
ಕರ್ನಾಟಕ ಸರ್ಕಾರ

ವಕೀಲರೊಬ್ಬರ ವಗೈರೆಗಳು

ಸಿ. ಎಚ್. ಹನುಮಂತರಾಯ



ಕನ್ನಡ ಪುಸ್ತಕ ಪ್ರಾಧಿಕಾರ

ವಕೀಲರೊಬ್ಬರ ವಗ್ಗೈರೆಗಳು

ಸಿ.ಎಚ್. ಹನುಮಂತರಾಯ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು - ೫೬೦ ೦೦೨.

VAKILAROBBARA VAGAIREGALU : by C.H. Hanumantaraya, Published By ***Ashok N. Chalawadi,*** Administrative Officer, Kannada Pustaka Pradhikara, Kannada Bhavana, J.C.Road, Bengalooru - 560 002.

ಮೊದಲ ಮುದ್ರಣ : ೨೦೧೦
ಪುಟಗಳು : xxviii + ೭೪೮ = ೭೭೮
ಬೆಲೆ : ₹ ೩೫೦.೦೦
ಪ್ರತಿಗಳು : ೧,೦೦೦

First Print : 2010
Pages : xxviii + 748 = 778
Price : ₹ 350.00
Copies : 1,000

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಕರಡು ತಿದ್ದಿದವರು : ವೈ.ಜಿ.ಜಗದೀಶ್

ಮುದ್ರಣ ಹಾಗೂ ಅಕ್ಷರ ಸಂಯೋಜನೆ

QUALITY OFFSET PRINTERS

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಪೋಸ್ಟ್, ಬೆಂಗಳೂರು ೫೬೦ ೦೨೧
ದೂ : ೦೮೦-೨೩೪೨ ೨೮೩೮

ಅರ್ಪಣೆ

ಹಳ್ಳಿಯಿಂದ ನಗರದ ಪಾಲಾಗಿ, ವಕೀಲವೃತ್ತಿಯ ಬೆನ್ನುಹತ್ತಿ
ಅನಾಥಪ್ರಜ್ಞೆ, ಹತಾಶೆ, ಕೀಳರಿಮೆ ಮತ್ತು ಅಸ್ಥಿರತೆಯಂಥ
ಅಟಕಾವುಗಳ ನೀಗಿಸಿಕೊಂಡು ಜೀವನೋತ್ಸಾಹದಿಂದಲೇ
ವೃತ್ತಿಯನ್ನು ಮತ್ತು ಬದುಕನ್ನು ಕಟ್ಟಿಕೊಳ್ಳಲು ಹವಣಿಸುತ್ತಿರುವ
ವೃತ್ತಿ ಬಾಂಧವರ ಮಡಿಲಿಗೆ ಈ ಕೃತಿ ಇರಿಸಲು ಹಿಗ್ಗುತ್ತೇನೆ.

ಸಿ.ಎಚ್. ಹನುಮಂತರಾಯ
ನ್ಯಾಯವಾದಿ

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಅಪರೂಪದ ಮೌಲ್ಯಯುತ ನೂರಾರು ಕೃತಿಗಳನ್ನು ಪ್ರಕಟಿಸಿದೆ, ಪ್ರಕಟಿಸುತ್ತಾ ಬಂದಿದೆ. ಈ ದಿಶೆಯಲ್ಲಿ ಪ್ರಸ್ತುತ ಪ್ರಾಧಿಕಾರದ ಮೂಲಕ ನಾಡಿನ ಪ್ರಸಿದ್ಧ ಕ್ರಿಮಿನಲ್ ವಕೀಲರಾದ ಸಿ.ಎಚ್. ಹನುಮಂತರಾಯರ 'ವಕೀಲರೊಬ್ಬರ ವಗ್ಗೈರೆಗಳು' ಕೃತಿಯ ಮುದ್ರಣವನ್ನು ಹೊರತರುತ್ತಿದೆ. ಈ ಕೃತಿ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಕೃತಿ ಎನ್ನಬಹುದು. ತಮ್ಮ ವಿಸ್ತಾರವಾದ ವೃತ್ತಿ ಜೀವನದಲ್ಲಿ ಲೇಖಕರು ನೋಡಿದ, ಅನುಭವಿಸಿದ ಅನೇಕ ಸಂಗತಿಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಒಂದು ಕೃತಿಯ ಯಶಸ್ಸು ಇರುವುದು ಅದು ಓದಿಸಿಕೊಂಡು ಹೋಗುವ ಗುಣದಿಂದ. ಆ ದೃಷ್ಟಿಯಲ್ಲಿ ಈ ಕೃತಿ ಅದ್ಭುತ ಯಶಸ್ಸನ್ನು ಸಾಧಿಸಿದೆ. ಕನ್ನಡ ಸಾಹಿತ್ಯ ರಚನೆ ಕೇವಲ ಕನ್ನಡ, ಆಂಗ್ಲ ಅಧ್ಯಾಪಕರಿಗೆ ಸೀಮಿತವಾಗಿದೆ ಎಂಬುದನ್ನು ಸುಳ್ಳು ಮಾಡುವಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮಹನೀಯರು ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದು ಅಭಿನಂದನಾರ್ಹ. ಶಿಕ್ಷಣ, ಕಂದಾಯ, ಪೊಲೀಸ್, ವೈದ್ಯಕೀಯ........ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವವರಲ್ಲಿ ಕೆಲವರಾದರೂ ತಮ್ಮ ಬದುಕಿನ ಅನುಭವಗಳನ್ನು ದಾಖಲಿಸಿದ್ದಾರೆ.ವಿಶೇಷವೆಂದರೆ ಕನ್ನಡದಲ್ಲಿ ಕಾನೂನು ವಿಭಾಗದಲ್ಲಿ ಕೆಲಸ ಮಾಡುತ್ತಿರುವವರು ಕಾನೂನಿಗೆ ಸಂಬಂಧಪಟ್ಟಂತೆ ಅನೇಕ ಲೇಖನಗಳು, ಕೃತಿಗಳನ್ನು ಹೊರತಂದಿದ್ದರೂ ಈ ಕ್ಷೇತ್ರದಲ್ಲಿನ ಸ್ವಂತ ಅನುಭವಗಳನ್ನು ದಾಖಲಿಸಿರುವವರು ವಿರಳವೆನ್ನಬಹದು. ಈ ದಿಶೆಯಲ್ಲಿ ಸಿ.ಎಚ್. ಹನುಮಂತರಾಯರ ಪ್ರಯತ್ನ ಗಮನಾರ್ಹವಾದದ್ದು. ಈ ಕೃತಿ ಓದುಗರಲ್ಲಿ ಕುತೂಹಲವನ್ನು ಉಂಟುಮಾಡುತ್ತಾ ನ್ಯಾಯಶಾಸ್ತ್ರದ ಬಗ್ಗೆಯೂ ಮಾಹಿತಿಯನ್ನು ಒದಗಿಸಿಕೊಡುತ್ತಾ ಹೋಗುತ್ತದೆ. ಕಾನೂನನ್ನು ಅಭ್ಯಾಸ ಮಾಡಿದವರಿಗಷ್ಟೇ ಅಲ್ಲದೆ, ಕಾನೂನಿನ ಪರಿಚಯ ಇಲ್ಲದ ಸಾಮಾನ್ಯ ಓದುಗರ ಮನಸ್ಸು ಬುದ್ಧಿಯನ್ನು ಸೆರೆಹಿಡಿಯುವಲ್ಲಿ ಅತ್ಯಂತ ಯಶಸ್ವಿಯಾಗಿದೆ. ಈ ಹಿಂದೆ ಪ್ರೊ. ಬಿ.ಜಿ.ಎಲ್. ಸ್ವಾಮಿಯವರು ಜೀವಶಾಸ್ತ್ರದ ಬಗ್ಗೆ ಕೃತಿ ರಚನೆಗೆ ಮಾಡಿ ಜನಪ್ರಿಯರಾದಂತೆ, ನ್ಯಾಯಶಾಸ್ತ್ರದ ಬಗ್ಗೆ ಕೃತಿ ರಚನೆ ಮಾಡಿ ಲೇಖಕರು

ಯಶಸ್ವಿಯಾಗಿದ್ದಾರೆ. ಇಂತಹ ಅದ್ಭುತ ಕೃತಿಯನ್ನು ಮರುಮುದ್ರಿಸಲು ಅನುಮತಿಸಿದ ಲೇಖಕರಿಗೆ ಕೃತಜ್ಞನಾಗಿದ್ದೇನೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ನಿರೂಪಿಸಿದ ಶ್ರೀ ಗಂಗಾಧರ ಕುಷ್ಟಗಿ ಅವರಿಗೆ ವಂದನೆಗಳು.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗವರಿಗೆ ಆಭಾರಿಯಾಗಿದ್ದೇನೆ. ಈ ಕೃತಿಯನ್ನು ಕನ್ನಡ ಸಾಹಿತ್ಯ ಪ್ರೇಮಿಗಳು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಮುನ್ನುಡಿ

ನಮ್ಮ ನಾಡಿನ ಪ್ರಸಿದ್ಧ ವಕೀಲರುಗಳಲ್ಲಿ ಒಬ್ಬರಾದ ಶ್ರೀ ಸಿ.ಎಚ್. ಹನುಮಂತರಾಯರ ಬಾಲ್ಯ, ಯೌವನ ಹಾಗೂ ವೃತ್ತಿಯ ಅನುಭವಗಳನ್ನು ಗಂಗಾಧರ ಕುಷ್ಟಗಿ "ವಕೀಲರೊಬ್ಬರ ವಗ್ಯೆರೆಗಳು" ಅಂಕಣದಲ್ಲಿ ನಿರೂಪಿಸಿದ್ದನ್ನು ನಾನು ಅತ್ಯಂತ ಕುತೂಹಲದಿಂದಲೂ ಸಂತೋಷದಿಂದಲೂ ಓದಿದೆ. ಓದುವಾಗ ನಾನು ಮಾಡಿಕೊಂಡ ಟಿಪ್ಪಣಿಗಳು ಇಲ್ಲಿವೆ.

ಇದೊಂದು ವಿಶಿಷ್ಟವಾದ ಆತ್ಮಕಥನ. ಕೆಲವು ಆತ್ಮಕಥನಗಳು ವೃತ್ತಿ ಕಥನ ಮಾತ್ರವಾಗಿ ಬಿಡುತ್ತವೆ. ಆದರೆ "ವಕೀಲರೊಬ್ಬರ ವಗ್ಯೆರೆಗಳು" ಹೀಗೆ ಕೇವಲ ವೃತ್ತಿಕಥನವಾಗುವುದಿಲ್ಲ. ಬಯಲುಸೀಮೆಯ ಹಳ್ಳಿಯೊಂದರ ಇಡೀ ಜೀವನ ಕ್ರಮವನ್ನು ದಟ್ಟವಾಗಿ ಕಥಿಸುವ ಆತ್ಮಚರಿತ್ರೆಯಿದು. ಒಬ್ಬ ಹುಡುಗ ಸಮಷ್ಟಿ ಕುಟುಂಬದಲ್ಲಿ ಬೆಳೆಯುವುದನ್ನು ನಾವಿಲ್ಲಿ ಕಾಣುತ್ತೇವೆ. ಅವನು ಬೆಳೆಯುವ ಪ್ರದೇಶದ ಹಲವು ಜನರು ಕಾದಂಬರಿಯೊಂದರ ಪಾತ್ರಗಳಂತೆ ನಮಗೆದುರಾಗುತ್ತಾರೆ. ಈ ಕಥನದಲ್ಲಿ ಕಟುವಾದ ವಾಸ್ತವಿಕ ಸತ್ಯಗಳೂ ಇವೆ, ಕನಸುಗಳೂ ಇವೆ. ಹೀಗೆ ಐಹಿಕದ ನೆಲಕ್ಕೂ ವಿಕಾಸದ ಆಕಾಶಕ್ಕೂ ಏಕಕಾಲದಲ್ಲಿ ಲೇಖಕರು ಮಿಡಿಯುತ್ತಾರೆ.

ಈ ಕಥನವನ್ನು ಓದುತ್ತಿದ್ದಂತೆ ವೈಯಕ್ತಿಕವಾಗಿ ನನ್ನಲ್ಲಿ ಹುಟ್ಟಿದ ಸ್ಪಂದನಗಳನ್ನು ಗುರುತಿಸಿಕೊಳ್ಳುತ್ತೇನೆ. ನಾನೂ ಒಂದು ಹಳ್ಳಿಯಲ್ಲಿ ಬೆಳೆದವನು. ನನ್ನ ತಂದೆಯವರು ಸದಾ ಕೋರ್ಟಿಗೆ ಅಲೆಯುತ್ತಿದ್ದ ವ್ಯಕ್ತಿ. ನಮ್ಮ ಮನೆಯ ಚಾವಡಿಯ ಮೇಲೆ ನಮ್ಮ ತಂದೆ ಮನೆಯಲ್ಲಿದ್ದಾಗ ನೆರೆಹೊರೆಯ ಎಷ್ಟೋ ಹಳ್ಳಿಯ ಜನರು ಬಂದು ಸೇರುತ್ತಿದ್ದರು.

ನನ್ನ ತಂದೆಯವರು ಹಲವು ವಕೀಲರ ಬಗ್ಗೆಯೂ ಹಲವು ನ್ಯಾಯಾಧೀಶರ ಬಗ್ಗೆಯೂ ರೋಚಕವಾದ ಕಥೆಗಳನ್ನು ಹೇಳುತ್ತಿದ್ದರು. ಕೇಳಿಸಿಕೊಳ್ಳುವವರಲ್ಲಿ ಹಲವು ಜಾತಿಯ ಜನರಿರುತ್ತಿದ್ದರು. ಒಂದು ದೇಶದ ಕಾನೂನಿನ ವ್ಯವಸ್ಥೆ ಒಂದು ಜೀವಂತ ದೇಹದ ನರಮಂಡಲವಿದ್ದ ಹಾಗೆ ಎಂದು ಆಗ ನನಗೆ

ಅನ್ನಿಸಿತ್ತು. ನನ್ನ ತಂದೆಯವರಿಗಿದ್ದ ಆಸೆ ನಾನೊಬ್ಬ ಲಾಯರ್ ಆಗಬೇಕು ಅಥವಾ ಗಣಿತಶಾಸ್ತ್ರಜ್ಞನಾಗಬೇಕು ಎಂದು. ನಾನು ಎರಡೂ ಆಗಲಿಲ್ಲ. ಆದರೆ ಇವತ್ತಿಗೂ ನನ್ನ ತಲೆಯ ತುಂಬ ನನ್ನ ತಂದೆಯವರು ವರ್ಣಿಸುತ್ತಿದ್ದ ವಕೀಲರುಗಳ ಸಾಹಸದ ಕಥೆಗಳು ಇವೆ.

ಹನುಮಂತರಾಯರು ತಾವು ಕೇಳಿಸಿಕೊಂಡ ಕಥೆಗಳನ್ನು ಹೇಳುವುದೇ ಹೆಚ್ಚು. "ಜೀವನ್ಮರಣಗಳ ಮಧ್ಯೆ ಸೆಣಸುವ ವಕೀಲನಾಗಬೇಕು" ಎಂದು ಅವರಿಗೆ ಮೊದಲು ಅನ್ನಿಸಿದ್ದು ಈಗ ಪ್ರಸಿದ್ಧವಾದ ಬೇಲೂರು ಶ್ರೀನಿವಾಸ ಅಯ್ಯಂಗಾರರ ಕೊಲೆ ಪ್ರಕರಣ ಕೇಳಿಸಿಕೊಂಡಾಗ. ಆಮೇಲಿನಿಂದ ಜಸ್ಟೀಸ್ ಮೇದಪ್ಪ ಕೊಲೆ ಪ್ರಕರಣದ ಕೇಸನ್ನೂ ಕೇಳಿಸಿಕೊಳ್ಳುತ್ತಾರೆ. ಲಾಯರ್ ಜೀವನದ ಆಮಿಷಗಳು ಅದರ ಆಕರ್ಷಣೆಯ ಜೊತೆಗೆ ಗೊಂದಲವನ್ನುಂಟುಮಾಡುತ್ತವೆ. ಆದರೆ ಲೇಖಕರು ಎಲ್ಲ ಹುಡುಗರಂತೆ ಚೀಟಿಯೊಂದನ್ನೆತ್ತಿ ತಾನು ಲಾಯರಾಗುವು ದೆಂದು ನಿರ್ಧರಿಸುತ್ತಾರೆ.

ಈ ಪುಸ್ತಕ ಕನ್ನಡ ಸಾರಸ್ವತ ಲೋಕದಿಂದ ದಟ್ಟವಾಗಿ ಪ್ರಭಾವಿತವಾಗಿ ಹುಟ್ಟಿಬಂದಿದೆ. ಕುವೆಂಪು, ರಾವ್ ಬಹದ್ದೂರ್‌ರನ್ನು ನೆನಪು ಮಾಡುವ ಹಳ್ಳಿಯ ಶ್ರೀಮಂತ ಜೀವನಕ್ರಮದ ವರ್ಣನೆಗಳು ಇಲ್ಲಿವೆ. ಉದಾ : ಮೊಹರಂ ವರ್ಣನೆ ಮತ್ತು ಅದರಲ್ಲಿ ಲೇಖಕರ ದೊಡ್ಡಪ್ಪ ಕೆಂಡ ಹಾಯುವುದು. ಒಬ್ಬ ಉತ್ತಮ ಕಾದಂಬರಿಕಾರನಿಗೆ ಇರಬೇಕಾದ ಪ್ರಾಣಿ, ಪಕ್ಷಿ, ವಸ್ತು ಲೋಕದ ವಿದ್ಯಮಾನಗಳ ಕುತೂಹಲ 'ವಗೈರೆ'ಗಳಲ್ಲಿ ನಿರೂಪಿಸಲ್ಪಟ್ಟಿದೆ. ಉಡಗಳ ಚಲನೆಯ ವರ್ಣನೆ ಅದ್ಭುತವಾಗಿದೆ. ಸಾಮಾನ್ಯರ ಗಮನಕ್ಕೆ ಬಾರದ ಸಂಗತಿ ಇದಾಗಿದೆ. ಜೇನುಗಳ್ಳರು ಜೇನುಬಿಡಿಸಲು ಎತ್ತರದ ಮರ ಏರಲು ಉಡಗಳನ್ನು ಬಳಸುತ್ತಾರೆ. ಉಡಗಳಿಗೆ ಕಟ್ಟಿದ ಹಗ್ಗವನ್ನು ತಮಗೆ ಕಟ್ಟಿಕೊಂಡಿರುತ್ತಾರೆ. ಉಡವನ್ನು ಮೇಲಕ್ಕೇರಿಸಲು ಅದರ ತಿಕಕ್ಕೆ ಬೆರಳಿಕ್ಕಿದರೆ ಹಿಡಿತ ಸಡಲಿಸುತ್ತಾ ಸ್ವಲ್ಪ ಸ್ವಲ್ಪವೇ ಮೇಲೇರುತ್ತಾ ಹೋಗುತ್ತದೆ. ಇಂಥ ವರ್ಣನೆ ಅಪರೂಪವೆನಿಸುವಂಥದ್ದು. ಬಾಲ್ಯದಲ್ಲಿಯೇ ಹನುಮಂತರಾಯರ ಸಾಮಾಜಿಕ ಕಳಕಳಿ ಗಟ್ಟಿಗೊಳ್ಳುವ ಪ್ರಕ್ರಿಯೆಯನ್ನು ನಾವಿಲ್ಲಿ ಕಾಣುತ್ತೇವೆ. ಅಡಿಕೆ ಮರ ಹತ್ತುವುದರಲ್ಲಿ ನಿಸ್ಸೀಮನಾದ ದಲಿತ ಹುಡುಗ ಗುಡ್ಡಯ್ಯನನ್ನು ಹನುಮಂತರಾಯರು ವರ್ಣಿಸುವುದು, ಅವನ ಮೇಲೆ ಪ್ರೀತಿ ತೋರುವುದು ಅವರ ಸಾಮಾಜಿಕ ಪ್ರಜ್ಞೆಯ ವಿಕಸನಕ್ಕೆ ಸಾಕ್ಷಿಯಾಗಿದೆ.

ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಸಾಮೂಹಿಕ ಶಿಕಾರಿಯನ್ನು ವರ್ಣಿಸುವಾಗ ಹನುಮಂತರಾಯರು ತೋರುವ ಸೂಕ್ಷ್ಮಜ್ಞತೆ ವಿಭಿನ್ನವೆನಿಸುತ್ತದೆ.

ಶಿಷ್ಟ ಸಮಾಜ ಯಾರನ್ನು ದಡ್ಡರು ಎಂದು ಪರಿಗಣಿಸಿರುತ್ತದೋ ಅವರೇ ಶಿಕಾರಿಯಲ್ಲಿ ಹೇಗೆ ನಿಪುಣರೂ ಜಾಣರೂ ಆಗಿರುತ್ತಾರೆನ್ನುವುದನ್ನು ಇಲ್ಲಿ ಗುರುತಿಸಲಾಗಿದೆ. ಕಾಡಿನ ಹಾದಿಯಲ್ಲಿ ಕಾಣುವ ಲದ್ದಿ ಯಾವ ಮೃಗದ್ದು, ಎಷ್ಟು ತಾಸಿನ ಹಿಂದೆ ಹಾಕಿದ್ದಿರಬಹುದು ಎನ್ನುವುದನ್ನು ತಿಳಿಯುವ ಚಾತುರ್ಯ ಹೊಲೆಯರ ಹುಡುಗ ಹನುಮನಿಗಿರುತ್ತದೆ ! ಗಂಗಾಧರ ಕುಷ್ಟಗಿಯವರ ನಿರೂಪಣೆ ಹೃದಯಂಗಮವಾಗಿ ಮೂಡಿಬಂದಿದೆ. ಸಂಪತಿ ಕೌರ್ ಎನ್ನುವವಳು ಪತಿಯ ಹೆಣದೊಂದಿಗೆ ಚಿತೆಯೇರಬೇಕಾದ, ಬಲಾತ್ಕಾರಕ್ಕೊಳಗಾದ ದೃಶ್ಯದ ನಿರೂಪಣೆ ಇದಕ್ಕೆ ಸಾಕ್ಷಿ.

ಹನುಮಂತರಾಯರು ನಮ್ಮ ನಡುವಿನ ಶ್ರೇಷ್ಠ ವಕೀಲರು ಮಾತ್ರವಲ್ಲ, ಕನ್ನಡ ಸಾರಸ್ವತ ಲೋಕಕ್ಕೆ ಒಂದು ಅಮೂಲ್ಯವಾದ ಆತ್ಮಕಥೆಯನ್ನು ಕೊಟ್ಟಿರುವವರು. ಗಾಢವಾದ ಅನುಭವಗಳನ್ನು ಅತ್ಯಂತ ಸುಲಲಿತವಾಗಿಯೂ ದೃಶ್ಯಾತ್ಮಕವಾಗಿಯೂ ಮನೋಜ್ಞವಾಗಿಯೂ ನಿರೂಪಿಸಲ್ಪಟ್ಟ "ವಕೀಲರೊಬ್ಬರ ವಗ್ಗೈರೆಗಳು" ಜನಪ್ರಿಯವಾಗುವುದರಲ್ಲಿ ನನಗೆ ಸಂದೇಹವಿಲ್ಲ.

–ಯು.ಆರ್. ಅನಂತಮೂರ್ತಿ

ಬೆಂಗಳೂರು

ಲೇಖಕರ ಮಾತು

ಬೆರಗುಗೊಳಿಸಬಲ್ಲ ಯಾವುದೇ ಸಂಗತಿ ನನ್ನಲ್ಲಿ ಬೇಗ ಮನೆಮಾಡಿಕೊಳ್ಳ ಬಲ್ಲದು, ಅದಕ್ಕೆ ಬೇಗ ಪಕ್ಕಾಗುವೆನು. ಈಗಲೂ ಬೇಕಾದವರಿಗೆ ನನಗೆ ತೋಚಿದಂತೆ ಹೇಳುವುದರ ಮೂಲಕ ಅವನ್ನೆಲ್ಲಾ ಸಾಕಿಕೊಂಡಿದ್ದೇನೆ. ಕೇಳುಗರ ಪ್ರತಿಕ್ರಿಯೆಯೇ ಸಾಕುತ್ತಿರುವ ಕ್ರಿಯೆಗೆ ಕಾರಣವಾಗಿದೆ. ಒಂದು ಘಟನೆಯನ್ನು ನಾಲ್ಕಾರು ಹುಡುಗರು ಹೇಳಲು ಮುಂದಾಗಲೆಲ್ಲಾ "ಹನ್ಮಂತ್ರಾಯ ಹೇಳ್ಲಿ, ನೀವೆಲ್ಲಾ ತಿಕಾಮುಚ್ಕಂಡು ಸುಮ್ನಿರ್ರೋ" ಎಂದು ಕೇಳುಗ ಹಿರಿಯರು, (ಊರಲ್ಲಿ) ಇತರರನ್ನು ಗದರಿಸಿದಾಗ ನನಗೆ ಬೆನ್ನು ತಟ್ಟಿದಂತಾಗುತ್ತಿತ್ತು. ನಾನು ಬೆಂಗಳೂರು ಪಾಲಾಗುವರೆಗೂ ಇದು ಮುಂದುವರೆಯಿತು.

ಕಾಲೇಜು ದಿನಗಳಲ್ಲಿ ಹಾಸ್ಟೆಲ್‌ನಲ್ಲೇ ವಾಸ್ತವ್ಯ. ವಿದ್ಯಾರ್ಥಿ ದಂಡುಗಳ ಮಧ್ಯೆಯೇ ಇರುತ್ತಿದ್ದ ನನಗೆ ಓದಿದ್ದಕ್ಕಿಂತ ಹೋರಾಟ, ಸಂಘರ್ಷ, ಬೇವಾರ್ಸಿಗಳ ಸಮಸ್ಯೆಗಳನ್ನೆಲ್ಲಾ ಮೈಗೆ ಸುತ್ತಿಕೊಂಡು ಒದ್ದಾಡಿದ್ದೇ ಹೆಚ್ಚು. ಒಟ್ಟಿನಲ್ಲಿ ಏಳು ವರ್ಷಗಳ ಕಾಲೇಜು ಜೀವನ ನನ್ನ ಪಾಲಿಗೆ ದೊಡ್ಡ ಪ್ರಯೋಗಶಾಲೆಯಾಗಿತ್ತು.

ಕಪ್ಪುಕೋಟು ಧರಿಸಿದ ಮೇಲೆ ಕೋರ್ಟ್ ಕಲಾಪಗಳು ಕೌತುಕಗಳ ಆಗರವಾಗಿ ಕಂಡವು. ವೃತ್ತಿಯನ್ನು ಗಾಢವಾಗಿ ತಬ್ಬಿದೆ. ತಡಕಾಟದ ಆ ದಿನಗಳಲ್ಲಿ ಹೆಜ್ಜೆ ಹೆಜ್ಜೆಗೂ ಒತ್ತಡ ಸ್ಪರ್ಧೆ ಕಾಣಿಸಿಕೊಂಡು ಹೆಚ್ಚೆಚ್ಚು ಬಿಗುವಾಗುತ್ತಾ ಕಡೆಗೊಮ್ಮೆ ನನ್ನತನವನ್ನೇ ಕಳೆದುಕೊಳ್ಳುವ ಆತಂಕಕ್ಕೆ ಒಳಗಾದೆ. ನನ್ನ ಸೀನಿಯರ್ ವಕೀಲರಾದ ಪಿ.ಎಸ್.ದೇವದಾಸರು ಮೂಡಿಸಿದ ಪ್ರೇರಣೆಗಳು ಸರಿಯಾದ ಪಾಠ ಕಲಿಸುವ ಅರ್ಹತೆ ಪಡೆದಿದ್ದವು. ಆಗಲೇ ದೌರ್ಬಲ್ಯಗಳು ಮನುಷ್ಯನನ್ನು ಹೇಗೆ ಮರು ನಿರ್ಮಿಸಬಲ್ಲವೆಂದು ಇತರೆ ವಕೀಲರನ್ನು ಹತ್ತಿರದಿಂದ ಗಮನಿಸಿ ತಿಳಿದೆ. ವೃತ್ತಿಯಲ್ಲಿ ಯಶಸ್ವಿಯಾದರೆ ಮನುಷ್ಯರಾಗಲ್ಲ ಎಂದು ಕಂಡೆ. ಯಶಸ್ಸಿನ ಬೆನ್ನತ್ತಿ ಆ ಯಶಸ್ಸಿನ ಹೋರಾಟವೇ ಅವರನ್ನು ನಿರ್ದಾಕ್ಷಿಣ್ಯ ಮನುಷ್ಯರನ್ನಾಗಿಸಿದ್ದನ್ನು ಕಂಡೆ. ಆರ್ಥಿಕವಾಗಿ ಮುಂದುವರೆದು ಒಬ್ಬಂಟಿಗರಾದ ವಕೀಲರನ್ನು ಕಂಡೆ. ನನ್ನ ವೃತ್ತಿಯಲ್ಲಿ ಕಂಡಿರುವಷ್ಟು ಒಬ್ಬಂಟಿ ಮನುಷ್ಯರನ್ನು,ತಮ್ಮಲ್ಲಿ ಮುಳುಗಿದವರನ್ನು ಇನ್ನೆಲ್ಲೂ ಕಾಣಲಾಗಿಲ್ಲ.

ಇಸವಿ ೨೦೦೦ ವೃತ್ತಿಯಲ್ಲಿ ನೆಲೆನಿಂತ ೩೦ನೇ ವರ್ಷ. ಪುರಸತ್ತೇ ಸಿಗದ ವೃತ್ತಿಜೀವನದಲ್ಲಿ ಸಮಯ ಮತ್ತು ಏಕಾಗ್ರತೆ ಕೇಳುವ ಸಾಹಿತ್ಯದ ಜತೆಗಿನ ನಂಟು ಕನಸಾಗೇ ಉಳಿಯಿತು. ಬರವಣಿಗೆಗೆ ಸಮಯ ಕೊಡುವುದು ವೃತ್ತಿಸಂಹಿತೆಯಲ್ಲ ಎನ್ನುವಂತೆ ಸುತ್ತಮುತ್ತಲಿನ ವಕೀಲರು ಕಾಣುತ್ತಿದ್ದರು. ಅಲ್ಲದೆ ಅವರೆಲ್ಲ ಸಾಹಿತ್ಯದೆಡೆಗೆ ವಿಮುಖತೆ ಬೆಳಸಿಕೊಂಡಿದ್ದವರೆ. ಈ ಕಾಲಾವಧಿಯಲ್ಲಿ ವೃತ್ತಿ ನನಗೆ ಸಾಕಷ್ಟು ಅಪರೂಪವಾದದ್ದನ್ನು ನೀಡಿತ್ತು. ನೂರಾರು ಗುಟ್ಟುಗಳನ್ನು ಅಡಗಿಸಿಕೊಳ್ಳಲು ಸಾಧ್ಯವಾಗಿಸಿತ್ತು. ನನ್ನೊಳಗೆ ನಡೆಯುತ್ತಿದ್ದ ಮತ್ತು ಸುತ್ತಮುತ್ತ ನಡೆಯುತ್ತಿದ್ದರ ಬಗ್ಗೆ ಅರಿವಿರುವಂತೆ ಮಾಡಿತ್ತು. ವೃತ್ತಿಜಾಯಮಾನದಿಂದ ದೊರೆತ ಅನಾಯಾಸ ಜನಸಂಪರ್ಕ ಸುತ್ತಮುತ್ತನ್ನು ಅರ್ಥಮಾಡಿಸಿತು. ಯಾವುದನ್ನೆಲ್ಲಾ ಪರಿಣಾಮಕಾರಿ ಕ್ರಿಯೆಯಾಗಿಸಲು ಹೆಣಗಾಡಿದೆನೋ ಅಲ್ಲೆಲ್ಲಾ ಬದುಕು, ಪಾತ್ರ, ಘಟನೆಯನ್ನು ಊಹಿಸಿಕೊಳ್ಳುತ್ತ, ಅಕ್ಷರರೂಪಕ್ಕಿಳಿಸುವ ಪ್ರಯತ್ನ ಮಾಡಬೇಕೆನ್ನಿಸಿತು.

ನಾಲ್ಕಾರು ಲೇಖನಗಳನ್ನು ಲಂಕೇಶ್ ಮೇಷ್ಟ್ರು ನನ್ನಿಂದ ಬರೆಸಿ "ಲಂಕೇಶ್ ಪತ್ರಿಕೆ" ಯಲ್ಲಿ ಪ್ರಕಟಿಸಿದರು. ಅವರಿಗೆ ಇಷ್ಟವಾದರೂ ಬರವಣಿಗೆಯಲ್ಲಿ ಆಸಕ್ತಿ ತೋರಿಸದ ನನಗೆ ಬೈದರು. "ನೀನೊಬ್ಬ ಈಡಿಯಟ್, ನಿನಗೇನ್ ಗೊತ್ತಿದೆ ಅಂತ ಗೊತ್ತಿಲ್ದಿರೋ ಫೂಲ್" ಎಂದೆಲ್ಲಾ ಎತ್ತಾಡಿದರು; ಆದರೂ ನನ್ನಿಂದ ಬರೆಸಲಾಗಲಿಲ್ಲ.

೧೯೮೬ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿದ್ದ ಪ್ರೊಫೆಸರ್ ನಗರಿ ಬಾಬಯ್ಯರ ಪ್ರಕರಣ ಕೈಗೆತ್ತಿಕೊಂಡ ಸಂದರ್ಭದಲ್ಲಿ ಹೆಚ್ಚಿನ ಸಾಹಿತಿಗಳಿಗೆ ಹತ್ತಿರವಾದೆ. ಆಗ್ಗೆ ನನಗೆ ಗೊತ್ತಿದ್ದ ಡಾ.ಸಿ.ವೀರಣ್ಣ, ಡಾ.ಹಂಪ ನಾಗರಾಜಯ್ಯ, ಡಾ.ಚಿದಾನಂದಮೂರ್ತಿ ಮುಂತಾದವರು ಆಗಾಗ್ಗೆ ವೃತ್ತಿಯ ಅನುಭವಗಳನ್ನು ಕಥಿಸಲು ಒತ್ತಿ ಹೇಳುತ್ತಿದ್ದರು. ಅವರು ಹಾಗೂ ಇತರರು ಹೇಳಿದ್ದನ್ನೆಲ್ಲಾ ನನ್ನ ಗುರುಪಿನಂಥ ಗೆಳೆಯ ಡಿ.ವಿ. ಮಂಜುನಾಥ (ಮಂಜು)ನ ಮುಂದಿಡುವ ಪರಿಪಾಠವಿತ್ತು. ಬರವಣಿಗೆಯ ಅಗತ್ಯ, ಔಚಿತ್ಯ ಕುರಿತು ತನ್ನ ಮೊನಚಾದ ಯುಕ್ತಾಯುಕ್ತ ಜ್ಞಾನದಿಂದ ಬರೆಯುವ ಉತ್ಕಟತೆಗೆ ಮಂಜು ನನ್ನನ್ನು ನೂಕುತ್ತಾ ಬಂದ. ಆದರೂ ನನ್ನ ಪರಿಮಿತಿ, ಸಾಧ್ಯತೆಗಳ ಬಗ್ಗೆ ಯೋಚಿಸುತ್ತಲೇ ಇದ್ದೆ.

ಈ ಹಂತದಲ್ಲಿ ಗೆಳೆಯ ಇಂದ್ರಜಿತ್ ಲಂಕೇಶ್ ಒಂದು ಸಂಜೆ ಕಬ್ಬನ್ ಪಾರ್ಕ್‌ನ ಸೆರಗಿನಲ್ಲಿರುವ "ಪ್ರೆಸ್ ಕ್ಲಬ್" ನಲ್ಲಿ ಬಿಯರ್ ಹೀರುವಾಗ ಕೊಲೆಯ ಕೇಸಿನ ತುಣುಕೊಂದನ್ನು ವಿವರಿಸಿದೆ. ಆತ ಎಷ್ಟೊಂದು ಹುಚ್ಚನಾದನೆಂದರೆ

ಕೈಮೇಲೆ ಕೈ ಇರಿಸಿಕೊಂಡು "ಲಂಕೇಶ್ ಪತ್ರಿಕೆ" ಗೆ ಬರೆಯುವಂತೆ ಪ್ರಮಾಣವನ್ನೇ ಮಾಡಿಸಿಬಿಟ್ಟ. ಲಂಕೇಶ್ ಮೇಷ್ಟ್ರನ್ನು ಹತ್ತಿರದಿಂದ ಕಂಡಿದ್ದ ನನಗೆ ಅವರಲ್ಲಿಲ್ಲದ ವ್ಯವಹಾರ ಚತುರತೆ, ಚಾಣಾಕ್ಷತೆ ಇಂದ್ರಜಿತ್ ಲಂಕೇಶ್‌ನಲ್ಲಿ ಕಂಡು ಬೆರಗಾದೆ.

ದಿನನಿತ್ಯವೂ ಒಂದಲ್ಲ ಒಂದು ಕೊಲೆ ಕೇಸಿನ ವಿಚಾರಣೆಯಲ್ಲಿ ಆರೋಪಿ ಪರ ಕೋರ್ಟ್ ಕಲಾಪಗಳಲ್ಲಿ ಭಾಗವಹಿಸುವ ನನಗೆ ಇರುವ ಸಮಯದ ಅಭಾವ ಕುರಿತು ಇಂದ್ರಜಿತ್‌ಗೆ ಮನವಿ ಮಾಡಿದೆ. ಮಾರನೆಯ ದಿನವೇ ಗಂಗಾಧರ ಕುಷ್ಟಗಿಯವರ ಮುಷ್ಟಿಗೆ ಸಿಕ್ಕಿಕೊಂಡೆ. ನಂತರ ಸುಮಾರು ನೂರು ಬಾರಿ ಹರಟಿದೆವು. ನನ್ನ ಅನುಭವಗಳನ್ನು ಸಂಪೂರ್ಣ ಸಂತೋಷ ಮತ್ತು ತೃಪ್ತಿ ಕೊಡುವಂತೆ ಅವರು ನಿರೂಪಿಸಿದರು. ಅವರ ನಿರೂಪಣಾ ಧಾಟಿ ಅನುಪಮವಾದುದು. ವಕೀಲರಲ್ಲದ ಗಂಗಾಧರ ಕುಷ್ಟಗಿಯವರು ನನಗೆ ಆಪ್ಯಾಯವಾದದ್ದನ್ನು ಕಾನೂನು ಚೌಕಟ್ಟಿನಲ್ಲಿ ಸಮಂಜಸವಾಗಿ ಧ್ವನಿಸುವ ಕುರಿತು ಇದ್ದ ಅಳುಕು ನಿವಾರಣೆಯಾಯಿತು, ನಿರೂಪಣೆ ಓದಿಕೊಂಡಾಗಲೆಲ್ಲಾ ಅವರ ಗ್ರಹಿಕೆಗೆ ನಿಲುಕದ್ದು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂದು ಪ್ರಾಮಾಣಿಕವಾಗಿ ಅನ್ನಿಸಿತು. ಕುಷ್ಟಗಿಯವರು ನನ್ನನ್ನು ಅರ್ಥಮಾಡಿಕೊಂಡ ರೀತಿ ನನಗಾಗಿರುವ ಅಪೂರ್ವ ಅನುಭವಗಳಲ್ಲೊಂದು

"ವಗೈರೆಗಳು" ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಂತೆ ಓದುಗರಿಂದ ಸಿಕ್ಕಿದ ಬೆಂಬಲದ ವಿಚಾರದಲ್ಲಿ ನಾನು ಅದೃಷ್ಟವಂತನೆ.

ಮನೆಯಲ್ಲಿ ನನ್ನಾಕೆ ಸಿದ್ಧಲಿಂಗಮ್ಮ ಮತ್ತು ಮಗಳು ಲೀಲಾವತಿ "ವಗೈರೆಗಳು" ಪ್ರಕಟಗೊಂಡ ಸಮಯದಲ್ಲಿ ಮುಜುಗರಕ್ಕೆ ಒಳಗಾಗುತ್ತಿದ್ದರು. ಅವುಗಳಲ್ಲಿನ ಸಾದಾಸೀದವನ್ನು ಅರಗಿಸಿಕೊಳ್ಳುವಲ್ಲಿ ಅವರಿಗಿದ್ದ ಮಾನಸಿಕ ಸಿದ್ಧತೆಯ ಕೊರತೆಯಿಂದಾಗಿ ಕೆಲವು ಆಪ್ತರು,ಸ್ನೇಹಿತರು ಮುನಿಸಿಕೊಂಡರು. ಇದರಿಂದಾಗಿ ಮನೆಮಂದಿ ಯೋಚನೆಗೊಳಗಾದರೆಂದು ತಿಳಿಸಲು ನನಗೆ ಅಳುಕಿಲ್ಲ. ಅದೆಲ್ಲವನ್ನೂ ಸಹಿಸಿದ ಅವರಿಗೆ ದೊಡ್ಡ ಬಹುಮಾನ ಇದ್ದೇ ಇದೆ.

ಇಂದ್ರಜಿತ್ ಲಂಕೇಶ್, ಗಂಗಾಧರ ಕುಷ್ಟಗಿ, ಡಿ.ವಿ.ಮಂಜುನಾಥ್ ಇವರಿಗೆ ಕೃತಜ್ಞತೆ ಸಲ್ಲಿಸಲು ನಾನು ದುರ್ಬಲ.

ಪ್ರತಿವಾರವೂ 'ವಗರೈಗಳು' ಪ್ರಕಟವಾಗುತ್ತಿದ್ದಂತೆ ನನಗಿಂತಲೂ ಮುಂಚೆಯೇ ಓದಿ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ ಹುರಿದುಂಬಿಸಿದ ವಕೀಲ ಕೆ.ದಿವಾಕರ, ಎದುರಾದಾಗಲೆಲ್ಲಾ ಮುಂದುವರೆಸುವಂತೆ ಬೆಚ್ಚನೆಯ ಮಾತುಗಳನ್ನಾಡಿದ ವಕೀಲರುಗಳಾದ ಸಿ.ಬಿ.ಶ್ರೀನಿವಾಸನ್, ಎಸ್. ಜಿ.ಭಗವಾನ್, ರವಿವರ್ಮಕುಮಾರ್,

ಸಿ.ಆರ್.ಗೋಪಾಲಸ್ವಾಮಿ, ಶಿವಶಂಕರಪ್ಪ, ಪ್ರಭಾ ಆರ್. ಗಿರಿಮಾಜಿ ಮತ್ತು ಬಿ.ಎನ್.ಚಂದ್ರಶೇಖರ್ (ತುಮಕೂರು), ಕೆಲವು ವೃತ್ತಾಂತಗಳನ್ನು ಕುರಿತು ವಿಶೇಷವಾಗಿ ಚರ್ಚಿಸಿದ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರುಗಳಾದ ಶ್ರೀ ಹೆಚ್. ಬಿಲ್ಲಪ್ಪ ಮತ್ತು ಶ್ರೀ ಹೆಚ್.ಎನ್. ನಾಗಮೋಹನ್‌ದಾಸ್, ಲೇಖನಗಳು ಓದುಗರ ನಡುವೆ ಹುಟ್ಟಿಸುತ್ತಿದ್ದ ಕುತೂಹಲ ಕುರಿತು ಆಗಾಗ್ಗೆ ತಿಳಿಸುತ್ತಾ ಇಂಬು ತುಂಬಿದ ಪತ್ರಕರ್ತರುಗಳಾದ ಇಂದೂಧರ ಹೊನ್ನಾಪುರ ಮತ್ತು ಅಗ್ನಿ ಶ್ರೀಧರ್, ಇನ್ನೂ ಹೆಸರಿಸಲಾಗದಷ್ಟು ಹಿತೈಷಿಗಳಿಂದ ಹರಿಯುತ್ತಲೇ ಬಂದ ಜೀವದ್ರವ್ಯದಂಥ ಮಾತುಗಳು ಮತ್ತು ದೊರೆತ ಪ್ರೋತ್ಸಾಹ ಮಾತುಗಳಿಂದ ಹಿಡಿಯಲಾಗದಷ್ಟು. ಇವರೆಲ್ಲರಿಗೆ ನಾನು ಸದಾ ಆಭಾರಿ. ಡಾ. ಯು.ಆರ್. ಅನಂತಮೂರ್ತಿಯವರಿಗೆ ಮುನ್ನುಡಿಗಾಗಿ ಕೃತಜ್ಞತೆಗಳು.

೨೦೦೭ರಲ್ಲಿ ಮೊದಲ ಮುದ್ರಣ ಕಂಡು ಲೋಕಾರ್ಪಣೆಯಾಗುತ್ತಿದ್ದಂತೆ 'ಪ್ರಜಾವಾಣಿ' 'ಕನ್ನಡಪ್ರಭ', 'ವಿಜಯ ಕರ್ನಾಟಕ', 'ಉದಯವಾಣಿ' ಮತ್ತು 'ಸಂಯುಕ್ತ ಕರ್ನಾಟಕ' – ದಿನಪತ್ರಿಕೆಗಳು; 'ಅಗ್ನಿ', 'ಹಾಯ್ ಬೆಂಗಳೂರ್' 'ಕನ್ನಡ ಟೈಮ್ಸ್'– ವಾರ ಪತ್ರಿಕೆಗಳು; 'ಬಹುಜನ ಕನ್ನಡಿಗರು' – ಪಾಕ್ಷಿಕ; 'ಪುಸ್ತಕ ಲೋಕ' – ತ್ರೈಮಾಸಿಕ (ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆ) ಇವುಗಳಲ್ಲಿ ಪದ್ಮಶ್ರೀ ಚಂದ್ರಶೇಖರ ಕಂಬಾರ, ವಿಮರ್ಶಕ ಪ್ರೊಫೆಸರ್ ನಾಡೋಜ ಕಿ.ರಂ.ನಾಗರಾಜ, ನಾಡೋಜ ಡಾ.ಸಿದ್ಧಲಿಂಗಯ್ಯ, ಡಾ.ನಟರಾಜ ಹುಳಿಯಾರ್, ಡಾ.ಬೈರಮಂಗಲ ರಾಮೇಗೌಡ,ಪ್ರೊಫೆಸರ್ ಪದ್ಮಾ ಶೇಖರ್, ಡಾ.ಜಿ.ಕೃಷ್ಣಪ್ಪ, ಪ್ರೊ.ಎಂ.ಜಿ. ಚಂದ್ರಶೇಖರಯ್ಯ, ಡಾ. ಹೆಚ್.ಚಂದ್ರಶೇಖರ್ ಮತ್ತು ಡಾ.ಜಯಂತಿ ಮನೋಹರ್ ಇವರು ಕೃತಿ ಕುರಿತು ಮಾಡಿರುವ ಮೌಲ್ಯಮಾಪನ ಹಾಗೂ ಬರೆದಿರುವ ಉತ್ತೇಜಕ ಮಾತುಗಳಿಗೆ ನಾನು ಋಣಿಯಾಗಿದ್ದೇನೆ.

೨೦೦೮ನೇ ಸಾಲಿನ 'ಸಂಕೀರ್ಣ' ವಿಭಾಗದಲ್ಲಿ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದ್ದು ನನ್ನ ಆಸಕ್ತಿಯನ್ನು ಮತ್ತಷ್ಟು ಉತ್ತೇಜಿಸಿದಂತಾಗಿದೆ.

ಮೂರನೆಯ ಮುದ್ರಣ ಮತ್ತು ಪ್ರಕಟಣೆಯ ಹೊರೆ ಹೊತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಕೃತಜ್ಞತೆಗಳು. ಅಧ್ಯಕ್ಷರಾದ ಡಾ.ಸಿದ್ಧಲಿಂಗಯ್ಯನವರ ಆಸಕ್ತಿಯನ್ನು ನಾನು ಮಾತಿನಲ್ಲಿ ಅಭಿವ್ಯಕ್ತಿಸಲಾರೆ.

ಅಧ್ಯಕ್ಷರಿಗೆ ಎಲ್ಲ ಹಂತದಲ್ಲಿ ಸಲಹೆ ಸಹಕಾರ ನೀಡಿದ ಕನ್ನಡ ಪುಸ್ತಕ

ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ ಮತ್ತು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಕೆ.ಮುಕುಂದನ್‌ವರಿಗೂ ನನ್ನ ಕೃತಜ್ಞತೆಗಳು. ಕರಡನ್ನು ಮೈಯೆಲ್ಲಾ ಕಣ್ಣಾಗಿಸಿಕೊಂಡು ತಿದ್ದಿಕೊಟ್ಟ ಶ್ರೀ ವೈ.ಜಿ.ಜಗದೀಶ್ ಮತ್ತು ಡಾ.ಬೈರಮಂಗಲ ರಾಮೇಗೌಡ,ನಂತರ ಕಣ್ಣಾಯಿಸಿದ ಡಾ.ನಟರಾಜ ಹುಳಿಯಾರ್, ಮುಖಪುಟ ವಿನ್ಯಾಸಕರಾದ ಮುರಳೀಧರ ರಾಠೋಡ್ ಇವರಿಗೆ ನಾನು ಆಭಾರಿ.

ದಿನಾಂಕ: ೧೬.೦೮.೨೦೧೦ **ಸಿ. ಎಚ್. ಹನುಮಂತರಾಯ**
ಬೆಂಗಳೂರು.

ಅಪರಾಧಿ ಜಗತ್ತಿನ ಮಾನವೀಯ ಮುಖಗಳು

ವಕೀಲೊಬ್ಬರ ವಗ್ಯೆರೆಗಳು ಪುಸ್ತಕದ ಕರ್ತೃ ಸಿ.ಎಚ್. ಹನುಮಂತರಾಯ ಅವರು ವಕೀಲಿ ವೃತ್ತಿಯಲ್ಲಿ ದೊಡ್ಡ ಸಾಧನೆಯನ್ನು ಮಾಡಿದವರು. ಕ್ರಿಮಿನಲ್ ವಕೀಲರಾಗಿ ಅವರು ನಡೆದುಬಂದ ದಾರಿಯೇ ಒಂದು ರೋಚಕ ಕತೆ. ಹೈಸ್ಕೂಲು ತರಗತಿಗಳಲ್ಲಿದ್ದಾಗಲೇ ವಕೀಲನಾಗಬೇಕೆಂಬ ಆಕಾಂಕ್ಷೆ ಹೊತ್ತು ಅವರು ಈ ದಿಕ್ಕಿನಲ್ಲಿ ತಮ್ಮನ್ನು ರೂಪಿಸಿಕೊಂಡರು. ಅವರು ಮತ್ತು ನಾನು ಒಂದೇ ಕಾಲಮಾನದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದವರು. ಅಂದಿನಿಂದಲೂ ಅವರು ಖಚಿತತೆ, ನಿಷ್ಠೆಗೆ ಬದ್ಧರಾಗಿರುವವರು. ಸ್ನೇಹವನ್ನು ಬೆಳೆಸಿಕೊಳ್ಳುವುದರಲ್ಲಿ ಸದಾ ಆಸಕ್ತರು. ವಿದ್ಯಾರ್ಥಿಯಾಗಿದ್ದಾಗ ಪ್ರೀತಿಯ ಗುರು ಲಂಕೇಶರಿಗೆ ಪ್ರಿಯರಾಗಿದ್ದರು. ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಇವರು ಕಾನೂನಿನ ಕ್ಷೇತ್ರವನ್ನು ಆಯ್ದುಕೊಳ್ಳುತ್ತಾರೆಂದು ನನಗೆ ಅನ್ನಿಸಿರಲಿಲ್ಲ. ಆದರೆ ಅವರ ಪುಸ್ತಕವನ್ನು ಓದುತ್ತ ಹೋದಂತೆ ಅವರು ವಕೀಲಿ ವೃತ್ತಿಯ ಬಗ್ಗೆ ಇಟ್ಟುಕೊಂಡಿದ್ದ ಆಸಕ್ತಿ ಎಷ್ಟು ಗಾಢವಾದದ್ದು ಎನ್ನುವುದು ತಿಳಿಯುತ್ತದೆ.

ನ್ಯಾಯದ ಜ್ಞಾನ ಅನೇಕ ಸೂಕ್ಷ್ಮಗಳನ್ನು ಒಳಗೊಂಡು ಬೆಳೆಯುತ್ತದೆ. ಹಿಂದೆ ಇದ್ದ ನ್ಯಾಯದ ಕಲ್ಪನೆಗಳಿಗೂ ಈ ಹೊತ್ತಿನ ನ್ಯಾಯದ ಕಲ್ಪನೆಗಳಿಗೂ ಅಗಾಧ ವ್ಯತ್ಯಾಸಗಳಿವೆ. ನ್ಯಾಯದ ಕಲ್ಪನೆ ಹೀಗೆ ಸೂಕ್ಷ್ಮಗೊಳ್ಳುತ್ತಿರುವುದರಿಂದ ಮನುಷ್ಯ ಕೂಡ ಅನ್ಯಾಯದ ವಿವಿಧ ಪರಿಗಳನ್ನು ಕಂಡುಕೊಳ್ಳುವುದರತ್ತ ನಿರಂತರವಾಗಿ ಚಲಿಸುತ್ತಿದ್ದಾನೆ. ಎಂಥ ಅನ್ಯಾಯಕ್ಕೆ ಕೈ ಹಚ್ಚಿದರೂ ನ್ಯಾಯ ಪದ್ಧತಿಯಲ್ಲಿ ರಕ್ಷಣೆಗೆ ಜಾಗ ಇದೆ ಎಂದು ತಿಳಿಯುತ್ತಾನೆ. ಮನುಷ್ಯ – ಸಮಾಜ – ಕಾನೂನು ಇವುಗಳ ಸಂಬಂಧ ನೇರವಾದದ್ದಲ್ಲ ತುಂಬ ಸಂಕೀರ್ಣವಾದದ್ದು, ಅನೇಕ ಒಳನೆಲೆಗಳ ಹೆಣಿಗೆಯಿಂದ ಕೂಡಿದ್ದು. ಮನುಷ್ಯನ ಕ್ರಿಯೆಗಳು, ನಡವಳಿಕೆಗಳು ಹೇಗಿರಬೇಕೆಂದು ನಮ್ಮ ರಾಜಕೀಯ ವ್ಯವಸ್ಥೆ, ಧರ್ಮ, ಕಾನೂನು ಮೇಲಿಂದ ಮೇಲೆ ಸೂಚನೆಗಳನ್ನು ಕೊಡುತ್ತಲೇ ಇರುತ್ತವೆ. ಆದರೆ ಮನುಷ್ಯರು ಈ ಎಲ್ಲವನ್ನೂ ತಿಳಿದು ತಮ್ಮ ತಮ್ಮ ರೀತಿಗಳಲ್ಲಿ ನಡೆಯುತ್ತಲೇ ಇದ್ದಾರೆ. ಮನುಷ್ಯರ ಲೋಕದ ಗತಿ, ಕಾನೂನು ನಿರೂಪಿಸುವ ಲೋಕ ಗತಿ ಇವೆರಡರ ನಡುವಣ ಸಂಬಂಧಗಳ ಜಿಜ್ಞಾಸೆ ನಿರಂತರವಾದದ್ದು.

'ವಕೀಲರೊಬ್ಬರ ವಗೈರೆಗಳು' ಕೇವಲ ಮೊಕದ್ದಮೆಗಳನ್ನು ಕುರಿತ ದಾಖಲೆಗಳಲ್ಲ. ಇದರಲ್ಲಿ ಮನುಷ್ಯಲೋಕದ ಅಂತರಂಗದ ಜಗತ್ತಿನ ನಿಗೂಢ ವಿವರಗಳಿವೆ. ಇಲ್ಲಿ ಒಂದು ವಿವರ ಮತ್ತೊಂದು ವಿವರದೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತ ಕಥನವೇ ಆಗುತ್ತ ಬೆಳೆಯುತ್ತದೆ. ವಕೀಲನೊಬ್ಬ ಕಠಿಣ ಪ್ರಕರಣಗಳನ್ನು ಮೈಮೇಲೆ ಎಳೆದುಕೊಂಡು ಅದಕ್ಕೆ ಎದುರಾಗಬೇಕೆಂಬ ಛಲದಿಂದ ಹೊರಟ ಧೋರಣೆಯಿಂದ ಪಡೆದ ಅನುಭವಗಳು ಈ ಪುಸ್ತಕದ ಮೂಲದ್ರವ್ಯವಾಗಿದೆ. ಜೀವನ್ಮರಣಗಳ ಮಧ್ಯೆ ಸೆಣೆಸುವ ವಕೀಲನಾಗಬೇಕೆಂಬ ಒಳಪ್ರೇರಣೆ – ಈ ಕೃತಿ ನಿರೂಪಣೆಯ ಮುಖ್ಯ ಅಂಶವಾಗಿದೆ.

ಈ ಪುಸ್ತಕ ಅನೇಕ ನೆಲೆಗಳಿಂದ ಓದಬಹುದಾದ ಪುಸ್ತಕ. ಕೃತಿಯ ಬಗ್ಗೆ ಕಠೋರ ನಿಷ್ಠೆ, ಸಂವೇದನೆ, ಜೀವನ ವೃತ್ತಾಂತ, ಸುತ್ತಣ ಆಗುಹೋಗುಗಳನ್ನು ಪರಿಶೀಲಿಸುವ ಸಾಕ್ಷಿ ಪ್ರಜ್ಞೆ, ಈಗಾಗಲೇ ವಿವರಿಸಿದಂತೆ ದಟ್ಟವಾದ ವಿವರ ಪ್ರಪಂಚ ಇವುಗಳೆಲ್ಲ ಮಹತ್ವದ ಕಾದಂಬರಿಯೊಂದಕ್ಕೆ ಧಾತುವಾಗಬಲ್ಲಷ್ಟು ಗಟ್ಟಿಯಾದದ್ದಾಗಿವೆ. ಕಾದಂಬರಿಯನ್ನೋ ಸಣ್ಣಕತೆಯನ್ನೋ ಬರೆಯುವ ಉದ್ದೇಶ ಲೇಖಕರದ್ದಲ್ಲ. ಆದರೆ ಇಲ್ಲಿನ ಒಂದೊಂದು ಬರಹವನ್ನು ಓದುತ್ತ ಹೋದಂತೆ ಇವು ಕತೆಯಾಗುವ ಹವಣಿಕೆಯಲ್ಲಿವೆ ಎಂದು ತೋರುತ್ತದೆ.

ಸಾಹಿತ್ಯದ ನಿರ್ದಿಷ್ಟ ಪ್ರಭೇದಗಳ ನೆಲೆಯನ್ನು ಒಡೆದು ಯಾವ ವರ್ಗೀಕರಣಕ್ಕೂ ಸಿಲುಕದ ಬರಹದ ಕ್ರಮಗಳನ್ನು ಲೇಖಕರು ಎಂದಿನಿಂದಲೂ ಶೋಧಿಸುತ್ತ ಬಂದಿದ್ದಾರೆ. ನಿರ್ದಿಷ್ಟ ವರ್ಗೀಕರಣಕ್ಕೆ ಬದ್ಧವಾಗದ ಕೃತಿಯೊಂದನ್ನು ಸಿ.ಎಚ್.ಹನುಮಂತರಾಯ ಕನ್ನಡದ ಸಂದರ್ಭದಲ್ಲಿ ಕೊಟ್ಟಿದ್ದಾರೆ.

ಕಾನೂನಿನ ವಲಯದ ಆವರಣದಲ್ಲಿದ್ದರೂ ಮನುಷ್ಯ ತನ್ನದೇ ಆದ ಬದುಕಿನಲ್ಲಿ ತೊಡಗಿದ್ದಾನೆ ಎಂಬ ನಿಜವನ್ನು ಈ ಕೃತಿ ಎಲ್ಲ ಹಂತಗಳಲ್ಲಿಯೂ ದಾಖಲಿಸಿದೆ. ಮನುಷ್ಯನು ವಿಕ್ಷಿಪ್ತತೆ, ವಿಪರ್ಯಾಸ, ತನ್ನದೇ ಆದ ಅನುಭೂತಿಗಳ ಅನೂಹ್ಯವೂ ನಿಗೂಢವೂ ಆದ ವ್ಯಕ್ತಿತ್ವದಿಂದ ಕೂಡಿದ್ದಾನೆಂಬುದನ್ನು ಇಲ್ಲಿನ ಬರಹಗಳು ಮನಗಾಣಿಸುತ್ತವೆ.

ಸಾಹಿತ್ಯದ ವಿದ್ಯಾರ್ಥಿಯಾದ ಸಿ.ಎಚ್. ಹನುಮಂತರಾಯರು ಇಲ್ಲಿನ ಬರಹಗಳನ್ನು ರೂಪಕ ಮಾರ್ಗದಲ್ಲಿ ಪ್ರಸ್ತುತಗೊಳಿಸಿದ್ದಾರೆ. ಕಾನೂನಿನ ಸೂಕ್ಷ್ಮತೆಯನ್ನು ಎಲ್ಲಿಯೂ ತಾಂತ್ರಿಕಗೊಳಿಸದೆ ಆತ್ಮೀಯವಾದ ನೇರ ನಿರೂಪಣೆಯ ಕ್ರಮದಲ್ಲಿ ನಿರೂಪಿಸಿದ್ದಾರೆ. 'ರುದ್ರಮಣೀಯ ಬೆಟ್ಟದಲ್ಲಿ ಹೆಜ್ಜೇನಿನ ಹೊಳೆ', 'ದೆವ್ವದ

ದಿಗಿಲಿನಲ್ಲಿ', 'ಮಾತಾಡುವ ಸಸ್ಯಗಳ ಯಕ್ಷಲೋಕ', 'ತಾಜಮಹಲ್ ಬಡವರ ಪ್ರೇಮವನ್ನು ಅಣಕಿಸುತ್ತದೆ', 'ಕುಮಾರನ ಚಿತ್ತ ಛಿದ್ರಗೊಳಿಸಿದ ಸಮುದ್ರವತಿ', 'ಗರುಡಗಣ್ಣುಗಳ ಗಾರುಡಿಗ' –ಹೀಗೆ ಅನೇಕವನ್ನು ಹೆಸರಿಸಬಹುದು. ವೈಯಕ್ತಿಕ ಸಂಗತಿಗಳಿಂದ ಸುತ್ತಣ ಪರಿಸರದ ಸೂಕ್ಷ್ಮಗಳನ್ನು ಕಥಿಸುವ ಸಿ.ಎಚ್. ಹನುಮಂತರಾಯರ ಈ ಪುಸ್ತಕ ಇತೀಚಿನ ದಿನಗಳಲ್ಲಿ ಒಂದು ಅಪರೂಪದ ಪುಸ್ತಕ.

–ಕಿ.ರಂ.ನಾಗರಾಜ

ಪರಿವಿಡಿ

1

ಕಕ್ಷಿದಾರರೇ ತಮ್ಮ ವಕೀಲರನ್ನು ಮರ್ಡರ್ ಮಾಡಿದರು

ನಾನು ಬೆಳೆದದ್ದು ಅವಿಭಕ್ತ ಕುಟುಂಬದಲ್ಲಿ. ನನ್ನ ದೊಡ್ಡಪ್ಪ ಮನೆಯ ಒಡೆಯ. ಅವರ ಮಕ್ಕಳಿಗೇ ಹೆಚ್ಚಿನ ಪ್ರಾಧಾನ್ಯತೆಯಿತ್ತು. ನನ್ನ ತಂದೆ ಹನುಮಂತಯ್ಯ ಜಗಳಗಂಟನಲ್ಲ. ಆದರೆ, ನನ್ನ ತಾಯಿ ಅಕ್ಕಚ್ಚಮ್ಮ ಗಟ್ಟಿಗಿತ್ತಿ.

ನನ್ನೂರು ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಕ್ಕಬೆಳವಂಗಲ. ಮಧ್ಯಮ ತರಗತಿಯ ರೈತ ಕುಟುಂಬ ನಮ್ಮದು. ನಮ್ಮ ಹೊಲದಲ್ಲಿದ್ದ ಹಲಸಿನಮರ ಸುತ್ತಲಿನ ಹತ್ತು ಹಳ್ಳಿಗಳಲ್ಲಿ ಪ್ರಸಿದ್ಧವಾಗಿತ್ತು. ಕಮ್ಮಿಯೆಂದರೂ ಎರಡು ಸಾವಿರ ಕಾಯಿಗಳನ್ನು ಬಿಡುತ್ತಿತ್ತು. ಹಣ್ಣಾದಾಗ ರಕ್ತ ಕೆಂಪು ಬಣ್ಣ ತಾಳುತ್ತಿತ್ತು. ಅದರ ರುಚಿಗಾಗಿ ಜನರಂತೆಯೇ ಕೋತಿಗಳೂ ಹಣ್ಣುಗಳನ್ನು ಕದಿಯಲು ಬರುತ್ತಿದ್ದವು. ಹೀಗಾಗಿ ನನ್ನನ್ನು ಆ ಮರದ ಕಾವಲಿಗೆ ಕಳಿಸುತ್ತಿದ್ದರು. ನನ್ನ ಕಾವಲನ್ನು ಪರೀಕ್ಷಿಸಲು ದೊಡ್ಡಪ್ಪ ಇನ್ಸ್‌ಪೆಕ್ಟರ್‌ರಂತೆ ಬಂದು ಹೋಗುತ್ತಿದ್ದರು. ನಾನು ಪಕ್ಕದ ತೊರೆಗೆ ಈಜಲು ನನ್ನ ಸ್ನೇಹಿತರೊಂದಿಗೆ ಹೋದಾಗ ಕೋತಿಗಳು

ಹಣ್ಣುಗಳನ್ನು ಕೆಳಕ್ಕೆ ಬೀಳಿಸುತ್ತಿದ್ದವು. ಕೋತಿಗಳು ಹೆಂಗಸರಿಗೆ ಹೆದರುತ್ತಿರಲಿಲ;. ಪ್ರಾಥಮಿಕ ಶಾಲೆಯ ಹುಡುಗನಾಗಿದ್ದರೂ ನನಗೆ ಹೆದರುತ್ತಿದ್ದವು. ಮರ ಕಾಯುವಾಗ ನಾನು ಸುಮ್ಮನೆ ಕೂರದೆ ಸೋಮೇಶ್ವರ ಶತಕ ಮತ್ತು ಸರ್ವಜ್ಞನ ವಚನಗಳನ್ನು ಕಂಠಪಾಠ ಮಾಡುತ್ತಿದ್ದೆ. ನಮ್ಮ ಹೋಬಳಿ ದೊಡ್ಡಬೆಳವಂಗಲದ ಲೈಬ್ರರಿಯಿಂದ ವಿವಿಧ ಪುಸ್ತಕಗಳನ್ನು ತಂದು ಓದುತ್ತಿದ್ದೆ.

ನಮ್ಮ ಹಳ್ಳಿಗೆ 'ಪ್ರಜಾವಾಣಿ' ಮತ್ತು 'ತಾಯಿನಾಡು' ಪತ್ರಿಕೆಗಳು ಬರುತ್ತಿದ್ದವು. ನಮ್ಮ ಮನೆಯ ಹುಡುಗರ ಪೈಕಿ ನಾನು ನಿರರ್ಗಳವಾಗಿ ಓದುತ್ತಿದ್ದುದರಿಂದ ನನ್ನ ದೊಡ್ಡಪ್ಪ ನನ್ನಿಂದ 'ಪ್ರಜಾವಾಣಿ'ಯನ್ನು ಓದಿಸುತ್ತಿದ್ದ. ನಾನು ಓದತೊಡಗಿದರೆ ನಮ್ಮ ಮನೆಯ ಆಳುಕಾಳುಗಳಲ್ಲದೆ ಪಕ್ಕದ ಮನೆಯ ರೈತರೂ ಬಾಗಿಲಾಚೆ ನಿಂತು ಕೇಳುತ್ತಿದ್ದರು.

ಬೆಂಗಳೂರಿನ ಖ್ಯಾತ ವಕೀಲ ಶ್ರೀನಿವಾಸ್ ಅಯ್ಯಂಗಾರ್‌ರೂ ಸೇರಿದಂತೆ ಅವರ ಕುಟುಂಬದ ಏಳು ಮಂದಿಯ ಕೊಲೆಯಾಗಿತ್ತು. ಕೊಲೆಗಡುಕರು ಬೇರೆ ಯಾರೂ ಆಗಿರಲಿಲ್ಲ. ಅಯ್ಯಂಗಾರ್‌ರ ಮೂವರು ಕಕ್ಷಿದಾರರೇ ಆಗಿದ್ದರು. ಈ ಕೊಲೆ ಕೇಸಿನ ಬಗ್ಗೆ ಸತತವಾಗಿ ಸುದ್ದಿಗಳು ಪತ್ರಿಕೆಯಲ್ಲಿ ಬರತೊಡಗಿದ್ದವು.

ಅಯ್ಯಂಗಾರ್‌ರ ಮನೆ ಈಗಿನ ಗಾಂಧಿನಗರದಲ್ಲಿ ಎರಡೂವರೆ ಎಕರೆ ವಿಸ್ತೀರ್ಣದ ಬೃಹತ್ ಕಾಂಪೌಂಡಿನಲ್ಲಿತ್ತು. ಮೋತಿಮಹಲ್ ಲಾಡ್ಜ್ ಮತ್ತು ಸುಖಸಾಗರ್ ಹೋಟೆಲ್‌ಗಳಿರುವ ಜಾಗ ಅವರ ಕಾಂಪೌಂಡ್ ವ್ಯಾಪ್ತಿಯಲ್ಲಿತ್ತು.

ಭಾರೀ ಶ್ರೀಮಂತರಾಗಿದ್ದ ಅಯ್ಯಂಗಾರ್‌ರಿಗೆ ಒಂದು ಗಂಡು, ಒಂದು ಹೆಣ್ಣು – ಇಬ್ಬರು ಮಕ್ಕಳು. ಮಗ ಹುಚ್ಚನಾಗಿದ್ದ. ಮನೆಯ ಹಿಂಭಾಗದ ರೂಮೊಂದರಲ್ಲಿ ಅವನನ್ನು ಕಟ್ಟಿ ಹಾಕಿರುತ್ತಿದ್ದರು. ರಾತ್ರಿಯಾಗುತ್ತಿದ್ದಂತೆ ಅವನ ಕೂಗಾಟ ತಾರಕಕ್ಕೇರುತ್ತಿತ್ತು. ಈ ಬೃಹತ್ ಬಂಗಲೆಗೆ ಇಬ್ಬರು ವಾಚ್‌ಮನ್‌ಗಳಿದ್ದರು.

ಅಯ್ಯಂಗಾರ್‌ರನ್ನು ಕೊಂದವರು ಪಳಗಿದ ಡಕಾಯಿತರಾಗಿದ್ದರು ಮತ್ತು ಅವರು ಸಿಕ್ಕಿಹಾಕಿಕೊಂಡಾಗಲೆಲ್ಲ ಕೋರ್ಟಿನಲ್ಲೇ ಬಿಡುಗಡೆ ಮಾಡಿಸುತ್ತಿದ್ದವರು ಅಯ್ಯಂಗಾರ್ ವಕೀಲರೇ ಆಗಿದ್ದರು.

ತಮ್ಮ ವಕೀಲರನ್ನೇ ಡಕಾಯಿತರು ಏಕೆ ಕೊಂದರು ಎನ್ನುವುದು ಎಲ್ಲರಿಗೂ ಚಿದಂಬರ ರಹಸ್ಯವಾಗಿ ಕಾಡುತ್ತಿತ್ತು. ಜನರು ಆಡಿಕೊಳ್ಳುತ್ತಿದ್ದ ಮಾತುಗಳ ಅಭಿಪ್ರಾಯದಂತೆ ಅಯ್ಯಂಗಾರರು ಡಕಾಯಿತರಿಂದ ತಮ್ಮ ವಕಾಲತ್‌ಗೆ ಫೀಜು ಪಡೆದುಕೊಳ್ಳುತ್ತಿರಲಿಲ್ಲವಂತೆ ; ಅವರು ದೋಚಿದ ಒಡವೆಗಳಲ್ಲಿ ಭಾಗವನ್ನು

ಪಡೆದುಕೊಳ್ಳುತ್ತಿದ್ದರಂತೆ ! ಒಮ್ಮೆ ಈ ರೀತಿ ಭಾಗ ಮಾಡಿಕೊಳ್ಳುವಾಗ ಅಯ್ಯಂಗಾರ್ ವಕೀಲರಿಗೂ ಮತ್ತು ಡಕಾಯಿತರಿಗೂ ಭಿನ್ನಾಭಿಪ್ರಾಯ ಬಂದು ಅದು ಜಗಳಕ್ಕೆ ತಿರುಗಿ ಅಂತಿಮವಾಗಿ ಅಯ್ಯಂಗಾರ್ ಮತ್ತವರ ಕುಟುಂಬದ ಕೊಲೆಯಲ್ಲಿ ಪರ್ಯಾವಸಾನಗೊಂಡಿತು.

ಗೋವಿಂದರೆಡ್ಡಿ, ನಾರಾಯಣರೆಡ್ಡಿ ಮತ್ತು ಮುನಿಸ್ವಾಮಿ – ಈ ಮೂವರು ಅಯ್ಯಂಗಾರ್‌ರನ್ನು ಕೊಂದ ಡಕಾಯಿತರು.

1954 ರಲ್ಲಿ ಅಯ್ಯಂಗಾರ್ ಡಕಾಯಿತರೊಂದಿಗೆ ಜಗಳ ಮಾಡಿಕೊಂಡ ಮೇಲೆ ಭೀತಿ ಅವರನ್ನು ಕಾಡತೊಡಗಿತು. ಬಂಗಲೆಯ ಕಾವಲನ್ನು ಬಿಗಿಗೊಳಿಸಿದರು; ಬಾಡಿಗಾರ್ಡ್‌ಗಳನ್ನಿರಿಸಿಕೊಂಡರು; ಸಮಯಕ್ಕಿರಲಿ ಎಂದು ಪೊಲೀಸರೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡರು.

ಒಂದು ರಾತ್ರಿ ಮೂವರು ಡಕಾಯಿತರು ಅಯ್ಯಂಗಾರ್‌ರ ಬಂಗಲೆಯ ಹಿಂಭಾಗಕ್ಕೆ ಗಡಾರ ಮತ್ತು ಹತಾರಗಳೊಂದಿಗೆ ಬಂದಿಳಿದರು. ಅಯ್ಯಂಗಾರ್‌ರ ಹುಚ್ಚುಮಗ ಜೋರಾಗಿ ಚೀರಿಕೊಳ್ಳುತ್ತಿದ್ದ. ಅವನು ಚೀರುವ ಸಮಯಕ್ಕೇ ಸರಿಯಾಗಿ ಕಿಟಕಿಯ ಸರಳುಗಳಿಗೆ ಗಡಾರದಿಂದ ಏಟು ಹಾಕುತ್ತಿದ್ದರು. ಹೀಗಾಗಿ ಕಿಟಕಿ ಮುರಿಯುವ ಸದ್ದು ಹುಚ್ಚು ಮಗನ ಚೀರಿನ ಸದ್ದಿನಲ್ಲಿ ಅಡಗಿಹೋಗುತ್ತಿತ್ತು. ಕಿಟಕಿ ಮುರಿದಾಗಿತ್ತು. ಇನ್ನೇನು ಒಳನುಗ್ಗಬೇಕು ಎನ್ನುವಷ್ಟರಲ್ಲಿ ವಾಚ್‌ಮನ್ ಹುಚ್ಚುಮಗನ ಹೆಚ್ಚಿದ ಕೂಗನ್ನು ಕೇಳಿ ಅವನನ್ನು ಸಂತೈಸಲು ಬಂದ. ಆ ಕ್ಷಣವೇ ಅವನನ್ನು ಡಕಾಯಿತರು ಹೊಡೆದುರುಳಿಸಿದರು. ಒಳಹೊಕ್ಕೊಡನೆ ಮೊದಲು ಕಣ್ಣಿಗೆ ಬಿದ್ದವರು ಅಯ್ಯಂಗಾರ್‌ರ ಮನೆಗೆ ಅದೇನೋ ಕಾರಣಕ್ಕೆ ಬಂದಿದ್ದ ಇಬ್ಬರು ಸಂಬಂಧೀ ಹೆಣ್ಣುಮಕ್ಕಳು. ಡಕಾಯಿತರನ್ನು ನೋಡಿ ಅವರು ಚೀರಿಕೊಳ್ಳಲಾರಂಭಿಸಿದಾಗ ಅವರನ್ನು ರಕ್ತದ ಮಡುವಿನಲ್ಲಿ ಕೆಡವಿದರು. ಮೂರು ಕೊಲೆ ಮಾಡಿದ ಆ ಘಳಿಗೆಯಲ್ಲಿ ಡಕಾಯಿತರಿಗೆ ಮೈಯಲ್ಲಿ ರಾಕ್ಷಸ ಹೊಕ್ಕಂತಾಗಿತ್ತು. ಅಯ್ಯಂಗಾರರ ಸಂಬಂಧೀ ಹೆಂಗಸರ ಎರಡು ಚಿಕ್ಕ ಹಸುಳೆಗಳನ್ನೂ ಕಣ್ ಪಿಳುಕಿಸುವುದರಲ್ಲಿ ಕೊಚ್ಚಿ ಹಾಕಿದರು. ಇದನ್ನೆಲ್ಲ ನೋಡುತ್ತಿದ್ದ ಅಯ್ಯಂಗಾರ್‌ರ ಮಗಳು ಸ್ಟೋರ್‌ರೂಮ್‌ನಲ್ಲಿ ಹೋಗಿ ಅಡಗಿಕೊಂಡಳು. ಡಕಾಯಿತರು ನೇರವಾಗಿ ಅಯ್ಯಂಗಾರ್‌ರ ಬೆಡ್‌ರೂಮಿಗೆ ದಾಳಿಯಿಟ್ಟರು. ಬಾಗಿಲನ್ನು ಮುರಿದು ಒಳಹೊಕ್ಕಾಗ ಅಯ್ಯಂಗಾರ್‌ರು "ನನ್ನ ಸಂಪತ್ತನ್ನೆಲ್ಲ ಒಯ್ಯಿರಿ, ನನ್ನನ್ನು ಮಾತ್ರ ಬಿಟ್ಟುಬಿಡಿ" ಎಂದು ಅಂಗಲಾಚಿದರು. "ನಮಗೆ ಬೇಕಿರುವುದು ನಿಮ್ಮ ಜೀವಗಳು, ಸಂಪತ್ತಲ್ಲ" ಎಂದು ಅಯ್ಯಂಗಾರ್‌ರ ಕಣ್‌ಮುಂದೆಯೇ ಅವರ ಹೆಂಡತಿಯನ್ನೂ

ಕೊಚ್ಚಿ ತಮ್ಮ ಪಾದಗಳ ಮೇಲೆ ಇಟ್ಟಿದ್ದ ಅಯ್ಯಂಗಾರ್‌ರ ರುಂಡವನ್ನು ಚೆಂಡಾಡಿದರು....

ತಡವಾಗಿ ಬಂದ ಮತ್ತೋರ್ವ ವಾಚ್‌ಮನ್‌ನನ್ನೂ ಕೊಂದು ಡಕಾಯಿತರು ಓಡಿಹೋದರು.

ಅದೆಷ್ಟೋ ಸಮಯದ ನಂತರ ಸ್ಟೋರ್‌ರೂಮ್‌ನಿಂದ ಹೊರಬಂದ ಮಗಳು ತನ್ನವರ ಹೆಣಗಳು ವಿಕಾರವಾಗಿ ರಕ್ತಸಿಕ್ತಗೊಂಡು ಬಿದ್ದಿರುವುದನ್ನು ಕಂಡು ಕಿಟಾರನೇ ಕಿರುಚಿಕೊಂಡದ್ದೇ ಹುಚ್ಚಿಯಾಗಿಬಿಟ್ಟಳು...

ಆಗ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ಕೊಲೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಹೋದರು ; ರೇವಣ್ಣ ಎನ್ನುವ ಇನ್ಸ್‌ಪೆಕ್ಟರ್‌ರನ್ನು ತನಿಖಾಧಿಕಾರಿ ಮಾಡಿದರು.

ಕಾಂಗ್ರೆಸ್ ಲೀಡರೂ ಆಗಿದ್ದ ಭಾಷ್ಯಮ್ ಅವರು ಮತ್ತು ಮಹೇಶಚಂದ್ರಗುರು ಎನ್ನುವ ವಕೀಲರು ಆರೋಪಿಗಳ ಪರ ವಾದಿಸಿದರು. ಆರೋಪಿಗಳಿಗೆ ಗಲ್ಲುಶಿಕ್ಷೆಯಾಯಿತು. ಸುಪ್ರೀಂಕೋರ್ಟ್‌ವರೆಗೂ ಆರೋಪಿಗಳು ಅಪೀಲ್ ಹೋದರೂ ಗಲ್ಲುಶಿಕ್ಷೆ ಬದಲಾಗಲಿಲ್ಲ. ರಾಜ್ಯದ ಗವರ್ನರ್ ಆಗಿದ್ದ ಜಯಚಾಮರಾಜೇಂದ್ರ ಒಡೆಯರ್ ಬಳಿ ದಯಾಯಾಚನೆ ಅರ್ಜಿ ಸಲ್ಲಿಸಿದ್ದರು. ಅದಕ್ಕವರು 'ಆ ಎರಡು ಹಸುಳೆಗಳನ್ನಾದರೂ ನೀವು ಕೊಲ್ಲದೇ ಹೋಗಿದ್ದರೆ ಕ್ಷಮೆ ನೀಡುತ್ತಿದ್ದೆ' ಎಂದರು. 1956-57ರ ಅವಧಿಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಆ ಮೂವರನ್ನೂ ಗಲ್ಲಿಗೇರಿಸಲಾಯಿತು.

ಈ ಕೇಸಿನ ಸವಾಲು, ಪಾಟಿ ಸವಾಲುಗಳು ವಿವರವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದನ್ನು ನಿತ್ಯ ಓದಿ ಹೇಳುತ್ತಿದ್ದಾಗ ನನ್ನ ದೊಡ್ಡಪ್ಪ ಮತ್ತು ಇತರರು ಕೇಸು ನಡೆಸುತ್ತಿದ್ದ ಪರ-ವಿರೋಧಿ ವಕೀಲರ ಬಗ್ಗೆ ಚಿತ್ರ ವಿಚಿತ್ರ ರೀತಿಯಲ್ಲಿ ತಮ್ಮ ಭಾವಾವೇಶಗಳನ್ನು ವ್ಯಕ್ತಪಡಿಸುತ್ತಿದ್ದರು. ಆಗಲೇ ನನಗನಿಸತೊಡಗಿತು, ಒಳಪ್ರೇರಣೆಯಾಗತೊಡಗಿತು ; ನಾನು ಮುಂದೆ ಆಗುವುದಾದರೆ ಜೀವನ್ಮರಣಗಳ ಮಧ್ಯೆ ಸೆಣಸುವ ವಕೀಲನಾಗಬೇಕು ಎಂದು.

2

ಕಳ್ಳರನ್ನು ಕೊಲೆಗಾರರನ್ನಾಗಿಸಿದ ಲಾಯರ್

"ಏನ್ ಮಗಾ ನನ್ನನ್ನ ಜಗಳಗಂಟಿ ಎಂದು ಬರೆಸಿದೀಯಂತೆ ಲಂಕೇಶ್ ಪತ್ರಿಕೇಲಿ?" ಎಂದು ವಯಸ್ಸಿನ ಭಾರದಿಂದ ಕುಸಿದಿರುವ ನನ್ನ ತಾಯಿ ಕೇಳಿದಾಗ ಚಕಿತಗೊಂಡೆ. ನನ್ನ ಅಂಕಣವನ್ನು ಆಕೆಗೆ ಓದಿ ಹೇಳಿದವರಾರೆಂದು ಕ್ಷಣಾರ್ಧದಲ್ಲಿ ತಿಳಿಯಿತು. "ಅಲ್ಲಮ್ಮ, ಮನೆಯಲ್ಲಿ ಏನಾದರೂ ತಾರತಮ್ಯ ನಡೆದರೆ ಯಾರೂ ಬಾಯಿ ಬಿಡುತ್ತಿರಲಿಲ್ಲ. ಚಿಕ್ಕಸೊಸೆಯಾಗಿದ್ದರೂ ನೀನು ದಿಟ್ಟವಾಗಿ ಪ್ರಶ್ನೆ ಮಾಡ್ತಿರಲಿಲ್ಲವೆ? ಅದಕ್ಕಾಗಿ ನಾನು ನನ್ನ ತಾಯಿ ಗಟ್ಟಿಗಿತ್ತಿ ಎಂದಿದ್ದು ತಪ್ಪಾ?" ಎಂದು ಮರುಪ್ರಶ್ನಿಸಿದೆ. "ಓ ಅಂಗಾ ಮಗಾ...." ಎಂದು ರಾಗ ಎಳೆದು ಸಮಾಧಾನಗೊಂಡಳು. ನನ್ನ ಮಾತುಗಳು ಅಕ್ಕಜ್ಜಮ್ಮನ ಭಾವಪರದೆಯ ಮೇಲೆ ಯಾವ ಪರಿಣಾಮ ಬೀರಿದವು ಎಂದು ಆಕೆಯ ಮುಖ ನೋಡುತ್ತಿರುವಂತೆಯೇ ನನ್ನ ಮನಸ್ಸು ಚಿಕ್ಕಬೆಳವಂಗಲದತ್ತ ಪ್ರಯಾಣ ಬೆಳೆಸಿಬಿಟ್ಟಿತ್ತು.....

ಅಂದು ಜನವರಿ ೨೬. ನಾವೆಲ್ಲ ಓದುತ್ತಿದ್ದ ನಮ್ಮ ಹಳ್ಳಿಯ ಸಮೀಪದ ದೊಡ್ಡ ಹೆಜ್ಜಾಲ ಗ್ರಾಮದ ಶಾಲೆಯ ಕಸಗುಡಿಸಿ, ನೀರಿನಿಂದ ತೊಳೆದು,

ಧ್ವಜಾರೋಹಣದ ಕಂಬನೆಟ್ಟು, ಧ್ವಜದಲ್ಲಿ ಹೂಗಳನ್ನು ಹಾಕಿ ಮೇಲಕ್ಕೇರಿಸಿಟ್ಟು ಹೋಗಿದ್ದೆವು. ಮಾರನೇ ದಿನ ಬೆಳಗ್ಗೆ ಧ್ವಜದ ದಾರವನ್ನು ಎಳೆದಾಗ ಧ್ವಜ ಬಿಚ್ಚಿಕೊಂಡು ಹೂಮಳೆಗರೆಯಲಿಲ್ಲ. ಎಳೆದಷ್ಟೂ ಕಗ್ಗಂಟಾಗತೊಡಗಿತು. ಮೇಷ್ಟ್ರು ನಾರಾಯಣರಾವ್‌ರ ಮುಖ ಕಳೆಗುಂದತೊಡಗಿತು. ಹುಡುಗರ ಸಾಲಿನಲ್ಲಿ ನಿಂತಿದ್ದ ನನ್ನೆಡೆಗೆ ನೋಡಿದ ನಾರಾಯಣರಾವ್ 'ಏ ಹನುಮಂತ್ರಾಯ' ಧ್ವಜಗಂಬ ಏರಿ ಬಿಡಿಸು ಕಗ್ಗಂಟನ್ನ' ಎಂದರು. ತಡಮಾಡದೆ ಅರವತ್ತು ಅಡಿಗಳಷ್ಟು ಎತ್ತರದ ಕಂಬವನ್ನು ಏರಿ ಧ್ವಜ ಹಾರಿಸಿ ಸರ್ರೆಂದು ಕೆಳಗಿಳಿದು ಬಂದು 'ಜನಗಣಮನ.....' ಹಾಡತೊಡಗಿದೆ, ಎಲ್ಲರೊಂದಿಗೆ.

ನಾರಾಯಣರಾವ್‌ರ ಪತ್ನಿ ಸುಬ್ಬಮ್ಮ ಸಹ ನಮ್ಮ ಶಾಲೆಯಲ್ಲೇ ಟೀಚರ್ ಆಗಿದ್ದರು. ನಾರಾಯಣರಾವ್ ಮಧ್ಯಾಹ್ನ ಊರಿಗೆ ಬಂದು ಧ್ವಜಸ್ತಂಭ ಏರಿದ ಸಾಹಸದ ಗುಣಗಾನ ಮಾಡಿದರು. ಈ ನನ್ನ ಸಾಹಸ ಹಳ್ಳಿಯಲ್ಲೆಲ್ಲ ಪ್ರಚಾರವಾಯಿತು. ನನ್ನ ದೊಡ್ಡಪ್ಪ ಮಾತ್ರ ನಿರ್ಲಿಪ್ತವಾಗಿ, "ಚಿಕ್ಕ, ಮಕ್ಕಳಿಗೆ ಅಟ್ಟಕ್ಕೇರಿಸಿದ್ರೆ ವಿದ್ಯೆ ಹತ್ತಲ್ಲ" ಎಂದು ತಮ್ಮ ಯಜಮಾನಿಕೆಯ ತೀರ್ಪು ನೀಡಿದರು.

ನಮ್ಮ ಹಳ್ಳಿಯ ಮೊಹರಂ ಹಬ್ಬದ ಬಾಬಯ್ಯನ ಗುಡಿಗೆ ದಿನಪತ್ರಿಕೆಯು ತಡವಾಗಿ ಬಂದಿತು. "ಮೂವರಿಗೆ ಗಲ್ಲು ಶಿಕ್ಷೆ" ಎಂದು ಬ್ಯಾನರ್ ಹೆಡ್‌ಲೈನ್‌ನಲ್ಲಿ ಶ್ರೀನಿವಾಸ್ ಅಯ್ಯಂಗಾರ್‌ರ ಕೊಲೆ ಕೇಸಿನ ತೀರ್ಪು ಪ್ರಕಟವಾಗಿತ್ತು. ಸತತವಾಗಿ ಆ ಕೊಲೆ ಪ್ರಕರಣದ ಸುದ್ದಿಯನ್ನು ಓದಿಸಿಕೊಳ್ಳುತ್ತಿದ್ದ ನಮ್ಮ ಮನೆಯವರು ಮತ್ತು ಅಕ್ಕಪಕ್ಕದವರಿಗೆ ತಡೆಯಲಾಗದ ಕುತೂಹಲ. ವಿಶೇಷ ಸುದ್ದಿಯಾದ್ದರಿಂದ ಎಂದಿಗಿಂತಲೂ ದುಪ್ಪಟ್ಟು ಜನ ನಮ್ಮ ಮನೆಯಂಗಳದಲ್ಲಿ ನೆರೆದರು. ನಮ್ಮ ಮನೆಯ ಮಾದಿಗರ ಆಳುಗಳು ತಮ್ಮ ಹಕ್ಕು ಎನ್ನುವಂತೆ ತಲೆಬಾಗಿಲ ಹೊಸ್ತಿಲು ಮತ್ತು ಪಾವಟಿಗೆಗಳ ಮೇಲೆ ಬಂದು ಕೂತರೆ, ಬೇರೆ ಮನೆಯವರ ಆಳುಗಳು ಅಂಗಳದಲ್ಲಿ ನಿಂತುಕೊಂಡರು.

ನನ್ನ ದೊಡ್ಡಪ್ಪ ತಿಮ್ಮಣ್ಣಗೌಡರು ಅಂದು ಕೊಲೆ ಪ್ರಕರಣದ ಅಂತಿಮ ಮಜಲನ್ನು ತಿಳಿದುಕೊಳ್ಳಲು ಉದ್ವಿಗ್ನರಾಗಿ ಕೂತಿದ್ದರು.

ಹೊರಗಿನಿಂದ ಬಂದ ನಾನು ಮುಖ ತೊಳೆಯಲು ಬಚ್ಚಲು ಮನೆಗೆ ಹೋದೆ. ಇಂದು ಪ್ರಭಾವಶಾಲಿಯಾಗಿ ಓದಬೇಕು ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತ ಮುಖ ತೊಳೆಯತೊಡಗಿದೆ.

ನನ್ನ ದೊಡ್ಡಪ್ಪ ತಾಳ್ಮೆಗೆಟ್ಟು "ಲೇ ಹನುಮಂತ್ರಾಯ, ಅದೇನ್ ಮುಖಾ ತೊಳೀತೀಯೊ? ನಿನ್ ತಿಕಾ ನಾರೊಲ್ಲ ಬೇಗ ಬಾ" ಎಂದು ಗುಡುಗಿದರು.

ಮನೆಯೊಳಗೆ ಸೇರಿದ್ದ ಹೆಂಗಸರು ಲಕಲಕ ಬಾಯಿ ಮಾಡುತ್ತಿದ್ದರು. ನನ್ನ ದೊಡ್ಡಪ್ಪ ಯಜಮಾನಿಕೆಯ ಗತ್ತಿನಿಂದ 'ಲೇ ಸುಮ್ನಾಗ್ರೆ' ಎಂದು ಗುಡುಗಿದರು. ಅಂಗಳದಲ್ಲಿ ನಿಂತು ಗಲಾಟೆ ಮಾಡುತ್ತಿದ್ದ ಪಡ್ಡೆ ಆಳುಗಳಿಗೆ ಸೀನಿಯರ್ ಆಳುಗಳು "ಲೇ ನಿಮ್ ಹೆಂಡ್ರನ್ನಾ ಕ್ಯಾಯ ಸುಮ್ನಾಗ್ರಲೇ...." ಎಂದು ಗದರಿಸಿದರು.

ಗಲ್ಲುಶಿಕ್ಷೆಯ ತೀರ್ಪನ್ನು ಓದತೊಡಗಿದೆ. ಮಧ್ಯೆ ಮಧ್ಯೆ ನನ್ನ ಓದನ್ನು ನಿಲ್ಲಿಸುವಂತೆ ದೊಡ್ಡಪ್ಪನಿಂದ ಆದೇಶವಾಗತೊಡಗಿತು. ಸವಾಲು, ಪಾಟಿ ಸವಾಲು ಮತ್ತು ತೀರ್ಪುಗಳ ಬಗ್ಗೆ ಚರ್ಚೆ ನಡೆಯತೊಡಗಿತು.

"ಬರೀ ಕಳ್ಳತನ, ರಾಬರಿ, ಡಕಾಯಿತಿಗಳನ್ನು ಮಾಡಿಕೊಂಡಿದ್ದವರನ್ನು ಕೊಲೆಗಾರರಾಗುವಂತೆ ಪ್ರಚೋದಿಸಿದ್ದೇ ಲಾಯರ್ರು ಶ್ರೀನಿವಾಸ ಅಯ್ಯಂಗಾರ್" ಎಂದು ನಮ್ಮ ದೊಡ್ಡಪ್ಪ ತಲೆಬಾಗಿಲ ಮುಂದೆ ಕೂತಿದ್ದ ಆಳುಗಳತ್ತ ನೋಡಿ ಹೇಳಿದರು.

ಅದಕ್ಕೆ ಆಳಗಳು "ಹೌದು ಸೋಮಿ, ಹೌದು ಸೋಮಿ" ಎಂದರು.

ನನ್ನ ಅಪ್ಪ, "ಲಾಯರ್ನ ಕೊಲೆ ಮಾಡಿದ್ದು ತಪ್ಪಲ್ಲ. ಆ ಹಸುಳೆಗಳನ್ನೂ ಬಿಡದೆ ಮನೆಯೋರ್ನೆಲ್ಲ ಕೊಂದಾಕಿದ್ದು ತಪ್ಪು...." ಎಂದ. ಅದಕ್ಕೆ ಆಳುಗಳು, "ಇಲ್ಲಾ ಸೋಮಿ, ಎಲ್ರನ್ನೂ ಮುಗಿಸಿದ್ದೇ ಸರಿ. ಬೇರೆಯೋರ ಚಿನ್ನ ಒಡವೆ ಕದ್ದು ತಂದುದ್ರಲ್ಲಿ ಭಾಗ ತಗೊಂಡೇ ಅಲ್ವೆ ತಮ್ಮ ಹೆಂಗಸ್ರಿಗೆ ಸಿಲ್ಕ್ ಸೀರೆ, ಚಿನ್ನ ಕೊಡಿಸ್‌ತಿದ್ದಾ ಆ ಲಾಯರ್. ಕಳವಿನ್ ಸಂಪತ್ತ ತಿಂದ ಪಾಪ ಬಿಡುತ್ಯೇ.... ಅದು ಎಲ್ರುನ್ನೂ ತೊಗೊಂಡು ಹೋತು...." ಎಂದರು.

ನನ್ನ ಇನ್ನೋರ್ವ ದೊಡ್ಡಪ್ಪ ದೊಡ್ಡಯ್ಯ ವಾದವಿವಾದದ ಮನುಷ್ಯ ಅಲ್ಲ. ಏನನ್ನೂ ಖಂಡಿಸುತ್ತಿರಲಿಲ್ಲ, ಯಾವುದನ್ನೂ ಮಂಡಿಸುತ್ತಿರಲಿಲ್ಲ. ಎಲ್ಲದಕ್ಕೂ "ಇರ್ಬೋದು ಇರ್ಬೋದು" ಎನ್ನುವ ಮನುಷ್ಯ. ಆದರೂ ಆ ಸಮಯಸ್ಫೂರ್ತಿಯಿಂದ "ಈ ಕೇಸ್ನ ಆರೋಪಿಗಳ ವಕೀಲ್ರು ಗೆದ್ದಿದ್ದರೆ ಅವರ ಕೀರ್ತಿ ಮುಗಿಲು ಮುಟ್‌ತಿತ್ತು...." ಎಂದಾಗ ಉಳಿದವರ ಮುಖದ ಮೇಲೆ ಆಶ್ಚರ್ಯ ಮಿಂಚಿತು.

ಅದಕ್ಕೆ ನನ್ನ ತಂದೆ, "ಅವರು ಈ ಕೇಸ್ನ ಸೋತರೇನಂತೆ, ಓದಿದ್ದನ್ನು ನಮ್ಗೆ ಕೇಳಿಸ್ಕಳಾಕೇ ಎದೆ ಡವ ಡವ ಅಂತದೆ. ಅಂಥಾದ್ರಲ್ಲಿ ಈ ಕೇಸ್ನ ಹಿಡ್ಕಂಡು ಕೋರ್ಟ್‌ನಲ್ಲಿ ಬಡಿದಾಡಬೇಕಾದ್ರೆ ಎಂಟೆದೆ ಬೇಕು.... ಎಲ್ಲ ಲಾಯರ್‌ಗೂ ಇಂಥ ಕೇಸ್ ಒಡಿಯಾಕೆ ಆತದಾ? ತರಡಿದ್ದೋರ್ಗೇ ಸಾಧ್ಯವಾಗೋದು" ಎಂದು ಹೇಳಿದರು.

ಆಗ ಆಳುಗಳು, "ಎಂಥಾ ಮಾತು ಸೋಮಿ. ತರಡಿಲ್ದೋರ್ಗೆ ನೀಗೋ ಮಾತಾ ಇದು. ಸರಿಯಾಗೇ ಹೇಳಿದ್ರಿ" ಎಂದು ಅಪ್ಪನ ಮಾತಿಗೆ ಶಹಬ್ಬಾಸ್‌ಗಿರಿ ನೀಡಿದರು.

ತನ್ನ ತಮ್ಮನಿಗೆ ಹೊಳೆದ ಈ ಯೋಚನೆ ತನಗೆ ಹೊಳೆಯದೆ ಹೋಯಿತಲ್ಲಾ ಎನ್ನುವ ಖಿನ್ನತೆ ದೊಡ್ಡಪ್ಪ ತಿಮ್ಮಣ್ಣನವರ ಮುಖದ ಮೇಲೆ ಆವರಿಸಿಕೊಂಡಿತು.

ಚರ್ಚೆಯಲ್ಲಿ ನಾನೂ ಭಾಗವಹಿಸಿ ನನ್ನ ಅಭಿಪ್ರಾಯ ತಿಳಿಸುವ ತವಕದಿಂದ ಮಾತಾಡಲು ಆರಂಭಿಸಿದೆ. ಆಗ ತಿಮ್ಮಣ್ಣ ದೊಡ್ಡಪ್ಪ ಕ್ರೋಢೀಕೃತ ಸಿಟ್ಟನ್ನೆಲ್ಲ ಹೊರಹಾಕುವಂತೆ,

"ಲೇ ಹುಡ್ಗಾ ನೀನಿನ್ನೂ ಪೀಚು, ತಿಕಮುಚ್ಕೊಂಡು ಸುಮ್ನಿರು. ದೊಡ್ಡವರ ಮಾತ್‌ನಲ್ಲಿ ಬಾಯಿ ಹಾಕ್‌ಬೇಡ...." ಎಂದು ಗದರಿದಾಗ ಅಕ್ಕಚ್ಚಮ್ಮ ನನ್ನೆಡೆಗೆ ತನ್ನ ಬೆಂಬಲದ ನೋಟ ಬೀರಿದಳು.

ನನ್ನ ಅಪ್ಪ, ದೊಡ್ಡಪ್ಪಂದಿರು, ಆಳುಗಳು ತಮ್ಮದೇ ರೀತಿಯಲ್ಲಿ ಬುದ್ಧಿವಂತಿಕೆ ಪ್ರದರ್ಶನ, ಸ್ಪರ್ಧೆಗಳನ್ನು ನಡೆಸಿದ್ದರು. ಅಲ್ಲಿ ಆರೋಪಿ ವಕೀಲರು, ಪ್ರಾಸಿಕ್ಯೂಟರ್‌ಗಳು, ಜಡ್ಜ್‌ಗಳು, ಆರೋಪಿಗಳು, ಕೊಲೆಯಾದವರು ಹೀಗೆ ಎಲ್ಲ ಪಾತ್ರಗಳೂ ಪ್ರತ್ಯಕ್ಷಗೊಂಡು ಮಾಯವಾಗುತ್ತಿದ್ದವು.

ನನ್ನ ಕಿವಿಯಲ್ಲಿ ಮಾತ್ರ "ಡಿಫೆನ್ಸ್ ಲಾಯರಾಗೋಕೆ ಎಂಟೆದೆ ಬೇಕು. ಅದು ತರಡಿದ್ದವನಿಗೆ ಮಾತ್ರ ಸಾಧ್ಯ" ಎನ್ನುವ ಅರ್ಥದ ಮಾತುಗಳು ಘಂಟಾನಾದದಂತೆ ಅನುರಣನಗೊಳ್ಳತೊಡಗಿದವು......

3

ಜಸ್ಟೀಸ್ ಕೊಲೆಗೆ ಸಂಚು, ಜೈಲಲ್ಲಿ ಸಾವಪ್ಪಿದ ವಕೀಲ

ಆಗ ಅಡಿಕೆ ಫಸಲು ಬರುವ ಸಮಯ. ಅಡಿಕೆ ಬೆಳೆಗೆ ಅಳಿಲುಗಳ ಕಾಟ; ಪೀಚುಕಾಯಿಗಳ ರಸ ಹೀರಿ ಕೆಳಗೆ ಉದುರಿಸಿಬಿಡುತ್ತಿದ್ದವು. ಅಡಿಕೆಮರಗಳನ್ನು ಕಾಯುವ ಸರದಿ ನನಗೂ ಇರುತ್ತಿತ್ತು. ತೋಟದ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ತಗಡಿನ ಡಬ್ಬಾವನ್ನು ಜೋರಾಗಿ ಬಾರಿಸುತ್ತ ಓಡಾಡಿದರೆ ಅಳಿಲುಗಳು ಅಡಿಕೆ ಮರಗಳಿಂದ ದೂರ ಓಡುತ್ತಿದ್ದವು. ಅಡಿಕೆ ತೋಟ ಕಾಯಲು ನನ್ನ ವಯಸ್ಸಿನ ಹಲವು ಹುಡುಗರು ಬರುತ್ತಿದ್ದರು. ತೋಟ ಕಾಯುವುದನ್ನು ಬಿಟ್ಟು ಒಮ್ಮೊಮ್ಮೆ ನಾವೆಲ್ಲ ಒಂದೆಡೆ ಸೇರಿ ಹುಡುಗಾಟ ಆಡುತ್ತಿದ್ದೆವು. ಅಷ್ಟರಲ್ಲಿ ಅಳಿಲುಗಳು ಪೀಚು ಕಾಯಿಗಳನ್ನು ಉದುರಿಸಿ ಹೋಗಿಬಿಡುತ್ತಿದ್ದವು. ನನ್ನಪ್ಪ, ದೊಡ್ಡಪ್ಪಂದಿರು ಬಂದು ನೋಡಿಯಾರೆಂದು ಉದುರಿದ ಕಾಯಿಗಳನ್ನೆಲ್ಲ ಆರಿಸಿ ಆಚೆ ಎಸೆದು ನನ್ನ ಕಾವಲಿನ ಪ್ರಾಮಾಣಿಕತೆಯನ್ನು ಪ್ರದರ್ಶಿಸುತ್ತಿದ್ದೆ.

ಬೇಲೂರು ಶ್ರೀನಿವಾಸ ಅಯ್ಯಂಗಾರ್ ಕೊಲೆ ಕೇಸಿನ ಕಾವು ನಮ್ಮ ಹಳ್ಳಿಯಲ್ಲಿ ಇನ್ನೂ ಆರಿರಲಿಲ್ಲ. ಅಡಿಕೆ ಫಸಲು ಬಂದಿತ್ತು. ನಮ್ಮ ಹಳ್ಳಿಯ ಅರ್ಧದಷ್ಟು ಕುಟುಂಬಗಳಿಗೆ ಅಡಿಕೆ ತೋಟಗಳಿದ್ದವು. ದೊಡ್ಡಬಳ್ಳಾಪುರದಿಂದ ಅಡಿಕೆ

ಖರೀದಿದಾರರು ಬರತೊಡಗಿದ್ದರು. ನಮ್ಮ ಮನೆಗೆ ಸಹ ದೊಡ್ಡಬಳ್ಳಾಪುರದ ಖರೀದಿದಾರರು ತಮ್ಮ ಈರ್ವರು ಯುವ ಮಕ್ಕಳೊಂದಿಗೆ ಬಂದರು.

ಮಾತು ವ್ಯಾಪಾರದ ವಿಷಯಕ್ಕೆ ಹೋಗುವ ಮುಂಚೆ ಲೋಕಾಭಿರಾಮದ ಮಾತುಗಳನ್ನಾಡುವ ವಾಡಿಕೆ ಖರೀದಿದಾರರದು. ಚಹ, ವೀಳ್ಯ, ಅಡಿಕೆ, ಹೊಗೆಸೊಪ್ಪುಗಳ ಆತಿಥ್ಯ ಆಗುತ್ತಿರುವಂತೆಯೇ ನಮ್ಮ ದೊಡ್ಡಪ್ಪ "ನಾ ಹುಟ್ಟಿದಾರಭ್ಯ ಶ್ರೀನಿವಾಸ ಅಯ್ಯಂಗಾರ್‌ರಂಥ ಕೊಲೆ ಕೇಸನ್ನು ಕೇಳಿದ್ದಿಲ್ಲ" ಎಂದರು.

ಅದಕ್ಕೆ ಅಡಿಕೆ ಖರೀದಿದಾರರು, "ಅದ್ಯಾಕೆ ತಿಮ್ಮಣ್ಣನವರೇ, ಜಸ್ಟೀಸ್ ಮೇದಪ್ಪನವರ ಕೊಲೆಗೆ ಯತ್ನಿಸಿ ಜೈಲಿಗೆ ಹೋದ ಎಸ್.ಎಸ್.ರಾಜು ಎಂಬ ಲಾಯರ್ ಪ್ರಕರಣವನ್ನು ನೀವು ಕೇಳಿಲ್ವೆ?" ಎಂದು ಆಶ್ಚರ್ಯದಿಂದ ಕೇಳಿದರು.

"ನಮ್ಮ ಹಳ್ಳಿಗೆ ಪೇಪರ್ ಬರ್ತಾ ಇರೋದೆ ಇತ್ತೀಚಿಗ್ಗೆ. ಬಾಳಾ ಮುಂಚೇದು ಇರ್ಬೇಕು ಆ ಕೇಸು" ಎಂದು ನಮ್ಮ ದೊಡ್ಡಪ್ಪ ಆ ಕೇಸಿನ ವಿವರ ಹೇಳಿ ಎನ್ನುವಂತೆ ಕೌತುಕ ತೋರಿದರು. ನನ್ನ ಕಿವಿಗಳನ್ನು ಚುರುಕುಗೊಳಿಸಿಕೊಂಡೆ ಲಾಯರ್ ರಾಜು ಪ್ರಕರಣ ಕೇಳಲು.

ಎಲ್.ಎಸ್. ರಾಜು ಬೆಂಗಳೂರಿನ ಖ್ಯಾತ ಕ್ರಿಮಿನಲ್ ಲಾಯರ್; ಅಧಿಕಾರ, ಅಂತಸ್ತು, ಸಂಪತ್ತುಗಳಲ್ಲಿ ತೂಗುಯ್ಯಾಲೆ ಆಡುತ್ತಿದ್ದವರು. ಬಸವನಗುಡಿಯ ನೆಟ್ಟಕಲ್ಲಪ್ಪ ಸರ್ಕಲ್ ಸಮೀಪದಲ್ಲಿ ಅರಮನೆಯಂಥ ಮನೆಯೊಳಗೆ ಪುಷ್ಕರಣಿಯನ್ನು ನಿರ್ಮಿಸಿದ್ದರು. ಈ ಪುಷ್ಕರಣಿಯ ಅಕ್ಕಪಕ್ಕಕ್ಕೆ ದೇವರ ಚಿಕ್ಕಗುಡಿಗಳು, ಗುಡಿಗಳ ಮಧ್ಯದ ದಾರಿಯ ಕಲ್ಲುಬಂಡೆಯ ಮೇಲೆ ಛತ್ತು. ಆ ಛತ್ತಿಗೆ ತೂಗುಯ್ಯಾಲೆ..... ಲಾಯರ್ ರಾಜು ಸ್ನಾನ ಮಾಡಿ ಬಂದು ಈ ತೂಗುಯ್ಯಾಲೆಯಲ್ಲಿ ಕೂತು ಎರಡೂ ದೇವರುಗಳಿಗೆ ಹೂ ಅರ್ಪಿಸುತ್ತಿದ್ದರು ; ಉಯ್ಯಾಲೆ ಒಂದು ಗುಡಿಯೆಡೆ ತೂಗಿಕೊಂಡಾಗ ಆ ದೇವರಿಗೆ ಪುಷ್ಪ, ಮತ್ತೊಂದೆಡೆ ತೂಗಿಕೊಂಡಾಗ ಇನ್ನೊಂದು ದೇವರಿಗೆ ಪುಷ್ಪ......!

ಮೈಸೂರು ರಾಜ್ಯದ ಹೈಕೋರ್ಟ್ ಚೀಫ್ ಜಸ್ಟಿಸ್ ಆಗಿದ್ದ ರಾವ್‌ಬಹದ್ದೂರ್ ಪಿ. ಮೇದಪ್ಪನವರೊಂದಿಗೆ ಲಾಯರ್ ರಾಜುಗೆ ಮನಸ್ತಾಪ ಆಯಿತು. ಅದಕ್ಕೆ ಕಾರಣ ಅಹಂ.

ಜೀವನದ ಸಂಜೆಯಲ್ಲಿದ್ದ ಅರವತ್ತರ ರಾಜು ಮೇದಪ್ಪನವರನ್ನು ಕೊಲೆಗೈಯ್ಯುವ ಸಂಚು ಹೂಡಿದರು. ಅದಕ್ಕಾಗಿ ದಾರಿ ಹುಡುಕತೊಡಗಿದರು. ಮೇದಪ್ಪನವರ ಕೊಲೆಯ ಗುಂಗಿನ ಗ್ರಹ ಹಿಡಿಯಿತು ಅವರಿಗೆ. ತಾವು ಹಿಡಿದ ಕೇಸುಗಳ ಬಗ್ಗೆ ಯೋಚಿಸಲೂ ಅವಕಾಶವಿಗದಂತೆ ಆವರಿಸಿಕೊಂಡಿತು ಕೊಲೆಯ ತೃಷೆ....

ಜಸ್ಟಿಸ್ ಮೇದಪ್ಪನವರ ಮನೆಯಲ್ಲಿ ಕೆಲಸಕ್ಕಿದ್ದ ಹೆಣ್ಣಾಳು ಕೊಲೆಗೆ ದಾರಿಯಾಗಿ ಕಂಡಳು ರಾಜುಗೆ. ಅವಳಿಗೆ ಹಣದ ಆಮಿಷ ಒಡ್ಡಿ ತಮ್ಮ ಬುಟ್ಟಿಗೆ ಹಾಕಿಕೊಂಡರು. ಲಾಯರ್ ರಾಜು ಅವರಿಂದ ಹಣ ಪಡೆದ ಕೆಲಸದ ಹೆಣ್ಣು ವಿಷಕನ್ಯೆಯಾಗಿದ್ದಾಳೆಂದು ಜಸ್ಟಿಸ್ ಮೇದಪ್ಪನವರಿಗೆ ತಿಳಿಯಲಿಲ್ಲ. ಮೇದಪ್ಪನವರಿಗೆ ನಿತ್ಯ ಬೆಡ್‌ಕಾಫಿ ಕೊಡುತ್ತಿದ್ದಳು ಆ ಕೆಲಸದ ಹೆಣ್ಣು. ಆಕೆಯ ಮನಸ್ಸನ್ನು ಕೊಲೆಗೆ ಸಿದ್ಧಗೊಳಿಸಲು ರಾಜು ಹಲವಾರು ದಿವಸಗಳನ್ನೇ ತೆಗೆದುಕೊಂಡರು. ಒಂದು ಮುಂಜಾನೆ ಕೆಲಸದವಳು ಕಾಫಿಯನ್ನು ಮೇದಪ್ಪನವರ ಟೇಬಲ್ ಮೇಲಿಟ್ಟು ಹೋದಳು. ಕಾಫಿ ಕಪ್‌ನ ತುಟಿ ವಿಷನಾಗರವಾಗಿದೆಯೆಂದು ಅರಿಯದ ಜಸ್ಟಿಸ್ ಮೇದಪ್ಪ ಅದನ್ನು ಕುಡಿಯಲೆಂದು ಎತ್ತಿಕೊಂಡರು. ಜಸ್ಟಿಸ್ ಅರಿವಿಗೆ ಬಾರದ್ದು ಅವರ ಮೂಗಿಗೆ ಬಂದಿತು. ಏನೋ ಘಾಟು ವಾಸನೆಯನ್ನು ಗ್ರಹಿಸಿದ ಜಸ್ಟಿಸ್ ಕಾಫಿಯ ಕಪ್ಪನ್ನು ಹಾಗೇ ಟೇಬಲ್ ಮೇಲಿಟ್ಟು ಐದು ನಿಮಿಷ ಬೆಡ್‌ರೂಮಲ್ಲೇ ಶತಪಥ ಹಾಕಿದರು. ಅಷ್ಟರಲ್ಲಿ ಅನುಮಾನ ಬೆಳೆದು ದೊಡ್ಡದಾಗಿತ್ತು. ಕೂಡಲೇ ತಮ್ಮ ಸಾಕುನಾಯಿಯನ್ನು ಕರೆತಂದರು. ಕಾಫಿಯನ್ನು ಇನ್ನಷ್ಟು ಊದಿ ತಣ್ಣಗಾಗಿಸಿದರು. ನಾಯಿಗೆ ಕುಡಿಸಿದರು ; ಕೆಲವೇ ಕ್ಷಣಗಳಲ್ಲಿ ನಾಯಿ ವಿಲವಿಲನೆ ಒದ್ದಾಡಿ ನಾಲಿಗೆ ಕಚ್ಚಿಕೊಂಡು ಸೆಟೆದು ಬಿದ್ದಿತು....!

ತಕ್ಷಣವೇ ಪೊಲೀಸರನ್ನು ಕರೆಸಿ ಕೆಲಸದ ಹೆಣ್ಣನ್ನು ಬಂಧಿಸಲು ಸೂಚಿಸಿದರು.

ಪೊಲೀಸರ ವಿಚಾರಣೆಯ ರೀತಿ ಶೈಲಿಗಳಿಗೆ ಬೆದರಿ ಬೆವೆತುಹೋದ ಕೆಲಸದಾಕೆ ಸತ್ಯವನ್ನು ಹೊರಹಾಕಿದಳು. ಕೆಲಸದಾಕೆಯನ್ನು ಆರೋಪಿ ಮಾಡದೆ ಅಪ್ರೂವರ್ ಅನ್ನಾಗಿ ಮಾಡಿ ಲಾಯರ್ ರಾಜುವನ್ನು ಆರೋಪಿಯನ್ನಾಗಿ ಮಾಡಿದರು.

ತಮ್ಮ ಕೇಸನ್ನು ತಾವೇ ವಾದಿಸಿಕೊಳ್ಳುವುದಾಗಿ ಘೋಷಿಸಿದ ರಾಜು ಈ ಕೇಸು ಮೈಸೂರು ರಾಜ್ಯದಲ್ಲಿ ನಡೆಯುವುದು ಬೇಡವೆಂದು ವಿನಂತಿಸಿಕೊಂಡರು. ಕೇಸು ಬಾಂಬೆಗೆ ಟ್ರಾನ್ಸ್‌ಫರ್ ಆಯಿತು. ಲಾಯರ್ ರಾಜು ತಮ್ಮ ಕೊಲೆಗೆ ಏಕೆ ಪ್ರಯತ್ನಿಸಿದರೆಂದು ಜಸ್ಟಿಸ್ ಮೇದಪ್ಪ ಹೇಳಲೇ ಇಲ್ಲ. ರಾಜು ಸಹ ತಾನು ಕೊಲೆಗೆ ಏಕೆ ಪ್ರಯತ್ನಿಸಿದರೆಂದು ಹೇಳಲೇ ಇಲ್ಲ. ರಾಜು ಸಹ ತಾನು ಕೊಲೆಗೆ ಪ್ರಚೋದಿಸಲಿಲ್ಲವೆಂದೇ ಕೊನೆಯವರೆಗೂ ವಾದಿಸಿದರೇ ವಿನಃ ಮೂಲ ಕಾರಣವನ್ನು ಬಯಲಿಗಿಟ್ಟು ತಮ್ಮ ಅಪರಾಧವನ್ನು ಒಪ್ಪಿಕೊಳ್ಳಲಿಲ್ಲ.

ಕೆಲಸದಾಕೆಯ ಸಾಕ್ಷಿ, ರಾಜು ಅವಳಿಗೆ ನೀಡಿದ್ದ ಆಮಿಷದ ಹಣ, ನಾಯಿಯ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಇವೆಲ್ಲ ರಾಜುಗೆ ಆಜೀವ ಸಜೆಯ ತೀರ್ಪು ನೀಡಿದವು.

ಬೆಂಗಳೂರು ಸೆಂಟ್ರಲ್ ಜೈಲು ಸೇರಿದ ರಾಜು ಹೈಕೋರ್ಟ್, ನಂತರ ಸುಪ್ರೀಂಕೋರ್ಟುಗಳಲ್ಲಿ ಅಪೀಲು ಮಾಡಿಕೊಂಡರು. ಅಲ್ಲೆಲ್ಲ ಸೆಷನ್ಸ್ ನ್ಯಾಯಾಲಯದ ತೀರ್ಪು ಕನ್‌ಫರ್ಮ್ ಆಯಿತು. ಬೆಂಗಳೂರಿನ ಸೆಂಟ್ರಲ್ ಜೈಲಲ್ಲಿರುವಾಗಲೇ ಅದೇನೋ ಕಾಯಿಲೆ ಬಂದು ರಾಜು ಮರಣವನ್ನಪ್ಪಿದರು.

ಈ ಕೇಸು ನಡೆಸುವಾಗ ಚಾಗಲಾ ಅವರು ಬಾಂಬೆಯ ಸೆಷನ್ಸ್ ನ್ಯಾಯಾಧೀಶರಾಗಿದ್ದರು, ನಂತರ ಇವರು ಕೇಂದ್ರ ಸರ್ಕಾರದಲ್ಲಿ ಕಾನೂನು ಮಂತ್ರಿಯೂ ಆದರು.

ರಾಜು ಅವರಿಗೆ ಇಬ್ಬರು ಗಂಡುಮಕ್ಕಳಿದ್ದರು. ಆಸ್ತಿ ಅವರ ಕೈಗೆ ದಕ್ಕಲಿಲ್ಲ. ಅವರಿಬ್ಬರೂ ಲಾರಿ ಡ್ರೈವರ್‌ಗಳಾದರು ಎಂದು ಬೆಂಗಳೂರಿನಲ್ಲಿ ಜನ ಮಾತಾಡಿಕೊಳ್ಳತೊಡಗಿದರು....

ಈ ಕಥೆ ಕೇಳಿ ಲಾಯರ್ ಆಗಬೇಕೆನ್ನುವ ಆಸೆ ಹೊತ್ತುಕೊಂಡು ಕೂತಿದ್ದ ನನಗೆ ಭಯ, ನಡುಕಗಳು ಶುರುವಾಗಿ ಬೆವೆತುಕೊಂಡೆ. ಕ್ರಿಮಿನಲ್ ಲಾಯರ್ ಶ್ರೀನಿವಾಸ ಅಯ್ಯಂಗಾರ್‌ರಂತೆಯೇ ಈ ಲಾಯರ್ ರಾಜು ಸಹ ಜೀವ ಕಳೆದುಕೊಂಡಿದ್ದ. ಲಾಯರ್ ಆಗುವುದೋ, ಬಿಡುವುದೋ ಎನ್ನುವ ನನ್ನೆದೆಯ ತಳಮಳವನ್ನು ಯಾರಿಗಾದರೂ ಹೇಳಿಕೊಳ್ಳುವಂತೆಯೂ ಇರಲಿಲ್ಲ. ಹಾಗೆ ಹೇಳಿಕೊಳ್ಳಲು ಹೋದರೆ 'ಓ ಇವನೊಬ್ಬ ಈಗಲೇ ಲಾಯರಾಗೋಕೆ ಹೊಂಟಿದಾನೆ' ಎನ್ನುವ ಲೇವಡಿ, ಅಣಕಗಳನ್ನು ಎದುರಿಸಬೇಕಾಗುತ್ತಿತ್ತು.

ಒಂದು ಚೀಟಿಯಲ್ಲಿ ಲಾಯರ್ ಆಗುವುದು ಸರಿ ಎಂದೂ ಮತ್ತೊಂದು ಚೀಟಿಯಲ್ಲಿ ಸರಿಯಲ್ಲ ಎಂದೂ ಬರೆದು ಅವೆರಡನ್ನೂ ಸುರುಳಿ ಸುತ್ತಿ ಒಂದು ಡಬ್ಬದಲ್ಲಿ ಹಾಕಿ ಅಲುಗಾಡಿಸಿದೆ. ಮನೆದೇವರು ಆಂಜನೇಯನ ಹೆಸರು ಹೇಳಿ ಕಣ್ಮುಚ್ಚಿಕೊಂಡು ಡಬ್ಬದೊಳಗಿಂದ ಒಂದು ಚೀಟಿಯನ್ನು ಎತ್ತಿಕೊಂಡೆ.

ಕಣ್ತೆರೆದೆ : ಲಾಯರ್ ಆಗೋದು ಸರಿ ಎಂದು ಬರೆದ ಚೀಟಿ ಕೈಯಲ್ಲಿತ್ತು....

4

ಕಣಿವೆಯಲ್ಲಿ ನೇತಾಡುತ್ತಿತ್ತು ವಕೀಲನ ಶವ

ಲಾಯರ್ ಆಗುವ ಆಸೆ, ತೀರ್ಮಾನಗಳನ್ನು ಹೊರಗೆಡವದೆ ನನ್ನ ಮನದೊಳಗೇ ಇಟ್ಟುಕೊಂಡಿದ್ದರೂ ನಾನು ಸ್ನೇಹಿತರೊಂದಿಗೆ ಮಾತಾಡುವಾಗ ಲಾಯರ್‌ಗಳ ವಿಷಯವನ್ನೇ ಜಾಸ್ತಿ ಮಾತಾಡ ತೊಡಗಿದೆ. ಇದನ್ನು ಕಂಡ ನನ್ನ ಗೆಳೆಯರು "ಏನ್ಲಾ ಬರೀ ಲಾಯರ್ ವಿಷ್ಯಾನೇ ಮಾತಾಡ್ತೀ, ನೀನೂ ಲಾಯರ್ ಆಗೋಂಗೆ ಕಾಣ್ತದೆ" ಎಂದು ಛೇಡಿಸತೊಡಗಿದ್ದರು. ಗೆಳೆಯರ ಮಾತುಗಳು ದೊಡ್ಡವರ ಕಿವಿಗಳವರೆಗೂ ಪ್ರಯಾಣ ಬೆಳೆಸಿದವು.

ನಮ್ಮ ಹಳ್ಳಿಯಲ್ಲಿ ಎರಡೇ ಬ್ರಾಹ್ಮಣ ಕುಟುಂಬಗಳಿದ್ದವು. ಅದರಲ್ಲಿ ಒಂದು ೧೫-೧೮ ಜನರ ಅವಿಭಕ್ತ ಮತ್ತು ಬೇಸಾಯ ವೃತ್ತಿಯ ಕುಟುಂಬ. ಇನ್ನೊಂದು ಪೋಸ್ಟ್‌ಮಾಸ್ಟರ್‌ರಾಗಿದ್ದವರ ಒಂಟಿ ಕುಟುಂಬ. ಪೋಸ್ಟ್‌ಮಾಸ್ಟರ್ ಭುಜಂಗರಾವ್ ಸದಾ ಪೂಜೆ, ಪುನಸ್ಕಾರಗಳಲ್ಲಿ ತೊಡಗಿರುತ್ತಿದ್ದರು. ಜ್ಯೋತಿಷ್ಯ, ಪೌರೋಹಿತ್ಯದ ಕೆಲಸಗಳನ್ನೂ ನಿಭಾಯಿಸುತ್ತಿದ್ದರು. ಇವರ ಮಕ್ಕಳು ಜಾಣರಿದ್ದು, ಬೆಂಗಳೂರಲ್ಲಿ ಓದು ಮುಗಿಸಿ ಸರ್ಕಾರಿ ಕೆಲಸದಲ್ಲಿದ್ದರು.

ಬೆಳಿಗ್ಗೆ ಮತ್ತು ಸಂಜೆ ಹಸುವಿನ ಹಾಲನ್ನು ಭುಜಂಗ್‌ರಾವ್‌ರ ಮನೆಗೆ ಕೊಟ್ಟು ಬರುವ ಡ್ಯೂಟಿ ನನ್ನ ಪಾಲಿನದಾಗಿತ್ತು. ಇದರಿಂದಾಗಿ ಚಿಕ್ಕವನಾಗಿದ್ದ ನನ್ನೊಂದಿಗೆ ಭುಜಂಗರಾವ್ ಸಲಿಗೆಯಿಂದ ಮಾತಾಡುತ್ತಿದ್ದರು, ಹರಟುತ್ತಿದ್ದರು. ಅವರು ಬೆಂಗಳೂರಿಗೆ ಹೋಗಿಬಂದಾಗಲೆಲ್ಲ ನನಗಾಗಿ ನೋಟ್ ಬುಕ್, ಪೆನ್ನು, ಪೆನ್ಸಿಲ್‌ಗಳನ್ನು ತಂದುಕೊಡುತ್ತಿದ್ದರು. ನನ್ನ ಗೆಳೆಯರಿಗೆ ಪೆನ್ನು, ಪೆನ್ಸಿಲ್‌ಗಳನ್ನು ಹಂಚುತ್ತಿದ್ದೆ.

ಒಂದು ಸಂಜೆ ಎಂದಿನಂತೆ ಹಾಲು ಕೊಡಲು ಹೋದಾಗ ಭುಜಂಗರಾವ್‌ರೂ "ಏನೋ ಹನುಮಂತ್ರಾಯ, ನೀನು ಲಾಯರಾಗೋಕೆ ಹೊಂಟ್ಟಿದೀಯಾಂತ ಸುದ್ದಿಯಾಗೇದೆ?" ಎಂದು ರಾಗವೆಳೆದು ಪ್ರಶ್ನಿಸಿದರು.

"ನೋಡು ಹನುಮಂತ್ರಾಯ ಟೀಚರ್, ಡಾಕ್ಟರ್, ಇಂಜಿನಿಯರ್ ಏನಾದ್ರೂ ಆಗು. ಆದರೆ, ಲಾಯರ್ ಆಗಬೇಡ. ಅದು ಬಾಳಾ ಅಪಾಯಕಾರಿ ; ಇಲ್ಲದ ಅವಘಡಗಳನ್ನು ಮೈಮೇಲೆ ಎಳೆದುಕೊಳ್ಳೋ ವೃತ್ತಿ. ನಾನು ಕಣ್ಣಾರೆ ಕಂಡ ಲಾಯರ್‌ನ ಗತಿ ಏನಾಯ್ತೂಂತ ಕೇಳು" ಎನ್ನುತ್ತಾ ನನಗೆ ಕೂರಲು ಹೇಳಿದರು. ನಿಂತ ಜಾಗದಲ್ಲೇ ನೆಲದ ಮೇಲೆ ಕೂತೆ.

ಮೋಕ್ಷಗುಂಡಂ ಕೃಷ್ಣಮೂರ್ತಿ ಬೆಂಗಳೂರಿನ ಹೆಸರಾಂತ ಲಾಯರ್. ಸರ್. ಎಂ. ವಿಶ್ವೇಶ್ವರಯ್ಯನವರ ಸಹೋದರ ಸಂಬಂಧಿ. ಐವತ್ತೈದು ವರ್ಷ ವಯಸ್ಸಿನ ಕಾನೂನು ಪರಿಣಿತ. ಜೊತೆಗೆ ಆಗ ದಿವಾನರಾಗಿದ್ದ ವಿಶ್ವೇಶ್ವರಯ್ಯನವರ ವರ್ಚಸ್ಸಿನ ಪ್ರಭಾವಳಿಯೂ ಕೃಷ್ಣಮೂರ್ತಿಯವರಿಗಿತ್ತು. ಇವರ ಕೈಗೆ ಬಂದ ಕೇಸು ಸೋಲುಂಡಿದ್ದೇ ಅಪರೂಪ.

ಬೆಂಗಳೂರು ಅಂಚಿನ ಅಗರಂ ನಾರಾಯಣರೆಡ್ಡಿ ಆಗರ್ಭ ಶ್ರೀಮಂತರು. ಆಸ್ತಿ ಹಂಚಿಕೆಯಲ್ಲಿ ರಾಮರೆಡ್ಡಿಯೊಂದಿಗೆ ವಿವಾದ ಶುರುವಾಗಿ ಬಗೆಹರಿಯದೆ ಕೇಸು ಕೋರ್ಟ್ ಕಟ್ಟೆ ಹತ್ತಿತ್ತು.

ನಾರಾಯಣರೆಡ್ಡಿ ಮಹಾ ಜಿದ್ದಿನ ಮನುಷ್ಯ. ಅದೂ ಅಲ್ಲದೆ ವಿಷಯ ಕೋಟ್ಯಂತರ ಮೊತ್ತದ ಆಸ್ತಿಗೆ ಸಂಬಂಧಿಸಿದ್ದಾಗಿತ್ತು.

ನಾರಾಯಣರೆಡ್ಡಿ ತನ್ನ ಕೇಸನ್ನು ವೆಂಕಟರಂಗ ಅಯ್ಯಂಗಾರ್‌ರಿಗೆ ನೀಡಿದರೆ ರಾಮರೆಡ್ಡಿ ಮೋಕ್ಷಗುಂಡಂ ಕೃಷ್ಣಮೂರ್ತಿಯವರಿಗೆ ನೀಡಿದರು. ಕೇಸು ಜಿದ್ದಾಜಿದ್ದಿಯಿಂದ ನಡೆಯಿತು. ವೆಂಕಟರಂಗ ಅಯ್ಯಂಗಾರರೂ ಬಹಳ ಮುತ್ಸದ್ದಿ ಮತ್ತು ಅಸಾಮಾನ್ಯ ಧೈರ್ಯದ ಲಾಯರ್. ಇವರ ಕಾರ್ಯಾಲಯ

ಗಾಂಧಿನಗರದಲ್ಲಿ. ಕೃಷ್ಣಮೂರ್ತಿಯವರ ಕಚೇರಿ ಬಸವನಗುಡಿಯಲ್ಲಿ. ಕಚೇರಿಗೆ ನಡಿಗೆ ಸಮೀಪದಲ್ಲಿಯೇ ಅವರ ಮನೆ.

ವೆಂಕಟರಂಗ ಅಯ್ಯಂಗಾರರು ಅತಿ ಹೆಚ್ಚು ರಿಟ್‌ಗಳನ್ನು ಹಾಕಿ ಗೆಲ್ಲುತ್ತಿದ್ದ ಯುವ ಲಾಯರ್ ಆಗಿದ್ದರು. ಇದರಿಂದಾಗಿ ಅವರಿಗೆ ರಿಟ್ ಅಯ್ಯಂಗಾರ್ ಎನ್ನುವ ಅಡ್ಡ ಹೆಸರೇ ಬಿದ್ದಿತ್ತು.

ನಾರಾಯಣರೆಡ್ಡಿಯ ದುರದೃಷ್ಟಕ್ಕೆ ಕೋರ್ಟ್‌ನಲ್ಲಿ ಕೇಸು ರಾಮರೆಡ್ಡಿ ಪರ ಆಗಿಹೋಯಿತು.

ಕಂಗೆಟ್ಟ ನಾರಾಯಣರೆಡ್ಡಿ, ಅಯ್ಯಂಗಾರ್‌ರ ಬಳಿ ನಿಸ್ತೇಜ ಮುಖ ಹೊತ್ತು ಬಂದು ಕೂತ. 'ಕೋರ್ಟ್‌ನಲ್ಲಿ ಸೋಲು ಗೆಲುವು ಇದ್ದದ್ದೇ, ಸಮಾಧಾನ ಮಾಡಿಕೊ' ಎಂದರು ಅಯ್ಯಂಗಾರ್.

ನಾರಾಯಣರೆಡ್ಡಿ "ಇಲ್ಲ ಲಾಯರ್ರೇ, ನನ್ನ ಇಡೀ ಆಸ್ತಿ ಖರ್ಚಾದರೂ ಪರವಾಗಿಲ್ಲ, ಈ ಕೇಸನ್ನು ನಾನು ಗೆದ್ದೇ ತೀರಬೇಕು" ಎಂದು ಪಟ್ಟು ಹಿಡಿದ. ರೆಡ್ಡಿಯೊಂದಿಗೆ ಬಂದಿದ್ದ ಅವನ ಸ್ನೇಹಿತರು "ಮುಂಚೆ ಆಸ್ತಿ ಉಳಿಯಲಿ ಅಂತ ಕೋರ್ಟ್ ಕಟ್ಟೆ ಹತ್ತಿದ ನಾರಾಯಣರೆಡ್ಡಿಗೆ ಈಗ ಆಸ್ತಿಯೆಲ್ಲಾ ಹೋಗಲಿ ಕೇಸ್ ಗೆಲ್ಲು ಎನ್ನುವ ಜಿದ್ದು ಬಂದುಬಿಟ್ಟಿದೆ ಸೋಮಿ. ಇವನು ಮುಂಚಿನಿಂದ್ಲೂ ಅವಮಾನ, ಸೋಲುಗಳನ್ನು ಸಹಿಸಿಕೊಂಡವನಲ್ಲ. ಈಗ ನೀವು ಕೇಸು ಗೆದ್ದುಕೊಡದಿದ್ದರೆ ನಾರಾಯಣರೆಡ್ಡಿ ನೇಣು ಹಾಕಿಕೊಂಡರೂ ಆಶ್ಚರ್ಯವಿಲ್ಲ. ಏನಾದರೂ ಮಾಡಿ ದಾರಿ ಹುಡುಕಿ ಸೋಮಿ...." ಎಂದರು. ಅದಕ್ಕೆ ಲಾಯರ್ ಅಯ್ಯಂಗಾರ್ "ನಾನು ಅಪ್ಪೀಲೇಟ್ ಕೋರ್ಟ್‌ನಲ್ಲಿ ಕೇಸು ನಡೆಸೋದಿಲ್ಲ ಎಂದೇನೂ ಹೇಳೋಲ್ಲ. ಆದರೆ ಕೇಸನ್ನು ಗೆದಿಯಬೇಕಾದರೆ ರಾಮರೆಡ್ಡಿ ಲಾಯರ್ ಮಾತ್ರ ಆ ಕೃಷ್ಣಮೂರ್ತಿ ಆಗಿರಬಾರದು...." ಎಂದರು.

ತಕ್ಷಣವೇ ಏನೋ ಹೊಳೆದಂತೆ ನಾರಾಯಣರೆಡ್ಡಿ "ಕೃಷ್ಣಮೂರ್ತಿ, ರಾಮರೆಡ್ಡಿಯ ಲಾಯರ್ ಆಗಿ ಬರದೇ ಇರೋ ಹಂಗೆ ಮಾಡೋದನ್ನ ನನಗೆ ಬಿಟ್‌ಬಿಡಿ. ದಯಮಾಡಿ ಈ ಕೇಸ್ನ ಗೆದ್ದುಕೊಡಿ" ಎಂದು ಅಂಗಲಾಚಿಕೊಂಡ.

ನಾರಾಯಣರೆಡ್ಡಿ ತನ್ನ ವ್ಯವಹಾರಗಳನ್ನೆಲ್ಲ ಬಿಟ್ಟ. ಊಟ, ತಿಂಡಿಗಳನ್ನೂ ಕಾಟಾಚಾರಕ್ಕೆ ಮಾಡತೊಡಗಿದ. ತನ್ನ ಕಾರಿನಲ್ಲಿ ಮೂವರು ಸಹಚರರನ್ನು ಕೂರಿಸಿಕೊಂಡು ಲಾಯರ್ ಕೃಷ್ಣಮೂರ್ತಿಯವರ ಚಲನವಲನಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸತೊಡಗಿದ.

ಕೃಷ್ಣಮೂರ್ತಿಯವರು ಬೆಳಿಗ್ಗೆ ಮನೆಯಿಂದ ಕಾರಿನಲ್ಲಿ ಹೊರಟು ತಮ್ಮ ಆಫೀಸ್‌ಗೆ ಹೋಗಿ ಅಲ್ಲಿಂದ ಕೋರ್ಟ್‌ಗೆ ಹೋಗಿ ವಾಪಸ್ ಕಾರಿನಲ್ಲಿ ಆಫೀಸ್‌ಗೆ ಮರಳುತ್ತಿದ್ದರು. ಆದರೆ, ರಾತ್ರಿ ಆಫೀಸ್‌ನಿಂದ ಕಾರಿನಲ್ಲಿ ಹೋಗದೆ ಕಾರನ್ನು ಮನೆಗೆ ಕಳಿಸಿ ತಮಗೆ ವಾಕ್ ಆಗುತ್ತದೆಂದು ಮನೆಗೆ ನಡೆದುಕೊಂಡೇ ಹೋಗುತ್ತಿದ್ದರು.

ಒಂದು ರಾತ್ರಿ ಕೃಷ್ಣಮೂರ್ತಿಯವರು ನಡೆದುಕೊಂಡು ಹೋಗುವಾಗ ನಾರಾಯಣರೆಡ್ಡಿಯ ಗ್ಯಾಂಗ್ ಕಾರಿನಲ್ಲಿ ಬಂದು ಹಠಾತ್ ದಾಳಿ ನಡೆಸಿ ಲಾಯರ್‌ರನ್ನು ಕಾರಿನಲ್ಲಿ ಎತ್ತಿ ಹಾಕಿಕೊಂಡು ಹೊರಟಿತು. ಕಿರುಚಾಡಲೂ ಅವಕಾಶ ನೀಡದಂತೆ ಅವರ ಕತ್ತಿಗೆ ಹಗ್ಗದಿಂದ ಬಿಗಿದಿದ್ದರು ರೆಡ್ಡಿಯ ಮೂವರು ಸಹಚರರು.

ಅಂದು ರಾತ್ರಿ ಕೃಷ್ಣಮೂರ್ತಿಯವರು ಮನೆಗೆ ಬಾರದಿದ್ದರಿಂದ ಮನೆಯವರೆಲ್ಲ ಗಾಬರಿಗೊಂಡರು. ಅವರು ಹೇಳದೆ ಕೇಳದೆ ಎಂದೂ ಎಲ್ಲಿಗೂ ಹೋಗಿರಲಿಲ್ಲ. ಮಾರನೇ ದಿನ ತಮ್ಮ ಸಂಬಂಧಿಕರ ಮನೆಗಳಿಗೆಲ್ಲ ಹೋಗಿ ಹುಡುಕಿ ಬಂದರು. ಎಲ್ಲೂ ಕೃಷ್ಣಮೂರ್ತಿಯವರ ಸುಳಿವು ಸಿಗದಿದ್ದಾಗ ದಿವಾನ್‌ರಾಗಿದ್ದ ವಿಶ್ವೇಶ್ವರಯ್ಯನವರಿಗೆ ಸುದ್ದಿ ಮುಟ್ಟಿಸಿದರು. ವಿಶ್ವೇಶ್ವರಯ್ಯನವರು ಪೊಲೀಸರಿಗೆ ತನಿಖೆ ನಡೆಸಲು ಆದೇಶಿಸಿದರು. ಪೊಲೀಸರು ಎಲ್ಲಿ ಶೋಧಿಸಿದರೂ ಕೃಷ್ಣಮೂರ್ತಿಯವರ ಪತ್ತೆ ಹತ್ತಲಿಲ್ಲ.

ಮೂರು ದಿನಗಳ ನಂತರ ದೊಡ್ಡಬಳ್ಳಾಪುರ ಪೊಲೀಸ್ ಠಾಣೆಗೆ ದನ ಕಾಯುವ ಹುಡುಗರು ಬಂದು ಮಾಕಳಿ ಕಣಿವೆಯಲ್ಲಿ ಹೊಂಗೇಮರದ ಮೇಲೆ ಶವವೊಂದು ನೇತಾಡುತ್ತಿದೆ, ಹದ್ದುಗಳೆಲ್ಲ ಬಂದು ಹೆಣವನ್ನು ಕಿತ್ತು ತಿನ್ನುತ್ತಿವೆ ಎಂದು ಸುದ್ದಿ ಮುಟ್ಟಿಸಿದರು. ತಕ್ಷಣವೇ ಪೊಲೀಸರು ಮಾಕಳಿ ಕಣಿವೆಗೆ ಹೋಗಿ ಶವವನ್ನು ತಂದರು. ಕೃಷ್ಣಮೂರ್ತಿಯವರ ಪತ್ನಿ, ಮಕ್ಕಳನ್ನು ಕರೆಯಿಸಿ ಶವವನ್ನು ಗುರುತಿಸುತ್ತೀರಾ ಎಂದು ಕೇಳಿದರು. ಕೃಷ್ಣಮೂರ್ತಿಯವರ ಪತ್ನಿ ಎದೆ ಬಡಿದುಕೊಳ್ಳುತ್ತಾ ಅಳತೊಡಗಿದರು

ಪೊಲೀಸರು ಕೇಸ್ ರಿಜಿಸ್ಟರ್ ಮಾಡಿಕೊಂಡು ಆರೋಪಿಗಾಗಿ ಶೋಧ ನಡೆಸತೊಡಗಿದರು. ಕೃಷ್ಣಮೂರ್ತಿಯವರ ಪತ್ನಿ, ಮಕ್ಕಳು ತಮಗೆ ಯಾರ ಮೇಲೂ ಅನುಮಾನವಿಲ್ಲ, ಇದೆಲ್ಲ ಹೇಗಾಯಿತೋ ಆ ದೇವರೇ ಬಲ್ಲ ಎಂದರು. ದಿವಾನ್ ವಿಶ್ವೇಶ್ವರಯ್ಯನವರ ದಾಯಾದಿಯ ಕೊಲೆ ಇದಾಗಿದ್ದರಿಂದ ಪೊಲೀಸರ

ತಲೆ ಬಿಸಿಯಾಗಿತ್ತು. ಯಾರನ್ನು ಈ ಕೊಲೆ ಆರೋಪಕ್ಕೆ ಫಿಕ್ಸ್ ಮಾಡುವುದೆಂದು ಚಡಪಡಿಸತೊಡಗಿದರು.

ನಾರಾಯಣರೆಡ್ಡಿ ಎಲ್ಲಿಲ್ಲದ ದುಷ್ಟಕಳೆಯಿಂದ ಮಿಂಚತೊಡಗಿದ. ಅದನ್ನು ರಾಮರೆಡ್ಡಿ ಗುರುತಿಸತೊಡಗಿದ. ರಾಮರೆಡ್ಡಿ ಮತ್ತು ಆತನ ಕಡೆಯವರು ಎದುರು ಬಂದರೆ ಮೀಸೆ ಮೇಲೆ ಕೈ ಹಾಕುತ್ತ ವಿಲಕ್ಷಣ ನಗೆ ನಗತೊಡಗಿದ. ತನ್ನ ಪರಿಚಿತರ ಮುಂದೆ 'ಕೇಸ್ ನನ್ನ ಪರವಾಗಿ ಆದಂತೆಯೇ ಎಂದಿಟ್ಟುಕೊಳ್ಳಿ' ಎಂದು ಎದೆಯುಬ್ಬಿಸಿಕೊಂಡು ಹೇಳತೊಡಗಿದ.

ರೆಡ್ಡಿಯ ವರ್ತನೆಗಳಲ್ಲಾದ ಈ ಬದಲಾವಣೆಗಳನ್ನು ಕಂಡ ರಾಮರೆಡ್ಡಿಗೆ ಒಂದು ಕ್ಷಣ ಒಂದು ಅನುಮಾನ ಸುಳಿದು ಮಾಯವಾಯಿತು. ತಡ ಮಾಡದೆ ರಾಮರೆಡ್ಡಿ ಪೊಲೀಸ್ ಠಾಣೆಗೆ ಹೋಗಿ ತನ್ನ ಅನುಮಾನಗಳನ್ನು ವ್ಯಕ್ತಪಡಿಸಿದ ದಿಕ್ಕೆಟ್ಟು ಕೂತಿದ್ದ ಪೊಲೀಸರು ತಕ್ಷಣವೇ ಚುರುಕುಗೊಂಡರು. ನಾರಾಯಣರೆಡ್ಡಿಯನ್ನು ಠಾಣೆಗೆ ಎಳೆದು ತಂದರು. ಹುಟ್ಟಿನಿಂದಲೇ ಸಿರಿಯುಂಡು ಬೆಳೆದಿದ್ದ ನಾರಾಯಣರೆಡ್ಡಿಯ ದೇಹ ಪೊಲೀಸರ ತನಿಖೆಗೆ ಬೆಚ್ಚಿಬಿದ್ದಿತು. 'ಹೆಚ್ಚು ಹೊಡೆಯಬೇಡಿ ಎಲ್ಲವನ್ನೂ ಹೇಳುವೆ' ಎಂದು ಬಾಯಿ ತೆರೆದ

ಮಾಕಳಿ ಕಣಿವೆ ದೊಡ್ಡಬಳ್ಳಾಪುರದಿಂದ ಹಿಂದೂಪುರಕ್ಕೆ ಹೋಗುವ ದಾರಿಯಲ್ಲಿ ಸುಬ್ರಮಣ್ಯ ಘಾಟಿ ಸಮೀಪ ಬರುತ್ತದೆ. ಕೃಷ್ಣಮೂರ್ತಿಯವರನ್ನು ಕಾರಲ್ಲಿ ಎಳೆದುಕೊಂಡು ಕತ್ತಿಗೆ ಹಗ್ಗ ಬಿಗಿದ ಕೆಲವೇ ಕ್ಷಣಗಳಲ್ಲಿ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಹೆಣವನ್ನು ಮೇಲಿನಿಂದ ಕಣಿವೆಗೆ ಬಿಸಾಡಿದ್ದರು ನಾರಾಯಣರೆಡ್ಡಿ ಮತ್ತು ಅವನ ಸಹಚರರು. ಹೆಣ ಕಣಿವೆಯ ಆಳಕ್ಕೆ ಬೀಳದೆ ಹೊಂಗೆಮರದ ಕೊಂಬೆಗೆ ಸಿಕ್ಕು ನೇತಾಡತೊಡಗಿತ್ತು 'ಏಕೆ ಕೊಲೆ ಮಾಡಿದ್ದು?' ಎನ್ನುವ ಪೊಲೀಸ್ ಪ್ರಶ್ನೆಗೆ_ನಾರಾಯಣರೆಡ್ಡಿ "ನಮ್ಮ ಲಾಯರ್ ವೆಂಕಟರಂಗ ಅಯ್ಯಂಗಾರರು ಕೃಷ್ಣಮೂರ್ತಿಯವರು ರಾಮರೆಡ್ಡಿ ಪರ ವಕಾಲತ್ತು ಹಾಕದಂತೆ ನೋಡಿಕೊ ಎಂದರು. ಅದಕ್ಕಾಗಿ ಹೀಗೆ ಮಾಡಿದ " ಎಂದು ಹೇಳಿಬಿಟ್ಟ !

ಸರಿ, ಪೊಲೀಸರು ವೆಂಕಟರಂಗ ಅಯ್ಯಂಗಾರ್‌ರ ಮೇಲೆ ಐಪಿಸಿಯ 302 Read with section 109ನೇ ಐ.ಪಿ.ಸಿ. ಕೇಸ್ ಮಾಡಿದರು.

ಮದ್ರಾಸಿನ ನಿಸ್ಸೀಮ ಕ್ರಿಮಿನಲ್ ಲಾಯರ್ ಆಗಿದ್ದ ಭಾಷ್ಯಮ್ ಅಯ್ಯಂಗಾರರು ವೆಂಕಟರಂಗ ಅಯ್ಯಂಗಾರರ ಪರ ವಕಾಲತ್ತು ಹಾಕಿದರು. ಭಾಷ್ಯಮ್ ಅವರು ಕೇಸನ್ನು ಅಟೆಂಡ್ ಮಾಡಿದ ಪ್ರತಿದಿನಕ್ಕೂ ಎರಡು ಸಾವಿರ

ರೂಪಾಯಿಗಳನ್ನು ಫೀಸ್ ಆಗಿ ಪಡೆಯುತ್ತಿದ್ದರು. ವೆಂಕಟರಂಗ ಅಯ್ಯಂಗಾರರು ಕೇಸಿನಿಂದ ಖುಲಾಸೆ ಆದರು. ಆದರೆ, ನಾರಾಯಣರೆಡ್ಡಿಗೆ ಮರಣ ದಂಡನೆ ವಿಧಿಸಲಾಯಿತು. ಮೇಲ್ಮನವಿಗಳಲ್ಲೂ ಕೆಳಗಿನ ಕೋರ್ಟ್ ನೀಡಿದ್ದ ಮರಣದಂಡನೆ ಶಿಕ್ಷೆಯೇ ಕಾಯಂ ಆಯಿತು....

ಈ ಕಥೆ ಹೇಳಿದ ಭುಜಂಗರಾವ್ "ನೋಡಿದಾ ಎಷ್ಟೆಲ್ಲ ಪಾಂಡಿತ್ಯ, ಸಿರಿ, ಸಂಪತ್ತು ಇದ್ದರೂ ಕೃಷ್ಣಮೂರ್ತಿಯವರ ಶವ ಕೊಳೆತು ನಾರಿ ಹದ್ದು, ಕಾಗೆಗಳ ಪಾಲಾಯಿತು. ಏನಿದ್ದರೆ ಏನು....!" ಎಂದು ನಿಟ್ಟುಸಿರುಬಿಟ್ಟರು. "ಹೂಂ ಹೋಗು ಮನೆಗೆ, ಲಾಯರ್ ಆಗುವ ಯೋಚನೇನ ತಲೆಯಿಂದ ತಗ್ದು ಹಾಕಿ ಚೆನ್ನಾಗಿ ಓದಿಕೊ" ಎಂದು ಬುದ್ಧಿವಾದ ಹೇಳಿ ಕಳಿಸಿದರು. ರಾತ್ರಿಯಿಡೀ ನನಗೆ ಭಯಾನಕ ಕನಸುಗಳು. ಬೆಳಗ್ಗೆ ಎದ್ದವನೇ ನಮ್ಮ ತೋಟಕ್ಕೆ ಬಂದೆ. ನಮ್ಮನೆ ದೇವರನ್ನು ನೆನೆಸಿಕೊಂಡು ಪುನಃ ಕೇಳಿದೆ : "ನಾನೀಗ ಏನು ಮಾಡುವುದು ; ಏನಾಗುವುದು.....?"

5

ನಿಗಿನಿಗಿ ಕೆಂಡಗಳು ದೊಡ್ಡಪ್ಪನನ್ನು ಸುಡಲಿಲ್ಲ

ನನಗರಿವಿಲ್ಲದಂತೆಯೇ ನನ್ನೊಳಗೆ ಪತ್ತೇದಾರಿಕೆ ಗುಣ ಬೆಳೆಯತೊಡಗಿತ್ತು. ನನಗೆ ನಿಗೂಢವೆನಿಸಿದ್ದರ ಆಳವನ್ನು ಬಗೆದು ಎಳೆಎಳೆಯಾಗಿ ಬಿಡಿಸುವ ಕುತೂಹಲವನ್ನು ನನಗೆ ತಡೆದುಕೊಳ್ಳಲು ಆಗುತ್ತಿರಲಿಲ್ಲ.

ನಾನು ಪಟ್ಟಣಕ್ಕೆ ಹೋಗಿ ಓದಿ ದೊಡ್ಡ ಪದವಿ ಪಡೆದುಕೊಳ್ಳಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ತಾತ್ಕಾಲಿಕವಾಗಿಯಾದರೂ ಮರೆಸುವ ಘಟನೆಗಳು ಹಳ್ಳಿಯಲ್ಲಿ ನಡೆಯುತ್ತಿದ್ದವು ; ರೋಮಾಂಚನಗೊಳಿಸುತ್ತಿದ್ದವು.

ನಮ್ಮದು ಅವಿಭಕ್ತ ಕುಟುಂಬ ಆಗಿದ್ದರಿಂದ ಮನೆ ಯಜಮಾನನದೇ ಸರ್ವಾಧಿಕಾರ. ನಮ್ಮ ಮನೆಗೆ ಬರುವವರೆಲ್ಲ ಯಜಮಾನ ದೊಡ್ಡಪ್ಪನವರನ್ನೇ ಕೇಳಿಕೊಂಡು ಬರುತ್ತಿದ್ದರು. ಕುಟುಂಬದ ಸದಸ್ಯರೊಂದಿಗೆ ಮಾತಾಡುವ ಪ್ರತಿ ಮಾತಿನಲ್ಲೂ ಯಜಮಾನಿಕೆಯ ಗತ್ತನ್ನು ಪ್ರದರ್ಶಿಸುತ್ತಿದ್ದರು ದೊಡ್ಡಪ್ಪ. ಹಾಗೆ ಗತ್ತು ಇಟ್ಟುಕೊಳ್ಳದಿದ್ದರೆ ತಮ್ಮ ಯಜಮಾನಿಕೆಗೆ ಎಲ್ಲಿ ಪೆಟ್ಟು ಬೀಳುವುದೊ ಎನ್ನುವ ಭಯವೂ ಅದರ ಹಿಂದಿರುತ್ತಿತ್ತೇನೋ. ಎಲ್ಲ ಮಕ್ಕಳನ್ನೂ ಸಮಾನವಾಗಿ

ಕಾಣಬೇಕು ಎನ್ನುವ ಮನೋಭಾವನೆಯಿಂದಿರಬಹುದು ಅವರು ತಮ್ಮ ಮಕ್ಕಳನ್ನೂ ಅಕ್ಕರೆ, ಸಲುಗೆಗಳಿಂದ ಮುದ್ದು ಮಾಡುತ್ತಿರಲಿಲ್ಲ. ಆದರೆ ನಮ್ಮ ಮನೆಯಲ್ಲಿ ದೊಡ್ಡಪ್ಪನ ಮಕ್ಕಳಿಗೆ ಹೆಚ್ಚಿನ ಸ್ಥಾನಮಾನ ಸದ್ದಿಲ್ಲದೆ ಬಂದುಬಿಟ್ಟಿತ್ತು.

ನನಗೆ ಎಷ್ಟೋ ಬಾರಿ "ನನ್ನ ತಂದೆಯೇಕೆ ನಮ್ಮ ದೊಡ್ಡಪ್ಪನಂತೆ ಎಲ್ಲರಿಗೂ ಹಿರಿಯನಾಗಿ ಹುಟ್ಟಲಿಲ್ಲ? ಮನೆಗೆ ಯಜಮಾನ ಏಕಾಗಲಿಲ್ಲ?" ಎಂದೆನಿಸುತ್ತಿತ್ತು. ನಮ್ಮ ದೊಡ್ಡಪ್ಪನ ಮಕ್ಕಳು ನಮ್ಮ ಮನೆಯ ಹಿರಿತನದ ಗತ್ತಿನಿಂದ ನಡೆದುಕೊಳ್ಳುವುದು ನನ್ನಲ್ಲಿ ಅಸಮಾಧಾನದ ಹೊಗೆಯೆಬ್ಬಿಸುತ್ತಿತ್ತು. ನನ್ನ ದೊಡ್ಡಪ್ಪ ಮತ್ತವರ ಮಕ್ಕಳು ಯಾವ ದೃಷ್ಟಿಯಲ್ಲಿ ಮಹಾ? ನನ್ನಪ್ಪನಂತೆ ನನ್ನ ದೊಡ್ಡಪ್ಪ; ಅವರ ಮಕ್ಕಳಂತೆ ನಾನೂ ಎಂದು ಮನದೊಳಗೇ ಎಷ್ಟೋ ಬಾರಿ ಸಮತಾಭಾವದ ತರ್ಕ ಮಾಡುತ್ತಿದ್ದೆ. ನನ್ನ ಈ ಒಳ ಭಾವನೆಗಳಿಗೆ ನನ್ನ ತಾಯಿ ಬಾಯಿಯಾಗುತ್ತಿದ್ದಳು ; ಮನೆಯಲ್ಲಿ ನಡೆಯುವ ತಾರತಮ್ಯಗಳ ವಿರುದ್ಧ ಸಿಡಿದೇಳುತ್ತಿದ್ದಳು. ಮೌನದಿಂದಿರುತ್ತಿದ್ದ ನನ್ನ ತಂದೆಯನ್ನು ಇದೇ ವಿಷಯಕ್ಕಾಗಿ ಕೆಲವೊಮ್ಮೆ ತರಾಟೆಗೂ ತೆಗೆದುಕೊಳ್ಳುತ್ತಿದ್ದಳು.

ಅದು ಮೊಹರಮ್ ಸಮಯ. ನಮ್ಮೂರ ಬಾಬಯ್ಯನ ಗುಡಿ ಮದುವಣಗಿತ್ತಿಯಂತೆ ಸಿಂಗರಿಸಿಕೊಂಡಿತ್ತು. ಮುಂಚಿನಿಂದಲೂ ನಮ್ಮೂರಲ್ಲಿದ್ದ ಗುಡಿಯಲ್ಲವದು. ನನ್ನ ತಾಯಿಯ ಪೂರ್ವ ಜನರಿಗೆ ಮಕ್ಕಳಾಗಿರಲಿಲ್ಲವಂತೆ. ಹಿಂದೂಪುರ ತಾಲ್ಲೂಕಿನ ಪೆನುಗೊಂಡ ಗ್ರಾಮದ ಬಾಬಯ್ಯ ಹೊತ್ತ ಹರಕೆ ಈಡೇರಿಸುವುದಕ್ಕೆ ಪ್ರಸಿದ್ಧನಾಗಿದ್ದ. ತಮಗೆ ಮಕ್ಕಳಾಗಲಿ ಎಂದು ಪೆನುಗೊಂಡದಿಂದ ಬಾಬಯ್ಯನ ಲೋಹದ ಹಸ್ತ ಮಾಡಿಸಿ ತಂದು ನಮ್ಮ ಊರಲ್ಲಿ ಸ್ಥಾಪಿಸಿದ್ದರು. ಊರಲ್ಲಿ ಮುಸ್ಲಿಮರಾರೂ ಇರಲಿಲ್ಲವಾಗಿ ದೊಡ್ಡಬಳ್ಳಾಪುರದಿಂದ ಒಂದು ಮುಸ್ಲಿಂ ಕುಟುಂಬವನ್ನು ಕರೆತಂದು ವಾಸಕ್ಕೆ ಮನೆಯ ವ್ಯವಸ್ಥೆಯನ್ನೂ ಮಾಡಿದ್ದರು. ಬಾಬಯ್ಯನಿಗಾಗಿ ಒಂದು ದೊಡ್ಡ ಗುಡಿಯನ್ನೂ ಕಟ್ಟಿಸಿದ್ದರು. ಬಾಬಯ್ಯನನ್ನು ಚಿಕ್ಕಬೆಳವಂಗಲದಲ್ಲಿ ಕೂರಿಸಿ ಒಂದು ಮೊಹರಮ್ ಮುಗಿಯುತ್ತಿದ್ದಂತೆಯೇ ನನ್ನ ತಾಯಿಯ ಪೂರ್ವ ಜನರಿಗೆ ಗಂಡುಮಗುವಾಯಿತಂತೆ.

ಮೊಹರಮ್ ಬಂತೆಂದರೆ ನನಗೆ ಮೈಮರೆಯುವ ಖುಷಿ. ದೂರದ ನೆಂಟರು ಮತ್ತು ಅವರ ಮಕ್ಕಳು ಬಂದು ಮನೆ ಮನಗಳಿಗೆ ಹೊಸಕಳೆ ಬರುತ್ತಿತ್ತು. ವರ್ಷವಿಡೀ ಕಟ್ಟಿಗೆಯ ಟ್ರಂಕಿನಲ್ಲಿರುತ್ತಿದ್ದ ಬಾಬಯ್ಯ ಮೊಹರಮ್ ಬಂತೆಂದರೆ ಹೊರಕ್ಕೆ ಬರುತ್ತಿದ್ದ. ಬಾಬಯ್ಯನ ಹಸ್ತಗಳನ್ನು ಆರಡಿ ಕೋಲಿಗೆ ಕಟ್ಟಿ ಅದರ ಮೇಲೆ ಜರಿಯಿಂದ ಕೂಡಿದ ಮಿಂಚುವ ಬಟ್ಟೆಗಳನ್ನು ಇಳಿಬಿಡುತ್ತಿದ್ದರು. ಹಸ್ತ ಮುಖದಂತೆಯೂ ಬಟ್ಟೆ ಹೊದಿಕೆಯಿಂದಾವೃತ ಭಾಗ ದೇಹದಂತೆಯೂ

ಕಾಣಿಸುತ್ತಿತ್ತು. ಅದಕ್ಕೊಂದು ದೈವಿ ಆಕಾರ ಮತ್ತು ಕಳೆಗಳು ಮೇಳೈಸಿಕೊಳ್ಳುತ್ತಿದ್ದವು. ಖತಲ್ ರಾತ್ರಿಯ ದಿನ ಹದಿನೈದು ಅಡಿ ವ್ಯಾಸದ ಕೊಂಡವೊಂದನ್ನು ಬಾಬಯ್ಯನ ಗುಡಿಯ ಎದುರಾಗಿ ಅಗೆದು ನಿರ್ಮಿಸಿ ಅದರಲ್ಲಿ ಕಟ್ಟಿಗೆಯ ದೊಡ್ಡದೊಡ್ಡ ಕೊರಡುಗಳನ್ನು ತಂದು ಹಾಕಿ ಅದಕ್ಕೆ ಉರಿಹಚ್ಚುತ್ತಿದ್ದರು. ಸಂಜೆಗೆ ಹಚ್ಚಿದ ಉರಿಗೆ ರಾತ್ರಿಯಾಗುತ್ತಿದ್ದಂತೆ ಕೊರಡಲ್ಲಿ ತಿವಿದು ತಿವಿದು ಹೊಡೆಯುತ್ತಿದ್ದರು. ಆಗ ಅಲಾಯಿಕುಣಿ ಸುತ್ತಲೂ ನಿಂತ ಹೆಣ್ಣು ಗಂಡುಗಳ ಮುಖಗಳು ಸಂಜೆಯ ಸೂರ್ಯನಂತೆ ಕೆಂಪಾಗಿ ಕಾಣುತ್ತಿದ್ದವು.

ಹರಕೆ ಹೊತ್ತವರು ಹುಲಿ ಬಣ್ಣ ಬಳಿದುಕೊಂಡು ಕೊಂಡದ ಸುತ್ತ ಕುಣಿಯುತ್ತಿದ್ದರು. ಹುಲಿ ಕುಣಿತದ ಹಲಗೆ ಸಪ್ಪಳ ಕಿವಿಗೆ ಬಿದ್ದೊಡನೆ ಮಕ್ಕಳ ಹೆಜ್ಜೆಗಳು ತಮಗೆ ತಾವೇ ಕುಣಿಯಲಾರಂಭಿಸುತ್ತಿದ್ದವು. ಬಾಬಯ್ಯನನ್ನು ಹೊಳೆಗೆ ಕಳಿಸುವ ರಾತ್ರಿ ಊರು, ಪರ ಊರುಗಳ ಜನವೆಲ್ಲ ಭಾರೀ ಜನಸಂಖ್ಯೆಯಲ್ಲಿ ಸೇರುತ್ತಿದ್ದರು. ಮಿಠಾಯಿ, ಬೋಂಡ, ಕಳ್ಳೆಪುರಿ, ಆಟಿಗೆ ಸಾಮಾನು ಇತ್ಯಾದಿಗಳ ಅಂಗಡಿಗಳು ಬೀಡುಬಿಡುತ್ತಿದ್ದವು. ಬಾಬಯ್ಯನಿಗೆ ಸಕ್ಕರೆ ಓದಿಸಲು ಬರುವವರೆಲ್ಲ ಮಕ್ಕಳಿಗೆ ಸಕ್ಕರೆ ಹಂಚುತ್ತಿದ್ದರು. ಬಾಬಯ್ಯನ ಗುಡಿ ಮುಂದಿನ ಕೊಂಡದಲ್ಲಿನ ಬಿಸಿಬೂದಿಯನ್ನು ವರ್ಷವಿಡೀ ಕಂಟಕನಾಶ ಭಸ್ಮವೆಂದು ಧರಿಸಿಕೊಳ್ಳುವುದಕ್ಕೋಸ್ಕರ ಒಯ್ಯಲು ಬೆಳಗ್ಗೆ ತಮ್ಮ ಸಮಯಾನುಕೂಲಕ್ಕೆ ಅನುಸಾರವಾಗಿ ಜನ ಬರುತ್ತಿದ್ದರು.

ಖತಲ್ ರಾತ್ರಿಯ ಮಾರನೆಯ ಬೆಳಗ್ಗೆ ಕೆಲವರು ಕೊಂಡದ ಬಳಿ ಬಂದು ಹೌಹಾರಿದರು ; ಕೊಂಡದೊಳಗಿನ ಕೆಂಡವನ್ನೆಲ್ಲ ಸುತ್ತಲೂ ಎರ್ರಾಬಿರ್ರಿ ಯಾರೋ ಎರಚಿ ಹೋಗಿದ್ದರು. ಕೊಂಡದ ಸುತ್ತಲೂ ಬೂದಿ, ಇದ್ದಿಲುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಯಾವ ವರ್ಷವೂ ಹೀಗಾಗಿರಲಿಲ್ಲ. ಈ ವರ್ಷ ಹೀಗೇಕಾಯಿತು ಎಂದು ಎಲ್ಲರೂ ಮಾತಾಡಿಕೊಳ್ಳುವಷ್ಟರಲ್ಲಿ ಜನಜಾತ್ರೆಯಾಯಿತು. ಬಾಬಯ್ಯನ ಗುಡಿಗೆ ಸಮೀಪದಲ್ಲಿದ್ದ ಬಾವಿಕಟ್ಟೆಯ ಮೇಲಿಂದ ಯಾವನೋ ಒಬ್ಬ ಕೂಗಿದ, "ಬರ್ರೋ ಇಲ್ಲಿ ನೋಡ್ರೋ, ತಿಮ್ಮೇಗೌಡ್ರ ಮೈಯೆಲ್ಲ ಬೂದಿಯಾಗೇತೆ" ಎಂದು.

ಜನರ ಗುಂಪು ಬಾವಿಯ ಬಳಿಗೆ ಹೋಯಿತು. ನಮ್ಮ ದೊಡ್ಡಪ್ಪ ಇದಾವುದರ ಪರಿವೆಯಿಲ್ಲದೆ ಆಳ ನಿದ್ರೆಯಲ್ಲಿದ್ದರು. ಜನ ದೊಡ್ಡಪ್ಪನವರನ್ನು ಎಬ್ಬಿಸಿ ಕೇಳಿದರು, "ರಾತ್ರಿ ನೀವೇ ಕೆಂಡ ಎರಚಿದ್ರಾ?"

ಅದಕ್ಕೆ ದೊಡ್ಡಪ್ಪ ಅದೇನೂ ತಮಗೆ ತಿಳಿಯದು ಎಂದೂ ಆ ಬಾವಿಕಟ್ಟೆಯ ಮೇಲೆ ತಂದು ತಮ್ಮನ್ನು ಮಲಗಿಸಿದವರಾರೆಂದೂ ಪುನರ್‌ಪ್ರಶ್ನಿಸಿದರು.

ಆಗ ಜನವೆಲ್ಲ, "ಓ ತಿಮ್ಮೇಗೌಡ್ರ ಮೈಮ್ಯಾಕೆ ಬಾಬಯ್ಯ ಬಂದು ಹೋಗವ್ನೆ. ರಾತ್ರಿ ಎಲ್ರೂ ಮನೆ ಸೇರಿದ್‌ಮ್ಯಾಕೆ ತಿಮ್ಮಣ್ಣಗೌಡ್ರು ಕೊಂಡ ಹಾರಿ ಕೆಂಡ ಎರಚಿದಾರೆ...." ಎಂದು ಏರುಧ್ವನಿಯಲ್ಲಿ ಹೇಳತೊಡಗಿದರು.... ನಮ್ಮ ದೊಡ್ಡಪ್ಪನವರ ವ್ಯಕ್ತಿತ್ವಕ್ಕೆ ದೈವಿಶಕ್ತಿಯ ರೆಕ್ಕೆಪುಕ್ಕಗಳು ಮೂಡಿಬಿಟ್ಟವು. ಅವರ ಯಜಮಾನಿಕೆಯ ಬಗ್ಗೆ ಒಳಗೊಳಗೇ ಅಸಮಾಧಾನಪಡುತ್ತಿದ್ದ ನನಗೆ ನಮ್ಮ ದೊಡ್ಡಪ್ಪ ಒಗಟಾಗತೊಡಗಿದರು ; ದೈವಿಶಕ್ತಿಯ ದೊಡ್ಡಪ್ಪನವರ ಬಗ್ಗೆ ಹೇಗೆ ಯೋಚಿಸುವುದೂ ತಪ್ಪಾಗುತ್ತದೆ ಎನ್ನುವ ಭಯವೂ ಸುಳಿದು ಹೋಯಿತು

ಪುನಃ ಮೊಹರಮ್ ಬಂದಿತು. ಇಡೀ ಊರೇ ಕಾತರಗೊಂಡಿತು. ನಮ್ಮ ದೊಡ್ಡಪ್ಪ ಕೊಂಡ ಧುಮುಕುವುದನ್ನು ನೋಡಲು ಸುತ್ತಲಿನ ಊರುಗಳಾದ ದೊಡ್ಡಬೆಳವಂಗಲ, ಸಂತೆ ಅಗ್ರಹಾರ, ಮೂಗೇನಹಳ್ಳಿ, ಸೊನ್ನೇನಹಳ್ಳಿ, ಅಕ್ಕಮ್ಮನಹಳ್ಳಿ, ರಾಂಪುರ, ಕಸಾಘಟ್ಟ, ಕಾರೇಪುರ, ಚಿಕ್ಕಹೆಜ್ಜಾಜಿ, ಕತ್ತೀಹೊಸಹಳ್ಳಿ, ದೊಡ್ಡಹೆಜ್ಜಾಜಿಗಳಿಂದ ಮಾತ್ರವಲ್ಲದೆ ತಾಲ್ಲೂಕು ಕೇಂದ್ರ ದೊಡ್ಡಬಳ್ಳಾಪುರದಿಂದಲೂ ವಿಶೇಷವಾಗಿ ಮುಸ್ಲಿಮರು ಕೊಂಡ ತುಳಿಯುವುದನ್ನು ನೋಡಲು ಬರುತ್ತಾರೆನ್ನುವ ಸುದ್ದಿ ಇಡೀ ಊರಲ್ಲಿ ಹರಡಿತ್ತು.

ಊರಲ್ಲಿ ಕೆಲವರು ನನಗೆ ಕೇಳಿಸಲಿ ಎಂದು "ಅಂಗೆಲ್ಲ ಕೊಂಡದಾಗ ಹಾರಾಕಾತದಾ? ಕಾಲು, ಕೈಗೋಳಿಗೆ ಗಿಡಮೂಲಿಕೆ ರಸ ಹಚ್ಚಿಕೊಂಡು ಜನರ್‍ನ ಹುಚ್ಚು ಮಾಡೋಕೆ ಹೊಂಟವ್ರೆ ತಿಮ್ಮೇಗೌಡ್ರು...." ಎಂದು ಗಟ್ಟಿಯಾಗಿ ಮಾತಾಡಿಕೊಳ್ಳತೊಡಗಿದರು.

ನನ್ನ ಪತ್ತೇದಾರಿ ಬುದ್ಧಿ ಸುಮ್ಮನೇ ಕೂರಲಿಲ್ಲ; ನನ್ನ ದೊಡ್ಡಪ್ಪನವರ ಚಲನವಲನಗಳನ್ನು ಹಿಂಬಾಲಿಸತೊಡಗಿತು.... ಕೊಂಡವನ್ನು ನಾಳೆ ತುಳಿಯುತ್ತಾರೆಂದರೆ ರಾತ್ರಿಯಿಂದಲೇ ದೊಡ್ಡಪ್ಪನವರನ್ನು ಗಮನಿಸತೊಡಗಿದೆ.... ರಾತ್ರಿ ಅವರೇನೂ ತಪ್ಪಲನ್ನು ಮೈಗೆ ಹಚ್ಚಿಕೊಂಡು ಮಲಗಲಿಲ್ಲ. ಬೆಳಗ್ಗೆ ಶೌಚಕ್ಕೆಂದು ದೊಡ್ಡಪ್ಪ ಹೊರನಡೆದಾಗ ಅವರಿಗೆ ತಿಳಿಯದಂತೆ ದೂರದಿಂದ ಹಿಂಬಾಲಿಸಿ ಹೋದೆ. ಅವರಿಗೆ ಕಾಣದಂತೆ ಪೊದೆಯಲ್ಲಿ ಕೂತು ಏನಾದರೂ ಗಿಡಮೂಲಿಕೆ ಕಿತ್ತುಕೊಳ್ಳುವರೇ, ಹಚ್ಚಿಕೊಳ್ಳುವರೋ ಎಂದು ನೋಡಿದೆ. ಅದೇನನ್ನೂ ದೊಡ್ಡಪ್ಪ ಮಾಡಲಿಲ್ಲ. ನನಗೆ ಸಮಾಧಾನ ಅಸಮಾಧಾನಗಳೆರಡೂ ಆದವು. ಊರಿನ ಕೆಲವರು ಆರೋಪಿಸುವಂತೆ ಗಿಡಮೂಲಿಕೆ ಹಚ್ಚಿಕೊಂಡಿಲ್ಲ. ದೊಡ್ಡಪ್ಪ ಢೋಂಗಿ ಅಲ್ಲ ಎನ್ನುವುದು ನನಗೆ ಖಚಿತಗೊಂಡುದು ಸಮಾಧಾನ ಉಂಟುಮಾಡಿದರೆ, ನನ್ನ ಬಂಡಾಯಕ್ಕೆ ಗುರಿಯಾಗಿದ್ದ ಯಜಮಾನನಿಗೆ ನಿಜವಾಗಿಯೂ ದೈವೀ

ವರ್ಚಸ್ಸು ಇದೆ ಎಂದ ಹಾಗಾಯಿತಲ್ಲಾ....? ಎನ್ನುವ ನಿರ್ಣಯ ನನ್ನ ಪೂರ್ವಗ್ರಹ ಸಂಶಯಗಳನ್ನು ಹಿಡಿದಲ್ಲಾಡಿಸತೊಡಗಿದುದು ಅಸಮಾಧಾನವನ್ನುಂಟುಮಾಡಿತು.

.ದೊಡ್ಡಪ್ಪ ಅಂದೂ ಕೂಡಾ ಎಂದಿನಂತೆ ಸ್ನಾನ, ಊಟ, ಎಲೆಯಡಿಕೆ ಸೇವನೆ ಮಾಡಿದರು. ಮಧ್ಯಾಹ್ನದ ಹೊತ್ತಿಗೆ ಬಾಬಯ್ಯನ ಗುಡಿಗೆ ಅವರನ್ನು ನನ್ನ ಸೋದರಮಾವಂದಿರು ಕರೆದೊಯ್ದರು. ಸಂಜೆ ಜನ ಸೇರಿದರು. ಕೊಂಡದ ಕಟ್ಟಿಗೆ ಕೊರಡುಗಳಿಗೆ ಹೊತ್ತಿದ ಉರಿ ಆಕಾಶಕ್ಕೆ ನಾಲಿಗೆ ಚಾಚುವಂತೆ ಉರಿಯತೊಡಗಿತು. ಉರಿಯಾರಿದಾಗ ಕಟ್ಟಿಗೆ, ಹೊಗೆ ಎರಡೂ ಮಾಯವಾದವು. ಆವರಿಸತೊಡಗಿದ್ದ ಕತ್ತಲೆ ರಾತ್ರಿಯಲ್ಲಿ ಕೆಂಡಗಳು ಮತ್ತಷ್ಟು ಕೆಂಪಾಗಿಯೂ ನಿಗಿನಿಗಿಯಾಗಿಯೂ ಕಾಣತೊಡಗಿದವು. ಬಾಬಯ್ಯನ ಗುಡಿಯಲ್ಲಿ ಕೂತಿದ್ದ ನನ್ನ ದೊಡ್ಡಪ್ಪನವರಿಗೆ ಆವೇಶ ಬರತೊಡಗಿತು. ಥಟ್ಟನೆ ಎದ್ದವರೇ ಗುಡಿಯ ಮುಂದಿದ್ದ ಕೊಂಡಕ್ಕೆ ಧುಮುಕಿದರು. ದೊಡ್ಡಪ್ಪನವರ ಮೊಣಕಾಲುಗಳು ಕೆಂಡದಲ್ಲಿ ಮುಳುಗಿದವು. ಬಾಗಿದವರೇ ಕೆಂಡಕ್ಕೆ ಕೈ ಹಾಕಿ ಸುತ್ತಲೆಲ್ಲ ಎರಚತೊಡಗಿದರು. ನೆರೆದು ನಿಂತಿದ್ದ ಜನ ಹೋ ಹೋ ಎಂದು ಅರಚಾಡತೊಡಗಿದರು. ಬೀಳುತ್ತಿದ್ದ ಕೆಂಡಗಳು ಜನರ ಮೈಯನ್ನು ಸುಡುತ್ತಿದ್ದವು....

ಜನಸ್ತೋಮ ಯಾಯಿಮಾಮ್ ಧೀನೌ ಎಂದು ಕೂಗತೊಡಗಿತು. ತಪ್ಪಡಿ ಶಬ್ದ ಗಗನಕ್ಕೇರಿತು.

ಸ್ವಲ್ಪ ಸಮಯದ ನಂತರ ನನ್ನ ಸೋದರಮಾವಂದಿರು ದೊಡ್ಡಪ್ಪನವರನ್ನು ಹೊರಗೆಳೆದುಕೊಂಡು ಗುಡಿಯಲ್ಲಿ ತಂದು ಕೂರಿಸಿದಾಗ ನನ್ನ ಕಣ್ಣುಗಳು ಮೊದಲು ಪರೀಕ್ಷಿಸಿದವು. ಕಾಲಿನ ಚರ್ಮ ಸುಟ್ಟಿಲ್ಲವಾಗಿದ್ದರೂ ಕೂದಲುಗಳಾದರೂ ಸುಟ್ಟಿರಬೇಕಲ್ಲಾ ಎಂದು. ಕೂದಲು ಯಥಾವತ್ ಇದ್ದುದನ್ನು ನೋಡಿ ನನ್ನ ಎದೆ ಮತ್ತಷ್ಟು ಡವಡವಗುಟ್ಟತೊಡಗಿತು. ಸಣ್ಣದಾಗಿ ಅದುರುವ ಕೈಗಳಿಂದ ದೊಡ್ಡಪ್ಪನವರ ಕಾಲುಗಳನ್ನು ಸವರಿದೆ.

6

ವಿಚಿತ್ರ ಚಟಕ್ಕಾಗಿ ಹೆಂಡತಿಯನ್ನೇ ಕೊಂದ

ನನ್ನ ಎರಡನೇ ದೊಡ್ಡಪ್ಪ ದೊಡ್ಡೇಗೌಡರಿಗೆ ಮಕ್ಕಳಿರಲಿಲ್ಲ. ನನ್ನನ್ನು ಅವರು ಬಹಳ ಮುದ್ದಾಡುತ್ತಿದ್ದರು. ಹಿರಿಯ ದೊಡ್ಡಪ್ಪನವರ ಮಕ್ಕಳೆಲ್ಲ ದೊಡ್ಡವರು. ದೊಡ್ಡೇಗೌಡರು ಹೊರನಡೆದರೆ ನನ್ನನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದರು.

ನನ್ನ ಕಿರಿಯ ದೊಡ್ಡಪ್ಪ ಜೋಡಿ ಹೋರಿಗಳನ್ನು ಕಟ್ಟಿ ಮೇಯಿಸುವುದರಲ್ಲಿ ಅಗಾಧ ಖುಷಿಪಡುತ್ತಿದ್ದರು. ಬೆಳಗಿನ ಜಾವ ನಾಲ್ಕು ಗಂಟೆಯಿಂದಲೇ ಹೋರಿಗಳಿಗೆ ಉಪಚಾರ ಶುರುವಾಗುತ್ತಿತ್ತು.

ಘಾಟಿ ಸುಬ್ರಹ್ಮಣ್ಯ ದನಗಳ ಜಾತ್ರೆ ಆರಂಭಗೊಳ್ಳುವುದಕ್ಕೆ ತಿಂಗಳು ಮುಂಚೆಯೇ ಅದರ ಬಗ್ಗೆ ರೋಚಕ ಚರ್ಚೆಗಳು ಶುರುವಾಗುತ್ತಿದ್ದವು.

ಮಜಬೂತಾಗಿ ಬೆಳೆಸಿದ ತಮ್ಮ ಹೋರಿಗಳನ್ನು ಹಿಡಿದುಕೊಂಡು ಘಾಟಿ ಸುಬ್ರಹ್ಮಣ್ಯ ಜಾತ್ರೆಗೆ ಪ್ರತಿ ವರ್ಷ ಹೋಗುತ್ತಿದ್ದರು ದೊಡ್ಡಪ್ಪ. ನಮ್ಮ ಹೋರಿ ಅಷ್ಟು ದುಡ್ಡಿಗೆ ಹೋಯಿತು, ಇಷ್ಟು ದುಡ್ಡಿಗೆ ಹೋಯಿತು ಎಂದು ದೊಡ್ಡಪ್ಪ

ಕೊಚ್ಚಿಕೊಳ್ಳುತ್ತಿದ್ದರು. ಹೋರಿ ಮಾರಾಟದಿಂದ ದೊಡ್ಡಪ್ಪನವರಿಗೆ ಲಾಭವಾಗಿದೆಯೆಂದು ನನಗನಿಸುತ್ತಿರಲಿಲ್ಲ. ಅವರು ಅಷ್ಟೊಂದು ಖುಷಿ, ಧಾರಾಳತನಗಳಿಂದ ಹೋರಿ ಬೆಳೆಸಿದ್ದನ್ನು ನಾನು ಕಣ್ಣಾರೆ ಕಂಡಿರುತ್ತಿದ್ದೆ. ದೊಡ್ಡಪ್ಪ ಹೋರಿ ಬೆಳೆಸುವುದು ಮತ್ತು ಮಾರುವುದು ದುಡ್ಡು ಗಳಿಸಲಿಕ್ಕಲ್ಲ ; ಖುಷಿಗೋಸ್ಕರ ಎನಿಸುತ್ತಿತ್ತು.

ಈ ಬಾರಿ ನನ್ನನ್ನೂ ಸುಬ್ರಹ್ಮಣ್ಯ ಘಾಟಿಯ ಜಾತ್ರೆಗೆ ಕರೆದೊಯ್ಯಬೇಕೆಂದು ಹದಿನೈದು ದಿನಗಳ ಮುಂಚಿನಿಂದಲೇ ದೊಡ್ಡಪ್ಪನಿಗೆ ದುಂಬಾಲು ಬಿದ್ದಿದ್ದೆ.

ನನ್ನ ಅಪ್ಪ ಮತ್ತು ಹಿರಿಯ ದೊಡ್ಡಪ್ಪನವರು ನಾನು ಜಾತ್ರೆಗೆ ಹೋಗುವುದು ಬೇಡವೆಂದಾಗ "ಹುಡ್ಗ ಚೂಟಿಯಾಗಿದಾನೆ, ಪ್ರಪಂಚ ನೋಡಿದ್ರೆ ಹುಷಾರ್ ಆಗ್‌ತಾನೆ" ಎಂದು ಹೇಳಿ ಅವರ ಬಾಯಿ ಮುಚ್ಚಿಸಿದಾಗ ರೋಮಾಂಚನಗೊಂಡೆ.

ಜಾತ್ರೆಯಲ್ಲಿ ಜಾನುವಾರುಗಳನ್ನು ನೋಡುವುದರಲ್ಲಿ, ತಮ್ಮ ಹೋರಿಗಳನ್ನು ತೋರಿಸುವುದರಲ್ಲಿ ದೊಡ್ಡಪ್ಪನವರ ಆಸಕ್ತಿಯಿದ್ದರೆ ಟೆಂಟ್ ಸಿನಿಮಾ, ಸರ್ಕಸ್, ತಿಂಡಿ ತಿನಿಸುಗಳ ಕಡೆಗೇ ನನ್ನ ಗಮನ. ನನ್ನ ಇಂಗಿತವನ್ನು ಅರಿತುಕೊಂಡವರಂತೆ ದೊಡ್ಡಪ್ಪ ನಮ್ಮ ಸಂಬಂಧಿಕ ಬಾಳಯ್ಯನನ್ನು ಕರೆದು "ಇವನ್‌ಗೆ ಸಿನಿಮಾ, ಸರ್ಕಸ್ ತೋರ್‍ಸಿಕಂಡ್ ಬಾರಯ್ಯ" ಎಂದು ಹೇಳಿ ಆತನೊಂದಿಗೆ ನನ್ನನ್ನು ಕಳಿಸಿಕೊಟ್ಟರು.

ಬಾಳಯ್ಯ ನನ್ನನ್ನು 'ಬೇಡರ ಕಣ್ಣಪ್ಪ' ಸಿನಿಮಾಕ್ಕೆ ಕರೆದುಕೊಂಡು ಹೋದ. ಸಿನಿಮಾ ಮುಗಿಯುವುದರಲ್ಲಿ ಹೊರಗಿನಿಂದ ಮೂರ್‍ನಾಲ್ಕು ಬಾರಿ ಬೋಂಡ, ವಡೆ, ಜಿಲೇಬಿಗಳನ್ನು ತಂದುಕೊಟ್ಟ. 'ನಿಮ್ ದೊಡ್ಡಪ್ಪ ತಿಂಡಿ ಕೊಡ್ಸು ಅಂತ ದುಡ್ಡು ಕೊಟ್ಟವ್ನೆ ತಿನ್ನು ತಿನ್ನು' ಎಂದಾಗ ದೊಡ್ಡಪ್ಪನವರ ಬಗ್ಗೆ ಈಗಾಗಲೇ ಇದ್ದ ಪ್ರೀತಿ ಇಮ್ಮಡಿಸಿ ಹೊಟ್ಟೆಯಿಂದ ಗಂಟಲವರೆಗೆ ಬಂದಿತು. ಸಿನಿಮಾದಲ್ಲಿ ನರಸಿಂಹರಾಜುವಿನ ಹಾಸ್ಯದ ದೃಶ್ಯ ಬಂದಾಗ ಅವಶ್ಯಕತೆಗಿಂತಲೂ ಹೆಚ್ಚು ನಕ್ಕೆ, ಚಪ್ಪಾಳೆ ತಟ್ಟಿದೆ.

ನಾವು ತಂಗಿಕೊಂಡಿದ್ದ ಸ್ಥಳಕ್ಕೆ ಎತ್ತರದ ಮೈಕಟ್ಟಿನ ಮತ್ತು ದಪ್ಪ ಮೀಸೆಯ ಆಸಾಮಿಯೊಬ್ಬರು ಬಂದರು. ಪೋಲೀಸ್ ಇನ್ಸ್‌ಪೆಕ್ಟರ್ ಬಂದ್ರು ಎಂದರು ಅಲ್ಲಿದ್ದವರು. ನನಗೆ ಒಳಗೇ ನಡುಕ ಶುರುವಾಯಿತು. ಆ ಇನ್ಸ್‌ಪೆಕ್ಟರ್‌ಗೆ ವಯಸ್ಸಾಗಿತ್ತಾದರೂ ಆದರೂ ಪೋಲೀಸ್ ಠೀವಿ, ಗತ್ತುಗಳು ಪೂರ್ಣ ಮಾಸಿರಲಿಲ್ಲ.

ದೊಡ್ಡ ಬೆಳವಂಗಲದ ಠಾಣೆಯೆದುರು ಸೈಕಲ್ ಇಳಿದು ಮರ್ಯಾದೆ ತೋರಿಸಿ ಹೋಗುತ್ತಿದ್ದ ನನಗೆ ಪೊಲೀಸರ ಬಗೆಗೆ ಭಯಾನಕ ಕಲ್ಪನೆಗಳಿದ್ದವು.

ಇನ್ಸ್‌ಪೆಕ್ಟರ್ "ಈ ಹುಡ್ಗ ಯಾರು" ಎಂದು ಕೇಳಿದರು. ಬಾಳಯ್ಯ "ದೊಡ್ಡೇಗೌಡರ ತಮ್ಮನ ಮಗ. ಚೂಟಿಯಾಗವ್ನೆ. ಭಾಳ ಸೊಗಸಾಗಿ ಮಾತಾಡ್ತನೆ" ಎಂದ.

"ಏನೋ ಮಗಾ, ದೊಡ್ಡೋನಾದ್ ಮೇಲೆ ಏನಾಗ್‌ಬೇಕು ಅಂತ ಅನ್ಕೊಂಡಿದೀಯಾ?" ಎಂದು ಇನ್ಸ್‌ಪೆಕ್ಟರ್ ಕೇಳಿದ್ದಕ್ಕೆ ನಾನು ಏನೂ ಮಾತಾಡದೆ ಮೌನವಾಗಿದ್ದೆ. ಆಗ ನನ್ನ ದೊಡ್ಡಪ್ಪ 'ಸುಳ್ ಹೇಳಿ ದುಡ್ಡು ಗಳಿಸೊ ಕೆಲ್ಸ, ಅದೇ ಲಾಯರ್ ಕೆಲ್ಸ ಮಾಡ್‌ಬೇಕೂಂತ ಆಸೆ ಇಟ್‌ಕೊಂಡವ್ನೆ ಇನ್‌ಸ್ಪೆಕ್ಟರ್ರೆ" ಎಂದರು.

"ಲಾಯರ್ ಅಂದ್ರೆ ಸುಳ್ಳು ಹೇಳೊ ಕೆಲ್ಸ ಅಂತ್ಹೇಳಾದು ತಪ್ಪು. ನಮ್ಗೆಲ್ಲ ಕಾಣ್ಸೋದು ಒಂದ್ ರೀತಿ ಆದ್ರೆ, ಕಾನೂನು ಕಣ್ಣಿಂದ ನೋಡೊ ಲಾಯರ್‌ಗೇ ಬೇರೆ ರೀತಿ ಕಾಣ್ತಿರ್‌ತದೆ. ಒಂದ್ ಕೊಲೆ ಕೇಸ್‌ನಾಗೆ ನಾನೇ ತನಿಖೆ ಮಾಡಿದ್ದೆ. ಆರೋಪಿಗೆ ಫಾಸೀ ಶಿಕ್ಷೆ ಕೊಡ್ಸೇ ತೀರ್‌ಬೇಕಂತ ಭಾಳ ಹೆಣಗಾಡಿದ್ದೆ. ಆದ್ರೆ ಆ ಲಾಯರ್ರು ಆರೋಪಿಗೆ ನಾಲ್ಕೇ ನಾಲ್ಕು ವರ್ಷ ಜೈಲು ವಾಸದ ಸಜೆ ಕೊಡಿಸಿಬಿಟ್ರು" ಎಂದರು ಇನ್ಸ್‌ಪೆಕ್ಟರ್.

ಆ ಕೊಲೆ ಕೇಸ್ ಹೇಳುವ ಉತ್ಸಾಹ ಇನ್ಸ್‌ಪೆಕ್ಟರ್ ಮುಖದ ಮೇಲೆ ಕುಣಿಯುತ್ತಿರುವುದನ್ನು ನೋಡಿ ಅಲ್ಲಿದ್ದವರೆಲ್ಲ 'ಅದೇನ್ ಕೇಸ್ ಹೇಳಿ ಸೋಮಿ' ಎಂದರು.

ಇದಕ್ಕಾಗೇ ಕಾಯುತ್ತಿದ್ದೆ ಎನ್ನುವಂತೆ ಇನ್ಸ್‌ಪೆಕ್ಟರ್ ತಾವು ಕೆಲಸಕ್ಕೆ ಸೇರಿಕೊಂಡ ಹೊಸತರಲ್ಲಿ ಹೊಸ ಹುರುಪಿನಿಂದ ತನಿಖೆ ಮಾಡಿದ ಕೊಲೆ ಕೇಸಿನ ನೆನಪುಗಳನ್ನು ಕೆದಕಿ ಪೋಣಿಸತೊಡಗಿದರು....

ಶಂಕರ ಶೆಟ್ಟಿ ಮೂಲತಃ ಬೆಂಗಳೂರಿನವನು. ನೋಡಲು ಕಟ್ಟುಮಸ್ತಾಗಿಯೂ ಸುಂದರವಾಗಿಯೂ ಇದ್ದ. ಆದರೆ ಅವನಿಗೆ ವಿಚಿತ್ರ ಚಪಲಗಳು, ಚಟಗಳು. ಆಹ್ವಾನಿಸದಿದ್ದರೂ ಮದುವೆ ಮಂಟಪಗಳನ್ನು ಹುಡುಕಿಕೊಂಡು ಹೋಗುತ್ತಿದ್ದ. ಆಟವಾಡಿಸುವ ನೆಪದಲ್ಲಿ ತಾಯಂದಿರಿಂದ ಸಣ್ಣ ಕೂಸು, ಮಕ್ಕಳುಗಳನ್ನು ಎತ್ತಿಕೊಂಡು ಅವುಗಳ ಮರ್ಮಾಂಗಕ್ಕೆ ಮುದ್ದು ಕೊಟ್ಟು ತೃಪ್ತಿಪಡುತ್ತಿದ್ದನು. ಶೆಟ್ಟಿಯ ಮನೆಯವರೆಲ್ಲ 'ಕರೆಯದೆ ಏಕೋ ಹೋಗ್ತೀಯ ಮದುವೆ ಮಂಟಪಗಳಿಗೆ? ನಮ್ಮ ಮನೆ ಮರ್ಯಾದೆ ಕಳೀಲಿಕ್ಕೆ ಹುಟ್ಟಿದೋನು ನೀನು' ಎಂದು ಬಯ್ಯುತ್ತಿದ್ದರು. ಇವನು

ಮದುವೆ ಮಂಟಪಗಳಿಗೆ ಹೋಗುತ್ತಿರುವುದು ಪುಷ್ಕಳ ಊಟದ ದುರಾಸೆಯಿಂದ ಎಂದು ತಿಳಿದುಕೊಂಡಿದ್ದರು ಅವರೆಲ್ಲ ! ಶಂಕರಶೆಟ್ಟಿಯ ಸಹೋದರ ಸಹೋದರಿಯರಿಗೆ ಮಕ್ಕಳು ಹುಟ್ಟಿದಾಗ ಚಿಕ್ಕಮಕ್ಕಳ ಮರ್ಮಾಂಗಕ್ಕೆ ಮುದ್ದುಕೊಡುವ ಅವನ ಚಪಲ ಬಯಲಾಯಿತು. ಹೀಗಾಗಿ ಮನೆಯಿಂದ ಓಡಿಸಿದರು.

ನೋಡಲು ಸುಂದರವಾಗಿದ್ದ ಶಂಕರಶೆಟ್ಟಿ ಕಾವೇರಿ ಎನ್ನುವ ಯುವತಿಯೊಂದಿಗೆ ಪ್ರೇಮವಿವಾಹ ಮಾಡಿಕೊಂಡ. ಕಾವೇರಿಯ ತಂದೆಯ ವಿರೋಧವಿದ್ದುದರಿಂದ ಕಾವೇರಿ ದಕ್ಷಿಣ ಕನ್ನಡ ಜಿಲ್ಲೆಯ ಕುತ್ತಾವೂರಿನಲ್ಲಿದ್ದ ತನ್ನ ಚಿಕ್ಕಪ್ಪನ ಬಳಿಗೆ ಗಂಡನೊಂದಿಗೆ ಹೋದಳು. ಮಕ್ಕಳಿರದ ಚಿಕ್ಕಪ್ಪ ಶಂಕರಶೆಟ್ಟಿ ಕಾವೇರಿ ದಂಪತಿಗಳಿಗೆ ಆಶ್ರಯ ನೀಡಿದ.

ಕೆಲಸವಿಲ್ಲದ ಶಂಕರಶೆಟ್ಟಿ ಸಣ್ಣಪುಟ್ಟ ಕಳ್ಳತನಗಳನ್ನು ಶುರುಮಾಡಿದ. ಮೇಲಿಂದ ಮೇಲೆ ಠಾಣೆಯ ಆತಿಥ್ಯ ಸ್ವೀಕರಿಸತೊಡಗಿದ. ಆದರೂ ಕಳ್ಳತನ ಬಿಡಲಿಲ್ಲ.

ಕಾವೇರಿಗೆ ಗಂಡುಮಗುವಾಯಿತು. ಹರ್ಷೋಲ್ಲಾಸಗಳಿಂದ ಶಂಕರ ಶೆಟ್ಟಿ ಕುಣಿದಾಡಿದ. ಕಾವೇರಿಯನ್ನು ಮತ್ತಷ್ಟು ತೀವ್ರವಾಗಿ ಪ್ರೀತಿಸತೊಡಗಿದ. 'ಮುತ್ತಿನಂಥ ಮಗನ್ನ ಹೆತ್ತು ಕೊಟ್ಟಿಯಲ್ಲೇ' ಎಂದು ಅವಳನ್ನು ಲಲ್ಲೆಗರೆದಾಗ ಕಾವೇರಿ ನೀರಾಗುತ್ತಿದ್ದಳು. ಶಂಕರ ಶೆಟ್ಟಿ ಕಳವು ಮಾಡಿದ ಚಿನ್ನಾಭರಣ, ಸೀರೆಗಳನ್ನು ತಂದುಕೊಟ್ಟಾಗ ಮೊದಮೊದಲು ತಿರಸ್ಕರಿಸುತ್ತಿದ್ದಳು. ಶಂಕರ ಶೆಟ್ಟಿಯ ಬಾಹುಗಳಲ್ಲಿದ್ದಾಗ ಕಾವೇರಿಗೆ ಅಗಾಧ ಸುಖವೆನಿಸುತ್ತಿತ್ತು. ಗಂಡ ಕಳ್ಳನಿದ್ದರೂ ಒಳ್ಳೆಯವನೇ ಇದ್ದಾನೆ ಎಂದುಕೊಳ್ಳತೊಡಗಿದಳು.

ಶಂಕರಶೆಟ್ಟಿ ತನ್ನ ಮಗುವಿನ ಶಿಶ್ನಕ್ಕೆ ಮುದ್ದು ಕೊಡಲು ಶುರುಮಾಡಿದ. ಇದನ್ನು ನೋಡಿ ಕಾವೇರಿ ಸಂಭ್ರಮಗೊಳ್ಳತೊಡಗಿದಳು. ಚಪ್ಪಾಳೆ ತಟ್ಟಿ ಕುಣಿಯತೊಡಗಿದಳು. ಕುಣಿದು ಕೆನೆಯುವ ಭರದಲ್ಲಿ ಕಾವೇರಿಗೆ ತನ್ನ ಸೆರಗು ಬಿದ್ದರೂ, ಸೀರೆ ಕಳಚಿ ಬಿದ್ದರೂ ಅರಿವಿರುತ್ತಿರಲಿಲ್ಲ. ಅಷ್ಟೊಂದು ಮೈಮರೆಯುತ್ತಿದ್ದಳು. ಮಗುವನ್ನು ಗಂಡ ಅದೆಷ್ಟು ಪ್ರೀತಿಸುತ್ತಿದ್ದಾನೆನ್ನುವ ಖುಷಿ ಆಕೆಗೆ. ಮಗುವಿನ ಶಿಶ್ನಕ್ಕೆ ಮುದ್ದು ಕೊಟ್ಟ ಮೇಲೆ ಗಂಡ ತನ್ನನ್ನು ಚಿತ್ರವಿಚಿತ್ರವಾಗಿ ಪ್ರೀತಿಸುವ ವೈಖರಿಯನ್ನು ಅವಳು ಸೂಕ್ಷ್ಮವಾಗಿ ಗಮನಿಸಿಕೊಂಡಿದ್ದಳು.

ಮಗ ಹುಟ್ಟಿದ ಮೇಲೆ ಗಂಡ ಮೈಮರೆಸುವಂತೆ ಪ್ರೀತಿಸುತ್ತಿದ್ದ. ಹೀಗಾಗಿ ಕಾವೇರಿಗೆ ಮಗುವಿನ ಮೇಲೆ ಅಕ್ಕರೆ ಉಕ್ಕಿಬರುತ್ತಿತ್ತು. ಅಂಥ ಸಂಭ್ರಮ ಸ್ಥಿತಿಯಲ್ಲಿ

ಒಮ್ಮೊಮ್ಮೆ ಮಗುವಿನ ಶಿಶ್ನಕ್ಕೆ ಕಾವೇರಿಯೂ ಮುತ್ತು ಕೊಟ್ಟಿದ್ದೂ ಉಂಟು. ಶಂಕರಶೆಟ್ಟಿ ಮತ್ತು ಕಾವೇರಿ ಅದೆಷ್ಟು ಪ್ರೀತಿಸಿದರೆಂದರೆ ಮೂರು ವರ್ಷಗಳಲ್ಲಿ ಮೂರು ಗಂಡುಮಕ್ಕಳಾಗಿಬಿಟ್ಟವು. ಚಿಕ್ಕಮಗುವಿನ ಶಿಶ್ನ ಶಂಕರಶೆಟ್ಟಿಯನ್ನು ಹುಚ್ಚೆಬ್ಬಿಸುತ್ತಿತ್ತು. ಮಕ್ಕಳು ದೊಡ್ಡವಾಗುತ್ತಿದ್ದಂತೆ ಅವರನ್ನು ಬಿಟ್ಟು ಚಿಕ್ಕ ಮಗುವಿನ ಶಿಶ್ನಕ್ಕೆ ಗಂಟುಬೀಳುತ್ತಿದ್ದ ಶಂಕರಶೆಟ್ಟಿ. ಇದಕ್ಕೆ ಕಾವೇರಿ ಪ್ರೋತ್ಸಾಹ ನೀಡುತ್ತಿದ್ದಳು.

ನಾಲ್ಕನೆಯ ಮಗುವಿಗೆ ಜನ್ಮ ನೀಡಲು ಕಾವೇರಿ ಗರ್ಭ ಧರಿಸಿದ್ದಳು. ಅದೇ ಸಂದರ್ಭಕ್ಕೆ ಸರಿಯಾಗಿ ಶಂಕರಶೆಟ್ಟಿ ಯಾವುದೋ ಕಳ್ಳತನದ ಪ್ರಕರಣದಲ್ಲಿ ಸಿಕ್ಕಿಕೊಂಡು ಜೈಲಿಗೆ ಹೋದ.

ಜೈಲಿನಿಂದ ಹೊರಬರುವಷ್ಟರಲ್ಲಿ ಕಾವೇರಿ ಹೆಣ್ಣುಮಗುವನ್ನು ಹೆತ್ತಿದ್ದಳು.

ಜೈಲಿನಿಂದ ಹೊರಬಂದಾಗ ಹೆಂಡತಿ ಮತ್ತು ಮಗಳನ್ನು ನೋಡುವ ಖುಷಿಯಾಗಿತ್ತು ಶೆಟ್ಟಿಗೆ. ಖುಷಿಯನ್ನು ಮನೆಗೆ ಹೋಗುವವರೆಗೆ ತಡೆದುಕೊಳ್ಳಲು ಆಗಲಿಲ್ಲ. ಜೈಲಿನಿಂದ ಹೊರಬರುವಾಗ ತಂದಿದ್ದ ಹಣ ಹೊರತೆಗೆದ. ಆಡುತ್ತಿದ್ದ ಹತ್ತಾರು ಮಕ್ಕಳನ್ನು ಕೂಗಿ ಕರೆದ. ನೆಲದ ಮೇಲೆ ಚಿಲ್ಲರೆ ನಾಣ್ಯಗಳನ್ನು ಚೆಲ್ಲಿದ. ಆರಿಸಿಕೊಳ್ಳಲು ಬಾಗಿದ ಮಕ್ಕಳ ಕುಂಡೆಯ ಮೇಲೆ ಕಾಲಿನಿಂದ ಒದೆದು ಕೇಕೆ ಹಾಕತೊಡಗಿದ.

ಶಂಕರಶೆಟ್ಟಿ ಮನೆಗೆ ಬಂದಾಗ ಅವನೊಳಗಿನಿಂದ ಒತ್ತರಿಸಿದ ಭಾವೋದ್ರೇಕ ಗಳಿಂದ ಮುಖ ರಂಗಾಯಿತು.

ಬಾಣಂತಿ ಹೆಂಡತಿ ಮಲಗಿದ್ದ ಕೋಣೆಯತ್ತ ಹೋಗಿ ಅವಳ ಪಕ್ಕದಲ್ಲಿ ಮಲಗಿದ್ದ ಹೆಣ್ಣುಮಗುವಿನ ಮರ್ಮಾಂಗಕ್ಕೆ ತುಟಿಯೊತ್ತಲು ಬಾಯಿ ಮುಂದೆ ತಂದ. ಇದರಿಂದ ದಿಗ್ಭ್ರಮೆಗೊಂಡ ಕಾವೇರಿ "ಏನ್ರೀ, ಇದು ಹೆಣ್ಣುಮಗು, ನಿಮ್ಮ ಮಗಳು. ಗಂಡಲ್ಲ ತಿಳೀತಾ" ಎಂದು ಶಂಕರಶೆಟ್ಟಿಯ ಮುಖವನ್ನು ಆಚೆಗೆ ತಳ್ಳಿದಳು. "ಗಂಡು, ಹೆಣ್ಣು ಬೇರೆ ಬೇರೆಯೇನೆ? ನಂಗೆ ಎಲ್ರೂ ನನ್ನ ಮಕ್ಕಳೇ" ಎಂದು ಪುನಃ ಬಂದ. ಈ ಬಾರಿ ರಭಸದಿಂದ ಶೆಟ್ಟಿಯ ಮುಖವನ್ನು ತಳ್ಳಿದಳು. ಇದನ್ನೆಲ್ಲ ಲೆಕ್ಕಿಸದೆ ಮತ್ತೆ ಸೊಂಡಿ ಮುಂದೆ ಮಾಡಿದಾಗ ಕಾವೇರಿ ಕೋಪ ತಡೆದುಕೊಳ್ಳದೆ ಕೋಪದಿಂದ ಗಂಡನ ಮುಖಕ್ಕೆ ಒದ್ದುಬಿಟ್ಟಳು. ಒದೆತದ ರಭಸಕ್ಕೆ ಶಂಕರ ಶೆಟ್ಟಿ ಹಿಂದಕ್ಕೆ ಉರುಳಿಬಿದ್ದ. ತುಟಿಗಳಲ್ಲಿ ಹಲ್ಲುಗಳನ್ನು ನೆಟ್ಟು ಅವನ ಬಾಯಲ್ಲಿ ರಕ್ತ ಬರತೊಡಗಿತು. ತನ್ನನ್ನು ಕಾಲುಗಳಿಂದ ಒದ್ದ ಹೆಂಡತಿಯ ತಲೆ ಮೇಲೆ ಹೊಡೆದ. ಕಾವೇರಿ ಚಿಟ್ಟನೇ ಚೀರಿದ ಶಬ್ದಕ್ಕೆ ಚಿಕ್ಕಮ್ಮ ಓಡಿಬಂದಳು. ಅಕ್ಕಪಕ್ಕದವರೂ ಬಂದರು. ಶಂಕರಶೆಟ್ಟಿ ಸ್ತಬ್ಧವಾಗಿ ನಿಂತಿದ್ದ. ಪೊಲೀಸರಿಗೆ ಸ್ವತಃ ಶರಣಾದ.

ಶಂಕರಶೆಟ್ಟಿಯ ಲಾಯರ್ ಅದ್ಭುತವಾಗಿ ವಾದ ಮಾಡಿದ. ಉದ್ದೇಶಪೂರ್ವಕ ಕೊಲೆಯಿದಲ್ಲ. ಶಂಕರಶೆಟ್ಟಿ ಮಾನಸಿಕವಾಗಿ ಅಸ್ವಸ್ಥ. ಅಸಹಜ ಲೈಂಗಿಕ ಚಟುವಟಿಕೆಗಳ ರೋಗ ಅವನಿಗೆ. ಮಕ್ಕಳೊಂದಿಗೆ ಲೈಂಗಿಕ ಆಟವಾಡುವ paedophilia ರೋಗದಿಂದ ಬಳಲುತ್ತಿರುವವನು. ಆರಂಭದಲ್ಲಿಯೇ ಕಾವೇರಿ ಇದಕ್ಕೆ ಪ್ರೋತ್ಸಾಹ ನೀಡದೆ ಶಂಕರಶೆಟ್ಟಿಗೆ ಚಿಕಿತ್ಸೆ ಕೊಡಿಸಿದ್ದರೆ ಕೊಲೆ ನಡೆಯುತ್ತಿರಲಿಲ್ಲವೆಂದು ನ್ಯಾಯಾಧೀಶರಿಗೆ ಮನವರಿಕೆಯಾಗುವಂತೆ ವಾದಿಸಿ ಲಾಯರ್ ಫಾಸಿ, ಜೀವಾವಧಿ ಶಿಕ್ಷೆಗಳನ್ನು ತಪ್ಪಿಸಿದ. ಆಗ ನನಗೆ ನಾನೂ ಲಾಯರ್ ಆಗಬೇಕಿತ್ತು ಎನಿಸಿತು ಎಂದು ಹೇಳಿ ಇನ್ಸ್‌ಪೆಕ್ಟರ್ ಕಥೆ ಮುಗಿಸಿದಾಗ ನನ್ನ ದೊಡ್ಡಪ್ಪನವರ ಮುಖದ ಭಾವ ಬದಲಾವಣೆಯಾಗುತ್ತಿರುವುದನ್ನು ಗಮನಿಸಿ ಒಳಗೇ ಸಂತೋಷಪಟ್ಟುಕೊಂಡೆ.

7

ಮಾರ್ಜಾಲ ಪ್ರೇಮದ ಸುಳಿಯಲ್ಲಿ

ಪಟ್ಟಣದಲ್ಲಿ ನಾಯಿ, ಬೆಕ್ಕುಗಳನ್ನು ಶೋಕಿಗಾಗಿ ಇಲ್ಲವೊ ಹವ್ಯಾಸಕ್ಕಾಗಿ ಸಾಕುತ್ತಾರೆ. ಆದರೆ ಹಳ್ಳಿಯಲ್ಲಿ ಇಂಥ ಸಾಕಾಣಿಕೆ ಅನಿವಾರ್ಯತೆಯಿಂದ ಕೂಡಿರುತ್ತದೆ.

ನಮ್ಮ ಮನೆಯಲ್ಲಿ ಬೆಕ್ಕು ಸಾಕಿದ್ದೆವು. ನಮ್ಮ ಮನೆಯ ಛತ್ತು ಸಿಮೆಂಟು ಮತ್ತು ಕಬ್ಬಿಣಗಳದ್ದಲ್ಲ; ಕಟ್ಟಿಗೆ, ಮಣ್ಣುಗಳದ್ದು. ಕಂಬಗಳ ಮೇಲೆ ಜಂತಿಗಳನ್ನು ಹೊಂದಿಸಿ ಅದರ ಮೇಲೆ ಬೊಂಬುಗಳನ್ನು ಸಾಲಾಗಿ ಹೊಂದಿಸಿ ಮಣ್ಣಿನ ಮೇಲ್ಹಾವಣಿಯಿಂದ ಸಿದ್ಧಗೊಳಿಸಿದ ಮನೆ ನಮ್ಮದು. ನಮ್ಮ ಮನೆಯಲ್ಲಿನ ರಾಗಿ, ಭತ್ತ, ಅಡಿಕೆ, ಬೆಲ್ಲ ಇತರೆ ಧಾನ್ಯಗಳ ಸಂಗ್ರಹಣೆಯ ಮೇಲೆ ಇಲಿಗಳು ದಾಳಿ ನಡೆಸುತ್ತಿದ್ದವು. ಈ ಇಲಿಗಳು ಹೊಡೆಯಲು ಕೈಗೆ ಸಿಕ್ಕುತ್ತಿರಲಿಲ್ಲ. ಗುದ್ದಿನೊಳಕ್ಕೆ ಹೋಗಿದೆಯೆಂದುಕೊಂಡು ಕಲ್ಲು, ಉಸುಕುಗಳನ್ನು ತುಂಬಿ ಆ ಗುದ್ದನ್ನು ಮುಚ್ಚತೊಡಗಿದರೆ ಮತ್ತೊಂದು ಗುದ್ದಿನೊಳಗಿಂದ ಜಂತಿಯೇರಿ ಮೇಲಿನಿಂದ ವಿಡಂಬನಾ ದೃಷ್ಟಿಯಿಂದ ನೋಡುತ್ತಿದ್ದವು.

ಈ ಇಲಿಗಳು ದವಸ, ಧಾನ್ಯಗಳನ್ನಷ್ಟೇ ತಿಂದು ಹೋಗಿದ್ದರೆ ಅವುಗಳ ಬಗ್ಗೆ ಅಷ್ಟೊಂದು ಚಿಂತಿಸುವ ಅವಶ್ಯಕತೆಯಿರಲಿಲ್ಲ. ಇಲಿಗಳು ಭೂಮಿಯ ಒಳಗೆ ಸಬ್‌ವೇ ಮಾದರಿಯಲ್ಲಿ ಹತ್ತು ಹಲವು ದಿಕ್ಕುಗಳಲ್ಲಿ ಹೋಗಲು ಸುರಂಗ ಮಾರ್ಗಗಳನ್ನು ರಚಿಸಿಕೊಂಡಿರುತ್ತವೆ. ಅವುಗಳ ಅಂಡರ್‌ಗ್ರೌಂಡ್ ರೂಟ್‌ಗಳ ನೆಟ್‌ವರ್ಕ್‌ಗೆ ಹೋಲಿಸಿದರೆ ಹಳ್ಳಿ ರಸ್ತೆಗಳ ಜಾಲ ಏನೂ ಅಲ್ಲ ಎನ್ನಬಹುದು. ಹೊಲ, ಗದ್ದೆಗಳಿಂದ ಮನೆಗಳವರೆಗೆ ಇರುತ್ತವೆ ಇಲಿಗಳ ನೆಲಮಾರ್ಗಗಳು.

ಇಲಿಗಳು ತಮ್ಮ ಆಹಾರ ಹುಡುಕಿ ಮನೆಯೊಳಕ್ಕೆ ನುಗ್ಗಿದರೆ ಒಮ್ಮೊಮ್ಮೆ ಹಾವುಗಳು ಇಲಿಗಳನ್ನು ಬೆನ್ನಟ್ಟಿಕೊಂಡು ಮನೆಯೊಳಕ್ಕೆ ನುಗ್ಗಿಬಿಡುತ್ತಿದ್ದವು.

ರಾತ್ರಿಯೇನಾದರೂ ಹಾವು ಮನೆಯೊಳಗೆ ಕಾಣಿಸಿಕೊಂಡವೆಂದರೆ ಮುಗಿಯಿತು ಅಂದು ಎಲ್ಲರಿಗೂ ಜಾಗರಣೆ.

ನಾವೆಲ್ಲ ನೆಲದ ಮೇಲೆಯೇ ಮಲಗುತ್ತಿದ್ದೆವು. ನಮ್ಮ ಕುರಿಗಳಿಂದ ಹೇರಳ ಉಣ್ಣೆ ಸಿಕ್ಕುತ್ತಿತ್ತು. ಅದರಿಂದ ಸಾಕಷ್ಟು ಕಂಬಳಿಗಳನ್ನು ಮಾಡಿಸುತ್ತಿದ್ದರು. ಹಾಸಲು ಮತ್ತು ಹೊದೆಯಲು ಎರಡಕ್ಕೂ ಕಂಬಳಿಯೇ. ಎಲ್ಲ ಅವಿಭಕ್ತ ಕುಟುಂಬಗಳ ಮನೆಗಳಂತೆಯೇ ನಮ್ಮ ಮನೆಯಲ್ಲೂ ವೈಯಕ್ತಿಕ ಬದುಕಿಗೆ ಮತ್ತು ಖಾಸಗೀತನಕ್ಕೆ ಅವಕಾಶವಿರಲಿಲ್ಲ. ಮಲಗಲು ಪ್ರತ್ಯೇಕ ಕೊಠಡಿಗಳಿರಲಿಲ್ಲ.

ಹಾವುಗಳು ಮನೆಯೊಳಕ್ಕೆ ನುಸುಳಿದ್ದರ ಬಗ್ಗೆ ಬಹಳಷ್ಟು ಬಾರಿ ನಾಯಿಗಳೇ ಭಿನ್ನ ರೀತಿಯಲ್ಲಿ ಬೊಗಳಿ ಸುಳಿವು ನೀಡುತ್ತಿದ್ದವು. ರಾತ್ರಿ ಹಾವು ಕಾಣಿಸಿಕೊಂಡರೆ ಪಂಜುಗಳನ್ನು ಹೊತ್ತಿಸಿಕೊಂಡು ಬೆತ್ತದಿಂದ ದಾಳಿ ನಡೆಸಲಾಗುತ್ತಿತ್ತು. ತಪ್ಪಿಸಿಕೊಂಡ ಹಾವುಗಳು ಛತ್ತಿನೊಳಕ್ಕೆ ನುಸುಳಿಕೊಂಡುಬಿಡುತ್ತಿದ್ದವು. ಛತ್ತಿನ ಬೊಂಬುಗಳ ಸಾಲುಗಳ ಮಧ್ಯೆ ಬಲವಾಗಿ ಜಪ್ಪಿಸಿಕೊಂಡು ಕೂತ ಹಾವನ್ನು ಹೊರಗೆಳೆಯಲು ಈಟಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈಟಿ ಏಟಿಗೆ ಹಾವು ಪಕ್ಕದ ಮನೆಯ ಛತ್ತಿನೊಳಕ್ಕೆ ಸರಿದುಹೋಗಿಬಿಡುತ್ತಿತ್ತು. ಆಗ ಹಾವಿನ ಬೇಟೆಯ ದಂಡು ಇಮ್ಮಡಿಸುತ್ತಿತ್ತು. ಒಮ್ಮೊಮ್ಮೆ ಬೆಳಗಾದರೂ ಹಾವು ಸಿಕ್ಕುತ್ತಿರಲಿಲ್ಲ. ಮಾರನೇ ದಿನ ಬೆಳಗ್ಗೆ ನಾವು ಚಿಕ್ಕಹುಡುಗರೆಲ್ಲ ಹಾವು ಹೊಡೆಯುವ ನೆಪದಲ್ಲಿ ಶಾಲೆಗೆ ಹೋಗದೆ ಸ್ವಯಂ ರಜಾ ಘೋಷಣೆ ಮಾಡಿಕೊಳ್ಳುತ್ತಿದ್ದೆವು. ನಿದ್ದೆಗೆಟ್ಟ ಹಿರಿಯರು ನಮ್ಮ ಕಡೆ ಲಕ್ಷ್ಯ ಕೊಡುತ್ತಿರಲಿಲ್ಲ.

ಸಾಯಿಸಿದ ಹಾವು ನಾಗರಹಾವಾಗಿದ್ದರೆ ಅದರ ಬಾಯೊಳಕ್ಕೆ ನಾಣ್ಯವನ್ನು ಇರಿಸಿ ಒಣಗಿದ ದಂಟಿನ ಮೇಲಿಟ್ಟು ಸುಟ್ಟುಹಾಕುತ್ತಿದ್ದರು. ಹಾವಿನ ದೇಹ

ದಹಿಸುವಾಗ ಓರಿಯರಲ್ಲಿ ಕೆಲವರು ಎದೆ, ಹಣೆಗಳನ್ನು ಕೈತಾಗಿಸಿಕೊಂಡು ಪಶ್ಚಾತ್ತಾಪದ ನಮಸ್ಕಾರ ಮಾಡುತ್ತಿದ್ದರು. ಹೆಣ್ಣುಮಕ್ಕಳು ನಾಗರ ಅಮಾವಾಸ್ಯೆಗೆ ಏನೆಲ್ಲ ಪೂಜೆ ಮಾಡುತ್ತೇವೆಂದು ಹರಕೆ ಕಟ್ಟಿಕೊಳ್ಳುತ್ತಿದ್ದರು. ಮತ್ತೆ ಕೆಲವರು ಹಣವನ್ನು ಮುಡಿಪಾಗಿ ತೆಗೆದಿಡುತ್ತಿದ್ದರು.

ಇಷ್ಟೆಲ್ಲ ಸರಣಿ ರಾದ್ಧಾಂತ ಸೃಷ್ಟಿಯಾಗುತ್ತಿದ್ದದ್ದೇ ಇಲಿಗಳಿಂದ. ಹೀಗಾಗಿ ಇಲಿಗಳ ನಾಶಕ್ಕಾಗಿ ನಮ್ಮ ಮನೆಯಲ್ಲಿ ಬೆಕ್ಕುಗಳನ್ನು ಸಾಕಲಾಗಿತ್ತು.

ಇಲಿಗಳನ್ನು ನಾಶಮಾಡುವ ಬೆಕ್ಕು ಹತ್ತು ಹಲವು ಉಪಟಳಗಳನ್ನು ನಡೆಸುತ್ತಿತ್ತು. ಹಾಲು, ಮೊಸರು, ಬೆಣ್ಣೆಗಳನ್ನು ಸ್ವಾಹಾ ಮಾಡುತ್ತಿತ್ತು. ಹಸುಗೂಸುಗಳನ್ನು ಬೆಕ್ಕುಗಳು ತಿಂದುಹಾಕುತ್ತವೆಂದು ಹೆಣ್ಣುಮಕ್ಕಳು ಮಾತಾಡಿಕೊಳ್ಳುವುದನ್ನು ಕೇಳಿಸಿಕೊಳ್ಳುತ್ತಿದ್ದೆ. ಆದರೆ ನನಗೆ ಬೆಕ್ಕುಗಳೆಂದರೆ ಇಷ್ಟ. ಅವು ಅಷ್ಟೊಂದು ಅಪಾಯಕಾರಿಯಾಗಿ ಕಾಣುತ್ತಿರಲಿಲ್ಲ. ಚೆಂಡನ್ನು ಬೆಕ್ಕಿನ ಮುಂದೆ ಬಿಡುತ್ತಿದ್ದೆ. ಅದರೊಂದಿಗೆ ಬೆಕ್ಕು ನಡೆಸುವ ಚಿನ್ನಾಟವನ್ನು ನೋಡಿ ಸಂತೋಷಪಡುತ್ತಿದ್ದೆ. ದೊಡ್ಡವರ ಕಣ್‌ತಪ್ಪಿಸಿ ಅದರ ಮೈಯನ್ನು ನೇವರಿಸುತ್ತಿದ್ದೆ. ಅದರ ತುಪ್ಪಳಗಳು ಕೈಗಂಟಿಕೊಂಡು ಊಟ ಮಾಡುವಾಗ ಹೊಟ್ಟೆಯೊಳಕ್ಕೆ ಹೋದರೆ ರೋಗ ಬರುತ್ತದೆ ಎಂದು ದೊಡ್ಡವರು ಬೈಯುತ್ತಿದ್ದರು. ನಮ್ಮ ಕುರಿಗಳನ್ನು ತೋಳಗಳಿಂದ ರಕ್ಷಿಸುವುದಕ್ಕಾಗಿ ನಾಯಿಗಳನ್ನು ಸಾಕಿದ್ದಂತೆಯೇ ಹಾವುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಬೆಕ್ಕುಗಳನ್ನು ಸಾಕಲಾಗಿತ್ತು.

ನಮ್ಮ ಮನೆಯ ಹೆಣ್ಣು ಬೆಕ್ಕು ಗರ್ಭಧರಿಸಿತು. ನಮ್ಮ ತಾಯಿ ಮತ್ತು ದೊಡ್ಡಮ್ಮಂದಿರು ಬೆಕ್ಕು ಮರಿ ಹಾಕಿದಾಗ ನಡೆಯುವ ರಂಪಗಳ ಬಗ್ಗೆ ಮಾತಾಡತೊಡಗಿದ್ದರು.

ಒಂದು ರಾತ್ರಿ ಬೆಕ್ಕು ಮರಿಗಳನ್ನು ಹಾಕಿತು. ಮಿಯಾಂವ್, ಮಿಯಾಂವ್ ಎನ್ನುವ ಅವುಗಳ ಕೀರಲು ಶಬ್ದ ಮನೆಯವರೆಲ್ಲರ ನಿದ್ರೆಗೆಡಿಸುತ್ತಿತ್ತು. ನನಗೋ ಅವುಗಳನ್ನು ನೋಡಿ, ಮುಟ್ಟಿ ಆಟವಾಡಿಸುವ ಬಯಕೆ. ಬೆಕ್ಕು ತನ್ನ ಮರಿಗಳನ್ನು ರಕ್ಷಿಸಲು ಸ್ಥಳ ಬದಲಾವಣೆ ಮಾಡತೊಡಗಿತು. ತನ್ನ ಮರಿಯ ಕತ್ತನ್ನು ಬಾಯಿಂದ ಕಚ್ಚಿ ಒಯ್ಯುವುದನ್ನು ನೋಡಿದಾಗ ನನಗೆ ಹೆದರಿಕೆಯಾಗುತ್ತಿತ್ತು. ಸ್ವಂತ ಮರಿಯನ್ನೇ ಎಲ್ಲಿ ಕಚ್ಚಿ ಸಾಯಿಸಿಬಿಡುವುದೊ ಎಂದು. ಮನೆಯಂಗಳದಲ್ಲಿ ನಾಯಿಯೊಂದಿಗೆ ಬೆಕ್ಕು ಕರ್ಕಶ ಧ್ವನಿಯಲ್ಲಿ ಕಿರುಚಿ ಜಗಳ ನಡೆಸುತ್ತಿತ್ತು. ನಾಯಿಯು ಬೆಕ್ಕಿನ ಮರಿಗಳನ್ನು ಕದ್ದು ತಿನ್ನುತ್ತದೆ ಅದಕ್ಕಾಗಿ ಈ ಜಗಳ ಎನ್ನುತ್ತಿದ್ದವರು ನನ್ನ ಚಿಕ್ಕದೊಡ್ಡಪ್ಪ.

ಹಲಸಿನ ಮರವನ್ನು ಕಾಯಲು ಹೋದಾಗ ಹೆಣ್ಣು ಕೋತಿಯನ್ನು ಚಿಕ್ಕಮರಿಗಳು ನಾಲ್ಕೂ ಕಾಲುಗಳಿಂದ ಅವುಚಿ ಹಿಡಿದುಕೊಂಡಿದ್ದುದನ್ನು ನೋಡಿದ್ದೆ. ಕೊಂಬೆಯಿಂದ ಕೊಂಬೆಗೆ ಕೋತಿ ಹಾರಿದರೂ ಮರಿಕೋತಿ ತಾಯಿಯ ಹೊಟ್ಟೆಗೆ ಹೊಲಿದಿದ್ದಾರೇನೊ ಎನ್ನುವಂತೆ ಅಂಟಿಕೊಂಡೇ ಇರುತ್ತಿತ್ತು.

ಕೋತಿಯ ತಾಯಿಪ್ರೇಮದಲ್ಲಿ ಬೇಜವಾಬ್ದಾರಿತನವಿದೆ ಎಂದೆನಿಸಿದಂತೆಯೇ ಬೆಕ್ಕಿನ ತಾಯಿಪ್ರೇಮದಲ್ಲಿ ಅಗಾಧ ರಕ್ಷಣಾಭಾವ ಅಡಗಿದೆ ಎನಿಸತೊಡಗಿತು. ಶಾಲೆಯಲ್ಲಿ ಮೇಷ್ಟ್ರು ಮಾರ್ಜಾಲ ಪ್ರೇಮ ಮತ್ತು ಮರ್ಕಟ ಪ್ರೇಮಗಳ ವ್ಯತ್ಯಾಸ ಹೇಳುವಾಗ ತಲೆಗೆ ಹೋಗದಿದ್ದುದು ಕಣ್ಣಾರೆ ಕಂಡಾಗ ಅರ್ಥವಾಗಿತ್ತು.

ಒಂದು ಬೆಳಗ್ಗೆ ನನ್ನ ದೊಡ್ಡಪ್ಪ ತಿಮ್ಮಣ್ಣಗೌಡರು "ಏ ಹನುಮಂತ್ರಾಯ ಬಾ ಇಲ್ಲಿ ಈ ಬೆಕ್ಕಿನ ಮರಿಗಳ್ನ ದೊಡ್ಡಬೆಳವಂಗಲದ ಆಚೆಯ ಹಳ್ಳದಲ್ಲಿ ಬಿಟ್ಟು ಬಾ, ತೊಗೊ ಈ ಒಂದಾಣೆ. ಬರೋವಾಗ ಏನಾದ್ರೂ ತಿಂಡಿ ತಿಂದ್ಕಂಡು ಬಾ. ಸೈಕಲ್‌ನ ಹುಷಾರ್‌ದಿಂದ ನಡೆಸ್ಕೊಂಡು ಹೋಗು" ಎಂದು ಅಪ್ಪಣೆ ಮಾಡಿದರು.

ಸೈಕಲ್ ಮತ್ತು ತಿಂಡಿಗಳು ನನ್ನನ್ನು ಹುರುಪುಗೊಳಿಸಿದವು. ಆದರೆ ಬೆಕ್ಕಿನ ಮರಿಗಳನ್ನು ಅವು ಮನೆಗೆ ವಾಪಸ್ ಬಾರದಂತೆ ಎಲ್ಲೋಸಸ ಬಿಟ್ಟು ಬರುವುದು ಕಟುಕನ ಕೆಲಸ ಎನಿಸಿತು. ಮಾತಿಗವಕಾಶವಿರಲಿಲ್ಲ.

ಗೋಣಿಚೀಲದಲ್ಲಿ ಬೆಕ್ಕಿನ ಮರಿಗಳನ್ನು ಹಾಕಿಕೊಂಡು ಸೈಕಲ್ ಹಿಂದಿನ ಸ್ಟ್ಯಾಂಡ್ ಮೇಲೆ ಅದನ್ನು ಕಟ್ಟಿಕೊಂಡು ಅಡ್ಡಗಾಲು ಹಾಕಿ ಸೈಕಲ್ ಓಡಿಸತೊಡಗಿದೆ. ನಮ್ಮ ಊರು ದಾಟುತ್ತಲೇ ಜೋಳದ ಹೊಲದಲ್ಲಿ ಕಾಲುಜಾಡಿನ ಮೂಲಕ ದೊಡ್ಡಬೆಳವಂಗಲಕ್ಕೆ ಹೋಗಬೇಕಾಗಿತ್ತು. ಊರ ಹೊರಗೆ ಅದೂ ಬೆಳಗಿನ ಜಾವದ ಪ್ರಶಾಂತ ವಾತಾವರಣ ಮನಸ್ಸಿಗೆ ಹೆಚ್ಚು ಉಲ್ಲಾಸ ನೀಡುತ್ತಿತ್ತು. ಸೈಕಲ್ ತುಳಿತವನ್ನು ತೀವ್ರಗೊಳಿಸಿದೆ. ಮರಿಗಳು ಚೀರುವ ಶಬ್ದ ಹೆಚ್ಚೆಚ್ಚು ಕೇಳತೊಡಗಿತು. ನನ್ನ ಮನಸ್ಸು ಚುರ್ರೆನ್ನತೊಡಗಿತು. ದೊಡ್ಡಬೆಳವಂಗಲದ ಹಳ್ಳದಾಚೆಗೆ ಬಿಟ್ಟುಬಂದರೆ ಈ ಮರಿಗಳೆಲ್ಲ ನಾಯಿ, ನರಿಗಳ ಬಾಯಿಸೇರುವುದು ಗ್ಯಾರಂಟಿ ಎನಿಸಿತು. ಇಲ್ಲೇ ಹೊಲದಲ್ಲಿ ಬಿಟ್ಟರೆ ಬೇರೆ ಯಾರದಾದರೂ ಹಾಳುಪಾಳು ಮನೆಗೆ ಹೋಗಿ ಸೇರಿಕೊಂಡು ಜೀವ ಉಳಿಸಿಕೊಳ್ಳಬಹುದೆಂದು ತರ್ಕಿಸಿದೆ. ಸರಿ ಎಂದು ಹೊಲದೊಳಗಿನ ಕಾಲುದಾರಿಯಿಂದ ಐವತ್ತು ಹೆಜ್ಜೆಗಳಷ್ಟು ಒಳಕ್ಕೆ ಹೋಗಿ ಮರಿಗಳನ್ನು ಚೀಲದೊಳಗಿಂದ ಹೊರತೆಗೆದು ಮುಕ್ತಗೊಳಿಸಿದೆ. ಸಣ್ಣಗೆ ಸಿಳ್ಳು ಹಾಕುತ್ತಾ ಊರ ಕಡೆ ಸೈಕಲ್ ಓಡಿಸತೊಡಗಿದೆ. ಸೈಕಲ್‌ಗೆ ಫಕ್ಕನೆ ಬ್ರೇಕ್ ಹಾಕಿದೆ. ದೊಡ್ಡಪ್ಪ "ಇಷ್ಟು ಬೇಗ ಹೇಗೋ ಬಂದೆ? ದೊಡ್ಡಬೆಳವಂಗಲದಾಚೆ

ಹೋಗಿ ಬಿಟ್ಟು ಬಂದಿಲ್ಲ ಅಲ್ವೆ?" ಎಂದು ಕೇಳಿದರೆ ಹೇಗೆಂದು ಗಾಬರಿಯಾಯಿತು. ಮನೆಗೆ ಹೋಗಲಿಲ್ಲ. ಊರ ಮಧ್ಯದ ಕಟ್ಟೆಯ ಬಳಿ ಆಡುತ್ತಿದ್ದ ಹುಡುಗರೊಂದಿಗೆ ಆಟಕ್ಕೆ ಸೇರಿಕೊಂಡೆ. ಆಟದಲ್ಲಿ ಹೊಕ್ಕ ಮನಸ್ಸು ಮನೆಗೆ ಹೋಗುವುದನ್ನು ಮರೆಯಿತು. ಅಷ್ಟರಲ್ಲಿ ಸಿಹಿ ನೀರಿಗಾಗಿ ಹೋಗುತ್ತಿದ್ದ ನನ್ನ ಚಿಕ್ಕದೊಡ್ಡಮ್ಮ ಕಾಣಿಸಿಕೊಂಡಳು. ಮನೆಗೆ ಹೋಗಲು ಬಹಳ ತಡವಾಯಿತು ಎಂದುಕೊಂಡೆ. "ದೊಡ್ಡಮ್ಮ ಬೆಕ್ಕಿನ ಮರಿಗಳ್ನ ಬಿಟ್ಟು ಬರಲಿಕ್ಕೆ ಬಾಳ ತಡ ಆಯ್ತು. ನಾ ಇಲ್ಲಿಗೆ ಬಂದು ಸ್ವಲ್ಪ ಹೊತ್ತಾಯಿತು ಅಷ್ಟೇನೆ" ಎಂದೆ. ಆಗ ದೊಡ್ಡಮ್ಮ "ಹೂಂ ಬಿಟ್ ಬಂದಿದ್ದೀಯಾ ಮರಿಗಳ್ನ ಅಲ್ವೇ? ಮನೆಗೆ ಹೋಗು. ನಿನ್ನ ದೊಡ್ಡಪ್ಪ ಬೆತ್ತ ಹಿಡ್‌ಕಂಡ್ ಕಾಯ್ತಾ ಅವ್ರೆ. ಇದೆ ಇವತ್ತು ನಿಂಗೆ ಪೂಜೆ...." ಎಂದು ಹೇಳುತ್ತಾ ಹೋಗಿಬಿಟ್ಟರು.

ಮೈ ಸಣ್ಣಗೆ ಬೆವರತೊಡಗಿತು. ಚಿಕ್ಕದೊಡ್ಡಪ್ಪನ ನೆನಪು ಬಂದಿತು. ಹುಡುಕಿಕೊಂಡು ಹೋದೆ. ಎಲ್ಲೂ ಸಿಕ್ಕಲಿಲ್ಲ. ಹೊಟ್ಟೆ ಹಸಿಯತೊಡಗಿತ್ತು. ನನ್ನ ತಾಯಿಯ ತವರುಮನೆಗೆ ಹೋಗುವ ಯೋಚನೆ ಬಂದಿತು. ನನ್ನಜ್ಜಿ ಏಕೋ ಬಂದಿ? ಬಾ ಎಂದು ಮುದ್ದಿನಿಂದ ಕರೆದಳು. ಕ್ಷಣ ಕಾಲ ಮನಸ್ಸೆಲ್ಲ ಹಗುರೆನಿಸಿತು. ಊಟ ಮಾಡ್ತೀಯ ಮಗ ಎಂದ ಅಜ್ಜಿ ನನ್ನ ಉತ್ತರಕ್ಕೆ ಕಾಯದೆ ಊಟಕ್ಕೆ ಕರೆದುಕೊಂಡು ಹೋದಳು.

ಊಟವಾದೊಡನೆ ಪುನಃ ಚಿಂತೆ ಶುರುವಿಟ್ಟುಕೊಂಡಿತು. ಚಿಕ್ಕದೊಡ್ಡಪ್ಪನನ್ನು ಅರಸಿಕೊಂಡು ಅಲೆಯಲು ಹೊರಟೆ.

ಚಿಕ್ಕದೊಡ್ಡಪ್ಪನ ತೊಡೆಯನ್ನು ಹಿಡಿದುಕೊಂಡು ಮನೆಯೊಳಕ್ಕೆ ಹೋಗುವಾಗ ಬಾಬಯ್ಯನ ಅಗ್ನಿಕುಂಡದೊಳಗೆ ಹೋಗುತ್ತಿರುವೆನೇನೋ ಎಂದು ಭಾಸವಾಗಿ ಎದೆಬಡಿತ ಹೆಚ್ಚಾಯಿತು.....

ಚಿಕ್ಕದೊಡ್ಡಪ್ಪನವರ ರಕ್ಷಣೆಯಲ್ಲಿ ಬಂದ ನನ್ನನ್ನು ನೋಡಿದ ಹಿರಿಯ ದೊಡ್ಡಪ್ಪ "ನಿವ್ ದೊಡ್ಡಪ್ಪನ್ನ ಮುಂದಿಟ್ಕಂಡು ಬಂದುಬಿಟ್ರಾಯ್ತು ಅನ್ಕೊಂಡಿದೀಯಾ? ನೀ ಹೋಗಿ ಅರ್ಧ ಗಂಟೆನೂ ಆಗಿರ್ಲಿಲ್ಲ ಅವಾಗ್ಲೇ ಅಂಗಳಕ್ಕೆ ಬಂದು ನಿಂತಿದ್ರು ಮರಿಗ್ಳು, ತಿಳೀತಾ ! ನಾಳೆ ಬೆಳಗ್ಗೆ ಸೈಕಲ್ ಕೊಡಲ್ಲ, ತಿಂಡಿಗೆ ಕಾಸ್ನೂ ಕೊಡಲ್ಲ. ಎಲ್ಲ ಮರಿಗಳನ್ನೂ ಬೆನ್ಮೇಲೆ ಹೊತ್ಕೊಂಡ್ ಹೋಗಿ ಬಿಟ್‌ಬರ್ಬೇಕು...ಎಂದು ಗುಡುಗಿದರು. "ಅದೇನಾದ್ರೂ ಆಗ್ಲಿ ಬೆತ್ತದ ಏಟುಗಳಿಲ್ಲವಲ್ಲ; ಶಿಕ್ಷೆಯಲ್ಲಿ ರಿಯಾಯ್ತಿ ಸಿಕ್ತು . ನಿದ್ದೆ ಹೋಗುವಾ. ಚಿಕ್ಕದೊಡ್ಡಪ್ಪ ಇಲ್ಲಿದ್ರೆ ಮೈಗೆಲ್ಲ ಬಾಸುಂಡೆ ಇರುತ್ತಿದ್ದವು" ಎಂದುಕೊಳ್ಳುತ್ತ ಅಮ್ಮನ ಬಳಿಗೆ ಹೋದೆ.

8

ಮನದ ಮಾಯೆಗೆ ತೇಲಿ ಬಂದ ಮಸಣ

ಬೇಸಿಗೆ ಶುರುವಾಗಿತ್ತು. ಎಂಟನೇ ತರಗತಿಯ ಪರೀಕ್ಷೆಗಳನ್ನು ಬರೆದಿದ್ದೆ. ರಜಾ ದಿನಗಳು ಆರಂಭಗೊಂಡಿದ್ದವು. ಭುಜಂಗರಾವ್ ಅವರ ಮಕ್ಕಳು ಬೆಂಗಳೂರಿನಿಂದ ಬಂದಿದ್ದರು. ಅವರೊಂದಿಗೆ ಇನ್ನೂ ಕೆಲವು ಸಂಬಂಧಿಕರೂ ಬಂದಿದ್ದರು. ನಾನು ನಿತ್ಯಕ್ಕಿಂತ ಹೆಚ್ಚು ಹಾಲು ಕೊಟ್ಟು ಬರಬೇಕಾಗಿತ್ತು ಅವರ ಮನೆಗೆ. ತರಕಾರಿಯನ್ನು ಒಯ್ದು ಕೊಡುತ್ತಿದ್ದ. ನಮ್ಮ ಮನೆತನದ ಗುರುವಿನಂತಿದ್ದ ಭುಜಂಗರಾವ್ ಅವರ ಮನೆಯ ಕೆಲಸಗಳನ್ನು ಸಂತೋಷದಿಂದ ಮಾಡುತ್ತಿದ್ದೆ. ಅದೆಷ್ಟೋ ಬಾರಿ ಭುಜಂಗರಾಯರ ಮನೆಯಲ್ಲಿ ಕೆಲಸವಿದೆಯೆಂದು ಮನೆಯಲ್ಲಿ ಸುಳ್ಳು ಹೇಳಿ ಸ್ನೇಹಿತರೊಂದಿಗೆ ಅಡವಿ ಅಲೆಯಲು ಹೋಗುತ್ತಿದ್ದೆ.

ತಮ್ಮ ಸಂಬಂಧಿಕನೊಂದಿಗೆ ಭುಜಂಗರಾವ್ ಅವರು ನಮ್ಮ ಮನೆಗೆ ಬಂದರು. ಹಾಲು ಕುಡಿದು ವೀಳ್ಯ ಜಗಿಯುವಾಗ ನನ್ನ ದೊಡ್ಡಪ್ಪ "ಕೇಸು ಭಾರೀ ಸುದ್ದಿ ಮಾಡಿದಂಗೆ ಕಾಣುತ್ತೆ. ಆದರೆ, ಶ್ರೀನಿವಾಸ ಅಯ್ಯಂಗಾರ್ ಮರ್ಡರ್ ಕೇಸ್ನ ಬರೆದಷ್ಟು ಪತ್ರಿಕೆಯೋರು ಬರೀತಾಯಿಲ್ಲ?" ಎಂದು ಭುಜಂಗರಾವ್ ಅವರ ಸಂಬಂಧಿಕರನ್ನು ಪ್ರಶ್ನಾರ್ಥಕವಾಗಿ ನೋಡುತ್ತಾ ಕೇಳಿದರು.

ಆಗ ಅವರು "ಓ ಅಹುಜಾ ಕೊಲೆ ಕೇಸಾ. ಯುದ್ಧದ ಹಡಗಿನ ಲೆಫ್ಟಿನೆಂಟ್ ಕಮಾಂಡರ್ ನಾನಾವತಿ ತನ್ನ ಹೆಂಡತಿಯ ಜೊತೆ ಅಹುಜಾ ಅನೈತಿಕ ಸಂಬಂಧವಿರಿಸಿಕೊಂಡಿದ್ದ ಕಾರಣಕ್ಕೆ ಕೊಲೆ ಮಾಡಿದ್ದು. ಆದರೇನು ನೋಡಿ, ನಾವೆಲ್ಲ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಆದ್ರೆ ಅದನ್ನೇ ಅಂತಿಮ ಅಂತಾ ತಿಳ್ಕೊಂಡ್‌ಬಿಡ್ತೇವೆ. ಜಡ್ಜ್‌ಮೆಂಟನ್ನೇ ತಲೆಕೆಳಗೆ ಮಾಡೋ ಅಧಿಕಾರ ರಾಜ್ಯಪಾಲರಿಗೆ, ರಾಷ್ಟ್ರಪತಿಗಳಿಗೆ ಇರ್‌ತದೆ. ಈ ಕೇಸ್‌ನಲ್ಲಿ ಕೋರ್ಟ್ ಸಜಾ ನೀಡಿದರೆ ಗವರ್ನರ್ ಅದನ್ನ ವಜಾ ಮಾಡಿಬಿಟ್ರು...." ಎಂದರು.

ಕೊಲೆ ಆರೋಪಿ ನಾನಾವತಿ "ಇಂಡಿಯನ್ ನೇವಲ್‌ಷಿಪ್ ಮೈಸೂರ್" ಇದರ ಲೆಫ್ಟಿನೆಂಟ್ ಕಮಾಂಡರ್ ಆಗಿದ್ದ. ಪೇಪರ್‌ನಲ್ಲಿ ಕೊಲೆ ಪ್ರಕರಣದ ಸುದ್ದಿ ಪ್ರಕಟವಾದಾಗಲೆಲ್ಲ ಅದರಲ್ಲಿ ಬರುತ್ತಿದ್ದ ಮೈಸೂರ್ ಎಂಬ ಶಬ್ದವನ್ನು ಹಿಡಿದುಕೊಂಡು ನನ್ನ ಹಳ್ಳಿಗರು, "ಕೊಲೆಗಾರ ಮೈಸೂರ್‌ನವ್ನಂತೆ. ಯುದ್ಧದ ಹಡಗು ಮಂಗಳೂರು ಸಮುದ್ರದಲ್ಲಿ ಇದ್ದದ್ದಂತೆ. ಪಾಪ ನಮ್ ರಾಜ್ಯದೋನು ಮುಂಬೈಗೆ ಹೋಗಿ ಕೊಲೆ ಕೇಸ್‌ನಲ್ಲಿ ಸಿಕ್ ಹಾಕ್ಕೊಂಡ್ ಬಿಟ್ಟವ್ನಂತೆ" ಎಂಬಿತ್ಯಾದಿ ಅಂತೆಕಂತೆಗಳನ್ನು ಮಾತಾಡಿ ದವಡೆ ಚಟ ತೀರಿಸಿಕೊಳ್ಳುತ್ತಿದ್ದರು. ಆರೋಪಿ ಲೆಫ್ಟಿನೆಂಟ್ ಕಮಾಂಡರ್‌ಗೆ ಶಿಕ್ಷೆಯಾದರೆ ಅದು ಮೈಸೂರು ರಾಜ್ಯಕ್ಕೆ ಅವಮಾನ ಆದಂತೆ ಎನ್ನುವ ಭಾವನೆಯಿಂದ ಆ ಕೇಸಿನ ಬಗ್ಗೆ ಚರ್ಚಿಸುತ್ತಿದ್ದರು ನನ್ನ ದೊಡ್ಡಪ್ಪ ! ನಾನು ಲಾಯರ್ ಆದಮೇಲೆ ಆ ಕೇಸಿನ ವಿವರಗಳನ್ನು ಓದಿದಾಗ ನಗು ತಡೆದುಕೊಳ್ಳಲಾಗಲಿಲ್ಲ. ಏಕೆಂದರೆ ಆ ಹಡಗು ಮತ್ತು ಅದರ ಕಮಾಂಡರ್ ನಾನಾವತಿಗೂ ಮೈಸೂರ್ ರಾಜ್ಯಕ್ಕೂ ಯಾವುದೇ ಸಂಬಂಧವಿರಲಿಲ್ಲ. ಅದು ಹಡಗಿನ ಹೆಸರು ಮಾತ್ರ ಆಗಿತ್ತು. ಆ ಹಡಗು ಭಾರತ ಸರ್ಕಾರಕ್ಕೆ ಸೇರಿದ್ದುದಾಗಿತ್ತು. ನಾನು ಚಿಕ್ಕವನಿದ್ದಾಗ ಉಸಿರು ಕಟ್ಟಿ ಹಿಡಿದು ಕೇಳಿಸಿಕೊಂಡ ಕೊಲೆ ಕೇಸಿನ ಕಥೆ ಹೀಗಿದೆ.....

ನೌಕಾಪಡೆಯ ಸೇವೆಯಲ್ಲಿ ನಾನಾವತಿಯ ವಂಶಜರದು ದೊಡ್ಡ ಹೆಸರು. ಪ್ರಧಾನಿ ನೆಹರೂ ಅವರಿಗೆ ನಾನಾವತಿ ಕುಟುಂಬದ ವೈಯಕ್ತಿಕ ಪರಿಚಯವಿತ್ತು.

ನಾನಾವತಿ ಸ್ಫುರದ್ರೂಪಿ. ಕಟ್ಟುಮಸ್ತಾದ ಆಳು. ನೇವಿಯಲ್ಲಿ ಕರ್ತವ್ಯನಿಷ್ಠೆಗೆ ಹೆಸರು ಗಳಿಸಿದ್ದ ವ್ಯಕ್ತಿಯಾಗಿದ್ದ.

ಸಮುದ್ರದ ಒಂದು ನೆಲೆಯಿಂದ ಮತ್ತೊಂದು ನೆಲೆಗೆ ತಿರುಗುವ ಈ ಅಧಿಕಾರಿ ಸೆಲ್ವಿಯಾ ಎನ್ನುವ ಇಂಗ್ಲಿಷ್ ಯುವತಿಯೊಂದಿಗೆ ಪ್ರೇಮ ಬೆಳೆಸಿದ ನಂತರ ಅವಳನ್ನೇ ಮದುವೆಯಾದ. ಹದಿನೈದು ದಿನ ಹಡಗಿನಲ್ಲಿದ್ದರೆ ಇನ್ನು

ಹದಿನೈದು ದಿನ ಮನೆಯಲ್ಲಿರುವಂಥ ಡ್ಯೂಟಿ ಲೆಫ್ಟಿನೆಂಟ್ ಕಮಾಂಡರ್ ನಾನಾವತಿಯದು. ಮೂರು ಮಕ್ಕಳಾದವು. ಇಂಗ್ಲಿಷ್ ಮತ್ತು ಇಂಡಿಯನ್ ಮಿಶ್ರತಳಿಯ ಆ ಮಕ್ಕಳು ಮುದ್ದುಮುದ್ದಾಗಿದ್ದವು. ನಾನಾವತಿಗೆ ಮಕ್ಕಳೆಂದರೆ ಪಂಚಪ್ರಾಣ. ಸಮುದ್ರ ಬಿಟ್ಟು ಮನೆಗೆ ಬರುತ್ತಿದ್ದಂತೆಯೇ ಮೂರೂ ಮಕ್ಕಳನ್ನು ತನ್ನ ಬಾಹುಗಳಲ್ಲಿ ಬಾಚಿ ಎತ್ತಿಕೊಳ್ಳುತ್ತಿದ್ದ.

ಹೆಂಡತಿ ಸೆಲ್ವಿಯಾ "ಅಲ್ಲಿ ಹಡಗು, ಇಲ್ಲಿ ಹುಡುಗರು. ನಾನು ನಿಮ್ಮ ಲೆಕ್ಕಕ್ಕೆ ಇಲ್ಲವಾಗಿದ್ದೇನೆ" ಎಂದು ಮುನಿಸಿಕೊಂಡು ಮಲಗುತ್ತಿದ್ದಳು. ಹಾಗೆ ಮುನಿಸಿಕೊಂಡಾಗಲೆಲ್ಲ ಸಿನಿಮಾ, ಹೋಟೆಲ್‌ಗಳಿಗೆ ಆಕೆಯನ್ನು ಕರೆದೊಯ್ದು ರಮಿಸುತ್ತಿದ್ದ.

ಮುಂಬೈ ಸಮುದ್ರನೆಲೆಗೆ ನಾನಾವತಿ ವರ್ಗಾವಣೆಗೊಂಡಿದ್ದ. ಸಮುದ್ರದಲ್ಲಿ ತೇಲುವ ಹಡಗು ಹೋಟೆಲ್‌ಗಳಲ್ಲಿ ನಡೆಯುತ್ತಿದ್ದ ಪಾರ್ಟಿಯೊಂದರಲ್ಲಿ ನಾನಾವತಿಗೆ ಮುಂಬೈನ ಶ್ರೀಮಂತ ಆಟೋಮೊಬೈಲ್ ವ್ಯಾಪಾರಿ ಅಹುಜಾನ ಪರಿಚಯವಾಯಿತು.

ಮುವತ್ತೆರಡರ ಹರೆಯದ ಅಹುಜಾಗೆ ಒಳ್ಳೆಯ ಅಂಗಸೌಷ್ಠವವಿತ್ತು. ಆದರೆ ಮದುವೆಯಾಗಿರಲಿಲ್ಲ. ಅಹುಜಾನ ಅಕ್ಕ ಸಹಿತ ಮದುವೆಯಾಗಿರಲಿಲ್ಲ. ಅಕ್ಕ ಮತ್ತು ತಮ್ಮ ಈರ್ವರೇ ಭಾರೀ ಬಂಗಲೆಯಲ್ಲಿ ವಾಸಿಸುತ್ತಿದ್ದರು. ಮನೆಯವರಿಗಿಂತ ಆಳು-ಕಾಳುಗಳದೇ ಸಂಖ್ಯೆ ಜಾಸ್ತಿಯಿತ್ತು.

ಅಹುಜಾನನ್ನು ನಾನಾವತಿ ತನ್ನ ಮನೆಗೆ ಕರೆದೊಯ್ದು ಗುಂಡಿನ ಪಾರ್ಟಿ ಕೊಟ್ಟ. ಸರಿ, ಅಹುಜಾ ನಾನಾವತಿ ಮತ್ತು ಸೆಲ್ವಿಯಾರನ್ನು ಭಾರಿ ಸ್ಟಾರ್ ಹೋಟೆಲ್‌ಗಳಿಗೆ ಕರೆದೊಯ್ದು ಪಾರ್ಟಿ ಕೊಡತೊಡಗಿದ. ಅಹುಜಾ ಮೊದಮೊದಲು ನಾನಾವತಿ ಇದ್ದಾಗ ಮಾತ್ರ ಮನೆಗೆ ಬರುತ್ತಿದ್ದ. ದಿನಗಳಂತೆ ನಾನಾವತಿ ಡ್ಯೂಟಿಗೆ ಹೋಗುವುದನ್ನೇ ಕಾಯತೊಡಗಿದ. ಸೆಲ್ವಿಯಾ ಒಬ್ಬಳನ್ನೇ ಹೋಟೆಲ್‌ಗಳಿಗೆ ಕರೆದೊಯ್ಯತೊಡಗಿದ.

ಸೆಲ್ವಿಯಾಳಿಗಾಗಿ ಹಣವನ್ನು ನೀರಿನಂತೆ ಚೆಲ್ಲುತ್ತಿದ್ದ ಅಹುಜಾ. ತಾನು ಆಸೆಯಿಂದ ನೋಡಿದ ವಸ್ತುವನ್ನು ತಕ್ಷಣವೇ ಕೊಡಿಸುತ್ತಾನಲ್ಲ ಈ ಅಹುಜಾ ಅದೆಷ್ಟು ಒಳ್ಳೆಯವ ಎನಿಸುತ್ತಿತ್ತು ಸೆಲ್ವಿಯಾಳಿಗೆ.

ನಾನಾವತಿಗೆ ಬರುತ್ತಿದ್ದ ಬಡ ಸಂಬಳದಲ್ಲಿ ಸ್ವಂತ ಮನೆ ಖರೀದಿಸಲು ಸಾಧ್ಯವಾಗಿರಲಿಲ್ಲ. ಒಂದು ರಾತ್ರಿ ನಾನಾವತಿಯೊಂದಿಗೆ ಗುಂಡು ಹಾಕುತ್ತಾ ಅಹುಜಾ "ನೀನೇಕೆ ಒಂದು ಸ್ವಂತ ಮನೆ ಮಾಡಬಾರದು?" ಎಂದು ಪ್ರಶ್ನಿಸಿದ. "ಅಷ್ಟೆಲ್ಲ ಹಣ ನನಗೆಲ್ಲಿದೆ?" ಎಂದ ನಾನಾವತಿ.

"ಏಕೆ ನನ್ನಲ್ಲಿಲ್ಲವೆ? ಸುಮ್ಮನೆ ಸ್ನೇಹಿತರೆ ನಾವು?" ಎಂದ ಅಹುಜಾ.

ನಾನಾವತಿ ಅಹುಜಾನನ್ನು ಗಾಢವಾಗಿ ಅಪ್ಪಿಕೊಂಡ ; ನಿನ್ನಂಥ ಗೆಳೆಯನನ್ನು ಪಡೆದ ನಾನು ಧನ್ಯ ಎಂದು ಭಾವಪೂರ್ಣವಾಗಿ ಹೇಳುವಾಗ ವಿಸ್ಕಿಯ ನಶೆಯನ್ನು ಮೀರಿಸಿತ್ತು ಸ್ನೇಹದ ನಶೆ.

ನಾನಾವತಿ ಸ್ವಂತ ಮನೆಯನ್ನು ಖರೀದಿಸಿದ. ಸೆಲ್ವಿಯಾ ಖುಷಿಯಾಗಿ ಮನೆಯಲ್ಲಿ ಕುಪ್ಪಳಿಸಿದಳು. ಸೆಲ್ವಿಯಾಗೆ ಮೊಗೆದುಕೊಂಡಂತೆಲ್ಲ ಮತ್ತೆ ಒತ್ತರಿಸಿ ಬರುವ ಒರತೆಯಂತೆ ಕಾಣತೊಡಗಿದ ಅಹುಜಾ. ಕಾಮಕ್ಕಿಂತ ಕಾಮದ ಹಪಹಪಿಯೇ ಜಾಸ್ತಿಯಾಯಿತು ಸೆಲ್ವಿಯಾಗೆ. ಬರಬರುತ್ತ ಆ ಹಪಹಪಿ ಗೀಳಾಗಿ ಪರಿವರ್ತನೆಯಾಯಿತು.

"ಕದ್ದು ಮುಚ್ಚಿ ಮಾಡುವುದೆಷ್ಟು ದಿನ?" ಎಂದು ಅಹುಜಾನಿಗೆ ಕೇಳಿದಳು.

"ಹೀಗಿದ್ದರೇ ಸರಿಯಲ್ವೆ !" ಎಂದ ಅಹುಜಾ. "ನೀವು ಇಂಡಿಯನ್ಸ್ ಬಹಳ ವಿಚಿತ್ರ. ಕಳ್ಳ ಬದುಕಿನಲ್ಲಿ ನಿಸ್ಸೀಮರು. ನನಗೆ ಮಾತ್ರ ಸಾಧ್ಯವಿಲ್ಲ. ನಿನ್ನನ್ನು ಮದುವೆಯಾಗಿಬಿಡುತ್ತೇನೆ" ಎಂದಳು ಸೆಲ್ವಿಯಾ.

ಭಾವೋದ್ರೇಕದಲ್ಲಿ ಹೇಳುತ್ತಿದ್ದಾಳೆಂದುಕೊಂಡ ಅಹುಜಾ "ಆಯಿತು ಮದುವೆಯಾಗೋಣ. ಸಮಾಧಾನವಾಗಿರು" ಎಂದು ರಮಿಸಿದ.

ಅಹುಜಾನ ಸಮಯಸ್ಫೂರ್ತಿಯ ಮಾತುಗಳನ್ನೇ ಗಟ್ಟಿಯಾಗಿ ನಂಬಿಕೊಂಡಳು. ಮನಸ್ಸಿನಲ್ಲಿ ಅಲ್ಪಸ್ವಲ್ಪ ಉಳಿದಿದ್ದ ಗಂಡನಿಗೆ ಗೇಟ್‌ಪಾಸ್ ಕೊಟ್ಟಳು. ನಾನಾವತಿ ಡ್ಯೂಟಿಯಿಂದ ಬಂದಾಗ ಸೆಲ್ವಿಯಾ ಎದುರುಗೊಳ್ಳಲಿಲ್ಲ. ಸ್ವಾಗತದ ನೋಟ, ನಗೆಗಳನ್ನು ಬೀರಲಿಲ್ಲ. ಊಟ, ತಿಂಡಿಗಳಿಗಾಗಿಯೂ ವಿಚಾರಿಸಲಿಲ್ಲ. ಮಕ್ಕಳೊಂದಿಗೆ ಆಟಕ್ಕೆ ಕೂತರೆ ಏನೂ ಆಕ್ಷೇಪಿಸದೆ ತನ್ನ ಪಾಡಿಗೆ ತಾನು ಗುಂಗಿನಲ್ಲಿ ಇರತೊಡಗಿದಳು.

ಮಾರನೇ ದಿನ ತಾನೊಬ್ಬಳೇ ಹೊರಹೋಗುತ್ತಿರುವುದಾಗಿ ಹೇಳಿ ಉತ್ತರಕ್ಕಾಗಿಯೂ ಕಾಯದೆ ಹೊರಟುಬಿಟ್ಟಳು.

ರಾತ್ರಿ ಮಕ್ಕಳನ್ನು ಮಲಗಿಸಿ ಹೆಂಡತಿಗಾಗಿ ಹಾದಿ ಕಾಯುತ್ತ ಕೂತ ನಾನಾವತಿಯ ಮನಸ್ಸು ಜ್ವಾಲಾಮುಖಿಯಾಗಿತ್ತು. ಹಿಂದೆಂದೂ ಸೆಲ್ವಿಯಾ ತನ್ನೊಂದಿಗೆ ಹೀಗೆ ನಡೆದುಕೊಂಡಿದ್ದಿಲ್ಲ ಈ ಬಾರಿ ಹೀಗೇಕೆ? ಎನ್ನುವ ಪ್ರಶ್ನೆ ತಿರುತಿರುಗಿ ಧುತ್ತೆಂದು ಬರತೊಡಗಿತು. ಬೇರೆ ಯೋಚನೆಯಲ್ಲಿ

ತೊಡಗೋಣವೆಂದು ಎಷ್ಟೇ ಪ್ರಯತ್ನಿಸಿದರೂ ಸೆಲ್ವಿಯಾ ಅವನ್ನೆಲ್ಲ ಬದಿಗೆ ಸರಿಸಿ ಬರತೊಡಗಿದಳು.

ಹಿರಿಯ ಮಗ ನಿದ್ರೆಯಿಂದ ಎದ್ದು ಬಂದು ತಂದೆಯ ತೊಡೆ ಅಲುಗಿಸಿ "ಪಾಪಾ ನಿದ್ರೆ ಮಾಡೋಲ್ವಾ. ಮಮ್ಮಿ ಅಹುಜಾ ಅಂಕಲ್ ಜೊತೆ ಹೋಗಿರ್ತಾಳೆ. ಅವಳು ಬರೋದಕ್ಕೆ ಇನ್ನೂ ತಡವಾಗುತ್ತೆ. ಬಾಪ್ಪಾ ಮಲಗೋಣ...." ಎಂದ.

ಮಗನ ಈ ಮಾತುಗಳನ್ನು ಕೇಳಿದ್ದೇ ತಡ ಅದುಮಿಟ್ಟಿದ್ದ ಅನುಮಾನಗಳು ಆಸ್ಫೋಟಗೊಂಡವು.

ಸೆಲ್ವಿಯಾ ಮನೆಗೆ ಬಂದಾಗ ಕುಡಿತ ಜಾಸ್ತಿಯಾಗಿ ತೂರಾಡುತ್ತಿದ್ದಳು. ಅವಳನ್ನು ಬಿಡಲು ಅಹುಜಾ ಕಾರಲ್ಲಿ ಬಂದಿದ್ದ.

"ಹಲೋ ನಾನಾ" ಎಂದ ಅಹುಜಾ. ಒಳಗೆ ಉಕ್ಕುತ್ತಿದ್ದ ಸಿಟ್ಟನ್ನು ತಡೆದುಕೊಂಡು ಅವನ ಕಡೆಗೆ ಔಪಚಾರಿಕ ನಗೆಯನ್ನೂ ಬೀರದೆ ಹೆಂಡತಿಯ ಜೋಲಿಯನ್ನು ಸಂಭಾಳಿಸುತ್ತ ಒಳಹೋಗಿ ಬಾಗಿಲು ಹಾಕಿಕೊಂಡ.

ನಾನಾವತಿಯ ಕಣ್ಣುಗಳ ಬಳಿ ನಿದ್ರೆ ಸುಳಿಯಲಿಲ್ಲ. ಬೆಳಗಿನ ಜಾವ ಯಾವಾಗ ನಿದ್ರೆ ಹತ್ತಿತ್ತೋ ಎಚ್ಚರಗೊಂಡಾಗ ಬಿಸಿಲು ಬಲಿತಿತ್ತು.

ಸೆಲ್ವಿಯಾ ಮಕ್ಕಳನ್ನೆಲ್ಲ ಶಾಲೆಗೆ ಕಳಿಸಿ ಪೇಪರ್ ಓದುತ್ತ ಹಾಲ್‌ನಲ್ಲಿ ಕೂತಿದ್ದಳು.

"ನೀನು ಅಹುಜಾನೊಂದಿಗೆ ಮದುವೆ ಆಗಬಯಸಿದ್ದೀಯಾ?" ಎಂದು ನಾನಾವತಿ ಗಂಭೀರವಾಗಿ ಪ್ರಶ್ನಿಸಿದ.

"ಹೌದು, ಅದಷ್ಟು ಶೀಘ್ರ ಆಗುವ ಯೋಚನೆಯಿದೆ" ಎಂದು ಅಷ್ಟೇ ಗಂಭೀರವಾಗಿ ಹೇಳಿದಳು.

"ಹಾಗಾದರೆ ಮಕ್ಕಳು?" ಎಂದು ಪ್ರಶ್ನಿಸಿದ.

"ನನ್ನ ಬಳಿಯೇ ಇರುತ್ತಾರೆ. ಅದಕ್ಕೆ ಅಹುಜಾನ ಆಕ್ಷೇಪಣೆ ಇಲ್ಲ" ಎಂದಳು.

"ಸರಿ, ಇಂದು ಕೊನೆಯ ಬಾರಿಗೆ ಮಕ್ಕಳೊಂದಿಗೆ ಮ್ಯಾಟಿನಿ ಸಿನಿಮಾ ನೋಡಿಬರೋಣ" ಎಂದ. ನಾನಾವತಿ ಸ್ಕೂಲ್‌ನಿಂದ ಮಕ್ಕಳನ್ನು ಕರೆತರುವಷ್ಟರಲ್ಲಿ ಸೆಲ್ವಿಯಾ ರೆಡಿಯಾಗಿದ್ದಳು. ಸಿನಿಮಾ ಇನ್ನೂ ಇಂಟರ್‌ವಲ್ ಬಿಟ್ಟಿರಲಿಲ್ಲ. "ಒಂದು ಅರ್ಜೆಂಟ್ ಕೆಲಸವನ್ನು ಮರೆತು ಬಂದಿದ್ದೇನೆ. ಸಿನಿಮಾ ಮುಗಿಯುವಷ್ಟರಲ್ಲಿ ಬಂದು ಬಿಡುತ್ತೇನೆ" ಎಂದು ಹೇಳಿ ಹೊರನಡೆದ.

ನಾನಾವತಿ ನೇರವಾಗಿ ನೌಕಾಪಡೆಯ ಕಚೇರಿಗೆ ತೆರಳಿ, ಅಲ್ಲಿದ್ದ ತನ್ನ ರಿವಾಲ್ವರ್‌ಗೆ ಬುಲೆಟ್‌ಗಳನ್ನು ತುಂಬಿಕೊಂಡು ನೇರವಾಗಿ ಅಹುಜಾನ ಮನೆಗೆ ಹೋದ.

ಸಹೋದರ ಅಹುಜಾ ಮಹಡಿಯ ರೂಮಿನಲ್ಲಿದ್ದಾನೆಂದು ಹೇಳಿದಳು ಅಕ್ಕ. ಅಹುಜಾ ಬೆಡ್‌ರೂಮಿನಲ್ಲಿರಲಿಲ್ಲ. ಬಾತ್‌ರೂಮಿನಲ್ಲಿ ನೀರಿನ ಶಬ್ದವಾಗುತ್ತಿತ್ತು. ಧಡಧಡ ಬಾಗಿಲು ಬಡಿದದ್ದಕ್ಕೆ ಅಹುಜಾ ಟವಲ್ ಸುತ್ತಿಕೊಂಡೇ ಹೊರಬಂದ. ಬಾತ್‌ರೂಮಿನಿಂದ ಹೊರಬರಲೂ ಬಿಡಲಿಲ್ಲ. ಅಲ್ಲಿಯೇ ತಡೆದು ಕೇಳಿದ : "ಸೆಲ್ವಿಯಾಳನ್ನು ಮದುವೆಯಾಗುವ ನಿರ್ಧಾರ ಮಾಡಿರುವಿಯ?"

"ಹೇ ನಾನಾ ಮೊದಲು ಕೂತುಕೊ. ನಿನ್ನೆ ರಾತ್ರಿಯೂ ನೀನು ನನ್ನೊಂದಿಗೆ ಮಾತಾಡಲಿಲ್ಲ. ಭಾರೀ ಸಿಟ್ಟು ಹೊತ್ತುಕೊಂಡು ಬಂದಿರುವಂತಿದೆ. ಅತ್ತ ಸರಿ, ಮೊದಲು ಡ್ರೆಸ್ ಮಾಡಿಕೊಳ್ಳುವೆ" ಎಂದ ಅಹುಜಾ. "ನನ್ನ ಪ್ರಶ್ನೆಗೆ ಮೊದಲು ಉತ್ತರಿಸು. ಉಳಿದ ಥೋಂಗಿ ಮಾತುಗಳನ್ನು ಬದಿಗಿಡು" ಎಂದ ನಾನಾ.

"ಅಲ್ವೊ ನಿನ್ನ ಹೆಂಡತಿಯನ್ನ ನಾನೇಕೊ ಮದ್ವೆಯಾಗ್‌ಬೇಕು?" ಎಂದ ಅಹುಜಾ.

"ಮತ್ತೆ ಅವಳಿಗೇಕೆ ಮದುವೆಯಾಗುವುದಾಗಿ ನಂಬಿಕೆ ಹುಟ್ಟಿಸಿದ್ದೀ? ನನ್ನ ಮಕ್ಕಳನ್ನೂ ನೀನೇ ನೋಡಿಕೊಳ್ಳುವುದಾಗಿಯೂ ಹೇಳಿರುವಿಯಂತೆ? ಈಗಲೂ ನಾನು ನಿನಗೆ ಹೇಳುತ್ತಿದ್ದೇನೆ. ನನ್ನ ಹೆಂಡತಿಯನ್ನು ಮದುವೆಯಾಗುವುದಾದರೆ ಆಗು. ನಾನು ಒಪ್ಪಿಗೆ ಕೊಡುತ್ತೇನೆ. ಆದರೆ ಒಂದು ಷರತ್ತು. ನನ್ನ ಮಕ್ಕಳು ಯಾವ ಕಾರಣಕ್ಕೂ ತಾಯಿಯಿಂದ ಅನಾಥವಾಗಕೂಡದು" ಎಂದು ಕಠೋರ ಧ್ವನಿಯಲ್ಲಿ ಹೇಳಿದ. ನಾನಾವತಿಯ ಕರ್ಕಶ ಧ್ವನಿ ಮತ್ತು ಮಾತುಗಳು ಅಹುಜಾನ ಸಿಟ್ಟನ್ನು ಕೆಣಕಿದವು.

ಅಹುಜಾ ವ್ಯಂಗ್ಯ ಮಿಶ್ರಿತ ಧ್ವನಿಯಲ್ಲಿ "ನನ್ನ ಮಗ್ಗುಲಲ್ಲಿ ಮಲಗುವ ಎಲ್ಲ ಹೆಂಗಸರನ್ನ ಮದುವೆಯಾಗಲು ಸಾಧ್ಯವಾ? ಅವರ ಮಕ್ಕಳಿಗೆಲ್ಲಾ ನಾ ಅಪ್ಪ ಆಗಲೆ?" ಎಂದು ಕೊಂಕು ನಗೆ ನಕ್ಕ.

ಹೆಣ್ಣಿನ ಮನಸ್ಸನ್ನು ಕದ್ದ ನೆಲೆಗಟ್ಟಿನಲ್ಲಿ ಹೊಮ್ಮುವ ವಿಟಪುರುಷನ ಪೌರುಷದ ಕೆಣಕು ಮಾತುಗಳೆದುರು ನಾನಾವತಿಯ ರಣರಂಗದ ಪೌರುಷ ಮತ್ತು ಪರಾಕ್ರಮಗಳು ಹೂಂಕರಿಸುತ್ತ ಹೊರಬಂದವು ; ಜೇಬಿನೊಳಗಿಂದ ರಿವಾಲ್ವರ್ ಅನ್ನು ಹೊರತೆಗೆದ.

ನಾನಾವತಿಯ ಕಣ್ಣುಗಳು ಕೆಂಪಾಗಿದ್ದವು. ಮುಖದಲ್ಲಿ ವ್ಯಗ್ರತೆ ತಾಂಡವ ನಡೆಸುತ್ತಿತ್ತು. ಕೈಯಲ್ಲಿದ್ದ ರಿವಾಲ್ವರ್ ಗುರಿ ಅಹುಜಾ ತಲೆಯ ಕಡೆಗೆ. ಹಿಂದೆಂದೂ ಕಂಡಿರದ ಅಹುಜಾನ ಮುಖ ಬಿಳಚಿಕೊಳ್ಳತೊಡಗಿತು. ದೇಹದ ಅದುರಾಟಕ್ಕೆ ಸುತ್ತಿಕೊಂಡಿದ್ದ ಟವಲ್ ಕಳಚಿ ಬಿದ್ದಿತ್ತು. ಪೌರುಷವೆಂದರೆ ಕಾಮಕೇಳಿ ಎಂದು ಭ್ರಮಿಸಿಕೊಂಡಿದ್ದ ಅಹುಜಾ ತತ್ತರಿಸತೊಡಗಿದ್ದ.

"ಬೇಡ ಬೇಡ ನಾನಾವತಿ. ನಾನಿನ್ನು ಸೆಲ್ವಿಯಾಳ ತಂಟೆಗೇ ಬರುವುದಿಲ್ಲ. ಪ್ರಾಮಿಸ್ ನನ್ನನ್ನು ಬಿಟ್ಟು ಬಿಡು...." ಎಂದು ಬಡಬಡಿಸುತ್ತಿದ್ದಂತೆಯೇ ರಿವಾಲ್ವಾರ್‌ನಿಂದ ಸಿಡಿದ ಗುಂಡು ಸರಿಯಾಗಿ ಅಹುಜಾನ ತಲೆಯೊಳಗೆ ಹೊಕ್ಕಿತು.... ಅಹುಜಾನ ಅಕ್ಕ, ಸೆಕ್ಯುರಿಟಿ ಗಾರ್ಡ್‌ಗಳು ಮತ್ತು ಮನೆಯ ಆಳುಕಾಳುಗಳೆಲ್ಲ ಮಹಡಿಯ ಮೇಲೆ ಓಡಿಬಂದರು. ಅಕ್ಕ ಚಿಟ್ಟನೆ ಚೀರಿದಳು. ತನ್ನನ್ನು ಹಿಡಿಯಲು ಬಂದವರಿಗೆ, "ನಡೆಯಿರಿ ನಾನೇ ಪೋಲೀಸರಿಗೆ ಶರಣಾಗುವೆ" ಎಂದ ನಾನಾವತಿ.

ನೌಕಾಪಡೆಯ ತನ್ನ ಮೇಲಧಿಕಾರಿಯೊಂದಿಗೆ ಪೋಲೀಸ್ ಠಾಣೆಗೆ ಹೋಗಿ ಶರಣಾದ. ನಂತರ ತನಿಖೆ ನಡೆದು ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆ ಪ್ರಾರಂಭವಾಯಿತು.

ಕೋರ್ಟ್‌ನಲ್ಲಿ ವಿಚಾರಣೆ ನಡೆಯಿತು. ವಿಚಾರಣೆ ಕಾಲದಲ್ಲಿ ಸಮಾಜದ ವಿವಿಧ ರಂಗಗಳಿಂದ ಆಯಲ್ಪಟ್ಟ ಎಕ್ಸ್‌ಪರ್ಟ್‌ಗಳನ್ನು ಜ್ಯೂರಿಗಳೆಂದು ಮಾಡುತ್ತಿದ್ದರು. ಆ ಕೋರ್ಟ್‌ನಲ್ಲಿ ಒಂಬತ್ತು ಜ್ಯೂರಿಗಳು ಇದ್ದರು. ಅದರ ಎಂಟೂ ಜ್ಯೂರಿಗಳು ನಾನಾವತಿಯ ಪರ ತೀರ್ಪು ನೀಡಿದರು. ನ್ಯಾಯಾಧೀಶ ಇದಕ್ಕೆ ತನ್ನ ಸಮ್ಮತಿಯಿಲ್ಲವೆಂದೂ ಇತ್ಯರ್ಥಕ್ಕಾಗಿ ಪ್ರಕರಣವನ್ನು ಹೈಕೋರ್ಟ್‌ಗೆ ಕಳಿಸುವುದಾಗಿಯೂ ಘೋಷಿಸಿದರು.

ಹೈಕೋರ್ಟ್ ನಾನಾವತಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಸಜೆಯಾದ ದಿನವೇ ಮಧ್ಯಾಹ್ನ ಗವರ್ನರ್ ಮುಂದೆ ಕ್ಷಮೆಯಾಚನೆ ಅರ್ಜಿ ಸಲ್ಲಿಸಲಾಯಿತು. ಅದೇ ದಿನ ಸಂಜೆ ಗವರ್ನರ್ ನಾನಾವತಿಗೆ ಕ್ಷಮಾದಾನ ಮಾಡಿರುವುದಾಗಿ ಘೋಷಿಸಿದರು.

ಅಂಥ ಕ್ಷಿಪ್ರ ಕ್ಷಮಾದಾನ ನೀಡಿದ ಉದಾಹರಣೆ ಹಿಂದೆಂದೂ ಇರಲಿಲ್ಲ, ಇಂದಿನವರೆಗೂ ಇಲ್ಲ.

9

ರುದ್ರರಮಣೀಯ ಬೆಟ್ಟದಲ್ಲಿ ಹೆಜ್ಜೇನು ಹೋಳಿ

ನಮ್ಮೂರು ಚಿಕ್ಕಬೆಳವಂಗಲದಿಂದ ಉತ್ತರಕ್ಕೆ ನಾಲ್ಕು ಕಿ.ಮೀ.ಗಳಷ್ಟು ದೂರ ಹೋದರೆ ಹುಲ್ಲುಕಡಿ ಬೆಟ್ಟ ಸಿಗುತ್ತದೆ. ಬಹುಕಾಲದ ಹಿಂದೆ ಮುನಿಯೊಬ್ಬ ಹುಲ್ಲುತಿಂದು ಈ ಬೆಟ್ಟದಲ್ಲಿ ಜೀವಿಸುತ್ತಿದ್ದುದರಿಂದ ಅದಕ್ಕೆ ಆ ಹೆಸರು ಬಂತು ಎನ್ನುವ ಪ್ರತೀತಿ.

ರುದ್ರರಮ್ಯತೆಯಿಂದ ಕೂಡಿದ ಆ ಬೆಟ್ಟವನ್ನು ಹತ್ತಲು ಚಿಕ್ಕಮಕ್ಕಳಿಂದ ಸಾಧ್ಯವಾಗುತ್ತಿರಲಿಲ್ಲ. ಕಡಿದಾದ ಆ ಬೆಟ್ಟವು ನಮ್ಮ ಹಳ್ಳಿಯ ಚಲನವಲನಗಳ ಮೇಲೆ ಸದಾ ಕಣ್ಣಿಟ್ಟು ಕಾಯುವ ಕಾವಲುಗಾರನಂತೆ ನಿಂತಿತ್ತು. ಮೇಲುಗಡೆ ವೀರಭದ್ರದೇವರ ಗುಡಿ, ಕಲ್ಲಿನ ಮಂಟಪಗಳು ಮತ್ತು ಪುಷ್ಕರಣಿ ಇದ್ದವು. ಊರಿನ ಜನಕ್ಕೆ ಪಿಕ್‌ನಿಕ್ ಸ್ಥಳವೂ ಆಗಿತ್ತು. ಪೇಟೆಯ ಜನರಂತೆ ಕೇವಲ ವನಭೋಜನಕ್ಕೆ ಹೋಗುವವರಲ್ಲ ಹಳ್ಳಿಗರು ; ದೇವರ ದರ್ಶನ, ಪೂಜೆಗಳನ್ನೂ ಅದರಲ್ಲಿ ಬೆರೆಸಿಕೊಂಡಿರುತ್ತಾರೆ. ಅಂಥ ಪಿಕ್‌ನಿಕ್‌ಗಳನ್ನು ದೇವರು ಮಾಡಿ ಬರುವುದೆಂತಲೂ ಕರೆಯುವುದು ರೂಢಿ. ಊರಿನ ಜಂಜಾಟದಿಂದ ದೂರವಾದ ನಿಸರ್ಗಧಾಮದ ವಾತಾವರಣದಲ್ಲಿ ಊಟ, ತಿಂಡಿಗಳಿಗೆ ವಿಶೇಷ ರುಚಿಯುಂಟಾಗಿ

ಬಿಡುತ್ತದೆ ; ದೇವರ ದರ್ಶನ ಮಾನಸಿಕ ನೆಮ್ಮದಿಯನ್ನು ನೀಡುತ್ತದೆ. ನಮ್ಮೂರಿನವರು ಮೈ ಮನಗಳೆರಡನ್ನೂ ಚೈತನ್ಯಗೊಳಿಸಿಕೊಳ್ಳಲು ಹುಲ್ಲುಕಡಿ ಬೆಟ್ಟಕ್ಕೆ ನೆಂಟರಿಷ್ಟರು ಮತ್ತು ಸ್ನೇಹಿತರೊಡಗೂಡಿ ಹೋಗುತ್ತಿದ್ದರು.

ಆದರೆ ಋತುಸ್ರಾವವಾದ ಹೆಂಗಸು ಆ ಬೆಟ್ಟಕ್ಕೆ ಹೋಗಬಾರದು ಎನ್ನುವ ನಂಬಿಕೆ ಜನರಲ್ಲಿ ಗಾಢವಾಗಿ ಬೇರೂರಿಬಿಟ್ಟಿತ್ತು.

ನಮ್ಮ ಮನೆಯವರು ಬೆಟ್ಟಕ್ಕೆ ಹೋಗುತ್ತಿರುವುದರ ಸುಳಿವು ನನ್ನ ಚಿಕ್ಕದೊಡ್ಡಪ್ಪನವರ ಮೂಲಕ ತಿಳಿದು ಹರ್ಷೋಲ್ಲಾಸಗೊಂಡೆ ; ನನ್ನ ಸ್ನೇಹಿತರನ್ನು ಆಹ್ವಾನಿಸಿ ಮಜಾ ಮಾಡಬಹುದೆಂದು.

ನಮ್ಮ ಮನೆಯವರಷ್ಟೇ ಅಲ್ಲದೆ ಬೇರೆ ಮನೆಯವರನ್ನೂ ಬೆಟ್ಟಕ್ಕೆ ಕರೆದೊಯ್ಯುವ ಏರ್ಪಾಡು ನಡೆಯುತ್ತಿತ್ತು. ಕೆಲವು ಮನೆಗಳಿಗೆ ಆಹ್ವಾನಿಸಿ ಬರಲು ನನಗೆ ಜವಾಬ್ದಾರಿ ನೀಡಿದರು. ಆಹ್ವಾನಿತರಲ್ಲಿ ಲಿಂಗಾಯತರೂ ಇದ್ದರು. ಅವರು ಮಾಡುವ ಸಿಹಿತಿನಿಸು ಗೋಧಿಯ ಮಾಲ್ದಿ ಕಣ್ಮುಂದೆ ಬಂದು ನನ್ನ ಬಾಯಲ್ಲಿ ನೀರಾಡತೊಡಗಿತು.

ಗೂರಪ್ಪ ಸುಮಾರು ಎಪ್ಪತ್ತು ವಯಸ್ಸಿನ ವ್ಯಕ್ತಿ. ಯಾರ ಮುಲಾಜೂ ಹಿಡಿಯದೆ ಮುಖದ ಮೇಲೆ ಮಾತಾಡುವ ಮನುಷ್ಯ ಎನ್ನುವ ಆರೋಪಕ್ಕೆ ಗುರಿಯಾಗಿದ್ದ. ಬಹಳಷ್ಟು ನಂಬಿಕೆ, ಸಂಪ್ರದಾಯಗಳನ್ನು ಪ್ರಶ್ನಿಸುತ್ತಿದ್ದ ; ಭಿನ್ನ ರೀತಿಯ ತರ್ಕಗಳನ್ನು ಮಾಡುತ್ತಿದ್ದ. ಭೋಜನಕೂಟಗಳು ನಡೆಯುವ ಸಂದರ್ಭದಲ್ಲಿ ಗೂರಪ್ಪನ ವಾದವಾಗ್ವಾದಗಳಿಗೆ ವಿಶೇಷ ಕಳೆಯೇರುತ್ತಿತ್ತು. ಕೆಣಕಿ ಮಾತಿಗಿಳಿಸುತ್ತಿದ್ದರು, ರೇಗಿಸುತ್ತಿದ್ದರು. ಗೂರಪ್ಪ ಬಡವನಿದ್ದರೂ ತನ್ನ ವಾಗ್ಝರಿಯಿಂದ ಜನರನ್ನು ಆಕರ್ಷಿಸುತ್ತಿದ್ದ. ಹಾಗೆಂದು ಅವನ ಮಾತುಗಳಿಗೆ ವಿಶೇಷ ಬೆಲೆಯನ್ನೇನೂ ಕೊಡುತ್ತಿರಲಿಲ್ಲ. ನಕ್ಕು ಸಮಯ ಕಳೆಯಲು ಆತನ ಮಾತುಗಳು ಬೇಕಾಗಿದ್ದವು. ನನ್ನ ದೊಡ್ಡಪ್ಪನ ಆಜ್ಞೆಯ ಮೇರೆಗೆ ಗೂರಪ್ಪನಿಗೂ ಬೆಟ್ಟದ ಊಟಕ್ಕೆ ಆಮಂತ್ರಣ ನೀಡಿ ಬಂದಿದ್ದೆ.

- ಹಿಂದಿನ ಸಂಜೆಯೇ ಬೆಟ್ಟಕ್ಕೆ ಆರೇಳು ಆಳುಗಳು ಅಡಿಗೆ ಪಾತ್ರೆ ಸರಂಜಾಮುಗಳನ್ನೆಲ್ಲ ಹೇರಿಕೊಂಡು ಹೋಗಿದ್ದರು. ಅದೇನಿದ್ದರೂ ಬೆಟ್ಟದ ಮೇಲೆ ಶಾಖಾಹಾರ ಮಾತ್ರ, ಮುಟ್ಟಾದ ಹೆಂಗಸು ಮತ್ತು ಮಾಂಸಾಹಾರಗಳು ನಿಷಿದ್ಧವಾಗಿದ್ದವು.

ಮುಟ್ಟಾಗುವುದೆಂದರೇನು ಎನ್ನುವುದರ ಸ್ಪಷ್ಟ ತಿಳಿವಳಿಕೆ ನನಗಾಗ ಇರಲಿಲ್ಲ.

ನನ್ನ ಮನೆಯಲ್ಲಿ ನನ್ನ ತಾಯಿ ಮತ್ತು ಇತರೆ ಹೆಂಗಸರು ಮುಟ್ಟಾದಾಗ ಮೂರು ದಿನ ಪ್ರತ್ಯೇಕವಾಗಿ ಕೂರುತ್ತಿದ್ದುದನ್ನು ನೋಡುತ್ತಿದ್ದೆ. ಮುಟ್ಟು ಎನ್ನುವುದು ಹೆಣ್ಣುಮಕ್ಕಳಿಗೆ ಆಗುವಂಥದು ಎನ್ನುವುದು ಮಾತ್ರ ಗೊತ್ತಾಗಿತ್ತು. ದೊಡ್ಡಮ್ಮ ನನ್ನ ತಾಯಿಗೆ "ಆ ಭೀಮಕ್ಕನ್ನೂ ಕರ್ದಿದೀಯಾ. ಅವ್ಳಿಗೆ ಈಗ ಮುಟ್ಟಿನ ದಿನಾ ಸಮೀಪಿಸ್ತಿವೆ" ಎಂದು ಆಕ್ಷೇಪದ ಧ್ವನಿಯಲ್ಲಿ ಹೇಳಿದ್ದನ್ನು ಕೇಳಿಸಿಕೊಂಡೆ.

ಬೆಟ್ಟ ಏರಲು ಆರಂಭಿಸಿದೆವು. ಕೆಲವರು ಬೇಗ ಹತ್ತಿಹೋಗುತ್ತಿದ್ದರೆ ಮತ್ತೆ ಕೆಲವರು ಸಾವಕಾಶ ಹತ್ತುತ್ತಿದ್ದರು. ನನಗೆ ಬೇಗ ಹತ್ತುವ ಶಕ್ತಿಯಿದ್ದರೂ ಗೂರಪ್ಪನ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಹೋಗಬೇಕೆನ್ನುವ ಆಸೆ.

"ಏನ್ ಮಹಿಮೇನೊ ಈ ಬೆಟ್ಟದ್ದು. ಈಗ್ಗೆ ನಾಲ್ಕು ವರ್ಷಗಳ ಹಿಂದೆ ಇದೇ ಹೆಜ್ಜೇನು ಬಂಡೆಯ ಹತ್ತಿರ ಹೋಗುತ್ತಿರೋವಾಗ ಕುರುಬರ ಹೆಂಗ್ಸಿಗೆ ಹೆಜ್ಜೇನು ಹುಳುಗಳು ಕಚ್ಚಿ, ಅವ್ಳು ಗಂಭೀರ ಸ್ಥಿತಿಗೆ ಒಯ್ದಿದ್ವು. ಆ ಸಮಯಕ್ಕೆ ಸರಿಯಾಗಿ ಹಸ್ರುತಪ್ಲು ತಿಕ್‌ದೇ ಹೋಗಿದ್ರೆ ಅವ್ಳು ಬದುಕುಳಿಯೋದೆ ದುಸ್ತರವಾಗಿತ್ತು. ಈ ಬೆಟ್ಟಕ್ಕೆ ಮುಟ್ಟಾದ ಹೆಂಗ್ಸು ಬರಬಾರ್ದು ಅಂತ ಸುಮ್ನೆ ಹೇಳಿಲ್ಲ. ಏನಾದ್ರೂ ಆಗೇ ತೀರ್ತದೆ..." ಎಂದು ಒಬ್ಬ ಹೇಳಿದ.

ಅದಕ್ಕೆ ಗೂರಪ್ಪ : "ಏಯ್ ಬಿಡೋ, ಮುಟ್ಟಾಗೋದ್ಕೂ ಬೆಟ್ಟ ಹತ್ತೋದ್ಕೂ ಏನ್ ಸಂಬಂಧ. ಆ ಅಕ್ಕಮಹಾದೇವಿ ಅರೆಘಳಿಗೇನೂ ಲಿಂಗ ಬಿಟ್ಟಿರ್ತಿರಲಿಲ್ಲ; ಮುಟ್ಟಾದಾಗಾಲೂವೆ.... ಹಂಗಂತ ಶಿವ ಅವ್ಳಿಗೆ ಶಾಪ ಕೊಟ್ನ? ಎಲ್ರೂ ಹೆಣ್ಣನ್ನು ಮಾಯೆ ಮಾಯೆ ಅಂತ ಮೂದ್ಲಿಸೋವಾಗ್ಗೆ ನಂಗೆ ಗಂಡ್ಸು ಮಾಯೆಯಾಗಿ ಕಾಣಿಸ್ತಿದೆ ಎಂದು ಶರಣರೆಲ್ರೂನ್ನೂ ಪ್ರಶ್ನಿಸಿದ್ಳು ! ಅಷ್ಟೆಲ್ಲಾ ಯಾಕೆ, ಯಾವಾಗ್ಲು ಶಿವನ ಪಕ್ಕದಾಗಿರೋ ಪಾರ್ವತಿ ಮುಟ್ಟಾಗಿ ದೂರ ಕೂತಿದ್ದು ಎಲ್ಲಾದ್ರೂ ಕೇಳಿದ್ದೀರಾ? ಬೆಟ್ಟದ ಗುಡೀಲೆಲ್ಲ ಕುಣಿದು ಕುಪ್ಪಳಿಸುವ ಹೆಣ್ಣು ಕೋತಿ ಮುಟ್ಟಾಗೋಲ್ವೆ? ಇನ್ನು ಬೆಟ್ಟದ ಮೇಲೆ ಮಾಂಸ ತಿನ್‌ಬಾರ್ದು ಅಂತಾರೆ. ಬೆಟ್ಟದ್ ಮೇಲಿರೋ ನರಿ, ತೋಳ, ಚಿರತೆಗಳೆಲ್ಲ ಹುಲ್ ತಿನ್‌ತವೆ ಅನ್ಕೊಂಡಿದೀರಾ?"

ಹೀಗೇ ಸಾಗಿತ್ತು ಗೂರಪ್ಪನ ತರ್ಕ.

ಬೆಟ್ಟದ ದಾರಿ ಮಧ್ಯೆ ಸುಮಾರು ೬೦ ಅಡಿಗಳಷ್ಟು ಎತ್ತರದ ಎರಡು ಬೃಹತ್ ಬಂಡೆಗಳು. ಅವುಗಳ ನೆತ್ತಿಯ ಮೇಲೆ ಅಡ್ಡಲಾಗಿ ಮಲಗಿದ್ದ ಹಾಸುಬಂಡೆ. ನೈಸರ್ಗಿಕವಾಗಿಯೇ ಹಾಗೆ ಈ ಬಂಡೆಗಳು ಬಾಗಿಲಾಕಾರದಲ್ಲಿ ಪೇರಿಸಲ್ಪಟ್ಟಿದ್ದವು.

ಕಡಿದಾದ ಜೋಡಿ ಬಂಡೆಗಲ್ಲುಗಳ ನೆತ್ತಿಯ ಮೇಲಿನ ಹಾಸುಗಲ್ಲಿನ ಮೇಲೆ ಒಂದು ಪಕ್ಕಕ್ಕೆ ಸುಮಾರು ನಾಲ್ಕಡಿ ವ್ಯಾಸದ ಬೃಹದಾಕಾರದ ಹೆಜ್ಜೇನು ಇರುವುದು ಕಾಣಿಸಿತು. ಈ ಬಂಡೆಗಲ್ಲುಗಳ ಕೆಳಗೆ ನಾಲ್ವರು ಏನನ್ನೋ ಮಾಡುತ್ತಾ ನಿಂತಿದ್ದರು.

ನಮ್ಮ ಗುಂಪಿನಲ್ಲಿದ್ದವರು "ಓ ಜೇನುಗಳ್ಳರು ಬಂದವ್ರೆ. ಹೆಜ್ಜೇನು ಬಿಡಿಸೋದ್ನ ಕತೆಯಾಗಿ ಕೇಳಿದ್ವಿ. ಈಗ ನಮ್ ಕಣ್ಣೆದುರ್ಗೇ ಜೇನು ಬಿಡಿಸೋದ್ ನಡೀತೈತೆ. ನೋಡೇ ಬಿಡೋವಾ" ಎಂದರು.

ಅಷ್ಟು ಎತ್ತರದಲ್ಲಿರುವ ಮತ್ತು ಅಂಥ ಬೃಹತ್ ಜೇನನ್ನು ಎಂಥ ಉಪಾಯದಿಂದ ಬಿಡಿಸುವರೋ ಎನ್ನುವ ಕುತೂಹಲ ನನ್ನಲ್ಲಿ.

ನಿಂತಿದ್ದ ನಮಗೆಲ್ಲ "ಹುಳು ಎಬ್ಬಿಸ್ತೇವೆ. ನೀವು ನಿಂತ್ಕೊಂಡಿದ್ರೆ ಕಚ್ಚಿಬಿಡ್ತವೆ, ಕೂತ್ಕೋಳಿ ಅಲ್ಲೆ, ಮಿಸುಗಾಡ್ದೆ ಕೂತುಕೊಳ್ಳಿ" ಎಂದ ಜೇನುಗಳ್ಳರ ಗುಂಪಿನಲ್ಲಿದ್ದವನೊಬ್ಬ.

ಸರ್ಕಸ್ ನೋಡಲು ಸಿದ್ಧರಾದವರಂತೆ ನಿಂತಲ್ಲೇ ಬಾಯಿ ಮುಚ್ಚಿಕೊಂಡು ಕೂತೆವು. ಕೆಳಗಿನಿಂದ ಉರಿ ಹಚ್ಚಿದರು. ಅದರೊಳಗೆ ಯಾವುದೋ ಗಿಡದ ಸೊಪ್ಪು ಸುರಿದರು. ದಟ್ಟವಾದ ಹೊಗೆ ಎದ್ದಿತು. ಹೊಗೆ ತಾಗಿದ ಕೂಡಲೇ ಜೇನುಗಳೆಲ್ಲ ಆಕಾಶಕ್ಕೆ ಹಾರಿದವು ; ತೇಲುವ ಕಪ್ಪು ಮೋಡದಂತೆ ಕಾಣತೊಡಗಿದವು.

ಕಟ್ಟಿಗೆ ಪೆಟ್ಟಿಗೆಯೊಳಗಿಂದ ಎರಡು ಉಡಗಳನ್ನು ಹೊರತೆಗೆದರು. ಆ ಎರಡೂ ಉಡಗಳ ಟೊಂಕಕ್ಕೆ ಹಗ್ಗವನ್ನು ಬಿಗಿದು ಕಟ್ಟಿದರು. ಎಡಗಡೆಯ ನಿಲುಬಂಡೆಯ ಮೇಲೆ ಆ ಉಡಗಳನ್ನು ಅಂಟಿಸಿದರು. ಎರಡೂ ಉಡಗಳ ಸೊಂಟದಿಂದ ನೇತುಬಿದ್ದಿದ್ದ ಹಗ್ಗಗಳನ್ನು ಸೇರಿಸಿ ಐವತ್ತು ವರ್ಷಗಳ ಮಧ್ಯವಯಸ್ಕನೊಬ್ಬ ತನ್ನ ಬೆನ್ನಿಗೆ ಹಾಕಿಕೊಂಡ. ಸರ್ಕಸ್ಸಿನ ರಿಂಗ್ ಮಾಸ್ಟರ್ ಸ್ಟೈಲ್‌ನಲ್ಲಿ ಉಡಗಳಿಗೆ ಉಟ್ ಉಟ್ ಎನ್ನತೊಡಗಿದ. ಉಟ್ ಎಂದು ಕೂಗಿದಂತೆ ಉಡಗಳು ಸಮಾನಾಂತರವಾಗಿ ಮೇಲೇರತೊಡಗಿದವು. ಹಗ್ಗ ಹಿಡಿದು ಮೇಲೇರುತ್ತಿದ್ದ ಮಧ್ಯವಯಸ್ಕ ತನ್ನ ಬೆನ್ನ ಹಿಂದ ಬಕೆಟ್ ಒಂದನ್ನು ಹಗ್ಗಕಟ್ಟಿ ಇಳಿಬಿಟ್ಟುಕೊಂಡಿದ್ದ. ಉಡಗಳು ಮೇಲೆ ಹೋದಂತೆಲ್ಲ ದೂರದಲ್ಲಿದ್ದ ನಮಗೆ ಚಿಕ್ಕದಾಗಿ ಕಾಣತೊಡಗಿದವು. ನಿಲುಬಂಡೆಯ ಮೇಲೆ ನಿರಾಧಾರವಾಗಿ ಆ ಮನುಷ್ಯ ಮೇಲೆ ಏರುತ್ತಿದ್ದಾನೇನೋ ಎನ್ನುವಂತೆ ಭಾಸವಾಗುತ್ತಿತ್ತು.

ತುದಿ ತಲುಪಿದಾಗ ಕೈಯಳತೆಯ ಅಂತರದಲ್ಲಿದ್ದ ಜೇನು ಹುಟ್ಟನ್ನು ಕತ್ತರಿಸಿ

ಬೆನ್ನ ಹಿಂದೆ ಕಟ್ಟಿಕೊಂಡಿದ್ದ ಬಕೆಟ್‌ನೊಳಗೆ ಹಾಕಿಕೊಂಡ. ತುಂಬಿದ ಬಕೆಟ್ ಅನ್ನು ಮೇಲಿನಿಂದ ಇಳಿಸತೊಡಗಿದ.

ನಮಗೆಲ್ಲ ಆಶ್ಚರ್ಯ, ಉಡಗಳ ಜೊತೆಗೆ ಮೇಲೇರಿದ ಮನುಷ್ಯ ಕೆಳಗೆ ಹೇಗೆ ಬರುತ್ತಾನೆಂದು ! ಹೀಗೆ ಅಂದುಕೊಳ್ಳುತ್ತಿರುವಾಗಲೇ ಈ ಮನುಷ್ಯ ಕೆಳಗೆ ಬಿಟ್ಟು ಬಿಟ್ಟು ಜರಿಯತೊಡಗಿದ್ದ. ರಿವರ್ಸ್ ಗೇರುಗಳಲ್ಲಿ ಬಸ್ ಹಿಂಚಲಿಸುವಂತೆ ಉಡಗಳು ಕೆಳಗೆ ಇಳಿಯತೊಡಗಿದವು.

ಉಡಗಳು ಹೇಗೆ ಜರಿಯುತ್ತವೆಂದು ನೋಡುವ ಕುತೂಹಲದಿಂದ ಆ ಬಂಡೆಯ ಸಮೀಪಕ್ಕೆ ಹೋದೆವು. ಮುಕ್ಕಾಲು ಭಾಗ ಇಳಿದಿದ್ದ ಉಡಗಳು ಸ್ಪಷ್ಟವಾಗಿ ಕಾಣತೊಡಗಿದ್ದವು. ಈ ಜೇನುಗಳ್ಳ ಎರಡೂ ಉಡಗಳಿಗೆ ಬಾಯಿಯಿಂದ ಏನೂ ಆದೇಶ ನೀಡುತ್ತಿರಲಿಲ್ಲ ; ಅವುಗಳ ತಿಕಗಳಲ್ಲಿ ಬೆರಳನ್ನು ಅಮುಕುತ್ತಿದ್ದ !

ನಮ್ಮ ಊರಲ್ಲಿ ಜನ ಮಾತಾಡಿಕೊಳ್ಳುವಾ 'ಉಡದ ತಿಕಕ್ಕೆ ಬೆರಳಿಕ್ಕಿದ್ರೆ ಹಿಡಿತ ಸಡಲ್ತದೆ' ಎನ್ನುತ್ತಿದ್ದುದರ ಅರ್ಥ ಪ್ರಯೋಗಪೂರ್ವಕವಾಗಿ ಆಯಿತು.

ಸುಬ್ರಹ್ಮಣ್ಯ ಘಾಟಿಯ ಜಾತ್ರೆಯಲ್ಲಿ ನೋಡಿದ ಸರ್ಕಸ್ಸಿಗಿಂತ ಹೆಚ್ಚು ರೋಮಾಂಚನಗೊಳಿಸಿತು ಜೇನುಗಳ್ಳ ಮತ್ತು ಉಡಗಳ ಸರ್ಕಸ್ಸು ಮತ್ತು ಜೇನುಗಳ್ಳರು ಸರ್ಕಸ್‌ಗಾಗಿ ಸರ್ಕಸ್ ಮಾಡುವರಲ್ಲವೆನಿಸಿತು.

ಜೇನಿನ ಬಕೆಟ್‌ಗೆ ತುಂಡೊಂದನ್ನು ಅದ್ದಿ ಮುಂದೊಡ್ಡಿದ್ದ ನಮ್ಮ ಅಂಗೈಗಳಿಗೆಲ್ಲ ಜೇನಿನ ಸ್ಯಾಂಪಲ್ ನೀಡಿದರು ಜೇನುಗಳ್ಳರು. ಹೆಜ್ಜೇನನ್ನು ಕಂಡೇ ಇರದಿದ್ದವನಿಗೆ ಜೇನ ಸಮಾರಾಧನೆಯಾದಂತೆನಿಸಿತು.

ಮೇಲೆ ಹೋಗಿ ಊಟ, ದೇವರ ದರ್ಶನ ಮಾಡಿಕೊಂಡು ಬೆಟ್ಟವಿಳಿದಾಗ ಸಂಜೆಯಾಗಿತ್ತು.

ಬರುವಾಗ ದಾರಿ ಮಧ್ಯೆ ಹೆಂಗಸರು ಕಳವಳದಿಂದ ಗುಸುಗುಸು ಎಂದು ಏನನ್ನೋ ಗುಟ್ಟು ಮಾತಾಡಿಕೊಳ್ಳುತ್ತಿದ್ದರು. ಆ ಪಿಸುಮಾತುಗಳಿಂದ, ನಮ್ಮೊಂದಿಗೆ ಬಂದಿದ್ದ ನೆರೆಮನೆಯ ತಿಮ್ಮಕ್ಕ ಮುಟ್ಟಾಗಿದ್ದಾಳೆಂದು ಅರ್ಥಮಾಡಿಕೊಂಡೆ.

ಬೆಟ್ಟದ ಕೆಳಗೆ ಜೇನುಗಳ್ಳರು ಕತ್ತೆಗಳ ಮೇಲೆ ಜೇನನ್ನು ಹೇರಿಕೊಂಡು ನಿಂತಿದ್ದರು. ಮತ್ತೊಂದೆಡೆಗೆ ಜೇನು ಬಿಡಿಸಲು ಹೋಗಿದ್ದ ಅವರು ಇನ್ನೊಂದು ತಂಡದ ಬರುವಿಕೆಗಾಗಿ ಕಾದು ನಿಂತಿದ್ದರು.

ಹೆಂಗಸರು ಬರುವಾಗ ತಂದಿದ್ದ ಹಣ್ಣು, ಕಾಯಿ, ಮಾಲ್ದಿ ಇತರೆ ತಿನಿಸುಗಳನ್ನೆಲ್ಲ ಆ ಜೇನುಗಳ್ಳರ ಬುಟ್ಟಿಗೆ ಸುರಿದುಬಿಟ್ಟರು !

ಅಲ್ಲಿದ್ದ ಕೆಲವರು "ಅದ್ಯಾಕೆ ಹಾಗೆ ಎಲ್ಲಾ ಪ್ರಸಾದವನ್ನು ಜೇನುಗಳ್ಳರಿಗೆ ಸುರೀತಿದೀರಿ?" ಎಂದು ಹೆಂಗಸರನ್ನು ಪ್ರಶ್ನಿಸಿದರು. ಹೆಂಗಸರು ಉತ್ತರ ಕೊಡದೆ ಮುಸಿಮುಸಿ ನಗತೊಡಗಿದರು. ಆದರೆ ಗೂರಪ್ಪ "ಹುಚ್ಚು ಮುಂಡೇವಕ್ಕೆ ಬುದ್ಧಿಯಿಲ್ಲ. ಈ ಹಿಂದೆ ಕುರುಬರ ಹೆಂಗ್ಸು ಮುಟ್ಟಾದಾಗ್ಲೂ ಇವರಂಥ ಜೇನುಗಳ್ಳರೇ ಅವಳನ್ನ ಬದುಕಿಸಿದ್ರು, ಹಂಗೇನೆ ಈಗಲೂವೆ ಮುಟ್ಟಾದ ತಿಮ್ಮಕ್ಕ ಯಾವ ಅಪಾಯವೂ ಇಲ್ದೆ ಬೆಟ್ಟದ ಕೆಳಗೆ ಇಳಿಯಾಕ್ಕೆ ಈ ಜೇನುಗಳ್ಳರೇ ಕಾರಣ ಅಂತ ತಿಳಕೊಂಡವೆ. ಇವ್ರು ಹುಳುಗಳ್ನ ಮೇಲಕ್ಕೆ ಹಾರ್ಸಿದ್ದು ತಿಮ್ಮಕ್ಕನ ಕಾಪಾಡ್ಲಿಕ್ಕಲ್ಲ, ಜೇನು ಕಳವು ಮಾಡೋಕೆ ಅಂತ ಇವಕ್ಕೆಲ್ಲಿ ಗೊತ್ತು?" ಎಂದು ತನ್ನ ತರ್ಕ ವಿಶ್ಲೇಷಣೆಯನ್ನು ಮಂಡಿಸತೊಡಗಿದ.

10

ಗೂಢಚಾರಿ ದೆವ್ವದ ದಿಗಿಲಿನಲ್ಲಿ

ತೋಟ ಕಾಯಲು ಹೋಗುವ ಹುಡುಗರೆಲ್ಲ ಆಗಾಗ ಒಂದೆಡೆ ಜಮಾಯಿಸುತ್ತಿದ್ದೆವು. ಊರು ಪಕ್ಕದ ಊರುಗಳ ಸುದ್ದಿಗಳೆಲ್ಲ ಕಥೆ, ಕಟ್ಟುಕಥೆಗಳ ರೂಪ ತಾಳುತ್ತಿದ್ದವು ; ರೆಕ್ಕೆಪುಕ್ಕ ಪಡೆದುಕೊಳ್ಳುತ್ತಿದ್ದವು. ದೆವ್ವದ ವಿಷಯ ಬಂದಾಗ ನನ್ನ ಮೈ ನವಿರೇಳುತ್ತಿತ್ತು. ಉಸಿರು ಬಿಗಿ ಹಿಡಿದು ಕಥೆಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಅಲ್ಲಿ ಸೇರಿದ್ದ ಹುಡುಗರಲ್ಲಿ ಕೆಲವು ದೊಡ್ಡ ಹುಡುಗರೂ ಇರುತ್ತಿದ್ದರು. ನಮ್ಮನ್ನೆಲ್ಲ ಭಯಬೀಳಿಸುವ ಉದ್ದೇಶದಿಂದ ಅಥವಾ ತಮ್ಮ ಸಾಮರ್ಥ್ಯದ ಬಗೆಗೆ ವಿಶೇಷ ಗೌರವವನ್ನು ಮೂಡಿಸುವುದಕ್ಕಾಗಿಯೇ ಚಿತ್ರ ವಿಚಿತ್ರ ದೆವ್ವಗಳನ್ನು ಸ್ವತಃ ನೋಡಿರುವುದಾಗಿ ಹೇಳುತ್ತಿದ್ದರು. ನನಗೆ ಕಾಣದ ದೆವ್ವಗಳು ಇವನಿಗೆ ಕಾಣುತ್ತವಲ್ಲಾ, ಇವನಲ್ಲಿ ಏನೋ ವಿಶೇಷತೆ ಇರಬಹುದು ಎಂದು ಇಂಥ ಕಥೆ ಹೇಳುವವನನ್ನೇ ದಿಟ್ಟಿಸಿ ನೋಡುತ್ತಿದ್ದೆ. ಒಬ್ಬೊಬ್ಬರು ಹುಟ್ಟಿದ ಗ್ರಹಚಾರ, ನಕ್ಷತ್ರಗಳನ್ನಾಧರಿಸಿ ದೆವ್ವಗಳು ಗೋಚರವಾಗುತ್ತವೆಂದೂ ಹೇಳುತ್ತಿದ್ದರು. ನಾನು ಹುಟ್ಟಿದ ನಕ್ಷತ್ರ ದೆವ್ವ ಕಾಣುವಂಥದ್ದಲ್ಲವೇನೋ ಎಂದುಕೊಳ್ಳುತ್ತಿದ್ದೆ. ಒಂದೊಂದು ಬಾರಿ ದೆವ್ವಗಳು ಮನುಷ್ಯನ ರೂಪ ತಾಳಿ

ಎದುರು ಬಂದುಬಿಡುತ್ತವೆ. ಅವುಗಳ ಪಾದಗಳನ್ನು ನೋಡಿ ಅವು ದೆವ್ವ ಹೌದೊ ಅಲ್ಲೊ ಎಂದು ನಿರ್ಧರಿಸಿಕೊಳ್ಳಬೇಕು ! ದೆವ್ವಕ್ಕೆ ಪಾದಗಳು ನೇರವಾಗಿರದೆ ಹಿಮ್ಮಡಿಕೆಗೊಂಡಿರುತ್ತವೆ ಎಂದು ಹೇಳುತ್ತಿದ್ದರು.

ನಾನು ತೋಟದಿಂದ ಒಬ್ಬನೇ ಇಕ್ಕಟ್ಟಾದ ದಾರಿಯಲ್ಲಿ ಮನೆಗೆ ಹೋಗುವಾಗ ಎದುರಿಗೆ ಅಪರಿಚಿತ ವ್ಯಕ್ತಿ ಬಂದನೆಂದರೆ ಅವನ ಪಾದಗಳನ್ನು ಗಮನಿಸುತ್ತಿದ್ದೆ. ದೆವ್ವ ಕಂಡುಹಿಡಿಯುವ ಈ ಟೆಕ್ನಿಕ್ ಒಮ್ಮೆಯೂ ನನಗೆ ಉಪಯೋಗಕ್ಕೆ ಬರಲಿಲ್ಲ. "ಇದೆಲ್ಲ ಸುಳ್ಳೇ ಇರಬಹುದು (ಸುಮ್ನೆ ಹೊಡೀತವ್ರೆ ಕಳ್ಳನನ್ನ ಮಕ್ಳು" ಎಂದುಕೊಳ್ಳುತ್ತಿರುವಷ್ಟರಲ್ಲೇ ದೆವ್ವದ ಭಯ ಧುತ್ತೆಂದು ಎದುರಾಗಿಬಿಡುತ್ತಿತ್ತು. ಇದ್ದರೂ ಇದ್ದೀತು. ಆ ದೆವ್ವಕ್ಕೇನಾದರೂ ನನ್ನ ಆ ಭಾವನೆಯಿಂದ ಸಿಟ್ಟು ಬಂದುಬಿಟ್ಟರೆ ಹೇಗೆ ಎನ್ನುವ ಭಯವೂ ಧುಮ್ಮಿಕ್ಕಿ ಬರುತ್ತಿತ್ತು. ದೆವ್ವದ ಕಥೆ ಹೇಳುವ ಹುಡುಗನಲ್ಲಿ ಏನೋ ಒಂದು ರೀತಿಯ ಹೀರೋತನ ಇದೆ ಎನ್ನಿಸುತ್ತಿತ್ತು. ಆದರೆ, ದೆವ್ವ ಕಾಣಿಸುವ ಹುಡುಗರೆಲ್ಲ ಸ್ಕೂಲಲ್ಲಿ ದಡ್ಡರಾಗಿದ್ದಾರಲ್ಲಾ ಎಂತಲೂ ಎನ್ನಿಸುತ್ತಿತ್ತು. ದೆವ್ವಗಳು ಕಾಣಿಸೋದು ದಡ್ಡರಿಗೇ ಇರಬೇಕೇನೋ ಎಂದು ಸಮಾಧಾನ ಮಾಡಿಕೊಳ್ಳುತ್ತಿದ್ದೆ. 'ನಂಗೆ ಒಂದು ಬಾರಿಯಾದ್ರೂ ಆ ದೆವ್ವನ ತೋರ್ಸೋ, ಹೆಂಗಿರುತ್ತೆ ನೋಡ್ಬೇಕು ಅನಿಸಿದೆ' ಎಂದು ನಾನು ಒಮ್ಮೆ ದುಂಬಾಲು ಬಿದ್ದಾಗ ನನ್ನ ಓರಗೆಯ ಇತರ ಹುಡುಗರೂ ಅವನಿಗೆ "ತೋರ್ಸೋ ತೋರ್ಸೋ" ಎಂದು ಪೀಡಿಸತೊಡಗಿದರು.

ಒಂದು ದೊಡ್ಡ ಹುಡುಗ ಮೊಣಕಾಲು ಮಂಡಿಯೂರಿ ನೆಲಕ್ಕೆ ಹಣೆ ಹಚ್ಚಿ ಡುಕ್ಕುಬಿದ್ದ. ಇನ್ನೊಬ್ಬ ದೊಡ್ಡ ಹುಡುಗ ಅವನ ಬೆನ್ನಮೇಲೆ ಚಪ್ಪರಿಸುತ್ತಾ "ಹಾದಿ ದೆವ್ವ, ಬೀದಿ ದೆವ್ವ ಬಾಬಾ" ಎಂದು ಒಂದು ಗತಿಯಲ್ಲಿ ರಾಗವಾಗಿ ಹೇಳತೊಡಗಿದ. ಎರಡು ನಿಮಿಷಗಳೂ ಕಳೆದಿರಲಿಲ್ಲ ಡುಕ್ಕುಬಿದ್ದ ಹುಡುಗ ಧಿಕ್ಕನೆ ಎದ್ದು ನಿಂತು ತನ್ನ ಮೈಸೆಟೆಸಿ ನಮ್ಮನ್ನೆಲ್ಲ ಅಪರಿಚಿತರಂತೆ ನೋಡತೊಡಗಿದ. ಏದುಸಿರು ಬಿಡತೊಡಗಿದ. ಎದುರಿಗಿದ್ದ ಹುಡುಗನೊಬ್ಬನ ಕೂದಲು ಹಿಡಿದುಕೊಂಡು ಹಾ.... ಹಾ.... ಎಂದು ಕೂಗತೊಡಗಿದ. ಬೆನ್ನು ಚಪ್ಪರಿಸಿದ ಹುಡುಗ "ಇಗೋ ಇವ್ನ ಮೈಮ್ಯಾಕೆ ದೆವ್ವ ಬಂದದೆ. ಅದ್ಕೇ ಹಿಂಗಾಡ್ತಾ ಅವ್ನೆ" ಎಂದ. ನಾನಿಟ್ಟುಕೊಂಡಿದ್ದ ದೆವ್ವದ ಭಯಾನಕ ಕಲ್ಪನೆಯ ಮುಂದೆ ಈ ದೆವ್ವ ಪೀಚೆನಿಸಿತು. "ದೆವ್ವದ ಅವತಾರ ಇಷ್ಟೇ ಆಗಿದ್ರೆ ಅದಕ್ಕೆ ಯಾರು ಹೆದರಿಕೊತಾ ಇದ್ರು, ಇದು ಇವ್ನ ನಾಟಕ ಇರ್ಬೇಕು" ಎಂದುಕೊಂಡೆ. ದೆವ್ವ ಹಿಡಿದಂತೆ ಆಡುತ್ತಿದ್ದ ಹುಡುಗ ಓಡಿಹೋದ. ಅವನನ್ನು ಹಿಡಿಯಲು ಹಿಂದೆ ಓಡಿಹೋದರು....

ಅಷ್ಟೊತ್ತಿಗೆ ದೆವ್ವ ಹಿಡಿದವನ ತಂದೆ ಬೆತ್ತ ಹಿಡಿದುಕೊಂಡು ಬಂದು "ಅಲ್ಲಿ ಸಾಲೀಗೂ ಹೋಗಾಕಿಲ್ಲ. ಇಲ್ಲಿ ಗದ್ದೆ ಕೆಲ್ಸಾನೂ ಮಾಡಾಕಿಲ್ಲ. ಸೊಂಬೇರಿ ನನ್ನಮಕ್ಳು...." ಎಂದು ಚೀರಾಡತೊಡಗಿದ. ನಾವೆಲ್ಲ ಅಲ್ಲಿಂದ ಊರಿನತ್ತ ಓಡುತ್ತ ಹೊರಟೆವು. ಊರಿನ ಬಾವಿಕಟ್ಟೆ ಸಮೀಪಿಸುತ್ತಲೇ ಗೋವಿಂದಯ್ಯ ಎದುರಾದ. ಅವನನ್ನು ನೋಡಿ ವಿಧವಿಧವಾಗಿ ನಾವು ಅಣಕಿಸಲು ಆರಂಭಿಸಿದೆವು. ಇದರಿಂದ ಕೋಪಗೊಂಡ ಗೋವಿಂದಯ್ಯ ಅಟ್ಟಿಸಿಕೊಂಡು ಬಂದ.

ನಮ್ಮ ದೂರದ ಸಂಬಂಧಿಕ ನರಸಿಂಹಯ್ಯನ ಮಗ ಈ ಗೋವಿಂದಯ್ಯ. ಈತನ ತಮ್ಮ ರಾಮಯ್ಯ. ಗೋವಿಂದಯ್ಯ ಸೊಟ್ಟನಡಿಗೆಯ ಅಜಾನುಬಾಹು ಮನುಷ್ಯ. ಯಾರೊಂದಿಗೂ ಮಾತಾಡುತ್ತಿರಲಿಲ್ಲ. ದನ ಕಾಯುತ್ತಿದ್ದ. ದನ ಕಾಯುವುದು ಮುಗಿದರೆ ಬೇರೆಲ್ಲೂ ಹೋಗುತ್ತಿರಲಿಲ್ಲ. ಮನೆ ಮುಂದಿನ ಜಗಲಿಯ ಮೇಲೆ ಕೂತಿರುತ್ತಿದ್ದ.

ಹುಣ್ಣಿಮೆ ಬಂತೆಂದರೆ ಗೋವಿಂದಯ್ಯನಿಗೆ ತಲೆ ಕೆರಳುತ್ತದೆ, ಮೈಯೊಳಗೆ ದೆವ್ವ ಪ್ರವೇಶಿಸುತ್ತದೆ ಎಂದು ಸುದ್ದಿಯಾಗಿತ್ತು. ದೆವ್ವ ಹಿಡಿಯುವ ದಿನ ಬಂದರೆ ಅವರ ಮನೆಯ ಮುಂದೆ ಹೆಣ್ಣು ಮಕ್ಕಳು ಸುಳಿಯುತ್ತಿರಲಿಲ್ಲ. ನಾವು ಚಿಕ್ಕವರೆಲ್ಲ ದೂರದಲ್ಲೆಲ್ಲೊ ನಿಂತುಕೊಂಡು ಗೋವಿಂದಯ್ಯನ ಚಲನವಲನಗಳನ್ನು ಗಮನಿಸುತ್ತಿದ್ದೆವು. ಗೋವಿಂದಯ್ಯನ ಮೈಮೇಲೆ ದೆವ್ವ ಬಂದರೆ ಸೊಟ್ಟನಡಿಗೆಯಲ್ಲಿ ಅಸಹಜವೆನ್ನುವಂತೆ ಜೋರಾಗಿ ಓಡುತ್ತಿದ್ದ. ಹುಣ್ಣಿಮೆಯ ಹಿಂದಿನ ರಾತ್ರಿಯಿಂದಲೇ ಗೋವಿಂದಯ್ಯ ಜೋರಾಗಿ ಊಳಿಡಲು ಆರಂಭಿಸುತ್ತಿದ್ದ. ಗೋವಿಂದಯ್ಯ ಕೋಪೋದ್ರಿಕ್ತನಾದಾಗ ಎದುರಿಗೆ ಬಂದವರನ್ನೆಲ್ಲ ಹೊಡೆಯುತ್ತಿದ್ದ. ಆದರೆ ಅವನ ತಮ್ಮ ರಾಮಯ್ಯ ಬಂದು ಹಿಡಿದುಕೊಂಡರೆ ಸಮಾಧಾನಗೊಳ್ಳುತ್ತಿದ್ದ.

ಇವನ್ನೆಲ್ಲ ದೆವ್ವ ಎಂದು ನನ್ನ ಮನಸ್ಸು ಒಪ್ಪಿಕೊಳ್ಳುತ್ತಿರಲಿಲ್ಲ. ಏಕೆಂದರೆ, ನನ್ನ ದೊಡ್ಡ ಗೆಳೆಯರು ತಾವು ನೋಡಿದ ದೆವ್ವಗಳನ್ನೆಲ್ಲ ವರ್ಣಿಸಿ ಬಂದು ಭಯಾನಕ ಕಲ್ಪನೆಯನ್ನು ಬೇರೂರಿಸಿದ್ದರು ; ನನ್ನ ಕಲ್ಪನೆಯ ದೆವ್ವ ಮಾತ್ರ ನನಗೆ ನೋಡಲು ಸಿಗುತ್ತಿರಲಿಲ್ಲ.

ನನ್ನ ತಾಯಿ ನನಗೆ ಊಟಕ್ಕೆ ನೀಡುತ್ತಿದ್ದಳು. ಆಗ ನನ್ನ ತಾಯಿಯ ತವರುಮನೆಯಿಂದ ಬಂದ ಹೆಣ್ಣಾಳೊಬ್ಬಳು ನನ್ನ ತಾಯಿಗೆ ಗುಸುಗುಸು ಏನನ್ನೋ ಹೇಳಿಹೋದಳು. ನನ್ನ ಊಟ ಮುಗಿಯುತ್ತಿದ್ದಂತೆಯೇ "ಅಮ್ಮನ ಮನೆಗೆ ಹೋಗಿ ಬರ್ತೀನೆ" ಎಂದು ಅಮ್ಮ ಹೇಳಿದಾಗ "ನಾನೂ ಬರ್ತೀನೆ" ಎಂದು ಮಾರುತ್ತರಕ್ಕಾಗಿ ಕಾಯದೆ ಆಕೆಯ ಹಿಂದೆ ನಡೆದೇಬಿಟ್ಟೆ.

ಜಯ ಚಿಕ್ಕಮ್ಮಳ ಸುತ್ತ ಹೆಂಗಸರೆಲ್ಲ ನೆರೆದಿದ್ದರು. ಅವಳಿಗೆ ತಮಗೆ ತೋಚಿದ ಸಮಾಧಾನಗಳನ್ನೆಲ್ಲ ಅವಳಿಗೆ ಹೇಳುತ್ತಿದ್ದರು. ಜಯಮ್ಮಗೆ ನನ್ನ ತಾಯಿಯೊಂದಿಗೆ ವಿಶೇಷ ಸಲುಗೆ.

"ಅಕ್ಕಚ್ಚಮ್ಮ ಬಂದ್ಳು, ಸರೀರಿ" ಎಂದರು ಅಲ್ಲಿ ನೆರೆದಿದ್ದವರು.

ನನ್ನ ತಾಯಿ "ಯಾಕೇ ಜಯ ಹಿಂಗಾಗಿದೀಯ. ಹೆಂಗಿದ್ದೋಳು ಹೆಂಗಾಗೋಗಿದೀಯ?" ಎಂದು ಅವಳ ಬೆನ್ನಿನ ಮೇಲೆ ಕೈಯಿಂದ ನೇವರಿಸತೊಡಗಿದಳು. ನಮ್ಮ ಅಮ್ಮನನ್ನು ಗಟ್ಟಿಯಾಗಿ ಹಿಡಿದುಕೊಂಡು ಜಯ ಚಿಕ್ಕಮ್ಮ ರೋದಿಸತೊಡಗಿದಳು. ಜಯ ಚಿಕ್ಕಮ್ಮಳಿಗೆ ಮದುವೆಯಾಗಿ ಎರಡು ವರ್ಷಗಳಾಗಿದ್ದವು, ಮಕ್ಕಳಿರಲಿಲ್ಲ. ಆಕೆಯ ಗಂಡ ತುಮಕೂರಿನ ವಿದ್ಯುತ್ ಮಂಡಳಿ ಕಚೇರಿಯ ಲೆಕ್ಕ ವಿಭಾಗದ ಅಧಿಕಾರಿಯಾಗಿದ್ದರು. ಜಯಮ್ಮನ ತಂದೆ ರಾಮಯ್ಯನವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಜಯಮ್ಮನ ತಾಯಿ ಮೂರು ಹೆಣ್ಣುಮಕ್ಕಳನ್ನು ಹೆತ್ತು ತೀರಿಹೋಗಿದ್ದರು. ತಮ್ಮ ಮಕ್ಕಳನ್ನೆಲ್ಲ ನನ್ನ ತಾಯಿಯ ತವರುಮನೆಯಲ್ಲಿ ಬಿಟ್ಟಿದ್ದರು ರಾಮಯ್ಯ. ನನ್ನ ತಾಯಿಯ ತವರು ಮನೆಯಲ್ಲಿ ನಲವತ್ತು ನಲವತ್ತೈದು ಜನ ಇದ್ದರು. ಮೂರುನಾಲ್ಕು ತಲೆಮಾರುಗಳಿಂದ ಕುಟುಂಬ ವಿಭಜನೆಯೇ ಆಗಿಲ್ಲ ಎಂದು ತನ್ನ ತವರಿನ ಬಗೆಗೆ ಹೆಗ್ಗಳಿಕೆಯಿಂದ ನನ್ನ ತಾಯಿ ಹೇಳಿಕೊಳ್ಳುತ್ತಿದ್ದಳು. ತಾಯಿ ಇಲ್ಲದ ಮಕ್ಕಳು ಎಂದು ಎಲ್ಲರೂ ಜಯಮ್ಮ ಮತ್ತು ಆಕೆಯ ಸಹೋದರಿಯರಿಗೆ ಅನುಕಂಪ ತೋರಿಸುತ್ತಿದ್ದರು. ಜಯಮ್ಮ ಮತ್ತು ಆಕೆಯ ಸಹೋದರಿಯರ ಅನಾಥಪ್ರಜ್ಞೆಯನ್ನು ಅಲ್ಪಸ್ವಲ್ಪ ತಗ್ಗಿಸುವ ಪ್ರಯತ್ನವನ್ನು ನನ್ನ ತಾಯಿ ಮಾಡುತ್ತಿದ್ದಳು. ಹೀಗಾಗಿ ಹೆಚ್ಚಿನ ಸಲುಗೆ ಅವಳೊಂದಿಗೆ.

ಗಂಡನ ಮನೆಗೆ ಹೋದ ಜಯಮ್ಮ ಇದ್ದಕ್ಕಿದ್ದಂತೆ ಒಬ್ಬಳೇ ಕೂತು ಮುಗುಳುನಗಲು ಶುರುಮಾಡಿದಳಂತೆ. ಬರಬರುತ್ತ ತನ್ನಷ್ಟಕ್ಕೇ ಮಾತಾಡಿಕೊಳ್ಳಲಾರಂಭಿಸಿದಳಂತೆ. ಗಂಡ ಆಫೀಸ್‌ಗೆ ಹೋದಾಗ ಇದು ಇನ್ನಷ್ಟು ಜಾಸ್ತಿ ಆಗುತ್ತಿತ್ತಂತೆ. ಹೀಗಾಗಿ ಜಯಮ್ಮನ ಗಂಡ ಆಕೆಯನ್ನು ತವರು ಮನೆಯಲ್ಲಿ ಬಿಟ್ಟುಹೋಗಿದ್ದರು.

ಜಯಮ್ಮನನ್ನು ಸಂತೈಸುತ್ತಿದ್ದ ನನ್ನ ತಾಯಿ ನನಗೆ ಹೊರಗೆ ಹೋಗಿ ಆಡಿಕೊಂಡಿರಲು ಹೇಳಿದಳು. ಕೋಣೆಯಿಂದ ಹೊರಬಂದಾಗ ಮೊಗಸಾಲೆಯಲ್ಲಿ ಸೇರಿದ ಹೆಣ್ಣುಮಕ್ಕಳಲ್ಲಿ ಒಬ್ಬಳು "ಇದೆಲ್ಲ ಗಾಳೀಶಕ. ಕಾರೇಪುರದಿಂದ ಪುಟ್ಟೇಗೌಡ್ರು ಬಂದು ಮಂತ್ರ ಹಾಕಿದ್ರೆ ಎಲ್ಲ ಸರಿಹೋತದೆ. ಇದೆಲ್ಲ ಔಸ್ದಿಯಿಂದ ವಾಸಿಯಾಗೊ

ರೋಗವಲ್ಲ" ಎಂದು ಹೇಳುತ್ತಿದ್ದಳು. ಇದ್ದಕ್ಕಿದ್ದಂತೆ ನನ್ನ ಕಿವಿಗಳು ನಿಮಿರಿಕೊಂಡವು. ಜಯಮ್ಮಂಗೂ ದೆವ್ವ ಹಿಡಿದುಕೊಂಡಿದೆಯಾ ಎಂದು ಆಶ್ಚರ್ಯಗೊಂಡೆ.

ಅಷ್ಟರಲ್ಲಿ "ಪುಟ್ಟೇಗೌಡ್ರು ಬಂದ್ರು" ಎನ್ನತೊಡಗಿದರು ಅಲ್ಲಿದ್ದವರು.

ಜಯಮ್ಮನನ್ನು ಪುಟ್ಟೇಗೌಡರ ಎದುರು ತಂದು ಕೂರಿಸಿದರು. ಪುಟ್ಟೇಗೌಡರು ನನ್ನ ತಾಯಿ ತವರಿಗೆ ಸಂಬಂಧಿಕರೇ ಆಗಬೇಕು. ಜಯಮ್ಮಳನ್ನೇ ಪುಟ್ಟೇಗೌಡರು ದಿಟ್ಟಿಸಿ ನೋಡುತ್ತ ಏನೇನೋ ಮಂತ್ರ ವಟಗುಟ್ಟತೊಡಗಿದರು. ನನ್ನ ತಾಯಿ ಜಯಮ್ಮನ ಪಕ್ಕಕ್ಕೇ ಕೂತಿದ್ದರಿಂದ ನನಗೂ ಅಲ್ಲಿ ಜಾಗ ಸಿಗಲು ಕಷ್ಟವಾಗಿರಲಿಲ್ಲ.

ಅದೇನೊ ಮಂಡಲ ಬರೆದ ಪುಟ್ಟೇಗೌಡರು ಬೇವಿನ ಸೊಪ್ಪನ್ನು ಜಯಮ್ಮನ ಮುಖದ ಸುತ್ತ ಊದುಕಡ್ಡಿಯಂತೆ ತಿರುಗಿಸತೊಡಗಿದರು.

"ನೀ ಯಾರು? ಯಾಕೆ ಬಂದೆ?" ಎಂದು ಪ್ರಶ್ನಿಸಿದರು. ಜಯಮ್ಮ ಉತ್ತರಿಸದೆ ಗಂಭೀರವಾಗಿ ಸುಮ್ಮನೆ ಕೂತಿದ್ದಳು.

"ಹೂಂ ಹೇಳ್ತಿಯೊ, ಇಲ್ಲ ಮೆಣಸಿನಕಾಯಿ ಹೊಗೆ ಕುಡಿಸ್‌ಬೇಕೊ?" ಎಂದು ಪುಟ್ಟೇಗೌಡ ಗುಡುಗಿದರು.

ಆಗ ಜಯಮ್ಮ ಮುದುಕಿಯ ಸ್ವರದಲ್ಲಿ ಗಹಗಹಿಸಿ ನಗತೊಡಗಿದಳು.

"ಏನೋ ಪುಟ್ಟಾ ನನ್ ಕೈ ಅನ್ನ ತಿಂದು ನಂಗೇ ಮೆಣಸಿನಕಾಯಿ ಗಾಟು ಕುಡಿಸೋಕೆ ಬಂದಿದೀಯಾ? ಲೋ ನೀ ಯಾವಾಗ ಈ ಮಂತ್ರಾ ಕಲ್ತುಕೊಂಡ್ಯೋ? ಹೂಂ ಮೊದ್ಲು ಇಲ್ಲಿಂದ ಎದ್ದೋಗು ಇಲ್ದಿದ್ರೆ ನಿನ್ ಜಾತಕಾ ಜಾಲಾಡ್ತೇನೆ" ಎಂದು ಅಬ್ಬರಿಸಿದಳು. ಮಂತ್ರ ಪಠಿಸುತ್ತಿದ್ದ ಪುಟ್ಟೇಗೌಡರ ನಾಲಿಗೆ ತೊದಲತೊಡಗಿತು.

"ನಾನು ಚಿಕ್ಕೋನಿದ್ದಾಗ ಈ ಮನೇಲಿದ್ದ ನಾಗಮ್ಮಜ್ಜಿ ದನದ ಕೊಟ್ಟಿಗೇಲಿ ನೇಣು ಹಾಕ್ಕೊಂಡು ಸತ್ಲು. ಅವ್ಳು ಈ ಜಯಮ್ಮಗೆ ಹಿಡಕಂಡವ್ಳೆ. ಸ್ವಲ್ಪದರಲ್ಲಿ ಬಿಟ್ಹೋಗೊ ದೆವ್ವ ಇದಲ್ಲ. ಈ ದೆವ್ವಕ್ಕೆ ತಿರುಮಂತ್ರಯೆಲ್ಲ ಬರ್ತದೆ. ನಾ ಈಗ ಹೊಂಟೋಗಿ ಇನ್ನಷ್ಟು ಮಂತ್ರಿಸಿದ್ಧಿ, ಕಾವುಕಟ್ ಮಾಡ್‌ಕೊಂಬರ್ತೇನೆ" ಎಂದೆನ್ನುತ್ತ ಪುಟ್ಟೇಗೌಡರು ಎದ್ದೇಬಿಟ್ಟರು !

ಪುಟ್ಟೇಗೌಡ ಹೋಗುತ್ತಿರುವ ಕಡೆ ನೋಡುತ್ತ ಗಹಗಹಿಸಿ ನಗುತ್ತ ಜಯಮ್ಮ "ಲೋ ಪುಟ್ಟಾ ನಿನ್ ಪಂಚೇಲಿ ಉಚ್ಚೆ ಹೊಯ್ಕಂಡಿದೀಯಾ ನೋಡ್ಕೊ, ಮತ್ತೆ ವಾಪಸ್ ಬರ್ತಾನಂತೆ ವಾಪಸ್ ಹಂ" ಎಂದಳು.

ಅಲ್ಲಿ ನೆರೆದಿದ್ದವರು "ಕಳವನ್ನು ಪತ್ತೆ ಹಚ್ಚುವ ದೆವ್ವ ಜಯಮ್ಮಂಗೆ ಹಿಡಕಂಡಿದೆ" ಎನ್ನತೊಡಗಿದರು. ಮನೆಯವರಷ್ಟೇ ಅಲ್ಲದೆ ಅಕ್ಕಪಕ್ಕದವರೂ ತಾವು ಕಳೆದುಕೊಂಡಿದ್ದ ವಸ್ತುಗಳು, ದನಗಳು, ಕುರಿಕೋಳಿಗಳು ಎಲ್ಲಿ ಹೋಗಿವೆ ಎಂದು ಕೇಳಲು ಬರತೊಡಗಿದರು.

"ಜಯಮ್ಮ ಕರಾರುವಾಕ್ ಹೇಳ್ತವ್ಳೆ" ಎನ್ನುತ್ತ ವಾಪಸ್ ಹೋಗುತ್ತಿದ್ದರು ಅವರೆಲ್ಲ.

ನನಗೆ ನಡುಕ ಶುರುವಾಗಿ ಹೋಯ್ತು. ನನ್ನ ತಾಯಿಯ ಸೆರಗು ಬಿಟ್ಟು ಹೊರಕ್ಕೆ ಬಂದು ನಿಂತುಕೊಂಡೆ. ನಮ್ಮ ಮನೆಗೆ ಹೋಗಿಬಿಡೋಣ ಎನಿಸತೊಡಗಿತು. ಜಯಮ್ಮನ ದೃಷ್ಟಿ ನನ್ನ ಮೇಲೆ ಬಿದ್ದರೆ ನನ್ನ ಕಳ್ಳತನಗಳೆಲ್ಲ ಬಯಲಾಗಿ ಬಿಡುತ್ತವೆ ಎನ್ನುವ ದಿಗಿಲು ಎದೆಯಲ್ಲಿ ಭುಗಿಲೆದ್ದಿತು. ಜೇನುಬಿಡಿಸುವ ರಂಪೆ, ಉಳಿಮೊಳೆ, ನೀಳ ಬಿದಿರು ಬೆತ್ತ, ಹಗ್ಗ, ಗಿಲ್ಲಿದಾಂಡುಗಳನ್ನೆಲ್ಲ ನನ್ನ ತಾಯಿಯ ಮನೆಯಿಂದ ಆಗಾಗ್ಗೆ ಕದ್ದೊಯ್ದಿದ್ದೆ!

ನನ್ನ ತಾಯಿಗೂ ಹೇಳದೆ ನಮ್ಮ ಮನೆಯ ಕಡೆ ಓಡಿದೆ.

ಆ ನಂತರ ಒಂದೆರಡು ತಿಂಗಳುಗಳಲ್ಲಿ ಜಯಮ್ಮನ ಆರೋಗ್ಯ ಸುಧಾರಣೆ ಆಯಿತಲ್ಲದೆ ನಂತರ ಮಕ್ಕಳೂ ಆದವು. ಜಯಮ್ಮ ಇರುವವರೆಗೆ ಆ ಮನೆಯ ಕಡೆ ಮುಖ ಮಾಡಿಯೂ ಮಲಗಲಿಲ್ಲ ನಾನು.

11

ಸಂಪತಿಗೆ ಬೆಂಕಿಯಿಟ್ಟ ಮತಾಂಧರು

ಒಂದು ದಿನ ನಾರಾಯಣರಾವ್ ಮಾಸ್ತರರನ್ನು ಹೊರತುಪಡಿಸಿ ಉಳಿದ ಯಾವ ಶಿಕ್ಷಕರೂ ಸ್ಕೂಲ್‌ಗೆ ಬಂದಿರಲಿಲ್ಲ. ಒಬ್ಬರೇ ಶಿಕ್ಷಕ ಎಲ್ಲ ಕ್ಲಾಸುಗಳನ್ನೂ ನಿಭಾಯಿಸುವ ಪರಿಸ್ಥಿತಿ ಬಂದಾಗ ಸ್ಕೂಲಿನ ವೆರಾಂಡಾದಲ್ಲಿ ಎಲ್ಲ ಹುಡುಗರನ್ನೂ ಕೂರಿಸಿ ಕಂಬೈನ್ಡ್ ಕ್ಲಾಸು ತೆಗೆದುಕೊಳ್ಳುತ್ತಿದ್ದರು. ಆಗ ನಿರ್ದಿಷ್ಟ ಪಠ್ಯಗಳ ವಿಷಯ ಬಿಟ್ಟು ಮಾರಲ್ ಎಜುಕೇಷನ್ ಎಂದು ಎಲ್ಲ ಹುಡುಗರೂ ತನ್ಮಯಗೊಳ್ಳುವಂಥದ್ದನ್ನು ಏನಾದರೂ ಹೇಳುತ್ತಿದ್ದರು. ಅಂದು ನಾರಾಯಣರಾವ್ ಮಾಸ್ತರು ಮಾರಲ್ ಎಜುಕೇಷನ್ ಬಗ್ಗೆ ಕ್ಲಾಸ್ ತಗೋತಾರೆ ಎಂದು ತಿಳಿದದ್ದೇ ತಡ ನನಗೆ, ನನ್ನ ಬಹುತೇಕ ಸಹಪಾಠಿಗಳಿಗೆ ಖುಷಿಯಾಯಿತು. ವೆರಾಂಡಕ್ಕೆ ಓಡಿಹೋದೆ ; ಮುಂದಿನ ಸಾಲಿನಲ್ಲಿ ಕೂಡುವುದಕ್ಕಾಗಿ.

ನಾರಾಯಣರಾವ್ ಮಾಸ್ತರರು ಬಹಳ ಭಾವುಕರು ಮತ್ತು ಮೌಲ್ಯಗಳನ್ನಿರಿಸಿಕೊಂಡವರು. ನಮ್ಮನ್ನೆಲ್ಲ ಭಾವೋದ್ವೇಗಕ್ಕೊಳಪಡಿಸುವಂಥದ್ದನ್ನೇನಾದರೂ ಹೇಳಿಯೇ ತೀರುತ್ತಾರೆ ಎಂದುಕೊಂಡಿದ್ದು ಸುಳ್ಳಾಗಲಿಲ್ಲ.

ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳಿಗೆಲ್ಲಾ ತಿಳಿದಿದ್ದ ರಾಜಾರಾವ್

ಮೋಹನ್‌ರಾಯ್ ಅವರ ಸುಧಾರಣಾ ಹೋರಾಟಗಳ ಬಗ್ಗೆ ಪೀಠಿಕೆ ಹಾಕುತ್ತಾ ಸತೀಪದ್ಧತಿ ಎಷ್ಟು ಕ್ರೂರ ಹಾಗೂ ಬರ್ಬರವಾಗಿತ್ತು ಎನ್ನುವುದಕ್ಕೆ ಸತ್ಯ ಘಟನೆಯ ಕಥನವನ್ನು ನಮ್ಮ ಮುಂದೆ ಬಿಚ್ಚಿಟ್ಟರು.

ಸಂಪತೀ ಕೌರ್ ಎನ್ನುವ ಯುವತಿಯನ್ನು ಅವಳ ಗಂಡನ ಹೆಣದೊಂದಿಗೆ ಚಿತೆಗೇರಿಸಿ ಸುಡುವ ಕಥೆಯನ್ನು ಹೇಳಿದ ನಾರಾಯಣರಾವ್ ಮಾಸ್ತರರು ಕೊನೆಯಲ್ಲಿ ಗಳಗಳನೆ ಅಳತೊಡಗಿದರು. ನಮ್ಮ ನೆಚ್ಚಿನ ಮಾಸ್ತರರ ಕಂಗಳಲ್ಲಿ ನೀರು ಹರಿಯುತ್ತಿರುವುದನ್ನು ನೋಡಿ ನಾವು ವಿದ್ಯಾರ್ಥಿಗಳೆಲ್ಲ ಅತ್ತೆವು.

ಆಗ ಕೇಳಿದ ಕತೆ ನನ್ನ ಮೇಲೆ ಅದ್ಭುತ ಪರಿಣಾಮ ಬೀರಿತು. ಎಂಥೆಂಥ ಆಚರಣೆಗಳು ನಮ್ಮಲ್ಲಿ ಇವೆಯಲ್ಲ ಎಂದು ಗೊಡ್ಡು ಸಂಪ್ರದಾಯಗಳ ಬಗ್ಗೆ ಹೇಸಿಗೆ ಪಟ್ಟುಕೊಂಡೆ. ಹೆಣ್ಣು ಕುಲದ ಬಗ್ಗೆ ಅನುಕಂಪದ ನೆಲೆಯ ಕೋಮಲ ಭಾವನೆಗಳು ಹೆಚ್ಚು ವಿಸ್ತಾರಗೊಳ್ಳತೊಡಗಿದವು. ಸತೀ ಪದ್ಧತಿಯ ವಿರುದ್ಧ ಸೇಡು ಎನ್ನುವಂತೆ 'ಸತಿಯೊಡನೆ ಸಹಗಮನ' ಪಾಠವೂ ನನ್ನ ಮೇಲೆ ಪ್ರಭಾವ ಬೀರಿತು. ತಾನಿಲ್ಲದಾಗ ಮನೆಯವರೆಲ್ಲ ಸೇರಿ ಬಸುರಿ ಹೆಂಡತಿಯನ್ನು 'ಕೆರೆಗೆ ಹಾರ' ಕೊಟ್ಟಿದ್ದು ತಿಳಿದು ಹೆಂಡತಿ ಹೋದಲ್ಲಿಗೆ ನಾನೂ ಹೋಗುವೆ ಎಂದು ಗಂಡ ಆತ್ಮಹತ್ಯೆ ಮಾಡಿಕೊಳ್ಳುವ ಪಾಠವೂ ಸಹ ಭಾವಸ್ಪರ್ಶಿ ಎನಿಸಿತು. ಸತಿಯೊಡನೆ ಸಹಗಮನ ಮಾಡಿದವ ನಮ್ಮ ರಾಜ್ಯದವ ಎಂದು ಅವನ ಬಗ್ಗೆ ಹೆಮ್ಮೆಯ ಭಾವನೆ ತುಂಬಿಬಂದಿತು; ಮನದ ಮಡದಿಗಾಗಿ ತಾನೇ ಮಡಿದ ಅವನಲ್ಲಿ ಹೀರೋತನವನ್ನು ಗುರುತಿಸಿದೆ.

ನಾನು ಕಾನೂನು ಪದವಿಗಾಗಿ ಅಭ್ಯಾಸ ಮಾಡುತ್ತಿರುವಾಗ ಸಂಪತೀ ಕೌರ್‌ಳ ಸತೀ ಕೇಸ್ ಹುಚ್ಚಾಗಿ ಹುಡುಕುವಷ್ಟು ಪರಿಣಾಮ ಬೀರಿತು.

ಇದು ನಾರಾಯಣರಾವ್ ಹೇಳಿದ ಈ ಕಥೆ ! Indian Law Reporter (1932) ನಲ್ಲಿ ಸಿಕ್ಕಾಗ ಪದೇಪದೇ ಓದಿದ್ದನ್ನು ನಿಮ್ಮ ಮುಂದಿಡುತ್ತಿರುವೆ......

ಸಂಪತೀ ಕೌರ್ ಘಟನೆ ನಡೆದದ್ದು ಬಿಹಾರ್ ರಾಜ್ಯದಲ್ಲಿ ; ಗಂಗಾನದಿಯ ದಡದಲ್ಲಿ ಹಳ್ಳಿಯೊಂದರಲ್ಲಿ 1917ರಲ್ಲಿ ಕೇಶವಪಾಂಡೆ ಎನ್ನುವಾತ ತನ್ನ ಮಗಳು ಸಂಪತೀ ಕೌರ್‌ಳನ್ನು ಸಿದ್ಧೇಶ್ವರ ಎನ್ನುವ ವರನಿಗೆ ಕೊಟ್ಟು ಮದುವೆ ಮಾಡಿದ.

ಮದುವೆ ಆದದ್ದಷ್ಟೇ ನಿಜ ಸಂಪತಿ ತನ್ನ ಗಂಡನ ಮನೆಗೆ ಹೋಗಲಿಲ್ಲ. ಸಿದ್ಧೇಶ್ವರನ ತಂದೆ ಒಪ್ಪಿಕೊಂಡಷ್ಟು ವರದಕ್ಷಿಣೆ ಕೊಡಲಿಲ್ಲವೆಂದು ಸೊಸೆಯನ್ನು ಮನೆಗೆ ಕರೆದೊಯ್ಯಲಿಲ್ಲ.

ಗಂಡನಿಂದ ಕೊರಳಿಗೆ ತಾಳಿ ಬಿಗಿಸಿಕೊಂಡ ಸಂಪತಿಗೆ ಮೊದಲ ರಾತ್ರಿಯ ಅನುಭವವೇ ಆಗಲಿಲ್ಲ.

ತಾಳಿ ಹೊತ್ತು ತವರು ಮನೆಯಲ್ಲಿ ಕೂತ ಮಗಳನ್ನು ನೋಡಿ ತಾಯಿ ಮೀರಾ ಬೇನ್ ಕೊರಗತೊಡಗಿದಳು. ತಂದೆ ಕೇಶವಪಾಂಡೆ ಮದುವೆ ಚಪ್ಪರದಲ್ಲಿ ಆದ ಅವಮಾನದಿಂದ ಕುದಿಯತೊಡಗಿದ. "ಕಾಸಿನಾಸೆಗೆ ನನ್ನ ಹಸುಳೆಯನ್ನು ತಿರಸ್ಕರಿಸಿದನಲ್ಲಾ" ಎಂದು ತನ್ನ ಬೀಗನ ಮೇಲೆ ಕೆಂಡಾಮಂಡಲಗೊಂಡ. "ಸಂಪತಿ ನನಗೆ ಮಗಳಲ್ಲ ಮಗ; ಮಗ ಮುರುಲಿಯ ಅಣ್ಣನಂತೆ ಇಲ್ಲೇ ಇದ್ದುಕೊಂಡಿರಲಿ" ಎಂದು ಪ್ರತಿಜ್ಞೆಯ ಧ್ವನಿಯಲ್ಲಿ ಘೋಷಿಸಿದ.

ಮೀರಾ ಬೇನ್ ತನ್ನ ಗಂಡನ ತಿಕ್ಕಲುತನದ ಕೋಪಾವೇಶದ ಮಾತುಗಳಿಂದ ಇನ್ನಷ್ಟು ಧೃತಿಗಟ್ಟಳು ; ಮಗಳ ಭವಿಷ್ಯಕ್ಕೆ ಕವಿದುಕೊಂಡ ಅಂಧಕಾರ ನೋಡಿ ಅಧೀರಳಾದ "ಬೆಳೆದ ಮಗಳಿಗೆ ಬರೀ ಅನ್ನ ನೀರು ಕೊಟ್ಟರೆ ಆಗುತ್ತೆಯೇನ್ರಿ? ಮೊದಲು ಜಮೀನು ಮಾರಿ ವರದಕ್ಷಿಣೆ ಬಿಸಾಕಿರಿ ಅವರ ಮುಖದ ಮೇಲೆ; ಮದುವೆಯಾದ ಮಗಳನ್ನು ತವರಿನಲ್ಲಿಟ್ಟುಕೊಳ್ಳುವುದೆಂದರೆ ಸೆರಗಿನಲ್ಲಿ ಕೆಂಡ ಕಟ್ಟಿಕೊಂಡು ತಿರುಗಿದಂತೆ" ಎಂದಳು.

"ಜಮೀನನ್ನು ಮಾರಿದರೆ ಇದ್ದೊಬ್ಬ ಮಗ ಮುರುಲಿಗೆ ಏನು ಬಿಟ್ಟು ಹೋಗಲಿ?" ಎಂದು ಕೇಶವಪಾಂಡೆ ಹೆಂಡತಿಗೆ ಗದರಿಕೆಯ ಧ್ವನಿಯಲ್ಲಿ ಪ್ರಶ್ನಿಸಿದಾಗ ಅಲ್ಲಿಯೇ ಇದ್ದ ಮುರುಲಿಗೆ ತನ್ನ ತಂದೆಯ ಮೇಲೆ ಪ್ರೇಮ, ಕಕ್ಕುಲತೆಗಳು ಉಕ್ಕಿ ಹರಿದವು ಮೊದಲ ಬಾರಿಗೆ ತನ್ನಕ್ಕ ತನ್ನ ಆಸ್ತಿಯನ್ನು ಕಬಳಿಸಿಕೊಂಡು ಹೋಗುವವಳಂತೆ ಗೋಚರಿಸಿದಳು.

ಸಂಪತಿಯ ತಾಯಿ ತನ್ನ ತವರಿಗೆ ಹೋಗಿ ತನ್ನಣ್ಣನ ಬಳಿ ದುಡ್ಡು ಕೇಳಿದಳು. ಈಗೆಲ್ಲಿದೆ ನನ್ನ ಜೇಬೆಲ್ಲ ಖಾಲಿ ಎಂದ ಅಣ್ಣ. ಹೋಗಲಿ ಒಂದು ಎಮ್ಮೆಯನ್ನಾದರೂ ಕೊಡು ಎಂದು ಪೀಡಿಸಿದಳು. ಎಮ್ಮೆಯ ಹಾಲಿಗೆ ಹಳ್ಳಿಯಲ್ಲಿ ಮಾರುಕಟ್ಟೆಯಿರಲಿಲ್ಲ. ಬೆಣ್ಣೆ, ತುಪ್ಪಗಳನ್ನು ಮಾಡಿ ಪೇಟೆಗೆ ಮಾರಲು ಕಳಿಸುತ್ತಿದ್ದಳು.

ಎಮ್ಮೆಯ ಕರು ಮಣಕವಾದರೂ ವರದಕ್ಷಿಣೆಯ ಹಣ ಸಂಗ್ರಹವಾಗಲಿಲ್ಲ ಮೀರಾಳಲ್ಲಿ.

"ವರದಕ್ಷಿಣೆ ಗಳಿಸಿಕೊಡುವ ಪಣ ತೊಟ್ಟಂತೆ ಹಾರಾಡುತ್ತಿದ್ದೀಯಾ, ಅದೆಷ್ಟು ಗಳಿಸ್ತೀಯೋ ಗಳಿಸು" ಎನ್ನುತ್ತಿದ್ದ ಕೇಶವಪಾಂಡೆ ಸ್ಪರ್ಧೆಯ ಧ್ವನಿಯಲ್ಲಿ.

ಗಂಡನ ಅಸಹಕಾರದೊಂದಿಗೆ ದುಡಿಯಲು ಹೆಣಗುತ್ತಿದ್ದ ಮೀರಾ ಐದು ಎಮ್ಮೆಗಳ ಒಡತಿಯಾಗುವ ಹೊತ್ತಿಗೆ ರೋಗಗ್ರಸ್ತಳಾಗಿಬಿಟ್ಟಳು. ತವರು ಮನೆಯಲ್ಲಿ ಸಂಪತಿ ಯೌವನದ ಜ್ವಾಲೆಯಲ್ಲಿ ಬೆಂದದ್ದು ಒಂದೆರಡು ವಸಂತಗಳಲ್ಲ ; ಹತ್ತು ವರ್ಷಗಳು ! ಇನ್ನೂ ಹೀಗೆ ಇರುತ್ತಿದ್ದಳೋ ಏನೋ ತಾಯಿ ಮೀರಾ ಸಾಯದಿದ್ದರೆ.

ಮೀರಾ ತಾನು ಕೂಡಿಟ್ಟಿದ್ದ ದುಡ್ಡನ್ನೆಲ್ಲ ಗಂಡನ ಕೈಯಲ್ಲಿಟ್ಟು "ಕಡಿಮೆ ಬಿದ್ದ ಹಣವನ್ನು ಎಲ್ಲಿಂದಲಾದರೂ ಇದಕ್ಕೆ ಹೊಂದಿಸಿ ಮೊದಲು ಮಗಳನ್ನು ಗಂಡನ ಮನೆಗೆ ಕಳಿಸಿ ಕೊಡಿ ; ನಿಮ್ಮ ಸ್ವಪ್ರತಿಷ್ಠೆಗೆ ಮಗಳ ಬಾಳನ್ನು ಬಲಿಕೊಡಬೇಡಿ" ಎನ್ನುತ್ತಲೇ ಕೊನೆಯುಸಿರೆಳೆದುಬಿಟ್ಟಾಗ ಕೇಶವಪಾಂಡೆ ಎದೆಬಡಿದುಕೊಂಡು ರೋದಿಸಿದ.

ಹೆಂಡತಿಯ ಅಂತ್ಯಕ್ರಿಯೆ, ಶಾಂತಿ ಸಮಾರಾಧನೆಗಳನ್ನು ಮುಗಿಸಿ ಮಗಳು ಮತ್ತು ವರದಕ್ಷಿಣೆಗಳೊಂದಿಗೆ ಬಂಡಿ ಏರಿ ಬೀಗರ ಊರಿನ ಕಡೆ ಹೊರಟ.

ಮದುವೆಯಾಗಿಯೂ ಹೆಂಡತಿಯಿಲ್ಲದ ಸಿದ್ದೇಶ್ವರ ವೇಶ್ಯೆಯರ ಮನೆಗೆ ಎಡತಾಕುವುದನ್ನು ಚಟವಾಗಿಸಿಕೊಂಡಿದ್ದ. 'ಹರೆಯದ ಹೋರಿ ಆಕಳ ಮಾರಿಗೆ ಹಾರಿತ್ತು' ಎನ್ನುವಂತೆ ಕಂಡಲ್ಲಿ ಹೋಗಿ ಕರುಕಾಗಿ ಹೋಗಿದ್ದ.

ಸಂಪತಿ ಮದುವೆಯ ಸಂದರ್ಭದಲ್ಲಿ ಸಿದ್ದೇಶ್ವರನ ಮುಖವನ್ನು ಕಳ್ಳಗಣ್ಣಿನಿಂದ ಅದೂ ಅಸ್ಪಷ್ಟವಾಗಿ ನೋಡಿದ್ದಳು. ಬಂಡಿಯಲ್ಲಿ ಬರುತ್ತಿರುವಾಗ ಗಂಡನ ಗುಂಡು ಗುಂಡು ಮುಖವನ್ನೇ ಮೆಲುಕು ಹಾಕಿದಳು ; ಏನೇನೋ ನೆನೆದು ಪುಳಕಗೊಂಡಳು.

ಮಾವನ ಮನೆಯ ಮುಂದೆ ಬಂಡಿ ನಿಂತಾಗ ಗಲ್ಲ ಗುಳಿಬಿದ್ದ, ಸೊಣಕಲು ದೇಹಿಯೊಬ್ಬ ಹೊರಬಂದು ಒಳಗೆ ಕರೆದೊಯ್ದು. ವರದಕ್ಷಿಣೆಯ ದುಡ್ಡು ಮನೆಗೆ ಬಂದುದರಿಂದ ಹೆಚ್ಚು ಖುಷಿಗೊಂಡಿದ್ದ ಬೀಗ. ಸಿಹಿಯೂಟದ ತಯಾರಿ ನಡೆಯಿತು. ಮಾವಿನ ತೋರಣ, ಹೂಮಾಲೆಗಳು ಬಂದವು.

ಈ ಎಲ್ಲಾ ಭರದ ಸಿದ್ಧತೆ ಮತ್ತು ಗಲಾಟೆಗಳ ನಡುವೆ ಸಂಪತಿಯ ಕಣ್ಣುಗಳು ಸಿದ್ದೇಶ್ವರನಿಗಾಗಿ ಹುಡುಕುತ್ತಿದ್ದವು. ರಾತ್ರಿ ಪ್ರಸ್ತದ ಕೋಣೆಗೆ ಹಾಲಿನ ಲೋಟ ಹಿಡಿದು ಕಾಲಿಟ್ಟ ಸಂಪತಿಯ ಹಣೆ ಬೆವರತೊಡಗಿತು. ತಾನು ಕಲ್ಪಿಸಿಕೊಂಡಿದ್ದ ಮುಖ ಅಲ್ಲಿರಲಿಲ್ಲ; ಬೆಳಗ್ಗೆ ತಮ್ಮನ್ನು ಸ್ವಾಗತಿಸಿ ಒಳಗೆ ಕರೆದೊಯ್ದು ಗುಳಿಗೆನ್ನೆಗಳ ಸೊಣಕಲು ದೇಹಿ ಅಲ್ಲಿದ್ದ. ಮದುವೆಯಲ್ಲಿ ಕಂಡ ಗಂಡನೇ ಈ ಅವತಾರಕ್ಕೆ ತಿರುಗಿದ್ದಾನೆಂದು ತಿಳಿದುಕೊಳ್ಳಲು ಸಂಪತಿಗೆ ತಡವಾಗಲಿಲ್ಲ.

ಅವಳ ಕೋಮಲ ಕೈಗಳನ್ನು ಹಿಡಿದುಕೊಳ್ಳುವಾಗ ಸಿದ್ಧೇಶ್ವರನ ತೊಡೆ ಸಂದಿಗಳು ಸಣ್ಣಗೆ ಅದುರುತ್ತಿದ್ದವು. ಮುಖವೆಲ್ಲ ಬೆವರು ಬಿಡುತ್ತಿತ್ತು. ಕೈಗಳು ನಡುಗುತ್ತಿದ್ದವು.

ತನ್ನಿಂದ ಏನೂ ಸಾಧ್ಯವಿಲ್ಲವೆಂದು ಹೇಳಿ ಅವಳ ಕೈ ಹಿಡಿದು ಗಳಗಳನೆ ಅಳತೊಡಗಿದ. ಇಪ್ಪತ್ತೆರಡರ ಕೆಂಡಸಂಪಿಗೆ ಸಂಪತಿಗೆ ಬರಸಿಡಿಲು ಬರೆಯೆಳೆದು ಹೋದಂತಾಯಿತು.

ತನ್ನ ತಾಯಿ ಮುಖ ತೇಲಿ ಬಂದಿತು. ಕೊನೆಯವರೆಗೂ ಅವಳು ತನ್ನ ಜೀವವನ್ನು ತೇಯ್ದು ಹೋದದ್ದು ನನ್ನನ್ನು ಇಲ್ಲಿಗೆ ಕಳಿಸಲೆಂದು ಅಲ್ಲವೆ? ಎನ್ನುವ ಪ್ರಶ್ನೆ ಮುಂದೆ ಬಂದು ನಿಂತಿತು.

ಹಂಗಿನ ತವರುಮನೆಗಿಂತ ಗಂಡನ ಮನೆಯೇ ಲೇಸೆಂದು ತಣ್ಣಗೆ, ನಿಶ್ಚಲವಾಗಿ ನಿಂತಳು. ಕೈಯೊಳಗಿನ ಹಾಲಿನ ಬಟ್ಟಲು ಜಾರಿಬಿದ್ದಾಗ ಭಾವಪರವಶತೆಯಿಂದ ಹೊರಬಂದಳು. ಚೆಲ್ಲಿದ ಹಾಲನ್ನು ಕಪ್ಪುಬೆಕ್ಕು ಬಂದು ನೆಕ್ಕುತ್ತಿತ್ತು.... ಮಗಳನ್ನು ಕಳಿಸಿ ವಾಪಸು ಹೋದ ಕೇಶವ ಪಾಂಡೆಗೆ ತನ್ನ ಮನೆ ಬಣಬಣ ಎನಿಸತೊಡಗಿತು. ಹೆಂಡತಿ ಮತ್ತು ಮಗಳು ಇಬ್ಬರೂ ಇರದಂಥ ಪರಿಸ್ಥಿತಿಗೆ ಎದೆಯೊಡೆದುಕೊಂಡ. ತಿಂಗಳು ಕಳೆಯುವುದರಲ್ಲಿಯೇ ತೀರಿಹೋದ. ಲಕಲಕ ಎನ್ನುವ ಹೆಂಡತಿಯನ್ನು ನೋಡಿದಂತೆಲ್ಲ ಜೀವಚ್ಛವದಂಥ ಸಿದ್ಧೇಶ್ವರ ಮಾನಸಿಕ ಆಘಾತಕ್ಕೊಳಗಾಗತೊಡಗಿದ. ತನಗೆ ತಿನ್ನಲಾಗದ ಹಣ್ಣನ್ನು ಇನ್ನೊಬ್ಬ ತಿಂದರೆ ಹೇಗೆ ಎನ್ನುವ ವ್ಯಾಕುಲಕ್ಕೀಡಾದ. ಇಂಥ ಊಹಾತ್ಮಕ ಉದ್ವೇಗಗಳಿಂದ ಇದ್ದ ಶಕ್ತಿಯೂ ಉಡುಗಿ ಹಾಸಿಗೆ ಹಿಡಿದ.

ತಾನು ಬಂದ ಒಂದು ವಾರದಲ್ಲೇ ಗಂಡ ಹಾಸಿಗೆ ಹಿಡಿದದ್ದನ್ನು ನೋಡಿ ತಾಯಿಯನ್ನು ನೆನೆದುಕೊಂಡು ಅತ್ತಳು ; ಶ್ರದ್ಧೆಯಿಂದ ಗಂಡನ ಆರೈಕೆಯನ್ನು ಮಾಡತೊಡಗಿದಳು.

ಮೂರು ತಿಂಗಳುಗಳೂ ಕಳೆದಿರಲಿಲ್ಲ. ಗಂಡನ ಕೈಯನ್ನು ಅಂಗೈಯಲ್ಲಿಟ್ಟುಕೊಂಡು ಅರೆನಿದ್ರೆಯಲ್ಲಿದ್ದಳು. ಇದ್ದಕ್ಕಿದ್ದಂತೆ ತನ್ನ ಕೈಯಲ್ಲಿ ತಣ್ಣನೆಯದೇನೋ ಪ್ರವೇಶಿಸಿದಂತಾಗಿ ಗಾಬರಿಯಿಂದ ಕಣ್ದೆರೆದಳು. ಸಿದ್ಧೇಶ್ವರನ ಕಣ್ಣುಗಳು ಬೆಳ್ಳಗಾಗಿದ್ದವು. ಸಾಯಲೂ ಶಕ್ತಿಯಿಲ್ಲದವನಂತಾಗಿದ್ದ ಅವನ ಎದೆಗೆ ಕಿವಿಯಿಟ್ಟಳು. ಮೂಗಿಗೆ ಬೆರಳಿಟ್ಟಳು. ಎಲ್ಲವೂ ಕ್ಷೀಣ ಕ್ಷೀಣ.

ಸಂಪತಿ ಚೀರಿಕೊಂಡಾಗ ಮನೆಯವರೆಲ್ಲ ಬಂದರು. ಸಂಪತಿಯ ಹಳ್ಳಿಗೆ ತಳವಾರನನ್ನು ಕಳಿಸಿದರು. ಬೆಳಗ್ಗೆ ಸೋದರ ಮುರಲಿ ಬಂದ. ಸಂಪತಿ

ಆತನನ್ನು ತೆಕ್ಕೆ ಹಿಡಿದುಕೊಂಡು ಅತ್ತಳು ; ಗಂಡನ ಸಾವು ಮತ್ತು ದೈವದ ದ್ರೋಹಗಳಿಗಾಗಿ.

ಸಂಜೆಯಾದರೂ ಹೆಣವನ್ನು ಸ್ಮಶಾನಕ್ಕೆ ಒಯ್ಯುವ ಸೂಚನೆಗಳು ಕಾಣಲಿಲ್ಲ. ರಾತ್ರಿಯಾಗತೊಡಗಿತು. ಮನೆಯ ಮೂಲೆಮೂಲೆಯಲ್ಲೆಲ್ಲ ಗುಸುಗುಸು ಮಾತುಗಳು. ಸಿದ್ಧೇಶ್ವರನ ತಾಯಿ, ತಂಗಿಯರು ಈ ದುಃಖದ ಸಮಯದಲ್ಲೂ ಕೈ, ಕತ್ತುಗಳನ್ನು ತಿರುಗಿಸಿ ಗುಪ್ತವಾಗಿ ಮಾತಾಡಿಕೊಳ್ಳುತ್ತಿರುವುದು ಸಂಪತಿಗೆ ಏಕೋ ಅಸಹಜವೆನಿಸತೊಡಗಿತು. ಒಂದು ರೀತಿಯ ನಡುಕ, ಅವ್ಯಕ್ತ ಭಯಗಳೂ ಶುರುವಾದವು. ಆಗ ತಮ್ಮನಿಗಾಗಿ ಕಣ್ಣುಗಳು ಅರಸಿದವು. ತನ್ನ ಮಾವನೊಂದಿಗೆ ಏನೋ ಮಾತಾಡುತ್ತ ನಿಂತಿದ್ದನ್ನು ನೋಡಿ ಧೈರ್ಯ ಹೊಂದಿದಳು.

ರಾತ್ರಿ ಹನ್ನೆರಡರ ಸಮಯ ಹೆಣವನ್ನು ಎತ್ತಿದರು. ಹೆಣದೊಂದಿಗೆ ಇಪ್ಪತ್ತು ಜನರಿದ್ದಿರಬಹುದು. ಗಂಗಾನದಿಯ ತೀರದಲ್ಲಿ ಅಂತ್ಯಕ್ರಿಯೆಗಾಗಿ ಕಟ್ಟಿಗೆಗಳನ್ನು ಪೇರಿಸಿಡಲಾಗಿತ್ತು. ಅಷ್ಟೊತ್ತಿಗೆ ಹೆಣ ಹೊತ್ತು ನಡೆದವರನ್ನು ಅನುಸರಿಸಿ ಒಬ್ಬ ಪೊಲೀಸ್ ಸೈಕಲ್ ಮೇಲೆ ಬಂದ. ಅಂತ್ಯಸಂಸ್ಕಾರಕ್ಕೆ ಬಂದ ಗುಂಪು ಪೊಲೀಸರನ್ನು ನೋಡಿ ಭಯಭೀತಗೊಂಡಿತು.

"ಈ ಅಪರಾತ್ರಿಯಲ್ಲಿ ಏಕೆ ಹೆಣ ಸುಡಲು ಬಂದಿದ್ದೀರಿ?" ಎಂದು ಪೊಲೀಸ್ ಪ್ರಶ್ನಿಸಿದ.

ಸಂಪತಿಯ ಮಾವ "ಮನೆಯಲ್ಲಿ ಅಳುವವರು ಹೆಚ್ಚಾಗುತ್ತಾರೆಂದು ಈ ಹೊತ್ತಿನಲ್ಲಿ ತಂದಿದ್ದೇವೆ. ನಾವು ಶವಸಂಸ್ಕಾರ ಮಾಡುವುದು ಬೆಳಗಿನ ಜಾವವೇ" ಎಂದ.

ಶವದ ಜೊತೆಗೆ ನಾಲ್ಕು ಜನರನ್ನು ಬಿಟ್ಟು ಎಲ್ಲರೂ ಹಳ್ಳಿಗೆ ವಾಪಸಾದರು. ಅವರೆಲ್ಲ ಹೋದದ್ದನ್ನು ನೋಡಿ ಬೀಡಿ ತರುವುದಾಗಿ ತಿಳಿಸಿ ಪೊಲೀಸ್ ಕಾಲು ಮೈಲಿ ದೂರದ ಇನ್ನೊಂದು ಹಳ್ಳಿಗೆ ಹೋಗಿ, ಅಲ್ಲಿದ್ದ ತನ್ನ ಪರಿಚಿತನನ್ನು ಪೊಲೀಸ್ ಠಾಣೆಗೆ ಓಡಿಸಿದ. ಅರ್ಧಘಂಟೆಯೊಳಗೆ ಮತ್ತೆ ಐದು ಜನ ಪೊಲೀಸರು ಹಾಜರಾದರು.

ಸ್ಮಶಾನದಿಂದ ಊರಿಗೆ ವಾಪಸಾಗಿದ್ದ ಗುಂಪು ಮನೆಯಲ್ಲಿ ಮಲಗಿದ್ದವರನ್ನೆಲ್ಲ ಎಬ್ಬಿಸಿತು. ವಿದ್ಯಾಸಾಗರ ಎನ್ನುವವನ ನೇತೃತ್ವದಲ್ಲಿ ಸಾವಿರಾರು ಜನರು ಸ್ಮಶಾನದತ್ತ "ಸತೀ ಮಾತಾಕೀ ಜೈ" ಎನ್ನುತ್ತ ರಭಸದಿಂದ ಹೊರಟರು.

ಆರು ಜನ ಪೊಲೀಸರು ನಿಸ್ಸಹಾಯಕರಾಗಿ ನಿಂತರು. ಹಳ್ಳಿಯ ಜನ ಪೊಲೀಸರಿಗೆ ಬೆದರಿಕೆ ಹಾಕಿದರಲ್ಲದೆ ಅವರು ಪುನಃ ಠಾಣೆಗೆ ಹೋಗಿ ಹೆಚ್ಚಿನ ಪೊಲೀಸರನ್ನು ಕರೆತರದಂತೆ ತಡೆದು ನಿಲ್ಲಿಸಿದರು. ಸಂಪತಿಗೆ 'ಸತೀ ಮಾತಾಕೀ ಜೈ' ಎನ್ನುವ ಘೋಷಣೆಯ ಅರ್ಥ ಸ್ಪಷ್ಟವಾಗಿ ಆಗತೊಡಗಿದಾಗ ಥರಗುಟ್ಟಿಬಿಟ್ಟಳು. ಅವಳ ಎಡ ಬಲ ಕೈಗಳನ್ನು ಹಿಡಿದು ಅತ್ತೆ, ನಾದಿನಿಯರು ಮತ್ತು ಅವರ ಸುತ್ತ ಮಹಿಳೆಯರು. ಇವರಿಗೆ ಸುತ್ತುಕೋಟೆಯಾಗಿ ವಿದ್ಯಾಸಾಗರನ ಪಡೆ !

ಸಂಪತಿಗೆ ಅಳಲೂ ಧ್ವನಿಯಿಲ್ಲದಂತಾಗಿ ಗಂಟಲು ಕುಸಿದುಹೋಯಿತು. ತನ್ನನ್ನು ಚಿತೆಗೇರಿಸಲು ಒಯ್ಯುತ್ತಿರುವಾಗ ತಮ್ಮನೆಲ್ಲಿ ಕಾಣೆಯಾಗಿದ್ದಾನೆ? ಅವನಿಗೆ ಇದೆಲ್ಲ ತಿಳಿದಿಲ್ಲ! ಕೂಗಿ ಕರೆಯಬೇಕು.

ಸಂಪತಿಯನ್ನು ನದಿಯಲ್ಲಿ ಮುಳುಗಿಸಿ ಒದ್ದೆ ಬಟ್ಟೆಯಲ್ಲಿ ಮಡಿಯಿಂದ ಕರೆತಂದು ಚಿತೆಯ ಮುಂದೆ ನಿಲ್ಲಿಸಿದರು. ಚಿತೆ ಹತ್ತಿ ಕೂತುಕೊ ಎಂದು ಬಾಯಲ್ಲಿ ಹೇಳುತ್ತ, ಜಡದೇಹಿಯಾಗಿ ನಿಂತಿದ್ದ ಅವಳ ಕಂಕುಳಗಳಲ್ಲಿ ಕೈ ಹಾಕಿ ಎತ್ತಬೇಕೆನ್ನುವಷ್ಟರಲ್ಲಿ ಮಲವಿಸರ್ಜನೆ ಮಾಡಿಕೊಂಡುಬಿಟ್ಟಳು !

ಮತ್ತೆ ಅವಳನ್ನು ಹೊಳೆಗೆ ಕರೆದೊಯ್ದು ಮಡಿ ಮಾಡಿಕೊಂಡು ಬಂದರು. ಚಳಿಗೆ ಸಂಪತಿಯ ಹಲ್ಲುಗಳು ಗಟಗರಿಸುತ್ತಿದ್ದವು. ತಮ್ಮನಿಗಾಗಿ ಕೂಗಲು ಧ್ವನಿ ಹೊರಡದಂತಾಗಿತ್ತು. ಮಾತಾಡಲು ಹಲ್ಲುಗಳು ಬಿಡುತ್ತಿರಲಿಲ್ಲ. ಅವಳನ್ನೆತ್ತಿ ಚಿತೆಯ ಮೇಲೆ ಕೂರಿಸಿದರು. ಅವಳ ಎಡ ತೊಡೆಯ ಮೇಲೆ ಶವದ ತಲೆಯನ್ನಿರಿಸಿದರು. ಅವಳ ತಲೆಯ ಮೇಲೆ ಸೀಮೆಎಣ್ಣೆಯನ್ನು ಸುರಿದರು.

ಇಷ್ಟಾದ ಮೇಲಾದರೂ ತನ್ನ ತಮ್ಮ ತನ್ನ ಹತ್ತಿರ ಬರಬೇಕಿತ್ತಲ್ಲ. ಇವರೆಲ್ಲ ಸೇರಿ ಅವನನ್ನು ಎಲ್ಲಿ ಕಟ್ಟಿ ಹಾಕಿದ್ದಾರೋ ಏನೋ ಎಂದುಕೊಂಡು ತಮ್ಮನಿಗೆ ಕೂಗಿಯೇ ಬಿಡುವೆ ಎಂದು ನಿರ್ಧರಿಸಿ ತನ್ನ ಶಕ್ತಿಯನ್ನೆಲ್ಲ ಸಂಚಯಿಸಿ ಕೊಟ್ಟ ಕೊನೆಯ ಬಾರಿ ಏನೊ ಎನ್ನುವಂತೆ "ಮುರಲಿ ಭಯ್ಯಾ ಕಂಹಾ ಹೈ ತು...." ಎಂದು ಕೂಗಿ ಗಂಡನ ತಲೆಯನ್ನು ಆಚೆ ತಳ್ಳಿ ಚಿತೆಯಿಂದ ಚಿಮ್ಮಿ ಏಳಲು ನೋಡಿದಳು. ಹಿಂದಿನಿಂದ ಯಾವುದೋ ವ್ಯಕ್ತಿ ತನ್ನ ಭುಜಗಳನ್ನು ಒತ್ತಿ ಹಿಡಿದು, ಅಲ್ಲೇ ಕುಕ್ಕರಿಸಲು ಶಕ್ತಿ ಹಾಕಿ ಪ್ರಯತ್ನಿಸುತ್ತಿತ್ತು. 'ಬಿಡೊ ನನ್ನ' ಎಂದು ತಿರುಗಿ ನೋಡಿದಳು ; ತನ್ನ ತಮ್ಮ ಮುರಲಿಯೇ ಅವನಾಗಿದ್ದ! ಭೂಮಿಯೇ ಬಾಯ್ದೆರೆದು ನಾಲಿಗೆ ಹಾಕಿ ನೆಕ್ಕಲು ಬಂದಂತೆ ಭಾಸವಾಗಿ ಸಂಪತಿ ಮುರಲಿಯ ಕೆನ್ನೆಗೆ ಬಾರಿಸಿದಳು. ಧಗ್ಗೆಂದಿತು ಬೆಂಕಿ. ಮುರಲಿ ಅವಳನ್ನು ಕೈ ಬಿಟ್ಟು ಹಿಂದಕ್ಕೆ ಹಾರಿಕೊಂಡ.

ಸಂಪತಿ ಕೆಳಗೆ ಹಾರಿದಳು. ಅವಳ ಸೀರೆಗೆಲ್ಲ ಉರಿ ಹೊತ್ತಿಕೊಂಡು ಇಡೀ ಅವಳ ದೇಹ ಕೊಳ್ಳಿದೆವ್ವದಂತೆ ಕಾಣತೊಡಗಿತು. ಉರಿಯುತ್ತಿದ್ದ ಅವಳನ್ನು ಹಿಡಿದು ತಮ್ಮ ಮೈ ಸುಟ್ಟುಕೊಳ್ಳಲು ಯಾರೂ ಮುಂದೆ ಬರಲಿಲ್ಲ.

ಓಡಿ ಹೋಗಿ ಅವಳು ನದಿಗೆ ಜಿಗಿದಳು. ಮಳೆಗಾಲದ ಹೊಳೆಗೆ ಸೆಳೆವಿತ್ತು. ಅವಳನ್ನು ಹಿಂಬಾಲಿಸಿ ಬಂದ ಪೊಲೀಸರು ದಡಕ್ಕೆ ಕಟ್ಟಿ ಹಾಕಿದ್ದ ಹುಟ್ಟು ಹರಿಗೋಲನ್ನು ಬಿಚ್ಚಿ ನೀರೊಳಗೆ ಬಿಟ್ಟರು. ಸಂಪತಿಯನ್ನು ಎತ್ತಿ ಹರಿಗೋಲಲ್ಲಿ ಹಾಕಿಕೊಂಡರು. ಆಚೆ ದಡಕ್ಕೆ ಹೋಗಬೇಕೆಂದರೂ ಹುಟ್ಟು ಹಾಕಿ ಅಭ್ಯಾಸವಿರದ ಪೊಲೀಸರಿಗೆ ಸೆಳವಿಗೆ ಅಡ್ಡಲಾಗಿ ಹೋಗಲು ಸಾಧ್ಯವಾಗಲಿಲ್ಲ. ಹರಿಗೋಲು ಹತ್ತಿದ ದಡದ ಗಂಟವೇ ಹುಟ್ಟು ಹಾಕತೊಡಗಿದರು.

ಅರ್ಧ ಮೈಲು ಸಾಗಿ ಬಂದ ಪೊಲೀಸರು ದಡಕ್ಕೆ ಬಂದರು. ಸಂಪತಿಯ ಚರ್ಮ ಮಾಂಸಗಳು ತಂದೂರಿಯಲ್ಲಿ ಬೇಯಿಸಿದಂತಾಗಿದ್ದವು. ಗಿಡದ ಟೊಂಗೆಗಳನ್ನು ಮುರಿದು ತಪ್ಪಲಿನ ಹಾಸಿಗೆ ಮಾಡಿ ಅದರ ಮೇಲೆ ಅವಳನ್ನು ಮಲಗಿಸಿದರು.

ದಪದಪ ಹೆಜ್ಜೆಗಳ ಸಪ್ಪಳ ಕೇಳಿದ ಪೊಲೀಸರು ದಿಗಿಲಿನಿಂದ ನೋಡಿದರು. ಶವಸಂಸ್ಕಾರಕ್ಕೆ ಬಂದಿದ್ದ ಸಾವಿರಾರು ಜನರ ದಂಡು ನೂರು ಹೆಜ್ಜೆಗಳಷ್ಟೂ ದೂರವಿರಲಿಲ್ಲ.

ಮೌನವಾಗಿ ಓಡಿ ಬಂದು ಸಂಪತಿಯ ಸುತ್ತ ನಿಂತು "ಸತೀ ಮಾತಾಕೀ ಜೈ" ಎಂದು ಕೂಗತೊಡಗಿತು.

ಸಂಪತಿ 'ಪಾನೀ ಪಾನೀ' ಎಂದು ಕ್ಷೀಣವಾಗಿ ಕೂಗುವುದು ಯಾರಿಗೂ ಕೇಳಿಸುತ್ತಿರಲಿಲ್ಲ. ಡಾಕ್ಟರನೊಂದಿಗೆ ಪೊಲೀಸಿನವನೊಬ್ಬ ಬಂದ.

"ಇವಳನ್ನು ಸುಟ್ಟಿದ್ದು ಅಂತಿಂಥ ಬೆಂಕಿಯಿಲ್ಲ : ಪತಿಯ ಚಿತೆಯ ಬೆಂಕಿ. ಆ ಬೆಂಕಿ ಬಿದ್ದ ಮೇಲೆ ಅವಳನ್ನು ಬದುಕಿಸಿದರೆ ಅದರಂಥ ಅನಿಷ್ಟ ಮತ್ತೊಂದಿಲ್ಲ. ನಾವೆಲ್ಲ ರೌರವ ನರಕಕ್ಕೆ ಹೋಗಬೇಕಾಗುತ್ತದೆ. ಮಳೆ ಮಾಯವಾಗಿ ಬರ ಬಾಯಿ ತೆರೆಯುತ್ತದೆ. ಅವಳಿಗೆ ಸಾವು ಸಮೀಪಿಸಿದಂತೆಲ್ಲ ಊರಿಗೆ ಸಮೃದ್ಧಿ ಉಕ್ಕಿ-ಉಕ್ಕಿ ಬರುತ್ತದೆ. ನಾಳೆ ಇಡೀ ಊರನ್ನು ರಕ್ಷಿಸುವವಳೇ ಈ ಸತೀ ಮಾತಾ...."ಎಂದು ಡಾಕ್ಟರ್‌ನನ್ನು ಸಂಪತಿಯ ಸಮೀಪಕ್ಕೂ ಸುಳಿಯಗೊಡಲಿಲ್ಲ.

ಬೆಳಗಿನ ಆರು ಗಂಟೆಯಾಗಿರಬಹುದು. ಸಂಪತಿಯ ದೇಹದ

ನೀರಿನಂಶವೆಲ್ಲ ಹೋಗಿತ್ತು. ಅವಳು ತಾಸುಗಳಗಟ್ಟಲೆ 'ಪಾನೀ ಪಾನೀ' ಎಂದು ಕೂಗುತ್ತಲೇ ಕೊನೆಯುಸಿರೆಳೆಯುವಾಗ ಸಹೋದರ ಮುರಲಿ ಅವಳ ಎದುರಿಗೇ ನಿಂತಿದ್ದ; ಒಂದು ಹನಿ ನೀರನ್ನೂ ಬಾಯಿಗೆ ಹಾಕಲಿಲ್ಲ; ಸತ್ತ ಮೇಲೆ ಅವಳ ಬಾಯಿಗೆ ಗಂಗಾಜಲ ಬಿಟ್ಟ!

ಬೆಳಗ್ಗೆ ನೂರಾರು ಪೊಲೀಸರೂ, ಹತ್ತಾರು ಪೊಲೀಸ್ ಅಧಿಕಾರಿಗಳೂ ಸ್ಥಳಕ್ಕೆ ಧಾವಿಸಿದರು. ಅಷ್ಟರಲ್ಲಿ ಅದೇ ಸ್ಥಳದಲ್ಲಿ ಸಂಪತಿಯ ದೇಹವನ್ನು ಹೂಳಿಬಿಟ್ಟಿದ್ದರು. ಅಲ್ಲಿಲ್ಲಿಂದ ಇಟ್ಟಿಗೆ, ಕಲ್ಲುಗಳನ್ನು ಜಮಾಯಿಸಿ ಒಂದು ಮಂಟಪವನ್ನೂ ನಿರ್ಮಿಸಿಬಿಟ್ಟರು. ಒಂದೆರಡು ಗಂಟೆಗಳಲ್ಲಿ ಆ ಮಂಟಪದ ಮೇಲೆ 'ಸತೀ ಮಾತಾ' ಎಂದು ಬರೆದರು.

ಪೊಲೀಸರು ಹದಿನಾರು ಜನರ ಮೇಲೆ ಕೊಲೆ ಮೊಕದ್ದಮೆ ಹೂಡಿದರು. ಅದರಲ್ಲಿ ಹತ್ತು ಜನರಿಗೆ ಕಠಿಣ ಜೈಲು ಶಿಕ್ಷೆ ಆಯಿತು.

ತೀರ್ಪು ಬರೆದ ನ್ಯಾಯಾಧೀಶ ಭಾವಪರವಶತೆಯಿಂದ: "ತಮ್ಮ ಇಹದ ಶಿಕ್ಷೆಯನ್ನು ಮೀರಿ ಅದರಾಚೆಗೂ ಉಳಿಯುವವರು ಈ ಸಾಧ್ವಿ ಸಂಪತಿಯ ಪುಷ್ಪಾಲಂಕೃತ ಬೃಂದಾವನಕ್ಕೆ ಕ್ಷಮಾಯಾತ್ರೆ ಕೈಗೊಳ್ಳುವುದು ಒಳಿತು. ಅಲ್ಲಿ ಅಡ್ಡಬಿದ್ದು ಶಾಶ್ವತ ಶಾಪದಿಂದ ತಮ್ಮ ಅಪರಾಧೀ ಆತ್ಮಗಳನ್ನು ಕ್ಷಮಿಸುವಂತೆ ತಮ್ಮ ಪರವಾಗಿ ಆ ದೇವರಲ್ಲಿ ವಿನಂತಿಸಿಕೊಳ್ಳುವಂತೆ ಸಂಪತಿಯ ಮೊರೆ ಹೋಗಲಿ......!"

12

ಅರಸಮ್ಮನ ಆತ್ಮಹತ್ಯೆ ; ಗುಡ್ಡಯ್ಯನ ಆಕ್ರಂದನ

ಗುಡ್ಡಯ್ಯ ನನ್ನ ಆತ್ಮೀಯ ಗೆಳೆಯರಲ್ಲಿ ಒಬ್ಬ. ಅವನೆಂದರೆ ನನಗೆ ಅದೇನೊ ಅವ್ಯಕ್ತ ಆಕರ್ಷಣೆ. 'ನಿನ್ನಲ್ಲಿ ಬಹಳ ಧೈರ್ಯ ಇದೆ ಕಣೋ' ಎನ್ನುತ್ತಿದ್ದ ಗುಡ್ಡಯ್ಯ ನನಗೆ. ಅಡಿಕೆ ತೋಟ ಕಾಯಲು ಹೋಗುವಾಗ ಒಮ್ಮೊಮ್ಮೆ ಗುಡ್ಡಯ್ಯನನ್ನು ಕರೆದೊಯ್ಯುತ್ತಿದ್ದೆ. ಅದಕ್ಕೆ ಅಡಿಕೆ ಮರ ಹತ್ತುವ ಸ್ಪರ್ಧೆ ನಮ್ಮಿಬ್ಬರಲ್ಲಿ ಏರ್ಪಡುತ್ತಿತ್ತು. ಇಬ್ಬರಲ್ಲಿ ಯಾರೂ ಸೋಲುತ್ತಿರಲಿಲ್ಲವಾದರೂ ಸ್ಪರ್ಧೆಯ ಕೊನೆಯಲ್ಲಿ ನಾನು ಆಯಾಸಗೊಂಡಿದ್ದರೆ ಅವನು ನಿರಾಯಾಸನಾಗಿರುತ್ತಿದ್ದ.

ಗುಡ್ಡಯ್ಯನದೇನೂ ಅಡಿಕೆ ತೋಟವಿರಲಿಲ್ಲ. ಆದರೂ ಅದೆಂಥ ಚಾಕಚಕ್ಯತೆ ಕಸುವುಗಳು ಅವನ ಮೈಯಲ್ಲಿ ತುಂಬಿಕೊಂಡಿವೆಯಲ್ಲ ಎಂದು ಆಶ್ಚರ್ಯವೆನಿಸುತ್ತಿತ್ತು. ಗುಡ್ಡಯ್ಯ ಮರ ಹತ್ತಿದರೆ ಸಾಕು ಕೋತಿಯಂತಾಗಿಬಿಡುತ್ತಿದ್ದ. ಅವನ ದೇಹ ಕಲ್ಲಿನಲ್ಲಿ ಕಟೆದಂತಿತ್ತು. ಹುರಿ ಮಾಡಿದ ಸ್ನಾಯುಗಳು, ಉಬ್ಬಿದ ಖಂಡಗಳು ಅವನ ಕಪ್ಪುದೇಹಕ್ಕೆ ವಿಲಕ್ಷಣ ಆಕರ್ಷಣೆಯನ್ನು ತಂದುಕೊಟ್ಟಿವೆ ಎನಿಸುತ್ತಿತ್ತು. ಅಂಥ ದಡ್ಡನೇನೂ ಆಗಿರದಿದ್ದ ಗುಡ್ಡಯ್ಯನಿಗೆ ಓದುವುದಕ್ಕೆ ಅವರಪ್ಪ ಮಾರಪ್ಪನ ಸಹಕಾರ

ಇರಲಿಲ್ಲ. ಅವನ ತಾಯಿ ಅರಸಮ್ಮ ಮಾತ್ರ ಅವನನ್ನು ಓದಿಸಿ ದೊಡ್ಡ ಸಾಹೇಬನನ್ನು ಮಾಡಬೇಕೆಂಬ ಮಾತುಗಳನ್ನು ಅವರ ಮನೆಗೆ ನಾನು ಹೋದಾಗಲೆಲ್ಲ ಹೇಳುತ್ತಿದ್ದಳು.

ಒಮ್ಮೆ "ನಮ್ ಜನಕ್ಕೆ ಓದು ಹತ್ತಕ್ಕಿಲ್ಲ ಕಣೋ. ಗದ್ದೆ ಕೆಲಸಕ್ಕೆ ಹೋಗಾದು ರೂಢಿಸ್ಕೊ ಇಲ್ದಿದ್ರೆ ಹೊಟ್ಟೆಗೆ ತಿನ್ನೋಕೆ ಸಿಗದಂತೆ ಆಗೋಗ್ತಿಯಾ" ಎಂದು ಮಾರಪ್ಪ ಗುಡ್ಡಯ್ಯನಿಗೆ ಬೈದ. ತಾಯಿ ಅರಸಮ್ಮ "ಹೂಂ ನೀನು ಬಲೆ ಗಂಡ್ಸು ನೋಡು, ತಂದು ಗುಡ್ಡೆ ಹಾಕ್ತಿದ್ದೀಯಾ ತಿನ್ನೋಕೆ ನಮ್ಗೆಲ್ಲ, ಮೊದ್ಲು ದುಡುದು ದುಡ್ಡನ್ನು ಆ ತಾಟಗಿತ್ತಿ ಹನುಮಿಗೆ ಕೊಡೋದ್ನ ನಿಲ್ಸು. ಮಗ ಕೈಗೆ ಬಂದವ್ನೆ ಅಂದ್ಕೊಂಡು ಅವ್ನನ್ನ ದುಡಿಯಾಕೆ ಹಚ್ಚಿ ಕುಡಿಯೋಕೆ ಹೋಗಾ ಗಂಡ್ಸು ನೀನು. ಅದ್ಕೇ ಈ ಬುದ್ಧಿವಾದನ್ನೆಲ್ಲ ಹೇಳಾದು. ಗುಡ್ಡಂಗೆ ತಿಳಿಯಾಕಿಲ್ಲ ಅಂದ್ರೆ ನಂಗೆ ತಿಳಿಯಾಕಿಲ್ವ ನಿನ್ ನಾಟಕ.... ಇರಾ ಒಬ್ಬ ಮಗನ್ನ ಓದಿಸಿ ದೊಡ್ಡ ಮನುಷ್ಯನ ಮಾಡ ಇಚಾರ ಮಡಿಕ್ಕೊ ತಲಿಯಾಕೆ. ನಾನು ಹೆಂಗ್ಸಾಗಿ ಮನೆ ಸಾಗಿಸಿ ಮಗನ್ನ ಓದಿಸ್ತಿವ್ನಿ ತಿಳೀತ್ತೈತಾ ನಿಂಗೆ?" ಎಂದು ಪಟಪಟಾಂತ ಹರಳುರುದಂಗೆ ಒದರಿದಳು.

ನಾನು ಇರುವಾಗ ಆತನ ಹೆಂಡತಿ ಇಂಥ ಅವಮಾನಕರ ಮಾತಾಡಿದ್ದರಿಂದ ಕೋಪಗೊಂಡ ಮಾರಪ್ಪ "ಲೇ ನಾ ಗಂಡ್ಸು, ಏನ್ ಬೇಕಾದ್ರೂ ಮಾಡ್ತೀನಿ. ನಿನ್ನನ್ನು ಸುಮ್ನೆ ತಂದಿಲ್ಲ; ಐವತ್ತು ರೂಪಾಯಿ ತೆರಾ ಕೊಟ್ ತಂದಿವ್ನಿ. ನೀ ದುಡ್ಡಿದ್ದೆಲ್ಲ ನಂದು. ಅದರಾಗ ನಿಂದೇನ್ಲೇ ಉಳಿತು ಬದ್ನೇಕಾಯಿ? ಈ ಗುಡ್ಡ ನಾ ಹುಟ್ಟಿಸ್ದೆ ಹುಟ್ಟವ್ನಾ? ಅವ್ನ ದುಡ್ಡದ್ದೂ ನಂದೇ.... ಇಲ್ತಂಕ ಸುಮ್ಕಿದ್ದೆ ! ದಿನ್‌ದಿನ್ಕೆ ನಿನ್ ಬಾಯಿ ಉದ್ದುಕ್ಕೋತಾ ಅದೆ" ಎಂದು ಕೂತಿದ್ದ ಬಸುರಿ ಅರಸಮ್ಮನ ಭುಜಕ್ಕೆ ಒದ್ದುಬಿಟ್ಟ. ಭಾರೀ ಗಾತ್ರದ ಹೊಟ್ಟೆಯ ಅರಸಮ್ಮ ಹತ್ತಿಯ ದಿಂಡಿನಂತೆ ಪಕ್ಕಕ್ಕೆ ವಾಲಿ ಬಿದ್ದಳು.

ಛಂಗನೆ ಬೇಟೆನಾಯಿಯಂತೆ ಹಾರಿದ ಗುಡ್ಡಯ್ಯ ತನ್ನ ತಾಯಿಯನ್ನು ಎಬ್ಬಿಸಿ ಕೂರಿಸಿದ. ತನ್ನ ಅಪ್ಪನ ಕಡೆ ದುರುಗುಟ್ಟಿ ನೋಡಿದ.

"ನಾಳೀಕಿಂದ ನೀ ಸಾಲೀಗೆ ಹೋಗೋಹಂಗಿಲ್ಲ ಗುಡ್ಡ. ನಿಮ್ಮವ್ವ ಬಸುರಿ ಹೆಂಗ್ಸು. ಅವ್ಳು ಕೂಲಿಗೆ ಹೋಗೋಕೆ ಸುರುಮಾಡುಗಂಟ ನೀ ಕೆಲ್ಸಕ್ ಹೋಗು. ಕವಳ ಪುಗುಸುಟ್ಟೆ ಕೊಡಾಕ ಇದಾನ ಮಾವ.....!" ಎಂದು ಮಾರಪ್ಪ ಗುಡುಗಿದ.

ನಾನೂ ಇನ್ನೂ ಅಲ್ಲಿ ನಿಂತದ್ದು ಸರಿಯಲ್ಲವೆನ್ನಿಸತೊಡಗಿತು. ನನ್ನ ಮೈ ಎಲ್ಲಂದರಲ್ಲಿ ಬಿರುಕು ಬಿಟ್ಟುಕೊಂಡ ಹಾಗೆ ಭಾಸವಾಗತೊಡಗಿ ಮೈಯನ್ನೊಮ್ಮೆ ಕುಗ್ಗಿಸಿ ಕೊಡವಿಕೊಂಡು "ಗುಡ್ಡ ನಾನು ಆಮೇಲೆ ಸಿಕ್ತೇನೊ" ಎಂದು ಹೇಳಿ ಓಟದ ನಡಿಗೆಯ ಹೆಜ್ಜೆ ಹಾಕಿದೆ.

ಮಾರಪ್ಪ ನಮ್ಮ ದೊಡ್ಡಪ್ಪನೆದುರು ಡೊಗ್ಗಿ ನಿಂತು ಮಾತಾಡುವಾಗ ವಿನಮ್ರ ಮನುಷ್ಯನಂಗೆ ಕಾಣುತ್ತಿದ್ದ. ಮಾರಪ್ಪನ ಇಂಥ ಅವತಾರವನ್ನು ನಾನು ನೋಡಿದ್ದು ಅದೇ ಮೊದ್ಲಲಾಗಿತ್ತು. ಗುಡ್ಡಯ್ಯ ಮತ್ತು ಅರಸಮ್ಮ ಇಬ್ಬರಲ್ಲಿ ಏನೂ ತಪ್ಪು ಕಾಣಲಿಲ್ಲ; ಮಾರಪ್ಪ ಎಂಥ ಕೆಟ್ಟ ಮನುಷ್ಯ, ಅದ್ಹೇಗೆ ಎಮ್ಮೆಗೆ ಒದೆಯುವಂತೆ ಹೆಂಡತಿಗೆ ಒದ್ದುಬಿಟ್ಟನಲ್ಲ....? ಎಂದು ಮನದಲ್ಲಿ ಅರೆಮಾತುಗಳಲ್ಲಿ ಅಂದುಕೊಳ್ಳುತ್ತ ನಡೆಯುತ್ತಿದ್ದೆ. ಹಿಂದಿನಿಂದ ಓಡಿಬಂದು ಗುಡ್ಡಯ್ಯ ನನ್ನ ಹೆಗಲಿಗೆ ಕೈ ಹಾಕಿದ: "ನಂಗೆ ಮನೇಲಿ ನಿಲ್ಲೋಕೆ ಆಗ್ಲಿಲ್ಲ. ನಿನ್ ಜೊತೆಗಿದ್ರೆ ಸಮಾಧಾನ ಅನ್ಸುತ್ತೆ ಅಂತ ಬಂದುಬಿಟ್ಟೆ. ಅಮ್ಮ ಅಳ್ತಿತ್ತು, ಇವತ್ತು ಒದ್ದಿದ್ದು ಏನೂ ಅಲ್ಲ. ಎಷ್ಟ್ ಬಾರಿ ಹೊಡ್ದಿದ್ದಾನೆ ಬೆತ್ತದಿಂದ ಲೆಕ್ಕಾನೆ ಇಲ್ಲ. ನಮ್ಮಮ್ಮ ಹೇಳ್ತವ್ಳೆ ನಾನು ಚಿಕ್ಕವನಿದ್ದಾಗ ನಮ್ಮಪ್ಪ ಹಿಂಗೆ ಕೆಟ್ಟಿರಲಿಲ್ವಂತೆ. ಆ ಹೆಂಗ್ಸಿನ ಸಾವಾಸಕ್ಕೆ ಬಿದ್ ಮ್ಯಾಕೆ ಅವ್ಳು ನಮ್ಮಪ್ಪನ್ ತಲೇಗೇ ಮದ್ದು ತಿಕ್ಕಿ ಮಾಟ ಮಾಡಿಸಿದಗಂಟಾ ಇಂಗೆಲ್ಲಾ ಆಡಾಕ್ ಸುರುಮಾಡವ್ನಂತೆ."

ನಾನು ಏನೂ ಮಾತಾಡದೆ ಸುಮ್ಮನೆ ನಡೆಯತ್ತೊಡಗಿದೆ.

"ಇವತ್ತು ರಾತ್ರಿ ಕುಡಿದು ಬಂದು ಅದೇನು ರಾದ್ಧಾಂತ ಮಾಡಂಗವ್ನೋ ನಮ್ಮಪ್ಪ, ಇನ್ನೊಂದು ವಾರದಲ್ಲಿ ಹಡೀತವ್ಳಂತೆ ನಮ್ಮವ್ವ. ನಾ ಮನೆಗೆ ಬೇಗ ಹೋಗ್‌ಬೇಕು" ಎಂದ.

"ಭುಜಂಗರಾವ್‌ರು ನಂಗೆ ಕೊಡುವ ನೋಟ್‌ಬುಕ್‌ಗಳನ್ನ ನಿಂಗೆ ಕೊಟ್ಟಿವ್ನಿ. ಇನ್‌ಮ್ಯಾಕೆ ಬೇರಾರಿಗೂ ಕೊಡ್ದಂಗೆ ನಿಂಗೇ ಕೊಡ್ತೀನಿ. ಪೆನ್ನು, ಪೆನ್ಸಿಲ್ಲು ಯಾವುದಕ್ಕೂ ನಿಮ್ಮ ಅಮ್ಮಂಗೆ ದುಡ್ಡು ಕೇಳ್ಬೇಡ್ವೊ. ನಂಗೆ ತಿಂಡಿ ತಿನ್ನೋಕೇಂತ ಕೊಡೊ ದುಡ್ಡಲ್ಲಿ ನಿಂಗೆ ಕೊಡ್ತೀನಿ. ನನ್ನ ಚಿಕ್ಕ ದೊಡ್ಡಪ್ಪಂಗೆ ಹೇಳಿ ನಿಮ್ಮಪ್ಪಂಗೆ ಬುದ್ಧಿ ಹೇಳಿಸ್ತೇನೆ ಸುಮ್ಕಿರು. ನಮ್ಮ ಚಿಕ್ ದೊಡ್ಡಪ್ಪ ಭೋ ಒಳ್ಳೆಯವರು" ಎಂದು ಏನೇನೋ ಬಡಬಡಿಸಿದೆ. ನನ್ನ ಮಾತುಗಳಿಂದ ಗುಡ್ಡಯ್ಯನಿಗೆ ನಿರ್ದಿಷ್ಟ ಪರಿಹಾರ ಸಿಗುತ್ತಿಲ್ಲ ಎಂದು ಅನಿಸುತ್ತಿರುವಾಗಲೇ ನನ್ನ ಮಾತುಗಳೆಲ್ಲಾ ಸುಮ್ಮನೆ ಹೇಳುತ್ತಿರುವಂತೆ ನನಗೂ ಎನಿಸತೊಡಗಿ ಮೌನವಾದೆ. ಎದುರಿಗೆ ಮುಂಬೈ ಮಿಠಾಯಿಯವನು ಕೋಲಿಗೆ ಗೆಜ್ಜೆ ಕಟ್ಟಿಕೊಂಡು ಘಿಲ್‌ಘಿಲ್ಲೆನಿಸುತ್ತ ಬರುತ್ತಿದ್ದ.

"ನಿನ್ ಬಳಿ ದುಡ್ಡಿದ್ರೆ ಮಿಠಾಯಿ ತಿನ್ನೋಣಾ" ಎಂದ ಗುಡ್ಡಯ್ಯ.

ನನ್ನಲ್ಲಿದ್ದ ದುಡ್ಡಿನಲ್ಲಿ ನಮ್ಮಿಬ್ಬರ ಕೈಗೆ ಒಂದೊಂದು ಮಿಠಾಯಿ ವಾಚ್ ಮಾಡಿ ಅಂಟಿಸಿದ.

ವಿಶೇಷವಾಗಿ ಸಂತೋಷ ಹಂಚಿಕೊಳ್ಳಲು ಗುಡ್ಡಯ್ಯನಂಥ ಗೆಳೆಯ ಬೇಕು ಎನಿಸಿತು.

ನಮ್ಮ ಕ್ಲಾಸಿನಲ್ಲಿ ಗುಡ್ಡಯ್ಯ ಒಬ್ಬನೇ ಮಾದಿಗರ ಹುಡುಗ. ಬಹಳಷ್ಟು ಹುಡುಗರು ಪ್ರೈಮರಿ ಸ್ಕೂಲಲ್ಲೇ ಫೇಲಾಗಿದ್ದರು. ಪಾಸಾದವರೂ ಮುಂದೆ ಓದಲು ಬಾರದೆ ಹೊಲ ಮನೆಗೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಅವರು ಈಗ ಎದುರು ಸಿಕ್ಕರೆ ಸ್ನೇಹದ ನಗೆ ನಗುತ್ತಿರಲಿಲ್ಲ. ದುಡ್ಡು ದುಡಿಯುವ ಗಂಡಸರ ಶೈಲಿಯಲ್ಲಿ ಪಂಚೆ ಏರಿಸಿ ಕಟ್ಟುಕೊಂಡು ಹುಸಿ ಧಿಮಾಕಿನಿಂದ ಹೋಗುತ್ತಿದ್ದರು. ನನಗೂ ಅವರೆಲ್ಲ ದೂರ ಸರಿದವರು ಎನಿಸಿ ಇತ್ತೀಚೆಗೆ ಎದುರಿಗೆ ಸಿಕ್ಕರೂ ಅವರನ್ನು ನೋಡುತ್ತಿರಲಿಲ್ಲ.

ಮಾರನೇ ದಿನ ಬೆಳಗ್ಗೆ ಶೌಚಕ್ಕೆಂದು ಹೊರಗೆ ಹೋಗುತ್ತಿದ್ದೆ. ಜನವೆಲ್ಲ ದೌಡಾಯಿಸಿ ಹೋಗುತ್ತಿದ್ದರು. ಓಡುತ್ತಿದ್ದ ನನ್ನ ಓರಗೆಯ ಹುಡುಗನೊಬ್ಬನನ್ನು ತಡೆದು "ಏಕೆ? ಏನು ಸಂಗತಿ?" ಎಂದು ಕೇಳಿದೆ. "ನಿಮ್ಮ ಗುಡ್ಡಯ್ಯನ ಅಮ್ಮ ಬಾವಿ ಹಾರ್ಕೊಂಡು ಸತ್ತವ್ಳೆ" ಎಂದು ಹೇಳುತ್ತಲೇ ಓಡಿದ. ನಾನು ನನ್ನ ದಿಕ್ಕು ಬದಲಿಸಿ ಜನರು ಓಡುತ್ತಿದ್ದ ಕಡೆಗೆ ಓಡಿದೆ. ಬಾವಿ ಕಟ್ಟೆಯ ಬಳಿಗೆ ನಾನು ಬರುತ್ತಿದ್ದಂತೆಯೇ ಅರಸಮ್ಮನನ್ನು ಹೊರಗೆ ತೆಗೆಯುತ್ತಿದ್ದರು.

"ಎಂಥಾ ದೊಡ್‌ದಾಗಿತ್ತು ಹೊಟ್ಟೆ. ಅವ್ಳ ಹೊಟ್ಟೇಲಿ ಎರಡು ಕೂಸು ಇದ್ದಿದ್ದೋ ಏನೊ. ಇಗಾ ನೋಡು ಅದೇಟು ಊದಿಕಂಡದೆ ಹೊಟ್ಟೆ. ಅವ್ಳ ಗಂಡನ ಕಾಟ ತಾಳ್ದೆ ಬಾವಿ ಹಾರ್ಕೊಂಡ್ಳು. ಇದ್ದೊಬ್ಬ ಮಗ ಗುಡ್ಡಯ್ಯನ ಪರದೇಶಿ ಮಾಡಿಹೋದ್ಳು. ಅವರಪ್ಪ ಗುಡ್ಡಯ್ಯನ ಹಟ್ಟೀ ಮಕ್ಳೆಲ್ಲ ಸಾಲಿ ಬಿಟ್ ಬಂದ್ರೂ ಗುಡ್ಡ ಮಾತ್ರ ಬಿಡ್ಲಿಲ್ಲ. ಓದು ಅಂದ್ರೆ ಅವುಂಗೆ ಅಷ್ಟು ಷೋಕು" ಎಂದು ಒಬ್ಬ ಹೆಣ್ಣುಮಗಳು ಮತ್ತೊಬ್ಬಳಿಗೆ ಹೇಳುತ್ತಿದ್ದಳು.

ಗುಡ್ಡಯ್ಯನ ತಲೆ ಕೆದರಿತ್ತು. ಕಣ್ಣು ಕೆಂಪಾಗಿದ್ದವು. ಚೀರಿಚೀರಿ ಧ್ವನಿ ಕುಸಿದಿತ್ತು. ತೊಟ್ಟಿದ್ದ ಹಳೆಯ ಅಂಗಿ ಜಗ್ಗಾಟದಲ್ಲಿ ಹರಿದಿತ್ತು. ಅವನ ಪಕ್ಕದ ಮನೆಯ ನಾಲ್ಕಾರು ಹೆಂಗಸರು ಅವನನ್ನು ಹಿಡಿದಿದ್ದರು. ಗುಡ್ಡಯ್ಯ ನನ್ನನ್ನು ನೋಡುತ್ತಲೇ ಜೋರಾಗಿ "ಹನುಮಂತಾಃ ನಾ ಪರ್ದೇಶಿ ಆಗಿಬಿಟ್ಟೇ" ಎಂದು ಕೂಗಿದ. ನಾನು ಅವನಿದ್ದಲ್ಲಿಗೇ ಹೋಗಿ ಹೆಗಲ ಮೇಲೆ ಕೈ ಹಾಕಿ ನಿಂತುಕೊಂಡೆ.

ನನ್ನೆದುರಿಗೆ ಇದ್ದ ಅರಸಮ್ಮನ ಹೆಣ ಚಿಕ್ಕಬೆಟ್ಟದ ಪ್ರತಿರೂಪವೇನೊ ಎನ್ನುವಂತೆ ತೋರುತ್ತಿತ್ತು.

ಗುಡ್ಡಯ್ಯನ ತಂದೆ ಮಾರಪ್ಪ ಎದೆ ಬಡಿದುಕೊಂಡು ಅಳುತ್ತಿದ್ದ. ಮಗ ಗುಡ್ಡಯ್ಯನನ್ನು ತಬ್ಬಿಕೊಳ್ಳಲು ಬರುತ್ತಿದ್ದ. ಆದರೆ, ಗುಡ್ಡಯ್ಯ ತನ್ನ ತಂದೆಯ ಕೈಯನ್ನು ಕೊಡಪ್ಪಿ ದೂರ ಸರಿಯುತ್ತಿದ್ದ.

ಅದೇನು ಶಕ್ತಿ ಬಂತೊ ಗುಡ್ಡಯ್ಯನಿಗೆ ಹಿಡಿದಿದ್ದ ಹೆಣ್ಣುಮಕ್ಕಳ ಕೈಗಳನ್ನು ಕೊಡವಿ ತನ್ನ ತಾಯಿಯ ದೇಹದ ಮೇಲೆ ಬಿದ್ದು ಹೊರಳಾಡಿ ಆಕ್ರಂದಿಸತೊಡಗಿದ.

ಅಷ್ಟರಲ್ಲಿ ನಮ್ಮ ಓಣಿಯ ಜನರೂ ಬಂದು ನಾನು ಹೆಣದ ಪಕ್ಕವೇ ನಿಂತುದನ್ನು ನೋಡಿ ಈಚೆ ಸರಿದು ಬರುವಂತೆ ನನಗೆ ಕೈಸನ್ನೆ ಮಾಡಿ ಹೇಳತೊಡಗಿದರು. ಓ ಇವತ್ತು ನನಗೆ ನಮ್ಮ ದೊಡ್ಡಪ್ಪರಿಂದ ಪೂಜೆ ಆಗುತ್ತೆ ಎಂದುಕೊಂಡೆ. ಅವರೆಲ್ಲ ಹೋಗಿ ನಮ್ಮ ದೊಡ್ಡಪ್ಪನವರಿಗೆ ನಾನು ಮಾದಿಗರ ಹೆಣದ ಪಕ್ಕ ನಿಂತಿದ್ದ ಸುದ್ದಿಯನ್ನು ವಿಜಿಲೆನ್ಸ್ ರಿಪೋರ್ಟ್ ಥರ ಒಪ್ಪಿಸುವಂಥವರು.

ಆದರೆ, ನಾನು ಅದನ್ನೆಲ್ಲ ಲೆಕ್ಕಿಸಲೇ ಇಲ್ಲ. ಗುಡ್ಡಯ್ಯನ ಸ್ನೇಹಕ್ಕಾಗಿ ಒಂದು ದಿನ ಒದೆ ತಿಂದರಾಯಿತು ಎಂದುಕೊಂಡು ಕದಲದೆ ನಿಂತೆ.

"ಪೊಲೀಸ್ ಇನ್ಸ್‌ಪೆಕ್ಟ್ರು ಬಂದ್ರು" ಎಂದು ಎಲ್ಲರೂ ಓ ಎಂದು ಹೇಳತೊಡಗಿದರು. ಇನ್ಸ್‌ಪೆಕ್ಟರ್ ಜೊತೆಗೆ ಡಾಕ್ಟರ್ ಒಬ್ಬರನ್ನು ಕರೆತಂದಿದ್ದ.

"ಎಲ್ಲ ದೂರ ಸರೀರಿ. ಇದು ಆತ್ಮಹತ್ಯೆಯಲ್ಲ ಕೊಲೆ. ಪೋಸ್ಟ್ ಮಾರ್ಟಂ ಮಾಡೋಕೆ ಡಾಕ್ಟರ್ ಬಂದವ್ರೆ" ಎಂದು ತನ್ನ ಬೆತ್ತದಿಂದ ನೆರೆದಿದ್ದವರನ್ನೆಲ್ಲ ಸರಿಸಿದ.

ತಳವಾರವನ್ನು ಕರೆದು "ಈ ಹೆಣಾನ ಆ ಗಿಡದ ಪೊದೆಯಲ್ಲಿ ಜಾಗ ಮಾಡಿ ಇಡು. ತಳಕ್ಕೆ ಮರದ ಸೊಪ್ಪು ಹಾಕಿಸು. ಪೋಸ್ಟ್ ಮಾರ್ಟಂ ಮಾಡ್ತಾರೆ ಡಾಕ್ಟರ್" ಎಂದ.

ತಳವಾರ ನಾಲ್ಕೈದು ಜನರ ಸಹಾಯದಿಂದ ಹೆಣವನ್ನು ಸಾಗಿಸಿದ.

"ಹೆಣ ಪೊಲೀಸ್‌ನೋರ ಕೈಗೆ ಹೋಯ್ತು ಹೋಯ್ತು" ಎನ್ನುವ ಮಾತೇ ಎಲ್ಲರ ಬಾಯಲ್ಲಿ.

ಊರ ಗೌಡರು ಬಂದರು ; "ನಮ್ ಊರಿನ ಯಾವ ಹೆಣಾನೂ ಈತಂಕ ಪೊಲೀಸ್‌ನೋರು ಒಯ್ದಿದ್ದಿಲ್ಲ. ಏನೊ ಬುದ್ಧಿ ಹೋಗಿ ಬಾವಿ ಹಾರ್ಕಂಡವ್ಳೆ. ಅವುಳ್ನ ಕೊಲೆ ಮಾಡೋರು ಯಾರಿದ್ದಾರೆ?"

"ಗೌಡ್ರೆ ಅದೆಲ್ಲ ಆಗಾಕಿಲ್ಲ. ಪೋಸ್ಟ್ ಮಾರ್ಟಂ ಮಾಡ್ಡಿದ್ರೆ ನಮ್ಮ ನೌಕರಿ ಹೋಗ್ತದೆ" ಎಂದ ಇನ್ಸ್‌ಪೆಕ್ಟರ್.

ಅಷ್ಟರಲ್ಲಿ ನನಗೆ ವಿಚಿತ್ರ ಕುತೂಹಲ ಕೆರಳಿತು. ಹೆಣವನ್ನು ಅದು ಹೇಗೆ ಕೊಯ್ಯುತ್ತಾರೆ ನೋಡೇಬಿಡೋಣ ಎದು ನಿರ್ಧರಿಸಿಕೊಂಡೆ. ಜಂಗುಳಿಯಿಂದ ಸದ್ದಿಲ್ಲದೆ ಜಾರಿಕೊಂಡು ಹೆಣ ಸಾಗಿಸಿದ ಸ್ಥಳಕ್ಕೆ ಸುತ್ತು ಬಳಸಿಕೊಂಡು ಹೋಗಿ ಮರವೊಂದನ್ನು ಏರಿ ಕೂತುಕೊಂಡೆ.

ಹೆಣದ ಹತ್ತಿರ ನಾಯಿಗಳು ಬಾರದಂತೆ ನೋಡಿಕೊಳ್ಳಲು ಇಬ್ಬರು ಮಾದಿಗರ ಹುಡುಗರು ನಿಂತಿದ್ದರು. ಸ್ವಲ್ಪ ಸಮಯದಲ್ಲಿ ಬಿಳಿ ಶರ್ಟ್ ತೊಟ್ಟು ಚೆನ್ನಾಗಿ ಕ್ರಾಪ್ ಮಾಡಿಸಿಕೊಂಡಿದ್ದ ಡಾಕ್ಟರ್ ಬಂದ. ನಾನು ಮೇಲೆ ಕೂತದ್ದು ಕೆಳಗಿನವರಿಗೆ ತಿಳಿದಿರಲಿಲ್ಲ.

ಡಾಕ್ಟರ್ ಅಲ್ಲಿದ್ದ ಹುಡುಗರನ್ನು ಆಚೆಗೆ ಕಳುಹಿಸಿದ. ತಾನು ಕರೆಯುವವರೆಗೆ ಬರಬಾರದೆಂದೂ ತಾಕೀತು ಮಡಿದ.

ಹುಡುಗರು ಅತ್ತ ಹೋಗುತ್ತಿದ್ದಂತೆಯೇ ಡಾಕ್ಟರ್ ಸಿಗರೇಟ್ ಸೇದುತ್ತ ನಿಂತುಕೊಂಡ. ತನ್ನ ಕೈಯಲ್ಲಿದ್ದ ಕಿಟ್ ಅನ್ನು ಓಪನ್ ಮಾಡಲೇ ಇಲ್ಲ. ನನಗೋ ಆಶ್ಚರ್ಯ. ಹೆಣ ಪೋಸ್ಟ್ ಮಾರ್ಟಂ ಮಾಡೋದಂದ್ರೆ ಕೊಯ್ಯೋದು ಅಂತ ಸುಳ್ಳು ಹೇಳಿದ್ದಾನೇನೋ ಆ ಗೂರಪ್ಪ ನನಗೆ ಎಂದುಕೊಂಡೆ.!

ಇನ್ಸ್‌ಪೆಕ್ಟರ್ ಬಂದು ಡಾಕ್ಟರ್ ಜೊತೆಗೆ ಏನೇನೊ ಮಾತಾಡಿದ ಮತ್ತು ದುಡ್ಡನ್ನು ಕೊಟ್ಟ ಡಾಕ್ಟರ್‌ಗೆ. ಇಬ್ಬರೂ ಸ್ವಲ್ಪ ಹೊತ್ತು ಹರಟೆ ಹೊಡೆದು ಎರಡೆರಡು ಸಿಗರೇಟ್‌ಗಳನ್ನು ಸುಟ್ಟರು. ನಂತರ ಇನ್ಸ್‌ಪೆಕ್ಟರ್ ಆಳುಗಳನ್ನು ಮತ್ತು ತಳವಾರನನ್ನು ಕೂಗಿ ಕರೆದು 'ಈ ಹೆಣಾನ್ನ ಯಾರಿಗೂ ಮುಟ್ಟೋಕೆ ಕೊಡದೆ ನೀವೇ ಹೂಳಬೇಕು; ಹಾಗೇ ಗೋಣಿಚೀಲದಲ್ಲಿ ಇದ್ದಂತೆಯೇ ಹೂಳಿರಿ' ಎಂದು ಆದೇಶಿಸಿದ.

ಅವರೆಲ್ಲ ಹೋದ ಮೇಲೆ ನಾನು ಮೆಲ್ಲನೆ ಮರ ಇಳಿದು ಜನಜಂಗುಳಿಯಿದ್ದ ಕಡೆಗೆ ಬಂದೆ. ಗೂರಪ್ಪನನ್ನು ಹುಡುಕಿದೆ, ಸಿಕ್ಕ. "ಏನು ಗೂರಪ್ಪನೋರೆ, ಪೋಸ್ಟ್ ಮಾರ್ಟಂ ಅಂದ್ರೆ ಹೆಣಾನ್ನ ಕೊಯ್ಯೋದು ಅಂತ ಸುಳ್ಳು ಹೇಳಿಬಿಟ್ರಿ ನಂಗೆ?" ಎಂದು ಪ್ರಶ್ನಿಸಿದೆ.

"ಅದ್ಯಾಕೆ ಸುಳ್ಳು? ಇದೀಗ ಡಾಕ್ಟರು, ಆ ಅರಸಮ್ಮನ್ ಶವನ ಆಚೆಗೊಯ್ದು

ಕೊಯ್ದು ಪರೀಕ್ಷೆ ಮಾಡಿಲ್ವ? ಅದೇ ಪೋಸ್ಟ್ ಮಾರ್ಟಂ" ಎಂದ. "ಇಲ್ಲ ಗೂರಪ್ಪನೋರೆ ನಾನು ಆ ಡಾಕ್ಟರ್ರು ಇನ್ಸ್‌ಪೆಕ್ಟರುಗಳಿಗೆ ಕಾಣಿಸ್ದಂಗೆ ಹಿಂದಿನಿಂದ ಹೋಗಿ ಮರ ಏರಿ ಕುಳಿತಿದ್ದೆ. ಡಾಕ್ಟ್ರು ತನ್ನ ಪೆಟ್ಟಿಗೆ ಬಾಯಿನೇ ತೆರೀಲಿಲ್ಲ. ಇನ್ನು ಕೊಯ್ಯಾದು ಎಲ್ಲಿ ಬಂತು. ಡಾಕ್ಟರ್ ಸಿಗರೇಟ್ ಸೇದಿದ. ನಂತರ ಬಂದ ಇನ್ಸ್‌ಪೆಕ್ಟರ್ ಜೊತೆ ಮತ್ತೊಂದು ಸಿಗರೇಟ್ ಸೇದಿದ. ಡಾಕ್ಟರ್ ಕೈಗೆ ದುಡ್ಡುಕೊಟ್ಟ. ನಂತರ ಆಳುಗಳನ್ನ ಕರೆದು ಹೆಣಾನ್ನ ಯಾರಿಗ್ಲೂ ಮುಟ್ಟೋಕೆ ಕೊಡ್ದೆ ಹೂಳಿಬಿಡಿ ಎಂದ್ರು" ಎಂದು ಹೇಳಿದೆ.

ತುಟಿ ಕಚ್ಚಿ ಹಿಡಿದ ಗೂರಪ್ಪ "ಇಂಗೋ ಸಮಾಚಾರ! ಪೋಸ್ಟ್ ಮಾರ್ಟಂ ಮಾಡಿದಾರೆ ಡಾಕ್ಟ್ರು, ಕತ್ತು ಹಿಚುಕಿ ಕೊಲೆ ಮಾಡಿದ್ದು ಪತ್ತೆ ಆಗಿದೆ ಎಂದ್ಹೇಳಿ ಆ ಮಾರಪ್ಪನ್ನ ಠಾಣೆಗೊಯ್ತೀವಿ ಅಂತ ಕೂತ. ಆಗ ಎಲ್ರೂ ಪಂಚೇತಿ ಸೇರಿ, ಇದು ಊರಿನ ಮರ್ಯಾದೆ ಪ್ರಶ್ನೆ, ನಮ್ಮೂರ ಕೇಸು ಕೋರ್ಟಿಗೆ ಹೋಗ್‌ಬಾರ್ದು ಗೌಡ್ರೇ, ನೀವೇ ಇದಕ್ಕೆ ದಾರಿ ತೋರ್ಸಿ ಎಂದ್ರು. ಆಗ ಗೌಡ್ರು ಇನ್ಸ್‌ಪೆಕ್ಟರ್‌ಗೆ ಲಂಚ ನೀಡಿದ್ರು. ಆ ಲಂಚದ ಹಣಾನ್ನ ಮಾರಪ್ಪನ್ ತಲೆಗೆ ಸಾಲ ಅಂತ ಕಟ್ಟಿದಾರೆ. ಆ ಮಾರಪ್ಪ ನಂಗೆ ಸಾಲ ತೀರಸೋಕೆ ಆಗಾಕಿಲ್ಲ. ಬೇಕಿದ್ರೆ ನಮ್ ಗುಡ್ಡನ್ನ ನಿಮ್ಮ ಹಟ್ಟೀಲಿ ಜೀತಕ್ಕೆ ಇಟ್‌ಕಳ್ರಿ ಅಂದಿದಾನೆ" ಎಂದ.

"ಲಂಚದ ಹಣ ವಾಪಸ್ ಕೊಡದೆ ಹೋದ್ರೆ ತಿರಗಾ ಹೆಣಾನ್ನ ಸಮಾಧಿಯಿಂದ ತೆಗಿಸಿ ಮಹಜರ್ ಮಾಡಿಸೋಕೆ ದೊಡ್ಡ ಸಾಹೇಬರ ಹತ್ರ ದೂರು ಕೊಡಲಾಗುತ್ತದೆ. ನೀವು ಹಳ್ಳಿಗೆ ಬಂದು ನಾಟಕ ಮಾಡಿ ಲಂಚ ತಿಂದು ಹೋಗಿದೀರಿ. ನೀವು ಪೋಸ್ಟ್ ಮಾರ್ಟಂ ಮಾಡದೆ ಇದ್ದದ್ದು ಈಗ ಪತ್ತೆಯಾಗಿದೆ. ಅದನ್ನು ನೋಡಿದ ಸಾಕ್ಷಿಗಳು ಇದ್ದಾರೆ..." ಎಂದು ಪತ್ರ ಬರೆಸಿದ ಗೂರಪ್ಪ ಇನ್ಸ್‌ಪೆಕ್ಟರ್‌ರನ್ನು ಮುಗಿಸುವ ವ್ಯವಸ್ಥೆ ಮಾಡಿದ.

ಪತ್ರ ತಲುಪಿದ್ದೇ ತಡ ಇನ್ಸ್‌ಪೆಕ್ಟರ್ ಹಳ್ಳಿಗೆ ಬಂದು ಗೌಡರಿಂದ ಪಡೆದುಕೊಂಡಿದ್ದ ಹಣವನ್ನು ವಾಪಸ್ ಕೊಟ್ಟು ಮತ್ತೆಂದೂ ಈ ಹಳ್ಳಿ ಸಮೀಪಕ್ಕೆ ಸುಳಿಯೋಲ್ಲ ಎಂದುಹೇಳಿ ಮೋಟರ್‌ಬೈಕ್ ಮೇಲೆ ತರಗೆಲೆಯಂತೆ ಹಾರಿಹೋದ.

ನನಗೋ ಭಾರೀ ಸಂತೋಷವಾಯಿತು. ನನ್ನ ಪತ್ತೆದಾರಿಕೆಯಿಂದಾಗಿ ಗೆಳೆಯ ಗುಡ್ಡಯ್ಯ ಗೌಡರ ಮನೆಗೆ ಜೀತಕ್ಕೆ ಹೋಗುವುದು ಬಿಟ್ಟು ಶಾಲೆಗೆ ಬರುವಂತಾಗಿದ್ದಕ್ಕೆ.

13

ಶಿಕಾರಿಯ ಚಿತ್ರಗಳು

ಸುಗ್ಗಿಯ ಕೊನೆಯಲ್ಲಿ ರೈತರು ಶಿಕಾರಿಗೆ ಹೋಗುವುದು ರೂಢಿ. ನಮ್ಮದು ಬಯಲು ಸೀಮೆ. ದಟ್ಟ ಅರಣ್ಯದ ಬೇಟೆಯಲ್ಲಿ ಚಿರತೆ, ಕಾಡುಹಂದಿಗಳು ಸಿಕ್ಕರೆ ಬಯಲು ಸೀಮೆಯಲ್ಲಿ ಮೊಲಗಳೇ ಜಾಸ್ತಿ. ಆಗಾಗ ಕಾಡುಹಂದಿ, ಚಿಗರೆಗಳೂ ದೊರೆಯುತ್ತಿದ್ದುದು ಉಂಟು.

ಬೇಟೆಯಲ್ಲಿ ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣರು, ಬೇಡರು, ಕುರುಬರು, ಹೊಲೆಮಾದಿಗರು ಭಾಗವಹಿಸುತ್ತಿದ್ದರು. ಬೇಟೆಯ ಕಾಲಕ್ಕೆ ಅಸ್ಪೃಶ್ಯತೆ ಭಾಗಶಃ ಮಾಯವಾಗಿರುತ್ತಿತ್ತು. ನನ್ನ ಓರಗೆಯ ಗುಡ್ಡಯ್ಯನ ಹೆಗಲ ಮೇಲೆ ಕೈ ಹಾಕಿಕೊಂಡು ಬೇಟೆಗೆ ಹೊರಡುವುದು ನನಗೆ ವಿಶೇಷ ಪುಳಕವನ್ನುಂಟುಮಾಡುತ್ತಿತ್ತು. ಮಾದಿಗ ಹುಡುಗನ ಜೊತೆ ಒಡನಾಟ ಬೇಡ ಎನ್ನುವ ನಮ್ಮ ಓಣಿಯ ಗಂಡಸರ ಎದುರೇ ಅನಿರ್ಬಂಧಿತನಾಗಿ ಗುಡ್ಡಯ್ಯನ ಜೊತೆ ಓಡಾಡುವ ಅವಕಾಶ ಸಿಕ್ಕಿದ್ದು ಖುಷಿಗೆ ಕಾರಣವಿದ್ದಿರಬೇಕು.

ಬೇಟೆ ನನಗೆ ಹುಚ್ಚನ್ನೇ ಹಿಡಿಸುತ್ತಿತ್ತು. ವರ್ಷಕ್ಕೆ ಮೂರು ಬಾರಿ ಮಾತ್ರ ಬೇಟೆ

ಎಂದು ಅದೇಕೆ ಮಾಡಿದ್ದರೋ? ಸತತ ಬೇಟೆ ಆಡುತ್ತಿದ್ದರೆ ಚೆನ್ನಾಗಿರುತ್ತಿರಲಿಲ್ಲವೆ? ಎಂದುಕೊಳ್ಳುತ್ತಿದ್ದೆ.

ಶಾಲೆಗೆ ಬಾರದೆ ಸದಾ ಕುರಿ, ದನಗಳನ್ನು ಕಾಯುತ್ತಿದ್ದ ನನ್ನ ಓರಗೆಯ ಹುಡುಗರು ಬೇಟೆಯ ಸಮಯದಲ್ಲಿ ಹೀರೋಗಳಾಗಿಬಿಡುತ್ತಿದ್ದರು. ಸ್ಕೂಲಲ್ಲಿ ಜಾಣನೆನಿಸಿಕೊಂಡಿದ್ದ ನಾನು ಆ ಹುಡುಗರ ಹಿಂಬಾಲಕನಾಗಿಬಿಡುತ್ತಿದ್ದೆ. ಬೇಟೆಯ ಬಗೆಗೆ ಆ ಹುಡುಗರಲ್ಲಿದ್ದ ಜ್ಞಾನವು ನನ್ನ ಮೇಲರಿಮೆಯನ್ನು ಕೆಣಕುತ್ತಿತ್ತು ; ಪಶುಪಕ್ಷಿ, ಬೆಟ್ಟ, ಗುಡ್ಡ, ಕೆರೆ, ಮರ, ಹಳ್ಳ, ಹೊಳೆಗಳೆಲ್ಲ ಸಾಂದ್ರಗೊಂಡು ಜ್ಞಾನದ ಮೂಟೆಯಾಗಿ ಕೂತಿವೆಯೇನೋ ಆ ದಡ್ಡ ಹುಡುಗರ ತಲೆಗಳಲ್ಲಿ ಎನಿಸುತ್ತಿತ್ತು. ಹೊಲೆಯರ ಹುಡುಗ ಹನುಮನಿಗೆ ನಿಸರ್ಗದ ಬಗೆಗಿದ್ದ ತಿಳಿವಳಿಕೆ ನನ್ನನ್ನು ಚಕಿತಗೊಳಿಸುತ್ತಿತ್ತು. ಯಾವ ಉಲಿತ ಯಾವ ಪಕ್ಷಿಯದೆಂದು ಗುರುತಿಸುತ್ತಿದ್ದ. ಪಕ್ಷಿಗಳ ಭಾಷೆಯನ್ನೂ ಗುರುತಿಸುತ್ತಿದ್ದ. ಪ್ರಾಣಿಗಳ ಹೆಜ್ಜೆಗಳನ್ನು ಗುರುತಿಸಿ ಆ ಹೆಜ್ಜೆ ಇಂಥದೇ ಪ್ರಾಣಿಯದೆಂದು ಹೇಳಿಬಿಡುತ್ತಿದ್ದ. ಯಾವ ಪ್ರಾಣಿ ಎಂಥ ಲದ್ದಿ, ಹಿಕ್ಕೆ ಹಾಕುತ್ತದೆಂದು ತೋರಿಸುತ್ತಿದ್ದ. ಅಷ್ಟೇ ಅಲ್ಲ ಲದ್ದಿಯನ್ನು ಕೈಯಲ್ಲಿ ಹಿಡಿದುಕೊಂಡು ಇಂತಿಷ್ಟು ತಾಸುಗಳ, ದಿನಗಳ ಮುಂಚೆ ಹಾಕಿದ್ದೆಂದು ಅಂದಾಜು ಮಾಡುತ್ತಿದ್ದ.

ಹನುಮನಲ್ಲಿ ಅದೇನು ಟ್ರಿಕ್‌ಗಳಿವೆ ! ಇವನ್ನೆಲ್ಲ ಕಂಡುಕೊಳ್ಳಲು ತನ್ನಲ್ಲೇ ಪ್ರಶ್ನಿಸಿಕೊಳ್ಳುತ್ತಿದ್ದ ಗುಡ್ಡಯ್ಯ "ಆ ಹನುಮನಿಗೆ ಹುಟ್ಟಲ್ಲೇ ಆ ಬುದ್ಧಿ ಬಂದದೆ" ಎನ್ನುತ್ತಿದ್ದ.

ಬಹುತೇಕ ಎಲ್ಲ ಹಳ್ಳಿಗಳಲ್ಲೂ ಜನ ಏಕಕಾಲಕ್ಕೆ ಬೇಟೆಗೆ ಹೊರಡುತ್ತಿದ್ದಾಗ, ನಮ್ಮೂರ ಅಕ್ಕಪಕ್ಕದ ಹಳ್ಳಿಗಳ ಜನ ನಾವು ಹೋದ ಕಾಡಿಗೆ ಬರುತ್ತಿದ್ದರು. ಕೇಕೆ, ಸೀಟಿ, ತಮಟೆ ಸಪ್ಪಳಗಳು ಪರಸ್ಪರ ಕೇಳುತ್ತಲೇ ಅಂತರವನ್ನು ಕಾಯ್ದುಕೊಳ್ಳಲಿಕ್ಕಾಗಿ ದಿಕ್ಕುಗಳನ್ನು ಬದಲಿಸಿಕೊಳ್ಳುತ್ತಿದ್ದರು. ಆದಾಗ್ಯೂ ಒಂದು ಹಳ್ಳಿಯವರು ಎಬ್ಬಿಸಿದ ಪ್ರಾಣಿ ಓಡಿ ಬಂದು ಮತ್ತೊಂದು ಹಳ್ಳಿಯವರ ಬಲೆಗೆ ಬೀಳುವುದು ಸಾಮಾನ್ಯವಾಗಿರುತ್ತಿತ್ತು.

ಮೊದಲ ಬೇಟೆ ಸಿಕ್ಕೊಡನೆ ಆ ಬೇಟೆಯನ್ನು ಹಾವಿನ ಹುತ್ತದ ಬಳಿಯಿಟ್ಟು ಲಬೋ ಲಬೋ ಎಂದು ಬಾಯಿ ಬಡಿದುಕೊಳ್ಳುವುದು ವಾಡಿಕೆ. ಬಹಳ ಹೊತ್ತು ಅಲೆದರೂ ಬೇಟೆ ಸಿಕ್ಕದಿದ್ದಾಗ ಹಾವನ್ನು ಹುಡುಕಿ ಕೊಲ್ಲುತ್ತಿದ್ದರು. ಹಾವನ್ನು ಕೊಂದರೆ ದೃಷ್ಟಿ ಹರಿಯುತ್ತದೆ. ಆ ನಂತರ ಬೇಟೆಗಳು ಸಿಗುತ್ತವೆ ಎನ್ನುವ ನಂಬಿಕೆ ಬೇಟೆಗಾರರಲ್ಲಿ.

ಆಂಜನೇಯ ದೇವರಿಗೆ ಪೂಜೆ ಸಲ್ಲಿಸಿ ಗುಡಿ ಮುಂದಿನಿಂದಲೇ ಬೇಟೆಯ ಮೆರವಣಿಗೆ ಹೊರಟಿತು. ತಮಟೆಯ ಶಬ್ದ ತಾರಕಕ್ಕೇರಿತು. ಲಯಬದ್ಧವಾಗಿ ತಮಟೆ ಬಡಿಯುತ್ತಿದ್ದವನು ಬೆವೆತು ನೀರಾಗಿದ್ದ. ನಾವು ಹುಡುಗರೆಲ್ಲ ಅವನ ಸುತ್ತ ನಿಂತೆವು. ವಿವಿಧ ಭಂಗಿಗಳಲ್ಲಿ ದಾಪುಗಾಲಿಟ್ಟು ತಮಟೆ ಬಡಿಯುವ ಅವನ ಠೀಕು ಗಂಡಸರನ್ನಷ್ಟೇ ಅಲ್ಲ ಹೆಂಗಳೆಯರ ಎದೆಬಡಿತವನ್ನೂ ಹೆಚ್ಚಿಸಿರಬೇಕು. ಎಲ್ಲೆಲ್ಲೂ ಇದ್ದ ಹೆಂಗಸರು ಗುಡಿಯ ಮುಂದೆ ಬಂದು ಜಮಾಯಿಸಿದರು. ಕುರುಬರು ಕುರಿ ಕಾಯುವ ನಾಯಿಗಳನ್ನು, ಬೇಡರು ಬೇಟೆಯ ನಾಯಿಗಳನ್ನು ಹಿಡಿದುತಂದರು. ಮತ್ತೆ ಕೆಲವರು ಮನೆ ಮುಂದೆ ಸೋಮಾರಿಯಾಗಿ ಬಿದ್ದುಕೊಂಡಿದ್ದ ನಾಯಿಗಳನ್ನು ಎಳೆದು ತಂದರು. ಬೇಟೆಯ ನಾಯಿಗಳು ಕಂತ್ರಿನಾಯಿಗಳನ್ನು ನೋಡಿ ಗುರ್ರೆಂದವು. ತಮಟೆಯ ಸಪ್ಪಳ ಮತ್ತಷ್ಟು ಜೋರಾಯಿತು. ಕಂತ್ರಿ ನಾಯಿಗಳು ಕೊಸರಿಕೊಂಡು ಓಟಕಿತ್ತವು. ಅದನ್ನು ನೋಡಿ ಒಬ್ಬ "ಹಿಡದ್ ತಂದ್ ನಾಯಿಗಳು ಬೇಟೆ ಆಡ್ತಾವೇನ್ಲಾ?" ಎಂದು ಛೇಡಿಸಿದ.

ಬೇಟೆಗಾರರ ಗುಂಪು ಈಟಿ, ಕೊಡಲಿ, ಬಲ್ಲೆ, ಹಗ್ಗ, ನಾಡಬಂದೂಕುಗಳನ್ನು ಎತ್ತಿ ಹಿಡಿದು ಕುಣಿತದ ನಡಿಗೆಯಲ್ಲಿ ಸಾಗಿತು. ಮುಖ್ಯಬೀದಿಯಲ್ಲಿ ಮೆರವಣಿಗೆ ಹಾದು ಊರ ಹೊರಗೆ ಬರುವಷ್ಟರಲ್ಲಿ ಕರಗಿತ್ತು. ಮಧ್ಯದಾರಿಯಲ್ಲೇ ಅನೇಕ ಹೆಂಗಸರು ಗುಂಪಿನಿಂದ ತಮ್ಮ ಗಂಡಂದಿರನ್ನು ಮನೆಯೊಳಗೆ ಸೆಳೆದೊಯ್ದಿದ್ದರು.

ಒಬ್ಬಳಂತೂ "ಕಂಡಿಲ್ವಾ ನಿನ್ನ ! ಭಾರಿ ಬೇಟೆಗಾರನಂಗೆ ಹೊಂಟಿಯಾ, ಬಾ ಬಾ ಒಳಿಕ್ಕೆ" ಎಂದು ಎಳೆದೊಯ್ದಳು.

ಮತ್ತೊಬ್ಬಳು "ಮಾಡೋ ಕೆಲ್ಸ ಮಾಡು ಅಂದ್ರೆ ಆಡೋ ದಾಸಯ್ಯನ ಹಿಂದೋಗಿದ್ರಂತೆ. ಅಂಗಾತು ನಿನ್ನ ಕತೆ" ಎಂದು ಕೆಂಗಣ್ಣು ಬಿಟ್ಟು ಗಂಡನನ್ನು ಕರೆದಳು.

ಹುಡುಗರೆಲ್ಲ ತಮ್ಮ ಮನೆ ಸಮೀಪಿಸುತ್ತಿದ್ದಂತೆ ತಪ್ಪಿಸಿಕೊಂಡು ಮುಂದು ಹೋಗುತ್ತಿದ್ದರು. ನಂಗೇನೂ ಭಯವಿರಲಿಲ್ಲ. ನಮ್ಮ ಚಿಕ್ಕದೊಡ್ಡಪ್ಪನವರಿಂದ ಪರವಾನಗಿ ಪಡೆದುಕೊಂಡು ಅಧಿಕೃತವಾಗಿ ಹೊರಟಿದ್ದೆ ಬೇಟೆಗೆ.

ನಮ್ಮೂರಿನಿಂದ ಆರೇಳು ಕಿ.ಮೀ. ದೂರಕ್ಕೆ ಬಂದಿದ್ದೆವು. ಅದು ವಡ್ಡರಪಾಳ್ಯದ ಅಡವಿಯಾಗಿತ್ತು.

ಹನುಮ ಕೈಯೆಳೆದು ನಿಲ್ಲಿಸಿ "ಇಲ್ ನೋಡೋ ಮೊಲ ಈಗಷ್ಟೇ ಹಿಕ್ಕೆ

ಹಾಕಿದೆ. ಇನ್ನೂ ಬಿಸಿಯಾಗಿದೆ. ಅವನಮ್ಮನ್ ಒಂದು ಘಳಿಗೇನೂ ಆಗಿಲ್ಲ. ಇಲ್ಲೇ ಅವಿತ್ಕೊಂಡಿರುತ್ತೆ...." ಎಂದು ಹಿಕ್ಕೆಗಳನ್ನು ಕೈಯಲ್ಲಿ ಹಿಡಿದುಕೊಂಡು ಹೇಳಿದ. ಮುಂದೆ ಹೋಗುತ್ತಿದ್ದ ದೊಡ್ಡವರ ಗುಂಪಿಗೂ ಈ ವಿಷಯ ತಿಳಿಸಿದ. ಅವರೆಲ್ಲ ಈ ಮೊಲ ಹಿಡಿಯುವುದಕ್ಕಾಗಿ ಆಚೀಚೆ ಚದುರಿದರು. ಕೆಲವು ನಿಮಿಷಗಳೂ ಕಳೆದಿರಲಿಲ್ಲ. ಪೊದೆಯೊಳಗಿಂದ ಮೊಲವೊಂದರ ಹಿಂದಿನ ಎರಡು ಕಾಲುಗಳನ್ನು ಹಿಡಿದುಕೊಂಡು ಒಬ್ಬ ಬಂದ. ಹನುಮನ ಗ್ರಹಣಶಕ್ತಿಗೆ ಬೆಚ್ಚಿಬೀಳುವಂತಾಯಿತು ನನಗೆ.

ಬೇಟೆ ಸಿಕ್ಕಿದ್ದರಿಂದ ಎಲ್ಲರಲ್ಲೂ ಉತ್ಸಾಹ ಇಮ್ಮಡಿಸಿತ್ತು. ಬಂದೂಕು ಹೊಡೆಯಬೇಡಿ ಎಂದು ಪದೇಪದೇ ಎಚ್ಚರಿಸಲಾಗುತ್ತಿತ್ತು. ಆದರೆ, ಬಂದೂಕು ಹಿಡಿದವರಿಗೆ ಗುಂಡು ಹಾರಿಸುವ ಹುಮ್ಮಸ್ಸು. ನಾನು ಗುರಪ್ಪನಿಗೆ ಕೇಳಿದೆ : "ಅದೇಕೆ ಬಂದೂಕು ಹೊಡೆಯಬೇಡಿ ಎಂದು ಪದೇ ಪದೇ ಎಚ್ಚರಿಸುತ್ತಿದ್ದಾರೆ? ಹಾಗಿದ್ದರೆ ಬಂದೂಕು ತಂದಿರುವುದೇತಕ್ಕೆ?"

ಅದಕ್ಕೆ ಗೂರಪ್ಪ ಹೇಳತೊಡಗಿದ : "ನೀ ಇನ್ನೂ ಹುಟ್ಟಿರಲಿಲ್ಲ ಆಗಿನ ಮಾತು ಅದು. ಇದೇ ವಡ್ಡರಪಾಳ್ಯದ ಕಾಡಿಗೆ ಬೇಟೆಯಾಡಲು ಬಂದಿದ್ದೆವು. ನಮ್ಮ ಹಾಗೆ ಪಕ್ಕದ ಊರಿನವರೂ ಬೇಟೆಯಾಡಲು ಬಂದಿದ್ದರು.

ತಿರುಮಲಗೌಡ ಬಂದೂಕು ಚಲಾಯಿಸೋದರಲ್ಲಿ ಬಹಳ ನಿಷ್ಣಾತ. ಬೇಟೆ ಆಡುತ್ತಾ ನಮ್ಮೂರ ಗುಂಪು ಚದುರಿತು. ತಿರುಮಲಗೌಡನ ಪಕ್ಕದಲ್ಲಿ ನಾನೇ ಇದ್ದೆ. ನಾವಿದ್ದೋರು ನಾಲ್ಕೇ ಜನ. ಬೇಟೆ ನಾಯಿಗಳು ಬೇರೆ ಕಡೆಗಿದ್ದವು. ಕಾಡುಹಂದಿಯೊಂದು ಓಡಿಹೋದುದರ ಹೆಜ್ಜೆ ಗುರುತುಗಳು ಕಾಣಿಸಿಕೊಂಡವು. ತಿರುಮಲಗೌಡ 'ಗೂರಪ್ಪ ಇವು ಈಯೋದಕ್ಕೆ ಸಿದ್ಧವಾಗಿರೋ ಹಂದಿಯ ಹೆಜ್ಜೆಗಳು' ಎಂದು ಹೇಳಿದ. ಹಂದಿ ಇಟ್ಟ ಹೆಜ್ಜೆಗಳ ಅಂತರ ಮತ್ತು ಹೆಚ್ಚಿನ ಭಾರದಿಂದ ಆದ ಹೆಜ್ಜೆಯ ತಗ್ಗುಗಳನ್ನು ಅಂದಾಜಿಸಿ ಹಾಗೆ ಹೇಳಿದ್ದ ತಿರುಮಲಗೌಡ. ಅಷ್ಟರಲ್ಲಿಯೇ ಒಂದು ಬಸುರಿ ಹಂದಿ ನಮ್ಮ ಕಣ್ಣಮುಂದಿನ ಪೊದೆಯಿಂದ ನೆಗೆದು ಓಡತೊಡಗಿತು. ನಮ್ಮಲ್ಲಿ ನಾಯಿಗಳಿರಲಿಲ್ಲ. ತಿರುಮಲಗೌಡ ಹಂದಿಯ ಬೇಟೆಯನ್ನು ತಪ್ಪಿಸಿಕೊಳ್ಳಬಾರದೆಂದು ಅದು ಓಡುವ ದಿಕ್ಕಿನೆಡೆ ಗುರಿಯಿಟ್ಟು ಗುಂಡು ಹಾರಿಸಿದ. ಹಂದಿ ಚೀರುತ್ತಾ ನೆಲಕ್ಕುರುಳಿತು. ಅದೇ ಸಮಯಕ್ಕೆ ಎದುರುಗಡೆಯ ಪಕ್ಕದ ಊರಿನ ಶಿಕಾರಿ ಗುಂಪಿನಿಂದ ಹೋ ಎನ್ನುವ ಆಕ್ರಂದನ ಕೇಳಿಬರತೊಡಗಿತು. ತಿರುಮಲಗೌಡ ಹಾರಿಸಿದ ಗುಂಡು ಹಂದಿಯ ದೇಹವನ್ನು ಭೇದಿಸಿಕೊಂಡು ಹೋಗಿ ಮುಂದೆ ಇದ್ದ ಶಿಕಾರಿ ಗುಂಪಿನಲ್ಲಿಯ ಒಬ್ಬನ ದೇಹವನ್ನು

ಹೊಕ್ಕಿತ್ತು. ನಾವು ಆ ಸ್ಥಳಕ್ಕೆ ಹೋಗುವಷ್ಟರಲ್ಲಿ ಅವನು ಅಸುನೀಗಿದ್ದ. ಬೇಟೆಗಾರನೇ ಸ್ವತಃ ಬೇಟೆ ಆಗಿಬಿಟ್ಟಿದ್ದ. ಎರಡೂ ಊರಿನವರು ಪಂಚಾಯಿತಿ ಮಾಡಿದರು. ಕೋರ್ಟಿಗೆ ಹೋಗುವುದು ಬೇಡ ಎಂದು ನಿರ್ಣಯಿಸಿದರು. ಅಂದಿನಿಂದ ತಿರುಮಲಗೌಡ ಮತ್ತೆ ಬಂದೂಕನ್ನು ಮುಟ್ಟಲಿಲ್ಲ. ಅಂದಿನಿಂದ ಬಂದೂಕು ಹೊಡೆದು ಶಿಕಾರಿ ಮಾಡುವುದಕ್ಕೆ ಎಲ್ಲರೂ ಹಿಂಜರಿಯತೊಡಗಿದರು. ಈಗ ತಂದಿರೋ ಬಂದೂಕುಗಳು ತೀರಾ ಸಾದಾ ; ಅವುಗಳಿಂದ ಹೊಡೆದರೆ ಮೊಲಗಳೂ ಬೇಗ ಸಾಯೋಲ್ಲ."

ಊರಿನ ಹೆಂಗಸರು ತಮ್ಮ ಗಂಡಸರನ್ನು ಬೇಟೆಗೆ ಹೋಗದಂತೆ ಏಕೆ ಒಳಗೆಳೆಯುತ್ತಿದ್ದರು ಎನ್ನುವುದು ನನಗೆ ಅರ್ಥವಾಯಿತು.

ನಾನು ಕಾಲೇಜ್ ಸೇರಿದ ಮೇಲೂ ಬೇಟೆಯ ಸೀಜನ್‌ನಲ್ಲಿ ಊರಿಗೆ ಬಂದು ಎಲ್ಲರೊಂದಿಗೆ ಸೇರಿ ಶಿಕಾರಿಗೆ ಹೋಗುವುದರಲ್ಲಿ ಮಜಾ ಕಂಡುಕೊಳ್ಳುತ್ತಿದ್ದೆ. ಶಿಕಾರಿಯಿಂದ ಗುರಿ, ಶ್ರದ್ಧೆ, ಏಕಾಗ್ರತೆ, ತಾಳ್ಮೆಗಳನ್ನು ಅಳವಡಿಸಿಕೊಳ್ಳಬಹುದೆಂದು ತಿಳಿದುಕೊಂಡೆ.

ಕೊಲೆ, ಆತ್ಮಹತ್ಯೆಗಳು ನಡೆದರೆ ಪ್ರಕರಣಗಳು ಕೋರ್ಟಿಗೆ ಹೋಗದಂತೆ ತಡೆಯುವ ಶಕ್ತಿ ಹಳ್ಳಿಗಳ ಪಾಳೇಗಾರಿ ಕಪಿಮುಷ್ಟಿಗೆ ಇರುವುದನ್ನು ದೊಡ್ಡವನಾದ ಮೇಲೆ ಕಂಡು ವಿಸ್ಮಯಗೊಂಡಿದ್ದೇನೆ.

14

ಶೌರ್ಯ, ಪರಾಕ್ರಮಗಳು ತಲ್ಲಣಿಸುವ ಕ್ಷಣಗಳು

ನಮ್ಮ ಶಾಲೆಯಿಂದ ಐವತ್ತು ಕಿ.ಮೀ. ದೂರದ ದೇವರಾಯನದುರ್ಗಕ್ಕೆ ಪಿಕ್‌ನಿಕ್‌ಗೆ ಹೋಗುವ ಕಾರ್ಯಕ್ರಮವನ್ನು ಶಿಕ್ಷಕರೆಲ್ಲ ಸೇರಿ ಯೋಜಿಸಿದ್ದಾರೆಂದು ತಿಳಿದು ಕುಣಿದಾಡುವಂತಾಯಿತು. ದೇವರಾಯನದುರ್ಗ ತುಮಕೂರಿಗೆ ಸಮೀಪ. ಅಷ್ಟು ದೂರದ ಪ್ರವಾಸವನ್ನು ಆವರೆಗೆ ನಾನು ಮಾಡಿಯೇ ಇರಲಿಲ್ಲ. ಅಷ್ಟು ದೂರದವರೆಗೆ ಬಸ್‌ನಲ್ಲಿ ಕೂತು ಪ್ರಯಾಣಿಸುವ ಸುಖವನ್ನು ಕಲ್ಪಿಸಿಕೊಂಡು ಹಿಗ್ಗಿದೆ. ಅದೆಷ್ಟೋ ಬಾರಿ ಊರು ಬಂದರೂ ಬಸ್ ಬಿಟ್ಟು ಇಳಿಯಲು ಮನಸ್ಸಾಗುತ್ತಿರಲಿಲ್ಲ, 'ಇಷ್ಟೇಕೆ ಬೇಗ ಬಂದುಬಿಟ್ಟಿತು ಈ ಊರು?" ಎಂದು!

ಪಿಕ್‌ನಿಕ್‌ಗೆ ಬರಲಿಚ್ಛಿಸುವವರು ಐದು ರೂಪಾಯಿಗಳನ್ನು ಕೊಡಬೇಕು ಎನ್ನುವುದು ತಿಳಿದಾಗ ಸ್ವಲ್ಪ ಮಂಕಾದೆ. ಅಷ್ಟು ದೊಡ್ಡ ಮೊತ್ತವನ್ನು ನಮ್ಮ ತಂದೆ ಅಥವಾ ಚಿಕ್ಕದೊಡ್ಡಪ್ಪನವರಿಂದ ಇಸಿದುಕೊಳ್ಳಲು ಸಾಧ್ಯವಿರಲಿಲ್ಲ. ದೊಡ್ಡಪ್ಪನವರನ್ನು ಕೇಳದೆ ಬೇರೆ ವಿಧಿಯೇ ಇರಲಿಲ್ಲ. ನೇರ ಹೋಗಿ ಕೇಳುವಂತೆಯೂ ಇರಲಿಲ್ಲ. ಚಿಕ್ಕದೊಡ್ಡಪ್ಪನವರೇ ಸರಿಯಾದ ರಾಯಭಾರಿ ಎಂದು ನಿಶ್ಚಯಿಸಿಕೊಂಡೆ.

ರಾತ್ರಿ ಮನೆಯಲ್ಲಿ ದೊಡ್ಡಪ್ಪನವರನ್ನು ಚಿಕ್ಕದೊಡ್ಡಪ್ಪ ಯಾವಾಗ ಮಾತನಾಡಿಸುವರೋ ಎಂದು ಕಾಯತೊಡಗಿದೆ. ಕೈಗಳು ಬೇರೆ ಕೆಲಸ ಮಾಡುತ್ತಿದ್ದರೂ ಕಿವಿಗಳು ಮಾತ್ರ ಚಿಕ್ಕದೊಡ್ಡಪ್ಪನವರ ಧ್ವನಿಗಾಗಿ ತಹತಹಿಸ ತೊಡಗಿದವು ಯಾವಾಗ ನನ್ನ ಪಿಕ್‌ನಿಕ್ ಬೇಡಿಕೆಯನ್ನು ಪ್ರಸ್ತಾಪಿಸುವರೋ ಎಂದು. ನನ್ನ ತಾಳ್ಮೆಯನ್ನು ಕೆಣಕುವಂತೆ ಚಿಕ್ಕದೊಡ್ಡಪ್ಪನವರು ನನಗೆ ಸಂಬಂಧಿಸದ ಬೇರೆ ವಿಷಯಗಳನ್ನೇ ಮಾತಾಡತೊಡಗಿದರು ಬಹಳ ಹೊತ್ತಿನವರೆಗೆ.

ನನ್ನ ಮನೆಯ ವಾತಾವರಣದ ಬಗೆಗೆ ಅಸಮಾಧಾನ ತೀವ್ರಗೊಳ್ಳತೊಡಗಿತು. ಇಂಥ ಸಣ್ಣಪುಟ್ಟ ಆಶೆ ತೀರಿಸಿಕೊಳ್ಳಲೂ ಅದೆಷ್ಟು ಹೆಣಗಬೇಕಲ್ಲ ಎಂದು. ನಮ್ಮ ಮನೆಯಲ್ಲಿ ಪ್ರತಿಯೊಂದನ್ನೂ ಹೋರಾಡಿ ಪಡೆದುಕೊಳ್ಳಬೇಕಾಗಿತ್ತು. ನಮ್ಮಪ್ಪ, ನಮ್ಮಮ್ಮ ಅಷ್ಟೇ ಪ್ರತ್ಯೇಕ ಇದ್ದಿದ್ದರೆ ನನಗಿಂಥ ಪರಿಸ್ಥಿತಿ ಬರುತ್ತಿರಲಿಲ್ಲ ಎನಿಸಿತು.

ಹೀಗೆ ನನ್ನ ಯೋಚನಾಲಹರಿ ಸಾಗಿರುವಾಗ ಚಿಕ್ಕದೊಡ್ಡಪ್ಪ "ನಮ್ಮ ಹನುಮಂತೂ ಅದೇನೊ ಪಿಕ್‌ನಿಕ್‌ಗೆ ಹೋಗ್ತವ್ನಂತೆ ದೇವರಾಯನದುರ್ಗಕ್ಕೆ. ಅದ್ಕೇ ಐದು ರೂಪಾಯಿ ಕೊಡಬೇಕಂತೆ" ಎಂದಾಗ ನನ್ನ ಕಿವಿ ಮತ್ತು ಮನಸ್ಸುಗಳೆರಡೂ ಜಾಗ್ರತಗೊಂಡವು.

ನಮ್ಮ ದೊಡ್ಡಪ್ಪ "ಹಾಂ? ಇಷ್ಟು ದೊಡ್ಡೋನಾಗಿರೊ ನಾನೇ ಆ ದೇವರಾಯನದುರ್ಗ ನೋಡಿಲ್ಲ ಈವರ್ಗೆ, ಅವ್ನು ಹೋಗ್ತವ್ನಂತಾ? ಅದೂ ಅಲ್ದೆ ಮನೆ ಹಿರಿಯೋರು ಜೊತೆಗಿಲ್ದೆ, ಹೋಗೋದು ಅಂದ್ರೆ ಸುಮ್ನೇನಾ? ಏನಾದ್ರೂ ಆದ್ರೆ ಯಾರು ಹೊಣೆ? ಸುತಾರಾಂ ಬೇಕಿಲ್ಲ...." ಎಂದು ಅಬ್ಬರಿಸಿದರು.

ನನಗೆ ಐದುರೂಪಾಯಿ ಕೊಡಲು ಇಷ್ಟವಿಲ್ಲದ್ದಕ್ಕೆ ನನ್ನ ಸಂರಕ್ಷಣೆಯ ನೆಪ ಮುಂದಿಡುತ್ತಿದ್ದಾರೆ ಈ ದೊಡ್ಡಪ್ಪ ಎನಿಸಿತು. "ನಿಮ್ಗೆ ದುಡ್ಡು ಕೊಡೋಕೆ ಮನಸ್ಸಿಲ್ದಿದ್ರೆ ಅದನ್ನೇ ಒಡೆದು ಹೇಳಿ, ಸುಮ್ನೆ ನನ್ನ ಬಗ್ಗೆ ಕಾಳಜಿ ವಹಿಸಿ ಮಾತಾಡ್ಬೇಡಿ" ಎಂದು ಬಯ್ದು ಹೇಳಬೇಕೆನಿಸಿತು; ಬಾಯಿ ತೆರೆಯುವಂತಿರಲಿಲ್ಲ.

ನಮ್ಮ ದೊಡ್ಡಪ್ಪ ಹೇಳಿದ ಒಂದೇ ಮಾತಿಗೆ ನಮ್ಮ ಚಿಕ್ಕದೊಡ್ಡಪ್ಪ ಸುಮ್ಮನಾಗಿಬಿಟ್ಟರು. ನಮ್ಮ ದೊಡ್ಡಪ್ಪನವರ ಮಾತಿಗಿಂತ ಚಿಕ್ಕದೊಡ್ಡಪ್ಪ ನನ್ನ ವಕಾಲತ್ತು ವಹಿಸಿ ಸಮಜಾಯಿಷಿ ನೀಡಲಿಲ್ಲವಲ್ಲ ಎನ್ನುವುದು ಹೆಚ್ಚಿನ ಬೇಜಾರುಂಟುಮಾಡಿತು. ದುಃಖ ಒತ್ತರಿಸಿ ಬಂದಿತು. ನನ್ನ ಪುಸ್ತಕಗಳನ್ನೆಲ್ಲ ಚೀಲಕ್ಕೆ ಹಾಕಿ ಹಾಸಿಗೆಯತ್ತ ನಡೆದೆ. ಕಂಬಳಿಯನ್ನು ಮುಖದ ಮೇಲೆಳೆದುಕೊಂಡಿದ್ದೇ ತಡ ಕಣ್ಣುಗಳಿಂದ ನೀರು ಹರಿಯತೊಡಗಿತು.

ಮಾರನೇ ದಿನ ಭುಜಂಗರಾಯರ ಮನೆಗೆ ಹಾಲು ಕೊಡಲು ಹೊರಟಾಗ ನಡುದಾರಿಯಲ್ಲೇ ಒಂದು ಯೋಚನೆ ಫಕ್ಕೆಂದು ಹೊಳೆದು ಹಿಗ್ಗಿ ಹೀರೇಕಾಯಿಯಾಯಿತು ಮನಸ್ಸು.

ಮುಂಚೇನೇ ಜಬರದಸ್ತ್ ವಶೀಲಿ ಹಚ್ಚಬೇಕಾಗಿತ್ತು, ಭುಜಂಗರಾವ್ ಹೇಳಿದ್ದರೆ ದೊಡ್ಡಪ್ಪನಿಗೆ ಇಲ್ಲವೆನ್ನುವ ಧೈರ್ಯ ಆಗುತ್ತಿರಲಿಲ್ಲ ಎಂದುಕೊಂಡೆ.

ಎಂದಿನಂತೆ ಹಾಲು ಹಾಕಿ ಹೊರಟುಹೋಗದೆ ಏನನ್ನೋ ಹೇಳುವವನಂತೆ ಕಾಲಿನ ಹೆಬ್ಬೆರಳಿನಿಂದ ನೆಲಕೆರೆಯುತ್ತ ನಿಂತುದನ್ನು ನೋಡಿದ ಭುಜಂಗರಾಯರು "ಅದೇನೋ ಹನುಮಂತ್ರಾಯ? ಏನೋ ಹೇಳಲಿಕ್ಕಿರೋ ಹಂಗಿದೆ?" ಎಂದರು.

"ನಮ್ಮ ಸ್ಕೂಲಲ್ಲಿ ಪಿಕ್‌ನಿಕ್ ಹೊರಟವ್ರೆ. ದೊಡ್ಡಪ್ಪ ನಂಗೆ ಹೋಗಬೇಡ ಅಂತಿದಾರೆ" ಎಂದೆ.

"ಅದ್ಯಾಕಂತೆ? ನೀವು ಹುಡುಗರು ಅಷ್ಟೇ ಏನೂ ಹೊಂಟಿಲ್ವಲ್ಲ. ಜೊತೆಗೆ ನಿಮ್ಮ ಟೀಚರ್ರೂ ಬರ್ತಾರೆ ಅಲ್ವೆ?"

"ಎಲ್ಲಾ ಟೀಚರ್‌ಗಳೂ ಬರ್ತಿದಾರೆ....." ಎಂದೆ.

"ಸರಿ ಹಂಗಿದ್ರೆ ನೀ ಮುಂದೆ ನಡಿ, ನಾ ಈಗ್ಲೇ ಬಂದೆ. ನಿಮ್ಮ ದೊಡ್ಡಪ್ಪಂಗೆ ಹೇಳಾಕೆ" ಎಂದರು.

ನಾನು ಮನೆ ಮುಟ್ಟಿ ಕಾಲುಗಂಟೆಯೂ ಆಗಿರಲಿಲ್ಲ. ಭುಜಂಗರಾವ್ ಬಂದೇ ಬಿಟ್ಟರು. ನಮ್ಮ ದೊಡ್ಡಪ್ಪ "ಇದೇನು ಭುಜಂಗರಾಯರೇ ಇವತ್ತು ಇಷ್ಟು ಬೇಗ ನಮ್ಮನೇಗೆ ಬಂದು ಬಿಟ್ಟಿದೀರಿ ಅಂಥಾ ದೊಡ್ಡ ಸಂಗತಿ ಏನು?" ಎಂದರು.

"ಅಲ್ಲಾ ನಿಮ್ಮ ಹನುಮಂತ್ರಾಯನ ಸ್ಕೂಲಾಗೆ ಪಿಕ್‌ನಿಕ್‌ಗೆ ಹೋಗ್ತವ್ರಂತೆ. ಇವ್ನೂ ಹೋಗ್ಲಿಬಿಡು. ಪರಸ್ಥಳ ನೋಡಿದಷ್ಟು ಹುಡುಗ್ರಿಗೆ ಬುದ್ಧಿ ಬಲೀತದೆ. ಅಪಾಯ ಏನೂ ಇಲ್ಲ. ಜೊತೆಗೆ ಎಲ್ಲ ಮೇಷ್ಟ್ರುಗಳು ಇರ್ತಾರಂತೆ" ಎಂದರು.

"ನೀವು ಹೇಳಿದ್ ಮೇಲೆ ಆಯ್ತು ಬಿಡಿ, ನನ್ನ ತಕರಾರೇನೂ ಇಲ್ಲ" ಎಂದು ದೊಡ್ಡಪ್ಪ ಹೇಳಿದಾಗ ಆಶ್ಚರ್ಯಾನಂದಗಳು ಏಕಕಾಲಕ್ಕೆ ಹೊಮ್ಮಿದವು ನನ್ನಲ್ಲಿ.

ದೇವರಾಯನದುರ್ಗವನ್ನು ತಲುಪಿದೆವು. ಭಿನ್ನ ನಿಸರ್ಗವು ಮನಸ್ಸನ್ನು ಪುಳಕಗೊಳಿಸಿತು. ಊರಿನ ವಾತಾವರಣದಲ್ಲಿ ಸದಾ ಅವ್ಯಕ್ತವಾಗಿ ಕಾಡುವ

ಭಯ, ಚಿಂತೆ, ಒಳಗುದಿ, ನಿರೀಕ್ಷಣಾ ಭಯಗಳು ಮಾಯವಾಗಿ ಮನಸ್ಸು ಹಗುರವಾಗಿ ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಯಿತು.

ನಾವು ಪಿಕ್‌ನಿಕ್‌ಗೆ ಬಂದ ಸ್ಥಳದಲ್ಲಿ ಐ.ಬಿ. ಇತ್ತು. ಬಂದು ಹೋಗುವವರ ಕಾಟ ಅಷ್ಟಾಗಿ ಇರಲಿಲ್ಲವೇನೊ, ಐ.ಬಿ. ಸಹ ನಿಸರ್ಗದ ಮೌನದಲ್ಲಿ ಒಂದಾಗಿರುವಂತೆ ಕಾಣುತ್ತಿತ್ತು. ನಾವು ತಂದಿದ್ದ ಊಟ, ತಿಂಡಿಗಳನ್ನು ಪರಸ್ಪರ ಹಂಚಿಕೊಂಡು ತಿಂದೆವು. ನಾವು ಹುಡುಗರೆಲ್ಲ ಗುಂಪುಗುಂಪಾಗಿ ನಿಂತು ಹರಟೆಯಲ್ಲಿ ತಲ್ಲೀನರಾಗಿದ್ದೆವು. ನಾವು ತಂಗಿದ್ದ ಸ್ಥಳದತ್ತ ಕಾರೊಂದು ಬಂದಿತು. ಕಾರಿನಿಂದ ಇಬ್ಬರು ಇಳಿದು ಐ.ಬಿ.ಯೊಳಗೆ ಹೋದರು.

ನಮ್ಮ ಮೇಷ್ಟ್ರು ಅದೇನೊ ಒಬ್ಬರಿಗೊಬ್ಬರು ಮಾತಾಡಿಕೊಂಡರು. ಸ್ವಲ್ಪ ಸಮಯ ಬಿಟ್ಟು ಮೇಷ್ಟ್ರುಗಳೂ ಐ.ಬಿ.ಯೊಳಗೆ ಹೋಗಿಬಂದರು.

ನಮ್ಮ ಮೇಷ್ಟ್ರೊಬ್ಬರು ಸೀಟಿ ಊದಿದರು. ಸ್ಕೌಟ್ ಸೇರಿದ್ದ ಹುಡುಗರೆಲ್ಲ ಅವರ ಮುಂದೆ ಹೋಗಿ ಆಜ್ಞೆಗಾಗಿ ಕಾಯ್ದು ನಿಂತುಕೊಂಡೆವು.

"ಇದೀಗ ಕಾರಲ್ಲಿ ಬಂದವರು ತುಮಕೂರಿನ ಪ್ರಖ್ಯಾತ ವಕೀಲರಾದ ಜಯಸಿಂಹರಾವ್. ಬಯಸದೇ ಬಂದ ಭಾಗ್ಯ ಎನ್ನುವಂತಾಗಿದೆ ನಮಗೆ. ನಮ್ಮ ಶಾಲಾ ಮಕ್ಕಳಿಗೆ ನಿಮ್ಮ ಹಿತವಚನ ಹೇಳಿರಿ ಎಂದು ಕೇಳಿಕೊಂಡೆವು. ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ನೀವು ವಿದ್ಯಾರ್ಥಿಗಳನ್ನೆಲ್ಲ ಶಿಸ್ತಿನಿಂದ ಕೂರಿಸಿ" ಎಂದರು.

ವಿದ್ಯಾರ್ಥಿಗಳೆಲ್ಲ ಸಾಲಾಗಿ ಕೂರುವಷ್ಟರಲ್ಲಿ ಜಯಸಿಂಹರಾವ್ ಹೊರಬಂದರು. ಐ.ಬಿ.ಯ. ಕೆಲಸಗಾರ ಕುರ್ಚಿಗಳನ್ನು ತಂದು ಹಾಕಿದ.

ಜಯಸಿಂಹರಾವ್ ಮಾತಾಡಲಾರಂಭಿಸಿದರು :

"ಮಕ್ಕಳೆ ನಿಮ್ಮ ಶಿಕ್ಷಕರಂತೆ ನನಗೆ ಕ್ಲಾಸ್ ತೆಗೆದುಕೊಳ್ಳಲು ಬರುವುದಿಲ್ಲ. ನಿಮಗೆ ತಿಳಿಯುವಂತೆ ಸರಳ ಭಾಷೆಯಲ್ಲಿ ನನಗೆ ಭಾಷಣ ಮಾಡಲೂ ಬರುವುದಿಲ್ಲ. ನಿಮ್ಮ ಶಿಕ್ಷಕರೆಲ್ಲ ನಮ್ಮ ವಿದ್ಯಾರ್ಥಿಗಳಿಗೆ ಏನನ್ನಾದರೂ ನೀವು ಹೇಳಲೇಬೇಕು ಎಂದು ಒತ್ತಾಯಿಸಿದ್ದಾರೆ. ಮಹಾಭಾರತದ ಒಂದು ಭಾಗವನ್ನು ನಿಮಗೆ ಹೇಳುತ್ತೇನೆ.

ಕುರುಕ್ಷೇತ್ರ ಯುದ್ಧ ಆರಂಭವಾಗಿತ್ತು. ಕೌರವರ ಬಳಿ ಅಪಾರ ಸೈನ್ಯ. ಅತಿರಥ ಮಹಾರಥರಿದ್ದರು. ಪಾಂಡವರ ಬಳಿ ಕೃಷ್ಣ ಮಾತ್ರ ಇದ್ದ. ಪಾಂಡವರಿಗೆ ಗೆಲುವನ್ನು ತನ್ನ ತಂತ್ರದಿಂದ ಮಾತ್ರ ತಂದುಕೊಡಬೇಕಿತ್ತು ಕೃಷ್ಣ. ರಣರಂಗದಲ್ಲಿ

ಸಾಮ, ದಾನಗಳು ಕೆಲಸಕ್ಕೆ ಬರುವುದಿಲ್ಲ. ಶೂರ ಕರ್ಣನನ್ನು ಅವಸಾನಗೊಳಿಸಲು ಭೇದೋಪಾಯವನ್ನು ಬಳಸುತ್ತಾನೆ ಕೃಷ್ಣ.

ಶಲ್ಯ ಮಹಾರಾಜನನ್ನು ಕರ್ಣನಿಗೆ ಸಾರಥಿಯನ್ನಾಗಿ ಮಾಡಿರುತ್ತಾನೆ ದುರ್ಯೋಧನ.

ಆಗ ಕೃಷ್ಣ ಶಲ್ಯನ ಬಿಡಾರಕ್ಕೆ ಹೋಗಿ "ಹೋಗಿ ಹೋಗಿ ಆ ಸೂತಪುತ್ರನಿಗೆ ನಿನ್ನಂಥ ಮಹಾರಾಜ ಸಾರಥಿಯಾಗಬೇಕೆ?" ಎಂದು ಕೆಣಕಿ ಬರುತ್ತಾನೆ.

ಕೃಷ್ಣನ ಈ ಕೆಣಕು ಮಾತುಗಳು ಶಲ್ಯನ ತಲೆಯಲ್ಲಿ ಕೊರೆಯತೊಡಗುತ್ತವೆ. ಕರ್ಣನಿಗಿಂತ ತಾನೇ ಮೇಲೆ ಮತ್ತು ಶೂರನೆಂದು ತೋರಿಸಿಕೊಳ್ಳುವ ಮನಸ್ಸು ಶಲ್ಯನಿಗೆ ಉಂಟಾಗುತ್ತದೆ.

ಮಾರನೆ ದಿನ ಯುದ್ಧಭೂಮಿಗೆ ತೆರಳುವಾಗ ಸಾರಥಿ ಶಲ್ಯ ಕರ್ಣನನ್ನು ವಿನಾಕಾರಣ ತೆಗಳಲು ಆರಂಭಿಸುತ್ತಾನೆ. ಕರ್ಣನ ವೈರಿ ಅರ್ಜುನನ ಪರಾಕ್ರಮಗಳನ್ನು ಹೊಗಳತೊಡಗುತ್ತಾನೆ.

ಇದರಿಂದ ಕರ್ಣನಿಗೆ ಶಲ್ಯನ ಮೇಲೆ ಎಲ್ಲಿಲ್ಲದ ಕೋಪವುಂಟಾಗುತ್ತದೆ. ಕರ್ಣನ ಮನಸ್ಥಿತಿ ಹೇಗಾಗುತ್ತದೆಂದರೆ, ಶಲ್ಯ ಏನೇ ಹೇಳಿದರೂ ಅದಕ್ಕೆ ವಿರುದ್ಧ ಮಾಡಬೇಕೆನ್ನುವಂಥದಾಗಿ ಬಿಡುತ್ತದೆ !

ಕೃಷ್ಣ ಶಲ್ಯನನ್ನು ಕಾಣುವುದಕ್ಕಿಂತ ಮುಂಚೆಯೇ ಕುಂತಿಯನ್ನು ಕರ್ಣನ ಬಳಿಗೆ ಕಳಿಸಿರುತ್ತಾನೆ. ಅಘೋಷಿತ ತಾಯಿ ಕುಂತಿಗೆ ಕರ್ಣನಿಂದ ತೊಟ್ಟ ಬಾಣವನ್ನು ಮತ್ತೆ ತೊಡಲಾರೆನೆನ್ನುವ ಭಾಷೆ ಪಡೆದುಕೊಂಡು ಬಂದಿರುತ್ತಾಳೆ.

ಕರ್ಣ ಮತ್ತು ಅರ್ಜುನರ ಯುದ್ಧದಲ್ಲಿ ಬಾಣಗಳ ಸುರಿಮಳೆಯೇ ಆಗುತ್ತದೆ. ಖಾಂಡವ ವನವನ್ನು ಕೃಷ್ಣ ಮತ್ತು ಅರ್ಜುನರು ಸೇರಿ ಸುಟ್ಟ ಸೇಡನ್ನು ತೀರಿಸಿಕೊಳ್ಳಲು ನಾಗನೊಬ್ಬ ಕರ್ಣನ ಬತ್ತಳಿಕೆಯಲ್ಲಿ ಸರ್ಪಾಸ್ತ್ರವಾಗಿ ಸೇರಿಕೊಂಡಿರುತ್ತಾನೆ. ಅರ್ಜುನನ ಶಿರಚ್ಛೇದ ಮಾಡಬಲ್ಲ ಅಸ್ತ್ರ ಅದೊಂದೇ ಆಗಿರುತ್ತದೆ.

ಕರ್ಣ ಸರ್ಪಾಸ್ತ್ರವನ್ನು ಬಿಲ್ಲಿಗೇರಿಸಿ ಅರ್ಜುನನ ಕುತ್ತಿಗೆಗೆ ಗುರಿಯಿಡುತ್ತಾನೆ.

ಶಲ್ಯ ತನ್ನ ಕೆಣಕು ಧ್ವನಿಯಲ್ಲಿ "ಎಲೋ ಕರ್ಣ ನೀನು ಅರ್ಜುನನ ಕುತ್ತಿಗೆಗೆ ಗುರಿಯಿಟ್ಟಿರುವೆ. ಆ ಕೃಷ್ಣ ತನ್ನ ರಥವನ್ನು ನೆಲದೊಳಕ್ಕೆ ಅದುಮಿಬಿಡುತ್ತಾನೆ. ನಿನ್ನ ಬಾಣ ಅರ್ಜುನನ ಕಿರೀಟವನ್ನುರುಳಿಸುತ್ತದೆ; ರುಂಡವನ್ನಲ್ಲ!" ಎನ್ನುತ್ತಾನೆ.

ಯುದ್ಧಕ್ಕೆ ಹೊರಡುವಾಗಿನಿಂದಲೂ ಶಲ್ಯ ಕರ್ಣನನ್ನು ಕುಟುಕಿ ಕುಟುಕಿ ಅವನ ಮನಸ್ಸನ್ನು ಏತಿ ಎಂದರೆ ಪ್ರೇತಿ ಎನ್ನುವಂತೆ ಮಾಡಿಟ್ಟಿರುತ್ತಾನೆ.

ಶಲ್ಯನ ಮಾತಿನಿಂದ ಸ್ಫೋಟಗೊಂಡ ಕರ್ಣ "ತೊಟ್ಟ ಬಾಣವನ್ನು ಮತ್ತೆ ತೊಡಲಾರೆನಷ್ಟೇ ಅಲ್ಲ ಇಟ್ಟ ಗುರಿಯನ್ನೂ ಬದಲಿಸಲಾರೆ...." ಎದು ಘೋಷಿಸಿ ಬಾಣ ಬಿಟ್ಟೇ ಬಿಡುತ್ತಾನೆ.

ಕೃಷ್ಣ ರಥವನ್ನು ಒಂದುಗೇಣು ಭೂಮಿಯೊಳಗೆ ಅದುಮುತ್ತಾನೆ. ಅಸ್ತ್ರವು ಅರ್ಜುನನ ಕಿರೀಟವನ್ನು ಮಾತ್ರ ಉರುಳಿಸುತ್ತದೆ.

ನೋಡಿ ಮಕ್ಕಳೆ, ಕರ್ಣ ದಾನವೀರನಿರುವಂತೆಯೇ ರಣಧೀರನೂ ಇರುತ್ತಾನೆ. ಶೂರನಿರುವಂತೆಯೇ ಪರಾಕ್ರಮಿಯೂ ಆಗಿರುತ್ತಾನೆ. ಆದರೆ, ಮನೋನಿಗ್ರಹಿ ಮಾತ್ರ ಆಗಿರುವುದಿಲ್ಲ. ಅವನ ಈ ಅಶಕ್ತತೆಯನ್ನು ಚೆನ್ನಾಗಿ ಅರಿತಿದ್ದ ಕೃಷ್ಣ ಕರ್ಣನನ್ನು ಮುಗಿಸಲು ಅವನ ಸಾರಥಿ ಶಲ್ಯನನ್ನೇ ಅಸ್ತ್ರವಾಗಿಸಿಕೊಳ್ಳುತ್ತಾನೆ !

ಮನೋನಿಗ್ರಹ ಇದ್ದರೆ ಮಾತ್ರ ನಮ್ಮ ವಿದ್ಯೆಗಳು ಕ್ಲುಪ್ತ ಕಾಲದಲ್ಲಿ ಫಲ ಕೊಡುತ್ತವೆ ಎನ್ನುವುದನ್ನು ಮಹಾಭಾರತದ ಈ ಪ್ರಸಂಗದಿಂದ ನಾನು ಕಲಿತುಕೊಂಡಿದ್ದೇನೆ. ಇದರ ಮರ್ಮವನ್ನು ನೀವೂ ತಿಳಿದುಕೊಳ್ಳುತ್ತೀರಿ ಎಂದು ನಿಮ್ಮ ಮುಂದೆ ಹೇಳಿದ್ದೇನೆ" ಎಂದು ತಮ್ಮ ಹಿತವಚನವನ್ನು ಮುಗಿಸಿದರು.

ಜಯಸಿಂಹರಾವ್ ಅವರು ಹೇಳಿದ ಕಥೆ ಉಳಿದ ಹುಡುಗರ ಮೇಲೆ ಎಂಥಾ ಪರಿಣಾಮ ಬೀರಿತೊ ತಿಳಿಯದು! ನನ್ನ ಮನಸ್ಸಿನ ಮೇಲೆ ಅಚ್ಚಳಿಯದಂತೆ ಮುದ್ರೆಯೊತ್ತಿಬಿಟ್ಟಿತು ಆ ಕಥೆ.

ಆವರೆಗೆ, ಮಹಾಭಾರತವನ್ನು ಕೇವಲ ಕಥೆಯಾಗಿ, ಪುರಾಣವಾಗಿ ಕೇಳುತ್ತಿದ್ದ ನನಗೆ ಅದರಲ್ಲಿ ಬೇರೊಂದು ಹೊಳಹು ಕಂಡಿತು.

15

ಹೆಣ್ಣುಜೇನಿನ ಮುತ್ತಿಗೆ ಕೋತಿಯಂತಾದೆ

ಮಿಡ್ಲ್‌ಸ್ಕೂಲ್ ಮುಗಿಸುವ ಹೊತ್ತಿಗೆ ನಾನು ಮತ್ತು ನನ್ನ ಸಹಪಾಠಿಗಳು ಜೇನು ಕೀಳುವ ಹವ್ಯಾಸಕ್ಕಂಟಿಕೊಂಡುಬಿಟ್ಟಿದ್ದೆವು. ಜೇನುಗಳ್ಳರು ಉಡಗಳನ್ನು ಉಪಯೋಗಿಸಿ ದುರ್ಗಮ ಬೆಟ್ಟದ ಕಡಿದಾದ ಬಂಡೆಗಲ್ಲುಗಳ ಮಧ್ಯೆ ಜೇನು ಕೀಳುತ್ತಿದ್ದ ದೃಶ್ಯ ನಮ್ಮನ್ನ ಸೆರೆ ಹಿಡಿದಿಟ್ಟಿತ್ತು. ಜೇನುಗಳ್ಳರಂತೆ ನಾವು ಸಾಹಸಮಯವಾಗಿ ಜೇನು ಕೀಳಬೇಕು ಎನ್ನುವ ಅದಮ್ಯ ಉತ್ಸಾಹ ನಮ್ಮಲ್ಲಿ ಉಕ್ಕುತ್ತಿತ್ತು. ನಾನು ಏಕೆ ಉಡಗಳನ್ನು ಸಾಕಬಾರದೆನ್ನುವ ಯೋಜನೆಯೂ ಒಮ್ಮೆ ಹೊಳೆಯಿತು. ಆದರೆ, ಊರಲ್ಲಿ ಯಾರೂ ಉಡಗಳನ್ನು ಸಾಕುತ್ತಿರಲಿಲ್ಲ. ನಾನು ಮಾತ್ರ ಅಂಥ ಸಾಹಸ ಮಾಡಹೋಗುವುದು ಒದೆ ತಿನ್ನುವುದಕ್ಕೆ ದಾರಿ ಮಾಡಿಕೊಡಬಹುದೆನ್ನುವ ಭಯವಿಟ್ಟುಕೊಂಡೇ ಚಿಕ್ಕದೊಡ್ಡಪ್ಪನಿಗೆ ಪ್ರಶ್ನಿಸಿದೆ : "ಊರಲ್ಲಿ ಯಾರೂ ಉಡ ಸಾಕೋಲ್ವೆ ಯಾಕೆ?" ಅದಕ್ಕೆ ಚಿಕ್ಕದೊಡ್ಡಪ್ಪ ಮುಖ ಸಿಂಡರಿಸಿಕೊಳ್ಳುತ್ತಾ "ಉಡ ಸಾಕೋಕೆ ಊರಲ್ಲಿ ಅಡವಿ ಚಂಚರು, ಕೊರಸರು ಇದಾರಾ !" ಎಂದು ಹೇಳಿದ್ದನ್ನು ಕೇಳುತ್ತಲೇ ನನ್ನ ಆ ಯೋಚನೆ ಒದೆ ತಿಂದ ನಾಯಿ ಓಡುವಂತೆ ಹೋಗಿಬಿಟ್ಟಿತ್ತು.

ನಮ್ಮ ಊರಿನ ರಸ್ತೆ ಬದಿಗಳಿಗಿದ್ದ ಸಾಲುಮರಗಳಿಗೆ ಆಗ ಒಳ್ಳೆಯ ಪ್ರಾಯ. ಈ ಮರಗಳಲ್ಲೇ ಎಷ್ಟೋ ಜೇನು ಇರುತ್ತಿತ್ತು. ನಮ್ಮದು ಬಯಲು ಸೀಮೆಯಾಗಿದ್ದರೂ ಈಗಿರುವುದಕ್ಕಿಂತ ಹೆಚ್ಚು ಗಿಡಮರಗಳು ಆಗ ಇದ್ದವು. ಈಗ ನಮ್ಮೂರು ರಸ್ತೆಯ ಗಿಡಗಳು ಮೈದುಂಬಿ ನಿಂತ ವೈಯಾರಿಗಳಂತೆ ಕಾಣುವುದಿಲ್ಲ; ಕುರಿ, ದನ ಕಾಯುವವರು ಅವುಗಳ ರೆಂಬೆ, ಕೊಂಬೆ, ತಪ್ಪಲುಗಳನ್ನು ಕೊಯ್ದು ಕಡಿದುದರಿಂದ ಅವೆಲ್ಲ ತಲೆ ಬೋಳಿಸಿಕೊಂಡ ತಿರುಪತಿ ತಿಮ್ಮಪ್ಪನ ಭಕ್ತರಂತೆ ಕಾಣುತ್ತಿವೆ. ಊರಿನ ಗೋಮಾಳವು ಅತಿಕ್ರಮಣಕ್ಕೊಳಗಾಗಿರುವುದರಿಂದ ಪಶುಗಳು ಮೇವಿನ ನೆಲೆ ಕಳೆದುಕೊಂಡು ಸಿಕ್ಕ ಸಿಕ್ಕ ಕಡೆ ಬಾಯಿ ಹಾಕಬೇಕಾಗಿದೆ.

ನಾನು ಜೇನು ಕೀಳುವ ಗೀಳಿಗೆ ಸಿಲುಕಿದಾಗಲೇ ಜೇನು ಸಾಕಾಣಿಕೆ ಯೋಜನೆಯನ್ನು ಸರ್ಕಾರದ ವತಿಯಿಂದ ಪ್ರಚಾರಗೊಳಿಸುವವರು ನಮ್ಮ ಹಳ್ಳಿಗೆ ಬರತೊಡಗಿದರು. ಜೇನು ಸಾಕಾಣಿಕಾ ಪೆಟ್ಟಿಗೆಯನ್ನೂ ವಿತರಿಸುವುದಾಗಿ ಹೇಳತೊಡಗಿದರು. ನಮಗೆಲ್ಲಾ ಅದರಲ್ಲಿ ವಿಶೇಷ ಆಸಕ್ತಿ ಉಂಟಾಗಿದ್ದರಿಂದ ಆ ಪ್ರಚಾರಕರ ಬೆನ್ನಲ್ಲೇ ತಿರುಗತೊಡಗಿದವು. ಅವರು ನಮಗೆ ಜೇನು ಹುಳುಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಒಂದೇ ರಾಣಿಜೇನನ್ನು ಇಟ್ಟುಕೊಂಡರೆ ಹೆಣ್ಣು ಮತ್ತು ಗಂಡು ಜೇನು ಹುಳುಗಳು ಹೇಗೆ ಆಕರ್ಷಿತವಾಗುತ್ತವೆಂದು ತೋರಿಸಿಕೊಟ್ಟರು. ಹೂಗಳ ಮಕರಂದ ಹೀರಲು ಹೆಣ್ಣು ಹುಳುಗಳು ಮಾತ್ರ ಹೋಗುತ್ತವೆಂದೂ ಗಂಡು ಹುಳುಗಳು ರಾಣಿಜೇನಿನ ಅಂಗಸಂಗದಲ್ಲಿ ಮಾತ್ರ ಇರುತ್ತವೆಂದೂ ಹೇಳಿದರು. ಒಂದು ರಾಣಿಜೇನನ್ನು ಖಾಲಿಯಾದ ಬೆಂಕಿಪೊಟ್ಟಣಕ್ಕೆ ತೂತುಗಳನ್ನು ಹಾಕಿ ಕೈಯಲ್ಲಿ ಹಿಡಿದುಕೊಂಡು ನಿಂತರೆ ಹೇಗೆ ಹೆಣ್ಣು-ಗಂಡು ಜೇನುಗಳು ನಮ್ಮ ಕೈಗಳ ಮೇಲೆ ಬಂದು ಜಮಾಯಿಸುತ್ತವೆಂದು ತೋರಿಸಿಕೊಟ್ಟರು. ನಾನು ರಾಣಿ ಜೇನನ್ನು ಕೈಯಲ್ಲಿರಿಸಿಕೊಂಡು ಜೇನು ಹುಳುಗಳನ್ನು ಆಕರ್ಷಿಸುವ ಆಟ ಆಡತೊಡಗಿದೆ. ಹುಳುಗಳು ಬಂದು ಕೂತರೇ ಇಡೀ ನನ್ನ ಕೈಯೇ ಜೇನುಹುಟ್ಟೆನ್ನುವಂತೆ ಕಾಣುತ್ತಿತ್ತು.

ನಾನು ಜೇನು ಕೀಳುವುದರಲ್ಲಿ ನಿಷ್ಣಾತನಾಗಿರುವೆನೆಂದು ಊರಲ್ಲಿ ಪ್ರಚಾರವಾಗಿತ್ತು. ಮನೆ ಹಿತ್ತಲುಗಳಲ್ಲಿರುವ ಜೇನು ಬಿಡಿಸಿಕೊಡುವಂತೆ ಹೆಣ್ಣುಮಕ್ಕಳು ಪೀಡಿಸುತ್ತಿದ್ದರು. ಹುಟ್ಟು ಕೀಳಲು ಹೋದಾಗ ಹುಳುಗಳು ದಾಳಿ ನಡೆಸಿ ವಿಷದ ಮುಳ್ಳುಗಳನ್ನು ನನ್ನ ಮೈ ಮುಖಗಳಿಗೆ ಚುಚ್ಚುತ್ತಿದ್ದವು. ಮೊದಮೊದಲು ಮುಳ್ಳು ಚುಚ್ಚಿದ ಕಡೆ ಬಾತುಕೊಳ್ಳುತ್ತಿತ್ತು. ಒಮ್ಮೆಯಂತೂ ಹೆಣ್ಣುಜೇನುಗಳು ನನ್ನೆರಡೂ

ತುಟಿಗಳನ್ನು ಕಚ್ಚಿಬಿಟ್ಟವು. ನನ್ನ ಮೂತಿ ಕೋತಿಯಾಗಿಬಿಟ್ಟಿತು ! ಆ ಸ್ಥಿತಿಯಲ್ಲಿ ನನ್ನನ್ನು ನೋಡಿದ ಕೆಲವರು "ಏನೋ ನಿಜವಾಗ್ಲೂ ಹನುಮಂತನೇ ಆಗಿಬಿಟ್ಟಿದ್ದೀಯಾ.....!" ಎಂದು ಗೇಲಿ ಮಾಡಿದರು.

ಆದರೆ, ಬರಬರುತ್ತ ಜೇನಿನ ವಿಷ ನನಗೆ ಒಗ್ಗಿತೋ ಏನೋ, ಕಚ್ಚಿದರೆ ಬಾತುಕೊಳ್ಳುತ್ತಿರಲಿಲ್ಲ.

ಇತ್ತೀಚೆಗೆ ಜೇನು ವಿಷ ದಿವ್ಯೌಷಧಿ ಎಂದು ವಿವರಿಸುವ ಲೇಖನ ಓದಿದೆ. ವಿಶೇಷವಾಗಿ ಕೀಲು ಬೇನೆಯ ರೋಗಿಗಳಿಗೆ ಜೇನುಗಳನ್ನು ಮೈ ಮೇಲೆ ಬಿಟ್ಟು ಕಚ್ಚಿಸುವ ಚಿಕಿತ್ಸೆ ಇರುವುದಾಗಿಯೂ ಅದರಲ್ಲಿ ಬರೆಯಲಾಗಿತ್ತು. ಬಹುಶಃ ಚಿಕ್ಕವನಿದ್ದಾಗ ಅನೇಕ ವರ್ಷಗಳು ಸಿಕ್ಕಾಪಟ್ಟೆ ಜೇನು ಕಚ್ಚಿಸಿಕೊಂಡುದರಿಂದಲೋ ಏನೋ ನನಗೆ ಈವರೆಗೆ ಕೀಲು ನೋವಿನ ಅನುಭವವೇ ಆಗಿಲ್ಲ !

ಹೆಣ್ಣು ಜೇನುಗಳ ಬಗೆಗೆ ನನಗೆ ಅಪಾರ ಪ್ರೇಮ. ಅವು ಗಂಡು ಜೇನುಗಳಂತೆ ಸೋಮಾರಿಗಳಲ್ಲ. ಹೂವಿಂದ ಹೂವಿಗೆ ಹಾರುತ್ತ ಸತತ ಮಕರಂದ ಹೀರಿ ಹುಟ್ಟಲ್ಲಿ ಜೇನನ್ನು ತುಂಬಿ ತುಳುಕಿಸುತ್ತವೆ. ಜೇನನ್ನು, ಜೇನು ಮರಿಗಳನ್ನು ಮತ್ತು ಹುಟ್ಟನ್ನು ರಕ್ಷಿಸಲು ಆತ್ಮಹತ್ಯಾ ದಳದ ಯೋಧರಂತೆ ಹೋರಾಡುತ್ತವೆ. ಹೆಣ್ಣು ಜೇನಿನ ವಿಷದ ಕೊಂಡಿಯು ನೇರವಾಗಿ ಅದರ ಕರುಳಿನೊಂದಿಗೆ ಬೆಸೆದುಕೊಂಡಿರುತ್ತದೆ. ವಿಷದ ಕೊಂಡಿಯನ್ನು ಚುಚ್ಚಿ ಗಿರ್ರನೆ ತಿರುಗಿ ತನ್ನ ದೇಹದಿಂದ ಅದನ್ನು ಕತ್ತರಿಸಿಕೊಂಡು ಹಾರಿಹೋಗಿ ಬಿದ್ದು ಸತ್ತು ಹೋಗುತ್ತದೆ. ಕಡಿಸಿಕೊಂಡವನ ದೇಹದಿಂದ ಆ ಕೊಂಡಿಯನ್ನು ಚಿಮಟದಿಂದ ಕೀಳಬೇಕಾಗುತ್ತದೆ. ಕೊಂಡಿಯನ್ನು ಕಳೆದುಕೊಂಡ ಜೇನು ಬಹಳ ಹೊತ್ತು ಬದುಕುವುದಿಲ್ಲ. ಇದು ಉತ್ಪಾದಿಸುವ ಜೇನು ಮತ್ತು ಇದರ ವಿಷದ ಕೊಂಡಿ ಎರಡೂ ಮಾನವರ ಆರೋಗ್ಯಕ್ಕೆ ಅದೆಷ್ಟೋ ಉಪಯೋಗಕಾರಿಯಾಗಿವೆ !

ಜೇನನ್ನು ಕೀಳಲು ಸ್ನೇಹಿತ ಗುಡ್ಡಯ್ಯನನ್ನೂ ಜೊತೆಗೆ ಕರೆದೊಯ್ಯುತ್ತಿದ್ದೆ. ದೊಡ್ಡ ಜೇನಿದ್ದರೆ ನಮಗೆ ಸಿನಿಮಾಕ್ಕೆ ದುಡ್ಡು ಕೊಡಬೇಕೆನ್ನುವ ಷರತ್ತು ಹಾಕುತ್ತಿದ್ದೆವು. ನಾವು ಬಿಡಿಸಿಕೊಡುವ ಜೇನಿನಲ್ಲಿ ನಮಗೂ ಒಂದು ಪಾಲು ಸಿಗುತ್ತಿತ್ತು. ನಮ್ಮ ಮೇಷ್ಟ್ರುಗಳೆಲ್ಲ ನಾನು ಕೊಡುವ ಜೇನನ್ನು ಕೊಂಡಾಡುತ್ತಿದ್ದರು. ನನ್ನ ಮೇಲೆ ಅವರ ಕುಟುಂಬದವರು ವಿಶೇಷ ಅಕ್ಕರೆಯನ್ನು ತೋರುತ್ತಿದ್ದರು. ಮೇಷ್ಟ್ರುಗಳ ಮನೆಗೆ ಹೋದರೆ ತಿಂಡಿ ತಿನ್ನದೆ ಹಾಗೇ ಬರುತ್ತಿರಲಿಲ್ಲ.

ವಿಶೇಷವಾಗಿ ಹೊಂಗೆ ಮತ್ತು ಮಾವಿನ ಮರಗಳಲ್ಲಿ ಹೂ ಬಿಡುವಾಗ

ಬಿಡಿಸಿದ ಜೇನಿಗೆ ವಿಶೇಷ ರುಚಿಯಷ್ಟೇ ಅಲ್ಲ ಅದು ಹೊಂಬಣ್ಣದಿಂದಲೂ ಕೂಡಿರುತ್ತಿತ್ತು, ಬಂಗಾರದ ರಸಕ್ಕೆ ಸೇರಿಸಿದಂತೆ. ಬೇರೆ ಕಾಲಗಳಲ್ಲೂ ಜೇನು ಸಿಗುತ್ತಿತ್ತು. ಆದರೆ ಅದರ ಬಣ್ಣ ಕಂದಾಗಿರುತ್ತಿತ್ತು.

ಪರೀಕ್ಷೆಗಳು ಸಮೀಪಿಸಿದಾಗ ಓರಗೆಯ ಹುಡುಗರೆಲ್ಲ ಸೇರಿ ಓದಿಕೊಳ್ಳುತ್ತೇವೆಂದು ಬಾಬಯ್ಯನ ಗುಡಿಯಲ್ಲಿ ಸೇರುತ್ತಿದ್ದೆವು. ಜೇನು ಕಿತ್ತು ಕೊಟ್ಟಿದ್ದಕ್ಕೆ ಅವರು ಕೊಡುತ್ತಿದ್ದ ಬಿಡಿಗಾಸುಗಳನ್ನು ಕೂಡಿಸಿಟ್ಟುಕೊಂಡಿರುತ್ತಿದ್ದೆ. ಸಾಮೂಹಿಕವಾಗಿ ಓದಲು ಬಾಬಯ್ಯನ ಗುಡಿಯಲ್ಲಿ ಸೇರುತ್ತಿದ್ದ ನಾವು ಹಿರಿಯರ ಕಣ್‌ತಪ್ಪಿಸಿ ರಾತ್ರಿ ಸಿನಿಮಾ ನೋಡಲು ಹೋಗುತ್ತಿದ್ದೆವು. ಒಂದು ಸೈಕಲ್ ಮೇಲೆ ಮೂರು ಜನ ಸವಾರಿ. ಸಿನಿಮಾದ ಗೇಟ್‌ಕೀಪರ್ ಮೇಲೆ ನಮಗೆ ಎಲ್ಲಿಲ್ಲದ ಅಸೂಯೆ ಮೂಡುತ್ತಿತ್ತು. ಎಂಥ ಪುಣ್ಯ ಮಾಡಿ ಹುಟ್ಟಿರಬೇಕು, ನಿತ್ಯ ಸಿನಿಮಾ ನೋಡುತ್ತಾನಲ್ಲಾ ಎಂದು ! ಎಲ್ಲ ಹುಡುಗರಲ್ಲೂ ದುಡ್ಡಿರುತ್ತಿರಲಿಲ್ಲ. ಗೇಟ್‌ಕೀಪರ್‌ನ ಮನವೊಲಿಸಿಕೊಂಡು ಕಮ್ಮಿ ಹಣವನ್ನು ಅವನ ಕೈಗೆ ಹಾಕಿ ಒಳಗೆ ತೂರಿಕೊಳ್ಳುತ್ತಿದ್ದೆವು.

ಒಂದು ದಿನ ಗುಡ್ಡಯ್ಯ ಬಂದು ಕಲ್ಲೇಗೌಡನ ಬಾವಿಯ ಬಳಿ ದೊಡ್ಡ ಮರವೊಂದರ ಪೊಟರೆಯಲ್ಲಿ ಭಾರೀ ಜೇನಿದೆ ಎಂದು ತಿಳಿಸಿದ. ರೆಂಪೆ, ಉಳಿ, ಮೊಳೆ, ಸುತ್ತಿಗೆ, ಹಗ್ಗಗಳ ಕಿಟ್ ಅನ್ನು ರೆಡಿ ಮಾಡಿಕೊಂಡು ಹೊರಟೆವು. ಪೊಟರೆ ಬಾಯಿ ಹದಿನೈದು ಅಡಿಗಳ ಎತ್ತರದಲ್ಲಿತ್ತು. ಕೆಳಗಿನಿಂದ ಹೊಗೆ ಹಾಕಿದರೆ ಪೊಟರೆಯೊಳಕ್ಕೆ ಅದು ಹೋಗುತ್ತಿರಲಿಲ್ಲ. ಮರವನ್ನು ಹದಿನೈದು ಅಡಿ ಹತ್ತಿಯೇ ಪೊಟರೆಯೊಳಕ್ಕೆ ಹೊಗೆ ಹಾಕಿ ಜೇನು ಹುಳುಗಳನ್ನು ಓಡಿಸಬೇಕಾಗಿತ್ತು. ಹೊಗೆ ಹಾಕಲು ಏರಿದವನ ಮೇಲೆ ಒಮ್ಮೆಲೇ ಭಾರೀ ಸಂಖ್ಯೆಯ ಜೇನುಗಳು ದಾಳಿಯಿಡುವ ಅಪಾಯವಿತ್ತು. ಹೊಗೆ ಹಾಕಿದೊಡನೆ ಸರ್ರೆಂದು ಜಾರಿದು ಕೆಳಗೆ ಬರುವಂತೆ ಹಗ್ಗವನ್ನು ರಂಭೆಯೊಂದಕ್ಕೆ ನೇತುಬಿಟ್ಟೆವು.

ಹೊಗೆಗೆ ಹುಳಗಳೆಲ್ಲ ಹಾರಿ ಹೋದ ಮೇಲೆ ನಾನು ಮತ್ತು ಗುಡ್ಡಯ್ಯ ಮರವೇರಿದೆವು. ನಾನು ಪೊಟರೆಯ ಬಾಯಿಯ ಹತ್ತಿರ ಹೋಗುತ್ತಿದ್ದಂತೆಯೇ ನಾಗರಹಾವೊಂದು ಹೊರಗೆ ಮೂತಿ ಹಾಕಿ ಹೆಡೆಬಿಚ್ಚಿ ಬುಸ್ ಎಂದುಬಿಟ್ಟಿತು ! ನನ್ನ ಜಂಘಾಬಲವೇ ಉಡುಗಿ "ಹಾವೂಃ" ಎಂದು ಚೀರುತ್ತ ಹದಿನೈದು ಅಡಿಗಳೆತ್ತರದಿಂದ ಕೆಳಗೆ ಬಿದ್ದೆ. ಮತ್ತೊಂದು ಕೊಂಬೆಯಲ್ಲಿದ್ದ ಗುಡ್ಡಯ್ಯ ಹಾವು ಎನ್ನುವ ಕೂಗು ಕೇಳುತ್ತಲೇ ಕೆಳಕ್ಕೆ ಜಿಗಿದಿದ್ದ. ಹೊಗೆ ಕುಡಿದು ಮಂಕಾಗಿದ್ದ ನಾಗರಹಾವು ನಮ್ಮ ಜೊತೆಯಲ್ಲೇ ನೆಲಕ್ಕೆ ಬಿದ್ದು ಎರ್ರಾಬಿರ್ರಿ ಹರಿದು ಹೋಯ್ತು. ಮಂಡೆ ಕೆತ್ತಿ ಎಷ್ಟೋ ದಿನಗಳವರೆಗೆ ಸೊಂಟ ಉಳುಕುವಂತಾಗಿತ್ತು. ಅಂದು ಎದೆ ಧಸಕ್ಕೆಂದಿದ್ದು ಈಗಲೂ ನೆನಪಲ್ಲಿ ಉಳಿದಿದೆ.

16

ಮಾತಾಡುವ ಸಸ್ಯಗಳ ಯಕ್ಷಲೋಕ

ಮರ ಕಾಯುವುದನ್ನು ಹೊರೆಯೆಂದುಕೊಳ್ಳುತ್ತಿದ್ದ ನಾನು ಬರಬರುತ್ತ ಬದಲಾದೆ. ನನ್ನನ್ನು ಸಸಿ ಬೆಳೆಸುವುದರಲ್ಲಿ ತೊಡಗಿಸಿಕೊಂಡಿದ್ದೆ. ಅದಕ್ಕೆ ಮುಖ್ಯ ಕಾರಣ ತಿಂದೊಗೆದ ಮಾವಿನ ಹಣ್ಣಿನ ವಾಟೆಗಳು ಮಳೆಗಾಲದಲ್ಲಿ ಮೊಳಕೆಯೊಡೆಯುತ್ತಿದ್ದವು. ಎರಡೆಲೆಯ ಆ ಕುಡಿಗಳಿಗೆ ವಿಚಿತ್ರ ಆಕರ್ಷಣೆಯಿರುತ್ತಿತ್ತು, ನವಜಾತ ಹಂದಿಯ ಮರಿಗಳಿಗಿದ್ದಂತೆ. ನಾಶಿ ಬಣ್ಣದ ಮಾವಿನ ಕುಡಿಯೆಲೆಗಳ ಮೇಲೆ ಕೈಯಾಡಿಸುವುದೇ ಒಂದು ಸುಖ. ಮಾವಿನ ಹಣ್ಣುಗಳನ್ನು ತಿನ್ನುವಾಗ ಸ್ವಾದ, ರುಚಿ, ಕಂಪುಗಳಲ್ಲಿ ವಿಶಿಷ್ಟ ಎನಿಸಿದರೆ ಅದರ ವಾಟೆಯನ್ನು ಬಿಸಾಡುತ್ತಿರಲಿಲ್ಲ. ನಮ್ಮ ಮನೆಯ ಬಚ್ಚಲ ಮೋರಿಯ ಹಸಿಮಣ್ಣಲ್ಲಿ ತುರುಕಿಡುತ್ತಿದ್ದೆ. ನಾನು ಮಾಡುವುದನ್ನು ಒಮ್ಮೆ ನೋಡಿದ ಅಪ್ಪ "ಮಗಾ ಬೊ ರುಚಿಕಟ್ಟಾದ ಮಾವಿನ ವಾಟೆ ಅಂತ ಸಸಿ ಮಾಡ್ತೀಯ? ಬೀಜದಂತೆ ಮಾವು ಬಿಡಲ್ಲ ಕಣೊ. ಹುಳಿಮಾವಿನ ವಾಟೆಯಲ್ಲಿ ಸಿಹಿಮಾವು ಹುಟ್ಟಬೋದು. ಹಂಗೇ ಸಿಹಿಮಾವಿನ ವಾಟೆಯಲ್ಲಿ ಹುಳಿ ಮಾವು ಹುಟ್ಟಬೋದು" ಎಂದರು. "ಬೀಜದಂತೆ

ಮರ ; ಅಪ್ಪನಂತೆ ಮಗ" ಎನ್ನುವ ಮಾತಿಗೆ ವಿರುದ್ಧವಾದುದು ಆಗಿದೆಯೆನಿಸುತ್ತಿತ್ತು ಅಪ್ಪನ ಮಾತು.

ಮಾವಿನ ಸಸಿಗಳನ್ನು ನಮ್ಮ ತೋಟದ ಬದುವಿನಲ್ಲಿ ನೆಟ್ಟೆ. ಕೆಲವು ದಿವಸಗಳವರೆಗೂ ಅವು ಉಳಿಯಲಿಲ್ಲ. ದನಕರುಗಳ ಬಾಯಿಗೆ ತುತ್ತಾದವು. ಮತ್ತೆ ಕೆಲವು ಭೂಮಿಯೊಳಕ್ಕೆ ಬೇರಿಳಿಸಲಾಗದೆ ಒಣಗಿಹೋದವು. ಈ ಸೋಲು ನನ್ನಲ್ಲಿ ಛಲವನ್ನುಂಟುಮಾಡಿತು; ಅಪ್ಪನಂತೆ ಸಸಿಗಳನ್ನು ಬೆಳೆಸುವಲ್ಲಿ ಪರಿಣತನಾಗಬೇಕು ಎಂದು.

ಒಡಕಲು ಗಡಿಗೆ, ತೂತುಬಿದ್ದ ತಗಡಿನ ಡಬ್ಬಗಳನ್ನು ಬಿಸಾಡಲು ಕೊಡುತ್ತಿರಲಿಲ್ಲ ಅಪ್ಪ. ಅವುಗಳಿಗೆ ಮಣ್ಣು, ಉಸುಕು, ಗೊಬ್ಬರಗಳ ಮಿಶ್ರಣ ತುಂಬಿ ನಾನಾ ನಮೂನೆಯ ಬೀಜಗಳನ್ನು ಮತ್ತು ಕುಡಿ ಸಸಿಗಳನ್ನು ಅವುಗಳಲ್ಲಿ ನೆಡುತ್ತಿದ್ದರು. ಬಿಲ್ವ, ಹಾರೆ, ಮೇವು, ಅತ್ತಿ, ಆಲ, ಅರಳಿ, ಬಸರಿ ಸಸಿಗಳೇ ಹೆಚ್ಚಾಗಿರುತ್ತಿದ್ದವು. ಹಲಸು, ಮಾವುಗಳು ಕಮ್ಮಿ ಇರುತ್ತಿದ್ದವು. ಮನೆಯ ಹಿತ್ತಲು, ಅಡಿಕೆ ತೋಟ, ಮಾಳಿಗೆ ಮತ್ತು ಅಂಗಳಗಳಲ್ಲೆಲ್ಲ ಈ ಸಸಿಗಳ ಕುಂಡಗಳೇ ತುಂಬಿರುತ್ತಿದ್ದವು. ಅಪ್ಪನಲ್ಲಿ ಸಸಿ ಬೆಳೆಸುವುದು ಒಂದು ಗೀಳಾಗಿ ಪರಿಣಮಿಸಿತ್ತು. ಇದನ್ನು ತಿಳಿದುಕೊಂಡಿದ್ದ ಮನೆಯವರು ಕುಂಡಗಳಿಗೆ ನೀರು ಹಾಕಿ ಅಪ್ಪನಿಗೆ ಸಹಕರಿಸುತ್ತಿದ್ದರು.

ನಮ್ಮ ತೋಟ ಮತ್ತು ಹೊಲಗಳ ಬದುವುಗಳಲ್ಲಿ ಖಾಲಿ ಜಾಗ ಉಳಿಯದಂತೆ ಸಸಿ ಮರಗಳನ್ನು ಬೆಳೆಸಿದ್ದರು ಅಪ್ಪ.

ಬಲಿತುಕೊಳ್ಳುವವರೆಗೆ ಕುಂಡಗಳಲ್ಲಿ ಬೆಳೆಸಿ ಆನಂತರ ನೆಲದಲ್ಲಿ ಊರಿದರೆ ಮಾತ್ರ ಸಸಿಗಳು ನಾಟಿಕೊಳ್ಳುತ್ತವೆನ್ನುವುದನ್ನು ಅಪ್ಪನಿಂದ ತಿಳಿದುಕೊಂಡೆ. ನಮ್ಮ ತೋಟದ ಬದುವುಗಳಲ್ಲಿ ನೆಟ್ಟಿದ್ದ ಸಸಿ ಮರಗಳಿಗೆ ದನ, ಕುರಿಗಳು ಬಾಯಿ ಹಾಕದಂತೆ ಮುಳ್ಳುಬೇಲಿಯನ್ನು ತಂದು ಹಚ್ಚಿದ್ದರು. ಅಪ್ಪ ನನ್ನನ್ನು ಸಸಿಮರಗಳ ಬಳಿಗೆ ಕರೆದೊಯ್ದು "ಸಸಿಮರಗಳ್ನ ಏನಂದ್ಕೊಂಡೀಯಾ, ಮೂಕವಾಗೇ ನಮ್ಮೊಂದಿಗೆ ಮಾತಾಡ್ತವೆ. ನಾವು ನೀರು ಹಾಕಿದ್ರೆ ಚಿಗುರೆಲೆಗಳ್ನ ಹೆತ್ತು ನಗ್ತವೆ. ಅವುಗಳ್ನ ಮಾತಾಡ್ಸೋದು ಗೊತ್ತಿರ್‌ಬೇಕಷ್ಟೆ...." ಎನ್ನುತ್ತಿದ್ದರು. ಸಸಿಗಳು ಮಾತಾಡೋದು ಅದ್ಹೇಗೆ ಸಾಧ್ಯ ಎಂದು ಪ್ರಶ್ನಾರ್ಥಕವಾಗಿ ಅಪ್ಪನ ಮುಖವನ್ನು ಮಿಕಿಮಿಕಿ ನೋಡುತ್ತಿದ್ದೆ.

ಅಪ್ಪನಿಗೆ ಅತ್ತಿಯ ಗಿಡದ ಮೇಲೆ ವಿಶೇಷವಾದ ಪ್ರೀತಿ. "ಅತ್ತೀ ಹಣ್ಣು

ತಿಂದ್ರೆ ಎತ್ತಿನಂಥ ಕಸುವು ಬರುತ್ತೆ" ಎಂದು ಪದೇಪದೇ ಹೇಳುತ್ತಿದ್ದರು. "ಮುಂಡೇವು ನಾಲಿಗೆ ರುಚಿ ನೋಡಿ ಮಾವಿನ ಗಿಡ ನೆಡ್ತವೆ. ನಿತ್ಯ ಒಂದು ಬಿಲ್ವಪತ್ರೆ ತಿಂದರೆ ಅದೆಂಥ ತೇಜಸ್ಸು ಬರುತ್ತೆ ಗೊತ್ತಾ ಮುಖದಾಗೆ. ಆಲದ ಗಿಡದ ಕಡ್ಡಿಯಿಂದ ಹಲ್ಲುಜ್ಜಿದ್ರೆ ನಾಲಿಗೆ ಮೇಲೆ ಸರಸ್ವತಿ ಮೂಡ್ತಾಳೆ. ಈಗಿನ ಕಾಲಕ್ಕೆ ಇದ್ಯಾವೂ ಬೇಕಿಲ್ಲ...." ಎಂಧು ಗೊಣಗುತ್ತಿದ್ದರು.

ಒಂದು ಮಳೆಗಾಲದಲ್ಲಿ ಮಂದೆಕಟ್ಟೆಯ ಬಳಿಗೆ ನಮ್ಮ ಮನೆಯ ಆಳುಗಳನ್ನೆಲ್ಲ ಕರೆದುಕೊಂಡು ಗುಂಡಿಗಳನ್ನು ತೋಡಲು ಶುರು ಮಾಡಿದರು ಅಪ್ಪ. ಐವತ್ತಕ್ಕೂ ಹೆಚ್ಚು ಅತ್ತಿಯ ಮರಗಳನ್ನು ಒಂದೇ ಕಡೆಗೆ ಗೋಮಾಳದಲ್ಲಿ ನೆಟ್ಟರು. ಮಂದೆಕಟ್ಟೆಯಲ್ಲಿ ಮಳೆಗಾಲದಲ್ಲಿ ನೀರು ಶೇಖರಣೆಗೊಳ್ಳುತ್ತಿತ್ತು. ದನ, ಕುರಿಗಳು ನೀರು ಕುಡಿಯಲು ಅಲ್ಲಿಗೆ ಬರುತ್ತಿದ್ದವು. ಅತ್ತಿಯ ಸಸಿಗಳಿಗೆ ಬೇಸಿಗೆಯಲ್ಲಿ ಅಲ್ಲಿಂದಲೇ ನೀರು ಹೊಯ್ಯುತ್ತಿದ್ದರು ಅಪ್ಪ. ಅಪ್ಪ ಮನೆ ಆಳುಗಳನ್ನು ಕರೆದುಕೊಂಡು ಸರ್ಕಾರಿ ಗೋಮಾಳದಲ್ಲಿ ಸಸಿಗಳನ್ನು ನೆಡಲು ಹೋಗುವುದು ವ್ಯರ್ಥ ಮತ್ತು ನಿರರ್ಥಕ ಎನ್ನುವಂತೆ ಮಾತಾಡುತ್ತಿದ್ದರು. ಅದೇಕೋ ಖಡಾಖಂಡಿತವಾಗಿ ಅಪ್ಪನಿಗೆ 'ಇಂಥದೆಲ್ಲ ಮಾಡಬೇಡ' ಎಂದು ಹೇಳುತ್ತಿರಲಿಲ್ಲ ! ಮಂದೆ ಕಟ್ಟೆ ಬಳಿ ಅಪ್ಪ ನೆಟ್ಟ ಅತ್ತಿ ಸಸಿಗಳನ್ನು ಊರವರು ನೋಡಿ ಬರಲು ಹೋಗುತ್ತಿದ್ದರು. ವಾಪಸ್ಸಾಗುವಾಗ ಎದುರಿಗೆ ಸಿಕ್ಕವರಿಗೆ "ಕೆಂಚಪ್ಪನವರ ತೋಪು ನೋಡೋಕೆ ಹೋಗಿದ್ದೆವು. ಒಬ್ಬೊಬ್ರುದು ಕೈಗುಣದ ಮ್ಯಾಕೆ ಇದೆಲ್ಲ ಆಗುತ್ತೆ. ಎಲ್ರೂ ಮಾಡ್ತೀವೀ ಅಂದ್ರೆ ಸಾಧ್ಯವಾಗೋದಾ !" ಎಂದು ಉದ್ಗಾರವೆಳೆಯುತ್ತಿದ್ದರು. ಹಳ್ಳಿಗಳಲ್ಲಿ ಕೆಂಪಗಿರುವವರು ವಿರಳ. ನನ್ನ ಅಪ್ಪ ಕೆಂಪಗಿದ್ದುದರಿಂದ ಅವರನ್ನು ಕೆಂಚಪ್ಪ ಎನ್ನುವ ಅಡ್ಡನಾಮೆಯಿಂದಲೂ ಕರೆಯುತ್ತಿದ್ದರು.

ಅಪ್ಪ ಸರ್ಕಾರಿ ಜಮೀನಿನಲ್ಲಿ ಸಸಿ ನೆಡುವುದನ್ನು ನೋಡಿದ ಕೆಲ ಯುವಕರು ಸಹಕರಿಸಲು ಮುಂದೆ ಬಂದರು. ನಮ್ಮ ಮನೆಯಲ್ಲಿ ಹಬ್ಬ ಹರಿದಿನಗಳಲ್ಲಿ ಕಡುಬು, ಹೋಳಿಗೆಗಳನ್ನು ಮಾಡಿದರೆ ಸಸಿ ನೆಡುವ ಯುವಕರ ತಂಡಕ್ಕೆ ಆಹ್ವಾನವಿರುತ್ತಿತ್ತು. ವಿಶೇಷ ಹಬ್ಬಗಳಲ್ಲಿ ಉಳಿದವರಂತೆ ಕಾಲಹರಣ ಮಾಡದೆ ಅಪ್ಪ ಮತ್ತಿತರರು ಸಸಿಗಳನ್ನು ಜೋಪಾನ ಮಾಡಲು, ಗುಂಡಿ ತೋಡಲು, ಮುಳ್ಳು ಬೇಲಿ ಹಚ್ಚಲು ಹೋಗುತ್ತಿದ್ದರು. ಸಸಿಗಳನ್ನು ಬೆಳೆಸುವ ವ್ಯಾಮೋಹ ನನ್ನನ್ನೂ ಆವರಿಸಿಕೊಂಡುಬಿಟ್ಟಿತ್ತು. ಸ್ವಯಂಪ್ರೇರಣೆಯಿಂದ ನಾನೂ ಅವರೊಂದಿಗೆ ಹೋಗುತ್ತಿದ್ದೆ. ಅಪ್ಪ ಸ್ವತಃ ಶ್ರದ್ಧೆ ವಹಿಸಿ ಸರ್ಕಾರಿ ಗೋಮಾಳದಲ್ಲಿ ಬೆಳೆಸಿದ ಮರಗಳ ಸಂಖ್ಯೆ ನಾನೂರಕ್ಕೂ ಹೆಚ್ಚು.

ನನ್ನ ಅಪ್ಪನ ಕೈ ಸೋಕಿದರೆ ಸಾಕು ಬೀಜ ಮರವಾಗಿ ಬೆಳೆಯುತ್ತೆ ಎನ್ನುವ ಪ್ರತೀತಿ ಹಬ್ಬಿತ್ತು. ಪಕ್ಕದ ನಮ್ಮ ಊರಲ್ಲಿ ಮಾತ್ರವಲ್ಲದೆ ಪಕ್ಕದ ಊರುಗಳಿಂದಲೂ ಜನ ಬಂದು ತಮ್ಮ ಮನೆ, ಗದ್ದೆ, ತೋಟಗಳಲ್ಲಿ ಹಲಸು, ಮಾವು ಇತ್ಯಾದಿ ಸಸಿಗಳನ್ನು ನೆಡಲು ಕರೆದೊಯ್ಯುತ್ತಿದ್ದರು.

ಕೆಲವು ಮರದ ರೆಂಬೆಗಳನ್ನು ಕಡಿದು ತಂದು ನೆಟ್ಟರೂ ಚಿಗಿತು ಬೆಳೆಯುತ್ತಿದ್ದವು. ಆದರೆ, ಅಪ್ಪ ಬೀಜದಿಂದ ಹುಟ್ಟಿದ ಸಸಿಗಳಿಗೆ ಆಯುಷ್ಯ ಜಾಸ್ತಿ ಎಂದು ಅವುಗಳನ್ನೇ ನೆಡುತ್ತಿದ್ದರು.

ಸುಗ್ಗಿಯ ಕಾಲದಲ್ಲಿ ಸಿದ್ಧಗಂಗಾಮಠದ ಶಿವಕುಮಾರಸ್ವಾಮಿಗಳು ನಮ್ಮ ಊರಿಗೆ ಬರುತ್ತಿದ್ದರು. ಈಶ್ವರಗುಡಿಯ ಹತ್ತಿರ ಕೂರುತ್ತಿದ್ದರು. ಸಂಜೆಯ ವೇಳೆಗೆ ಪ್ರವಚನ ನಡೆಸುತ್ತಿದ್ದರು. ಊರಿನ ಎಲ್ಲ ಜಾತಿಯವರೂ ಗುಡಿಯ ಹತ್ತಿರ ಬಂದು ನೆರೆಯುತ್ತಿದ್ದರು. ಸ್ವಾಮಿಗಳ ಬಗ್ಗೆ ಅಪಾರ ಗೌರವ, ಭಕ್ತಿಗಳನ್ನು ಜನ ತೋರಿದರು. ಸಿದ್ಧಗಂಗಾಮಠದಲ್ಲಿ ನಿತ್ಯ ಅನ್ನ ದಾಸೋಹ ನಡೆಯುತ್ತಿತ್ತು. ಅಲ್ಲದೆ ವಿದ್ಯಾರ್ಥಿಗಳಿಗೆ ಊಟ, ವಸತಿ ಮತ್ತು ಶಿಕ್ಷಣವನ್ನು ಪುಕ್ಕಟೆಯಾಗಿ ಒದಗಿಸುತ್ತಿದ್ದರು ಎನ್ನುವ ಮಾತು ಎಲ್ಲರ ಬಾಯಲ್ಲೂ ಕೇಳಿಬರುತ್ತಿತ್ತು. ಅನ್ನದಾನದಲ್ಲಿ ನಮ್ಮದೂ ಪಾಲಿರಲಿ ಎಂದು ನಮ್ಮ ಊರವರು ರಾಗಿ, ಭತ್ತಗಳನ್ನು ಸ್ವಾಮಿಗಳಿಗೆ ಚೀಲಗಟ್ಟಲೆ ದಾನ ಮಾಡುತ್ತಿದ್ದರು. ಈಶ್ವರ ಗುಡಿಯ ಮುಂದೆ ಧಾನ್ಯದ ಚೀಲಗಳನ್ನಿಟ್ಟರೆ ಎತ್ತರವಾಗುತ್ತ ಹೋಗುತ್ತಿತ್ತು. ಪಕ್ಕದ ಐದಾರು ಊರಿನವರೂ ತಮ್ಮ ಎತ್ತಿನ ಬಂಡಿಗಳಲ್ಲಿ ಧಾನ್ಯ ಹೇರಿಕೊಂಡು ಬಂದು ಸ್ವಾಮಿಗಳಿಗೆ ಸಲ್ಲಿಸುತ್ತಿದ್ದರು. ದಾನವಾಗಿ ಬಂದ ಈ ಧಾನ್ಯ ಲಾರಿಗಟ್ಟಲೆ ಆಗುತ್ತಿತ್ತು. ನಮ್ಮ ಮನೆಯಿಂದ ಆರೇಳು ಮೂಟೆ ಧಾನ್ಯ ಕೊಡಲಾಗುತ್ತಿತ್ತು.

ಬಿಲ್ವದ ಮರಗಳನ್ನು ಬೆಳೆಸಿದ್ದರಿಂದ ಇರಬೇಕು ಸ್ವಾಮಿಗಳು ಅಪ್ಪನನ್ನು ವಿಶೇಷ ಮಮತೆಯಿಂದ ಕಾಣುತ್ತಿದ್ದರು. ಒಮ್ಮೆ ತಮ್ಮ ಪ್ರವಚನದಲ್ಲಿ "ಹನುಮಂತಯ್ಯ ಮಾಡುತ್ತಿರುವ ಸಸಿ ಬೆಳೆಸುವ ಕಾಯಕ ಪೂಜೆಗಿಂತ ದೊಡ್ಡದು. ಬಸವಣ್ಣನವರು ಇದಕ್ಕೇ ಕಾಯಕವೇ ಕೈಲಾಸ ಎಂದದ್ದು" ಎಂದು ಹೇಳಿದಾಗ ನನ್ನಪ್ಪನ ಬಗ್ಗೆ ನನ್ನೆದೆಯಲ್ಲಿ ಪ್ರೀತಿ, ಅಭಿಮಾನಗಳು ಉಕ್ಕಿ ಬಂದವು.

ನಮ್ಮ ಊರಲ್ಲಿ ಸ್ವಾಮಿಗಳು ಇರುವವರೆಗೆ ಅಪ್ಪ ಬೆಳೆಸಿದ ಕಪ್ಪು ಮಿಶ್ರಿತ ದಟ್ಟ ಹಸಿರೆಲೆಯ ದಪ್ಪ ಪತ್ರೆಗಳನ್ನು ತಮ್ಮ ಶಿವಪೂಜೆಗೆ ತರಿಸಿಕೊಳ್ಳುತ್ತಿದ್ದರು.

ಸ್ವಾಮಿಗಳ ಪ್ರವಚನ ಕೇಳಲು ಈಶ್ವರಗುಡಿಗೆ ಸಂಜೆ ಹೋದಾಗ ಗುಡಿಯೊಳಗಿದ್ದ ದೊಡ್ಡ ವಿಭೂತಿಯನ್ನು ಮೂರು ಬೆರಳಿಗೆ ಹಚ್ಚಿಕೊಂಡು ಹಣೆಗೆ ಬಳಿದುಕೊಳ್ಳುತ್ತಿದ್ದೆ. ಪ್ರವಚನ ಮುಗಿಯುವಷ್ಟರಲ್ಲಿ ಎರಡು ಮೂರು ಬಾರಿ ಸ್ವಾಮಿಗಳ ಪಾದಕ್ಕೆ ನಮಸ್ಕರಿಸುತ್ತಿದ್ದೆ.

ಸ್ವಾಮಿಗಳು ಪ್ರವಚನದಲ್ಲಿ ಶಾಖಾಹಾರದ ಬಗ್ಗೆ ವಿವರಿಸುತ್ತಿದ್ದರು : "ಬಸವಣ್ಣ ಕೊಲುವವನೆ ಮಾದಿಗ, ತಿನುವವನೆ ಹೊಲೆಯ....." ಎಂದಿದ್ದಾನೆ ಎಂದು ಹೇಳಿದಾಗ ನನಗೆ ಕಸಿವಿಸಿಯಾಗುತ್ತಿತ್ತು. ಸ್ವಾಮಿಗಳು ಎಷ್ಟೊಂದು ಒಳ್ಳೆಯವರಾಗಿ ಕಾಣುತ್ತಾರೆ. ಆದರೆ ಅದೇಕೆ ಮಾಂಸಾಹಾರದ ಬಗ್ಗೆ ಇಷ್ಟೊಂದು ಕಟುವಾಗಿ ಮಾತಾಡುತ್ತಾರೊ ಎಂದುಕೊಂಡೆ. ಮನೆಯಲ್ಲಿ ಮಾಂಸದ ಅಡುಗೆ ಇದ್ದ ದಿವಸ ಮೂಗರಳಿಸಿಕೊಂಡೇ ಓಡಾಡುವುದು ನೆನಪಾಯಿತು. ಒಲೆಯ ಮೇಲೆ ಕುದಿಯುತ್ತಿರುವಾಗಲೇ ಅಮ್ಮನಿಗೆ ಪೀಡಿಸಿ ಎಲುಬಿನ ತುಂಡುಗಳನ್ನು ಬಟ್ಟಲಲ್ಲಿ ಹಾಕಿಸಿಕೊಂಡು ಅದರ ಸ್ವಾದ ಸವಿಯುವುದು ಕಣ್ಮುಂದೆ ಬಂದಿತು. ಛೇ, ಮಾಂಸ ತಿನ್ನದೆ ಇರುವುದೆಂದರೆ ಸಾಧ್ಯವಿರದ ಮಾತು; ತಿನ್ನಬಾರದೆಂದು ಹೇಳುವುದು ಶಿಕ್ಷೆಯ ಮಾತು ಎನಿಸಿತು. ಅಷ್ಟಕ್ಕೂ ಸ್ವಾಮಿಗಳು ಹೇಳುವುದು ನಮ್ಮ ಧರ್ಮವಲ್ಲ ಅಲ್ಲವೆ! ತಿಂದರೆ ಪಾಪವಿರಲಾರದು. ಹೀಗೇ ಮನದ ಮಾತು ಸಾಗಿರುತ್ತಿತ್ತು.

17

ಕಣ್ಣೀರು ತರಿಸಿದ ಚಿನ್ನದುಂಗುರ

ನನ್ನ ಚಿಕ್ಕದೊಡ್ಡಪ್ಪನೂ ಚಿಕ್ಕದೊಡ್ಡಮ್ಮನೂ ನನ್ನನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ ನನ್ನ ಮೇಲೆ ಕೋಪಿಸಿಕೊಂಡಾಗ ಕರೆದು, ತಲೆಸವರಿ, ಸಮಾಧಾನಪಡಿಸುತ್ತಿದ್ದರು. ನಾನು ದೇವರಾಯನದುರ್ಗಕ್ಕೆ ಶಾಲೆ ಮಕ್ಕಳೊಂದಿಗೆ ಟೂರ್ ಹೋದಾಗ ತಾವು ಕೂಡಿಸಿಟ್ಟುಕೊಂಡಿದ್ದ ಹಣದಲ್ಲಿ ಎರಡು ರೂಪಾಯಿ ನನ್ನ ಖರ್ಚಿಗಾಗಿ ಕೊಟ್ಟಿದ್ದರು. ಚಿಕ್ಕದೊಡ್ಡಮ್ಮ ಬೇರಾರು ಆಗಿರದೆ ನನ್ನ ತಂದೆಯ ಏಕೈಕ ಸೋದರಿ ನಂಜಮ್ಮನ ಮಗಳಾಗಿದ್ದಳು. ನಂಜಮ್ಮ ಸೋದರತ್ತೆಯದು ಅವಿಭಕ್ತ ಕುಟುಂಬ. ಇವರಿಗೆ ನಾಲ್ವರು ಹೆಣ್ಣುಮಕ್ಕಳು. ಎಲ್ಲರದೂ ಮದುವೆಯಾಗಿತ್ತು. ಅದರಲ್ಲಿ ಒಬ್ಬಳು ಚನ್ನಮ್ಮ ಎನ್ನುವವಳನ್ನು ರಾಂಪುರದ ಹೊನ್ನಪ್ಪ ಎನ್ನುವಾತನಿಗೆ ಕೊಟ್ಟು ಮದುವೆ ಮಾಡಿದ್ದರು. ಉಳಿದ ಮೂವರು ಹೆಣ್ಣುಮಕ್ಕಳಂತೆ ಖುಷಿಯಿಂದ ಇರಲಿಲ್ಲ ಚನ್ನಮ್ಮ. ಹೊನ್ನಪ್ಪ ತೀರಾ ಸಂಶಯದ ಪ್ರಾಣಿ. ಸದಾ ಚನ್ನಮ್ಮನನ್ನು, ಆಕೆಯ ತವರುಮನೆಯವರನ್ನು ಕುಟುಕಿ ಮಾತಾಡಿ ಅವಳ ಜೀವ ತಿನ್ನುತ್ತಿದ್ದ. ಹಬ್ಬಹುಣ್ಣಿಮೆಗಳು ಬಂದಾಗ ಕರೆಯಲು ಹೋದರೆ ಕಳಿಸುತ್ತಿರಲಿಲ್ಲ. ತನ್ನ ತಂದೆಯನ್ನು ಕೇಳಿ ಚನ್ನಮ್ಮನನ್ನ

ಕರೆದೊಯ್ಯಿರಿ ಎನ್ನುತ್ತಿದ್ದ. ಆತನ ತಂದೆಯನ್ನು ಕೇಳಿದರೆ, "ಹೆಣ್ಣುಮಕ್ಕಳ ವಿಷಯ ನನಗೇನು ತಿಳಿಯುತ್ತದೆ, ನನ್ನ ಹೆಂಡತಿಯನ್ನು ಕೇಳಿ ಕರೆದೊಯ್ಯಿರಿ" ಎನ್ನುತ್ತಿದ್ದ. ಅಂತಿಮವಾಗಿ ಬೀಗತಿಯನ್ನು ಕೇಳಿದರೆ, "ನಾನೇನು ಮನೆಗೆ ಹಿರಿಯವಳೇ ಗಂಡಸರನ್ನು ಕೇಳಿ ಕರೆದುಕೊಂಡು ಹೋಗಿ" ಎಂದು ಜಾರಿಕೊಂಡು ಬಿಡುತ್ತಿದ್ದಳು. ಕರೆಯಲು ಹೋದವರು ಚನ್ನಮ್ಮನಿಲ್ಲದೆ ವಾಪಸ್ ಬಂದದ್ದು ಅದೆಷ್ಟು ಬಾರಿಯೋ ನಂಜಮ್ಮತ್ತೆ ನನ್ನ ಚಿಕ್ಕದೊಡ್ಡಮ್ಮನ ಬಳಿಗೆ ಬಂದು "ಚನ್ನು ಹಣೆಬರ ಅದ್ಯಾಕೆ ಹೀಗ್ ಬರದ್ನೊ ಆ ದೇವ್ರು" ಎಂದು ಅಳುತ್ತಿದ್ದಳು.

ನಂಜಮ್ಮತ್ತೆಯ ಗಂಡ ಚನ್ನಮ್ಮನ ಮನೆಗೆ ಹೋಗುವುದನ್ನೇ ಬಿಟ್ಟುಬಿಟ್ಟಿದ್ದರು. "ಯಾರಾದರೂ ಹೋಗ್‌ಕಳ್ಳಿ ಆ ಹಾಳಾದೋರ್ ಮನೆಗೆ, ನಾನಂತೂ ಹೋಗೋಲ್ಲ. ಥಸೀಲ್ ಆಫೀಸ್‌ನಾಗಾದ್ರೂ ಕೆಲ್ಸ ಮಾಡಿಸಿಕೊಂಡ್ ಬರ್‌ಬೋದು. ಆದ್ರೆ ಆ ದುಷ್ಟರ ಮನೇಲಿಂದ ನನ್ನ ಮಗಳ್ನ ಮಾತ್ರ ಕರೆತರೋಕ್ ಆಗೋಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ನನ್ ಪಾಲಿಗೆ ನನ್ ಮಗಳು ಸತ್ತವ್ಳೆ ಅಂತ ಅನ್ಕೊಂಡಿದೀನಿ" ಎಂದು ಚೀರಾಡಿದ್ದನ್ನು ನಂಜಮ್ಮತ್ತೆ ನನ್ನ ಚಿಕ್ಕದೊಡ್ಡಮ್ಮನ ಬಳಿಗೆ ಬಂದು ಹೇಳಿ ಅಳತೊಡಗಿದರು.

ನನ್ನ ಚಿಕ್ಕದೊಡ್ಡಮ್ಮ "ಅಮ್ಮೊ, ದೊಡ್ಡೋರು ಕರೀಲಿಕ್ಕೆ ಹೋದ್ರೆ, ಹಂಗಾಡ್ತವೆ ಅವು. ನಮ್ಮ ಹನುಮಂತೂನ ಕಳಿಸೋಣ. ಮಾತ್ನಲ್ಲಿ ಇವ್ನು ಬೋ ಹುಷಾರಿ. ಹೊನ್ನಪ್ಪ ಭಾವಂಗೆ ತಾನು ಉಳಿದೋರ್ಗಿಂತ ಜಿಪುಣ ಕುಟುಂಬ ಅನ್ನೋ ವಿಚಾರ ಕೊರೀತದೆ. ಅದ್ಕೇ ಹಂಗಾಡ್ತವ್ನೆ. ಹನುಮಂತು ಹೋದ್ರೆ ಕುಟುಕಿ ಮಾತಾಡೋಕೆ ಆಸ್ಪದ ಇರೋಲ್ಲ..." ಎಂದಳು.

ಖುಷಿಯಿಂದ ನಂಜಮ್ಮತ್ತೆಯ ಮುಖ ಅರಳಿತು. ನನ್ನ ಕೈಗೆ ಒಂದು ರೂಪಾಯಿ ಇರಿಸಿ, "ಇವತ್ತೇ ರಾಂಪುರಕ್ಕೆ ಹೋಗಿಬಿಡು. ನಾಳೆ ಬೆಳಿಗ್ಗೆ ಚನ್ನುಗೆ ಕರೆತಾ. ನಾಡದ್ದೇ ಪಂಚಮಿ ಹಬ್ಬ" ಎಂದಳು.

ರಾಂಪುರ ಬಹಳ ದೂರದ ಊರೇನೂ ಆಗಿರಲಿಲ್ಲ. ನಮ್ಮೂರಿನಿಂದ ಮೂರು ಕಿ.ಮೀ. ಆಗುತ್ತಿರಲಿಲ್ಲ. ಆದರೆ ಸೈಕಲ್ ಮೇಲೆ ಹೋಗುವಂತೆಯೂ ಇರಲಿಲ್ಲ. ಬರುವಾಗ ಚನ್ನಮ್ಮ ಮತ್ತು ಅವಳ ಮಕ್ಕಳನ್ನು ಸೈಕಲ್ ಮೇಲೆ ಕರೆತರುವುದು ಸಾಧ್ಯವಿರಲಿಲ್ಲ. ಹೀಗಾಗಿ ನಡೆದುಕೊಂಡೇ ಹೋಗಿ ಬರಬೇಕು.

ಪಂಚಮಿ ಹಬ್ಬಕ್ಕಾಗಿ ಲಡ್ಡುಗಳನ್ನು ಮಾಡಲು ಕಡಲೆ, ಎಳ್ಳು, ನೆಲಗಡಲೆಗಳನ್ನು ಹುರಿದಿಟ್ಟಿದ್ದರು. ಹುರಿಗಡಲೆ, ಬೀಜಗಳನ್ನು ಜೇಬಿಗೆ ತುಂಬಿದ ಚಿಕ್ಕದೊಡ್ಡಮ್ಮ

ಮೇಲೊಂದು ಬೆಲ್ಲದ ಕಡ್ಲೆ ಕೊಟ್ಟಳು. ರಾಮಪುರದಿಂದ ದೊಡ್ಡಬೆಳವಂಗಲ ಹೈಸ್ಕೂಲ್ ಮತ್ತು ಮಿಡ್ಲಸ್ಕೂಲ್‌ಗೆ ಬರುತ್ತಿರುವವರು ನನಗೆ ಗೊತ್ತಿದ್ದರು. ಅವರ ಊರಲ್ಲಿ ನಾನು ಅನಿರೀಕ್ಷಿತವಾಗಿ ಪ್ರತ್ಯಕ್ಷವಾದರೆ ಹೇಗೆ ಪ್ರತಿಕ್ರಿಯಿಸುವರೋ ಎನ್ನುವ ಕುತೂಹಲ ನನಗೆ ಇನ್ನಷ್ಟು ಪ್ರೇರಣೆಯನ್ನು ನೀಡಿತು.

ಚನ್ನಮ್ಮನ ಗಂಡ ಮತ್ತು ಅತ್ತೆ, ಮಾವರೊಂದಿಗೆ ಏನೇನು ಮಾತಾಡಬೇಕೆಂದು ರಿಹರ್ಸಲ್ ಮಾಡುತ್ತ ರಾಂಪುರದ ದಾರಿ ಸವೆಸಿದೆ.

ರಾಂಪುರಕ್ಕೆ ಈ ಮುಂಚೆ ಜೇನು ಬಿಡಿಸಲು, ಅಪ್ಪನೊಂದಿಗೆ ಹಲಸಿನ ಗಿಡ ನೆಡಲು ಬಂದುಹೋಗಿದ್ದೆ. ಚನ್ನಮ್ಮನ ಗಂಡ ಒಳ್ಳೆಯ ಸ್ವಭಾವದ ವ್ಯಕ್ತಿಯಲ್ಲ ಎನ್ನುವ ಅಭಿಪ್ರಾಯ ಗಟ್ಟಿಗೊಂಡಿದ್ದರಿಂದ ಅವರ ಮನೆಕಡೆ ಹೋಗಿರಲಿಲ್ಲ.

ಚನ್ನಮ್ಮ ನನಗಿಂತ ಹತ್ತಾರು ವರ್ಷ ದೊಡ್ಡವಳಾದುದರಿಂದ ಅವಳೊಂದಿಗೆ ಕೂಡಿ ಆಡಿ ಸಲಿಗೆ ಬೆಳೆದಿರಲಿಲ್ಲ. ಅವಳ ಮದುವೆಯಲ್ಲಿ ಖುಷಿಯಿಂದ ಓಡಾಡಿದ್ದೆ.

ರಾಂಪುರ ಸಮೀಪಿಸುತ್ತಲೇ ಜವಾಬ್ದಾರಿಯ ಕಂಪನ ನನ್ನಲ್ಲಿ ಶುರುವಿಟ್ಟುಕೊಂಡಿತು. ಊರ ಮುಂದಿನ ಬಾವಿಯ ಬಳಿ ನೀರಿಗಾಗಿ ಹೆಣ್ಣುಮಕ್ಕಳು ನೆರೆದಿದ್ದರು. ನನ್ನ ಸ್ಕೂಲ್‌ನಲ್ಲಿ ಓದುತ್ತಿದ್ದ ತಿಮ್‌ರಾಯ ಕೊಡ ಹೊತ್ತುಕೊಂಡು ಎದುರಿಗೆ ಬಂದ. ನನ್ನನ್ನು ನೋಡಿ ಆಶ್ಚರ್ಯದಿಂದ "ಅದೇನು ಹನುಮಂತ್ರಾಯ ನೀನಿಲ್ಲಿ?" ಎಂದು ಪ್ರಶ್ನಿಸಿದ. ನಡೆದು ಬಂದುದರಿಂದ ದಣಿವು ಮತ್ತು ಹುರಿಗಡಲೆ, ಬೆಲ್ಲ ತಿಂದುದರಿಂದ ಬಾಯಾರಿಕೆಯಾಗಿತ್ತು. ತಿಮ್‌ರಾಯ ತನ್ನ ಕೊಡದಿಂದ ನೀರು ಹಾಕಿದ. ಬೊಗಸೆಯಿಂದ ಕುಡಿದೆ. ನಮ್ಮ ಚಿಕ್ಕಮ್ಮನ್ನ ಹಬ್ಬಕ್ಕೆ ಕರೆದುಕೊಂಡು ಹೋಗೋಕೆ ಬಂದೀವ್ನಿ ಎಂದೆ.

ಚನ್ನಮ್ಮ ಅಂಗಳಕ್ಕೆ ನೀರು ಹಾಕುತ್ತಿದ್ದಳು. ನನ್ನನ್ನು ನೋಡಿ ಚಂಬು ಕೆಳಗಿಟ್ಟು "ಓ ಹನುಮಂತು ಬಾಬಾ. ಮನೇಲಿ ಎಲ್ಲ ಹೆಂಗಿದ್ದಾರೆ? ಕೈಕಾಲು ತೊಳೆದ್ಕೊ ಕಾಫಿ ಮಾಡ್ತೇನೆ" ಎಂದು ಹರ್ಷದಿಂದ ಮುಖ ಅಗಲಿಸಿ ಹೇಳಿದಳು. ಚನ್ನಮ್ಮ ಗಂಡನ ಮನೆಯಲ್ಲಿ ಪಡುತ್ತಿರುವ ಕಷ್ಟಗಳ ಬಗ್ಗೆ ಪದೇ ಪದೇ ಕೇಳಿದ್ದರಿಂದ ಅವಳ ಬಗ್ಗೆ ಅನುಕಂಪ ಮಿಶ್ರಿತ ವಾತ್ಸಲ್ಯಭಾವ ಒತ್ತರಿಸಿ ಬಂದಿತು. ಚನ್ನಮ್ಮ ನಮ್ಮ ಊರಿನಲ್ಲಿ ನನ್ನನ್ನು ಕಂಡಾಗ ಇಂಥ ಖುಷಿ ವ್ಯಕ್ತಪಡಿಸುತ್ತಿರಲಿಲ್ಲ ಎನ್ನುವುದನ್ನು ಗುರುತಿಸಿದೆ. ನನ್ನಲ್ಲಿ ತನ್ನ ತವರುಮನೆಯನ್ನೇ ಕಂಡುಕೊಂಡು ಹಿಗ್ಗಿಹೀರೆಕಾಯಿಯಾಗಿದ್ದಳು ! ಅಕ್ಕಪಕ್ಕದ ಮನೆಯ ತನ್ನ ಪರಿಚಿತರಿಗೆ ಕರೆದು ನನ್ನನ್ನು ತೋರಿಸಿ, "ನನ್ನ ಅಕ್ಕನ ಮಗ. ಪಂಚಮಿ ಹಬ್ಬಕ್ಕೆ ಕರಿಯೋಕೆ ಬಂದವ್ನೆ.

ಇಡೀ ಸ್ಕೂಲ್‌ಗೇ ಒಂದನೇ ನಂಬರ್. ದೊಡ್ಡಬಳ್ಳಾಪುರದಲ್ಲಿ ಹೋಗಿ ಭಾಷಣ ಮಾಡಿ ಬೋಮಾನ ಪಡಕೊಂಡ್ ಬಂದವ್ನೆ....." ಎಂದು ಹೇಳಿದಳು.

ಹೊಲದಿಂದ ಹೊನ್ನಪ್ಪ ಬಂದು ನನ್ನನ್ನು ನೋಡಿ : "ಓ ಹನುಮಂತ್ರಾಯ ಯಾವಾಗ್ ಬಂದೆ? ನಿಮ್ಮಪ್ಪ ಈ ಊರಿಗೆ ಬಂದ್ರೂ ನಮ್ಮನೆಗೆ ಬರದೇ ಹೋಗ್ತಾನೆ. ನೀನು ಬಂದುಬಿಟ್ಟಿದೀಯಾ ! ನೀನು ಜಾಣ. ಪೇಪರ್‌ನಲ್ಲೆಲ್ಲಾ ನಿನ್ನೆಸ್ರು ಬರ್‍ತೈತಂತೆ. ಇಸ್ಕೂಲ್‌ಗೇ ಹೆಸ್ರು ಮಾಡಿದೀಯಂತೆ...." ಎಂದ.

ನಾನು "ಚಿಕ್ಕಪ್ಪ, ಚಿಕ್ಕಮ್ಮನ ಪಂಚಮಿ ಹಬ್ಬಕ್ಕೆ ಕರೆದೊಯ್ಯೋಕೆ ಬಂದಿವ್ನಿ" ಎಂದೆ.

ಹೊನ್ನಪ್ಪನ ಧ್ವನಿ, ಧಾಟಿಗಳೇ ಬದಲಾಗಿಬಿಟ್ಟವು. ತನ್ನ ಹೆಂಡತಿಯ ತವರಿನ ಪ್ರತಿನಿಧಿಯೊಂದಿಗೆ ಬಹಳ ಸಲುಗೆಯಿಂದ ವರ್ತಿಸಿಬಿಟ್ಟೆನೆನ್ನುವ ಪಶ್ಚಾತ್ತಾಪದ ಭಾವ ಪ್ರದರ್ಶಿಸುತ್ತ, "ಓ ಆ ವಿಷಯಕ್ಕಾ ಬಂದದ್ದು ! ನಾವು ಅವರ ಕಣ್ಣಾಗೆ ಕಾಣಿಸೊಲ್ಲ. ಹಂಗಂತ ನಾವೇನೂ ಭಿಕ್ಷುಕರಲ್ಲ ಅವರ ಮನೆಯ ಮುಂದೆ ಹೋಗಿ ನಿಲ್ಲೋಕೆ. ದುಡ್ಡಿದ್ರೆ ಅವರ ಹತ್ರ ಇರ್‍ತೈತೆ. ಎಲ್ಲ ಮಕ್ಕಳೂ ಒಂದೇ ರೀತಿ ನೋಡೋ ಜನ ಅಲ್ಲ ಅವ್ರು. ಒಂದ್ ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಒರಸೊ ಜನ. ದೊಡ್ಡ ಹೆಜ್ಜಾಜಿ ಅಳಿಯ ತಿಂಗಳ ತಿಂಗಳ ಸರಕಾರೀ ಸಂಬಳ ತೊಗೋತಾನೆ ಅಂತ ಅವುಂಗೆ ಚಿನ್ನದ ಉಂಗುರ ಮಾಡಿಸಿಕೊಟ್ಟವ್ರೆ, ನಾವು ಗದ್ದೇಲಿ ಗೇದು ದೇವರು ಕೊಟ್ರೆ ಹೊಟ್ಟೆ ತುಂಬಿಸ್ಕೊಳ್ಳೋವ್ರು ನಮಗ್ಯಾಕೆ ಕೊಡ್ತಾರೆ ಚಿನ್ನದುಂಗುರ ಆಂ? ಕರೀಲಿಕ್ಕೆ ಅವುರು ಬಾರ್ದೆ ನಿನ್ನನ್ನ ಕಳಿಸಿರೋದರ ಹಿಂದೆ ಮಸಲತ್ತಿದೆ. ನಿನಗಾದ್ರೆ ನಾ ಏನನ್ನೂ ಕೇಳಾಕೆ ಬರೋಲ್ಲ ಅಂತ ಅವರ ಪಿಲಾನ್, ನಂಗೋತ್ತಾಗಲ್ವೆ ! ಚನ್ನೀನ ನಿಂಜೊತೆ ಕಳಿಸ್ತೇನೆ. ಆದ್ರೆ ಒಂದು ಷರತ್ತು : ಇವ್ರು ವಾಪಸ್ ಇಲ್ಲಿಗೆ ಬರೋವಾಗ ನಂಗೂ ಒಂದ್ ಚಿನ್ನದ ಉಂಗುರ ತರಬೇಕು. ಇಲ್ದಿದ್ರೆ ತವರು ಮನೇಲೇ ಉಳ್ಕೋಬೇಕು....." ಎಂದ.

ಅದೇನಾದ್ರೂ ಆಗಲಿ ಸದ್ಯ ನನ್ನ ರಾಯಭಾರ ಫಲಿಸಿತಲ್ಲ ಎಂದು ಸಂತೋಷವಾಯಿತು. ನಾನು ಓದಿನಲ್ಲಿ ಬಹಳ ಜಾಣ ಇದ್ದೇನೆಂದು ಮನೆಗೆ ಬಂದವರ ಎದುರು ಹೇಳಿದಾಗಲೆಲ್ಲ ಚನ್ನಮ್ಮ ಖುಷಿಯಿಂದ ಬೀಗುತ್ತಿದ್ದಳು. ನನ್ನತ್ತ ಅಭಿಮಾನದ ನೋಟ ಹಾಯಿಸಿ ಹೋಗುತ್ತಿದ್ದಳು.

ಮಾರನೇ ಬೆಳಿಗ್ಗೆ ಚಿಕ್ಕ ಟ್ರಂಕನ್ನು ತಲೆಯ ಮೇಲಿಟ್ಟುಕೊಂಡು ಚನ್ನಮ್ಮ ಮತ್ತು ಆಕೆಯ ಮಕ್ಕಳನ್ನು ಕರೆದುಕೊಂಡು ನಡೆದೆ.

"ಹನುಮಂತು, ಇನ್‌ಮ್ಯಾಕೆ ನನ್ನ ಕರೆಯೋಕೆ ನೀನೇ ಬಾ. ನಿನ್ನ ಕಂಡರೆ ನಿಮ್ ಚಿಕ್ಕಪ್ಪಂಗೆ ಹೆಮ್ಮೆ ; ನೀ ಓದಿನಲ್ಲಿ ಜಾಣ ಅಂತ. ನಮ್ಮ ಮನೆಯಿಂದ ಯಾರೇ ಬರಲಿ ಸಿರ್ ಅಂತ ಸಿಂಡರಿಸಿಕೋತಾನೆ. ನಮ್ಮನೆಯಿಂದ ಕರೆಯಾಕೆ ಬರೋವ್ರೂ ಮಾತಿಗೆ ಪ್ರತಿಮಾತ್ ಅಂದು ಜಗಳ ಮಾಡಿ ಕರೆದುಕೊಂಡೇ ಹೋಗ್‌ತಿರಲಿಲ್ಲ" ಎಂದಳು ಚನ್ನಮ್ಮ.

ಧುತ್ತೆಂದು ಗಂಡನ ಷರತ್ತು ಚನ್ನಮ್ಮನ ಕಣ್ಣಿನ ಮುಂದೆ ನಿಂತಿತೆಂದು ಕಾಣುತ್ತೆ. ಇದ್ದಕ್ಕಿದ್ದಂತೆ ಅಳತೊಡಗಿದಳು : "ದೊಡ್ಡ ಹೆಜ್ಜಾಜಿಗೆ ನಮ್ಮ ಮಾವ ಕಳೆದ ವಾರ ಹೋದಾಗ ಮೇಷ್ಟ್ರು ಭಾವ ತನ್ನ ಬೆರಳಾಗಿನ ಉಂಗುರ ತೋರಿಸಿ, ನಮ್ಮತ್ತೆ ಮಾಡಿಸಿಕೊಟ್ಟಿದ್ದು ಎಂದವ್ನಂತೆ. ಅದನ್ನ ತಂದು ಮಾವ ನಿಮ್ಮ ಚಿಕ್ಕಪ್ಪಂಗೆ ಹೇಳಿದ್ದೇ ತಡ, ಪೀರಲು ದೇವ್ರಂತೆ ಹಾರಾಡೋಕೆ ಶುರುಮಾಡಿಬಿಟ್ಟವ್ನೆ. ನಾ ಎಷ್ಟ್ ಹೇಳಿದ್ರೂ ಕೇಳ್ತಾಯಿಲ್ಲ; ನಮ್ಮಮ್ಮ ಹಂಗೆಲ್ಲ ಭೇದಭಾವ ಮಾಡುವಾಕಿ ಅಲ್ಲ ಅಂತ.... ನಮ್ ಭಾವಂಗೇನಾಗಿದ್ಯೋ, ನಮ್ಮಮ್ಮ ಪ್ರೀತಿಗೆ ಕೊಟ್ಟಿದ್ದಾಳೆ ಅಂತ್ಲೇ ಇಟ್ಕೋಳ್ಳೋಣ, ಆ ಸಂಗತೀನ ನನ್ ಗಂಡನ ಮನೆಯೋರ್ಗೆ ಹೇಳಿ ನಂಗೆ ಗಂಡನ ಮನೇಲಿ ನಿಲ್‌ಲಾರ್ದಂಗೆ ಯಾಕ್ ಮಾಡಬೇಕು? ಸಿಗಲಿ ಭಾವ ಕೇಳೇ ಬಿಡ್ತೇನೆ......" ಎಂದಳು.

ಇದೇ ವಿಷಯವಾಗಿ ಇನ್ನೂ ಏನೇನೋ ಹೇಳುತ್ತಿದ್ದಳು ಚನ್ನಮ್ಮ. ದಾರಿ ಹೋದದ್ದೇ ಗೊತ್ತಾಗಲಿಲ್ಲ. ಊರಿನ ಸೊಣ್ಣೇನಹಳ್ಳಿ ಕೆರೆ ಕಾಣತೊಡಗಿತ್ತು. ಮುಂಜಾವಿನಲ್ಲಿ ಹೊರಟಿದ್ದರಿಂದ ಬಿಸಿಲಿನ್ನೂ ಬಲಿತಿರಲಿಲ್ಲ.

"ಮಗೂನ್ನ ಎತ್ಕೊಂಡ್ ಕೈ ನೋಯಿತಾ ಅದೆ. ಸ್ವಲ್ಪ ಹೊತ್ತು ಕೆರೆಕಟ್ಟೆ ಮೇಲೆ ಕೂತು ಸುಧಾರಿಸ್ಕೊಂಡು ಹೋಗೋಣ" ಎಂದಳು ಚನ್ನಮ್ಮ.

ಗಂಟುಬಿಚ್ಚಿ ಕಳ್ಳೆಪುರಿ, ಬೆಂಡು, ಬತ್ತಾಸುಗಳನ್ನು ಒಂದು ಕಾಗದದ ತುಂಡಿನಲ್ಲಿ ತಿನ್ನಲು ಹಾಕಿಕೊಟ್ಟಳು. ಚಿಕ್ಕಮ್ಮನ ವಾತ್ಸಲ್ಯ ನೋಡಿ ದುಃಖ ಉಮ್ಮಳಿಸಿ ಬಂದಿತು. ನಂಜಮ್ಮತ್ತೆ ಕೊಟ್ಟಿದ್ದ ಎರಡು ರೂಪಾಯಿಗಳನ್ನು ಕಿಸೆಯಿಂದ ತೆಗೆದು "ಇದನ್ನು ನೀ ಮಡಿಕ್ಕೊ" ಎಂದೆ.

ಚನ್ನಮ್ಮನ ಕಣ್ಣಲ್ಲಿ ನೀರು ಧಾರೆಯಾಗಿ ಹರಿಯತೊಡಗಿತು. "ಅದ್ಯಾಕೊ ನಂಗೆ ದುಡ್ಡುಕೊಡ್ತಾ ಇದಿಯಾ. ನೀ ಚಿಕ್ಕೊವ್ನು" ಎನ್ನುತ್ತಾ ನನ್ನ ಕೈಯನ್ನು ಅಕ್ಕರೆಯಿಂದ ಹಿಡಿದುಕೊಂಡು ತನ್ನ ಕೈಯನ್ನು ನನ್ನ ತಲೆಯ ಮೇಲೆ ಒತ್ತಿ ಇನ್ನಷ್ಟು ಜೋರಾಗಿ ಅಳತೊಡಗಿದಳು. ತಾಯಿ ಅಳುವುದನ್ನು ಕಂಡ ಮಕ್ಕಳೂ

ಅಳತೊಡಗಿದವು. ಇಡೀ ವಾತಾವರಣವೇ ದುಃಖಮಯವಾಗಿದ್ದರಿಂದ ನನ್ನ ಕಣ್ಣುಗಳಲ್ಲೂ ನೀರು ತಡೆಯಲಿಲ್ಲ.

"ನಮ್ಮಮ್ಮ ನೀಲಿ ಚಿನ್ನದ ಉಂಗುರ ಕೊಡೋಕೆ ಸಾಧ್ಯನೇ ಇಲ್ಲ. ನಮ್ಮಪ್ಪನ ಅಣ್ಣ ತಮ್ಮಂದಿರ ಹೆಣ್ಣುಮಕ್ಕಿಗೂ ಕೊಡಬೇಕಾಗುತ್ತೆ. ಒಬ್ಬರಿಗೆ ಕೊಟ್ಟು ಮತ್ತೊಬ್ಬರಿಗೆ ಬಿಟ್ರೆ ಮನೆ ಒಡೀದೆ ಇರ್ತೈತಾ. ಎಲ್ಲಾ ಅಳಿಯಂದ್ರಿಗೂ ಅಂದ್ರೆ ಎಷ್ಟು ಉಂಗುರಗಳು ಬೇಕು !...." ಎಂದು ರೋದಿಸತೊಡಗಿದಳು.

ನಂಜಮ್ಮತ್ತೆ ತಾನು ದೊಡ್ಡ ಹೆಜ್ಜಾಜಿ ಅಳಿಯ ಮೇಷ್ಟ್ರು ರಾಮಯ್ಯನಿಗೆ ಚಿನ್ನದ ಉಂಗುರವನ್ನು ಮಾಡಿಸಿಕೊಟ್ಟೇ ಇಲ್ಲವೆಂದು ದೊಡ್ಡಮ್ಮದೇವಿಯ ಆಣೆ ಮಾಡಿ ಹೇಳಿದಳು. "ನಂಗೆ ನಿನ್ ಮ್ಯಾಕೆ ನಂಬಿಕೆ ಇಲ್ವೇನಮ್ಮ. ದೇವಿ ಆಣೆ ಯಾಕೆ ಮಾಡ್ತೀಯ? ಈಗ ನಿನ್ನ ಅಳಿಯಂಗೆ ಏನ್ ಹೇಳಿ ಸಮಾಧಾನ ಮಾಡೋದು? ಅದ್ಕೆ ದಾರಿ ಹುಡ್ಕು" ಎಂದಳು ಚನ್ನಮ್ಮ.

ದೊಡ್ಡ ಹೆಜ್ಜಾಜಿಯಿಂದ ರಾಮಯ್ಯ ಮೇಷ್ಟ್ರು ಬಂದರು. ಚನ್ನಮ್ಮ ಭಾವ ರಾಮಯ್ಯನೊಂದಿಗೆ ಜಗಳಕ್ಕೇ ನಿಂತಳು : "ನಿಮ್ಮ ಸುಳ್ಳು ಮಾತು ನನ್ನ ಸಂಸಾರಕ್ಕೆ ವಿಧಿಯಾಗಿ ಕಾಡೋಕ್ಕೆ ಶುರುಮಾಡಿದೆ" ಎಂದಳು.

ನಂಜಮ್ಮತ್ತೆಯ ಅಳಿಯ ರಾಮಯ್ಯ ಮೇಷ್ಟ್ರು : "ನಿಮ್ಮ ಮಗಳೇ ಉಂಗುರ ಮಾಡಿಸಿಕೊಟ್ಟು. ಭೀಮನ ಅಮಾವಾಸ್ಯೆಗೆ ಇಟ್ಕೊಳ್ಳೇ ಬೇಕು ಅಂತ ಒತ್ತಾಯಿಸಿದ್ಳು. ನಮ್ದು ಒಂಟಿ ಸಂಸಾರ ಅಲ್ಲ. ಅಣ್ಣ, ತಮ್ಮಂದಿರೆಲ್ಲ ಕೂಡಿರೋ ಸಂಸಾರ. ಗದ್ದೆ ಖರೀದಿಸಲಿಕ್ಕೆ ನಮ್ಮಪ್ಪ ದುಡ್ಡು ಕೇಳಿದಾಗ ಏನೂ ಇಲ್ಲ ಅಂದಿದ್ದೆ. ಅಂಥದರಲ್ಲಿ ಚಿನ್ನದುಂಗುರ ಮಾಡಿಸಿ ಹಾಕಿಕೊಂಡರೆ ಏನಂದಾರು ಎಂದೆ. ಅದಕ್ಕೆ ನಿಮ್ಮ ಮಗಳು ನನ್ನ ತಾಯಿ ಅಳಿಯಂಗೆ ಅಂತ ಕೊಟ್ಟವ್ಳೆ ಅಂತ ಹೇಳ್ತೀನಿ, ನೀವೇನು ಚಿಂತೆ ಮಾಡದೆ ಇಟ್ಕೊಳ್ಳಿ ಅಂತ ಒತ್ತಾಯಿಸಿದ್ಳು....." ಎಂದಾಗ ಅಲ್ಲಿದ್ದವರೆಲ್ಲ ಪರಸ್ಪರ ಮುಖ ನೋಡಿಕೊಳ್ಳತೊಡಗಿದರು.

ನಂಜಮ್ಮತ್ತೆ ತನ್ನ ಕೊರಳಲ್ಲಿದ್ದ ಚಿನ್ನದ ಸರವನ್ನು ಮುರಿಸಿ ಉಂಗುರ ಮಾಡಿಸಿ ಚನ್ನಮ್ಮನನ್ನು ಗಂಡನ ಮನೆಗೆ ಕಳಿಸಿಕೊಟ್ಟಳು.

ಅವಿಭಕ್ತ ಕುಟುಂಬದ ಬಗ್ಗೆ ಆಗಲೇ ನನ್ನಲ್ಲಿ ಹರಳುಗಟ್ಟಿದ್ದ ಅತೃಪ್ತಿಯು ಕೋಪವಾಗಿ ಉರಿಯತೊಡಗಿತು.

18

ನಾಟಿ ವೈದ್ಯರ ಕಣ್ಕಟ್ಟು

ದೊಡ್ಡ ಹೆಜ್ಜಾಜಿಯ ಸಂತೆ ನನ್ನನ್ನು ರೋಮಾಂಚನಗೊಳಿಸುತ್ತಿತ್ತು. ಸಂತೆಗೆ ಹೋದರೆ ದಿನಸಿ ಮತ್ತು ತರಕಾರಿ ಅಂಗಡಿಗಳತ್ತ ಅಷ್ಟು ಗಮನವಿರುತ್ತಿರಲಿಲ್ಲ. ಕರಡಿ ಆಡಿಸುವವರು, ಹಾವಾಡಿಸುವವರು, ಆನೆ ಒಂಟೆ ಚಿತ್ರಗಳ ಜೂಜಾಟ, ಬರ್ಫ್, ಬೊಂಬೈ ಮಿಠಾಯಿ ಇವುಗಳು ನನ್ನನ್ನು ಸೆಳೆಯುತ್ತಿದ್ದವು. ಸಂತೆಗೆ ಹೋಗಿ ತರಕಾರಿ ತರುವುದು ನನ್ನ ಕೆಲಸ ಆಗಿರಲಿಲ್ಲ. ಆದರೂ ಕೆಲವೊಮ್ಮೆ ನನ್ನ ಮೇಲೆ ಆ ಜವಾಬ್ದಾರಿ ಬೀಳುತ್ತಿತ್ತು. ತರಕಾರಿ ಖರೀದಿಯಲ್ಲಿ ಸುಳ್ಳು ಲೆಕ್ಕ ಹೇಳಿ ದುಡ್ಡು ಉಳಿಸಿಕೊಳ್ಳುತ್ತಿದ್ದೆ. ಅದರಿಂದ ಜೂಜಾಡುತ್ತಿದ್ದೆ. ಒಂದು ಕಪ್ಪು ಹಲಗೆಯ ಮೇಲೆ ಆನೆ, ಒಂಟೆ, ಹುಲಿ, ಸಿಂಹ ಇತ್ಯಾದಿ ಪ್ರಾಣಿಗಳ ಚಿತ್ರ ಬರೆಯಲಾಗಿರುತ್ತಿತ್ತು. ನಮಗಿಷ್ಟವಾದ ಪ್ರಾಣಿಯ ಚಿತ್ರದ ಖಾನೆಯ ಮೇಲೆ ದುಡ್ಡು ಹಾಕಬೇಕು. ಎಲ್ಲ ಖಾನೆಗಳಿಗೂ ಹಣ ಬೀಳುವವರೆಗೆ ದಾಳ ಬೀಳುತ್ತಿರಲಿಲ್ಲ. ದಾಳದಲ್ಲಿ ಮುಖ ಮೇಲಾಗಿ ಬಿದ್ದ ಪ್ರಾಣಿಯ ಖಾನೆಯಲ್ಲಿ ಎಷ್ಟು ಹಣವಿರುತ್ತಿತ್ತೋ ಅದಕ್ಕೆ ಎರಡರಷ್ಟು ಹಣವನ್ನು ಕೊಡಲಾಗುತ್ತಿತ್ತು. ಕೆಲವು ಬಾರಿ ವಿಧವಿಧದ ಚಿತ್ರಗಳ ಕ್ಯಾಲೆಂಡರ್‌ಗಳನ್ನು ಕೊಡಲಾಗುತ್ತಿತ್ತು. ನಾನುಳಿಸಿಕೊಂಡಿದ್ದ

ಪುಡಿಗಾಸುಗಳನ್ನೆಲ್ಲ ಈ ಆಟದಲ್ಲಿ ಕಳೆದುಕೊಳ್ಳುತ್ತಿದ್ದೆ. ಜೂಜಿನಲ್ಲಾದ ಸೋಲು ನನ್ನಲ್ಲಿ ಬೇಸರ ತರಿಸುತ್ತಿತ್ತು. ಇಡಿಯಾಗಿ ಮನಸ್ಸಿನಲ್ಲಿ ಅಪರಾಧಿ ಭಾವನೆಯನ್ನು ಹೆಚ್ಚು ಮಾಡುತ್ತಿತ್ತು.

ಸಂತೆಯಲ್ಲಿ ಚೋಟು ಕೊಳವೆಯಿಂದ ಸುಂಯ್ ಎಂದು ಜೋರಾಗಿ ಸೀಟಿ ಊದಿ ಜನರ ಗಮನ ಸೆಳೆದು ಆಕರ್ಷಕವಾಗಿ ಮಾಡುತ್ತಿದ್ದ ನಾಟಿ ವೈದ್ಯರ ಮಾತುಗಳನ್ನು ಕೇಳುತ್ತ ನಿಲ್ಲಬೇಕೆನಿಸುತ್ತಿತ್ತು. ಹಸಿರು, ಹಳದಿ, ಕಂದು, ಬಾದಾಮಿ ಬಣ್ಣಗಳ ಚೂರ್ಣಗಳನ್ನು ತುಂಬಿದ ಗಾಜಿನ ಬಾಟಲಿಗಳನ್ನು ಸಾಲಾಗಿರಿಸಿರುತ್ತಿದ್ದರು. ಸತ್ತ ಉಡವನ್ನು ನೇತು ಬಿಟ್ಟಿರುತ್ತಿದ್ದರು. ಎಲ್ಲ ರೋಗಗಳಿಗೂ ದಿವ್ಯ ಔಷಧಿಗಳು ತಮ್ಮಲ್ಲಿವೆಯೆಂದೂ ವೀರ್ಯವರ್ಧನೆಗೆ ವಿಶೇಷ ಔಷಧಿ ಇದೆಯೆಂದೂ ಆಕರ್ಷಕ ಶೈಲಿಯಲ್ಲಿ ಹೇಳುತ್ತಿದ್ದರು. ನನ್ನಂಥ ಹುಡುಗರನ್ನು ನೋಡಿ ಮಿದುಳನ್ನು ಚುರುಕುಗೊಳಿಸುವ, ನೆನಪಿನ ಶಕ್ತಿಯನ್ನು ಹೆಚ್ಚಿಸುವ ಔಷಧಿ ತಮ್ಮಲ್ಲಿದೆಯೆಂದು ಹೇಳಿ ತಿನ್ನಲು ಚೂರ್ಣವೊಂದನ್ನು ಕೊಡಲು ಮುಂದಾಗುತ್ತಿದ್ದರು. ನಾಟಿ ವೈದ್ಯರ ಅಂಗಡಿಯ ಮುಂದೆ ಹಳ್ಳಿಯ ಯುವಕರು, ಮಧ್ಯವಯಸ್ಕರು ಹೆಚ್ಚಾಗಿ ನೆರೆದಿರುತ್ತಿದ್ದರು. ಅವರು ಗರ್ಭಪಾತವನ್ನೂ ಕಳ್ಳತನದಲ್ಲಿ ಮಾಡುತ್ತಾರೆಂದು ಅಲ್ಲಿ ನೆರೆದಿದ್ದವರ ಮಾತುಗಳಿಂದ ಅಸ್ಪಷ್ಟವಾಗಿ ತಿಳಿಯುತ್ತಿತ್ತು. ಒಮ್ಮೆ ಜೂಜಿನಲ್ಲಿ ದುಡ್ಡು ಗೆದ್ದೆ. ಮತ್ತೆ ಆಡಿದರೆ ಸೋಲುತ್ತೇನೆ ಅತಿಯಾಸೆ ಬೇಡವೆಂದು ಬಂದ ದುಡ್ಡಿನಲ್ಲಿ ಬೊಂಬೈ ಮಿಠಾಯಿ ಮತ್ತು ಬೋಂಡ ಖರೀದಿಸಿ ತಿನ್ನುತ್ತ ನಮ್ಮ ಊರಿನತ್ತ ನಡೆದೆ.

ಊರ ಹೊರಗೆ ಹತ್ತಾರು ಜನ ಸೇರಿದ್ದರು. ಹೋಗಿ ನೋಡಿದೆ. ಈರ್ವರು ದಢೂತಿ ಆಸಾಮಿಗಳು ಹೆಗಲಿಗೆ ಪೆಟ್ಟಿಗೆಗಳನ್ನು ಜೋತು ಬಿಟ್ಟುಕೊಂಡು ನಿಂತಿದ್ದರು. ಅವರನ್ನು ಸುತ್ತುವರಿದು ನಿಂತಿದ್ದವರಲ್ಲಿ ನಮ್ಮ ಅಜ್ಜಿ ಕೋಟೆಮ್ಮನ ಹತ್ತಿರ ಬಂದು ಹೋಗುತ್ತಿದ್ದವರೇ ಬಹಳ ಜನವಿದ್ದರು.

ಕೀಲುವಾತ ಎಷ್ಟೇ ಘೋರವಿರಲಿ ಕೆಲವೇ ಗಳಿಗೆಗಳಲ್ಲಿ ವಾಸಿ ಮಾಡುವುದಾಗಿ ಆ ದಢೂತಿ ಆಸಾಮಿಗಳು ಉರ್ದುಮಿಶ್ರಿತ ಕನ್ನಡದಲ್ಲಿ ಮಾತಾಡುತ್ತಿದ್ದರು. ಅಲ್ಲಿ ನೆರೆದಿದ್ದವರಲ್ಲಿ ಕೀಲುಬೇನೆಯಿಂದ ಕುಂಟಿ ನಡೆಯುವವರಿದ್ದರೂ ತಮ್ಮ ಬಳಿ ನಾಟಿವೈದ್ಯರಿಗೆ ನೀಡಲು ಬೇಕಾದಷ್ಟು ಹಣವಿಲ್ಲದ್ದಕ್ಕೋ ಅಥವಾ ತಾವೇ ಪ್ರಥಮ ಪ್ರಯೋಗಪಶು ಆಗುವುದಕ್ಕೆ ಹೆದರಿಯೋ, "ನಮ್ಮ ತಿಮ್ಮೇಗೌಡರ ತಾಯಿ ಕೋಟೆಮ್ಮಂಗೆ ಹೇಳೋಕ್ಕೆ ಆಗದಷ್ಟು ಊತರೋಗ. ಆಯಮ್ಮಂಗೆ ವಾಸಿ

ಮಾಡಿ ತೋರ್ಸಿ ನೋಡವಾ. ಕೋಟೆಮ್ಮನ ಕಾಲು ವಾಸಿ ಆದ್ರೆ ತಿಮ್ಮೇಗೌಡ್ರು ನಿಮ್ಗೆ ಕೈತುಂಬ ದುಡ್ಡು ಕೊಡ್ತರೆ...." ಎಂದರು.

"ಪೈಸಾ ಕೊಡೋವ್ರು ಇತ್ತೂ ಅಂದರೆ ನಾವ್ ಇಲಾಜ್ ಕೊಡ್ಬೋದು. ನಮ್ಗೆ ದಾಬಸ್‌ಪೇಟ್ ಸಾಹುಕಾರ ಶೆಟ್ಟರ ಮನೆಯಿಂದ ಬುಲಾವ್ ಇದೆ" ಎಂದರು ದಡೂತಿ ಆಸಾಮಿಗಳು. ಅಲ್ಲಿ ನೆರೆದಿದ್ದವರ ಒತ್ತಾಯಕ್ಕಾಗಿ ಹೊರಟವರಂತೆ ನಮ್ಮ ಮನೆಯತ್ತ ಆ ನಾಟಿವೈದ್ಯದ್ವಯರು ನಡೆದರು. ಅವರ ಹಿಂದೆ ಜನರ ಗುಂಪು, ಅದರಲ್ಲಿ ನಾನು.

ನನ್ನಜ್ಜಿ ಕೋಟೆಮ್ಮ ಬಡವರ ಮೇಲೆ ಅನುಕಂಪ ಇರಿಸಿಕೊಂಡಿದ್ದಳು. ನನ್ನ ತಾಯಿ ಮತ್ತು ದೊಡ್ಡಮ್ಮಂದಿರಿಂದ ಹಳೆಯ ಸೀರೆ ಇತರೆ ಬಟ್ಟೆಗಳನ್ನು ಬಡವರಿಗೆ ಕೊಡಿಸುತ್ತಿದ್ದಳು. ಹೊಲೆಯರ ಕೇರಿಯವರು ವೀಳ್ಯ ಅಡಿಕೆಗಳನ್ನು ನನ್ನಜ್ಜಿಯಿಂದ ಪುಕ್ಕಟೆ ಪಡೆದುಕೊಳ್ಳಲು ಮೇಲಿಂದ ಮೇಲೆ ಬರುತ್ತಿದ್ದರು.

ನಲವತ್ತೈದನೇ ವಯಸ್ಸಿಗೇ ಗಂಡನನ್ನು ಕಳೆದುಕೊಂಡಿದ್ದ ನನ್ನಜ್ಜಿ ನೂರನಾಲ್ಕು ವರ್ಷಗಳವರೆಗೆ ಬದುಕಿದ್ದಳು. ಅಜ್ಜಿಗೆ ಮೊಳಕಾಲು ವಾತರೋಗ ಬಿಟ್ಟರೆ ಬೇರೆ ಕಾಯಿಲೆಗಳು ಇದ್ದಂತಿರಲಿಲ್ಲ. ಅಜ್ಜಿ ನಡೆದಾಡಿದರೆ ಬಾತುಕೋಳಿ ನಡೆದಂತೆ ಕಾಣಿಸುತ್ತಿತ್ತು.

ನಾಟಿ ವೈದ್ಯರು ಬಂದು ದೊಡ್ಡಪ್ಪನವರಿಗೆ ಅಜ್ಜಿಯ ಮೊಳಕಾಲುಗಳನ್ನು ಅರ್ಧ ಗಂಟೆಯಲ್ಲಿ ಚಿಕಿತ್ಸೆ ನೀಡಿ ಮತ್ತು ಮಂತ್ರಪ್ರಯೋಗ ಮಾಡಿ ಗುಣಪಡಿಸುವುದಾಗಿಯೂ, ಚಿಕ್ಕಮಕ್ಕಳಂತೆ ಅಜ್ಜಿ ಓಡಾಡುವುದನ್ನು ನಿಮ್ಮ ಕಣ್ಣ ಮುಂದೆಯೇ ಪ್ರದರ್ಶಿಸುವುದಾಗಿಯೂ ಬಹಳ ವಿಶ್ವಾಸದಿಂದ ಹೇಳಿದರು. ನಾಟಿ ವೈದ್ಯರ ಮಾತು ಕೇಳಿದ ಅಜ್ಜಿಯೂ ಚಿಕಿತ್ಸೆ ಪಡೆದುಕೊಳ್ಳಲು ಸಿದ್ಧವಾದಳು.

ವೀಳ್ಯ, ಅಡಿಕೆ, ದಕ್ಷಿಣೆಗಳನ್ನು ಮೊದಲು ಇಡಲು ಸೂಚಿಸಿದರು. ದಕ್ಷಿಣೆಯ ಹಣ ತೀರಾ ಕಮ್ಮಿಯಾಯಿತು, ನಮ್ಮ ಚಿಕಿತ್ಸೆಯ ಚಮತ್ಕಾರ ನೋಡಿ ನೀವೇ ಹೆಚ್ಚು ದುಡ್ಡು ನೀಡುವಿರಿ ಎಂದು ಹೇಳುತ್ತ ಚಿಕಿತ್ಸೆಯನ್ನು ಆರಂಭಿಸಿದರು.

ಮನೆಯಲ್ಲಿ ಜನ ಕಿಕ್ಕಿರಿದಿತ್ತು. ಅಷ್ಟರಲ್ಲೇ ನಾನು ಜಾಗ ಮಾಡಿಕೊಂಡು ನಾಟಿವೈದ್ಯರ ಬಳಿಯೇ ನಿಂತುಕೊಂಡು ಅವರು ಮಾಡುವುದನ್ನು ಸಮೀಪದಿಂದ ಅವಗಾನಿಸತೊಡಗಿದೆ.

ಮೊದಲಿಗೆ ಅವರು ಮೊಳಕಾಲು ಮತ್ತು ಹಿಮ್ಮಡಿಗಳ ಮೇಲೆ ಯಾವುದೋ ತೈಲವನ್ನು ಮೇಲಿಂದ ಮೇಲೆ ಹಚ್ಚಿ ಕೈಯಾಡಿಸುತ್ತ ಉಜ್ಜಿಸಿದರು. ಆ ನಂತರ

ಒಂದು ಬ್ಲೇಡನ್ನು ತೆಗೆದುಕೊಂಡು ಮೊಳಕಾಲು ಚಿಪ್ಪಿನ ಸುತ್ತ ಮತ್ತು ಹಿಮ್ಮಡಿಯ ಭಾಗಗಳಲ್ಲಿ ಚಿಕ್ಕಚಿಕ್ಕದಾಗಿ ಕೊಯ್ದರು. ರಕ್ತ ಬರತೊಡಗಿತು. ಅದನ್ನು ಒರೆಸಿ ಅದಕ್ಕೂ ಏನೋ ಒಂದು ತೈಲವನ್ನು ಹಾಕಿದರು. ರಕ್ತ ಒಸರುವುದು ನಿಂತಿತು. ಬ್ಲೇಡಿನಿಂದ ಕೊಯ್ದರೂ ನನ್ನಜ್ಜಿಗೆ ನೋವೇ ಆಗಲಿಲ್ಲ. ಕೊಯ್ಯುವುದನ್ನು ನೋಡಿ ನನಗೆ ನಡುಕವುಂಟಾಯಿತು. ದವಡೆಗಳನ್ನು ಗಟ್ಟಿ ಹಿಡಿದುಕೊಂಡು ಬಿಗಿ ಉಸಿರಿನಲ್ಲಿ ಇದನ್ನೆಲ್ಲ ನೋಡುತ್ತಿದ್ದೆ.

ಬ್ಲೇಡಿನಿಂದ ಕೊಯ್ದು ಗೀರು ಗಾಯಗಳನ್ನು ಮಾಡಿಯಾದ ಮೇಲೆ ಕಸಪೊರಕೆಯನ್ನು ಕೇಳಿದರು ನಾಟಿವೈದ್ಯರು. ಕಸಪೊರಕೆಯ ಕಡ್ಡಿಗಳನ್ನು ಕಿತ್ತು ಅವುಗಳನ್ನು ಅಜ್ಜಿಯ ಮೊಣಕಾಲು ಹಿಮ್ಮಡಿಗಳ ಮೇಲೆ ನೀವಳಿಸುವ ರೀತಿ ಮೇಲಿಂದ ಕೆಳಗೆ ಒಯ್ಯುತ್ತಾ ಅದೇನೊ ಮಂತ್ರ ಪಟಗುಟ್ಟಿ ಕೊನೆಗೆ ಥೂ ಥೂ ಎಂದರು.

ಇದೆಲ್ಲ ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಮುಗಿಯಿತು.

ಅಜ್ಜಿಗೆ ಎದ್ದು ನಿಲ್ಲಲು ಹೇಳಿದರು. ಎದ್ದು ನಿಂತಳು. ಓಡಾಡು ಎಂದರು. ನೆರೆದಿದ್ದ ಜನರಿಗೆ ದಾರಿ ಬಿಡಿ ಎಂದರು. ಅಜ್ಜಿ ಅವಿಶ್ವಾಸದಿಂದ ಕಾಲನ್ನು ಎತ್ತಿಟ್ಟಳು. ಅದೇನೂ ಯೋಚನೆ ಮಾಡದೆ ಜೋರಾಗಿ ನಡೆಯಿರಿ ಎಂದರು. ಜೋರಾಗಿ ನಡೆದಳು ಅಜ್ಜಿ! ಮೊಳಕಾಲುಗಳನ್ನು ಮಡಿಸಿ ಎತ್ತಿಡತೊಡಗಿದಳು. ಖುಷಿಗೊಂಡ ಅಜ್ಜಿ "ಓ ನನ್ನ ಕಾಲುಗಳು ಮುಂಚೇನಂಗೇ ಆಗಿಬಿಟ್ವು" ಎಂದು ಉದ್ಗಾರ ತೆಗೆದಳು.

ಅಲ್ಲಿ ನೆರೆದಿದ್ದವರೆಲ್ಲ ಆಶ್ಚರ್ಯಚಕಿತರಾಗಿ ನಿಂತಿದ್ದರು. ಇವರು ನಾಟಿವೈದ್ಯರಲ್ಲ ಪವಾಡವೈದ್ಯರು ಎಂದು ಮಾತಾಡತೊಡಗಿದರು. ನಮ್ಮ ದೊಡ್ಡಪ್ಪನವರು ಅತೀವ ಸಂತೋಷಗೊಂಡು ಐದು ಸೇರು ಅಡಿಕೆ ಮತ್ತು ಮೇಲೆ ಇನ್ನಷ್ಟು ಹಣವನ್ನು ನೀಡಿದರು. "ನೀವು ನಿಜವಾಗಿಯೂ ನಮ್ಮ ಮುಂದೆ ಪವಾಡ ಮಾಡಿ ತೋರಿಸಿರುವಿರಿ. ಮೊದಲು ನಿಮ್ಮನ್ನು ನಂಬಿರಲಿಲ್ಲ...." ಎಂದರು ಪಶ್ಚಾತ್ತಾಪದ ಧ್ವನಿಯಲ್ಲಿ.

ನಾಟಿ ವೈದ್ಯರು "ನಿಮ್ದೂ ಸರೀನೆ. ಯಾವುದನ್ನೂ ಆಂಖ್‌ನಿಂದ ನೋಡ್ದೆ ನಂಬೋಕೆ ಆಗೊಲ್ಲ" ಎನ್ನುತ್ತ ಹೊರಡಲು ರೆಡಿಯಾಗಿ ನಿಂತರು.

ಕೋಟೆಮ್ಮನ ಕಾಲುಗಳನ್ನು ಗುಣಪಡಿಸಿದ ಸುದ್ದಿ ಊರಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ವಾತರೋಗಿಗಳ ದಂಡೇ ನಮ್ಮ ಮನೆಯ ಮುಂದೆ ಬಂದು

ಘೇರಾಯಿಸಿತು. ನಾಟಿವೈದ್ಯರು ಮಾತ್ರ ಮತ್ತಾರಿಗೂ ಚಿಕಿತ್ಸೆ ನೀಡಲು ತಯಾರಾಗಲಿಲ್ಲ. "ನಾವು ದಾಬಸ್‌ಪೇಟೆ ಶೆಟ್ಟರ ಮನೆಗೆ ತುರ್ತಾಗಿ ಹೋಗ್ಬೇಕು. ಆ ಕೆಲಸ ಮುಗಿಸಿದ ಮೇಲೆ ಬೇಕಾದರೆ ವಾಪಸ್ ಹೋಗುವಾಗ ಬರುತ್ತೇವೆ" ಎಂದರು. ಎರಡು ದಿನಗಳ ನಂತರ ಬರುವುದಾಗಿ ಹೇಳಿ ಕೈತುಂಬ ದಕ್ಷಿಣೆ, ಚೀಲದ ತುಂಬ ಅಡಿಕೆ ಹೊತ್ತುಕೊಂಡು ಲಗುಬಗೆಯಿಂದ ಬಸ್‌ಸ್ಟ್ಯಾಂಡ್‌ಗೆ ನಡೆದೇಬಿಟ್ಟರು. ಊಟ ಮಾಡಿಕೊಂಡು ಹೋಗಬೇಕೆಂದು ದೊಡ್ಡಪ್ಪ ಒತ್ತಾಯಿಸಿದರೂ ಅವರು ಕೇಳಲಿಲ್ಲ. ಅವರನ್ನು ಕಳಿಸಿಕೊಡಲು ನೂರಾರು ಜನರ ಗುಂಪೇ ಹೊರಟಿತು. ದಾಬಸ್‌ಪೇಟೆ ಬಸ್ ಹತ್ತಿದ ಅವರನ್ನು ಹಳ್ಳಿಯ ಜನ ಆತ್ಮೀಯವಾಗಿ ಬೀಳ್ಕೊಟ್ಟರು.

ಜನರು ಗುಂಪುಗುಂಪಾಗಿ ಅಜ್ಜಿ ಓಡಾಡುವುದನ್ನು ನೋಡಲು ಬರತೊಡಗಿದರು. ಜನರು ಬಂದಂತೆಲ್ಲ ಅವರ ಮುಂದೆ ಓಡಾಡಿ ತನ್ನ ಪುಟನಡಿಗೆಯ ಪ್ರದರ್ಶನ ಮಾಡಿ ಅಜ್ಜಿ ಸುಸ್ತಾಗಿ ಮಲಗಿಕೊಂಡುಬಿಟ್ಟಳು.

ಬಂದವರೆಲ್ಲ "ಈಗಿನ ಡಾಕ್ಟ್ರ್‌ಗೋಳೆಲ್ಲ ಕೆಲಸಕ್ಕೆ ಬಾರ್ದೋರು. ನೋಡಿ ಈ ನಾಟಿವೈದ್ಯರು ಸ್ಕೂಲ್ ಮುಖಾಸಹಿತ ನೋಡ್ದೆ ಇರೋರು. ಇವರಿಗಿರೊ ವಿದ್ಯೆ ಅವರಲ್ಲಿ ಎಲ್ಲಿದೆ?" ಎಂದು ಮಾತಾಡತೊಡಗಿದರು. ಮತ್ತೆ ಕೆಲವರು, ಇದು ಔಸ್ದಿಯಿಂದ ಗುಣಪಡಿಸಿದ್ದಲ್ಲ, ಮಂತ್ರವಿದ್ಯೆಯಿಂದ ಗುಣಪಡಿಸಿದ್ದು. ಇಲ್ಲಿ ಶಾಸ್ತ್ರಕ್ಕೆ, ಜನರ ನಂಬಿಕೆಗೇಂತ ಕಾಲಿಗೆ ಎಣ್ಣೆ ಹಚ್ಚವ್ರೆ. ಕೊನೇಗೆ ಕಸಪೊರಕೆ ಕಡ್ಡಿ ಹಿಡ್ದು ಮಂತ್ರ ಹೇಳಿ ನಿವಾಳಿಸಿದನಲ್ಲ, ಅದೇ ಕಾಲುಗಳ್ನ ಗುಣಪಡಿಸಿದ್ದು. ಔಸ್ದಿಯಿಂದ ಈಪಾಟಿ ಪವಾಡ ಆಗೋಕೆ ಸಾಧ್ಯವಾ ! ಎಂದರು.

ಹೀಗೆ ನಾಟಿವೈದ್ಯರ ಗುಣಗಾನ, ಸರ್ಕಾರಿ ಡಾಕ್ಟರ್‌ಗಳ ಅವಹೇಳನ ನಡೆಯುತ್ತಿತ್ತು. ನಾಟಿವೈದ್ಯರು ಹೋಗಿ ನಾಲ್ಕು ಗಂಟೆ ಆಗಿರಬಹುದು. ಮಲಗಿದ್ದ ಅಜ್ಜಿ ಜೋರಾಗಿ "ಉರೀ ಉರೀ" ಎಂದು ಕಿರುಚಿಕೊಳ್ಳತೊಡಗಿದಳು.

ಎಲ್ಲರೂ ಅಜ್ಜಿಯತ್ತ ಧಾವಿಸಿದರು. ಅಜ್ಜಿಯ ಮೊಳಕಾಲುಗಳ ಮೇಲೆ ಬ್ಲೇಡ್‌ನಿಂದ ಗೀರಿದಲ್ಲೆಲ್ಲ ಬಾತುಕೊಂಡಿತ್ತು. ಗಾಳಿ ಹಾಕತೊಡಗಿದರು. ಅಜ್ಜಿಯ ಚೀರಾಟ ಜೋರಾಗತೊಡಗಿತು. "ನಂಗೆ ವಿಷ ಕೊಟ್‌ಬಿಡೀ. ಉರೀ ತಡಕೋಳೋಕೆ ಆಗೊಲ್ಲ" ಎನ್ನತೊಡಗಿದಳು.

ಸೈಕಲ್ ಕೊಟ್ಟು ದೊಡ್ಡ ಹೆಜ್ಜಾಜಿಯಿಂದ ಸರ್ಕಾರಿ ಡಾಕ್ಟರ್‌ರನ್ನು ಕರೆತರಲು ಒಬ್ಬರನ್ನು ಓಡಿಸಿದರು ದೊಡ್ಡಪ್ಪ.

ಬಂದು ನೋಡಿದ ಡಾಕ್ಟರ್ "ನಿಮಗೇನು ತಲೆ ಸರಿಯಾಗಿದೆಯಾ? ಈ ಅಜ್ಜೀನ ಸಾಯಿಸ್‌ಬೇಕೂ ಅಂತ ಈ ಪಾಟಿ ಅವಳ ಕಾಲುಗಳ್ನ ಕೊಯ್ಸಿದೀರ...." ಎಂದು ಬೈದು ತಮ್ಮ ಚಿಕಿತ್ಸೆ ಆರಂಭಿಸಿದರು. ಗಾಯಗಳಿಗೆ ಮುಲಾಮು ಹಚ್ಚಿ ಬ್ಯಾಂಡೇಜ್ ಮಾಡಿ, ಇಂಜೆಕ್ಷನ್ ಕೊಟ್ಟರು, ಹದಿನೈದು ನಿಮಿಷಗಳಲ್ಲಿ ಅಜ್ಜಿ ನಿದ್ರೆ ಮಾಡತೊಡಗಿದಳು. ಮಾರನೆ ದಿನ ಅಜ್ಜಿಯ ಕಾಲುಗಳು ಬಾಳೆಯ ದಿಂಡಿನಂತೆ ಬಾತುಕೊಂಡಿದ್ದವು. ಗಾಯಗಳಲ್ಲಿ ಕೀವೂ ತುಂಬಿಕೊಂಡಿತ್ತು.

ನಾಟಿ ವೈದ್ಯರನ್ನು ದೊಡ್ಡಪ್ಪ "ಆ ಕಳ್‌ನನ್ಮಮಕ್ಳು ನಾಟಿವೈದ್ಯರಲ್ಲ ಮಾಟದ ವೈದ್ಯರು. ಎಲ್ಲಿದ್ರೂ ಅವುರ್ನ ಹುಡುಕ್ಸಿ ಪೋಲೀಸ್‌ನೋರಿಂಧ ಸರಿಯಾಗಿ ಚಚ್ಚಿಸಬೇಕು, ಅಂದ್ರೆ ಬುದ್ಧಿ ಬರುತ್ತೆ. ಇನ್ನೊಂದ್ ಕಡೆ ಈ ಥರಾ ಮಾಡಬಾರ್ದು ಆ ಸೂಳೆಮಕ್ಳು......" ಎಂದು ಕೂಗಾಡಿದರು. ದಾಬಸ್‌ಪೇಟೆಯ ಶೆಟ್ಟರ ಮನೆಗಳಿಗೆಲ್ಲ ಹೋಗಿ ಆ ಕಳ್ಳರ ಪತ್ತೆ ಮಾಡಿಕೊಂಡು ಬನ್ನಿ ಅಂತ ಇಬ್ಬರನ್ನು ಕಳಿಸಿದರು. ದಾಬಸ್‌ಪೇಟೆಯ ಯಾವ ಶೆಟ್ಟರ ಮನೆಯಲ್ಲೂ ಅವರ ಸುಳಿವು ಸಿಗಲಿಲ್ಲ. ತಮಗೆ ಅವರ ವಿಷಯವೇ ಗೊತ್ತಿಲ್ಲವೆಂದು ಹೇಳಿದರಂತೆ ಶೆಟ್ಟರು.

ತಾತ್ಕಾಲಿಕವಾಗಿ ಸ್ಪರ್ಶಜ್ಞಾನ ಕಳೆಯುವ ಗಿಡಮೂಲಿಕೆಗಳ ಮಿಶ್ರಣವನ್ನು ದುರುಪಯೋಗ ಮಡಿಕೊಂಡು ಈ ಥರ ಮೋಸ ಮಾಡಿದ್ದಾರೆಂದು ಡಾಕ್ಟರ್ ಹೇಳಿದರು. ಅಜ್ಜಿ ನಡೆದಾಡುವಂತಾಗಲು ತಿಂಗಳೇ ಬೇಕಾಯಿತು.

ನಮ್ಮ ಊರಿನ ಸುತ್ತಲ ಹಳ್ಳಿಗಳಲ್ಲೆಲ್ಲ 'ಕಣ್‌ಕಟ್ ವೈದ್ಯರು ಮೋಸ ಮಾಡೋಕೆ ಬರ್ತಾರೆ, ಎಚ್ಚರಿಕೆಯಿಂದ ಇರಬೇಕು' ಎನ್ನುವ ಸುದ್ದಿ ಹಬ್ಬಿತು.

19

ರಾಜನಿಲ್ಲದ ಭಯದ ತುಮುಲಗಳು

ಒಂಬತ್ತನೇ ತರಗತಿಗೆ ನಾನು ಬರುವಷ್ಟರಲ್ಲಿ ದೊಡ್ಡಬೆಳವಂಗಲಕ್ಕೆ ಹೈಸ್ಕೂಲ್ ಮಂಜೂರು ಆಗಿತ್ತು. ಪಕ್ಕದ ಮಧುರೆ ಹೋಬಳಿಗೆ ಹೈಸ್ಕೂಲ್ ಮಂಜೂರಾಗಿ ತಮ್ಮ ಊರಿಗೆ ಏಕೆ ಆಗಿಲ್ಲವೆಂದು ಸರಕಾರದ ಜೊತೆ ತಕರಾರು ಮಾಡಿ ಸ್ಕೂಲನ್ನು ಪಡೆದುಕೊಂಡು ಬಂದಿದ್ದರು ದೊಡ್ಡಬೆಳವಂಗಲದ ಹೋಬಳಿ ಮುಖಂಡರು. ದೊಡ್ಡಬೆಳವಂಗಲದ ಹೈಸ್ಕೂಲು ನಾನು ಪ್ರವೇಶ ಪಡೆದುಕೊಂಡಾಗ ದನದ ಕೊಟ್ಟಿಗೆಯಲ್ಲಿ ನಡೆಯುತ್ತಿತ್ತು. ಹಳ್ಳಿಯ ನಮ್ಮ ಮತ್ತು ನಮ್ಮ ಸಂಬಂಧಿಕರ ಅವಿಭಕ್ತ ಕುಟುಂಬಗಳಲ್ಲಿ ಉಂಟಾದ ಬದಲಾವಣೆಗಳು ನನ್ನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಬೀರಿದವು. ನನ್ನ ಮನಸ್ಸು ವಿಚಿತ್ರ ಸಂದಿಗ್ಧತೆಗಳಿಂದ ತಳಮಳಗೊಳ್ಳತೊಡಗಿತು. ಅವಿಭಕ್ತ ಕುಟುಂಬಗಳ ಬಗ್ಗೆ ನನ್ನಲ್ಲಿ ದ್ವೇಷ ಉಂಟಾಗಿರುವಾಗಲೇ ಅವುಗಳು ಛಿದ್ರಗೊಂಡು ನಾಶವಾದರೆ ಹೇಗೆನ್ನುವ ಅನಾಥ ಭಾವನೆಯೂ ನನ್ನಲ್ಲಿ ಮನೆಮಾಡತೊಡಗುವಂಥ ಸನ್ನಿವೇಶಗಳು ನನ್ನ ಕಣ್ಣೆದುರು ನಡೆಯತೊಡಗಿದವು.

ನನ್ನ ತಾಯಿಯ ತವರುಮನೆ ನಾಲ್ವರು ಸಹೋದರರ ಅವಿಭಕ್ತ ಕುಟುಂಬ;

ನನ್ನ ತಾಯಿಯ ತಂದೆಗೆ ಮೂವರು ತಮ್ಮಂದಿರು. ನನ್ನ ತಾಯಿಯ ಸ್ವಂತ ಅಣ್ಣ ಸಿದ್ಧನಂಜೇಗೌಡರು ಕಾಂಗ್ರೆಸ್ ಮುಂದಾಳುವಾಗಿದ್ದರು. ಮನೆಯಲ್ಲೂ ಅವರೇ ಹಿರಿಯರು. ಚಾಣಾಕ್ಷತನ, ಮುತ್ಸದ್ದಿತನಗಳು ಅವರ ಕೈಗೆ ಯಜಮಾನಿಕೆಯನ್ನು ತಂದುಕೊಟ್ಟಿದ್ದವು. ಇವರ ತಮ್ಮ ದೊಡ್ಡೇಗೌಡ ಕಮ್ಯುನಿಸ್ಟ್ ಪಕ್ಷ ಸೇರಿದ್ದರು. ತನ್ನ ಸ್ವಂತ ಅಣ್ಣನ ವಿರುದ್ಧವೇ ರಾಜಕೀಯ ಚಟುವಟಿಕೆಗಳನ್ನು ಮಾಡುತ್ತಿದ್ದರು.

ದೊಡ್ಡಯ್ಯ ಮಾವ ಕಮ್ಯುನಿಸ್ಟ್ ತತ್ವಗಳನ್ನು ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಳ್ಳುತ್ತಿದ್ದೆ. ಎಲ್ಲರೂ ಸಮಾನರಾಗಬೇಕು ಎನ್ನುವ ಅವರ ಭಾಷಣ ನನಗೆ ವಿಚಿತ್ರವಾಗಿ ಕಾಣುತ್ತಿತ್ತು. ನನ್ನ ಕ್ಲಾಸ್‌ನಲ್ಲಿ ದಡ್ಡ ಹುಡುಗರ ಮಟ್ಟಕ್ಕೆ ಹೋಗಿ ನಾನು ನಿಂತುಕೊಳ್ಳುವುದು ಸಮಾನತೆಯೇ ಎನ್ನುವ ಪ್ರಶ್ನೆ ಎದುರಾಗುತ್ತಿತ್ತು; ಜಾಣರು ದಡ್ಡರ ಮಟ್ಟಕ್ಕೆ ಹೋಗಿ ನಿಂತುಕೊಳ್ಳುವ ತತ್ವವಿದು ಎನಿಸುತ್ತಿತ್ತು. ಆದರೆ ಆ ಬಗ್ಗೆ ದೊಡ್ಡಯ್ಯ ಮಾವನೊಂದಿಗೆ ನಾನು ಚರ್ಚಿಸುವುದಕ್ಕೆ ಹೋಗುತ್ತಿರಲಿಲ್ಲ. ವ್ಯಕ್ತಿ ಸ್ವಾತಂತ್ರ್ಯ, ಬಡತನಗಳ ಬಗ್ಗೆ ಅವರಾಡುವ ಮಾತುಗಳು ಆಕರ್ಷಕ ಎನಿಸುತ್ತಿದ್ದವು. ಅದೇ ಸಮಯಕ್ಕೆ ಅವರು ಎಲ್ಲರೆದುರು ತಮ್ಮ ಸ್ವಂತ ಅಣ್ಣ ಸಿದ್ಧನಂಜೇಗೌಡರನ್ನು ಟೀಕಿಸುವುದು ನನ್ನಲ್ಲಿ ಅಸಹ್ಯ ಭಾವವನ್ನು ಹುಟ್ಟಿಸುತ್ತಿತ್ತು. ಸಿದ್ಧನಂಜೇಗೌಡ ಮಾವನ ಬಗೆಗೆ ನನ್ನಲ್ಲಿ ಉನ್ನತ ಭಾವನೆಗಳಿದ್ದವು. ಅವರ ವ್ಯಕ್ತಿತ್ವ ನನಗೆ ಅನುಕರಣೀಯ ಎನಿಸುತ್ತಿತ್ತು. ತನ್ನಣ್ಣನಂತೆ ತಾನು ಜಾಣನಲ್ಲ, ಮುತ್ಸದ್ದಿಯಲ್ಲ, ಹಿರಿತನದ ಗುಣಗಳನ್ನು ಹೊಂದಿಲ್ಲ ಎನ್ನುವ ಕಾರಣಕ್ಕೆ ದೊಡ್ಡಯ್ಯ ಮಾವ ಸಿದ್ಧನಂಜೇಗೌಡ ಮಾವನನ್ನು ವಿನಾಕಾರಣ ಟೀಕಿಸುತ್ತಿದ್ದಾನೆನ್ನುವ ಯೋಚನೆ ನನ್ನಲ್ಲಿ ಮೂಡುತ್ತಿತ್ತು. ದೊಡ್ಡಯ್ಯ ಮಾವ ವಿನಾಕಾರಣ ರಾಜಕೀಯದಲ್ಲಿ ಆಸಕ್ತಿ ವಹಿಸುತ್ತಿದ್ದ. ಇದಕ್ಕಾಗಿ ಮನೆಯವರೆಲ್ಲ ಅವರನ್ನು ಬೈಯುತ್ತಿದ್ದರು; ಮನೆ, ಮಠ ಬಿಟ್ಟು ದರಿದ್ರರ ಸಾವಾಸಕ್ಕಿಳಿದಿದ್ದಾರೆ ಎಂದು. "ಕಷ್ಟಕ್ಕೆ ಕರೀಬೇಡಿ; ಊಟಕ್ಕೆ ಮರೀಬೇಡಿ ಎನ್ನುವವ ನಮ್ಮನೇಲಿ ಹುಟ್ಟಿದ" ಎನ್ನುತ್ತಿದ್ದರು ಸಿದ್ಧನಂಜೇಗೌಡ ಮಾವ.

ಹೊಲೆಯರ ಕೇರಿಗೆ ಭಾಷಣ ಮಾಡಲು ಹೊರಟಾಗ ಒಮ್ಮೆ ನನ್ನನ್ನೂ ತಮ್ಮೊಡನೆ ಕರೆದೊಯ್ದರು ಕಮ್ಯುನಿಸ್ಟ್ ಮಾವ. ಅದು ನಮ್ಮ ತಾಯಿಗೆ ತಿಳಿದು ನನಗೆ ಇನ್ನೊಮ್ಮೆ ಹೋಗಬಾರದೆಂದು ಗದರಿದರು. "ಚಿಕ್ಕಮಾವನ ಮಾತು ಕೇಳಿಸ್ಕಂಡ್ರೆ ಮನೆಹಾಳ ಆಗ್ತೀಯಾ" ಎಂದು ಬೈದರು ಅಮ್ಮ.

ಕಮ್ಯುನಿಸ್ಟ್ ಮಾವನ ಭಾಷಣ ಜನರಿಗೆ ಆಕರ್ಷಣೀಯವಾಗಿತ್ತು. ಜನ

ಚಪ್ಪಾಳೆ ತಟ್ಟುತ್ತಿದ್ದರು. ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತಾಡಿದ ಅವರ ಮಾತುಗಳು ನನಗೂ ಹಿಡಿಸಿದವು.

ಆದರೆ, ಅಣ್ಣ ಸಿದ್ಧನಂಜೇಗೌಡರು ಊರಿಗೆ ಕಲ್ಲುಚಪ್ಪಡಿ ರಸ್ತೆ ಮಾಡಿಸಿದ್ದನ್ನು ಶ್ರೀಮಂತರ ಕೆಲಸಗಳು ಎಂದು ಟೀಕಿಸಿದ್ದನ್ನು ಕೇಳಿ ಆಶ್ಚರ್ಯವೆನ್ನಿಸಿತು.

ದೊಡ್ಡಬಳ್ಳಾಪುರದಿಂದ ಐದು ಬಾರಿ ಶಾಸಕರಾಗಿ ಆಯ್ಕೆಯಾದ ಮತ್ತು ಅರಸು ಸಂಪುಟದಲ್ಲಿ ಅರಣ್ಯದ ಸಚಿವರಾಗಿದ್ದ ವರ್ಚಸ್ವೀ ನಾಯಕ ಜಿ. ರಾಮೇಗೌಡರ ಅನುಚರರಾಗಿದ್ದನ್ನೂ ಚಿಕ್ಕಮಾವ ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡರು. ಆಗ ನನಗೆ ಇವು ಅಪ್ಪಟ ಅಸೂಯೆಯಿಂದ ಹುಟ್ಟಿಕೊಂಡ ದುರ್ಯೋಚನೆಗಳು ಎನಿಸಿದವು.

ಕಮ್ಯುನಿಸ್ಟ್ ಮಾವ ನನಗೆ ಬಹಳಷ್ಟು ಸಪೋರ್ಟ್ ಮಾಡುತ್ತಿದ್ದರು. ಲಾಯರ್ ಆಗು ಎಂದು ಹೇಳುತ್ತಿದ್ದರು. ಆದರೆ ಸಿದ್ಧನಂಜೇಗೌಡ ಮಾವನ ಅನಭಿವ್ಯಕ್ತ ಮತ್ತು ಸುಪ್ತ ನೈತಿಕ ಬೆಂಬಲವೇ ನನ್ನನ್ನು ಆಕರ್ಷಿಸುತ್ತಿತ್ತು, ಅವರು ನನ್ನೊಂದಿಗೆ ಹೆಚ್ಚು ಮಾತನಾಡದಿರುತ್ತಿದ್ದರೂ ಸಹ.

ತಾಲ್ಲೂಕ್ ಬೋರ್ಡ್ ಚುನಾವಣೆಗಳು ಘೋಷಿಸಲ್ಪಟ್ಟವು. ಸಿದ್ಧನಂಜೇಗೌಡ ಮಾವ ಕಾಂಗ್ರೆಸ್ ಅಭ್ಯರ್ಥಿಯಾದರು. ಅವರ ವಿರುದ್ಧ ಕಮ್ಯುನಿಸ್ಟ್ ಪಕ್ಷದಿಂದ ನೆರೆ ಗ್ರಾಮದ ಗಂಗಭೈರಯ್ಯ ಎನ್ನುವ ವ್ಯಕ್ತಿ ಸ್ಪರ್ಧಿಸಿದರು. ಚಿಕ್ಕಮಾವ ಸ್ವಂತ ತಮ್ಮಣ್ಣನ ವಿರುದ್ಧವೇ ಗಂಗಭೈರಯ್ಯನ ಪರ ಚುನಾವಣಾ ಪ್ರಚಾರಕ್ಕಿಳಿದ. ಇದು ಊರಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿಬಿಟ್ಟಿತು. ಊರು ಎರಡು ಪಾರ್ಟಿಯಾಗಿ ಇಬ್ಭಾಗವಾಯಿತು. ಕಮ್ಯುನಿಸ್ಟ್ ಅಭ್ಯರ್ಥಿ ಗಂಗಭೈರಯ್ಯ ಚುನಾವಣೆಯಲ್ಲಿ ಗೆದ್ದುಬಿಟ್ಟ. ಅಂದು ಚಿಕ್ಕಮಾವ ದಲಿತರ ಕೇರಿಗೆ ಭಾಷಣಕ್ಕೆ ಹೋಗಿದ್ದು ಚುನಾವಣಾ ಪೂರ್ವ ತಯಾರಿಗೆಂದು ಆಮೇಲೆ ನನಗೆ ತಿಳಿಯಿತು.

ಸಿದ್ಧನಂಜೇಗೌಡ ಮಾವನ ಇಬ್ಬರು ಚಿಕ್ಕಪ್ಪಂದಿರ ಮಕ್ಕಳು ಆಸ್ತಿ ಭಾಗ ಮಾಡಿಕೊಳ್ಳಲು ಕಾಯುತ್ತಿದ್ದರಂತೆ. ಹೀಗಾಗಿ "ಮನೆ ಮುರುಕರ್ನ ಪಕ್ಕೇಲಿರಿಸಿಕೊಂಡು ನಮಗಿರಾಕ ಆಗೋಲ್ಲ. ಬೇರೆ ಆಗ್ಲೇಬೇಕು" ಎಂದು ಪಟ್ಟು ಹಿಡಿದು ಕೂತರು. ತಾವು ಹಿರಿ ಸೋದರರ ಮಕ್ಕಳಾಗಿದ್ದರೂ ತಮ್ಮ ಚಿಕ್ಕಪ್ಪನ ಮಗ ಸಿದ್ಧನಂಜೇಗೌಡ ಮನೆ ಹಿರಿಯ ಅನ್ನಿಸಿಕೊಳ್ಳುತ್ತಿದ್ದದ್ದು ಅವರುಗಳಲ್ಲಿ ಅತೃಪ್ತಿಯ ಹೊಗೆಯೆಬ್ಬಿಸಿದೆಯೆಂದು ನಮ್ಮ ಮನೆಯಲ್ಲಿ ಮಾತಾಡಿಕೊಳ್ಳುತ್ತಿದ್ದರು.

ಕುಟುಂಬದ ಆಸ್ತಿ ನಾಲ್ಕು ಭಾಗಗಳಾಗಿ ಒಡೆಯಿತು. ಸಿದ್ಧನಂಜೇಗೌಡ ಮತ್ತು ದೊಡ್ಡೇಗೌಡ ಮಾವ ಇವರಿಬ್ಬರ ನಡುವೆ ಒಂದು ಭಾಗ ಬಂದಿತು. ಅದರಲ್ಲಿ ಎರಡು ಭಾಗ ಮಾಡಿ ಒಂದು ಭಾಗವನ್ನು ದೊಡ್ಡೇಗೌಡ ಮಾವನಿಗೆ ಕೊಟ್ಟರು. ಆದರೆ ಸಿದ್ಧನಂಜೇಗೌಡರ ಚಿಕ್ಕಪ್ಪನ ಮಗ ಸೀನಪ್ಪ ಮತ್ತು ಇತರರು 'ನಾವು ಬೇರೆ ಹೋಗೋಲ್ಲ, ಸಿದ್ಧನಂಜಣ್ಣನ ಜೊತೆಲೇ ಇರ್ತೇವೆ' ಎಂದು ತಮ್ಮ ಭಾಗದ ಆಸ್ತಿಯನ್ನು ಆತನ ಕೈಗೆ ಕೊಟ್ಟರು.

ದೊಡ್ಡೇಗೌಡ ಮಾವ ತನಗೆ ಆಸ್ತಿಯಲ್ಲಿ ನ್ಯಾಯಯುತ ಪಾಲು ಸಿಕ್ಕಿಲ್ಲವೆಂದು ಕೋರ್ಟಿನಲ್ಲಿ ದಾವೆ ಹೂಡಿದ. ಅದೇ ಸಮಯಕ್ಕೆ ಹೊಲದಲ್ಲಿ ರಾಗಿಯ ಫಸಲು ಬೆಳೆದು ಕಟಾವಿಗೆ ಬಂದಿತ್ತು. ಪುನಃ ಭಾಗ ಆಗುವವರೆಗೆ ಬೆಳೆಯನ್ನು ಕಟಾವು ಮಾಡಬಾರದೆಂದು ತಗಾದೆ ಎತ್ತಿದ ಚಿಕ್ಕಮಾವ.

ಒಂದು ದಿನ ಸಂಜೆ ದೊಡ್ಡಬೆಳವಂಗಲದ ಶಾಲೆಯಿಂದ ಹೊರಬಿದ್ದು ಮುಖ್ಯರಸ್ತೆಗಿಳಿದೆ. ಠಾಣೆಯ ಮುಂದೆ ಬಹಳಷ್ಟು ಜನ ಜಮಾಯಿಸಿದ್ದರು.

ಪೊಲೀಸ್ ಠಾಣೆಯೆದುರಿನಿಂದ ಹೋಗುವಾಗ ಅದರ ಕಡೆ ಮುಖ ಹಾಕದೆ ಹೋಗುವಷ್ಟು ಭಯ ನನ್ನಲ್ಲಿ. ಯಾರನ್ನಾದರೂ ಠಾಣೆಯಲ್ಲಿ ಥಳಿಸುತ್ತಿರುವ ಶಬ್ದ ಕೇಳಿದರಂತೂ ನನ್ನಲ್ಲಿ ನಡುಕ ಶುರುವಾಗುತ್ತಿತ್ತು.

ಠಾಣೆ ಸಮೀಪಿಸುತ್ತಿರುವಂತೆಯೇ ನಮ್ಮೂರಿನ ಜನ ಜಂಗುಳಿಯಾಗಿ ನಿಂತುದನ್ನು ನೋಡಿ ತೀವ್ರ ಕುತೂಹಲದಿಂದ ನನ್ನ ಎದೆಬಡಿತ ಹೆಚ್ಚಾಯಿತು.

"ನಿಮ್ಮ ಚಿಕ್ಕಮಾವ ಸಿದ್ಧನಂಜೇಗೌಡನ್ನ ಕೊಲೆ ಮಾಡೋಕೆ ಹೋಗಿದ್ದ.... ಅದ್ಕೇ ಕೇಸ್ ಮಾಡಾಕೆ ಬಂದವ್ರೆ...." ಎಂದು ಒಬ್ಬ ಹೇಳಿದಾಗ ನನ್ನೆದೆ ಧಸಕ್ಕೆಂದಿತು. ನಮ್ಮ ಕುಟುಂಬದಲ್ಲಿ ಕೊಲೆ, ಹೊಡೆಬಡಿದಾಟಗಳು ನಡೆದ ಬಗ್ಗೆ ನಾನು ಕೇಳಿದ್ದು ಅದೇ ಪ್ರಥಮವಾಗಿತ್ತು.

ಸದಾ ಠಾಣೆ ನೋಡಿದರೆ ಅಂಜುತ್ತಿದ್ದ ನಾನು ಅಂದು ಧುಮ್ಮಿಕ್ಕುವ ಧೈರ್ಯದಿಂದ ಒಳಗೆ ಓಡಿಹೋದೆ ಜನರನ್ನು ಸರಿಸಿಕೊಳ್ಳುತ್ತ. ಸಿದ್ಧನಂಜೇಗೌಡ ಮಾವ ಚಿಕ್ಕಮಾವನ ಮೇಲೆ 'ಕೊಲೆಯತ್ನ' ಪ್ರಕರಣ ದಾಖಲು ಮಾಡಲು ನಿಂತಿದ್ದರು. ಸಿದ್ಧನಂಜೇಗೌಡರ ಮಕ್ಕಳಾದ ವೆಂಕಟೇಶಯ್ಯ ಮತ್ತು ಗೋವಿಂದಯ್ಯ ಇವರೀರ್ವರೂ ದೊಡ್ಡಬೆಳವಂಗಲದ ಹೈಸ್ಕೂಲ್‌ಗೆ ಬರುತ್ತಿದ್ದರು. ಅವರೂ ಠಾಣೆಗೆ ಬಂದರು. ತಮ್ಮ ತಂದೆಯ ಮೇಲೆ ನಡೆದ ಹಲ್ಲೆಯ ಸುದ್ದಿ ತಿಳಿದು ಗಾಬರಿಗೊಂಡಿದ್ದರು. ಆದರೆ ಸಿದ್ಧನಂಜೇಗೌಡರಿಗೆ ಯಾವುದೇ ರೀತಿಯ

ಗಾಯಗಳು ಆಗಿರಲಿಲ್ಲವೆಂದೂ ಚಿಕ್ಕ ಮಾವ ಮಚ್ಚೆತ್ತಿದಾಗ ಅಡ್ಡ ಬಂದು ಕೈ ಹಿಡಿದ ಅವರ ಚಿಕ್ಕಪ್ಪನ ಮಗನ ಕೈಗೆ ಏಟು ಬಿದ್ದು ರಕ್ತ ಚೆಲ್ಲೆಂದಿತೆಂದೂ ತಿಳಿಯಿತು. ಸೀನಪ್ಪ ಮಾವನನ್ನು ನೋಡಲು ನಾವು ಮೂವರೂ ಹುಡುಗರು ಆಸ್ಪತ್ರೆಗೆ ತೆರಳಿದೆವು. ಈ ಎಲ್ಲ ವಿಷಯಗಳು ನನ್ನಲ್ಲಿ ದುಗುಡ, ಭಯ, ವ್ಯಾಕುಲ, ವಿಚಿತ್ರ ಕುತೂಹಲಗಳನ್ನು ಕೆರಳಿಸಿದ್ದರಿಂದ ಬಾಯಾರಿ ಗಂಟಲೊಣಗುತ್ತಿತ್ತು.

ಕೈಗೆ ಬ್ಯಾಂಡೇಜು ಕಟ್ಟಿಸಿಕೊಂಡಿದ್ದ ಸೀನಪ್ಪ ಮಾವ "ನಾವೆಲ್ಲ ಸೇರಿ ಹೊಡೆದಿದ್ರೆ ಅವ್ನು ಉಳೀತಿದ್ನಾ! ಅವುಂದೇ ಕೊಲೆಯಾಗಿ ಹೋಗ್ತಿತ್ತು. ಅದ್ಕೆ ಅವುನ್ನ ಹಿಡಿಯೋಕೆ ಹೋಗ್ಲಿಲ್ಲ. ಮಕ್ಕಲು ದೊಡ್ಡ ನನ್ ಕೈಲಿ ರಕ್ತ ಸುರಿಯೋದ್ ನೋಡಿದ್ದೇ ತಡ ಮಚ್ಚೊಗುದು ಹೆಂಗ್ಸಿನ್ ಹಂಗೆ ಓಡಿಹೋಗಿಬಿಟ್ಟ...." ಎಂದು ಹೇಳುತ್ತಿದ್ದ.

ಇದನ್ನು ಕೇಳಿ ಅಲ್ಲಿದ್ದವರಲ್ಲಿ ಒಬ್ಬರು "ನೀನ್ ಬಂದು ಕೈ ಅಡ್ಡ ಹಿಡೀದೆ ಹೋಗಿದ್ರೆ, ಸಿದ್ಧನಂಜೇಗೌಡರ ಕತ್ತೇ ಹೋಗಿರೋದು. ನಿಮ್ಮಣ್ಣನ್ ಪ್ರಾಣ ಕಾಪಾಡಿದಿ. ನೀನೇ ಸಿದ್ಧನಂಜೇಗೌಡರಿಗೆ ಸ್ವಂತ ತಮ್ಮನಾಗಿ ಹುಟ್‌ಬೇಕಾಗಿತ್ತು. ರಾಮನಿಗೆ ಲಕ್ಷ್ಮಣನಂಗೆ ಇದೀಯಾ...." ಎಂದಾಗ ಆ ನೋವಿನಲ್ಲೂ ಸೀನಪ್ಪನಿಗೆ ಅತೀವ ಖುಷಿಯಾಗಿ ಕಣ್ಣಲ್ಲಿ ನೀರು ತುಳುಕಿತು. ಮುಂದೆ ನಿಂತಿದ್ದ ನನಗೆ, 'ಹುಡುಗ್ರಾ ತಿನ್ರಲಾ ಈ ಬ್ರೆಡ್‌ನ' ಎಂದು ಯಾರೋ ತಂದುಕೊಟ್ಟಿದ್ದ ಬ್ರೆಡ್ ಪ್ಯಾಕೆಟ್ ಅನ್ನು ಕೈಗೆ ಕೊಟ್ಟ.

ನನಗೆ ಇದ್ದಕ್ಕಿದ್ದಂತೆ ಕಮ್ಯುನಿಸ್ಟ್ ಮಾವನ ಮೇಲೆ ಕೋಪ ಉಕ್ಕಿ ಬಂದಿತು. ಒಣಗಿದ ಗಂಟಲಲ್ಲಿ ಬ್ರೆಡ್ ಇಳಿಯುವುದಿಲ್ಲವೆಂದುಕೊಂಡು ಸುಮ್ಮನೆ ನಿಂತೆ.

ಅದೇ ಹೊತ್ತಿಗೆ ಮತ್ತೋರ್ವ ಸೀನಪ್ಪನನ್ನು ಮಾತಾಡಿಸಿಕೊಂಡು ಹೋಗಲು ಬಂದು, "ದೊಡ್ಡೇಗೌಡ ತನ್ನ ಸ್ವಂತ ಬುದ್ದೀಲಿಂದ ಮಚ್ಚು ತಂದದ್ದಲ್ಲ. ದಾರೀಲಿ ಬರೋವಾಗ ಆ ದುಷ್ಟ ಬುದ್ಧಿಯ ಆಂಜನಪ್ಪ ಇರ್ಲಿ ನಿನ್ನ ರಕ್ಷಣೆಗೆ ಅಂತ ಕೊಟ್ಟು ಕಳಿಸಿದ್‌ನಂತೆ. ಅಣ್ಣ-ತಮ್ಮರಿಗೆ ಹೊಡೆದಾಟ ಹಚ್ಚಿ ಮಜಾ ನೋಡೋ ಜನಾ ಹೆಚ್ಚಾಗೇತಿ ಊರಾಗ. ಎಂಥ ಕಾಲ ಬಂತೋ ಸಿದ್ಧಗಂಗಾ...." ಎಂದು ಉದ್ಗಾರವೆಳೆದ.

ಕಮ್ಯುನಿಸ್ಟ್ ಮಾವ ಅಷ್ಟೇ ಅಲ್ಲ ಆತನ ಪಕ್ಷದ ಮುಖ್ಯ ಸಹಚರರೂ ಊರುಬಿಟ್ಟು ತಲೆ ಮರೆಸಿಕೊಂಡರು.

ದೊಡ್ಡಮಾವ ಮತ್ತು ಚಿಕ್ಕಮಾವ ಇಬ್ಬರೂ ಸ್ಥಳೀಯ ಲಾಯರ್‌ಗಳಿಗೆ

ಕೇಸ್ ಕೊಡಲಿಲ್ಲ. ಬೆಂಗಳೂರಿನ ಹೆಸರಾಂತ ಕ್ರಿಮಿನಲ್ ಲಾಯರ್‌ಗಳಾದ ಮಹೇಶ್‌ಚಂದ್ರಗುರು ದೊಡ್ಡೇಗೌಡ ಮಾವನ ಪರವಾಗಿಯೂ ಪಿ.ಎಸ್. ದೇವದಾಸ್ ಅವರು ಸಿದ್ಧನಂಜೇಗೌಡ ಮಾವನ ಪರವಾಗಿಯು ಅಭಿಯೋಜಕರಿಗೆ ಸಹಾಯ ಮಾಡಲು ವಹಿಸಿಕೊಂಡರು. ಮಹೇಶ್‌ಚಂದ್ರಗುರು ಅವರು ಬೇಲೂರು ಶ್ರೀನಿವಾಸ್ ಅಯ್ಯಂಗಾರ್ ಕೊಲೆ ಕೇಸಿನ ಆರೋಪಿಯೊಬ್ಬರಿಗೆ ಲಾಯರ್ ಆಗಿದ್ದರಲ್ಲದೆ ಮಾಜಿ ಚೀಫ್ ಜಸ್ಟಿಸ್ ಮಹಾದೇವಯ್ಯನವರ ಸಹೋದರರೂ ಆಗಿದ್ದರು. ಪ್ರಾಸಿಕ್ಯೂಷನ್ ಅಸಿಸ್ಟೆಂಟ್ ಆಗಿ ಬಂದ ದೇವದಾಸ್ ಅವರೂ ಆವಾಗಲೇ ಹೆಸರುವಾಸಿ ಲಾಯರ್ ಆಗಿದ್ದರು.

ಸಿದ್ಧನಂಜೇಗೌಡ ಮಾವ ದೊಡ್ಡಬೆಳವಂಗಲ ಠಾಣೆಯ ಇನ್ಸ್‌ಪೆಕ್ಟರ್‌ಗೆ ಕೇಸಿಗೆ ಸಂಬಂಧಿಸಿದ ಸುದ್ದಿ, ಮಾಹಿತಿ, ವಿವರಗಳನ್ನು ನನ್ನ ಮತ್ತು ಅವರಿಬ್ಬರ ಮಕ್ಕಳ ಮೂಲಕ ಹೇಳಿಕಳಿಸುತ್ತಿದ್ದರು. ಇದರಿಂದಾಗಿ ನನ್ನಲ್ಲಿ ಹುದುಗಿಕೊಂಡಿದ್ದ ಠಾಣೆಯ ಭಯ ಕಡಿಮೆಯಾಯಿತು ಮತ್ತು ಇನ್ಸ್‌ಪೆಕ್ಟರ್ ಜೊತೆ ಸಲುಗೆಯೂ ಬೆಳೆಯಿತು. ಶಾಸಕ ಜಿ. ರಾಮೇಗೌಡರು ಈ ಪ್ರಕರಣದಲ್ಲಿ ವಿಶೇಷ ಆಸಕ್ತಿ ವಹಿಸಿ ಇನ್ಸ್‌ಪೆಕ್ಟರ್‌ಗೆ ಆರೋಪಿಗಳನ್ನು ಹಿಡಿಯಲು, ದಂಡಿಸಲು ಹೇಳಿದ್ದರೆಂದು ನನಗೆ ಕೇಳಿಬಂದಿತು. ಶಾಸಕರಿಗೆ ಬೇಕಾದ ಕುಟುಂಬಕ್ಕೆ ಸೇರಿದ ಹುಡುಗರು ಇವ್ರು ಎನ್ನುವ ದೃಷ್ಟಿಯಿಂದ ನಮ್ಮನ್ನು ಕಾಣತೊಡಗಿದರು ಇನ್ಸ್‌ಪೆಕ್ಟರ್.

ಕೋರ್ಟ್‌ನಲ್ಲಿ ಕೇಸ್ ಇದ್ದ ದಿನ ನಾನು ಹೋಗತೊಡಗಿದೆ; ಖ್ಯಾತ ಲಾಯರ್‌ಗಳು ವಾದ ಹೇಗೆ ಮಾಡುತ್ತಾರೆನ್ನುವ ಕುತೂಹಲದಿಂದ.

ನನಗೆ ಆರ್ಗ್ಯುಮೆಂಟ್ ಅರ್ಥವಾಗುತ್ತಿರಲಿಲ್ಲ. ವಕೀಲರ ವಾಗ್ವೈಖರಿ, ದೇಹದ ಚಲನವಲನ, ಭಾವಾಭಿವ್ಯಕ್ತಿ, ನ್ಯಾಯಾಧೀಶರ ಪ್ರತಿಕ್ರಿಯೆ, ಕಿಕ್ಕಿರಿದ ಜನರ ಕುತೂಹಲಗಳನ್ನು ಗಮನಿಸುತ್ತಿದ್ದೆ.

ಕೋರ್ಟ್‌ನಲ್ಲಿ ನನ್ನನ್ನು ನೋಡಿದ ಕೆಲವರು : "ಈಗ್ಲೇ ಎಷ್ಟು ಆಸಕ್ತಿ ಈ ಹುಡ್ಗುಂಗೆ ಕೋರ್ಟ್ ವಿಷ್ಯಗಳಲ್ಲಿ" ಎನ್ನುವಾಗ ನನಗೆ ಒಳಗೇ ಖುಷಿಯಾಗುತ್ತಿತ್ತು.

20

ತಂಗಿಯನ್ನು ಕೆಣಕಿದವನ ಮರ್ಮಾಂಗ ಕತ್ತರಿಸಿದರು

ಅಂದು ನಾನು ಹೈಸ್ಕೂಲ್‌ಗೆ ಹೋದಾಗ ನನ್ನ ಗೆಳೆಯ ಕರಿಯಣ್ಣ ಅದೇಕೊ ಮಂಕಾಗಿದ್ದ. ತೀರಾ ಬಡ ಹುಡುಗ. ವಾರಾನ್ನ ತಿಂದು ಓದುತ್ತಿದ್ದ ಜಾಣ ಮತ್ತು ಪರಿಶ್ರಮಿ. ಮೊದಲನೇ ಕ್ಲಾಸ್ ಮುಗಿದಾಗ ಏನೋ ಹೀಗಿದ್ದೀಯಾ ಎಂದು ಕೇಳಿದೆ ಕರಿಯಣ್ಣನನ್ನು.

"ನಮ್ಮ ಮಾವನ ಕೊಲೆಯಾಗೈತೆ. ನೆಂಟರೆಲ್ಲ ಪೋಲೀಸ್ ಠಾಣೆಗೆ ಬಂದವ್ರೆ. ಠಾಣೆಗೆ ಒಬ್ಬನೇ ಹೋಗಲಿಕ್ಕೆ ಭಯ...." ಎಂದ.

ಠಾಣೆಯ ಭಯದಿಂದ ಇತ್ತೀಚೆಗಷ್ಟೇ ಮುಕ್ತಿ ಪಡೆದಿದ್ದ ನಾನು ಹುಟ್ಟಾ ನಿರ್ಭಯಿ ಎನ್ನುವವನಂತೆ ನನ್ನ ಗೆಳೆಯನನ್ನು ಠಾಣೆಗೆ ಕರೆದೊಯ್ದೆ. ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಸತ್ಯನಾರಾಯಣರು ನನ್ನ ಪರಿಚಯ ಹಿಡಿದು ಹೇಗೆ ಸಲುಗೆಯಿಂದ ಮಾತಾಡಿಸುತ್ತಾರೆನ್ನುವುದನ್ನು ಗೆಳೆಯನ ಮುಂದೆ ಪ್ರದರ್ಶಿಸಬೇಕೆನ್ನುವ ಒಳ ಆಸೆಯೂ ಸೇರಿ ಎದೆಯುಬ್ಬಿಸಿಕೊಂಡು ಠಾಣೆಯೊಳಕ್ಕೆ ಗೆಳೆಯನ ಕೈ ಹಿಡಿದು ಕರೆದೊಯ್ದೆ. ಬಡ್ತಿ ಮೇರೆಗೆ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಸತ್ಯನಾರಾಯಣರಿಗೆ ನಿವೃತ್ತಿಯ ವಯಸ್ಸು ಸಮೀಪಿಸುತ್ತಿತ್ತು.

ಗೆಳೆಯನ ಕಡೆಯವರು ಆಗಲೇ ಬಂದು ಠಾಣೆಯಲ್ಲಿ ಜಮಾಯಿಸಿದ್ದರು. ನನ್ನನ್ನು ನೋಡಿದ ಇನ್ಸ್‌ಪೆಕ್ಟರ್ "ಅದೇನು ಹನುಮಂತ್ರಾಯ ಶಾಲೆಗೆ ಹೋಗದೆ ಬಂದ್‌ಬಿಟ್ಟಿದೀಯಾ? ಅಂಥ ಅರ್ಜೆಂಟ್ ವಿಷ್ಯ ಏನಾದ್ರೂ ಹೇಳಿ ಕಳಿಸಿದ್ರೆ ನಿಮ್ಮ ಮಾವ ನಂಜೇಗೌಡ್ರು?" ಎಂದರು.

ಈ ಥರ ಸಲುಗೆಯಿಂದ ಮುಂಚೆ ಎಷ್ಟೋ ಬಾರಿ ಇನ್ಸ್‌ಪೆಕ್ಟರ್ ನನಗೆ ಮಾತಾಡಿಸಿದ್ದರೂ ಯಾವಾಗಲೂ ಆಗದಷ್ಟು ಸಂಭ್ರಮಗೊಂಡೆ. ಕ್ಷಣ ಮಾತು ಹೊರಡದೆ ತೊದಲಿದೆ. ಠಾಣೆಯಲ್ಲಿ ನನ್ನ ಪ್ರಭಾವ ನೋಡಿ ಕರಿಯಣ್ಣನ ಮುಖದಲ್ಲಿ ಏನು ಬದಲಾವಣೆಗಳುಂಟಾಗಿವೆಯೆಂದು ಕ್ಷಣ ನೋಡಿ ಇನ್ಸ್‌ಪೆಕ್ಟರ್‌ಗೆ, "ಈತ ನನ್ನ ಕ್ಲಾಸ್‌ಮೇಟ್. ಈತನ ಮಾವನ ಕೊಲೆ ಆಗೋಗಿದೆ......" ಎಂದೆನ್ನುತ್ತಿದ್ದಂತೆಯೇ ನನ್ನ ಗೆಳೆಯ "ಇವರೆಲ್ಲ ಅದೇ ಕೇಸ್ ವಿಷಯಕ್ಕೆ ಬಂದವ್ರು" ಎಂದು ಪಿಸುಗುಟ್ಟಿದ ಕಿವಿಯಲ್ಲಿ.

ಇನ್ಸ್‌ಪೆಕ್ಟರ್ ಸತ್ಯನಾರಾಯಣ್‌ರು "ಓ ಹಾಗ, ನೀ ಬಂದದ್ದು ನಿಮ್ಮ ಕೇಸ್ ವಿಷ್ಯಕಲ್ಲ. ಹೂಂ, ಸರ್ಕಲ್ ಇನ್ಸ್‌ಪೆಕ್ಟರ್ ಶಿಫಾರಸ್ಸನ್ನೂ ತೊಗೊಂಡು ಬಂದಿದಾರೆ ನಿನ್ನ ಗೆಳೆಯನ ಕಡೆಯವರು. ಹೆಣ್ಣಿನ ವಿಷಯಕ್ಕೆ ನಡೆದ ಕೊಲೆ ಕೇಸ್‌ಗಳು ಬಾಳ ವಿಚಿತ್ರ ಆಗಿರ್ತವೆ. ಇಲ್ಲಿ ನನ್ನ ಹತ್ರ ವಶೀಲಿ ತೊಗೊಂಡು ಬಂದವ್ರಲ್ಲ ಇವ್ರೇ ನಾಳೆ ಕೋರ್ಟ್‌ನಲ್ಲಿ ಉಲ್ಟಾ ಸಾಕ್ಷಿ ಹೇಳಿ ಪೋಲೀಸರ್ನ ಪೇಚಿಗೆ ಸಿಲುಕಿಸ್ತಾರೆ. ನಾನು ಆನೇಕಲ್ ಠಾಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿದ್ದಾಗ ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಬಾಳಾ ಬೇಕಾಗಿದ್ದ ದಾಸರೆಡ್ಡಿ ಎನ್ನುವವನ ಕೊಲೆ ಆಯಿತು. ಆ ಕೇಸ್ನ ಇವತ್ತಿಗೂ ನಂಗೆ ಮರೆಯೋಕೆ ಆಗ್ತಿಲ್ಲ.... ಸರ್ಕಲ್ ಇನ್ಸ್‌ಪೆಕ್ಟರ್ ಶಿಫಾರಸ್ ತಂದ ಇವ್ರು, ನಡೆದ ಸಂಗತಿ ಮರೆಮಾಚಿ ತಿರುಚಿ ಚಾರ್ಜ್‌ಷೀಟ್ ಹಾಕು ಅಂತಿದಾರೆ. ಆ ದಾಸರೆಡ್ಡಿ ಕೇಸೂ ಹಿಂಗೇ ಇತ್ತು....." ಎಂದು ಆನೇಕಲ್ ಠಾಣೆಯನ್ನು ತಮ್ಮ ಕಣ್ಣಮುಂದೆ ತಂದುಕೊಂಡರು. ನಮ್ಮಿಬ್ಬರಿಗೂ ಬೆಂಚ್ ಮೇಲೆ ಕೂಡುವಂತೆ ತಿಳಿಸಿ ಶಿಫಾರಸ್ ತಂದಿದ್ದವರತ್ತ ನೋಡಿ ದಾಸರೆಡ್ಡಿ ಕೊಲೆ ಕೇಸನ್ನು ಹೇಳತೊಡಗಿದರು.

ಬೆಂಗಳೂರಿಗೆ ಸಮೀಪದ ಮತ್ತು ತಮಿಳುನಾಡು ಗಡಿಹಳ್ಳಿ ದೇವಪುರದಲ್ಲಿ ದಾಸರೆಡ್ಡಿಯ ಹೂದೋಟವಿತ್ತು. ಊರಿನಿಂದ ಮುಕ್ಕಾಲು ಕಿ.ಮೀ. ದೂರವಿದ್ದ ತೋಟದಲ್ಲಿ ಮನೆ ಮಾಡಿಕೊಂಡಿದ್ದ. ಮಲ್ಲಿಗೆ, ಕನಕಾಂಬರ, ಸೇವಂತಿಗೆ, ಗುಲಾಬಿ ಮುಂತಾದ ಹೂಗಳನ್ನು ತನ್ನ ತೋಟದಿಂದ ಬೆಂಗಳೂರಿಗೆ ತಂದು ಮಾರುತ್ತಿದ್ದ. ಅಲ್ಪ ಪ್ರಮಾಣದಲ್ಲಿ ಹೂ ಬೆಳೆಯುತ್ತಿದ್ದವರೂ ದಾಸರೆಡ್ಡಿಗೇ ಹೂ

ಮಾರುತ್ತಿದ್ದರು. ದಾಸರೆಡ್ಡಿಯ ಹೆಂಡತಿಯ ಹೆಸರು ಪಚ್ಚಮ್ಮ ಮತ್ತು ಒಬ್ಬನೇ ಮಗನ ಹೆಸರು ಈಶರೆಡ್ಡಿ.

ಹೂ ಬಿಡಿಸುವುದು ಸೂಕ್ಷ್ಮ ಹಾಗೂ ತಾಳ್ಮೆಯ ಕೆಲಸವಾಗಿದ್ದರಿಂದ ಹೆಣ್ಣುಮಕ್ಕಳು ಮತ್ತು ಚಿಕ್ಕಹುಡುಗರು ಮಾತ್ರ ದಾಸರೆಡ್ಡಿ ತೋಟಕ್ಕೆ ಬರುತ್ತಿದ್ದರು.

ದಾಸರೆಡ್ಡಿ ಒಳ್ಳೆ ಚಟಗಾರ. ಹೂಬಿಡಿಸಲು ಬರುವ ಬಡ ಹುಡುಗಿಯರನ್ನು ಆಯ್ದು ಮಜಾ ಉಡಾಯಿಸುತ್ತಿದ್ದ. ಈ ಬಗ್ಗೆ ಹಳ್ಳಿಯಲ್ಲಿ ಸ್ವಲ್ಪ ಗುಸುಗುಸು ಸುದ್ದಿ ಹರಡಿತ್ತು.

ಆನೇಕಲ್ ರೂರಲ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಣಯ್ಯನ ಪರಿಚಯ ಮಾಡಿಕೊಂಡ ದಾಸರೆಡ್ಡಿ. ಪರಿಚಯವನ್ನು ಹಂಗಿನ ಸಂಬಂಧವನ್ನಾಗಿ ಮಾರ್ಪಡಿಸುವ ಹೊಂಚು ಹಾಕಿ ಲಕ್ಷ್ಮಣಯ್ಯನವರನ್ನು ತನ್ನ ತೋಟಕ್ಕೆ ಬಂದು ಆತಿಥ್ಯ ಸ್ವೀಕರಿಸಲು ಆಹ್ವಾನಿಸಿದ.

ಲಕ್ಷ್ಮಣಯ್ಯನವರಿಗೆ ದಾಸರೆಡ್ಡಿ ತೋಟದ ಮನೆಯಲ್ಲಿ ಮಾಂಸ ತಿಂದು ಬಂದ ಮೇಲೆ ಬೇರೆಲ್ಲಿ ತಿಂದರೂ ರುಚಿಗಾಣದಂತಾಗಿಬಿಟ್ಟಿತು! ರವಿವಾರ ಬಂತೆಂದರೆ ಲಕ್ಷ್ಮಣಯ್ಯನವರ ಜೀಪು ದೇವಪುರದ ಹೂವಿನ ವಾಸನೆ ಹಿಡಿದು ಓಡುತ್ತಿತ್ತು. ಒಂದು ದಿನ ಎಮರ್ಜನ್ಸಿ ಕೇಸೊಂದು ರಾತ್ರಿ ಬಂದಾಗ ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಕಾಣಲು ನಾನೂ ಆ ತೋಟಕ್ಕೆ ಹೋಗಿದ್ದೆ. ನಮ್ಮ ಸಾಹೇಬ್ರು ನಂಗೂ ಒಂದು ಪೆಗ್ ಕುಡಿಯಲು, ಊಟ ಮಾಡಲು ಒತ್ತಾಯಿಸಿದ್ದರು. ಲಕ್ಷ್ಮಣಯ್ಯನವರು ತಮ್ಮ ಮೇಲಾಧಿಕಾರಿಗಳು ಬಂದರೆ ದಾಸರೆಡ್ಡಿ ತೋಟದಲ್ಲೇ ಪಾರ್ಟಿ ಫಿಕ್ಸ್ ಮಾಡುತ್ತಿದ್ದರು.

ದೇವಪುರದ ಜನ ದಾಸರೆಡ್ಡಿಯನ್ನು ಒಳಭಯವಿರಿಸಿಕೊಂಡೇ ಮಾತಾಡಿಸತೊಡಗಿದರು. ದಾಸರೆಡ್ಡಿಗೂ ಇದೇ ಬೇಕಾಗಿತ್ತು. ತನ್ನ ಹಲ್ಕಾ ಕೆಲಸಗಳನ್ನು ಹಳ್ಳಿಯ ಜನ ಪ್ರಶ್ನಿಸುವ ಧೈರ್ಯ ಮಾಡಬಾರದೆಂದೇ ಸರ್ಕಲ್ ಇನ್ಸ್‌ಪೆಕ್ಟರ್ ಕನೆಕ್ಷನ್ ಬೆಳೆಸಿಕೊಂಡಿದ್ದ. ಹೂದೋಟದ ಮನೆಯ ಪಾರ್ಟಿಗಳು ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಕಟ್ಟಿ ಹಾಕಿದ್ದವು, ದಾಸರೆಡ್ಡಿಯೊಂದಿಗೆ ಕೈಗೂಡಿಸುವಂತೆ ಮಾಡಿದ್ದವು. ದಾಸರೆಡ್ಡಿ ತೋಟದಿಂದ ಒಂದೂವರೆ ಕಿ.ಮೀ. ದೂರವಿದ್ದ ಇನ್ನೊಂದು ಹಳ್ಳಿಯಿಂದಲೂ ಹೂಬಿಡಿಸುವ ಕೆಲಸಕ್ಕೆ ಹುಡುಗಿಯರು ಬರುತ್ತಿದ್ದರು.

ಹೊಲೆಯರ ಜಾತಿಗೆ ಸೇರಿದ ಬೀರವ್ವ ಎನ್ನುವ ಹದಿನೆಂಟರ ಹುಡುಗಿ ಹೂಬಿಡಿಸುವ ಕೆಲಸಕ್ಕೆಂದು ಬಂದಳು.

ಹೊಸ ಮೈಮುಖಗಳನ್ನು ಹುಡುಕುವ ಚಪಲದಿಂದ ದಾಸರೆಡ್ಡಿ ಮುಂಜಾನೆ ಹೂಬನ ಹೊಕ್ಕ. ಬೀರವ್ವನನ್ನು ನೋಡಿದ್ದೇ ಅವಾಕ್ಕಾಗಿ ನಿಂತ ದಾಸರೆಡ್ಡಿ. ಕಟೆದ ಶಿಲ್ಪದಂತಿತ್ತು ಅವಳ ಮೈಮಾಟ.

ಅಂದು ಬೆಂಗಳೂರಿಗೆ ಹೋಗುವುದನ್ನು ಕ್ಯಾನ್ಸಲ್ ಮಾಡಿದ ದಾಸರೆಡ್ಡಿ. ಮುಪ್ಪು ಸಮೀಪಿಸಿದ್ದ ಮುನಿತಾಯಮ್ಮಳನ್ನು ಹತ್ತಿರ ಕರೆದ. ಎಲೆ, ಹೊಗೆಸೊಪ್ಪು, ಅಡಿಕೆಗಳನ್ನು ಕೊಟ್ಟ.

"ಏನ್ ಧಣಿ, ಎಲೆಂಡಕೆ ಕೊಡ್ತಿದೀಯಾ, ಯಾವ ಹುಡ್ಗೀ ಮ್ಯಾಕೆ ಕಣ್ ಬಿತ್ತು ಇವತ್ತು?"

"ನಿಂಗೊತ್ತಿಲ್ಲದ್ದು ಏನು ಮುನಿತಾಯಿ.... ಅಂದ್ಹಂಗೆ ಅಗೋ ಅಲ್ಲಿದಾಳಲ್ಲ ಈರುಳ್ಳಿ ಬಣ್ಣದ ರವಿಕೆ ಹುಡ್ಗಿ ಯಾರವ್ವ?"

"ಅವ್ಳು ಬೀರವ್ವ ಅಂತ. ಹೊಸ್ತಾಗಿ ಬಂದವ್ಳೆ. ಅವುರ್ ಮನೇರೆಲ್ಲ ನಂಗೊತ್ತು. ಅವುಳ್ಗೆ ಮದ್ವೆ ನಿಶ್ಚಯ ಮಾಡವ್ರೆ. ಅಂಥ ಕಸುಬಿನ ಮನೇವ್ರಲ್ಲ. ಅದರಾಸೆ ಬಿಟ್ಟುಬಿಡು...."

"ಎಲ್ಲಾ ಹುಡ್ಗೀರ್‌ಗೂ ಹಿಂಗೇ ಹೇಳಾದು ನೀನು. ತಗೋ ಈ ದುಡ್ ಮಡಿಕ್ಕೊ"

"ಬ್ಯಾರೇ ಹುಡ್ಗೀರ್ ವಿಷ್ಯದಂಗೆ ಅಲ್ಲ ಇವುಳ್ದು. ನಾನ್ಯಾಕೆ ಸುಳ್ಳೇಳ್ಲಿ. ನೀ ಮುಟ್ಟಿಲ್ದಿರೊ ಚೆಂಡು ಹೂ ಇನ್ನೂ ಅವಲ್ಲ. ಬೆರಳ್ ಮಾಡಿ ತೋರ್‍ಸು ಒಪ್ಪಿಸ್ತೀನಿ"

"ನಂಗೆ ಬೇಕಾಗಿದ್ದು ಬೀರವ್ವ"

"ಅದು ಮಾತ್ರಾ ಆಗಾಕಿಲ್ಲ ನನ್ನಿಂದ ಸೋಮಿ. ಇಕೊ ನಿಮ್ ದುಡ್ನ್..."

"ನಿನ್ ಕೈಲಿ ಆಗಾಕಿಲ್ಲಂದ್ರೆ ನಾನೇ ನೋಡ್ಕೋತೀನಿ. ಆ ದುಡ್ನ್ ನೀನೇ ಮಡಿಕ್ಕೊ"

"ಕುಂಟಲಗಿತ್ತಿ ಸೂಳೇಗೆ ಕೊಬ್ಬು ಜಾಸ್ತಿ ಆಗ್ಯದೆ. ಕೊಟ್ಟಿರೊ ದುಡ್ ವಾಪಸ್ ಕೊಡೋಕೆ ಬರ್ತವ್ಳೆ" ಎಂದು ಗೊಣಗುಟ್ಟಿಕೊಂಡ ದಾಸರೆಡ್ಡಿ.

ಹೂ ಬಿಡಿಸುವವರಿಗೆ ತಾಸಿನ ಲೆಕ್ಕದ ಕೂಲಿಯಲ್ಲ ; ಬಿಡಿಸಿದ ಹೂಗಳನ್ನು ಅಳೆದು ಸೇರಿಗೆ ಇಂತಿಷ್ಟು ಎಂದು ದುಡ್ಡು ನಿಗದಿಯಾಗಿರುತ್ತದೆ.

ಹೂ ಅಳೆದುಕೊಂಡು ದುಡ್ಡು ಕೊಡುವ ಡ್ಯೂಟಿ ಸಾಮಾನ್ಯವಾಗಿ ಪಚ್ಚಮ್ಮನದು. ಆದರೆ, ಅಂದು ದಾಸರೆಡ್ಡಿಯೇ ಹೂ ಅಳೆಯಲು ಕೂತ.

ಬೀರವ್ವ ಬಿಡಿಸಿದ ಹೂ ಅಳೆದ. ಕೊಡಬೇಕಾದುದಕ್ಕಿಂತ ಎರಡು ಪಟ್ಟು ದುಡ್ಡು ನೀಡಿದ. ಬೀರವ್ವನಿಗೆ ಅದೇಕೆಂದು ಗೊತ್ತಾಗಲಿಲ್ಲ. ಹೆಚ್ಚಿನ ದುಡ್ಡೇಕೆಂದೂ ಕೇಳಲಿಲ್ಲ.

ಮೌನ ಸಮ್ಮತಿಸೂಚನೆ ಎಂದುಕೊಂಡ ದಾಸರೆಡ್ಡಿ. ಮಾರನೇ ದಿನವೂ ಎಲ್ಲೂ ಹೋಗದೆ ತೋಟದಲ್ಲೇ ಝಾಂಡಾ ಹೂಡಿದ.

ಬೀರವ್ವ ಬೇಲಿಯಾಚೆ ಮೂತ್ರ ವಿಸರ್ಜನೆಗೆ ಹೋಗುವುದನ್ನೇ ಕಾಯ್ದು ಕೊಂಡಿದ್ದ.

ಮೂತ್ರ ಮಾಡಿ ಎದ್ದ ಬೀರವ್ವನೆದುರು ನೆರಳೊಂದು ಕಂಡಾಗ ಅವಳ ಎದೆ ಧಸಕ್ಕೆಂದಿತು. ಕೂಗಲು ಬಾಯ್ದೆರೆದಳು. ಧ್ವನಿ ಕುಸಿದು ಸ್ವರ ಬರಲಿಲ್ಲ. ಅದಾರೆಂದು ಹಿಂದಿರುಗಿದ ಬೀರವ್ವಳನ್ನು ಯಮಬಾಹುಗಳಲ್ಲಿ ಬಿಗಿದುಕೊಂಡ. ಕೊಡರಲೆತ್ನಿಸಿದಳು ಬೀರವ್ವ.

"ನಿನ್ನೆ ಡಬಲ್ ದುಡ್ಡು ಕೊಟ್ಟಿದ್ಕೆ ನಿಂಗೆ ಖುಷಿ ಆತಾ? ನಿಂಗೆ ಇನ್ನೂ ಸಾಕಷ್ಟು ದುಡ್ಡು ಕೊಡ್ತೇನೆ. ನಾ ಹೇಳ್ದಂಗೆ ಕೇಳು. ಇಲ್ದಿದ್ರೆ ಕಳವಿನ್ ಕೇಸ್ ಹಾಕಿ ಪೋಲೀಸರ್ಗೆ ಕೊಡ್ತೆನೆ ನಿನ್ನ...."

ಬೀರವ್ವ ಥರಗುಟ್ಟಿ ಹೋಗಿದ್ದಳು. ಅವಳ ತೊಡೆಗಳು ಗಡಗಡ ನಡುಗುತ್ತಿದ್ದವು. ಮುಖ ಬೆವೆತು ಗಾಬರಿಯಿಂದ ಕಣ್ಣಲ್ಲಿ ನೀರು ಇಂಗಿಹೋಗಿತ್ತು. ಒಣಗಿದ ನಾಲಿಗೆಯನ್ನು ತುಟಿಗಳ ಮೇಲೆ ಆಡಿಸಿಕೊಂಡು ತೇವ ಮಾಡಿಕೊಳ್ಳಲು ನೋಡುತ್ತಿದ್ದಳು. ದಾಸರೆಡ್ಡಿಯ ಕಪ್ಪು ಮುಖದಲ್ಲಿಯ ಜೊಂಡು ಮೀಸೆಗಳನ್ನು ನೋಡಿ ಚೀರಿಕೊಳ್ಳಲು ಬಾಯ್ದೆರೆದಳು. ದಾಸರೆಡ್ಡಿ ತನ್ನ ಬಾಯಿಯಿಂದ ಅವಳ ಬಾಯಿಯನ್ನು ಸೀಲು ಮಾಡಿದ.

ಬೀಡಿ ವಾಸನೆಯಿಂದ ಗಬ್ಬು ನಾರುತ್ತಿತ್ತು ದಾಸರೆಡ್ಡಿಯ ಬಾಯಿ. ತಲೆ ಸುತ್ತಿ ಬಂದು ಪ್ರಜ್ಞೆ ಕಳೆದುಕೊಳ್ಳುವೆನೇನೋ ಎನಿಸತೊಡಗಿತು ಬೀರವ್ವನಿಗೆ.

ಅಷ್ಟರಲ್ಲಿ ಬೀರವ್ವನ ಜೊತೆ ಕೆಲಸಕ್ಕೆ ಬರುತ್ತಿದ್ದ ಲಕ್ಷ್ಮಿ ಮೂತ್ರಕ್ಕೆ ಬಂದಳು.

ಥತ್ ಎಂದು ದಾಸರೆಡ್ಡಿ ಬೀರವ್ವಳನ್ನು ಬಿಟ್ಟು ಬಿರಬಿರ ನಡೆದುಹೋದ.

ಕಾಲುಗಳಲ್ಲಿ ನಿಯಂತ್ರಣ ಕಳೆದುಕೊಂಡಿದ್ದ ಬೀರವ್ವ ಆಯತಪ್ಪಿ ನೆಲಕ್ಕುರುಳಿದಳು. ಓಡಿ ಬಂದ ಲಕ್ಷ್ಮಿ ಬೀರವ್ವನನ್ನು ಎಬ್ಬಿಸಿ ಕೂರಿಸಿದಳು. ಸುಧಾರಿಸಿಕೊಂಡ ಬೀರವ್ವ ಅಳತೊಡಗಿದಳು. ರೆಡ್ಡಿ ತನ್ನನ್ನು ಬಲಾತ್ಕರಿಸಲು ಪ್ರಯತ್ನಿಸಿದನೆಂದೂ ತನ್ನ ತಪ್ಪು ಏನೂ ಇಲ್ಲವೆಂದೂ ಹೇಳಿ ಮತ್ತಷ್ಟು ರೋದಿಸತೊಡಗಿದಳು.

"ನೀ ಕೂಗಿಕೊಂಡಿದ್ರೆ ನಾವೆಲ್ಲ ಬರ್ತಿರ್ಲಿಲ್ವೆ?" ಎಂದು ಸಂಶಯದ ಧ್ವನಿಯಲ್ಲಿ ಲಕ್ಷ್ಮಿ ಪ್ರಶ್ನಿಸಿದಾಗ ಬೀರವ್ವ ಮತ್ತಷ್ಟು ಅಳತೊಡಗಿದಳು. ಸ್ವಯಂ ಸಮರ್ಥನೆಯ ಆಧಾರಗಳಿಗಾಗಿ ತಡಕಾಡಿ ಇನ್ನಷ್ಟು ಗೊಂದಲಕ್ಕೀಡಾದಳು.

ದಾಸರೆಡ್ಡಿಯ ಹಲ್ಲು ಮೂಡಿ ಬೀರವ್ವನ ತುಟಿಗಳಿಂದ ರಕ್ತ ಒಸರುತ್ತಿತ್ತು. ಅಲ್ಲೇ ಬೆಳೆದಿದ್ದ ಟೀಕಿಸೊಪ್ಪನ್ನು ಕಿತ್ತು ಕೈಯಿಂದ ತಿಕ್ಕಿ ರಸ ತೆಗೆದು ಬೀರವ್ವನ ತುಟಿಗೊರೆಸಿದಳು ಲಕ್ಷ್ಮಿ.

ಪುನಃ ತೋಟದೊಳಕ್ಕೆ ಹೋಗದೆ ಬೀರವ್ವ, ಲಕ್ಷ್ಮಿ ಈರ್ವರೂ ಊರಿನತ್ತ ದಾಪುಗಾಲು ಹಾಕಿದರು.

ಕೊಡಲಿ ಹಣಿಸಿಕೊಳ್ಳಲು ಕುಲುಮೆಯ ಮುಂದೆ ನಿಂತಿದ್ದ ಅಣ್ಣನನ್ನು ನೋಡಿದಳು ಬೀರವ್ವ.

"ನಾರಣ್ಣ ಬ್ಯಾಗ್ ಮನೀಗ್ ಬಾ" ಎಂದಳು.

ತಂಗಿಯ ಧ್ವನಿಯಲ್ಲಿ ಅಸಹಜ ಕಂಪನಗಳನ್ನು ಗುರುತಿಸಿದ ನಾರಪ್ಪ ಕೊಡಲಿಯನ್ನು ನಂತರ ಬಂದು ಒಯ್ಯುವುದಾಗಿ ಹೇಳಿ ಮನೆಯತ್ತ ಬಿರುಗಾಲು ಹಾಕಿದ.

ಮಧ್ಯಾಹ್ನ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಮುಂದಿದ್ದ ಮುದುಕಿಯ ಕಣ್ಣುಗಳು ಕಾಣುತ್ತಿರಲಿಲ್ಲ.

ನಿಲ್ಲಿಸಿದ ರಾಗಿಯ ಚೀಲದ ಮೇಲೆ ಬೋರಲಾಗಿ ಅಳುತ್ತಿದ್ದಳು ಬೀರವ್ವ.

"ಲಕ್ಷ್ಮಿ ಅದೇನು ವಿಷ್ಯ ಹೇಳು. ಯಾವೋನ್ ಏನ್ ಮಾಡ್ದ ಬೀರಮ್ಮಂಗೆ?" ಎಂದ.

ಲಕ್ಷ್ಮಿ ಹೇಳಿದ್ದನ್ನು ಕೇಳಿ ನಾರಪ್ಪ ಕೊತ ಕೊತ ಕುದಿಯತೊಡಗಿದ. ಬೇರೆ ಯಾರ ಮುಂದೂ ಈ ವಿಷಯ ಹೇಳಬಾರದು ಎಂದು ತಾಕೀತು ಮಾಡಿದ

ಲಕ್ಷ್ಮಿಗೆ. ಬೀರವ್ವ ಒಬ್ಬಳನ್ನೇ ಬಿಟ್ಟು ಹೋಗಬೇಡವೆಂದು ಹೇಳಿ ಹೊರಬಿದ್ದ ನಾರಪ್ಪ ನೇರವಾಗಿ ತನ್ನ ತಂಗಿಯ ಭಾವೀ ಗಂಡ ದುರ್ಗಯ್ಯನ ಮನೆಗೆ ಬಂದ. ಮನೆಯಲ್ಲಿರದ ದುರ್ಗಯ್ಯನನ್ನು ಹುಡುಕಿಕೊಂಡು ಹೊಲಕ್ಕೆ ಹೋದ.

ನಾರಪ್ಪ ಹೇಳಿದ ವಿಷಯ ಕೇಳಿ ದುರ್ಗಯ್ಯ ಹಲ್ಲುಕಡಿದ. "ಆ ಸೂಳೆಮಗನ್ ಎದುರ್ಗೇ ಅವನ ಹೆಂಡ್ತೀನ್" ಎಂದು ಗುಡುಗಿದ.

ಇಬ್ಬರೂ ಒಂದೊಂದು ಮಚ್ಚು ತೆಗೆದುಕೊಂಡು ಒಳಂಗಿಯನ್ನೆತ್ತಿ ಸೊಂಟದಲ್ಲಿ ಸಿಕ್ಕಿಸಿಕೊಂಡರು. ಆಳುಗಳು ಹೋಗುವುದನ್ನೇ ಕಾಯುತ್ತ ತೋಟದ ಹೊರಗೆ ನಿಂತುಕೊಂಡರು. ಆಳುಗಳು ಹೋಗುತ್ತಿದ್ದಂತೆಯೇ ಪೋಲೀಸ್ ಜೀಪು ಬಂದು ನಿಂತುಕೊಂಡಿದ್ದನ್ನು ನೋಡಿ ಭಯಬಿದ್ದರು ನಾರಪ್ಪ, ದುರ್ಗಯ್ಯಗಳು. ತಾವು ಬಂದಿರುವ ಸುಳಿವು ಸಿಕ್ಕೊ ಅಥವಾ ಬರಬಹುದೆನ್ನುವ ಗುಮಾನಿಯಿಂದಲೊ ಪೋಲೀಸರಿಗೆ ತಿಳಿಸಿದ್ದಾನೇನೊ ಎಂದುಕೊಂಡರು. ಮಚ್ಚುಗಳನ್ನು ಮರವೊಂದರ ಬುಡದಲ್ಲಿರಿಸಿ ಟೊಂಗೆ ಮುರಿದು ಅವುಗಳ ಮೇಲೆ ಹಾಕಿ ಮರೆ ಮಾಡಿದರು. ಏನೂ ಅರಿಯದವರಂತೆ ದೇವಪುರದತ್ತ ನಡೆದರು. ಊರ ಮುಂದಿನ ಹೆಂಡದಂಗಡಿಯಿಂದ ಇಬ್ಬರೂ ಹೆಂಡದ ಬಾಟಲಿಗಳನ್ನು ಹಿಡಿದುಕೊಂಡು ಪಕ್ಕದ ಹೊಲದಲ್ಲಿ ಕುಳಿತರು ಹುಣ್ಣಿಮೆಯ ಬೆಳದಿಂಗಳಲ್ಲಿ.

ಕುಡಿದದ್ದಕ್ಕಿಂತ ನಶೆಯೇ ಹೆಚ್ಚಾಗಿತ್ತು ಅವರಿದ್ದ ಮನಸ್ಥಿತಿಯಿಂದಾಗಿ.

"ಪೋಲೀಸ್ನೋರು ಇಪ್ಪತ್ನಾಕ್ ತಾಸೂ ಕಾಯ್ತಾರೇನ್ಲ ಆ ಬೋಸುಡಿ ಮಗನ್ನ? ಇವತ್ತು ಬೆಳಗಾಗಗಂಟ ಕೂತಾದ್ರೂ ಕಡೀಲೇಬೇಕ್ ಅಪ್ನಂದನ್ನ. ಅದರ್ ತೀಟೆಯೆಲ್ಲ ಇವತ್ತೇ ತೀರ್‌ಬೇಕ್" ಎಂದ ದುರ್ಗಯ್ಯ.

"ಅವುನ ರಕ್ತಾನ ಬೆಳಕ ಹರಿಯೋದ್ರಾಗ ದುರ್ಗೀ ಗುಡಿ ಪಾದಗಟ್ಟಿಗೆ ಹಚ್ಚದಿದ್ರೆ ನಾನ್ ನಮ್ಮಪ್ಪಂಗೇ ಹುಟ್ಟಿಲ್ಲ" ಎಂದ ನಾರಪ್ಪ.

ನಾರಪ್ಪ, ದುರ್ಗಯ್ಯರು ಕೆಂಡಗಣ್ಣುಗಳನ್ನು ಹೊತ್ತುಕೊಂಡು ದಾಸರೆಡ್ಡಿ ತೋಟದೆದುರು ಚಿರತೆಗಳಂತೆ ನಿಂತುಕೊಂಡಾಗ ರಾತ್ರಿ ಹನ್ನೊಂದಾಗಿತ್ತು.

ಮರದಡಿ ಇರಿಸಿದ್ದ ಮಚ್ಚುಗಳನ್ನು ತೆಗೆದುಕೊಳ್ಳುತ್ತಿದ್ದಂತೆಯೇ ಪೋಲೀಸ್ ಜೀಪು ಸ್ಟಾರ್ಟ್ ಆಗಿದ್ದರಿಂದ ಕ್ಷಣ ಬೆಚ್ಚಿದರು. ಪೊದೆಯಲ್ಲಿ ಅಡಗಿಕೊಂಡರು. ಪೋಲೀಸ್ ಜೀಪ್ ದೇವುಪುರದತ್ತ ಹೊರಟುಹೋದದ್ದು ನೋಡಿ ನಿಟ್ಟುಸಿರುಬಿಟ್ಟ ನಾರಪ್ಪ ಮತ್ತು ದುರ್ಗಯ್ಯ ತೋಟದೊಳಕ್ಕೆ ಹೊಕ್ಕರು.

ಮನೆಯ ಪಕ್ಕಕ್ಕಿದ್ದ ಬಾವಿಯ ಮೇಲೆ ದಾಸರೆಡ್ಡಿ ಸಿಗರೇಟ್ ಸೇದುತ್ತ ನಿಂತಿದ್ದ. ಮಗ ಈಶರೆಡ್ಡಿಗೆ ಸಿಗರೇಟ್ ಪ್ಯಾಕ್ ಬೆಂಕಿಪೊಟ್ಟಣ ತರುವಂತೆ ಕೂಗಿ ಹೇಳಿದ.

ಮುಗಿದ ಸಿಗರೇಟ್ ಅನ್ನು ಒಗೆದು ಮತ್ತೊಂದು ಸಿಗರೇಟನ್ನು ಹಚ್ಚಿಕೊಂಡು ಪಕ್ಕದ ಕಣಗಿಲೆ ಗಿಡದ ಬೊಡ್ಡಿಗೆ ಉಚ್ಚೆ ಹೊಯ್ಯತೊಡಗಿದ.

ಹಿಂದಿನಿಂದ ಬಂದ ನಾರಪ್ಪ ದಾಸರೆಡ್ಡಿಯ ಕೈಗಳೆರಡನ್ನೂ ಹೆಡೆಮುರಿಗೆ ಮಾಡಿ ಬಿಗಿಯಾಗಿ ಹಿಡಿದುಕೊಂಡ. ದಾಸರೆಡ್ಡಿಯ ಶಿಶ್ನವನ್ನು ದುರ್ಗಯ್ಯ ಕ್ಷಣಾರ್ಧದಲ್ಲಿ ಕತ್ತರಿಸಿ ಕೈಯಲ್ಲಿ ಹಿಡಿದುಕೊಂಡು "ಹೆಂಗೆ ಮಿಸುಕಾಡತ್ತೈತೆ ನೋಡೊ ಮಗನೆ. ಇದರ ತೀಟೇನ ಇವತ್ ನಿನ್ನ ಬಾಯಿನೇ ತೀರಿಸ್ಬೇಕು" ಎನ್ನುತ್ತಿದಂತೆಯೇ ದಾಸರೆಡ್ಡಿ ಚಿಟ್ಟನೆ ಚೀರಿದ ತೆರೆದ ಬಾಯಿಗೆ ಅವನದೇ ಶಿಶ್ನವನ್ನು ತುರುಕಿದ ದುರ್ಗಯ್ಯ ಬಲಗೈಯನ್ನು ಕಡಿದ. ನಾರಪ್ಪ ಎಡಗೈ ಕಡಿದ. ಅಷ್ಟರಲ್ಲಿ ಹೆಂಡತಿ ಪಚ್ಚಮ್ಮ ಮತ್ತು ಮಗ ಈಶರೆಡ್ಡಿ ಗಾಬರಿಯಿಂದ ಓಡಿ ಬಂದು ಅವಾಕ್ಕಾಗಿ ನಿಂತುಕೊಂಡರು. ಅವರ ಕಣ್ಣೆದುರೇ ದಾಸರೆಡ್ಡಿಯ ಎರಡೂ ಕಾಲುಗಳನ್ನು ಕಡಿದರು. ಕೈ, ಕಾಲುಗಳು ಬಾವಿಕಟ್ಟೆಯ ಮೇಲೆ ಮಿಸುಕಾಡುತ್ತಿದ್ದವು.

ಹೆಂಡತಿ, ಮಗನೆಡೆ ಆರ್ತನಾಗಿ ನೋಡುತ್ತಲೇ ದಾಸರೆಡ್ಡಿ ಕೊನೆಯುಸಿರೆಳೆದ.ಸ

ಮಚ್ಚುಗಳನ್ನು ಅಲ್ಲೇ ಬಿಸಾಡಿ ಓಡಿದ ನಾರಪ್ಪ, ದುರ್ಗಯ್ಯನವರನ್ನು ನಂತರ ಪೋಲೀಸರು ಬಂಧಿಸಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಣಯ್ಯ ಹೆಣ್ಣಿನ ಮಾನಭಂಗಕ್ಕೆ ಯತ್ನಿಸಿದಾಗ ನಡೆದ ಕೊಲೆಯೆಂದು ದಾಖಲಿಸದೆ ಕಳವಿಗಾಗಿ ಬಂದು, ಪ್ರತಿಭಟಿಸಿದ ದಾಸರೆಡ್ಡಿಯನ್ನು ಕೊಂದಿದ್ದಾರೆಂದು ದಾಖಲು ಮಾಡಿಸಿದರು. ಹುಡುಗಿಯ ವಿಷಯಕ್ಕಾಗಿ ಕೊಲೆಯೆಂದು ದಾಖಲಿಸಿದರೆ ವಿಚಾರಣೆಯ ಸಂದರ್ಭದಲ್ಲಿ ತನ್ನ ಪ್ರಸ್ತಾಪವೂ ಬರಬಹುದೆನ್ನುವ ದೂರಾಲೋಚನೆಯಿಂದ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೆ ತಿರುಚಿಸಿದ್ದರು ಪ್ರಕರಣವನ್ನು. ಕೋರ್ಟ್‌ನಲ್ಲಿ ಟ್ರಯಲ್ ಶುರುವಾಯಿತು. ಸರ್ಕಲ್ ಇನ್ಸ್‌ಪೆಕ್ಟರ್ ಪಚ್ಚಮ್ಮಳನ್ನು ತಮ್ಮ ಜೀಪ್‌ನಲ್ಲಿ ಕೂರಿಸಿಕೊಂಡು ಕೋರ್ಟ್‌ಗೆ ಹೋಗಿ ಪ್ರಾಸಿಕ್ಯೂಟರ್ ಸಮಕ್ಷಮ ಏನೇನು ಹೇಳಿಕೆ ನೀಡಬೇಕೆಂದು ರಿಹರ್ಸಲ್ ಮಾಡಿಸಿದರು.

ವಿಟ್ನೆಸ್ ಬಾಕ್ಸ್‌ನಲ್ಲಿ ನಿಂತು ಪಚ್ಚಮ್ಮ "ನಮ್ಮ ಮನೆಗೆ ಯಾರೂ ಕಳ್ಳರು ಬಂದಿರಲಿಲ್ಲ. ನನ್ನ ಗಂಡ ಉಂಡು ಸಿಗರೇಟ್ ಸೇದಲು ಬಾವಿಯ ಕಟ್ಟೆ ಬಳಿ

ಹೋಗಿದ್ದ. ಆತ ಚೀರಿದ್ದು ಕೇಳಿ ಹೊರಗೋಡಿ ಬಂದಾಗ ಕೈಕಾಲುಗಳು ಕತ್ತರಿಸಲ್ಪಟ್ಟಿದ್ದವು. ಕೊಲೆಗಡುಕರು ನನಗೆ ಕಾಣಿಸಲಿಲ್ಲ." ಎಂದು ಹೇಳಿಬಿಟ್ಟಳು.

ಸರ್ಕಲ್ ಇನ್ಸ್‌ಪೆಕ್ಟರ್ ಬೆವೆತುಹೋದರೆ ಪ್ರಾಸಿಕ್ಯೂಟರ್ ದಂಗಾಗಿ ನಿಂತುಕೊಂಡಿದ್ದರು !

ಕೋರ್ಟ್ ಹಾಲ್‌ನಿಂದ ಹೊರಬಂದಳು ಪಚ್ಚಮ್ಮ. ಪೋಲೀಸರಿಂದ ಕೊಸರಿಕೊಂಡು ನಾರಪ್ಪ, ದುರ್ಗಯ್ಯ ಪಚ್ಚಮ್ಮಳ ಕಾಲುಗಳ ಮೇಲೆ ಬಿದ್ದು "ಆ ಗುಡಿಯಾಗಿನ ದುರ್ಗಮ್ಮ ನೀನೇ" ಎಂದು ಅಳತೊಡಗಿದರು.

"ಬೀರವ್ವ ನಂಗೆ ಮಗಳಿದ್ದಂಗೆ ಮೇಲಕ್ಕೆ ಏಳಿ" ಎಂದಾಗ ಪಚ್ಚಮ್ಮಳ ಕಣ್ಣುಗಳಲ್ಲಿ ನೀರು ಕೋಡಿಯಾಗಿ ಹರಿಯುತ್ತಿತ್ತು.

21

ಮೈ ಫಾದರ್ ಈಸ್ ಮ್ಯಾನ್

ಹೈಸ್ಕೂಲ್ ಕೊನೇ ವರ್ಷದಲ್ಲಿ ಓದುತ್ತಿರುವಾಗ ಅಂತರ ಶಾಲಾ ಚರ್ಚಾಸ್ಪರ್ಧೆಗಾಗಿ ತುಮಕೂರು, ಕನಕಪುರ, ಸಿದ್ಧಗಂಗಾ ಮುಂತಾದ ಊರುಗಳಿಗೆ ಹೋಗಿ ಮೆಡಲ್, ಶೀಲ್ಡ್‌ಗಳನ್ನು ತಂದೆ. ಒಂದು ವಿಷಯವನ್ನು ಕೊಟ್ಟರೆ ಅದಕ್ಕೊಂದು ರೂಪುಕೊಟ್ಟು ಮಾತಾಡುವುದರಲ್ಲಿ ಮತ್ತಷ್ಟು ಪಳಗಿದ್ದೆ.

ನನ್ನ ಈ ಕಲೆಯನ್ನು ಸರಿಯಾಗಿ ಗುರುತಿಸಿದ್ದರು ಹೆಡ್‌ಮಾಸ್ಟರ್ ಸಿ. ಹನುಮೇಗೌಡರು. ನನಗೆ ತಿಂಡಿ, ಕಾಫಿ ಕೊಡಿಸಿ ತರಬೇತಿ ನೀಡುತ್ತಿದ್ದರು. ನನಗೆ ತಿಳಿಯದ ವಿಷಯಕ್ಕೆ ಸಂಬಂಧಿಸಿದ ಹಲವಾರು ಅಂಶಗಳನ್ನು ಪಟ್ಟಿ ಮಾಡಿಕೊಡುತ್ತಿದ್ದರು ಮತ್ತು ತಮಗೆ ತೃಪ್ತಿಯಾಗುವವರೆಗೆ ಭಾಷಣದ ರಿಹರ್ಸಲ್ ಮಾಡಿಸುತ್ತಿದ್ದರು. ಹನುಮೇಗೌಡರು ನಂತರ ಹೆಸರಾಂತ ಡಿಡಿಪಿಐ ಆಗಿ ನಿವೃತ್ತಿ ಹೊಂದಿದರು.

ಹೈಸ್ಕೂಲ್‌ನಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಪಾಸ್ ಆದೆ. ಆದರೆ ದೊಡ್ಡಪ್ಪ ಮುಂದೆ ಓದುವುದು ಬೇಡ ಎಂದಾಗ ನನಗೆ ತೀವ್ರ ಆಘಾತವೆನಿಸಿತು. "ನಾವೇನು

ಜಮೀನಿಲ್ಲದವರೆ? ಓದಿ ನೌಕರಿ ಮಾಡಲು ಹೋಗಲಿಕ್ಕೆ ! ನಮ್ಮ ಬಡ್ಡಿ ವ್ಯವಹಾರದ ಲೇವಾದೇವಿ ನೋಡಿಕೊಂಡಿರಲು ಕಲಿಯಲಿ" ಎಂದಾಗ ನಮ್ಮನೆಯಲ್ಲಿ ಎದುರು ಮಾತಾಡುವ ಧೈರ್ಯ ಯಾರಿಗೂ ಆಗಲಿಲ್ಲ.

ನನ್ನ ತಾಯಿ, ನನ್ನ ಅಪ್ಪನನ್ನು ಕೋಣೆಯೊಂದಕ್ಕೆ ಕರೆದು "ಎಲ್ಲಾದಕ್ಕೂ ಹಿಂದೆ ಬಾಯಿ ಮುಚ್ಕೊಂಡ್ ಇದ್ರೆ ಮಗನ್ ಭವಿಷ್ಯ ಹಾಳಾಗುತ್ತೆ. ನೀವು ಲಕ್ಷ್ಮಣನಂಗೆ ಇರ್ಬೋದು, ಈಗಿನ ಕಾಲ್ದಾಗೆ ಯಾರಿದ್ದಾರೆ ರಾಮನಂಗೆ !" ಎಂದು ತರಾಟೆಗೆ ತೆಗೆದುಕೊಂಡಳು. ಆಗಲೂ ಅಪ್ಪ ಏನೂ ಪ್ರತಿಕ್ರಿಯಿಸದೆ ಮೌನವಾಗಿದ್ದುದು ನೋಡಿ ಅಪ್ಪನ ಮೇಲೆ ನನಗೂ ಬೇಜಾರಾಯಿತು.

ನನ್ನ ಅಮ್ಮ ಕೈಕಟ್ಟಿ ಕೂರಲಿಲ್ಲ. ತನ್ನ ಅಣ್ಣ ದೊಡ್ಡ ಸಿದ್ಧನಂಜೇಗೌಡರ ಮುಂದೆ ಸಮಸ್ಯೆಯನ್ನು ಇಟ್ಟು ಕಣ್ಣೀರು ಹಾಕಿ ಬಂದಳು. ಸೋದರಮಾವ ಸಿದ್ಧನಂಜೇಗೌಡರು ಭುಜಂಗರಾವ್ ಅವರನ್ನು ಕಂಡು "ನಮ್ಮ ಬೀಗರಿಗೆ ಹನ್ಮಂತ್ರಾಯನ್ನ ಓದ್ಸೋಕೆ ಕೈಲಾಗಕಿಲ್ವಂತೆ. ತಂದೆ ಸತ್ತರೂ ಸೋದರ ಮಾವ ಇರಬೇಕು ಅಂತ ಗಾದೆ ಇದೆಯಲ್ಲವೆ ! ಹನ್ಮಂತ್ರಾಯನಷ್ಟು ಜಾಣ ಹುಡುಗ್ರು ನಮ್ಮ ಮನೇಲೇ ಇಲ್ಲ. ನಮ್ ಎಂ.ಎಲ್.ಎ. ಅವರಿಗೆ ಮಾತಾಡಿ ಬೆಂಗಳೂರಲ್ಲಿ ಓದ್ಸೋಕೆ ಎಲ್ಲ ವ್ಯವಸ್ಥೆ ಮಾಡಬೇಕು ಅಂತ ಅನ್ಕೊಂಡೀವ್ನಿ" ಎಂದರು.

ನನ್ನ ಸೋದರಮಾವನ ಈ ಮಾತುಗಳನ್ನು ಯಥಾವತ್ ತಂದು ಭುಜಂಗರಾವ್ ನನ್ನ ದೊಡ್ಡಪ್ಪನ ಮುಂದೆ ಹೇಳಿದರು. ಅವಮಾನದಿಂದ ಕುದಿಯತೊಡಗಿದ ನಮ್ಮ ದೊಡ್ಡಪ್ಪ "ನಮಗೆ ಇನ್ನೂ ಆ ಗತಿ ಬಂದಿಲ್ಲಂತ ನಮ್ಮ ಬೀಗರಿಗೆ ಹೇಳ್ರೀ ಭುಜಂಗರಾಯರೇ. ಹನ್ಮಂತು ಓದೋಕೆ ಹೋಗೋದು ಬೇಡಾ ಅಂದದ್ದು ನನ್ನ ತಾವ ದುಡ್ಡುಕಾಸಿನ ಕೊರತೆ ಐತೆ ಅಂತಲ್ಲ. ಏನೋ ಹುಡುಗ ಈಗ್ಲಿಂದಾನೇ ದುಡಿಮೆಗೆ ಹತ್ಲೀ ಅನ್ನೋ ಉದ್ದೇಶದಿಂದ ಹಾಗೇಳ್ದೆ. ನನ್ ಮಕ್ಕಳ್ನ ಬೆಂಗಳೂರಿಗೆ ಕಳಿಸಿದೀನಾ? ಒಬ್ಬ ಕುರಿ ಕಾಯ್ತಿದ್ರೆ ಇನ್ನೊಬ್ಬ ಸಾಲದ ವ್ಯವಹಾರ ನೋಡ್ಕೋತಿಲ್ವಾ? ವಿಷ್ಯ ಇಷ್ಟ್ ದೀರ್ಘಕ್ಕೆ ಹೋಗಿದೆ ಅಂದ್ ಮ್ಯಾಕೆ ಓದೋಕೆ ಹೋಗ್ಲಿ ಬೆಂಗ್ಳೂರಾಗೆ ಓದ್ಸೋ ತಾಕತ್ತು ಈ ತಿಮ್ಮೇಗೌಡನಿಗೆ ಇದೆಯಾ ಅಂತಾ." ಎಂದರು.

ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ನನಗೆ ಅತೀವ ಸಂತೋಷವಾಗಿ ಕಣ್ಣುಗಳು ಮಂಜಾದವು. ಅಮ್ಮ ಹಣ್ಣು, ಕಾಯಿ ಕೊಟ್ಟು ನನ್ನನ್ನು ಆಂಜನೇಯ ದೇವಸ್ಥಾನಕ್ಕೆ ಓಡಿಸಿದಳು.

ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜ್‌ನಲ್ಲಿ ಆರ್ಟ್ಸ್ ವಿಭಾಗಕ್ಕೆ ಸೇರಿಕೊಂಡೆ.

ಬೆಂಗಳೂರಿನ ಬಗೆಗೆ ನನ್ನಲ್ಲಿ ಅತೀವ ಆಕರ್ಷಣೆಯಿದ್ದರೂ ಅದರ ನಿಗೂಢತೆ, ಅಗಾಧತೆ, ಆಡಂಬರಗಳ ಬಗೆಗೆ ನನ್ನಲ್ಲಿ ಸುಪ್ತ ಭಯವಿತ್ತು. ಸೇಂಟ್ ಜೋಸೆಫ್ ಕಾಲೇಜ್ ಆವರಣ ಪ್ರವೇಶಿಸುತ್ತಿದ್ದಂತೆಯೇ ನನಗೆ ನನ್ನ ಕಲ್ಪನೆಯ ಇಂಗ್ಲೆಂಡ್ ಹೀಗೇ ಇರುತ್ತೇನೊ ಎನಿಸಿತು ; ನಮ್ಮ ದೇಶದ ವಾತಾವರಣದ ಲವಲೇಶವೂ ಅಲ್ಲಿರಲಿಲ್ಲ.

ಬಣ್ಣ ಹಾರಿದ ಮತ್ತು ಬಿದ್ದು ಸೊಟ್ಟಗಾದ ಹ್ಯಾಂಡಲ್‌ನ ಸೈಕಲ್ ಮೇಲೆ ಪಾಯಿಜಾಮ, ಹವಾಯಿ ಚಪ್ಪಲಿಗಳನ್ನು ಹಾಕಿಕೊಂಡು ಬಂದ ನನ್ನನ್ನು ಎಲ್ಲರೂ ವಿಚಿತ್ರವಾಗಿ ನೋಡಿದರು.

ಸ್ಟ್ಯಾಂಡ್‌ನಲ್ಲಿ ಸೈಕಲ್ ನಿಲ್ಲಿಸಿ ಅದಕ್ಕೆ ಬೀಗ ಹಾಕತೊಡಗಿದ ನನ್ನನ್ನು ನೋಡಿದ ಜವಾನ "ನಿನ್ನ ಆ ಮುರುಕಲು ಸೈಕಲ್ ಅನ್ನ ಯಾರು ಕದೀತಾರೆ !" ಎಂದು ನಕ್ಕ. ನನಗೆ ಕಸಿವಿಸಿಯೆನಿಸಿತು.

ಕನ್ನಡ ಮಾಧ್ಯಮದಲ್ಲಿ ಓದಿ ಬಂದ ನನ್ನನ್ನು ಸೇಂಟ್ ಜೋಸೆಫ್ ಕಾಲೇಜ್‌ನ ಇಂಗ್ಲಿಷ್ ಬೆಚ್ಚಿಬೀಳಿಸಿತು. ನನ್ನ ಕ್ಲಾಸಿನ ಎಲ್ಲ ಹುಡುಗ, ಹುಡುಗಿಯರು ಟಸ್‌ಪುಸ್ ಎಂದು ಇಂಗ್ಲಿಷ್ ಮಾತಾಡುವಾಗ ತೀವ್ರ ಕೀಳರಿಮೆ ನನ್ನಲ್ಲಿ ಹುಟ್ಟತೊಡಗಿತು. ಕನ್ನಡ ಸಬ್ಜೆಕ್ಟ್‌ನ ಕ್ಲಾಸ್ ಬಂದಾಗ ಮಾತ್ರ ನನಗೂ ಅಲ್ಪಸ್ವಲ್ಪ ಅಸ್ತಿತ್ವ ಇದೆ, ಈ ವಾತಾವರಣದಲ್ಲಿರಲು ಸ್ವಲ್ಪವಾದರೂ ಲಾಯಕ್ ಇದ್ದೇನೆ ಎನಿಸತೊಡಗಿತು.

ಹರಳೆಣ್ಣೆ ಮೆತ್ತಿಕೊಂಡ ನನ್ನ ಕ್ರಾಪನ್ನು ನೋಡಿ ಹುಡುಗಿಯರು ಮುಸಿಮುಸಿ ನಗುವುದನ್ನು ಗಮನಿಸಿಕೊಂಡೆ.

ನನಗೆ ಇಂಗ್ಲಿಷ್ ಮಾತಾಡಲು ಬರುವುದಿಲ್ಲ ಎನ್ನುವುದು ಗೊತ್ತಾದ ಹುಡುಗರು ಬೇಕೆಂತಲೇ ನನ್ನನ್ನು ಇಂಗ್ಲಿಷ್‌ನಲ್ಲಿ ಮಾತಾಡಿಸತೊಡಗಿದರು. ಇಂಗ್ಲಿಷ್‌ನಲ್ಲಿ ಉತ್ತರಿಸಲು ಬಾರದೆ ನನ್ನ ಮುಖ ಬೆವರುವುದನ್ನು ನೋಡಿ ವಿಘ್ನ ಸಂತೋಷವನ್ನು ಅನುಭವಿಸುತ್ತಿದ್ದರು ನನ್ನ ಕೆಲವು ಕ್ಲಾಸ್‌ಮೇಟ್‌ಗಳು.

ಹೈಸ್ಕೂಲ್‌ನಲ್ಲಿ ಇಂಗ್ಲಿಷ್ ಬಾರದೆಯೇ ಫಸ್ಟ್‌ಕ್ಲಾಸ್ ಮಾರ್ಕ್ಸ್ ತೆಗೆದುಕೊಂಡಿದ್ದೆ; ಇಡೀ ಪುಸ್ತಕವನ್ನು ಕಂಠಪಾಠ ಮಾಡಿ !

ಕಾಲೇಜ್‌ನಿಂದ ಹಾಸ್ಟೆಲ್ ರೂಮಿಗೆ ಬಂದೊಡನೆ ಕೀಳರಿಮೆ,

ಅವಮಾನಗಳಿದ ಅಳು ಉಕ್ಕಿಬರತೊಡಗಿತು. ಏಕಾಂತವಾಗಿರಬೇಕೆನಿಸತೊಡಗಿತು. ಊರಿನ ನೆನಪು ಮರುಕಳಿಸಿ ಬರತೊಡಗಿತು. ತಡೆದುಕೊಳ್ಳಲು ಆಗಲಿಲ್ಲ. ಕನಿಷ್ಠ ನಮ್ಮೂರು ಕಡೆಯಿಂದ ಬರುವ ಬಸ್‌ಗಳನ್ನಾದರೂ ನೋಡಿ ಬರೋಣ, ಅದರಲ್ಲಿ ಊರವರು ಯಾರಾದರೂ ಸಿಕ್ಕರೆ ಮಾತಾಡಿಸೋಣ ಎಂದುಕೊಂಡು ಬಸ್‌ಸ್ಟ್ಯಾಂಡ್‌ನತ್ತ ಹೊರಟೆ. ಬಸ್‌ನಲ್ಲಿ ಭುಜಂಗರಾಯರನ್ನು ನೋಡಿ ಅಳು ತಡೆದುಕೊಳ್ಳಲಾಗಲಿಲ್ಲ.

"ಏಕೋ ಏನಾಯಿತು?" ಎಂದರು. "ನಮ್ ದೊಡ್ಡಪ್ಪ ಬೇಡಾ ಅಂತಂದ್ರೂ ಅಷ್ಟೊಂದ್ ಜಿದ್ದು ಮಾಡಿ ಇಲ್ಲಿಗೆ ಬಂದಿವ್ನಿ. ಕಾಲೇಜ್‌ನಲ್ಲಿ ಏನೊಂದು ವಿಷಯಾನೂ ತಿಳೀತಿಲ್ಲ. ಕೊಡುವ ನೋಟ್ಸ್‌ಗಳನ್ನು ಯಾಂತ್ರಿಕವಾಗಿ ಬರೆದು ಕಂಠಪಾಠ ಮಾಡುತ್ತ ಕಾಲ ಕಳೆಯುತ್ತಿರುವೆ. ಫೇಲ್ ಆದರೆ ಊರಿನವರಿಗೆ, ಎಲ್ಲಕ್ಕೂ ಹೆಚ್ಚು ನಮ್ ದೊಡ್ಡಪ್ಪಂಗೆ ಮುಖ ತೋರ್‍ಸೋದು ಹೆಂಗೆ !" ಎಂದೆ.

"ಛೆ ಹುಚ್ಚ. ನೀನು ಜಾಣ ಇದೀಯಾ. ಹೊಸ ವಾತಾವರಣ... ಸ್ವಲ್ಪ ದಿನ ಹೋದ್ರೆ ಎಲ್ಲ ಸರಿ ಹೋಗುತ್ತೆ. ಇಡೀ ಕಾಲೇಜ್‌ಗೆ ಮುಂದಿರ್ತೀಯಾ" ಎಂದು ಭುಜಂಗರಾಯರು ಹೋಟೆಲ್‌ಗೆ ಕರೆದುಕೊಂಡು ಹೋಗಿ ಜಿಲೇಬಿ, ದೋಸೆ, ಕಾಫಿ ಕೊಡಿಸಿದರು. ಭುಜಂಗರಾಯರು ಹೇಳಿದ ಮಾತುಗಳು ನನ್ನಲ್ಲಿ ಧೈರ್ಯ ಮೂಡಿಸಲಿಲ್ಲ. ಏಕೆಂದರೆ, ನನ್ನೊಳಗಿನ ವಾಸ್ತವ ನನ್ನ ಕಣ್ಣ ಮುಂದಿತ್ತು. ನನ್ನನ್ನು ಸಮಾಧಾನಪಡಿಸಲು ಹಾಗೆ ಹೇಳಿದ್ದಾರೆಂದು ಸುಮ್ಮನಾದೆ.

ನವೆಂಬರ್, ಡಿಸೆಂಬರ್ ತಿಂಗಳು ಬಂದವು. ಇಂಟರ್‌ಕಾಲೇಜ್ ಕನ್ನಡ ಡಿಬೇಟ್‌ಗಳು ಶುರು ಆದವು. ಕನ್ನಡ ಚರ್ಚಾಸ್ಪರ್ಧೆಗೆ ನಮ್ಮ ಕಾಲೇಜ್ ಪ್ರತಿನಿಧಿಯಾಗಿ ಆಯ್ಕೆಗೊಂಡೆ. ನಿರರ್ಗಳ ಕನ್ನಡ ಭಾಷಣ ಕೇಳಿ ನನ್ನ ಕ್ಲಾಸ್‌ಮೇಟ್‌ಗಳು ನನ್ನ ಬಗ್ಗೆ ಇರಿಸಿಕೊಂಡಿದ್ದ ಪೂರ್ವಗ್ರಹವನ್ನು ಕಡಿಮೆ ಮಾಡಿಕೊಂಡಿರಬೇಕು ಎಂದು ಅವರು ಕೂತೆಡೆ ನೋಡಿ ಬೀಗತೊಡಗಿದೆ. ಅವರ ಮುಖಗಳಲ್ಲಿ ನನ್ನ ಬಗ್ಗೆ ಮುಂಚೆಗಿಂತ ಬೇರೆ ಭಾವಗಳು ಮೂಡಿರುವುದನ್ನು ಓದಿಕೊಂಡು ಖುಷಿಗೊಂಡೆ. ನನ್ನ ಈ ಪುಟ್ಟ ವಿಜಯ ನನ್ನಲ್ಲಿ ಹೊಸ ಹುಮ್ಮಸ್ಸನ್ನು ಮೂಡಿಸಿತು. ನನ್ನ ಕಾಲೇಜು ನನಗೆ ಯುದ್ಧಭೂಮಿಯಂತೆ ಕಾಣತೊಡಗಿತು. ಸಮರವಿಲ್ಲದೆ ಜಯವಿಲ್ಲವೆನಿಸಿತು. ಯೋಧನ ಛಲ ಬೇಕು ನನಗೆ ಎಂದುಕೊಂಡೆ. ನನ್ನ ಎಲ್ಲ ಸಮಸ್ಯೆಯ ಮೂಲವಾಗಿ ನನ್ನ ಕಣ್ಣ ಮುಂದೆ ನೇತಾಡತೊಡಗಿದ್ದು ಇಂಗ್ಲಿಷ್ ! ಇಂಗ್ಲಿಷ್ ಅನ್ನು ಜಯಸಿದರೆ ಉಳಿದದ್ದೆಲ್ಲ ತಮಗೆ ತಾವೇ ಶರಣಾಗುತ್ತವೆ ಎನ್ನುವುದು ತಿಳಿಯಿತು. ಅಂತರಕಾಲೇಜ್ ಕನ್ನಡ

ಚರ್ಚಾಸ್ಪರ್ಧೆಯಲ್ಲಿ ಇಡೀ ಬೆಂಗಳೂರಿಗೇ ಪ್ರಥಮ ಬಹುಮಾನವಾಗಿ ಶೀಲ್ಡ್ ಅನ್ನು ತಂದುಕೊಟ್ಟ ನಾನು ನಾಲ್ಕು ವೈಯಕ್ತಿಕ ಬಹುಮಾನಗಳನ್ನು ಬಾಚಿಕೊಂಡೆ.

ಕಾಲೇಜ್‌ನಲ್ಲಿ ಪ್ರೇಯ್ಯರ್ ಕಾಲಕ್ಕೆ ವೇದಿಕೆಯ ಮೇಲೆ ನನ್ನನ್ನು ನಿಲ್ಲಿಸಿ ಪ್ರಿನ್ಸಿಪಾಲ್ ಫಾದರ್ ಡಿಸೋಜಾ ಅವರು "ನಮ್ಮ ಕಾಲೇಜಿಗೆ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಏಳು ವರ್ಷಗಳಿಂದ ಪ್ರಶಸ್ತಿ ಸಿಕ್ಕಿರಲಿಲ್ಲ ; ಅದನ್ನು ತಂದುಕೊಟ್ಟ ಹಳ್ಳಿಯ ಪ್ರತಿಭಾವಂತ ಈ ಹನುಮಂತರಾಯ....." ಎಂದು ಘೋಷಿಸಿದರು. ಆಗ ನನಗಾದ ರೋಮಾಂಚನ ಅಷ್ಟಿಷ್ಟಲ್ಲ. ಇಂಗ್ಲಿಷ್ ವಿರುದ್ಧ ಸೆಣಸಲು ಅದು ನನಗೆ ಸ್ಫೂರ್ತಿಯ ಸೆಲೆಯಾಯಿತು.

ನನ್ನ ತಲೆಯ ಕ್ರಾಪು ನೋಡಿ ಮುಸಿಮುಸಿ ನಗುತ್ತಿದ್ದ ಕ್ಲಾಸಿನ ಹುಡುಗಿಯರು ಚರ್ಚಾಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಶೀಲ್ಡ್ ತಂದದ್ದಕ್ಕಾಗಿ "ಕಂಗ್ರಾಚ್ಯುಲೇಷನ್ಸ್" ಎಂದು ಹೇಳಿದಾಗ ಪ್ರತಿಯಾಗಿ ಏನು ಹೇಳಬೇಕೆಂದು ತೋಚದೆ ತಡಬಡಿಸಿದೆ. ಕಷ್ಟಪಟ್ಟು "ಎಸ್, ಎಸ್" ಎಂದು ತುಟಿಕೊಂಕಿಸಿ ನಕ್ಕೆ. ಆ ಕಾಲೇಜಿನಲ್ಲಿ ಹುಡುಗಿಯರು ನನ್ನನ್ನು ಪ್ರಥಮ ಬಾರಿಗೆ ಮಾತಾಡಿಸಿದ್ದರಿಂದಲೋ ಏನೋ ನನ್ನ ಎದೆಬಡಿತ ತೀವ್ರವಾಯಿತು. ಮೈಯಲ್ಲೆಲ್ಲ ಮಿಂಚು ಹರಿದಾಡಿದಂತೆನಿಸಿತು.

"ಛೆ ! ಇಂಗ್ಲಿಷ್ ಒಂದು ಬಂದಿದ್ದರೆ" ಎಂದುಕೊಂಡೆ.

ಪ್ಯೂನ್ ಬಂದು ಪ್ರಿನ್ಸಿಪಾಲ್‌ರು ಕರೆಯುತ್ತಿದ್ದಾರೆಂದು ಹೇಳಿದ. ಎದೆಯುಬ್ಬಿಸಿಕೊಂಡು ಪ್ರಿನ್ಸಿಪಾಲ್ ಚೇಂಬರ್‌ಗೆ ಹೋದೆ.

ಪ್ರಿನ್ಸಿಪಾಲ್‌ರು "ವ್ಹಾಟ್ ಈಸ್ ಯುವರ್ ಫಾದರ್?" ಎಂದು ಕುತೂಹಲದಿಂದ ಪ್ರಶ್ನಿಸಿದರು. ಕೂಡಲೇ ಏನು ಉತ್ತರಿಸಬೇಕೆಂದು ತೋಚದೆ "ಮೈ ಫಾದರ್ ಈಸ್ ಮ್ಯಾನ್" ಎಂದುಬಿಟ್ಟೆ !

ನನ್ನ ಇಂಗ್ಲಿಷ್ ಬಡತನದ ಅರಿವು ಅವರಿಗಾಗಿ "ನೋಡು ನೀನು ಪ್ರತಿಭಾವಂತ. ನಿನಗೆ ಇಂಗ್ಲಿಷ್ ಕಲಿಯಲು ನಾನು ವಿಶೇಷ ಸಹಾಯ ಮಾಡುತ್ತೇನೆ" ಎಂದು ಕೆಲವು ಗ್ರಾಮರ್ ಪುಸ್ತಕಗಳನ್ನು ಕೊಟ್ಟರು ಮತ್ತು ಶಿಕ್ಷಕಿಯೊಬ್ಬರನ್ನು ಪರಿಚಯಿಸಿ "ಸಮಸ್ಯೆಗಳು ಬಂದರೆ ಇವರು ನಿನಗೆ ಸಹಾಯ ಮಾಡುತ್ತಾರೆ" ಎಂದರು.

ಕಂಠಪಾಠ ಮಾಡುವ ರೋಗ ನನ್ನಲ್ಲಿ ಎಷ್ಟು ಉಲ್ಬಣಿಸಿತ್ತೆಂದರೆ ಗ್ರಾಮರ್ ಪುಸ್ತಕವನ್ನೂ ಯಾಂತ್ರಿಕವಾಗಿ ಉರುಹೊಡೆದುಬಿಟ್ಟೆ. ಶಿಕ್ಷಕಿ ಏನೇ ಕೇಳಿದರೂ ಉತ್ತರಿಸುತ್ತಿದ್ದೆ ; ಆದರೆ, ಇಂಗ್ಲಿಷ್ ಮಾತ್ರ ಬರಲಿಲ್ಲ ! "ಕಂಠಪಾಠದ ಪ್ರವೃತ್ತಿಯನ್ನು

ಬಿಡದ ಹೊರತು ನಿನಗೆ ಇಂಗ್ಲಿಷ್ ಬರುವುದು ಸಾಧ್ಯವಿಲ್ಲ" ಎಂದು ಹತಾಶಗೊಂಡು ಹೇಳಿದಳು ಆ ಶಿಕ್ಷಕಿ !

ಇಂಗ್ಲಿಷ್‌ನಲ್ಲಿ ಕ್ರಮಕ್ರಮೇಣ ಚೇತರಿಸಿಕೊಳ್ಳತೊಡಗಿದೆ. ಫಸ್ಟ್ ಟರ್ಮ್ ಮುಗಿಸುವಷ್ಟರಲ್ಲಿ ನನ್ನಲ್ಲಿ ಇಂಗ್ಲಿಷ್ ಬಗ್ಗೆ ಆತ್ಮವಿಶ್ವಾಸ ಮೂಡಿಬಿಟ್ಟಿತು ; ಇನ್ನು ನನ್ನನ್ನು ಹಿಡಿಯುವವರೇ ಇಲ್ಲವೆಂದುಕೊಂಡೆ.

ಪ್ರಿನ್ಸಿಪಾಲ್ ಡಿಸೋಜಾ ಅವರು ನನಗೆ ಮೂರು ಸ್ಕಾಲರ್‌ಶಿಪ್ ಕೊಡಿಸಿದರು; ಸಾವಿರದ ಮೂರುನೂರು ರೂಪಾಯಿಗಳು ನನ್ನ ಕೈಗೆ ಬಂದವು. ಮೊದಲು ನನ್ನ ಹಳೆಯ ಸೈಕಲ್ ಅನ್ನು ಮಾರಿ ಹೊಸ ಸೈಕಲ್ ಕೊಂಡುಕೊಂಡೆ. ಹವಾಯಿ ಚಪ್ಪಲಿಗಳನ್ನು ಬಿಟ್ಟು ಒಳ್ಳೆಯ ಚಪ್ಪಲಿಗಳನ್ನು ಕೊಂಡೆ.

ಪಿಯುಸಿಯನ್ನು ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡಿದೆ. ನನ್ನಲ್ಲಿ ಇಂಗ್ಲಿಷ್ ಒಂದು ಗೀಳಾಗಿ ಬೆಳೆದುಬಿಟ್ಟಿತ್ತು. ಇಂಗ್ಲಿಷ್ ಲಿಟರೇಚರ್ ತೆಗೆದುಕೊಂಡು ಬಿ.ಎ. ಆನರ್ಸ್ ಮಾಡಬೇಕೆಂದು ನಿರ್ಧರಿಸಿಕೊಂಡೆ. ದುರದೃಷ್ಟವಶಾತ್ ನಮ್ಮ ಕಾಲೇಜ್‌ನಲ್ಲಿ ಇಂಗ್ಲಿಷ್ ಲಿಟರೇಚರ್ ಸಬ್ಜೆಕ್ಟ್ ಇರಲಿಲ್ಲ. ಅದೇ ಸಮಯಕ್ಕೆ ಅಸ್ತಿತ್ವಕ್ಕೆ ಬಂದಿತ್ತು ಬೆಂಗಳೂರು ವಿಶ್ವವಿದ್ಯಾನಿಲಯ. ಸೆಂಟ್ರಲ್ ಕಾಲೇಜ್‌ನಲ್ಲಿ ಲಿಟರೇಚರ್ ವಿಷಯದ ಕಾಂಬಿನೇಷನ್ ಇತ್ತು.

ನನಗೆ ಟಿಸಿ ನೀಡಬೇಕೆಂದು ಅರ್ಜಿ ಸಲ್ಲಿಸಿದೆ. ಈ ವಿಷಯ ಪ್ರಿನ್ಸಿಪಾಲ್ ಡಿಸೋಜಾ ಅವರಿಗೆ ಗೊತ್ತಾಗಿ ನನ್ನನ್ನು ಕರೆಸಿದರು. "ನಿನಗೆ ಸೇಂಟ್ ಜೋಸೆಫ್ ಹಾಸ್ಟೆಲ್‌ನಲ್ಲಿ ಫ್ರೀ ಬೋರ್ಡಿಂಗ್, ಲಾಜಿಂಗ್ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆ. ನಮ್ಮ ಕಾಲೇಜ್‌ನಲ್ಲೇ ಇರುವ ವಿಷಯಗಳನ್ನು ಆಯ್ದುಕೊ. ಬೇರೆಡೆ ಹೋಗಬೇಡ" ಎಂದು ಹೇಳಿದರು.

"ಇಲ್ಲ" ಎಂದು ಅವರ ಮುಖದ ಮೇಲೆ ಹೇಳಲು ಮನಸ್ಸಾಗಲಿಲ್ಲ. ಮೌನವಾಗಿ ವಾಪಸ್ ಬಂದು ಕ್ಲರ್ಕ್ ಮುಂದೆ ನನಗೆ ಟಿ.ಸಿ. ಬೇಕೇಬೇಕು ಎಂದೆ.

ಸೆಂಟ್ರಲ್ ಕಾಲೇಜ್‌ನಲ್ಲಿ ಅಡ್ಮಿಷನ್ ಮಾಡಿಸಿದೆ. ಅಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಲೆಕ್ಚರರ್ ಆಗಿದ್ದ ಪಿ. ಲಂಕೇಶರಿಗೆ ಶಿಷ್ಯನಾದೆ.

22

ರಾವಣನೊಂದಿಗೆ ಹನುಮಂತನ ಟಿಫನ್

ಸೇಂಟ್ ಜೋಸೆಫ್ ಕಾಲೇಜನ್ನು ತೊರೆದು ಸೆಂಟ್ರಲ್ ಕಾಲೇಜ್‌ಗೆ ಏಕೆ ಸೇರಿಕೊಂಡೆಯೆಂದು ನಮ್ಮ ಮನೆಯಲ್ಲಿ ಯಾರೂ ನನ್ನನ್ನು ಪ್ರಶ್ನಿಸಲಿಲ್ಲ. ಅವರಿಗೆಲ್ಲ ನಾನು ಬೆಂಗಳೂರಿನಲ್ಲಿ ಓದುತ್ತಿದ್ದೇನೆ, ಬಹಳ ಪಂಡಿತನಾಗುತ್ತಿದ್ದೇನೆ ಎನ್ನುವ ಭಾವನೆ. ನನ್ನ ಭವಿಷ್ಯವನ್ನು ನಾನೇ ರೂಪಿಸಿಕೊಳ್ಳಬೇಕಾಗಿತ್ತು. ಯಾವ ಕೋರ್ಸ್‌ಗೆ ಸೇರಿಕೊಳ್ಳಬೇಕು, ಅದರಿಂದ ಮುಂದೆ ಯಾವ ವೃತ್ತಿಯನ್ನು ಹಿಡಿಯಬೇಕು ಎಂದು ನಿರ್ದಿಷ್ಟವಾಗಿ ಮಾರ್ಗದರ್ಶನ ಮಾಡುವಂಥ ವಿದ್ಯಾವಂತರು ನಮ್ಮ ಮನೆಯಲ್ಲಿರಲಿಲ್ಲ. ನಮ್ಮ ಸೋದರಮಾವ ದೊಡ್ಡ ಸಿದ್ಧನಂಜೇಗೌಡರು ಮಾತ್ರ 'ನೀನು ಆದ್ರೆ ಲಾಯರ್ರೇ ಆಗಬೇಕು. ನಿನ್ನನ್ನ ಅಂತಿಂಥವರಲ್ಲಿ ಅಲ್ಲ, ಪ್ರಖ್ಯಾತ ಲಾಯರ್ ದೇವದಾಸ್‌ರ ಬಳಿಯೇ ಜ್ಯೂನಿಯರ್ ಆಗಿ ಸೇರಿಸುವುದು ನನ್ನ ಜವಾಬ್ದಾರಿ' ಎಂದು ಒಮ್ಮೆ ಹೇಳಿದ್ದರು.

ಸೆಂಟ್ರಲ್ ಕಾಲೇಜಿನಲ್ಲಿ ವಿಶ್ವವಿದ್ಯಾಲಯದಲ್ಲಿರುವಂತೆ ಎಂ.ಎ.,ಎಂ.ಎಸ್ಸಿ. ಮುಂತಾದ ಸ್ನಾತಕೋತ್ತರ ಪದವಿಗಳೂ ಇದ್ದವು. ಅದೇ ಮಾದರಿಯಲ್ಲಿ ಪ್ರತಿ ವಿಷಯಗಳಿಗೂ ಪ್ರತ್ಯೇಕ ಡಿಪಾರ್ಟ್‌ಮೆಂಟ್‌ಗಳೂ ಮತ್ತು ಅವಕ್ಕೆ ಪ್ರತ್ಯೇಕ ಹೆಡ್‌ಗಳೂ

ಇದ್ದರು. ಬೆಂಗಳೂರಲ್ಲಿ ಹೀಗೆ ಯೂನಿವರ್ಸಿಟಿಯ ವಾತಾವರಣ ಇರುವಂಥ ಕಾಲೇಜ್ ಇದೊಂದೇ ಆಗಿತ್ತು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಪ್ರೊ. ಭರತ್‌ರಾಜ್‌ಸಿಂಗ್ ಅವರಿದ್ದರು. ಬಿ.ಸಿ. ಚಂದ್ರಶೇಖರ್, ಮಿಸೆಸ್ ಮುಲೀಲ್, ಎಲ್.ಎಸ್. ಶೇಷಗಿರಿರಾವ್, ಇನಾಮ್‌ದಾರ್, ನಂಬಿಯಾರ್, ರಾಮರಾವ್, ವಿಮಲಾ ರಾವ್, ಪಿ. ಲಂಕೇಶ್ ಇವರುಗಳೆಲ್ಲ ಇಂಗ್ಲಿಷ್ ಅಧ್ಯಾಪಕರಾಗಿದ್ದರು.

ನಮ್ಮ ಕ್ಲಾಸಿನಲ್ಲಿ ಮೂವತ್ತಾರು ಹುಡುಗಿಯರಿದ್ದರೆ ಕೇವಲ ಆರೇ ಜನ ಹುಡುಗರಿದ್ದೆವು. ಮಂತ್ರಿ ಕೊಂಡಜ್ಜಿ ಬಸಪ್ಪನವರ ಮಗ ರಾಜಶೇಖರ ನನ್ನ ಕ್ಲಾಸ್‌ನಲ್ಲೇ ಇದ್ದ. ಕೆಲವೇ ದಿನಗಳಲ್ಲಿ ಆತ ನನ್ನ ಆತ್ಮೀಯ ಸ್ನೇಹಿತನಾದ. ರಾಜಶೇಖರನದು ಕಂಚಿನ ಕಂಠ. ಒಳ್ಳೆಯ ಮೈಕಟ್ಟಿನ ಸ್ಫುರದ್ರೂಪಿಯೂ ಆಗಿದ್ದುದರಿಂದ ಲಂಕೇಶ್ ಅವರು ತಮ್ಮ ನಾಟಕಗಳಿಗಾಗಿ ಹೀರೊ ಪಾತ್ರಕ್ಕಾಗಿ ರಾಜಶೇಖರನನ್ನು ಆಯ್ಕೆಮಾಡಿಕೊಂಡರು. ನನಗೆ ನಾಟಕದಲ್ಲಿ ಆಸಕ್ತಿ ಇರಲಿಲ್ಲ. ನನ್ನ ಎಲ್ಲ ವೇಳೆಯನ್ನೂ ಓದಿಗೇ ಮೀಸಲಿಟ್ಟಿದ್ದೆ. ಸೇಂಟ್ ಜೋಸೆಫ್ ಕಾಲೇಜ್‌ನಲ್ಲೇ ಇಂಗ್ಲಿಷ್ ಮೇಲೆ ಹಿಡಿತ ಸಾಧಿಸಿದ್ದರಿಂದ ಸೆಂಟ್ರಲ್ ಕಾಲೇಜ್ ನನ್ನಲ್ಲಿ ದಿಗ್ಭ್ರಮೆಯನ್ನುಂಟುಮಾಡಲಿಲ್ಲ. ನನ್ನ ಬಹುತೇಕ ಸಹಪಾಠಿ ಹುಡುಗಿಯರೆಲ್ಲ ಕಾನ್ವೆಂಟ್ ಶಿಕ್ಷಣದಿಂದ ಬಂದವರು. ನಾನು ಇಂಗ್ಲಿಷ್‌ನಲ್ಲಿ ಚೇತರಿಸಿಕೊಂಡಿದ್ದರೂ ಆ ಹುಡುಗಿಯರಂತೆ ಅಲಂಕಾರಿಕವಾಗಿ ಮಾತನಾಡಲು ಬರುತ್ತಿರಲಿಲ್ಲ.

ನನ್ನ ಸಹಪಾಠಿ ಹುಡುಗರು ಕ್ಲಾಸ್‌ಗೆ ನಿರಂತರವಾಗಿ ಬರುತ್ತಿರಲಿಲ್ಲ. ಕೊಂಡಜ್ಜಿ ರಾಜಶೇಖರನಿಗೆ ನಾಟಕ, ಸಿನಿಮಾಗಳ ಗೀಳು ಹತ್ತಿಬಿಟ್ಟಿದ್ದರಿಂದ ಅವನೂ ಕ್ಲಾಸ್ ತಪ್ಪಿಸತೊಡಗಿದ. ಹುಡುಗರ ಪೈಕಿ ನಾನೊಬ್ಬನೇ ನಿರಂತರವಾಗಿ ಮತ್ತು ತಪ್ಪದೆ ಎಲ್ಲ ಕ್ಲಾಸ್‌ಗಳಿಗೂ ಹಾಜರಾಗತೊಡಗಿದ್ದೆ.

ನಮ್ಮ ವಿಭಾಗದ ಮುಖ್ಯಸ್ಥ ಭರತ್‌ರಾಜ್‌ಸಿಂಗ್ ಕ್ಲಾಸ್‌ನಲ್ಲಿ ವಿಷಯದ ಮೇಲೆ ಪ್ರಶ್ನೆಯನ್ನು ಕೇಳಿದರು. ಯಾರೂ ಉತ್ತರಿಸಲಿಲ್ಲ. ಸಂಕೋಚದಿಂದಲೇ ನಾನು ಉತ್ತರ ನೀಡಿದೆ. ಭರತ್‌ರಾಜ್‌ಸಿಂಗ್ ನನ್ನನ್ನು ಎಲ್ಲರ ಮುಂದೆ "ನೋಡಿ, ಕನ್ನಡ ಮಾಧ್ಯಮದಿಂದ ಅದೂ ಹಳ್ಳಿಯ ಸ್ಕೂಲ್‌ನಿಂದ ಬಂದು ವಿಷಯದ ಅಧ್ಯಯನದ ಬಗ್ಗೆ ಅದೆಷ್ಟು ಗಂಭೀರತೆಯನ್ನು ಬೆಳೆಸಿಕೊಂಡಿದ್ದಾನೆ!" ಎಂದು ಪ್ರಶಂಸಿಸಿದರು. ಸ್ಟೈಲ್ ಆಗಿ ಇಂಗ್ಲಿಷ್ ಮಾತಾಡುವವರೆಲ್ಲರೂ ವಿಷಯದಲ್ಲಿ ಜಾಣರಿರುತ್ತಾರೆಂದು ನಾನು ತಿಳಿದುಕೊಂಡಿದ್ದು ತಪ್ಪೆನಿಸಿತು.

ಆಲಂಕಾರಿಕ ಇಂಗ್ಲಿಷ್ ನನಗೆ ಬಾರದ್ದರ ಕೀಳರಿಮೆಯಿಂದಾಗಿ ಬಹಳ ಕಡಿಮೆ ಮಾತಾಡುತ್ತಿದ್ದ ನನ್ನನ್ನು ಆರಂಭದಲ್ಲಿ ಅಧ್ಯಾಪಕರುಗಳು ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಹಳ್ಳಿಯಿಂದ ಕನ್ನಡ ಓದಿ ಬಂದವನಾಗಿದ್ದರೂ ನನ್ನಲ್ಲಿರುವ ಇಂಗ್ಲಿಷ್ ಅಧ್ಯಯನದ ಗೀಳು ಮತ್ತು ಪರಿಶ್ರಮಗಳನ್ನು ನೋಡಿದ ಹೆಡ್ ಭರತ್‌ರಾಜ್ ಸಿಂಗ್ ಅವರು ಒಮ್ಮೆ ಕ್ಲಾಸ್‌ನಲ್ಲಿ ನನ್ನನ್ನು ಹಕ್ಲ್‌ಬೆರಿಫಿನ್ ಎಂದು ಕರೆದರು. ನನಗೆ ಆ ಹೆಸರಿನ ತಳಬುಡ ಅರ್ಥವಾಗಿರಲಿಲ್ಲ. ಆ ಹೆಸರು ಲೇವಡಿಯದ್ದೊ ಅಥವಾ ಹೊಗಳಿಕೆಯದ್ದೊ ಎಂದೂ ಅರ್ಥವಾಗಲಿಲ್ಲ.

ನನ್ನ ಸಹಪಾಠಿ ಹುಡುಗಿಯರಿಗೆ ನಾನು ಕೀಟಲೆ ಮಾಡುತ್ತಿರಲಿಲ್ಲವಾದ್ದರಿಂದ ನಿರಪಾಯಕಾರಿಯೆಂದು ತಿಳಿದುಕೊಂಡು ಅವರೇ ನನ್ನನ್ನು ಮಾತಾಡಿಸತೊಡಗಿದರು! ಕ್ಲಾಸ್‌ನಲ್ಲಿ ನಾನು ಗಂಭೀರ ವಿದ್ಯಾರ್ಥಿಯೆಂದು ಹೆಡ್ ಪ್ರಶಂಸಿಸಿದ್ದೂ ಹುಡುಗಿಯರ ಮಧ್ಯ ನನ್ನ ಪ್ರಭಾವ ಬೆಳೆಯಲು ಕಾರಣವಾಗಿತ್ತೇನೋ.

ಸಹಪಾಠಿಗಳಲ್ಲೊಬ್ಬಳಾದ ಬೆನೆಡಿಕ್ಟ್ ರಾಜಕುಮಾರಿ ಪಠ್ಯದ ವಿಷಯವಾಗಿ ನನ್ನೊಂದಿಗೆ ಹೆಚ್ಚು ಚರ್ಚಿಸತೊಡಗಿದಳು. ಇದರಿಂದಾಗಿ ಹೆಚ್ಚಿನ ಸ್ನೇಹವೂ ನಮ್ಮಲ್ಲಿ ಬೆಳೆಯಿತು. ಭಾರೀ ಶ್ರೀಮಂತ ಕುಟುಂಬದಿಂದ ಬಂದಿದ್ದ ಬೆನೆಡಿಕ್ಟ್ ರಾಜಕುಮಾರಿ ನನಗೆ ಬೇಕಾದ ಬಹಳಷ್ಟು ಪುಸ್ತಕಗಳನ್ನು ತಾನೇ ಖರೀದಿಸಿಕೊಟ್ಟಳು. ಒಮ್ಮೆ ಎಂ.ಜಿ. ರೋಡ್‌ನಲ್ಲಿರುವ ಹಿಗ್ಗಿನ್ ಬಾಥಮ್ ಬುಕ್‌ಶಾಪ್‌ಗೆ ನನ್ನನ್ನು ತನ್ನ ಕಾರಲ್ಲಿ ಕರೆದೊಯ್ದು 'ನಿನಗೆ ಬೇಕಾದ ಪುಸ್ತಕಗಳನ್ನು ಆಯ್ದುಕೊ' ಎಂದಳು. ಆದರೆ ನನಗೆ ಸ್ನೇಹವನ್ನು ದುರುಪಯೋಗಿಸಿಕೊಂಡು ಸಿಕ್ಕಂತೆ ಹಣ ಖರ್ಚು ಮಾಡಿಸುವುದು ಕೀಳು ಪ್ರವೃತ್ತಿಯೆನಿಸಿತು. 'ನೀವೇ ಪುಸ್ತಕಗಳನ್ನು ಖರೀದಿಸಿಟ್ಟುಕೊಳ್ಳಿ. ನನಗೆ ಬೇಕಾದಾಗ ನಿಮ್ಮಿಂದ ಇಸಿದುಕೊಂಡು ಓದಿ ವಾಪಸ್ ಕೊಡುತ್ತೇನೆ' ಎಂದೆ.

ರಾಜಕುಮಾರಿ ತನ್ನ ಆಪ್ತ ಗೆಳತಿಯರಿಗೆಲ್ಲ ನನ್ನ ಪರಿಚಯ ಮಾಡಿಸಿದಳು.

ಸೆಂಟ್ರಲ್ ಕಾಲೇಜ್‌ನ ಎದುರೇ 'ಗ್ಯಾಸ್' ಕಾಲೇಜ್. ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್‌ಗೆ ಸಂಕ್ಷಿಪ್ತವಾಗಿ 'ಗ್ಯಾಸ್' ಎಂದು ಕರೆಯಲಾಗುತ್ತಿತ್ತು. ಬಹುತೇಕವಾಗಿ ಸಾಮಾನ್ಯ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳೇ ಅಲ್ಲಿ ತುಂಬಿರುತ್ತಿದ್ದರು. ಆ ಕಾಲೇಜ್‌ನಲ್ಲಿ ಕ್ಯಾಂಟೀನ್ ಇರಲಿಲ್ಲ. ಹಾಗೆಯೇ ಕೋ-ಎಜುಕೇಷನ್ ಇರಲಿಲ್ಲ. ಹೀಗಾಗಿ ನಮ್ಮ ಕಾಲೇಜ್‌ಗೆ ಆ ಕಾಲೇಜ್ ಹುಡುಗರು

ತಿಂಡಿಕಾಫಿಯ ನೆಪದಲ್ಲಿ ಬಂದು ಹುಡುಗಿಯರನ್ನು ಕಿಚಾಯಿಸುತ್ತಿದ್ದರು. ರಾಜಕುಮಾರಿಯಿಂದ ಪರಿಚಿತಳಾದ ಮೈಕೊ ಕಂಪನಿಯ ಚೇರ್ಮನ್ ಮಗಳ ಕಾರಿನ ಟೈರನ್ನು 'ಗ್ಯಾಸ್' ಹುಡುಗರು ಒಮ್ಮೆ ಪಂಕ್ಚರ್ ಮಾಡಿದರು. ಪಂಕ್ಚರ್ ತಿದ್ದಿಸಲು ನಾನು ಸಹಾಯ ಮಾಡಿದೆ.

ರಾಜಕುಮಾರಿ ಮತ್ತು ಆಕೆಯ ಗೆಳತಿಯರ ಗುಂಪು ಕ್ಯಾಂಟೀನ್‌ಗೆ ಹೋಗಬೇಕಾದಾಗಲೆಲ್ಲ ನನ್ನನ್ನು ಜೊತೆಗೆ ಕರೆದೊಯ್ಯತೊಡಗಿದರು; 'ಗ್ಯಾಸ್' ಹುಡುಗರ ಕಿಚಾಯಿಸುವಿಕೆಯಿಂದ ಪಾರಾಗಲು ನನ್ನನ್ನು ಷೀಲ್ಡ್ ಮಾಡಿಕೊಂಡಿದ್ದರು.

ನನಗೆ ನಾಲ್ಕು ಜೊತೆ ಡ್ರೆಸ್‌ಗಳಿದ್ದವು. ಬೈಸಿಕಲ್‌ನ ಚರ್ಮದ ಸೀಟ್ ಬಹಳ ಹಾರ್ಡ್ ಇದ್ದು ಕೂರುವ ಭಾಗದಲ್ಲಿ ಪ್ಯಾಂಟ್‌ಗಳು ಬೇಗ ಜೀರ್ಣಗೊಂಡುಬಿಡುತ್ತಿದ್ದವು. ಉಳಿದೆಡೆ ಗಟ್ಟಿಯಾಗಿದ್ದರೂ ಸೀಟ್ ಭಾಗದಲ್ಲಿ ಮಾತ್ರ ಜೀರ್ಣಗೊಂಡ ಪ್ಯಾಂಟ್‌ಗಳನ್ನು ಬಿಸಾಡುವಂಥ ಆರ್ಥಿಕ ಸ್ಥಿತಿ ನನ್ನದಾಗಿರಲಿಲ್ಲ ; ಆ ಭಾಗದಲ್ಲಿ ಡಾರ್ನಿಂಗ್ ಮಾಡಿಸಿಕೊಂಡು ಮತ್ತಷ್ಟು ತಿಂಗಳುಗಳವರೆಗೆ ತೊಡುತ್ತಿದ್ದೆ. ಸೀಟ್ ಮೇಲೆ ಕೂತು ಬೈಸಿಕಲ್ ನಡೆಸಿದರೆ ಪ್ಯಾಂಟ್ ಸವೆಯುತ್ತದೆಂದು ಸಾಧ್ಯವಾದ ಸಂದರ್ಭಗಳಲ್ಲೆಲ್ಲ ಸೀಟ್ ಮೇಲೆ ಕೂರದೆ ಬೈಸಿಕಲ್ ತುಳಿಯುತ್ತಿದ್ದೆ.

ದಿನಕ್ಕೊಂದು ಡ್ರೆಸ್ ಮಾಡಿಕೊಂಡು ಮೋಟಾರ್ ಬೈಕ್ ಮೇಲೆ ಷೋಕಿಯಿಂದ ಬರುತ್ತಿದ್ದ ಹುಡುಗರು "ಏನೊ ಹನುಮಂತ್ರಾಯ, ನಮ್ಮಲ್ಲಿ ಕಾಣದ್ದನ್ನು ನಿನ್ನಲ್ಲಿ ಅದೇನ್ ಕಂಡವ್ರೊ ಹುಡ್ಗೀರು?" ಎಂದು ಆಗಾಗ ನನಗೆ ಛೇಡಿಸುತ್ತಿದ್ದರು. ನಾನು ಆಗೆಲ್ಲ "ಕೀಟಲೆ ಮಾಡೋದನ್ನ ಬಿಡಿ ನಿಮ್ಗೂ ಮಾತಾಡಿಸ್ತಾರೆ" ಎನ್ನುತ್ತಿದ್ದೆ. ಅದಕ್ಕೆ ಅವರು ನಗುತ್ತಾ "ಅದನ್ನೇ ಬಿಟ್ಟಮೇಲೆ ಇನ್ಯಾತಕ್ಕೆ ಹುಡ್ಗೀರ್ನ ಮಾತಾಡಿಸಬೇಕೊ !?" ಎಂದು ಗೇಲಿ ಮಾಡುತ್ತಿದ್ದರು.

ಆರಂಭದಲ್ಲಿ ಅಷ್ಟಾಗಿ ಗಮನಿಸದ ಲಂಕೇಶ್ ನಾನೊಬ್ಬ ಗಂಭೀರ ವಿದ್ಯಾರ್ಥಿಯೆನ್ನುವುದನ್ನು ಬೇಗ ಗುರುತಿಸಿದರು. ಒಮ್ಮೆ ತಮ್ಮೊಡನೆ ನನ್ನನ್ನು ಡಿಪಾರ್ಟ್‌ಮೆಂಟ್‌ಗೆ ಕರೆದೊಯ್ದು ಲಂಕೇಶ್ "ಏನೊ ನಿನ್ನನ್ನ ಹೆಡ್ ಭರತ್‌ರಾಜ್ ಸಿಂಗ್ ಹಕ್ಲ್‌ಬೆರಿಫಿನ್ ಅಂತ ಕರೀತಾರೆ?' ಎಂದರು.

ಲಂಕೇಶ್ ಅವರಿಗೆ ವ್ಯಕ್ತಿತ್ವದ ಒಳಹೊಕ್ಕು ಗ್ರಹಿಸುವಂಥ ವಿಚಿತ್ರ ಶಕ್ತಿಯಿತ್ತು. ನಾವು ಹೊರಗೆ ಏನೇ ನಟಿಸಿದರೂ ಸತ್ಯವನ್ನು ಗುರುತಿಸಿಬಿಡುತ್ತಿದ್ದರು ! "ಹಕ್ಲ್‌ಬೆರಿಫಿನ್ ಅಂದ್ರೆ ಏನೂ ಅಂತ ನಿಂಗೆ ಅರ್ಥವಾಗಿಲ್ಲ ಹೌದಲ್ವೊ?" ಎಂದು ಪ್ರಶ್ನಿಸಿದರು. "ಹೌದು ಸಾರ್" ಎಂದೆ.

"ಹಳ್ಳಿಯಿಂದ ಓದಲು ಬರುವವರ ಕಷ್ಟಗಳೇ ವಿಚಿತ್ರ. ಒಳಗಿರುವ ಪ್ರತಿಭೆಯನ್ನು ರೂಪಿಸಿಕೊಳ್ಳುವ, ಅಭಿವ್ಯಕ್ತಿಸುವ ಚಾಣಾಕ್ಷತನ ಇರೋದಿಲ್ಲ. ಇಡೀ ಕ್ಲಾಸ್‌ನಲ್ಲಿ ನೀನೇ ಜ್ಞಾಣ. ಫ್ಯಾಶನ್ ಮಾಡಿಕೊಂಡು ಸ್ಟೈಲ್‌ಆಗಿ ಮಾತಾಡೊ ಆ ಹುಡ್ಗೀರ್‌ಗೆ ಮೂವತ್ತೈದು ಮಾರ್ಕ್ಸ್ ಸಿಗೋದು ಕಷ್ಟ ಪರೀಕ್ಷೇಲಿ !" ಎಂದರು ಸಿಗರೇಟ್ ಎಳೆಯುತ್ತಾ.

ಹಕ್ಲ್‌ಬೆರಿಫಿನ್ ಅರ್ಥವೇನು ಎಂದು ತಿಳಿದುಕೊಳ್ಳುವುದಕ್ಕಾಗಿ ನಾನು ಕಾತರಿಸುತ್ತಿದ್ದೇನೆನ್ನುವುದನ್ನು ಗುರುತಿಸಿದ ಲಂಕೇಶ್ "ಅಮೆರಿಕಾದ ಮಾಡರ್ನ್ ನಾವೆಲಿಸ್ಟ್ ಮಾರ್ಕ್‌ಟ್ವೇನ್ ಬರೆದ 'ಅಡ್ವೆಂಚರ್ಸ್ ಆಫ್ ಹಕ್ಲ್‌ಬೆರಿಫಿನ್' ನಲ್ಲಿ ಹಕ್ಲ್‌ಬೆರಿಯೇ ನಾಯಕ. ಮಿಸಿಸಿಪಿ ನದಿಯಲ್ಲಿ ಅವನು ಮಾಡಿದ ಸಾಹಸಗಳ ಕಾದಂಬರಿ ಅದು. ನೀನು ಹಳ್ಳಿಯ ಶಾಲೆಯಿಂದ ಸೆಂಟ್ರಲ್ ಕಾಲೇಜ್‌ವರೆಗೆ ಅದೂ ಇಂಗ್ಲಿಷ್ ಲಿಟರೇಚರ್ ಆನರ್ಸ್ ಓದಲು ಬಂದಿದ್ದೀಯಲ್ಲ. ಅದೊಂದು ದೊಡ್ಡ ಸಾಹಸ ಅನ್ನೋ ಅರ್ಥದಲ್ಲಿ ಹೇಳಿದಾನೆ ಆ ಹೆಡ್" ಎಂದರು.

ನನಗೆ ಅತೀವ ಸಂತೋಷವಾಯಿತು. ಲಂಕೇಶರು ಮತ್ತೊಂದು ಸಿಗರೇಟ್ ಹಚ್ಚಲೆಂದು ಪ್ಯಾಕ್ ತೆರೆದರು, ಖಾಲಿಯಾಗಿತ್ತು. ಬಿಸಾಡಿದರು. "ಸಿಗರೇಟ್ ತಂದುಕೊಡುತ್ತೇನೆ ಸರ್" ಎಂದೆ.

"ನೀನು ಹಳ್ಳೀ ಹುಡುಗ ಹೀಗೆನ್ನುತ್ತಿ. ಸಿಟಿ ಹುಡುಗ್ರು ಯಾರೂ ಹೀಗನ್ನೋಲ್ಲ" ಎಂದು ದುಡ್ಡು ಕೊಟ್ಟರು. ಸಿಗರೇಟ್ ತಂದುಕೊಟ್ಟ ಮೇಲೆ ಪುನಃ ಶುರು ಮಾಡಿದರು: "ನೀನು ಕ್ಲಾಸ್‌ನಲ್ಲಿ ಕೇಳಿದ್ದಕ್ಕೆಲ್ಲ ಸರಿಯಾಗಿ ಉತ್ತರಿಸ್ತೀಯಾ. ಅದಷ್ಟೇ ಆದ್ರೆ ಸಾಲ್ದು. ಆನರ್ಸ್ ಎಂದರೆ ಗಿಳಿಪಾಠವಲ್ಲ; ವಿಷಯವನ್ನು ಕರತಲಾಮಲಕ ಮಾಡಿಕೊಳ್ಳಬೇಕು ! ನಾನೂ ಹಳ್ಳಿಯಿಂದ ಬಂದಿದ್ದರಿಂದ ನಿನ್ನ ಕಷ್ಟಗಳು ಏನೂ ಅಂತ ಅರ್ಥವಾಗ್ತವೆ...." ಎಂದು ಹೇಳಿದರು.

ಲಂಕೇಶ್ ನನ್ನನ್ನು ಬಹಳ ಹಚ್ಚಿಕೊಂಡುಬಿಟ್ಟರು. ರೆಫರ್ ಮಾಡಬೇಕಾದ ಪುಸ್ತಕಗಳನ್ನು ಸೂಚಿಸಿ ನನ್ನ ಬೆಳವಣಿಗೆಯನ್ನು ವೈಯುಕ್ತಿಕವಾಗಿ ಗಮನಿಸಿಕೊಳ್ಳತೊಡಗಿದರು. ಒಂದು ದಿನ "ಹನುಮಂತ್ರಾಯ ನೀನು ಒಂದು ಜೊತೆ ಷೂಸ್ ಖರೀದಿಸು. ಒಳ್ಳೆ ಟೇಲರ್ ಬಳಿ ಡ್ರೆಸ್ ಹೊಲಿಸಿಕೊ. ನಮ್ಮ ಹಿಂದುಳಿದಿರುವಿಕೆಯ ಬಗ್ಗೆ ರೊಮ್ಯಾಂಟಿಕ್ ಆಗಬಾರದು....." ಎಂದರು.

ಲಂಕೇಶ್ ವಿಶೇಷ ಶಿಫಾರಸನ್ನು ಪ್ರಿನ್ಸಿಪಾಲ್ ಷಡಕ್ಷರಸ್ವಾಮಿಯವರೊಂದಿಗೆ ಮಾಡಿ ನನಗೆ ಎರಡು ಸ್ಕಾಲರ್‌ಷಿಪ್‌ಗಳನ್ನು ಕೊಡಿಸಿದರು. ಮಿಡ್ಲ್‌ಸ್ಕೂಲ್‌ನಲ್ಲಿ

ಶಿಕ್ಷಕರಾಗಿದ್ದ ನಾರಾಯಣರಾವ್ ಮಾಸ್ತರರು ಲಂಕೇಶರಲ್ಲಿ ಕಾಣತೊಡಗಿದರು.

ಒಮ್ಮೆ ಲಂಕೇಶ್ ನನ್ನನ್ನು ಡಿಪಾರ್ಟ್‌ಮೆಂಟ್‌ಗೆ ಕರೆದುಕೊಂಡುಹೋದರು. ಆವಾಗಾಗಲೇ ಲಂಕೇಶ್ ಮತ್ತು ನನ್ನ ನಿಕಟ ಸಂಬಂಧ ಇಡೀ ಡಿಪಾರ್ಟ್‌ಮೆಂಟ್‌ಗೆ ಗೊತ್ತಾಗಿತ್ತು. ಪ್ರೊ. ಮಿಸೆಸ್ ಮುಲಿಲ್ ನನ್ನ ಓದಿನ ಬಗ್ಗೆ ವೈಯಕ್ತಿಕವಾಗಿ ಕೇರ್ ತೆಗೆದುಕೊಳ್ಳುತ್ತಿದ್ದರೂ ಲಂಕೇಶ್‌ರೊಂದಿಗಿನಷ್ಟು ಆಪ್ತತೆ ಬೆಳೆದಿರಲಿಲ್ಲ.

ಲಂಕೇಶ್ ಇತರ ಪ್ರೊಫೆಸರ್‌ಗಳೊಂದಿಗೆ ಹರಟುವಾಗಲೂ ನನ್ನನ್ನು ಪಕ್ಕದಲ್ಲಿ ಕೂರಿಸಿಕೊಳ್ಳತೊಡಗಿದರು. ಇದರಿಂದಾಗಿ ಪ್ರಬುದ್ಧ ಮನಸ್ಸುಗಳ ಚಿಂತನ, ಮಂಥನಗಳನ್ನು ಕೇಳುವ ಅವಕಾಶ ನನ್ನದಾಯಿತು. ಒಮ್ಮೆ 'ತಜ್ಞ' ಅಂತ ಯಾರಿಗನ್ನಬೇಕು ಎನ್ನುವ ಚರ್ಚೆ ಶುರುವಾಯಿತು. ಉಳಿದವರೆಲ್ಲ ವಿಷಯದಲ್ಲಿ ಪರಿಣತಿ ಪಡೆದವನು, ಸಂಶೋಧಕ ಹೀಗೆ ಇತ್ಯಾದಿ ಹೇಳಿದರು. ಕೊನೆಗೆ ಲಂಕೇಶ್ "ಯಾವನು ಒಂದು ವಿಷಯದಲ್ಲಿ ಹೆಚ್ಚು ತಪ್ಪುಗಳನ್ನು ಮಾಡುವನೋ ಅಂಥವನು ತಜ್ಞನಾಗುತ್ತಾನೆ !" ಎಂದಾಗ ಎಲ್ಲರೂ ಘೊಳ್ಳೆಂದು ನಕ್ಕರು.

ಒಂದು ದಿನ ಡಿಪಾರ್ಟ್‌ಮೆಂಟ್‌ನಲ್ಲಿ ಲಂಕೇಶ್ ಮತ್ತು ನಾನು ತಿಂಡಿ ತಿನ್ನುತ್ತ ಕೂತಿದ್ದೆವು. "ಅಲ್ಲಯ್ಯ ನಮ್ಮ ಪ್ಯೂನ್ ಹನುಮಯ್ಯನ ಮೈಯೆಲ್ಲ ಹಣ್ಣಾಗಿ ಹೋಗಿದೆ. ಎಪ್ಪತ್ತೈದು ವರ್ಷಗಳಾದ್ರೂ ಆಗಿರಬಹುದು ಅವನಿಗೆ. ಕನಿಷ್ಟ ಇಪ್ಪತ್ತು ವರ್ಷವಾದರೂ ಕಮ್ಮಿ ಹೇಳಿ ಕೆಲಸಕ್ಕೆ ಸೇರಿಕೊಂಡಿರಬೇಕು. ಅವನಿಗೆ ಏನು ಕೆಲಸ ಹೇಳಲೂ ಮನಸ್ಸಾಗೋದಿಲ್ಲ" ಎನ್ನುತ್ತಿದ್ದಂತೆಯೇ ನಾನು "ಸಿಗರೇಟ್ ಬೇಕಾ ಸಾರ್. ಇದೀಗ ತಂದೆ" ಎಂದು ಎದ್ದುನಿಂತೆ. "ಅದಕ್ಕಲ್ಲ ಹೇಳಿದ್ದು ಕೂಡು, ಮೊದ್ಲು ತಿಂಡಿ ತಿನ್ನು" ಎಂದರು.

ಅದೇ ವೇಳೆಗೆ ನಮ್ಮ ಡಿಪಾರ್ಟ್‌ಮೆಂಟ್ ಹೆಡ್ ಭರತ್‌ರಾಜ್‌ಸಿಂಗ್ ಒಳಗೆ ಪ್ರವೇಶಿಸಿದರು. ಎಲ್ಲರಿಗೂ ಕೇಳುವಂತೆ : "ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ರಾಮಾಯಣವೇ ಉಲ್ಟಾಪಲ್ಟಾ ಆಗಿದೆಯಲ್ಲ ಇವತ್ತು !" ಎಂದರು. ಪ್ರೊಫೆಸರ್‌ಗಳೆಲ್ಲ ಅವರೆಡೆ ಆಶ್ಚರ್ಯದಿಂದ ನೋಡತೊಡಗಿದರು. ಮತ್ತಷ್ಟು ಕುತೂಹಲ ಕೆರಳಿಸುವಂತೆ ಕ್ಷಣ ಸುಮ್ಮನಿದ್ದು "ಅಗೋ ನೋಡಿ ಲಂಕೆ ಸುಟ್ಟ ಹನುಮಂತನೊಂದಿಗೆ ರಾವಣ ಟಿಫನ್ ಮಾಡುತ್ತಿದ್ದಾನೆ.... !" ಎಂದಾಗ ಡಿಪಾರ್ಟ್‌ಮೆಂಟ್ ನಗೆಗಡಲಲ್ಲಿ ಮುಳುಗಿತು. ಎಲ್ಲರೂ "ಎಂಥ ಅದ್ಭುತ ಜೋಕ್ ಹೊಳೆದಿದೆ ನಿಮಗೆ!" ಎಂದರು.

ಆದರೆ ಲಂಕೇಶ್ "ಅಲ್ಲಯ್ಯ, ನಾನು ನೀನು ಐದು ತಿಂಗಳಿಂದ ಹೀಗೆ ಕೂರ್ತಾ ಇದ್ದೇವೆ. ಅದೆಷ್ಟು ಲೇಟ್‌ಆಗಿ ಈ ಜೋಕ್ ಹೊಳೆದಿದೆ ನೋಡು ನಮ್ಮ

ಹೆಡ್‌ಗೆ!" ಎಂದಾಗ ಲಂಕೇಶರ ವಿಲಕ್ಷಣ ಯೋಚನಾಧಾಟಿಗೆ ಬೆರಗಾಗಿ ನಿಂತೆ.

"ಇಂದು ಸಂಜೆ 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕ ಇದೆ. ನಿನಗೆ ಆಕ್ಟಿಂಗ್ ಬರಲ್ಲ. ಕೊನೆಗೆ ನೋಡೋಕ್ಕಾದ್ರೂ ಬಾ" ಎಂದರು.

ಸಂಜೆ ರವೀಂದ್ರ ಕಲಾಕ್ಷೇತ್ರಕ್ಕೆ ಹೋದೆ. ಲಂಕೇಶ್ ತಮ್ಮ ಪತ್ನಿ ಇಂದಿರಾ ಅವರಿಗೆ "ಇವ್ನು ಹಳ್ಳಿಯಿಂದ ಬಂದು ನಮ್ಮ ಕಾಲೇಜ್‌ನಲ್ಲಿ ಆನರ್ಸ್ ಮಾಡ್ತಾ ಇದ್ದಾನೆ. ನನಗೆ ಬಾಳ ಪೆಟ್" ಎದು ಪರಿಚಯಿಸಿದರು.

ತಮ್ಮ ಐದುತಿಂಗಳ ಕೂಸನ್ನು ಎತ್ತಿಕೊಂಡು ಬಂದಿದ್ದರು ಇಂದಿರಾ. ಅವರ ಕೈಯಿಂದ ಮಗುವನ್ನು ಇಸಿದುಕೊಂಡು ಎತ್ತಿಕೊಂಡೆ. 'ಸರ್ ಹೆಸರೇನು?" ಎಂದೆ.

"ಕವಿತಾ" ಎಂದರು ಇಂದಿರಾ.

23

ಕೇಡಿತನಕ್ಕೆ ದೀರ್ಘಾಯಸ್ಸು !

ಬೆಂಗಳೂರು ನಗರರಾಕ್ಷಸ ನನ್ನ ವ್ಯಕ್ತಿತ್ವದ ಮೇಲೆ ನಡೆಸುತ್ತಿದ್ದ ದಾಳಿ ದಬ್ಬಾಳಿಕೆ ವಿರುದ್ಧವಾಗಿ ನನ್ನೊಳಗೆ ಬಂಡಾಯ ಪ್ರವೃತ್ತಿ ಪುಟಿದೇಳತೊಡಗಿತ್ತು. ನನ್ನ ಅಸ್ತಿತ್ವ, ಇರುವಿಕೆ, ಬದುಕುಗಳನ್ನು ನಗರವು ಅಣಕಿಸುತ್ತಿತ್ತು; ಕೀಳರಿಮೆಗೆ ಗುರಿ ಮಾಡುತ್ತಿತ್ತು. ಯಾವುದೇ ಅನ್ಯಾಯದ ವಿರುದ್ಧ ಸಿಡಿದೇಳುವ ಮನಸ್ಸು ರೂಪುಗೊಳ್ಳತೊಡಗಿತ್ತು ನನ್ನಲ್ಲಿ.

ಲಂಕೇಶರೊಂದಿಗೆ ನನ್ನದು ಗುರು-ಶಿಷ್ಯ ಸಂಬಂಧವಾಗಿ ಮಾತ್ರ ಉಳಿದಿರಲಿಲ್ಲ. ನನ್ನ ಬಗೆಗೆ ಲಂಕೇಶರು ಅತಿಯಾದ ಆತ್ಮೀಯಭಾವವನ್ನು ಬೆಳೆಸಿಕೊಂಡುಬಿಟ್ಟರು. ಅವರು ತೋರಿದ ಆತ್ಮೀಯತೆ ನನ್ನನ್ನು ಪಾಶವಾಗಿ ಬಿಗಿಯತೊಡಗಿತು; ಲಂಕೇಶರು ನನ್ನ ಬಗೆಗೆ ಇರಿಸಿಕೊಂಡಿರುವ ನಿರೀಕ್ಷೆಗಳನ್ನು ಹುಸಿಗೊಳಿಸಬಾರದೆಂದುಕೊಳ್ಳತೊಡಗಿದೆ.

ಆನರ್ಸ್ ಎರಡನೇ ವರ್ಷದಲ್ಲಿ ಓದುತ್ತಿದ್ದೆ. ತಮಿಳುನಾಡಿನಲ್ಲಿ ಆರಂಭವಾದ ಹಿಂದಿ ವಿರೋಧಿ ಚಳವಳಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ವ್ಯಾಪಿಸಿಕೊಂಡಿತು.

'ಏಕದೇಶ-ಏಕಭಾಷೆ' ಸೂತ್ರ ಮೊರಾರ್ಜಿಯ ಘೋಷಣೆಯಾಗಿತ್ತು. ಎಲ್ಲರೂ ಒಂದೇ ಭಾಷೆ ಆಡಿದರೆ ದೇಶದ ಸಮಗ್ರತೆ ಕಾಯ್ದುಕೊಳ್ಳಬಹುದೆನ್ನುವ ಕೇಂದ್ರ ಸರ್ಕಾರದ ಧೋರಣೆಯ ವಿರುದ್ಧ ದಕ್ಷಿಣದ ದ್ರಾವಿಡ ಭಾಷಾರಾಜ್ಯಗಳು ಸಿಡಿದೆದ್ದವು.

ಪಿ. ಕೋದಂಡರಾವ್ ಅವರು ಕನ್ನಡತ್ವದ ಬಗ್ಗೆ ಮಾಡಿದ ಭಾಷಣ ನನ್ನಲ್ಲಿ ರೋಮಾಂಚನವುಂಟುಮಾಡಿತು. ನಗರಕ್ಕೆ ಬಂದು ನಾನು ಅನುಭವಿಸಿದ ವಿಚಿತ್ರ ಅವಮಾನಗಳು ಬಂಡಾಯದ ರೂಪು ಪಡೆದುಕೊಂಡು ಹೊರಹೊಮ್ಮತೊಡಗಿದವು. ಕನ್ನಡ, ಕನ್ನಡತ್ವಗಳನ್ನು ಮರೆತು ಹಿಂದಿಯನ್ನು ಅಪ್ಪಿಕೊಳ್ಳುವುದು ಒಂದು ರೀತಿಯಲ್ಲಿ ಹಳ್ಳಿಯ ಕರುಳಿನ ಸಂಬಂಧಗಳನ್ನು ಕತ್ತರಿಸಿಕೊಂಡು ನಗರದ ನಿರ್ಜೀವ ಪ್ಲಾಸ್ಟಿಕ್ ಸಂಬಂಧಗಳ ಬೆನ್ನು ಹತ್ತಿದಂತೆಯೇ ಎಂದೆನಿಸಿತು. ಆಗ ಅನಿಸಿತು, ಇಂಗ್ಲಿಷ್ ಏಕೆ ಕಲಿಯುತ್ತಿರುವೆ ಎಂದು! ನನ್ನೊಳಗಿನ ತರ್ಕ ಉತ್ತರಿಸಿತು: ಪ್ರೇಮದಿಂದ ಅಲ್ಲ ಜಿದ್ದಿನಿಂದ ಎಂದು! ನನ್ನದಲ್ಲದ ಭಾಷೆಯೊಂದು ನನ್ನ ವ್ಯಕ್ತಿತ್ವದ ಬೆಲೆ ಕಟ್ಟುತ್ತಿದೆಯಲ್ಲ ಎಂದು ದಿಗ್ಭ್ರಮಿಸಿದೆ. ಇಷ್ಟೊಂದು ಪರಿಶ್ರಮದಿಂದ ಕಲಿಯುತ್ತಿರುವ ಇಂಗ್ಲಿಷ್ ಮೇಲೆ ನನ್ನ ಆಳದಲ್ಲಿ ಅದೆಷ್ಟು ಸಿಟ್ಟು ಕುದಿಯುತ್ತಿದೆಯಲ್ಲವೆ ಎನಿಸಿ ವಿಸ್ಮಯಗೊಂಡೆ.

ಪಿ. ಕೋದಂಡರಾವ್ ಗಾಂಧೀಜಿಯವರ ಅನುಯಾಯಿ. ಮೂವತ್ತು ವರ್ಷಗಳವರೆಗೆ ಗಾಂಧಿಯ ಒಡನಾಟದಲ್ಲಿದ್ದವರು. ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದಾಗ ಸತ್ಯಾಗ್ರಹ ನಡೆಸಿದವರು. ಅಮೆರಿಕದ ಯುವತಿಯೊಂದಿಗೆ ಮದುವೆಯಾಗಿದ್ದರು ಕೋದಂಡರಾವ್. ಕೊನೆಗೆ ಬೆಂಗಳೂರಲ್ಲಿ ನೆಲೆಗೊಂಡಿದ್ದ ಕೋದಂಡರಾವ್ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ 'ಬಬ್ಲ್ಸ್ ಆಫ್ ಮೆಮೊರಿ' ಎನ್ನುವ ಜನಪ್ರಿಯ ಅಂಕಣ ಬರೆಯುತ್ತಿದ್ದರು. ಹಿಂದಿ ಹೇರಿಕೆಯ ವಿರುದ್ಧದ ಚಳವಳಿಗೆ ಕೋದಂಡರಾವ್ ನೇತೃತ್ವ ವಿಶೇಷ ನೈತಿಕ ಸ್ಥೈರ್ಯವನ್ನು ತಂದುಕೊಟ್ಟಿತು.

ನಮ್ಮ ಕಾಲೇಜ್‌ನಿಂದ ನಾನು ಮತ್ತು ಸಹಪಾಠಿ ಕದಮ್ ಮಾತ್ರ ಚಳವಳಿಯಲ್ಲಿ ಭಾಗವಹಿಸಿದೆವು. ಸರ್ಕಾರಿ ಕಾಲೇಜ್‌ನಿಂದ ಬಹಳಷ್ಟು ಹುಡುಗರು ಚಳವಳಿಗೆ ಧುಮುಕಿದರು. ಕೋದಂಡರಾವ್ ಅವರು ನನ್ನ ಉತ್ಸಾಹ ನೋಡಿ ಸರ್ಕಾರಿ ಕಾಲೇಜ್ ಹುಡುಗರನ್ನು ಚಳವಳಿಗೆ ಕರೆತರುವ ಜವಾಬ್ದಾರಿಯನ್ನು ನನಗೇ ವಹಿಸಿದರು. ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಹೈಕಮಾಂಡ್ ಕೇಂದ್ರದ ವಿರುದ್ಧ ಧ್ವನಿಯೆತ್ತುವ ತಾಕತ್ತಿರಲಿಲ್ಲ. ಚಳವಳಿಗೆ ಬೆಂಬಲವನ್ನು ನೀಡದಿರುವುದು ಮಾತ್ರವಲ್ಲ ಸದೆಬಡಿಯತೊಡಗಿತು. ಗೋಡೆಬರಹ ಮಾಡಲು ಹೋದ ನನ್ನ ಬೆನ್ನಿಗೆ ಪೋಲೀಸ್ ಬೆತ್ತ ರುಚಿ ತೋರಿಸಿತು. ಚಿಕ್ಕಂದಿನಿಂದ ಪೋಲೀಸ್

ಬಗೆಗೆ ಇದ್ದ ನನ್ನ ಭಯವು ಆಕ್ರೋಶವಾಗಿ ಸ್ಫೋಟಿಸಿತು ಹುಡುಗರ ಜಂಗುಳಿಯ ಬಲದಿಂದ. ನಾವು ಹತ್ತು ಹನ್ನೆರಡು ಹುಡುಗರಿದ್ದೆವು. ಪೊಲೀಸ್ ಕೈಯೊಳಗಿನ ಬೆತ್ತವನ್ನು ಕಸಿದುಕೊಂಡೆವು. ಏನು ಸುದ್ದಿ ಎಂದು ಹುಬ್ಬೇರಿಸಿದೆವು! ಚಳವಳಿಯ ಬಗೆಗೆ ನಮಗಿದ್ದ ಬದ್ಧತೆ, ಪ್ರಾಮಾಣಿಕತೆಗಳು ನಮಗೆ ಅಂಥ ಮನೋಬಲವನ್ನು ತಂದುಕೊಟ್ಟಿದ್ದವು.

ಕೋದಂಡರಾವ್ ಭಾಷಣ ಮಾಡುತ್ತ "ಬ್ರಿಟಿಷರು ನಮ್ಮ ದೇಶವನ್ನು ಇಂಗ್ಲಿಷ್‌ಮಯಗೊಳಿಸಿಬಿಟ್ಟರೆ ತಮ್ಮ ವಿರುದ್ಧ ಧ್ವನಿಯೆತ್ತುವವರಿರುವುದಿಲ್ಲ ಎಂದು ಭ್ರಮಿಸಿಕೊಂಡಿದ್ದರು. ಅದೇ ರೀತಿ ಈಗ ಕೇಂದ್ರ ಸರ್ಕಾರ ದೇಶವನ್ನು ಹಿಂದಿಮಯಗೊಳಿಸ ಹೊರಟಿದೆ...." ಎಂದು ಹೇಳಿದ ಮಾತುಗಳು ನನ್ನ ಕಿವಿಗಳಲ್ಲಿ ಅನುರಣನಗೊಳ್ಳತೊಡಗಿದವು.

ಚಳವಳಿಗಾಗಿ ಕಾಲೇಜನ್ನೇ ತೊರೆದೆ. ಚಳವಳಿ ಆರಂಭಗೊಂಡ ಹದಿನೈದು ದಿವಸಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹೋರಾಟದ ತಾಲೀಮು ಮನೆಯಾಗಿ ಮಾರ್ಪಟ್ಟಿತು. ವಿದ್ಯಾರ್ಥಿಗಳು ಸಹಸ್ರ ಸಂಖ್ಯೆಯಲ್ಲಿ ಬರತೊಡಗಿದರು. ಚರ್ಚಾಸ್ಪರ್ಧೆಗೆ ಮಾತ್ರ ಸೀಮಿತಗೊಂಡಿದ್ದ ನನ್ನ ಭಾಷಣ ಪ್ರತಿಭೆಗೆ ಹೊಸ ತಿರುವು ಸಿಕ್ಕಿತು. ನನ್ನ ಭಾಷಣಕ್ಕೆ ವಿದ್ಯಾರ್ಥಿಗಳು ಭಾವಪರವಶರಾಗಿ ಹೋರಾಟಕ್ಕೆ ಸಿದ್ಧರಾಗತೊಡಗಿದರು. ಸಂಘಟನಾಶಕ್ತಿ ನನ್ನಲ್ಲಿ ಕುಡಿಯೊಡೆಯತೊಡಗಿತು. ಬೆಂಗಳೂರಿನ ಕಾಲೇಜ್‌ಗಳಿಗೆಲ್ಲ ಹೋಗಿ ಭಾಷಣ ಮಾಡಿ ವಿದ್ಯಾರ್ಥಿಗಳನ್ನು ಹುರುಪುಗೊಳಿಸತೊಡಗಿದೆ. ಚಳವಳಿಯಲ್ಲಿ ಎಲ್ಲಾ ತರಹದ ಯುವಕರೂ ಬಂದು ಹೋರಾಟದಲ್ಲಿ ಪಾಲ್ಗೊಳ್ಳತೊಡಗಿದರು. ಬೆಳೆಯುತ್ತಿದ್ದ ಹಿಂದಿ ವಿರೋಧಿ ಹೋರಾಟವನ್ನು ಗುಂಡೂರಾವ್, ಎಫ್.ಎಂ. ಖಾನ್ ಥರದವರು ತಮ್ಮ ಮುಖಂಡತ್ವ ಬೆಳೆಸಿಕೊಳ್ಳಲು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆನ್ನುವ ಚರ್ಚೆ ಆಗತೊಡಗಿತು. ಆಗ ನನಗೆ ಅದರ ತಲೆಬುಡ ಅರ್ಥವಾಗುತ್ತಿರಲಿಲ್ಲ. ಯಾರು ಏನೇ ಮಾಡಿಕೊಳ್ಳಲಿ ನಮ್ಮ ಹೋರಾಟಕ್ಕೆ ಜಯ ದೊರೆಯಬೇಕು ಎನ್ನುವುದೊಂದೇ ಧ್ಯೇಯ, ಛಲ.

ಉಪಪ್ರಧಾನಿ ಮೊರಾರ್ಜಿಯವರು ಬೆಂಗಳೂರಿನ ಕಪಾಲಿ ಥೇಟರ್ ಅನ್ನು ಉದ್ಘಾಟಿಸಲು ಬರುವ ಸುದ್ದಿ ತಿಳಿದ ನಾವು ಪ್ರತಿಭಟನೆಗೆ ಸಕಲ ಸಿದ್ಧತೆ ನಡೆಸಿದೆವು. ಆಗ ಗರುಡಾಚಾರ್ ಡಿಸಿಪಿ (ಲಾ ಅಂಡ್ ಆರ್ಡರ್) ಆಗಿದ್ದರು. ರಾತ್ರೋರಾತ್ರಿ ಮೊರಾರ್ಜಿಯವರಿಗೆ ಧಿಕ್ಕಾರ ಎಂದು ವಾಲ್‌ರೈಟಿಂಗ್ ಮಾಡಿದೆವು, ಪೋಸ್ಟರ್ ಅಂಟಿಸಿದೆವು. ಮಾರನೆ ದಿನ ಸಂಜೆ ವಿಮಾನ ನಿಲ್ದಾಣದಲ್ಲಿಳಿದ

ಮೊರಾರ್ಜಿಯವರಿಗೆ ಪೋಲಿಸರು ನಮ್ಮ ಪ್ರತಿಭಟನೆಯ ಬಗ್ಗೆ ಮಾಹಿತಿ ನೀಡಿದರು. ಅದನ್ನು ಕೇಳಿ ಕೋಪಗೊಂಡ ಮೊರಾರ್ಜಿಯವರು "ಬೆಂಗಳೂರು ವಿದ್ಯಾರ್ಥಿಗಳು ಗೂಂಡಾಗಳು !" ಎಂದು ಪತ್ರಿಕಾ ಹೇಳಿಕೆ ನೀಡಿದರು.

ಮಾರನೇ ದಿನ ಬೆಳಗ್ಗೆ ಪತ್ರಿಕೆಗಳಲ್ಲಿ ಮೊರಾರ್ಜಿಯವರ ಹೇಳಿಕೆ ದೊಡ್ಡದಾಗಿ ಅಚ್ಚಾಗಿತ್ತು. ಹೋರಾಟ ನಿರತ ಹುಡುಗರೆಲ್ಲ ಅದನ್ನೋದಿ ಕೆರಳಿದರು. ಸ್ವಯಂ ಪ್ರೇರಣೆಯಿಂದ ವಿದ್ಯಾರ್ಥಿಗಳು ಜಮಾಯಿಸತೊಡಗಿದರು. ನಾವು ವಿದ್ಯಾರ್ಥಿಗಳೆಲ್ಲ ಒಟ್ಟುಗೂಡಿಕೊಂಡು ಹೋಗಿ ಮೊರಾರ್ಜಿ ಉದ್ಘಾಟಿಸಬೇಕಿದ್ದ ಕಪಾಲಿ ಥೇಟರ್‌ನ ಗಾಜು ಒಡೆದು ಕಪ್ಪು ಬಾವುಟ ಹಾರಿಸಿಕೊಂಡು ನಿಂತೆವು.

ಮೊರಾರ್ಜಿ ಉದ್ಘಾಟನೆಗೆ ಬರಲಿಲ್ಲ. ಮೈಸೂರಿಗೆ ಹೊರಟುಹೋದರು. ವಿದ್ಯಾರ್ಥಿಗಳಿಗೆ ಮುಖಂಡತ್ವ ಕೊಟ್ಟ ಹುಡುಗರನ್ನು ಆಯ್ದು ಪೋಲೀಸರು ಬಂಧಿಸಿದರು. ಅದರಲ್ಲಿ ನಾನೂ ಇದ್ದೆ. ಕೋರ್ಟ್‌ಗೆ ಹಾಜರುಪಡಿಸಿ ನಮ್ಮನ್ನು ಸೆಂಟ್ರಲ್ ಜೈಲಿಗೆ ಕಳಿಸಿದರು. ವಿಜಯೋತ್ಸಾಹದೊಂದಿಗೆ ಜೈಲು ಸೇರಿದ ದುಗುಡ ಸೇರಿಕೊಂಡು ನನ್ನ ಮನಸ್ಸು ಕಲಸುಮೇಲೋಗರದಂತಾಯಿತು. ನನ್ನೊಂದಿಗಿದ್ದ ಬಹಳಷ್ಟು ಹುಡುಗರನ್ನು ಅವರ ಪಾಲಕರು ಬಂದು ಜಾಮೀನು ಕೊಟ್ಟು ಬಿಡಿಸಿಕೊಂಡು ಹೋದರು.

ಮೊದಲು ಬಂದು ಜೈಲಲ್ಲಿ ನನ್ನನ್ನು ಭೇಟಿ ಮಾಡಿದ ರಾಜಶೇಖರ ಕಾಲೇಜ್‌ನಲ್ಲಿ ಹೋಗಿ ನನ್ನ ಬಂಧನದ ಸುದ್ದಿ ಹಬ್ಬಿಸಿದ. ಲಂಕೇಶ್ ಜೈಲಿಗೆ ಬಂದು 'ನೀನೇನೂ ಹೆದರಬೇಡ ನಾನಿದ್ದೇನೆ' ಎಂದು ಹೇಳಿಹೋದರು. ಹೊರಗೆ ಹೋರಾಟ ಮಾಡುವಾಗ ಇದ್ದ ಧೈರ್ಯ ಜೈಲೊಳಗೆ ಇರಲಿಲ್ಲ. ಸಹಚರರು ಚೆಲ್ಲಾಪಿಲ್ಲಿಗೊಂಡು ಏಕಾಂಗಿತನದ ಭಯ ಕಾಡಲು ಶುರುವಿಟ್ಟುಕೊಂಡಿತು. ನಮ್ಮ ವರ್ತನೆ, ಚಟುವಟಿಕೆಗಳು ಇಷ್ಟು ಅತಿಯಾಗಬಾರದಿತ್ತೇನೋ ಎನಿಸಿತು. ಚಂದ್ರಶೇಖರ್ ಆಝಾದ್, ಭಗತ್‌ಸಿಂಗ್‌ರನ್ನು ಕಣ್ಮುಂದೆ ತಂದುಕೊಂಡೆ. ಆದರೂ ಸಮಾಧಾನ ಆಗಲಿಲ್ಲ.

"ಯಾರೊ ಹೆಣ್ಣುಮಕ್ಕಳು ನಿನ್ನನ್ನು ನೋಡೋಕೆ ಬಂದವ್ರೆ" ಎಂದಾಗ ಎದೆ ಧಸಕ್ಕೆಂದಿತು. ನಮ್ಮ ಮನೆಯವರಿಗೆ ಗೊತ್ತಾಗಿಬಿಟ್ಟಿದೆಯೇನೊ ಎಂದು ದಿಗಿಲುಗೊಂಡೇ ಗೇಟ್ ಬಳಿ ಬಂದೆ. ಬೆನೆಡಿಕ್ಟ್ ರಾಜಕುಮಾರಿ ಮತ್ತು ರಾಜಶೇಖರ ನಿಂತಿದ್ದರು! ಮನಕ್ಕೆ ಕವಿದಿದ್ದ ಮಂಕು ಚದುರಿ ಹೋಯಿತು. "ಲಂಕೇಶ್ ಮೇಷ್ಟ್ರು ನಿನಗೆ ಜಾಮೀನಿನ ವ್ಯವಸ್ಥೆ ಮಾಡಿಸಿದ್ದಾರೆ" ಎಂದ ರಾಜಶೇಖರ. "ಎರಡೂವರೆ ತಿಂಗಳಾದವು ನೀನು ಕಾಲೇಜ್‌ಗೆ ಬಾರದೆ!" ಎಂದಳು ಬೆನೆಡಿಕ್ಟ್.

ಜೈಲಲ್ಲಿ ಮೂರೇ ದಿನಗಳಿದ್ದರೂ ಕುಂದಿಹೋಗಿದ್ದೆ, ಆತಂಕ, ಭಯ, ಉದ್ವೇಗಗಳಿಂದ.

ಕಾಲೇಜ್‌ಗೆ ಹೋದಾಗ ಸಹಪಾಠಿ ಹುಡುಗಿಯರು ನನ್ನನ್ನು ಅನುಕಂಪದಿಂದ ನೋಡತೊಡಗಿದ್ದು ಕಸಿವಿಸಿ ತರಿಸಿತು. ಮೇಲ್ವರ್ಗದಿಂದ ಬಂದ ಆ ವಿದ್ಯಾರ್ಥಿನಿಯರು ಹಿಂದಿ ವಿರೋಧಿ ಚಳವಳಿ ಒಳ್ಳೆಯ, ಸುಸಂಸ್ಕೃತ ಹುಡುಗರು ಮಾಡುವಂಥದಲ್ಲ ಎಂದರು. ನನಗೆ ಅವರ ಮೇಲೆ ಕೋಪವುಕ್ಕಿತು. ನನ್ನ ಮುಖ ಕೆಂಪಗಾದುದನ್ನು ನೋಡಿ ಬೆನೆಡಿಕ್ಟ್ "ನೀನೇ ನೋಡು ಈಗ ನಿನಗೆ ಅಟೆಂಡನ್ಸ್ ಇಲ್ಲವೆಂದು ಪರೀಕ್ಷೆಗೆ ಅಲೋ ಮಾಡ್ತಾಯಿಲ್ಲ" ಎಂದಳು ಆಕ್ಷೇಪಣೆಯ ಧ್ವನಿಯಲ್ಲಿ. ನನಗೆ ಎದೆಗುದಿ ಶುರುವಾಯಿತು. ಲಂಕೇಶರ ಬಳಿಗೋಡಿದೆ.

"ಅದು ಹೇಗೆ ಪರೀಕ್ಷೆಗೆ ಕೂರಿಸೊಲ್ಲ. ಪ್ರಿನ್ಸಿಪಾಲ್ ಬಳಿ ನಾನು ಮಾತಾಡ್ತೇನೆ ನಡೆ" ಎಂದಾಗ ಗುರು ಎಂದರೆ ಲಂಕೇಶ್ ಇದ್ದಂತಿರಬೇಕು ಎಂದುಕೊಂಡೆ. ಅವರಿಗೆ ಹಿತ ಎನಿಸುವಂತೆ ಏನನ್ನಾದರೂ ನನ್ನ ಸೇವೆ ಸಲ್ಲಿಸಬೇಕೆಂಬ ಭಾವ ಮೂಡಿತು.

ಪ್ರಿನ್ಸಿಪಾಲ್ ಷಡಕ್ಷರಪ್ಪ "ಇಂಥ ತಲೆಹರಟೆ ಹುಡುಗರಿಗೆ ಶಿಫಾರಸ್ಸು ಮಾಡೋಕೇ ಬರ್ತೀರಲ್ರೀ?" ಎಂದಾಗ ಲಂಕೇಶರಿಗೆ ಕೋಪವುಕ್ಕಿ ಬಂದಿತು.

"ಅಲ್ರೀ ನಾವೆಲ್ಲ ಸ್ಟೈನ್‌ಲೆಸ್ ಕ್ರೀಚರ್ಸ್ ಥರ ಕೂತಿದ್ದಾಗ ನಮ್ಮ ಕಾಲೇಜಿನಿಂದ ಹೋರಾಟಕ್ಕೆ ಹೋಗಿ ನಮ್ಮ ಮರ್ಯಾದೆ ಉಳಿಸಿದ್ದಾನೆ. ಅದಕ್ಕಾದರೂ ಎಗ್ಸಾಮ್‌ಗೆ ಅಲೊ ಮಾಡಿ" ಎಂದರು ಲಂಕೇಶ್ ಕುಟುಕಿ.

ಅನಿರೀಕ್ಷಿತವಾಗಿ ಬಂದ ಈ ಕಟುನುಡಿಯಿಂದ ಸ್ಫೋಟಗೊಂಡ ಷಡಕ್ಷರಪ್ಪ "ನಮ್ಮ ಕಾಲೇಜ್‌ನಿಂದ ಹೋಗಿ ಒಲಿಂಪಿಕ್ಸ್ ಗೆದ್ದು ಬಂದಿದಾನೆ ಅನ್ನೋ ಥರ ಹೇಳ್ತಾ ಇದೀರಲ್ರೀ. ಪುಂಡ ಪೋಕ್ರಿಗಳಂತೆ ಕಲ್ಲು ಹೊಡೆದು ಜೈಲಿಗೆ ಹೋಗಿ ಬಂದವನಿಗೆ ಕಾಲೇಜ್‌ನಿಂದ್ಲೇ ಹೊರಹಾಕಬೇಕು ತಿಳೀತಾ!" ಎಂದರು.

"ಹಟ, ಹೋರಾಟಗಳು ಇಲ್ಲದ ಬದುಕು ಬದುಕೇನ್ರಿ? ಗಾಂಧೀಜಿ ಜೈಲಿಗೆ ಹೋದದ್ದು ಮಾತ್ರ ಚರಿತ್ರೆ ಅಂದ್ಕೋತೀರಾ ನಿಮ್ಮಂಥವ್ರು. ಒಬ್ಬ ಸಾಮಾನ್ಯನ ಸಿಟ್ಟು, ಸೆಡವು, ಪ್ರತಿಭಟನೆಗಳೂ ಚರಿತ್ರೇಲಿ ದಾಖಲಾಗಬೇಕು. ಸಾಮಾನ್ಯರ ಹೋರಾಟಗಳು ಮುಖಂಡರಿಗೆ ಮೂಕಪಾಠಗಳಾಗ್ತವೆ....." ಎಂದರು ಲಂಕೇಶ್.

"ಈ ಕಾಲೇಜ್‌ಗೆ ಹೆಡ್ ನೀವ್ರೊ ನಾನೊ? ನಂಗೇ ಲೆಕ್ಚರ್ ಕೊಡ್ತಾ ಇದೀರಾ ಏನ್ ಕತೆ ನಿಮ್ದು?" ಎಂದರು ಪ್ರಿನ್ಸಿಪಾಲ್ ಏರಿದ ಧ್ವನಿಯಲ್ಲಿ.

ಏರುಧ್ವನಿಯ ಈ ವಾಗ್ವಾದ ಕೇಳಿ ಕಾಲೇಜಿನ ಸಿಬ್ಬಂದಿ ಓಡಿಬಂದಿತ್ತು. ಲಂಕೇಶರನ್ನು ಪ್ರೊಫೆಸರ್‌ಗಳು ಕೈಹಿಡಿದು ಕರೆದೊಯ್ದರು. ಲಂಕೇಶರ ಕೋಪದ ವಿರಾಟ್‌ದರ್ಶನವಾಗಿ ಬೆವೆತುಹೋದೆ.

ಜಿದ್ದಿಗೆ ಬಿದ್ದ ಪ್ರಿನ್ಸಿಪಾಲ್ ಪರೀಕ್ಷೆ ಬರೆಯಲು ಅವಕಾಶ ನೀಡಲಿಲ್ಲ. ಆ ವರ್ಷದ ಓದನ್ನು ಪುನರಾವರ್ತನೆ ಮಾಡಿದೆ. ಲಂಕೇಶರೊಂದಿಗೆ ಹೆಚ್ಚು ಕಾಲ ಕಳೆಯುವ ಅವಕಾಶ ದೊರಕಿತು; ಹಾಗೇ ಬೆಳೆಯುವ ಅವಕಾಶ ಕೂಡಾ.

ಒಂದು ದಿನ ಲಂಕೇಶ್ "ನೋಡೋ ಹನುಮಂತ್ರಾಯ, ಹೋರಾಟಕ್ಕಾಗಿ ನೀನು ಒಂದು ವರ್ಷದ ಓದು ಕಳೆದುಕೊಂಡಿ, ಜೈಲಿಗೆ ಹೋದಿ. ಆದರೆ ಇಂದು ಸ್ಟೂಡೆಂಟ್ಸ್ ಲೀಡರ್‌ಗಳಾಗಿ ಗುಂಡೂರಾವ್, ಎಫ್.ಎಂ. ಖಾನ್ ಎಮರ್ಜ್ ಆಗಿದ್ದಾರೆ ! ನಮ್ಮ ದೇಶದ ದುರಂತ ನೋಡು ! ಹೋರಾಟ, ಪ್ರತಿಭಟನೆಗಳಲ್ಲಿರುವ ಸಾತ್ವಿಕತೆಗೆ ಅಲ್ಪಾಯುಷ್ಯ; ಕೇಡಿತನಕ್ಕೆ ದೀರ್ಘಾಯುಷ್ಯ." ಎಂದರು.

24

ನಾವು ಹಿಂದೂಸ್ಥಾನದವರು ನೀವು ಮುಂದುಸ್ಥಾನದವರು

ಲಂಕೇಶ್ ಅವರಿಗೆ ಕಾಲೇಜ್ ಕ್ಯಾಂಟೀನ್ ತಿಂಡಿ ರುಚಿಸುತ್ತಿರಲಿಲ್ಲ. ಮೆಜೆಸ್ಟಿಕ್ ಹೋಟೆಲ್‌ಗಳಿಗೆ ಆಗಾಗ ನನ್ನನ್ನು ತಿಂಡಿ ತಿನ್ನಲು ಕರೆದೊಯ್ಯುತ್ತಿದ್ದರು. ಷೇಕ್ಸ್‌ಪಿಯರ್ ಕೃತಿಗಳ ಬಗ್ಗೆ ಮಾತಾಡುತ್ತಿದ್ದರು. ಮಾತಿನ ಮಧ್ಯೆ "ಆ ಭಾಗ ಓದಿದ್ದೀಯಾ, ಈ ಭಾಗ ಓದಿದ್ದೀಯಾ?" ಅಂತ ಕೇಳುತ್ತಿದ್ದರು. ನಾನು ಮೌನವಾಗಿರುವುದನ್ನು ನೋಡಿ, "ನೀನು ಪರೀಕ್ಷೇಲಿ ಉತ್ತರಿಸೋ ದೃಷ್ಟಿಯಿಂದ ಓದ್ತೀಯಾ. ಅಷ್ಟೇ ಆದ್ರೆ ಷೇಕ್ಸ್‌ಪಿಯರ್‌ನನ್ನ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಮನುಷ್ಯ ಎಂತೆಂಥ ಸಂದರ್ಭಗಳಲ್ಲಿ ಹೇಗೆ ವರ್ತಿಸ್ತಾನೆ" ಎಂಥ ಅಪಾಯಕಾರೀ ಮನಸ್ಸು ಮನುಷ್ಯರದು. ಮನುಷ್ಯನಲ್ಲಿ ರಾಕ್ಷಸೀ ಮನಸ್ಸು ಇರುವುದರಿಂದಲೇ ಪ್ರಾಣಿಗಳು ಕಾಣದ ದುರಂತಗಳು ಮನುಷ್ಯ ಸಮಾಜದಲ್ಲಿ ಸಂಭವಿಸುತ್ತವೆ...." ಎಂದರು. ಆಗ ಅವರ ಮಾತುಗಳು ನನ್ನ ತಲೆಯೊಳಗೆ ಹೋಗುವ ಬದಲು ತಲೆಮೇಲಿನಿಂದ ಹಾಯ್ದು ಹೋದವು. ಷೇಕ್ಸ್‌ಪಿಯರ್‌ನ ಪುಸ್ತಕಗಳನ್ನು ನಾನು ಓದುವಾಗ ಲಂಕೇಶರು ಬಿಚ್ಚಿಡುತ್ತಿದ್ದ ಅರ್ಥಗಳು

ನನಗೆ ಹೊಳೆಯುತ್ತಿರಲಿಲ್ಲ. ಲಂಕೇಶರು ಮಾತಾಡುತ್ತಲೇ ಅನ್ಯಮನಸ್ಕರಾಗಿ ಶೂನ್ಯಕ್ಕೆ ದೃಷ್ಟಿ ಹರಿಸಿ ಸಿಗರೇಟು ಹೊಗೆ ಬಿಡತೊಡಗುತ್ತಿದ್ದರು. ಉಳಿದ ಪ್ರೊಫೆಸರ್‌ಗಳಿಗಿಂತ ತೀರಾ ಭಿನ್ನ ವ್ಯಕ್ತಿತ್ವ ಇವರದು ಎನಿಸಿತು.

"ಪಠ್ಯಕ್ರಮದ ದೃಷ್ಟಿಯಿಂದ ಹೊರಬಂದು ಓದಿದರೆ ಷೇಕ್ಸ್‌ಪಿಯರ್‌ನನ್ನು ಆಳವಾಗಿ ಅರ್ಥಮಾಡಿಕೊಳ್ಳಬಹುದು. ಕಾಲೇಜ್‌ಗಳಲ್ಲಿ ಓದು ಆಸಕ್ತಿಯ ವಿಷಯವಾಗುವ ಬದಲು ಪರಕೀಯ ವಿಷಯವಾಗಿಬಿಟ್ಟಿದೆ; ಪರೀಕ್ಷೆಯೆನ್ನುವುದು ಠಾಣೆಯಲ್ಲಿ ಪೋಲೀಸರು ನಡೆಸುವ Interrogation ನಂತಾಗಿದೆ. ಹೀಗಾದ್ರೆ ಹುಡುಗರು ಉದ್ಧಾರ ಆಗುವುದು ಹೇಗೆ?" ಎಂದು ನನ್ನತ್ತ ಅನುಕಂಪದಿಂದ ನೋಡಿದರು. ಅವರ ಅನುಕಂಪದ ನೋಟ ನನ್ನಲ್ಲಿ ಮುಜುಗರವುಂಟುಮಾಡಿತು. ಪರೀಕ್ಷೆಯಲ್ಲಿ ಮಾರ್ಕ್ಸ್ ಸ್ಕೋರು ಮಾಡುವುದೇ ಪರಮಗುರಿ ಎಂದುಕೊಂಡಿದ್ದು ತಪ್ಪು ಎನಿಸಿತು.

ಬೇರೆ ಪ್ರೊಫೆಸರ್‌ಗಳಾರೂ ಲಂಕೇಶರಂತೆ ಹೀಗೆ ಆಪ್ತವಾಗಿ ನನ್ನೊಂದಿಗೆ ಮಾತಾಡುತ್ತಿರಲಿಲ್ಲ. ನಾನು ಕಂಡ ಹಾಗೆ ಬೇರೆ ವಿದ್ಯಾರ್ಥಿಗಳೊಂದಿಗೆ ಅವರು ಆಪ್ತ ಸಂಬಂಧ ಇರಿಸಿಕೊಂಡಿರಲಿಲ್ಲ.

ಹಿಂದಿ ವಿರೋಧಿ ಚಳವಳಿ ನನ್ನ ಮತ್ತು ಲಂಕೇಶರ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು. ನನ್ನಲ್ಲಿಯ ಪ್ರತಿಭಟನಾ ಸ್ವಭಾವವನ್ನು ಲಂಕೇಶರು ಮೆಚ್ಚಿ ಮಾತಾಡುತ್ತಿದ್ದರು ಮತ್ತು ತಮ್ಮ ಸ್ನೇಹಿತರಿಗೆ "ಇವನು ನೋಡೋಕೆ ಹೀಗ್ ಕಾಣ್ತಾನೆ. ಆ್ಯಂಟಿ ಹಿಂದಿ ಸ್ಟ್ರೈಕ್‌ನಲ್ಲಿ ಜೈಲಿಗೆ ಹೋಗಿ ಬಂದಿದಾನೆ. ಒಳ್ಳೆ ಹೋರಾಟಗಾರ" ಎಂದು ಪರಿಚಯಿಸುತ್ತಿದ್ದರು.

ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿದ್ದ ಪ್ರೊ. ನಂಬಿಯಾರ್ 'ವ್ಹಿಟ್‌ಮನ್ ಮತ್ತು ಯೋಗ' ಎನ್ನುವ ಪುಸ್ತಕ ಬರೆದಿದ್ದರು. ಅದು ಅಮೆರಿಕಾ ಮತ್ತಿತರ ಐರೋಪ್ಯ ದೇಶಗಳಲ್ಲಿ ಬಹಳಷ್ಟು ಮಾರಾಟವಾಗಿತ್ತು, ಚರ್ಚೆಗೂ ಒಳಪಟ್ಟಿತ್ತು.

. ಆನಂದರಾವ್ ಸರ್ಕಲ್ ಹತ್ತಿರದ ರಾಮಕೃಷ್ಣ ಲಂಚ್ ಹೋಮ್‌ಗೆ ನನ್ನನ್ನು ಲಂಕೇಶರು ತಿಂಡಿಗಾಗಿ ಕರೆದೊಯ್ದರು. ಲಂಕೇಶರಿಗೆ ಆ ಹೋಟೆಲ್ ಜಿಲೇಬಿ ಬಹಳ ಹಿಡಿಸುತ್ತಿತ್ತು. "ಹಳ್ಳಿಯವರಿಗೆ ಸಿಹಿಯೆಂದ್ರೆ ಪಂಚಪ್ರಾಣ. ಇಲ್ಲಿ ನಿಮ್ಮ ಹಾಸ್ಟೆಲ್‌ನಲ್ಲಿ ಅದೇನ್ ಊಟ ಕೊಡ್ತಾರೋ ತಿನ್ನು ಜಿಲೇಬಿ" ಎಂದು ಎರಡು ಪ್ಲೇಟ್ ತರಿಸಿದರು. "ಈ ಉಡುಪಿಯವರಿಗೆ ಸಾಂಬಾರ್ ಮಾಡೋಕೆ ಬಂದಂಗೆ ನಮ್ಮ ಕಡೆಯವರಿಗೆ ಬರೋಲ್ಲ. ಅದಕ್ಕೇ ಊಟ, ತಿಂಡಿಗಳಿಗೆ ಮಾರ್ಕೆಟ್ ಕ್ರಿಯೇಟ್ ಮಾಡಿಕೊಳ್ಳೋಕೆ ಸಾಧ್ಯವಾಗಿದೆ ಉಡುಪಿಯವರಿಗೆ. ನನಗೆ ನಮ್ಮ

ಹಳ್ಳೀಲಿ ಮಾಡುತ್ತಿದ್ದ ಹೋಳಿಗೆ ಬಹಳ ಇಷ್ಟ. ಆದ್ರೆ ಅದೇ ರೀತಿ ಸಿಟಿ ಜನರಿಗೆ ಹೋಳಿಗೆ ಇಷ್ಟವಾಗೊಲ್ಲ. ನಮ್ಮ ಹಳ್ಳೀಲಿ ಕಬ್ಬಿಣ ಭಾರದ ಕೆಂಪು ಗೋಧಿಯಿಂದ ಮಾಡುತ್ತಿದ್ದ ಹೋಳಿಗೆಯನ್ನು ನೆನಸಿಕೊಂಡರೆ ಬಾಯಲ್ಲಿ ನೀರೂರುತ್ತದೆ. ಸಿಟಿಯಲ್ಲಿ ಗೋಧಿ ಎಲ್ಲಿಂದ ಬರ್ತವೊ....ಕಳ್ಳೆಪುರಿ ಥರ ಹಗುರ ಇರ್ತವೆ!" ಎಂದರು.

ದೋಸೆ ತಿಂದು ಕಾಫಿ ಕುಡಿದು ಕಾಲೇಜ್ ಕಡೆಗೆ ಹೊರಟೆವು. ಕೆಂಪೇಗೌಡ ರಸ್ತೆ ಮುಖಾಂತರ ಸರ್ಕಾರಿ ಲಾ ಕಾಲೇಜ್ ಹಾಯ್ದು ಪ್ಯಾಲೇಸ್ ರಸ್ತೆಗೆ ಬಂದೆವು. ಪ್ಯಾಲೇಸ್ ರಸ್ತೆಯಿಂದ ಕಾಲೇಜಿನ ಹಿಂಭಾಗದ ಗೇಟು ದಾಟಿ ಇಂಗ್ಲಿಷ್ ವಿಭಾಗಕ್ಕೆ ಬಂದೆವು. ಆಗ ಲಂಕೇಶರು,

"ಆ ನಂಬಿಯಾರ್ ಅದೇನು ಯೋಗದ ಬಗ್ಗೆ ಬುಕ್ ಬರೆದಿದಾನಂತಲ್ಲೊ ನೋಡಿದೀಯಾ?" ಎಂದರು.

"ಇಲ್ಲ ಸರ್" ಎಂದೆ. ನಿಜವಾಗಿ ಹೇಳಬೇಕಾದ್ರೆ ಆ ಪುಸ್ತಕ ನನ್ನಲ್ಲಿತ್ತು. ಇದೆ ಎಂದುಬಿಟ್ಟರೆ ಆ ಪುಸ್ತಕದೊಳಗಿನ ವಿಷಯದ ಬಗ್ಗೆ ಪ್ರಶ್ನೆಗಳನ್ನು ಎಲ್ಲಿ ಕೇಳುತ್ತಾರೊ ಎಂದು ಸುಳ್ಳು ಹೇಳಿಬಿಟ್ಟೆ.

"ನಾನು ಕಾಲೇಜಿನಲ್ಲಿ ಓದೋವಾಗ 'ಬ್ರಹ್ಮಚರ್ಯವೇ ಜೀವನ, ವೀರ್ಯ ನಾಶವೇ ಮೃತ್ಯು' ಎನ್ನೊ ಪುಸ್ತಕ ಓದಿದೆ. ಸ್ವಾಮಿ ಶಿವಾನಂದ ಬರೆದದ್ದು. ಆ ಪುಸ್ತಕದ ಪ್ರಕಾರ ಹುಡುಗರೆಲ್ಲಾ ಕಾಲೇಜು ಮುಗಿಸುವಷ್ಟರಲ್ಲಿ ಸತ್ತುಹೋಗಬೇಕು; ಅಷ್ಟೊಂದು ವೀರ್ಯನಾಶ ಮಾಡಿಕೊಂಡಿರ್ತಾರೆ..... ಹ ಹ ಹ" ಎಂದು ನಕ್ಕರು ಛೇಡಿಕೆಯ ಸ್ವರದಲ್ಲಿ.

"ಸಿವಿಲಿಜೇಷನ್ ಯುರೋಪ್‌ನಲ್ಲಿ ಎಕ್ಸ್‌ಟ್ರೀಮ್ ಸ್ಟೇಜ್‌ಗೆ ಹೋಗಿ ಪಾಪ್ಯುಲೇಷನ್ನೇ ಕಮ್ಮಿಯಾಗುತ್ತಿದೆ. ಮ್ಯಾರೇಜು, ಮಕ್ಕಳು ಹುಟ್ಟಿಸುವುದಕ್ಕಿಂತ ಬೇರೆ ವಿಷಯಗಳು ಅವರಿಗೆ ಖುಷಿ ಕೊಡುವಂತಾಗಿದೆ. ನಮ್ಮ ಹಳ್ಳೀ ಕಡೆ ಮನೆತುಂಬ ಮಕ್ಕಳಾಗಲಿ ಎಂದು ಹರಸ್ತಾರೆ. ಸೈನ್ಸ್ ಬೆಳೆದಿರಲಿಲ್ಲ. ಹತ್ತು ಮಕ್ಕಳನ್ನು ಹೆತ್ತರೆ ಉಳಿಯುತ್ತಿದ್ದುದು ಐದೋ ಆರೋ. ಹೆಚ್ಚು ಮಕ್ಕಳಿದ್ದರೆ ಹೊಲಗದ್ದೆ ಕೆಲಸಗಳಿಗೆ ಅನುಕೂಲ ಹೆಚ್ಚು ಎಂದುಕೊಳ್ಳುತ್ತಿದ್ದರು" ಎಂದರು.

ಸ್ವಲ್ಪ ಹೊತ್ತು ಮೌನವಾಗಿ ನಡೆದ ಲಂಕೇಶ್, "ಭೋಗ ಹೆಚ್ಚಾದಾಗ ಯೋಗ ಬೇಕೆನಿಸುತ್ತೆ. ನಮ್ಮ ದೇಹದಲ್ಲೇ ಹುಟ್ಟಿದ ಯೋಗ ನಮ್ಮ ಬಡವರಿಗೆ ಹಿಡಿಸುವುದಿಲ್ಲ; ಅಮೆರಿಕಾದ ಶ್ರೀಮಂತರಿಗೆ ಹಿಡಿಸುತ್ತದೆ. ಈ ನಂಬಿಯಾರ್‌ರಂಥವರು ಈಗಾಗಲೇ ಇರೋದನ್ನೇ ತಮ್ಮ ಶೈಲಿಯಲ್ಲಿ ಬರೆದು

ತಮ್ಮ ಮುದ್ರೆ ಒತ್ತಿಕೊಂಡುಬಿಡ್ತಾರೆ. ನಮ್ಮಲ್ಲಿ ಪತಂಜಲಿಗೆ ಹುಸಿ ವಾರಸುದಾರರೇ ತುಂಬಿ ಹೋಗಿದ್ದಾರೆ. ಅಷ್ಟಕ್ಕೂ ಯೋಗ ಎಂದರೆ ಪುರುಷತ್ವವನ್ನು ದಮನ ಮಾಡುವುದೆಂದೇ ಅರ್ಥವಾಗುತ್ತದಲ್ಲವೆ?" ಎಂದರು.

ಅಷ್ಟರಲ್ಲಿ ನಮ್ಮ ಡಿಪಾರ್ಟ್‌ಮೆಂಟನ್ನು ಸಮೀಪಿಸಿದ್ದೆವು. ಕೂಗಾಟ, ಚೀರಾಟಗಳು ಕೇಳಿಬರತೊಡಗಿದವು ಡಿಪಾರ್ಟ್‌ಮೆಂಟ್ ಒಳಗಿನಿಂದ. ಸ್ವಲ್ಪ ಗಾಬರಿಯಾಗಿ ನಾವು ದಾಪುಗಾಲು ಹಾಕುತ್ತ ಓಡಿದೆವು. ಒಳಗೆ ಡೋಲು ಹಿಡಿದುಕೊಂಡು ಖೋಜಾಗಳು ಪ್ರೊ. ನಂಬಿಯಾರ್‌ರನ್ನು ಸುತ್ತಿಕೊಂಡು ಒದರಾಡುತ್ತಿದ್ದರು. ನಂಬಿಯಾರ್‌ರು ಅವರನ್ನು ನೂಕಲು ಅವರ ತೋಳುಗಳನ್ನು ಹಿಡಿದು ತಳ್ಳಲು ಯತ್ನಿಸುತ್ತಿದ್ದರು. ಆದರೆ ಖೋಜಾಗಳು ತಮ್ಮ ಕೃತಕವಾಗಿ ಉಬ್ಬಿಸಿಕೊಂಡ ಎದೆಗಳಿಂದ ನಂಬಿಯಾರ್‌ರನ್ನು ತಿವಿಯುತ್ತಿದ್ದರು.

ಲಂಕೇಶ್ ಖೋಜಾಗಳತ್ತ ಧಾವಿಸಿ "ಏಕೆ ಜಗಳ ಕಾಯುತ್ತಿದ್ದೀರಿ?" ಎಂದರು.

"ಪಾರ್ಕ್‌ನಲ್ಲಿ ಕೂತಿದ್ದ ನಮ್ಮನ್ನ ಕರೆಸಿ ಏನೇನೋ ಪ್ರಶ್ನೆ ಕೇಳಿದ. ಅದೇನೋ ಪುಸ್ತಕ ಬರೀತಾವ್ನಂತೆ. ನಮ್ಗೆ ಸಾಮಾನು ಎಂಗಿರ್‍ತೈತೆ ಅಂತ ಕೇಳ್ದ. ಹೆಂಗಸಿನಂಗೇ ಯಾಕೆ ಇರಬೇಕನಿಸ್ತೈತೆ ಅಂತ ಕೇಳ್ದ. ಎಲ್ಲಾ ಹೇಳಿದ್ವಿ. ಈಗ್ ನೋಡಿದ್ರೆ ನಮ್ ಕೈಯಾಗೆ ಒಂದು ರೂಪಾಯಿ ಕೊಡಾಕೆ ಬಂದವ್ನೆ" ಎಂದು ಮತ್ತೆ ಗಲಾಟೆ ಶುರುಮಾಡಿದರು.

ಒಬ್ಬರೇ ಆಗಿ ಖೋಜಾಗಳ ಮಧ್ಯೆ ಸಿಕ್ಕುಬಿದ್ದಿದ್ದ ನಂಬಿಯಾರ್‌ರಿಗೆ ನಾವು ಬಂದದ್ದು ಬಲ ಬಂದ ಹಾಗಾಗಿತ್ತು. ಖೋಜಾಗಳನ್ನು ಇನ್ನಷ್ಟು ಏರುಧ್ವನಿಯಲ್ಲಿ ಬಯ್ಯತೊಡಗಿದರು. ಪ್ರತಿಯಾಗಿ ಖೋಜಾಗಳು ತಮ್ಮ ಸೀರೆ ಎತ್ತಿ ಅಸಹ್ಯ ಹಾವಭಾವಗಳಿಂದ ನಂಬಿಯಾರ್‌ರನ್ನು ಅಣಕಿಸತೊಡಗಿದರು. "ನಾನು ಒಂದು ರೂಪಾಯಿ ಕೊಟ್ಟಿದ್ದೇ ಹೆಚ್ಚು. ಬೇಕಿದ್ದರೆ ಇನ್ನೊಂದು ರೂಪಾಯಿ ಕೊಡಬಲ್ಲೆ. ಅದಕ್ಕಿಂತ ಹೆಚ್ಚು ಕೇಳಿದರೆ ಪೋಲೀಸರನ್ನ ಕರೆಸಿ ಹೊರಹಾಕಿಸಬೇಕಾಗುತ್ತದೆ" ಎನ್ನುತ್ತಾ ಟಾಯ್ಲೆಟ್‌ನೊಳಕ್ಕೆ ಹೊಕ್ಕು ಬಾಗಿಲು ಹಾಕಿಕೊಂಡರು.

ಖೋಜಾಗಳು ಬಾಗಿಲು ಬಡಿಯತೊಡಗಿದರು. ಲಂಕೇಶರು ಅವರನ್ನು ಕರೆದು ತಮ್ಮ ಜೇಬಿನಿಂದ ದುಡ್ಡು ತೆಗೆದು ಅದರೊಳಗಿಂದ ಹತ್ತು ರೂಪಾಯಿಯ ನೋಟೊಂದನ್ನು ತೆಗೆದುಕೊಟ್ಟರು. ಖೋಜಾಗಳು ಆ ನೋಟನ್ನು ಕೈಯಲ್ಲಿ ಹಿಡಿದುಕೊಂಡು ಲಂಕೇಶರ ಮುಖದ ಸುತ್ತ ಊದುಬತ್ತಿ ಬೆಳಗುವಂತೆ ನಿವಾಳಿಸಿ "ಗಂಡ್ಸೂ ಅಂದ್ರೆ ನೀನು. ತತ್ತಾ ಇನ್ನೂ ಹತ್ ರೂಪಾಯಿ" ಎಂದು ಲಂಕೇಶರು ಕೊಡದಿದ್ದರೂ ಅವರ ಕೈಲಿದ್ದ ನೋಟುಗಳಲ್ಲಿ ಮತ್ತೊಂದನ್ನು ಕಿತ್ತುಕೊಂಡರು.

ಲಂಕೇಶರು "ಏಯ್ ಏಯ್" ಎನ್ನುವಷ್ಟರಲ್ಲಿ ಡೋಲು ಬಾರಿಸುತ್ತಾ ಹೊರಟುಬಿಟ್ಟರು.

ಈ ಗಲಾಟೆಯಿಂದಾಗಿ ಬಹಳಷ್ಟು ಹುಡುಗರು ಬಂದು ಡಿಪಾರ್ಟ್‌ಮೆಂಟ್ ಬಳಿ ಜಮಾಯಿಸಿದ್ದರು. ಹುಡುಗರು ಖೋಜಾಗಳಿಗೆ ಛೇಡಿಸಿದರು.

"ಅದ್ಯಾಕ್ರಯ್ಯ ಹಂಗ್ ಆಡ್ತೀರಿ, ನಾವು ಹಿಂದೂಸ್ಥಾನ್‌ದೋರು ನೀವು ಮುಂದುಸ್ಥಾನ್‌ದೋರು" ಎನ್ನುತ್ತ ಕೈಗಳಿಂದ ಅಸಹ್ಯ ಸಂಜ್ಞೆಗಳನ್ನು ಮಾಡುತ್ತಾ ಅವರು ಹೊರಟುಹೋದರು.

ಲಂಕೇಶರು "ಅವ್ರಿಗೆ ಛೇಡಿಸಬಾರ್ದು ಕಣ್ರೋ. ಸೈಕಾಲಜಿಕಲಿ ಇಂಬ್ಯಾಲೆನ್ಸ್ ಆಗಿರ್ತಾರೆ; ಎರೋಟೊಮೇನಿಯಾದಿಂದ ನರಳ್ತಿರ್ತಾರೆ...." ಎಂದು ಗದರಿಸಿ ಹುಡುಗರನ್ನು ಕ್ಲಾಸ್ ಒಳಕ್ಕೆ ಕಳುಹಿಸಿದರು.

ನನ್ನತ್ತ ನೋಡಿ ಲಂಕೇಶರು ನಗುತ್ತ "ನಾವು ಸರಿಯಾದ ಸಮಯಕ್ಕೆ ಬಾರ್ದೆ ಹೋಗಿದ್ರೆ ಇವತ್ತು ಆ ನಂಬಿಯಾರ್‌ನ ಪ್ಯಾಂಟ್ ಕಳಚಿಬಿಡುತ್ತಿದ್ರು ಈ ಖೋಜಾಗಳು" ಎಂದು ನಕ್ಕರು.

ಅಷ್ಟರಲ್ಲಿ ಡಿಪಾರ್ಟ್‌ಮೆಂಟಿನ ಪ್ಯೂನ್ ಹನುಮಯ್ಯ ಬಂದು "ಕಾಲೇಜ್ ಬದಿ ಪಾರ್ಕ್‌ನಾಗೆ ಆ ಖೋಜಾಗಳು ಸುಮ್ನೆ ಕಳ್ಳೆಕಾಯಿ ತಿಂತಾ ಕೂತಿದ್ರು. ನಮ್ಮ ಪ್ರೊಫೆಸರೇ ಅವರ್ನ ಕರಕೊಂಬಾ ಅಂತಾ ಕಳಿಸಿದ್ರು. ನಾನೇ ಹೋಗಿ ಕರ್ಕೊಂಡು ಬಂದೆ ಅವುರ್ನ. ಹಿಂಗಾಗಿ ಹೋತು...." ಎಂದ.

"ಮಾಡೋಕೆ ನಿಂಗೆ, ಆ ನಂಬಿಯಾರ್‌ಗೆ ಇಬ್ರಿಗೂ ಕೆಲ್ಸ ಇಲ್ಲ. ಅದ್ಕೆ ಇಂಥದ್ದು ಮಾಡ್ತೀರಾ, ಆಯ್ತು ಹೋಗು" ಎಂದರು ನಸುಗೋಪದಲ್ಲಿ ಲಂಕೇಶ್.

ನನ್ನತ್ತ ನೋಡುತ್ತಾ ಲಂಕೇಶ್ "ನಮ್ ದೇಶದಲ್ಲಿ ಮಾನಸಿಕವಾಗಿ ಬಹಳಷ್ಟು ಜನ ಇಂಪೊಟೆಂಟ್ ಆಗಿಬಿಡ್ತಾರೆ; ದೈಹಿಕವಾಗಿ ಎಲ್ಲ ಸರಿ ಇರ್ತಾರೆ ! ಇದೆಲ್ಲ ಸೆಕ್ಸ್ ಅನ್ನು ಆರೋಗ್ಯಕರ ದೃಷ್ಟಿಯಿಂದ ನೋಡ್ದೆ ಇರೋದರ ಪರಿಣಾಮ. ಆಯ್ತು ನೀನು ಇನ್ನು ಹೋಗು. 'ಮ್ಯಾಕ್‌ಬೆತ್' ನಾಟಕವನ್ನು ನಾನು ಹೇಳಿದ ದೃಷ್ಟಿಯಿಂದ ಓದಿಕೊಂಡು ಬಾ. ಮುಂದಿನ ವಾರ ಅದರ ಬಗ್ಗೆ ಮಾತಾಡೋಣ...." ಎಂದು ಹೇಳಿ ಸಿಗರೇಟು ಹಚ್ಚಿಕೊಂಡು ಡಿಪಾರ್ಟ್‌ಮೆಂಟ್‌ನ ಹತ್ತಿರ ಹೊರಟರು.

ಈ ಘಟನೆಯ ನಂತರ ಲಂಕೇಶರು ನಂಬಿಯಾರ್ ಜೊತೆ ಮಾತನಾಡುವುದನ್ನು ನಿಲ್ಲಿಸಿದರು.

25

"ಪಾತಕದ ಬೀಜಗಳಿಲ್ಲದವ ಲಾಯರ್ ಆಗಲಾರ"

ಇತರ ವಿದ್ಯಾರ್ಥಿಗಳಲ್ಲಿ ಅಸೂಯೆ ಮೂಡಿಸುವಷ್ಟು ನಿಕಟಗೊಂಡಿತ್ತು ನನ್ನ ಮತ್ತು ಲಂಕೇಶರ ಸಂಬಂಧ. ಗ್ರಾಮೀಣ ಹೈಸ್ಕೂಲ್‌ಗಳ ಮಟ್ಟದ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೂ ಬೆಂಗಳೂರಂಥ ನಗರದಲ್ಲಿ ಭಾಗವಹಿಸುವುದಕ್ಕೂ ವ್ಯತ್ಯಾಸವಿದೆಯೆನ್ನುವುದನ್ನು ಬೇಗನೆ ತಿಳಿದುಕೊಂಡು, ಸಾಮಾನ್ಯ ಜ್ಞಾನದ ಜೊತೆಗೆ ವಿಶೇಷ ಜ್ಞಾನವೂ ಬೇಕು ಎನ್ನುವುದನ್ನು ಅರಿತುಕೊಂಡೆ. ಲಂಕೇಶರೊಂದಿಗಿನ ಚರ್ಚೆಗಳನ್ನು ನನ್ನ ಡಿಬೇಟ್‌ನಲ್ಲಿ ಉಪಯೋಗಿಸುತ್ತಿದ್ದೆ. ಒಮ್ಮೆ "ಸಾರ್ ನೀವು ಹೇಳಿದ ಮಾತುಗಳನ್ನು ಹೇಳಿದೆ. ಎಲ್ಲರೂ ನಿಬ್ಬೆರಗಾದರು. ಪ್ರಶಸ್ತಿ ನನಗೇ ಬಂದಿತು" ಎಂದಾಗ ಲಂಕೇಶರು ವಿಚಿತ್ರವಾಗಿ ನಕ್ಕು "ನೋಡು, ನಾನು ಸಹಜವಾಗಿ ಮಾತಾಡಿದೆ. ಅದನ್ನೇ ಒಂದು ಟ್ರೈನಿಂಗ್ ರೀತಿಯಲ್ಲಿ ನಿನಗೆ ಹೇಳಹೊರಟಿದ್ದರೆ ನಿನ್ನ ತಲೆಯೊಳಕ್ಕೆ ಇಳೀತಿರಲಿಲ್ಲ. ಮತ್ತು ಚರ್ಚಾಸ್ಪರ್ಧೆಯಲ್ಲಿ ಮಾತಾಡುವಾಗ ಸಾಂದರ್ಭಿಕವಾಗಿ ಹೊಳೆಯುತ್ತಿರಲಿಲ್ಲ. ಕಲಿಯುವುದು ಕಲಿಸುವುದು ಹೀಗೇ ಇರಬೇಕು" ಎಂದರು.

ಅಂತರಕಾಲೇಜು ಹಾಸ್ಟೆಲ್‌ಗಳ ಚರ್ಚಾಸ್ಪರ್ಧೆಯಲ್ಲಿ ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡ

ನನಗೆ ಅಂತರ ಕಾಲೇಜ್ ಸ್ಪರ್ಧೆಯಲ್ಲಿ ಆಯ್ಕೆಗೊಳ್ಳಬೇಕೆನ್ನುವ ಹಂಬಲ ತೀವ್ರಗೊಳ್ಳತೊಡಗಿತು.

ನಂತರ ಮಂತ್ರಿಯೂ ಆದ ಬೇಗಾನೆ ರಾಮಯ್ಯ, ಸಿ. ವೀರಣ್ಣ, ಕಿ.ರಂ. ನಾಗರಾಜರಂಥವರು ನಮ್ಮ ಕಾಲೇಜ್‌ನಲ್ಲಿ ಎಂ.ಎ., ಅಧ್ಯಯನ ಮಾಡುತ್ತಿದ್ದರು. ಅಂತರಕಾಲೇಜು ಕನ್ನಡ ಚರ್ಚಾಸ್ಪರ್ಧೆಯಲ್ಲಿ ನಮ್ಮ ಕಾಲೇಜನ್ನು ಪ್ರತಿನಿಧಿಸಲು ಇವರುಗಳೇ ಆಯ್ಕೆಯಾಗುತ್ತಿದ್ದರು. ನನಗಿಂತಲೂ ಸೀನಿಯರ್‌ಗಳಾಗಿದ್ದ ಇವರು ಎಂ.ಎ. ಮುಗಿಸಿದ ಮೇಲೆ ನಾನು ನಮ್ಮ ಕಾಲೇಜನ್ನು ಪ್ರತಿನಿಧಿಸಿದೆ.

"ಕನ್ನಡ ಡಿಬೇಟ್‌ನಲ್ಲಿ ನೀನು ಸೆಲೆಕ್ಟ್ ಆಗೋದು ನನಗೆ ದೊಡ್ಡ ವಿಷಯವಲ್ಲ. ಆಗುವುದಾದರೆ ಇಂಗ್ಲಿಷ್‌ನಲ್ಲಿ ಆಗಿ ತೋರಿಸು" ಎಂದು ಲಂಕೇಶ್ ಛೇಡಿಸಿ ಮಾತಾಡಿದರು.

ನಾನು ಫೈನಲ್ ಆನರ್ಸ್‌ನಲ್ಲಿದ್ದೆ. ಅಂತರಕಾಲೇಜು ಇಂಗ್ಲಿಷ್ ಚರ್ಚಾಸ್ಪರ್ಧೆಯಲ್ಲಿ ನಮ್ಮ ಕಾಲೇಜನ್ನು ಪ್ರತಿನಿಧಿಸಿ ಹೋಗಬೇಕಾದವರನ್ನು ಆಯ್ಕೆ ಮಾಡಲು ಸ್ಪರ್ಧೆ ಏರ್ಪಡಿಸಿದರು. ಸ್ಪರ್ಧೆಯಲ್ಲಿ ನಾಲ್ವರನ್ನು ಆಯ್ಕೆ ಮಾಡಿ ಈರ್ವರನ್ನು ಮಾತ್ರ ಸ್ಪರ್ಧೆಗೆ ಕಳಿಸುವುದು ಎಂದಾಗಿತ್ತು. ಮೊದಲ ಈರ್ವರು ಪರಿಣಾಮಕಾರಿಯಾಗಿ ಮಾತಾಡದೇ ಹೋದಾಗ ಅಥವಾ ಕಾರಣಾಂತರಗಳಿಂದ ಸ್ಪರ್ಧೆಯಲ್ಲಿ ಭಾಗವಹಿಸಲು ಆಗದೆ ಹೋದಾಗ ಉಳಿದ ಈರ್ವರನ್ನು ಸ್ಪರ್ಧೆಗೆ ಕಳಿಸುವುದು ಎಂದೂ ಆಗಿತ್ತು.

ನಮ್ಮ ಕಾಲೇಜಿನ ಆಯ್ಕೆ ಸ್ಪರ್ಧೆಯಲ್ಲಿ ನಾನು ನಾಲ್ಕನೆಯವನಾಗಿ ಆಯ್ಕೆಗೊಂಡೆ. ಆ ಸಂದರ್ಭದಲ್ಲಿ ಲಂಕೇಶರು ಇರಲಿಲ್ಲ. ಮಾರನೆಯ ದಿನ ಲಂಕೇಶರಿಗೆ ಭೇಟಿಯಾಗಿ ನಮ್ಮ ಕಾಲೇಜ್ ಅನ್ನು ಇಂಗ್ಲಿಷ್ ಚರ್ಚಾಸ್ಪರ್ಧೆಯಲ್ಲಿ ಪ್ರತಿನಿಧಿಸುವುದರ ಪ್ಯಾನೆಲ್‌ಗೆ ಆಯ್ಕೆಗೊಂಡಿರುವ ವಿಷಯ ತಿಳಿಸಿದೆ.

ತಕ್ಷಣವೇ ಫೋನ್ ರಿಸೀವರ್ ಅನ್ನು ಕೈಗೆತ್ತಿಕೊಂಡು ನಂಬರ್ ಡಯಲ್ ಮಾಡಿ "ಷಡಕ್ಷರಪ್ಪನವರೇ ನಮ್ಮ ಹನುಮಂತ್ರಾಯ ಅಂತರಕಾಲೇಜು ಇಂಗ್ಲಿಷ್ ಚರ್ಚಾಸ್ಪರ್ಧೆಗೆ ನಮ್ಮ ಕಾಲೇಜು ಪ್ರತಿನಿಧಿಸುವ ಪ್ಯಾನೆಲ್‌ಗೆ ಸೆಲೆಕ್ಟ್ ಆಗಿದಾನೆ. ಹಿಂದಿ ವಿರೋಧಿ ಚಳವಳಿಯಲ್ಲಿ ಭಾಗವಹಿಸಿ ಕಾಲೇಜ್ ತಪ್ಪಿಸಿ ಅಟೆಂಡೆನ್ಸ್ ಕಳೆದುಕೊಂಡ ಎಂದು ಅವನಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಿಲ್ಲ. ಅಂದು ನೀವು ಅವನೇನು ಒಲಂಪಿಕ್ಸ್‌ಗೆ ಸೆಲೆಕ್ಟ್ ಆಗಿದಾನೆ ಅಂತ ರಿಯಾಯಿತಿ ತೋರಿಸಬೇಕು ಅಂತ ಕೇಳಿದ್ರಿ, ಹಳ್ಳಿಯ ಕನ್ನಡ ಶಾಲೆಯಿಂದ ಬಂದವ ಇಂಗ್ಲಿಷ್ ಚರ್ಚಾಸ್ಪರ್ಧೆಗೆ ಸೆಲೆಕ್ಟ್ ಆಗೋದು, ಅದೂ ಸೆಂಟ್ರಲ್ ಕಾಲೇಜಿನಿಂದ ಎಂದರೆ

ಒಲಂಪಿಕ್ಸ್‌ಗೇ ಸೆಲೆಕ್ಟ್ ಆದಂತೆ. ನೀವು ಮಾಡಿದ ಅನ್ಯಾಯ ಹನುಮಂತ್ರಾಯನಿಗೆ ಹಲವು ಪಾಠ ಕಲಿಸಿದೆ; ಜಿದ್ದು ಕಲಿಸಿದೆ. ಪರಿಸರ, ಅವಕಾಶ, ಗಾಡ್‌ಫಾದರ್‌ಗಳಿಲ್ಲದೆ ಬೆಳೆದು ಬರುವವರನ್ನು ಅರ್ಥಮಾಡಿಕೊಳ್ಳೋಕೆ ನಿಮ್ಮಿಂದ ಸಾಧ್ಯವಿಲ್ಲ...." ಎಂದು ಒಂದೇ ಉಸಿರಿಗೆ ಹೇಳಿ ಅವರ ಮಾರುತ್ತರಕ್ಕೂ ಕಾಯದೆ ಫೋನ್‌ಅನ್ನು ಕುಕ್ಕಿದರು. ನನ್ನತ್ತ ತಿರುಗಿ "ಕಂಗ್ರ್ಯಾಜ್ಯುಲೇಷನ್ಸ್ ! ನೀನು ಡಿಬೇಟ್‌ಗೆ ಸೆಲೆಕ್ಟ್ ಆಗಿದ್ದಕ್ಕಲ್ಲ. ಆ ಪ್ರಿನ್ಸಿಪಾಲ್‌ಗೆ ತಿರುಗೇಟು ಕೊಡಲು ನನಗೆ ಅವಕಾಶ ಮಾಡಿಕೊಟ್ಟೆಯಲ್ಲ ಅದಕ್ಕೆ....!" ಎಂದರು.

ಲಂಕೇಶರ ಇಂಥ ವಿಲಕ್ಷಣ ಧೋರಣೆ ನನಗೆ ಹೊಸದಾಗಿರಲಿಲ್ಲ.

ಪ್ಯಾನೆಲ್‌ನಲ್ಲಿದ್ದ ಮೊದಲ ಈರ್ವರೇ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ಹೋದರು. ನನಗೆ ಮತ್ತು ಮೂರನೆಯವನಿಗೆ ಅವಕಾಶ ಸಿಗಲಿಲ್ಲ.

"ನಿನಗೆ ಮಾತಾಡೋ ಅವಕಾಶ ಸಿಗದಿದ್ರೆ ಮುಂಡಾಮೋಚ್ತು. ಪ್ಯಾನೆಲ್‌ಗೆ ಸೆಲೆಕ್ಟ್ ಆಗಿದ್ದೀಯಾ ಸಾಕು" ಎಂದು ಲಂಕೇಶ್ ನನಗೆ ಸಮಾಧಾನ ಮಾಡಿದರು. ತಮ್ಮ spokes wheel ಗಳ ಆಸ್ಟಿನ್ ಕಾರಲ್ಲಿ ನನ್ನನ್ನು ಕೂರಿಸಿಕೊಂಡು ಪುಸ್ತಕಗಳನ್ನು ಖರೀದಿಸಿಕೊಂಡು ಬರೋಣ ಬಾ ಎಂದು ಕರೆದೊಯ್ದರು.

ಆಗ ಬೆಂಗಳೂರಲ್ಲಿ ಪ್ರತ್ಯೇಕ ಕ್ರಿಕೆಟ್ ಸ್ಟೇಡಿಯಮ್ ನಿರ್ಮಾಣವಾಗಿರಲಿಲ್ಲ. ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಇಂಟರ್‌ನ್ಯಾಷನಲ್ ಟೆಸ್ಟ್ ಕ್ರಿಕೆಟ್ ಮ್ಯಾಚ್ ಆರಂಭವಾಯಿತು. ನನಗೆ ಆಗ ಕ್ರಿಕೆಟ್‌ನಲ್ಲಿ ಅಷ್ಟೊಂದು ಆಸಕ್ತಿಯಿರಲಿಲ್ಲ. ವಿದ್ಯಾರ್ಥಿಗಳೆಲ್ಲ ಹಾಸ್ಟೆಲ್ ಮೇಲುಗಡೆ ಕೂತು ಆಟ ವೀಕ್ಷಿಸುತ್ತಿದ್ದರು. ಕೋಣೆಯೊಳಗೆ ಓದುತ್ತಿದ್ದ ನಾನು ಟೀ ಕುಡಿದು ಬರೋಣವೆಂದು ಹೊರಬಂದೆ. ಅಷ್ಟರಲ್ಲಿ ಲಂಕೇಶರು ತಮ್ಮ ಕಾರನ್ನು ನಮ್ಮ ಹಾಸ್ಟೆಲ್ ಕಾಂಪೌಂಡ್ ಒಳಗೆ ತಂದಿದ್ದರು. ನನ್ನನ್ನು ನೋಡಿ "ಏಯ್ ಕ್ರಿಕೆಟ್ ನೋಡಲು ಹೋಗಿಲ್ವಾ?" ಎಂದು ಕೇಳಿದರು.

ಬಿ.ಎಸ್. ಚಂದ್ರಶೇಖರ್, ಪ್ರಸನ್ನ, ವೆಂಕಟರಾಘವನ್, ಪಟೌಡಿ, ಬಿಷನ್ ಸಿಂಗ್ ಬೇಡಿ, ಫರೂಕ್ ಇಂಜಿನಿಯರ್, ಅಜಿತ್ ವಾಡೇಕರ್ ಮುಂತಾದವರ ಆಟ ನನ್ನಲ್ಲಿ ರೋಮಾಂಚನವುಂಟುಮಾಡಿತು.

ಮಾರನೇ ದಿನ ಕಾಲೇಜ್‌ನಲ್ಲಿ ನಾನು ನನ್ನ ಗೆಳೆಯರೊಂದಿಗೆ ಮಾತಾಡುತ್ತಾ ನಿಂತಿದ್ದೆ. ಲಂಕೇಶ್ ಬರುತ್ತಿದ್ದರು. ನಮ್ಮನ್ನು ನೋಡಿ ನಿಂತು, "ಛಲವನ್ನು ಹನುಮಂತ್ರಾಯನಿಂದ ನೀವು ಕಲಿಬೇಕು. ಓದಬೇಕೆನ್ನುವುದು ಇವನಿಗೆ ಗೀಳಾಗಿಬಿಟ್ಟಿದೆ. ಪಕ್ಕದಲ್ಲೇ ಕ್ರಿಕೆಟ್ ಟೆಸ್ಟ್ ಮ್ಯಾಚ್ ನಡೀತಿದ್ರೂ ಅತ್ತ ಹೋಗದೆ ಪುಸ್ತಕದಲ್ಲಿ ಮುಳುಗಿಹೋಗಿದ್ದ ನಿನ್ನೆ" ಎಂದರು.

ನನಗೆ ಆಶ್ಚರ್ಯವಾಯಿತು ; ನಿನ್ನೆಯಷ್ಟೇ ನನ್ನನ್ನು 'ಕೂಚುಭಟ್ಟ' ಎಂದು ಮೂದಲಿಸಿ ಹೋಗಿದ್ದವರು ಇದೀಗ ನನ್ನ ಗೆಳೆಯರೆದುರಿಗೆ ಹೀಗೆ ಹೊಗಳುತ್ತಿರುವರಲ್ಲಾ ಎಂದು!

ನಾನು ಅನಂತರ ಕ್ರಿಕೆಟ್ ನೋಡಲು ಹೋಗಿದ್ದ ಸಂಗತಿಯನ್ನು ಲಂಕೇಶರಿಗೆ ಹೇಳಲಿಲ್ಲ; ನನ್ನ ಛಲದ ಬಗೆಗೆ ಲಂಕೇಶರು ಇರಿಸಿಕೊಂಡಿರುವ ಇಮೇಜ್‌ಗೆ ಎಲ್ಲಿ ಪೆಟ್ಟು ಬೀಳುವುದೋ ಎಂದು.

ನನ್ನ ಫೈನಲ್ ಆನರ್ಸ್ ಮುಗಿದಾಗ ಲಾ ಕಾಲೇಜ್‌ಗೆ ಅಡ್ಮಿಷನ್ ಮಾಡಿಸೋಣವೆಂದು ಟಿ.ಸಿ.ಗೆ ಅರ್ಜಿ ಕೊಟ್ಟೆ. ಪ್ರೊ. ಭರತ್‌ರಾಜ್‌ಸಿಂಗ್ ಅವರು, "ನೀನು ನಮ್ಮಲ್ಲೇ ಎಂ.ಎ., ಮಾಡು. ಇದೇ ಕಾಲೇಜ್‌ನಲ್ಲಿ ನೀನು ಲೆಕ್ಚರರ್ ಆಗಬಹುದು" ಎಂದರು.

"ಇಲ್ಲ ಸಾರ್, ನಾನು ಲಾ ಮಾಡಬೇಕು" ಎಂದೆ.

"ಲಾಯರ್ಸ್ ಪ್ರೊಫೆಷನ್‌ನಲ್ಲಿ Uncertainty ಯಿರುತ್ತೆ" ಎಂದರು. ಪಕ್ಕದಲ್ಲೇ ಇದ್ದ ಲಂಕೇಶರು, "The power of lawyer is the uncertainty of law" ಎಂದರು. ಪ್ರೊ. ನಂಬಿಯಾರ್ ನಗುತ್ತ ಹೊರಹೊರಟರು.

"ಇಸ್ರೇಲ್ ದೇಶ ಅಸ್ತಿತ್ವಕ್ಕೆ ಬಂದಾಗ ಅಧ್ಯಕ್ಷನಾಗುವಂತೆ ಐನ್‌ಸ್ಟೀನ್‌ಗೆ ಆಹ್ವಾನ ಬಂದಿತು. ಆದರೆ ಆತ ನಮ್ರವಾಗಿಯೇ 'ವ್ಯಕ್ತಿಗಳೊಂದಿಗೆ ವ್ಯವಹರಿಸಬೇಕಾದ ಹಾಗೂ ಮನುಷ್ಯ ಸಂಬಂಧಗಳೇ ಮುಖ್ಯವಾದ ಈ ಹುದ್ದೆಗೆ ನಾನು ಅನರ್ಹ' ಎಂದು ತಿರಸ್ಕರಿಸಿದ." ಎಂದ ಲಂಕೇಶ್, ಮುಂದುವರಿದು "ತನಗೆ, ತನ್ನ ವ್ಯಕ್ತಿತ್ವಕ್ಕೆ ಒಗ್ಗದ್ದನ್ನು ಒಪ್ಪಿಕೊಳ್ಳುವುದು ಅಪರಾಧ" ಎಂದರು.

ಸ್ವಲ್ಪಹೊತ್ತು ಸುಮ್ಮನಿದ್ದು, "ತುಂಬಾ ಜನ, ಬಾಳ ಬ್ರೇನ್ ಇದ್ದೋನು ದೊಡ್ಡ ಲಾಯರ್ ಆಗ್ತಾನೆ ಅಂತ ತಿಳಿದುಕೊಂಡಿರುತ್ತಾರೆ. ಆದರೆ ಆ ತಿಳಿವಳಿಕೆ ತಪ್ಪು. ಮುಖ್ಯವಾಗಿ ಗಟ್ಸ್ ಇರಬೇಕು. ಆಗ ಮಾತ್ರ ಬ್ರೇನ್ ಉಪಯೋಗಕ್ಕೆ ಬೀಳುತ್ತೆ. ನನ್ನ ಮೇಲೆ ಕೇಸ್ ಆಗಿ ಲಾಯರ್‌ನೇನಾದ್ರೂ ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಬಂದರೆ ಗಟ್ಸ್ ಇರೋ ಲಾಯರ್‌ನನ್ನೇ ಆಯ್ಕೆ ಮಾಡಿಕೋತೇನೆ; ಬರೀ ಜಾಣ ಇರುವ ಲಾಯರ್‌ನನ್ನಲ್ಲ. ಜಾಣ ವಕೀಲ ಜಡ್ಜ್ ಆಗಲು ಯೋಗ್ಯ" ಎಂದರು.

"ನಾನು ಹೇಳಿದ್ದು ತಿಳೀತಾ?" ಎಂದು ಹುಬ್ಬೇರಿಸಿ ಕೇಳಿದರು. ಒಂದು ಸಿಗರೇಟ್ ಅನ್ನು ಕಿರುಬೆರಳಿನ ಸಂದಿನಲ್ಲಿರಿಸಿಕೊಂಡು ಬೆಂಕಿ ಹಚ್ಚಿಕೊಂಡು ಆಳವಾಗಿ ಹೊಗೆಯೆಳೆದುಕೊಂಡು ವರ್ತುಲಾಕಾರವಾಗಿ ಹೊಗೆ ಬಿಡತೊಡಗಿದರು.

ನಾನು "ಅರ್ಥವಾಯಿತು ಸಾರ್" ಎಂದೆ.

"ಏನಾಯಿತು ಅರ್ಥ? ಪಾತಕದ ಬೀಜಗಳನ್ನು ತನ್ನಲ್ಲಿರಿಸಿಕೊಂಡವ ಮಾತ್ರ ಪ್ರಸಿದ್ಧ ಲಾಯರ್ ಆಗೋಕೆ ಸಾಧ್ಯ" ಎಂದರು.

ಅದೇನೆಂದು ತಿಳಿಯದೆ ಅವಾಕ್ಕಾದೆ.

26

ಪ್ರಿನ್ಸಿಪಾಲ್‌ನನ್ನೇ ಕೊಂದ ವಿದ್ಯಾರ್ಥಿ !

ನಾನು ಲಾ ಕಾಲೇಜ್‌ಗೆ ಸೇರಿದೆ. ಅಲ್ಲಿಯ ವಾತಾವರಣ ನೋಡಿ ನನಗೆ ಪಿಚ್ಚೆನ್ನಿಸಿತು. ನನ್ನ ವಯಸ್ಸಿನ ವಿದ್ಯಾರ್ಥಿಗಳು ವಿರಳವಾಗಿದ್ದರು. ಸರ್ಕಾರಿ ನೌಕರರು, ಅಧಿಕಾರಿಗಳೇ ತುಂಬಿಕೊಂಡಿದ್ದರು. ಅಂಥ ಪಾರ್ಟ್‌ಟೈಮ್ ವಿದ್ಯಾರ್ಥಿಗಳಿಗೋಸ್ಕರವೇ ಕಾಲೇಜ್ ಇದೆಯೆನ್ನುವ ರೀತಿಯಲ್ಲಿ ಬೆಳಗ್ಗೆ ಏಳೂವರೆಗೆ ಆರಂಭವಾಗಿ ಹತ್ತೂವರೆ ಗಂಟೆಗೆ ಅಂದರೆ ಮೂರೇ ತಾಸುಗಳಲ್ಲಿ ಕಾಲೇಜ್ ಅವಧಿ ಮುಗಿಯುತ್ತಿತ್ತು. ವಿಧಾನಸೌಧ, ಸೆಕ್ರೆಟೇರಿಯಟ್, ಬ್ಯಾಂಕ್‌ಗಳು ಮತ್ತಿತರೆಡೆ ಕೆಲಸ ಮಾಡುತ್ತಿದ್ದ ಗ್ರ್ಯಾಜುಯೇಟ್‌ಗಳು ಪಿರಿಯಡ್ ತಪ್ಪಿಸಿ ತಮ್ಮ ಆಫೀಸ್‌ಗೆ ಓಡುವ ತರಾತುರಿಯಲ್ಲಿರುತ್ತಿದ್ದರು. ಸೇಂಟ್ ಜೋಸೆಫ್ ಮತ್ತು ಸೆಂಟ್ರಲ್ ಕಾಲೇಜ್‌ಗಳ ಅದ್ಭುತ ಶೈಕ್ಷಣಿಕ ವಾತಾವರಣಗಳಿಂದ ನನಗೆ ನಿರಾಶೆ ಕವಿಯತೊಡಗಿತು. ಕಾಲೇಜ್ ಮತ್ತು ಮೆಜಾರಿಟಿ ವಿದ್ಯಾರ್ಥಿಗಳಿಗೆ ತಕ್ಕಂತೆಯೇ ಪ್ರೊಫೆಸರ್‌ಗಳಿದ್ದರು. ಬೆಳಗ್ಗೆ ಹತ್ತೂವರೆ ಗಂಟೆಗೆ ಕಾಲೇಜ್ ಮುಗಿಸಿ ನಂತರ ಸಂಜೆಯವರೆಗೆ ಏನು ಕಡಿಯುವುದು ಎನಿಸತೊಡಗಿತು. ಕಾಲೇಜ್‌ನಲ್ಲಿ ಕಲಿಯುವುದಕ್ಕಿಂತ ಕೋರ್ಟ್‌ನಲ್ಲಿ ಕಲಿಯುವುದೇ ಹೆಚ್ಚಿದೆಯೆನ್ನುವ ಭಾವನೆ ತೀವ್ರಗೊಳ್ಳತೊಡಗಿತು. ತಮ್ಮ ಲಾ

ಕಾಲೇಜ್‌ಗೆ ಸಮೀಪದಲ್ಲಿಯೇ ಇದ್ದ ಕೋರ್ಟ್‌ಗೆ ಹೋಗತೊಡಗಿದೆ. ಮರ್ಡರ್ ಕೇಸ್‌ಗಳು ನನ್ನಲ್ಲಿ ಆಸಕ್ತಿ ಕೆರಳಿಸುತ್ತಿದ್ದವು. ಸಿವಿಲ್ ಕೇಸ್‌ಗಳಲ್ಲಿ ಮನುಷ್ಯ ಸಂಬಂಧಗಳಿಲ್ಲದೆ ಬರೀ ಆಸ್ತಿ, ಅಧಿಕಾರ ಸಂಬಂಧಗಳೇ ಇರುತ್ತವೆ ಎನಿಸತೊಡಗಿತು. ದೇವದಾಸ್, ಎ. ಶಾಮಣ್ಣ ಮುಂತಾದ ಕ್ರಿಮಿನಲ್ ಲಾಯರ್‌ಗಳ ವಾದಗಳನ್ನು ಕೇಳಲು ಹೆಚ್ಚೂಕಡಿಮೆ ನಿತ್ಯ ಎನ್ನುವಂತೆ ಕೋರ್ಟಿಗೆ ಹೋಗತೊಡಗಿದೆ.

ಒಂದು ದಿನ ಲಾ ಕಾಲೇಜ್ ಮುಗಿಸಿಕೊಂಡು ಲಂಕೇಶರನ್ನು ಕಂಡು ಮಾತಾಡಿಸೋಣವೆಂದು ಸೆಂಟ್ರಲ್ ಕಾಲೇಜ್ ಕಡೆಗೆ ನಡೆದೆ.

ನೋಡು ನೋಡುವಷ್ಟರಲ್ಲಿ ಗವರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ ಆವರಣದಿಂದ ಒಬ್ಬ ಯುವಕ ಕಬ್ಬಿಣದ ರಾಡ್ ಒಂದನ್ನು ಹಿಡಿದುಕೊಂಡು ಓಡಿ ಬರತೊಡಗಿದ. ದಿಟ್ಟಿಸಿ ನೋಡಿದೆ. ಹಿಂದಿ ವಿರೋಧಿ ಚಳವಳಿಯಲ್ಲಿ ನನ್ನೊಂದಿಗೆ ಚಳವಳಿಗೆ ಹುಡುಗರನ್ನೆಲ್ಲ ಹುರಿದುಂಬಿಸಲು ಬರುತ್ತಿದ್ದ ವಿಲಿಯಮ್‌ನೇ ಓಡುತ್ತಿದ್ದ ಯುವಕ ಎನ್ನುವುದನ್ನು ಗುರುತಿಸಿದೆ. ಅವನ ಹಿಂದೆ ನೂರಾರು ವಿದ್ಯಾರ್ಥಿಗಳ ಗುಂಪು ಹಿಡಿಯಿರಿ ಹಿಡಿಯಿರಿ, ಕೊಲೆಗಾರ, ಪ್ರಿನ್ಸಿಪಾಲ್‌ರನ್ನು ಕೊಂದಿದ್ದಾನೆ ಇತ್ಯಾದಿಯಾಗಿ ಕೂಗುತ್ತಾ ಬರುತ್ತಿತ್ತು. ವಿಲಿಯಮ್ ಎನ್.ಸಿ.ಸಿ. ಗ್ಯಾರೇಜ್ ಒಳಹೊಕ್ಕು ಷಟರ್ ಅನ್ನು ಎಳೆದುಕೊಂಡುಬಿಟ್ಟ. ಹುಡುಗರೆಲ್ಲ ಕಲ್ಲಿನಿಂದ ಷಟರ್ ಅನ್ನು ಜಜ್ಜಿ ತೆರೆಯಲು ಯತ್ನಿಸುತ್ತಿರುವಾಗ ಪೋಲೀಸರು ಬಂದು ಅವರನ್ನೆಲ್ಲ ಚದುರಿಸಿದರು. ಪೋಲೀಸರು ರಕ್ಷಣೆ ನೀಡುವ ಆಶ್ವಾಸನೆ ನೀಡಿದ ಮೇಲೆ ವಿಲಿಯಮ್ ಷಟರ್ ತೆರೆದ. ಕೊಲೆ ಮಾಡಿದ್ದರ ಬಗ್ಗೆ ಯಾವುದೇ ಪಶ್ಚಾತ್ತಾಪ, ಭಯ, ಕಂಪನಗಳಿಲ್ಲದೆ ನಿರ್ವಿಕಾರವಾಗಿ ನಿಂತಿದ್ದ ವಿಲಿಯಮ್ ಕೈಗಳಿಗೆ ಪೊಲೀಸರು ಕೋಳ ತೊಡಿಸಿದರು. ಸಿಟ್ಟಿಗೆದ್ದ ವಿದ್ಯಾರ್ಥಿಗಳ ಒಂದು ಗುಂಪು ವಿಲಿಯಮ್ ಮೇಲೆ ಮುಗಿಬೀಳಲು ಬಂದಾಗ ವಿಲಿಯಮ್‌ನ ಕ್ಲಾಸ್‌ಮೇಟ್‌ಗಳು ಅಡ್ಡ ಬಂದು ಅವನಿಗೆ ರಕ್ಷಣೆ ನೀಡಿದರು. ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ "ನಿಮ್ಮ ಪರ್ಸನಲ್ ಜಗಳಗಳ ಸೇಡನ್ನು ಈ ನೆಪದಲ್ಲಿ ತೀರಿಸಿಕೊಳ್ಳೋಕೆ ಬರಬೇಡಿ. ಕಾನೂನಿಗೆ ಅಪರಾಧಿ ಶರಣಾಗಿದ್ದಾನೆ. ಕೋರ್ಟ್ ಶಿಕ್ಷೆ ಕೊಡುತ್ತೆ, ನೀವಲ್ಲ" ಎಂದರು.

ಹಿಂದಿ ವಿರೋಧಿ ಚಳವಳಿಯಲ್ಲಿ ಇಟ್ಟಿಗೆ, ಕಲ್ಲುಗಳಿಂದ ನಾನು ವಿದ್ಯಾರ್ಥಿಗಳೊಂದಿಗೆ ಸೇರಿ ಕಪಾಲಿ ಥೇಟರ್ ಮೇಲೆ ದಾಳಿಯಿಡುವಾಗ ಪೊಲೀಸ್ ಇನ್ಸ್‌ಪೆಕ್ಟರ್‌ನೊಬ್ಬ "ಕಲ್ಲು ಹಿಡಿದ್‌ಕಂಡೇ ನೀವ್ ಇಷ್ಟು ಹಾರಾಡ್‌ತಿರಬೇಕಿದ್ರೆ ನಮ್ ಕೈಯಾಗೆ ಬುಲೆಟ್ ಅವೆ ಗೊತ್ತಾ?" ಎಂದು ಕೇಳಿದ್ದಕ್ಕೆ ನಾನು "ನಮ್ಮ

ಗಟ್ಸ್ ನಿಮ್ಮ ಬುಲೆಟ್ಸ್‌ಗಿಂತ ಸ್ಟ್ರಾಂಗ್ ಗೊತ್ತಾ?" ಎಂದು ಪ್ರತಿಯೇಟು ಕೊಟ್ಟಿದ್ದೆ. ಆಗ ನನ್ನ ಪಕ್ಕದಲ್ಲಿದ್ದ ವಿಲಿಯಮ್ ನನ್ನನ್ನು ಅಪ್ಪಿಕೊಂಡು "ಆ ಇನ್ಸ್‌ಪೆಕ್ಟರ್‌ಗೆ ಒಳ್ಳೆ ಏಟು ಕೊಟ್ಟೆ" ಎಂದದ್ದು ನೆನಪಾಯಿತು. ಚಳವಳಿಯಲ್ಲಿ ತೀರಾ ಸೌಮ್ಯವಾಗಿ ವರ್ತಿಸುತ್ತಿದ್ದ ವಿಲಿಯಮ್‌ನನ್ನು "ಏನಯ್ಯ ಹಳ್ಳೀಲಿಂದ ಬಂದ ನಂಗೇ ಇಷ್ಟ್ ಧೈರ್ಯ ಇರೋವಾಗ ನೀನು ಪೋಲೀಸ್‌ನೋರ್ನ್ನ ಕಂಡು ಒಳ್ಳೆ ಪುಕ್ಕಲು ಥರ ಆಡ್ತಾ ಇದೀಯಲ್ಲ?" ಎಂದು ಛೇಡಿಸಿದ್ದೂ ನೆನಪಿಗೆ ಬಂದಿತು. ಅಂಥ ಸೌಮ್ಯ ವಿಲಿಯುವ್‌ನಲ್ಲಿ ಕೊಲೆಗಡುಕತನ ಅದೆಲ್ಲಿ ಅಡಗಿಕೊಂಡಿತ್ತೋ ಎಂದು ದಿಗ್ಭ್ರಮೆಗೊಂಡೆ.

ಅವನ ಖಾಸಾ ಸ್ನೇಹಿತನನ್ನು ತಡೆದು ನಿಲ್ಲಿಸಿದೆ. ಇಂಡಿಯಾ ಕಾಫಿ ಹೌಸ್‌ಗೆ ಕರೆದೊಯ್ದೆ. ವಿಲಿಯಮ್ ಕೊಲೆಗಾರನೆಂದು ನಂಬಲೇ ಆಗುತ್ತಿಲ್ಲವೆಂದು ಮಾತಿಗಾರಂಭಿಸಿದೆ.

ವಿಲಿಯುವ್‌ನ ನಾಲ್ವರು ಸ್ನೇಹಿತರು ಪರಸ್ಪರ ವಾತುಗಳನ್ನು ಕಸಿದುಕೊಳ್ಳುವವರಂತೆ ಬಡಬಡ ಮಾತನಾಡತೊಡಗಿದರು..... "ನಮ್ಮ ಕಣ್ಣೆದುರೇ ರಾಡ್‌ನಿಂದ ಒಂದೇ ಹೊಡೆತ ಹಾಕಿದ, ಪ್ರಿನ್ಸಿಪಾಲ್ 'ಆ' ಎಂದು ಬಾಯಿ ತೆರೆಯೋದ್ದೂ ಛಾನ್ಸ್ ಇಲ್ದಂಗೆ ಪ್ರಾಣ ಹೊರಟೋಯ್ತು" ಎಂದರು.

ವಿಲಿಯಮ್ ಪ್ರಿನ್ಸಿಪಾಲ್‌ರನ್ನು ಕೊಂದುದು ಏಕೆಂದು ಅವನ ಸ್ನೇಹಿತರು ವಿವರಿಸಿದರು.

ಪ್ರಿನ್ಸಿಪಾಲ್ ಮುನಿಗವಿಯಪ್ಪನವರದು ಭೀಮಕಾಯ. ಕರ್ರಗೆ ಎತ್ತರಕ್ಕಿದ್ದ ಅವರಿಗೆ ತೊನ್ನು ರೋಗ ತಗುಲಿಕೊಂಡಿತ್ತು. ಅವರ ಕಪ್ಪುಬಣ್ಣ ತೊನ್ನನ್ನು ಇನ್ನಷ್ಟು ವಿಕಾರ ಕಾಣುವಂತೆ ಮಾಡಿತ್ತು.

ವಿಲಿಯಮ್‌ನ ತಾಯಿ ರೀಟಮ್ಮನ ಜೊತೆಗೆ ಮುನಿಗವಿಯಪ್ಪ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದರು. ರೀಟಮ್ಮ ವಿಧವೆ. ಬಡವಿಯೂ ಕೂಡಾ. ವಿ.ವಿ. ಪುರದ ಒಂದು ಭಾಗವಾಗಿರುವ ಪಾರ್ವತಿಪುರದಲ್ಲಿ ವಾಸವಾಗಿದ್ದ ರೀಟಮ್ಮ ವಿಧವೆಯಾದ ಮೇಲೆ ಮುನಿಗವಿಯಪ್ಪನವರನ್ನೇ ನೆಚ್ಚಿಕೊಂಡಿದ್ದಳು. ವಿಲಿಯಮ್‌ಗೆ ಸಹೋದರಿಯರೂ ಇದ್ದರು. ವಿಲಿಯಮ್‌ನನ್ನು ಸರ್ಕಾರಿ ಕಾಲೇಜ್‌ಗೆ ಮುನಿಗವಿಯಪ್ಪನವರೇ ಸೇರಿಸಿದ್ದರು. ಬಿ.ಎಸ್ಸಿ.ಯಲ್ಲಿ ವಿಲಿಯಮ್ ಓದುತ್ತಿದ್ದ.

ವಿಲಿಯಮ್‌ನ ತಾಯಿಯೊಂದಿಗೆ ಪ್ರಿನ್ಸಿಪಾಲ್‌ಗೆ ಸಂಬಂಧವಿದೆಯನ್ನುವುದು ಇಡೀ ಕಾಲೇಜ್‌ಗೆ ಗೊತ್ತಾಗಿ ಹೋಗಿತ್ತು. ಕಣ್ಣುಮುಚ್ಚಿಕೊಂಡು ಹಾಲು ಕುಡಿಯುವ

ಬೆಕ್ಕಿನಂತೆ ಆಡುತ್ತಿದ್ದ ಮುನಿಗವಿಯಪ್ಪನವರ ಕಿವಿಗೆ ಬೀಳುವಂತೆಯೇ ವೈಯಕ್ತಿಕ ವೈಮನಸ್ಸು ಇರುವ ಕಾಲೇಜ್ ಸಿಬ್ಬಂದಿ ಮಾತಾಡಿಕೊಳ್ಳತೊಡಗಿತ್ತು. ಮುನಿಗವಿಯಪ್ಪನವರು ಕಾಲೇಜ್ ಆಡಳಿತದಲ್ಲಿ ಗಟ್ಟಿಗರಾಗಿದ್ದರು. ಲೆಕ್ಚರರ್ ಒಬ್ಬ "ಇವ್ನು ಮಾಡೊ ಹಲ್ಕಾ ಕೆಲಸಗಳು ನಮಗೆ ಗೊತ್ತಿಲ್ವೆ. ಲಾಲ್ ಬಹಾದ್ದೂರ್ ಶಾಸ್ತ್ರಿ ಥರ ಪೋಜ್ ಕೊಡ್ತವ್ನೆ. ಪ್ರಾಕ್ಟಿಕಲ್‌ನಲ್ಲಿ ವಿಲಿಯಮ್ ಹೇಗೆ ಮಾಡಿದಾನೆ ಅಂತ ಪ್ರಶ್ನಿಸ್ತಾನೆ. ಅದರ ಇಂಡೈರೆಕ್ಟ್ ಅರ್ಥ ನಮಗೆ ಗೊತ್ತಾಗಾಕಿಲ್ವೆ. ಹೆಚ್ಚಿಗೆ ಮಾರ್ಕ್ಸ್ ಹಾಕಿ ಅಂತ್ಲೇ ಅಲ್ವೆ!" ಎಂದು ಮಾತಾಡಿದ್ದು ಮುನಿಗವಿಯಪ್ಪನವರ ಕಿವಿಗೆ ಬಿದ್ದಿತ್ತು.

ವಿಲಿಯಮ್ ತನ್ನ ಓರಗೆಯ ಹುಡುಗರೊಂದಿಗೆ ಜಗಳವಾಡಬೇಕಾಗಿ ಬಂದಾಗ ತಾನೇ ಹಿಂದೆ ಸರಿಯುತ್ತಿದ್ದ. ಅದಕ್ಕೆ ಕಾರಣವೂ ಇತ್ತು. ಕಾಲೇಜ್ ಹುಡುಗರು ಪ್ರಿನ್ಸಿಪಾಲ್ ಬಂದ ತಕ್ಷಣ "ನಿಮ್ ಡ್ಯಾಡಿ ಬಂದ ನೋಡೊ" ಎಂದು ಛೇಡಿಸುತ್ತಿದ್ದರು. ಒಮ್ಮೆ ವಿಲಿಯಮ್ "ಹೌದ್ರೊ" ಅವ್ರೇ ನಮ್ ಡ್ಯಾಡಿ. ಏನೀಗ?" ಎಂದು ತಿರುಗಿಬಿದ್ದ. "ಓ ಡ್ಯಾಡಿಯಂತೆ ಡ್ಯಾಡಿ! ನಾವೆಲ್ಲ ಪ್ರಿನ್ಸಿಪಾಲ್ ಮುಂದೆ ನಿಂತಿರ್ತೀವೆ, ಅವಾಗಲೇ ನೀನು 'ಹಲೊ ಡ್ಯಾಡಿ' ಎಂದು ಮಾತಾಡಿಸಬೇಕು" ಎಂದು ಸವಾಲು ಹಾಕಿದರು.

ಕಾಲೇಜ್ ಪೋರ್ಟಿಕೋದಲ್ಲಿ ಪ್ರಿನ್ಸಿಪಾಲ್ ಮುನಿಗವಿಯಪ್ಪ ಇಳಿಯುತ್ತಿದ್ದಂತೆಯೇ ವಿದ್ಯಾರ್ಥಿಗಳ ಗುಂಪು ಸ್ವಾಗತಕ್ಕೆನ್ನುವಂತೆ ನಿಂತಿತ್ತು. ಮುಂದೆಯೇ ನಿಂತಿದ್ದ ವಿಲಿಯಮ್ "ಹಲೋ ಡ್ಯಾಡಿ" ಎಂದುಬಿಟ್ಟ. ಮುನಿಗವಿಯಪ್ಪ ಕ್ಷಣ ಬೆಚ್ಚಿ ಬೆವರೊಡೆದಂತಾಗಿ ತಕ್ಷಣವೇ ಚೇತರಿಸಿಕೊಂಡು "ಫೂಲಿಷ್ ಫೆಲೊ" ಎಂದು ಗೊಣಗಿ ಹೊರಳಿಯೂ ನೋಡದೆ ಕಾಲೇಜೊಳಕ್ಕೆ ಹೋದಾಗ ವಿದ್ಯಾರ್ಥಿಗಳ ಗುಂಪು ಗೊಳ್ಳೆಂದಿತು. ವಿಲಿಯಮ್‌ಗೆ ಅಲ್ಲೇ ಸತ್ತು ಹೋಗಬೇಕೆನಿಸಿತು. ಅವನ ಆತ್ಮೀಯ ಸ್ನೇಹಿತರು ಕರೆದೊಯ್ದು ಗುಂಡು ಹಾಕಿಸಿ ಸಮಾಧಾನಪಡಿಸಿದರು. ಗುಂಡಿನ ಮತ್ತು ಏರಿದಂತೆಲ್ಲ ಮುನಿಗವಿಯಪ್ಪ ಅಂದ 'ಫೂಲಿಷ್ ಫೆಲೊ' ಎನ್ನುವ ಮಾತು ಅಲೆಯಲೆಯಾಗಿ ತೇಲಿ ಬಂದು ವಿಲಿಯಮ್ ಕಿವಿ ಪಟಲಗಳಿಗೆ ಅಪ್ಪಳಿಸತೊಡಗಿತು.

ಮುನಿಗವಿಯಪ್ಪನವರಿಗೆ ವಯಸ್ಸಾಗುತ್ತಾ ಬಂದಿತ್ತು. ರೀಟಮ್ಮನಲ್ಲಿ ಮುಂಚಿನ ಆಕರ್ಷಣೆ ಮಸುಕಾದಂತೆ ಅನಿಸತೊಡಗಿತ್ತು. ರೀಟಮ್ಮನಿಗೆ ತಿಂಗಳಾ ಕೊಡುತ್ತಿದ್ದ ದುಡ್ಡನ್ನು ನಿಲ್ಲಿಸಿದ್ದರು. ರೀಟಮ್ಮ ಮುನಿಗವಿಯಪ್ಪನವರನ್ನು ಪೀಡಿಸಿ ಪಡೆಯತೊಡಗಿದ್ದಳು. ಅಂಥ ಸಂದರ್ಭಗಳಲ್ಲಿ ಮಾತಿನ ಚಕಮಕಿ ನಡೆದು

ಜಗಳಗಳಾಗತೊಡಗಿದ್ದವು. ಒಮ್ಮೆ ವಿಲಿಯಮ್ ಮನೆಯಲ್ಲಿರುವಾಗಲೇ ರೀಟಮ್ಮ ಮುನಿಗವಿಯಪ್ಪನವರಿಗೆ "ಜನ ನಿನ್ನ ನೋಡ್ಕೋಕೂ ಹೇಸ್‌ಕೋತಾರೆ. ಅಂಥದರಲ್ಲಿ ಹತ್ತು ವರ್ಷ ನಿನ್ ಪಕ್ಕದಾಗೆ ಮಲಕ್ಕೊಂಡಿದೀನಲ್ಲ. ಅದಕ್ಕೆ ತಕ್ಕ ಪಾಠ ಕಲಿಸ್ತಿದೀಯಾ ನೀನು...." ಎಂದು ಏರುದನಿಯಲ್ಲಿ ಚೀರಾಡತೊಡಗಿದಳು. ಅಂದೇ ಕೊನೆಯಾಯಿತು. ಮುನಿಗವಿಯಪ್ಪ ರೀಟಮ್ಮನ ಮನೆಗೆ ಬರುವುದು.

ವಿಲಿಯಮ್ ಕಾಲೇಜ್‌ನ ಲ್ಯಾಬ್‌ನಲ್ಲಿ ಪ್ರಾಕ್ಟಿಕಲ್ ಎಗ್ಸಾಮ್ ಕೊಡುತ್ತಿದ್ದ ಲೆಕ್ಚರರ್ ಒಬ್ಬ "ಏಕೊ ವಿಲಿಯಮ್, ಪ್ರಿನ್ಸಿಪಾಲ್ ನಿನ್ ಮೇಲೆ ಕೋಪಗೊಂಡವ್ರೆ ಅಂತ ಕಾಣ್ಸುತ್ತೆ. ಪ್ರಾಕ್ಟಿಕಲ್‌ನಲ್ಲಿ ಸರಿಯಾಗಿ ಸ್ಟ್ರಿಕ್ಟ್ ಮಾಡಿ ಅಂತ ಹೇಳಿದ್ರು ನಂಗೆ ಕರೆಸಿ...." ಎಂದರು ರಾಗವಾಗಿ. ವಿಲಿಯಮ್ ತಲೆ ಸ್ಫೋಟಗೊಂಡಂತಾಯ್ತು. ಪ್ರಾಕ್ಟಿಕಲ್ ನಿಲ್ಲಿಸಿದ ಹಾಗೇ ತನ್ನ ಗೆಳೆಯನೊಂದಿಗೆ ಗುಂಡು ಹಾಕಲು ಹೋದ. ಗುಂಡು ಹಾಕಿ ಏರುಧ್ವನಿಯಲ್ಲಿ ಅಳತೊಡಗಿದ. ಗೆಳೆಯ ಸಂತೈಸಿದಷ್ಟೂ ರೋದಿಸತೊಡಗಿದ.

"ನನ್ನಮ್ಮನ್ನ ಸುಲಿದು ತಿಂದ ಸೂಳೇಮಗ ನನ್ನ ಮುಗಿಸೋಕೆ ಹೊಂಟವ್ನೆ. ನಾನಿನ್ನು ಅವುನ್ನ ಬಿಡೊಲ್ಲ" ಎಂದು ಗುಡುಗಿದ.

ಮಾರನೇ ದಿನವೇ ಬೆಳಗ್ಗೆ ಮುನಿಗವಿಯಪ್ಪನವರನ್ನು ವಿಲಿಯಮ್ ಕೊಲೆ ಮಾಡಿದ.

ವಿಲಿಯಮ್ ಕೇಸನ್ನು ಲಾಯರ್ ಎ. ಶಾಮಣ್ಣನವರು ನಡೆಸಿದರು. ಸೆಷನ್ಸ್‌ನಲ್ಲಿ ಜೀವಾವಧಿ ಶಿಕ್ಷೆಯಾಯಿತು ವಿಲಿಯಮ್‌ಗೆ.

ವಿಲಿಯಮ್ ಕೇಸಿನ ಪ್ರತಿ ಹಂತವನ್ನೂ ಕೋರ್ಟ್‌ನಲ್ಲಿ ನಾನು ಅವಗಾಹನಿಸಿದೆ. ಒಮ್ಮೆಯಂತೂ ಜಡ್ಜ್ "ಏನಯ್ಯ ಸ್ಟೂಡಿಯಸ್ ಮತ್ತು ಪಂಕ್ಚುಯಲ್ ಆಗಿ ಲಾಯರ್‌ಗಳೂ ಕೂಡಾ ಕೋರ್ಟ್ ಅಟೆಂಡ್ ಮಾಡಲ್ಲ" ಎಂದುಬಿಟ್ಟರು.

ನನ್ನ ಕಾಲೇಜ್‌ನಲ್ಲಿ ಈ ಕೇಸಿನ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ಸಹಪಾಠಿಗಳಷ್ಟೇ ಅಲ್ಲ ಪ್ರೊಫೆಸರ್‌ಗಳೂ ನನ್ನನ್ನು ಮುತ್ತಿಕೊಳ್ಳತೊಡಗಿದರು. ಕೋರ್ಟ್ ಕಲಾಪಗಳನ್ನು ಚಾಚೂ ತಪ್ಪದೆ ಹೇಳುವ ವ್ಯಕ್ತಿ ಎನ್ನುವ ಪ್ರತೀತಿ ನನ್ನ ಬಗ್ಗೆ ಹರಡಿಕೊಂಡುಬಿಟ್ಟಿತ್ತು.

ಮುಂದೆ ಹೈಕೋರ್ಟ್‌ನಲ್ಲಿ ವಿಲಿಯಮ್‌ಗೆ ರಿಯಾಯಿತಿ ದೊರೆತು ಶಿಕ್ಷೆ ಆರು ವರ್ಷಗಳಿಗೆ ಇಳಿಯಿತು.

27

"ತಾಜಮಹಲ್ ಬಡವರ ಪ್ರೇಮವನ್ನು ಅಣಕಿಸುತ್ತದೆ"

ಕಾನೂನು ಪದವಿಯ ವಿದ್ಯಾರ್ಥಿ ಆಗಿರುವಾಗಲೇ ನಾನು ಕೋರ್ಟಿಗೆ ಹೋಗುವಂತಾದುದರ ಬಗ್ಗೆ ಈಗಾಗಲೇ ಹೇಳಿರುವೆ. ಒಮ್ಮೆ ಲಂಕೇಶರನ್ನು ಕಾಣಲು ಹೋದಾಗ ಅವರು "ಲಾ ಓದೋಕೆ ಸ್ಟೂಡೆಂಟ್‌ಗಳು ಬೇಕಿಲ್ಲ; ನೌಕರರೇ ಸಾಕು. ಆ ಕೋರ್ಸ್‌ಗೆ ಒಂದು ಗಂಭೀರತೇನೆ ಇಲ್ವಲ್ಲಯ್ಯ!" ಎಂದರು.

ಅವರೇ ಮುಂದುವರೆದು, "ನೋಡು, ಕೋರ್ಸ್ ಹೇಗಾದ್ರೂ ಇರ್ಲಿ, ಈವರೆಗೂ ನಮ್ಮ ರಾಜ್ಯದಿಂದ ಹೆಸರಾಂತ ವಕೀಲ ಹುಟ್ಟಿಬರಲಿಲ್ಲ. ಈ ವೃತ್ತಿಗೂ ನಮ್ಮಲ್ಲಿ ವಂಶಪಾರಂಪರ್ಯದ ರೋಗ ಬಡಿದುಕೊಂಡಿದೆ; ವೃತ್ತಿ ಹೊಟ್ಟೆಪಾಡಿಗೆ, ಬದುಕುವುದಕ್ಕೆ, ಹಣಗಳಿಸಲಿಕ್ಕೆ ಮಾತ್ರ ದಾರಿಯಾಗಿಬಿಟ್ಟರೆ ಹೀಗಾಗುತ್ತೆ. ಕೇರಳ, ಬಾಂಬೆ, ಬೆಂಗಾಲ್‌ಗಳಲ್ಲಿ ಕ್ಲೈಂಟ್‌ಗಳೇ ವಕೀಲರನ್ನು ಪ್ರಸಿದ್ಧಿಗೆ ಬರುವಂತೆ ಮಾಡಿದರು; ಕಾನ್‌ಸ್ಟಿಟ್ಯೂಷನ್ ಅನ್ನು ಚಾಲೆಂಜ್ ಮಾಡಿದರು. ನಮ್ಮಲ್ಲಿ ಜನರೂ ಅಂಥವರಿಲ್ಲ, ವಕೀಲರೂ ಇಲ್ಲ." ಎಂದರು.

ನನಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ "ಹೌದು ಸಾರ್" ಎಂದೆ. "ಎಲ್ಲದಕ್ಕೂ ಹೌದು ಸಾರ್ ಎನ್ನೋದು ಮಾತ್ರ ಗೊತ್ತು ನಿಂಗೆ. ಅಲ್ಲಯ್ಯ ಮುಂಜಾನೆ ಮೂರು ತಾಸು ಕಲಿಯೋಕೆ ನಿನ್ನಂಥವರು ಪಟ್ಟಣದಲ್ಲಿ ಇಷ್ಟೆಲ್ಲ ಖರ್ಚು ಮಾಡಿಕೊಂಡಿರಬೇಕಲ್ಲ! ಇದೆಂಥ ವ್ಯವಸ್ಥೆ. ನಿಮ್ಮೂರಿನಲ್ಲಿಯೇ ಇದ್ದು ಪರೀಕ್ಷೆ ಸಮಯದಲ್ಲಿ ಮಾತ್ರ ಬಂದು ಬರೆಯುವಂತಿರಬೇಕು ಅಲ್ವಾ?" ಎಂದರು.

ನನ್ನನ್ನು ಅಧೈರ್ಯಗೊಳಿಸಲು ಹೀಗೆ ಮಾತಾಡುತ್ತಿರುವರೆ ಲಂಕೇಶ್ ಎಂದು ಒಂದು ಕ್ಷಣ ಯೋಚಿಸಿದೆ. ಅವರ ಮುಖವನ್ನು ಓದಿದೆ. ಲಾಯರ್ ವೃತ್ತಿಗೆ ಘನತೆ ಬರಬೇಕು ಎನ್ನುವ ಉದ್ದೇಶ ಅಲ್ಲಿ ಅಡಗಿದ್ದು ಕಾಣಿಸಿತು. ಕಾಫಿ ಕೊಡಿಸಿ ನನ್ನನ್ನು ಬೀಳ್ಕೊಟ್ಟರು.

ಬೆಂಗಳೂರಿನಲ್ಲಿ ಅಖಿಲ ಭಾರತ ಮಟ್ಟದಲ್ಲಿ ವಕೀಲರ ಸಮ್ಮೇಳನ ಜರುಗುವುದು ತಿಳಿದು ನನ್ನಲ್ಲಿ ಸಂತೋಷವುಕ್ಕಿತು. ರಾಷ್ಟ್ರಖ್ಯಾತಿಯ ನ್ಯಾಯಾಧೀಶರು ಮತ್ತು ವಕೀಲರುಗಳು ಬೆಂಗಳೂರಿಗೆ ಬರುತ್ತಾರೆ, ಅವರನ್ನೆಲ್ಲ ನಾನು ಸಮೀಪದಿಂದ ನೋಡಬಹುದಲ್ಲಾ ಎನ್ನುವುದು ನನ್ನ ಸಂತೋಷಕ್ಕೆ ಕಾರಣವಾಗಿತ್ತೆಂದು ಪ್ರತ್ಯೇಕ ಹೇಳಬೇಕಿಲ್ಲ.

ಕೆ.ಎಸ್. ಹೆಗಡೆ, ಕೆ. ಸುಬ್ಬರಾವ್‌ರಂಥ ಸುಪ್ರೀಂಕೋರ್ಟ್ ನ್ಯಾಯಾಧೀಶರು, ಪಿ. ಗೋವಿಂದ ಮೆನನ್, ಗೋಖಲೆ, ಭಾರತದ ಅಟಾರ್ನಿ ಜನರಲ್ ನಿರನ್‌ಡೇ, ಸಾಲಿಸಿಟರ್ ಜನರಲ್ ಎಸ್.ವಿ. ಗುಪ್ತೆ ಮುಂತಾದ ಖ್ಯಾತರು ಬೆಂಗಳೂರಿಗೆ ಬಂದು ಜಮಾಯಿಸಿದರು.

ಕರ್ನಾಟಕ ಹೈಕೋರ್ಟ್ ಚೀಫ್ ಜಸ್ಟಿಸ್ ಹೊಂಬೇಗೌಡರು ತೀರಿಕೊಂಡಿದ್ದರು. ಅವರ ಜಾಗಕ್ಕೆ ಎ.ಆರ್. ಸೋಮನಾಥ ಅಯ್ಯರ್ ಬಂದಿದ್ದರು. ವಿ.ಎಸ್. ಮಳೀಮಠ ಅಡ್ವೋಕೇಟ್ ಜನರಲ್ ಆಗಿದ್ದರು.

ಜಿ.ಆರ್. ಯತಿರಾಜುಲು ನಾಯ್ಡು ಸಮ್ಮೇಳನದ ರಿಸೆಪ್ಷನ್ ಕಮಿಟಿ ಚೇರ್ಮನ್ ಆಗಿದ್ದರು. ಸುಮಾರು ಏಳು ಸಾವಿರ ಪ್ರತಿನಿಧಿಗಳು ಬಂದಿದ್ದರು.

ಸತತ ಕೋರ್ಟ್ ಸಂಪರ್ಕದಲ್ಲಿದ್ದ ನನಗೆ ವಾಲಂಟೀಯರ್‌ಗಳನ್ನು ಕಾಲೇಜ್‌ನಿಂದ ಕರೆತರುವ ಜವಾಬ್ದಾರಿ ವಹಿಸಿಕೊಟ್ಟಿದ್ದರು. ನನ್ನ ಸಹಪಾಠಿಗಳಾಗಿದ್ದ ಎಂ. ಬಾಲಕೃಷ್ಣನ್ ಮತ್ತು ಬ್ಯಾಡರಳ್ಳಿ ಹನುಮಂತರಾಯಪ್ಪ (ಈಗ ಈತ ಬೆಂಗಳೂರು ಜಿಲ್ಲಾ ಜಾತ್ಯತೀತ ಜನತಾ ದಳದ ಅಧ್ಯಕ್ಷ) ಮುಂತಾದವರೊಡಗೂಡಿ ನಮ್ಮ ಕಾಲೇಜ್‌ನಿಂದ ವಾಲಂಟೀಯರ್‌ಗಳ ಟೀಮನ್ನು ಕರೆದೊಯ್ದೆ.

ಬೃಹತ್ ಸಮ್ಮೇಳನದಲ್ಲಿ ಕಾನ್‌ಸ್ಟಿಟ್ಯೂಷನಲ್, ಕ್ರಿಮಿನಲ್, ಸಿವಿಲ್, ಲೇಬರ್ ಹೀಗೆ ಆರೇಳು ಶಾಖೆಗಳನ್ನು ಪ್ರತ್ಯೇಕವಾಗಿ ಏರ್ಪಡಿಸಿ ಏಕಕಾಲಕ್ಕೆ ಗೋಷ್ಠಿಗಳು ನಡೆಯುವಂತೆ ಮಾಡಿದ್ದರು. ಕ್ರಿಮಿನಲ್ ಲಾ ಕುರಿತ ಗೋಷ್ಠಿಗಳು ನಡೆಯುವಲ್ಲಿ ನಮ್ಮ ಕಾಲೇಜಿನ ಟೀಮ್ ವಾಲಂಟೀಯರ್ ಕೆಲಸಕ್ಕೆ ನಿಂತಿತ್ತು.

ಅಂದು ಕ್ರಿಮಿನಲ್ ಲಾ ಕ್ಕೆ ಸಂಬಂಧಿಸಿದ ವಿಷಯವೊಂದರ ಮೇಲೆ ರಾಮ್ ಜೇಠ್‌ಮಲಾನಿ ಮಾತಾಡಿದರು. ಸ್ವಲ್ಪ ಕುಳ್ಳು ವ್ಯಕ್ತಿತ್ವ ಎನ್ನಿಸಿದರೂ ಮುಖಭಾವದಲ್ಲಿಯ ಸ್ಥಿರತೆ, ದೃಢ ಹೆಜ್ಜೆಗಳು, ಆತ್ಮವಿಶ್ವಾಸದಿಂದ ಉಬ್ಬಿಕೊಂಡಿದ್ದ ಎದೆ, ನಿಖರತೆಯಿಂದ ನಿರರ್ಗಳಗೊಂಡಿದ್ದ ಗಂಟಲು ಇವೆಲ್ಲ ಜೇಠ್‌ಮಲಾನಿಯವರ ವ್ಯಕ್ತಿತ್ವಕ್ಕೆ ಪ್ರಭಾವಳಿಯನ್ನು ಸೃಷ್ಟಿಸಿದ್ದವು. ಅವರ ಇಂಗ್ಲಿಷ್ ಮಾತಿನ ಶೈಲಿ, ವಿಷಯದ ಮೇಲಿನ ಹಿಡಿತ, ವಾಕ್‌ಚಾತುರ್ಯಗಳು ನನ್ನ ಮನಸೆಳೆದವು. ಇವರ ವ್ಯಕ್ತಿತ್ವ ಅನುಕರಣೆಗೆ ಯೋಗ್ಯ ಎನಿಸಿತು. ಆದರ್ಶ ಲಾಯರ್‌ನ ಮಾಡೆಲ್ ಥರ ನನಗೆ ಆಗ ಕಾಣಿಸಿದರು.

ನಾನು ಕೆಲ ವಾಲಂಟೀಯರ್‌ಗಳ ಜೊತೆ ಸೇರಿಕೊಂಡು ರಿಸೆಪ್ಷನ್ ಕಮಿಟಿ ಚೇರ್ಮನ್ ಯತಿರಾಜಲು ನಾಯ್ಡು ಬಳಿ ಹೋದೆ. ಮರುದಿನವೂ ಜೇಠ್‌ಮಲಾನಿಯವರಿಂದ ನಮ್ಮ ಲಾ ಕಾಲೇಜ್ ವಿದ್ಯಾರ್ಥಿಗಳ ಸಲುವಾಗಿ ಸ್ಪೀಚ್ ಕೊಡಿಸುವ ಏರ್ಪಾಡು ಮಾಡಲು ಕೇಳಿಕೊಂಡೆವು. ಮಾರನೇ ದಿನ ಕಾಲೇಜ್‌ನಿಂದ ಬಹಳಷ್ಟು ವಿದ್ಯಾರ್ಥಿಗಳು ಬಂದಿದ್ದರು. ಜೇಠ್‌ಮಲಾನಿಯವರು ಸಂಕೀರ್ಣ ಹಾಗೂ ಕ್ಲಿಷ್ಟ ವಿಷಯುವನ್ನು ಬಿಟ್ಟು ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು "It is a secret worth knowing that lawyers rerealy go to law" (ಎಲ್ಲರಿಗೂ ಗೊತ್ತಿರಲೇಬೇಕಾದ ಒಂದು ಗುಟ್ಟಿದೆ – ಅದೇನೆಂದರೆ ವಕೀಲರು ಅಪರೂಪವಾಗಿ ಕಾನೂನನ್ನು ಬಳಸಿಕೊಳ್ಳುತ್ತಾರೆ) ಎನ್ನುವ ಕೊಟೇಷನ್ ಮೂಲಕ ಮಾತನ್ನು ಆರಂಭಿಸಿದರು.

ಪ್ರಕರಣವೊಂದರಲ್ಲಿ ತಮಗಾದ ಅನುಭವವನ್ನು ಹೇಳಿದರು.

ಬಾಂಬೆಯಲ್ಲಿ ಹಾಜಿಮಸ್ತಾನ್ ಎನ್ನುವ ಕಳ್ಳಸಾಗಾಣಿಕೆದಾರನ ಕೇಸ್‌ಗಳನ್ನು ಗೆದ್ದು ಪ್ರಸಿದ್ಧಿಗೆ ಬಂದಿದ್ದ ಜೇಠ್‌ಮಲಾನಿಯವರನ್ನು ಕಕ್ಷಿದಾರನೊಬ್ಬ ಸಂಪರ್ಕಿಸಿ ನಾಸಿಕ್ ಕೋರ್ಟ್‌ನಲ್ಲಿ ಬಂದು ವಾದ ಮಾಡುವಂತೆ ಆಹ್ವಾನಿಸುತ್ತಾನೆ. ಅದಕ್ಕಾಗಿ ಅಡ್ವಾನ್ಸ್ ಫೀಯನ್ನು ಕೊಟ್ಟು ಹೋಗುತ್ತಾನೆ. ಜೇಠ್‌ಮಲಾನಿಯವರ ಬಳಿಗೆ ಬಂದ ಕಕ್ಷಿದಾರ ನಾಸಿಕ್ ನಗರದ ಒಂದು ಜಾಗೆಯ ಟೆನೆಂಟ್ ಆಗಿದ್ದ. ಅವನ

ಲ್ಯಾಂಡ್‌ಲಾರ್ಡ್ ಜಾಗೆ ಖಾಲಿ ಮಾಡಿಸುವಂತೆ ಕೇಸ್ ಹಾಕಿದ್ದ. ಜೇಠ್‌ಮಲಾನಿಯವರಂಥ ಪ್ರಭಾವಿ ವಕೀಲರು ಬಂದು ವಾದ ಮಾಡಿದರೆ ಕೇಸ್ ನಿನ್ನಂತಾಗದಿದ್ದರೂ ಹೆಚ್ಚು ಅವಧಿಯವರೆಗೆ ಟೆನೆಂಟ್ ಆಗಿ ಮುಂದುವರಿಯಲು ಅವಕಾಶ ಸಿಗುತ್ತದೆ ಎಂದು ಕಕ್ಷಿದಾರನಿಗೆ ಹಲವಾರು ಜನ ಹೇಳಿದ್ದರಂತೆ.

ಕೇಸ್ ನಡೆಸಲು ಒಪ್ಪಿಕೊಂಡ ಜೇಠ್‌ಮಲಾನಿಯವರು ನಾಸಿಕ್‌ಗೆ ಹೋದರು. ಹಿಂದಿನ ದಿನ ಹೋಗಿ ಲಾಡ್ಜ್‌ವೊಂದರಲ್ಲಿ ತಂಗಿದರು. ಬೆಳಗ್ಗೆ ಹತ್ತೂವರೆಗೆ ಕೋರ್ಟ್‌ಗೆ ಹೋಗುವುದು ಎಂದಾಗಿತ್ತು. ಆದರೆ ಕಕ್ಷಿದಾರ ಮಾತ್ರ ನಾಪತ್ತೆ. ಹನ್ನೊಂದು ಗಂಟೆಯಾದರೂ ಯಾರೂ ಬಾರದಿದ್ದಾಗ ಜೇಠ್‌ಮಲಾನಿ ಸಿಡಿಮಿಡಿಗೊಳ್ಳತೊಡಗಿದರು. ಕಕ್ಷಿದಾರನ ನಿರ್ಲಕ್ಷ್ಯಕ್ಕೆ ಬೇಸತ್ತ ಜೇಠ್‌ಮಲಾನಿ ವಾಪಸ್ ಬಾಂಬೆಗೆ ಹೋಗಲು ತಮ್ಮ ಬ್ಯಾಗ್ ರೆಡಿ ಮಾಡಿಕೊಳ್ಳತೊಡಗಿದರು.

ಹನ್ನೊಂದುವರೆ ಆಗಿರಬಹುದು. ಆಗ ಕಕ್ಷಿದಾರ ಬಂದ ಸಪ್ಪೆ ಮುಖ ಹೊತ್ತು. ಅದೇಕೆ ಹೀಗೆ ತಡ ಮಾಡಿದಿರಿ ಎಂದು ಜೇಠ್‌ಮಲಾನಿ ಆಕ್ಷೇಪಿಸಿದರು.

'ನೀವು ಬಂದು ನನ್ನ ಪರ ವಾದಿಸುತ್ತೀರಿ ಎಂದು ಗೊತ್ತಾಗಿ ಲ್ಯಾಂಡ್‌ಲಾರ್ಡ್ ಪರ ವಕೀಲರು ಕುತಂತ್ರ ಮಾಡಿಬಿಟ್ಟಿದ್ದಾರೆ. ಈಗ ನೀವು ನನ್ನ ಪರ ಕೇಸ್ ವಾದಿಸುವ ಅವಶ್ಯಕತೆಯೇ ಇಲ್ಲದಂತೆ ಮಾಡಿಟ್ಟಿದ್ದಾರೆ.' ಎಂದ ಕಕ್ಷಿದಾರ.

"ಅದೆಲ್ಲ ಸುತ್ತಿಬಳಸಿ ಮಾತಾಡಬೇಡಿ, ನೇರ ವಿಷಯ ಹೇಳಿ" ಎಂದರು ಸಿಡುಕಿನಿಂದ ಜೇಠ್‌ಮಲಾನಿ.

"ಈಗ ನಾನು ಟೆನೆಂಟ್ ಆಗಿರುವ ಜಾಗ ಬಹು ಬೆಲೆ ಬಾಳುವಂಥದ್ದು. ಅಷ್ಟು ಮಾತ್ರವಲ್ಲದೆ ಆ ಜಾಗೆಯಲ್ಲಿ ನಾನು ಹಾಕಿರುವ ಫ್ಯಾಕ್ಟರಿ ಚೆನ್ನಾಗಿ ನಡೆಯುವುದಕ್ಕೆ ಜಾಗೆಯ ದೆಸೆಯೂ ಕಾರಣ. ಹೀಗಾಗಿ ಬಾಡಿಗೆ ಬೇಕಿದ್ದರೆ ಹೆಚ್ಚು ಕೊಡುವೆ ಎಂದು ಮಧ್ಯವರ್ತಿಯೊಬ್ಬರ ಮೂಲಕ ಹೇಳಿ ಕಳುಹಿಸಿದ್ದೆ. ಫ್ಯಾಕ್ಟರಿ ಪಕ್ಕದಲ್ಲಿಯೇ ನನ್ನ ಮನೆಯಿದೆ. ಮಧ್ಯವರ್ತಿ ನಮ್ಮ ಮನೆಗೆ ಬಂದಾಗ ನನ್ನ ಹೆಂಡತಿ ತಾನು ನಾಗದೇವತೆಗೆ ಪೂಜೆ ಮಾಡಿದ್ದರಿಂದ ಈ ಜಮೀನು ಭಾಗ್ಯವಾಗಿ ಬಂದಿದೆ ಎಂದು ಹೇಳಿಬಿಟ್ಟಳು. ಮಧ್ಯವರ್ತಿ ಲ್ಯಾಂಡ್‌ಲಾರ್ಡ್ ಪರ ಲಾಯರ್‌ಗೆ ಹೋಗಿ ರಾಜೀ ಮಾತುಕತೆ ನಡೆಸುವಾಗ ನನ್ನ ಹೆಂಡತಿ ನಾಗದೇವತೆಯ ಪರಮಭಕ್ತೆ ಎನ್ನುವ ಸಂಗತಿಯನ್ನು ಯಥಾರ್ಥ ಹೇಳಿದ್ದಾನೆ. ಆ ಲಾಯರ್ ಉಳಿದ ಮಾತುಗಳನ್ನೆಲ್ಲ ಬಿಟ್ಟು ನನ್ನ ಹೆಂಡತಿ ನಾಗದೇವತೆಯ ಭಕ್ತೆ ಎನ್ನುವುದನ್ನು ಮಾತ್ರ ಪಿಕ್ ಮಾಡಿಕೊಂಡ. ನಿನ್ನೆ ರಾತ್ರಿ ನಾವು ನಮ್ಮ ಗೆಳೆಯನ ಮನೆಯ ಫಂಕ್ಷನ್ ಅಟೆಂಡ್ ಮಾಡಲು

ಹೋಗಿ ಬಂದಾಗ ರಾತ್ರಿ ಹನ್ನೆರಡಾಗಿತ್ತು. ಬಾಗಿಲು ತೆರೆದೆ. ಎದೆ ಧಸ್ ಎಂದಿತು. ಭಾರೀ ನಾಗರಹಾವು ಹೆಡೆಯೆತ್ತಿ ಸ್ವಾಗತಕ್ಕೆ ನಿಂತಿತ್ತು. ನಾನು ಹಾವೂ ಹಾವೂ ಎಂದು ಚೀರುತ್ತಲೇ ನಮ್ಮ ಡ್ರೈವರ್ ಓಡಿ ಬಂದು ದೊಣ್ಣೆಯಿಂದ ಹೆಡೆಗೆ ಹೊಡೆದು ಸಾಯಿಸಿಬಿಟ್ಟ. ಸತ್ತ ನಾಗನನ್ನು ನೋಡಿದ ನನ್ನ ಹೆಂಡತಿ ಪ್ರಜ್ಞೆ ತಪ್ಪಿಬಿದ್ದಳು. ನೀರು ಹಾಕಿ ಅವಳನ್ನೆಬ್ಬಿಸಿದಾಗ "ಮೊದಲು ಈ ಜಾಗ ಖಾಲಿ ಮಾಡಿರಿ, ನನ್ನ ದೇವರ ಕೊಲೆಯಾಗಿದೆ ಈ ಜಾಗದಲ್ಲಿ" ಎಂದು ಒಂದೇ ಸಮನೆ ರೋದಿಸತೊಡಗಿದಳು. ಹಾವು ಸತ್ತರೇನಾಯಿತು? ಅದಕ್ಕೆ ಏನು ಶಾಂತಿ ಮಾಡಿಸಬೇಕೊ ಅದನ್ನೆಲ್ಲ ಮಾಡಿಸೋಣ ಎಂದು ಸಮಾಧಾನಪಡಿಸಲು ಯತ್ನಿಸಿ ವಿಫಲನಾದೆ. ನನ್ನ ಹೆಂಡತಿ ಆ ಜಾಗೆಯಲ್ಲಿ ನಿಂತು ಒಂದು ಹನಿ ನೀರನ್ನು ಕುಡಿಯಲಾರಳು ಈಗ. ಬೆಳಗ್ಗೆ ನನಗೆ ನಿಜ ವಿಷಯ ತಿಳಿಯಿತು. ಹಾವಾಡಿಗನನ್ನು ಸಂಪರ್ಕಿಸಿ ಅವನ ಮೂಲಕ ನಮ್ಮ ಮನೆಯಲ್ಲಿ ಹಾವು ಹೋಗಿಸುವ ವ್ಯವಸ್ಥೆಯನ್ನು ಲ್ಯಾಂಡ್‌ಲಾರ್ಡ್ ಪರ ಲಾಯರ್ ಮಾಡಿಸಿದ್ದ. ಎರಡು ದಿನಗಳ ಮುಂಚೆಯೇ ಕೋರ್ಟ್‌ನಲ್ಲಿ ಆ ಲಾಯರ್ ಇತರ ಲಾಯರ್‌ಗಳ ಮುಂದೆ 'ಜೇಠ್‌ಮಲಾನಿ ನಾಸಿಕ್‌ಗೆ ಬರಬಹುದು. ಆದರೆ ಈ ಕೇಸ್ ವಾದಿಸಲು ಕೋರ್ಟ್‌ಗೆ ಮಾತ್ರ ಬರಲಾರರು. ಹಾಗೆ ಮಾಡಿದ್ದೇನೆ ಈ ಕೇಸ್‌ಗೆ ಬಂದೋಬಸ್ತ್' ಎಂದು ಕಾಲರ್ ಹಾರಿಸಿಕೊಂಡು ಹೇಳುತ್ತಿದ್ದನಂತೆ."

ತಾವೀಗಾಗಲೇ ರೆಡಿ ಮಾಡಿಟ್ಟುಕೊಂಡಿದ್ದ ಬ್ಯಾಗನ್ನು ಬಿಚ್ಚದೆ ಬಾಂಬೆಗೆ ವಾಪಸ್ ಹೊರಡುವುದು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ ಜೇಠ್‌ಮಲಾನಿಯವರಿಗೆ.

ಎದುರಾಳಿ ಲಾಯರ್ ಕೋರ್ಟ್‌ನಲ್ಲಿ ತಮ್ಮನ್ನು ಎದುರಿಸದೆ ಇಂಥ ಕೀಳು ತಂತ್ರ ಉಪಯೋಗಿಸಿದ್ದರ ಅನುಭವವನ್ನು ಹೇಳಿದ ಜೇಠ್‌ಮಲಾನಿ ಅಲ್ಲಿ ನೆರೆದಿದ್ದ ಕಾನೂನು ವಿದ್ಯಾರ್ಥಿಗಳಿಗೆ 'ನೀವು ಎಂದೂ ಇಂಥ ಲಾಯರ್‌ಗಳಾಗಬೇಡಿ' ಎಂದು ಹೇಳಿದರು. ಜೇಠ್‌ಮಲಾನಿಯವರ ಸ್ಪೀಚ್ ಮುಗಿಯುತ್ತಿದ್ದಂತೆಯೇ ಪ್ರತಿನಿಧಿಗಳು 'ಗಡಿನಾಡ ಗಾಂಧಿ ಬಂದರು' ಎಂದು ಉದ್ಗರಿಸಿದರು. ಆಗ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಖಾನ್ ಅಬ್ದುಲ್ ಗಫಾರ್ ಖಾನ್‌ರನ್ನು ವೇದಿಕೆಯ ಮೇಲೆ ಕರೆತಂದರು.

ಗಡಿನಾಡ ಗಾಂಧಿ ಭಾಷಣ ಮಾಡುತ್ತ ಹೇಳಿದ ಈ ಮಾತುಗಳು ಇಂದಿಗೂ ನನ್ನ ತಲೆಯಲ್ಲಿ ಗುಂಯ್‌ಗುಡುತ್ತಿವೆ : "ನಮ್ಮ ಹಿಂದಿನ ಪೀಳಿಗೆಯವರು ನಮಗಾಗಿ ತಾಜ್‌ಮಹಲ್, ಕುತುಬ್‌ಮಿನಾರ್‌ಗಳನ್ನು ಬಳುವಳಿಯಾಗಿ ಬಿಟ್ಟುಹೋಗಿದ್ದಾರೆ.

ಇಂದು ನಾವೂ ಅಂಥ ಅವಶೇಷಗಳನ್ನು ನಮ್ಮ ಮುಂದಿನ ಪೀಳಿಗೆಯವರಿಗೆ ಬಿಟ್ಟು ಹೋದರೆ ನಮ್ಮ ಸ್ವಾತಂತ್ರ್ಯ ಸಮರಕ್ಕೆ ಯಾವುದೇ ಅರ್ಥವಿರುವುದಿಲ್ಲ."

ಕವಿ ಸಾಹಿರ್ ಲುಧಿಯಾನ್ವಿಯ ಕಾವ್ಯವೊಂದರ "ತಾಜ್‌ಮಹಲ್ ಬಡವರ ಪ್ರೇಮವನ್ನು ಅಣಕಿಸುತ್ತಿದೆ" ಎನ್ನುವ ಸಾಲಿನೊಂದಿಗೆ ಗಡಿನಾಡ ಗಾಂಧಿ ಮಾತು ಮುಗಿಸಿದಾಗ ಸಭೆ ಕರತಾಡನದಲ್ಲಿ ಮುಳುಗಿತು.

28

'ಪ್ರೇಮ ಅಧೋಮುಖ; ನ್ಯಾಯ ಊರ್ಧ್ವಮುಖ'

ಸಮಾಜದಲ್ಲಿ ದೊಡ್ಡವರೆನಿಸಿಕೊಂಡವರೊಂದಿಗೆ ಪರಿಚಯ, ಸ್ನೇಹ, ಸಂಪರ್ಕಗಳನ್ನು ಹೊಂದಬೇಕೆನ್ನುವ ಆಸೆ ನನ್ನಲ್ಲಿ ತೀವ್ರವಾಗಿತ್ತು. ವಿಶೇಷವಾಗಿ ಹಳ್ಳಿಯಿಂದ ಪಟ್ಟಣಕ್ಕೆ ಬಂದು ನೆಲೆಗೊಳ್ಳಬೇಕೆನ್ನುವ ಬಹುತೇಕ ಜನರಲ್ಲಿ ಇಂಥ ಆಸೆ ತೀವ್ರವಾಗಿರುತ್ತದೆನ್ನುವುದು ನನ್ನ ಅಭಿಪ್ರಾಯ. ಅಡ್ವೋಕೇಟ್ ಜನರಲ್ ಯತಿರಾಜುಲು ನಾಯ್ಡು ಅವರೊಂದಿಗೆ ನಾನು ಪರಿಚಯಸ್ಥನಾದುದ್ದಕ್ಕೆ ನನ್ನ ವೈಯಕ್ತಿಕ ಕಾರಣಗಳಿಗಿಂತ ಯತಿರಾಜುಲು ಅವರ ಉದಾತ್ತ ವ್ಯಕ್ತಿತ್ವವೇ ಹೆಚ್ಚಿನ ಮಟ್ಟಿಗೆ ಕಾರಣವಾಗಿತ್ತು ಎನ್ನುವುದು ನನ್ನ ಅನಿಸಿಕೆ.

ಅಖಿಲ ಭಾರತ ವಕೀಲರ ಸಮ್ಮೇಳನದ ಸಮಯದಲ್ಲಿ ಸ್ವಯಂಸೇವಕನಾಗಿ ಯತಿರಾಜುಲು ಅವರ ವ್ಯಕ್ತಿತ್ವವನ್ನು ಸಮೀಪದಿಂದ ನೋಡಿ ತಿಳಿದುಕೊಳ್ಳುವ ಅವಕಾಶ ನನಗೆ ಸಿಕ್ಕಿತ್ತು. ಅಂಥ ದೊಡ್ಡ ಸಮ್ಮೇಳನದ ಗಡಿಬಿಡಿಯಲ್ಲಿಯೂ ಅವರು ಸ್ವಯಂಸೇವಕರ ಬೇಕುಬೇಡಗಳನ್ನು ವಿಚಾರಿಸಿಕೊಳ್ಳುವ ಸಂಯಮ ತೋರಿದ್ದರು. ತೀರಾ ಅಮುಖ್ಯ ವ್ಯಕ್ತಿಗಳಾಗಿದ್ದ ನಮಗೆಲ್ಲ ಅವರೇಕೆ ಅಷ್ಟು

ಮಹತ್ವ ಕೊಡುತ್ತಾರೆಂದು ಸ್ವಯಂಸೇವಕರಾಗಿದ್ದ ನಮಗೇ ಮುಜುಗರವಾಗುತ್ತಿತ್ತು. ಸಮ್ಮೇಳನದ ಸ್ವಾಗತ ಸಮಿತಿಯ ಚೇರ್ಮನ್ ಆಗಿದ್ದ ಯತಿರಾಜುಲು ನಮ್ಮಂಥ ಸ್ವಯಂಸೇವಕರಿಂದ ಮಾತ್ರವಲ್ಲದೆ ವಿ.ಐ.ಪಿ.ಗಳಿಂದಲೂ ಪ್ರಶಂಸೆ ಗಳಿಸಿದ್ದರು. ಸಮ್ಮೇಳನಕ್ಕೆ ಭಾರೀ ಮೊತ್ತದಲ್ಲಿ ಹಣ ವ್ಯಯಿಸಲಾಗಿತ್ತು. ಅಂಥ ಸಂದರ್ಭಗಳಲ್ಲಿ ಲೆಕ್ಕವನ್ನು ಸರಿಯಾಗಿ ಕೊಟ್ಟು ಪಾರದರ್ಶಕತೆ ತೋರುವುದು ಕಷ್ಟಸಾಧ್ಯದ ಸಂಗತಿ. ಆದರೆ ಯತಿರಾಜುಲು ಅವರು ಆ ವಿಷಯದಲ್ಲೂ ಹೊಗಳಿಕೆಗೆ ಪಾತ್ರರಾಗಿದ್ದರು.

ಯತಿರಾಜುಲು ಅವರು ನಯ, ವಿನಯಗಳು ಅವರ ಪ್ರಾಮಾಣಿಕ ಹಾಗೂ ದಕ್ಷ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ನೀಡಿದ್ದವು. ಯತಿರಾಜುಲು ಅವರ ದೊಡ್ಡ ಗುಣಗಳಿಗಾಗಿ ಮಾರುಹೋಗಿದ್ದ ನಾನು ಅವರನ್ನು ನಮ್ಮ ಕಾಲೇಜ್‌ಗೆ ಬಂದು ವಿದ್ಯಾರ್ಥಿಗಳಿಗೆ ಬೋಧಕ ಮಾತುಗಳನ್ನು ಆಡಲು ವಿನಂತಿಸಿಕೊಂಡೆ. ಅದಕ್ಕೆ ಅವರು ಒಪ್ಪಿಕೊಂಡು '+' "ಮೈಸೂರು ಹೈಕೋರ್ಟ್ ನಡೆದು ಬಂದ ದಾರಿ ಎನ್ನುವ ವಿಷಯ ಕುರಿತು ಮಾತಾಡಿದರು. ಆ ಮಾತುಗಳ ಸಂಕ್ಷಿಪ್ತ ವಿವರಣೆ ಹೀಗಿದೆ :

ಹಳೇ ಮೈಸೂರಲ್ಲಿ ಮೊದಲಿಗೆ ಹೈಕೋರ್ಟ್ ಇರಲಿಲ್ಲ. ಚೀಫ್ ಕೋರ್ಟ್ ಎಂದು 1870ರಲ್ಲಿಯೇ ಆರಂಭವಾಗಿತ್ತು. 1930ರಲ್ಲಿ ಪ್ರಥಮ ಬಾರಿಗೆ ಹೈಕೋರ್ಟ್ ಎನ್ನುವ ಹೆಸರಿನೊಂದಿಗೆ ತನ್ನ ಕಾರ್ಯವನ್ನು ಮುಂದುವರಿಸಿತು. ಹೈಕೋರ್ಟ್‌ನ ಪ್ರಥಮ ಚೀಫ್ ಜಸ್ಟಿಸ್ ರಾಜಧರ್ಮ ಪ್ರವೀಣ ಸಿ.ಎಸ್. ದೊರೆಸ್ವಾಮಿ ಅಯ್ಯರ್ ಆಗಿದ್ದರು.

1956ರಲ್ಲಿ ರಾಜ್ಯಗಳ ಪುನರ್ ವಿಂಗಡಣೆಯಾದಾಗ ಹಳೇ ಮೈಸೂರಿನ ಬದಲು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು. ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡದ ಪ್ರದೇಶಗಳು ವಿಶಾಲ ಮೈಸೂರಿಗೆ ಸೇರಿಸಲ್ಪಟ್ಟವು. ಇದರ ಪರಿಣಾಮವಾಗಿ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಮತ್ತು ಕೇರಳ ಹೈಕೋರ್ಟ್‌ಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದ ನೂರಾರು ವಕೀಲರುಗಳು ಮೈಸೂರು ಹೈಕೋರ್ಟ್‌ಗೆ ಬಂದು ನೆಲೆಗೊಳ್ಳುವಂತಾಯಿತು. ಹೀಗೆ ಬಂದವರಲ್ಲಿ ಕೇವಲ ಕನ್ನಡಿಗರಷ್ಟೇ ಅಲ್ಲದೆ ಅನ್ಯಭಾಷಿಕ ವಕೀಲರೂ ಇದ್ದರು. ಮುಂಚೆ ವಿವಿಧ ರಾಜ್ಯಗಳಲ್ಲಿದ್ದ ಕನ್ನಡದ ಜಿಲ್ಲೆಗಳಿಗೆ ಸಂಬಂಧಿಸಿದ ಪ್ರಕರಣಗಳೆಲ್ಲ ಮೈಸೂರು ರಾಜ್ಯದ ಹೈಕೋರ್ಟ್‌ಗೆ ವರ್ಗಾಯಿಸಲ್ಪಟ್ಟವು. ಈ ಪ್ರಕರಣಗಳು ತಮ್ಮೊಂದಿಗೆ ವಕೀಲರನ್ನೂ ಮೈಸೂರು

ಹೈಕೋರ್ಟಿಗೆ ಹೊತ್ತು ತಂದವು. ಹೈಕೋರ್ಟಿನಲ್ಲಿ ಕೇಸುಗಳೊಂದಿಗೆ ನ್ಯಾಯಾಧೀಶರ ಸಂಖ್ಯೆಯೂ ಹೆಚ್ಚಿತು. ಆಡಳಿತಾತ್ಮಕ ಜಾಲವೂ ವಿಸ್ತೃತಗೊಂಡು ಹೈಕೋರ್ಟ್‌ನಲ್ಲಿ ರಾಜ್ಯ ನ್ಯಾಯಾಂಗದ ಅಧಿಕಾರ ಮತ್ತಷ್ಟು ಕೇಂದ್ರೀಕರಣಗೊಂಡಿತು.

1957ರಲ್ಲಿ ಪಶ್ಚಿಮ ಬಂಗಾಳದ ಜಸ್ಟಿಸ್ ಸುಬೋಧ್ ರಂಜನ್‌ದಾಸ್ ಗುಪ್ತಾ ಅವರು ಮೈಸೂರು ಹೈಕೋರ್ಟ್‌ನ ಚೀಫ್ ಜಸ್ಟಿಸ್ ಆಗಿ ಅಧಿಕಾರ ಸ್ವೀಕರಿಸಿದರು. ಹೀಗೆ ಬೇರೆ ರಾಜ್ಯದವರೊಬ್ಬರು ಬಂದು ಚೀಫ್ ಆದದ್ದು ಭಾರತದ ನ್ಯಾಯಾಂಗ ಚರಿತ್ರೆಯಲ್ಲಿ ಘಟಿಸಿಯೇ ಇರಲಿಲ್ಲ. ಕಲಕತ್ತಾ ಹೈಕೋರ್ಟ್‌ನಲ್ಲಿ ಜಸ್ಟಿಸ್ ಆಗಿದ್ದ ದಾಸ್‌ಗುಪ್ತ ಅವರು ಮೈಸೂರು ಹೈಕೋರ್ಟ್‌ಗೆ ಚೀಫ್ ಜಸ್ಟಿಸ್ ಆಗಿ ಬಂದುದು ಎಷ್ಟು ಸೂಕ್ತ ಎನ್ನುವ ಚರ್ಚೆ ಮೈಸೂರಿನ ವಕೀಲರು ಮತ್ತು ಜಸ್ಟೀಸ್‌ಗಳಲ್ಲಿ ತೀವ್ರವಾಗಿ ನಡೆಯಿತು. ಅತೃಪ್ತಿಯ ಹೊಗೆಯೂ ಎದ್ದಿತು.

ಆಗ ಯತಿರಾಜುಲು ಅವರು ಹೇಳಿದ ಮಾತುಗಳಿಗೆ ಈಗ ನಾನು ಒಂದೆರಡು ಅಂಶಗಳನ್ನು ಸೇರಿಸಿ ಹೇಳಬೇಕಾಗಿದೆ. ಇದೀಗ ತಮ್ಮ 99 ನೇ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ನಿಟ್ಟೂರು ಶ್ರೀನಿವಾಸರಾವ್ ಅವರು ಅಲ್ಪಾವಧಿಯ ಚೀಫ್ ಜಸ್ಟಿಸ್ ಆಗಲು ದಾಸ್‌ಗುಪ್ತಾ ಅವರ ನೇಮಕಾತಿಯೇ ಕಾರಣವಾಗಿತ್ತು. ದಾಸ್‌ಗುಪ್ತಾ ಬರದಿದ್ದರೆ ನಿಟ್ಟೂರು ಶ್ರೀನಿವಾಸರಾವ್ ಅವರು ಕನಿಷ್ಠ ಏಳು ವರ್ಷಗಳವರೆಗೆ ಚೀಫ್ ಜಸ್ಟಿಸ್ ಆಗಿರುತ್ತಿದ್ದರು.

ದಾಸ್‌ಗುಪ್ತಾರ ನೇಮಕಾತಿಯ ಸಮಂಜಸತೆಯ ಬಗ್ಗೆ ತೀವ್ರ ಚರ್ಚೆಗಳು 1957 ರಲ್ಲಿ ನಡೆದವು ಸರಿಯಷ್ಟೆ. ಆದರೆ, ಪ್ರಧಾನಿ ಇಂದಿರಾಗಾಂಧಿಯವರು 1975ರಲ್ಲಿ ಅದೇ ರಾಜ್ಯಕ್ಕೆ ಸೇರಿದ ವ್ಯಕ್ತಿಗಳು ಚೀಫ್ ಜಸ್ಟಿಸ್‌ಗಳಾಗತಕ್ಕದ್ದಲ್ಲ ಎಂದು ವಿಶೇಷ ಅಧಿಸೂಚನೆ ಹೊರಡಿಸುವ ಮೂಲಕ ಚೀಫ್ ಜಸ್ಟಿಸ್ ನೇಮಕಾತಿ ಧೋರಣೆಯನ್ನು ಜಾರಿಗೆ ತಂದರು. ಅಷ್ಟೇ ಅಲ್ಲ ಮೂರನೇ ಒಂದು ಭಾಗದ ಜಸ್ಟಿಸ್‌ಗಳು ಹೊರರಾಜ್ಯದವರಿರಬೇಕೆಂದೂ ಆ ಅಧಿಸೂಚನೆ ಹೇಳಿತು. 1957ರಲ್ಲಿ ಮೈಸೂರು ರಾಜ್ಯ ಜಾರಿಗೊಳಿಸಿದ ನ್ಯಾಯಾಂಗ ಸುಧಾರಣೆಯನ್ನೇ 1975ರಲ್ಲಿ ಅಂದರೆ ಹದಿನೆಂಟು ವರ್ಷಗಳ ತರುವಾಯ ಇಂದಿರಾ ಸರಕಾರ ಜಾರಿಗೊಳಿಸಿತು; ಮಂಡಲ್ ವರದಿ ಬರುವುದಕ್ಕೆ ಹತ್ತಾರು ವರ್ಷಗಳ ಮುಂಚೆಯೇ ಅರಸು ಕರ್ನಾಟಕದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿದ್ದಂತೆ!

1957 ರಿಂದ 62 ರವರೆಗೆ ಅಡ್ವೊಕೇಟ್ ಜನರಲ್ ಆಗಿದ್ದ ಯತಿರಾಜುಲು ಅವರು ಮಾತಾಡುತ್ತಾ "ಸುಬೋಧ್ ರಂಜನ್‌ದಾಸ್ ಗುಪ್ತಾರಂಥಾ ಉನ್ನತ ವ್ಯಕ್ತಿತ್ವದ

ಚೀಫ್ ಜಸ್ಟಿಸ್‌ರನ್ನು ನನ್ನ ಜೀವಮಾನದಲ್ಲಿಯೇ ನೋಡಿಲ್ಲ" ಎನ್ನುತ್ತಾ, "Justice Dasgupta impressed everyone by his transparent integrity and honesty and the dignity with which he conducted himself" ಎಂದು ಹೇಳಿದರು.

"ವ್ಯಕ್ತಿಯಲ್ಲಿ ಮನಸ್ಸಾಕ್ಷಿ ಎನ್ನುವುದು ಇದ್ದರೆ ಅದು ಎಂಥೆಂಥ ಉನ್ನತ ಕೆಲಸ, ಕ್ರಿಯೆಗಳನ್ನು ಮಾಡಿಸುತ್ತೆ ಎನ್ನಲು ದಾಸ್‌ಗುಪ್ತಾ ಜೀವಂತ ಉದಾಹರಣೆ" ಎಂದ ಯತಿರಾಜುಲು ಅವರು ಒಂದು ಘಟನೆಯನ್ನು ವಿವರಿಸಿದರು.

ಹುಬ್ಬೇರಿಕೆ, ಮೂಗು ಮುರಿತಗಳೇ ದಾಸ್‌ಗುಪ್ತಾರನ್ನು ಹೈಕೋರ್ಟ್‌ಗೆ ಸ್ವಾಗತಿಸಿದರೂ ಕೆಲವೇ ದಿನಗಳಲ್ಲಿ ದಾಸ್‌ಗುಪ್ತಾ ತಮ್ಮ ಅಪ್ಪಟ ಪ್ರಾಮಾಣಿಕ ವ್ಯಕ್ತಿತ್ವದಿಂದ ಎಲ್ಲರ ಬಾಯನ್ನೂ ಮುಚ್ಚಿಸಿಬಿಟ್ಟಿದ್ದರು. ತೀರಾ ಒರಟು ಲಾಯರ್ ಸಹ ದಾಸ್‌ಗುಪ್ತಾ ಜೊತೆ ಘರ್ಷಣೆಗೆ ಇಳಿಯುತ್ತಿರಲಿಲ್ಲ. ಸತ್ಯ, ಪ್ರಾಮಾಣಿಕತೆಗಳನ್ನು ನಯ ನಾಜೂಕುಗಳಿಂದ ಅನುಷ್ಠಾನಕ್ಕೆ ತರುವ ಚಾತುರ್ಯ ದಾಸ್‌ಗುಪ್ತಾರಿಗಿತ್ತು. ತಾವೊಬ್ಬರೇ ಸತ್ಯವಂತರು ಎನ್ನುವ ದುರಹಂಕಾರ ದಾಸ್‌ಗುಪ್ತಾರಿಗೆ ಇರಲಿಲ್ಲ. ಹಾಗಾಗಿ ಆ ವಿನಯ ಅವರ ವ್ಯಕ್ತಿತ್ವಕ್ಕೆ ಸಾಧ್ಯವಾಗಿತ್ತು.

ಕಲಕತ್ತಾದಲ್ಲಿ ದಾಸ್‌ಗುಪ್ತಾರ ಮಾವ ತೀರಿಹೋಗಿದ್ದಾರೆನ್ನುವ ದುಃಖದ ಸಂದೇಶ ಒಂದು ರಾತ್ರಿ ಬಂದಿತು. ಬೆಳಗ್ಗೆ 9 ಗಂಟೆಯ ವಿಮಾನಕ್ಕೆ ದಾಸ್‌ಗುಪ್ತಾ ತಮ್ಮ ಪತ್ನಿಯೊಂದಿಗೆ ಹೊರಡುವುದಾಗಿ ತೀರ್ಮಾನಿಸಿದರು. ಸ್ವತಃ ಮಂಜೂರಾತಿಗಾಗಿ ಹೈಕೋರ್ಟ್‌ಗೆ ರಜೆಯ ಪತ್ರವನ್ನೂ ಬರೆದಿಟ್ಟರು.

ದಾಸ್‌ಗುಪ್ತಾರ ಆಪ್ತ ಸಹಾಯಕ ವಿಮಾನದ ಟಿಕೆಟ್ ವ್ಯವಸ್ಥೆ ಮಾಡಿದ್ದ. ಬೆಳಗ್ಗೆ 8 ಕ್ಕೆ ಕಾರಲ್ಲಿ ಆಪ್ತ ಸಹಾಯಕ ಮತ್ತು ಪತ್ನಿಯೊಂದಿಗೆ ದಾಸ್‌ಗುಪ್ತಾ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ವಿಮಾನ ಹೊರಡಲು ಇನ್ನೂ ಸಮಯಾವಕಾಶವಿತ್ತು. ವಿರಾಮ ಕೊಠಡಿಯಲ್ಲಿ ದುಃಖದ ಬೇಗುದಿಯಲ್ಲಿ ಕುಳಿತಿದ್ದ ದಾಸ್‌ಗುಪ್ತಾ ಚೇಳು ಕಡಿಸಿಕೊಂಡವರಂತೆ ಥಟ್ಟನೆ ಎದ್ದು ನಿಂತರು. ಆಪ್ತ ಸಹಾಯಕನನ್ನು ಸಮೀಪಕ್ಕೆ ಕರೆದರು.

"ಮೂರು ತಿಂಗಳ ಹಿಂದೆ ನಿಮ್ಮ ಮಾವ ತೀರಿ ಹೋಗಿದ್ದಾಗ ಅಂತ್ಯಕ್ರಿಯೆಗೆ ಹೋಗಬೇಕೆಂದು ರಜೆ ಅರ್ಜಿ ಸಲ್ಲಿಸಿದ್ದೀರಿ. ಮಾವ ತೀರಿಕೊಂಡದ್ದು ರಜೆ ನೀಡಲು ಸಕಾರಣವಾಗುವುದಿಲ್ಲ ಎಂದು ಬರೆದು ರಜೆ ನಿರಾಕರಿಸಿದ್ದೆನಲ್ಲವೆ?" ಎಂದು ಪ್ರಶ್ನಿಸಿದರು.

ಅದಕ್ಕೆ ಆಪ್ತ ಸಹಾಯಕ "ಸಾರ್ ಇಂಥ ದುಃಖದ ಸನ್ನಿವೇಶದಲ್ಲಿ ಅದೆಲ್ಲ ಏಕೆ

ಸಾರ್. ನನಗೆ ರಜ ಮಂಜೂರು ಮಾಡಿದರೆ ತುಂಬ ಜನ ಅಫಿಷಿಯಲ್‌ಗಳಿಗೆ ಯಾರ್ಯಾರೋ ಸಂಬಂಧಿಗಳು ತೀರಿಕೊಂಡಾಗ ರಜ ಕೊಡಬೇಕಾಗಿ ಬರ್ತದೆ, ಹಾಗಾಗದಿರಲಿ ಅಂತ ನನಗೆ ತಾವು ರಜ ಕೊಡಲಿಲ್ಲ. ನಿಮ್ಮ ಬಗ್ಗೆ ನಾನು ತಪ್ಪೇನೂ ತಿಳಿದುಕೊಂಡಿಲ್ಲ." ಎಂದ.

"ನಿಮ್ಮ ಮಾವ ಸತ್ತರೆ ರಜೆಗೆ ಸಕಾರಣವಾಗದ್ದು ನಮ್ಮ ಮಾವ ಸತ್ತಾಗ ಆಗಿಬಿಡುತ್ತದೆಯೆ? ಸಾಧ್ಯವಿಲ್ಲ. ಅಧಿಕಾರ ಕೈಯಲ್ಲಿದ್ದರೆ ಎಂಥ ಮರೆವನ್ನು ತರುತ್ತದೆ ನೋಡು. ನಾವು ಎಷ್ಟಿದ್ದರೂ ಮನುಷ್ಯರು. ಅಧಿಕಾರ ಇರುವುದು ಇನ್ನೊಬ್ಬರ ಮೇಲೆ ಶಿಸ್ತು ಹೇರಲಿಕ್ಕೆ ಮಾತ್ರ ಎಂದು ತಿಳಿದುಕೊಂಡಿರುತ್ತೇವೆ ನಮ್ಮಂಥವರು; 'ನೀತಿಯನ್ನು ಬೋಧಿಸು. ಆದರೆ, ನೀನು ಅದರಂತೆ ನಡೆದುಕೋ ಬೇಡ' ಎಂದು ಮ್ಯಾಕೆವೆಲ್ಲಿ ರಾಜನಿಗೆ ಹೇಳುವಂತೆ....." ಎಂದು ತಮ್ಮ ಟಿಕೆಟ್ ಕ್ಯಾನ್ಸಲ್ ಮಾಡಿಸಿಕೊಂಡು ಬರುವಂತೆ ಆಪ್ತ ಸಹಾಯಕನಿಗೆ ಆದೇಶಿಸಿದರು. ಆಪ್ತ ಸಹಾಯಕ ದಿಕ್ಕು ತೋಚದೆ ದಾಸ್‌ಗುಪ್ತಾರ ಪತ್ನಿಯೆಡೆಗೆ ನೋಡಿದ. ಅತ್ತು ಕೆಂಡವಾಗಿದ್ದ ಕಣ್ಣುಗಳಿಂದ ಮತ್ತೂ ನೀರು ಹರಿಯತೊಡಗಿತು. ಒಮ್ಮೆ ತನ್ನ ಗಂಡನೆಡೆ ನೋಡಿ ಆಪ್ತ ಸಹಾಯಕನತ್ತ ತಿರುಗಿ "ಹೋಗಪ್ಪಾ ಟಿಕೆಟ್ ಕ್ಯಾನ್ಸಲ್ ಮಾಡಿಸು. ಅವರ ನಿರ್ಧಾರ ಬದಲಿಸೋ ಶಕ್ತಿ ನನ್ನಲ್ಲಿಲ್ಲ..." ಎಂದು ಕರವಸ್ತ್ರದಲ್ಲಿ ತನ್ನ ಮುಖ ಮುಚ್ಚಿಕೊಂಡಳು.

ತಮ್ಮ ಪತ್ನಿಯನ್ನು ಮಾತ್ರ ವಿಮಾನ ಹತ್ತಿಸಿ ಆಪ್ತ ಸಹಾಯಕನೊಂದಿಗೆ ಕಾರು ಹತ್ತಿದರು.

ದಾಸ್‌ಗುಪ್ತಾರ ಪತ್ನಿ ವಿಮಾನ ಏರುವಾಗ ಗಂಡನೆಡೆ ನೋಡುವ ಶಕ್ತಿಯನ್ನೂ ಕಳೆದುಕೊಂಡಿದ್ದ ದೃಶ್ಯ ಕಣ್ಮುಂದೆ ಬಂದು ಆಪ್ತ ಸಹಾಯಕ ರೋದಿಸತೊಡಗಿದ.

"ನನ್ನಿಂದಾಗಿ ನೀವು ನಿಮ್ಮ ಮಾವನವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳದಂತಾಯಿತು ಸಾರ್." ಎಂದ ಗದ್ಗದಿತನಾಗಿ.

"ನೋಡು ಪ್ರೀತಿ, ಪ್ರೇಮ, ದ್ವೇಷ, ರೋಷ, ಸೇಡುಗಳಿಗೆ ಕಣ್ಣೀರಿರುವುದಿಲ್ಲ. ನ್ಯಾಯ ಇದನ್ನೆಲ್ಲ ಮೀರಿ ನಿಂತಿರುವುದರಿಂದಲೇ ಅದಕ್ಕೆ ಕಣ್ಣುಗಳಿರುವುದು. ಅಂತಃಸಾಕ್ಷಿಯನ್ನು ಕಳೆದುಕೊಂಡು ನಾನು ನ್ಯಾಯಪೀಠದ ಮೇಲೆ ಹೇಗೆ ಕೂರಲಿ? ಪ್ರೀತಿ ಅಧೋಮುಖಿದ್ದಾಗಿರುತ್ತದೆ; ನ್ಯಾಯಕ್ಕೆ ಊರ್ಧ್ವಮುಖವಿರುತ್ತದೆ! ಮನಸ್ಸಿನ ಮೂಲಕ ಯೋಚಿಸುವುದಕ್ಕೂ ಬುದ್ಧಿಯ ಮೂಲಕ ಯೋಚಿಸುವುದಕ್ಕೂ ಬಹಳ ವ್ಯತ್ಯಾಸವಿದೆ" ಎಂದರು.

ಚೀಫ್ ಜಸ್ಟಿಸ್ ರಜೆಯ ಮೇಲೆ ಹೋಗಿದ್ದಾರೆಂದು ವಕೀಲರೆಲ್ಲ ನಿರಾಳವಾಗಿ ತಮ್ಮ ಫೈಲ್‌ಗಳನ್ನೆಲ್ಲ ಗಂಟು ಕಟ್ಟುತ್ತಿರುವಾಗ ಹೈಕೋರ್ಟ್‌ಗೆ ರಜೆಯಿಲ್ಲ, ಚೀಫ್ ಜಸ್ಟಿಸ್ ಡ್ಯೂಟಿಗೆ ಬರುತ್ತಿದ್ದಾರೆಂದು ಘೋಷಿಸಲಾಯಿತು.

ಕೆಲ ವಕೀಲರು "ಚೀಫ್ ಜಸ್ಟಿಸ್ ಆದೊಡನೆ ತಾವು ಅಮರ ಅಂತ ತಿಳಕೊಂಡಿರೋ ಹಾಗಿದೆ. ಮಾವನ ಸಾವು ತಮ್ಮ ಹುದ್ದೆಯ ಮುಂದೆ ತೀರಾ ಕಳಪೆಯಾಗಿ ಕಂಡಿರುವಂತಿದೆ" ಎಂದು ಮಾತಾಡಿದರೆ, ಮತ್ತೆ ಕೆಲವರು "ಮಾವ ಸತ್ತರೂ ಹೋಗದೆ ಡ್ಯೂಟಿ ಮಾಡಿ ತೋರಿಸುವ ಹುಸಿ ಆದರ್ಶದ ಭ್ರಮೆ ಈ ಚೀಫ್ ಜಸ್ಟಿಸ್‌ಗೆ" ಎಂದು ಗೇಲಿಯ ಮಾತಾಡಿದರು.

ಆಪ್ತ ಸಹಾಯಕನ ಮೂಲಕ ನಿಜ ಸಂಗತಿ ಇಡೀ ಕೋರ್ಟ್‌ಗೆ ಹಬ್ಬಿತ್ತು. ಕೊಂಕು ಮಾತಾಡಿದ ವಕೀಲರುಗಳು ನಾಲಿಗೆ ಕಚ್ಚಿಕೊಂಡರು. ಯತಿರಾಜುಲು ಅವರು ಮಾತು ಮುಗಿಸಿದಾಗ ಅವರ ಕಣ್ಣು ಒದ್ದೆಯಾಗಿದ್ದವು. ತೀವ್ರ ಭಾವುಕರಾಗಿದ್ದರು. ವಿದ್ಯಾರ್ಥಿಗಳೆಲ್ಲ ಅವರ ಕೈ ಕುಲುಕಿದರು. ಉಪನ್ಯಾಸಕರೊಂದಿಗೆ ಟೀ ಸೇವಿಸಿ ಹೊರಡಲನುವಾದ ಯತಿರಾಜುಲು ಅವರು ನನ್ನನ್ನು ಸಮೀಪ ಕರೆದು ನನ್ನ ಕೈ ಹಿಡಿದುಕೊಂಡು ಕಾರಿನವರೆಗೆ ನಡೆದರು. ಕಾರ್ ಒಳಕ್ಕೆ ಹತ್ತುವ ಮುನ್ನ "ಗುರಿ ತಲುಪದೇ ಇರುವುದು ದುರಂತವಲ್ಲ; ಆದರೆ ಜೀವನದಲ್ಲಿ ಗುರಿಯನ್ನೇ ಇಟ್ಟುಕೊಳ್ಳದಿರುವುದು ಮಹಾ ದುರಂತ." ಎಂದು ಹೇಳಿದರು.

29

ಅಜ್ಞಾನ ಒಪ್ಪಿಕೊಳ್ಳುವುದು ದೊಡ್ಡಸ್ತಿಕೆ

ನಾನು ರೇಣುಕಾಚಾರ್ಯ ಈವ್‌ನಿಂಗ್ ಲಾ ಕಾಲೇಜ್‌ನಲ್ಲಿಯೂ ಹೋಗಿ ಪ್ರೊಫೆಸರ್ ಎಂ.ಆರ್. ಜನಾರ್ಧನ್ ಅವರ ಕ್ಲಾಸ್‌ಗಳನ್ನು ಅಟೆಂಡ್ ಮಾಡತೊಡಗಿದೆ. ಲಾ ವಿದ್ಯಾರ್ಥಿಗಳ ಪಾಲಿಗೆ ಕಬ್ಬಿಣದ ಕಡಲೆಯಂತಿದ್ದ ಲೀಗಲ್ ಜುರಿಸ್‌ಪ್ರುಡೆನ್ಸ್ ವಿಷಯವನ್ನು ಪ್ರೊ. ಎಂ.ಆರ್. ಜನಾರ್ದನ್ ಅವರು ಆಕರ್ಷಕವಾಗಿಯೂ, ಕುತೂಹಲಕರವಾಗಿಯೂ ಮತ್ತು ಮನಮುಟ್ಟುವಂತೆಯೂ ಪಾಠ ಮಾಡುತ್ತಿದ್ದರು ಆ ಕಾಲೇಜ್‌ನಲ್ಲಿ. ಪ್ರೊ, ಎಂ.ಆರ್. ಜನಾರ್ದನ್ ಅವರ ಪಾಠ ಕೇಳಲಿಕ್ಕೆಂದೇ ನನ್ನಂತೆ ಇನ್ನೂ ಕೆಲವು ವಿದ್ಯಾರ್ಥಿಗಳು ಸಂಜೆಯಾಗುತ್ತಲೇ ಬೇರೆ ಕಾಲೇಜುಗಳಿಂದ ರೇಣುಕಾಚಾರ್ಯ ಲಾ ಕಾಲೇಜ್ ಬಳಿ ಜಮಾಯಿಸುತ್ತಿದ್ದರು. ಅವರ ಪಾಠ ಕೇಳುತ್ತ ಅವರ ಅಭಿಮಾನಿಯಾಗಿಬಿಟ್ಟೆ. ಇಂದಿಗೂ ನನ್ನ ಆಫೀಸ್‌ನಲ್ಲಿ ಅವರ ಫೋಟೋ ನೇತಾಡುವಷ್ಟು ಅವರು ನನ್ನ ಮೇಲೆ ತಮ್ಮ ಪ್ರಭಾವ ಬೀರಿಬಿಟ್ಟರು.

ನಾನು ಬೇರೆ ಕಾಲೇಜ್‌ನಿಂದ ಅವರ ಪಾಠ ಕೇಳಲಿಕ್ಕೆಂದೇ ಬರುತ್ತಿರುವುದು ಕೆಲವೇ ದಿನಗಳಲ್ಲಿ ಜನಾರ್ದನ್ ಅವರಿಗೆ ತಿಳಿಯಿತು. ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗಿಂತಲೂ ರೆಗ್ಯುಲರ್ ಆಗಿ ಕ್ಲಾಸ್ ಅಟೆಂಡ್ ಮಾಡುವ ನನ್ನನ್ನು

ಅವರು ಹೆಚ್ಚು ಗಮನಿಸತೊಡಗಿದರು. ಅದೇನೋ ಕಾರಣಕ್ಕೆ ನಾನು ಒಂದು ವಾರ ನಮ್ಮ ಹಳ್ಳಿಗೆ ಹೋಗಬೇಕಾಗಿ ಬಂದು ಅವರ ಪಾಠ ಕೇಳಲು ಹೋಗಲಿಲ್ಲ. ನಾನು ವಾಪಸ್ ಬರುವಷ್ಟರಲ್ಲಿ ನನ್ನ ಸ್ನೇಹಿತರು "ಅದೇನೊ ಪ್ರೊ. ಜನಾರ್ದನ್ ಅವರು ಎಲ್ರನ್ನ ಬಿಟ್ಟು ನಿನ್ನನ್ನ ಕೇಳ್ತಾ ಅವ್ರಲ್ಲೊ, ಎಲ್ಲಿ ನಿಮ್ಮ ಸ್ನೇಹಿತಾ ಅಂತ. ಅದೇನ್ ಮೋಡಿ ಮಾಡಿಬಿಟ್ಟಿದೀಯಾ!" ಎಂದರು. ಜನಾರ್ದನ್ ಮತ್ತು ನನ್ನ ಸಂಬಂಧ ನಮಸ್ಕಾರಗಳ ವಿನಿಮಯ ಮಟ್ಟದಲ್ಲಿ ಮಾತ್ರ ಇದ್ದದ್ದು ಇಷ್ಟು ಬಲಿತುಕೊಂಡಿದೆಯೆನ್ನುವುದು ಆವಾಗಲೇ ಗೊತ್ತಾದುದು ನನಗೆ! ಜನಾರ್ದನ್ ಅವರು ಲಾ ವಿದ್ಯಾರ್ಥಿಗಳ ಮಧ್ಯೆ ಹೀರೋ ಆಗಿಬಿಟ್ಟಿದ್ದರು. ಪ್ರೊ. ಜನಾರ್ದನ್ ಅವರ ಪಾಂಡಿತ್ಯ ಬಹಳ ಆಳದ್ದು. ಹೀಗೆ ನಾನು ವಿದ್ಯಾರ್ಥಿಯಾಗಿದ್ದಾಗಲಷ್ಟೇ ಅಲ್ಲ ಇಂದಿಗೂ ಅನಿಸುತ್ತಿದೆ! ಆ ವಿಷಯದಲ್ಲಿ ಅವರನ್ನು ಮೀರಿಸಿದ ಮತ್ತೊಬ್ಬ ಕಾನೂನು ತಜ್ಞರನ್ನು ಇಂದಿಗೂ ನಾನು ಕಂಡಿಲ್ಲ.

ಇಂದು ನಮ್ಮ ಮುಖ್ಯಮಂತ್ರಿಗಳಾಗಿರುವ ಎಸ್.ಎಂ. ಕೃಷ್ಣ ಅವರು ಇಂಗ್ಲೆಂಡ್‌ನಲ್ಲಿ ಬಾರ್ ಅಟ್ ಲಾ ಮುಗಿಸಿ ಬಂದು ಅದೇ ರೇಣುಕಾಚಾರ್ಯ ಕಾಲೇಜ್‌ನಲ್ಲಿ ಪ್ರೊಫೆಸರ್ ಆಗಿದ್ದರು.

ಕರ್ನಾಟಕದ ಅಡ್ವೊಕೇಟ್ ಜನರಲ್ ಆಗಿದ್ದ ಎ.ಎನ್. ಜಯರಾಮ್ ಅವರೂ ಎಸ್.ಎಂ. ಕೃಷ್ಣರೊಂದಿಗೆ ಇಂಗ್ಲೆಂಡ್‌ನಲ್ಲಿ ಬಾರ್ ಅಟ್ ಲಾ ಮುಗಿಸಿಕೊಂಡು ಬಂದು ಅದೇ ಕಾಲೇಜ್‌ನಲ್ಲಿ ಪ್ರೊಫೆಸರ್ ಆಗಿದ್ದರು. ನಂತರ ಇವರು ಮಲ್ಯ ಅವರ ಲಿಕ್ಕರ್ ಕಂಪನಿಗೆ ಲೀಗಲ್ ಅಡ್ವೈಜರ್ ಕೂಡಾ ಆದರು. ಕೃಷ್ಣ ಅವರು ಮುಖ್ಯಮಂತ್ರಿಗಳಾಗುತ್ತಲೇ ಅಡ್ವೊಕೇಟ್ ಜನರಲ್ ಕೂಡಾ ಆಗಿದ್ದರು ಎ.ಎನ್. ಜಯರಾಮ್.

ಹಿಂದೆ ಕರ್ನಾಟಕದಲ್ಲಿ ಸಚಿವರಾಗಿದ್ದ ಯಾಹ್ಯಾ ರಾಜ್ಯಸಭಾ ಸದಸ್ಯರಾಗಿದ್ದ ಮತ್ತು ಮಾಜಿ ಮಂತ್ರಿಗಳಾದ ಪ್ರೊ. ಲಕ್ಷ್ಮೀಸಾಗರ್ ಕೂಡಾ ಆ ಕಾಲೇಜ್‌ನಲ್ಲಿ ಪ್ರೊಫೆಸರ್‌ಗಳಾಗಿದ್ದರು. ಆ ನಂತರ ಯಾಹ್ಯಾ ಕಾಂಗ್ರೆಸ್ ಮುಖಂಡರಾದರೆ, ಲಕ್ಷ್ಮೀಸಾಗರ್ ಜನತಾ ಪಕ್ಷದ ಮುಖಂಡರಾದರು.

ಅವೆನ್ಯೂ ರಸ್ತೆಯಲ್ಲಿರುವ ಇಂಡಿಯನ್ ಕಾಫೀ ಹೌಸ್‌ಗೆ ಹೋಗಿ ಬ್ರೆಡ್‌ಟೋಸ್ಟ್ ತಿಂದು ಕಾಫಿ ಕುಡಿಯುವುದು ಚಟವಾಗಿ ಪರಿಣಮಿಸಿತ್ತು. ಒಮ್ಮೆ ಕಾಫೀ ಹೌಸ್‌ನಲ್ಲಿ ಟೋಸ್ಟ್ ತಿನ್ನುತ್ತ ಕೂತಿರುವಾಗ ಎದುರುಗಡೆ ಒಬ್ಬ ಪೋಲೀಸ್ ಅಧಿಕಾರಿ ಬಂದು ಕೂತರು. ನನ್ನನ್ನೇ ದಿಟ್ಟಿಸಿ ನೋಡತೊಡಗಿದರು. "ನೀನು ಸಿದ್ಧನಂಜೇಗೌಡರ ಸೋದರಳಿಯ ಹನುಮಂತ್ರಾಯ ಅಲ್ವೆ?" ಎಂದು ಪ್ರಶ್ನಿಸಿದರು.

ನಾನು ಅವಾಕ್ಕಾಗಿ "ಓ ಹೌದು ಸರ್. ನೀವು ದೊಡ್ಡಬೆಳವಂಗಲ ಪೋಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಸತ್ಯನಾರಾಯಣ ಅವರಲ್ವೆ?" ಎಂದೆ.

"ಏನಪ್ಪ ಅದೆಷ್ಟು ಬೆಳೆದುಬಿಟ್ಟಿದೀಯ. ನಿಮ್ಮ ಮಾವ ಆಗಾಗ ಭೇಟಿಯಾಗ್ತಾರೆ. ನೀನು ಬೆಂಗಳೂರಲ್ಲಿ ಓದುತ್ತಿರುವ ಬಗ್ಗೆ ಹೆಮ್ಮೆಯಿಂದ ಹೇಳ್ತಾರೆ. ನೀನು ಸಿಕ್ಕಿದ್ದು ಸಂತೋಷ. ನಾನು ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದೇನೆ. ಯಾವಾಗ್ಲಾದ್ರೂ ಬಿಡುವು ಸಿಕ್ರೆ ಆ ಕಡೆ ಬಾ" ಎಂದರು.

ಅವರ ಕೈಯಲ್ಲಿದ್ದ ಫೈಲ್‌ಗಳನ್ನು ನೋಡಿ "ಏನ್ ಸಾರ್ ಕೋರ್ಟ್ ಡ್ಯೂಟಿನಾ?" ಎಂದೆ.

"ಹೌದಪ್ಪ. ಆ ಕಮ್ಯುನಿಸ್ಟ್ ಒಬ್ಬನ ಮರ್ಡರ್ ಕೇಸ್ ನನ್ನ ತಲೆ ತಿಂತಾ ಇದೆ. ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಮ್ಯುನಿಸ್ಟರು ಗೌಪ್ಯ ಸಭೆಯೊಂದನ್ನು ನಡೆಸ್ತಾ ಇದ್ರು. ರಾತ್ರಿ ಹನ್ನೆರಡರ ಸಮಯದಲ್ಲಿ ಆ ಸಭೆಯಿಂದ ಹೊರಗೆ ಬಂದ ಒಬ್ಬನನ್ನು ಡ್ಯೂಟೀಲಿದ್ದ ನಮ್ಮ ಪೋಲೀಸರು ನೋಡಿದ್ರು. ಪೋಲೀಸರನ್ನ ನೋಡಿ ಭಯದಿಂದ ಅವನು ಓಡತೊಡಗಿದ. ಪೋಲೀಸರು ಅವನನ್ನು ಬೆನ್ನಟ್ಟಿದರು. ತಪ್ಪಿಸಿಕೊಳ್ಳಲು ಅವಸರದಲ್ಲಿ ಗಟಾರ ಜಿಗಿಯಲು ಹೋಗಿ ಅದರೊಳಕ್ಕೆ ಬಿದ್ದ. ಕಲ್ಲಿಗೆ ತಲೆ ತಾಗಿತು. ಬಿದ್ದ ರಭಸಕ್ಕೆ ಓ ಎಂದು ಚೀರಿಕೊಂಡ. ಗೌಪ್ಯ ಸಭೆಯಲ್ಲಿದ್ದ ಕಮ್ಯುನಿಸ್ಟರು ಓಡಿಬಂದರು. ಈಗ ಓಡುವ ಸರದಿ ಪೊಲೀಸರದಾಗಿತ್ತು. ಅದೇ ರಾತ್ರಿ ಆ ಹೆಣವನ್ನು ಠಾಣೆಯ ಮುಂದಿಟ್ಟು ಘೋಷಣೆ ಕೂಗತೊಡಗಿದರು. ಡ್ಯೂಟಿ ಪೋಲೀಸರ ಮೇಲೆ ಕೊಲೆ ಕೇಸ್ ರಿಜಿಸ್ಟರ್ ಆಯಿತು. ಕಮ್ಯುನಿಸ್ಟ್ ಸಾಕ್ಷಿಗಳು ತರಲೆ ಮಾಡುತ್ತಿದ್ದಾರೆ. ಅವಕ್ಕೆ ಪೊಲೀಸರ ಹೆದರಿಕೇನೂ ಇಲ್ಲ; ಕೋರ್ಟ್ ಹೆದರಿಕೇನೂ ಇಲ್ಲ. ಇಂದು ಮುಖ್ಯಸಾಕ್ಷಿಯ ಹೇಳಿಕೆ ಇದೆ" ಎಂದು ಒಂದೇ ಉಸಿರಿಗೆ ಹೇಳಿ ನಿಟ್ಟುಸಿರುಬಿಟ್ಟರು.

ಕಮ್ಯುನಿಸ್ಟ್ ಆಗಿದ್ದ ನಮ್ಮ ಚಿಕ್ಕ ಸೋದರಮಾವ ತನ್ನಣ್ಣ ಸಿದ್ಧನಂಜೇಗೌಡರನ್ನೇ ಮಚ್ಚಿನಿಂದ ಕೊಚ್ಚಲು ಯತ್ನಿಸಿದ ಕೇಸನ್ನು ದೊಡ್ಡಬೆಳವಂಗಲ ಠಾಣೆಯಲ್ಲಿ ಇದೇ ಸತ್ಯನಾರಾಯಣರು ದಾಖಲು ಮಾಡಿಕೊಂಡಿದ್ದರು. "ನಿಮ್ಮ ಚಿಕ್ಕಸೋದರಮಾವ ಕಮ್ಯುನಿಸ್ಟ್ ಆಗಿಲ್ಲದೆ ಇದ್ದರೆ ಇಷ್ಟು ಕೆಟ್ಟವನಾಗುತ್ತಿರಲಿಲ್ಲ" ಎಂದು ಆಗ ಹೇಳುತ್ತಿದ್ದುದು ನೆನಪಿಗೆ ಬಂದಿತು. ಈಗಲೂ ಸತ್ಯನಾರಾಯಣ

ಅವರಿಗೆ ಕಮ್ಯುನಿಸ್ಟ್ ಬಗೆಗೆ ಸದಭಿಪ್ರಾಯವಿರಲಿಲ್ಲ. ತಿಂಡಿ, ಕಾಫಿ ಮುಗಿದ ಮೇಲೆ ಸರ್ಕಲ್ ಇನ್ಸ್‌ಪೆಕ್ಟರ್ ಸತ್ಯನಾರಾಯಣರೊಂದಿಗೆ ಕೋರ್ಟ್‌ಗೆ ಹೋದೆ. ಹೋಗುತ್ತ ದಾರಿಯಲ್ಲಿ ದೊಡ್ಡಬೆಳವಂಗಲದಲ್ಲಿ ನೌಕರಿ ಮಾಡುತ್ತಿದ್ದಾಗಿನ ನೆನಪುಗಳನ್ನು ತೋಡಿದರು ಸತ್ಯನಾರಾಯಣ.

ಪ್ರಾಸಿಕ್ಯೂಟರ್ ಮುನಿಸ್ವಾಮಿಗೌಡರನ್ನೂ ಮತ್ತು ಡಿಫೆನ್ಸ್ ಲಾಯರ್ ಎಸ್.ವಿ. ಜಗನ್ನಾಥರನ್ನೂ ಸತ್ಯನಾರಾಯಣರು ಭೇಟಿ ಮಾಡಿಸಿದರು.

ಸಾಹುಕಾರ್ ಎನ್ನುವ ಸೆಷನ್ಸ್ ಜಡ್ಜ್‌ರ ಮುಂದೆ ಕೇಸ್ ನಡೆಯುತ್ತಿತ್ತು.

ಮೊಕದ್ದಮೆಯ ಮೂವರು ಡಿಫೆನ್ಸ್ ವಿಟ್ನೆಸ್‌ಗಳ ಸಾಕ್ಷಿ ಹೇಳಿಕೆ ಇತ್ತು.

ವಿಟ್ನೆಸ್ ಬಾಕ್ಸ್‌ನಲ್ಲಿ ನಿಂತಿದ್ದ ಮೂವರ ಪೈಕಿ ಒಬ್ಬರಿಗೆ ಸಾಕ್ಷಿ ಹೇಳಿಕೆ ನೀಡುವುದಕ್ಕೆ ಪೂರ್ವದಲ್ಲಿ ದೇವರ ಹೆಸರಿನಲ್ಲಿ ಪ್ರಮಾಣ ಮಾಡುವಂತೆ ಕೋರ್ಟ್ ಆಫೀಸರ್ ಹೇಳಿದ. ಮೂವರಲ್ಲಿ ಮುಂದೆ ನಿಂತಿದ್ದ ತಿಮ್ಮಪ್ಪಯ್ಯ ಎನ್ನುವ ಸಾಕ್ಷಿ "ಕೋರ್ಟ್ ಆಫೀಸರ್ ಮೂಲಕ ನಾನು ಪ್ರಮಾಣ ಮಾಡುವುದಿಲ್ಲ" ಅಂದ. ಜಡ್ಜ್ ಕ್ಷಣಕಾಲ ಮುಗುಳ್ನಕ್ಕು, "ಇದು ಕೋರ್ಟ್, ತಮಾಷೆಗೆ ಅವಕಾಶವಿಲ್ಲ" ಎಂದರು.

"ನಾನು ತಮಾಷೆ ಮಾಡುತ್ತಿಲ್ಲ ಸಾರ್. ಗಂಭೀರವಾಗಿಯೇ ಹೇಳುತ್ತಿದ್ದೇನೆ" ಎಂದ.

"ಆಯಿತು, ಕೋರ್ಟ್ ಆಫೀಸರ್ ಬೇಡದಿದ್ದರೆ ನಾನೇ ಮಾಡಿಸುವೆ. ಹೂ. ಹೇಳಿ ನಾನು ಹೇಳಿದಂತೆ ಎಂದು, 'I do swear in the name of God that what I shall state shall be the truth, the whole truth and nothing but the truth' ಎಂದು ಹೇಳಿದರು. ಆಗ ಸಾಕ್ಷಿ "ನೀವು ಹೇಳಿದ ರೀತಿಯಲ್ಲಿ ಪ್ರಮಾಣ ಮಾಡಿ ಸಾಕ್ಷಿ ಹೇಳಿಕೆ ನೀಡುವ ಅಗತ್ಯವಿಲ್ಲ" ಎಂದ.

ಜಡ್ಜ್ ಸರಳ ಸ್ವಭಾವದವರಂತೆ ಕಂಡರು. ಕೋಪ ಪ್ರದರ್ಶಿಸಲಿಲ್ಲ. ಈ ಸಾಕ್ಷಿ ಸ್ವಲ್ಪ ಉದ್ಧಟತನದವನಂತೆ ಇದ್ದಾನೆ ಎನ್ನುವಂತೆ ನೋಡಿ "ಕಾನೂನಿಗೆ ಎಲ್ಲರೂ ತಲೆ ಬಾಗಬೇಕು. ನೀನು ಕಾನೂನಿಗಿಂತ ದೊಡ್ಡವನಲ್ಲ" ಎಂದರು.

"ನಾನು ಹೇಳುತ್ತಿರುವುದೂ ಅದನ್ನೇ ಸ್ವಾಮಿ. ನ್ಯಾಯಾಧೀಶರು ಕಾನೂನಲ್ಲಿ ಇಲ್ಲದ್ದನ್ನು ಹೇಳಿ ಕಾನೂನಿನ ಹಾದಿ ತಪ್ಪಿಸಕೂಡದು" ಎಂದು ನಮ್ರವಾಗಿಯೇ ಹೇಳಿದ. ಇದ್ದಕ್ಕಿದ್ದಂತೆ ನ್ಯಾಯಾಧೀಶರ ಮುಖ ಕಪ್ಪಿಟ್ಟಿತು. ಸೃಷ್ಟಿಯಾಗಿದ್ದ

ಸನ್ನಿವೇಶವನ್ನು ಸರಳವಾಗಿ ನಿಭಾಯಿಸುವ ಧಾಟಿಯಲ್ಲಿದ್ದ ನ್ಯಾಯಾಧೀಶರು ಸ್ವಲ್ಪ ಕುಪಿತಗೊಂಡಂತೆ ಕಂಡರೂ ಅದನ್ನು ಮರೆಮಾಚಿಕೊಳ್ಳುತ್ತ, "ಆಯಿತು, ನಿಮಗೆ ಕಾನೂನು ಗೊತ್ತಿದೆಯೆ? ಪ್ರಮಾಣ ಮಾಡದೆ ಸಾಕ್ಷಿ ಹೇಳುವುದು ಶಿಕ್ಷಾರ್ಹ ಅಪರಾಧ ಎನ್ನುವುದ್ದು?" ಎಂದರು.

"ಸ್ವಾಮಿ ದಯವಿಟ್ಟು ಓಥ್ಸ್ ಆಕ್ಟ್ ಅನ್ನು ಓದಿಕೊಂಡು ಬಂದು ಈ ಮಾತನ್ನು ಹೇಳಬೇಕು" ಎಂದಾಗ ಇಡೀ ಕೋರ್ಟ್ ಸ್ತಬ್ಧವಾಗಿ ಹೋಯಿತು. ನ್ಯಾಯಾಧೀಶರ ಮುಖ ಬೆವರತೊಡಗಿತು. ಮುಂದೆ ಮಾತಾಡುವ ಆತ್ಮವಿಶ್ವಾಸ ನ್ಯಾಯಾಧೀಶರಲ್ಲಿ ಉಳಿಯಲಿಲ್ಲ. ಕೇಸನ್ನು ಮಧ್ಯಾಹ್ನಕ್ಕೆ ಹಾಕಿ ಉಳಿದ ಕೇಸ್‌ಗಳಿಗೂ ಬೇಗ ಬೇಗ ಡೇಟ್‌ಗಳನ್ನು ಕೊಟ್ಟು ತಮ್ಮ ಚೇಂಬರ್‌ಗೆ ಹೊರಟುಹೋದರು.

ಮಧ್ಯಾಹ್ನ ಮೂರು ಗಂಟೆಗೆ ತಿಮ್ಮಪ್ಪಯ್ಯ ವಿಟ್ನೆಸ್ ಬಾಕ್ಸ್‌ನಲ್ಲಿ ಬಂದು ನಿಂತಾಗ ನ್ಯಾಯಾಧೀಶರು "ನೀವು ಹೇಳಿದ್ದೇ ಸರಿ. ನ್ಯಾಯಾಲಯವೂ ಕಾನೂನಿಗೆ ಹೇಗೆ ಕುರುಡಾಗಿರುತ್ತದೆ ಎನ್ನಲು ಈ ಘಟನೆಯೇ ಸಾಕ್ಷಿ. ಕಾನೂನು ತಿಳಿಯದೆ ನಿಮಗೇ ಏನೇನೊ ಅಂದು ಮನನೋಯಿಸಿದ್ದಕ್ಕೆ ನ್ಯಾಯಾಲಯದ ಪರವಾಗಿ ಕ್ಷಮೆ ಕೋರುವೆ. ನೀವು ಕಾನೂನು ಪಂಡಿತರೇ ಇರುವಂತೆ ಕಾಣುತ್ತದೆ. ಪ್ರಮಾಣ ಕಾಯ್ದೆಯಲ್ಲಿರುವ ಯಾವುದೇ ರೀತಿಯಲ್ಲಿ ನೀವು ನಿಮ್ಮ ಸಾಕ್ಷಿ ಹೇಳಿಕೆಯನ್ನು ನೀಡಬಹುದು...." ಎಂದಾಗ ಇಡೀ ಕೋರ್ಟ್ ಬೆಚ್ಚಿಬಿದ್ದಿತು.

ನಂತರ ಗೊತ್ತಾಯಿತು ತಿಮ್ಮಪ್ಪಯ್ಯ ನೋಡಲು ಕೃಷಿಕರಂತೆ ಕಾಣುತ್ತಿದ್ದರೂ ಕಾನೂನು ಪದವಿ ಪಾಸು ಮಾಡಿದವರಾಗಿದ್ದರು. ಆದರೆ, ವೃತ್ತಿಗೆ ಬಾರದೆ ಕೃಷಿಯಲ್ಲಿ ತೊಡಗಿದ್ದರು.

ಕೋರ್ಟ್ ಹಾಲ್‌ನಿಂದ ಹೊರಬಂದ ತಿಮ್ಮಪ್ಪಯ್ಯನವರನ್ನು ಪ್ರಾಸಿಕ್ಯೂಟರ್, ಡಿಫೆನ್ಸ್ ಲಾಯರ್, ಸರ್ಕಲ್ ಇನ್ಸ್‌ಪೆಕ್ಟರ್ ಎಲ್ಲ ಮುತ್ತಿಕೊಂಡರು.

ನ್ಯಾಯಾಧೀಶರಿಂದಲೇ ಕ್ಷಮೆ ಕೇಳಿಸಿಕೊಂಡ ತಿಮ್ಮಪ್ಪಯ್ಯನ ಕೈಯನ್ನು ಕುಲುಕಿ ಹಾಗೇ ಸ್ವಲ್ಪಹೊತ್ತು ಒಡಿದುಕೊಂಡಿದ್ದೆ. "ನಿಮ್ಮೊಂದಿಗೆ ಮಾತಾಡಬೇಕು. ನಾನೂ ಲಾ ಸ್ಟುಡೆಂಟ್" ಎಂದೆ. ಎಲ್ಲ ಕಾಫಿಗೆ ಹೋದೆವು.

ಹೋಟೆಲ್‌ನಲ್ಲಿ ತಿಮ್ಮಪ್ಪಯ್ಯ ಪ್ರಮಾಣ ಕಾಯ್ದೆ ಬಗ್ಗೆ ಒಂದು ಲೆಕ್ಚರ್ ಕೊಟ್ಟರು. ಬ್ರಿಟಿಷರು ಭಾರತವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿದಾಗ ನಮ್ಮ ದೇಶದಲ್ಲಿ ಏಕರೀತಿಯ ನ್ಯಾಯ ವಿತರಣೆ ಇರಲಿಲ್ಲ. ವಿವಿಧ ಮತ, ಧರ್ಮ, ಪಂಥ, ಬುಡಕಟ್ಟುಗಳ ಜನ ತಮತಮಗೆ ತಿಳಿದ ರೀತಿಯಲ್ಲಿ ನ್ಯಾಯ

ನಿಷ್ಕರ್ಷಿಸುತ್ತಿದ್ದರು. ಬ್ರಿಟಿಷರು ಒಂದು ಅಂಶವನ್ನು ಗಮನಿಸಿದ್ದರು : ಭಾರತೀಯರಲ್ಲಿ ದೇವರ ಭಯ ಬಹಳಷ್ಟಿದೆ, ದೇವರ ಹೆಸರಿನಲ್ಲಿ ಪ್ರಮಾಣ ಮಾಡಿಸಿದರೆ ಸತ್ಯ ಹೊರಬೀಳುತ್ತದೆ ಎಂದು.

1973ರಲ್ಲಿ ಇಂಗ್ಲೆಂಡ್‌ನ ಪಾರ್ಲಿಮೆಂಟ್‌ನಲ್ಲಿ ಭಾರತದ ನ್ಯಾಯಾಲಯಗಳಲ್ಲಿ ಸಾಕ್ಷಿದಾರರಿಂದ ಹೇಗೆ ಪ್ರಮಾಣ ಮಾಡಿಸಬೇಕೆಂದು ದೊಡ್ಡ ಡಿಬೇಟ್ ನಡೆಯಿತು. ಪರಿಣಾಮವಾಗಿ ಓಥ್ಸ್ ಆ್ಯಕ್ಟ್ 1873 ಜಾರಿಗೆ ಬಂದಿತು.

ದೇವರ ಹೆಸರಿನಲ್ಲಿ ಪ್ರಮಾಣ ಮಾಡದಿರುವುದು ಅಪರಾಧವೆಂದು ಓಥ್ಸ್ ಆಕ್ಟ್ ಹೇಳಿತು. ಆದರೆ ಸ್ವಾತಂತ್ರ್ಯ ಹೋರಾಟದೊಂದಿಗೆ ಬೆಳೆದುಬಂದ ಕಮ್ಯುನಿಸ್ಟ್ ಚಳವಳಿಯ ನಾಯಕರು ಕೋರ್ಟ್‌ಗಳಲ್ಲಿ ತಮಗೆ ದೇವರ ಮೇಲೆ ನಂಬಿಕೆಯಿಲ್ಲವೆಂದೂ ಹಾಗೆ ಪ್ರಮಾಣ ಮಾಡುವುದು ಸಾಕ್ಷಿಯ ವ್ಯಕ್ತಿತ್ವದ ಸಮಗ್ರತೆಯನ್ನೇ ಪ್ರಶ್ನಿಸಿದಂತಾಗುವುದು ಎಂದೂ ವಾದಿಸುತ್ತ ಬಂದರು. ಸ್ವಾತಂತ್ರ್ಯ ನಂತರವೂ ಇ.ಎಂ.ಎಸ್ ನಂಬೂದಿರಿಪಾದ್, ಎ.ಕೆ. ಗೋಪಾಲನ್, ಪಿ. ಸುಂದರಯ್ಯ, ತೆರಿಮಲ ನಾಗಿರೆಡ್ಡಿಯಂಥ ಮಹಾನ್ ಕಮ್ಯುನಿಸ್ಟ್ ಮುಂದಾಳುಗಳು ಕೋರ್ಟ್‌ಗಳಲ್ಲಿ ಈ ಬಗ್ಗೆ ತೀವ್ರ ಆಕ್ಷೇಪಣೆ ಮಾಡುವುದರೊಂದಿಗೆ ಲಾ ಕಮೀಷನ್ ಮೇಲೆ ಒತ್ತಾಯವನ್ನೂ ತಂದರು. ಇದೆಲ್ಲದರ ಪರಿಣಾಮವಾಗಿ 1969 ರಲ್ಲಿ ಪಾರ್ಲಿಮೆಂಟ್‌ನಲ್ಲಿ ಪ್ರಮಾಣ ಕಾಯ್ದೆಯ ಬಗ್ಗೆ ಚರ್ಚೆ ನಡೆದು ತಿದ್ದುಪಡಿ ತರಲಾಯಿತು.

1969 ರ ಪ್ರಮಾಣ ಕಾಯ್ದೆಯ ಮೂಲ ಆ್ಯಕ್ಟ್‌ನ ಅಂಶಗಳನ್ನು ಹಾಗೇ ಇರಿಸಿಕೊಂಡು ಅದಕ್ಕೆ ಹೊಸತಾಗಿ ಕೆಲ ಅಂಶಗಳನ್ನು ಸೇರಿಸಲಾಯಿತು. ಅವುಗಳ ಪೈಕಿ ಮುಖ್ಯವಾದ ಎರಡು ಅಂಶಗಳಿವೆ. ಆ ಅಂಶಗಳು :

* ದೇವರ ಹೆಸರಿನಲ್ಲಿ ಬೇಡವೆನಿಸಿದರೆ ಕೇವಲ ಸ್ವಯಂ ದೃಢೀಕರಣದಿಂದ ಹೇಳಿಕೆ ನೀಡಬಹುದು.

* ಯಾವುದೇ ರೀತಿಯ ಪ್ರಮಾಣ ಮಾಡದೆಯೂ ಸಾಕ್ಷಿ ಹೇಳಬಹುದು.

ಈ ಹೊಸ ಪ್ರಮಾಣ ಕಾನೂನು ದೇವರ ಭಯದ ಸ್ಥಾನದಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಸಮಗ್ರತೆ, ಘನತೆಗಳನ್ನು ತಂದುಕೊಟ್ಟಿತು. ಹಾಗೆಯೇ ಪ್ರಮಾಣ ಎನ್ನುವುದು ಸಾಕ್ಷಿಯಿಂದ ಸತ್ಯ ಹೊರಗೆಡುಹುವ ಟೆಕ್ನಿಕ್ ಅಥವಾ ಟ್ರಿಕ್ ಮಾತ್ರ ಅಲ್ಲವೆಂದೂ ವ್ಯಾಖ್ಯಾನಿಸಿತು.

ಈಗಲೂ ಈ ಪ್ರಮಾಣ ಕಾಯ್ದೆಯ ಪರಿಜ್ಞಾನವಿಲ್ಲದೆಯೇ ಕೋರ್ಟ್‌ಗಳಲ್ಲಿ ನಿತ್ಯ ರೂಢಿಗತ ಪ್ರಮಾಣಗಳು ಮಾಡಲ್ಪಡುತ್ತಲೇ ಇರುತ್ತವೆ.

ಮಾರನೆ ದಿನ ಪ್ರೊ. ಜನಾರ್ದನ್ ಅವರಿಗೆ ಈ ಘಟನೆಯನ್ನು ವಿವರಿಸಿದೆ. ಆಗ ಅವರು, "ಕಾನೂನಿನ ಉತ್ಕೃಷ್ಟಜ್ಞಾನ ತನಗಷ್ಟೇ ಇರುತ್ತೆ ಎನ್ನುವ ಪೂರ್ವಗ್ರಹದಿಂದ ನ್ಯಾಯಾಧೀಶರು ಕಟಕಟೆಯಲ್ಲಿ ನಿಂತವರನ್ನು ನೋಡುತ್ತಿರುತ್ತಾರೆ. ಅಂಥ ಧೋರಣೆಗೆ ಇಂಥ ಚುರುಕುಗಳು ಆಗಾಗ ಬೇಕಾಗುತ್ತವೆ. ಆ ಜಡ್ಜ್ ನಿಜವಾಗ್ಲೂ ದೊಡ್ಡ ಮನುಷ್ಯ. ಓಪನ್ ಕೋರ್ಟ್‌ನಲ್ಲಿ ಪ್ರಮಾಣ ಕಾಯ್ದೆ ಬಗೆಗೆ ತಮಗಿದ್ದ ಅಜ್ಞಾನವನ್ನು ಒಪ್ಪಿಕೊಂಡರಲ್ಲ. ಇಂಥವರು ಬಹಳ ವಿರಳ" ಎಂದರು.

30

ಮರದಲ್ಲಿ ತಂಗಿಯನ್ನು ಕಾಣುವ ಹುಚ್ಚ

ನಮ್ಮ ಲಾ ಕಾಲೇಜ್ ಕಾಂಪೌಂಡ್‌ನಲ್ಲಿಯ ಮರವೊಂದರ ಕೆಳಗೆ ಪ್ರತಿನಿತ್ಯ ಎನ್ನುವಂತೆ ಒಬ್ಬ ಬಂದು ನಿಂತುಕೊಳ್ಳುತ್ತಿದ್ದ. ಆರಡಿಗಿಂತಲೂ ಎತ್ತರದ ನೀಳಕಾಯ ಅವನದು. ಬೆಳ್ಳಗಿದ್ದ ಆತ ಗಡ್ಡಬಿಟ್ಟಿದ್ದ. ನೀಟಾಗಿ ಡ್ರೆಸ್ ಮಾಡಿಕೊಂಡು ಷೂಗಳನ್ನು ನೀಟಾಗಿ ಪಾಲಿಷ್ ಮಾಡಿಕೊಂಡು ಬರುತ್ತಿದ್ದ. ಆದರೆ ಮೇಲೆ ಹಾಕುತ್ತಿದ್ದ ತೆಳು ಖಾಕಿ ಬಣ್ಣದ ಕೋಟ್ ಮಾತ್ರ ಬದಲಾಗುತ್ತಿರಲಿಲ್ಲ. ಆತ ತನ್ನಲ್ಲೇ ಮಗ್ನನಾಗಿರುತ್ತಿದ್ದ. ಗಿಡದೊಂದಿಗೆ ಸಂಭಾಷಣೆ ನಡೆಸುತ್ತಿದ್ದ. ಎದುರಿಗೆ ಯಾರಾದರೂ ಹೋದರೆ ಮಾತು ನಿಲ್ಲಿಸಿ ವಿಸ್ಮಯದಿಂದ ಅಪರಿಚಿತ ಕಣ್ಣುಗಳಿಂದ ನೋಡುತ್ತಿದ್ದ. ನಮ್ಮದು ಬೆಳಗಿನ ಕಾಲೇಜ್ ಆಗಿದ್ದರಿಂದ ಆತನೂ ಬೆಳಗ್ಗೆ ಏಳುಗಂಟೆಗೇ ಬಂದು ಹಾಜರಾಗುತ್ತಿದ್ದ. ಕಾಲೇಜ್ ಬಿಟ್ಟೊಡನೆ ಎಲ್ಲರೊಂದಿಗೆ ತಾನೂ ನಿರ್ಗಮಿಸುತ್ತಿದ್ದ. ನನ್ನಲ್ಲಿ ಕುತೂಹಲ ತಡೆದುಕೊಳ್ಳಲಾಗಲಿಲ್ಲ. ನನ್ನ ಕ್ಲಾಸ್‌ಮೇಟ್‌ಗಳಾಗಿದ್ದ ಎಂ. ಬಾಲಕೃಷ್ಣ ಮತ್ತು ಚಿತ್ತರಂಜನ್‌ರನ್ನು ವಿಚಾರಿಸಿ ಅವನ ಬಗ್ಗೆ ಮಾಹಿತಿ ಕೇಳಿದೆ. “ನಮ್ಮ ತಲೆಯಲ್ಲೂ ಅವನ ಬಗ್ಗೆ ಪ್ರಶ್ನೆ ಕೊರೀತಾಯಿದೆ. ಮೂವರೂ ಸೇರಿ ಯಾರನ್ನಾದರೂ ಕೇಳೋಣ” ಎಂದರು.

ನಮ್ಮ ಕಾಲೇಜ್ ಲೈಬ್ರರಿಯನ್ ಆಗಿದ್ದ ಮಾಲತಿಯವರಿಗೆ, "ಅದೇನು ಆ ಹುಡುಗ ನಿತ್ಯ ಬಂದು ಮರದ ಕೆಳಗೆ ನಿಲ್ಲುತ್ತಾನೆ?" ಎಂದು ಕೇಳಿದೆವು.

"ಅವ್ನು ನಮ್ಮ ಕಾಲೇಜ್‌ನಲ್ಲೇ ಓದ್ತಾಯಿದ್ದ. ಅದೇನೊ ಹುಚ್ಚು ಹಿಡಿದು ಹೀಗಾಗ್‌ಬಿಟ್ಟಿದ್ದಾನಂತೆ. ಅದೇಕೆ ಹುಚ್ಚು ಹಿಡೀತು ಅಂತ ನಂಗೆ ಗೊತ್ತಿಲ್ಲ. ಪ್ರೊ. ಬಷೀರ್ ಹುಸೇನ್ ಅವರಿಗೆ ಅವನ ಬಗ್ಗೆ ಚೆನ್ನಾಗಿ ಗೊತ್ತಿದೆ" ಎಂದರು.

ಬಷೀರ್ ಹುಸೇನ್ ಅವರು ನಾವು ಕೇಳಿದ ಪ್ರಶ್ನೆಗೆ ಒಂದು ಕ್ಷಣ ನಿಟ್ಟುಸಿರುಬಿಟ್ಟು, "ಅವನದು ದೊಡ್ಡ ಕತೆ. ಅವ್ನುನ್ನ ಏನೂ ಅಂತ ತಿಳಿದಿದೀರಾ. ಬಿ.ಎಲ್.ನಲ್ಲಿ ಮೊದಲ ರ್‍ಯಾಂಕ್ ಪಡೆದು ನಮ್ಮ ಕಾಲೇಜಿನ ಕೀರ್ತಿ ಹೆಚ್ಚಿಸಿದವನು. ಅವನ ಹೆಸರು ಶಿವರುದ್ರಯ್ಯ. ನನ್ನ ಸ್ಟೂಡೆಂಟ್ ಆಗಿದ್ದ ಅವನ ಮೆಮೊರಿ ಪವರ್ ಎಷ್ಟಿತ್ತು ಅಂತ ನನಗೆ ಚೆನ್ನಾಗಿ ಗೊತ್ತು. ಸಿ.ಆರ್.ಪಿ.ಸಿ., ಐ.ಪಿ.ಸಿ. ಮುಂತಾದವುಗಳು ಅವನ ನಾಲಿಗೆಯ ಮೇಲೆ ಕುಣಿದಾಡುತ್ತಿದ್ದವು. ಅಂಥವನು ನನ್ನ ಸ್ಟೂಡೆಂಟ್ ಆಗಿದ್ದ ಎಂದು ಹೇಳಿಕೊಳ್ಳುವುದೇ ನನಗೆ ಇಂದಿಗೂ ಹೆಮ್ಮೆಯ ಸಂಗತಿ. ಅಂಥ ಅದ್ಭುತ ಪಾಂಡಿತ್ಯದ ವಿದ್ಯಾರ್ಥಿಯ ಬಾಳು ಹೀಗಾಗಬಾರದಿತ್ತು. ದೇವರು ನಿಷ್ಕರುಣಿ ಎನ್ನುವುದು ಇದಕ್ಕೇ ಏನೋ. ಅವನು ಎಂ.ಎಲ್.ಗೆ ಸೇರಿಕೊಂಡಿದ್ದ. ಶಿವರುದ್ರಯ್ಯ ತನ್ನ ತಂದೆ, ತಾಯಿ ಮತ್ತು ಸಹೋದರಿಯರೊಂದಿಗೆ ಕಾರಲ್ಲಿ ಪ್ರಯಾಣಿಸುತ್ತಿದ್ದ. ತುಮಕೂರು ಹತ್ತಿರದ ಗುಬ್ಬಿಯ ಬಳಿ ಕಾರು ಆಕ್ಸಿಡೆಂಟ್ ಆಯಿತು. ಆಗ ಸ್ಥಳದಲ್ಲೇ ಅವನ ತಂಗಿ ಸತ್ತಳು. ಒಬ್ಬಳು ಅಕ್ಕ ಕಾಲು ಕಳೆದುಕೊಂಡಳು. ಇವನ ತಲೆಗೂ ಪೆಟ್ಟಾಯಿತು. ಈ ಎಲ್ಲ ಶಾಕ್‌ಗಳಿಂದ ಅವನು ಹೀಗಾಗಿಬಿಟ್ಟಿದ್ದಾನೆ. ಅವನನ್ನು ಹುಚ್ಚ ಎನ್ನುತ್ತಾರೆ. ಆದರೆ ಅವನೆಂದೂ ಯಾರಿಗೂ ಕೆಟ್ಟದಾಗಿ ಬೈದಿಲ್ಲ. ಅಸಹನೆ, ಕ್ರೌರ್ಯಗಳನ್ನು ವ್ಯಕ್ತಪಡಿಸಿಲ್ಲ. ವಿಧೇಯ ವಿದ್ಯಾರ್ಥಿಯಂತೆ ನಿತ್ಯ ಕಾಲೇಜ್ ಕ್ಯಾಂಪಸ್‌ಗೆ ಬರುತ್ತಾನೆ," ಎಂದು ಮಾತು ಮುಗಿಸಿದಾಗ ಬಷೀರ್ ಹುಸೇನ್ ಅವರ ಮುಖದ ಮೇಲೆ ವ್ಯಾಕುಲತೆ ಆವರಿಸಿತ್ತು.

ಶಿವರುದ್ರಯ್ಯನ ಬಗೆಗೆ ನಮ್ಮಲ್ಲಿ ಗೌರವ ಭಾವನೆ ಮೂಡಿತು. ನಾವು ಅಂದುಕೊಂಡಂತೆ ಯಃಕಶ್ಚಿತ್ ಹುಚ್ಚ ಅವನಲ್ಲ ಎಂದುಕೊಂಡೆ. ಅವನು ಏನು ವಟಗುಡುತ್ತಾನೆ ಎಂದು ತಿಳಿದುಕೊಳ್ಳುವ ಕುತೂಹಲ ಕೆರಳಿತು.

ಸದ್ದು ಮಾಡದೆ ಅವನ ವಟಗುಡುವ ಮಾತುಗಳು ಕೇಳುವಷ್ಟು ದೂರದಲ್ಲಿ ನಿಂತೆವು. ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದ. ಆಗ ಕೇಳಿದ ಮಾತುಗಳಲ್ಲಿ ಒಂದೆರಡು ಇಂದಿಗೂ ನೆನಪುಳಿದಿವೆ.

"All laws are useless. For goodmen do not need laws and bad men are made no better by them."

"Old lawyers never die; they just lose their appeals."

"Law can not persuade where it can not punish" ಹೀಗೆ ಅವನ ಹೇಳಿಕೆಗಳು ten commandments ರೀತಿಯಲ್ಲಿ ಹೊರಬೀಳುತ್ತಿದ್ದವು.

ಅವನ ಪಾರ್ಶ್ವ ನೋಟಕ್ಕೆ ನಮ್ಮ ಇರುವು ಗೊತ್ತಾಗುತ್ತಿದ್ದಂತೆಯೇ ಪಕ್ಕನೆ ಹೊರಳಿ ನಮ್ಮನ್ನು ನೋಡಿದ; ಮುಖದಲ್ಲಿ ದಿಗಿಲನ್ನು ವ್ಯಕ್ತಪಡಿಸಿದ. ಅಷ್ಟರಲ್ಲಿ ನಮ್ಮ ಕಾಲೇಜ್ ಬಿಡುವ ಸಮಯವಾಯಿತು. ಶಿವರುದ್ರಯ್ಯ ಬಿರಬಿರನೆ ನಡೆಯತೊಡಗಿದ. ಅವನನ್ನು ನಾನು ಹಿಂಬಾಲಿಸುವುದಾಗಿ ಹೇಳಿ ನಾನೂ ಹೊರಟೆ. ಚಿತ್ತರಂಜನ್, "ನನಗೆ ಬೇರೆ ಕೆಲಸವುಂಟು ಕಣೋ" ಎಂದು ಹೇಳಿದ. ಬಾಲಕೃಷ್ಣ ನನ್ನೊಂದಿಗೆ ಮೌನವಾಗಿ ಹೆಜ್ಜೆ ಹಾಕಿದ.

ಶಿವರುದ್ರಯ್ಯನ ಬಗೆಗೆ ಹುಟ್ಟಿದ ಕುತೂಹಲ ಅವನ ಮನೆ, ತಂದೆ, ತಾಯಿ, ಸೋದರಿಯನ್ನೂ ನೋಡಬೇಕೆನ್ನುವವರೆಗೆ ವಿಸ್ತೃತಗೊಂಡಿತು.

ಕೆಂಪೇಗೌಡ ರಸ್ತೆಗೆ ಹೊಂದಿಕೊಂಡಿರುವ ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯ ಮೂಲಕ ಗುಂಡೋಪಂತ್ ರಸ್ತೆಯತ್ತ ನಡೆದ ಶಿವರುದ್ರಯ್ಯನನ್ನು ಹಿಂಬಾಲಿಸಿದೆವು. ಅಲಿದು ಗಲ್ಲಿಯ ತಿರುವಿನಲ್ಲಿದ್ದ ಮನೆಯೊಳಕ್ಕೆ ಹೋದ. ನಾವು ಹಿಂಬಾಲಿಸುತ್ತಿರುವುದು ಅವನ ಗಮನಕ್ಕೆ ಬಂದಿರಲಿಲ್ಲ. ಶಿವರುದ್ರಯ್ಯ ಬೆಲ್ ಮಾಡಿದ. ಬಾಗಿಲು ತೆಗೆದವಳು ಕುಂಟಿ. ಕಂಕುಳಲ್ಲಿ ಆಧಾರಗೋಲುಗಳನ್ನಿರಿಸಿ ಕೊಂಡಿದ್ದಳು. ಪ್ರೊ. ಬಷೀರ್ ಹುಸೇನ್ ಅವರು ಹೇಳಿದಂತೆ ಆಕ್ಸಿಡೆಂಟ್‌ನಲ್ಲಿ ಕಾಲು ಕಳೆದುಕೊಂಡು ಬದುಕಿ ಉಳಿದವಳು ಇವಳೇ ಇರಬಹುದು ಎಂದುಕೊಂಡೆ.

ಅವಳು ಬಾಗಿಲು ಮುಚ್ಚುವ ಮುನ್ನವೇ ನಾವಿಬ್ಬರೂ ದೌಡುಗಾಲುಗಳಿಂದ ಅಂಗಳಕ್ಕೆ ಹಾರಿದ್ದೆವು. ನಮ್ಮನ್ನು ಅವಳು ಪ್ರಶ್ನಾರ್ಥಕವಾಗಿ ನೋಡಿದಳು.

"ನಾವು ಲಾ ಕಾಲೇಜ್ ಸ್ಟೂಡೆಂಟ್ಸ್. ನಿತ್ಯ ಇವರು ನಮ್ಮ ಕಾಲೇಜ್ ಕ್ಯಾಂಪಸ್‌ಗೆ ಬಂದು ನಿಲ್ಲುತ್ತಾರೆ. ಎಲ್ಲರೂ ಹುಚ್ಚ ಅನ್ನುತ್ತಾರೆ. ಆದರೆ ನಮಗೆ ಇವರ ಕಥೆ ಕೇಳಿ ಗೌರವ ಭಾವನೆ ಮೂಡಿದೆ. ನಮ್ಮ ಕಾಲೇಜಿನ ರ್‍ಯಾಂಕ್ ಸ್ಟೂಡೆಂಟ್ ಆಗಿದ್ದವರು ಇವರು ಎಂದು ಕೇಳಿದೆವು. ಇವರು ಮನೆಯಲ್ಲಿ

ಹೇಗಿರುತ್ತಾರೆ, ಮನೆಯವರೆಲ್ಲ ಅವರಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವ ಕುತೂಹಲದಿಂದ ಇವರನ್ನು ಹಿಂಬಾಲಿಸಿಕೊಂಡು ಬಂದಿದ್ದೇವೆ" ಎಂದೆ.

"ಓ ಹಾಗಾ !" ಎಂದ ಆಕೆ ನಮ್ಮನ್ನು ಒಳಕ್ಕೆ ಕರೆದಳು. ಶಿವರುದ್ರಯ್ಯ ಒಂದು ಸ್ಟೂಲ್ ಮೇಲೆ ಕೂತು ತನ್ನ ಪಾಡಿಗೆ ತಾನು ಏನೋ ಮಾತಾಡುತ್ತಿದ್ದ. ಕಾಲೇಜ್ ಕ್ಯಾಂಪಸ್‌ನಲ್ಲಿ ನಮ್ಮನ್ನು ನೋಡಿದ್ದರ ನೆನಪು ಆತನ ಮುಖದ ಮೇಲೆ ಸುಳಿದದ್ದು ಕಾಣಲಿಲ್ಲ. ಆತನ ಎದುರಿಗಿನ ಸೋಫಾ ಮೇಲೆ ಕುಳಿತೆವು. ಒಳಗಿನಿಂದ ವಯಸ್ಸಾದ ಹೆಂಗಸು ಕಾಫೀ ಲೋಟಗಳನ್ನು ಹಿಡಿದುಕೊಂಡು ಬಂದಳು.

"ಅದೆಲ್ಲ ಏಕಮ್ಮ, ಸುಮ್ಮನೆ ಬಂದಿದ್ದೆವು" ಎನ್ನುತ್ತ ಹೆಚ್ಚು ಉಪಚಾರ ಮಾಡಿಸಿಕೊಳ್ಳಲು ಮುಜುಗರವಾಗಿ ಲೋಟಗಳನ್ನು ಕೈಗೆತ್ತಿಕೊಂಡೆವು.

"ಏನಮ್ಮ ಮನೆಯಲ್ಲಿ ಸದಾ ಹೀಗೇ ಇರುತ್ತಾರೇನಮ್ಮ?" ಎಂದು ಕೇಳಿದ್ದಕ್ಕೆ ಆ ಮಹಿಳೆ ಕಣ್ಣೊರೆಸಿಕೊಳ್ಳುತ್ತ ಒಳಗೆ ಹೋದಳು.

ಆಧಾರಗೋಲುಗಳನ್ನು ಊರುತ್ತ ಹೊರಬಂದ ಯುವತಿ "ನಾನು ಇವನ ಅಕ್ಕ. ನೋಡಿ ಇವನು ಬಿ.ಎಲ್. ನಲ್ಲಿ ರ್‍ಯಾಂಕ್ ಬಂದುದಕ್ಕಾಗಿ ಸನ್ಮಾನಗೊಂಡಾಗ ತೆಗೆದ ಫೋಟೊಗಳು" ಎಂದು ಆಲ್ಬಮ್ ಕೊಟ್ಟಳು. ಆ ಫೋಟೊಗಳಲ್ಲಿ ಗಡ್ಡವಿರಲಿಲ್ಲ. ಮುಖ ಕಾಂತಿಯುತವಾಗಿ ಹೊಳೆಯುತ್ತಿತ್ತು. ಈಗಿನಂತೆ ಜಗತ್ತೇ ತನ್ನ ತಲೆಯ ಮೇಲಿದ್ದವನಂತೆ ಭಾರದ ಮುಖಭಾವವಿರಲಿಲ್ಲ.

"ಅದೇಕೆ ನಿತ್ಯ ಕಾಲೇಜ್‌ಗೆ ಬಂದು ಮರದೊಂದಿಗೆ ಮಾತಾಡುತ್ತಾರೆ?" ಎಂದೆ.

"ಬೆಳಗ್ಗೆ ತಿಂಡಿ ತಿನ್ನದೇ ಹೋಗಿರುತ್ತಿದ್ದ ಇವನಿಗೆ ಮಹಾರಾಣಿ ಕಾಲೇಜ್‌ನಲ್ಲಿ ಓದುತ್ತಿದ್ದ ನನ್ನ ತಂಗಿ ಇವನಿಗಾಗಿಯೇ ತಿಂಡಿಕಟ್ಟಿಕೊಂಡು ಹೋಗುತ್ತಿದ್ದಳು. ಇವನು ಈಗ ನಿಲ್ಲುತ್ತಾನಲ್ಲ ಆ ಮರದ ಕೆಳಗೇ ಸಾಮಾನ್ಯವಾಗಿ ಇಬ್ಬರೂ ತಿಂಡಿ ತಿನ್ನುತ್ತಿದ್ದರು. ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದ. ಕಾಲೇಜ್‌ನಿಂದ ಬರುವಾಗ ಅವಳಿಗಾಗಿ ರಸ್ತೆ ಬದಿಯ ಮರಗಳಿಂದ ನಾಗಲಿಂಗ ಪುಷ್ಪಗಳನ್ನು ತರುತ್ತಿದ್ದ. ನನ್ನ ತಂಗಿಗೆ ನಾಗಲಿಂಗ ಪುಷ್ಪವೆಂದರೆ ಪಂಚಪ್ರಾಣ; ಅದು ಮುಡಿದುಕೊಳ್ಳಲು ಬರುತ್ತಿರಲಿಲ್ಲವಾದರೂ ನೋಡಿ ಸಂತೋಷಪಡುತ್ತಿದ್ದಳು. ಆಕ್ಸಿಡೆಂಟ್‌ನಿಂದ ಚೇತರಿಸಿಕೊಂಡ ಮೇಲೆ ಇವ್ನು 'ಕಾಲೇಜ್ ಹತ್ರ ಪುಟ್ಟಿ ತಿಂಡಿ ತಗೊಂಡು ನನಗಾಗಿ ಕಾಯ್ತಿರ್ತಾಳೆ ಬೇಗ ಹೋಗಬೇಕು' ಎನ್ನತೊಡಗಿದ. ಮಾನಸಿಕ ಆಘಾತದಿಂದ ಸ್ವಲ್ಪ ದಿನ ಹೀಗೆನ್ನಬಹುದು ಎಂದುಕೊಂಡೆವು. ಆದರೆ ಇಂದಿಗೂ

ನಿತ್ಯ ಮುಂಜಾನೆ ಕಾಲೇಜ್‌ಗೆ ಹೋಗಿ ಆ ಮರದ ಕೆಳಗೆ ನಿಂತು ತನ್ನ ತಂಗಿಯ ಜೊತೆ ತಿಂಡಿ ತಿಂದು ಬರುತ್ತಾನೆ! ಬೆಳಗ್ಗೆ ತಿಂಡಿ ಕೊಟ್ಟರೆ ಮುಟ್ಟುವುದೇ ಇಲ್ಲ. ಅವನು ಅಲ್ಲಿ ಮರದ ಜೊತೆ ಮಾತಾಡುವುದಿಲ್ಲ ತಂಗಿಯ ಜೊತೆ ಮಾತಾಡುತ್ತಾನೆ..." ಎನ್ನುತ್ತಾ ಗದ್ಗದಿತಳಾದಳು.

ಶಿವರುದ್ರಯ್ಯನ ಬಗ್ಗೆ ಪ್ರೊ. ಬಷೀರ್ ಹುಸೇನ್ ಅವರು ಹೇಳಿದ್ದು ಗೌರವವನ್ನು ಹುಟ್ಟಿಸಿದರೆ, ಅವನಕ್ಕ ಹೇಳಿದ್ದು ಕರುಣೆಯನ್ನು ಹುಟ್ಟಿಸಿತು.

ಮಾರನೆ ದಿನ ಒಂದು ಪಿರಿಯಡ್ ಮುಗಿಸಿಕೊಂಡು ಇಂಡಿಯನ್ ಕಾಫೀ ಹೌಸ್‌ಗೆ ನಾನು, ಬಾಲಕೃಷ್ಣ ಹೋಗಿ ವಾಪಸು ಬಂದೆವು. ಕಾಲೇಜ್ ಬಳಿಗೆ ಬರುತ್ತಿದ್ದಂತೆಯೇ ಕಾಲೇಜ್ ಪ್ಯೂನ್ ಬೀರಯ್ಯ "ಪಾಪ ಯಾರಿಗೆ ಏನು ತೊಂದ್ರೆ ಕೊಟ್ಟ ಅಂತ ಹಿಡ್ಕೊಂಡು ಹೋದ್ರೊ ಆ ಪೊಲೀಸ್ನೋರು. ಅವ್ರ ಮನೆ ಹಾಳಾಗ...." ಎಂದ.

ಶಿವರುದ್ರಯ್ಯನನ್ನು ಪೊಲೀಸರು ಹಿಡಿದುಕೊಂಡು ಹೋಗಿದ್ದಕ್ಕೆ ಕಾರಣ ತಿಳಿಯಲಿಲ್ಲ. ಉಪ್ಪಾರಪೇಟೆ ಠಾಣೆಗೆ ಒಯ್ದಿದ್ದಾರೆಂದು ಗೊತ್ತಾಗಿ ಅಲ್ಲಿಗೆ ಹೋದೆವು.

ಅಲ್ಲಿದ್ದ ಸಬ್‌ಇನ್ಸ್‌ಪೆಕ್ಟರ್ ನಿರ್ಭಾವುಕನಾಗಿ "ಅವುನ್ನ ಕೋರ್ಟಿಗೆ ಕಳಿಸಿ ಆಯ್ತು" ಎಂದು ಹೇಳಿ ಮುಂದೆ ನೀವು ಮಾತಾಡುವ ಅವಶ್ಯಕತೆಯಿಲ್ಲವೆನ್ನುವಂತೆ ಪೊಲೀಸ್‌ನೊಬ್ಬನನ್ನು ಕೂಗಿ ಕರೆದು ಅದೇನನ್ನೊ ಹೇಳತೊಡಗಿದ. ಪೆಚ್ಚು ಮೋರೆಯಿಂದ ಹೊರಬಂದೆವು. ಸ್ನೇಹಿತ ಬಾಲಕೃಷ್ಣ ನನಗೆ ವಿದಾಯ ಹೇಳಿ ಹೊರಟ.

ಹಾಸ್ಟೆಲ್‌ನಲ್ಲಿ ಮಂಚಕ್ಕೊರಗಿ ಸೂರನ್ನೇ ದಿಟ್ಟಿಸತೊಡಗಿದೆ. ಇದ್ದಕ್ಕಿದ್ದಂತೆ ಯತಿರಾಜುಲು ನಾಯ್ಡು ನೆನಪಾದರು. ಕೋರ್ಟಿಗೆ ಹೋದೆ. ಅವರು ಸಿಗಲಿಲ್ಲ. ಪುನಃ ಬೆಳಿಗ್ಗೆ ಹೋದೆ. ನಾನು ಹೇಳಿದ್ದನ್ನು ಕೇಳಿಸಿಕೊಂಡ ಅವರು, ಪ್ರಾಸಿಕ್ಯೂಟರ್ ಒಬ್ಬರಿಗೆ ಫೋನ್ ಮಾಡಿ ಅವರನ್ನು ಕಂಡರೆ ನಿನಗೆ ಸಹಾಯ ಮಾಡುತ್ತಾರೆಂದು ಹೇಳಿದರು.

ಪ್ರಾಸಿಕ್ಯೂಟರ್, "ನೆನ್ನೆಯೇ ಬರಬೇಡ್ವಾ? ಇಂದು ಬೆಳಗ್ಗೆ ಹುಚ್ಚಾಸ್ಪತ್ರೆಗೆ ಸೇರಿಸಿಯಾಯ್ತು" ಎಂದರು. ಸಿಟ್ಟಿನಿಂದ ಮುಖ ಬೆವರಿತು. ಒರೆಸಿಕೊಳ್ಳುತ್ತಾ "ಅದೇಕೆ ಪೊಲೀಸ್ರು ಹಿಡಿದರು?" ಎಂದೆ.

"ಲುನಸಿ ಆಕ್ಟ್ ಪ್ರಕಾರ ಕೇಸ್ ಹಾಕಿದ್ದಾರೆ. ಆ lunatic who is dan-

gerous and unfit to be at large ಎಂದು ರಿಪೋರ್ಟ್ ಹಾಕಿದ್ದಾರೆ. ನೀನು ಅವನಿಗೆ ಏನಾಗಬೇಕು?" ಎಂದರು.

ನಾನು ಅವನ ಸಂಬಂಧಿಕನಾಗಿಲ್ಲದಿದ್ದರೂ ಶಿವರುದ್ರಯ್ಯನ ಬಗ್ಗೆ ಇಷ್ಟು ಆಸಕ್ತಿ ತೋರಿಸುತ್ತಿದ್ದುದನ್ನು ನೋಡಿದ ಪ್ರಾಸಿಕ್ಯೂಟರ್ "ಪೊಲೀಸರಿಗೆ ಕೇಸ್‌ಗಳು ಕಮ್ಮಿಯಾದಾಗ ತಮ್ಮ ಸ್ಟ್ಯಾಟಿಸ್ಟಿಕ್ಸ್ ತೋರಿಸಿಕೊಳ್ಳಲು ಹೀಗೆ ಕೇಸ್‌ಗಳನ್ನು ಬುಕ್ ಮಾಡುತ್ತಾರೆ" ಎಂದರು ನಗುತ್ತ.

ವರ್ಮಾ ಎನ್ನುವವರು ನಿಮ್ಹಾನ್ಸ್‌ಗೆ ಡೈರೆಕ್ಟರ್ ಆಗಿದ್ದರು. ಪ್ರಾಸಿಕ್ಯೂಟರ್ ಅವರಿಗೆ ಫೋನ್ ಮಾಡಿ ನಿಜ ವಿಷಯ ತಿಳಿಸಿದರು. ಶಿವರುದ್ರಯ್ಯನ ಸಂಬಂಧಿಕರು ಬಂದು ಬರೆದುಕೊಟ್ಟರೆ ಬಿಡುವುದಾಗಿ ತಿಳಿಸಿದರು.

ನಾನು ಶಿವರುದ್ರಯ್ಯನ ಮನೆಗೆ ಹೋದಾಗ ಅವರ ಮನೆಯಲ್ಲಿ ಎಲ್ಲ ಕಂಗಾಲಾಗಿದ್ದರು. ನನ್ನೊಂದಿಗೆ ಅವರ ಸಂಬಂಧಿಕನೊಬ್ಬ ಬಂದು ಡೈರೆಕ್ಟರ್ ಹೇಳಿದಂತೆ ಬರೆದುಕೊಟ್ಟ. "ಇವನು ಅಪಾಯಕಾರಿ ಹುಚ್ಚನಲ್ಲ, ಸುಮ್ಮನೆ ಹಿಡಿದು ತಂದಿದ್ದಾರೆ ಪೊಲೀಸರು" ಎಂದರು. ಶಿವರುದ್ರಯ್ಯ ನನ್ನನ್ನು ನೋಡಿ ಕೃತಜ್ಞತಾ ಭಾವವನ್ನೇನೂ ವ್ಯಕ್ತಪಡಿಸಲಿಲ್ಲ. ನಿರ್ಲಿಪ್ತವಾಗಿ ತನ್ನಲ್ಲೇ ಮಾತಾಡಿಕೊಳ್ಳುತ್ತಿದ್ದ.

ಬೆಳಗ್ಗೆ ನಾನು ಕಾಲೇಜ್‌ಗೆ ಬಂದಾಗ ಅದೇ ಮರದ ಕೆಳಗೆ ನಿಂತಿದ್ದ ಶಿವರುದ್ರಯ್ಯ. ಇವತ್ತಿಗೂ ನಾನು ಯು.ಆರ್. ಅನಂತಮೂರ್ತಿಯವರನ್ನು ನೋಡಿದಾಗಲೆಲ್ಲಾ ಶಿವರುದ್ರಯ್ಯನ ನೆನಪಾಗುತ್ತದೆ. ಶಿವರುದ್ರಯ್ಯನದು ಥೇಟ್ ಅನಂತಮೂರ್ತಿಯವರಂತೆಯೇ ಗೌರವರ್ಣ, ನೀಳನಾಸಿಕ, ಕೋಲುಮುಖ.

31

ಕುಮಾರನ ಚಿತ್ತ ಛಿದ್ರಗೊಳಿಸಿದ ಸಮುದ್ರವತಿ

ಶಿವರುದ್ರಯ್ಯನನ್ನು ಮಾನಸಿಕ ಆಸ್ಪತ್ರೆಯಿಂದ ಪಾರು ಮಾಡಲು ಓಡಾಡಿದ್ದರ ಪರಿಣಾಮವಾಗಿ ಅದರ ಸೂಪರಿಂಟೆಂಡೆಂಟ್ ಡಾ. ನಾರಾಯಣರೆಡ್ಡಿ ನನಗೆ ಪರಿಚಿತರಾದರು. ಯಾವುದಾದರೂ ನನ್ನ ತಲೆಯೊಳಗೆ ಹೊಕ್ಕರೆ ಅದರ ತಲೆಬುಡ ಜಾಲಾಡಿ ನೋಡುವುದು ನನ್ನ ಜಾಯಮಾನವಾಗಿ ಹೋಗಿತ್ತು. ಶಿವರುದ್ರಯ್ಯ ಮಾನಸಿಕ ರೋಗಿಯಾದ್ದರ ಕಥೆ ಕೇಳಿ ಇನ್ನಷ್ಟು ಮಾನಸಿಕ ರೋಗಿಗಳನ್ನು ನೋಡುವ ತವಕ ನನ್ನಲ್ಲಿ ಹುಟ್ಟಿಕೊಂಡಿತು. ಇಂಥ ನನ್ನ ಚಟುವಟಿಕೆಗಳಿಗೆ ನನ್ನ ಕಾಲೇಜಿನ ವೇಳಾಪಟ್ಟಿಯೂ ಅವಕಾಶ ಮಾಡಿಕೊಟ್ಟಿತ್ತು.

ಒಂದು ದಿನ ಮಾನಸಿಕ ಆಸ್ಪತ್ರೆಗೆ ಹೋಗಿ ಡಾ. ನಾರಾಯಣರೆಡ್ಡಿಯವರನ್ನು ಕಂಡು ಭಿನ್ನಭಿನ್ನ ಮನೋರೋಗಿಗಳನ್ನು ತೋರಿಸಿ, ಆ ರೋಗಗಳಿಗೆ ಕಾರಣ, ಹಿನ್ನೆಲೆಗಳನ್ನು ತಿಳಿಸಿಕೊಡಲು ಸಾಧ್ಯವೆ ಎಂದು ಪ್ರಶ್ನಿಸಿದೆ.

ಅದಕ್ಕೆ ಅವರು, "ಈ ಥರದ ಉತ್ಸಾಹ ನಮ್ಮ ವಿದ್ಯಾರ್ಥಿಗಳಿಗೇ ಅಪರೂಪವಾಗಿರುತ್ತದೆ. ಅಂಥವರಲ್ಲಿ ಲಾ ಸ್ಟೂಡೆಂಟ್ ಆದ ನಿನಗೆ ಇದರಲ್ಲಿ

ಒಳ್ಳೆ ಆಸಕ್ತಿ ಮೂಡಿಬಿಟ್ಟಿದೆ. ನನಗೆ ಸಂತೋಷ. ನಿಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನೆಲ್ಲ ಕರೆತರುವ ಏರ್ಪಾಡು ಮಾಡು. ನಿನಗೊಬ್ಬನಿಗೆ ಹೇಳುವ ಸಮಯದಲ್ಲಿಯೇ ಅವರೆಲ್ಲರಿಗೂ ಹೇಳಬಹುದು" ಎಂದರು.

ಅವರ ಸೂಚನೆ ನನಗೆ ಸರಿಕಂಡಿತು. "ನಮ್ಮ ಪ್ರಿನ್ಸಿಪಾಲ್ ಅವರೊಂದಿಗೆ ನೀವೊಮ್ಮೆ ಮಾತಾಡಿ ಸರ್" ಎಂದೆ.

ನಮ್ಮ ಕಾಲೇಜ್ ಪ್ರಿನ್ಸಿಪಾಲ್ ಬಿ. ಸದಾಶಿವಯ್ಯ ಅವರಿಗೆ ನಾರಾಯಣರೆಡ್ಡಿ ಫೋನ್ ಮಾಡಿದರು.

ಮಾರನೆ ದಿನ ನಮ್ಮ ಪ್ರಿನ್ಸಿಪಾಲ್ ನನ್ನನ್ನು ತಮ್ಮ ಚೇಂಬರ್‌ಗೆ ಕರೆಸಿ, "ಏನ್ರಿ ಮೆಂಟಲ್ ಹಾಸ್ಪಿಟಲ್‌ವರೆಗೆ ವಿಸ್ತರಿಸಿಬಿಟ್ಟಿದೆ ನಿಮ್ಮ ಕಾರ್ಯಕ್ಷೇತ್ರ? ಲಾ ಸ್ಟೂಡೆಂಟ್‌ಗಳಿಗೆ ಎಲ್ಲ ತಿಳಿದಿರಬೇಕು. ವಿಶೇಷವಾಗಿ ಮನಃಶಾಸ್ತ್ರವನ್ನು ಅರಿತುಕೊಳ್ಳದಿದ್ದರೆ ಅಪರಾಧದ ನೆಲೆಯನ್ನು ಅರಿತುಕೊಳ್ಳಲಿಕ್ಕಾಗುವುದಿಲ್ಲ; ಅಂತೆಯೇ ಅಪರಾಧಿಯ ಮನದಾಳವನ್ನೂ ತಿಳಿದುಕೊಳ್ಳಲಾಗುವುದಿಲ್ಲ. ಈ ವಾರದೊಳಗೆ ನಮ್ಮ ವಿದ್ಯಾರ್ಥಿಗಳನ್ನು ನಿಮ್ಹಾನ್ಸ್‌ಗೆ ಕರೆದೊಯ್ಯುವ ಏರ್ಪಾಟು ಮಾಡೋಣ" ಎಂದರು.

ನಮ್ಮ ಪ್ರಿನ್ಸಿಪಾಲ್ ಬಿ. ಸದಾಶಿವಯ್ಯ ಆಜಾನುಬಾಹು ವ್ಯಕ್ತಿಯಾಗಿದ್ದರು. ಕಾಲೇಜಿನ ಶಿಸ್ತನ್ನು ಕಾಯ್ದುಕೊಂಡು ಹೋಗಲು ಬಹಳ ಗಮನಕೊಡುತ್ತಿದ್ದ ಸದಾಶಿವಯ್ಯನವರನ್ನು ಸಿಬ್ಬಂದಿ 'ಅನುಮಾನದ ಪ್ರಾಣಿ' ಎನ್ನುವ ಅಡ್ಡನಾಮದಿಂದ ಟೀಕಿಸುತ್ತಾ, "ಎಲ್ಲರನ್ನೂ ಅನುಮಾನದಿಂದ ನೋಡುವ ಈತ ತನ್ನ ಹೆಂಡತಿಯನ್ನು ಮನೆಯಲ್ಲಿ ಕೂಡಿಹಾಕಿ ಬರುತ್ತಾನೊ ಏನೊ ಮಹಾರಾಯ...." ಎಂದೂ ಗೇಲಿ ಮಾಡುತ್ತಿದ್ದರು.

ಕಾಲೇಜಿನ ವಿದ್ಯಾರ್ಥಿಗಳನ್ನೆಲ್ಲ ಕರೆದೊಯ್ದು ಮಾನಸಿಕ ಆಸ್ಪತ್ರೆಯ ದರ್ಶನ ಮಾಡಿಸುವ ಕಾರ್ಯಕ್ರಮ ನನ್ನಿಂದ ಪ್ರೇರೇಪಿತಗೊಂಡಿದ್ದು ಎಂದು ತಿಳಿದ ಕೆಲವು ತುಂಟ ವಿದ್ಯಾರ್ಥಿಗಳು ನನ್ನನ್ನು "ಹಲೋ ರೂಟ್ ನಂ. 4" ಎಂದು ಮಾತಾಡಿಸಿದರು.

ಆಗ ಸಿಟಿ ಬಸ್‌ರೂಟ್‌ಗಳಲ್ಲಿ ಮಾನಸಿಕ ಆಸ್ಪತ್ರೆ ರಸ್ತೆಯ ಸಂಖ್ಯೆ 4 ಆಗಿತ್ತು. ಹೀಗಾಗಿ ಯಾರಿಗಾದರೂ ತಿಕ್ಕಲು ಎಂದು ಕರೆಯುವುದಕ್ಕೆ 'ರೂಟ್ ನಂಬರ್ ಫೋರ್' ಎಂದು ಸಾಂಕೇತಿಕ ಮಾತಿನಲ್ಲಿ ಛೇಡಿಸುತ್ತಿದ್ದರು. ಅವರು ಹಾಗೆ ನನ್ನನ್ನು ಕೀಟಲೆ ಮಾಡಿದರೂ ನನಗೆ ಸಿಟ್ಟು ಬರಲಿಲ್ಲ. ನನ್ನ ಪ್ರಯತ್ನದಿಂದಾಗಿ

ಕಾಲೇಜಿನ ವಿದ್ಯಾರ್ಥಿಗಳೆಲ್ಲ ಅಲ್ಲಿಗೆ ಹೊರಟಿದ್ದಾರಲ್ಲ ಎನ್ನುವ ಹೆಮ್ಮೆ ನನ್ನಲ್ಲುಂಟಾಯಿತು.

ಎಲ್ಲ ವಿದ್ಯಾರ್ಥಿಗಳೂ ಮಾನಸಿಕ ಆಸ್ಪತ್ರೆ ವೀಕ್ಷಣೆಗೆ ಹೋಗಬೇಕೆಂದು ಪ್ರಿನ್ಸಿಪಾಲರು ನೋಟೀಸ್ ಹಚ್ಚಿದ್ದರೂ ನೌಕರಿ ಮಾಡುವ ಬಹಳಷ್ಟು ಅರೆ ವಿದ್ಯಾರ್ಥಿಗಳು ತಮ್ಮ ಆಫೀಸ್‌ಗಳಿಗೆ ಓಡಿಹೋದರು. ಸುಮಾರು ಮೂವತ್ತೈದು ನಲವತ್ತು ವಿದ್ಯಾರ್ಥಿಗಳು ಹೊರಡಲು ಸಿದ್ಧರಾದರು.

ನಮ್ಮನ್ನೆಲ್ಲ ನೋಡಿ ಸೂಪರಿಂಟೆಂಡೆಂಟ್ ನಾರಾಯಣರೆಡ್ಡಿಯವರು, "ಪರವಾಯಿಲ್ಲ ಗಮನಾರ್ಹ ಸಂಖ್ಯೆಯಲ್ಲೇ ಬಂದಿದ್ದೀರಿ!" ಎಂದರು. ಅಮರಗೌಡ ಎನ್ನುವ ಯುವ ಡಾಕ್ಟರ್ ಒಬ್ಬರನ್ನು ಕರೆದು "ಇವರಿಗೆ ಸ್ಪೆಷಲ್ ಕೇಸ್‌ಗಳನ್ನೆಲ್ಲ ತೋರಿಸಿ ಎಕ್ಸ್‌ಪ್ಲೇನ್ ಮಾಡಿ. ಎಲ್ಲ ಮುಗಿದ ಮೇಲೆ ಕ್ಯಾಂಟೀನ್‌ನಲ್ಲಿ ಕಾಫಿ ಕೊಡಿಸಿ. ನಾನು ಹೇಳಿಟ್ಟಿರುತ್ತೇನೆ" ಎಂದರು.

ಡಾ. ಅಮರಗೌಡರಿಗೆ ನಾರಾಯಣರೆಡ್ಡಿಯವರು "ಇಷ್ಟೆಲ್ಲ ವಿದ್ಯಾರ್ಥಿಗಳನ್ನೆಲ್ಲ ಬರುವಂತೆ ಮಾಡಿದ್ದು ಈತನೆ" ಎಂದು ನನ್ನನ್ನು ಪರಿಚಯಿಸಿದರು. ಹೆಸರಿನ ಕೊನೆಯಲ್ಲಿ ಗೌಡ ಎಂದು ಇದ್ದುದರಿಂದ ಆ ಡಾಕ್ಟರ್ ನಮ್ಮ ಒಕ್ಕಲಿಗ ಜಾತಿಯವರೇ ಇರಬೇಕೆಂದುಕೊಂಡೆ. ನಾನೂ ಒಕ್ಕಲಿಗರವನೇ ಎಂದು ಸಮಯ ಸಾಧಿಸಿ ಹೇಳಿಕೊಳ್ಳಬೇಕೆನ್ನುವ ಭಾವ ಮೂಡಿತಾದರೂ ಅವರೆಲ್ಲಿ ನನ್ನನ್ನು ಕೀಳಾಗಿ ಭಾವಿಸಿಕೊಳ್ಳುವರೋ ಎನ್ನುವ ಭಯ ಮೂಡಿ ಸುಮ್ಮನಾದೆ.

ಡಾ. ಅಮರಗೌಡ ಒಂದೊಂದೇ ಪೇಶಂಟ್‌ಗಳನ್ನು ತೋರಿಸತೊಡಗಿದರು.

ಒಬ್ಬಳು ಹದಿನೈದು ವರ್ಷದ ಹುಡುಗಿ. ಅವಳಿಗೆ ವರ್ತನೆಯ ಸಮಸ್ಯೆ (behavioral problem). ಕಂಡ ಗಂಡಸಿನೊಂದಿಗೆ ರತಿಕೇಳಿಗೆ ತೊಡಗುವ ಕಾಯಿಲೆ. ಸುತ್ತುಮುತ್ತಲವರು ಅದನ್ನು ನೋಡುತ್ತಾರೆನ್ನುವ ನಾಚಿಕೆ ಅವಳಿಗಿರಲಿಲ್ಲ. ಆಕಾಶವೇ ತಲೆ ಮೇಲೆ ಬಿದ್ದ ಮುಖಭಾವದಲ್ಲಿದ್ದಳು ಅವಳ ತಾಯಿ. ಮುಂಜಾಗ್ರತೆ ಕ್ರಮವಾಗಿ ಆ ಹುಡುಗಿಗೆ ಟುಬೆಕ್ಟಮಿ ಮಾಡಿಸಿಬಿಟ್ಟಿದ್ದಳು ಅವಳ ತಾಯಿ.

ಡಾ. ಅಮರಗೌಡ, "ನೋಡಿ ಮುಂಚೆಯೇ ಇವಳನ್ನು ಈ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಿದ್ದರೆ ಇವಳ ಸಂತಾನ ಶಕ್ತಿಯ ಹರಣ ಮಾಡಿಸುವ ಅವಶ್ಯಕತೆಯಿರುತ್ತಿರಲಿಲ್ಲ. ಈಗ ಇವಳ ಕಾಯಿಲೆಯನ್ನು ವಾಸಿ ಮಾಡುತ್ತಿದ್ದೇವೆ. ಆದರೇನು, ತಂದೆತಾಯಿಗಳ ಅಜ್ಞಾನದಿಂದ ಇವಳು ತನ್ನ ತಾಯಿತನವನ್ನೇ ಕಳೆದುಕೊಂಡಿದ್ದಾಳೆ..." ಎಂದು ಮುಂದೆ ಸಾಗಿದರು.

"ಇವನಿಗೆ ಸ್ಕಿಜೋಫ್ರೀನಿಯಾ. ಪ್ರತಿಯೊಬ್ಬರನ್ನೂ ಅತಿಸಂಶಯದಿಂದ, ಭಯದಿಂದ ನೋಡುವ ಕಾಯಿಲೆ. ಇವನದು ಸ್ಪ್ಲಿಟ್ ಪರ್ಸನಾಲಿಟಿ. ತನ್ನ ತಾಯಿ ತನಗೆ ವಿಷ ಹಾಕಬಹುದೆಂದು ಸಂಶಯಿಸಿ ಅವಳನ್ನು ಕೊಂದು ಅಡ್ಡ ಬಂದ ತಂದೆಯನ್ನು ಗಾಯಗೊಳಿಸಿದ್ದಾನೆ" ಎಂದರು.

ಮತ್ತೊಂದು ಪೇಶಂಟ್ ಬಳಿಗೆ ಕರೆದೊಯ್ದು, "ಇವನದು ಇನ್ನೊಂದು ಕತೆ. ಇವನಿಗೆ ಬಟ್ಟೆಯೆಂದರೇ ಅಲರ್ಜಿ. ನಾವು ರೂಮಲ್ಲಿ ಕೂಡಿ ಹಾಕಿದ್ದರೂ ಅದಾವ ಮಾಯದಿಂದಲೋ ತಪ್ಪಿಸಿಕೊಂಡು ಹೋಗಿ ಕ್ಯಾಂಟೀನ್ ಬಳಿ ಬೆತ್ತಲೆಯಾಗೇ ನಿಂತಿರುತ್ತಾನೆ" ಎಂದರು.

ಸ್ಪೆಷಲ್ ರೂಮ್ ಒಂದರೊಳಗೆ ನಮ್ಮನ್ನು ಕರೆದೊಯ್ದರು. ಮಂಚದ ಮೇಲೆ ಇಪ್ಪತ್ತರ ಹರೆಯದ ಸುಂದರ ಯುವತಿಯೊಬ್ಬಳು ಮಲಗಿದ್ದಳು. ಅವಳ ಬಳಿ ಅವಳ ತಾಯಿ ಕೂತಿದ್ದಳು.

"ಇದು ವಿಚಿತ್ರ ಕೇಸ್. ಮೂರು ತಿಂಗಳಾದರೂ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಳೆ. ಹೀಗೂ ಆಗಲು ಸಾಧ್ಯವಿದೆಯೆಂದು ನಾವು ಪುಸ್ತಕಗಳಲ್ಲಿ ಓದಿದ್ದೆವು; ಈಗ ಪ್ರತ್ಯಕ್ಷ ನೋಡುತ್ತಿದ್ದೇವೆ" ಎಂದರು.

ಪಕ್ಕದಲ್ಲಿದ್ದ ಪೇಶಂಟ್ ತಾಯಿಗೆ, "ಈಗ ಹೇಗಿದಾಳಮ್ಮ ನಿನ್ನ ಮಗಳು?" ಎಂದು ಪ್ರಶ್ನಿಸಿದರು.

"ಸ್ವಲ್ಪ ಪರವಾಗಿಲ್ಲ ಡಾಕ್ಟ್ರೆ" ಚಿವುಟಿದರೆ ತೀರಾ ಸಾವಕಾಶವಾಗಿ ಕೈ ಅಲುಗಾಡಿಸ್ತಾಳೆ" ಎಂದಳು.

ಹೀಗೆ ಇನ್ನೂ ಹಲವಾರು ಪೇಶಂಟ್‌ಗಳನ್ನು ತೋರಿಸಿ ಕೊನೆಗೆ ನಮ್ಮನ್ನು ಕ್ಯಾಂಟೀನ್‌ಗೆ ಕಾಫಿಗಾಗಿ ಕರೆದೊಯ್ದರು. ಕಾಫೀ ಕುಡಿಯಲು ಬಹಳ ವಿದ್ಯಾರ್ಥಿಗಳು ಉಳಿಯಲಿಲ್ಲ. ಕಾಫಿ ಕುಡಿದಾದ ಮೇಲೆ ಆರೇಳು ಜನ ವಿದ್ಯಾರ್ಥಿಗಳು ಮಾತ್ರ ಉಳಿದುಕೊಂಡೆವು.

"ಸರ್ ಆ ಹುಡುಗಿ ಅದೇಕೆ ಮೂರು ತಿಂಗಳುಗಳಿಂದ ಪ್ರಜ್ಞಾಹೀನ ಸ್ಥಿತೀಲಿದಾಳೆ?" ಎಂದು ಕೇಳಿದೆ.

"ಓ ಅದೊಂದು ಭಾರೀ ಸಸ್ಪೆನ್ಸ್ ಸಿನಿಮಾ ಕಥೆ ಥರಾ ಇದೆ. ಅವಳನ್ನು ಟ್ರೀಟ್ ಮಾಡೋ ಡಾಕ್ಟರ್‌ಗಳಿಗೆಲ್ಲ ಪ್ರಾಣಸಂಕಟವುಂಟುಮಾಡಿದ ಕೇಸ್ ಅದು. ಕಳೆದ ವಾರವಷ್ಟೇ ನಿಗೂಢತೆ ಬಯಲಾಗಿ ಎಲ್ಲರ ಉಸಿರಾಟ ಸರಾಗವಾಗಿದೆ" ಎಂದು ಕುತೂಹಲ ಕೆರಳಿಸಿದರು; ಕತೆಯನ್ನು ಹೇಳಲಾರಂಭಿಸಿದರು......

ಅವಳ ಹೆಸರು ಸಮುದ್ರವತಿ. ಹೆಸರಿಗೆ ತಕ್ಕಂತೆ ಅವಳ ಪ್ರಕರಣಕ್ಕೂ ಬಹಳ ಆಳವಿದೆ. ಆಗರ್ಭ ಶ್ರೀಮಂತರ ಮಗಳಾದ ಸಮುದ್ರವತಿ ಆನೇಕಲ್ ಬಳಿಯ ಹಳ್ಳಿಯಲ್ಲಿ ಅನಾರೋಗ್ಯದಿಂದ ಇದ್ದ ಅಜ್ಜಿಯನ್ನು ಮಾತಾಡಿಸಿಕೊಂಡು ಬರಲೆಂದು ಒಬ್ಬಳೇ ಕಾರಲ್ಲಿ ಹೊರಟಳು. ಕಾರ್ ಮಧ್ಯದಲ್ಲಿ ಪಂಕ್ಚರ್ ಆದರೆ ಏನು ಗತಿ ಎಂದು ಬೈದು ಅವಳ ತಾಯಿ ಜೊತೆಗೆ ಡ್ರೈವರ್‌ನನ್ನು ಕಳಿಸಿದಳು. ಅಮ್ಮನ ಕಣ್ಣುಗಳು ಮರೆಯಾಗುತ್ತಲೇ ಡ್ರೈವರ್‌ನನ್ನು ಹಿಂದೆ ಕೂರಿಸಿ ತಾನೇ ಡ್ರೈವ್ ಮಾಡತೊಡಗಿದಳು.

ಕಲ್ಲಲ್ಲಿ ಕಟೆದ ಮಾಟದ ಮಾದಕ ದೇಹ ಸಮುದ್ರವತಿಯದು. ಈ ಯಕ್ಷ ಸುಂದರಿಯನ್ನು ನಿತ್ಯ ಕಣ್ಣುಗಳಿಂದ ಹೀರುತ್ತಿದ್ದ ಕುಮಾರ್ ಎನ್ನುವ ಯುವಕ. ಅವನೂ ದೊಡ್ಡ ಕಾಂಟ್ರಾಕ್ಟರ್ ಮಗ. ಇವಳು ಮನೆಯಿಂದ ಹೊರಬೀಳುವುದನ್ನೇ ಕಾಯುತ್ತ ನಿಂತಿರುತ್ತಿದ್ದ ತನ್ನ ಮನೆಯ ಕಿಟಕಿಯಲ್ಲಿ. ಕೂತರೆ ನಿಂತರೆ ಅವಳದೇ ಧ್ಯಾನವಾಗಿಬಿಟ್ಟಿತು ಕುಮಾರ್‌ಗೆ. ಕಾಲೇಜು, ಪುಸ್ತಕಗಳು ಕಿರಿಕಿರಿಯೆನಿಸ ತೊಡಗಿದವು, ವ್ಯಾಮೋಹ ಹೆಚ್ಚಿತು. ಆದರೆ ಅವಳಿಂದ ಪ್ರತಿಕ್ರಿಯೆ ಮಾತ್ರ ದೊರೆಯಲಿಲ್ಲ. ಏನಾದರೂ ಮಾಡಿ ಅವಳನ್ನು ಗೆಲ್ಲಬೇಕೆಂದು ಬಗೆಬಗೆಯ ರೊಮ್ಯಾಂಟಿಕ್ ಸರ್ಕಸ್ಸುಗಳನ್ನು ಮಾಡಿದ. ಅವನ ಬಗೆಗೆ ಅವಳು ಇನ್ನಷ್ಟು ಅಸಡ್ಡೆಯಾಗಿ ನಡೆದುಕೊಳ್ಳತೊಡಗಿದಳು; ಅಯ್ಯಾ ಮಜ್ನೂ ಸಾಕು ಮಾಡು ನಿನ್ನ ಕಪಿಚೇಷ್ಟೆ ಎಂದಳು. ತನ್ನ ಗೆಳೆಯರ ಮುಂದೆ ದುಃಖ ತೋಡಿಕೊಂಡ. ಸಮಯ ಸಾಧಿಸಿ ಒಂದು ಕಿಸ್ ಕೊಟ್ಟುಬಿಡು ನಿನಗೆ ಒಲಿದು ಬಿಡುತ್ತಾಳೆಂದು ಸಲಹೆ ಕೊಟ್ಟರು. ಅವಳು ಬೆಳಗ್ಗೆ ವಾಕ್ ಹೋಗುವಾಗ ಅವಕಾಶ ನೋಡಿ ಹಿಂದಿನಿಂದ ಅಪ್ಪಿ ಕಿಸ್ ಕೊಟ್ಟೇಬಿಟ್ಟ ! ಜಾಗಿಂಗ್ ಮಾಡುತ್ತಿದ್ದ ಒಬ್ಬಿಬ್ಬರು ಈ ದೃಶ್ಯ ನೋಡಿ ಬಾಯಿ ತೆರೆಯುವಷ್ಟರಲ್ಲಿಯೇ ಛಟೀರ್‌ನೆ ಕಪಾಳಕ್ಕೆ ಏಟು ಕೊಟ್ಟಿದ್ದಳು ಸಮುದ್ರವತಿ.

ಕುಮಾರ್‌ನ ತಂದೆಗೆ ಸಮುದ್ರವತಿಯ ತಂದೆ ತಾಕೀತು ಮಾಡಿದ. ತಂದೆ ಮಗನನ್ನು ಕರೆದು ಗದರಿಸಿದ. ದೊಡ್ಡವರ ಮನೆಯ ಹಗರಣವಾಗಿದ್ದರಿಂದ ಹೆಚ್ಚು ರಂಪವಾಗಲಿಲ್ಲ.

ಅಂದಿನಿಂದ ಕುಮಾರ್ ಮಾದಕಗಳ ದಾಸನಾದ. ಸಮುದ್ರವತಿಯ ರೂಪ ಕುಮಾರನ ನಶೆಗಣ್ಣುಗಳ ಮುಂದೆ ಕುಣಿಯತೊಡಗಿತು. ಕಾರಲ್ಲಿ ಹಿಂದೆ ಕೂತಿದ್ದ ಡ್ರೈವರ್ ಕುಮಾರ್ ಕಣ್ಣಿಗೆ ಬೀಳಲಿಲ್ಲ. ಸಮುದ್ರವತಿಯ ಕಾರನ್ನು ಕುಮಾರ್ ಕಾರು ಬೆನ್ನು ಹತ್ತಿ ಹೊರಟಿತು.

ಹಳ್ಳಿಯಿಂದ ವಾಪಸ್ಸು ಹೊರಡುವಾಗ ಸಮುದ್ರವತಿಗೆ ಕುಮಾರನ ಕಾರು ಕಣ್ಣಿಗೆ ಬಿದ್ದಿತು. ಅವನ ಕಪಾಳಕ್ಕೆ ಛಟೀರನೆ ಬಾರಿಸಿದ್ದು ನೆನಪಾಗಿ ಮೈಯಲ್ಲಿ ನಡುಕವುಂಟಾಯಿತು. ಡ್ರೈವರ್‌ಗೆ ಕಾರು ನಡೆಸುವಂತೆ ಹೇಳಿದಳು.

ಕತ್ತಲಾವರಿಸಿಕೊಳ್ಳತೊಡಗಿತ್ತು. ಮಿಂಚು, ಗುಡುಗುಗಳ ಆರ್ಭಟ ಆರಂಭವಾಗಿತ್ತು. ಮುಖ್ಯರಸ್ತೆಗೆ ಬರುವಷ್ಟರಲ್ಲಿ ಮಳೆ ಭೋರ್ಗರೆಯತೊಡಗಿತು.

ಹಿಂದೆ ಬರುತ್ತಿದ್ದ ಕುಮಾರ್ ಕಾರನ್ನು ಪದೇಪದೇ ನೋಡುತ್ತ "ಇನ್ನೂ ಸ್ಪೀಡ್ ಹೋಗೂ" ಎನ್ನುತ್ತಿದ್ದಳು ಡ್ರೈವರ್‌ಗೆ.

ಜಾಗರೂಕವಾಗಿ ಡ್ರೈವ್ ಮಾಡುವುದರಲ್ಲಿ ಹೆಸರು ಗಳಿಸಿದ್ದ ಮುದುಕ ಡ್ರೈವರ್‌ಗೆ ಹೊರಗಿನ ಮಳೆ ಮತ್ತು ಸಮುದ್ರವತಿಯ ಒತ್ತಡಗಳು ಗಲಿಬಿಲಿಯುಂಟುಮಾಡಿದ್ದವು.

ಎದುರಿನಿಂದ ಬಂದ ಲಾರಿಯೊಂದು ಕಾರಿನ ಬಲಭಾಗಕ್ಕೆ ಗುದ್ದಿತು. ಲಾರಿ ಕ್ಷಣ ಸಾವರಿಸಿಕೊಂಡು ನಾಗಾಲೋಟದಿಂದ ಮಳೆಯನ್ನು ಸೀಳಿಕೊಂಡು ಓಡಿತು. ಲಾರಿಯ ಹೊಡೆತಕ್ಕೆ ಸ್ಟೇರಿಂಗ್ ವ್ಹೀಲ್ ಡ್ರೈವರ್‌ನ ಎದೆಯನ್ನು ಅಪ್ಪಿಕೊಂಡು ಅವನ ಪ್ರಾಣವನ್ನು ನುಂಗಿತ್ತು. ಅಪಘಾತದ ರಭಸಕ್ಕೆ ರಸ್ತೆಯಲ್ಲಿಯೇ ಗಿರಗಿರನೆ ತಿರುಗಿದ ಕಾರು ಪಕ್ಕದ ಕಂದಕದಲ್ಲಿ ನೆಲಕಚ್ಚಿಕೊಂಡು ಒರಗಿತು.

ಹಿಂದೆಯೇ ಇತ್ತು ಕುಮಾರನ ಕಾರು. ಅರ್ಜೆಂಟ್ ಬ್ರೇಕ್‌ನಲ್ಲಿಯೇ ಇದ್ದ ಗಾಲಿಗಳು ರಸ್ತೆಯನ್ನು ಗಾಯಗೊಳಿಸಿದವು; ಮುಂದೆ ನಡೆದ ಅಪಘಾತದಿಂದ ಕಾರು ಪಾರಾಯಿತು.

ಲಾರಿಯ ಬೆನ್ನು ಹತ್ತಿ ನಂಬರ್ ನೋಡೋಣವೆಂದುಕೊಂಡ. ಅದಕ್ಕಿಂತ ಮುಖ್ಯ ಸಮುದ್ರವತಿಯ ಜೀವ ಎಂದುಕೊಂಡು ತನ್ನ ಕಾರಿನ ಹೆಡ್‌ಲೈಟ್ ಬೆಳಕು ರಸ್ತೆ ಪಕ್ಕಕ್ಕೆ ಬಿದ್ದುಕೊಂಡಿದ್ದ ಕಾರಿನ ಮೇಲೆ ಬೀಳುವಂತೆ ಮಾಡಿದ.

ಡ್ರೈವರ್ ತಾನು ಕೂತಿದ್ದ ಸೀಟಿನಲ್ಲೇ ಪ್ರಾಣ ಬಿಟ್ಟಿದ್ದು ಸಮುದ್ರವತಿ, ನರಳುತ್ತಿದ್ದಳು. ಅವಳನ್ನು ಹೊರಗೆಳೆದುಕೊಂಡ.

ಸಮುದ್ರವತಿಯನ್ನು ತಂದು ತನ್ನ ಕಾರೊಳಗೆ ಹಾಕಿದ. ಮಳೆಗೆ ಸಿಕ್ಕ ಅವಳ ಸೀರೆ ತೊಯ್ದು ತೊಪ್ಪೆಯಾಗಿತ್ತು. ದೇಹದ ಉಬ್ಬುತಗ್ಗುಗಳೆಲ್ಲ ಮಿಂಚಿನ ಬೆಳಕಲ್ಲಿ ಮಿಂಚಿದವು.

"ಕನಸಿನ ಕನ್ಯೆ ಈಗ ತನ್ನ ತೋಳಬಂಧಿಯಲ್ಲವೆ!" ಎಂದುಕೊಂಡ ಕುಮಾರ್. ಅವಳ ಮೈಮೇಲೆಲ್ಲೂ ಗಾಯಗಳಾಗಿರಲಿಲ್ಲ. ಅವಳ ಗಲ್ಲ ಹಿಡಿದು "ಸಮುದ್ರಾ

ಸಮುದ್ರಾ" ಎಂದ. ಅವಳು ಕಣ್ಣುಮುಚ್ಚಿ ಕ್ಷೀಣವಾಗಿ ಹಾಂ, ಹೂಂ ಎನ್ನುತ್ತಿದ್ದಳು.

ಸಮುದ್ರವತಿಯನ್ನು ಹೊತ್ತ ಕಾರು ಒಂದು ಫರ್ಲಾಂಗ್ ಕೂಡಾ ಬಂದಿರಲಿಲ್ಲ.

"ಇಂಥ ಅವಕಾಶ ಮತ್ತೆಂದಾದರೂ ಸಿಗಲು ಸಾಧ್ಯವೆ ನಿನ್ನ ಜೀವನದಲ್ಲಿ?" ಎಂದು ಕೇಳಿತು ಕುಮಾರನ ಮೋಹಪೀಡಿತ ಮನಸ್ಸು.

ಕಾರನ್ನು ಮುಖ್ಯರಸ್ತೆಯಿಂದ ಉಪರಸ್ತೆಯೆಡೆಗೆ ತಿರುಗಿಸಿದ. ಎಲ್ಲೆಲ್ಲೂ ಗಾಢಾಂಧಕಾರ. ಬಹಳ ದೂರವೇನೂ ಹೋಗುವುದು ಬೇಕಿಲ್ಲವೆನಿಸಿತು. ಕಾರನ್ನು ನಿಲ್ಲಿಸಿ ಸಮುದ್ರವತಿಯನ್ನು ಹೀರತೊಡಗಿದ.

ಸಮುದ್ರವತಿಯ ನರಳಾಟ ನಿಂತಾಗ ಕುಮಾರನ ಎದೆಬಡಿತ ಸ್ತಬ್ಧಗೊಂಡಂತಾಯಿತು; ಸತ್ತೇ ಹೋಗಿಬಿಟ್ಟಳೇನೊ ಎಂದು ಭಯಗೊಂಡು ಅವಳ ಮೂಗಿನ ಹೊರಳೆಗಳಿಗೆ ತನ್ನ ಗಲ್ಲವೊಡ್ಡಿದ. ಬಿಸಿಯುಸಿರು ತಾಗಿತು. ತನ್ನ ಕೃತ್ಯಕ್ಕೆ ತಾನೇ ಹೇಸಿಗೆಗೊಂಡ; ನನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಹುಡುಗಿಯ ಪ್ರಾಣಕ್ಕೇ ಸಂಚಕಾರ ತರುವಂಥವನಾಗಿಬಿಟ್ಟೆನಲ್ಲ ಎಂದುಕೊಂಡ. ತೊಡೆಗಳು ಕಂಪಿಸತೊಡಗಿದವು. ಸಾವರಿಸಿಕೊಂಡು ಕಾರ್ ಸ್ಟಾರ್ಟ್ ಮಾಡಿದ.

ವಿಕ್ಟೋರಿಯಾ ಆಸ್ಪತ್ರೆಗೆ ಸಮುದ್ರವತಿಯನ್ನು ಸೇರಿಸಿದ. ಪೋಲೀಸರಿಗೆ ಫೋನ್ ಮಾಡಿ ಕಾರ್ ಅಪಘಾತಗೊಂಡ ಸ್ಥಳವನ್ನು ತಿಳಿಸಿದ. ಪೋಲೀಸರು ಸತ್ತ ಡ್ರೈವರ್‌ನನ್ನು ಪೋಸ್ಟ್ ಮಾರ್ಟಮ್‌ಗೆ ಒಪ್ಪಿಸಿದರು.

ಸಮುದ್ರವತಿಗೆ ಪ್ರಥಮ ಚಿಕಿತ್ಸೆ ನೀಡಿದ ಡಾಕ್ಟರ್‌ಗಳು ಈ ಪೇಶಂಟನ್ನು ನಿಮ್ಹಾನ್ಸ್‌ನಲ್ಲಿ ಅಡ್ಮಿಟ್ ಮಾಡಬೇಕೆಂದರು.

ಸಮುದ್ರವತಿಯ ತಂದೆತಾಯಿಗಳು ಧಾವಿಸಿ ಆಸ್ಪತ್ರೆಗೆ ಬಂದರು. ಮಗಳ ಪ್ರಾಣಕ್ಕೆ ಅಪಾಯವಿಲ್ಲವೆನ್ನುವುದನ್ನು ತಿಳಿದು ಸಮಾಧಾನಗೊಂಡರು. ಡ್ರೈವರನ ಅಂತ್ಯಕ್ರಿಯೆಗೆ ಏರ್ಪಾಟು ಮಾಡತೊಡಗಿದರು.

ದಿನಗಳುರುಳಿದವು. ಆದರೆ ಅವಳಿಗೆ ಮಾತ್ರ ಪ್ರಜ್ಞೆ ಬರಲಿಲ್ಲ. ಅವಳ ದೇಹದ ಎಲ್ಲ ನೈಸರ್ಗಿಕ ಕ್ರಿಯೆಗಳೂ ನಡೆದಿದ್ದವು ಪ್ರಜ್ಞಾಹೀನ ಸ್ಥಿತಿಯಲ್ಲಿಯೇ. ಇದೇ ಸ್ಥಿತಿಯಲ್ಲಿ ಅವಳು ಒಂದು ತಿಂಗಳು ಕಳೆದಳು. ಡಾಕ್ಟರ್‌ಗಳಿಗೆ ಅನುಮಾನ ಬಂದಿತು; ಎಲ್ಲ ಕ್ರಿಯೆಗಳೂ ನಡೆಯುತ್ತಿವೆ ಆದರೆ, ಮುಟ್ಟು ಮಾತ್ರ ಆಗುತ್ತಿಲ್ಲವೇಕೆ?

ಮನೆಯವರ ಹೇಳಿಕೆಯಂತೆ ಅವಳಿಗೆ ಮದುವೆಯಾಗಿರಲಿಲ್ಲ ! ಸರಿ ಸ್ತ್ರೀರೋಗ ತಜ್ಞೆ ಬಂದು ಪರೀಕ್ಷಿಸಿ, "ಇವಳಿಗೆ ಗರ್ಭ ನಿಂತಿರುವ ಹಾಗಿದೆ. ಇನ್ನೊಂದು

ವಾರ ಬಿಟ್ಟು ಮತ್ತೆ ಚೆಕ್ ಮಾಡೋಣ" ಎಂದಳು. ಮನೆಯವರಿಗೆಲ್ಲ ಶಾಕ್ ಆಯಿತು. ಆಗಲೂ ಮುಟ್ಟು ಹೋಗಲಿಲ್ಲ. ಅಷ್ಟೊತ್ತಿಗೆ ಡಾಕ್ಟರ್ ಅವಳು ಗರ್ಭ ಧರಿಸಿರುವುದನ್ನು ವೈದ್ಯಕೀಯವಾಗಿ ಖಚಿತಗೊಳಿಸಿದ್ದರು.

ಇತ್ತ ಕುಮಾರ್ ಪಾಪಪ್ರಜ್ಞೆಯಿಂದ ದಿನದಿನಕ್ಕೆ ಕುಸಿಯತೊಡಗಿದ್ದ. ಕೂಡಲೇ ಆಸ್ಪತ್ರೆಗೆ ಸೇರಿಸಿದ್ದಿದ್ದರೆ ಅವಳಿಗೆ ಹೀಗೆ ದೀರ್ಘಾವಧಿಯವರೆಗೆ ಪ್ರಜ್ಞೆ ತಪ್ಪುತ್ತಿರಲಿಲ್ಲವೇನೋ. ಈಗ ಪ್ರಜ್ಞೆ ಮರುಳುವುದೋ ಇಲ್ಲವೋ. ಸತ್ತೇ ಹೋಗಿಬಿಟ್ಟರೆ? ಕೊಲೆಗಾರ ನಾನೇ ಅಲ್ಲವೆ! ಎಂದು ತನ್ನ ಕಾಮತೃಷೆಗೆ ಶಾಪ ಹಾಕತೊಡಗಿದ. ತಾನೆಂಥ ಪೈಶಾಚಿಕ ವ್ಯಕ್ತಿ ಎಂದು ದಿಗ್ಭ್ರಮೆಗೊಳ್ಳತೊಡಗಿದ.

ಸಮುದ್ರವತಿಯ ತಂದೆತಾಯಿಗಳಿಗೆ ಕುಮಾರ್ ಮೇಲೆ ಅನುಮಾನ ಶುರುವಾಯಿತು. ತಮಗೆ ಪರಿಚಯವಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರಿಗೆ ಸಮುದ್ರವತಿಯ ತಂದೆ ಈ ವಿಷಯ ತಿಳಿಸಿದರು. ಇನ್ಸ್‌ಪೆಕ್ಟರ್ "ಅವನ ಬಾಯಿ ಬಿಡಿಸುವ ಜವಾಬ್ದಾರಿ ನನಗೆ ಬಿಡಿ" ಎಂದರು. ಇನ್‌ಸ್ಪೆಕ್ಟರ್ ಮುಂದೆ ಕೂತೊಡನೆ ಕುಮಾರ್ ಗಳಗಳ ಅಳತೊಡಗಿದ. "ನೀವೇಕೆ ನನ್ನನ್ನು ಕರೆಸಿದ್ದೀರಿ ನನಗೆ ಗೊತ್ತು. ನಾನು ಪಾಪಿ, ಅವಳು ಸತ್ತರೆ ಆ ಕೊಲೆಗೆ ನಾನೇ ಜವಾಬ್ದಾರ. ನನಗೆ ಯಾವ ಶಿಕ್ಷೆ ಬೇಕಾದರೂ ಕೊಡಿ...." ಎಂದು ಚೀರತೊಡಗಿದ.

ಈ ಪ್ರಕರಣದ ಅಂತ್ಯ ಏನಾಯಿತು ಎಂದು ತಿಳಿದುಕೊಳ್ಳುವ ತವಕದಿಂದ ಹದಿನೈದು ಇಪ್ಪತ್ತು ದಿವಸಗಳ ನಂತರ ಡಾ. ಅಮರಗೌಡರನ್ನು ಕಾಣಲು ಹೋದೆ. ನಗುತ್ತ ನನ್ನನ್ನು ಸ್ವಾಗತಿಸಿದರು. ಅವರು, "ಎಲ್ಲ ಸುಖಾಂತ್ಯ. ನೂರ ಐದನೇ ದಿನಕ್ಕೆ ಅವಳಿಗೆ ಪ್ರಜ್ಞೆ ಬಂದಿತು. ಕುಮಾರ್ ಜೊತೆಗೆ ಅವಳ ಮದುವೆಯೂ ನಿಶ್ಚಯವಾಯಿತು" ಎಂದು ಹೇಳಿದರು.

ಅವನು ತನ್ನ ತಪ್ಪು ಒಪ್ಪಿಕೊಂಡು ಮದುವೆಗೆ ಒಪ್ಪಿದ್ದರಿಂದ ಕ್ರಿಮಿನಲ್ ಕೇಸು ಮಾಡುವುದನ್ನು ಅವರಿಬ್ಬರ ಭವಿಷ್ಯದ ದೃಷ್ಟಿಯಿಂದ ಪೊಲೀಸರು ಕೈಬಿಟ್ಟು ಸಹಕರಿಸಿದ್ದರು.

32

ಮರಣದ ಮೆರವಣಿಗೆ ಮಾಡುವ ಖೈದಿಗಳು

ಸಮುದ್ರವತಿಯ ಪ್ರಕರಣವನ್ನು ಡಾ. ಅಮರಗೌಡರಿಂದ ಕೇಳಿಸಿಕೊಂಡ ನಾವು ಉಳಿದ ವಿದ್ಯಾರ್ಥಿಗಳಿಗೆ ಮೈನವಿರೇಳಿಸುವ ಕಥೆಯನ್ನು ಹೇಳತೊಡಗಿದೆವು. ಅವಸರ ಮಾಡಿ ಮನೆಗೆ ಹೋದ ಮತ್ತು ನಿಮ್ಹಾನ್ಸ್ ಭೇಟಿಗೆ ಬಾರದೇ ಹೋದ ವಿದ್ಯಾರ್ಥಿಗಳು "ಛೇ, ನಾವೂ ಇರಬೇಕಾಗಿತ್ತು" ಎಂದರು.

ನಿಮ್ಹಾನ್ಸ್‌ಗೆ ಭೇಟಿ ನೀಡಿದಂತೆಯೇ ಸೆಂಟ್ರಲ್ ಜೈಲ್‌ಗೂ ಭೇಟಿ ನೀಡಬೇಕೆನ್ನುವ ಚರ್ಚೆ ವಿದ್ಯಾರ್ಥಿಗಳ ಮಧ್ಯೆ ಶುರುವಾಗಿ ಪ್ರಿನ್ಸಿಪಾಲ್‌ವರೆಗೆ ಹೋಗಿ ಮುಟ್ಟಿತು.

ಪ್ರಿನ್ಸಿಪಾಲ್‌ರು ನನ್ನನ್ನು ಮತ್ತು ನನ್ನಂತೆ ನೌಕರರಲ್ಲದ ಮೂರುನಾಲ್ಕು ವಿದ್ಯಾರ್ಥಿಗಳನ್ನು ಕರೆದು, "ಕಾಲೇಜ್ ಕಡೆಯಿಂದ ಜೈಲ್ ಸೂಪರಿಂಟೆಂಡೆಂಟ್‌ಗೆ ಒಂದು ಲೆಟರ್ ಕೊಡುವೆ. ನೀವು ಹೋಗಿ ಭೇಟಿಯಾಗಿ ದಿನವನ್ನು ನಿಗದಿಗೊಳಿಸಿಕೊಂಡು ಬನ್ನಿ. ನಮ್ಮ ವಿದ್ಯಾರ್ಥಿಗಳು ಜೈಲ್ ಒಳಗೆ ಏನಿರುತ್ತೆ ಎಂದು ತಿಳಿದುಕೊಳ್ಳುವುದು ಅವಶ್ಯಕ" ಎಂದರು.

ನನ್ನೊಂದಿಗೆ ಬಂದಿದ್ದ ಇತರ ವಿದ್ಯಾರ್ಥಿಗಳು "ಹನುಮಂತ್ರಾಯ ಇಂಥದರಲ್ಲಿ ಈಗಾಗಲೇ ಪಳಗಿಬಿಟ್ಟಿದ್ದಾನೆ ಸಾರ್. ಲೆಟರ್ ಅನ್ನು ಆತನ ಕೈಗೇ ಕೊಡಿ. ಒಂದೇ ದಿನದಲ್ಲಿ ಡೇಟ್ ಫಿಕ್ಸ್ ಮಾಡಿಕೊಂಡು ಬಂದುಬಿಡುತ್ತಾನೆ ಸಾರ್" ಎಂದಾಗ ನನ್ನ ಮುಖದಲ್ಲಿ ಮುಖಂಡತ್ವದ ಭಾವ ನುಗ್ಗಿ ಬಂದು ಖುಷಿಯಿಂದ ಎದೆಬಡಿತ ತೀವ್ರಗೊಂಡು ಪುಳಕಗೊಂಡೆ. ತಮಗೇಕೆ ಆ ತಲೆನೋವಿನ ಜವಾಬ್ದಾರಿಯೆಂದು ಹೀಗೆ ನನಗೆ ಪೂಸಿ ಹೊಡೆದಿರಬಹುದೆನ್ನುವ ಅನುಮಾನ ಆಗ ನನಗೆ ಬರಲಿಲ್ಲ.

ನಮ್ಮ ಕಾಲೇಜಿನಿಂದ ನಡೆದುಕೊಂಡು ಹೋಗುವಷ್ಟು ಸಮೀಪವಿದ್ದ ಸೆಂಟ್ರಲ್ ಜೈಲ್‌ಗೆ ಹೋದೆ. ಸೂಪರಿಂಟೆಂಡೆಂಟ್ ಚಂದ್ರಶೇಖರ್ ಅವರನ್ನು ಕಂಡೆ. ಅವರು ಜೈಲಿನ ಚಹ ಕುಡಿಸಿದರು. ಅದ್ಭುತವಾಗಿತ್ತು. ಖೈದಿಗಳಿಗೂ ಅದೇ ಗುಣಮಟ್ಟದ ಚಹ ಕೊಡುತ್ತಿರಬಹುದೆಂದುಕೊಂಡೆ. ದಿನ ನಿಗದಿಗೊಳಿಸಿಕೊಂಡು ಬಂದೆ.

ಜೈಲಲ್ಲಿಯ ಅಪರಾಧಿಗಳ ಬಗ್ಗೆ ಭಿನ್ನವಿಭಿನ್ನ ಅಭಿಪ್ರಾಯಗಳನ್ನಿರಿಸಿಕೊಂಡಿದ್ದ ನಮಗೆಲ್ಲ ಆಶ್ಚರ್ಯಗಳು ಕಾದಿದ್ದವು.

ಖೈದಿಗಳೆಲ್ಲ ಕ್ರೂರವಾಗಿರುತ್ತಾರೆ, ವಿಕಾರವಾಗಿ ಕಾಣುತ್ತಿರುತ್ತಾರೆಂದುಕೊಂಡಿದ್ದೆ ನಾನು. ಆದರೆ ನೀಟಾಗಿ ಶೇವ್ ಮಾಡಿಕೊಂಡು, ನಗಾಡುತ್ತ ಚಟುವಟಿಕೆಯಿಂದ ಓಡಾಡುತ್ತಿದ್ದವರನ್ನು ನೋಡಿ ಚಕಿತಗೊಂಡೆ.

ಗಲ್ಲು ಶಿಕ್ಷೆಗೊಳಗಾದವರನ್ನು ಒಬ್ಬೊಬ್ಬರನ್ನೇ ಪ್ರತ್ಯೇಕವಾಗಿ ಕಂಬಿಗಳಿಂದ ನಿರ್ಮಿಸಿದ ಚಿಕ್ಕ ಕೋಣೆಗಳಲ್ಲಿ ಹಾಕಿದ್ದರು. ಕ್ರೈಸ್ತರ ಸ್ಮಶಾನದಲ್ಲಿಯ 6 x 3 ಅಳತೆಯ ಸಮಾಧಿಯಂತೆ ಕಾಣುವ ಕಟ್ಟೆಯನ್ನು ನಿರ್ಮಿಸಲಾಗಿದ್ದು, ಖೈದಿ ಅದರ ಮೇಲೆಯೇ ಮಲಗಬೇಕೆನ್ನುವ ಆದೇಶ ನೀಡಲಾಗಿತ್ತು. ಇಂದು ಸಮಾಧಿಯಂಥ ಕಟ್ಟೆಯ ಮೇಲೆ ಮಲಗಿದ ಖೈದಿಗಳು ಇನ್ನು ಕೆಲವೇ ದಿನಗಳಲ್ಲಿ ನಿಜವಾಗಿಯೂ ಅದರೊಳಗೆ ಶವಗಳಾಗಿಬಿಡುತ್ತಾರಲ್ಲ ಎನ್ನುವ ಯೋಚನೆಯುಂಟಾಗಿ ಭಯವಾಯಿತು. ಮಲಗಿದ್ದ ಆ ಖೈದಿ ಬೋನೊಳಗಿನ ಸರ್ಕಸ್ ಪ್ರಾಣಿಯಂತೆ ಕಂಡ. ನಮ್ಮ ಗದ್ದಲಕ್ಕೆ ಎದ್ದು ಕೂತ ಆ ಖೈದಿ ನಮ್ಮತ್ತ ಕೈ ಬೀಸಿ ನಕ್ಕ. ಎದ್ದು ಬಂದು ಕಂಬಿಯ ಹತ್ತಿರ ನಿಂತ. ಖೈದಿಗಳ ಯೂನಿಫಾರಂಗಳನ್ನುಟ್ಟಿದ್ದ; ಶುಭ್ರವಾಗಿದ್ದವು. ಶೇವ್ ಮಾಡಿಕೊಂಡಿದ್ದ; ಮುಖದಲ್ಲಿ ಮುಗುಳ್ನಗೆಯಿತ್ತು. ಸಾವು ನಿಶ್ಚಿತವಾದ ಮನುಷ್ಯನಂತೆ ಅವನು ಕಾಣುತ್ತಿರಲಿಲ್ಲ.

ಜೈಲ್ ಸೂಪರಿಂಟೆಂಡೆಂಟ್ ನಮ್ಮನ್ನೆಲ್ಲ ಅಡಿಗೆ ಮಾಡುತ್ತಿದ್ದಲ್ಲಿಗೆ ಕರೆದೊಯ್ದರು. ಬಿಸಿಬಿಸಿಯಾಗಿ ಅಡಿಗೆ ರೆಡಿಯಾಗಿತ್ತು.

"ಜೈಲೊಳಗಿನದೇ ಒಂದು ವಿಚಿತ್ರ ಸಮಾಜ. ಇಲ್ಲಿ ಜಾತಿಭೇದಗಳಿಲ್ಲ; ಎಲ್ಲ ಜಾತಿಯವರಿಗೂ ಸಹಭೋಜನವಿಲ್ಲಿ. ನಮ್ಮ ದೇಶದ ನಿಜವಾದ ಸೆಕ್ಯುಲರ್ ಸೊಸೈಟಿಯನ್ನು ಜೈಲಲ್ಲೇ ಕಾಣಬೇಕು ನೀವು...." ಎಂದರು ನಗುತ್ತ ಸೂಪರಿಂಟೆಂಡೆಂಟ್.

ಆದರೆ, ನನ್ನ ಮನಸ್ಸು ಮರಣದ ಮುಂದೆ ನೇತಾಡುವ ಮನುಷ್ಯನ ಮನಸ್ಸಿನ ಸುತ್ತ ಸುತ್ತುತ್ತಿತ್ತು..... ಸಾಯುವ ಘಳಿಗೆಯಲ್ಲೂ ವ್ಯಕ್ತಿ ತನ್ನತನವನ್ನು ಬಿಟ್ಟುಕೊಡುವುದಿಲ್ಲವಲ್ಲ! ಸಾವಿನಪ್ರಜ್ಞೆ ನಾನು ತಿಳಿದುಕೊಂಡಂತೆ ಸರಳ ಸಮೀಕರಣವಲ್ಲ ! ಎನಿಸಿತು.

ಇನ್ನೇನು ಜೈಲಿನ ವೀಕ್ಷಣಾ ಕಾರ್ಯಕ್ರಮವನ್ನು ಸೂಪರಿಂಟೆಂಡೆಂಟ್ ಮುಗಿಸಿಬಿಡುತ್ತಾರೆ ಅನಿಸಿತು. ಅವರ ಬಳಿಗೆ ಹೋಗಿ, "ಸಾರ್, ಯಾರಾದರೂ ಒಬ್ಬ ಅಪರಾಧಿಯಿಂದ ಮಾತಾಡಿಸಿ. ತಾನೇಕೆ ಅಪರಾಧಿಯಾದೆನೆಂದು ಅವನು ಹೇಳಲಿ" ಎಂದು ಕೇಳಿಕೊಂಡೆ.

"ಗುಡ್ ಐಡಿಯಾ. ಅಪರಾಧಿಯನ್ನೇ ನಿಮಗೆ ಭೇಟಿ ಮಾಡಿಸುವೆ" ಎಂದರು ಸೂಪರಿಂಟೆಂಡೆಂಟ್.

ನಮ್ಮನ್ನೆಲ್ಲ ಬಯಲಿಗೆ ಕರೆದೊಯ್ಯಲಾಯಿತು. ಅಲ್ಲಿಗೆ ಒಬ್ಬ ಖೈದಿ ಬಂದ. ತನ್ನ ಪರಿಚಯ ಮಾಡಿಕೊಂಡ. ಜೀವಾವಧಿ ಶಿಕ್ಷೆಗೆ ತಾನು ಹೇಗೆ ಬಲಿಯಾದೆನೆಂದು ಹೇಳತೊಡಗಿದ.....

ಭಗವಂತಪ್ಪ ದೊಡ್ಡ ಶ್ರೀಮಂತ. ಚಾಮರಾಜಪೇಟೆಯ ಶಂಕರಪುರದಲ್ಲಿ ದೊಡ್ಡ ಬಂಗಲೆ. ಮಗ ಶ್ರೀಪಾದನಿಗೆ ಹದಿನೇಳು ವರ್ಷಗಳು. ಸಿರಿಯ ಗರದಲ್ಲಿದ್ದ ಶ್ರೀಫಾದನಿಗೆ ಶೋಕಿಯ ಹುಚ್ಚು. ಒಂದುದಿನ ಅಪ್ಪನ ಕಣ್ಣು ತಪ್ಪಿಸಿ ಕಾರು ತೆಗೆದುಕೊಂಡು ಹೋಗಿಬಿಟ್ಟ. ಅರೆಬರೆ ಡ್ರೈವಿಂಗ್ ಕಲಿತಿದ್ದ ಶ್ರೀಪಾದ ಕಾರನ್ನು ಎರ್ರಾಬಿರ್ರಿ ಓಡಿಸತೊಡಗಿದ. ಅಡ್ಡಬಂದ ಬಾಲಕಿಯೊಬ್ಬಳ ಮೇಲೆ ಹಾಯಿಸಿದ. ಕಾರು ಎಷ್ಟು ಸ್ಪೀಡ್ ಇತ್ತೆಂದರೆ ಬಾಲಕಿಯ ದೇಹವನ್ನು ಇಪ್ಪತ್ತು ಅಡಿಗಳವರೆಗೆ ಕಾರು ಎಳೆದೊಯ್ದಿತು. ಕಾರು ನಿಲ್ಲುವಷ್ಟರಲ್ಲಿ ಬಾಲಕಿಯ ಉಸಿರು ನಿಂತುಹೋಗಿತ್ತು. ಹದಿನೈದು ವರ್ಷಗಳ ಬಾಲಕಿಯ ದೇಹ ರಸ್ತೆಗೆ ಸೊಳ್ಳೆಯನ್ನು ಒರೆಸಿದಂತಾಗಿತ್ತು. ಜನ ಚೀರುತ್ತ ಓಡಿಬರತೊಡಗಿದ್ದನ್ನು ನೋಡಿದ ಶ್ರೀಪಾದ

ದಿಗಿಲುಗೊಂಡ. ನಿಂತರೆ ಕೆಟ್ಟೆನೆಂದು ಗೇರ್ ಬದಲಿಸಿ ಬ್ರೇಕ್ ಮೇಲಿದ್ದ ಕಾಲನ್ನು ಕಿತ್ತು ಎಕ್ಸಲರೇಟರ್ ಮೇಲಿಟ್ಟ. ಕಾರು ಕೈಗೆ ಸಿಗದಂತೆ ಓಡಿದರೂ ಅದರ ನಂಬರನ್ನು ಜನ ನೋಡಿಕೊಂಡರು.

ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಆ ಬಾಲಕಿ ಮಾಸ್ತಿಯಮ್ಮ ಎನ್ನುವ ಶಿಕ್ಷಕಿಯೊಬ್ಬರ ಮಗಳು. ಗಂಡ ಸತ್ತಿದ್ದ ಅವಳು ಇರುವ ಒಬ್ಬಳೇ ಮಗಳನ್ನು ಅತಿಯಾದ ಮುದ್ದಿನಿಂದ ಬೆಳೆಸಿದ್ದಳು. ಒಳ್ಳೆಯ ಶಿಕ್ಷಕಿಯೆಂದು ಹೆಸರು ಗಳಿಸಿದ್ದ ಮಾಸ್ತಿಯಮ್ಮನಿಂದ ಟ್ಯೂಷನ್ ಹೇಳಿಸಿಕೊಂಡ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದುಕೊಂಡಿದ್ದರು. ಹೀಗಾಗಿ ಆ ಗಲ್ಲಿಯಲ್ಲೆಲ್ಲ ಮಾಸ್ತಿಯಮ್ಮ ಹೆಸರುವಾಸಿ ಶಿಕ್ಷಕಿಯಾಗಿದ್ದಳು. ಮಗಳು ಅಪಘಾತದಲ್ಲಿ ಸತ್ತ ಸುದ್ದಿ ತಿಳಿದ ಮಾಸ್ತಿಯಮ್ಮ ಪ್ರಜ್ಞೆ ತಪ್ಪಿದಳು ; ಆಸ್ಪತ್ರೆಯ ಬೆಡ್ ಮೇಲೆ ತಾಯಿ, ಶವಾಗಾರದಲ್ಲಿ ಮಗಳ ದೇಹ.

ಮಾಸ್ತಿಯಮ್ಮನ ವಿದ್ಯಾರ್ಥಿಗಳು, ಅವರ ತಂದೆತಾಯಿಗಳು, ನೆರೆಹೊರೆಯವರು ಕ್ರೋಧಾವೇಶಕ್ಕೊಳಗಾದರು. ಪೊಲೀಸ್ ಠಾಣೆಗೆ ಹೋಗಿ ಕೂಡಲೇ ಆ ಕಾರನ್ನು ಪತ್ತೆಹಚ್ಚಬೇಕೆಂದೂ ಆಕ್ಸಿಡೆಂಟ್ ಮಾಡಿದವನನ್ನು ತಮಗೆ ಒಪ್ಪಿಸಬೇಕೆಂದು ಕೂಗಾಡತೊಡಗಿದರು.

ಮಾರನೆ ದಿನದ ಹೊತ್ತಿಗೆ ಕಾರು ಭಗವಂತಪ್ಪನವರದೆಂದು ಪತ್ತೆಯಾಯಿತು.

ಭಗವಂತಪ್ಪನವರ ವಸೂಲಿ ವ್ಯವಹಾರ, ಅಕ್ರಮ ಡೀಲ್‌ಗಳಿಗೆ ಸಹಾಯಕನಾಗಿದ್ದ ಜಮಾಲ್ ಪ್ರತ್ಯಕ್ಷನಾದ. 'ಇದಕ್ಕೆಲ್ಲ ನೀವು ಚಿಂತಿಸುವ ಅಗತ್ಯವಿಲ್ಲ. ಕೂಡಲೇ ಒಬ್ಬ ಡ್ರೈವರ್‌ನನ್ನು ಕರೆತರುವೆ. ಅವನನ್ನೇ ಬಾಡಿಗೆ ಅಪರಾಧಿಯನ್ನಾಗಿ ಮಾಡೋಣ' ಎಂದು ಭರವಸೆಯಿತ್ತ.

ಜಿಗಟು ಕೈಯ ಭಗವಂತಪ್ಪನಿಂದ ಹಣ ಬಿಚ್ಚಿಸಲು ಇದು ಒಳ್ಳೆಯ ಅವಕಾಶ ಎಂದುಕೊಂಡ ಜಮಾಲ್ ಒಂದಕ್ಕೆರಡು ಖರ್ಚು ಹೇಳತೊಡಗಿದ. ಪೊಲೀಸರಿಗೆ, ಕೋರ್ಟ್ ಪ್ರಾಸಿಕ್ಯೂಟರ್‌ಗೆ ಕೊಡಬೇಕೆಂದು ಹಣ ಪಡೆದ. ಅದರಲ್ಲಿ ಅರ್ಧ ತನ್ನ ಜೇಬಿಗಿಳಿಸಿಕೊಂಡ. ತನಗೆ ಗೊತ್ತಿರುವ ಟ್ರಾವೆಲ್ ಏಜೆನ್ಸಿಯೊಂದಕ್ಕೆ ಹೋದ ಜಮಾಲ್ ಅದರ ಮ್ಯಾನೇಜರ್‌ಗೆ ಸಮಸ್ಯೆ ವಿವರಿಸಿದ. ಸದಾ ಕುದುರೆ ಜೂಜಿನ ಹುಚ್ಚಿನಲ್ಲಿರುತ್ತಿದ್ದ ಕಾಡಯ್ಯ ಎನ್ನುವ ಟೆಂಪರರಿ ಡ್ರೈವರ್ ಇದಕ್ಕೆ ತಕ್ಕ ವ್ಯಕ್ತಿ ಎಂದು ಮ್ಯಾನೇಜರ್ ಸೂಚಿಸಿದ. ತನ್ನ ಮಾಮೂಲು ಸಿಕ್ಕಿದೊಡನೆ ಮ್ಯಾನೇಜರ್ ಕಾಡಯ್ಯನನ್ನು ಕರೆಸಿದ.

“ಪಾಪ ದೊಡ್ಡ ಶ್ರೀಮಂತರ ಮನೆಯ ಹುಡುಗ. ಆಗೋನು ಹೋಗೋನು. ಜೈಲ್‌ಗೆ ಹೋದ್ರೆ ಕೆಟ್ಟೆಸ್ರು ಬರುತ್ತೇಂತ ಚಿಂತೆ ಅವ್ರಿಗೆ. ಅಷ್ಟಕ್ಕೂ ಆ ಹುಡುಗುನ್ಗೆ ಲೈಸೆನ್ಸ್ ಇದ್ದಿದ್ರೆ ಇಷ್ಟೆಲ್ಲ ಚಿಂತೆ ಮಾಡ್ತಿರಲಿಲ್ಲ. ನೀನು ಮನಸ್ಸು ಮಾಡಿದ್ರೆ ನಿನ್ನ ಕೈ ತುಂಬ ಹಣ ಸಿಗುತ್ತೆ. ನೀನೇನೂ ಹೆಚ್ಚಿಗೆ ಚಿಂತೆ ಮಾಡಬೇಕಾದ್ದಿಲ್ಲ. ಅವರಲ್ಲಿ ದುಡ್ಡಿದೆ. ಎರಡೇ ದಿವಸಗಳಲ್ಲಿ ನಿನ್ನನ್ನು ಬೇಲ್ ಮೇಲೆ ಹೊರತರುತ್ತಾರೆ. ವರ್ಷಗಟ್ಟಲೆ ಕೇಸ್ ನಡೆಯುತ್ತೆ, ಕೊನೆಗೆ ಒಂದಷ್ಟು ದಂಡ ಹಾಕುತ್ತಾರೆ, ಬಿಡುಗಡೆ ಮಾಡುತ್ತಾರೆ; ಡ್ರೈವ್ ಮಾಡುವಾಗ ಸಾಯಿಸಿದ್ದು ಕೊಲೆ ಅಪರಾಧವೇನೂ ಆಗೊಲ್ಲ; ಅಲಕ್ಷ್ಯ ಚಾಲನೆ ಎಂದಾಗುತ್ತೆ. ನಿನಗೂ ನೂರೆಂಟು ತಾಪತ್ರಯ. ಮೊನ್ನೆಯಷ್ಟೇ ಬಂದು ನಂಗೆ ಸಾಲಕ್ಕಾಗಿ ಪೀಡಿಸುತ್ತಿದ್ದಿ. ಬಯಸದೇ ಬಂದ ಭಾಗ್ಯ ಎಂದು ತಿಳಿ ಇದನ್ನ” ಎಂದ.

ಚಿಕಿತ್ಸೆಗೆ ಹಣವಿಲ್ಲದೆ ರೋಗದಿಂದ ನರಳುತ್ತಿರುವ ಹೆಂಡತಿ, ಕೊಡಲು ವರದಕ್ಷಿಣೆಯಿಲ್ಲದೆ ಮನೆಯಲ್ಲೇ ಕೂತ ಮಗಳು ಕಣ್ಮುಂದೆ ಬಂದರು ಕಾಡಯ್ಯನಿಗೆ. ಮೈಸೂರಿನ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ತಮ್ಮನ ಹತ್ತಿರ ತನ್ನ ಒಬ್ಬನೇ ಮಗನನ್ನು ಓದಲು ಬಿಟ್ಟಿದ್ದ. ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದ ಮಗ, “ನಿನ್ನಂಥವರು ಮಕ್ಕಳ್ನ ಹುಟ್ಟಿಸ್‌ಬಾರ್ದು, ಕಟ್ಟಿಕೊಂಡ ಹೆಂಡ್ತೀನ್ನೇ ಸಾಕಾಕೆ ಆಗ್ದಿರೋ ನಿನ್ನನ್ನು ನನ್ನಪ್ಪ ಎಂದು ಹೇಳ್ಕೊಳ್ಳೋಕೆ ನಾಚಿಕೆಯಾಗುತ್ತೆ” ಎಂದು ಬೈದು ಹೋದದ್ದು ಕಣ್ಮುಂದೆ ಬಂದಿತು.

“ಆಯ್ತು ದುಡ್ಡೆಷ್ಟು ಕೊಡ್ತಾರೆ?” ಎಂದು ಕೇಳಿ ಜಮಾಲ್‌ನತ್ತ ತಿರುಗಿದ.

“ನೀನೇನೂ ಯೋಚಿಸ್‌ಬೇಡ. ಇಪ್ಪತ್ತೈದು ಸಾವಿರ ಕೊಡಿಸ್ತೇನೆ” ಎಂದ.

ಒಂದೇ ಮಾತಿಗೆ ಹೂಂ ಎಂದುಬಿಟ್ಟ. ಆಕ್ಸಿಡೆಂಟ್ ಮಾಡುವಾಗ ಕಾರಲ್ಲಿ ಹುಡುಗನಿದ್ದ. ಈಗ ನೋಡಿದ್ರೆ ಭಾರೀ ಆಳನ್ನೇ ತಂದು ಕೋರ್ಟಿಗೆ ತೋರಿಸ್ತಿದಾರೆ. ನಿಜವಾದ ಅಪರಾಧಿ ಭಗವಂತಪ್ಪನ ಮಗ ಶ್ರೀಪಾದನೇ. ದುಡ್ಡಿನಾಸೆಗೆ ಅವನು ಜೈಲಿಗೆ ಹೋಗೋಕೆ ಒಪ್ಪಿಕೊಂಡಿರಬಹುದು. ಆದರೆ ನಾವು ಕೇಳಬೇಕಲ್ಲ! ಕೋರ್ಟ್‌ಗೆ ಬಂದಾಗ ಆ ಬಾಡಿಗೆ ಅಪರಾಧಿಯನ್ನ ಹಿಡಿದು ನಿಜ ಏನೆಂದು ಬಾಯಿ ಬಿಡಿಸುತ್ತೇವೆ ಇತ್ಯಾದಿಯಾಗಿ ಮಾತಾಡತೊಡಗಿದರು. ಜಮಾಲ್ ಕಾಡಯ್ಯನನ್ನು ಜಾಮೀನಿನ ಮೇಲೆ ಬಿಡಿಸಬೇಕೆಂದು ಪೊಲೀಸರ ಹತ್ತಿರ ಕೇಳಿಕೊಂಡಾಗ ಅವರು, “ಈಗ ಅವನ್ನ ಹೊರಗೆ ಬಿಟ್ಟರೆ ಕೇಸ್ ಉಲ್ಟಾ ಆಗುತ್ತೆ. ಜನ ಅವನ್ನ ಹಿಡಿದು ನಿಜ ಬಾಯಿ ಬಿಡಿಸುವ ಮಾತಾಡ್ತಿದಾರೆ. ಇನ್ನಷ್ಟು ದಿನ ಕಾಡಯ್ಯ ಜೈಲಲ್ಲಿದ್ರೇನೇ ನಿಮ್ಮ ಕೇಸ್‌ಗೆ ಹೆಲ್ಪ್ ಆಗೋದು” ಎಂದರು.

ಈ ವಿಷಯ ಕೇಳಿದ ಜಮಾಲ್‌ಗೆ ಹೊಸ ಯೋಚನೆ ಹೊಳೆದು ಖುಷಿಗೊಂಡ.

ಜೈಲಲ್ಲಿ ಹೋಗಿ ಕಾಡಯ್ಯನನ್ನು ಕಂಡು, "ನೋಡು ಈಗ ನೀನು ಹೊರಗೆ ಬಂದ್ರೆ ಆಕ್ಸಿಡೆಂಟ್‌ನಲ್ಲಿ ಸತ್ತ ಹುಡುಗಿಯ ಕಡೆಯೋರು ಬಂದು ನಿನ್ನ ಕೈಕಾಲು ಮುರಿಯುವ ಮಾತಾಡ್ತಿದಾರೆ. ಕಾವು ಆರಲಿ. ಆಗ ಎಲ್ಲ ತಣ್ಣಗಾಗಿರ್ತಾರೆ" ಎಂದ.

"ಅಯ್ಯೋ, ನನ್ನ ಹೆಂಡ್ತೀಗೆ ಹೊಟ್ಟೆ ಆಪರೇಷನ್ ಮಾಡಿಸ್ದಿದ್ರೆ ಸತ್ತೋಗ್ತಾಳೆ ಅಂತ ಡಾಕ್ಟ್ರು ಹೇಳವ್ರೆ. ನಾನು ಹೊರಗೆ ಹೋಗ್ಲೇಬೇಕು" ಎಂದ.

"ಅದಕ್ಕೆಲ್ಲ ನಾನು ಏರ್ಪಾಟು ಮಾಡ್ತೇನೆ. ನಿನ್ನ ಮನೆ ಜವಾಬ್ದಾರೀನ ನನ್ನ ಮೇಲೆ ಬಿಡು. ನಿನ್ನ ಹೆಂಡ್ತೀನ ಆಸ್ಪತ್ರೆಗೆ ಸೇರಿಸ್ತೇನೆ. ನಿಮ್ಮನೇಲಿ ಪ್ರತಿ ತಿಂಗ್ಳೂ ಖರ್ಚಿಗೆ ದುಡ್ಡು ಕೊಡ್ತೇನೆ" ಎಂದು ಸಮಾಧಾನಪಡಿಸಿದ.

ಸಾಹುಕಾರ ಭಗವಂತಪ್ಪನ ಬಳಿಗೆ ಹೋಗಿ ಜಮಾಲ್ ಆದ ಹೊಸ ಬೆಳವಣಿಗೆಗಳನ್ನೆಲ್ಲ ಒಂದಕ್ಕೆರಡು ಉತ್ಪ್ರೇಕ್ಷಿಸಿ ಹೇಳಿ ಸಮಸ್ಯೆಗೆ ಕಗ್ಗಂಟು ಹಾಕಿ ನೀನೇ ಬಿಡಿಸು ನನಗೆ ಸಾಕಾಯಿತು ಎಂದ!

"ಶುರುವಾತ್‌ನಿಂದ್ಲೂ ಎಲ್ಲ ನೀನೇ ಮಾಡಿದ್ದೀಯಾ. ಮಧ್ಯೆ ನಾನು ಏನಾದ್ರೂ ಮಾಡೋಕೆ ಹೋದ್ರೆ, ಮತ್ತೇನೊ ಆಗೋದ್ರೆ ಹೇಗೆ?" ಎಂದು ವಿನೀತವಾಗಿ ಜಮಾಲ್ ಮುಖ ನೋಡಿದ. ಎದುರಿಗೆ ಬಂದ ಮಗ ಶ್ರೀಪಾದವನ್ನು ನೋಡಿ ಭಗವಂತಪ್ಪನ ಕಣ್ಣುಗಳು ಕೆಂಡವಾದವು, "ನನ್ನ ಜೀವಮಾನದಲ್ಲೇ ಹೀಗೆ ಯಾರಿಗೂ ದಮ್ಮಯ್ಯ ಅನ್ನೊ ದಯನೀಯ ಸ್ಥಿತಿ ಬಂದಿರ್ಲಿಲ್ವೊ ನಂಗೆ. ನಿನ್ನಿಂದ್ಲೇ ಇಷ್ಟೆಲ್ಲ. ಹೋಗು ನನ್ನ ಕಣ್ಮುಂದೆ ನಿಂತ್ಕೋಬೇಡ" ಎಂದು ಚೀರಿದ.

"ನೋಡಿ ಸಾಹುಕಾರ್ರೇ, ಈಗ ಕಾಡಯ್ಯನ್ನ ಹೊರಗೆ ಬಿಡಿಸಿಕೊಂಡು ಬರೋ ಹಾಗಿಲ್ಲ. ಪ್ರತಿ ತಿಂಗಳೂ ಅವನ ಮನೆಗೆ ಖರ್ಚು ಕೊಡಬೇಕು. ಅವನ ಹೆಂಡತಿಯ ಆಪರೇಷನ್ ಮಾಡಿಸಬೇಕು. ಮೈಸೂರಲ್ಲಿ ಅವನ ಮಗ ಓದ್ತಿದಾನೆ. ಅವನಿಗೆ ದುಡ್ಡು ಕಳಿಸಬೇಕು. ಪೋಲೀಸ್ನೋರ್ನ ನೋಡ್ಕೋಬೇಕು....." ಎಂದು ತನ್ನ ಪ್ರೈಸ್‌ಲಿಸ್ಟ್ ಮುಂದಿಟ್ಟ.

ಜಮಾಲ್ ಕಾಡಯ್ಯನ ಹೆಂಡತಿಯನ್ನೇನೊ ಆಸ್ಪತ್ರೆಗೆ ಸೇರಿಸಿದ. ಆಪರೇಷನ್‌ಗೆ ದುಡ್ಡು ಕೊಟ್ಟು ಸರಿಯಾದ ವ್ಯವಸ್ಥೆ ಮಾಡಲಿಲ್ಲ. ಹೀಗಾಗಿ ಅವಳು ಸತ್ತುಹೋದಳು.

ಮೈಸೂರಿನಿಂದ ಕಾಡಯ್ಯನ ಮಗ ಮಾದು ಮತ್ತು ತಮ್ಮ ಸಿದ್ಧರಾಜು ಬೆಂಗಳೂರಿಗೆ ಧಾವಿಸಿದರು.

ಕಾಡಯ್ಯನನ್ನು ಅವನ ಹೆಂಡತಿಯ ಶವಸಂಸ್ಕಾರಕ್ಕೆ ಪೊಲೀಸ್ ಕಾವಲಿನಲ್ಲಿ ಕಳಿಸಿದರು. ಮಾದು ಮತ್ತು ಸಿದ್ಧರಾಜು ಅವರಿಗೆ ಕಾಡಯ್ಯ ತಾನು ಜೈಲಿಗೆ ಸೇರಿದ್ದರ ಕಥೆಯನ್ನೆಲ್ಲ ಹೇಳಿದ.

ಸಿದ್ಧರಾಜು ಭಗವಂತಪ್ಪನ ಬಳಿ ಹೋಗಿ "ನೀನು ನಮ್ಮಣ್ಣನ್ನ ಬಿಡಿಸ್ದೇ ಹೋದ್ರೆ ಮುಂದೇನಾಗುತ್ತೊ ಹೇಳೋಕ್ಕಾಗಲ್ಲ" ಎಂದು ಗದರಿಸಿದ. ಎಲ್ಲಾದಕ್ಕೂ ಜಮಾಲ್‌ಗೆ ಜವಾಬ್ದಾರಿ ಕೊಟ್ಟಿದ್ದಾಗಿಯೂ, ಕಾಡಯ್ಯನಿಗಾಗಿ ಕೊಡಲೆಂದು ಮೂವತ್ತೈದು ಸಾವಿರ ಕೊಟ್ಟಿರುವುದಾಗಿಯೂ ಭಗವಂತಪ್ಪ ಹೇಳಿದ. ಜಮಾಲ್‌ನನ್ನು ಕರೆದು ಕಾಡಯ್ಯನನ್ನು ಬಿಡಿಸುವ ವ್ಯವಸ್ಥೆ ಮಾಡುವುದಾಗಿ ಹೇಳಿಕಳಿಸಿದ. ಭಗವಂತಪ್ಪ ಜಮಾಲ್‌ನನ್ನು ಕರೆದು, "ಈಗ ಪರಿಸ್ಥಿತಿ ತಿಳಿಯಾಗಿದೆ. ಕಾಡಯ್ಯನನ್ನು ಬಿಡಿಸಿಬಿಡು. ಪಾಪ ಅವನ ಹೆಂಡ್ತೀನೂ ಸತ್ತವ್ಳೆ" ಎಂದ.

ಜಮಾಲ್ ಕಾಡಯ್ಯನನ್ನು ಬಿಡಿಸಿದ. ತಿಥಿ, ಕರ್ಮಗಳು ಮುಗಿದ ಮೇಲೆ ಸಿದ್ಧರಾಜು ಮೈಸೂರಿಗೆ ಹೊರಟುಹೋದ. ಮಾದು ಸ್ವಲ್ಪ ದಿವಸ ಬೆಂಗಳೂರಲ್ಲೇ ಇರಲಿ ಎಂದ ಕಾಡಯ್ಯ.

ಕಾಡಯ್ಯ ತನ್ನ ಮಗ ಮಾದುನನ್ನು ಕರೆದುಕೊಂಡು ಜಮಾಲ್ ಬಳಿಗೆ ಹೋದ. ಒಪ್ಪಂದದ ಪ್ರಕಾರ ನನಗೆ ಇಪ್ಪತ್ತೈದು ಸಾವಿರ ಕೊಡು ಎಂದ.

ಅದಕ್ಕೆ ಜಮಾಲ್ ಹಹ್ಹಹ್ಹ ಎಂದು ನಗುತ್ತ 'ಅಲ್ಲ ಕಾಡಯ್ಯ, ಪಾಪ ನಿನ್ನ ಹಣಾ ತಗೊಂಡು ನಾನೇನು ಮಾಡ್ಲಿ. ನಿನ್ನ ಹೆಂಡ್ತಿ ಬಾಳ ಅತ್ತು ಗೋಗರೆದಳು. "ನನ್ನ ಮಗಳ ಮದುವೆ ಮಾಡ್ಬೇಕು ದುಡ್ನ ನನ್‌ಕೈಗೇ ಕೊಡಿ. ನನ್ ಗಂಡನ್ ಕೈಗೆ ಕೊಟ್ರೆ ಕುದುರೆ ಜೂಜಿಗೆ ಹಾಕಿಬಿಡ್ತಾನೆ" ಎಂದಳು. ಆವಾಗ್ಲೇ ಅವಳ ಕೈಗೆ ಮೂವತ್ತೈದು ಸಾವಿರ ಕೊಟ್ಟೆ. ನಿಂಗೆ ಒಪ್ಪಿಕೊಂಡಿದ್ದು ಕೇವಲ ಇಪ್ಪತ್ತೈದು ಸಾವಿರ. ಇರಲಿ ಪಾಪ, ಬಾಳ ಕಷ್ಟಪಟ್ಟವ್ನೆ ಅಂತ ಇನ್ನೂ ಹತ್ತು ಸಾವಿರ ಹೆಚ್ಚಿಗೆ ಇಸಿದುಕೊಟ್ಟೆ. ಅವಳ ಆಸ್ಪತ್ರೆ ಬಿಲ್ ಅನ್ನ ನನ್ನ ಕೈನಿಂದ ಕೊಟ್ಟೆ. ಡಾಕ್ಟ್ರ ಸಹಾ ಬಾಳ ಪ್ರಯತ್ನಪಟ್ರು ನಿನ್ನ ಹೆಂಡ್ತೀನ್ನ ಉಳಿಸೋಕೆ. ಅಲ್ಲಾನ ದಯೆ ಇರ್ಲಿಲ್ಲ ಹೊರಟು ಹೋದಳು....." ಎಂದ ತಣ್ಣಗೆ. ಕಾಡಯ್ಯನಿಗೆ ಸಿಟ್ಟು ನೆತ್ತಿಗೇರಿತು. "ಜಮಾಲ್ ನನ್ನೊಂದಿಗೆ ಹುಡುಗಾಟ ಬೇಡ. ಸತ್ತ ಹೆಂಡತೀನ್ನ ಸಾಕ್ಷಿಯಿಟ್ಟು ಸುಳ್ಳು ಹೇಳ್ತಾ ಇದ್ದೀಯಾ. ನಿಂಗೂ ಹೆಂಡ್ತೀ ಮಕ್ಕಳವ್ರೆ, ದೇವರು ಒಳ್ಳೇದು ಮಾಡಾಕಿಲ್ಲ" ಎಂದ.

"ನಂಗೆ ನಿನ್ನತ್ರ ಮಾತಾಡ್ಯಾಕೆ ಟೈಮಿಲ್ಲ. ಸುಮ್ನೆ ನನ್ ತಲೆ ಬಿಸಿ ಮಾಡಬೇಡ. ನೀ ಹೋಗ್ದಿದ್ರೆ ಕತ್ತು ಹಿಡಿದು ಆಚೆ ದಬ್ಬಿಸಬೇಕಾಗುತ್ತೆ....." ಎಂದು ಕೂಗಿದ.

"ನಾನು ಜೈಲಿಗೆ ಹೋದದ್ದಾದ್ರೂ ಸಾರ್ಥಕ ಆಗ್ಬೇಕಲ್ಲ. ನೀನೂ ಸ್ವಲ್ಪ ಇಟ್ಟುಕೊ, ಇಪ್ಪತ್ತು ಸಾವಿರನಾದ್ರೂ ಕೊಡು. ಆ ಸಾಹುಕಾರನಲ್ಲಿ ನನ್ನ ಹೆಸರೇಳಿ ಮೂವತ್ತೈದು ಸಾವಿರ ಕಿತ್ಕೊಂಡಿದೀಯಾ. ಇದಲ್ದೆ ಏನೇನೊ ಬಾಬತ್ತು ಹಚ್ಚಿ ಲಕ್ಷಗಟ್ಟಲೆ ಕಿತ್‌ಕಂಡಿದೀಯಾ...." ಎನ್ನುತ್ತ ಇನ್ನೂ ಮಾತು ಮುಗಿಸಿರಲಿಲ್ಲ. ತನ್ನ ಕಳವನ್ನೆಲ್ಲ ಬಯಲಿಗೆಳೆಯುತ್ತಿರುವ ಕಾಡಯ್ಯನ ಮೇಲೆ ಜಮಾಲ್‌ಗೆ ಎಲ್ಲಿಲ್ಲದ ಕೋಪವುಕ್ಕಿ ಬಂದಿತು.

"ನಾ ಏನ್ ಬೇಕಾದ್ರೂ ಮಾಡ್ಕೋತೇನೆ. ನನ್ನ ದಂಧಾ ಬಗ್ಗೆ ಮಾತಾಡೋಕೆ ನೀ ಎಷ್ಟರವ್ನೋ. ನಿನ್ನ ಮಗಳ ಮದುವೆ ಮಾಡಾಕೆ ದುಡ್ಡಿಲ್ದಿದ್ರೆ, ಅದ್ಕೆ ನಾ ಕೊಡೋಕಾಗ್ತದಾ? ಅವಳ ಮದುವೆ ಮಾಡೋ ತಾಕತ್ತು ನಿಂಗಿಲ್ದಿದ್ರೆ ನನ್ನತ್ರ ಕಳ್ಸು; ಸಾಕ್ಕೊಂಡಿರ್ತೇನೆ..." ಎನ್ನುತ್ತ ಇನ್ನೂ ಮಾತು ಮುಂದುವರಿಸುತ್ತಿದ್ದ. ಕಾಡಯ್ಯನ ಮಗ ಮಾದು, ಅಲ್ಲಿಯೇ ಇದ್ದ ಸೈಕಲ್‌ಗೆ ಗಾಳಿ ಹಾಕುವ ಪಂಪನ್ನು ಎತ್ತಿ ಜಮಾಲ್ ತಲೆಯ ಮೇಲೆ ತನ್ನ ಶಕ್ತಿಯನ್ನೆಲ್ಲ ಹಾಕಿ ಹೊಡೆದ. ಒಂದೇ ಏಟಿಗೆ ಜಮಾಲ್ ಓss ಎಂದು ಚೀರಿ ಕುಸಿದ. ಆಗಲೂ ಬಿಡದೆ ಮಾದು ಜಮಾಲ್ ತಲೆಗೆ ಚಚ್ಚತೊಡಗಿದ. ಕಾಡಯ್ಯ ಮಗನ ಕೈಯಲ್ಲಿದ್ದ ಪಂಪನ್ನು ಕಸಿದುಕೊಂಡ. ಮನೆಯೊಳಗಿಂದ ಹೆಂಗಸರೆಲ್ಲ ಓಡಿ ಬಂದು ಜಮಾಲ್ ದೇಹದ ಮೇಲೆ ಉರುಳಾಡಿ ರೋದಿಸತೊಡಗಿದರು. ಕಾಡಯ್ಯ "ನೀ ಇನ್ನು ನಿಲ್ಲಬೇಡ ಓಡಿಹೋಗು" ಎಂದ ಮಗನಿಗೆ.

ಅಕ್ಕಪಕ್ಕದ ಮನೆಯವರು ಬಂದು ಕಾಡಯ್ಯನನ್ನು ಹಿಡಿದು ಕಟ್ಟಿಹಾಕಿದರು; ಥಳಿಸತೊಡಗಿದರು. ಪೊಲೀಸರು ಬಂದು ಕಾಡಯ್ಯನನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು.

ಕೋರ್ಟ್‌ನಲ್ಲಿ ವಿಚಾರಣೆ ನಡೆದು ತಪ್ಪಿತಸ್ಥನೆಂದು ಕಂಡುಬಂದು ಜೀವಾವಧಿ ಶಿಕ್ಷೆಯಾಯಿತು.

33

ಮಗನ ಮಾಂಸವನ್ನೇ ತಿಂದ ಬ್ರೂಕ್ಸ್ !

ಥಾಮಸ್ ಡಡ್ಲಿ, ಎಡ್‌ವರ್ಡ್, ಬ್ರೂಕ್ಸ್ ಮತ್ತು ರಿಚರ್ಡ್ ಈ ನಾಲ್ವರೂ ನಾವೆಯೇರಿ ಸಮುದ್ರ ಪ್ರಯಾಣ ಆರಂಭಿಸಿದಾಗ ತಮ್ಮ ಭವಿಷ್ಯಕ್ಕೆ ಗ್ರಹಣ ಹಿಡಿಯಲಿರುವುದರ ಸೂಚನೆಯಿರಲಿಲ್ಲ. ಅಂದೇ ಸಂಜೆಯ ಹೊತ್ತಿಗೆ ವಾಪಸು ಬರುವುದಾಗಿ ತಮ್ಮ ತಮ್ಮ ಮನೆಯಲ್ಲಿ ಹೇಳಿ ಹೊರಟವರು ಚಂಡಮಾರುತಕ್ಕೆ ಸಿಕ್ಕುಬಿಟ್ಟರು. ಚಂಡಮಾರುತದಿಂದ ದಿಕ್ಕೆಟ್ಟ ನಾವೆ ಸಮುದ್ರದಿಂದ ಸಾಗರದೊಡಲಿಗೆ ಹೋಗಿ ಸೇರಿಕೊಂಡಿತು. ಎಲ್ಲಿ ನೋಡಿದರೂ ನೀರು; ಕರಾಳ ಕಪ್ಪೊಡಲು. ಇಡೀ ಆಕಾಶವನ್ನೇ ತನ್ನ ಗರ್ಭದಲ್ಲಿ ಸೆರೆಹಿಡಿದಿಟ್ಟುಕೊಂಡಂತಿದ್ದ ಸಾಗರ. ಸೂರ್ಯ, ಚಂದ್ರ, ಮಾರುತರೂ ತನ್ನಾಣತಿಯಂತೆ ನಡೆಯಬೇಕೆನ್ನುವಂತೆ ಆರ್ಭಟಿಸುತ್ತಿತ್ತು ಸಾಗರ.

ಶರವೇಗದಿಂದ ನಾವೆ ಸಾಗುತ್ತಿತ್ತು. ಅದನ್ನು ತಡೆಯುವ ಶಕ್ತಿ, ಅದರೊಳಗಿದ್ದ ಹುಲುಮಾನವರಿಗೆಲ್ಲಿ! ಹಗಲು, ರಾತ್ರಿ ಸಾಗಿದ ನಾವೆ ಮಾರನೆ ದಿನ ಸೂರ್ಯಕಿರಣಗಳು ಕಂಡಾಗ ಸಮುದ್ರ ದೊಡ್ಡಾಟದ ಪಾತ್ರ ಕುಣಿದು ಸುಸ್ತಾದಂತೆ ಶಾಂತವಾಗಿತ್ತು.

ಎತ್ತ ನೋಡಿದರೂ ಮತ್ತೊಂದು ಹಡಗು, ನಾವೆ ಏನೊಂದೂ ಕಾಣುತ್ತಿಲ್ಲ. ಇನ್ನು ನರಪಿಳ್ಳೆಯ ಸುಳಿವಂತೂ ಇರಲೇ ಇಲ್ಲ.

ಥಾಮಸ್ ಡಡ್ಲಿ ಪಳಗಿದ ನಾವಿಕ. ಸಮುದ್ರದ ಅಪಘಾತಗಳ ಅರಿವಿಲ್ಲದವನೇನೂ ಅಲ್ಲ. ಪಕ್ಷಿಗಳು, ಹದ್ದುಗಳು ಕಣ್ಣಿಗೆ ಬೀಳಲಿಲ್ಲ. ಭೂಮಿಗೆ ಆಳವಾಗುತ್ತಾ ಹೋದಂತೆ ಸಾಗರದಲ್ಲಿ ಹಿರಿ, ಕಿರಿ ಮೀನುಗಳೂ ಕಾಣಸಿಗುವುದಿಲ್ಲ. ಆಹಾರವಿದ್ದರೆ ತಾನೆ ಹದ್ದುಗಳು ಹಾರಾಡುವುದು. ತಲೆ ಮೇಲೆ ಸುಡುವ ಬಿಸಿಲು, ಕೆಳಗೆ ಸಮುದ್ರದ ಕರಿನೀರು; ಬಿಸಿಲು, ನೀರುಗಳು ಸೇರಿ ನಮ್ಮನ್ನು ಸುಟ್ಟು ಇಜ್ಜಿಲು ಮಾಡಿ ಹಾಕಿಬಿಡುತ್ತವೆ ಎಂದು ಕೊಂಡ ಡಡ್ಲಿ. ಆ ನಾಲ್ವರಲ್ಲಿ ರಿಚರ್ಡ್ ಮಾತ್ರ ಹದಿವಯಸ್ಸಿನ ಬಾಲಕ. ಅವನ ಚಿಕ್ಕಪ್ಪ ಬ್ರೂಕ್ಸ್ ಮತ್ತು ಎಡ್‌ವರ್ಡ್ ಸ್ಟೀಫನ್‌ರು ಡಡ್ಲಿಯಷ್ಟು ಎಕ್ಸ್‌ಪರ್ಟ್‌ಗಳಲ್ಲ ಸಮುದ್ರಯಾನದಲ್ಲಿ. 'ಭೂಮಿಯನ್ನು ಮರೆತೇ ಸಮುದ್ರಕ್ಕಿಳಿಯಬೇಕು' ಎನ್ನುವ ಆಡುಮಾತಿನ ಅರ್ಥವನ್ನು ಡಡ್ಲಿ ಅರಿತವನಾಗಿದ್ದ. ಹೀಗಾಗಿ ಸಂಜೆಗೇ ವಾಪಸು ಬರಲು ರೆಡಿಯಾಗಿ ಹತ್ತುವಾಗಲೂ ಎರಡು ದಿನಗಳಿಗೆ ಬೇಕಾದಷ್ಟು ಬ್ರೆಡ್, ಮಾಂಸದ ತುಣುಕುಗಳು, ಹುರಿದ ಮೀನು, ಇಪ್ಪತ್ತೈದು ಲೀಟರ್‌ಗಳ ನೀರಿನ ಕ್ಯಾನ್‌ಗಳನ್ನೆಲ್ಲ ನಾವೆಗೆ ಹಾಕಿದ್ದ.

ಬಿಸಿಲೇರಿದಂತೆ ಬಾಯಾರಿಕೆ, ಹಸಿವೆಗಳೂ ಏರಿದವು. ಆವರಿಸಿದ ಭಯ, ವಿಹ್ವಲತೆಗಳು ಅಗತ್ಯಕ್ಕಿಂತ ಹೆಚ್ಚಿನ ದಣಿವನ್ನುಂಟುಮಾಡಿದ್ದವು.

ಎಡ್‌ವರ್ಡ್ ಮತ್ತು ಬ್ರೂಕ್ಸ್ ತಮ್ಮ ವಾಟರ್ ಬ್ಯಾಗ್‌ಗಳನ್ನೆತ್ತಿ ಗಟಗಟನೆ ನೀರು ಕುಡಿಯಲಾರಂಭಿಸಿದರು. ರಿಚರ್ಡ್ ತನಗಾಗಿದ್ದು ಹಸಿವೊ ಅಥವಾ ಬಾಯಾರಿಕೆಯೊ ಎನ್ನುವ ಗೊಂದಲದಲ್ಲಿ ನಾಲಿಗೆ, ತುಟಿಗಳನ್ನೊಣಗಿಸಿಕೊಂಡು ಕೂತಿದ್ದ.

ಡಡ್ಲಿ "ಲೋ ಪೆಕ್ರಗಳಾ, ನಾವೆ ದಿಕ್ಕುತಪ್ಪಿ ಸಾವಿರಾರು ಮೈಲು ದೂರ ಬಂದಿರೋವಾಗ ನೀರನ್ನ ಹಾಗೆ ಕುಡೀತಾರೇನ್ರೊ. ಲೆಕ್ಕಾಚಾರವಿಲ್ಲದೆ ನೀರು ಕುಡಿಯೋದು ಅಂದ್ರೆ ಸಾವಕಾಶ ಆತ್ಮಹತ್ಯೆ ಮಾಡಿಕೊಂಡಂತೆ. ಇಂಥ ಆಪತ್ಕಾಲದಲ್ಲಿ ನೀರನ್ನ ಬಾಯಾರಿಕೆಗಾಗಿ ಕುಡಿಯೋದಲ್ಲ. ಬದುಕಲಿಕ್ಕಾಗಿ ಮಾತ್ರ ಕುಡಿಯಬೇಕು. ದಾಂಡಿಗರಾಗಿದೀರಿ, ಮೊದಲು ಪಾಪ ಆ ರಿಚರ್ಡ್‌ಗೆ ಕುಡಿಸಿ. ಮುಖ ಒಣಗಿಸಿಕೊಂಡು ಹೇಗೆ ಕೂತಿದಾನೆ ನೋಡಿ. ಅವನಿಗೆ ತಿನ್ನಲೂ ಸ್ವಲ್ಪ ಕೊಡಿ. ಸುಧಾರಿಸಿಕೋತಾನೆ. ದೇಹ ಕಂಗೆಟ್ಟರೆ ಮನಸ್ಸು ಕಂಗೆಡುತ್ತದೆ; ಮನಸ್ಸು ಕಂಗೆಟ್ಟರೆ

ದೇಹ ಕಂಗೆಡುತ್ತದೆ. ವಿಶೇಷವಾಗಿ ಇಂಥ ಸಮಯದಲ್ಲಿ ಸ್ಥಿತಪ್ರಜ್ಞತೆ ಇರಬೇಕು ನಾವಿಕನಾದವನಿಗೆ. ಮರಣದ ಬಾಯೊಳಗಿರುವಾಗಲೂ ಹಲ್ಲು ಸಂದಿನಿಂದಾದರೂ ಪಾರಾಗಬಹುದು ಎಂದುಕೊಳ್ಳುವ ಆಶಾವಾದಿಯಾಗಿರಬೇಕು" ಎಂದ.

ಎಡ್‌ವರ್ಡ್, ಬ್ರೂಕ್ಸ್‌ಗಳು ರಿಚರ್ಡ್‌ಗೆ ತಿನ್ನಲು ಮಾಂಸದ ತುಣುಕುಗಳನ್ನು ಕೊಟ್ಟು ನೀರು ಕೊಟ್ಟರು. ತನ್ನ ಬಗ್ಗೆ ಹಿರಿಯರಾದ ಮೂವರೂ ಕಾಳಜಿ ವಹಿಸುತ್ತಿರುವುದು ರಿಚರ್ಡ್‌ಗೆ ಒಂದು ರೀತಿಯ ಸಮಾಧಾನವನ್ನುಂಟುಮಾಡಿತು.

ಸೂರ್ಯ ಮುಳುಗಿದ. ಸೂರ್ಯ ಹುಟ್ಟಿದ ನೆಲೆಯೇ ಕಾಣಲಿಲ್ಲ ನಾವೆಗೆ. ಹಡಗೇನಾದರೂ ಕಾಣುವುದೇ, ಕಂಡರೆ ಮದ್ದನ್ನು ಹಾರಿಸಿ ಶಬ್ದ ಮಾಡಿ ತಮ್ಮ ಇರುವನ್ನು ತಿಳಿಸಬೇಕೆಂದು ಡಡ್ಲಿಯ ಕಣ್ಣುಗಳು ಹೊಂಚು ಹಾಕುತ್ತಲೇ ಇದ್ದವು. ಎಲ್ಲರ ಬಳಿಯಿದ್ದ ಆಹಾರ ಮತ್ತು ನೀರನ್ನು ಡಡ್ಲಿ ತನ್ನ ಸುಫರ್ದಿಗೆ ತೆಗೆದುಕೊಂಡ; ಉಸಿರಾಡಲಷ್ಟೇ ಆಹಾರ, ನೀರು ಎಂದ!

ನೀರು ಸ್ವಲ್ಪವೇ ಉಳಿದಾಗ ಕೊನೆ ಕೊನೆಗೆ ಡಡ್ಲಿ ನೀರನ್ನು-ಕುಡಿಯಬೇಡಿ ಬಾಯೊಳಗೆ ಹಾಗೇ ಹಾಕಿಟ್ಟುಕೊಂಡಿರಿ, ಅಂದರೆ ಬಾಯಿ ಒಣಗುವುದಿಲ್ಲ ಎಂದು ಉಪಾಯ ಸೂಚಿಸಿದ. ಡಡ್ಲಿ, ರಿಚರ್ಡ್‌ಗೆ ತಾವು ಮೂವರು ಸೇವಿಸುವುದಕ್ಕಿಂತ ಒಂಚೂರು ಹೆಚ್ಚಿನ ಆಹಾರ, ನೀರು ಕೊಡುತ್ತಿದ್ದುದನ್ನು ನೋಡಿ ರಿಚರ್ಡ್‌ಗೆ ಡಡ್ಲಿಯ ಬಗ್ಗೆ ಅಪಾರ ಗೌರವ, ಭಕ್ತಿಗಳು ಮೂಡಿದವು; ತನ್ನ ತಾಯಿಯಂತೆ ಪ್ರೀತಿ ಮಾಡುತ್ತಿದ್ದಾನೆ ಎನಿಸಿತು.

"ಪಾಪ, ಆ ಹುಡುಗನಿಗೆ ನಾವು ಧೈರ್ಯ ಕೊಡದಿದ್ದರೆ ಎದೆಯೊಡೆದುಕೊಂಡು ಸತ್ತೇ ಹೋಗಿಬಿಡುತ್ತಾನೆ" ಎನ್ನುತ್ತಿದ್ದ ಡಡ್ಲಿ. ಎಷ್ಟೇ ಜಿಪುಣತನ ಮಾಡಿದರೂ ಆಹಾರ, ನೀರುಗಳು ಹನ್ನೆರಡು ದಿನಗಳವರೆಗೆ ಮಾತ್ರ ಇದ್ದವು. ಕೊನೆಗಂತೂ ಕೆಲವೇ ಒಣಮೀನುಗಳು ಇದ್ದವು. ಮೂವರೂ ಹಂಚಿಕೊಂಡು ತಿನ್ನಲಿಲ್ಲ; ಬಾಯಲ್ಲಿಟ್ಟುಕೊಂಡು ಚೀಪತೊಡಗಿದರು.

ರಿಚರ್ಡ್ ಮನೆಯಲ್ಲಿ ಒಣಗಿದ ಮೀನು ಕೊಟ್ಟರೆ ತಟ್ಟೆ ಬೀಸಿ ಒಗೆದು ತಾಯಿಯ ಜೊತೆಗೆ ತಂಟೆ ಮಾಡುತ್ತಿದ್ದ. ಆದರೆ ಈಗ ತನ್ನ ಜೀವವುಳಿಸುವ ಸಂಜೀವಿನಿ ಎನ್ನುವಂತೆ ಭದ್ರವಾಗಿ ಕೈಯಲ್ಲಿ ಹಿಡಿದು ಕೊಂಡಿದ್ದ ಒಣಮೀನೊಂದನ್ನು.

ಹಾಗೆ ನೋಡಿದರೆ ಚಂಡಮಾರುತಕ್ಕೆ ಸಿಕ್ಕ ಮಾರನೇ ದಿನದಿಂದಲೇ ಎಲ್ಲರಿಗೂ ಉಪವಾಸ ವ್ರತವನ್ನು ಹಿಡಿಸಿಬಿಟ್ಟಿದ್ದ ಡಡ್ಲಿ. ಏಕೆಂದರೆ, ಡಡ್ಲಿ ರೇಶನ್

ಕೊಟ್ಟಿದ್ದನ್ನು ಮಾತ್ರ ತಿನ್ನುತ್ತ ಬಂದಿದ್ದರು. ಡಡ್ಲಿ ಎಂದರೆ ಸಮುದ್ರ ತಿಮಿಂಗಿಲ ಎಂದೇ ಹೆಸರು ಪಡೆದುಕೊಂಡಿದ್ದ ಊರಲ್ಲಿ. ಡಡ್ಲಿ ಹೇಳಿದಂತೆ ತಾವು ಬದುಕುವುದೇ ಸಾಧ್ಯವಿಲ್ಲವೆನ್ನುವ ಅಚಲ ವಿಶ್ವಾಸ ಎಡ್‌ವರ್ಡ್ ಮತ್ತು ಬ್ರೂಕ್ಸ್‌ರಿಗೆ ಇತ್ತು. ರಿಚರ್ಡ್ ಪಾಲಿಗಂತೂ ಡಡ್ಲಿ ಪ್ರತ್ಯಕ್ಷಗೊಂಡ ದೇವರೇ ಆಗಿದ್ದ.

ಎಲ್ಲೆಲ್ಲೂ ನೀರು. ಆದರೆ ಬಾಯೊಳಗೆ ಹಾಕಲು ಒಂದು ಹನಿಯೂ ಇಲ್ಲ! ಉಪವಾಸ ಹದಿನೇಳನೇ ದಿವಸಕ್ಕೆ ಕಾಲಿಟ್ಟಿತು. ಡಡ್ಲಿಯೂ ಧೃತಿಗೆಟ್ಟ. ತನ್ನಲ್ಲಿಯ ಆತ್ಮವಿಶ್ವಾಸ ಕುಸಿಯತೊಡಗಿದೆಯೆನಿಸತೊಡಗಿ ತನಗೆ ತಾನೇ ಗಾಬರಿಗೊಂಡ. ಡಡ್ಲಿಗೆ ಸಮುದ್ರವೆಂದರೆ ತನ್ನ ಪ್ರೇಯಸಿ ಹೆಲೆನ್ ಇದ್ದಂತೆ. ನಾವೆ ಹಾಯಿಸುವುದು, ಬೃಹತ್ ತೆರೆಗಳು ಬಂದರೆ ಚಾಕಚಕ್ಯತೆಯಿಂದ ಪುಚುಗಿ ಕೊಳ್ಳುವುದು, ದೋಣಿ ಮಗುಚಿಕೊಂಡರೆ ತಕ್ಷಣವೇ ಅದನ್ನು ಬೋರಲು ತೇಲುವಂತೆ ಮಾಡಿ ಅದರ ಮೇಲೆ ಕೂತು ದಡ ಸೇರುವುದು ಇವೆಲ್ಲ ಡಡ್ಲಿಗೆ ಕರಗತವಾಗಿದ್ದವು. ಆದರೆ ಹಸಿವು, ನೀರಡಿಕೆಗಳು ಅವನನ್ನು ಕಂಗೆಡಿಸಿಬಿಟ್ಟಿದ್ದವು.

ನಲವತ್ತು ವಯಸ್ಸಿನ ಡಡ್ಲಿಯೇ ಆ ನಾಲ್ವರಲ್ಲಿ ಹಿರಿಯ. ಡಡ್ಲಿಯ ಮುಖದ ಮೇಲೆ ಅವಿಶ್ವಾಸದ ಗೆರೆಗಳು ಮೂಡತೊಡಗಿದ್ದನ್ನು ರಿಚರ್ಡ್ ಸೂಕ್ಷ್ಮವಾಗಿ ಗಮನಿಸಿಕೊಂಡು ದಿಗಿಲುಗೊಂಡ; ಡಡ್ಲಿಗೇ ಆತ್ಮ ವಿಶ್ವಾಸ ಹೊರಟುಹೋದರೆ ಇನ್ನು ತಾವೆಂತು ಉಳಿಯುವುದು ಎಂದುಕೊಂಡ. ಕೊಟ್ಟಿದ್ದನ್ನು ತಿನ್ನದೆ ಯಾರಿಗೂ ಕಾಣದಂತೆ ಸೊಂಟದಪಟ್ಟಿಯಲ್ಲಿ ಸಿಕ್ಕಿಸಿಕೊಂಡಿದ್ದ ಒಣಮೀನನ್ನು ಹೊರತೆಗೆದ ರಿಚರ್ಡ್ ಡಡ್ಲಿಗೆ ಕೊಡಲು ಹೋದ. ಡಡ್ಲಿಯ ಕಣ್ಣುಗಳಲ್ಲಿ ಹಸಿವಿನ ರಾಕ್ಷಸ ಭೂತನರ್ತನ ನಡೆಸಿದ್ದ; ಕಣ್ಣುಗುಡ್ಡೆಗಳೂ ಹಸಿತನ ಕಳೆದುಕೊಂಡು ಒಣಗಿ ಗೋಲಿಗುಂಡಾಗಿದ್ದವು.

"ಅದೆಲ್ಲಿ ನನಗೆ ಹತ್ತಬೇಕು, ನೀನೇ ತಿನ್ನು. ವೆರಿ ಲವ್ಲಿ ಬಾಯ್" ಎಂದು ಬೆನ್ನು ತಟ್ಟಿದ.

ರಿಚರ್ಡ್ ಕೈಯೊಳಗಿನ ಮೀನನ್ನು ಎಡ್‌ವರ್ಡ್ ಕಸಿದುಕೊಂಡು ಚೂರು ಮಾಡಿ ಬ್ರೂಕ್ಸ್‌ಗೆ ಒಂದು ತುಂಡು ರಿಚರ್ಡ್‌ಗೆ ಒಂದು ತುಂಡು ನೀಡಿ ಉಳಿದದ್ದನ್ನು ತಾನು ತಿನ್ನತೊಡಗಿದ. "ಲೋಫರ್ ನನ್‌ಮಗನೆ ಕಳ್ಳತನದಿಂದ ಎಲ್ಲೋ ಬಚ್ಚಿಟ್ಟುಕೊಂಡಿದ್ದಿ?" ಎಂದು ರಿಚರ್ಡ್ ತಲೆಗೆ ಹೊಡೆದ.

ಮೀನಿನ ತುಂಡು ಎಡ್‌ವರ್ಡ್ ಹೊಟ್ಟೆಯೊಳಕ್ಕೆ ಇಳಿದು ಹಸಿವನ್ನು ಇಂಗಿಸಲಿಲ್ಲ. ಕೆರಳಿಸಿ ಕೆಂಡವಾಗಿಸಿತು. ಡಡ್ಲಿಯ ತೊಡೆಗಳನ್ನು ಅಪ್ಪಿಕೊಂಡು

"ನಾನು ಬದುಕಬೇಕು" ಎಂದು ರೋದಿಸತೊಡಗಿದ. ಅವನನ್ನು ನೋಡಿ ಬ್ರೂಕ್ಸ್ ಮತ್ತು ರಿಚರ್ಡ್ ಇಬ್ಬರೂ ಅಳತೊಡಗಿದರು.

"ಬಾಯಿ ಮುಚ್ಕೋ" ಎಂದು ಜೋರಾಗಿ ಚೀರಿದ ಡಡ್ಲಿ. ಪ್ರಾಣಭಯದಿಂದಾಗಿ ಯಾರ ಬಳಿಗೂ ನಿದ್ರೆ ಸುಳಿಯುತ್ತಿರಲಿಲ್ಲ. ನಿದ್ರೆ ಮತ್ತು ಎಚ್ಚರಗಳ ನಡುವಿನ ಸ್ಥಿತಿಯಲ್ಲಿ ಹೊಯ್ದಾಡುತ್ತಿದ್ದರು. ಬೆಳಗಿನ ಜಾವ ಸೂರ್ಯ ಹುಟ್ಟಿದ.

ರಿಚರ್ಡ್ ಅರೆಮಂಪರಿನಲ್ಲಿ ಕನವರಿಸತೊಡಗಿದ್ದ. ತನ್ನ ತಾಯಿಯೊಂದಿಗೆ ಮಾತಾಡತೊಡಗಿದ್ದ. "ಡಡ್ಲಿ ಅಂಕಲ್ ದೇವರಂಗಿದ್ದಾನೆ. ನನ್ನನ್ನು ಕಾಪಾಡ್ತಾನೆ" ಎಂದು ಬಡಬಡಿಸತೊಡಗಿದ ಸದ್ದಿಗೆ ಎಡ್‌ವರ್ಡ್ ಮತ್ತು ಬ್ರೂಕ್ಸ್ "ಏಯ್ ಸುಮ್ನೆ ಯಾಕೊ ಬಡಬಡಸ್ತೀಯಾ? ಬಡಬಡಿಸಿದ್ರೆ ಅದಕ್ಕಷ್ಟು ಎನರ್ಜಿ ವೇಸ್ಟ್ ಆಗುತ್ತೆ; ಬಾಯಾರುತ್ತೆ" ಎಂದು ಗದರಿಸಿದರು.

ಡಡ್ಲಿ ರಾತ್ರಿಯಿಂದ ಬಿಟ್ಟಕಣ್ಣುಗಳನ್ನು ಬಿಟ್ಟಂಗೇ ಕೂತಿದ್ದ. ಬಾಯಿಬಿಡಲಿಲ್ಲ. ಅವನ ದೃಷ್ಟಿ ಮಲಗಿದ್ದ ರಿಚರ್ಡ್ ಮುಖದ ಮೇಲೆ ನೆಟ್ಟಿತ್ತು. ಗದರಿಕೆಯಿಂದಾಗಿ ಬಡಬಡಿಕೆ ನಿಲ್ಲಿಸಿ ಎದ್ದು ಕೂತ ರಿಚರ್ಡ್ ಡಡ್ಲಿಗೆ ಉಳಿದಿಬ್ಬರು ಬಯ್ಯುತ್ತಿರುವ ಬಗ್ಗೆ ದೂರುವ ದೃಷ್ಟಿಯಿಂದ ನೋಡಿದ; ಏಳಲು ನೋಡಿದ ಕೈಕಾಲುಗಳು ಸತ್ತಂತಾಗಿದ್ದವು. ಸಾವರಿಸಿಕೊಂಡು ಡಡ್ಲಿಯ ಕಡೆಗೆ ಅಳುತ್ತ ಹೋದ ರಿಚರ್ಡ್‌ನನ್ನು ಡಡ್ಲಿ ತನ್ನ ತೆಕ್ಕೆಗಳಲ್ಲಿ ಅಪ್ಪಿ ಹಿಡಿದ. ಡಡ್ಲಿಯ ತೆಕ್ಕೆಯಲ್ಲಿ ರಿಚರ್ಡ್ ಕ್ಷೇಮಭಾವವನ್ನು ಅನುಭವಿಸುತ್ತಿರುವಾಗಲೇ ಡಡ್ಲಿ ತನ್ನ ಸೊಂಟದಲ್ಲಿ ನೇತುಬಿದ್ದಿದ್ದ ಸಣ್ಣ ಕತ್ತಿಯನ್ನು ತೆಗೆದುಕೊಂಡು ರಿಚರ್ಡ್‌ನ ಕುತ್ತಿಗೆಗೆ ಹಾಕಿ ಎಳೆದುಬಿಟ್ಟ.... ಕತ್ತಿನಿಂದ ರಕ್ತ ಚಿಲ್ಲೆಂದು ಚಿಮ್ಮಿತು. ರಿಚರ್ಡ್ ಚೀರಲೂ ಆಗದೆ ಸತ್ತು ಬಿದ್ದಿದ್ದ. ತನ್ನಣ್ಣನ ಮಗನ ರಕ್ತ ನೋಡಿದ ಬ್ರೂಕ್ಸ್ ಮೂರ್ಛೆ ತಪ್ಪಿಬಿದ್ದ. ಇದಾವುದರ ಪರಿವೆಯೇ ಇಲ್ಲದಂತೆ ಡಡ್ಲಿ ಚಿಮ್ಮುತ್ತಿದ್ದ ರಕ್ತವನ್ನು ತಟ್ಟೆಯೊಂದರಲ್ಲಿ ಹಿಡಿದು ಕುಡಿಯತೊಡಗಿದ....

ಬ್ರೂಕ್ಸ್‌ಗೆ ಪ್ರಜ್ಞೆ ಬಂದಾಗ ರಿಚರ್ಡ್‌ನ ದೇಹದ ಒಂದು ಕೈಯನ್ನು ತಿನ್ನುತ್ತ ಕೂತಿದ್ದರು ಡಡ್ಲಿ, ಎಡ್‌ವರ್ಡ್‌ಗಳು....!

"ನೀವು ಕೊಲೆಗಡುಕರು, ರಾಕ್ಷಸರು, ನಿಮಗೂ ಮಕ್ಕಳಿವೆ. ಆ ಬಾಲಕನ ಹಸಿಮಾಂಸ ತಿನ್ನುತ್ತಿದ್ದೀರಲ್ಲ...." ಎಂದ ಬ್ರೂಕ್ಸ್.

ಡಡ್ಲಿ ಆ ಮಾತಿಗೇನೂ ಉತ್ತರಿಸದೆ ಮಾಂಸ ಸವಿಯುತ್ತಿದ್ದ. ಆದರೆ ಎಡ್‌ವರ್ಡ್ "ಏಯ್, ಸುಮ್ನೆ ಮಾತಾಡ್ಬೇಡ. ಸಂಜೆ ಹೊತ್ತಿಗೆ ನೀನೇ ಇವನ ಮಾಂಸಕ್ಕೆ ನಾಲಿಗೆ ಚಾಚ್ತೀಯಾ" ಎಂದು ಎಲುಬು ಕಡಿಯತೊಡಗಿದ.

"ನಾನು ಜೀವವನ್ನಾದರೂ ಬಿಡುವೆ ನನ್ನ ಮಗನ ಮಾಂಸವನ್ನು ಮಾತ್ರ ತಿನ್ನೊಲ್ಲ...." ಎನ್ನುತ್ತ ಪುನಃ ಪ್ರಜ್ಞೆ ತಪ್ಪಿಬಿದ್ದ.

ಬ್ರೂಕ್ಸ್ ಕಣ್ಣು ತೆರೆದ. ಬಾಯಿ ಹಸಿಯಾಗಿತ್ತು; ಉಪ್ಪುಪ್ಪು ಏನಿದು? ಎಂದು ಕೈಯೊರೆಸಿಕೊಂಡ ಕೈಯೆಲ್ಲ ಕೆಂಪಾಯಿತು.

"ನನಗೂ ರಕ್ತ ಕುಡಿಸಿಬಿಟ್ಟಿರಾ" ಎಂದು ಅಳತೊಡಗಿದ. ಮೌನವಾಗಿದ್ದ ಡಡ್ಲಿ "ಸತ್ತವನು ವಾಪಸ್ ಬರೊಲ್ಲ. ನೀನು ಬದುಕಬೇಕು ಅಂತಿದ್ರೆ ತಿನ್ನು ಇದನ್ನು ಎಂದು ರಿಚರ್ಡ್ ಮುಂಗೈಯನ್ನು ಕತ್ತರಿಸಿ ಕೊಟ್ಟ....."

ಹಸಿವು ಮರಣವಾಗಿ ಕಣ್ಣುಗಳ ಮುಂದೆ ತೇಲಾಡುತ್ತಿದ್ದ ಬ್ರೂಕ್ಸ್‌ಗೆ ಡಡ್ಲಿಯ ಮಾತುಗಳು ಸತ್ಯ ಎನಿಸಿದವು.

"ನಾನೇನೂ ಕೊಲೆ ಮಾಡಿಲ್ಲವಲ್ಲವೆ! ತಿನ್ನುವುದಕ್ಕೆ ಒಲ್ಲೆನೆಂದರೆ ನಾನೇ ಸಾಯಬೇಕಾಗುತ್ತೆ. ತಿಂದು ಬದುಕಿದರೆ ವಾಪಸು ಊರಿಗೆ ಹೋದ ಮೇಲೆ ಇವರಿಬ್ಬರಿಗೆ ಜೈಲು ಶಿಕ್ಷೆ ಕೊಡಿಸಿ ರಿಚರ್ಡ್ ಆತ್ಮಕ್ಕೆ ಶಾಂತಿ ದೊರೆಯುವಂತೆ ಮಾಡಬಹುದು" ಎಂದುಕೊಂಡು ಅಣ್ಣನ ಮಗನ ಹಸ್ತವನ್ನು ಹಲ್ಲುಗಳಿಂದ ಕಚ್ಚಿ ಮಾಂಸವನ್ನು ಅಗಿಯತೊಡಗಿದ.

"ಛೆ, ಇವರಿಗೆ ಜೈಲು ಶಿಕ್ಷೆ ಕೊಡಿಸಿ ರಿಚರ್ಡ್ ಆತ್ಮಕ್ಕೆ ಶಾಂತಿ ಉಂಟು ಮಾಡುವುದು ಕೇವಲ ನೆಪ ಅಲ್ಲವೆ. ಈಗ ನನಗೆ ಬೇಕಿರುವುದು ನನ್ನ ಜೀವ ಉಳಿಯುವುದು ಮಾತ್ರ ಅಲ್ಲವೆ!" ಎನಿಸುವಾಗ ದವಡೆಗಳಲ್ಲಿ ಆಗಿದ ಮಾಂಸ ಹೊಟ್ಟೆ ಸೇರಿತ್ತು.

ಕ್ಲಾಸ್ ರೂಮ್ ಪಿನ್ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದವಾಗಿತ್ತು. ಪ್ರೊ. ಎಂ.ಆರ್. ಜನಾರ್ದನ್ ಅವರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ನನ್ನ ಕಣ್ಣುಗಳೂ ಒದ್ದೆಯಾಗಿದ್ದವು. ಬಹಳಷ್ಟು ವಿದ್ಯಾರ್ಥಿಗಳು ಸನ್ನಿವೇಶವನ್ನು ನಿಭಾಯಿಸುವುದು ಹೇಗೆಂದು ತಿಳಿಯದೆ ತಲೆಬಾಗಿಸಿಕೊಂಡಿದ್ದರು.

ಜನಾರ್ದನ್ ಅವರು ಮತ್ತೆ ಹೇಳಿದರು: ನೋಡಿ ಅದೇ ದಿನವೇ ಹಡಗೊಂದು ಆ ನಾವೆಯನ್ನು ರಕ್ಷಿಸುತ್ತದೆ. ಕೊಲೆಯಾದ ಹುಡುಗನ ಚಿಕ್ಕಪ್ಪ ಬ್ರೂಕ್ಸ್ ಪೊಲೀಸರಿಗೆ ದೂರು ಕೊಡುತ್ತಾನೆ. ನಾವೆ ಕೇಪ್ ಆಫ್ ಗುಡ್‌ಹೋಪ್‌ದಿಂದ ಸಾವಿರದ ಆರುನೂರು ಮೈಲು ದೂರ ಕೊಚ್ಚಿಕೊಂಡು ಹೋಗಿರುವುದು ಗೊತ್ತಾಗುತ್ತದೆ.

ಯಾವುದೇ ದೇಶಕ್ಕೊಳಪಡದ ಪ್ರದೇಶದಲ್ಲಿ ಅಪರಾಧ ಜರುಗಿದರೆ ಯಾವ

ದೇಶದ ಕಾನೂನಿನ ಪ್ರಕಾರ ಶಿಕ್ಷೆ ನೀಡಬೇಕಾಗುತ್ತದೆ? ಅಪರಾಧಿಗಳು ಮೊದಲು ಬಂದು ಯಾವ ದೇಶದ ಪ್ರದೇಶವನ್ನು ಪ್ರವೇಶಿಸುವರೋ ಆ ದೇಶದ ಕಾನೂನಿನ ಪ್ರಕಾರ ಶಿಕ್ಷೆ ವಿಧಿಸಲ್ಪಡುತ್ತದೆ. ಇದು ಅಂತಾರಾಷ್ಟ್ರೀಯ ಕಾನೂನು.

ಕಾರಣ ಯಾವುದೇ ಇರಲಿ ಮನುಷ್ಯ ಮನುಷ್ಯನನ್ನು ಕೊಲ್ಲುವುದು ಎಂದರೇನು! ರಕ್ಕಸತನದ ಪರಾಕಾಷ್ಠೆಯಿದು. ಪ್ರೊ. ಜನಾರ್ದನ್ ಅವರು ಕೊಡುವ ಉಪನ್ಯಾಸಗಳು ಹೇಗೆ ಭಾವಪೂರ್ಣವಾಗಿರುತ್ತಿದ್ದವು ಎನ್ನುವುದಕ್ಕೆ ಇದು ಒಂದು ಉದಾಹರಣೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ರೈತ ಕುಟುಂಬವೊಂದರಲ್ಲಿ ಹುಟ್ಟಿದ ಜನಾರ್ದನ್ ಎಂ.ಎಲ್. ಪದವೀಧರರು.

ರೇಣುಕಾಚಾರ್ಯ ಕಾಲೇಜ್‌ನಲ್ಲಿ ಉಪನ್ಯಾಸಕರಾಗಿದ್ದರು. ನಂತರ ವಿವೇಕಾನಂದ ಲಾ ಕಾಲೇಜ್‌ಗೆ ಪ್ರಿನ್ಸಿಪಾಲ್ ಆದರು. ಆಗ ನಾನು ಎಲ್.ಎಲ್.ಬಿ. ಮುಗಿಸಿ ವೃತ್ತಿಗೆ ತೊಡಗಿದ್ದೆ. ನಾನೂ ಎರಡು ವರ್ಷಗಳವರೆಗೆ ಅಲ್ಲಿ ಲೆಕ್ಚರರ್ ಆಗಿದ್ದೆ.

ನನ್ನ ಮೇಲೆ ಗಾಢ ಪ್ರಭಾವ ಬೀರಿದ್ದ ಜನಾರ್ದನ್‌ರನ್ನು ನಾನು ನಮ್ಮ ಮನೆಯಲ್ಲಿ ಜರುಗುವ ಅನೇಕ ಕಾರ್ಯಕ್ರಮ, ಹಬ್ಬಗಳಿಗೆ ಆಹ್ವಾನಿಸತೊಡಗಿದೆ.

ಜನಾರ್ದನ್‌ರಷ್ಟು ಕಾನೂನು ವಿಷಯದ ಮೇಲೆ ವಿಶೇಷ ಉಪನ್ಯಾಸಗಳನ್ನು ಕೊಟ್ಟ ಮತ್ತೊಬ್ಬ ಲಾ ಪ್ರೊಫೆಸರ್ ಕರ್ನಾಟಕದಲ್ಲಿ ನನ್ನ ಗಮನಕ್ಕೆ ಬಂದಿಲ್ಲ. ಅಮೆರಿಕಾ ಯೂನಿವರ್ಸಿಟಿಗಳಲ್ಲೂ ಉಪನ್ಯಾಸ ಕೊಟ್ಟುಬಂದ ಜನಾರ್ದನ್‌ರ ಬಗ್ಗೆ ಸಾಮಾನ್ಯ ಜನ ತಿಳಿದುಕೊಂಡಿಲ್ಲದಿರುವುದು ನನಗೆ ವ್ಯಥೆ ತರಿಸುತ್ತದೆ.

ಜನಾರ್ದನ್ ಅವರ ಪತ್ನಿ ಶ್ರೀಮತಿ ಲಲಿತಾ ಅವರು ಕ್ರಿಶ್ಚಿಯನ್. ಜನಾರ್ದನ್ ಅವರು ತಮ್ಮ ಪತ್ನಿಯನ್ನು ಹಿಂದೂ ಆಗಿ ಪರಿವರ್ತಿಸಲಿಲ್ಲ; ತಾವು ಕ್ರಿಶ್ಚಿಯನ್ ಆಗಿ ಪರಿವರ್ತನೆಗೊಳ್ಳಲಿಲ್ಲ. ಭಾನುವಾರ ಬಂದರೆ ತಮ್ಮ ಪತ್ನಿಯನ್ನು ಚರ್ಚ್‌ಗೆ ಕಾರಲ್ಲಿ ಕರೆದೊಯ್ದು ಪ್ರಾರ್ಥನೆ ಮುಗಿಸಿ ಬರುವವರೆಗೆ ಅವರು ಕಾಯುವುದು ಸಾಮಾನ್ಯ ವಿದ್ಯಮಾನವಾಗಿತ್ತು.

34

ಹೆಂಡತಿಯನ್ನೇ ಕೊಂದು ಪ್ರಿಯತಮೆಗೆ ಹೆದರಿದ ವಕೀಲ

ಹಾಸ್ಟೆಲ್ ರೂಮಲ್ಲಿ ಮಲಗುವ ಸಿದ್ಧತೆಯಲ್ಲಿದ್ದೆ. ಬಾಗಿಲು ತಟ್ಟಿದ ಸದ್ದು ಕೇಳಿಸಿತು. ನನ್ನ ಸೋದರಮಾವ ಸಿದ್ಧನಂಜೇಗೌಡರು ಬಂದು ನಿಂತುಕೊಂಡಿದ್ದರು. ರಾತ್ರಿ ವೇಳೆ ಅವರು ನನ್ನ ರೂಮಿಗೆ ಬಂದಿರಲೇ ಇಲ್ಲ. ಪ್ರಶ್ನಾರ್ಥವಾಗಿ ನೋಡುತ್ತಲೇ ಒಳಗೆ ಕರೆದೆ. ಮಲಗಲು ಹಾಸಿಗೆ ಸಿದ್ಧಪಡಿಸಿದ್ದ ಮಂಚದ ಮೇಲೆ ಕೂರಿಸಿದೆ. ಊಟದ ಬಗ್ಗೆ ವಿಚಾರಿಸಿದೆ. 'ಅದೆಲ್ಲ ಆಯಿತು' ಎಂದರು ಭಾರದ ಧ್ವನಿಯಲ್ಲಿ. ಹೆಚ್ಚಿಗೆ ಮಾತಾಡಿಸುವುದು ಬೇಡವೆಂದು, 'ನೀವು ದಣಿದುಕೊಂಡ ಹಾಗಿದೆ, ಮಲಗಿಕೊಳ್ಳಿ' ಎಂದೆ. ನಾನು ಚಾಪೆಯ ಸುರುಳಿಯನ್ನು ನೆಲದ ಮೇಲೆ ಬಿಡಿಸಿಕೊಂಡು ತಲೆಗೆ ದಪ್ಪನೆಯ ಲಾ ಬುಕ್ ಒಂದನ್ನು ಇಟ್ಟುಕೊಂಡು ಅದರ ಮೇಲೆ ಟವಲ್ ಅನ್ನು ಮಡಿಸಿ ಹಾಕಿ ಮೆತ್ತಗೆ ಮಾಡಿಕೊಂಡೆ. ಮಂಚದ ಮೇಲೆ ವಿರಮಿಸಿಕೊಳ್ಳುತ್ತ, 'ಆ ಹನುಮೇಗೌಡನ ಮಗ ಶಂಕರ್ ಇಂಜಿನಿಯರಿಂಗ್

ಓದ್ತಿದಾನಲ್ಲ ಅವನ ರೂಮಿಗೆ ಹೋಗಿದ್ದೆ. ಹನುಮೇಗೌಡ ನಾಲ್ಕು ದಿವಸಗಳಿಂದ ಬೆಂಗಳೂರಲ್ಲಿ ತನ್ನ ಮಗನ ರೂಮಲ್ಲೇ ಇದ್ದಾನೆ. ಅದೇನೋ ಕೆಲಸಕ್ಕೆ ದುಡ್ಡು ಕಡಿಮೆಬಿದ್ದಿತಂತೆ ಹನುಮೇಗೌಡನಿಗೆ. ಹಳ್ಳಿಗೆ ಬರೋವ್ರ ಜೊತೆ ನನಗೆ ದುಡ್ಡು ತರಲು ಹೇಳಿಕಳಿಸಿದ್ದ. ಬಾಳ ಸಂಭಾವಿತ ಪ್ರಾಣಿ. ರಾತ್ರಿ ಬಿಡುವು ಸಿಕ್ಕಮೇಲೆ ಹನುಮೇಗೌಡನ ಮಗನ ರೂಮಿಗೆ ದುಡ್ಡು ಕೊಡೋಕೆ ಅಂತ ಹೋದೆ. ಅಲ್ಲಿಯ ದೃಶ್ಯ ನನ್ನ ತಲೇನೇ ತಿರುಗಿಸಿತು.

ಶಂಕರ್ ಭಾರಿ ಜಾಣ ಎಂದು ನಮ್ಮೂರಲ್ಲೆಲ್ಲ ಮಾತಾಡಿಕೊಳ್ತಾರೆ. ಜಾಣನ ಸಂಸ್ಕಾರ, ಸಂಸ್ಕೃತಿಗಳನ್ನು ಇವತ್ತು ಕಣ್ಣಾರೆ ಕಂಡೆ. ಅವರ ತಂದೇನ ಕೆಳಗೆ ಚಾಪೆ ಮೇಲೆ ಮಲಗಿಸಿ ತಾನು ಮಂಚದ ಮೇಲೆ ಮಲಗಿದ್ದ. ರೂಮಿನ ಬಾಗಿಲು ತೆರೆದ ಹನುಮೇಗೌಡ ಕೂಡೆಂದ. ನಿನ್ನ ಕರ್ಮ, ನೀನೇ ಕೂತ್ಕೊ. ತಗೋ ಈ ದುಡ್ನ ಅಂತ ವಾಪಸ್ ಬಂದೆ. ಅಷ್ಟೆಲ್ಲ ನಾವು ಮಾತಾಡುವ ಸದ್ದಾಗುತ್ತಿದ್ದರೂ ಮಲಗಿದ್ದ ಶಂಕರ ಏಳಲಿಲ್ಲ. ಶುದ್ಧ ನಟನೆ. ತಂದೆ ಕಳಿಸೊ ಹಣದಲ್ಲಿ ಓದ್ತಿರೋವಾಗ್ಲೆ ಹೀಗೆ. ಇನ್ನು ಸ್ವಂತ ಸಂಪಾದನೆಗೆ ನಿಂತರೆ ತಂದೆಯನ್ನ ಮನೆ ಕಸಗುಡಿಸಲಿಕ್ಕೆ ಇಟ್ಕೋತಾನೆ ಆ ಮುಠ್ಠಾಳ. ಬೆಂಗಳೂರು ನಮ್ಮ ಹಳ್ಳಿ ಹುಡುಗ್ರ ಕೈಲಿ ಇನ್ನೂ ಏನೇನು ಮಾಡಿಸುತ್ತೋ..." ಎನ್ನುತ್ತ ನಿದ್ದೆ ಹೋದರು.

ಬೆಳಗ್ಗೆ ತಿಂಡಿ ತಿನ್ನಲು ಗಾಂಧಿನಗರದ ಸುಜಾತ ಹೋಟೆಲ್‌ಗೆ ಹೋದೆವು. ಅಲ್ಲೇ ಪಕ್ಕದಲ್ಲಿ ನಾಯ್ಡು ಬಿಲ್ಡಿಂಗ್‌ನಲ್ಲಿ ಖ್ಯಾತ ಕ್ರಿಮಿನಲ್ ಲಾಯರ್ ಪಿ.ಎಸ್. ದೇವದಾಸ್ ಅವರ ಆಫೀಸ್ ಇತ್ತು. ನಮ್ಮ ಮಾವ ದೇವದಾಸರಿಗೆ ಹಳೆಯ ಕಕ್ಷಿದಾರರಾಗಿದ್ದರೂ ನಮ್ಮ ಹಳ್ಳಿಯ ಕಡೆಯ ಕೇಸ್‌ಗಳನ್ನು ಕೊಡಲು ಅವರಲ್ಲಿಗೆ ಬರುತ್ತಿದ್ದರು. ಮಾವನವರೊಂದಿಗೆ ದೇವದಾಸ್ ಅವರ ಆಫೀಸ್‌ಗೆ ಹೋಗುವ ಅವಕಾಶವನ್ನು ನಾನು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಆಫೀಸ್‌ನಲ್ಲಿ ಜ್ಯೂನಿಯರ್‌ಗಳು ಮತ್ತು ಕಕ್ಷಿದಾರರು ಆಗಲೇ ಬಂದು ಸೀನಿಯರ್‌ಗಾಗಿ ಕಾಯುತ್ತಿದ್ದರು. ನಾವು ಒಳಹೋಗಿದ್ದೆವು, ಅಷ್ಟರಲ್ಲಿ ಆಜಾನುಬಾಹು ಹೆಣ್ಣುಮಗಳೊಬ್ಬಳು ಬಂದು ಬಾಗಿಲಲ್ಲಿ ನಿಂತುಕೊಂಡರು, ಸಿಟ್ಟಿನಲ್ಲಿದ್ದರು.

ಒಳಗಿದ್ದವರನ್ನೆಲ್ಲ ಉದ್ದೇಶಿಸಿ, "ಎಲ್ಲಿ? ಅವನಿನ್ನೂ ಬಂದಿಲ್ವೊ? ಅವನೆಲ್ಲಿ ಒಳ್ಳೇ ಮಾತ್ನಲ್ಲಿ ಬರ್ತಾನೆ" ಎನ್ನುತ್ತ ತಮ್ಮೊಂದಿಗೆ ಕರೆತಂದಿದ್ದ ಇಬ್ಬರು ಯುವಕರಿಗೆ "ಈ ಟೈಪ್‌ರೈಟರ್‌ಗಳನ್ನ ಎತ್ತಿಕೊಳ್ರೋ" ಎಂದು ಆಜ್ಞೆ ಮಾಡಿದರು. ದೇವದಾಸ್ ಅವರ ಜ್ಯೂನಿಯರ್‌ಗಳ ಮುಂದಿದ್ದ ಒಂದೆರಡು ಫೈಲ್‌ಗಳನ್ನು ತಮ್ಮ ಕೈಗೆತ್ತಿಕೊಂಡು ನಮ್ಮ ಸೋದರ ಮಾವನವರತ್ತ ತಿರುಗಿ, "ರೀ ಗೌಡ್ರೇ, ಅವ್ನು ಇಲ್ಲಿಗ್ ಬಂದ

ಅಲ್ಲಿಂದ ಹೊರಬಂದಾಗ ಮಾವ, "ಆ ಹೆಂಗಸು ಮಾಡಿದ ರೀತಿ ನೋಡಿ ನಿಂಗೆ ಆಶ್ಚರ್ಯ ಆಗಿರಬಹುದು ಅಲ್ವೆ! ಅವ್ರು ಯಾರು ಅಂತ, ಕಥೆ ಏನು ಅಂತ ಹೇಳ್ತೀನಿ" ಎಂದರು.

ನಾನು ಪ್ರಶ್ನಿಸದೆಯೇ ನನ್ನ ಕುತೂಹಲ ತಣಿಸುವ ಮಾತಾಡಿದ ಮಾವನವರತ್ತ ನೋಡಿದೆ.

ಡಾ. ಸುಬ್ಬರಾವ್ 1939 ರಿಂದ 1941 ರವರೆಗೆ ಮೆಡಿಕಲ್ ಫ್ಯಾಕಲ್ಟಿ ಡೀನ್ ಆಗಿದ್ದರು. ನೀನು ಯಾವಾಗಲಾದರೂ ಮಿಂಟೋ ಆಸ್ಪತ್ರೆ ಕಡೆ ಹೋದರೆ ಅದರ ಪ್ರವೇಶಿಕೆಯಲ್ಲಿ ಸುಬ್ಬರಾವ್ ಅವರ ದೊಡ್ಡ ಫೋಟೋವನ್ನು ಹಾಕಲಾಗಿದೆ. ಅವರು ಮಹಾರಾಜರಿಗೆ ಅತ್ಯಂತ ಬೇಕಾದ ವೈದ್ಯರು. ಬೆಂಗಳೂರಿನಿಂದ ಮಾಗಡಿಗೆ ಹೋಗುವ ರಸ್ತೆಯಲ್ಲಿ ತಾವರೆಕೆರೆ ಗ್ರಾಮ ಬರುತ್ತಲ್ಲ, ಅದರ ಬಳಿ ಸಾವಿರದ ಇನ್ನೂರು ಎಕರೆಗಳ ಎಸ್ಟೇಟ್ ಮತ್ತು ಅದರೊಳಗೆ ಬ್ರಿಟಿಷರು ಕಟ್ಟಿಸಿದ ಬಂಗಲೆಯನ್ನು ಸುಬ್ಬರಾವ್ ಅವರಿಗೆ ಬಿಟ್ಟುಕೊಟ್ಟರು. ಅದಕ್ಕೆ ಅರ್ಕಾವತಿ ಎಸ್ಟೇಟ್ ಎಂದು ಹೆಸರು.

ಸುಬ್ಬರಾವ್ ಅವರಿಗೆ ಒಬ್ಬನೇ ಒಬ್ಬ ಮಗ. ಅವರೇ ಈ ದೇವದಾಸ್. ಹುಟ್ಟಿದೊಡನೆ ಬಂಗಾರದ ಚಮಚ ಬಾಯಿಗಿಟ್ಟುಕೊಂಡ ಈ ದೇವದಾಸ್ ಹಣಗಳಿಕೆಗಾಗಿ ಲಾಯರ್ ವೃತ್ತಿಗೆ ಬರಲಿಲ್ಲ; ಗೀಳಿನಿಂದ ಬಂದರು.

ಇವರ ಹೆಂಡತಿ ತುಂಬಾ ದೈವಭಕ್ತೆ, ವಿದ್ಯಾವಂತೆ, ರೂಪವಂತೆ, ವೀಣಾವಾದಕಿಯೂ ಆಗಿದ್ದರು. ಆದರೂ ಗಂಡ ಹೆಂಡಿರ ಮಧ್ಯೆ ಜಗಳ ಸಾಮಾನ್ಯವಾಗಿತ್ತು. ಕಚ್ಚಾಡುತ್ತಲೇ ಒಂಬತ್ತು ಮಕ್ಕಳನ್ನೂ ಹೆತ್ತರು. ಐದು ಗಂಡು ನಾಲ್ಕು ಹೆಣ್ಣು! ಮಕ್ಕಳಿಗೆ ತಂದೆ ತಾಯಿಗಳು ಜಗಳವಾಡದ ದಿನ ವಿಶೇಷವಾಗಿರುತ್ತಿತ್ತು.

ಸಾದಿಕಾ ಎನ್ನುವ ಯುವತಿ ತನ್ನ ವಿಚ್ಛೇದನದ ಕೇಸನ್ನು ದೇವದಾಸ್‌ಗೆ ಕೊಟ್ಟಳು. ಆಕೆಯ ಗಂಡ ಅರಬ್ ದೇಶಕ್ಕೆ ಹೋಗಿದ್ದ. ಈಕೆಯನ್ನು ಅಲ್ಲಿಗೆ ಬರುವಂತೆ ಒತ್ತಾಯಿಸಿದ. ಈಕೆ ಒಲ್ಲೆ ಎಂದಾಗ ಡೈವೋರ್ಸ್ ಕೇಸ್ ಹಾಕಿದ. ಆ ಕೇಸ್ ಮುಗಿಯುವಷ್ಟರಲ್ಲಿ ದೇವದಾಸ್ ಮತ್ತು ಸಾದಿಕಾರ ರೋಮಾನ್ಸ್ ಸ್ಟಾರ್ಟ್ ಆಗಿಬಿಟ್ಟಿತ್ತು!

ಒಂದು ರಾತ್ರಿ ದೇವದಾಸ್ ಬೆಡ್‌ರೂಮಲ್ಲಿ ರೀಡಿಂಗ್ ಟೇಬಲ್ ಮೇಲೆ ಫೈಲ್ ಹರವಿಕೊಂಡು ಅದೇನೋ ಓದುತ್ತ ಕೂತಿದ್ದರು. ಎದುರಿಗೆ ವ್ಹಿಸ್ಕಿ ಗ್ಲಾಸನ್ನು ಇರಿಸಿಕೊಂಡಿದ್ದರು. ವೀಣೆ ನುಡಿಸುತ್ತಿದ್ದ ಪತ್ನಿಗೆ "ಅದೇನು ನಿಂದು

ಕರ್ಕಶ, ನಿಲ್ಸು ಅದನ್ನ, ನಂಗೆ ಬರೆಯೋದಿದೆ" ಎಂದರು. ಸಿಟ್ಟಿನಿಂದ ಎದ್ದು ಬಂದ ಪತ್ನಿ, "ನೀವು ಏನು ಬರೀತೀರಿ ನಂಗೊತ್ತಿಲ್ವೆ. ನೋಡಿ ಇದೇ ಅಲ್ವೆ?" ಎನ್ನುತ್ತ ದೇವದಾಸ್ ಮುಂದೆ ಪತ್ರವೊಂದನ್ನು ಬೀಸಿ ಒಗೆದರು. ದೇವದಾಸ್ ತಮ್ಮ ಪತ್ನಿಯ ಸಪ್ಪೆತನವನ್ನು ಹೇಳುತ್ತ ಸಾದಿಕಾಳನ್ನು ವರ್ಣಿಸಿ ಬರೆದ ಪತ್ರವಾಗಿತ್ತು ಅದು.

"ನನ್ನ ಕೋಟಿಗೆ ಏಕೆ ಕೈ ಹಾಕ್ದೆ ನೀನು? ಹೂಂ, ಏನೀಗ? ನಿನಗೆ ಗೊತ್ತಾಗ್ದ ಹಾಗೆ ಮಾಡುತ್ತಿದ್ದೆ. ಈಗ ಬಯಲಾದ ಮೇಲೆ ರಾಜಾರೋಷವಾಗಿ ಮಾಡ್ತೇನೆ. ಏನು ಮಾಡ್ತೀಯ? ನಂಗೂ ಅವಳ್ಗೂ ಲವ್ ಇದೆ. ಸುಮ್ನೆ ಬಾಯಿಮುಚ್ಕೊಂಡು ಹೋಗಾಚೆ...." ಎಂದರು ಏರುಧ್ವನಿಯಲ್ಲಿ.

"ಒಂಬತ್ತು ಮಕ್ಕಳಿವೆ. ಇಂಥದ್ದು ಮಾಡೋಕೆ ನಾಚಿಕೆ ಆಗೊಲ್ವೆ? ಬೆಳೆದ ಮಕ್ಕಳೂ ನಿಮ್ಮನ್ನು ನೋಡಿ ಕಲೀಬೇಕಾ ಇಂಥದ್ದನ್ನು? ಅವುಳ್ಗೆ ಲವ್ ಮಾಡಬೇಕಾದ್ರೆ ನನ್ನನ್ನ ಯಾಕೆ ತೆಗಳಿ ಅವಳ್ಗೆ ಪತ್ರ ಬರೀಬೇಕು? ನನ್ನ ಸರ್ವಸ್ವನೇ ಅರ್ಪಿಸ್ತೀನಿ ಅಂತ ಬರ್ದಿದ್ದೀರಲ್ಲ! ನಾಚಿಕೆ ಆಗೊಲ್ವಾ?" ಎಂದಳು.

"ನನಗೆ ಪಾಠ ಹೇಳಿಕೊಡ್ತೀಯೇನೆ ನೀನು? ನಾಚಿಕೆಗೀಚಿಕೆ ಅಂತ ನನ್ನೆದುರೇ ವಾದಿಸ್ತೀಯಾ?" ಎಂದು ಲೋಹದ ಹೂದಾನಿಯನ್ನೆತ್ತಿಕೊಂಡು ಪತ್ನಿಯ ತಲೆಯತ್ತ ಬೀಸಿದರು. ಚೀರಲು ಬಾಯಿತೆರೆದ ಪತ್ನಿ ಹಾಗೇ ಕುಸಿದಳು. ರಕ್ತ ಸುರಿಯತೊಡಗಿತು. ದೊಡ್ಡ ಬಂಗಲೆ. ಮಕ್ಕಳಿಗೆಲ್ಲ ಪ್ರತ್ಯೇಕ ರೂಮುಗಳು. ಅಷ್ಟಕ್ಕೂ ಇಂಥ ಜಟಾಪಟಿಗಳು ಅಪ್ಪ ಅಮ್ಮರ ಮಧ್ಯೆ ಸದಾ ಇದ್ದದ್ದೇ ಎನ್ನುವ ತಾತ್ಸಾರ.

ಜೋರಾಗಿ ಚೀರಿಕೊಳ್ಳಲೂ ಆಗದೆ ಕುಸಿದ ಪತ್ನಿಯನ್ನು ದೇವದಾಸ್ ಎತ್ತಿಕೊಂಡರು. ಉಸಿರು ನಿಂತುಹೋಗಿ ಮೈ ತಣ್ಣಗಾಗಿದ್ದು ನೋಡಿ ವ್ಹಿಸ್ಕಿಯ ನಶೆಯೆಲ್ಲ ಇಳಿದು ಬೆವರತೊಡಗಿದರು; ಎದೆ ಧಸಕ್ಕೆಂದಿತು.

ಬೆಡ್‌ರೂಮಿನ ಬೋಲ್ಟ್ ಅನ್ನು ಭದ್ರಪಡಿಸಿ ಶತಪಥ ಹಾಕತೊಡಗಿದರು. ಮಕ್ಕಳನ್ನು ಎಬ್ಬಿಸುವುದೇ ಬೇಡ ಎನ್ನುವ ತೀರ್ಮಾನಕ್ಕೆ ಬಂದರು. ಎಲ್ಲರೂ ನಿದ್ರೆ ಹೋಗಲಿ ಎಂದು ಮತ್ತೊಂದು ಗಂಟೆ ಹಾಗೇ ಕಾದರು. ವ್ಹಿಸ್ಕಿಯ ಬಾಟಲ್ ಖಾಲಿಯಾಯಿತು, ಸಿಗರೇಟ್ ಕೊನೆಗಳು ರಾಶಿಯಾದವು. ರಾತ್ರಿ ಹನ್ನೆರಡು ಗಂಟೆ, ತಮ್ಮ ಪತ್ನಿಯ ಶವವನ್ನು ಒಂದು ಬೆಡ್‌ಷೀಟ್‌ನಲ್ಲಿ ಸುತ್ತಿದರು. ವಿಕ್ರಮಾದಿತ್ಯನಂತೆ ಹೆಗಲ ಮೇಲೆ ಹೊತ್ತು ಸಾವಕಾಶವಾಗಿ ಹೆಜ್ಜೆ ಹಾಕುತ್ತ ನಡೆದರು. ಕಾರ್ ಹಿಂದಿನ ಸೀಟ್‌ನಲ್ಲಿ ಶವವನ್ನು ಹಾಕಿದರು. ಕಾರ್ ಅನ್ನು ಕಷ್ಟಪಟ್ಟು ಸ್ವಲ್ಪ ದೂರ ತಳ್ಳಿಕೊಂಡೇ ಹೋದರು; ಮನೆಮುಂದೆಯೇ ಸ್ಟಾರ್ಟ್ ಮಾಡಿದರೆ ಮಕ್ಕಳಿಗೆ ಎಚ್ಚರಾಗಬಹುದು ಎಂದು!

ಕೂಡ್ಲೇ ಹೋಗೋದು ಕೋರ್ಟಿಗಲ್ಲ ನನ್ನ ಮನೇಗೆ ಅಂತ ಹೇಳ್ರೀ" ಎಂದು ಗಡಸುಧ್ವನಿಯಲ್ಲಿ ಹೇಳಿ ಬಿರಬಿರನೆ ಹೋಗಿ ಕಾರಲ್ಲಿ ಕೂತು ಬುರ್ರೆಂದು ಹೊರಟುಹೋಗಿಬಿಟ್ಟರು.

ಜ್ಯೂನಿಯರ್‌ಗಳೆಲ್ಲ ತಲೆಮೇಲೆ ಕೈಹೊತ್ತು ಕೂತರೆ, ಕಕ್ಷಿದಾರರು ಗಾಬರಿಯಿಂದ ಏನಿದು ಸ್ತ್ರೀ ಗೂಂಡಾಗಿರಿ ಎನ್ನುವಂತೆ ಬಾಯಿತೆರೆದುಕೊಂಡು ಕೂತುಬಿಟ್ಟರು. ಆದರೆ ನಮ್ಮ ಮಾವನವರು ಇದೆಲ್ಲ ಮಾಮೂಲು ಎನ್ನುವಂತೆ ಸಹಜ ಮುಗುಳ್ನಗೆಯಲ್ಲಿದ್ದರು. ಅಷ್ಟರಲ್ಲಿಯೇ ದೇವದಾಸ್ ಬಂದರು. ಆಫೀಸ್‌ನಲ್ಲಿ ವಿಲಕ್ಷಣ ಮೌನ ಆವರಿಸಿದ್ದನ್ನು ಗಮನಿಸಿದರು. ತಮ್ಮ ಜ್ಯೂನಿಯರ್‌ಗಳ ಮುಖಗಳು ಕುಂದಿರುವುದನ್ನು ನೋಡಿ ನಮ್ಮ ಮಾವನವರತ್ತ ಹೊರಳಿ "ಏನು ಗೌಡ್ರೆ? ಬೆಳಗ್ಗೆ ಬಂದಿರಾ?" ಎಂದು ಔಪಚಾರಿಕವಾಗಿ ಕೇಳಿ ತಮ್ಮ ಕುರ್ಚಿಯ ಮೇಲೆ ಕೂತರು.

ದೇವದಾಸ್ ಅವರ ಮುಖ ಮೇಲಿನ ಸಮಸ್ಯೆಯ ಗೆರೆಗಳನ್ನು ನೋಡಿದ ಮಾವ, "ಅಮ್ಮಾ ಅವ್ರು ಬಂದು ಗಲಾಟೆ ಮಾಡಿ ಟೈಪ್‌ರೈಟರ್‌ಗಳನ್ನು ಎತ್ತುಕೊಂಡು ಹೋದ್ರು...." ಎಂದು ಇನ್ನೂ ಮಾತು ಮುಗಿಸಿರಲಿಲ್ಲ, "ಓ, ಹುಚ್ಚುಮುಂಡೇದು ಅದ್ಯಾಕೆ ಇಲ್ಲಿಗೆ ಬಂದಿತ್ತೋ ಇರ್ಲಿ, ಅದನ್ನೆಲ್ಲ ಆಮೇಕೆ ಸರಿಮಾಡೋಣ. ಏನ್ ಸೆಕೇನೋ, ಹಾಗೇ ಕೂತಿದೀರಿ, ಫ್ಯಾನ್ ಹಾಕ್ರೋ" ಎಂದರು.

ಫ್ಯಾನ್ ಹಾಕಿದ ಜ್ಯೂನಿಯರ್, "ಇವತ್ತು ಆರ್ಗ್ಯುಮೆಂಟ್‌ಗೆ ಇದ್ದ ಫೈಲ್ ಅನ್ನೂ ಎತ್ತಿಕೊಂಡು ಹೋಗಿಬಿಟ್ರು ಸಾರ್....." ಎಂದ.

"ಥೂ ನಾಚ್ಕೆ ಆಗೋಲ್ಲೇನ್ರೋ. ಫೈಲ್ ಕಸಿದು ಇಟ್ಕೋಳೋಕೆ ಆಗ್ಲಿಲ್ವಾ? ಈಗ ನೋಡು ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ಮಾಡೋದು ಬಿಟ್ಟುಕೊಟ್ಟು ಅವಳ್ನ ರಮಿಸೋಕೆ ಹೋಗ್‌ಬೇಕು. ಎಲ್ಲ ತಲೆಹರಟೆಗಳು....." ಎಂದರು.

ವಾತಾವರಣವನ್ನು ಕೃತಕವಾಗಿ ತಿಳಿಗೊಳಿಸಲು ನಮ್ಮ ಮಾವನವರ ಕಡೆ ನೋಡುತ್ತಾ, "ಓ ನಿಮ್ಮ ಅಳಿಯನನ್ನೂ ಕರೆ ತಂದಿದೀರಿ. ಏನಪ್ಪಾ ಮುಗೀತಾ ನಿನ್ನ ಲಾ ಕೋರ್ಸು?" ಎಂದರು.

"ಇದು ಕೊನೇ ವರ್ಷ. ಇನ್ನೇನು ನಿಮ್ಮ ಆಫೀಸ್‌ಗೆ ಬಂದುಬಿಡ್ತಾನೆ" ಎಂದರು ಮಾವ.

ನಾನು ವಿನಯಕ್ಕಾಗಿ ಎದ್ದು ನಿಂತೆ. ಕೂರುವಂತೆ ಸನ್ನೆ ಮಾಡಿದರು ದೇವದಾಸ್.

ಮೈಸೂರು ತಲುಪಿದಾಗ ರಾತ್ರಿ ಮೂರು ಗಂಟೆ. ತಮಗೆ ತೀರಾ ಬೇಕಾಗಿದ್ದ ಸಂಬಂಧಿಕರೊಬ್ಬರನ್ನು ಎಬ್ಬಿಸಿ ಅಂತ್ಯಕ್ರಿಯೆಯ ಏರ್ಪಾಟು ಮಾಡಲು ತಿಳಿಸಿದರು. ಹೆಪ್ಪುಗಟ್ಟಿದ್ದ ರಕ್ತವನ್ನು ಒದ್ದೆಬಟ್ಟೆಯಿಂದ ನೀಟಾಗಿ ಒರೆಸಿ ಬಿಳಿಬಟ್ಟೆಯಲ್ಲಿ ಶವವನ್ನು ಸುತ್ತಿದ್ದರು. ಬೆಳಗಿನ ಆರುಗಂಟೆಗೆ ಶವ ಚಿತೆಯ ಮೇಲೆ ಧಗಧಗಿಸುತ್ತಿತ್ತು. ದೇವದಾಸ್ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಇಳಿಯುತ್ತಿತ್ತು. ತಮ್ಮೆರಡೂ ಹಸ್ತಗಳನ್ನು ಮುಷ್ಟಿಮಾಡಿ ಬಿಗಿಹಿಡಿದಿದ್ದರು.

ಅಂತ್ಯಕ್ರಿಯೆಯ ವಿಧಿಗಳನ್ನು ಪೂರೈಸಲು ಬಂದಿದ್ದ ಪುರೋಹಿತ, "ನೋಡಿ ಪ್ರೀತಿ, ಬಂಧನ ಅನ್ನೋದು ಹೇಗಿರುತ್ತೆ. ಹೆಂಡತೀನ್ನ ಅದೆಷ್ಟು ಪ್ರೀತಿಸ್ತಿದ್ರೋ ಮಹಾರಾಯ್ರು. ಹ್ಯಾಗೆ ಅಳ್ತಿದಾರೆ ನೋಡು...." ಎಂದ ಇನ್ನೋರ್ವನ ಮುಖ ನೋಡುತ್ತ!

ಇದಾದ ಮೇಲೆ ದೇವದಾಸ್ ಅವರು ಆ ಅರ್ಕಾವತಿ ಎಸ್ಟೇಟ್ ಬಂಗಲೆಯನ್ನೇ ತೊರೆದರು. ಶೇಷಾದ್ರಿಪುರಂನಲ್ಲಿ ಮನೆ ಮಾಡಿದರು.

ವಾರದಲ್ಲಿ ಮೂರುದಿನ ಸಾದಿಕಾ ಮನೆಯಲ್ಲೇ ಇರತೊಡಗಿದರು. ನಿನ್ನಿಂದ್ಲೇ ನನ್ನ ಹೆಂಡತಿ ಸತ್ತಳು ಎಂದು ಆಗಾಗ ಜಗಳವನ್ನೂ ಕಾಯತೊಡಗಿದರು. ಅಷ್ಟೊತ್ತಿಗೆ ಸಾದಿಕಾ ಬಹಿರಂಗವಾಗಿ "ನಾನು ದೇವದಾಸ್ ಅವರ ಪತ್ನಿ" ಎಂದು ಪರಿಚಯ ಮಾಡಿಕೊಳ್ಳಲು ಆರಂಭಿಸಿದ್ದಳು. ಅದನ್ನು ದೇವದಾಸ್ ನಿರಾಕರಿಸುತ್ತಿರಲಿಲ್ಲ.

ಜಗಳವಾದಾಗ ವಾರಗಟ್ಟಲೆ ದೇವದಾಸ್ ಸಾದಿಕಾ ಮನೆಗೆ ಹೋಗುತ್ತಿರಲಿಲ್ಲ. ಅಂಥ ಸಂದರ್ಭದಲ್ಲಿ ಸಾದಿಕಾ ರೌದ್ರಾವತಾರ ತಾಳಿ ನೇರ ಆಫೀಸ್‌ಗೆ ಬಂದು ದೇವದಾಸ್ ಅವರೊಂದಿಗೆ ಬಹಿರಂಗವಾಗಿ ಜಗಳಕ್ಕೆ ನಿಲ್ಲಲಾರಂಭಿಸಿದಳು.

ಜಸ್ಟಿಸ್ ಗಿಣಿಯವರ ತಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಮಗಳು ಈ ಸಾದಿಕಾ.

ಇಂದು ದೇವದಾಸ್ ಆಫೀಸ್‌ನಿಂದ ಟೈಪ್ ರೈಟರ್ ಹೊತ್ತುಕೊಂಡು ಚೀರಾಡುತ್ತ ಹೋದವಳೇ ಸಾದಿಕಾ ಬೇಗಂ ಷಾ!

ಮಾವನವರು ಈ ಕಥೆ ಹೇಳಿ ಮುಗಿಸುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ನನ್ನ ಹಾಸ್ಟೆಲ್‌ನಲ್ಲಿ ಇಬ್ಬರೂ ಊಟ ಮಾಡಿದೆವು. ನಂತರ ಅವರನ್ನು ಬಸ್ ಹತ್ತಿಸಿ ವಾಪಸ್ ಹಾಸ್ಟೆಲ್‌ಗೆ ಬಂದೆ.

35

ಗುರು ಶಿಷ್ಯರ ಕಾಳಗ

ಹಿಂದಿ ವಿರೋಧಿ ಚಳವಳಿಯಲ್ಲಿ ನನಗೆ ಪರಿಚಯವಾಗಿದ್ದ ಆರ್. ಗುಂಡೂರಾವ್, ಎಫ್. ಎಂ. ಖಾನ್ ಮತ್ತು ಕೃಷ್ಣಸ್ವಾಮಿ ಈ ಮೂವರ ಪೈಕಿ ಆರ್. ಗುಂಡೂರಾವ್ ಮತ್ತು ಕೃಷ್ಣಸ್ವಾಮಿ ಈರ್ವರೂ ಈಗ ಬದುಕಿಲ್ಲ. ಕೃಷ್ಣಸ್ವಾಮಿಯವರು ನಾನು ಲಾ ಕಾಲೇಜ್ ಸೇರುವಷ್ಟರಲ್ಲಿ ಲಾ ಮುಗಿಸಿ ಲಾಯರ್ ಆಗಿಬಿಟ್ಟಿದ್ದರು. ಅವರು ಲಾ ಮುಗಿಸಿದ್ದು ಮೂವತ್ತೈದನೇ ವಯಸ್ಸಿಗೆ. ಅವರ ಪತ್ನಿ ಮಹಾರಾಣಿ ಕಾಲೇಜ್‌ನಲ್ಲಿ ಲೆಕ್ಚರರ್ ಆಗಿದ್ದರು. ಗಾಂಧಿನಗರದ ಸುಜಾತ ಹೋಟೆಲ್‌ನಲ್ಲಿ ತಿಂಡಿಗಾಗಿ ಹೋದಾಗ ಆಗಾಗ ಅಲ್ಲಿ ಸಿಕ್ಕು ಕೃಷ್ಣಸ್ವಾಮಿಯವರೊಂದಿಗೆ ಮುಗುಳ್ನಗೆಯ ವಿನಿಮಯ ನಡೆಯುತ್ತಿತ್ತು.

ನಾನು ಅಂದು ಕೃಷ್ಣಸ್ವಾಮಿಯವರನ್ನು ಸಂದಿಸಿದಾಗ ದೇವದಾಸ್ ಅವರ ಉಪಪತ್ನಿ ಸಾದಿಕಾ ಬೇಗಂ ಷಾ ಅವರು ಆಫೀಸ್‌ನಲ್ಲಿ ನಡೆಸಿದ ದಾಂಧಲೆಯನ್ನು ಹೇಳಿ ಆಶ್ಚರ್ಯ ವ್ಯಕ್ತಪಡಿಸಿದೆ. ನಮ್ಮ ಮಾವ ದೇವದಾಸ್ ಬಗ್ಗೆ ಹೇಳಿದ ಕಥೆಯನ್ನೂ ಅವರಿಗೆ ಸಂಕ್ಷಿಪ್ತವಾಗಿ ಹೇಳಿದೆ. ಅದಕ್ಕವರು ನಗುತ್ತ, "ಅದೆಲ್ಲ ನವಗೆ ಗೊತ್ತು. ಪ್ರತಿಭಾವಂತ ವ್ಯಕ್ತಿಗಳ ಕಾಣದ ಮುಖಗಳಿವು. ಇನ್ನೊಬ್ಬ

ವಕೀಲ ಎ. ಶಾಮಣ್ಣ ಅಂತ. ಅವರು ಸರಿಯಾಗಿದ್ದಿದ್ದರೆ ದೇವದಾಸ್‌ರಷ್ಟೇ ಪ್ರಸಿದ್ಧರಾಗಿರುತ್ತಿದ್ದರು. ಅವರ ಪ್ರತಿಭೆಯೆಲ್ಲ ಕುಡಿತದ ನಶೆಯಲ್ಲೇ ತೇಲಿ ಹೋಗಿಬಿಟ್ಟಿತು" ಎಂದರು.

ನಾನೂ ಅಷ್ಟರಲ್ಲಾಗಲೇ ಎ. ಶಾಮಣ್ಣನವರನ್ನು ನೋಡಿದ್ದೆ. ಕೋರ್ಟ್‌ನಲ್ಲಿ ಅವರ ಬಗ್ಗೆ ಹೊಗಳಿಕೆಯ ಮಾತುಗಳಿದ್ದುದನ್ನೂ ಕೇಳಿಸಿಕೊಂಡಿದ್ದೆ. ಅವರು ಕೋರ್ಟಿನ ಗಿಡವೊಂದರ ಕೆಳಗೆ ಕುಡಿದು ಬಿದ್ದಿರುತ್ತಿದ್ದ ದೃಶ್ಯವನ್ನು ವರ್ಣಿಸಿದ್ದನ್ನೂ ಕೇಳಿದ್ದೆ. ಕುಡಿತಕ್ಕೆ ದಾಸರಾಗಿ ಸತತ ಮೂರು ವರ್ಷ ವೃತ್ತಿಯನ್ನೇ ತೊರೆದಿದ್ದರು. ಕುಡಿತವನ್ನು ಬಿಟ್ಟಾದ ಮೇಲೆ ಪುನಃ ತಮ್ಮ ವೃತ್ತಿಯಲ್ಲಿ ದೊಡ್ಡ ಹೆಸರು ಮಾಡಿದರೆಂದೂ ಕೇಳಿ ತಿಳಿದಿದ್ದೆ.

'ಅದೇನು ಶಾಮಣ್ಣನವರ ವೈಶಿಷ್ಟ್ಯ?' ಎಂದು ಪ್ರಶ್ನಿಸಿದೆ. ಶಾಮಣ್ಣನವರನ್ನು ಹತ್ತಿರದಿಂದ ಬಲ್ಲವರಾಗಿದ್ದರಿಂದ ಇರಬೇಕು ಕೃಷ್ಣಸ್ವಾಮಿ ಅವರ ಬಗ್ಗೆ ಹೇಳಲು ಆಸಕ್ತಿ ತೋರಿದರು. ಮತ್ತೊಂದು ಕಾಫಿಗೆ ಆರ್ಡರ್ ಮಾಡಿದೆ. ಶಾಮಣ್ಣನವರ ಕಥೆ ಶುರು ಮಾಡಿಯೇ ಬಿಟ್ಟರು.....

ಎ. ಶಾಮಣ್ಣ, ಯತಿರಾಜುಲು ನಾಯ್ಡು ಹಾಗೂ ಎ.ಸಿ. ಭೈರಪ್ಪ ಇವರು ಮೂವರೂ ಒಂದುಗೂಡಿ ಕುಡಿಯುತ್ತಿದ್ದರು. ಯತಿರಾಜುಲು ಮತ್ತು ಭೈರಪ್ಪ ನಿಯಂತ್ರಿತವಾಗಿ ಕುಡಿದರೆ ಶಾಮಣ್ಣ ಅಳತೆತಪ್ಪಿ ಕುಡಿಯಲಾರಂಭಿಸಿದರು. ಶಾಮಣ್ಣನವರ ಕುಡಿತವನ್ನು ನೋಡಿ ಭಯಪಟ್ಟ ಯತಿರಾಜಲು 'ಇನ್ನು ಮೇಲೆ ನಾನು ನಿನ್ನೊಂದಿಗೆ ಕುಡಿಯುವುದಿಲ್ಲ' ಎಂದು ಘೋಷಿಸಿಬಿಟ್ಟರು. ಆದರೆ ಅಷ್ಟೊತ್ತಿಗೆ ಶಾಮಣ್ಣ ಕುಡಿತಕ್ಕೆ ದಾಸರಾಗಿಬಿಟ್ಟಿದ್ದರು. ಕೋರ್ಟಿಗೆ ಬರುವಾಗಲೇ ಕೋಟಿನ ಒಳಕಿಸೆಯಲ್ಲಿ ವ್ಹಿಸ್ಕಿ ಬಾಟಲಿ ಇರಿಸಿಕೊಂಡು ಬರತೊಡಗಿದರು. ಇನ್ನೇನು ತಮ್ಮ ಆರ್ಗ್ಯುಮೆಂಟ್ ಶುರು ಆಗುತ್ತೆ ಎನ್ನುವಾಗ ಹೊರಹೋಗಿ ನೀಟಾಗಿ ವ್ಹಿಸ್ಕಿಯನ್ನು ಹಾಗೇ ಎತ್ತಿ ಗುಟುಕರಿಸಿಕೊಂಡು ಒಳಗೆ ಬಂದು ಮಾತಾಡುವ ಚಟ ಬೆಳೆಸಿಕೊಂಡರು. ಬರುಬರುತ್ತ ಇವರ ವೀಕ್‌ನೆಸ್ ನೋಡಿಕೊಂಡ ಕಕ್ಷಿದಾರರು ಫೀಜು ಕೊಡದೆ ಬಾಟಲಿಗಳನ್ನು ತಂದುಕೊಡತೊಡಗಿದರು. ಇವರ ಒಬ್ಬನೇ ಮಗ ರವೀಂದ್ರನ ಭವಿಷ್ಯದ ಕಡೆ ಗಮನ ಹರಿಸುವುದಿರಲಿ ತಮ್ಮ ಮೇಲೆ ತಮಗೇ ಪ್ರಜ್ಞೆ ಇಲ್ಲದಂತೆ ಕುಡಿದು ಎಲ್ಲೆಂದರಲ್ಲಿ ಬಿದ್ದಾಗ ಅವರನ್ನು ಗುರುತು ಹಿಡಿದ ಪೊಲೀಸರೊ, ಕಕ್ಷಿದಾರರೊ, ಪರಿಚಿತರೊ ಆಟೋ ರಿಕ್ಷಾದಲ್ಲಿ ಕೂರಿಸಿ ಮನೆಗೆ ಕಳಿಸುವಂಥ ಸ್ಥಿತಿಯುಂಟಾಯಿತು. ಇದರಿಂದ ತೀರಾ ಬೇಜಾರು ಮಾಡಿಕೊಂಡ ಯತಿರಾಜುಲು ಮತ್ತು ಭೈರಪ್ಪ ಶಾಮಣ್ಣನವರ ಮನೆಯವರೆಗೆ

ಬಂದು ಜಗಳ ಕಾಯ್ದು ಕುಡಿತ ನಿಲ್ಲಿಸುವಂತೆ ಒತ್ತಾಯಿಸಿದರು. ಯತಿರಾಜುಲು ಅವರ ಮಾತುಗಳು ಶಾಮಣ್ಣನವರ ಪತ್ನಿಯವರ ಕಣ್ಣುಗಳಲ್ಲಿ ನೀರು ತರಿಸಿದುವೇ ಹೊರತು ಶಾಮಣ್ಣನವರ ಮೇಲೇನೂ ಪರಿಣಾಮ ಉಂಟುಮಾಡಲಿಲ್ಲ.

ಅವರ ಪತ್ನಿ "ಮನೆಯಲ್ಲೇ ಕೂತು ಕುಡಿಯಿರಿ. ಹೊರಗೇಕೆ ಹೋಗುತ್ತೀರಿ" ಎನ್ನುವ ಅಗ್ರಿಮೆಂಟ್‌ಗೆ ಬಂದರು. ಆಗಿನಿಂದ ಮೂರು ವರ್ಷಗಳವರೆಗೆ ಸತತ ಮನೆಯಲ್ಲೇ ಕುಡಿಯುತ್ತ ಕೂತಿರುತ್ತಿದ್ದರು. ಅವರು ಹೊರಗೆ ಕಾಣಿಸಿಕೊಂಡದ್ದೇ ಅಪರೂಪ. ಕುಡಿತದಲ್ಲಿ ಮಾತ್ರ ಭಾರೀ ಶಿಸ್ತನ್ನು ರೂಢಿಸಿಕೊಂಡರು ಶಾಮಣ್ಣ 'A method in madness' ಎನ್ನುವಂತೆ.

ಕೊನೆಗೆ ಖ್ಯಾತ ಅಡ್ವೊಕೇಟ್ ಜನರಲ್ ಆಗಿದ್ದ ಯತಿರಾಜುಲು ಮತ್ತು ಭೈರಪ್ಪ ಅವರೇ ಶಾಮಣ್ಣನವರಿಗೆ ಕುಡಿತ ಬಿಡುವಂತೆ ಚಿಕಿತ್ಸೆ ಕೊಡಿಸಿದರು. ಮಾನಸಿಕ ಆಸ್ಪತ್ರೆಯಲ್ಲಿ ಕೌನ್ಸಿಲಿಂಗ್ ಮಾಡಿಸಿದರು. ಬೆಂಗಳೂರಿನ ನಗರ ಪರಿಸರದಿಂದ ಅವರನ್ನು ಬಿಡಿಸಬೇಕೆನ್ನುವ ಉದ್ದೇಶದಿಂದ ಮಾಗಡಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಒಯ್ದು ಇರಿಸಿದರು. ಈ ಪ್ರಯತ್ನಗಳು ಫಲಕೊಟ್ಟವು. ಕುಡಿತದಿಂದ ಡೈವೋರ್ಸ್ ಪಡೆದುಕೊಂಡ ಶಾಮಣ್ಣ ಪುನಃ ಬೆಂಗಳೂರಿಗೆ ತಮ್ಮ ಪತ್ನಿಯ ಬಳಿಗೆ ಬಂದರು. ಶಾಮಣ್ಣ ಕುಡಿತ ಬಿಟ್ಟಿದ್ದಾರೆನ್ನುವ ಸಂಗತಿಯೇ ಕೋರ್ಟ್‌ನಲ್ಲಿ ತಿಂಗಳುಗಟ್ಟಲೇ ಚರ್ಚೆಯಲ್ಲಿತ್ತು. ಒಂದು ದಿನ ಶಾಮಣ್ಣ ನೀಟ್ ಆಗಿ ಕೋಟ್ ಹಾಕಿಕೊಂಡು ಕೋರ್ಟ್ ಪ್ರವೇಶಿಸಿದಾಗ ಜಡ್ಜ್ ಮತ್ತು ಲಾಯರ್‌ಗಳು ಅವಾಕ್ಕಾಗಿದ್ದರು.

"ಆರೇಳು ವರ್ಷ ನಶೆಯಲ್ಲಿದ್ದ ತಲೆ ಪುನಃ ಮೊದಲಿನಂತೆ ಕೆಲಸ ಮಾಡಲು ಸಾಧ್ಯವೆ?" ಎಂದು ಕೆಲವರು ಕುಟುಕಿದರು.

ಅದನ್ನೆಲ್ಲ ಸಾವಧಾನ ಚಿತ್ತದಿಂದಲೇ ಕೇಳಿಸಿಕೊಂಡರು ಶಾಮಣ್ಣ. ಇವರ ಪಾಂಡಿತ್ಯದ ಅರಿವಿದ್ದ ಹಳೆಯ ಕಕ್ಷಿದಾರರು ಕೇಸ್‌ಗಳನ್ನು ತಂದುಕೊಡಲು ಆರಂಭಿಸಿದರು. ಮುಂಚೆಗಿಂತ ಅದ್ಭುತವಾಗಿ ಕೋರ್ಟ್‌ನಲ್ಲಿ ವಾದಿಸತೊಡಗಿದರು. ಶಾಮಣ್ಣ ಏರುತ್ತಲೇ ಹೋದರು. ಕೆಳಗಿಳಿಯಲೇ ಇಲ್ಲ.

ಅಜಾನುಬಾಹುವಾಗಿದ್ದ ಶಾಮಣ್ಣ ಮೀಸೆ ಬಿಟ್ಟಿದ್ದರು. ಕೋಟು, ಪೇಟಗಳಲ್ಲಿ ಪ್ರಭಾವಶಾಲಿಗಳಾಗಿ ಕಾಣಿಸುತ್ತಿದ್ದರು.

ಕೋರ್ಟಿನಲ್ಲಿ ವಿಟ್ನೆಸ್‌ಗಳಿಗೆ ಅತ್ಯಂತ ಕಡಿಮೆ ಪ್ರಶ್ನೆಗಳನ್ನು ಹಾಕಿ ಕೇಸ್ ಗೆದ್ದು ಕೊಡುವುದರಲ್ಲಿ ನಿಸ್ಸೀಮರಾಗಿದ್ದರು. ತಮ್ಮ ಮಾನವೀಯ ನಡವಳಿಕೆ,

ಪಾಂಡಿತ್ಯ ಮತ್ತು ವಾದವೈಖರಿಗಳಿಂದಾಗಿ ಜಡ್ಜ್‌ಗಳ ಮೇಲೆ ಗಾಢ ಪರಿಣಾಮ ಉಂಟುಮಾಡುತ್ತಿದ್ದರು.

ನಾನೇ ಕಂಡಂತೆ ಒಮ್ಮೆ ಅವರ ಕಕ್ಷಿದಾರನೊಬ್ಬ "ಸಾರ್, ನಮ್ಮ ವಿರುದ್ಧದ ಸಾಕ್ಷಿ ಪ್ರಾಸಿಕ್ಯೂಶನ್‌ಗೆ ತಿರುಗಿ ಬೀಳುವ ಸ್ಥಿತಿಯಲ್ಲಿದ್ದಾರೆ. ಕೋರ್ಟಿನಲ್ಲಿ ಏನೇನು ಹೇಳಬೇಕೆಂದು ಅವರಿಗೆ ಹೇಳಿ ಕೊಡಿ, ಹಾಗೆ ಹೇಳ್ತಾರೆ. ನಮ್ಮ ಕೇಸು ಗೆದ್ದು ಹೋಗ್ತದೆ" ಎಂದ. ಆಗ ಶಾಮಣ್ಣ "ಅದು ಜಾಣ ವಕೀಲನಾದವನು ಮಾಡೋ ಕೆಲಸ ಅಲ್ಲ. ನನ್ನಿಂದ ಅದಾಗುವುದಿಲ್ಲ. ಆ ವಿಟ್ನೆಸ್ ಕೋರ್ಟಿನಲ್ಲಿ ನಿನ್ನ ವಿರುದ್ಧ ಸಾಕ್ಷಿ ಹೇಳಿದಾಗಲೂ ನಾನು ನನ್ನ ಪಾಟೀ ಸವಾಲ್‌ನಲ್ಲಿ ಅವನನ್ನು ಸೋಲಿಸಿ ತೋರಿಸುತ್ತೇನೆ, ಹೋಗಾಚೆ" ಎಂದು ಗದರಿದರು.

ಮತ್ತೊಂದು ಕೇಸ್, ಅದು ಹೈಕೋರ್ಟ್‌ನಲ್ಲಿ ನಡೆಯುತ್ತಿತ್ತು. ಶಾಮಣ್ಣನವರಿಗೆ ಎ.ಎಚ್. ಭಗವಾನ್ ಅವರು ಸಹಾಯಕ ವಕೀಲರಾಗಿದ್ದರು. ವಾದದ ಮಧ್ಯೆ ಬಿಡುವಿನ ವೇಳೆಯಲ್ಲಿ ಭಗವಾನ್ ಅವರು ಶಾಮಣ್ಣನವರಿಗೆ, "ನೋಡಿ ಕೆಳಗಿನ ಕೋರ್ಟ್‌ನಲ್ಲಿ ನಮ್ಮ ಕಕ್ಷಿದಾರನ ಪರ ವಾದಿಸಿದ ಲಾಯರ್ ಅತಿಮುಖ್ಯವಾದ ಪಾಯಿಂಟ್ ಅನ್ನೇ ಬಿಟ್ಟುಬಿಟ್ಟಿದ್ದಾರೆ. ವಿಟ್ನೆಸ್ ಪೊಲೀಸ್ ಠಾಣೆಯಲ್ಲಿ ನೀಡಿದ ಹೇಳಿಕೆಯನ್ನು ವೃದ್ಧಿಸಿಕೊಂಡು ಕೋರ್ಟಿನಲ್ಲಿ ಸಾಕ್ಷಿ ನೀಡಿದ್ದಾನೆ. ಈ ಪಾಯಿಂಟ್ ಅನ್ನು ಕೇಂದ್ರೀಕರಿಸಿ ವಾದಿಸಿರಿ" ಎಂದು ಸೂಚಿಸಿದರು.

ಅದಕ್ಕೆ ಶಾಮಣ್ಣ, "ಅಯ್ಯೋ ಇಂಥ ತಪ್ಪನ್ನ ಯಾವ ಲಾಯರ್ ತಾನೇ ಮಾಡೋಲ್ಲ. ಈಗ ನಾವು ಪರಿಪೂರ್ಣ ವಾದಿಸ್ತೇವೆಯೆ? ಪಾಪ ಕೆಳಗಿನ ಕೋರ್ಟಿನಲ್ಲಿ ವಾದಿಸಿದ ಲಾಯರ್ ಮಾಡಿದ ತಪ್ಪನ್ನು ತೋರಿಸಿ ಸಂಭ್ರಮಿಸುವುದು ಬೇಡ. ವಾದಿಸಲು ನಮ್ಮ ಕಡೆ ಪ್ಲಸ್ ಪಾಯಿಂಟ್‌ಗಳು ಬಹಳ ಇವೆ ಸುಮ್ಮನಿರಿ" ಎಂದರು. ಮತ್ತು ಆ ಕೇಸ್‌ನನ್ನು ಗೆದ್ದೂಬಿಟ್ಟರು.

ಶಾಮಣ್ಣನವರ ಕೈಯಲ್ಲಿ ಜ್ಯೂನಿಯರ್‌ಗಳಾಗಿದ್ದವರು ಜಸ್ಟಿಸ್‌ಗಳಾದರು, ಖ್ಯಾತ ವಕೀಲರಾದರು. ಅಂಥವರಲ್ಲಿ ಜಸ್ಟಿಸ್ ಹೊನ್ನಯ್ಯ, ಜಸ್ಟಿಸ್ ಪೀರಾನ್, ಜಸ್ಟಿಸ್ ಸಿ. ಶಿವಪ್ಪ, ಲಾಯರ್ ಎಂ.ವಿ. ದೇವರಾಜ್ (ಇವರು ಮೂರು ಬಾರಿ ಕರ್ನಾಟಕ ಹೈಕೋರ್ಟ್‌ನಲ್ಲಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು), ಲಾಯರ್ ಕೆಂಪಣ್ಣ (ಲಾ ಸೆಕ್ರೆಟರಿ ಆಗಿದ್ದವರು), ಲಾಯರ್ ಕೆ.ಟಿ. ಚನ್ನಬಸವೇಗೌಡ ಇವರೆಲ್ಲ ಮುಖ್ಯರಾದವರು.

ಚಿತ್ರದುರ್ಗ ಕೋರ್ಟಿನಲ್ಲಿ ಖ್ಯಾತ ಕ್ರಿಮಿನಲ್ ಲಾಯರ್ ಆಗಿದ್ದ ಓ. ವೀರಬಸಪ್ಪ

ಸ್ವಂತ ತಮ್ಮನ ಕೊಲೆ ಮಾಡಿದ ಆರೋಪಕ್ಕೆ ಗುರಿಯಾಗಿದ್ದರು. ವೀರಬಸಪ್ಪನವರು ಎಸ್. ನಿಜಲಿಂಗಪ್ಪನವರಿಗೆ ಆಪ್ತ ಸ್ನೇಹಿತರು. ಆ ಕೇಸನ್ನು ಶಾಮಣ್ಣನವರಿಗೆ ವಹಿಸಿ ಕೊಟ್ಟಿದ್ದರು ನಿಜಲಿಂಗಪ್ಪ. ಶಾಮಣ್ಣ, ಚಿತ್ರದುರ್ಗದಲ್ಲೇ ಕ್ಯಾಂಪ್ ಮಾಡಿ ಆ ಕೇಸನ್ನು ಗೆದ್ದುಕೊಟ್ಟರು.

ಓ. ವೀರಬಸಪ್ಪನವರನ್ನು ಹೈಕೋರ್ಟ್ ಜಸ್ಟಿಸ್ ಮಾಡುತ್ತಾರೆನ್ನುವ ಸುದ್ದಿ ಕೇಳಿಬರುತ್ತಿರುವಾಗಲೇ ಸಹೋದರನ ಕೊಲೆ ಕೇಸಿನಲ್ಲಿ ಸಿಲುಕಿಕೊಂಡಿದ್ದರು.

ವೀರಬಸಪ್ಪನವರು ಉದ್ದೇಶಪೂರ್ವಕ ಮಾಡಿದ ಕೊಲೆಯಲ್ಲವದು. ಅವರ ಕುಟುಂಬಕ್ಕೇ ಬೇಜಾರಾಗಿದ್ದ ಅವರ ತಮ್ಮ ಕುಡುಕನಾಗಿದ್ದನಂತೆ, ಆದರೆ ಸಾರ್ವಜನಿಕವಾಗಿ ಕೀಳಾಗಿ ವರ್ತಿಸುತ್ತಿದ್ದನಂತೆ. ಕಂಠಪೂರ್ತಿ ಕುಡಿದು ಬಂದು ವೀರಬಸಪ್ಪನವರಿಗೆ ದುಡ್ಡಿಗೆ ಪೀಢಿಸಿದನಂತೆ ಅವರ ಸೋದರ. ಆಗ ಕೋಪಾವೇಶದಿಂದ ವೀರಬಸಪ್ಪ ತಮ್ಮನ ಕಪಾಳಕ್ಕೆ ಹೊಡೆದರು. ಕೆಳಗೆ ಕುಸಿದ ತಮ್ಮ ಮೇಲೇಳಲೇ ಇಲ್ಲವಂತೆ!

ಶಾಮಣ್ಣನವರಿಗೆ ಹೆಸರು ತಂದುಕೊಟ್ಟ ಮತ್ತೊಂದು ಮಹತ್ವದ ಕೇಸ್ ಅಗರಮ್ ಗ್ರಾಮದ ಕೊಲೆ ಕೇಸ್. ಈ ಗ್ರಾಮದ ಎರಡು ಬಣಗಳ ಮಧ್ಯೆ ಘರ್ಷಣೆ ನಡೆದು ಎರಡೂ ಕಡೆ ಕೊಲೆಗಳಾಗಿದ್ದವು. ಹೀಗಾಗಿ ಎರಡೂ ಬಣಗಳವರು ಕೊಲೆ ಆರೋಪಿಗಳಾಗಿದ್ದರು. ಒಂದು ಕೇಸಿನಲ್ಲಿ ಶಾಮಣ್ಣ, ಇನ್ನೊಂದು ಕೇಸಿನಲ್ಲಿ ದೇವದಾಸ್ ವಕೀಲರಾಗಿದ್ದರು.

ಮಂಡ್ಯ ಜಿಲ್ಲೆಯ ಗಾಣದಾಳ್ ಗ್ರಾಮದ ಮರ್ಡರ್ ಕೇಸ್ ಸಹ ಶಾಮಣ್ಣನವರ ಹೆಸರನ್ನು ಆಕಾಶಕ್ಕೇರಿಸಿತು.

ಶಾಮಣ್ಣನವರ ಕೈಯಲ್ಲಿ ಜ್ಯೂನಿಯರ್ ಆಗಿದ್ದು, ನಂತರ ಸ್ವಂತ ಪ್ರಾಕ್ಟೀಸ್ ಮಾಡುತ್ತಿದ್ದ ಶಿವಪ್ಪನವರು ಸೆಷನ್ಸ್ ಕೋರ್ಟಿನಲ್ಲಿ ಸರ್ಕಾರದ ಪರ ಸ್ಪೆಷಲ್ ಪ್ರಾಸಿಕ್ಯೂಟರ್ ಆಗಿದ್ದು ಆರೋಪಿಗಳಿಗೆ ಗಲ್ಲು ಶಿಕ್ಷೆಯಾಗುವಂತೆ ಕೇಸ್ ನಡೆಸಿ ಖ್ಯಾತಗೊಂಡಿದ್ದರು.

ಆ ಕೇಸ್‌ನಲ್ಲಿ ಶಾಸಕ ಬೊಮ್ಮೇಗೌಡರ ನಾಲ್ವರು ಸಹೋದರರಿಗೂ ಮರಣದಂಡನೆ ಆಗಿತ್ತು. ಹೈಕೋರ್ಟಿನಲ್ಲಿ ಶಾಮಣ್ಣ ಡಿಫೆನ್ಸ್ ಲಾಯರ್ ಆದರು. ಸರ್ಕಾರದ ಪರ ಭೈರಾರೆಡ್ಡಿ ಇದ್ದರು. ಅವರಿಗೆ ಸಹಾಯಕರಾಗಿದ್ದ ಶಿವಪ್ಪ ಶಾಮಣ್ಣನವರ ಕೈಯಲ್ಲೇ ಪಳಗಿದ ವ್ಯಕ್ತಿ.

ಗುರು ಶಿಷ್ಯರ ಕಾಳಗವನ್ನು ನೋಡಲು ಲಾಯರ್‌ಗಳು ಮುಗಿಬೀಳುತ್ತಿದ್ದರು. ಶಾಮಣ್ಣ ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸಿಕೊಟ್ಟರು ಆ ಕೇಸ್‌ನಲ್ಲಿ.

ಶಾಮಣ್ಣನವರು ಯಾವುದಾದರೂ ಒಂದು ಪ್ರಬಲ ಡಿಫೆನ್ಸ್ ಪಾಯಿಂಟ್ ಅನ್ನು ಅವಲಂಬಿಸಿಕೊಂಡು ಅದರ ಆಳ, ಅಗಲಗಳನ್ನು ಜಾಲಾಡಿಸಿಬಿಡುತ್ತಿದ್ದರು. ಆದರೆ ದೇವದಾಸ್ ಹಾಗಲ್ಲ; ಹಲವಾರು ಡಿಫೆನ್ಸ್ ಪಾಯಿಂಟ್‌ಗಳನ್ನು ಅವಲಂಬಿಸಿಕೊಂಡು ಕೇಸ್ ನಡೆಸುತ್ತಾರೆ. ಈಗಲೂ ಕ್ರಿಮಿನಲ್ ಲಾಯರ್‌ಗಳ ಮಧ್ಯೆ ಈ ಬಗ್ಗೆ ಚರ್ಚೆ ಆಗುತ್ತದೆ; ಇವರಿಬ್ಬರಲ್ಲಿ ಯಾರ ಸ್ಟೈಲ್ ಸರಿ ಎಂದು.

ಶಾಮಣ್ಣನವರು ಕಾರ್ಯಕ್ರಮಗಳಿಗೆ ಹಾಜರಾದಾಗ ಜಡ್ಜ್‌ಗಳೆಲ್ಲ ಆತನ ಸುತ್ತ ನಿಂತು ಮಾತಾಡಿಸುತ್ತಿದ್ದರು. ಆದರೆ ಈಗ ಅಂಥ ಲಾಯರ್‌ಗಳು ಕಾಣಸಿಗುವುದಿಲ್ಲ; ಜಡ್ಜ್‌ಗಳಿದ್ದಲ್ಲಿ ಲಾಯರ್‌ಗಳು ಮುತ್ತಿಕೊಂಡಿರುತ್ತಾರೆ.

ಮತ್ತೊಂದು ಬಾರಿ ಲಾಯರ್ ಕೃಷ್ಣಸ್ವಾಮಿ ನನ್ನ ಕೈ ಕುಲುಕಿ ಹೋದವರು ಪುನಃ ಭೇಟಿಯಾಗಲಿಲ್ಲ; ಕಾರು ಅಪಘಾತದಲ್ಲಿ ಅಕಾಲ ಮರಣಕ್ಕೀಡಾದರು. ಕೊಡಗಿನಲ್ಲಿ ಅಂಬಾಸಿಡರ್ ಕಾರನ್ನು ಖರೀದಿಸಿಕೊಂಡು ಅಲ್ಲಿಂದ ಬೆಂಗಳೂರಿಗೆ ಬರುವಾಗ ದಾರಿ ಮಧ್ಯೆ ಅಪಘಾತವಾಗಿತ್ತು.

36

ಇನ್ಸ್‌ಪೆಕ್ಟರ್‌ನನ್ನು ಕೊಲೆಗಾರನನ್ನಾಗಿಸಿದ ನಿಗೂಢ ಸಾವು

ಅಂದು ರವಿವಾರ, ಊರಿಗೆ ಹೋದೆ. ಹಣ ತರಲು ತಿಂಗಳಿಗೊಮ್ಮೆ ಊರಿಗೆ ಹೋಗಿಬರುತ್ತಿದ್ದೆ. ಬರುವಾಗ ದೊಡ್ಡಬಳ್ಳಾಪುರದಲ್ಲಿ ಒಬ್ಬರ ಪರಿಚಯವಾಯಿತು. ಇಬ್ಬರೂ ಕೂಡಿಯೇ ಬೆಂಗಳೂರು ಕಡೆ ಹೋಗುವ ಬಸ್ ಹತ್ತಿದೆವು. ಪರಸ್ಪರ ಮಾತುಗಳಲ್ಲಿ ನಾನು ಲಾ ವಿದ್ಯಾರ್ಥಿಯೆನ್ನುವುದು ಆತನಿಗೆ ಗೊತ್ತಾಗಿ, "ನಮ್ಮ ಚಿಕ್ಕಪ್ಪ ಲಿಂಗೋಜಿರಾವ್ ಸೆಷನ್ಸ್ ಜಡ್ಜ್ ಆಗಿದ್ದಾರೆ ಬೆಂಗಳೂರಲ್ಲಿ. ನಿನ್ನೆ ಅವರು ನಮ್ಮ ಮನೆಗೆ ಬಂದಿದ್ದರು. ಇಂದು ಅದೇನೊ ಬಹಳ ಕುತೂಹಲಕಾರಿ ಕೇಸ್ ನಡೀತಾ ಇದೆಯೆಂದು ಹೇಳುತ್ತಿದ್ದರು. ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬ ಲಾಕಪ್‌ಡೆತ್ ಕೇಸ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದಕ್ಕೆ ಸಂಬಂಧಿಸಿದ್ದಂತೆ" ಎಂದ. ಆತನಾಡಿದ ಉಳಿದ ಮಾತುಗಳು ಕರಗಿ ಹೋಗಿ, ಲಾಕಪ್‌ಡೆತ್ ಕೇಸ್ ಮಾತ್ರ ನನ್ನ ತಲೆಯಲ್ಲಿ ಉಳಿಯಿತು. ಹಾಸ್ಟೆಲ್‌ಗೆ ಹೋಗಿ ಮಾರನೆ ದಿನ ನೇರ ಕೋರ್ಟ್ ಕಡೆಗೆ ಹೋದೆ. ಸದರಿ ಕೇಸ್ ಬಗ್ಗೆ ಬೆಂಚ್

ಕ್ಲಾರ್ಕ್‌ನನ್ನು ವಿಚಾರಿಸಿದೆ. ಅದಕ್ಕೆ ಡಿಫೆನ್ಸ್ ಲಾಯರ್ ಆಗಿ ಬಿ.ಕೆ. ರಾಮಚಂದ್ರರಾವ್ ಇದ್ದಾರೆಂದು ಗೊತ್ತಾಯಿತು.

ಅಂದು ಆ ಕೇಸ್ ನಡೆಯಲಿಲ್ಲ. ಮುಂದಿನ ಡೇಟ್ ತೆಗೆದುಕೊಂಡರು ಲಾಯರ್. ಸರ್ಕಲ್ ಇನ್ಸ್‌ಪೆಕ್ಟರ್ ಬಂದಿದ್ದರು. ಒಳ್ಳೆ ಕಟ್ಟುಮಸ್ತಾದ ಆಸಾಮಿ. ಮುಖ ಸೌಮ್ಯವಾಗಿತ್ತು. ಆತನ ಮುಖದ ಮೇಲೆ ಅವಮಾಯಕತನ ಆವರಿಸಿಕೊಂಡಿತ್ತು. ತನ್ನಲ್ಲಿ ಉಂಟಾಗುತ್ತಿದ್ದ ವಿಚಿತ್ರ ದಿಗಿಲನ್ನು ಮುಚ್ಚಿಟ್ಟುಕೊಂಡು ಪೊಲೀಸ್ ಗತ್ತನ್ನು ಪ್ರದರ್ಶಿಸುವ ಪ್ರಯತ್ನ ಮಾಡುತ್ತಿದ್ದಾನೆ ಎನಿಸಿತು ಆತನ ಮುಖ ನೋಡಿ.

ಹೊರಬಂದ ಲಾಯರ್‌ರನ್ನು ಮಾತಾಡಿಸಿ ನನ್ನ ಪರಿಚಯ ಹೇಳಿಕೊಂಡೆ. "ಗೊತ್ತು, ಗೊತ್ತು, ಯಾವಾಗ್ಲೂ ಕೋರ್ಟಿನಲ್ಲೇ ಇರ್ತೀಯಾ, ನಿನ್ನ ಮುಖ ಪರಿಚಯ ನನಗಿಲ್ವೆ..." ಎಂದರು. ನಿರಾಡಂಬರ ಮತ್ತು ಸೌಮ್ಯ ಸ್ವಭಾವದವರಾಗಿದ್ದ ರಾಮಚಂದ್ರರಾಯರು ನನ್ನನ್ನು ತಮ್ಮ ಜೊತೆ ಕ್ಯಾಂಟೀನ್‌ಗೆ ಕರೆದೊಯ್ದರು. ಅವರೊಂದಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಸಹ ಇದ್ದರು. ನನ್ನನ್ನು ಆ ಇನ್ಸ್‌ಪೆಕ್ಟರ್‌ಗೆ "ಇವ್ನು ಇನ್ನೂ ಲಾ ಮುಗಿಸಿಲ್ಲ, ಆವಾಗ್ಲೇ ಕೋರ್ಟಿಗೆ ಎಡತಾಕ್ತಾ ಅವ್ನೆ. ಒಳ್ಳೆ ಆಸಕ್ತಿಯ ಹುಡುಗ. ವೃತ್ತಿಯ ಬಗ್ಗೆ ಈ ಥರಾ ಗೀಳು ಇದ್ರೇನೇ ಅದರಲ್ಲಿ ಮುಂದೆ ಬರೋಕೆ ಸಾಧ್ಯ ಅಲ್ವಾ!" ಎಂದು ಹೇಳುತ್ತಾ ಪರಿಚಯಿಸಿದರು.

"ನೋಡು ಈ ಇನ್ಸ್‌ಪೆಕ್ಟರ್‌ದು ದುರ್ದೈವ. ಠಾಣೆಗೆ ಬಂದವನ್ನ ಕೈಯಿಂದ್ಲೂ ಮುಟ್ಟಿಲ್ಲ. ಆದ್ರೂ ಕೊಲೆ ಕೇಸ್ ಮೈಮೇಲೆ ಬಂದಿದೆ. ಬ್ಯಾಡ್‌ಟೈಮ್" ಎಂದರು.

ಇನ್ಸ್‌ಪೆಕ್ಟರ್ ನನ್ನ ಕೈ ಕುಲುಕಿದರು. ಕ್ಯಾಂಟೀನ್‌ನಲ್ಲಿ ಕಾಫಿಗೆ ಹೇಳಿದ ರಾಮಚಂದ್ರರಾಯರು "ನಿನ್ನ ಕುತೂಹಲ ನನಗೆ ಗೊತ್ತಾಗಿದೆ. ಹೇಳ್ತೀನಿ ಕಥೇನ" ಎಂದರು.

ಮಾಗಡಿ ತಾಲೂಕಿನ ಕತ್ತಾಳೆಪಾಳ್ಯ ಎನ್ನುವ ಗ್ರಾಮದಲ್ಲಿ ಕಾಡಯ್ಯ ಮತ್ತು ಮಂಜಪ್ಪ ಎನ್ನುವ ಜಮೀನ್ದಾರರ ಮಧ್ಯೆ ಜಮೀನು ಸಂಬಂಧದ ವ್ಯಾಜ್ಯವಿತ್ತು. ಒಂದು ದಿನ ಹುಲ್ಲು ಹಿತ್ತಲಿನಲ್ಲಿ ಮಂಜಪ್ಪ ತನ್ನ ಭಾವಮೈದುನರಾದ ಲೋಕಯ್ಯ ಮತ್ತು ಅಪ್ಪಾಜಪ್ಪನವರೊಂದಿಗೆ ಅದೇನೋ ಮಾತಾಡುತ್ತ ನಿಂತಿದ್ದ. ಅದೇ ಸಮಯಕ್ಕೆ ಕಾಡಯ್ಯ ತನ್ನ ಹುಲ್ಲು ಹಿತ್ತಲಿಗೆ ಬಂದ.

"ಏನೋ ಕಾಡಯ್ಯ, ನಮ್ಮ ಭಾವ ಒಬ್ನೇ ಇದಾನಂತ ತಿಳ್ಕಂಡೀಯೇನೊ.

ನಾವಿರೋದು ಪಕ್ಕದ ಊರ್‌ನಾಗೇ. ನಮ್ಮ ಭಾವ ಕೆಮ್ಮಿದರೂ ಓಡಿ ಬರ್ತೇವೆ. ನಿನ್ನಟಾನೆಲ್ಲ ಬಿಚ್‌ಬೇಡ...." ಎಂದ ಲೋಕಯ್ಯ.

ಕಾಡಯ್ಯ ಆಜಾನುಬಾಹು ವ್ಯಕ್ತಿ. ಸುತ್ತ ಹತ್ತು ಹಳ್ಳಿಗಳಲ್ಲಿ ಎಲ್ಲಿಯೇ ಕುಸ್ತಿ ಪಂದ್ಯ ನಡೆಯಲಿ ಕಡಗ ಗೆದ್ದುಕೊಂಡು ಬರುತ್ತಿದ್ದ. ದಂಡು, ಬೈಠಕ್ ಹೊಡೆದು ಬೆಣ್ಣೆ, ಉತ್ತುತ್ತೆಗಳನ್ನು ತಿಂದು ಬೆಳೆಸಿಕೊಂಡಿದ್ದ ಮಾಟದ ಮಾಂಸಖಂಡಗಳು ಕಾಡಯ್ಯನಲ್ಲಿ ಅತೀವ ಆತ್ಮವಿಶ್ವಾಸವನ್ನುಂಟುಮಾಡಿದ್ದವು.

"ಥೂ ಪೀಚ್ಲು ನನ್ನಮಕ್ಳಾ. ನಿಮ್ ಮೂವರ್‍ನೂ ನೊಣ ಒರೆಸಿದಂಗೆ ಹೊಸಕಿ ಹಾಕಿಬಿಡ್ತೇನೆ. ಏನ್ ತಿಳ್ಕಂಡೀರ ಈ ಕಾಡಯ್ಯ ಅಂದ್ರೆ.. ಕಾಡಾನೆ ಜೊತೆ ಹಿಡಿಯೋವ್ನು ಇವ್ನು. ನಿಮ್ಮಂಗೆ ಚಾ ಕುಡ್ದು ಬೀಡಿ ಹಚ್ಕಂಡ್ ಹೆಂಗ್ಸರ ಹೆಜ್ಜೇ ಮೂಸ್ತಾ ಹೋಗೋನಲ್ಲ...." ಎಂದು ಪ್ರತಿಯಾಗಿ ಗುಡುಗಿದ ಕಾಡಯ್ಯ.

ತಾವು ಮೂವರು, ಅವನೊಬ್ಬ ಏನು ಮಾಡಬಲ್ಲ ಎಂದು ಕಾಡಯ್ಯನ ಮೇಲೆ ಹರಿಹಾಯ್ದರು ಮಂಜಪ್ಪ ಮತ್ತವನ ಭಾವಮೈದುನರು.

ಈ ಅನಿರೀಕ್ಷಿತ ದಾಳಿಯಿಂದ ಗೆಲಿಬಿಲಿಗೆ ಒಳಗಾದ ಕಾಡಯ್ಯ ಹುಲ್ಲು ಬಣವೆಯಲ್ಲಿ ಸಿಕ್ಕಿಸಿಬಿಟ್ಟಿದ್ದ ಕಬ್ಬಿಣದ ಸಲಾಕೆಯೊಂದನ್ನು ಎಳೆದುಕೊಂಡು ಪ್ರತಿ ದಾಳಿ ನಡೆಸಿದ.

ಮೊದಲು ಲೋಕಯ್ಯನ ನೆತ್ತಿಗೆ ಸಲಾಕೆಯಿಂದ ಹೊಡೆದ. ಒಂದೇ ಹೊಡೆತಕ್ಕೆ ಲೋಕಯ್ಯ ಚಿಟ್ಟನೆ ಚೀರಿ ನೆಲಕ್ಕುರುಳಿದ. ತಲೆಯಿಂದ ಹರಿಯುತ್ತಿದ್ದ ರಕ್ತ ನೆಲವನ್ನು ತೊಯ್ಯಿಸಿತು. ಅಡ್ಡಬಂದ ಮಂಜಪ್ಪನ ತಲೆಗೂ ಒಂದು ಏಟು ಬಿತ್ತು. ಆ ಏಟು ನೇರ ಬೀಳದೆ ಸವರಿಕೊಂಡು ಹೋಯಿತು. ತಲೆ ಧಿಮ್ ಎನ್ನತೊಡಗಿತು. ಇವರಿಬ್ಬರ ಮೇಲೆ ನಡೆದ ದಾಳಿಯನ್ನು ನೋಡಿದ ಅಪ್ಪಾಜಪ್ಪ ಅಲ್ಲಿಂದ ಓಟಕಿತ್ತ.

ಮಂಜಪ್ಪನ ತಲೆಯಲ್ಲಿ ಬುಗುಟೆ ಬಂದಿತ್ತು. ರಕ್ತವೇನೂ ಬಂದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡ. ಟವೆಲ್ ಸುತ್ತಿಕೊಂಡಿದ್ದಕ್ಕೆ ಏಟು ಜಾರಿ ಬಚಾವಾದೆ ಎಂದುಕೊಂಡ. ಅಷ್ಟರಲ್ಲಿ ಕಾಡಯ್ಯನೂ ಅಲ್ಲಿಂದ ಓಟ ಕಿತ್ತಿದ್ದ.

ಕೆಳಗೆ ಮಿಸುಕಾಡದೆ ಬಿದ್ದಿದ್ದ ಭಾವಮೈದುನ ಲೋಕಯ್ಯನ ಮೂಗಿನ ಮೇಲೆ ಬೆರಳಿಟ್ಟ. ಉಸಿರು ನಿಂತಿತ್ತು. ಮೈಮೇಲೆ ಕೈಯಾಡಿಸಿದ. ಹಾವಿನಂತೆ ತಣ್ಣಗಾಗಿತ್ತು. ಸುತ್ತ ನೋಡಿದ. ನಡೆದದ್ದನ್ನು ಗಮನಿಸಲು ಅಲ್ಲಿ ಯಾರೂ ಇರಲಿಲ್ಲವೆಂದು ಗೊತ್ತಾಯಿತು.

ಹೇಗೂ ಇನ್ನೋರ್ವ ಭಾವಮೈದುನ ಅಪ್ಪಾಜಪ್ಪ ಓಡಿಹೋಗಿದ್ದಾನೆ. ನಾನೂ ಇಲ್ಲಿ ಇರಲಿಲ್ಲ, ಲೋಕಯ್ಯ ಒಬ್ಬನೇ ಇದ್ದಾಗ ಹಿಂದಿನಿಂದ ಬಂದು ಕಾಡಯ್ಯ ಕೊಲೆ ಮಾಡಿದ್ದಾನೆಂದು ಕೇಸ್ ಮಾಡಿಸಿದರೆ ಅವನನ್ನು ಜೈಲಿಗೆ ಕಳಿಸಬಹುದು. ನಾವೆಲ್ಲ ಜಗಳಕ್ಕೆ ಹೋದಾಗ ಮೂವರ ದಾಳಿಯನ್ನು ಎದುರಿಸಿ ಆತ್ಮರಕ್ಷಣೆಗೆ ಹೊಡೆದಾಗ ಕೊಲೆಯಾಗಿದ್ದಾನೆಂದರೆ ಕೇಸ್ ಅಷ್ಟೊಂದು ಜಬರ್‌ದಸ್ತ್ ಆಗಲಿಕ್ಕಿಲ್ಲ ಎಂದು ಲೆಕ್ಕ ಹಾಕಿದ. ಜಮೀನು ವ್ಯಾಜ್ಯದಲ್ಲಿ ಕೋರ್ಟ್ ಅಲೆದಿದ್ದ ಮಂಜಪ್ಪನಿಗೆ ಕಾಯ್ದೆ ಕಾನೂನಿನ ಪಟ್ಟುಗಳೆಲ್ಲ ಗೊತ್ತಾಗಿದ್ದವು. ತನ್ನ ಅರೆಬರೆ ಕಾಯ್ದೆ ಯೋಚನೆಗಳನ್ನು ಒಂದಕ್ಕೊಂದು ಹೆಣೆಯುತ್ತ, ಕಳ್ಳ ಹೆಜ್ಜೆಯಲ್ಲಿ ಊರೊಳಕ್ಕೆ ಹೋದ. ಮುಂಜಾವಿನ ಸಮಯ. ಎಲ್ಲ ತಮ್ಮ ಜಮೀನುಗಳಿಗೆ ಹೋಗುವ ತರಾತುರಿಯಲ್ಲಿದ್ದರು.

ಏನೂ ಆಗಿಲ್ಲ, ನಡೆದಿಲ್ಲ ಎನ್ನುವಂತೆ ಒತ್ತಾಯದಿಂದ ಮುಖಭಾವ ಸಂಘಟಿಸಿಕೊಂಡು ಕೃತಕ ನಗೆ ನಗುತ್ತ ತನ್ನ ಅಕ್ಕಪಕ್ಕದವರನ್ನು ಮಾತಾಡಿಸಿದ. ಮನೆಗೆ ಚಹ ಕುಡಿಯಲು ಕರೆದ. ಚಹ ಕುಡಿಸಿದ ಮೇಲೆ ದೇಶಾವರಿ ಮಾತಾಡುತ್ತ ತಮ್ಮ ಹುಲ್ಲು ಹಿತ್ತಲ ಕಡೆ ಹೋಗಿ ಬರೋಣ ನಡೀರಿ ಎಂದ. ಇಲ್ಲಪ್ಪ ನಮ್ಮವೇ ಕೆಲಸಗಳು ಕೈತುಂಬ ಇವೆ ಎಂದು ಒಂದಿಬ್ಬರು ಹೋದರು. ಇನ್ನಿಬ್ಬರು ಚಹದ ಮುಲಾಜಿಗೆ ಒಳಗಾಗಿ ಮಂಜಪ್ಪನ ಹಿಂದೆ ನಡೆದರು. ಕಾಡಯ್ಯನ ಹುಲ್ಲು ಹಿತ್ತಿಲನ್ನು ದಾಟಿಕೊಂಡೇ ಮಂಜಪ್ಪನ ಹುಲ್ಲು ಹಿತ್ತಿಲಿಗೆ ಬರಬೇಕು. ಅಲ್ಲಿ ಲೋಕಯ್ಯ ಬಿದ್ದುದನ್ನು ನೋಡಿ ಎದೆ ಎದೆ ಬಡಿದುಕೊಳ್ಳತೊಡಗಿದ.

"ನನ್ನ ವೈರಿ ಕಾಡಯ್ಯನ ಹುಲ್ಲು ಹಿತ್ತಿಲಿನಲ್ಲಿ ನನ್ನ ಭಾವಮೈದುನ ಹೆಣವಾಗಿ ಬಿದ್ದಿದಾನೆ. ಎಲ್ರೂ ಬನ್ರೋ" ಎಂದು ಚೀರಿಕೊಳ್ಳತೊಡಗಿದ.

ತನ್ನ ಏಟಿಗೆ ಲೋಕಯ್ಯ ಸತ್ತಿರಬೇಕು ಎಂದುಕೊಂಡಿರಲಿಲ್ಲ ಕಾಡಯ್ಯ. ಮನೆಗೆ ಹೋಗಿ ಕಬ್ಬಿಣದ ಸಲಾಕೆಯನ್ನು ನೀರಿನಿಂದ ತೊಳೆದು, ತಾನೂ ಸ್ನಾನ ಮಾಡಿ ಹೊಲಕ್ಕೆ ಹೊರಡುವ ಸಿದ್ಧತೆ ನಡೆಸಿದ್ದ.

ಮಂಜಪ್ಪನ ಚೀರಾಟಕ್ಕೆ ಹಳ್ಳಿಗೆ ಹಳ್ಳಿಯೇ ಸೇರಿತು. ಕಾಡಯ್ಯನ ಮನೆ ಮುಂದೆ ಜನ ಜಮಾಯಿಸಿತು. ಮಂಜಪ್ಪ ತನ್ನ ಆಳುಮಗನನ್ನು ಮಾಗಡಿ ಪೊಲೀಸ್ ಠಾಣೆಗೆ ಓಡಿಸಿದ್ದ.

ಒಂದೇ ಏಟಿಗೆ ಲೋಕಯ್ಯ ಗೊಟಕ್ ಎಂದಿದ್ದಾನಲ್ಲ ಎಂದು ಆಶ್ಚರ್ಯ, ಎದೆಗುದಿಗಳು ಶುರುವಾದವು. ಜನರನ್ನೆಲ್ಲ ನೋಡಿ ಮುಖ ಬೆವರತೊಡಗಿತು.

"ಏನ್ ಮಾಡ್ಲಿ ಮೂರೂ ಜನಾ ತೋಳೇರಿಸಿ ನನ್ನನ್ನ ಹೊಡೆಯೋಕೆ ಬಂದ್ರು, ನಾ ಹೊಡೀದಿದ್ರೆ ನನ್ನ ಅವ್ರು ಹೊಡೀತಿದ್ರು" ಎಂದ.

ಕಾಡಯ್ಯನನ್ನು ಕೈ ಮೈ ಮುಟ್ಟಿ ಮಾತಾಡಿಸುವ ಧೈರ್ಯ ಯಾರಿಗೂ ಇರಲಿಲ್ಲ.

ಪೋಲೀಸ್ ಜೀಪ್ ಮನೆ ಮುಂದೆ ನಿಂತಾಗ ಅದರೊಳಕ್ಕೆ ಕಾಡಯ್ಯ ಕೂತುಕೊಂಡ. ಕೊಲೆ ನಡೆದ ಸ್ಥಳ ಮತ್ತು ಡೆಡ್‌ಬಾಡಿಯ ಮಹಜರ್ ನಡೆಯಿತು.

ಮಂಜಪ್ಪ ಕೊಲೆ ನಡೆದಾಗ ತಾನು ಇರಲಿಲ್ಲ ಎಂದೇ ಬರೆಸಿದ. ತನ್ನ ಗೆಳೆಯರೊಂದಿಗೆ ಬಂದಾಗ ಲೋಕಯ್ಯ ಕೊಲೆಯಾಗಿದ್ದನ್ನು ಕಂಡುದಾಗಿ ಹೇಳಿಕೆ ನೀಡಿ ಅದಕ್ಕೆ ಸಹಿ ಮಾಡಿದ. ಸರ್ಕಲ್ ಇನ್ಸ್‌ಪೆಕ್ಟರ್ ಮುತ್ತಯ್ಯ ಕಾಡಯ್ಯನನ್ನು ಮಾತಾಡಿಸಿದಾಗ, "ಮೂವರೂ ಹೊಡೆಯಲು ಬಂದರು ಅದಕ್ಕೆ ಹೊಡೆದೆ" ಎಂದ. ನೀನು ತಪ್ಪು ಹೇಳಿಕೆ ನೀಡಿರುವಂತೆ ಕಾಣಿಸುತ್ತೆ. ನಿನ್ನ ಇನ್ನೊಬ್ಬ ಭಾವಮೈದುನ ಅಪ್ಪಾಜಪ್ಪ ಎಲ್ಲಿ? ಅವ್ನೂ ಬರ್ಲಿ ಅಂದ್ರೆ ಸತ್ಯ ಹೊರಬೀಳುತ್ತೆ. ಅಲ್ಲೀವರೆಗೆ ನೀನು ಠಾಣೆಯಲ್ಲೇ ಇರು ಎಂದು ಹೇಳಿದ. ಅಷ್ಟೊತ್ತಿಗೆ ಸಂಜೆಯಾಗಿತ್ತು. "ಅಪ್ಪಾಜಪ್ಪ ಅವರು ಊರಲ್ಲಿಯೂ ಇಲ್ಲ, ಎಲ್ಲೋ ತಲೆತಪ್ಪಿಸಿಕೊಂಡಿದ್ದಾನೆ" ಎಂದು ಪೋಲೀಸರು ವರದಿ ನೀಡಿದರು. ಮಂಜಪ್ಪ ರಾತ್ರಿ ಠಾಣೆಯಲ್ಲಿಯೇ ಕೂತ. ಲಾಕಪ್‌ನಲ್ಲಿ ಹಾಕಲಿಲ್ಲ. ಇನ್ಸ್‌ಪೆಕ್ಟರ್ ಮುತ್ತಯ್ಯ ಮನೆಗೆ ಹೋದ.

ಬೆಳಗ್ಗೆ ಆರು ಗಂಟೆಗೆ ಸೆಂಟ್ರಿ ಓಡಿ ಬಂದು "ಸಾರ್ ನಿನ್ನೆ ಕೊಲೆ ಕೇಸ್‌ನಲ್ಲಿ ಒಬ್ಬನ್ನ ಕೂರಿಸಿಕೊಂಡಿದ್ದೆವಲ್ಲ ಅವ್ನು ಸತ್ತೋಗಿದ್ದಾನೆ ಸಾರ್" ಎಂದ.

ಮುತ್ತಯ್ಯನ ಎದೆ ಧಸಕ್ಕೆಂದಿತು. ಠಾಣೆಗೆ ಓಡಿ ಬಂದ. ಪೋಸ್ಟ್ ಮಾರ್ಟಮ್‌ಗೆ ಬಾಡಿ ಕಳಿಸಿ ತಲೆ ಮೇಲೆ ಕೈ ಹೊತ್ತು ಕೂತ. ಮಂಜಪ್ಪನ ಸಾವು ನಿಗೂಢವಾಗಿತ್ತು. ಅದೆಷ್ಟೇ ತಲೆಕೆಡಿಸಿಕೊಂಡರೂ ಅದರ ಸುಳಿವು ಹತ್ತಲಿಲ್ಲ.

ಕಬ್ಬಿಣದ ಸಲಾಕೆಯಿಂದ ಏಟು ಬಿದ್ದು ತಲೆ ಬುರುಡೆಯಲ್ಲಿ ಹೇರ್‌ಲೈನ್ ಫ್ರಾಕ್ಚರ್ ಆಗಿ ಮಿದುಳಿನ ರಕ್ತಸ್ರಾವ ಆಗಿ ಸತ್ತಿದ್ದಾನೆಂದು ರಿಪೋರ್ಟ್ ಬಂತು.

"ರಾತ್ರಿ ಅವನಿಗೆ ಹೊಡೆದಿರೇನ್ರೋ?" ಎಂದು ಸೆಂಟ್ರಿಗಳಿಗೆ ಗದರಿಸಿ ಕೇಳಿದ.

ಡ್ಯೂಟಿ ಪೋಲೀಸರು, ನಮ್ಮ ಮಕ್ಕಳಾಣೆಗೂ ಹೊಡೆದಿಲ್ಲವೆಂದು ಕಣ್ಣೀರು ತಂದರು.

ಕಾಡಯ್ಯ ಸಲಾಕೆಯೇಟು ತನ್ನ ತಲೆಗೆ ಬಿದ್ದು ಜಾರಿ ಸ್ವಲ್ಪವೇ ಪೆಟ್ಟು ಬಿದ್ದಿದೆ ಎಂದುಕೊಂಡಿದ್ದ ಮಂಜಪ್ಪ. ರಕ್ತ ಹೊರಗೆ ಹರಿದಿಲ್ಲದ್ದನ್ನು ನೋಡಿ ತನಗೇನೂ

ಆಗಿಲ್ಲವೆಂದುಕೊಂಡಿದ್ದ. ಆದರೆ ರಕ್ತ ಬುರುಡೆಯೊಳಗೇ ಹರಿದು ಮಂಜುಗಟ್ಟಿ ವಿಷವಾಗಿ ಅವನ ಉಸಿರನ್ನು ತಿಂದುಹಾಕಿತ್ತು.

ಲಕ್ನೋದಲ್ಲಿಯೂ ಇಂಥದೇ ಕೇಸ್ ಒಂದು ಆಗಿತ್ತು. ಹೊಡೆದಾಟದಲ್ಲಿ ಒಬ್ಬನಿಗೆ ತಲೆಗೆ ಏಟು ಬಿದ್ದು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ತೆಗೆದುಕೊಂಡು ಮನೆಗೆ ಹೋದ. ತಲೆಯ ಗಾಯವೂ ಮಾಯಿತು. ಆದರೆ ಹತ್ತು ದಿನಕ್ಕೆ ಸತ್ತು ಹೋದ. ಹೀಗೆ ಮಿದುಳಿಗೆ ಒಳ ಹೊಡೆತ ಬಿದ್ದರೂ ಹತ್ತಾರು ದಿನಗಳವರೆಗೆ ಯಾವ ವ್ಯತ್ಯಾಸವೂ ಇಲ್ಲದೆ ನಿತ್ಯದಂತೆ ಓಡಾಡಿಕೊಂಡಿದ್ದೇ ಸಾಯುವ ಸಾಧ್ಯತೆಯಿರುತ್ತದೆ. ಸತ್ತವನ ತಲೆಗೆ ಹೊಡೆದವನು ಆದ ಸಣ್ಣ ಜಗಳವನ್ನು ಮರೆತು ಅಡ್ಡಾಡುತ್ತಿದ್ದಾಗ ಪೊಲೀಸರು ಬೇಡಿ ಹಿಡಿದು ಮುಂದೆ ನಿಂತಿದ್ದರು.

ಅದಕ್ಕೇ ಇವತ್ತು ಕೋರ್ಟ್‌ನಲ್ಲಿ ಮುಂದಿನ ಡೇಟ್ ತೆಗೆದುಕೊಂಡಿರುವೆ.

ಲೋಕಯ್ಯನನ್ನು ಕೊಂದುದರ ಕೇಸ್‌ನಲ್ಲಿ ಕಾಡಯ್ಯ ವಿಟ್ನೆಸ್ ಬಾಕ್ಸ್ ಹತ್ತಿ "ತನ್ನ ಮೇಲೆ ದಾಳಿ ಮಾಡಲು ಮೂವರು ಬಂದರು. ಅದರಲ್ಲಿ ಮಂಜಪ್ಪನೂ ಇದ್ದ. ಅವನ ತಲೆಗೂ ಒಂದು ಏಟು ಹೊಡೆದೆ" ಎಂದು ಹೇಳಿಕೆ ನೀಡಿದ್ದಾನೆ. ಕಾಡಯ್ಯನನ್ನು ಈ ಕೇಸ್‌ನಲ್ಲಿ ಒಬ್ಬ ಡಿಫೆನ್ಸ್ ವಿಟ್ನೆಸ್ ಆಗಿ ವಿಚಾರ ಮಾಡುತ್ತೇನೆ. ಅವನು ಅದಕ್ಕೆ ಒಪ್ಪಿದ್ದಾನೆ. ಆ ಸರ್ಕಲ್ ಇನ್ಸ್‌ಪೆಕ್ಟರ್ ಮುತ್ತಯ್ಯನವರಿಗೆ ಬಿಡುಗಡೆ ಆಗುತ್ತದೆ.

ಸರ್ಕಲ್ ಇನ್ಸ್‌ಪೆಕ್ಟರ್ ಮುತ್ತಯ್ಯನವರು ತಾವು ಈಗಾಗಲೇ ಬಿಡುಗಡೆ ಆಗಿರುವಂತೆಯೇ ಸಂತೋಷಭರಿತರಾಗಿ ಕೂತಿದ್ದರು.

37

ಗುರುಗಳಿಂದ ಮೊದಲ ಪಾಠ

ಕಾನೂನು ಪದವಿಯ ಅಂತಿಮ ವರ್ಷದ ಪರೀಕ್ಷೆ ಬರೆದು ಮುಗಿಸಿದಂದು ತಾರೀಖು 29.04.1972 ಆಗಿತ್ತು. ಊರಿಗೆ ಹೋದೆ. ನಮ್ಮ ಸೋದರಮಾವ ಸಿದ್ಧನಂಜೇಗೌಡರನ್ನು ಭೇಟಿಯಾದೆ.

"ಏನೊ, ಹೇಗ್ ಬರ್ದಿದೀಯಾ ಪರೀಕ್ಷೆ?" ಎಂದರು.

"ಚೆನ್ನಾಗಿ ಬರ್ದಿದೇನೆ ಮಾವ. ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಆಗಬಹುದು" ಎಂದೆ.

"ಇದಕ್ಕಪ್ಪ ಓದೋದು ಅನ್ನೋದು. ಊಂ, ಏನ್ ಮಾಡ್ತೀಯಾ ಈಗ?" ಎಂದರು.

"ಇಲ್ಲೇ ಸ್ವಲ್ಪ ದಿವಸ ಹಳ್ಳೀಲಿ ಇರ್ತೀನಿ. ತೋಟ, ಗದ್ದೆಗಳು ಮರೆತಂತಾಗಿವೆ. ಬೇಟೆಗೆ ಹೋಗಿದ್ದು ಕನಸಾಗಿದೆ. ದೊಡ್ಡ ಹೆಜ್ಜಾಜಿ, ಚಿಕ್ಕ ಹೆಜ್ಜಾಜಿ, ದೊಡ್ಡ ಬಳ್ಳಾಪುರಗಳನ್ನು ಸುತ್ತಿ ನನ್ನ ಹಳೆಯ ಸ್ನೇಹಿತರನ್ನು ಮಾತಾಡಿಸಿಕೊಂಡು ಬರುವೆ.

ಅಷ್ಟರಲ್ಲಿ ನನ್ನ ರಿಸಲ್ಟ್ ಬರುತ್ತೆ. ನಿಮ್ಮ ಸ್ನೇಹಿತ ಅದೇ ಆ ಸಾದಿಕಾ ಅಂದು ಗಲಾಟೆ ಮಾಡಿದ್ದಲ್ಲ..... ದೇವದಾಸ್ ಅವರ್ಹತ್ರ ಜ್ಯೂನಿಯರ್ ಆಗ್ತೀನಿ...." ಎಂದೆ.

"ಅಲ್ವೊ, ಈಗ ಹಳ್ಳಿ ಮುಂಚಿನಂಗೆ ಉಳಿದಿಲ್ಲ. ಕೆಟ್ಟು ಕೊಳಕಾಗ್ಯೆತೆ. ಜನಕ್ಕೆ ಈಗ ಸ್ನೇಹ, ವಿಶ್ವಾಸ ಬೇಕಿಲ್ಲ; ಗಿಲೀಟ್ ಮಾತು ಬೇಕು. ಹಳ್ಳೀಲಿ ಒಂದ್ ತಿಂಗ್ಳು ನೀ ಕೂತೆ ಅಂದ್ರೆ ನಿನ್ನ ತಲೆ ಖಾಲಿಯಾಗೋದು ಗ್ಯಾರಂಟಿ. ನಾಳೇನೆ ರೆಡಿಯಾಗು. ಬೆಂಗಳೂರಿಗೆ ಹೋಗೋಣ" ಎಂದರು.

ಮಾರನೆ ದಿನ ಬೆಂಗಳೂರಿಗೆ ಬಂದಾಗ ದೇವದಾಸ್ ಅವರು ಆಫೀಸ್‌ನಲ್ಲಿದ್ದರು. ಅಂದು ಭಾನುವಾರವಾಗಿತ್ತು. ಒಳ್ಳೆ ಮೂಡ್‌ನಲ್ಲಿದ್ದರು. ಲಹರಿಯಲ್ಲಿ ಮಾತಾಡುತ್ತಿದ್ದರು. ನನ್ನನ್ನು ನೋಡಿ, "ಏನಯ್ಯ ಮತ್ತೇನು ವಿಷ್ಯ? ಲಾ ಪಾಸ್ ಆಯ್ತಾ?" ಎಂದು ಕೇಳಿದರು. "ಪರೀಕ್ಷೆ ಬರೆದವ್ನೆ. ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗೇತೀರ್ತೇನೆ ಅಂತಿದಾನೆ. ಈಗಿನಿಂದ್ಲೇ ನಿಮ್ ಆಫೀಸ್‌ನಲ್ಲಿ ಕೆಲಸ ಮಾಡಬೇಕೂ ಅಂತಿದಾನೆ. ಅದ್ಕೇ ಸೇರಿಸಾಣ ಅಂತ ಕರ್‍ಕಂಬಂದೆ...." ಎಂದರು ಮಾವ ನನ್ನ ಕಡೆಗೊಮ್ಮೆ ನೋಟಹರಿಸಿ.

"ಇದಪ್ಪ ಲಕ್ಷಣ. ಲಾಯರ್ ಆಗೋವ್ನಿಗೆ ಈ ಥರದ ಆತ್ಮವಿಶ್ವಾಸ ಇರಬೇಕು. ನಿನ್ನಲ್ಲಿ ಧೈರ್ಯ ಇದೆ, ವೃತ್ತೀಲಿ ಯಶಸ್ಸು ಸಿಕ್ಕುತ್ತೆ.

ಲಾಯರ್ ಹತ್ರ ಬರೋ ಕ್ಲೈಂಟ್‌ಗಳು ರಿಸಲ್ಟ್ ಓರಿಯೆಂಟೆಡ್ ಆಗಿರ್ತಾರೆ. ಲಾಯರ್‌ಗೆ ಎಂಥ ಪಾಂಡಿತ್ಯ, ಕಾನೂನಿನ ಜ್ಞಾನ ಇದೆ ಅನ್ನೋದನ್ನ ಗಮನಿಸೋದಿಲ್ಲ. ತಮ್ಮ ಕೇಸು ಗೆದ್ದೀತೊ ಇಲ್ವೊ ಅನ್ನೋದನ್ನ ಮಾತ್ರ ನೋಡ್ತಾರೆ. ಹಾಗಂತ ಏನೇನೊ ಮಾಡ್ಲಿಕ್ಕೆ ಹೋದ್ರೆ ಲಾಯರ್ ಬದ್ಲಿ ಬ್ರೋಕರ್ ಆಗೋ ಅಪಾಯ ಇರ್ತದೆ. ಹಾಗಾಗದಂಗೆ ಬ್ಯಾಲನ್ಸ್ಡ್ ಆಗಿ ಹೋಗಬೇಕಾಗುತ್ತೆ. ಪ್ರೊಫೆಷನ್‌ನಲ್ಲಿ ಮೇಲೆ ಬರೊ ಸೂಚನೆ ಕಾಣುತ್ತಲೇ ಅಸೂಯೆ ಶುರುವಾಗುತ್ತೆ. ವಿನಯದ ನಡವಳಿಕೆಗಳು ಅಸೂಯೆಯನ್ನು ಕಡಿಮೆ ಮಾಡುತ್ತವೆ. ದುಡ್ಡು, ಕೀರ್ತಿಗಳೊಂದಿಗೆ ಅಹಂಕಾರ ಸೇರಿಕೊಳ್ಳಲು ಬಿಡಬಾರ್ದು. ಕೀರ್ತಿಯ ಮದ ತಲೆಗೇರಿದರೆ ಅದನ್ನ ಇಳಿಸೋದು ಕಷ್ಟ.

ಒಳ್ಳೆ ಲಾಯರ್ ಆಗಬೇಕಾದ್ರೆ ಕಾನೂನಿನ ಜ್ಞಾನ ಎಷ್ಟು ಮುಖ್ಯಾನೊ ಅಷ್ಟೇ ಮುಖ್ಯ ಕ್ರಾಸ್ ಎಗ್ಸಾಮಿನೇಷನ್ ಮಾಡೊ ಕಲೆ. ಯಾಂತ್ರಿಕವಾಗಿ ಕ್ರಾಸ್ ಎಗ್ಸಾಮಿನೇಷನ್ ಮಾಡಿದರೆ ಯಶಸ್ಸು ಸಿಕ್ಕೊಲ್ಲ. ಅದು ಕಲೆಯಾಗಿ ಕರಗತವಾಗಬೇಕು. ಅದು ಕಲೆಯಾಗಿ ಒಲಿಯುವಾಗ ನಮ್ಮನ್ನ ದಾರಿ ತಪ್ಪಿಸುತ್ತಿರುತ್ತೆ

ಕ್ರಾಸ್ ಎಗ್ಸಾಮಿನೇಷನ್ ಮಾಡುವಾಗ ನಮಗೆ ನಾವೇ ಅದ್ಭುತವಾಗಿ ಪಾಟೀಸವಾಲು ಹಾಕುತ್ತಿದ್ದೇವೆ ಎಂದುಕೊಂಡು ಅತಿಯಾಗಿ ಪ್ರಶ್ನೆಗಳನ್ನು ಕೇಳಿ ಕೇಸ್ ಕೆಡಿಸಿಕೊಳ್ಳುವ ಸಾಧ್ಯತೆಯಿರುತ್ತದೆ. ಹಣ ಕಂತೆಗಟ್ಟಲೆ ಕೈಗೆ ಬಂದಾಗ ದುಂದುವೆಚ್ಚಕ್ಕೆ ಪ್ರೇರಣೆ ಸಿಗುವಂತೆ ಮಾತು ಕರಗತವಾದಾಗ ಮಾತಿನ ದುಂದುಗಾರಿಕೆಗೆ ಒಳಗಾಗುತ್ತೇವೆ. ಅದನ್ನು ನಿಯಂತ್ರಿಸಿಕೊಂಡರೆ ಮುಗಿಯಿತು ವಿಜಯಲಕ್ಷ್ಮಿ ಸದಾ ನಮ್ಮಲ್ಲಿರುತ್ತಾಳೆ" ಎಂದು ಹೇಳುತ್ತಾ ಒಂದು ಉದಾಹರಣೆಯನ್ನು ಕೊಟ್ಟರು.....

ಇದು ನಡೆದದ್ದು ಇಂಗ್ಲೆಂಡ್‌ನಲ್ಲಿ. ಸಾಮುಯೆಲ್ ಶ್ರೀಮಂತ. ಒಮ್ಮೆ ತನ್ನ ಕಾರನ್ನು ನಿರ್ಲಕ್ಷ್ಯದಿಂದ ಡ್ರೈವ್ ಮಾಡಿಕೊಂಡು ಹೋಗುವಾಗ ಡೇವಿಡ್ ಎನ್ನುವ ಬಡವನ ಹದಿವಯದ ಮಗಳ ಮೇಲೆ ಹಾಯಿಸಿಬಿಡುತ್ತಾನೆ. ತನ್ನ ಮಗಳು ಸತ್ತುದನ್ನು ನೋಡಿದ ಡೇವಿಡ್ ಕೆಂಡಾಮಂಡಲವಾಗುತ್ತಾನೆ. ಸಾಮುಯೆಲ್ ಜೊತೆ ಜಗಳಕ್ಕಿಳಿಯುತ್ತಾನೆ. ಅವನು ಪೋಲೀಸರನ್ನು ಕರೆಸುತ್ತಾನೆ. "ನೀನು ಏನಿದ್ದರೂ ಕೋರ್ಟ್‌ನಲ್ಲಿ ಕೇಳು. ಅಲ್ಲಿ ನನಗೆ ಎಷ್ಟು ಪರಿಹಾರ ಕೊಡುವುದು ಅಂತ ತೀರ್ಮಾನವಾಗುತ್ತೋ ಅಷ್ಟು ಕೊಡುತ್ತೇನೆ. ಹೆಚ್ಚಿಗೆ ಬಾಯಿಬಿಡಬೇಡ" ಎಂದು ಸಾಮುಯೆಲ್ ಗದರಿಸುತ್ತಾನೆ.

"ನನಗೆ ಬೇಕಾದ್ದು ಪರಿಹಾರ ದುಡ್ಡಲ್ಲ, ನಿನ್ನ ಜೀವ" ಎಂದು ಕಿರುಚುತ್ತಾನೆ ಡೇವಿಡ್.

ಒಂದು ರಾತ್ರಿ ಮಳೆ ಸುರಿಯುತ್ತಿರುವಾಗ ಸಾಮುಯೆಲ್ ಕಾಂಪೌಂಡ್ ಒಳಗೆ ಡೇವಿಡ್ ಕಾಯುತ್ತ ಕೂತಿರುತ್ತಾನೆ. ಸಾಮುಯೆಲ್ ಕಾರ್‌ನಿಂದ ಇಳಿಯುತ್ತಲೇ ಹಿಂದಿನಿಂದ ತಲೆಗೆ ಕಬ್ಬಿಣದ ಸಲಾಕೆಯಿಂದ ಡೇವಿಡ್ ಹೊಡೆಯುತ್ತಾನೆ. ಸಾಮುಯೆಲ್ ಚೀರಿ ಕೆಳಕ್ಕೆ ಬಿದ್ದಾಗ ಡೇವಿಡ್ ಕ್ರೋಧಾವೇಶಗಳಿಂದ "ಈಗ ನನಗೆ ಪರಿಹಾರ ಸಿಕ್ತು" ಎಂದು ಚೀರುತ್ತಾನೆ. ಸಾಮುಯೆಲ್ ಮನೆಮುಂದಿನ ರಸ್ತೆಯಲ್ಲಿ ಫ್ಲವರ್ ಎನ್ನುವ ವ್ಯಕ್ತಿ ಅದೇ ಸಮಯಕ್ಕೆ ಹೊರಟಿರುತ್ತಾನೆ. "ಡೇವಿಡ್ ಏನಾಯ್ತು?" ಎಂದು ಕೇಳುತ್ತಾನೆ. "ಯಾರೂ ಇಲ್ಲ ಈ ಕಾಳ ರಾತ್ರಿಯಲ್ಲಿ, ಅದೂ ಎಲ್ಲೆಡೆ ಕರೆಂಟ್ ಹೋಗಿರುವಾಗ ನನ್ನನ್ನು ಗುರುತು ಹಿಡಿದು ಕೂಗುತ್ತಿದ್ದಾನಲ್ಲ ಯಾವನಿವ?" ಎಂದು ಬೆಚ್ಚಿ ಸಲಾಕೆಯನ್ನು ಕೈಯಲ್ಲಿ ಹಿಡಿದುಕೊಂಡೇ ಓಡಿಹೋಗುತ್ತಾನೆ.

ಡೇವಿಡ್ ಕೊಲೆಗಾರ ಎನ್ನುವುದಕ್ಕೆ ಐ ವಿಟ್ನೆಸ್ ಫ್ಲವರ್ ಒಬ್ಬನೇ ಇರುತ್ತಾನೆ. ಅದೊಂದು ಫೇಲ್ ಆದರೆ ಡೇವಿಡ್ ಪಾರಾಗುತ್ತಾನೆ.

ಡೇವಿಡ್ ಎಂಥ ಬಡವನೆಂದರೆ ತನ್ನ ಕಡೆಯಿಂದ ವಕೀಲನನ್ನು ಇಡುವ ಸಾಮರ್ಥ್ಯವೂ ಇರುವುದಿಲ್ಲ. ಕೋರ್ಟ್ ಸರ್ಕಾರದ ವತಿಯಿಂದ ಸ್ಟ್ಯಾಂಡಿಂಗ್ ಕೌನ್ಸಿಲ್‌ನ ಸಹಾಯ ನೀಡುತ್ತದೆ.

ಡೇವಿಡ್ ಪರವಾಗಿ ಯುವ ವಕೀಲ ಮೈಕೇಲ್ ವಾದ ಮಾಡತೊಡಗುತ್ತಾನೆ. ಬಾರ್‌ನಲ್ಲಿ ಲಾರೆನ್ಸ್ ಎನ್ನುವ ಸೀನಿಯರ್ ವಕೀಲನಿರುತ್ತಾನೆ. ಯುವ ವಕೀಲರಿಗೆ ಕೋರ್ಟ್‌ನಲ್ಲಿ ಸಲಹೆ ನೀಡಿ ತಿದ್ದುವಷ್ಟು ದೊಡ್ಡ ಮನಸ್ಸಿನವ ಆತನಾಗಿರುತ್ತಾನೆ.

ಕೊಲೆ ಮೊಕದ್ದಮೆಯಾದ್ದರಿಂದ ಎಲ್ಲರೂ ಕುತೂಹಲದಿಂದ ಈ ಕೇಸ್‌ನ ಪ್ರಕ್ರಿಯೆಯನ್ನು ಅವಗಾಹನಿಸುತ್ತಿರುತ್ತಾರೆ. ಲಾರೆನ್ಸ್ ಹತ್ತಿರ ಯುವ ವಕೀಲ ಮೈಕೇಲ್ ಸಲಹೆ, ಮಾರ್ಗದರ್ಶನಗಳನ್ನು ಪಡೆದುಕೊಂಡು ಮುಖ್ಯ ಐ ವಿಟ್ನೆಸ್ ಫ್ಲವರ್‌ನನ್ನು ಕ್ರಾಸ್ ಮಾಡಲು ನಿಂತಿರುತ್ತಾನೆ.

"ಸಾಮುಯೆಲ್ ಕೊಲೆಯಾದಾಗ ಸಮಯ ಎಷ್ಟಾಗಿತ್ತು?"

"ರಾತ್ರಿ ಹತ್ತೂವರೆ."

"ನಿನ್ನ ಕೈಯಲ್ಲಿ ಟಾರ್ಚ್ ಇತ್ತೆ?"

"ಇಲ್ಲ"

"ಮಳೆ ಬರುತ್ತಿತ್ತೊ?"

"ಹೌದು."

"ಕರೆಂಟ್ ಹೋಗಿ ಎಲ್ಲೆಡೆ ಕತ್ತಲಾವರಿಸಿತ್ತೋ?"

"ಹೌದು."

ಮೈಕೇಲ್ ಇಷ್ಟು ಪ್ರಶ್ನೆಗಳನ್ನು ಕೇಳಿ ಮುಗಿಸುತ್ತಲೇ ಸೀನಿಯರ್ ವಕೀಲ ಲಾರೆನ್ಸ್ ಹಿಂದಿನಿಂದ ಮೈಕೇಲ್‌ನ ಕೋಟನ್ನು ಜಗ್ಗಿ ಇಲ್ಲಿಗೇ ಸಾಕುಮಾಡು ಮುಂದೆ ಪ್ರಶ್ನೆಗಳನ್ನು ಕೇಳಿದರೆ ಕೇಸ್ ಕೈಬಿಡುತ್ತದೆ ಎಂದು ಪಿಸುಗುಟ್ಟಿದ.

ಆದರೆ ಮೈಕೇಲ್ ತಾನು ಕ್ರಾಸ್ ಮಾಡಿದ ಸ್ಟೈಲ್ ಮತ್ತು ಗತ್ತುಗಳಿಗೆ ತಾನೇ ಮಾರುಹೋಗಿದ್ದ. ಕೋರ್ಟ್ ಹಾಲ್ ಎಲ್ಲ ವಕೀಲರ ಮೆಚ್ಚುಗೆಯ ನೋಟಗಳೊಂದಿಗೆ ಜಡ್ಜ್ ಮುಖದ ಮೇಲಿನ ಮೆಚ್ಚುಗೆಯ ಮುಗುಳ್ನಗೆ ಮೈಕೇಲ್‌ನನ್ನು ಉದ್ದೀಪನಗೊಳಿಸಿತು. ಸೀನಿಯರ್ ವಕೀಲ ಲಾರೆನ್ಸ್‌ನ ಮಾತನ್ನು ತಾನು ಕೇಳಿಸಿಯೇಕೊಂಡಿಲ್ಲ ಎನ್ನುವಂತೆ ಕ್ರಾಸ್ ಎಗ್ಸಾಮಿನೇಷನ್ ಅನ್ನು ಮುಂದುವರಿಸಿಯೇ ಬಿಟ್ಟ.

"ಮಳೆ ಬರುತ್ತಿತ್ತು, ಕತ್ತಲಾಗಿತ್ತು. ಕೈಯಲ್ಲಿ ಟಾರ್ಚ್ ಇರಲಿಲ್ಲ, ಆದರೂ ಕೊಲೆ ಮಾಡಿದವನು ಇವನೇ ಎಂದು ಹೇಗೆ ಹೇಳುತ್ತೀಯೇ?" ಎಂದು ಕೇಳಿಬಿಟ್ಟ.

"ಡೇವಿಡ್ ನನ್ನ ಓಣಿಯಲ್ಲೇ ಇರುವವ ಮತ್ತು ಪರಿಚಿತ. ಅವನು ಕೊಲೆ ಮಾಡಿದ ಮೇಲೆ 'ನನಗೆ ಈಗ ನಿಜವಾದ ಪರಿಹಾರ ಸಿಕ್ಕಿತು' ಎಂದು ಉನ್ಮಾದದಿಂದ ಕೂಗಿದ. ಅದಕ್ಕಾಗಿಯೇ ನಾನು ಅವನ ಮುಖ ನೋಡದೆಯೇ 'ಏನಾಯ್ತು ಡೇವಿಡ್?' ಎಂದು ಕೂಗಿ ಕೇಳಿದೆ. ಅಷ್ಟರಲ್ಲಿ ಅವನು ಓಡಿಹೋದ. ಕತ್ತಲಲ್ಲಿ ಓಡುತ್ತಿದ್ದ ದೇಹದ ಎತ್ತರ, ಮಾಟ, ಓಟಗಳು ಕೇಳಿಸಿಕೊಂಡ ಧ್ವನಿಯೊಂದಿಗೆ ಸೇರಿ ಅದು ಡೇವಿಡ್‌ನೇ ಹೌದು ಎನ್ನುವ ತೀರ್ಮಾನಕ್ಕೆ ಬಂದೆ....." ಎಂದು ಉತ್ತರಿಸಿಬಿಟ್ಟ.

ಇಡೀ ಕೋರ್ಟ್ ಮೌನವಾಗಿಬಿಟ್ಟಿತು. ಡೇವಿಡ್‌ಗೆ ಶಿಕ್ಷೆ ಗ್ಯಾರಂಟಿ ಎನ್ನುವ ಭಾವನೆ ಜಡ್ಜ್ ಮುಖದ ಮೇಲೆ ತೇಲಿದ್ದನ್ನು ಮೈಕೇಲ್ ಗಮನಿಸಿದ. ತನ್ನ ತಪ್ಪಿನ ಅರಿವಾಗಿ ಸೀನಿಯರ್ ಲಾರೆನ್ಸ್ ಕಡೆ ತಿರುಗಿದ.

ಎದ್ದು ನಿಂತ ಲಾರೆನ್ಸ್ "ಮೈ ಡಿಯರ್ ಬಾಯ್, ನಾನು ನಿನ್ನ ಕೋಟ್ ಜಗ್ಗಿ ಎಳೆದಾಗಲೇ ಸಾಕು ಮಾಡಿದ್ದಿದ್ದರೆ ನಿನ್ನ ಕ್ಲೈಂಟ್ ಉಳಿಯುತ್ತಿದ್ದ. ಈಗ ಅವನು ಸ್ವರ್ಗಕ್ಕೋ, ನರಕಕ್ಕೋ ಹೋಗುತ್ತಾನೆ. ಅಲ್ಲಿಗೆ ನೀನೂ ಹೋಗಿ ಅವನ ಕ್ಷಮಾಪಣೆಯನ್ನು ಯಾಚಿಸು...." ಎಂದು ಹೇಳಿ ಕೋರ್ಟ್ ಹಾಲ್‌ನಿಂದ ನಿರ್ಗಮಿಸುತ್ತಾನೆ!

ದೇವದಾಸ್, "ಹೂಂ, ಆಯಿತು ಇದು ಮೊದಲ ಪಾಠ ನಿನಗೆ. ಗುರುದಕ್ಷಿಣೆಯಾಗಿ ಟೀ ತೆಗೆದುಕೊಂಡು ಬಾ ಹೋಗು" ಎಂದಾಗಲೇ ಇಂಗ್ಲೆಂಡ್ ಕೋರ್ಟ್ ಹಾಲ್‌ನಿಂದ ಹೊರಬಂದು ಸುಜಾತ ಹೋಟೆಲ್ ಕಡೆ ಓಡಿದೆ.

38

ದೇವದಾಸ್ : ಗುರಿ ಮತ್ತು ದಾರಿ

ನಾನು ದೇವದಾಸ್ ಅವರ ಜ್ಯೂನಿಯರ್ ಆಗಿ 1972ರ ಮೇ ತಿಂಗಳಿನಲ್ಲಿ ಸೇರಿಕೊಂಡಾಗ ರಾಜಾ ಅಯ್ಯಂಗಾರ್ ಮತ್ತು ಶ್ರೀನಿವಾಸ ಅಯ್ಯರ್‌ಗಳು ಹತ್ತಾರು ವರ್ಷಗಳಿಂದ ಜ್ಯೂನಿಯರ್‌ಗಳಾಗಿದ್ದರು. ಜನತಾದಳ ಸರ್ಕಾರದಲ್ಲಿ ಸಚಿವರಾಗಿದ್ದ ಬಚ್ಚೇಗೌಡರು ಮತ್ತು ದೇವದಾಸ್ ಅವರ ದೂರದ ಸಂಬಂಧಿ ಮನೋಹರ್ ಅವರು ಮೂರು ನಾಲ್ಕು ವರ್ಷಗಳಿಂದ ಜ್ಯೂನಿಯರ್‌ಗಳಾಗಿದ್ದರು.

ಬಚ್ಚೇಗೌಡರಿಗೆ ವಕೀಲಿ ವೃತ್ತಿಗಿಂತ ರಾಜಕೀಯದಲ್ಲೇ ಒಲವು ಜಾಸ್ತಿ. ಅವರಲ್ಲಿ ಆವಾಗಲೇ ರಾಜಕಾರಣಿಯ ಗುಣಲಕ್ಷಣಗಳು ಎದ್ದು ತೋರತೊಡಗಿದ್ದವು.

ಇಷ್ಟೆಲ್ಲ ಜ್ಯೂನಿಯರ್‌ಗಳಿದ್ದರೂ ಪರಿಪೂರ್ಣ ಜ್ಯೂನಿಯರ್ ಎನ್ನಿಸಿಕೊಂಡ ವಕೀಲರು ಅವರ ಬಳಿಯಿರಲಿಲ್ಲ. ಈ ಕಾರಣಕ್ಕಾಗಿ ದೇವದಾಸ್ ಅವರು ರಾಮಚಂದ್ರರಾವ್ ಎನ್ನುವ ಮರಾಠಿಗರೊಬ್ಬರನ್ನು ಕ್ಲರ್ಕ್ ಕಮ್ ಟೈಪಿಸ್ಟ್ ಆಗಿ ನೇಮಿಸಿಕೊಂಡಿದ್ದರು. ಹಗಲು ಕೋರ್ಟ್ ಡ್ಯೂಟಿ ಮಾಡುತ್ತಿದ್ದ ರಾಮಚಂದ್ರ ರಾವ್ ಸಂಜೆ ಆಫೀಸ್‌ನಲ್ಲಿ ಟೈಪಿಸ್ಟ್ ಆಗಿ ಮಾರ್ಪಾಟಾಗಿಬಿಡುತ್ತಿದ್ದರು. ಕುಳ್ಳಗೆ,

ತೆಳ್ಳಗಿನ ಆ ವ್ಯಕ್ತಿ ಮೂಗಿನ ತುದಿಯಲ್ಲಿ ತನ್ನ ಚಶ್ಮಾ ಕೂರಿಸಿಕೊಂಡಿರುತ್ತಿದ್ದ. ಆತ ಟೈಪ್ ಮಾಡತೊಡಗಿದರೆ ಸೊಂಟದ ಮೇಲ್ಭಾಗ ಕುಣಿದಾಡುತ್ತಿತ್ತು. ಆಗಾಗ ದೇವದಾಸ್ ಅವರು ಕ್ಲರ್ಕ್‌ಗೆ 'ರೀ ಕುಣೀಬೇಡ್ರೀ' ಎಂದು ಹೇಳುವುದನ್ನು ರೂಢಿ ಮಾಡಿಕೊಂಡಿದ್ದರು. .

ನಾನು ನನ್ನನ್ನು ವೃತ್ತಿಗೆ ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದೆ. ರಾತ್ರಿ ಎಷ್ಟೇ ಹೊತ್ತಾಗಲಿ ಸೀನಿಯರ್ ಹೋಗುವವರೆಗೆ ನಾನು ಆಫೀಸ್ ಬಿಟ್ಟು ಕದಲುತ್ತಿರಲಿಲ್ಲ. ಟೈಪಿಸ್ಟ್ ಸಹ ತನ್ನ ಅಂದಿನ ಕೆಲಸ ಮುಗಿಸಿ ಮನೆಗೆ ಹೊರಟು ಹೋಗುತ್ತಿದ್ದ. ದೇವದಾಸ್ ಆಫೀಸ್‌ನಲ್ಲಿ ರಾತ್ರಿ ಹತ್ತು ಹತ್ತೂವರೆವರೆಗೆ ಕೂರುತ್ತಿದ್ದರು. ನಾನೂ ಕೂರತೊಡಗಿದೆ. ರೆಫರೆನ್ಸ್‌ಗೆ ಇಂಥ ಪುಸ್ತಕ ಬೇಕು ಎಂದು ಕೇಳಿದರೆ ಉತ್ಸಾಹದಿಂದ ತೆಗೆದುಕೊಡುತ್ತಿದ್ದೆ.

ಗಾಂಧಿನಗರ ನಾಂಯ್ಡು ಬಿಲ್ಡಿಂಗ್ ಪ್ರದೇಶ ಈಗಿನಂತೆ ಜನದಟ್ಟಣೆಯದಾಗಿರಲಿಲ್ಲ. ರಾತ್ರಿ 9 ಗಂಟೆಯಾದರೆ ನಿಶ್ಯಬ್ದವಾಗುತ್ತಿತ್ತು; ಮಧ್ಯರಾತ್ರಿಯ ವಾತಾವರಣ ಆವರಿಸಿಕೊಳ್ಳುತ್ತಿತ್ತು.

ಕೆಲವೇ ವಾರಗಳಲ್ಲಿ ನನ್ನ ಶ್ರದ್ಧೆ, ನಿಷ್ಠೆ, ಉತ್ಸಾಹಗಳನ್ನು ದೇವದಾಸ್ ಅವರು ಗುರುತಿಸಿದರು. ತೀರಾ ವಿಶ್ವಾಸಕ್ಕೆ ತೆಗೆದುಕೊಂಡರು. ತಮ್ಮ ಖಾಸಗಿ ಭೇಟಿಗಳಿಗೆಲ್ಲ ನನ್ನನ್ನು ಜೊತೆ ಮಾಡಿಕೊಂಡು ಹೋಗತೊಡಗಿದರು.

ಹೀಗೇ ಒಂದು ರಾತ್ರಿ ಒಂಬತ್ತೂವರೆ ಸಮಯವಾಗಿತ್ತು. ನಾನು ಮತ್ತು ದೇವದಾಸರು ಮಾತ್ರ ಆಫೀಸ್‌ನಲ್ಲಿದ್ದೆವು. ಕೆಳಗಡೆ ಆಟೋ ಒಂದು ಬಂದು ನಿಂತ ಶಬ್ಧ ಕೇಳಿಸಿತು. ನಮ್ಮ ಆಫೀಸ್ ಮೊದಲ ಮಹಡಿಯಲ್ಲಿತ್ತು. "ಏ ಹನುಮಂತ್ರಾಯ, ಆ ಸಾದಿಕಾ ಬಂದಳೇನೊ ನೋಡೋ" ಎಂದರು ಗಾಬರಿಯ ಧ್ವನಿಯಲ್ಲಿ.

ನಾನು ಹೋಗಿ ಬಾಗಿ ನೋಡಿದೆ. "ಸಾರ್, ಅಲ್ಲ. ಬೇರೆ ಯಾರೊ ಹೆಣ್ಣುಮಗಳು ಮೂರು ಮಕ್ಕಳೊಂದಿಗೆ ಬಂದವಳೆ" ಎಂದೆ. ಅಷ್ಟರಲ್ಲಿ ಆ ಹೆಣ್ಣುಮಗಳು ಮೇಲೇರಿ ಬಂದಳು. ದೇವದಾಸ್ ಅವರು, "ನೀನಾ? ಏಕೆ ಇಷ್ಟೊತ್ತಿನಲ್ಲಿ?" ಎಂದು ಪ್ರಶ್ನಾರ್ಥಕವಾಗಿ ನೋಡಿದರು.

ಆ ಹೆಣ್ಣುಮಗಳು ಮಾತಾಡಲಿಲ್ಲ, ಅಳುತ್ತಿದ್ದಳು. ಹಾಗೆಯೇ ತನ್ನ ಮೂರು ಮಕ್ಕಳನ್ನು ಎಳೆದುಕೊಂಡು ಅವರ ಕಾಲಿಗೆ ಬಿದ್ದಳು.

"ಏಳು, ಏಳು. ವಿಷಯ ಏನೂಂತ ಹೇಳು" ಎಂದು ಗದರಿದರು.

"ನನ್ನ ಗಂಡನ್ನ ಜೈಲಿಗೆ ಹಾಕಿಬಿಟ್ಟಿದ್ದಾರೆ. ನಮಗೆ ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಗತಿಯಿಲ್ಲ. ಅವರನ್ನು ಬಿಡಿಸಿಕೊಡಬೇಕು" ಎಂದು ಮತ್ತೆ ರೋದಿಸತೊಡಗಿದಳು.

ನಂತರ ನನಗೆ ಆಕೆ ಯಾರು ಮತ್ತು ಬಂದದ್ದೇಕೆಂದು ಗೊತ್ತಾಯಿತು. ಅವಳು ದೇವದಾಸ್ ಅವರ ಧರ್ಮಪತ್ನಿಯ ಸಹೋದರ ಸಂಬಂಧಿಯಾಗಿದ್ದಳು. ಆಕೆಯ ಗಂಡ ಶ್ರೀನಿವಾಸ ಚಿತ್ರದುರ್ಗದ ಪೊಲೀಸ್ ಠಾಣೆಯೊಂದರಲ್ಲಿ ಕಾನ್ಸ್‌ಟೇಬಲ್ ಆಗಿದ್ದ; ಅತ್ತ ಜಾಣನೂ ಅಲ್ಲದ ಇತ್ತ ಹುಚ್ಚನೂ ಅಲ್ಲದ ಎಡಬಿಡಂಗಿ ಸ್ವಭಾವದ ವ್ಯಕ್ತಿಯಾಗಿದ್ದ. ಠಾಣೆಯ ಸಬ್‌ಇನ್ಸ್‌ಪೆಕ್ಟರ್ ತನ್ನ ಕೈಕೆಳಗೆ ಕೆಲಸ ಮಾಡುವವರನ್ನು ಪೀಡಿಸುವ ಸ್ವಭಾವದವನಾಗಿದ್ದ. ಹೀಗಾಗಿ ಪೊಲೀಸರಿಗೂ ಮತ್ತು ಸಬ್‌ಇನ್ಸ್‌ಪೆಕ್ಟರ್‌ಗೂ ಶೀತಲಯುದ್ಧ ಆರಂಭವಾಯಿತು. ಮೂವರು ಕಾನ್‌ಸ್ಟೇಬಲ್‌ಗಳ ಸಂಬಳವನ್ನು ಎರಡು ತಿಂಗಳಿಂದ ತಡೆಹಿಡಿದು ಪೀಡಿಸುತ್ತಿದ್ದ.

ಒಂದು ದಿನ ಶ್ರೀನಿವಾಸ ಸೆಂಟ್ರಿ ಡ್ಯೂಟಿಯಲ್ಲಿದ್ದ. ಕೈಯಲ್ಲಿ ಗನ್ ಇತ್ತು. ಇನ್ನೀರ್ವರು ಚಾಲಾಕಿ ಪೊಲೀಸರು ಎಡಬಿಡಂಗಿ ಶ್ರೀನಿವಾಸನನ್ನು ಹುರಿದುಂಬಿಸಿದರು, "ಬೆಳಿಗ್ಗೆ ಬೈಕ್ ಮೇಲೆ ಇನ್‌ಸ್ಪೆಕ್ಟರ್ ಠಾಣೆಗೆ-ಡ್ಯೂಟಿಗೆಂದು ಬರುತ್ತಲೇ ಗಾಳಿಯಲ್ಲಿ ಒಂದು ಗುಂಡು ಹಾರಿಸಿಬಿಡು. ಭಯ ಬಿದ್ದು ನಮಗೆಲ್ಲ ತಡೆ ಹಿಡಿದ ಸಂಬಳ ಕೊಡುತ್ತಾನೆ, ಮುಂದೆ ಪೀಡಿಸುವುದನ್ನು ಬಿಡುತ್ತಾನೆ" ಎಂದು.

ಎಂದಿನಂತೆ ಇನ್ಸ್‌ಪೆಕ್ಟರ್ ಮೋಟಾರ್ ಬೈಕ್ ಮೇಲೆ ಠಾಣೆಯ ಗೇಟ್ ಪ್ರವೇಶಿಸುತ್ತಿದ್ದಂತೆಯೇ ಶ್ರೀನಿವಾಸ್ ಗುಂಡನ್ನು ಹಾರಿಸಿಯೇ ಬಿಟ್ಟ; ಆದರೆ ಗಾಳಿಯಲ್ಲಲ್ಲ ಇನ್ಸ್‌ಪೆಕ್ಟರ್ ಮೇಲೆಯೇ !!

ಇನ್ಸ್‌ಪೆಕ್ಟರ್ ಜಿಗಿದು ತಪ್ಪಿಸಿಕೊಂಡ. ಆದರೂ ಗುಂಡು ತೊಡೆಯ ಮೇಲ್ಪದರದಲ್ಲಿ ಗಾಯ ಉಂಟುಮಾಡಿತ್ತು.

ಕೂಡಲೇ ಶ್ರೀನಿವಾಸನನ್ನು ಮತ್ತು ಪುಸಲಾಯಿಸಿದ ಇನ್ನೀರ್ವರನ್ನು ದಸ್ತಗಿರಿ ಮಾಡಲಾಗಿತ್ತು.

ತಮ್ಮ ಪತ್ನಿಯನ್ನು ತಾವೇ ಕೊಂದ ಪಾಪಪ್ರಜ್ಞೆ ದೇವದಾಸ್‌ರನ್ನು ತೀವ್ರವಾಗಿ ಕಾಡುತ್ತಿದೆ ಎನಿಸುತ್ತಿತ್ತು ನನಗೆ. ಅಂಥ ಸಾಂದರ್ಭಿಕ ಘಟನಾವಳಿಗಳೊಂದಿಗೆ ಅವರ ಪ್ರತಿಕ್ರಿಯೆಗಳನ್ನು ತಳುಕು ಹಾಕಿ ಆ ತೀರ್ಮಾನಕ್ಕೆ ಬಂದಿತ್ತು ನನ್ನ ಮನಸ್ಸು.

ದೇವದಾಸ್ ಬೇರೆಯವರಿಗೆ ಉಪಕಾರ ಮಾಡುವಂಥ ಮನೋಧರ್ಮದವರಲ್ಲ. ಆದರೆ ಅವರ ಹೆಂಡತಿಯ ಸಂಬಂಧಿಕರಿಗೆ ಮತ್ತು ಮಕ್ಕಳಿಗೆ ಎಲ್ಲಿಲ್ಲದ ಉಪಕಾರ ಮತ್ತು ಪ್ರೀತಿಗಳನ್ನು ತೋರುತ್ತಿರುವುದನ್ನು ನಾನು ಗುರುತಿಸಿಕೊಂಡಿದ್ದೆ. ದೇವದಾಸ್ ಮಹಾದೈವಭಕ್ತರು. ತಿಂಗಳಿಗೆ ಒಮ್ಮೆಯಾದರೂ ತಿರುಪತಿಗೆ ಹೋಗಿ ಬರುತ್ತಿರುವ ವಿಷಯ ಆಫೀಸ್ ಸಿಬ್ಬಂದಿಯ ಮೂಲಕ ನನಗೆ ತಿಳಿದಿತ್ತು. ಬೆಂಗಳೂರು ಕನಕಪುರ ರಸ್ತೆಯಲ್ಲಿರುವ ವಸಂತಗುಡ್ಡಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. "ಒಂದೇ ಜಾಗದಲ್ಲಿ ತ್ರಿಮೂರ್ತಿಗಳಿರುವ ಜಾಗವಿದು. ನನಗೆ ತೀರಾ ತಾಪವೆನಿಸಿದಾಗ ಇಲ್ಲಿಗೆ ಬರ್ತೇನೆ" ಎಂದಿದ್ದರು.

ದೇವದಾಸ್ ಮಹಾ ಜಿದ್ದಿನ ಮನುಷ್ಯ. ತಮ್ಮ ಕರ್ತವ್ಯ ಮುಗಿಯಿತು ಎನ್ನುವ ಜಾಯಮಾನ ಅವರದಲ್ಲ. ತಮ್ಮ ಗುರಿಯನ್ನು ತಲುಪಲು ಯಾವ ಮಾರ್ಗವನ್ನು ಬೇಕಾದರೂ ಹಿಡಿಯಬಲ್ಲಂಥವರು; ಸ್ವರ್ಗಕ್ಕೆ ದಾರಿ ನರಕದ ಮೂಲಕ ಎಂದರೆ, ರೆಡಿ ಎನ್ನುವವರು!

ಚಿತ್ರದುರ್ಗದ ಸೆಷನ್ಸ್ ಕೋರ್ಟ್‌ನಲ್ಲಿ ಶ್ರೀನಿವಾಸನ ಕೇಸ್ ನಡೆಸಿದರು. ಐದು ವರ್ಷದ ಜೈಲು ಸಜೆ ವಿಧಿಸಲ್ಪಟ್ಟಿತು. ಹೈಕೋರ್ಟ್‌ನಲ್ಲಿ ಅಪೀಲ್ ಮಾಡಿಕೊಂಡರು. ಶಾಮಣ್ಣನವರ ಜ್ಯೂನಿಯರ್ ಆಗಿದ್ದ ಹೊನ್ನಯ್ಯ ಜಸ್ಟಿಸ್ ಆಗಿದ್ದರು. ಅವರ ಮುಂದೆ ಕೇಸ್ ಬಂದಿತ್ತು.

ಏತನ್ಮಧ್ಯೆ ಶ್ರೀನಿವಾಸ, ಹೆಂಡತಿ ಮತ್ತು ಮಕ್ಕಳನ್ನು ತಮ್ಮ ಶೇಷಾದ್ರಿಪುರಂ ಹಳೆ ಮನೆಯಲ್ಲಿರಿಸಿ ತಾವೇ ಸಲಹತೊಡಗಿದ್ದರು. ಶ್ರೀನಿವಾಸನ ಕುಟುಂಬದ ಮೇಲೆ ಅವರು ತೋರುತ್ತಿರುವ ಧಾರಾಳತನ ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಎಷ್ಟೋ ಬಾರಿ ತಮ್ಮ ಮನೆಯಲ್ಲಿ ಹಬ್ಬದ ಅಡಿಗೆ ಮಾಡಿದಾಗ ಕಟ್ಟಿಸಿಕೊಂಡು ಬಂದು ಕೊಡುತ್ತಿದ್ದರು. ಹಲವಾರು ಬಾರಿ ಕ್ಯಾರಿಯರ್ ಅನ್ನು ಕಾರಿನಲ್ಲಿ ಇರಿಸಿಕೊಂಡು ಹೋಗಿ ಕೊಟ್ಟು ಬರುತ್ತಿದ್ದೆವು.

ಇದ್ದಕ್ಕಿದ್ದಂತೆ ಒಂದು ದಿವಸ ಶ್ರೀನಿವಾಸ ಮಾಯವಾಗಿಬಿಟ್ಟ. ಬೇಲ್ ಮೇಲೆ ಬಿಡಿಸಿ ಅವನನ್ನು ತಮ್ಮ ಮನೆಯಲ್ಲಿಟ್ಟುಕೊಂಡಿದ್ದ ದೇವದಾಸ್‌ಗೆ ಮೈಯೆಲ್ಲ ಉರಿದುಹೋಯಿತು. ತಮ್ಮ ಕೋಪವನ್ನು ತಡೆದುಕೊಂಡು ಅವನ ಹೆಂಡತಿಗೆ ಸಮಾಧಾನ ಮಾಡಿದರು.

"ಏನು ಮಾಡೋದು ಇಂಥ ಅಯೋಗ್ಯರನ್ನ ಕಟ್ಟಿಕೊಂಡು. ತಮ್ಮ ಮೇಲೆ ತಮಗೆ ಜವಾಬ್ದಾರಿ ಇಲ್ಲದೋರಿಗೆ ಇನ್ನು ಹೆಂಡತಿ ಮಕ್ಕಳ ಮೇಲೆ ಜವಾಬ್ದಾರಿ

ಇರುತ್ತಾ? ಇಂಥ ಅಪಾತ್ರರ ಜವಾಬ್ದಾರೀನ ನಾನು ಹೊತ್ಕೊಂಡಿದೇನೆ. ನಾನು ತೋರುತ್ತಿರುವ ಸಹಾಯ, ಅನುಕಂಪಗಳಿಗೆ ಎಂಥ ಉಪಕಾರ ಮಾಡುತ್ತಿದ್ದಾನೆ ನೋಡು ಆ ಶ್ರೀನಿವಾಸ" ಎಂದು ಹಲ್ಲು ಕಡಿದರು. "ನನ್ನವಳ ಆತ್ಮಕ್ಕೆ ಶಾಂತಿ ಸಿಕ್ಕಲಿ ಎನ್ನುವ ಒಂದೇ ಕಾರಣಕ್ಕೆ ಇವರ ಸಹಾಯಕ್ಕೆ ನಿಂತೆ," ಎನ್ನುವ ಮಾತು ಕಾರ್‌ನಲ್ಲಿ ಪಕ್ಕಕ್ಕಿದ್ದ ನನ್ನನ್ನ ಉದ್ದೇಶಿಸಿದ್ದಾಗಿರದೆ ತಮಗೆ ತಾವೇ ಹೇಳಿಕೊಂಡಂತಿತ್ತು.

ಕಾರ್ ಎದುರಿಗೆ ಗಡ್ಡಬಿಟ್ಟುಕೊಂಡ ಕಾವಿಧಾರಿಯೊಬ್ಬ ದೇವದಾಸ್ ಅವರಿಗೆ ಎರಡೂ ಕೈಯೆತ್ತಿ ನಮಸ್ಕಾರ ಮಾಡಿ ಕಾರ್ ನಿಲ್ಲಿಸುವಂತೆ ಸಂಜ್ಞೆ ಮಾಡಿದ.

"ಅವನೇ ಆ ಕಳ್ಳ ಶ್ರೀನಿವಾಸ ಸನ್ಯಾಸಿವೇಷದಲ್ಲಿ ಬಂದು ಬಿಟ್ಟವ್ನೆ. ಖದೀಮ್‌ನನ್‌ಮಗ..." ಎಂದು ಅವುಡುಗಚ್ಚಿ ಕಾರ್ ನಿಲ್ಲಿಸಿದರು. ಬಾಗಿಲು ತೆರೆದದ್ದೇ ಬೇರೇನೂ ಮಾತಾಡದೆ ಅವನ ಗಡ್ಡ ಹಿಡಿದು ರಪ್‌ರಪ್ ಎಂದು ಕಪಾಳ, ತಲೆಗಳಿಗೆ ನಡುರಸ್ತೆಯಲ್ಲಿ ಹೊಡೆಯತೊಡಗಿದರು.

ಜನ ಗುಂಪುಗಟ್ಟಿದರು. "ಆ ಸನ್ಯಾಸೀನ ಏಕೆ ಹೊಡೀತೀರಿ?" ಎಂದ ಒಬ್ಬ.

ದೇವದಾಸ್ ಏದುಸಿರು ಬಿಡುತ್ತಿದ್ದರು.

ಆ ಸನ್ಯಾಸಿ ವೇಷದ ಶ್ರೀನಿವಾಸನೇ ಹೇಳಿದ, "ನನ್ನನ್ನು ಹೊಡಿಯೋ ಅಧಿಕಾರ ಅವರಿಗಿದೆ. ನೀವು ಹೋಗಿರಿ" ಎಂದ! ಕತ್ತು ಹಿಡಿದು ಕಾರೊಳಕ್ಕೆ ನೂಕಿದರು. ಸೀದಾ ಶೇಷಾದ್ರಿಪುರಂ ಮನೆಗೆ ಹೋದರು. ಶ್ರೀನಿವಾಸ ಹೆಂಡತಿ ಸಂತೋಷ, ನಾಚಿಕೆ, ಸಿಟ್ಟುಗಳಿಂದ ಗಂಡನನ್ನು ಬಯ್ಯತೊಡಗಿದಳು.

ಜೇಬಿನಿಂದ ಇನ್ನೂರು ರೂಪಾಯಿ ತೆಗೆದು ಆಕೆಯ ಕೈಗೆ ಕೊಟ್ಟು, "ಈಗಿಂದೀಗ್ಲೇ ಇವನ ಗಡ್ಡ ಬೋಳಿಸಿ, ಕಾವಿ ತೆಗೆಸು. ಹೊಸ ಪಂಚೆ ಕೊಡಿಸು ಮುಠ್ಠಾಳ ನನ್‌ಮಗನಿಗೆ...." ಎಂದು ಹೇಳಿ ಮತ್ತೆ ಮಾತನಾಡದೆ ದಡದಡ ನಡೆದರು. ಅವರ ಹಿಂದೆ ನಾನು ಬಾಲಂಗೋಚಿಯಂತೆ ನಡೆದೆ. ಬಚ್ಚೇಗೌಡರ ಚಿಕ್ಕಪ್ಪ ಹೊಸಕೋಟೆ ತಾಲ್ಲೂಕಿನ ಚನ್ನಭೈರೇಗೌಡರು ಎಂ.ಎಲ್.ಸಿ. ಯಾಗಿದ್ದರು. ಶಾಸಕರ ಭವನದಲ್ಲಿ ಅವರ ರೂಮ್ ಇತ್ತು. ಹೊನ್ನಯ್ಯನವರನ್ನು ಹೈಕೋರ್ಟ್ ಜಸ್ಟಿಸ್ ಮಾಡಲು ಚನ್ನಭೈರೇಗೌಡರು ರಾಜಕೀಯ ಪಾತ್ರ ವಹಿಸಿದರು ಎಂದು ದೇವದಾಸ್ ಹೇಳಿದರು. ನನಗೆ ಅದರ ಹಿಂದುಮುಂದು ತಿಳಿಯಲಿಲ್ಲ. ಅದನ್ನು ತೋರ್ಪಡಿಸಿಕೊಳ್ಳದೆ ಮುಗುಳುನಗೆ ಬೀರಿದೆ.

"ಹೊನ್ನಯ್ಯ ಕೆಂಗಲ್ ಹನುಮಂತಯ್ಯನವರ ವಿರುದ್ಧ ರಾಮನಗರ ಕ್ಷೇತ್ರಕ್ಕೆ ಅಸೆಂಬ್ಲಿ ಚುನಾವಣೆಯಲ್ಲಿ ಸ್ಪರ್ಧೆಗಿಳಿದರು. ಆಗ ಅವರಿಗೆ ಹೈಕೋರ್ಟ್ ಜಸ್ಟಿಸ್ ಮಾಡುವುದಾಗಿ ಆಶ್ವಾಸನೆ ನೀಡಿ ಸ್ಪರ್ಧಾಕಣದಿಂದ ಹಿಂದೆಗಿಸಿದರು" ಎಂದರು ದೇವದಾಸ್.

ಸಂಜೆಯಾಗಿತ್ತು. ಶ್ರೀನಿವಾಸ ಇದ್ದ ಮನೆಗೆ ಹೋದೆವು. ಕಾವಿ ತೆಗೆದು, ಗಡ್ಡ ಬೋಳಿಸಿಕೊಂಡು ಸ್ವಚ್ಛವಾಗಿದ್ದ. ಅವನನ್ನು ಮತ್ತು ಅವನ ಹೆಂಡಿರು ಮಕ್ಕಳನ್ನು ಕಾರ್ ಹತ್ತುವಂತೆ ಆಜ್ಞಾಪಿಸಿದರು. ಏನೊಂದೂ ಪ್ರಶ್ನಿಸದೆ ಅವರೆಲ್ಲ ಹತ್ತಿದರು. ನೇರ ಶಾಸಕರ ಭವನಕ್ಕೆ ಹೋದೆವು.

ಚನ್ನಭೈರೇಗೌಡರ ರೂಮ್ ಬಾಗಿಲನ್ನು ತಟ್ಟಿದೆ. ಕೆಲಸದ ಹುಡುಗ ಬಾಗಿಲು ತೆರೆದ. "ದೇವದಾಸ್ ವಕೀಲರು ಬಂದವ್ರೆ ಅಂತ ಹೇಳು" ಅಂದೆ.

ಹೊರಬಂದ ಚನ್ನಭೈರೇಗೌಡರು "ಅದೇನು ವಕೀಲರೇ, ನಮ್ ಬಚ್ಚೇಗೌಡನಿಗೆ ಹೇಳಿದ್ರೆ ನಾನೇ ನಿಮ್ಮನ್ನ ಬಂದು ಕಾಣುತ್ತಿದ್ದೆ. ನೀವು ಇಲ್ಲೀವರೆಗೆ ಬರೋ ತೊಂದರೆ ಏಕೆ ತೆಗೆದುಕೊಂಡಿರಿ, ಬನ್ನಿ ಬನ್ನಿ" ಎಂದು ಒಳಗೆ ಕರೆದರು.

ರೂಮಲ್ಲಿ ನಾಲ್ಕಾರು ಜನ ಇಸ್ಪೀಟ್ ಆಡುತ್ತಾ ಕೂತಿದ್ದರು. ನಮ್ಮನ್ನೆಲ್ಲ ನೋಡಿ ಅವರು ಆಟ ನಿಲ್ಲಿಸಿ ಹೊರಟುಹೋದರು.

"ಏನು ಬಂದ ವಿಷಯ?" ಎಂದು ಕೇಳಿದರು ಚನ್ನಭೈರೇಗೌಡರು. "ಈ ಹೆಣ್ಣುಮಗಳು ನನ್ನ ಪತ್ನಿಯ ಸೋದರ ಪತ್ನಿಯ ಸೋದರ ಸಂಬಂಧಿ. ಈತ ಈಕೆಯ ಗಂಡ, ಇವರೆಲ್ಲ ಮಕ್ಕಳು" ಎನ್ನುತ್ತ ಶ್ರೀನಿವಾಸನ ಕಡೆ ದಿಟ್ಟಿಸಿ ನೋಡಿದರು.

ಸಂಜ್ಞೆ ಅರ್ಥ ಮಾಡಿಕೊಂಡವನಂತೆ ಶ್ರೀನಿವಾಸ ಮತ್ತು ಆತನ ಹೆಂಡತಿ ಮಕ್ಕಳು ಚನ್ನಭೈರೇಗೌಡರ ಕಾಲಿಗೆ ಬಿದ್ದುಬಿಟ್ಟರು.

"ಛೇ, ಬ್ರಾಹ್ಮಣರಿಂದ ನನ್ನ ಕಾಲು ಹಿಡಿಸ್ತಿದೀರಲ್ಲ. ನನಗೇಕೆ ಆ ಪಾಪ ತಟ್ಟಿಸ್ತೀರಿ. ನಾನು ಇವರಿಗೆ ಏನ್ ಮಾಡಬೇಕು ಹೇಳಿ?" ಎಂದರು.

ಶ್ರೀನಿವಾಸನ ಕೇಸು, ವಿಧಿಸಲ್ಪಟ್ಟ ಶಿಕ್ಷೆಯನ್ನು ಹೇಳಿ "ಈಗ ಇವರ ಕೇಸು ಹೈಕೋರ್ಟ್‌ನಲ್ಲಿ ಜಸ್ಟಿಸ್ ಹೊನ್ನಯ್ಯನವರ ಮುಂದಿದೆ. ನೀವು ಮನಸ್ಸು ಮಾಡಿದರೆ ಮಾತ್ರ ಈ ಎಡಬಿಡಂಗಿ ಪಾರಾಗ್ತಾನೆ. ಇವ್ನ ಹೆಂಡ್ತಿ, ಮಕ್ಕಳ್ನ ಉಳಿಸಿದ ಪುಣ್ಯ ನಿಮಗೆ ಬರುತ್ತೆ. ನನ್ನ ಹೆಂಡತಿಯ ಆತ್ಮಕ್ಕೆ ಶಾಂತಿ ಸಿಗುವ ಈ

ಕೆಲಸದ ಉಪಕಾರಾನ ನಾನು ನನ್ನ ಜೀವಮಾನದಲ್ಲಿ ಸ್ಮರಿಸುತ್ತೇನೆ" ಎಂದರು.

"ಛೇ.... ಅಷ್ಟೆಲ್ಲ ದೊಡ್ಡ ಮಾತು ಏಕಾಡ್ತೀರಿ ವಕೀಲರೇ. ಆಯ್ತು ತಾವು ಟೀ ಕುಡೀರಿ. ಇವರ ಕೇಸ್ ವಿಷಯ ನನಗೆ ಬಿಡಿ" ಎಂದರು.

ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಸಜೆಯನ್ನು ರದ್ದುಗೊಳಿಸಿ ಶ್ರೀನಿವಾಸನನ್ನು ಆರೋಪದಿಂದ ಮುಕ್ತಗೊಳಿಸಿತು ಹೈಕೋರ್ಟ್!

ದೇವದಾಸ್ ತಮ್ಮ ಗುರಿ ತಲುಪಲು ಎಂಥೆಂಥ ದಾರಿಗಳನ್ನು ಹುಡುಕುತ್ತಿದ್ದರು, ತುಳಿಯುತ್ತಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆ ಮಾತ್ರ.

ಬಿಡುಗಡೆ ಆದ ದಿನ ಶ್ರೀನಿವಾಸ ಮತ್ತು ಅವನ ಕುಟುಂಬವನ್ನು ವಸಂತಗುಡ್ಡಕ್ಕೆ ಕರೆದೊಯ್ದು ಪೂಜೆ ಮಾಡಿಸುವಾಗ ನಾನೂ ಇದ್ದೆ.

39

ಗರುಡಗಣ್ಣುಗಳ ಗಾರುಡಿಗ

ನಾನಿನ್ನೂ ಬಾರ್ ಕೌನ್ಸಿಲ್ ಮೂಲಕ ಪ್ರಮಾಣವಚನ ಸ್ವೀಕರಿಸಿದ ವಕೀಲನಾಗಿರಲಿಲ್ಲ. ದೇವದಾಸರ ನೆರಳಿನಂತೆ ಓಡಾಡಿಕೊಂಡಿರುವುದು, ಅವರು ಹೇಳಿದ ಕೆಲಸಗಳನ್ನು ನಯ ನಾಜೂಕುಗಳಿಂದ ಮಾಡಿ ಶಹಭಾಷ್‌ಗಿರಿ ಪಡೆಯುವುದರತ್ತಲೇ ನನ್ನ ತಲೆ ಓಡುತ್ತಿತ್ತು. ಯಾವಾಗ ನನ್ನ ಪರೀಕ್ಷೆ ಫಲಿತಾಂಶ ಬಂದು ನಾನೂ ಕೋರ್ಟ್‌ನಲ್ಲಿ ನಿಂತು ವಾದಿಸುವಂತಾಗುವೆನೋ ಎನ್ನುವ ತವಕ ನನ್ನಲ್ಲಿ ತುಂಬಿತ್ತು.

ಒಂದು ದಿನ ಬೆಳಗ್ಗೆ ಹೊಸಕೋಟೆ – ಮಾಲೂರು ರಸ್ತೆಗೆ ಸಮೀಪದ ಗುಳ್ಳೆಗದ್ದೆ ಗ್ರಾಮಕ್ಕೆ ದೇವದಾಸ್ ನನ್ನನ್ನು ಕರೆದೊಯ್ದರು. ಕೊಲೆ ಕೇಸ್‌ಗೆ ಸಂಬಂಧಿಸಿದ ಸ್ಥಳ ಪರಿಶೀಲನೆಗಾಗಿ ಹೋಗುತ್ತಿರುವುದಾಗಿ ದಾರಿಮಧ್ಯೆ ತಿಳಿಯಿತು. ಹೊರಡುವ ಮುಂಚೆ ಎಲ್ಲಿ ಎತ್ತ ಎಂದು ಕೇಳುತ್ತಿರಲಿಲ್ಲ ನಾನು. ಹಾಗೆ ಕೇಳುವುದು ದೇವದಾಸ್‌ರಿಗೂ ಇಷ್ಟವಾಗುತ್ತಿರಲಿಲ್ಲವೆನ್ನುವುದನ್ನೂ ನಾನು ಗ್ರಹಿಸಿಕೊಂಡಿದ್ದೆ; ಅವರ ಮಾತು ಮತ್ತು ಆಜ್ಞೆಗಳಿಗೆ ಕೋಲೆ ಬಸವನಂತೆ ತಲೆಯಾಡಿಸುತ್ತಿದ್ದೆ.

ಸ್ಥಳ ಪರಿಶೀಲನೆ ಮುಗಿಸಿಕೊಂಡು ವಾಪಸು ಬೆಂಗಳೂರಿನತ್ತ ಹೊರಟೆವು. "ನೋಡು ಹನುಮಂತ್ರಾಯ, ಎಷ್ಟೋ ಡಿಫೆನ್ಸ್ ಲಾಯರ್ಸ್ ಹೀಗೆ ಸ್ಥಳ ಪರಿಶೀಲನೇನೆ ಮಾಡುವುದಿಲ್ಲ. ಒಳ್ಳೆ ಕೇಸಿದ್ದರೂ ಸೋತು ನೇಣಿಗೇರುವಂತೆ ಮಾಡಿಬಿಡುತ್ತಾರೆ. ಕೊಲೆ ರಾತ್ರಿ ನಡೆದಿದ್ದರೆ, ಸ್ಥಳ ಪರಿಶೀಲನೆಯನ್ನೂ ನಡುರಾತ್ರಿಯೇ ಮಾಡಬೇಕು. ಅಷ್ಟೇ ಅಲ್ಲ ಆ ರಾತ್ರಿ ಕೃಷ್ಣಪಕ್ಷದ್ದೋ ಅಥವಾ ಶುಕ್ಲಪಕ್ಷದ್ದೋ ಎಂದು ನೋಡಿಕೊಳ್ಳುವುದೂ ಅಷ್ಟೇ ಮುಖ್ಯ. ಅಂಥ ಸ್ಥಳ ಪರಿಶೀಲನೆಯಿಂದ ಡಿಫೆನ್ಸ್ ಲಾಯರ್ ಒಳ್ಳೆ ಉಪಯುಕ್ತ ಪಾಯಿಂಟ್‌ಗಳನ್ನು ಪಡೆದುಕೊಳ್ಳುತ್ತಾನೆ" ಎಂದರು.

ಅಂದೇ ಸಂಜೆ ದೇವದಾಸ್ ಅವರು "ರಾತ್ರಿ ಐಜಿಪಿ ಮನೆಗೆ ಡಿನ್ನರ್‌ಗೆ ಹೋಗಬೇಕು. ನೀನೂ ರೆಡಿಯಾಗಿರು" ಎಂದರು. ಈವರೆಗೆ ಏನಿದ್ದರೂ ಪೊಲೀಸ್ ಅಧಿಕಾರಿಗಳ ಸಂಪರ್ಕ ಮಾತ್ರ ನನಗೆ ಬಂದಿತ್ತು. ರಾಜ್ಯದ ಎಲ್ಲ ಪೊಲೀಸ್ ಅಧಿಕಾರಿಗಳ ಮುಖ್ಯ ಬಾಸ್ ಮನೆಯ ಡಿನ್ನರ್ ಪಾರ್ಟಿಗೆ ಹೋಗುವ ಅವಕಾಶ ನನಗೊದಗಿದ್ದರಿಂದ ಸಂತೋಷಗೊಂಡು ಕಂಪಿಸಿದೆ.

ಐಜಿಪಿ ಎಸ್.ಎನ್. ಹೊಸಾಳಿಯವರ ಮನೆಗೆ ಹೊರಟಾಗ "ಹೊಸಾಳಿ ಮತ್ತು ನಾನು ಕಾಲೇಜ್ ಫ್ರೆಂಡ್ಸ್. ನನಗೆ ಎಂತೆಂಥ ಸಹಾಯ ಮಾಡಿದಾನೆ ಗೊತ್ತ ಈ ಹೊಸಾಳಿ. ನೂರು ಸ್ನೇಹಿತರಿಗಿಂತ ಮುತ್ತಿನಂಥ ಒಬ್ಬ ಹೊಸಾಳಿ ಸಾಕು....." ಎಂದು ತೀವ್ರ ಹೆಮ್ಮೆಯಿಂದ ಹೇಳಿದರು ದೇವದಾಸ್.

'ದೇವದಾಸ್ ಅವರ ಮೂಲಕ ಎಂತೆಂಥ ದೊಡ್ಡ ವ್ಯಕ್ತಿಗಳ ಒಡನಾಟ ಸಿಗುತ್ತಿದೆಯಲ್ಲವೆ ನನಗೆ!' ಎಂದು ಒಳಗೊಳಗೇ ಉಬ್ಬಿದೆ.

ಇಂಥ ಭಾರೀ ಬಂಗಲೆಯನ್ನು ಪ್ರವೇಶಿಸುತ್ತಿರುವುದು ಇದೇ ಮೊದಲು ಎನ್ನುವ ಭಾವನೆ ಮೂಡಿತು. ಆ ಬಂಗಲೆಯ ವೈಭವ ರೌದ್ರಮಯವಾಗಿದ್ದುದರಿಂದಲೋ ಏನೋ ಹಾಗನ್ನಿಸಿರಬೇಕು.

ನಮ್ಮನ್ನು ಎದುರುಗೊಳ್ಳಲು ಬಗೆಬಗೆಯ ಉಂಡಾಡಿ ನಾಯಿಗಳು ಬಂದವು. ಗಿಡ್ಡ, ಎತ್ತರ, ದಪ್ಪ, ಉದ್ದ ಹೀಗೆ ನಾನಾ ಜಾತಿಯ ನಾಯಿಗಳು ವಿವಿಧ ಧ್ವನಿಗಳಿಂದ ನಮ್ಮನ್ನು ಕರೆದವು. ಸ್ವಲ್ಪ ಹೆದರಿಕೊಂಡ ನನ್ನನ್ನು ನೋಡಿ ದೇವದಾಸ್, ಆ ನಾಯಿಗಳ ತಳಿ ಎಂಥದು, ಗುಣ ಎಂಥದು ಎಂದು ವಿವರಿಸತೊಡಗಿದಾಗ ಹೊಸಾಳಿ ದಂಪತಿಗಳು ಬಂದು ದೇವದಾಸ್‌ರನ್ನು ತಬ್ಬಿಕೊಂಡು ಮುತ್ತಿಟ್ಟರು. ಅವರಿಗೆ ನನ್ನನ್ನು ಪರಿಚಯ ಮಾಡಿಸುತ್ತ 'A promising criminal lawyer' ಎಂದಾಗ ನಾನು ಮುಜುಗರದಿಂದ ಮುದುಡಿಕೊಂಡೆ.

ದೇವದಾಸ್ ಅವರಿಗೆ ಬಿಯರ್ ತುಂಬಿದ ಮಗ್ ಅನ್ನು ನೀಡಿದರು. ನನಗೆ ಅಭ್ಯಾಸವಿಲ್ಲ ಎಂದು ತಂಪು ಪಾನೀಯ ನೀಡಿದರು.

ಹೊಸಾಳಿಯವರು ದೇವದಾಸ್ ಅವರ ಪಾಂಡಿತ್ಯವನ್ನು ಹೊಗಳಲು ಶುರು ಮಾಡಿದರು. ಅವರ ಹೊಗಳಿಕೆಯನ್ನು ಆನಂದದಿಂದ ಆಸ್ವಾದಿಸುತ್ತಲೇ ಬಿಯರ್ ಹೀರತೊಡಗಿದರು. "ನೋಡಿ ನೀವು ನೀಡಿದ ಸಲಹೆ ಸೂಚನೆಗಳ ಮೇಲೆ ಆ ಪೊಲೀಸ್ ಆಫೀಸರ್ ಮತ್ತು ಇಂಜನಿಯರ್‌ಗಳಿಗೆ ತಕ್ಕ ಶಿಕ್ಷೆ ಆಗುವಂತಾಯಿತು. ಇಲ್ಲದಿದ್ದರೆ ಕೇಸ್ ಪ್ರಾಸಿಕ್ಯೂಷನ್ ವಿರುದ್ಧವಾಗಿಬಿಡುತ್ತಿತ್ತು...." ಎಂದರು ಹೊಸಾಳಿ.

ದೇವರಾಜ್ ನನ್ನತ್ತ ತಿರುಗಿ "ಬೆಳಗ್ಗೆ ಹೇಳಿದೆನಲ್ಲ ಸ್ಪಾಟ್ ಇನ್‌ಸ್ಪೆಕ್ಷನ್ ಮಹತ್ವ ಏನೂ ಅಂತ. ಅದಕ್ಕೆ ಸಂಬಂಧಿಸಿದ್ದು ಹೊಸಾಳಿ ಹೇಳ್ತಾ ಇರೋ ಕೇಸು. ನಂತರ ಅದೇನೂ ಅಂತ ನಿಂಗೆ ಹೇಳ್ತೀನೆ" ಎಂದು ಹೇಳಿ ಪುನಃ ಹೊಸಾಳಿಯವರೊಂದಿಗೆ ಮಾತಿನಲ್ಲಿ ತೊಡಗಿದರು.

ಹೊಸಾಳಿಯವರ ಪತ್ನಿ, "ಈಗ ನಿಮ್ಮ ಸಾದಿಕಾ ಬೇಗಮ್ ಆರ್ಭಟ ಹೇಗಿದೆ?" ಎಂದು ಹುಬ್ಬೇರಿಸಿ ಪ್ರಶ್ನಿಸಿದಾಗ, ಹೊಸಾಳಿ ಮತ್ತು ದೇವದಾಸ್ ಇಬ್ಬರೂ ಪರಸ್ಪರ ಕೈತಟ್ಟಿ ದೊಡ್ಡದಾಗಿ ಗಹಗಹಿಸಿದರು. ಹೀಗೇ ಪಾರ್ಟಿ ಬಹಳ ಹೊತ್ತು ನಡೆಯಿತು.

ದೇವದಾಸ್‌ರಿಗೆ ನಶೆ ಏರಿತ್ತು. "OK she is a queer fish" ಎನ್ನುತ್ತ ಮೇಲೆದ್ದರು ದೇವದಾಸ್. ಬೀಳ್ಕೊಡಲು ಹೊಸಾಳಿ ದಂಪತಿಗಳು ಹೊರಬಂದರು. "May God save you from Sadika" ಎಂದರು ಹೊಸಾಳಿ ನಶೆಯಲ್ಲಿ ತೊದಲುತ್ತ.

ನನ್ನ ಹೆಗಲ ಮೇಲೆ ಕೈಹಾಕಿ ಕಾರಿನತ್ತ ನಡೆದರು ದೇವದಾಸ್. ದೇವದಾಸ್ ನಶೆಯಲ್ಲಿದ್ದರೂ ಸ್ಟೀಯರಿಂಗ್ ಮೇಲಿನ ಅವರ ಕೈಗಳ ಗ್ರಿಪ್ ಸಡಿಲಗೊಂಡಿರಲಿಲ್ಲ. ಪುನಃ ಹೊಸಾಳಿ ಬಗೆಗೆ ಹೇಳಲು ಶುರು ಮಾಡಿದರು. "ನೋಡು ಒಂದೇ ರಾಜ್ಯದಲ್ಲಿ ಹದಿನಾಲ್ಕು ವರ್ಷ ಐಜಿಪಿ ಆಗಿರೋದು ಅಂದ್ರೆ ಸಾಮಾನ್ಯ ಅಂದುಕೋಬೇಡ. ಅಂಥ capable ಮತ್ತು influencial ಈ ಹೊಸಾಳಿ. ಪಾರ್ಟಿ ನಡೀತಿರುವಾಗ ಹೇಳಿದೆನಲ್ಲ ನಂತರ ಹೇಳ್ತೀನೆ ಆ ಕೇಸ್ ಬಗ್ಗೆ ಅಂತ, ಈಗ ಹೇಳ್ತೀನೆ ಕೇಳು...." ಎಂದರು.

ಪರಶುರಾಮ್ ಎನ್ನುವ ಇನ್‌ಸ್ಪೆಕ್ಟರ್ ಇಡೀ ಇಲಾಖೆಗೆ ತಲೆನೋವಾಗಿದ್ದ. ಎಂ.ಎಲ್.ಎ., ಮಿನಿಸ್ಟರ್‌ಗಳಿಂದಲೂ ಅವನ ಬಗ್ಗೆ ದೂರುಗಳು ಬಂದಿದ್ದವು.

ಆದರೆ ಪರಶುರಾಮ್ ಚಾಣಾಕ್ಷ ಭ್ರಷ್ಟನಾಗಿದ್ದ. ತಾನು ಎಸಗುವ ದೌರ್ಜನ್ಯ, ವಂಚನೆಗಳಲ್ಲಿ ಎಂದೂ ಸಿಕ್ಕಿಹಾಕಿಕೊಳ್ಳುತ್ತಿರಲಿಲ್ಲ. ದೂರುಗಳನ್ನು ಕೇಳಿ ಬೇಸತ್ತಿದ್ದ ಹೊಸಾಳಿ ಪರಶುರಾಮನನ್ನು ದೂರದ ಬೀದರ್‌ಗೆ ವರ್ಗಾ ಮಾಡಿದ.

ಪರಶುರಾಮ್ ಡ್ಯೂಟಿಯಲ್ಲಿದ್ದ ಠಾಣೆ ವ್ಯಾಪ್ತಿಯಲ್ಲಿ ಕೊಲೆಯೊಂದು ನಡೆಯಿತು. ಸರ್ಕಾರಿ ವೈದ್ಯಾಧಿಕಾರಿಯ ಯುವಪತ್ನಿಯನ್ನು ಇಬ್ಬರು ದುಷ್ಕರ್ಮಿಗಳು ಮಾನಭಂಗ ಮಾಡಿ ಕೊಲೆ ಮಾಡಿದ್ದರು. ಹಾಡು ಹಗಲೇ ಕೊಲೆ ಮಾಡಿ ಹಿಂಬಾಗಿಲಿನಿಂದ ಓಡಿಹೋಗುತ್ತಿದ್ದ ದುಷ್ಕರ್ಮಿಗಳನ್ನು ಕಾಮಣ್ಣನ ಹಬ್ಬಕ್ಕಾಗಿ ಚಂದಾ ಎತ್ತುವ ಹುಡುಗರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು.

ದುಷ್ಕರ್ಮಿಗಳು ಶ್ರೀಮಂತರ ಮಕ್ಕಳಾಗಿದ್ದರು. ಇನ್ಸ್‌ಪೆಕ್ಟರ್ ಪರಶುರಾಮ್ ಚೆನ್ನಾಗಿ ಹಣ ಸುಲಿದುಕೊಂಡು ಆರೋಪಿಗಳ ರಕ್ಷಣೆಗೆ ನಿಂತ.

ಬೀದರ್‌ನಲ್ಲಿ ಆ ಕೇಸ್ ಸಾರ್ವಜನಿಕರ ಕುತೂಹಲ ಕೆರಳಿಸಿತು. ಅಷ್ಟೇ ಅಲ್ಲ, ವಿರೋಧಿಗಳು ಹಾಗೂ ಮತ್ತಿತರೆ ಸಂಘ ಸಂಸ್ಥೆಗಳೂ ಆರೋಪಿಗಳಿಗೆ ಶಿಕ್ಷೆಯಾಗಬೇಕೆಂದು ಪತ್ರಿಕಾ ಹೇಳಿಕೆ ನೀಡಿದವು.

ಇನ್ಸ್‌ಪೆಕ್ಟರ್ ಪರಶುರಾಮ್ ಮಾತ್ರ ಆರೋಪಿಗಳಿಗೆ "ಯಾರು ಏನೇ ಹಾರಾಡಲಿ ಕೋರ್ಟ್‌ನಲ್ಲಿ ಮಾತ್ರ ನಿಮ್ಮ ಮೇಲಿನ ಆರೋಪ ಸಾಬೀತಾಗಲು ಸಾಧ್ಯವಿಲ್ಲ. ಆ ರೀತಿ ನೀಡಿದ್ದೇನೆ ತನಿಖಾ ವರದಿಯನ್ನ, ನೀವು ನಿಶ್ಚಿಂತವಾಗಿರಿ" ಎಂದು ಅಭಯಹಸ್ತ ನೀಡಿದ.

ಐಜಿಪಿ ಹೊಸಾಳಿಗೆ ಬೀದರ್ ಸಾರ್ವಜನಿಕರಿಂದ ಪರಶುರಾಮ್ ಮೇಲೆ ದೂರುಗಳು ಬರತೊಡಗಿದವು. ಆರೋಪಿಗಳೊಂದಿಗೆ ಪರಶುರಾಮ್ ಶಾಮೀಲಾಗಿದ್ದಾನೆನ್ನುವ ತೀರ್ಮಾನಕ್ಕೆ ಬರಲು ಬೇರೆ ಸಾಕ್ಷಿಗಳೇ ಬೇಕಿರಲಿಲ್ಲ. ಅವನ ಗುಣಗಳನ್ನು ಚೆನ್ನಾಗಿ ಅರಿತಿದ್ದ ಹೊಸಾಳಿ ಬೀದರ್‌ಗೆ ಸ್ವತಃ ತಾವೇ ಹೋಗಿ ಎಸ್.ಪಿ.ಯೊಂದಿಗೆ ಈ ಬಗ್ಗೆ ಚರ್ಚಿಸಿ ಬಂದರು.

ಈ ಕೇಸಿಗೆ ಸಂಬಂಧಪಟ್ಟ F.I.R. ಚಾರ್ಜ್‌ಶೀಟ್, ಸಾಕ್ಷಿಗಳ ಹೇಳಿಕೆ, ತನಿಖಾ ವರದಿ ಎಲ್ಲವನ್ನೂ ಒಂದು ಪ್ರತಿ ಮಾಡಿಸಿಕೊಂಡು ಬಂದರು ಹೊಸಾಳಿ. ಆ ಕಡತವನ್ನು ದೇವದಾಸ್ ಕೈಗಿಟ್ಟು "ಆರೋಪಿಗಳಿಗೆ ಶಿಕ್ಷೆಯಾಗಬೇಕು ಈ ಕೇಸ್‌ನಲ್ಲಿ. ಅಂದರೆ ಮಾತ್ರ ನಮ್ಮ ಇಲಾಖೆಯ ಮಾನ ಉಳಿಯುತ್ತದೆ. ಆ ಪಾಪಿ ಪರಶುರಾಮನ್ನ ಬೀದರ್‌ಗಲ್ಲ ಪಾತಾಳಕ್ಕೆ ಕಳಿಸಿದರೂ ನನ್ನ ತಲೆ ತಿನ್ನೋದು ಬಿಡೊಲ್ಲ" ಎಂದರು ಹೊಸಾಳಿ.

ಕಾಮಣ್ಣನ ಹಬ್ಬಕ್ಕೆ ಚಂದಾ ಎತ್ತುವ ಹುಡುಗರು, "ಆರೋಪಿಗಳು ಹಿಂಬಾಗಿಲಿನಿಂದ ಓಡುತ್ತಿರುವಾಗ ಬೆನ್ನಟ್ಟಿ ಹಿಡಿದೆವು" ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಪರಶುರಾಮನ ಕಂತ್ರಿಬುದ್ಧಿ ಅತಿಚಾಣಾಕ್ಷತನದಿಂದ ಕೆಲಸ ಮಾಡಿತ್ತು. ಹೇಗೆಂದರೆ, ಲೋಕೋಪಯೋಗಿ ಇಂಜಿನಿಯರ್‌ನೊಬ್ಬನಿಗೆ ಲಂಚ ಕೊಟ್ಟು ಬುಕ್ ಮಾಡಿಕೊಂಡಿದ್ದ. ಅವನಿಂದ ಅತ್ಯಾಚಾರ, ಕೊಲೆ ನಡೆದ ಮನೆಯ ನಕ್ಷೆಯನ್ನು ತಯಾರಿಸಿದ್ದ. ಆ ನಕ್ಷೆಯಲ್ಲಿ ಮನೆಗೆ ಹಿಂಬಾಗಿಲೇ ಇಲ್ಲದಂತೆ ಮಾಡಿಸಿದ್ದ!

ಈ ಸಂಗತಿಯನ್ನು ದೇವದಾಸ್ ಅವರ ಚುರುಕು ತಲೆ ಒಂದೇ ಪಟ್ಟಿಗೆ ಗ್ರಹಿಸಿತ್ತು.

ದೇವದಾಸ್ ಹೊಸಾಳಿಗೆ, "ಕೂಡಲೇ ನಿಮ್ಮ ಪ್ರಾಸಿಕ್ಯೂಟರ್‌ಗೆ Cr. P.C. 539-B ಸೆಕ್ಷನ್ಸ್ ಪ್ರಕಾರ ಅರ್ಜಿಯೊಂದನ್ನು ದಾಖಲಿಸಿ ಖುದ್ದು ನ್ಯಾಯಾಧೀಶರೇ ಸ್ಥಳ ಪರಿಶೀಲನೆ ನಡೆಸುವಂತೆ ಕೋರಿಕೊಳ್ಳಬೇಕೆಂದು ಸೂಚಿಸಿ" ಎಂದು ಸಲಹೆ ನೀಡಿದ್ದರು.

ಅದರಂತೆ ನ್ಯಾಯಾಧೀಶರು ಸ್ಥಳ ಪರಿಶೀಲನೆಗೆ ಖುದ್ದು ಹೋದರು. ಆಗ ಮನೆಗೆ ಹಿಂಬಾಗಿಲು ಇದ್ದಿರುವುದು ಸಾಬೀತಾಯಿತು ಮತ್ತು ಅವರು ಮಾಡಿದ ಸ್ಥಳ ಪರಿಶೀಲನೆಯಿಂದ ಕೃತ್ಯ ನಡೆದ ದಿನವೂ ಹಿಂಬಾಗಿಲು ಇದ್ದ ವಿಚಾರ ಖಚಿತವಾಯಿತು. ಆರೋಪಿಗಳಿಗೆ ಶಿಕ್ಷೆಯಾಗಿದ್ದು ಮಾತ್ರವಲ್ಲ ಇನ್ಸ್‌ಪೆಕ್ಟರ್ ಪರಶುರಾಮ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಇಬ್ಬರನ್ನೂ ಕೆಲಸದಿಂದ ವಜಾ ಮಾಡಬೇಕೆಂದು ಕೋರ್ಟ್ ಆದೇಶಿಸಿತ್ತು!

ಆ ಕೇಸ್‌ನಲ್ಲಿ ದೇವದಾಸ್ ಅವರಿಗೆ ಹೊಳೆದ ಪಾಯಿಂಟ್ ಪ್ರಾಸಿಕ್ಯೂಟರ್‌ಗೆ ಏಕೆ ಹೊಳೆಯಲಿಲ್ಲ ಎನ್ನುವ ಪ್ರಶ್ನೆ ಏಳುವುದು ಸಾಮಾನ್ಯ ಅಲ್ಲವೆ? ಇನ್ಸ್‌ಪೆಕ್ಟರ್ ಪರಶುರಾಮ್ ತನ್ನ ಲಿಖಿತ ತನಿಖಾ ವರದಿಯಲ್ಲಿ ಎಲ್ಲೂ ಆ ಮನೆಗೆ ಹಿಂಬಾಗಿಲು ಇಲ್ಲ ಎಂದು ಬರೆದಿರಲಿಲ್ಲ. ಆದರೆ ನಕ್ಷೆಯಲ್ಲಿ ಮಾತ್ರ ಬಾಗಿಲಿಲ್ಲದಂತೆ ಮಾಡಿಸಿದ್ದ! ಆರೋಪಿಗಳ ಪರ ಲಾಯರ್ 'ಕೊಲೆಯಲ್ಲಿ ಈ ಪಾಯಿಂಟ್ ಮೇಲೆ ನಿಮ್ಮ ಕೇಸ್ ಗೆದ್ದುಕೊಳ್ಳಿ' ಎಂದು ಹೇಳಿದ್ದ! ಇಂಥ ಲೂಪ್‌ಹೋಲ್ ಅನ್ನು ದೇವದಾಸ್‌ರಂಥವರ ಗರುಡಗಣ್ಣುಗಳು ಮಾತ್ರ ನೋಡಲು ಸಾಧ್ಯ.

40

"ದೊಡ್ಡೋರ್ ಬುದ್ಧಿ ಒಂದ್ ಮಾದರಿಯಲ್ಲ"

ಐ.ಜಿ.ಪಿ. ಹೊಸಾಳಿಯವರ ಮನೆಯಲ್ಲಿ ಹಿಂದಿನ ರಾತ್ರಿ ಪಡೆದ ಆತಿಥ್ಯದ ಖುಷಿ ಇನ್ನೂ ಆರಿರಲಿಲ್ಲ. ಆಫೀಸ್‌ನಲ್ಲಿದ್ದೆ. ದೇವದಾಸ್ ಅವರು ಇನ್ನೂ ಬಂದಿರಲಿಲ್ಲ. ಅಷ್ಟರಲ್ಲಿ ತಾವರೆಕೆರೆಯ ವೆಂಕಟಗಿರಿಯಪ್ಪ, ದೇವದಾಸ್ ಅವರನ್ನು ಕಾಣಲೆಂದು ಬಂದರು. ನನ್ನ ದೂರದ ಸಂಬಂಧಿಯೂ ಆಗಿದ್ದ ಅವರು, ನನ್ನನ್ನು ಕಂಡದ್ದೇ ಖುಷಿಯಿಂದ, "ಈ ಆಫೀಸ್‌ನಲ್ಲಿ ನಮ್ಮವನು ಅನ್ನೋಕೆ ನೀನೊಬ್ಬನಾದೆ ನೋಡು. ಕಳೆದ ವಾರ ನಿಮ್ಮ ಮಾವ ಸಿದ್ಧನಂಜಪ್ಪ ಸಿಕ್ಕಿದ್ದ. ನಿನ್ನನ್ನ ಈ ಆಫೀಸ್‌ಗೆ ಸೇರಿಸಿದ ವಿಷಯಾನ ಹೇಳ್ದ. ನಿಂಗೆ ತಿಂಡಿ, ಕಾಫಿ ಕೊಡಿಸ್ತೇನೆ ನಡೆ. ದೇವದಾಸರು ಬರೋವಷ್ಟರಲ್ಲಿ ವಾಪಸಾಗೋಣ" ಎಂದರು.

ಎಷ್ಟೊಂದು ಶೀಘ್ರವಾಗಿ ದೇವದಾಸ್ ಅವರ ವಿಶ್ವಾಸ ಗಳಿಸಿಕೊಂಡಿದ್ದೇನೆ ಅಂತ ಹೇಳುವ ತವಕ ನನ್ನಲ್ಲಿ ಉಕ್ಕತೊಡಗಿತು. ನನ್ನ ಬೆಳವಣಿಗೆಯ ಬಗೆಗೆ ನನ್ನ ಸೋದರಮಾವನ ಮುಂದೆ ವೆಂಕಟಗಿರಿಯಪ್ಪನವರು ಹೇಳಲಿ ಎನ್ನುವ ಆಸೆಯೂ ಒತ್ತರಿಸಿದ್ದರಿಂದ ಮಸಾಲೆದೋಸೆ ತಿನ್ನುತ್ತಾ, "ನೋಡಿ

ವೆಂಕಟಗಿರಿಯಪ್ಪನವರೆ, ನಮ್ಮ ಸೀನಿಯರ್ ನನ್ನನ್ನ ಹಚ್ಚಿಕೊಂಡಷ್ಟು ನಮ್ಮ ಆಫೀಸ್‌ನಲ್ಲಿ ಮತ್ತಿನ್ನಾರನ್ನೂ ಹಚ್ಚಿಕೊಂಡಿಲ್ಲ. ಕೋರ್ಟ್ ಕೆಲಸಗಳಷ್ಟೇ ಅಲ್ಲ ತಮ್ಮ ಪರ್ಸನಲ್ ಕೆಲಸಗಳಿಗೂ ನನ್ನನ್ನ ಕರೆದೊಯ್ತಾರೆ. ಅಷ್ಟೊಂದ್ ನಂಬಿಬಿಟ್ಟಿದ್ದಾರೆ ನನ್ನನ್ನ. ನಿನ್ನೆ ರಾತ್ರಿ ಐ.ಜಿ.ಪಿ. ಹೊಸಾಳಿಯವರ ಮನೆಯಲ್ಲಿ ಡಿನ್ನರ್ ಪಾರ್ಟಿ. ಅಲ್ಲಿಗೂ ನನ್ನನ್ನ ಕರೆದೊಯ್ದಿದ್ದರು...." ಎಂದು ಇನ್ನೂ ಮಾತು ಮುಗಿಸಿರಲಿಲ್ಲ, ವೆಂಕಟಗಿರಿಯಪ್ಪನವರು, "ಓಹ ಆವಾಗ್ಲೆ ನಿನ್ನನ್ನ ಅಲ್ಲಿಗೂ ಕರ್ಕೊಂಡು ಹೋಗಿಬಿಟ್ರಾ.... ಆ ಹೊಸಾಳಿಗೆ ಪರಂಗಿಯವ್ರು ಅಂದ್ರೆ ಎಲ್ಲಿಲ್ಲದ ವ್ಯಾಮೋಹ. ಮನೆಗೆ ಹೋಗೋ ಅತಿಥಿಗಳ್ನ ಇಬ್ರೂ ಗಂಡ-ಹೆಂಡತಿ ಸೇರಿ ತಬ್‌ಕೊಳ್ಳೋದು, ಮುತ್ತಿಕ್ಕೋದು.... ನಂಗೆ ಅದೆಲ್ಲ ಸರಿ ಕಾಣ್‌ಲಿಲ್ಲ. ದೇವದಾಸ್ ಎಷ್ಟೋ ಬಾರಿ ಕರೆದ್ರೂ ನಾನ್ ಮಾತ್ರ ಏನೇನೊ ನೆಪ ಹೇಳಿ ತಪ್ಪಿಸ್ಕೊಂಡೆ ನೋಡು ಹನುಮಂತ್ರಾಯ." ಎಂದರು.

ಹೊಸಾಳಿಯವರನ್ನು ವೆಂಕಟಗಿರಿಯಪ್ಪ ಗೌಣಗೊಳಿಸಿ ಮಾತಾಡುವುದರ ವಾಸನೆ ಬಡಿಯಿತು. ನಾನು ಹೊಸಾಳಿಯವರ ಮನೆಯ ಪಾರ್ಟಿಗೆ ಹೋದದ್ದು ಅತ್ಯಂತ ಹೆಮ್ಮೆಯ ಸಂಗತಿ ಎಂದು ಪರಿಗಣಿಸಿರುವಾಗ ವೆಂಕಟಗಿರಿಯಪ್ಪನವರ ಈ ಧಾಟಿ ಸೂಜಿ ಚುಚ್ಚಿ ಗಾಳಿ ತೆಗೆಯುವಂತೆ ಕಂಡಿತು. ಹೊಸಾಳಿಯವರ ಬಗೆಗೆ ನೀವು ಹೊಂದಿರುವ ಅಭಿಪ್ರಾಯ ಪೂರ್ಣ ಸರಿಯಲ್ಲ ಎಂದು ಹೇಳಲು ತಡಕಾಡುತ್ತ, "ಹೊಸಾಳಿಯವರು ಎಂಥ ಪ್ರಾಮಾಣಿಕ ಅಧಿಕಾರಿಗಳು ಗೊತ್ತ, ಪರಶುರಾಮ ಎನ್ನುವ ಒಬ್ಬ ಭ್ರಷ್ಟ ಇನ್ಸ್‌ಪೆಕ್ಟರ್‌ನನ್ನು ನೌಕರಿಯಿಂದ ಡಿಸ್‌ಮಿಸ್ ಮಾಡಿಸಿದರು. ಇದಕ್ಕೆಲ್ಲ ನಮ್ಮ ಸೀನಿಯರ್‌ದು ಲೀಗಲ್ ಅಡ್‌ವೈಜ್...." ಎಂದು ಹೇಳಿ ಅವರ ಮುಖಭಾವದಲ್ಲಿ ಬದಲಾವಣೆಯನ್ನು ನಿರೀಕ್ಷಿಸತೊಡಗಿದೆ.

ಆದರೆ ವೆಂಕಟಗಿರಿಯಪ್ಪನವರು ನಸುನಕ್ಕರು, ನೀನಿನ್ನೂ ಎಳಸು ಎನ್ನುವಂತೆ. "ಈ ಹೊಸಾಳಿ ಮತ್ತು ದೇವದಾಸ್ ಅವರ್ನ ನೀ ಎಷ್ಟ್ ಕಂಡಿದ್ದೀಯಾ. ಅವ್ರು ಇಬ್ರೂ ಕಾಲೇಜ್‌ನಲ್ಲಿ ಕ್ಲಾಸ್‌ಮೇಟ್‌ಗಳಾಗಿದ್ದರು ಅಂತ ಹೇಳ್ತವ್ರೆ. ಓದು ಮುಗಿದು ವೃತ್ತಿಗೆ ಹತ್ತಿದ ಮೇಲೇನೂ ಸ್ನೇಹಾ ಮುಂದುವರೀಬೇಕಾದ್ರೆ ಕಾಲೇಜ್ ಗೆಳೆತನ ಮಾತ್ರ ಸಾಕಾಗೋಲ್ಲ; ವ್ಯವಹಾರದ ಸಂಬಂಧಾನೂ ಬೇಕಾಗುತ್ತೆ ನೋಡು."

ನನ್ ಕಣ್ಣಾರೆ ನೋಡಿದೇನೆ ನಿಮ್ಮ ಸೀನಿಯರ್ ಮತ್ತು ಹೊಸಾಳಿ ಸೇರಿ ಬಡರೈತರ ಮೇಲೆ ಮಾಡಿರೊ ದಬ್ಬಾಳಿಕೇನ. ಆ ಪಾಪದಲ್ಲಿ ನಂದೂ ಪರೋಕ್ಷ ಪಾಲು ಇಲ್ಲ ಅಂತ ಹೇಳಾಕಾಗಲ್ಲ. ಅರ್ಕಾವತಿ ಎಸ್ಟೇಟ್ ಸುತ್ತಲಿನ ಹಳ್ಳಿಗಳ ಜನ ದೇವದಾಸರ ಬಂಗಲೆಗೆ ಉರಿಹಚ್ಚಲು ಹೋಗಿದ್ರು. ನಾನೇ ಮಧ್ಯಸ್ಥಿಕೆ

ವಹಿಸಿ ಅದನ್ನೆಲ್ಲ ಸರಿಮಾಡ್ದೆ. ಇದರಿಂದ ಕೆಲ ಜನ ನನ್ನ ಮೇಲೆ ಸಿಟ್ಟಾದ್ರು. ದೇವದಾಸ್ರ ಬಾಲಬಡುಕ ಆಗ್ಬವ್ನೆ, ಅಷ್ಟೇ ಅಲ್ಲ ಅವರ ಮನೆ ನಾಯಿ ತರ ವರ್ತಿಸ್ತಾನೆ ವೆಂಕಟಗಿರಿಯಪ್ಪ ಎಂದು ನನ್ನ ಬೆನ್ನ ಹಿಂದೆ ಜನ ಮಾತಾಡೋಕೂ ಶುರು ಮಾಡಿದ್ರು. ಅದನ್ನೆಲ್ಲ ಸಹಿಸ್ಕಂಡು ನಿಮ್ಮ ಸೀನಿಯರ್‌ಗೆ ರಕ್ಷಣೆ ಕೊಟ್ಟೆ. ಆದ್ರೆ ದೇವದಾಸ್ ತಲೇಗೆ ಅದಿನ್ನೂ ಹೋಗಿಲ್ಲ. ಐ.ಜಿ.ಪಿ. ಹೊಸಾಳಿ ಮತ್ತು ಅವನ ಪೋಲೀಸರಿಗೆ ಹೆದರಿಕೊಂಡು ಜನ ಸುಮ್ಮನಾದ್ರು ಅಂತ ತಿಳ್ಕೊಂಡವ್ನೆ...." ಎನ್ನುತ್ತ ಆರುತ್ತಿದ್ದ ಬಾಯಿಯನ್ನು ಕಾಫಿಯಿಂದ ತೇವಗೊಳಿಸಿಕೊಳ್ಳತೊಡಗಿದರು.

ನನಗೆ ಇವೆಲ್ಲ ಅನಿರೀಕ್ಷಿತ ಸಂಗತಿಗಳು. ಕುತೂಹಲ ಕೆರಳಿ "ಅದೇನೇನೊ ಹೇಳ್ತೀದೀರಿ, ನನಗೆ ಒಂದೂ ಅರ್ಥವಾಗ್ತಾಯಿಲ್ಲ" ಎಂದೆ ಹುಬ್ಬೇರಿಸಿ.

ಹೇಳ್ತೇನೆ ಕೇಳು ಎಂದ ವೆಂಕಟಗಿರಿಯಪ್ಪ: "ಅರ್ಕಾವತಿ ಎಸ್ಟೇಟ್ ಅಂದ್ರೆ ಏನೂ ಅಂತ ತಿಳ್ಕಂಡಿದೀಯಾ, ಮಹಾರಾಜರಂಥವರಿಗೆ ಮಾತ್ರ ಇರುವಂಥ ಆಸ್ತಿ ಅದು. ಸಾವಿರದ ಇನ್ನೂರು ಎಕರೆ ಜಮೀನು! ಅರ್ಕಾವತಿ ನದಿ ಆ ಎಸ್ಟೇಟ್ ಮಧ್ಯೆ ಹರಿದುಹೋಗಿದೆ ಅಂದ್ರೆ ಊಹಿಸ್ಕೋ ಅದೆಷ್ಟು ದೊಡ್ಡದಿರಬೋದು ಅಂತ. ಈ ಹಳೇ ಮೈಸೂರು ಸೀಮೇಲಿ ನಾನು ಅನ್ನೋ ಪಟೇಲ್ರುಗಳಿಗೇ ಅಷ್ಟೊಂದ್ ಜಮೀನು ಇದ್ದಿಲ್ಲ ತಿಳ್ಕೊ. ಉಳುವವನಿಗೇ ಭೂಮಿ ಕೊಡಬೇಕು ಅಂತ ಕಾನೂನು ಬಂದದೆ ಅಂತ ಹಳ್ಳಿಜನಕ್ಕೆ ಗೊತ್ತಾಯಿತು. ಅರ್ಕಾವತಿ ಎಸ್ಟೇಟಿನ ಸುತ್ತಲಿನ ಹೊಸಪಾಳ್ಯ, ವಡ್ಡರದೊಡ್ಡಿ, ಜೆಟ್ಟಿಪಾಳ್ಯ, ಮಲ್ಲಸಂದ್ರ, ಗಂಗೇನಹಳ್ಳಿಗಳ ಜನ ದೇವದಾಸರ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ಜನರ ಯೋಚನೆ ಬದಲಾಗಿರೋದು ನೋಡಿಕೊಂಡ ದೇವದಾಸ್ ಜಮೀನು ಹಾಳುಬಿದ್ದರೆ ಬೀಳಲಿ ಸಾಗುವಳಿಗೆ ಕೊಡೋದು ಬೇಡ ಅಂತ ತೀರ್ಮಾನಿಸಿದ. ಬಡರೈತರನ್ನ ವಕ್ಕಲೆಬ್ಬಿಸಿದ. ಎಷ್ಟೋ ರೈತರು ನಾವೇನೂ ನಿಮ್ಮ ಜಮೀನು ಕಿತ್‌ಕೊಳ್ಳಲ್ಲ, ನಮ್ಮ ಹೊಟ್ಟೆಮ್ಯಾಕೆ ಹೋಡೀಬ್ಯಾಡಿ ಬುದ್ಧಿ ಅಂತ ಬೇಡಿಕೊಂಡ್ರೂ ಕೇಳ್‌ಲಿಲ್ಲ. ನನ್ನಂಥ ನಂಬಿಗಸ್ಥ ಮೂರು ನಾಲ್ಕು ಜನಕ್ಕೆ ಮಾತ್ರ ಸಾಗುವಳಿಗೆ ಕೊಟ್ರು. ಕೊನೆಗೆ ನಾನು ಯಾರಿಗೆ ಕೊಡು ಅಂತ ಹೇಳ್ತೇನೊ ಅವರಿಗೆ ಮಾತ್ರ ಅದೂ ನನ್ನ ಮಧ್ಯಸ್ಥಿಕೆಯಲ್ಲಿ ಸಾಗುವಳಿಗೆ ಕೊಡತೊಡಗಿದ್ರು. ಸಾಗುವಳಿ ಬಿಡಿಸಲ್ಪಟ್ಟ ವಕ್ಕಲೆದ್ದಿದ್ದ ರೈತರಿಗೆ ಚಿಕ್ಕಪುಟ್ಟ ಜಮೀನುಗಳಿದ್ದವು. ಬ್ರಿಟಿಷರ ಕಾಲದಿಂದ್ಲೂ ಎಸ್ಟೇಟ್ ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಬಹಳಷ್ಟು ಬಡವರು ನಿರ್ಗತಿಕರಾದರು. ರಾತ್ರಿ ಹೊತ್ತು ಎಸ್ಟೇಟ್ ಒಳಗೆ ಮರಕಡಿಯುವುದು, ಫಸಲು, ಫಲ ಕೊಯ್ಯುವುದು ಮಾಡತೊಡಗಿದರು. ಇದರಿಂದ ದೇವದಾಸ್

ಕೋಪಾವೇಶಗೊಳ್ಳತೊಡಗಿದರು. ಅಷ್ಟು ಸಣ್ಣಪುಟ್ಟ ಕಳವು ಆಗಲಿ, ಸಹಿಸ್ಕೊಳ್ಳಿ. ಸುಮ್ನೆ ಜನರನ್ನ ಎದುರು ಹಾಕ್ಕೋಬೇಡಿ ಎಂದು ಎಷ್ಟೋ ತಿಳಿಹೇಳ್ದೆ. ಆದ್ರೆ ದೇವದಾಸ್ ಕೇಳಲಿಲ್ಲ. ಇವತ್ತು ಮರ ಕದೀತಾರೆ, ನಾಳೆ ಜಮೀನೇ ತಮ್ದು ಅಂತಾರೆ. ಇವರಿಗೆ ಬುದ್ಧಿ ಕಲಿಸೋದು ಹೇಗೆ ಅಂತ ನಂಗೊತ್ತು ಅಂತ ಹಾರಾಡಿದ್ರು. ಇದೇ ಹೊಸಾಳಿಗೆ ಹೇಳಿ ಒಂದಷ್ಟು ಬಡವರನ್ನು ಪೊಲೀಸ್ ಲಾಕಪ್‌ಗೆ ಹಾಕಿಸಿ ಹೊಡೆಸಿದರು. ಆದರೆ ಜನರೇನೂ ಅಂಜಲಿಲ್ಲ. ಒದೆ ತಿಂದವರೆಲ್ಲ ಒಂದಾದರು. ಒಂದು ದಿನ ರಾತ್ರಿ ದೇವದಾಸ್ ಕಾರು ಎಸ್ಟೇಟ್ ದಾರಿಯ ತಿರುವಿನಲ್ಲಿ ಬರುತ್ತಿರುವಾಗ ರಸ್ತೆ ಪಕ್ಕದ ಮರದ ಮೇಲೆ ಕಾದುಕೂತು ದೊಡ್ಡ ಮರದ ಬೊಡ್ಡೆಯನ್ನು ಕಾರ್ ಮೇಲೆ ಹಾಕಿದರು. ದೇವದಾಸ್ ಸುದೈವ ಕಾರಿನ ಮುಂಭಾಗ ಮಾತ್ರ ಜಜ್ಜಿತು. ಕಾರ್‌ನಿಂದ ಜಿಗಿದು ಕತ್ತಲಲ್ಲಿ ಏಳುತ್ತ ಬೀಳುತ್ತ ಬಂಗಲೆ ಸೇರಿದ ದೇವದಾಸ್‌ಗೆ ರೈತರ ಮೇಲೆ ರಕ್ತ ಕುದಿಯತೊಡಗಿತು. ಇದನ್ನು ಮಾಡಿದವರು ಕೆಲವೇ ಕಿಡಿಗೇಡಿಗಳು. ಆದರೆ ದೇವದಾಸ್ ಎಲ್ಲರ ಮೇಲೆ ಕಿಡಿಕಾರತೊಡಗಿದರು.

ಅಂದು ಯುಗಾದಿ ಹಬ್ಬ. ಹಳ್ಳಿಯ ಜನ ಮಾವಿನ ತೋರಣ ಕಟ್ಟಿ, ಬೇವುಬೆಲ್ಲ ಸವಿಯಲು ಸಿದ್ಧರಾಗುತ್ತಿದ್ದರು. ಏಕಾಏಕೀ ಎರಡು ಪೊಲೀಸ್ ವ್ಯಾನ್‌ಗಳಿಂದ ಇಳಿದ ಪೇದೆಗಳು ಕೈಗೆ ಸಿಕ್ಕ ರೈತರ ಮೇಲೆ ಬೆತ್ತಪ್ರಹಾರ ನಡೆಸತೊಡಗಿದರು. ಹೆಣ್ಣುಗಂಡುಗಳೆನ್ನದೆ ಎಳೆದು ವ್ಯಾನ್‌ನಲ್ಲಿ ತುಂಬತೊಡಗಿದರು. ಮೈಗೆ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತಿರುವಾಗಲೇ ಬಾಸುಂಡೆಗಳೇಳುವಂತೆ ಹೊಡೆದರು. ಬರಿಮೈನಲ್ಲಿ ಎಳೆತಂದು ವ್ಯಾನ್‌ನಲ್ಲಿ ತುರುಕಿದರು. ಇದನ್ನೆಲ್ಲ ಮಾಡಿಸಿದ್ದು ನಿಮ್ಮ ಆ ಪ್ರಾಮಾಣಿಕ ಅಧಿಕಾರಿ ಹೊಸಾಳಿ.

ಹಬ್ಬದ ದಿನ ಇಂಥ ರಾಕ್ಷಸೀ ದಾಳಿ ನಡೆದದ್ದನ್ನು ನೋಡಿ ಸುತ್ತಲಿನ ಹಳ್ಳಿಗಳ ಜನವೆಲ್ಲ ಕೋಲು, ಭರ್ಜಿ, ಕೊಡಲಿಗಳನ್ನು ಕೈಗೆ ಎತ್ತಿಕೊಂಡು ದೇವದಾಸ್ ಬಂಗಲೆಗೆ ಮುತ್ತಿಗೆ ಹಾಕಲು ಸನ್ನದ್ಧರಾದರು. ಈಗಲಾದರು ನೀವು ಸ್ಥಿಮಿತಕ್ಕೆ ಬನ್ನಿ, ಇಲ್ಲದಿದ್ದರೆ ನಿಮ್ಮ ತಪ್ಪಿಗಾಗಿ ಇಡೀ ಕುಟುಂಬ ಬಲಿಯಾಗಬೇಕಾಗುತ್ತೆ ಎಂದೆ. ಕೂಡಲೇ ಹೊಸಾಳಿಗೆ ಫೋನ್ ಮಾಡಿ ವ್ಯಾನ್‌ನಲ್ಲಿ ಎತ್ತಿಕೊಂಡು ಹೋದವರನ್ನೆಲ್ಲ ವಾಪಸ್ ಕಳಿಸು ಅಂತ ಕೇಳಿಕೊಂಡರು ದೇವದಾಸ್. ನಾನೇ ಮುಂದು ನಿಂತು ಜನರಿಗೆ ಯಾವ ಕೇಸೂ ಆಗದಂತೆ ಆಶ್ವಾಸನೆ ನೀಡಿದೆ. ಪೊಲೀಸರ ಭಯವೂ ಇದ್ದುದರಿಂದ ಜನ ರಾಜೀ ಸಂಧಾನಕ್ಕೆ ಒಪ್ಪಿಕೊಂಡರು! ಹೂಂ, ವೇಳೆ ಹೋದದ್ದೇ ಗೊತ್ತಾಗಲಿಲ್ಲ ನೋಡು. ನಿಮ್ಮ ಸೀನಿಯರ್ ಬಂದು

ಅದೆಷ್ಟು ಹೊತ್ತಾಗಿರುತ್ತೋ ನಡಿ. ದೊಡ್ಡೋರ ಜೊತೆಗೆ ಓಡಾಡೋವಾಗ ರುಚಿ ಅನಿಸ್ತದೆ. ಆದ್ರೆ ಅವರ ಒಳಹೊಕ್ಕು ನೋಡಿದ್ರೆ ಎಲ್ಲ ಅತ್ತಿಹಣ್ಣಿನ ಥರಾ.... ನಿಂಗೆ ಹೊಸ ಹುಮ್ಮಸ್ಸು..... ಅದ್ಕೇ ಹಿರಿಯರು, 'ದೊಡ್ಡೋರ್ ಬುದ್ಧಿ ಒಂದ್ ಮಾದರಿಯಲ್ಲ ಅಂತಾರೆ" ಎನ್ನುತ್ತ ಮೇಲೆದ್ದರು.

ವೆಂಕಟಗಿರಿಯಪ್ಪನವರು ಹೇಳಿದ ದೇವದಾಸ್ ಮತ್ತು ಹೊಸಾಳಿ ಸ್ನೇಹದ ಕಥೆ ಕೇಳಿ ಭ್ರಮನಿರಸನಗೊಂಡಂತವನಾಗಿ ಅವರನ್ನು ಹಿಂಬಾಲಿಸಿ ಆಫೀಸ್ ಸೇರಿದೆ.

41

ಸನ್ನದು ಇಲ್ಲದೆಯೇ ಕೋಟ್ ಹಾಕಿದೆ

"ನಾಡಿದ್ದು ನೀನು ತುಮಕೂರು ಸೆಷನ್ಸ್ ಕೋರ್ಟಿಗೆ ಹೋಗಿ, ಮರ್ಡರ್ ಕೇಸ್‌ವೊಂದಕ್ಕೆ ವಕಾಲತ್ತು ಹಾಕಿ ಬರಬೇಕು" ಎಂದು ಸೀನಿಯರ್ ದೇವದಾಸ್ ಅವರು ಹೇಳಿದಾಗ ದಿಗಿಲುಗೊಂಡೆ.

"ಸಾರ್, ನಾನಿನ್ನೂ ಬಾರ್ ಕೌನ್ಸಿಲ್‌ನಲ್ಲಿ ನನ್ನ ಹೆಸರನ್ನ ರಿಜಿಸ್ಟರ್ ಮಾಡಿಸಿಲ್ಲ. ಸನ್ನದು ಇಲ್ಲದೆ ವಕೀಲನಾಗಿ ಹೋಗೋದೆ....?" ಎಂದು ರಾಗ ಎಳೆದೆ.

"ಕಂಡಿದೀನಯ್ಯ ಈ ಕೋರ್ಟ್‌ಗಳನ್ನೆಲ್ಲ. ನೀನು ನನ್ನ ಜ್ಯೂನಿಯರ್ ಅಂತ ಹೋಗಿ ನಿಂತುಕೊಂಡರೆ, ಆ ತುಮಕೂರು ಕೋರ್ಟಿನಲ್ಲಿ ನಿನ್ನನ್ನ ಪ್ರಶ್ನೆ ಮಾಡೋ ಧೈರ್ಯ ಯಾರಿಗಿದೆಯೊ?" ಎಂದು ಹುಬ್ಬೇರಿಸಿದರು.

ಗುಮಾಸ್ತ ರಾಮಚಂದ್ರರಾವ್‌ರನ್ನು ಕರೆದು, "ಪಕ್ಕದಲ್ಲಿರೋ ವೆಂಕಟೇಶ್ವರ ಟೇಲರಿಂಗ್ ಹಾಲ್‌ನವನನ್ನು ಕರೆ ತಾ," ಎಂದರು.

ಟೇಲರ್‌ಗೆ ನನ್ನೆಡೆ ತೋರಿಸುತ್ತ, "ಇವನಿಗೆ ಎರಡು ಪ್ಯಾಂಟು, ಎರಡು

ಷರ್ಟು, ಒಂದು ಕಪ್ಪು ಕೋಟು ಇಂದು ಸಂಜೆಗೇ ರೆಡಿ ಮಾಡಿಕೊಡಬೇಕು" ಎಂದರು.

ತುಮಕೂರಿನಲ್ಲಿ ಬಸ್‌ಸ್ಟ್ಯಾಂಡ್ (ಈಗ ಇದು ಹಳೆಯ ಬಸ್‌ಸ್ಟ್ಯಾಂಡ್) ಪಕ್ಕಕ್ಕಿದ್ದ ವುಡ್‌ಲ್ಯಾಂಡ್ ಹೋಟೆಲ್‌ನಲ್ಲಿ ರೂಮ್ ಅರೇಂಜ್ ಮಾಡಲಾಗಿತ್ತು. ಖರ್ಚಿಗೆ ಒಂದಷ್ಟು ದುಡ್ಡು ಕೊಟ್ಟರು. ಸಿಪಾಯಿ ಮೊದಲ ಬಾರಿಗೆ ಯುದ್ಧ ಭೂಮಿಗೆ ತೆರಳುವಂತೆ ಹೊರಟೆ.

ಆರೋಪಿಗಳಾಗಿದ್ದ ಪರಮಪ್ಪ ಮತ್ತು ರಮಣಯ್ಯ ಬಂದು ಲಾಡ್ಜ್‌ನಲ್ಲಿ ನನ್ನನ್ನು ಕಂಡರು. ಅತ್ಯಂತ ಭಯಪೂರ್ವಕ ಗೌರವವನ್ನು ತೋರಿದರು. ಊಟ, ತಿಂಡಿಯ ವ್ಯವಸ್ಥೆ ಮಾಡಿದರು. ಯಾವುದಕ್ಕೂ ನನ್ನಿಂದ ಖರ್ಚು ಮಾಡಿಸಲಿಲ್ಲ. ಇದರಿಂದ ನನಗೆ ಖುಷಿ ಹೆಚ್ಚಿ, "ನಿಮಗೇನೂ ಆಗೋಲ್ಲ. ಕೇಸ್ ನಿಮ್ಮಂಗೇ ಆಗುತ್ತೆ" ಎಂದು ಬಹು ತಿಳಿದವನಂತೆ ಆಶ್ವಾಸನೆ ನೀಡಿದೆ.

"ಪರಮಪ್ಪ ನನ್ನ ಮುಂದೆ ನೀನು ನಿಜ ಹೇಳಬೇಕು. ಡಾಕ್ಟರ್‌ಗೆ ಪೇಶಂಟು, ಲಾಯರ್‌ಗೆ ಕಕ್ಷಿದಾರ ಸುಳ್ಳು ಹೇಳಿದ್ರೆ ಕೊನೆಗೆ ನಷ್ಟ ಆಗ್ತೋದು ಯಾರಿಗೆ ಗೊತ್ತಲ್ವೆ! ನೀನು ನಿಜ ಹೇಳಿದ್ರೆ, ನಿನ್ನನ್ನ ಉಳಿಸೋದು ಹ್ಯಾಗೆ ಅಂತ ತಂತ್ರ ರೂಪಿಸಬಹುದು" ಎಂದೆ.

"ಸೋಮಿ, ನನ್ನ ಮಕ್ಕಳಾಣೆ ನಾವು ಆ ಕೂಮಣ್ಣ ಅಲಿಯಾಸ್ ಕಾಮಣ್ಣನ್ನ ಕೊಂದಿಲ್ಲ. ಸಂಜೆ ಹೊತ್ತಿನಾಗೆ ಒಂದೆರಡು ಏಟು ಕೈಯಿಂದ ಬಡಿದು ಹೋದ್ವಿ. ಅಷ್ಟು ಮಾತ್ರ ಗೊತ್ತು ಬುದ್ಧಿ. ಇದ್ದಕ್ಕಿದ್ದಂಗೆ ಅವ್ನನ್ನ ಯಾರು ಕೊಂದು ಹಾಕಿದ್ದು ಅಂತ್ಲೂ ನಂಗೆ ಗೊತ್ತಾಗ್ತಾಯಿಲ್ಲ. ಅವನ ಮಗ ಗವಿಯಪ್ಪ ಅದ್ಯಾಕೆ ನಮ್ಮ್ಯಾಕೆ ಸುಳ್ಳು ಕಂಪ್ಲೇಂಟ್ ಕೊಟ್ಟವ್ನೋ ಆ ದ್ಯಾವರಿಗೇ ಗೊತ್ತು...." ಎಂದ.

"ಮರ್ಡರ್ ಮಾಡಿದವುನು ಒಪ್ಪಿಕೊಳ್ಳೋದುಂಟಾ ಎಲ್ಲಾದ್ರೂ" ಎಂದುಕೊಂಡು, "ಇರ್ಲಿ ಬಿಡು. ನನ್ನ ಮುಂದೆ ಹೇಳ್ಲಿಕ್ಕೆ ಆಗದಿದ್ರೂ ನಮ್ ಸೀನಿಯರ್ ಮುಂದೆ ಮಾತ್ರ ಸತ್ಯಾನ ಮುಚ್ಚಿಡಬೇಡಾ" ಅಂದೆ.

ನನ್ನ ಮಾತಿನಿಂದ ದಿಕ್ಕೆಟ್ಟಂತಾದ ಪರಮಪ್ಪ ಪುನಃ ಏನು ಮಾತಾಡಬೇಕು ಎಂದು ತಿಳಿಯದೆ ಬಾಯಿ ತೆರೆದುಕೊಂಡೇ ಕೂತಿದ್ದು, ಉಗುಳು ನುಂಗತೊಡಗಿದ.

"ಕಳ್ಳ ಹ್ಯಾಗೆ ಸುಮ್ಮನಾದ ನೋಡು. ನನ್ನ ಮುಂದೆ ನಿಜ ಹೇಳಲ್ಲ ಅಂದ್ರೆ, ನಂಗೆ ಗೊತ್ತಾಗೊಲ್ಲ ಅಂತ ತಿಳಕೊಂಡವ್ನೆ....." ಎಂದುಕೊಂಡೆ, ಒಳಗೇ ನಗುತ್ತ.....

ಮೊಕದ್ದಮೆಯ ವಿಚಾರಣೆ ಸೆಷನ್ಸ್ ಜಡ್ಜ್ ಪೊನ್ನರಂಗಮ್ ಅವರ ಮುಂದೆ ಆರಂಭವಾಯಿತು.

ದೇವದಾಸ್ ಅವರ ಖ್ಯಾತಿಯ ಬಗ್ಗೆ ಈಗಾಗಲೇ ತಿಳಿದಿದ್ದರಿಂದ ಇರಬೇಕು, ಪೊನ್ನರಂಗಮ್ ದೇವದಾಸ್ ಅವರನ್ನು ವಿಶೇಷ ಮುಗುಳುನಗೆಯಿಂದ ಸ್ವಾಗತಿಸಿದರು. ಫಿರ್ಯಾದುದಾರ ಗವಿಯಪ್ಪನ ಮುಖ್ಯ ವಿಚಾರಣೆ ನಡೆಯಿತು. ಮುಗಿಯುವವರೆಗೆ ದೇವದಾಸ್‌ರು ಗಂಭೀರವಾಗಿ ಗವಿಯಪ್ಪನನ್ನೇ ಅವಲೋಕಿಸುತ್ತಿದ್ದರು.

ಗವಿಯಪ್ಪನ ಹೇಳಿಕೆಯಿಂದ ತಿಳಿದು ಬಂದುದಿಷ್ಟು: ಕೊಲೆಯಾದ ಗವಿಯಪ್ಪನ ತಂದೆ ಕಾಮಣ್ಣ ಮತ್ತು ಪರಮಪ್ಪ ಇವರೀರ್ವರ ಮನೆಗಳಷ್ಟೇ ಅಲ್ಲ ಹೊಲಗಳೂ ಅಕ್ಕಪಕ್ಕದಲ್ಲಿದ್ದವು. ಪರಮಪ್ಪ ಮತ್ತು ಈತನ ತಮ್ಮ ರಮಣಯ್ಯ ಇನ್ನೂ ಬೇರೆ ಆಗಿರಲಿಲ್ಲ. ಪರಮಪ್ಪನಿಗೂ ಕಾಮಣ್ಣನಿಗೂ ಜಮೀನು ಸಂಬಂಧದ ಜಗಳ ಆರಂಭವಾಯಿತು. ಇದು ಕಾಮಣ್ಣನ ಕೊಲೆಯಲ್ಲಿ ಪರ್ಯಾವಸಾನಗೊಂಡಿತು. ತಂದೆಯನ್ನು ಕಾಪಾಡಲು ಹೋದ ಗವಿಯಪ್ಪನನ್ನೂ ಪರಮಪ್ಪ ಮತ್ತು ಸಹೋದರರು ಕೊಲ್ಲಲು ಯತ್ನಿಸಿದ್ದರೂ ಆತ ಬದುಕಿ ಉಳಿದ.

ಗವಿಯಪ್ಪನ ಮುಖ್ಯ ವಿಚಾರಣೆ ಮುಗಿಯುತ್ತಿದ್ದಂತೆಯೇ, ಕ್ರಾಸ್ ಎಗ್ಸಾಮಿನೇಷನ್ ನಾಳೆಗೆ ಇಟ್ಟುಕೊಳ್ಳೋಣ ಎಂದರು ಜಡ್ಜ್. ಆಗ ದೇವದಾಸ್‌ರು, "ದಯವಿಟ್ಟು ಹಾಗೆ ಮಾಡಬೇಡಿ ಸ್ವಾಮಿ. ಗವಿಯಪ್ಪನ ಕ್ರಾಸ್ ಎಗ್ಸಾಮಿನೇಷನ್‌ಗೆ ಮುಂಚೆ ಗವಿಯಪ್ಪನ ಗಾಯಗಳಿಗೆ ಚಿಕಿತ್ಸೆ ನೀಡಿದ ಡಾಕ್ಟರ್‌ರ ಮುಖ್ಯ ವಿಚಾರಣೆ ನಡೆಯಬೇಕು" ಎಂದರು.

ಜಡ್ಜ್ ಆಕ್ಷೇಪಿಸದೆ ಸಮ್ಮತಿಸಿದರು. ಡಾಕ್ಟರ್‌ರ ಮುಖ್ಯ ವಿಚಾರಣೆಗೆ ದಿನ ನಿಗದಿಯಾಯಿತು.

ಕೋರ್ಟ್‌ನಿಂದ ಹೊರಬಂದ ದೇವದಾಸ್ ಗಂಭೀರವಾಗಿಯೇ ಇದ್ದರು. ಕಕ್ಷಿದಾರರನ್ನೂ ಹೆಚ್ಚು ಮಾತಾಡಿಸಲಿಲ್ಲ. ಕೆಲವು ಲಾಯರ್‌ಗಳು ಬಂದು ತಮ್ಮ ಪರಿಚಯ ಹೇಳಿಕೊಂಡು ದೇವದಾಸ್‌ರನ್ನು ಮಾತಾಡಿಸತೊಡಗಿದರು. ಸೌಜನ್ಯಕ್ಕಾಗಿ ಒತ್ತಾಯದ ನಗೆ ತಂದುಕೊಂಡು ಕೈಕುಲುಕಿ ಕಾರು ಹತ್ತಿದರು.

ಡಾಕ್ಟರ್ ಅವರ ಮುಖ್ಯ ವಿಚಾರಣೆ ನಡೆಯಿತು. ಆ ನಂತರ ಗವಿಯಪ್ಪನ ಕ್ರಾಸ್ ಎಗ್ಸಾಮಿನೇಷನ್ ಇಟ್ಟುಕೊಳ್ಳಲಾಯಿತು.

ಬಾರ್‌ನಲ್ಲಿ ಬಹಳಷ್ಟು ಜನ ಲಾಯರ್‌ಗಳು, "ಈ ಕೇಸ್ ಬಹಳ ಟಫ್ ಇದೆ. ಸ್ವಂತ ಮಗನೇ ಐ ವಿಟ್ನೆಸ್ ಇದಾನೆ. ನಿಮ್ಮ ಸೀನಿಯರ್‌ಗೆ ಈ ಕೇಸ್ ಹೆಸರು ತಂದುಕೊಡೊಲ್ಲ ನೋಡು" ಎಂದರು. ನನಗೂ ಹಾಗೇ ಅನಿಸುತ್ತಿತ್ತು. ಆದರೂ ನನಗೆ ದೇವದಾಸ್ ಮೇಲೆ ಅಂಧಶ್ರದ್ಧೆ ಇತ್ತು; ಎಂಥದೇ ಕೇಸಿರಲಿ ಅದನ್ನು ಜೀರ್ಣಗೊಳಿಸಿಕೊಂಡುಬಿಡುತ್ತಾರೆ ಎಂದು! ಆದರೆ ಹೇಗೆ ಎನ್ನುವುದಕ್ಕೆ ಮಾತ್ರ ವಿವರಣೆ ನನ್ನಲ್ಲಿರುತ್ತಿರಲಿಲ್ಲ. ನಾನು ಆ ಲಾಯರ್‌ಗಳಿಗೆ, "ನೀವು ನೋಡ್ತಾ ಇರಿ. ಕೇಸ್ ನಮ್ಮ ಪರವಾಗೇ ಆಗೋದು. ಆ ಸೀಕ್ರೇಟ್‌ನ್ನೆಲ್ಲ ನಿಮ್ಮ ಮುಂದೆ ಈಗ್ಲೇ ಹೇಳೋಕಾಗಲ್ಲ" ಎಂದು ಹೇಳಿ ಬಾಯಿ ಮುಚ್ಚಿಸಿದೆ.

ಗವಿಯಪ್ಪನ ಕ್ರಾಸ್ ಎಗ್ಝಾಮಿನೇಷನ್ ಆರಂಭವಾಯಿತು. "ಗವಿಯಪ್ಪ ನೀನು ಊಟ ಮಾಡೋದಕ್ಕೆ, ಉತ್ತೋಕೆ, ಇನ್ನಿತರೆ ಕೆಲಸ ಮಾಡೋಕೆ ಬಳಸೋದು ಬಲಗೈಯನ್ನೋ ಅಥವಾ ಎಡಗೈಯನ್ನೋ?"

"ಬಲಗೈಯನ್ನ"

"ನಿನಗೆ ಏಟುಗಳು ಎಲ್ಲೆಲ್ಲಿ ಬಿದ್ದಿವೆ?" ತನಗೆ ಏಟು ಬಿದ್ದ ಭಾಗಗಳನ್ನು ಶರ್ಟ್ ತೆಗೆದು ತೋರಿಸಿದ. ಎಡತೋಳು, ಎದೆ ಎಡಭಾಗ, ಕತ್ತಿನ ಎಡ ಪಕ್ಕೆ, ಎಡ ಕುಂಡಿ, ಎಡ ತೊಡೆ, ಎಡ ಮೊಣಕಾಲುಗಳಲ್ಲಿ ಗಾಯದ ಗುರುತುಗಳಿದ್ದವು.

"ಪರಮಪ್ಪ ಎಲ್ಲ ಏಟುಗಳನ್ನೂ ನಿನ್ನ ಎಡಭಾಗಕ್ಕೇ ಏಕೆ ಹೊಡೆದ? ಬಲಗೈ, ಬಲ ಎದೆಗಳಿಗೆ ಒಂದೇ ಒಂದು ಏಟು ಹಾಕಲಿಲ್ಲವೆ?" ಈ ಪ್ರಶ್ನೆ ಕೇಳಿದ ತಕ್ಷಣ ಜಡ್ಜ್ ಮುಖದಲ್ಲಿ ವಿಚಿತ್ರ ಮಿಂಚು ಬಂದು ಮಾಯವಾದುದನ್ನು ಗುರುತಿಸಿದೆ.

ನನಗೂ ಸಹ ಈ ಪ್ರಶ್ನೆ ಮೊಕದ್ದಮೆಯ ನಿಗೂಢತೆಯನ್ನು ಬಯಲುಗೊಳಿಸುವ ಕೀಲಿಕೈಯಂತೆ ತೋರಿತು.

ಕೋರ್ಟ್ ಹಾಲ್‌ನಲ್ಲಿದ್ದ ಲಾಯರ್‌ಗಳ ಮುಖಚರ್ಯೆಯೂ ಬದಲಾಯಿತು. ನನಗೆ ಅಧೈರ್ಯಗೊಳಿಸುತ್ತಿದ್ದ ಲಾಯರ್‌ಗಳತ್ತ ನೋಡಿ ನಸುನಕ್ಕೆ, "ನೋಡಿ ನಮ್ಮ ಸೀನಿಯರ್ ಎಂಥ ಘಾಟಿ ಎಂದು ತಿಳೀತಾ" ಎನ್ನುವಂತೆ!

ದೇವದಾಸ್ ಕೇಳಿದರು, "ಗವಿಯಪ್ಪ ನಿನಗೆ ಪರಮಪ್ಪ ಗಾಯಗೊಳಿಸಿ ಕೊಲ್ಲಲು ಯತ್ನಿಸಿದನೆಂದು ಹೇಳುತ್ತೀಯಲ್ಲ, ಯಾವುದರಿಂದ ಹೊಡೆದ?"

"ಅಡಿಕೆ ಸವರೋ ಕತ್ತಿಯಿಂದ" ಪೋಲೀಸರು ವಶಕ್ಕೆ ತೆಗೆದುಕೊಂಡಿದ್ದ ಆ ಕತ್ತಿಯನ್ನು ಗವಿಯಪ್ಪನ ಕೈಗೆ ಕೊಟ್ಟ ದೇವದಾಸರು, "ಎಲ್ಲಿ ಈ ಕತ್ತಿಯನ್ನು ನಿನ್ನ ಬಲಗೈಲಿ ಹಿಡಿದುಕೋ" ಎಂದರು.

ಗವಿಯಪ್ಪ ಕತ್ತಿಯನ್ನು ಬಲಗೈಲಿ ಹಿಡಿದುಕೊಂಡ.

"ನಿನ್ನ ಎಡತೋಳಿಗೆ ಏಟು ಬಿದ್ದಿದೆಯಲ್ಲ ಹಾಗೇ ನಿನ್ನ ಬಲತೋಳಿಗೆ ಏಟು ಬೀಳಿಸಿಕೊಳ್ಳುವಂತೆ ನಟನೆ ಮಾಡಿ ತೋರಿಸು."

ಗವಿಯಪ್ಪ ಬಲಗೈಲಿ ಹಿಡಿದುಕೊಂಡಿದ್ದ ಕತ್ತಿಯನ್ನು ಬಲತೋಳಿನತ್ತ ತಿರುಗಿಸಿಕೊಳ್ಳಲು ಆಗಲಿಲ್ಲ.

"ಆಯಿತು, ನಡೆ ಇನ್ನು ನೀನು" ಎಂದರು ದೇವದಾಸ್"

ಕ್ರಾಸ್ ಎಗ್ಜಾಮಿನೇಷನ್‌ಗಾಗಿ ಡಾಕ್ಟರ್‌ನನ್ನು ಬಾಕ್ಸ್‌ಗೆ ಹಾಕಿಸಿದರು.

"ಗವಿಯಪ್ಪನ ಮೈಮೇಲಿನ ಗಾಯಗಳು ಬೇರೆಯವರು ಹೊಡೆದುದರಿಂದ ಆದಂಥವೊ?"

ಪ್ರಶ್ನೆಯ ಆಳ ಅಗಲಗಳನ್ನು ಅರ್ಥೈಸಿಕೊಂಡ ಡಾಕ್ಟರ್ ಒಂದೇ ಬಾರಿಗೆ, "self-inflicted injuries" ಅವೆಲ್ಲ ಎಂದುಬಿಟ್ಟರು.

ಆಗ ಇಡೀ ಕೋರ್ಟ್ ಬೆಚ್ಚಿಬಿದ್ದಿತು.

ಕೇಸು ಇದ್ದಕ್ಕಿದ್ದಂತೆ ನಾಟಕೀಯವಾಗಿ ಬುಡಮೇಲಾಗಿತ್ತು. ದೇವದಾಸರ ಚಾಣಾಕ್ಷತನಕ್ಕೆ ನನ್ನ ತಲೆ ಬಾಗಿತ್ತು; ನನ್ನ ಸೀನಿಯರ್ ಎಂಥ ಬುದ್ಧಿವಂತ ಎಂದು ಹೆಮ್ಮೆ ಎದೆಯಲ್ಲಿ ಉಕ್ಕಿಬಂದಿತು.

ಜಡ್ಜ್ ಅವರೇ ಸ್ವತಃ ದೇವದಾಸರಿಗೆ ಮಾರುಹೋಗಿಬಿಟ್ಟಿದ್ದರು. ಅವರು ತಾವು ನ್ಯಾಯಾಧೀಶರು ಎನ್ನುವುದನ್ನು ಮರೆತು ತಲೆದೂಗತೊಡಗಿದ್ದರು. ಈ ಕೊಲೆ ಕೇಸು ಮುಗಿಯುವುದರೊಳಗೆ ಜಡ್ಜ್ ಪೊನ್ನರಂಗಮ್ ಅವರ ಮೇಲೆ ದೇವದಾಸ್ ಅವರ ಪ್ರಭಾವ ಎಷ್ಟಾಗಿತ್ತೆಂದರೆ, ದೇವದಾಸ್‌ರಂತೆಯೇ ಅವರೂ ತಲೆಗೆ ಪೇಟ ಧರಿಸಿ ಕೋರ್ಟಿಗೆ ಬರತೊಡಗಿದರು. ಆ ನ್ಯಾಯಾಧೀಶರು ನಿವೃತ್ತರಾಗಿ ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿದರು. ಆಗಲೂ ಅವರು ಪೇಟ ಧರಿಸುತ್ತಿದ್ದರು. ನಮ್ಮ ಸೀನಿಯರ್ ಕೊಟ್ಟ ಗಿಫ್ಟ್ ಅದು ಎಂದು ಮನದಲ್ಲೇ ಅಂದುಕೊಳ್ಳುತ್ತಿದ್ದೆ, ಹೈಕೋರ್ಟಿನಲ್ಲಿ ಪೊನ್ನರಂಗಮ್ ಅವರನ್ನು ಕಂಡಾಗಲೆಲ್ಲ.

ಗವಿಯಪ್ಪ ಮತ್ತು ಡಾಕ್ಟರ್‌ರ ಕ್ರಾಸ್ ಎಗ್ಜಾಮಿನೇಷನ್ ಮಾಡುವ ಮೂಲಕ ದೇವದಾಸ್ ಅವರು ಹೊರಗೆಡವಿದ ಸತ್ಯಾಂಶಗಳು ಮೈನವಿರೇಳಿಸುವಂತಿದ್ದವು.

ಗವಿಯಪ್ಪನ ತಂದೆ ಕಾಮಣ್ಣ ಹೆಸರಿಗೆ ತಕ್ಕಂತೆಯೇ ಇದ್ದ. ನೆರೆಮನೆಯ

ಪರಮಪ್ಪನಿಗೆ ಮೂರು ಜನ ಹೆಂಡಂದಿರಿದ್ದರು. ಮೂರನೆಯ ಹೆಂಡತಿಯ ಮೇಲೆ ಕಾಮಣ್ಣ ಕಣ್ಣು ಹಾಕಿದ. ಆದರೆ ಆಕೆ ಅದಕ್ಕೆ ಸಹಕರಿಸದೆ ಗಂಡ ಪರಮಪ್ಪನಿಗೆ ಕಾಮಣ್ಣನ ಕೀಟಲೆಗಳ ಬಗ್ಗೆ ದೂರು ಹೇಳಿದಳು.

ಕಾಮಣ್ಣನ ಮಗ ಗವಿಯಪ್ಪನೇ ಸ್ವತಃ ತನ್ನ ತಂದೆಯ ಈ ಚಟದಿಂದ ತಲೆರೋಸಿಕೊಂಡಿದ್ದ. 'ನನಗೆ ಮದುವೆಯಾಗೋ ವಯಸ್ಸಾಯಿತು ಆದರೂ ನಿನ್ನ ಬುದ್ಧಿ ಬಿಡ್ತಾ ಇಲ್ಲವಲ್ಲ ಹೋಗಿ' ಎಂದು ಎಷ್ಟೋ ಬಾರಿ ತಂದೆಯೊಂದಿಗೆ ಜಗಳ ಮಾಡಿದಾಗ ಮಗನ ಬೆಂಬಲಕ್ಕೆ ಕಾಮಣ್ಣನ ಹೆಂಡತಿ ನಿಲ್ಲುತ್ತಿದ್ದಳು.

ಅಂದು ಮಧ್ಯಾಹ್ನ ಪರಮಪ್ಪನ ಹೆಂಡತಿ ಹಿತ್ತಲಲ್ಲಿ ಅದೇನೋ ಕೆಲಸ ಮಾಡುತ್ತಿರುವಾಗ ಯಾರೂ ಇಲ್ಲದ್ದು ನೋಡಿಕೊಂಡ ಕಾಮಣ್ಣ ಅವಳ ಸೆರಗಿಗೆ ಕೈ ಹಾಕಿದ. ಆಕೆ ಕೊಸರಿಕೊಂಡು ಅಳುತ್ತ ಓಡಿಬಂದಳು. ತೋಟದಿಂದ ಸಂಜೆ ಮನೆಗೆ ಬಂದ ಪರಮಪ್ಪ ಈ ವಿಷಯ ತಿಳಿದು ಕೆಂಡಾಮಂಡಲವಾದ. ಅಣ್ಣನ ಹೆಂಡತಿಯನ್ನು ಕೆಣಕಿದ ಕಾಮಣ್ಣನನ್ನು ಇವತ್ತು ಸುಟ್ಟು ಹೋಳಿ ಮಾಡಿಬಿಡ್ತೇನೆ ಎಂದು ಆತನ ತಮ್ಮ ರಮಣಯ್ಯ ಪ್ರತಿಜ್ಞೆ ಮಾಡಿದ.

ಓಣಿಯ ಜನರನ್ನೆಲ್ಲ ಸೇರಿಸಿಕೊಂಡು ಕಾಮಣ್ಣನ ಮನೆ ಮುಂದೆ ಘೇರಾಯಿಸಿ ಅವಾಚ್ಯ ಶಬ್ದಗಳಿಂದ ಬೈಯತೊಡಗಿದರು. ಓಣಿಯ ಜನರೂ ನಿನ್ನ ಬದುಕಿಗೆ ನಾಚಿಕೆಯೇ ಇಲ್ಲವಲ್ಲ ಎಂದು ಮೂದಲಿಸಿದರು. ಸಿಟ್ಟಿಗೆದ್ದ ಪರಮಪ್ಪ, "ಲೋ ಕಾಮ, ಕಳಿಸೊ ನಿನ್ನ ಹೆಂಡ್ತೀನ ಹೊರಗೆ. ನೀನು ಬರೀ ಸೆರಗು ಹಿಡ್ದೀಯಾ, ನಾನು ಸೀರೆನೇ ಬಿಚ್ತೇನೇ, ಏನು ತಿಳ್ಕಂಡಿದೀಯಾ ನನ್ನ...." ಎಂದು ಚೀರಾಡಿದ. ಕಾಮಣ್ಣನ ಮಗ ಗವಿಯಪ್ಪನಿಗೆ ಇದನ್ನೆಲ್ಲ ನೋಡಿ ಮೈಯೆಲ್ಲ ಕುದ್ದು ಹೋಯಿತು. ಸಿಟ್ಟಿನಿಂದ ಥರಗುಟ್ಟಿ ನಡುಗತೊಡಗಿದ. ಸಿಟ್ಟು ಜನರ ಮೇಲೆ ಬಂದಿರಲಿಲ್ಲ; ಇಂಥ ಅವಮಾನಕರ ಸ್ಥಿತಿಯನ್ನು ತಂದೊಡ್ಡಿದ ತಂದೆಯ ಮೇಲೆ! ತಂದೆಯನ್ನು ಬೈಯಬೇಕೆಂದು ಬಾಯಿ ತೆಗೆದ, ಉದ್ವೇಗದಿಂದ ಧ್ವನಿ ಆರಿತು. ಮನೆಯ ಬಾಗಿಲು ತೆಗೆದು ಕಟ್ಟೆಯ ಮೇಲೆ ಹೋಗಿ ಗಾಳಿಗೆ ಕೂತ. ಬೇಕಿದ್ದರೆ ಒಳಗೆ ಹೋಗಿ ನಮ್ಮಪ್ಪನಿಗೆ ಹೊಡೆದುಕೊಳ್ಳಿರಿ ಎನ್ನುವಂತಿತ್ತು ಗವಿಯಪ್ಪನ ವರ್ತನೆ.

ಕಾಮಣ್ಣನ ಹೆಂಡತಿ ಅಡಿಗೆಮನೆ ಸೇರಿದವಳು ಹೊರಗೆ ಬರಲಿಲ್ಲ.

ಪರಮಪ್ಪ ಮತ್ತು ರಮಣಯ್ಯ ಮನೆಯೊಳಗೆ ಹೊಕ್ಕು ಕಾಮಣ್ಣನನ್ನು ಹೊರಗೆಳೆದು ಥಳಿಸತೊಡಗಿದರು.

"ಕೋಪದಲ್ಲಿ ಏನಾದರೂ ಮಾಡಿ ಕೇಸು ಮಾಡಿಕೊಂಡೀರಾ. ಇವತ್ತಿಗೆ ಸಾಕು ಬಿಡಿ. ಇಷ್ಟಕ್ಕೇ ಅವ್ನು ಬುದ್ಧಿ ಕಲೀಲಿಲ್ಲ ಅಂದ್ರೆ, ಕುಲದಿಂದ ಬಹಿಷ್ಕಾರ ಹಾಕೋಣ" ಎಂದು ಹೇಳಿ ಕಾಮಣ್ಣನನ್ನು ಬಿಡಿಸಿಕೊಂಡರು. ಕಾಮಣ್ಣ ಪ್ರತಿಭಟಿಸದೆ ಒದೆ ತಿಂದಿದ್ದ. ಅವನ ಮಾನಸಿಕ ಸ್ಥೈರ್ಯ ಉಡುಗಿಹೋಗಿತ್ತು.

ಜನರೆಲ್ಲ ಹೋದಮೇಲೆ ಮನೆಯೆಲ್ಲ ಭಣಗುಡತೊಡಗಿತು. ಒಬ್ಬರಿಗೊಬ್ಬರು ಮಾತಾಡಲಿಲ್ಲ. ಯಾರೂ ಊಟ ಮಾಡಲಿಲ್ಲ.

ಕಾಮಣ್ಣ ಮನೆ ಮುಂದಿನ ಕಟ್ಟೆಯ ಮೇಲೆ ಮಲಗಿಕೊಂಡ. ಮಗ ಗವಿಯಪ್ಪನೂ ಇನ್ನೊಂದು ಕಟ್ಟೆಯ ಮೇಲೆ ಮಲಗಿಕೊಂಡ.

ನಡುರಾತ್ರಿಯ ಸಮಯ. ಹುಣ್ಣಿಮೆಯ ಬೆಳದಿಂಗಳು. ಅಪ್ಪನ ಬಾಯಿಯನ್ನು ಎಡಗೈಯಿಂದ ಮುಚ್ಚಿ ಒಂದೇ ಏಟಿಗೆ ಅಡಿಕೆ ಸವರೊ ಕತ್ತಿಯಿಂದ ಗಂಟಲನ್ನು ಹರಿದ, ಕಾಮಣ್ಣ ನಾಲಿಗೆ ಹೊರಚಾಚಿ ವಿಲವಿಲ ಒದ್ದಾಡತೊಡಗಿದ. ಬಿಟ್ಟಗಣ್ಣುಗಳಲ್ಲಿ ಮಗನನ್ನು ನೋಡುತ್ತಿದ್ದಂತೆಯೇ ಎದೆ, ಕೈ, ಕಾಲುಗಳ ಮೇಲೆ ಕತ್ತಿಯಿಂದ ತಿವಿಯತೊಡಗಿದ. ಕೈಸೋತು ದಮ್ಮು ಹತ್ತಿದ್ದಕ್ಕೆ ಗವಿಯಪ್ಪ ತಿವಿಯುವುದನ್ನು ನಿಲ್ಲಿಸಿದ. ಅಪ್ಪನ ಪ್ರಾಣ ಅದಾವಾಗಲೋ ಹಾರಿಹೋಗಿತ್ತು.

ಅವ್ವ ಒಳಗಿದ್ದಳು. ಅಕ್ಕಪಕ್ಕದ ಮನೆಗಳ ಜನ ನಿದ್ರೆಯಲ್ಲಿದ್ದರು. ತಾನೆಸಗಿದ ಕೃತ್ಯದಿಂದ ತಾನೇ ಭೀತಿಗೊಂಡ. ಏನು ಮಾಡುವುದೆಂದು ದಿಕ್ಕು ತೋಚದಂತಾದ. ಅವ್ವ ಮತ್ತು ಸಮಾಜವನ್ನು ಎದುರಿಸುವುದು ಹೇಗೆ ಎನ್ನುವ ಪ್ರಶ್ನೆ ಕಣ್ಮುಂದೆ ದೈತ್ಯಾಕಾರವಾಗಿ ನಿಂತಿತು; ವಿವೇಚನಾ ಶೂನ್ಯನಾದ. ಅರೆಪ್ರಜ್ಞಾವಸ್ಥೆಯಲ್ಲಿದ್ದವನಂತಾದ. ಅಪ್ಪನನ್ನು ಕೊಚ್ಚಿಹಾಕಿದ್ದ ಕತ್ತಿಯಿಂದ ತನ್ನ ಎಡತೋಳು, ಎಡ ಎದೆ, ಎಡ ಭುಜ, ಎಡ ಕತ್ತುಗಳಿಗೆ ಹೊಡೆದುಕೊಳ್ಳತೊಡಗಿದ. ತನ್ನ ಮೈಯಿಂದ ಧಾರಾಕಾರವಾಗಿ ರಕ್ತ ಹರಿಯತೊಡಗಿತು.

ತನ್ನ ಮೈಯಿಂದ ಹರಿವ ರಕ್ತದೊಂದಿಗೇ ಧೈರ್ಯವೂ ಉಕ್ಕಿ ಬಂದಿತು; ತಾನು ಪಾರಾಗುವ ದಾರಿಯೂ ಸ್ಪಷ್ಟ ಕಾಣಿಸಿತು. ಕೂಗತೊಡಗಿದ; ಇಡೀ ಓಣಿಯ ಜನ ಕ್ಷಣಾರ್ಧದಲ್ಲಿ ಎದ್ದು ಓಡಿಬರುವಂತೆ ಕೂಗತೊಡಗಿದೆ.

ನೆರೆದ ಜನರೆದುರಿಗೆ, "ನಮ್ಮಪ್ಪನ್ನ ಹೊಡೆದು ಆ ಪರಮಪ್ಪ, ರಮಣಯ್ಯ ಕೊಂದುಹಾಕಿದ್ರೋ. ನಾನೂ ಸಾಯ್ತೇನೆ. ನೋಡಿ ನನ್ನ ಕತ್ತನ್ನೆಲ್ಲ ಕತ್ತರಿಸಿ ಹಾಕಿದಾರೆ. ನಾನು ಬದುಕೊಲ್ಲ...." ಎಂದು ಮೂರ್ಛೆ ತಪ್ಪಿ ಬಿದ್ದ.

"ನಾವು ಆ ಪರಮಪ್ಪನಿಗೆ ಎಷ್ಟು ಪರಿಯಿಂದ ಹೇಳಿದಿವಿ. ಕೇಸ್ ಮಾಡ್ಕೋಬೇಡ್ವೋ ಅಂತ. ಉಪ್ಪು ಹುಳಿ ಉಂಡ ದೇಹ ಕೇಳ್ತದಾ; ಹೆಂಡ್ತೀನ್ನ ಕೆಣಕಿದವನ ಮ್ಯಾಕೆ ಸಿಟ್ಟಿಗೇಳಬೇಡಾ ಅಂದೆವು. ಎಷ್ಟಾದ್ರೂ ನಾವು ಹೊರಗೆ ನಿಂತು ಬುದ್ಧಿ ಹೇಳೋರು. ಅನುಭವಿಸೋನು ಅವ್ನೆ...." ಎಂದು ಜನ ಮಾತಾಡಿಕೊಳ್ಳುವಾಗ ಪರಮಪ್ಪ, ರಮಣಯ್ಯ "ನಾವು ಕೊಲೆ ಮಾಡಿಲ್ಲ. ಗವಿಯಪ್ಪ ಸುಳ್ಳು ಹೇಳ್ತಿದಾನೆ...." ಎಂದು ಹೇಳುವ ಮಾತುಗಳು ಯಾರ ಕಿವಿಗೂ ತಾಗಲಿಲ್ಲ.

ಪೊಲೀಸರು ಬಂದು ಪರಮಪ್ಪ ಮತ್ತು ರಮಣಯ್ಯರ ಕೈಗಳಿಗೆ ಕೋಳ ತೊಡಿಸಿದರು.

ತಂದೆಯನ್ನು ಕೊಂದವರು ಯಾರು ಎಂದು ಹೇಳಿಕೆ ನೀಡಲು ಕಟಕಟೆಯಲ್ಲಿ ನಿಂತ ಮಗನೇ ಕೊಲೆಗಡುಕ ಎನ್ನುವುದು ದೇವದಾಸ್ ತಲೆಗೆ ಅದ್ಹೇಗೆ ಹೊಳೆಯಿತು. ಎಂದು ಬಹಳ ತಲೆಕೆಡಿಸಿಕೊಂಡೆ. ಉತ್ತರ ಸಿಗಲಿಲ್ಲ. ದೇವದಾಸ್ ಅವರೊಳಗಿದ್ದ ಈ ಸುಪ್ತಶಕ್ತಿಯ ಬಗ್ಗೆ ತಿಳಿದುಕೊಳ್ಳಲು ಹೆಣಗಿದಂತೆಲ್ಲ ಅದು ನಿಗೂಢವಾಗತೊಡಗಿತು.

42

ನ್ಯಾಯಕ್ಕಾಗಿ ಜೈಲು ಸೇರಿದವರು

ದೇವದಾಸ್ ಅವರ ಸ್ವಭಾವವೇ ವಿಚಿತ್ರವಾಗಿತ್ತು. ಅವರನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸರಳವಾಗಿರಲಿಲ್ಲ. ಒಬ್ಬ ವ್ಯಕ್ತಿಯನ್ನು ಒಂದು ಸಂದರ್ಭದಲ್ಲಿ ಹೊಗಳಿದರೆ ಮತ್ತೊಂದು ಸಂದರ್ಭದಲ್ಲಿ ತೆಗಳುತ್ತಿದ್ದರು. ಮೇಲುನೋಟಕ್ಕೆ ಇದು ದ್ವಂದ್ವವಾಗಿ ಕಾಣಿಸಿದರೂ ಹೊಗಳಿಕೆ ಮತ್ತು ತೆಗಳಿಕೆಗಳೆರಡೂ ನಿಜವಾಗಿ ಕಾಣುತ್ತಿದ್ದವು. ಸಾಮಾನ್ಯವಾಗಿ ನಾನು ಎಲ್ಲ ಹಳ್ಳಿಗರಂತೆ ವ್ಯಕ್ತಿಗಳನ್ನು ಬ್ಲ್ಯಾಕ್ ಅಂಡ್ ವೈಟ್ ಎಂದು ಪ್ರತ್ಯೇಕಿಸುತ್ತಿದ್ದೆ. ಒಳ್ಳೆಯವನು ಯಾವತ್ತೂ ಒಳ್ಳೆಯವನಾಗಿರುತ್ತಾನೆ, ಅಂತೆಯೇ ಕೆಟ್ಟವನೂ ಸಹ ಎನ್ನುವ ಧೋರಣೆಯಲ್ಲಿದ್ದ ನನಗೆ ದೇವದಾಸ್ ವರ್ತನೆಗಳು ವಿಚಿತ್ರವಾಗಿ ಕಾಣಿಸುತ್ತಿದ್ದವು. ಬರುಬರುತ್ತ ಅವರ ಮಾತಿನ ಮರ್ಮ ತಿಳಿಯತೊಡಗಿದಾಗ ವ್ಯಕ್ತಿಗಳ ಹೊರಮುಖ, ಒಳಮುಖಗಳ ಬಗೆಗಿರುವ ಒಂದು ಲೋಕವೇ ನನ್ನ ಮುಂದೆ ಬಿಚ್ಚಿಕೊಂಡಿತು.

ತುಮಕೂರಿನ ಕೊಲೆ ಕೇಸ್ ಮುಗಿಸಿಕೊಂಡು ಬೆಂಗಳೂರು ಕಡೆಗೆ ಕಾರಿನಲ್ಲಿ ಹೊರಟಿದ್ದೆವು. ದೇವದಾಸ್ ಅವರು ದಿಗ್ವಿಜಯದ ಭಾವದಲ್ಲಿ ತುಂಬಿ ತುಳುಕುತ್ತಿದ್ದರು. ಅವರು ಇಂಥ ಮೂಡ್‌ನಲ್ಲಿದ್ದಾಗ ತಮ್ಮನ್ನು ತಾವು ಬಿಚ್ಚಿಕೊಂಡುಬಿಡುತ್ತಾರೆನ್ನುವುದನ್ನು

ನಾನು ಆಗಲೇ ಗುರುತಿಸಿಕೊಂಡಿದ್ದೆ. ಅಂಥ ಸಮಯದಲ್ಲಿ ಏನು ಕೇಳಿದರೂ ಕೇಳುವವರಿಗೆ ಸಾಕೆನ್ನಿಸುವಂತೆ ಹೇಳಿಬಿಡುತ್ತಿದ್ದರು.

ಅವರು ಯಾವಾಗಲೋ ಯಾವುದೋ ವಿಷಯದ ಮೇಲೆ ಮಾಡಿದ ಟೀಕೆ ಆಪಾದನೆಗಳನ್ನು ಅಂಥ ಸಮಯ ನೋಡಿ ಕೆದಕುತ್ತಿದ್ದೆ.

ನಾನು "ಸರ್, ನೀವು ಯಾವಾಗಲೂ ಕಂಟೆಂಪ್ಟ್ ಆಫ್ ಕೋರ್ಟ್ ಆ್ಯಕ್ಟ್ ಅನ್ನು ಯರ್ರಾಬಿರ್ರಿ ತೆಗಳುತ್ತೀರಲ್ಲ?" ಎಂದು ಪ್ರಶ್ನಾರ್ಥಕವಾಗಿ ನೋಡಿದೆ.

ಅಷ್ಟರಲ್ಲಿ ಕಾರನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿದರು. ಏಕೆಂದು ನನಗೆ ಗೊತ್ತಾಯಿತು. ಅವರಿಗೆ ಎಳನೀರೆಂದರೆ ಪಂಚಪ್ರಾಣ. ಗಂಜಿ ಇರೋ ನೀರು ಕೊಡಲು ಹೇಳಿದರು. ತುಂಬಾ ಸಿಹಿಯಾಗಿದ್ದುದರಿಂದ ಮೂರು ಎಳನೀರು ಕುಡಿದರು.

" ಯಾವ ಪುಣ್ಯಾತ್ಮನ ತೋಟದಲ್ಲಿ ಬೆಳೆದಿದ್ದೊ ಅಮೃತ ಅಮೃತ ಇದ್ದ ಹಾಗಿದೆ" ಎನ್ನುತ್ತ ಕುಡಿದರು.

ಎಳನೀರು ಕಿಡ್ನಿಗೆ ಅದೆಷ್ಟು ಒಳ್ಳೆಯದು ಎಂದು ವೈಜ್ಞಾನಿಕ ಕಾರಣವನ್ನೂ ನೀಡಿದರು.

ಕಾರು ಏರಿ ಕೂತಾಗ ನ್ಯಾಯಾಲಯ ನಿಂದನೆ ಕಾನೂನಿನ ಬಗ್ಗೆ, "ಅದನ್ನ ಆ ಕಳ್ಳ ಬ್ರಿಟಿಷರು ಮಾಡಿದರು. ಅವ್ರು ಬಿಟ್ಟುಹೋದ್ರೂ ಹಂಗೇ ಮುಂದುವರಿಸುತ್ತಾ ಇದಾರೆ. ಎಲ್ಲರನ್ನೂ ಮಾನವರಂತೆ ನೋಡೋದೇ ಪ್ರಜಾಪ್ರಭುತ್ವ ವ್ಯವಸ್ಥೆ. ನ್ಯಾಯಾಧೀಶರನ್ನ ದೇವರ ಸ್ಥಾನದಲ್ಲಿ ಕೂರಿಸಿದೆ ಆ ಕಾನೂನು. ನ್ಯಾಯಾಧೀಶನ ಅಕ್ರಮ, ಅಜ್ಞಾನ, ಭ್ರಷ್ಟತೆ, ಪಕ್ಷಪಾತ ಧೋರಣೆ ಇವೆಲ್ಲ ಕಣ್ಣಿಗೆ ರಾಚುತ್ತಿದ್ದರೂ ವಕೀಲ ಕೈಕಟ್ಟಿಕೊಂಡು ಸುಮ್ಮನೆ ಕೂರುವಂತೆ ಮಾಡಿದೆ. ಲಾಯರ್ ಎಲ್.ಎಸ್. ರಾಜು ಜಡ್ಜ್ ವಿರುದ್ಧ ತಿರುಗಿ ಬಿದ್ದು ಜೈಲು ಕಂಬಿ ಎಣಿಸಲೇಬೇಕಾಯಿತು. ಆಗ ಇನ್ನೂ ರಾಜರ ಆಡಳಿತ ಇತ್ತು. ಆಗಲೇ ಈ ಕಾನೂನಿನ ವಿರುದ್ಧ ಧ್ವನಿಯೆದ್ದಿತ್ತು. ಈಗ ನಮಗೆ ಸ್ವಾತಂತ್ರ್ಯ ಸಿಕ್ಕಿದೆ, ಆದರೂ ನಮ್ಮಲ್ಲಿ ಧ್ವನಿ ಕುಸಿದು ಹೋಗಿದೆ. ಆರಂಭದಲ್ಲಿ ಪ್ರಕರಣ ಏನೇನೋ ತಿರುವು ಪಡೆದುಕೊಂಡು ಕೊನೆಗೆ ಮೂವರು ಜೈಲಿಗೆ ಹೋಗುವುದರಲ್ಲಿ ಪರ್ಯಾವಸಾನಗೊಂಡಿತು...." ಎನ್ನುತ್ತಾ ಕಥೆ ಹೇಳಿದರು.

"ನೀನು ಕೆಂಪೇಗೌಡ ರಸ್ತೆಯಲ್ಲಿರುವ ಏಶಿಯಾಟಿಕ್ ಬಿಲ್ಡಿಂಗ್ ಅನ್ನು ನೋಡಿದ್ದೀಯಾ?" ಎಂದು ಕೇಳಿದರು.

"ಹೂಂ" ಎಂದೆ.

ಈಗ ಆ ಕಟ್ಟಡದಲ್ಲಿ ಜನತಾಬಜಾರ್ ಇದೆ. ಆ ಕಟ್ಟಡದ ಪಕ್ಕಕ್ಕೆ ತ್ರಿಭುವನ್ ಥೇಟರ್ ಇದೆ.

ಆ ಕಟ್ಟಡವನ್ನು ಕಟ್ಟಿಸಿದಾತ ಬಿ.ಎನ್. ಗೋಪಾಲರಾವ್. ಈತ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಗುಮಾಸ್ತನಾಗಿದ್ದ. ಬ್ಯಾಂಕ್ ವ್ಯವಹಾರದ ಒಳಗುಟ್ಟುಗಳನ್ನು ಅರಿತುಕೊಂಡು ಈತ ತನ್ನ ಹುದ್ದೆಗೆ ರಾಜೀನಾಮೆ ನೀಡಿದ. ಸ್ವಂತ ಫೈನಾನ್ಸ್ ಕಾರ್ಪೋರೇಷನ್ ಆರಂಭಿಸಿದ. ಡಿಪಾಜಿಟ್‌ಗಳಿಗೆ ಎಲ್ಲ ಬ್ಯಾಂಕ್‌ಗಳಿಗಿಂತ ಹೆಚ್ಚಿನ ಬಡ್ಡಿ ಕೊಡತೊಡಗಿದ. ಮೊದಮೊದಲು ಸಣ್ಣಪುಟ್ಟ ವ್ಯಾಪಾರಿಗಳಷ್ಟೇ ಈ ಬ್ಯಾಂಕಿನ ವಹಿವಾಟುದಾರರಾಗಿದ್ದರು. ಕೇವಲ ಒಂದು ವರ್ಷದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು, ವಕೀಲರು, ಕಾಂಟ್ರಾಕ್ಟರ್‌ಗಳು ರಾವ್ ಫೈನಾನ್ಸ್‌ನಲ್ಲಿ ಖಾತೆಗಳನ್ನು ಆರಂಭಿಸಿದರು. ನಾಲ್ಕೇ ವರ್ಷಗಳಲ್ಲಿ ರೂ. ನಾಲ್ಕು ಕೋಟಿ ಡಿಪಾಜಿಟ್ ಸಂಗ್ರಹವಾಗಿಬಿಟ್ಟಿತು. ಬಿ.ಎನ್. ಗೋಪಾಲರಾವ್ ಖ್ಯಾತಿ ಶಿಖರಕ್ಕೇರಿತು. ಸರಕಾರಕ್ಕಿಂತ ವಿಶ್ವಾಸಾರ್ಹ ಬ್ಯಾಂಕ್ ಈತನದು ಎನ್ನುವ ಪ್ರತೀತಿ ಹಬ್ಬಿತು. 1944ನೇ ಇಸವಿಯಲ್ಲಿ ನಾಲ್ಕು ಕೋಟಿ ರೂಪಾಯಿ ಮೊತ್ತ ಸಾಮಾನ್ಯವಾದುದಾಗಿರಲಿಲ್ಲ. ಸ್ವತಃ ಮೈಸೂರು ಮಹಾರಾಜರೇ ರಾವ್ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಿದ ಮೇಲಂತೂ ಬ್ಯಾಂಕ್ ಮುಂದೆ ಜನ ಇರುವೆ ಸಾಲುಗಟ್ಟಿತು.

1945ರ ಅವಧಿಯಲ್ಲಿ ರಾವ್ ಈ ಏಶಿಯಾಟಿಕ್ ಬಿಲ್ಡಿಂಗ್ ಅನ್ನು ಕಟ್ಟಿಸಿದ. ಅಂದಾಜು ಅದೇ ಅವಧಿಯಲ್ಲಿ ಮಹಾರಾಜರು ಬಿ.ಎನ್. ಗೋಪಾಲರಾವ್ ಅವರಿಗೆ "ಧರ್ಮರತ್ನಾಕರ" ಎನ್ನುವ ಬಿರುದು ನೀಡಿ ಸನ್ಮಾನಿಸಿದರು.

ಈ ಬಿರುದು ಪಡೆದ ವರ್ಷದಲ್ಲಿಯೇ ರಾವ್ ಬ್ಯಾಂಕ್‌ನಲ್ಲಿ ದೊಡ್ಡ ಮೊತ್ತದ ಚೆಕ್‌ಗಳು ಬೌನ್ಸ್ ಆಗತೊಡಗಿದವು. ಆರಂಭದಲ್ಲಿ ಜನ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕೆಲವೇ ತಿಂಗಳುಗಳಲ್ಲಿ ಸಣ್ಣ ಪುಟ್ಟ ಮೊತ್ತದ ಚೆಕ್‌ಗಳೂ ಬೌನ್ಸ್ ಆಗತೊಡಗಿದಾಗ ಜನ ಬ್ಯಾಂಕ್ ಮುಂದೆ ಘೇರಾಯಿಸಿದರು. ತರಕಾರಿ ಮಾರುವವನಿಂದ ಹಿಡಿದು ಮಹಾರಾಜರವರೆಗೆ ಗಿರಾಕಿಗಳಿದ್ದರು ಆ ಬ್ಯಾಂಕಿಗೆ. ಜನ ರಾವ್‌ನನ್ನು ಬೀದಿಗೆ ಎಳೆ ತಂದರು. "ನಾನು ದಿವಾಳಿಯೆದ್ದಿದ್ದೇನೆ. ನನ್ನ ಆಸ್ತಿಯನ್ನೆಲ್ಲ ಹರಾಜು ಹಾಕಿ ನಿಮ್ಮ ದುಡ್ಡು ಹಂಚಿಕೊಳ್ಳಿ" ಎಂದ ರಾವ್.

ದುಡ್ಡನ್ನು ಎಲ್ಲೋ ಸಾಗಿಸಿ, ಸಾರ್ವಜನಿಕರಿಗೆ ಸುಳ್ಳು ಹೇಳುತ್ತಿದ್ದಾನೆ, ಇದ್ದಕ್ಕಿದ್ದಂತೆ ಹೀಗೆ ಬ್ಯಾಂಕ್ ನಷ್ಟದಲ್ಲಿ ಬರಲು ಕಾರಣಗಳೇ ಇಲ್ಲ ಎಂದು ಜನ ಸರಕಾರಕ್ಕೆ ದೂರು ನೀಡಿದರು.

ಮೈಸೂರು ರಿಪ್ರೆಸೆಂಟೇಟಿವ್ ಗೌರ್ನಮೆಂಟ್‌ಗೆ ಕೆ.ಸಿ. ರೆಡ್ಡಿ ಮುಖ್ಯಮಂತ್ರಿಗಳಾಗಿದ್ದರು. ಎ. ರಾಮಸ್ವಾಮಿ ಮೊದಲಿಯಾರ್ ಅವರು ಸ್ಪೀಕರ್ ಆಗಿದ್ದರು. ಸದನದಲ್ಲಿ ಧರ್ಮರತ್ನಾಕರರಾವ್ ಮೋಸದ ವಿಷಯ ಚರ್ಚೆಗೆ ಬಂದಾಗ ಅದಕ್ಕೊಂದು ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ಮೈಸೂರು ಮಹಾರಾಜರಿಗೆ ಈ ಘಟನೆ ಮುಜುಗರವುಂಟುಮಾಡಿತ್ತು. ತಾವು ಬಿರುದು ನೀಡಿದ ವ್ಯಕ್ತಿ ಎಂಥ ಪಾಪರ್ ಇದಾನಲ್ಲ ಎನಿಸಿರಬೇಕು. ಇದೆಲ್ಲದರಿಂದ ತಮ್ಮ ರಾಜ್ಯಭಾರದ ಬಗ್ಗೆ ಜನರ ವಿಶ್ವಾಸಕ್ಕೆ ಕುಂದುಂಟಾಗಿದ್ದೂ ಅವರಿಗೆ ಇಕ್ಕಟ್ಟು ಉಂಟುಮಾಡಿತ್ತು. ಸರಕಾರಕ್ಕೆ ನಿಜವಾಗಿಯೂ ವಿಚಾರಣೆ ಮಾಡುವ ಇರಾದೆ ಇದ್ದಂತಿರಲಿಲ್ಲವೆಂದು ಕಾಣುತ್ತದೆ. ಹೀಗಾಗಿ ವಿಚಾರಣೆಯನ್ನು ಬಹಿರಂಗವಾಗಿ ಇಟ್ಟುಕೊಳ್ಳದೆ ಇನ್‌ಕ್ಯಾಮೆರಾ ನಡೆಸಿದರು.

ವಿಚಾರಣಾ ಆಯೋಗಕ್ಕೆ ಪಿ. ಮೇದಪ್ಪನವರನ್ನು ಚೇರ್ಮನ್ ಎಂದು ನೇಮಕ ಮಾಡಲಾಯಿತು. ಆಯೋಗದ ಇಬ್ಬರು ಸದಸ್ಯರಲ್ಲಿ ಒಬ್ಬರು ಎಸ್. ನಿಜಲಿಂಗಪ್ಪ, ಇನ್ನೊಬ್ಬರು ಟಿ. ಸುಬ್ರಮಣ್ಯ.

ಈ ಆಯೋಗದ ಮುಂದೆ ಸಿ.ಎಫ್. ಡಕೊಸ್ಟಾ ಎನ್ನುವ ವ್ಯಕ್ತಿ ಹೇಳಿಕೆ ನೀಡಲು ಹೋದ. ಹೇಳಿಕೆ ನೀಡಿ ಹೊರ ಬಂದ ಈತ, "ಇದು fact finding committee ಅಲ್ಲ fault finding committee. ಅದೂ ಅಲ್ಲದೆ ಸಾಕ್ಷಿಗಳಿಗೆ ಗೌರವ ನೀಡದೆ ಕೀಳಾಗಿ ನಡೆಸಿಕೊಳ್ಳುತ್ತಿದ್ದಾರೆ" ಎಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರಿಗೆ ಲಿಖಿತ ದೂರು ನೀಡಿದ ಮತ್ತು ಆ ದೂರಿನಲ್ಲಿ, "ವಿಚಾರಣೆಯನ್ನು ಸಾರ್ವಜನಿಕವಾಗಿ ನಡೆಸಿದ್ದರೆ ಆಯೋಗದ ಚೇರ್ಮನ್ ಮತ್ತು ಸದಸ್ಯರು ಹೀಗೆ ಉಡಾಫೆಯಿಂದ ವರ್ತಿಸಲು ಅವಕಾಶವಿರುತ್ತಿರಲಿಲ್ಲ. ಇನ್‌ಕ್ಯಾಮೆರಾ ವಿಚಾರಣೆಯನ್ನು ಮೊದಲು ರದ್ದುಗೊಳಿಸಿ, ಸಾರ್ವಜನಿಕ ವಿಚಾರಣೆಗೆ ಆದೇಶಿಸಿ" ಎಂದೂ ವಿನಂತಿಸಿಕೊಂಡ.

ವಿಚಾರಣಾ ಆಯೋಗದ ಬಗ್ಗೆ ಡಕೊಸ್ಟಾ ಮಾಡಿದ ಟೀಕೆಯನ್ನು ಬೆಂಬಲಿಸಿ ಖ್ಯಾತ ವಕೀಲ ಎಲ್.ಎಸ್.ರಾಜು 'ಡೇಲಿ ನ್ಯೂಜ್' ಎನ್ನುವ ಪತ್ರಿಕೆಗೆ ಲೇಖನವೊಂದನ್ನು ಬರೆದರು. ಇದನ್ನು ನೋಡಿದ ಆಯೋಗದ ಚೇರ್ಮನ್ ಮೇದಪ್ಪ ಲೇಖನ ಬರೆದ ಎಲ್.ಎಸ್. ರಾಜು, ಪ್ರಕಟಿಸಿದ ಪಿ.ಆರ್. ರಾಮಯ್ಯ ಮತ್ತು ಎಡಿಟ್ ಮಾಡಿದ ಪಿ.ಬಿ. ಶ್ರೀನಿವಾಸನ್ ಈ ಮೂವರೂ ಆಯೋಗಕ್ಕೆ ನಿಂದನೆ ಮಾಡಿದ್ದಾರೆ, ಇದು ನ್ಯಾಯಾಲಯ ನಿಂದನೆಯೇ ಆಗುತ್ತದೆ ಎಂದು ಹೇಳಿ ಮೂವರಿಗೂ ಮೂರು ತಿಂಗಳ ಜೈಲು ಶಿಕ್ಷೆಯನ್ನು ಮತ್ತು ತಲಾ ಮೂರು ನೂರು ರೂಪಾಯಿಗಳ ದಂಡವನ್ನೂ ವಿಧಿಸಿ ಆದೇಶ ಹೊರಡಿಸಿದರು.

ಈ ಜೈಲು ಶಿಕ್ಷೆಯ ಆದೇಶ ಸಂಜೆ 4.50ಕ್ಕೆ ಹೊರಬಿತ್ತು. ಆ ತಕ್ಷಣವೇ ಆ ಮೂವರನ್ನೂ ಬಂಧಿಸಿ ಸೆಂಟ್ರಲ್ ಜೈಲಿಗೆ ತಳ್ಳಲಾಯಿತು. ಅಪೀಲ್‌ಗೆ ಕಾಲಾವಕಾಶವಿಲ್ಲದಂತೆ ಮಾಡಲು ಕೋರ್ಟ್ ಅವಧಿಯ ಕೊನೆ ಘಳಿಗೆಯಲ್ಲಿ ತೀರ್ಪು ನೀಡಲಾಗಿದ್ದು ಮೇಲುನೋಟಕ್ಕೆ ತೋರುವಂತಿತ್ತು. ಆಯೋಗದ ಕಾರ್ಯವೈಖರಿಯನ್ನು ನಿಂದಿಸಿದವರಿಗೆ ಸ್ವಸಮರ್ಥನೆ ಮಾಡಿಕೊಳ್ಳಲು ಅವಕಾಶ ಸಿಗದಂತೆ ಏಕಾಏಕಿ ಜೈಲಿಗಟ್ಟುವ ಧೋರಣೆ ಆ ಆಯೋಗದ ತೀರ್ಪಿನಲ್ಲಿ ಅಡಗಿದ್ದೂ ಸ್ಪಷ್ಟ ಕಾಣುವಂತಿತ್ತು.

ಸಂಜೆ 5.45ಕ್ಕೆ ಹೈಕೋರ್ಟ್‌ನಲ್ಲಿ ಅಪೀಲ್ ಹಾಕಿಕೊಂಡರು ಎಲ್.ಎಸ್. ರಾಜು ಮತ್ತಿತರರ ಪರ ವಕೀಲರು. ಜಸ್ಟಿಸ್ ಪುಟ್ಟರಾಜು ಅರಸು ಅವರು ಬೇಲ್ ನೀಡಿದರು. ಈ ಆದೇಶ ಜೈಲು ಅಧಿಕಾರಿಗೆ ಮಧ್ಯರಾತ್ರಿ 12 ಘಂಟೆಗೆ ತಲುಪಿತು. ಆ ಸಮಯದಲ್ಲಿ ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಮಾರನೇ ದಿನ ಸರಕಾರದ ಅಡ್ವೊಕೇಟ್ ಜನರಲ್ ಅವರು ಬೇಲ್ ಕ್ಯಾನ್ಸಲ್ ಮಾಡಬೇಕೆಂದು ಪಿಟಿಷನ್ ಹಾಕಿದರು.

ಮಹಾರಾಜರು ಈ ಪ್ರಕರಣದಲ್ಲಿ ವಿಶೇಷ ಆಸಕ್ತಿ ವಹಿಸಿದರು. ಸರಕಾರಕ್ಕೆ ಸೋಲಾದರೆ ತಮಗೆ ಮುಖಭಂಗವಾಗುತ್ತದೆಂದು ಮದ್ರಾಸ್ ರಾಜ್ಯದ ಅಡ್ವೋಕೇಟ್ ಜನರಲ್ ಕೆ.ರಾಜ ಅಯ್ಯರ್ ಅವರನ್ನು ಕರೆಸಿ ಸರಕಾರದ ಪರ ವಾದ ಮಾಡಿಸಿದರು.

ಅಪರಾಧಿಗಳ ಪರ ಎಂ.ಪಿ. ಸೋಮಶೇಖರರಾವ್ ಮತ್ತು ನಿಟ್ಟೂರು ಶ್ರೀನಿವಾಸ ರಾವ್ ಅವರು ವಾದಿಸಿದರು.

ಕೊನೆಗೆ ಹೈಕೋರ್ಟ್‌ನಲ್ಲಿ ತೀರ್ಪು ಅಪರಾಧಿಗಳ ವಿರುದ್ಧ ಆಯಿತು. ಎಲ್.ಎಸ್. ರಾಜು, ಪಬ್ಲಿಷರ್ ಮತ್ತು ಎಡಿಟರ್‌ಗಳನ್ನು ಪುನಃ ಜೈಲ್‌ಗೆ ಹಾಕಲಾಯಿತು.

ಅಷ್ಟೊತ್ತಿಗೆ ಇಡೀ ಪ್ರಕರಣ ಸಾರ್ವಜನಿಕರ ಗಮನ ಸೆಳೆದಿತ್ತು. ಎಲ್.ಎಸ್.ರಾಜು ಮತ್ತು ಪತ್ರಿಕೆಯ ಸಂಪಾದಕ ಹಾಗೂ ಮಾಲೀಕರು ಸಾರ್ವಜನಿಕ ಹಿತಾಸಕ್ತಿಯಿಂದ ಮಾಡಿದ ಟೀಕೆಯನ್ನು ಸರಕಾರ ಸಹಿಸಿಕೊಳ್ಳದೆ ಸೇಡಿನ ಧೋರಣೆಯಿಂದ ಇವರನ್ನೆಲ್ಲ ಜೈಲಿಗೆ ತಳ್ಳಿದೆ ಎಂದು ಜನ ಮಾತಾಡಿಕೊಳ್ಳತೊಡಗಿದರು.

ಹೈಕೋರ್ಟ್‌ನ ಮೇಲೆ ಸರಕಾರ ಒತ್ತಡ ತಂದು ನಿರಪರಾಧಿಗಳನ್ನು ಜೈಲಿಗೆ ತಳ್ಳಿ 'ಢೋಂಗೀ ಧರ್ಮರತ್ನಾಕರ' ಬಿ.ಎನ್. ಗೋಪಾಲ್‌ರಾವ್‌ನ ಕರ್ಮಕಾಂಡವನ್ನು ಮುಚ್ಚಿ ಹಾಕಲು ಯತ್ನಿಸುತ್ತಿದೆಯೆಂದೂ ಜನ ಮಾತಾಡಿಕೊಳ್ಳತೊಡಗಿದರು.

ಪತ್ರಿಕೋದ್ಯಮದ ದಿಗ್ಗಜರೆನಿಸಿಕೊಂಡಿದ್ದ ಡಿ.ಪಿ. ಗುಂಡಪ್ಪನವರು ಸರಕಾರದ

ವಿರುದ್ಧ ಪ್ರತಿಭಟನೆಗೆ ಇಳಿದರು. ಆಗ ಜನ ಸಹಸ್ರ ಸಂಖ್ಯೆಯಲ್ಲಿ ಸತ್ಯಾಗ್ರಹಕ್ಕಿಳಿದರು. ಡಿ.ವಿ.ಜಿ. ಯವರ ನೇತೃತ್ವದ ಜನಾಂದೋಲನ ಸರಕಾರವನ್ನು ನಡುಗಿಸಿತು. ಸರ್ಕಾರ ಬಂಧಿತ ಲಾಯರ್ ಎಲ್.ಎಸ್. ರಾಜು ಮತ್ತು 'ಡೇಲಿ ನ್ಯೂಜ್' ಪತ್ರಿಕೆಯ ಪಬ್ಲಿಷರ್ ಹಾಗೂ ಎಡಿಟರ್‌ಗಳನ್ನು ಬಿಡುಗಡೆಗೊಳಿಸಿತು!

ಹೈಕೋರ್ಟ್ ಕೆಲಸದ ವೇಳೆ ಮುಗಿಯುವ ಸಂದರ್ಭದಲ್ಲಿ ಅಪರಾಧಿಗಳು ಸಲ್ಲಿಸಿದ ಅಪೀಲನ್ನು ಸ್ವೀಕರಿಸಿ ರಾತ್ರಿ ಹನ್ನೆರಡು ಘಂಟೆಗೆ ಜೈಲು ಅಧಿಕಾರಿಗಳಿಗೆ ಬೇಲ್ ಆರ್ಡರ್ ಸಿಗುವಂತೆ ಮಾಡಿದ ಜಸ್ಟಿಸ್ ಪುಟ್ಟರಾಜ ಅರಸು ಅವರನ್ನು ಹುದ್ದೆಯಿಂದ ವಜಾ ಮಾಡಲಾಯಿತು.

ಜೈಲಿನಿಂದ ಹೊರಬಂದ ಲಾಯರ್ ಎಲ್.ಎಸ್.ರಾಜು ಅವರು ಜಸ್ಟಿಸ್ ಪುಟ್ಟರಾಜ ಅರಸು ಅವರನ್ನು ಕಿತ್ತು ಹಾಕಿದ ಸರಕಾರವನ್ನು ಖಂಡಿಸಿ 'ಡೆಕ್ಕನ್ ಹೆರಾಲ್ಡ್'ಗೆ ಪುನಃ ಲೇಖನ ಬರೆದರು. ಕುತೂಹಲ ಮತ್ತು ಆಶ್ಚರ್ಯದ ಸಂಗತಿಯೆಂದರೆ 'ಎಲ್.ಎಸ್. ರಾಜು' ಅವರು ಬರೆದ ಲೇಖನವನ್ನು ಬೆಂಬಲಿಸಿ ಆಗಿನ ಚೀಫ್ ಜಸ್ಟಿಸ್ ಪರಮಶಿವಯ್ಯ ಹೇಳಿಕೆ ನೀಡಿ ಸರಕಾರ ಮತ್ತು ಮಹಾರಾಜರನ್ನು ಮುಜುಗರಕ್ಕೀಡುಮಾಡಿದರು.

ಈ ಎಲ್ಲಾ ವಿದ್ಯಮಾನಗಳಿಂದ ಸರಕಾರ ಎಷ್ಟು ಕೋಪಗೊಂಡಿತ್ತೆಂದರೆ, ಕಿತ್ತು ಹಾಕಲ್ಪಟ್ಟ ಪುಟ್ಟರಾಜು ಅರಸು ಅವರ ಜಸ್ಟಿಸ್ ಸ್ಥಾನಕ್ಕೆ ವಿಚಾರಣಾ ಆಯೋಗಕ್ಕೆ ಚೇರ್ಮನ್ ಆಗಿದ್ದ ಮೇದಪ್ಪನವರನ್ನು ತಂದು ಕೂಡಿಸಿದ್ದಲ್ಲದೆ ಚೀಫ್ ಜಸ್ಟಿಸ್ ಪರಮಶಿವಯ್ಯನವರನ್ನು ಸೇವೆಯಿಂದ ವಜಾ ಮಾಡಿ ತನ್ನ ಕೋಪವನ್ನು ಶಮನಮಾಡಿಕೊಂಡಿತು!

ಅಷ್ಟರಲ್ಲಿ ಸಿವಿಲ್ ಕೋರ್ಟ್ ಧರ್ಮರತ್ನಾಕರ ಬಿರುದಾಂಕಿತ ಗೋಲ್‌ಮಾಲ್ ಗೋಪಾಲ್‌ರಾವ್‌ನನ್ನು ಇನ್‌ಸಾಲ್ವಂಟ್ (ದಿವಾಳಿಯೆದ್ದ ವ್ಯಕ್ತಿ) ಎಂದು ಘೋಷಿಸಿತು.....

ಬೆಂಗಳೂರು ಹೊರವಲಯಕ್ಕೆ ನಮ್ಮ ಕಾರು ಪ್ರವೇಶಿಸಿತ್ತು. ದೇವದಾಸ್ ಮುಖ ಕಿವುಚಿಕೊಂಡು "ಈ ಎಳೆನೀರು ಹೊಲಸು ಮುಂಡೇದು. ಬಾಯಿ ರುಚಿಗೆ ಕುಡಿದ್ರೆ, ಉಚ್ಚೆ ಪದೇ ಪದೇ ಹುಯ್ಯುತ್ತೆ" ಎನ್ನುತ್ತ ಮೂತ್ರ ವಿಸರ್ಜನೆಗಾಗಿ ಅವರ ಕಣ್ಣುಗಳು ಜಾಗ ಹುಡುಕತೊಡಗಿದವು. ನನಗೆ ಅನುಭವದ ಜಗತ್ತೊಂದರಲ್ಲಿ ಮುಳುಗಿಹೋದಂತೆ ಭಾಸವಾಯಿತು.

43

ಬೆಚ್ಚಿ ಬೀಳಿಸಿತು ಬಾರ್ ಕೌನ್ಸಿಲ್

ಅಂದು ಆಫೀಸಿನಲ್ಲಿ ಪೆಚ್ಚುಮೋರೆ ಹಾಕಿಕೊಂಡು ಕೂತಿದ್ದೆ. ಸಾಧಾರಣ ದರ್ಜೆಯಲ್ಲಿ ಲಾ ಪಾಸಾದ ನನ್ನ ಸಹಪಾಠಿಗಳು ಖುಷಿಯಿಂದ ಸಿಹಿ ಹಂಚುತ್ತಿದ್ದರೆ ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾದ ನಾನೇಕೆ ಹೀಗೆ ಕುಗ್ಗಿದ್ದೇನೆಂದು ಆಶ್ಚರ್ಯವಾಗಿತ್ತು. ಫಸ್ಟ್‌ಕ್ಲಾಸ್ ನನ್ನ ಗುರಿಯಾಗಿತ್ತು. ಅದು ಈಡೇರಿರಲಿಲ್ಲ.

"ಏನೋ, ಹಂಗೆ ನಿನ್ನಲ್ಲೇ ಮುಳುಗಿ ಕೂತ್ಕೊಂಡಿದ್ದೀಯಾ?" ಎಂದವರು ನನ್ನ ಸೀನಿಯರ್ ದೇವದಾಸ್ ಎಂದು ತಿಳಿದಾಗ ಗಲಿಬಿಲಿಯಿಂದ ಎದ್ದುನಿಂತೆ.

"ಸಾರ್ ನನ್ನ ರಿಸಲ್ಟ್...." ಎಂದು ತಲೆ ಕರೆದುಕೊಳ್ಳತೊಡಗಿದೆ.

"ಏನು? ಫೇಲ್ ಆಗಿರುವೆಯಾ? ಚಿಂತೆ ಬೇಡ. ನಾನೂ ಫೇಲ್ ಆದವನೇ. ನೆಕ್ಸ್ಟ್ ಇದೆಯಲ್ಲ. ಹೀಗೆ ಮಂಕಾಗಿ ಕೂರಬೇಡ ಹುಡುಗ, ಚಟುವಟಿಕೆಯಿಂದಿರಬೇಕು" ಎಂದರು.

"ಅಯ್ಯೋ ಹಾಗಲ್ಲ ಸಾರ್. ನಾನು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದೇನೆ. ಫಸ್ಟ್ ಕ್ಲಾಸ್ ನನ್ನ ನಿರೀಕ್ಷೆಯಿತ್ತು...." ಎಂದೆ.

"ಥೂ ಯಾಕ್ರೀ ಮತ್ತೆ ಸೋಡ್ ಮುಖ ಹಾಕಿ ಕೂತಿದೀರಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿ ಸರಕಾರಿ ನೌಕರಿಗೆ ಹೋಗಬೇಕೂ ಅಂದುಕೊಂಡಿದ್ದಿರಾ? ತಕ್ಕೊಳ್ಳಿ ಈ ದುಡ್ಡು, ಸ್ವೀಟ್ ತನ್ನಿ" ಎಂದು ಜೇಬಿನಿಂದ ದುಡ್ಡು ತೆಗೆದುಕೊಟ್ಟರು.

ದೇವದಾಸ್ ಅವರೇ ಫೇಲ್ ಆಗಿದ್ದರು ಎನ್ನುವ ಸಂಗತಿ ನನ್ನಲ್ಲಿ ಚೈತನ್ಯ ಹುಟ್ಟಿಸಿತು. ರಾಜಾಜಿನಗರದ ಮನೆ ಮುಂದೆ ನನ್ನ ಹೆಸರಿನ ಬೋರ್ಡ್ ನೇತು ಹಾಕುವುದನ್ನು ಕಲ್ಪಿಸಿಕೊಳ್ಳತೊಡಗಿದೆ.

ಪೇಂಟರ್‌ನನ್ನು ಹಿಡಿದು ಬೋರ್ಡ್ ಬರೆಸಿದೆ. ಬಾರ್ ಕೌನ್ಸಿಲ್‌ನಲ್ಲಿ ನನ್ನ ಹೆಸರನ್ನು ದಾಖಲಿಸಿ, ಪ್ರಮಾಣವಚನ ಸ್ವೀಕರಿಸಿದ ಮೇಲೆ ಮಾತ್ರ ಬೋರ್ಡನ್ನು ಹೊರಕ್ಕೆ ನೇತುಬಿಡಲು ಸಾಧ್ಯವಿತ್ತು. ಸನ್ನದು ಪಡೆಯಲಿಕ್ಕಾಗಿ ಅರ್ಜಿ ಫಾರ್ಮ್ ತೆಗೆದುಕೊಂಡೆ. ರಾತ್ರಿ ಅದನ್ನು ಭರ್ತಿ ಮಾಡಿದೆ. ನನ್ನ ಮಂಚದ ಕೆಳಗಿಟ್ಟಿದ್ದ ನನ್ನ ಹೆಸರಿನ ಬೋರ್ಡ್ ಹೊರಗೆಳೆದು ನೋಡಿ ತೃಪ್ತಿಯಿಂದ ಬೀಗಿದೆ.

ಪ್ರತಿ ಶುಕ್ರವಾರ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗುವವರಿಗೆ ಪ್ರಮಾಣ ವಚನ ಬೋಧಿಸುವುದು ರೂಢಿಯಿತ್ತು. ಗೋಪಾಲಗೌಡ ವೃತ್ತದ ಎದುರಿನ ಹೈಕೋರ್ಟ್ ಕಟ್ಟಡದ ಮೂಲೆಯಲ್ಲಿ ಎರಡು ರೂಮುಗಳನ್ನು ಬಾರ್ ಕೌನ್ಸಿಲ್ ಕಚೇರಿಗಾಗಿ ಬಿಟ್ಟುಕೊಡಲಾಗಿತ್ತು.

1972 ರಲ್ಲಿ ಎ.ಸಿ. ಭೈರಪ್ಪನವರು ಬಾರ್ ಕೌನ್ಸಿಲ್ ಅಧ್ಯಕ್ಷರಾಗಿದ್ದರು. ನಟರಾಜನ್ ಕಾರ್ಯದರ್ಶಿಯಾಗಿದ್ದರು. ಅಂದು ಶುಕ್ರವಾರ ನಾನು ಬಾರ್ ಕೌನ್ಸಿಲ್‌ಗೆ ಪ್ರಮಾಣವಚನ ಸ್ವೀಕರಿಸಲು ಹೋದೆ. ನನ್ನಂತೆಯೇ ಸನ್ನದು ಅಪೇಕ್ಷಿಸಿ ದೂರದ ಜಿಲ್ಲೆಗಳಿಂದ ಭಾವೀ ಲಾಯರ್‌ಗಳು ಬಂದಿದ್ದರು.

ಅಧ್ಯಕ್ಷ ಭೈರಪ್ಪನವರು ಅಂದು ಹಾಜರಿರಲಿಲ್ಲ. ಕಾರ್ಯದರ್ಶಿ ನಟರಾಜನ್ ಮತ್ತು ಕೆಲವು ಸದಸ್ಯರು ಮಾತ್ರ ಇದ್ದರು.

ಪ್ರಮಾಣವಚನ ಬೋಧಿಸುವ ಪ್ರಕ್ರಿಯೆ ಇನ್ನೂ ಆರಂಭಗೊಂಡಿರಲಿಲ್ಲ. ಅಷ್ಟರಲ್ಲಿ ಕಾರ್ಯದರ್ಶಿ ನಟರಾಜನ್‌ರನ್ನು ಕೇಳಿಕೊಂಡು ಲಾಯರ್ ಮೋಹನ್ ರಂಗಮ್ ನಾವು ಕುಳಿತಿದ್ದ ಬಾರ್ ಕೌನ್ಸಿಲ್ ಕಚೇರಿಯೊಳಕ್ಕೆ ಬಂದರು. ನನ್ನನ್ನು ನೋಡಿದವರೇ, "ಓ ಹನುಮಂತ್ರಾಯ ಇದೇನು ಇಲ್ಲಿ?" ಎಂದು ಪ್ರಶ್ನಿಸಿದರು.

ಸೀನಿಯರ್ ಲಾಯರ್ ಒಬ್ಬರು ನನ್ನನ್ನು ಹೀಗೆ ಹೆಸರು ಹಿಡಿದು ಪರಿಚಯದ ಮಾತಾಡಿದ್ದು ನನಗೆ ಖುಷಿಯುಂಟುಮಾಡಿತು.

"ಸಾರ್, ಓಥ್ ತೆಗೆದುಕೊಳ್ಳೋಕ್ಕೆ ಬಂದಿದೀನಿ" ಎಂದೆ ಎದೆಯುಬ್ಬಿಸಿಕೊಂಡು.

"ಅರೆ, ನೀನು ದೇವದಾಸ್ ಜ್ಯೂನಿಯರ್ ಆಗಿ ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡ್ತಾ ಇದ್ದೀಯಾ. ಕೋರ್ಟ್‌ಗೆ ಅಡ್ರೆಸ್ ಮಾಡಿದ್ದನ್ನು, ಆರ್ಗ್ಯೂ ಮಾಡಿದ್ದನ್ನು ಎಷ್ಟು ಸಾರಿ ನೋಡಿಲ್ಲ ನಾನು. ನನಗೆ ಸುಳ್ಳು ಹೇಳ್ತೀಯಾ? ಯಾರೋ ನಿನ್ನ ಸ್ನೇಹಿತ ಓಥ್ ತೆಗೆದುಕೊಳ್ತಿರಬೇಕು. ಅವ್ನ್ ಜೊತೆ ಬಂದಂಗಿದೀಯ" ಎಂದರು.

ಕಾರ್ಯದರ್ಶಿ ನಟರಾಜನ್ ಅವರು ಮೋಹನ್ ರಂಗಮ್ ಅವರ ಮಾತು ಕೇಳಿಸಿ ಕೊಂಡವರೇ ನನ್ನನ್ನು ಪ್ರತ್ಯೇಕವಾಗಿ ಬೇರೊಂದು ಸ್ಥಳದಲ್ಲಿ ಕೂರಿಸಿದರು. "ಇವರದೆಲ್ಲ ಮುಗಿಯಲಿ ಸ್ವಲ್ಪ ತಡೆಯಿರಿ" ಎಂದರು.

ಲಾಯರ್ ಮೋಹನ್ ರಂಗಮ್ ಅಷ್ಟೊಂದು ಸಲಿಗೆಯಿಂದ ಮಾತಾಡಿಸಿದ್ದಕ್ಕೆ ಇರಬೇಕು, ನನ್ನನ್ನು ವಿಶೇಷವಾಗಿ ಪರಿಗಣಿಸಿದ್ದಾರೆ ಎಂದುಕೊಂಡೆ.

ಎಲ್ಲರೂ ಓಥ್ ತೆಗೆದುಕೊಂಡು ಹೋಗಿಯಾದ ಮೇಲೆ, "ನೋಡಿ, ನೀವು ಸನ್ನದು ಪಡೆದುಕೊಳ್ಳದೆ ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಶುರು ಮಾಡಿದ್ದು ಅಕ್ಷಮ್ಯ ಅಪರಾಧ. ನಾಳೆ ಬನ್ನಿ. ಅಧ್ಯಕ್ಷರ ಸಮ್ಮುಖದಲ್ಲಿ ನಿಮ್ಮ ವಿಚಾರಣೆ ನಡೆಯುತ್ತದೆ. ನೀವು ಶಿಕ್ಷೆಗೂ ಗುರಿಯಾಗಬೇಕಾಗುತ್ತದೆ...." ಎಂದಾಗ ನನ್ನೆದೆ ಝಲ್ ಎಂದಿತು.

ಪುನಃ ಕೋರ್ಟ್‌ಗೆ ಹೋಗಲು ಮನಸ್ಸಾಗಲಿಲ್ಲ. ಕೋರ್ಟ್ ಹಾಲ್ ಕಣ್‌ಮುಂದೆ ಬಂದು ಭಯವೆನಿಸಿತು. ಅದೇಕೆ ದೇವದಾಸ್ ಮಾತು ಕೇಳಿ ಸನ್ನದಿಲ್ಲದೆ ಕೋಟ್ ಹಾಕಿ ಕೋರ್ಟ್‌ಗೆ ಕಾಲಿಟ್ಟೆನೊ ಎಂದು ನನ್ನನ್ನು ಶಪಿಸಿಕೊಂಡೆ. ಅಂಥ ದೊಡ್ಡ ಲಾಯರ್ ಆಗಿದ್ದಾರೆ, ನನ್ನ ಭವಿಷ್ಯದ ಬಗ್ಗೆ ಸ್ವಲ್ಪವೂ ಕಾಳಜಿ ಬೇಡವಾ? ತಮ್ಮ ಕೆಲಸವಿದ್ದ ಮಾತ್ರಕ್ಕೆ ಏನೂ ಅರಿಯದ ನನ್ನನ್ನ ಹೀಗೆ ದುರ್ಬಳಕೆ ಮಾಡಿಕೊಳ್ಳೋದು ನ್ಯಾಯವಾ ಎಂದು ದೇವದಾಸ್‌ರನ್ನು ಶಪಿಸಿದೆ. ಇದೆಲ್ಲದರಿಂದ ನಾನು ಲಾಯರ್ ಆಗುವಂತೆಯೇ ಇಲ್ಲ ಎಂದಾಗಿಬಿಟ್ಟರೆ ನನ್ನ ಬದುಕಿನ ಗತಿಯೇನು ಎಂದು ಪ್ರಶ್ನಿಸಿಕೊಂಡೆ.

ಎಲ್ಲ ಸಾಕಾದಂತೆನಿಸಿತು. ಎಂ.ಜಿ. ರೋಡ್‌ಗೆ ಹೋದೆ. ಪ್ಲಾಜಾ ಥೇಟರ್‌ನಲ್ಲಿ ಇಂಗ್ಲಿಷ್ ಮ್ಯಾಟನಿ ಇತ್ತು. ಒಳ ಹೊಕ್ಕೆ. ಸಿನಿಮಾ ಎಂಜಾಯ್ ಮಾಡಲಿಕ್ಕಾಗಲಿಲ್ಲ. ದುಡ್ಡು ಕೊಟ್ಟಿದ್ದೇನಲ್ಲಾ ಎಂದುಕೊಂಡು ಮುಗಿಯುವವರೆಗೆ ಕೂತೆ.

ಸಿನಿಮಾ ಬಿಟ್ಟ ಮೇಲೆ ಒಂದು ಸ್ಟ್ರಾಂಗ್ ಕಾಫಿ ಕುಡಿದೆ. ರಸ್ತೆಯ ಮೇಲೆ

ಬಗೆಬಗೆಯ ಜನ ಹರ್ಷೋಲ್ಲಾಸಗಳಲ್ಲಿ ಅಡ್ಡಾಡುವುದನ್ನೇ ಸ್ವಲ್ಪ ಹೊತ್ತು ನೋಡಿದೆ. "ಜಗತ್ತು ದೊಡ್ಡದಿದೆ. ಇಂಥ ಸಣ್ಣ ವಿಷಯಕ್ಕೆ ಇಷ್ಟೊಂದು ತಲೆ ಕೆಡಿಸಿಕೊಳ್ಳುವುದೆ? ನೇರ ದೇವದಾಸ್ ಹತ್ತಿರ ಹೋಗೋದು. ನಿಮ್ಮಿಂದ್ಲೇ ಇದೆಲ್ಲ ಆದದ್ದು, ನೀವೇ ಬಗೆಹರಿಸಿ ಎಂದು ಕೂರುವುದು. ಮುಂದೇನಾಗುತ್ತೋ ಅದನ್ನು ಎದುರಿಸುವುದು. ಲಾಯರ್ ಆಗದಿದ್ದರೆ ಬದುಕೇ ಇರೋಲ್ಲವೆ? ನನ್ನೆದುರಿಗೆ ಜೀವನೋಲ್ಲಾಸದಿಂದ ಓಡಾಡುತ್ತಿರುವವರಲ್ಲಿ ಎಷ್ಟು ಜನ ಲಾಯರ್‌ಗಳಿದ್ದಾರೆ?" ಎಂದುಕೊಳ್ಳುತ್ತ ಸಿಟಿಬಸ್ ಏರಿದೆ.

ಆಫೀಸ್ ಒಳಕ್ಕೆ ಕಾಲಿಡುತ್ತಿದ್ದಂತೆಯೇ ದೇವದಾಸ್ ಅವರೇ, "ಏನೋ ನೀನು ಎಲ್ಲೋ ಹೋಗಿದ್ದಿ. ನಿನಗೆ ಸರ್ಟಿಫಿಕೇಟ್ ನೀಡೋಲ್ಲ ಅಂತ ಹೇಳಿದ್ ಕೂಡ್ಲೇ ನನ್ನ ಹತ್ತಿರ ಬರೋಕೆ ಏನಾಗಿತ್ತು? ಆಗ್ಲೇ ಬಂದು ಅವರ ಜನ್ಮ ಜಾಲಾಡಿಬಿಡ್ತಿದ್ದೆ. ನನ್ನ ಜ್ಯೂನಿಯರ್ ಆಗಿ ಹೀಗೇನಾ ನೀನು ಮುಖಮರೆಸಿಕೊಂಡು ಹೋಗೋದು. ಆ ಬಾರ್ ಕೌನ್ಸಿಲ್ಲು, ಅದರ ಪ್ರೆಸಿಡೆಂಟು, ಸೆಕ್ರೆಟರಿ ಎಲ್ಲರನ್ನೂ ಬಲ್ಲೆ." ಎಂದರು.

ಮಾತನ್ನು ಹೇಗೆ ಆರಂಭಿಸೋದು ಎಂದು ರಿಹರ್ಸಲ್ ಮಾಡಿಕೊಳ್ಳುತ್ತ ಬಂದ ನನ್ನ ಮುಖದ ಮೇಲೆ ಮಳೆಯ ದೊಡ್ಡ ಹನಿಗಳು ಟಪಟಪನೆ ಉದುರಿದಂತೆನಿಸಿತು.

"ಇಲ್ಲಾ ಸಾರ್. ಆ ಲಾಯರ್ ಮೋಹನ್ ರಂಗಮ್ ನಾನು ಡಿಗ್ರಿ ಕಾಲೇಜ್‌ನಲ್ಲಿ ಓದುತ್ತಿದ್ದಾಗಿನಿಂದ್ಲೂ ಪರಿಚಿತರು. ಯೂನಿವರ್ಸಿಟಿಯ ಸೆನೆಟ್ ಮೆಂಬರ್ ಕೂಡಾ ಆಗಿದ್ದರು. ಅವರ ಹೆಂಡತಿ ಡಾಕ್ಟರ್. ಅವರೂ ಕೂಡಾ ಸೆನೆಟ್ ಮೆಂಬರ್. ಇಲ್ಲೇ ಹಾಸ್ಪಿಟಲ್ ರಸ್ತೆಯಲ್ಲಿ ಅವರ ಕ್ವಾರ್ಟರ್ಸ್. ಯೂನಿವರ್ಸಿಟಿಯ ರಿಜಿಸ್ಟ್ರಾರ್ ಒಬ್ಬರ ಅವ್ಯವಹಾರಗಳ ವಿರುದ್ಧ ವಿದ್ಯಾರ್ಥಿಗಳನ್ನೆಲ್ಲ ಹೋರಾಟಕ್ಕೆ ಪ್ರಚೋದಿಸಿದ್ದರು ಮೋಹನ್ ರಂಗಮ್. ಅದಕ್ಕಾಗಿ ಅವರು ನನ್ನನ್ನು ಬಹಳ ಅವಲಂಬಿಸಿದ್ದರು. ಅದೇ ಪರಿಚಯದಿಂದ ನನ್ನನ್ನು ಮಾತಾಡಿಸಿ, ನಾನು ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ ಎಂದೆಲ್ಲಾ ಮಾತಾಡಿದ್ದೇ ಎಡವಟ್ಟಾಗಿ ಹೋಯಿತು ಸಾರ್" ಎಂದೆ.

"ಅಲ್ಲಯ್ಯಾ, ನೀನು ಮೋಹನ್ ರಂಗಮ್ ಮಾತು ಕೇಳಿ ಹುಡುಗರನ್ನೆಲ್ಲ ಸಂಘಟಿಸಿ ಹೋರಾಟ ಮಾಡಿದ್ದಕ್ಕೆ ಒಳ್ಳೆ ಉಪಕಾರಾನೇ ಮಾಡಿದನಲ್ಲಯ್ಯ ನಿನಗೆ.... ಕೋರ್ಟಿನಲ್ಲೆಲ್ಲ ಸುದ್ದಿ. ಎಲ್ಲರೂ ಕೇಳಿದರು, ನಿಮ್ಮ ಜ್ಯೂನಿಯರ್‌ಗೆ ಬಾರ್ ಕೌನ್ಸಿಲ್ ಸರ್ಟಿಫಿಕೇಟ್ ರಿಜೆಕ್ಟ್ ಮಾಡಿತಂತೆ ಎಂದು. ನಾಳೆ ನೀನು ಹೋಗು.

ಅದೇನಾಗುತ್ತೋ ನೋಡ್ತೀನಿ. ನಿಂಗೆ ಸರ್ಟಿಫಿಕೇಟ್ ಕೊಡಿಸೋಕೆ ಅಗ್ಲಿಲ್ಲಾಂದ್ರೆ ನನ್ನ ಕೋಟ್ ಅನ್ನೇ ಬಿಚ್ಚಿಟ್ಟು ಮನೆ ಸೇರಿಕೊಳ್ತೇನೆ...." ಅವರ ಈ ಮಾತು ನನ್ನಲ್ಲಿ ಆನೆಯ ಬಲವುಂಟುಮಾಡಿತು.

ಮಾರನೆ ದಿನ ಬಾರ್ ಕೌನ್ಸಿಲ್ ಕಚೇರಿಗೆ ಹೋದಾಗ, ಅಧ್ಯಕ್ಷ ಭೈರಪ್ಪನವರು ಅಡ್ವೋಕೇಟ್ ಜನರಲ್ ಭೈರಾರೆಡ್ಡಿಯವರ ಚೇಂಬರ್‌ನಲ್ಲಿದ್ದರು. ಕಾರ್ಯದರ್ಶಿ ನಟರಾಜನ್ ನನ್ನನ್ನು ಅಲ್ಲಿಗೇ ಕರೆದೊಯ್ದರು. ಒಳಕ್ಕೆ ಹೋಗುತ್ತಲೇ, ಮಾಜಿ ಅಡ್ವೋಕೇಟ್ ಜನರಲ್ ಯತಿರಾಜುಲು ನಾಯ್ಡು ಅವರೂ ಕೂತಿದ್ದರು. ಆಲ್ ಇಂಡಿಯಾ ಲಾಯರ್ಸ್ ಕಾನ್‌ಫರೆನ್ಸ್‌ನಲ್ಲಿ ಅವರೊಂದಿಗೆ ಆದ ಪರಿಚಯ ಬೆಳೆಯುತ್ತಲೇ ಹೋಗಿತ್ತು.

ನನ್ನನ್ನು ನೋಡಿದವರೇ, "ಏನು ಹನುಮಂತ್ರಾಯ, ಹೇಗಿದೀಯಾ? ಲಾಯರ್ ಆಗಿಬಿಟ್ಟೆಯಾ? ಹೇಗಿದೆ ಪ್ರಾಕ್ಟೀಸ್? ಯಾರ ಜ್ಯೂನಿಯರ್ ಆಗಿದ್ದೀ?" ಇತ್ಯಾದಿ ಪ್ರಶ್ನೆಗಳನ್ನು ಕೇಳಿದರು.

ಅವರ ಪಕ್ಕದಲ್ಲಿ ಕೂತಿದ್ದ ಅಧ್ಯಕ್ಷ ಭೈರಪ್ಪನವರು, "ಲಾಯರ್ ಆಗೋಕೆ ಮುಂಚೇನೆ ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಶುರು ಮಾಡಿದ್ದಾನೆ ಅಂತ ಅಲಿಗೇಷನ್ ಇವನ ಮೇಲಿದೆ" ಎಂದರು.

"ಅರೆ, ಎಂಥ ಉತ್ಸಾಹೀ ಹುಡುಗ ಕಣ್ರೀ ಇವ್ನು. ಅದೆಂಥ ಸಂಘಟನಾ ಶಕ್ತಿಯಿದೆ ಇವನಲ್ಲಿ. ನಮ್ಮ ಕಾನ್‌ಫರೆನ್ಸ್‌ನಲ್ಲಿ ಲಾ ಕಾಲೇಜ್ ಸ್ಟೂಡೆಂಟ್‌ಗಳನ್ನೆಲ್ಲ ವಾಲಂಟೀಯರ್ಸ್ ಮಾಡಿ ಅದ್ಭಂಗೆ ಮ್ಯಾನೇಜ್ ಮಾಡ್ದ! ತನಗೆ ಸಂಬಂಧಿಸಿಲ್ಲದ ಯಾವುದೋ ಹುಚ್ಚನನ್ನ ನಿಮ್ಹಾನ್ಸ್‌ನಿಂದ ಬಿಡಿಸಿಕೊಂಡು ಬರಲು ಎಷ್ಟು ಕಷ್ಟಪಟ್ಟ. ಇಂಥ ಸೋಷಿಯಲ್ ಕನ್ಸರ್ನ್ ಇರೋ ಹುಡುಗ್ರೇ ಅಪರೂಪವಾಗ್ತಿದ್ದಾರೆ ಈಗ. ಸರ್ಟೀಫಿಕೇಟ್ ಇಲ್ದೆ ಪ್ರಾಕ್ಟೀಸ್ ಮಾಡ್ದಾ ಅಂತ್ಲೇ ಇಟ್ಟುಕೊಳ್ಳಿ. ಏನಾಯ್ತು? Over ambitious ಆಗಿ ಏನೋ ತಿಳೀದೇ ಮಾಡಿದ ತಪ್ಪಿಗೆ ಸರ್ಟಿಫಿಕೇಟನ್ನೇ ರಿಜೆಕ್ಟ್ ಮಾಡೋದಾ, ಛೇ, ಛೇ...." ಎಂದಾಗ ನನ್ನ ಕಣ್ಣುಗಳು ಒದ್ದೆಯಾದವು. ಎಂಥ ದೊಡ್ಡಮನುಷ್ಯರು ಈ ಯತಿರಾಜುಲು ನಾಯ್ಡು ಎನಿಸಿತು.

ಅಡ್ವೋಕೇಟ್ ಜನರಲ್ ಭೈರಾರೆಡ್ಡಿಯವರು, "ಮತ್ತೇನು ಬೇಕಪ್ಪಾ ನಿನಗೆ? ಯತಿರಾಜುಲು ಸರ್ಟಿಫಿಕೇಟ್ ನೀಡಿದ ಮೇಲೆ ಮತ್ತೆ ಯಾವ ಸರ್ಟಿಫಿಕೇಟ್ ಅವಶ್ಯಕತೆಯೂ ಇಲ್ಲ. ನೇರ ಕೋರ್ಟಿಗೆ ಹೋಗಿ ಪ್ರಾಕ್ಟೀಸ್ ಶುರು ಮಾಡು...." ಎಂದರು.

"ಒಳ್ಳೆ ಘಾಟಿ ಹುಡುಗ ಕಣಪ್ಪ ನೀನು. ಯತಿರಾಜುಲು, ಭೈರಾರೆಡ್ಡಿ ಎಲ್ಲ ನಿನ್ನ ಪರ ವಕಾಲತ್ತು ಹಾಕೊ ಹಾಗೆ ಅವರಿಗೆ ಮೋಡಿ ಮಾಡಿಬಿಟ್ಟಿದ್ದೀಯ. ಇಷ್ಟೆಲ್ಲಾ ತಿಳಿದವನಾಗಿ ಅದೇಕೊ ಸರ್ಟಿಫಿಕೇಟ್ ಇಲ್ದೆ ಪ್ರಾಕ್ಟೀಸ್ ಶುರು ಮಾಡಿದಿ?" ಎಂದು ಕೇಳಿದರು ಭೈರಪ್ಪನವರು.

"ಸಾರ್ ನಾನು ನಿಜವಾಗಿಯೂ ಹೇಳಬೇಕೆಂದ್ರೆ ಪ್ರಾಕ್ಟೀಸ್ ಶುರು ಮಾಡಿಲ್ಲ. ದೇವದಾಸ್ ಅವರೇ ನಂಗೆ ಕೋಟ್ ಹೊಲಿಸಿಕೊಟ್ಟು ಹಾಕ್ಕೊ ಇದನ್ನ ಅಂದ್ರು, ಹಾಕ್ಕೊಂಡೆ. ನನ್ನ ಜೊತೆ ಕೋರ್ಟ್‌ಗೆ ಬಾ ಅಂದ್ರು ಹೋದೆ. ಫೈಲ್ ಹೊತ್ತುಕೊಂಡು ಹೋಗೋದು ಬರೋದು ಅಷ್ಟನ್ನ ಮಾತ್ರ ಮಾಡಿದ್ದೇನೆ ಸರ್. ಒಂದು ಬಾರಿಯೂ ನಾನು ಜಡ್ಜ್‌ರನ್ನು ಉದ್ದೇಶಿಸಿ ಪಿಟ್ ಅಂತ ಒಂದು ಶಬ್ದಾನೂ ಮಾತಾಡಿಲ್ಲ ಸರ್...." ಎಂದೆ.

"ಓ ದೇವದಾಸ್, ತಮ್ಮ ಕ್ಲರ್ಕ್‌ನನ್ನೇ ಕೋರ್ಟಿನಲ್ಲಿ ಲಾಯರ್ ಮಾಡಿ ಹಾಕಿಬಿಡುವ ಘಾಟಿ ಮನುಷ್ಯ. ಇನ್ನು ಲಾಯರ್ ಆಗೋ ನಿನ್ನಂಥವನು ಸಿಕ್ಕಿದರೆ ಬಿಡ್ತಾರೆಯೇ.... ದೇವದಾಸ್ ಸ್ಟೈಲೇ ಹೀಗೆ! ಆಯ್ತು ನಟರಾಜನ್ ಸರ್ಟಿಫಿಕೇಟ್ ಕೊಡ್ತಾರೆ ತಕ್ಕೊಂಡು ಹೋಗು. ಹಾಗೇ ಓಥ್ ಅನ್ನೂ ತೊಗೊ...." ಎಂದು ಹೇಳಿ ನನ್ನ ಬೆನ್ನು ತಟ್ಟಿದರು ಭೈರಪ್ಪ.

ಯತಿರಾಜುಲು ನಾಯ್ಡು ಅಲ್ಲಿ ಇಲ್ಲದಿದ್ದಿದ್ದರೆ, ನನ್ನ ಬಗ್ಗೆ ಶಿಫಾರಸ್ ಮಾಡದಿದ್ದಿದ್ದರೆ ಸಮಸ್ಯೆ ಇಷ್ಟು ಸಲೀಸ್ ಆಗಿ ಮುಗಿಯುತ್ತಿರಲಿಲ್ಲ. 22.09.1972 ರಂದು ಬಾರ್ ಕೌನ್ಸಿಲ್‌ನಲ್ಲಿ ಎನ್‌ರೋಲ್‌ಮೆಂಟ್ ಆಯಿತು ವಿಧಿವತ್ತಾಗಿ.

ಅಂದು ರಾತ್ರಿ ಮನೆಯಲ್ಲಿ ಮುಖ ಮರೆಸಿಟ್ಟಿದ್ದ ಬೋರ್ಡ್ ಅನ್ನು ಹೊರತೆಗೆದೆ. ಸರಿಯಾದ ಜಾಗ ನೋಡಿ ನೇತುಹಾಕಿದೆ. ವಿವಿಧ ಕೋನಗಳಿಂದ ನಾನೇ ನಡೆದಾಡಿ ನೋಡುತ್ತಾ ಆನಂದಪಟ್ಟೆ.

44

ಕೋರ್ಟಿನಲ್ಲಿ ಪಂಚೆ ಎತ್ತುವಂದಾಗ

ವಕೀಲ ವೃತ್ತಿಯ ಪ್ರಾರಂಭಿಕ ದಿನಗಳಲ್ಲಿ ನಾನು ಅಂಟಿಕೊಂಡಿದ್ದ ಆಫೀಸಿಗೆ ಸಂಬಂಧಪಟ್ಟ ಕೇಸುಗಳಲ್ಲಿ ಹಾಜರಾಗಿ, ಇಲ್ಲವೆ ಹಿರಿಯ ವಕೀಲರೊಂದಿಗಿದ್ದು ಕೇಸಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುವ ಸಂದರ್ಭಗಳಲ್ಲಿ ಆಗೊಮ್ಮೆ ಈಗೊಮ್ಮೆ ಸಮಯ ದೊರಕುತ್ತಿತ್ತು. ಆ ಸಮಯದಲ್ಲಿ ಕೋರ್ಟಿನಿಂದ ಕೋರ್ಟಿಗೆ ಹೋಗಿ, ಇಣುಕಿ ನೋಡಿ ವಿಶೇಷವಾದದ್ದೋ ಆಸಕ್ತಿ, ಉತ್ಸಾಹ, ಕುತೂಹಲ ಕೆರಳಿಸುವಂಥದ್ದೋಏನಾದರೂ ಜರುಗುತ್ತಿದ್ದರೆ ಆಗ ಕೋರ್ಟಿನ ಒಳಗಡೆ ಜಗಿದು, ಕೇಸಿನ ಕಲಾಪಗಳಿಂದ ಸಾಧ್ಯವಾದಷ್ಟು ಹೀರುವ ಜಾಯಮಾನ ರೂಢಿಸಿಕೊಂಡಿದ್ದೆ. ಅಂತಹ ದಿನಗಳಲ್ಲಿ ಗಮನಿಸಿದ ಒಂದು ಕೇಸು ವಿವಾಹ ವಿಚ್ಛೇದನಕ್ಕೆ ಸಂಬಂಧಪಟ್ಟದ್ದು. ಹೆಂಡತಿ ಅರ್ಜಿದಾರಳು, ಗಂಡ ಪ್ರತಿವಾದಿ. ಅರ್ಜಿದಾರಳು ತನ್ನ ಅರ್ಜಿಯಲ್ಲಿ ಗಂಡನಿಗೆ ಪುರುಷತ್ವವಿಲ್ಲವೆಂದೂ, ಮದುವೆಯಾಗಿ ಮೂರು ವರ್ಷಗಳೇ ಕಳೆದರೂ ತನಗೆ ವೈವಾಹಿಕ ಜೀವನದ ಗುರಿ ಸಾಧನೆಯಾಗುತ್ತಿಲ್ಲವೆಂದೂ ಹಾಗೂ ತನ್ನಲ್ಲಿ ಎಲ್ಲವೂ ಸರಿಯಿದೆಯೆಂದೂ ಹೇಳಿಕೊಂಡು ಇಂತಹ ಗಂಡನ ಸಂಗದಿಂದ ದಿನದಿಂದ ದಿನಕ್ಕೆ ಅಸಂತೋಷ, ಅತೃಪ್ತಿ, ಜಿಗುಪ್ಸೆ ಮತ್ತು ಬೇಸರ

ಹೆಚ್ಚುತ್ತಾ ಆತ್ಮಹತ್ಯೆಗೆ ಮನಸ್ಸು ವಾಲುತ್ತಿದೆಯೆಂದೂ, ಅನೇಕ ಹಿತೈಷಿಗಳ ಮಾತಿನಂತೆ ಆತ್ಮಹತ್ಯೆಗಿಂತ ಗಂಡನನ್ನು ದೂರವಿರಿಸುವುದು ಸರಿಯೆಂದು ತೀರ್ಮಾನಕ್ಕೆ ಬಂದಿರುವುದಾಗಿಯೂ ಹೇಳಿರುವ ಎಲ್ಲ ವಿಚಾರಗಳು ಸತ್ಯವಾಗಿದ್ದು ತನಗೆ ಗಂಡನಿಂದ ವಿವಾಹ ವಿಚ್ಛೇದನ ಕೊಡಿಸಬೇಕೆಂದೂ ಬೇಡಿದ್ದಳು.

ಕೇಸಿನ ಘನ ಉದ್ದೇಶವನ್ನು ತಿಳಿದುಕೊಳ್ಳುವ ಪ್ರಯತ್ನದಲ್ಲಿ ನಾನು ಸಫಲನಾಗುತ್ತಿದ್ದಂತೆಯೇ ವಾದಿಗೆ ಸಾಕ್ಷಿ ಕಟಕಟೆಯೊಳಗೆ ನಿಲ್ಲಲು ನ್ಯಾಯಾಧೀಶರು ಆಜ್ಞಾಪಿಸಿದರು. ಆಕೆಗೆ ಅದು ತಿಳಿಯದೆ ತನ್ನ ವಕೀಲರಾದ ಅಜ್ಜಪ್ಪರ ಕಡೆ ಅದರರ್ಥಕ್ಕಾಗಿ ಪಿಳಿಪಿಳಿ ನೋಡಿದಳು. ಅಜ್ಜಪ್ಪನವರು ಎದ್ದು ನಿಂತು ಆಕೆಯನ್ನು ತನ್ನ ಎಡಭಾಗಕ್ಕಿದ್ದ ಸಾಕ್ಷಿ ಕಟಕಟೆಯ ಒಂದು ಭಾಗವನ್ನು ತೆರೆದು ಒಳಹೋಗಲು ಹೇಳಿ ನಂತರ ಅದನ್ನು ಮುಂದೆ ತಳ್ಳಿ ಭದ್ರಪಡಿಸಿದರು. ವಾದಿ ಬಹು ಗಟ್ಟಿಮುಟ್ಟಾದ ವಿಲಕ್ಷಣ ರೂಪು ಹೊತ್ತು ನಿಂತಿದ್ದಳು. ಮುಖವೆಲ್ಲ ಕೆಂಪೇರಿದ್ದು, ಏದುಸಿರು ಬಿಡುತ್ತಾ ತನ್ನ ಗಂಡನನ್ನೂ ಅವರ ವಕೀಲ ರಾಗೇಶ್‌ರನ್ನೂ ಗಮನಿಸಿಕೊಳ್ಳುತ್ತಿದ್ದಳು. ಅಷ್ಟರಲ್ಲಿ ಅವರ ವಕೀಲರಿಗೆ ಕೇಸನ್ನು ಪ್ರಾರಂಭಿಸಲು ನ್ಯಾಯಾಧೀಶರು ಆದೇಶಿಸುತ್ತಿದ್ದಂತೆ ಅಜ್ಜಪ್ಪರು ವಾದಿಗೆ ನ್ಯಾಯಾಧೀಶರ ಕಡೆ ಮುಖ ಮಾಡಲು ತಿಳಿಸಿದರು. ಪ್ರಮಾಣ ಬೋಧನೆಯಾಗುತ್ತಿದ್ದಂತೆ ಅಜ್ಜಪ್ಪರು ವಾದಿಗೆ ಯಾವ ಕಾರಣಕ್ಕಾಗಿ ಕೋರ್ಟಿಗೆ ಬಂದಿರುವುದಾಗಿ ಕೇಳಲು, ಆಕೆ ಪ್ರತಿವಾದಿಯ ಕಡೆ ಕೈ ತೋರಿಸುತ್ತ "ಅವ್ರ ನನ್ನ ಮದ್ವೇನ ಮುರ್ದಾಕಿ ಅಂತ ಕೇಳೋಕ್ಕೆ ಬಂದಿದ್ದೀನಿ" ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟಳು. ಆಕೆಯ ಮೊದಲನೇ ಉತ್ತರದಲ್ಲೇ ಆಕೆಯ ಸ್ವಭಾವದ ಬಹುಭಾಗವನ್ನು ಗ್ರಹಿಸಿದವರಂತೆ ನ್ಯಾಯಾಧೀಶರು ತಲೆಯಾಡಿಸಿದರು. ನ್ಯಾಯಾಧೀಶರು ತಲೆಯಾಡಿಸಿದ್ದನ್ನು ಕಂಡ ಅಜ್ಜಪ್ಪರಿಗೆ ಕೇಸಿನ ಆರಂಭ ಸರಿಯಾಗಿ ಆಗುತ್ತಿಲ್ಲವೆಂದೆನ್ನಿಸಿ, ತನ್ನ ಕಕ್ಷಿದಾರಳಿಗೆ, "ನೀನು ಕೋರ್ಟಿನಲ್ಲಿದ್ದೀಯೆ, ಈ ರೀತಿ ಸೆಟೆದು ಉತ್ತರ ಕೊಡಬಾರ್ದು, ಸ್ವಲ್ಪ ನಯವಾಗಿರ್ಬೇಕು" ಹತ್ತಾರು ಜನರಿದ್ದಾರೆ, ಅಲ್ಲದೆ ಸಾಹೇಬರು ಎಲ್ಲವನ್ನು ಸೂಕ್ಷ್ಮವಾಗಿ ನೋಡ್ತಿರ್ತಾರೆ, ಎಂದು ವಿಧೇಯವಾಗಿ ನ್ಯಾಯಾಧೀಶರ ಕಡೆ ಕೈ ತೋರಿಸಿ ಹೇಳುತ್ತಿದ್ದಂತೆ, ಅಜ್ಜಪ್ಪರಿಗೆ ತನ್ನಲ್ಲಿರುವ ಗೌರವವನ್ನು ನ್ಯಾಯಾಧೀಶರು ತಮ್ಮ ಕಣ್ಣುಗಳನ್ನು ದೊಡ್ಡದು ಮಾಡಿ ತುಂಬಿಕೊಳ್ಳುತ್ತಿದ್ದರು. "ಮುಂದೆ ಕೇಳಿ" ಎಂದು ನ್ಯಾಯಾಧೀಶರು ಅನ್ನಲು, ಕೂಡಲೆ ಅಜ್ಜಪ್ಪರು "ಯಾವ ಕಾರಣಕ್ಕೆ ವಿವಾಹ ಜೀವನ ರದ್ದಾಗಬೇಕೂಂತ ಕೇಳ್ತಾಯಿದ್ದೀರಿ?" ಎನ್ನಲು, ಆಕೆಯ ಮುಖಕ್ಕೆ ಇನ್ನಷ್ಟು ರಕ್ತ ಬಂದು ತುಂಬಿಕೊಂಡದ್ದು, ಏನೋ ಕಸಿವಿಸಿಯಾದಂತೆ ಮುಖ ಮಾಡಿಕೊಂಡದ್ದು ಎಲ್ಲರಿಗೂ ಕಾಣಿಸುತ್ತಿತ್ತು. ಆಗಂತುಕನಾಗಿ ಬಂದ ನಾನು

ಕೇಸಿನ ತಿರುಳನ್ನು ತಿಳಿದುಕೊಂಡುಬಿಟ್ಟಿದ್ದೆ. ಅಲ್ಲಿದ್ದ ಬಹುಜನರಿಗೆ ಅದು ತಿಳಿದಿರಲಿಲ್ಲ. ಒಟ್ಟಿನಲ್ಲಿ ಕುತೂಹಲ ಕೆರಳಿ ನಿಂತಿದ್ದವರು ಮುಂದೆ ಬಂದು, ವರಾಂಡದಲ್ಲಿದ್ದವರು ಒಳಗೆ ಬರುವಂತಾಗಿ, ಫ್ಯಾನುಗಳು ಸಾಕಷ್ಟು ಗಾಳಿಯನ್ನು ಒದಗಿಸಲು ಪರದಾಡುತ್ತಿದ್ದವು. ಕೋರ್ಟಿನ್ನ ತುಂಬಾ ವಕೀಲರು, ಜನರು ತುಂಬಿಹೋದುದನ್ನು ಕಂಡ ನ್ಯಾಯಾಧೀಶರು ಹೆಚ್ಚು ಎಚ್ಚರದಿಂದ ಕಾರ್ಯನಿರ್ವಹಿಸಲು ಶುರು ಮಾಡಿದರು. ಕುರ್ಚಿಯಲ್ಲಿ ತುಂಬಿದ್ದ ತಮ್ಮ ಮೈಯನ್ನು ಸ್ವಲ್ಪ ಹೊರತಂದು, ಎಡ ಬಲ ಅಳ್ಳಾಡಿಸಿ ಎದುರು ಗೋಡೆಗೆ ಒರಗಿ ನಿಂತಿದ್ದವರಿಗೂ ಕಾಣುವಂತೆ ಸರಿಪಡಿಸಿಕೊಂಡವರೆ ಏರಿದ ಧ್ವನಿಯಲ್ಲಿ ನ್ಯಾಯಾಧೀಶರು ಅಜ್ಜಪ್ಪರಿಗೆ "ನಿಮ್ಮ ಕಕ್ಷಿದಾರರಿಗೆ ಬೇಗ ಉತ್ತರ ಕೊಡಲು ಹೇಳಿ" ಎಂದು ತಾಕೀತು ಮಾಡಿದರು. ನ್ಯಾಯಾಧೀಶರ ಮಾತಿನಿಂದ ಎಚ್ಚೆತ್ತ ಅಜ್ಜಪ್ಪರು ಅದಕ್ಕನುಗುಣವಾಗಿ ತನ್ನ ಕಕ್ಷಿದಾರಳಿಗೆ ಹೇಳಲು ಗಂಟಲು ಸರಿಪಡಿಸಿಕೊಳ್ಳುತ್ತಿರುವಂತೆ, "ಕಾರಣ ಏನು, ನನ್ನ ಗಂಡ್ನಿಗೆ ಏನು ತೊಂದ್ರೆ ಇದೆ, ನನ್ಗೆ ಎಂಗೆಲ್ಲಾ ಮೋಸ ಆಗ್ತೈತೆ, ನನ್‌ಬಾಳು ಎಂಗೆ ನರ್ಕ ಆಗೈತೆ ಅನ್ನೋದ್ನೆಲ್ಲಾ ಬಿಡಿಬಿಡಿಯಾಗಿ ಅರ್ಜಿನಲ್ಲಿ ಬರ್ಸಿ ಕೊಟ್ಟಿದ್ದೀನಿ" ಎಂದು ಆ ಹೆಂಗಸು ಒಂದೇ ಉಸಿರಿನಲ್ಲಿ ಒದರಿದಳು. ತನ್ನ ಕಕ್ಷಿದಾರಳು ಒದರಿದ್ದನ್ನು ಸರಿಪಡಿಸಲು ಯತ್ನಿಸುವಂತೆ, ಅಜ್ಜಪ್ಪರು "ಅರ್ಜಿಯಲ್ಲಿ ಬರೆಸಿರೋದು ಕೋರ್ಟಿನಲ್ಲಿ ನಿನ್ನ ಕೇಸು ದಾಖಲಾಗೋದಿಕ್ಕೆ ಬೇಕಾಯ್ತು. ಅದರಲ್ಲಿ ಬರೆಸಿರೊ ಕಾರಣಗಳನ್ನು ನೀನು ಮತ್ತೆ ಸಾಹೇಬರ ಮುಂದೆ ನಿನ್ನದೇ ಮಾತುಗಳಲ್ಲಿ ಹೇಳಿದರೆ ಮಾತ್ರ ಸಾಕ್ಷ್ಯ ಆಗೋದು" ಎಂದು ವಿವರವಾಗಿ ಆಕೆ ತನ್ನ ಮಾತುಗಳಲ್ಲೇ ಬರೆಸಿರುವುದನ್ನು ಹೇಳುವ ಅವಶ್ಯಕತೆಯನ್ನು ಹೇಳಿದರೂ ಪಟ್ಟುಹಿಡಿದವಳಂತೆ, "ಅದ್ನೆಲ್ಲಾ ಬಾಯ್ಮಾತ್ನಲ್ಲಿ ಹೇಳೋಕೆ ನನ್ಗೆ ಕಷ್ಟ ಆಗ್ತದೆ, ಬರ್ಸಿರೋದೆಲ್ಲಾ ನನ್ನ ಅವ್ರ ವಿಶ್ಯನೇಂತ ಅಂತ್ಕೊಳ್ಳಿ ಸ್ವಾಮಿ" ಎನ್ನುತ್ತಾ ಕೈಮುಗಿದು ನ್ಯಾಯಾಧೀಶರನ್ನು ಬೇಡಿಕೊಂಡೇಬಿಟ್ಟಳು. ನ್ಯಾಯಾಧೀಶರು ಇದರಿಂದ ತಮಗಾದ ಇರುಸುಮುರುಸನ್ನು ಮುಚ್ಚಿಕೊಳ್ಳದೆ ಅಜ್ಜಪ್ಪರಿಗೆ "ನಿಮ್ಮ ಕಕ್ಷಿದಾರಳು ಸಾಕ್ಷಿ ನುಡಿಯೋದಿಕ್ಕೆ ಬಂದಿದ್ದಾರೋ, ಇಲ್ಲವೇ ನಾಟಕ ಪ್ರಾಕ್ಟೀಸ್ ಮಾಡೋಕ್ಕೆ ಬಂದಿದ್ದಾರೋ, ಬಾಯ್ಬಿಟ್ಟು ಹೇಳ್ಬೇಕ್ಕಾದದ್ದನ್ನೆಲ್ಲಾ ಬೇಗಬೇಗ ಹೇಳ್ದೆ ಹೋದ್ರೆ, ಕಕ್ಷಿದಾರಳು ಹೆಚ್ಚು ಹೇಳುವುದೇನು ಇಲ್ಲಾಂತ ಭಾವಿಸಿ, ಆಕೆಯ ಚಹರೆ, ಹಾವಭಾವಗಳ ಬಗ್ಗೆ ಒಂದು ಟಿಪ್ಪಣಿ ಮಾಡಿ, ನಿಮ್ಮ ಸಾಕ್ಷ್ಯವಿಷ್ಟೆ ಎಂದು ಹೇಳಿ ಮುಕ್ತಾಯ ಮಾಡಬೇಕಾಗುತ್ತೆ" ಎಂದು ಹೇಳುತ್ತಿರುವಾಗ, ಅಜ್ಜಪ್ಪರು ತಮ್ಮ ಕರವಸ್ತ್ರದಿಂದ ಕುತ್ತಿಗೆಯ ಹಿಂಭಾಗವನ್ನು ಒತ್ತಿಕೊಳ್ಳುತ್ತಾ ಸಿಟ್ಟಿನಿಂದಲೇ ತನ್ನ ಕಕ್ಷಿದಾರಳ ಕಡೆ ನೋಡುತ್ತಿದ್ದಂತೆ, ಅವರಿಗಾದ ಯಡವಟ್ಟಿನ ದುರ್ಲಾಭ ಪಡೆಯಲು ಪ್ರತಿವಾದಿಯ ವಕೀಲರಾದ ರಾಗೇಶ್ ಪ್ರಾರಂಭದಿಂದಲೂ

ಎಲ್ಲವನ್ನೂ ವ್ಯಂಗ್ಯವಾಗಿ, ಕುಚೇಷ್ಟೆಯ ಮುಖಭಾವ ಪ್ರದರ್ಶಿಸುತ್ತಾ ನಡೆಯುತ್ತಿರುವುದೆಲ್ಲಾ ತನಗೇ ಫಲಕಾರಿ ಎಂದು ಒಳಗೊಳಗೆ ಸುಖಿಸುತ್ತಿದ್ದವರು ಕುಳಿತಲ್ಲಿಂದಲೇ ಅಜ್ಜಪ್ಪರಿಗೆ ನೇರವಾಗಿ "ನಿಮ್ಮ ಕಕ್ಷಿದಾರರ ಹಾವಭಾವ ನೋಡ್ತಿದ್ರೆ, ಅರ್ಜಿಯಲ್ಲಿರೋದನ್ನ ಬಾಯಿ ಮಾತುಗಳಲ್ಲಿ ಹೇಳೋದು ಕಷ್ಟವಾಗಲಾರ್ದು ಅನಿಸುತ್ತೆ" ಎಂದರು. ಎದುರಾಳಿಯ ವಕೀಲರು ಮೂಗುತೂರಿಸಿದ್ದು ಅರ್ಜಿದಾರಳಿಗೆ ಸುತರಾಂ ಸರಿಕಾಣದೆ, ನ್ಯಾಯಾಧೀಶರ ಕಡೆ ತಿರುಗಿ "ಸ್ವಾಮಿ ಅವ್ರಿಗೆ ಸಾಮಾನಿಲ್ಲ" ಎಂದೇಬಿಟ್ಟಳು. ಆಕೆ ಹಾಗನ್ನುತ್ತಿದ್ದಂತೆ ಕೋರ್ಟಿನಲ್ಲಿದ್ದವರೆಲ್ಲ ತಮತಮಗೆ ಅನ್ನಿಸಿದಂತೆ ಪ್ರತಿಕ್ರಿಯಿಸಿದರು. ಒಂದು ಕ್ಷಣ ಪ್ರತಿಕ್ರಿಯೆಗಳ ಅಬ್ಬರ. ಅಲ್ಲಿದ್ದವರು ಪ್ರತಿವಾದಿಯ ಕಡೆಯೂ ನೋಡಲಾರಂಭಿಸಿದರು. ವಕೀಲ ರಾಗೇಶ್‌ರ ಹಿಂದೆ ನಿಂತಿದ್ದ ಪ್ರತಿವಾದಿ ತನ್ನ ತಲೆಯನ್ನು ಮುಂದೆ ಬಗ್ಗಿಸಿಕೊಂಡ ಕಾರಣ ಯಾರಿಗೂ ಅವನ ಮುಖದರ್ಶನ ಭಾಗ್ಯ ಲಭ್ಯವಾಗಲಿಲ್ಲ. ಆ ವ್ಯಕ್ತಿ ತನ್ನ ಹೆಂಡತಿಗಿಂತ ದುರ್ಬಲನಾಗಿ ಕಾಣುತ್ತಿದ್ದ. ಮುಖ ನವಿರಾಗಿದ್ದು ಮುಖಕ್ಷೌರ ಅನವಶ್ಯಕ ಎಂದು ಸಾರಿ ಹೇಳುತ್ತಿತ್ತು. ಮುಖ ನೋಡಲಾಗದಿದ್ದರೂ ದೈಹಿಕವಾಗಿ ವಯಸ್ಸಿಗೆ ಮೀರಿ ಸವೆದಿದ್ದ. ಅವನ ವಿಚಿತ್ರ ಭಂಗಿಯ ಬಗ್ಗೆಯೂ ಕೆಲವರು ಸಣ್ಣಗೆ ಊಳಿಡತೊಡಗಿದರು. ಎಲ್ಲರೂ ಕ್ಷಣ ತಣ್ಣಗಿರಲು ನ್ಯಾಯಾಧೀಶರು ತಮ್ಮ ಬಲಗೈ ಎತ್ತಿ ಕೇಳಿಕೊಳ್ಳಲು, ಮುಂದೆ ಇನ್ನೂ ಕುತೂಹಲಕಾರಿ ಬೆಳವಣಿಗೆಗಳಿವೆಯೆಂದು ಭಾವಿಸಿಕೊಂಡು ಅಲ್ಲಿದ್ದವರಿಗೆ ಮೈಯೆಲ್ಲಾ ಕಣ್ಣಾಗಿ ಅರ್ಜಿದಾರಳನ್ನು ಎವೆಯಿಕ್ಕದೆ ನೋಡುತ್ತಿದ್ದರು. ಇದಕ್ಕೆ ಕಾಯುತ್ತಿದ್ದ ಪ್ರತಿವಾದಿಯ ವಕೀಲ ರಾಗೇಶ್ ಕೈಗಳನ್ನು ಸೊಂಟದ ಮೇಲಿರಿಸಿಕೊಂಡು ಅಲ್ಲಿದ್ದವರನ್ನೆಲ್ಲಾ ಒಂದು ಬಾರಿ ಗಮನಿಸಿಕೊಂಡು ನ್ಯಾಯಾಧೀಶರಿಗೆ "ಅರ್ಜಿದಾರಳ ಹೇಳಿಕೆ ಅಸ್ಪಷ್ಟ ಮತ್ತು ಅಸಂಗತ. ಅವಳ ಅರ್ಜಿಯಲ್ಲಿ ಮಾಡಿರುವ ಆರೋಪಕ್ಕೂ ಈ ಆರೋಪಕ್ಕೂ ಸಂಬಂಧವಿಲ್ಲ. ಅರ್ಜಿದಾರಳಿಗೆ ಹೀಗೆಲ್ಲಾ ಆರೋಪಗಳನ್ನು ಮಾಡಲು ಅವಕಾಶ ಕೊಟ್ಟಲ್ಲಿ ಪಾಟಿಸವಾಲು ಕಷ್ಟವಾಗುತ್ತದೆ. ನನ್ನ ಕಕ್ಷಿದಾರನಿಗೆ ಸಾಮಾನು ಇಲ್ಲ ಎಂದರೆ ಆಕೆಯ ಅರ್ಜಿಯಲ್ಲಿ ಆಪಾದನೆಗೆ ಸಮಾನಾರ್ಥಕ ಪದಗಳೆಂದು ಪರಿಗಣಿಸಲು ಬರುವುದಿಲ್ಲ. ಆಕೆಯೂ ಅದರರ್ಥ ಏನೆಂಬುದನ್ನು ಹೇಳಲೇಬೇಕು, ಹಾಗೆಂದು ತಾವು ಈ ಹಂತದಲ್ಲಿ ಒತ್ತಾಯಿಸುವುದು ಸೂಕ್ತ" ಎಂದು ಹೇಳಿ ತನ್ನ ಹೇಳಿಕೆಯ ಮಂಡನೆ ಅಲ್ಲಿದ್ದವರ ಮೇಲೆ ಮಾಡಿರಬಹುದಾದ ಪರಿಣಾಮವನ್ನು ಕಾಣಲು ಮತ್ತೆ ಎಲ್ಲರ ಕಡೆ ನೋಡಿ, ಮೋಡಿ ಹಾಕಿದವರಂತೆ ಕುಳಿತುಕೊಂಡರು. ಇದಕ್ಕೆ ಉತ್ತರ ನೀಡಲು ಅಜ್ಜಪ್ಪರು ಎದ್ದು ನಿಲ್ಲುತ್ತಿದ್ದಂತೆ ನ್ಯಾಯಾಧೀಶರೆ ಅವರಿಗೆ ಕುಳಿತುಕೊಳ್ಳಲು ಹೇಳಿ, ತಾವೇ ಮಧ್ಯೆ ಪ್ರವೇಶ ಮಾಡಿ

"ನೋಡಿ ಮಿಸ್ಟರ್ ರಾಗೇಶ್, ಇಂತಹ ಪ್ರಕರಣಗಳಲ್ಲಿ ನಾವು ಕಕ್ಷಿದಾರರ ಹಿನ್ನೆಲೆ, ಅವರ ಸಾಮಾಜಿಕ ಸ್ಥಿತಿಗತಿ, ಅವರ ಸಂಸ್ಕೃತಿ ಮುಂತಾದುವನ್ನು ಗಮನದಲ್ಲಿರಿಸಿ ಕೊಂಡು ಯಾವ ಭಾವನೆಯನ್ನು ಅಭಿವ್ಯಕ್ತಿಸಲು ಯಾವ ಯಾವ ಶಬ್ದಗಳನ್ನು ಬಳಸುತ್ತಾರೆಂಬುದು ಮುಖ್ಯವಾಗುತ್ತದೆ. ಆಕೆಯ ಅರ್ಜಿ ಆರೋಪ ಮಾಡಲು ಬಳಸಿರುವ ಶಬ್ದಗಳು ಅವರ ವಕೀಲರವು. ಇಲ್ಲಿ ಬಳಸಿರುವ ಶಬ್ದಗಳು ಆಕೆಯವು, ಅರ್ಥ ಮಾತ್ರ ಒಂದೇ ಎಂದು ಹೇಳಲು ಸಾಧ್ಯ. ಆದಕಾರಣ ಆಕೆಯನ್ನು ವಿವರವಾಗಿ ಹೇಳೆಂದು ಒತ್ತಾಯಿಸಬೇಕೆನ್ನುವುದರಲ್ಲಿ ಅರ್ಥವಿಲ್ಲ" ಎಂದು ನಿರ್ಣಯಿಸಿದರು. ಈ ನಿರ್ಣಯದಿಂದ ರಾಗೇಶ್‌ರು ಕುಪಿತಗೊಂಡು ಪರಿಸ್ಥಿತಿಗೆ ಸಂವರ್ತಿಸದೆ, ನ್ಯಾಯಾಧೀಶರೊಂದಿಗೆ ಮೇಲಾಟವಾಡಲು ಸನ್ನದ್ಧರಾದಂತೆ, ತಮಗೂ ಒಳದಾರಿಗಳು ಗೊತ್ತಿರುವುದನ್ನು ಪ್ರದರ್ಶಿಸುವ ಹುಮ್ಮಸ್ಸಿನಿಂದ ಪ್ರತಿವಾದಿಗೆ ಮುಂದೆ ಬಂದು ನ್ಯಾಯಾಧೀಶರಿಗೆ ಎದುರಾಗಿ ನಿಲ್ಲಲು ಹೇಳಿದರು. ಇದರ ಉದ್ದೇಶ ನ್ಯಾಯಾಧೀಶರಾದಿಯಾಗಿ ಯಾರಿಗೂ ತೋಚಲಿಲ್ಲ. ನ್ಯಾಯಾಧೀಶರು ಅದರ ಔಚಿತ್ಯವನ್ನು ಪ್ರಶ್ನಿಸುವುದರೊಳಗಾಗಿ ಪಂಚೆಧಾರಿಯಾಗಿದ್ದ ತನ್ನ ಕಕ್ಷಿದಾರನಿಗೆ "ನ್ಯಾಯಾಧೀಶರು ಚೆನ್ನಾಗಿ ಕಾಣಿಸುತ್ತಾರೆಯೇ?" ಎಂದು ಪ್ರಶ್ನಿಸಿದರು. ಕಕ್ಷಿದಾರ "ಹೌದು" ಎಂದ. "ಹಾಗಾದರೆ ನಿನ್ನ ಪಂಚೆ ಎತ್ತು" ಎಂದರು. ಗಾಬರಿಗೊಂಡ ಪ್ರತಿವಾದಿ ಸೋಡ ಮುಖ ಮಾಡಿಕೊಂಡು ತಬ್ಬಿಬ್ಬಾಗಿ ತನ್ನ ಪಾದಗಳ ಕಡೆ ನೋಟ ನೆಟ್ಟಿದ್ದ. ರಾಗೇಶ್‌ರು ಉದ್ಧಟತನದಿಂದ "ಅಲ್ಲಿ ನೋಡಲು ನಿನಗೆ ನಾನು ಹೇಳುತ್ತಿಲ್ಲ, ಮೊದಲು ಪಂಚೆ ಮೇಲೆತ್ತು. ನಾನು ಹೇಳಿದಂತೆ ನೀನು ಪಂಚೆ ಮೇಲೆತ್ತದೆ ಹೋದರೆ ನಿನ್ನ ಹೆಂಡತಿ ನಿನ್ನ ಮೇಲೆ ಮಾಡುತ್ತಿರುವ ಆರೋಪ ಸಾಬೀತಾದಂತಾಗುತ್ತದೆ, ನೀನು ಸಂಕೋಚಪಟ್ಟರೆ ಸೋಲುತ್ತೀಯೇ! ಬೇಗ...." ಎಂದರು. ಅಲ್ಲಿದ್ದವರಿಗೆಲ್ಲ ಗಾಬರಿ, ಕೌತುಕ, ತಲ್ಲಣ ಸವಾರಿ ಮಾಡುವಂತಾಯಿತು. ನೋಡುತ್ತಿದ್ದಂತೆ ಕ್ಷಣಾರ್ಧದಲ್ಲಿ ಎಂಥ ಬೆಳವಣಿಗೆ, ಎಂಥ ತಿರುವು – ಇದನ್ನು ನ್ಯಾಯಾಧೀಶರು ಹೇಗೆ ನಿಭಾಯಿಸುತ್ತಾರೆಂಬುದನ್ನು ನೋಡಬೇಕೆನ್ನುವುದೇ ಎಲ್ಲರಲ್ಲಿ ಉಳಿದಿದ್ದ ಕುತೂಹಲ. ನ್ಯಾಯಾಧೀಶರು ರಾಗೇಶ್‌ರನ್ನುದ್ದೇಶಿಸಿ "ತಾವು ಏಕೆ ಆತನಿಗೆ ಪದೇಪದೇ ಪಂಚೆ ಮೇಲೆತ್ತಲು ಹೇಳುತ್ತಿದ್ದೀರಿ? ಅಂತಹ ಮಾತುಗಳನ್ನು ನಿಮ್ಮ ಕಕ್ಷಿದಾರನಿಗೆ ಹೇಳಲು ಕೋರ್ಟಿನ ಅನುಮತಿಯನ್ನು ನೀವು ಪಡೆದಿಲ್ಲ" ಎಂದು ಕಾನೂನಿಗೆ ಸಂಬಂಧಿಸಿದಂತೆ ಹೇಳಿದಾಗ, ರಾಗೇಶ್‌ರು "ಹೌದು ಸ್ವಾಮಿ, ಅರ್ಜಿದಾರಳು ಆಡಿದ ಮಾತುಗಳಿಗೆ ತಮ್ಮ ಅನುಮತಿಯಿರಲಿಲ್ಲ. ಈಗ ನನ್ನ ಕಕ್ಷಿದಾರನ ವಿರುದ್ಧ ಆಕೆ ಮಾಡಿರುವ ಆರೋಪವನ್ನು ಗಮನದಲ್ಲಿರಿಸಿಕೊಂಡು

ಆತ ಪಂಚೆಯನ್ನು ಎತ್ತಿ ತೋರಿಸಿದ ಮೇಲೆ ಅವನಿಗೆ ಅದು ಇದೆಯೇ ಅಥವಾ ಇಲ್ಲವೆ ಎಂಬ ಬಗ್ಗೆ ಜುಡಿಷಿಯಲ್ ನೋಟೀಸ್ ತೆಗೆದುಕೊಂಡು ನೋಟ್ ಮಾಡಿಕೊಳ್ಳಬೇಕಾಗುತ್ತೆ" ಎಂದು ಮುಂದಿಟ್ಟ ವಾದದಿಂದ ರಾಗೇಶ್ ವಕೀಲರ ಧಾರ್ಷ್ಟ್ಯವನ್ನು ತಿಳಿದಿದ್ದ ನ್ಯಾಯಾಧೀಶರು "ಹಾಗಾದರೆ ನೀವು ನಿಮ್ಮ ಕಕ್ಷಿದಾರರನ್ನು ಡಾಕ್ಟರುಗಳಿಂದ ಪರೀಕ್ಷೆಗೆ ಒಳಪಡಿಸಲು ಆದೇಶಿಸಬೇಕೆಂದು ಕೇವಲ ಕಾನೂನಿನಲ್ಲಿ ಅವಕಾಶವಿದ್ದು, ತೆರೆದ ನ್ಯಾಯಾಲಯದಲ್ಲಿ ನೀವು ಕೇಳಿಕೊಂಡಂತೆ ಮಾಡಲು ಬರುವುದಿಲ್ಲ" ಎಂದು ತಿಳಿಸಿ "ನಾಳೆಯೇ ಈ ಕೇಸನ್ನು ಮುಂದಿನ ವಿಚಾರಣೆಗೆಂದು ಇಟ್ಟುಕೊಳ್ಳುತ್ತೇನೆ, ನೀವು ನಿಮ್ಮ ಕಕ್ಷಿದಾರನನ್ನು ಇಬ್ಬರು ಸರ್ಕಾರಿ ಡಾಕ್ಟರ್‌ಗಳಿಂದ ಮರ್ಮಾಂಗ ಕುರಿತು ಮಾಡಬೇಕಾದ ಪರೀಕ್ಷೆಗೆ ಮನವಿ ಪತ್ರವೊಂದನ್ನು ಸಲ್ಲಿಸಿ, ಅದರಂತೆ ಆದೇಶ ನೀಡುತ್ತೇನೆ" ಎಂದರು. ಅಲ್ಲದೆ ಪ್ರತಿವಾದಿಗೆ ಮಾರನೆ ದಿನವೇ ಪರೀಕ್ಷೆಗೆ ಸಿದ್ಧವಾಗಿ ಬರಲು ಹೇಳಿದರು. ಸದರಿ ಕೇಸನ್ನು ಮಾರನೆಯ ದಿನಕ್ಕೆಂದು ಮುಂದೂಡಿದರು. ಕೇಸನ್ನು ಮುಂದೂಡಿದ ನ್ಯಾಯಾಧೀಶರು ಉಳಿದ ವಕೀಲರುಗಳಿಗೆ ಮಧ್ಯಾಹ್ನ 3 ಗಂಟೆಗೆ ಬರಲು ತಿಳಿಸಿದರು. ಎಲ್ಲರಿಗೂ ಪ್ರತಿವಾದಿಯ ಮುಖವನ್ನು ಒಮ್ಮೆ ನೋಡುವ ಕುತೂಹಲ. ಎದೆಯ ಭಾಗಕ್ಕೆ ಕೈಗಳನ್ನು ಕಟ್ಟಿಕೊಂಡು ಪಾದದ ಕಡೆ ನೋಡಿಕೊಳ್ಳುತ್ತಿದ್ದ ಅವನ ಪೂರ್ಣಮುಖ ಯಾರಿಗೂ ಕಾಣಿಸುತ್ತಿರಲಿಲ್ಲ. ಕೋರ್ಟಿನಿಂದ ಹೊರಹೋಗುವಾಗ ಸಿನಿಮಾ ಶೋ ಮುಗಿದಂತೆ ಕಾಣಿಸಿತು. ಅರ್ಜಿದಾರಳು ಮಾತ್ರ ತನ್ನ ವಕೀಲರನ್ನೇ ಹಿಂಬಾಲಿಸುತ್ತಿದ್ದಳು.

ಕೋರ್ಟಿನಿಂದ ಇತರ ಕೆಲವು ಹಿರಿಯ ವಕೀಲರುಗಳೊಂದಿಗೆ ಹೊರಬಂದಾದ ಮೇಲೆ ಸ್ವಲ್ಪ ದೂರದಲ್ಲಿ ಅವರು ನಿಂತು ರಾಗೇಶ್ ವಕೀಲರು ತನ್ನ ಕಕ್ಷಿದಾರನಿಗೆ ಪಂಚೆ ಮೇಲೆತ್ತಲು ಹೇಳಿ, ನ್ಯಾಯಾಧೀಶರು ಅವನಿಗೆ ಮರ್ಮಾಂಗ ಇದೆಯೇ ಇಲ್ಲವೇ ಎಂಬ ಬಗ್ಗೆ ನ್ಯಾಯಿಕ ಗಮನ ಹರಿಸಿ ಬರೆದುಕೊಳ್ಳಲು ಕೇಳಿಕೊಂಡದ್ದು ಮಾತ್ರ ವಿಪರೀತವಾಯಿತೆಂದುಕೊಂಡರು. ಅಂತಹ ಮಾತುಗಳನ್ನು ರಹಸ್ಯವಾಗಿ ನಡೆಸುವ (In camera) ನ್ಯಾಯಿಕ ವ್ಯವಹರಣೆಯಲ್ಲೂ ಕೇಳಲು ನ್ಯಾಯಾಧೀಶರು ಒಪ್ಪಿಗೆ ನೀಡುವುದಿಲ್ಲ. ತೆರೆದ ನ್ಯಾಯಾಲಯದಲ್ಲಿ ಅಸಂಬದ್ಧ ಮತ್ತು ಅಸಹ್ಯ ಮಾತುಗಳನ್ನಾಡಿ ಪ್ರತಿವಾದಿಯನ್ನು ಇಕ್ಕಟ್ಟಿಗೆ ಸಿಕ್ಕಿಸಿ, ಮಾನ ತೆಗೆಯುವ ಕೆಲಸ ಅವರು ಮಾಡಬಾರದಿತ್ತೆಂದು ಟೀಕಿಸಿದರು. ಆ ಪೈಕಿ ಒಬ್ಬ ಹಿರಿಯ ವಕೀಲರಂತೂ ಅರ್ಜಿದಾರಳಿಗೂ, ಪ್ರತಿವಾದಿಯ ವಕೀಲರಿಗೂ ವ್ಯತ್ಯಾಸವೇ ಕಾಣಲಿಲ್ಲವೆಂದರು. ಮಾತು ಮುಂದುವರೆದಂತೆ ಮಾರನೆಯ ದಿನ ಪ್ರತಿವಾದಿಯ ವಕೀಲರು ಬೇರೊಂದು

ನೆಪವನ್ನೇ ಒಡ್ಡಬಹುದೆಂದು ಅನುಮಾನಿಸಿದರು. ಇಡೀ ದಿನ ಕೋರ್ಟಿನ ಆವರಣದಲ್ಲಿ ಮತ್ತು ವಕೀಲರ ಸಂಘದಲ್ಲಿ ಈ ಕೇಸಿನ ನಡಾವಳಿಗಳ ಬಗ್ಗೆಯೇ ಮಾತುಕತೆ ನಡೆದು ಸುದ್ದಿ ಬಹುಮಟ್ಟಿನ ವಕೀಲರುಗಳಿಗೆ ತಿಳಿಯಿತು.

ಮಾರನೆಯ ದಿನಕ್ಕಾಗಿ ನಾನು ಕಾತರಿಸಿದೆ. ಇತರೆ ನನ್ನ ವಾರಗೆಯ ವಕೀಲರಿಗೂ ತಿಳಿಸಿ ಅವರೊಂದಿಗೆ ಮಾರನೆಯ ದಿನ ಅದೇ ಕೋರ್ಟಿಗೆ ಸ್ವಲ್ಪ ಮುಂಚೆಯೇ ಹೋಗಿ ಕುಳಿತೆ. ಸ್ವಲ್ಪ ಸಮಯದಲ್ಲೇ ವಕೀಲ ಅಜ್ಜಪ್ಪ ತಮ್ಮ ಕಕ್ಷಿದಾರಳೊಂದಿಗೆ ಬಂದು ಕುಳಿತರು. ಹಿಂದಿನ ದಿನ ಅಲ್ಲಿದ್ದವರು ಆ ದಿನ ಬಂದಿದ್ದವರಿಗೆ ಅರ್ಜಿದಾರಳನ್ನು ತೋರಿಸಿ ಪಿಸುಗುಟ್ಟುತ್ತಿದ್ದರು. ನ್ಯಾಯಾಧೀಶರು ಬರುವ ಹೊತ್ತಿಗೆ ಜನರಿಂದ ಕೋರ್ಟು ತುಂಬಿ ತುಳುಕುತ್ತಿತ್ತು. ಕಿಟಕಿಗಳಲ್ಲಿ ಹತ್ತಿ ನಿಂತಿದ್ದರು. ಬಾಗಿಲುಗಳಲ್ಲಿ ಜಮಾಯಿಸಿದ್ದರು. ಹಿಂದಿನ ದಿನದ ತೀರ್ಮಾನದಂತೆ ಸುಲಭವಾಗಿ ಕಲಾಪಗಳು ಮುಗಿಯದೆ, ಹೊಸದೇನಾದರೂ ಜರುಗುವುದೆಂಬ ನಿರೀಕ್ಷೆ, ಅದನ್ನು ಗಮನಿಸಬೇಕೆಂದು ಕಾತುರ.

ನ್ಯಾಯಾಧೀಶರು ಬಂದು ಇತರ ಕೇಸುಗಳನ್ನು ಸ್ವಲ್ಪ ತಡವಾಗಿ ಕರೆಯಿಸುವುದಾಗಿ ತಿಳಿಸಿ ನೇರವಾಗಿ ದಾಕ್ಷಾಯಣಿ (ಅರ್ಜಿದಾರಳು) ಮತ್ತು ವಿ.ಡಿ ಸಾಂಬಯ್ಯ (ಪ್ರತಿವಾದಿ)ಗಳ ಕೇಸನ್ನು ಕರೆಯಲು ಕೋರ್ಟ್ ಆಫೀಸರ್‌ಗೆ ತಿಳಿಸಲು, ಅವರು ಅದರಂತೆ ಕರೆದರು. ಪ್ರತಿವಾದಿಯಾಗಲಿ ಅವರ ವಕೀಲರಾಗಲಿ ಇನ್ನೂ ಬಂದಿರಲಿಲ್ಲ. ಸ್ವಲ್ಪ ಸಮಯದ ನಂತರ ಕರೆಸಲು ಹೇಳಿ ಮಧ್ಯೆ ಕೆಲವು ಕೇಸುಗಳನ್ನು ಕರೆಸಿ ವಿಚಾರಿಸುತ್ತಿದ್ದರು. ಎಲ್ಲರ ಗಮನ ಪ್ರತಿವಾದಿ ಮತ್ತು ಆತನ ವಕೀಲರ ಆಗಮನದ ಕಡೆಯೇ ವಾಲಿತ್ತು. ಅಷ್ಟರಲ್ಲಿ ಪ್ರತಿವಾದಿಯ ವಕೀಲ ರಾಗೇಶ್‌ರ ಕಿರಿಯ ವಕೀಲರೊಬ್ಬರು ಒಬ್ಬ ಪೊಲೀಸ್ ಅಧಿಕಾರಿಯೊಂದಿಗೆ ಬಾಗಿಲ ಕಡೆಯಿಂದ ಜನರಿಗೆ ದಾರಿ ಬಿಡಲು ದಬಾಯಿಸಿಕೊಂಡು ಒಳಗೆ ನುಗ್ಗಿ ಬರುತ್ತಿರುವುದನ್ನು ನ್ಯಾಯಾಧೀಶರು ಕಂಡು "ಪ್ರತಿವಾದಿ ಎಲ್ಲಿ" ಎಂದು ಗಟ್ಟಿ ಧ್ವನಿಯಲ್ಲೇ ಪ್ರಶ್ನಿಸಿದರು. ಆ ಕಿರಿಯ ವಕೀಲ ಏನನ್ನೂ ಹೇಳದೆ ಒಂದು ಮೆಮೋವನ್ನು ಕೋರ್ಟ್ ಆಫೀಸರ್‌ಗೆ ಕೊಟ್ಟು ನ್ಯಾಯಾಧೀಶರಿಗೆ ಕೊಡಲು ತಿಳಿಸಿದರು. ಎಲ್ಲರೂ ಅದು ಕೇಸನ್ನು ಮುಂದೆ ಹಾಕಿಸಲು ಕೊಟ್ಟಿರುವ ಪತ್ರವೆಂದು ಸುಲಭವಾಗಿ ತಿಳಿದರು; ಆದರೆ ಪೊಲೀಸ್ ಅಧಿಕಾರಿಯೊಬ್ಬ ಬಂದಿದ್ದು ಆ ರೀತಿಯ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿ ಯಾರ ಊಹೆಯನ್ನೂ ಬೆಳೆಯಲು ಬಿಡಲಿಲ್ಲ. ಮೆಮೋ ನೋಡಿಕೊಂಡ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ ಕಡೆ ನೋಡಿ "ಮರಣಕಾಲೀನ ಹೇಳಿದೆ (dying declaration)" ಯಲ್ಲಿ ಏನೆಂದು

ಬರೆದಿದ್ದಾನೆ?" ಎಂದು ಪ್ರಶ್ನಿಸಿದಾಗ ಇಡೀ ಕೋರ್ಟ್ ಹಾಲಿನಲ್ಲಿ ಆಶ್ಚರ್ಯಕರ ಖೇದ ವ್ಯಕ್ತವಾಯಿತು. ಎಲ್ಲರೂ ಹಾಗಾಗಬಾರದಿತ್ತೆಂದು ಭಾವಿಸಿದಂತಿತ್ತು. ಪೊಲೀಸ್ ಅಧಿಕಾರಿಯ ನಿವೇದನೆ ಯಾರಿಗೂ ಕೇಳಿಸುತ್ತಿರಲಿಲ್ಲ. ನ್ಯಾಯಾಧೀಶರು ಎಲ್ಲರೂ ಸುಮ್ಮನಿರುವಂತೆ ಎಲ್ಲ ದಿಕ್ಕಿನಲ್ಲಿ ನೋಡಿ ಕೇಳಿಕೊಳ್ಳಲು ಸದ್ದು ಅಡಗಿತು. ನೆಲೆಸಿದ ಮೌನದಲ್ಲಿ ನ್ಯಾಯಾಧೀಶರು ಅಂದದ್ದು "ನಿನ್ನೆ ಇಲ್ಲಿ ಜರುಗಿದ ನ್ಯಾಯಿಕ ವ್ಯವಹಾರಗಳಿಂದ (judicial proceedings) ಚಿತ್ತಕ್ಷೋಭೆಗೊಳಗಾದ ಪ್ರತಿವಾದಿ ಈ ದಿನ ಆತನು ಆಶ್ರಯ ಪಡೆದಿದ್ದ ತಂಗಿಯ ಮನೆಯಲ್ಲಿ ಬೆಳಿಗ್ಗೆ 9:00 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸದರಿ ಕಾರಣಕ್ಕಾಗಿ ಈ ಕೇಸು ಉಳಿಯಲು ಸಾಧ್ಯವಿಲ್ಲ" ಎಂದು ಹೇಳಿ ಆರ್ಡರ್ ಶೀಟ್‌ನಲ್ಲಿ ಬರೆದು ತೆರಳಿದರು.

45

ಪೋಲೀಸ್ ಕಮೀಷನರ್ ಕ್ಷಮೆ ಕೇಳಿದರು

ನಾನು ಸನ್ನದು ಪಡೆದುಕೊಂಡ ಮೇಲೆ ಒಂದು ಮುಖ್ಯ ಕೊಲೆ ಕೇಸ್‌ನ ಟ್ರಯಲ್‌ನಲ್ಲಿ ಭಾಗವಹಿಸಿದೆ. ಅದು ಉಗುರುಸ್ವಾಮಿಯ ಕೊಲೆ ಮೊಕದ್ದಮೆಯಾಗಿತ್ತು. ನನ್ನ ಸೀನಿಯರ್ ದೇವದಾಸ್ ಅವರು ಆ ಕೇಸಿಗೆ ಸಂಬಂಧಿಸಿದ ಬಹಳಷ್ಟು ಜವಾಬ್ದಾರಿಗಳನ್ನು ನನ್ನ ಮೇಲೆ ಹೊರಿಸಿದರು. ಈ ಕೇಸು ನನಗೆ ಹೊಸ ಅನುಭವಗಳನ್ನು ತಂದುಕೊಟ್ಟಿತು. ಆ ಕೇಸಿನ ವಿವರಗಳೇ ನನಗೆ ವಿಚಿತ್ರವಾಗಿ ತೋರುತ್ತಿದ್ದವು. ನನ್ನ ಊಹೆಯ ಮೇರೆ ಮೀರಿದ ಸಂಗತಿಗಳು ಅವಾಗಿದ್ದರಿಂದ ನನಗೆ ಆಗ ಹಾಗೆ ಅನ್ನಿಸಿರಬೇಕು.

ಉಗುರುಸ್ವಾಮಿ ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಅಪಾರ ಭಕ್ತರನ್ನು ಗಳಿಸಿಕೊಂಡಿದ್ದ. ಭಕ್ತರೆನ್ನುವುದಕ್ಕಿಂತ ಗಿರಾಕಿಗಳು ಎಂದರೂ ಅಡ್ಡಿಯಿಲ್ಲ. ಮಾಟ, ಮಂತ್ರಗಳ ವಾಮಮಾರ್ಗ ಅವನದಾಗಿತ್ತು. ಅವನ ಮತ್ತು ಅವನ ಆಚರಣೆಗಳ ಬಗ್ಗೆ ಭಕ್ತಿಯಿಲ್ಲದಿರುವವರೂ ಅವನ ಮಾಂತ್ರಿಕ ವಿದ್ಯೆಯ ಮೂಲಕ ದುರ್ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಅವನ ಬಳಿ ಬರುತ್ತಿದ್ದರು. ವಿಲ್ಸನ್ ಗಾರ್ಡನ್ ಪ್ರದೇಶದಲ್ಲಿ ಅವನ ಮನೆಯಿತ್ತು. ಅವಿವಾಹಿತನಾಗಿದ್ದ ಉಗುರುಸ್ವಾಮಿಯ ಮೂಲ

ಹೆಸರು ಯೋಗೇಶ್ವರ ಸೀತಾರಾಮಶಾಸ್ತ್ರಿ. ಅವನ ಎಡಹಸ್ತದ ಐದೂ ಬೆರಳುಗಳ ಉಗುರುಗಳನ್ನು ಮೂರು ಅಡಿಯುದ್ದ ಬೆಳೆಸಿದ್ದ. ಅವನ ಉದ್ದನೆಯ ಉಗುರುಗಳಿಂದಾಗಿ ಅವನಿಗೆ ಉಗುರುಸ್ವಾಮಿ ಎಂದು ಅಡ್ಡ ಹೆಸರು ಬಿದ್ದಿತ್ತು. ಆ ಉಗುರುಗಳು ಶೃಂಗಗಳಾಗಿ ಬೆಳೆದುದರಿಂದ ಎಡಗೈ ಯಾವ ಕೆಲಸಕ್ಕೂ ಬಾರದಂತಾಗಿತ್ತು. ಮುಖ, ತಿಕಗಳೆರಡಕ್ಕೂ ಬಲಗೈಯನ್ನೇ ಬಳಸುತ್ತಿದ್ದ. ಆ ದೀರ್ಘ ಉಗುರುಗಳ ಮೂಲಕ ಅತೀಂದ್ರಿಯ ಶಕ್ತಿಯನ್ನು ಆಕರ್ಷಿಸುವುದು, ನಿಯಂತ್ರಿಸುವುದು ಮಾಡುತ್ತಾನೆಂದು ಜನ ಹೇಳಿಕೊಳ್ಳುತ್ತಿದ್ದರು. ಅವನ ಮಾಂತ್ರಿಕ ಶಕ್ತಿಯ ಬಗ್ಗೆ ಉತ್ಪ್ರೇಕ್ಷಿತ ಕಥೆಗಳೂ ಸೃಷ್ಟಿಯಾಗಿದ್ದವು. ವಿಲ್ಸನ್ ಗಾರ್ಡನ್ ಮೇಲೆ ಹಾರುತ್ತಿದ್ದ ವಿಮಾನವೊಂದನ್ನು ಮಾಂತ್ರಿಕ ಶಕ್ತಿಯ ಮೂಲಕ ತಡೆದು ನಿಲ್ಲಿಸಿ ಆ ದೃಶ್ಯವನ್ನು ಭಕ್ತರಿಗೆ ತೋರಿಸಿದ್ದರ ಬಗ್ಗೆ ಕಥೆಗಳು ಹಬ್ಬಿದ್ದವು. ಆ ವಿಮಾನವನ್ನು ಅವನ ಎಡಗೈ ಉಗುರುಗಳು ತಡೆದು ನಿಲ್ಲಿಸಿದ್ದನ್ನು ಕಣ್ಣಾರೆ ನೋಡಿರುವುದಾಗಿ ಹೇಳುವವರೂ ಇದ್ದರು.

ಉಗುರುಸ್ವಾಮಿ ಮದುವೆಯಾಗಿರಲಿಲ್ಲ. ಅವನು ಯೋನಿಪೂಜೆ ಮಾಡುತ್ತಿದ್ದ. ಕಲ್ಲು, ಲೋಹಗಳ ಮೇಲೆ ಕೆತ್ತಿದ ಯೋನಿ ಚಿತ್ರವನ್ನಲ್ಲ, ನಿಜವಾದ-ಯೋನಿಯನ್ನೆ! ಅದಕ್ಕೇ ಹದಿನಾರು ವರ್ಷದ ಶಾರದೆ ಎನ್ನುವ ಕನ್ಯೆಯನ್ನು ತನ್ನ ಬಳಿ ಸಾಕಿಕೊಂಡಿದ್ದ. ಇವನ ಸೇವೆ ಮಾಡಲು ಚಂದ್ರಶೇಖರ ಎನ್ನುವವ ಇದ್ದ.

ವಿಮಾನವನ್ನೇ ತನ್ನ ಉಗುರುಗಳಿಂದ ತಡೆದು ನಿಲ್ಲಿಸುತ್ತಿದ್ದ ಉಗುರುಸ್ವಾಮಿ ಕೊಲೆಯಾಗಿಬಿಟ್ಟಿದ್ದ! ಆಶ್ರಮದಲ್ಲಿ ಬಚ್ಚಿಟ್ಟಿದ ಲಕ್ಷಗಟ್ಟಲೆ ಹಣ ದರೋಡೆಯಾಗಿತ್ತು. ಅವನ ಶಿಷ್ಯ ಚಂದ್ರಶೇಖರ ಪ್ರಥಮ ಆರೋಪಿಯಾಗಿದ್ದ. ಕೇಸು ಸೆಷನ್ಸ್ ಜಡ್ಜ್ ನಾಗಪ್ಪನವರ ಮುಂದೆ ಇತ್ತು. ಸ್ಪೆಷಲ್ ಪ್ರಾಸಿಕ್ಯೂಟರ್ ಆಗಿದ್ದವರು ಬಿ.ಆರ್. ನಂಜುಂಡಯ್ಯ.

ಮುಖ್ಯ ಆರೋಪಿ ಚಂದ್ರಶೇಖರ್ ಪರ ದೇವದಾಸ್ ವಕಾಲತ್ತು ಹಾಕಿದ್ದರು.

ಏತನ್ಮಧ್ಯ ಉಗುರುಸ್ವಾಮಿಯ ಆಸ್ತಿಗೆ ಯಾರು ವಾರಸುದಾರರು ಎನ್ನುವುದರ ಬಗ್ಗೆ ಚಂದ್ರಶೇಖರ್ ಮತ್ತು ಯೋನಿಪೂಜೆಗಾಗಿರಿಸಲ್ಪಟ್ಟಿದ್ದ ಶಾರದೆಯ ಮಧ್ಯೆ ಸಿವಿಲ್ ವ್ಯಾಜ್ಯ ನಡೆಯತೊಡಗಿತ್ತು. ಆಶ್ರಮ ಶಾರದೆಯ ಕಬ್ಜಾದಲ್ಲಿತ್ತು. ಚಂದ್ರಶೇಖರನ ಕಡೆಯವರು ಕಬ್ಜಾ ತೆಗೆದುಕೊಳ್ಳಲು ಹೋದಾಗ ಗಲಾಟೆಗಳಾಗುತ್ತಿದ್ದವು. ಶಾರದೆಯ ಪರವಾಗಿ ಎಂ.ಎಲ್.ಸಿ. ಸ್ವಾಮಿ ಎನ್ನುವವರು ಬೆಂಬಲಕ್ಕೆ ನಿಂತುಕೊಂಡಿದ್ದರು. ಶಾರದೆಗೆ ರಕ್ಷಕರೂ ಇದ್ದರು. ಅಲ್ಲದೆ ಆಶ್ರಮಕ್ಕೆ ಪೊಲೀಸ್ ಕಾವಲನ್ನೂ ಹಾಕಲಾಗಿತ್ತು.

ವಿಲ್ಸನ್ ಗಾರ್ಡನ್ ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ಧಲಿಂಗಯ್ಯ ಆರೋಪಿಗಳಿಗೆ ಶಿಕ್ಷೆ ಆಗುವಂಥ ಚಾರ್ಜ್‌ಷೀಟ್ ಹಾಕುವುದರಲ್ಲಿ ಹೆಸರು ಪಡೆದಿದ್ದರು.

ದೇವದಾಸ್ ಅವರು ಇಡೀ ಫೈಲ್ ಅನ್ನು ನನಗೆ ಕೊಟ್ಟು ಪೂರ್ಣ ಓದಲು ಹೇಳಿದರು. ಕೊಲೆ ನಡೆದ ಸ್ಥಳದ ಆಶ್ರಮದ ನಕ್ಷೆಯೇ ಇಲ್ಲವೆಂದು ಸೀನಿಯರ್‌ಗೆ ಹೇಳಿದೆ.

"ಇದಪ್ಪ ಕಲಿಯುವವರ ಲಕ್ಷಣ. ಹೀಗೆ ಗುರುತಿಸೋದನ್ನ ಕಲಿಯಬೇಕು...." ಎಂದರು. ನನ್ನ ಬುದ್ಧಿಮತ್ತೆಗೆ ಸಿಕ್ಕ ಶಹಬ್ಬಾಸ್‌ಗಿರಿಯಿಂದ ನಾನು ಉಬ್ಬಿಹೋದೆ. ಕೆಲಸ ಮಾಡಿಸಬೇಕಾದ ಸ್ಫೂರ್ತಿ ತುಂಬುವುದರಲ್ಲಿ ದೇವದಾಸ್ ನಿಸ್ಸೀಮರು.

"ನೀನು ಹೋಗಿ ಕೊಲೆಯಾದ ಸ್ಥಳವನ್ನು ನೋಡಿಕೊಂಡು ಬಾ. ಹಾಗೇ ಅದರ ನಕ್ಷೆಯನ್ನೂ ರಚಿಸಿಕೊಂಡು ಬಾ" ಎಂದರು ಸೀನಿಯರ್.

"ನೀವೂ ನನ್ನೊಂದಿಗೆ ಬಂದಿದ್ದರೆ ಸರಿಯಿತ್ತು...." ಎಂದು ರಾಗವೆಳೆದೆ.

"ನಿನ್ನ ಬ್ರೇನ್ ಕ್ಯಾಮೆರಾ ಇದ್ದ ಹಾಗೆ. ನಾನೇತಕ್ಕೆ ಬೇಕು. ನಾನು ಕೇಳಿದ ವಿವರಗಳನ್ನು ನೀನು ಕೊಟ್ಟರೆ ಸಾಕು....." ಎಂದರು.

ಸರಿ, ನೇರ ಉಗುರುಸ್ವಾಮಿಯ ಆಶ್ರಮಕ್ಕೆ ಹೋದೆ. ಕಾವಲು ನಿಂತಿದ್ದ ಪೊಲೀಸರಿಗೆ ನಾನು ಸ್ಥಳ ಪರಿಶೀಲನೆಗೆ ಬಂದಿರುವ ವಿಷಯ ತಿಳಿಸಿದೆ. ನನ್ನೊಂದಿಗೆ ಒಬ್ಬ ಪೇದೆ ಒಳಗೆ ಬಂದ.

ಆಶ್ರಮದೊಳಗೆಲ್ಲ ಸುತ್ತಾಡಿದೆ. ಒಂದು ಹಾಳೆಯ ಮೇಲೆ ಗುರುತು ಮಾಡಿಕೊಂಡೆ. ಆವಶ್ಯಕ ಟಿಪ್ಪಣಿಗಳನ್ನೂ ಮಾಡಿಕೊಂಡೆ. ನನ್ನ ಕೆಲಸವೆಲ್ಲ ಮುಗಿದ ಮೇಲೆ ಉಗುರುಸ್ವಾಮಿಯ ವಾರಸುದಾರಳೆಂದು ಸಾಧಿಸುತ್ತಿದ್ದ ಯುವತಿ ಶಾರದೆಯನ್ನು ಮಾತಾಡಿಸಿದೆ. ಅವಳ ಪೂರ್ವಾಪರಗಳನ್ನು ವಿಚಾರಿಸಿದೆ. ತಂದೆ, ತಾಯಿಗಳು ಏನು ಮಾಡುತ್ತಿದ್ದಾರೆಂದು ಕೇಳಿದೆ.

ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಒಬ್ಬರು ಬಂದು, "ನಿಮ್ಮನ್ನು ಕಮೀಷನರ್ ಸಾಹೇಬರು ಕರೆತರಲು ತಿಳಿಸಿದ್ದಾರೆ" ಎಂದು ಹೇಳಿದ. ಅದರ ಹಿಂದುಮುಂದು ತಿಳಿಯದೆ ಆಶ್ಚರ್ಯಗೊಂಡ ನಾನು, "ಏಕಂತೆ?" ಎಂದು ಕೇಳಿದೆ.

"ನೀವು ಉಗುರುಸ್ವಾಮಿ ಕೊಲೆ ಆರೋಪಿಯ ಪರ ವಕೀಲರು. ಕೇಸಿನ ಮುಖ್ಯ ವಿಟ್ನೆಸ್‌ಗಳನ್ನು ಪುಸಲಾಯಿಸುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೀರಿ ಎಂದು ಎಂಎಲ್‌ಸಿಯವರಿಂದ ಕಂಪ್ಲೇಂಟ್ ಬಂದಿದೆ" ಎಂದರು.

ಆಶ್ರಮದ ಹೊರಕ್ಕೆ ಬಂದಾಗ ಎದುರು ಮನೆಯಲ್ಲಿ ನಿಂತಿದ್ದ ಒಬ್ಬ, "ಹೇಳ್ದೆ ಕೇಳ್ದೆ ಆಶ್ರಮದೊಳಕ್ಕೆ ಹೋಗೋದಾ? ಏನೂ ಅರಿಯದ ಹುಡುಗೀಗೆ ಏನೇನೋ ಕೇಳಿ ಅವಳ ತಲೆ ಕೆಡಿಸೋದಾ?" ಎಂದ ನನ್ನತ್ತ ವಕ್ರದೃಷ್ಟಿ ಬೀರುತ್ತ.

ನನಗೆ ಆಗ ಅರ್ಥವಾಯಿತು, ಈ ಗಲಾಟೆಯೆಲ್ಲ ಏನು ಅಂತ. ನನ್ನ ಸೀನಿಯರ್‌ಗೆ ಫೋನ್ ಮಾಡಿ ಕಮೀಷನರ್ ಆಫೀಸ್‌ಗೆ ಕೂಡಲೇ ಹೊರಟು ಬರುವಂತೆ ತಿಳಿಸಿದೆ. ನನ್ನನ್ನು ಮತ್ತು ಶಾರದೆಯನ್ನು ಪೊಲೀಸ್ ಜೀಪ್‌ನಲ್ಲಿ ಕೂರಿಸಿಕೊಂಡು ನಡೆದ ಇನ್ಸ್‌ಪೆಕ್ಟರ್.

ನಾವು ಕಮೀಷನರ್ ಚೇಂಬರ್ ಒಳಹೋಗುತ್ತಲೇ ಎಂಎಲ್‌ಸಿ ಸ್ವಾಮಿ ಹಾಜರಿದ್ದ. ಆ ಕ್ಷಣ ಅವನ ಮೇಲೆ ವಿಚಿತ್ರ ಕೋಪವುಕ್ಕಿ ಬಂದಿತು. ಕಾಲ ಮೇಲೆ ಕಾಲು ಹಾಕಿಕೊಂಡು ತನ್ನ ಪಾದವನ್ನು ನಾಯಿಯ ಬಾಲದಂತೆ ಅಲ್ಲಾಡಿಸುತ್ತಿದ್ದ.

"ಏನ್ರೀ ಕಾನೂನನ್ನೇ ಉಸಿರಾಡೋರಂತೆ ಆಡುವ ಲಾಯರ್‌ಗಳೇ ಹೀಗೆ ಮಾಡೋದಾ? ವ್ಹಿಟ್ನೆಸ್ ಟ್ಯಾಂಪರಿಂಗ್‌ಗೆ ಏಕ್ರೀ ಕೈ ಹಾಕಿದ್ರಿ? ಎಂಥ ಡೆಲಿಕೇಟ್ ಕೇಸ್ ಗೊತ್ತಾ ಇದು!" ಎಂದರು ಕಮೀಷನರ್ ಎಂ.ಎಲ್. ಚಂದ್ರಶೇಖರ್ ಕಣ್ಣು ಕಿಸಿಯುತ್ತಾ.

ತೀರಾ ಕುಳ್ಳಗೆ ಮತ್ತು ತೆಳ್ಳಗಿದ್ದರು ಆ ವ್ಯಕ್ತಿ. ಪೊಲೀಸರಿಗೆ ಇರಬೇಕಾದ ದೃಢಕಾಯ ಅವರಿಗಿರಲಿಲ್ಲ. ಅದನ್ನೆಲ್ಲ ಮರೆಮಾಚಲೇನೋ ಎನ್ನುವಂತೆ ಜೊಂಡು ಮೀಸೆಗಳನ್ನು ಬಿಟ್ಟಂತೆ ಕಾಣುತ್ತಿತ್ತು.

"ನಾನು ಕೇಸ್ ವಿಷಯವಾಗಿ ಒಂದು ಮಾತನ್ನೂ ಅವಳಿಗೆ ಕೇಳಿಲ್ಲ, ಹೇಳಿಲ್ಲ. ಬೇಕಿದ್ದರೆ ನೀವೇ ವಿಚಾರಿಸಿ ಇವಳನ್ನ. ಅಷ್ಟಕ್ಕೂ ನಾನು ಒಳಕ್ಕೆ ಹೋದದ್ದೇನೂ ಕಳವಿನಿಂದಲ್ಲ; ನಿಮ್ಮ ಪೊಲೀಸರಿಗೆ ನನ್ನ ಉದ್ದೇಶ ತಿಳಿಸಿಯೇ ಹೋದೆ. ನನ್ನೊಂದಿಗೆ ನಿಮ್ಮ ಒಬ್ಬ ಪೇದೆಯೂ ಒಳಗೆ ಬಂದ. ಆತನನ್ನೂ ಇಲ್ಲಿಗೆ ಕರೆಸಿ ಕೇಳಿ, ನಾನು ಅಲ್ಲಿ ಏನೇನು ಮಾಡಿದೇ ಅಂತ. ರಾಜಕಾರಣಿಯ ಮಾತು ಕೇಳಿಕೊಂಡು ನನ್ನ ಬಗ್ಗೆ ಪೂರ್ವಗ್ರಹಪೀಡಿತರಾಗಿ ಮಾತಾಡೋದು ತಪ್ಪು" ಎಂದೆ.

ನನ್ನ ಮಾತುಗಳು ಮುಗಿಯುತ್ತಿದ್ದಂತೆಯೇ ದೇವದಾಸರು ಒಳಬಂದರು. ಅವರ ಮುಖ, ಕಣ್ಣುಗಳು ಕೆಂಪಾಗಿದ್ದವು.

"ಅದ್ಯಾಕ್ರೀ ನನ್ನ ಜ್ಯೂನಿಯರ್ ಅನ್ನ ಇಲ್ಲಿಗೆ ಕರೆಸಿದ್ರಿ? ಕಂಪ್ಲೇಂಟ್ ಎಲ್ಲಿ? ವಾರಂಟ್ ಎಲ್ಲಿ?" ಎಂದರು.

ದೇವದಾಸರ ಬಗ್ಗೆ ಗೊತ್ತಿರುವವರಂತೆ, "ಕೂಡಿ ದೇವದಾಸ್ ಅವರೆ. ಇಲ್ಲಿಗೆ ನಿಮ್ಮ ಜ್ಯೂನಿಯರ್‌ರನ್ನು ಬಂಧಿಸಿ ಕರೆತಂದಿಲ್ಲ. ಅನವಶ್ಯಕ ಗೊಂದಲ ನಿವಾರಣೆಗಾಗಿ ಕರೆಸಿದ್ದೇವೆ" ಎಂದರು ಕಮೀಷನರ್ ಶಾಂತ ಧ್ವನಿಯಲ್ಲಿ. ನಾನೊಬ್ಬನೇ ಇದ್ದಾಗ ಏರಿದ್ದ ಕಮೀಷನರ್ ಸ್ವರ ಇಳಿದಿತ್ತು.

ಕಮೀಷನರ್ ಯುವತಿ ಶಾರದೆಗೆ ನನ್ನನ್ನು ತೋರಿಸುತ್ತಾ ಕೇಳಿದರು: "ಏನಮ್ಮಾ ಇವರು ನಿನಗೆ ಉಗುರುಸ್ವಾಮಿಯ ಕೊಲೆಗೆ ಸಂಬಂಧಿಸಿ ಏನನ್ನಾದರೂ ಚರ್ಚಿಸಿದಾರ?"

ಇಡೀ ವಾತಾವರಣದಿಂದ ತಬ್ಬಿಬ್ಬಾಗಿದ್ದ ಶಾರದೆ ಎಂ.ಎಲ್.ಸಿ.ಯ ಸಂಜ್ಞೆಗಳಿಂದ ಮತ್ತಷ್ಟು ಗಲಿಬಿಲಿಗೊಳಗಾಗಿದ್ದಳು. "ಇಲ್ಲ ಸಾಹೇಬ್ರೆ ಕೊಲೆಗಿಲೆ ವಿಷ್ಯವನ್ನೇನೂ ಕೇಳ್ಲಿಲ್ಲ. ನನ್ನ ಅಪ್ಪ ಅಮ್ಮ ಎಲ್ಲಿ ಅಂತ ಕೇಳಿದ್ರು ಅಷ್ಟೆಯಾ...." ಎಂದು ಇದ್ದ ವಿಷಯ ಹೇಳಿಬಿಟ್ಟಳು.

ಎಂ.ಎಲ್.ಸಿ.ಯ ಮುಖ ಕಪ್ಪಿಟ್ಟಿತ್ತು. "ರೀ ಸ್ವಾಮಿ ನನ್ನ ವಿಶ್ವಾಸವನ್ನ ಈ ರೀತಿ ನೀವು ದುರ್ಬಳಕೆ ಮಾಡಿಕೊಳ್ಳಬಾರ್ದು. ಅವಳಿಗೇಕೆ ಸನ್ನೆಗಳನ್ನ ಮಾಡ್ತೀರಾ? ಸುಳ್ಳು ಹೇಳೋಕೆ ಪ್ರಚೋದಿಸ್ತೀರಾ? ನನಗೆ ಮುಖವಿಲ್ಲದ ಹಾಗೆ ಮಾಡಿದಿರಿ...." ಎಂದರು ಕಮೀಷನರ್ ಎಂ.ಎಲ್.ಸಿ. ಯವರತ್ತ ತಿರಸ್ಕಾರದ ನೋಟ ಬೀರುತ್ತ.

"Please excuse me Mr. Devadas" ಎಂದು ಕಮೀಷನರ್ ಎದ್ದು ನಿಂತು ಸೀನಿಯರ್ ಕಡೆ ಲಾಘವಕ್ಕಾಗಿ ಹಸ್ತ ನೀಡಿದರು. ಕಾಫಿ ತರಲು ಅಟೆಂಡರ್‌ಗೆ ಹೇಳಿದರು. ಎಂ.ಎಲ್.ಸಿ. ಎದ್ದು "ನಾನು ಹೋಗಿ ಬರುತ್ತೇನೆ ಚಂದ್ರಶೇಖರ್ ಅವರೆ" ಎಂದಾಗ "ಇಲ್ಲ ಕಾಫಿ ಕುಡಿದು ಹೋಗಿರಿ" ಎನ್ನಲಿಲ್ಲ ಕಮೀಷನರ್.

46

ಮಧ್ಯರಾತ್ರಿ ಮನೆಗೆ ಬಂದ ರೋಮಿಯೋ

ರಾತ್ರಿ ಬಾಗಿಲು ಬಡಿದ ಶಬ್ದವಾಯಿತು. ಲೈಟು ಹಾಕಿದೆ. ಹನ್ನೆರಡು ಗಂಟೆಯಾಗಿತ್ತು. ಕಿಟಕಿಯನ್ನು ಓರೆ ಮಾಡಿ ನೋಡಿದೆ. "ಹನುಮಂತ್ರಾಯ ಬಾಗಿಲು ತೆಗಿ" ಎನ್ನುವ ಮಾತು ಕೇಳಿಸಿತು. ಮಾತಿನ ಧ್ವನಿ ಮತ್ತು ಕತ್ತಲಲ್ಲಿ ಕಂಡ ಆಕಾರದ ಮೇಲೆ ಬಂದವನು ದೇವರಾಜ್ ಎಂದು ಗುರುತಿಸಿದೆ. ಅದೇಕೆ ಇಷ್ಟೊತ್ತಿನಲ್ಲಿ ಇವನು ಎಂದುಕೊಳ್ಳುತ್ತ ಬಾಗಿಲು ತೆರೆದೆ. ದೇವರಾಜ್ ಉದ್ವೇಗದಲ್ಲಿದ್ದ. ಮಾತಿನ ಧ್ವನಿಯಲ್ಲಿ ಸ್ಥಿಮಿತತೆಯಿರಲಿಲ್ಲ. ಅವನ ಕೈಕಾಲುಗಳೆಲ್ಲ ಚಡಪಡಿಕೆಯಲ್ಲಿರುವಂತೆ ಕಂಡವು. ದೇವರಾಜ್ ಸ್ವಭಾವತಃ ಗಂಭೀರ ಮನುಷ್ಯ. ತೀವ್ರ ಉದ್ವೇಗಕ್ಕೆ ಒಳಗಾಗುವ ವ್ಯಕ್ತಿತ್ವ ಅವನದಲ್ಲ. ನಾನು ಸೆಂಟ್ರಲ್ ಕಾಲೇಜ್‌ನಲ್ಲಿ ಓದುತ್ತಿದ್ದಾಗ ದೇವರಾಜ್ ಗವರ್ನಮೆಂಟ್ ಆರ್ಟ್ಸ್ ಕಾಲೇಜ್‌ನಲ್ಲಿ ಓದುತ್ತಿದ್ದ. ಪರಸ್ಪರ ಸ್ನೇಹ ಬೆಳೆದಿತ್ತು. ಹುಡುಗಿಯರನ್ನು ಚುಡಾಯಿಸುವ ಪೋಲಿ ಗುಂಪಿನಿಂದ ಪ್ರತ್ಯೇಕವಾಗಿರುತ್ತಿದ್ದ ದೇವರಾಜ್‌ಗೆ ನಾನೆಂದರೆ ಬಹಳ ಅಚ್ಚುಮೆಚ್ಚು.

"ಅದೇಕೊ ಹಿಂಗಾಡ್ತಾ ಇದೀಯಾ. ಈ ಅವತಾರದಲ್ಲಿ ನಿನ್ನನ್ನ ಯಾವತ್ತೂ ನೋಡೇ ಇರಲಿಲ್ವಲ್ಲೋ..... ಬಾ ಒಳಗೆ ಬಾ ಮೊದಲು" ಎಂದೆ.

ಏನೂ ಮಾತಾಡದೆ ನನ್ನ ಕೈಗೆ ಒಂದು ಲೆಟರ್ ಕೊಟ್ಟ. ಓದಿದೆ.

ಮಂಗಳ ಎನ್ನುವ ಹುಡುಗಿ ದೇವರಾಜ್‌ಗೆ ಬರೆದ ಪತ್ರ ಅದಾಗಿತ್ತು. ತನ್ನ ತಂದೆ ತಾಯಿಗೆ ತಮ್ಮಿಬ್ಬರ ಪ್ರೇಮ ವ್ಯವಹಾರ ತಿಳಿದು ಪ್ರಮಾದವಾಗಿಬಿಟ್ಟಿದೆಯೆಂದೂ, ಆದ್ದರಿಂದ ತನ್ನನ್ನು ದೂರದ ಅಜ್ಞಾತ ಸ್ಥಳಕ್ಕೆ ಕರೆದೊಯ್ದು ಬೇರೆ ಮದುವೆ ಮಾಡುವ ವಿಚಾರ ನಡೆದಿದೆಯೆಂದೂ, ಈ ಕೂಡಲೇ ತನ್ನನ್ನು ಸಂಪರ್ಕಿಸಿ ಕರೆದುಕೊಂಡು ಹೋದರೆ ಮಾತ್ರ ನಿನ್ನವಳಾಗಿ ಉಳಿಯುವೆನೆಂದೂ ಇತ್ಯಾದಿ ಇತ್ಯಾದಿ ಬರೆದಿದ್ದಳು.

ನನಗೆ ದೇವರಾಜ್ ಕಥೆಯೆಲ್ಲ ತಿಳಿಯಿತು.

"ಅಲ್ವೊ ನಿನಗೆ ಪ್ರೇಮ ವ್ಯವಹಾರ ಮಾಡಲಿಕ್ಕೂ ಬರುತ್ತದೆ ಅಂತಾ ನಂಗೇ ಗೊತ್ತಿರಲಿಲ್ವಲ್ಲೋ" ಎಂದು ಚುಡಾಯಿಸಿದೆ.

"ಇದು ನನ್ನ ಜೀವನ್ಮರಣದ ಪ್ರಶ್ನೆ. ನೀನು ಹಾಗೆ ಉಡಾಫೆ ಮಾತಾಡುವ ಮನುಷ್ಯ ಅಲ್ಲ ಅಂತ ನಿನ್ನ ಹತ್ತಿರ ಬಂದಿರುವೆ, ತಿಳೀತಾ. ಮೊದಲು ಅವಳನ್ನು ರಕ್ಷಿಸಬೇಕು. ಅವಳನ್ನು ಬೇರೆಯವರಿಗೆ ಮದುವೆ ಮಾಡಿಕೊಟ್ಟರೆ ತನ್ನ ಪ್ರಾಣವನ್ನೇ ಕಳೆದುಕೊಂಡುಬಿಡುತ್ತಾಳೆ...." ಎಂದು ಏದುಸಿರುಬಿಡತೊಡಗಿದ. ಕಣ್ಣಲ್ಲಿ ನೀರು ಒಸರತೊಡಗಿತು. ತೋರಿಕೆಗಾದರೂ ನಾನು ಗಂಭೀರವಾಗಿ ವರ್ತಿಸದಿದ್ದರೆ ದೇವರಾಜ್ ರೋದಿಸುವುದು ಗ್ಯಾರಂಟಿಯೆಂದು ಗೊತ್ತಾಗಿಬಿಟ್ಟಿತು.

"ನಿನ್ನ ಶ್ರೀಮದ್ ಗಾಂಭೀರ್ಯದ ವ್ಯಕ್ತಿತ್ವವನ್ನು ಈ ರೀತಿ ನೀರುಗಾಯಿ ಹಣ್ಣುಗಾಯಿ ಮಾಡಿ ಹಾಕಿದ ಆ ಮಂಗಳಳ ಮನಸ್ಸಿಲ್ಲಿ ಅದೆಂಥ ಶಕ್ತಿ ಅಡಗಿದೆ! ಆಯಿತು, ಈಗ ನನಗೆ ಏನು ಮಾಡೂ ಅಂತೀಯಾ ಮಾಡ್ತೇನೆ....." ಎಂದು ಟೊಂಕದ ಮೇಲೆ ಕೈಗಳನ್ನಿಟ್ಟುಕೊಂಡು ಅಭಯ ನೀಡಿದೆ.

"ನಿನ್ನ ವಕೀಲಿ ಬುದ್ಧಿಯನ್ನೆಲ್ಲಾ ಪ್ರಯೋಗಿಸಿ, ಅವಳನ್ನ ಎಲ್ಲಿ ಬಚ್ಚಿಟ್ಟಿದ್ದಾರೆ ಮೊದಲು ಪತ್ತೆಹಚ್ಚು. ದುಡ್ಡಿಗಾಗಿ ಚಿಂತೆ ಬೇಡ. ನಮ್ಮ ಮನೆಯಲ್ಲಿ ಈ ಮದುವೆಗೆ ಒಪ್ಪಿಗೆಯಿದೆ. ನನ್ನ ಅಮ್ಮ ನಿನಗೆ ಗೊತ್ತಲ್ಲ, ನಾನು ಏನು ಬಯಸುತ್ತೇನೊ ಅದನ್ನು ಈಡೇರಿಸಿ ನನ್ನನ್ನು ತೃಪ್ತಿಪಡಿಸಲು ತುದಿಗಾಲ ಮೇಲೆ ನಿಂತಿರುತ್ತಾಳೆ. ನನ್ನ ಅಕ್ಕನೂ ಅಷ್ಟೆ. ಈಗ ಅವಳಿಗೆ ಗವರ್ನಮೆಂಟ್ ಅಪಾಯಿಂಟ್‌ಮೆಂಟ್ ಆಗಿದೆ. ನಿನಗೆ ಈ ವಿಷಯ ಗೊತ್ತಿರಲಿಕ್ಕಿಲ್ಲ. ದುಡ್ಡಿಗಾಗಿ ಚಿಂತೆ ಬೇಡ...." ಎಂದ.

ನಿಜವಾಗ್ಲೂ ಇದು ಲೈಲಾ ಮಜ್ನು ಕೇಸೇ ಸರಿ ಎಂದುಕೊಂಡೆ.

"ಆಯಿತು ಈಗ ಇಲ್ಲೇ ಮಲಗು. ಬೆಳಗ್ಗೆ ನಮ್ಮ ಸೀನಿಯರ್‌ಗೆ ಭೇಟಿ ಮಾಡಿಸುವೆ" ಎಂದೆ.

ಬೆಳಗ್ಗೆ ಆಫೀಸ್‌ಗೆ ದೇವರಾಜ್‌ನನ್ನು ಕರೆದೊಯ್ದೆ. ಕ್ಲೈಂಟ್‌ಗಳು ಬಹಳಷ್ಟು ಜನ ಇದ್ದರು. ಅನುಮಾನಿಸುತ್ತ "ಸಾರ್ ಇವ್ನು ನನ್ನ ಆಪ್ತ ಸ್ನೇಹಿತ. ಒಬ್ಬ ಹುಡುಗೀನ್ನ ಲವ್ ಮಾಡಿಬಿಟ್ಟಿದ್ದಾನೆ. ಅವ್ಳು ಮೈನರ್ ಏನೂ ಅಲ್ಲ. ಆದರೆ ಜಾತಿ ಬೇರೆ ಬೇರೆ; ಇವ್ನು ಒಕ್ಕಲಿಗರವನು, ಅವ್ಳು ಲಿಂಗಾಯತಳು. ಅವಳ ತಂದೆತಾಯಿ ಈಗ ಅವಳ್ನ ಬಚ್ಚಿಟ್ಟಿದ್ದಾರೆ. ಹುಡುಕಿಸಿಕೊಡಬೇಕು.... ಎನ್ನುತ್ತಿದ್ದಂತೆಯೇ ಸೀನಿಯರ್ "ಹುಡುಗ್ರಿಗೆ ಬೇರೆ ಕೆಲ್ಸ ಏನಿದೆ! ಲವ್ ಮಾಡೋದು ಬಿಟ್ರೆ.... ಇರ್ಲಿ, ಸಾಯಂಕಾಲ ನೋಡೋಣಂತೆ, ಇವತ್ತು ಇರೋ ಇಂಪಾರ್ಟೆಂಟ್ ಕೇಸ್‌ಗಳ ಬಗ್ಗೆ ಈಗ ವಿಚಾರ ಮಾಡೋಣ...." ಎಂದರು.

ಸೀನಿಯರ್ ಮಾತು ಕೇಳಿದ ದೇವರಾಜ್ ಮುಖದಲ್ಲಿ ನಿರಾಸೆಯ ಗೆರೆಗಳು ಮೂಡಿದವು. ಧೃತಿಗೆಡಬೇಡ ಎನ್ನುವಂತೆ ಸನ್ನೆ ಮಾಡಿದೆ.

"ನಿನ್ನವು ಏನಾದ್ರೂ ಕೆಲಸಗಳಿದ್ದರೆ ಅವನ್ನು ಮುಗಿಸಿಕೊಂಡು ಸಾಯಂಕಾಲ ಬಾ" ಎಂದು ತಿಳಿಸಿದೆ.

"ನನಗೆ ಬೇರೇನೂ ಕೆಲಸವಿಲ್ಲ, ಇದನ್ನು ಬಿಟ್ಟರೆ. ಆಯಿತು ನೀವು ಕೋರ್ಟ್‌ಗೆ ಹೋಗಿ. ನೀವು ಬರೋವರೆಗೆ ಇಲ್ಲೇ ಯಾವುದಾದ್ರೂ ಮ್ಯಾಟಿನಿಯಲ್ಲಿ ಕೂತಿದ್ದು ಬರ್ತೇನೆ" ಎಂದ.

ನಾವು ವಾಪಸ್ ಬರುವಷ್ಟರಲ್ಲಿ ದೇವರಾಜ್ ಆಫೀಸ್ ಮುಂದೆ ಹಾಜರಿದ್ದ. ಸೀನಿಯರ್‌ಗೆ ನಮಸ್ಕಾರ ಮಾಡಿದ. ಅದಕ್ಕೆ ಸೀನಿಯರ್ ಪ್ರತಿ ನಮಸ್ಕಾರ ಮಾಡದೆ ಕೇವಲ ತಲೆ ಅಲ್ಲಾಡಿಸಿ ನಮಸ್ಕಾರ ಸ್ವೀಕರಿಸಿದ್ದನ್ನು ಗಮನಿಸಿದೆ.

ತಮ್ಮ ಚೇಂಬರ್‌ಗೆ ಹೋಗಿ ಉಶ್ ಎಂದು ಟೋಪಿ ತೆಗೆದು ಫ್ಯಾನ್‌ಗೆ ತಲೆಯೊಡ್ಡಿ ಕೂತರು. ದೇವದಾಸ್ ಅವರಿಗೆ ಸದಾ ಗಾಳಿ ಬೇಕು. ಕೋರ್ಟ್‌ನಲ್ಲಿ ವಾದಿಸುವಾಗಲೂ ಅವರಿಗೆ ಫ್ಯಾನ್ ತಿರುಗುತ್ತಿರಬೇಕು. ಸೆಕೆಯುಂಟಾದರೆ ಅವರ ಸಿಡಿಮಿಡಿ ಆರಂಭವಾಗುತ್ತಿತ್ತು.

ಪುನಃ ದೇವರಾಜ್ ವಿಷಯ ಎಲ್ಲಿಂದ ಆರಂಬಿಸುವುದೆಂದು ತಲೆ ಕೆರೆದುಕೊಳ್ಳತೊಡಗಿದೆ.... "ಸಾರ್ ಬೆಳಗ್ಗೆ ಭೇಟಿ ಮಾಡಿಸಿದೆನಲ್ಲ ನನ್ನ ಸ್ನೇಹಿತ

ದೇವರಾಜ್. ಅವರ ತಾಯಿ ಲಾಯರ್ ಫೀಸ್ ಎಷ್ಟಾಗುತ್ತೆ ಕೇಳಿಕೊಂಡು ಬಾ ಅಂತ ಹೇಳಿ ಕಳಿಸಿದಾಳೆ. ಎಷ್ಟು ಅಂತ ಹೇಳಬೇಕು ಸಾರ್?" ಕುರ್ಚಿಗೆ ಒರಗಿಕೊಂಡಿದ್ದ ಸೀನಿಯರ್ ನೆಟ್ಟಗೆ ಕೂತರು. "ಆಂ ಏನು ಹೇಳಿದಿ? ಲವ್ ಕೇಸಿಗೆ ಅವನ ತಾಯಿನೇ ಫೀಜು ಕೊಡ್ತಾಳಂತಾ? ಪಾಪ ಜಿನೈನ್ ಕೇಸೇ ಇರಬೇಕು. ಎಲ್ಲಿ ಕರಿ ನಿನ್ನ ಸ್ನೇಹಿತನ್ನ...." ಎಂದರು.

ಒಳಬಂದ ದೇವರಾಜ್‌ಗೆ ಕುಲುಕಲು ಕೈಕೊಟ್ಟ ಸೀನಿಯರ್ ಹೇಳಿದರು: "ಇವೆಲ್ಲ ಕಾಮನ್. ನೀನೇನೂ ವರಿ ಮಾಡಿಕೋ ಬೇಡ. ನಿನ್ನ ಸ್ನೇಹಿತನೇ ಇಲ್ಲಿದಾನಲ್ಲ. ಅವನೊಬ್ಬ ಇದ್ದರೆ ಸಾಕು ನಿನ್ನ ಲವರ್ ನಿಂಗೆ ಸಿಕ್ತಾಳೆ. ನನಗೆ ಬೇಕಾದ ಪೊಲೀಸ್ ಆಫೀಸರ್‌ಗಳಿದಾರೆ....". ದೇವರಾಜ್ ಕಿವಿಯಲ್ಲಿ "ಬೇಗ ಹೋಗಿ ಐದು ಸಾವಿರ ತಂದುಬಿಡು" ಎಂದೆ.

ರಾತ್ರಿ ಎಂಟೂವರೆಯಾಗುತ್ತಿತ್ತು. ದೇವರಾಜ್ ತನ್ನ ಅಕ್ಕನೊಂದಿಗೆ ಆಫೀಸ್‌ನಲ್ಲಿ ಪ್ರತ್ಯಕ್ಷನಾದ.

ಸೀನಿಯರ್ ಕೈಗೆ ಐದು ಸಾವಿರ ಇಟ್ಟು ಅವರಕ್ಕ "ಸಾರ್, ಏನಾದರೂ ಮಾಡಿ ನನ್ನ ತಮ್ಮನಿಗೆ ಅವಳೊಂದಿಗೆ ಮದುವೆ ಮಾಡ್ಸಿ. ಇಲ್ಲಿದ್ರೆ ಇವ್ನು ಹುಚ್ಚಾಗಿ ಹೋಗಿಬಿಡ್ತಾನೆ. ಅವ್ಳೂ ಅಷ್ಟೆ. ನನ್ನ ಮುಂದೆ ಎಲ್ಲ ಹೇಳವ್ಳೆ, ಇವುನ್ನ ಅದೆಷ್ಟು ಪ್ರೀತಿಸ್ತೀನೀ ಅಂತ" ಎಂದಳು.

"ಛೆ, ಛೆ, ನಮ್ಮ ಹನುಮಂತ್ರಾಯನ ಸ್ನೇಹಿತ ಅಂದಮೇಲೆ ಫೀಜು ತೊಗೋಳೊಕೆ ಆಗ್ತದಾ? ಅದೆಲ್ಲ ಏನೂ ಬೇಡ. ಕೋರ್ಟು, ಪೊಲೀಸ್ ಸ್ಟೇಷನ್ ಖರ್ಚು ನೋಡಿಕೊಳ್ಳಿ ಸಾಕು...." ಎಂದರು ಸೀನಿಯರ್.

ನಾನು ದೇವರಾಜ್‌ಗೆ ಸನ್ನೆ ಮಾಡಿದೆ. "ಸಾರ್ ಅವೆಲ್ಲ ನಮಗೆ ಗೊತ್ತಾಗಾಕಿಲ್ಲ. ನೀವೇ ಅದನ್ನೆಲ್ಲ ನೋಡಿಕೊಳ್ಳಿ. ಈಗ ದಯವಿಟ್ಟು ಇದನ್ನ ತೆಕ್ಕೊಳ್ಳಿ...." ಎಂದ.

ಮೇಜಿನ ಮೇಲಿಟ್ಟ ದುಡ್ಡನ್ನು ತೆಗೆದು ಟೇಬಲ್ ಡ್ರಾದೊಳಕ್ಕೆ ಹಾಕೊಂಡ ಸೀನಿಯರ್, "ಹನುಮಂತ್ರಾಯ ನಾಳೆಗೆ ಪಿ.ಎಸ್.ಐ. ನಿಂಗೇಗೌಡನ್ನ ಕಾಂಟ್ಯಾಕ್ಟ್ ಮಾಡಿ ವಿಷಯ ತಿಳಿಸು. ಅವ್ನೂ ಒಕ್ಕಲಿಗ. ಈ ಕೇಸ್ ಬಗ್ಗೆ ಸ್ವಲ್ಪ ಇಂಟರೆಸ್ಟ್ ತೊಗೋಬಹುದು" ಎಂದರು.

ಮಂಗಳ ಬರೆದ ಪತ್ರವನ್ನು ಸೀನಿಯರ್ ಕೈಗೆ ಕೊಟ್ಟ ದೇವರಾಜ್, "ಆಯಿತು, illegal detention ಎಂದು ಕಂಪ್ಲೇಂಟ್ ರೆಡಿ ಮಾಡು" ಎಂದರು ನನ್ನತ್ತ ನೋಡಿ.

ಇದೆಲ್ಲದರಿಂದ ನನಗೂ ಈ ಕೇಸ್ ಬಗ್ಗೆ ಇದ್ದ ಉತ್ಸಾಹ ಹೊಸರೂಪು ಪಡೆದುಕೊಂಡಿತ್ತು. ಅಂತರ್ ಜಾತಿಯ ವಿವಾಹವನ್ನು ಮಾಡಿಸಿದ ಕೀರ್ತಿಯಲ್ಲಿ ನನ್ನ ಪಾಲೂ ಇರಬೇಕು ಎನಿಸಿತು. ನನ್ನಲ್ಲಿದ್ದ ಹಳ್ಳಿಯ ಮನಸ್ಸಿನ ಮೂಲೆಯೊಂದರಲ್ಲಿ ಸಾಮಾನ್ಯರಿಗೆ ಸಾಧ್ಯವಾಗದ್ದನ್ನು ಈ ದೇವರಾಜ್ ಮಾಡುತ್ತಿದ್ದಾನೆ ಎನ್ನಿಸಿತು. ಅದ್ಭುತ ಕೆಲಸವೊಂದರಲ್ಲಿ ಒಳಗೊಳ್ಳುತ್ತಿರುವೆನೆನ್ನುವ ಸ್ಫೂರ್ತಿ ನನ್ನಲ್ಲಿ ಉಕ್ಕಿತು.

ಮಂಗಳ ತಂದೆ ಪಿ.ಡಬ್ಲ್ಯೂ.ಡಿ. ಯಲ್ಲಿ ಇಂಜಿನಿಯರ್ ಆಗಿದ್ದರು. ಒಳ್ಳೆಯ ಶ್ರೀಮಂತರಾಗಿದ್ದ ಅವರ ಮನೆಯೆದುರಿಗೇ ದೇವರಾಜ್ ಮನೆ. ನೆರೆಹೊರೆಯೆನ್ನುವ ಪ್ರೀತಿ ಪ್ರೇಮ. ದೇವರಾಜ್ ಮತ್ತು ಮಂಗಳ ಪರಸ್ಪರರ ಮನೆಗಳಲ್ಲಿ ಹೋಗಿ ಬಂದು ಮಾಡುತ್ತಿದ್ದರು. ಹಿರಿಯರು ಯಾರೂ ಅನುಮಾನಿಸುತ್ತಿರಲಿಲ್ಲ.

ಒಂದು ದಿನ ಮಂಗಳಳ ತಾಯಿಯ ಕೈಗೆ ದೇವರಾಜ್ ಬರೆದ ಪ್ರೇಮಪತ್ರ ಸಿಕ್ಕಿದ್ದೇ ಪ್ರಮಾದಕ್ಕೆಡೆ ಮಾಡಿಬಿಟ್ಟಿತು.

"ಒಬ್ಬಳೇ ಮಗಳೂ ಅಂತ ಮುದ್ದು ಮಾಡಿದ್ದಕ್ಕೆ ಒಳ್ಳೇ ಉಪಕಾರವನ್ನೇ ಮಾಡ್ದಿಯಲ್ಲೇ ಮಂಗಳೀ. ನಿನ್ನಪ್ಪ ತಲೆಯೆತ್ಕೊಂಡು ತಿರುಗದ ಹಾಗೆ ಮಾಡಿದಿಯಲ್ಲೇ. ನಿನಗಾಗಿ ಇಂಜಿನಿಯರ್, ಡಾಕ್ಟರ್ ವರಗಳನ್ನ ನಿಮ್ಮಪ್ಪ ಹುಡುಕ್ತಾ ಇದ್ರೆ, ಇಲ್ಲಿ ನೀನೇ ಸ್ವಯಂವರ ನಡೆಸಿಬಿಟ್ಟಿಯಲ್ಲೇ ಗಯ್ಯಾಳಿ. ಅದೂ ಖಂಡಮಾಂಸ ತಿನ್ನೋ ಜಾತಿಯವ್ನುನ್ನ" ಎಂದು ಚೀರಾಡತೊಡಗಿದಳು.

"ಅದೇನೆ ಆಗಲಿ, ನಾನು ಮಾತ್ರ ದೇವರಾಜನನ್ನೇ ಮದುವೆಯಾಗೋದು. ಇಲ್ದಿದ್ರೆ ಆತ್ಮಹತ್ಯೆ ಮಾಡ್ಕೋತೀನಿ" ಎಂದು ಹೇಳುವಾಗ ಅವಳ ತಂದೆಯೂ ನಿಂತಿದ್ದ.

ಮಗಳ ಮಾತಿಗೆ ಏನೂ ಪ್ರತಿ ಮಾತಾಡದೆ ಬ್ಯಾಗ್ ತೆಗೆದುಕೊಂಡು ಊರಿಗೆ ನಡೆದ. ಮಾರನೇ ದಿನವೇ ಬಂದು ತನ್ನ ಪತ್ನಿ ಮತ್ತು ಮಗಳನ್ನು ಕಾರಲ್ಲಿ ಕೂರಿಸಿಕೊಂಡು ನಡೆದಿದ್ದ......

P.S.I. ನಿಂಗೇಗೌಡರು, ಸರ್ಚ್ ವಾರೆಂಟ್ ತೆಗೆದುಕೊಂಡು ಮಂಗಳಳ ತಂದೆಯ ಮನೆಗೆ ಹೋದರು. ಬರಿಗೈಲಿ ವಾಪಸಾದರು.

ದೇವರಾಜ್ ಮತ್ತು ನಾನು ಠಾಣೆಗೆ ಹೋದಾಗ ನಿಂಗೇಗೌಡರು, "ಆ ಹುಡುಗಿಯ ಅಪ್ಪ ತುಂಬ ಘಾಟಿ ಇದಾನೆ. ಸರ್ಚ್‌ವಾರಂಟ್ ತಂದು ನಮ್ಮ

ಕೆಲಸ ಹಗುರ ಮಾಡ್ಬಿದಿರಿ. ನಾವೂ ಅವಳನ್ನು ಹುಡುಕುತ್ತಿದ್ದೇವೆ. ನಿಮ್ಮ ಸಹಕಾರವಿದ್ದರೆ ಬೇಗ ಸಿಕ್ಕಬಹುದು. ಎಲ್ಲಿಯಾದ್ರೂ ಸುಳಿವು ಸಿಕ್ಕರೆ ಬೇಗ ನಮಗೆ ತಿಳಿಸಿ ದಯವಿಟ್ಟು " ಎನ್ನಬೇಕೆ!

ದೇವರಾಜ್ "ಹಾಗಾದ್ರೆ ನಿಮ್ಮಿಂದ ಹುಡುಕೋಕೆ ಸಾಧ್ಯವಾಗೋಲ್ವಾ ಸಾರ್? ನೀವು ಹುಡುಕದೇ ಹೋದ್ರೆ ಬೇರೆ ಯಾರಿಗೆ ಸಾಧ್ಯ ಸಾರ್?" ಎಂದ ತಾಳ್ಮೆ ಕಳೆದುಕೊಂಡು.

ಸುಮ್ಮನಿರುವಂತೆ ಹೇಳಿ ಅವನನ್ನು ಸಮಾಧಾನಪಡಿಸಿದೆ. "ನಿತ್ಯ ಬಂದು ನಿಮ್ಮ ತಲೆ ತಿನ್ನುತ್ತಾ ಇದೇವೆ. ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು ಸಾರ್" ಎಂದೆ ನಿಂಗೇಗೌಡರಿಗೆ.

"ಛೆ, ಇದು ಸಮಾಜಸೇವೆ. ಪ್ರೇಮಿಗಳನ್ನು ಒಂದುಗೂಡಿಸಿದ ಪುಣ್ಯ ನನಗೆ ಬರುತ್ತೆ. ನಿಮ್ಮ ಸ್ನೇಹಿತ ದಿಕ್ಕೆಟ್ಟಂತಾಗಿ ಹತಾಶ ಮಾತಾಡುತ್ತಿದ್ದಾನೆ. ಅದಕ್ಕೆಲ್ಲ ನನಗೆ ಬೇಜಾರಿಲ್ಲ. ಈಗ ಕಾಲ ಬದಲಾಗಿದೆ. ಹಿರಿಯರು ತಮ್ಮ ಭಾವನೆಗಳನ್ನು ಕಿರಿಯರ ಮೇಲೆ ಹೇರುವುದನ್ನು ಬಿಡಬೇಕು. ಆದರೆ ಹಿರಿಯರು ತಮ್ಮ ಹಟ ಬಿಡಬೇಕಲ್ಲವೆ!" ಎಂದರು.

ಹೀಗೇ ಹದಿನೈದು ದಿನಗಳುರುಳಿದವು. ಸಂಜೆಯಾದರೆ ದೇವರಾಜ್ ನಮ್ಮ ಆಫೀಸಿನ ಮುಂದೆ ನಿತ್ಯ ಅಟೆಂಡೆನ್ಸ್ ಹಾಕುತ್ತಿದ್ದ. ಅವನು ಹಾಗೆ ಬರುವುದನ್ನು ನೋಡಿ ನಮ್ಮ ಆಫೀಸ್‌ನವರು ಒಳೊಗೊಳಗೇ ಮುಸಿಮುಸಿ ನಗುತ್ತಿದ್ದುದು, 'ಲವ್ ಫೀವರ್' ಎಂದು ಛೇಡಿಕೆಯ ಮಾತಾಡಿಕೊಳ್ಳುತ್ತಿದ್ದುದು ನನ್ನ ಗಮನಕ್ಕೆ ಬರುತ್ತಿತ್ತು. ಬೇಕೆಂತಲೇ ನನಗೆ "ಹನುಮಂತ್ರಾಯ ನಿಮ್ಮ ಫ್ರೆಂಡ್ ದೇವರಾಜ್ ಬಂದು ಬಹಳ ಹೊತ್ತಾಯಿತು ಕಾಯ್ತಾ ಇದಾರೆ...." ಎಂದು ಹೇಳಿ ಅರ್ಥಪೂರ್ಣವಾಗಿ ನೋಡುತ್ತಿದ್ದರು. ಅದನ್ನೆಲ್ಲ ನಾನು ಕೇರ್ ಮಾಡದೆ ದೇವರಾಜ್ ಕೇಸನ್ನು ಸೀರಿಯಸ್ ಆಗಿ ಫಾಲೋಅಪ್ ಮಾಡುತ್ತಿದ್ದೆ. ಸೀನಿಯರ್ ಆ ಕೇಸಿನ ಬಗ್ಗೆ ತಲೆಕೆಡಿಸಿಕೊಳ್ಳದೆ ನನ್ನ ಮೇಲೆ ಹಾಕಿ ನಿಶ್ಚಿಂತರಾಗಿದ್ದರು. ಆಗೊಮ್ಮೆ ಈಗೊಮ್ಮೆ, "ಎಲ್ಲಿಗೆ ಬಂತು ರೋಮಿಯೊ ಜ್ಯೂಲಿಯೆಟ್ ಕೇಸು?" ಎಂದು ಕೇಳಿ ಸುಮ್ಮನಾಗುತ್ತಿದ್ದರು. ಮಧ್ಯಾಹ್ನ ಹನ್ನೆರಡಾಗಿತ್ತು. ಸೀನಿಯರ್ ಜೊತೆ ಕೋರ್ಟ್‌ನಲ್ಲಿದ್ದೆ. ಕೋರ್ಟ್ ಹಾಲ್ ಒಳಕ್ಕೆ ಬಂದ ದೇವರಾಜ್ ನನಗೆ ಹೊರಬರುವಂತೆ ಸನ್ನೆ ಮಾಡಿದ. 'ಇವನದು ಅತಿಯಾಯಿತು' ಎಂದುಕೊಳ್ಳುತ್ತ ಹೊರಬಂದು ಸಿಡುಕಿನಿಂದ "ಅದೇನು? ಕೋರ್ಟ್ ನಡೆಯುವಾಗ್ಲೂ ಬರೋದೆ?" ಎಂದೆ.

ನನ್ನ ಮಾತಿನಿಂದ ದೇವರಾಜ್ ಎಳ್ಳಷ್ಟೂ ಬೇಜಾರಾದಂತೆ ತೋರಲಿಲ್ಲ. ನಿತ್ಯ ಇರುವಂತೆ ಮುಖ ಕಳೆಗುಂದಿರದೆ ಗೆಲುವಾಗಿತ್ತು. ಪ್ಯಾಂಟ್ ಜೇಬಿನಿಂದ ಒಂದು ಇನ್‌ಲ್ಯಾಂಡ್ ಲೆಟರ್ ಹೊರತೆಗೆದುಕೊಟ್ಟ.

ತುಮಕೂರು ಕಾಲೇಜಿನಿಂದ ಬಂದ ಆ ಲೆಟರ್‌ನಲ್ಲಿ ಮಂಗಳಳ ಬಗ್ಗೆ ಸುಳಿವಿತ್ತು. ಅವನ ಬೆನ್ನು ಚಪ್ಪರಿಸಿ "ಓ ಅದಕ್ಕಾ ಇಷ್ಟೊಂದು ಖುಷಿ ಕುಣಿದಾಡ್ತಾ ಇದೆ ಮುಖದ ಮೇಲೆ" ಎಂದೆ.

ಇಬ್ಬರು ಹುಡುಗರು ಮತ್ತು ಒಬ್ಬ ಹುಡುಗಿ ಮೂವರು ಪತ್ರದ ಕೊನೆಗೆ ತಮ್ಮ ಹೆಸರುಗಳನ್ನು ಬರೆದುಕೊಂಡಿದ್ದರು. ತುಮಕೂರಿಗೆ ಸಮೀಪದ ಒಂದು ಸಣ್ಣ ಹಳ್ಳಿಯ ಶ್ರೀಮಂತರ ಮನೆಯೊಂದರಲ್ಲಿ ಮಂಗಳಳನ್ನು ಇಟ್ಟಿರುವುದಾಗಿ ತಿಳಿಸಿದ್ದರು. ಆ ಹುಡುಗರು ಆ ಮನೆಗೆ ಸೇರಿದವರೇ ಆಗಿದ್ದು, ಮಂಗಳಳ ವಿರಹವೇದನೆ ನೋಡಲಾಗದೆ ಅವಳ ಪರವಾಗಿಬಿಟ್ಟಿದ್ದರು. ಹಿರಿಯರಿಗೆ ಗೊತ್ತಾಗದಂತೆ ಅವಳ ಸೂಚನೆಯ ಮೇರೆಗೆ ದೇವರಾಜ್‌ಗೆ ಪತ್ರ ಬರೆದಿದ್ದರು.

ಸರಿ, ಸೀನಿಯರ್‌ಗೆ ಹೇಳಿಕೊಂಡು ಕೋರ್ಟ್‌ನಿಂದ ಆಚೆ ಬಂದೆ. ನೇರ ಪಿ.ಎಸ್.ಐ ನಿಂಗೇಗೌಡರ ಬಳಿಗೆ ಇಬ್ಬರೂ ಹೋದೆವು.

ನಿಂಗೇಗೌಡರು, "ಈಗ ಬಿಡ್ತೇವೆಯಾ. ಪಾತಾಳಗರಡಿ ಹಾಕಿ ಎಳೆತರ್ತೇವೆ" ಎಂದರು.

ನಾನು "ಸಾರ್ ನಿಮ್ಮೊಂದಿಗೆ ನಾವೂ ಬರ್ತೀವೆ" ಎಂದೆ.

"ಸರಿ ಅದಕ್ಕೇನು ಅಭ್ಯಂತರ!" ಎಂದರು. ಬಲಕ್ಕೆ ಇರಲಿ ಎಂದು ದೇವರಾಜ್ ತನ್ನ ನಾಲ್ಕೈದು ಸ್ನೇಹಿತರನ್ನು ಕಾರಲ್ಲಿ ಕರೆದುಕೊಂಡು ಬಂದ. ಮುಂದೆ ಪೊಲೀಸ್ ಜೀಪ್, ಹಿಂದೆ ರೋಮಿಯೊ ಕಾರ್.

ಆ ಹಳ್ಳಿಯನ್ನು ತಲುಪಿದಾಗ ಸಂಜೆ ಆರು ಗಂಟೆಯಾಗಿತ್ತು. ಊರಮುಂದೆ ಸಿಕ್ಕ ಒಬ್ಬನನ್ನು ಇಂಥವರ ಮನೆಯೆಲ್ಲಿ ಎಂದು ಕೇಳಿದ್ದಕ್ಕೆ, "ಅದೇನು, ಯಾರ ತಂಟೆಗೂ ಹೋಗದ ಅವ್ರುರ್ ಮನೆ ಕೇಳ್‌ಕಂಡು ಪೋಲೀಸ್‌ನವ್ರು ಬಂದಿದೀರಿ?" ಎಂದ.

"ಜೀಪ್‌ನಲ್ಲಿ ಕೂರಿಸ್ರೋ ಇವನ್ನ" ಎಂದರು ನಿಂಗೇಗೌಡರು.

"ಬೇಡ ಕಣ್ರಪ್ಪೋ. ಒಂದೇ ಊರು, ಅವುರಿಗೆ ನಾವು ಬೇಕು. ನಮ್ಗೆ ಅವ್ರುಬೇಕು. ನಾ ಮಾತ್ರಾ ಬರಾಕಿಲ್ಲ. ಅಕೋ ಎದುರಿಗೆ ದೊಡ್ಡ ಮನೆ

ಕಾಣಿಸ್ತಲ್ವಾ, ಅದೇ ಮನೆ. ನೀವೇ ಹೋಗಿ" ಎಂದು ಅಲ್ಲಿ ನಿಲ್ಲದೆ ಓಡಲು ನೋಡಿದ, ಅವನನ್ನು ಪೊಲೀಸ್ ಪೇದೆಗಳು ಬಿಡಲಿಲ್ಲ. "ಬೇರೆ ಸಂದಿಯೊಳಗಿಂದ ಹೋಗಿ ಅವರಿಗೆ ಸುದ್ದಿ ತಲುಪ್ಸೋಕೆ ಹೊಂಟಿದೀಯಾ?" ಎಂದು ಎತ್ತಿ ಜೀಪಿನಲ್ಲಿ ಕೂರಿಸಿಕೊಂಡು "ನಿಂಗೇನೂ ಮಾಡೊಲ್ಲ. ಸುಮ್ಕಿರು" ಎಂದರು.

ಮನೆ ಬಾಗಿಲು ತೆರೆದಿತ್ತು. ನಿಂಗೇಗೌಡ ಜೀಪ್ ಇಳಿದದ್ದೇ ತಡ ಒಳಗೆ ಓಡುನಡಿಗೆಯಲ್ಲಿ ಮನೆ ಹೊಕ್ಕರು. ನಾವೂ ಅವರ ಹಿಂದೆ ಹೋದೆವು. ಪಡಸಾಲೆಯಲ್ಲಿ ಮಂಗಳ ಕೂತಿದ್ದಳು. ದೇವರಾಜ್‌ನನ್ನು ನೋಡಿ ಎದ್ದು ಓಡಿ ಬರತೊಡಗಿದ ಮಂಗಳಳನ್ನು ಹಿಡಿದು ಕೆಳಗೆ ಕೆಡವಿದ ಅವಳ ತಾಯಿ, "ರಾಕ್ಷಸಿ, ಅದ್ಯಾವ ಮಾಯೆಯಿಂದ ಇಲ್ಲಿಗೆ ಕರೆಸಿದೆ ಇವರನ್ನೆಲ್ಲ. ಇವತ್ತು ನೀನೂ ಇರಬಾರದು, ನಾನೂ ಇರಬಾರದು" ಎಂದು ಅವಳ ಮೇಲೆ ಕೂತು ಕತ್ತು ಅಮುಕತೊಡಗಿದಳು.

ದೇವರಾಜ್ ಚಂಗನೇ ಹಾರಿ ಮಂಗಳಳ ತಾಯಿಯನ್ನು ಪಕ್ಕಕ್ಕೆ ಎಳೆದು ಹಾಕಿದ. ಮಂಗಳಳನ್ನು ಎಡತೋಳಿನಲ್ಲಿ ಹಿಡಿದುಕೊಂಡು ಅವಳ ಕತ್ತಿನ ಸುತ್ತ ಕೈಯಾಡಿಸತೊಡಗಿದ. ಕೂದಲು ಕೆದರಿಕೊಂಡು ಅವಳ ತಾಯಿ "ಹೋಯ್ತು, ಎಲ್ಲ ಹೋಯ್ತು, ಮನೆತನದ ಮರ್ಯಾದೆ ಬೀದಿ ಪಾಲಾಯಿತು...." ಎಂದು ರೋದಿಸತೊಡಗಿದಳು.

ನಿಂಗೇಗೌಡರು ಅಲ್ಲಿಯೇ ಮಹಜರ್ ನಡೆಸಿದರು.

"ನಾನು ದೇವರಾಜ್ ಜೊತೆ ಬರಲು ಸಿದ್ಧಳಿದ್ದೇನೆ. ನನ್ನ ಇಚ್ಛೆಗೆ ವಿರುದ್ಧ ನನ್ನಿಲ್ಲಿ ಕೂಡಿಟ್ಟಿದ್ದಾರೆ" ಎಂದು ಮಂಗಳ ಹೇಳಿಕೆ ನೀಡಿದಳು.

ಬೇರೆ ದಾರಿ ಕಾಣದ ಮಂಗಳಳ ತಂದೆ, ತಾಯಿ ರಾಜೀ ಸಂಧಾನಕ್ಕೆ ಬಂದರು. ಮದುವೆ ಸಿದ್ಧಗಂಗಾಮಠದಲ್ಲಿ ನಡೆಯುವುದೆಂದು ತೀರ್ಮಾನವಾಯಿತು.

ಮದುವೆ ದಿನ ಇದ್ದಕ್ಕಿದ್ದಂತೆ ದೇವರಾಜ್ ಬದಲಾಗಿಬಿಟ್ಟಿದ್ದ; ಹಣೆಗೆ ವಿಭೂತಿ ಪಟ್ಟೆ ಬಳಿದುಕೊಂಡು ಕೊರಳಲ್ಲಿ ಲಿಂಗದ ಕರಡಿಗೆ ಹಾಕಿಕೊಂಡು ನಿಂತಿದ್ದ; ಲಿಂಗಾಯತನಾಗಿ ಮತಾಂತರಗೊಂಡುಬಿಟ್ಟಿದ್ದ.

47

ಅಂದು ನನ್ನಲ್ಲಿ ನೂರು ರೂಪಾಯಿ ಇರಲಿಲ್ಲ

ನಾನು ತುಂಬಾ ಮಹತ್ವಾಕಾಂಕ್ಷಿಯಾಗಿದ್ದೆ. ಸೀನಿಯರ್ ಹೇಳಿದ್ದನ್ನು ಮಾತ್ರ ಮಾಡಿ ಕೈಕಟ್ಟಿ ಕೂರುವುದಷ್ಟೇ ನನ್ನ ಕೆಲಸವಲ್ಲ, ನಾನು ಈ ವೃತ್ತಿಯಲ್ಲಿ ಸಾಧಿಸುವುದು ಬಹಳ ಇದೆ ಎಂದು ಪದೇ ಪದೇ ಅಂದುಕೊಳ್ಳುತ್ತಿದ್ದೆ. ಈ ನನ್ನ ಅನಿಸಿಕೆಯನ್ನು ಅಳಿಸಿಹಾಕುವಂತೆ ಆಗಾಗ ನನ್ನನ್ನು ಸೋಮಾರಿತನ ಆವರಿಸಿಕೊಳ್ಳುತ್ತಿತ್ತು. ಹತ್ತರೊಂದಿಗೆ ಹನ್ನೊಂದನೆಯವನಾಗಿದ್ದರೆ ಸಾಕು ಎಂದೂ ಅನಿಸದೆ ಇರುತ್ತಿರಲಿಲ್ಲ. ನನ್ನ ಪರಿಚಯದ ಜ್ಯೂನಿಯರ್ ಲಾಯರ್‌ಗಳು, "ಪ್ರೊಫೆಶನ್ ಅನ್ನು ಅಷ್ಟೊಂದು ತಲೆಗೆ ಹಚ್ಚಿಕೋಬಾರದು. ಕ್ಯಾಜುಯಲ್ ಆಗಿ ಇರಬೇಕು. ನಮ್ಮ ಹಣೆಯಲ್ಲಿ ಏನಿರುತ್ತೊ ಅದಾಗ್ತೀವಿ. ಸದಾ ಕೋರ್ಟು, ಅದು ತಪ್ಪಿದರೆ ಆಫೀಸು, ಪುನಃ ರಾತ್ರಿ ಲಾ ಬುಕ್ ಜರ್ನಲ್‌ಗಳು ಎನ್ನುತ್ತ ಕೂತರೆ ನಮ್ಮ ಲೈಫ್ ಅನ್ನು ಎಂಜಾಯ್ ಮಾಡಲಿಕ್ಕೆ ಸಾಧ್ಯವಾ?" ಎಂದು ಛೇಡಿಸುತ್ತಿದ್ದರು. ಆದರೆ ಅವರು ತಿಳಿದುಕೊಂಡಿದ್ದ ಜೀವನ ನನ್ನ ದೃಷ್ಟಿಯಲ್ಲಿ ಮೌಲಿಕ ಎನಿಸುತ್ತಿರಲಿಲ್ಲ. ಹಾಗೆ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂದುಕೊಳ್ಳುತ್ತಿದ್ದೆ. ಹಾಗೆಂದು ಅವರ ಮುಖಕ್ಕೆ ಹೇಳುತ್ತಿರಲಿಲ್ಲ.

ಸೌಜನ್ಯಕ್ಕಾಗಿ ನಕ್ಕು ಸುಮ್ಮನಾಗುತ್ತಿದ್ದೆ. ಛಲ, ಧ್ಯೇಯ, ಗುರಿ, ಪರಿಶ್ರಮಗಳಿಲ್ಲದ ಜೀವನ ಜೀವನವೆ? ಎನಿಸುತ್ತಿತ್ತು.

ಇದೆಲ್ಲ ನನ್ನ ಮನಃಪಟಲದಲ್ಲಿ ತೇಲುತ್ತಿರುವಾಗ ಟೇಬಲ್ ಮೇಲಿದ್ದ ನೀರಿನ ಗ್ಲಾಸಿನಲ್ಲಿ ಎರಡು ನೊಣಗಳು ಕಚ್ಚಾಡುತ್ತಲೋ ಅಥವಾ ಮುದ್ದಾಡುತ್ತಲೋ ಬಿದ್ದವು. ಪಟಪಟ ರೆಕ್ಕೆ ಬಡಿದು ಗ್ಲಾಸಿನ ಒಳಮೈ ಮೂಲಕ ಮೇಲೇರಿ ಮತ್ತೆ ಹಾರಾಡತೊಡಗಿದವು; ನೀರಲ್ಲಿ ಬಿದ್ದೆವು, ಮುಗಿಯಿತು ನಮ್ಮ ಕಥೆ ಎಂದು ಪ್ರಾಣ ಬಿಡಲಿಲ್ಲ ಅವು. ಕುಡಿಯಲೆಂದು ತೆಗೆದುಕೊಂಡಿದ್ದ ಗ್ಲಾಸಿನೊಳಗಿನ ನೀರು ಕಲುಷಿತವಾಯಿತೆಂದು ನನಗೆ ಸಿಟ್ಟು ಬರಲಿಲ್ಲ. ನೊಣಗಳ ಬಗ್ಗೆ ಹೆಮ್ಮೆಯಾಯಿತು; ಅವುಗಳಿಗಿರುವ ಜೀವನೋತ್ಸಾಹ ಮತ್ತು ಬದುಕಿಗಾಗಿ ನಡೆಸುವ ಹೋರಾಟ ಕಂಡು ! ಛೇ! ನೊಣಕ್ಕಿಂತಲೂ ಕೀಳೇ ನಾವು ಮನುಷ್ಯರು ಎನಿಸಿತು.

ಬಾಗಿಲು ತಟ್ಟಿದ ಸದ್ದು ಕೇಳಿಸಿತು. ಹಳ್ಳಿಯಿಂದ ನನ್ನ ಗೆಳೆಯ ಬಂದಿದ್ದ. ನನ್ನೊಂದಿಗೆ ಸ್ಕೂಲ್‌ನಲ್ಲಿ ಓದುತ್ತಿದ್ದ ಹನುಮಯ್ಯ ಬಂದು ನಿಂತಿದ್ದ. ನೋಡಿ ಬಹಳ ದಿನಗಳಾಗಿದ್ದವು. ಚಿಕ್ಕಂದಿನಲ್ಲಿ ಅವನ ತಾಯಿಯ ಶವದ ಪೋಸ್ಟ್ ಮಾರ್ಟಮ್ ನೆಪದಲ್ಲಿ ಪೊಲೀಸರು ಆಡಿದ ನಾಟಕವನ್ನು ನಾನು ಬಯಲುಗೊಳಿಸಿದ್ದು ಕಣ್‌ಮುಂದೆ ತೇಲಿತು. "ಅರೆ, ನಾನೂ ಸುಮ್ನೆ ನಿಂತೆ ನೋಡು. ಬಾ ಒಳಕ್ಕೆ. ಏನು ಇದ್ದಕ್ಕಿದ್ದಂತೆ ಇಷ್ಟೊತ್ತಿನಲ್ಲಿ?" ಎಂದೆ.

ಅವನು ತೀರಾ ತೊಂದರೆಯಲ್ಲಿದ್ದುದರಿಂದ ನನ್ನ ಬಳಿ ಒಂದು ನೂರು ರೂಪಾಯಿ ಸಾಲ ಕೇಳುವುದಕ್ಕಾಗಿ ಬಂದಿದ್ದ.

"ನೀವು ಓದಿ ಮುಂದಕ್ಕೆ ಬಂದುಬಿಟ್ರಿ ಹನುಮಂತ್ರಾಯ. ನಾವೆಲ್ಲ ಹಳ್ಳೀಲಿ ಕೊಳೀತಾ ಬಿದ್ದಿದೇವೆ" ಎಂದ. ನನ್ನನ್ನು ಮಾತಾಡಿಸುವುದು ಏಕವಚನದಲ್ಲೊ ಇಲ್ಲಾ ಬಹುವಚನದಲ್ಲೋ ಎನ್ನುವ ಸಂದಿಗ್ಧದಲ್ಲಿದ್ದ ಹನುಮಯ್ಯ ಎರಡನ್ನೂ ನನ್ನ ಮೇಲೆ ಪ್ರಯೋಗಿಸಿದ್ದ.

ಚಿಕ್ಕವಯಸ್ಸಿನಲ್ಲಿ ಶಾಲೆಯಲ್ಲಿ ಓದುವಾಗ ನಮ್ಮಿಬ್ಬರ ಮಧ್ಯೆ ಇರದಿದ್ದ ಅಂತಸ್ತುಗಳ ಕಂದರ ಏರ್ಪಟ್ಟಿತ್ತು. ಅವನೂ ನನ್ನಂತೆಯೇ, ನನ್ನಷ್ಟೇ ಓದಿದ್ದರೆ ಹೀಗೆ ಕೀಳರಿಮೆಯಿಂದ ವರ್ತಿಸುತ್ತಿರಲಿಲ್ಲವೇನೋ ಎನಿಸಿತು. ಅಷ್ಟಕ್ಕೂ ನಾನು ಯಾವಾಗ ಹಳ್ಳಿಗೆ ಹೋದರೂ ಅವನು ಎಂದೂ ನನ್ನನ್ನು ದುಡ್ಡು ಕೇಳಿದವನಲ್ಲ. ಬೇಗನೆ ಮದುವೆಯಾಗಿಬಿಟ್ಟಿದ್ದ. ಅದೇನು ತೊಂದರೆಯೋ ಎಂದುಕೊಂಡೆ. ಆದರೆ ನನ್ನ ಬಳಿ ಅವನಿಗೆ ಕೊಡಲು ಒಂದು ನೂರು ರೂಪಾಯಿ ಇರಲಿಲ್ಲ.

ಇಲ್ಲ ಎಂದು ಹೇಳಿದರೆ ಅವನಿಗೆ ನಂಬಿಕೆ ಬರುವುದಿಲ್ಲ ಎಂದೂ ಗೊತ್ತಾಯಿತು. "ಕೋಟು ಹಾಕಿದ ದಿನದಿಂದಲೇ ಹಣದ ಸುರಿಮಳೆ ಆರಂಭಗೊಳ್ಳುತ್ತದೆಂದು ಭಾವಿಸಿಕೊಂಡಿರುತ್ತಾರೆ ಈ ಹಳ್ಳಿಯ ಹನುಮಯ್ಯನಂಥವರು" ಎಂದುಕೊಂಡೆ. "ಆಯಿತು, ಈಗ ಮಲಗು. ಬೆಳಗ್ಗೆ ಮಾತಾಡೋಣ" ಎಂದೆ. ಮಲಗಿದೆ. ನಿದ್ರೆ ಬರಲಿಲ್ಲ. ಲಾಯರ್ ಆದ ಮೇಲೆ ನನ್ನ ಪರಿಸ್ಥಿತಿ ವಿಚಿತ್ರವಾಗಿತ್ತು. ಮುಂಚೆಯಾದರೆ ವಿದ್ಯಾರ್ಥಿಯಾಗಿದ್ದೆ. ಪ್ರತಿ ತಿಂಗಳೂ ನನ್ನ ಹಕ್ಕು ಎನ್ನುವಂತೆ ಊರಿನಿಂದ ಹಣ ತರುತ್ತಿದ್ದೆ. ವೃತ್ತಿಗೆ ಸೇರಿಕೊಂಡ ಮೇಲೆ ಊರಿನಲ್ಲಿ ಹಣ ಕೇಳಲು ಮನಸ್ಸು ಹಿಂಜರಿಯುತ್ತಿತ್ತು. ನಮ್ಮ ಮನೆಯಲ್ಲಿ ಕೂಡಾ ನನಗೆ ಒಳ್ಳೆ ಗಳಿಕೆ ಆರಂಭದಿಂದಲೇ ಶುರುವಾಗಿದೆ ಎಂದು ತಿಳಿದುಕೊಂಡಂತೆ ಮಾತಾಡುತ್ತಿದ್ದರು. ಹಣಕ್ಕಾಗಿ ಸೀನಿಯರ್ ಮುಂದೆ ಕೈ ಒಡ್ಡುತ್ತಿರಲಿಲ್ಲ. ಅವರಾಗಿ ತಿಳಿದು ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತಿದ್ದೆ. ಕೆಲವು ಕಕ್ಷಿದಾರರು ಖುಷಿಗಾಗಿ ಕೊಟ್ಟಿದ್ದನ್ನು ಪಡೆಯುತ್ತಿದ್ದೆ.

ಲಾಯರ್ ವೃತ್ತಿಯೇ ಹೀಗೆ. ಯೌವನದಲ್ಲಿ ಹಣ ನೀಡುವುದಿಲ್ಲ; ಜ್ಞಾನ, ಪಾಂಡಿತ್ಯಗಳನ್ನು ನೀಡುತ್ತದೆ. ಇದನ್ನು ಸರಿಯಾಗಿ ಬಳಸಿಕೊಂಡು ಜಾಗ್ರತೆ ವಹಿಸದಿದ್ದರೆ ಆಯ ತಪ್ಪುವುದು ಗ್ಯಾರಂಟಿ !

ನಾಳೆ ನೂರು ರೂಪಾಯಿಗಳನ್ನು ಯಾರಿಗೆ ಕೇಳುವುದು ಎಂದು ಯೋಚಿಸುತ್ತಲೇ ನಿದ್ರೆ ಹೋಗಿದ್ದೆ.

ಬೆಳಗ್ಗೆ ಎದ್ದೊಡನೆ ಏನೂ ಯೋಚನೆ ಮಾಡದೆಯೇ ಫಕ್ಕನೆ ಡಾ. ಪರಂಗೂಸ ದಾಸ್ ನೆನಪಾಯಿತು. ಹನುಮಯ್ಯನನ್ನು ನನ್ನೊಂದಿಗೆ ಕರೆದೊಯ್ದೆ. "ದುಡ್ಡು ಬ್ಯಾಂಕಿನಲ್ಲಿದೆ ತೆಗೆದು ಕೊಡಬೇಕು" ಎಂದು ಹೇಳಿದ್ದಕ್ಕೆ ಹನುಮಯ್ಯ ಆಶ್ಚರ್ಯದಿಂದ ನನ್ನನ್ನು ನೋಡಿದ. ಅವನ ಆ ನೋಟವನ್ನು ಗಮನಿಸಿಯೂ ಗಮನಿಸಿದಂತೆ ಅತ್ತಿತ್ತ ನೋಟ ಬದಲಿಸಿ ಮುನ್ನಡೆದೆ.

ಪರಂಗೂಸ ದಾಸ್ ಅವರ ಮನೆಗೆ ನಾನೊಬ್ಬನೇ ಹೋದೆ. ಹನುಮಯ್ಯನನ್ನು ಸಮೀಪದ ಹೋಟೆಲ್‌ನಲ್ಲಿ ಕಾಫಿ ಕುಡಿಯುತ್ತ ಕೂತಿರು ಎಂದು ಕೂರಿಸಿದೆ. ಡಾ. ಪರಂಗೂಸ ದಾಸ್ ಆಸ್ಪತ್ರೆಗೆ ಹೋಗಲು ರೆಡಿಯಾಗುತ್ತಿದ್ದರು. ನನ್ನನ್ನು ನೋಡಿ "ಅದೇನು ಹನುಮಂತರಾಯರೆ ಬೆಳಿಗ್ಗೆ ದಯಮಾಡಿಸಿದ್ದು?" ಎಂದರು.

ನಾನು ಹೆಚ್ಚು ಔಪಚಾರಿಕ ಮಾತುಗಳಿಗಿಳಿಯದೆ ನೇರ ವಿಷಯಕ್ಕೆ ಬಂದು, "ನನಗೆ ಅರ್ಜೆಂಟಾಗಿ ಒಂದು ನೂರು ರೂಪಾಯಿ ಬೇಕಿತ್ತು ಸಾರ್" ಎಂದುಬಿಟ್ಟೆ;

ಹೆಚ್ಚು ಯೋಚಿಸಿದ್ದರೆ ಹಾಗೆ ದುಡ್ಡು ಕೇಳಲು ಸಾಧ್ಯವಾಗುವುದಿಲ್ಲವೇನೋ ಎನ್ನುವ ಭಯ ಒಳಗಿದ್ದುದರಿಂದ.

"ಅರೆ ಅದೇನು ದೊಡ್ಡ ವಿಷಯ, ತೆಕ್ಕೊಳ್ಳಿ," ಎಂದು ನೂರರ ಎರಡು ನೋಟುಗಳನ್ನು ತಮ್ಮ ಪಾಕೆಟ್‌ನಿಂದ ತೆಗೆದು ಕೊಟ್ಟರು. ಕಾಫಿ ಕುಡಿಯುವಂತೆ ಒತ್ತಾಯಿಸಿದರು. ಮತ್ತೊಮ್ಮೆ ಬರುವುದಾಗಿ ಅಲ್ಲಿಂದ ಹೊರಟೆ.

ನೂರು ರೂಪಾಯಿ ಕೇಳಿದ್ದಕ್ಕೆ ಎರಡು ನೂರು ಕೊಟ್ಟಿದ್ದರಿಂದ ಖುಷಿಯಾಗಿ ಸಣ್ಣಗೆ ಮೈ ಕಂಪಿಸುತ್ತಿತ್ತು. ಕೇಸರಿಬಾತ್‌ಗೆ ಆರ್ಡರ್ ಮಾಡಿದೆ. ಹನುಮಯ್ಯನಿಗೆ ಡಬಲ್ ಟಿಫನ್ ಮಾಡಿಸಿ ನೂರು ರೂಪಾಯಿ ಕೊಟ್ಟಾಗ ಅವನ ಕಣ್ಣುಗಳು ಥಕ್ ಎಂದು ಹೊಳೆದುದ್ದನ್ನು ನೋಡಿ ನನ್ನಲ್ಲಿ ಉಪಕಾರಿಯ ಭಾವ ಹೊಮ್ಮಿ ಬಂದಿತು. "ನೀನೇನೂ ಮತ್ತೆ ವಾಪಸ್ ಕೊಡೊ ಅವಶ್ಯಕತೆಯಿಲ್ಲ, ಮಡಿಕ್ಕೊ. ನಾನು ದುಡ್ಡು ಕೊಟ್ಟಿದ್ದನ್ನು ಯಾರಿಗೂ ಹೇಳೋಕೆ ಹೋಗಬೇಡ" ಎಂದೆ.

ನಾನು ಹನುಮಯ್ಯನಿಗೆ ದುಡ್ಡು ಕೊಟ್ಟ ವಿಷಯ ಮನೆಯಲ್ಲಿ ತಿಳಿದರೆ ಎಡವಟ್ಟಾಗುತ್ತದೆನ್ನುವ ಭಯ ನನಗೆ. ಊರೋರಿಗೆಲ್ಲ ದುಡ್ಡು ಹಂಚೋವಷ್ಟು ದುಡ್ಡು ನನಗೆ ಬರ್ತಾ ಇದೆ ಎನ್ನುವ ಭಾವನೆ ಮನೆಯವರಲ್ಲಿ ಮೂಡಬಾರದು ಎನ್ನುವ ಮುಂಜಾಗ್ರತೆ ನನ್ನದಾಗಿತ್ತು !

ಡಾ. ಪರಂಗೂಸ ದಾಸ್ ಬೇರೆ ಯಾರೂ ಆಗಿರದೆ ನನ್ನ ಪ್ರಥಮ ಕಕ್ಷಿದಾರರಾಗಿದ್ದರು ! ನಾನೇ ಸ್ವತಂತ್ರವಾಗಿ ಹಾಕಿದ ಮೊದಲ ಕೇಸ್ ಅದಾಗಿತ್ತು.

ಡಾ. ಪರಂಗೂಸ ಅವರ ಪರಿಚಯ ನನಗೆ ಅನಿರೀಕ್ಷಿತವಾಗಿತ್ತು. ದೇವದಾಸ್ ಅವರು ನನ್ನನ್ನು ವಿಕ್ಟೋರಿಯಾ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಕೃಷ್ಣ ಭಾರ್ಗವ ಅವರ ಬಳಿಗೆ ಕಳಿಸಿಕೊಡಲು ಒಂದು ಕಾರಣವಿತ್ತು. ನಾನು ಸೀನಿಯರ್‌ಗೆ ಆಗಾಗ ಮೆಡಿಕಲ್ ಜುರಿಸ್‌ಪ್ರುಡೆನ್ಸ್ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಹೀಗೇ ಒಂದು ಬಾರಿ ಯಾವುದೋ ಕೇಸಿನ ಸಂದರ್ಭದಲ್ಲಿ ನಾನು ಆ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳಿದ್ದಕ್ಕೆ ದೇವದಾಸ್ ಅವರು, " ಬರೀ ಥಿಯರಿ ತಿಳಕಂಡ್ರೆ ಜ್ಞಾನ ಬರೋಲ್ಲ. ನೀನು ಆಸ್ಪತ್ರೆಗೆ ಹೋಗಿ ಬರ್ನ್ಸ್ ವಾರ್ಡ್‌ನಲ್ಲಿ ಸುಟ್ಟುಕೊಂಡ ಪೇಶಂಟುಗಳನ್ನು, ಪೋಸ್ಟ್ ಮಾರ್ಟಮ್ ವಿಭಾಗದಲ್ಲಿ ಶವಪರೀಕ್ಷೆಗಳನ್ನು ನೋಡಬೇಕು. ಅಂದರೆ ವಾಸ್ತವಜ್ಞಾನ ಬರುತ್ತೆ. ನಾನೂ ನಿನ್ನ ಹಾಗೇ ಆರ್ಟ್ಸ್ ಓದಿದೋನು, ಲಾಯರ್ ವೃತ್ತಿ ಎಂದರೆ ಎಲ್ಲ ವಿಷಯಗಳ ಟಚ್ ಇರಬೇಕು" ಎಂದರು.

ಮರ್ಡರ್ ಕೇಸುಗಳಲ್ಲಿ ದೇವದಾಸ್ ಮುಖ್ಯವಾಗಿ ಡಾಕ್ಟರ್‌ಗಳನ್ನು ಕ್ರಾಸ್ ಎಗ್ಸಾಮಿನೇಷನ್ ಮಾಡುವುದನ್ನು ಗಂಭೀರವಾಗಿ ಗಮನಿಸಿಕೊಳ್ಳುತ್ತಿದ್ದೆ. ಅದು ನನ್ನನ್ನು ಮೆಡಿಕಲ್ ಜುರಿಸ್‌ಪ್ರುಡೆನ್ಸ್ ಕಡೆ ಕರೆತಂದಿತ್ತು. ಪ್ರಾಕ್ಟಿಕಲ್ ನಾಲೆಡ್ಜ್‌ಗಾಗಿ ದೇವದಾಸ್ ನನ್ನನ್ನು ಆಸ್ಪತ್ರೆಯ ಕಡೆಗೆ ಅಟ್ಟಿದ್ದರು.

ಸೂಪರಿಂಟೆಂಡೆಂಟ್ ಭಾರ್ಗವ ಅವರು, ಬರ್ನ್ಸ್ ವಾರ್ಡ್‌ಗೆ ಹೆಡ್ ಆಗಿದ್ದ ಡಾ. ಪರಂಗೂಸ ದಾಸ್ ಅವರನ್ನು ಕರೆದು, "ನೋಡಿ, ಇವರು ನನ್ನ ಸ್ನೇಹಿತ ದೇವದಾಸ್ ಅವರ ಜ್ಯೂನಿಯರ್. ಇವರಿಗೆ ಬರ್ನ್ಸ್ ಬಗ್ಗೇ ಮತ್ತಿತರೆ ಮಾರಣಾಂತಿಕ ಗಾಯಗಳ ಬಗ್ಗೆ ತಿಳಿವಳಿಕೆ ಕೊಡಿ" ಎಂದು ಪರಿಚಯಿಸಿದರು.

ಡಾ. ಪರಂಗೂಸ ಅವರು ನನ್ನನ್ನು ಬರ್ನ್ಸ್ ವಾರ್ಡ್‌ಗೆ ಕರೆದೊಯ್ದಾಗ ನಿಜವಾಗಿಯೂ ಬೆಚ್ಚಿ ಬೆವತುಹೋದೆ. ಮನುಷ್ಯ ವಿಕಾರಗೊಂಡರೆ ಎಂಥ ಭಯ ಹುಟ್ಟಿಸುತ್ತಾನಲ್ಲವೆ ಎನಿಸಿತು. ಮುಖ ಸುಟ್ಟುಕೊಂಡವರನ್ನು ನೋಡಿದ ನನಗೆ ವಾಂತಿ ಬರುವಂತೆ ಭಾಸವಾಯಿತು. ದೇಹವೆಲ್ಲ ಸುಟ್ಟ ಪೇಶಂಟ್‌ಗಳ ಮಂಚಕ್ಕೆ ಅರ್ಧವೃತ್ತಾಕಾರದ ಚಿಕ್ಕ ಡೇರೆಗಳನ್ನು ಮೇಲೆ ಕಟ್ಟಿದ್ದನ್ನು ನೋಡಿದೆ. ನೊಣಗಳು ಕೂರದಂತೆ, ಸೋಂಕು ತಗುಲದಂತೆ ಇರಲೆಂದು ಹಾಗೆ ಕಟ್ಟಲಾಗುತ್ತೆ ಎಂದು ಹೇಳಿದರು.

ಡಾ. ಪರಂಗೂಸ ಅವರು ನನ್ನನ್ನು ತಮ್ಮ ಚೇಂಬರ್‌ಗೆ ಕರೆದೊಯ್ದರು. ತಿಂಡಿ, ಕಾಫೀ ತರಿಸಿದರು. ನನ್ನ ಕಣ್ಣುಗಳ ಮುಂದೆ ಸುಟ್ಟ ಗಾಯದ ರೋಗಿಗಳು ಇನ್ನೂ ತೇಲಾಡುತ್ತಿದ್ದುದರಿಂದ ನನಗೆ ತಿಂಡಿ ತಿನ್ನಲು ಸಾಧ್ಯವಾಗಲಿಲ್ಲ. ಡಾಕ್ಟರ್ ತಮ್ಮ ಮನೆಯಲ್ಲೇ ತಿಂಡಿ ತಿನ್ನುತ್ತಿರುವಂತೆಯೇ ಸಹಜವಾಗಿ ತಿಂದರು!

ನಾನು ಕೇಳಿದೆ : "ಸಾರ್, ನಿತ್ಯ ಇಂಥ ರೋಗಿಗಳಿಗೆ ಚಿಕಿತ್ಸೆ ನೀಡಿಯೂ ಯಾವ ವಾಕರಿಕೆಯಿಲ್ಲದಂತೆ ಸಹಜ ಜೀವನ ನಡೆಸುವ ನಿಮ್ಮನ್ನು ನೋಡಿ ನನಗೆ ಆಶ್ಚರ್ಯವೆನ್ನಿಸುತ್ತಿದೆ!"

ನನ್ನನ್ನ ಮುಗುಳ್ನಗುತ್ತ ನೋಡಿದ ಡಾ. ಪರಂಗೂಸ ಅವರು "ನಿಮ್ಮ ಪ್ರೊಫೆಷನ್ ಬಗೆಗೆ ಸಹ ನನ್ನಲ್ಲಿ ವಿಚಿತ್ರ ಕಲ್ಪನೆಗಳಿವೆ, ಆದರೆ ನೀವು ಸಹಜವಾಗಿರುತ್ತೀರಿ" ಎಂದರು. ನನಗೆ ಅವರ ಮಾತಿನ ಪೂರ್ಣ ಇಂಗಿತ ಅರ್ಥವಾಗಲಿಲ್ಲ. ಸುಮ್ಮನಾದೆ.

ಕೇವಲ ಮೈಮೇಲಿನ ಚರ್ಮ ಸುಟ್ಟರೆ ಎಷ್ಟು ಡಿಗ್ರಿ ಬರ್ನ್, ಅದೇ ರೀತಿ ಆ ಸುಟ್ಟ ಗಾಯ ಮಾಂಸ ಖಂಡಗಳನ್ನು ತಾಗಿದರೆ, ಕೊನೆಗೆ ಎಲುಬನ್ನು ತಾಗಿದರೆ ಎಷ್ಟೆಷ್ಟು ಡಿಗ್ರಿ ಸುಟ್ಟಂತೆ ಎನ್ನುವುದನ್ನು ವಿವರಿಸಿದರು. ಅದೇ ರೀತಿ ಕಾಲು, ಕೈ,

ಎದೆ, ಹೊಟ್ಟೆ, ಮುಖ, ತಲೆ ಹೀಗೆ ಯಾವ್ಯಾವುದಕ್ಕೆ ಸುಟ್ಟರೆ ಎಷ್ಟೆಷ್ಟು ಪರ್ಸೆಂಟೇಜ್ ಸುಟ್ಟಂತೆ ಎನ್ನುವ ಲೆಕ್ಕಾಚಾರ ಹೇಳಿದರು.

ಅವರು ಹೇಳದಿದ್ದರೂ ನನಗೆ ಆಗ ಒಂದು ವಿಷಯ ಹೊಳೆಯಿತು :

"ಹೆಚ್ಚು ಪರ್ಸೆಂಟ್ ಸುಟ್ಟುಕೊಂಡ ವ್ಯಕ್ತಿಗಿಂತ ಕಡಿಮೆ ಪರ್ಸೆಂಟ್ ಸುಟ್ಟುಕೊಂಡ ವ್ಯಕ್ತಿಗೆ ಹೆಚ್ಚು ಹಾನಿ ಆಗಬಹುದಲ್ಲವೆ! ಏಕೆಂದರೆ ಸೊಂಟ-ತೊಡೆಗಳ ಭಾಗಕ್ಕೆ ಮಾತ್ರ ಹಾನಿಯಾಗಿ ಕಡಿಮೆ ಪರ್ಸೆಂಟ್ ಸುಟ್ಟುಕೊಂಡಿದ್ದಾನೆನ್ನಲು ಬರುವುದಿಲ್ಲ! ಅಲ್ಲವೆ ಸಾರ್?" ಎಂದೆ.

"ಇದಪ್ಪ ಲಾಯರ್‌ಗಳ ತಲೆ! ನಾವು ಡಾಕ್ಟರ್‌ಗಳು ಚಿಕಿತ್ಸೆ ಹೇಗೆ ನೀಡಬೇಕೆನ್ನುವುದಕ್ಕೆ ನಮ್ಮ ಗಮನ ಕೇಂದ್ರೀಕರಿಸುತ್ತವೆ. ಆದರೆ ನೀವು ಕೇಸು, ಶಿಕ್ಷೆ, ಹಾನಿ, ಲಾಭಗಳ ಕಡೆ ತಲೆ ಓಡಿಸುತ್ತೀರಿ" ಎಂದರು.

ನನ್ನ ಪ್ರಶ್ನೆಯಿಂದ ಪ್ರಭಾವಿತರಾದಂತೆ ಕಂಡರು ಡಾ. ಪರಂಗೂಸ. "ನಿಮಗೆ ಒಳ್ಳೆ ಆಸಕ್ತಿಯಿದೆ. ನೀವು ಬೇಗ ಈ ವಿಷಯವನ್ನ ಕರಗತ ಮಾಡಿಕೊಳ್ಳಬಹುದು" ಎಂದರು. ನನಗೆ ಸಂತೋಷವಾಯಿತು; ಪರವಾಗಿಲ್ಲ ಸೈನ್ಸ್ ವಿಷಯವೂ ನನಗೆ ಸಮಸ್ಯೆಯಲ್ಲ ಎಂದುಕೊಂಡೆ. ಬೆಂಕಿಯಿಂದ ಸುಟ್ಟ ಗಾಯಕ್ಕೂ ಆಸಿಡ್‌ನಿಂದ ಸುಟ್ಟ ಗಾಯಕ್ಕೂ ವ್ಯತ್ಯಾಸ ಹೇಗಿರುತ್ತದೆಂದು ತೋರಿಸಿದರು. ಆಸಿಡ್ ಬಿದ್ದರೆ ಚರ್ಮ, ಮಾಂಸಗಳಲ್ಲಿ ತಗ್ಗು, ದಿನ್ನೆಗಳು ನಿರ್ಮಾಣವಾಗುತ್ತವೆಂಬುದು ಹೇಳಿ ಪ್ರತ್ಯಕ್ಷ ಹೋಲಿಕೆ ಮಾಡಿ ತೋರಿಸಿದರು. ನಾನು ಎರಡು ಮೂರು ದಿನಗಳಿಗೆ ಒಮ್ಮೆಯಂತೆ ಆಸ್ಪತ್ರೆಗೆ ಹಾಜರಾಗತೊಡಗಿದೆ. ತರಚಿದಾಗ, ಬರೆಬಿದ್ದಾಗ, ದೊಣ್ಣೆಯಿಂದ ಪೆಟ್ಟಾದಾಗ, ಕಬ್ಬಿಣ ಸಲಾಕೆಯಿಂದ ಪೆಟ್ಟಾದಾಗ, ಮಚ್ಚಿನಿಂದ ಕೊಚ್ಚಿದಾಗ ಹೀಗೆ ನಾನಾ ವಿಧದ ಗಾಯಗಳನ್ನು ಆಯಾ ಆಯುಧಗಳೊಂದಿಗೆ ತಳುಕು ಹಾಕುವುದು ಹೇಗೆಂದು ತಿಳಿದುಕೊಂಡೆ. ಇದರೊಟ್ಟಿಗೆ ಡಾ. ಮೋದಿ, ಡಾ. ನಾರಾಯಣ್‌ರೆಡ್ಡಿ, ಡಾ. ಲಯನ್ಸ್, ಡಾ. ಬಸು ಮುಂತಾದವರು ಬರೆದ ಮೆಡಿಕಲ್ ಜುರಿಸ್‌ಪ್ರುಡೆನ್ಸ್ ಪುಸ್ತಕಗಳಲ್ಲಿ ಮುಳುಗಿದೆ.

ಒಂದು ದಿನ ಡಾ. ಪರಂಗೂಸ ಅವರನ್ನು ಕಾಣಲು ಹೋದೆ. ತೀರಾ ಖಿನ್ನರಾಗಿ ಕೂತಿದ್ದರು. ಅವರ ಮುಂದೆ ವಾರಪತ್ರಿಕೆಯೊಂದಿತ್ತು. ಅದರ ಮುಖಪುಟಕ್ಕೆ ಪರಂಗೂಸ ಅವರ ಫೋಟೋ ಹಾಕಲಾಗಿತ್ತು. ಕೆಟ್ಟ ತಲೆಬರಹ ಕೊಡಲಾಗಿತ್ತು. ವಿಷಯ ಏನೆಂದು ತಿಳಿಯಿತು. ಅವಾಗಾಗಲೇ ನನಗೆ ಅವರೊಂದಿಗೆ ಸ್ವಲ್ಪ ಸಲುಗೆ ಬೆಳೆದಿತ್ತು. "ಸಾರ್, ನೀವು ಎಂಥ ನಿಷ್ಠೆಯಿಂದ ಕೆಲಸ ಮಾಡುತ್ತೀರಿ

ಎಂದು ನಾನು ಕಣ್ಣಾರೆ ಕಂಡವನಿದ್ದೇನೆ. ಸಾವಿರಾರು ರೋಗಿಗಳು ನಿಮ್ಮ ಕೈಯಿಂದಾಗಿ ಪ್ರಾಣವುಳಿಸಿಕೊಂಡು ಹೋಗುತ್ತಿದ್ದಾರೆ. ಕೇವಲ ದುರುದ್ದೇಶದಿಂದ ನಿಮ್ಮ ಮೇಲೆ ಹೀಗೆ ಬರೆಯಲಾಗಿದೆ. ನೀವು ಒಪ್ಪಿಗೆ ನೀಡಿ, ನಾನು ನಿಮ್ಮ ಪರವಾಗಿ ಮಾನಹಾನಿ ಮೊಕದ್ದಮೆ ಹಾಕುವೆ" ಎಂದೆ.

"ಆಯಿತು, ಅದೆಲ್ಲ ಕೋರ್ಟಿನಲ್ಲಿ ನಡೆಯುತ್ತೆ. ಈಗ ಸಾರ್ವಜನಿಕವಾಗಿ ನನ್ನ ಮಾನ ಹರಾಜಾಯಿತಲ" ಎಂದರು.

ಅಷ್ಟರಲ್ಲಿ ಅವರ ಚೇಂಬರ್ ಒಳಕ್ಕೆ ಒಬ್ಬ ಹೆಣ್ಣುಮಗಳು ಪ್ರವೇಶಿಸಿದಳು. ಬಂದವಳ ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದವು.

"ಸಾರ್ ನೀವು ನನ್ನ ಪಾಲಿನ ದೇವರು. ನಿಮ್ಮ ಬಗ್ಗೆ ಹೀಗೆಲ್ಲ ಬರೆದಿದ್ದಾರಲ್ಲ. ಇದು ಸುಳ್ಳು, ಅವರ ಕಚೇರಿ ಮುಂದೆ ಧರಣಿ ಕೂರ್ತೇನೆ" ಎಂದಳು ಬಿಕ್ಕಳಿಸುತ್ತ. ನಂತರ ತಿಳಿಯಿತು, ಅಳುತ್ತ ಬಂದವಳು ಸ್ಟೌವ್ ಸಿಡಿದಾಗ ಮುಖ, ಮೈ ಸುಟ್ಟುಕೊಂಡು ಪರಂಗೂಸರ ಬಳಿ ಚಿಕಿತ್ಸೆ ಪಡೆದುಕೊಂಡು ಗುಣಮುಖ ಗೊಂಡವಳೆಂದು. ಅಷ್ಟೇ ಅಲ್ಲ ಅವಳ ಮುಖ ಕುರೂಪಗೊಂಡಿದೆಯೆಂದು ಅವಳ ಗಂಡ ಆಕೆಯಿಂದ ದೂರವಿರಲು ಯತ್ನಿಸಿದಾಗ ಇವಳು ಪರಂಗೂಸರ ಬಳಿಗೆ ಬಂದು ತನ್ನ ಅಳಲು ತೋಡಿಕೊಂಡಿದ್ದಳು. ಡಾ. ಪರಂಗೂಸರು ಅವನು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯ ಎಂ.ಡಿ.ಯ ಮೂಲಕ ವರ್ಕರ್ಸ್ ಯೂನಿಯನ್ ಲೀಡರ್‌ಗಳನ್ನು ಸಂಪರ್ಕಿಸಿ ಆಕೆಯ ಗಂಡನ ಮನಸ್ಸನ್ನು ರಿಪೇರಿ ಮಾಡಿಸಿದ್ದರು; ಗಂಡ–ಹೆಂಡತಿಯ ಮಧ್ಯೆ ಸಾಮರಸ್ಯವನ್ನು ತಂದಿದ್ದರಿಂದ. ಅವಳಿಗೆ ದೇವರಂತೆ ಕಂಡಿದ್ದರಲ್ಲಿ ಆಶ್ಚರ್ಯವಿರಲಿಲ್ಲ. ನಾನು ಆಕೆಯನ್ನು ವಿಟ್ನೆಸ್ ಮಾಡಿಕೊಂಡು ಆ ಸುಳ್ಳು ವರದಿ ಪ್ರಕಟಿಸಿದ ಪತ್ರಿಕೆಯ ಮೇಲೆ ಮಾನಹಾನಿ ಮೊಕದ್ದಮೆ ಹಾಕಿದೆ. ಡಾ. ಪರಂಗೂಸರ ಬಗ್ಗೆ ಸಾರ್ವಜನಿಕರಿಗೆ ಸದಭಿಪ್ರಾಯ ಗೌರವಗಳಿದ್ದವು. ನಾನು ಹಾಕಿದ ಕೇಸಿನ ಸಾರಾಂಶವನ್ನು ಇಂಗ್ಲಿಷ್, ಕನ್ನಡ ಪತ್ರಿಕೆಗಳೆಲ್ಲ ಪ್ರಕಟಿಸಿಬಿಟ್ಟವು. ಪತ್ರಿಕೆಗಳೆಲ್ಲ ತಮ್ಮನ್ನು ನಿರ್ದೋಷಿಯೆನ್ನುವಂತೆ ಬರೆದುದರಿಂದ ಪರಂಗೂಸ ಅತ್ಯಾನಂದಗೊಂಡರು. ನನ್ನನ್ನು ಟಿಫಾನಿಸ್ ಹೋಟೆಲ್‌ಗೆ ಕರೆದೊಯ್ದು ಪಾರ್ಟಿ ಕೊಟ್ಟರು; ನನ್ನ ಆಪ್ತ ಸ್ನೇಹಿತರೂ ಆಗಿಬಿಟ್ಟರು.

48

ವಿರೋಧ ಹೆಚ್ಚಿಸಿದ ನಂಬಿಕೆ

ಲಾಯರ್ ಆಗಬೇಕೆನ್ನುವ ಅದಮ್ಯ ಬಯಕೆಯೇನೋ ಈಡೇರಿತ್ತು. ಆಗಬೇಕೆಂದುಕೊಂಡದ್ದು ಆದಾಗ ಉಂಟಾಗುವ ಭ್ರಮನಿರಸನವೂ ವಿಚಿತ್ರವಾಗಿರುತ್ತದೆ; ಸಂತೋಷವೇ ಹೆಚ್ಚಾಗಿರುವುದರಿಂದ ಭ್ರಮನಿರಸನ ಅದರಲ್ಲಿ ಬೆರೆತುಕೊಂಡು ಹೋಗಿಬಿಟ್ಟಿರುತ್ತದೆ. ಕರಿ ಕೋಟು, ಕರಿ ಟೈ, ಕರಿಬೋರ್ಡು, ಕರಿಬೂಟು ಎಲ್ಲ ಆಗಿತ್ತು. ಆದರೆ ಅದಕ್ಕೆ ತಕ್ಕಂತೆ ಆದಾಯ ಮಾತ್ರವಿರಲಿಲ್ಲ! "ಸ್ಫುರದ್ರೂಪಿ ಯುವಕ; ಆದರೆ ನಿರುದ್ಯೋಗಿ" ಎನ್ನುವ ಸ್ಥಿತಿ ನನ್ನದಾಗಿದೆಯೆನಿಸಿತು. ನನ್ನ ಸ್ನೇಹಿತನಿಗೆ ನೂರು ರೂಪಾಯಿ ಕೊಡಲಾರದ ಆರ್ಥಿಕ ಪರಿಸ್ಥಿತಿ ನನ್ನದಾಗಿದೆಯಲ್ಲ ಎನಿಸಿತು. ಜ್ಯೂನಿಯರ್ ಆಗಿಯೇ ಮುಂದುವರಿದರೆ ನನ್ನ ವ್ಯಕ್ತಿತ್ವದಲ್ಲಿರುವ ಸ್ವತಂತ್ರ ಪ್ರವೃತ್ತಿಗೆ ಧಕ್ಕೆಯುಂಟಾಗಿ ಅನುಕರಣೀಯತೆಯ ಸೆಳೆತಕ್ಕೆ ಸಿಕ್ಕಿಕೊಳ್ಳಬಹುದೆನ್ನುವ ಭಯವುಂಟಾಯಿತು. ಗಳಿಕೆ ಇರದ ವೃತ್ತಿ ಅರ್ಥರಹಿತವೆನಿಸತೊಡಗಿತು. ನಾನು ಬಹಳಷ್ಟು ಕೇಸ್‌ಗಳನ್ನು ಮೈಮೇಲೆ ಹಾಕಿಕೊಂಡು ನಡೆಸುತ್ತಿದ್ದೆ. ಆದರೆ ಅದಕ್ಕೆ ಆರ್ಥಿಕ ಪ್ರತಿಫಲವೇನೂ ಇರಲಿಲ್ಲ. ಸೀನಿಯರ್ ಮತ್ತು ಜ್ಯೂನಿಯರ್‌ಗಳ ಸಂಬಂಧವೇ ವಿಚಿತ್ರ. ವೃತ್ತಿಯ ತಂತ್ರ,

ಒಳಗುಟ್ಟು, ಚಾಣಾಕ್ಷತೆಗಳನ್ನು ಜ್ಯೂನಿಯರ್‌ಗಳಿಗೆ ಕಲಿಸಿ ಅವರಿಗೆ ಉಪಕಾರ ಮಾಡುತ್ತಿದ್ದೇವೆ ಎನ್ನುವ ಭಾವ ಸೀನಿಯರ್‌ಗಳಿಗೆ; ಅದೇ ರೀತಿ, ಕತ್ತೆ ದುಡಿತವೆಲ್ಲ ನಮ್ಮದು, ಫಲವೆಲ್ಲ ಸೀನಿಯರ್‌ಗಳದು ಎನ್ನುವ ಭಾವ ಜ್ಯೂನಿಯರ್‌ಗಳದು. ಎಂಥ ಸೋಜಿಗವೆಂದರೆ, ಜ್ಯೂನಿಯರ್‌ಗಳಾಗಿದ್ದವರು ಸ್ವತಃ ಸೀನಿಯರ್‌ಗಳಾಗುತ್ತಲೇ ಮುಂಚೆ ಸೀನಿಯರ್‌ಗಳ ಯಾವ ಧೋರಣೆಗಳನ್ನು ಟೀಕಿಸುತ್ತಿದ್ದರೋ ಅವುಗಳ ಪಕ್ಕಾ ಪ್ರತಿಪಾದಕರಾಗಿಬಿಡುವುದು! ವಕೀಲಿ ರಂಗವೇ ಹೀಗೆ, ಇದರ ಒಳಸುಳಿಗಳೇ ಹೀಗೆ.

ಚಿಕ್ಕಂದಿನಲ್ಲಿ ಲಾಯರ್ ವೃತ್ತಿ ಎಂದರೆ ನನಗೆ ಮೈನವಿರೇಳುತ್ತಿತ್ತು. ಆದರೆ, ವೃತ್ತಿಗೆ ಇಳಿದ ಮೇಲೆ ಅದರ ಹುಳುಕು ಮುಖಗಳೂ ಕಾಣತೊಡಗಿದವು; ಬೆಟ್ಟದ ಸಮೀಪ ಹೋದಾಗ ಕಾಣುವಂತೆ. ಆದರ್ಶಗಳಿಗೆ ಸೂಕ್ಷ್ಮ ಕಣ್ಣುಗಳಿರುವುದಿಲ್ಲ ವಾಸ್ತವಿಕತೆಗಿರುವಂತೆ! ವೃತ್ತಿಯಲ್ಲಿ ಮೊದಲು ನೆಲೆ ನಿಲ್ಲುವಂತಾಗಬೇಕು. ಆನಂತರ ಏನನ್ನಾದರೂ ಸಾಧಿಸಲು ಸಾಧ್ಯ. ನೆಲೆ ನಿಲ್ಲಲಿಕ್ಕೇ ಸಾಧ್ಯವಿಲ್ಲದ ವಾತಾವರಣ. ಹೀಗಿರುವಾಗ ಏನು ಮಾಡುವುದು? ಅರ್ಧಕ್ಕೇ ಬಿಟ್ಹೋಡುವುದು ಅಥವಾ 'ಶಿವ ಇಟ್ಟಂಗೆ ಇರು' ಎಂದುಕೊಳ್ಳುವುದು. ಇವೆರಡೂ ಆಗದ ಮಹತ್ವಾಕಾಂಕ್ಷಿಗಳಿಗೆ ಈ ವೃತ್ತಿ ನಿಜವಾಗಿಯೂ ಒಂದು ಸವಾಲು. ನಮ್ಮ ಆದರ್ಶಗಳೊಂದಿಗೆ ರಾಜಿ ಮಾಡಿಕೊಳ್ಳಲು ಪ್ರೇರೇಪಿಸುತ್ತದೆ ವೃತ್ತಿಯ ವಾಸ್ತವಿಕತೆ; ಅದು ಹೇಳಿಕೊಡುವ ಮೊದಲ ಪಾಠವೂ ಅದೇ ಎಂದೆನಿಸತೊಡಗಿತು ನನ್ನ ಅಂದಿನ ಬಿಸಿರಕ್ತಕ್ಕೆ. ಖ್ಯಾತ ವಕೀಲನಾಗುವುದೆಂದರೆ ಹೇಗೆ ಎನ್ನುವ ಪ್ರಶ್ನೆ ನನ್ನ ಮುಂದೆ ಬೃಹದಾಕಾರವಾಗಿ ಬೆಳೆಯುತ್ತಲೇ ಹೋಯಿತು; ಉತ್ತರ ಸಹ ಅದೇ ರೀತಿ ಜಟಿಲವಾಗುತ್ತಲೇ ಹೋಯಿತು.....! ಆದರ್ಶ ಮತ್ತು ವಾಸ್ತವಿಕತೆಗಳ ಘರ್ಷಣೆಗೆ ಒಳಗಾಗುವುದೇ ಬೇಡ ಎನ್ನುವ ಸ್ಥಿತಿ ನನ್ನ ಕಣ್ಣ ಮುಂದೆ ಬಂದಿತು. ಆಗ ನನಗೆ ಹೊಳೆದ ದಾರಿ ನ್ಯಾಯಾಧೀಶನಾಗಿಬಿಡುವುದು..... ಹಾಗಾಗುವುದು ನನ್ನ ಉದ್ದೇಶವಾಗಿರಲಿಲ್ಲ. ಸೋಲು ಬಂದು ನನ್ನನ್ನು ತಿವಿದಷ್ಟೂ ನಾನು ಸೆಟೆದುಕೊಳ್ಳತೊಡಗಿದೆ; ಮನಸ್ಸು ಛಲ ಬಿಡದ ತ್ರಿವಿಕ್ರಮನಾಗತೊಡಗಿತು....

ವಿದ್ಯಾರ್ಥಿಯಾಗಿದ್ದಾಗ ಗಾಂಧೀಜಿಯ ಮಾತುಗಳು, ವಾದಗಳು ಅಷ್ಟಾಗಿ ಹಿಡಿಸುತ್ತಿರಲಿಲ್ಲ; ಅಪ್ರಾಯೋಗಿಕ ಎನಿಸುತ್ತಿದ್ದವು. ಗುರಿ ಮತ್ತು ದಾರಿ ಇವೆರಡೂ ಸಾತ್ವಿಕ ಇರಬೇಕೆಂದು ಪದೇಪದೇ ಒತ್ತು ಹೇಳಿದ ಗಾಂಧೀಜಿಯ ಮಾತಿನ ಆಳದ ಅರಿವಾಗತೊಡಗಿತು. ಗುರಿ ಮಾತ್ರ ಸಾತ್ವಿಕ ಇದ್ದರೆ ಸಾಲದು ದಾರಿಯೂ ಸಾತ್ವಿಕ ಇರಬೇಕು ಎಂದು ಹೇಳಿದ ಗಾಂಧೀಜಿ ಆ 'ಸಾತ್ವಿಕ ದಾರಿ'ಗಾಗಿ ತನ್ನ

ರಕ್ತತರ್ಪಣ ಮಾಡಿದ್ದು ಕಣ್ಣೆದುರು ಬಂದು ಏಕೆ ಆತ ಮಹಾತ್ಮನಾದ ಎನ್ನುವುದು ಹೊಳೆಯಿತು. ಗುರಿ ಮತ್ತು ದಾರಿ ಸಮನ್ವಯಗೊಳಿಸುವುದು ಕಡುಕಷ್ಟ. ಹಾಗೆಂದು ಎಲ್ಲ ಗಾಳಿಗೆ ತೂರಿ ಮೂರೂ ತೊರೆದು ನಿಲ್ಲಬೇಕೆ? ಸಾಧ್ಯವಿಲ್ಲ! ನನ್ನ ಕೈಲಾದ ಆದರ್ಶಗಳನ್ನಾದರೂ ಕಾಪಾಡಿಕೊಳ್ಳಬೇಕು ಎನ್ನುವ ನಿಶ್ಚಯ ನನ್ನಲ್ಲಿ ಬಲಿಯಿತು. ದೇವದಾಸ್ ಅವರು ನನ್ನನ್ನು ಮೈಸೂರಿಗೆ ಹೋಗಿ ಒಂದು ಕೇಸ್ ಅಟೆಂಡ್ ಮಾಡಲು ತಿಳಿಸಿದರು. ಅದು ಫೇಕ್ ನೋಟ್ (ಖೋಟಾ ನೋಟು ಪ್ರಕರಣ) ಕೇಸ್ ಆಗಿತ್ತು. ಕೋರ್ಟ್‌ನಲ್ಲಿ ಬೇಲ್ ತೆಗೆದುಕೊಂಡು ಶಂಕರಶೆಟ್ಟಿ ಮತ್ತು ಮಾಧವಶೆಟ್ಟಿ ಎನ್ನುವ ಬಂಧಿತರನ್ನು ಬಿಡಿಸಿಕೊಂಡು ಬರುವಂತೆ ಸೂಚಿಸಿದ್ದರು ಸೀನಿಯರ್.

ಮೈಸೂರು ಜೈಲಿನಿಂದ ಅವರನ್ನು ಬಿಡಿಸಿಕೊಂಡ ಮೇಲೆ ಆ ಆರೋಪಿಗಳು ನನಗೆ ಐದುನೂರು ರೂಪಾಯಿಗಳನ್ನು ಕೊಟ್ಟರು. ಆ ನೋಟುಗಳ ಬಗೆಗೆ ಅನುಮಾನ ಉಂಟಾಯಿತು. ಅಸಲಿಯೋ ನಕಲಿಯೋ ಎಂದು! ಅವರ ಗಮನಕ್ಕೆ ಬಾರದಂತೆ ನೂರರ ನೋಟೊಂದನ್ನು ಸೂರ್ಯನಿಗೆ ಅಡ್ಡಹಿಡಿದು ಅದರಲ್ಲಿ ಲೋಹದ ಎಳೆ ಇದೆಯೊ ಇಲ್ಲವೊ ಎಂದು ಪರೀಕ್ಷಿಸಿದೆ.

ನಾನು ಹಾಗೆ ಮಾಡುವುದನ್ನು ಗಮನಿಸಿದ ಶಂಕರಶೆಟ್ಟಿ "ಸಾರ್, ನೀವು ನಮ್ಮ ಲಾಯರ್ರು. ನಿಮಗೂ ಖೋಟಾ ನೋಟು ಕೊಡ್ತೇವಾ?" ಎಂದು ನಗತೊಡಗಿದ. ಅವನ ಬಗ್ಗೆ ನನ್ನಲ್ಲಿ ಹೇಸಿಗೆ ಉಂಟಾಯಿತು. ನಾಚಿಕೆಗಾದರೂ ತನ್ನ ಅಪರಾಧವನ್ನು ಮುಚ್ಚಿಟ್ಟುಕೊಳ್ಳದ ಭಂಡತನ ಅವನ ಮಾತು, ನಗೆಗಳಲ್ಲಿ ಕಾರುತ್ತಿತ್ತು.

ಕೊಲೆಗಡುಕರಿಗಿಂತ ಇವನು ದುಷ್ಟ ಎನಿಸಿತು ; ಕೊಲೆ ವೈಯಕ್ತಿಕ ದ್ವೇಷದಿಂದ ನಡೆದರೆ ಈ ಖೋಟಾ ನೋಟಿನ ಕೃತ್ಯ ಇಡೀ ದೇಶಕ್ಕೇ ದ್ರೋಹವೆನಿಸುವಂಥದು ಎನಿಸಿತು. ದೇವದಾಸ್ ಮತ್ತೊಮ್ಮೆ ಆ ಖೋಟಾ ನೋಟಿನ ಶೆಟ್ಟಿಗಳ ಕೇಸನ್ನು ಅಟೆಂಡ್ ಮಾಡಿಬರುವಂತೆ ಹೇಳಿದರು. ಆಗ ನಾನು ನಯವಾಗಿಯೇ ಅವರ ಆದೇಶವನ್ನು ತಿರಸ್ಕರಿಸಿ "ಸಾರ್, ಎಷ್ಟು ಕೊಲೆ ಕೇಸ್‌ಗಳನ್ನಾದರೂ ಅಟೆಂಡ್ ಮಾಡ್ತೇನೆ. ಆದ್ರೆ, ಖೋಟಾ ನೋಟಿನ ಕೇಸು, ರೇಪ್ ಕೇಸುಗಳನ್ನ ಮಾತ್ರ ಅಟೆಂಡ್ ಮಾಡೋಕೆ ನನ್ನ ಮನಸ್ಸು ಒಪ್ಪುತ್ತಿಲ್ಲ.' ಎಂದೆ.

ನನ್ನ ಮಾತಿಗೆ ಆಶ್ಚರ್ಯದಿಂದ ಬಾಯಿ ತೆಗೆದ ದೇವದಾಸ್ ತಮ್ಮ ಮೂಗಿನ ಮೇಲೆ ಕೂತಿದ್ದ ಚಶ್ಮಾವನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು, "ಓ ನನಗೇ

ಬುದ್ಧಿವಾದ ಶುರು ಮಾಡಿಬಿಟ್ಟೆಯಾ. ಹಾಗಿದ್ದರೆ ಇಲ್ಲಿ ನಿನಗೆ ಜಾಗವಿಲ್ಲ. ನಡೆ ಬೇರೆ ಆಫೀಸ್ ನೋಡಿಕೊ" ಎಂದರು. ಸೌಜನ್ಯಕ್ಕಾಗಿ ಹೋಗದೆ ಹಾಗೇ ನಿಂತುಕೊಂಡೆ. ನನ್ನ ಅನಿರೀಕ್ಷಿತ ಮಾತುಗಳಿಂದ ದೇವದಾಸ್‌ರಿಗೆ ಕೋಪ ಭುಗಿಲೆದ್ದಿತ್ತು. "ಆಯಿತು, ಎರಡನೇ ವಿಚಾರವೇ ಬೇಡ, ನಡೆ. ನನ್ನ ಮುಂದೆ ನಿಲ್ಲಬೇಡ." ಎಂದರು. ಹೊರನಡೆದೆ.

ನನಗೂ ಬಹಳ ಬೇಜಾರಾಯಿತು. ನೇರ ಅವೆನ್ಯೂ ರಸ್ತೆಯ ಇಂಡಿಯಾ ಕಾಫಿ ಹೌಸ್‌ಗೆ ಹೋದೆ. ಲಾ ಕಾಲೇಜ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಎಂ. ಬಾಲಕೃಷ್ಣನ್ ಚಪ್ಪಾಳೆ ತಟ್ಟಿ ತಾನು ಕೂತಿದ್ದ ಟೇಬಲ್‌ಗೆ ಬರಲು ಕರೆದ. ಸ್ನೇಹಿತನ ಮುಖ ನೋಡಿ ಎದೆ ಭಾರ ಕಮ್ಮಿಯೆನಿಸಿತು. ಸೀನಿಯರ್ ಮತ್ತು ನನ್ನ ಮಧ್ಯೆ ನಡೆದ ಜಗಳ ಹೇಳಿದೆ. ಅದಕ್ಕೆ ಅವನು, "ಅದೇಕೆ ಯೋಚನೆ ಮಾಡುತ್ತಿ. ನಾವಿಬ್ಬರೂ ಸೇರಿ ಆಫೀಸ್ ಆರಂಭಿಸೋಣ. ಸೀನಿಯರ್‌ಗಳ ಗೊಡವೆಯೇ ಬೇಡ" ಎಂದ. ಅವನ ಮಾತು ಕೇಳಿ ಉತ್ಸಾಹ ಮೂಡಿತು.

ಕಬ್ಬನ್‌ಪೇಟೆ ಮುಖ್ಯರಸ್ತೆಯಲ್ಲಿ ಸೇಂಟ್ ಮಾರ್ಥಾಸ್ ಆಸ್ಪತ್ರೆ ಎದುರಿಗೆ ಆಫೀಸ್ ಆರಂಭಿಸಿದೆವು.

ಗಾಂಧೀನಗರದ ಮೋತಿಮಹಲ್ ಲಾಡ್ಜ್‌ನ ಮಾಲೀಕ ಶ್ರೀರಾಮರೆಡ್ಡಿ ರಾಜ್ಯಸಭಾ ಸದಸ್ಯರಾಗಿದ್ದರು. ಇವರಿಗೆ ಸೇರಿದ ಐಲ್ಯಾಂಡ್ ಹೋಟೆಲ್ ಅನ್ನು ಇವರ ಸಹೋದರ ಗೋವಿಂದರೆಡ್ಡಿ ಯಾದವ್ ನೋಡಿಕೊಳ್ಳುತ್ತಿದ್ದ. ಸಂಪತ್ತಿನ ಜೊತೆಗೆ ರಾಜಕೀಯ ಅಧಿಕಾರ ಮತ್ತು ವರ್ಚಸ್ಸುಗಳು ಸೇರಿದ್ದರಿಂದ ಗೋವಿಂದರೆಡ್ಡಿಗೆ ಮದ ಬಂದಿತ್ತೆಂದು ಕಾಣುತ್ತದೆ. ಹೋಟೆಲ್‌ನ ಕೆಲಸಗಾರರು ತಮ್ಮ ಯಾವುದೋ ಆರ್ಥಿಕ ಬೇಡಿಕೆಯನ್ನು ಮುಂದಿಟ್ಟಾಗ ಅವರನ್ನು ಗದರಿದರು. ಆಗ ಕೆಲಸಗಾರರು ಸ್ಟ್ರೈಕ್ ಆರಂಭಿಸಿದರು. ಇದೆಲ್ಲದರಿಂದ ಸಿಟ್ಟಿಗೆದ್ದ ಗೋವಿಂದರೆಡ್ಡಿ ತಾನು ಸಾಕಿದ್ದ ಗ್ರೇಟ್ ಡೇನ್ ನಾಯಿಗಳನ್ನು ಕೆಲಸಗಾರರ ಮೇಲೆ ಛೂ ಬಿಟ್ಟ. ನಾಯಿ ಒಬ್ಬ ಕ್ಲೀನರ್‌ನ ಕುಂಡೆಯನ್ನು ಕಚ್ಚಿ ಮಾಂಸವನ್ನು ಕಿತ್ತು ತಿಂದಿತು.

ಆ ಕೆಲಸಗಾರರು ಬಂದು ನನಗೆ ಕೇಸ್ ಕೊಟ್ಟರು. ಮಾಲೀಕನ ಮೇಲೆ ಕೇಸ್ ಹೂಡಿದೆ. ಮಾಲೀಕ ದೇವದಾಸ್ ಅವರಿಗೆ ಕೇಸ್ ಕೊಟ್ಟ. ಕೆಲಸಗಾರರಿಗೆ ಪರಿಹಾರ ಕೊಡಿಸ್ತೇನೆ ರಾಜಿ ಮಾಡಿಕೊ ಎಂದು ದೇವದಾಸ್ ಹೇಳಿಕಳಿಸಿದರು. ಕೆಲಸಗಾರರಿಗೆ ರೂ. 25,000 ಪರಿಹಾರ ಸಿಕ್ಕಿತು.

ಕೇಸ್ ರಾಜಿ ಮಾಡಿಕೊಳ್ಳುವ ಸಮಯದಲ್ಲಿ ದೇವದಾಸ್ ನನ್ನ ಬೆನ್ನು ತಟ್ಟುತ್ತಾ, "ನಿನಗೂ ಬಹಳ ಸ್ವಾಭಿಮಾನ ಕಣೊ. ನನ್ನ ಆ ಒಂದೇ ಮಾತಿಗೆ ಆಫೀಸ್ ಬಿಟ್ಟು ಹೋಗಿಬಿಟ್ಟೆಯಲ್ಲ!" ಎಂದರು.

"ನೀವು ಹಾಗೆ ಬೈದದ್ದೇ ಒಳ್ಳೆಯದಾಯಿತು ಸಾರ್. ಇಲ್ಲದಿದ್ದರೆ ಸ್ವಂತ ಆಫೀಸ್ ಅನ್ನು ಇಷ್ಟು ಬೇಗ ಮಾಡಲಾಗುತ್ತಿತ್ತೆ?" ಎಂದೆ ತಲೆ ಕೆರೆದುಕೊಳ್ಳುತ್ತ.

ದೇವದಾಸ್ ಅವರ ಕೊನೆಯ ಮಗ ಶೈಲೇಂದ್ರ ನನಗೆ ಆಪ್ತ ಸ್ನೇಹಿತನಾಗಿದ್ದ. ಒಂದು ದಿನ ನನ್ನ ಬಳಿ ಬಂದು, "ನಿನ್ನ ಆಬ್ಸೆನ್ಸ್ ಅಪ್ಪನ ತಲೆ ಕೆಡಿಸಿದೆ. ಮನೆಯಲ್ಲೂ ಆಫೀಸ್‌ನಲ್ಲೂ ವಿಚಿತ್ರವಾಗಿ ರೇಗಾಡುತ್ತಾರೆ. ಯಾರೂ ಸರಿಯಾದ ಸಹಾಯಕರಿಲ್ಲ ಅಂತ ಚಡಪಡಿಸುತ್ತಾರೆ. ಪುನಃ ವಾಪಸ್ ಬಾ ಆಫೀಸ್‌ಗೆ. ನೇರವಾಗಿ ತಾವೇ ನಿನ್ನನ್ನು ಕರೆಯಲು ಅಪ್ಪನಿಗೆ ಸ್ವಾಭಿಮಾನ. ನನ್ನ ಮುಂದೆ ಹೇಳಿದ್ದಾರೆ. ಅವರಿಗೆ ನೀನು ಬರೀ ಜ್ಯೂನಿಯರ್ ಅಷ್ಟೇ ಆಗಿರಲಿಲ್ಲ, ಅವರ ವೈಯಕ್ತಿಕ ವಿಷಯಗಳಿಗೂ ನಿನ್ನನ್ನು ಎಳೆದುಕೊಂಡು ಹೋಗುತ್ತಿದ್ದರು" ಎಂದ.

ಅಷ್ಟರಲ್ಲಿ ನನ್ನ ಸ್ನೇಹಿತ ಬಾಲಕೃಷ್ಣನ್‌ಗೆ ಕೆ.ಎಸ್.ಎಫ್.ಸಿ.ಯಲ್ಲಿ ಲಾ ಆಫೀಸರ್ ಎಂದು ನೌಕರಿ ಸಿಕ್ಕಿತು. ನಾನೂ ಒಬ್ಬನೇ ಆದೆ.

ಒಂದು ಸಂಜೆ ನಾನು ಶೈಲೇಂದ್ರನ ಜೊತೆ ದೇವದಾಸ್ ಆಫೀಸ್‌ಗೆ ಹೋದೆ. ನಾನು ಅವರ ಆಫೀಸನ್ನು ಬಿಟ್ಟೇ ಹೋಗಿಲ್ಲವೇನೋ ಎನ್ನುವಂತೆ, "ಹೂಂ, ನಾಳೆ ಈ ಕೇಸ್ ಅಟೆಂಡ್ ಮಾಡು" ಎಂದು ಫೈಲ್ ಕೊಟ್ಟರು.

49

ಜೀರುಗುಣಿಕೆಯಾದ ಲೀಗಲ್ ನೋಟೀಸ್

ನಾನು ಪುನಃ ದೇವದಾಸ್ ಅವರ ಆಫೀಸ್‌ಗೆ ಮರಳಿದ್ದಕ್ಕೆ ಮಿಶ್ರ ಪ್ರತಿಕ್ರಿಯೆಗಳು ಬಂದವು. ಅಲ್ಪಾವಧಿಯಲ್ಲಿಯೇ ಸೀನಿಯರ್ ದೇವದಾಸ್‌ರ ಆಪ್ತತೆಯನ್ನು ಗಳಿಸಿಕೊಂಡಿದ್ದ ನನ್ನನ್ನು ಕಂಡರೆ ನಮ್ಮ ಆಫೀಸ್‌ನಲ್ಲೇ ಕೆಲವರಿಗೆ ಆಗುತ್ತಿರಲಿಲ್ಲ. ಅಂಥವರು, "ದೊಡ್ಡದಾಗಿ ಇಂಡಿಪೆಂಡೆಂಟ್ ಲಾಯರ್ ಆಗೋಕೆ ಹೋದ, ಹೇಗೆ ಬಂದ ನೋಡು ವಾಪಸು" ಎಂದು ಬೇರೆಯವರ ಮುಂದೆ ಮಾತಾಡಿಕೊಂಡದ್ದು ನನಗೆ ತಿಳಿಯಿತು. ದೇವದಾಸ್ ನನ್ನನ್ನು ವಾಪಸ್ಸು ಕರೆಸಿಕೊಳ್ಳಲು ವಹಿಸಿದ ಪಾತ್ರ ಹೊರಗೆ ಬರದಂತೆ ತಮ್ಮ ಮಾತುಗಳಲ್ಲಿ ನೋಡಿಕೊಳ್ಳುತ್ತಿದ್ದರು. ಆದರೆ ದೇವದಾಸ್ ಅವರ ಮಿತ್ರರು, ಶ್ರೀಮಂತ ಕ್ಲೈಂಟ್‌ಗಳು ನನ್ನ ಆಗಮನಕ್ಕೆ ಖುಷಿ ವ್ಯಕ್ತಪಡಿಸಿದರು. ಕೆಲವರಂತೂ 'ಮಿ. ಇಂಡಿಸ್ಪೆನ್ಸಿಬಲ್' ಎಂದು ನನ್ನ ಕೈ ಕುಲುಕಿದರು. ಅವರಿಗೆಲ್ಲ ದೇವದಾಸ್ ಮತ್ತು ನನ್ನ ಸಂಬಂಧ ಎಂಥದ್ದೆಂದು ತಿಳಿದಿತ್ತು. ದೇವದಾಸ್ ಅವರು ತಮ್ಮ ಖಾಸಗಿ ಪಾರ್ಟಿಗಳಿಗೆಲ್ಲ ನನ್ನನ್ನು ಕರೆದೊಯ್ಯುತ್ತಿದ್ದುದು ಬಹಳಷ್ಟು ಕ್ಲೈಂಟ್‌ಗಳಿಗೆ ಗೊತ್ತಿರುವ ವಿಷಯವಾಗಿತ್ತು. ನನ್ನದು ವೃತ್ತಿ ಸೀಮಿತ ವ್ಯಕ್ತಿತ್ವ ಅಲ್ಲ ಎಂದು ದೇವದಾಸ್ ಗುರುತಿಸಿದ್ದಿರಬಹುದೆಂದು ಬಹಳಷ್ಟು ಬಾರಿ ಅಂದುಕೊಂಡಿದ್ದೇನೆ. ಏಕೆಂದರೆ,

ಅವರ ವೃತ್ತಿಗೆ ಸಹಾಯ ಮಾಡುವುದಕ್ಕೆ ಸಾಲುಗಟ್ಟಿ ನಿಲ್ಲುವವರಿದ್ದರು. ದೇವದಾಸ್ ಅವರು ಲಾಯರ್ ವೃತ್ತಿಯ ಒಳಮರ್ಮವನ್ನು ಅರಿತುಕೊಂಡವರಾಗಿದ್ದರು. ಹುಟ್ಟಾ ಶ್ರೀಮಂತರಾಗಿದ್ದ ಅವರು ವೃತ್ತಿಯಿಂದ ದುಡ್ಡು ಗಳಿಸುವುದೊಂದನ್ನೇ ಮುಖ್ಯ ಗುರಿಯಾಗಿರಿಸಿಕೊಂಡಿರಲಿಲ್ಲ.

ವ್ಯಾಪಾರ ಮತ್ತು ವೃತ್ತಿಗಳ ಮಧ್ಯೆ ಏನು ವ್ಯತ್ಯಾಸ ಎಂದು ನನ್ನ ಮುಂದೆ ಆಗಾಗ ಮಾತಾಡುತ್ತಿದ್ದರು ದೇವದಾಸ್: "ವ್ಯಾಪಾರವು ದುಡ್ಡಿಗಾಗಿ ಏನೆಲ್ಲ ಬಲಿಕೊಡಹಚ್ಚುತ್ತದೆ; ಆದರೆ ವೃತ್ತಿ ಹಣಗಳಿಕೆಯನ್ನು ಮೀರಿದ ಕೀರ್ತಿ, ಜಿದ್ದು, ಸ್ವಾಭಿಮಾನಗಳಿಗಾಗಿ ತಹತಹಿಸುತ್ತಿರುತ್ತದೆ; ಆದರೆ, ಗಳಿಕೆಯೇ ಇರದ ವೃತ್ತಿ ಅರ್ಥಶೂನ್ಯ"

ಫೀಜು ಇಲ್ಲದ ಕೇಸುಗಳನ್ನು ಅವರು ಜಿದ್ದಿನಿಂದ ಗೆದ್ದಿರುವುದನ್ನು ನೋಡಿರುವೆ. ಎಷ್ಟೋ ಬಾರಿ ಕೇಸು ನಡೆಸಲು ತಾವೇ ಖರ್ಚು ಮಾಡಿಕೊಂಡದ್ದೂ ಉಂಟು. ಕೋರ್ಟಿನಲ್ಲಿ ಕೇಸು ಘರ್ಷಣೆಯ ತಾರಕಕ್ಕೆ ಮುಟ್ಟಿರುವಾಗ ತನ್ನ ಬಳಿ ಹಣವಿಲ್ಲವೆಂದು ಕ್ಲೈಂಟ್ ಕೈ ಚೆಲ್ಲಿ ಕೂತಾಗ ಅವನ ಖರ್ಚಿಗೂ ದೇವದಾಸ್ ದುಡ್ಡು ಕೊಟ್ಟಿದ್ದನ್ನು ನೋಡಿ ಆಶ್ಚರ್ಯಗೊಂಡದ್ದೂ ಇದೆ! ಅದೇ ರೀತಿ ಶ್ರೀಮಂತ ಕ್ಲೈಂಟ್‌ಗಳ ಬಳಿ ಒಂದಕ್ಕೆ ಹತ್ತು ಹಣ ಸುಲಿದದ್ದನ್ನೂ ನೋಡಿರುವೆ. ದುಡ್ಡಿಗಾಗಿ ಬಾಯಿಬಿಡುವ ಮನುಷ್ಯ ಎಂದು ಕೆಲವರು ಅಂದುಕೊಳ್ಳುತ್ತಿರುವಾಗಲೇ ದುಡ್ಡಿನ ಹಪಾಹಪಿಯ ಲಾಯರ್ ಈತ ಅಲ್ಲ ಎಂದು ಮತ್ತೆ ಕೆಲವರು ಮಾತಾಡಿಕೊಳ್ಳುವುದನ್ನು ಕೇಳಿಸಿಕೊಂಡದ್ದುಂಟು. ಅಂಥ ಸಂಕೀರ್ಣ ವ್ಯಕ್ತಿತ್ವ ದೇವದಾಸ್‌ರದ್ದು.

ಅಂದು ರಾತ್ರಿ ಎಂಟು ಗಂಟೆಯ ಸಮಯ. ಐಜಿಪಿ ಎಸ್.ಎನ್. ಹೊಸಾಳಿಯವರ ಅಣ್ಣ ದೇಬು ಹೊಸಾಳಿ ಆಫೀಸ್‌ಗೆ ಬಂದರು. ತಮ್ಮೊಂದಿಗೆ ಒಬ್ಬನನ್ನು ಕರೆತಂದಿದ್ದರು. ಆಗಾಗ ನಾನು ಸೀನಿಯರ್ ಜೊತೆಗೆ ಹೊಸಾಳಿಯವರ ಮನೆಯ ರಾತ್ರಿ ಪಾರ್ಟಿಗಳಿಗೆ ಹೋಗುತ್ತಿದ್ದುದರಿಂದ ದೇಬು ನನಗೆ ಹೆಚ್ಚು ಪರಿಚಿತರೇ ಆಗಿದ್ದರು. ದೇವದಾಸ್ ಅವರು, "ಏನು ಅರ್ಜೆಂಟಾ?" ಎಂದು ಪ್ರಶ್ನಿಸಿದ್ದಕ್ಕೆ ದೇಬು, "ಇಲ್ಲ ನಿಮ್ಮ ಕೆಲಸ ಮುಗಿಸಿ ಖಾಸಗಿಯಾಗಿ ಮಾತಾಡುವುದಿದೆ" ಎಂದರು.

ಆಫೀಸ್‌ನಲ್ಲಿದ್ದವರೆಲ್ಲ ಹೊರಟರು. ನಾನೂ ಹೊರಡಲು ಅನುವಾದೆ. ಸೀನಿಯರ್ ನನ್ನತ್ತ ಕೈ ಮಾಡಿ, ಇರು ಎನ್ನುವಂತೆ ಸೂಚಿಸಿದರು.

ದೇಬು 'MYSINDIA' ಎನ್ನುವ ವಾರಪತ್ರಿಕೆ ನಡೆಸುತ್ತಿದ್ದರು. ಅವರ ಕಚೇರಿ ಎಂ.ಜಿ. ರಸ್ತೆಯಲ್ಲಿತ್ತು. ಅವರೊಂದಿಗೆ ಬಂದ ವ್ಯಕ್ತಿ ಆಂಟೋನಿ ಎಂದೂ ಅವರ ಪತ್ರಿಕಾಲಯದಲ್ಲಿ ಅವನು ಸಹಾಯಕನಾಗಿ ಕೆಲಸ ಮಾಡುತ್ತಿರುವನೆಂದೂ ತಿಳಿಯಿತು.

ದೇವದಾಸ್ ಬಳಿಗೆ ತಂದಿದ್ದ ಕೇಸು ಆಂಟೋನಿಗೆ ಸಂಬಂಧಿಸಿದ್ದಾಗಿತ್ತು. ಅವನ ಮಗಳು ರಾಣಿಯ ಗಂಡ ಸುಂಕಪ್ಪನ ಕಿರುಕುಳಕ್ಕೆ ಸಂಬಂಧಿಸಿದ್ದು. ಪಿ.ಡಬ್ಲ್ಯೂಡಿ. ಇಲಾಖೆಯ ಆಫೀಸ್ ಒಂದರಲ್ಲಿ ಅಕೌಂಟೆಂಟ್ ಆಗಿದ್ದ ಸುಂಕಪ್ಪ ಕಾಂಟ್ರಾಕ್ಟರ್‌ಗಳನ್ನು ತನ್ನ ಮನೆಗೆ ಕರೆತಂದು ಗುಂಡಿನ ಪಾರ್ಟಿ ಕೊಡುತ್ತಿದ್ದ. ಅಷ್ಟೇ ಅಲ್ಲ ಮತ್ತೇರಿದ ಕಾಂಟ್ರಾಕ್ಟರ್‌ಗಳನ್ನು ರಾತ್ರಿ ಮನೆಯಲ್ಲಿ ಬಿಟ್ಟು ತಾನು ಹೊರಗೆ ಹೋಗಿಬಿಡುತ್ತಿದ್ದ. ಬೆಡ್‌ರೂಮಲ್ಲಿ ಒಳಚಿಲಕ ಹಾಕಿಕೊಂಡು ಎದೆ ಒತ್ತಿ ಹಿಡಿದುಕೊಂಡು ಕೂತ ರಾಣಿಗೆ ನಶೆಯೇರಿದ ಕಾಂಟ್ರಾಕ್ಟರ್‌ಗಳು ಬಾಗಿಲು ತೆಗೆಯುವಂತೆ, ತಿನ್ನಲು ಅದು ಇದು ಕೊಡು ಎನ್ನುವಂತೆ ಕೂಗುತ್ತಿದ್ದರು. ಒಂದು ದಿನವಂತೂ ಒಬ್ಬ ಕಾಂಟ್ರಾಕ್ಟರ್ ಬಾಗಿಲ ಬೋಲ್ಟ್ ಕಿತ್ತು ಬಾಗಿಲು ದಬ್ಬಿ ಬೆಡ್‌ರೂಮ್ ಒಳಕ್ಕೆ ಗೂಳಿಯಂತೆ ನುಗ್ಗಿಬಿಟ್ಟ. ಮಧ್ಯರಾತ್ರಿಯ ಆ ಸಮಯದಲ್ಲಿ ಏನು ಮಾಡುವುದೆಂದು ದಿಕ್ಕು ತೋಚದೆ ಕಿಟಕಿಯಿಂದ ಪಕ್ಕದ ಮನೆಯವರನ್ನು ಕೂಗಿ ಕರೆದಳು. ಪಕ್ಕದ ಮನೆಯವರು ಬರುವುದರೊಳಗೆ ಓಟ ಕಿತ್ತಿದ್ದ ಆ ಕಾಂಟ್ರಾಕ್ಟರ್. ಅಂದು ರಾತ್ರಿಯಿಡೀ ಪಕ್ಕದ ಮನೆಯಲ್ಲಿ ಮಲಗಿಕೊಂಡ ರಾಣಿ ಬೆಳಗ್ಗೆಯೇ ಅಪ್ಪನ ಮನೆಗೆ ಬಂದು ತನ್ನ ಗೋಳನ್ನು ತೋಡಿಕೊಂಡಿದ್ದಳು ರೋದಿಸುತ್ತ. ಆಂಟೋನಿ ತೀರಾ ಬಡವ. ಏನು ಮಾಡುವುದೆಂದು ತಿಳಿಯದೆ ಪತ್ರಿಕೆಯ ಕಚೇರಿಯಲ್ಲಿ ಮಂಕಾಗಿ ಕೂತ. ಹೀಗೇಕೆಂದು ದೇಬು ಪ್ರಶ್ನಿಸಿದಾಗ ತನ್ನ ಮಗಳ ಕಣ್ಣೀರ ಕಥೆ ಹೇಳಿ ತಾನೂ ಅಳತೊಡಗಿದಾಗ ದೇವದಾಸ್ ಬಳಿಗೆ ಅವನನ್ನು ಕರೆತಂದಿದ್ದರು.

"ರಾಣಿ ನನ್ನ ಮಗಳಿಗೆ ಸಮಾನ. ಆ ದುಷ್ಟನಿಗೆ ತಕ್ಕ ಶಾಸ್ತಿ ಮಾಡಿಸದೆ ಬಿಡೋಲ್ಲ. ನೀವು ನಿಶ್ಚಿಂತರಾಗಿರಿ" ಎಂದು ದೇಬು ಹೊಸಾಳಿಯವರಿಗೆ ಹೇಳಿ ನನ್ನತ್ತ ತಿರುಗಿ, "ನೀನು ಈ ಕೇಸಿನ ಜವಾಬ್ದಾರಿ ತೊಗೊ. ಆ ಸುಂಕಪ್ಪ ಏನು, ಎತ್ತ, ತಳ, ಬುಡ ಎಲ್ಲ ಶೋಧಿಸಿ ನನಗೆ ಹೇಳು" ಎಂದು ಹೇಳಿದರು.

ನಾನು ನನ್ನ ಹಾಸ್ಟೆಲ್‌ಮೇಟ್ ಆಗಿದ್ದ ಜ್ಞಾನೇಂದ್ರ ಎನ್ನುವ ಕಾಂಟ್ರಾಕ್ಟರ್‌ನನ್ನು ಮೊದಲು ಸಂಪರ್ಕಿಸಿದೆ. ಅವನ ಮೂಲಕ ಸುಂಕಪ್ಪನ ವ್ಯವಹಾರ ಇತಿಹಾಸಗಳನ್ನೆಲ್ಲ ಜಾಲಾಡಿದೆ. ಸಬ್‌ಇನ್ಸ್‌ಪೆಕ್ಟರ್ ಅಗ್ನಿಹೋತ್ರಿ ಎನ್ನುವವರ ಸಹಾಯದಿಂದ ಸುಂಕಪ್ಪನ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕಿದೆ.

ಸುಂಕಪ್ಪ ಹೊರಗೆ ನೋಡಲು ದಷ್ಟಪುಷ್ಟನಾಗಿ ಕಾಣುತ್ತಿದ್ದ. ಆದರೆ ಅವನಿಗೆ ಮಾನಸಿಕ ಅರೆನಪುಂಸಕತ್ವದ ರೋಗ ಬಡಿದುಕೊಂಡುಬಿಟ್ಟಿತ್ತು. ತನ್ನ ಹೆಂಡತಿಯೊಂದಿಗೆ ಮತ್ತೊಬ್ಬರು ಲೈಂಗಿಕ ಕ್ರಿಯೆ ಎಸಗುವುದನ್ನು ನೋಡಿದ ಮೇಲೆ ಅವನಿಗೆ ಉದ್ರೇಕ ಬರುತ್ತಿತ್ತು.

ಚಿಕ್ಕಂದಿನಲ್ಲಿ, ಹದಿಹರೆಯದಲ್ಲಿ ಆಗುವ ಮಾನಸಿಕ ಆಘಾತಗಳಿಂದ ಇಂಥ ಮನೋಲೈಂಗಿಕ ಅಸ್ವಸ್ಥತೆ ಉಂಟಾಗುತ್ತದೆಂದು ನನಗೆ ಕೇಳಿ ಮಾತ್ರ ಗೊತ್ತಿತ್ತು. ಆದರೆ ಇಂದು ಅಂಥ ಒಂದು ಜೀವಂತ ಉದಾಹರಣೆಯೇ ನನ್ನ ಮುಂದಿತ್ತು! ಇಂಥ ರೋಗಗಳಿಗೆಲ್ಲ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಇದೆ ಎನ್ನುವುದೂ ಸುಂಕಪ್ಪನಂಥವರಿಗೆ ಗೊತ್ತಿರುವುದಿಲ್ಲವೇನೊ. ಚಿಕಿತ್ಸೆ ಪಡೆಯಲು ನಾಚಿಕೆ ಅಡ್ಡ ಬಂದಿರುತ್ತದೊ? ಸುಂಕಪ್ಪ ತನ್ನ ಅರೆನಪುಂಸಕತ್ವಕ್ಕಾಗಿ ಈಗಾಗಲೇ ಇಬ್ಬರು ಹೆಂಡಂದಿರ ಬಾಳನ್ನು ಬಲಿ ತೆಗೆದುಕೊಂಡಿದ್ದ. ಮೊದಲನೆ ಹೆಂಡತಿ ಮೇಲೆ ಪ್ರಯೋಗಗಳು ನಡೆದುಹೋಗಿದ್ದವು. ಅನೇಕ ಕಂಟ್ರಾಕ್ಟರ್‌ಗಳು ಹಟ ಸಂಭೋಗದಲ್ಲಿ ಯಶಸ್ವಿಯಾಗಿದ್ದರು. ತನ್ನ ಗಂಡನ ಈ ಸಂಗತಿಯನ್ನು ಯಾರಿಗೂ ಹೇಳದೆ ಆಕೆ ಆತ್ಮಹತ್ಯೆಗೆ ಮೊರೆಹೋಗಿದ್ದಳು. ಎರಡನೆಯ ಹೆಂಡತಿ ರಾಜೇಶ್ವರಿ ಎಂಬ ಹಳ್ಳಿಯ ಬಡ ಹುಡುಗಿ ತವರುಮನೆ ಸೇರಿಕೊಂಡಿದ್ದಳು. ಇಬ್ಬರು ಹೆಂಡರಿಗಾದ ಗತಿಯ ಕಾರಣ ಹೊರನುಸುಳದಂತೆ ಸುಂಕಪ್ಪ ಎಚ್ಚರ ವಹಿಸಿದ್ದ. ಅವನೊಬ್ಬ ಹಿಂಸ್ರಪಶು ಎಂದು ಯಾರಿಗೂ ಗೊತ್ತಾಗಲಿಲ್ಲ.

ಸುಂಕಪ್ಪನ ನೌಕರಿ, ಸಂಬಳ, ಗಿಂಬಳಗಳನ್ನು ಮತ್ತು ಅವನ ಕಟ್ಟುಮಸ್ತಾದ ದೇಹವನ್ನು ನೋಡಿದವರಿಗೆ ತಮ್ಮ ಮಗಳನ್ನು ಕೊಡುವುದಿಲ್ಲ ಎನ್ನಲು ಬಾಯಿ ಬರುತ್ತಿರಲಿಲ್ಲ. ಅದೂ ಅಲ್ಲದೆ ರಾಣಿಯೊಂದಿಗೆ ಪ್ರೇಮದ ನಟನೆ ಮಾಡಿ ಮದುವೆಯಾಗಿ ಮೋಸವೆಸಗಿದ್ದ ಸುಂಕಪ್ಪ. ತನ್ನ ಈ ವಿಚಿತ್ರ ಅರೆನಪುಂಸಕತೆಗಾಗಿ ನಾಟಿ ವೈದ್ಯರನ್ನೂ ಸಂಪರ್ಕಿಸಿದ್ದ. ಮತ್ತೊಬ್ಬನಿಂದ ಅಸ್ವಾಭಾವಿಕ ಸಂಭೋಗವಾದರೆ ನಿನಗೆ ಪುರುಷತ್ವ ಬರುತ್ತದೆ ಎಂದು ಕೇಳಿ ಆ ಕೆಲಸಕ್ಕಾಗಿ ಒಬ್ಬ ಹುಡುಗನನ್ನು ಪ್ರೇರೇಪಿಸಿದ. ಆದರೆ ಅವನ ಲೆಕ್ಕಾಚಾರವೆಲ್ಲ ತಲೆಕೆಳಗಾಗಿತ್ತು; ಅದಾವನೊ ಒಬ್ಬ ಇದನ್ನು ನೋಡಿ ಹತ್ತಾರು ಜನರನ್ನು ಸೇರಿಸಿ ಸ್ಕೂಲ್ ಕೊಠಡಿಯಲ್ಲಿ ಸುಂಕಪ್ಪ ಮತ್ತು ಆ ಹುಡುಗ ಈರ್ವರನ್ನೂ ಕೂಡಿ ಹಾಕಿದ್ದ! ಈ ಘಟನೆಯ ನಂತರ ತನ್ನ ಪತ್ನಿಯ ಆಸೆ ತೋರಿಸಿ ಕಂಟ್ರಾಕ್ಟರ್‌ಗಳನ್ನು ಮನೆಗೆ ಕರೆದೊಯ್ದು ತನ್ನ ಪುರುಷತ್ವ ಕುದುರಿಸಿಕೊಳ್ಳುವ ಮತ್ತು ಹಣವನ್ನು ದೋಚುವ ಉಪಾಯ ಹೂಡಿದ್ದ.

ಸುಂಕಪ್ಪನ ಎರಡನೇ ಹೆಂಡತಿ ರಾಜೇಶ್ವರಿಯ ಮನೆಯವರನ್ನೂ ಸಂಪರ್ಕಿಸಿದೆ. ಅವಳ ತಂದೆ, "ನೀವು ಸಹಾಯ ಮಾಡುವುದಾದರೆ ನನ್ನ ಮಗಳನ್ನು ಕ್ರಮ ಜರುಗಿಸುವಂತೆ ಒಪ್ಪಿಸುತ್ತೇನೆ. ಸುಂಕಪ್ಪನಂಥ ನೀಚನನ್ನು ಮುಗಿಸಲು ದೇವರೇ ನಿಮ್ಮನ್ನು ನನ್ನ ಮನೆ ಬಾಗಿಲಿಗೆ ಕಳಿಸಿದ್ದಾನೆ. ಕೆಲವು ವೇಳೆ ನನಗೆ ಅವನನ್ನು ಕೊಲೆ ಮಾಡಿಬಿಡಬೇಕು ಅನ್ನಿಸುತ್ತೆ. ಇನ್ನೂ ಮೂರು ಹೆಣ್ಣುಮಕ್ಕಳ ಭವಿಷ್ಯ ನನ್ನನ್ನು ತಡೆಹಿಡಿದಿದೆ" ಎಂದು ಹೇಳಿದ. ರಾಜೇಶ್ವರಿಯ ತಂದೆ ತೋರಿಸಿದ ಧೈರ್ಯಕ್ಕೆ

ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅಗ್ನಿಹೋತ್ರಿ ಕಾರಣರಾಗಿದ್ದನ್ನು ನಾನು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತೇನೆ.

ನಾನು ಫೀಲ್ಡ್ ವರ್ಕ್ ಮಾಡಿ ಇಷ್ಟೆಲ್ಲ ಮಾಹಿತಿ ಸಂಗ್ರಹಿಸಿದ್ದನ್ನು ಸೀನಿಯರ್ ನನ್ನ ಬೆನ್ನು ತಟ್ಟಿ, "ಇದಕ್ಕಪ್ಪ ವೃತ್ತಿಯ ಹುಮ್ಮಸ್ಸು ಎನ್ನುವುದು. ನೀನೇ ಒಂದು ಲಾಯರ್ ನೋಟೀಸ್ ರೆಡಿ ಮಾಡು" ಎಂದರು. ಮೂರನೇ ಹೆಂಡತಿ ರಾಣಿ ಮತ್ತು ಎರಡನೇ ಹೆಂಡತಿ ರಾಜೇಶ್ವರಿ ಈರ್ವರ ಮೂಲಕವೂ ಸುಂಕಪ್ಪನಿಗೆ ಲಾಯರ್ ನೋಟೀಸುಗಳು ಹೋದವು.

ನೋಟೀಸ್‌ಗಳನ್ನು ಓದಿದ ಸುಂಕಪ್ಪ ಆತ್ಮ ಹತ್ಯೆ ಮಾಡಿಕೊಂಡುಬಿಟ್ಟ! ದೇಬು ಹೊಸಾಳಿ, "ಅವನಿಗೆ ತಕ್ಕ ಶಿಕ್ಷೆಯಾಯಿತು. ಅದಕ್ಕೆಲ್ಲ ನೀನೇ ಕಾರಣ ಎಂದು ನನ್ನ ಬೆನ್ನು ತಟ್ಟಿದರು.

ರಾಣಿಯ ಅಪ್ಪ ಆಂಟೋನಿಯೂ ಖುಷಿಯಲ್ಲಿದ್ದ. ನನಗೆ ಮಾತ್ರ ಪಿಚ್ಚೆನ್ನಿಸಿತು. ಸತ್ತು, ಶಿಕ್ಷೆಯಿಂದ ಪಾರಾಗಿಬಿಟ್ಟನಲ್ಲ ಎನ್ನಿಸಿತು! ಗಲ್ಲು ಶಿಕ್ಷೆಯ ಅರ್ಥಶೂನ್ಯತೆಯ ದಟ್ಟ ಅರಿವು ಆ ಕ್ಷಣದಲ್ಲಾಯಿತು. ಸುಂಕಪ್ಪನಿಗೂ ಗೊತ್ತಾಯಿತೆಂದು ಕಾಣುತ್ತದೆ. ಕೋರ್ಟಿನಲ್ಲಿ ವಿಚಾರಣೆ ಎದುರಿಸುವುದು, ಸಾರ್ವಜನಿಕವಾಗಿ ಅವಮಾನಗೊಳ್ಳುವುದು ಸಾವಿಗಿಂತ ಭಯಾನಕ ಎಂದು....! ದೇಬು ಹೊಸಾಳಿ ಮುಖ್ಯಮಂತ್ರಿ ಅರಸು ಅವರೊಂದಿಗೆ ಒಳ್ಳೆ ಸ್ನೇಹದಲ್ಲಿದ್ದರು. ರಾಣಿ ಮತ್ತು ರಾಜೇಶ್ವರಿ ಈರ್ವರಿಗೂ ಸರಕಾರಿ ನೌಕರಿ ಕೊಡಿಸಿದರು.

ದೇಬು ಹೊಸಾಳಿಯವರಿಗೆ ಕಾರ್ಪೆಂಟರಿ ಕೆಲಸ ಹಾಬಿಯಾಗಿತ್ತು. ತಮ್ಮ ಕೈಯಾರೆ ತಯಾರಿಸಿದ ಟೀಕ್‌ವುಡ್ಡಿನ ಟೇಬಲ್ ಅನ್ನು ಅಂಟೋನಿಯ ಮೂಲಕ ನನಗೆ ಕಳಿಸಿಕೊಟ್ಟಿದ್ದು ಇಂದಿಗೂ ನನ್ನ ಮನೆಯಲ್ಲಿದೆ. ಮನೆಯಲ್ಲಿ ಯಾವ ಗದ್ದಲವೂ ಇರದೆ ನಾನೊಬ್ಬನೇ ಇದ್ದ ಹಲವಾರು ಸಂದರ್ಭಗಳಲ್ಲಿ ಆ ಟೇಬಲ್ ಕಣ್ಣಿಗೆ ಬಿದ್ದಾಗೆಲ್ಲ ಸುಂಕಪ್ಪನ ಮುಖ ತೇಲಿ ಬಂದದ್ದಿದೆ. ಈ ಕಂತಿನ ಬರಹಕ್ಕೆ ಆ ಟೇಬಲ್ ಕಕ್ಕಿಸುವ ನೆನಪುಗಳೇ ಕಾರಣ. ಒಂದು ವಿಷಯ ಮರೆತೆ. ಆ ಟೇಬಲ್ ನನ್ನ ಮನೆಯಲ್ಲಿದ್ದರೂ ಒಂದು ದಿನವೂ ಅದರ ಮೇಲೆ ಕಪ್ ಇಟ್ಟುಕೊಂಡು ಟೀ ಕುಡಿದಿಲ್ಲ !

50

ಮೂರನೇ ಬಾರಿ ಮದುಮಗನಾದ ನನ್ನ ಗುರುಗಳು

ಸಾದಿಕಾ ಬೇಗಮ್ ಮತ್ತು ದೇವದಾಸ್ ಅವರ ಸಂಬಂಧ ಹಳಸುತ್ತ ಬಂದದ್ದು ನನಗೆ ಕಾಣತೊಡಗಿತ್ತು. ಸಾದಿಕಾ ಬಹಿರಂಗವಾಗಿ, "ದೇವದಾಸ್ ನನ್ನೊಂದಿಗೆ ನಿಖಾ ಮಾಡಿಕೊಂಡಿದ್ದಾರೆ ಮತ್ತು ಮುಸ್ಲಿಮ್ ಆಗಿ ಕನ್ವರ್ಟ್ ಕೂಡಾ ಆಗಿದ್ದಾರೆ" ಎಂದು ಹೇಳಿಕೊಳ್ಳತೊಡಗಿದಳು. ಸಿವಿಲ್ ದಾವಾ ಕೂಡಾ ಹೂಡಿದ್ದಳು. ದೇವದಾಸ್ ಕೂಡ ಸಾದಿಕಾ ಅವರ ಈ ಮಾತನ್ನು ನಿರಾಕರಿಸುತ್ತಿರಲಿಲ್ಲ; ಮೌನವಾಗಿದ್ದರು ಆ ವಿಷಯದಲ್ಲಿ ದೇವದಾಸ್ ಅವರನ್ನು ದಬಾಯಿಸಿ ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಬಹುದು ಎಂದುಕೊಂಡಂತಿತ್ತು ಸಾದಿಕಾ ಬೇಗಮ್ ಅವರ ವರ್ತನೆ. ಸಾದಿಕಾ ಅವರ ಅತಿರೇಕದ ಜಗಳ, ದಾಂಧಲೆ, ಸಾರ್ವಜನಿಕವಾಗಿ ಮುಜುಗರದ ಸ್ಥಿತಿಯ ನಿರ್ಮಾಣ ಇವನ್ನೆಲ್ಲ ಆರಂಭದಲ್ಲಿ ಸಹಿಸಿಕೊಳ್ಳುತ್ತಿದ್ದ ದೇವದಾಸ್ ಬರಬರುತ್ತ ಅದನ್ನೆಲ್ಲ ಪ್ರತಿರೋಧಿಸತೊಡಗಿದ್ದರು. ಮುಂಚೆ ಸಹ ದೇವದಾಸ್ ಅವರು ಅಂಜಿದಂತೆ, ಮಣಿದಂತೆ ನಟಿಸುತ್ತಿದ್ದರೆಂದೇ ನನಗನಿಸುತ್ತಿತ್ತು. ಈ ನಟನೆಯನ್ನೇ ಸಾದಿಕಾ ನಿಜ ಎಂದು ನಂಬಿ ತಮ್ಮ ಭಯೋತ್ಪಾದಕ ತಂತ್ರಕ್ಕೇ ಜೋತು ಬಿದ್ದಿದ್ದರು; ಕಂಡೀಷನ್ಡ್ ಆಗಿದ್ದರೆಂದರೂ

ನಡೆಯುತ್ತದೆ. ಆ ಸಂದರ್ಭದಲ್ಲಿದ್ದ ಬಹಳಷ್ಟು ಜನ ದೇವದಾಸ್ ಅವರು ಪರಿಸ್ಥಿತಿಯ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತಿದ್ದರೆ ನನ್ನಲ್ಲಿ ಮಾತ್ರ ಸಾದಿಕಾ ಬಗ್ಗೆ ಅನುಕಂಪ ಹುಟ್ಟುತ್ತಿತ್ತು. ಸಾದಿಕಾ ಅವರ ಅಜ್ಞಾನ, ಮೊಂಡುತನ, ಮೌಢ್ಯತೆ, ಹಪಾಹಪಿತನ ಇವೆಲ್ಲವುಗಳ ಮರೆಯಲ್ಲಿ ಮಸುಕಾಗಿ ಕಾಣಿಸುತ್ತಿದ್ದ ಪ್ರೀತಿಯ ಬಗ್ಗೆ, ಆ ಪ್ರೀತಿ ಸಂಕೀರ್ಣಗೊಂಡು ಹಿಂಸಾಪ್ರೀತಿಯಾಗಿ ರೌದ್ರವತಾರ ತಾಳಿದಾಗ ತಣ್ಣಗೆ ಕೂತಿರುತ್ತಿದ್ದ ದೇವದಾಸ್ ಅವರಲ್ಲಿ ಕೇಡಿತನ ಕಾಣಿಸುತ್ತಿತ್ತು; ಶೀತಲ ಕ್ರೌರ್ಯವದು ಎನಿಸುತ್ತಿತ್ತು. ಸಾದಿಕಾ ಸದಾ ಉರಿಯಬೇಕೆನ್ನುತ್ತಿದ್ದರು; ತಮ್ಮ ಉರಿಯಿಂದ ದೇವದಾಸ್ ಅವರನ್ನು ಕರಗಿಸಬೇಕೆಂದು ಬಯಸುತ್ತಿದ್ದರು ಆದರೆ ದೇವದಾಸ್ ಬೆಣ್ಣೆಯಾಗಿರದೆ ಮಂಜುಗಡ್ಡೆಯಾಗಿದ್ದರು; ಕೆಂಡವನ್ನು ಇದ್ದಿಲಾಗಿಸುವ ಮಂಜುಗಡ್ಡೆ.

ನನ್ನ ಮುಂದೆ ಆಗಾಗ ಸಾದಿಕಾ ಅವರನ್ನು ಬಾಯಿಗೆ ಬಂದ ಶಬ್ದಗಳಲ್ಲಿ ದೇವದಾಸ್ ಬೈಯುತ್ತಿದ್ದರು. ಆಗ ನಾನು ಏನೂ ಪ್ರತಿಕ್ರಿಯಿಸದೆ ಸುಮ್ಮನಿರುತ್ತಿದ್ದೆ. ಸೀನಿಯರ್ ನನ್ನ ಬಳಿ ತಮ್ಮ ತೀರಾ ಖಾಸಗಿ ವಿಷಯವನ್ನು ಹೇಳಿಕೊಳ್ಳುತ್ತಿದ್ದಾರಲ್ಲಾ ಎಂದು ಧನ್ಯಭಾವ ಮೂಡುತ್ತಿತ್ತು. ಅವರ ಹೇಳಿಕೆ, ಬೈಗುಳ, ಭಾವನೆಗಳ ಧೋರಣೆಗಳು ಸರಿಯೋ ತಪ್ಪೋ ಎಂದು ಹೇಳುವ ಸಾಮರ್ಥ್ಯ ನನ್ನಲ್ಲಿರಲಿಲ್ಲ. ನಾನು ಹಾಗೆಲ್ಲ ತಲೆಹರಟೆ ಮಾಡದೆ ಸುಮ್ಮನೆ ಕೇಳಿಸಿಕೊಳ್ಳುತ್ತೇನೆ ಎನ್ನುವ ಕಾರಣಕ್ಕಾಗಿಯೋ ನನ್ನ ಮುಂದೆ ತಮ್ಮ ಖಾಸಗಿ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರೇನೋ ಗೋಡೆಗೆ ಹೇಳಿಕೊಳ್ಳುವುದು ತೀರಾ ಅಸಮಂಜಸ ಎನಿಸಿ ನನ್ನ ಮುಂದೆ ಹೇಳುತ್ತಿದ್ದರೇನೋ ! ದೇವದಾಸ್ ಅವರ ಸಾಂಸಾರಿಕ ಜೀವನ ನನ್ನ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು. ಅವರ ಕೌಟುಂಬಿಕ ಕಲಹಗಳು ಮತ್ತು ದುರಂತಗಳು ಪ್ರಳಯಕಾರಿಯಾಗಿ ಕಾಣುತ್ತಿದ್ದವು. ಚಂಡಮಾರುತವನ್ನೆದುರಿಸುವ ಬಂಡೆಯಂತೆ ಕಾಣುತ್ತಿದ್ದರು ಸೀನಿಯರ್. ಇವರ ಮೂಲಗುಣವೇ ಹೀಗೋ ಅಥವಾ ಅವರ ಬದುಕಿನ ಅಲೆಗಳ ಅಪ್ಪಳಿಕೆಯಿಂದ ಹೀಗೆ ಕಲ್ಲಾಗಿ ಪರಿವರ್ತನೆಗೊಂಡಿದ್ದಾರೋ ಎನ್ನುವ ಅನುಮಾನಕ್ಕೆ ಮಾತ್ರ ಉತ್ತರ ಸಿಗುತ್ತಿರಲಿಲ್ಲ.

ಕಳ್ಳತನ ಗೊತ್ತಿರಲಾರದವ ಪೊಲೀಸ್ ಆಗಲಾರ; ಹಾಗೆಂದು ಪೊಲೀಸ್ ಸ್ವತಃ ಕಳ್ಳತನಕ್ಕಿಳಿಯುವುದು ಸಾಧುವಾಗಲಾರದು. ಆದರೆ ಸ್ವಲ್ಪವೇ ಆಯ ತಪ್ಪಿದರೂ ಸಾಕು ಪೊಲೀಸ್ ಕಳ್ಳರಕಳ್ಳನಾಗಿಬಿಡಬಲ್ಲ. ಈ ಮಾತು ಲಾಯರ್ ವೃತ್ತಿಗೆ ಸಹ ಅನ್ವಯಿಸುತ್ತದೆಂದು ನನ್ನ ಅನಿಸಿಕೆ. ಕಾನೂನಿನ ಜ್ಞಾನವಿರದ ಅಪರಾಧಿಗಿಂತ ಕಾನೂನು ತಿಳಿದ ಅಪರಾಧಿ ಹೆಚ್ಚು ಅಪಾಯಕಾರಿ ಮತ್ತು ಸಮಾಜಕ್ಕೆ ಕಂಟಕಪ್ರಾಯ.

ದೇವದಾಸ್ ಅವರು ಸ್ವಯಂಕೃತಾಪರಾಧಗಳಿಂದ ಸೃಷ್ಟಿಸಿಕೊಂಡಿದ್ದ ಕೌಟುಂಬಿಕ ದುರಂತ, ಗೋಳುಗಳು ನನ್ನಲ್ಲಿ ಭಯ ಮೂಡಿಸಿದ್ದವು; ಎಂದಿಗೂ ನನ್ನ ಕೌಟುಂಬಿಕ ಜೀವನ ಹೀಗಾಗಬಾರದು ಎಂದುಕೊಳ್ಳುತ್ತಿದ್ದೆ. 'ಸಹವಾಸ ದೋಷ' ಎನ್ನುವ ಮಾತು ಪೂರ್ಣ ಸತ್ಯವಲ್ಲ. ಅದಕ್ಕೆ ಇನ್ನೊಂದು ಮುಖವೂ ಇರುತ್ತದೆ; ಕುಡುಕನ ಮಗ ಸಾತ್ವಿಕನಾಗುವಂತೆ !

ಒಮ್ಮೆ ಊರಿಗೆ ಹೋದಾಗ ನನ್ನ ಸೋದರಮಾವ ಸಿದ್ಧನಂಜೇಗೌಡರೊಂದಿಗೆ ಮಾತನಾಡುತ್ತಿದ್ದೆ. ದೇವದಾಸ್ ಅವರು ಪುನಃ ನನ್ನನ್ನು ತಮ್ಮ ಆಫೀಸ್‌ಗೆ ಬರಮಾಡಿಕೊಂಡಿದ್ದನ್ನೂ ಆದಷ್ಟು ಪರಿಣಾಮಕಾರಿಯಾಗಿ ಹೇಳಿದೆ. ನನ್ನ ಅವಶ್ಯಕತೆ ಸೀನಿಯರ್‌ಗೆ ಎಷ್ಟಿದೆ ಎಂದು ಮಾವನ ಮುಂದೆ ತೋರಿಸಿಕೊಳ್ಳುವ ಆಸೆ ನನ್ನದು. ದೇವದಾಸ್ ಅವರು ತಮ್ಮ ಖಾಸಗಿ ವಿಷಯಗಳನ್ನೆಲ್ಲ ನನ್ನ ಮುಂದೆಯೇ ಹೇಳಿಕೊಳ್ಳುವುದು ಎಂದೂ ಹೇಳಿ ಸಾದಿಕಾ ಬೇಗಮ್ ಮತ್ತು ಸೀನಿಯರ್ ಮಧ್ಯೆ ಇತ್ತೀಚೆಗೆ ಕಂದರ ಹೆಚ್ಚಾಗಿರುವುದನ್ನು ಬಣ್ಣಿಸಿದೆ. ನನ್ನ ಮಾತುಗಳನ್ನು ಸಾವಧಾನವಾಗಿ ಕೇಳಿಸಿಕೊಂಡ ಸಿದ್ಧನಂಜೇಗೌಡ ಮಾವ, "ಅದೆಲ್ಲ ಸರಿ ಕಣಪ್ಪ. ನೀನು ಏನಿದ್ದರೂ ಅವರ‍್ಹತ್ರ ಕೆಲಸ ಕಲಿ; ಅವರ ಗುಣ ಕಲಿಯುವುದು ಬೇಡ! ಅವ್ರ ಖಾಸಗಿ ಸಂಗತಿಗಳ ಬಗ್ಗೆ ನೀನು ತಲೆಹಾಕೋಕೆ ಹೋಗಬೇಡ" ಎಂದರು. ನನ್ನ ಮಾತು ಮಾವನವರ ಮೇಲೆ ನಿರೀಕ್ಷಿತ ಪರಿಣಾಮ ಬೀರದೆ ವಕ್ರವಾಯಿತು ಎಂದುಕೊಂಡೆ.

ಮಾರನೇ ದಿನ ಬೆಳಗ್ಗೆ ಹೊರಡುವಾಗ ತಾಯಿ ನನ್ನ ಮದುವೆ ವಿಷಯ ಪ್ರಸ್ತಾಪಿಸಿದಳು. ಸೋದರಮಾವ ಸಿದ್ಧನಂಜೇಗೌಡರ ಮಗಳು ಸಿದ್ಧಲಿಂಗಮ್ಮ ಹುಟ್ಟಿದಾಗಲೇ ಆಕೆಯನ್ನು ನನಗೆ ಕೊಟ್ಟು ಮದುವೆ ಮಾಡುವ ತೀರ್ಮಾನವನ್ನು ಮಾಡಿಬಿಟ್ಟಿದ್ದರು. ಪರಸ್ಪರ ಭಾಷೆಯನ್ನೂ ಕೊಟ್ಟುಬಿಟ್ಟಿದ್ದರು ಹಿರಿಯರು.

ಬೆಂಗಳೂರಿಗೆ ನಾನು ಓದಲು ಹೊರಟಾಗ, ವಿದ್ಯಾಭ್ಯಾಸ ಮುಗಿಸಿದಾಗ, ವೃತ್ತಿಗೆ ತೊಡಗಿದಾಗ ಹೀಗೆ ನನ್ನ ಒಂದೊಂದು ಘಟ್ಟದಲ್ಲೂ ತನ್ನದೇನೊ ಇದೆಯೆನ್ನುವಂತೆ ಹಲವು ವಿಧಗಳಲ್ಲಿ ತನ್ನೊಳಗಿನ ಸಂತೋಷದ ಭಾವನೆಗಳನ್ನು ಹೊರಹಾಕುತ್ತಿದ್ದಳು. ಊರಿಗೆ ಹೋದರೆ ನನ್ನನ್ನು ಹೆಮ್ಮೆಯಿಂದ ನೋಡುತ್ತಿದ್ದಳು. ಚಿಕ್ಕವರಿದ್ದಾಗ ನಮ್ಮಿಬ್ಬರ ಮಧ್ಯೆ ಇರದ ನಾಚಿಕೆ, ಮುಜುಗರಗಳು ಬೆಳೆದು ನಿಂತಾಗ ದಿಢೀರ್ ಪ್ರತ್ಯಕ್ಷವಾಗಿದ್ದವು. ಭಾವೀ ಗಂಡಹೆಂಡಿರು ಎನ್ನುವ ಭಾವನೆಗಳು ನಮ್ಮಿಬ್ಬರಲ್ಲಿ ಬೇರೂರಿದ್ದವು. ಹಿರಿಯರು ಅದೇನೊ ತಮಗೆ ತಾವೇ ನಿರ್ಧರಿಸಿಕೊಂಡಿದ್ದಾರೆ. ನನ್ನ ಅನಿಸಿಕೆ, ಅಭಿಪ್ರಾಯಕ್ಕೆ ಬೆಲೆಯೇ ಇಲ್ಲವೇ

ಇತ್ಯಾದಿ ಭಾವನೆಗಳು ನನ್ನಲ್ಲಿ ಮೂಡಲಿಲ್ಲ; ನನ್ನಾಕೆಗೂ ಸಹ ನನ್ನ ಪತ್ನಿ ಚಿಕ್ಕವಳಾಗಿದ್ದಾಗ ನೆಂಟರು ನೆರೆಹೊರೆಯವರು ಅವಳಿಗೆ 'ನಿನ್ನ ಗಂಡನ ಹೆಸರೇಳು' ಎಂದು ಪೀಡಿಸಿದರೆ ತಡಮಾಡದೆ ನನ್ನ ಹೆಸರು ಹೇಳಿಬಿಡುತ್ತಿದ್ದಳು.

1975ರ ಮೇ 29ರಂದು ನಮ್ಮ ಮದುವೆ ನನ್ನೂರು ಬೆಳವಂಗಲದಲ್ಲಿ ನಡೆಯಿತು. ದೇವದಾಸ್ ಅವರು ಶಾರದಾ ಹರಿಹರನ್ ಅವರೊಂದಿಗೆ ಬಂದು ನಮ್ಮನ್ನು ಹರಿಸಿ ಹೋದರು.

ಶಾರದಾ ಹರಿಹರನ್ ತುಂಬಾ ಸುಂದರಿ ಹೆಣ್ಣು; ಗಂಧರ್ವ ಕನ್ಯೆಯಂತೆ ಕಾಣುತ್ತಿದ್ದಳು. ಮೂಲತಃ ಕೂರ್ಗಿನ ಹೆಣ್ಣುಮಗಳಾದ ಈಕೆ ಕಾವೇರಿ ಟ್ರಾನ್ಸ್‌ಪೋರ್ಟ್‌ನ ಮಾಲೀಕ ಪೂವಯ್ಯನ ಹೆಂಡತಿ. ಪೂವಯ್ಯನಿಂದ ಎರಡು ಹೆಣ್ಣುಮಕ್ಕಳನ್ನೂ ಹೆತ್ತಿದ್ದಳು. ಬೆಂಗಳೂರಿನ ರೇಸ್ ಕುದುರೆಗಳ ಮಾಲೀಕ ಸಾರಂಗಪಾಣಿ ಮೊದಲಿಯಾರ್ ಅವರ ಮಗ ಹರಿಹರನ್ ಪೂವಯ್ಯನ ಆತ್ಮೀಯ ಸ್ನೇಹಿತನಾಗಿದ್ದ. ಪದೇ ಪದೇ ಬೆಂಗಳೂರಿನಿಂದ ಕೂರ್ಗಿಗೆ ಹೋಗಿ ಪೂವಯ್ಯನ ಮನೆಯಲ್ಲಿ ತಂಗುತ್ತಿದ್ದ. ಪೂವಯ್ಯ ಬಿಜಿನೆಸ್‌ನಲ್ಲಿ ದಿವಾಳಿಯೆದ್ದುಬಿಟ್ಟ; ಲಕ್ಷ್ಮಿಗಿಂತಲೂ ಚಂಚಲೆಯಾಗಿದ್ದ ಶಾರದಾ ಗಂಡನಿಗೆ ವಿದಾಯ ಹೇಳಿ ಹರಿಹರನ್ ಜೊತೆಗೆ ಬೆಂಗಳೂರಿಗೆ ಬಂದುಬಿಟ್ಟಿದ್ದಳು. ಮಲ್ಲೇಶ್ವರಂನ ಹತ್ತೊಂಬತ್ತನೇ ಕ್ರಾಸ್ ಬಳಿಯಿದ್ದ ತನ್ನ ಪ್ರತ್ಯೇಕ ಮನೆಯಲ್ಲಿ ಆಕೆಯನ್ನು ಇರಿಸಿದ್ದ. ಆ ಮನೆಯನ್ನು ಆಕೆಯ ಹೆಸರಿಗೇ ಬರೆದುಕೊಡುವುದಾಗಿ ಆಶ್ವಾಸನೆಯನ್ನೂ ಕೊಟ್ಟಿದ್ದ. ತನ್ನ ಹೆಸರಿನ ಮುಂದಿದ್ದ ಪೂವಯ್ಯನನ್ನು ತೆಗೆದು ಹರಿಹರನ್ ಎಂದು ಇರಿಸಿಕೊಂಡಿದ್ದಳು. ಮಾತುಕೊಟ್ಟಂತೆ ಹರಿಹರನ್ ಆ ಮನೆಯನ್ನು ಶಾರದಾಳ ಹೆಸರಿಗೆ ಮಾಡಿಸಿಕೊಡದೆ, ಆ ವಿಷಯವನ್ನು ಮುಂದೂಡುತ್ತಲೇ ಹೋಗುವುದನ್ನು ನೋಡಿ ಒಂದು ದಿನ ಜಗಳಕ್ಕಿಳಿದ ಶಾರದಾ ಹರಿಹರನ್‌ನ ತಲೆಗೆ ದೊಣ್ಣೆಯಿಂದ ಹೊಡೆದುಬಿಟ್ಟಳು. ತಲೆಗೆ ಭಾರೀ ಪೆಟ್ಟಾಗಿ ಹರಿಹರನ್ ಪೊಲೀಸ್‌ಗೆ ಕಂಪ್ಲೇಂಟ್ ನೀಡಿದ. ಆದರೆ ಶಾರದ ಇದರಲ್ಲಿ ತನ್ನ ತಪ್ಪೇನೂ ಇಲ್ಲವೆಂದು ಪೊಲೀಸರಿಗೆ ಕನ್‌ವಿನ್ಸ್ ಮಾಡುವಲ್ಲಿ ಯಶಸ್ವಿಯಾದಳು. ಪಟ್ಟು ಬಿಡದ ಹರಿಹರನ್ ಪ್ರೈವೇಟ್ ಕಂಪ್ಲೇಂಟ್ ಮೂಲಕ ಕೇಸ್ ಹಾಕಿದ್ದ. ಶಾರದಾ ತನ್ನ ಪರ ವಕಾಲತ್ತು ಹಾಕಬೇಕೆಂದು ದೇವದಾಸ್ ಬಳಿಗೆ ಬಂದಳು. ಮೊದಲ ನೋಟದಲ್ಲೇ ಸೀನಿಯರ್ ಸುಸ್ತಾಗಿ ಬಿಟ್ಟರು. ಮೂವತ್ತರ ಹರೆಯದ ಶಾರದಾಳನ್ನು ಬಿಟ್ಟಗಣ್ಣಿಂದ ನೋಡುತ್ತಿದ್ದರು ಅರವತ್ತೈದು ವಸಂತಗಳನ್ನು ಕಂಡುಂಡಿದ್ದ ದೇವದಾಸ್. ಯಾರಾದರೂ ನನಗೆ ಮೋಡಿ ಮಾಡಲಿ ಎಂದು ಕಾದು ಕೂತಿದ್ದ ದೇವದಾಸ್ ಅವರನ್ನು ಅಲುಗಿಸಲು ಶಾರದಾ ಯಾವುದೇ ಪ್ರಯತ್ನಪಡುವ ಅವಶ್ಯಕತೆಯಿರಲಿಲ್ಲ.

ರೇಸ್ ಬುಕ್ಕಿಯಾಗಿದ್ದ ತಮ್ಮ ಸ್ನೇಹಿತ ಜಟ್ಟಿಯ ಮೂಲಕ ಶಾರದಾಗೆ ಜಾಮೀನು ಕೊಡಿಸಿದ ಸೀನಿಯರ್ ನವತರುಣನ ಉತ್ಸಾಹದಲ್ಲಿ ಕೇಸ್ ನಡೆಸತೊಡಗಿದ್ದರು.

ಎರಡು ತಿಂಗಳೂ ಆಗಿರಲಿಲ್ಲ ಶಾರದಾ ಕೇಸ್ ಆರಂಭವಾಗಿ, ದೇವದಾಸ್ ಪೇಟ ಮಾಯವಾಗಿ ಆಕರ್ಷಕ ನೇಪಾಳಿ ಟೊಪ್ಪಿಗೆ ತಲೆಯೇರಿ ಕೂತಿತ್ತು! ಆ ಟೊಪ್ಪಿಗೆ ಹಾಕಿದ್ದು ಶಾರದಾ ಎಂದು ಆಫೀಸ್‌ನಲ್ಲಿ ಎಲ್ಲರಿಗೂ ಗೊತ್ತಾಗಿತ್ತು.

ಒಂದು ದಿನ ಕಾರಲ್ಲಿ ಇಬ್ಬರೇ ಹೋಗುತ್ತಿದ್ದೆವು. ಸೀನಿಯರ್, "ಈ ಹೆಂಗಸರೇ ವಿಚಿತ್ರ. ಮುಟ್ಟಿದರೆ ಸಾಕು ಮೈಮೇಲೆ ಬರುತ್ತಾರೆ; ಸ್ವಲ್ಪ ಸದರ ಕೊಟ್ಟರೂ ಸಾಕು ತಲೆಯೇರಿ ಕೂತುಬಿಡುತ್ತಾರೆ..... ಏನೋ ಪಾಪ ಯಾರೂ ದಿಕ್ಕಿಲ್ಲವೆಂದು ಅನುಕಂಪ ತೋರಿಸಿದರೆ, ಮದುವೆ ಮಾಡಿಕೊಳ್ಳಿ ಎಂದು ಹಠ ಹಿಡಿದಿದ್ದಾಳೆ ಆಗಲೇ ಆ ಶಾರದೆ" ಎಂದರು.

ನಾನು, "ಆಯಿತು ಸಾರ್" ಎಂದೆ. "ಆಯಿತು ಎಂದರೆ ಆಗಿಬಿಡುತ್ತಾ? ಈ ವಾರದಲ್ಲಿ ಸುಬ್ರಹ್ಮಣ್ಯ ಘಾಟಿಯ ದೇವಸ್ಥಾನದಲ್ಲಿ ಯಾರಿಗೂ ಗೊತ್ತಾಗದಂತೆ ಶಾರದಾಳೊಂದಿಗೆ ಮದುವೆಯಾಗಬೇಕು. ಏರ್ಪಾಟು ಮಾಡು" ಎಂದರು.

ಸುಬ್ರಮಣ್ಯ ಘಾಟಿಗೆ ದೇವದಾಸ್ ಅವರ ಸ್ನೇಹಿತರಾದ ಜಟ್ಟಿ ಗುರು ಪತ್ನಿಯಂದಿರ ಸಮೇತರಾಗಿ ಬಂದರು. ದರ್ಶನಾರ್ಥಿಗಳು ಮಧ್ಯಾಹ್ನ ಇರುವುದಿಲ್ಲವೆಂದುಕೊಂಡು ಬಂದಿದ್ದೆವು. ನಿರೀಕ್ಷೆಯಂತೆ ಬೇರೆ ಜನ ಇರಲಿಲ್ಲ. 'ದೇವಸ್ಥಾನದ ಪಕ್ಕದ ಮನೆಗೆ ಹೋಗಿ ಪುರೋಹಿತರನ್ನು ಕಂಡು ಸರಳ ಮದುವೆ ಮಾಡಿಸಿಕೊಡುವಂತೆ ಮಾತಾಡಿ ಬಾ' ಎಂದು ನನಗೆ ಹೇಳಿದರು. ಅದರಂತೆ ನಾನು ಹೋಗಿ ಅರ್ಚಕನನ್ನು ಸಂಪರ್ಕಿಸಿದೆ. ಅರ್ಧ ಗಂಟೆಯಲ್ಲಿ ಎಲ್ಲ ತಯಾರಿ ಮಾಡುವುದಾಗಿ ಹೇಳಿದ ತರುಣ ಅರ್ಚಕ.

ಯಾವುದೇ ದಾಖಲೆ, ಫೋಟೋ, ಸಾಕ್ಷಿಗಳು ಇರದಂತೆ ಈ ಮದುವೆಗೆ ಏರ್ಪಾಟಾಗಬೇಕೆಂದು ಸೀನಿಯರ್ ಆದೇಶ ನೀಡಿದ್ದರು. ಅದರಂತೆಯೇ ನಾನು ಎಲ್ಲ ವ್ಯವಸ್ಥೆ ಮಾಡಿದ ಬಗ್ಗೆ ತೃಪ್ತಿ ಭಾವ ನನ್ನಲ್ಲಿ ಮೂಡಿತು. "ಎಲ್ಲ ರೆಡಿ, ನೀವು ಹೇಳಿದಂತೆಯೇ" ಎಂದೆ ಸೀನಿಯರ್‌ಗೆ. ಅವರು ಖುಷಿಯಿಂದ ಮಗುಳ್ನಕ್ಕರು.

ದೇವಸ್ಥಾನದೊಳಕ್ಕೆ ನಾವೆಲ್ಲ ಹೋಗುತ್ತಲೇ ವೃದ್ಧ ಅರ್ಚಕರೊಬ್ಬರು "ಬರಬೇಕು ದೇವದಾಸ್ ಅವರೇ. ಏನು ಇಷ್ಟು ದೂರ? ಮದುವೆ ನಿಮ್ಮ ಪೈಕಿಯವರದೆ?" ಎಂದು ಕೇಳತೊಡಗಿದರು!

ದೇವದಾಸ್ ಕೆಂಡಾಮಂಡಲವಾಗಿ ನನ್ನನ್ನು ಸಿಗಿದುಹಾಕುವಂತೆ ನೋಡತೊಡಗಿದರು. ಅವರ ಇಡೀ ದೇಹ ಕೋಪದಿಂದ ಕಂಪಿಸುತ್ತಿತ್ತು. "ಸಾರ್ ನಾನು ಮಾತಾಡಿದಾಗ ಈ ಅರ್ಚಕರಿರಲಿಲ್ಲ. ಹುಡುಗ ಇದ್ದ. ಈಗ ಈತ ಪ್ರತ್ಯಕ್ಷನಾಗಿದ್ದಾನೆ. ಸಾರಿ ಸಾರ್" ಎಂದೆ.

ಆ ವೃದ್ಧ ಅರ್ಚಕ ಬೇರಾರೂ ಆಗಿರಲಿಲ್ಲ; ಬೈಗಮಿ ಕೇಸ್ ಒಂದರಲ್ಲಿ ಮೊದಲ ಪತ್ನಿಯ ಪರವಾಗಿ ದೇವದಾಸ್ ಅವರಿಂದ ಕ್ರಾಸ್ ಎಗ್ಸಾಮಿನೇಷನ್‌ನಲ್ಲಿ ಹಿಗ್ಗಾಮುಗ್ಗಾ ಎಳೆದಾಡಿಸಿಕೊಂಡಿದ್ದ ಪುರೋಹಿತ ಆತನಾಗಿದ್ದ; ಆತನೇ ನಾರಾಯಣಶಾಸ್ತ್ರಿ. ಅಕ್ರಮವಾಗಿ ಎರಡನೇ ಮದುವೆಯ ಪೌರೋಹಿತ್ಯ ವಹಿಸಿ ಕಟಕಟೆಯಲ್ಲಿ ನಿಂತಿದ್ದ ನಾರಾಯಣಶಾಸ್ತ್ರಿಗಳೇ ದೇವದಾಸ್ ಅವರ ಮೂರನೇ ಲಗ್ನಕ್ಕೆ ಪುರೋಹಿತರಾಗಿ ನಿಂತಿದ್ದರು!

ನಾನು ಮೊದಲು ಹೋಗಿ ಸಂಪರ್ಕಿಸಿದ ತರುಣ ಅರ್ಚಕ ನಾರಾಯಣ ಶಾಸ್ತ್ರಿಗಳ ಮಗನಾಗಿದ್ದ.

ನನ್ನ ಮದುವೆಯಾದ ವರ್ಷದಲ್ಲಿಯೇ ನನ್ನ ಸೀನಿಯರ್ ಮದುವೆ ಸಹ ನಡೆಯಿತು. ಅದೂ ನನ್ನದಾದ ನಂತರ. ಶಾರದಾ ಪೂವಯ್ಯ ಅಲಿಯಾಸ್ ಶಾರದಾ ಹರಿಹರನ್ ಅಲಿಯಾಸ್ ಶಾರದಾ ದೇವದಾಸ್ ಆಗಿದ್ದರು.

51

ಕಟಕಟೆಯಲ್ಲಿ ವಾಜಪೇಯಿ , ನ್ಯಾಯಾಧೀಶರು ನುಡಿದ ಭವಿಷ್ಯ

ನಾನು ದೇವದಾಸ್ ಅವರ ಆಫೀಸನ್ನು ತೊರೆದು ಸ್ವತಂತ್ರವಾಗಿ ವೃತ್ತಿ ಆರಂಭಿಸಿದ ಕಾಲಾವಧಿಯಲ್ಲಿ ಮೋತಿಮಹಲ್ ಲಾಡ್ಜ್ ಮತ್ತು ಐಲ್ಯಾಂಡ್ ಬಾರ್‌ಗಳ ಕಾರ್ಮಿಕರ ಪರ ಕೇಸ್ ನಡೆಸಿ ಪರಿಹಾರ ಕೊಡಿಸಿದ್ದು ಕಾರ್ಮಿಕರ ಯೂನಿಯನ್‌ಗಳಲ್ಲಿ ಸುದ್ದಿಯಾಗಿತ್ತು. ಮಾಲೀಕರು ನನ್ನ ಸೀನಿಯರ್ ದೇವದಾಸ್‌ರಿಗೆ ಕೇಸ್ ಕೊಟ್ಟಾಗಲೂ ನಾನು ಯಶಸ್ವಿಯಾಗಿದ್ದು ಆ ಸಂಗತಿಗೆ ಹೆಚ್ಚಿನ ರೆಕ್ಕೆಪುಕ್ಕಗಳು ಬರಲು ಕಾರಣವಾಗಿತ್ತು.

ನಾನು ಪುನಃ ದೇವದಾಸ್ ಅವರ ಆಫೀಸ್ ಸೇರಿದ ಮೇಲೂ ಕಾರ್ಮಿಕ ಯೂನಿಯನ್‌ಗಳು ಬಂದು ನನ್ನನ್ನು ಸಂಪರ್ಕಿಸುತ್ತಿದ್ದವು.

ಒಂದು ದಿನ ಆಲಂಪಲ್ಲಿ ವೆಂಕಟರಾಮ್ ಎನ್ನುವವರು ಬಂದು ನನ್ನನ್ನು ಕಂಡರು. ಅವರು ಭಾರತೀಯ ಮಜ್ದೂರ್ ಸಂಘದ ಮುಖಂಡರು ಎಂದು

ಆಗಲೇ ಹೆಸರು ಮಾಡಿದ್ದರು. ಮೂವೀಲ್ಯಾಂಡ್ ಥೇಟರ್ ಎದುರಿಗೆ ಅವರ ಆಫೀಸ್ ಇತ್ತು. ಅವರು ಬ್ರಹ್ಮಚಾರಿಗಳೆಂದೂ ಸ್ವಯಂಸೇವಕ ಸಂಘದ ನಿಸ್ವಾರ್ಥ ಕಾರ್ಯಕರ್ತರೆಂದೂ ಕಾರ್ಮಿಕರ ಮಧ್ಯೆ ಪ್ರಚಾರವಾಗಿತ್ತು. ಅವರದು ಭಾರೀ ಗಾತ್ರದ ದೇಹ. ಇನ್ನೂ ಜ್ಯೂನಿಯರ್ ಆಗಿದ್ದ ನನ್ನ ಬಳಿ ಅವರು ಬಂದದ್ದು ನನ್ನ ಭಾಗ್ಯ ಎಂದುಕೊಂಡೆ.

ಒಂದು ಕೇಸಿನ ವಿಷಯ ಮಾತಾಡುವುದಿದೆಯೆಂದು ನನ್ನನ್ನು ಹೋಟೆಲ್‌ಗೆ ಕರೆದೊಯ್ದರು. ಗಾಂಧೀನಗರದ ಜನತಾ ಬಜಾರ್ ಮ್ಯಾನೇಜಿಂಗ್ ಡೈರೆಕ್ಟರ್ ವಿರುದ್ಧ ಪ್ರೈವೇಟ್ ಕೇಸ್ ಮಾಡಬೇಕೆಂದು ಕೇಳಿದರು.

ಜನತಾ ಬಜಾರ್‌ನಲ್ಲಿ ನೌಕರಿಗಿದ್ದ ಮುಸ್ಲಿಂ ಮಹಿಳೆಯನ್ನು ಹೀನಾಯವಾಗಿ ಅವಮಾನಿಸಿದ್ದ ಎಂ.ಡಿ. ಆಕೆಯನ್ನು ಕೆಲಸದಿಂದ ಅಮಾನತ್ತುಗೊಳಿಸಿದ್ದರೂ ಸಹ ಆ ಮುಸ್ಲಿಂ ಮಹಿಳೆಯ ಪರವಾಗಿ ಸಂಘ ಪರಿವಾರ. ಸಿದ್ಧಾಂತದ ಈ ವ್ಯಕ್ತಿ ಬಂದಿದ್ದಾರಲ್ಲ ಎಂದು ಕೊಂಚ ಆಶ್ಚರ್ಯವೇ ಆಯಿತು; ಸಿದ್ಧಾಂತಗಳು ಏನೇ ಇರಲಿ ವಾಸ್ತವತೆಗಳೇ ಬೇರೆಯಾಗಿರುತ್ತವೆ, ಅವು ಸಿದ್ಧಾಂತಗಳೊಂದಿಗೆ ಘರ್ಷಣೆಗಿಳಿಯುತ್ತವೆ ಎಂದುಕೊಂಡೆ. ನನ್ನಲ್ಲಿ ಉಂಟಾದ ಈ ಭಾವನೆಯನ್ನು ಅವರಿಗೆ ತೋರಗೊಡದೆ ಅವರು ನೀಡುವ ವಿವರಗಳನ್ನೆಲ್ಲಾ ನೋಟ್ ಮಾಡಿಕೊಂಡೆ.

ಮಹಿಳೆಯೊಂದಿಗೆ ಅಸಭ್ಯ ನಡವಳಿಕೆ ಮಾಡಿದ್ದಾರೆಂದು ಎಂ.ಡಿ.ಯ ಮೇಲೆ ಕೇಸ್ ಹಾಕಿದೆ. ಅದು ಕೋರ್ಟ್‌ನಲ್ಲಿ ಸ್ವೀಕೃತಗೊಂಡು ಎಂ.ಡಿ.ಗೆ ವಾರೆಂಟ್ ಹೋಯಿತು. ಎಂ.ಡಿ. ಜಾಮೀನನ್ನು ಪಡೆದುಕೊಂಡ. ಜನತಾ ಬಜಾರ್ ಆಡಳಿತ ಮಂಡಳಿಯ ದುಡ್ಡಿನಲ್ಲಿ ಆ ಎಂ.ಡಿ. ಫಾರಿನ್ ಟ್ರಿಪ್ ಹೊರಟಿದ್ದು ಗೊತ್ತಾಗಿತ್ತು ನಮಗೆ. ದೇಶಬಿಟ್ಟು ಹೋಗಬಾರದೆಂದು ಕೋರ್ಟ್ ಷರತ್ತು ವಿಧಿಸಿತ್ತು. ಎಂ.ಡಿ. ಅಡಕೊತ್ತಿನಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದ.

ಒಂದು ದಿನ ನನ್ನ ಬಳಿಗೆ ಬಂದು 'ಇದೋ ಇದು ಇಪ್ಪತ್ತೈದು ಸಾವಿರವಿದೆ ಇಟ್ಕೊಳ್ಳಿ. ಕೇಸ್ ಅನ್ನ ಪಂಚರ್ ಮಾಡಿ' ಎಂದು ಆಮಿಷ ಒಡ್ಡಿದ. ನನಗೆ ರೇಗಿ ಹೋಯಿತು. "ಅದೆಷ್ಟು ಧೈರ್ಯ ನಿಮಗೆ? ಇನ್ನೊಂದು ಕ್ಷಣ ನೀವಿಲ್ಲಿ ನಿಂತರೆ ಕಂಪ್ಲೇಂಟ್ ಕೊಡುತ್ತೇನೆ" ಎಂದೆ. ಕುಳ ಜಾಗ ಖಾಲಿ ಮಾಡಿತು.

ಆಲಂಪಲ್ಲಿಯವರಿಗೆ ಈ ಸಂಗತಿ ಹೇಳಿದೆ. ಅವರು ಖುಷಿಪಟ್ಟರು. ತಮ್ಮ ಕಾರ್ಮಿಕರ ಮುಂದೆ ನಾನು ಕಕ್ಷಿದಾರರ ಬಗ್ಗೆ ಇರಿಸಿಕೊಂಡಿರುವ ನಿಷ್ಠೆಯನ್ನು ಕೊಂಡಾಡಿದರು.

ಎಂ.ಡಿ.ಗೆ ಬೇರೆ ದಾರಿ ಇಲ್ಲದೆ ಆಲಂಪಲ್ಲಿಯವರಲ್ಲಿ ಹೋಗಿ ಶರಣಾದರು. ಆ ಮುಸ್ಲಿಂ ಮಹಿಳೆಯ ಕ್ಷಮಾಪಣೆ ಕೇಳಿದಲ್ಲದೆ ಅಮಾನತ್ ಆದೇಶವನ್ನು ವಾಪಸ್ ಪಡೆದುಕ್ಕೊಂಡರು. ಅದಕ್ಕೂ ಮುಂಚೆ ಜನತಾ ಬಜಾರ್‌ನ ಸುಮಾರು ನಲವತ್ತು ಮಹಿಳಾ ಕೂಲಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದರು. ಅವರೆಲ್ಲ ಆಲಂಪಲ್ಲಿಯವರ ನೇತೃತ್ವದಲ್ಲಿ ಸಂಘಟಿತರಾಗಿದ್ದರು. ಅವರ ಅದೃಷ್ಟವೂ ಖುಲಾಯಿಸಿತು; ಅವರನ್ನೆಲ್ಲ ಪುನಃ ಕೆಲಸಕ್ಕೆ ಸೇರಿಸಿಕೊಂಡ ಎಂ.ಡಿ.

ಆ ಕೇಸಿನಲ್ಲಿ ನನಗೆ ಆಲಂಪಲ್ಲಿಯವರು ಹತ್ತು ಸಾವಿರ ರೂಪಾಯಿಗಳನ್ನು ಕೊಡಿಸಿದರು. ನಾನು ನನ್ನ ವೃತ್ತಿಯಲ್ಲಿ ಪಡೆದ ಅತ್ಯಂತ ದೊಡ್ಡ ಮೊತ್ತ ಅದಾಗಿತ್ತು. ಅವತ್ತು ನನಗಾದ ಸಂತೋಷ ಅಷ್ಟಿಷ್ಟಲ್ಲ. ಕಕ್ಷಿದಾರರಿಂದ ಹೊಗಳಿಕೆ ಮತ್ತು ಹಣ ಎರಡೂ ಸಿಕ್ಕಿದ್ದವು. ಅದರೊಂದಿಗೆ ಎಂ.ಡಿ.ಯ ಆಮಿಷ ತಿರಸ್ಕರಿಸಿದ ತೃಪ್ತಿಯೂ ಸೇರಿಕೊಂಡಿತ್ತು.

ಈ ಪ್ರೈವೇಟ್ ಕೇಸ್‌ನಿಂದಾಗಿ ನನ್ನ ಮತ್ತು ಆಲಂಪಲ್ಲಿಯವರ ಸಂಬಂಧ ನಿಕಟವಾಗಿಬಿಟ್ಟಿತು.

ಅದೇ ಸಮಯಕ್ಕೆ ಪ್ರಧಾನಿ ಇಂದಿರಾಗಾಂಧಿಯವರು ದೇಶದ ಮೇಲೆ ಎಮರ್ಜೆನ್ಸಿ ಹೇರಿಬಿಟ್ಟರು. ಎಲ್ಲ ಲಾಯರ್‌ಗಳ ಬಾಯಲ್ಲೂ ಎಮರ್ಜೆನ್ಸಿಯ ಚರ್ಚೆಯೇ. ನಮ್ಮ ಸೀನಿಯರ್ ಅಂತೂ ಇಂದಿರಾಗಾಂಧಿಯನ್ನು ವಾಚಾಮಗೋಚರ ಬಯ್ಯತೊಡಗಿದ್ದರು.

ಎಮರ್ಜೆನ್ಸಿಯ ಪರ ಮಾತಾಡುವ ಲಾಯರ್‌ಗಳೂ ಕೆಲವರಿದ್ದರು. ಎಮರ್ಜೆನ್ಸಿಯಿಂದ ಶ್ರೀಮಂತರಿಗೆ, ಕಾಳಸಂತೆಕೋರರಿಗೆ ತೊಂದರೆಯಾಗಿದೆ. ರೈತರಿಗೆ, ಬಡವರಿಗೆ ಮತ್ತು ಕಾರ್ಮಿಕರಿಗೆ ತೊಂದರೆಯೇನೂ ಇಲ್ಲ. ನಮ್ಮ ಸಂವಿಧಾನ ನೀಡಿರುವ ಹಕ್ಕುಗಳು ದುರುಪಯೋಗ ಮತ್ತು ದುರ್ಬಳಕೆಗಳನ್ನು ಎಮರ್ಜೆನ್ಸಿ ನಿಯಂತ್ರಣದಲ್ಲಿಡುತ್ತದೆಯಷ್ಟೆ ಎನ್ನುವುದು ಅವರ ವಾದದ ಸಾರಾಂಶವಾಗಿತ್ತು. ಈ ಅಂಶಗಳು ಸರಿಯಲ್ಲವೆ ಅದೇಕೆ ನಮ್ಮ ಸೀನಿಯರ್, "ಅನ್ನದ ಆಸೆಯೊಡ್ಡಿ ಹಕ್ಕುಗಳನ್ನು ಕಿತ್ತುಕೊಂಡಿದ್ದಾಳೆ" ಎಂದು ಟೀಕಿಸುತ್ತಿದ್ದಾರೆ ಎಂದೆನಿಸುತ್ತಿತ್ತು. ನಮ್ಮ ಸೀನಿಯರ್ ತರಹವೇ ಹಲವಾರು ವಕೀಲರು ಏರಿದ ಸ್ವರದಲ್ಲಿ ಎಮರ್ಜೆನ್ಸಿಯ ವಿರುದ್ಧ ಮಾತಾಡಿ ತಾವು ಡೆಮಾಕ್ರಸಿಯ ಚಾಂಪಿಯನ್‌ಗಳೆನ್ನುವಂತೆ ಬೀಗುತ್ತಿದ್ದರು. ಎರಡೇ ವಾರದಲ್ಲಿ ಮೂವರು ಲಾಯರ್‌ಗಳ ಬಂಧನವಾಗಿಬಿಟ್ಟಿತು. ರಾಮಾ ಜೋಯಿಸ್, ಶ್ವೇತಾದ್ರಿ ಮತ್ತು

ಎಸ್. ಕೃಷ್ಣಯ್ಯ. ಈ ಮೂವರೂ ಲಾಯರ್‌ಗಳು ಜನಸಂಘದವರು ಎಂದು ಬಂಧಿಸಲಾಗಿತ್ತು.

ಆಗ ಇದ್ದಕ್ಕಿದ್ದಂತೆ ಲಾಯರ್‌ಗಳಲ್ಲಿ ಸ್ಮಶಾನಮೌನ ಆವರಿಸಿಕೊಂಡುಬಿಟ್ಟಿತ್ತು. ಏರಿದ ಸ್ವರದಲ್ಲಿ ಎಮರ್ಜೆನ್ಸಿಯ ವಿರುದ್ಧ ಕೆಂಡಕಾರಿದವರಾರೂ ಬಂಧಿತರ ಪರ ವಕಾಲತ್ತು ಹಾಕಲು ಮುಂದೆ ಬರಲಿಲ್ಲ.

ನನಗೆ ಪಿಚ್ಚೆನ್ನಿಸಿತು; ನಮ್ಮದು ಟಾಕಿಂಗ್ ಡೆಮಾಕ್ರಸಿ ಎನ್ನಿಸಿತು. ಎಮರ್ಜೆನ್ಸಿಯಲ್ಲಿ ಬಂಧಿಸಲ್ಪಟ್ಟ ಆರೋಪಿಗಳ ಪರ ವಕಾಲತ್ತು ಹಾಕುವ ಲಾಯರ್‌ಗಳನ್ನು ಬಂಧಿಸಬೇಕೆನ್ನುವ ಆದೇಶವಿತ್ತು. ಹೀಗಾಗಿ ಲಾಯರ್‌ಗಳೆಲ್ಲ ಥಂಡಾ ಹೊಡೆದುಬಿಟ್ಟಿದ್ದರು.

ತಾನು ತಪ್ಪಿತಸ್ಥ ಅಲ್ಲ ಎಂದು ವಾದಿಸಲೂ ಅವಕಾಶ ನೀಡದಿರುವಂಥ ಧೋರಣೆ ತೀರಾ ಅಪಾಯಕಾರಿಯಾದುದು ಎನಿಸಿತು ನನಗೆ.

ಎಮರ್ಜೆನ್ಸಿ ಪರವಾಗಿ ವಾದಿಸುತ್ತಿದ್ದ ಲಾಯರ್‌ಗಳು ಅದರ ವಿರೋಧಿಗಳನ್ನು "ಭಾರೀ ಶೂರರಂತೆ ಮಾತಾಡುತ್ತಿದ್ದವರೆಲ್ಲ ಎಲ್ಲಿ ನಾಪತ್ತೆಯಾಗಿ ಬಿಟ್ಟಿದ್ದಾರೆ?" ಎಂದು ಲೇವಡಿ ಮಾಡತೊಡಗಿದ್ದರು.

ಪ್ರಜಾಪ್ರಭುತ್ವ ಹುಟ್ಟಿಕೊಂಡಿದ್ದೇ ಮಾತಿನ ಹಕ್ಕು ಕೇಳಿ ಅಲ್ಲವೆ? ಆ ಮಾತಾಡುವ ಹಕ್ಕನ್ನೇ ಕಸಿದುಕೊಳ್ಳುವುದು ನ್ಯಾಯವೇ? ಪ್ರಜಾಪ್ರಭುತ್ವವೆಂದರೆ ಬಲಶಾಲಿಗಳು ಮಾತ್ರ ಮಾತಾಡುವುದು ಎಂದರ್ಥವಲ್ಲ. ಅತ್ಯಂತ ಅಶಕ್ತನಿಗೂ ಮಾತಾಡುವ ಹಕ್ಕಿರುವುದು ಎಂದರ್ಥ ಅಲ್ಲವೆ? ಆಳುವವರಿಗೆ ಇರುವಂತೆಯೇ ಕೇಳುವವರಿಗೂ ಹಕ್ಕಿರುವುದೇ ನಿಜವಾದ ಪ್ರಜಾಪ್ರಭುತ್ವವಲ್ಲವೆ? ದೇಶದಲ್ಲಿ ಎಲ್ಲ ನಡೆದಿದೆ; ಆದರೆ ಅದೆಲ್ಲ ಭಯದ ನೆರಳಲ್ಲಿ! ಪಾರ್ಲಿಮೆಂಟ್‌ನಲ್ಲಿ ಎಲ್ಲ ಕೂತಿದ್ದಾರೆ, ಆದರೆ ಅವರ ಸುತ್ತ ಬಂದೂಕಧಾರಿಗಳು ನಿಂತಿದ್ದಾರೆ, ಬಾಯಿಬಿಟ್ಟೀರಿ ಜೋಕೆ ಎನ್ನುವಂಥ ದೃಶ್ಯ ನನ್ನ ಕಣ್ ಮುಂದೆ ಬಂದಿತು.

ಒಂದು ಬೆಳಗ್ಗೆ ಪೇಪರ್ ತೆರೆಯುತ್ತಿದ್ದಂತೆಯೇ ಆಲಂಪಲ್ಲಿ ವೆಂಕಟರಾಮ್ ಅವರ ಬಂಧನದ ಸುದ್ದಿಯಿತ್ತು. ನನಗೆ ಷಾಕ್ ಆಯಿತು. ಎಮರ್ಜೆನ್ಸಿ ವಿರುದ್ಧ ನಿಜವಾಗಿಯೂ ಕೋಪ ಉಕ್ಕಿತು.

"ನನ್ನ ಬಂಧನವಾದರೂ ಪರವಾಗಿಲ್ಲ, ಆಲಂಪಲ್ಲಿಯವರ ಪರ ವಕಾಲತ್ತು ಹಾಕಿಬಿಡುವೆ" ಎಂದೆ ಸೀನಿಯರ್ ಹತ್ತಿರ.

"ನಿನಗಿನ್ನೂ ಯೌವನದ ಹುಮ್ಮಸ್ಸು. ಅನುಭವ ಸಾಲದು. ನಾನು ಹೇಳಿದಷ್ಟು ಕೇಳಿಕೊಂಡು ಇರು" ಎಂದರು ಗಂಭೀರವಾಗಿ ದೇವದಾಸ್.

ದೇವದಾಸ್ ಅವರೊಂದಿಗೆ ಪುನಃ ಘರ್ಷಣೆ ಮಾಡಿಕೊಂಡು ಆಫೀಸ್ ಬಿಟ್ಟು ಹೋಗಿ, ಪುನಃ ವಾಪಸ್ ಬಂದು ಬಹಳ ಕಾಲವಾಗಿರಲಿಲ್ಲ. ಬಿಡುವುದು, ಬರುವುದು ಇವನ ಪ್ರವೃತ್ತಿ ಎನ್ನುವ ಟೀಕೆಗಳು ನನಗೆ ಕಿರಿಕಿರಿಯುಂಟುಮಾಡುತ್ತಿದ್ದವು. ಸೀನಿಯರ್ ಜೊತೆ ಘರ್ಷಣೆ ಮಾಡಿಕೊಳ್ಳಬಾರದೆಂದು ಆಲಂಪಲ್ಲಿಯವರ ಪರ ನಾನು ವಕಾಲತ್ತು ಹಾಕದೇ ಹೋದುದು ಇಂದಿಗೂ ನನ್ನಲ್ಲಿ ಮುಳ್ಳಾಗಿ ಚುಚ್ಚುತ್ತಿದೆ.

ಬೇರೆಯವರನ್ನೆಲ್ಲ ಮಾತಿನ ಶೂರರು ಎಂದು ಛೇಡಿಸುತ್ತಿದ್ದ ನನ್ನ ಮನಸ್ಸು ನನ್ನನ್ನೇ ಛೇಡಿಸತೊಡಗಿತ್ತು! ಪ್ರಜಾಪ್ರಭುತ್ವದ ಅರ್ಥ ಅದೆಷ್ಟು ಸಂಕೀರ್ಣ ಎನಿಸತೊಡಗಿತು.

ಎಮರ್ಜೆನ್ಸಿಯನ್ನು ಹೇರಿದ ಇಂದಿರಾಗಾಂಧಿಯನ್ನು ನಾನಂದುಕೊಂಡಿದ್ದ ಶೂರರು ಮಾತ್ರವಲ್ಲ ಕೋಟ್ಯಂತರ ಹೇಡಿಗಳೂ ತಮ್ಮ ಮತ ಚಲಾಯಿಸಿ ಅಧಿಕಾರದಿಂದ ಕೆಳಗಿಳಿಸಿದಾಗ; ಬಿಡಿಬಿಡಿಯಾಗಿದ್ದಾಗ ಹೇಡಿಗಳಾಗಿ ಕಾಣಿಸುತ್ತಿದ್ದವರು ಇಡಿಯಾದಾಗ ಶೂರರಾಗಿ ಪರಿವರ್ತಿತಗೊಂಡಿದ್ದರು ! ಇದೇ beauty of the democracy ಅಲ್ಲವೆ !

ಮತ್ತೆ ವಿಷಯಕ್ಕೆ ಬರೋಣ. ಬೆಂಗಳೂರಿನ ಸೆಂಟ್ರಲ್ ಜೈಲ್‌ನಲ್ಲಿ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅದ್ವಾನಿ ಮತ್ತು ಜಾರ್ಜ್ ಫರ್ನಾಂಡಿಸ್‌ರವರನ್ನು ಬಂಧಿಸಿಡಲಾಗಿತ್ತು. ಇದರಂತೆಯೇ ರಾಮಕೃಷ್ಣ ಹೆಗಡೆ, ದೇವೇಗೌಡ, ಪಿ.ಜಿ.ಆರ್. ಸಿಂಧ್ಯಾ ಮುಂತಾದವರೂ ಎಮರ್ಜೆನ್ಸಿಯ ಬಂಧನಕ್ಕೊಳಗಾಗಿದ್ದರು.

ಬಂಧಿತರ ಪರ ವಕಾಲತ್ತು ಹಾಕಲು ಯಾವ ವಕೀಲರೂ ಮುಂದೆ ಬಾರದಿದ್ದಾಗ ರಿಟ್ ಅಯ್ಯಂಗಾರ್ ಎಂದು ಖ್ಯಾತರಾಗಿದ್ದ ವಯೋವೃದ್ಧ ಲಾಯರ್ ಕೃಷ್ಣ ಅಯ್ಯಂಗಾರ್ ಅವರು ರಾಮಾ ಜೋಯಿಸ್ ಮತ್ತಿತರ ಬಂಧಿತ ವಕೀಲರ ಪರ ವಕಾಲತ್ತು ಹಾಕಿದ್ದರು.

"ಮುದುಕರಾಗಿದ್ದಾರೆ, ಆಗಲೇ ಒಂದು ಕಾಲನ್ನು ಸ್ಮಶಾನದಲ್ಲಿರಿಸಿಕೊಂಡಿದ್ದವರು. ಅದಕ್ಕಾಗಿ ಅವರಿಗೆ ಬಂಧನದ ಭಯವಿಲ್ಲ" ಎಂದು ಅಯ್ಯಂಗಾರ್ ಬಗ್ಗೆ ಮಾತಾಡುತ್ತಿದ್ದುದು ನನಗೆ ಸರಿಯೆನಿಸಲಿಲ್ಲ. ಅವರಂತೆಯೇ ವೃದ್ಧರಾಗಿದ್ದ ಅದೆಷ್ಟೋ ಲಾಯರ್‌ಗಳು ಆ ಧೈರ್ಯವನ್ನು ತೋರಿರಲಿಲ್ಲ!

ನನ್ನಂಥ ಯುವಕರಿಗೆ ಮಾಡಲಾಗದ್ದನ್ನು ರಿಟ್ ಅಯ್ಯಂಗಾರ್ ಮಾಡಿದ್ದರು. ಅವರ ಬಗ್ಗೆ ನನ್ನಲ್ಲಿದ್ದ ಗೌರವಭಾವ ಹೆಚ್ಚಾಯಿತು. ಆಲಂಪಲ್ಲಿಯವರ ಪರ ಅವರು ವಕಾಲತ್ತು ಹಾಕಿದ್ದರು. ಅದನ್ನು ವಿಚಾರಿಸಿಕೊಳ್ಳುವುದರ ಮೂಲಕ ನನ್ನ ಅಪರಾಧೀ ಪ್ರಜ್ಞೆಯನ್ನು ಸಮಾಧಾನಪಡಿಸಿದೆ.

ರಿಟ್ ಅಯ್ಯಂಗಾರ್ ಅವರು ನನಗೆ, "ಎಮರ್ಜೆನ್ಸಿ ಕೇಸ್‌ಗಳಲ್ಲಿ ನಿನ್ನಷ್ಟು ಆಸಕ್ತಿ ತೋರುವ ತರುಣ ಲಾಯರ್‌ಗಳು ಕಮ್ಮಿ. ನಾಳೆ ವಾಜಪೇಯಿ, ಆದ್ವಾನಿ, ಫರ್ನಾಂಡೀಸ್‌ಗಳ ವಿಚಾರಣೆ ನಡೆಯಲಿದೆ. ಹೈಕೋರ್ಟ್‌ಗೆ ಹೋಗಿ ಅದನ್ನೆಲ್ಲಾ ಗಮನಿಸು. ಒಳ್ಳೆ ಜ್ಞಾನ, ಅನುಭವಗಳು ಸಿಗುತ್ತವೆ" ಎಂದರು.

ಮಾರನೆ ದಿನ ಹೈಕೋರ್ಟ್‌ಗೆ ಹೋದೆ. ಜಸ್ಟಿಸ್ ಜಿ.ಕೆ. ಗೋವಿಂದ್ ಭಟ್ ಮುಖ್ಯ ನ್ಯಾಯಾಧೀಶರಾಗಿದ್ದ ಸಂವಿಧಾನ ಪೀಠದ ಮುಂದೆ ವಿಚಾರಣೆ ನಡೆಯತೊಡಗಿತು. ಸೆಂಟ್ರಲ್ ಗೌರ್ನಮೆಂಟ್ ಸ್ಟಾಂಡಿಂಗ್ ಕೌನ್ಸಿಲ್ ಯು.ಎಲ್. ನಾರಾಯಣ್‌ರಾವ್ ಅವರು ಸೆಂಟ್ರಲ್ ಗೌರ್ನಮೆಂಟ್ ಪರ ಇದ್ದರು. ಸ್ಟೇಟ್ ಗೌರ್ನಮೆಂಟ್ ಪರ ಅಡ್ವೋಕೇಟ್ ಆರ್.ಎನ್. ಭೈರಾರೆಡ್ಡಿಯವರು ಇದ್ದರು.

ನಾರಾಯಣ್‌ರಾವ್ ಅವರು ತೀರಾ ಅಸಡ್ಡೆಯ ಧ್ವನಿಯಲ್ಲಿ ತಮ್ಮ ವಾದ ಪ್ರಾರಂಬಿಸಿದ್ದು ಜಸ್ಟಿಸ್ ಗೋವಿಂದಭಟ್ಟರ ಮುಖದಲ್ಲಿ ಅತೃಪ್ತಿಯ ಹೊಗೆಯೆಬ್ಬಿಸಿತು. ನಾರಾಯಣ್‌ರಾವ್ ಅವರು ಬಂಧಿತರನ್ನು "One Mr. Vajpayee, One Mr. Advani....." ಎನ್ನುತ್ತಿದ್ದಂತೆಯೇ ಜಸ್ಟಿಸ್ ಗೋವಿಂದಭಟ್ಟರು ನಾರಾಯಣ್‌ರಾವ್‌ರನ್ನು ಮಧ್ಯದಲ್ಲಿಯೇ ತಡೆದು "ಹಾಗೆ ಹಗುರವಾಗಿ ಸಂಬೋಧಿಸಿ ಮಾತಾಡಬೇಡಿ. ಅವರೆಲ್ಲ ಮುಂದೊಮ್ಮೆ ಈ ದೇಶದ ಪ್ರಧಾನಿಗಳಾಗುವ ಸಾಮರ್ಥ್ಯ ಹೊಂದಿರುವವರು. ವಿಚಾರಣೆಯೆಂದರೆ ಅವಹೇಳನಕ್ಕೆ ಗುರಿಪಡಿಸುವುದು ಎಂದರ್ಥವಲ್ಲ; ವಿಚಾರಣೆ ಶಿಕ್ಷೆಯಾಗಿ ಮಾರ್ಪಡಕೂಡದು...." ಎಂದುಬಿಟ್ಟಾಗ ನಾರಾಯಣ್‌ರಾವ್ ಕ್ಷಣ ತಬ್ಬಿಬ್ಬಾಗಿಬಿಟ್ಟರು.

ಇಪ್ಪತ್ತಾರು ವರ್ಷಗಳಲ್ಲಿ ತಮ್ಮ ಮಾತು ನಿಜವಾಗುತ್ತದೆಂದು ಜಸ್ಟಿಸ್ ಗೋವಿಂದಭಟ್ ಅವರಿಗೂ ಅಂದು ಗೊತ್ತಿರಲಿಲ್ಲ! ವಾಜಪೇಯಿಯವರು ಪ್ರಧಾನಿಗಳಾಗಿ ಅಧಿಕಾರ ಸ್ವೀಕರಿಸಿದಾಗ 1976ರಲ್ಲಿ ಜಸ್ಟಿಸ್ ಗೋವಿಂದ ಭಟ್ ಅವರಾಡಿದ ಮಾತು ನೆನಪಿನಾಳದಿಂದ ತೇಲಿಬಂದಿತು.

ನಂತರ ಭೈರಾರೆಡ್ಡಿಯವರು ತಮ್ಮ ವಾದ ಶುರುಮಾಡಿದರು. ತೀರಾ ವಿವಾದಾಸ್ಪದವಾಗಿ ಮಾತಾಡಿಬಿಟ್ಟರು: "State has the power to take away

the lives of citizens during emergency. Now we have only detained these persons without doing anything. They are all lucky...." ಎಂದು ಏರುಧ್ವನಿಯಲ್ಲಿ ವಾದಿಸಿದರು. ಇವರ ಈ ಮಾತುಗಳು ಪತ್ರಿಕೆಗಳಲ್ಲಿ ಸ್ಫೋಟವಾಗಿ ಪ್ರಕಟಗೊಂಡವು.

ಮತ್ತೊಂದು ದಿನ ರಾಮಕೃಷ್ಣ ಹೆಗಡೆಯವರ ವಿಚಾರಣೆಯಿತ್ತು. ಕೋರ್ಟ್‌ನಲ್ಲಿ ಜನ ಕಿಕ್ಕಿರಿದರು. ಹೆಗಡೆಯವರು ಹೊರಬರುತ್ತಿದ್ದಂತೆಯೇ ಅವರ ಒಬ್ಬ ಅಭಿಮಾನಿ ಸಿಗರೇಟಿನ ದೊಡ್ಡ ಬಂಡಲ್ ಒಂದನ್ನು ತಂದುಕೊಟ್ಟ. ಅದನ್ನು ಪ್ರೀತಿಯಿಂದ ಕಂಕುಳಲ್ಲಿರಿಸಿಕೊಂಡರು. ಪಕ್ಕದಲ್ಲಿದ್ದ ಪೋಲೀಸ್ ಆಫೀಸರ್ "ಜೈಲಲ್ಲಿ ಇಷ್ಟೊಂದು ಸಿಗರೇಟ್ ಸೇದಿದರೆ ನಿಮ್ಮ ಆರೋಗ್ಯ ಹಾಳಾಗುತ್ತದೆ" ಎಂದು ಹೇಳಿ ಅದನ್ನು ಇಸಿದುಕೊಳ್ಳಲು ಹೋದರೆ ಅದಕ್ಕೆ ಹೆಗಡೆಯವರು "ಇದನ್ನೆಲ್ಲ ಸೇದುವ, ದಕ್ಕಿಸಿಕೊಳ್ಳುವ ಶಕ್ತಿಯನ್ನು ಈ ಎಮರ್ಜೆನ್ಸಿ ನನಗೆ ನೀಡಿದೆ...." ಎಂದರು. ಜನ ಹೋ ಎಂದು ಚಪ್ಪಾಳೆ ತಟ್ಟುವಾಗ ಅವರ ಕಣ್ಣುಗಳಲ್ಲಿ ಅನುಕಂಪ ಅಲೆಯಲೆಯಾಗಿ ಹರಿಯುತ್ತಿತ್ತು.

ಆಲಂಪಲ್ಲಿ ವೆಂಕಟರಾಮ್ ಅವರು ಜೈಲಿನಿಂದ ಹೊರಬಂದರು. ತೀರಾ ಸಣ್ಣಗಾಗಿ ಆರೋಗ್ಯಶಾಲಿಗಳಾಗಿ ಮಿಂಚುತ್ತಿದ್ದರು. "ನಿಮ್ಮ ಬೊಜ್ಜೆಲ್ಲ ಹೋಗಿಬಿಟ್ಟಿದೆ?" ಎಂದೆ.

ಅದಕ್ಕವರು 'ಆ ಇಂದಿರಾಗಾಂಧಿಯ ಕೃಪೆ. ನಮ್ಮನ್ನೆಲ್ಲಾ ಬಂಧಿಸಿ ಜೈಲಲ್ಲಿಡದಿದ್ದರೆ ಅನಾರೋಗ್ಯದಿಂದ ನಮ್ಮ ಆಯುಷ್ಯ ಕಡಿಮೆಯಾಗುತ್ತಿತ್ತು. ಈಗ ನೋಡಿ ಜೈಲಿನಲ್ಲಿ ಸಮಯಕ್ಕೆ ಸರಿಯಾಗಿ ಊಟ, ತಿಂಡಿ, ಯೋಗ, ಪ್ರಾಣಾಯಾಮಗಳಿಂದ ಹೇಗಾಗಿದ್ದೇನೆ....! ನನ್ನಂಥವರಿಗೆ ಆರೋಗ್ಯಭಾಗ್ಯ ಕಲ್ಪಿಸಿದಂತೆಯೇ ಇನ್ನೂ ಕೆಲವರಿಗೆ ರಾಜಕೀಯ ಭಾಗ್ಯವನ್ನೂ ಕಲ್ಪಿಸಿದ್ದಾಳೆ ಇಂದಿರಾಗಾಂಧಿ. ಯಾವ ಲೆಕ್ಕಕ್ಕೂ ಇಲ್ಲದ ಕೆಲವರನ್ನು ಬಂಧಿಸಿಬಿಟ್ಟಿದ್ದಾರೆ. ಅವರೆಲ್ಲ ಈಗ ಹೊರಬಂದು ದೊಡ್ಡ ಲೀಡರ್‌ಗಳಾಗಿ ಮಿಂಚುತ್ತಿದ್ದಾರೆ. ತಮಗೆ ದಕ್ಕಿದ ರಾಜಕೀಯ ಸೌಭಾಗ್ಯಕ್ಕಾಗಿ ಇಂದಿರಾಗಾಂಧಿಗೆ ಥ್ಯಾಂಕ್ಸ್ ಹೇಳಬೇಕು ಅವರೆಲ್ಲ!" ಎಂದು ನಗಾಡಿದರು.

52

ತಾಯಿಯೇ ಮಗಳನ್ನು ಕೊಂದಳು !

ದೇವದಾಸ್ ಅವರು ಡಾ. ಡಿಸೋಜಾ ಅವರ ಮನೆಗೆ ಪದೇಪದೇ ಹೋಗುತ್ತಿದ್ದರು. ನನ್ನನ್ನೂ ಕರೆದೊಯ್ಯುತ್ತಿದ್ದರು. ಇಬ್ಬರೂ ಗಂಟೆಗಟ್ಟಲೆ ಮಾತಾಡಿದರೂ ಖಾಲಿಯಾಗುತ್ತಿದ್ದುದು ಮಾತ್ರ ಒಂದೇ ಬಿಯರ್. ನನಗೆ ಕೋಲ್ಡ್ ಡ್ರಿಂಕ್ಸ್ ಇರುತ್ತಿತ್ತು. ಮರ್ಡರ್ ಕೇಸ್‌ಗಳಿಗೆ ಸಂಬಂಧಿಸಿದಂತೆ ಪೋಸ್ಟ್ ಮಾರ್ಟಮ್ ರಿಪೋರ್ಟ್‌ಗಳ ಬಗ್ಗೆ ಚರ್ಚಿಸಲು ದೇವದಾಸ್, ಡಿಸೋಜಾ ಅವರ ಮನೆಗೆ ಮಾತ್ರ ಹೋಗುತ್ತಿದ್ದರು. ಸೀನಿಯರ್ ಜೊತೆಗೆ ನಾಲ್ಕಾರು ಬಾರಿ ನಾನು ಹೋಗಿದ್ದರಿಂದ ಡಿಸೋಜಾ ನನ್ನನ್ನೂ ಆಪ್ತವಾಗಿ ಕಾಣತೊಡಗಿದ್ದರು. ಅವರ ದೊಡ್ಡಬಂಗಲೆಯಲ್ಲಿ ಮಧ್ಯವಯಸ್ಕ ಹೆಣ್ಣು ಮಗಳೊಬ್ಬಳಿದ್ದಳು. ಇಬ್ಬರು ಮೂವರು ಕೆಲಸಗಾರರಿದ್ದರು. ನಾನು ಅವರ ಮನೆಯಲ್ಲಿದ್ದ ಹೆಣ್ಣುಮಗಳು ಡಿಸೋಜಾ ಅವರಿಗೆ ಏನಾಗಬೇಕೆಂದು ಪ್ರಶ್ನಿಸುವ ಗೋಜಿಗೆ ಹೋಗಿರಲಿಲ್ಲ.

ಹೀಗೇ ಒಂದು ರಾತ್ರಿ ನಾನು ಮತ್ತು ದೇವದಾಸ್ ಡಿಸೋಜಾ ಅವರ ಮನೆಗೆ ಹೋದೆವು. ದೇವದಾಸ್ ಒಂದು ವಿಚಿತ್ರ ಮರ್ಡರ್ ಕೇಸ್ ವಿವರಿಸಿದರು.

ಅದನ್ನು ಕೇಳಿ ಡಿಸೋಜಾ "Truth is stranger than fiction" ಎಂದರು. ಅದಕ್ಕೆ ಸೀನಿಯರ್ "ನಿಮ್ಮ ಮನೆ ಕೇಸ್ ಥರ...." ಎಂದರು. ಥಟ್ಟನೆ ನಾನು ಅಲ್ಲಿ ಉಪಸ್ಥಿತನಿರುವುದರ ಬಗ್ಗೆ ಜ್ಞಾಪಕವಾಗಿ ನನ್ನತ್ತ ನೋಡಿ ಮಾತು ಬದಲಿಸಿ ವಿಷಯವನ್ನು ಬೇರೆಡೆ ಎಳೆದ್ಕೊಯ್ದರು. ಡಿಸೋಜಾ ಮುಖ ಗಂಭೀರವಾಯಿತು. ಅದೇನಿರಬಹುದು ಇವರ ಮನೆಯ ಕಥೆ ಎಂದು ನನ್ನ ತಲೆಯಲ್ಲಿ ಕೊರೆಯತೊಡಗಿತು.

ಇದೆಲ್ಲಾ ಆಗಿ ಎರಡು ತಿಂಗಳು ಕಳೆದಿರಬೇಕು. ಸೀನಿಯರ್, "ಡಿಸೋಜಾಗೆ ಫೋನ್ ಮಾಡಿದ್ದೇನೆ, ಇವತ್ತು ಸಾಯಂಕಾಲ ಹೋಗಿ ಅವರು ಕೊಡುವ ಕೆಲವು ನೋಟ್ಸ್ ಮತ್ತು ರೆಫರೆನ್ಸ್ ಬುಕ್ಸ್ ತಕ್ಕೊಂಡ್ ಬಾ" ಎಂದರು.

ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜ್ ಸಮೀಪ ಇದ್ದ ಡಿಸೋಜಾ ಮನೆಗೆ ಹೋದೆ. ಕಾಂಪೌಂಡ್ ಗಾರ್ಡನ್‌ನಲ್ಲಿ ಸಿಗರೇಟ್ ಸೇದುತ್ತಾ ಅಡ್ಡಾಡುತ್ತಿದ್ದರು. ನನ್ನನ್ನು ನೋಡಿ "ಹಲೋ ಹನುಮಂತ್ರಾಯ್ !" ಎಂದು ಸ್ವಾಗತಿಸಿದರು. ಸೀನಿಯರ್‌ರನ್ನು ಬಿಟ್ಟು ನಾನೊಬ್ಬನೇ ಅವರ ಮನೆಗೆ ಬಂದದ್ದು ಅದೇ ಮೊದಲು. ದೇವದಾಸ್ ಅವರಿಗೆ ಕೊಡುತ್ತಿದ್ದ ಸ್ವಾಗತವನ್ನೂ ಸೇರಿಸಿ ನನ್ನನ್ನು ಬರಮಾಡಿಕೊಳ್ಳುತ್ತಿದ್ದಾರೆನ್ನಿಸಿತು; ಹಾಗಿತ್ತು ಅವರ ಧ್ವನಿ.

"ಇನ್ನೇನು ರಾತ್ರಿಯಾಗುತ್ತಿದೆ. ಇವತ್ತು ನೀನು ಬಿಯರ್ ಕುಡಿಯಬೇಕು ನನ್ನ ಜೊತೆಗೆ" ಎಂದರು. ನಾನು ಅದೆಲ್ಲ ಬೇಡಿ ಸಾರ್ ಎಂದೆ. "ನಿಮ್ಮ ಸೀನಿಯರ್ ಭಯಾನಾ ನಿಂಗೆ? ನಾನು ಅವರಿಗೆ ಹೇಳೋಲ್ಲ ಕುಡಿ" ಎಂದು ನನ್ನನ್ನು ಹಾಲ್‌ಗೆ ಕರೆದೊಯ್ದರು.

ನನಗೆ ಕುಡಿಯುವ ಅಭ್ಯಾಸವಿದ್ದರೂ ಮುಜುಗರದಿಂದಾಗಿ ನಿರಾಕರಿಸುತ್ತಿರುವೆ ಎಂದುಕೊಂಡಂತಿತ್ತು ಅವರು. ನಾನು ಕುಡಿಯುತ್ತಿರುವುದು ಇದೇ ಮೊದಲು ಎಂದು ಹೇಳಿದೆ. ಆದರೆ ಅವರು ಅದನ್ನು ನಂಬಿದಂತೆ ಕಾಣಲಿಲ್ಲ.

"ನೋಟ್ಸ್ ಎಲ್ಲ ರೆಡಿ ಮಾಡಿಟ್ಟಿದ್ದೇನೆ. ಒಂದರ್ಧ ಗಂಟೆ ಹರಟೆ ಹೊಡೆಯೋಣ. ನಂತರ ಅವನ್ನೆಲ್ಲ ನಿನಗೆ ಕೊಡುವೆ" ಎಂದರು.

ಮೈಯನ್ನು ಬಿಗಿ ಹಿಡಿದುಕೊಂಡು ಬಿಯರ್ ಮಗ್ಗನ್ನೂ ಕೈಗೆತ್ತಿಕೊಂಡೆ. ಯಾವ ತಡೆಯೂ ಇಲ್ಲದೆ ನನ್ನ ಬಾಯಿಯಿಂದ, "ಸಾರ್ ಅದೇನೂ ತಪ್ಪು ತಿಳಿಯೊಲ್ಲ ಅಂದರೆ ಒಂದು ಪ್ರಶ್ನೆ. ಕಳೆದ ಬಾರಿ ನಾನು ಮತ್ತು ನಮ್ಮ ಸೀನಿಯರ್ ಬಂದಾಗ ಒಂದು ಕೇಸ್ ಬಗ್ಗೆ ಹೇಳುತ್ತಾ, 'ನಿಮ್ಮ ಮನೆಯ ಕೇಸ್

ಥರ' ಎಂದರು. ಆ ಕುತೂಹಲ ನನ್ನನ್ನ ಕಾಡುತ್ತಿದೆ. ಅದೇನೆಂದು ಹೇಳುತ್ತೀರಾ?" ಎಂದೆ.

ಯಾವ ಸಂಕೋಚ, ಮುಜುಗರಗಳೂ ಇಲ್ಲದಂತೆ "Why not" ಎಂದರು. ಅಷ್ಟರಲ್ಲಿ ಆ ಹೆಂಗಸು ಆ ದಿನ ಮನೆಯಲ್ಲಿ ಇಲ್ಲದಿರುವುದನ್ನು ಗಮನಿಸಿಕೊಂಡೇ ಹಾಗೆಂದಿದ್ದೆ. ಅವರು ಹೇಳಿದ ಕಥೆ ನಿಜವಾಗಿಯೂ ಆಘಾತಕಾರಿಯಾಗಿತ್ತು.

ಡಾ. ಡಿಸೋಜಾ ಅವರ ತಮ್ಮ ಲೋಬೋ ಕೂಡಾ ಡಾಕ್ಟರ್. ಅವರ ಹೆಂಡತಿ ಮೊಬಿಲ್. ಒಬ್ಬಳೇ ಒಬ್ಬಳು ಮಗಳು ಇಸಬೆಲ್ಲಾ. ಲೋಬೋ ಕೆಲಸ ಮಾಡುತ್ತಿದ್ದುದು ಚರ್ಚ್ ಆಫ್ ಸೌಥ್ ಇಂಡಿಯನ್ ಆಸ್ಪತ್ರೆಯಲ್ಲಿ. ತೀವ್ರ ಸೇವಾ ಮನೋಭಾವ. ಲೋಬೋ ಹಗಲಿರುಳೆನ್ನದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದು, ರೋಗಿಗಳಲ್ಲಿ ಯೇಸುವನ್ನು ಕಂಡುಕೊಳ್ಳುತ್ತಿದ್ದ.

ಡಿಸೋಜಾ ನಿವೃತ್ತಿ ಹೊಂದಿದ್ದರಿಂದ ಮಂಗಳೂರಲ್ಲಿ ಹೋಗಿ ಸೆಟ್ಲ್ ಆಗಿದ್ದರು.

ಪತ್ನಿ ಮೊಬಿಲ್ ವ್ಯಕ್ತಿತ್ವ ಗಂಡ ಲೋಬೋಗಿಂತ ತೀರಾ ಭಿನ್ನ. ಗಂಡ ತನ್ನನ್ನು ಸದಾ ಓಲೈಸಿಕೊಂಡಿರಬೇಕು. ಅದನ್ನೆಲ್ಲ ಬಿಟ್ಟು ಇಪ್ಪತ್ನಾಲ್ಕು ಗಂಟೇನೂ ರೋಗಿಗಳು, ಅನಾಥರು ಎಂದು ಬಡಕೊಳ್ಳುತ್ತಾ ಇರೋದು ಸರಿಯಲ್ಲ ಎಂದುಕೊಳ್ಳುವವಳು. ಎಮರ್ಜೆನ್ಸಿ ಕೇಸ್‌ಗಳೆಂದು ಕರೆಯಲು ಬಂದರೆ ಮಧ್ಯರಾತ್ರಿ ಎದ್ದು ಹೋಗಿಬಿಡುತ್ತಿದ್ದ ಗಂಡನ ಮೇಲೆ ಮೊಬಿಲ್‌ಗೆ ತೀವ್ರ ಕೋಪವುಕ್ಕುತ್ತಿತ್ತು. ಗಂಡನ ಈ ನಡವಳಿಕೆ ಮುಂದುವರಿದಂತೆಲ್ಲ ಮೊಬಿಲ್‌ಗೆ ಏನೇನೋ ಯೋಚನೆಗಳು ಹುಟ್ಟತೊಡಗಿದವು. ತನ್ನಲ್ಲಿ ಮುಂಚಿನಂತೆ ಲೋಬೋ ಆಸಕ್ತಿ ತೋರುತ್ತಿಲ್ಲ ಎನಿಸತೊಡಗಿತು. ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರೋ, ನರ್ಸೋ ಜೊತೆಯಾಗಿರಬೇಕು ಎಂದು ಸಂಶಯಪಡತೊಡಗಿದಳು. ಇದನ್ನು ಪರೀಕ್ಷಿಸಲೆಂದು ಕೆಲವು ಬಾರಿ ಆಸ್ಪತ್ರೆಗೆ ತಾನೇ ಊಟ ಒಯ್ದಳು. "ನೀನು ಇಲ್ಲಿಗೆ ಬಂದರೆ ನಿನ್ನೊಂದಿಗೆ ಕಾಲ ಕಳೆಯಲು, ಹರಟೆ ಹೊಡೆಯಲು ಅವಕಾಶವಿಲ್ಲ ನನಗೆ" ಎಂದು ಲೋಬೋ ಮುನಿಸಿಕೊಂಡು ಹೇಳಿದ. ಮೊಬಿಲ್ ಮಾನಸಿಕವಾಗಿ ಜರ್ಝರಿತಗೊಂಡಳು, ಮಾನಸಿಕ ಅಸ್ವಸ್ಥತೆಗೆ ಗುರಿಯಾದಳು. ಗಂಡನ ಪ್ರತಿಯೊಂದು ಮಾತು, ಚಟುವಟಿಕೆಯನ್ನು ಸಂಶಯಿಸತೊಡಗಿದಳು. ಗಂಡ ಮನೆಗೆ ಬಂದರೂ ಬೆಡ್‌ರೂಮ್ ಬಿಟ್ಟು ಹೊರಬರದಾದಳು. ಸದಾ ಏನೊ ಗುಂಗಿನಲ್ಲಿ ಮುಳುಗಿಬಿಟ್ಟಿರುತ್ತಿದ್ದಳು. ಲೋಬೋ ಸ್ವತಃ ಡಾಕ್ಟರ್ ಆಗಿದ್ದರೂ ಪತ್ನಿಯ ಈ ನಡವಳಿಕೆಯನ್ನು ಮನೋವೈಫಲ್ಯವಿರಬಹುದೆಂದು ಅನುಮಾನಿಸಲಿಲ್ಲ.

ತಾಯಿಯ ವರ್ತನೆ ಬೆಳೆದು ನಿಂತ ಮಗಳು ಇಸಬೆಲ್ಲಾಳಿಗೆ ಸರಿಬರಲಿಲ್ಲ. ತಾಯಿ ಮಗಳ ಮಧ್ಯೆ ಘರ್ಷಣೆಗಳಾಗತೊಡಗಿದವು. ಮಗಳಿಗೆ ತಂದೆಯ ಮೇಲೆ ಎಲ್ಲಿಲ್ಲದ ಪ್ರೀತಿ.

"ಅಪ್ಪ ಮನೆಗೆ ಬಂದರೆ ಏನೂ ವಿಚಾರಿಸಿಕೊಳ್ಳೋಲ್ಲ. ಊಟ, ತಿಂಡಿ ಕೊಡೋಲ್ಲ. ಆಸ್ಪತ್ರೇಲಿ ಅಷ್ಟೆಲ್ಲ ದಣಿದು ಬಂದಿರ್ತಾರೆ...." ಎಂದು ಮಗಳು ಹೇಳಿದರೆ, "ಸದಾ ರೋಗಿಗಳು ಅಂತ ಬಡಕೋತಾರಲ್ಲ, ಅವರೇ ಕೊಡ್ಲಿ ಊಟ ತಿಂಡೀನ...... ನನಗೆ ಈ ಮನೇಲಿ ಏನ್ ವ್ಯಾಲ್ಯೂ ಇದೆ? ಮೂಕಪ್ರಾಣಿಯಂತೆ ಬದುಕಬೇಕು..... ನಿಮ್ಮಪ್ಪಂಗೆ ಆಸ್ಪತ್ರೆಯಿದೆ, ನಿಂಗೆ ಕಾಲೇಜಿದೇ ಅಲ್ಲಿ ಫ್ರೆಂಡ್ಸ್ ಇದಾರೆ..." ಎಂದು ಗಹಗಹಿಸಿ ನಗುತ್ತಿರುವಾಗಲೇ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು. ಮಗಳು ಇಸಬೆಲ್ಲಾಗೆ ತಾಯಿಯ ಮಾತುಗಳು ವಿಚಿತ್ರವಾಗಿ ಕೇಳಿಸತೊಡಗಿದವು. ಇವಳ ತಲೆ ಸರಿಯಿಲ್ಲ ಎಂದುಕೊಂಡು ತನ್ನ ಕೆಲಸಗಳಲ್ಲಿ ಮುಳುಗಿದಳು. ತಂದೆಯ ಬಗ್ಗೆ ತೀವ್ರ ಅನುಕಂಪ ಉಂಟಾಗತೊಡಗಿತು. ಹೆಂಡತಿಯಾಗಿ ನನ್ನ ತಾಯಿ ತನ್ನ ಗಂಡನಿಗೆ ಏನೂ ಮಾಡುತ್ತಿಲ್ಲವಲ್ಲ ಎನಿಸಿತು. ನಿಜವಾಗಿಯೂ ಅಪ್ಪನದು ಬ್ಯಾಡ್‌ಲಕ್ ಎಂದುಕೊಂಡಳು.

ನಾನಾದರೂ ಸ್ವಲ್ಪ ಉಪಚಾರ ಮಾಡಿ ಅಪ್ಪನ ದಣಿವನ್ನು ನೀಗಿಸಬೇಕು, ಸ್ಫೂರ್ತಿ ನೀಡಬೇಕು ಎಂದುಕೊಂಡಳು. ಅಪ್ಪ ನನ್ನನ್ನು ಅದೆಷ್ಟು ಮುದ್ದಿನಿಂದ ಬೆಳೆಸಿದ್ದಾರೆ. ಮನೆಯ ಪರಿಸ್ಥಿತಿ ನೋಡಿಯೋ ಏನೋ ನನಗಾಗಿ ಹೋಟೆಲ್‌ನಿಂದ ಅದೆಷ್ಟು ಬಾರಿ ಊಟ, ತಿಂಡಿಗಳನ್ನು ಕಟ್ಟಿಸಿಕೊಂಡು ಬಂದಿದ್ದಾರೆ. ಅಪ್ಪನ ಭೇಟಿ ಬೆಳಗ್ಗೆ ಬಿಟ್ಟರೆ ರಾತ್ರಿಯೇ ಆಗುವುದು. ಆಸ್ಪತ್ರೆಯ ತನ್ನ ದಣಿವನ್ನೆಲ್ಲ ಮರೆತು ನನ್ನ ತಲೆಯ ಮೇಲೆ ಕೈಯಾಡಿಸುತ್ತಾ "ಇಸ್ ಊಟವಾಯ್ತಾ, ತಿಂಡಿ ಆಯ್ತಾ, ಕಾಲೇಜ್ ವಿಷಯ ಏನು? ಪಾಕೆಟ್ ಮನಿ ಇದೆಯಾ?" ಎಲ್ಲ ವಿಚಾರಿಸಿ ಕೊಳ್ತಾರೆ. ಅಪ್ಪನಿಗೆ ಅದೆಷ್ಟು ತಾಳ್ಮೆ ! ಅಮ್ಮ ನಿಜವಾಗಿಯೂ ಅಪ್ಪನಿಗೆ ತಕ್ಕವಳಲ್ಲ ಎಂದುಕೊಳ್ಳುತ್ತಾ ತನ್ನಲ್ಲೇ ಮುಳುಗಿದಳು.

ಬೆಳಗ್ಗೆ ಎದ್ದದ್ದೇ ಅಪ್ಪನಿಗೆ ಸ್ನಾನಕ್ಕೆ ಟವೆಲ್ ಹಾಕಿದಳು. ತಾನೇ ಓಡಾಡಿ ಕಾಫಿ, ತಿಂಡಿ ರೆಡಿ ಮಾಡಿದಳು. ಅಪ್ಪನ ಪ್ಯಾಂಟ್, ಷರ್ಟ್ ಇಸ್ತ್ರಿ ಮಾಡಿದಳು.

ಅಪ್ಪ ಯಾವುದೇ ಪ್ಯಾಂಟ್‌ಗೆ ಯಾವುದೋ ಷರ್ಟ್ ಜೊತೆ ಮಾಡಿಕೊಂಡು ಹೋಗುವಂತಿಲ್ಲ ಎಂದು ತಾಕೀತು ಮಾಡಿದಳು. ಡ್ರೆಸ್‌ಗೆ ಯಾವುದು ಮ್ಯಾಚಿಂಗ್, ಯಾವುದು ಕಾಂಬಿನೇಷನ್ ಎಂದು ಹೇಳಿ ಪೇರಿಸಿಟ್ಟಳು.

ಮಗಳು ತನಗೆ ತೋರುತ್ತಿರುವ ಪ್ರೀತಿ ಆದರಗಳು ಲೋಬೋಗೆ ಸಂತೋಷ ಉಕ್ಕಿಸಿದವು. ಅವಳನ್ನು ಕರೆದೊಯ್ದು ಹೊಸ ಡ್ರೆಸ್ ಕೊಡಿಸಿಕೊಂಡು ಬಂದ.

ಅಂದು ರಾತ್ರಿ ಒಂಬತ್ತು ಘಂಟೆಯಾಗಿರಬಹುದು. ಅಪ್ಪನಿಗಾಗಿ ಇಸಬೆಲ್ಲಾ ಅಡುಗೆ ಮಾಡತೊಡಗಿದ್ದಳು. ಇದ್ದಕ್ಕಿದ್ದಂತೆ ಹಿಂದಿನಿಂದ ಹಗ್ಗವೊಂದು ಅವಳ ಕುತ್ತಿಗೆಗೆ ಸಿಕ್ಕಿಕೊಂಡಿತು. ಚೀರಬೇಕೆಂದರೆ ಧ್ವನಿಯೇ ಹೊರಡಲಿಲ್ಲ. ಉಸಿರುಗಟ್ಟಿ ಥರಗುಟ್ಟತೊಡಗಿದಳು. ಶಕ್ತಿಯನ್ನೆಲ್ಲ ಹಾಕಿ ಹೊರಳಿದಳು. ತನ್ನ ಕತ್ತಿಗೆ ಬಿದ್ದ ಪಾಶ ಹಿಡಿದು ಯಮನಂತೆ ನಿಂತಿದ್ದಳು ತಾಯಿ !

"ನಿನ್ನನ್ನು ಮಗಳು ಅಂದುಕೊಂಡಿದ್ದೆನಲ್ಲ. ನನ್ನ ಹೊಟ್ಟೆಯಲ್ಲಿ ಹುಟ್ಟಿ ನನಗೇ ಸವತಿಯಾಗಿಬಿಟ್ಟೆಯಾ? ನನ್ನ ಗಂಡನ್ನ ಆಸ್ಪತ್ರೆ ನರ್ಸ್‌ಗಳು ಬುಟ್ಟಿಗೆ ಹಾಕ್ಕೊಂಡಂತೆ ನೀನೂ ಮರಳು ಮಾಡಿದ್ದೀಯೇನೆ. ನಿನ್ನನ್ನು ನಾನಿವತ್ತು ಜೀವಂತ ಉಳಿಸೊಲ್ಲ. ಎಷ್ಟು ದಿವಸ ಅಂತ ತಡಕೊಳ್ಳಲಿ ನಿಮ್ಮಿಬ್ಬರ ಸರಸ ಸಲ್ಲಾಪಗಳನ್ನು. ನೀನು ಹುಟ್ಟಿದಾಗಲೇ ಕತ್ತು ಹಿಚುಕಬೇಕಿತ್ತು, ತಪ್ಪು ಮಾಡಿದೆ. ಇವೊತ್ತು ಬಿಡೊಲ್ಲ...." ಎಂದು ಚೀರುತ್ತಿದ್ದಳು. ಕತ್ತಿಗೆ ಉರುಳು ಬಿದ್ದದ್ದರಿಂದ ಚೀರಲು ಇಸಬೆಲ್ಲಾಗೆ ಅವಕಾಶವಿರಲಿಲ್ಲ. ತಾಯಿಯೇ ಏರುಧ್ವನಿಯಲ್ಲಿ ಚೀರುತ್ತಿದ್ದಳು. ಚೀರಾಟ ಕೇಳಿ ಮನೆಯಾಳುಗಳು ಓಡಿಬಂದರು. ಮೊಬಿಲ್‌ಳನ್ನು ಎಳೆದುಕೊಂಡರು. ಉರುಳಿನೊಂದಿಗೆ ಇಸಬೆಲ್ಲಾಳೂ ಎಳೆಯಲ್ಪಟ್ಟಳು. ಕೆಲಸದವರು ಮೊಬಿಲ್ ಕೈಗಳನ್ನು ಕಚ್ಚಿ ಹಗ್ಗದಿಂದ ಕೈಬಿಡಿಸಿದರು. ಇಸಬೆಲ್ಲಾಳ ಮುಖದ ಮೇಲೆ ನೀರು ಚಿಮುಕಿಸಿದರು. ಆದರೆ ಕಣ್ಣು ಬಿಡಲು ಇಸಬೆಲ್ಲಾ ದೇಹದಲ್ಲಿ ಪ್ರಾಣವಿರಲಿಲ್ಲ!

ಮೊಬಿಲ್ ಮೇಲೆ ಮರ್ಡರ್ ಕೇಸ್ ದಾಖಲಾಯಿತು. 'culpable homicide not amounting to muder' ಎನ್ನುವ ತೀರ್ಮಾನಕ್ಕೆ ಬಂದ ಕೋರ್ಟ್ ಏಳು ವರ್ಷಗಳ ಸಜೆ ವಿಧಿಸಿತು. ತನ್ನ ಹೆಂಡತಿಯನ್ನು ಶಿಕ್ಷೆಯಿಂದ ಮುಕ್ತಗೊಳಿಸಲು ಲೋಬೋ ಬಹಳ ಪರದಾಡಿದ. ಹೈಕೋರ್ಟಿಗೆ ಅಪೀಲು ಹೋದ. ಅಲ್ಲಿಯೂ ಶಿಕ್ಷೆ ಕನ್‌ಫರ್ಮ್ ಆಯಿತು. ಮೊಬಿಲ್ ಜೇಲಿಗೆ ಹೋದಳು. ಲೋಬೋ ಜರ್ಝರಿತನಾಗಿ ಕಾಯಿಲೆ ಬಿದ್ದು ಸತ್ತುಹೋದ.

ಡಾ. ಡಿಸೋಜಾ ಮಂಗಳೂರಿನಿಂದ ಬೆಂಗಳೂರಿಗೆ ಬಂದರು. ತಮ್ಮನ ಹೆಂಡತಿಯ ಯೋಗಕ್ಷೇಮ ವಿಚಾರಿಸಿಕೊಳ್ಳಲು ಜೈಲಿಗೆ ಬರತೊಡಗಿದರು. ಡಿಸೋಜಾರ ಮಗನಿಗೆ ಅಮೆರಿಕಾದಲ್ಲಿ ಕೆಲಸ ಸಿಕ್ಕಿತು. ತಾಯಿಯನ್ನು ಅಮೆರಿಕಾಕ್ಕೆ

ಕರೆದೊಯ್ದ. ಡಿಸೋಜಾ ಒಂಟಿಯಾದರು. ಜೈಲಿನಿಂದ ಬಿಡುಗಡೆಯಾಗಿ ಮೊಬಿಲ್ ಬಂದಳು. ಜೈಲಿನಲ್ಲಿರುವಾಗಲೇ ಮಾನಸಿಕ ಚಿಕಿತ್ಸೆಗೆ ಒಳಗಾಗಿದ್ದಳು. ಡಿಸೋಜಾ ಅವರ ಮನೆಯಲ್ಲಿದ್ದ ಮಧ್ಯವಯಸ್ಕ ಹೆಣ್ಣುಮಗಳು ಅವಳೇ ಆಗಿದ್ದಳು!

ದುರದೃಷ್ಟವನ್ನು ಸಹಿಸುವ ಅಗಾಧ ಶಕ್ತಿಯನ್ನು ಅವರಲ್ಲಿ ಕಂಡ ನಾನು ದಂಗಾಗಿ ಹೋದೆ. ಇವತ್ತಿಗೂ ಅಂತಹ ಸ್ಥೈರಣೆ, ಸಹನೆ ಇರುವವರನ್ನು ನಾನು ಕಂಡೇ ಇಲ್ಲ.

53

ನಾನು ಗೆದ್ದ ಮೊದಲ ಮರ್ಡರ್ ಕೇಸ್

ದೇವದಾಸ್ ಅವರಿಗೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸೆಷನ್ಸ್ ಕೋರ್ಟ್‌ಗಳಲ್ಲಿ ವಾದಿಸಲು ಕರೆಗಳು ಹೆಚ್ಚಾಗತೊಡಗಿದ್ದವು. ಅನೇಕ ಶ್ರೀಮಂತ ಕಾಫಿ ಪ್ಲಾಂಟರ್‌ಗಳು ಇವರಿಗೆ ಕಕ್ಷಿದಾರರಾಗಿದ್ದರು. ಅಲ್ಲಿಗೆ ಹೋಗುವುದು ಹೆಚ್ಚಾಗುತ್ತಿದ್ದಂತೆಯೇ ಬೆಂಗಳೂರು ಕೋರ್ಟಿನಲ್ಲಿ ಕೆಲವೊಂದು ಕೇಸುಗಳನ್ನು ನಡೆಸಲು ನನಗೆ ಹೇಳಿದರು.

ಪಿ.ಎಸ್.ಐ. ಚನ್ನಯ್ಯ ದೇವದಾಸ್ ಅವರಿಗೆ ಚೆನ್ನಾಗಿ ಗೊತ್ತು. ಒಂದು ದಿನ ಬಂದು, "ಇದು ನನ್ನ ಮನೆಯ ಕೇಸ್ ಸಾರ್. ನನ್ನಕ್ಕನ ಕುಟುಂಬದ ಪ್ರಶ್ನೆ. ಏನಾದರೂ ಮಾಡಿ ನೀವೇ ನಡೆಸಿ ಗೆದ್ದುಕೊಡಬೇಕು" ಎಂದರು.

ಸೀನಿಯರ್ "ಆಯ್ತಪ್ಪ, ಅದೇನು ಕೇಸ್ ಹೇಳು, ನಮ್ಮ ಹನುಮಂತ್ರಾಯ ಅವ್ನೆ, ನನಗೆ ಹಾಸನ ಸೆಷನ್ಸ್ ಕೋರ್ಟಿಗೆ ತುರ್ತಾಗಿ ಹೋಗಬೇಕಾದ್ದಿದೆ"ಎಂದರು.

"ಸಾರ್ ಜ್ಯೂನಿಯರ್‌ಗಳಿಗೆ ಹಚ್ಚಿಕೊಟ್ಟು ನೀವು ಕೈಬಿಟ್‌ಬಿಡಬೇಡಿ ಸಾರ್"

ಎಂದಾಗ, "ನೀನು ಇನ್ನೊಂದ್ ಮಾತಾಡಬೇಡ. ಕೇಸ್ ಕೊಡು ಹೋಗು. ಗೆಲ್ಲೊ ಜವಾಬ್ದಾರಿ ನಂದು, ಆಯ್ತಾ?" ಎಂದರು.

ಕೇಸ್ ಬಗ್ಗೆ ವಿವರಗಳನ್ನೆಲ್ಲ ತಿಳಿದುಕೊಂಡು ನೋಟ್ ಮಾಡಿಕೊಳ್ಳಲು ಸೀನಿಯರ್ ನನಗೆ ಹೇಳಿದರು. ಚನ್ನಯ್ಯ ಅರೆಮನಸ್ಸಿನಿಂದಲೇ ವಿವರಗಳನ್ನು ಹೇಳತೊಡಗಿದ. ಚಾರ್ಜ್‌ಶೀಟ್ ತಂದುಕೊಟ್ಟರು. "ಆರೋಪಿಯನ್ನು ಮಾತಾಡಿಸಬೇಕು" ಎಂದೆ.

ಅದಕ್ಕೆ ವ್ಯವಸ್ಥೆ ಮಾಡುವುದಾಗಿ ಹೇಳಿ ಹೋದ ಚನ್ನಯ್ಯ.

"ನೀನು ಅಂದ್ರೆ ಎಂಥ ಕಿಲಾಡಿ ಅಂತ ಇವರಿಗೆಲ್ಲ ಗೊತ್ತಿಲ್ಲ. ಅವ್ರು ಹಾಗೇ ಅಂತಾ ಇರ್ತಾರೆ. ನೀನು ಸೀರಿಯಸ್ ಆಗಿ ಕೇಸ್ ನಡೆಸು. ಅನುಮಾನ ಬಂದಲ್ಲಿ ನನ್ನನ್ನ ಕೇಳ್ಕೋ" ಎಂದರು ಸೀನಿಯರ್.

ಕೊಲೆಯಾದ ಸ್ಥಳ ನೋಡಿ ಬಂದೆ. ಆರೋಪಿ ನಂಜುಂಡನನ್ನು ಬೆಂಗಳೂರು ಜೈಲಿನಲ್ಲಿ ಭೇಟಿ ಮಾಡಿದೆ. ಅವನು ಹೇಳಿದ ಕಥೆ ಕೇಳಿ ನನ್ನ ಮೈ ನಡುಗಿಹೋಯಿತು.

ಬೆಂಗಳೂರು ಜಿಲ್ಲೆಯ ಸೀಗೇಪುರದ ಮಾರಪ್ಪ ಎನ್ನುವವನಿಗೆ ನರಸಮ್ಮಳನ್ನು ಕೊಟ್ಟು ಮದುವೆ ಮಾಡಲಾಯಿತು. ಅಕ್ಕ ನರಸಮ್ಮನ ಮದುವೆಯಾದಾಗ ಚನ್ನಯ್ಯ ಇನ್ನೂ ಸಬ್‌ಇನ್ಸ್‌ಪೆಕ್ಟರ್ ಆಗಿರಲಿಲ್ಲ. ಅಂಥ ಸ್ಥಿತಿವಂತರಲ್ಲದಿದ್ದರೂ ತಕ್ಕಮಟ್ಟಿಗೆ ಜಮೀನು ಇತ್ತು. ಅಕ್ಕನ ಮೇಲೆ ಚನ್ನಯ್ಯಗೆ ಎಲ್ಲಿಲ್ಲದ ಪ್ರೀತಿ. ನರಸಮ್ಮನೇನೂ ಬೇರೆ ಊರವಳಲ್ಲ. ಅದೇ ಸೀಗೇಪುರದವಳೇ. ಮಾರಪ್ಪನಿಗೆ ಹೊಲ, ಮನೆ ಇದೆಯೆಂದು ನರಸಮ್ಮನನ್ನು ಕೊಟ್ಟು ಮದುವೆ ಮಾಡಿದ್ದ ಚನ್ನಯ್ಯನ ತಂದೆ. ಮಾರಪ್ಪನ ಬುದ್ಧಿ ನೆಟ್ಟಗಿರಲಿಲ್ಲ. ಹೋದಲ್ಲಿ ಬಂದಲ್ಲಿ ಕಳವು ಮಾಡುವ ಚಟ ಅವನಿಗಿದೆ ಎಂದು ಯಾರೋ ನರಸಮ್ಮನ ಅಪ್ಪನಿಗೆ ಹೇಳಿದರೂ ಆತ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. "ಒಬ್ನು ನೆಟ್ಟಗೆ ಅವ್ನೆ ಅಂದ್ರೆ ಬೊಟ್ಟು ಮಾಡಿ ತೋರ್ಸೋರು ನೂರು ಜನ ಇರ್ತಾರೆ. ಮಾರಪ್ಪ ಏನಾಗಿದ್ದಾನೆ, ಲಕ್ಷಣವಂತ. ಮನೆ, ಜಮೀನು ಇರುವಾತ" ಎಂದಿದ್ದ ಚನ್ನಯ್ಯನ ಅಪ್ಪ. ಚನ್ನಯ್ಯನ ತಂದೆ ಮಧ್ಯಮ ವರ್ಗದ ರೈತ. ಅವನ ಒಳಮನಸ್ಸಿನಲ್ಲಿ ತನ್ನ ಒಬ್ಬಳೇ ಮಗಳಿಗೆ ಇನ್ನೂ ಒಳ್ಳೆಯ ಕಡೆ ಸಂಬಂಧ ಬೆಳೆಸಿಕೊಡಬೇಕು ಎನ್ನುವುದಿದ್ದರೂ ಸಹ ಅವನ ಆರ್ಥಿಕ ಸ್ಥಿತಿ ಅದಕ್ಕೆ ಅವಕಾಶ ಮಾಡಿಕೊಡುವ ಪರಿಸ್ಥಿತಿಯಲ್ಲಿರಲಿಲ್ಲ. ಇರುವ ಅಲ್ಪ-ಜಮೀನನ್ನು ಮಾರಿ ಮಗನ ಕೈಗೆ ಕರಟ ಕೊಟ್ಟು ಸಾಯಬೇಕೇ

ಎಂದು ಪ್ರಶ್ನಿಸಿಕೊಂಡಿದ್ದ; ಮಾರಪ್ಪನನ್ನು ಸಮರ್ಥಿಸಿಕೊಂಡಿದ್ದ. ಅಷ್ಟಕ್ಕೂ ಮಾರಪ್ಪನ ಒಳಗುಣಗಳ ಪೂರ್ತಿ ದರ್ಶನ ಚನ್ನಯ್ಯನ ಅಪ್ಪನಿಗಿರಲಿಲ್ಲ. ಅಕ್ಕನ ಮದುವೆಯ ನಿರ್ಧಾರದಲ್ಲಿ ತಮ್ಮನಿಗೇನೂ ಅಧಿಕಾರವಿರಲಿಲ್ಲ. ಆದರೂ ತನ್ನ ತಂದೆಗೆ "ಎಂಥದಾದರೂ ನೌಕರಿ ಇರೋವ್ನಿಗೆ ಕೊಟ್ರೆ ಚೆನ್ನಾಗಿರುತ್ತೆ...." ಎಂದು ಚನ್ನಯ್ಯ ರಾಗ ಎಳೆದಾಗ, "ಏನ್ಲಾ ನಾನೇನು ನೌಕರೀಲಿದ್ದು ನಿನ್ನನ್ನ ಹುಟ್ಟಿಸ್ದೆನೇನ್ಲಾ? ಓದು ಕಲೀ ಅಂದ್ರೆ ಇಂಥದ್ದನ್ನೆಲ್ಲಾ ಕಲ್ತುಕೊಂಡ್ ಬಂದೆಯಾ? ನೌಕರಿ ಮಾಡೋರಷ್ಟೇ ಗಂಡಸ್ರು, ಉಳಿದೋರೆಲ್ಲ ಕೈಲಿ ಬಳೆ ಇಟ್‌ಕಂಡವ್ರೆ ಅಂತೇನ್ಲಾ ನೀನು ಅನ್ನೋದು?" ಎಂದು ಗದರಿದ್ದ. ಅಷ್ಟಕ್ಕೇ ಚನ್ನಯ್ಯ ಬಾಯಿ ಮುಚ್ಚಿಕೊಂಡಿದ್ದ.

ಮದುವೆಯಾದದ್ದೊಂದೇ ನಿಜ, ನರಸಮ್ಮ ತವರುಮನೆಯಲ್ಲಿ ಇರೋದೆ ಹೆಚ್ಚಾಗಿತ್ತು. ಕಾಟಾಚಾರಕ್ಕೆ ಮಾರಪ್ಪನೊಂದಿಗೆ ಸಂಸಾರ ಮಾಡಬೇಕಾಗಿತ್ತು. ಮಾತು ಮಾತಿಗೂ 'ತವರು ಮನೆಯಿಂದ ಅದನ್ನು ತಾ ಇದನ್ನು ತಾ' ಎಂದು ಪೀಡಿಸುತ್ತಿದ್ದ. ಹೆಂಡತಿ ತವರುಮನೆಯಲ್ಲಿದ್ದಾಗ ಮಾರಪ್ಪ ಅಲ್ಲಿಗೆ ಬಂದು ಹೋಗಿ ಮಾಡುತ್ತಿದ್ದ. ಮಾರಪ್ಪ ಬಂದು ಹೋದರೆ ಸಾಕು ಏನಾದರೂ ಸಾಮಾನು ಕಳುವಾಗಿರುತ್ತಿತ್ತು. ಬೀಗರು ಬಾಯಿಬಿಟ್ಟು ಹೇಗೆ ಕೇಳಬೇಕು? ನರಸಮ್ಮ ಗಂಡನ ಮನೆಗೆ ಹೋದಾಗಲೇ ತನ್ನ ತವರುಮನೆಯಿಂದ ಕದ್ದು ತಂದ ಸಾಮಾನುಗಳೆಲ್ಲಾ ಸಿಕ್ಕುತ್ತಿದ್ದವು. ತವರುಮನೆಯಿಂದ ಏಕೆ ಕದ್ದು ತಂದೆ ಎಂದು ಆಕೆ ಕೇಳಿದರೆ, "ನಿನ್ನನ್ನ ಮಾಡಿಕೊಂಡಿದ್ದಕ್ಕೆ ನಿಮ್ಮಪ್ಪ ತನ್ನ ಜಮೀನೆಲ್ಲ ನಂಗೆ ಬರ್ದುಕೊಡ್‌ಬೇಕು. ಅಂಥಾದ್ದರಲ್ಲಿ ಈ ಚಾದರ, ತಂಬಿಗೆ, ಬಟ್ಟಲು, ಕೊಡಲಿಗಳೆಲ್ಲ ಯಾವ ಲೆಕ್ಕ!" ಎಂದು ಬಾಯಿ ಮುಚ್ಚಿಸುತ್ತಿದ್ದ. ತನ್ನ ತವರಿನಿಂದ ಗಂಡ ಕದ್ದು ತಂದಿದ್ದ ಹಲವಾರು ಸಾಮಾನುಗಳನ್ನು ತಾಯಿಗೆ ವಾಪಸ್ಸು ಒಯ್ದು ಕೊಡಲು ಹೋಗಿದ್ದಳು ಮಗಳು. ಆದರೆ ತಾಯಿ ಮಗಳನ್ನು ತಬ್ಬಿಕೊಂಡು ಗೋಳೋ ಎಂದು ಅಳುತ್ತಾ, "ಅವೆಲ್ಲ ನಿನ್ ತಾವನೇ ಇರ್ಲಿ ಮಗಾ. ಅವೆಲ್ಲ ಎಲ್ ಹೋದ್ವು ಅಂತ ನಿನ್ ಜೊತೆ ಜಗಳ ಕಾಯೋ ಮುಠ್ಠಾಳ ಆ ನನ್ನ ಅಳಿಯ" ಎಂದಿದ್ದಳು.

ತನ್ನ ಗಂಡನ ಈ ನಡತೆಯಿಂದ ನರಸಮ್ಮನಿಗೆ ಮೈಯೆಲ್ಲ ಉಡುಗಿದಂತಾಗುತ್ತಿತ್ತು. ಮುಜುಗರದಿಂದ ನಾಲಗೆ ಒಣಗುತ್ತಿತ್ತು.

ತನ್ನ ಗಂಡ ನಿತ್ಯ ಏನಾದರೂ ಸಾಮಾನು ಇಲ್ಲದಿದ್ದರೆ ಕೊನೆಗೆ ಚಪ್ಪಲಿಗಳನ್ನಾದರೂ ತರುತ್ತಿದ್ದ. ಅವೆಲ್ಲ ಕದ್ದು ತಂದವು ಎನ್ನುವುದು ನರಸಮ್ಮನಿಗೆ ಗೊತ್ತಾಗುತ್ತಿದ್ದರೂ ಬಾಯಿಬಿಟ್ಟು ಕೇಳುತ್ತಿರಲಿಲ್ಲ.

ಒಂದರಮೇಲೆ ಒಂದರಂತೆ ನಾಲ್ಕು ಗಂಡು ಮಕ್ಕಳನ್ನು ಹೆತ್ತಳು ನರಸಮ್ಮ. ಇದರಿಂದಾಗಿ ಸತತವಾಗಿ ತವರುಮನೆಯಲ್ಲಿ ಬಾಣಂತಿಯಾಗಿ ಇರುವ ಅವಕಾಶ ಸಿಕ್ಕಿತು ನರಸಮ್ಮನಿಗೆ.

ನರಸಮ್ಮನ ಅಪ್ಪನಿಗೆ ಮಗಳ ಮುಖ ನೋಡಲು ಭಯಮಿಶ್ರಿತ ನಾಚಿಕೆಯಾಗುತ್ತಿತ್ತು. ತನ್ನ ಮಗನಿಗೆ ಆಸ್ತಿ ಉಳಿಸೋಕ್ಕಾಗಿ ಮಗಳ ಕಣ್ಣಿಗೆ ಸುಣ್ಣ ಹಚ್ಚಿದೆನಲ್ಲಾ ಎಂದು ಒಳಗೊಳಗೇ ಕೊರಗುತ್ತಿದ್ದ; ರಾತ್ರಿ ಮುಖದ ತುಂಬ ಹೊದ್ದುಕೊಂಡು ಕಣ್ಣೀರಿಡುತ್ತಿದ್ದ.

ಚನ್ನಯ್ಯನಿಗೆ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ನೌಕರಿ ಸಿಗುವ ಹೊತ್ತಿಗೆ ತಂದೆ ಸತ್ತಿದ್ದ. ತನ್ನ ಗಳಿಕೆಯಿಂದ ಮತ್ತಷ್ಟು ಜಮೀನು ಖರೀದಿಸಿದ, ಮೇಕೆಗಳನ್ನು ಖರೀದಿಸಿದ. ಅಷ್ಟರಲ್ಲಿ ಮಾರಪ್ಪ ತನ್ನ ಕಳ್ಳತನದ ಗುಣಕ್ಕಾಗಿ ನೆಂಟರಿಷ್ಟರಲ್ಲಷ್ಟೇ ಅಲ್ಲ ಇಡೀ ಊರಿಗೇ ಕುಖ್ಯಾತನಾಗಿದ್ದ. ಜನ ಕಳ್ಳಮಾರ ಎಂದೇ ಅವನ ಹಿಂದೆ ಮಾತಾಡಿಕೊಳ್ಳುತ್ತಿದ್ದರು. ಕೆಲವು ತುಂಟರು ನೇರವಾಗಿ ಹಾಗೆ ಹೇಳಿದರೆ, ಅವರೊಂದಿಗೆ ಜಗಳಕ್ಕಿಳಿಯುತ್ತಿದ್ದ.

ನರಸಮ್ಮ ಹೊಸ ಸೀರೆ ಉಟ್ಟರೆ ಕೆಲವು ಹೆಂಗಸರು ಮಾರಪ್ಪ ಎಲ್ಲಿಂದ ದೋಚಿ ತಂದನೋ; ನಂಜುಂಡ ಹೊಸ ಅಂಗಿ ತೊಟ್ಟರೆ ಅವನಪ್ಪ ಯಾವ ಜವಳಿ ಅಂಗಡಿಯಿಂದ ಬಟ್ಟೆ ಲಪಟಾಯಿಸಿದನೊ ಎಂದೆಲ್ಲ ಮಾತನಾಡುತ್ತಿದ್ದರು.

ಮಾರಪ್ಪನ ಚೊಚ್ಚಲ ಮಗ ನಂಜುಂಡ ಬೆಳೆದು ದೊಡ್ಡವನಾಗಿದ್ದ. ಅವನ ಓರಗೆಯವರು, "ನಿಮ್ಮಪ್ಪ ಮತ್ತೇನೇನು ಕದ್ದು ತಂದ್ ಇಟ್ಟಾನ್ಲಾ ಮನ್ಯಾಗೆ?" ಎಂದು ಕೇಳಿದಾಗ ನಂಜುಂಡನಿಗೆ ನೆಲವೇ ಬಾಯಿ ತೆರೆದು ನುಂಗಿದಂತೆ ಎನಿಸುತ್ತಿತ್ತು. ಒಂದು ದಿನ ಮಗ ನಂಜುಂಡ ಕೇಳಿಯೇ ಬಿಟ್ಟ. "ಅಪ್ಪೋ, ಯಾವಾಗ್ ನಿಲ್ಲಿಸ್ತೀಯಾ ಕದಿಯೋದನ್ನ?" ಎಂದು.

ಸಿರ್ರನೆ ಸಿಡಿದೆದ್ದ ಮಾರಪ್ಪ, "ಏನ್ಲಾ ನಿನ್ನಜ್ಜೀನ್, ನಿಮ್ಮ ಅಮ್ಮ ಹೇಳಿಕೊಟ್ಟೇನ್ಲಾ ಇಂಗೆ ಕೇಳೂ ಅಂತಾ? ನಾ ದುಡುದು ಹಾಕಿದ್ದನ್ನ ತಿಂದು ನಂಗೇ ಕಳ್ಳ ಅಂತೀರೇನ್ರೋ. ಒಬ್ಬೊಬ್ರ ಚರ್ಮ ಸಿಗ್ದು ಹಾಕೇನು...." ಎಂದ.

"ನಿನ್ನನ್ನ ನಮ್ಮಪ್ಪ ಅಂತ ಹೇಳ್‌ಕೊಳ್ಳೋಕೆ ನಾಚ್ಕೆ ಆಯ್ತದೆ ನಂಗೆ. ಇವತ್ತಿಂದ ಯಾರ್ ಮನೇಗಾದ್ರೂ ಜೀತಾ ಮಾಡ್‌ಕಂಡ್ ಇದ್ದೇನು. ಈ ಮನೇನಾಗೆ ಇರಾಕಾಗಲ್ಲ," ಎಂದು ಚೀರಿದ ನಂಜುಂಡನ ಕಪಾಳಕ್ಕೆ ಮಾರಪ್ಪ ಒಂದು ಏಟು ಬಿಗಿದ. ಮೆತ್ತನೆಯ ಸ್ವಭಾವದ ನರಸಮ್ಮನಿಗೆ ಅದೆಲ್ಲಿಂದ ಕೋಪವುಕ್ಕಿ ಬಂದಿತೋ,

“ಇನ್‌ಮ್ಯಾಕೆ ನಾನೂ ಇಲ್ಲಿ ಇರೋದಿಲ್ಲ. ನಡೀ ಮಗಾ ಎಲ್ರೂ ಹೋಗಾನ. ಎಷ್ಟ್ ದಿನಾ ಅಂತ ಕಳವಿಂದು ತಿಂದ್‌ಕಂಡಿರಬೇಕು. ನಿಮ್ ಸೋದರ ಮಾವ ಕಳ್ರನ್ನ ಹಿಡಿಯೋ ಅಧಿಕಾರಿ ಆಗವ್ನೆ, ನನ್ನ ಹಣೇಬರ ಇದ್ದಂಗೆ ಆಯ್ತದೆ....!” ಎಂದು ಉಟ್ಟ ಸೀರೆಯಲ್ಲಿಯೇ ಹೊರಟುನಿಂತಳು.

ನರಸಮ್ಮ ತನ್ನ ನಾಲ್ಕೂ ಮಕ್ಕಳ ಸಮೇತ ತವರುಮನೆಗೆ ಹೋದಳು.

ಈ ವಿಷಯ ತಿಳಿದು ಪಿ.ಎಸ್.ಐ ಚನ್ನಯ್ಯ ಹಳ್ಳಿಗೆ ಹೋದ. ತನ್ನ ಜಮೀನು, ಮನೆ ನೋಡಿಕೊಳ್ಳಲು ಯಾರೂ ಇದ್ದಿರಲಿಲ್ಲ. ಮುಪ್ಪಾದ ತಾಯಿಗೂ ಅಕ್ಕ ಜೊತೆಯಾಗುತ್ತಾಳೆ ಎಂದುಕೊಂಡು, “ನೀವು ಯಾರೂ ಅವುನ್ ಮನೆಗೆ ಕಾಲಿಡ್‌ಕೂಡ್ದು. ‘ತಾಯಿ ಸತ್ರೂ ಸೋದರಮಾವ ಇರಬೇಕು’ ಅಂತಾರಲ್ಲ ಆ ಮಾತನ್ನ ನಿಜಾ ಮಾಡಿ ತೋರಿಸ್ತೇನೆ” ಎಂದು ಪ್ರತಿಜ್ಞೆಯ ಧ್ವನಿಯಲ್ಲಿ ಹೇಳಿದ. ಅಕ್ಕ ನರಸಮ್ಮ ಗೊಳೋ ಎಂದು ಅಳುತ್ತ ತಮ್ಮನನ್ನು ಪರಿಪರಿಯಾಗಿ ಕೊಂಡಾಡಿದಳು.... “ತವರುಮನೆಯವರು ಅದೆಷ್ಟು ದಿನ ಇಟ್‌ಕೋತಾರೊ ನೋಡ್ತೀನಿ” ಎಂದುಕೊಂಡ ಮಾರಪ್ಪನಿಗೆ ಆಶ್ಚರ್ಯ ಕಾದಿತ್ತು. ತಿಂಗಳುಗಳು ಕಳೆದರೂ ಹೆಂಡತಿ, ಮಕ್ಕಳು ಮನೆ ಕಡೆ ಬರುವ ಸೂಚನೆಗಳೇ ಕಾಣಲಿಲ್ಲ. ಕದ್ದುಮುಚ್ಚಿ ಇಟ್ಟುಕೊಂಡಿದ್ದ ಹೆಂಗಸೊಬ್ಬಳನ್ನು ರಾಜಾರೋಷವಾಗಿ ಮನೆಯಲ್ಲಿ ತಂದಿರಿಸಿಕೊಂಡ ಮಾರಪ್ಪ ಭಂಡಜೀವನ ಸಾಗಿಸಲು ಶುರುಮಾಡಿದ.

ನಂಜುಂಡನಿಗೆ ಸೋದರಮಾವ ಚನ್ನಯ್ಯ ಮತ್ತಷ್ಟು ಮೇಕೆಗಳನ್ನು ಕೊಡಿಸಿದ. ಮಾವನ ಮೇಲೆ ಪೂರ್ಣ ವಿಶ್ವಾಸ ಮೂಡಿತ್ತು. ಅಪ್ಪನ ಮನೆ, ಜಮೀನಿನೊಳಗಿನ ಹಿಡಿಮಣ್ಣು ತನಗೆ ಬೇಡ ಎಂದುಕೊಂಡ.

ಒಂದು ಮುಸ್ಸಂಜೆ ಊರು ಮುಂದಿನ ಅರಳಿ ಮರದ ಬಳಿ ನಂಜುಂಡ ಮೇಕೆ ಮೇಯಿಸುತ್ತ ನಿಂತಿದ್ದ. ಅದೇ ಸಮಯಕ್ಕೆ ಮಾರಪ್ಪ ಅಲ್ಲಿ ನಡೆದು ಹೋಗುತ್ತಿದ್ದ. ತನ್ನಪ್ಪನನ್ನು ನೋಡಿ ಮೈಯೊಳಗೆ ರಕ್ತ ಕುದಿಯತೊಡಗಿತು. ಕ್ಯಾಕರಿಸಿ ಉಗುಳಿದ ನಂಜುಂಡ, “ಇವುಂಗೆ ಎಂದು ಬರತ್ತೋ ಸಾವು. ನಾಚಿಗೆ, ಮರ್ಯಾದೆ ಇರೋರಾದ್ರೆ ನೇಣು ಹಾಕ್ಕೊಂಡ್ ಸಾಯ್‌ಬೇಕು....” ಎಂದ.

“ನಾಚಿಗೆ ನಂಗಲ್ಲೊ, ನಿಂಗೆ ಬೇಕು. ನನಗ್ ಹುಟ್ಟಿ ನನ್ ಮನ್ಯಾಗೆ ಇರಬೇಕಾದ ನೀನು ಆ ನಿಮ್ಮ ಮಾವನ್ ಮನ್ಯಾಗೆ ಹೋಗಿ ಜೀತ ಮಾಡ್‌ಕಂಡು ಇದ್ದೀಯಲ್ಲೋ. ನೀನು ಆ ನಿಮ್ಮ ಮಾವುಂಗೇ ಹುಟ್ಟಿದಂತೆ ಆಡ್ತಿದಿಯಾ....” ಎಂದ ಉಡಾಫೆ ಧ್ವನಿಯಲ್ಲಿ. ಅಪ್ಪನಾಡಿದ ಕೊನೆಯ ಮಾತಿಗೆ ನಂಜುಂಡನ ಪಿತ್ತ

ನೆತ್ತಿಗೇರಿಬಿಟ್ಟಿತು. ಎರಡನೇ ವಿಚಾರವನ್ನೇ ಮಾಡದೆ ತನ್ನ ಕೈಯೊಳಗಿದ್ದ ಮೇಕೆ ಕಾಯುವ ದೊಣ್ಣೆಯಿಂದ ತನ್ನಪ್ಪನ ತಲೆಗೆ ಜೋರಾಗಿ ಕಿರುಚುತ್ತಾ ಬೀಸಿದ. ಒಂದೇ ಏಟಿಗೆ ಮಾರಪ್ಪ ಕೆಳಗುರುಳಿ ಬಿದ್ದ. ಆದರೆ, ನಂಜುಂಡ ಮೈಯಲ್ಲಿ ದೆವ್ವ ಹೊಕ್ಕವನಂತಾಗಿದ್ದ. ತನ್ನಪ್ಪನ ಬಗ್ಗೆ ಇಷ್ಟು ವರ್ಷ ತನ್ನಲ್ಲಿ ಮಡುಗಟ್ಟಿಕೊಂಡಿದ್ದ ಸಿಟ್ಟೆಲ್ಲ ಧುಮ್ಮಿಕ್ಕತೊಡಗಿತ್ತು. ಅವನಿಂದಾಗಿ ತನಗೆ, ತಾಯಿಗೆ, ಮಾವನಿಗೆ ಆದ ಅವಮಾನಗಳೆಲ್ಲ ಕಣ್‌ಮುಂದೆ ಬಂದವು. ಹುಚ್ಚುನಾಯಿಯನ್ನು ಬಡಿಯುವಂತೆ ಒಂದೇ ಸಮನೆ ಬಡಿಯತೊಡಗಿದ್ದ. ಮಾರಪ್ಪನ ಉಸಿರು ನಿಂತು ಅದೆಷ್ಟೋ ಹೊತ್ತಾಗಿದ್ದರೂ ನಂಜುಂಡ 'ಸಾಯಿ, ಸಾಯಿ' ಎಂದು ಚೀರುತ್ತ ಚಚ್ಚುತ್ತಲೇ ಇದ್ದ. ಸ್ವಲ್ಪವೇ ದೂರದಲ್ಲಿದ್ದ ಮೇಕೆ–ಕುರಿ ಕಾಯುವ ಹುಡುಗರು ಓಡಿ ಬಂದು ಅವನ ಕೈಯೊಳಗಿನ ದೊಣ್ಣೆ ಕಸಿದುಕೊಂಡರು. ಊರಿನ ಜನರನ್ನು ಕರೆತಂದರು.

ಮಾರಪ್ಪನ ಬಗ್ಗೆ ಊರಲ್ಲಿ ಯಾರಿಗೂ ಕರುಣೆ, ಅನುಕಂಪಗಳಿರಲಿಲ್ಲ. ಎಲ್ಲರಿಗೂ ನಂಜುಂಡನ ಬಗ್ಗೆಯೇ ಚಿಂತೆ, ಇಷ್ಟು ಚಿಕ್ಕವಯಸ್ಸಿನಲ್ಲಿ ಜೈಲಿಗೆ ಹೋಗಬೇಕಾಗಿ ಬಂತಲ್ಲ ಎಂದು.

ಹಳ್ಳಿಯ ಮುಖಂಡ ರಾಮೇಗೌಡ, ಯಾರೂ ನಂಜುಂಡನ ವಿರುದ್ಧ ಪೊಲೀಸರಿಗೆ ಸಾಕ್ಷಿ ಹೇಳಿಕೆ ಕೊಡಕೂಡದೆಂದು ಮೌಖಿಕ ಆದೇಶ ನೀಡಿದ.

ಪಿ.ಎಸ್.ಐ ಗಂಗಾಧರ ಬಂದು ಹೆಣದ ಮಹಜರ್ ನಡೆಸಿದ. ಮೇಕೆಗಳಿಗೆ ಸೊಪ್ಪು ಕೊಯ್ದು ಹಾಕಲು ಅರಳಿ ಮರವೇರಿ ಕಾಲು ಜಾರಿ ಬಿದ್ದ ಎಂದೇ ಎಲ್ಲರೂ ಹೇಳಿದರು. ಮಾರಪ್ಪನಲ್ಲೂ ನಾಲ್ಕಾರು ಮೇಕೆಗಳಿದ್ದವು. ಇತರೆಯವರ ಮರಗಳಲ್ಲಿ ಕದ್ದು ಸೊಪ್ಪು ಕೊಯ್ಯುವ ವಾಡಿಕೆಯಿತ್ತು ಎಂದೂ ಹೇಳಿದರು.

ಆದರೆ ಅನಾಮಧೇಯ ಅರ್ಜಿಯೊಂದು ಠಾಣೆಗೆ ಹೋಯಿತು; ಮಾರಪ್ಪನದು ಸಾವಲ್ಲ, ಕೊಲೆ ಎಂದು ಅದರಲ್ಲಿ ಬರೆಯಲಾಗಿತ್ತು.

ಕೊಲೆ ಮೊಕದ್ದಮೆ ದಾಖಲು ಮಾಡಿಕೊಂಡು ಬೆಂಗಳೂರಿನ ಗ್ರಾಮಾಂತರ ಸೆಷನ್ಸ್ ನ್ಯಾಯಾಲಯದಲ್ಲಿ ಆರೋಪಿ ನಂಜುಂಡನನ್ನು ಹಾಜರುಪಡಿಸಿದ್ದರು. ಅಲ್ಲಿ ಆರ್.ಜಿ. ದೇಸಾಯಿಯವರು ಸೆಷನ್ಸ್ ಜಡ್ಜ್ ಆಗಿದ್ದರು. ನಂತರ ಅವರು ಹೈಕೋರ್ಟ್ ಜಡ್ಜ್ ಆಗಿ ನಿವೃತ್ತರಾದರು.

ನಂಜುಂಡನ ಕಥೆ ಕೇಳಿ ನನ್ನ ಹೃದಯ ತುಂಬಿ ಬಂದಿತು. ಏನಾದರೂ ಮಾಡಿ ಇವನನ್ನು ಬಿಡುಗಡೆಗೊಳಿಸಬೇಕು ಎಂದುಕೊಂಡೆ, ಬಿಡುಗಡೆಗೊಳಿಸಿದೆ ಕೂಡಾ.

ನಂಜುಂಡನ ಸೋದರಮಾವ ಚನ್ನಯ್ಯ "ಆರಂಭದಲ್ಲಿ ನಾನು, ನೀವೊಬ್ಬ ಅನನುಭವಿ ಜ್ಯೂನಿಯರ್ ಎಂದು ಹೇಳಿ ನಿಮ್ಮ ಮನಸ್ಸು ನೋಯಿಸಿದೆ. ದೇವದಾಸ್ ನಿಮ್ಮಲ್ಲಿ ಎಂಥ ಸಾಮರ್ಥ್ಯ ಕಂಡಿದ್ದಾರೇಂತ ಈಗ ಅರ್ಥವಾಗ್ತಿದೆ, ದಯವಿಟ್ಟು ಕ್ಷಮಿಸಿ" ಎಂದು ನನ್ನ ಕೈ ಹಿಡಿದುಕೊಂಡರು.

ನರಸಮ್ಮ, "ನನ್ ಮಗಂಗೆ ಜೀವ ಕೊಟ್ಟಿರಿ. ನಿಮ್ಮ ಹೆಂಡ್ತಿ ಮಕ್ಳು ಸುಖವಾಗಿರ್ಲಿ" ಎಂದಳು ಬಿಕ್ಕುತ್ತ.

ನನಗೆ ಮಾತುಗಳು ಹೊರಡಲಿಲ್ಲ. ನಾನು ಸ್ವತಂತ್ರವಾಗಿ ನಡೆಸಿ ಗೆದ್ದುಕೊಟ್ಟ ಮೊದಲ ಮರ್ಡರ್ ಕೇಸ್ ಅದಾಗಿತ್ತು.

54

ಕೋರ್ಟಿನಲ್ಲಿ ನರ್ತಿಸಿದ ಗೂಂಡಾಗಿರಿ

ಕೋರ್ಟಿನಲ್ಲಿ ಕೂತು ಅರ್ಧಗಂಟೆಯೂ ಕಳೆದಿರಲಿಲ್ಲ. ಒಬ್ಬ ವ್ಯಕ್ತಿ. "ಅಯ್ಯಯ್ಯೊ ನನ್ನ ಸಾಯಿಸ್ತಾರೆ, ಉಳಿಸೀ" ಎಂದು ಚೀರುತ್ತ ನೇರ ಕೋರ್ಟ್ ಹಾಲ್ ಒಳಕ್ಕೆ ಓಡಿಬಂದುಬಿಟ್ಟ!

ಶ್ರೀಮದ್ ಗಾಂಭೀರ್ಯದಿಂದ ಕೂತಿದ್ದ ಮ್ಯಾಜಿಸ್ಟ್ರೇಟ್ ಸಾಮಾನ್ಯ ಮನುಷ್ಯನಂತೆ ಹೌಹಾರಿ ತಮ್ಮ ಕುರ್ಚಿಯಿಂದ ಮೇಲೆದ್ದು ನಿಂತರು ಗಾಬರಿಯಿಂದ; ಕ್ಷಣ ಏನು ಮಾಡಬೇಕೆಂದು ತೋಚದೆ ದಿಗ್ಮೂಢರಾದಂತೆ ಕಂಡರು.

ಅಷ್ಟರಲ್ಲಿ ಮಚ್ಚು ಹಿಡಿದುಕೊಂಡು ಬೆನ್ನಟ್ಟಿ ಬಂದ ಮೂವರು ಕೋರ್ಟಿನಲ್ಲಿ ಪ್ರತ್ಯಕ್ಷರಾದರು! ಆಗ ಲಾಯರ್‌ಗಳೆಲ್ಲ ಎದ್ದು ನಿಂತು ಹೋ ಎನ್ನತೊಡಗಿದೆವು. ಪಕ್ಕದಲ್ಲಿ ನಮ್ಮ ಸೀನಿಯರ್‌ಗೆ ರಕ್ಷಣೆ ಕೊಡೋಣ ಎಂದುಕೊಂಡು ನೋಡಿದೆ. ಅಷ್ಟರಲ್ಲಿ ಅವರು ಮಾಯವಾಗಿ ಹೋಗಿದ್ದರು!

ರಕ್ಷಣೆ ಅರಸಿ ಓಡಿ ಬಂದಿದ್ದ ವ್ಯಕ್ತಿ ಮ್ಯಾಜಿಸ್ಟ್ರೇಟ್ ಅವರ ಬೆಂಚ್ ಕೆಳಕ್ಕೆ ತೂರಿಕೊಂಡ. ಮ್ಯಾಜಿಸ್ಟ್ರೇಟ್ ಪಕ್ಕದಲ್ಲೇ ಇದ್ದ ಬೆಂಚ್ ಕ್ಲರ್ಕ್ ತನ್ನ ರಕ್ಷಣೆಯನ್ನು

ಮಾಡಿಕೊಳ್ಳುವುದು ಹೇಗೆನ್ನುವ ಗೊಂದಲದಲ್ಲಿ ಯಾವ ನಿರ್ಧಾರಕ್ಕೂ ಬರಲಾಗದವನಂತೆ ತಾನೂ ಮ್ಯಾಜಿಸ್ಟ್ರೇಟ್ ಅವರ ಬೆಂಚ್ ಕೆಳಕ್ಕೆ ತೂರಿಕೊಂಡುಬಿಟ್ಟ. ಮ್ಯಾಜಿಸ್ಟ್ರೇಟ್ ಅವರ ಮುಖ ಬೆವತುಹೋಗಿತ್ತು. ಇಡೀ ದೇಹ ನಡುಗತೊಡಗಿತ್ತು. ಮಚ್ಚು ಹಿಡಿದು ತಮ್ಮ ಬೆಂಚ್ ಕಡೆಗೆ ನುಗ್ಗಿ ಬರುತ್ತಿರುವವರನ್ನು ತಡೆಯುವುದು ಹೇಗೆನ್ನುವ ದಿಗ್ಭ್ರಮೆಗೆ ಒಳಗಾಗಿದ್ದರು.

ಮ್ಯಾಜಿಸ್ಟ್ರೇಟ್ ಅವರ ಮುಂದುಗಡೆಯೇ ನಿಂತಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಚಿಕ್ಕಮಕ್ಕಳಂತೆ ಠಣ್ಣನೆ ಹಾರಿ ಮ್ಯಾಜಿಸ್ಟ್ರೇಟ್‌ರು ಕೋರ್ಟ್ ಹಾಲ್‌ಗೆ ಪ್ರವೇಶಿಸುತ್ತಿದ್ದ ದ್ವಾರದ ಕಡೆಗೆ ಓಡಿದರು.

ಪ್ರಾಸಿಕ್ಯೂಟರ್ ಓಡಿದತ್ತಲೇ ಮ್ಯಾಜಿಸ್ಟ್ರೇಟ್‌ರೂ ಅವರ ಹಿಂದೆಯೇ ಓಡಿದರು. ನಾವೂ ಅನೇಕ ವಕೀಲರೂ ಸಹ ಅದೇ ದ್ವಾರದತ್ತ ಓಡಿದೆವು. ಮುಂದಿನ ದ್ವಾರದಲ್ಲಿ ಮಚ್ಚು ಹಿಡಿದವರು ಇನ್ನಷ್ಟು ಜನ ಇರಬಹುದು ಎಂದು ಭಾವಿಸಿಕೊಂಡೆ. ಇತರರೂ ಹಾಗೇ ಭಾವಿಸಿಕೊಂಡಂತಿತ್ತು.

ಮ್ಯಾಜಿಸ್ಟ್ರೇಟ್‌ರು ತಮ್ಮ ಚೇಂಬರ್ ಬಾಗಿಲನ್ನು ಬಡಿಯುತ್ತಿದ್ದರು. ಅವರಿಗಿಂತ ಮುಂಚೆಯೇ ಓಡಿ ಬಂದಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಒಳ ಸೇರಿ ಬೋಲ್ಟ್ ಹಾಕಿಕೊಂಡುಬಿಟ್ಟಿದ್ದರು.

ಮ್ಯಾಜಿಸ್ಟ್ರೇಟ್ ಅವರು ಮತ್ತೆಲ್ಲಿ ಹೋಗಿ ಅವಿತುಕೊಳ್ಳುವುದು ಎಂದು ಪರದಾಡುತ್ತಾ ಬೆದರಿದ ಗುಬ್ಬಚ್ಚಿಯಂತೆ ಅತ್ತಿತ್ತ ನೋಡತೊಡಗಿದರು.

ಕೋರ್ಟ್ ಹಾಲ್ ಒಳಕ್ಕೆ ಮಚ್ಚು ಹಿಡಿದು ತೂರಿಬಂದವರು ಬಹುಶಃ ತಮ್ಮ ಕೋರ್ಟಿನಲ್ಲಿ ನಡೆಯುತ್ತಿರುವ ಕೇಸ್‌ಗೆ ಸಂಬಂಧಪಟ್ಟವರೇ ಇರಬೇಕೆಂದೂ ತಮ್ಮ ಎದುರಾಳಿಗಳನ್ನು ಮುಗಿಸಿದ ನಂತರ ತಮ್ಮ ಮೇಲೂ ದಾಳಿ ಮಾಡಬಹುದೆಂದೂ ಭಾವಿಸಿಕೊಂಡಂತೆ ಕಂಡರು. ಹಾಗಾಗಿ ಅವರ ಭಯ ತಾರಕಕ್ಕೇರಿತ್ತು. ಅದರಿಂದಾಗಿ ಮುಖ ಕಪ್ಪಿಟ್ಟಿತ್ತು. ಅಷ್ಟರಲ್ಲಿ ಕೋರ್ಟ್ ಹಾಲ್ ಒಳಗಿನಿಂದ ಚೀತ್ಕಾರಗಳು ಕೇಳತೊಡಗಿದವು.

'ಅಯಿತು ಕೊಲೆ' ಎಂದುಕೊಂಡೆ. ನಾಲ್ಕಾರು ಜನ ಯುವ ಲಾಯರ್‌ಗಳು ಸೇರಿ ಓಡಿಹೋಗದೆ ಅಲ್ಲಿಯೇ ನಿಂತುಕೊಂಡೆವು. ಕೋರ್ಟ್ ಹಾಲ್ ಕಿಟಕಿಯ ಬಳಿಗೆ ಬಂದು ಒಳಕ್ಕೆ ಇಣುಕಿದೆವು.

ಮ್ಯಾಜಿಸ್ಟ್ರೇಟ್ ಅವರ ಬೆಂಚಿನ ಕೆಳಕ್ಕೆ ತೂರಿದ್ದ ವ್ಯಕ್ತಿಯ ಬೆನ್ನು, ತಿಕಗಳನ್ನು ಕೊಚ್ಚುತ್ತಿದ್ದರು. ಅವನೂ ಗಾಬರಿಯಿಂದ ಬೆಂಚ್ ಕ್ಲರ್ಕ್ ಅನ್ನು ಗಟ್ಟಿಯಾಗಿ

ಹಿಡಿದುಕೊಂಡುಬಿಟ್ಟಿದ್ದ. ಹೀಗಾಗಿ ಮಚ್ಚಿನೇಟುಗಳು ಬೆಂಚ್ ಕ್ಲರ್ಕ್‌ಗೂ ಬೀಳುತ್ತಿದ್ದವು. ಕೋರ್ಟ್ ಹಾಲ್ ಅದುರುವಂತಿತ್ತು ಅವನ ಚೀತ್ಕಾರ.

ನಿರಾಯುಧರಾದ ನಾವು ಅವರನ್ನು ರಕ್ಷಿಸುವಂತೆಯೂ ಇರಲಿಲ್ಲ. ನನ್ನ ಆ ನಿಸ್ಸಹಾಯಕತೆಗೆ ನನಗೇ ನಾಚಿಕೆಯೆನಿಸಿತು ಆಗ..... 'ನಾಗರಿಕತೆ ಎಂಥ ಷಂಡತ್ವವನ್ನುಂಟುಮಾಡುತ್ತದಲ್ಲವೆ!' ಎನಿಸಿತು. ಮಚ್ಚು ಹಿಡಿದುಕೊಂಡು ಬಂದವರು ಮೂರೇ ಮೂರು ಜನ. ಅಲ್ಲಿದ್ದ ನಾವು ಮೂವತ್ತಕ್ಕಿಂತ ಹೆಚ್ಚಿನ ಜನರಿದ್ದೆವು. ಅಷ್ಟೇ ಏಕೆ ಮುನ್ನೂರು ಜನರಿದ್ದರೂ ಆ ಮೂವರನ್ನು ನಮಗೆ ಎದುರಿಸಲಾಗುತ್ತಿರಲಿಲ್ಲ.

ಎಲ್ಲ ಲಾಯರ್‌ಗಳಿಗೂ ಗಾಬರಿ. ಯಾರು ಯಾರ ಕಕ್ಷಿದಾರರೊ, ಯಾತಕ್ಕಾಗಿ ಈ ಸೇಡೊ ತಿಳಿಯದೆ ತಮ್ಮ ಸ್ವಯಂ ರಕ್ಷಣೆಯಲ್ಲಿ ನಿರತರಾಗಿದ್ದರು.

ಮ್ಯಾಜಿಸ್ಟ್ರೇಟ್ ಅವರು ಪಕ್ಕದ ಕೋರ್ಟ್‌ನ ಜಡ್ಜ್ ಅವರ ಚೇಂಬರ್ ಒಳಕ್ಕೆ ಹೊಕ್ಕು ಬೋಲ್ಟ್ ಹಾಕಿಕೊಂಡು ಏದುಸಿರು ಬಿಡುತ್ತಿರಬೇಕು ಎನಿಸಿತು.

ನೋಡ ನೋಡುತ್ತಿರುವಂತೆಯೇ ನಾಲ್ಕನೇ ಮ್ಯಾಜಿಸ್ಟ್ರೇಟ್ ಕೋರ್ಟಿನ ಕಡೆಯಿಂದಲೂ ಪ್ರಾಣ ಭಯದ ಕೂಗು ಕೇಳಿಸಿತು. ಆಗ ನಾನು ನಿಜವಾಗಿಯೂ ಹೆದರಿದೆ. "ಇಲ್ಲಷ್ಟೇ ಅಲ್ಲ, ಇಡೀ ಕೋರ್ಟಿನಲ್ಲಿ ಎಲ್ಲೆಡೆ ಏನೋ ಆಗುತ್ತಿದೆ...." ಎಂದುಕೊಂಡೆ.

ನಾಲ್ಕನೇ ಕೋರ್ಟ್ ಕಡೆ ನಾವು ಓಡಿಹೋಗುತ್ತಿದ್ದಂತೆ ಆ ಕೋರ್ಟಿನ ಲಾಯರ್‌ಗಳೂ ಹೊರಗೆ ಓಡಿಬರುತ್ತಿದ್ದರು.

ಕೋರ್ಟ್ ಹಾಲ್ ಮುಂದೆಯೇ ಒಬ್ಬನನ್ನು ಕೊಚ್ಚಿ ಆತ ಕೆಳಗುರುಳಿದ್ದ. ಎರಡನೇ ಮತ್ತು ನಾಲ್ಕನೇ ಕೋರ್ಟ್‌ಗಳಲ್ಲಿ ಮಚ್ಚುಗಳಿಂದ ದಾಳಿ ನಡೆಸಿದವರು ನಮ್ಮ ಕಣ್ಣೆದುರೇ ಕೋರ್ಟ್ ಕಾಂಪೌಂಡ್ ಹಾರಿ ಕಬ್ಬನ್ ಪಾರ್ಕ್ ಕಡೆ ಓಡಿಹೋಗುತ್ತಿದ್ದರು.

ಮೆಟ್ರೋಪಾಲಿಟನ್ ಕೋರ್ಟ್‌ನಲ್ಲಿ ನಿಂತು ಕೂಗಿದರೆ ಕೇಳಬೇಕು ಅಷ್ಟೇ ಸಮೀಪದಲ್ಲಿರುವುದು ಪೊಲೀಸ್ ಮಹಾನಿರ್ದೇಶಕರ ಕಚೇರಿ! ಇಷ್ಟೆಲ್ಲ ಗಲಾಟೆಯಾದರೂ ಒಂದೇ ಒಂದು ಪೊಲೀಸ್ ಪಿಳ್ಳೆ ಪ್ರತ್ಯಕ್ಷಗೊಳ್ಳಲಿಲ್ಲ!

ಹಾಂ, ಎನ್ನುವಷ್ಟರಲ್ಲಿ ಎಲ್ಲ ಲಾಯರ್‌ಗಳೂ ಒಂದೆಡೆ ಸೇರಿದರು. ಎಲ್ಲ ಮ್ಯಾಜಿಸ್ಟ್ರೇಟ್‌ಗಳೂ ಕೋರ್ಟ್ ಹಾಲ್‌ನಿಂದ ತಲೆತಪ್ಪಿಸಿಕೊಂಡಿದ್ದರು.

ಇಡೀ ಕೋರ್ಟ್ ಸಂಕೀರ್ಣ ತಲ್ಲಣಿಸಿಹೋಗಿತ್ತು; ಕೇವಲ ನಾಲ್ಕಾರು ಗೂಂಡಾಗಳಿಂದ. ಅದೂ ಅವರ ಕೈಗಳಲ್ಲಿ ಪಿಸ್ತೂಲು, ಗನ್‌ಗಳೇನೂ ಇರಲಿಲ್ಲ. ಕೇವಲ ಮಚ್ಚು ಮತ್ತು ಖಡ್ಗಗಳಿದ್ದವು !

ಅಷ್ಟರಲ್ಲಿ ಇಬ್ಬರು ಲಾಯರ್‌ಗಳು ನಾವಿದ್ದಲ್ಲಿಗೆ ಓಡಿಬಂದರು : "ಡಿಜಿಪಿ ಆಫೀಸ್‌ಗೆ ಹೋಗಿ ಕೋರ್ಟ್‌ನಲ್ಲಿ ಹೀಗೆಲ್ಲ ಗಲಾಟೆ ಆಗುತ್ತಿದೆ ಅಂತ ಹೇಳಿದೆವು. ಆದರೆ ಅವರು ಏನೂ ಆಗೇ ಇಲ್ಲ ಎನ್ನುವಂತೆ ಶಾಂತವಾಗಿ ಕೂತಿದ್ದಾರೆ...." ಎಂದು ಹೇಳಿದರು ಗಾಬರಿಯಾಗಿ. ಇದನ್ನು ಕೇಳಿ ಅಲ್ಲಿ ನೆರೆದಿದ್ದ ಲಾಯರ್‌ಗಳೆಲ್ಲ ಪೋಲೀಸರ ಮೇಲೆ ಕೋಪೋದ್ರೇಕಗೊಂಡರು. ಸರ್ಕಾರದ ಆಡಳಿತದ ಬಗ್ಗೆ ಬಿಸಿ ಚರ್ಚೆ ನಡೆಯತೊಡಗಿತು.

ಮಚ್ಚಿನಿಂದ ಕೊಚ್ಚಿಸಿಕೊಂಡವರನ್ನು ಮೊದಲು ಉಳಿಸೋಣ ಎಂದು ಅವರಿದ್ದಲ್ಲಿಗೆ ಒಂದಷ್ಟು ಲಾಯರ್‌ಗಳು ಓಡಿದೆವು. ನಾಲ್ಕನೇ ಮೆಟ್ರೊಪಾಲಿಟನ್ ಕೋರ್ಟಿನ ಮ್ಯಾಜಿಸ್ಟ್ರೇಟ್ ಜೆ. ಚಂದ್ರಶೇಖರಯ್ಯ ಅವರು ಮಾರಣಾಂತಿಕ ಗಾಯಗಳಿಂದ ನರಳುತ್ತಿದ್ದವನಿಂದ ಹೇಳಿಕೆಯನ್ನು ಪಡೆಯುತ್ತಿದ್ದರು.

ಚಂದ್ರಶೇಖರಯ್ಯನವರು ಬಹಳ ದಿಟ್ಟ ಸ್ವಭಾವದವರು. ವೃತ್ತಿಯಲ್ಲಿ ನಿಷ್ಕಳಂಕರಾಗಿದ್ದರು. ತಮ್ಮ ಕೋರ್ಟಿನ ಮುಂದೆಯೇ ನಡೆದ ಈ ಕೊಲೆಯತ್ನದಿಂದ ಅವರಲ್ಲಿ ಕೋಪ ಸ್ಫೋಟಗೊಂಡಂತೆ ಕಂಡಿತು. ಅವರೊಂದಿಗೆ ಬೇರೆ ಮ್ಯಾಜಿಸ್ಟ್ರೇಟ್‌ರು ಇರಲಿಲ್ಲ.

ಕೋರ್ಟ್ ಹಾಲ್ ಎರಡರಲ್ಲಿ ಬಿದ್ದಿದ್ದ ಇಬ್ಬರನ್ನು ಮತ್ತು ಕೋರ್ಟ್ ಹಾಲ್ ನಾಲ್ಕರ ಮುಂದೆ ಬಿದ್ದಿದ್ದ ಒಬ್ಬನನ್ನು ಆಸ್ಪತ್ರೆಗೆ ಸಾಗಿಸುವ ಏರ್ಪಾಟು ಮಾಡಿದೆವು. ಚಂದ್ರಶೇಖರಯ್ಯನವರಿಗೆ ಆಸ್ಪತ್ರೆಯಲ್ಲಿ ಹೇಳಿಕೆ ಪಡೆದುಕೊಳ್ಳಬಹುದೆಂದು ಹೇಳಿದೆವು.

ಗಾಯಾಳುಗಳು ಯಾರೂ ಸಾಯಲಿಲ್ಲ. ಪ್ರಾಣಾಪಾಯದಿಂದ ಪಾರಾದರು.

ಪಾಪ ಬೆಂಚ್ ಕ್ಲರ್ಕ್ ಬಗ್ಗೆ ಕರುಣೆ ಪಡದವರೇ ಇರಲಿಲ್ಲ ಇಡೀ ಕೋರ್ಟ್ ಸಂಕೀರ್ಣದಲ್ಲಿ.

ಇಂದು ಬೆಂಚ್ ಕ್ಲರ್ಕ್‌ಗೆ ಆಗಿದ್ದು ನಾಳೆ ನ್ಯಾಯಾಧೀಶರಿಗೆ ಆಗದೆ? ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಆಗದೆ? ಲಾಯರ್‌ಗಳಿಗೆ ಆಗದೆ? ಇದೇನಾ ಸರ್ಕಾರ ನ್ಯಾಯಾಂಗಕ್ಕೆ ನೀಡುವ ರಕ್ಷಣೆ? ಇದು ಪ್ರಜಾಪ್ರಭುತ್ವವೊ ಅಥವಾ ಗೂಂಡಾ ಪ್ರಭುತ್ವವೊ ಎಂದೆಲ್ಲ ಲಾಯರ್‌ಗಳು ಮಾತಾಡತೊಡಗಿದರು.

ಮ್ಯಾಜಿಸ್ಟ್ರೇಟ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಜಗಳ ಕಾಯ್ತಿದಾರೆ ಎಂದು ಯಾರೋ ಬಂದು ಹೇಳಿದರು. ನಾವು ಕೆಲವರು ಎರಡನೇ ಕೋರ್ಟ್ ಹಾಲ್ ಕಡೆ ಓಡಿದೆವು.

ಮ್ಯಾಜಿಸ್ಟ್ರೇಟ್ ಅವರು, "ನನ್ನ ಚೇಂಬರ್ ಒಳಕ್ಕೆ ಹೋಗಿ ಬೋಲ್ಟ್ ಹಾಕಿಕೊಳ್ಳೋಕೆ ನಿಮಗೆಷ್ಟೂರಿ ಧೈರ್ಯ? ನಾನು ಕೂಗ್ತಾ ಇದೀನಿ ತೆರೀತಾ ಇಲ್ಲ. ಆ ಗೂಂಡಾಗಳು ನನಗೇನಾದರೂ ಮಾಡಿದ್ದರೆ ಯಾರ್ರೀ ಹೊಣೆ? ನೀವು ನಿಮ್ಮ ಚೇಂಬರ್‌ಗೆ ಹೋಗಬೇಕಿತ್ತು. ಇದೆಲ್ಲ ನಾನ್‌ಸೆನ್ಸ್...." ಎಂದು ರೌದ್ರಾವತಾರ ತಾಳಿದ್ದರು. ಪ್ರಾಸಿಕ್ಯೂಟರ್ ಪ್ರತಿ ಮಾತಾಡದೆ ಸುಮ್ಮನೆ ನಿಂತಿದ್ದರು; ನನ್ನ ಪ್ರಾಣ ಬಚಾವಾಯಿತು ಈಗ ಏನಾದರೂ ಬೈದುಕೊ ಎನ್ನುವಂತೆ.

ನ್ಯಾಯಾಂಗಕ್ಕೆ ಸೂಕ್ತ ರಕ್ಷಣೆ ಒದಗಿಸುವವರೆಗೂ ಕೋರ್ಟುಗಳನ್ನು ಬಹಿಷ್ಕರಿಸೋಣ ಎನ್ನುವ ಸಲಹೆ ಲಾಯರ್‌ಗಳಿಂದ ಬಂದಿತು. ಇನ್ನು ಕೆಲವು ಸೀನಿಯರ್ ಲಾಯರ್‌ಗಳು "ಕಾಲ ಕೆಟ್ಟಿತು, ನಮ್ಮಂಥವರು ಪ್ರೊಫೆಶನ್ ಮುಂದುವರಿಸಬಾರದು. ಎಲ್ಲಕ್ಕೂ ರೆಡಿಯಾದವರ ಕಾಲವಿದು" ಎಂದು ನಿರಾಶೆಯಿಂದ ಕೈಚೆಲ್ಲಿದರು.

ಕೊಲೆ ಮಾಡಬಂದವರಾರು? ಅವರಿಗೆ ಈಡಾದವರಾರು? ಪೊಲೀಸರು ಏಕೆ ಸುಳಿಯಲಿಲ್ಲ? ಎನ್ನುವ ಚರ್ಚೆ ನಡೆದಾಗ ಸತ್ಯಗಳು ಹೊರಬಿದ್ದವು.

ಗೂಂಡಾ ಜಯರಾಜ್ ಕಡೆಯವರು ಕೊಲೆ ಮಾಡಲು ಬಂದಿದ್ದರು. ಜಯರಾಜ್‌ನ ಎದುರಾಳಿ ಗೂಂಡಾ ವಾಸುವಿನ ಕಡೆಯವರು ಹಲ್ಲೆಗೊಳಗಾಗಿದ್ದರು.

ಜಯರಾಜ್‌ಗಿಂತ ಮುಂಚೆ ಬೆಂಗಳೂರಲ್ಲಿ ಅಂಥ ಕುಖ್ಯಾತ ರೌಡಿಗಳಾರೂ ಇರಲಿಲ್ಲ. ಏನಿದ್ದರೂ ಅವರೆಲ್ಲ ಸಣ್ಣಪುಟ್ಟ ಕಳ್ಳತನ, ದರೋಡೆಗಳಲ್ಲಿರುತ್ತಿದ್ದರು.

ಆದರೆ ಜಯರಾಜ್ ಸರ್ಕಾರಕ್ಕೆ ಪ್ಯಾರಲಲ್ ಎನ್ನುವಂಥ ಒಂದು ವ್ಯವಸ್ಥೆಯನ್ನು ಸೃಷ್ಟಿಸಿಬಿಟ್ಟಿದ್ದ. ಇದೆಲ್ಲ ಹೇಗೆ ಸಾಧ್ಯವಾಗಿತ್ತು? ಆಗ ಮುಖ್ಯಮಂತ್ರಿಗಳಾಗಿದ್ದ ದೇವರಾಜ್ ಅರಸು ಅವರ ಅಳಿಯ ನಟರಾಜ್ ಜಯರಾಜ್‌ಗೆ ಗಾಡ್‌ಫಾದರ್ ಆಗಿದ್ದರು. ನಟರಾಜ್‌ಗೆ ಅರಸು ಗಾಡ್‌ಫಾದರ್ ಆಗಿದ್ದರು.

ಜಯರಾಜ್‌ಗೆ ರಾಜಕೀಯ ಸಪೋರ್ಟ್ ಇದ್ದುದರಿಂದ ಪೊಲೀಸರು ಅವನ ಮುಂದೆ ಷಂಡರಾಗಿಬಿಡುತ್ತಿದ್ದರು.

ಜಯರಾಜ್‌ನನ್ನು ಪ್ರಶ್ನಿಸುವ ಧೈರ್ಯ ಪೊಲೀಸರಿಗೆ ಇಲ್ಲದಿದ್ದಾಗ ವಾಸು ಎನ್ನುವವ ಅವನ ವಿರುದ್ಧ ಸೆಡ್ಡು ಹೊಡೆದು ನಿಂತಿದ್ದ. ವಾಸುವಿನದೇನೂ ನೈತಿಕ ಹೋರಾಟವಲ್ಲ; ಭೂಗತ ಕರಾಳಲೋಕದ ಸುಪ್ರಿಮಸಿಗಾಗಿ ಸ್ಪರ್ಧೆ.

ಜಯರಾಜ್ ಮತ್ತು ವಾಸು ಮಧ್ಯೆ ಘರ್ಷಣೆಗಳು ಸಾಮಾನ್ಯವಾಗಿದ್ದವು. ನಾಲ್ಕನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಪರಸ್ಪರರು ಹಾಕಿಕೊಂಡ ಕೇಸುಗಳೂ ಇದ್ದವು. ಇವರೀರ್ವರ ಕಾದಾಟಕ್ಕೆ ಕಾರ್ಪೋರೇಷನ್ ಎದುರಿಗಿನ ಪೈ ವಿಹಾರದ ಸುತ್ತಲಿನ ಪ್ರದೇಶ ರಣರಂಗವಾಯಿತು. ಜಯರಾಜ್ ವಿವಿಧ ಪ್ರದೇಶಗಳಿಗೆ ತನ್ನ ಪ್ರತಿನಿಧಿಗಳನ್ನು ನೇಮಿಸಿದ್ದ; ಚಕ್ರವರ್ತಿ ಸಾಮಂತರಿಗೆ ಸಂಸ್ಥಾನಗಳ ಉಸ್ತುವಾರಿ ನೀಡಿದಂತೆ.

ಜಯರಾಜ್ ಮತ್ತು ವಾಸುಗಳ ಮಧ್ಯದ ಜಗಳದ ಬಹುತೇಕ ಕೇಸ್‌ಗಳು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿಯೇ ರಿಜಿಸ್ಟರ್ ಆಗುತ್ತಿದ್ದವು.

ಅಧಿಕಾರಾರೂಢ ರಾಜಕೀಯದ ಪೋಷಣೆಯಲ್ಲಿ ತಲೆಯೆತ್ತಿದ್ದರಿಂದ ರಾಜಧಾನಿಯಲ್ಲಿ ಗೂಂಡಾಗಿರಿಗೆ ಒಂದು ವಿಚಿತ್ರ ಪ್ರಭಾವಳಿ ಸೃಷ್ಟಿಯಾಗಿತ್ತು. ಸಂಸ್ಕಾರವಿಲ್ಲದ ಯುವಜನರು ಗೂಂಡಾ ಆಗುವುದು ಜೀವನದ ಮಹತ್ತರ ಸಾಧನೆ ಎಂದುಕೊಳ್ಳುವಂಥ ವಾತಾವರಣ ಸೃಷ್ಟಿಯಾಗಿತ್ತು. ಗೂಂಡಾಗಳು ಸಮರಧೀರರಂತೆ ಕಾಣತೊಡಗಿದರು.

ಅರಸು ಅವರು ತಮ್ಮ ಮೌನಮುದ್ರೆಯ ಮೂಲಕ ಗೂಂಡಾ ಯುಗಕ್ಕೆ ನಾಂದಿಯನ್ನು ಹಾಡಿದ್ದರು.

ಅರಸು ಅವರು ಕರ್ನಾಟಕಕ್ಕೆ ನೀಡಿದ ಕೊಡುಗೆಗಳು ಅಪಾರ. ಅದರ ಬಗ್ಗೆ ಎರಡು ಮಾತಿಲ್ಲ. ಅದೇ ಸಂದರ್ಭದಲ್ಲಿ ಸಮಾಜದ್ರೋಹಿ ಗೂಂಡಾ ಪರಂಪರೆಗೆ ಕೆಂಪುಗಂಬಳಿಯನ್ನೂ ಹಾಸಿಕೊಟ್ಟರು.

ಅರಸು ಅವರ ಈ ದ್ವಂದ್ವ ವ್ಯಕ್ತಿತ್ವ ನನಗೆ ಜಟಿಲ ಪ್ರಶ್ನೆಯಾಗಿಯೇ ಉಳಿದುಕೊಂಡಿದೆ.

55

ಅರಸು ರಂಗದ ಇನ್ನೊಂದು ಮುಖ

ಕೋರ್ಟಿನಲ್ಲಿ ಹಾಡುಹಗಲೇ ಗೂಂಡಾಗಿರಿಯ ನಗ್ನನೃತ್ಯವಾದುದು ಇಡೀ ನ್ಯಾಯಾಂಗವನ್ನು ತಲ್ಲಣಗೊಳಿಸಿಬಿಟ್ಟಿತ್ತು. ವಿಶೇಷವಾಗಿ ನ್ಯಾಯಾಧೀಶರು ನಡುಗಿಹೋಗಿದ್ದರು. ಕೋರ್ಟುಗಳಿಗೆ ಪೊಲೀಸ್ ರಕ್ಷಣೆ ನೀಡದಿದ್ದರೆ ಕೋರ್ಟ್ ಕಲಾಪಗಳನ್ನು ನಡೆಸುವುದೇ ದುಸ್ತರ ಎನ್ನುವ ಚರ್ಚೆ ಅವರ ಮಧ್ಯೆ ನಡೆಯತೊಡಗಿತ್ತು. ಮುಖ್ಯಮಂತ್ರಿ ದೇವರಾಜ್ ಅರಸು ಅವರಿಗೆ ಈ ಬಗ್ಗೆ ಮನವಿಯೊಂದನ್ನು ಕೊಡಬೇಕೆನ್ನುವ ತೀರ್ಮಾನವೂ ಆದಂತೆ ಕಂಡುಬಂದಿತು. ವಕೀಲರ ಸಮೂಹದಲ್ಲಂತೂ ಅರಸು ಅವರ ಈ ಧೋರಣೆಯ ಬಗ್ಗೆ ತೀವ್ರ ಟೀಕೆಗಳು ಬರತೊಡಗಿದವು.

ಅರಸು ಅವರು ತಂದ ಭೂಸುಧಾರಣೆ ಮತ್ತು ಮೀಸಲಾತಿ ಕಾನೂನುಗಳ ಬಗ್ಗೆ ಹಲವಾರು ವಕೀಲರು ಎಷ್ಟು ಮೆಚ್ಚುಗೆ ವ್ಯಕ್ತಪಡಿಸಿದ್ದರೋ ಅದಕ್ಕೂ ಹೆಚ್ಚು ಈ ಸರ್ಕಾರಿ ಪ್ರಣೀತ ಗೂಂಡಾಗಿರಿಯನ್ನು ತೆಗಳತೊಡಗಿದರು.

ದಿಲ್ಲಿಯಲ್ಲಿ ನಡೆಯಲಿದ್ದ ಕಾಂಗ್ರೆಸ್ ರ್‍ಯಾಲಿಯೊಂದಕ್ಕೆ ಡಾ. ನಟರಾಜ್

ತಮ್ಮ ನೇತೃತ್ವದಲ್ಲಿ ಜೈರಾಜ್ ಮತ್ತು ಅವನ ಗೂಂಡಾ ಪಡೆಯನ್ನು ರಾಜಾರೋಷವಾಗಿ ಟ್ರೇನ್‌ನಲ್ಲಿ ಕರೆದೊಯ್ಯುವುದನ್ನು ನೋಡಿದ ನಾಗರಿಕರು ತಬ್ಬಿಬ್ಬಾಗಿಬಿಟ್ಟರು. ಕಾಂಗ್ರೆಸ್ಸಿನಲ್ಲಿದ್ದ ಸಂಭಾವಿತರು ಇದನ್ನೆಲ್ಲ ನೋಡಿ ಕಂಗೆಟ್ಟರು. ಈ ಗೂಂಡಾಗಳು ಕಾಂಗ್ರೆಸ್ಸಿನ ಅನಾದಿ, ಬುನಾದಿಗಳೆಲ್ಲ ತಾವೇ ಏನೊ ಎನ್ನುವಂತೆ ಎದೆಸೆಟೆಸಿ ಜಿಂದಾಬಾದ್ ಕೂಗುತ್ತ ರ್‍ಯಾಲಿಗೆ ನಡೆದದ್ದು ನೋಡಿ ಪ್ರಜ್ಞಾವಂತರೆಲ್ಲ ತಲೆತಗ್ಗಿಸಿದರು.

ಚೂರುಪಾರು ಉಳಿದುಕೊಂಡಿದ್ದ ಕಾಂಗ್ರೆಸ್ಸಿನ ಸತ್‌ಸಂಪ್ರದಾಯಗಳೆಲ್ಲ ಜೈರಾಜ್ ಪಡೆಯ ಕೇಕೆಗೆ ಮುದುರಿ ಮೂಲೆಗುಂಪಾಗಿದ್ದವು. ಕಾಂಗ್ರೆಸ್ಸಿನ ಕಮಿಟಿಯೊಳಗೆ ಮುಕ್ತ ಚರ್ಚೆಗಳು ನಿಂತುಹೋಗಿದ್ದವು. ಒಳಗೆ ಮೀಟಿಂಗ್ ನಡೆಯುತ್ತಿದ್ದರೆ ಹೊರಗೆ ಗೂಂಡಾಗಳು ಪೆರೇಡ್ ಮಾಡುತ್ತಿದ್ದರು. ಹೊರಗಿನ ಗೂಂಡಾಗಳನ್ನು ನೋಡಿದ ಕಮಿಟಿಯ ಸದಸ್ಯರು ಬಾಯಿಗೆ ಬೀಗ ಹಾಕಿಕೊಂಡು ಕೂರುವ ಸ್ಥಿತಿಗೊಳಗಾಗಿದ್ದರು. ಹೊರಗಿದ್ದ ಗೂಂಡಾಗಳು, ಅರೆಗೂಂಡಾಗಳು ಕಾಂಗ್ರೆಸ್ ಕಮಿಟಿಯೊಳಕ್ಕೆ ಒಬ್ಬೊಬ್ಬರೇ ಪ್ರವೇಶಿಸುತ್ತಿರುವ ಸುದ್ದಿಗಳೂ ಬರತೊಡಗಿದರು.

ಗೂಂಡಾಗಳಿಗೆ ಆಳುವ ಪಕ್ಷದ ಕಾರ್ಡ್ ಸಿಕ್ಕಿದ್ದರಿಂದ ಅವರು ಇಡೀ ಬೆಂಗಳೂರನ್ನು ಅರಾಜಕ ಪರಿಸ್ಥಿತಿಗೆ ದೂಡಿದರು. ಗೂಂಡಾಗಳು ಪರ್ಯಾಯ ಕೋರ್ಟು, ಠಾಣೆಗಳನ್ನು ನಡೆಸತೊಡಗಿದರು. ಜೈರಾಜ್ ವಿವಿಧ ಪ್ರದೇಶಗಳಿಗೆ ನೇಮಿಸಿದ್ದ ಮರಿಗೂಂಡಾಗಳು ಯಾರೆಂದರೆ ಅವರನ್ನು ತಮ್ಮ ಅಡ್ಡೆಗಳಿಗೆ ಎಳೆತಂದು ಜೀವಭಯವೊಡ್ಡಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳತೊಡಗಿದರು.

ಅರಸು ಅವರು ಹೌಸ್ ರೆಂಟ್ ಕಂಟ್ರೋಲ್ ಕಾನೂನನ್ನು ಜಾರಿಗೊಳಿಸಿದರು. ಮನೆರಹಿತ ಬಾಡಿಗೆದಾರರ ರಕ್ಷಣೆಗಾಗಿ ಈ ಕಾನೂನು ತರಲಾಗಿತ್ತು.

ಈ ಕಾನೂನಿನನ್ವಯ ಹಲವಾರು ಬಾಡಿಗೆದಾರರು ತಮ್ಮ ಹಕ್ಕುಗಳನ್ನು ಕೇಳಿ ಮಾಲೀಕರ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆ ಹೂಡಿದ್ದರು.

ಮನೆ ಮಾಲೀಕರ ವಿರುದ್ಧ ಕೇಸು ಕೊಟ್ಟ ಕಕ್ಷಿದಾರರು ವಕೀಲರ ಬಳಿ ಬಂದು 'ಕೇಸ್ ವಾಪಸ್ ತೆಗೆದುಕೊಳ್ಳಿ' ಎಂದು ಕೇಳಿಕೊಳ್ಳುತ್ತಿರುವುದರ ಬಗ್ಗೆ ವಕೀಲರ ಮಧ್ಯೆ ಚರ್ಚೆ ಆಗತೊಡಗಿತು.

ಕಕ್ಷಿದಾರರು ಏಕೆ ತಾವು ಹಾಕಿದ ಕೇಸುಗಳನ್ನು ವಾಪಸ್ ಪಡೆಯಲಿಚ್ಛಿಸುತ್ತಿದ್ದಾರೆನ್ನುವ ಕಾರಣ ಹುಡುಕಿ ನೋಡಿದರೆ ದಿಗ್ಭ್ರಮೆಯಾಯಿತು! ಅರಸು ಅವರ ಸರ್ಕಾರಿ ಕೃಪಾಪೋಷಿತ ಗೂಂಡಾಗಳು ಮನೆ ಮಾಲೀಕರ

ಪರವಾಗಿ ಬಂದು ಬಾಡಿಗೆದಾರರಿಗೆ ಜೀವಭಯವೊಡ್ಡಿ ಕೇಸುಗಳನ್ನು ವಾಪಸು ತೆಗೆಸುತ್ತಿದ್ದರು!

ಮನೆಯೊಳಗೆ ದಾನ ಕೊಟ್ಟು ಅದನ್ನು ಕಸಿದುಕೊಂಡು ಕಳಿಸಲು ಗೇಟಿನಲ್ಲಿ ಒಬ್ಬನನ್ನು ನಿಲ್ಲಿಸಿದಂಥ ಸನ್ನಿವೇಶ ನಿರ್ಮಾಣವಾಗಿತ್ತು ಮನೆ ಬಿಡಿಸುವುದು ಮತ್ತು ಕೊಡಿಸುವುದರಲ್ಲಿಯೇ ಜೈರಾಜ್ ಪಡೆ ಭಾರೀ ಸಂಪತ್ತನ್ನು ಗಳಿಸಿತು; ಲಿಟಿಗೇಷನ್‌ನಲ್ಲಿದ್ದ ಹಲವಾರು ಬಿಲ್ಡಿಂಗ್‌ಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡೂಬಿಟ್ಟರು.

ಹೀಗೆ ಹೌಸ್‌ರೆಂಟ್ ಕಂಟ್ರೋಲ್ ಆಕ್ಟ್ ಬಾಡಿಗೆದಾರರಿಗಿಂತ ಗೂಂಡಾಗಳಿಗೇ ವರದಾನವಾಗಿ ಪರಿಣಮಿಸಿತು ! ಮುಂದುವರಿದ ಜನಾಂಗಗಳ ಬಗ್ಗೆ ಅರಸು ಅವರಲ್ಲಿದ್ದ ಕೋಪದ ಫಾಯಿದೆಯನ್ನು ಅಪಾತ್ರರು ಲಪಟಾಯಿಸತೊಡಗಿದರು. ಹಿಂದುಳಿದವರಿಗೆ ಏನೂ ಲಾಭವೇ ಆಗಲಿಲ್ಲ ಎನ್ನುವುದು ನನ್ನ ಮಾತಿನ ಉದ್ದೇಶವಲ್ಲ; ಹಿಂದುಳಿದವರ ಹೆಸರಿನಲ್ಲಿ ಸಮಾಜ ಕಂಟಕರು, ಪಾತಕಿಗಳು ಮೆರೆಯತೊಡಗಿದರು.

ಬಹುತೇಕ ಗೂಂಡಾಗಳೇ ತುಂಬಿಕೊಂಡಿದ್ದ ಇಂದಿರಾ ಬ್ರಿಗೇಡ್ ಬಗ್ಗೆ ಸಾರ್ವಜನಿಕರಲ್ಲಿ ಭಯ ಮೂಡತೊಡಗಿತು.

ಎಂ.ಡಿ. ನಟರಾಜ್ ಮೆಡಿಕಲ್ ಓದುತ್ತಿದ್ದಾಗಲೇ ಇಂದಿರಾ ಬ್ರಿಗೇಡ್‌ಗೆ ಲೀಡರ್ ಆಗಿ ಅರಸು ಅವರ ಬಲಗೈ ಬಂಟರಾಗಿಬಿಟ್ಟರು. ಅರಸು ಅವರ ಎರಡನೇ ಮಗಳು ನಾಗರತ್ನ ಅವರೂ ಮೆಡಿಕಲ್ ಓದುತ್ತಿದ್ದರು. ನಟರಾಜ ಜಾತಿಯಲ್ಲಿ ಕುರುಬರು. ನಟರಾಜ್ ತಮ್ಮ ಮಗಳನ್ನೇ ಮದುವೆಯಾಗುತ್ತಿದ್ದಾನೆನ್ನುವ ಸುದ್ದಿ ಅರಸು ಅವರಿಗೆ ಶಾಕ್ ನೀಡಿತು. ಈ ಮದುವೆಯನ್ನು ತೀವ್ರವಾಗಿ ವಿರೋಧಿಸಿದರು. ತಮ್ಮದೇ ಗೂಂಡಾ ಪಡೆಯ ನಾಯಕನಿಂದ ಇಂಥ ಕೆಲಸವನ್ನು ಅರಸು ನಿರೀಕ್ಷಿಸಿರಲಿಲ್ಲ. ಬೇರೆಯವರನ್ನು ಸುಡಲು ಬಳಸಿದ್ದ ಕಿಡಿ ಸ್ವತಃ ತಮ್ಮ ಮನೆಗೇ ಸಿಡಿದದ್ದು ಅರಸು ಅವರಿಗೆ ಕೋಪವುಕ್ಕಿಸಿತ್ತು. ಅದೂ ಅಲ್ಲದೆ ನಟರಾಜ್ ಅವರಿಗೆ ಮೊದಲೊಂದು ಮದುವೆ ಆಗಿತ್ತು. ಮೊದಲ ಹೆಂಡತಿಯ ಸವತಿಯಾಗಿ ತಮ್ಮ ಮುದ್ದಿನ ಮಗಳು ಹೋಗಬೇಕಾಯಿತಲ್ಲ ಎಂದು ಅರಸು ನೊಂದುಕೊಂಡರು.

ಆದರೆ ಸ್ವತಃ ಅವರ ಮಗಳು ನಾಗರತ್ನ, "ನೀವು ಮದುವೆ ಮಾಡದಿದ್ದರೆ ನಾನೇ ಮಾಡಿಕೊಳ್ಳುವೆ" ಎಂದು ಹೆದರಿಸಿದಾಗ ಅರಸು ಮೌನಸಮ್ಮತಿ ಸೂಚಿಸಿದರು. ಮದುವೆಯ ನಂತರ ತಮ್ಮ ಮಗಳು ನಟರಾಜ್ ಜೊತೆ ಸುಖದಿಂದ ಇ...

ಎನ್ನುವುದು ಅರಸು ಅವರಿಗೆ ತಿಳಿದು ಕೊರಗತೊಡಗಿದರು. ಅರಸು ಅವರ ಅಳಿಯ ಎಂ.ಎಲ್.ಸಿ. ಸಹ ಆದರು. ಬೆಂಗಳೂರಲ್ಲಿ ಎಲ್ಲೆಂದರಲ್ಲಿ ಅಕ್ರಮವಾಗಿ ಭೂಮಿ ಕಬಳಿಸಿದರು.

ಎಸ್ಟೇಟ್ ಒಂದರ ಬಾವಿಯಲ್ಲಿ ಒಂದು ಬೆಳಗ್ಗೆ ಅರಸು ಅವರ ಮಗಳು ನಾಗರತ್ನ ಅವರ ಹೆಣ ತೇಲುತ್ತಿತ್ತು ! ಕೆಲವರು 'ಆತ್ಮ ಹತ್ಯೆ' ಎಂದರೆ ಮತ್ತೆ ಕೆಲವರು 'ಕೊಲೆ' ಎಂದರು. ಕೊನೆಗೂ ಸತ್ಯ ನಿಗೂಢವಾಗಿಯೇ ಉಳಿಯಿತು.

56

ಕೂಲಿಕಾರನ ಭೀಕರ ಕೊಲೆ : ಸಾಹುಕಾರ ಮತ್ತು ಸರ್ಕಾರ

ಡಿಜಿಪಿ ಹೊಸಾಳಿಯವರು ನಿವೃತ್ತರಾದ ಮೇಲೆ ಪೊಲೀಸ್ ಇಲಾಖೆಯಲ್ಲಿ ದೇವದಾಸ್ ಕೆಲಸಗಳು ಆಗುತ್ತಿರಲಿಲ್ಲ. ಪದೇ ಪದೇ ಹೊಸಾಳಿಯವರನ್ನು ದೇವದಾಸ್, "ಈ ಸಂದರ್ಭದಲ್ಲಿ ಹೊಸಾಳಿಯಿದ್ದಿದ್ದರೆ...." ಎಂದೆನ್ನುತ್ತಿದ್ದರು. ಹೊಸಾಳಿಯವರಿಗೆ ಆಗಿಬರದ ಅಧಿಕಾರಿಗಳು ದೇವದಾಸ್ ಬಗ್ಗೆ ಕೆಂಗಣ್ಣು ಮಾಡಿಕೊಂಡು "ಹೊಸಾಳಿ ಇರುವ ತನಕ ಈತನ ಆಟ ನಡೆಯುತ್ತೆ. ನಂತರ ಏನು ಮಾಡುತ್ತಾರೆ ಈ ದೇವದಾಸ್?" ಎಂದು ಪಿಸುಗುಡುತ್ತಿದ್ದರು. ದೇವದಾಸ್ ಅವರ ಸ್ವಭಾವವೇ ಹಾಗೆ; ತಮ್ಮ ಕೆಲಸ ಮಾಡಿಕೊಡಲು ಇಲಾಖೆಯ ಮುಖ್ಯಸ್ಥರೆ ಮುಂಗಾಲ ಮೇಲೆ ನಿಂತಾಗ ಉಳಿದವರದೇನು ಲೆಕ್ಕ ಎನ್ನುವ ತಾತ್ಸಾರ ಭಾವ. ಕೆಳಗಿನ ಪೊಲೀಸ್ ಅಧಿಕಾರಿಗಳನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಹೊಸಾಳಿಯವರ ನಿವೃತ್ತಿಯ ನಂತರ ನಾನು ಪೊಲೀಸ್ ನಿರ್ದೇಶಕರು ಮತ್ತು ಕಮೀಷನರ್‌ಗಳ ಆಫೀಸಿಗೆ ಹೋದಾಗ ಉದ್ದೇಶಪೂರ್ವಕವೆಂದು ಎದ್ದು

ಕಾಣುವಂತಹ ಅಸಹಕಾರ ತೋರುತ್ತಿದ್ದರು. ವಿಷಯವನ್ನು ತಂದು ದೇವದಾಸ್ ಅವರಿಗೆ ಹೇಳಿದೆ. "ಬಿಡ್ರಿ ಆ ಪೊಲೀಸ್ ಆಫೀಸರ್‌ಗಳ್ಹತ್ರ ಇನ್‌ಮೇಲೆ ಹೋಗ್‌ಬೇಡ್ರಿ. ಪೊಲೀಸರ ಬಗ್ಗೆ ಇಂಗ್ಲೀಷ್‌ನಲ್ಲಿ ಒಂದು ಮಾತಿದೆ : some men are hetero-sexual, some men are homosexual and some do not think of sex at all. They become police officers...." ಎಂದು ಹೇಳುತ್ತ ಗಹಗಹಿಸಿದರು. ಹೊಸಾಳಿಯವರು ಹುದ್ದೆಯಿಂದ ನಿವೃತ್ತಿಯಾಗುವವರೆಗೆ ಒಂದು ದಿನವೂ ಪೊಲೀಸರ ಬಗ್ಗೆ ಇಂಥ ಅಭಿಪ್ರಾಯವನ್ನು ದೇವದಾಸ್‌ರು ವ್ಯಕ್ತಪಡಿಸಿರಲಿಲ್ಲ! ಹೊಸಾಳಿಯವರನ್ನು ದೇವದಾಸ್ ಹೊಗಳತೊಡಗಿದರೆ ಇಡೀ ಪೊಲೀಸ್ ಇಲಾಖೆಯನ್ನೇ ಹೊಗಳಿದಂತೆ ಕೇಳಿಸುತ್ತಿತ್ತು! ಇದೇ ಮಾತು ಅದೆಷ್ಟೋ ಜನ ವಕೀಲರಿಗೂ ಅನ್ವಯಿಸುತ್ತದಲ್ಲವೆ ಎನ್ನುವ ವಿಚಾರ ಹೊಳೆದು ಮಾಯವಾಯಿತು.

ನಮ್ಮ ಮಾತುಗಳಲ್ಲಿ ಅದೇ ಆಗ ದೇವರಾಜ್ ಅರಸು ಅವರು ತಂದಿದ್ದ ಜೀತ ವಿಮೋಚನಾ ಕಾನೂನಿನ ಬಗೆಗೂ ಚರ್ಚೆಗೆ ಬಂದಿತು. ದೇವದಾಸ್ ಅವರ ತಲೆಯಲ್ಲಿ ಕೆಲವು ವಿಷಯಗಳ ಬಗ್ಗೆ ನಿರ್ದಿಷ್ಟ ತೀರ್ಮಾನಗಳೇ ಇದ್ದವು. ಅವನ್ನು ಬದಲಿಸಲು ಯಾವ ತರ್ಕ, ಚರ್ಚೆಗಳಿಗೂ ಸಾಧ್ಯವಾಗುತ್ತಿರಲಿಲ್ಲ. ಅಂಥದರಲ್ಲಿ ಜ್ಯೂನಿಯರ್ ಆಗಿದ್ದ ನನ್ನಿಂದಂತೂ ಸಾಧ್ಯವೇ ಇರಲಿಲ್ಲ.

"ಜೀತಕ್ಕೆ ಇಟ್‌ಕೊಳ್ದೆ ಹೋದ್ರೆ ಊಟಕ್ಕಿಲ್ದೆ ಸಾಯ್ತಾರಲ್ರೀ ಈ ಮುಂಡೇವು..... ಅದಕ್ಕೇನು ಗೌರ್ನಮೆಂಟ್ ಹಾಕುತ್ತಾ ಕವಳಾನ.... ಅವುರಿಗೆಲ್ಲ ಕೂರಿಸಿ.... ಹಾಂ" ಎಂದು ಅಬ್ಬರಿಸಿದರು.

ತಮ್ಮ ಎಸ್ಟೇಟ್ ಒತ್ತುವರಿ ಮಾಡಿಕೊಂಡಿದ್ದ ಬಡ ರೈತರು, ಕೂಲಿಕಾರರನ್ನು ದೇವದಾಸ್ ಪೊಲೀಸ್‌ರಿಂದ ಹೊಡೆಸಿದ್ದು ನನ್ನ ಕಣ್ಣಮುಂದೆ ಬಂದಿತು. ಜೀತಗಾರರ ಬಗ್ಗೆ ಇವರಲ್ಲಿ ತಿರಸ್ಕಾರ ಭಾವ ಇರುವುದಕ್ಕೆ ಕಾರಣವನ್ನು ಗ್ರಹಿಸಿಕೊಂಡೆ, ಆದರೆ ವ್ಯಕ್ತಗೊಳಿಸಲಿಲ್ಲ.

"ಇವರ ಕಾನೂನುಗಳನ್ನು ನಾ ಕಂಡಿಲ್ಲವೇನ್ರೀ. ಸಮಾನತೆ ಎಂದು ಮೊಸಳೆ ಕಣ್ಣೀರು ಸುರಿಸ್ತಾರೆ. ಅಲ್ರೀ ಉಳುವವನಿಗೇ ಭೂಮಿ ಅಂತ ಕಾನೂನು ತಂದ್ರಲ್ಲ, ದುಡಿಯುವವನೇ ಫ್ಯಾಕ್ಟರಿ ಮಾಲೀಕ ಅಂತ ಯಾಕ್ರೀ ತರ್ಲಿಲ್ಲ ಕಾನೂನು? ಎಲ್ಲ ಬೋಗಸ್ ಕಣ್ರೀ. ಜನರನ್ನ ಮರಳು ಮಾಡೋಕೆ ಇವೆಲ್ಲ ಸರ್ಕಸ್ಸುಗಳು...." ಎಂದು ತುಟಿ ಸೊಟ್ಟಗೆ ಮಾಡಿ ತುಚ್ಛಭಾವ ವ್ಯಕ್ತಪಡಿಸಿದರು. ಜೀತಗಾರಿಕೆ

ನಿರ್ಮೂಲನೆಯ ಬಗ್ಗೆ ಸರಕಾರದಿಂದ ಕಾರ್ಯಕ್ರಮ, ಪ್ರಚಾರಗಳು ನಡೆಯತೊಡಗಿದವು. ಜೀತಗಾರಿಕೆ ಆಚರಣೆಯ ವಿರುದ್ಧ ಅಲ್ಲಲ್ಲಿ ಕೇಸುಗಳು ದಾಖಲಾಗುತ್ತಿರುವುದರ ಬಗ್ಗೆಯೂ ಸುದ್ದಿಗಳು ಬರತೊಡಗಿದ್ದವು.

ಜೀತಗಾರಿಕೆ ನಿರ್ಮೂಲನೆ ಕಾನೂನು ನನಗೆ ಸರಿಯೆಂದೇನೋ ಅನಿಸುತ್ತಿತ್ತು. ಆದರೆ ಆ ಜೀತಗಾರರಿಗೆ ಪರ್ಯಾಯ ವ್ಯವಸ್ಥೆ ಏನು ಎನ್ನುವ ಪ್ರಶ್ನೆ ಕಾಡುತ್ತಿತ್ತು. ಹಾಗೆಯೇ ಖಾಸಗಿ ಬಡ್ಡಿ ಸಾಲ ವಿಧಿ ಕ್ರಮಗಳ ಬಗ್ಗೆಯೂ ಅನಿಸುತ್ತಿತ್ತು. ಇದರಿಂದಾಗಿ ಹಳ್ಳಿಯಲ್ಲಿ ಬಡವನಿಗೆ ಅತ್ತ ಸಾಹುಕಾರ ಇತ್ತ ಸರಕಾರ ಇಬ್ಬರಿಂದಲೂ ಸಾಲ ಸಿಗದಂಥ ಪರಿಸ್ಥಿತಿ ನಿರ್ಮಾಣವಾಗುತ್ತದಲ್ಲ ಎನಿಸುತ್ತಿತ್ತು. ಆದಾಗ್ಯೂ, ಅರಸು ಅವರ ಈ ಕ್ರಮಗಳು ಹಳ್ಳಿಯ ಮಲೆತು ನಿಂತ ನೀರಲ್ಲಿ ಕಲ್ಲೊಗೆದು ತರಂಗಗಳನ್ನೆಬ್ಬಿಸಿದ್ದು ನನ್ನನ್ನು ಆಕರ್ಷಿಸಿತ್ತು.

ಒಂದು ದಿನ ದೇವದಾಸ್‌ರು "ನೀನು ಚಿಕ್ಕಮಗಳೂರಿಗೆ ಹೋಗಿ ಬರಬೇಕು. ನನಗೆ ತೀರಾ ಬೇಕಾದ ಕ್ಲೈಂಟ್. ಪಾಪ ಅವನು ಕೋಟ್ಯಾಧೀಶ ಅಂತ ಅವನಿಂದ ದುಡ್ಡು ಕಿತ್ತುಕೊಳ್ಳೋಕೆ ಜೊತೆಗಾರನ ಕೊಲೆ ಕೇಸ್‌ನಲ್ಲಿ ಅವನನ್ನ ಸಿಕ್ಕಿ ಹಾಕಿಸಿದ್ದಾರೆ. ನೀನು ಹೋಗಿ ಪ್ರೈಮರಿ ವರ್ಕ್‌ಗಳನ್ನೆಲ್ಲ ಮುಗಿಸು. ಪಾಪ ಅವ್ನು ಭಯ ಬಿದ್ದಿದ್ದಾನೆ. ಅವನೆಂಥ ಸಂಭಾವಿತ ಅಂತ ನಂಗೆ ಗೊತ್ತು" ಎಂದರು.

ನಾನು ಚಿಕ್ಕಮಗಳೂರಿಗೆ ಹೋದೆ. ಕೇಸು ಸುಲಭದ್ದಾಗಿರಲಿಲ್ಲ. ಆ ಕೊಲೆ ಆರೋಪಿ ಕಾಫಿ ಪ್ಲಾಂಟರ್ ವಿರುದ್ಧ ಕೃಷಿ ಕಾರ್ಮಿಕ ಸಂಘಟನೆ ಮತ್ತು ಟ್ರೇಡ್ ಯೂನಿಯನ್‌ಗಳು ಹೋರಾಟ ನಡೆಸತೊಡಗಿದ್ದವು.

ಅದೇ ಆಗ ಬಂದಿದ್ದರಿಂದ ಜೀತ ವಿಮೋಚನಾ ಕಾಯ್ದೆ ಗರಿಗರಿಯಾಗಿತ್ತು. ಪೊಲೀಸರು ಕೇಸನ್ನು ಬಹಳ ಸೀರಿಯಸ್ ಆಗಿ ಪರಿಗಣಿಸಿದ್ದರು. ಕಾಫಿ ಪ್ಲಾಂಟರ್ ಒಡ್ಡುವ ಆಮಿಷಗಳಿಗೆ ಬಲಿಯಾದರೆ ತಾವು ನೌಕರಿ ಕಳೆದುಕೊಳ್ಳಬಹುದೆನ್ನುವ ಭಯ ಅವರಿಗೆ ಬಂದಂತಿತ್ತು.

ಕಾಫಿ ಪ್ಲಾಂಟರ್ ನನಗೆ ಶ್ರೀಮಂತ ಆತಿಥ್ಯ ನೀಡಿದರು. ಅವರ ನಯ, ವಿನಯಗಳ ನಡತೆ ನನ್ನನ್ನು ಮುದಗೊಳಿಸಿತು. ಇಂಥವರು ಕೊಲೆ ಮಾಡಿದರೆ? ಎನ್ನಿಸಿತು.

ಪ್ಲಾಂಟರ್ ನನ್ನ ಮುಂದೆ ಹಲವಾರು ದಾಖಲಾತಿ ಕಾಗದ ಪತ್ರಗಳನ್ನು ಇರಿಸಿ, "ನೋಡಿ ಕೊಲೆ ನಡೆದದ್ದು 15ನೇ ಆಗಸ್ಟ್. ಆದರೆ, ನಾನು ಅಂದು ಈ ಊರಿನಲ್ಲೇ ಇರಲಿಲ್ಲ. ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುವ ಇಂಡಿಪೆಂಡೆನ್ಸ್

ಡೇಗೆ ಆಮಂತ್ರಣ ಬಂದಿತ್ತು ಅಲ್ಲಿಗೆ ಹೋಗಿದ್ದೆ. ಇದೋ ನೋಡಿ ಇದು ಆಮಂತ್ರಣ ಪತ್ರ. ಇದು ಫ್ಲೈಟ್ ಟಿಕೆಟ್....." ಎಂದು ತೋರಿಸಿದರು. ನನಗೆ ನಿಜವಾಗಿಯೂ ಅವರ ಬಗ್ಗೆ ಅನುಕಂಪ ಅಂಕುರಿಸಿತು. ಇಂಥ ಸ್ಫಟಿಕಸ್ಪಷ್ಟ ದಾಖಲೆಗಳಿದ್ದಾಗಲೂ ಇವರನ್ನು ಆರೋಪಿ ಮಾಡಿದ್ದಾರಲ್ಲ ಎನಿಸಿತು. ನಾನು ಅವರಿಗೆ, "ನೀವು ಚಿಂತಿಸುವ ಅವಶ್ಯಕತೆಯೇ ಇಲ್ಲ. ಈ ದಾಖಲಾತಿಗಳು ನಿಮ್ಮನ್ನು ಆರೋಪಮುಕ್ತಗೊಳಿಸುತ್ತವೆ. ಕೇಸು ಆರಂಭವಾಗುವುದಕ್ಕೆ ಮುನ್ನವೇ ನಿಮ್ಮ ಹೆಸರು ಆರೋಪಿಗಳ ಪಟ್ಟಿಯಿಂದ ಅಳಿಸಲ್ಪಡುತ್ತದೆ" ಎಂದು ಭರವಸೆ ನೀಡಿದೆ. ಪ್ಲಾಂಟರ್ ಮುಖದಲ್ಲಿ ಆಶೆಯ ನಗೆ ಮಿಂಚಿತು.

ಅಲ್ಲಿಯ ಪೋಲೀಸರು ಪ್ಲಾಂಟರ್ ಕೊಡುವ ಯಾವ ದಾಖಲೆಗಳನ್ನು ತೆಗೆದುಕೊಳ್ಳಲೂ ತಯಾರಿರಲಿಲ್ಲ. "ಅವನ್ನೆಲ್ಲ ಕೋರ್ಟಿನಲ್ಲಿ ಕೊಟ್ಟುಕೊಳ್ಳಿ" ಎನ್ನುತ್ತಿದ್ದರು. ಕೋರ್ಟಿನಲ್ಲಿ ಪ್ರಾಥಮಿಕವಾಗಿ ಮಾಡಬೇಕಾದ ಕೆಲಸಗಳ ಬಗ್ಗೆ ಗಮನ ಹರಿಸಿದೆ.

ಅಂದು ಕೋರ್ಟು ಮುಗಿದ ಮೇಲೆ ಸಂಜೆ ತಿರುಗಾಟಕ್ಕೆ ಹೊರಟೆ. ನನ್ನೊಳಗೆ ಒಂದು ಸಂಶಯ ಕಾಡುತ್ತಿತ್ತು. ಇವರು ನಿರಪರಾಧಿಯಾಗಿದ್ದರೂ ಅದೇಕೆ ಮೊಕದ್ದಮೆಯಲ್ಲಿ ಇವರನ್ನು ಸಿಕ್ಕಿಸಿದ್ದಾರೆ ಎಂದು.

ಪ್ಲಾಂಟೇಷನ್ ಕಾರ್ಮಿಕನೊಬ್ಬನನ್ನು ಸುಮ್ಮನೆ ಅದೂ ಇದೂ ಮಾತಾಡಿಸಿದೆ. ನಾನು ಯಾರೆಂದು ಅವನಿಗೆ ಗೊತ್ತಿರಲಿಲ್ಲ. ಮುಂದುವರೆದು "ಇಲ್ಲಿ ಕಾರ್ಮಿಕನ ಕೊಲೆ ಆಗಿದೆಯಂತೆ? ಆ ಕೊಲೇನ ಮಾಲೀಕರೇ ಮಾಡಿದಾರಂತೆ?" ಎಂದು ಕೇಳಿದೆ.

"ಹೌದು ಸ್ವಾಮಿ, ಅವನೇ ಕೊಲೆ ಮಾಡಿದ್ದು. ನಮ್ ಕಣ್ಣೆದುರಿಗೇ ನಡೆದೋತು. ನೋಡೋಕೆ ದೊಡ್ಡೋರು; ಒಳಗೆ ಕೊಲೆಗಡುಕರು" ಎಂದ.

ನನಗೆ ಆಶ್ಚರ್ಯವಾಯಿತು. ಅವನ ಮಾತುಗಳಲ್ಲಿ ಸತ್ಯದ ವಾಸನೆಯಿದೆಯೆನಿಸಿತು. ಅಲ್ಲೇ ರಸ್ತೆ ಪಕ್ಕಕ್ಕಿದ್ದ ಟೀ ಸ್ಟಾಲ್‌ನತ್ತ ಅವನನ್ನು ಕರೆದೊಯ್ದೆ. 'ಟೀ ತಕ್ಕೋ' ಎಂದೆ. ಒಂದಷ್ಟು ಚಿಲ್ಲರೆ ಕಾಸು ಅವನ ಕೈಗಿಟ್ಟು 'ಬೀಡೀನೂ ತಕ್ಕೊ' ಎಂದೆ. ಅವನು ಖುಷಿಗೊಂಡ.

"ಯಾವೂರು ಸ್ವಾಮಿ ನಿಮ್ದು?" ಎಂದ. "ತುಮಕೂರು. ಇಲ್ಲಿಯ ಆಫೀಸ್‌ನಲ್ಲಿ ಕೆಲಸವಿತ್ತು ಅದಕ್ಕಾಗಿ ಬಂದಿದ್ದೆ" ಎನ್ನುತ್ತಾ, "ಅಂದ ಹಾಗೆ ಕೊಲೆ ಮಾಡಿದ ಪ್ಲಾಂಟರ್‌ನ ಪೋಲೀಸು ಬಿಡೋಲ್ಲ ಅನ್ನು?" ಎಂದೆ.

"ಹೂಂ ಮತ್ತೆ. ದೇವರಾಜ್ ಅರಸು ಅವ್ರು ಕಾರ್ಮಿಕರ ಬಗ್ಗೆ ಭಲೇ ಸ್ಟ್ರಾಂಗ್ ಕಾಯ್ದೆ ತಂದಿದ್ದಾರಂತೆ. ಅದ್ಕೆ ಅವುನು ಸಿಕ್ಕಿಹಾಕ್ಕೊಂಡಿರೋದು. ಇಲ್ದಿದ್ರೆ ಅವುನ್ನ ಹಿಡಿಯೋ ಧೈರ್ಯ ಯಾವನಿಗೆ ಇದೆ?" ಎಂದ.

"ಏನು ಅಂಥ ತಪ್ಪು ಮಾಡಿದ್ದ ಅವ್ನು? ಯಾಕೆ ಕೊಂದದ್ದು?" ಎಂದೆ.

"ಅದೇನ್ ದೊಡ್ ತಪ್ಪಲ್ಲ ಸ್ವಾಮಿ. ಎಲ್ಲ ಕೂಲಿಗಳೂ ಮಾಡೋದನ್ನೇ ಅವ್ನೂ ಮಾಡ್ದ. ಸ್ವಲ್ಪ ಹೆಚ್ಚೇ ಮಾಡಿದ ಅಂತ ಇಟ್ಕೊಳ್ಳಿ, ಕೊಂದೇ ಬಿಡೋದಾ!"

"ಅದೇನು ಮಾಡಿದ್ದ?" ಎಂದೆ.

"ಸ್ವಾಮಿ ಇವ್ರು ಕೊಡೋ ಕೂಲಿ ಸಾಕಾಗಾಕಿಲ್ಲ. ಕಾಫಿ ಬೀಜಾನ ಮನೆಗೆ ಒಯ್ತಾರೆ ಕೂಲಿಗಳು. ಹಂಗೇ ಅವ್ನೂ ಒಯ್ದಿದ್ದ. ಮಾಲೀಕನಿಗೆ ಸಿಟ್ಟು ಇರೋದೆ ಬೇರೇದಕ್ಕೆ. ಅವ್ನು ಎಲ್ಲ ಕೂಲಿಗಳನ್ನ ಒಂದುಗೂಡಿಸಿ ಮಾಲೀಕರ ವಿರುದ್ಧ ನಿಲ್ತಾ ಇದ್ದ. ಅವುನ್ನ ಯಾವ ತಪ್ನಲ್ಲಿ ಸಿಕ್ಕಿಸಬೇಕೂ ಅಂತ ಕಾಯ್ತಾ ಇದ್ರು. ಒಂದು ಮುಂಜಾನೆ ಮಾಲೀಕ, ಅವನ ಅಣ್ಣತಮ್ಮಂದಿರು, ಮ್ಯಾನೇಜರ್ರು ಬಂದು ಅವನ ಮನೆ ಜಪ್ತಿ ಮಾಡಿದ್ರು. ಕೂಡಿಟ್ಟಿದ್ದ ಕಾಫಿ ಬೀಜಾನೆಲ್ಲ ಹೊರಗಿಟ್ಟು ಜನರೆದುರೇ ಅವುನ್ನ ಸಿಕ್ಕಂಗೆ ಚಚ್ಚಿದ್ರು. ಬಾಯಾಗೆ ರಕ್ತಬಿತ್ತು. ಬಿಟ್ಟು ಹೋದ್ರು. ಅವ್ರು ಅತ್ತ ಹೋಗಿದ್ದೇ ಗ್ಯಾನತಪ್ಪಿ ಬಿದ್ದ. ನಾವೆಲ್ಲ ಆಸ್ಪತ್ರೆಗೆ ಹೊತ್ಗೊಂಡು ಹೋದ್ವಿ. ಡಾಕ್ಟ್ರು, ಇದು ಉಳಿಯೋ ಕೇಸಲ್ಲ ಮನೆಗೆ ಒಯ್ಯಿರಿ ಅಂದರು. ಅಷ್ಟರಲ್ಲಿ ಅವನ ಮೈ ತಣ್ಣಗಾಗಿ ಬಿಡ್ತು.... ನಾವು ಹೆಣಾನ ಮನೆಗೆ ತರಲೇ ಇಲ್ಲ. ಪೊಲೀಸ್ ಠಾಣೆಗೆ ಒಯ್ದಿವಿ. ಯೂನಿಯನ್‌ದವರು ಬಂದು ಹೋರಾಟ ನಡೆಸಿದರು. ಇಷ್ಟೆಲ್ಲ ಗಲಾಟೆ ಮಾಡದೇ ಇದ್ದರೆ ಪೊಲೀಸ್ರು ಪ್ಲಾಂಟರ್ ಮ್ಯಾಕೆ ಕೇಸು ಹಾಕ್ತಿದ್ರಾ....." ಎಂದ ಬೀಡಿಯ ಹೊಗೆ ಬಿಡುತ್ತ.

ಅಂದೇ ರಾತ್ರಿ ನಮ್ಮ ಸೀನಿಯರ್‌ಗೆ ಫೋನ್ ಮಾಡಿದೆ; ಪ್ಲಾಂಟರ್ ಕೊಟ್ಟಿರುವ ದಾಖಲಾತಿಗಳ ಬಗ್ಗೆ ಮತ್ತು ಲೋಕಲ್ ಕೂಲಿಯಾಳು ಹೇಳಿದ ಕಥೆಯ ಬಗ್ಗೆ.

ಅದಕ್ಕೆ ದೇವದಾಸ್‌ರು, "ಜನ ದನ. ಒಂದು ಇದ್ದರೆ ಹತ್ತು ಸುದ್ದಿ ಹುಟ್ಟಿಸ್ತವೆ. ನೀನು ಆ ಫ್ಲೈಟ್ ಟಿಕೆಟ್ ಮತ್ತು ಇಂಡಿಪೆಂಡೆನ್ಸ್ ಡೇಯ ಇನ್‌ವಿಟೇಷನ್ ಕಾರ್ಡ್‌ಗಳನ್ನು ತೆಕ್ಕೊಂಡು ಬಾ. ಇಲ್ಲಿ ನಾನು ಡಿಜಿಪಿಯನ್ನೇ ಕಂಡು ಒಂದು ರಿಪ್ರೆಜೆಂಟೇಷನ್ ಹಾಕ್ತೇನೆ. ಇಲ್ಲಿಂದಲೇ ಆ ಪೊಲೀಸರಿಗೆ ಡೈರೆಕ್ಷನ್ ಹೋಗೋ ಹಾಗೆ ಮಾಡ್ತೇನೆ.... ನೀನು ಹೊರಟು ಬಾ" ಎಂದರು.

ನಾನು ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ವಾಪಸಾದೆ. ಕಾಫೀ ಪ್ಲಾಂಟರ್ ಕೊಟ್ಟಿದ್ದ ದಾಖಲೆ ಕಾಗದಗಳನ್ನು ಸೀನಿಯರ್ ಕೈಗೆ ಕೊಟ್ಟೆ. ಪ್ರಸನ್ನವದನರಾಗಿ, "ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ನಮ್ಮ ಕ್ಲೈಂಟು ಇನ್ನೋಸೆಂಟ್. ನೋಡು ಅವನು ಇವನ್ನೆಲ್ಲ ಕಾದಿಟ್ಟುಕೊಳ್ಳದಿದ್ದಿದ್ದರೆ ಏನು ಗತಿ. ಇವನು ಕೋಟ್ಯಾಧೀಶ ಕಣೋ. ದಿಲ್ಲಿಯ ಸಂಪರ್ಕಗಳೆಲ್ಲ ಉಂಟು ಇವನಿಗೆ. ಅದಕ್ಕೇ ಅವನಿಗೆ ಇಂಡೆಪೆಂಡೆನ್ಸ್ ಡೇ ಸೆಲೆಬ್ರೇಷನ್‌ಗೆ ಆಹ್ವಾನ ಬಂದಿದೆ. ಇಂಥ ಆಹ್ವಾನ ಸುಮ್ಮನೇನಾ? ನೀನು ಹೋಗಿ ಹೋಗಿ ಅದ್ಯಾವನೋ ತಿರುಬೋಕೀನ ಕಂಡು ಮಾತಾಡಿಸಿ ಅವ್ನು ಹೇಳಿದ ಕಟ್ಟುಕಥೇನ ಹೊತ್ತುಕೊಂಡು ಬಂದಿದೀಯಾ. ಈ ಫ್ಲೈಟ್ ಟಿಕೆಟ್ಟು, ಇನ್‌ವಿಟೇಷನ್ ಕಾರ್ಡು ತಗೊಂಡು ಹೋಗಿ ಡಿಜಿಪಿ ಮುಂದೆ ಹಿಡಿದು, ಅವನ ಮುಖಾನ ಇಂಗುತಿಂದ ಮಂಗನ ಹಾಗೆ ಮಾಡದೆ ಹೋದ್ರೆ ನೋಡು" ಎಂದರು.

ಸೀನಿಯರ್‌ಗೆ ಇದ್ದ ಆತ್ಮವಿಶ್ವಾಸ ನನಗಿರಲಿಲ್ಲ. ಏನೋ ಅಳುಕು ನನ್ನೆದೆಯಲ್ಲಿತ್ತು. ಆದರೆ ಆರೋಪಿ ನೀಡಿದ ದಾಖಲೆಪತ್ರಗಳನ್ನು ಸುಳ್ಳೆಂದು ಹೇಳಲು ಸಾಧ್ಯವಾಗಲಿಲ್ಲ. ಒಟ್ಟಾರೆ ಗೊಂದಲದಲ್ಲಿದ್ದ ನನ್ನ ಮನಸ್ಸನ್ನು ಆ ವಿಷಯದಿಂದ ಬಿಡಿಸಿ ಬೇರಡೆ ತಿರುಗಿಸಿಕೊಳ್ಳಲೆಂದು ಇಂಗ್ಲಿಷ್ ಸಿನಿಮಾ ಹುಡುಕಿಕೊಂಡು ಹೊರಟೆ.

ಚಿಕ್ಕಮಗಳೂರು ಕಕ್ಷಿದಾರನ ಪರವಾಗಿ ಡಿಜಿಪಿಯವರಿಗೆ ರಿಪ್ರಜೆಂಟೇಷನ್ ಕೊಡಲು ಜೊತೆಗೆ ನನ್ನನ್ನೂ ಕರೆದೊಯ್ದರು ದೇವದಾಸ್. ದೇವದಾಸ್ ಅವರು ಮಂಡಿಸಿದ ದಾಖಲೆಪತ್ರಗಳನ್ನು ನೋಡಿ ಡಿಜಿಪಿಯವರೂ ಸ್ವಲ್ಪ ವಿಚಲಿತರಾದಂತೆ ಕಂಡಾಗ ದೇವದಾಸ್‌ರಿಗೆ ಎಲ್ಲಿಲ್ಲದ ರೋಷ ಮೈಯಲ್ಲಿ ಉಕ್ಕಿತು. "ನೋಡಿದ್ರಾ, ನಿಮ್ಮ ಇಲಾಖೆಯವರ ಹಲ್ಕಾ ಕೆಲಸಗಳನ್ನ. ನಮ್ಮ ಕ್ಲೈಂಟ್ ಇವನ್ನೆಲ್ಲ ನಿಮ್ಮ ತನಿಖಾಧಿಕಾರಿಗೆ ಕೊಡಲಿಕ್ಕೆ ಹೋದ್ರೆ, 'ಅವುನ್ನೆಲ್ಲ ಕೋರ್ಟ್‌ನ್ಯಾಗೆ ಕೊಡಿ' ಅಂತಾನಂತೆ. ಕೋರ್ಟ್‌ವರೆಗೂ ನಮ್ಮ ಕ್ಲೈಂಟ್ ಹೆಸರು ಹೋಗಬೇಕಾದದ್ದಿಲ್ಲ ಅನ್ನೋ ಕಾರಣಕ್ಕೇ ಅಲ್ವಾ ಇವನ್ನೆಲ್ಲ ಈಗ ಕೊಡ್ತಿರೋದು. ಕೋರ್ಟಿನಲ್ಲಿ ಹೋದ ಮೇಲೆ ಬಿಡಿಸೋಕೆ ನಾನಿದ್ದೇ ಇದೇನೆ. ಆದರೆ ಯಾರದೋ ಒತ್ತಾಯಕ್ಕೆ ನನ್ನ ಕ್ಲೈಂಟ್‌ಗೆ ಈ ರೀತಿಯ ಅನ್ಯಾಯ ಆದ್ರೆ ನಾನು ಸುಮ್ಮನಿರೋನಲ್ಲ. ಆ ಚಿಕ್ಕಮಗಳೂರಿನ ಪಿ.ಎಸ್.ಐ ಗೆ ನನ್ನ ಹೆಸರು ಗೊತ್ತಿರಲಿಕ್ಕಿಲ್ಲ. ನೀವು ಈ ಕೂಡಲೇ ಡೈರೆಕ್ಷನ್ ಕೊಡಿ, ನಮ್ಮ ಕ್ಲೈಂಟ್ ಒದಗಿಸೋ ದಾಖಲೆಗಳನ್ನೆಲ್ಲ ತೆಗೆದುಕೊಂಡು ಆರೋಪಿಗಳ ಪಟ್ಟಿಯಿಂದ ಹೆಸರು ತೆಗೆದುಹಾಕಲಿಕ್ಕೆ" ಎಂದು ಗುಡುಗಿದರು. "ನಮ್ಮ ಹೊಸಾಳಿಯವರು ಇದ್ದಿದ್ದರೆ ಇಲ್ಲೀವರೆಗೆ ನಾನು

ಬರಲೇಬೇಕಾಗುತ್ತಿರಲಿಲ್ಲ. ಬರೀ ಫೋನ್ ಮೇಲೆ ಕೆಲಸ ಮುಗೀತ್ತಿತ್ತು" ಎನ್ನುವ ಮಾತನ್ನು ಸೇರಿಸಲು ಮರೆಯಲಿಲ್ಲ ದೇವದಾಸ್‌ರು.

ಸೀನಿಯರ್ ರೇಗಾಡುತ್ತಿದ್ದರೂ ಡಿಜಿಪಿ ಸಾವಧಾನದಿಂದಲೇ ವರ್ತಿಸಿದರು. "ನೀವು ಇದನ್ನೆಲ್ಲ ಕೊಟ್ಟಿದೀರಲ್ಲ, ನಾನು ಸೂಕ್ತ ಕ್ರಮಕ್ಕೆ ಏರ್ಪಾಟು ಮಾಡ್ತೇನೆ, ಚಿಂತಿಸಬೇಡಿ. ನೀವು ಸೀನಿಯರ್ ಮತ್ತು ವೃದ್ಧರು, ಕೋಪ ಮಾಡಿಕೋಬೇಡಿಸ" ಎಂದು ಸಮಾಧಾನ ಹೇಳಿ ಕಾಫಿ ಕುಡಿಸಿ ಕಳಿಸಿದರು.

ಹೊರಬರುತ್ತಿದ್ದಂತೆಯೇ ಸೀನಿಯರ್, "ನೋಡು ಆ ಡಾಕ್ಯುಮೆಂಟ್ಸ್ ಎಲ್ಲ ನೋಡಿ ಹೇಗೆ ತೆಪ್ಪಗಾದ? ಇಲ್ದಿದ್ರೆ ಇಷ್ಟು ಮಾತಾಡೋಕೆ ಅವಕಾಶ ಕೊಡ್ತಾರ ಈ ಪೋಲೀಸ್ರು, ಖದೀಮರು..... ಹಾಂ" ಎಂದರು ಏರುದನಿಯಲ್ಲಿ.

ಇದೆಲ್ಲ ನೋಡಿ ನನಗೆ ಆ ದಾಖಲಾತಿಗಳ ಬಗೆಗೆ ಇದ್ದ ಸಂಶಯ ದೂರವಾಯಿತು. "ಅಪ್ಪ ಯಾವನೋ ತರ್ಲೆ ಕೂಲಿ ಹೇಳಿದ ಕಟ್ಟುಕಥೆ ಕೇಳಿ ಕೆಟ್ಟೆ" ಎಂದುಕೊಂಡೆ. ಚಿಕ್ಕಮಗಳೂರುವರೆಗೆ ಹೋಗಿ ಪತ್ತೇದಾರಿ ಕೆಲಸ ಮಾಡಿಕೊಂಡು ಬಂದೆ ಎನ್ನುವ ಖುಷಿ ಅಲ್ಪಸ್ವಲ್ಪ ಎಲ್ಲೋ ಮೂಲೆಯಲ್ಲಿ ಉಳಿದುಕೊಂಡಿತ್ತು. ಅದೂ ಹಾರಿಹೋಯಿತು.

ಸೀನಿಯರ್ ಚಿಕ್ಕಮಗಳೂರಿಗೆ ಫೋನ್ ಮಾಡಿ, "ನೀವೇನೂ ಯೋಚಿಸಬೇಕಾದದ್ದಿಲ್ಲ. ನೀವು ಕೊಟ್ಟ ಡಾಕ್ಯುಮೆಂಟ್‌ಗಳನ್ನೆಲ್ಲ ಡಿಜಿಪಿ ಮುಂದಿಟ್ಟೆ. ಬೆವೆತುಹೋದ. ಅವನ ಜೀವ ಜಾಲಾಡಿಬಿಟ್ಟೆ. ನಿಮ್ಮ ಕೇಸ್ ಮುಗೀತು ಎಂದೇ ಇಟ್‌ಕೊಳ್ಳಿ. ನೀವು ನಿಜವಾಗಿಯೂ ಅಪರಾಧಿಗಳಾಗಿದ್ದಲ್ಲಿ ನಿಮ್ಮನ್ನು ಪಾರು ಮಾಡಲಿಕ್ಕೆ ನಾನು ಏನಾದರೂ ಉಪಾಯ, ತಂತ್ರಗಳನ್ನೂ ಹುಡುಕಬೇಕಾಗುತ್ತಿತ್ತು. ಆ ಭಾವವೇ ಇಲ್ಲ ನಿಮ್ಮ ಈ ಕೇಸಿನಲ್ಲಿ. ಮೇಲುನೋಟಕ್ಕೇ ಎಲ್ಲ ನಿರಾಧಾರ ಎನ್ನುವುದು ಮುಖಕ್ಕೆ ರಾಚುತ್ತೆ" ಎಂದೆಲ್ಲ ಮಾತಾಡಿದರು.

ಮಾರನೇ ದಿನ ಕಾಫೀ ಪ್ಲಾಂಟರ್ ಕಡೆಯಿಂದ ಒಬ್ಬ ವ್ಯಕ್ತಿ ಬಂದು ದೇವದಾಸ್‌ರಿಗೆ ಭಾರೀ ಹಣವನ್ನು ನೀಡಿ ಹೋದ. ಎಷ್ಟೆಂದು ನಿಖರವಾಗಿ ಗೊತ್ತಾಗಲಿಲ್ಲ. ಆ ಮೊತ್ತ ಮೂರು ಲಕ್ಷಗಳಿಗಿಂತ ಕಮ್ಮಿಯಿರಲಿಲ್ಲವೆನಿಸಿತು. ನಾನು ಅಷ್ಟು ಮೊತ್ತದ ಫೀಜು ಎಣಿಸುವ ಕಾಲ ಎಂದು ಬರುತ್ತದೋ ಎಂದುಕೊಂಡೆ.

ಅಂದು ಮಧ್ಯಾಹ್ನ ಕೋರ್ಟಿಗೆ ಹೋಗಲಿಲ್ಲ ನಾನು. ಊಟದ ನಂತರ ಆಫೀಸ್‌ನಲ್ಲೇ ಉಳಿದುಕೊಂಡೆ. ಅಂದು ಸೀನಿಯರ್ ಸಹ ಕೋರ್ಟಿಗೆ ಬಂದಿರಲಿಲ್ಲ. ಅದೇನೋ ಕಾರಣಕೆ ಮನೆಯಲಿಯೇ ಉಳಿದುಕೊಂಡಿದ್ದರು.

ಮುಖ್ಯ ಕೇಸ್ ಒಂದರ ಫೈಲ್ ಅನ್ನು ತಿರುವಿ ಹಾಕುತ್ತಿದ್ದೆ. ನಾಲ್ಕೂವರೆ ಗಂಟೆ ಆಗಿರಬಹುದು ಒಬ್ಬ ದಢೂತಿ ವ್ಯಕ್ತಿ ಒಳಬಂದ. ಕೂರುವಂತೆ ಹೇಳಿದೆ.

"ದೇವದಾಸ್ ಯಾವಾಗ ಬರ್ತಾರೆ?" ಎಂದ.

ಅವನು ಪ್ರಶ್ನಿಸುವ ಧ್ವನಿಯಲ್ಲೇ ಕಕ್ಷಿದಾರನಲ್ಲ ಇವ ಎನ್ನಿಸಿತು. ಅವನ ಧ್ವನಿಯಲ್ಲಿ ಅಧಿಕಾರದ ಗಡುಸಿತ್ತು.

"ಇನ್ನೇನು ಐದು ಗಂಟೆಗೆ ಬಂದುಬಿಡ್ತಾರೆ" ಎಂದೆ.

ಪುನಃ ಫೈಲಲ್ಲಿ ಮುಳುಗಿದೆ. ಇವನ ಮುಖವನ್ನು ಅದೆಲ್ಲೋ ನೋಡಿದ ಹಾಗಿದೆಯಲ್ಲ ಎನಿಸಿ ಓರೆಗಣ್ಣಿಂದ ಅವನನ್ನು ನೋಡಿದೆ. ಅವನು ದಿನಪತ್ರಿಕೆ ಓದುತ್ತ ಕುಳಿತಿದ್ದ. "ಹೌದು ಅವನೇ, ಸಂಶಯವಿಲ್ಲ" ಎಂದುಕೊಂಡೆ. ಅಂದು ಚಿಕ್ಕಮಗಳೂರಿನ ಕೋರ್ಟಿನಲ್ಲಿ ನೋಡಿದ ಮುಖ. ಅಂದು ಡ್ರೆಸ್‌ನಲ್ಲಿದ್ದ, ಇಂದು ಸಿವಿಲ್ ಡ್ರೆಸ್‌ನಲ್ಲಿ ಬಂದಿದ್ದಾನೆ. ಅವನೇ ಸರ್ಕಲ್ ಇನ್ಸ್‌ಪೆಕ್ಟರ್! "ಅದೇಕೆ ನಮ್ಮ ಆಫೀಸ್ ಸೀನಿಯರ್ ಹುಡುಕ್ಕೊಂಡು ಬಂದಿದ್ದಾನೆ?" ಎಂದು ಪ್ರಶ್ನಿಸಿಕೊಂಡೆ.

ಓ, ಬಹುಶಃ ಇಲ್ಲಿಂದ ಡಿಜಿಪಿ ಇವರಿಗೆಲ್ಲ ಬೆಂಡೆತ್ತಿರಬೇಕು. ಕ್ಷಮೆ ಯಾಚಿಸೋಕೆ, ಮುಂದೆ ಕೋರ್ಟಿನಲ್ಲಿ ಗಲಾಟೆ ಮಾಡದಂತೆ ಕೇಳಿಕೊಳ್ಳೋಕೆ ಬಂದಿರಬೇಕು ಎನಿಸಿತು.

ಆದರೆ, ಇವನ ಧ್ವನಿ ಮಾತ್ರ ಹಾಗಿಲ್ಲವಲ್ಲ..... ದರ್ಪದಲ್ಲಿದೆ.... ಪೋಲೀಸರೇ ಹೀಗೆ.... ಸ್ವಂತ ಮಗುವನ್ನು ಕರೆಯಬೇಕಾದಾಗಲೂ ಕಳ್ಳನನ್ನು ಕರೆಯುವಾಗಿನ ಗಡಸುತನವೇ ಇರುತ್ತೆ ಧ್ವನಿಯಲ್ಲಿ..... ಕೆಲವೊಮ್ಮೆ ಕೀಳರಿಮೆಯಿಂದಲೂ ಅಹಂಕಾರದ ಧ್ವನಿ ಮೂಡುತ್ತದೆ ಅದನ್ನು ಮುಚ್ಚಿಕೊಳ್ಳಲು. ಅದೇನೇ ಇರಲಿ ಕೇಳಿಯೇ ಬಿಡೋಣ ಎಂದುಕೊಂಡೆ.

"ಏನ್ ಸಾರ್, ನೀವು ಚಿಕ್ಕಮಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲವೇ?" ಎಂದೆ ತುಂಟಧ್ವನಿಯಲ್ಲಿ.

"ಹೌದು, ನಿಮಗೆ ಆಗ್ಲೇ ವಿಷ್ಯ ಗೊತ್ತಾಗಿ ಹೋಗಿದೆಯಾ? ಅದಕ್ಕೇ ನಿಮ್ಮ ಸೀನಿಯರ್ ಇವತ್ತು ಕೋರ್ಟಿಗೆ ಬಂದಿಲ್ಲ ಅನ್ನಿ" ಎಂದ.

ಅವನ ಮಾತು ಒಗಟಾಗಿ ಕಂಡಿತು. ಅವನ ಮಾತಿನ ಇಂಗಿತ ತಿಳಿದುಕೊಳ್ಳುವ ಆಸಕ್ತಿ ಬದಿಗಿರಿಸಿ "ಇಲ್ಲಿ ನಿಮ್ಮ ಡಿಜಿಪಿಯವರಿಗೆ ನಮ್ಮ ಸೀನಿಯರ್ ನಿಮ್ಮ ಮೇಲೆಲ್ಲ ದೂರಿದ್ದರು. ಅದಕ್ಕೆ ಬೇಜಾರಾಗಿ ಬಂದಿರಾ? ಬೇಗನೆ ಮರೆತುಬಿಡ್ತಾರೆ"

ಎನ್ನುತ್ತಿದ್ದಂತೆಯೇ ಕೊಂಚ ಸಿಟ್ಟಿಗೆದ್ದಂತೆ ಕಂಡ ಆ ಸರ್ಕಲ್ ಇನ್ಸ್‌ಪೆಕ್ಟರ್, "ರೀ ನಮ್ಮ ಮ್ಯಾಕೆ ಏನ್ರೀ ಕಂಪ್ಲೇಂಟ್ ಮಾಡ್ತಾರೆ ನಿಮ್ಮ ಸೀನಿಯರ್. ಅವರನ್ನು ಅರೆಸ್ಟ್ ಮಾಡಿಕೊಂಡು ಹೋಗೋಕೆ ನಾನೇ ವಾರೆಂಟ್ ತಂದಿದೇನೆ.... ಅದಕ್ಕೆ ಅಂಜಿ ಅವ್ರು ಮನೇಲಿ ಕೂತಿರಬೇಕೂ ಅಂತ ನಾನು ಅಂದುಕೊಂಡಿದ್ದೇನೆ.... ನೀವು ನೋಡಿದ್ರೆ ಏನೇನೋ ಬಡ ಬಡಸ್ತಿದೀರಾ....." ಎಂದ ಕೊಂಕು ನಗೆ ಬೀರುತ್ತಾ.

ನನಗೆ ಅರೆಘಳಿಗೆ ಮೈ ನಡುಗಿತು. ದಿಗಿಲುಗೊಂಡ ನನ್ನ ಮುಖ ಬೆವೆತಿತು. ನನ್ನ ಪರಿಸ್ಥಿತಿ ನೋಡಿ ಖುಷಿಗೊಂಡಂತೆ ಕಂಡ ಆ ಸರ್ಕಲ್ ಇನ್ಸ್‌ಪೆಕ್ಟರ್, "ಇರ್ಲಿ ಬನ್ನಿ ಕಾಫಿ ಕುಡಕೊಂಡು ಬರೋಣಾ. ನಿಮ್ಮ ಸೀನಿಯರ್ ಮೇಲಿನ ವಾರೆಂಟ್‌ಗೆ ನೀವೇಕೆ ಅಷ್ಟು ಭಯಪಡೋದು?" ಎಂದು ಎದ್ದುನಿಂತ.

ನಾನು ಸಾವರಿಸಿಕೊಂಡು, "ನನಗೇನು ಸಾರ್ ಭಯ? ನಿತ್ಯ ನಾವು ಉಸಿರಾಡೋದೇ ವಾರೆಂಟುಗಳನ್ನ. ವಾರೆಂಟ್ ಅಂದ್ರೆ ಗಲ್‌ಸೆಂಟ್ ಅಂದ್ಕೊಂಡ್ರಾ?" ಎಂದು ತಿರುಗೇಟು ನೀಡಿದೆ.

ಆತ ಎದ್ದು ಕಾಫೀಗೆ ಹೋದ. ನಾನು ಒಳ ದಿಗಿಲಿನಲ್ಲೇ ಸೀನಿಯರ್ ಮನೆಗೆ ಫೋನ್ ಹಚ್ಚಿದೆ.

"ಅದು ಯಾಕ್ರೀ ಅವ್ನು ನನ್ನ ಮೇಲೆ ವಾರೆಂಟ್ ತರ್ತಾನೆ, ಆಂ?" ಎಂದು ಗಡುಸಾಗಿ ಪ್ರಶ್ನಿಸಿದರು ಸೀನಿಯರ್.

"ಅದೇನೋ ಗೊತ್ತಿಲ್ಲ ಸಾರ್. ಏನು ಕೇಳಿದರೂ ಅವ್ನು ಹೇಳುತ್ತಿಲ್ಲ. ನಿಮ್ಮ ಸೀನಿಯರ್‌ನ ಅರೆಸ್ಟ್ ಮಾಡಿ ಕರಕೊಂಡು ಹೋಗಬೇಕು ಅಂತಿದಾನೆ" ಎಂದೆ.

"ಸರಿ, ಅವ್ನನ್ನ ಅಲ್ಲೇ ಕೂರಿಸಿಕೋ, ಈಗ ಬಂದ್ ಬಿಡ್ತಾರೆ ಅಂತ ಹೇಳು. ನಾನು ದೇವು ಮನೆಗೆ ಹೋಗ್ತೇನೆ. ರಾತ್ರಿಗೆ ನೀನು ಅಲ್ಲಿಗೆ ಬಾ" ಎಂದು ಫೋನ್ ಇಟ್ಟರು.

ವಾಪಸ್ ಬಂದ ಸರ್ಕಲ್ ಇನ್ಸ್‌ಪೆಕ್ಟರ್ ಏಳು ಗಂಟೆವರೆಗೆ ಕೂತ. ಅಷ್ಟರಲ್ಲಿ ಟೈಪಿಸ್ಟ್, ಉಳಿದವರೆಲ್ಲ ಬಂದಿದ್ದರು. ಅವರಿಗೆಲ್ಲ ಈ ವಿಷಯ ಗೊತ್ತಾಗಿರಲಿಲ್ಲ.

ಆ ಸರ್ಕಲ್ ಇನ್ಸ್‌ಪೆಕ್ಟರ್ ದಡ್ಡತನದ ಬಗ್ಗೆ ಕನಿಕರ ಮೂಡಿತು. ಸ್ವಲ್ಪ ಸಿಟ್ಟಿಗೇರಿಸಿದೊಡನೆ ಇರೋ ಸಂಗತೀನ ಹೇಳೇ ಬಿಡೋದಾ ಎಂದುಕೊಂಡೆ.

ಅವ್ನು ಚಿಕ್ಕ ನಾಟಕವಾಡಿದ್ದರೂ ಇವತ್ತು ನಮ್ಮ ಸೀನಿಯರ್‌ನನ್ನು ಅವ್ನು ಅರೆಸ್ಟ್ ಮಾಡಬಹುದಾಗಿತ್ತು ಎಂದುಕೊಂಡೆ ಒಳಗೇ ನಗುತ್ತ.

ಅಷ್ಟರಲ್ಲಿ ಆ ಸರ್ಕಲ್ ಇನ್ಸ್‌ಪೆಕ್ಟರ್ ಸೀನಿಯರ್ ಬರೋದು ಯಾವಾಗ ಎಂದು ನಾಲ್ಕಾರು ಬಾರಿ ಕೇಳಿದ್ದ. ನನ್ನಿಂದ ನಮ್ಮ ಸೀನಿಯರ್ ಇರುವ ಜಾಗೆಯನ್ನು ತಿಳಿದುಕೊಳ್ಳಬೇಕೆನ್ನುವ ಯೋಚನೆ ಆತನಿಗಿತ್ತು ಎಂದು ಕಾಣುತ್ತದೆ. ಸ್ವಲ್ಪ ಸಲಿಗೆಯ ಧ್ವನಿಯಲ್ಲಿಯೇ ಕರೆದ ಕಾಫಿಗೆ. ನಾನೂ ನಿಜ ವಿಷಯವನ್ನು ಆತನ ಬಾಯಿಂದ ತಿಳಿದುಕೊಳ್ಳಬೇಕಿತ್ತು. ಹೊರಟೆ. ತಿಂಡಿಗೆ ಆರ್ಡರ್ ಮಾಡಿದ.

"ನಿಮ್ಮ ಸೀನಿಯರ್‌ಗೆ ಎರಡು ಮೂರು ಮನೆಗಳಂತೆ. ಇವೊತ್ತು ಆಫೀಸ್‌ಗೆ ಬರೋ ಲಕ್ಷಣ ಕಾಣಿಸ್ತಿಲ್ಲ. ಎಲ್ಲಿ ಹಿಡಿಯೋದು ಅವ್ರುನ್ನ?" ಎಂದ.

"ಏನು ಅದು ವಾರೆಂಟ್? ಯಾವ ಆರೋಪಕ್ಕಾಗಿ?" ಎಂದೆ.

"ನಿಮ್ಮ ಸೀನಿಯರ್ ಕಾಫಿ ಪ್ಲಾಂಟರ್ ಕ್ಲೈಂಟ್‌ನನ್ನ ಕೊಲೆ ಆರೋಪದಿಂದ ಮುಕ್ತಗೊಳಿಸೋ ದುರುದ್ದೇಶದಿಂದ ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿಸಿ ತನಿಖೆಯ ಹಾದಿಯನ್ನು ತಪ್ಪಿಸಲು ಯತ್ನಿಸಿದ್ದಾರೆ. ಫ್ಲೈಟ್ ಟಿಕೆಟ್ ಮತ್ತು ಇನ್‌ವಿಟೇಷನ್ ಕಾರ್ಡ್ ಎರಡೂ ಫೋರ್ಜರಿ ಎಂದು ಪ್ರೂವ್ ಆಗಿವೆ. ದಿಲ್ಲಿಯವರೆಗೆ ಹೋಗಿ ವೆರಿಫಿಕೇಷನ್ ಮಾಡಿಕೊಂಡು ಬರಲಾಗಿದೆ..... ಇದು ಬಾಳ ಸೆನ್ಸಿಟಿವ್ ಕೇಸ್. ಅದರಲ್ಲೂ ಮುಖ್ಯಮಂತ್ರಿ ಇಂಟರೆಸ್ಟ್ ತೆಗೆದುಕೊಂಡು ಸ್ಪೆಷಲ್ ಪ್ರಾಸಿಕ್ಯೂಟರ್‌ರನ್ನು ನೇಮಿಸಿರುವಂಥ ಕೇಸು. ಈ ಒಂದು ಕೇಸಿನಲ್ಲಿ ನಿಮ್ಮ ಸೀನಿಯರ್ ಫೇಲ್ ಆಗಿಬಿಟ್ಟರು. ಅವರ ಜೀವಮಾನವಿಡೀ ತಮ್ಮ ಇಮೇಜ್ ಬಗ್ಗೆ ಕಟ್ಟಿಕೊಂಡಿದ್ದ ಗೋಪುರ ಈ ಕೇಸಿನ ಸಂದರ್ಭದಲ್ಲಿ ಕುಸಿದು ಬಿದ್ದಂತಾಗಿದೆ. ಅವರು ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲ. ಎಷ್ಟು ದಿನಾ ಅಂತ ಕೋರ್ಟಿಗೆ ಬಾರದಿರುತ್ತಾರೆ? ಅರೆಸ್ಟ್ ಮಾಡಿದರೆ ಸಾಕು ಅವರ ಮಾನ ಹೋಗುತ್ತದೆ. ಮುಂದೆ ಅವರು ಆರೋಪ ಮುಕ್ತರಾಗಬಹುದು. ಆದರೆ ಅರೆಸ್ಟ್ ಆದರೆನ್ನುವ ಅವಮಾನ ಉಳಿದು ಬಿಡುತ್ತೆ" ಎಂದು ಹೇಳತೊಡಗಿದ. ನಿಜವಾಗಿಯೂ ನನ್ನೆದೆ ಧಸಕ್ಕೆಂದಿತು ಸೀನಿಯರ್ ದುಡುಕಿಬಿಟ್ಟರು. ನಾನು ಹೇಳಿದ್ದನ್ನು ಉಡಾಫೆ ಮಾಡಿಬಿಟ್ಟರು. ಈ ಕೂಲಿಕಾರ ಹೇಳಿದ್ದರಲ್ಲಿ ಸತ್ಯಾಂಶವಿದೆ. ನಮ್ಮ ಸೀನಿಯರ್ ಮರ್ಯಾದೆ ಹೋದರೆ ನಾವೆಲ್ಲ ಹೇಗೆ ತಲೆಯೆತ್ತಿ ತಿರುಗೋದು..... ಎನ್ನುವ ಯೋಚನೆಯಿಂದಾಗಿ ಮನಸ್ಸು ಒಳಮುಚುಗವಾಯಿತು.

"ರೀ ತಿಂಡಿ ತಿನ್ನಿ" ಎಂದಾಗ ಹೊರಬಂದಿತು ಮನಸ್ಸು.

ನಮ್ಮ ಸೀನಿಯರ್ ಮನೆಯ ವಿಳಾಸವನ್ನು ಆತನಿಗೆ ಕೊಟ್ಟೆ.

ಸೀನಿಯರ್ ತಮ್ಮ ಮನೆಯಲ್ಲಿ "ಪೊಲೀಸರು ಬಂದರೆ ಈಗ ಬರುತ್ತಾರೆ ಅಂತ ಹೇಳಿ" ಎಂದು ತಮ್ಮ ಮಗ ದೇವು ಮನೆಗೆ ಹೋಗಿದ್ದರು.

ರಾತ್ರಿ ಹತ್ತು ಗಂಟೆವರೆಗೆ ಕಾಯ್ದಿದ್ದು ಆ ಸರ್ಕಲ್ ಇನ್ಸ್‌ಪೆಕ್ಟರ್ ವಾಪಸು ಹೋಗಿದ್ದನೋ ಅಥವಾ ಅಲ್ಲೇ ಅವಿತು ಕೂತಿದ್ದನೋ.....

ರಾತ್ರಿ ನಾನು ದೇವದಾಸ್ ಅವರ ಮಗ ದೇವೇಂದ್ರ ಅವರ ಮನೆಗೆ ಹೋದೆ. ಸೀನಿಯರ್ ತಮ್ಮ ಮಗನನ್ನು ದೇವು ಎಂದು ಕರೆಯುತ್ತಿದ್ದರು. ಈ ಮನೆಗೂ ಪೊಲೀಸರು ಹುಡುಕಿ ಬಂದರೆ ಹಿಂಬಾಗಿಲಿನಿಂದ ಪಾರಾಗುವ ಸಿದ್ಧತೆಯಲ್ಲಿದ್ದರು ಸೀನಿಯರ್. ದೇವದಾಸ್‌ರು ನಿಜವಾಗಿಯೂ ಭಯಗೊಂಡಿದ್ದರು. ಅವರ ಭಯದ ಸ್ಥಿತಿಯನ್ನು ನೋಡಿ ನನ್ನಲ್ಲೂ ಭಯ ಆವರಿಸಿಕೊಂಡಿತು.

"ಅಲ್ಲಯ್ಯ, ಪ್ಲಾಂಟರ್ ನನ್ನಮಗನನ್ನ ನಂಬಿ ಕೆಟ್ಟುಬಿಟ್ಟೆನಲ್ಲೊ. ಇರೋ ವಿಷಯಾನ ಆ ಕಳ್‌ನನ್ ಮಗನಿಗೆ ಹೇಳೋಕೆ ಏನಾಗಿತ್ತೋ. ನೋಡೋಕೆ ಹಸು ತರಾ ಇದಾನಲ್ಲೋ. ನನ್ನ ಜೀವನಾನೇ ವ್ಯರ್ಥ ಅನ್ನೋವಂಥಾ ಪರಿಸ್ಥಿತಿ ತಂದುಬಿಟ್ಟನಲ್ಲೋ. ಈಗ ಆಂಟಿಸಿಪೇಟರಿ ಬೇಲ್ ಹಾಕ್ಕೊಂಡ್ರೂನುವೇ ನನ್ನ ಮರ್ಯಾದೆ ಹೋಗುತ್ತಲ್ಲೊಪೀ. ಇಂಥ ಕೇಸ್‌ನಲ್ಲಿ ನಾನು ಸಿಕ್ಕಿಹಾಕ್ಕೊಳ್ಳೋದನ್ನೇ ಕಾಯ್ತಾ ಇದಾರೆ ಎಲ್ರೂ. ನನ್ನ ಕೀರ್ತಿಗೆ ಅಸೂಯೆ ಪಡೋವ್ರು ಅದೆಷ್ಟು ಜನಾ ಇಲ್ಲ?" ಎಂದು ಬಡಬಡನೇ ಮಾತಾಡತೊಡಗಿದರು. ಸೀನಿಯರ್ ಇಷ್ಟು ವಿಹ್ವಲರಾಗಿದ್ದುದನ್ನು ನಾನು ಮುಂಚೆ ಎಂದಿಗೂ ಕಂಡಿರಲಿಲ್ಲ. "ಅವ್ಳು ಆ ಸಾದಿಕಾ ಲೌಡಿಗೆ ಈ ವಿಷ್ಯ ಗೊತ್ತಾದ್ರೆ ತನ್ನ ಪಾರ್ಟಿ ಕಡೆಯವರಿಂದ ಜಲೂಸನ್ನೇ ತೆಗೆಸಿಬಿಡ್ತಾಳೆ ಕಣಯ್ಯ" ಎಂದು ಒದ್ದಾಡಿದರು. ಸೀನಿಯರ್ ಬಗ್ಗೆ ಅಯ್ಯೋ ಪಾಪ ಎನಿಸಿತು.

"ಪೊಲೀಸ್ ಮತ್ತು ಪ್ರಾಸಿಕ್ಯೂಷನ್ ಎರಡೂ ಡಿಪಾರ್ಟ್‌ಮೆಂಟ್‌ಗಳು ಸೇರಿ ಹೀಗೆ ಮಾಡಿವೆ. ಎಷ್ಟೋ ಬಾರಿ ಮರ್ಡರ್ ಕೇಸ್‌ಗಳಲ್ಲಿ ಪೊಲೀಸ್ ಮತ್ತು ಪ್ರಾಸಿಕ್ಯೂಟರ್ ಇವರಿಬ್ಬರನ್ನು ನಾನು ಗೇಲಿ ಮಾಡಿದೀನಿ ! ಅದರ ಸೇಡು ತೀರಿಸಿಕೊಳ್ತಿದಾರೆ ಈಗ" ಎಂದರು.

ಮೂರು ದಿನಗಳಾದರೂ ಸೀನಿಯರ್ ಕೋರ್ಟಿಗೆ ಬರಲಿಲ್ಲ. ಅಷ್ಟೊತ್ತಿಗೆ ಕೋರ್ಟಿನಲ್ಲೆಲ್ಲ ದೇವದಾಸ್‌ರಿಗೆ ವಾರೆಂಟ್ ಬಂದ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತ್ತು. ಎಲ್ಲೆಲ್ಲೂ ಅದರದೇ ಗುಲ್ಲು. ಒಬ್ಬ ಸೀನಿಯರ್ ಲಾಯರ್ ನನ್ನತ್ತ ನೋಡಿ,

"ಏನಯ್ಯ ಗಲ್ಲು ಶಿಕ್ಷೆ ತಪ್ಪಿಸೋ ನಿಮ್ಮ ಸೀನಿಯರ್‌ಗೆ ಈಗ ಗುಲ್ಲು ಶಿಕ್ಷೆ ಅಲ್ವಾ?" ಎಂದು ಛೇಡಿಸಿದ.

ದೇವದಾಸ್‌ರ ಜ್ಯೂನಿಯರ್‌ಗಳಲ್ಲೇ ಹಿರಿಯರಾಗಿದ್ದ ರಾಜ್ ಅಯ್ಯಂಗಾರ್ ಒಂದು ಆಶಾಕಿರಣವನ್ನು ಮೂಡಿಸಿದರು: "ಕೆ.ಕೆ. ಮೂರ್ತಿಯವರಿಗೂ ಮತ್ತು ಮುಖ್ಯಮಂತ್ರಿ ದೇವರಾಜ್ ಅರಸ್ ಅವರಿಗೂ ಬಹಳ ಗಳಸ್ಯ ಕಂಠಸ್ಯ" ಎಂದರು. ಈ ವಿಷಯವನ್ನು ಸೀನಿಯರ್‌ಗೆ ಹೋಗಿ ಹೇಳಿದೆ.

"ಆ ಕೆ.ಕೆ. ಮೂರ್ತಿ ಈ ರಾಜ್ ಅಯ್ಯಂಗಾರ್‌ಗೆ ಅಷ್ಟೊಂದು ಕ್ಲೋಜಾ? ಅವನೇ ಹೋಗಿ ಮೂರ್ತಿಯವರಿಗೆ ಹೇಳ್ತಾನಂತಾ? ಆ ಅಯ್ಯಂಗಾರ್‌ನ ಕರ್‌ಕೊಂಡ್ ಬಾ ಇಲ್ಲಿಗೆ" ಎಂದರು.

ರಾಜ ಅಯ್ಯಂಗಾರ್‌ಗೆ ಸೀನಿಯರ್ ಪರಿಸ್ಥಿತಿಯ ಬಗ್ಗೆ ಅನುಕಂಪ ಉಕ್ಕಿ ಹರಿಯತೊಡಗಿತ್ತು. ಏನಾದರೂ ಮಾಡಿ ದೇವದಾಸ್‌ರನ್ನು ಪಾರುಮಾಡಬೇಕೆಂದು ನಿರ್ಧರಿಸಿದ್ದರು. ಸರಿ, ಹೋಗಿ ಕೆ.ಕೆ. ಮೂರ್ತಿಯವರಿಗೆ ವಿಷಯ ತಿಳಿಸಿದರು. ಆದರೆ ಕೆ.ಕೆ. ಮೂರ್ತಿಯವರು ರಾಜ್ ಅಯ್ಯಂಗಾರ್‌ಗೆ, "ನನ್ನನ್ನು ನಿಮ್ಮ ದೇವದಾಸ್‌ಗೆ ಮುಖತಃ ಭೇಟಿ ಮಾಡಿಸಿ. ನಾನು ಅವರನ್ನು ಬಿಡಿಸಿಕೊಡುವೆ" ಎಂದರು. ರಾಜ್ ಅಯ್ಯಂಗಾರ್‌ಗೆ ಈಗ ಪೀಕಲಾಟ ಶುರುವಾಯಿತು. ಅವರಿಬ್ಬರ ಮಧ್ಯೆ ಭೇಟಿ ಮಾಡಿಸದೇನೇ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಬಯಸಿದ್ದರು. ಏಕೆಂದರೆ ಸೀನಿಯರ್‌ಗೆ ಗೊತ್ತಾಗದ ಹಾಗೆ ಒಳಗೊಳಗೇ ಕೆ.ಕೆ. ಮೂರ್ತಿಯವರ ಕೇಸುಗಳನ್ನು ನಡೆಸುತ್ತಿದ್ದರು. ಆದರೆ ಮೂರ್ತಿಯವರಿಗೆ ರಾಜ್ ಅಯ್ಯಂಗಾರ್ ಅವರ ವಕೀಲಿ ಅಷ್ಟು ತೃಪ್ತಿ ನೀಡಿರಲಿಲ್ಲ. ಈ ವಿಷಯ ರಾಜ್ ಅಯ್ಯಂಗಾರ್‌ಗೂ ಗೊತ್ತಾಗಿತ್ತು. ಸೀನಿಯರ್ ಮತ್ತು ಮೂರ್ತಿಯವರ ಮುಖಾಮುಖಿ ಭೇಟಿ ಆಗಿಬಿಟ್ಟರೆ ಅವರಿಬ್ಬರೂ ಒಂದಾಗಿಬಿಟ್ಟರೆ ನಾನು ಮಂಗ ಆಗಬೇಕಾಗುತ್ತಲ್ಲ ಎನ್ನುವ ಚಿಂತೆ ಹತ್ತಿತ್ತು. ಆದರೆ ಈಗ ಹೇಳಿಯಾಗಿಬಿಟ್ಟಿದೆ. ಮೂರ್ತಿಯವರನ್ನು ಭೇಟಿ ಮಾಡಿಸದೆ ಬೇರೆ ವಿಧಿಯಿಲ್ಲವೆಂದು ಮನಗಂಡ ಅವರು ಒಲ್ಲದ ಮನಸ್ಸಿನಿಂದಲೇ ಮೂರ್ತಿಯವರನ್ನು ಆಫೀಸ್‌ಗೆ ಕರೆತಂದರು. ಅವರನ್ನು ನೇರವಾಗಿ ಸೀನಿಯರ್ ಅಡಗಿಕೊಂಡಿದ್ದ ಮನೆಗೆ ಕರೆದೊಯ್ಯಲಿಲ್ಲ. ಗಾಂಧಿನಗರದಿಂದ ಸದಾಶಿವನಗರಕ್ಕೆ ನೇರವಾಗಿ ಹೋಗಲಿಲ್ಲ. ಪೋಲೀಸರು ಫಾಲೋ ಮಾಡಿಯಾರೆನ್ನುವ ಭಯವಿತ್ತು. ಮೊದಲು ಯಶವಂತಪುರಕ್ಕೆ ಹೋಗಿ ಅಲ್ಲಿಂದ ಸದಾಶಿವನಗರಕ್ಕೆ ಹೋದೆವು.

ಕೆ.ಕೆ. ಮೂರ್ತಿಯವರು ದೇವದಾಸ್‌ರಿಗೆ, "ನನ್ನ ಕೇಸುಗಳನ್ನೆಲ್ಲ ನೀವೇ

ನಡೆಸಬೇಕು ಅನ್ನೋದು ಮಾತ್ರ ನನ್ನ ಷರತ್ತು. ಈ ಮುಂಚೇನೆ ರಾಜ್ ಅಯ್ಯಂಗಾರ್‌ಗೆ ಹೇಳಿದೆ. ನನ್ನ ಕೇಸುಗಳೆಲ್ಲ ಬಹಳ ಪ್ರಾಬ್ಲಮೆಟಿಕ್ ಅದಾವೆ. ನಿಮಗೆ ಆಗೋಲ್ಲ, ನಿಮ್ಮ ಸೀನಿಯರ್‌ಗೆ ಕೊಡ್ತೋಣ ಅಂತ. ಆದ್ರೆ ಅವ್ರು ಇಲ್ಲಾ ಸಾರ್, ಸೀನಿಯರ್ ಬಹಳ ಬಿಜಿ. ಅವರು ಬರೀ ಮರ್ಡರ್ ಕೇಸುಗಳನ್ನು ನೋಡ್ಕೋತಾರೆ. ಅದೂ ಅಲ್ಲದೆ ಅವರ ಫೀಸೂ ಬಹಳ ಹೈ. ನಾನೇ ಚೀಪಾಗಿ ನಡೆಸಿಕೊಡ್ತೇನೆ ಅಂದುಬಿಟ್ಟರು. ಕೇಸು ಹಿಂದೂ ಹೋಗಿಲ್ಲ ಮುಂದೂ ಹೋಗಿಲ್ಲ. ಅದಕ್ಕಾಗಿ ನನ್ನ ಕೇಸುಗಳನ್ನು ನೀವೇ ನಡೆಸಿಕೊಡಬೇಕು" ಎಂದರು.

"ಅಯ್ಯೋ ಅದಕ್ಕೇನು ಬಿಡಿ. ನಿಮ್ದು ಎಷ್ಟೇ ಸಣ್ಣ ಕೇಸಿರ್ಲಿ ಅದರ ಜವಾಬ್ದಾರಿ ನಂಗೆ ಬಿಡಿ. ಒಂದು ಪೈಸೆ ದುಡ್ಡೂ ನೀವು ನಂಗೆ ಕೊಡಬೇಕಾಗಿಲ್ಲ. ನನ್ನ ಜೀವನಪರ್ಯಂತ ನಿಮ್ಮ ಆನರರಿ ಲಾಯರ್ ಆಗಿರ್ತೀನೆ. ಈಗ ಮೊದಲು ನನ್ನ ಹೆಸರನ್ನ ಆ ಕೇಸಿನಿಂದ ತೆಗೆಸಿ ಹಾಕಿ" ಎಂದು ಅಂಗಲಾಚಿದರು.

ಕೆ.ಕೆ. ಮೂರ್ತಿಯವರು ಹೊರಟುಹೋದರು. ನನ್ನತ್ತ ನೋಡಿ ಸೀನಿಯರ್, "ನೋಡೋ ಆ ಅಯ್ಯಂಗಾರಿ ನನಗೆ ಕೈಕೊಟ್ಟನಲ್ಲೋ. ಲಕ್ಷಗಟ್ಟಲೇ ಫೀಜು ಕೊಡ್ತೋ ಕ್ಲೈಂಟ್ ಈ ಕೆ.ಕೆ. ಮೂರ್ತಿ. ಅಂಥವನ್ನ ನನಗೆ ಭೇಟಿ ಮಾಡಿಸ್ದೇ ಒಳಗೊಳಗೇ ತಾನೇ ಅವನಿಗೆ ಲಾಯರ್ ಆಗಿಬಿಟ್ಟವ್ನಲ್ಲೋ. ಇದೇ ಥರ ಇನ್ನೂ ಅದೆಷ್ಟು ವಿಐಪಿ ಕ್ಲೈಂಟ್‌ಗಳನ್ನು ನನ್ನ ಕಣ್‌ತಪ್ಪಿಸಿ ಇಟ್ಟುಕೊಂಡವ್ನೋ ಏನೋ" ಎಂದು ರೇಗತೊಡಗಿದರು.

"ಇರ್ಲಿ ಬಿಡಿ ಸಾರ್. ಈಗ ಅಯ್ಯಂಗಾರ್‌ರು ಮನಸ್ಸು ಮಾಡದಿದ್ದಿದ್ದರೆ ಕೆ.ಕೆ. ಮೂರ್ತಿಯವರು ನಿಮ್ಮಲ್ಲಿಗೆ ಬರೋಕೆ ಸಾಧ್ಯವಾಗುತ್ತಿತ್ತಾ? ಈಗಲಾದರೂ ನಿಮಗೆ ಅವರ್ನ ಭೇಟಿ ಮಾಡಿಸಿದಾರಲ್ಲ. ನಿಜವಾಗಿ ರಾಜ್ ಅಯ್ಯಂಗಾರ್‌ರೆ ನಿಮ್ಮನ್ನು ಪಾರು ಮಾಡಿದವರಾಗುವುದಿಲ್ಲವೇ?" ಎಂದೆ.

"ಹೌದು ಹೌದು; ಅದೂ ಸರಿ ಅನ್ನು. ಏನಾದ್ರೂ ಹಾಳಾಕ್ಕೊಂಡು ಹೋಗ್ಲಿ ಮೊದ್ಲು ಈ ಪೀಡೆಯಿಂದ ಹೊರಬರಬೇಕು ನಾನು" ಎಂದರು.

ಕೆ.ಕೆ. ಮೂರ್ತಿಯವರು ಮಾತುಕೊಟ್ಟಂತೆ ಮುಖ್ಯಮಂತ್ರಿ ಅರಸು ಅವರಿಂದ ಡಿಜಿಪಿಯವರಿಗೆ ಫೋನ್ ಮಾಡಿಸಿ ದೇವದಾಸ್ ಅವರ ಹೆಸರನ್ನು ಆರೋಪ ಪಟ್ಟಿಯಿಂದ ತೆಗೆಸಿದರು.

ಈ ಘಟನೆಯ ನಂತರವೂ ಜೀತ ವಿಮೋಚನೆಯ ಬಗ್ಗೆ ಅರಸು ಉದ್ರೇಕಕಾರಿ ಭಾಷಣ ಮಾಡಿದ್ದನ್ನು ನಾನು ಕೇಳಿದೆ.

57

ನನ್ನ ಮನಸೂರೆಗೊಂಡ ನ್ಯಾಯಾಧೀಶ

ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟ್‌ಗೆ ದೇವದಾಸ್ ಅವರನ್ನು ಕಂಡರಾಗುತ್ತಿರಲಿಲ್ಲ. ಮುಖ್ಯಮಂತ್ರಿಗಳ ಮೌಖಿಕ ಶಿಫಾರಸ್ಸಿನ ಮೇರೆಗೆ ಕಾಫಿ ಪ್ಲಾಂಟೇಷನ್ ವರ್ಕರ್ ಕೊಲೆ ಮೊಕದ್ದಮೆಯ ಆರೋಪಿಗಳ ಪಟ್ಟಿಯಿಂದ ನುಣುಚಿಕೊಂಡರೂ ಬಿಡಲಿಲ್ಲ. ಆ ಕೇಸಿನಲ್ಲಿ ದೇವದಾಸ್ ಅವರನ್ನು ವಿಟ್ನೆಸ್ ಆಗಿ ಮಾಡಿಕೊಳ್ಳುವ ಮೂಲಕ ಆರೋಪಿ ಪರ ವಕೀಲರಾಗಿ ಹಾಜರಾಗದಂತೆ ಮಾಡುವಲ್ಲಿ ಯಶಸ್ವಿಯಾಯಿತು ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟ್.

ದೇವದಾಸ್ ಅವರು ಇದರಿಂದಾಗಿ ಮಾನಸಿಕ ಕಿರಿಕಿರಿಗೆ ಒಳಗಾದರು. ಅರೆಮುಖಭಂಗವಾದವರಂತೆ ಆಡಿದರು. ಕೆ.ಕೆ. ಮೂರ್ತಿಯವರನ್ನು ಸಾಪಳಿಸದೆ ಬಿಡಲಿಲ್ಲ ಸೀನಿಯರ್; "ಅಲ್ಲಾರೀ ಕೆ.ಕೆ. ಮೂರ್ತಿಯವರೇ, ನೀವೇನೇ ಪ್ರಯತ್ನ ಮಾಡಿದ್ರೂನೂವೆ ನನ್ನ ಮಾನ ಹೋಯಿತಲ್ಲಾರೀ, ನಾನೇ ಲಾಯರ್ ಆಗಿ ಪ್ಲೀಡ್ ಮಾಡಬೇಕಾದ ಕೇಸಿನಲ್ಲಿ ನಾನೇ ವಿಟ್ನೆಸ್ ಆಗಿ ನಿಂತ್ಕೋಬೇಕಾಯಿತಲ್ಲಾರೀ. ನಿಮ್ಮ ಮುಖ್ಯಮಂತ್ರಿಗೆ ಹೇಳಿ ನನ್ಹೆಸರು ತೆಗೆಸಿಹಾಕಿ ವಿಟ್ನೆಸ್ ಪಟ್ಟಿಯಿಂದ....."

ಎಂದರು. ಅದಕ್ಕೆ ಕೆ.ಕೆ. ಮೂರ್ತಿಯವರು, "ಸ್ವಾಮೀ, ನೀವು ಮುಖ್ಯ ಗಂಡಾಂತರದಿಂದ ಪಾರಾಗಿದೀರಿ. ಅದಕ್ಕಾಗಿ ಮೊದಲು ಸಮಾಧಾನ ಮಾಡಿಕೊಳ್ಳಿ. ಪದೇಪದೇ ಸಿ.ಎಂ. ಹತ್ತಿರಕ್ಕೆ ಈ ವಿಷಯಾನ ಹೇಳೋಕೆ ಹೋದ್ರೆ ತಿರಗಾ ಆರೋಪಿ ಪಟ್ಟೀಗೆ ಸೇರಿಸೋಕೆ ಆರ್ಡರ್ ಮಾಡಿಬಿಟ್ಟರೆ ಏನು ಗತಿ? ದೊಡ್ಡೋರ ಕಡೆಯಿಂದ ಕೆಲಸಾನ ಬೆಣ್ಣೇಲಿ ಕೂದಲು ತೆಗೆಯೋ ಹಾಗೆ ಮಾಡಿಕೋಬೇಕು. ಈಗ ನೀವು ಇಷ್ಟಕ್ಕೇ ಸಮಾಧಾನ ಮಾಡಿಕೋಬೇಕು" ಎಂದಾಗ ಸೀನಿಯರ್ ಮೌನವಹಿಸಿದರು. ಮೂರ್ತಿಯವರು ಆಚೆ ಹೋದ ಮೇಲೆ, "ಏನ್ರೀ ಈ ಮನುಷ್ಯ, ಮೊದಲು ಸಿ.ಎಂ. ನನ್ನ ಕೈಲಿದಾರೆ, ನೀವೇನೂ ಚಿಂತೆ ಮಾಡಬೇಡಿ ಎಂದು ದೊಡ್ಡದಾಗಿ ಹೇಳಿಕೊಂಡ. ಈಗ ನೋಡಿದ್ರೆ ಹಿಂಗಾಡ್ತಾವ್ನೆ? ಈ ಪೊಲಿಟಿಷಿಯನ್‌ಗಳನ್ನ ನಂಬೋಕೆ ಆಗೋಲ್ಲ. ಇವರೆಲ್ಲ ಊಸರವಳ್ಳಿ ಥರ...." ಎಂದು ಗೊಣಗಿದರು.

ನಮ್ಮ ಸೀನಿಯರ್ ಎದುರಿಗೆ ಬಂದು ನಿಲ್ಲುವ ಧೈರ್ಯ ಕೊಲೆ ಆರೋಪಿಯಾಗಿದ್ದ ಕಾಫೀ ಪ್ಲಾಂಟರ್‌ಗೆ ಇರಲಿಲ್ಲ. ತನ್ನಿಂದಾಗಿಯೇ ಲಾಯರ್ ಹೆಸರು ಕೊಲೆ ಆರೋಪಿಗಳ ಪಟ್ಟಿಯಲ್ಲಿ ಬರುವಂತಾಯಿತು ಎನ್ನುವ ಅಪರಾಧೀ ಭಾವನೆ ಆತನನ್ನು ಕಾಡುತ್ತಿತ್ತು. ತಾನು ಬರದೆ ತಮ್ಮ ಮ್ಯಾನೇಜರ್ ಕಡೆಯಿಂದ ಸೀನಿಯರ್‌ಗೆ ಮತ್ತಷ್ಟು ಹಣ ಕೊಟ್ಟು ಕಳಿಸಿದ.

"ಇಂಥ ದುಡ್ಡು ನಾನೆಷ್ಟು ಕಂಡಿಲ್ಲ. ನಿಮ್ಮ ಧಣಿಗೆ ಹೇಳು, ತಲೆತಪ್ಪಿಸಿಕೊಂಡು ಅಡ್ಡಾಡದೆ ಬಂದು ಕಾಣಲು" ಎಂದು ದೇವದಾಸ್ ಹೇಳಿಕಳಿಸಿದರು.

ಈ ಘಟನೆ ನನ್ನ ಮೇಲೆ ಭಾರೀ ಪರಿಣಾಮ ಬೀರಿತು. ನಮ್ಮ ವೃತ್ತಿಯಲ್ಲಿ ಮೇಲೇರದೆ ಸಾಮಾನ್ಯ ದರ್ಜೆಯಲ್ಲಿದ್ದಾಗ ಹೇಳಿಕೊಳ್ಳುವಂಥ ವೈರಿಗಳು ಹುಟ್ಟಿಕೊಳ್ಳುವುದಿಲ್ಲ ಆದರೆ ಸಾಧನೆಯ ಶಿಖರಕ್ಕೇರಿದಾಗ ಕಾಲೆಳೆಯಲು ನೂರು ವೈರಿಗಳು ತೋಳೇರಿಸಿ ನಿಂತಿರುತ್ತಾರೆ ಎನ್ನುವುದನ್ನು ತಿಳಿದುಕೊಂಡೆ. ನಾನು ಇಂಡಿಪೆಂಡೆಂಟ್ ಆಗಿ ಆಫೀಸ್ ಆರಂಭಿಸಿ ವೃತ್ತಿಯಲ್ಲಿ ನೆಲೆನಿಂತ ಮೇಲೆ, ಮುಂಚೆ ಸ್ನೇಹಿತರಾಗಿದ್ದ ಕೆಲವರು ನನ್ನ ಬಗ್ಗೆ ಅಸೂಯೆಪಟ್ಟುಕೊಳ್ಳುವುದನ್ನು ನಾನು ಗುರುತಿಸಿಕೊಂಡಿದ್ದೇನೆ. ಆತ್ಮೀಯತೆ, ಆಪ್ತತೆ, ಸ್ನೇಹ, ಸಂಬಂಧಗಳಲ್ಲಿ ಸ್ಫೋಟಗೊಳ್ಳುವ ದ್ವೇಷಾಸೂಯೆಗಳ ಗುಣ ವಿಚಿತ್ರವಾಗಿರುತ್ತದೆ; ಹಿತಶತ್ರು ರೂಪದಲ್ಲಿರುತ್ತದೆ.

ಈಗ ನಾನು ಹೇಳ ಹೊರಟಿರುವುದು ನನ್ನ ಮೇಲಷ್ಟೇ ಅಲ್ಲ, ನನ್ನ ತಲೆಮಾರಿನ ಬಹಳಷ್ಟು ಯುವ ವಕೀಲರ ಮೇಲೆ ಗಾಢ ಪ್ರಭಾವ ಬೀರಿದ

ನ್ಯಾಯಾಧೀಶರೊಬ್ಬರ ಬಗ್ಗೆ. ಅವರ ಹೆಸರು ಜಸ್ಟಿಸ್ ಕೆ. ರಾಮಚಂದ್ರಯ್ಯ ಎಂದು. ಇವರು ಸೆಷನ್ಸ್ ನ್ಯಾಯಾಧೀಶರಾಗಿ ನಿವೃತ್ತರಾದರು. ಇವರದು ಸ್ಫಟಿಕ ವ್ಯಕ್ತಿತ್ವ. ಇವನ ನಿವೃತ್ತಿಯ ನಂತರವೂ ಇವರನ್ನು ಹೈಕೋರ್ಟ್ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಯಿತು. ಹೀಗೆ ನಿವೃತ್ತ ಸೆಷನ್ಸ್ ನ್ಯಾಯಾಧೀಶರೊಬ್ಬರು ಹೈಕೋರ್ಟ್ ನ್ಯಾಯಾಧೀಶರಾಗಿ ನೇಮಕಗೊಂಡಿದ್ದು ಕರ್ನಾಟಕ ನ್ಯಾಯಾಂಗ ಇತಿಹಾಸದಲ್ಲಿಯೇ ಪ್ರಪ್ರಥಮ ಎಂದು ನನ್ನ ಅನಿಸಿಕೆ.

ಕೆ. ರಾಮಚಂದ್ರಯ್ಯನವರು ಕಪ್ಪಗೆ ಮತ್ತು ಕುರೂಪಿಯಾಗಿ ಕಾಣುತ್ತಿದ್ದರೂ ನೀಟಾಗಿ ಡ್ರೆಸ್ ಮಾಡುತ್ತಿದ್ದರು. ಶಿಸ್ತಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದ್ದರು. ಲಾಯರ್‌ಗಳ ಯೂನಿಫಾರಂನಲ್ಲಿ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಆಕ್ಷೇಪಿಸುತ್ತಿದ್ದರು. ಕೆಲವು ಸೀನಿಯರ್ ಲಾಯರ್‌ಗಳು ಕೋರ್ಟ್‌ನಲ್ಲಿ ಕೂತಲ್ಲಿಯೇ ನಿದ್ದೆ ಹೊಡೆಯುತ್ತಿದ್ದಾಗ ನಿರ್ದಾಕ್ಷಿಣ್ಯವಾಗಿ ಅವರನ್ನು ಎಬ್ಬಿಸಿ, "ಇದು ಬೆಡ್ ರೂಮಲ್ಲ, ಕೋರ್ಟು" ಎಂದು ಎಚ್ಚರಿಸುತ್ತಿದ್ದರು. "ನಿಮ್ಮ ಜ್ಯೂನಿಯರ್ ಲಾಯರ್‌ಗಳಿಗೆ ಕೆಲಸ ಒಪ್ಪಿಸಿ ನೀವು ಮಲಗಲು ಹೋಗಿ. ಪ್ರತಿಯೊಂದು ಸಣ್ಣ ವಿಷಯಕ್ಕೂ ಸೀನಿಯರ್ ಲಾಯರ್‌ಗಳೇ ಆಗಬೇಕಾ? ಎಲ್ಲ ನೀವೇ ಮಾಡಿದರೆ ನಿಮ್ಮ ಜ್ಯೂನಿಯರ್‌ಗಳು ಯಾವಾಗ ಪಿಕ್‌ಅಪ್ ಆಗಬೇಕು?" ಎಂದು ಮಾತನ್ನು ಹಾಸ್ಯರೂಪದಲ್ಲಿ ತೇಲಿಸಿ ಚುಚ್ಚುತ್ತಿದ್ದರು.

ಕೆ.ಆರ್. ಎಂದರೆ ಬಹುತೇಕ ಜ್ಯೂನಿಯರ್‌ಗಳಿಗೆಲ್ಲ ಖುಷಿಯೋ ಖುಷಿ. ಸೀನಿಯರ್‌ಗಳು ಹಾಜರಾದರೆ ಸಿಕ್ಕದಿದ್ದ ರಿಲೀಫ್‌ಗಳು ಜ್ಯೂನಿಯರ್‌ಗಳು ಹಾಜರಾದಾಗ ಸಿಗುತ್ತಿದ್ದವು. ಹೀಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಸೀನಿಯರ್‌ಗಳು ಜ್ಯೂನಿಯರ್‌ಗಳನ್ನೇ ಮುಂದೆ ಬಿಡುತ್ತಿದ್ದರು. ಕೆ. ರಾಮಚಂದ್ರಯ್ಯನವರು ಪರೋಕ್ಷವಾಗಿ ಜ್ಯೂನಿಯರ್‌ಗಳಿಗೆ ಸಪೋರ್ಟ್ ಮಾಡುತ್ತಿದ್ದ ರೀತಿ ಇದಾಗಿತ್ತು. "ನೀವು ಹಾಜರಾದರೆ ಶಿಕ್ಷೆ ಗ್ಯಾರಂಟಿ. ಆದರೆ ನಿಮ್ಮ ಜ್ಯೂನಿಯರ್ ಹಾಜರಾದರೆ ರಿಲೀಫ್ ಕೊಡ್ತೇನೆ" ಎಂದು ಸೀನಿಯರ್‌ಗಳಿಗೆ ಜೋಕ್ ಮಾಡುತ್ತಿದ್ದರು. ಮೇಲುನೋಟಕ್ಕೆ ಜೋಕ್ ಆಗಿ ಕಾಣಿಸುತ್ತಿದ್ದ ಆ ಮಾತಿನಲ್ಲಿ ಅವರ ಇಂಗಿತವಿರುತ್ತಿತ್ತು.

ಕೆ. ರಾಮಚಂದ್ರಯ್ಯನವರು ಬಂದಮೇಲೆ ಕೋರ್ಟಿನ ಕಳೆಯೇ ಬೇರೆಯಾಗಿತ್ತು. ಒಳಗೆ ಕಾಲಿಟ್ಟರೆ ಸಾಕು ನಿಜವಾದ ಕೋರ್ಟಿನ ವಾತಾವರಣ ಮುಖಕ್ಕೆ ಮೆತ್ತಿಕೊಳ್ಳುತ್ತಿತ್ತು. ಈ ಅನುಭವ ನನ್ನಂಥ ಜ್ಯೂನಿಯರ್ ಲಾಯರ್‌ಗಳದ್ದು ಮಾತ್ರವಾಗಿರಲಿಲ್ಲ. ನನ್ನ ಒಬ್ಬ ಕಕ್ಷಿದಾರ, "ಈ ಜಡ್ಜ್ ಮುಂದೆ ನಿಂತಕಂಡ್ರೆ

ಈತನಿಂದ ನಮಗೇನೊ ನ್ಯಾಯಾ ಸಿಕ್ತದೆ ಅಂತ ಒಳಗಿನಿಂದ ಅನಿಸ್ತದೆ" ಎಂದಿದ್ದ.

ಪೊಲೀಸರು ಮತ್ತು ಪ್ರಾಸಿಕ್ಯೂಟರ್‌ಗಳನ್ನೂ ಚುರುಕು ಮಾಡಿಬಿಟ್ಟಿದ್ದರು ಕೆ.ಆರ್. ಅವರು. ಜ್ಯೂನಿಯರ್‌ಗಳು ಪ್ರೀತಿಯಿಂದ ಬಾಯ್ತುಂಬ ಅವರ ಬಗ್ಗೆ ಕೆ.ಆರ್. ಎಂದೇ ಮಾತಾಡಿಕೊಳ್ಳುತ್ತಿದ್ದೆವು.

ಒಮ್ಮೆ ಒಂದು ಘಟನೆ ನಡೆಯಿತು. ಕೆ.ಆರ್. ಅವರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಕುಗ್ರಾಮದವರು. ರಜೆ ದಿನಗಳಲ್ಲಿ ಅವರು ಊರಿಗೆ ಹೋಗಿ ಬರುತ್ತಿದ್ದರು. ಬೆಂಗಳೂರಲ್ಲಿ ಅವರ ಮನೆ ರಾಜಾಜಿನಗರದ ಸಮೀಪದಲ್ಲಿತ್ತು. ಹೀಗೆ ಒಂದು ದಿನ ಅವರು ತಮ್ಮೂರಿನಿಂದ ಬೆಂಗಳೂರಿಗೆ ಬಸ್ ಹತ್ತಿದರು. ಬೆಂಗಳೂರು ತಲುಪಿದ ಬಸ್ ನವರಂಗ್ ಥೇಟರ್ ಮಾರ್ಗ ಬಿಟ್ಟು ಬೇರೆ ಮಾರ್ಗದಿಂದ ನಡೆಯತೊಡಗಿತು. ಬಹುಶಃ ರಸ್ತೆ ರಿಪೇರಿ ಅಥವಾ ಮೆರವಣಿಗೆ ಮತ್ತೇನಾದರೂ ಇದ್ದ ನಿಮಿತ್ತ ಬಸ್ ಮಾರ್ಗ ಬದಲಾವಣೆಯಾಗಿರಬಹುದು ಎಂದುಕೊಂಡರು ಪ್ರಯಾಣಿಕರು. ಆದರೆ ಏಕಾಏಕಿ ಡ್ರೈವರ್ ಕೆ.ಆರ್. ಅವರ ಮುಂದೆ ಬಂದು ಒಂದು ಸೆಲ್ಯೂಟ್ ಹೊಡೆದು, "ಸಾರ್ ನಿಮ್ಮ ಮನೆ ನಂಗೆ ಗೊತ್ತಿತ್ತು. ಅದಕ್ಕೇ ನೇರವಾಗಿ ಇಲ್ಲಿಗೆ ತಂದೆ....." ಎಂದು ಹಲ್ಲುಗಿಂಜತೊಡಗಿದ. ಮುಜುಗರ, ನಾಚಿಕೆಗಳಿಂದ ಕೆ.ಆರ್. ಕುಗ್ಗಿ ಹೋದರು. ಸಹಪ್ರಯಾಣಿಕರ ಮುಂದೆ ದೃಷ್ಟಿ ತಗ್ಗಿಸಿಕೊಂಡು ದುಡುದುಡನೆ ಇಳಿದು ಮನೆಯೊಳಗೆ ಹೊರಟು ಹೋದರು. ಆ ಡ್ರೈವರ್ ಮೇಲೆ ಕೇಸ್ ನಡೆಯುತ್ತಿತ್ತು. ನಿರ್ಲಕ್ಷ್ಯದ ಡ್ರೈವಿಂಗ್ ಮಾಡಿ ಒಬ್ಬ ವ್ಯಕ್ತಿಯ ಸಾವಿಗೆ ಕಾರಣನಾಗಿದ್ದಾನೆನ್ನುವ ಆರೋಪ ಆ ಡ್ರೈವರ್ ಮೇಲಿತ್ತು. ಆ ಕೇಸು ಕೆ.ಆರ್. ಅವರ ಮುಂದೆಯೇ ನಡೆಯುತ್ತಿತ್ತು. ತಾನು ಅವರ ಮನೆಯವರೆಗೆ ಬಸ್ ಅನ್ನು ಒಯ್ದು ನಿಲ್ಲಿಸಿದರೆ ಅವರ ಕೃಪಾದೃಷ್ಟಿ ತನ್ನ ಮೇಲೆ ಬೀಳಬಹುದು ಎಂದುಕೊಂಡಿದ್ದ ಆ ಡ್ರೈವರ್. ಆದರೆ ಕೆ.ಆರ್. ಅವರು ಆ ಘಟನೆಯ ಮಾರನೆಯ ದಿನವೇ ಸದರಿ ಡ್ರೈವರ್‌ಗೆ ಸಂಬಂಧಿಸಿದ ಕೇಸ್ ಅನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ತಮ್ಮ ಮೇಲಧಿಕಾರಿಗಳಿಗೆ ಬರೆದುಬಿಟ್ಟರು. ಆ ಡ್ರೈವರ್ ತಮ್ಮನ್ನು ಓಲೈಸಲು ಕೈಗೊಂಡ ಕ್ರಮವನ್ನೂ ಅದರಲ್ಲಿ ವಿವರಿಸಿಬಿಟ್ಟಿದ್ದರು ! ಕೆ.ಎಸ್.ಆರ್.ಟಿ.ಸಿ.ಯ ಅಧಿಕಾರಿಗಳನ್ನು ಓಲೈಸಿದ ರೀತಿಯೇ ನ್ಯಾಯಾಧೀಶರನ್ನೂ ಓಲೈಸಬಹುದು ಎಂದುಕೊಂಡಿದ್ದ ಆ ಡ್ರೈವರ್‌ಗೆ ನಿರಾಶೆಯಾಗಿತ್ತು. ಜ್ಯೂನಿಯರ್‌ಗಳ ಮಧ್ಯೆ ಈ ವಿಷಯ ಬಹಳ ದಿನಗಳವರೆಗೆ ಚರ್ಚೆ ನಡೆದು ಕೆ.ಆರ್. ವ್ಯಕ್ತಿತ್ವದ ಬಗ್ಗೆ ಪ್ರಶಂಶೆಯ ಸುರಿಮಳೆಯೇ ನಡೆಯಿತು.

ಮುನಿರಾಜು ಎನ್ನುವ ಶ್ರೀಮಂತ ಕಾರ್ ಅನ್ನು ರ್ಯಾಷ್ ಆಗಿ ನಡೆಸಿ ಒಂದು ಹೆಣ್ಣುಮಗುವನ್ನು ಸಾಯಿಸಿದ್ದ. ಚುನ್ನಿಲಾಲ್ ಎನ್ನುವ ಶ್ರೀಮಂತ ಬಟ್ಟೆ ವ್ಯಾಪಾರಿಯ ಮುದ್ದಿನ ಮಗಳಾಗಿದ್ದಳು ಅವಳು. ಇಬ್ಬರೂ ಶ್ರೀಮಂತರು. ಹೀಗಾಗಿ ಹಣಕ್ಕಾಗಿ ರಾಜೀ ಏರ್ಪಡುವ ಸಂಭವವಿರಲಿಲ್ಲ. ಪೀಣ್ಯ ಪೊಲೀಸ್ ಠಾಣೆಯಲ್ಲಿ ಈ ಆಕ್ಸಿಡೆಂಟ್ ಕೇಸ್ ದಾಖಲಾಗಿತ್ತು. ಆಗ್ಗೆ ಅಲ್ಲಿ ಹಮೀದ್‌ಖಾನ್ ಎನ್ನುವಾತ ಪಿಎಸ್‌ಐ ಆಗಿದ್ದ. ಈ ಹಮೀದ್‌ಖಾನನ್ನು ಮುನಿರಾಜು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದ. ಕೆ.ಆರ್. ಅವರ ಮುಂದೆ ಕೇಸ್ ನಡೆದರೆ ಶಿಕ್ಷೆ ಗ್ಯಾರಂಟಿ ಎಂದುಕೊಂಡು ಆ ಕೇಸನ್ನು ಮುಂದೂಡಲು ಪ್ರಯತ್ನ ನಡೆಸಿದ್ದರು. ಎಷ್ಟೇ ಬಾರಿ ಕೋರ್ಟ್‌ನಿಂದ ಕರೆಹೋದರೂ ತನಿಖಾಧಿಕಾರಿಯಾಗಿದ್ದ ಹಮೀದ್ ಖಾನ್ ಕೋರ್ಟಿಗೆ ಹಾಜರಾಗದೆ ತಪ್ಪಿಸಿಕೊಂಡ. ಏತನ್ಮಧ್ಯ ಹಮೀದ್ ಖಾನ್ ಪೀಣ್ಯ ಠಾಣೆಯಿಂದ ಚಿತ್ರದುರ್ಗಕ್ಕೆ ವರ್ಗಾ ಕೂಡ ಆಗಿಬಿಟ್ಟ.

ಸತತವಾಗಿ ತಪ್ಪಿಸಿಕೊಳ್ಳುತ್ತ ಬಂದ ಹಮೀದ್ ಖಾನ್‌ನ ಉದ್ದೇಶದ ಬಗ್ಗೆ ಕೆ.ಆರ್. ಅವರಿಗೆ ಸಂಶಯ ಮೂಡಿತು. ವಾರೆಂಟ್ ಹೊರಡಿಸಿದರು. ಆಗಲೂ ಆ ವ್ಯಕ್ತಿ ತಪ್ಪಿಸಿಕೊಂಡಿತು. ಆಗ ಪೊಲೀಸ್ ಪ್ರಾಸಿಕ್ಯೂಟರ್ ಆಗಿ ಚನ್ನಿಗಪ್ಪ ಇದ್ದರು. ಚನ್ನಿಗಪ್ಪನವರನ್ನು ಕೆ.ಆರ್. ಕೇಳಿದರು : "ಏನ್ರೀ ಈ ವ್ಯಕ್ತಿ ಡ್ಯೂಟಿಯಲ್ಲಿದ್ದಾನೊ ಅಥವಾ ರಿಟೈರ್ ಆಗಿದ್ದಾನೊ?" ಡ್ಯೂಟಿಯಲ್ಲಿದ್ದಾನೆಂದು ತಿಳಿದ ಕೆ.ಆರ್. ಕೆಂಡಾಮಂಡಲವಾದರು. ಏನನ್ನೂ ವ್ಯಕ್ತಪಡಿಸದೆ ಗಾಢಮೌನ ವಹಿಸಿದರು. ಅರೆಸ್ಟ್ ವಾರೆಂಟ್ ಅನ್ನು ಹಮೀದ್ ಖಾನ್‌ಗೆ ನೇರವಾಗಿ ಕಳಿಸದೆ ಎಸ್ಪಿ ಅವರಿಗೆ ಕಳಿಸಿ ಅದರಲ್ಲಿ, ನೀವೇ ಸದರಿ ಪಿಎಸ್‌ಐ ಯನ್ನು ಅರೆಸ್ಟ್ ಮಾಡಿ ತಂದು ಕೋರ್ಟ್‌ನಲ್ಲಿ ನಿಲ್ಲಿಸಬೇಕೆಂದು ಸೂಚಿಸಿದ್ದರು.

ಕೇಸ್ ಇದ್ದ ದಿನ ಪಿಎಸ್‌ಐ ಹಮೀದ್‌ಖಾನ್ ಕೋರ್ಟಿಗೆ ಹಾಜರಾದ. ಹೆಸರು ಕೂಗಿದ ತಕ್ಷಣ ಕೋರ್ಟಿನಲ್ಲಿ ಹಾಜರಾದ. "ನಿಮ್ಮ ಎಸ್ಪಿ ಎಲ್ಲಿ? ನಿಮ್ಮನ್ನು ಅರೆಸ್ಟ್ ಮಾಡಿ ತಂದವರಾರು?" ಎಂದು ಪ್ರಶ್ನಿಸಿದರು ಕೆ.ಆರ್.

ತಬ್ಬಿಬ್ಬಾದ ಹಮೀದ್‌ಖಾನ್ "ನನ್ನನ್ನು ಅರೆಸ್ಟ್ ಮಾಡಿ ತಂದ ಪಿಎಸ್‌ಐ ಹೊರಗಿದ್ದಾನೆ ಸಾರ್" ಎಂದ.

ಆ ಪಿಎಸ್‌ಐನನ್ನು ಒಳಗೆ ಕರೆಸಿ, "ಏನ್ರೀ ಕೋರ್ಟ್ ನಿಮಗೆ ಹೊಸತಾ? ಅರೆಸ್ಟ್ ಮಾಡಿಕೊಂಡು ಬಂದವರನ್ನ ಹೇಗೆ ತಂದು ನಿಲ್ಲಿಸಬೇಕೂ ಅಂತ ಗೊತ್ತಿಲ್ಲವೇನ್ರೀ?"

"ಸಾರ್ ಇವರು ನನಗಿಂತ ಸೀನಿಯರ್, ಸಿಪಿಐ ಆಗಿ ಪ್ರೊಮೋಷನ್ ಬೇರೆ ಪಡೆದುಕೊಂಡಿದ್ದಾರೆ" ಎಂದು ರಾಗವೆಳೆದ.

"ಆಯಿತು, ಈಗ ಇವರನ್ನ ಕರೆದೊಯ್ದು ಹೊರಗೆ ಕೂತಿರಿ. ನಾವು ಕರೆದಾಗ ಅರೆಸ್ಟ್ ಮಾಡಿಕೊಂಡು ಬರುವ ರೀತಿಯಲ್ಲಿ ಬನ್ನಿ" ಎಂದರು.

ಮಧ್ಯಾಹ್ನದ ಬಿಡುವಿನ ಸಮಯವಾದರೂ ಹಮೀದ್ ಖಾನ್‌ನನ್ನು ಕೋರ್ಟ್ ಕರೆಯಲಿಲ್ಲ. "ಜಡ್ಜ್ ಸಿಟ್ಟಾದದ್ದರಿಂದ ಕಾಯಿಸಿ ಸತಾಯಿಸಬೇಕು ಅಂತ ಅನ್ಕೊಂಡಿದಾರೆ" ಎಂದು ಪ್ರಾಸಿಕ್ಯೂಟರ್ ಚನ್ನಿಗಪ್ಪ ಹಮೀದ್‌ಖಾನ್‌ಗೆ ಹೇಳಿದರು.

ಮಧ್ಯಾಹ್ನವೂ ಕರೆಯಲಿಲ್ಲ. ಕೊನೆಗೆ ಸಂಜೆ 5.15ಕ್ಕೆ ಕರೆಸಿದರು. ಹಮೀದ್‌ಖಾನ್‌ನ ಭುಜಗಳನ್ನು ಹಿಡಿದುಕೊಂಡು ಬಂದು ಕಟಕಟೆಯಲ್ಲಿ ನಿಲ್ಲಿಸಿದ ಅರೆಸ್ಟ್ ಮಾಡಿ ತಂದೆ ಪಿಎಸ್‌ಐ.

ಕೆ.ಆರ್. ಅವರು "ಇವತ್ತು ಸಮಯ ಮುಗಿಯಿತು. ಈ ಕೇಸ್ ಅನ್ನು ನಡೆಸಲಾಗುವುದಿಲ್ಲ. ಮುಂದೆ ಕೊಡಲಾಗುವ ದಿನಾಂಕದವರೆಗೆ ಈ ಹಮೀದ್‌ಖಾನ್ ಜ್ಯುಡಿಸಿಯಲ್ ಕಸ್ಟಡಿಯಲ್ಲಿರುತ್ತಾರೆ. ಈವರೆಗೆ ಇವರು ಕೋರ್ಟ್ ಜೊತೆ ನಡೆದುಕೊಂಡ ರೀತಿ ಸರಿಯಿಲ್ಲ. ಈಗ ಇವರನ್ನು ಬಿಟ್ಟರೆ ಪುನಃ ತಪ್ಪಿಸಿಕೊಳ್ಳುವ ಅನುಮಾನ ಕೋರ್ಟ್‌ಗೆ ಇರುವುದರಿಂದ ಇವರನ್ನು ಕಸ್ಟಡಿಗೆ ಕಳಿಸಲಾಗುತ್ತಿದೆ" ಎಂದು ಹೇಳಿಬಿಟ್ಟರು

ಪ್ರಾಸಿಕ್ಯೂಟರ್, ಲಾಯರ್‌ಗಳು, ಕಕ್ಷಿದಾರರು ಎಲ್ಲರೂ ಸ್ತಂಭೀಭೂತರಾಗಿ ಬಿಟ್ಟರು!

ಪೆಚ್ಚುಮೋರೆ ಹಾಕಿಕೊಂಡ ಹಮೀದ್‌ಖಾನ್ ಕಳ್ಳರನ್ನೊಯ್ಯುವ ವ್ಯಾನ್ ಏರಿದ ಹಿಂಬಾಗಿಲ ಮೂಲಕ

ಆರೋಪಿ ಮುನಿರಾಜು ಪರ ದೇವದಾಸ್‌ರು ವಕಾಲತ್ತು ಹಾಕಿದ್ದರು. ನಾನು ಆ ಕೇಸ್ ಅನ್ನು ಅಟೆಂಡ್ ಮಾಡುತ್ತಿದ್ದೆ. ನಮ್ಮ ಕಕ್ಷಿದಾರನ ಪರ ಪಕ್ಷಪಾತ ತೋರಿದ ಹಮೀದ್‌ಖಾನ್ ಜೈಲಿಗೆ ಹೋಗಬೇಕಾಗಿ ಬಂದ ಕಥೆಯಿದು.

58

ಕ್ರಿಮಿನಲ್ ಲಾಯರ್ ಎಂದರೆ ಪ್ಯಾರಲಲ್ ಇನ್‌ವೆಸ್ಟಿಗೇಟರ್...

ಸೋರಹುಣಿಸೆ ಗ್ರಾಮದ ಪಟೇಲ್ ವೆಂಕಟಸ್ವಾಮಿರೆಡ್ಡಿಯವರ ಕೇಸು ನನ್ನ ವೃತ್ತಿಯಲ್ಲಿ ಒಂದು ಹೊರಳುದಾರಿಯಾಯಿತು. ಬೆಂಗಳೂರು ದಕ್ಷಿಣ ತಾಲ್ಲೂಕು ವರ್ತೂರು ಗ್ರಾಮಕ್ಕೆ ಕೇವಲ ಒಂದು ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ನಡೆದ ಕೊಲೆಯೊಂದರ ಕೇಸ್‌ನಲ್ಲಿ ವೆಂಕಟಸ್ವಾಮಿರೆಡ್ಡಿ ಆರೋಪಿಯಾಗಿದ್ದರು. ಅವರೊಂದಿಗೆ ಇನ್ನೂ ಹದಿನಾಲ್ಕು ಜನರೂ ಆರೋಪಿಗಳಾಗಿದ್ದರು. ದೇವದಾಸ್ ಅವರಿಗೆ ವೆಂಕಟಸ್ವಾಮಿ ರೆಡ್ಡಿ ಕಕ್ಷಿದಾರರಾಗಿದ್ದು ಅನಿರೀಕ್ಷಿತ. ಅದಕ್ಕೂ ಮುಂಚಿನಿಂದಲೇ ಅವರಿಬ್ಬರ ಮಧ್ಯೆ ಸ್ನೇಹವಿತ್ತು. ದೇವದಾಸ್ ವೆಂಕಟಸ್ವಾಮಿರೆಡ್ಡಿಯವರನ್ನು ಆರೋಪಮುಕ್ತಗೊಳಿಸಬೇಕೆಂದು ತೀವ್ರ ಪ್ರಯತ್ನ ನಡೆಸಿದ್ದರು. ಆದರೆ, ಸ್ವತಃ ದೇವದಾಸ್ ಅವರೇ ಸ್ವಲ್ಪ ಮಂಕಾಗಿಬಿಟ್ಟಿದ್ದರು. ಚಿಕ್ಕಮಗಳೂರಿನ ಕಾಫಿ ಪ್ಲಾಂಟೇಷನ್ ಕೂಲಿಯ ಕೊಲೆ ಮೊಕದ್ದಮೆಯಲ್ಲಿ ತಮ್ಮನ್ನೇ ಆರೋಪಿಯಾಗಿಸುವ ಪ್ರಯತ್ನ ನಡೆದುದಕ್ಕೆ ಅವರು ಮಾನಸಿಕವಾಗಿ

ಜರ್ಝರಿತಗೊಂಡಿದ್ದರು. ಕೇಸುಗಳಲ್ಲಿ ಮನಸ್ಸು ಮುಂಚಿನಂತೆ ನೆಟ್ಟ ಕಂಬದಂತೆ ನಿಲ್ಲುತ್ತಿರಲಿಲ್ಲ. ವೃದ್ಧಾಪ್ಯದ ಕಾರಣವೂ ಇರಬಹುದು, ಅವರ ಮನಸ್ಸು ತರಗೆಲೆಯಂತಾಗಿಬಿಟ್ಟಿತ್ತು.

ವೆಂಕಟಸ್ವಾಮಿರೆಡ್ಡಿಯವರ ಕೇಸಿನಲ್ಲಿ ತನ್ಮಯರಾಗಬೇಕೆಂದುಕೊಂಡರೂ ಸೀನಿಯರ್‌ಗೆ ಅದು ಸಾಧ್ಯವಾಗಲಿಲ್ಲ: ಅವರ ಮಾನಸಿಕ ಸ್ಥಿತಿ ಅವರ ಇಚ್ಛೆಗಳಿಗೆ ಸಾತ್ ಕೊಡುತ್ತಿಲ್ಲ ಎನ್ನುವುದನ್ನು ನಾನು ಗಮನಿಸಿಕೊಂಡೆ. ಸೀನಿಯರ್ ಬಗ್ಗೆ ನನ್ನಲ್ಲಿ ಕನಿಕರವುಂಟಾಯಿತು. ಹೇಗೆ ಹುಲಿಯಂತಿದ್ದವರು ಹೀಗಾಗಿಬಿಟ್ಟರಲ್ಲಾ ಎಂದುಕೊಂಡೆ. ದೇವದಾಸ್‌ರನ್ನು ನಾನು ಲೀಗಲ್ ಎನ್‌ಸೈಕ್ಲೋಪಿಡಿಯಾ ನೋಡಿದಂತೆ ನೋಡುತ್ತಿದ್ದೆ. ಅವರಾಗಿ ನನಗೆ ಏನನ್ನೂ ಕಲಿಸುವ ಅವಶ್ಯಕತೆಯಿರಲಿಲ್ಲ. ಅವರ ಪ್ರತಿಯೊಂದು ಮಾತು, ಚರ್ಚೆ, ಆರ್ಗ್ಯುಮೆಂಟ್‌ಗಳು ನನಗೆ ಪಾಠ ಹೇಳುತ್ತಿದ್ದವು. ಅವರ ಪಾಂಡಿತ್ಯ ಮತ್ತು ವೈಯಕ್ತಿಕ ಜೀವನ ಇವೆರಡೂ ವಿರೋಧಾಭಾಸದಂತೆ ಮೊದಮೊದಲು ತೋರುತ್ತಿದ್ದರೂ ನಂತರ ಅವರಲ್ಲಿಯ ಶುದ್ಧಪಾಂಡಿತ್ಯವನ್ನು ಮಾತ್ರ ಕಬ್ಬಿನ ರಸವನ್ನು ಹೀರಿದಂತೆ ಹೀರಿಕೊಳ್ಳತೊಡಗಿದೆ. ದೇವದಾಸ್‌ರಲ್ಲಿ ಪಟೇಲ್ ವೆಂಕಟಸ್ವಾಮಿರೆಡ್ಡಿಯ ಬಗ್ಗೆ ಬಹಳಷ್ಟು ಗೌರವ ಇದ್ದಿರುವುದಕ್ಕೆ ಕಾರಣವಿಲ್ಲದಿರಲಿಲ್ಲ. ವೆಂಕಟಸ್ವಾಮಿರೆಡ್ಡಿಯವರು ವೈಟ್‌ಫೀಲ್ಡ್‌ನಲ್ಲಿರುವ ಸಾಯಿಬಾಬಾನ ಆಶ್ರಮದ ಭಜನಾ ಮಂಡಳಿಯ ಅಧ್ಯಕ್ಷರಾಗಿದ್ದರು. ಅದು ಮಾತ್ರವಲ್ಲ, ಸ್ವತಃ ಸಾಯಿಬಾಬಾ ವೆಂಕಟಸ್ವಾಮಿಯರೆಡ್ಡಿಯವರ ಮನೆಗೆ ಬಂದು ಅವರೊಂದಿಗೆ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು! ದೇವರು, ಬಾಬಾಗಳ ಬಗ್ಗೆ ದೇವದಾಸ್‌ರಲ್ಲಿ ಅತೀವ ಭಕ್ತಿಭಾವಗಳು. ಹೀಗಿರುವಾಗ ಸಾಯಿಬಾಬಾನೊಂದಿಗೆ ಊಟ ಮಾಡಿದ ವ್ಯಕ್ತಿ ಬಾಬಾನ ಪ್ರತಿರೂಪವಾಗಿ ಕಾಣತೊಡಗಿದ್ದರು ದೇವದಾಸ್‌ಗೆ.

ವೆಂಕಟಸ್ವಾಮಿರೆಡ್ಡಿಯಯವರ ಕೇಸ್‌ಗೆ ತಾವು ವಕಾಲತ್ ಹಾಕುವಾಗ ನನ್ನಿಂದಲೂ ವಕಾಲತ್ ಹಾಕಿಸಿದರು. ಇದರರ್ಥ ಕೇಸಿನ ಭಾರ ನಿನ್ನ ಮೇಲೆಯೇ ಇದೆ ಎಂದು ಸೀನಿಯರ್ ನನ್ನ ಕಿವಿಯಲ್ಲಿ ಪಿಸುಗುಟ್ಟಿದಂತೆ ಭಾಸವಾಗಿತ್ತು. ನಾನು ವಿಶೇಷ ಶ್ರದ್ಧೆ ವಹಿಸಿ ಕೇಸ್ ವಿವರಗಳನ್ನು ಫಾಲೊ ಮಾಡತೊಡಗಿದೆ.

ವೆಂಕಟಸ್ವಾಮಿರೆಡ್ಡಿಯವರನ್ನು ನೋಡಿದ ಯಾವ ವ್ಯಕ್ತಿಯೂ ಅವರು ಕೊಲೆ ಮಾಡುವಂಥವರು ಎನ್ನುವ ಅಭಿಪ್ರಾಯಕ್ಕೆ ಬರಲು ಸಾಧ್ಯವಿರಲಿಲ್ಲ. ಅವರ ಮುಖದಲ್ಲಿ ಅಂಥ ತೇಜಸ್ಸಿತ್ತು. ಕೊಲೆ ಕೇಸನ್ನು ಎದುರಿಸುವಾಗಲೂ ಅವರು ದೃಢಚಿತ್ತರಾಗಿದ್ದುದು ನನ್ನಲ್ಲಿ ಆಶ್ಚರ್ಯ ಮೂಡಿಸಿತ್ತು. ಕೇಸಿನ ಭಾರವನ್ನೆಲ್ಲ

ಬಾಬಾನ ಮೇಲೆ ಹೊರಸಿ ತಾವು ನಿರಾತಂಕವಾಗಿರುವವರಂತೆ ಕಾಣುತ್ತಿದ್ದರು. ಆದರೆ ಅವರೊಂದಿಗೆ ಆರೋಪಿಗಳಾಗಿದ್ದ ಇತರೇ ಹದಿನಾಲ್ಕು ಜನ ಮಾತ್ರ ಜಡ್ಜ್‌ಮೆಂಟ್ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಲೇ ಇದ್ದರು.

ವೆಂಕಟಸ್ವಾಮಿಯವರ ಅಳಿಯ ಕೃಷ್ಣಾರೆಡ್ಡಿಯನ್ನು ನಮ್ಮ ಸಹಾಯಕ್ಕೆ ಬಿಡಲಾಗಿತ್ತು. ನಾನು ಕೇಳಿದ ಮಾಹಿತಿ, ವಿವರಗಳನ್ನೆಲ್ಲ ಒದಗಿಸುತ್ತಿದ್ದ ಆತ ಕೆಲವೇ ದಿನಗಳಲ್ಲಿ ನನಗೆ ಸ್ನೇಹಿತನಂತಾಗಿ ಬಿಟ್ಟ. ನಾನು ಈ ಕೇಸ್‌ನಲ್ಲಿ ಹೆಚ್ಚು ಆಸಕ್ತಿ ತೋರಿದಂತೆಲ್ಲ ಸೀನಿಯರ್ ತಮ್ಮ ನಿರ್ಲಿಪ್ತತೆಯನ್ನು ಹೆಚ್ಚಿಸಿಕೊಂಡರು.

ಸೀನಿಯರ್ ವಕೀಲರು ಕೇಸಿನ ಜವಾಬ್ದಾರಿಯನ್ನೆಲ್ಲ ಜ್ಯೂನಿಯರ್‌ಗೆ ಹೊರಿಸಿ ಕೈತೊಳೆದುಕೊಂಡಿದ್ದಾರೆನ್ನುವ ಭಾವನೆ ಕಕ್ಷಿದಾರರಲ್ಲಿ ಬಲವಾಗಿ ಬೆಳೆಯತೊಡಗಿತು. ವೆಂಕಟಸ್ವಾಮಿರೆಡ್ಡಿಯವರ ಸಹ ಆರೋಪಿಗಳು ಇದನ್ನು ಪಿಸುಧ್ವನಿಯಲ್ಲಿ ಆಕ್ಷೇಪಿಸತೊಡಗಿದರು. ಸಹಾರೋಪಿಗಳ ಒತ್ತಾಯಕ್ಕೆ ಮಣಿದು ಒಮ್ಮೆ ಬಾಯಿಬಿಟ್ಟು ವೆಂಕಟಸ್ವಾಮಿರೆಡ್ಡಿಯವರು ಸೀನಿಯರ್‌ಗೆ, "ನಮ್ಮಂತೆ ಆಗುತ್ತಾ ಕೇಸು?" ಎಂದು ಪ್ರಶ್ನಿಸಿಯೇಬಿಟ್ಟರು.

"ದೇವರಿದ್ದಾನೆ. ಪ್ರಯತ್ನ ನಮ್ಮದು!" ಎಂದು ಸೀನಿಯರ್ ಹೇಳಿದಾಗ ಕಕ್ಷಿದಾರರು ಪಾತಾಳಕ್ಕೆ ಕುಸಿದವರಂತೆ ಮುಖ ಮಾಡಿಕೊಂಡರು. ಆದರೆ ವೆಂಕಟಸ್ವಾಮಿರೆಡ್ಡಿಯವರು ಮಾತ್ರ ಮುಗುಳುನಕ್ಕರು.

ಸೀನಿಯರ್ ಈ ರೀತಿ ಯಾವತ್ತೂ ಕಕ್ಷಿದಾರರೆದುರು ಮಾತಾಡಿರಲಿಲ್ಲ. ನನಗೂ ಆಶ್ಚರ್ಯವಾಯಿತು; ಸೀನಿಯರ್ ಇಷ್ಟೇಕೆ ಆತ್ಮವಿಶ್ವಾಸ ಕಳೆದುಕೊಂಡಿದ್ದಾರೆ ಎಂದು.

ಯಾರೂ ಇಲ್ಲದಿದ್ದಾಗ ನಾನು ಕೇಳಿದೆ, "ಸಾರ್ ಈ ಕೇಸ್ ಬಗ್ಗೆ ಆಶೆ ಬಿಟ್ಟವರಂತೆ ಮಾತಾಡುತ್ತಿದ್ದೀರಿ?" ಎಂದು.

ಅದಕ್ಕೆ ಸೀನಿಯರ್ ನಗುತ್ತ, "ಕ್ರಿಮಿನಲ್ ಲಾಯರ್ ಎಂದರೆ ಸುಮ್ಮನೆ ಹೋಮ್‌ವರ್ಕ್ ಮಾಡಿಕೊಂಡು ಹೋಗುವುದಲ್ಲ. ಪ್ಯಾರಲಲ್ ಆಗಿ ಇನ್ವೆಸ್ಟಿಗೇಷನ್ ಮಾಡುವ ಸಾಮರ್ಥ್ಯ ಇದ್ದರೆ ಮತ್ತು ಇರುವವರೆಗೆ ಮಾತ್ರ ಕ್ರಿಮಿನಲ್ ಲಾಯರ್‌ಗಿರಿ ನಡೆಯುತ್ತೆ" ಎಂದು ಹೇಳಿ ತಿರುಗುತ್ತಿದ್ದ ಫ್ಯಾನ್ ಕಡೆ ತಮ್ಮ ದೃಷ್ಟಿ ನೆಟ್ಟರು. ಅವರ ಮೌನ ನನ್ನನ್ನು ಅಲ್ಲಿಂದ ನಡೆ ಎಂದಿತು.

ವೆಂಕಟಸ್ವಾಮಿರೆಡ್ಡಿಯವರ ಅಳಿಯ ಕೃಷಾರೆಡ್ಡಿಯನ್ನು ಬರಲು ಹೇಳಿಕಳಿಸಿದೆ. ಅವನಿಗೆ ಕೇಳಿದೆ: "ಚಾಚೂ ತಪ್ಪದೆ ನಿಜ ಸಂಗತಿಗಳನ್ನೆಲ್ಲ ಹೇಳು. ಹಾಗಾದರೆ

ಮಾತ್ರ ನನಗೆ ಏನಾದರೂ ಉಪಾಯ ಹುಡುಕಲು ಸಾಧ್ಯ". ಆತ ಕೊಲೆ ವೃತ್ತಾಂತ ಹೇಳಿದ......

ಪಟೇಲ್ ವೆಂಕಟಸ್ವಾಮಿರೆಡ್ಡಿ ಶಾಂತಿಪ್ರಿಯ ವ್ಯಕ್ತಿ. ಗ್ರಾಮದ ಬಹಳಷ್ಟು ಜನ ಇವರ ಬೆಂಬಲಕ್ಕಿದ್ದರು. ಇವರ ಜನಪ್ರಿಯತೆಯನ್ನು ಕಂಡು ಕರುಬುತ್ತಿದ್ದ ಚಿನ್ನಯ್ಯರೆಡ್ಡಿ ಒಂದು ಉಡಾಳರ ಗುಂಪು ಕಟ್ಟಿಕೊಂಡು ಏತಿ ಎಂದರೆ ಪ್ರೇತಿ ಎನ್ನಲು ತುದಿಗಾಲಲ್ಲಿ ನಿಂತುಬಿಟ್ಟಿದ್ದ. ಈತನಿಗೆ ಇಬ್ಬರು ಮಕ್ಕಳು. ಗೋಪಾಲ ರೆಡ್ಡಿ ಮತ್ತು ಚಂದ್ರರೆಡ್ಡಿ. ಎರಡನೆಯವ ಡಾಕ್ಟರ್ ಆಗಿದ್ದ. ಆತನ ಹೆಂಡತಿಯೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾಕ್ಟರ್ ಆಗಿದ್ದಳು.

ವೆಂಕಟಸ್ವಾಮಿರೆಡ್ಡಿ ಮತ್ತು ಚಿನ್ನಯ್ಯರೆಡ್ಡಿ ಇವರೀರ್ವರ ಬೆಂಬಲಿಗರ ಮಧ್ಯೆ ನಡೆದ ಜಗಳಗಳಿಗೆ ಲೆಕ್ಕವಿರಲಿಲ್ಲ. ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ನಡೆದ ಜಗಳದಲ್ಲಿ ವೆಂಕಟಸ್ವಾಮಿರೆಡ್ಡಿಯವರ ಮಗ ಅಶ್ವತ್ಥರೆಡ್ಡಿಯ ಬಲಹಸ್ತವನ್ನು ಮಚ್ಚಿನಿಂದ ಹೊಡೆದು ಸೀಳಿಬಿಟ್ಟಿದ್ದರು. ಚಿನ್ನಯ್ಯರೆಡ್ಡಿಯ ಮಗ ಗೋಪಾಲರೆಡ್ಡಿ ಈ ಹಲ್ಲೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದ. ಇಷ್ಟಾದರೂ ವೆಂಕಟಸ್ವಾಮಿ ರೆಡ್ಡಿ ಮಾತ್ರ ಸೇಡು ಬೇಡ ಎಂದು ಹೇಳಿದ್ದನ್ನು ಕೇಳಿ ಆತನ ಬೆಂಬಲಿಗರೆಲ್ಲ ರೊಚ್ಚಿಗೆದ್ದರು, "ಪಟೇಲ್ರೇ ಇನ್ನು ನಮ್‌ಕೈಲಿ ತಡಕಣಾಕೆ ಆಗೋಲ್ಲ. ಇವತ್ತು ನಿಮ್ ಮಗನ ಕೈಕೊಚ್ಚಿದ್ರು. ಹಿಂಗೇ ಸುಮ್ಕಿದ್ರೆ ನಾಳೆ ನಮ್ಮನ್ನ ಒಬ್ಬೊಬ್ಬರನ್ನೇ ಕೊಚ್ಚಿ ಹಾಕ್ತಾರೆ. ನಿಮ್ಮ ಪಾಡಿಗೆ ನೀವಿರಿ. ನಾವು ನಮಗೆ ತಿಳಿದಿದ್ನ ಮಾಡ್ಕೋತೇವಿ....." ಎಂದು ಹೇಳಿ ಹೊರಟಿತು ಗುಂಪು.

ಇದಾದ ಕೆಲ ವಾರಗಳ ಮೇಲೆ ಬೆಳಗಿನ ಜಾವ ಐದು ಗಂಟೆಗೆ ಗೋಪಾಲ ರೆಡ್ಡಿ ತನ್ನ ತೋಟಕ್ಕೆ ನಡೆದು ಹೋಗುತ್ತಿರುವಾಗ ವೆಂಕಟಸ್ವಾಮಿರೆಡ್ಡಿಯ ಬೆಂಬಲಿಗರ ಗುಂಪು ತೀವ್ರ ಮಚ್ಚಿನ ದಾಳಿ ನಡೆಸಿತು. ಗೋಪಾಲರೆಡ್ಡಿ ಅರೆಜೀವಾವಸ್ಥೆಯಲ್ಲಿ ರಕ್ತದ ಮಡುವಿನಲ್ಲಿ ಒದ್ದಾಡತೊಡಗಿದ.

ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಒಯ್ದರು. ಇನ್ನೇನು ಡಾಕ್ಟರ್ ಬಂದು ನೋಡಬೇಕೆನ್ನುವಷ್ಟರಲ್ಲಿ ಆತ ಸತ್ತುಹೋಗಿಬಿಟ್ಟ.

ನಾನು ಕೃಷ್ಣಾರೆಡ್ಡಿಯನ್ನು ಕೇಳಿದೆ, "ಅವನ ಮೇಲೆ ದಾಳಿ ಮಾಡಿದ್ದು ಎಷ್ಟು ಜನ?"

"ಏಳು ಜನ"

"ಅವರನ್ನು ನಾನು ಕೂಡಲೇ ಮಾತಾಡಿಸಬೇಕು" ಎಂದೆ.

"ಕೃಷ್ಣಾರೆಡ್ಡಿ, ನೀನು ಎಲ್ಲ ಸಂಗತಿಯನ್ನೂ ಯಥಾವತ್ ಹೇಳಿರುವೆ. ಆದರೆ, ಗೋಪಾಲರೆಡ್ಡಿ ಎಲ್ಲಿ ಎಷ್ಟು ಸಮಯಕ್ಕೆ ಸತ್ತ ಎನ್ನುವ ಸಂಗತಿಯನ್ನು ಮಾತ್ರ ನಿಜವಾಗಿ ಹೇಳಲಿಲ್ಲ. ಎಫ್‌ಐಆರ್‌ನಲ್ಲಿ ಫಿರ್ಯಾದುದಾರರು ಹೇಳಿದ್ದನ್ನೇ ನಂಬಿಕೊಂಡು ಅದನ್ನೇ ಸತ್ಯ ಅಂತ ಭಾವಿಸಿಕೊಂಡು ನನ್ನ ಮುಂದೆ ಹೇಳಿದಂತೆ ಅನಿಸುತ್ತಿದೆ. ಹೌದಲ್ಲವಾ?" ಎಂದು ಕೇಳಿದಾಗ ಕೃಷ್ಣಾರೆಡ್ಡಿ ಆಶ್ಚರ್ಯದಿಂದ ನನ್ನ ಮುಖವನ್ನೇ ನೋಡತೊಡಗಿದ.

ಸರಿ, ನಿಜವಾಗಿಯೂ ಹಲ್ಲೆ ಮಾಡಿದ ಏಳು ಜನ ಆರೋಪಿಗಳನ್ನು ಮಾತಾಡಿಸಿದೆ.

ಅವರನ್ನು ಕೇಳಿದೆ: "ನೀವು ಗೋಪಾಲರೆಡ್ಡಿಯನ್ನು ಕೊಲ್ಲುವ ಉದ್ದೇಶದಿಂದ ಹೊಡೆದಿರೊ ಅಥವಾ ಸುಮ್ಮನೆ ಗಾಯಗೊಳಿಸಿ ಭೀತಿ ಹುಟ್ಟಿಸುವ ಉದ್ದೇಶದಿಂದ ಹೊಡೆದಿರೊ?"

ಕೃಷ್ಣಾರೆಡ್ಡಿ ಹೇಳಿದ : "ನಿಜ ಹೇಳಿ. ಇಲ್ಲದಿದ್ದರೆ ನಿಮ್ಮನ್ನ ಪಾರು ಮಾಡೋಕೆ ಆಗೊಲ್ಲ ನಮ್ಮ ಲಾಯರ್‌ಗೆ" ಒಟ್ಟಿಗೇ ಏಳು ಜನ ಉದ್ಗರಿಸಿದರು: "ಅವ್ನನ್ನ ಮುಗಿಸೇಬಿಡಬೇಕು ಅಂತ್ಲೇ ನಾವು ಹೋಗಿದ್ದು. ಅವ್ನು ಸತ್ತ ಅಂತ ಅನ್ನಿಸಿದ ಮೇಲೇ ಅಲ್ಲಿಂದ ಓಟಕಿತ್ತೆವು."

ನನ್ನ ಮೈಯಲ್ಲಿ ಮಿಂಚಿನ ಸಂಚಾರವಾಯಿತು. ಹೊಸ ಪಾಯಿಂಟ್ ಸಿಕ್ಕಿತ್ತು. ಗೋಪಾಲರೆಡ್ಡಿ ಮಾರಣಾಂತಿಕ ಹಲ್ಲೆಗೆ ಒಳಗಾದ ಮೇಲೆ ಆಸ್ಪತ್ರೆಗೆ ಒಯ್ಯುವವರೆಗೆ ಬದುಕಿದ್ದು ಡಾಕ್ಟರ್ ಬರುವಷ್ಟರಲ್ಲಿ ಆಸ್ಪತ್ರೆಯಲ್ಲಿ ಸತ್ತ ಎಂದು ಗೋಪಾಲರೆಡ್ಡಿಯನ್ನು ಹೊತ್ತು ತಂದವರು ಹೇಳಿದ್ದು ಸುಳ್ಳು ಎನಿಸಿಬಿಟ್ಟಿತು. ಅವನು ಸಾಯುವ ಮುಂಚೆ ಡೈಯಿಂಗ್ ಡಿಕ್ಲೆರೇಷನ್‌ನಲ್ಲಿ ಈಗ ಆರೋಪಿಗಳಾಗಿರುವ ಹದಿನೈದು ಜನ ಸೇರಿ ತನ್ನ ಮೇಲೆ ಹಲ್ಲೆ ನಡೆಸಿದರೆಂದು ಹೇಳಿದ್ದೂ ಸಹ ಸುಳ್ಳು ಎನಿಸಿತು.

ನಾನು ಆರೋಪಿಗಳನ್ನು ಕೇಳಿದೆ: "ನೀವು ಗೋಪಾಲರೆಡ್ಡಿಯ ಮೇಲೆ ಬೆಳಗಿನ ಜಾವ ನಡೆಸಿದ ಹಲ್ಲೆಯನ್ನು ತಡೆಯಲು ಯಾರಾದರೂ ಬಂದದ್ದಕ್ಕೆ ನೀವು ಓಟ ಕಿತ್ತಿರಾ?"

ಅದಕ್ಕೆ ಅವರಲ್ಲೊಬ್ಬ "ನಾನು ಮೊದಲ ಏಟನ್ನೇ ಅವನ ಕತ್ತಿಗೆ ಹಾಕಿದೆ. ಅವನಿಗೆ ಕೂಗಿಕೊಳ್ಳಕೂ ಆಗಲಿಲ್ಲ. ಅದೆಲ್ಲ ಸದ್ದಿಲ್ದೆ ನಡೆದೋತು." ಎಂದ.

ನನ್ನ ಅನಿಸಿಕೆಗೆ ಬೇರು ಬೆಳೆದಿತ್ತು. ನನ್ನಲ್ಲಿ ದೃಢವಿಶ್ವಾಸ ಮೂಡಿತು; ಅವನು ಅಲ್ಲಿ ಹಲ್ಲೆ ನಡೆದ ಸ್ಥಳದಲ್ಲಿಯೇ ಸತ್ತಿದ್ದಾನೆ ಎಂದು.

ಇಷ್ಟು ಸಾಕು ಎಂದು ಕೃಷ್ಣಾರೆಡ್ಡಿಯನ್ನು ಕರೆದುಕೊಂಡು ನಡೆದೆ. ವಿಕ್ಟೋರಿಯಾ ಆಸ್ಪತ್ರೆಯ ನಾರ್ತ್‌ಗೇಟ್ ಔಟ್‌ಪೋಸ್ಟ್ ಪೊಲೀಸ್ ಠಾಣೆಗೆ ಹೋದೆ. ಆಸ್ಪತ್ರೆಗೆ ತರಲ್ಪಡುವ ಕ್ಯಾಜುಯಲ್ಟಿಗಳಲ್ಲಿ, ಆ ಠಾಣೆಯ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಡುವುದು ಸಾಮಾನ್ಯ ನಿಯಮ. ಗೋಪಾಲರೆಡ್ಡಿ ಸತ್ತ ದಿನಾಂಕ ನೀಡಿ ವಿವರಗಳನ್ನು ತೆಗೆಸಿದೆ. ಪೇದೆಯ ಕೈಗೆ ಸಾಕಷ್ಟು ದುಡ್ಡಿಟ್ಟಾಗ ಶ್ರದ್ಧೆಯಿಂದ ಬೇರೆ ಯಾರಿಗೂ ತಿಳಿಯದಂತೆ ಸ್ಟೇಷನ್ ಡೈರಿಯನ್ನು ತೆಗೆದು ತೋರಿಸಿದ. ಅದರ ಪ್ರಕಾರ, ಠಾಣೆಗೆ ಗೋಪಾಲರೆಡ್ಡಿ ಬಂದಿರಲಿಲ್ಲ ಆತನ ಶವ ಬಂದಿತ್ತು. ಹೆಡ್‌ಕಾನ್‌ಸ್ಟೇಬಲ್ ಶವಮುಟ್ಟಿ ನೋಡಿದಾಗ ತಣ್ಣಗಾಗಿರುವುದು ಕಂಡು ಬಂತು. ಗೋಪಾಲರೆಡ್ಡಿ ಮೃತಪಟ್ಟು ಅರ್ಧ ಗಂಟೆಗಿಂತಲೂ ಹೆಚ್ಚಾಗಿತ್ತೆಂದು ಹೇಳಬಹುದಿತ್ತು. ಇದೆಲ್ಲವನ್ನು ಸ್ಟೇಷನ್ ಡೈರಿಯಲ್ಲಿ ನಮೂದಿಸಿಕೊಳ್ಳಲಾಗಿತ್ತು. ಅದನ್ನು ಯಥಾವತ್ತಾಗಿ ಬರೆದುಕೊಂಡೆ. ಅನುಮಾನದಿಂದ ಹುಟ್ಟಿಕೊಂಡಿದ್ದ ಊಹೆ ನಿಜವಾಗಿ ಬೆಳೆದು ನಿಂತಿತ್ತು. ಗೋಪಾಲರೆಡ್ಡಿ ಆಸ್ಪತ್ರೆಯಲ್ಲಿ ಸತ್ತಿಲ್ಲ ಮತ್ತು ಆತ ನೀಡಿದ ಹೇಳಿಕೆ, ಹೇಳಲ್ಪಡುತ್ತಿರುವ ಡೈಯಿಂಗ್ ಡಿಕ್ಲರೇಷನ್ ಶುದ್ಧ ಸುಳ್ಳು ಎನ್ನುವುದು ನನಗೆ ಖಚಿತವಾಗಿತ್ತು.

ನನ್ನ ತನಿಖೆಯಿಂದ ಕಲೆ ಹಾಕಿದ ವಿವರಗಳಿಗೆ ಒಂದು ರೂಪು ಕೊಟ್ಟು ಮನೆಯಲ್ಲಿ ವಿಶ್ರಮಿಸುತ್ತಿದ್ದ ಸೀನಿಯರ್ ಮುಂದೆ ಒಯ್ದಿಟ್ಟೆ. ದೇವದಾಸ್‌ರಿಗೆ ಸಂತೋಷ ತಡೆದುಕೊಳ್ಳಲಾಗಲಿಲ್ಲ. ಅರೆಬರೆಯಾಗಿ ಸುತ್ತಿಕೊಂಡಿದ್ದ ಪಂಚೆಯಲ್ಲೇ ಎದ್ದು ಬಂದು ನನ್ನನ್ನು ಅಪ್ಪಿಕೊಂಡರು."I did less with more; but you did more with less. Now you have become a complete criminal lawyer" ಎಂದರು.

ನೋಡು ಕ್ರಿಮಿನಲ್ ಕೇಸ್ ಬಹಳ ಕಷ್ಟ ಎನ್ನುತ್ತಾರೆ. ಆದರೆ, ಅದರ ವೀಕ್ ಪಾಯಿಂಟ್ ಕಂಡುಹಿಡಿಯುವವನಿಗೆ ಅದು ಕಷ್ಟದ ಕೇಸಲ್ಲ, "A criminal case is always as strong as its weakest link...." ಎಂದು ಹೇಳಿ ಗಹಗಹಿಸಿ ನಗತೊಡಗಿದರು. ಸಾರ್ಥಕ ಭಾವನೆ ನನ್ನಲ್ಲಿ ಉಕ್ಕಿ ಕಣ್ಣುಗಳನ್ನು ಒದ್ದೆಯಾಗಿಸಿತ್ತು.

ಕೇಸ್ ಗೆದ್ದಾಗ ಪಟೇಲ್ ವೆಂಕಟಸ್ವಾಮಿರೆಡ್ಡಿಯವರು ಎರಡು ಹಾರಗಳನ್ನು

ತಂದಿದ್ದರು. ಒಂದು ಸೀನಿಯರ್‌ಗೆ, ಮತ್ತೊಂದು ನನಗೆ. ನನಗೆ ಹಾಕಲು ಬಂದಿದ್ದ ಹಾರವನ್ನು ಕೈಯಲ್ಲಿ ಇಸಿದುಕೊಂಡು ದೇವದಾಸ್‌ರ ಪಾದಗಳ ಮೇಲೆ ಹಾಕಿದೆ.

59

ಮೂಗರ್ಜಿ ಮಾಡಿದ ಪವಾಡ

ಬೆಂಗಳೂರು ಹೊರವಲಯದಲ್ಲಿರುವ ವೈಟ್‌ಫೀಲ್ಡ್ ಒಂದು ಅಪೂರ್ವ ಪ್ರದೇಶ. ಅಲ್ಲಿನ ಬಹುಜನ ಸೇನಾಧಿಕಾರಿಗಳು ಆಂಗ್ಲೋ ಇಂಡಿಯನ್ಸ್. ಅವರ ಜೀವನ ಶೈಲಿ ಮತ್ತು ಕರಾರುವಕ್ಕಾದ ನಡೆನುಡಿ ಆ ಪ್ರದೇಶವನ್ನು ಅಪೂರ್ವವಾಗಿಸಿವೆ. ಅಲ್ಲಿ ಓಡಾಡಿ ಗಮನಿಸದ ಹೊರತು ನನ್ನ ಮಾತುಗಳು ಸ್ಪಷ್ಟವಾಗದು.

ದೇವದಾಸರಿಗೆ ಅರ್ಕಾವತಿ ಎಸ್ಟೇಟ್ ಮಾರಿದ ಮೇಲೆ ಬೆಂಗಳೂರಿನ ಅಂಚಿನಲ್ಲೆ ಒಂದು 45 ಎಕರೆಯಷ್ಟು ಚಿಕ್ಕದಾದ ಎಸ್ಟೇಟ್ ಮಾಡುವ ಇರಾದೆ ಇತ್ತು. ಆಗಾಗ್ಗೆ ರಜಾದಿನಗಳಲ್ಲಿ ನನ್ನನ್ನು ಜೊತೆ ಮಾಡಿಕೊಂಡು ಅಂಥ ಜಮೀನಿಗಾಗಿ ಹುಡುಕಾಟ ಮಾಡುವಾಗ ವೈಟ್‌ಫೀಲ್ಡ್‌ನಲ್ಲಿ ಮಾರ್ಕೋಸ್ ಎಂಬುವನ ಪರಿಚಯವಾಯ್ತು.

ಮಾರ್ಕೋಸನ ನೇರ ಮಾತುಗಳು, ಬೈಬಲ್‌ನ ಉದ್ಧರಣೆ ದೇವದಾಸರಿಗೆ ತುಂಬಾ ಹಿಡಿಸಿತು. ಜೊತೆಯಾದಾಗೆಲ್ಲ ಅವನಿಂದ ಯುದ್ಧಗಳ ಬಗ್ಗೆ ಹೇಳಿಸುತ್ತಿದ್ದರು; ಆ ವಿವರಗಳಿಂದ ನಾನು ರೋಮಾಂಚನಗೊಳ್ಳುತ್ತಿದ್ದೆ.

ರಣರಂಗದಲ್ಲಿ ಕಾದಾಡಿದವನಿಂದಲೇ ಆ ವಿವರಗಳನ್ನು ಕೇಳುತ್ತಿದ್ದಂತೆ ನನ್ನಲ್ಲಿ ಅವನೊಬ್ಬ ಗ್ಲಾಡಿಯೇಟರ್ ಆಗಿಬಿಟ್ಟ.

ಮಾರ್ಕೋಸ್‌ನೊಂದಿಗೆ ಅವನ ಪುಟ್ಟ ಎಸ್ಟೇಟ್‌ನಲ್ಲಿ ಮಾತನಾಡುವಾಗೆಲ್ಲ ಅವನ ಮಗ ಡೇವಿಸ್ ನಮ್ಮ ಎದುರೆ ಓಡಾಡಿದರೂ ಮಾರ್ಕೋಸ್ ಮಾತ್ರ ಅವನನ್ನು ನಮಗೆ ಪರಿಚಯಿಸುವ ಪ್ರಯತ್ನ ಎಂದೂ ಮಾಡಲಿಲ್ಲ. ಅವನನ್ನು ದೃಷ್ಟಿಸಿಯೂ ನೋಡುತ್ತಿರಲಿಲ್ಲ. ಸೊಸೆ ಮತ್ತು ಮೊಮ್ಮಗನನ್ನು ಚೆನ್ನಾಗಿ ಮಾತನಾಡಿಸುತ್ತಿದ್ದ. ಮಗನನ್ನು ಪರಿಚಯಸದ್ದು ನಮಗೆ ಆಶ್ಚರ್ಯ–ಜಿಜ್ಞಾಸೆ ಹುಟ್ಟಿಸಿತ್ತು. ಡೇವಿಸ್ ಮನೆ ಕೂಗಳತೆ ದೂರದಲ್ಲಿತ್ತು. ಮಾರ್ಕೋಸ್‌ನಂಥ ಸುಸಂಸ್ಕೃತ ತನ್ನ ಮಗನನ್ನು ನಮಗೆ ಪರಿಚಯಸದ್ದನ್ನು ಒಂದು ದಿನ ದೇವದಾಸರೊಂದಿಗೆ ಪ್ರಸ್ತಾಪಿಸಿದಾಗ, ಅವರು "ಅದನ್ನೆಲ್ಲಾ ನಾವು ಮನಸ್ಸಿಗೆ ನಾಟಿಸ್ಕೊಬಾರದ್ರೀ, ಅವನೇ ಪರಿಚಯಸ್ದೆ ಸುಮ್ನಿರೋವಾಗ ಬಲವಾದ ಕಾರಣ ಇರ್ಬೇಕೂಂತ ತಿಳ್ಕೊಳಾನ. ಪ್ರತಿ ಸಂಸಾರದಲ್ಲೂ ಒಡಕು ಇರ್‍ತಾವೆ. ಯಾರೂ ಅದನ್ನೆಲ್ಲಾ ಬಯಲು ಮಾಡೋದಿಲ್ಲ. ನಾವೂ ಅಂಥ ಪ್ರಯತ್ನ ಮಾಡ್ಬಾರ್ದು" ಎಂದು ಮಾರ್ಮಿಕವಾಗಿ ಹೇಳಿ ನನ್ನ ಮಾತುಗಳನ್ನು ಮೊಟಕುಗೊಳಿಸಿದರು.

ಆದರೂ ನನ್ನ ಪತ್ತೇದಾರಿ ಬುದ್ಧಿ ನಿದ್ದೆ ಮಾಡಲು ನಿರಾಕರಿಸಿತು.

ವೈಟ್‌ಫೀಲ್ಡ್‌ಗೆ ಅಂಟಿಕೊಂಡಂತೆ ಇರುವ ಹಳ್ಳಿಗಳಲ್ಲಿ ಸೀಗೇಹಳ್ಳಿಯೂ ಒಂದು. ನನ್ನ ಪರಿಚಯದವರಾದ ಸ್ಕೂಲ್ ಮಾಸ್ತರ್ ಅರಸಪ್ಪನಿಗೆ ಕೆಲವು ಪುಂಡರಿಂದ ಜೀವಭಯವಿತ್ತು. ನನ್ನ ಸಹಾಯ ಯಾಚಿಸಿದರು. ಸ್ಥಳೀಯ ಪೊಲೀಸ್ ಆಫೀಸರ್ ಗೋವಿಂದರಾಜು ನನಗೆ ಪರಿಚಯವಿರಲಿಲ್ಲ. ಅವರ ಆಪ್ತನೂ ನನ್ನ ಕಕ್ಷಿದಾರನೂ ಆದ ರಮಣರೆಡ್ಡಿಗೆ ಈ ವಿಷಯದಲ್ಲಿ ತಲೆ ಹಾಕುವಂತೆ ಒಪ್ಪಿಸಿದೆ. ಸ್ಕೂಲ್ ಮಾಸ್ತರಿಂದ ಹಣ ಕಸಿದು ಪೊಲೀಸರ ಕೈಲಿ ಒಂದು ಭಾಗವನ್ನಿಟ್ಟು ಪುಂಡರ ಬೆನ್ನು ಹತ್ತುವಂತೆ ಮಾಡಿ ಪರಿಸ್ಥಿತಿಯನ್ನು ತಹಬಂದಿಗೆ ತಂದ. ಕಂಟಕದಿಂದ ಪಾರಾದ ಮಾಸ್ತರು ನನಗೆ ತುಂಬಾ ಹತ್ತಿರವಾದರು. ಇದೇ ಮಾಸ್ತರು ಮಾರ್ಕೋಸ್‌ಗೆ ವ್ಯವಹಾರದಲ್ಲಿ ನೆರವಾಗುತ್ತಿದ್ದರು. ಎಸ್ಟೇಟಿನ ತೆಂಗಿನತೋಟದ ಕಾರುಬಾರೆಲ್ಲ ಮಾಸ್ತರದೆ. ಇದೆಲ್ಲಾ ನನಗೆ ತಿಳಿದಾಗ ನಿದ್ದೆ ಮಾಡಲು ನಿರಾಕರಿಸುತ್ತಿದ್ದ ನನ್ನ ಪತ್ತೇದಾರಿ ಬುದ್ಧಿ ಎದ್ದುಕೂತಿತು.

ಮಾರ್ಕೋಸ್ ತನ್ನ ಮಗನನ್ನು ನಮಗೆ ಪರಿಚಯಿಸದೇ ಇದ್ದ ಅವನ ಮಗ ಹತ್ತಿರದ ಪ್ರತ್ಯೇಕ ಮನೆಯೊಂದರಲ್ಲಿ ವಾಸವಿರುವುದು ಏಕೆಂದು ಮಾಸ್ತರಿಗೆ

ಪ್ರಶ್ನಿಸಿದೆ. ಅವರು ಹಿಂದುಮುಂದು ನೋಡದೆ, "ಜೀವನ ಎಷ್ಟು ವಿಚಿತ್ರ ಸಾರ್. ಅಪ್ಪ ಒಂದು ದಿಕ್ಕಾದರೆ ಮಗನದು ಮತ್ತೊಂದು; ಮಾರ್ಕೋಸ್ ಹೇತು ಬರೋ ಜಾಗದಲ್ಲಿ ಮಗನಿಗೆ ಕೂತು ಬರೋ ಯೋಗ್ಯತೆ ಇಲ್ಲಾ ಸಾರ್" ಎಂದಾಗ ನಾನು ಸ್ವಲ್ಪ ಬಿಡಿಸಿ ಹೇಳಲು ಪೀಡಿಸಿದೆ. ಅದನ್ನು ಹೇಳಲು ಒಪ್ಪಿದ ಮಾಸ್ತರು ಮೊದಲು ಹೇಳಿದ್ದು, "ಮಾರ್ಕೋಸ್ ಕೇವಲ ಒಬ್ಬ ಸಿಪಾಯಿ ಅಲ್ಲ, ಅವನೊಬ್ಬ ಸೇಂಟ್ ಸಾರ್; ಯಾರು ಬೇಕಾದರು ಅವನ ಪಾದ ಮುಟ್ಟಬಹುದು ಅಂಥಾ ಸೇಂಟ್!" ಎಂದು ವೈಟ್‌ಫೀಲ್ಡ್‌ನ ಅವನ ಎಸ್ಟೇಟ್ ಕಡೆಗೆ ಕೈಮುಗಿದರು. ಮಾತು ಮುಂದುವರೆಸಿದ ಮಾಸ್ತರು ಮಾರ್ಕೋಸ್‌ನನ್ನು ಕುರಿತು ಪೂಜ್ಯಭಾವದಿಂದಲೂ, ಅವನ ಮಗನನ್ನು ಕುರಿತು ಆಕ್ರೋಶದಿಂದಲೂ ಹೇಳಿದ್ದು :

ಮಾರ್ಕೋಸ್ ನಿವೃತ್ತ ಸೇನಾಧಿಕಾರಿ. ಅವರಪ್ಪನೂ ಸೇನೆಯಲ್ಲಿದ್ದು ಯುದ್ಧವೊಂದರಲ್ಲಿ ಮಡಿದ. ವೈಟ್ ಫೀಲ್ಡ್‌ನಲ್ಲಿ ಅವರಪ್ಪ ಸಂಪಾದಿಸಿದ ಜಮೀನನ್ನು ಅಭಿವೃದ್ಧಿಗೊಳಿಸಿ ಒಂದು ಸೊಗಸಾದ ಎಸ್ಟೇಟ್ ಆಗಿ ರೂಪಾಂತರಿಸಿದ. ಡೇವಿಸ್ ಒಬ್ಬನೇ ಮಗ. ಜೀವನದ ಬಹುಭಾಗವನ್ನು ಸೇನೆಯಲ್ಲಿ ಕಳೆದ ಮಾರ್ಕೋಸ್ ತನ್ನ ಮಗನನ್ನು ರೂಪಿಸಲು ಗಮನಹರಿಸಲಾಗಲಿಲ್ಲ. ಅದನ್ನು ತನ್ನ ಹೆಂಡತಿ ಮಾಡುವಳೆಂದು ನಂಬಿದ. ಅವನ ಹೆಂಡತಿ ಕ್ಲಾರಾ ದೈವಭಕ್ತೆ. ಚರ್ಚ್‌ಗೆ ಹೋಗಿ ಬರುವುದು ಬಿಟ್ಟರೆ ಅವಳ ದಿನಚರಿಯಲ್ಲಿ ಇನ್ನೊಂದಕ್ಕೆ ಮಹತ್ವವಿರಲಿಲ್ಲ. ಕ್ರಿಸ್ತನನ್ನು ಹಚ್ಚಿಕೊಂಡ ಅವಳು, ಮಗನ ವಿಷಯ ಕ್ರಿಸ್ತನಿಗೆ ಸಂಬಂಧಿಸಿದ್ದೆಂದು ನಿಜಕ್ಕೂ ಭಾವಿಸಿದ್ದಳು. ಅದರಂತೆಯೇ ನಡೆದುಕೊಂಡಳು. ಅದದ್ದೇನು– ಡೇವಿಸ್ ಸಿನಿಮಾ ಹುಚ್ಚು ಹಿಡಿಸಿಕೊಂಡ. ಚಿತ್ರ ನಟರೇ ಅವನಿಗೆ ಮಹಾನ್ ಆದರ್ಶ ಪುರುಷರಾದರು. ಅವರನ್ನು ವಿವಿಧ ರೂಪದಲ್ಲಿ ವರ್ಣಿಸುವುದು; ಅವರ ಬಗ್ಗೆಯೇ ಅನುದಿನ ಚರ್ಚೆ; ನಟನಟಿಯರ ಅರೆನಗ್ನ ಫೋಟೋಗಳನ್ನು ತಂದು ಮನೆಯಲ್ಲೆಲ್ಲಾ ತೂಗುಹಾಕಿ ನೋಡುತ್ತ ಖುಷಿಪಡುವುದು ಮಾಡಿದ. ಸಿನಿಮಾನೇ ಸತ್ಯ, ನಿತ್ಯ ಎಂದು ಭಾವಿಸಿದ; ಅದೇ ಅವನ ದಾರಿದೀಪ ಎಂದು ಪರಿಗಣಿಸಿದ. ಅದೇ ಗುಂಗಿನಲ್ಲಿ ಪಾರ್ಕು ಬೀದಿ ಸುತ್ತಿ ವರ್ಷಗಳನ್ನೇ ಕಳೆದ.

ಮಾರ್ಕೋಸ್ ಸೇನೆಯಿಂದ ನಿವೃತ್ತಿ ಹೊಂದಿ ವೈಟ್‌ಫೀಲ್ಡ್‌ಗೆ ಜೀವಿತದ ಉಳಿದ ಭಾಗವನ್ನು ಸವೆಸಲು ಬರುವ ವೇಳೆಗೆ, ಡೇವಿಸ್ ಸಿನಿಮಾದ ಆಚಾರ ವಿಚಾರಗಳನ್ನೆಲ್ಲಾ ಮೈಗೂಡಿಸಿಕೊಂಡಿದ್ದ. ಉದ್ರೇಕದಿಂದ, ಸೊಕ್ಕಿನಿಂದ ವರ್ತಿಸುತ್ತಿದ್ದ. ಒಟ್ಟಿನಲ್ಲಿ ಸರ್ವಘಾತಕನಂತೆ ರೂಪಿತನಾಗಿದ್ದ.

ಮಾರ್ಕೋಸ್ ಮಗನ ಸ್ಥಿತಿಯನ್ನು ಕಂಡು ಯಾರನ್ನೂ ದೂಷಿಸಲಿಲ್ಲ. ದಂಡಿನಲ್ಲಿದ್ದನಾದರೂ ವಿಧಿಯನ್ನು ನಂಬಿದವನು. ಕ್ರಿಸ್ತಶಾಸ್ತ್ರವನ್ನು ಬುದ್ಧಿ ಬಂದಾಗಿನಿಂದ ಚಾಚೂ ತಪ್ಪದೆ ಕಟ್ಟುನಿಟ್ಟಾಗಿ ಅನುಸರಿಸಿದವನು.

ತಂದೆ-ಮಗನ ಮನೋಧರ್ಮ ಬಿಚ್ಚಿಟ್ಟ ಸ್ಕೂಲ್ ಮಾಸ್ತರ್ ಗದ್ಗಿದಿತರಾಗಿ, "ಸಾರ್, ಮಾರ್ಕೋಸ್ ಮತ್ತು ಅವನ ಹೆಂಡತಿ ಕ್ಲಾರಾ ಮಾಡಿದ ದೊಡ್ಡ ತಪ್ಪು ಆ ಉಡಾಳ ಮಗನಿಗೆ ಮುಗ್ಧೆ ರೋಸ್‌ಮೇರಿಯನ್ನು ತಂದು ಮದುವೆ ಮಾಡಿದ್ದು. ಮದುವೆ ಮಾಡಿದರೆ ಮಗ ಪರಿವರ್ತನೆಯಾಗಬಹುದೆಂದು ಭಾವಿಸಿದ ಅವರು ಹಾಗಾಗದ್ದನ್ನು ಕಂಡು ಭ್ರಮನಿರಸನಗೊಂಡರು" ಎಂದರು ತಮ್ಮ ಹಣೆಯನ್ನು ಕೈಯಿಂದ ಚಚ್ಚಿಕೊಳ್ಳುತ್ತ. ನನ್ನನ್ನು ನೆಟ್ಟಕಣ್ಣುಗಳಿಂದ ನೋಡುತ್ತ "ಡೇವಿಸ್ ಮೋಜಿಗಾಗಿ ಹಣ ಬೇಕಾದಾಗೆಲ್ಲಾ ಹೆಂಡತಿಯನ್ನು ಮಾನಸಿಕವಾಗಿ ಹಿಂಸಿಸಲು ಕಲಿತ. ಅವಳ ತವರುಮನೆಯಿಂದ ಹಣ ತರಿಸಿಕೊಂಡ. ತವರಿನವರು ತಡವರಿಸಿದಾಗ ದೈಹಿಕವಾಗಿ ರೋಸ್‌ಮೇರಿಯನ್ನು ಹಿಂಸಿಸಲೂ ಹೇಸದವನಾದ" ಎಂದು ಕೈಗಳನ್ನು ಕಣ್ಣುಗಳ ಸಹಾಯಕ್ಕೆ ಹಚ್ಚಿದರು.

ಮುಂದೆ ಡೇವಿಸ್ ತಂದೆ ತಾಯಿಯ ಜೊತೆ ವಾಸಿಸಲು ಇಷ್ಟಪಡದಾದ. ಮುಗ್ಧ ಸೊಸೆ, ಮೊಮ್ಮಗನ ಸಲುವಾಗಿ ಮಾರ್ಕೋಸ್ ಹತ್ತಿರವೆ ಒಂದು ಮನೆ ಏರ್ಪಾಡು ಮಾಡಿದರು.

ಮಾರ್ಕೋಸ್ ಮಗನನ್ನು ನಮಗೆ ಪರಿಚಯಿಸಲು ಮುಂದಾಗದ್ದಕ್ಕೆ ಇನ್ನೂ ಹೆಚ್ಚು ಕಾರಣ ತಿಳಿಯಬೇಕೆನ್ನಿಸಲಿಲ್ಲ. ನನ್ನ ಪತ್ತೇದಾರಿ ಬುದ್ಧಿ ತಣಿಯಿತು. ಇದೆಲ್ಲವನ್ನು ದೇವದಾಸ್‌ರಿಗೆ ತಿಳಿಸಿದರೆ "ನಿನ್ನದು ಅತಿಯಾಯ್ತು" ಎಂದೇ ಅಂದಾರೆಂದು ನನ್ನೊಳಗೇ ಇರಿಸಿಕೊಂಡಿದ್ದೆ.

ಬೆಂಗಳೂರಿನಲ್ಲಿ ಕೇಸುಗಳನ್ನು ನೋಡಿಕೊಳ್ಳಲು ನನ್ನನ್ನು ಬಿಟ್ಟು ದೇವದಾಸರು ಹಾಸನದಲ್ಲಿ ಕೊಲೆ ಕೇಸೊಂದರಲ್ಲಿ ಭಾಗವಹಿಸುತ್ತಿದ್ದರು. ಸ್ಕೂಲ್ ಮಾಸ್ತರ್ ಅರಸಪ್ಪ ಕೆಲವರ ಜೊತೆಗೂಡಿ ಬಂದು ನನಗೆ ಕೋರ್ಟಿನಿಂದ ಹೊರಬರಲು ಸನ್ನೆ ಮಾಡಿದರು. ಅವರೆಲ್ಲ ಬೆವರಿದ್ದರು. ನಿತ್ಯಕರ್ಮಗಳನ್ನು ಬದಿಗಿರಿಸಿ ಬಂದಂತಿತ್ತು. ನಾನು ಎದುರಾದ ಕೂಡಲೆ ಮಾಸ್ತರು "ಸಾರ್ ರೋಸ್‌ಮೇರಿ ಕೊಲೆಯಾದಳು, ಡೇವಿಸ್ ಪೊಲೀಸ್ ಕಸ್ಟಡಿಯಲ್ಲಿದ್ದಾನೆ, ಏನಾದರೂ ಮಾಡಿ" ಎಂದು ಗೋಗರೆದರು. ನನಗೆ ಒಂದು ಕ್ಷಣ ಇದೆಲ್ಲ ವಿಚಿತ್ರ ಎನಿಸಿತು. ಮಾಸ್ತರು ಡೇವಿಸ್‌ನ ನೀಚತನ ಬಲ್ಲವರು. ರೋಸ್‌ಮೇರಿ ಕೊಲೆಗೆ ಸಮರ್ಥನೆ ಇರಲಾರದು. ಮಾರ್ಕೋಸ್ ಬಂದಿಲ್ಲ..... ಎಂದೆಲ್ಲ ನನ್ನ ಮನಸ್ಸು ಲೆಕ್ಕಾಚಾರ ಮಾಡುತ್ತಿರುವಾಗ,

"ವೃತ್ತಿಧರ್ಮ" ಅವೆಲ್ಲವನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕುವಂತೆ ಪುಸಲಾಯಿಸಿತು. ದೇವದಾಸರಿಗೆ ಫೋನ್ ಮಾಡಿ ವಿಷಯ ತಿಳಿಸಲು "ನೀವು ಕೂಡಲೆ ಡೇವಿಸ್‌ಗೆ ವಕಾಲತ್ತು ಹಾಕಿ, ಬಾಕಿ ವಿಷಯ ಆಮೇಲೆ" ಎಂದೇಬಿಟ್ಟರು.

ಕೇಸಿನ ಸಿದ್ಧತೆಗಳನ್ನೆಲ್ಲ ನಾನೇ ಮಾಡಿದೆ. ದೇವದಾಸರಿಗೆ ಬ್ರೀಫ್ ಮಾಡುವಾಗ "ಮಾರ್ಕೋಸ್ ಈ ಕೇಸಿನಲ್ಲಿ ಬಹುಮುಖ್ಯ ಸಾಕ್ಷಿ. He can make or mar the case" ಎಂದು ಉದ್ಗರಿಸುತ್ತಲೇ ಇದ್ದರು. ಕೇಸು ವಿಚಾರಣೆಗೆ ಬಂದರೂ ಮಾರ್ಕೋಸ್ ಮಗನ ಬಗ್ಗೆ ಆಸಕ್ತಿ ತೋರಿಸಲಿಲ್ಲ; ನಮ್ಮ ಆಫೀಸ್ ಕಡೆ ಬರಲೇ ಇಲ್ಲ. ಅವನು ಬಂದೇ ಬರುತ್ತಾನೆಂದು ತಿಳಿದಿದ್ದ ದೇವದಾಸರ ಲೆಕ್ಕಾಚಾರ ತಲೆಕೆಳಗಾಗಿ ಚಡಪಡಿಸಿದರು.

ಮಾರ್ಕೋಸ್ ಕೋರ್ಟಿಗೆ ಬರಲು ಎರಡು ವಾರಗಳಿದ್ದಂತೆ ಸ್ಕೂಲ್ ಮಾಸ್ತರ್ ಆಫೀಸಿಗೆ ಬಂದು "ಮಾರ್ಕೋಸ್ ನಿಜವನ್ನೇ ಹೇಳುತ್ತಾನಂತೆ; ಕ್ರಿಸ್ತನಿಗೆ ಅವಮಾನ ಮಾಡಲಾರನಂತೆ; ಕೋರ್ಟಿಗೆ ಬಂದು ಹೇಳಿಕೆ ಕೊಡುವವರೆಗೆ ಯಾರನ್ನೂ ಭೇಟಿಯಾಗುವುದಿಲ್ಲವಂತೆ" ಎಂದು ತಮಗೆ ತಿಳಿದುಬಂದಿದ್ದ ಖಚಿತ ವರ್ತಮಾನವನ್ನು ದೇವದಾಸರ ಮುಂದಿರಿಸಿದರು.

ಇದನ್ನು ಕೇಳಿ ದೇವದಾಸರು ನನ್ನನ್ನು ನೋಡಿ, "ನೋಡ್ರಿ ಹನುಮಂತ್ರಾಯ, ಇದರಲ್ಲಿ ಪಾಟಿ ಸವಾಲು ಏನೆಲ್ಲ ಮಾಡ್ಬೇಕೂಂತ ಹೇಳ್ತೇನೆ. ನೀವೇ ರೆಡಿಯಾಗಿ ಮಾಡ್ರಿ, ನಾನಿದ್ದೇನೆ" ಎಂದರು. ಸುಮ್ಮನಿದ್ದು ಒಪ್ಪಿಗೆ ಸೂಚಿಸಿದೆ. ನನ್ನ ಒಪ್ಪಿಗೆಗೆ ಒಂದು ಹೊಳಹು ಗೋಚರಿಸಿದ್ದು ಕಾರಣವಾಗಿತ್ತು. ಅದನ್ನೇ ನಂಬಿದೆ. ಮಾಸ್ತರರ ಪೂರ್ಣ ಬೆಂಬಲ, ಸಹಕಾರ ನನಗಿತ್ತು.

ಮಾರ್ಕೋಸ್ ಕೋರ್ಟಿನಲ್ಲಿ ಹೇಳಿಕೆ ಕೊಡುವ ದಿನ ಪ್ರಾರಂಭದಲ್ಲೆ ಪಬ್ಲಿಕ್ ಪ್ರಾಸಿಕ್ಯೂಟರ್ ಒಂದು ಅರ್ಜಿಯನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್, ಸೆಕ್ಷನ್ 319ರ ಪ್ರಕಾರ ಜಡ್ಜ್‌ಗೆ ಕೊಟ್ಟರು. ಅದು ಕೋರ್ಟ್ ಮತ್ತು ಪ್ರಾಸಿಕ್ಯೂಟರ್ ಮಧ್ಯದ ವಿಷಯವಾಗಿತ್ತು.

ಡೇವಿಸ್ ಹೆಂಡತಿಯನ್ನು ಕೊಲೆ ಮಾಡಿ ರಿವಾಲ್ವರ್ ಸಮೇತ ಕಾರ್ ಶೆಡ್ಡಿನಿಂದ ಹೊರಬರುವಾಗ ಮಾರ್ಕೋಸ್ ಒಳಹೊಕ್ಕ. ಸೊಸೆ ಇನ್ನೂ ಉಸಿರಾಡುತ್ತಿದ್ದಳು. ಕೂಡಲೇ ಅವಳನ್ನು ತನ್ನ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಮಾರ್ಗ ಮಧ್ಯೆ ಪ್ರಾಣ ಬಿಟ್ಟಳು. ಶವವನ್ನು ಹಿಂದಕ್ಕೆ ಸಾಗಿಸಿದ. ಪೊಲೀಸರಿಗೆ ಸಾವಿನ ವಿಷಯ ಮಾರನೇ ದಿನ ಗಾಳಿಸುದ್ದಿಯಾಗಿ ತಲುಪಿತು. ಇದೆಲ್ಲವನ್ನು ಮಾರ್ಕೋಸ್ ಪೊಲೀಸರಿಗೆ ತಿಳಿಸದೆ ಒಂದು ಸಾಮಾನ್ಯ ಅಫೆನ್ಸ್ (small

offence) ಮಾಡಿದ್ದ. ಪ್ರಾಸಿಕ್ಯೂಟರ್ ವಾದ ಕೋರ್ಟಿಗೆ ಒಪ್ಪಿತವಾಯಿತು. ಮಾರ್ಕೋಸ್ ವಿಚಾರಣೆ ಎದುರಿಸಲು ಮಗನ ಪಕ್ಕ ನಿಲ್ಲಬೇಕಾಯಿತು.

ಮಾರ್ಕೋಸ್ ಲಾಯರನ್ನು ನೇಮಕ ಮಾಡಿಕೊಳ್ಳಲಿಲ್ಲ. ಸರ್ಕಾರ ಅವನಿಗೆ ಸ್ಟಾಂಡಿಂಗ್ ಕೌನ್ಸಿಲ್ ನೇಮಕ ಮಾಡಿತು.

ವಿಚಾರಣೆ ಮತ್ತೆ ಪ್ರಾರಂಭವಾಯಿತು. ದೇವದಾಸರು ಬಂದರು.

ವಿಚಾರಣೆ ಮುಗಿದು ತಂದೆ ಮಗ ಎಲ್ಲ ಆರೋಪಗಳಿಂದ ಬಿಡುಗಡೆಯಾದರು.

ತೀರ್ಮಾನವನ್ನು ಜಡ್ಜ್ ಓದಿದ ಕೂಡಲೆ ದೇವದಾಸರು ಕೋರ್ಟಿನಿಂದ ಹೊರಬಂದು ಪಬ್ಲಿಕ್ ಪ್ರಾಸಿಕ್ಯೂಟರ್‌ನನ್ನು ಎದುರು ನೋಡುತ್ತಿದ್ದರು. ಅವರನ್ನು ಕಂಡಕೂಡಲೇ "ಮಿಸ್ಟರ್ ಪ್ರಾಸಿಕ್ಯೂಟರ್, ನೀವು ಮಾರ್ಕೋಸ್‌ನನ್ನು ಆರೋಪಿ ಮಾಡ್ಬೇಕೂಂತ ಅರ್ಜಿ ಹಾಕಿದ್ರಲ್ಲಾ ಅದರ ಹಿನ್ನೆಲೆ ಏನೂಂತ ಕೇಳ್ಬೇಕೂಂತ ಇಷ್ಟು ದಿನ ಕಾದೆ. ಕೇಸ್ ಇವತ್ತು ಮುಗ್ದಿದೆ; ದಯವಿಟ್ಟು ಹೇಳ್ತೀರಾ" ಎಂದು ಕುತೂಹಲದಿಂದ ಕೇಳಿಕೊಂಡರು.

ಪ್ರಾಸಿಕ್ಯೂಟರ್ "ಅದೆಲ್ಲ ದೊಡ್ಡ ಮಾತು ಬೇಡಿ ಸಾರ್. ಈಗ ನಿಮ್ಮಲ್ಲಿ ತಿಳಿಸೋದಿಕ್ಕೆ ಏನೂ ಅಭ್ಯಂತರ ಇಲ್ಲ" ಎಂದು ಹೇಳಿ ಅಲ್ಲಿದ್ದ ಪೊಲೀಸರನ್ನು ದೂರ ಹೋಗಲು ಹೇಳಿದರು. ಪೊಲೀಸರು ಹೊರಟ ಮೇಲೆ "ಸಾಹೇಬ್ರೆ ಯಾರೋ ಬಂದು ಮೂಗರ್ಜಿಯನ್ನು ನನ್ನ ಮತ್ತು ತನಿಖಾಧಿಕಾರಿ ವಿರುದ್ಧ ಸರ್ಕಾರಕ್ಕೆ ಕೊಟ್ಟರು–ಅದರಲ್ಲಿ ನಾವು ಕಂಠಪೂರ್ತಿ ಲಂಚ ತಿಂದು, ಮಾರ್ಕೋಸ್‌ನನ್ನು ಆರೋಪಿ ಮಾಡ್ದೆ ಕೈಬಿಟ್ಟಿದ್ದೇವೆ ಅನ್ನೋ ಆರೋಪ ಮಾಡಿದ್ರು. ಪ್ರಾಸಿಕ್ಯೂಷನ್ ಡಿಪಾರ್ಟ್‌ಮೆಂಟ್‌ನವರು ಚಾರ್ಜ್‌ಷೀಟನ್ನು ಪಡಕೊಂಡು ಪರಿಶೀಲಿಸಿ ನಮಗೆ ಅವನನ್ನು ಒಂದು ಚಿಕ್ಕ ಅಫೆನ್ಸ್‌ಗೆ ಮಾಡೀಂತ ಡೈರೆಕ್ಷನ್ ಕೊಟ್ಟರು, ಮಾಡ್ದೆ" ಎಂದು ವಿನಯದಿಂದ ಹೇಳಿಬಿಟ್ಟರು.

ಮಾರನೆ ದಿನ ಡೇವಿಸ್, ಅವನ ತಾಯಿ, ಪರಿಚಾರಿಕೆಯರಾದ ಮುಟ್ಟಚ್ಚ ಮತ್ತು ಧನವತ್ ಅಲ್ಲದೆ ಅರಸಪ್ಪ ಮಾಸ್ತರು ಮತ್ತಿತರರು ದೇವದಾಸರನ್ನು ಅಭಿನಂದಿಸಲು ಬಂದರು. ಮಾರ್ಕೋಸ್ ಬರಲಿಲ್ಲ.

ಡೇವಿಸ್ ತಾಯಿ ಅಭಿನಂದಿಸಲು ಮುಂದಾದಾಗ ದೇವದಾಸರು "ನೀವು ಅಭಿನಂದಿಸಬೇಕಾದ್ದು ನನ್ನನ್ನಲ್ಲ ಆ ಮೂಗರ್ಜಿ ಮಾಲೀಕನನ್ನ" ಎಂದು ವಿಲಕ್ಷಣವಾಗಿ ನನ್ನ ಕಡೆ ನೋಡಿದಾಗ ನಾನು ನಿರ್ವಿಕಾರವಾಗಿ ನಿಲ್ಲಲು ಎಲ್ಲಾ

ಪ್ರಯತ್ನ ಮಾಡಿದೆ. ಕ್ಲಾರಾ ದೇವದಾಸರಿಗೆ "You are really a tall person, Sir" ಎಂದಾಗ ಅವರು "I look tall because I stand on the shoulders of others" ಎಂದು ನಮ್ಮೆಲ್ಲರ ಕಡೆ ನೋಡಿದರು.

ಜಯಕ್ಕೆ ಹೆಚ್ಚು ಗಮನಕೊಟ್ಟು ನನ್ನಿಂದ ಅದು ಎಂತಹ ಕೆಲಸ ಮಾಡಿಸಿತೆಂದು ಈಗಲೂ ಇರಿತದ ಭಾವನೆಗೆ ಒಳಗಾಗಿದ್ದೇನೆ.

60

ಕಾನೂನು ನ್ಯಾಯಕ್ಕೊಂದು ಅಪವಾದ

ಬೆಂಗಳೂರು ನಗರದಲ್ಲಿ 1970ರ ಹಿಂದು ಮುಂದಿನ ದಶಕಗಳಲ್ಲಿ ಗಟ್ಟಿ ಹೆಸರು ಮಾಡಿದ ವಕೀಲರು ನಾಲ್ಕೋ-ಐದೋ. ಅವರಲ್ಲಿ ಕನಕಸಭಾಪತಿ ಒಬ್ಬರು. ಇವರು ಹೇಳಿಕೇಳಿ ಸಿವಿಲ್ ಲಾಯರು. ಆದರೆ ರೇಪ್ ಕೇಸುಗಳನ್ನು ನಡೆಸುವುದರಲ್ಲಿ ಅಸಾಧಾರಣರು. ದೇವದಾಸ್, ಶಾಮಣ್ಣ, ರಾಮಚಂದ್ರರಾವ್, ಮೋಟಯ್ಯ ಮುಂತಾದ ಕ್ರಿಮಿನಲ್ ಲಾಯರುಗಳು ರೇಪ್ ಕೇಸು ನಡೆಸುವ ವಿಚಾರದಲ್ಲಿ ಕನಕಸಭಾಪತಿಗೆ ಸಮಾನರಾಗಿ ಕಾಣಲಿಲ್ಲ. ಸಿವಿಲ್ ಲಾಯರ್‌ಗಳಲ್ಲಿ ಇಂತಹ ವಿಶೇಷ ಸಾಮರ್ಥ್ಯವಿದ್ದುದು ಅವರೊಬ್ಬರಲ್ಲಿ ಮಾತ್ರ. ಘಟಾನುಘಟಿ ಕ್ರಿಮಿನಲ್ ಲಾಯರುಗಳು ಕೈಗೆತ್ತಿಕೊಳ್ಳಲು ಹಿಂದುಮುಂದು ನೋಡಿದ ರೇಪ್ ಕೇಸುಗಳಲ್ಲಿ ಕನಕಸಭಾಪತಿ ಆರೋಪಿ ಪರ ನಿಂತು ಪಾರುಮಾಡಿದ್ದನ್ನು ಅವರ ಅಭಿಮಾನಿ ವಕೀಲರು ದಂತಕತೆಗಳನ್ನಾಗಿಸಿದರು. ನಾನು ಲಾ ಓದುವಾಗ ಮತ್ತು ದೇವದಾಸರ ಜ್ಯೂನಿಯರಾಗಿ ಕನಕಸಭಾಪತಿಯವರು ನಡೆಸಿದ ಹಲವಾರು ರೇಪ್ ಕೇಸುಗಳನ್ನು ಗಮನಿಸಿಕೊಂಡೆ. ರೇಪ್ ಕೇಸ್ ನಡೆಸುವ ವಕೀಲ ಕೊಲೆ

ಕೇಸಿಗಿಂತ ವಿಭಿನ್ನ ಆಯಾಮಗಳಲ್ಲಿ ಕಸರತ್ತು ನಡೆಸಬೇಕು. ಅತ್ಯಾಚಾರಕ್ಕೆ ಒಳಗಾದ ವ್ಯಕ್ತಿ ಸಾಕ್ಷಿ ಹೇಳಲು ಬದುಕುಳಿದಿರುತ್ತಾಳೆ. ಕಾನೂನು ಕ್ರಮವೂ, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ವ್ಯಾಖ್ಯಾನವೂ ಅತ್ಯಾಚಾರಕ್ಕೆ ಒಳಗಾದವಳಿಗೆ ಅನುಕೂಲಕರವಾಗಿವೆ. ಇದಕ್ಕೆ ಮುಖ್ಯ ಕಾರಣ ಕೊಲೆ ಕೇಸಿನಲ್ಲಿ ಆರೋಪಿಗೆ ದೊರಕುವ ಸಮ್ಮರ್ಥನೆಗಳು ರೇಪ್ ಕೇಸಿನಲ್ಲಿ ದೊರಕುವುದಿಲ್ಲ.

ವೈಯಾಲಿಕಾವಲ್ ಬಡಾವಣೆಯ ಮಹೇಶಯ್ಯ ಎಸ್ಟೇಟ್ ಏಜನ್ಸಿಯಲ್ಲಿ ದೊಡ್ಡ ಹೆಸರು. ಅವನಿಗೆ ಮೂರು ಗಂಡುಮಕ್ಕಳು; ಹೆಣ್ಣುಮಕ್ಕಳಿಲ್ಲ. ಮೊದಲ ಇಬ್ಬರು ಡಾಕ್ಟರುಗಳಾಗಿ ಅಮೆರಿಕಾ ಪಾಲಾದರು. ಕೊನೆಯ ಮಗ ಉಮಾಕಾಂತ ಬಿ.ಇ. ಪದವೀಧರ. ಅಪ್ಪನ ಬಹು ಇಷ್ಟದ ಮಗ. ಅವನಿಗೂ ಅಣ್ಣಂದಿರನ್ನು ಹಿಂಬಾಲಿಸುವ ಆಸೆ. ಆದರೆ ಅಪ್ಪನ ಮಾತು ಮೀರಲಾಗದೆ ಎಸ್ಟೇಟ್ ಏಜನ್ಸಿ ಮುಂದುವರೆಸುವ ದೀಕ್ಷೆ ಪಡೆದ. ಒಂದೆರಡು ವರ್ಷಗಳಲ್ಲೇ ಅಪ್ಪನಿಗೆ ಅಚ್ಚರಿಯಾಗುವಂತೆ ಪಳಗಿಕೊಂಡ. ಮಗನ ಏಳಿಗೆಯಿಂದ ತೃಪ್ತನಾದ ಮಹೇಶಯ್ಯ ಎಲ್ಲವನ್ನೂ ಅವನಿಗೆ ಒಪ್ಪಿಸಿ ನಿರಾಳಗೊಂಡ.

ನನ್ನ ಕಾಲೇಜು ದಿನಗಳಲ್ಲಿ ಹಾಸ್ಟೆಲ್‌ಮೇಟ್ ಆಗಿದ್ದ ಕೃಷ್ಣಮೂರ್ತಿ ನನ್ನನ್ನು ಕಾಣಲು ಬಂದು ದೇವದಾಸ್‌ರೊಂದಿಗೆ ಮಾತನಾಡುತ್ತಿದ್ದ. ನಾನು ಬಂದ ಕೂಡಲೇ "ನೋಡ್ರಿ ಹನುಮಂತ್ರಾಯ, ಇವ್ರು ನಿಮ್ಮನ್ನ ಕಾಣೋದಿಕ್ಕೆ ಬಂದಿದ್ದಾರೆ, ಏನೋ ನಿಮ್ಮಲ್ಲೇ ಹೇಳಬೇಕಾದ್ದಿದೆಯಂತೆ, ನೀವೇ ವಿಚಾರಿಸ್ರಿ" ಎಂದು ದೇವದಾಸರು ಹೇಳಿದಾಗ ಅದು ಮಾಮೂಲು ಧ್ವನಿಯಾಗಿರಲಿಲ್ಲ. ನಾನು ಬರುವುದರೊಳಗಾಗಿ ಸೀನಿಯರ್ ವಿಷಯ ತಿಳಿಯಲು ಪ್ರಯತ್ನಿಸಿ ಆಗದೆ ಹಾಗೆ ಧ್ವನಿ ವ್ಯತ್ಯಾಸಗೊಂಡಿತ್ತು. ಆಫೀಸಿಗೆ ಬರುವ ಕಕ್ಷಿದಾರರು ಅವರೊಂದಿಗೇ ಮಾತನಾಡಿ ಮುಂದುವರಿಯಬೇಕು; ಬೇರೊಬ್ಬರನ್ನು ಕುರಿತು ಮಾತಾಡಿದರೆ ಕುಪಿತರಾಗುತ್ತಿದ್ದರು. ಸೀನಿಯರ್ ವಕೀಲರಲ್ಲಿ ಇಂತಹ ವಕ್ರಬುದ್ಧಿಗೆ ಹೊರತಾದವರು ವಿರಳ.

ಕೃಷ್ಣಮೂರ್ತಿ ಮಹೇಶಯ್ಯನ ತಮ್ಮನ ಮಗ. ಅವನಿಗೆ ನಾನೆಂದರೆ ಸಮರ್ಥನೆಂಬ ಭ್ರಮೆ. ದೇವದಾಸರು ಅವನನ್ನು ನನ್ನ ಕಡೆ ತಿರುಗುವಂತೆ ಹೇಳಿದ ಮೇಲೆ, ಅವನು ನನಗೆ ತಿಳಿಸಿದ ವಿಷಯ ಗಾಬರಿ ಉಂಟುಮಾಡಿತು. ರೇಪ್ ಕೇಸೊಂದನ್ನು ತಂದಿದ್ದ. ದೇವದಾಸ್‌ರ ಆಫೀಸಿಗೆ ನಾನು ಜ್ಯೂನಿಯರ್ ಆಗಿ ಬಂದ ಏಳು ವರ್ಷಗಳಲ್ಲಿ ಮೊದಲ ಬಾರಿಗೆ ರೇಪ್ ಕೇಸೊಂದು ಬಾಗಿಲು ತಟ್ಟಿತ್ತು; ವಿಚಿತ್ರವೆಂಬಂತೆ ನನ್ನ ಮೂಲಕ. ನನ್ನ ಸೀನಿಯರ್ ನಾನು ಕಂಡಂತೆ

ರೇಪ್ ಕೇಸ್ ನಡೆಸಿರಲಿಲ್ಲವಾದ ಕಾರಣ ಇನ್ನೊಬ್ಬರನ್ನು ನೋಡಲು ಯೋಚಿಸಿದೆ. ಹಾಗಾದರೆ ಸೀನಿಯರ್ ನನ್ನನ್ನು ತಪ್ಪಾಗಿ ತಿಳಿಯುವುದಲ್ಲದೆ, ನನಗೆ ರೇಪ್ ಕೇಸೊಂದರಲ್ಲಿ ವಕೀಲನಾಗುವ ಅವಕಾಶದಿಂದ ವಂಚಿತನಾಗುವುದಿತ್ತು; ಸೀನಿಯರ್‌ರನ್ನು ಒಳಪಡಿಸಿಕೊಂಡು, ಹೆಚ್ಚು ಕೆಲಸ ಮಾಡಲು ಮನಸ್ಸು ಸಿದ್ಧಗೊಂಡಿತು.

ಏಕೋ ಏನೋ ಕೃಷ್ಣಮೂರ್ತಿಯಿಂದ ಕೇಸಿನ ವಿವರ ಪಡೆಯುವಾಗಲೇ ನನ್ನ ಬುದ್ಧಿ, ಮನಸ್ಸು ಅದರ ಪರವಾದವು. ಫಿರ್ಯಾದಿಗಾಗಿ ಅನುಕಂಪಿಸಿದೆ; ಸಹಾಯ ಹಸ್ತ ಚಾಚಬೇಕೆನ್ನುವಷ್ಟು ಕದಲಿದೆ.

ಕೇಸಿನ ಪೂರ್ಣ ವಿವರವನ್ನು ದೇವದಾಸರಿಗೆ ಕೊಟ್ಟೆ. ಮಹೇಶಯ್ಯನ ಸಂಪ್ರದಾಯಪಾಲಕ ನಿಲುವಿನಿಂದ ಆಗಲಿರುವ ದುರಂತ ಕುರಿತು ಉಸಿರುಕಟ್ಟಿ ಹೇಳಿದೆ. ಅದನ್ನು ತಪ್ಪಿಸಲು ನಾನು ಕೃಷ್ಣಮೂರ್ತಿ ಮಾಡಬೇಕೆಂದಿರುವುದನ್ನು ತಿಳಿಸಿದೆ. ಅವರು ನನ್ನ ಮಾತಿಗೆ ಬೆಲೆ ಕಟ್ಟದೆ, "ಅಷ್ಟು ದೂರ ಯೋಚಿಸ್ಬೇಡ್ರೀ ಹನುಮಂತ್ರಾಯ, ಆ ಉಸಾಬರಿಯೆಲ್ಲಾ ನಮ್ಗೆ ಏಕ್ರಿ; ಸ್ಮಶಾನ ಕಾಯೋನು ಸ್ಮಶಾನಕ್ಕೆ ತಂದ ಹೆಣಗಳ ಕುರ್ತು ಗೋಳಾಡ್ತಾನೇನ್ರೀ?; ಕಣ್ಣೀರಿಡ್ತಾನೇನ್ರೀ?; ಕೇಸ್ ನಡ್ಸೋ ವಕೀಲ ಏಕ್ರೀ ಅಳಬೇಕು?; You are too officious" ಎಂದು ಕಸಿವಿಸಿಗೊಂಡು ಹೇಳಿದರು.

ನನ್ನಲ್ಲಿ ಸೀನಿಯರ್ ಮಾತುಗಳು ಉತ್ಸಾಹ ತುಂಬುವ ಶಕ್ತಿ ಕಳೆದುಕೊಂಡಿದ್ದವು. ನನಗೆ ಈ ರೇಪ್ ಕೇಸ್ ಒಂದು ಕ್ರಿಮಿನಲ್ ಕೇಸಾಗಿ ಕಾಣದೆ human problem ಆಗಿ ಕಂಡಿತ್ತು. ನ್ಯಾಯಾಲಯದ ತೀರ್ಮಾನವೆಂದರೆ ಕಾನೂನು ಕಟ್ಟಳೆ ತಂತ್ರಗಾರಿಕೆಗಳಿಂದ ಮೂಡಿಬರುವುದು; ಜೀವದ್ರವ್ಯದ ಸೋಂಕಿನ ನಿರಾಕರಣೆ ಇರುತ್ತೆ. ಈ ನಿರಾಕರಣೆಯಿಂದ ತೀರ್ಪು ಪರಿಪೂರ್ಣವಾಗಿರದೆಂದು ನನ್ನ ಮನಸ್ಸನ್ನು ಕಾಡಿಸಿತು. ನನಗೆ ಹೊಳೆದ ಪ್ರಯೋಗ ಮಾಡಲು ಮನಸ್ಸು ಮುನ್ನುಗ್ಗಿತು.

ಮಹಿಳಾ ಸಂಘಟನೆಗಳು ಫಿರ್ಯಾದಿಗೆ ಸಹಾಯ ಮಾಡಲು ಮುಂದಾದವು. ಕೆಲವು ಕಾರ್ಯಕರ್ತೆಯರು ದೇವದಾಸರಿಗೆ ಗೊತ್ತಾಗದಂತೆ ನನ್ನೊಂದಿಗೆ ಸಂಪರ್ಕವಿರಿಸಿಕೊಂಡರು. ಅವರಲ್ಲಿ ಬೆಂಗಳೂರು ಲೇಬರ್ ಯೂನಿಯನ್ ಅಧ್ಯಕ್ಷೆ ನಂದನಾ ರೆಡ್ಡಿ (ಸೋಷಲಿಸ್ಟ್ ನಾಯಕಿ ದಿವಂಗತ ಸ್ನೇಹಲತಾ ರೆಡ್ಡಿ ಮತ್ತು ಖ್ಯಾತ ಸಿನಿಮಾ ನಿರ್ದೇಶಕ ಪಟ್ಟಾಭಿರಾಮರೆಡ್ಡಿ ಮಗಳು) ಬಹುಮುಖ್ಯವಾದವಳು. ಫಿರ್ಯಾದಿ ಪಾಳೆಯದಲ್ಲಿ ಆಗುತ್ತಿದ್ದ ಬೆಳವಣಿಗೆಗಳು ಅವರಿಂದ ನನಗೆ ಗೊತ್ತಾಗುತ್ತಿದ್ದವು. ಕೇಸಿನಲ್ಲಿ ಅವರು ವಹಿಸುತ್ತಿದ್ದ ಕಾಳಜಿಯನ್ನು

ನೋಡುತ್ತಿದ್ದ ನನ್ನಲ್ಲಿ ಸಂಕಲ್ಪ ಮೂಡಿಸಿತು–ದೇವದಾಸರ ಆಫೀಸನ್ನು ಬಿಡುವಂತಾದರೂ ನನ್ನ ಪ್ರಯೋಗ ಮುಂದುವರೆಸುವುದೆಂದು.

ಕೇಸು ವಿಚಾರಣೆಗೆ ಹತ್ತಿರವಾಗುತ್ತಿದ್ದಂತೆ ವಿಚಾರಣಾಧೀನ ಬಂಧನದಲ್ಲಿದ್ದ ಮಹೇಶಯ್ಯನ ಮಗ ಉಮಾಕಾಂತನನ್ನು ಕಂಡು ಕೆಲವು ಮುಖ್ಯ ಮಾಹಿತಿ ತರಲು ದೇವದಾಸರು ನನಗೆ ಹೇಳಿದರು. ಇದಕ್ಕೆ ಮೊದಲೇ ಅನಧಿಕೃತವಾಗಿ ಅವನನ್ನು ಕಂಡು ಅಮೆರಿಕಾದಲ್ಲಿರುವ ಅಣ್ಣಂದಿರಿಗೆ ಕಾಗದ ಬರೆಸಿದ್ದನ್ನು ನಾನು ಸೀನಿಯರ್‌ಗೆ ತಿಳಿಸಲಿಲ್ಲ. ಅವನ ಅಣ್ಣಂದಿರ ವಿಷಯದಲ್ಲಿ ತಲೆ ಹಾಕಿದರೆ ಮಹೇಶಯ್ಯ ತಹಬಂದಿಗೆ ಬಂದು ಒಪ್ಪಿಗೆ ಕೊಡುವ ಸಾಧ್ಯತೆಯ ಸುಳಿವು ಸಿಕ್ಕಿದ್ದು ಆರೋಪಿಯಿಂದ ಕಾಗದ ಬರೆಸಲು ಕಾರಣವಾಗಿತ್ತು.

ವಿಚಾರಣೆ ಪ್ರಾರಂಭಿಸಲು ಕೆಲವು ದಿನಗಳಿದ್ದಂತೆ ಉಮಾಕಾಂತನ ಅಣ್ಣಂದಿರು ಬೆಂಗಳೂರು ತಲುಪಿದರು. ಜೈಲಿನಲ್ಲಿದ್ದ ತಮ್ಮನನ್ನು ಕಂಡು ಕೂಲಂಕಷವಾಗಿ ಕೇಸಿನ ವಿವರಗಳನ್ನು ಅವನಿಂದ ಪಡೆದು ಹೆದರದಿರಲು ಹೇಳಿಬಂದರು.

ನಂತರದ ಅವರ ಭೇಟಿ ನಮ್ಮೊಂದಿಗೆ–ಕೃಷ್ಣಮೂರ್ತಿ, ನಂದನಾ ರೆಡ್ಡಿ ಮತ್ತು ನಾನು. ಸಮಾಲೋಚನೆಯಲ್ಲಿ ಅವರು ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು, ರಾಜಿಯಲ್ಲಿ ಆಸಕ್ತಿ ಇರುವುದು ಗೋಚರಿಸಿತು. ಅದನ್ನು ಬೆಂಬಲಿಸುವಂತೆ ಕಾನೂನಿನ ವಿಚಾರಗಳನ್ನೂ ಅದರಾಚೆಯ ವಿಚಾರಗಳನ್ನೂ ಅವರಿಗೆ ಸಾದ್ಯಂತವಾಗಿ ತಿಳಿಸಿದೆವು. ಕೊನೆಗೆ ಉಮಾಕಾಂತ ಮಾಲತಿಯನ್ನು ಮದುವೆಯಾಗುವುದಾದರೆ ಮಾತ್ರ ಸಮಸ್ಯೆಗೆ ಪರಿಹಾರ ಒದಗಿಸುವ ಸೂತ್ರವಾಗುವುದೆಂದು ಒಪ್ಪಿಸಿದೆವು. ಅವರ ಒಪ್ಪಿಗೆ ನಮ್ಮನ್ನು ಇನ್ನಷ್ಟು ಮುನ್ನುಗ್ಗಿಸಿತು.

ಮಹೇಶಯ್ಯ ಮತ್ತು ಅಮೆರಿಕಾದಿಂದ ಬಂದ ಮಕ್ಕಳ ಮಧ್ಯೆ ಮಾತಿನ ಚಕಮಕಿಯಾಗಿ; ಆರೋಪ ಪ್ರತ್ಯಾರೋಪಗಳ ಸುರಿಮಳೆಯಾಗಿ; ತಪ್ಪು ಸರಿಗಳ ತಲಸ್ಪರ್ಶಿ ಚರ್ಚೆಯಾಗಿ; ತಪ್ಪಿನ ಸಾಧನೆಯಿಂದ ಎದುರಾಗುವ ದುರಂತಗಳ ಅರಿವು ತೇಲಿ ಬಂದಾಗ– ಮಹೇಶಯ್ಯ ಒಲ್ಲದ ಮನಸ್ಸಿನಿಂದ ತಣ್ಣಗಾದ.

ಕೃಷ್ಣಮೂರ್ತಿ ಮತ್ತು ನಾನು ಇದಕ್ಕಾಗಿ ಕಾಯುತ್ತಿದ್ದೆವು. ಬೆಳವಣಿಗೆಗಳ ವಾಸನೆ ದೇವದಾಸರಿಗೆ ಬಡಿಯದಂತೆ ಕಟ್ಟೆಚ್ಚರ ವಹಿಸಿದೆವು.

ವಿಚಾರಣೆಯ ಹಿಂದಿನ ದಿನ ಮಹೇಶಯ್ಯ ಅಮೆರಿಕಾದಿಂದ ಬಂದಿದ್ದ ಮಕ್ಕಳು, ಮಾಲತಿ ತಂದೆ ಬಾಗೂರಯ್ಯ, ಒಂದೆರಡು well meaning persons ಗಳನ್ನು ಸೇರಿಸಿ ಅಗತ್ಯಕ್ಕೆ ತಕ್ಕಂತೆ ಕಾಗದ ಪತ್ರಗಳನ್ನು ತಯಾರಿಸಿದೆವು.

ಆ ಪತ್ರಗಳಿಗೆ force of law ಇದೆ ಎನ್ನುವಂತೆ ಸಿವಿಲ್ ಲಾಯರ್ ಅಲ್ಲದ ನಾನು ಒಂದು ಅದ್ಭುತ ಚಿತ್ರಣ ಕೊಟ್ಟು ಅವರು ನಂಬುವಂತೆ ಮಾಡಿದೆ.

ವಿಚಾರಣೆಯಲ್ಲಿ ಮಾಲತಿ ನಮ್ಮೆಲ್ಲರ ಆಣತಿಯಂತೆ ಆಂಗಿಕವಾಗಿ ಸಾಕ್ಷ್ಯ ನುಡಿದಳು. ಅವಳ ಸಾಕ್ಷ್ಯವನ್ನು ಒಬ್ಬ ಆಂಗಿಕ ತಜ್ಞ ಕೋರ್ಟಿಗೆ ಅರ್ಥ ವಿವರಣೆ ನೀಡಿದ. ಅವಳ ಸಾಕ್ಷ್ಯದಲ್ಲಿ ಒಂದೇ ಒಂದು ವಾಕ್ಯ ಸತ್ಯವಾಗಿದ್ದರೂ ಉಮಾಕಾಂತನಿಗೆ ಶಿಕ್ಷೆಯಾಗುತ್ತಿತ್ತು.

ಉಮಾಕಾಂತ ಆರೋಪಮುಕ್ತನಾಗಿ ಅವನ ಅಣ್ಣಂದಿರು ಅಮೆರಿಕಾಕ್ಕೆ ಹಿಂತಿರುಗುವ ಮುನ್ನವೇ ಅವನ ಮತ್ತು ಮಾಲತಿ ಮದುವೆ ಜರುಗಿತು.

ನಮ್ಮ ಪ್ರಯತ್ನಗಳೆಲ್ಲ ಬಿದ್ದುಹೋಗಿ, ಮಾಲತಿ ಸತ್ಯವನ್ನೇ ಸಾಕ್ಷ್ಯವಾಗಿಸಿದ್ದರೆ ಅದು ಹೀಗಿರುತ್ತಿತ್ತು:

"ಉಮಾಕಾಂತನ ಎಸ್ಟೇಟ್ ಏಜನ್ಸಿ ಆಫೀಸು ಇದ್ದ ಕಟ್ಟಡದ ಒಂದು ಭಾಗದಲ್ಲಿ ನನ್ನ ತಂದೆ, ತಾಯಿ, ಇಬ್ಬರು ಚಿಕ್ಕ ತಮ್ಮಂದಿರು ವಾಸವಿದ್ದೆವು. ನಾನು ಮೂಗಿ (ಕಿವುಡಿಯಲ್ಲ). ಉಮಾಕಾಂತ ನನ್ನನ್ನು ಯಾವಾಗಲೂ ಎವೆಯಿಕ್ಕದೆ ನೋಡುತ್ತಿದ್ದ. ದಿನಗಳದಂತೆ ನನ್ನ ಆಂಗಿಕ ಭಾಷೆಯನ್ನು ಚೆನ್ನಾಗಿ ಅರಿತ. ಎಷ್ಟು ಅಭ್ಯಾಸವಾಗಿ ಹೋಯಿತೆಂದರೆ, ಅವನಪ್ಪನನ್ನೂ ಒಮ್ಮೊಮ್ಮೆ ಕೈ ಸನ್ನೆ ಬಾಯಿಸನ್ನೆಯಿಂದಲೇ ಮಾತನಾಡಿಸುತ್ತಿದ್ದ. ಅರ್ಥವಾಗದ ಅಪ್ಪ ತಬ್ಬಿಬ್ಬಾಗುತ್ತಿದ್ದನ್ನು ನಾನು ಬಲ್ಲೆ.

ವಿಚಿತ್ರ ಅಂದ್ರೆ ಅವನಪ್ಪ ಇದ್ದಾಗಲೆಲ್ಲಾ ನನ್ನ ಕಡೆ ಬೆನ್ನು ಮಾಡಿ ನೋಡಿಯೇ ಇಲ್ಲ, ಗೊತ್ತೇ ಎಲ್ಲ ಎನ್ನುವಂತೆ ನಟಿಸುತ್ತಿದ್ದ. ಅದು ಅವನು ಅವರಪ್ಪನನ್ನು ಗೌರವಿಸುವ ವರಸೆಯೆಂದು ನಾನು ಭಾವಿಸಿದೆ. ನಾನು ಚೆಲುವೆ ಮಾತ್ರ ಅಲ್ಲ ಜಾಣೆ, ಬುದ್ಧಿವಂತೆಯೆಂದು ಹೇಳ್ತಾನೇ ಇದ್ದ. ನಾನು ಒಬ್ಬ ಮೂಗಿ ಅನ್ನೋ ಊನ ಮರೆಯುವಂತೆ ಪ್ರೀತಿಸಿದ. ನಾವು ತುಂಬಾ ಹತ್ತಿರಾದೆವು–ಎಷ್ಟೊಂದು ಹತ್ತಿರವೆಂದರೆ ಮನಸ್ಸನ್ನೂ, ಮೈಯನ್ನೂ ಬಿಗಿಯುವಷ್ಟು. ಮದುವೆ ಮಾತ್ರ ಮುಂದೋಗುತ್ತಿತ್ತು. ಅವರಪ್ಪನನ್ನು ಒಪ್ಪಿಸಿ ಮದುವೆಯಾಗೋದೂಂತ ಹೇಳಿದ್ದ. ಎಲ್ಲಕ್ಕೂ ಅಪ್ಪನನ್ನು ತೋರಿಸೋದು ಅವನ ಜಾಯಮಾನವಾಗಿತ್ತು.

ಇದೆಲ್ಲ ಒಂದಿನ ಅವನ ಮನೆಯವರಿಗೂ, ನನ್ನ ಮನೆಯವರಿಗೂ ಗೊತ್ತಾಯಿತು. ಅವನಪ್ಪ ಮದುವೆಗೆ ಬಿಲ್‌ಕುಲ್ ಒಪ್ಪಲಿಲ್ಲ. ಪ್ರೀತಿಸಿ, ಮದುವೆಯಾಗುವ ನಂಬಿಕೆ ಹುಟ್ಟಿಸಿ ಅಂಗಸಂಗ ಮಾಡಿದ ಉಮಾಕಾಂತ ಕೇವಲ

ಮೋಸಗಾರನಲ್ಲ ಅವನೊಬ್ಬ ಅತ್ಯಾಚಾರಿ ಎಂದು ಒಂದು ಫಿರ್ಯಾದನ್ನು ತಯಾರು ಮಾಡಿದ್ದರು. ಅದನ್ನು ಪೊಲೀಸರು ಒಪ್ಪಿ ತನಿಖೆ ಮಾಡಿದರು.

ಈ ಕೇಸು ಮುಗಿದ ಮೇಲೆ ದೇವದಾಸರು ನನ್ನನ್ನು ಲಾಯರ್ ಕೆಲಸಕ್ಕಿಂತ ಬೇರೆ ಕೆಲಸಗಳಿಗೆ ಹೆಚ್ಚು ಫಿಟ್ ಎಂದು ಭಾವಿಸಿದಂತೆ ಕಂಡಿತು. ನನಗೆ ಅದರಿಂದ ಬೇಸರವಾಗಲಿಲ್ಲ.

ಉಮಾಕಾಂತ ಮತ್ತು ಮಾಲತಿ ಇಬ್ಬರೂ ಕೇಸಿನಲ್ಲಿ ಗೆಲುವು ಸಾಧಿಸಿದರು. ಅದು ನನಗೆ ದೇವದಾಸರ ಭಾವನೆಗೆ ಮೀರಿದ ತೃಪ್ತಿ-ಸಂತೋಷ ತಂದಿತು.

61

ನನ್ನ ಅಂತರಂಗ ಕಲಕಿದ ಮಥುರಾ ರೇಪ್ ಕೇಸ್

ಮಥುರಾ ಹದಿನೈದು ವರ್ಷ ವಯಸ್ಸಿನ ಬಾಲೆ. ಬಡಕುಟುಂಬ. ತಂದೆ, ತಾಯಿ ಎಲ್ಲ ಅವಳ ಅಣ್ಣನೇ ಆಗಿದ್ದ. ಅವಳ ಅಣ್ಣನ ಹೆಸರು ಗಾಮ. ಅಣ್ಣನ ಆಶ್ರಯದಲ್ಲಿದ್ದ ಮಥುರಾ ಸಹ ಕೆಲಸಕ್ಕೆ ಹೋಗುತ್ತಿದ್ದಳು. ಶ್ರೀಮತಿ ನುಷಿ ಎನ್ನುವವಳ ಗೃಹಕೈಗಾರಿಕೆಯಲ್ಲಿ ಮಥುರಾಗೆ ಕೆಲಸ ಸಿಕ್ಕಿತ್ತು. ಅಲ್ಲಿಯೇ ಮೇಲುಸ್ತುವಾರಿ ಕೆಲಸಕ್ಕಿದ್ದ ಅಶೋಕ ಎನ್ನುವವನೊಂದಿಗೆ ಮಥುರಾ ಪ್ರೇಮ ಶುರುವಾಯಿತು. ಒಂದು ದಿನ ಇದ್ದಕ್ಕಿದ್ದಂತೆ ಮಥುರಾ ಮತ್ತು ಅಶೋಕ್ ಕಣ್ಮರೆಯಾದರು.

ಮಥುರಾಳ ಅಣ್ಣ ಶ್ರೀಮತಿ ನುಷಿಯ ಗೃಹ ಕೈಗಾರಿಕಾ ಘಟಕಕ್ಕೆ ಬಂದು, "ನನ್ನ ತಂಗಿ ನಿಮ್ಮಲ್ಲಿಗೆ ಕೆಲಸಕ್ಕೆ ಬಂದವಳು ವಾಪಸು ಮನೆಗೆ ಬರಲೇ ಇಲ್ಲ" ಎಂದು ಚೀರಾಡಿದ. ಅದಕ್ಕೆ ನುಷಿ ಮತ್ತು ಆಕೆಯ ಗಂಡ ಇಬ್ಬರೂ ಕೋಪಗ್ರಸ್ತರಾಗಿ, "ನಾವು ಇಲ್ಲಿ ಉತ್ಪಾದನೆಗಾಗಿ ಕೈಗಾರಿಕೆ ಆರಂಭಿಸಿದ್ದೇವೆ. ನಿನ್ನ ತಂಗಿಯಂಥ ಹುಡುಗಿಯರು ಯಾರ ಹಿಂದಲೋ ಓಡಿಹೋಗದಂತೆ ಕಾವಲಿಡಲು ಸೆಕ್ಯುರಿಟಿ

ಏಜನ್ಸಿಯನ್ನು ಆರಂಭಿಸಿಲ್ಲ...." ಎಂದು ಕಪಾಳಕ್ಕೆ ಹೊಡೆದಂತೆ ಮಾತಾಡಿದರು. ಇದರಿಂದ ಗಾಮ ಕೆಂಡಾಮಂಡಲವಾದ. "ಹಾಂ, ನನ್ನ ತಂಗಿ ಯಾರ ಹಿಂದಲೋ ಓಡಿಹೋಗಿದ್ದಾಳೆಂದು ಹೇಳುತ್ತೀರೆಂದರೆ ನೀವೇ ಓಡಿಸಿ ಕಳಿಸಿರಬೇಕು. ಈಗಲೇ ನಾನು ಪೊಲೀಸ್ ಠಾಣೆಗೆ ಕಂಪ್ಲೇಂಟ್ ಕೊಟ್ಟು ನಿಮ್ಮನ್ನೆಲ್ಲ ಒಳಗೆ ಹಾಕಿಸುತ್ತೇನೆ ನೋಡುತ್ತಿರಿ. ಯಾರ ಬೆಂಬಲವೂ ಇರದ ಭಿಕಾರಿ ಏನೂ ಅಲ್ಲ ನಾನು. ನಮ್ಮ ಏರಿಯಾದ ಕಾರ್ಪೋರೇಟರ್ ಬೆಂಬಲ ನನಗಿದೆ....." ಎಂದು ಹಾರಾಡಿದ.

ಗಾಮನ ಹಾರಾಟಕ್ಕೆ ನುಷಿ ದಂಪತಿಗಳು ಸೊಪ್ಪು ಹಾಕಲಿಲ್ಲ. "ನೀನು ಇನ್ನೊಂದು ಕ್ಷಣ ಇಲ್ಲಿ ನಿಂತರೆ ಕತ್ತು ಹಿಡಿದು ಆಚೆ ತಳ್ಳಿಸುತ್ತೇವೆ. ಹುಷಾರ್ ! ಮೊದಲು ಜಾಗ ಖಾಲಿ ಮಾಡು. ಅದೇನು ಕೇಸ್ ಮಾಡಿಕೋತಿಯೋ ಮಾಡಿಕೋಹೋಗು" ಎಂದರು.

ನುಷಿಯ ಕೈಗಾರಿಕಾ ಘಟಕದಲ್ಲಿಯೇ ಕೆಲಸ ಮಾಡುತ್ತಿದ್ದ ಒಬ್ಬ ದೂರದ ಅಂತರದಿಂದ ಗಾಮನನ್ನು ಹಿಂಬಾಲಿಸಿ ಹೊರಟ. ಕೈಗಾರಿಕಾ ಘಟಕ ಕಣ್ಮರೆಯಾದ ಮೇಲೆ ಗಾಮನನ್ನು ಸಮೀಪಿಸಿದ. ಅವನ ಹೆಗಲ ಮೇಲೆ ಕೈಯಿಟ್ಟು, "ನಾನು ನಿನಗೆ ನಡೆದ ಸಂಗತಿ ಹೇಳುವೆ ಬಾ ಇಲ್ಲಿ" ಎಂದ.

ಇಬ್ಬರೂ ರಸ್ತೆ ಬಳಿಯ ಹೋಟೆಲ್ ಹೊಕ್ಕರು. ಚಹ ಕುಡಿಯುತ್ತ ಆ ವ್ಯಕ್ತಿ ಮಾತಾಡಲಾರಂಭಿಸಿದ. "ನೋಡು ನಿನ್ನ ತಂಗಿ ನನಗೆ ಮಗಳಿದ್ದಂತೆ. ನನಗೆ ಈ ಇಂಡಸ್ಟ್ರಿ ಹೊಸತೇನೂ ಅಲ್ಲ. ಈ ನುಷಿ ದಂಪತಿಗಳಿಗೆ ಇದೊಂದೇ ಕೈಗಾರಿಕೆ. ಇದೇ ಅವರಿಗೆ ದಿಕ್ಕು. ಇದೊಂದನ್ನೇ ನೆಚ್ಚಿಕೊಂಡು ಬದುಕಬೇಕು ಅವರು. ಆದರೆ ಇಡೀ ಮುಂಬೈನಲ್ಲಿರೋ ಇಂಥ ಇಂಡಸ್ಟ್ರಿಗಳೆಲ್ಲ ನನ್ನವು! ಯಾವಾಗ ಬೇಕೆಂದರೆ ಆಗ ನಾನು ಬದಲಾಯಿಸಬಹುದು. ಈ ನುಷಿಗೆ ಅನುಭವ ಸಾಲದು. ನನ್ನಂಥ ಎಕ್ಸ್‌ಪರ್ಟ್ ವರ್ಕರ್ ಮೇಲೇ ಕಣ್ಣು ಕೆಂಪಗೆ ಮಾಡ್ತಾಳೆ. ಮನಸ್ಸಿಲ್ಲದಿದ್ದರೆ ಕೆಲಸ ಬಿಟ್ಟು ಹೋಗು ಅಂತಾಳೆ.... ಎಲ್ಲ ಆ ಮೇಸ್ತ್ರಿ ಅಶೋಕನ ಕಿತಾಪತಿ. ಅವನ ಮಾತು ಕೇಳಿಕೊಂಡು ನನ್ನಂಥ ಒಳ್ಳೆ ಕೆಲಸಗಾರನನ್ನು ಕಳಕೊಳ್ಳೋಕೆ ರೆಡಿಯಾಗಿದ್ದಾಳೆ ಈ ನುಷಿ ಮುಂಡೆ.... ಉತ್ಪಾದನೆ ಮಾಡೋವ್ನು ನಾನೋ ಆ ಮೇಸ್ತ್ರೀಯೋ ಎನ್ನುವ ಅರಿವೂ ಅವಳಿಗಿಲ್ಲ. ಉತ್ಪಾದನೆ ಮಾಡೋಕೆ ತಲೆ ಬೇಕು; ಉಸ್ತುವಾರಿ ಮಾಡೋಕೆ ಅಲ್ಲ!...." ಎಂದು ಇನ್ನೂ ಮಾತು ಮುಂದುವರಿಸುತ್ತಿದ್ದವನನ್ನು ಗಾಮ ತಡೆದು "ಅದೇನು? ನನ್ನನ್ನ ಇಲ್ಲಿಗೆ ಕರೆತಂದು ನಿಮ್ಮ ಫ್ಯಾಕ್ಟರಿ ಕಥೆ ಹೇಳೋಕೆ ಶುರು ಮಾಡಿದೆಯಲ್ಲ?" ಎಂದ ಅಸಮಾಧಾನದ ಧ್ವನಿಯಲ್ಲಿ.

"ಇರು. ನಾನೂ ಅದೇ ವಿಷಯಕ್ಕೆ ಬರ್ತೀನೆ. ನೋಡು ಮೇಸ್ತ್ರಿ ಅಶೋಕ ಅಂತ ಹೇಳ್ದೆನಲ್ಲ, ಅವ್ನೇ ನಿನ್ನ ತಂಗೀನ ಓಡಿಸಿಕೊಂಡು ಹೋಗಿದ್ದು. ಪಾಪ ನಿನ್ನ ತಂಗಿ ಇನ್ನೂ ಮೈನರ್. ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಳ್ಳೋದೇ ಅಪರಾಧ. ಅಂಥದರಲ್ಲಿ ಅವಳಿಗೆ ರಕ್ಷಣೆ ನೀಡಿಲ್ಲ ಈ ನುಷಿ. ಆ ಮೇಸ್ತ್ರಿ ಹೇಳಿದ್ದಕ್ಕೆಲ್ಲ ಮಣೆ ಹಾಕ್ತಾಳೆ. ನಿನ್ನ ತಂಗೀನ ಅಶೋಕ ಬುಟ್ಟಿಗೆ ಹಾಕ್ಕೊಂಡಿರೋ ವಿಷಯ ನುಷಿಗೆ ಗೊತ್ತಿಲ್ಲದ್ದೇನೂ ಅಲ್ಲ. ಎಲ್ಲ ಅವಳ ಕಣ್‌ಮುಂದೇನೇ ನಡೆದದ್ದು. ನಿನ್ನ ತಂಗಿ ಮಥುರಾ ಎಂಥ ಸುಂದರಿ, ಮಹಾಲಕ್ಷ್ಮಿ ರೂಪ! ಅಂಥವಳನ್ನು ಹಾರಿಸ್ಕೊಂಡು ಹೋಗಿದ್ದಾನೆ ಈ ಖದೀಮ ಮೇಸ್ತ್ರಿ. ಲಗ್ನ ಆಗ್ತಾನೆ ಅನ್ನೋ ಗ್ಯಾರಂಟಿ ಏನು? ರೆಡ್‌ಲೈಟ್ ಏರಿಯಾಕ್ಕೆ ಮಾರಿಕೊಳ್ಳೋದಿಲ್ಲ ಅಂತ ಹೇಗೆ ನಂಬೋದು? ಅಶೋಕ ಮಹಾ ಧೂರ್ತ. ಖಂಡಿತ ಅವನಿಗೆ ಪ್ರೀತಿ, ಪ್ರೇಮಗಳು ಗೊತ್ತಿಲ್ಲ. ನಡಿ ನಮ್ಮ ಯೂನಿಯನ್ ಲೀಡರ್ ಅನ್ನ ಭೇಟಿಯಾಗೋಣ. ಈ ನುಷಿ ಮತ್ತು ಅಶೋಕ ಇಬ್ಬರೂ ಕಂಬಿ ಎಣಿಸಬೇಕು ಹಾಗ್ ಮಾಡೋಣ" ಎಂದು ಗಾಮನನ್ನು ಎಬ್ಬಿಸಿಕೊಂಡು ಹೊರಟ.

ಗಾಮ ನೀಡಿದ ಕಂಪ್ಲೇಂಟ್ ನೋಡಿ ಪೊಲೀಸರಿಗೆ ಖುಷಿಯಾಯಿತು. "ದೀಪಾವಳಿ ಹಬ್ಬದ ಖುಷಿ ಕೊಡಿ ಎಂದು ಹೋದರೆ ಆ ನುಷಿ, 'ನಿಮಗೆ ಸರ್ಕಾರ ಸಂಬಳ ಕೊಡೋದಿಲ್ವಾ?' ಎಂದು ಕೇಳಿದ್ದಳು. ಈಗ ಸರಿಯಾಗಿ ಸಿಕ್ಕಿದ್ದಾಳೆ; ಇಳಿಸೋಣ ಬಸ್ತೀ....." ಎಂದ ಕಾನ್‌ಸ್ಟೇಬಲ್ ಗಣಪತ್. ಈ ಕೇಸ್‌ನಲ್ಲಿ ಹೇಗೆ ನುಷಿಯಿಂದ ಹಣ ಕೀಳಬಹುದು ಎಂದು ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಸ್ಟೇಬಲ್‌ಗಳು ಸೇರಿ ಪ್ಲಾನ್ ಮಾಡಿದರು.

ಮೈನರ್ ಮಥುರಾಳನ್ನು ಅಶೋಕ ಕಿಡ್‌ನ್ಯಾಪ್ ಮಾಡಲು ಫ್ಯಾಕ್ಟರಿಯ ಮಾಲಕಿ ನುಷಿ ಮತ್ತು ಅವಳ ಗಂಡ ಸಹಾಯ ಮಾಡಿದ್ದಾರೆಂದು ಕೇಸ್ ದಾಖಲಿಸಿಕೊಂಡು, ಪ್ರಕರಣದ "ತನಿಖೆ" ಆರಂಭಿಸಿದರು.

ನುಷಿ ದಂಪತಿಗಳನ್ನು ಠಾಣೆಗೆ ಕರೆದೊಯ್ದು ಕೂರಿಸಿದ ವಿಷಯ ತಿಳಿದು ಮೇಸ್ತ್ರಿ ಅಶೋಕ ತನ್ನ ಪ್ರಿಯತಮೆ ಮಥುರಾಳೊಂದಿಗೆ ಠಾಣೆಗೆ ಹಾಜರಾದ. ಮಥುರಾ ಪೊಲೀಸ್‌ರಿಗೆ, "ನನ್ನ ಮಾಲಕಿ ಮತ್ತು ಆಕೆಯ ಗಂಡನ ತಪ್ಪೇನೂ ಇಲ್ಲ. ನಾವಿಬ್ಬರೂ ಪ್ರೀತಿಸಿದ್ದೇವೆ. ಮದುವೆಯಾಗುತ್ತೇವೆ. ಅವರನ್ನು ಬಿಟ್ಟುಬಿಡಿ...." ಎಂದಳು. ಅದಕ್ಕೆ ಕಾನ್‌ಸ್ಟೇಬಲ್ ಗಣಪತ್ "ಹಾಂ, ಅದ್ಹೇಗೆ ಆಗುತ್ತೆ? ಪ್ರೀತಿಸಿ ಮದುವೆಯಾಗಬೇಕಾದ್ರೆ ನಿನಗೆ ಹದಿನೆಂಟು ವಯಸ್ಸಾಗಬೇಕು. ಆದರೆ ನಿನಗೀಗ ಕೇವಲ ಹದಿನೈದು, ತಿಳೀತಾ ಮರಿ......!" ಎಂದು ಮೀಸೆಯಲ್ಲಿ ನಕ್ಕ.

ಇಷ್ಟೆಲ್ಲ ಆಗುವಾಗ್ಗೆ ರಾತ್ರಿ ಎಂಟೂವರೆ ಆಗಿಬಿಟ್ಟಿತು. ನುಷಿ ಮತ್ತು ಅವಳ ಗಂಡನನ್ನು ಲಾಕಪ್‌ನಲ್ಲಿ ಹಾಕಲಾಗಿತ್ತು. ಅಶೋಕನನ್ನೂ ಅದರೊಳಕ್ಕೆ ದಬ್ಬಿದರು. ಮಥುರಾಳನ್ನು ಮಾತ್ರ ರೈಟರ್ ತನ್ನ ಪಕ್ಕದ ಕುರ್ಚಿಯಲ್ಲಿ ಕೂರಿಸಿಕೊಂಡ. "ನಿನ್ನಣ್ಣನನ್ನ ಕರೆಯಲು ಕಳಿಸಿದ್ದೇವೆ. ಅವ್ನು ಬರೋವರೆಗೆ ನೀನು ಇಲ್ಲಿಯೇ ಕೂತಿರು" ಎಂದ.

ಊಟದ ಸಮಯವಾದ್ದರಿಂದ ಎಲ್ಲ ಚದುರಿದರು. ಠಾಣೆಯಲ್ಲಿ ಇಬ್ಬರೇ ಕಾನ್ಸ್‌ಟೇಬಲ್‌ಗಳಿದ್ದರು. ಕಾನ್‌ಸ್ಟೇಬಲ್ ಗಣಪತ್ ಇನ್ನೊಬ್ಬ ಕಾನ್ಸ್‌ಟೇಬಲ್‌ಗೆ ಕಣ್ಣು ಮಿಟುಕಿಸಿದ. ಅದಕ್ಕೆ ಅವ ಪ್ರತಿಯಾಗಿ ನಕ್ಕ. ಇವರಿಬ್ಬರ ಸಂಜ್ಞೆಗಳನ್ನು ಗಮನಿಸಿದ ಮಥುರಾಳಿಗೆ ನಡುಕ ಶುರುವಾಯಿತು. "ನಮ್ಮ ಅಣ್ಣ ಬರೋವರೆಗೆ ನನ್ನನ್ನೂ ಲಾಕಪ್‌ನಲ್ಲಿ ಹಾಕಿ, ಅಲ್ಲಿ ನಮ್ಮವರಿದ್ದಾರೆ. ಅವರೊಂದಿಗೆ ಮಾತಾಡುತ್ತಾ ಕಾಲ ಕಳೆಯುವೆ" ಎಂದಳು. "ನಿನ್ನ ಟೈಮ್‌ಪಾಸ್‌ಗೆ ಬೇರೆ ಪ್ರೋಗ್ರಾಮ್ ಹಾಕಿದೇವೆ. ತಾಳಿಕೋ" ಎಂದು ಅವರಿಬ್ಬರೂ ನಕ್ಕಾಗ ಮಥುರಾಳ ಕಣ್ಣುಗಳು ನೀರಾಡತೊಡಗಿದವು. "ಅಶೋಕ್, ಅಶೋಕ್, ನುಷಿ ದೀದೀ....." ಎಂದು ಕೂಗಿಕೊಂಡಳು.

"ಏಯ್ ಇದೇನು ಸೂಳೇಗೇರಿ ಅಂದ್ಕೊಂಡೆಯಾ? ನಿನ್ನ ಮಿಂಡನ್ನ ಕೂಗಿ ಕರೀತೀಯಾ? ವಯಸ್ಸು ಚಿಕ್ಕದಾದ್ರೂ ನಿಂಗೆ ತೀಟೆ ಜಾಸ್ತಿ ಅಲ್ವಾ? ಇದು ಪೊಲೀಸ್ ಠಾಣೆ. ಈಗ ಮೂವರ ಮೇಲೆ ಅಷ್ಟೇ ಕೇಸ್ ಹಾಕಿದೇವೆ. ನಾವು ಹೇಳಿದಂತೆ ನೀನು ಕೇಳದಿದ್ರೆ, ನಿನ್ನ ಮೇಲೂ ಕೇಸ್ ಹಾಕಿ ಕೈಗೆ ಬೇಡಿ ತೊಡಿಸಿಬಿಡ್ತೇವೆ ಹುಷಾರ್.....!" ಎಂದು ಗದರಿಸಿದ ಕಾನ್ಸ್‌ಟೇಬಲ್ ಗಣಪತ್.

ಗಣಪತ್ ಸನ್ನೆ ಮಾಡಿದ. ಇನ್ನೊಬ್ಬ ಕಾನ್ಸ್‌ಟೇಬಲ್ ಕೈಗೆ ಲಾಠಿ ತೆಗೆದುಕೊಂಡು ನಡೆದ. ಅಶೋಕನ ಮೈಮೇಲೆಲ್ಲ ಬಾಸುಂಡೆಗಳೇಳುವಂತೆ ಹೊಡೆದ. ಮೊಣಕಾಲು ಕೀಲಿಗೆ ಹೊಡೆದ. ಅಶೋಕನ ಚೀರಾಟ, ರಂಪಾಟಗಳಿಂದ ಮಥುರಾ ಹೌಹಾರಿದಳು.

ಅತ್ತ ಅಶೋಕನಿಗೆ ಲಾಠಿಯೇಟುಗಳು ಬೀಳತೊಡಗಿದ್ದೇ ಇತ್ತ ಗಣಪತ್, "ನೋಡಿದ್ಯಾ? ನಿನಗೂ ಹಾಗೇ ಹೊಡೀಬಹುದು ಗೊತ್ತಾ. ಏನೋ ಚಿಕ್ಕ ಹುಡುಗಿ ತಪ್ಪು ಮಾಡಿದೆ, ಕ್ಷಮಿಸೋಣ ಅಂತ ಸುಮ್ನೆ ಬಿಟ್ಟಿದೀವಿ...." ಎಂದ. ಮಥುರಾಗೆ ದಿಗ್ಮೂಢತೆ ಆವರಿಸಿಕೊಂಡುಬಿಟ್ಟಿತ್ತು. ಭಯ ಅವಳ ಹೊಟ್ಟೆಯೊಳಗೆ ಮಡುಗಟ್ಟಿ ಕೂತುಬಿಟ್ಟಿತ್ತು. ಬಾಗಿಲು ಕಿರಕ್ ಎಂದರೂ ಬೆಚ್ಚಿ ಬೀಳುವ ಸ್ಥಿತಿ ಅವಳದಾಗಿತ್ತು. ಅಶೋಕನಿಗೆ ಚಚ್ಚಿದ ದಣಿವನ್ನು ಆರಿಸಿಕೊಳ್ಳಲು ಕಾನ್ಸ್ ಟೇಬಲ್

ಹೊರಹೋದ. ರಮ್ ಅನ್ನು ಗುಟುಕರಿಸಿ ಗಣಪತ್‌ಗಾಗಿ ಸಹ ಒಂದು ಕ್ವಾರ್ಟರ್ ಬಾಟಲ್ ತಂದ. ನಂಜಿಕೊಳ್ಳಲು ಆಮ್ಲೆಟ್ ಕಟ್ಟಿಸಿಕೊಂಡ.

ಮಥುರಾಗೆ ಆಮ್ಲೆಟ್ ತಿನ್ನಲು ಹೇಳಿದಾಗ ತಿನ್ನದಿದ್ದರೆ ಎಲ್ಲಿ ತನಗೂ ಹೊಡೆಯುತ್ತಾರೆಂದು ಗಬಕ್ಕನೆ ಆಮ್ಲೆಟ್ ಅನ್ನು ಬಾಯಲ್ಲಿ ತುರುಕಿಕೊಂಡಳು. ಆದರೆ ಭಯ, ದಿಗಿಲುಗಳಿಂದ ಬಾಯೆಲ್ಲ ಒಣಗಿಹೋಗಿತ್ತು. ನೀರಾಡದೆ ಆಮ್ಲೆಟ್ ನುರಿಯಲಿಲ್ಲ. ಬಾಯಲ್ಲಿ ಆಮ್ಲೆಟ್ ತುಂಬಿಕೊಂಡು ಎರಡೂ ಗಲ್ಲಗಳನ್ನು ಉಬ್ಬಿಸಿಕೊಂಡು ಬಾವುಗಳಂತೆ ಕೂತಳು ಮಥುರಾ.

"ಏಯ್, ತಿನ್ನು, ಸರಿಯಾಗಿ ತಿನ್ನು. ಈಗ ನೀನು ನಗ್ತಾ ಇರ್‌ಬೇಕು, ನಮಗೆ ಜೋಷ್ ಬರುತ್ತೆ. ತೊಗೊ ನೀನೂ ಸ್ವಲ್ಪ ಕುಡೀತಿಯಾ?" ಎಂದ ಕಾನ್‌ಸ್ಟೇಬಲ್‌ನನ್ನು ತಡೆದ ಗಣಪತ್, "ಇವಳಿಗೆಲ್ಲಿ ಕುಡಿದು ಅಭ್ಯಾಸವಿರುತ್ತೆ, ಪಾಪದವಳು. ಬರೀ ನೀರು ಕುಡೀಲಿ" ಎಂದು ನೀರಿನ ಗ್ಲಾಸ್ ಅವಳ ಮುಂದೆ ಹಿಡಿದ. ಬಾಯಲ್ಲಿ ಆಮ್ಲೆಟ್ ತುರುಕಿಕೊಂಡೇ ನೀರು ಹೀರಿದ ಮಥುರಾಳನ್ನು ನೋಡಿ ಇಬ್ಬರೂ ಕಾನ್‌ಸ್ಟೇಬಲ್‌ಗಳು ಗಹಗಹಿಸಿ ನಗತೊಡಗಿದರು.

ಅಷ್ಟರಲ್ಲಿ ಗಣಪತ್ ಠಾಣೆಯ ಹಿತ್ತಿಲಿಗೆ ಹೋಗಿ ರಮ್ ಗುಟುಕರಿಸಿ ಒಳ ಬಂದು, "ಏಯ್ ನಿಮ್ಮಣ್ಣ ಬಂದಿದಾನೆ ನಡಿ" ಎಂದು ಅವಳನ್ನು ಠಾಣೆಯ ಹಿತ್ತಲಿನ ಮೂಲೆಯೊಂದರಲ್ಲಿದ್ದ ಕಕ್ಕಸಿನತ್ತ ಕರೆದೊಯ್ದ. ಹಿತ್ತಲಲ್ಲಿ ನಸುಗತ್ತಲಿತ್ತು. ಅಣ್ಣನಿಗಾಗಿ ಕಣ್ಣುಗಳು ಹುಡುಕುತ್ತಿದ್ದಂತೆಯೇ ಗಣಪತ್ ಬಾಹುಗಳು ಮಥುರಾಳನ್ನು ಮುತ್ತಿಕೊಂಡವು. ಹೆಬ್ಬಾವಿನ ಬಾಯಿಗೆ ಸಿಕ್ಕ ಕೋಳಿ ಮರಿಯಂತಾಗಿದ್ದಳು ಮಂಥುರಾ.

ಬಾಯಲ್ಲಿ ಆಮ್ಲೆಟ್ ಹಾಗೇ ಇತ್ತು; ಚೀರದಿರಲಿಎಂದು ಬಟ್ಟೆ ತುರುಕಿದ ಥರದಲ್ಲಿ ಒಮ್ಮೆಗೇ ಗಂಟಲಿಗೆ ಬಂದು ಏನೋ ಹಾದಂತಾಯಿತು ಮಥುರಾಗೆ ಆ ರಭಸಕ್ಕೆ ಬಾಯಲ್ಲಿದ್ದ ಆಮ್ಲೆಟ್ ಹೊರಕ್ಕೆ ಪುಟಿದು ಬಿತ್ತು ಆಂಟಿ ಎಂದ ಅವಳ ಬಾಯಿಗೆ ಗಣಪತ್‌ನ ಬಾಯಿ ಸೀಲು ಹಾಕಿತು.

ಈ ಅನಿರೀಕ್ಷಿತ ಲೈಂಗಿಕ ದಾಳಿಗೆ ತತ್ತರಿಸಿ ಹೋಗಿದ್ದಳು ಮಥುರಾ. ಗಣಪತ್ ತೊಡೆಗಳು ಸಡಲಿದ್ದು, ಇನ್ನೊಬ್ಬ ಕಾನ್‌ಸ್ಟೇಬಲ್ ತೊಡೆಗಳು ಬಂದು ಬೆಸೆದುಕೊಂಡಿದ್ದು ಇವೆಲ್ಲ ಅವಳ ಅಸ್ಪಷ್ಟ ಅರಿವಿನಲ್ಲೇ ನಡೆದವು. ಕೂಗಲು ಯತ್ನಿಸಿದಳು ಧ್ವನಿಯೇ ಹೊರಡಲಿಲ್ಲ; ಬಾಯಿಂದ ಬರೀ ನಿಶ್ಶಬ್ದ, ಉಸಿರೇ ಹೋಗತೊಡಗಿತು. ಕಣ್ಣಿಗೆ ಕತ್ತಲೆ ಆವರಿಸಿತು. ಬೇಡಿಯಂತೆ ಬೆಸೆದುಕೊಂಡಿದ್ದ ತೊಡೆ ತೋಳುಗಳು ಸಡಿಲಿದಾಗ ಮಥುರಾಗೆ ಉಸಿರಾಟ ಸರಾಗವಾಯಿತು.

ಮಥುರಾಳನ್ನು ಬಿಟ್ಟಿದ್ದ ವ್ಯಕ್ತಿ ಪ್ಯಾಂಟ್ ಏರಿಸಿಕೊಳ್ಳತೊಡಗಿದ. ಪೋಲೀಸ್ ಬೆಲ್ಟ್‌ನ ಸ್ಟೀಲ್ ಬಕ್ಕಲ್ ಮಿಂಚಿದ್ದನ್ನು ಮಥುರಾ ನೋಡಿದಳು. ಟಾಯ್ಲೆಟ್‌ಗೆ ಹಾಕಲೆಂದು ಮಣ್ಣಿನ ಗಡಿಗೆಯಲ್ಲಿ ನೀರಿತ್ತು. ಅದರತ್ತ ಕೈತೋರಿ "ಮುಖ ತೊಳೆದುಕೊಂಡು ಫ್ರೆಷ್ ಆಗಿ ಬಾ" ಎಂದು ಹೇಳಿ ಹೊರಟಿತು ಆ ವ್ಯಕ್ತಿ.

ಎದ್ದು ನಿಂತ ಮಥುರಾಳ ತೊಡೆಗಳು ಕಂಪಿಸುತ್ತಿದ್ದವು. ತೊಡೆ ಮೂಲದ ಗೆಜ್ಜೆಗಳಲ್ಲಿ ಉಸಿರಿಲ್ಲದಂತಾಗಿತ್ತು. ಇನ್ನೇನು ಕುಸಿದುಬೀಳುತ್ತೇನೆ ಎನಿಸಿತು. ಬಾಗಿ ನೀರಿನ ಗಡಿಗೆಯ ಕಂಠಕ್ಕೆ ಕೈಯೂರಿದಳು. ನೀರು ಕುಡಿಯದಿದ್ದರೆ ಸತ್ತೇ ಹೋಗುತ್ತೇನೆನಿಸಿತು. ಬಾಗಿರುವಂತೆಯೇ ಒಂದು ಕೈಯಿಂದ ಸೆರಿನೀರನ್ನು ಕುಡಿದಳು. ಆಗ ಆ ನೀರು ಅಮೃತವೆನಿಸಿತು! ಮತ್ತೆ ಕುಡಿದಳು. ಗಂಟಲು ತುಂಬಿ ಬರುವವರೆಗೂ ಕುಡಿದಳು.

ಮಥುರಾ ಮೆಲ್ಲಗೆ ಹೆಜ್ಜೆ ಹಾಕಿಕೊಂಡು ಠಾಣೆಯೊಳಗೆ ಬಂದಾಗ ಗಣಪತ್ ಕಂಪ್ಲೇಂಟ್ ಕೊಡಲು ಬಂದವರ ಹೇಳಿಕೆಯನ್ನು ಬರೆದುಕೊಳ್ಳುತ್ತಿದ್ದ. ಏಕ್‌ದಂ ಫ್ರೆಷ್ ಆಗಿ ಕಾಣಿಸುತ್ತಿದ್ದ. ಅವನಂತೆಯೇ ಫ್ರೆಷ್ ಆಗಿದ್ದ ಇನ್ನೊಬ್ಬ ಕಾನ್ಸ್‌ಟೇಬಲ್. ಮಥುರಾಳಿಗೆ ಗಲಿಬಿಲಿಯಾಯಿತು. ಇವರೇನಾ ನನ್ನ ಮೇಲೆ ಅತ್ಯಾಚಾರ ಮಾಡಿದವರು ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡಳು! ಲಾಕಪ್ ಕೋಣೆಯತ್ತ ನಡೆದುಹೋದಳು. ತನ್ನ ಪ್ರಿಯಕರ ಅಶೋಕನನ್ನು ಅಂಡರ್‌ವೇರ್ ಮೇಲೆ ನಿಲ್ಲಿಸಿದ್ದರು. ಮೈತುಂಬ ಬಾಸುಂಡೆಗಳೆದ್ದಿದ್ದವು. ಕಂಬಿಗಳೊಳಗಿಂದ ಕೈಚಾಚಿ ನಿಂತಿದ್ದ ಅಶೋಕನ ಹತ್ತಿರಕ್ಕೆ ಹೋದಳು. "ನನ್ನನ್ನು ಅವರಿಬ್ಬರೂ ಸೇರಿ ಗಲೀಜು ಮಾಡಿಬಿಟ್ಟರು..." ಎಂದು ಹೇಳಿ ಅಳತೊಡಗಿದ್ದಳು. ನುಷಿ ದಂಪತಿಗಳು ಇದನ್ನೆಲ್ಲ ಬಿಟ್ಟಬಾಯಿಂದ ನೋಡುತ್ತಿದ್ದರು.

ಮಥುರಾಳ ಅಣ್ಣ ಠಾಣೆಗೆ ಬಂದಾಗ ರಾತ್ರಿ ಹನ್ನೊಂದು ಗಂಟೆ. ಅಶೋಕನ ಬಾಹುಗಳಲ್ಲಿದ್ದ ತಂಗಿಯನ್ನು ಬಿಡಿಸಿಕೊಳ್ಳಲು ಹೋದ. "ಅಣ್ಣ ನನ್ನನ್ನು ಮುಟ್ಟಬೇಡ. ನಿನ್ನಿಂದ್ಲೇ ಇದೆಲ್ಲ ಆಯಿತು. ಪೋಲೀಸರು ನನ್ನನ್ನ ನಾಯಿಮುಟ್ಟಿದ ಮಡಕೆ ಮಾಡಿಬಿಟ್ರೂ" ಎಂದು ಗೋಳೋ ಎಂದು ಅಳತೊಡಗಿದಳು.

ಪಾಪಪ್ರಜ್ಞೆಯಲ್ಲಿದ್ದ ಕಾನ್ಸ್‌ಟೇಬಲ್‌ಗಳು ಮಥುರಾಳನ್ನು ಅವಳಣ್ಣನೊಂದಿಗೆ ಕಳಿಸಿಕೊಟ್ಟರು. ಗಾಮ ಅವಳನ್ನು ಕೂಡಲೇ ಆಸ್ಪತ್ರೆಗೆ ದಾಖಲು ಮಾಡಿ ರೇಪ್ ಆಗಿದೆಯೆಂದು ಡಾಕ್ಟರ್‌ಗಳಿಗೆ ದೂರಿದ. ಮಥುರಾಳ ದೇಹದಲ್ಲಿದ್ದ ವೀರ್ಯವನ್ನು ಸಂಗ್ರಹಿಸಿಕೊಂಡು ವೈದ್ಯಕೀಯ ಪರೀಕ್ಷೆಗೆ ಕಳಿಸಿಕೊಡಲಾಯಿತು.

ಮಥುರಾ, ಅವಳಣ್ಣ ಗಾಮ, ಪ್ರಿಯಕರ ಅಶೋಕ ಮತ್ತು ನುಷಿ ದಂಪತಿಗಳು ಎಲ್ಲರೂ ಒಂದಾದರು. ಅತ್ಯಾಚಾರಿ ಪೊಲೀಸರ ವಿರುದ್ಧ ಸಿಡಿದೆದ್ದರು. ರೇಪ್ ಕೇಸ್ ಮಾಡಿದರು.

ಕಾನ್‌ಸ್ಟೇಬಲ್ ಗಣಪತ್ ಮತ್ತು ಸಹಚರ ಪೊಲೀಸ್ ಕೋರ್ಟ್ ಕಟಕಟೆಯಲ್ಲಿ ನಿಂತರು. ಸೆಷನ್ಸ್ ಕೋರ್ಟ್ ಬಿಡುಗಡೆ ಮಾಡಿತು. ಆದರೆ ಹೈಕೋರ್ಟ್ ಅವರಿಗೆ ಶಿಕ್ಷೆ ವಿಧಿಸಿತು. ಆದರೆ ಸುಪ್ರೀಂಕೋರ್ಟ್‌ನಲ್ಲಿ ಆರೋಪಿಗಳು ಶಿಕ್ಷೆಯಿಂದ ಪಾರಾದರು. ಮಥುರಾ ತನ್ನ ಒಪ್ಪಿಗೆ ನೀಡಿಯೇ ಸಂಭೋಗಕ್ಕೊಳಗಾದಳು. ಅತ್ಯಾಚಾರವೇ ಆಗಿದ್ದರೆ ಅವಳ ದೇಹದ ಮೇಲೆ ಗಾಯದ ಗುರುತುಗಳಿರುತ್ತಿದ್ದವು. ಮೈನರ್ ಆಗಿದ್ದರೆ ಒಪ್ಪಿಗೆ ನೀಡಿದರೂ ರೇಪ್ ಆಗುತ್ತದೆ. ಆದರೆ ಮಥುರಾ ಮೈನರ್ ಎಂದು ಹೇಳಲು ಅವಳ ವಯಸ್ಸಿನ ದೃಢೀಕರಣಕ್ಕೆ ಸೂಕ್ತ ದಾಖಲೆ ಪುರಾವೆಗಳಿಲ್ಲ ಎಂಬಿತ್ಯಾದಿ ಅಂಶಗಳನ್ನು ಪರಿಗಣಿಸಿ ಸುಪ್ರೀಂ ಕೋರ್ಟ್ ಆರೋಪಿಗಳನ್ನು ಖುಲಾಸೆ ಮಾಡಿತು.

ಮಥುರಾ ಅತ್ಯಾಚಾರ ಪ್ರಕರಣದ ವಿವರಗಳು ಹೀಗೆ ಮೇಲೆ ಹೇಳಿದ ರೀತಿಯಲ್ಲಿ ಕಥೆಯಾಗಿ ನಮ್ಮ ಲಾಯರ್‌ಗಳ ಮಧ್ಯೆ ಚರ್ಚೆಗೆ ಒಳಪಟ್ಟಿತು. ಈ ಚರ್ಚೆಗಳೆಲ್ಲ ಮಥುರಾಳ ಪರವಾಗಿ ನಡೆಯತೊಡಗಿದವು. ಆಗೆಲ್ಲ ನನ್ನ ಕಣ್ಮುಂದೆ ಬಾಲಿಕೆ ಮಥುರಾಳ ಮುಗ್ಧ ಮುಖ ತೇಲಿಬರತೊಡಗಿತು. ಕೊಲೆಯೊಂದನ್ನು ಸಮರ್ಥಿಸಿಕೊಳ್ಳಲು ಹಲವಾರು ನೈತಿಕ, ಸಾಂದರ್ಭಿಕ, ಪರಿಸ್ಥಿತಿಯ ಒತ್ತಡದ, ಅನಿವಾರ್ಯತೆಯ ಕಾರಣಗಳು ಕ್ರಿಮಿನಲ್ ಲಾಯರ್ ಆದ ನನಗೆ ಗೊತ್ತಿದ್ದವು. ಆದರೆ ರೇಪ್ ಅನ್ನು ಸಮರ್ಥಿಸಿಕೊಳ್ಳಲು ಒಂದೇ ಒಂದು ಕಾರಣ ನನ್ನ ಕಣ್ಣುಗಳಿಗೆ ಕಾಣಲಿಲ್ಲ. "ನಿರಪರಾಧಿಯಾದ ಕೊಲೆಗಾರನಿರಲು ಸಾಧ್ಯ, ಆದರೆ ನಿರಪರಾಧಿಯಾದ ಅತ್ಯಾಚಾರಿ ಇರಲು ಮಾತ್ರ ಅಸಾಧ್ಯ" ಎನಿಸಿತು. ಇನ್ನೆಂದೂ ಜೀವಮಾನದಲ್ಲಿ ರೇಪ್ ಕೇಸ್‌ನಲ್ಲಿ ಡಿಫೆನ್ಸ್ ಲಾಯರ್ ಆಗಕೂಡದೆಂದು ನನ್ನೊಳಗೇ ಪ್ರತಿಜ್ಞೆ ಮಾಡಿಕೊಂಡೆ. ಇಂದಿಗೂ ಅದರಿಂದ ವಿಚಲಿತನಾಗಿಲ್ಲ ನಾನು.

ಮಥುರಾ ಅತ್ಯಾಚಾರ ಪ್ರಕರಣದ ಬಗ್ಗೆ ಫೆಮಿನಿಸ್ಟ್ ಹಾಗೂ ಎಡ ಸಂಘಟನೆಗಳು ಡಿಬೇಟ್ ಶುರು ಮಾಡಿದವು. ನಾಲ್ವರು ಸುಪ್ರೀಂಕೋರ್ಟ್ ಲಾಯರ್‌ಗಳು ಸೇರಿ ಸುಪ್ರೀಂಕೋರ್ಟ್‌ಗೆ "ಮಥುರಾ ಪ್ರಕರಣವನ್ನು ರಿವ್ಯೂ ಮಾಡಬೇಕು. ಮೈಮೇಲೆ ಗಾಯಗಳಾದರೆ ಮಾತ್ರ ಅದನ್ನು ರೇಪ್ ಎಂದು ಪರಿಗಣಿಸುವುದು ಸರಿಯೆ? Non coercieve ಶಕ್ತಿಗಳು ಮಥುರಾಳನ್ನು

ಮೌನವಾಗಿಸಿರುವುದರ ಸಾಧ್ಯತೆಯ ಬಗೆಗೆ ಪುನರ್‌ಪರಿಶೀಲಿಸುವುದು ಅಗತ್ಯ" ಎಂಬಿತ್ಯಾದಿ ಅಂಶಗಳನ್ನು ಮಂಡಿಸಿ ಪತ್ರ ಬರೆದರು.

ಸುಪ್ರೀಂಕೋರ್ಟ್ ಪ್ರಪ್ರಥಮಬಾರಿಗೆ ಪತ್ರವೊಂದನ್ನು ಸಾರ್ವಜನಿಕ ಹಿತಾಸಕ್ತಿಯ ಪ್ರಕರಣ (P.I.L.) ಎಂದು ಪರಿಗಣಿಸಿತು! ಮಥುರಾ ಪ್ರಕರಣವನ್ನು ರಿವ್ಯೂ ಮಾಡಲು ಒಪ್ಪಿಕೊಂಡಿತು. ಅದಕ್ಕೂ ಮುಂಚೆ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣಗಳು ಚಾಲ್ತಿಯಲ್ಲಿರಲಿಲ್ಲ. ಮಥುರಾ ಪ್ರಕರಣವು ಇಂದು ಬಹುವಾಗಿ ಚಾಲ್ತಿಯಲ್ಲಿರುವ ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳಿಗೆ ಭದ್ರ ಬುನಾದಿಯೊದಗಿಸಿಕೊಟ್ಟಿತೆಂದರೆ ತಪ್ಪಿಲ್ಲ.

62

ಗುರುವಿನ ಗುಲಾಮನಾಗುವತನಕ.....

ನಾನು ನಮ್ಮ ಹಳ್ಳಿಗೆ ಹೋಗುವುದು ಕಡಿಮೆಯಾಗುತ್ತಾ ಬಂದಿತು. ತಿಂಗಳಿಗೊಮ್ಮೆ ಹೋದರೂ ಒಂದೇ ದಿನ ಇದ್ದು ವಾಪಸಾಗಿಬಿಡುತ್ತಿದ್ದೆ. ಹಳ್ಳಿಯ ನನ್ನ ಸ್ನೇಹಿತರು "ನಿಂಗೆ ಪಟ್ಟಣದ ನೀರು ಹತ್ತಿಕೊಂಡಿದೆ, ಹಳ್ಳಿ ಹೆಂಗಯ್ಯ ಹಿಡಿಸುತ್ತೆ" ಎಂದು ಛೇಡಿಸುತ್ತಿದ್ದರು. ಆದರೆ ವಾಸ್ತವವಾಗಿ ನನ್ನ ಹಿಡಿದಿಟ್ಟದ್ದು ಬೆಂಗಳೂರು ನಗರವೇ? ನಗರದ ನಶೆಗಳು ಹತ್ತು ಹಲವು, ಅವುಗಳಲ್ಲಿ ಯಾವುದು ನನ್ನನ್ನು ಹಿಡಿದಿಟ್ಟಿದೆ? ನನಗೆ ಕುಡಿತ, ಸಿನಿಮಾ, ಲೈವ್‌ಬ್ಯಾಂಡ್‌ಗಳ ಹುಚ್ಚಿರಲಿಲ್ಲ. ನನ್ನನ್ನು ಹಿಡಿದಿಟ್ಟದ್ದು ಕೇವಲ ನನ್ನ ಆಫೀಸ್ ಎಂದು ಹೇಳಿದರೆ ನನ್ನ ಹಳ್ಳಿಯ ಬಂಧುಗಳು ನಂಬುವ ಸ್ಥಿತಿಯಿರಲಿಲ್ಲ. ನನ್ನ ಮತ್ತು ಆಫೀಸ್‌ಗಳ ಮಧ್ಯೆ ಲಿಂಗಾಂಗ ಸಾಮರಸ್ಯ ಆದಂತಿತ್ತು.

ಆಫೀಸಿನ ಪ್ರತಿಯೊಂದು ಆಗುಹೋಗುಗಳೂ ನನ್ನ ಕಣ್ಮುಂದೆ ಆಗಬೇಕು ಎನ್ನುವ ಅದಮ್ಯ ಆಸೆ ನನ್ನದು. ಮದುವೆಯಾಗಿ ಪ್ರಸ್ತವಾದ ಮರುದಿನವೇ ನಾನು ಆಫೀಸಿಗೆ ಹಾಜರಾದಾಗ ಸಹೋದ್ಯೋಗಿಗಳು ನನ್ನನ್ನು ಗೇಲಿ ಮಾಡಿದ್ದರು.

ದೇವದಾಸ್ ಅವರೇ, "ಅದೇನು ಇಲ್ಲಿ ಕೊಳ್ಳೆ ಹೋಗುತ್ತಿತ್ತು. ಮದುವೆಯಾಗಿದ್ದೀಯಾ, ಹತ್ತು ಹದಿನೈದು ದಿವಸ ಹಾಯಾಗಿ ಇದ್ದು ಬರೋದು ಬೇಡವಾ" ಎಂಬ ಪ್ರೀತಿ ಮಿಶ್ರಿತ ಆಕ್ಷೇಪಣಾ ಧ್ವನಿಯಲ್ಲಿ ಅಂದಾಗ ಆಫೀಸಿನ ಸಿಬ್ಬಂದಿ "ನೋಡಿದೆಯಾ ನಾವು ಗೇಲಿ ಮಾಡಿದ್ದಕ್ಕೆ ಸೀನಿಯರ್ ತಮ್ಮ ಸೀಲು ಒತ್ತಿದರು" ಎಂದರು.

ಪರಾವಲಂಬನೆ ದೇವದಾಸ್ ಅವರನ್ನು ಸಾವಕಾಶವಾಗಿ ಆವರಿಸಿಕೊಳ್ಳತೊಡಗಿತ್ತು. ವಯಸ್ಸು ಮತ್ತು ಮಾನಸಿಕ ಜರ್ಝರಿತಗಳು ದೇವದಾಸ್‌ರನ್ನು ಮುತ್ತಿದವು. ಅವರ ತಲೆಯ ಮೇಲೆ ಒತ್ತಡಗಳು ಜಾಸ್ತಿಯಾದಂತೆ ಅವರ ಹೊಟ್ಟೆ ಗಜಗಾತ್ರವಾಗತೊಡಗಿದ್ದನ್ನು ನಾನು ಗಮನಿಸಿದೆ.

ಮಕ್ಕಳೊಂದಿಗೆ ತಮಗೆ ಇರದಿದ್ದ ಅನ್ಯೋನ್ಯತೆಯನ್ನು ತುಂಬಿಕೊಳ್ಳಲು ರಕ್ತಸಂಬಂಧದ ಹೊರಗೆ ಪ್ರಯತ್ನಿಸುತ್ತಿದ್ದಾರೇನೋ ಎನ್ನುವ ಭಾವನೆ ನನ್ನಲ್ಲಿ ಹಲವಾರು ಬಾರಿ ಮೂಡಿದ್ದಿದೆ.

ದೇವದಾಸ್ ಅವರ ಸೇವೆಯನ್ನು ಅವರ ಮಕ್ಕಳೇನೂ ಅಷ್ಟಾಗಿ ಮಾಡುತ್ತಿರಲಿಲ್ಲ. ಅವರ ಹೊಟ್ಟೆ ದಪ್ಪ ಆಗಿದ್ದರಿಂದ ಕಾಲಿಗೆ ಸಾಕ್ಸ್ ಹಾಕಿಕೊಳ್ಳಲು ಆಗುತ್ತಿರಲಿಲ್ಲ. ಸಾಕ್ಸ್ ಇಲ್ಲದೆಯೇ ಬೂಟ್‌ಗಳನ್ನು ಹಾಕಿಕೊಂಡು ಬರುವುದು ಹೆಚ್ಚಾಗತೊಡಗಿತು. ಕೋರ್ಟ್‌ಗೆ ಹೋಗುವ ಮುಂಚೆ ನಾನು ದೇವದಾಸ್ ಅವರ ಮನೆಗೆ ಆಗಾಗ ಹೋಗಿರುತ್ತಿದ್ದೆ. ಅವರು ಕುರ್ಚಿಯ ಮೇಲೆ ಕೂತು ಸಾಕ್ಸ್ ಹಾಕಿಕೊಳ್ಳಲು ಪ್ರಯತ್ನಿಸುವುದು ಕಂಡರೆ ಸಾಕು ನಾನೇ ಸ್ವತಃ ಅವರ ಪಾದಗಳಿಗೆ ಸಾಕ್ಸ್ ತೊಡಿಸುತ್ತಿದ್ದೆ. ಅವರು ಮನೆಯಿಂದ ಕೋರ್ಟಿಗೆ ಹೋಗುವ ಸಮಯದಲ್ಲಿ ನಾನು ಇದ್ದರೆ ಮಾತ್ರ ಸಾಕ್ಸ್ ಹಾಕಿಕೊಳ್ಳುವುದು ಎನ್ನುವಂತಾಗಿಬಿಟ್ಟಿತು. ನನ್ನ ಈ ಸೇವೆಯಿಂದ ದೇವದಾಸ್ ಸಂಪ್ರೀತರಾಗುತ್ತಿದ್ದರು. ತಮ್ಮ ಸೇವೆ ಮಾಡದೇ ಅತ್ತಿತ್ತ ಅಡ್ಡಾಡುತ್ತಿದ್ದ ತಮ್ಮ ಮಕ್ಕಳತ್ತ ವಾರೆನೋಟ ಬೀರಿ ಒಂದು ರೀತಿಯ ಮಂದಹಾಸವನ್ನು ತಮ್ಮ ಮುಖದ ಮೇಲೆ ತಂದುಕೊಳ್ಳುತ್ತಿದ್ದರು.

ತಮ್ಮ ಸೇವೆಯನ್ನು ಮಾಡಲಾರದ ಕಾರಣವನ್ನು ಮುಂದು ಮಾಡಿ ಮಕ್ಕಳನ್ನು ಟೀಕಿಸುವ ಧಾರ್ಷ್ಟ್ಯ ದೇವದಾಸ್‌ರಲ್ಲಿರಲಿಲ್ಲ. ತಮ್ಮ ಮಕ್ಕಳನ್ನು ಟೀಕಿಸುವ ಹುಸಿಕಾರಣಗಳಿಗಾಗಿ ತಡಕಾಡುತ್ತಿದ್ದರು.

ನಾನು ಬಹಳಷ್ಟು ಬಾರಿ ಎಂಟುಗಂಟೆಗೇ ಸೀನಿಯರ್ ಮನೆಗೆ ಹೋಗಿಬಿಡುತ್ತಿದ್ದೆ. ಅದೇ ತಾನೆ ಎದ್ದು ಆಕಳಿಸುತ್ತಿದ್ದ ತಮ್ಮ ಮಗನಿಗೆ "ನೋಡು

ಹನುಮಂತ್ರಾಯ ಶೂದ್ರನಾಗಿದ್ದರೂ ನಿಜವಾಗಿಯೂ ಬ್ರಾಹ್ಮಣನಂತಿದ್ದಾನೆ. ನೀನು ನೋಡು ಬ್ರಾಹ್ಮಣನಾಗಿ ಹುಟ್ಟಿ ಶೂದ್ರನಂತೆ ಆಕಳಿಸ್ತಿದೀಯಾ ಈಗ" ಎಂದು ಕುಟುಕಿದರು. ಅವರ ಮಗ ಶೈಲೇಂದ್ರ ನನಗೆ "ನಿಂದು ಒಳ್ಳೆ ಕತೆಯಾಯ್ತು. ನೀನು ಬೇಗೆ ಮನೆಗೆ ಬಂದು ನಮ್ಮನ್ನೆಲ್ಲಾ ಬೈಯ್ಯಿಸ್ತೀಯಾ" ಎಂದು ಜೋರು ಮಾಡುತ್ತಿದ್ದ!

ಏರುವಯಸ್ಸಿನಲ್ಲಿ ದೇವದಾಸ್ ಅವರಿಗೆ ತಮ್ಮ ಪಾಂಡಿತ್ಯದ ಅಹಂಕಾರವೊಂದೇ ಸಾಕೆನಿಸಿತ್ತೆಂದು ಕಾಣುತ್ತದೆ. ಆದರೆ ಇದು ಇಳಿವಯಸ್ಸಿನಲ್ಲಿ ಅವರನ್ನು ಒಂಟಿಪಕ್ಷಿಯನ್ನಾಗಿಸಿತ್ತು. ಎಲ್ಲ ಸಂಬಂಧಗಳನ್ನು ಕಳಚಿಕೊಂಡಿದ್ದ ಪಾಂಡಿತ್ಯವು ಸೂತ್ರ ಕಳಚಿಕೊಂಡ ಪಟವಾಗಿತ್ತು. ತಮ್ಮ ಪಾಂಡಿತ್ಯ ಮತ್ತು ಅದರಿಂದ ಆಗುತ್ತಿದ್ದ ಧನಗಳಿಕೆ ಇದನ್ನು ಮುಂದಿಟ್ಟುಕೊಂಡು ಎಲ್ಲ ಸಂಬಂಧಗಳನ್ನು ಆಯಸ್ಕಾಂತದಂತೆ ಆಕರ್ಷಿಸಿಕೊಳ್ಳಲು ವ್ಯರ್ಥ ಹೆಣಗಾಟ ಮಾಡುತ್ತಿದ್ದರೇನೋ ಎನಿಸುತ್ತಿತ್ತು.

ಕೇಸ್ ಫೈಲ್‌ಗಳನ್ನು ಸಾಮಾನ್ಯವಾಗಿ ಅವರು ರಾತ್ರಿಯೇ ಅಭ್ಯಸಿಸುತ್ತಿದ್ದರು. ವೃದ್ಧಾಪ್ಯದ ಪರಿಣಾಮವಾಗಿ ರಾತ್ರಿ ಸಮಯ ಫೈಲುಗಳನ್ನು ಓದುವ ಶಕ್ತಿ ಕುಂದಿತ್ತು. ಹೀಗಾಗಿ ಅವರು ನನ್ನ ಮೇಲೆ ಹೆಚ್ಚು ಅವಲಂಬಿತರಾಗಬೇಕಾಯಿತು. ರಾತ್ರಿ ಹನ್ನೆರಡು ಘಂಟೆಯುವರೆಗೂ ಶಾರದಮ್ಮನವರೂ ಮಲಗುತ್ತಿರಲಿಲ್ಲ. ಬೆಡ್‌ರೂಮ್‌ನಲ್ಲಿ ದೇವದಾಸ್ ಮಲಗಿಕೊಂಡಿದ್ದರೆ ನಾನು ಅವರ ಪಕ್ಕಕ್ಕೆ ಕೂತು ಫೈಲ್‌ಗಳನ್ನು ಓದುತ್ತಿದ್ದೆ. ಕೇಳಿಸಿಕೊಳ್ಳುವ ಮೂಲಕ ಕೇಸಿನ ಬಗ್ಗೆ ತಮ್ಮ ತೀರ್ಮಾನಗಳನ್ನು ರೂಢಿಸಿಕೊಳ್ಳುತ್ತಿದ್ದರು.

ನನ್ನ ಮದುವೆಯಾಗಿ ಆರು ತಿಂಗಳುಗಳು ಮಾತ್ರ ಆಗಿದ್ದವು. ಮನೆಗೆ ಹೋಗಿ ತಲುಪಲು ಒಮ್ಮೊಮ್ಮೆ ರಾತ್ರಿ ಎರಡು ಘಂಟೆ ಸಮಯವೂ ಆಗುತ್ತಿತ್ತು. ದೇವದಾಸ್ ಅವರ ಮನೆಯಿಂದ ಹೊರಗೆ ಬಂದರೆ ಆಟೋಗಳು ಸಿಗುತ್ತಿರಲಿಲ್ಲ. ಸಮೀಪದ ಹೈಗ್ರೌಂಡ್ ಪೊಲೀಸ್ ಸ್ಟೇಷನ್‌ವರೆಗೆ ನಡೆದು ಬಂದು ಆಟೋಕ್ಕಾಗಿ ಕಾಯುತ್ತಿದ್ದೆ. ತೀರಾ ರಾತ್ರಿಯಾದಾಗ ಕೆಲವೊಮ್ಮೆ ದೇವದಾಸ್ ಅವರೇ ತಮ್ಮ ಕಾರಿನಲ್ಲಿ ನನ್ನನ್ನು ಮನೆಗೆ ಬಿಡುತ್ತಿದ್ದರು. ಅವರ ಹೆಂಡತಿ ಶಾರದಮ್ಮ ಸಹ ಆಗ ಕಾರಲ್ಲಿ ಬರುತ್ತಿದ್ದರು.

ಹೀಗೆ ಮಧ್ಯರಾತ್ರಿಯವರೆಗೂ ಇರಬೇಕಾಗಿ ಬಂದ ಸಂದರ್ಭಗಳಲ್ಲಿ ಶಾರದಮ್ಮ ನನಗೆ ಒಳ್ಳೆ ಊಟ ಕೊಡುತ್ತಿದ್ದರು. ಫ್ರಿಜ್‌ನಲ್ಲಿ ಸದಾ ಪೋರ್ಕ್ ಇರುತ್ತಿತ್ತು. ಅದನ್ನು ಬಿಸಿ ಮಾಡಿ ಅನ್ನ ಅಥವಾ ಬ್ರೆಡ್ ಜೊತೆಗೆ ಕೊಡುತ್ತಿದ್ದರು. ದೇವದಾಸ್ ಅವರೆದುರು ಕೂತು ಬಾಡು ತಿನ್ನಲು ನನಗೆ ಮುಜುಗರವಾಗುತ್ತಿತ್ತು.

ಹಾಗಾಗಿ ತಟ್ಟೆಗೆ ಎಡಗೈಯನ್ನು ಮರೆಮಾಡಿಕೊಂಡು ಊಟ ಮಾಡುತ್ತಿದ್ದೆ. ಒಮ್ಮೆ ಅದನ್ನು ನೋಡಿ "ಅದೇಕೋ ಹಂಗೆ ಕೈ ಮರೆ ಮಾಡ್ಕೋತ್ತೀಯಾ? ನಾನು ತಿನ್ನದಿದ್ದರೇನಾಯಿತು. ತಿನ್ನೋವವರನ್ನ ನೋಡೋಲ್ಲ ಪ್ರೀತಿಸೋಲ್ಲ ಅಂತ ಅನ್ಕೊಂಡಿದ್ದೀಯಾ?" ಎಂದು ಅನ್ನುತ್ತ ಶಾರದಮ್ಮನವರ ಕಡೆ ನೋಡಿ ನಕ್ಕರು.

ನಾನು ಮಧ್ಯರಾತ್ರಿ ಮನೆಯಿಂದ ಹೊರಡುವಾಗ ದೇವದಾಸ್‌ರಿಗೆ, "ಪಾಪ ಹಾಗೇ ಹೋಗುತ್ತಿದ್ದಾನೆ, ಆಟೋ ಚಾರ್ಜ್‌ಗೆ ಕೊಡಿ" ಎಂದು ಯಾವಾಗಲೂ ನೂರು ರೂಪಾಯಿ ಕೊಡಿಸುತ್ತಿದ್ದರು ಶಾರದಮ್ಮ. ಶಾರದಮ್ಮ ತೋರುತ್ತಿದ್ದ ವಾತ್ಸಲ್ಯವನ್ನು ನಾನು ಈ ಜನ್ಮದಲ್ಲಿ ಮರೆಯಲಾರೆ.

ಒಂದು ದಿನ ರಾತ್ರಿ ಫೈಲ್ ಒಂದನ್ನು ಓದಿ ಹೇಳುತ್ತಿದ್ದೆ. ದೇವದಾಸ್ ಅವರು ಬೆನ್ನಿಗೆ ದಿಂಬು ಇಟ್ಟುಕೊಂಡು ಗೋಡೆಗೆ ಒರಗಿದ್ದರು. ಅಜೀರ್ಣವಾಗಿತ್ತೋ ಏನೋ ಮುಖವೆಲ್ಲ ಬೆವರತೊಡಗಿತು. ಒಮ್ಮೆ ವಾಂಯಿಕ್ ಎಂದರು.

ಕುಡಿದವರಿಗಿಂತ ಹೆಚ್ಚಿಗೇ ನಶೆಯೇರಿದವರಂತೆ ಕಂಡರು. ನಾನು ಫೈಲ್ ಓದುವುದನ್ನು ನಿಲ್ಲಿಸಿದೆ; ಯಾವ ಕ್ಷಣದಲ್ಲಿ ಕಾರಿಕೊಳ್ಳುವರೋ ಏನು ಮಾಡಬೇಕೋ ಎಂದು. ಅಷ್ಟರಲ್ಲಿ ಲಡುಲುಡು ಎಂದು ಕಾರಿಕೊಳ್ಳಲಾರಂಭಿಸಿದರು. ಆ ಕ್ಷಣ ಬೇರೆ ಏನೂ ತೋಚದೆ ಬೆಡ್‌ಮೇಲೆ ಬೀಳದಿರಲಿ ಎಂದು ನನ್ನ ಬೊಗಸೆ ಒಡ್ಡಿದೆ. ಅವರ ವಾಂತಿ ನನ್ನ ಬೊಗಸೆ ತುಂಬಿ ಕೆಳಗೆ ಹರಿಯಿತು. ನನ್ನ ಬಿಳಿಯ ಷರ್ಟ್ ಮೇಲೆ ಹಳದಿ ಹನಿಗಳು ಬಿದ್ದವು. ಆ ವಾಸನೆಯಿಂದ ನನಗೂ ವಾಕರಿಕೆ ಬಂದಿತು.

ಅಷ್ಟರಲ್ಲಿ ಶಾರದಮ್ಮ ಬೆಡ್‌ರೂಮ್‌ಗೆ ಬಂದರು. "ಅಯ್ಯೋ ಇದೇನು, ಬೆಡ್ ಗಲೀಜಾದ್ರೆ ವಾಷ್ ಮಾಡಿಸೋಕೆ ಆಗೋಲ್ವ? ನೀನು ಅದೇಕೆ ಕೈ ಮೈ ಮಾಡಿಕೊಂಡಿ?" ಎಂದು ನನ್ನನ್ನು ಆಕ್ಷೇಪಿಸಿದರು. ದೇವದಾಸ್ ಆಗ ನನ್ನನ್ನು ನೋಡಿದರು. ನಾನು ಅವರನ್ನು ನೋಡಿದೆ. ಆ ಕ್ಷಣ ಅವರ ಕಣ್ಣುಗಳಲ್ಲಿ ಹೊಳೆದ ಮಿಂಚನ್ನು ಹಿಂದೆಂದೂ ಕಂಡಿರಲಿಲ್ಲ, ಮುಂದೆಯೂ ಕಾಣಲಿಲ್ಲ.

ಆ ಒಂದು ಕ್ಷಣ ಹೊಳೆದ ಮಿಂಚಿಗೇ ಗುರುಕೃಪೆ ಎನ್ನುತ್ತಾರೇನೋ ಎನಿಸಿತು. ಆದರೆ ನಾನು ಇಷ್ಟಪಡದ ಅವರ ದುರ್ಗುಣಗಳು ರೊಂಯ್ ಎಂದು ಕಣ್ಮುಂದೆ ಬರತೊಡಗಿ ನನ್ನ ತಲೆಯಲ್ಲಿ ಗೊಂದಲ ಶುರುವಾಯಿತು.

ದೇವದಾಸ್ ಅವರ ಆಫೀಸ್‌ನಲ್ಲಿ ಅವರ ಮಗಳ ಗಂಡ ಪದ್ಮನಾಭಯ್ಯನವರೂ ಸಹ ಜ್ಯೂನಿಯರ್ ಆಗಿದ್ದರು. ದೇವದಾಸ್ ಆಫೀಸಿನಲ್ಲಿ

ಎಲ್ಲರಿಗಿಂತ ಹೆಚ್ಚಿನ ಪ್ರಾಮುಖ್ಯತೆ ನನಗೆ ನೀಡುವುದು ಅವರಿಗೆ ಸರಿ ಬರುತ್ತಿರಲಿಲ್ಲ. ನನಗಿಂತ ಹದಿನೈದು ಇಪ್ಪತ್ತು ವರ್ಷ ಹಿರಿಯರಾಗಿದ್ದರೂ ನನ್ನೊಂದಿಗೆ ಮತ್ಸರಭಾವ ತೋರುತ್ತಿದ್ದರು. ಸ್ವಂತ ಅಳಿಯ ಎದುರಿದ್ದಾಗಲೂ ದೇವದಾಸ್ ಕಕ್ಷಿದಾರರಿಗೆ ಫೀಜನ್ನು ಹನುಮಂತರಾಯರ ಕೈಗೆ ಕೊಟ್ಟು ಹೋಗಿ ಎಂದು ಹೇಳುತ್ತಿದ್ದದ್ದು ಅವರ ಹೊಟ್ಟೆಕಿಚ್ಚನ್ನು ಹೆಚ್ಚಿಸುತ್ತಿತ್ತು. ದೇವದಾಸ್ ಅವರು ಹೀಗೆ ತಾರತಮ್ಯ ಮಾಡಬಾರದು ಎಂದು ಒಂದೆಡೆ ಅನಿಸುತ್ತಿದ್ದರೂ ಅವರು ನನಗೆ ನೀಡುತ್ತಿದ್ದ ಪ್ರಾಮುಖ್ಯತೆ ಖುಷಿಯುಂಟುಮಾಡುತ್ತಿತ್ತು.

ದೇವದಾಸ್ ಆಫೀಸ್‌ಗೆ ಹೆಚ್ಚಾಗಿ ಕೊಲೆ ಕೇಸುಗಳೇ ಬರುತ್ತಿದ್ದವು. ಒಕ್ಕಲಿಗ, ರೆಡ್ಡಿ ಮತ್ತು ಮುಸ್ಲಿಮ್ ಜನಾಂಗಗಳಲ್ಲಿಯೇ ಹೆಚ್ಚು ಕೊಲೆ ಪ್ರಕರಣಗಳು ನಡೆಯುತ್ತಿದ್ದವು. ಬೆಂಗಳೂರಿನ ಸುತ್ತಮುತ್ತಲ ಮುಖ್ಯ ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳ ಲೀಡರ್‌ಗಳು ಕೊಲೆ ಪ್ರಕರಣಗಳನ್ನು ತಂದುಕೊಡಲು ಆಫೀಸ್‌ಗೆ ಬರುತ್ತಿದ್ದರು.

ದೇವದಾಸ್ ಅವರು ಕೇಸಿನ ವಿವರಗಳನ್ನು ಕಕ್ಷಿದಾರರಿಂದ ಪಡೆದುಕೊಳ್ಳುವ ಕೆಲಸವನ್ನು ನನಗೆ ವಹಿಸುತ್ತಿದ್ದುದರಿಂದ ಹಳ್ಳಿಗಾಡು ಮತ್ತು ಪಟ್ಟಣಗಳ ಪಟೇಲರು, ರೆಡ್ಡಿಗಳು, ಗೌಡರು, ಸಾಬಿಗಳು ನನ್ನ ಸಂಪರ್ಕಕ್ಕೆ ಬಂದರು.

ದೇವದಾಸ್ ಅವರು ಚೆನ್ನಾಗಿ ಮಾತಾಡುತ್ತಿದ್ದುದು ಅವರಿಂದ ಫೀಜನ್ನು ಇಸಿದುಕೊಳ್ಳುವಾಗ ಮಾತ್ರ. ನಂತರ ಕಕ್ಷಿದಾರರು ದೇವದಾಸ್‌ರನ್ನು ಮಾತನಾಡಿಸಲಿಕ್ಕೆ ಹೆದರುತ್ತಿದ್ದರು. ಹೆಚ್ಚುಕಡಿಮೆ ಮಾತಾಡಿದರೆ ಕೇಸ್ ಆರ್ಗ್ಯುಮೆಂಟ್ ಸ್ಟೇಜಿಗೆ ಬಂದಾಗ ಇದ್ದಕ್ಕಿದ್ದಂತೆ ಹೆಚ್ಚಿನ ಫೀ ಕೊಡು ಎಂದುಬಿಡುತ್ತಿದ್ದರು, ಕೇಸು ಪಡೆದುಕೊಳ್ಳುವಾಗ ಆದ ಫೀ ಒಪ್ಪಂದವನ್ನು ಮುರಿದುಹಾಕಿಬಿಡುತ್ತಿದ್ದರು. ಹೆಚ್ಚಿನ ಫೀಜು ಕೊಡದಿದ್ದರೆ ಕೇಸ್ ನಡೆಸೋಕ್ಕೆ ಆಗೋಲ್ಲ ಎಂದು ಫೈಲ್ ಅನ್ನು ಬಿಸಾಡಿಬಿಡುತ್ತಿದ್ದರು. ದೇವದಾಸ್‌ರನ್ನು ಶಾಂತಗೊಳಿಸಲು, ಮನವೊಲಿಸಲು ಕಕ್ಷಿದಾರರು ಊರಿನ ಪಟೇಲ, ಪುಢಾರಿ ಮತ್ತಿತರೇ ಪುಡಿ ಲೀಡರ್‌ಗಳನ್ನು ಕರೆತರುತ್ತಿದ್ದರು. ಕೆಲವು ಕಕ್ಷಿದಾರರು ನನ್ನನ್ನೇ ಮೊರೆ ಹೋಗುತ್ತಿದ್ದರು. "ನೀವು ಹೇಳಿದರೆ ಸೀನಿಯರ್ ಹೂಂ ಅನ್ನುತ್ತಾರೆ. ದಯವಿಟ್ಟು ದೊಡ್ಡ ಮನಸ್ಸು ಮಾಡಬೇಕು" ಎಂದು ದುಂಬಾಲು ಬೀಳುತ್ತಿದ್ದರು.

ಬಡವನಾಗಿದ್ದ ಕಕ್ಷಿದಾರನೊಬ್ಬನಿಗೆ ದೇವದಾಸ್ ಅವನ ಕೇಸ್ ಕೊನೆಯ ಹಂತಕ್ಕೆ ಬಂದಿದೆಯೆನ್ನುವಾಗ ಇದ್ದಕ್ಕಿದ್ದಂತೆ ಹೆಚ್ಚುವರಿ ಫೀಜನ್ನು ತರುವಂತೆ ಹೇಳಿದರು. ಅದನ್ನು ಕೇಳಿ ಅವನ ಎದೆ ಒಡೆದೇ ಹೋಯಿತು. ನೇರವಾಗಿ

ಅವನು ನನ್ನ ಬಳಿಗೆ ಬಂದು, "ಇನ್ನು ಕೊಡಲು ನನ್ನಲ್ಲಿ ದುಡ್ಡಿಲ್ಲ ಸ್ವಾಮಿ, ಮನೇಲಿರುವ ಎಮ್ಮೆ ಮಾರಿದರೆ ಮಾತ್ರ ದುಡ್ಡು ಬರ್ತದೆ, ಆದ್ರೆ ಮನೆಯಲ್ಲಿರುವವರೆಲ್ಲಾ ಉಪಾಸ ಮಾಡಬೇಕಾಯ್ತದೆ. ಏನಾದ್ರೂ ಮಾಡಿ ಸೀನಿಯರ್‌ಗೆ ಹೇಳಿ ಒಪ್ಸಿ. ಕೇಸ್ ಮುಗಿದಮ್ಯಾಕೆ ದೇವರಾಣೆಗೂ ಫೀಜು ತಂದುಕೊಡ್ತೇನೆ...." ಎಂದು ಹಲುಬತೊಡಗಿದ.

ಸೀನಿಯರ್ ಜೊತೆಗೆ ಕೋರ್ಟಿಗೆ ಕಾರ್‌ನಲ್ಲಿ ಹೊರಟಿದ್ದೆ. ಅವರ ಮೂಡ್ ನೋಡಿಕೊಂಡು "ಪಾಪ ಆ ಕಕ್ಷಿದಾರ ಬಹಳ ಗೋಳಾಡ್ತವ್ನೆ ಸಾರ್. ಫೀಜು ಕೊಡೋಕೆ ಆಗೋಲ್ಲವಂತೆ. ಎಮ್ಮೆ ಮಾರಿಬಿಟ್ರೆ ಮನೆಯೋರೆಲ್ಲಾ ಉಪಾಸ ಇರಬೇಕಾಗ್ತದಂತೆ...." ಎಂದು ಇನ್ನೂ ಮಾತು ಮುಗಿಸಿರಲಿಲ್ಲ, "ರೀ ಕೊಲೆಗಾರನ ಬಗ್ಗೆ ದಯೆ, ಅನುಕಂಪ ಇಟ್ಕೊಳ್ಳೋಕೆ ಆಗ್ತದ? ಎಳ್ಳುಕಾಳಷ್ಟೂ ಇರಕೂಡದು! ನನ್ನ ಬಳಿ ಇರುವ ಕೊಲೆಗಾರನಿಗೆ ಕೋರ್ಟ್ ಶಿಕ್ಷೆ ಕೊಡೊಲ್ಲ, ನಾನೇ ಕೊಡ್ತೇನೆ. ನನಗೆ ಫೀಜ್ ಕಕ್ಕಿ ಕಕ್ಕಿ ಕೊಲೆಯ ಪ್ರಾಯಶ್ಚಿತ್ತ ಮಾಡ್ಕೋತಾನೆ ಅವ್ನು. ಇನ್ನೂ ನೀನು ಹುಡುಗ, ಇವೆಲ್ಲ ಅರ್ಥವಾಗೋಲ್ಲ..." ಎಂದು ಮುಖಕ್ಕೆ ಹೊಡೆದಂತೆ ಹೇಳಿಬಿಟ್ಟರು. ಕೊಲೆಗಾರ ಕಕ್ಷಿದಾರರ ಬಗ್ಗೆ ದೇವದಾಸ್ ಅವರು ಇಂಥ ಕಠೋರ ನಿಲುವನ್ನು ಹೊಂದಿದ್ದರೆನ್ನುವ ಸಂಗತಿ ನನಗೆ ಅಂದೇ ಗೊತ್ತಾದದ್ದು! ಬೇರೆಯವರ ಮುಂದೆ ಇದನ್ನು ಹೇಳಿದರೆ ಯಾರೂ ನಂಬುತ್ತಿರಲಿಲ್ಲ. "ದೇವದಾಸ್ ಅಂಥ ಕ್ರೂರಿಯಲ್ಲ ಮಾರಾಯ. ನಿಮ್ಮ ಸೀನಿಯರ್ ಬಗ್ಗೆ ಸಿಟ್ಟಿದ್ದರೆ ಬೇರೆ ಏನನ್ನಾದರೂ ಹೇಳು ಬೇಕಿದ್ದರೆ....." ಅಂದುಬಿಡುವ ಸಾಧ್ಯತೆಯೂ ಇತ್ತು. ದೇವದಾಸರೊಂದಿಗೆ ನನ್ನಷ್ಟು ಆಪ್ತ ಸಂಬಂಧ ಇಟ್ಟುಕೊಂಡವರು ಯಾರೂ ಇರಲಿಲ್ಲ. ಇತರರು ಅಂತರದ ಸಂಬಂಧದಿಂದಲೇ ದೇವದಾಸ್‌ರನ್ನು ನೋಡುತ್ತಿದ್ದುದರಿಂದ ಅವರಲ್ಲಿದ್ದ ಇಂಥ ಒಳಗುಣಗಳನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆಯಿರಲಿಲ್ಲ.

ಅಷ್ಟೊತ್ತಿಗೆ ಅನೇಕ ಮರ್ಡರ್ ಕೇಸ್‌ಗಳನ್ನು ನಾನೇ ಸಂಪೂರ್ಣವಾಗಿ ನಿರ್ವಹಿಸಿದ್ದೆ. ದೇವದಾಸ್ ಅವರು ಕೀಪಾಯಿಂಟ್‌ಗಳನ್ನು ಹೇಳಿಕೊಡುತ್ತಿದ್ದರು. ಅವರು ನಡೆಸಿದ 100 ಕೇಸುಗಳಲ್ಲಿ ಅವರಿಗೆ ಸಹಾಯಕನಾಗಿದ್ದೆ. ನಾನೂ ಕೇಸುಗಳನ್ನು ನಡೆಸುತ್ತಿದ್ದೆ. ದುಡ್ಡಿಗಾಗಿ ಕಕ್ಷಿದಾರರನ್ನು ನಾನು ಒಂದು ದಿನವೂ ಪೀಡಿಸಲಿಲ್ಲ. ನನ್ನಲ್ಲಿ ಕಕ್ಷಿದಾರರು ಆತ್ಮೀಯತೆಯನ್ನು ಕಂಡುಕೊಂಡಿದ್ದರು. ಕಕ್ಷಿದಾರರ ಬಗ್ಗೆ ದೇವದಾಸ್ ಕೋಪೋದ್ರೇಕಗಳು ದಿನದಿನಕ್ಕೆ ಹೆಚ್ಚಾಗುತ್ತಿದ್ದವು ದೇವದಾಸ್ ತಮ್ಮ ಕಕ್ಷಿದಾರರನ್ನು ನಡೆಸಿಕೊಳ್ಳುತ್ತಿದ್ದ ರೀತಿಗೆ ಅವರ ಸ್ವಂತ ಮಗ

ಶೈಲೇಂದ್ರನೇ ರೋಸಿಹೋಗಿದ್ದ. ಹಲವಾರು ಬಾರಿ "ನಮ್ಮಪ್ಪನನ್ನು ಬಿಟ್ಟರೆ ನಿಮಗೆ ಬೇರೆ ವಕೀಲರು ಸಿಗೋಲ್ವೆ?" ಎಂದು ಕಕ್ಷಿದಾರರಿಗೆ ಅಂದದ್ದೂ ಉಂಟು.

ಹಲವಾರು ಕಕ್ಷಿದಾರರು ಮತ್ತು ಅವರನ್ನು ಕರೆತರುತ್ತಿದ್ದ ಪಟೇಲರು ನನಗೆ "ನೀನು ಪ್ರತ್ಯೇಕ ಆಫೀಸ್ ಶುರು ಮಾಡಿಬಿಡಪ್ಪ. ನಿಮ್ಮ ಸೀನಿಯರ್ ಸಿಡುಕಾಟ ತೀರಾ ಜಾಸ್ತಿಯಾತು...." ಎಂದು ರಾಗವೆಳೆಯುತ್ತಿದ್ದರು.

ಆಫೀಸ್‌ನಲ್ಲಿದ್ದ ಉಳಿದ ಜ್ಯೂನಿಯರ್‌ಗಳಿಗಿಂತ ನನಗೆ ಹೆಚ್ಚಿನ ದುಡ್ಡನ್ನೇನೋ ದೇವದಾಸ್ ನೀಡುತ್ತಿದ್ದರು. ಆದರೆ ಅದು ನನ್ನ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಅವರ ಬಳಿ ಒಂಬತ್ತು ವರ್ಷಗಳವರೆಗೆ ಜ್ಯೂನಿಯರ್ ಆಗಿ ಕೆಲಸ ಮಾಡಿದ್ದರೂ ನನಗೆ ಒಂದು ಸ್ಕೂಟರನ್ನೂ ಖರೀದಿಸಲಾಗಿರಲಿಲ್ಲ. ಬೇರೆ ಆಫೀಸ್ ಮಾಡುವ ಯೋಜನೆ ನನ್ನಲ್ಲಿ ಮೊಳೆತು ಸಸಿಯಾಗತೊಡಗಿತು. ಆದರೆ ನಾನು ಹಾಗೆ ಮಾಡಿದರೆ ದೇವದಾಸರಿಗೆ ಆಘಾತವಾಗುವುದು ಗ್ಯಾರಂಟಿ ಎಂದುಕೊಂಡು ಹಿಂದು ಮುಂದು ನೋಡತೊಡಗಿದೆ. ಅವರಲ್ಲಿದ್ದ ಅರವತ್ತು ಮರ್ಡರ್ ಕೇಸ್ ಫೈಲ್‌ಗಳು ನನ್ನ ಮೇಲೆ ಬಹಳಷ್ಟು ಅವಲಂಬಿತವಾಗಿದ್ದವು. ಸೀನಿಯರ್ ಇದ್ದಕ್ಕಿದ್ದಂತೆ ವಿಕಲಾಂಗರಂತಾಗಿ ಬಿಡುತ್ತಾರಲ್ಲಾ ಎನ್ನುವ ಕೊರಗು ನನ್ನೊಳಗೆ ಮನೆ ಮಾಡಿತು.

ಮನಸ್ಸು ಡೋಲಾಯಮಾನ ಸ್ಥಿತಿಯಲ್ಲಿದ್ದಾಗ ವೀಟೋ ಪವರ್ ಚಲಾಯಿಸುವ ಸ್ನೇಹಿತ ಸಿಕ್ಕರೆ ಮನಸ್ಸು ಕೂಡಲೇ ಒಂದು ತೀರ್ಮಾನಕ್ಕೆ ಬಂದುಬಿಡುತ್ತದೆಯೇನೋ.

ಕಾಲೇಜು ಓದುವಾಗ ಡಿಬೇಟ್ ಕಾಂಪಿಟೇಷನ್ ಒಂದರಲ್ಲಿ ಪರಿಚಯವಾಗಿದ್ದ ಮಂಜುನಾಥ ಸಿಕ್ಕ. ಮಂಜುನನ್ನು ನಾನು ಬೆನ್ನು ಹತ್ತಿ ಸ್ನೇಹಿತನನ್ನಾಗಿಸಿಕೊಂಡಿದ್ದೆ ಕಾಲೇಜ್‌ನಲ್ಲಿ ಓದುವಾಗ. ಅಂಥ ಪ್ರಭಾವ ನನ್ನ ಮೇಲೆ ಬೀರಿದ್ದ. ನಾನು ಯಾವತ್ತೂ ಆತನನ್ನು ಕರೆಯುವುದು ಮಂಜು ಎಂದು. General ಆದ ಒಂದು ವಿಷಯವನ್ನು particularise ಮಾಡುವ, ಅದೇ ರೀತಿ particular ಆದುದನ್ನು generalise ಮಾಡುವ ಆತನ ಜಾಣ್ಮೆ ನನ್ನನ್ನು ಸಮ್ಮೋಹನಗೊಳಿಸಿತ್ತು. ನನ್ನ ಮನಸ್ಸು ಗೊಂದಲವುಂಟಾಗಿ fluid ಪರಿಸ್ಥಿತಿಯಲ್ಲಿರುವಾಗ ಮಂಜುನೊಂದಿಗೆ ಚರ್ಚಿಸಿದರೆ ಅದಕ್ಕೊಂದು ರೂಪ ಸಿಕ್ಕುತ್ತಿತ್ತು.

ಮಂಜು ದೇವದಾಸ್ ಅವರಿಗೆ ದೂರದ ಸಂಬಂಧಿಯೂ ಹೌದು. ದೇವದಾಸ್ ಅವರ ಅಳಿಯ ಪದ್ಮನಾಭಯ್ಯನವರ ಸೋದರಸಂಬಂಧಿಯಾಗಿದ್ದ ಮಂಜು ಯಾವತ್ತೂ ನನ್ನ ಹಿತಚಿಂತಕ. ಮಂಜು ಮತ್ತು ದೇವದಾಸ್ ಅವರ

ಮಗ ಶೈಲೇಂದ್ರ ಇಬ್ಬರೂ ಪ್ರತ್ಯೇಕ ಆಫೀಸ್ ಮಾಡು ಎಂದು ಒತ್ತಾಯಿಸಿದ್ದು ನನ್ನಲ್ಲಿ ನೈತಿಕ ಬಲವುಂಟುಮಾಡಿತು.

ಏತನ್ಮಧ್ಯೆ ನನ್ನ ಕಾಲೇಜು ಗುರುಗಳಾಗಿದ್ದ ಎಂ.ಆರ್. ಜನಾರ್ದನ್ ಅವರು ಅವೆನ್ಯೂ ರಸ್ತೆಯಲ್ಲಿರುವ ತಮ್ಮ ಆಫೀಸ್ ಅನ್ನು ಬಿಟ್ಟು ಬ್ರಿಗೇಡ್ ರಸ್ತೆಯಲ್ಲಿ ಶುರುಮಾಡಿದ್ದರು. ಮೈಸೂರು ಮಹಾರಾಜರ ಅಳಿಯ ಜನಾರ್ದನ್ ಅವರಿಗೆ ಜ್ಯೂನಿಯರ್ ಆಗಿದ್ದ. ತಮ್ಮ ಅಳಿಯ ಅವೆನ್ಯೂ ರಸ್ತೆಯಲ್ಲಿನ ಕಿರಿದಾದ ಆಫೀಸ್‌ನಲ್ಲಿ ಕೆಲಸ ಮಾಡುವುದು ಹೇಗೆ ಎಂದು ಬ್ರಿಗೇಡ್ ರೋಡ್‌ನಲ್ಲಿ ಅತ್ಯಂತ ವಿಶಾಲವೂ, ಸುಸಜ್ಜಿತವೂ ಆದ ಆಫೀಸನ್ನೂ ನಿರ್ಮಿಸಿಕೊಟ್ಟಿದ್ದರು ಮಹಾರಾಜರು ಜನಾರ್ದನ್ ಅವರಿಗೆ.

ಒಮ್ಮೆ ಸಿಕ್ಕಾಗ ಅವರು ನನಗೆ "ನನ್ನ ಆಫೀಸ್ ಖಾಲಿಯಾಗೇ ಇದೆ. ನೀನು ಬೇಕಿದ್ದರೆ ಉಪಯೋಗಿಸಿಕೊ" ಎಂದರು. ಇದು ನಾನು ಪ್ರತ್ಯೇಕ ಆಫೀಸ್ ಆರಂಭಿಸುವುದಕ್ಕೆ ಮತ್ತಷ್ಟು ಒತ್ತಿನ ಪ್ರೇರಣೆ ನೀಡಿತು.

ಒಂದು ಶಾಸ್ತ್ರಿ ದೇವದಾಸ್ ಅವರ ಮನೆಯಲ್ಲಿ ಕೆಲಸವೆಲ್ಲಾ ಮುಗಿದು ಹೊರಡುವ ವೇಳೆಯಲ್ಲಿ ಅಳೆದು ಸುರಿದೂ ಹಲವಾರು ಬಾರಿ ಮನಸ್ಸಿನಲ್ಲೇ ರಿಹರ್ಸಲ್ ಮಾಡಿಕೊಂಡಿದ್ದ ಮಾತನ್ನು ಹೇಳಿಯೇ ಬಿಟ್ಟೆ : "ಸಾರ್ ಎಂ.ಆರ್ ಜನಾರ್ದನ್ ಅವರ ಆಫೀಸ್ ಖಾಲಿಯಿದೆ ಅವರೇ ಹೇಳಿದ್ರು, ಬೇಕಾದ್ರೆ ಉಪಯೋಗಿಸಿಕೋ ಎಂದು....." ಎಂದೆನ್ನುತ್ತಿದ್ದಂತೆಯೇ "ಅಲ್ಲಯ್ಯ ನನ್ನಂಥ ಕ್ರಿಮಿನಲ್ ಲಾಯರ್ ಮುಂದೆ ಮರೆಮಾಚುವಿಕೆ ಯಾಕೆ? ನೇರವಾಗಿ ಹೇಳಬಾರದೆ, ನಿಮ್ಮಲ್ಲಿ ಜ್ಯೂನಿಯರ್ ಆಗಿದ್ದು ಸಾಕಾಗಿದೆ" ಇಂಡಿಪೆಂಡೆಂಟ್ ಆಗ್ತಿದೀನಿ ಅಂತ!" ಎಂದು ನನ್ನತ್ತ ವಿಷಣ್ಣ ನಗೆ ಬೀರಿದರು.

ನಾನು ಸುಮ್ಮನೆ ಹೊರಟು ಬಂದೆ. ಮಾರನೆ ದಿನ ದೇವದಾಸ್‌ರ ಆಫೀಸ್‌ಗೆ ಹೋಗಲಿಲ್ಲ. ನಾನು ಪ್ರತ್ಯೇಕ ಆಫೀಸ್ ಮಾಡಿದ ಸುದ್ದಿ ಬೇಗ ಹಬ್ಬಿತು. ಎರಡೇ ವಾರದಲ್ಲಿ ಕೈತುಂಬ ಕೇಸುಗಳು ಬಂದವು.

ಕೋರ್ಟ್‌ನಲ್ಲಿ ಆದಷ್ಟು ದೇವದಾಸ್‌ರ ಮುಖ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ.

ಒಂದು ದಿನ ನನ್ನ ಆಫೀಸ್‌ಗೆ ದೇವದಾಸ್‌ರ ಹೆಂಡತಿ ಶಾರದಮ್ಮ ಬಂದು "ನೀನು ಇಲ್ಲದೆ ದೇವದಾಸ್ ತಾಳ್ಮೆಗೆಡುತ್ತಿದ್ದಾರೆ. ಅವರು ಈಗ ಹಿಡಿದಿರುವ ಬಹಳಷ್ಟು ಕೇಸುಗಳಲ್ಲಿ ನಿನ್ನ ಸಹಾಯದ ಅವಶ್ಯಕತೆಯಿದೆ. ಅವು ಮುಗಿಯೋವರೆಗೆ

ಬಾ" ಎಂದರು. ನನ್ನನ್ನು ಆತ್ಮೀಯವಾಗಿ ನಡೆಸಿಕೊಂಡು ವಾತ್ಸಲ್ಯದ ಹೊಳೆಯನ್ನೇ ಹರಿಸಿದ್ದ ಶಾರದಮ್ಮನವರಿಗೆ ಇಲ್ಲ ಎನ್ನಲು ನನ್ನ ನಾಲಿಗೆ ಎಳಲಿಲ್ಲ.

ನಿತ್ಯ ಸಾಯಂಕಾಲ ಎರಡು ಘಂಟೆಗಳ ಕಾಲ ಬಂದು ಅಸಿಸ್ಟ್ ಮಾಡುವುದಾಗಿ ಹೇಳಿದೆ. ಆರು ತಿಂಗಳುಗಳ ಕಾಲ ದೇವದಾಸ್ ಆಫೀಸ್‌ಗೆ ಹೋಗಿ ಸಹಾಯಕನಾದೆ.

ನಂತರ ಗಾಂಧಿನಗರದಲ್ಲಿ ನಾನು ಆಫೀಸ್ ಅನ್ನು ದೇವದಾಸ್ ಅವರಿಂದ ರಿಬ್ಬನ್ ಕಟ್ ಮಾಡಿಸಿ ಆರಂಭಿಸಿದೆ.

ಕೊನೆಗೂ ಕರುಳಬಳ್ಳಿಯನ್ನು ಕಳಚಿಕೊಂಡು ಭೂಮಿಗೆ ಬಿದ್ದ ಶಿಶುವಾದೆ.

63

ಕೊಲೆಗೆ ಕೊಲೆಯ ಉತ್ತರ !

ಅಂದು ನಾನು ಕೋರ್ಟಿನಲ್ಲಿ ಕೊಲೆ ಕೇಸೊಂದರ ಆರ್ಗ್ಯುಮೆಂಟ್ ಮಾಡಿದ್ದೆ. ಕೊಲೆಗಾರನಿಗೆ ಕೊಲೆಯ ಉದ್ದೇಶವಿರಲಿಲ್ಲವೆಂದೂ, ತನ್ನ ಕಣ್ಣೆದುರಿಗೇ ನಡೆಯುತ್ತಿದ್ದ ಘೋರ ಕೃತ್ಯಕ್ಕೆ ರೋಷಗೊಂಡು ಕೊಲೆ ಮಾಡಿದನೆಂದೂ ವಾದಿಸಿದ್ದೆ. ತಾನೇಕೆ ಕೊಲೆ ಮಾಡಿದೆನೆಂದು ತನ್ನನ್ನು ಸಮರ್ಥಿಸಿಕೊಳ್ಳದವನ ವಕಾಲತ್ತು ವಹಿಸಿ ಮಾತಾಡುವುದು ಒಂದು ವಿಚಿತ್ರ ಅನುಭವ. ಕೊಲೆಗಾರ ಬಾಯಿಲ್ಲದ ಮೂಕನಾಗಿರುತ್ತಾನೆ. ಅವನ ವಿಸ್ತೃತ ಬಾಯಿ, ಭಾಷೆಗಳಾಗಿ ವರ್ತಿಸುವುದು ಲಾಯರ್ ಕೆಲಸ. ಸಂಚು, ತಂತ್ರಗಳನ್ನು ರೂಪಿಸಿ ಯೋಜನಾಬದ್ಧ ಕೊಲೆಗಾರನನ್ನು ಕ್ರೋಧೋದ್ವೇಗಗಳಲ್ಲಿ ಕೊಲೆ ಮಾಡಿದವನಿಂದ ಪ್ರತ್ಯೇಕಿಸುವುದು ಹೇಗೆನ್ನುವುದನ್ನು ಅನುಭವದಿಂದ ಕಲಿತಿದ್ದೆ. ವೃತ್ತಿಪರ ಕೊಲೆಗಡುಕ ಲಾಯರ್‌ಗೇ ಪಾಯಿಂಟ್‌ಗಳನ್ನು ಹೇಳಿಕೊಡಲು ಯತ್ನಿಸುತ್ತಿರುತ್ತಾನೆ. ಸಾಕ್ಷಿ, ಸಬೂಬುಗಳು ಸಿಗದಂತೆ ಹೇಗೆ ತಾನು ಕೊಲೆ ಮಾಡಿದೆನೆಂದು ಲಾಯರ್‌ಗೆ ಹೇಳುತ್ತಾನೆ. ಆದರೆ ಕೋಪೋದ್ರೇಕಗಳಲ್ಲಿ ಅನುದ್ದಿಶ್ಯವಾಗಿ ಕೊಲೆ ಮಾಡಿದವ ಮೌನವಾಗಿ ಲಾಯರ್‌ಗೆ ನೀವೇ ದೇವರು ಎಂದು ಶರಣು ಹೋಗುತ್ತಾನೆ. ವೃತ್ತಿಪರ ಕೊಲೆಗಡುಕರಿಗೆ

ಶಿಕ್ಷೆಯಿಂದ ಪಾರಾಗಲು ಹತ್ತು ಹಲವು ದಾರಿಗಳಿರುತ್ತವೆ. ಕೇಸಿನಲ್ಲಿರುವ ಮುಖ್ಯ ಸಾಕ್ಷಿಗಳಿಗೇ ಕೊಲೆ ಬೆದರಿಕೆ ಹಾಕಿ ಬಿಡುಗಡೆಯಾಗುವುದು ಅವರಿಗೆ ಕರಗತವಾಗಿರುತ್ತದೆ. ಆದರೆ ನಿರುದ್ದಿಶ್ಯವಾಗಿ ಕೊಲೆ ಮಾಡಿದವನಿಗೆ ಅವೆಲ್ಲ ಗೊತ್ತಿರುವುದಿಲ್ಲ. ವೃತ್ತಿಪರ ಕೊಲೆಗಡುಕರನ್ನು ಪಾರು ಮಾಡಲು ಜಾಣ ಕ್ರಿಮಿನಲ್ ಲಾಯರ್ರೇ ಬೇಕೆಂದೇನೂ ಇಲ್ಲ. ಆದರೆ ಎರಡನೇ ಬಗೆಯ ಕೊಲೆಗಡುಕನನ್ನು ಶಿಕ್ಷೆಯಿಂದ ಕಾಪಾಡಲು ಲಾಯರ್ ನಿಜವಾಗಿಯೂ ಜಾಣನಾಗಿರುವುದು ಅತ್ಯವಶ್ಯ. ಅವನ ಮನದಾಳದೊಳಗೆ ಇಳಿದು, ಪರಕಾಯ ಪ್ರವೇಶ ಮಾಡಿ ಅವನೇ ಆಗಿ ಕೋರ್ಟ್‌ನಲ್ಲಿ ವಾದಿಸಿದಾಗ ಮಾತ್ರ ಅವನಿಗೆ ನ್ಯಾಯ ದೊರಕಿಸಿಕೊಡುವುದು ಸಾಧ್ಯ.

ವೃತ್ತಿಪರ ಕೊಲೆಗಡುಕರನ್ನು ಮೀರಿಸುವ ಸೂಕ್ಷ್ಮ ಕೊಲೆಗಡುಕರು ಇನ್ನೂ ಅಪಾಯಕಾರಿ. ಜುಜುಬಿ ಕಳ್ಳನನ್ನು ಹಿಡಿಯುವುದು ಸುಲಭ. ಆದರೆ ಕಾಳಸಂತೆಕೋರನನ್ನು ಹಿಡಿಯುವುದು ತೀರಾ ಕಷ್ಟ.

ಭೂಪಾಲ್‌ನಲ್ಲಿ ಗ್ಯಾಸ್ ದುರಂತವಾಯಿತು. ಧನ್‌ಬಾದ್‌ನಲ್ಲಿ ಕಲ್ಲಿದ್ದಲು ಗಣಿ ದುರಂತವಾಯಿತು. ಅಲ್ಲಿ ಸಾವಿರಾರು ಜನ ಪ್ರಾಣಬಿಟ್ಟರು. ಈ ಸಾವುಗಳಿಗೆ ಕಾರಣೀಭೂತರಾದವರು ಮಾತ್ರ ಕೊಲೆಗಡುಕರೆನಿಸಿಕೊಳ್ಳುವುದಿಲ್ಲ. ಅದಷ್ಟೇ ಅಲ್ಲ ಅದನ್ನು ದುರಂತ ಎಂದು ವ್ಯಾಖ್ಯಾನಿಸಲಾಗಿಬಿಡುತ್ತದೆ. ಕೊಲೆಯನ್ನು ದುರಂತವೆಂದು ಅರ್ಥೈಸುವ ವ್ಯವಸ್ಥೆ ನಮ್ಮಲ್ಲಿದೆ. ಅಂಥ ಕೊಲೆಗಳಲ್ಲಿ ಲೇಬರ್, ಪೊಲೀಸ್, ಆರೋಗ್ಯ, ಪರಿಸರ ಹೀಗೆ ವಿವಿಧ ತಾಂತ್ರಿಕ ಇಲಾಖೆಗಳೆಲ್ಲ ಭಾಗಿಯಾಗಿರುತ್ತವೆ. ಕೊಲೆಗಾರನೊಂದಿಗೆ ಕೈಗೂಡಿಸಿರುತ್ತವೆ. ಕೊಲೆಗಾರನಿಗೆ ಕಾನೂನಿನ ಕೈಗೆ ಸಿಲುಕದಂತೆ ನುಸುಳುದಾರಿಗಳನ್ನು ನಿರ್ಮಿಸಿ ಕೊಟ್ಟಿರುತ್ತವೆ. ಅಂಥ ಕೊಲೆಗಾರ ಕೊಲೆಯ ಪೂರ್ವ ಸಂಚಿನ ಅಂಗವಾಗಿ ಇಲಾಖೆಗಳನ್ನೆಲ್ಲ ತನ್ನ ವಾರಾಂಗನೆಯರನ್ನಾಗಿಸಿಕೊಂಡಿರುತ್ತಾನೆ....

ಇಂಥದೇ ವಿಚಾರಗಳ ಗುಂಗಿನಲ್ಲಿ ಮನೆಯ ಕಡೆ ಹೊರಟಿದ್ದೆ. ರೈಲ್ವೆ ಸ್ಟೇಷನ್‌ನಿಂದ ರಾಜಾಜಿನಗರ ಪ್ರವೇಶಿಸುವಾಗ ಬರುವ ರೈಲ್ವೆ ಅಂಡರ್‌ಬ್ರಿಜ್ ದಾಟಿದ್ದೆ. ಒಳಗುಂಗಿನಲ್ಲಿದ್ದ ನನ್ನ ಮನಸ್ಸಿಗೆ ಮರೆಪೆಟ್ಟು ಹೊಡೆದಂತಹ ಆಕ್ರಂದನ ಚೀತ್ಕಾರಗಳು ಕೇಳಿ ಬರತೊಡಗಿದವು. ಕೆಲವರು ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆ ಪಕ್ಕಕ್ಕೇ ಬಿಟ್ಟು ಓಡತೊಡಗಿದ್ದರು. ನನಗೆ ಗಾಬರಿಯಾಯಿತು. ಅಷ್ಟರಲ್ಲಿ ಆಕಾಶದೆತ್ತರಕ್ಕೆ ಕಪ್ಪು ಹೊಗೆ ದಟ್ಟೈಸಿತು. ಓಡಿ ಹೊರಟಿದ್ದ ಒಬ್ಬನನ್ನು ತಡೆದು, ಏನಿದೆಲ್ಲ ಎಂದು ಪ್ರಶ್ನಿಸಿದೆ.

ಅದಕ್ಕೆ ಅವನು, "ಸರ್ಕಸ್ ಕಂಪನಿಯ ಟೆಂಟ್‌ಗೆ ಬೆಂಕಿ ಬಿದ್ದು ಸ್ಕೂಲ್ ಮಕ್ಕಳೆಲ್ಲ ಬೂದಿಯಾಗಿದ್ದಾರೆ" ಎಂದು ಓಡುತ್ತಲೇ ಹೇಳಿಹೋದ. ಆ ರಸ್ತೆಯಲ್ಲಿ ಚಲಿಸುತ್ತಿದ್ದ ಆಟೋ, ಕಾರು, ಬಸ್ಸುಗಳಲ್ಲೆಲ್ಲ ಗಾಯಾಳುಗಳನ್ನು ತುಂಬತೊಡಗಿದರು. ನಾನಿದ್ದ ಆಟೋರಿಕ್ಷಾಕ್ಕೂ ಗಾಯಾಳು ಮಕ್ಕಳನ್ನು ತುಂಬಿಕೊಂಡೆ. ಏನು, ಏಕೆ, ಎತ್ತ ಎಂದು ವಿಚಾರಿಸ್ಪದೆ ನೇರ ಆಸ್ಪತ್ರೆಯತ್ತ ಹೊರಟೆ. ಕೋತಿ, ಕುದುರೆ, ಒಂಟೆಗಳು ಅರೆಬರೆ ಸುಟ್ಟುಕೊಂಡು ಓಡಿಬರತೊಡಗಿದ್ದರಿಂದ ಗಾಯಾಳುಗಳ ರಕ್ಷಣೆಗಾಗಿ ಓಡುತ್ತಿದ್ದವರಿಗೆ ಅಡಚಣೆಯಾಯಿತು. ಭಯಗ್ರಸ್ತ ಪ್ರಾಣಿಗಳೆಲ್ಲಿ ತಮ್ಮ ಮೇಲೆ ದಾಳಿ ಮಾಡುವವ್ರೋ ಎಂದು ತಮ್ಮ ರಕ್ಷಣೆಗಾಗಿ ಚದುರತೊಡಗಿದರು. ಸಿಂಹಗಳ ಗರ್ಜನೆ, ಆನೆಗಳ ಘೀಳು ಕೇಳಿದವು. ಗಾಯಾಳುಗಳನ್ನು ಇಳಿಸಿಕೊಳ್ಳಲು ಸ್ವಯಂಪ್ರೇರಿತ ಸಾರ್ವಜನಿಕರು ನಿಂತಿದ್ದರು. ವಾಪಸ್ ದುರಂತದ ಸ್ಥಳದೆಡೆ ನಾನು ಆಟೋರಿಕ್ಷಾದಲ್ಲಿ ಬಂದೆ. ಅಗ್ನಿಶಾಮಕ ದಳದವರ ಭರಾಟೆ ನಡೆದಿತ್ತು. ಕಪ್ಪು ಹೊಗೆ ವಿಸ್ತಾರವಾಗಿ ವ್ಯಾಪಿಸಿಕೊಂಡು ದೃಷ್ಟಿಯನ್ನು ಮಸುಕುಗೊಳಿಸಿತ್ತು. ಹೊಗೆಯಿಂದ ಉಸಿರು ಕಟ್ಟಿದಂತಾಗಿತ್ತು. ನಾಲ್ವರು ಯುವಕರು ನನ್ನ ಆಟೋ ತಡೆದು 'ಬೇಗ ಸಾರ್' ಎಂದರು. ಅವರ ಕೈಗಳಲ್ಲಿ ನರಳುತ್ತಿದ್ದ ಮಕ್ಕಳಿದ್ದವು.

ಆಮೇಲೆ ಗೊತ್ತಾಯಿತು ಆ ನಾಲ್ವರು ಹುಡುಗರು ಇಂಜಿನಿಯರಿಂಗ್ ವಿದ್ಯಾರ್ಥಿಗಳೆಂದು. ಸ್ವಯಂ ರಕ್ಷಣೋಪಾಯಗಳ ಬಗ್ಗೆ ಚಿಂತಿಸುವುದಕ್ಕೆ ಅವಕಾಶವೆಲ್ಲಿ? ಮಕ್ಕಳನ್ನು ರಕ್ಷಿಸಲು ಹೋದ ಕೆಲವರಿಗೆ ಜ್ವಾಲೆಗಳ ಬಿಸಿ ತಾಗಿ ಹುಬ್ಬು, ರೆಪ್ಪೆ, ಮೀಸೆಗಳು, ತಲೆಕೂದಲು ಕರುಕಾಗಿದ್ದವು. ತಿಕ್ಕಿಕೊಂಡರೆ ಬೂದಿಯಾಗಿ ಉದುರುತ್ತಿದ್ದವು. ಆ ಹುಡುಗರು ಎತ್ತಿಕೊಂಡಿದ್ದ ಗಾಯಾಳು ಮಕ್ಕಳ ಎಳೆಯ ಕಣ್ಣುಗುಡ್ಡೆಗಳು ಜ್ವಾಲೆಗಳ ಝಳಕ್ಕೆ ಬೆಂದುಹೋಗಿ ಕುರುಡಾಗಿದ್ದವು. ಅವುಗಳ ಸ್ಥಿತಿ ನೋಡಿ ನನ್ನ ಕರುಳು ಕಿತ್ತುಬಂದಿತ್ತು..... ಆ ನಾಲ್ವರು ಯುವಕರಲ್ಲಿ ಇಬ್ಬರಿಗೆ ಸಂಬಂಧಪಟ್ಟ ಮಕ್ಕಳಾಗಿದ್ದವು ಅವು. ಆಟೋರಿಕ್ಷಾದಲ್ಲಿ ಗಾಯಾಳು ಮಕ್ಕಳನ್ನು ಹಾಕಿ ಅವುಗಳೊಂದಿಗೆ ಒಬ್ಬ ಯುವಕ ಮಾತ್ರ ಆಟೋರಿಕ್ಷಾ ಹತ್ತಿದ. ಉಳಿದ ಹುಡುಗರು, "ಬೇರೆ ಮಕ್ಕಳನ್ನು ಹೊತ್ತುಕೊಂಡು ಬರ್ತೀವೆ" ಅಂತ ಓಡಿದರು.

ಆಸ್ಪತ್ರೆಯ ಬಳಿ ಮಕ್ಕಳನ್ನು ಆಟೋರಿಕ್ಷಾದಿಂದ ಇಳಿಸಿದಾಗ ಅವರುಗಳೊಂದಿಗೆ ಕಾಲೇಜ್ ವಿದ್ಯಾರ್ಥಿ, "ಸಾರ್ ನಿಮ್ಮಿಂದ ಬಹಳ ಉಪಕಾರವಾಯ್ತು ಸಾರ್. ನಿಮ್ಮ ವಿಳಾಸ ಕೊಡಿ" ಎಂದ. ನನ್ನ ಫೋನ್ ನಂಬರ್ ಕೊಟ್ಟು ಪುನಃ ದುರಂತದ ಸ್ಥಳದತ್ತ ಹೊರಟೆ.

ಈ ಬಾರಿ ಅಲ್ಲಿ ಗಾಯಾಳು ಮಕ್ಕಳು ಇರಲಿಲ್ಲ. ಸತ್ತ ಮಕ್ಕಳ ದೇಹಗಳನ್ನು ಸಾಲಾಗಿ ಜೋಡಿಸುತ್ತಿದ್ದರು. ಪಾಲಕರು ಬಂದು ಎದೆ ಬಡಿದುಕೊಂಡು ಆಕ್ರಂದಿಸತೊಡಗಿದ್ದರು. ಸಾಲಾಗಿ ಬಿದ್ದಿದ್ದ ಮಕ್ಕಳ ಶವಗಳು ಕ್ರೈಸ್ತರ ಗೋರಿಗಳಂತೆ ಕಾಣುತ್ತಿದ್ದವು. ಇಡೀ ವಾತಾವರಣ ರೌರವ ರುದ್ರಭೂಮಿಯಂತಾಗಿತ್ತು. ಸತ್ತ ಮಕ್ಕಳ ಮುಖಗಳು ಸುಟ್ಟುಹೋಗಿದ್ದವು. ತಮ್ಮ ಮಕ್ಕಳು ಹೌದೋ ಅಲ್ಲವೋ ಎಂದು ಗುರುತಿಸಲು ಕೆಲವರು ಕೈ, ಕಿವಿಯೊಳಗಿನ ಆಭರಣಗಳನ್ನು ಪರೀಕ್ಷಿಸಿ ನೋಡುತ್ತಿದ್ದರು. ಎರಡು ನೂರಕ್ಕೂ ಹೆಚ್ಚು ಮಕ್ಕಳು ಸತ್ತಿದ್ದವು. ಅವುಗಳಲ್ಲಿ ಸುಟ್ಟುಕೊಂಡು ಸತ್ತವಕ್ಕಿಂತ ಕಾಲ್ತುಳಿತಕ್ಕೆ ಸಿಕ್ಕು ಸತ್ತಂಥವೇ ಬಹಳ ಇದ್ದವು. ಕಾಲ್ತುಳಿತಕ್ಕೆ ಮಕ್ಕಳ ಕೋಮಲ ಮುಖಗಳು ಜಜ್ಜಿಹೋಗಿದ್ದವು; ಕಮರಿದ ಗುಲಾಬಿಗಳಂತೆ. ಅವುಗಳು ತೊಟ್ಟಿದ್ದ ಉಡುಪುಗಳಿಂದ ಗುರುತು ಹಚ್ಚುವ ಯತ್ನ ನಡೆದಿತ್ತು. ನನ್ನ ತಲೆ ಸುತ್ತತೊಡಗಿತು. ಮನೆಯತ್ತ ಹೊರಟೆ.

ಆ ದಿನ ಸ್ಕೂಲ್ ಮಕ್ಕಳಿಗಾಗಿ ಕಡೆಯ ಷೋ ಅನ್ನು ಕಡಿಮೆ ಟಿಕೆಟ್ ದರದಲ್ಲಿ ಏರ್ಪಡಿಸಿದ್ದರು. ಇಡೀ ಟೆಂಟ್‌ನ ತುಂಬ ಸ್ಕೂಲ್ ಮಕ್ಕಳೇ ಇದ್ದರು. ಕೆಲವರು ತಂದೆ-ತಾಯಿಗಳು, ಬಂಧುಗಳು ಮಕ್ಕಳೊಂದಿಗೆ ಹೋಗಿ ದುರಂತಕ್ಕೆ ಒಳಗಾಗಿದ್ದರು.

ಮಾರನೇ ದಿನ ಪೇಪರ್‌ಗಳಲ್ಲಿ ದುರಂತದ ವಿವರಗಳನ್ನು ಓದಿದೆ. ನನಗೆ ಕಣ್ಣಾರೆ ನೋಡಲು ಸಿಕ್ಕಿದ್ದಕ್ಕಿಂತ ಹೆಚ್ಚಿನ ದುರಂತ ಅದಾಗಿತ್ತು. ಇಡೀ ಕಾಡನ್ನೇ ನಡುಗಿಸುವ ಹುಲಿ, ಸಿಂಹಗಳು ತಂದೂರಿ ಕೋಳಿಯಂತೆ ಬೆಂದುಬಿದ್ದಿದ್ದವು !

ಬೆಂಕಿಗೆ ಸರ್ಕಸ್ ಟೆಂಟ್ ಮೇಲುಗಡೆಯಿಂದ ಹಾದು ಹೋಗಿದ್ದ ಹೈಟೆನ್ಷನ್ ವೈರ್‌ಗಳೇ ಕಾರಣ ಎಂದು ಪತ್ತೆ ಹಚ್ಚಲಾಗಿತ್ತು. ಶರಾವತಿಯ ವಿದ್ಯುತ್ ಸ್ಥಾವರದಿಂದ ಹೊರಡುವ ಹೈಟೆನ್ಷನ್ ವೈರ್‌ಗಳವು. ಅವುಗಳಲ್ಲಿ ಎಂಥ ವಿದ್ಯುತ್ ಪ್ರವಾಹ ವಿರುತ್ತದೆಂದರೆ, ಅವನ್ನು ಮುಟ್ಟುವುದೇ ಬೇಕಿಲ್ಲ. ಐದಡಿ ದೂರಕ್ಕೂ ತನ್ನ ಕೆನ್ನಾಲಿಗೆ ಚಾಚಿ ಸಿಕ್ಕಿದ್ದನ್ನೆಲ್ಲ ತನ್ನ ಜಠರಾಗ್ನಿಗೆ ಸೇರಿಸಿಕೊಳ್ಳುವಂಥ ವೈರ್‌ಗಳು ಅವು.

ಹೈಕೋರ್ಟ್ ಜಸ್ಟಿಸ್ ಎನ್.ಆರ್. ಕುದೂರ್ ನೇತೃತ್ವದಲ್ಲಿ ದುರಂತದ ವಿಚಾರಣಾ ಆಯೋಗ ನೇಮಕವಾಯಿತು. ಸೆಷನ್ಸ್ ಜಡ್ಜ್ ಆಗಿದ್ದ ಬಿ.ಎನ್. ಕೃಷ್ಣನ್ ಆಯೋಗದ ಸೆಕ್ರೆಟರಿಯಾದರು.

ಆಗ ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರಿಗೆ ಮನುಷ್ಯರ

ಗುಂಡಿಗೆಯಿರಲಿಲ್ಲವೆನಿಸುತ್ತದೆ. ನೂರಾರು ಮಕ್ಕಳು ಕ್ರಿಮಿಕೀಟಗಳಂತೆ ಸುಟ್ಟುಕೊಂಡು ಸತ್ತರೂ, ರಾಜ್ಯದಾದ್ಯಂತ ಪೊಲೀಸರು ರೈತರ ರಕ್ತ ಹರಿಸಿದರೂ ಅದನ್ನೆಲ್ಲ ನೋಡಿ ತಮ್ಮ ಖಳತ್ವದ ಮೀಸೆಯಲ್ಲಿಯೇ ನಗುತ್ತಿದ್ದರು. ಆ ಸಂದರ್ಭದಲ್ಲಿ ನನಗೆ ಕಂಡ ಅವರ ನಗುವಿನಲ್ಲಿಯ ಕ್ರೌರ್ಯ ಮಾತಿಗೆ ಮೀರಿದ್ದು.

ಪ್ರೊಫೆಸರ್ ಲಕ್ಷ್ಮೀಸಾಗರ್ ಆಯೋಗದ ಮುಂದೆ ವಿವಿಧ ಇಲಾಖೆಗಳ ವಿರುದ್ಧ ಅಫಿಡವಿಟ್ ಹಾಕಿದರು ಮತ್ತು ಅಫಿಡವಿಟ್ ಹಾಕುವ ಸಾರ್ವಜನಿಕರಿಗೆ ಮುಂದಾಳತ್ವ ವಹಿಸಿದರು. ಎಲ್ಲರೂ ಕೆಇಬಿ, ರೈಲ್ವೆ ಹೀಗೆ ವಿವಿಧ ಇಲಾಖೆಗಳಲ್ಲದೆ ಕಾರ್ಪೊರೇಷನ್ ವಿರುದ್ಧ ಅಫಿಡವಿಟ್ ಹಾಕಿದರು. ಆದರೆ ಯಾರೂ ಪೊಲೀಸ್ ಇಲಾಖೆಯ ವಿರುದ್ಧ ಅಫಿಡವಿಟ್ ಹಾಕಿರಲಿಲ್ಲ. ಆಗ ನಾನು ಪೊಲೀಸ್ ಇಲಾಖೆಯ ವಿರುದ್ಧ ಅಫಿಡವಿಟ್ ಹಾಕಿದೆ. ನನ್ನ ಪರವಾಗಿ ಪ್ರೊ. ಎಂ.ಆರ್. ಜನಾರ್ದನ್ ಇದ್ದರು. ಆಗ ಪೊಲೀಸ್ ಕಮೀಷನರ್ ಆಗಿದ್ದವರು ಗರುಡಾಚಾರ್.

ವೀನಸ್ ಸರ್ಕಸ್ ಕಂಪನಿಯ ಮಾಲೀಕ ಮತ್ತು ಮ್ಯಾನೇಜರ್‌ಗಳನ್ನು ಆರೋಪಿಗಳನ್ನಾಗಿಸಲಾಗಿತ್ತು. ಮ್ಯಾನೇಜರ್ ಪರವಾಗಿ ಸಿ.ವಿ. ಸುಬ್ಬರಾವ್ ಮತ್ತು ಸಿ.ವಿ. ನಾಗೇಶ್ ವಕಾಲತ್ತು ಹಾಕಿದ್ದರೆ, ಮಾಲೀಕನ ಪರವಾಗಿ ರತನ್‌ಲಾಲ್ ಎನ್ನುವ ಕೇರಳದ ಲಾಯರ್ ವಕಾಲತ್ತು ಹಾಕಿದ್ದರು.

ವಿಚಾರಣೆ ಒಂದೂವರೆ ತಿಂಗಳುಗಳವರೆಗೆ ನಡೆಯಿತು. ಹೈಟೆನ್ಷನ್ ವೈರ್‌ಗಳ ಕೆಳಗೆ ರೈಲ್ವೆ ಹಳಿಗಳ ಪಕ್ಕ ಮತ್ತು ಫುಟ್‌ಪಾತ್‌ಗಳಿಗೆ ಅಂಟಿಕೊಂಡಂತೆ ಸರ್ಕಸ್ ಡೇರೆ ಹಾಕುವುದು ಸರಿಯಲ್ಲವೆಂದು ಸಾರ್ವಜನಿಕರಿಂದ ಆಕ್ಷೇಪಣೆಗಳು ಬಂದಿದ್ದಾಗ್ಯೂ ಅವನ್ನೆಲ್ಲ ನಿರ್ಲಕ್ಷಿಸಿ ಸರಕಾರೀ ಇಲಾಖೆಗಳು ಸರ್ಕಸ್ ಕಂಪನಿಗೆ ಟೆಂಟ್ ಹಾಕಲು ಎನ್. ಓ. ಸಿ. ನೀಡಿದ್ದವು. ರೈಲು ನಿಲ್ದಾಣ ಮತ್ತು ಹಳಿಗಳಿಂದ ಇಂತಿಷ್ಟು ದೂರದಲ್ಲಿ ಮಾತ್ರ ಅಂಥ ಟೆಂಟ್‌ಗಳನ್ನು ಹಾಕಬೇಕೆನ್ನುವ ನಿಯಮಗಳಿದ್ದರೂ ರೈಲ್ವೆ ಇಲಾಖೆಯ ಅಧಿಕಾರಿಗಳು ಲಂಚ ತಿಂದು ಎನ್. ಓ. ಸಿ. ನೀಡಿದ್ದರು.

ಏತನ್ಮಧ್ಯೆ ಒಂದು ಬೆಳಗ್ಗೆ ನನ್ನ ಆಫೀಸ್‌ಗೆ ಅಂದು ದುರಂತ ನಡೆದಾಗ ಕಂಡ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರತ್ಯಕ್ಷರಾದರು. ಅವರ ಮುಖಗಳು ಅಸಹನೆಯಿಂದ ಸಿಡಿಮದ್ದಿನಂತಾಗಿದ್ದವು.

"ಸಾರ್ ನಾವು...." ಎಂದು ಅವರು ಒಮ್ಮೆಗೇ ಪರಿಚಯ ಹೇಳಿಕೊಳ್ಳಲು ಶುರು ಮಾಡಿದರು. ಆಗ ನಾನು, "ಬನ್ನಿ ಕೂಡಿ, ನಿಮ್ಮ ಪರಿಚಯ ಅಷ್ಟು ಬೇಗ ಮಾಸಿಹೋಗುತ್ತದೆಯೇ ನನಗೆ! ಹೇಗಿವೆ ಮಕ್ಕಳು?" ಎಂದು ಪ್ರಶ್ನಿಸಿದೆ.

ಅವರಲ್ಲೊಬ್ಬ, "ನನ್ನಕ್ಕನ ಎರಡೂ ಮಕ್ಕಳು ಸತ್ತುಹೋದವು...." ಎನ್ನುತ್ತ ಇನ್ನೊಬ್ಬನೆಡೆಗೆ ಕೈ ತೋರಿಸುತ್ತ "ಇವನಣ್ಣನ ಒಬ್ಬನೇ ಮಗನೂ ಸತ್ತ. ಉಳಿದವಳು ಅವನ ತಂಗಿ ಮಾತ್ರ.... ಅದೂ ಶಾಶ್ವತ ಕುರುಡಿಯಾಗಿ...." ಎಂದಾಗ ಅವನ ಕಣ್ಣುಗಳಲ್ಲಿ ನೀರು ಉಕ್ಕಿಬಂತು. ಆ ನೀರು ಉಕ್ಕಿದ್ದು ದುಃಖದಿಂದ ಅಲ್ಲ ಕ್ರೋಧದಿಂದ ಎನಿಸಿತು.

ಮತ್ತೊಬ್ಬ ಹೇಳಿದ, "ವಿಚಾರಣಾ ಆಯೋಗ ನೀಡಿದ ವರದಿಯನ್ನು ಈ ಸರ್ಕಾರ ಕಸದ ಬುಟ್ಟಿಗೆ ಎಸೆದಿದೆ. ಈ ತನಿಖೆ, ಆಯೋಗ, ವರದಿಗಳೆಲ್ಲ ಬರೀ ನಾಟಕ. ಇವುಗಳಿಂದ ನಮಗೆ ನ್ಯಾಯ ಸಿಗೋಲ್ಲ. ನ್ಯಾಯ ಭಿಕ್ಷೆಯಿಂದ ದಕ್ಕೋಲ್ಲ; ಬಲಾತ್ಕಾರದಿಂದ ಕಿತ್ತಿಕೋಬೇಕು ಸಾರ್.... ನೀವು ಹೂಂ ಅನ್ನಿ ಇವತ್ತೇ ಆ ಸರ್ಕಸ್ ಕಂಪನಿಯ ಮ್ಯಾನೇಜರ್‌ಗಳನ್ನು ಮುಗಿಸಿ ಬರ್ತೀವಿ...." ಎಂದ ಹಲ್ಲು ಕಡಿಯುತ್ತ.

ನಾನು ರಕ್ಷಿಸಲೆತ್ನಿಸಿದ ಮಕ್ಕಳಲ್ಲಿ ಮೂವರು ಸತ್ತ ವಿಷಯ ನನ್ನ ಒಳಗನ್ನು ಕಲಕಿತು. ಆ ಮಕ್ಕಳು ನನಗೆ ಸಂಬಂದಿಸಿದವಾಗಿದ್ದರೆ ನನಗೂ ಹೀಗೇ ಅನ್ನಿಸುತ್ತಿತ್ತಲ್ಲವೇ ಎಂದುಕೊಂಡೆ.

ಕಾಫಿ ತರಿಸಿ ಕುಡಿಸಿ ಸಮಾಧಾನ ಹೇಳಿಕಳಿಸಿದೆ ಆ ಹುಡುಗರಿಗೆ.

ಆ ಹುಡುಗರ ಬೆನ್ನಟ್ಟಿದ ನನ್ನ ಕಣ್ಣುಗಳಿಗೆ ಮಂಪರು ಕವಿದು, ಮನಸ್ಸು ಚಿಪ್ಪಿನೊಳಗಿನ ಆಮೆಯಂತಾಯಿತು. ಕೊಲೆಗೆ ಎಂಥೆಂಥ ಕಾರಣಗಳು ! ಎಂಥೆಂಥ ಪ್ರೇರಣೆಗಳು ! ಕೊಲೆಯ ಹಸಿವು ಹೂಂಕರಿಸುವ ಬಗೆಯೇ ವಿಚಿತ್ರ ! ಕೊಲೆಗೆ ಒಂದು ಮುಖವಲ್ಲ ಹತ್ತು ಮುಖಗಳು; ರಾವಣನಂತೆ.

ಕೊಲೆಯ ಹಸಿವನ್ನು ಇಂಗಿಸುವ ಶಕ್ತಿಯಿರುವುದು ಕೊಲೆಗೆ ಮಾತ್ರ ! ಇದು ಮಾನವನಿಗೆ ಅನಿವಾರ್ಯವೇ?

"ಸಾರ್ ಕೋರ್ಟಿಗೆ ಹೊತ್ತಾಯಿತು....." ಎಂದು ನನ್ನ ಜ್ಯೂನಿಯರ್ ಹೇಳಿದಾಗಲೇ ಫಕ್ಕನೆ ಎಚ್ಚರಗೊಂಡೆ.

64

ನರಬಲಿಯ ಸಾಧು ಲಕ್ಷ್ಮಣಗಿರಿ

ಕರ್ನಾಟಕದ ಸಂಸದೀಯ ಇತಿಹಾಸದಲ್ಲಿ ಗುಂಡೂರಾವ್ ಸರಕಾರ [illegible] ಕ್ರೂರ ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಿದೆ. ನರಗುಂದ ಬಂಡಾಯದಲ್ಲಿ ರೈತರ ರಕ್ತ ಹರಿಸಿತು, ವೀನಸ್ ಸರ್ಕಸ್ ದುರಂತದಲ್ಲಿ ಎರಡು ನೂರಕ್ಕೂ ಹೆಚ್ಚು ಕಂದಮ್ಮಗಳನ್ನು ಕಮರಿಸಿ ಹಾಕಿತು.

ಕದ್ದುಮುಚ್ಚಿ ಕುಕೃತ್ಯಗಳನ್ನು ಮಾಡುವ ರಾಜಕಾರಣಿಗಳು ಗುಂಡೂರಾವ್ ಅವರ ಬೆತ್ತಲೆ ನೃತ್ಯ ನೋಡಿ ಹೌಹಾರಿದ್ದರು. ಗುಂಡೂರಾವ್ "ನಾನು ಕುರಿಕೋಳಿ ತಿನ್ನುವ ಬ್ರಾಹ್ಮಣ" ಎಂದು ಗುಟುರು ಹಾಕಿದ್ದರು. ಕೋಳಿ ತಿಂದಿದ್ದೇನೆಂದು ತೋರಿಸಿಕೊಳ್ಳಲು ಕೊರಳಲ್ಲಿ ಎಲುಬುಗಳನ್ನು ಕಟ್ಟಿಕೊಂಡು ಅಡ್ಡಾಡುವ ಜಾಯಮಾನ ತಮ್ಮದು ಎನ್ನುವುದನ್ನು ಗುಂಡೂರಾವ್ ಪ್ರದರ್ಶಿಸಿದ್ದರು. ತಮ್ಮ ಸಂಪುಟದಲ್ಲಿ ಸಚಿವೆಯಾಗಿದ್ದ ರೇಣುಕಾ ರಾಜೇಂದ್ರನ್ ಅವರನ್ನು ರಾಜಕೀಯ ಪ್ರವಾಸಗಳಿಗೆ ತಮ್ಮೊಂದಿಗೆ ಹೆಲಿಕಾಪ್ಟರ್‌ನಲ್ಲಿ ಕರೆದೊಯ್ಯುತ್ತಿದ್ದುದು ರಾಜಕೀಯ ವಲಯದಲ್ಲಿ ಗಾಸಿಪ್ ಸೃಷ್ಟಿಗೆ ಕಾರಣವಾಗಿತ್ತು. ರಾಜಕೀಯದ ಖಳನಾಯಕನ

ಇಮೇಜ್ ಅನ್ನು ಪಡೆದುಕೊಳ್ಳಲು ಗುಂಡೂರಾವ್ ಹೆಣಗುತ್ತಿದ್ದಾರೇನೋ ಎನಿಸುತ್ತಿತ್ತು ಅವರ ನಡವಳಿಕೆಗಳನ್ನು ನೋಡಿದರೆ.

ಗುಂಡೂರಾವ್ ಸರಕಾರವನ್ನು ಪೇಚಿಗೆ ಸಿಲುಕಿಸಿದ ಮತ್ತೊಂದು ಪ್ರಕರಣ ಜರುಗಿತು. ಅದೇ ಸಾಧು ಲಕ್ಷ್ಮಣಗಿರಿಯ ಲಾಕಪ್ ಡೆತ್ ಪ್ರಕರಣ.

ಸಾಧು ಲಕ್ಷ್ಮಣಗಿರಿ ಬೆಂಗಳೂರಿನ ಓಕಳಿಪುರ ಮತ್ತು ರಾಮಚಂದ್ರಪುರದ ಮಧ್ಯದಲ್ಲಿರುವ ಸ್ವತಂತ್ರಪಾಳ್ಯಕ್ಕೆ ಹೊಂದಿಕೊಂಡಿದ್ದ ಸ್ಮಶಾನದಲ್ಲಿ ಮನೆ ಮಾಡಿಕೊಂಡಿದ್ದ. ಅವನಿಗೆ ಹೆಂಡತಿ, ಮಕ್ಕಳಿರಲಿಲ್ಲ. ದೇವಿ ಥಿಯೇಟರ್ ಹಿಂಭಾಗದ ಪ್ರದೇಶದ ಈ ಸ್ಮಶಾನದ ಸುತ್ತ ಮನೆಗಳು ಕಟ್ಟಲ್ಪಟ್ಟಿದ್ದವು. ಹೀಗಾಗಿ ಆ ಸ್ಮಶಾನ ಒಂದು ನಡುಗುಡ್ಡೆಯಂತೆ ಕಾಣತೊಡಗಿತು.

ಆ ಸ್ಮಶಾನಕ್ಕೆ ದಟ್ಟವಾದ ರೋಜಿಬೇಲಿ. ದಟ್ಟ ಬೇಲಿಯಿದ್ದ ಸ್ಮಶಾನದ ಮೂಲೆಯೊಂದರಲ್ಲಿ ಸಾಧುವಿನ ಮನೆ. ಮನೆಯಲ್ಲಿ ಆಕಳುಗಳನ್ನು ಕಟ್ಟಿಕೊಂಡಿದ್ದ. ಈ ಸಾಧು ಹೆಸರಿಗೆ ತಕ್ಕಂತೆ ಸಾಧುಪ್ರಾಣಿಯಂತೆ ಕಾಣುತ್ತಿದ್ದ. ಯಾರಿಗೂ ಮನನೋಯಿಸಿ ಮಾತಾಡುತ್ತಿರಲಿಲ್ಲ. ಹೆಚ್ಚು ಮಾತಾಡುತ್ತಿರಲಿಲ್ಲ.

ಒಮ್ಮಿಂದೊಮ್ಮೆಗೇ ಪ್ರಚಾರಕ್ಕೆ ಬಂದ ಸಾಧು ಇವನಲ್ಲ. ಅರವತ್ತರ ಗಡಿಯಲ್ಲಿದ್ದ ಸಾಧು ತನ್ನ ಮನೆ ಮುಂದೆ ಬರುವ ಚಿಕ್ಕಮಕ್ಕಳಿಗೆಲ್ಲ ಪುಕ್ಕಟೆಯಾಗಿ ಆಕಳ ಹಾಲನ್ನು ಕೊಡುತ್ತಿದ್ದ. ಕೊಳಗೇರಿ ನಿವಾಸಿಗಳ ಮಕ್ಕಳಿಗೆ ಪುಕ್ಕಟೆ ಹಾಲು ಸಿಕ್ಕುವುದೆಂದರೆ ಸುಮ್ಮನೆಯೇ? ಎಲ್ಲ ಹಾಲು ಮುಗಿಯಿತು ಎಂದು ಖಾಲಿ ಪಾತ್ರೆಯನ್ನು ಬೋರಲು ಹಾಕಿ ತೋರಿಸುವವರೆಗೆ ಅಲ್ಲಿಂದ ಮಕ್ಕಳು ಕದಲುತ್ತಿರಲಿಲ್ಲ. ಮಕ್ಕಳಿಗೆ ಪೆಪ್ಪರ್‌ಮಿಂಟ್, ಕಲ್ಲುಸಕ್ಕರೆ, ಕೊಬ್ಬರಿ, ಮಿಠಾಯಿಗಳನ್ನೂ ಕೊಡುತ್ತಿದ್ದ. ಹೀಗಾಗಿ ಆ ಸ್ಮಶಾನದ ಸುತ್ತಮುತ್ತಲ ಕೊಳಗೇರಿ ಪ್ರದೇಶದ ಮಕ್ಕಳಿಗೆಲ್ಲ ಕಿಂದರಜೋಗಿಯಂತಾಗಿಬಿಟ್ಟಿದ್ದ.

ತಿನಿಸು, ಹಾಲುಗಳನ್ನು ಪಟಾಯಿಸಿದ ಮಕ್ಕಳು ತಮ್ಮ ತಾಯಂದಿರಿಗೆ ಸಾಧುವಿನ ಒಳ್ಳೆಯತನದ ವರದಿ ಮಾಡತೊಡಗಿದವು. ಸಾಧು ದೇವಿಯ ಪೂಜೆ ಮಾಡಿ ಬಗೆಬಗೆಯ ಪ್ರಸಾದಗಳನ್ನು ಕೊಡುತ್ತಾನೆಂದು ಹೇಳಿದವು. ಒಟ್ಟಾರೆ ಸಾಧುವಿನ ಪ್ರಚಾರಕರಾಗಿಬಿಟ್ಟರು ಕೊಳಗೇರಿ ಮಕ್ಕಳು. ಮಕ್ಕಳ ಮಾತುಗಳಿಂದ ಪ್ರಭಾವಿತಗೊಂಡ ತಾಯಂದಿರು ಸಾಧುವಿನ ಬಳಿ ಕುತೂಹಲದಿಂದ ಬಂದು ಹೋಗತೊಡಗಿದರು. ಬಂದ ಹೆಣ್ಣುಮಕ್ಕಳಿಗೆ ಬಹಳ ಮರ್ಯಾದೆ ಕೊಟ್ಟು ಮಾತಾಡಿಸುತ್ತಿದ್ದ. ಮಾತುಮಾತಿಗೆ ಅವರನ್ನು ತಾಯಿ, ಅಮ್ಮಾ, ದೇವಿ ಎಂದು

ಸಂಬೋಧಿಸುತ್ತಿದ್ದ. ಬಡ ತಾಯಂದಿರು ತಮ್ಮ ಚಿಕ್ಕ ಕೂಸುಗಳಿಗೆ ಬಾಲಾರಿಷ್ಟ ಏನು ಮಾಡುವುದು ಎಂದು ಕೇಳಿದರೆ ಸಾಧು ತಾಯತವನ್ನು ಕೊಡುತ್ತಿದ್ದ. ಸಾಧುವಿನ ತಾಯತಕ್ಕೆ ಕೂಸುಗಳ ಕಾಯಿಲೆಗಳು ವಾಸಿಯಾಗುತ್ತವೆಂದು ಪ್ರತೀತಿಯಾಯಿತು. ಹುಣ್ಣಿಮೆ ಮತ್ತು ಅಮಾವಾಸ್ಯೆಗಳಿಗೆ ಹೆಣ್ಣುಮಕ್ಕಳು ಸಾಧುವಿನ ಮನೆಯಲ್ಲಿ ಮುಕ್ಕರಿಸಿಕೊಳ್ಳತೊಡಗಿದರು. ಸಾಧು ಯಾರಿಗೂ ದುಡ್ಡು ಕೇಳುತ್ತಿರಲಿಲ್ಲ. ಅವನ ಮೇಲೆ ಜನರ ವಿಶ್ವಾಸ ಬೇಗ ಕುದುರುವುದಕ್ಕೆ ಇದೂ ಒಂದು ಕಾರಣವಾಗಿತ್ತು. ಸಾಧು ಕೇಳದಿದ್ದರೂ ಹೆಣ್ಣುಮಕ್ಕಳು ಬಿಡಿಗಾಸುಗಳನ್ನು ಅವನು ಆರಾಧಿಸುತ್ತಿದ್ದ ದೇವಿಯ ಮುಂದೆ ಹಾಕಿ ಹೋಗುತ್ತಿದ್ದರು. ಹಾಗೆ ಸಂಗ್ರಹವಾಗುತ್ತಿದ್ದ ನಾಣ್ಯಗಳನ್ನು ಮುಷ್ಟಿಯಲ್ಲಿ ತೆಗೆದುಕೊಂಡು ಯಾವುದಾದರೂ ಹುಡುಗನನ್ನು ಬಳಿಗೆ ಕರೆದು ಅವನ ಜೇಬಿಗೆ ಸುರಿದುಬಿಡುತ್ತಿದ್ದ. ಅಂದು ಆ ಹುಡುಗನದು ಹಬ್ಬವೇ ಹಬ್ಬ. ಎಲ್ಲ ಹುಡುಗರೂ ಅವನ ಸುತ್ತಲೇ ತಿರುಗುತ್ತಿದ್ದರು. ಪೆಪ್ಪರ್‌ಮಿಂಟು, ಕೋಡುಬಳೆ, ಸಂಡಿಗೆ, ಹಪ್ಪಳ, ಬೊಂಬೆ, ಮಿಠಾಯಿಗಳನ್ನು ಕೊಡಿಸೆಂದು ಪೀಡಿಸುತ್ತ.

ತಮ್ಮ ಕಷ್ಟ ಪರಿಹಾರ ಕೇಳಿ ಬರುತ್ತಿದ್ದ ಹೆಂಗಸರು ಸಾಧುವಿನ ನಡವಳಿಕೆ, ಮಾತುಗಳಿಂದ ಶೀಘ್ರವೇ ಪ್ರಭಾವಿತಗೊಳ್ಳುತ್ತಿದ್ದರು. ಹೀಗಾಗಿ ಅವನ ತಾಯತದ ಬಗ್ಗೆ ತಮ್ಮದೇ ಕಪೋಲಕಲ್ಪನೆಗಳನ್ನು ಸೃಷ್ಟಿಸಿಕೊಂಡು ಪ್ರಚಾರ ಮಾಡುತ್ತಿದ್ದರು. ಕೊಳಗೇರಿಯ ಹೆಂಗಸರು ತಾವು ಕೆಲಸಕ್ಕೆ ಹೋಗುತ್ತಿದ್ದ ಶ್ರೀಮಂತರ ಮನೆಯ ಹೆಂಗಸರ ಮುಂದೆಯೂ ಸಾಧುವಿನ ಗುಣಗಾನ ಶುರುಮಾಡಿದರು. ಬೇರೆ ಹೆಂಗಸರ ಸಂಗ ಬಯಸಿ ಹೋಗುವ ತಮ್ಮ ಗಂಡಂದಿರನ್ನು ವಶೀಕರಣ ಮಾಡಿಕೊಳ್ಳಲೋ, ತಮ್ಮ ಮಗನ ಕುಡಿತವನ್ನು ಬಿಡಿಸಲೋ, ಮಗಳಿಗೆ ಗಂಡು ಸಿಗಲೆಂದೋ ಇತ್ಯಾದಿ ಇತ್ಯಾದಿ ಬೇಡಿಕೆಗಳನ್ನು ಹೊತ್ತು ಶ್ರೀಮಂತರ ಮನೆಯ ಹೆಂಗಸರು ಗೌಪ್ಯವಾಗಿ ಸಾಧುವಿನ ಬಳಿಗೆ ಬಂದು ಹೋಗತೊಡಗಿದರು. ಈ ಎಲ್ಲ ಬೆಳವಣಿಗೆಗಳನ್ನು ಕಣ್ಮುಂದೆ ಕಂಡ ಆ ಪ್ರದೇಶದ ಗಂಡಸರೂ ಅವನ ಬಳಿಗೆ ಬರತೊಡಗಿದರು. ಕಳ್ಳಭಟ್ಟಿ, ಪಿಕ್‌ಪಾಕೆಟ್, ಬಾಡಿಗೆ, ರೌಡಿತನಗಳಲ್ಲಿ ಶುಕ್ರದೆಸೆ ತಂದುಕೊಡಬೇಕೆಂದು ಸಾಧುವಿಗೆ ಗಂಟುಬಿದ್ದರು. ಕೊಳಗೇರಿಯ ಕೆಲವು ಯುವಕರು ತಾವು ಕಣ್ಣಿಟ್ಟ ಶ್ರೀಮಂತರ ಮನೆಯ ಕನ್ಯೆಯನ್ನು ವಶೀಕರಣ ಮಾಡಿಕೊಡಬೇಕೆಂದು ಪಟ್ಟು ಹಿಡಿದರು.

ಜನ ತನ್ನನ್ನು ಸರ್ವಶಕ್ತ ಎಂದು ಭ್ರಮಿಸಿಕೊಂಡು ಸಾಲುಗಟ್ಟಿ ತನ್ನ ಮನೆಯ ಮುಂದೆ ನಿಂತುಕೊಳ್ಳತೊಡಗಿದ್ದನ್ನು ನೋಡಿ ಸಾಧುವಿಗೆ ಒಳಗೇ ಖುಷಿಯಾಗತೊಡಗಿತು. ತನ್ನಲ್ಲಿ ಏನೂ ಶಕ್ತಿಯಿಲ್ಲದಿದ್ದರೂ ಜನರಿಗೆ ತಾನು

ನೀಡುವ ತಾಯತದಿಂದ ಕೆಲಸಗಳಾಗುತ್ತಿವೆ! ಅದು ಜನರ ಭ್ರಮೆಯೇ ಸರಿ ಎಂದುಕೊಂಡ !

ನಾನು ಈ ಸ್ಮಶಾನದಲ್ಲಿ ಬಂದು ಬೇರೂರಿದ್ದೇ ಅತೀತವಾದ ಶಕ್ತಿಯನ್ನು ವಶೀಕರಿಸಿಕೊಳ್ಳುವುದಕ್ಕೋಸ್ಕರ. ಆ ಶಕ್ತಿಯ ವಶೀಕರಣ ಈವರೆಗೆ ಆಗಲಿಲ್ಲ; ಆದರೆ, ಜನ ಮಾತ್ರ ನನ್ನ ವಶೀಕರಣಕ್ಕೊಳಗಾಗಿದ್ದಾರೆ! ನಿಜವಾಗಿಯೂ ಆ ಸ್ಮಶಾನತಾರಾಳ ವಶೀಕರಣವಾಗಿಬಿಟ್ಟರೆ ನನ್ನನ್ನು ಹಿಡಿಯುವವರು ಈ ಜಗದಲ್ಲಿರುವರೆ ಎಂದು ಯೋಚಿಸಿ ಉಬ್ಬಿಹೋದ. ಈ ಜನರ ಬಂದುಹೋಗುವಿಕೆಯಿಂದಾಗಿ ನನ್ನ ವಶೀಕರಣದ ಸಾಧನೆಗೆ ಅಡ್ಡಿಯುಂಟಾಗುತ್ತಿದೆ ಎಂದುಕೊಂಡ. ವಿಶ್ವಾಸವಿಟ್ಟುಕೊಳ್ಳುವುದು ನನ್ನ ವಶೀಕರಣದ ಸಾಧನೆಗೆ ಸಹಾಯಕವೇ ಆಗುತ್ತದಲ್ಲವೇ ಎಂದೂ ಯೋಚಿಸಿದ. ನನ್ನ ಗುಪ್ತ ಶವಸಾಧನೆಗೆ ಜನರ ವಿಶ್ವಾಸದ ಕೋಟೆ ರಕ್ಷಣೆಗೆ ಬರುತ್ತದೆ. ಇಲ್ಲದಿದ್ದಲ್ಲಿ ಜನ ನನ್ನನ್ನು ಅಟ್ಟಾಡಿಸಿ ಕೊಂದುಹಾಕಿಯಾರಲ್ಲವೆ ಎಂದೂ ಪ್ರಶ್ನಿಸಿಕೊಂಡ.

ನ್ಯಾಯಯುತವಾಗಿ ದುಡಿದು ತಿನ್ನುವ ಕೊಳಗೇರಿಯ ಶ್ರಮಿಕ ಜನರ ಒಂದು ಗುಂಪು ಮಾತ್ರ ಸಾಧುವನ್ನು ಲೇವಡಿ ಮಾಡಿ ಮಾತಾಡುತ್ತಿತ್ತು. ಸಾಧುವಿನ ಅತೀಂದ್ರಿಯ ಶಕ್ತಿಯನ್ನು ಹೊಗಳುವವರಿಗೆ, "ಆ ನಿಮ್ಮ ಸಾಧುವಿಗೆ ಅಷ್ಟು ಶಕ್ತಿಯಿದ್ದರೆ ನಮ್ಮ ಮಾಲೀಕನ ಮೇಲೆ ಮೋಡಿ ಮಾಡಲಿ ನೋಡುವಾ. ನಾವು ಕೆಲಸಕ್ಕೆ ಹೋಗದಿದ್ದರೂ ಮಾಲೀಕ ನಮಗೆ ಸಂಬಳ ಕೊಡಬೇಕು. ಹಾಗೆ ಮಾಡಿ ತೋರಿಸಲಿ ನಾವೂ ನಿಮ್ಮ ಸಾಧುವಿನ ಶಿಷ್ಯರಾಗಿಬಿಡ್ತೇವೆ. ದುಡಿಯೋಕೆ ಹೋಗೋದು ಬಿಟ್ಟು ಅವನ ಮನೆ ಮುಂದೆ ಭಜನೆ ಶುರುಮಾಡ್ತೇವೆ" ಎಂದು ನಗುತ್ತ ಹೇಳುತ್ತಿದ್ದರು. "ಬುರುಡೆ ಬಾಬಾ" ಬೀದಿನಾಟಕ ತಂಡದವರು ಕೊಳಗೇರಿಯಲ್ಲಿ ಪ್ರದರ್ಶನ ನೀಡಿದಾಗ, "ಇಲ್ಲೂ ಒಬ್ಬ ಸಾಧು ನಮ್ಮ ಜನರ ತಲೆ ಕೆಡಿಸವ್ನೆ. ಅವ್ರುನ್ ಮ್ಯಾಕೂ ಒಂದು ನಾಟಕ ಮಾಡಿ" ಎಂದು ಒತ್ತಾಯಿಸಿದರು.

ಈ ವಿವಾದಗಳ ನಡುವೆಯೂ ಸಾಧುವಿನ ಪ್ರಭಾವ ದಿನದಿಂದ ದಿನಕ್ಕೆ ಪಸರಿಸುತ್ತಾ ಹೋಯಿತು. ಅನೇಕ ಶ್ರೀಮಂತರು ಸಾಧುವಿನ ಮನೆಗೆ ಬರಲು ಮುಜುಗರಪಟ್ಟುಕೊಂಡು ಅವನನ್ನೇ ತಮ್ಮ ಮನೆಗೆ ಕರೆಸಿಕೊಳ್ಳತೊಡಗಿದರು. ಸಾಲ ವಾಪಸು ನೀಡದವನ ಮೇಲೆ, ಬಾಡಿಗೆ ಹಿಡಿದು ಮನೆ ಬಿಡದೆ ಕೂತವನ ಮೇಲೆ ಮಾಟ ಮಾಡಿಸತೊಡಗಿದರು ಸಾಧುವಿನ ಮೂಲಕ.

ದೊಡ್ಡ ವ್ಯಾಪಾರೀ ಕುಳಗಳು ರಾಜಕಾರಣಿಗಳ ಬಳಿಗೆ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಹೋದಾಗ, ಸಾಧು ಲಕ್ಷ್ಮಣಗಿರಿಯ ಗುಣಗಾನ ಮಾಡಿ

ರಾಜಕಾರಣಿಗಳನ್ನು ಪ್ರಚೋದಿಸತೊಡಗಿದರು. ಸಾಧುವಿನ ಶಕ್ತಿಯ ಬಗ್ಗೆ ತಾವು ಇಟ್ಟುಕೊಂಡಿದ್ದ ನಂಬಿಕೆಯನ್ನು ಇಮ್ಮಡಿಸಿ ರಾಜಕಾರಣಿಗಳಿಗೆ ಹೇಳುತ್ತಿದ್ದರು. ಹೀಗಾಗಿ ಸಾಧುವಿನ ಬಳಿಗೆ ಶಾಸಕ, ಸಚಿವ, ವಿಫಲ ರಾಜಕಾರಣಿ, ಪುಢಾರಿ ಮುಂತಾದವರೆಲ್ಲ ಬರತೊಡಗಿದರು. ಸಾಧುವಿನ ಪೂಜೆಯ ಬೂಟಾಟಿಕೆ ಹೆಚ್ಚಾಗತೊಡಗಿತು. ಬರುವ ವಿ.ಐ.ಪಿ.ಗಳಿಗೆ impress ಮಾಡಲು ಅದು ಅನಿವಾರ್ಯವೂ ಆಗಿತ್ತು. ರಾಜಕಾರಣಿಗಳನ್ನು ಕರೆತರುತ್ತಿದ್ದ ಮಧ್ಯವರ್ತಿಗಳೇ ಸಾಧುವಿಗೆ ರಾಜಕಾರಣಿಗಳ ಪೂರ್ವಾಪರಗಳನ್ನು ತಿಳಿಸುತ್ತಿದ್ದರು. ಮುಖ ನೋಡಿದ ತಕ್ಷಣ ಅವರ ಜೀವನದ ಮುಖ್ಯ ಘಟನೆಗಳನ್ನು ಹೇಳತೊಡಗುತ್ತಿದ್ದ ಸಾಧು. ತಮ್ಮ ಇತಿಹಾಸ ಬಲ್ಲ ಈ ಸಾಧು ತಮ್ಮ ಭವಿಷ್ಯವನ್ನು ರೂಪಿಸುವ ಸಮರ್ಥ ವ್ಯಕ್ತಿ ಎಂದು ಅವನ ಕಾಲಿಗೆ ಬೀಳುತ್ತಿದ್ದರು. ಒಬ್ಬನೇ ಮುಖ್ಯ ರಾಜಕಾರಣಿ ಬಂದುಹೋದರೂ ಸಾಕು ಅಂಥ ಮಂತ್ರವಾದಿಯ ಪ್ರಚಾರ ದಿಢೀರ್ ಆಗುವುದು ಸಹಜವೇ ಸರಿ. ಅಂಥ ಪರಿಸ್ಥಿತಿ ನಮ್ಮ ಸಮಾಜದಲ್ಲಿದೆ. ಬೇರೆ ಎಲ್ಲ ವಿಷಯಗಳಿಗಿಂತಲೂ ಹೆಚ್ಚು ಅಸ್ಥಿರ ಗುಣ ಹೊಂದಿರುವುದು ರಾಜಕೀಯ. ಹಾಗಾಗಿಯೇ ಅಲ್ಲಿ ಭವಿಷ್ಯ, ಜ್ಯೋತಿಷ್ಯ, ಶಕುನ, ಮಂತ್ರ, ಮಾಟಗಳಿಗೆ ಎಲ್ಲಿಲ್ಲದ ಪ್ರಾಶಸ್ತ್ಯ ಎಂದು ತೋರುತ್ತದೆ.

ಒಮ್ಮೆ ಸಾಧು ಒಬ್ಬ ಮಂತ್ರಿಯ ಮನೆಗೆ ಹೋದ. ಅವರ ಮನೆಯನ್ನು ಪ್ರವೇಶಿಸುತ್ತಿದ್ದಂತೆಯೇ ಸ್ವಲ್ಪ ಝಟಕಿ ಹೊಡೆದಂತೆ ನಿಂತು ಏದುಸಿರುಬಿಡತೊಡಗಿದ. ಸುತ್ತಮುತ್ತ ಮೂವತ್ತು ನಲವತ್ತು ಜನರಿದ್ದರು. ಅಲ್ಲಿ ನಿಂತಲ್ಲಿಯೇ ಕಣ್ಣುಗಳನ್ನು ಅರೆಬರೆ ಮುಚ್ಚಿಕೊಂಡು ಧ್ಯಾನಸ್ಥ ಸ್ಥಿತಿಯಲ್ಲಿರುವಂಥ ಮುಖಮಾಡಿ ಹೇಳತೊಡಗಿದ: "ಬರೆದುಕೊಳ್ಳಿ. ನೈರುತ್ಯ ದಿಕ್ಕಿನ ಮೂಲೆ, ಮನೆಯ ಹೊರಮಗ್ಗಲು, ಒಂದೂವರೆ ಅಡಿ ಆಳ, ಒಂದು ಗೊಂಬೆ, ನಿಂಬೆಹಣ್ಣು, ಅದಕ್ಕೆ ಸೂಜಿ, ಕೇರು, ಅದಕ್ಕೆ ಸೂಜಿ" ಎಂದ. ಗುದ್ದಲಿ ತರಿಸಿ ಮನೆಯ ನೈರುತ್ಯ ದಿಕ್ಕಿನ ಮೂಲೆಯಲ್ಲಿ ಅಗೆಸತೊಡಗಿದ. "ಸರಿಯಾಗಿ ಒಂದೂವರೆ ಅಡಿ ಅಗೆದಾದ ಮೇಲೆ ನನ್ನನ್ನು ಕರೆಯಿರಿ ನಾನೇ ಕೈ ಹಾಕಿ ತೆಗೆಯುವೆ. ಯಾರಾದರೂ ಮುಟ್ಟೀರಾ ಜೋಕೆ. ಅದು ನಿಮ್ಮನ್ನು ಅಟ್ಟಾಡಿಸಿ ಕೊಂದುಬಿಡುತ್ತದೆ" ಎಂದ. ಮಂತ್ರಿಗಳ ಬಂಗಲೆಯ ಗಾರ್ಡನ್ ನೋಡಿಕೊಳ್ಳುವ ಕೆಲಸಗಾರ ಅಂಜಂಜುತ್ತಲೇ ನೆಲವನ್ನು ಅಗೆಯತೊಡಗಿದ. ಅಗೆಯುವುದು ಸಾಗಿದ್ದಂತೆಯೇ ಮತ್ತೆ ಸಾಧು, "ಅಗೆಯುವುದು ಕಡಿಮೆಯೂ ಆಗಬಾರದು, ಹೆಚ್ಚು ಆಗಬಾರದು, ಟೇಪು ತಂದು ಅಳೆಯಿರಿ" ಎಂದ. ಮಂತ್ರಿಗಳ ಮನೆಯಲ್ಲಿ ಟೇಪ್ ಇರಲಿಲ್ಲ. ಸ್ಕೇಲ್‌ನಿಂದಲೇ ತಗ್ಗಿನ ಆಳವನ್ನು ಅಳೆಯಲಾಯಿತು. ಒಂದೂವರೆ ಅಡಿ ಸರಿಯಾಗಿ ಅಗೆದಾಗ ಮೇಲೆ ಅದರ ಸಮೀಪ ಸಾಧು

ಹೋದ. ಅಲ್ಲಿ ಸುತ್ತಲಿದ್ದವರ ಕೈಗೆ ಅಕ್ಕಿಕಾಳುಗಳನ್ನು ಕೊಟ್ಟು, "ನನ್ನ ಕೆಲಸ ಮುಗಿಯುವವರೆಗೆ ಒಂದೊಂದೇ ಅಕ್ಕಿಕಾಳನ್ನು ನನ್ನ ಮೇಲೆ ಎಸೆಯುತ್ತಾ ನಿಲ್ಲಿರಿ" ಎಂದ. ಬೆಳಗಿನ ಹನ್ನೊಂದು ಗಂಟೆಯ ಸಮಯ. ಹುಲ್ಲಿನ ಮೇಲೆ ಬಿದ್ದ ಕೂದಲು ಕಾಣುವಂಥ ಬೆಳಕು. ಎಲ್ಲರ ದೃಷ್ಟಿ ಸಾಧುವಿನತ್ತಲೇ. ಸಾಧು ತಗ್ಗಿಗೆ ಕೈ ಹಾಕಿ ಒಂದರೆನಿಮಿಷ ಅದೇನೋ ತಡಕಾಡಿದ. ಇದ್ದಕ್ಕಿದ್ದಂತೆ ಹಿಂದಕ್ಕೆ ನೆಗೆದು ಬಿದ್ದುಬಿಟ್ಟ! ಎಲ್ಲರಿಗೂ ಗಾಬರಿ. ಸಾಧುವಿಗೇನಾಯಿತೆಂದು ನೋಡಲು ಅವನ ಬಳಿಗೆ ಯಾರೂ ಬರಲಿಲ್ಲ. ತಮಗೇನಾದರೂ ಆದೀತೆಂದು ದೂರಕ್ಕೆ ಹಾರಿದರು! ಸಾಧು ಸಾವರಿಸಿಕೊಳ್ಳುತ್ತ ಎದ್ದುನಿಂತು ಮೈ ಕೊಡವಿದ, "ನಿಮ್ಮ ಕೈಗೆ ಅಕ್ಕಿ ಕಾಳು ಕೊಟ್ಟಿದ್ದು ಏತಕ್ಕೆ? ಅವೇ ನನ್ನನ್ನು ರಕ್ಷಿಸುವುದು. ಏನೇ ಆಗಲಿ ಅಕ್ಕಿ ಕಾಳು ಹಾಕುವುದನ್ನು ನಿಲ್ಲಿಸಬಾರದು. ಇಲ್ಲಿ ಮಾಡಲಾಗಿರುವ ಮಾಟ ಅಂತಿಂಥದ್ದಲ್ಲ. ನನ್ನಂಥವನನ್ನೇ ಹೇಗೆ ಜಾಡಿಸಿ ಒದೆಯಿತು ನೋಡಿ! ಅಕ್ಕಿ ಕಾಳು ಹಾಕಲು ಧೈರ್ಯವಿಲ್ಲದಿದ್ದವರು ದೂರಕ್ಕೆ ಹೋಗಿ ನಿಂತುಕೊಳ್ಳಿ. ಧೈರ್ಯವಿರುವ ಇಬ್ಬರೇ ಸಾಕು ನನ್ನ ಸಹಾಯಕ್ಕೆ" ಎಂದ. ಯಾರೂ ಮುಂದೆ ಬರಲಿಲ್ಲ. ಮಂತ್ರಿಗಳು ತಮ್ಮ ಕೆಲಸದಾಳುಗಳತ್ತ ದಿಟ್ಟಿಸಿ ನೋಡಿದರು. ಇಬ್ಬರು ಆಳುಗಳು ಸಾಧುವಿನ ಸಹಾಯಕ್ಕೆ ಮುಂದೆ ಬಂದರು.

"ನನ್ನನ್ನು ಹಿಂದಕ್ಕೆ ಒದ್ದು ಮತ್ತೆ ಅರ್ಧ ಅಡಿ ಒಳಕ್ಕೆ ಹೋಗಿದೆ ಈ ಮಾಟದ ಗೊಂಬೆ. ಇನ್ನೂ ಅರ್ಧ ಅಡಿ ಅಗೆಯಿರಿ" ಎಂದ ಸಾಧು. ಮತ್ತೆ ಅರ್ಧ ಅಡಿ ಅಗೆಯಲಾಯಿತು. ಸಾಧು ಈ ಬಾರಿ ಕಣ್ಣುಮುಚ್ಚಿ ತೀವ್ರಗತಿಯಲ್ಲಿ ಮಂತ್ರವನ್ನು ವಟಗುಟ್ಟಿ ಎಲ್ಲಾ ದಿಕ್ಕುಗಳಿಗೂ ನಿಂಬೆ ಹಣ್ಣುಗಳನ್ನು ಕೊಯ್ದು ಚೆಲ್ಲಿಸಿದ. "ಓಂ ಕಾಲಿ, ಕಾಲಿ ಮಹಾಕಾಲಿ, ಹೂಂ ಫಟ್....." ಎನ್ನುತ್ತ ತಗ್ಗಿಗೆ ಕೈ ಹಾಕಿದ. ಆಳಕ್ಕಿಳಿದುಕೊಂಡ ಶಕ್ತಿಯುತವಾದ ಬೇರನ್ನು ಕೀಳುವವನಂತೆ ಮೇಲಕ್ಕೆ ಜಗ್ಗತೊಡಗಿದ. ಅರ್ಧ ನಿಮಿಷವೂ ಆಗಿರಲಿಲ್ಲ, ಸಾಧುವಿನ ಮಂತ್ರದ ಭರಾಟೆ ಆಕಾಶ ಮುಟ್ಟಿತ್ತು, ಸಾಧುವಿನ ಕೈ ತಗ್ಗಿನಿಂದ ಆಚೆಗೆ ಬಂದಿತ್ತು. ಅವನ ಕೈಯಲ್ಲಿ ಗೊಂಬೆ, ಲಿಂಬೆಹಣ್ಣು, ಕೇರುಗಳಿದ್ದವು.....! ಸುತ್ತ ನಿಂತಿದ್ದ ಎಲ್ಲರೂ ಬೆಕ್ಕಸಬೆರಗಾಗಿ ಬಾಯಿ ತೆರೆದುಕೊಂಡು ನಿಂತುಬಿಟ್ಟರು. ದೂರದಲ್ಲಿ ನಿಂತಿದ್ದ ಮಂತ್ರಿಗಳು ಓಡಿ ಬಂದು ಸಾಧುವಿನ ಪಾದಗಳಲ್ಲಿ ತಮ್ಮ ತಲೆಯಿರಿಸಿದರು. ಕಟ್ಟಿಗೆ, ಸೀಮೆಯೆಣ್ಣೆ ತರಿಸಿ ಅಲ್ಲಿಯೇ ಉರಿಹಚ್ಚಿ ಅದರೊಳಕ್ಕೆ ಗೊಂಬೆಯನ್ನು ಎಸೆದು, ಉಚ್ಚಾಟನಾ ಮಂತ್ರವೊಂದನ್ನು ಪಟಿಸಿದ. ಗೊಂಬೆ ಬೆಂಕಿಯಲ್ಲಿ ಬಿದ್ದದ್ದೇ ತಡ ಚಿಟಿಪಿಟಿ ಚಿಟಿಪಿಟಿಯೆಂದು ಶಬ್ದಮಾಡುತ್ತ ಉರಿದು ಬೂದಿಯಾದದ್ದನ್ನು ನೋಡಿ ಸುತ್ತಲಿದ್ದವರೆಲ್ಲ ಬಂದು ಸಾಧುವಿಗೆ ನಮಸ್ಕರಿಸಲು ಮುಗಿಬಿದ್ದರು.

ಸಾಧು ಲಕ್ಷ್ಮಣಗಿರಿ ಮಂತ್ರಿಯ ಮನೆಯಲ್ಲಿ ಮಾಟದ ಗೊಂಬೆ, ಲಿಂಬೆ ಹಣ್ಣುಗಳನ್ನು ತೆಗೆದ ಮೇಲೆ ರಾಜಕೀಯ ವಲಯದಲ್ಲಿ ಆತನ ಖ್ಯಾತಿ ಹಬ್ಬತೊಡಗಿತು. ರಾಜಕಾರಣಿಗಳು ಅವನ ಬೆನ್ನು ಹತ್ತತೊಡಗಿದರು. ಕೆಲವರ ಮನೆಯಲ್ಲಿ ನಿಧಿಯನ್ನೂ ಸಹ ತೆಗೆದುಕೊಟ್ಟನೆಂದು ಸುದ್ದಿ ಹಬ್ಬಿತು. ಈ ಸುದ್ದಿ ತಿಳಿದ ಹಲವಾರು ನಿಧಿಚೋರರು ಸಾಧುವಿನ ಬೆನ್ನುಬಿದ್ದರು. ಮಾಟ, ಮೋಡಿಗಳು ಜನರನ್ನು ದಿಢೀರ್ ಆಕರ್ಷಿಸುವುದಕ್ಕೆ ಕಾರಣಗಳಲ್ಲಿ ಮುಖ್ಯವಾದುದು ಪ್ರಯತ್ನ, ಪರಿಶ್ರಮಗಳಿಲ್ಲದೇನೆ ಫಲವನ್ನು ಲಪಟಾಯಿಸಿಕೊಳ್ಳಬಹುದೆಂದು ಅದು ನೀಡುವ ಆಶ್ವಾಸನೆ!

ಸಾಧು ಲಕ್ಷ್ಮಣನ ಬಳಿ ಬಂದು ಹೋಗುವವರನ್ನು ನೋಡಿ ಕೊಳಗೇರಿ ಜನ ಅವಾಕ್ಕಾದರು. ಆರಂಭದಲ್ಲಿ ಸಾಧುವನ್ನು ಕ್ಯಾರೆ ಎಂದು ಮಾತಾಡಿಸದೇ ಇದ್ದ ಅನೇಕರು ಸಾಧುವಿನ ಬಳಿ ಸುಳಿದಾಡತೊಡಗಿದರು. ಅವನ ಮಾಟಶಕ್ತಿಯ ಬಗ್ಗೆ ನಂಬಿಕೆ ಇರದವರೂ ಸಹ ಅವನ ಬಳಿಗೆ ಬರತೊಡಗಿದರು. ಏಕೆಂದರೆ, ಅವನ ಮೂಲಕ ಶಾಸಕ, ಮಂತ್ರಿಗಳಿಂದ ಸರಕಾರೀ ಕೆಲಸಗಳನ್ನು ಮಾಡಿಸಿಕೊಳ್ಳಬಹುದೆನ್ನುವ ಹುನ್ನಾರದಿಂದ. ಹೀಗೆ ವಿವಿಧ ಕಾರಣ ಹಾಗೂ ಉದ್ದೇಶಗಳಿಗಾಗಿ ಸಾಧುವಿನ ಬಳಿ ಜನ ಬರತೊಡಗಿದರು. ಅವನ ಖ್ಯಾತಿ ಬೆಳೆಯತೊಡಗಿತು.

ಸಾಧುವಿಗೆ ತನ್ನ ಖ್ಯಾತಿ ಬೆಳೆಯತೊಡಗಿದಂತೆ ಭಯವೂ ಅಗಾಧವಾಗಿ ಬೆಳೆಯತೊಡಗಿತು. ತನ್ನ ಬಂಡವಾಳ ಬಯಲಾದರೆ ಹೇಗೆ ಎಂದು ಮಾನಸಿಕ ಒತ್ತಡ ತೀವ್ರಗೊಂಡಿತು. ಜನರು ತನ್ನ ಪಾದಕ್ಕೆ ಮಾಡುವ ನಮಸ್ಕಾರ ಬೆಟ್ಟದಂತೆ ಭಾರವಾಗಿ ಬೆಳೆಯತೊಡಗಿತು.

ಈ ಮಾನಸಿಕ ಒತ್ತಡದ ಪರಿಣಾಮವಾಗಿ ರಕ್ತದೊತ್ತಡ, ಮಧುಮೇಹ ಕಾಯಿಲೆಗಳು ಸೇರಿಕೊಂಡವು. ಅವನ ದೇಹ ಅಸ್ವಸ್ಥಗೊಂಡಿತು. ಉಬ್ಬಸ ರೋಗವೂ ಸೇರಿಕೊಂಡಿತು. ಸಾಧುವಿನ ಕಾಯಿಲೆಗಳನ್ನು ನೋಡಿದ ಅವನ ಕೆಲಭಕ್ತರು, ನಿಜವಾಗಿಯೂ ಸಾಧುವಿನಲ್ಲಿ ದೈವೀಶಕ್ತಿ ಇದ್ದದ್ದೇ ಆದರೆ ಈ ಕಾಯಿಲೆಗಳು ಬರಬಾರದಿತ್ತಲ್ಲ ಎಂದು ಮಾತಾಡಿಕೊಳ್ಳಲಾರಂಭಿಸಿದರು. ಮತ್ತೆ ಕೆಲವು ಭಕ್ತರು 'ನೀವೆಲ್ಲಾ ಅಜ್ಞಾನಿಗಳು. ಇದೆಲ್ಲ ನಿಮಗೆ ಅರ್ಥವಾಗೊಲ್ಲ. ಸಾವಿರ ತರಹ ಕಾಯಿಲೆಗಳ ಜನ ಬಂದು ಈ ಸಾಧುವಿನ ಪಾದಕ್ಕೆ ಬೀಳುತ್ತಾರೆ. ಅವರಿಗೆ ಕಾಯಿಲೆಗಳು ನಿವಾರಣೆಯಾಗುತ್ತವೆ. ಅವೆಲ್ಲ ಎಲ್ಲಿ ಹೋಗುತ್ತವೆ? ಭಕ್ತರ ಕಾಯಿಲೆ ಕಸಾಲೆ, ಕಷ್ಟ ಕಾರ್ಪಣ್ಯಗಳನ್ನು ತನ್ನ ಮೈಮೇಲೆ ಹಾಕಿಕೊಂಡಿದ್ದಕ್ಕೆ

ಸಾಧು ಹೀಗೆ ಕಾಯಿಲೆಗಳಿಂದ ನರಳುತ್ತಿದ್ದಾನೆ. ಇದೆಲ್ಲಾ ನಿಮಗೆ ಗೊತ್ತಾಗೋಕೆ ಇನ್ನೊಂದು ಜನ್ಮ ಎತ್ತಿಬರಬೇಕು ಎಂದು ಹೇಳಿ ಬಾಯಿ ಮುಚ್ಚಿಸಿದರು. ತಾವು ಸಾಧುವಿನ ದೈವೀಶಕ್ತಿಯನ್ನು ಸಂಶಯಿಸಿ ಆಡಿದ ಮಾತುಗಳಿಗೆ ಪಶ್ಚಾತ್ತಾಪ ಮಾಡಿಕೊಳ್ಳಲು ಸಾಧುವಿನ ಕಾಲುಗಳಿಗೆ ಎಣ್ಣೆಹಚ್ಚಿ ನೀವತೊಡಗಿದರು. ಜನರ ಇಂಥ ಭಾವನೆ ಮತ್ತು ನಂಬಿಕೆಗಳು ಸಾಧುವಿಗೆ ಶ್ರೀರಕ್ಷೆಯಂತಾದವು. ಒಂದು ದಿನ ಸಾಧು ಕೇರಳಕ್ಕೆ ಹೊರಟ. ಕನ್ಯಾಕುಮಾರಿಯ ದರ್ಶನಕ್ಕೆ ಹೋಗಿ ಬರುವುದಾಗಿ ಹೇಳಿ ಹೊರಟ. ಜೊತೆಗೆ ಯಾರನ್ನೂ ಕರೆದೊಯ್ಯಲಿಲ್ಲ. ಆದರೆ ಸಾಧು ಕನ್ಯಾಕುಮಾರಿಗೆ ಹೋಗಲಿಲ್ಲ. ಕಾಸರಗೋಡಿನ ಹತ್ತಿರದ ದುರ್ಗಮ ಪ್ರದೇಶಕ್ಕೆ ಹೋದ. ಅಲ್ಲಿ ಆತ ಬೈರಾಗಿಯೊಬ್ಬನನ್ನು ಸಂಧಿಸಿದ. ಆ ಬೈರಾಗಿ ಸಾಧುವನ್ನು ತೀರಾ ನಿರ್ಲಕ್ಷ್ಯದಿಂದ ಬರಮಾಡಿಕೊಂಡ. ಬೈರಾಗಿಯ ಪಾದಕ್ಕೆ ದೀರ್ಘದಂಡ ನಮಸ್ಕಾರ ಮಾಡಿ ಬಂಗಾರದ ಉಂಗುರದ ಕಾಣಿಕೆಯನ್ನು ನೀಡಿದ.

ಬೈರಾಗಿ "ಹೂಂ ಬಾ, ಸಾಧನೆ ಮಾಡಿಕೊಳ್ಳದಿದ್ರೂ ಗಳಿಕೆ ಮಾತ್ರ ಚೆನ್ನಾಗಿ ಮಾಡಿಕೊಂಡಿರೋ ಹಾಗಿದೆ. ಜನರೇ ಹೀಗೇ ಏನೋ; ಗಾಜನ್ನೇ ವಜ್ರವೆಂದು ಭ್ರಮಿಸಿಕೊಂಡು ಅದಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯ ನೀಡುತ್ತಾರೆ. ವಜ್ರ ಮಾತ್ರ ಗಣಿಯಲ್ಲಿ ತನ್ನ ಪಾಡಿಗೆ ತಾನಿರುತ್ತದೆ. ಏನೂ ಶಕ್ತಿ ಇಲ್ಲದೇನೆ ಇಷ್ಟು ಗಳಿಸಿದ್ದೀಯಾ ಅಂದಮೇಲೆ ಇನ್ನು ಏನಾದರೂ ದೈವೀಶಕ್ತಿ ನಿನ್ನಲ್ಲಿ ಬಂದುಬಿಟ್ಟರೆ ಇನ್ನೆಷ್ಟು ಗಳಿಸ್ತೀಯೋ? ಅದಕ್ಕೆ ನಿನ್ನ ಬಳಿಗೆ ಆ ದೈವೀಶಕ್ತಿ ಸುಳಿಯುತ್ತಿಲ್ಲವೇನೋ.....!" ಎಂದು ಉದ್ಗರಿಸಿದ.

"ನೀನು ಆಡೋ ನಾಟಕವೆಲ್ಲ ನಂಗೊತ್ತಿದೆ. ಒಂಚೂರು ವಿದ್ಯೆ ಕಲಿಸು ಅಂತ ಬೆನ್ನು ಹತ್ತಿ ಹತ್ತು ವರ್ಷ ಆದ್ರೂ ಏನೂ ಇಲ್ಲ. ನನ್ನ ಕಡೆ ಬೆಟ್ಟು ಮಾಡಿದ್ರೆ ಉಗುರೊಳಗಿನ ಹೊಲಸು ಬಿದ್ದು ಹೋದೀತು ಎನ್ನುವಂತೆ ಆಡ್ತೀಯಾ. ಜ್ಞಾನ ಜಿಪುಣ ನೀನು. ನಿನ್ನನ್ನು ಬಿಟ್ರೆ ಇನ್ಯಾರೂ ಈ ವಿದ್ಯೇನ ಕಲಿತುಕೋಬಾರ್ದು ಎನ್ನುವವನು ನೀನು" ಎಂದು ಮನಸ್ಸಿನೊಳಗೇ ಎಂದುಕೊಂಡ. ಮುಂದುವರಿದು "ನನಗೆ ಜನ ಮರುಳಾದಂತೆ ನಿನಗೆ ನಾನೆಲ್ಲಿ ಮರುಳಾಗಿರುವೆನೋ. ನಿನ್ನಲ್ಲಿ ಶಕ್ತಿ ಇದೆಯೆಂದು ತಿಳಿದುಕೊಂಡಿದ್ದು ನನ್ನ ಭ್ರಮೆಯಾಗಿದ್ದರೆ? ಜನರನ್ನು ಮೋಸ ಮಾಡುವಷ್ಟು ಸಾಮರ್ಥ್ಯ ನನ್ನಲ್ಲಿದ್ದರೆ, ನನ್ನನ್ನು ಮೋಸ ಮಾಡುವ ಸಾಮರ್ಥ್ಯ ನಿನ್ನಲ್ಲಿದ್ದಿರಬಹುದೇನೋ...." ಎಂದು ಮನಸ್ಸಿನೊಳಗೇ ಮಾತುಗಳನ್ನು ಮೆಲುಕು ಹಾಕತೊಡಗಿದ.

"ಅಂದ ಹಾಗೆ ಜನರನ್ನು ನಂಬಿಸ್ತಿದೀಯಾ?" ಎಂದು ಕೇಳಿದ ಬೈರಾಗಿ.

"ಆ ಗೋಳನ್ನು ಎಷ್ಟೂ ಅಂತ ಹೇಳಲಿ. ಮೈತುಂಬ ಕಣ್ಣು ಮಾಡಿಕೊಂಡು ಜನರಿಗೆ ಮೋಸ ಮಾಡುವಷ್ಟರಲ್ಲಿ ಸಾಕುಬೇಕಾಗಿ ಹೋಗುತ್ತೆ" ಎಂದ ಸಾಧು.

"ಬಹಳ ಮಜವಾಗಿದೆ ಕೇಳಲಿಕ್ಕೆ. ಹೇಳು ನೋಡೋಣ ಒಂದು ಉದಾಹರಣೆಯನ್ನ. ಜನರಿಗೆ ಹೇಗೆ ನಂಬಿಕೆ ಬರಿಸ್ತೀಯಾ ಅಂತ?" ಎಂದು ಕೇಳಿದ ಬೈರಾಗಿ.

"ಅದೆಲ್ಲಾ ಈಗೇಕೆ ಗುರೂಜಿ? ಜನ ಈಗ ನನ್ನ ಮೇಲೆ ಇಟ್ಟಿರೋ ವಿಶ್ವಾಸವನ್ನ ಉಳಿಸಿಕೊಳ್ಳಬೇಕಾದರೆ ನೀವು ಈಗ ನನಗೆ ಏನಾದರೂ ಒಂದು ವಿದ್ಯೆಯನ್ನ ಕಲಿಸಿಕೊಡಲೇಬೇಕು" ಎಂದು ಬೇಡಿಕೊಂಡ.

"ಆಗಲಿ, ಈ ಬಾರಿ ನಿನ್ನನ್ನು ಬರಿಗೈಲಿ ಕಳಿಸಿಕೊಡೊಲ್ಲಾ. ಹೇಳು ನಿನ್ನ ಕಥೇನ....." ಎಂದು ಬೈರಾಗಿ ಹೇಳಿದಾಗ, ಸಾಧುವಿಗೆ ಸಂತೋಷ ಉಕ್ಕಿ ಬಂದಿತು. ಬೈರಾಗಿಯ ಪಾದವನ್ನು ಗಟ್ಟಿಯಾಗಿ ಹಿಡಿದುಕೊಂಡ.

"ನೀನು ಬಹಳ ಪುಕ್ಕಲು. ಅದನ್ನು ನೋಡಿಯೇ ನಿನಗೆ ಶವಸಾಧನೆಯನ್ನು ಹೇಳಿಕೊಟ್ಟಿಲ್ಲ. ನಿನಗೊಮ್ಮೆ ಹೇಳಿದ್ದೆ, ಸಾಧನೆಯ ಅಂತಿಮ ಹಂತದಲ್ಲಿ ಒಂಬತ್ತು ಬಾಲಕರ ಬಲಿ ಬೇಕಾಗುತ್ತದೆ ಅಂತ" ಎಂದು ಬೈರಾಗಿ ಹೇಳಿದ.

"ಗುರುವೆ, ನಾನು ನೀವು ಹೇಳಿದ್ದನ್ನು ಮರೆತಿಲ್ಲ. ಹೀಗೆ ಕಾಡಿನಲ್ಲಿ ಕೂತರೆ ಬಾಲಕರು ಸಿಗುವುದಿಲ್ಲ. ಅಪರಿಚಿತರು ಬಾಲಕರನ್ನು ಕರೆಯಲು ಹೋದರೆ ಜನರಿಂದ ಒದೆ ತಿಂದು ಓಡಿಬರಬೇಕಾಗುತ್ತದೆ. ಈಗ ನಾನು ಸರಿಯಾದ ವಾತಾವರಣವನ್ನು ನಿರ್ಮಿಸಿಕೊಂಡಿದ್ದೇನೆ. ಜನ ನನ್ನ ಮೇಲೆ ಗಾಢವಾದ ಭಕ್ತಿ, ಶ್ರದ್ಧೆ, ವಿಶ್ವಾಸಗಳನ್ನಿರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ನಾನು ಬಾಲಕರಿಗಾಗಿ ಹುಡುಕಿಕೊಂಡು ಹೋಗಬೇಕಾಗಿಲ್ಲ. ಓ ಎಂದು ಕರೆದರೆ ಸಾಕು ನೂರು ಬಾಲಕರು ಓಡಿಬಂದು ನಿಲ್ಲುತ್ತಾರೆ ನನ್ನ ಮನೆ ಮುಂದೆ. ಅವರನ್ನು ಆಕರ್ಷಿಸಲಿಕ್ಕಾಗಿಯೇ ಆಕಳುಗಳನ್ನು ಸಾಕಿದ್ದೇನೆ. ನನ್ನ ಆಕಳ ಹಾಲು ಕುಡಿದು ಮಕ್ಕಳು ಬೆಳೆಯುತ್ತಿದ್ದಾರೆ, ಕುರುಬನ ಮನೆಯ ಕುರಿಗಳಂತೆ. ಅವುಗಳ ತಾಯಂದಿರೆಲ್ಲಾ ನನ್ನ ಭಕ್ತರು. ಹುಡುಗರಿಗೆ ನಾನು ಕೊಡುವಷ್ಟು ಮಿಠಾಯಿಗಳನ್ನು ಅವರ ಅಪ್ಪಂದಿರೂ ಕೊಡುವುದಿಲ್ಲ. ನೀವು ಹೂಂ ಅನ್ನಿ ಸಾಕು. ಒಂಬತ್ತಲ್ಲ ತೊಂಬತ್ತು ಹುಡುಗರನ್ನು ಬಲಿ ಕೊಡ್ತೇನೆ. ಆದರೆ ನನ್ನದೊಂದು ಸಣ್ಣ ಅನುಮಾನ, ಬಲಿಗೆ ಬಾಲಕರೇ ಏಕೆ ಬೇಕು? ವಯಸ್ಕರು, ಮುದುಕರು ಆದರೆ ಆಗೋಲ್ಲವೆ? ನನ್ನ ಬಳಿ ಅಂಥ ಜನ ದಿಕ್ಕಿಲ್ಲದೆ ಬಿದ್ದಿದ್ದಾರೆ. ನಾನು ಹೀಗೆ ಪ್ರಶ್ನಿಸಿದ್ದಕ್ಕೆ ಸಿಟ್ಟಿಗೇಳಬೇಡಿ" ಎಂದ ಸಾಧು.

ಅದಕ್ಕೆ ಬೈರಾಗಿ "ಬಲಿಗೆ ಶುದ್ಧ ರಕ್ತದವರಿರಬೇಕು. ಚಿಕ್ಕಮಗುವಿದ್ದರೆ ತಾಯಿ ಮಾಸದ ಸೂತಕವಿರುತ್ತದೆ, ಅಂಗಾಂಗಗಳು ಬೆಳೆದಿರುವುದಿಲ್ಲ, ವಯಸ್ಕರಾದರೆ ವೀರ್ಯ ಸ್ಖಲನದ ಸೂತಕವಿರುತ್ತದೆ. ಇನ್ನು ಮುದುಕರಂತೂ ಇದ್ದೂ ಸತ್ತಂತಿರುತ್ತಾರೆ. ಎಲ್ಲ ಗಬ್ಬೆದ್ದು ಹೋಗಿರುತ್ತಾರೆ. ಎಂಟರಿಂದ ಹನ್ನೆರಡು ವರ್ಷದವರೆಗಿನ ಬಾಲಕರು ಬಲಿಗೆ ಯೋಗ್ಯರಿರುತ್ತಾರೆ. ದೇಹದೊಳಗೆ ಎಲ್ಲಾ ಅಂಗಾಂಗಗಳು ವೃದ್ಧಿಯಾಗಿರುತ್ತವೆ. ಆದರೆ ವೀರ್ಯ ಸ್ಖಲನವಾಗಿರುವುದಿಲ್ಲ. ಆದರೆ ಅದೇ ಅಂಗವಿಕಲ ಬಾಲಕ ಬಲಿಗೆ ಯೋಗ್ಯನಲ್ಲ. ಜೇಷ್ಠ ಪುತ್ರನಿದ್ದರೆ ಮತ್ತು ಅವಳಿಜವಳಿಗಳಿದ್ದರೆ ಅವರು ಅತ್ಯಂತ ಶ್ರೇಷ್ಠ ಬಲಿಗಳಾಗುತ್ತಾರೆ. ಸ್ಮಶಾನ...... ಇವಕ್ಕೆಲ್ಲ ಮತ್ತೆ ಪ್ರಶ್ನೆ ಕೇಳಬೇಡ. ಹೇಳಿದ್ದನ್ನು ಪ್ರಶ್ನಿಸದೆ ಮಾಡುವವ ಮಾತ್ರ ಶಿಷ್ಯನಾಗಬಲ್ಲ, ತಿಳಿಯಿತೇ? ಹೂಂ ಅದೇನೋ ನಿನ್ನ ಕಪಟ ನಾಟಕಗಳನ್ನು ಹೇಳ್ತೀನಿ ಅಂದೆಯಲ್ಲ. ಮಾತಿನಲ್ಲಿ ಮರೆಸ್ತಿದ್ದೀಯಾ." ಎಂದ ಬೈರಾಗಿ.

ಅದಕ್ಕೆ ಸಾಧು ಹೇಳಿದ : "ನಿಮ್ಮ ಮುಂದೆ ಮುಚ್ಚಿಡುವುದೇನಿದೆ ಗುರುವೇ! ನನ್ನಲ್ಲಿ ಶಕ್ತಿಯಿಲ್ಲ. ಆದರೂ ಮರುಳು ಜನ ಬರುತ್ತಾರೆ. ಅವರನ್ನು ಏನಾದರೂ ಮಾಡಿ ನಂಬಿಸಲೇಬೇಕಲ್ಲವೆ? ಇತ್ತೀಚೆಗೆ ಒಬ್ಬ ಮಂತ್ರಿ ಮನೆಗೆ ಹೋದೆ. ಅಲ್ಲಿ ನಾನು ಏನಾದರೂ ಪವಾಡ ಮಾಡಿ ತೋರಿಸಬೇಕಲ್ಲವೆ. ಮೊದಲೇ ಎಲ್ಲ ಸಿದ್ಧ ಮಾಡಿಟ್ಟುಕೊಂಡಿದ್ದೆ. ಅವನ ಮನೆಯ ಬಾಗಿಲು ಪ್ರವೇಶಿಸುತ್ತಿದ್ದಂತೆಯೇ ನಿಮ್ಮ ಮನೆಗೆ ಮಾಟ ಮಾಡಿಸಿದ್ದಾರೆ ಎಂದು ಘೋಷಿಸಿ ಬಿಟ್ಟೆ. ಅಷ್ಟು ಮಾತ್ರ ಹೇಳಿದರೆ ನಂಬುತ್ತಾರೆಯೇ ಜನ? ಸರಿ ಇಂಥ ಮೂಲೆಯಲ್ಲಿ ಇಷ್ಟು ಆಳದಲ್ಲಿ ಮಾಟದ ಗೊಂಬೆ, ನಿಂಬೆ ಹಣ್ಣು, ಸೂಜಿ ಚುಚ್ಚಲ್ಪಟ್ಟ ಕೇರುಗಳಿವೆ ಎಂದು ಹೇಳಿದೆ. ಒಂದೂವರೆ ಅಡಿ ತಗ್ಗು ತೆಗೆದರು. ನಾನು ಹೋಗಿ ತಗ್ಗಿನಲ್ಲಿ ಕೈ ಹಾಕಿದೆ. ಒಳಗಿನಿಂದ ಯಾವುದರಿಂದಲೋ ಒದೆಸಿಕೊಂಡಂತೆ ಹಿಂದಕ್ಕೆ ಹಾರಿಬಿದ್ದೆ. ಜನರೆಲ್ಲಾ ಗಾಬರಿಯಾಗಿ ದೂರಕ್ಕೆ ಚೆಲ್ಲಾಪಿಲ್ಲಿಯಾದರು. ತಗ್ಗಿನ ಸಮೀಪಕ್ಕೆ ಬರುವ ಧೈರ್ಯವನ್ನು ಯಾರೂ ಮಾಡಲಿಲ್ಲ. ಮತ್ತೆ ನಾನು ಹೋಗಿ ತಗ್ಗಿನಲ್ಲಿ ಕೈ ಹಾಕಿದೆ. ಈ ಬಾರಿ ತಗ್ಗಿಗೆ ಬರಿಗೈ ಹಾಕಲಿಲ್ಲ. ನನ್ನ ಸೊಂಟದಲ್ಲಿ ಬಚ್ಚಿಟ್ಟುಕೊಂಡಿದ್ದ ಗೊಂಬೆ, ನಿಂಬೆ ಹಣ್ಣು, ಕೇರುಗಳನ್ನು ಹಿಡಿದಿಟ್ಟುಕೊಂಡಿದ್ದೆ. ಜನ ಗಾಬರಿಯಾಗಿ ದೂರಸರಿದಾಗ ನನಗೆ ಅವರ ಕಣ್ಣು ತಪ್ಪಿಸುವ ಅವಕಾಶ ಸಿಕ್ಕಿತ್ತು. ಗೊಂಬೆ, ನಿಂಬೆ ಹಣ್ಣುಗಳನ್ನು ನಾನೇ ಇಟ್ಟು ಮೇಲೆ ಸ್ವಲ್ಪ ಮಣ್ಣು ಮುಚ್ಚಿದೆ. ಎಲ್ಲರೂ ದೂರವಿದ್ದಾಗ ಗೊಂಬೆ ತೆಗೆದು ತೋರಿಸಿದರೆ ಸಂಶಯಕ್ಕೆಡೆಯಾಗಬಹುದೆಂದು ನನ್ನ ಸಹಾಯಕ್ಕೆ ಒಂದಿಬ್ಬರನ್ನು ಕರೆದೆ. ಅವರ ಸಮಕ್ಷಮ ತಗ್ಗಿಗೆ ಮತ್ತೆ ಕೈ ಹಾಕಿದೆ. ಶಕ್ತಿಯನ್ನೆಲ್ಲ ಹಾಕಿ ಆಳಕ್ಕಿಳಿದ ಬೇರನ್ನು

ಕೀಳುವವನಂತೆ ನಟಿಸುತ್ತಾ ಗೊಂಬೆಯನ್ನು ಹೊರಕ್ಕೆ ತೆಗೆದೆ. ಅದನ್ನು ನೋಡಿದ ಮಂತ್ರಿ ನನ್ನ ಕಾಲಿಗೆ ಬಿದ್ದ" ಈ ಕಥೆ ಕೇಳಿ ಬೈರಾಗಿ ಗಹಗಹಿಸಿ ನಗಲಾರಂಭಿಸಿದ.

ಬೈರಾಗಿಯ ಗಹಗಹಿಕೆಯಲ್ಲಿದ್ದ ಕುಚೋದ್ಯ ಸಾಧು ಲಕ್ಷ್ಮಣಗಿರಿಯನ್ನು ಕುಟುಕಿತು. ತಡೆದುಕೊಳ್ಳಲಾಗಲಿಲ್ಲ ಬಾಯಿಂದ ಒತ್ತರಿಸಿತು, "ನಾನು ಆಡಿದ್ದು ನಾಟಕ, ಸರಿ. ಅದನ್ನೆಲ್ಲ ನಿಮ್ಮ ಮುಂದೆ ಬಿಚ್ಚಿಟ್ಟೆ. ಆದರೆ ನೀವು ನಿಜವಾಗಿಯೂ ಸಿದ್ಧಿ ಮಾಡಿಕೊಂಡ ಮಹಾತ್ಮರು. ಆದರೆ ಈವರೆಗೆ ನನ್ನ ಮುಂದೆ ಒಂದೇ ಒಂದು ನಿಜವಾದ ಚಮತ್ಕಾರವನ್ನು ಮಾಡಿ ತೋರಿಸಿಲ್ಲ ನೀವು. ಗಾಳಿಯಲ್ಲಿ ಖಾಲಿ ಕೈಯಾಡಿಸಿ ರುದ್ರಾಕ್ಷಿ, ಬೂದಿ ಇತ್ಯಾದಿಗಳನ್ನು ತೆಗೆದು ತೋರಿಸಿದ್ದೀರಿ. ಇಂಥ ಕೈಚಳಕವನ್ನು ಹಾವಾಡಿಸುವವರೂ ಮಾಡಿ ತೋರಿಸುತ್ತಾರೆ. ಮನೋರಂಜನೆಗಾಗಿ ಜಾದೂ ಮಾಡುವವರೂ ಮಾಡಿ ತೋರಿಸುತ್ತಾರೆ. ಇಂದಿನವರೆಗೂ ನಿಮ್ಮ ನಿಜವಾದ ಶಕ್ತಿಯ ಪ್ರದರ್ಶನವನ್ನು ನಾನು ನೋಡಿಯೇ ಇಲ್ಲ. ಅದನ್ನು ನನಗೆ ಕಲಿಸಿರೆಂದು ನಿಮ್ಮ ಬೆನ್ನು ಬಿದ್ದಿದ್ದೇನೆ. ನೀವು ಈವರೆಗೆ ಆ ಕೃಪೆ ತೋರಿಲ್ಲ ನನ್ನ ಮೇಲೆ. ಅದೇಕೆ? ಸಿದ್ಧಿ, ವಶೀಕರಣಗಳನ್ನು ಮಾಡಿಕೊಳ್ಳಲು ಆಗದಿದ್ದರೂ ಪರವಾಗಿಲ್ಲ ಕೊನೆಪಕ್ಷ ಅವುಗಳ ಪ್ರದರ್ಶನವನ್ನಾದರೂ ನೋಡೋಣ. ಅದರ ಸತ್ಯಾಸತ್ಯಗಳನ್ನು ಅರಿತುಕೊಳ್ಳೋಣ ಎನಿಸುತ್ತಿದೆ ನನಗೆ" ಸಾಧು ಅದೆಷ್ಟೇ ನಿಯಂತ್ರಿತವಾಗಿ ಮಾತಾಡಿದರೂ ಬೈರಾಗಿಯನ್ನು ಪರೋಕ್ಷವಾಗಿ ಕೆಣಕುವ ಅರ್ಥ ಹೊಮ್ಮಿಯೇ ಬಿಟ್ಟಿತು.

ಚಿಗರಿಯ ಚರ್ಮದ ಮೇಲೆ ಕೂತಿದ್ದ ಬೈರಾಗಿ ಥಂಗನೆ ಚಿಮ್ಮಿದಂತೆ ಎದ್ದು ನಿಂತ. ಮೈಯೆಲ್ಲ ಅದುರುವುದು ಕಾಣುವಷ್ಟು ಕೋಪಕ್ಕೊಳಗಾದ. "ಏ ಸಾಧು, ನಿನ್ನ ಯೋಗ್ಯತೆ ಎಷ್ಟೋ ಅಷ್ಟೇ ಮಾತಾಡು. ನನ್ನ ಶಕ್ತಿಯನ್ನು ಕೆದಕುತ್ತೀಯಾ? ಕೆಣಕುತ್ತೀಯಾ? ನನ್ನ ಸೇವೆ ಮಾಡುತ್ತಾ ಬಂದಿದೀಯಾ ಅಂತ ಸುಮ್ಮನೆ ಬಿಟ್ಟಿದೀನಿ. ಇಲ್ಲದಿದ್ರೆ ನಿನ್ನ ಕಥೆ ಇಂದು ಮುಗಿದು ಹೋಗುತ್ತಿತ್ತು. ನಾನು ನೋಡಲು ಬೈರಾಗಿ; ಆದರೆ ಒಳಗೆ ಅಘೋರಿ. ನನ್ನ ಅಘೋರಾವತಾರವನ್ನು ನೋಡುವ ಗುಂಡಿಗೆ ನಿನ್ನಲ್ಲಿಲ್ಲ. ನೀನು ಅದೆಲ್ಲಿ ಎದೆಯೊಡೆದು ಸಾಯುತ್ತೀಯೋ ಅಂತ ನಿನಗೆ ನನ್ನ ಶಕ್ತಿಯ ಪ್ರದರ್ಶನ ಮಾಡಿಲ್ಲ. ನಿನ್ನಲ್ಲಿ ಅಂತ ತಾಕತ್ತಿದೆಯೇ? ಬಾ ಇಂದು ನಿನಗೆ ತೋರಿಸುತ್ತೇನೆ ನನ್ನ ಶಕ್ತಿ ಎಂಥದ್ದು ಅಂತ. ನನ್ನನ್ನು ಅನುಮಾನಿಸುವಂಥ ಧೈರ್ಯ ನಿನ್ನಲ್ಲಿ ಬಂದಿದೆ ಎಂದ ಮೇಲೆ ನಾನಿಂದು ನಿನಗೆ ಅದರ ಪ್ರದರ್ಶನ ಮಾಡಿಯೇ ತೋರಿಸುತ್ತೇನೆ" ಎನ್ನುತ್ತಾ ತನ್ನ ಮತ್ತೋರ್ವ ಶಿಷ್ಯ ನಾಯರಿಯನ್ನು ಕೂಗಿದ. ನಾಯರಿ ಇರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ

ಓಡಿ ಬಂದ ನಾಯರಿ ಬೈರಾಗಿಯ ಎದುರು ನಿಂತುಕೊಂಡು "ಹಳ್ಳಿಯ ಕಡೆ ಹೋಗಿದ್ದೆ ಭಿಕ್ಷೆಗೆ" ಎಂದ.

"ಏನೋ ಹೊಸ ಸರಕು ಬಂದಿದೆಯಾ?"

"ನಿನ್ನೆ ರಾತ್ರಿ ಒಂದು ಹುಡುಗಿ ತೀರಿಹೋಗಿದೆ. ವಯಸ್ಸು ಹದಿನೆಂಟರ ಆಚೆಈಚೆ. ದೂರದ ಸಂಬಂಧಿಕರು ಬಂದಿಲ್ಲವೆಂದು ಶವಸಂಸ್ಕಾರ ಆಗಿಲ್ಲ. ಇನ್ನು ಸ್ವಲ್ಪ ಹೊತ್ತಿಗೆ ಆಗಬಹುದು. ಒಂದು ತಿಂಗಳಿಂದ ಕಾಯ್ದರೆ ಇವೊತ್ತು ಹದಿವಯಸ್ಸಿನ ಕನ್ಯೆಯ ಶವ ಸಿಕ್ಕಿದೆ."

"ವ್ಹಾ, ಮುದ್ದಾಮು ಸಾಧು ಲಕ್ಷ್ಮಣಗಿರಿಗಾಗಿಯೇ ಸತ್ತಿರುವ ಹಾಗಿದೆ ಆ ಹುಡುಗಿ. ಹೇಗಿದೆ ಯೋಗಾಯೋಗ! ನೋಡು. ನೀನು ನನ್ನ ಶಕ್ತಿಯನ್ನು ಅನುಮಾನಿಸಿ ಕೆಣಕುವುದಕ್ಕೂ, ನನ್ನ ಶಕ್ತಿ ಪ್ರದರ್ಶನಕ್ಕೆ ಬೇಕಾಗುವ ಕನ್ಯೆಯ ಶವ ಸಿಕ್ಕುವುದಕ್ಕೂ, ನೀನು ಇಲ್ಲಿ ಹಾಜರಿರುವುದಕ್ಕೂ ಎಲ್ಲ ಸರಿಯಾಗಿ ಕೂಡಿದೆ. ಹೂಂ, ಇಂದು ಸಿದ್ಧನಾಗು ಶವಸಾಧನೆಗೆ" ಎಂದು ಗುಡುಗಿದ ಭೈರಾಗಿ.

ಸಾಧು ಲಕ್ಷ್ಮಣಗಿರಿ ಎದೆಯೊಡೆದು ನೀರಾಗತೊಡಗಿದ. "ಗುರುಗಳೇ ನಾನು ನಿಮ್ಮ ಶಕ್ತಿಗೆ ಸವಾಲು ಹಾಕಿಲ್ಲ. ನಿಮ್ಮಲ್ಲಿ ಶಕ್ತಿ ಇಲ್ಲದೇ ಇದ್ದಿದ್ದರೆ ಇಷ್ಟು ವರ್ಷದಿಂದ ನಿಮ್ಮ ಬೆನ್ನುಬೀಳುತ್ತಿದ್ದೆನೆ? ದಯವಿಟ್ಟು ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡಿ.... ಅದೇಕೋ ನಾನು ಹೊರಟು ಬಂದ ಸಮಯ ಸರಿಯಾಗಿಲ್ಲ ಅಂತ ಕಾಣುತ್ತೆ. ನಾನು ಹೋಗಿ ಬರುತ್ತೇನೆ. ಮತ್ತೊಮ್ಮೆ ನೀವು ಶಾಂತ ಮನಸ್ಥಿತಿಯಲ್ಲಿದ್ದಾಗ ಬರುತ್ತೇನೆ" ಎನ್ನುತ್ತ ಬೈರಾಗಿಯ ಪಾದಗಳನ್ನು ಮುಟ್ಟಲು ಬಂದ ಸಾಧು.

"ಅದೆಲ್ಲ ಇಲ್ಲ. ಇಂದು ನೀನು ಶವಸಾಧನೆ ಮಾಡಿಯೇ ತೀರಬೇಕು. ಅದರ ಚಮತ್ಕಾರವನ್ನು ನೀನು ನೋಡಿಯೇ ತೀರಬೇಕು" ಎಂದು ಗುಡುಗಿದ ಬೈರಾಗಿ. ಇದೊಳ್ಳೆ ಪೀಕಲಾಟಕ್ಕೆ ಸಿಲುಕಿಕೊಂಡೆನಲ್ಲ ಎಂದುಕೊಳ್ಳುತ್ತ ಸಾಧು ಮೂಲೆಯೊಂದರಲ್ಲಿ ಕುಕ್ಕರಿಸಿದ. ಇಂದು ರಾತ್ರಿ ತನಗೆ ಅದೇನು ಕಾದಿದೆಯೋ ಎಂದು ದಿಗಿಲುಕೊಂಡ. ಎದೆಬಡಿತ ತೀವ್ರವಾಯಿತು. ಬ್ಲಡ್ ಪ್ರೆಶರ್ ಜಾಸ್ತಿಯಾಗತೊಡಗಿತು. Anticipatary tension ಜಾಸ್ತಿಯಾಗಿ ಬಾಯಿ ಒಣಗತೊಡಗಿತು. ಸಾಧುವಿನ ಸ್ಥಿತಿಯನ್ನು ನೋಡಿ ಬೈರಾಗಿಯಲ್ಲಿ ಸ್ವಲ್ಪ ಕನಿಕರಭಾವ ಮೂಡಿತೆಂದು ಕಾಣುತ್ತದೆ. ನಾಯರಿಗೆ ಸಂಜ್ಞೆ ಮಾಡಿದ. ಮೂಲೆಯಲ್ಲಿದ್ದ ಗಡಿಗೆಯಿಂದ ಹೆಂಡವನ್ನು ಮಣ್ಣಿನ ಕುಡಿಕೆಯಲ್ಲಿ ತಂದು ಸಾಧುವಿನ ಮುಂದೆ

ಹಿಡಿದ. ಆರಿದ ಬಾಯಿಗೆ ಸಿಕ್ಕಿದ್ದೇ ಅಮೃತವೆಂದು ಒಂದೇ ಪಟ್ಟಿಗೆ ಸಾಧು ಗಟಗಟನೆ ಕುಡಿದ ಅದನ್ನು. ಹೀಗೇ ತಂದುಕೊಟ್ಟಂತೆಲ್ಲ ಮೂರು ಕುಡಿಕೆ ಹೆಂಡ ಕುಡಿದ. ಹೊಟ್ಟೆ ಹಸಿಯತೊಡಗಿತು. ಏನಾದರೂ ತಿನ್ನಲು ಕೇಳಿದ. "ನಾವು ಇಲ್ಲಿ ಅಡಿಗೆ ಮಾಡುವುದಿಲ್ಲ. ನಮ್ಮ ಅಡಿಗೆ ತಯಾರಾಗುವುದು ಸ್ಮಶಾನದಲ್ಲಿ. ಪಾತ್ರೆಯಲ್ಲಿ ಮಾಡಿದ ಅಡಿಗೆ ನಮಗೆ ಸೂತಕವಾಗುತ್ತದೆ. ಇದೆಲ್ಲ ನಿನಗೆ ಹೊಸದು. ತಿಳಿದುಕೊಳ್ಳುವುದು ಬಹಳವಿದೆ. ಹಳ್ಳಿಯಲ್ಲಿ ಭಿಕ್ಷೆಗೆ ಅನ್ನ ಹಾಕಿದರೆ ನಾವು ಹಾಕಿಸಿಕೊಳ್ಳುವುದಿಲ್ಲ. ಧಾನ್ಯವನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಇಂದು ರಾತ್ರಿಗೆ ನಿನಗೆ ಸ್ಮಶಾನದಲ್ಲಿ ಹಬ್ಬದಡಿಗೆ ಮಾಡಿ ಉಣಿಸುತ್ತೇವೆ. ಈಗ ಇದನ್ನು ತಿನ್ನು" ಎಂದು ಗಡ್ಡೆಯೊಂದನ್ನು ಕೊಟ್ಟ. ಹಸಿವು ತಾಳದೆ ಅದನ್ನು ತಿನ್ನತೊಡಗಿದ. ಆರಂಭದಲ್ಲಿ ಅದರ ಒಗರು ಕಿವಿಗಳಲ್ಲಿ ಕಚಗುಳಿಯಿಟ್ಟಿತು. ನಂತರ ಅದರದೇ ಒಂದು ಸ್ವಾದವಿದೆ ಎನಿಸತೊಡಗಿತು. ಒಂದರ ಮೇಲೊಂದರಂತೆ ಎರಡು ಮೂರು ಗೆಡ್ಡೆ ತಿಂದುಬಿಟ್ಟ. ಹೊಟ್ಟೆಯೊಳಗೆ ಕಲಸಿದಂತಾಗತೊಡಗಿತು. ಉಡುಉಡು ಕಾರಿಕೊಳ್ಳತೊಡಗಿದ ಸಾಧುವಿನ ಸ್ಥಿತಿಯನ್ನು ನೋಡಿ ಬೈರಾಗಿ ಮುಗುಳುನಗತೊಡಗಿದ. ವಾಂತಿ ಮಾಡಿಕೊಂಡಿದ್ದರ ಮೇಲೆ ಮಣ್ಣು ತಂದು ಹಾಕಿದ ನಾಯರಿ. ವಾಂತಿಯಿಂದಾಗಿ ಎರಡೂ ಪಕ್ಕೆಗಳು ನೋಯತೊಡಗಿ ಸಾಧು ಕೂತಿದ್ದಂತೆಯೇ ನೆಲದ ಮೇಲೆ ಉರುಳಿಕೊಂಡ. ಅವನ ಮುಖವನ್ನು ನೊಣಗಳು ಮುತ್ತಿಕೊಂಡವು.

ಸಾಧು ಕಣ್ಣುಬಿಟ್ಟಾಗ ಕತ್ತಲಾವರಿಸತೊಡಗಿತ್ತು. ಬೈರಾಗಿ ಮತ್ತು ನಾಯರಿ ಬಗಲಿಗೆ ಜೋಳಿಗೆ ಹಾಕಿಕೊಂಡು ತಯಾರಾಗುತ್ತಿದ್ದರು. ಸಾಧು ಎದ್ದುದನ್ನು ನೋಡಿ ಕೂಡಲೇ ತಯಾರಾಗುವಂತೆ ಹೇಳಿದರು. ಸಾಧು ಸ್ನಾನ ಮಾಡುವುದಾಗಿ ಹೇಳಿದ. ಅದಕ್ಕೆ ಬೈರಾಗಿ ನಕ್ಕು, "ಸ್ನಾನ ಮಾಡು. ಆದರೆ ನೀರಿನಿಂದ ಅಲ್ಲ; ಭಸ್ಮದಿಂದ. ಅಗೋ ಮೂಲೆಯಲ್ಲಿ ಚೀಲವಿದೆಯಲ್ಲ ಅದರಲ್ಲಿ ಪವಿತ್ರ ಭಸ್ಮವಿದೆ. ಬಾಣಂತಿಯ ಶವದ ಭಸ್ಮವೂ ಅದರಲ್ಲಿ ಸೇರಿದೆ. ಅದಕ್ಕಿಂತ ಪವಿತ್ರವಾದ ಭಸ್ಮ ಮತ್ತಾವುದಿದೆ? ಬೇಗ ಮುಖ, ಮೈಗಳಿಗೆ ಬಳಿದುಕೊ. ನಿನ್ನ ಮಾಂಸಪಿಂಡ ಮಂತ್ರಪಿಂಡವಾಗಿ ಮಾರ್ಪಡುತ್ತದೆ" ಎಂದ. ಅಷ್ಟರಲ್ಲಿ ಇನ್ನೀರ್ವರು ವ್ಯಕ್ತಿಗಳು ಬಂದರು. ಸಾಧುವಿಗೆ ಅವರ ಪರಿಚಯ ಮಾಡಿಸಲಿಲ್ಲ. ಆದರೆ ಅವರಿಗೆ, "ಇವನು ಇವತ್ತು ಶವಸಾಧಕ!" ಎಂದ ಕೊಂಕುನಗುತ್ತಾ ಬೈರಾಗಿ. ಅವರಲ್ಲಿ ಒಬ್ಬ ತತ್ರಾಣಿಯಂಥ ಮಣ್ಣಿನ ಎರಡು ಪಾತ್ರೆಗಳಲ್ಲಿ ಹೆಂಡವನ್ನು ತುಂಬಿಕೊಂಡ. ಐದು ಜನಕ್ಕೆ ಅಷ್ಟೇ ಸಾಲುವುದಿಲ್ಲ ಎಂದ ಬೈರಾಗಿ. ಇನ್ನೊಬ್ಬ ಆಗಂತುಕ ಇಡೀ ಹೆಂಡದ ಕೊಡವನ್ನೇ ಹೊತ್ತುಕೊಂಡ.

ಕೃಷ್ಣಪಕ್ಷವಾದ್ದರಿಂದ ಕತ್ತಲು ಗವ್ವೆನ್ನುತ್ತಾ ಸ್ವಲ್ಪ ದೂರ ಸಾಗುತ್ತಲೇ ದಾರಿ ದುರ್ಗಮವಾಯಿತು. ಮುಳ್ಳುಕಂಟಿಗಳನ್ನು ಕೈಯೊಳಗಿನ ದಂಡದಿಂದ ಸರಿಸುತ್ತ ನಾಯರಿ ಮುಂದೆ ನಡೆಯತೊಡಗಿದ. ಯಾರಿಗೂ ಸುಳಿವು ಸಿಗಬಾರದೆಂದು ಸುತ್ತು ಹಾಕಿಕೊಂಡು ಸ್ಮಶಾನವನ್ನು ತಲುಪಿದರು. ಬೈರಾಗಿ ಕಾಲಭೈರವನ ಜಪ ಮಾಡತೊಡಗುತ್ತ ಒಂದೆಡೆ ಕೂತ. ನಾಯರಿ ತಲೆಬುರುಡೆಯೊಂದನ್ನು ಆಯ್ದು ತಂದ. ಕಲ್ಲುಗಳನ್ನಿಟ್ಟು ಒಲೆ ಹೂಡಿದ. ಆಗಂತುಕರಲ್ಲೊಬ್ಬ ಒಂದು ಕಟ್ಟಿಗೆಗೆ ಎಣ್ಣೆಬಟ್ಟೆ ಸುತ್ತಿ ಉರಿ ಹಚ್ಚಿ ಪಂಜು ಮಾಡಿದ. ಆ ಪಂಜನ್ನು ಹಿಡಿದುಕೊಂಡು ಸ್ಮಶಾನದ ಸುತ್ತಲೂ ಒಂದು ಸುತ್ತು ಹಾಕಿ ಬಂದ. ಅದೇಕೆ ಹಾಗೆ ಸುತ್ತು ಹಾಕಿದ್ದು ಎನ್ನುವಂತೆ ಪ್ರಶ್ನಾರ್ಥಕವಾಗಿ ನೋಡಿದ ಸಾಧು ಲಕ್ಷ್ಮಣಗಿರಿಗೆ ಬೈರಾಗಿ, "ಈ ಕೊಳ್ಳಿಯನ್ನು ನೋಡಿ ಜನ ಸ್ಮಶಾನದ ಹತ್ತಿರ ಸುಳಿಯುವುದಿಲ್ಲ. ಕೊಳ್ಳಿ ದೆವ್ವವೆಂದು ಭಯಬೀಳುತ್ತಾರೆ" ಎಂದ.

ಒಲೆಯ ಮೇಲಿಟ್ಟ ತಲೆಬುರುಡೆಯಲ್ಲಿ ನೀರು ಹಾಕಿದ. ಅದು ಕಾಯುತ್ತಲೇ ಅದರೊಳಗೆ ಅಕ್ಕಿ ಸುರಿದ. ಅಕ್ಕಿ ಕುದಿಯತೊಡಗಿತು. ನಾಯರಿ "ಈ ತಲೆಬುರುಡೆಯಲ್ಲಿ ಮಾಡಿದ್ದು ಮಾತ್ರ ನೈವೇದ್ಯಕ್ಕೆ ಬರುತ್ತದೆ. ಲೋಹದ ಪಾತ್ರೆಗಳ ಅಡುಗೆ ನೈವೇದ್ಯವಾಗುವುದಿಲ್ಲ" ಎಂದ ಸಾಧುವಿನೆಡೆ ತಿರುಗಿ.

ಇದನ್ನೆಲ್ಲ ದಿಗ್ಭ್ರಮೆಗೊಂಡು ನೋಡುತ್ತಿದ್ದ ಸಾಧುವಿಗೆ, ಇದೇ ಒಂದು ಪ್ರತ್ಯೇಕ ಲೋಕ ಎನಿಸಿತು. ಸಾಧುವಿಗೆ ಸ್ಮಶಾನವೇನೂ ಹೊಸದಲ್ಲ. ಆದರೆ ಸಿದ್ಧಿಯ ಉದ್ದೇಶದಿಂದ ನಿರ್ದಿಷ್ಟ ಕ್ರಿಯೆಗಳಿಗಾಗಿ ಸ್ಮಶಾನದಲ್ಲಿ ನಿಂತಿದ್ದು ಅದೇ ಪ್ರಥಮವಾಗಿತ್ತು. ಹೀಗಾಗಿ ಸಾಧುವಿನಲ್ಲಿ ಅವ್ಯಕ್ತ ತಲ್ಲಣ ಉಂಟಾಗಿತ್ತು.

ಒಲೆಯಲ್ಲಿ ಕೆಂಡ ನಿಗಿನಿಗಿಯೆನ್ನುತ್ತಿತ್ತು. ಅಕ್ಕಿ ಕುದಿದು ಅನ್ನವಾಗಿ ಅರಳುತ್ತಿತ್ತು. ಬೈರಾಗಿ ಬಂದು ಒಲೆಗೆ ಕೈ ಒಡ್ಡಿ ಕಾಯಿಸಿಕೊಳ್ಳುತ್ತಾ, "ಏ ಸಾಧು ನೋಡಿಲ್ಲಿ, ನಿನ್ನ ಜೀವಮಾನವಿಡೀ ಇಂಥ ಸುವಾಸನೆಭರಿತ ಅನ್ನವನ್ನು ತಿಂದಿರುವುದಿಲ್ಲ. ಬುರುಡೆಯೊಳಗೆ ಕುದಿದ ಅನ್ನದ ಪರಿಮಳ ವರ್ಣನಾತೀತ" ಎಂದು ಕಣ್ಣು ಮುಚ್ಚಿಕೊಂಡು ಒಲೆಯತ್ತ ಬಾಗಿದ. ಬೂದಿ ಬಳಿದುಕೊಂಡಿದ್ದ ಬೈರಾಗಿಯ ಮುಖದ ಮೇಲೆ ಕೆಂಡದ ಕೆಂಪು ಬೆಳಕು ಪ್ರತಿಫಲಿಸಿತು. ಸಾಧುವಿಗೆ ಒಂದರೆಕ್ಷಣ ಹೃದಯದ ಬಡಿತ ನಿಂತಂತಾಯಿತು; ಬೈರಾಗಿಯ ಮುಖದ ಮೇಲೆ ಪೈಶಾಚಿಕ ಕಳೆ ಝುಲಕ್ ಎಂದದ್ದನ್ನು ನೋಡಿ. ಪಿಶಾಚಿ ಹೀಗೆ ಇರುತ್ತದೇನೋ ಅಥವಾ ಈ ಬೈರಾಗಿಯೇ ನಿಜವಾದ ಪಿಶಾಚಿಯೋ ಏನೋ ಅಥವಾ ಬೈರಾಗಿಯ ರೂಪದಲ್ಲಿ ಪಿಶಾಚಿ ಬಂದು ನನ್ನನ್ನು ಇಲ್ಲಿಗೆ ಕರೆ ತಂದಿದೆಯೇನೋ..... ಹೀಗೇ ಅಸಂಬದ್ಧವಾಗಿ

ಸಾಧುವಿನ ಮನಸ್ಸು ಮಾತಾಡಿಕೊಳ್ಳತೊಡಗಿತು. ಅಷ್ಟರಲ್ಲಿ ಅಲ್ಲಿಯೇ ಇದ್ದ ಗಿಡವೊಂದರ ಬುಡದಲ್ಲಿ ಹುಗಿದಿಟ್ಟಿದ್ದ ಸನಿಕೆ, ಗುದ್ದಲಿಗಳನ್ನು ತೆಗೆದು ತಂದ ನಾಯರಿ ಅವುಗಳಿಗೆ ಹೆಂಡವನ್ನು ಚಿಮುಕಿಸಿದ. ಬೈರಾಗಿಗೆ ತಲೆಬುರುಡೆಯಲ್ಲಿ ಹೆಂಡವನ್ನು ಕೊಟ್ಟ. ಒಂದು ಗುಟುಕು ಕುಡಿದು ಸಾಧುವಿಗೆ ಕುಡಿಯಲು ಕೊಟ್ಟ. ಹಾಗೆಯೇ ಬೈರಾಗಿ ನಾಯರಿ ಮತ್ತು ಆಗಂತುಕರಿಗೆ ಹೆಂಡ ಗುಟುಕರಿಸಿ ಕೊಟ್ಟ. ಎಲ್ಲ ಹೊಟ್ಟೆ ತುಂಬ ಹೆಂಡ ಕುಡಿದರು. ಮಧ್ಯೆ ಮಧ್ಯೆ ಗಡ್ಡೆಗಳನ್ನು ತಿಂದರು.

ಅಂದೇ ಹೂತಿದ್ದ ಹದಿಹರೆಯದ ಕನ್ಯೆಯ ಸಮಾಧಿಯನ್ನು ನಾಯರಿ ಅಗೆಯಲಾರಂಭಿಸಿದ. ಬೈರಾಗಿ "ನಾಯರಿ, ಗುದ್ದಲಿಯನ್ನು ಸಾಧು ಲಕ್ಷ್ಮಣಗಿರಿಗೆ ಕೊಡು. ಅವನೇ ಅಗೆದು ತೆಗೆಯಲಿ. ಉಳಿದವರು ಅವನಿಗೆ ಸಹಾಯ ಮಾಡಿ" ಎಂದ. ನಡುಗುವ ಕೈಗಳಿಂದ ಸಾಧು ಸಮಾಧಿ ಕೆದರತೊಡಗಿದ. ಉಳಿದವರು ಸನಿಕೆಯಿಂದ ಕೈ ಬದಲಾಯಿಸುತ್ತಾ ಮಣ್ಣನ್ನು ತೆಗೆದರು. "ಶವಕ್ಕೆ ಏಟಾಗಬಾರದು ಜೋಕೆ" ಎಂದು ಬೈರಾಗಿ ಎಚ್ಚರಿಸಿದ. ಸ್ವಲ್ಪ ಆಳ ತೆಗೆದಾದ ಮೇಲೆ ಸನಿಕೆ ಬಿಟ್ಟು ಕೈಗಳಿಂದಲೇ ಮಣ್ಣು ತೆಗೆದರು. ಶವ ಕಾಣಿಸಿಕೊಂಡಿತು. ಸಾಧುವಿಗೆ ಭಯವಾಗಿ ಕುಣಿಯಿಂದ ಆಚೆಗೆ ನೆಗೆದ. "ಹೀಗೆ ಭಯಪಟ್ಟರೆ ಹೇಗೆ, ಆಂ?" ಎನ್ನುತ್ತ ಬೈರಾಗಿ, ಸಾಧುವಿಗೆ ಮತ್ತೊಂದು ಬುರುಡೆ ಹೆಂಡ ಕೊಟ್ಟ. ಹೆಂಡದ ನಶೆ ಮತ್ತು ಸಮಾಧಿ ಅಗೆದ ಬಳಲಿಕೆಯಿಂದ ಸಾಧುವಿನ ತಲೆ ಸಿಡಿಯತೊಡಗಿತ್ತು. ಕಣ್ಣುಗಳು ಮಂಜಾದವು. ಎಲ್ಲರೂ ಬಟ್ಟೆ ಕಳಚಿ ಬೆತ್ತಲೆಯಾದರು. "ಹೂಂ, ನೀನೂ ತೆಗೆ" ಎಂದ ಬೈರಾಗಿ ಸಾಧುವಿಗೆ. ನಾಲ್ವರೂ ಬೆತ್ತಲೆಯಾದರು. ಗಡಿಗೆಯಲ್ಲಿ ಸ್ವಲ್ಪವೇ ಉಳಿದಿದ್ದ ಹೆಂಡವನ್ನು ಖಾಲಿಯಾಗಿದ್ದ ತತ್ರಾಣಿಗಳಲ್ಲಿ ತುಂಬಿ ಅದನ್ನು ಖಾಲಿ ಮಾಡಿದರು.

"ಈ ಗಡಿಗೆ ತೆಗೆದುಕೊ. ಇಲ್ಲಿಯೇ ಸಮೀಪ ಬಾವಿಯಿದೆ. ಇಳಿಯಲು ಪಾವಟಿಗೆಗಳಿವೆ. ನಿನ್ನೊಂದಿಗೆ ನಾಯರಿ ಬರುತ್ತಾನೆ. ಅಂಜಬೇಡ, ನೀರು ತೆಗೆದುಕೊಂಡು ಬಾ" ಎಂದ ಬೈರಾಗಿ.

ಭಯ ಒತ್ತರಿಸಿ ಬರುತ್ತಿದ್ದರೂ ಏರಿದ ನಶೆಯನ್ನೇ ಗುರಾಣಿ ಮಾಡಿಕೊಂಡು, ಗಡಿಗೆಯನ್ನು ಹೆಗಲ ಮೇಲಿಟ್ಟುಕೊಂಡು ನಡೆದ. ಬಾವಿಯಿಂದ ನೀರೆತ್ತಿಕೊಂಡು ಮೇಲೆ ಬಂದಾಗ ತಾನಿನ್ನೂ ಬದುಕಿರುವುದನ್ನು ಖಾತರಿಪಡಿಸಿಕೊಳ್ಳಲು ತನ್ನ ತೊಡೆಯನ್ನು ತಾನೇ ಚಿವುಟಿಕೊಂಡ ಸಾಧು.

ಸಮಾಧಿಯ ಮುಂದೆ ಚಿತಾಭಸ್ಮದಿಂದ ಮಂಡಲವೊಂದನ್ನು ಬರೆದಿದ್ದ ಬೈರಾಗಿ. ಕಿಚ್ಚಿನ ಮಂದಬೆಳಕಿನಲ್ಲಿ ಮಸುಕಾಗಿ ಕಾಣುತ್ತಿದ್ದ ಮಂಡಲವನ್ನು

ತೋರಿಸಿ, "ಆ ಶವಕ್ಕೆ ಸ್ನಾನ ಮಾಡಿಸಿ ಈ ಮಂಡಲದಲ್ಲಿರಿಸಿ ಷೋಡಶೋಪಚಾರದ ಪೂಜೆ ಮಾಡು. ಆ ನಂತರ ನಿನಗೆ ಮಂತ್ರವೊಂದನ್ನು ಹೇಳುತ್ತೇನೆ. ಅದನ್ನು ನೂರೆಂಟು ಬಾರಿ ಪಠಿಸಬೇಕು" ಎಂದ ಬೈರಾಗಿ. ಆ ಕನ್ಯೆಯ ಶವವನ್ನು ತಾನು ತಂದಿದ್ದ ನೀರಿನಲ್ಲಿ ತೊಳೆದ. ಶವದ ಅಂಗಸೌಷ್ಠವ ಸಾಧುವಿನ ಕಣ್ಣು ತಿರುಗಿಸಿತು. ಸ್ನಾನ ಮಾಡಿಸುತ್ತ ಅದು ಶವವೆನ್ನುವುದನ್ನೇ ಮರೆತ. ನಿದ್ರೆಯಲ್ಲಿರುವ ಕನ್ಯೆಗೆ ಮೈತೊಳೆಸುತ್ತಿರುವಂತೆ ಭಾಸವಾಗತೊಡಗಿತು. ಅನಾಮತ್ತಾಗಿ ಶವವನ್ನು ಎತ್ತಿ ಮಂಡಲದ ಮಧ್ಯೆ ಮಲಗಿಸಿದ. ತಲೆ, ಭುಜಗಳು, ಸೊಂಟ, ಪಾದಗಳ ಹತ್ತಿರ ಮೊಳೆಗಳನ್ನು ನೆಲದಲ್ಲಿ ನೆಡಲು ತಿಳಿಸಿದ ಬೈರಾಗಿ.

"ಇಲ್ಲ, ನನಗೆ ಇನ್ನು ಮುಂದೆ ಏನು ಮಾಡಲೂ ಸಾಧ್ಯವಾಗುವುದಿಲ್ಲ. ದಯವಿಟ್ಟು ನೀವು ಯಾರಾದರೂ ಮುಂದಿನ ಕೆಲಸಗಳನ್ನು ಮಾಡಿಕೊಳ್ಳಿ" ಎಂದು ಗೋಗರೆದ ಸಾಧು.

"ಛೇ, ಛೇ, ಅದೆಲ್ಲ ಆಗುತ್ಯೆ? ಇನ್ನೂ ಈಗ ಆರಂಭವಾಗಿದೆ. ನೀನು ಮಾಡುವುದು ಬಹಳವಿದೆ. ಈಗಲೇ ಒಲ್ಲೆನೆಂದರೆ ಹೇಗೆ?" ಎಂದು ಬೈರಾಗಿ ಸಾಧುವಿನ ಕೈಗೆ ಕರಿದಾರದ ರೀಲನ್ನು ಕೊಟ್ಟ. ಹಾಗೆಯೇ ಮತ್ತೊಂದು ಬುರುಡೆ ಹೆಂಡವನ್ನೂ ಕೊಟ್ಟ. ಸಾಧು ಹೆಂಡ ಗುಟುಕರಿಸಿ ಧೈರ್ಯವನ್ನು ಕ್ರೋಡೀಕರಿಸಿಕೊಂಡ. ಬೈರಾಗಿ ಹೇಳಿದಂತೆ ನೆಲಕ್ಕೆ ಹೊಡೆಯಲ್ಪಟ್ಟಿದ್ದ ಮೊಳೆಗಳೆಲ್ಲ ಕವರ್ ಆಗುವಂತೆ ಕರಿದಾರ ಸುತ್ತತೊಡಗಿದ. ಮದುವೆ, ಮುಂಜಿಗಳಲ್ಲಿ ಪಂಚ ಕಲಶಗಳಿಗೆ ದಾರ ಸುತ್ತುವ ನೆನಪಾಯಿತು ಸಾಧುವಿಗೆ.

"ಹೂಂ, ಈಗ ಸರಿಯಾಯಿತು. ಗಂಧ, ಅರಿಷಿಣ, ಕುಂಕುಮ, ಬಳೆ, ಮೂಗುತಿ, ಕಿವಿಯೋಲೆ, ಕಾಲುಂಗುರಗಳಿಂದ ಸಿಂಗರಿಸು" ಎಂದ ಬೈರಾಗಿ. ಸಾಧು ಅದನ್ನೆಲ್ಲ ಮಾಡಿದ. ಇಲ್ಲಿ ಬಾ ಎಂದು ಬೈರಾಗಿ ಸಾಧುವನ್ನು ಹತ್ತಿರಕ್ಕೆ ಕರೆದು ಕಿವಿಯಲ್ಲಿ ಏನೋ ಮಂತ್ರ ಹೇಳಿದ. ಇದನ್ನು ನೂರೆಂಟು ಸಲ ಜಪಿಸಬೇಕು. ಇದೋ ಈ ತಲೆಬುರುಡೆಯಲ್ಲಿ ಬೇಯಿಸಿದ್ದ ಅನ್ನ ಮತ್ತು ಹೆಂಡಗಳನ್ನು ಶವದ ಬಾಯಿಯಲ್ಲಿ ತುರುಕು. ಇದನ್ನೆಲ್ಲ ನೀನು ಆ ಶವದ ಕಿಬ್ಬೊಟ್ಟೆಯ ಅಂದರೆ ಯೋನಿಪ್ರವೇಶದ ಮೇಲೆ ಕೂತು ಮಾಡಬೇಕು" ಎಂದ.

ಅಷ್ಟೊತ್ತಿಗೆ ಸಾಧುವಿಗೆ ಕುಡಿತ ಮಿತಿಮೀರಿ ಹೋಗಿತ್ತು. ತಾನು ನಿಂತಿದ್ದ ಭೂಮಿ ನೀರ ಮೇಲಿನ ದೋಣಿಯಂತೆ ಓಲಾಡುತ್ತಿದೆಯೇನೋ ಎನಿಸತೊಡಗಿತ್ತು. ಆ ಎಲ್ಲ ನಶೆಯನ್ನು ಸೀಳಿಕೊಂಡು ಸಾವಿನ ಭಯ ಚಿಮ್ಮಿ ಬಂದಿತು ಸಾಧುವಿಗೆ. ಗಳಗಳನೆ ಅಳತೊಡಗಿದ. ಬೈರಾಗಿಯ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು,

"ದಯವಿಟ್ಟು ನನ್ನನ್ನು ಬಿಟ್ಟುಬಿಡಿ" ಎಂದು ರೋದಿಸತೊಡಗಿದ. "ಈ ಅಳುವಿಗೆ ಇಲ್ಲಿ ಬೆಲೆಯಿಲ್ಲ. ಸಮಯ ಮೀರಿಹೋಗುತ್ತದೆ. ನೀನು ಶವದ ಮೇಲೆ ಕೂತು ಮಂತ್ರ ಪಠಿಸದಿದ್ದರೆ ಇಲ್ಲಿ ನೀನೇ ಶವವಾಗಿ ಬೀಳುತ್ತೀಯ. ಆಗ ನಿನ್ನ ಶವದ ಮೇಲೆ ಈ ನಾಯರಿ ಕೂತು ಮಂತ್ರ ಪಠಿಸುತ್ತಾನೆ" ಎಂದ ಬೈರಾಗಿ ಕ್ರೂರ ಧ್ವನಿಯಲ್ಲಿ.

ಸಾಧುವಿಗೆ ಬೇರೆ ಮಾರ್ಗವೇ ಇರಲಿಲ್ಲ; ತಾನು ಹೆಣದ ಮೇಲೆ ಕೂಡುವುದು, ಇಲ್ಲಾ ತಾನೇ ಹೆಣವಾಗುವುದು ಬಿಟ್ಟರೆ! "ನನ್ನ ಜೀವ ಇಂದು ಹೋಗುವುದು ಗ್ಯಾರಂಟಿ, ಹಾಗೆಯೇ ಏಕೆ ಜೀವ ಕಳೆದುಕೊಳ್ಳಬೇಕು? ಶವಸಾಧನೆ ಮಾಡುತ್ತಲೇ ಜೀವ ಕಳೆದುಕೊಳ್ಳುವುದರಲ್ಲಿಯೇ ಅರ್ಥವಿದೆ!" ಎಂದುಕೊಂಡ ಸಾಧು. ಮಿದುಳಿನ ನರಗಳಲ್ಲಿ ಸೂಜಿಯಿಂದ ಚುಚ್ಚಿದಂತಾಗುತ್ತಿತ್ತು. ಅಂಥ ತಲೆಸಿಡಿತ ಸಾಧುವಿಗೆ. ಬೈರಾಗಿ ಯಮನಂತೆ ಕಂಡರೆ, ನಾಯರಿ ಮತ್ತು ಆಗಂತುಕರು ಯಮದೂತರಂತೆ ಕಂಡರು. ಎಲ್ಲಿಲ್ಲದ ಧೈರ್ಯ ತಂದುಕೊಂಡು ಮಂಡಲ ಪ್ರವೇಶಿಸಿ ಕನ್ಯೆಯ ಶವದ ಕಿಬ್ಬೊಟ್ಟೆಯ ಮೇಲೆ ಕುಳಿತುಕೊಂಡು ಹೆಣವನ್ನು ಸಿಂಗರಿಸಿದ. ಬಾಯಿಗೆ ಅನ್ನವಿಕ್ಕಿದ ಮೇಲೆ ಹೆಂಡ ಸುರಿದ. ಮೊಳೆಗಳಿಗೆ ಸುತ್ತಲ್ಪಟ್ಟಿದ್ದ ದಿಗ್ಬಂಧನದ ಕರಿದಾರದ ಕೊನೆಯನ್ನು ತನ್ನ ಗುದಸ್ಥಾನದಲ್ಲಿರಿಸಿಕೊಂಡ. ಬೈರಾಗಿ ಮತ್ತೊಂದು ಬುರುಡೆ ಹೆಂಡ ಕೊಟ್ಟ. ಸಾಯುವ ಮುಂಚೆ ಕುಡಿಯುವ ಕೊನೆಯ ಗುಟುಕೆನ್ನುವಂತೆ ಹೆಂಡ ಕುಡಿದ ಸಾಧು. ಮಂತ್ರೋಚ್ಚಾರಣೆಯನ್ನು ಆರಂಭಿಸಿದ. ಮಂಡಲದ ಸುತ್ತ ನಿಂತಿದ್ದ ಬೈರಾಗಿ ಮತ್ತಿತರರು ವಿಜಯೋತ್ಸಾಹದ ನಗೆ ನಗತೊಡಗಿದರು. ಬೈರಾಗಿ ಮಂತ್ರವನ್ನು ಕಿವಿಯಲ್ಲಿ ವಟಗುಟ್ಟಿದಾಗ ಹೇಳಿದ್ದ, "ಜಪ ನೂರೆಂಟು ಆಗುವುದರೊಳಗೆ ಶವ ನಗುತ್ತದೆ. ಕಣ್ಣು ತೆಗೆದು ನಿನ್ನನ್ನು ನೋಡುತ್ತದೆ" ಎಂದು. ಕೈಯಲ್ಲಿ ಜಪಮಣಿ ಹಿಡಿದು ಮಂತ್ರ ಕರಗಿ ಹೋಗುತ್ತಿತ್ತು. ಬಾಯಿ ಒಣಗತೊಡಗಿತು. ನೂರೆಂಟು ಆಗುವುದಿಲ್ಲ ಎನಿಸಿತು.... ಶವ ನಗುವುದು ಕಾಣಿಸಿತು.... ಕಣ್ತೆರೆದು ನೋಡುವುದು ಕಾಣಿಸಿತು.... ನಾಲಿಗೆ ಕಿಸಿದುಕೊಂಡು ಶವದ ಮೇಲೆ ಉರುಳಿದ ಸಾಧು.

ಸಾಧು ಲಕ್ಷ್ಮಣಗಿರಿ ಕಣ್ಣುಬಿಟ್ಟಾಗ ಬೈರಾಗಿಯ ಆಶ್ರಮದಲ್ಲಿದ್ದ. ಮೈಮೇಲೆ ಹೊದಿಸಿದ್ದ ಕಂಬಳಿಯನ್ನು ಸರಿಸಿ ಎದ್ದು ಕೂತು ಕಣ್ಣು ತಿಕ್ಕಿಕೊಂಡ. ಸ್ಮಶಾನ, ಶವ, ಮಂತ್ರ, ನಾಲಿಗೆ ಕಚ್ಚಿಕೊಂಡು ಮೂರ್ಛೆ ಹೋದದ್ದು ಎಲ್ಲವೂ ಕಣ್‌ಮುಂದೆ ಬಂದವು.

ಬೈರಾಗಿ ಸಾಧುವಿನತ್ತ ನೋಡಿ ನಗುತ್ತ, "ನೀನೊಬ್ಬ ಶುದ್ಧ ಪುಕ್ಕಲು

ಆಸಾಮಿ. ಶವಸಾಧನೆಯ ಸಾಮರ್ಥ್ಯ ನಿನ್ನಲ್ಲಿಲ್ಲ. ನಿನ್ನಿಂದ ಸಾಧನೆ ಮಾಡಿಸಿಯೇ ತೀರಬೇಕೆಂದು ಪಟ್ಟುಹಿಡಿದೆ. ನಿನಗೆ ಜೀವಭಯ ಹುಟ್ಟಿಸಿದೆ. ಆದರೆ ಸಾಧ್ಯವಾಗಲಿಲ್ಲ. ನೂರಾ ಎಂಟು ಬಾರಿ ಮಂತ್ರ ಜಪಿಸು ಎಂದರೆ ಎಂಟು ಬಾರಿ ಜಪಿಸುವುದರಲ್ಲಿಯೇ ಬಾಯಿ ಕಿಸಿದುಕೊಂಡು ಬಿದ್ದಿ. ಜನರಲ್ಲಿ ವಾಡಿಕೆಯ ಮಾತೊಂದಿದೆ 'ಸಿದ್ಧಿ ಕಿಸಿಗಾಲು ಹಾಕಿಕೊಂಡು ಬಿದ್ದಿ' ಅಂತ! ಹಾಗಾಯಿತು ನಿನ್ನ ಪಾಡು. ಇರಲಿ ಏಳು ನಿನಗೆ ಇನ್ನೊಂದು ಸರಳ ಸಾಧನೆ ಹೇಳಿಕೊಡ್ತೇನೆ ಮಾಡು" ಎಂದ.

ತಾನು ಹೆಣದ ಮೇಲೆ ಪ್ರಜ್ಞೆ ತಪ್ಪಿ ಬಿದ್ದಾದ ಮೇಲೂ ಬದುಕಿ ಉಳಿದಿದ್ದೇನಲ್ಲಾ ಎಂದು ಖುಷಿಗೊಂಡ ಸಾಧು. ಎದ್ದು ನಿಲ್ಲಲು ಹೋದ. ಮೈಕೈಗಳಲ್ಲಿ ತಾಳಲಸಾಧ್ಯ ನೋವು ಕಾಣಿಸಿತು. ನಾಯರಿ ಬಂದು ಅದಾವುದೋ ಕಷಾಯ ಕೊಟ್ಟ. ಕುಡಿದು ಮತ್ತೆ ಕಂಬಳಿ ಹೊದ್ದು ಮಲಗಿದ.

ಸಾಧು ವಾಪಸು ಬೆಂಗಳೂರಿಗೆ ಹೊರಡಲನುವಾಗಿ ಬೈರಾಗಿಯ ಮುಂದೆ ಅಪ್ಪಣೆಗಾಗಿ ನಿಂತ. ತನ್ನಲ್ಲಿಯ ಸಂಶಯ ಪರಿಹರಿಸಿಕೊಳ್ಳಲೆಂದು ಪ್ರಶ್ನಿಸಿದ. "ನಿನ್ನೆಯ ರಾತ್ರಿ ನಾನು ಸ್ಮಶಾನದಲ್ಲಿ ಶವಸಾಧನೆ ಮಾಡುವಾಗ ಶವ ಕಣ್ಣಬಿಟ್ಟಿತು, ನಕ್ಕಿತು ಸಹ!?" ಎಂದ.

ಅದಕ್ಕೆ ಬೈರಾಗಿ, "ಹುಚ್ಚಪ್ಪ ಅದೆಲ್ಲ ನಿನ್ನ ಭ್ರಮೆ. ನೀನು ಶವಸಾಧನೆಗೆ ತೊಡಗುವುದಕ್ಕೆ ಮುನ್ನ ನಾನು ನಿನಗೆ ಶವ ನಗುತ್ತದೆ ಎಂದು ಹೇಳಿದ್ದೆನಲ್ಲವೆ? ಅದನ್ನೇ ತಲೆಯಲ್ಲಿಟ್ಟುಕೊಂಡು ಮಂತ್ರ ಜಪಿಸಿದ್ದೀಯಾ. ಭಯದಲ್ಲಿ ಹಾಗೆ ಭ್ರಮಿಸಿಕೊಂಡಿದ್ದೀಯಾ. ಬಹಳಷ್ಟು ಸಾಧಕರು ಇಂಥದೇ ಭ್ರಮೆಯಲ್ಲಿ ಮುಳುಗಿ ತಮಗೆ ಸಿದ್ಧಿ ಆಗಿದೆಯೆಂದುಕೊಂಡು ಅಲೆಯುತ್ತಿದ್ದಾರೆ. ಅಂಥವರಲ್ಲಿ ನೀನೂ ಒಬ್ಬ. ಅದೆಲ್ಲ ಬಿಡು, ಈಗ ಸರಳವಾದದ್ದೊಂದನ್ನು ನಿನಗೆ ಹೇಳಿಕೊಡುತ್ತೇನೆ. ಒಂಭತ್ತು ಹುಣ್ಣಿಮೆಗಳ ವ್ರತವಿದು. ಸ್ಮಶಾನತಾರಾ ದೇವತೆಗೆ ಪ್ರತಿ ಹುಣ್ಣಿಮೆಗೆ ಒಂದೊಂದರಂತೆ ಒಟ್ಟು ಹನ್ನೊಂದು ಹುಡುಗರ ಬಲಿಯನ್ನು ಕೊಡಬೇಕು. ಈ ವ್ರತಕ್ಕೆ ಶವಸಾಧನೆಯ ಅವಶ್ಯಕತೆಯಿಲ್ಲ. ಸ್ಮಶಾನತಾರಾಳ ಅವಾಹನೆ ಮಂತ್ರ ಹೇಳಿಕೊಡುತ್ತೇನೆ. ಅದನ್ನು ಪಠಿಸು. ನಂತರ ದೇವಿಗೆ ಷೋಡಶೋಪಚಾರದ ಪೂಜೆ ಮಾಡು. ನೈವೇದ್ಯಕ್ಕೆ ನರಬಲಿ ನೀಡು. ಹನ್ನೊಂದು ಹುಣ್ಣಿಮೆಗಳು ಮುಗಿಯುವುದರೊಳಗೆ ದೇವಿ ನಿನಗೆ ಪ್ರತ್ಯಕ್ಷಳಾಗುತ್ತಾಳೆ" ಎಂದು ಹೇಳಿದ ಬೈರಾಗಿ ಸಾಧುವಿನ ಕಿವಿಯಲ್ಲಿ ಮಂತ್ರಗಳನ್ನು ಉಸುರಿದ. ಗುರುವೆ ನೀವು ಎಂದಾದರೂ ಶವಸಾಧನೆ ಮಾಡಿ ಶವ ನಕ್ಕಿದ್ದನ್ನು ನೋಡಿದ್ದೀರಾ? ಎಂದು ಪ್ರಶ್ನಿಸಬೇಕೆನಿಸಿತು ಸಾಧುವಿಗೆ. ಆದರೆ ಆ ಮಾತಿನಿಂದ ಗುರು ಮತ್ತೆ ಕೋಪಗೊಂಡು ಮಂತ್ರ

ಬೋಧನೆ ಮಾಡದಿದ್ದರೆ ಹೇಗೆನ್ನುವ ಭಯ ಇಣುಕಿ ಬಾಯಿಮುಚ್ಚಿಕೊಂಡ. ಆದರೂ ಸಾಧುವಿನ ಮನಸ್ಸಿನ ಮೂಲೆಯೊಂದರಲ್ಲಿ ಬೈರಾಗಿಯ ಸಿದ್ಧಿಶಕ್ತಿಯ ಬಗ್ಗೆ ಅನುಮಾನದ ಅಳುಕು ಉಳಿದುಕೊಂಡಿತು.

ಬೆಂಗಳೂರಿಗೆ ಬಂದ ಸಾಧು ಸ್ಮಶಾನತಾರಾ ದೇವಿಯನ್ನು ಪ್ರತ್ಯಕ್ಷಗೊಳಿಸಿಕೊಳ್ಳಲು ವ್ರತ ಕೈಗೊಂಡ.

ಒಂದು ಮಧ್ಯಾಹ್ನ ಸಾಧುವಿನ ಮನೆಯ ಬಳಿಗೆ ಹುಡುಗನೊಬ್ಬ ಬಂದ. ಹೊಸಬನೇನೂ ಅಲ್ಲ. ಆಗಾಗ ಬರುತ್ತಿದ್ದವನೇ. ಸಾಧು ಬೆಳಗ್ಗೆಯೇ ಸಿಹಿತಿಂಡಿ ಮತ್ತು ಭಂಗಿ ಹಾಕಿದ ಕೇಸರಿ ಹಾಲನ್ನು ಸಿದ್ಧಪಡಿಸಿಟ್ಟುಕೊಂಡು ಕೂತಿದ್ದ. ಸಾಧು ಕೊಡುವ ತಿಂಡಿಯ ಆಸೆಗಾಗಿ ಬಂದಿದ್ದ ಹುಡುಗ. ತಿಂಡಿ ತಿಂದು ಹಾಲು ಕುಡಿದ. ಮಿಠಾಯಿಗೆ ಇಟ್ಟುಕೊ ಎಂದು ಹತ್ತು ರೂಪಾಯಿ ನೋಟುಕೊಟ್ಟಾಗ ಹುಡುಗನ ಸಂತೋಷಕ್ಕೆ ಮಿತಿಯೇ ಇಲ್ಲವಾಗಿತ್ತು. ಸ್ವಲ್ಪ ಹೊತ್ತು ಬಿಟ್ಟ. ಪುನಃ ಒಂದು ಗ್ಲಾಸು ಹಾಲು ಕುಡಿದ ಆ ಹುಡುಗ. ಮನೆಗೆ ಹೋಗುತ್ತೇನೆಂದು ಬಾಯಲ್ಲಿ ಹೇಳುತ್ತಿದ್ದರೂ ಭಂಗಿನ ನಶೆಯಿಂದಾಗಿ ಅಲ್ಲಿಯೇ ನೆಲದ ಮೇಲೆ ಉರುಳಿದ. ಹೊರಗಡೆಯಿಂದ ತನ್ನ ಮನೆಗೆ ಬೀಗ ಹಾಕಿ ಹಿತ್ತಿಲು ಬಾಗಿಲಿನಿಂದ ಒಳಕ್ಕೆ ಬಂದು ಸೇರಿಕೊಂಡ ಸಾಧು. ಅಂದು ಹುಣ್ಣಿಮೆ. ಹುಣ್ಣಿಮೆಯ ಬೆಳದಿಂಗಳಿಗೆ ವಿಚಿತ್ರ ಶಕ್ತಿಯಿದೆ; ಸುಂದರ ಬನದ ರಮ್ಯತೆಯನ್ನು ದ್ವಿಗುಣಗೊಳಿಸುವಂತೆಯೇ ಸ್ಮಶಾನದ ರೌದ್ರತೆಯನ್ನೂ ಸಹ ದಟ್ಟಗೊಳಿಸುತ್ತದೆ!

ಹೊರಗಿನವರಿಗೆ ನೋಡಲು ಸಾಧುವಿನ ಮನೆಗೆ ಬೀಗ. ಒಳಗೆ ಕ್ರೂರ ಯಾಗ! ಹುಡುಗ ಎದ್ದು ಕೂತೊಡನೆ ಭಂಗಿನ ಹಾಲು ಅವನ ಗಂಟಲಲ್ಲಿಳಿಯುತ್ತಿತ್ತು. ಕೈಕಾಲು ಆಡಿಸಲೂ ಆಗದಷ್ಟು ಭಂಗಿಯ ನಶೆ ಏರಿತು ಆ ಹುಡುಗನಿಗೆ. ಸ್ಮಶಾನದ ಮೂಲೆಯೊಂದಕ್ಕೆ ಹೊಂದಿಕೊಂಡಿದ್ದ ಸಾಧುವಿನ ಮನೆ ಯಮನ ಮನೆಯಂತೆ ಕಾಣುತ್ತಿತ್ತು. ಸ್ಮಶಾನದ ಭೀಕರತೆಯನ್ನು ಬೆಳದಿಂಗಳು ಸಾಧುವಿನ ಮನೆಯ ಮೇಲೆ ಪ್ರತಿಫಲಿಸುತ್ತಿತ್ತು.

ಸಾಧುವಿನ ಪೂಜೆ ಆರಂಭವಾಯಿತು. ಹೊಟ್ಟೆ ತುಂಬ ಸಿಹಿ ತಿಂಡಿ ತಿಂದು ಭಂಗಿಯ ಹಾಲು ಕುಡಿ ಕುಡಿದು ಸುಖದ ಅಮಲಿನಲ್ಲಿ ತೇಲಾಡುತ್ತಿದ್ದ ಬಾಲಕನ ಬಾಯಿಗೆ ಅರಿವೆ ಕಟ್ಟಿದ. ಬ್ಲೇಡ್‌ನಿಂದ ಗಂಟಲನ್ನು ಕೊಯ್ದ. ಬಿಸಿರಕ್ತ ಬುಗ್ಗೆಯಾಗಿ ಚಿಮ್ಮಿತು. ಬಾಲಕನಿಗೆ ಕೂಗಿಕೊಳ್ಳಲೂ ಆಗಲಿಲ್ಲ. ಕೈಕಾಲುಗಳನ್ನು ಆಡಿಸಲಂತೂ ಆಗಲೇ ಇಲ್ಲ. ಬಿಸಿರಕ್ತ ಕೆಳಗಿಟ್ಟಿದ್ದ ಪಾತ್ರೆಯಲ್ಲಿ ಶೇಖರಗೊಳ್ಳ

ತೊಡಗಿತು. ಬಾಲಕ ನಿಮಿಷಾರ್ಧದಲ್ಲಿ ನಿಸ್ತೇಜನಾದ. ಅವನ ಪ್ರಾಣ ಹರಿಯುತ್ತಿದ್ದ ರಕ್ತದ ಮಡುವಿನಲ್ಲಿ ಒಂದೊಂದೇ ಮೆಟ್ಟಿಲಿಳಿಯತೊಡಗಿತು ಬಾಲಕನ ಸುಖದ ಸಾವು ನೆತ್ತರಿನ ಪಾತ್ರೆಯಲ್ಲಿ ತಾಂಡವವಾಡುತ್ತಿತ್ತು.

ಯಾವುದೇ ಸದ್ದುಗದ್ದಲವಿಲ್ಲದೆ ನರ ಬಲಿ ನಡೆದುಹೋಗಿತ್ತು. ಬಲಿ ಕೊಡುವುದು ಅದೆಷ್ಟು ಸುಲಭವಲ್ಲವೆ ಎನಿಸಿತು ಸಾಧುವಿಗೆ. ಇದರಂತೆ ಬಲಿ ಕೊಡುವುದಾದರೆ ಒಂಬತ್ತಲ್ಲ ತೊಂಬತ್ತು ಬಲಿ ಕೊಡುವೆ ದೇವೀ ಎಂದ. ಬಾಲಕನ ಶವವನ್ನು ಗೋಣಿಚೀಲವೊಂದರಲ್ಲಿ ಹಾಕಿಟ್ಟ. ಬಲಿಯ ರಕ್ತದ ಪಾತ್ರೆಯನ್ನು ಸ್ಮಶಾನದೊಳಕ್ಕೆ ಹೋಗಿ ಒಂದು ಸಣ್ಣ ಗುಂಡಿ ತೆಗೆದು ಅದಕ್ಕೆ ಹಾಕಿ ಮೇಲೆ ಮಣ್ಣು ಮುಚ್ಚಿದ. ಹರಿಯುತ್ತಿದ್ದ ಚರಂಡಿಯಲ್ಲಿ ರಕ್ತದ ಪಾತ್ರೆಯನ್ನು ತೊಳೆದ. ವಾಪಸು ಮನೆಗೆ ಬಂದು ಬಾಲಕನ ಶವದ ಚೀಲವನ್ನು ಹೊತ್ತು ಪುನಃ ಸ್ಮಶಾನದೊಳಕ್ಕೆ ನಡೆದ ಸಾಧು. ಸ್ಮಶಾನ ದಾಟಿ ಹೋಗಿ ಜನವಸತಿ ಸುಳಿದಾಟಗಳಿರದ ಸ್ಥಳ ತಲುಪಿದ. ಅಲ್ಲಿಯೇ ಹರಿಯುತ್ತಿದ್ದ ಓಪನ್ ಡ್ರೈನೇಜ್‌ನಲ್ಲಿ ಆ ಶವವನ್ನು ಎಸೆದ ಹೆಣ ಚರಂಡಿಗೆ ಬಿದ್ದದ್ದೇ ಸಾಧುವಿನ ಎದೆ ಹಗುರವಾಯಿತು. ವಾಪಸು ಮನೆ ಸೇರಿಕೊಂಡ ಸಾಧು ದೇವಿಯ ಕೃಪೆಗೆ ಪಾತ್ರನಾಗುವ ಕನಸಿನಲ್ಲಿ ಮುಳುಗಿದ.

ಮಾರನೇ ದಿನ ಸಾಧು ಬೇಗ ಏಳಲಿಲ್ಲ. ಯಾರೂ ನೋಡಿಲ್ಲೆಂದರೂ ಎದೆಯೊಳಗೆ ಡವಡವ ಇದ್ದೇ ಇತ್ತು.

ಬಾಲಕನ ಶವ ಪತ್ತೆಯಾದುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿತು. ಅವನ ತಂದೆ-ತಾಯಿಗಳು ಎದೆ ಬಡಿದುಕೊಂಡು ಅತ್ತರು. ಸತ್ತ ಬಾಲಕನ ತಂದೆ ತನ್ನ ವೈರಿಯ ಮೇಲೆ ಸಂಶಯಪಟ್ಟ. ತನ್ನ ವಿರುದ್ಧ ವೈರತ್ವ ಸಾಧಿಸುವ ಗಂಡಸುತನವಿಲ್ಲದ ಷಂಡ ಏನೂ ಅರಿಯದ ಮಗನ ಮೇಲೆ ಸೇಡು ತೀರಿಸಿಕೊಂಡಿದ್ದಾನೆಂದು ಒಳಗೇ ಕುದಿಯತೊಡಗಿದ್ದ. ಇದಕ್ಕೆ ಸೇಡು ತೀರಿಸಿಕೊಳ್ಳದೆ ಇರಲಾರೆ ಎಂದು ಒಳಗೇ ಪ್ರತಿಜ್ಞೆ ಸಹ ಮಾಡಿಕೊಂಡ. ಊದುಬತ್ತಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಈ ತಂದೆತಾಯಿಗಳು. ಮೂರು ದಿನಗಳಾದ ಮೇಲೆ ಸತ್ತ ಬಾಲಕನ ತಾಯಿ ಸಾಧುವಿನ ಬಳಿಗೆ ಬಂದಳು. ಗೊಳೋ ಎಂದು ಅತ್ತಳು. "ನೋಡಿದಿರಲ್ಲ ಸ್ವಾಮಿ, ಅದು ಯಾವನಿಗೆ ಏನು ಮಾಡಿದ್ದ ನನ್ನ ಮಗ. ಚಿನ್ನದಂಥ ಕೂಸು ನನ್ನದು. ಯಾರಿಗೂ ಕೆಟ್ಟದ್ದು ಮಾಡಿದ್ದಲ್ಲ. ನೀವೇ ಹೇಳಿ, ಯಾರ ಕೆಲಸ ಇರ್‌ಬೋದು ಇದು ಅಂತ! ನನ್ ಗಂಡ ಒಬ್ಬನ ಮ್ಯಾಕೆ ಸಂಶಯ ಪಟ್ಟವ್ನೆ. ಅವ್ನೇ ಮಾಡಿದ್ದು ಹೌದೋ ಅಲ್ವೋ ಅಂತ" ಎಂದು ರೋದಿಸುತ್ತ ಸಾಧುವಿನ

ಪಾದಗಳಿಗೆ ತಲೆಯಿಟ್ಟಳು. "ಏಳಮ್ಮ ಮೇಲೆ. ನೀವು ಅಂದುಕೊಂಡಿದ್ದು ಸತ್ಯವಿದೆ. ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಏನೂ ಅರಿಯದ ನಿಮ್ಮ ಮಗನ ಪ್ರಾಣ ತಿಂದಿದ್ದಾನೆ. ಅವ್ನು ಯಾರು ಅಂತ ನಿನ್ನ ಗಂಡಂಗೆ ಗೊತ್ತು" ಎಂದ! ಸಂಜೆ ಪುನಃ ಆ ಹೆಂಗಸು ತನ್ನ ಗಂಡನೊಂದಿಗೆ ಸಾಧುವಿನ ಬಳಿಗೆ ಬಂದಳು. ಅವಳ ಗಂಡ ಮತ್ತೊಮ್ಮೆ ಸಾಧುವಿನ ಬಾಯಿಯಿಂದ ಅವೇ ಮಾತುಗಳನ್ನು ಕೇಳಿ ಒಳಗೇ ತನ್ನ ವೈರಿಯ ಬಗ್ಗೆ ಹಲ್ಲು ಕಡಿಯತೊಡಗಿದ.

ಬೆಂಗಳೂರು ನಗರದಲ್ಲಿ ಕೊಲೆಗಳಿಗೆ ಲೆಕ್ಕವಿಲ್ಲ. ಅದೊಂದು ನಿತ್ಯ ಸಂಗತಿಯೆನ್ನುವ ತೀರ್ಮಾನಕ್ಕೆ ಬಂದಿದ್ದ ನಾಗರಿಕರ ಮೇಲೆ ಈ ಬಾಲಕನ ಕೊಲೆಯ ಘಟನೆ ಅಂಥ ಪರಿಣಾಮವನ್ನೇನೂ ಬೀರಲಿಲ್ಲ.

ಮತ್ತೆ ಹುಣ್ಣಿಮೆ ಬಂದಿತು. ಮಾರನೆಯ ದಿನ ಮತ್ತೊಂದು ಬಾಲಕನ ಶವ ಪತ್ತೆಯಾಯಿತು. ಕೊಲೆಯ ವಿಧಾನವೂ ಒಂದೇ ರೀತಿಯದಾಗಿತ್ತು. ಈ ಬಾಲಕ ಸಹ ಗಂಟಲು ಕೊಯ್ತದಿಂದ ಸಾವಿಗೀಡಾಗಿದ್ದ.

ಒಂದೇ ರೀತಿಯಲ್ಲಿ ಕೊಲೆ ಮಾಡುವವನಾರು, ಏಕಾಗಿ ಮಾಡುತ್ತಿದ್ದಾನೆ ಎನ್ನುವ ಪ್ರಶ್ನೆಗಳು ಪೊಲೀಸರನ್ನು ಕಾಡತೊಡಗಿದವು. ಈ ಬಾರಿ ಕೊಲೆಯಾದ ಹುಡುಗ ಸಹ ಓಕಳಿಪುರಂನ ಕೊಳೆಗೇರಿಗೆ ಸಂಬಂಧಿಸಿದ ಹುಡುಗನೇ ಆಗಿದ್ದ. ಮುಂಚೆ ಸತ್ತ ಬಾಲಕನ ತಂದೆಗೆ ಸ್ವಲ್ಪ ಗಲಿಬಿಲಿಯುಂಟಾಯಿತು. ತಾನು ಸಂಶಯಪಟ್ಟದ್ದು ಸರಿಯೊ, ತಪ್ಪೊ? ಮಗನನ್ನು ಕೊಂದ ನನ್ನ ವೈರಿ ಏನೂ ವೈರತ್ವವಿರದ ಇನ್ನೊಬ್ಬನ ಮಗನನ್ನು ಏಕೆ ಕೊಂದ? ಅವನ ತಲೆ ಹೊಗೆಯಿಟ್ಟ ಜೇನುಗೂಡಾಯಿತು.

ಮತ್ತೊಂದು ಹುಣ್ಣಿಮೆಯ ಮಾರನೇ ದಿನವೂ ಸಹ ಮತ್ತೊಂದು ಬಾಲಕನ ಶವ ಪತ್ತೆಯಾಗಿ ಅದೂ ಸಹ ಗಂಟಲು ಕೊಯ್ತದಿಂದ ಸತ್ತದ್ದು ಎನ್ನುವುದು ತಿಳಿದಾಗ ನಾಗರಿಕರು ಗಾಬರಿಗೊಂಡರು. ಮಕ್ಕಳ ಕೊಲೆ ಮಾಡುವವರು ನಗರದೊಳಕ್ಕೆ ಬಂದಿದ್ದಾರೆಂದು ಸುದ್ದಿಯಾಯಿತು.

ಪತ್ರಿಕೆಗಳು ಈ ಮೂವರು ಬಾಲಕರ ಸಾವಿನ ಸುತ್ತ ವಿವಿಧ ರೀತಿಯ ವಿಶ್ಲೇಷಣೆಗಳನ್ನು ಮಾಡಿದವು. ಮೂರನೇ ಕೊಲೆ ನಡೆದಿದ್ದರೂ ಕೊಲೆಗಡುಕನನ್ನು ಹಿಡಿಯುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ತೀವ್ರ ಟೀಕೆಗಳು ಬರತೊಡಗಿದವು. ವಿಧಾನಸಭೆಯಲ್ಲಿ ಇದು ಗುಂಡೂರಾವ್ ಸರ್ಕಾರದ ನಿಷ್ಕ್ರಿಯತೆಯ ಪರಮಾವಧಿ ಎನ್ನುವ ಟೀಕೆಗಳು ಬಂದವು.

ಬಾಲಕರ ಸರಣಿ ಕೊಲೆಗಳ ಶೋಧನೆಗಾಗಿ ವಿಶೇಷ ಪೊಲೀಸ್ ತಂಡವೊಂದನ್ನು ರಚಿಸಲಾಯಿತು.

ಶಿವಲಿಂಗಯ್ಯ ಎನ್ನುವ ಸರ್ಕಲ್ ಇನ್‌ಸ್ಪೆಕ್ಟರ್ ನೇತೃತ್ವದ ವಿಶೇಷ ತನಿಖಾದಳಕ್ಕೆ ಬಾಲಕರ ಸಾವು ತಲೆನೋವಾಗಿ ಪರಿಣಮಿಸಿತು. ಹುಣ್ಣಿಮೆ ಸಮೀಪಿಸಿದರೆ ಸಾಕು ಪೊಲೀಸರಿಗೆ ಕಳವಳ ಶುರುವಾಗುತ್ತಿತ್ತು. ಪತ್ರಿಕೆಗಳ ಟೀಕೆಗಳು ಅವರಿಗೆ ಮುಜುಗರವುಂಟುಮಾಡುತ್ತಿದ್ದವು. 'ಮಕ್ಕಳನ್ನು ಬಲಿ ತೆಗೆದುಕೊಳ್ಳುವ ಸರ್ಕಾರವಿದು' ಎಂದು ಜನ ಮಾತಾಡಿಕೊಳ್ಳತೊಡಗಿದರು. ವಿರೋಧ ಪಕ್ಷದ ನಾಯಕ ದೇವೇಗೌಡರು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ಗುಂಡೂರಾವ್ ಗೃಹಖಾತೆಯನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದರು. ಪೊಲೀಸ್ ವರಿಷ್ಠರನ್ನು ಕರೆಸಿ ತಮ್ಮ ಖಾತೆಯ ಮಾನ ಹರಾಜಾಗುತ್ತಿದೆ ಎಂದು ಗುಂಡೂರಾವ್ ಆಕ್ರೋಶ ವ್ಯಕ್ತಪಡಿಸಿದರು. ಈ ಪ್ರಕರಣ ಸರ್ಕಲ್ ಇನ್‌ಸ್ಪೆಕ್ಟರ್ ಶಿವಲಿಂಗಯ್ಯನವರಿಗೆ ಅಸ್ತಿತ್ವದ ಅಳಿವು ಉಳಿವಿನ ಸಮಸ್ಯೆಯಾಗಿ ಕಾಡತೊಡಗಿತು.

ಬಾಲಕರ ಶವಗಳು ಬೀಳುತ್ತಿದ್ದ ಜಾಗಗಳು, ಬಲಿಯಾದ ಬಾಲಕರ ವಸತಿ ಪ್ರದೇಶ, ಬಲಿಯಾದ ಬಾಲಕರು ಹೊಂದಿದ್ದ ಸಂಪರ್ಕಗಳು ಇವನ್ನೆಲ್ಲ ಪೊಲೀಸರು ಜಾಲಾಡಿದರು.

ಬಾಲಕರು ಒಂದೇ ತೆರನಾಗಿ ಕೊಲೆಗೈಯಲ್ಪಡುತ್ತಿದ್ದುದರಿಂದ ಕೊಲೆಗಡುಕಒಬ್ಬನೇ ಎಂದು ಸುಲಭವಾಗಿ ಪೊಲೀಸರು ಕಂಡುಕೊಂಡರು. ಕೊಲೆಯಾದ ಬಾಲಕರೆಲ್ಲಾ ಓಕಳಿಪುರ, ಸ್ವತಂತ್ರ ಪಾಳ್ಯ, ಜಕ್ಕನಕೆರೆ, ರಾಮಚಂದ್ರಪುರ ಸುತ್ತಮುತ್ತಲಿನ ಕೊಳಚೆ ಪ್ರದೇಶದ ನಿವಾಸಿಗಳೇ ಆಗಿದ್ದರು. ಕೊಲೆಯಾದ ಬಾಲಕರ ತಂದೆತಾಯಿಗಳನ್ನು ವಿಚಾರಣೆ ನಡೆಸಿದಾಗ ಬಹುತೇಕ ಮಕ್ಕಳು ಸಾಧು ಲಕ್ಷ್ಮಣಗಿರಿ ಕೊಡುವ ತಿಂಡಿ ತಿನಿಸು ಮತ್ತು ಹಾಲುಗಳ ಆಸೆಗಾಗಿ ಹೋಗುತ್ತಾರೆನ್ನುವ ಸಂಗತಿ ಬಯಲಾಯಿತು. ಆದರೆ ಯಾವ ತಂದೆತಾಯಿಗಳೂ ಸಾಧುವಿನ ಮೇಲೆ ಸಂಶಯ ವ್ಯಕ್ತಪಡಿಸಲಿಲ್ಲ. ಅವನು ದೈವೀಭಕ್ತ. ನಮ್ಮ ಮಕ್ಕಳ ರೋಗರುಜಿನಗಳನ್ನು ತನ್ನ ಮಂತ್ರ, ಭಸ್ಮಗಳಿಂದ ವಾಸಿಪಡಿಸುವ ಸಾಧು ಎಂದೇ ಅಭಿಪ್ರಾಯ ನೀಡಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಸಾಧುವಿನ ಮನೆಗೆ ಹೋದ. ಅಲ್ಲಿ ಕೊಲೆಗಡುಕ ವಾತಾವರಣವಾಗಲೀ, ಕುರುಹುಗಳಾಗಲಿ ದೊರೆಯಲಿಲ್ಲ. ಸಾಧುವಿನ ಮಾತುಕತೆಗಳೆಲ್ಲಾ ತೀರಾ ಮೃದುವಾಗಿದ್ದವು. ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಪಿಚ್ಚೆನ್ನಿಸಿ,

"ಸತತವಾಗಿ ತಿಂಗಳಿಗೊಂದರಂತೆ ಬಾಲಕರನ್ನು ಬಲಿಕೊಡಲಾಗುತ್ತಿದೆಯಲ್ಲಾ ಸಾಧುಗಳೇ ಯಾರಿರಬಹುದು? ಅವರ ಬಗ್ಗೆ ಸುಳಿವು ಕೊಡಿ" ಎಂದು ಕೇಳಿದ.

ಅದಕ್ಕೆ "ಆ ನರಹಂತಕನಿಗೆ ರೌರವ ನರಕ ಪ್ರಾಪ್ತಿಯಾಗುತ್ತದೆ. ಎಂಥ ಮುದ್ದು ಕಂದಮ್ಮಗಳು. ಅವೆಲ್ಲ ನನ್ನ ಬಳಿ ಬಂದು ಹೋಗುತ್ತಿದ್ದವು. ಆ ಮಕ್ಕಳು ಕೊಲೆಯಾದ ಸುದ್ದಿ ತಿಳಿದು ನನಗೆ ಕರುಳು ಕತ್ತರಿಸಿದಂತಾಗಿದೆ. ಅದಕ್ಕಾಗಿ ನಾನೂ ದೇವರಲ್ಲಿ ಪ್ರಾರ್ಥಿಸುತ್ತಿದ್ದೇನೆ. ನನಗೆ ಆ ನರಹಂತಕನ ಸುಳಿವು ಸಿಕ್ಕೊಡನೆ ನಿಮಗೆ ತಿಳಿಸುತ್ತೇನೆ. ನಿಮ್ಮ ಫೋನ್ ನಂಬರ್ ಕೊಟ್ಟು ಹೋಗಿ" ಎಂದ ಸಾಧು.

ಸಾಧುವಿನ ಮನೆಗೆ ಹೊಂದಿಕೊಂಡಿದ್ದ ಸ್ಮಶಾನದತ್ತ ಶಿವಲಿಂಗಯ್ಯ ಹೊರಟ.

ಒಂದೆಡೆ ನಾಯಿ ತನ್ನ ಮುಂಗಾಲುಗಳಿಂದ ಮಣ್ಣು ಕೆದರಿ ತಗ್ಗು ಮಾಡುತ್ತಿತ್ತು. ಇನ್‌ಸ್ಪೆಕ್ಟರ್ ಬಂದುದನ್ನು ನೋಡಿ ಬೊಗಳುತ್ತ ಆಚೆ ಓಡಿತು. ನಾಯಿ ಕೆದರಿದ್ದ ತಗ್ಗಿನಲ್ಲಿ ಮಣ್ಣು ರಕ್ತಸಿಕ್ತವಾಗಿದ್ದುದ್ದನ್ನು ನೋಡಿದ. ಕಟ್ಟಿಗೆಯಿಂದ ಮತ್ತಷ್ಟು ಕೆದರಿದ. ರಕ್ತದ ವಾಸನೆ ಮೂಗಿಗೆ ರಾಚಿತು. ತನ್ನ ಕರವಸ್ತ್ರದಲ್ಲಿ ರಕ್ತಸಿಕ್ತ ಮಣ್ಣನ್ನು ಕಟ್ಟಿಕೊಂಡು ನಡೆದ.

ಆ ಮಣ್ಣನ್ನು ಲ್ಯಾಬ್‌ಗೆ ಪರೀಕ್ಷೆಗೆ ಕಳಿಸಲಾಯಿತು. ಅದು ಮಾನವ ರಕ್ತವೆಂದು ತಜ್ಞರು ಖಚಿತಪಡಿಸಿದರು. ಥಟ್ಟನೆ ಸರ್ಕಲ್ ಇನ್‌ಸ್ಪೆಕ್ಟರ್ ಕಣ್ಮುಂದೆ ಸಾಧುವಿನ ಮುಖ ಬಂದಿತು. 'ಅವನೇ ಕೊಲೆಗಡುಕ!' ಎಂದುಕೊಂಡ ಪದೇ ಪದೇ.

ಪುನಃ ಹುಣ್ಣಿಮೆ ಸಮೀಪಿಸಿತು. ಸಿ.ಪಿ.ಐ. ಶಿವಲಿಂಗಯ್ಯ ತನ್ನ ಸ್ಕ್ವಾಡ್‌ನ ಕೆಲವು ಪೊಲೀಸರನ್ನು ಮಾರುವೇಷದಲ್ಲಿ ಸಾಧುವಿನ ಮನೆ ಮತ್ತು ಸ್ಮಶಾನದಲ್ಲಿ ಗಸ್ತು ತಿರುಗಲು ಬಿಟ್ಟ.

ಪೊಲೀಸರ ಕಣ್ಣು ತನ್ನ ಮೇಲೆ ಬಿದ್ದದ್ದನ್ನು ಗಮನಿಸಿಕೊಂಡ ಸಾಧು ಜಾಗೃತಗೊಂಡಿದ್ದ. ಹುಣ್ಣಿಮೆ ಒಂದು ವಾರ ಇರುವಾಗಲೇ ಊರಿಗೆ ಹೋಗುವುದಾಗಿ ತನ್ನಲ್ಲಿ ಬರುವ ಕೆಲವರಿಗೆ ಹೇಳಿ ಹೋಗಿದ್ದ.

ಹುಣ್ಣಿಮೆಯ ದಿನ ಪೊಲೀಸರು ಸ್ಮಶಾನದಲ್ಲಿ ಮರವೇರಿ ರಾತ್ರಿಯಿಡೀ ಕಾಯುತ್ತ ಕೂತರು. ಕೊಲೆಗಡುಕರು ಸುಳಿಯಲೇ ಇಲ್ಲ. ಆದರೆ ಮಾರನೇ ದಿನ ಅದೇ ಪ್ರದೇಶದಲ್ಲಿ ಹರಿಯುವ ಓಪನ್ ಡ್ರೈನೇಜ್‌ನಲ್ಲಿ ಮತ್ತೊಂದು ಬಾಲಕನ ಶವ ಸಿಕ್ಕಿತು!

ಪೋಲೀಸರು ತಲೆತಲೆ ಚಚ್ಚಿಕೊಂಡರು.

ಬೆಂಗಳೂರಿನ ಸ್ಮಶಾನಗಳನ್ನೆಲ್ಲ ಅಲೆಯತೊಡಗಿದ ಶಿವಲಿಂಗಯ್ಯ. ಸತ್ತ ಬಾಲಕನ ರಕ್ತ ಎಲ್ಲಿಯಾದರೂ ಸಿಕ್ಕುತ್ತೋ ಎಂದು ನೋಡಿದ. ಎಲ್ಲೂ ಸಿಕ್ಕಲಿಲ್ಲ. ಸಿ.ಪಿ.ಐ. ಶಿವಲಿಂಗಯ್ಯನ ಪಿತ್ತ ನೆತ್ತಿಗೇರಿತು. "ಮೊದಲು ಆ ಸಾಧೂ ಸೂಳೆಮಗನನ್ನು ಎಳೆ ತನ್ನಿ" ಎಂದ.

ಕೆಂಗೇರಿ ಗೇಟ್ ಪೊಲೀಸ್ ಸ್ಟೇಷನ್ ಲಾಕಪ್‌ನಲ್ಲಿ ಸಾಧುವಿನ ಬಾಯಿಬಿಡಿಸಲು ಚಿತ್ರವಿಚಿತ್ರ ಹಿಂಸೆ ನೀಡತೊಡಗಿದರು ಪೊಲೀಸರು. ಇದನ್ನೆಲ್ಲ ಇನ್ನೊಂದು ಲಾಕಪ್‌ನಲ್ಲಿದ್ದ ಆರೋಪಿಗಳು ನೋಡಿದರು. ಸಾಧುವಿಗೆ ಕೋಲಿನಿಂದ ಹೊಡೆದರು. ಅವನು ವಶೀಕರಣ ಮಾಡಿಕೊಳ್ಳಬೇಕೆಂದಿದ್ದ ಶಕ್ತಿಯೇ ಪೊಲೀಸರ ಮೈಮೇಲೆ ಬಂದಿದೆಯೇನೋ ಎಂದುಕೊಂಡ ಸಾಧು ಥರಗುಟ್ಟಿ ಹೋಗಿಬಿಟ್ಟ.

ಬಾಯಿ ಬಿಡದಿದ್ದರೆ ತನ್ನನ್ನು ಪೊಲೀಸರು ಬಿಡುವುದಿಲ್ಲವೆನ್ನುವುದು ಸಾಧುವಿಗೆ ಖಾತ್ರಿಯಾಯಿತು. ತನ್ನ ಒಂದೊಂದು ಕೃತ್ಯಗಳನ್ನು ಹೇಳತೊಡಗಿದ. ಆದರೆ ಸಾಧು ಆ ಮೊದಲೇ ತಿಂದಿದ್ದ ಏಟುಗಳು ಸಾಮಾನ್ಯವಾದುವಾಗಿರಲಿಲ್ಲ, ಮಾರಣಾಂತಿಕವಾಗಿದ್ದವು. ಲಾಕಪ್‌ನಲ್ಲೇ ಅಸುನೀಗಿಬಿಟ್ಟ.

ಈ ಲಾಕಪ್‌ಡೆತ್ ಸುದ್ದಿ ನಗರದಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಮಂತ್ರಿ, ಶಾಸಕರು, ಶ್ರಿಮಂತರುಗಳಿಗೂ ಸಹ ಬೇಕಾದವನಾಗಿದ್ದ ಸಾಧುವಿನ ಸಾವು ವಿಧಾನಸೌಧದಲ್ಲಿ ಭುಗಿಲೆಬ್ಬಿಸಿತು.

ವಿರೋಧ ಪಕ್ಷಗಳ ನಾಯಕರಾಗಿದ್ದ ಎಚ್.ಡಿ. ದೇವೇಗೌಡರು ಸದನದಲ್ಲಿ ಸಾಧುವಿನ ಲಾಕಪ್‌ಡೆತ್ ತನಿಖೆಯಾಗಬೇಕೆಂದು ಗುಡುಗಿದರು. ಕೂಡಲೇ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಫೋರೆನ್ಸಿಕ್ ಮೆಡಿಸಿನ್ ವಿಭಾಗದ ಹೆಡ್ ಆಗಿದ್ದ ಡಾ.ಬಿ.ಸಿ. ಚಂದ್ರಗೌಡ ಪೋಸ್ಟ್ ಮಾರ್ಟಮ್ ವರದಿ ನೀಡಿದರು. ತೀವ್ರವಾದ ಏಟುಗಳಿಂದ ಒಳಗೇ ರಕ್ತಸ್ರಾವವಾಗಿ ಸಾಧು ಸತ್ತಿದ್ದಾನೆ ಎಂದು ವರದಿ ನೀಡಿದರು.

ಈ ವರದಿಯನ್ನು ದೇವೇಗೌಡರು ಸದನದ ಮುಂದಿಟ್ಟು ಮುಖ್ಯಮಂತ್ರಿಗಳ ರಾಜೀನಾಮೆಗೆ ಪಟ್ಟು ಹಿಡಿದು ಕೂತುಬಿಟ್ಟರು. ಮುಖ್ಯಮಂತ್ರಿ ಗುಂಡೂರಾವ್ ಅವರು ಸಾಧುವಿನ ಶವವನ್ನು ಮತ್ತೊಮ್ಮೆ ಪೋಸ್ಟ್ ಮಾರ್ಟಮ್ ಮಾಡಿಸುವುದಾಗಿ ಘೋಷಿಸಿದರು.

ಮೈಸೂರು ಆಸ್ಪತ್ರೆಯ ಫೋರೆನ್ಸಿಕ್ ಮೆಡಿಸಿನ್ ವಿಭಾಗದ ಹೆಡ್ ಆಗಿದ್ದ ಡಾ. ಸೋಮಯ್ಯ ಅವರು ಎರಡನೇ ಬಾರಿಗೆ ಪೋಸ್ಟ್ ಮಾರ್ಟಮ್ ಮಾಡಿದರು. ಇದಕ್ಕಾಗಿ ಹೂಳಲ್ಪಟ್ಟಿದ್ದ ಸಾಧುವಿನ ಶವವನ್ನು ಹೊರತೆಗೆಯಲಾಯಿತು.

ಡಾ. ಸೋಮಯ್ಯ ನೀಡಿದ ಪೋಸ್ಟ್ ಮಾರ್ಟಮ್ ವರದಿ ವಿವಾದಕ್ಕೆ ನಾಂದಿಯಾಯಿತು. ಸಾಧುವಿನ ಸಾವು ಪೆಟ್ಟುಗಳು ಬಿದ್ದಿದ್ದರಿಂದ ಆಗಿಲ್ಲ. ಅವನಿಗೆ ಇದ್ದ ಆಸ್ತಮಾ ಕಾಯಿಲೆ, ರಕ್ತದೊತ್ತಡ, ಸಕ್ಕರೆ ಕಾಯಿಲೆಗಳು ಹೃದಯಸ್ತಂಭನಕ್ಕೆ ಕಾರಣವಾಗಿವೆ ಎಂದು ವರದಿ ನೀಡಿದರು. ಈ ಎರಡನೇ ವರದಿ ಪೊಲೀಸರ ಕೈಗೆ ಗುರಾಣಿಯಂತೆ ಸಿಕ್ಕಿತು.

ವಿರೋಧ ಪಕ್ಷಗಳು ಮೊದಲು ಡಾ. ಚಂದ್ರಗೌಡರಿಂದ ನೀಡಲ್ಪಟ್ಟ ಪೋಸ್ಟ್ ಮಾರ್ಟಮ್ ವರದಿಯೇ ಸತ್ಯ ಎಂದರೆ, ಸರಕಾರ ಡಾ. ಸೋಮಯ್ಯನವರ ವರದಿಯೇ ಸತ್ಯ ಎನ್ನತೊಡಗಿತು. ಇವೆರಡರಲ್ಲಿ ಯಾವ ವರದಿ ಸತ್ಯ ಎಂದು ತೀರ್ಮಾನಿಸುವುದಕ್ಕಾಗಿ ವಿ.ಕೆ. ಗೋವಿಂದರಾಜು ವಿಚಾರಣಾ ಆಯೋಗವನ್ನು ನೇಮಿಸಿರುವುದಾಗಿ ಸದನದಲ್ಲಿ ಘೋಷಿಸಿ ಬೀಸುವ ದೊಣ್ಣೆಯಿಂದ ಸರ್ಕಾರ ಪಾರಾಯಿತು. ಲಾಕಪ್‌ಡೆತ್ ಪ್ರಕರಣದ ಗದ್ದಲ ಸದನದಲ್ಲಿ ಸ್ತಬ್ಧಗೊಂಡು ಹೊರಗೆ ಶುರುವಾಯಿತು.

ಡಾ. ಚಂದ್ರಗೌಡ ಅವರು ಆಯೋಗದ ಮುಂದೆ ತಮ್ಮ ಪರ ದೇವದಾಸ್ ಮತ್ತು ನೀವು ಇಬ್ಬರು ಜಂಟಿಯಾಗಿ ವಕಾಲತ್ತು ಹಾಕಬೇಕು ಎಂದು ನನ್ನನ್ನು ಕೇಳಿಕೊಂಡರು. ನೀವೇ ದೇವದಾಸ್ ಅವರನ್ನು ಒಪ್ಪಿಸಬೇಕೆಂದು ವಿನಂತಿಸಿಕೊಂಡರು. ಡಾ. ಚಂದ್ರಗೌಡರ ಪ್ರಾಮಾಣಿಕತೆ, ನಿಷ್ಠುರ ನಡೆ-ನುಡಿ ನನ್ನನ್ನು ಬಹಳ ವರ್ಷಗಳಿಂದ ಬೆರಗುಗೊಳಿಸಿದ್ದವು. ಅವರಿಗೆ ಸಹಾಯ ಮಾಡಬೇಕೆಂಬ ಮನಸ್ಸಿತ್ತು. ಡಾ. ಚಂದ್ರಗೌಡರನ್ನು ದೇವದಾಸ್ ಬಳಿಗೆ ಕರೆದೊಯ್ದೆ. ಜಂಟೀ ವಕಾಲತ್ತು ಹಾಕಲು ಒಪ್ಪಿಕೊಂಡರು. ಎರಡು ದಿನ ಬಿಟ್ಟು ಡಾ. ಚಂದ್ರಗೌಡ ಮತ್ತು ನಾನು ದೇವದಾಸ್ ಬಳಿಗೆ ಹೋದೆವು. ಅವರ ಬಳಿ ಪೊಲೀಸರು ಕೂತಿದ್ದರು. ದೇವದಾಸ್ ಪಕ್ಷ ಬದಲಾಯಿಸಿಬಿಟ್ಟಿದ್ದರು. ಡಾ. ಸೋಮಯ್ಯ ಮತ್ತು ಪೊಲೀಸರ ಪರ ವಕಾಲತ್ತು ಹಾಕುತ್ತಿರುವುದಾಗಿ ಹೇಳಿದರು. ಆಮೇಲೆ ತಪ್ಪು ಭಾವಿಸಿಕೊಳ್ಳಬಾರದೆಂದೂ ಹೇಳಿದರು. ತಮ್ಮ ಬದಲಾದ ನಿಲುವನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳಲು ತಡಕಾಡತೊಡಗಿದರು. ಎದುರಿಗೆ ಕೂತಿದ್ದ ಪೊಲೀಸರಿಗೆ "ನೀವು ಸಾಧುವನ್ನು ವಿಚಾರಣೆ ಮಾಡಿದಾಗ ಅವ್ನು

ಏನೇನು ಬಾಯಿಬಿಟ್ಟ ಇವರಿಗೆ ಹೇಳಿ" ಎಂದರು.

ಹೆಡ್‌ಕಾನ್‌ಸ್ಟೇಬಲ್ ಒಬ್ಬ ಸಾಧುವಿನ ವೃತ್ತಾಂತವನ್ನೆಲ್ಲ ಹೇಳತೊಡಗಿದ. ಈವರೆಗೆ ನಾಲ್ಕು ಕಂತುಗಳಲ್ಲಿ ಹೇಳಿದ ಸಾಧುವಿನ ಕಥೆ ಆ ಪೊಲೀಸನಿಂದ ಕೇಳಿದ್ದುದು.

ದೇವದಾಸ್ ಅವರೊಂದಿಗೆ ಕೇಸಿನ ಬಗ್ಗೆ ಮತ್ತೆ ಮಾತಾಡದೆ ಎದ್ದು ಬಂದೆವು. ಕೋರ್ಟ್‌ನಲ್ಲಿ ಯಾವಾಗಲೂ ಪೊಲೀಸರ ವಿರುದ್ಧ ನಿಲ್ಲುತ್ತಿದ್ದ ನಾನು ಈ ಕೇಸ್‌ನಲ್ಲೂ ಅವರ ವಿರುದ್ಧ ನಿಂತೆ. ನನಗೆ ಪ್ರೊ. ಎಂ.ಆರ್. ಜನಾರ್ದನ್‌ರವರ ಸಾರಥ್ಯ ದೊರಕಿತು. ವಕೀಲ ಕೋಟಿಯನ್‌ರವರ ವಿಶೇಷ ನೆರವು ಸಿಕ್ಕಿತು. ಮೇಲುನೋಟಕ್ಕೆ "ನೀನು ಡಾ. ಚಂದ್ರಗೌಡರ ಪರ ವಾದಿಸುವಂತೆ ಕಂಡರೂ ಪರೋಕ್ಷವಾಗಿ ಆ ಕ್ರೂರ ಸಾಧುವಿನ ಪರ ವಕಾಲತ್ತು ಹಾಕಿರುವೆ" ಎನ್ನುವ ಟೀಕೆಗಳು ನನ್ನ ಪರಿಚಿತರು, ಸ್ನೇಹಿತರುಗಳಿಂದ ಬಂದವು. ಅವರಿಗೆ ನಾನು ಮರು ಪ್ರಶ್ನಿಸಿದೆ. "ಆ ಸಾಧು ಕ್ರೂರಿಯಾಗಿದ್ದ ಎನ್ನುವ ಕಾರಣಕ್ಕೆ ಡಾ. ಚಂದ್ರಗೌಡ ಸುಳ್ಳು ಪೋಸ್ಟ್ ಮಾರ್ಟಮ್ ರಿಪೋರ್ಟ್ ಕೊಡಬೇಕಾಗಿತ್ತಾ?" ಎಂದು. ನನ್ನ ಪ್ರಶ್ನೆಗೆ ಸೂಕ್ತ ಉತ್ತರ ಅವರುಗಳಲ್ಲಿರಲಿಲ್ಲ.

ಆಯೋಗದ ಮುಂದೆ ಡಾ. ಚಂದ್ರಗೌಡರ ಪರ ನಾನು ಮತ್ತು ಎಂ.ಆರ್. ಜನಾರ್ದನ್ ಜಂಟಿಯಾಗಿ ವಕಾಲತ್ತು ಹಾಕಿದೆವು. ವಾದ ಮಾಡುವಾಗ ಕೆಲವು ಸಂದರ್ಭಗಳಲ್ಲಿ ನಾನು ದೇವದಾಸರೊಂದಿಗೆ ಮಾತಿನ ಘರ್ಷಣೆಗಿಳಿಯಬೇಕಾಯಿತು.

ಆಯೋಗವು ಅಂತಿಮ ವರದಿ ನೀಡಿತು. ಸಾಧುವಿನ ಸಾವಿಗೆ ಪೊಲೀಸರು ನಡೆಸಿದ ದೈಹಿಕ ದಾಳಿಯೇ ಕಾರಣವೆಂದೂ ಮತ್ತು ಸಾಧುವಿನ ಮೇಲೆ ಲಾಕಪ್‌ನಲ್ಲಿ ಯಾವ ಯಾವ ಪೊಲೀಸರು ಮತ್ತು ಅಧಿಕಾರಿಗಳು ಹಲ್ಲೆ ನಡೆಸಿದರೆಂದೂ ಹೇಳಿತು.

ಆದರೆ ಸರಕಾರವು ಆಯೋಗದ ಆ ವರದಿಯನ್ನು ಕಸದ ಬುಟ್ಟಿಗೆ ಎಸೆಯಿತು. ಆ ಆಯೋಗಗಳಿಗೆ ಏನಾದರೂ ಅರ್ಥವಿದೆಯೇ? ನಾವು ವಕೀಲರು ಆಯೋಗದ ಮುಂದೆ ವಾದವಿವಾದ ನಡೆಸಿದ್ದಕ್ಕೆ ಏನು ಬೆಲೆ? ಎನ್ನುವ ಪ್ರಶ್ನೆಗಳು ಎದುರಾದವು.

65

ಕಳ್ಳಭಟ್ಟಿ ದುರಂತ : ಗುಂಡೂರಾವ್ ಸಮರ್ಥನೆ !

ಗುಂಡೂರಾವ್ ಸರಕಾರ ತನ್ನ ಭಂಡ ಧೋರಣೆ, ನಿಲುವುಗಳಿಗಾಗಿ ಕುಖ್ಯಾತಗೊಂಡಿತ್ತು. ದೇವರಾಜ್ ಅರಸು ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ಸ್ಪಂದಿಸುವ ಸರಕಾರ ತಮ್ಮದು ಎಂದು ಬಿಂಬಿಸಿಕೊಂಡಿದ್ದರು. ಅದೇ ಕಾಂಗ್ರೆಸ್ ಪಕ್ಷದ ಸರಕಾರ ಗೂಂಡೂರಾಯರದಿತ್ತು. ದೇವರಾಜ್ ಅರಸು ಅವರಿಗೆ ತದ್ವಿರುದ್ಧ ಧೋರಣೆಗಳು ತಮ್ಮವು ಎನ್ನುವಂತೆ ಬಹಿರಂಗವಾಗಿ ನಡೆದುಕೊಳ್ಳುತ್ತಿದ್ದರು. ಅರಸು ಅವರ ಭೂಸುಧಾರಣೆ ಮತ್ತು ಬ್ಯಾಕ್‌ವರ್ಡ್ ಪಾಲಿಟಿಕ್ಸ್‌ಗಳನ್ನು ಉಡಾಫೆ ಮಾಡುವ ರೀತಿಯಲ್ಲಿ ಮಾತಾಡತೊಡಗಿದ್ದರು ಮತ್ತು ನಡೆದುಕೊಳ್ಳತೊಡಗಿದ್ದರು.

ತಾ: 7.7.1981 ರಂದು ಕಳ್ಳಭಟ್ಟಿ ದುರಂತ ಬೆಂಗಳೂರಿನಲ್ಲಿ ಸಂಭವಿಸಿತು. ನಗರದ ಲಿಂಗರಾಜಪುರ, ಮುನಿರೆಡ್ಡಿಪಾಳ್ಯ, ಸಗಾಯಪುರ ಮತ್ತು ಟ್ಯಾನರಿ ರಸ್ತೆಯ ಪ್ರದೇಶಗಳ ಕೊಳಗೇರಿಗಳ ಮೂರು ನೂರಕ್ಕೂ ಹೆಚ್ಚು ಜನ ಅಸುನೀಗಿದರು. ಸೊಳ್ಳೆ ನೊಣಗಳಂತೆ ಉದುರುದುರಿ ಜನ ಬೀಳುತ್ತಿದ್ದರು. ತಂದೆ, ತಾಯಿ, ಅಜ್ಜ, ಅಜ್ಜಿಯರನ್ನು ಕಳೆದುಕೊಂಡ ಅನಾಥ ಮಕ್ಕಳ ರೋದನ ಕರಳು ಕತ್ತರಿಸುವಂತಿತ್ತು.

ಬಡತನದ ಜೊತೆಗೆ ಕುಡಿತ ಸೇರಿದರೆ ಆಗುವಂಥ ಎಲ್ಲಾ ಅನಾಹುತಗಳೂ ಆ ಕೊಳಗೇರಿಗಳಲ್ಲಿ ಆಗುತ್ತಿದ್ದವು. ಅದುಮಿಡಲ್ಪಟ್ಟ ಅತೃಪ್ತಿ ಸ್ಫೋಟಗೊಳ್ಳಲು ಪಿಳ್ಳೆನೆವ ಸಾಕಾಗಿತ್ತು. ತಳ್ಳುಬಂಡಿಯಲ್ಲಿ ಬೋಂಡಾ ಮಾರುವವ ಸಾಲವಾಗಿ ಬೋಂಡಾ ಕೊಡಲಿಲ್ಲ ಎನ್ನುವ ಕಾರಣಕ್ಕೆ ಅವನ ಹೊಟ್ಟೆಗೆ ಒಬ್ಬ ಕುಡುಕ ಚೂರಿ ಹಾಕಿದ್ದ. ಇಂಥ ಉದಾಹರಣೆಗಳು ಅಲ್ಲಿ ಸಾವಿರ. ಈ ಕೊಳಗೇರಿಯ ಕುಡುಕರು ಸಂಜೆಯಾದರೆ ಅಸಭ್ಯವಾಗಿ ವರ್ತಿಸುತ್ತಾರೆ ಎಂದು ಎ.ಕೆ. ಕಾಲೋನಿಯ ಸುಸಂಸ್ಕೃತರೆಂದುಕೊಳ್ಳುವ ಜನ ಸರ್ಕಾರಕ್ಕೆ ಫಿರ್ಯಾದು ನೀಡಿದರು. ಫಿರ್ಯಾದು ನೀಡಿದವರಲ್ಲಿ ಕುಡುಕರಿರಲಿಲ್ಲವೆಂದೇನು ಅಲ್ಲ. ಕುಡುಕರು, ಆದರೆ ಸಭ್ಯರು ! ಕೊಳಗೇರಿ ಕುಡುಕರಂತೆ ಬೀದಿಯಲ್ಲಿ ನಿಂತು ಒದರಾಡುತ್ತಿರಲಿಲ್ಲ. ಕೊಳಗೇರಿಯ ಜನ ತಾವು ದುಡಿದ ದುಡ್ಡನ್ನು ಉಳಿತಾಯ ಮಾಡದೆಯೇ ಕುಡಿದು ಹಾಳು ಮಾಡಿಕೊಳ್ಳುವುದರಿಂದಾಗಿ ಬಡವರಾಗಿದ್ದಾರೆ ಎನ್ನುವ ಸವಕಲು ವಾದವನ್ನು ಸಭ್ಯರು ಮಾಡುತ್ತಿದ್ದರು. ಶ್ರೀಮಂತರು ಎಷ್ಟೇ ಕುಡಿದರೂ ಅದೇಕೆ ಬಡವರಾಗುವುದಿಲ್ಲ ಎನ್ನುವ ಯೋಚನೆ ಇವರಿಗೆ ಬರುತ್ತಿರಲಿಲ್ಲ. ಆದರೂ ಈ ಎ.ಕೆ. ಕಾಲೋನಿಯ ಸಭ್ಯರು ಗುರುತಿಸಿದ್ದ ಒಂದು ಕಾರಣ ಮಾತ್ರ ಗಂಭೀರ ಸ್ವರೂಪದ್ದಾಗಿತ್ತು. ಈ ಕೊಳಗೇರಿಗಳಿಗೆಲ್ಲ ಸರಬರಾಜಾಗುತ್ತಿದ್ದುದು ಒಳ್ಳೆ ಗುಣಮಟ್ಟದ ಸಾರಾಯಿಯಲ್ಲ; ಕಳ್ಳಭಟ್ಟಿ ಸಾರಾಯಿ !

ಬಣ್ಣ, ಪಾಲಿಷ್ ಇತರೆ ದ್ರವ್ಯಗಳ ತಯಾರಿಕೆಗಾಗಿ denature spirit ಅನ್ನು ಬಳಸಲಾಗುತ್ತದೆ. ಇದಕ್ಕಾಗಿ ಸರಕಾರ ಸ್ಪಿರಿಟ್ ಅನ್ನು ಅಲಾಟ್ ಮಾಡುತ್ತದೆ.

ಗುಂಡೂರಾವ್ ಸರಕಾರಕ್ಕೆ ನಿರ್ದಿಷ್ಟ ಪಾಲಿಸಿಗಳೇ ಇರಲಿಲ್ಲ "ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ" ಎನ್ನುವಂತೆ ಎಲ್ಲ ನಡೆಯುತ್ತಿತ್ತು. ಸರಕಾರದ ಈ ಧೋರಣೆಗೇಡಿತನದ ದುರ್ಲಾಭ ಪಡೆದುಕೊಳ್ಳಲು ಕ್ರಿಮಿನಲ್‌ಗಳು ಮುಂದಾದರು. ಈ ಕ್ರಿಮಿನಲ್‌ಗಳೊಂದಿಗೆ ರಾಜಕಾರಣಿಗಳ ಒಳಸಂಬಂಧವೂ ಇತ್ತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಕಾರ್ಪೋರೇಟರ್ ಆದ ಮಾರಿಮುತ್ತು ಆಗ ಕಳ್ಳಭಟ್ಟಿ ರಾಣಿ ಎಂದು ಕುಖ್ಯಾತಗಳಾಗಿದ್ದಳು. ಅದೇ ರೀತಿಯಲ್ಲಿ ಕುಖ್ಯಾತನಾಗಿದ್ದ ಇನ್ನೋರ್ವನೆಂದರೆ ಅಮೀರ್ ಸುಲ್ತಾನಿ. ಡಿನೇಚರ್ ಸ್ಪಿರಿಟ್‌ಗೆ ನೀರು ಬೆರೆಸಿ ಸಾರಾಯಿಯೆಂದು ಮಾರಾಟ ಮಾಡಲಾಗುತ್ತಿತ್ತು. ಇದು ವಾಸ್ತವದಲ್ಲಿ ವಿಷದ ಮಿಶ್ರಣವೇ ಆಗಿತ್ತು. ಮಿಶ್ರಣದಲ್ಲಿ ನೀರಿನ ಪ್ರಮಾಣ ಜಾಸ್ತಿಯಿದ್ದುದರಿಂದ slow poision ನಂತೆ ಕರುಳು, ಕಿಡ್ನಿಗಳು ಹಾಳಾಗಿ ಅಕಾಲ ಮರಣಕ್ಕೆ ತುತ್ತಾಗುತ್ತಿದ್ದರು. ದಿಢೀರ್

ಸಂಭವಿಸುವ ಸಾವು ಇದಾಗಿಲಿಲ್ಲವಾದ್ದರಿಂದ ಯಾರೂ ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಹೀಗೆ ಸಾಯುತ್ತಿದ್ದವರು ಬಡವರೇ ಆಗಿದ್ದುದರಿಂದ ಆ ಕಡೆ ಗಮನ ಹರಿಸುತ್ತಿರಲಿಲ್ಲ.

ಆದರೆ, ಒಂದೇ ದಿನ ಏಕಾಏಕಿ ಮೂರನೂರು ಜನ ಸತ್ತಾಗ ದೊಡ್ಡದಾಗಿ ಗದ್ದಲ ಶುರುವಾಯಿತು. ಇದಕ್ಕೂ ಮುಂಚೆ ನಿಧಾನ ವಿಷಕ್ಕೆ ತುತ್ತಾಗಿ ಸಾವಪ್ಪಿದ್ದವರು ಸಾವಿರಾರು ಜನರೇ ಇದ್ದಿರಬೇಕು. ಕಳ್ಳಭಟ್ಟಿ ಮಿಶ್ರಣದಲ್ಲಿ ನೀರಿನ ಪ್ರಮಾಣ ಕಮ್ಮಿಯಾಗಿ ಸ್ಪಿರಿಟ್ ಪ್ರಮಾಣ ಜಾಸ್ತಿಯಾಗಿದ್ದುದರಿಂದ ಅದನ್ನು ಕುಡಿದವರು ಕೆಲವೇ ನಿಮಿಷಗಳಲ್ಲಿ ಸಾವಿಗೀಡಾಗಿದ್ದರು.

ಎ.ಕೆ. ಕಾಲೋನಿಯ ಸಭ್ಯರು ಸರಕಾರಕ್ಕೆ ನೀಡಿದ್ದ ದೂರಿನಲ್ಲಿ ಪ್ರಸ್ತಾಪಗೊಂಡಿದ್ದ ಕಳ್ಳಭಟ್ಟಿ ವಿಷಯ ನನ್ನ ಗಮನವನ್ನು ಸೆಳೆದಿತ್ತು. ನಾನು ಮತ್ತು ವಕೀಲ ಓ. ಶ್ರೀಧರ್ ಸೇರಿ ಸರಕಾರಕ್ಕೆ ಈ ಬಗ್ಗೆ ಪ್ರತ್ಯೇಕ ದೂರು ನೀಡಿ ಕೂಡಲೇ ಕಳ್ಳಭಟ್ಟಿಯನ್ನು ನಿಯಂತ್ರಿಸಬೇಕೆಂದು ಒತ್ತಾಯಿಸಿದ್ದೆವು. ಆದರೆ ಸರಕಾರ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಎ.ಕೆ. ಕಾಲೋನಿಯ ಜನರ ಮತ್ತು ನಮ್ಮ ದೂರುಗಳನ್ನು ಸರಕಾರ ಕಸದ ಬುಟ್ಟಿಗೆ ಎಸೆದ ಒಂದು ತಿಂಗಳಲ್ಲಿಯೇ ಈ ದುರಂತ ಜರುಗಿ ಹೋಯಿತು ! ಸರಕಾರ ಸ್ವಲ್ಪ ಸ್ಪಂದಿಸಿದ್ದರೂ ಈ ಮುನ್ನೂರು ಪ್ರಾಣಗಳನ್ನು ಉಳಿಸಬಹುದಿತ್ತಲ್ಲಾ ಎನಿಸಿ ಖೇದಗೊಂಡೆ. ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುವುದೆಲ್ಲ ವ್ಯರ್ಥ ಎನ್ನುವ ಭಾವನೆ ನನ್ನಲ್ಲಿ ಗಟ್ಟಿಗೊಳ್ಳತೊಡಗಿತ್ತು. ವಿಚಾರಣಾ ಆಯೋಗಗಳ ಮುಂದೆ ಅಫಿಡವಿಟ್ ಸಲ್ಲಿಸುವುದಂತೂ ಸಾರ್ವಜನಿಕ ಪ್ರಹಸನ ಎನ್ನುವಂತಾಗಿಬಿಟ್ಟಿತ್ತು.

ನಾನು ಮತ್ತು ಓ. ಶ್ರೀಧರ್ ಕಳ್ಳಭಟ್ಟಿಯ ಬಗ್ಗೆ ಸರಕಾರವನ್ನು ಎಚ್ಚರಿಸಿದಾಗ ಮುಂದೆ ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿ ನಿವೃತ್ತರಾದ ಶ್ರೀಯುತ ಭಟ್ಟಾಚಾರ್ಯ ಆಗ ಅಬಕಾರಿ ಕಮೀಷನರ್ ಆಗಿದ್ದರು ! ಬೆಂಗಳೂರು ನಗರದ ಕಮೀಷನರ್ ಆಗಿದ್ದ ಸಾಂಗ್ಲಿಯಾನ ಅವರು ಡಿಸಿಪಿ (ಎಲ್ ಅಂಡ್ ಒ) ಆಗಿದ್ದರು. ಈ ಅಧಿಕಾರಿಗಳ ಮೂಗಿನ ಕೆಳಗೇ ಕಳ್ಳಭಟ್ಟಿ ಹೊಳೆಯಂತಾಗಿ ಹರಿಯುತ್ತಿತ್ತು .

ಆಗ ಪೊಲೀಸ್ ಕಮೀಷನರ್ ಆಗಿದ್ದ ನಿಜಾಮುದ್ದೀನ್ ಅವರಿಗೆ ನಾವು "ಕಳ್ಳಭಟ್ಟಿ ಬಗ್ಗೆ ಸಾರ್ವಜನಿಕರು ಎಚ್ಚರಿಸಿದಾಗಲೂ ಯಾವುದೇ ಕ್ರಮ ಕೈಗೊಳ್ಳದೆ ನೂರಾರು ಸಾವುಗಳಿಗೆ ಕಾರಣರಾದ ಅಬಕಾರಿ ಮತ್ತು ಪೊಲೀಸ್ ಅಧಿಕಾರಿಗಳ

ಮೇಲೆ, ಅಂದರೆ ಕಳ್ಳಭಟ್ಟಿ ದುರಂತದ ಪ್ರದೇಶಗಳ ವ್ಯಾಪ್ತಿಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು " ಎಂದು ಒತ್ತಾಯಿಸಿದೆವು. ಅಬಕಾರಿ ಅಧೀಕ್ಷಕರ ಅರ್ಜುನ್‌ದಾಸ್ ಮುಖ್ಯ ವಿಲನ್ ಎಂದು ದೂರಿದೆವು.

ಕಳ್ಳಭಟ್ಟಿ ದುರಂತದ ನಂತರ ಮತ್ತೊಂದು ದುರಂತ ನನಗೆ ಕಾಣಿಸಿತು. ಅದು ಈ ದುರಂತದಲ್ಲಿ ಮಡಿದ ಮುನ್ನೂರು ಪ್ರಾಣಗಳ ಬಗ್ಗೆ ನಾಗರಿಕರು ಮೌನವಾಗಿದ್ದುದು!

ನಮ್ಮಲ್ಲಿಯ ಸಾಮಾಜಿಕ ದೃಷ್ಟಿಯ ಮಿತಿಯಿದು. ತಮ್ಮ ಸ್ವಾರ್ಥದ ದೃಷ್ಟಿಯಿಂದಲಾದರೂ ಶ್ರೀಮಂತರು ಬಡತನವನ್ನು ನಿಯಂತ್ರಿಸಬೇಕಲ್ಲವೆ ! ಇಲ್ಲದಿದ್ದರೆ ಶ್ರೀಮಂತರ ಸುಸಂಸ್ಕೃತ ಜೀವನಕ್ಕೆ ಮುನಿರೆಡ್ಡಿಪಾಳ್ಯದ ಕುಡುಕರು ಕಂಟಕಪ್ರಾಯರಾಗುವುದು ಖಚಿತ ಅಲ್ಲವೆ? ಶ್ರೀಮಂತ ಮತ್ತು ಬಡವನ ಮಧ್ಯೆ ಅತಿಯಾದ ಕಂದರ ಉಂಟಾದರೆ ಅಂಥ ಸಮಾಜದಲ್ಲಿ ನಾಗರಿಕತೆಯೆನ್ನುವುದು ಬಾಯಿಮಾತಿನಲ್ಲಿ ಮಾತ್ರವಿರುತ್ತದೆ. ನಗರದ ಸಭ್ಯ ಗೃಹಸ್ಥರು ಥಳಥಳ ಮಿಂಚುವುದೇ ಕೊಳೆಗೇರಿಗಳ ಹೆಂಗಸರ ಶ್ರಮದಿಂದ ಎನ್ನುವ ಕಲ್ಪನೆ ಇರದಿದ್ದರೆ ಹೇಗೆ?

ವಿರೋಧ ಪಕ್ಷಗಳ ಗಲಾಟೆಗೆ ಮಣಿದ ಸರಕಾರ ಆರ್.ಜಿ. ದೇಸಾಯಿ ವಿಚಾರಣಾ ಆಯೋಗವನ್ನು ನೇಮಿಸಿತು.

ಆಯೋಗದ ಮುಂದೆ ಓ. ಶ್ರೀಧರ್ ಅಫಿಡವಿಟ್ ಸಲ್ಲಿಸಿದರು. ನಾನು ಸಹಾಯ ಮಾಡಿದೆ. ವಿಚಾರಣಾ ಆಯೋಗವೆಂದರೆ ವಾಕರಿಕೆ ಬರುವಂತಾಗಿತ್ತು. ಪರಿಶಿಷ್ಟ ಜನಾಂಗದ ಬ್ಯಾಂಕ್ ನೌಕರರ ಸಂಘಟನೆಕಾರ ಜಕ್ಕಪ್ಪನವರ್ ದಲಿತರನ್ನು ಕರೆ ತಂದು ಓ. ಶ್ರೀಧರ್ ಮೂಲಕ ಅಫಿಡವಿಟ್ ಹಾಕಿಸಿದರು. ಸತ್ತವರ ಕುಟುಂಬದ ಅನಾಥರಿಗೆ ಸರಕಾರದಿಂದ ಪರಿಹಾರಕ್ಕಾಗಿ ಒತ್ತಾಯಿಸಲಾಯಿತು.

ವಾಸ್ತವದಲ್ಲಿ ಮೂರುನೂರು ಜನ ಸಾವಿಗೀಡಾಗಿದ್ದರೂ ಸರಕಾರ ಮಾತ್ರ 229 ಜನ ಮಾತ್ರ ಸತ್ತಿದ್ದಾರೆ ಎಂದು ಅಧಿಕೃತವಾಗಿ ಘೋಷಿಸಿತ್ತು. ಸರಕಾರದ ಈ ಹೇಳಿಕೆಯನ್ನು ಸುಳ್ಳೆಂದು ಸಾರುತ್ತಿದ್ದವು ಆರೋಗ್ಯ ಇಲಾಖೆಯ ದಾಖಲಾತಿಗಳು! 295 ಹೆಣಗಳ ಶವಪರೀಕ್ಷೆ ಮಾಡಿದ್ದುದರ ಬಗ್ಗೆ ದಾಖಲಾತಿಗಳಿದ್ದವು. ಸರಕಾರ ಸುಳ್ಳು ಅಂಕಿಸಂಖ್ಯೆ ನೀಡಿದ್ದನ್ನೂ ಆಯೋಗದ ಮುಂದೆ ಪ್ರಶ್ನಿಸಲಾಯಿತು.

ಏತನ್ಮಧ್ಯೆ ಅಬಕಾರಿ ಇಲಾಖೆ 110 ಡಿನೇಚರ್ ಸ್ಪಿರಿಟ್ ಲೈಸೆನ್ಸ್‌ಗಳನ್ನು ರದ್ದುಗೊಳಿಸಿ ಆದೇಶ ಹೊರಡಿಸಿತು. ಈ ಎಲ್ಲ ಬೋಗಸ್ ಲೈಸೆನ್ಸ್‌ಗಳ ಬಗ್ಗೆಯೂ ತನಿಖೆ ನಡೆಯಬೇಕೆಂದೂ ಒತ್ತಾಯಿಸಲಾಯಿತು.

ಪೊಲೀಸರು 63 ಜನರ ವಿರುದ್ಧ ಈ ಪ್ರಕರಣದಲ್ಲಿ ಚಾರ್ಜ್‌ಷೀಟ್ ಹಾಕಿದರು. ಆದರೆ ಕೊನೆಯಲ್ಲಿ ಯಾರೊಬ್ಬರೂ ಶಿಕ್ಷೆಗೆ ಗುರಿಯಾಗಲಿಲ್ಲ. ಅಷ್ಟು ಕಳಪೆಯಾಗಿತ್ತು ಪೊಲೀಸ್ ಚಾರ್ಜ್‌ಷೀಟ್ ಮತ್ತು ಮತ್ತು ತನಿಖೆಗಳು !

ಆಯೋಗ ವರದಿ ನೀಡಿತು. ಕಳ್ಳಭಟ್ಟಿ ಮಾಫಿಯಾ ಮತ್ತು ರಾಜಕಾರಣಿಗಳ ಮಧ್ಯೆ ಅನೈತಿಕ ಮೈತ್ರಿಯಿರುವುದನ್ನು ದೃಢಪಡಿಸಿತು ಮತ್ತು ಬೋಗಸ್ ಲೈಸೆನ್ಸ್‌ಗಳ ಮೂಲಕ ಹರಿಯುವ ಡಿನೇಚರ್ ಸ್ಪಿರಿಟ್‌ನಲ್ಲಿ 75% ಕಳ್ಳಭಟ್ಟಿಗಾಗಿ ಹೋಗುತ್ತಿದೆಯೆಂದೂ ಹೇಳಿತು.

ಸದನದಲ್ಲಿ ಮುಖ್ಯಮಂತ್ರಿ ಗುಂಡೂರಾವ್ ಸತ್ತವರಿಗೆ ಪರಿಹಾರ ಘೋಷಿಸಿದರು. ಎಷ್ಟು ಗೊತ್ತೆ ? ಸತ್ತ ಪ್ರತಿಯೊಬ್ಬರ ಸಂಬಂಧಿಗೆ ಒಂದು ಸಾವಿರ ರೂಪಾಯಿಗಳು ಮಾತ್ರ ! ವಿರೋಧಪಕ್ಷಗಳು ಈ ಪರಿಹಾರವನ್ನು ಗೇಲಿ ಮಾಡಿದವು. ಅದಕ್ಕೆ ಗುಂಡೂರಾವ್, "ಹೆಚ್ಚಿಗೆ ಪರಿಹಾರ ನೀಡಿದರೆ ಮತ್ತಷ್ಟು ಹೆಚ್ಚು ಸಾವುಗಳಿಗೆ ಸರಕಾರ ಕಾರಣವಾಗಬೇಕಾಗುತ್ತದೆ. ಏಕೆಂದರೆ, ಪರಿಹಾರದ ಹಣ ಸಿಕ್ಕೊಡನೆ ಮತ್ತೆ ಕಳ್ಳಭಟ್ಟಿ ಕುಡಿದುಬಿಡುತ್ತಾರೆ" ಎಂದು ಹೇಳಿದರು! ಮಾನವೀಯ ಕಳಕಳಿಯಿರುವವರ ಬಾಯಲ್ಲಿ ಮಾತೇ ಹೊರಡದಂತಾಯಿತು.

66

ರಿಸ್ಕ್ ತಂದುಕೊಡುವ ಹೊಳಹುಗಳು

ನಜೀರ್ ನನಗೆ ಪರಿಚಯವಾದದ್ದು ನಾನು ಬೆಂಗಳೂರು ಯೂನಿವರ್ಸಿಟಿ ಹಾಸ್ಟೆಲ್‌ನಲ್ಲಿದ್ದಾಗ. ಆಗ ಆತ ಹಾಸ್ಟೆಲ್‌ಗೆ ಮಾಂಸ ಸರಬರಾಜು ಮಾಡುತ್ತಿದ್ದ. ಶಾಖಾಹಾರಿಗಳಿಗಿಂತ ಮಾಂಸಾಹಾರಿ ವಿದ್ಯಾರ್ಥಿಗಳ ಸಂಖ್ಯೆಯೇ ಜಾಸ್ತಿಯಿತ್ತು. ಹಾಗೆಯೇ ಮಾಂಸಾಹಾರಿ ವಿಭಾಗಕ್ಕೆ ಗೆಸ್ಟ್‌ಗಳ ಸಂಖ್ಯೆಯೂ ಜಾಸ್ತಿಯಿತ್ತು. ಬ್ರಾಹ್ಮಣ, ಲಿಂಗಾಯತ ಹುಡುಗರು ನಾಲಿಗೆ ಚಪಲಕ್ಕಾಗಿ ಭಾನುವಾರದಂಥ ವಿಶೇಷ ದಿನಗಳಲ್ಲಿ ಮಾಂಸಹಾರೀ ವಿಭಾಗಕ್ಕೆ ಕುಲಾಂತರಗೊಂಡು ಬಿಡುತ್ತಿದ್ದರು. ಸರಿಯಾದ ಮಾಂಸ ಸರಬರಾಜಾಗಿರದಿದ್ದರೆ ಗಲಾಟೆ ಮಾಡಲು ನಾನು ಮುಂದಾಗುತ್ತಿದ್ದೆ. ನಜೀರ್ ನನ್ನನ್ನು ತಾನೇ ಪರಿಚಯ ಮಾಡಿಕೊಳ್ಳಲಿಕ್ಕೆ ಮುಖ್ಯ ಕಾರಣವೂ ಇದೇ ಆಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಇದೆಲ್ಲ ಹಳೆಯ ಕಥೆ. ಈಗ ಹೇಳಹೊರಟಿರುವ ಸಂಗತಿಯಲ್ಲಿ ನಜೀರ್ ಪಾತ್ರ ಅಂಥ ವಿಶೇಷದ್ದೇನೂ ಅಲ್ಲ. ನಾನು ದೇವದಾಸ್ ಅವರ ಆಫೀಸನ್ನು ಅಂತಿಮವಾಗಿ ಬಿಟ್ಟು ಪ್ರತ್ಯೇಕ ಆಫೀಸ್ ಮಾಡಿಕೊಂಡಿದ್ದೆ. ನಜೀರ್ ಒಬ್ಬ ಮುದುಕನನ್ನು ನನ್ನ ಬಳಿಗೆ ಕರೆತಂದ. ಆ ಮುದುಕನ ಹೆಸರು ಖಾದರ್ ಎಂದು. ಅವನ ಮಗ ಷಫಿ ಎನ್ನುವವ

ಇಮ್ತಿಯಾಜ್ ಎನ್ನುವ ದೊಡ್ಡ ಪೈಲ್ವಾನ್‌ನನ್ನು ಕೊಲೆ ಮಾಡಿಬಿಟ್ಟಿದ್ದ. ಕೊಲೆಗಾರನನ್ನು ಪೋಲೀಸರು ಬಂಧಿಸದಂತೆ ನೋಡಿಕೊಳ್ಳುವುದರೊಂದಿಗೆ ಆ ಕೇಸ್‌ನಿಂದ ಅವನನ್ನು ಖುಲಾಸೆ ಮಾಡಿಸಿಕೊಡಬೇಕೆಂದು ನಜೀರ್ ತನ್ನ ಹಳೆಯ ಪರಿಚಯದ ಜಾಡನ್ನು ಹಿಡಿದುಕೊಂಡು ನನ್ನ ಬಳಿಗೆ ಬಂದಿದ್ದ.

ನನಗೆ ಆಶ್ಚರ್ಯವಾಗುತ್ತದೆ. ಯಾವುದೋ ಸಂದರ್ಭದಲ್ಲಿ ಯಾವುದೋ ಅನಿವಾರ್ಯತೆಗಾಗಿ ಆಗುವ ಪರಿಚಯಗಳಿಗೆ ಎಷ್ಟೊಂದು ಆಯುಷ್ಯವಿರುತ್ತದಲ್ಲವೆ ಎಂದು ! ನಾನು ಆ ಹಾಸ್ಟೆಲ್ ಬಿಟ್ಟ ಮೇಲೂ ಆ ನಜೀರ್ ರಸ್ತೆಯಲ್ಲಿ ಕಂಡಾಗಲೆಲ್ಲ ಪರಿಚಯದ ನಗೆ ಬೀರಿ ಕೈ ಬೀಸುತ್ತಿದ್ದ. ನಾನು ಅದಕ್ಕೆ ಪ್ರತಿಕ್ರಿಯಿಸುತ್ತಿದ್ದೆ.

ನಜೀರ್ ಬಂದವನೇ ತೀರಾ ಖಾಸಗಿಯಾಗಿ ಮಾತಾಡಬೇಕು, ಬೇರೆ ಯಾರೂ ಇರಕೂಡದು ಎಂದ. ಆಗಲಿ ಎಂದು ನನ್ನ ಮುಂದಿದ್ದ ಬೇರೆಯವರನ್ನು ಆಚೆಗೆ ಕಳಿಸಿ, ಏನದು ಕೇಸು? ಎಂದು ಕೇಳಿದೆ.

ನಜೀರ್ ಪಿಸುಧ್ವನಿಯಲ್ಲಿ ಕಥೆಯನ್ನು ಹೇಳಿದ.......

ಮುದುಕ ಖಾದರ್‌ನ ಮಗ ಷಫೀವುಲ್ಲಾಗೆ ಜಂಗಲ್ ಷಫಿ ಎಂದೂ ಕರೆಯುತ್ತಿದ್ದರು. ಜಂಗಲ್ ಎನ್ನುವ ಅಡ್ಡನಾಮ ಹೇಗೆ ಬಂತೋ ಗೊತ್ತಿಲ್ಲ. ಷಫಿ ತನ್ನ ಜೀವಮಾನದಲ್ಲಿ ತಾನಾಗಿ ಕಾಲುಕೆರೆದು ಜಗಳಕ್ಕೆ ಇನ್ನೊಬ್ಬರ ಮೇಲೆ ಏರಿ ಹೋದವನಲ್ಲ. ಜಂಗಲ್ ಎನ್ನುವ ಶಬ್ದಕ್ಕೆ ತೀರಾ ವಿರುದ್ಧವಾಗಿತ್ತು ಅವನ ಮೈಕಟ್ಟು. ತೆಳ್ಳಗೆ, ಕುಳ್ಳಗೆ, ಒಣಗಿದ ಹಲ್ಲಿಯಂತಿದ್ದ ಷಫಿ. ಅಷ್ಟು ಬುದ್ಧಿವಂತನೂ ಆಗಿರಲಿಲ್ಲ. ಸಲೀಮ್ ಎನ್ನುವ ಶ್ರೀಮಂತನ 'ಸೀಮಾ ಚಿಟ್‌ಫಂಡ್'ನಲ್ಲಿ ಕೆಲಸಕ್ಕಿದ್ದ. ಬಿಡುವಿನ ವೇಳೆಯಲ್ಲಿ ಮಾವಳ್ಳಿ ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದ. ವ್ಯವಹಾರಿಕ ಕಾರಣಗಳಿಗಾಗಿ ಚಿಟ್ ಫಂಡ್ ದಿವಾಳಿಯಾಯಿತು. ಆದರೆ ಸಲೀಮ್ ಎಲ್ಲೂ ಓಡಿಹೋಗುವಂತಿರಲಿಲ್ಲ. ಅವನ ಬೇರೆ ಆಸ್ತಿಪಾಸ್ತಿಗಳು ಬೆಂಗಳೂರಲ್ಲಿ ಇದ್ದವು. ಅದೂ ಅಲ್ಲದೆ ಚಿಟ್ ಫಂಡ್‌ನಲ್ಲಿ ಹಣ ತೊಡಗಿಸಿದ್ದವರು ಸಲೀಮ್‌ಗೆ ಗೊತ್ತಿದ್ದವರೇ ಆಗಿದ್ದು, ಅದರಲ್ಲಿ ಮುಸ್ಲಿಮ್ ಸಮುದಾಯದವರೇ ಹೆಚ್ಚಾಗಿದ್ದರು. ಮುಸ್ಲಿಮ್ ಸಮಾಜದ ಪಂಚರು ಸೇರಿ ಸಲೀಮ್ 70% ಹಣವನ್ನು ಹೂಡಿಕೆದಾರರಿಗೆ ವಾಪಸ್ಸು ನೀಡಬೇಕೆಂದು ತೀರ್ಮಾನಿಸಿದರು. ಅದಕ್ಕೆ ಸಲೀಮ್ ಒಪ್ಪಿಕೊಂಡ. ಇತರರೂ ಒಪ್ಪಿಕೊಂಡರು. ಆದರೆ ನವಾಬ್ ಜಾನ್ ಎನ್ನುವ ಹೂಡಿಕೆದಾರ 100% ಹಣ ವಾಪಸ್ ಬೇಕು ಎಂದು ಪಟ್ಟು ಹಿಡಿದು ಕೂತ. 'ನಿನಗೊಬ್ಬನಿಗೆ ಹಾಗೆ ಕೊಟ್ಟರೆ ಉಳಿದವರಿಗೂ ಕೊಡಬೇಕಾಗುತ್ತದೆ, ಪಂಚರು ತೀರ್ಮಾನ ಮಾಡಿದ ಪ್ರಕಾರ 70% ಮಾತ್ರ ಕೊಡುವೆ' ಎಂದ ಸಲೀಮ್. ಮತ್ತು ನವಾಬ್

ಜಾನ್‌ಗಳ ಮಧ್ಯೆ ಈ ವಿವಾದ ಜಗಳವಾಗಿ ಪರಿಣಮಿಸಿತು. ನವಾಬ್ ಜಾನ್ ಸಲೀಮ್‌ನ ಕಾಲರನ್ನು ಹಿಡಿದು ಹೊಡೆಯಲು ಹೋದ. ಅಲ್ಲಿಯೇ ಪಕ್ಕದಲ್ಲಿದ್ದ ಷಫೀವುಲ್ಲಾ ನವಾಬ್ ಜಾನ್‌ನ ಮೇಲೆ ಬಿದ್ದು ತನ್ನ ಮಾಲೀಕ ಸಲೀಮ್‌ಗೆ ಬೀಳಬಹುದಾಗಿದ್ದ ಹೊಡೆತಗಳಿಂದ ಪಾರು ಮಾಡಿದ. ನವಾಬ್ ಒಬ್ಬನೇ ಇದ್ದುದರಿಂದ, "ನಿಮ್ಮಿಬ್ಬರನ್ನೂ ನೋಡಿಕೊಳ್ಳುವೆ" ಎಂದು ಧಮ್‌ಕಿ ಹಾಕಿ ಹೋದ.

ಈ ನವಾಬ್ ಜಾನ್ ಕುರುಬರಪೇಟೆ ಇಮ್ತಿಯಾಜ್ ಎನ್ನುವ ಪೈಲ್ವಾನನ ಸಂಬಂಧಿಕನಾಗಿದ್ದ. ಇಮ್ತಿಯಾಜ್ ಬಳಿಗೆ ಹೋಗಿ ತನಗೆ ಸಲೀಮ್ ಮತ್ತು ಷಫೀವುಲ್ಲಾ ಹೊಡೆದು ಬಡಿದು ಕಳಿಸಿದ್ದಾರೆ ಎಂದು ಅತ್ತು ಅನುಕಂಪ ಗಿಟ್ಟಿಸಿಕೊಂಡ. "ನಾನು ಪೈಲ್ವಾನ್ ಇಮ್ತಿಯಾಜ್ ಕಡೆಯವನು ಗೊತ್ತಾ ಎಂದು ಹೇಳಿದ್ದಕ್ಕೆ, ಆ 'ಷಫಿ ಅಂತ ನೂರು ಪೈಲ್ವಾನ್‌ಗಳು ಬರಲಿ ನೋಡಿಕೋತೇನೆ' ಎಂದು ಗೇಲಿ ಮಾಡಿದ" ಎಂದು ಸುಳ್ಳು ಹೇಳಿ ಇಮ್ತಿಯಾಜ್ ಕೆರಳುವಂತೆ ಮಾಡಿದ.

ಇಮ್ತಿಯಾಜ್ ಬೆಂಗಳೂರಿಗೆ ಮಾತ್ರವಲ್ಲ ಅಕ್ಕಪಕ್ಕ ಮಂಡ್ಯ, ಮೈಸೂರು, ತುಮಕೂರು, ಕೋಲಾರ, ಚಿತ್ರದುರ್ಗಗಳಲ್ಲೆಲ್ಲ ಖ್ಯಾತ ಕುಸ್ತಿ ಪಟು ಎಂದು ಹೆಸರು ಮಾಡಿದ್ದ. ಪೈಲ್ವಾನ್‌ಗೆ ಕುಸ್ತಿಯಾಡಲು ಬರುತ್ತಿತ್ತೇ ಹೊರತು ಜಗಳ ಮಾಡಲು ಬರುತ್ತಿರಲಿಲ್ಲ. ಬಹುತೇಕ ಗೂಂಡಾಗಳು ಪೈಲ್ವಾನ್‌ಗಳಾಗಿರುವುದಿಲ್ಲ ಎನ್ನುವುದು ಆಶ್ಚರ್ಯವೇನೂ ಅಲ್ಲ.

ಇಮ್ತಿಯಾಜ್‌ಗೆ ಉಕ್ಕಿ ಬಂದ ಕೋಪದಲ್ಲಿ, "ಈಗಲೇ ಹೋಗೋಣ ನಡಿ. ಯಾವನು ಆ ಬದ್ಮಾಷ್. ಅವನ ಕಥೆ ಮುಗಿಸಿಬಿಡುತ್ತೇನೆ" ಎಂದ. ನವಾಬ್ ಜಾನ್‌ಗೆ ತನ್ನ ಉದ್ದೇಶ ಈಡೇರಿದ್ದಕ್ಕೆ ಖುಷಿಯಾಯಿತು. ಸೀಮಾ ಚಿಟ್ ಫಂಡ್‌ಗೆ ಇಮ್ತಿಯಾಜ್‌ನೊಂದಿಗೆ ಹೋದ. ರಸ್ತೆಯಲ್ಲೇ ಆಟೋ ನಿಲ್ಲಿಸಿ ಆಟೋದೊಳಗೇ ಇಮ್ತಿಯಾಜ್ ಕೂತುಕೊಂಡು ಸಲೀಮ್ ಮತ್ತು ಷಫಿಗಳನ್ನು ಕರೆದುಕೊಂಡು ಬಾ ಎಂದು ನವಾಬ್‌ಗೆ ಕಳಿಸಿದ. ನವಾಬ್ ಚಿಟ್ ಫಂಡ್ ಆಫೀಸ್ ಒಳಕ್ಕೆ ಹೋದಾಗ ಅಲ್ಲಿ ಸಲೀಮ್ ಇರಲಿಲ್ಲ. ಷಫಿ ಒಬ್ಬನೇ ಇದ್ದ. "ಬಾರೋ ಹೊರಗೆ" ಎಂದು ಜೋರಾಗಿ ಕೂಗಿದ.

"ಚಕ್ಕ ನನ್‌ಮಗನೆ, ನಾನೇಕೆ ಹೊರಗೆ ಬರಲಿ?" ಎಂದ ಷಫಿ.

ನವಾಬ್ ಇಮ್ತಿಯಾಜ್ ಬಳಿ ಹೋಗಿ "ಆ ಪೈಲ್ವಾನ್‌ನನ್ನೇ ಇಲ್ಲಿಗೆ ಬರುವಂತೆ ಹೇಳು ಎನ್ನುತ್ತಿದ್ದಾನೆ, ಆ ಬದ್ಮಾಶ್ ಷಫಿ" ಎಂದು ಹೇಳಿ ಮತ್ತಷ್ಟು ರೊಚ್ಚಿಗೆಬ್ಬಿಸಿದ ಇಮ್ತಿಯಾಜ್‌ನನ್ನು.

ಇಮ್ತಿಯಾಜ್‌ನ ಮೈಯೆಲ್ಲ ಉರಿದುಹೋಯಿತು. ಆ ಕಡುಕೋಪದಲ್ಲಿ ರಭಸದಿಂದ ಚಿಟ್‌ಫಂಡ್ ಕಚೇರಿಯೊಳಕ್ಕೆ ನುಗ್ಗಿ ಷಫಿಯನ್ನು ದರದರ ಎಳೆದುಕೊಂಡು ರಸ್ತೆಗೆ ಬಂದ.

"ರೋಗ ಹತ್ತಿದ ನಾಯಿ ಹಂಗೆ ಇದ್ದೀಯಾ. ಎಷ್ಟೋ ನಿನಗೆ ಕೊಬ್ಬು? ಏನೆಲ್ಲಾ ಮಾತಾಡ್ತೀಯಾ. ಇವತ್ತು ನಿಂಗೆ ಹುಟ್ಟಿಲ್ಲ ಅನ್ನಿಸ್ತೀನಿ" ಎಂದು ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡು ಬಂದಿದ್ದ ಉದ್ದನೆಯ ಚಾಕುವಿನಿಂದ ಷಫಿ ಮೊಣಕೈ, ರಟ್ಟೆಗಳಿಗೆ ಹೊಡೆದ. ಗಾಯಿಗಳಾಗಿ ರಕ್ತ ಚಿಮ್ಮತೊಡಗಿತು. ಷಫಿ "ನನ್ನನ್ನು ಈ ದಾಂಡಿಗ ಕೊಂದೇಬಿಡುತ್ತಾನೆ. ಬದುಕುವುದಕ್ಕಾಗಿ ಏನೆಲ್ಲ ಸಾಧ್ಯ ಅದನ್ನು ಮಾಡಬೇಕು" ಎಂದುಕೊಂಡ.

ಇಮ್ತಿಯಾಜ್ ಚಾಕುವನ್ನು ಅಂಜಿಸಲು ತಂದಿದ್ದ. ಆ ಮುಂಚೆ ಚೂರಿ ಹಿಡಿದು ಹೊಡೆದಾಡಿದ ಅನುಭವ ಅವನಿಗಿರಲಿಲ್ಲ.

ರಕ್ತಸಿಕ್ತಗೊಂಡಿದ್ದ ತನ್ನ ಕೈಗಳನ್ನು ನೋಡಿಕೊಂಡ ಷಫಿಗೆ ಸಾಯುವ ಮುನ್ನ ಉಕ್ಕುವ ಧೈರ್ಯ ಚಿಮ್ಮಿ ಬಂದಿತು. ಪೈಲ್ವಾನ್ ಚಾಕು ಹಿಡಿದುಕೊಂಡಿದ್ದ ಕೈಯತ್ತ ನಾಯಿಯಂತೆ ನೆಗೆದು ಹಸ್ತದ ಕೆಳಭಾಗವನ್ನು ತನ್ನ ಬಾಯಿಯಿಂದ ಜೋರಾಗಿ ಕಚ್ಚಿದ. ರಕ್ತ ಒಸರತೊಡಗಿ ಉಪ್ಪುಪ್ಪು ರಕ್ತವನ್ನು ಹೀರತೊಡಗಿದ. ಪೈಲ್ವಾನ್ ತನ್ನ ಇನ್ನೊಂದು ಕೈಯಿಂದ ಷಫಿಯನ್ನು ಹೊಡೆದ ಬಡಿದ. ಜೊತೆಗಿದ್ದ ನವಾಬ ಷಫಿಯನ್ನು ಹಿಡಿದೆಳೆಯತೊಡಗಿದ. ಆದರೆ ಕಚ್ಚಿಹಿಡಿದಿದ್ದ ಕೈಯನ್ನು ಮಾತ್ರ ಬಿಡಲಿಲ್ಲ. ಇನ್ನೇನು ತನ್ನ ಕೈಯ ನರಗಳೇ ಹರಿದುಹೋಗುತ್ತವೆ ಎನಿಸಿತು ಪೈಲ್ವಾನನಿಗೆ. ಚಾಕು ಹಿಡಿದಿದ್ದ ಕೈಯ ಹಿಡಿತವನ್ನು ಸಡಿಲುಗೊಳಿಸಿದ. ಕೂಡಲೇ ಆ ಚಾಕುವನ್ನು ಷಫಿ ತನ್ನ ಕೈಗೆ ಕಿತ್ತುಕೊಂಡು ದೂರಕ್ಕೆ ಜಿಗಿದ.

ತನ್ನೆದುರು ಚಾಕು ಹಿಡಿದು ನಿಂತ ಷಫಿ ಪ್ರಾಣಭೀತಿಯಿಂದ ಚೀರುವ ಬೆಕ್ಕಿನಂತೆ ಕಂಡ. ಅತ್ತ ಇತ್ತ ಏನೂ ಯೋಚಿಸಲಿಲ್ಲ ಷಫಿ. ಅರೆಘಳಿಗೆಯಲ್ಲಿ ಪೈಲ್ವಾನನ ಹೊಟ್ಟೆಯೊಳಕ್ಕೆ ಚಾಕುವನ್ನು ಜೋರಾಗಿ ತಿವಿದುಬಿಟ್ಟ. ನೋಡನೋಡುತ್ತಲೇ ಪೈಲ್ವಾನ ಕೆಳಗುರುಳಿಬಿದ್ದ. ಪೈಲ್ವಾನನೊಂದಿಗೆ ಬಂದಿದ್ದ ನವಾಬ್ ಕ್ಷಣಾರ್ಧದಲ್ಲಿ ಕಣ್ಮರೆಯಾಗಿದ್ದ. ರಸ್ತೆಯಲ್ಲಿ ಇದನ್ನೆಲ್ಲ ನೋಡುತ್ತ ನಿಂತ ಜನಕ್ಕೆ ಷಫಿಯನ್ನು ಮುಟ್ಟುವ ಧೈರ್ಯವಿರಲಿಲ್ಲ. ಪೈಲ್ವಾನ್ ತನ್ನ ಹೊಟ್ಟೆಗೆ ಚಾಕು ಬಿದ್ದದ್ದನ್ನು ನೋಡಿಕೊಂಡದ್ದೆ ಎದೆ ಧಸಕ್ಕೆಂದು ಅರ್ಧ ಸತ್ತಿದ್ದ. ಪೊಲೀಸರು ವಿಕ್ಟೋರಿಯಾ ಆಸ್ಪತ್ರೆಗೆ ಅವನನ್ನು ಸೇರಿಸುವಷ್ಟರಲ್ಲಿ ಕೊನೆಯುಸಿರೆಳೆದ ಪೈಲ್ವಾನ್ ಇಮ್ತಿಯಾಜ್.

ಷಫಿಯ ಕಡೆಯವರು ಬಂದು ಷಫಿಯನ್ನು ಗುಪ್ತ ಸ್ಥಳಕ್ಕೊಯ್ದು ತಲೆಮರೆಸಿದ್ದರು. ಪರಿಚಯದ ಅರೆ ವೈದ್ಯನಿಂದ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದರು. ಆದರೆ ಗಾಯಗಳು ಆಳವಾಗಿದ್ದವು. ಹೊಲಿಗೆ ಹಾಕದೆ ಬೇರೆ ಮಾರ್ಗವಿರಲಿಲ್ಲ.

ನಜೀರ್ ಹೇಳಿದ : "ಈ ಸ್ಥಿತಿಯಲ್ಲಿ ಷಫಿಯನ್ನು ಬಿಟ್ಟು ಬಂದಿದ್ದೇವೆ. ಪೊಲೀಸರು ಅವನನ್ನು ಅರೆಸ್ಟ್ ಮಾಡಿಬಿಟ್ಟರೆ ಹೊಡೆದು ಬಡಿದು ಸಾಯಿಸಿಬಿಡುತ್ತಾರೆ. ಕೂಡಲೇ ಆಂಟಿಸಿಪೇಟರಿ ಬೇಲ್ ಕೊಡಿಸಿ".

"ಎಲ್ಲಕ್ಕೂ ಮೊದಲು ನಾನು ಆ ಷಫಿಯನ್ನು ನೋಡಬೇಕು" ಎಂದೆ.

ಮಹಡಿಯ ರೂಮೊಂದರಲ್ಲಿ ಷಫಿಯನ್ನು ನೋಡಿದೆ. ಬ್ಯಾಂಡೇಜ್‌ನಿಂದ ರಕ್ತ ಸೋರುತ್ತಿತ್ತು. ಹೊಲಿಗೆ ಹಾಕದೆ ಬ್ಯಾಂಡೇಜ್ ಮಾಡಲಾಗಿದೆ ಎಂದು ತಿಳಿಯಿತು.

"ಕೂಡಲೇ ಇವನನ್ನು ಪೊಲೀಸರ ವಶಕ್ಕೆ ಕೊಡೋಣ. ಅವರು ಇವನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸುತ್ತಾರೆ" ಎಂದೆ.

"ಇದೇನ್ರೀ ಹನುಮಂತರಾಯರೆ, ನಾವು ನಿಮ್ಮ ಹತ್ತಿರ ಬಂದದ್ದೇ ಪೊಲೀಸರಿಂದ ಆಗುವ ಅರೆಸ್ಟ್ ಅನ್ನು ತಪ್ಪಿಸಿ ಅಂತ" ಎಂದ ನಜೀರ್.

"ನಜೀರ್, ನಾನು ವಕೀಲ. ಕಕ್ಷಿದಾರನಿಗೆ ಕಾನೂನಿನ ದೃಷ್ಟಿಯಲ್ಲಿ ಯಾವುದು ಸಹಾಯಕಾರಿ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ನನ್ನ ಸಲಹೆ ನಿಮಗೆ ಹಿಡಿಸದಿದ್ದರೆ ಬೇರೆ ವಕೀಲರನ್ನು ನೋಡಿಕೊಳ್ಳಿ. ಷಫಿಗೆ ಆಗಿರುವ ಗಾಯಗಳು ಅವನನ್ನು ಜೈಲು ಶಿಕ್ಷೆಯಿಂದ ಪಾರುಮಾಡುತ್ತವೆ. ಈ ಸ್ಥಿತಿಯಲ್ಲಿಯೇ ಅವನು ಪೊಲೀಸರಿಗೆ ಶರಣಾಗತಿ ಆಗದೆ ಆಂಟಿಸಿಪೇಟರಿ ಬೇಲ್ ತೆಗೆದುಕೊಂಡು ತಿಂಗಳು ಕಳೆದರೆ ಈ ಗಾಯಗಳೆಲ್ಲ ಮಾಸಿಹೋಗಿರುತ್ತವೆ. ಪೊಲೀಸರ ರೆಕಾರ್ಡ್‌ನಲ್ಲಿ ಇವುಗಳ ಗಂಭೀರ ಸ್ವರೂಪ ದಾಖಲಾಗುವುದಿಲ್ಲ" ಎಂದು ಎದ್ದು ನಿಂತೆ.

ನನ್ನ ಮಾತನ್ನು ಮೀರುವ ಧೈರ್ಯ ನಜೀರ್ ಮತ್ತು ಖಾದರ್‌ಗೆ ಬರಲಿಲ್ಲ.

ಕೂಡಲೇ ಷಫಿಯನ್ನು ಪೊಲೀಸರ ವಶಕ್ಕೊಪ್ಪಿಸಿದೆ.

ವಿಟ್ನೆಸ್ ಬಾಕ್ಸ್‌ನಲ್ಲಿ ಕೊಲೆಯಾದ ಇಮ್ತಿಯಾಜ್ ಅಪ್ಪ ಬಂದು ನಿಂತ.

ನಾನು ಕೇಳಿದೆ: "ನಿಮ್ಮ ಮಗ ಇಮ್ತಿಯಾಜ್‌ಗಿಂತ ಆರೋಪಿ ಷಫಿ ಬಲಶಾಲಿಯೆ?"

"ಛೆ, ನನ್ನ ಮಗ ದೊಡ್ಡ ಶೂರ. ಈ ಷಫಿಯಂತ ಹತ್ತು ಕಂತ್ರಿ ನಾಯಿಗಳು ಬಂದರೂ ಅವರನ್ನೆಲ್ಲ ಒಂದೇ ಬಾರಿಗೆ ಮುಗಿಸುವ ಸಾಮರ್ಥ್ಯ ನನ್ನ ಮಗನಲ್ಲಿತ್ತು" ಎಂದ ಗೌಸ್.

ಆತ್ಮರಕ್ಷಣೆಗಾಗಿ ಮಾಡಿದ ಕೊಲೆ ಇದು ಎಂದು ವಾದಿಸಲು ಗೌಸ್ ಹೇಳಿಕೆ ನನಗೆ ತುಂಬಾ ಸಹಾಯಕವಾಯಿತು.

ಆದರೆಸ ಸೆಷನ್ಸ್ ನ್ಯಾಯಾಲಯಕ್ಕೆ ನನ್ನ ವಾದ ಒಪ್ಪಿಗೆಯಾಗಲಿಲ್ಲ. ಆರೋಪಿಗಳಿಗೆ (ಷಫಿಯೊಂದಿಗೆ ಸಲೀಮ್‌ನನ್ನೂ ಆರೋಪಿಯನ್ನಾಗಿಸಲಾಗಿತ್ತು) ಜೀವಾವಧಿ ಶಿಕ್ಷೆ ವಿಧಿಸಿತು.

ನಜೀರ್ ಮತ್ತು ಖಾದರ್ ಬಂದು "ನಿಮ್ಮ ಮಾತು ಕೇಳಿದ್ದಕ್ಕೆ ಹೀಗಾತು ಸಾಬ್. ಹೈಕೋರ್ಟ್‌ನಲ್ಲೂ ಇದೇ ಶಿಕ್ಷೆ ಆಗುತ್ತೆ ಅಂತಿದಾರೆ ನನ್ನ ಸ್ನೇಹಿತರು" ಎಂದರು ದುಗುಡದಿಂದ.

"ಹೈಕೋರ್ಟ್ ನನ್ನ ವಾದವನ್ನು ಎತ್ತಿ ಹಿಡಿಯುತ್ತೆ ಅನ್ನುವ ಭರವಸೆ ನನ್ನಲ್ಲಿದೆ, ತಾಳ್ಮೆವಹಿಸಿ" ಎಂದೆ.

ಅರೆಮನಸ್ಸಿನಿಂದಲೇ ಹೋದರು.

ಜಸ್ಟಿಸ್ ಎಂ.ಎಸ್. ಪಾಟೀಲ್ ಮತ್ತು ಜಸ್ಟಿಸ್ ವಿಠ್ಠಲರಾವ್‌ರೊಳಗೊಂಡ ವಿಭಾಗೀಯ ಪೀಠದ ಮುಂದೆ ಅಪೀಲ್ ಬಂತು.

ಬೆಂಚ್ ಷಫಿ ಮತ್ತು ಸಲೀಮರನ್ನು ಶಿಕ್ಷೆಯಿಂದ ಮುಕ್ತಗೊಳಿಸಿತು. Exercise of right self defence ಪಾಯಿಂಟ್ ಮೇಲೆ ಈ ಕೇಸನ್ನು ವಾದಿಸುವಂಥ ರಿಸ್ಕ್ ತೆಗೆದುಕೊಂಡಿದ್ದಕ್ಕೆ ಬೆಂಚ್ ನನ್ನನ್ನು ಪ್ರಶಂಸಿಸಿತು.

67

ಮಗ ಜೈಲಲ್ಲೇ ಇರಲಿ ಎಂದ ತಂದೆ

೧೯೭೪ರಲ್ಲಿ ದಾಸ ಎನ್ನುವ ಹದಿನಾಲ್ಕು ವರ್ಷದ ಅನಾಥ ಹುಡುಗ ದೇವಗಿರಿ ಜಾತ್ರೆಯಲ್ಲಿ ಅಳುತ್ತ ನಿಂತದ್ದನ್ನು ನೋಡಿದ ಗುಡ್ಡದಳ್ಳಿ ಗೌಡರಿಗೆ ಕರುಣೆ ಬರುತ್ತದೆ. ತಮ್ಮೊಂದಿಗೆ ಅವನನ್ನೂ ತಮ್ಮೂರು ಗುಡ್ಡದಳ್ಳಿಗೆ ಕರೆತರುತ್ತಾರೆ. ಆದರೆ ತಮ್ಮ ಮನೆಯಲ್ಲಿ ಜೀತಕ್ಕೆ ಈಗ ಇರುವವರೇ ಜಾಸ್ತಿ ಆಗಿರುವಾಗ ಇವನನ್ನೇನು ಮಾಡುವುದೆಂದು ಯೋಚಿಸಿ ತಮ್ಮ ಮಿತ್ರ ದೇವಯ್ಯನಿಗೆ " ಈ ಹುಡುಗನ್ನ ನಿಮ್ಮನೇಲಿ ಜೀತಕ್ಕೆ ಇಟ್ಕೊ, ಜೀತದಾಳು ಬೇಕು ಅಂತಿದ್ದಿ" ಎಂದು ದಾಸನನ್ನು ಇರಿಸುತ್ತಾರೆ.

ಊರಿನ ಜೀತದಾಳುಗಳೆಲ್ಲ ರಾತ್ರಿ ಹರಟೆ ಹೊಡೆಯಲು, ಮಲಗಲು ಗೌಡರ ದನದ ಕೊಟ್ಟಿಗೆಗೇ ಹೋಗುತ್ತಿರುತ್ತಾರೆ. ತಮ್ಮ ಮನೆಯಲ್ಲಿ ಐದಾರು ಜೀತದಾಳುಗಳಿದ್ದುದರಿಂದ ಒಂದು ದನದ ಕೊಟ್ಟಿಗೆಯನ್ನೇ ಅವರಿಗೆ ಬಿಟ್ಟುಕೊಟ್ಟಿದ್ದರು ಗೌಡರು. ಕೆಲವೇ ದಿನಗಳಲ್ಲಿ ದಾಸ ಮನೆಯಲ್ಲಿ ಅಚ್ಚುಮೆಚ್ಚಿನ ಕೆಲಸಗಾರನಾದ. ದೀಪಾವಳಿ ಬಂದುದರಿಂದ ಅಂಗಿ, ದೊಗಳೆ ಚೆಡ್ಡಿಗಳನ್ನು ದಾಸನಿಗಾಗಿ ಹೊಲಿಸಿದರು.

ಮನೆಗೆಲಸ ಮುಗಿಸಿದ ನಂತರ ನಿತ್ಯರಾತ್ರಿ ಗೌಡರ ಕೊಟ್ಟಿಗೆಗೆ ಉಳಿದ ಜೀತದಾಳುಗಳ ಜೊತೆ ಮಲಗಲು ಹೋಗುತ್ತಿದ್ದ ದಾಸನಿಗೆ ಕರಿಯಣ್ಣ ಎನ್ನುವ ಮೂವತ್ತೈದರ ವಯಸ್ಸಿನ ಜೀತದಾಳಿನೊಂದಿಗೆ ನಿಕಟ ಸ್ನೇಹ ಬೆಳೆಯುತ್ತದೆ. ಇವರಿಬ್ಬರ ನಿಕಟತೆ ಹೆಚ್ಚಾಗಲು ಕಾರಣವಿಲ್ಲದಿರಲಿಲ್ಲ.

ಕರಿಯಣ್ಣ ದಾಸನನ್ನು ತನ್ನ ಪಕ್ಕಕ್ಕೇ ಮಲಗಿಸಿಕೊಂಡು ಅವನ ಮರ್ಮಾಂಗದ ಮೇಲೆ ಕೈಯಾಡಿಸುತ್ತಿದ್ದ. ದಾಸನಿಗೆ ಅದು ಹಿತವೆನ್ನಿಸುತ್ತಿತ್ತು. ದಾಸ ಚಿಕ್ಕ ಹುಡುಗನಾಗಿದ್ದರಿಂದ ಸಲಿಂಗರತಿಯ ಬಗ್ಗೆ ಉಳಿದವರು ಸಂಶಯಪಟ್ಟುಕೊಳ್ಳಲಿಲ್ಲ.

ಕರಿಯಣ್ಣನಿಗೆ ಹೆಣ್ಣಿನ ಚಟವಿತ್ತು. ಆದರೆ ಸಿಗುತ್ತಿರಲಿಲ್ಲ. ಒಮ್ಮೆ ಸಮೀಪದ ಚನ್ನಪಟ್ಟಣಕ್ಕೆ ಹೋಗಿ ವೇಶ್ಯೆಯ ಸಂಗ ಮಾಡಿ ಗುಪ್ತರೋಗಕ್ಕೂ ಬಲಿಯಾಗಿದ್ದ. ನಂತರ ನಾಟಿ ವೈದ್ಯನೊಬ್ಬನ ಬಳಿ ಚಿಕಿತ್ಸೆಯನ್ನೂ ಪಡೆದುಕೊಂಡಿದ್ದ. ತಮ್ಮಪ್ಪ ಮಾಡಿದ ಸಾಲಕ್ಕಾಗಿ ಜೀತಕ್ಕಿದ್ದ ಕರಿಯಣ್ಣನಿಗೆ ಮದುವೆ ಮಾಡಿಕೊಳ್ಳಲು ದುಡ್ಡಿರಲಿಲ್ಲ.

ಕರಿಯಣ್ಣನಿಗೆ ದಾಸನ ಮರ್ಮಾಂಗದ ಮೇಲೆ ಅನುಮಾನ ಬರತೊಡಗಿತು; ಯಾವಾಗ ಕೈ ಹಾಕಿದರೂ ಅದು ನಿಗುರಿಕೊಂಡೇ ಇರುತ್ತಿತ್ತು!

"ಏನ್ಲಾ ಇದು ಇಂಗೆ, ಯಾವಾಗ್ಲೂ ನಿಗರ್‌ಕಂಡೇ ಇರ್ತೈತೆ?"

"ನಂಗೆ ನೆನಪಿದ್ದಾಗ್ಲಿಂದ್ಲೂ ಇದು ಇಂಗೇ ನಿಗರ್‌ಕಂಡೇ ಐತೆಣ್ಣೋ. ಬ್ಯಾರೆ ಹುಡ್ಗುರ್‌ದ್ನ ನೋಡ್ತೀನಿ, ಇಂಗಿರಲ್ಲ. ಏನ್ ಮಾಡೋದೊ ತಿಳೀದು. ದೊಗಳೆ ಚೆಡ್ಡಿ ಹಾಕೋದ್ರಿಂದ ನಿಗುರ್‌ಕಂಡಿರೋದು ಯಾರ್ಗೂ ಕಾಣಾಕಿಲ್ಲ"

"ಅಂಗಾರೆ ಒಂದ್ ಕೆಲ್ಸ ಮಾಡೋಣ. ಬಿದಗೆರೇಲಿ ಒಬ್ಬ ನಾಟಿ ವೈದ್ಯ ನಂಗೊತ್ತವ್ನೆ. ಅವುನ್ ಬಳೀಗ್ ಹೋದ್ರೆ ಔಸ್ಧಿ ಕೊಡ್ತಾನೆ."

"ನಮ್ಮ ಧಣಿಯೋರ್ಗೆ ಏನಂತ ಹೇಳಿ ಹೋಗಾದು?"

"ನೀ ಏನೂ ಚಿಂತೆ ಮಾಡ್‌ಬೇಡಾ. ನಮ್ಮೂರ್‌ನಾಗೆ ದೇವರ್‌ಗೆ ಹರಕೆ ಮಾಡವ್ರೆ, ಜೊತೆಲೇ ದಾಸನ್ನೂ ಕರ್ಕೊಂಡ್ ಹೋಗಿಬರ್ತೀನೆ ಅಂತ ನಿಮ್ ಧಣಿಯೋರ್ಗೆ ಹೇಳಿ ಕರ್ಕೊಂಡೋಗ್ತೀನೆ" ಎಂದು ಹೇಳಿದ.

ದಾಸನನ್ನು ನೋಡಿದ ನಾಟಿವೈದ್ಯ "ಇದು ಔಸ್ಧಿಗೆ ಗುಣವಾಗೊ ರೋಗಲ್ಲ. ಒಂದ್ ಚಿಕಿತ್ಸೆ ಅದೆ. ಅಂಗ್ ಮಾಡಾಕೆ ಇವುಂಗೆ ಆಗುತ್ತೊ ಇಲ್ವೊ ನಂಗೆ ಅನುಮಾನ" ಎಂದ.

"ಅದೇನ್ ಹೇಳಿ ಮೊದ್ಲು" ಅಂದು ಕರಿಯಣ್ಣ.

"ಒಂದು ಹತ್ತು ವರ್ಷದ ಹುಡುಗನ್ ಮರ್ಮಾಂಗ ಚೀಪ್‌ಬೇಕು. ರಸ ಬರ್ತದೆ, ಮೊದ್ಲು ಅದನ್ನು ಕುಡಿಬೇಕು. ಹೀಗೆ ತಿಂಗಳಿಗೆ ಎರಡು ಬಾರಿಯಂತೆ ಐದ್ ತಿಂಗ್ಳು ಮಾಡ್‌ಬೇಕು" ಎಂದ ವೈದ್ಯ.

ತನ್ನ ಜೇಬಿನೊಳಗಿಂದ ಎರಡ್ ರೂಪಾಯಿ ತೆಗೆದು ವೈದ್ಯನ ಮುಂದಿಟ್ಟು ವಿದಾಯ ಹೇಳಿ ಕರಿಯಣ್ಣ ದಾಸನನ್ನು ಕರೆದುಕೊಂಡು ನಡೆದ.

ಪ್ರಿಯಾಪಿಸಮ್ (priapism) ಎನ್ನುವ ರೋಗದ ಕಾರಣದಿಂದ ದಾಸನ ಶಿಶ್ನ ಲೈಂಗಿಕ ಇಚ್ಛೆ ಇರದಿರುವಾಗಲೂ ನಿಗುರಿಕೊಂಡೇ ಇರುತ್ತಿತ್ತು.

"ಅಲ್ಲೊ ದಾಸ. ನಿಮ್ ಧಣೀ ಮಗ ಸಂಜೀವನೇ ಇದ್ದಾನಲ್ಲಾ, ಅವುನ್ ಜೊತೇಗೆ ಸ್ನೇಹ ಬೆಳೆಸು. ನಿನ್ ಕೆಲ್ಸ ಆಗೋಗ್ತದೆ...." ಎಂದ.

ದಾಸ ಮುಂಚೆಗಿಂತ ಬೆಳಗ್ಗೆ ಬೇಗ ಏಳತೊಡಗಿದ. ಬೇಗ ಬೇಗ ಕೆಲಸ ಮುಗಿಸಿ ಧಣಿಯ ಮಗ ಸಂಜೀವನನ್ನು ಹೆಗಲ ಮೇಲೆ ಹೊತ್ತುಕೊಂಡು ಶಾಲೆಗೆ ಬಿಟ್ಟುಬರಲು ಶುರುಮಾಡಿದ್ದನ್ನು ನೋಡಿದ ಮಲ್ಲಾಜಮ್ಮ "ನೋಡಿದ್ರಾ ನಮ್ಮ ಸಂಜೀವ್ನುನ್ ಮ್ಯಾಕೆ ದಾಸಂದು ಅದೆಷ್ಟು ಪ್ರೀತಿ ಹುಟ್‌ಕಂಡಿದೆ" ಎಂದು ತನ್ನ ಗಂಡ ದೇವಯ್ಯನಿಗೆ ಹೇಳಿದಳು.

ತನ್ನ ಹೆಗಲ ಮೇಲೆ ಕೂತ ಸಂಜೀವನ ತೊಡೆ, ಕುಂಡೆಗಳನ್ನು ಸವರಾಡತೊಡಗಿದ ದಾಸ.

ದಾಸ ಹೊತ್ತುಕೊಂಡು ಹೋಗದಿದ್ದರೆ ಶಾಲೆಗೆ ಹೋಗುವುದಿಲ್ಲವೆಂದು ತಂಟೆ ಮಾಡತೊಡಗಿದ ಸಂಜೀವ. ತನ್ನವ್ವ ಏನೇ ತಿಂಡಿ ಕೊಟ್ಟರೂ ಅದರಲ್ಲಿ ಒಂದು ಪಾಲನ್ನು ದಾಸನಿಗೆ ಕೊಡತೊಡಗಿದ ಸಂಜೀವ.

ತನ್ನ ತೊಡೆ, ತಿಕಗಳನ್ನು ದಾಸ ಮುಟ್ಟಿದಾಗ ಸುಮ್ಮನಿರುತ್ತಿದ್ದ ಸಂಜೀವ ಶಿಶ್ನದತ್ತ ಕೈ ಬಂದರೆ ಕೊಸರುತ್ತಿದ್ದ.

ಸಂಜೀವ ತನ್ನ ಮರ್ಮಾಂಗ ಮುಟ್ಟಿಸಿಕೊಳ್ಳುತ್ತಿಲ್ಲವೆಂದು ಕರಿಯಣ್ಣನ ಮುಂದೆ ತನ್ನ ದುಃಖ ತೋಡಿಕೊಂಡ ದಾಸ.

"ನಾಳೆ, ಸುಭದ್ರಾ ಕಲ್ಯಾಣ' ನಾಟಕ ಆಡ್ತಾರೆ. ಬೆಳಗಾಗೋವರ್ಗೂ ಸಂಜೀವಂಗೆ ನಾಟ್ಕ ತೋರ್ಸು. ನಿದ್ದೆ ಬರ್ದಿರೋ ಹಂಗೆ ನೋಡ್ಕೋ. ಇಕೋ ಈ ಎಂಟಾಣೆ ಇಟ್ಕೊ. ನಾಟಕದ ಮಧ್ಯೆ ಸಂಜೀವಂಗೆ ಪೆಪರ್‌ಮಿಂಟ್ ಕೊಡ್ಸು. ಮಾರನೇ ದಿನ ಕಬ್ಬಿನ ಗದ್ದೇಗೆ ಕರಕೊಂಡು ಹೋಗು. ನಿದ್ರೆಗೆಟ್ಟ ಸಂಜೀವನ್ನ ಮಲಗ್ಸಿ ನಿನ್ನ ಕೆಲ್ಸ ಮುಗಿಸ್ಕೊ" ಎಂದ ಕರಿಯಣ್ಣ.

ಊರಲ್ಲಿ ಹಿಂದಿನ ರಾತ್ರಿ ನಾಟಕವಿದ್ದುದರಿಂದ ಹಳ್ಳಿಯ ಶಾಲೆಗೆ ಅಘೋಷಿತ ರಜೆಯಿತ್ತು.

ಬೇಗ ಬೇಗ ಮನೆಗೆಲಸ ಮುಗಿಸಿಕೊಂಡ ದಾಸ ಸಂಜೀವನಿಗೆ "ನಿನ್ ಹೊತ್ಕೊಂಡು ಆಟ ಆಡಿಸ್ತೀನಿ ಗದ್ದೆಗೆ ಹೋಗ್ವಾ ನಡಿ" ಎಂದು ಆಸೆ ತೋರಿಸಿದ.

"ದಾಸನ ಜೊತೆ ನಾನೂ ಗದ್ದೆಗೆ ಹೋಗಿ ಬರ್ತೇನೆ" ಎಂದು ಅವ್ವಂಗೆ ಪೀಡಿಸಿದ. "ಇನ್ನೂ ನೀನು ಊಟ ಮಾಡಿಲ್ಲ. ಹೋಗೋದು ಬೇಡ" ಅಂದಳು ಅವ್ವ. "ನಾನು ದಾಸನ ಜೊತೆ ಬುತ್ತಿಕಟ್ಟಿಕೊಡು ಅಲ್ಲೇ ಊಟ ಮಾಡ್ತೇನೆ" ಎಂದ.

ಮಲ್ಲಾಜಮ್ಮಂಗೆ ಇಬ್ಬರು ಹೆಣ್ಣುಮಕ್ಕಾದ ಮೇಲೆ ಮಕ್ಕಳೇ ಆಗಿರಲಿಲ್ಲ. ತನ್ನ ವಂಶೋದ್ಧಾರಕ್ಕೆ ಗಂಡು ಹುಟ್ಟಲಿಲ್ವಲ್ಲ ಎಂದು ಬೆಟ್ಟದ ಹನುಮಪ್ಪನಿಗೆ ಹರಕೆ ಹೊತ್ತು ಮದುವೆಯಾದ ಹದಿನಾರು ವರ್ಷಗಳ ನಂತರ ಹಡೆದಿದ್ದಳು ಸಂಜೀವನನ್ನು. ಮಗನನ್ನು ಎಲ್ಲೆಂದರಲ್ಲಿಗೆ ಕಳಿಸುತ್ತಿರಲಿಲ್ಲ. ದಾಸ ಸಂಜೀವನನ್ನು ಜೋಪಾನದಿಂದ ಕರೆತರುತ್ತಾನೆನ್ನುವ ವಿಶ್ವಾಸದಿಂದ ಅವನೊಂದಿಗೆ ಗದ್ದೆಗೆ ಕಳಿಸಲು ಒಪ್ಪಿಕೊಂಡಳು. ಬರೋವಾಗ ಎಮ್ಮೆಗಾಗಿ ಹಸೀಹುಲ್ಲು ಕೊಯ್ದು ತರಲು ಹೇಳಿದಳು. ಹುಲ್ಲುಕೊಯ್ಯಲು ಗರಗಸದಂಥ ಹಲ್ಲುಗಳುಳ್ಳ ಕುಡುಗೋಲನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ದಾಸ ನಡೆದ.

ಗದ್ದೆಗೆ ಹೋದೊಡನೆ ದಾಸ ಮತ್ತು ಸಂಜೀವ ಮರಕೋತಿ ಆಡಿದರು. ಸಂಜೀವನನ್ನು ಓಡಾಡಿಸಿ ದಣಿಯುವಂತೆ ಮಾಡಿದ ದಾಸ ಬುತ್ತಿ ಬಿಚ್ಚಿ ಊಟ ಮಾಡಿಸಿದ.

ಹಿಂದಿನ ರಾತ್ರಿ ನಿದ್ರೆಗೆಟ್ಟಿದ್ದಲ್ಲದೆ ಅದೇ ಆಗ ಓಡಾಡಿ ದಣಿದಿದ್ದ ಸಂಜೀವನಿಗೆ ನಿದ್ರೆ ಆವರಿಸಿಕೊಂಡಿತು. ಊಟ ಮಾಡ ಮಾಡುತ್ತಲೇ ತೂಕಡಿಸಿದ ಅವನನ್ನು ಕಬ್ಬಿನ ಗದ್ದೆಯ ಮಧ್ಯೆ ಹೊತ್ತು ನಡೆದ ದಾಸ.

ಮಲಗಿದ ಸಂಜೀವನ ಚೆಡ್ಡಿ ಬಿಚ್ಚಿದ ದಾಸ ಶಿಶ್ನದ ಮೇಲೆ ಕೈ ಹಾಕಿದ. ನಿದ್ರೆಗಣ್ಣಲ್ಲೇ ತನ್ನೆರಡೂ ತೊಡೆಗಳನ್ನು ಕತ್ತರಿ ಹಾಕಿಕೊಂಡು ಅದರ ಮಧ್ಯೆ ಕೈಗಳನ್ನು ಸೇರಿಸಿಕೊಂಡು ಕುಡುಗೋಲಿನಾಕಾರದಲ್ಲಿ ಮಲಗಿದ.

ದಾಸನಿಗೆ ಸ್ವಲ್ಪ ಸಿಟ್ಟು ಬಂದು "ಎಷ್ಟು ಮಸ್ಕಾ ಹೊಡ್ಯೋದೊ ನಿಂಗೆ" ಎಂದು ವಟಗುಟ್ಟಿ ಸ್ವಲ್ಪ ಹೊತ್ತು ಬಿಟ್ಟ. ಸ್ವಲ್ಪ ಸಮಯದಲ್ಲಿ ಸಂಜೀವ ಪುನಃ

ಅಂಗಾತ ಮಲಗಿದಾಗ ದಾಸ ಮತ್ತೆ ಶಿಶ್ನಕ್ಕೆ ಕೈಹಾಕಿದ. ಈ ಬಾರಿ ಸಂಜೀವ ತನ್ನ ಕೈಯಿಂದ ದಾಸನ ಕೈಯುನ್ನು ಕೊಸರಿ ಕಿತ್ತೊಗೆದ. ದಾಸ ತಾಳ್ಮೆ ಕಳೆದುಕೊಳ್ಳತೊಡಗಿದ. ಬಿಡದೆ ಮತ್ತೆ ಕೈ ಹಾಕಿದಾಗ ಬಲಗಾಲಿನಿಂದ ಸಂಜೀವ ಒದ್ದ.

"ಇರ್ಲಿ ಅಂದಂಗೆಲ್ಲ ನಿಂದು ಬಾಳಾ ಆತು. ಇಷ್ಟ್ ದಿವ್ಸ ಹೆಗಲಮ್ಯಾಕೆ ಕೂರಿಸ್ಕಂಡಿದ್ದು ಸುಮ್ಕೇನ, ಬಾ ಇವತ್ ನಿನ್ ಬಿಡಾಕಿಲ್ಲ" ಎನ್ನುತ್ತ ಸಂಜೀವನ ಎರಡೂ ತೊಡೆಗಳನ್ನು ಅಗಲಿಸಿ ಅವನ್ನು ಕೈಗಳಿಂದ ಬಿಗಿಯಾಗಿ ಒತ್ತಿ ಹಿಡಿದು ಶಿಶ್ನಕ್ಕೆ ಬಾಯಿಯನ್ನು ಹಾಕಿಯೇ ಬಿಟ್ಟ. ಆಗಲೂ ಸಂಜೀವ ನಿದ್ರೆಗಣ್ಣಲ್ಲೇ 'ಯ್ಹೋ' ಎಂದು ತನ್ನೆರಡೂ ಕಾಲುಗಳನ್ನು ತನ್ನೆದೆಯತ್ತ ಮಡಚಿಕೊಂಡು ಜೋರಾಡಿ ಜಾಡಿಸಿ ಒದ್ದ. ಒದೆತ ನೇರವಾಗಿ ದಾಸನ ಬಾಯಿಗೆ ಬಿದ್ದಿತು. ಹಲ್ಲುಮುರಿದು ಬಾಯಲ್ಲಿ ರಕ್ತ ಹರಿಯತೊಡಗಿತು. ತುಟಿ, ಮೂಗುಗಳು ಊದಿಕೊಂಡಂತೆನಿಸಿ ಭಗಭಗ ಎನ್ನತೊಡಗಿದವು.

ದಾಸನಿಗೆ ಅದೆಲ್ಲಿಂದ ರೋಷ ಉಕ್ಕಿತೊ ಏನೊ "ಆ ನಂಗೇ ಒದೀತೀಯಾ ನಿನ್ನ ತಿಕಾನಕೇಯಾ", ಎಂದು ಅವಡುಗಚ್ಚುತ್ತ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕುಡಗೋಲನ್ನು ಸೆಳೆದುಕೊಂಡು ಸಂಜೀವನ ಶಿಶ್ನದ ಬುಡಕ್ಕೆ ಹಾಕಿ ಎಳೆದ.

ಸಂಜೀವ "ಅವ್ವೋ" ಎಂದು ಚೀರಿದ್ದು ಆಕಾಶ ಮುಟ್ಟಿತು. ಗದ್ದೆಗೆ ಮೇವು ಕೊಯ್ಯಲು ಬಂದಿದ್ದವರು ಭೀಕರ ಚೀತ್ಕಾರ ಕೇಳಿದೆಡೆಗೆ ಓಡಿಬಂದರು.

ದಾಸ ಓಟಕಿತ್ತಿದ್ದ. ಸಂಜೀವ ವಿಕಾರವಾಗಿ ಚೀರುತ್ತಿದ್ದ. ಅವನ ಶಿಶ್ನ ಪಕ್ಕಕ್ಕೆ ಬಿದ್ದಿತ್ತು.

"ನಮ್ಮ ದೇವಯ್‌ನೋರ ಮಗ ಸಂಜೀವ. ಅದ್ಯಾವ್ ಬೋಸುಡಿಮಗ ಹಿಂಗ್ ಮಾಡಿದ್ದು ಆ ಅರೀದ್ ಕೂಸ್ಗೆ" ಎಂದು ಸಂಜೀವನನ್ನು ಅಂಗಾತ ಎತ್ತಿಕೊಂಡ ಮಂಜ. ಮತ್ತೊಬ್ಬ ಬಾಳೆಎಲೆ ಹರಿದುಕೊಂಡು ಬಂದು ಅದರಲ್ಲಿ ಶಿಶ್ನವನ್ನು ಹಾಕಿಕೊಂಡ. "ಯಾರೋ ನಿಂಗ ಹಿಂಗ್ ಮಾಡಿದ್ದು" ಎಂದು ಕೇಳಿದ್ದಕ್ಕೆ ಸಂಜೀವ "ದಾಸ ದಾಸ" ಎಂದು ಬಡಿದುಕೊಳ್ಳುತ್ತಿದ್ದ.

"ಬೇವಾರ್ಸಿ ನನ್ನಮಕ್ಳು ಅಂತ ಕರುಣೆ ತೋರ್‌ಬಾರ್ದು ಯಾರ್ಗೂ" ಎನ್ನುತ್ತ ಓಡೋಡಿ ಬಂದರು.

ಸಂಜೀವನ ಆಕಾರ ನೋಡಿದ ಮಲ್ಲಾಜಮ್ಮ ಮೂರ್ಛೆ ಹೋದಳು. ದೇವಯ್ಯನ ಹೃದಯವೇ ಕಿವುಚಿಹೋಯಿತು. ಸಂಜೀವನನ್ನ ಹೊತ್ತು ತಂದವರು

"ಇದನ್ನು ಮಾಡಿದ್ದು ಆ ದಾಸ" ಎಂದು ಹೇಳಿದಾಗ "ಅವುನ್ ಇವತ್ತು ಹುಟ್‌ಲಿಲ್ಲ ಅನ್ನಿಸಿ ಬಿಡ್‌ಬೇಕು" ಎಂದ ದೇವಯ್ಯನ ಮತ್ತೊಬ್ಬ ಜೀತದಾಳು.

ದೇವಯ್ಯನಿಗೆ ಅದಾವುದೂ ಆಗ ಬೇಕಿರಲಿಲ್ಲ. ಮೊದಲು ತನ್ನ ಮಗನ ಪ್ರಾಣ ಉಳಿಯುವುದು ಬೇಕಿತ್ತು.

ಗೌಡರ ಮನೆಯ ರಾಜದೂತ್ ಸೈಕಲ್ ಮೋಟಾರ್ ಮೇಲೆ ಮಂಡ್ಯದ ಆಸ್ಪತ್ರೆಗೆ ಸಂಜೀವನನ್ನು ಒಯ್ದರು.

"ಈ ಕೇಸ್ ಸೀರಿಯಸ್ ಇದೆ. ಬೆಂಗಳೂರಿನ ವಿಕ್ಟೋರಿಯಾಕ್ಕೆ ಒಯ್ಯಿರಿ" ಎಂದು ಡಾಕ್ಟರ್ ಪ್ರಥಮ ಚಿಕಿತ್ಸೆ ಮಾಡಿದ.

ವಿಕ್ಟೋರಿಯಾದಲ್ಲಿ "ಬಹಳ ತಡವಾಗಿ ಬಂದಿರಿ. ಏನೂ ಮಾಡಲು ಸಾಧ್ಯವಿಲ್ಲ, ನಿಮ್ಮ ಮಗನ ಜೀವ ಉಳಿಸಬಹುದು. ಆಗಿರುವ ಗಾಯ ಮಾಯಿಸಬಹುದು. ಆದರೆ, ಪುನಃ ಶಿಶ್ನ ಜೋಡಿಸಲು ಮಾತ್ರ ಸಾಧ್ಯವಿಲ್ಲ" ಎಂದಾಗ ದೇವಯ್ಯ "ಅದ್ಯಾಕೆ ಹನುಮಪ್ಪ, ಬಲಗೈಯಿಂದ ಕೊಟ್ಟು ಎಡಗೈಯಿಂದ ಕಿತ್ಕೊಂಡೆ? ಅದೇನ ತೆಪ್ಪು ಮಾಡಿದ್ದೆ ನಿಂಗೆ ನಾನು? ನನ್ನ ವಂಸ ನಿರ್ವಂಸ ಆಗೋತಲ್ಲ...." ಎಂದು ಅಳತೊಡಗಿದ. ಸಂಜೀವ ಆಸ್ಪತ್ರೆಯಿಂದ ಮನೆಗೆ ವಾಪಸಾದ ಮೇಲೆ ಊರಿಗೆ ಊರೇ ಬಂದಿತು. ಮಲ್ಲಾಜಮ್ಮ ಹೆಂಗಸರಿಗೆಲ್ಲ ಸಂಜೀವನ ಚೆಡ್ಡಿ ಬಿಚ್ಚಿ ತೋರಿಸುತ್ತ ಎದೆ ಬಡಿದುಕೊಂಡು ಅಳತೊಡಗಿದಳು.

ದಿನಗಳೆದಂತೆ ಈ ಸುದ್ದಿ ಪಕ್ಕದ ಊರುಗಳಿಗೂ ಹಬ್ಬಿ ಅಲ್ಲಿಂದಲೂ ಜನ ಸಂಜೀವನನ್ನು ನೋಡಲು ಬರತೊಡಗಿದರು. ಸಂಜೀವ Zoo ನಲ್ಲಿಯ ಪ್ರಾಣಿಯಂತಾಗಿಬಿಟ್ಟ ಜನರ ಕಣ್ಣಿಗೆ.

ಚೆಡ್ಡಿ ಬಿಚ್ಚಲು ಒಲ್ಲೆನೆಂದರೂ ತಾಯಿ ಕೇಳುತ್ತಿರಲಿಲ್ಲ. "ದೂರ್‌ದೂರಿಂದ ಬಂದವ್ರೆ ಮನೆ ಹಾಳ ದಾಸ ಮಾಡಿರೋದ್ನ ನೋಡಾಕೆ. ತೋರ್ಸು ಮಗಾ" ಎನ್ನುತ್ತಿದ್ದಳು. ನೋಡಿದವರು ಮಲ್ಲಾಜಮ್ಮಳನ್ನು ತೆಕ್ಕೆಬಡಿದುಕೊಂಡು "ನಿನ್ನ ವಂಶಕ್ಕೆ ಇನ್ಯಾರು ಗತಿ?" ಎಂದು ಅಳುತ್ತಿದ್ದರು.

ಶಿಶ್ನವಿಲ್ಲದೆ ತನ್ನ ಜೀವನ ವ್ಯರ್ಥ ಎನಿಸತೊಡಗಿತು ಸಂಜೀವನಿಗೆ.

ಶಾಲೆಯಲ್ಲಿ ಮೇಷ್ಟ್ರುಗಳೂ ತಮ್ಮ ಪರಿಚಿತರಿಗೆ ಸಂಜೀವನ ಚೆಡ್ಡಿಯನ್ನು ಬಿಚ್ಚಿಸಿ ತೋರಿಸತೊಡಗಿದರು. ಸಂಜೀವ ಎಲ್ಲ ಹುಡುಗರೆದುರಿಗೆ ಚೆಡ್ಡಿ ಬಿಚ್ಚಿ ನಿಂತಾಗ ಇಡೀ ಕ್ಲಾಸು ಗೊಳ್ಳೆನ್ನುತ್ತಿತ್ತು. ಆಗ ಸಂಜೀವನಿಗೆ ತಾನು ಅಲ್ಲೇ ಸತ್ತು

ಹೋಗಬಾರದೇಕೆನಿಸುತ್ತಿತ್ತು. ಬಾಯಾರಿ, ಮುಖ ಕಪ್ಪಿಟ್ಟು, ಕೈಕಾಲುಗಳು ನಡುಗತೊಡಗುತ್ತಿದ್ದವು.

ಶಾಲೆ ಬಿಟ್ಟ ಮೇಲೆ ಮನೆಗೆ ಹೋಗುವಾಗ ಎಲ್ಲ ಹುಡುಗರಿಗೆ ಸಂಜೀವ ಮನರಂಜನೆಯ ಪ್ರಾಣಿಯಾದ.

ದೇವಯ್ಯನಿಗೆ ಮಗನ ಸಮಸ್ಯೆ ಗೊತ್ತಾಯಿತು. ಶಾಲೆಗೆ ಹೋಗೋದು ಬೇಡ ಎಂದು ಬಿಡಿಸಿದ. ಹೆಂಡತಿಗೆ "ಇನ್ಯಾರ್ ಬಂದ್ರೂ ಸಂಜೀವನಿಗೆ ಚೆಡ್ಡಿ ಬಿಚ್ಚೆಂದು ಹೇಳ್‌ಬೇಡ" ಎಂದು ತಾಕೀತು ಮಾಡಿದ.

ದಾಸನನ್ನು ಪೊಲೀಸರು ಬಂಧಿಸಿದ್ದರು. ವಿಚಾರಣೆ ನಡೆಯಿತು. ವಿಚಾರಣೆಯಲ್ಲಿ ಸಂಜೀವ ಸಾಕ್ಷಿ ನುಡಿದ. ಅಲ್ಲದೆ ಕೋರ್ಟಿನಲ್ಲೂ ಚೆಡ್ಡಿ ಬಿಚ್ಚಿ ತೋರಿಸಬೇಕಾಗಿ ಬಂದು ಅವನು ರೋಸಿ ಹೋಗಿದ್ದ. ಕೋರ್ಟ್ ದಾಸನಿಗೆ ಎಂಟು ವರ್ಷಗಳ ಶಿಕ್ಷಣ ವಿಧಿಸಿತು. ಅನಾಥ ದಾಸ ಅಪೀಲ್ ಮಾಡಿಕೊಳ್ಳದೆ ಜೈಲಿಗೆ ಹೋದ.

ಜೈಲಿನಲ್ಲಿ ದಾಸ ಕ್ಷೌರ ಮಾಡುವುದು ಕಲಿತು ನಿಪುಣನಾದ. ಕೈದಿಗಳಿಗೆ ಅವನೇ ಕ್ಷೌರ ಮಾಡುತ್ತಿದ್ದು, ಅವನ ಖಾತೆಯಲ್ಲಿ ಹಣ ಜಮಾ ಆಗುತ್ತಾ ಹೋಯಿತು.

ಜೈಲಿನಲ್ಲಿ ದಾಸನ ಸಲಿಂಗರತಿ ಉಲ್ಬಣಗೊಂಡಿತು. ಅಶ್ಲೀಲ ಜೋಕುಗಳನ್ನು ಕಲಿತ; ಅವನ್ನು ಸೃಷ್ಟಿಸುವುದನ್ನೂ ಕಲಿತ.

ಜೈಲಿನಿಂದ ಹೊರಬಿದ್ದಾಗ ದಾಸನಿಗೆ ಇಪ್ಪತ್ತೆರಡು ವರ್ಷಗಳು. ಕ್ಷೌರ ಮಾಡಿದ್ದಕ್ಕೆ ಜಮಾ ಆಗಿದ್ದ ಹಣವನ್ನು ಜೇಬಲ್ಲಿರಿಸಿಕೊಂಡು ಚನ್ನಪಟ್ಟಣ ಸಮೀಪದ ಮುದಗೆರೆ ಕ್ರಾಸ್‌ಗೆ ಬಂದ. ಕ್ರಾಸ್‌ನಲ್ಲಿ ಸಲೂನ್ ಇಲ್ಲದ್ದು ನೋಡಿ ತನ್ನ ವೃತ್ತಿಗೆ ತಕ್ಕ ಸ್ಥಳವೆಂದುಕೊಂಡ. ಪೆಟ್ಟಿಗೆಯಂಗಡಿಯಲ್ಲಿ ಸಲೂನ್ ಆರಂಭಿಸಿದ ದಾಸ ಅತಿ ಶೀಘ್ರ ಜನಪ್ರಿಯ ಕ್ಷೌರಿಕನಾದ. ದಾಸ ಒಳ್ಳೆ ಕ್ಷೌರ ಮಾಡುವುದರ ಜೊತೆಗೆ ತನ್ನ ಅಶ್ಲೀಲ ಜೋಕುಗಳಿಂದಲೂ ಗಿರಾಕಿಗಳನ್ನು ಆಕರ್ಷಿಸುತ್ತಿದ್ದ. ಪಡ್ಡೆ ಹುಡುಗರಿಗೆ ಅದೊಂದು ಕೇಂದ್ರಸ್ಥಾನವಾಯಿತು.

ಶಾಲೆ ಬಿಟ್ಟ ಸಂಜೀವನಿಗೆ ಎಮ್ಮೆಗಳನ್ನು ಕೊಡಿಸಿದ್ದರು. ದಾಸ ಬಿಡುಗಡೆಯಾದಾಗ ಸಂಜೀವನಿಗೆ ಹತ್ತೊಂಬತ್ತು ವರ್ಷಗಳು.

ಎಮ್ಮೆ ಕಾಯುವ ಹುಡುಗಿಯರು "ನಿಂದೂ ನಮ್ಮಂಗೇ ಸಾಪಾಗಿದೆಯಂತೆ?" ಎಂದು ಛೇಡಿಸುತ್ತಿದ್ದರು.

ತನ್ನದಲ್ಲದ ಅಪರಾಧಕ್ಕಾಗಿ ಸಿಕ್ಕ ಶಿಕ್ಷೆಯಲ್ಲಿ ಬದುಕುವುದು ಸಂಜೀವನಿಗೆ ರೂಢಿಯಾಗಿತ್ತು. ಮತ್ತೆ ಅವಮಾನ ಅನಿಸದಿರುವಷ್ಟು ಮನಸ್ಸು ಜಡ್ಡುಗಟ್ಟಿತ್ತು.

ಒಂದು ದಿನ ಸಂಜೀವನ ಮೂರು ಎಮ್ಮೆಗಳು ಕಳೆದುಹೋದವು. ಗದ್ದೆ, ಕೆರೆಗಳನ್ನು ಹುಡುಕತೊಡಗಿದ. ಊರುಗಳನ್ನು ಸುತ್ತಾಡಿ ಬರುವುದಾಗಿ ಹೇಳಿ ನಡೆದ ಸಂಜೀವ ಮುದಗೆರೆ ಕ್ರಾಸ್‌ಗೆ ಬಂದ. ಅಲ್ಲಿದ್ದ ಬಿದಿರುತಟ್ಟೆಯ ಚಹದಂಗಡಿಯಲ್ಲಿ ತಿಂಡಿ ತಿನ್ನಲು ಮರದ ಕೆಳಗೆ ಹಾಕಿದ ಕಲ್ಲಿನ ಬೆಂಚ್ ಮೇಲೆ ಕೂತ. ಆ ಚಹದಂಗಡಿ ಎದುರಿಗೇ ದಾಸನ ಸಲೂನ್ ಇತ್ತು. ದಾಸ ತನ್ನ ಕತ್ತಿ ಮಸೆದುಕೊಳ್ಳಲೆಂದು ಪೆಟ್ಟಿಗೆಯಂಗಡಿಯ ಬಾಗಿಲಿಗೆ ಜೋತು ಬಿಟ್ಟಿದ್ದ ಮಸೆದೊಗಲಿನ ಹತ್ತಿರ ಬಂದ. ಮಸೆಯುತ್ತಿದ್ದ ದಾಸನ ದೃಷ್ಟಿ ಎದುರಿಗೆ ಹೋಯಿತು. "ಅರೇ ಅವ್ನು ಸಂಜೀವ್ನಂಗೆ ಕಾಣ್ತಿದಾನಲ್ವೆ?" ಎಂದು ಪ್ರಶ್ನಿಸಿಕೊಂಡ.

"ಸಂಜೀವ್ನಂಗೆ ಏನ್ ಬಂತು, ಅವ್ನೆ ಸಂಜೀವ" ಎಂದುಕೊಂಡ. ಒಳಬಂದ ದಾಸ ಅಲ್ಲಿದ್ದ ಗಿರಾಕಿಗಳಿಗೆ ಹೇಳಲು ಹೊಸ ಜೋಕ್ ಒಂದು ಸಿಕ್ಕಿತೆಂದುಕೊಂಡ. ಪೊಲೀಸರಿಂದ ಬೆಂಡೆತ್ತಿಸಿಕೊಂಡು ಎಂಟು ವರ್ಷ ಜೈಲಲ್ಲಿ ಕೊಳೆಯುವಂತೆ ಮಾಡಿದನಲ್ಲ ಈ ಸಂಜೀವ ಎಂದು ಹಲ್ಲು ಕಡಿದುಕೊಂಡ. ದಾಸನ ಮುಖದಲ್ಲಿ ತನ್ನ ಅಪರಾಧದ ಬಗ್ಗೆ ಪಶ್ಚಾತ್ತಾಪದ ಸುಳಿವೇ ಇರಲಿಲ್ಲ.

"ಸಾಮಾನು ಇಲ್ದಿದ್ರೂ ಗಂಡ್ಸು ಬದುಕಿರ್ತಾನೆಯೆ?" ಎಂದು ಗಿರಾಕಿಯೊಬ್ಬನಿಗೆ ಪ್ರಶ್ನೆ ಹಾಕಿದ.

"ಅದೆಂಗೆ ಸಾಧ್ಯ? ನಪುಂಸಕನಿಗೆ ಕೂಡ ಶಾಸ್ತ್ರಕ್ಕೆ ಸ್ವಲ್ಪ ನೇತಾಡ್‌ತಿರ್‌ತ್ತೈತೆ" ಎಂದ.

"ಹಂಗಾರೆ ನಿಮಗೆ ಆ ವಿಚಿತ್ರ ಸತ್ಯಾನ ನಾನ್ ತೋರಿಸ್ತೇನೆ ಹೊರಗ್ ಬನ್ನಿ" ಎಂದು ಕರೆದ. "ಅಗೋ ಅಲ್ಲಿ ಚಹ ಕುಡೀತಾ ಕೂತವ್ನಲ್ಲ ಅವನ್ಗೇ ಸಾಮಾನು ಇಲ್ದಿರೋದು" ಎಂದ ದಾಸ.

"ಅದೆಂಗಯ್ಯ ನೀನ್ ಹೇಳ್ತಿ ಇಲ್ಲ ಅಂತ?" ಎಂದ ಗಿರಾಕಿ.

"ನಂಗೆ ಮುಖಾ ನೋಡಿದ್ರೆ ಸಾಮಾನು ಎಂಗೈತೆ ಅಂತೆ ಗೊತ್ತಾತದೆ, ಏನ್ ಅನ್ಕಂಡಿರಿ ನನ್ನ?" ಎಂದ ದಾಸ "ಬೇಕಾದ್ರೆ ಹೋಗಿ ಅವುನ್ನ ಕೇಳ್ರಿ, ಅವುಂಗೆ ಸಾಮಾನು ಐತೆ ಅಂತಾದ್ರೆ, ಈ ನನ್ನ ಸೆಲೂನನ್ನೇ ನಿಂಗೆ ಬಿಟ್ ಹೋಗ್ತೀನಿ" ಎಂದ.

ದಾಸನ ಗಿರಾಕಿ ಸಂಜೀವನ ಬಳಿಗೆ ಬಂದು ನಿಮ್ದು ಯಾವ ಊರು, ಏಕೆ ಬಂದದ್ದು ಎನ್ನುವ ಪ್ರಶ್ನೆಗಳನ್ನು ಕೇಳುತ್ತ "ನಿಂಗೆ ಸಾಮಾನು ಇಲ್ವಂತೆ ಹೌದಾ?" ಎಂದಾಗ ಸಂಜೀವನಿಗೆ ಎದೆ ಝಲ್ ಎಂದಿತು! ಇಷ್ಟು ದೂರದೂರಿನಲ್ಲಿ ತನ್ನ ವಿಷ್ಯ ತಿಳ್ಕಂಡೋರು ಯಾರಿದಾರೆ ಎನ್ನುವ ಕುತೂಹಲ ಉಕ್ಕಿಬಂದಿತು.

"ಹೌದು ನಂಗೆ ಸಾಮಾನಿಲ್ಲದ್ದು ನಿಜ. ಆದ್ರೆ ಈ ವಿಷ್ಯಾನ ನಿಮ್ಗೆ ಹೇಳಿದ್ದು ಯಾರು? ದಯಮಾಡಿ ಅವರ್ನ ತೋರ್ಸಿ" ಎಂದ ಸಂಜೀವ.

"ನಮ್ಮ ದಾಸ ನಿಜವಾಗ್ಲೂ ಬುದ್ಧಿವಂತ. ಅದೆಂಗೆ ಕಂಡು ಹಿಡಿದ್‌ಬುಟ್ಟ ನೋಡು ನಿಂಗೆ ಇಲ್ದಿರೋದ್ನ!" ಎಂದು ಆಶ್ಚರ್ಯವ್ಯಕ್ತಪಡಿಸಿದ ಗಿರಾಕಿ.

ದಾಸನ ಹೆಸರು ಕೇಳುತ್ತಲೇ ಸಂಜೀವನ ಕಿವಿಗಳು ನಿಗುರಿದವು. ಸಲೂನ್ ಮುಂದೆ ಟೊಂಕಕ್ಕೆ ಕೈಗಳನ್ನಿಟ್ಟುಕೊಂಡು ನಗುತ್ತಿದ್ದ ದಾಸ. ದಾಸನನ್ನು ನೋಡಿದ್ದೇ ತಡ ಗುಡ್ಡದಳ್ಳಿ ದಾರಿಯತ್ತ ಬಿರಬಿರ ನಡೆದುಹೋದ ಸಂಜೀವನನ್ನು ನೋಡಿ ದಾಸ ಗಹಗಹಿಸಿದ. "ಪುಕ್ಲ ಮುಂಡೇದು, ಓಡಿಹೋಯ್ತು. ಮತ್ತೆ ಇತ್ಲಾಗೆ ತಲೆಯಿಟ್ಟರೆ ಅಲ್ವಾ?" ಎಂದುಕೊಂಡ.

ಮಾರನೇ ಬೆಳಗ್ಗೆ ಕಟ್ಟೆ ಹತ್ತಿರದ ಬಿದಿರು ಮೆಳೆಯ ಬಳಿ ಸಿಳ್ಳು ಹಾಕುತ್ತ ಮಧ್ಯೆ ಮಧ್ಯೆ ಬೀಡಿ ಎಳೆಯುತ್ತ ದಾಸ ಕಕ್ಕಸಿಗೆಂದು ನಡೆದ. ದಾಸ ಮಲ ವಿಸರ್ಜಿಸುತ್ತಿರುವಾಗಲೇ ಬೆನ್ನ ಹಿಂದೆ "ಎಲಾ ದಾಸಾಟಿ" ಎನ್ನುವ ಕರ್ಕಶ ಧ್ವನಿ ಕೇಳಿ ದಿಗಿಲಿನಿಂದ ಹಿಂದಿರುಗಿದಾಗ ಸಂಜೀವ ಮಚ್ಚೆತ್ತಿ ನಿಂತಿದಾನೆ! ಇನ್ನೇನು ತನ್ನ ರುಂಡ ಉರುಳುತ್ತದೆಂದು ತಪ್ಪಿಸಿಕೊಳ್ಳಲು ಎದ್ದ. ರುಂಡಕ್ಕೆ ಗುರಿಯಿಟ್ಟ ಮಚ್ಚು ಪಕ್ಕೆಯ ಕೆಳಗಿನಿಂದ ಹೊಟ್ಟೆಯೊಳಕ್ಕೆ ಹೊಕ್ಕಿತು. ಚೀರುತ್ತಾ ತಾನೇ ವಿಸರ್ಜಿಸಿದ ಮಲದಲ್ಲಿ ದಾಸ ಹೊರಳಾಡತೊಡಗಿದ. ಸಂಜೀವ ಓಟಕಿತ್ತಿದ್ದ. ಬಹಿರ್ದೆಸೆಗಾಗಿ ಬಂದಿದ್ದ ಇತರರು ಓಡಿ ಬಂದರು. ದಾಸನನ್ನು ರಕ್ತದ ಮಡುವಿನಲ್ಲಿ ನೋಡಿ "ಕೊಲೆ, ಕೊಲೆ, ಹಿಡೀರಿ ಅವುನ್ನ" ಎಂದು ಕೂಗಿದರು.

ಬೆನ್ನಟ್ಟಿದ ಜನ ಸಂಜೀವನನ್ನು ಹಿಡಿದರು. ಗುಂಪಿನಲ್ಲಿದ್ದ ಹಿರಿಯನೊಬ್ಬ "ಯಾಕ್ಲಾ ಅವುನ್ನ ಕೊಂದೆ?" ಎಂದ.

ಎಲ್ಲರೆದುರಿಗೆ ಸಂಜೀವ ತನ್ನ ಚೆಡ್ಡಿ ಬಿಚ್ಚಿ ನಿಂತ!

"ನನ್ನ ಶಿಶ್ನ ಕತ್ತರಿಸಿದ ಇವುನ್ನ ಸುಮ್ನೆ ಬಿಡು ಅಂತೀರಾ?" ಎಂದು ಪ್ರಶ್ನಿಸಿ ತನ್ನ ಕಥೆಯನ್ನೆಲ್ಲಾ ಹೇಳಿದ.

ಹಿಡಿದವರಿಗೆ ಸಂಜೀವನ ಬಗೆಗೆ ಕರುಣೆ ಬಂದಿತು. ತಕ್ಕ ಶಾಸ್ತಿಯನ್ನೇ ಮಾಡಿದ್ದಾನೆ ಎನಿಸಿತು. "ಆಯ್ತು ನಿನ್ನ ಪೋಲೀಸರಿಗೆ ಹಿಡಿದುಕೊಡೋಲ್ಲ ತಪ್ಪಿಸಿಕೊ ಹೋಗು" ಎಂದು ಬಿಟ್ಟುಬಿಟ್ಟರು.

ಮೈತುಂಬ ಮಲ ಮೆತ್ತಿಕೊಂಡಿದ್ದ ದಾಸನನ್ನ ಕೂಡಲೇ ಯಾರೂ ಮುಟ್ಟಲಿಲ್ಲ. ಒಂದು ಗೋಣಿ ತಟ್ಟನ್ನು ಅವನ ಮೈಮೇಲೆ ಹಾಕಿ ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆ ಮಾಡಿದರು. ಮಾರ್ಗ ಮಧ್ಯದಲ್ಲೇ ದಾಸ ಕೊನೆಯುಸಿರೆಳೆದ.

ಸಂಜೀವನಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿದವರೊಂದಿಗೆ ಹಗೆತನ ಇರುವವರು ಪೋಲೀಸರಿಗೆ ಅಪರಾಧಿ ತಪ್ಪಿಸಿಕೊಳ್ಳಲು ಇಂಥಿಂಥವರು ಸಹಾಯ ಮಾಡಿದರು ಎಂದು ದೂರು ನೀಡಿದರು.

ಸಂಜೀವನನ್ನು ಪಾರುಮಾಡಲು ಹೋಗಿ ಕೇಸ್‌ನಲ್ಲಿ ಸಿಕ್ಕಿಹಾಕಿಕೊಂಡವರನ್ನು ಬಿಡಿಸಿಕೊಡಬೇಕೆಂದು ಮುದಗೆರೆಯ ಮುಂದಾಳುಗಳು ಬಂದು ನನಗೆ ಕೇಸ್ ಕೊಟ್ಟಾಗಲೇ ಈ ಕಥೆ ನನಗೆ ತಿಳಿದದ್ದು.

ಅದೇ ಸಮಯಕ್ಕೆ ಸಂಜೀವನ ತಂದೆ, ತಾಯಿಗಳು ಬಂದು, "ಲಾಯರ್‍ರೇ ನಮ್ಮ ಮಗನ್ನ ಬಿಡಿಸ್‌ಬೇಡಿ. ಜೈಲಿನಲ್ಲಿದ್ದರೇ ಅವ್ನು ಸುಖವಾಗಿರ್ತಾನೆ. ಊರಾಗೆ ಜನ ಅವುನ್ ಮನಸ್ಗೆ ಹಿಂಸೆ ಕೊಡ್ತಾರೆ. ಉಳಿದೋರ್‍ನ ಬಿಡ್ಸಿ. ಆದರೆ ನಮ್ಮಗಂಗೆ ಶಿಕ್ಷೆ ಆಗ್ಲಿ" ಎಂದು ಅಳುತ್ತ ನಿಂತಾಗ ಶಾಕ್ ಆಗಿ ತತ್ತರಿಸಿದೆ!

ಕೇಸ್ ಗೆದ್ದುಕೊಟ್ಟೆ. ಫೀ ಮುಟ್ಟಲು ಮನಸ್ಸಾಗಲಿಲ್ಲ. ಸಂಜೀವ ನನ್ನ ಕಾಲು ಹಿಡಿದು ಅಳುತ್ತ "ನನ್ನನ್ನು ಮತ್ತೆ ಹಳ್ಳೀಗೆ ಕಳಿಸ್ಬೇಡೀ ಸಾರ್" ಎಂದು ಗೋಳಾಡಿದ. ನನಗೆ ಗೊತ್ತಿರುವ ಕಾರ್ಖಾನೆಯ ಕಾರ್ಮಿಕರ ಮುಖಂಡನಿಗೆ ಹೇಳಿ ಸಂಜೀವನಿಗೆ ಬೆಂಗಳೂರಲ್ಲೇ ಕೆಲಸ ಕೊಡಿಸಿದೆ.

ಸಂಜೀವ ಸ್ಫುರದ್ರೂಪಿ ಯುವಕನಾಗಿದ್ದುದರಿಂದ ಅವನು ವಾಸಿಸುತ್ತಿದ್ದ ರೂಮಿನ ಪಕ್ಕದ ಮನೆಯ ಹುಡುಗಿ ಅವನನ್ನು ಪ್ರೇಮಿಸಲಾರಂಭಿಸಿದಳು. ಇದನ್ನು ತಿಳಿದುಕೊಂಡ ಆ ಹುಡುಗಿಯ ತಂದೆ "ನಿಮ್ಮ ಊರಿನ ವಿಳಾಸ ಕೊಡಿ, ನಿಮ್ಮ ತಂದೆಯನ್ನು ವಿಚಾರಿಸಿ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ಯೋಚಿಸಿದ್ದೇನೆ" ಎಂದು ಸಂಜೀವನಿಗೆ ಹೇಳಿದ.

ಬೆಳಗಾವುದರಲ್ಲಿ ಸಂಜೀವ ಆ ರೂಮನ್ನು ಖಾಲಿ ಮಾಡಿದ್ದ. ಅಷ್ಟೇ ಅಲ್ಲ ತಾನು ಕೆಲಸ ಮಾಡುತ್ತಿದ್ದ ಕಾರ್ಖಾನೆಯನ್ನು ಬಿಟ್ಟು ಹೋಗಿದ್ದ. ಇಂದಿಗೆ 16 ವರ್ಷಗಳಾದವು, ಸಂಜೀವ ನನ್ನಲ್ಲಿಗೆ ಮತ್ತೆ ಬಂದಿಲ್ಲ.

68

ಪೊಲೀಸ್ ದರ್ಪಕ್ಕೆ ಮಣ್ಣು ಮುಕ್ಕಿಸಿದ ವಕೀಲರು

ಇಡೀ ದೇಶ ಎಮರ್ಜೆನ್ಸಿಯ ವಿರುದ್ಧ ಮತ ನೀಡಿದಾಗ ಕರ್ನಾಟಕ ಕಾಂಗ್ರೆಸ್ ಅನ್ನು ತನ್ನ ಮಡಿಲಲ್ಲಿಟ್ಟುಕೊಂಡು ಕಾವು ಕೊಟ್ಟಿತ್ತು. ಇದರ ದುರ್ಲಾಭ ಪಡೆಯಲು ದುಷ್ಟ ಯತ್ನ ನಡೆಸಿತು ಕಾಂಗ್ರೆಸ್. ಗುಂಡೂರಾವ್ ಸರ್ಕಾರ ರೈತರ ರಕ್ತವನ್ನು ರಸ್ತೆಗೆ ಹರಿಸಿದ್ದಕ್ಕೆ ಕೇವಲ ರೈತ ಸಮುದಾಯ ಮಾತ್ರ ಕೆಂಡಕಾರಲಿಲ್ಲ; ರೈತರ ಬೇರಿನಿಂದ ಚಿಗಿತು ಪಟ್ಟಣಗಳಲ್ಲಿ ಟೊಂಗೆಗಳನ್ನು ಚಾಚಿಕೊಂಡಿದ್ದ ಮಧ್ಯಮ ವರ್ಗವೂ ಸರ್ಕಾರದ ವಿರುದ್ಧ ತನ್ನ ತೀವ್ರ ಪ್ರತಿಭಟನೆ ತೋರತೊಡಗಿತು.

ಗುಂಡೂರಾವ್ ಸರ್ಕಾರದಲ್ಲಿ ಮೆರೆದವರೆಂದರೆ ಅಧಿಕಾರಶಾಹಿಗಳು ಮತ್ತು ಸರ್ಕಾರಿ ನೌಕರರು. ನರಗುಂದದಲ್ಲಿ ಪೊಲೀಸ್ ಗುಂಡಿಗೆ ಬಲಿಯಾದ ರೈತನ ಸಮಾಧಿಗೆ ಶ್ರದ್ಧಾಂಜಲಿ ಸಲ್ಲಿಸಿದ ರೈತರ ಮನಸ್ಥಿತಿಯನ್ನು ಅರಿತುಕೊಳ್ಳುವಷ್ಟು, ಸ್ಪಂದಿಸುವಷ್ಟು ಸಂವೇದನಾಶೀಲರಾಗಿರಲಿಲ್ಲ ಗುಂಡೂರಾವ್. ರೈತರನ್ನು ಚಂಬಲ್ ಡಾಕುಗಳಂತೆ ಕೊಚ್ಚಿ ಹಾಕಿದ ಪೊಲೀಸರ ಮೇಲೆ ಯಾವುದೇ ವಿಚಾರಣೆ, ಕ್ರಮ ಜರುಗಿಸಲಿಲ್ಲ. ಇದಕ್ಕೆ ವಿರುದ್ಧವಾಗಿ ಹೋರಾಟನಿರತ ರೈತರ ಮೇಲೆ ಮೊಕದ್ದಮೆಗಳನ್ನು ಹೂಡಿ ಕೋರ್ಟ್‌ಗೆ ಅಲೆದಾಡಿಸತೊಡಗಿದ್ದರು ಗುಂಡೂರಾವ್.

ಪ್ರಧಾನವಾಗಿ ಗ್ರಾಮೀಣ ಬುದ್ಧಿಜೀವಿಗಳಾದ ವಕೀಲರು ಸರ್ಕಾರ, ಪೊಲೀಸು ಮತ್ತು ಅಧಿಕಾರಶಾಹಿಗಳ ಬಗ್ಗೆ ತಿರಸ್ಕಾರ ಭಾವ ಬೆಳೆಸಿಕೊಂಡಿದ್ದರು. ಅತ್ತ ರೈತರ ನೆತ್ತರಿನ ನೆಣ ಮೆಂದ ಪೊಲೀಸ್ ಇಲಾಖೆ ಕ್ರೌರ್ಯದ ಅಪ್ಪಟ ಪ್ರತೀಕಗಳನ್ನು ಹುಟ್ಟುಹಾಕಿತ್ತು. ನಿರುದ್ಯೋಗ ಸಮಸ್ಯೆಯ ತೀವ್ರತೆಯಿಂದ ಬಳಲಿದ್ದ, ಸರ್ಕಾರಿ ಕೆಲಸ ಸಿಗದ ಹಲವಾರು ಯುವಕರು ವಕೀಲಿ ವೃತ್ತಿಯ ಆಶ್ರಯಕ್ಕೆ ಬಂದಿದ್ದರು. ಅವರಲ್ಲಿ ಪ್ರಜ್ಞೆ, ವಿದ್ಯೆ, ಪಾಂಡಿತ್ಯ ಎಲ್ಲ ಇದ್ದವು. ಅವುಗಳ ಅಭಿವ್ಯಕ್ತಿಗೆ ಸೂಕ್ತ ಅವಕಾಶಗಳು ಇರಲಿಲ್ಲ. ಇದರಿಂದಾಗಿ ವಕೀಲರ ಸಮುದಾಯದಲ್ಲಿ ಆಳವಾದ ಅತೃಪ್ತಿ ಬೇರೂರಿತ್ತು. ಒಂದು ಕಿಡಿ ಬಿದ್ದರೂ ಸಾಕು ಭುಗಿಲ್ ಎನ್ನುವಂಥ ಸ್ಥಿತಿ ತಲುಪಿತ್ತು. ಹೀಗಾಗಿ ಸರ್ಕಾರದ ವಿರುದ್ಧ ಬಂಡೇಳುವ ರೈತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ದಲಿತರು ಹೀಗೆ ಎಲ್ಲರಿಗೆ ತನ್ನ ಅನುಕಂಪ ತೋರಿಸುತ್ತಿತ್ತು ಮತ್ತು ಸಾಧ್ಯವಿದ್ದ ಸಹಾಯವನ್ನೂ ಮಾಡುತ್ತಿತ್ತು ವಕೀಲರ ಸಮುದಾಯ.

ಕೆಂಪೇಗೌಡ ರಸ್ತೆಯಲ್ಲಿರುವ ಕಾವೇರಿ ಬಿಲ್ಡಿಂಗ್‌ನಲ್ಲಿ ಪೊಲೀಸ್ ಜಾಗೃತ ದಳಕ್ಕೆ ಸಂಬಂಧಿಸಿದ ಕೆಲವು ಕಚೇರಿಗಳು ಇದ್ದವು.

ಆಫೀಸ್ ಆರಂಭಗೊಳ್ಳುವ ವೇಳೆಯಲ್ಲಿ ಕಾವೇರಿ ಬಿಲ್ಡಿಂಗ್ ಆವರಣದ ಒಳಕ್ಕೆ ಪ್ರವೇಶಿಸಲು ವಾಹನಗಳ ನೂಕು ನುಗ್ಗಲು ಜಾಸ್ತಿಯಿರುತ್ತದೆ. ಒಂದು ದಿನ ಇಂಥ ವಾಹನಗಳ ಭರಾಟೆಯ ಸಮಯದಲ್ಲಿ ವಕೀಲರ ಕಾರೊಂದು ಕಾವೇರಿ ಬಿಲ್ಡಿಂಗ್ ಗೇಟ್ ಪ್ರವೇಶಿಸುತ್ತಿತ್ತು. ಅದರ ಹಿಂದೆಯೇ ಪೊಲೀಸ್ ವಾಹನವೊಂದು ಬರುತ್ತಿತ್ತು. ವಕೀಲರ ಕಾರಿನ ಮುಂದೆ ಬಹಳಷ್ಟು ವಾಹನಗಳು ಇದ್ದುದರಿಂದ ವಕೀಲರ ಕಾರು ತೀರಾ ಸಾವಧಾನವಾಗಿ ಚಲಿಸುತ್ತಿತ್ತು. ಹಿಂದಿನಿಂದ ಪೊಲೀಸ್ ವಾಹನದ ಡ್ರೈವರ್ ಕಿವಿಗಡಚಿಕ್ಕುವಂತೆ ಹಾರ್ನ್ ಮಾಡುತ್ತಿದ್ದ. "ಮುಂದೆ ಹೋಗಲು ಜಾಗವೇ ಇಲ್ಲ, ನೀನು ಹಾರ್ನ್ ಮಾಡಿದರೆ ನಾವೇನು ಮಾಡುವುದು?" ಎನ್ನುವಂತೆ ವಕೀಲರ ಕಾರು ತನ್ನ ಪಾಡಿಗೆ ತಾನಿತ್ತು, ಯಾವ ವಿಧದ ತರಾತುರಿ ತೋರದೆ. ಪೊಲೀಸ್ ವಾಹನದಲ್ಲಿದ್ದ ಅಧಿಕಾರಿಗೆ ಕೋಪ ನೆತ್ತಿಗೇರಿತು. ಏನೇನೋ ಕಿರುಚಿದ. ಆಗಲೂ ವಕೀಲರ ಕಾರಿನ ಗತಿ ಬದಲಲಿಲ್ಲ. ತಾಳ್ಮೆಗೆಟ್ಟ ಪೊಲೀಸ್ ಅಧಿಕಾರಿ ತನ್ನ ವಾಹನದಿಂದ ಇಳಿದು ಬಂದು ವಕೀಲರ ಕಾರಿನ ಬಾಗಿಲನ್ನು ಬಡಿಯತೊಡಗಿದ. ಕಾರಿನ ಹಿಂದಿನ ಸೀಟ್‌ನಲ್ಲಿ ಕೂತಿದ್ದ ವಕೀಲರು ಕೆಳಗಿಳಿದು, "ಅದೇನ್ರೀ ಹಾಗೆ ಮ್ಯಾನರ್ಸ್ ಇಲ್ದೆ ಕಿರಿಚ್ತಾ ಇದೀರಿ? ನಾವು ಬೇಕೂ ಅಂತ ನಿಂತಿದೇವಾ? ಜಾಗ ಸಿಕ್ಕರೆ ತಾನೆ ನಾವು ಮುಂದೆ ಹೋಗೋದು" ಎಂದರು.

ಇದರಿಂದ ಮತ್ತಷ್ಟು ಕೆರಳಿದ ಪೊಲೀಸ್ ಅಧಿಕಾರಿ ಅಸಹ್ಯವಾಗಿ, ಅವಾಚ್ಯ ಮಾತುಗಳಿಂದ ಒಳಗಿದ್ದ ವಕೀಲರಿಗೆ ಬೈಯತೊಡಗಿದ. ಮತ್ತು ತನ್ನ ಕೈಯಲ್ಲಿದ್ದ ಪೊಲೀಸ್ ದಂಡದಿಂದ ಕಾರಿನ ಕಿಟಕಿಯ ಗಾಜನ್ನು ಒಡೆಯಲು ಕೈ ಎತ್ತಿದ. ಕಾರಿನ ಮೇಲೆ ದಾಳಿ ಮಾಡಿಬಿಡುತ್ತಾನೆ ಈ ಪೊಲೀಸ್ ಎಂದುಕೊಂಡ ವಕೀಲ ಪೊಲೀಸ್ ಅಧಿಕಾರಿಯ ಕೈಯನ್ನು ಹಿಡಿದುಕೊಂಡ. ವಕೀಲನಿಗೆ ಹೊಡೆಯಲು ಪೊಲೀಸ್ ಅಧಿಕಾರಿ ಮತ್ತೊಂದು ಕೈ ಎತ್ತಿದಾಗ ಆ ಕೈಯನ್ನೂ ಹಿಡಿದುಕೊಂಡ. ಇಬ್ಬರ ಕೈಗಳೂ ಮಿಲಾಯಿಸಿದವು. ಕಾರೊಳಗಿದ್ದ ಇನ್ನು ಇಬ್ಬರು ವಕೀಲರು ಇಳಿದು ಬಂದು ಪೊಲೀಸ್ ಅಧಿಕಾರಿಯ ದಾಳಿಯನ್ನು ಪ್ರತಿರೋಧಿಸಿದರು. ಈ ಜಗ್ಗಾಟದಲ್ಲಿ ಪೊಲೀಸ್ ಅಧಿಕಾರಿಯ ಹೆಸರಿನ ಪಟ್ಟಿ, ಸ್ಟಾರ್ ಮತ್ತು ಹ್ಯಾಟ್‌ಗಳು ಕಿತ್ತುಬಂದವು.

ತನ್ನ ತಾಳ್ಮೆಗೇಡಿತನದಿಂದ ಕಾಲು ಕೆದರಿ ಜಗಳ ತೆಗೆದ ಅಧಿಕಾರಿ ಎನ್. ಸೋಮಶೇಖರ್, ಎಸಿಪಿ ಎನ್ನುವುದು ಗೊತ್ತಾಯಿತು.

ಈ ಜಗಳದ ನಂತರ ವಕೀಲರು ಕೋರ್ಟ್‌ಗೆ ಹೋದರು. ತಮ್ಮ ಸಹೋದ್ಯೋಗಿಗಳ ಮುಂದೆ ಪೊಲೀಸ್ ಅಧಿಕಾರಿಯ ಉದ್ಧಟ ವರ್ತನೆಯ ಬಗ್ಗೆ ವಿವರಿಸಿ ಕಂಪ್ಲೇಂಟ್ ನೀಡುವುದಾಗಿ ಮಾತಾಡತೊಡಗಿದರು.

ಇತ್ತ ಎಸಿಪಿ ಸೋಮಶೇಖರ್ ಆ ಮೂವರು ವಕೀಲರ ಮೇಲೆ ಠಾಣೆಯಲ್ಲಿ ಕಂಪ್ಲೇಂಟ್ ದಾಖಲು ಮಾಡಿದ. ಈ ಸುದ್ದಿ ತಕ್ಷಣವೇ ವಕೀಲರಿಗೆ ತಿಳಿಯಿತು.

ಎಸಿಪಿ ಸೋಮಶೇಖರ್ ದಾಳಿಯನ್ನು ಪ್ರತಿರೋಧಿಸಿದ ಆ ಮೂವರು ವಕೀಲರು: ಪ್ರೊ. ಪುಟ್ಟಸ್ವಾಮಿ, ಜಿ.ಎಸ್. ವಿಶ್ವೇಶ್ವರ ಮತ್ತು ವಸಂತಕುಮಾರ್. ಈ ಮೂವರ ಮೇಲೆ ಎಸಿಪಿ ಸೋಮಶೇಖರ್ ಕೈ ಮಾಡಿದ್ದಾನೆಂದು ತಿಳಿಯುತ್ತಲೇ ಕೋರ್ಟ್ ಕಲಾಪಗಳನ್ನು ಸ್ಥಗಿತಗೊಳಿಸಿ ವಕೀಲರೆಲ್ಲ ಒಂದೆಡೆ ಸೇರಿದರು.

"ಮೊದಲು ಜಗಳ ತೆಗೆದು ದಾಳಿ ನಡೆಸಿದ್ದು ಸೋಮಶೇಖರ್. ಅವನೇ ಮೊದಲು ಹೋಗಿ ಠಾಣೆಯಲ್ಲಿ ಕಂಪ್ಲೇಂಟ್ ರಿಜಿಸ್ಟರ್ ಮಾಡಿಸಿದ್ದಾನೆ. ಇದು ಪೊಲೀಸ್ ದುರ್ಬುದ್ಧಿ. ಕೂಡಲೇ ನಾವು ಕಂಪ್ಲೇಂಟ್ ರಿಜಿಸ್ಟರ್ ಮಾಡಿಸದಿದ್ದರೆ ಸಾರ್ವಜನಿಕರೆದುರು ನಗೆಪಾಟಲಿಗೆ ಈಡಾಗಬೇಕಾಗುತ್ತದೆ" ಎಂದರು ಒಬ್ಬ ಸೀನಿಯರ್ ಲಾಯರ್.

ಕಂಪ್ಲೇಂಟ್ ಅನ್ನು ಡ್ರಾಫ್ಟ್ ಮಾಡಿ ರಿಜಿಸ್ಟರ್ ಮಾಡಿಸಿ ಬರುವ ಜವಾಬ್ದಾರಿಯನ್ನು ನನಗೆ ಮತ್ತು ಇತರ ಆರು ಜನ ವಕೀಲರಿಗೆ ಕೊಡಲಾಯಿತು.

ಕಂಪ್ಲೇಂಟ್ ಅನ್ನು ಠಾಣೆಯಲ್ಲಿ ಸ್ವೀಕರಿಸಲಿಲ್ಲ. ವಾದ ವಾಗ್ವಾದ ನಡೆಯಿತು. ಕೊನೆಗೆ ಕಮೀಷನರ್‌ಗೆ ಫೋನ್ ಮಾಡಿದೆವು. "ಠಾಣೆಗಳು ಪೊಲೀಸರ ಕಾಟೇಜ್‌ಗಳಲ್ಲ" ಎಂದು ಏರು ಧ್ವನಿಯಲ್ಲಿ ಮಾತಾಡಿದಾಗ ಕಂಪ್ಲೇಂಟ್ ರಿಜಿಸ್ಟರ್ ಆಯಿತು. ಈ ಸುದ್ದಿ ದಿನಪತ್ರಿಕೆಗಳಲ್ಲೆಲ್ಲ ಪ್ರಧಾನವಾಗಿ ಪ್ರಕಟಗೊಂಡಿತು. ಎಸಿಪಿ ಸೋಮಶೇಖರ್ ಅವ್ವಾಚ್ಯವಾಗಿ ಬೈಯುವಾಗ ಇಡೀ ವಕೀಲ ಸಮುದಾಯವನ್ನು ಸಂಬೋಧಿಸಿ ಬೈದುಬಿಟ್ಟಿದ್ದ. ಆ ಯಥಾವತ್ ಬೈಗುಳಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿಬಿಟ್ಟಿದ್ದವು. ಕರ್ನಾಟಕದ ಇಡೀ ವಕೀಲ ಸಮುದಾಯ ಸೋಮಶೇಖರ್ ವಿರುದ್ಧ ಸಿಡಿದೆದ್ದಿತು.

ಮಾರನೇ ದಿನ ಸಹ ಎಲ್ಲ ಕೋರ್ಟ್ ಕಲಾಪಗಳೂ ಸ್ಥಗಿತಗೊಂಡವು. ಇಡೀ ರಾಜ್ಯದ ಕೋರ್ಟ್‌ಗಳೂ ಬಂದ್ ಆದವು. ಗ್ರಾಮೀಣ ಕರ್ನಾಟಕದ ವಕೀಲರುಗಳಿಂದ ಅಭೂತಪೂರ್ವ ಸಾಲಿಡಾರಿಟಿ ವ್ಯಕ್ತಗೊಂಡಿತು.

ಅತ್ತ ಪೊಲೀಸ್ ಅಧಿಕಾರಿಗಳೂ ಸಭೆ ನಡೆಸಿದರು. ಒಗ್ಗಟ್ಟಿನಿಂದ ಇದನ್ನೆಲ್ಲ ಎದುರಿಸಬೇಕೆಂದು ನಿರ್ಣಯಿಸಿಕೊಂಡರು.

ಆಗ ಪೊಲೀಸ್ ಕಮೀಷನರ್ ಆಗಿದ್ದವರು ನಿಜಾಮುದ್ದೀನ್. ವಕೀಲರ ಪ್ರತಿನಿಧಿಗಳು ಅಡ್ವೋಕೇಟ್ ಜನರಲ್ ಆಗಿದ್ದ ಕೇಶವ್ ಅಯ್ಯಂಗಾರರೊಂದಿಗೆ ಚರ್ಚಿಸಿದರು. ಸರ್ಕಾರದ ಮುಖ್ಯ ಕೊಂಡಿಗಳಲ್ಲೊಬ್ಬರಾದ ಅಡ್ವೋಕೇಟ್ ಜನರಲ್ ಅವರು ಪೊಲೀಸ್ ಕಮೀಷನರ್ ಜೊತೆ ಮಾತಾಡಿ ಸಂಧಾನದ ಏರ್ಪಾಟು ಮಾಡುತ್ತೇನೆ ಎಂದರು. ಆಗ ನಿಜಾಮುದ್ದೀನ್‌ಗೆ ಕೂಡಲೇ ಹೊರಟು ಬರುವಂತೆ ಫೋನ್ ಮಾಡಿದರು. ಕೇಶವ ಅಯ್ಯಂಗಾರ್ ಅವರ ಸಂಧಾನದ ಆಹ್ವಾನವನ್ನು ಪೊಲೀಸ್ ಕಮೀಷನರ್ ನಿರಾಕರಿಸಿದರು.

"ಇನ್ನು ಹದಿನೈದೇ ನಿಮಿಷಗಳಲ್ಲಿ ಪೊಲೀಸ್ ಕಮೀಷನರ್ ನನ್ನ ಚೇಂಬರ್‌ನಲ್ಲಿರುತ್ತಾನೆ ನೋಡುತ್ತಿರಿ" ಎಂದ ಕೇಶವ ಅಯ್ಯಂಗಾರ್ ಅವರು ಯಾರೊಂದಿಗೋ ಫೋನ್‌ನಲ್ಲಿ ಮಾತಾಡಿದರು. ಬಹುಶಃ ಮುಖ್ಯಮಂತ್ರಿಗಳ ಕಚೇರಿಗೆ ಇದ್ದಿರಬೇಕು. ಇದಾಗಿ ಅರ್ಧ ಗಂಟೆಯೂ ಆಗಿರಲಿಲ್ಲ ಕಮೀಷನರ್ ನಿಜಾಮುದ್ದೀನ್ ಅಡ್ವೋಕೇಟ್ ಜನರಲ್ ಅವರ ಕಚೇರಿಗೆ ಹಾಜರಾದರು! ಆದರೆ ಅವರು ಸಂಧಾನಕ್ಕೆ ಒಪ್ಪಿಕೊಳ್ಳಲಿಲ್ಲ.

ವಕೀಲರ ಮುಷ್ಕರ ಮುಂದುವರಿಯಿತು. ಇಡಿಯಾಗಿ ವಕೀಲರ ಸಮೂಹವನ್ನು ಅವಮಾನಿಸಿದ ಸೋಮಶೇಖರ್ ಮೇಲೆ ದೂರದ ಬೀದರ್,

ಗುಲ್ಬರ್ಗಾ, ಧಾರವಾಡ, ಬಳ್ಳಾರಿ ಜಿಲ್ಲೆಗಳ ಕೋರ್ಟುಗಳಲ್ಲಿ ಮಾನಹಾನಿ ಮೊಕದ್ದಮೆಗಳನ್ನು ಹಾಕಿದರು ಅಲ್ಲಲ್ಲಿಯ ವಕೀಲರುಗಳು. "ಈ ಥರ ನೂರು ಕೋರ್ಟುಗಳಲ್ಲಿ ಮಾನಹಾನಿ ಮೊಕದ್ದಮೆ ಹೂಡಿದರೆ ಆಗ ಹೇಗೆ ಮಾಡುತ್ತಾನೆ ಈ ಸೋಮಶೇಖರ್" ಎಂದೂ ಕೆಲವು ವಕೀಲರು ಮಾತಾಡತೊಡಗಿದರು. ಮುಖ್ಯಮಂತ್ರಿ ಗುಂಡೂರಾವ್ ಸಪೋರ್ಟ್ ಇಲ್ಲದಿದ್ದರೆ ಇಷ್ಟೊತ್ತಿಗೆ ಕ್ಷಮಾಪಣೆ ಕೇಳಿಬಿಟ್ಟಿರುತ್ತಿದ್ದ ಈ ಸೋಮಶೇಖರ್" ಎಂದು ಮತ್ತೆ ಕೆಲವು ವಕೀಲರು ಮಾತಾಡಿದರು.

ವಕೀಲರ ಇಂಥ ಗುಂಪು ಚರ್ಚೆಗಳು ಸರ್ಕಾರದ ವಿರುದ್ಧದ ವಿಚಾರ ಸಂಕಿರಣಗಳಾಗಿ ಮಾರ್ಪಾಟುಗೊಳ್ಳತೊಡಗಿದವು. ಇದು ಬೆಂಗಳೂರಲ್ಲಿ ಮಾತ್ರವಲ್ಲ, ಇಡೀ ರಾಜ್ಯದ ಎಲ್ಲ ಕೋರ್ಟ್ ಆವರಣಗಳ ಸಾಮಾನ್ಯ ಸ್ಥಿತಿಯಾಗಿತ್ತು.

ಆಗ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರಾಗಿ ಎಂ.ಎಸ್. ಗೋಪಾಲ್ ಮತ್ತು ಕಾರ್ಯದರ್ಶಿಗಳಾಗಿ ಎ.ಜೆ. ಸದಾಶಿವ ಅವರುಗಳಿದ್ದರು. ಪ್ರಮೀಳಾ ನೇಸರ್ಗಿಯವರು ರಾಜ್ಯ ಬಾರ್ ಕೌನ್ಸಿಲ್ ಚೇರ್ಮನ್ ಆಗಿದ್ದರು. ರಾಷ್ಟ್ರ ಬಾರ್ ಕೌನ್ಸಿಲ್ ಚೇರ್ಮನ್ ಮೊಹಂತಿ ಬೆಂಗಳೂರಿಗೆ ಬಂದು ಠಿಕಾಣಿ ಹೂಡಿದ್ದು, ವಕೀಲರ ಹೋರಾಟಕ್ಕೆ ಪ್ರೋತ್ಸಾಹ ನೀಡುತ್ತಿದ್ದರು.

ಮುಷ್ಕರ ಆರನೇ ದಿನಕ್ಕೆ ಕಾಲಿಟ್ಟಾಗ ಚೀಫ್ ಜಸ್ಟಿಸ್ ಭೀಮಯ್ಯ ಅವರು ಪೊಲೀಸ್ ಕಮೀಷನರ್ ಅವರನ್ನು ಕರೆಯಿಸಿ ಮಾತಾಡಿದರು.

ಭೀಮಯ್ಯ ಅವರು ನಿಜಾಮುದ್ದೀನ್‌ಗೆ "ನೀವು ಹೀಗೇ ಬಿಗಿಪಟ್ಟಿನಿಂದ ಇದ್ದರೆ ಪ್ರಕರಣ ಕೋರ್ಟ್‌ಗೆ ಬಂದಾಗ ಪಶ್ಚಾತ್ತಾಪಪಟ್ಟುಕೊಳ್ಳಬೇಕಾಗುತ್ತದೆ. ನಿಮ್ಮ ಎಸಿಪಿ ಪರ ವಕಾಲತ್ತು ಹಾಕಲು ಒಬ್ಬನೇ ಒಬ್ಬ ವಕೀಲ ನಿಮಗೆ ಸಿಗುವುದಿಲ್ಲ. ಬೇರೆ ರಾಜ್ಯಗಳಿಂದಲೂ ವಕೀಲರನ್ನು ಕರೆಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಆಲ್ ಇಂಡಿಯಾ ಬಾರ್ ಕೌನ್ಸಿಲ್ ಚೇರ್ಮನ್ ಮೊಹಂತಿಯೇ ಸ್ವತಃ ಹೋರಾಟಕ್ಕೆ ಇಳಿದಿದ್ದಾರೆ. ರಾಜ್ಯದ ವಿವಿಧ ಕೋರ್ಟ್‌ಗಳಲ್ಲಿ ಸೋಮಶೇಖರ್ ಮೇಲೆ ಹೂಡಿರುವ ಮಾನನಷ್ಟ ಮೊಕದ್ದಮೆಗಳನ್ನು ಅಟೆಂಡ್ ಮಾಡಲಿಕ್ಕೇ ಆತನ ಸಮಯವೆಲ್ಲ ಖರ್ಚಾಗುತ್ತದೆ. ಬೇಲ್ ಸಿಗದೆ ಜ್ಯುಡಿಷಿಯಲ್ ಕಸ್ಟಡಿಗೆ ತೆಗೆದುಕೊಳ್ಳುವ ಸಾಧ್ಯತೆಗಳ ಬಗೆಗೂ ಯೋಚಿಸಿ ನೋಡಿ" ಇತ್ಯಾದಿ ಕಿವಿಮಾತು ಹೇಳಿದರೆಂದು ವಕೀಲರ ಮಧ್ಯೆ ಸುದ್ದಿಯಾಯಿತು. ಆರನೇ ದಿನ ಎಸಿಪಿ ಸೋಮಶೇಖರ್ ಅವರು ವಕೀಲರ ಸಮುದಾಯದ ಕ್ಷಮೆ ಯಾಚಿಸಿದರು.

ವಕೀಲರ ಮುಷ್ಕರ ಅಂತ್ಯಗೊಂಡಿತು. ಆರನೇ ದಿನಕ್ಕೆ ಕಾಲಿಡುವ ಹೊತ್ತಿಗೆ ಮುಷ್ಕರ ಸೋಮಶೇಖರ್ ವಿರುದ್ಧ ಮಾತ್ರವಾಗಿ ಉಳಿದಿರಲಿಲ್ಲ; ಸರ್ಕಾರದ ವಿರುದ್ಧ ತಿರುಗಿಕೊಂಡಿತ್ತು. ಸರ್ಕಾರದ ವಿರುದ್ಧ ಜಯ ಸಾಧಿಸಿದ ಹೆಮ್ಮೆ ಎಲ್ಲ ವಕೀಲರ ಮುಖದಲ್ಲಿ ನಲಿದಾಡುತ್ತಿತ್ತು. ಇತಿಹಾಸದಲ್ಲಿ ಎಂದಿಗೂ ಆ ಮುಂಚೆ ವಕೀಲರು ರಾಜ್ಯ ಮಟ್ಟದಲ್ಲಿ ಅಷ್ಟು ಒಗ್ಗಟ್ಟಾಗಿ ಹೋರಾಟ ನಡೆಸಿರಲಿಲ್ಲ.

69

ಹಾದರಕ್ಕೆ ಗಂಡನನ್ನು ಬಲಿಕೊಟ್ಟ ಹೆಂಡತಿ!

ಕರಡೀರಾಂಪುರ ಬೆಂಗಳೂರಿಗೆ ಅಂಥ ದೂರದ ಗ್ರಾಮವೇನೂ ಅಲ್ಲ. ಬೆಂಗಳೂರಿನಿಂದ ಮೈಸೂರಿಗೆ ಹೋಗುವ ದಾರಿಯಲ್ಲಿ ರಾಮನಗರಕ್ಕಿಂತಲೂ ಮುಂಚೆಯೇ ಬಲಗಡೆ ಕ್ರಾಸ್ ಮೂಲಕ ಮೂರ್‍ನಾಲ್ಕು ಕಿ.ಮೀ. ಹೋದರೆ ಸಿಕ್ಕುತ್ತದೆ. ಈ ಊರಲ್ಲಿ ಬಹಳಷ್ಟು ಮನೆಗಳು ಲಿಂಗಾಯತರವು. ಒಕ್ಕಲಿಗರು ಮತ್ತು ಹರಿಜನರ ಮನೆಗಳೂ ಗಣನೀಯ ಸಂಖ್ಯೆಯಲ್ಲಿದ್ದವು. ದೇವರಾಜ್ ಅರಸು ಅವರ ಭೂಸುಧಾರಣಾ ಕಾಯ್ದೆಯ ಕಾವು ಈ ಗ್ರಾಮಕ್ಕೂ ತಾಗಿತ್ತು. ಬೇರೆಯವರ ಜಮೀನುಗಳನ್ನು ಗೇಣಿಗೆ ಮಾಡುತ್ತಿದ್ದ ಹಲವಾರು ಭೂಹೀನ ಕೃಷಿಕರು ಫಾರ್ಮ್ ನಂ. 7ನ್ನು ಹಾಕಿ ತಮ್ಮ ಮಾಲೀಕತ್ವವನ್ನು ಸ್ಥಾಪಿಸಲು ಕೋರ್ಟ್ ಕಟ್ಟೆ ಹತ್ತಿದ್ದರು. ಭೂಮಿತಿ ಕಾಯ್ದೆಯಿಂದ ಪಾರಾಗಲು ಹೆಚ್ಚುವರಿ ಜಮೀನಿದ್ದವರು ಪ್ರಯತ್ನಿಸುತ್ತಿದ್ದರು. ಅವಿಭಕ್ತ ಕುಟುಂಬದ ಒಡೆಯನ ಹೆಸರಿನಲ್ಲಿದ್ದ ಭೂಮಿ ಹರಿದು ಹಂಚಿಹೋಗಿತ್ತು. ಆದರೆ ಅದೇ ವೇಳೆಗೆ ಅಲ್ಪ ಜಮೀನಿದ್ದವರೂ ಈ ಹೊಸ ಕಾಯಿದೆಯ ಸೈಡ್ ಎಫೆಕ್ಟ್‌ನಿಂದ ಬಳಲುವಂತಾಗಿತ್ತು. ನಾಲ್ಕೋ ಐದೋ ಎಕರೆ ಜಮೀನಿದ್ದವನಿಗೆ ಸರಕಾರಿ ನೌಕರಿ ಸಿಕ್ಕಿಬಿಟ್ಟರೆ ಆ ಜಮೀನಿನ

ಮಾಲೀಕತ್ವ ಹೋಗಿಬಿಡುವಂಥ ಪರಿಸ್ಥಿತಿ ತಲೆದೋರಿಬಿಟ್ಟಿತ್ತು. ಭೂಸುಧಾರಣಾ ಕಾಯಿದೆಯಲ್ಲಿ ಅಬ್ಸೆಂಟೀ ಲ್ಯಾಂಡ್ ಹೋಲ್ಡರ್ ಅಂದರೆ ಸ್ವತಃ ಕೃಷಿ ಮಾಡದ ಆದರೆ ಜಮೀನಿನ ಮಾಲೀಕತ್ವ ಹೊಂದಿದವರಿಗೆ ಕಾನೂನಿನ ರಕ್ಷಣೆ ಇಲ್ಲದಂತಾಯಿತು. ಆದರೆ ಅದೇ ಪಶ್ಚಿಮ ಬಂಗಾಳ ಸರಕಾರ ತಂದ ಭೂ ಸುಧಾರಣಾ ಕಾಯಿದೆಯಲ್ಲಿ ಇಂಥ ಪುಟ್ಟ ಹಿಡುವಳಿದಾರನಿಗೆ ಕಾನೂನಿನ ರಕ್ಷಣೆ ಇದೆ. ಅದೇ ರೀತಿ ಗೇಣಿದಾರನ ಹಕ್ಕುಗಳಿಗೂ ರಕ್ಷಣೆಯಿದೆ. ಕರ್ನಾಟಕ ಭೂಸುಧಾರಣೆಯಲ್ಲಿ ಗೇಣಿದಾರನಿಗೆ ಯಾವುದೇ ಥರದ ಕಾನೂನಿನ ರಕ್ಷಣೆ ಇಲ್ಲ.

ಕರ್ನಾಟಕ ಭೂಸುಧಾರಣಾ ಕಾನೂನಿನ ಅಶಕ್ತ ಅಂಶವಿದು ಎನ್ನುವುದು ನನ್ನ ಅನಿಸಿಕೆ. ಈಗ ಹೇಳಹೊರಟಿರುವ ವಿಷಯದ ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ.

ಕರಡೀರಾಂಪುರದ ಸರಕಾರೀ ಸ್ಕೂಲ್‌ಗೆ ಹೆಡ್‌ಮಾಸ್ಟರ್ ಆಗಿದ್ದ ಕೆಂಚಪ್ಪ ಸಹ ಪುಟ್ಟ ಹಿಡುವಳಿದಾರ. ಕೆಂಚಪ್ಪನ ಜಮೀನನ್ನು ಈರಯ್ಯ ಎನ್ನುವ ಹರಿಜನ ಗೇಣಿ ಮಾಡುತ್ತಿದ್ದ. ಉಳುವವನಿಗೇ ಭೂಮಿ ಎನ್ನುವ ಸರಕಾರೀ ಘೋಷಣೆಯಂತೆ ಅರ್ಜಿ ಹಾಕಿಕೊಂಡಿದ್ದ ಈರಯ್ಯ. ಕೆಂಚಪ್ಪನ ಆ ಜಮೀನು ಆತನ ದಾಯಾದಿಗಳ ಹೆಸರಿನಲ್ಲಿತ್ತು. ಅಸಿಸ್ಟೆಂಟ್ ಕಮೀಷನರ್ ಅವರ ಕೋರ್ಟ್‌ನಲ್ಲಿ ಕೇಸು ಕೆಂಚಪ್ಪನ ದಾಯಾದಿಗಳ ಪರವಾಗಿ ಆಗಿತ್ತು, ಮಾತ್ರವಲ್ಲ ಅವರ ವಶಕ್ಕೆ ಜಮೀನು ಬಂದಿತ್ತು. ಈ ತೀರ್ಪಿನ ವಿರುದ್ಧ ಈರಯ್ಯ ಜಿಲ್ಲಾಧಿಕಾರಿಗಳ ಕೋರ್ಟ್‌ನಲ್ಲಿ ಅಪೀಲ್ ಮಾಡಿಕೊಂಡಿದ್ದ.

ಈರಯ್ಯ ಗೇಣಿ ಮಾಡುತ್ತಿದ್ದ ಕೆಂಚಪ್ಪನ ಜಮೀನಿನ ಪಕ್ಕದ್ದು ಶಂಕರಯ್ಯನ ಜಮೀನು. ಶಂಕರಯ್ಯ ಲಿಂಗಾಯತರವ. ಗೇಣಿಯ ಜಮೀನು ತನ್ನ ಕೈ ತಪ್ಪಿ ಹೋದ ಮೇಲೆ ಶಂಕರಯ್ಯನ ಜಮೀನಿನಲ್ಲಿ ಕೆಲಸ ಮಾಡಲು ಶುರು ಮಾಡಿದ ಈರಯ್ಯ. ಶಂಕರಯ್ಯ ಒಳ್ಳೆಯ ಕಟ್ಟುಮಸ್ತಾದ ಆಳು. ಶ್ರಮಪಟ್ಟು ದುಡಿಯುವ ವ್ಯಕ್ತಿ. ಈರಯ್ಯನ ದೇಹ ಕಟೆದ ಕಲ್ಲಿನ ಮೂರ್ತಿಯಂಥದ್ದು. ಈರಯ್ಯನ ಸಹಾಯ-ಸಿಕ್ಕಮೇಲೆ ಶಂಕರಯ್ಯನ ಜಮೀನು ಹೆಚ್ಚು ಹದಗೊಂಡಿತು. ಎರಡೂ ಕಟ್ಟಾಳುಗಳು ಬೆವರು ಹರಿಸಿ ಒಳ್ಳೆಯ ಬೆಳೆ ತೆಗೆಯತೊಡಗಿದರು.

ಈ ಗ್ರಾಮಕ್ಕೆ ಕರಡೀರಾಂಪುರ ಎಂದು ಹೆಸರು ಬರಲು ಆ ಗ್ರಾಮದ ಬಳಿಯ ಗುಡ್ಡ ಮತ್ತು ಕಾಡಿನಲ್ಲಿ ಬಹಳಷ್ಟು ಕರಡಿಗಳಿದ್ದದ್ದೇ ಕಾರಣವಾಗಿತ್ತು.

ಒಂದು ದಿನ ಶಂಕರಯ್ಯ ಬೆಳಗ್ಗೆ ಬೇಗ ಹೊಲಕ್ಕೆ ಹೋದ. ಬಾಗಿ ಅದೇನೋ ಕೆಲಸ ಮಾಡುತ್ತಿದ್ದ. ಹಿಂದಿನಿಂದ ಅದ್ಯಾರೋ ಬಂದು ಅಮುಕಿಕೊಂಡಂತೆ ಆಗಿ ಬೆಚ್ಚಿಬಿದ್ದ. ತನ್ನ ದೇಹವನ್ನು ಬಳಸಿದ್ದು ಕೈಗಳಲ್ಲಿ ಉದ್ದ ಉಗುರಿನ ಕೂದಲು ತುಂಬಿದ್ದ ಮುಂಗಾಲುಗಳು. ಕೂಡಲೇ ಶಂಕರಯ್ಯನಿಗೆ ತನ್ನನ್ನು ಹಿಡಿದುಕೊಂಡಿದ್ದು ಕರಡಿಯೆಂದು ಗುರುತಾಯಿತು. ಜೋರಾಗಿ ಚೀರಿದ. ತನ್ನ ಶಕ್ತಿಯನ್ನೆಲ್ಲ ಹಾಕಿ ಕರಡಿಯ ಮುಂಗಾಲುಗಳನ್ನು ಕಿತ್ತು ಮುಂದಕ್ಕೆ ಚಿಮ್ಮಿದ. ಬಲಗೈ ಭುಜ ಮತ್ತು ಕುತ್ತಿಗೆ ಭಾಗದ ಮಾಂಸ ಕಿತ್ತು ಹೋಗಿತ್ತು. ದೂರ ಬಿದ್ದವನ ಮೇಲೆ ಕರಡಿ ಏರಿ ಹೋಯಿತು. ಶಂಕರಯ್ಯನ ಬಲಗೈ ನಾಡಿ ಸತ್ತಂತಾಯಿತು. ಕರಡಿಯಿಂದ ಬಿಡಿಸಿಕೊಂಡು ಪಕ್ಕದ ಹಳ್ಳಕ್ಕೆ ಬಿದ್ದಿದ್ದ. ಕೈ ಕಾಲು ಮುರಿದಿತ್ತು. ಈ ಬಾರಿ ಕರಡಿ ಶಂಕರಯ್ಯನ ತೊಡೆಗೆ ತನ್ನ ಪಂಜ ಹಾಕಿ ಅದರ ಮಾಂಸ ಕಿತ್ತುಕೊಂಡಿತು. ಅಷ್ಟರಲ್ಲಿ ಅಕ್ಕಪಕ್ಕದ ಹೊಲಗಳ ಜನ ಶಂಕರಯ್ಯನ ಚೀರಾಟ ಕೇಳಿ ಕೈಗೆ ಸಿಕ್ಕ ಆಯುಧಗಳನ್ನು ಹಿಡಿದುಕೊಂಡು ಓಡಿಬಂದರು. ಬಹಳ ಜನರನ್ನು ನೋಡಿದ ಕರಡಿ ತಪ್ಪಿಸಿಕೊಂಡು ಓಡಿಹೋಯಿತು.

ಶಂಕರಯ್ಯನಿಗೆ ಚಿಕಿತ್ಸೆ ಕೊಡಿಸಲಾಯಿತು. ಆದರೆ ಕೈ ಸೊಟ್ಟಗಾಯಿತು. ಕಾಲು ಕುಂಟಾಯಿತು. ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಶಕ್ತಿ ಶಂಕರಯ್ಯನ ದೇಹಕ್ಕಿಲ್ಲವಾಯಿತು.

ಶಂಕರಯ್ಯ ಚಹದ ಅಂಗಡಿ ಆರಂಭಿಸಿದ. ಜಮೀನಿನ ಉಸ್ತುವಾರಿಗೆ ಹೆಂಡತಿ ಮಹದೇವಮ್ಮ ನಿಂತಳು. ಹೊಲದ ಎಲ್ಲಾ ಮುಖ್ಯ ಕೆಲಸಗಳನ್ನು ಈರಯ್ಯ ಮಾಡತೊಡಗಿದ. ಆಳು ಈರಯ್ಯನೊಂದಿಗೆ ಮಹದೇವಮ್ಮನ ಪ್ರಣಯ ಅಂಕುರಿಸಿತು. ಮಹದೇವಮ್ಮನಿಗೆ ಗಂಡನ ದೈಹಿಕ ಊನತೆ ಹೆಚ್ಚೆಚ್ಚು ಕಾಣತೊಡಗಿತು.

ಈರಯ್ಯ ಮತ್ತು ಮಹದೇವಮ್ಮರ ಮಧ್ಯದ ಲೈಂಗಿಕ ಸಂಬಂಧ ಇಡೀ ಊರಿಗೆ ಗೊತ್ತಾಯಿತು. ಆ ಗ್ರಾಮದ ಲಿಂಗಾಯತರು ಶಂಕರಯ್ಯನ ಮನೆಗೆ ಅಘೋಷಿತ ಬಹಿಷ್ಕಾರ ಹಾಕಿದರು. ಮಹದೇವಮ್ಮನ ಅಣ್ಣ ಮಹಾದೇವಪ್ಪ ತಂಗಿಯ ಮನೆಗೆ ಬರುವುದನ್ನು ನಿಲ್ಲಿಸಿದ.

ಏತನ್ಮಧ್ಯೆ ಈರಯ್ಯ ಮತ್ತು ಕೆಂಚಪ್ಪ ಮಾಸ್ತರ್‌ಗಳ ಮಧ್ಯೆ ಒಂದೆರಡು ಬಾರಿ ಜಗಳಗಳಾದವು. ಈರಯ್ಯ ಕೆಂಚಪ್ಪನ ಮೇಲೆ ಹಗೆ ಸಾಧಿಸತೊಡಗಿದ.

ಶಂಕರಯ್ಯ ಹೆಂಡತಿ ಮಹದೇವಮ್ಮನೊಂದಿಗೆ ಜಗಳ ಹೆಚ್ಚಿಗೆ ಮಾಡಿದ. 'ಇಡೀ ಊರವರ ಮುಂದೆ ನನ್ನ ಮರ್ಯಾದೆ ತೆಗೆಯುತ್ತಿದ್ದೀಯಾ' ಎಂದು ರೋಷಗೊಳ್ಳತೊಡಗಿದ.

ಗಂಡನ ಈ ಕಿರುಕುಳವನ್ನು ಈರಯ್ಯನ ಮುಂದೆ ಮಹದೇವಮ್ಮ ಹೇಳಿಕೊಂಡಳು.

ಒಂದು ದಿನ ಈರಯ್ಯ ಮಹದೇವಮ್ಮನಿಗೆ ತನಗೆ ಹೊಳೆದ ಯೋಜನೆ ಹೇಳಿದ. ಅದನ್ನು ಕಾರ್ಯಗತಗೊಳಿಸಲು ಮಹದೇವಮ್ಮ ಸಿದ್ಧಳಾದಳು.

ಅಂದು ಆದಿತ್ಯವಾರ. ಹೊಲಕ್ಕೆ ಗಂಡನನ್ನು ಜೊತೆಗೆ ಕರೆದುಕೊಂಡು ನಡೆದಳು. ಹಳ್ಳದ ಇಳುಕಲಿನಲ್ಲಿ ಹೋಗುತ್ತಿರುವಾಗ ಮಚ್ಚು ಹಿಡಿದುಕೊಂಡು ಈರಯ್ಯ ಹಾರಿಬಂದ. ಏನು ಎತ್ತ ಎಂದು ಯೋಚಿಸಲೂ ಅವಕಾಶವನ್ನು ನೀಡದೆ ಶಂಕರಯ್ಯನ ಕುತ್ತಿಗೆಗೆ ಮಚ್ಚಿನೇಟು ಹಾಕಿದ. ರಕ್ತ ಚಿಲ್ಲೆಂದು ಸಿಡಿಯಿತು. ಕೂಡಲೇ ಈರಯ್ಯ ಪರಾರಿಯಾದ. ಮಹದೇವಿ ಬಾಯಿ ಬಡಿದುಕೊಳ್ಳತೊಡಗಿದಳು. ಕೆಂಚಪ್ಪ ಮಾಸ್ಟರ್ ಮತ್ತು ಆತನ ಕಡೆಯವರು ಬಂದು ತನ್ನ ಗಂಡನನ್ನು ಕೊಚ್ಚಿಹಾಕಿ ಓಡಿಹೋದರು ಎಂದು ಈರಯ್ಯ ಓಡಿ ಹೋದ ದಿಕ್ಕಿಗೆ ವಿರುದ್ಧ ದಿಕ್ಕನ್ನು ತೋರಿಸಿದಳು.

ಶಂಕರಯ್ಯನ ಜೀವ ಇನ್ನೂ ಇತ್ತು. ಆದರೆ ಮಾತಾಡಲು ಬರುತ್ತಿರಲಿಲ್ಲ. ಆಸ್ಪತ್ರೆಗೆ ಒಯ್ಯಲು ಎತ್ತಿಕೊಂಡರು. ಒಂದು ಫರ್ಲಾಂಗು ಹೋಗಿರಲಿಲ್ಲ ಕೊನೆಯುಸಿರೆಳೆದ.

ಸರ್ಕಲ್ ಇನ್ಸ್‌ಪೆಕ್ಟರ್ ಬಂದು ಕೆಂಚಪ್ಪ ಮತ್ತು ಇತರರನ್ನು ಬಂಧಿಸಿಕೊಂಡು ಹೋದ. ಕೆಂಚಪ್ಪ ಮಾಸ್ಟರ್ ತಮ್ಮ ತಪ್ಪೇನೂ ಇಲ್ಲ ಎಂದು ಹೇಳುತ್ತಿರುವುದರಲ್ಲಿ ಪ್ರಾಮಾಣಿಕ ಧ್ವನಿಯಿದೆ ಎನಿಸಿತು ಆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ. ಈರಯ್ಯ ಮತ್ತು ಮಹದೇವಮ್ಮರ ಮಧ್ಯದ ಲೈಂಗಿಕ ಸಂಬಂಧದ ಕಥೆಯನ್ನು ಕೇಳಿದ ಸರ್ಕಲ್ ಇನ್ಸ್‌ಪೆಕ್ಟರ್ ಮಹದೇವಮ್ಮನ ಮನೆಯನ್ನು ಜಪ್ತಿ ಮಾಡಿದ. ಆಗ ಒಂದು ಮೂಲೆಯಲ್ಲಿ ಸುತ್ತಿ ಉಂಡೆ ಮಾಡಿಟ್ಟಿದ್ದ ಸೀರೆ ಸಿಕ್ಕಿತು. ಅದರ ಮೇಲೆ ರಕ್ತದ ಕಲೆಗಳಿದ್ದವು. ಇದೇನು ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಪ್ರಶ್ನಿಸಿದ್ದಕ್ಕೆ ಮಹದೇವಮ್ಮ ಮಾಸಿಕ ಮುಟ್ಟಿನ ರಕ್ತ ಎಂದು ಸುಳ್ಳು ಹೇಳಿದಳು ಗೊಂದಲಗೊಂಡು. ಗಂಡನನ್ನು ಹೊಡೆದಾಗ ಪಕ್ಕದಲ್ಲೇ ನಿಂತಿದ್ದೆ ಹಾಗಾಗಿ ನನ್ನ ಸೀರೆಗೂ ರಕ್ತ ಸಿಡಿದಿದೆ ಎಂದು ಆಕೆ ಹೇಳಿಬಿಟ್ಟಿದ್ದರೆ ಆಕೆ ಸಿಕ್ಕುಬೀಳುತ್ತಿರಲಿಲ್ಲ.

ನಾನು ಕೆಂಚಪ್ಪ ಮಾಸ್ಟರ್ ಮತ್ತಿತರರ ಪರವಾಗಿ ವಕಾಲತ್ ಹಾಕಿದೆ. ಕೊಲೆಯಾದ ಸ್ಥಳ ಪರಿಶೀಲಿಸಿದೆ. ಗ್ರಾಮಸ್ಥರನ್ನು ವಿಚಾರಿಸಿದೆ. ಮಹಾದೇವಮ್ಮನ ಅಣ್ಣನನ್ನು ಸಂಪರ್ಕಿಸಿದೆ.

ಕೆಂಚಪ್ಪ ಮಾಸ್ಟರ್ ಕೊಲೆ ಮಾಡಲಿಲ್ಲ ಎನ್ನುವ ಒಂದೇ ಸ್ಟ್ಯಾಂಡ್ ಪಾಯಿಂಟ್ ಅನ್ನು ನನ್ನ ವಾದಕ್ಕೆ ಇಟ್ಟುಕೊಳ್ಳಲಿಲ್ಲ. ಮಹದೇವಮ್ಮ ಮತ್ತು ಈರಯ್ಯ ಸೇರಿ ಈ ಕೊಲೆ ಮಾಡಿದ್ದಾರೆಂದು ಸಾಬೀತುಗೊಳಿಸುವ ನಿಲುವನ್ನೂ ತೆಗೆದುಕೊಂಡು ಕೇಸ್ ನಡೆಸಿದೆ. ಈರಯ್ಯ ಮತ್ತು ಮಹದೇವಮ್ಮ ಕೊಲೆಗಾರರು ಎಂದು ನೂರಕ್ಕೆ ನೂರು ಸಾಬೀತುಗೊಳಿಸುವ ಜವಾಬ್ದಾರಿ ನನ್ನ ಮೇಲಿರಲಿಲ್ಲ. ಅವರು ಕೊಲೆಗಾರರು ಎನ್ನುವ ಸಂಗತಿಯನ್ನು probable ಮಾಡಿದರೆ ಸಾಕಾಗಿತ್ತು.

ಸೀಜ್ ಮಾಡಲ್ಪಟ್ಟ ಮಹದೇವಮ್ಮನ ಸೀರೆಯನ್ನು ಫೋರೆನ್ಸಿಕ್ ಪರೀಕ್ಷೆಗೆ ಕಳಿಸಿಕೊಡಲಾಗಿತ್ತು. ಮಹದೇವಮ್ಮನ ಅಣ್ಣನನ್ನೂ ನಮ್ಮ ಕಡೆ ಸಾಕ್ಷಿಯಾಗಲು ಒಪ್ಪಿಸಿದೆ. ತನ್ನ ತಂಗಿ ಹರಿಜನ ಈರಯ್ಯನೊಂದಿಗೆ ಅನೈತಿಕ ಸಂಬಂಧ ಇರಿಸಿಕೊಂಡಿದ್ದಳು ಎಂದು ಸಾಕ್ಷಿ ಹೇಳಿದ. ಈ ಮೌಖಿಕ ಸಾಕ್ಷ್ಯಗಳಿಗೆ ಪೂರಕವಾಗಿ ಭೌತಿಕ ಪುರಾವೆಗಳನ್ನು ನೀಡಬೇಕಾದರೆ ಮಹದೇವಮ್ಮನ ಸೀರೆಯ ಮೇಲಿನ ರಕ್ತ ಯಾವುದು ಎನ್ನುವುದರ ಕೆಮಿಕಲ್ ಎಗ್ಸಾಮಿನೇಷನ್ ರಿಪೋರ್ಟ್ ಮತ್ತು ಸೆರೋಲೋಜಿಸ್ಟ್ ರಿಪೋರ್ಟ್ ಬೇಕು ಎಂದು ಕೇಳಿದೆ. ಆಗ ಕೋರ್ಟ್ ತರಿಸಿತು. ನಿರ್ದೇಶನ ಕೊಟ್ಟು ತುರ್ತಾಗಿ ತಪಾಸಣಾ ವರದಿಯನ್ನು ತರಿಸಿತು.

ಅದಕ್ಕೂ ಮುಂಚೆ ಮಹದೇವಮ್ಮ ಕೋರ್ಟ್‌ನಲ್ಲಿ ಜಪ್ತಿ ಮಾಡಲ್ಪಟ್ಟ ತನ್ನ ಸೀರೆಯ ಮೇಲೆ ಇದ್ದ ರಕ್ತ ತನ್ನ ಋತುಚಕ್ರದ್ದು ಎಂದು ಹೇಳಿಕೆ ನೀಡಿದ್ದಳು ಮತ್ತು ಇತರ ಸಾಕ್ಷಿಗಳು, ಮಾರಣಾಂತಿಕ ಪೆಟ್ಟಿನಿಂದ ಗಂಡ ಕೆಳಗೆ ಬಿದ್ದಾಗ ಮಹದೇವಮ್ಮ ಶಂಕರಯ್ಯನಿಂದ ದೂರ ನಿಂತು ಬಾಯಿ ಬಡಿದುಕೊಳ್ಳುತ್ತಿದ್ದಳೇ ವಿನಃ ಶಂಕರಯ್ಯನ ದೇಹವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರಲಿಲ್ಲ ಎಂದು ಸಾಕ್ಷಿ ಹೇಳಿದ್ದರು.

ಫೋರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿಯಿಂದ ಕೆಮಿಕಲ್ ಎಗ್ಸಾಮಿನೇಷನ್ ರಿಪೋರ್ಟ್, ಸೆರೋಲೋಜಿಸ್ಟ್ ರಿಪೋರ್ಟ್ ಬಂದಿತು. ಮಹದೇವಮ್ಮನ ಸೀರೆಯ ಮೇಲೆ ಇದ್ದದ್ದು ಋತುಚಕ್ರದ ರಕ್ತ ಅಲ್ಲ. ಶಂಕರಯ್ಯನನ್ನು ಕೊಚ್ಚಿಹಾಕಲ್ಪಟ್ಟ ಮಚ್ಚಿನ ಮೇಲಿದ್ದ ರಕ್ತ. ಕೊಲೆಯಾದ ಶಂಕರಯ್ಯನ ರಕ್ತ ಮತ್ತು ಸೀರೆಯ ಮೇಲಿನ ರಕ್ತ ಎಲ್ಲ ಒಂದೇ ಗುಂಪಿಗೆ ಸೇರಿದ ರಕ್ತವಾಗಿತ್ತು.

ಮೌಖಿಕ ಸಾಕ್ಷಿಗಳು ಮತ್ತು ಅದನ್ನು ಪುಷ್ಟೀಕರಿಸುವ ಭೌತಿಕ ಪುರಾವೆಗಳು ಸಿಕ್ಕ ಮೇಲೆ ಇನ್ನೇನು? ರೂರಲ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್ ಪ್ರಸಾದ್‌ರಾವ್ ಅವರು ನನ್ನ ಕಕ್ಷಿದಾರರಾದ ಕೆಂಚಪ್ಪ ಮಾಸ್ಟರ್ ಮತ್ತಿತರರನ್ನು ಕೊಲೆ ಆರೋಪದಿಂದ ಮುಕ್ತಗೊಳಿಸಿದರು.

70

ತಿರುಗುಬಾಣವಾದ ಗುಂಡೇಟು!

ಬೆಂಗಳೂರು ಕಾಂಗ್ರೆಸ್ ಹುಲ್ಲಿನಂತೆ ಹಬ್ಬತೊಡಗಿದ್ದನ್ನು ಅವಾಕ್ಕಾಗಿ ನೋಡುತ್ತಿದ್ದೆ. ಸುತ್ತಲಿನ ಹಳ್ಳಿ, ಹೋಬಳಿ, ಪಟ್ಟಣಗಳನ್ನು ತನ್ನ ರಾಕ್ಷಸ ಗರ್ಭದೊಳಕ್ಕೆ ಸೆಳೆದುಕೊಳ್ಳುತ್ತ ಬೆಳೆದ ಬೆಂಗಳೂರು ಹಳ್ಳಿಗಳಲ್ಲಿ ದೈತ್ಯ ನೃತ್ಯ ನಡೆಸತೊಡಗಿದ್ದರಿಂದ ಕೃಷಿ ಪರಂಪರೆಯ ಮೇಲೆ ದೊಡ್ಡ ಪೆಟ್ಟು ಬಿದ್ದಂತಾಯಿತು. ಹಳ್ಳಿಯ ಆರ್ಥಿಕತೆ ಕುಸಿದುಹೋಯಿತು. ಆದರೆ ಅದಕ್ಕೆ ಪರ್ಯಾಯವಾಗಿ ನಗರ ಏನನ್ನೂ ನೀಡಲಿಲ್ಲ ಹಳ್ಳಿಗಳಿಗೆ. ಹಳ್ಳಿಗರ ಕೃಷಿ ಜಮೀನುಗಳನ್ನು ರಿಯಲ್ ಎಸ್ಟೇಟ್ ಗೂಳಿಗಳು ಕಬಳಿಸಿ ಕೃಷಿಕರಿಗೆ ಒಂದು ವೃತ್ತಿಯೇ ಇಲ್ಲದಂತೆ ಮಾಡುತ್ತಿರುವುದು ನಿಜವಾಗಿಯೂ ಖೇದಕರ ಸಂಗತಿ ನಗರ ಸಂಪರ್ಕದ ಹಳ್ಳಿಗಳಲ್ಲಿ ಜಾತಿಕಲಹ ತೀರ್ಮಾನಗೊಳ್ಳುವುದು ಒಂದು ವಿದ್ಯಮಾನವೇನೋ ಎನ್ನುವಂತಾಗಿಬಿಟ್ಟಿರುವುದು ಎಂಥ ಅಪಾಯಕಾರಿ.

ಆನೇಕಲ್ ತಾಲ್ಲೂಕಿನ ಸಂಪಿಗೆಹಳ್ಳಿಗೆ ಸಂಬಂಧಿಸಿ ಈ ಮೇಲಿನ ಪೀಠಿಕೆಯನ್ನು ಹಾಕಬೇಕಾಯಿತು. ಬನ್ನೇರುಘಟ್ಟ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ಗಳ

ಮಧ್ಯೆ ಬರುವ ಈ ಹಳ್ಳಿಯಲ್ಲಿ ಲಿಂಗಾಯತರು, ಒಕ್ಕಲಿಗರು, ಹರಿಜನರು ಮತ್ತಿತರ ಅಲ್ಪಸಂಖ್ಯಾತರು ಇದ್ದರು. ಅದರಲ್ಲಿ ಲಿಂಗಾಯತರದೇ ಹೆಚ್ಚಿನ ಸಂಖ್ಯೆ. ಆದರೆ ಮುನಿಲಿಂಗೇಗೌಡ ಎನ್ನುವ ಒಕ್ಕಲಿಗ ಈ ಹಳ್ಳಿಗೇ ದೊಡ್ಡ ಜಮೀನ್ದಾರ. ತನ್ನ ಗದ್ದೆಗೆ ದಾಳಿಯಿಡುತ್ತಿದ್ದ ಆನೆ, ಕರಡಿ, ಕಾಡುಹಂದಿಗಳನ್ನು ಓಡಿಸಲೆಂದು ಡಬ್ಬಲ್ ಬ್ಯಾರೆಲ್ ಗನ್ ಅನ್ನು ಇಟ್ಟುಕೊಂಡಿದ್ದ ಒಬ್ಬನೇ ವ್ಯಕ್ತಿಯಾಗಿದ್ದ ಆ ಹಳ್ಳಿಗೆ.

ಸಣ್ಣಪುಟ್ಟ ರೈತರಿಗೆ ಸ್ಥಿತಿವಂತ ಮುನಿಲಿಂಗೇಗೌಡ ಕಣ್ಣಲ್ಲಿ ಒತ್ತುತ್ತಿದ್ದ. ಅವನ ಹಿಂದೆ ಏನೇನೋ ಬೈದುಕೊಳ್ಳುತ್ತಿದ್ದವರು ಎದುರಿಗೆ ಕಂಡೊಡನೆ ಸಲಾಮು ಹೊಡೆಯುತ್ತಿದ್ದರು. ಅವನಲ್ಲಿದ್ದ ಬಂದೂಕು ಇದಕ್ಕೆ ಬಹುಮಟ್ಟಿಗೆ ಕಾರಣವಾಗಿದ್ದಿತು ಎನಿಸುತ್ತದೆ.

ಹಳ್ಳಿಗಳಲ್ಲಿ ವೈಯಕ್ತಿಕವಾಗಿ ನಡೆಯುವ ಜಗಳಗಳು ದಿಢೀರನೇ ಜಾತಿ ಸ್ವರೂಪ ಪಡೆದುಕೊಂಡುಬಿಡುತ್ತವೆ. ಅಂಥ ಪಾಳೇಗಾರೀ ವಾತಾವರಣ ಅಲ್ಲಿ ಮನೆಮಾಡಿಕೊಂಡಿರುತ್ತದೆ. ಮುನಿಲಿಂಗೇಗೌಡ ದೊಡ್ಡ ಜಮೀನ್ದಾರನೇನೋ ಸರಿ. ಆದರೆ ಅವನು ತನ್ನ ಗದ್ದೆಗೆ ಹೋಗಬೇಕಾದರೆ ಅಧಿಕೃತ ದಾರಿಯಿರಲಿಲ್ಲ. ಸಣ್ಣಪುಟ್ಟ ರೈತರ ಗದ್ದೆಗಳ ಮೂಲಕ ತನ್ನ ಜಮೀನಿಗೆ ಹೋಗಬೇಕಾಗಿತ್ತು. ಕಾಕತಾಳೀಯವಾಗಿ ಆ ಸಣ್ಣಪುಟ್ಟ ಬಹುತೇಕ ಗದ್ದೆಗಳು ಲಿಂಗಾಯತ ರೈತರಿಗೆ ಸೇರಿದವಾಗಿದ್ದವು. ತಮ್ಮ ಗದ್ದೆಯ ಮೂಲಕ ದಾರಿ ಕೊಡದಿದ್ದರೆ ಈತನೆಲ್ಲಿಯ ಜಮೀನ್ದಾರ ಎನ್ನುವ ಕುಹಕ ಲಿಂಗಾಯತ ರೈತರ ತಲೆ ಹೊಕ್ಕಿತು. ತಾವು ದಾರಿಕೊಟ್ಟಿದ್ದಕ್ಕೆ ತಮ್ಮ ಮುಲಾಜು ಹಿಡಿದುಕೊಂಡಿರಬೇಕು ಮುನಿಲಿಂಗೇಗೌಡ ಎಂದು ಲಿಂಗಾಯತ ರೈತರು ಬಯಸುತ್ತಿದ್ದರು. ಕೆರೆಯ ನೀರನ್ನು ಬಿಟ್ಟುಕೊಳ್ಳುವಾಗ ಮೊದಲು ತಾವೇ ಬಿಟ್ಟುಕೊಳ್ಳುತ್ತೇವೆ ಎಂದೂ ಹಟ ಹಿಡಿಯುತ್ತಿದ್ದರು. ಬೇಸಿಗೆ ಕಾಲ ಮತ್ತು ನೀರು ಕಮ್ಮಿ ಇರುವ ಸಂದರ್ಭಗಳಲ್ಲಿ ಮುನಿಲಿಂಗೇಗೌಡನಿಗೆ ಲಿಂಗಾಯತ ರೈತರ ಹಟ ಅತಿಯಾಗಿ ಕಾಣುತ್ತಿತ್ತು. ತಾನು ದೊಡ್ಡ ಜಮೀನ್ದಾರನಿದ್ದೂ ಇಂಥ ಸಣ್ಣಪುಟ್ಟ ರೈತರ ಮುಲಾಜಿನಲ್ಲಿ ಬದುಕುವ ಪರಿಸ್ಥಿತಿ ಬಂತಲ್ಲ ಎನ್ನುವ ಅತೃಪ್ತಿ ಹೆಚ್ಚುತ್ತಲೇ ಹೋಯಿತು. ಆದರೆ ಮುನಿಲಿಂಗೇಗೌಡನದು ತಾಳ್ಮೆಯ ಪ್ರವೃತ್ತಿ. ಸಹನೆಯನ್ನು ಕಳೆದುಕೊಂಡರೆ ಹೆಚ್ಚಿನ ನಷ್ಟ ತನಗೇ ಎನ್ನುವ ಪರಿಜ್ಞಾನವೂ ಅವನಲ್ಲಿತ್ತು. ದಾರಿ ಮತ್ತು ನೀರು ಸಂಪಿಗೆಹಳ್ಳಿಯನ್ನು ಸಂಘರ್ಷದ ಕೂಪವಾಗಿಸಿದ್ದವು. ಆದರೆ ಮುನಿಲಿಂಗೇಗೌಡನ ತಾಳ್ಮೆ ಅವನ ಮಗ ವೆಂಕಟಪ್ಪನಲ್ಲಿರಲಿಲ್ಲ. ಹರೆಯದ ಹುಮ್ಮಸ್ಸು; ನಾವು ಯಾವುದರಲ್ಲಿ ಕಮ್ಮಿ ಅಂತ ಬೇರೆಯವರ ಮುಲಾಜಿನಲ್ಲಿ ಬದುಕುವುದು ಎಂದು ತಂದೆಯ ಮುಂದೆ ಸಿಡುಕುತ್ತಿದ್ದ.

ತನ್ನ ಬೆಂಬಲಕ್ಕೆ ಒಕ್ಕಲಿಗ ಯುವಕರನ್ನು ಸಂಘಟಿಸಿಕೊಂಡಿದ್ದ. ಇಷ್ಟು ದಿವಸ ಮೊದಲು ನೀರು ಬಿಟ್ಟುಕೊಟ್ಟಿದ್ದು ಸಾಕು, ಅದೆಲ್ಲ ಇನ್ನು ಮುಂದೆ ನಡೆಯೊಲ್ಲ. ನನ್ನಪ್ಪನ ಒಳ್ಳೆಯತನವನ್ನು ನೀವು ದುರುಪಯೋಗಮಾಡಿಕೊಂಡಿದ್ದೀರಿ ಎಂದು ಅಘೋಷಿತ ಸವಾಲು ಹಾಕಿದ ವೆಂಕಟಪ್ಪ. ಕೈಯಲ್ಲಿ ಬಿದಿರಿನ ಬೆತ್ತಗಳನ್ನು ಹಿಡಿದು ತಂಡದೊಂದಿಗೆ ಹೋಗಿ ನೀರು ಬಿಟ್ಟುಕೊಳ್ಳಲು ಆರಂಭಿಸಿದ. ಒಕ್ಕಲಿಗ ವೆಂಕಟಪ್ಪನ ವಿರುದ್ಧ ಲಿಂಗಾಯತರ ಗುರಪ್ಪನ ಗ್ಯಾಂಗ್ ತಯಾರಾಯಿತು. ಒಂದು ದಿನ ವೆಂಕಟಪ್ಪ ಒಬ್ಬನೇ ಗದ್ದೆ ಬದುವಿನಲ್ಲಿ ಹೋಗುತ್ತಿರುವುದನ್ನೇ ಕಾದುಕೊಂಡಿದ್ದ ಗುರಪ್ಪನ ಕಡೆ ಗುಂಪು ದಾಳಿ ನಡೆಸಿತು. ವೆಂಕಟಪ್ಪ ಬಲಶಾಲಿ. ಅನಿರೀಕ್ಷಿತ ದಾಳಿಯನ್ನು ಆಕ್ರಮಣಕಾರಿಯಾಗಿ ಎದುರಿಸಿದ. ಗುರಪ್ಪನ ಗ್ಯಾಂಗಿನಲ್ಲಿ ಹರಿಜನರೂ ಸೇರಿಕೊಂಡಿದ್ದರು. ಅಯ್ಯಣ್ಣ, ಚಿಕ್ಕಣ್ಣ, ನಂದೀಶಯ್ಯ, ಮಾದಪ್ಪ ಈ ನಾಲ್ವರೂ ಸೇರಿ ವೆಂಕಟಪ್ಪನ ಮೇಲೆ ಮುಗಿಬಿದ್ದರು. ಏತನ್ಮಧ್ಯೆ ಒಕ್ಕಲಿಗ ಮತ್ತು ಲಿಂಗಾಯತರ ಸಂಘರ್ಷಕ್ಕೆ ಹೊಸ ಆಯಾಮವೊಂದು ಉಂಟಾಗಿತ್ತು. ಒಕ್ಕಲಿಗ ಹುಡುಗಿಯರನ್ನು ಲಿಂಗಾಯತ ಯುವಕರು, ಅದೇ ರೀತಿ ಲಿಂಗಾಯತ ಹುಡುಗಿಯರನ್ನು ಒಕ್ಕಲಿಗ ಯುವಕರು ಕೆಣಕಿದ ಪ್ರಸಂಗಗಳು ನಡೆದು ಜಾತಿ ಸಂಘರ್ಷಕ್ಕೆ ಜೀವನ್ಮರಣದ ಛಾಪನ್ನು ಒತ್ತಿದಂತಾಗಿತ್ತು.

ನಾವು ನಾಲ್ವರು, ವೆಂಕಟಪ್ಪ ಒಬ್ಬ ಈಡಾಗುತ್ತಾನೆಯೇ ಎಂದುಕೊಂಡಿದ್ದ ಅಯ್ಯಣ್ಣ ಮತ್ತಿತರರ ಲೆಕ್ಕಾಚಾರ ತಲೆಕೆಳಗಾಯಿತು. ಒಮ್ಮೆಗೇ ನಾಲ್ವರು ತನ್ನ ಮೇಲೆ ದಾಳಿ ಮಾಡಿದ್ದರಿಂದ ಜೀವದ ಹಂಗು ತೊರೆದು ಪ್ರತಿದಾಳಿ ನಡೆಸಿದ್ದ ವೆಂಕಟಪ್ಪ. ಈ ಅನಿರೀಕ್ಷಿತ ಪ್ರತಿದಾಳಿಯಿಂದ ಗಲಿಬಿಲಿಗೊಂಡು ವೆಂಕಟಪ್ಪನ ಲಾಠಿಯೇಟಿನ ರುಚಿನೋಡಿದರು ಅಯ್ಯಣ್ಣ ಮತ್ತಿತರರು. ಮೊದಲಿನಿಂದ ಕಾಲು ಕೆರೆದು ದಾಳಿ ಮಾಡಿದವ ವೆಂಕಟಪ್ಪ ಎಂದು ಪೊಲೀಸರಿಗೆ ಅಯ್ಯಣ್ಣ ಮತ್ತಿತರರು ದೂರು ನೀಡಿದರು. ಅದಕ್ಕೆ ಸಾಕ್ಷಿಯಾಗಿ ತಮ್ಮ ಮೈಮೇಲೆ ಬಿದ್ದಿದ್ದ ಏಟುಗಳನ್ನು ತೋರಿಸಿದರು. ಆದರೆ ವೆಂಕಟಪ್ಪನ ಮೈಮೇಲೆ ಗಾಯಗಳೇ ಇರಲಿಲ್ಲ. ಆನೇಕಲ್ ಪೊಲೀಸ್ ಠಾಣೆಯಲ್ಲಿ ಎರಡೂ ಕಡೆಯವರು ಕೇಸ್ ಹಾಕಿದರು.

ಜಮೀನ್ದಾರ ಮುನಿಲಿಂಗೇಗೌಡ ಪೊಲೀಸರಿಗೆ ದುಡ್ಡು ಕೊಟ್ಟು ಲಿಂಗಾಯತರನ್ನು ಮತ್ತು ಹರಿಜನರನ್ನು ಜೈಲಿಗೆ ಹಾಕಿಸಿದ್ದಾನೆ. ವೆಂಕಟಪ್ಪನನ್ನು ಸುಮ್ಮನೆ ಕೂರಿಸಿದ್ದಾರೆ, ಅವನನ್ನು ಜೈಲಿಗೆ ಹಾಕಿಲ್ಲ ಎಂದು ಗುರಪ್ಪನ ಗ್ಯಾಂಗ್ ಸುದ್ದಿ ಹರಡತೊಡಗಿತು ಇತ್ತ ಹಳ್ಳಿಯಲ್ಲಿ.

ಲಿಂಗಾಯತರು ಮತ್ತು ಹರಿಜನರು ಒಟ್ಟಾಗಿ ಸಭೆ ಮಾಡುತ್ತಿದ್ದಾರೆ ಎನ್ನುವ ಸುದ್ದಿ ವೃದ್ಧ ಮುನಿಲಿಂಗೇಗೌಡನಿಗೆ ಗೊತ್ತಾಯಿತು. ಮಗ ಹಳ್ಳಿಯಲ್ಲಿಲ್ಲದಿರುವಾಗ ಏನು ಮಾಡುವುದೆಂದು ವೆಂಕಟಪ್ಪನ ಸಹಚರರನ್ನು ಕರೆಕಳುಹಿಸಿದ. ಕೆಲವರಿದ್ದರು ಮತ್ತೆ ಕೆಲವರು ಬೇರೆ ಊರುಗಳಿಗೆ ಹೋಗಿದ್ದರು. ಮನೆಯಲ್ಲಿ 80 ವರ್ಷ ವಯಸ್ಸಿನ ವೃದ್ಧ ಮುನಿಲಿಂಗೇಗೌಡ ಒಬ್ಬನೇ ಇರುವ ಈ ಸಮಯವೇ ದಾಳಿಗೆ ಸೂಕ್ತ ಎಂದುಕೊಂಡ ಗುರಪ್ಪನ ಗ್ಯಾಂಗು ಕೇಕೆ ಹಾಕುತ್ತ ದೌಡಾಯಿಸಿತು. ದಾರಿಯಲ್ಲಿ ವೆಂಕಟಪ್ಪನ ಕಟ್ಟಾ ಬೆಂಬಲಿಗ ರಾಮಸ್ವಾಮಿಯ ಅಂಗಡಿಗೆ ಬೆಂಕಿ ಹಚ್ಚಿದರು. ರಂಗಮ್ಮನ ಮನೆಯ ಹೆಂಚು ಒಡೆದುಹಾಕಿದರು. ರೊಚ್ಚಿಗೆದ್ದ ಜನರು ತನ್ನ ಮನೆಯತ್ತಲೇ ಧುಮ್ಮಿಕ್ಕಿ ಬರುತ್ತಿರುವುದನ್ನು ನೋಡಿದ ಮುನಿಲಿಂಗೇಗೌಡನ ದೇಹದಲ್ಲಿ ಆವೇಶ ಸಂಚಾರಗೊಳ್ಳತೊಡಗಿತು. ತನ್ನ ಮನೆಯ ಮಕ್ಕಳು, ಹೆಣ್ಣುಮಕ್ಕಳನ್ನು ಕಾಯಬೇಕಾದರೆ ಬಂದೂಕನ್ನು ಕೈಗೆತ್ತಿಕೊಳ್ಳಬೇಕೆಂದುಕೊಂಡ. ನಲವತ್ತು ವರ್ಷಗಳ ಹಿಂದೆಯೇ ಖರೀದಿಸಿದ್ದ ಬಂದೂಕನ್ನು ಮನುಷ್ಯರ ಮೇಲೆ ಎಂದೂ ಎತ್ತಿರಲಿಲ್ಲ. ಗಾಳಿಯಲ್ಲಿ ಹಾರಿಸಿದರೆ ಜನ ಅಂಜುವುದಿಲ್ಲ ಎಂದುಕೊಂಡು ನೇರ ಜನರ ಗುಂಪಿನ ಮೇಲೇ ಬಂದೂಕನ್ನು ಚಲಾಯಿಸಿದ. ಮೊಣಕಾಲಿನ ಕೆಳಗೇ ಗುರಿಯಿಟ್ಟ. ಬಂದೂಕಿನಿಂದ ಹಾರಿದ ಚೆರ್‍ರಿಗಳು ಒಬ್ಬನ ತೊಡೆಯೊಳಕ್ಕೆ ಸೇರಿ ಅವನ ವೃಷಣಕ್ಕೂ ಅಲ್ಪ ಗಾಯವನ್ನುಂಟುಮಾಡಿತು. ಮತ್ತಿತರ ಮೂವರು ನಾಲ್ವರಿಗೆ ಗುಂಡಿನ ಚೂರುಗಳು ಸಿಡಿದು ಗಾಯಗಳಾದವು. ಮುದುಕ ಬಂದೂಕ ಹಾರಿಸಲಾರ ಎಂದುಕೊಂಡು ಧೈರ್ಯದಿಂದ ಸಾಗಿದ್ದ ಜನಜಂಗುಳಿಯ ಜಂಘಾಬಲವನ್ನೇ ಉಡುಗಿಸಿತು ಗುಂಡಿನ ದಾಳಿ. ಜಂಗುಳಿ ಛಿದ್ರವಾಗಿ ದಿಕ್ಕಾಪಾಲು ಓಡಿಹೋಯಿತು.

ದಾಳಿಕೋರರು ಚದುರಿ ಓಡುತ್ತಿರುವಾಗ ವೆಂಕಟಪ್ಪ ಹಳ್ಳಿಯನ್ನು ಪ್ರವೇಶಿಸುತ್ತಾನೆ. ಓಡಿಹೋದವರು ಪುನಃ ಠಾಣೆಗೆ ಹೋಗಿ ವೆಂಕಟಪ್ಪ ಬಂದು ಬಂದೂಕು ಹಾರಿಸಿದ್ದಾನೆ. ಅದು ಒಬ್ಬನ ತೊಡೆಯನ್ನೇ ಸೀಳಿದೆ. ಉಳಿದವರಿಗೂ ಗಾಯ ಮಾಡಿದೆ. ಪೋಲೀಸರಿಗೆ ನನ್ನ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಕ್ಕೆ ಈ ಶಿಕ್ಷೆ ಎಂದು ಗುಡುಗಿದ ಎಂಬಿತ್ಯಾದಿ ಸುಳ್ಳು ಫಿರ್ಯಾದಿಯನ್ನು ಕೊಟ್ಟರು.

ಪೋಲೀಸ್ ಠಾಣೆಯಲ್ಲಿ ಕೂರಿಸಿದ್ದ ಅಯ್ಯಣ್ಣ ಮತ್ತಿತರರನ್ನು ಮೊದಲೇ ಮುಚ್ಚಳಿಕೆ ಬರೆಸಿಕೊಂಡು ಬಿಟ್ಟುಬಿಡಲಾಗಿತ್ತು. ವೆಂಕಟಪ್ಪ ಜಮೀನ್ದಾರನಾಗಿದ್ದರಿಂದ ಒಂದಷ್ಟು ದುಡ್ಡು ಕೀಳಬಹುದೆಂದು ಸಂಜೆಯವರೆಗೂ ಕೂರಿಸಿದ್ದರು. ಹೀಗಾಗಿ ಮೊದಲೇ ಹಳ್ಳಿಗೆ ಬಂದ ಅಯ್ಯಣ್ಣ ಮತ್ತಿತರರು ಜನಜಂಗುಳಿಯಲ್ಲಿ

ಸೇರಿಕೊಂಡಿದ್ದರು. ಅವರೇ ಈಗ ಪುನಃ ವೆಂಕಟಪ್ಪನ ಮೇಲೆ ಸುಳ್ಳು ಕಂಪ್ಲೇಂಟ್ ನೀಡಿದ್ದರು.

ಪೊಲೀಸರು ರಾತ್ರಿಯೇ ಬಂದು ವೆಂಕಟಪ್ಪನನ್ನು ಪುನಃ ಬಂಧಿಸಿ ಬಂದೂಕನ್ನು ಸೀಜ್ ಮಾಡಿಕೊಂಡು ಹೋಗಿದ್ದರು. ತನ್ನ ಏಕೈಕ ಮಗನನ್ನು ಬಂಧಿಸಿ ಒಯ್ಯುವಾಗ ಮುನಿಲಿಂಗೇಗೌಡ ಪೊಲೀಸರಿಗೆ ಅಡ್ಡಬಂದು, "ಬಂದೂಕು ಹಾರಿಸಿದವನು ನಾನು. ನನ್ನನ್ನು ಬಂಧಿಸಿರಿ" ಎಂದ. ಆತನ ಮಾತಿಗೆ ನಕ್ಕ ಪೊಲೀಸರು "ನೀನು 80 ವರ್ಷದ ಮುದುಕ. ಬಂದೂಕು ಎತ್ತಲಿಕ್ಕೇ ನಿನ್ನಲ್ಲಿ ಶಕ್ತಿಯಿಲ್ಲ. ಇನ್ನು ಹಾರಿಸುವುದು ದೂರದ ಮಾತು" ಎಂದು ನಗಾಡುತ್ತ ವೆಂಕಟಪ್ಪನನ್ನು ಸೆಳೆದೊಯ್ದರು.

ಜಮೀನ್ದಾರ ಮುನಿಲಿಂಗೇಗೌಡ ನನ್ನ ಮನೆಗೆ ಮುಂಜಾನೆ ಆರು ಗಂಟೆಗೆ ಬಂದ. ಮಾತಾಡುವ ಮೊದಲೇ ನನ್ನ ಪಾದಗಳಿಗೆರಗಿದ. ನನಗೆ ಬಹಳ ಮುಜುಗರವಾಗಿ "ನೀವು ಹಿರಿಯರು, ಹೀಗೆಲ್ಲ ಮಾಡಬಾರದು" ಎಂದು ಎಬ್ಬಿಸಿದಾಗ ಈ ಮೇಲಿನ ಕಥೆಯನ್ನೆಲ್ಲ ಹೇಳಿ ಗಳಗಳ ಅಳತೊಡಗಿದ, ಏನಾದರೂ ಮಾಡಿ ನನ್ನ ಮಗನನ್ನು ಬಿಡಿಸಿಕೊಡಬೇಕು ಎಂದು ನನ್ನ ಕೈ ಹಿಡಿದುಕೊಂಡ.

ವೆಂಕಟಪ್ಪನಿಗೆ ಬೇಲ್ ಕೊಡಿಸಿದೆ. ಕಾಡುಪ್ರಾಣಿಗಳ ಹಾವಳಿ ವಿಪರೀತವಾಗಿರುವುದನ್ನು ಕೋರ್ಟಿಗೆ ಮನನ ಮಾಡಿಕೊಟ್ಟು ಸೀಜ್ ಮಾಡಲ್ಪಟ್ಟ ಬಂದೂಕನ್ನೂ ವಾಪಸ್ ಕೊಡಿಸಿದೆ. ಕೇಸು ಎವಿಡೆನ್ಸ್ ಸ್ಟೇಜ್‌ಗೆ ಬರುತ್ತಿದೆ ಎನ್ನುವಾಗ ಗುರಪ್ಪನ ಗುಂಪಿನ ಕಡೆಯವನೊಬ್ಬ ಬಂದೂಕು ಹಾರಿಸಿ ತನ್ನ ಆಕಳನ್ನು ಮುನಿಲಿಂಗೇಗೌಡ ಕೊಂದಿದ್ದಾನೆ ಎಂದು ಕಂಪ್ಲೇಂಟ್ ಕೊಟ್ಟ. ವಾಸ್ತವದಲ್ಲಿ ಮುನಿಲಿಂಗೇಗೌಡ ಹಂದಿ ಓಡಿಸಲು ಹಾರಿಸಿದ ಗುಂಡು ಪಕ್ಕದ ಗದ್ದೆಯವನ ಆಕಳಿಗೆ ತಾಗಿತ್ತು.

ಬಂದೂಕಿನ ಲೈಸೆನ್ಸ್ ಮುನಿಲಿಂಗೇಗೌಡನ ಹೆಸರಲ್ಲಿರುವುದೇನೋ ನಿಜ. ಆದರೆ ಅದನ್ನು ಚಲಾಯಿಸುವ ಶಕ್ತಿ ಆತನಲ್ಲಿಲ್ಲ. ಹೀಗಾಗಿ ಅಂದು ಗಲಭೆಯ ಕಾಲದಲ್ಲಿ ಬಂದೂಕು ಹಾರಿಸಿದ್ದು ಮಗ ವೆಂಕಟಪ್ಪನೇ ಎಂದು ಪ್ರಾಸಿಕ್ಯೂಷನ್ ಬಲವಾಗಿ ವಾದ ಮಂಡಿಸಿತ್ತು. ಆಶ್ಚರ್ಯವೆಂದರೆ, ಮುನಿಲಿಂಗೇಗೌಡ ಬಂದೂಕು ಹಾರಿಸಿ ತನ್ನ ಆಕಳನ್ನು ಕೊಂದಿದ್ದಾನೆಂದು ಕಂಪ್ಲೇಂಟ್ ನೀಡಿದವ ಬೇರೆ ಯಾರೂ ಆಗಿರಲಿಲ್ಲ, ವೆಂಕಟಪ್ಪನೇ ಬಂದೂಕು ಹಾರಿಸಿದ್ದು ಎಂದು ಮಾಡಿದ ಕೇಸಿನಲ್ಲಿಯ ಮುಖ್ಯ ಸಾಕ್ಷಿ ಆತನಾಗಿದ್ದ!

ಸಂಪಿಗೆಹಳ್ಳಿಯಲ್ಲಿ ಗಲಭೆ ನಡೆಯುತ್ತಿರುವಾಗಲೇ 18 ಕಿ.ಮೀ. ದೂರದ ಆನೇಕಲ್ ಠಾಣೆಯಿಂದ ವೆಂಕಟಪ್ಪ ಬಿಡುಗಡೆಯಾಗಿದ್ದ ಎನ್ನುವ ಸಂಗತಿಯನ್ನು ಠಾಣೆಯ S.H.D.ಯನ್ನು ಕೋರ್ಟ್‌ನಲ್ಲಿ ಹಾಜರುಪಡಿಸುವ ಮೂಲಕ ಸಾಬೀತುಗೊಳಿಸಿದೆ. ಮುನಿಲಿಂಗೇಗೌಡನಿಗೆ ಬಂದೂಕು ಚಲಾಯಿಸಲು ಬರುತ್ತದೆ ಎನ್ನುವುದನ್ನು ಆಕಳು ಸತ್ತಿದ್ದಕ್ಕಾಗಿ ನೀಡಿದ ಕಂಪ್ಲೇಂಟ್‌ನಲ್ಲಿ ಮುಖ್ಯ ಸಾಕ್ಷಿಯೇ ಒಪ್ಪಿಕೊಂಡು ಬಿಟ್ಟಿದ್ದ. ಕೇಸ್ ಮೇಲೆ ಕೇಸ್‌ಗಳನ್ನು ಮಾಡುತ್ತ ಹೋದರೆ ಆರೋಪಿಯನ್ನು ಅಲ್ಲಾಡಿಸಬಹುದು ಎಂದುಕೊಳ್ಳುವುದು ಎಂಥ ಪ್ರಮಾದವಾಗುತ್ತದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

71

ಪೊಲೀಸರಿಗೆ ಚಳ್ಳೆಹಣ್ಣು, ಡಾಕ್ಟರಿಗೆ ಬೆವರು

ಬೆಂಗಳೂರಿನಿಂದ ನೆಲಮಂಗಲದ ಕಡೆ ಹೋಗುವಾಗ ದಾಸನಪುರ ಮತ್ತು ದೇವಣ್ಣನಪಾಳ್ಯ ಎಂಬ ಎರಡು ಗ್ರಾಮಗಳು ಬರುತ್ತವೆ. ಅಲ್ಪ ಅಂತರದ ಈ ಗ್ರಾಮಗಳೆರಡಕ್ಕೂ ಗ್ರಾಮದೇವತೆ ಒಬ್ಬಳೇ ಇದ್ದಾಳೆ. ಪಟಾಲಮ್ಮನ ಉತ್ಸವ ಒಂದು ಹುಣ್ಣಿಮೆಯ ರಾತ್ರಿಯಂದು ನಡೆಯುತ್ತಿತ್ತು. ಪಟಾಲಮ್ಮನ ಉತ್ಸವಮೂರ್ತಿಯ ಮೆರವಣಿಗೆ ಆರಂಭವಾದಾಗ ರಾತ್ರಿ 7.30 ಗಂಟೆಯಾಗಿರಬಹುದು. ಉತ್ಸವದಲ್ಲಿ ಪಲ್ಲಕ್ಕಿ ಹೊತ್ತವರು, ವಾಲಗದವರು, ಆವೇಶದಲ್ಲಿ ಕುಣಿಯುವವರು, ಪೆಟ್ರೋಮ್ಯಾಕ್ಸ್ ಲೈಟ್ ಹೊತ್ತವರು ಮತ್ತು ಕಲಶ ಹಿಡಿದ ಮುತ್ತೈದೆಯರು ಎಲ್ಲ ಇದ್ದರು. ಉತ್ಸವ ಆರಂಭಗೊಂಡು ಅರ್ಧಗಂಟೆಯೂ ಕಳೆದಿರಲಿಕ್ಕಿಲ್ಲ ಉತ್ಸವಕ್ಕೆ ಎದುರಾಗಿ ಒಂದು ಬೆತ್ತಲೆ ದೇಹ ವಿಕಾರವಾಗಿ ಕಿರುಚುತ್ತಾ ಓಡಿಬರತೊಡಗಿತು! ಮೆರವಣಿಗೆಯ ಮುಂದೆ ಕುಣಿಯುತ್ತಿದ್ದವರಿಗೆ ಈ ದೃಶ್ಯ ಕಂಡು ಅವರ ಆವೇಶವೆಲ್ಲ ಜರ್‍ರನೆ ಇಳಿದುಹೋಯಿತು. ಓಟಕಿತ್ತರು ದೆವ್ವ ದೆವ್ವ ಎಂದು ಚೀರುತ್ತಾ. ನಂತರ ಪಲ್ಲಕ್ಕಿ ಹೊತ್ತವರೂ ಬೆತ್ತಲೆ ದೇಹವನ್ನು ನೋಡಿ ನಡುಗಿದರು. ಪಟಾಲಮ್ಮ ದೇವತೆಯ ಪಲ್ಲಕ್ಕಿಯನ್ನು ಅಲ್ಲಿಯೇ ಬಿಸಾಡಿ ಓಡತೊಡಗಿದರು. ಕಲಶ ಹಿಡಿದುಕೊಂಡಿದ್ದ

ಹೆಂಗಸರು ದಿಗಿಲುಗೊಂಡು ಅಳತೊಡಗಿದರು, ಚೀರಾಡತೊಡಗಿದರು. ಬೆತ್ತಲೆ ದೇಹ ತೀರಾ ಹತ್ತಿರಕ್ಕೆ ಬಂದಾಗ ಮೈಯೆಲ್ಲ ಸುಟ್ಟುಕೊಂಡು ವಿಕಾರವಾಗಿ ಕಾಣಿಸುತ್ತಿದ್ದ ಆ ದೇಹದ ಮೊಲೆಗಳು ಜೋತಾಡುತ್ತಿದ್ದವು.

ಎಲ್ಲ ಓಡಿಹೋದರೂ ಮೂರು ನಾಲ್ಕು ಜನ ಧೈರ್ಯಸ್ಥ ತರುಣರು ಏನಿದು ಎಂದು ಪರೀಕ್ಷಿಸಲು ನಿಂತರು. ಉರಿ ಉರಿ ಎಂದು ಚೀರುತ್ತ ತಮ್ಮ ಮುಂದಿನಿಂದಲೇ ಓಡಿದ ಆ ಹೆಣ್ಣಿನ ಬೆನ್ನು ಹತ್ತಿ ಓಡತೊಡಗಿದರು. ಒಬ್ಬ "ಲೋ ಇವ್ಳು ನಮ್ ಆಚಾರಿ ಮಗಳು ಮಂಜಮ್ಮ ಕಣ್ಲಾ" ಎಂದು ಆ ಬೆತ್ತಲೆ ದೇಹವನ್ನು ಗುರುತು ಹಿಡಿದು ಕೂಗಿದ.

ಅಕ್ಕಸಾಲಿಗ ಜಾತಿಯ ಆದಿನಾರಾಯಣಾಚಾರ್‌ನ ಮನೆಯ ಮುಂದೆ ಓಡಿ ಅಂಗಳದ ಕಲ್ಲಿಗೆ ಎಡವಿ ಮುಗ್ಗರಿಸಿ ಬಿದ್ದಾಗ ತಲೆಗೆ ಕಟ್ಟೆಯ ಕಲ್ಲು ಬಡಿದು ಅವಳ ಪ್ರಜ್ಞೆ ತಪ್ಪಿತು. ಊರ ಅಮ್ಮನ ಉತ್ಸವಕ್ಕಾಗಿ ಹಬ್ಬದಡಿಗೆ ಮಾಡಿಸಿದ್ದ ಆಚಾರ್ ತನ್ನ ಸ್ನೇಹಿತರನ್ನು ಊಟಕ್ಕೆ ಆಹ್ವಾನಿಸಿದ್ದ. ಅವಳ ಬೆನ್ನು ಹತ್ತಿ ಓಡಿ ಬಂದಿದ್ದ ತರುಣರ ಗುಂಪು ದಿಢೀರನೆ ಬೆಳೆದು ದೊಡ್ಡದಾಗಿತ್ತು. "ಆಚಾರ್ರೇ ನಿಮ್ ಮಗಳು, ಮಗಳು...." ಎಂದು ಕೂಗತೊಡಗಿದ್ದರು. ಮನೆ ಮುಂದಿನ ಗದ್ದಲ ಕೇಳಿ ಗಾಬರಿಯಿಂದ ಆಚಾರ್ ಮತ್ತು ಆತನ ಸ್ನೇಹಿತರು ಹೊರಗೆ ಓಡಿಬಂದರು. ಅಂಗಳದಲ್ಲಿ ಬೋರಲಾಗಿ ಬಿದ್ದಿದ್ದ ಬೆತ್ತಲೆ ದೇಹದತ್ತ ಕೈ ತೋರಿ, "ನಿಮ್ ಮಗಳು ಮೈ ಸುಟ್ಟುಕೊಂಡು ಓಡಿಬಂದವ್ಳೆ" ಎಂದಿತು ಗುಂಪು.

ಆಚಾರ್ ಹೆಂಡತಿ ಲಕ್ಷ್ಮಮ್ಮ ಎದೆ ಬಡಿದುಕೊಳ್ಳುತ್ತ ಓಡಿಬಂದಳು. ಬೋರಲು ಬಿದ್ದಿದ್ದ ದೇಹದ ಮೇಲೆ ಆಚಾರ್ ಸ್ನೇಹಿತ ತನ್ನ ಹೆಗಲ ಮೇಲಿದ್ದ ಶಾಲನ್ನು ಹೊದಿಸಿದ. ಕೂಡಲೇ ನೆಲಮಂಗಲದ ಆಸ್ಪತ್ರೆಗೆ ಒಯ್ಯೋಣ ಎಂದಿತು ಗುಂಪು. ರಾಷ್ಟ್ರೀಯ ಹೆದ್ದಾರಿಗೆ ಮಂಜಮ್ಮನನ್ನು ಹೊತ್ತುಕೊಂಡು ಬಂದು ಒಂದು ಲಾರಿಯನ್ನು ಅಡ್ಡಗಟ್ಟಿ ನಿಲ್ಲಿಸಿದರು.

ನೆಲಮಂಗಲದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿರುವ ವಿಕ್ಟೋರಿಯಾಕ್ಕೆ ಒಯ್ಯುವಂತೆ ಸೂಚಿಸಿದರು ಡಾಕ್ಟರ್. ವಾಪಸ್ ಬೆಂಗಳೂರು ದಿಕ್ಕಿಗೆ ಅವಳನ್ನು ಹೊತ್ತು ನಡೆದರು. ಯಶವಂತಪುರ ತಲುಪುತ್ತಿದ್ದಂತೆಯೇ ಅವಳ ಮೈ ತಣ್ಣಗಾಯಿತು. ಅವಳನ್ನು ಹಿಡಿದುಕೊಂಡಿದ್ದವರು ಪ್ರಾಣ ಹೋಯಿತು ಎಂದರು ಒಕ್ಕೊರಲಿನಲ್ಲಿ.

ವಿಕ್ಟೋರಿಯಾದಲ್ಲಿ ತಪಾಸಣೆ ಮಾಡಿದ ಡಾಕ್ಟರ್ ಜೀವ ಹೋಗಿದೆ ಎಂದು ಡಿಕ್ಲೇರ್-ಮಾಡಿದರು. ನೆಲಮಂಗಲಕ್ಕೆ ಒಯ್ದಾಗಲೇ ಪೊಲೀಸರು ಮಂಜಮ್ಮಳ

ಗಂಡ ಮಾರುತಿಯ ಮೇಲೆ 307 ಕೇಸ್ ದಾಖಲು ಮಾಡಿದ್ದರು. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಪೊಲೀಸ್ ಠಾಣೆಯಿಂದ ಮಂಜಮ್ಮನ ಸಾವಿನ ಸುದ್ದಿ ಬಂದ ಮೇಲೆ ಅದನ್ನು ಒಂದು ಕೊಲೆ ಕೇಸಾಗಿ ಮಾಡಿಕೊಂಡರು.

ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟವ್ ಮಾಡಲಾಯಿತು. 80 ಡಿಗ್ರಿಯವರೆಗೂ ದೇಹ ಸುಟ್ಟಿದ್ದು, ತಲೆಗೆ ಪೆಟ್ಟು ಬಿದ್ದಿದ್ದರಿಂದ ಮಿದುಳಿನಲ್ಲಿ ರಕ್ತಸ್ರಾವವಾಗಿ ಸತ್ತಿದ್ದಾಳೆಂದು ವರದಿ ನೀಡಲಾಯಿತು.

ಮಂಜಮ್ಮ ಮತ್ತು ಮಾರುತಿ ಪ್ರೇಮಿಸಿ ವಿವಾಹವಾಗಿದ್ದರು. ಮಾರುತಿ ತಿಗಳ ಜಾತಿಗೆ ಸೇರಿದವ. ಕಾಯಿಪಲ್ಯ ಮಾರುವ ವೃತ್ತಿಯಲ್ಲಿದ್ದ ಮಾರುತಿ ಮದ್ಯ ವ್ಯಸನಿಯೂ ಆಗಿದ್ದ. ಕೀಳು ಜಾತಿಯವನ ಹಿಂದೆ ಓಡಿಹೋಗಿದ್ದಾಳೆಂದು ಮಂಜಮ್ಮಳ ತಂದೆ ತಾಯಿ ಕೋಪಗೊಂಡಿದ್ದರು. ತಮ್ಮ ಮಗಳು ತಮ್ಮ ಪಾಲಿಗೆ ಸತ್ತುಹೋಗಿದ್ದಾಳೆ ಎಂದು ಹೇಳುವ ಮೂಲಕ ತಮ್ಮ ಜಾತಿಪ್ರತಿಷ್ಠೆಗೆ ಜೋತುಬಿದ್ದಿದ್ದರು. ಮದುವೆಯಾಗಿ ಹೋದ ಮಂಜಮ್ಮ ಪುನಃ ತವರಿಗೆ ಬಂದಿರಲಿಲ್ಲ. ತವರುಮನೆಯ ಅಂಗಳಕ್ಕೆ ಪ್ರಾಣ ಬಿಡಲು ಬಂದಂತಾಗಿತ್ತು.

ಉಚ್ಚ ಜಾತಿಯನ್ನು ತ್ಯಾಗ ಮಾಡಿ ಬಂದಿದ್ದರಿಂದ ಗಂಡ ಮತ್ತು ಆತನ ಮನೆಯವರು ತನ್ನನ್ನು ಓಲೈಸಬೇಕೆಂದು ಮಂಜಮ್ಮ ನಿರೀಕ್ಷಿಸುತ್ತಿದ್ದಳು. ಆದರೆ ಗಂಡನ ಮನೆಯವರು "ನೀನೇನೂ ಸ್ಪೆಷಲ್ ಅಲ್ಲ. ಎಲ್ಲ ಸೊಸೆಯಂದಿರಂತೆ ನೀನು ಮನೆಗೆಲಸ ಮಾಡಿಕೊಂಡು, ಹೇಳಿದ್ದು ಕೇಳಿಕೊಂಡು ಇರು" ಎನ್ನುವಂತೆ ವರ್ತಿಸುತ್ತಿದ್ದರು. ತಾನು ಕಳೆದುಕೊಂಡಿದ್ದಕ್ಕೆ ಪರ್ಯಾಯವಾಗಿ ಗಂಡನ ಮನೆಯಲ್ಲಿ ಏನೂ ಸಿಕ್ಕಲಿಲ್ಲ ತನಗೆ ಎನ್ನುವ ವ್ಯಸನ ಮಂಜಮ್ಮನಲ್ಲಿ ತೀವ್ರಗೊಳ್ಳತೊಡಗಿತು. ಇದು ಅವಳನ್ನು ಜಿಗುಪ್ಸೆಗೆ ಈಡುಮಾಡಿತು. ಅಂತಿಮವಾಗಿ ಆತ್ಮಹತ್ಯೆಗೆ ಪ್ರೇರೇಪಿಸಿತು. ತನ್ನ ಗಂಡನ ಊರು ಅರಿಶಿನಕುಂಟೆಯಿಂದ ಕೇವಲ ಒಂದು ಕಿ.ಮೀ. ಅಂತರದಲ್ಲಿದ್ದರೂ ತನ್ನ ತವರೂರು ದಾಸನಪುರ ಅಗಾಧ ಮಾನಸಿಕ ದೂರೀಕರಣಕ್ಕೆ ಈಡಾಗಿತ್ತು. ಜೀವನವೇ ವ್ಯರ್ಥ ಎನ್ನಿಸತೊಡಗಿತ್ತು. ಕುಡಿಯುವುದು ಬಿಡು ಮತ್ತು ಪ್ರತ್ಯೇಕ ಮನೆ ಮಾಡು ಎಂದು ಒತ್ತಾಯಿಸತೊಡಗಿದ್ದನ್ನು ಗಂಡ ಮಾರುತಿ ನಿರ್ಲಕ್ಷಿಸಿದ. ತನ್ನ ಈ ನಿರ್ಲಕ್ಷ್ಯ ಅವಳನ್ನು ಆತ್ಮಹತ್ಯೆಯತ್ತ ತಳ್ಳುತ್ತದೆಂದುಕೊಂಡಿರಲಿಲ್ಲ ಮಾರುತಿ. 'ನೀನು ಕುಡಿಯುವ ಸಾರಾಯಿಯನ್ನೇ ಮೈಮೇಲೆ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುವೆ' ಎಂದು ಪದೇ ಪದೇ ಹೇಳುತ್ತಿದ್ದ ಮಂಜಮ್ಮನ ಮಾತುಗಳನ್ನು ಮಾರುತಿ ಕಿವಿಗೆ ಹಾಕಿಕೊಳ್ಳಲಿಲ್ಲ.

ಪಟಾಲಮ್ಮನ ಉತ್ಸವದ ದಿನ ಊರಿನ ಹೊರಗೆ ಬಂದು ಮೈಗೆ ಉರಿ ಹಚ್ಚಿಕೊಂಡಳು. ಉರಿ ಹಚ್ಚಿಕೊಳ್ಳುವಾಗ ಇದ್ದ ಸಾಯುವ ಇಚ್ಛೆ ನಂತರ

ಉಳಿಯಲಿಲ್ಲ. ಅಭಾವ ವೈರಾಗ್ಯದಿಂದ ಸಾವಿನ ಯೋಚನೆ ಹುಟ್ಟಿಕೊಂಡಿತ್ತು ಅವಳಲ್ಲಿ. ಉರಿಯತೊಡಗಿದ್ದ ತನ್ನ ಸಿಂಥೆಟಿಕ್ ಸೀರೆಯನ್ನು ಬಿಚ್ಚಿ ಎಸೆಯಲು ನಡೆಸಿದ ಅವಳ ಪ್ರಯತ್ನಗಳು ವಿಫಲವಾದವು. ಸೀರೆಯನ್ನು ತಾನೇ ಸೆಳೆದು ಬಿಚ್ಚಿಕೊಂಡಾಗ ಅದರೊಂದಿಗೆ ತನ್ನ ಚರ್ಮವೂ ಕಿತ್ತು ಹೋದುದನ್ನು ನೋಡಿ ಹೌಹಾರಿದಳು ಮಂಜಮ್ಮ. ಇದ್ದಕ್ಕಿದ್ದಂತೆ ತಾಯಿ ಕಣ್ಮುಂದೆ ಬಂದಳು. ತವರಿನತ್ತ ಓಡತೊಡಗಿದಳು.

ಮಗಳು ಮಂಜಮ್ಮ ತನ್ನ ಪಾಲಿಗೆ ಸತ್ತಿದ್ದಾಳೆ ಎಂದು ಘೋಷಿಸಿದ ಆದಿನಾರಾಯಣಚಾರ್‌ಗೆ ಅಳಿಯ ಮಾರುತಿಯ ಮೇಲೆ ಕೋಪ ಉಕ್ಕಿ ಬಂತು. ಮೋಸ ಮಾಡಿ ತನ್ನ ಮಗಳನ್ನು ಓಡಿಸಿಕೊಂಡು ಹೋದ ಅವನ ಮೇಲೆ ಸೇಡು ತೀರಿಸಿಕೊಳ್ಳಲು ಮನಸ್ಸು ಮಸೆಯತೊಡಗಿತು.

ಮಾರುತಿ ಮತ್ತು ಆತನ ಮನೆಯವರು ಸೇರಿ ತಮ್ಮ ಮಗಳಿಗೆ ಬೆಂಕಿ ಹಚ್ಚಿ ಕೊಂದಿದ್ದಾರೆ ಎಂದು ದೂರು ನೀಡಿದ ಆದಿನಾರಾಯಣಚಾರ್. ಮಾರುತಿಯ ಮೇಲೆ ಕೊಲೆ ಕೇಸ್ ಹಾಕಿದರು ಪೋಲೀಸರು. ಆದರೆ ಮಾರುತಿ ತಲೆತಪ್ಪಿಸಿಕೊಂಡ.

ನನ್ನ ಆತ್ಮೀಯ ಸ್ನೇಹಿತರಾದ ಕೆ. ಕೇಶವಮೂರ್ತಿಗಳು ನೆಲಮಂಗಲ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ವಕೀಲರು. ಇವರ ಬಳಿ ಮಾರುತಿ ಮತ್ತು ಅವರ ತಂದೆತಾಯಿಗಳು ಬಂದು ಏನಾದರೂ ಮಾಡಿ ರಕ್ಷಿಸಿ ಎಂದು ನಡೆದ ಸಂಗತಿಯನ್ನೆಲ್ಲಾ ವಿವರಿಸಿದರು. ಕೇಶವಮೂರ್ತಿಗಳಿಗೆ ಮಾರುತಿಯ ಕುಟುಂಬ ಅಪರಿಚಿತವಾದುದ್ದೇನೂ ಆಗಿರಲಿಲ್ಲ.

ಆದಿನಾರಾಯಣಚಾರ್ ಪೋಲೀಸರ ಮೇಲೆ ವಿಶೇಷ ಒತ್ತಡ ತಂದರು. ಏನಾದರೂ ಮಾಡಿ ಮಾರುತಿಯನ್ನು ಬಂಧಿಸಬೇಕೆಂದು ಅವನಿಗಾಗಿ ಶೋಧನೆ ನಡೆಸಿದರು. ಕೇಶವಮೂರ್ತಿಗಳು ಮಾರುತಿಯನ್ನು ನನ್ನ ಬಳಿಗೆ ಕರೆತಂದು ಪರಿಸ್ಥಿತಿಯನ್ನು ವಿವರಿಸಿದರು. ಮಾರುತಿ ಬಡವ. ಅವನನ್ನು ಏನಾದರೂ ಮಾಡಿ ರಕ್ಷಿಸಬೇಕೆಂದು ಕೇಶವಮೂರ್ತಿಗಳು ಮತ್ತು ನಾನು ಸೇರಿ ತೀರ್ಮಾನಿಸಿದೆವು. ಈ ಪ್ರಕರಣದಲ್ಲಿ ನಾನು ವಕಾಲತ್ತು ಹಾಕುವೆ ಎಂದು ಹೇಳಿದಾಗ ಕೇಶವಮೂರ್ತಿಗಳಿಗೆ ಸಂತೋಷವಾಯಿತು.

ಪೋಲೀಸರು ನನ್ನ ಬಳಿ ಬಂದರು. ಮಾರುತಿಯನ್ನು ತಮ್ಮ ವಶಕ್ಕೆ ನೀಡಿ ,ಅವನಿಗೆ ತಾವೇನು ಮಾಡುವುದಿಲ್ಲ ಎಂದರು. ಆದರೆ ನಾವು ಆಂಟಿಸಿಪೇಟರಿ ಬೇಲ್ ಹಾಕಿಕೊಳ್ಳುವ ತಯ್ಯಾರಿ ನಡೆಸಿದ್ದೆವು. ಪೋಲೀಸರು ಮಾರುತಿಯ ತಂದೆ ತಾಯಿ ಮತ್ತಿತರ ಸಂಬಂಧಿಕರನ್ನು ಅಕ್ರಮವಾಗಿ ಬಂಧಿಸಿ ವಿಚಾರಣೆಯ

ಹೆಸರಿನಲ್ಲಿ ಹಿಂಸಿಸತೊಡಗಿದರೂ ಮಾರುತಿಯನ್ನು ನೇರವಾಗಿ ನಾವೇ ಕೋರ್ಟಿನಲ್ಲಿ ಹಾಜರುಪಡಿಸುವ ತೀರ್ಮಾನ ತೆಗೆದುಕೊಂಡೆವು.

ಮಾರುತಿಗೆ ಬುರ್ಖಾ ಹಾಕಿಸಿದೆವು. ಜೊತೆಗೆ ಗಡ್ಡದ ಸಾಬಿಯೊಬ್ಬನನ್ನು ಕರೆತಂದೆವು. ಗಂಡ ಹೆಂಡಿರಂತೆ ನೇರವಾಗಿ ಕೋರ್ಟ್ ಹಾಲ್‌ನಲ್ಲಿ ಹೋಗಿ ಕೂರುವಂತೆ ತಿಳಿಸಿದೆವು. ಅಂದು ನಾವು ಮಾರುತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುತ್ತಿರುವುದರ ಬಗ್ಗೆ ಪೊಲೀಸರು ಸಂಶಯಪಟ್ಟು ಕೋರ್ಟ್ ಆವರಣದಲ್ಲಿ ಹೊಂಚು ಹಾಕಿ ಕೂತುಕೊಂಡರು. ಪೊಲೀಸರ ಕಣ್ಣುಮುಂದೆಯೇ ಬುರ್ಖಾ ತೊಟ್ಟ ಮಾರುತಿ ಗಡ್ಡದ ಸಾಬಿಯ ಜೊತೆ ನಡೆದುಹೋದದ್ದು ಪೊಲೀಸರ ಕಣ್ಣಿಗೆ ಮಣ್ಣೆರಚಿತು.

'ಜಡ್ಜ್ ಕೋರ್ಟ್ ಹಾಲ್‌ನಲ್ಲಿ ಬಂದು ಆಸೀನರಾದ ಮೇಲೆ ನಾವು ಸನ್ನೆ ಮಾಡುತ್ತೇವೆ. ಆಗ ನೀನು ಬುರ್ಖಾ ತೆಗೆದು, ಸೀರೆ ಬಿಚ್ಚಿ ಒಳಗೆ ಮೊದಲೇ ತೊಟ್ಟುಕೊಳ್ಳಲ್ಪಟ್ಟ ಪ್ಯಾಂಟ್ ಷರ್ಟ್ ಮೇಲೆ ನಿಲ್ಲುವುದು' ಎಂದು ರಿಹರ್ಸಲ್ ಮಾಡಿಸಿದ್ದೆವು. ಆದರೆ ಮಾರುತಿ ಕೋರ್ಟ್ ಹಾಲ್‌ನಲ್ಲಿ ನಾವು ಪ್ರವೇಶಿಸಿದ ತಕ್ಷಣ ಎದ್ದು ನಿಂತು ಬುರ್ಖಾ ತೆಗೆದುಹಾಕಿದ. ಸೀರೆ ಬಿಚ್ಚತೊಡಗಿಬಿಟ್ಟ. ಮ್ಯಾಜಿಸ್ಟ್ರೇಟ್ ಅವರು ಇನ್ನೂ ತಮ್ಮ ಚೇಂಬರ್‌ನಿಂದ ಕೋರ್ಟ್ ಹಾಲ್‌ಗೆ ಪ್ರವೇಶಿಸಿಯೇ ಇರದಿರುವಾಗಲೇ. ನಾವು ಮಾರುತಿಗೆ ತಡೆತಡೆ ಎಂದು ಮಾಡಿದ ಸಂಜ್ಞೆ ಅವನಿಗೆ ಅರ್ಥವಾಗಲೇ ಇಲ್ಲ. ಕೋರ್ಟ್ ಹಾಲ್‌ನಲ್ಲಿದ್ದ ಬೆಂಚ್ ಕ್ಲರ್ಕ್ ಮತ್ತು ಲೇಡಿ ಟೈಪಿಸ್ಟ್‌ಗಳು ಸೀರೆ ಬಿಚ್ಚುತ್ತಿರುವ ದೃಶ್ಯ ನೋಡಿ ಓ ಎಂದು ಉದ್ಗಾರ ತೆಗೆದಾಗ ಹೊರಗಿದ್ದವರೆಲ್ಲ ಹಾಲ್ ಒಳಗೆ ಓಡಿಬಂದರು. ಸೀರೆ ಬಿಚ್ಚಿದ ವ್ಯಕ್ತಿ ಬೆತ್ತಲೆಯಾಗದೆ ಪ್ಯಾಂಟ್ ಷರ್ಟ್‌ಗಳ ಮೇಲೆ ನಿಂತುದನ್ನು ನೋಡಿ ಏನೂ ಅರ್ಥವಾಗದೇ ಜನರೆಲ್ಲಾ ತಮಾಷೆ, ಕೌತುಕ, ಗಾಬರಿ ಮಿಶ್ರಿತ ದೃಷ್ಟಿಯಲ್ಲಿ ಮಾರುತಿಯನ್ನು ನೋಡತೊಡಗಿದರು. ಅಷ್ಟರಲ್ಲಿ ಮ್ಯಾಜಿಸ್ಟ್ರೇಟ್ ಒಳಗೆ ಪ್ರವೇಶಿಸಿದರು. ಸೈಲೆನ್ಸ್ ಸೈಲೆನ್ಸ್ ಎಂದು ದಫ್ತರಿ. ಒಳಗಿನ ಗಲಾಟೆ ಹೊರಗೂ ಪಸರಿಸಿದ್ದರಿಂದ ಪೊಲೀಸರೂ ಒಳಕ್ಕೆ ಓಡಿಬಂದರು. ಮಾರುತಿಯನ್ನು ಕೋರ್ಟ್ ಹಾಲ್‌ನಲ್ಲಿ ನೋಡಿ ನಿರಾಶೆಯೊಂದಿಗೆ ಕೋಪ ಅವರ ಮುಖದಲ್ಲಿ ತುಳುಕತೊಡಗಿತು.

ಇದರಿಂದ ಸಿಟ್ಟಿಗೆದ್ದ ಪೊಲೀಸರು ಡೈಯಿಂಗ್ ಡಿಕ್ಲೇರೇಷನ್ ಒಂದನ್ನು ಹುಟ್ಟು ಹಾಕಿದರು. ಮಂಜಮ್ಮ ಸಾಯುವಾಗ ತನ್ನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದು ತನ್ನ ಗಂಡ ಮತ್ತು ಆತನ ಮನೆಯವರು ಎಂದು ಹೇಳಿ ಹೆಬ್ಬೆಟ್ಟು ಒತ್ತಿದಂತೆ ಡಾಕ್ಯುಮೆಂಟ್ ಅನ್ನು ಸೃಷ್ಟಿಸಲಾಗಿತ್ತು.

ಡಾಕ್ಟರ್ ಕಡೆಯಿಂದ 80 ಡಿಗ್ರಿಯವರೆಗೆ ಸುಟ್ಟಿದ್ದನ್ನು ಮಾತ್ರ ವಿವರಿಸುವ ಪೋಸ್ಟ್ ಮಾರ್ಟಮ್ ರಿಪೋರ್ಟ್ ಅನ್ನು ಹಾಜರುಪಡಿಸಿದರು. ಆದರೆ, ನನ್ನ ಸಹೋದ್ಯೋಗಿ ಕೇಶವಮೂರ್ತಿಯವರು ಆಸ್ಪತ್ರೆಯ ಮೂಲ ರಿಜಿಸ್ಟರ್‌ನಲ್ಲಿ ಮಂಜಮ್ಮಳ ಸಾವು ಹೇಗೆ ಸಂಭವಿಸಿತು ಎಂದು ಹೇಳುವ ವರದಿಯ ಜೆರಾಕ್ಸ್ ಅನ್ನು ವಾಮಮಾರ್ಗದಿಂದ ಮಂಜಮ್ಮ ಸತ್ತ ಮಾರನೇ ದಿನವೇ ಪಡೆದುಕೊಂಡು ತಮ್ಮಲ್ಲಿ ಇರಿಸಿಕೊಂಡಿದ್ದರು. ಟ್ರಯಲ್ ಸಮಯದಲ್ಲಿ ಈ ಜೆರಾಕ್ಸ್ ಪ್ರತಿ ನಮ್ಮ ಗೆಲುವಿಗೆ ಕೀಲಿಕೈಯಾಯಿತು. ಅದರಲ್ಲಿ ತವರು ಮನೆಯ ಅಂಗಳದ ಕಟ್ಟೆಯ ಕಲ್ಲಿಗೆ ತಲೆಬಡಿದು ಮಿದುಳಿನಲ್ಲಿ ರಕ್ತಸ್ರಾವವಾಗಿದ್ದರಿಂದ ಸಾವನ್ನಪ್ಪಿದ ಸಂಗತಿ ದಾಖಲಾಗಿತ್ತು. ಇದಕ್ಕೆ ಸಾಂದರ್ಭಿಕ ಸಾಕ್ಷಿಗಳನ್ನಾಗಿ ಮಂಜಮ್ಮಳನ್ನು ಬೆನ್ನತ್ತಿ ಹೋಗಿ ನಂತರ ಆಸ್ಪತ್ರೆಗೆ ಸೇರಿಸಿದ ಘಟಾಲಮ್ಮ ದೇವತೆಯ ತರುಣ ಭಕ್ತರನ್ನು ಬಳಸಿಕೊಂಡೆವು.

ವಿಟ್ನೆಸ್ ಬಾಕ್ಸ್‌ನಲ್ಲಿ ನಿಂತ ನೆಲಮಂಗಲ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟ ಮತ್ತು ಮಂಜಮ್ಮನನ್ನು ಆಸ್ಪತ್ರೆಗೆ ತಂದಾಗ ಅವಳು ಪ್ರಜ್ಞಾಹೀನಳಾಗಿದ್ದಳೆಂದು ಆಕ್ಸಿಡೆಂಟ್ ರಿಜಿಸ್ಟರ್‌ನಲ್ಲಿ ಬರೆದುಕೊಂಡಿದ್ದ ಡಾಕ್ಟರಿಗೆ ಜೆರಾಕ್ಸ್ ಪ್ರತಿಯನ್ನು ಹಿಡಿದಾಗ ಬೆವತುಹೋದ! ಕಾರಣ ಅದೇ ಡಾಕ್ಟರ್ ಪೊಲೀಸರು ತದನಂತರದಲ್ಲಿ ಹುಟ್ಟುಹಾಕಿದ ಡೈಯಿಂಗ್ ಡಿಕ್ಲೇರೇಷನ್‌ಗೂ ಸಹಿ ಮಾಡಿದ್ದ. ನ್ಯಾಯಾಧೀಶ ಡಿ.ಪಿ. ಹಿರೇಮಠ್ ಅವರು ಆ ಡಾಕ್ಟರ್‌ಗೆ ವಾರ್ನ್ ಮಾಡಿ ಬಿಡಲು ಕಾರಣ ಆ ಡಾಕ್ಟರ್ ಅಂತಹ ಒಂದು ಪತ್ರವನ್ನು ಮೊದಲ ಬಾರಿಗೆ ತಮ್ಮ ಸೇವೆಯಲ್ಲಿ ಮಾಡಿದ್ದರೆಂದು ಕಂಡುಬಂದಿತು. PSI ಎನ್. ರಾಜಪ್ಪ ಮತ್ತು CPI ಸಿದ್ದೇಗೌಡರು ತನಿಖಾಧಿಕಾರಿಗಳಾಗಿದ್ದರು ಈ ಪ್ರಕರಣದಲ್ಲಿ.

ಮಾರುತಿ ಆರೋಪಮುಕ್ತನೆಂದು ತೀರ್ಪು ಹೊರಬಿದ್ದಾಗ ಅವನ ಕಣ್ಣುಗಳಲ್ಲಿ ನೀರಾಡುತ್ತಿತ್ತು. ಅವನ ತಲೆ ಕೇಶವಮೂರ್ತಿಯವರ ಪಾದಗಳೆಡೆ ಬಾಗಿತ್ತು.

72

ತಲೆಕೆಳಗಾದ ನ್ಯಾಯಾಧೀಶ

ಮಾಲೂರು ಗೋಲಿಬಾರ್ ಘಟನೆಯ ವಿಚಾರಣಾ ಆಯೋಗ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿತು. ಮಾಲೂರಿನಲ್ಲಿ ಹಲವಾರು ವ್ಯಕ್ತಿಗಳು ಮತ್ತು ಸಂಘಟನೆಗಳು ಆಯೋಗದ ಮುಂದೆ ಅಫಿಡವಿಟ್ ಸಲ್ಲಿಸಿದ್ದವು. ಆಯೋಗ ತನ್ನ ಕೆಲಸವನ್ನು ಕಾವೇರಿ ಭವನದ ಹಿಂಭಾಗದ ಕೋರ್ಟ್ ಸಂಕೀರ್ಣದಲ್ಲಿ ವಿಚಾರಣೆ ಆರಂಭಿಸಿತು. ಆರ್ಗ್ಯುಮೆಂಟ್‌ಗಳು ನಡೆಯತೊಡಗಿದವು. ಆಯೋಗದ ನ್ಯಾಯಾಧೀಶ ಪಿ.ಕೆ. ಶಾಮಸುಂದರ್ ಅವರು ಒಳ್ಳೆ ಕಟ್ಟುಮಸ್ತಾದ, ಗಂಭೀರಮುಖಿಯಾದ ವ್ಯಕ್ತಿ. ಮಂಡ್ಯದ ಕಡೆಯ ಗೌಡರಾಗಿದ್ದ ಅವರಿಗೆ ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವೂ ಇತ್ತು. ಅವರು ಆಡುವ ಇಂಗ್ಲಿಷ್ ಕೇಳುಗನ ಮೇಲೆ ಪ್ರಭಾವ ಬರುತ್ತಿತ್ತು ಮತ್ತು ಅವರ ಬಗ್ಗೆ ಗೌರವ ಭಾವವನ್ನೂ ಮೂಡಿಸುತ್ತಿತ್ತು.

ಆಯೋಗವು ತನ್ನ ವಿಚಾರಣೆಯನ್ನು ಪ್ರಥಮವಾಗಿ ಮಾಲೂರಿನಲ್ಲಿ ನಡೆಸಿದಾಗ ಪೊಲೀಸರೊಂದಿಗೆ ನನ್ನ ಒಡನಾಟ ಶುರುವಾಯಿತು. ಪೊಲೀಸರೊಂದಿಗಿನ ನನ್ನ ಸಂಬಂಧ ಎಣ್ಣೆಸೀಗೆಕಾಯಿಯದು.

ಆಯೋಗದ ಮುಂದೆ ನಾನು ಪೊಲೀಸರ ಪರವಾಗಿಯೇ ಹಾಜರಾಗಿರುವೆನ್ನೇನೋ ಎನ್ನುವಂತೆ ಪೊಲೀಸರು ನನ್ನೊಂದಿಗೆ ವರ್ತಿಸತೊಡಗಿದರು. ಪೊಲೀಸರ ಭಿನ್ನವಿಭಿನ್ನ ನಡವಳಿಕೆಗಳ ದರ್ಶನ ಆಗ ಆಯಿತು. ಅವರು ಡ್ಯೂಟಿಯಲ್ಲಿಲ್ಲದಿರುವಾಗ ಬಹಳ ಸುಸಂಸ್ಕೃತರಂತೆ ವರ್ತಿಸಿದರೆ, ಅದೇ ಯೂನಿಫಾರ್ಮ್ ತೊಟ್ಟು ಕೈಯಲ್ಲಿ ಲಾಠಿ ಹಿಡಿದುಬಿಟ್ಟರೆ ಅಪ್ಪಟ ಬರ್ಬರರಂತಾಗಿಬಿಡುತ್ತಾರೆ. ಕೇಸಿನಲ್ಲಿ ಸಿಕ್ಕಿಹಾಕಿಕೊಂಡವರ ಪ್ರಾಣ ಹಿಂಡುವ ಪೊಲೀಸರೇ ಸ್ವತಃ ತಾವು ಯಾವುದಾದರೂ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಾಗ ತೀರಾ ದೀನರಾಗಿಬಿಡುತ್ತಾರೆ!

ವಿಚಾರಣಾ ಆಯೋಗದ ಮುಂದೆ ಪೊಲೀಸರ ಪರವಾಗಿದ್ದ ವಕೀಲರಾದ ರಾಜೀವ್ ಹೆಗಡೆ ವಾದ ಅಷ್ಟು ಮನಸ್ಸಿಗೆ ನಾಟುತ್ತಿರಲಿಲ್ಲ. ಆಸಕ್ತಿಯಿಂದ ವಾದಿಸುತ್ತಿರಲಿಲ್ಲ. ನಾನು ಶಾಸಕ ಎ. ನಾಗರಾಜ್ ಅವರ ಪರ ವಾದಿಸುವುದನ್ನು ನೋಡಿ, "ನೀವಾದರೂ ಏಕೆ ನಮ್ಮ ವಕೀಲರಾಗಲಿಲ್ಲ" ಎಂದೆನ್ನತೊಡಗಿದರು. ಮಾಜಿ ಸಚಿವರು, ಹಾಲಿ ವಿಪಕ್ಷಗಳ ನಾಯಕರು ಆದ ಮೊಯ್ಲಿಯವರು ನನಗೆ ವಹಿಸಿಕೊಟ್ಟ ಕೇಸಾಗಿದ್ದರಿಂದ ವಿಶೇಷ ಹುಮ್ಮಸ್ಸಿನಿಂದ ಕೆಲಸ ಮಾಡತೊಡಗಿದ್ದೆ. ಮಾಲೂರಿನಲ್ಲಿಯೇ ಬಿಡಾರ ಹೂಡಿದ್ದೆ. ನಾನು ಹೋಟೆಲ್‌ಗಳಲ್ಲಿ ಊಟ ಮಾಡುವುದನ್ನು ನೋಡಿದ ಪೊಲೀಸರು, ಗವರ್ನಮೆಂಟ್ ಗೆಸ್ಟ್‌ಹೌಸ್‌ನಲ್ಲಿ ಚಿಕನ್, ಮಟನ್‌ಗಳನ್ನು ಮಾಡಿಸಿ ಆದರಿಸಲಾರಂಭಿಸಿದರು. ಪೊಲೀಸರು ಮತ್ತು ನನ್ನ ಪರಿಸ್ಥಿತಿಗಳು ತಿರುಗುಮುರುಗಾಗಿದ್ದವು; ಪೊಲೀಸರು ಹುಮ್ಮಸ್ಸಿನಲ್ಲಿದ್ದರು ಆದರೆ ಅವರ ವಕೀಲರು ನಿರುತ್ಸಾಹಿಗಳಾಗಿದ್ದರು. ಅದೇ ರೀತಿ ನಾನು ತೀರಾ ಉತ್ಸಾಹದಲ್ಲಿದ್ದರೆ ನನ್ನ ಕಕ್ಷಿದಾರರು ತಮ್ಮ ಪಾಡಿಗೆ ತಾವಿದ್ದರು. ನನ್ನ ಸಹೋದ್ಯೋಗಿ ಎ. ಗೋಪಾಲ್ "ಸಾರ್ ಮೊಯ್ಲಿಯವರು ಈ ಕೇಸಿನ ಪ್ರತಿ ವಿಷಯವನ್ನು ತೀವ್ರ ಕುತೂಹಲದಿಂದ ಕೇಳಿ ತಿಳಿದುಕೊಳ್ಳುತ್ತಿದ್ದಾರೆ. ನೀವು ಈ ಕೇಸಿನಲ್ಲಿ ಪಡುತ್ತಿರುವ ಪರಿಶ್ರಮದ ಬಗೆಗೆ ನಮ್ಮ ಪಾರ್ಟಿಯ ಲೀಡರ್‌ಗಳ ಮುಂದೆಲ್ಲ ಮಾತಾಡುತ್ತಿದ್ದಾರೆ" ಎಂದು ಆಗಾಗ ಹೇಳುತ್ತಿದ್ದರು. ನನಗೆ ಬೇಜಾರುಂಟಾಗದಿರಲಿ ಎನ್ನುವುದಕ್ಕಾಗಿ ಗೋಪಾಲ್ ಹೀಗೆ ಹೇಳುತ್ತಿರಬಹುದು ಎನ್ನುವ ಅನುಮಾನ ಮಿಂಚಿಮರೆಯಾಗುತ್ತಿತ್ತು. ಸಹೋದ್ಯೋಗಿ ಗೋಪಾಲ್‌ಗೆ ನನ್ನ ಮುಂದೆ ಮೊಯ್ಲಿಯವರನ್ನು, ಹಾಗೆಯೇ ಮೊಯ್ಲಿಯವರ ಮುಂದೆ ನನ್ನನ್ನು ಹೊಗಳುವ ಕೆಲಸ ಬಿದ್ದಂತಾಗಿಬಿಟ್ಟಿತ್ತು.

"ಅಲ್ಲಯ್ಯ ನಿಮ್ಮ ಮೊಯ್ಲಿಯವರ ಹೊಗಳಿಕೆಯ ಮಾತುಗಳನ್ನು ಈಗ ಪಕ್ಕಕ್ಕಿಡು, ಪೊಲೀಸರು ಮಾಡಿಸಿರುವ ಈ ಚಿಕನ್ ಅನ್ನು ಚೆನ್ನಾಗಿ ತಿನ್ನು. ಹೊಗಳಿಕೆಯ ಮಾತುಗಳು ಹೊಟ್ಟೆ ತುಂಬಿಸೋದಿಲ್ಲ ತಿಳೀತಾ, ಆಂ?" ಎಂದಾಗ ಪಾಪ ನಮ್ಮ ಗೋಪಾಲ್ ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳಲು ಕರ್ಚೀಫ್ ತೆಗೆದ.

ಪೊಲೀಸರೊಂದಿಗೆ ಕೂತು ಬಾಡಿನೂಟ ಮಾಡುವಾಗ ಡಿವೈಎಸ್ಪಿ ಕೌರಿ ಹೇಳಿದ ಮಾತುಗಳು ಇಂದಿಗೂ ನನ್ನ ತಲೆಯಲ್ಲಿ ಅಚ್ಚಳಿಯದೆ ಉಳಿದಿವೆ; ಪೊಲೀಸರು ಮನಸ್ಸು ಮಾಡಿದರೆ ಏನೆಲ್ಲ ಮಾಡಬಹುದು ಎನ್ನುವ ದೃಶ್ಯವನ್ನು ಕಣ್ಮುಂದೆ ಬರಿಸುತ್ತವೆ.

"ಅಲ್ರೀ ಹನುಮಂತರಾಯರೇ, ಆಯೋಗದ ಮುಂದೆ ನಾವು ಮಾಡಿದ್ದನ್ನು ಹೇಳಿಕೊಳ್ಳೋಕೆ ಆಗುತ್ತೇನ್ರೀ. ಜನಜಂಗುಳಿಯಲ್ಲಿ ಯಾರೊಬ್ಬರಿಗೂ ನಾವು ಏನೂ ಮಾಡಿಲ್ಲವೆಂದೇ ಹೇಳಬೇಕಾಗುತ್ತೆ. ಇಲ್ಲಿ ನಿಮ್ಮ ಮುಂದೆ ಹೇಳೋಕೆ ಏನು ಅಡ್ಡಿ?" ಎನ್ನುತ್ತಾ ಗೋಲಿಬಾರ್ ಘಟನೆಯ ತುಣುಕೊಂದನ್ನು ತೆಗೆದಿಟ್ಟರು.

"ಮುಸ್ಲಿಮರ ಅಂಗಡಿಗಳಲ್ಲಿ ಲೂಟಿ ಮಾಡಿದ ವಸ್ತುಗಳನ್ನು ರಿಕವರ್ ಮಾಡಲಿಕ್ಕಾಗಿ ಗಲಭೆಕೋರರ ಮನೆಗಳನ್ನು ಶೋಧಿಸಲು ಹೊರಟೆವು. ಐದಾರು ಸಾವಿರ ಸಂಖ್ಯೆಯ ಜನಜಂಗುಳಿ ನಮ್ಮ ವ್ಯಾನ್‌ಗೆ ಬೆಂಕಿ ಹಚ್ಚಿ ತಡೆಯೊಡ್ಡಿತು. ಜನಜಂಗುಳಿ ಗುಂಪು ಗುಂಪಾಗಿ ಚಿತ್ರವಿಚಿತ್ರ ಪ್ಲಾನ್‌ಗಳನ್ನು ರೂಪಿಸತೊಡಗಿತ್ತು. ತೀರಾ ಕೀಟಲೆಕೋರನಂತೆ ಕಾಣುತ್ತಿದ್ದ ಒಬ್ಬನತ್ತ ಹೋಗಿ, "ಹತ್ತೋ" ಎಂದು ನನ್ನ ಜೀಪಿನತ್ತ ತೋರಿಸಿದೆ. ಅವ ಕಿಸಕ್ಕನೆ ನಕ್ಕು ತನ್ನ ಸಹಚರರೆಡೆ ನೋಡುತ್ತ, "ಯಾರ ಮೇಲೆ ಹತ್ತಬೇಕು?" ಎಂದು ಪ್ರಶ್ನಿಸಿ ಲೇವಡಿ ಮಾಡಿದ. ನನಗೆ ಆಗ ಎಲ್ಲಿಲ್ಲದ ರೋಷ ಉಕ್ಕಿಬಂದಿತು. ತಾಳ್ಮೆ ಕಳೆದುಕೊಂಡರೆ ಇಡೀ ಜನಜಂಗುಳಿ ನಮ್ಮ ಮೇಲೆ ತಿರುಗಿ ಬೀಳುತ್ತದೆ ಎಂದುಕೊಂಡು ಅವುಡುಗಚ್ಚಿ ಅವನ ಹಲ್ಕಾ ಲೇವಡಿಯನ್ನು ಸಹಿಸಿಕೊಂಡೆ. ಬಹಳ ಸಲುಗೆಯಿಂದ ಅವನೊಂದಿಗೆ ಮಾತಾಡತೊಡಗಿದೆ. 'ನನ್ನ ಮೇಲೆ ಹತ್ತೋ ಧೀರನೇ ಸರಿ ನೀನು. ನಿನ್ನ ಧೈರ್ಯ ಮೆಚ್ಚಬೇಕಾದದ್ದೇ. ಸರಿ ಈಗ ತಕ್ಷಣಕ್ಕೆ ಜೀಪು ಹತ್ತು, ನಿನಗೇನು ಜೈಲಿಗೆ ಹಾಕೊಲ್ಲ' ಎಂದೆ. ನನ್ನ ಮಾತು ಅವನ ಧೈರ್ಯವನ್ನು ಕೆಣಕಿದುದರಿಂದ 'ಹಿಂದೂಗಳಿಗೆ ಜಯವಾಗಲಿ' ಎಂದು ಕೂಗುತ್ತ ಜೀಪು ಹತ್ತಿ 'ನನಗೆ ಏನು ಬೇಕಾದರೂ ಮಾಡಿ, ಜೈಲಿಗೆ ಹೋಗಲೂ ರೆಡಿ' ಎಂದು ತನ್ನ ಸಹಚರರನ್ನು ಕೈಬೀಸಿ ಕರೆದ. ಅವರೂ ಬಂದು ಜೀಪು ಹತ್ತಿದರು. ವಾಹನ ತುಂಬಿದರೂ

ಹತ್ತಿ ನೇತಾಡತೊಡಗಿದರು. ಎರಡನೇ ಟ್ರಿಪ್ ಬರುವುದಾಗಿ ಹೇಳಿ ಜೀಪ್ ಅನ್ನು ದೂರಕ್ಕೆ ಒಯ್ದೆ. ನಮ್ಮ ಜೀಪ್ ಹಿಂದೆ ಮತ್ತೊಂದು ಜೀಪ್‌ನಲ್ಲಿ ಪೊಲೀಸರಿಗೆ ಬರಲು ಸೂಚಿಸಿದೆ. ಮಧ್ಯ ದಾರಿಯಲ್ಲಿ ಎಲ್ಲರನ್ನೂ ಜೀಪಿನಿಂದ ಇಳಿಸಿ ವಾಪಸು ಹೋಗುವಂತೆ ಹೇಳಿದೆ. ಆದರೆ ನನಗೆ ಲೇವಡಿ ಮಾಡಿದವನನ್ನು ಮಾತ್ರ, 'ನೀನು ಹೀರೋ ನನ್ನ ಜೊತೆಗೇ ಇರಬೇಕು' ಎಂದೆ. ಇನ್ನಿಬ್ಬರು ಅವನೊಂದಿಗೇ ಇರುವುದಾಗಿ ಪಟ್ಟು ಹಿಡಿದರು. ಆ ಮೂವರನ್ನು ಮತ್ತಷ್ಟು ದೂರಕ್ಕೆ ಕರೆದೊಯ್ದೆ.

ಅಲ್ಲಿ ನೋಡಿ ಅವನ ಬಟ್ಟೆ ಬಿಚ್ಚಿಸಿ ನೆಲದ ಮೇಲೆ ಮಲಗಿಸಿ ನಮ್ಮ ಪೊಲೀಸರನ್ನು ಅವನ ಮೇಲೆ ಅಡ್ಡಾಡಿಸಿದೆ. ಅವನ ಚೀರಾಟ ಕೇಳಿಯೇ ಅವನ ಇನ್ನಿಬ್ಬರು ಮಿತ್ರರು ಪ್ಯಾಂಟಿನಲ್ಲಿ ಮೂತ್ರ ಮಾಡಿಕೊಂಡುಬಿಟ್ಟರು. 'ಎಲ್ಲೋ ಮಗನೇ ನನ್ನ ಮೇಲೆ ಹತ್ತು ಬಾ' ಎಂದು ನಾನು ಕರೆಯುತ್ತಿದ್ದರೆ, ಅವನು ನನ್ನ ಪಾದಗಳತ್ತ ನಮಸ್ಕಾರ ಮಾಡುತ್ತಾ, 'ಸ್ವಾಮಿ ನನ್ನದು ದೊಡ್ಡ ತಪ್ಪಾಗಿದೆ ಬಿಟ್ಟುಬಿಡೀ. ಇನ್ನೊಂದ್ಸಾರಿ ಆ ರೀತಿ ಹತ್ತೋ ಮಾತಾಡೋಲ್ಲ' ಎಂದು ರೋದಿಸತೊಡಗಿದ. ಅವನನ್ನು ಬೋರಲು ಮಲಗಿಸಿ ಬೆನ್ನ ಮೇಲೆ ಲಾಠಿಯಿಟ್ಟು ಕಾಲಿನಿಂದ ಚಪಾತಿ ಲಟ್ಟಿಸಿಬಿಟ್ಟಾಗ ಆ ಸೂಳೇಮಗ ಕಕ್ಕಸು ಮಾಡಿಕೊಂಡುಬಿಟ್ಟ.....ಹ್ಹಹ್ಹಹ್ಹ" ಎಂದಾಗ ಚಿಕನ್ ತಿನ್ನುತ್ತಿದ್ದ ನನಗೆ ಉಬ್ಬಳಿಕೆ ಬಂದಂತಾಯಿತು. ನಾನು ನನ್ನ ಕಾಲೇಜ್ ದಿನಗಳಲ್ಲಿ ಹಿಂದಿ ವಿರೋಧಿ ಹೋರಾಟದಲ್ಲಿ ಪೊಲೀಸರ ಅತಿಥಿಯಾಗಿ ಜೈಲು ಸೇರಿದ್ದು ಕಣ್ಮುಂದೆ ಕಟ್ಟಿತು.

ವಿಚಾರಣಾ ಆಯೋಗ ತನ್ನ ಕೆಲಸವನ್ನು ಬೆಂಗಳೂರಿಗೆ ವರ್ಗಾಯಿಸಿತು ಎಂದು ಹೇಳಿದೆನಷ್ಟೆ. ಒಂದು ದಿನ ವಿಚಾರಣಾ ಆಯೋಗದಲ್ಲಿ ಆರ್ಗ್ಯುಮೆಂಟ್ ನಡೆದಿತ್ತು. ಶ್ರೀಮದ್ ಗಾಂಭೀರ್ಯದಿಂದ ನ್ಯಾಯಾಧೀಶರು ಆಸೀನರಾಗಿದ್ದರು. ಇದ್ದಕ್ಕಿದ್ದಂತೆ ಇಡೀ ಕಟ್ಟಡದ ಗರ್ಭದಿಂದ ಭೀಕರ ಸಿಡಿಲಿನಂಥ ಶಬ್ದ ಕೇಳಿಬರತೊಡಗಿತು. ಇದೇನು ಎಂದು ತಿಳಿಯದೆ ದಿಗ್ಭ್ರಾಂತರಾಗಿ ನಾವೆಲ್ಲ ಹಾಲ್‌ನಿಂದ ಹೊರ ಓಡಿಹೋಗಿ ಕೆಳಗೆ ಇಣುಕಿದೆವು. ಕೆಳಗಿದ್ದ ಜನ ಸಹ ನಮ್ಮಂತೆಯೇ ದಿಗ್ಭ್ರಾಂತರಾಗಿ ಚಲ್ಲಾಪಿಲ್ಲಿಯಾಗಿ ಓಡುತ್ತಿರುವುದು ಕಾಣಿಸಿತು. ಆನಂತರ ತಿಳಿಯಿತು ಎಲ್ಲೋ ಸಂಭವಿಸಿದ ಭೂಕಂಪನದ ಅಲೆಗಳ ಶಬ್ದವದು ಎಂದು!

ಕೆಲವು ಕ್ಷಣಗಳ ನಂತರ ಶಬ್ದ ಆಕಾಶದಲ್ಲಿ ಲಯವಾಗಿ ಹೋಯಿತು. ಪುನಃ ಕೋರ್ಟ್ ಒಳಕ್ಕೆ ಬಂದೆವು. ಚೇಂಬರ್ ಒಳಕ್ಕೆ ಓಡಿಹೋಗಿದ್ದ ನ್ಯಾಯಾಧೀಶರು ಬಂದು ತಮ್ಮ ಕುರ್ಚಿಯ ಮೇಲೆ ಆಸೀನರಾದರು. ಇದ್ದಕ್ಕಿದ್ದಂತೆ

ನ್ಯಾಯಾಧೀಶರು ಸ್ವಿಂಗ್ ಮಾಡುತ್ತಿದ್ದ ಕುರ್ಚಿ ಹಿಂದಕ್ಕೆ ಮಡಚಿಕೊಂಡಿತು. ಅವರ ಕಾಲುಗಳೆರಡೂ ಮೇಲಾದವು. ಬೂಟುತೊಟ್ಟ ಪಾದಗಳೆರಡು ಟೇಬಲ್ ಮೇಲೆ ಪಿಕಿಪಿಕಿ ಒದ್ದಾಡತೊಡಗಿದವು. ಪೈಪ್ ಕುರ್ಚಿ ಹಿಂದಕ್ಕೆ ಮುದುಡಿಕೊಂಡು ನ್ಯಾಯಾಧೀಶರನ್ನು ತಲೆಕೆಳಗು ಮಾಡಿಬಿಟ್ಟಿತು. ನಾವೆಲ್ಲ ಧಾವಿಸಿಹೋಗಿ ನ್ಯಾಯಾಧೀಶರನ್ನು ಎತ್ತಿಕೊಂಡೆವು. ಎದ್ದುನಿಂತ ನ್ಯಾಯಾಧೀಶರು ಚಿಕ್ಕಮಕ್ಕಳಂತೆ ತಮ್ಮನ್ನು ಬೀಳಿಸಿದ ಕುರ್ಚಿಯನ್ನು ಒದೆಯತೊಡಗಿದರು! ಅವಾಚ್ಯವಾಗಿ ಬೈಯತೊಡಗಿದರು! ಅವರ ಈ ಅಸಹಜ ವರ್ತನೆ ಅವರ ಬಗೆಗೆ ನಮ್ಮೊಳಗಿದ್ದ ಗೌರವ ಭಾವನೆಯನ್ನು ಅಳಿಸಿಹಾಕಿತು. "ನನಗೆ ವಿಚಾರಣೆ ಮುಂದುವರಿಸುವುದು ಇಷ್ಟವಿಲ್ಲ. ನಾಳೆ ನೋಡೋಣ. ಆಗ ನೋಡಿದರೆ ಭೂಕಂಪದ ಶಬ್ದ, ಈಗ ನೋಡಿದರೆ ಈ ಕುರ್ಚಿ ನನ್ನನ್ನು ತಳಕ್ಕೆ ಕೆಡವಿಕೊಳ್ಳುತ್ತಿದೆ. ಈ ದಿನದಲ್ಲಿ ಏನೋ ಭಾರಿ ದೋಷ ಇದೆ. ನಾಳೆ ಸೇರೋಣ" ಎಂದು ಬಿಟ್ಟರು.

73

ಗಲ್ಲು ತಪ್ಪಿಸಿದ ಪೋಲೀಸ್ ಅಡಾವುಡಿ

ಪೋಲೀಸರು ಕ್ರಿಮಿನಲ್ ಕೇಸ್‌ಗಳನ್ನು ನಿರ್ವಹಿಸುವಲ್ಲಿ ಹಲವಾರು ದೋಷಗಳನ್ನೆಸಗುತ್ತಾರೆ. ಆ ಮಿಸ್ಟೇಕ್‌ಗಳು ಡಿಫೆನ್ಸ್ ಲಾಯರ್‌ಗಳಿಗೆ ವರದಾನವಾಗಿ ಪರಿಣಮಿಸುತ್ತವೆ. ನಮ್ಮ ಪೋಲೀಸ್ ವ್ಯವಸ್ಥೆಯ ಗುಣಮಟ್ಟ ಸುಧಾರಿಸಿದರೆ ಅದು ಲಾಯರ್‌ಗಳಿಗೆ ಸವಾಲಾಗುವುದು ಖಂಡಿತ.

ಸ್ವಾತಂತ್ರ್ಯಪೂರ್ವ ಬ್ರಿಟಿಷ್ ಭಾರತದಲ್ಲಿ ಪೋಲೀಸರಿಗೆ ಪ್ರಶ್ನಾತೀತರಂತೆ ವರ್ತಿಸುವ ಅವಕಾಶವಿತ್ತು. ಆದರೆ, ಈಗ ಆ ಪರಿಸ್ಥಿತಿ ಬದಲಾಗಿದೆ. ಬ್ರಿಟಿಷ್ ಪ್ರಣೀತ ಆ್ಯಕ್ಟ್‌ಗಳು ಈಗಲೂ ಮುಂದುವರಿದುಕೊಂಡು ಬಂದಿದ್ದರೂ ಸಹ ಪ್ರಜಾಪ್ರಭುತ್ವದ ಬೆಳವಣಿಗೆಯು ಅದಕ್ಕೆ ಹಲವು ಹಂತಗಳಲ್ಲಿ ಸವಾಲಾಗಿ ಪರಿಣಮಿಸಿದೆ.

ಪೋಲೀಸ್ ಮತ್ತು ಕ್ರಿಮಿನಲ್ ಲಾಯರ್ ಸಂಬಂಧ ತುಂಬಾ ಸಂಕೀರ್ಣವಾದುದು. ಅದು ಸಾಹಿತ್ಯ ಲೋಕದಲ್ಲಿ ವಿಮರ್ಶಕ ಮತ್ತು

ಕಾದಂಬರಿಕಾರನ ನಡುವಿನ ಸಂಬಂಧಕ್ಕೆ ಹೋಲಿಸಬಹುದಾದಂಥದ್ದು. ಸಾಹಿತ್ಯ ಬೆಳೆಯದೆ ವಿಮರ್ಶೆ

ಬೆಳೆಯುವುದಿಲ್ಲ; ವಿಮರ್ಶೆ ಸ್ಥಗಿತಗೊಂಡರೆ ಸಾಹಿತ್ಯ ಜಡಗೊಳ್ಳತೊಡಗುತ್ತದೆ.

ಕ್ರಿಮಿನಲ್ ಲಾಯರ್‌ನ ಜಾಣತನದ ಟೆಸ್ಟ್ ಆಗಬೇಕಾದರೆ ಜಾಣ ಪೊಲೀಸ್ ವ್ಯವಸ್ಥೆಯ ಅವಶ್ಯಕತೆಯಿದೆ. ನಮ್ಮ ಪೊಲೀಸರಿಗೆ ಕಾನೂನಿಗಿಂತ ತಮ್ಮ ದಂಡದ ಮೇಲೆಯೇ ಹೆಚ್ಚು ವಿಶ್ವಾಸ. ಹೀಗಾಗಿ ಲಾಯರ್ ಕೋರ್ಟ್‌ನಲ್ಲಿ ಸಮರ್ಥ ಎದುರಾಳಿಯೇ ಇಲ್ಲದ ಯೋಧನಂತಾಗಿಬಿಡುತ್ತಾನೆ. ಅಂತಿಮವಾಗಿ ಕಾಪಾಡಬೇಕಾದುದು ಕಾನೂನನ್ನೇ ಹೊರತು ದಂಡವನ್ನಲ್ಲ ಎನ್ನುವ ಪ್ರಜ್ಞೆ ಇನ್ನೂ ನಮ್ಮಲ್ಲಿ ಬೆಳೆಯಬೇಕಿದೆ ಎನಿಸುತ್ತೆ ನನಗೆ. ಪೊಲೀಸರು ತನಿಖೆಯಲ್ಲಿ ಚಾಣಾಕ್ಷತನ ತೋರಿದ್ದರೆ ನನಗೆ ಕೇಸು ಗೆದೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಬಹಳಷ್ಟು ಪ್ರಕರಣಗಳಲ್ಲಿ ಅನಿಸಿದ್ದಿದೆ.

ಅಂಥ ಒಂದು ಕೇಸು ನೆನಪಿಗೆ ಬರುತ್ತಿದೆ. ಆ ಕೇಸು ನಡೆಸಿದ್ದು ನಾನೇನೂ ಅಲ್ಲ, ಪ್ರೊ. ಪುಟ್ಟಸ್ವಾಮಿ. ಡಿ.ಸಿ.ಪಿ. ಸೋಮಶೇಖರ್ ಈ ಪುಟ್ಟಸ್ವಾಮಿಯವರ ಮೇಲೆ ಕೈ ಮಾಡಿದರು ಎನ್ನುವ ಕಾರಣಕ್ಕೆ ವಕೀಲರು ರಾಜ್ಯಮಟ್ಟದಲ್ಲಿ ಹೋರಾಟ ನಡೆಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕೇಸನ್ನು ನಾನು ನಡೆಸದಿದ್ದರೂ ಅದರ ಪೂರ್ವಾರ್ಧದಲ್ಲಿ ನನ್ನ ಪಾತ್ರವಿತ್ತು.

ಆ ಪ್ರಕರಣದ ಕತೆ ಬಹಳ ಕುತೂಹಲಕಾರಿಯಾಗಿದೆ. ಹೊಸಕೋಟೆ ತಾಲ್ಲೂಕಿನ ಚೋಳಪ್ಪನಹಳ್ಳಿಯ ದೊಡ್ಡಪ್ಪಯ್ಯ ಒಳ್ಳೆಯ ಶ್ರೀಮಂತ. ಆತನಿಗೆ ದೊಡ್ಡನಂಜಮ್ಮ ಎನ್ನುವ ಪತ್ನಿ. ಆಕೆಗೆ ಮಕ್ಕಳಾಗಲಿಲ್ಲವೆಂದು ದ್ಯಾವಮ್ಮ ಎನ್ನುವವಳನ್ನು ಮದುವೆಯಾದ. ಆದರೆ ದ್ಯಾವಮ್ಮನಿಗೆ ಸಹ ಮಕ್ಕಳಾಗಲಿಲ್ಲ. ದ್ಯಾವಮ್ಮನ ಅಕ್ಕನ ಮಗ ನಾರಾಯಣಸ್ವಾಮಿ ಆಗಾಗ ದೊಡ್ಡಪ್ಪಯ್ಯನ ಮನೆಗೆ ಬಂದು ಹೋಗುತ್ತಿದ್ದ. ತನ್ನ ಚಿಕ್ಕಮ್ಮನಿಗೆ ಸಹ ಮಕ್ಕಳಾಗದೇ ಹೋದದ್ದು ನೋಡಿ, "ನನ್ನನ್ನೇ ಮಗ ಎಂದು ತಿಳಿದುಕೊಳ್ಳಿ" ಎನ್ನತೊಡಗಿದ. ಬರುಬರುತ್ತ ದೊಡ್ಡಪ್ಪಯ್ಯನನ್ನು ದುಡ್ಡುಕಾಸಿಗಾಗಿ ಪೀಡಿಸತೊಡಗಿದ. ಹಾಗೆಂದು ನಾರಾಯಣಸ್ವಾಮಿ ತೀರಾ ಬಡವನಾಗಿಯೇನೂ ಇರಲಿಲ್ಲ. ದೊಡ್ಡಪ್ಪಯ್ಯನಿಂದ ಕಿತ್ತುಕೊಳ್ಳಬೇಕೆನ್ನುವ ದುರಾಸೆ ಆತನಲ್ಲಿ ಹುಟ್ಟಿಕೊಂಡಿತ್ತು.

ತನ್ನ ಅಣ್ಣನ ಮಗನಿಗೆ ಬಹಳಷ್ಟು ವ್ಯವಹಾರಗಳ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದ ದೊಡ್ಡಪ್ಪಯ್ಯ. ನಾರಾಯಣಸ್ವಾಮಿ ಪದೇ ಪದೇ ಬಂದು ಹೋಗುವುದು ದೊಡ್ಡಪ್ಪಯ್ಯನ ಅಣ್ಣನ ಮಗನಿಗೆ ಇಷ್ಟವಾಗುತ್ತಿರಲಿಲ್ಲ.

ಆದರೂ ದೊಡ್ಡಪ್ಪಯ್ಯ ನಾರಾಯಣಸ್ವಾಮಿಗೆ ಪೂರಾ ಇಲ್ಲವೆನ್ನದೆ ಚೂರುಪಾರು ಹಣ ಕೊಡುತ್ತಿದ್ದ. ನಾರಾಯಣಸ್ವಾಮಿಯ ಈ ವರ್ತನೆ ಸ್ವತಃ ದ್ಯಾವಮ್ಮಳಿಗೇ ಸಿಟ್ಟು ತರಿಸಿತು. ಒಂದು ದಿನ ನಾರಾಯಣಸ್ವಾಮಿಯ ಬಂದು ದುಡ್ಡು ಕೇಳಿದ. ದೊಡ್ಡಪ್ಪಯ್ಯ ಇಲ್ಲ ಎಂದು ಹೇಳಿದ. ದುಡ್ಡು ಇಲ್ಲದಿದ್ದರೆ ಬಂಗಾರ ಕೊಡಿ ಎಂದು ಗಂಟುಬಿದ್ದ. ಆಗ ಸಿಟ್ಟಿಗೆದ್ದ ದ್ಯಾವಮ್ಮ, "ನೀನು ಇನ್ನು ಮೇಲೆ ನಮ್ಮ ಮನೆಗೆ ಕಾಲಿಡಬೇಡ" ಎಂದು ಬೈದಳು. ಈ ಜಗಳ ಜೋರಾಗಿ ನಡೆದು ಅಕ್ಕಪಕ್ಕದ ಮನೆಯವರು ಬಂದು ದೊಡ್ಡಪ್ಪಯ್ಯನ ಅಂಗಳದಲ್ಲಿ ನೆರೆದರು. ದೊಡ್ಡಪ್ಪಯ್ಯನ ಅಣ್ಣನ ಮಗನೂ ಬಂದ. ಜನಬಲ, ಧನಬಲ, ಅಣ್ಣನ ಮಗನ ಸಪೋರ್ಟ್ ಇವೆಲ್ಲ ದೊಡ್ಡಪ್ಪಯ್ಯನಲ್ಲಿ ಆವೇಶ ಹುಟ್ಟಿಸಿದವು. ಸರಿ, ನಾರಾಯಣಸ್ವಾಮಿಯ ಕತ್ತಿಗೆ ಕೈ ಹಾಕಿ ಅಂಗಳಕ್ಕೆ ನೂಕಿದ. ತೀವ್ರ ಅವಮಾನಿತನಾದ ನಾರಾಯಣಸ್ವಾಮಿ 'ಎಲ್ಲರೆದುರಿಗೇ ನಿಮ್ಮಿಬ್ಬರನ್ನು ಹುಟ್ಟಲಿಲ್ಲ ಅನ್ನಿಸುತ್ತೇನೆ' ಎಂದು ಕೂಗುತ್ತ ಹೊರಟುಹೋದ.

ದೊಡ್ಡಪ್ಪಯ್ಯನ ಪಕ್ಕದ ಮನೆಯಲ್ಲಿ ಮದುವೆ ದಿಬ್ಬಣ ನಡೆದಿತ್ತು. ಬಹಳ ಬೇಕಾದವರು. ಹೀಗಾಗಿ ಮದುವೆ ಮುಗಿಯುವವರೆಗೆ ಹಾಕಿಕೊಂಡು ಪುನಃ ವಾಪಸ್ ಕೊಡಿ ಎಂದು ಒಡವೆಗಳನ್ನು ಕೊಟ್ಟಿದ್ದರು.

ದೊಡ್ಡಪ್ಪಯ್ಯನ ಅಣ್ಣ ಕೇವಲ ಕೃಷಿಯ ಮೇಲೆ ಅವಲಂಬಿತನಾಗಿದ್ದುದರಿಂದ ಅಂಥ ಸ್ಥಿತಿವಂತನೂ ಆಗಿರಲಿಲ್ಲ.

ದೊಡ್ಡಪ್ಪಯ್ಯ ಬಡ್ಡಿ ವ್ಯವಹಾರವಿರಿಸಿಕೊಂಡಿದ್ದ. ಊರಲ್ಲಿಯೇ ಹಲವರು ಸಾಲ ವಾಪಸ್ ನೀಡದೆ ಪೀಡಿಸುತ್ತಿದ್ದರು. ಅಂಥ ಸಾಲಗಳ ವಸೂಲಿಗಾಗಿ ತನ್ನ ಅಣ್ಣನ ಮಗನ ಸಹಾಯ ಪಡೆದುಕೊಳ್ಳುತ್ತಿದ್ದ. ಅಣ್ಣನ ಮಗನಿಗೂ ಸಹ ದೊಡ್ಡಪ್ಪಯ್ಯನ ಆಸ್ತಿಯ ಮೇಲೆ ಕಣ್ಣು.

ಮಾರನೆಯ ದಿನ ಬೆಳಗ್ಗೆ ಹೊತ್ತೇರಿದರೂ ದೊಡ್ಡಪ್ಪಯ್ಯನ ಮನೆಯ ಬಾಗಿಲು ತೆಗೆಯಲಿಲ್ಲ. ಮೊಸರು ಮಾರುವ ಹೆಂಗಸು ಕದ ದೂಡಿ ಇನ್ನೇನು ಒಳಹೋಗಬೇಕೆಂದುಕೊಂಡಳು; ಎದುರಿಗೇ ದೊಡ್ಡಪ್ಪಯ್ಯ ಮತ್ತು ದ್ಯಾವಮ್ಮ ಇಬ್ಬರೂ ಶವವಾಗಿದ್ದರು. ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು.

ದೊಡ್ಡಪ್ಪಯ್ಯ ಎರಡನೇ ಮದುವೆಯಾದ ಮೇಲೆ ಮೊದಲ ಪತ್ನಿ ನಂಜಮ್ಮನಿಗೆ ಅಸಮಾಧಾನವಾಗಿತ್ತು. ಪದೇ ಪದೇ ತನ್ನ ತವರೂರಿಗೆ ಹೋಗುತ್ತಿದ್ದಳು. ಕೊಲೆಯಾದ ದಿವಸ ಅವಳು ಊರಲ್ಲಿರಲಿಲ್ಲ. ಮಧ್ಯಾಹ್ನದ ಹೊತ್ತಿಗೆ ತವರಿನಿಂದ ನಂಜಮ್ಮ ಬಂದಳು.

ತನ್ನ ಮನೆಯಲ್ಲಿ ಏನೆಲ್ಲ ಚಿನ್ನದ ಒಡವೆಗಳು ಕಳುವಾಗಿವೆ ಎಂದು ಪಟ್ಟಿ ಮಾಡಿ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟಳು ಮತ್ತು ತನ್ನ ಅನುಮಾನವೆಲ್ಲ ನಾರಾಯಣಸ್ವಾಮಿಯ ಮೇಲೆಯೇ ಎಂದೂ ದೂರಿನಲ್ಲಿ ಹೇಳಿದಳು.

ಪೊಲೀಸರು ತನ್ನ ಶೋಧನೆಯಲ್ಲಿದ್ದಾರೆಂದು ತಿಳಿದ ನಾರಾಯಣಸ್ವಾಮಿ ತಲೆಮರೆಸಿಕೊಂಡ. ಆದರೂ ಪೊಲೀಸರು ಅವನನ್ನು ಬಂಧಿಸುವಲ್ಲಿ ಯಶಸ್ವಿಯಾದರು. ಆದರೆ ಅವನ ಬಂಧನವನ್ನು ಮಾತ್ರ ರೆಕಾರ್ಡ್‌ನಲ್ಲಿ ತರಲಿಲ್ಲ. ಅಕ್ರಮವಾಗಿ ತಮ್ಮ ಕಸ್ಟಡಿಯಲ್ಲಿ 5.11.83 ರಿಂದ ಇರಿಸಿಕೊಂಡು ಅವನನ್ನು ಚೆನ್ನಾಗಿ ಚಚ್ಚತೊಡಗಿದರು. 8.11.83 ರಂದು ನಾರಾಯಣಸ್ವಾಮಿಯ ಮನೆಯ ಮೇಲೆ ದಾಳಿ ನಡೆಸಿ ಅವನ ಮನೆಯ ಹೆಂಗಸರ ಮೈಮೇಲಿದ್ದ ಮತ್ತು ಮನೆಯಲ್ಲಿದ್ದ ಒಡವೆಗಳನ್ನೆಲ್ಲ ಅಕ್ರಮವಾಗಿ ತಂದಿಟ್ಟುಕೊಂಡರು.

ನಿಜವಾಗಿಯೂ ದೊಡ್ಡಪ್ಪಯ್ಯನನ್ನು ಯಾರು ಕೊಲೆ ಮಾಡಿದ್ದು ಎನ್ನುವುದು ನಿಗೂಢವಾಗಿಯೇ ಉಳಿಯಿತು. ನಾರಾಯಣಸ್ವಾಮಿ ಎಲ್ಲರೆದುರಿಗೆ ನಿಮ್ಮನ್ನು ಹುಟ್ಟಿಲ್ಲ ಅನ್ನಿಸ್ತೇನೆ ಎಂದದ್ದೇ ಅಪರಾಧವಾಗಿ ಅವನಿಗೆ ಕೊಲೆಗಾರನ ಪಟ್ಟಿ ಹಚ್ಚಿಬಿಡಲಾಗಿತ್ತು. ನಾರಾಯಣಸ್ವಾಮಿ ಹೀಗೆ ಬಹಿರಂಗವಾಗಿ ಕೊಲೆ ಮಾಡುವುದಾಗಿ ಘೋಷಿಸಿದ್ದರ ದುರ್ಲಾಭ ಪಡೆದುಕೊಂಡು ಬೇರೆ ಯಾರಾದರೂ ಕೊಲೆ ಮಾಡಿರುವ ಸಾಧ್ಯತೆಯಿತ್ತು. ನಾರಾಯಣಸ್ವಾಮಿಯೇ ಕೊಲೆ ಮಾಡಿರುವ ಸಾಧ್ಯತೆಯನ್ನೂ ಇಲ್ಲಿ ತಳ್ಳಿಹಾಕುವಂತಿಲ್ಲ. ಆದರೆ ಸೂಕ್ತ ತನಿಖೆಯಿಂದ ಮಾತ್ರ ಇದೆಲ್ಲ ಬಯಲಾಗಬೇಕಾಗಿತ್ತು.

ನಾರಾಯಣಸ್ವಾಮಿಯನ್ನು ಅಕ್ರಮವಾಗಿ ಪೊಲೀಸರು ಕಸ್ಟಡಿಯಲ್ಲಿಟ್ಟುಕೊಂಡಿದ್ದನ್ನು ಆಕ್ಷೇಪಿಸಿ ಹೇಬಿಯಸ್ ಕಾರ್ಪಸ್ ರಿಟ್ ಅನ್ನು ಅವನ ತಂದೆ ಆದಪ್ಪನ ಪರವಾಗಿ ಹೈಕೋರ್ಟ್‌ನಲ್ಲಿ ನಾನು ಹಾಕಿದೆ ಮತ್ತು ನಾರಾಯಣಸ್ವಾಮಿಯ ಮನೆಯಿಂದ ಏನೇನು ಒಡವೆಗಳನ್ನು ಪೊಲೀಸರು ಕಿತ್ತುಕೊಂಡು ಹೋಗಿದ್ದಾರೆ ಎಂಬ ಬಗ್ಗೆ ಆಭರಣಗಳ ಎಲ್ಲಾ ವಿವರಗಳ ಪಟ್ಟಿಯನ್ನು ಕೋರ್ಟ್‌ಗೆ ನೀಡಿದೆ.

ಆದರೆ ಪೊಲೀಸರು ನಾರಾಯಣಸ್ವಾಮಿಯನ್ನು 12.11.83 ರಂದು ಬಂಧಿಸಿದ್ದೇವೆಂದು, ಅವನು ಸರ್ವೆ ತೋಪೊಂದರಲ್ಲಿ ನೆಲ ಬಗೆದು ಬಚ್ಚಿಟ್ಟಿದ್ದ ಒಡವೆಗಳನ್ನೆಲ್ಲ ಸೀಜ್ ಮಾಡಿದೆವೆಂದು ರೆಕಾರ್ಡ್ ಮೇಲೆ ತಂದರು. ಹೀಗಾಗಿ ನಾನು ಹಾಕಿದ ಹೇಬಿಯಸ್ ಕಾರ್ಪಸ್ ರಿಟ್ ವಜಾ ಆಯಿತು. ಇಲ್ಲಿಗೆ ನನ್ನ ಮತ್ತು ಆ ಕೇಸಿನ ಸಂಬಂಧ ಮುಗಿದುಹೋಯಿತು. ನಾನು ಅದನ್ನು ಅಲ್ಲಿಗೇ ಮರೆತೆ ಕೂಡಾ.

ಮುಂದೆ ನಾರಾಯಣಸ್ವಾಮಿ ತನ್ನ ಈ ಕೇಸ್ ಅನ್ನು ಲಾಯರ್ ಪ್ರೊ. ಪುಟ್ಟಸ್ವಾಮಿಯವರಿಗೆ ಕೊಟ್ಟ.

ಸೆಷನ್ಸ್ ಕೋರ್ಟ್‌ನಲ್ಲಿ ಕೇಸ್ ವಿಚಾರಣೆಗೆ ಬರುವುದಕ್ಕೆ ಒಂದಷ್ಟು ಕಾಲಾವಕಾಶ ತೆಗೆದುಕೊಂಡಿತು. ಹೇಬಿಯಸ್ ಕಾರ್ಪಸ್ ರಿಟ್ ಹಾಕಿದಾಗ ಹೈಕೋರ್ಟಿನಲ್ಲಿ ಪೊಲೀಸರು ನೀಡಿದ ಸಮಜಾಯಿಷಿಯನ್ನು ಮರೆತರು. ತನಿಖಾಧಿಕಾರಿ ವರ್ಗಾ ಆಗಿದ್ದನೆಂದೂ ತೋರುತ್ತದೆ.

ಸೆಷನ್ಸ್ ಕೋರ್ಟ್‌ನಲ್ಲಿ ನಾರಾಯಣಸ್ವಾಮಿಯ ವಿರುದ್ಧ ಇಡೀ ಹಳ್ಳಿಯನ್ನೇ ಸಾಕ್ಷಿಗೆ ನಿಲ್ಲಿಸಿದರು. ಎಲ್ಲ ಸಾಕ್ಷಿಗಳೂ ನಾರಾಯಣಸ್ವಾಮಿಯೇ ಕೊಲೆಗೆ ಕಾರಣ ಎನ್ನುವಂತೆ ಬಹಿರಂಗವಾಗಿ ಘೋಷಿಸಿದ್ದನ್ನು ಹೇಳಿದರು.

ಈ ಸಂದರ್ಭದಲ್ಲಿ ಪುಟ್ಟಸ್ವಾಮಿಯವರು ನನಗೆ ಫೋನ್ ಮಾಡಿ ಹೇಬಿಯಸ್ ಕಾರ್ಪಸ್ ರಿಟ್ ಹಾಕಿದ್ದರ ಫೈಲನ್ನು ಕೇಳಿದರು. ನಾನು ಕೊಟ್ಟೆ. ಹೇಬಿಯಸ್ ಕಾರ್ಪಸ್ ರಿಟ್ ಹಾಕಿದಾಗ, ನಾರಾಯಣಸ್ವಾಮಿಯ ಕುಟುಂಬದವರ ಯಾವ ಯಾವ ಒಡವೆಗಳ ಲಿಸ್ಟ್ ಕೊಟ್ಟಿದ್ದೆನೋ ಅವುಗಳ ವಿವರಗಳನ್ನು ಕೂಲಂಕಷವಾಗಿ ವಿವರಿಸಿದ್ದೆ ಮತ್ತು ಪೊಲೀಸರು ಆ ಪಟ್ಟಿಯಲ್ಲಿದ್ದ ಒಡವೆಗಳ ವಿವರಗಳನ್ನು ಒಪ್ಪಿಕೊಂಡಿದ್ದರು ಕೂಡಾ.

ಆದರೆ, ಸೆಷನ್ಸ್ ನ್ಯಾಯಾಲಯದಲ್ಲಿ ಪೊಲೀಸರು ಅಚಾತುರ್ಯದಿಂದ ತಾ. 13.11.83 ರಂದು ಆ ಒಡವೆಗಳನ್ನು ಜಪ್ತಿ ಮಾಡಿಕೊಂಡಿದ್ದಾಗಿ ಹೇಳಿಕೆ ನೀಡಿಬಿಟ್ಟಿದ್ದರು.

ಹೈಕೋರ್ಟಿನಲ್ಲಿ 12.11.83 ರಂದು ಜಪ್ತಿ ಮಾಡಿಕೊಂಡಿದ್ದಾಗಿ ಒಪ್ಪಿಕೊಂಡು, ಸೆಷನ್ಸ್ ನ್ಯಾಯಾಲಯದಲ್ಲಿ 13.11.83 ಎಂದು ಹೇಳಿಕೆ ನೀಡಿದ್ದನ್ನು ಪ್ರೊ. ಪುಟ್ಟಸ್ವಾಮಿ ನ್ಯಾಯಾಧೀಶರ ಮುಂದಿಟ್ಟರು. ಕೋರ್ಟಿಗೆ ಈ ರೀತಿ ಪೊಲೀಸರು ಸುಳ್ಳು ಹೇಳಿಕೆ ನೀಡಿದ್ದನ್ನು ನ್ಯಾಯಾಧೀಶರು ಗಂಭೀರವಾಗಿ ಪರಿಗಣಿಸಿದರು. ಇದೊಂದೇ ಪಾಯಿಂಟ್ ಮೇಲೆ ನಾರಾಯಣಸ್ವಾಮಿಯ ವಿರುದ್ಧ ಮಾಡಿದ್ದ ಕೊಲೆ ಆರೋಪವನ್ನು ತಿರಸ್ಕರಿಸಿದರು. ನಾರಾಯಣಸ್ವಾಮಿಯನ್ನು ಆರೋಪ ಮುಕ್ತಗೊಳಿಸಿದರು.

ಪೊಲೀಸರು ಅದೊಂದು ತಪ್ಪು ಮಾಡಿರದಿದ್ದರೆ ನಾರಾಯಣಸ್ವಾಮಿಗೆ ಗಲ್ಲು ಇಲ್ಲವೆ ಜೀವಾವಧಿ ಶಿಕ್ಷೆ ಕಟ್ಟಿಟ್ಟಿತ್ತು.

ಸೆಷನ್ಸ್ ಕೋರ್ಟ್ ತೀರ್ಮಾನ ನೀಡಿದ ದಿನವೇ ಆರೋಪಿ ಜೈಲಿನಿಂದ ಸಂಜೆ ಹೊರಗೆ ಬಂದ. ಅವನನ್ನು, ಅವನ ಸಂಬಂಧಿಗಳೊಂದಿಗೆ ಪ್ರೊ. ಪುಟ್ಟಸ್ವಾಮಿ ನನ್ನ ಆಫೀಸಿಗೆ ಕರೆತಂದು ಹೂಮಾಲೆ, ಹಣ್ಣುಹಂಪಲುಗಳನ್ನು ಕೊಡಿಸಿ, ಹೇಬಿಯಸ್ ಕಾರ್ಪಸ್ ರಿಟ್ ಅನ್ನು ಆರೋಪಿಯ ತಂದೆ ಪರವಾಗಿ ಹೈಕೋರ್ಟಿನಲ್ಲಿ ಹೂಡದೇ ಹೋಗಿದ್ದರೆ ಈ ಕೇಸನ್ನು ಗೆಲ್ಲಲು ಸಾಧ್ಯವೇ ಇರಲಿಲ್ಲವೆಂದು ಹೇಳಿದಾಗ ನನಗೆ ನಾನು ನಿರ್ವಹಿಸಿದ ಕೆಲಸದ ಬಗ್ಗೆ ಹೆಮ್ಮೆಯಾಯಿತು.

74

ನಾನು ಸೋತ ಮರ್ಡರ್ ಕೇಸ್

ನಾಮಧಾರಿ ಫಾರ್ಮಿನ ಸಿಖ್ಖರೊಂದಿಗೆ ನನ್ನ ಸಂಪರ್ಕ ಏರ್ಪಟ್ಟಿದ್ದು ಆಕಸ್ಮಿಕ. ಬೆಂಗಳೂರಿನಿಂದ ರಾಮನಗರ ಕಡೆಗೆ ಹೋಗುವಾಗ ಬಿಡದಿ ಬರುತ್ತದೆ. ಇಲ್ಲಿಂದ ಮೂರು ಕಿ.ಮೀ. ಮುಂದಕ್ಕೆ ಹೋದರೆ ಉರಗಳ್ಳಿ ಕ್ರಾಸ್ ಇದೆ. ಈ ಕ್ರಾಸ್‌ನಿಂದ ಒಳಕ್ಕೆ ನಾಲ್ಕು ಕಿ.ಮೀ. ಹೋದರೆ ಉರಗಳ್ಳಿ ಬರುತ್ತದೆ. ಉರಗಳ್ಳಿಯ ಕೆರೆಗೆ ಹೊಂದಿಕೊಂಡು ನಾಲ್ಕುನೂರು ಎಕರೆ ಜಮೀನು ಇದೆ. ಇದೆಲ್ಲ ಸಿಖ್ಖರ ನಾಮಧಾರಿ ಫಾರ್ಮಿಗೆ ಸೇರಿದ್ದು. 1983ರಲ್ಲಿ ಸಿಖ್ಖರಿಗೂ ಮತ್ತು ಪಕ್ಕದ ಗ್ರಾಮಸ್ಥರಿಗೂ ಕೆರೆಯ ನೀರಿನ ಸಲುವಾಗಿ ಜಗಳವಾಗಿತ್ತು. ಈ ಜಗಳದಲ್ಲಿ ಸಿಖ್ಖರ ಮೇಲೆ 307 ಕೇಸ್ ಆಗಿತ್ತು. ಅದಕ್ಕಾಗಿ ಅವರು ಬೆಂಗಳೂರಿನ ಕೋರ್ಟಿಗೆ ಅಲೆಯಬೇಕಾಗಿ ಬಂದಿತ್ತು. ನಾನು ಅವರ ಕೇಸನ್ನು ಹಿಡಿದಿರಲಿಲ್ಲ. ಕೋರ್ಟಿನಲ್ಲಿ ನಾನು ಕೇಸು ನಡೆಸುವಾಗ ನೋಡಿದ್ದ ಅವರು ನನ್ನನ್ನು ತಾವೇ ಪರಿಚಯ ಮಾಡಿಕೊಂಡಿದ್ದರು. ಅಷ್ಟೊತ್ತಿಗೆ ಅವರು ಪಂಜಾಬಿನಿಂದ ಬಂದು ಉರಗಳ್ಳಿಯಲ್ಲಿ ನೆಲೆಯೂರಿ 25 ವರ್ಷಗಳೇ ಸಂದಿದ್ದವು. ಇವರು ಗ್ರಾಮಸ್ಥರಂತೆ ಸಾಮಾನ್ಯ ಬೆಳೆಗಳನ್ನು ಬೆಳೆಯುತ್ತಿರಲಿಲ್ಲ. ಮಿಶ್ರತಳಿ ಬೀಜೋತ್ಪಾದನೆಯ ಫಾರ್ಮ್ ಅವರದಾಗಿತ್ತು. ಹೀಗಾಗಿ ಅವರು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರು.

ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಉದ್ದೇಶದಿಂದ ನಿತ್ಯ ಒಂದು ವ್ಯಾನ್ ಬೆಂಗಳೂರಿಗೆ ಹೋಗಿ ಬರುವ ವ್ಯವಸ್ಥೆ ಮಾಡಿದ್ದರು. ಆ ಫಾರ್ಮ್‌ನಲ್ಲಿ ಸುಮಾರು 25 ಸಿಖ್ ಕುಟುಂಬಗಳು ಇದ್ದವು. ನಮ್ಮ ಹಿಂದುಳಿದ ಕೃಷಿ ಪದ್ಧತಿಯ ತೊಟ್ಟಿಲೊಳಗೇ ಪಂಜಾಬಿನ ಗ್ರೀನ್ ರೆವಲೂಷನ್‌ನ ತುಣುಕೊಂದು ಉರಗಳ್ಳಿ ಸಮೀಪದಲ್ಲಿ ಮಿಂಚುತ್ತಿತ್ತು. ಅವರ ವ್ಯಾನ್ ಒಮ್ಮೆ ನನ್ನನ್ನು ಆ ಫಾರ್ಮಿಗೆ ಹೊತ್ತೊಯ್ದಿತ್ತು. ಫಾರ್ಮ್ ಒಳಹೊಕ್ಕರೆ ಪಂಜಾಬಿನ ಮುಂದುವರಿದ ಕೃಷಿಯ ಹಳ್ಳಿಯೊಂದರೊಳಕ್ಕೆ ಹೊಕ್ಕಂಥ ಅನುಭವ.

ಅವರು ನನಗೆ ಒಂದು ವಿಚಿತ್ರ ಮರ್ಡರ್ ಕೇಸ್ ಒಂದನ್ನು ನಡೆಸಲು ಕೊಟ್ಟರು. ಬೆಂಗಳೂರಿನ ಮುನಿರೆಡ್ಡಿಪಾಳ್ಯಕ್ಕೆ ಹೊಂದಿಕೊಂಡಿರುವ ಪಯೋನಿಯರ್ ಕಾರ್ಪ್ಸ್ ಟ್ರೈನಿಂಗ್ ಸೆಂಟರ್‌ನಲ್ಲಿ ಸೋಲ್ಜರ್ ಆಗಿದ್ದ ದುರ್ಗಾಸಿಂಗ್ ಎನ್ನುವವ ಮರ್ಡರ್ ಕೇಸೊಂದರಲ್ಲಿ ಸಿಕ್ಕಿಹಾಕಿಕೊಂಡಿದ್ದ. ನಾಮಧಾರಿ ಫಾರ್ಮಿನವರಿಗೆ ದೂರದ ಸಂಬಂಧಿಯಾಗಿದ್ದ ಇವನನ್ನು ಆರೋಪದಿಂದ ಮುಕ್ತಗೊಳಿಸಲು ಕೋರಿ ನನಗೆ ಕೇಸ್ ಒಪ್ಪಿಸಿದ್ದರು.

ಅದು ವಿಚಿತ್ರ ರೀತಿಯ ಕೊಲೆ ಕೇಸ್ ಆಗಿತ್ತು. ಅಂಥ ಕೇಸ್ ಮತ್ತೆ ಈವರೆಗೆ ನನಗೆ ಸಿಕ್ಕಿಲ್ಲ. ಇನ್ನೊಬ್ಬರು ನಡೆಸಿದ್ದನ್ನು ಕಂಡಿಲ್ಲ. ಎಷ್ಟೋ ಕೊಲೆ ಕೇಸ್‌ಗಳನ್ನು ನಿರಾಯಾಸವಾಗಿ ಗೆದ್ದಿದ್ದ ನನಗೆ ಆ ಕೇಸ್ ಸವಾಲಾಗಿ ನಿಂತಿತು. ಬಹಳ ತಲೆಕೆಡಿಸಿಕೊಂಡು ಆ ಕೇಸಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲ ಅಧ್ಯಯನ ಮಾಡಿದೆ. ವಿಶೇಷವಾಗಿ ಅಸಹಜ ಲೈಂಗಿಕ ಮನೋವ್ಯಾಧಿಗೆ ಸಂಬಂಧಿಸಿ ಸೈಕಿಯಾಟ್ರಿಕ್‌ಗಳ ಜೊತೆ ಚರ್ಚಿಸಿದೆ.

ದುರ್ಗಾಸಿಂಗ್ ಪಯೋನಿಯರ್ ಕಾರ್ಪ್ಸ್ ಟ್ರೈನಿಂಗ್ ಸೆಂಟರ್‌ನಲ್ಲಿದ್ದಾಗ ತೀವ್ರ ರಕ್ತದೊತ್ತಡದ ಕಾಯಿಲೆಗೆ ಈಡಾದ. 35ರ ದುರ್ಗಾಸಿಂಗ್‌ಗೆ ಮದುವೆಯಾಗಿ ಐದು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಅವನ ಹೆಂಡತಿಯೊಂದಿಗೆ ಲೈಂಗಿಕ ಸಂಪರ್ಕ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಬೇಸತ್ತ ಅವನ ಹೆಂಡತಿ ತವರು ಸೇರಿಕೊಂಡಿದ್ದಳು. ಹೆಂಡತಿ ಬಿಟ್ಟು ಹೋದ ಮೇಲೆ ದುರ್ಗಾಸಿಂಗ್‌ನಲ್ಲಿ ಅಸಹಜ ಲೈಂಗಿಕ ಮನೋವ್ಯಾಧಿ ತೀವ್ರಗೊಂಡಿತು. ಇದು ಅವನ ರಕ್ತದೊತ್ತಡ ಕಾಯಿಲೆಗೆ ಮೂಲ ಕಾರಣವಾಗಿತ್ತು. ನಿತ್ಯವೂ ಇವನ ಬಿ.ಪಿ. ಚೆಕ್ ಮಾಡಬೇಕಾಗಿತ್ತು. ಹೀಗಾಗಿ ಇವನಿಗೆ ಕಮಾಂಡರ್ ಕೇಡರ್‌ನ ಡಾಕ್ಟರ್ ಓಂಪ್ರಕಾಶ್ ಶರ್ಮಾ ಅವರ ಮನೆಗೆಲಸದ ಆರ್ಡರ್‌ಲಿಯಾಗಿ ಡ್ಯೂಟಿಗೆ ಹಾಕಲಾಗಿತ್ತು. ಆದರೆ ಓಂಪ್ರಕಾಶ್‌ಗೆ ಆರಂಭದಲ್ಲಿ ಇವನ ಅಸಹಜ ಲೈಂಗಿಕ ಮನೋವ್ಯಾಧಿ ಗೊತ್ತಾಗದೆ ಕೇವಲ ಗ ಬಿ.ಪಿ. ಮಾತ್ರ ಚಿಕಿತ್ಸೆ ಕೊಡಲು ಆರಂಭಿಸಿದ್ದರು.

ಆದರೆ ದುರ್ಗಾಸಿಂಗ್ fetishism ವ್ಯಾಧಿಯಿಂದ ಬಳಲುತ್ತಿದ್ದ. ಇದೊಂದು ರೀತಿಯ sexual perversion. ಸಂಭೋಗ ಕ್ರಿಯೆ ನಡೆಸದೆಯೇ ಸಂಭೋಗದ ಚರಮಸುಖ ಅನುಭವಿಸುವ ಭ್ರಾಂತಿಯ ರೋಗವಿದು.

ಡಾ. ಓಂಪ್ರಕಾಶ್‌ಗೆ ಒಂದು ಗಂಡು, ಒಂದು ಹೆಣ್ಣು ಮಕ್ಕಳಿದ್ದವು. ಹೆಂಡತಿ ಸರಸ್ವತಿ ಸಂಸ್ಕೃತದಲ್ಲಿ ಪದವಿ ಮಾಡಿಕೊಂಡವಳಾಗಿದ್ದಳು. ತುಂಬಾ ದೈವಭಕ್ತೆಯೂ ಆಗಿದ್ದಳು. ಬಹು ಬೇಗನೆ ದುರ್ಗಾಸಿಂಗ್‌ನ ಮನೋರೋಗ ಡಾ. ಓಂಪ್ರಕಾಶ್‌ಗೆ ತಿಳಿಯಿತು. ಡಾಕ್ಟರ್ ಮಗಳು ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದಳು. ಅವಳನ್ನು ಸ್ಕೂಲ್‌ಗೆ ಎತ್ತಿಕೊಂಡು ಹೋಗಿ ಬಿಟ್ಟುಬರುತ್ತಿದ್ದ. ತಮ್ಮ ಮಗಳನ್ನು ಎತ್ತಿಕೊಂಡ ಕೆಲವೇ ಕ್ಷಣಗಳಲ್ಲಿ ದುರ್ಗಾಸಿಂಗ್‌ಗೆ ಸ್ಖಲನವಾಗುತ್ತಿದ್ದದ್ದನ್ನು ಡಾಕ್ಟರ್ ಗುರುತಿಸಿದರು. ಮೊದಮೊದಲು ಏನೋ ನೀರು ಬಿದ್ದಿರಬಹುದು ಅಥವಾ ಪೂರ್ತಿ ಮೂತ್ರ ಮಾಡುವ ಮುನ್ನವೇ ಜಿಪ್ ಎಳೆದುಕೊಂಡಿರಬಹುದು ಎಂದುಕೊಂಡು, "ಏನೋ ಪ್ಯಾಂಟಲ್ಲೇ ಮೂತ್ರ ಮಾಡಿಕೊಂಡಿದ್ದೀಯಾ?" ಎಂದು ಆಕ್ಷೇಪಣಾತ್ಮಕವಾಗಿ ಡಾಕ್ಟರ್ ಕೇಳಿದೊಡನೆ ಗಲಿಬಿಲಿಗೊಂಡ ದುರ್ಗಾಸಿಂಗ್‌ನ ಮುಖ ಬೆವರಿತು. ಆದರೆ ಇದು ನಿತ್ಯ ಆಗತೊಡಗಿದಾಗ ಡಾಕ್ಟರ್‌ಗೆ ಅನುಮಾನ ಬಂದಿತು. ತಮ್ಮ ಮಗಳನ್ನು ಸ್ಕೂಲಿಗೆ ಬಿಟ್ಟು ಬರುವ ಕೆಲಸದಿಂದ ಅವನನ್ನು ಬಿಡಿಸಿದರು. ಆಗ ಅವನ ಪ್ಯಾಂಟ್ ಒದ್ದೆ ಆಗಲಿಲ್ಲ. ಆದರೆ ದುರ್ಗಾಸಿಂಗ್ ಡಾಕ್ಟರ್ ಹೆಂಡತಿಯ ಬಟ್ಟೆಗಳನ್ನು ಒಗೆಯಲು ಹೆಚ್ಚು ಉತ್ಸಾಹ ತೋರತೊಡಗಿದ. ದುರ್ಗಾಸಿಂಗ್ ಬಟ್ಟೆ ಒಗೆಯುವಾಗ ಅಚಾನಕ್ ಒಮ್ಮೆ ಡಾಕ್ಟರ್ ಮನೆಯ ಹಿಂಭಾಗಕ್ಕೆ ಹೋದಾಗ ತಮ್ಮ ಹೆಂಡತಿ ಸರಸ್ವತಿಯ ಕಾಚಾದಿಂದ ತನ್ನ ಮರ್ಮಾಂಗದ ಸ್ಥಳದ ಮೇಲೆ ಉಜ್ಜಿಕೊಳ್ಳತೊಡಗಿದ್ದ. ನೋಡನೋಡುತ್ತಿದ್ದಂತೆಯೇ ದುರ್ಗಾಸಿಂಗ್‌ನಿಗೆ ಸ್ಖಲನವಾಗಿಬಿಟ್ಟಿತು.

ಫೆಟಿಸಿಜಮ್ ಎಂದರೆ ಒಂದು ಹೆಂಗಸಿಗೆ ಸೇರಿದ ವಸ್ತುಗಳನ್ನು ನೋಡಿ, ಸ್ಪರ್ಶಿಸಿ ಕಾಮೋದ್ರೇಕಗೊಂಡು ಸ್ಖಲನಗೊಂಡು ಅಸಹಜ ಲೈಂಗಿಕ ತೃಪ್ತಿಪಟ್ಟುಕೊಳ್ಳುವುದು. ಓಂಪ್ರಕಾಶ್ ದುರ್ಗಾಸಿಂಗ್‌ನನ್ನು ಕಮಾಂಡೆಂಟ್ ಹಾಸ್ಪಿಟಲ್‌ಗೆ ಸೇರಿಸಿದರು.

ದುರ್ಗಾಸಿಂಗ್‌ನಿಗೆ ಓಂಪ್ರಕಾಶ್ ಮೇಲೆ ಒಳಗೇ ಸಿಟ್ಟು ಕುದಿಯತೊಡಗಿತು.

ಓಂಪ್ರಕಾಶ್‌ಗೆ ತನ್ನ ಕಾಯಿಲೆಯ ಬಗ್ಗೆ ಗೊತ್ತಾಗಿದೆ. ಅದಕ್ಕೇ ತನ್ನನ್ನು ಮನೆ ಬಿಡಿಸಿ ಆಸ್ಪತ್ರೆಗೆ ಸೇರಿಸಿದ್ದಾನೆ. ಇಲ್ಲಿ ಒಂದೇ ಒಂದು ಹೆಣ್ಣು ಪಿಳ್ಳೆಯೂ ಇಲ್ಲ. ಕನಿಷ್ಠ ನರ್ಸ್‌ಗಳೂ ಹೆಂಗಸರಾಗಿಲ್ಲ. ಅವರ ವಸ್ತುಗಳು ದೊರಕುತ್ತಿಲ್ಲ.

ಎಲ್ಲ ಮೇಲ್ ನರ್ಸ್‌ಗಳೇ. ಮೊದಲೇ ಮಿಲಿಟರಿ ಆಸ್ಪತ್ರೆ ಎಂದು ಯೋಚಿಸುತ್ತಲೇ ದುರ್ಗಾಸಿಂಗ್‌ಗೆ ಡಾಕ್ಟರ್ ಓಂಪ್ರಕಾಶ್ ಮೇಲೆ ಕೋಪ ಭುಗಿಲೇಳತೊಡಗಿತು.

ಅವನ ಕಣ್‌ಮುಂದೆ ಓಂ ಪ್ರಕಾಶ್‌ನ ಮಗಳು ಮತ್ತು ಹೆಂಡತಿಯ ಕಾಚಾ, ಕರ್ಚೀಫ್, ವ್ಯಾನಿಟಿ ಬ್ಯಾಗ್ ಮುಂತಾದ ವಸ್ತುಗಳು ಬರಲಾರಂಭಿಸಿದವು. ಅವರಿಗೆ ಸೇರಿದ ವಸ್ತುಗಳನ್ನು ಮುಟ್ಟುವ ಅವಕಾಶದಿಂದ ವಂಚಿತನಾಗಿರುವುದನ್ನು ನೆನೆದು ವ್ಯಗ್ರಗೊಳ್ಳುತ್ತಿದ್ದ.

ದುರ್ಗಾಸಿಂಗ್ ಆಸ್ಪತ್ರೆ ಸೇರಿ ಒಂದು ತಿಂಗಳಾಗಿತ್ತು. ಸ್ಖಲನಕ್ಕೆ ಅವಕಾಶವೇ ಇಲ್ಲದಂತಾಗಿತ್ತು. ಆಸ್ಪತ್ರೆಯ ಸ್ಟಾಫ್ ಒಂದು ರಾತ್ರಿ ಗುಂಪಾಗಿ ಟಿ.ವಿ. ನೋಡುವುದರಲ್ಲಿ ನಿರತವಾಗಿತ್ತು. ರಾತ್ರಿ ಎಂಟು ಗಂಟೆಯ ಸಮಯ. ದುರ್ಗಾಸಿಂಗ್ ದಾಖಲಾಗಿದ್ದ ಕಮಾಂಡೆಂಟ್ ಆಸ್ಪತ್ರೆಯಿಂದ ಸ್ವಲ್ಪ ಅಂತರದಲ್ಲಿಯೇ ಡಾ. ಓಂಪ್ರಕಾಶ್ ಮನೆ. ಪಕ್ಕದ ಕಾಟಿನ ಪೇಷಂಟ್‌ಗೆ ಬೇಜಾರಾಗಿದೆ, ಮೇಲ್ ನರ್ಸ್‌ಗಳನ್ನು ಮಾತಾಡಿಸಿ ಬರುವುದಾಗಿ ಹೇಳಿ ಹೊರಟ. ಸ್ಟಾಫಿನ ಕಣ್‌ತಪ್ಪಿಸಿ ಆಸ್ಪತ್ರೆಯ ಕಾಂಪೌಂಡ್ ಹಾರಿ ಸ್ವಲ್ಪ ದೂರ ನಡೆದು ಓಂಪ್ರಕಾಶ್ ಮನೆಯ ಕಾಂಪೌಂಡ್ ಅನ್ನು ಹಿಂಭಾಗದಿಂದ ಪ್ರವೇಶಿಸಿದ. ಓಂ ಪ್ರಕಾಶ್ ಮಗಳು ಮತ್ತು ಹೆಂಡತಿ ಈರ್ವರನ್ನು ಕೊಲ್ಲುವ ಉದ್ದೇಶದಿಂದ ಆಸ್ಪತ್ರೆಯಿಂದ ಚಾಕು ಒಯ್ದಿದ್ದ. ಬಾತ್ ರೂಮ್‌ಗೆಂದು ಸರಸ್ವತಿ ಬಂದಳು. ಹಿಂಬಾಗಿಲಿನಲ್ಲಿ ದುರ್ಗಾಸಿಂಗ್‌ನನ್ನು ನೋಡಿ ಕ್ಷಣ ಗಾಬರಿಗೊಂಡಳಾದರೂ "ಅದೇಕೆ ಆಸ್ಪತ್ರೆಯಿಂದ ಬಂದುಬಿಟ್ಟೆ?" ಎಂದು ಪ್ರಶ್ನಿಸುವಷ್ಟರಲ್ಲಿಯೇ ಆಕೆಯ ಹೊಟ್ಟೆಗೆ ಚಾಕು ಹಾಕಿ ತಿರುಚಿದ. ಓ ಎಂದು ಚೀರುತ್ತ ಬಿದ್ದುಬಿಟ್ಟಳು. ಮನೆಯ ಮುಂಭಾಗದಲ್ಲಿದ್ದ ಜವಾನರು, ಒಳಕೋಣೆಯಲ್ಲಿದ್ದ ಮಗಳು, ಮಗ ಬಂದರು. ಓಂಪ್ರಕಾಶ್ ಮನೆಯಲ್ಲಿರಲಿಲ್ಲ. ಜವಾನ ಬಂದು ಯಾರಮ್ಮ ಮಾಡಿದ್ದು ಎಂದು ಪ್ರಶ್ನಿಸಿದ್ದಕ್ಕೆ ದುರ್ಗಾಸಿಂಗ್ ಓಡಿಹೋದ ದಿಕ್ಕನ್ನು ತೋರಿಸಿ ಸರಸ್ವತಿ ಪ್ರಜ್ಞೆ ತಪ್ಪಿದಳು. ಅವಳನ್ನು ಜವಾನರು ಆಸ್ಪತ್ರೆಗೆ ಒಯ್ಯುವಷ್ಟರಲ್ಲಿ ಕೊನೆಯುಸಿರೆಳೆದಳು.

ಓಂಪ್ರಕಾಶ್ ದುರ್ಗಾಸಿಂಗ್‌ನನ್ನು ಆರೋಪಿ ಎಂದು ಜೆ.ಸಿ. ನಗರ ಠಾಣೆಯಲ್ಲಿ ದೂರು ನೀಡಿದರು.

ಕಮಾಡೆಂಟ್ ಆಸ್ಪತ್ರೆಯ ಇಡೀ ಸಿಬ್ಬಂದಿ ಓಂಪ್ರಕಾಶ್ ಪರವಾಗಿ ನಿಂತು ಅನುಕಂಪ, ವಿಷಾದಗಳನ್ನು ಹರಿಸಿತು.

ಆದರೆ ದುರ್ಗಾಸಿಂಗನಿಗೆ ಸೂಕ್ತ ಚಿಕಿತ್ಸೆ ದೊರೆತಿದ್ದಿದ್ದರೆ ಹೀಗೆ ಕೊಲೆ ಮಾಡುತ್ತಿರಲಿಲ್ಲ. ಅವನನ್ನು ಮಾನಸಿಕ ಆಸ್ಪತ್ರೆಗೆ ಸೇರಿಸಬೇಕಾಗಿತ್ತು. ಓಂ

ಪ್ರಕಾಶ್ ಮನೆಯಿಂದ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟ ಮೇಲೆ delusion of suspicion ಗೆ ಒಳಗಾಗಿದ್ದ. ಅವನ ಮನೋರೋಗದ ಒಂದು ಹಂತವಿದು. ಅವನಿಗೆ ಸೂಕ್ತ ಚಿಕಿತ್ಸೆ ದೊರಕದಿದ್ದರಿಂದ ಇದು ಉಲ್ಬಣಗೊಂಡು delusion of persecution ಆಗಿ ಪರಿವರ್ತನೆಗೊಂಡು ಸರಸ್ವತಿಯ ಕೊಲೆಯಲ್ಲಿ ಪರ್ಯಾವಸಾನಗೊಂಡಿತ್ತು.

ಕೊಲೆಯಾದ ಸಮಯದಲ್ಲಿ ದುರ್ಗಾಸಿಂಗ್ ಆಸ್ಪತ್ರೆಯ ಹೊರಗೆ ಹೋಗಿದ್ದ ಎನ್ನುವುದನ್ನು ಸಾಬೀತುಪಡಿಸಲು ಅಕ್ಕಪಕ್ಕದ ಕಾಟ್‌ಗಳ ಪೇಷಂಟ್‌ಗಳಿಂದ ಮತ್ತು ಆಸ್ಪತ್ರೆಯ ಸಿಬ್ಬಂದಿಯಿಂದ ಸಾಕ್ಷಿ ಹೇಳಿಕೆಗಳನ್ನು ಕೋರ್ಟ್ ಮುಂದೆ ಹಾಜರುಪಡಿಸಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಓಂಪ್ರಕಾಶ್ ಕೋರ್ಟ್ ಕಟಕಟೆಯಲ್ಲಿ ತನ್ನ ಹೆಂಡತಿಯ ಗುಣಗಾನ ಮಾಡುತ್ತಾ ಅಳತೊಡಗಿದ್ದ. "ಯುದ್ಧಭೂಮಿಯಲ್ಲಿ ಸಾವು ಸಂಭವಿಸಿದರೆ ನನಗೆ ದುಃಖವಾಗುತ್ತಿರಲಿಲ್ಲ. ಇಂಥ ದುರ್ಮರಣಕ್ಕೆ ನನ್ನ ಪತ್ನಿ ಈಡಾಗಬೇಕಾಗಿ ಬಂದುದಕ್ಕೆ ನನಗೆ ದುಃಖ ತಡೆದುಕೊಳ್ಳಲಾಗುತ್ತಿಲ್ಲ" ಎಂದು ಹೇಳಹೇಳುತ್ತಲೇ ಅರೆಪ್ರಜ್ಞೆಗೊಳಗಾಗಿ ಕಟಕಟೆಯಲ್ಲಿಯೇ ಓಂ ಪ್ರಕಾಶ್ ಕುಸಿದುಬಿಟ್ಟಿದ್ದು ನ್ಯಾಯಾಧೀಶರನ್ನು ಕರಗಿಸಿಬಿಟ್ಟಿತು.

ದುರ್ಗಾಸಿಂಗ್‌ಗೆ ಜೀವಾವಧಿ ಶಿಕ್ಷೆ ಆಯಿತು.

ನ್ಯಾಯಾಧೀಶರು ನೈತಿಕ ತೀರ್ಪನ್ನು ನೀಡಿದ್ದಾರೆಂದು ನಾನು ಭಾವಿಸಿಕೊಂಡೆ. ಅದು ಕಾನೂನಿನ ತೀರ್ಪು ಆಗಿದ್ದರೆ ದುರ್ಗಾಸಿಂಗ್ ಆರೋಪಮುಕ್ತನಾಗುತ್ತಿದ್ದ.

ನಾನು ಸೋತ ಪ್ರಥಮ ಮರ್ಡರ್ ಕೇಸ್ ಇದು.

75

ಪ್ರೊ. ನಗರಿ ಬಾಬಯ್ಯ ಜೈಲುಪಾಲಾದ ಕಥೆ

ಇದು 1986ರಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿ ನಡೆದ ಕಥೆ. ಕರ್ನಾಟಕದ ಎಡ ಚಳವಳಿಗೆ ಶುಕ್ರದೆಸೆ ಹತ್ತಿತ್ತು. ರಾಜಕೀಯವಾಗಿ ಕಾಂಗ್ರೆಸ್ ವಿರೋಧಿ ಅಲೆ ಬೀಸಿತ್ತು. ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳಿಂದ ಹತ್ತಾರು ಶಾಸಕರು ಆಯ್ಕೆಗೊಂಡಿದ್ದರು. ಮಧ್ಯಮ ವರ್ಗಕ್ಕೆ 'ಲೆಫ್ಟ್' ಎನ್ನುವುದು ಒಂದು ಫ್ಯಾಷನ್ ಆಗಿತ್ತು. ಮಧ್ಯಮ ವರ್ಗದ ಕೌಟುಂಬಿಕ ಸಂಬಂಧದ ಆದರ್ಶಗಳು ಮತ್ತು ಸಾಮಾಜಿಕ ವಾಸ್ತವತೆ ಇವೆರಡರ ಘರ್ಷಣೆಗೆ 'ಲೆಫ್ಟ್' ತನ್ನದೇ ಆದ ಪರಿಹಾರವನ್ನು ಸೂಚಿಸುತ್ತಿತ್ತು.

ಸಮಾಜದಲ್ಲಿ ಶೋಷಣೆ ಹೇಗೆ ನಡೆಯುತ್ತಿದೆ ಎಂದು ಮಧ್ಯಮ ವರ್ಗದ ಅಕ್ಷರಸ್ಥ ಜನಕ್ಕೆ ತಿಳಿದಿತ್ತು. ಸ್ವತಃ ಶೋಷಕನಾಗುವ ಅವಕಾಶಗಳಿಂದ ವಂಚಿತರಾದ ಮಧ್ಯಮ ವರ್ಗ ಭ್ರಮನಿರಸನದ ತತ್ತರಿಸುವಿಕೆಯ ಪರಿಣಾಮವಾಗಿ ಬಂಡುಕೋರ ಪ್ರವೃತ್ತಿಯನ್ನು ಬೆಳೆಸಿಕೊಂಡಿತ್ತು. ಈ ವ್ಯಕ್ತಿನಿಷ್ಠ ನೆಲೆಯ ಬಂಡುಕೋರತನ ಶೋಷಿತ ವರ್ಗಗಳ ಆಶಯಗಳ ಜೊತೆ ಅನುಸಂಧಾನಕ್ಕಾಗಿ ಯತ್ನಿಸುತ್ತಿತ್ತು.

ಕರ್ನಾಟಕದಲ್ಲಿ ಎಡತತ್ವ ರಾಜಕೀಯದಲ್ಲಿ ಹೊಸಗಾಳಿ ಬೀಸಿತ್ತು. ಮಧ್ಯಮ ವರ್ಗ ತಮ್ಮೆಡೆಗೆ ಸ್ವಯಂಪ್ರೇರಿತವಾಗಿ ಧಾವಿಸುತ್ತಿರುವುದನ್ನು ಕಂಡು ನಗರದಲ್ಲಿ ಕಾರ್ಮಿಕರು, ಹಳ್ಳಿಗಳಲ್ಲಿ ರೈತರು ಅವಾಕ್ಕಾಗಿದ್ದರು.

ಆದರೆ ಆಂಧ್ರಪ್ರದೇಶದಲ್ಲಿ ಇಂಥ ಸನ್ನಿವೇಶ ಅದೆಂದೋ ಬಂದಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿಯೇ ಅಲ್ಲಿ ಎಡ ಚಳವಳಿ ಸಿಡಿಲಾಗಿ ಸಿಡಿದಿತ್ತು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತು ಎಡ ಚಳವಳಿ ಎರಡೂ ಆಂಧ್ರಕ್ಕೆ ಹೋಲಿಸಿದರೆ ತೀರಾ ಅಶಕ್ತವೇ ಎಂದು ಹೇಳಬೇಕು.

ಮಹಾನ್ ಕ್ರಾಂತಿಕಾರಿ ಪಿ. ಸುಂದರಯ್ಯನವರ ನೇತೃತ್ವದಲ್ಲಿ ತೆಲಂಗಾಣ ರೈತ ಚಳವಳಿ ನಡೆದುದು ಅಲ್ಲಿ ಎಡ ಚಳವಳಿಗೆ ಒಂದು ಗಟ್ಟಿ ತಳಹದಿ ಸಿಕ್ಕಿತು. ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ತೆಲಂಗಾಣ ಕೃಷಿ ಕಾರ್ಮಿಕರು ಬ್ರಿಟಿಷರ ಕೈಗೊಂಬೆಗಳಾಗಿ ನಿಜಾಮನ ಮಿಲಿಟರಿಯ ವಿರುದ್ಧ ಸೆಣಸಿದರು. ಸ್ವತಂತ್ರ ಭಾರತದ ಅಧಿಕಾರ ರೈತ, ಕಾರ್ಮಿಕ ವಿರೋಧಿಗಳ ಕೈಗೆ ಸಿಕ್ಕಿತು. ತೆಲಂಗಾಣ ರೈತರು ಸ್ವತಂತ್ರ ಭಾರತದ ಬಲಿಷ್ಠ ಸೇನೆಯ ವಿರುದ್ಧ ಸಶಸ್ತ್ರ ಯುದ್ಧ ನಡೆಸಬೇಕಾದ ವಿಪರ್ಯಾಸ ಉಂಟಾಯಿತು.

ಸಾವಿರ, ಲಕ್ಷ ಎಕರೆಗಳುಳ್ಳ ಹೊಸ ಜಮೀನ್ದಾರಿ ವರ್ಗವನ್ನು ಬ್ರಿಟಿಷರು ಹುಟ್ಟುಹಾಕಿದ್ದರು. ಕೃಷಿ ಕಾರ್ಮಿಕರು ಜಮೀನ್ದಾರರ ವಿರುದ್ಧ ಯುದ್ಧ ನಡೆಸಿ ಪಡೆದುಕೊಂಡಿದ್ದ ಜಮೀನನ್ನು ಉಳಿಸಿಕೊಳ್ಳುವುದು ಕಷ್ಟವಾಗಿತ್ತು. ಸ್ವತಂತ್ರ ಭಾರತದಲ್ಲಿ ಸರ್ಕಾರ ಸ್ವತಂತ್ರ ಭಾರತದ ಮಿಲಿಟರಿ ಜಮೀನ್ದಾರರ ರಕ್ಷಣೆಗೆ ಬಂದು ನಿಂತಾಗ ರೈತರು ದಿಗ್ಭ್ರಾಂತಗೊಂಡಿದ್ದರು.

ಸ್ವಾತಂತ್ರ್ಯ ಸಿಗುವವರೆಗೆ ನೆಹರೂ ಕಾಂಗ್ರೆಸ್ ರೈತ–ಕಾರ್ಮಿಕರ ಬಗ್ಗೆ ಅನುಕಂಪದ ಹೊಳೆ ಹರಿಸುತ್ತಿದ್ದುದು ಇದ್ದಕ್ಕಿದ್ದಂತೆ ತನ್ನ ಬಣ್ಣವನ್ನು ಬದಲಾಯಿಸಿತ್ತು.

ಹೈದ್ರಾಬಾದ್ ನಿಜಾಮ ತನ್ನ ಸಂಸ್ಥಾನವನ್ನು ಸ್ವತಂತ್ರ ಭಾರತದಿಂದ ಪ್ರತ್ಯೇಕ ಉಳಿಸಿಕೊಳ್ಳುವುದಾಗಿಯೂ ಮತ್ತು ಅದನ್ನು ಮಿನಿ ಪಾಕಿಸ್ತಾನವನ್ನಾಗಿಸುವುದಾಗಿಯೂ ಘೋಷಿಸಿ ರಜಾಕಾರರ ಚಳವಳಿಯನ್ನು ಹುಟ್ಟು ಹಾಕಿದ. ಈ ರೆಜಾಕಾರರನ್ನು ಜಮೀನುದಾರರು ಹೋರಾಟನಿರತ ರೈತರ ಮೇಲೆ ಛೂ ಬಿಟ್ಟರು. ಕೃಷಿ ಕಾರ್ಮಿಕರ ಹೋರಾಟವನ್ನು ಸದೆಬಡಿಯುವ ತಮ್ಮ ಕೆಲಸಕ್ಕೆ ರಜಾಕಾರರು ಇಸ್ಲಾಮ್ ಧರ್ಮಾಂಧತೆಯನ್ನು ಬಳಸಿಕೊಂಡರು.

ರೈತ ವಿರೋಧಿ ಪ್ರತಿಗಾಮೀ ಚಳವಳಿಯಾಗಿ ಭುಗಿಲೆದ್ದ ರಜಾಕಾರರ ಹಾವಳಿಯು ಮುಸ್ಲಿಂ ಮೂಲಭೂತವಾದದ ವೇಷವನ್ನು ತೊಟ್ಟುಕೊಂಡಿತ್ತು.

ನಿಜಾಮನ ಪ್ರತ್ಯೇಕ ರಾಜ್ಯದ ಘೋಷಣೆ ಮತ್ತು ರಜಾಕಾರರ ಧರ್ಮಾಂಧ ಚಳವಳಿ ಇವೆರಡನ್ನು ಬಗ್ಗು ಬಡಿದು ಹೈದ್ರಾಬಾದ್ ಸಂಸ್ಥಾನವನ್ನು ಅಖಂಡ ಭಾರತಕ್ಕೆ ಸೇರಿಸಿಕೊಳ್ಳಲು ಸರ್ದಾರ್ ವಲ್ಲಭಬಾಯಿ ಪಟೇಲ್ ನೇತೃತ್ವದಲ್ಲಿ ಮಿಲಿಟರಿ ಪಡೆಗಳು ಬಂದವು. ನಿಜಾಮ ಮತ್ತು ಆತನ ರಜಾಕಾರರು ಬಹುಬೇಗ ಮಿಲಿಟರಿಗೆ ಶರಣಾದರು. ಹೈದ್ರಾಬಾದ್ ಸಂಸ್ಥಾನ ಭಾರತಕ್ಕೆ ಸೇರ್ಪಡೆ ಆದಮೇಲೂ ಸಹ ಕಾರ್ಯಾಚರಣೆಗಾಗಿ ಬಂದಿದ್ದ ಮಿಲಿಟರಿ ಪಡೆಗಳು ವಾಪಸು ಹೋಗಲಿಲ್ಲ. ತೆಲಂಗಾಣ ಸಶಸ್ತ್ರ ಹೋರಾಟಗಾರರ ರಕ್ತ ಹರಿಸತೊಡಗಿದವು. ವಲ್ಲಭಬಾಯಿ ಪಟೇಲ್ ಹೈದ್ರಾಬಾದ್ ಸಂಸ್ಥಾನ ವಶಪಡಿಸಿಕೊಳ್ಳಲು ಬಂದಿರುವರೊ ಅಥವಾ ತೆಲಂಗಾಣ ರೈತ ಚಳವಳಿಯನ್ನು ಹುಟ್ಟಡಗಿಸಲು ಬಂದಿರುವರೊ ಎನ್ನುವ ಗೊಂದಲಕ್ಕೀಡಾದರು ಜನ. ನಿಜಾಮನ ಮಿಲಿಟರಿಗಿಂತ ಸ್ವತಂತ್ರ ಭಾರತದ ಮಿಲಿಟರಿಯ ಕೈಯೇ ಮೇಲಾಯಿತು ರೈತರ ರುಂಡ ಚೆಂಡಾಡುವ ಸ್ಪರ್ಧೆಯಲ್ಲಿ.

ಭಾರತದ ಮಿಲಿಟರಿಯ ವಿರುದ್ಧ ಸಶಸ್ತ್ರ ಯುದ್ಧವನ್ನು ಮುಂದುವರಿಸುವುದೋ ಅಥವಾ ಸ್ವತಂತ್ರ ಭಾರತದ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಒಪ್ಪಿಕೊಂಡು ಶಸ್ತ್ರರಹಿತ ರಾಜಕೀಯ ಚಳವಳಿ ಮಾಡುವುದೋ ಎನ್ನುವ ಚರ್ಚೆಯನ್ನು ಕಮ್ಯುನಿಸ್ಟ್ ಪಕ್ಷ ನಡೆಸಿತು.

ಈಗ ಸ್ವತಂತ್ರ ಭಾರತದ ಅಧಿಕಾರವನ್ನು ಕೈಗೆ ತೆಗೆದುಕೊಂಡಿರುವ ಭೂಮಾಲೀಕ ಬಂಡವಾಳಗಾರರು ಬ್ರಿಟಿಷರ ಬ್ರೋಕರ್‌ಗಳು, ಅವರ ಸಾಕುನಾಯಿಗಳು. ಈವರೆಗೆ ನಾವು ಯುದ್ಧ ನಡೆಸಿದ್ದು ಬ್ರಿಟಿಷರ ಕೈಗೊಂಬೆ ನಿಜಾಮನ ವಿರುದ್ಧವಲ್ಲವೆ? ನೆಹರೂ, ವಲ್ಲಭಬಾಯಿ ಪಟೇಲ್‌ಗಳು ದೊಡ್ಡ ನಿಜಾಮರು ಎಂದು ಕೆಲವರು ವಾದಿಸಿದರು. ಅಂತೂ ಕೊನೆಗೆ ಸಶಸ್ತ್ರ ಯುದ್ಧವನ್ನು ನಿಲ್ಲಿಸಬೇಕು ಎನ್ನುವ ತೀರ್ಮಾನಕ್ಕೆ ಬರಲಾಯಿತು. ಈ ನಿರ್ಣಯವನ್ನು ರಣಹೇಡಿಗಳ ಕ್ರಮವೆಂದು ಹೇಳುತ್ತ ಬಂದ ತೆರಿಮಲ ನಾಗಿರೆಡ್ಡಿ, ಚಾರು ಮಜುಮ್‌ದಾರ್ ನೇತೃತ್ವದಲ್ಲಿ ಸ್ವತಂತ್ರ ಭಾರತದ ಸೇನೆಯ ವಿರುದ್ಧ ಸಶಸ್ತ್ರ ಗೆರಿಲ್ಲಾ ಯುದ್ಧ ನಕ್ಸಲ್‌ಬರಿ ಎಂಬ ಹಳ್ಳಿಯಲ್ಲಿ ಸ್ಫೋಟಗೊಂಡಿತು. ಸಶಸ್ತ್ರ ಯುದ್ಧ ಮಾಡಬೇಕೆನ್ನುವ ಕಮ್ಯುನಿಸ್ಟ್ ಗುಂಪುಗಳಿಗೆಲ್ಲ ನಕ್ಸಲೈಟ್ ಎಂದು ಹೆಸರು ಬರಲು ಇದೇ ಕಾರಣ; ನಕ್ಸಲ್‌ಬರಿಯಿಂದ ನಕ್ಸಲೈಟ್.

ಸ್ವತಂತ್ರ ಭಾರತದ ಆಳುವ ವರ್ಗವನ್ನು ಬ್ರಿಟಿಷರ ಏಜೆಂಟ್ ಎಂದು ಅರ್ಥೈಸುವುದು ಸರಿಯಲ್ಲ. ದೇಶದ ಒಳಗಡೆ ರೈತ ಕಾರ್ಮಿಕರ ವಿರುದ್ಧ ಧೋರಣೆ ತಾಳಿದರೂ ಅಂತಾರಾಷ್ಟ್ರೀಯ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಕೂಟಕ್ಕೆ ವಿರುದ್ಧವಾಗಿದೆ. ಆದ್ದರಿಂದ ಈ ದೇಶಕ್ಕೆ ತನ್ನದೇ ಆದ ಸಾರ್ವಭೌಮತೆ ಇದೆ. ಈ ಸಾರ್ವಭೌಮತೆ ಕ್ರಾಂತಿಕಾರೀ ಚಳವಳಿಗೆ ಅತ್ಯವಶ್ಯಕ ಎಂದು ವಾದಿಸಿದ ಪಿ. ಸುಂದರಯ್ಯ, ನಂಬೂದರಿ ಪಾದ್, ಎ.ಕೆ. ಗೋಪಾಲನ್ ಇವರೆಲ್ಲ ಸಿಪಿಐ(ಎಂ) ಮುಖಂಡರು. ಕಾಂಗ್ರೆಸ್ ಶೋಷಿತ ವರ್ಗದ ಪರ ಇದೆ, ಅದರೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು ಎಂದು ವಾದಿಸಿದ ರಾಜೇಶ್ವರರಾವ್, ಡಾಂಗೆಯಂಥವರು ಸಿಪಿಐ ಮುಖಂಡರು. ಹೀಗೆ ಕಮ್ಯುನಿಸ್ಟ್ ಚಳವಳಿ ಹಲವಾರು ಪಕ್ಷ, ಗುಂಪುಗಳಾಗಿ ವಿಭಜನೆಗೊಳ್ಳುತ್ತ ನಡೆಯಿತು.

ನಗರಿ ಬಾಬಯ್ಯನವರ ಪ್ರಕರಣ ನಕ್ಸಲೈಟ್ ಚಳವಳಿಗೆ ಸಂಬಂಧಿಸಿದ್ದರಿಂದ ಸ್ವಲ್ಪ ದೀರ್ಘವೆನ್ನಿಸಿದರೂ ಈ ಹಿನ್ನೆಲೆ ನೀಡುವುದು ಅವಶ್ಯವೆನ್ನಿಸಿತು.

ನಗರಿ ಬಾಬಯ್ಯನವರು ಹುಟ್ಟಿದ್ದು ಆಂಧ್ರದಲ್ಲಿ. ಆದರೆ ಕಣ್ಣುಬಿಟ್ಟಿದ್ದು, ಬೆಳೆದದ್ದು ಕರ್ನಾಟಕದಲ್ಲಿ. ಕರ್ನಾಟಕದ ಬಗ್ಗೆ ಅವರಿಗೆ ಆಭಾರಿ ಭಾವನೆ ಸದಾ ಇರಲು ಈ ಹಿನ್ನೆಲೆ ಮುಖ್ಯ ಕಾರಣವೆನಿಸುತ್ತದೆ. ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರು. ಹುಟ್ಟುರಾಜ್ಯ ಆಂಧ್ರ, ಹಾಗಾಗಿ ಅಲ್ಲಿ ಅವರ ನೆಂಟರಿಷ್ಟರು ಅನೇಕರಿದ್ದರು. ಅವರ ಆದರ್ಶ ಧ್ಯೇಯಗಳ ಪರಿಣಾಮ ಬಾಬಯ್ಯನವರ ಮೇಲೆ ಉಂಟಾದದ್ದು ಸಹಜವೇನೊ. ಬಾಬಯ್ಯ ಸ್ವತಃ ನಕ್ಸ್‌ಲೈಟ್ ಅಲ್ಲದಿದ್ದರೂ ನಕ್ಸ್‌ಲೈಟ್‌ರನ್ನು ದೇವಾಂಶ ಸಂಭೂತರಂತೆ ನೋಡುವ ಮನೋಧರ್ಮದವರು. ಬಾಬಯ್ಯರಲ್ಲಿರುವ ಪರೋಪಕಾರೀ ಗುಣ ನಕ್ಸ್‌ಲೈಟ್‌ರ ಬಗ್ಗೆ ಅಂಥ ಭಾವನೆ ಮೂಡಿಸಿತ್ತೆಂದು ತೋರುತ್ತದೆ. ಯಾರಾದರೂ ಕಷ್ಟದಲ್ಲಿದ್ದಾರೆಂದರೆ ಮಧ್ಯರಾತ್ರಿಯಾದರೂ ಸರಿ ತಮ್ಮ ಕೈಲಾದ ಸಹಾಯ ಮಾಡಲು ದೌಡಾಯಿಸುವುದು ಬಾಬಯ್ಯನವರ ಗುಣ.

ಅತ್ಯಾಚಾರ, ದೌರ್ಜನ್ಯಗಳು ಎಲ್ಲಿಯೇ ನಡೆಯಲಿ ತಮ್ಮ ಸಹಚರರೊಡನೆ ಹೋಗಿ ಭೇಟಿ ನೀಡಿ ಸತ್ಯಶೋಧನೆ ಮಾಡುವುದು, ಅದನ್ನು ಸಾರ್ವಜನಿಕರೆದುರು ಇಡುವುದು ಬಾಬಯ್ಯನವರಿಗೆ ತೃಪ್ತಿಕೊಡುವ ಕೆಲಸ.

1986 ರಷ್ಟೊತ್ತಿಗೆ ಬಾಬಯ್ಯ ಕರ್ನಾಟಕ ನಾಗರಿಕ ಹಕ್ಕುಗಳ ಹೋರಾಟ ಸಮಿತಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಇವರಿಗೆ ಎರಡು ಹೆಣ್ಣು, ಒಂದು ಗಂಡು – ಒಟ್ಟು ಮೂರು ಮಕ್ಕಳು. ಪತ್ನಿ ಎಚ್‌ಎಎಲ್ ಆಸ್ಪತ್ರೆಯಲ್ಲಿ ಹೆಡ್

ನರ್ಸ್ ಆಗಿದ್ದರು. ಸ್ವತಃ ಅಂತರ್ಜಾತೀಯ ಮದುವೆಯಾಗಿದ್ದರು ಬಾಬಯ್ಯ. ಇವರ ಪತ್ನಿಯ ಹೆಸರು ಖೈರುನ್ನೀಸಾ; ಕಾಲೇಜಿಗೆ ಹೋಗುವ ವಯಸ್ಸಿನ ಮಕ್ಕಳು.

ಕಮ್ಯುನಿಸ್ಟ್ ಚಳವಳಿಯಲ್ಲಿ ಬರೀ ವರ್ಗ ವರ್ಗ ಎಂದು ವಾದಿಸುತ್ತಿದ್ದಾರೆ. ಆದರೆ ಇಡೀ ಸಮಾಜವನ್ನು ಹಿಂಡಿ ಹಿಪ್ಪೆ ಮಾಡಿರುವ ಧರ್ಮಾಂಧತೆ ನಿಂತಿರುವುದೇ ಜಾತಿಯ ತಳಹದಿಯ ಮೇಲೆ. ಈ ಜಾತಿಯ ನಿರ್ಮೂಲನೆಯಿಂದ ಜನ ಧರ್ಮಾಂಧತೆಯಿಂದ ದೂರ ಸರಿದು ವರ್ಗದ ನೆಲೆಯಲ್ಲಿ ಒಗ್ಗೂಡುತ್ತಾರೆ ಎನ್ನುವ ವಾದ ಮಾಡುತ್ತಿದ್ದ ಬಾಬಯ್ಯ ಅಂತರ್ಜಾತಿಯ ಮದುವೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ಅಷ್ಟೇ ಅಲ್ಲ ಈ ಬಗ್ಗೆ ಕವನ, ಪ್ರಬಂಧಗಳನ್ನು ಬರೆದು ಆಕಾಶವಾಣಿಯಲ್ಲಿ ಬಿತ್ತರಿಸಿದ್ದರು ಕೂಡಾ.

ಧರ್ಮದ ವಿರುದ್ಧದ ಇವರ ಹೋರಾಟಕ್ಕೆ ಧರ್ಮಶ್ರದ್ಧೆಯ ಲೇಪ ಇರುವಂತೆ ಕಾಣುತ್ತಿತ್ತು. ನಿರೀಶ್ವರವಾದವನ್ನೂ ಒಂದು ಧರ್ಮ ಎನ್ನುವಂತೆ ಪಾಲಿಸುವವರಾಗಿ ಎನ್ನುವಂತೆ ಕಾಣುತ್ತಿದ್ದರು ಬಾಬಯ್ಯ.

ಬಾಬಯ್ಯನವರೊಂದಿಗೆ ಹಲವಾರು ಪ್ರಗತಿಪರ ಸಂಘಟನೆಗಳು ಕೈಗೂಡಿಸಿದ್ದವು.

ಬಾಬಯ್ಯ ವೈಯಕ್ತಿಕ ಸಾಹಸವನ್ನು ಸಂಭ್ರಮದಿಂದ ಕಾಣುತ್ತಿದ್ದರು. ಸ್ವತಃ ಸಾಹಸ ಮಾಡಲೂ ಮುಂದಾಗುತ್ತಿದ್ದರು. ಜನರಿಗಾಗಿ ರೈಫಲ್ ಕೈಗೆತ್ತಿಕೊಂಡ ನಕ್ಸಲೈಟ್ ಕೊಂಡಪಲ್ಲಿ ಸೀತಾರಾಮಯ್ಯನವರ ಹೆಸರು ಕೇಳುತ್ತಲೇ ಭಾವೋದ್ರೇಕಗೊಳ್ಳುತ್ತಿದ್ದರು. ಪ್ರತಿಯೊಬ್ಬರೂ ಕೊಂಡಪಲ್ಲಿಯವರಂತೆ ತ್ಯಾಗಿಗಳೂ, ಹೋರಾಟಗಾರರೂ, ಕ್ರಾಂತಿಕಾರಿಗಳೂ ಆದರೆ ಈ ದೇಶದಲ್ಲಿ ಸಮಾನತೆ ಬರಲು ತಡವಾಗುವುದಿಲ್ಲ ಎಂದು ತಮ್ಮ ಆಪ್ತ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಕೊಂಡಪಲ್ಲಿಯವರು ಅದ್ಹೇಗೆ ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಮಂಗ ಮಾಯವಾಗುತ್ತಾರೆ ಎಂದು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿ ಹೇಳುವುದನ್ನು ವಿದ್ಯಾರ್ಥಿಗಳು ಉಸಿರು ಬಿಗಿಹಿಡಿದು ಆಲಿಸುತ್ತಿದ್ದರು. ಇದರಿಂದ ಬಾಬಯ್ಯ ಹುರುಪುಗೊಂಡು ಕೊಂಡಪಲ್ಲಿಯವರ ಇತಿಹಾಸವನ್ನು ಹೇಳುತ್ತಿದ್ದರು.

ಸೀತಾರಾಮಯ್ಯ ಆಂಧ್ರದ ಕೃಷ್ಣಾ ಜಿಲ್ಲೆಯ ಗ್ರಾಮವೊಂದರಲ್ಲಿ ಹುಟ್ಟಿ ಮುಂದೆ ಕಮ್ಯುನಿಸ್ಟ್ ಪಕ್ಷ ನಡೆಸಿದ ತೆಲಂಗಾಣ ಚಳವಳಿಯಲ್ಲಿ ಧುಮುಕಿದರು. ಇವರ ಮೂಲ ಹೆಸರು ಸೀತಾರಾಮರೆಡ್ಡಿ. ಕ್ರಾಂತಿಕಾರಿ ಪಿ. ಸುಂದರಯ್ಯನವರ ಪ್ರಭಾವಕ್ಕೊಳಗಾಗಿ ಕಮ್ಯುನಿಸ್ಟ್ ಚಳವಳಿ ಸೇರಿದ್ದರೂ ನಂತರ ಅವರ

ಧೋರಣೆಗಳನ್ನು ಪ್ರತಿಭಟಿಸಿ ಸಿಪಿಐ(ಎಂ) ದಿಂದ ಹೊರಬಂದು ಸಿಪಿಐ(ಎಂ.ಎಲ್.) ನೊಂದಿಗೆ ಸೇರಿಕೊಂಡರು. ಈ ಅವಧಿಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಆಯ್ಕೆ ಆಗಿ ಲೋಕಸಭೆಯಲ್ಲಿ ಕೂಡಾ ಐದು ವರ್ಷಗಳ ಕಾಲ ತಮ್ಮ ಧೋರಣೆ ಛಾಪು ಒತ್ತಿದ್ದರು ಮತ್ತು ಕಮ್ಯುನಿಸ್ಟ್ ಪಕ್ಷಗಳನ್ನು ಒಗ್ಗೂಡಿಸಲು ಶ್ರಮಿಸಿದರು. 1964ರಲ್ಲಿ ಸಿಪಿಐ(ಎಂ) ಪಕ್ಷವು ಕೊಂಡಪಲ್ಲಿಯವರನ್ನು ಉಚ್ಚಾಟಿಸಿರುವುದಾಗಿ ಹೇಳಿಕೊಂಡರೆ, ಆ ಪಕ್ಷದ ಧೋರಣೆಗಳನ್ನು ತಿರಸ್ಕರಿಸಿ ಸ್ವತಃ ಆ ಪಕ್ಷ ತ್ಯಜಿಸಿ ಹೊರಬಂದಿರುವುದಾಗಿ ಕೊಂಡಪಲ್ಲಿ ಹೇಳಿದರು. ಸಿಪಿಐ ಮತ್ತು ಸಿಪಿಐ (ಎಂ) ಇವೆರಡೂ ಅಣ್ಣ ತಮ್ಮ ಇದ್ದಂತಿವೆ. ಇಂದು ಕ್ರಾಂತಿ ಸ್ಫೋಟಗೊಳ್ಳಬೇಕಾದುದು ಗ್ರಾಮೀಣ ಪ್ರದೇಶದಿಂದ. ಕಾರ್ಮಿಕರಿಗೆ ಬೋನಸ್ ಕೊಡಿಸುತ್ತ ಕೂತಿದ್ದರೆ ಚೀನಾದಲ್ಲಿ ಮಾವೋ ಕ್ರಾಂತಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇಂದು ಭಾರತದಲ್ಲಿ ಚೀನಾ ಮಾದರಿಯ ಕ್ರಾಂತಿ ಆಗಬೇಕು ಎಂದು ವಾದಿಸಿದರು. ತಾನು ಹೇಳಬೇಕಾದುದನ್ನು ಪ್ರಭಾವಕಾರಿಯಾಗಿ ಹೇಳುವುದರಲ್ಲಿ ಕೊಂಡಪಲ್ಲಿ ನಿಸ್ಸೀಮರು. ತತ್‌ಕ್ಷಣ ಜನರನ್ನು ಒಗ್ಗೂಡಿಸಿ ಹೋರಾಟಕ್ಕಿಳಿಸುವ ಪ್ರಚಂಡ ಶಕ್ತಿ ಕೊಂಡಪಲ್ಲಿಯವರದು. ಹೋರಾಟದ ನಂತರ ಸಂಘಟನೆಯನ್ನು ಗಟ್ಟಿಗೊಳಿಸುತ್ತ ಕೂರುವುದಕ್ಕೆ ಕೊಂಡಪಲ್ಲಿ ಸಮಯ ವ್ಯಯಿಸುತ್ತಿರಲಿಲ್ಲ. ~~ಬಿಡಿ~~ ಹೋರಾಟಗಳೇ ನದಿಗಳಾಗಿ, ಸಾಗರವಾಗಿ ಹೊಮ್ಮುತ್ತವೆ ಎನ್ನುವುದರಲ್ಲಿ ಅದಮ್ಯ ನಂಬಿಕೆಯೇ ಅವರಿಗೆ ಮೂಲ ಪ್ರೇರಕ ಶಕ್ತಿ. ಸಿಪಿಐ (ಎಂ) ಪಕ್ಷದಿಂದ ಹೊರಬಂದ ಕೊಂಡಪಲ್ಲಿ ಎರಡು ದಶಕಗಳವರೆಗೆ ಭೂಗತರಾಗಿಬಿಟ್ಟರು. ಆಂಧ್ರದ ಕಾಡುಮೇಡುಗಳಷ್ಟೇ ಅಲ್ಲ ಮಧ್ಯಪ್ರದೇಶದ ಬಸ್ತರ್ ಅರಣ್ಯ ಪ್ರದೇಶ, ಮಹಾರಾಷ್ಟ್ರದ ಚಂಡಾ ಅರಣ್ಯ ಪ್ರದೇಶಗಳಲ್ಲಿ ಗೆರಿಲ್ಲಾ ನೆಲೆಗಳನ್ನು ಸ್ಥಾಪಿಸಿದರು. ಕೊಂಡಪಲ್ಲಿ ಬಿಹಾರ್ ಮತ್ತು ಒರಿಸ್ಸಾ ರಾಜ್ಯಗಳವರೆಗೆ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದರು. ಸಿಪಿಐ (ಎಂ.ಎಲ್.) ಜೊತೆ ಹೊಂದಾಣಿಕೆಯಾಗದೆ ಪೀಪಲ್ಸ್‌ವಾರ್ ಗ್ರೂಪ್ (ಪಿ.ಡಬ್ಲ್ಯೂ.ಜಿ.) ಅನ್ನು ಆರಂಭಿಸಿದರು. ಕೊಂಡಪಲ್ಲಿಯವರು ಅದೆಷ್ಟು ತೀವ್ರಗಾಮಿಗಳಾಗಿದ್ದರೆಂದರೆ ಅದನ್ನು ನಕ್ಸಲೈಟ್‌ರಿಂದಲೇ ತಡೆದುಕೊಳ್ಳಲಾಗಲಿಲ್ಲ.

ಸಿಪಿಐ(ಎಂ.ಎಲ್.)ನಲ್ಲಿದ್ದಾಗ 1977ರಲ್ಲಿ ಒಮ್ಮೆ ನಾಗಪುರ್‌ನಲ್ಲಿ ಕೊಂಡಪಲ್ಲಿ ಪೊಲೀಸರಿಂದ ಬಂಧಿಸಲ್ಪಟ್ಟರು. ಆ ಪಕ್ಷದ ಪ್ರಾದೇಶಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾಗ ಬಂಧನಕ್ಕೊಳಗಾದವರು ಸತತ ಎರಡು ವರ್ಷ ಜೈಲಲ್ಲಿ ಕೊಳೆಯಬೇಕಾಯಿತು. 1979ರಲ್ಲಿ ಜಾಮೀನು ಮೇಲೆ ಬಿಡುಗಡೆ ಆದರು. ಜೈಲಿನಿಂದ ಹೊರಬಂದ ಮೇಲೆ 1982ರಲ್ಲಿ ಪಿ.ಡಬ್ಲ್ಯೂ.ಜಿ.ಯನ್ನು ರಚಿಸಿದರು. ಕೊಂಡಪಲ್ಲಿಯವರ ಸಶಸ್ತ್ರ ಕ್ಷಿಪ್ರ ಹೋರಾಟಗಳಿಗೆ ಪೊಲೀಸರು ಬೆಚ್ಚಿಬಿದ್ದರು.

ಆಂಧ್ರದ ಸಾಮಾನ್ಯ ಪೊಲೀಸ್ ಪಡೆಯಿಂದ ಕೊಂಡಪಲ್ಲಿಯವರ ಚಟುವಟಿಕೆಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಅಲ್ಲಿಯ ಸರಕಾರ ಬಂದಿತು. ಈ ಪಿ.ಡಬ್ಲ್ಯೂ.ಜಿ. ಚಟವಟಿಕೆಗಳನ್ನು ಹತ್ತಿಕ್ಕಲೆಂದೇ ಆಂಧ್ರಪ್ರದೇಶ ಸರ್ಕಾರವು Special Task Force Police ಪಡೆಯೊಂದನ್ನು ರಚಿಸಿತು. ನಕ್ಸಲೈಟ್‌ರು ಸಾಮಾನ್ಯ ಅಪರಾಧಿಗಳಿಗಿಂತ ಹೇಗೆ ಭಿನ್ನರಿರುತ್ತಾರೆ, ತಮ್ಮ ಜಾಣತನದಿಂದ ಪೊಲೀಸ್ ಮತ್ತು ನ್ಯಾಯಾಲಯಗಳಿಂದ ಹೇಗೆ ಪಾರಾಗುತ್ತಾರೆ ಎನ್ನುವ ವಿಷಯಗಳ ಕುರಿತು ಆ ಪಡೆಗೆ ತರಬೇತಿ ನೀಡಿದರು. ಪಿ.ಡಬ್ಲ್ಯೂ.ಜಿ.ಯ ಸದಸ್ಯರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದರೆ ಅದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ ಎನ್ನುವ ತೀರ್ಮಾನಕ್ಕೆ ವಿಶೇಷ ಪೊಲೀಸ್ ದಳ ಬಂದಿತು. ಇಂಥ ತೀರ್ಮಾನಕ್ಕೆ ಬರಲು ಒಂದು ಬಲವಾದ ಕಾರಣವೂ ಇದ್ದಿತು. ನ್ಯಾಯಾಂಗ ವಶಕ್ಕೆ ಒಪ್ಪಿಸಲ್ಪಟ್ಟ ನಕ್ಸಲೈಟರು ಜಾಮೀನಿನ ಮೇಲೆ ತಪ್ಪಿಸಿಕೊಂಡು ಹೋಗುತ್ತಿದ್ದರು. ಅನಾರೋಗ್ಯವಿದೆ ಯೆಂದು ಆಸ್ಪತ್ರೆ ಸೇರಿ ಅಲ್ಲಿಂದ ಪರಾರಿಯಾಗುತ್ತಿದ್ದರು.

ಜಾಮೀನಿನ ಮೇಲೆ ಹೊರಬಂದಿದ್ದ ಕೊಂಡಪಲ್ಲಿಯವರನ್ನು ಪೊಲೀಸರು ಮುಂಬೈ ರೈಲು ನಿಲ್ದಾಣದಲ್ಲಿ ಬಂಧಿಸಿದರು. ಬಂಧನದ ನಂತರ ಕೊಂಡಪಲ್ಲಿಯವರಿಗೆ ಹೃದಯದ ಬೇನೆ ಕಾಣಿಸಿಕೊಂಡಿತು. ಹೈದ್ರಾಬಾದಿನ ಉಸ್ಮಾನಿಯಾ ಜನರಲ್ ಆಸ್ಪತ್ರೆಗೆ ದಾಖಲು ಮಾಡಿ ವಿಶೇಷ ಪಡೆಯ ಸರ್ಪಗಾವಲನ್ನಿಕ್ಕಲಾಯಿತು. ಆಸ್ಪತ್ರೆಯನ್ನು ಸಶಸ್ತ್ರ ಪೊಲೀಸರು ಸುತ್ತುಗಟ್ಟಿ ನಿಂತಿದ್ದರು. ಕೊಂಡಪಲ್ಲಿಯವರನ್ನಿರಿಸಲಾಗಿದ್ದ ಇಂಟೆನ್ಸಿವ್ ಕೇರ್ ಯೂನಿಟ್ ಮುಂದೆ ನಾಲ್ವರು ಪೊಲೀಸರನ್ನು ಕಾವಲಿಗೆ ಹಾಕಲಾಗಿತ್ತು. ಆಸ್ಪತ್ರೆಯ ಒಳ ಹೋಗುವ ಎಲ್ಲರನ್ನೂ ತಪಾಸಿಸತೊಡಗಿದರು ಪೊಲೀಸರು.

ಕೊಂಡಪಲ್ಲಿಯವರನ್ನು ಬಂಧಿಸುವುದಕ್ಕೆ ಮುಂಚೆ ಕೆಲವು ಪಿ.ಡಬ್ಲ್ಯೂ.ಜಿ. ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದರು. ಆದರೆ, ಅವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸುವ ಪ್ರಮೇಯವೇ ಉದ್ಭವಿಸಿರಲಿಲ್ಲ. ಬಂಧಿಸಿದ ತಕ್ಷಣ ಅವರನ್ನು ಗುಂಡಿಟ್ಟು ಕೊಂದು, ಎನ್‌ಕೌಂಟರ್‌ನಲ್ಲಿ ಸತ್ತರು ಎಂದು ನ್ಯಾಯಾಲಯಕ್ಕೆ ವರದಿ ಒಪ್ಪಿಸಿದ್ದರು ಪೊಲೀಸರು. ಕೊಂಡಪಲ್ಲಿ ದೇಶಮಟ್ಟದಲ್ಲಿ ಹೆಸರು ಮಾಡಿದ ನಾಯಕರಾಗಿದ್ದರಿಂದ ಅಷ್ಟು ಸುಲಭವಾಗಿ ಅವರನ್ನು ಎನ್‌ಕೌಂಟರ್ ನೆಪದಲ್ಲಿ ಕೊಲ್ಲಲು ಸಾಧ್ಯವಿರಲಿಲ್ಲ. ಆದರೆ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸ್ ಅಧಿಕಾರಿಗಳಲ್ಲಿ ಕೊಂಡಪಲ್ಲಿಯವರನ್ನು ಕೊಲ್ಲುವ ಬಗ್ಗೆ ಚರ್ಚೆ ನಡೆಯತೊಡಗಿತ್ತು.

ಕೆಲವು ಅಧಿಕಾರಿಗಳು ಬಂಧಿಸಿದ ಕೂಡಲೇ ಕೊಂಡಪಲ್ಲಿಯವರನ್ನು ಕೊಲ್ಲಬೇಕಾಗಿತ್ತು ಎಂದು ವಾದಿಸಿದರೆ, ಸಾರ್ವಜನಿಕರಿಗೆ ಅನುಮಾನ ಬಾರದಂತೆ ಕೊಲ್ಲುವುದು ಸರಿ ಎಂದು ಮತ್ತೆ ಕೆಲವರು ವಾದಿಸುತ್ತಿದ್ದರು.

ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರು P.W.G. ಸಂಘಟನೆಗೆ ಸಹಾಯ ಮಾಡುವ ಕೆಲ ನಿಕಟವರ್ತಿಗಳೊಂದಿಗೆ ಸಂಪರ್ಕವಿರಿಸಿಕೊಂಡು ಅವರನ್ನು ತಮ್ಮ ಬೇಹುಗಾರರನ್ನಾಗಿಸಿಕೊಂಡಿದ್ದರು. ಹೀಗಾಗಿ ಕೊಂಡಪಲ್ಲಿಯವರನ್ನು ಹಿಡಿಯಲು ಸಾಧ್ಯವಾಗಿತ್ತು. ಅದೇ ರೀತಿ P.W.Gಯವರೂ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರಲ್ಲಿ ಬೇಹುಗಾರರನ್ನು ಇರಿಸಿಕೊಂಡಿದ್ದರು. ಹೀಗಾಗಿ ಕೊಂಡಪಲ್ಲಿಯವರನ್ನು ಕೊಲ್ಲುವ ಪೊಲೀಸರ ಹುನ್ನಾರ P.W.Gಗೆ ತಿಳಿಯಿತು. ಪೊಲೀಸರ ಚಕ್ರವ್ಯೂಹ ಭೇದಿಸಿ ಕೊಂಡಪಲ್ಲಿಯವರನ್ನು ಆಸ್ಪತ್ರೆಯಿಂದ ಹೊರತರುವುದು ಹೇಗೆ ಎನ್ನುವ ಯೋಜನೆಯನ್ನು P.W.G. ಸದಸ್ಯರು ರೂಪಿಸಿದರು. ಅದಕ್ಕಾಗಿ ಆತ್ಮಹತ್ಯಾದಳ ಮುಂದೆ ಬಂದಿತು. ಆ ಆಸ್ಪತ್ರೆಯ ವೈದ್ಯರುಗಳಲ್ಲಿಯೇ P.W.G. ಹಿತೈಷಿಗಳಿದ್ದರು! ಆಂಧ್ರಪ್ರದೇಶದಲ್ಲಿ ನಕ್ಸಲೈಟ್ ಚಳವಳಿ ದಶಕಗಳಿಂದ ನಡೆದುಕೊಂಡು ಬಂದಂಥದ್ದು. ಎಷ್ಟೋ ಜನ ನಕ್ಸಲೈಟರು ಪೊಲೀಸರ ಗುಂಡುಗಳಿಗೆ ಬಲಿಯಾಗಿದ್ದಾರೆ. ಹಾಗೆ ಬಲಿದಾನಗೊಂಡವರಲ್ಲಿ ಕೆಲವರ ಮಕ್ಕಳು ಡಾಕ್ಟರ್‌ಗಳಾಗಿದ್ದಾರೆ, ಪೊಲೀಸರೂ ಆಗಿದ್ದಾರೆ. ಹೀಗೇ ವಿವಿಧ ರೀತಿಯ ಅಧಿಕಾರಿಗಳೂ ಇದ್ದಾರೆ. ಅವರಲ್ಲೆಲ್ಲ ನಕ್ಸಲೈಟರ ಬಗ್ಗೆ ಅನುಕಂಪದ ಎಳೆಗಳು ಕೆಲಸ ಮಾಡುತ್ತವೆ.

ಅಂದು ಉಸ್ಮಾನಿಯಾ ಆಸ್ಪತ್ರೆಯೊಳಕ್ಕೆ P.W.G. ನಕ್ಸಲೈಟ್ ಗೆರಿಲ್ಲಾಗಳು ಪ್ರವೇಶ ಮಾಡಿದ್ದು ಡಾಕ್ಟರ್, ನರ್ಸ್, ವಾರ್ಡ್ ಬಾಯ್ಸ್ ವೇಷಗಳಲ್ಲಿ. ಇದಕ್ಕೆಲ್ಲ ಅಂದು ಸಹಾಯ ನೀಡಿದ್ದು ಆ ಆಸ್ಪತ್ರೆಯ ಒಬ್ಬಳು ಲೇಡಿ ಡಾಕ್ಟರ್ !

ಇಂಟೆನ್ಸಿವ್ ಕೇರ್ ಯೂನಿಟ್‌ನಿಂದ ಕೊಂಡಪಲ್ಲಿಯುವರನ್ನು ಹೊರಕರೆತಂದವರು ಇಬ್ಬರು ವೇಷಧಾರಿ ಡಾಕ್ಟರ್‌ಗಳು ಎಂದು ಗೊತ್ತಾದೊಡನೆ ಕಾವಲಿಗಿದ್ದ ಪೊಲೀಸರು ಗನ್ ಕೈಗೆತ್ತಿಕೊಂಡರು. ಕೊಂಡಪಲ್ಲಿಯ ಅಕ್ಕಪಕ್ಕಕ್ಕಿದ್ದ ವೇಷಧಾರಿ ಈರ್ವರನ್ನು ಮಾತ್ರ ನಕ್ಸಲೈಟ್‌ರೆಂದು ಭಾವಿಸಿದ ಕಾವಲು ಪೊಲೀಸರು ಮೋಸಹೋದರು. ಅಂಥ ಹತ್ತಾರು ವೇಷಧಾರಿ ಡಾಕ್ಟರ್‌ಗಳು ಆ ಪೊಲೀಸರ ಬೆನ್ನ ಹಿಂದಿದ್ದರು. ಪೊಲೀಸರು ಬಂದೂಕಿನ ಕುದುರೆ ಅಮುಕುವ ಮೊದಲೇ ಅವರ ಹಿಂಭಾಗದಲ್ಲಿದ್ದ ವೇಷಧಾರಿ ಡಾಕ್ಟರ್‌ಗಳಲ್ಲೊಬ್ಬ ಹಾರಿಸಿದ ಗುಂಡುಗಳು ಪೊಲೀಸರ ಬೆನ್ನು ಹೊಕ್ಕವು..

ಆಸ್ಪತ್ರೆಯ ಹೊರಗೆ ಕಾವಲಿದ್ದ ಪೊಲೀಸರಿಗೆ ಇದು ಗೊತ್ತಾಗಿ ಒಳ ಬರುವಷ್ಟರಲ್ಲಿ ಕೊಂಡಪಲ್ಲಿಯನ್ನು ಹೊತ್ತೊಯ್ದಿದ್ದರು ಗೆರಿಲ್ಲಾಗಳು. ಪೊಲೀಸರ ಎದುರಿನಿಂದಲೇ ನಡೆದು ಹೋಗಿ ಕಣ್ಮರೆಯಾದರು ಉಳಿದ ವೇಷಧಾರಿ ಗೆರಿಲ್ಲಾಗಳು.

ಪೊಲೀಸರ ರಕ್ತ ನೋಡಿದ ಸ್ಪೆಷಲ್ ಟಾಸ್ಕ್ ಫೋರ್ಸ್ ನಖಶಿಖಾಂತ ಸ್ಫೋಟಗೊಂಡಿತು. ಕೂಡಲೇ ಕೊಂಡಪಲ್ಲಿಯನ್ನು ಕೊಂದು ಎನ್‌ಕೌಂಟರ್ ಬ್ಯಾಡ್ಜ್ ಹಚ್ಚಬೇಕೆಂದು ಅಭಿಪ್ರಾಯಪಟ್ಟಿತು. ಪೊಲೀಸ್ ಅಧಿಕಾರಿಗಳು ನಾವು ಹೇಳಿದಂತೆ ಮಾಡದ್ದಕ್ಕೆ ಆಯಿತಲ್ಲ ತಕ್ಕ ಶಾಸ್ತಿ ಎಂದು ಛೇಡಿಸತೊಡಗಿದರು. ಹೀಗೆ ಛೇಡಿಸುವ ಅಧಿಕಾರಿಗಳಿಗೆ ತಮ್ಮ ಸಹಚರ ಪೊಲೀಸರು ಸತ್ತುದಕ್ಕೆ ಆಗುವ ದುಃಖಕ್ಕಿಂತ ತಮ್ಮ ಅಭಿಪ್ರಾಯ ಸತ್ಯವಾದುದಕ್ಕೆ ಹೆಚ್ಚು ಹೆಮ್ಮೆಯಾಗಿತ್ತು.

ಆಂಧ್ರಪ್ರದೇಶದ ಗಡಿಯಲ್ಲೆಲ್ಲ ಬಿಗಿ ಪೊಲೀಸ್ ಕಣ್ಗಾವಲಿರಿಸಿದ್ದು, ಕೊಂಡಪಲ್ಲಿ ಮತ್ತು ಕಾಮ್ರೇಡ್‌ಗಳಿಗೆ ಗೊತ್ತಾಗದಿರಲಿಲ್ಲ. ಗಡಿ ದಾಟಿ ಹೊರಟರೆ ಪೊಲೀಸರು ತಮ್ಮನ್ನು ಕಡಿದು ಕೆಡಹುವುದು ಗ್ಯಾರಂಟಿ ಎಂದುಕೊಂಡರು. ಅರಣ್ಯದೊಳಗಿನ ತಮ್ಮ ನೆಲೆಯನ್ನು ಮೊದಲು ಸೇರಿದರು. ಪೊಲೀಸರ ಕಣ್ಣಿಗೆ ಮಣ್ಣೆರಚಲು ಬೇರೊಂದು ಅರಣ್ಯದ ನೆಲೆಯಲ್ಲಿ ಅವಿತುಕೊಂಡಿದ್ದಾರೆ ಕೊಂಡಪಲ್ಲಿ ಎಂದು ಸುಳ್ಳು ಸಮಾಚಾರವನ್ನು ಯೋಜಿತವಾಗಿ ಹರಿಯಬಿಟ್ಟರು. ತಮಗೆ ಬಂದ ಫೋನ್ ಮಾಹಿತಿಗಳನ್ನು ನಂಬಿಕೊಂಡ ಪೊಲೀಸರು ಅರಣ್ಯವನ್ನು ಜಾಲಾಡತೊಡಗಿದರು. ಕೊಂಡಪಲ್ಲಿ ಅಲ್ಲಿಯೇ ಸುತ್ತಮುತ್ತ ಇದ್ದಾರೆನ್ನುವುದನ್ನು ಪೊಲೀಸರು ನಂಬುವಂತೆ ಕೆಲವು ಕುರುಹುಗಳನ್ನೂ ಬಿಡುವ ವ್ಯವಸ್ಥೆಯನ್ನು ಮಾಡಿದರು. ಇತ್ತ ಪೊಲೀಸರು ಅರಣ್ಯದ ಗಿಡಗಂಟೆಗಳನ್ನು ಬಡಿದು ಕೊಂಡಪಲ್ಲಿಗಾಗಿ ಜಾಲಾಡುವುದರಲ್ಲಿ ಮಗ್ನವಾಗಿದ್ದಾಗ ಸಮಯ ಸಾಧಿಸಿ ಕಾಮ್ರೇಡ್‌ಗಳು ಕೊಂಡಪಲ್ಲಿಯವರನ್ನು ಬೆಂಗಳೂರಿಗೆ ಸಾಗಿಸಿದರು.

ಅಂದು ರಾತ್ರಿ ಒಂಬತ್ತು ಗಂಟೆಯಾಗಿರಬಹುದು. ಬಾಬಯ್ಯನವರ ಮನೆ ಬಾಗಿಲು ಬೆಲ್ ಆಯಿತು. ಆಗಂತುಕರು, "ಸಾರ್, ಬೆಂಗಳೂರಿಗೆ ಕೊಂಡಪಲ್ಲಿಯವರು ಬಂದಿದ್ದಾರೆ. ಅವರಿಗೆ ತೀವ್ರ ಹೃದಯದ ತೊಂದರೆ. ಕೂಡಲೇ ಒಬ್ಬ ಡಾಕ್ಟರ್‌ನನ್ನು ಹುಡುಕಿ ಕೊಡಿ. ತುಂಬಾ ಸೀಕ್ರೆಟ್ ಆಗಿರಬೇಕು ವಿಷಯ" ಎಂದರು.

ಕೊಂಡಪಲ್ಲಿಯವರ ಹೆಸರು ಕೇಳುತ್ತಲೇ ಬಾಬಯ್ಯ ಭಾವೋದ್ವೇಗಕ್ಕೊಳಗಾದರು. ಅವರನ್ನು ನಡೆದಾಡುವ ದೇವರು ಎಂದುಕೊಂಡಿದ್ದರು ಬಾಬಯ್ಯ. ಆ ದೇವರನ್ನು ಪ್ರತ್ಯಕ್ಷ ಕಾಣುವ ಸುಯೋಗ ತಮಗೊದಗಿಬಂದಿದೆ

ಎಂದು ಭಾವುಕರಾದರು. ಮುಂದೊದಗಬಹುದಾದ ಅಪಾಯಕಾರಿ ಆಗುಹೋಗುಗಳ ಬಗೆಗೆ ತಲೆಯನ್ನೇ ಕೆಡಿಸಿಕೊಳ್ಳಲಿಲ್ಲ. ಕೊಂಡಪಲ್ಲಿಯವರಿಗೆ ಡಾಕ್ಟರ್ ಒಬ್ಬರನ್ನು ಹುಡುಕಿಕೊಟ್ಟು ಅವರ ಜೀವ ಉಳಿಸಬೇಕು ಎನ್ನುವ ಯೋಚನೆ ನಗರಿಯವರ ತಲೆಯಲ್ಲಿ ಭಾರಿಸತೊಡಗಿತು. ಯಾರೇ ಹೋಗಲಿ, ಮಧ್ಯರಾತ್ರಿಯಾದರೂ ಸರಿ ಸಹಾಯ ಹಸ್ತ ನೀಡುವುದಕ್ಕೆ ಖ್ಯಾತರಾಗಿದ್ದರು ಬಾಬಯ್ಯ.

ಬಾಬಯ್ಯನವರದು ಎಂಥ ಮುಗ್ಧಸ್ವಭಾವ ಎಂದರೆ, ಅಪರಾತ್ರಿಯಲ್ಲಿ ಸಹಾಯ ಕೋರಿ ಬಂದವರು ಕೊಂಡಪಲ್ಲಿಯವರ ಪೈಕಿ ಹೌದೋ ಅಲ್ಲವೋ ಎಂದೂ ಸಹ ಸಂಶಯಿಸಲಿಲ್ಲ. ಒಂದೇ ಪಟ್ಟಿಗೆ ರೆಡಿಯಾಗಿ ಹೊರಟುನಿಂತುಬಿಟ್ಟರು.

ತಮ್ಮ ಫ್ಯಾಮಿಲಿ ಡಾಕ್ಟರ್ ಮನೆಗೆ ಫೋನ್ ಮಾಡಿದ ಬಾಬಯ್ಯ, "ನನ್ನ ತೀರಾ ಹತ್ತಿರದ ರಿಲೇಟಿವ್ ಒಬ್ಬರಿಗೆ ಹೃದಯದ ತೊಂದರೆ ಕಾಣಿಸಿಕೊಂಡಿದೆ. ಕೂಡಲೇ ಪ್ರಥಮ ಚಿಕಿತ್ಸೆಯ ಅವಶ್ಯಕತೆಯಿದೆ, ಬರಬೇಕಲ್ಲ" ಎಂದರು. ಡಾಕ್ಟರ್ ಜೊತೆ ಪೇಷೆಂಟ್ ಸಂಬಂಧ ಮೀರಿ ಸ್ನೇಹಿತರಾಗಿದ್ದರು ಬಾಬಯ್ಯ. ಎರಡನೇ ಮಾತಾಡದೆ ಡಾಕ್ಟರ್ ಸಿದ್ಧರಾದರು. ಆಗಂತುಕರೊಂದಿಗೆ ಡಾಕ್ಟರ್ ಮನೆಗೆ ಹೋಗಿ ಅಲ್ಲಿಂದ ಕೊಂಡಪಲ್ಲಿ ಇರುವ ಸ್ಥಳಕ್ಕೆ ಡಾಕ್ಟರ್‌ರನ್ನು ಕರೆದೊಯ್ದರು.

ಕೊಂಡಪಲ್ಲಿಯವರನ್ನು ನೋಡುತ್ತಲೇ ಬಾಬಯ್ಯನವರಲ್ಲಿ ಭಕ್ತಿಭಾವ ಉಕ್ಕಿತು. ಮಲಗಿದ್ದ ಅವರ ದೇಹಸ್ಪರ್ಶ ಮಾಡಿ ಧನ್ಯಭಾವದಲ್ಲಿ ಮುಳುಗಿದರು. ಪ್ರಥಮ ಚಿಕಿತ್ಸೆ ನೀಡಿದ ಡಾಕ್ಟರ್, 'ಸದ್ಯಕ್ಕೆ ಇಷ್ಟು ಟ್ರೀಟ್‌ಮೆಂಟ್ ಸಾಕು. ನಾಳೆ ಕಾರ್ಡಿಯಾಲಜಿಸ್ಟ್ ಅನ್ನು ಸಂಪರ್ಕಿಸಿರಿ' ಎಂದು ಒಬ್ಬ ಡಾಕ್ಟರ್‌ರ ವಿಳಾಸ ಕೊಟ್ಟರು. ಡಾಕ್ಟರ್ ಜೊತೆ ಬಾಬಯ್ಯ ಹೊರಟುಬಂದರು. ಮಾರನೇ ದಿನ ಕಾರ್ಡಿಯಾಲಜಿಸ್ಟ್‌ರನ್ನು ಕಂಡ ಬಾಬಯ್ಯನವರು ಫ್ಯಾಮಿಲಿ ಡಾಕ್ಟರ್ ಕೊಟ್ಟ ಗುರುತಿನ ಚೀಟಿ ನೀಡಿದರು. ಇ.ಸಿ.ಜಿ. ತಪಾಸಣೆ ಮತ್ತು ವಿಶೇಷ ಚಿಕಿತ್ಸೆಯ ವ್ಯವಸ್ಥೆ ಆಯಿತು. ಮುಖ ಚಹರೆಯ ಗುರುತು ಸಿಗದಿರಲಿ ಎಂದು ಕೊಂಡಪಲ್ಲಿ ತಲೆ, ಮೀಸೆಗಳನ್ನು ಬೋಳಾಗಿಸಿದ್ದರು. ಹೆಸರನ್ನೂ ಬದಲಾಯಿಸಿಕೊಂಡಿದ್ದರು. ಆಂಧ್ರದಿಂದ ಬೆಂಗಳೂರಿಗೆ ಮೆಡಿಕಲ್ ಓದಲು ಬಂದಿದ್ದ ವಿದ್ಯಾರ್ಥಿಯ ರೂಮಲ್ಲಿ ಕೊಂಡಪಲ್ಲಿ ತಂಗಿದ್ದರು. ಮನೆಯಲ್ಲಿ ವಿಶೇಷ ಅಡಿಗೆ ಮಾಡಿಸಿಕೊಂಡು ಒಯ್ದಾಗ ಕೊಂಡಪಲ್ಲಿ ಕೂಡಲೇ ಅದನ್ನು ಉಣ್ಣಲಿಲ್ಲ. ಮೊದಲು ಆತನ ಸಹಚರರು ಉಂಡರು. ಬಾಬಯ್ಯನವರು, 'ಆರಿಹೋಗುತ್ತೆ ಬಿಸಿಯಾಗಿರುವಾಗಲೇ ರುಚಿಯಾಗಿರುತ್ತೆ' ಎಂದರು ಪ್ರೀತಿಯಿಂದ. ಅದಕ್ಕೆ ಕೊಂಡಪಲ್ಲಿ ನಕ್ಕು ಮಾತನ್ನು

ಬೇರೆಡೆಗೆ ತಿರುಗಿಸಿ, ಶ್ರೀ ಶ್ರೀ ಕವನಗಳು ಕನ್ನಡದಲ್ಲಿ ಬಂದಿರುವ ಬಗ್ಗೆ ಕೇಳಿದರು ಮತ್ತು ಕರ್ನಾಟಕದಲ್ಲಿ ಹೋರಾಟಕ್ಕೆ ಏನಾದರೂ ಅವಕಾಶಗಳಿವೆಯೇ ಎಂದು ಚರ್ಚೆ ಶುರುಮಾಡಿದರು. ಗಂಟೆಗಟ್ಟಲೆ ಕ್ರಾಂತಿಕಾರಿ ಮಾತುಗಳನ್ನಾಡಿದ ಮೇಲೆಯೂ ಕೊಂಡಪಲ್ಲಿ ಊಟ ಮಾಡದೆಇದ್ದಾಗ ಬಾಬಯ್ಯ ಪುನಃ ಒತ್ತಾಯಿಸಿದರು ಊಟ ಮಾಡುವಂತೆ. ಬಾಬಯ್ಯ ತಂದಿದ್ದ ಆಹಾರವನ್ನು ಊಟ ಮಾಡಿ ಕೂತಿದ್ದ ತಮ್ಮ ಸಹಚರರತ್ತ ನೋಡಿದರು ಕೊಂಡಪಲ್ಲಿ. ಅವರು ಒಂದು ಪ್ಲೇಟಿನಲ್ಲಿ ಬಡಿಸಿಕೊಟ್ಟಾಗ ಕೊಂಡಪಲ್ಲಿ ಉಣ್ಣತೊಡಗಿದರು.... ಬಾಬಯ್ಯ ತಾವು ತಂದಿದ್ದ ಕ್ಯಾರಿಯರ್ ಅನ್ನು ಎತ್ತಿಕೊಂಡು ಹೊರಟು ನಿಂತಾಗ ಕೊಂಡಪಲ್ಲಿಯವರು ಬಾಬಯ್ಯಗೆ 'ನಾಳೆ ನಾವಿಲ್ಲಿರೊಲ್ಲ' ಎಲ್ಲಿರುತ್ತೇವೆ ಎಂದು ನಿಮಗೆ ಫೋನ್ ಮಾಡಿ ವಿಳಾಸ ಕೊಡುತ್ತೇವೆ, ಎಂದರು.

ಬಾಬಯ್ಯನವರ ಜೊತೆಗೆ ಹೊರಬಂದ ಮೆಡಿಕಲ್ ಸ್ಟೂಡೆಂಟ್, 'ಸಾರ್ ನೀವು ತಂದ ಫುಡ್ ಅನ್ನು ಕೊಂಡಪಲ್ಲಿ ಮೊದಲಿಗೆ ಏಕೆ ತಿನ್ನಲಿಲ್ಲ ಗೊತ್ತಾಯಿತೆ? ಹೊಸದಾಗಿ ಪರಿಚಯವಾದವರು ಕೊಟ್ಟಿದ್ದನ್ನು ಸಹಚರರು ಪರೀಕ್ಷಿಸಿ ಗ್ರೀನ್‌ಸಿಗ್ನಲ್ ಕೊಟ್ಟ ಮೇಲೆಯೇ ಅವರು ಊಟ ಮಾಡುವುದು. ನೋಡಿ, ಕೊಂಡಪಲ್ಲಿಯ ಕಾಮ್ರೇಡ್‌ಗಳು ಊಟ ಮಾಡಿದ ಮೇಲೆ ಒಂದು ಗಂಟೆಯವರೆಗೂ ನಿಮ್ಮೊಂದಿಗೆ ಮಾತಾಡಿದ್ದು ಏಕೆ ಗೊತ್ತೆ? ನೀವು ತಂದೆ ಆಹಾರದಲ್ಲಿ ವಿಷದ ಅಥವಾ ಮಂಪರು ಔಷಧಿಯ ಬೆರಕೆ ಇಲ್ಲವೆಂದು ಪರೀಕ್ಷಿಸುವುದಕ್ಕೋಸ್ಕರ' ಎಂದು ಹೇಳಿದಾಗ ಬಾಬಯ್ಯ ದಂಗಾಗಿ ಹೋದರು. ತಾವು ಒಯ್ದ ಆಹಾರವನ್ನು ಸಂಶಯಿಸಿದ್ದಕ್ಕಾಗಿ ಬಾಬಯ್ಯನವರಿಗೆ ಕೋಪ ಉಂಟಾಗಲಿಲ್ಲ. ಹೀಗೆ ಜಾಗೃತರಾಗಿರಬೇಕಾದುದು ಕ್ರಾಂತಿಕಾರಿಗಳ ಮುಖ್ಯ ಲಕ್ಷಣ ಎಂದು ಕೊಂಡಪಲ್ಲಿ ಮತ್ತು ಅವರ ಜೀವ ಕಾಪಾಡಲು ತಮ್ಮ ಆತ್ಮಾಹುತಿಗೂ ಸಿದ್ಧರಾಗಿರುವ ಕಾಮ್ರೇಡ್‌ಗಳ ಬಗ್ಗೆ ಹೆಮ್ಮೆ ಉಕ್ಕಿಬಂದಿತು ಬಾಬಯ್ಯಗೆ. ಆ ಸ್ಟೂಡೆಂಟ್ ಮತ್ತೆ ಹೇಳಿದ: 'ನೋಡಿ ನಾಳೆ ಯಾವ ಪ್ಲೇಸ್‌ನಲ್ಲಿರುತ್ತಾರೆ ಎಂದು ನನಗೇ ಹೇಳಿಲ್ಲ, ಅದೆಲ್ಲ ಸೀಕ್ರೆಟ್, ನೀವೇ ಧನ್ಯರು; ನಾಳೆ ಅವರಿರುವ ಸ್ಥಳದ ಅಡ್ರೆಸ್ ಫೋನ್ ಮೂಲಕ ನಿಮಗೆ ತಿಳಿಯುತ್ತದೆ'. ನಾಳೆ ಈ ರೂಮಲ್ಲಿರುವುದಿಲ್ಲ ಎಂದು ಕೊಂಡಪಲ್ಲಿ ಹೇಳಿದಾಗ, ಅದೇಕೆ ಎಂದು ಪ್ರಶ್ನಿಸಿಕೊಂಡಿರದ ಬಾಬಯ್ಯನವರು ಮೆಡಿಕಲ್ ಸ್ಟೂಡೆಂಟ್ ನೀಡಿದ ವಿವರಣೆಯಿಂದ ಹುಬ್ಬೇರಿಸಿದರು. ನಕ್ಸಲೈಟ್‌ರ ನೆಲೆ ಕಂಡುಹಿಡಿಯುವುದು ದುಸ್ಸಾಧ್ಯ ಎಂದುಕೊಳ್ಳುತ್ತ ಮನೆಯತ್ತ ನಡೆದರು.

ಮಾರನೆಯ ದಿನ ಬಾಬಯ್ಯನವರ ಮನೆಗೆ ಭಾಸ್ಕರರೆಡ್ಡಿ ಎನ್ನುವ ಯುವಕ ಬಂದು ಕಾಮ್ರೇಡ್ ಕೊಂಡಪಲ್ಲಿ ನಿಮ್ಮನ್ನು ಕರೆತರಲು ತಿಳಿಸಿದ್ದಾರೆ ಅಂದ. ಫೋನ್‌ಗಾಗಿ ಕಾಯುತ್ತ ಕೂತಿದ್ದೆ ಎನ್ನುತ್ತ ಸಂಭ್ರಮದಿಂದ ಭಾಸ್ಕರರೆಡ್ಡಿಯ ಜೊತೆಗೆ ನಡೆದರು. ಬಾಬಯ್ಯನವರಿಗೆ ಭಾಸ್ಕರರೆಡ್ಡಿ ಹೊಸ ವ್ಯಕ್ತಿಯಾಗಿದ್ದ. ಪರಿಚಯ ಹೇಳಿಕೊಂಡ. ಪೆಸ್ಟಿಸೈಡ್ಸ್ ಸೇಲ್ಸ್ ಏಜೆಂಟ್ ಇರುವುದಾಗಿ ಹೇಳಿದ. ಕೊಳಚೆ ಪ್ರದೇಶವೊಂದರ ಚಿಕ್ಕಮನೆಯಲ್ಲಿ ಕೊಂಡಪಲ್ಲಿಯವರಿದ್ದರು. ಬಾಬಯ್ಯನವರಿಂದ ಬಹಳ ಸಹಾಯವಾಯಿತು ಎಂದು ಧನ್ಯವಾದ ಹೇಳಿದರು ಕೊಂಡಪಲ್ಲಿ. 'ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕಿರುವುದು ನನಗೆ ಅತ್ಯಂತ ಸಂತೋಷ ನೀಡಿದೆ' ಎಂದು ಬಾಬಯ್ಯ ಹೇಳಿದರು. ಮಾರನೇ ದಿನವೂ ಬಾಬಯ್ಯ ಅಲ್ಲಿಗೆ ಹೋಗಿ ಕೊಂಡಪಲ್ಲಿಯವರ ಆರೋಗ್ಯ ವಿಚಾರಿಸಿಕೊಂಡು ಬಂದರು. ಮೂರನೇ ದಿನ ಆ ಸ್ಥಳಕ್ಕೆ ಹೋದಾಗ ಆ ಮನೆಗೆ ಬೀಗ ಹಾಕಲಾಗಿತ್ತು. ಎಲ್ಲೋ ಹೊರಹೋಗಿರಬಹುದು ಎಂದುಕೊಂಡ ಬಾಬಯ್ಯ ಸ್ವಲ್ಪ ಹೊತ್ತು ಅಲ್ಲೇ ನಿಂತುಕೊಂಡಿರುವಾಗಲೇ ಭಾಸ್ಕರರೆಡ್ಡಿ ಬಂದ. ಏನು ಬೀಗ ಹಾಕಿದೆ ಎಂದು ಇಬ್ಬರೂ ಮಾತಾಡಿಕೊಳ್ಳುತ್ತಿರುವಾಗಲೇ ಪಕ್ಕದ ಮನೆಯ ವ್ಯಕ್ತಿಯೊಂದು ಬಂದು, ಈ ಮನೆಯಲ್ಲಿದ್ದವರೆಲ್ಲ ಊರಿಗೆ ಹೋದರು. ಯಾರಾದರೂ ಬಂದರೆ ಹಾಗೆ ಹೇಳು ಅಂತ ನನಗೆ ಹೇಳಿದ್ದಾರೆ ಅಂದ. ಬಾಬಯ್ಯ ಮತ್ತು ಭಾಸ್ಕರರೆಡ್ಡಿ ಈರ್ವರೂ ಪರಸ್ಪರ ಮುಖ ನೋಡಿಕೊಂಡರು.

ಈ ಐದಾರು ದಿನಗಳ ಒಡನಾಟದಲ್ಲಿ ಬಾಬಯ್ಯನವರಿಗೆ ಇಂಥ ಕ್ರಾಂತಿಕಾರೀ ಗೌಪ್ಯತೆಗಳು ಅನುಭವಕ್ಕೆ ಬಂದಿದ್ದವು. ಭಾಸ್ಕರರೆಡ್ಡಿಗೆ ಬಾಬಯ್ಯನವರು, 'ಇದಕ್ಕೆ ಆಶ್ಚರ್ಯಪಟ್ಟುಕೊಳ್ಳಬೇಡ. ಕ್ರಾಂತಿಕಾರಿಗಳು ಹೀಗಿರುವುದೇ ಸರಿ. ನೀನು ಸೇಲ್ಸ್ ಏಜಂಟ್, ನಾನು ಪ್ರೊಫೆಸರ್. ನಮಗೆಲ್ಲ ಕ್ರಾಂತಿಕಾರಿಗಳ ಆಳ ಅಗಲಗಳು ತಿಳಿಯುವುದು ಅಷ್ಟ ಸುಲಭವಲ್ಲ. ಐದಾರು ದಿವಸ ಅವರನ್ನು ಭೇಟಿಯಾಗುವ ಭಾಗ್ಯ ದೊರಕಿತಲ್ಲ ಅದಕ್ಕೆ ಖುಷಿಪಡಬೇಕು ನಾವು' ಎಂದು ಸಮಾಧಾನ ಹೇಳಿದರು.

'ನೀವು ಇಷ್ಟೆಲ್ಲ ಸಹಾಯ ಮಾಡಿದ್ದೀರಿ. ನಿಮಗೂ ಹೇಳದೆ ಕೇಳದೆ ಹೋಗಿದ್ದಾರೆ ನೋಡಿ' ಎಂದ ಭಾಸ್ಕರರೆಡ್ಡಿ ಅತೃಪ್ತಿ ವ್ಯಕ್ತಪಡಿಸುತ್ತ.

ಇದೆಲ್ಲ ಆಗಿ ಆರೇಳು ತಿಂಗಳುಗಳ ಬಳಿಕ ಭಾಸ್ಕರರೆಡ್ಡಿ ಮೆಜೆಸ್ಟಿಕ್‌ನಲ್ಲಿರುವ ಹೋಟೆಲ್ ಎಲೈಟ್‌ನಲ್ಲಿ ಬಾಬಯ್ಯನವರಿಗೆ ಸಿಕ್ಕ. ಎಲೈಟ್ ಹೋಟೆಲ್‌ನ [illegible]

ಬಹಳ ಫೇಮಸ್. ಎಲೈಟ್ ಹೋಟೆಲ್‌ನ ಟೀಯ ಜೊತೆಗೆ ಸಿಗರೇಟ್ ಎಳೆಯುವುದರೆಂದರೆ ಬಾಬಯ್ಯನವರಿಗೆ ಬಲು ಖುಷಿ.

ಬಾಬಯ್ಯನವರು ತಮ್ಮ ಗೆಳೆಯರೊಂದಿಗೆ ಕೂತಿದ್ದ ಟೇಬಲ್ ಕಡೆಗೆ ಬಂದ ಭಾಸ್ಕರರೆಡ್ಡಿ ತನ್ನ ಪರಿಚಯವನ್ನು ನೆನಪಿಸಿದ. ಕೂಡಲೇ ಬಾಬಯ್ಯನವರಿಗೆ ಭಾಸ್ಕರರೆಡ್ಡಿಯ ಪರಿಚಯ ಸಿಕ್ಕಿ ತುಸು ಗೊಂದಲಕ್ಕೀಡಾಗಿ ಏನೂ ಮಾತಾಡದಿರುವಂತೆ ಕಣ್ಣಿನಿಂದ ಸಂಜ್ಞೆ ಮಾಡಿ ತಾವೇ ಎದ್ದು ಬಂದು ಅವನ ಕೈಕುಲುಕಿದರು. 'ನನ್ನೊಂದಿಗೆ ಕೂತಿರುವ ಗೆಳೆಯರಿಗೆ ಕಮ್ಯುನಿಸ್ಟ್‌ರೆಂದರೆ ಆಗುವುದಿಲ್ಲ. ನೀನು ಎಲ್ಲಿ ಕೊಂಡಪಲ್ಲಿಯವರ ಹೆಸರು ಹೇಳಿಬಿಡುತ್ತೀಯೋ ಅಂತ ನಾನೇ ಎದ್ದು ಬಂದೆ' ಎಂದರು.

"ಸಾರ್, ನಿಮ್ಮಿಂದ ನನಗೆ ಒಂದು ಸಹಾಯವಾಗಬೇಕು. ನನ್ನ ಬಿಜಿನೆಸ್ ಬೆಂಗಳೂರಲ್ಲಿ ಜಾಸ್ತಿ ಆಗುತ್ತಿರುವುದರಿಂದ ಕಂಪನಿಯವರು ಬೆಂಗಳೂರಲ್ಲೇ ಮನೆ ಮಾಡು ಎನ್ನುತ್ತಿದ್ದಾರೆ. ನಾನು ಬ್ಯಾಚುಲರ್. ಚಿಕ್ಕ ಮನೆಯೊಂದನ್ನು ಹುಡುಕಿ ಬಾಡಿಗೆಗೆ ಕೊಡಿಸಿ. ಔಟ್‌ಹೌಸ್ ಇದ್ದರೆ ಒಳ್ಳೆಯದು. ನಾನೂ ಊರೂರು ತಿರುಗುವವನು. ಸೇಫ್ಟಿಯಿರುತ್ತದೆ. ಇಂಡಿಪೆಂಡೆಂಟ್ ಮನೆ ಹಿಡಿದರೆ ಬೀಗ ಹಾಕಿಕೊಂಡು ಊರಿಗೆ ಹೋಗುವುದು ಕಷ್ಟವಾಗುತ್ತದೆ. ಬ್ರೋಕರ್‌ಗಳ ಹತ್ತಿರ ಹೋದರೆ ದುಡ್ಡು ಕೀಳುತ್ತಾರೆ" ಎಂದ ಭಾಸ್ಕರರೆಡ್ಡಿ. "ಆಯಿತು, ಇನ್ನೊಂದು ಹದಿನೈದು ದಿವಸ ಬಿಟ್ಟು ನನಗೆ ಫೋನ್ ಮಾಡು. ನನ್ನ ಸ್ನೇಹಿತರನ್ನು ಕೇಳಿ ನಿನಗೆ ಹೇಳ್ತೇನೆ" ಎಂದರು ಬಾಬಯ್ಯ.

ಒಂದು ವಾರವೂ ಕಳೆದಿರಲಿಲ್ಲ, ಭಾಸ್ಕರರೆಡ್ಡಿ ಫೋನ್ ಮಾಡಿ 'ಸಾರ್ ನನಗೆ ಮನೆಯ ಅವಶ್ಯಕತೆ ಬಹಳ ಇದೆ. ಬೇಗನೆ ಹುಡುಕಿ ಕೊಡಬೇಕು' ಎಂದು ವಿನಂತಿಸಿಕೊಂಡ. ಆ ವಿಷಯವನ್ನು ಎಲೈಟ್ ಹೋಟೆಲ್‌ನಲ್ಲೇ ಮರೆತು ಬಂದಿದ್ದ ಬಾಬಯ್ಯನವರು, 'ಆಯಿತಪ್ಪ, ಇನ್ನೊಂದು ವಾರ ಬಿಟ್ಟು ಫೋನ್ ಮಾಡು ಹೇಳ್ತೇನೆ' ಎಂದರು.

ಕ್ರಾಂತಿಕಾರಿಗಳ ಬಗ್ಗೆ ಅನುಕಂಪವುಳ್ಳ ಭಾಸ್ಕರರೆಡ್ಡಿಗೆ ಸಹಾಯ ಮಾಡಲು ಬಾಬಯ್ಯ ನಿರ್ಧರಿಸಿಕೊಂಡರು. ತಾನೇನು ಕೈಯಿಂದ ಕಳೆದುಕೊಳ್ಳುವುದಿದೆ. ಪಾಪ ಅವನಿಗೆ ಕಡಿಮೆ ಬಾಡಿಗೆಯ ಮನೆ ಕೊಡಿಸಿದರೆ ಎಷ್ಟೋ ಸಹಾಯವಾಗುತ್ತದೆ ಎಂದುಕೊಂಡರು.

ಯೂನಿವರ್ಸಿಟಿಯ ತಮ್ಮ ಸಹೋದ್ಯೋಗಿಗಳ ಬಳಿ ವಿಚಾರಿಸಿ ಒಂದು ಮನೆಯನ್ನು ಹುಡುಕಿದರು. ರಿಚ್‌ಮಂಡ್ ಸರ್ಕಲ್ ಬಳಿಯ ದೊಡ್ಡ ಮನೆಯ ಕಾಂಪೌಂಡ್ ಒಳಗಿನ ಔಟ್‌ಹೌಸ್ ಅದಾಗಿತ್ತು. ಭಾಸ್ಕರರೆಡ್ಡಿಯನ್ನು ಕರೆದೊಯ್ದು ತೋರಿಸಿದರು. ಆ ಮನೆಯನ್ನು ನೋಡಿ ರೆಡ್ಡಿ ಸಂತೋಷಗೊಂಡ. ಬಾಬಯ್ಯನವರಿಗೆ ಥ್ಯಾಂಕ್ಸ್ ಹೇಳಿದ. "ಪರರಾಜ್ಯದಲ್ಲಿ ನಮ್ಮವರು ಅಂತ ಇದ್ದರೆ ಇಂಥ ಸಹಾಯಗಳು ಸಿಗುತ್ತವೆ ನೋಡಿ ಸಾರ್" ಎಂದು ಹೇಳಿದ. "ನಾನೇನು ಮಹಾ ಸಹಾಯ ಮಾಡಿದೇನೆ ಬಿಡೋ. ಆಗಾಗ ಬರುತ್ತಿರು" ಎಂದು ಹೇಳಿ ಬಾಬಯ್ಯ ಹೊರಟರು.

ಭಾಸ್ಕರರೆಡ್ಡಿ ಮತ್ತೆ ಬಾಬಯ್ಯನವರನ್ನು ಕಾಣಲು ಹೋಗಲಿಲ್ಲ. ಭಾಸ್ಕರರೆಡ್ಡಿ ಯಾವಾಗಲೋ ಬಂದು ಮತ್ಯಾವಾಗಲೋ ಹೋಗಿರುತ್ತಿದ್ದ. ಇರುವನೋ ಇಲ್ಲವೋ ಎನ್ನುವಂತಿರುತ್ತಿದ್ದ. ಪ್ರತಿ ತಿಂಗಳೂ ಬಾಡಿಗೆಯನ್ನು ತಪ್ಪದೆ ಕೊಡುತ್ತಿದ್ದ. ಮನೆಯ ಮಾಲೀಕರಿಗೆ ಸಹ ಇಂಥ ಬಾಡಿಗೆದಾರನೇ ಬೇಕಾಗಿತ್ತು. ಸಂಸಾರಿಗಳಾದರೆ ಗಲಾಟೆ ಹೆಚ್ಚು. ಬಂದು ಹೋಗುವವರ ಕಿರಿಕಿರಿಯಿರುತ್ತದೆ. ಈ ವ್ಯಕ್ತಿಯನ್ನು ಭೇಟಿಯಾಗಲು ಜನ ಬಂದುದನ್ನೇ ಮಾಲೀಕರು ನೋಡಿರಲಿಲ್ಲ. ಹೀಗೇ ಆರು ತಿಂಗಳು ಕಳೆದಿರಬಹುದು. ಸತತವಾಗಿ ಮೂರು ತಿಂಗಳಾದರೂ ಭಾಸ್ಕರರೆಡ್ಡಿ ಮಾಲೀಕರಿಗೆ ಕಾಣಲಿಲ್ಲ. ಬಾಡಿಗೆಯನ್ನೂ ಕೊಡಲಿಲ್ಲ. ಪಾಪ ಒಳ್ಳೆಯವನು ಅದೇನು ತೊಂದರೆಯೋ ಏನೋ, ಹೇಳಿಯೂ ಹೋಗಿಲ್ಲ ಎಂದುಕೊಂಡು ಸುಮ್ಮನಾದರು. ಒಂದು ದಿನ ಇದ್ದಕ್ಕಿದ್ದಂತೆ ಭಾಸ್ಕರರೆಡ್ಡಿ ಬಾಡಿಗೆಗೆ ಇದ್ದ ಔಟ್‌ಹೌಸ್‌ನ ಹಿಂದಿನ ಕಿಟಕಿಯ ಸರಳುಗಳನ್ನು ಕಿತ್ತಿದ್ದರು ಕಳ್ಳರು. ಇದನ್ನು ನೋಡಿದ ಮನೆಯ ಮಾಲೀಕರು ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟರು. ಪೊಲೀಸರು ಬಂದು ಮಹಜರು ಮಾಡಲು ಅಣಿಯಾದರು. ಪಂಚರ ಸಮಕ್ಷಮ ಪೊಲೀಸರು ಬಾಗಿಲಿಗೆ ಹಾಕಿದ್ದ ಬೀಗವನ್ನು ಒಡೆದು ಔಟ್‌ಹೌಸಿನ ಒಳಕ್ಕೆ ಹೋದರು. ಒಳಗೆ ಹೋಗಿದ್ದ ಇಬ್ಬರು ಪೊಲೀಸರು ಹೋ ಎಂದು ಕೂಗುತ್ತ ಹೊರಗೋಡಿ ಬಂದರು. ಎಲ್ಲರೂ ಗಾಬರಿಯಾಗಿ ಏನು ಎಂದು ಪ್ರಶ್ನಾರ್ಥಕವಾಗಿ ನೋಡಿದರು. ಹೊರಬಂದ ಪೊಲೀಸರು ರೈಫಲ್, ರೈಫಲ್ ಎಂದು ಕೂಗಿದರು.

ಒಳಗೆ ಕಳ್ಳನಿದ್ದು, ಅವನ ಕೈಯಲ್ಲಿ ರೈಫಲ್ ಇದ್ದುದರಿಂದ ಹೀಗೆನ್ನುತ್ತಿದ್ದಾರೋ ಅಥವಾ ಆ ಕಳ್ಳನ ಕೈಯಲ್ಲಿ ಏನಾದರೂ ಆಯುಧವಿದ್ದುದರಿಂದ ಅವನನ್ನು ಅಂಜಿಸಲು ರೈಫಲ್ ಬೇಕೆಂದು ಕೇಳುತ್ತಿದ್ದಾರೋ ಎನ್ನುವ ಗೊಂದಲಕ್ಕೊಳಗಾದರು ಹೊರಗೆ ನಿರಿತಿದ್ದ ಸರ್ಕಲ್ ಇನ್ಸ್‌ಪೆಕ್ಟರ್. ಮನೆ ತುಂಬ ರೈಫಲ್‌ಗಳು ತುಂಬಿವೆ ಎಂದು ಚೀರಿದರು ಆ ಪೊಲೀಸರು. ಕೂಡಲೇ ಹೊರಗಿದ್ದ ಪೊಲೀಸರು

ಮನೆಯೊಳಕ್ಕೆ ಹೊಕ್ಕರು. ಒಳಗೆ ರೈಫಲ್‌ಗಳು, ಕಂಟ್ರಿಮೇಡ್ ರಿವಾಲ್ವರ್‌ಗಳು, ಪಿಸ್ತೂಲುಗಳು ಸಾಲಾಗಿ ಕಂಡವು. ಅವನ್ನೆಲ್ಲ ತಂದು ಮನೆಯಂಗಳದಲ್ಲಿ ಗುಡ್ಡೆ ಹಾಕಿದರು. ಆ ಮನೆ ಮಾಜಿ ಮುಖ್ಯಮಂತ್ರಿ ಕಡಿದಾಳು ಮಂಜಪ್ಪನವರ ಪಕ್ಕದವರ ಮನೆಯಾಗಿತ್ತು.

1986ರ ಏಪ್ರಿಲ್ 23 ರಂದು ಬಾಬಯ್ಯನವರನ್ನು ಅಶೋಕನಗರ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಇನ್ಸ್‌ಪೆಕ್ಟರ್ ಧರ್ಮೇಶ್ ಬಾಬಯ್ಯನವರನ್ನು ಪರಿಚಯದ ಧ್ವನಿಯಲ್ಲಿಯೇ ಮಾತಾಡಿಸಿ, "ಸಾರ್, ನಾನೂ ಯೂನಿವರ್ಸಿಟಿಯಲ್ಲಿಯೇ ಓದಿದ್ದು. ನನ್ನ ಹೆಂಡತಿ ಕೂಡಾ ಅಲ್ಲೇ ಎಂ.ಎ. ಮಾಡುತ್ತಿರೋದು" ಎಂದರು. ತಮ್ಮ ಯೂನಿವರ್ಸಿಟಿಯ ವಿದ್ಯಾರ್ಥಿಯೇ ಇಲ್ಲಿ ಇನ್ಸ್‌ಪೆಕ್ಟರ್ ಆಗಿದ್ದಾನೆ ಚಿಂತಿಸಬೇಕಿಲ್ಲ ಎಂದುಕೊಂಡಾಗ ಬಾಬಯ್ಯನವರಿಗೆ ಸ್ವಲ್ಪ ನಿರಾಳವೆನಿಸಿತು. ಇನ್ಸ್‌ಪೆಕ್ಟರ್ ಧರ್ಮೇಶ್ ಪುನಃ ರೈಫಲ್‌ಗಳನ್ನು ಶೇಖರಿಸಿಡಲಾಗಿದ್ದ ಮನೆಯತ್ತ ಬಾಬಯ್ಯನವರನ್ನು ಕರೆದೊಯ್ದರು. ಅದೇನೋ ಮತ್ತೆ ಹುಡುಕಿದರು. ವೈರ್‌ಲೆಸ್ ಮೂಲಕ ಯಾರಯಾರದೋ ಜೊತೆ ಮಾತಾಡಿದರು. ಅಷ್ಟೊತ್ತಿಗೆ ಮಧ್ಯಾಹ್ನ 2.30 ಘಂಟೆ. ಹೊಟ್ಟೆ ಹಸಿಯತೊಡಗಿದ್ದರ ಅರಿವಾಗತೊಡಗಿತು. ಆದರೆ ಪೊಲೀಸ್ ವಾತಾವರಣ ಅವರಲ್ಲಿ ಅವ್ಯಕ್ತ ದುಗುಡ ಹುಟ್ಟಿಸಿತ್ತು. ಸ್ಪೆಷಲ್ ಬ್ರಾಂಚಿನ ಎಸಿಪಿ ರಘುನಾಥ್‌ರಾವ್ ಬಂದು ಬಾಬಯ್ಯನವರಿಗೆ ತಮ್ಮ ಕಾರಲ್ಲಿ ಕೂರುವಂತೆ ಸೂಚಿಸಿದರು. ಕಾರು ಬಾಬಯ್ಯನವರ ಮನೆಯೆದುರು ಬಂದು ನಿಂತುಕೊಂಡಿತು. ತಮ್ಮ ಮನೆಯನ್ನು ತಲಾಶ್ ಮಾಡುವುದಕ್ಕಾಗಿ ಬಂದಿದ್ದಾರೆನ್ನುವುದು ಬಾಬಯ್ಯನವರಿಗೆ ಗೊತ್ತಾಯಿತು. ತಪಾಸಣೆ ಮಾಡಿಕೊಳ್ಳಲಿ, ಏನಾದರೂ ಬಚ್ಚಿಟ್ಟಿದ್ದರೆ ತಾನೆ ಭಯಪಡುವುದು ಎಂದು ನಿಂತರು. ಎಲ್ಲ ಹುಡುಕಿದರು. ಆದರೆ ಏನೂ ಸಿಕ್ಕಲಿಲ್ಲ. ಅವರ ರ್‍ಯಾಕ್‌ನಲ್ಲಿರುವ ಪುಸ್ತಕಗಳ ಬಗ್ಗೆ, ಅವರ ಫೋಟೋ ಅಲ್ಬಮ್‌ಗಳಲ್ಲಿರುವ ವಿವಿಧ ವ್ಯಕ್ತಿಗಳ ಭಾವಚಿತ್ರಗಳ ಬಗ್ಗೆ ಪ್ರಶ್ನಿಸತೊಡಗಿದರು. ಇದೆಲ್ಲದರಿಂದ ಪೊಲೀಸರು ಏನನ್ನು ನಿರೀಕ್ಷಿಸಿದ್ದರೋ ಅದು ಸಿಗದಂತಾಯಿತು. ಎಸಿಪಿ ರಘುನಾಥ್‌ರಾವ್ ಬಾಬಯ್ಯನವರಿಗೆ, "ನೀವು ಪುನಃ ನನ್ನೊಂದಿಗೆ ಬರಬೇಕು" ಎಂದು ಆದೇಶಿಸಿದರು. ಬಾಬಯ್ಯನವರ ಮಗ ದಿಗಿಲುಗೊಂಡು 'ಏನಪ್ಪ ಇದೆಲ್ಲ?' ಎಂದು ಪ್ರಶ್ನಿಸಿದ. ಬೇಗ ಬಂದು ಬಿಡುತ್ತೇನೆ ಎಂದು ಹೇಳಿದ ಬಾಬಯ್ಯ ಪೊಲೀಸರೊಂದಿಗೆ ಹೊರಟುಹೋದರು. ಇದೇಕೊ ಸರಳವಾದದ್ದಲ್ಲ, ಗಂಟೆಗಂಟೆಗೂ ಸಂಕೀರ್ಣಗೊಳ್ಳುತ್ತಾ ನಡೆಯುತ್ತಿದೆ ಎಂದುಕೊಂಡರು ಬಾಬಯ್ಯ. ಅಶೋಕನಗರ ಠಾಣೆ ತಲುಪಿದಾಗ ಸಂಜೆ ನಾಲ್ಕೂವರೆ ಗಂಟೆ. 'ಬೆಂಚಿನ ಮೇಲೆ ಕೂತ್ಕೊಳ್ಳಿ' ಎಂದು ಪೊಲೀಸರು

ಸೂಚಿಸಿದರು. ಬೆಳಗ್ಗೆ ಬಂದಾಗ ಬಾಬಯ್ಯನವರನ್ನು ಕುರ್ಚಿಯ ಮೇಲೆ ಕೂರಿಸಿದ್ದರು ಪೊಲೀಸರು. ಹಸಿವಿನಿಂದ ಕಣ್ಣಿಗೆ ಕತ್ತಲೆಗಟ್ಟತೊಡಗಿತ್ತು. ತೀವ್ರ ಉದ್ವೇಗದಲ್ಲಿ ಗಂಟೆಗಳು ಉರುಳತೊಡಗಿದವು. ರಾತ್ರಿ ಹನ್ನೊಂದು ಗಂಟೆಯಾಗಿರಬೇಕು ಪೊಲೀಸ್ ವ್ಯಾನ್ ಒಂದು ಬಂದಿತು. ಅದರಲ್ಲಿ ಬಾಬಯ್ಯನವರನ್ನು ಕರೆದುಕೊಂಡು ಹಲಸೂರು ಸ್ಟೇಷನ್‌ಗೆ ಒಯ್ದರು. ಆ ವ್ಯಾನಿನ ತುಂಬಾ ತೆಲುಗು ಮಾತಾಡುವ ಪೊಲೀಸರಿದ್ದರು. ಠಾಣೆಯೊಳಗೆ ಕರೆದೊಯ್ದು "ಬಾಬಯ್ಯನವರೇ, ನಿಮಗೆ ತೆಲುಗು ಕ್ರಾಂತಿಕಾರಿಗಳ ಪರಿಚಯವಿದೆಯೇ?" ಎಂದು ಒಬ್ಬ ಅಧಿಕಾರಿ ಪ್ರಶ್ನಿಸಿದ.

"ಶ್ರೀ ಶ್ರೀ, ಕರುಣಶ್ರೀ, ಚಲಂ ಮುಂತಾದವರ ವಿಪ್ಲವ ಕಾವ್ಯಗಳು ನನ್ನ ನಾಲಿಗೆಯ ಮೇಲೆಯೇ ಇವೆ" ಎಂದರು ಬಾಬಯ್ಯ.

"ಹಾಗಿದ್ದರೆ ನೀವು ಎಷ್ಟು ವರ್ಷಗಳಿಂದ ನಕ್ಸಲೈಟ್‌ರಾಗಿದ್ದೀರಿ?" ಎಂದು ಪ್ರಶ್ನಿಸಿದಾಗ ಬಾಬಯ್ಯ ಬೆಚ್ಚಿಬಿದ್ದರು.

"ನಾನು ಯಾವತ್ತೂ ನಕ್ಸಲೈಟ್ ಅಲ್ಲ. ಶೋಷಿತರ ಪರ ಚಳವಳಿ ಮಾಡುವ ಸಂಘಟನೆಗಳ ಬಗ್ಗೆ ಸದ್ಭಾವನೆ ನನಗೆ. ಆದರೆ ನಾನು ಎಂದೂ ನಕ್ಸಲೈಟ್ ಸಂಘಟನೆಯ ಕ್ರಿಯಾಶೀಲ ಕಾರ್ಯಕರ್ತನಾಗಿಲ್ಲ. ಕರ್ನಾಟಕದ ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಸಕ್ರಿಯ ಸದಸ್ಯ ನಾನು. ಅಷ್ಟು ಬಿಟ್ಟರೆ ನನಗೆ ಮತ್ತೇನೂ ಗೊತ್ತಿಲ್ಲ" ಎಂದರು ಬಾಬಯ್ಯ. "ಹೈದ್ರಾಬಾದಿನಲ್ಲಿ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರಿಬ್ಬರನ್ನು ಕೊಂಡಪಲ್ಲಿ ಕೊಲೆ ಮಾಡಿರುವ ಪ್ರಕರಣದಲ್ಲಿ ನೀವೂ ಶಾಮೀಲು ಆಗಿದ್ದೀರಿ ಅಲ್ಲವೆ?" ಎಂಬ ಪ್ರಶ್ನೆಗೆ ಬಾಬಯ್ಯ ಥರಗುಟ್ಟಿದರು. ನಖಶಿಕಾಂತ ಬೆವೆತುಹೋದರು.

"ನನಗೂ ಅದಕ್ಕೂ ಏನೇನೂ ಸಂಬಂಧವಿಲ್ಲ. ಬೆಂಗಳೂರಿನ ಯಾರನ್ನಾದರೂ ವಿಚಾರಿಸಿಕೊಳ್ಳಿ, ನಾನು ಹೇಗೆ ಎತ್ತ ಎಂದು. ಇಲ್ಲೇ ಇದ್ದಾರೆ ನೋಡಿ ನಮ್ಮ ಯೂನಿವರ್ಸಿಟಿಯ ಸ್ಟೂಡೆಂಟ್ ಆಗಿದ್ದವರು. ಅವರನ್ನು ಕೇಳಿ ಬೇಕಿದ್ದರೆ" ಎಂದು ಧರ್ಮೇಶ್ ಕಡೆ ನೋಡಿದರು.

ಧರ್ಮೇಶ್ ಕೈಯಲ್ಲಿ ಗಾಜಿನ ಪೇಪರ್‌ವೇಟ್ ಅನ್ನು ಆಡಿಸುತ್ತ ಕೂತಿದ್ದರು. ಅವರತ್ತ ಬಾಬಯ್ಯ ನೋಡುತ್ತಲೇ ತಮ್ಮ ಕೈಯಲ್ಲಿದ್ದ ಅದನ್ನು ಜೋರಾಗಿ ಬೀಸಿ ಎಸೆದರು. ಬಾಬಯ್ಯ ಪಕ್ಕಕ್ಕೆ ಸರಿದುಕೊಂಡರು. ಆಂಧ್ರದ ಪೊಲೀಸ್ ಅಧಿಕಾರಿಯ ಮೊಣಕಾಲು ಚಿಪ್ಪಿನ ಕೆಳಗಿನ ಎಲುಬಿಗೆ ಬಡಿಯಿತು. ಆ ಅಧಿಕಾರಿ ಕಿಟಾರನೆ

ಕಿರುಚಿಕೊಂಡು ಅಲ್ಲಿಯೇ ಕುಸಿದುಬಿದ್ದ. ಕೂಡಲೇ ಆತನನ್ನು ಆಸ್ಪತ್ರೆಗೆ ಕರೆದೊಯ್ದರು. ಈ ಘಟನೆಯಿಂದಾಗಿ ಆಂಧ್ರ ಪೊಲೀಸರು ಇನ್ನಷ್ಟು ಕ್ರುದ್ಧರಾದರು. ಹೀಗೆಲ್ಲ ಮಾತಾಡಿದರೆ ಇವನು ಬಾಯಿ ಬಿಡೋಲ್ಲ ಎಂದ ಆಂಧ್ರದ ಎಸ್‌ಪಿ ಬಾಬಯ್ಯಗೆ "ಏಳೋ ಮೇಲೆ ಬಿಚ್ಚು ಬಟ್ಟೇನ" ಎಂದು ಗುಡುಗಿದರು.

ಅಷ್ಟರವರೆಗೆ ಮನುಷ್ಯ ರೂಪದಲ್ಲಿ ಕಾಣಿಸಿಕೊಂಡಿದ್ದ ಪೊಲೀಸರು ರಾಕ್ಷಸರಾಗಿ ಕಾಣಿಸತೊಡಗಿದರು. ಭಾಷೆಯ ಸೌಜನ್ಯ ಮಾಯವಾಯಿತು. ಸೊಂಟದ ಕೆಳಗಿನ ಮಾತುಗಳು ಪಾಪ್‌ಡ್ಯಾನ್ಸ್ ಮಾಡತೊಡಗಿದವು.

ಬಾಬಯ್ಯನವರ ಬೆತ್ತಲೆ ದೇಹಕ್ಕೆ ಮುಷ್ಟಿಯಿಂದ ಗುದ್ದತೊಡಗಿದರು. ಕಾಲಿನಿಂದ ಒದೆಯತೊಡಗಿದರು. ಅವರಲ್ಲಿ ಒಬ್ಬ ಪೊಲೀಸಿನವ, "ನಾನೂ ನಿಮ್ಮ ಊರಿನವನೇ. ನೀನು ಬೆಳೆದದ್ದು ಬೆಂಗಳೂರಾದರೂ ಹುಟ್ಟಿದ್ದು ಚಿತ್ತೂರೇ ಅಲ್ಲವೆ. ಹುಟ್ಟಿದ ನೆಲದ ನಂಟು ನಿನಗೆ ಬಿಡುತ್ತದೆಯೇ. ಕರ್ನಾಟಕದಲ್ಲಿ ಪ್ರೊಫೆಸರ್ ವೇಷ ಹಾಕಿಕೊಂಡಿರುವ ನೀನು ಆಂಧ್ರದಲ್ಲಿ ಪಕ್ಕಾ ನಕ್ಸಲೈಟ್. ಅವರು ತಲೆಮರೆಸಿಕೊಂಡು ಓಡಿಬಂದರೆ ಅವರಿಗೆಲ್ಲ ಆಶ್ರಯ ನಿನ್ನದೇ. ಎಲ್ಲವನ್ನೂ ಒಪ್ಪಿಕೊಂಡು ಬಿಡು. ನಿನಗೆ ಹೆಚ್ಚು ಹೊಡೆಯುವುದಿಲ್ಲ" ಎಂದ.

ನೀವು ಹೇಳುವುದು ಸತ್ಯ ಇದ್ದರೆ ತಾನೆ ಒಪ್ಪಿಕೊಳ್ಳುವುದು ಎಂದು ಬಾಬಯ್ಯ ಪ್ರತ್ಯುತ್ತರಿಸಿದರು. "ಓಹೋ, ಹಾಗಾದರೆ ನಾವು ಹೇಳುವುದು ನಿನಗೆ ಇನ್ನೂ ಸತ್ಯ ಎನ್ನಿಸುತ್ತಿಲ್ಲ. ನಮ್ಮ ಮಾತುಗಳು ನಿನಗೆ ಸತ್ಯವೆಂದು ಕಾಣಿಸಬೇಕಾದರೆ ಚಪಾತಿ ಮಾಡಬೇಕೆಂದು ಕಾಣುತ್ತದೆ" ಎಂದು ಬಾಬಯ್ಯನವರನ್ನು ಅಂಗಾತ ಮಲಗಿಸಿ ಕಾಲುಗಳ ಮೇಲೆ ರೋಲ್ ಕಟ್ಟಿಗೆಯಿಟ್ಟು ಅದರ ಮೇಲೆ ಪೊಲೀಸನೊಬ್ಬ ನಿಂತು ಹಿಂದೆ ಮುಂದೆ ಚಪಾತಿ ಲಟ್ಟಿಸಿದಂತೆ ಲಟ್ಟಿಸತೊಡಗಿದ. ಬಾಬಯ್ಯ ತನ್ನ ಜೀವನದಲ್ಲಿ ಹಿಂದೆಂದೂ ಚೀರದಂಥ ಧ್ವನಿಯಲ್ಲಿ ವಿಕಾರವಾಗಿ ಚೀರಿದರು. ಎರಡನೇ ಬಾರಿ ಚೀರಲು ಹೋದರೆ ಧ್ವನಿಯೇ ಹೊರಡಲಿಲ್ಲ. ಗಂಟಲು ಬತ್ತಿ ಹೋಗಿತ್ತು. ಪಿಸುಧ್ವನಿಯಲ್ಲಿ ನೀರು, ನೀರು ಎಂದರು. ತೊಗೋ ನೀರು ಎಂದು ಲೋಟವನ್ನು ಬಾಯಿಯ ಮುಂದೆ ಹಿಡಿದು ಒಪ್ಪಿಕೊ, ನಕ್ಸಲೈಟ್ ಎಂದು ಒಪ್ಪಿಕೊ ಎಂದರು. ಊಹೂಂ ಎಂದಾಗ ಲೋಟವನ್ನು ಹಿಂದೆಳೆದುಕೊಂಡು ಪುನಃ ಚಪಾತಿ ಲಟ್ಟಿಸತೊಡಗಿದರು. ಬಾಬಯ್ಯ ಮೂರ್ಛೆ ಹೋಗಿಬಿಟ್ಟರು. ಆಗ ಮುಖಕ್ಕೆ ನೀರು ಸಿಂಪರಿಸಿದರು. ಮುಖಕ್ಕೆ ತಂಪು ಅನುಭವವಾಗಿ ಬಾಬಯ್ಯ ಕಣ್ಣು ತೆರೆದರು. ಹಣೆ, ಮೂಗು, ಕಪಾಳಗಳ ಮೇಲಿದ್ದ ನೀರಿನ ಹನಿಗಳನ್ನು ಗೀರಿಕೊಂಡು ನಾಲಿಗೆಗೆ ಒರೆಸಿಕೊಂಡರು.

ಚಿತ್ತೂರಿನವನೆಂದು ಹೇಳಿಕೊಂಡ ಡಿವೈಎಸ್ಪಿ "ನೀನು ಇಷ್ಟಕ್ಕೇ ಬಾಯಿ ಬಿಡದಿದ್ದರೆ, ನಿನ್ನ ಹೆಂಡತಿ, ಮಕ್ಕಳನ್ನು ಎಳೆದು ತರ್ತೀವೆ. ನಿನ್ನ ಹೆಂಡತಿಯ ಸೀರೆ ಬಿಚ್ತೇವೆ. ನಿನ್ನ ಹೆಣ್ಣುಮಕ್ಕಳನ್ನ ನಿನ್ನ ಎದುರೇ ರೇಪ್ ಮಾಡ್ತೇವೆ!" ಎಂದ.

"ದಯವಿಟ್ಟು ಹಾಗೆ ಮಾಡಬೇಡಿ. ನನ್ನ ಹೆಂಡತಿ ಹಾರ್ಟ್ ಪೇಷೆಂಟ್. ಈ ಸ್ಥಿತಿಯಲ್ಲಿ ನನ್ನನ್ನು ನೋಡಿದರೇನೇ ಎದೆಯೊಡೆದುಕೊಂಡು ಸಾಯುತ್ತಾಳೆ. ಇರೋ ವಿಷಯ ಕೇಳಿ, ಎಲ್ಲ ಹೇಳ್ತೇನೆ. ಇರದಿರುವ ವಿಷಯವನ್ನು ನಾನು ಹೇಗೆ ಒಪ್ಪಿಕೊಳ್ಳಲಿ. ನೋಡಿ ನಾನು ಕರ್ನಾಟಕ ಸಿವಿಲ್ ಲಿಬರ್ಟೀಸ್ ಕಮಿಟಿಯಿಂದ ಭೇಟಿಕೊಟ್ಟ ಬಿಳಿಗಿರಿರಂಗನಬೆಟ್ಟದ ಸೋಲಿಗ ಬುಡಕಟ್ಟಿನ ಶೋಷಣೆಯ ಬಗ್ಗೆ ಸತ್ಯಶೋಧನಾ ವರದಿ, ನಾಗಸಂದ್ರ ಜೀವವಿಮೋಚನಾ ಹೋರಾಟಗಳ ಬಗ್ಗೆ ಎಷ್ಟು ಬೇಕಾದರೂ ಕೇಳಿ ವಿವರವಾಗಿ ಹೇಳ್ತೀನಿ. ನಕ್ಸಲೈಟ್ ಎಂದು ಒಪ್ಪಿಕೊ ಎಂದರೆ ಹೇಗೆ ಒಪ್ಪಿಕೊಳ್ಳಲಿ. ಆ ಚಳವಳಿಯ ಹಿತೈಷಿ ಮಾತ್ರ ನಾನು. ಕ್ರಾಂತಿಕಾರೀ ಸಾಹಿತ್ಯದ ಅಭಿಮಾನಿ. ಅಂಥ ಸಾಹಿತ್ಯ ಸಮ್ಮೇಳನಗಳಿಗೆ ಹಾಜರಾಗಿ ಪ್ರಬಂಧಗಳನ್ನು ಓದಿರುವೆ. ಇದಿಷ್ಟೇ. ಇದಕ್ಕಿಂತ ಹೆಚ್ಚು ಇಲ್ಲ" ಎಂದು ಬಾಬಯ್ಯ ಗೋಗರೆದರು.

ಅವರಲ್ಲೊಬ್ಬ ಪೊಲೀಸ್ "ಐದು ಗಂಟೆಯಾಯಿತು. ಕಣ್ಣಿಗೆ ಮಂಪರು ಬರ್ತಾಯಿದೆ ಮಲಗೋಣ" ಎಂದ. ಬೆಳಗಿನ ಜಾವ ಐದು ಗಂಟೆಯವರೆಗೆ ಬಾಬಯ್ಯನವರನ್ನು ಹೀಗೇ ಹಿಂಸಿಸುತ್ತಿದ್ದರು. ಪೇಪರ್‌ವೇಟ್ ಹೊಡೆತ ತಿಂದಿದ್ದ ಪೊಲೀಸ್ ಆಫೀಸರ್ ಕುಂಟುತ್ತ ಒಳಬಂದ. ಅವನೊಟ್ಟಿಗೆ ಇನ್ಸ್‌ಪೆಕ್ಟರ್ ಧರ್ಮೇಶ್ ಇದ್ದರು. ಧರ್ಮೇಶ್‌ನನ್ನು ನೋಡುತ್ತಲೇ ಬಾಬಯ್ಯ, ನನ್ನ ಮೇಲೆ ಸಿಟ್ಟಿಗೇಳಲು ಆಂಧ್ರ ಪೊಲೀಸರಿಗೆ ಕಾರಣಗಳಿವೆ. ಆದರೆ ನಮ್ಮ ಯೂನಿವರ್ಸಿಟಿಯಲ್ಲಿಯೇ ಓದಿ, ನನ್ನನ್ನು ಚೆನ್ನಾಗಿ ಬಲ್ಲ ಇವನಿಗೆ ಅಂಥ ಕಡುಕೋಪ ಹೇಗೆ ಉಕ್ಕಿಬಂತು ಎಂದು ಆಶ್ಚರ್ಯಪಟ್ಟುಕೊಂಡರು. ಪೊಲೀಸ್ ಯೂನಿಫಾರ್ಮ್ ತೊಟ್ಟು ಬೂಟು ಹಾಕಿಕೊಂಡು ಕೈಯಲ್ಲಿ ಲಾಠಿ ಹಿಡಿದೊಡನೆ ಅವರು ಯಾರೇ ಇರಲಿ ಮೈಯೊಳಗೆ ರಾಕ್ಷಸ ಪ್ರವೇಶವಾಗಿಬಿಡುತ್ತದೇನೊ! ಎಂದು ಹುಬ್ಬೇರಿಸಿದರು.

ಅಷ್ಟರಲ್ಲಿ ಕುಂಟುತ್ತಿದ್ದ ಆಂಧ್ರದ ಪೊಲೀಸ್ ಅಧಿಕಾರಿ, ನಿನ್ನಿಂದಾಗಿ ನನ್ನ ಮೊಣಕಾಲು ಮುರಿಯಿತು ಎಂದು ಚಟೀರನೆ ಬಾಬಯ್ಯನವರ ಕಪಾಳಕ್ಕೆ ಹೊಡೆದ. ಏಪ್ರಿಲ್ 24 ರ ಬೆಳಗ್ಗೆ ಮತ್ತೆ ಅಶೋಕನಗರ ಠಾಣೆಗೆ ಬಾಬಯ್ಯನವರನ್ನು ಸಾಗಿಸಲಾಯಿತು. ಅದರ ಮಹಡಿಯಲ್ಲಿ ಕಿರುಗುಡುವ ಬೆಂಚಿನ ಮೇಲೆ ಅವರನ್ನು ಹಾಕಿದರು. ತೊಡೆಗಳು ಬಾರಿಸುವ ತಮಟೆಗಳಂತಾಗಿದ್ದವು. ದೇಹದ

ಅಂಗಾಂಗಗಳು ರಿಪೇರಿಗಾಗಿ ಬಿಚ್ಚಿಟ್ಟ ಸ್ಪೇರ್‌ಪಾರ್ಟ್ಸ್‌ಗಳಂತಾಗಿದ್ದವು ಆವರಿಸಿದ್ದು ನಿದ್ರೆಯೋ, ಮೂರ್ಛೆಯೋ ಗೊತ್ತಾಗಲಿಲ್ಲ. ಪೇದೆಯೊಬ್ಬ ಅಲುಗಾಡಿಸಿ, ಮುಖ ತೊಳಕೋ ಎಂದಾಗಲೇ ಬಾಬಯ್ಯನವರಿಗೆ ಎಚ್ಚರವಾಯಿತು. ಅಲ್ಲಿಂದ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ಗೆ ಒಯ್ದರು. ಅಷ್ಟೊತ್ತಿಗೆ ಆಗಲೇ ಆಂಧ್ರದ ಪೋಲೀಸರು ಅಲ್ಲಿ ಬೀಡುಬಿಟ್ಟಿದ್ದರು. ಅವರನ್ನು ನೋಡುತ್ತಲೇ ಬಾಬಯ್ಯನವರ ತೊಡೆಸಂದಿಗಳು ಅದುರತೊಡಗಿದವು.

ಬಾಬಯ್ಯ ನಿರೀಕ್ಷಿಸಿದಂತೆ ಮತ್ತೆ ಹೊಡೆತ ಶುರು ಮಾಡಲಿಲ್ಲ. ನಯ ನಾಜೂಕಿನ ಮಾತುಗಳನ್ನು ಆಡತೊಡಗಿದರು. ನಿಮ್ಮ ಮಕ್ಕಳ ಹೆಸರೇನು ಎಂದು ಕೇಳಿದರು.

ಅದಕ್ಕೆ ಬಾಬಯ್ಯ ಪ್ರಣವ, ಜಗತಿ ನನ್ನ ಹೆಣ್ಣುಮಕ್ಕಳು. ಒಬ್ಬನೇ ಮಗ ಭಾನುತೇಜ ಎಂದರು.

ಇಡಲು ದೇವರ ಹೆಸರು ಸಿಗಲಿಲ್ಲ ಅಲ್ವೆ ಎಂದು ಗೇಲಿ ಮಾಡಿದರು. ಸದ್ಯ ಹೊಡೆತ ಶುರು ಮಾಡಿಲ್ಲ ಅಷ್ಟೇ ಸಾಕು ಎಂದುಕೊಂಡ ಬಾಬಯ್ಯ ಸಹ ಕೃತಕವಾಗಿ ಅವರೊಂದಿಗೆ ತಾವೂ ನಗತೊಡಗಿದರು.

ಮಧ್ಯಾಹ್ನ ಒಂದು ಗಂಟೆಯಾಯಿತು. 'ಏನಯ್ಯ ಟಿಫನ್ ಬೇಕಾ' ಎಂದುದಕ್ಕೆ ಬಾಬಯ್ಯ ಹೂಂಗುಟ್ಟಿದ್ದರು. 'ಬಿರಿಯಾನಿ ತರಸೋಣಾ?' ಎಂದು ನಕ್ಕರು. 'ಬೇಡ ಇಡ್ಲಿ ಸಾಕು' ಎಂದರು ಬಾಬಯ್ಯ. ನಕ್ಕ ಪೋಲೀಸರು ಟಿಫನ್ ತರಿಸಲಿಲ್ಲ. ಟೀ ಮಾತ್ರ ತರಿಸಿದರು. 'ಪಾಪ ಬಹಳ ಹಸಿದಿದ್ದೀರಾ ಮೊದಲು ಟೀ ಕುಡೀರಿ. ನಂತ್ರ ಬಿರಿಯಾನಿ ತರ್ಸೋಣ' ಎಂದರು. ಟೀ ಕುಡಿದ ಬಾಬಯ್ಯಗೆ 555 ಸಿಗರೇಟ್ ಮುಂದೆ ಹಿಡಿದರು. 'ಇದೆಲ್ಲ ಬೇಡ, ಮಾಮೂಲಿ ಸಿಗರೇಟ್ ಕೊಡಿ' ಎಂದ ಬಾಬಯ್ಯಗೆ 'ಏಕೆ, ಇದು ಬೂರ್ಜ್ವಾ ಸಿಗರೇಟ್ ಅಂತಾ ತಿರಸ್ಕಾರಾನಾ? ತಗೊಳ್ಳಿ ಸೇದಿ. ಇವೊತ್ತೊಂದಿನ ಮಾತ್ರ' ಎಂದು ಒತ್ತಾಯ ಮಾಡಿ ಸೇದಿಸಿದರು.

ಟೀ ಮತ್ತು ಸಿಗರೇಟ್‌ಗಳಲ್ಲಿ ಮತ್ತಿನ ಮದ್ದು ಸೇರಿಸಿದ್ದರಿಂದ ಬಾಬಯ್ಯನವರ ಕಣ್ಣುಗಳು ತೇಲಾಡತೊಡಗಿದವು. ಟೇಪ್‌ರೆಕಾರ್ಡರ್ ಆನ್ ಮಾಡಿ 'ಹೂಂ ಹೇಳು, ಕೊಂಡಪಲ್ಲಿಗೆ ಹೇಗೆ ಹೇಗೆ ಸಹಾಯ ಮಾಡಿದ್ದೀಯಾ? ಎಷ್ಟು ಕೊಲೆ ಸಂಚುಗಳಲ್ಲಿ ಭಾಗಿಯಾಗಿದ್ದೀಯಾ? ಎಂದರು. ಬಾಬಯ್ಯನಲ್ಲಿ ಏನೂ ಇರಲಿಲ್ಲ ಹೇಳಲು. ಅರೆಪ್ರಜ್ಞೆಗೊಯ್ದರೂ ಏನೂ ಹೇಳದಿದ್ದಾಗ ಪೋಲೀಸರೇ ಸುಸ್ತಾದರು. ಇಲ್ಲಿ ಬೆಂಗಳೂರಲ್ಲಿ ಕೂತು ಹೀಗೆ ಕೇಳುತ್ತಾ ಹೋದ್ರೆ ಇದು ಬಗೆಹರಿಯುವ

ಕೇಸಲ್ಲ. ಮೊದ್ಲು ಇವುನ್ನ ಹೈದ್ರಾಬಾದ್‌ಗೆ ಒಯ್ಯೋಣ ಎಂದ ಒಬ್ಬ ಪೋಲೀಸ್ ಆಫೀಸರ್. ಆಂಧ್ರದ ಎಸ್ಪಿ ಕೇಳಿದ, ಕೊನೆಯದಾಗಿ ಕೇಳ್ತಾ ಇದೀವಿ ಹೇಳು. ನಿನಗೆ ಒಂದು ಲಕ್ಷ ರೂಪಾಯಿ ಕೊಡ್ತೀವಿ. ಕೊಂಡಪಲ್ಲಿ ಎಲ್ಲಿ ಅಡಗಿದಾನೆ, ಅವನ ಗೌಪ್ಯ ಸ್ಥಳಗಳು ಎಲ್ಲೆಲ್ಲಿ ಎಂದು ಹೇಳಿದರೆ, ನೀನು ನಿನ್ನ ಹೆಂಡತಿ ಮಕ್ಕಳು ಬದುಕಿಕೊಳ್ತೀರಿ ಎಂದು ಗುಡುಗಿದ. ಆಗಲೂ ಬಾಬಯ್ಯ ಏನು ಹೇಳದಿದ್ದಾಗ ಪುನಃ-ಅಶೋಕನಗರ ಠಾಣೆಗೆ ಕರೆತಂದರು. 8 x 8 ಅಳತೆಯ ಲಾಕಪ್‌ನಲ್ಲಿ ಬಾಬಯ್ಯನವರನ್ನು ಹಾಕಿದರು. ಅಷ್ಟೇ ಜಾಗದಲ್ಲಿ ಆಗಲೇ ಎಂಟು ಜನ ಅದರೊಳಗಿದ್ದರು.

ಸೆಂಟ್ರಿ ಡ್ಯೂಟಿಯಲ್ಲಿದ್ದ ಪೊಲೀಸಿನವನಿಗೆ ಪ್ರೊಫೆಸರ್ ಬಗ್ಗೆ ಸ್ವಲ್ಪ ಅನುಕಂಪ ಮೂಡಿತೋ ಏನೋ, ಒಳಗಿದ್ದವರಿಗೆ "ಸೂಳೆಮಕ್ಳಾ ಹಿಂದೆ ಸರೀರಿ" ಎಂದು ಬೈದು ಬಾಬಯ್ಯನವರಿಗೆ ಕಂಬಿಗಳ ಹತ್ತಿರವೇ ಕೂತು ಹೊರಗಿನ ಗಾಳಿಯನ್ನು ಹೀರಿಕೊಳ್ಳಲು ಅನುವು ಮಾಡಿಕೊಟ್ಟ. ಲಾಕಪ್‌ನ ಮೂಲೆಗಳಲ್ಲಿ ಕೈದಿಗಳು ಉಚ್ಚೆ ಹೊಯ್ದಿದ್ದರಿಂದ ಕಮಟು ನಾತ ಮೂಗಿಗೆ ರಾಚುತ್ತಿತ್ತು.

ಲಾಕಪ್ಪಿನ ಕಂಬಿಯೊಳಗೆ ತೂರಿ ಬಂದ ಗಾಳಿಯನ್ನು ಸುಗಂಧದ ಪರಿಮಳವೇನೋ ಎನ್ನುವಂತೆ ಆಘ್ರಾಣಿಸಿದರು. ಜೀವನದಲ್ಲಿ ಪ್ರಥಮ ಬಾರಿಗೆ ಗಾಳಿಯ ಸ್ವಾದದ ಅರಿವಾಯಿತು ಎಂದುಕೊಂಡರು ಬಾಬಯ್ಯ. ಲಾಕಪ್ಪಿನ ಕಂಬಿಗಳಿಗೆ ಆತುಕೊಂಡು ಕೂತು ಹೊರಗಿನ ಗಾಳಿ ಎಳೆದುಕೊಳ್ಳಲು ಅನುವು ಮಾಡಿಕೊಟ್ಟ ಸೆಂಟ್ರಿಯತ್ತ ಕೃತಜ್ಞತಾ ದೃಷ್ಟಿ ಬೀರಿದರು. ಬಾಬಯ್ಯ, ಅದಕ್ಕೆ ಆ ಪೋಲೀಸ್, 'ನಿಮ್ಹತ್ರ ದುಡ್ಡಿದ್ರೆ ಕೊಡಿ, ಟೀ ತರಿಸಿಕೊಡ್ತೇನೆ' ಎಂದ. ಬಾಬಯ್ಯನವರ ಜೇಬು ಖಾಲಿಯಿತ್ತು.

ನಗರಿ ಬಾಬಯ್ಯನವರು ನಕ್ಸಲೈಟ್‌ರೊಂದಿಗೆ ಕೊಲೆ ಕೇಸಿನಲ್ಲಿ ಶಾಮೀಲಾಗಿದ್ದಾರೆನ್ನುವ ಆರೋಪದ ಹಿನ್ನೆಲೆ ಮತ್ತು ಪೊಲೀಸರು ಇಂಟೆರಾಗೇಷನ್ ಹೆಸರಿನಲ್ಲಿ ನೀಡಿದ ಚಿತ್ರಹಿಂಸೆಗಳೆಲ್ಲ ನನ್ನ ಸ್ನೇಹಿತ ಮೋಹನ್ ಕೋರ್ಟ್‌ನಲ್ಲಿ ಓಡಿಬಂದು ಕಿವಿಯಲ್ಲಿ ಪಿಸುಗುಟ್ಟರದಿದ್ದರೆ ತಿಳಿದುಬರುತ್ತಿರಲಿಲ್ಲ.

ಅಂದು ಅದು ಯಾವುದೋ ಕೇಸ್ ಆರ್ಗ್ಯುಮೆಂಟ್‌ಗೆ ಇತ್ತು. ನಾನು ಹಿಂದಿನ ರಾತ್ರಿಯೆಲ್ಲ ತಯ್ಯಾರಿ ಮಾಡಿಕೊಂಡು ಹೋಗಿ ಬಿರುಸಿನಿಂದ ವಾದ ಮಂಡಿಸುತ್ತಿದ್ದಾಗ ಮಿತ್ರ ಮೋಹನ್ ಕೋರ್ಟ್‌ಹಾಲ್‌ನಲ್ಲಿ ನನ್ನ ಕಣ್ಣಿಗೆ ಬೀಳುವಂತೆ ನಿಂತುಕೊಂಡ. ಪರಿಚಿತ ಮುಖ ಎನಿಸಿತು ನನ್ನ ಪಾರ್ಶ್ವನೋಟಕ್ಕೆ. ಪೂರ್ಣ ದೃಷ್ಟಿ ಹರಿಸಿದರೆ ಎದುರಿಗೆ ಮೋಹನ್. ಬಿ.ಎ.,(ಆನರ್ಸ್) ಓದುತ್ತಿದ್ದಾಗ ನನ್ನ

ಸಹಪಾಠಿಯಾಗಿದ್ದ. ಡಿಬೇಟ್ ಮತ್ತಿತರೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಇಬ್ಬರಿಗೂ ಆಸಕ್ತಿ.

ಸಮಾನ ಮನಸ್ಕರಾಗಿದ್ದ ನಾವಿಬ್ಬರೂ ಕಾಲೇಜ್ ಓದು ಮುಗಿದ ನಂತರವೂ ಸ್ನೇಹವನ್ನು ಕಾಪಾಡಿಕೊಂಡಿದ್ದೆವು. ಮೋಹನ್ ಎಂದಿಗೂ ಕೋರ್ಟಿನಲ್ಲಿ ನನ್ನನ್ನು ಕಾಣಲು ಬಂದಿದ್ದಿಲ್ಲ. ಅದೇನು ನನ್ನನ್ನು ಕಾಣಲು ಬಂದಿರುವನೋ ಅಥವಾ ಬೇರಿನ್ನಾವುದೋ ಕೆಲಸಕ್ಕಾಗಿ ಬಂದಿರುವನೋ ಎಂದು ಮನಸ್ಸಿನ ಸೈಡ್‌ವಿಂಗ್‌ನಲ್ಲಿ ಮೆಲುಕು ಹಾಕುತ್ತ ನನ್ನ ವಾದ ಮುಂದುವರಿಸಿದ್ದೆ. ಆದರೆ ಮೋಹನ್ ನನ್ನತ್ತ ಸಂಜ್ಞೆ ಮಾಡತೊಡಗಿದ. ನಾನು ಜಡ್ಜ್‌ಗೆ ಕಾಣದಂತೆ 'ಐದು ನಿಮಿಷ ತಡಿ' ಎಂದು ಕೈಯಿಂದ ಸಂಜ್ಞೆ ಮಾಡಿದೆ. ಅದನ್ನು ಲೆಕ್ಕಿಸದೆ ಮೋಹನ್ 'ಒಂದೇ ನಿಮಿಷ ಹೊರಬಂದು ಹೋಗು' ಎನ್ನುವಂತೆ ತೋರುಬೆರಳಿನಿಂದ ಸಂಜ್ಞೆ ಮಾಡಿದ. ಆರ್ಗ್ಯುಮೆಂಟ್‌ನಲ್ಲಿ ಹೇಳಿದ ಪಾಯಿಂಟ್ ಅನ್ನೇ ಪುನರುಚ್ಚರಿಸತೊಡಗಿದ್ದೆ. ಅದನ್ನು ಗಮನಿಸಿದ ಜಡ್ಜ್ ನನ್ನೆಡೆ ನೋಡಿ ಮುಗುಳ್ನಗತೊಡಗಿದರು. ಮೋಹನ್ ಮೇಲೆ ತುಸು ಕೋಪವೇ ಉಕ್ಕಿತು. ಅದೇಕೆ ಇವನು ಇಂದು ಈ ಥರ ನಾನ್‌ಸೆನ್ಸ್ ಆಗಿ ಆಡುತ್ತಿದ್ದಾನೆ ಎಂದು ಮನಸ್ಸಿನೊಳಗೇ ಗೊಣಗಿಕೊಂಡೆ. ಒಟ್ಟಾರೆ ಪರಿಸ್ಥಿತಿ ಜೊಲ್ಲಿಗೆ ಸಿಕ್ಕ ನೊಣದಂತಾಯಿತು. ಜಡ್ಜ್ ಹತ್ತಿರಕ್ಕೆ ಹೋಗಿ "ಬಂದಿರುವ ವ್ಯಕ್ತಿ ನನ್ನ ಸೋದರ ಸಂಬಂಧಿ. ಅದೇನೋ ತುರ್ತು ವಿಷಯ ಹೇಳಲು ಬಂದಿದ್ದಾನೆ. ಇಲ್ಲದಿದ್ದರೆ ಯಾವತ್ತೂ ಹೀಗೆ ಅವನು ಬರೋಲ್ಲ. ಆರ್ಗ್ಯುಮೆಂಟ್‌ಗೆ ಮಧ್ಯಾಹ್ನ ಅಥವಾ ಸಂಜೆಗೆ ಅವಕಾಶ ಮಾಡಿಕೊಡಬೇಕು ಸಾರ್" ಎಂದು ವಿನಂತಿಸಿಕೊಂಡೆ. ಜಡ್ಜ್ ಆಯಿತು ಎಂದು ತಲೆದೂಗಿ ಸಮ್ಮತಿಸಿದರು. ಕೋರ್ಟ್ ಹಾಲ್‌ನಿಂದ ಅಸಮಾಧಾನದ ಮುಖ ಹೊತ್ತು ಹೊರಬಂದೆ ನಾನು. "ನಾನು ಹೇಳೋ ವಿಷಯ ಕೇಳಿದ್ರೆ ನಿನಗಾಗಿರೊ ಬೇಜಾರು ಹೊರಟುಹೋಗುತ್ತೆ. ಮ್ಯಾಟರ್ರು ಬಹಳ ಸೀರಿಯಸ್ಸು" ಎಂದು ಮೋಹನ್ ಬಾಬಯ್ಯನವರ ಬಂಧನದ ಸುದ್ದಿಯನ್ನು ಹರಿಯಬಿಟ್ಟ.

ಬಾಬಯ್ಯನವರ ಹೆಸರು ಕೇಳಿ ಗೊತ್ತಿತ್ತು. ಅವರ ಸ್ನೇಹಿತರು ಅನೇಕರು ನನ್ನನ್ನು ಸುತ್ತುವರಿದು ನಿಂತಿದ್ದರು. ಬಾಬಯ್ಯನವರೊಂದಿಗಿದ್ದ ವೈಯಕ್ತಿಕ ಸ್ನೇಹವೊಂದೇ ಅವರನ್ನೆಲ್ಲ ಅಲ್ಲಿಗೆ ಎಳೆತಂದಿಲ್ಲ ಎನಿಸಿತು ನನಗೆ. ಮಾನವ ಹಕ್ಕುಗಳ ಬಗೆಗಿನ ಕಳಕಳಿ ಅವರ ಧ್ವನಿಗಳಲ್ಲಿ ಹೊಮ್ಮುತ್ತಿತ್ತು. ನನಗೆ ಕ್ಷಣಾರ್ಧದಲ್ಲಿ ಎಲ್ಲ ತಿಳಿಯಿತು. ಬಾಬಯ್ಯನವರನ್ನು ಎರಡು ದಿನಗಳ ಕಾಲ ಕಾನೂನಿಗೆ ವಿರುದ್ಧವಾಗಿ ಪೊಲೀಸರು ತಮ್ಮ ಕಸ್ಟಡಿಯಲ್ಲಿರಿಸಿಕೊಂಡಿದ್ದಲ್ಲದೆ ಆಂಧ್ರದ

ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಮ್ಯಾಜಿಸ್ಟ್ರೇಟ್ ಇಂದೂಧರ ಅವರು ಆರ್ಡರ್ ಮಾಡಿದ್ದರು. ಮೂರುನಾಲ್ಕು ಹೆಣ್ಣುಮಕ್ಕಳೂ ನಾವಿದ್ದಲ್ಲಿಗೆ ಬಂದರು. ಅವರಲ್ಲಿ ಒಬ್ಬರು ಬಾಬಯ್ಯನವರ ಪತ್ನಿ ಎನ್ನುವುದು ತಿಳಿಯಿತು. ಬೆಂಗಳೂರು ಲೇಬರ್ ಯೂನಿಯನ್‌ನ ನಂದನಾ ರೆಡ್ಡಿಯವರನ್ನು ನಾನೇ ಗುರುತು ಹಿಡಿದು ಮಾತಾಡಿಸಿದೆ. ಅವರು ತಮ್ಮ ಪರಿಚಯ ಹೇಳಿಕೊಳ್ಳುವುದನ್ನು ಅರ್ಧಕ್ಕೇ ನುಂಗಿ, "ನನ್ನ ಜೀವ ಹೋದರೂ ಸರಿ ಬಾಬಯ್ಯನವರನ್ನು ಆಂಧ್ರದ ಪೊಲೀಸರ ಕೈಗೊಪ್ಪಿಸಲು ಬಿಡುವುದಿಲ್ಲ. ಆಂಧ್ರದ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರು ಇಡೀ ದೇಶಕ್ಕೇ ಕುಖ್ಯಾತಿ ಪಡೆದಿದ್ದಾರೆ. ಅವರ ಕೈಗೆ ಸಿಕ್ಕ ಯಾರೂ ಜೀವಂತ ಮನೆಗೆ ಮರಳುವುದಿಲ್ಲ. ತಾವೇ ಗುಂಡಿಟ್ಟು ಕೊಂದು ಎನ್‌ಕೌಂಟರ್‌ನಲ್ಲಿ ಸತ್ತ ಎಂದು ಘೋಷಿಸಿ ಬಿಡುತ್ತಾರೆ" ಎಂದು ಒಂದೇ ಉಸಿರಿಗೆ ಹೇಳಿದರು. ತಕ್ಷಣವೇ ನಾನು ಬಾಬಯ್ಯನವರ ಪತ್ನಿ ಕಡೆ ನೋಡಿದೆ. ಅವರ ಮುಖ ಇನ್ನಷ್ಟು ದಿಗಿಲಿನಿಂದ ಕಪ್ಪಿಟ್ಟಿತು. "ಹಾಗೆಲ್ಲ ಎಳಕೊಂಡು ಹೋಗೋದಿದ್ರೆ ನಾವೆಲ್ಲ ಯಾಕಿರಬೇಕು, ಅದು ಅಷ್ಟು ಸುಲಭ ಅಲ್ಲ" ಎಂದ ನನ್ನ ಮಾತಿನಿಂದ ಅವರ ಮುಖದಲ್ಲಿ ಭರವಸೆಯ ಗೆರೆಗಳು ಕಾಣಿಸಿ ಕಣ್ಣುಗಳಲ್ಲಿ ಹನಿಗಳಾಗಿ ಉದುರತೊಡಗಿದವು.

ನಾನು ಕೂಡಲೇ ಕಾರ್ಯಪ್ರವೃತ್ತನಾದೆ. "ಕರ್ನಾಟಕದ ಪೊಲೀಸರು ಬಾಬಯ್ಯನವರ ಮೇಲೆ ಒಂದು ಕೇಸು ಹೂಡಿ ತಮ್ಮ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಈ ಹಂತದಲ್ಲಿ ಆರೋಪಿಯನ್ನು ಬೇರೊಂದು ರಾಜ್ಯದಲ್ಲಿಯ ಪ್ರಕರಣದ ವಿಚಾರಣೆಗಾಗಿ ಅವರನ್ನು ಕಸ್ಟಡಿಗೆ ಒಪ್ಪಿಸಬೇಕಾದರೆ ಕೋರ್ಟು ಆರೋಪಿಗೆ ತನ್ನ ವಾದವನ್ನು ಮಂಡಿಸಲು ಅವಕಾಶ ಕಲ್ಪಿಸಿಕೊಡಬೇಕು" ಎಂದೆ.

"ಅದೆಲ್ಲ ಒಂದೆಡೆಯಿರಲಿ, ಆರೋಪಿಯನ್ನ ಮ್ಯಾಜಿಸ್ಟ್ರೇಟ್ ಮುಂದೆ ಸಹ ಪ್ರೊಡ್ಯೂಸ್ ಮಾಡದೆಯೇ ಕರೆದೊಯ್ಯುತ್ತಿದ್ದಾರೆ" ಎಂದ ಮೋಹನ್.

"ಅದು ಸಾಧ್ಯವಿಲ್ಲದ ಮಾತು. ಈ ಕೂಡಲೇ ನಾವೆಲ್ಲ ಹೋಗಿ ಮ್ಯಾಜಿಸ್ಟ್ರೇಟ್‌ರನ್ನು ಕಂಡು, ಆಗಿರುವ ತಪ್ಪನ್ನು ಸರಿಪಡಿಸುವಂತೆ ಒತ್ತಾಯಿಸೋಣ" ಎಂದು ಅವರನ್ನೆಲ್ಲ ಕರೆದುಕೊಂಡು ಮ್ಯಾಜಿಸ್ಟ್ರೇಟ್ ಇಂದೂಧರ ಅವರ ಚೇಂಬರ್‌ಗೆ ಹೋದೆ. ಅವರು ಅದೇ ತಾನೆ ಲಂಚ್ ಮುಗಿಸಿ ವಿರಾಮದಲ್ಲಿದ್ದರೆಂದು ಕಾಣುತ್ತದೆ.

"ಸರ್, ಪ್ರೊ. ಬಾಬಯ್ಯನವರನ್ನು ಆಂಧ್ರದ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರ ವಶಕ್ಕೆ ನೀಡಿದ ಕ್ರಮವನ್ನು ವಿರೋಧಿಸಿ ಹಲವಾರು ಸಂಘಟನೆಗಳ

ಮುಖಂಡರು ತಮ್ಮನ್ನು ಕಾಣಲು ಬಂದಿದ್ದಾರೆ. ಕೇಸ್ ಅನ್ನು ನನಗೆ ಒಪ್ಪಿಸಿದ್ದಾರೆ. ಆರೋಪಿಯನ್ನು ನಿಮ್ಮ ಮುಂದೆಯೂ ಹಾಜರುಪಡಿಸಿಲ್ಲ. ನೀವು ಆರೋಪಿಗೆ ಕೋರ್ಟ್‌ನಲ್ಲಿ ತನ್ನ ಹೇಳಿಕೆ ನೀಡಲೂ ಅವಕಾಶ ಕೊಟ್ಟಿಲ್ಲ. You have been fooled by the special task force police of Andhra Pradesh. ಕೂಡಲೇ ಈ ತಪ್ಪನ್ನು ಸರಿಪಡಿಸದಿದ್ದರೆ ನಾವೆಲ್ಲ ಸೇರಿ ಪ್ರೆಸ್ ಮೀಟ್ ಮಾಡಿ ಆಗಿರುವ ಅನ್ಯಾಯವನ್ನೆಲ್ಲ ಬಹಿರಂಗಗೊಳಿಸುವುದು ಅನಿವಾರ್ಯವಾಗುತ್ತದೆ" ಎಂದೆ. ಮ್ಯಾಜಿಸ್ಟ್ರೇಟ್ ಅವರಿಗೆ ಕೂಡಲೇ ಪರಿಸ್ಥಿತಿಯ ಅರಿವಾಯಿತು. "ಈ ಕೂಡಲೇ ಪೊಲೀಸ್‌ರಿಗೆ ಹೇಳಿ, ಆರೋಪಿಯನ್ನು ಕೋರ್ಟ್‌ನಲ್ಲಿ ಹಾಜರುಪಡಿಸುವಂತೆ ಹೇಳುತ್ತೇನೆ" ಎಂದು ಮ್ಯಾಜಿಸ್ಟ್ರೇಟ್‌ರು ನನ್ನೆದುರೆ ಅಶೋಕನಗರ ಠಾಣೆಗೆ ಫೋನ್ ಮಾಡಿದರು. ಫೋನ್ ಅನ್ನು ಇನ್ಸ್‌ಪೆಕ್ಟರ್ ಎತ್ತಿಕೊಂಡರು. "ಈ ಕೂಡಲೇ ಬಾಬಯ್ಯನವರನ್ನು ಕೋರ್ಟ್ ಮುಂದೆ ಹಾಜರುಪಡಿಸಬೇಕು. ಇಲ್ಲದಿದ್ದರೆ ಮುಂದೆ ಜರುಗಬಹುದಾದ ಕಾನೂನಿನ ಆಗುಹೋಗುಗಳನ್ನು ನೀವು ಎದುರಿಸಬೇಕಾಗುತ್ತದೆ" ಎಂದು ಹೇಳಿ ಫೋನ್ ಇಟ್ಟುಬಿಟ್ಟರು.

ಮೋಹನ್ ಮತ್ತು ಇತರರು, "ನಾವೆಲ್ಲ ಅಶೋಕನಗರ ಠಾಣೆಗೆ ಹೋಗೋಣ. ಆಂಧ್ರ ಪೊಲೀಸರು ಬಾಬಯ್ಯನವರನ್ನು ಎತ್ತಿಕೊಂಡು ಹೋಗಿಬಿಡುವ ಸಾಧ್ಯತೆಯೂ ಇದೆ. ಮ್ಯಾಜಿಸ್ಟ್ರೇಟ್ ಅವರ ಫೋನ್ ಕರೆ ಬರುವಷ್ಟರಲ್ಲಿ ಆಂಧ್ರದ ಪೊಲೀಸರು ಬಾಬಯ್ಯನವರನ್ನು ಕರೆದುಕೊಂಡು ಹೋಗಿಬಿಟ್ಟಿದ್ದರು ಎಂದು ಕಥೆ ಕಟ್ಟುವವರು ನಮ್ಮ ಪೊಲೀಸರು. ಏಕೆಂದರೆ, 1984ರಲ್ಲಿ ಬೆಂಗಳೂರಲ್ಲಿ ನಡೆದ ಒಂದು ಪೊಲೀಸ್ ಗೋಲಿಬಾರ್ ಬಗ್ಗೆ ಕರ್ನಾಟಕ ನಾಗರಿಕ ಹಕ್ಕುಗಳ ಸಮಿತಿ ಬಾಬಯ್ಯನವರ ನೇತೃತ್ವದಲ್ಲಿ ಒಂದು ವರದಿ ಸಿದ್ಧಪಡಿಸಿತು. ಆ ವರದಿಯಲ್ಲಿ ಹಲವಾರು ಉನ್ನತ ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರು ಎಂದು ಪುರಾವೆಗಳ ಸಮೇತ ವರದಿ ನೀಡಿದ್ದರು. ಹೀಗಾಗಿ ಬಾಬಯ್ಯನವರ ಮೇಲೆ ನಮ್ಮ ಪೊಲೀಸರು ಹಲ್ಲು ಕಡಿಯುತ್ತಿದ್ದಾರೆ ಸೇಡು ತೀರಿಸಿಕೊಳ್ಳಲು" ಎಂದರು. ಮೋಹನ್ ಮಾತಿಗೆ ಮ್ಯಾಜಿಸ್ಟ್ರೇಟ್ "ಅದೆಲ್ಲ ಬೇಕಾಗಿಲ್ಲ. ನನ್ನ ಮಾತು ಮೀರಿ ಅವರನ್ನು ಕರೆದೊಯ್ಯಲು ಸಾಧ್ಯವೇ ಇಲ್ಲ. ನೋಡುತ್ತಿರಿ, ಇನ್ನರ್ಧ ಗಂಟೆಯಲ್ಲಿ ಬಾಬಯ್ಯ ಇಲ್ಲಿರುತ್ತಾರೆ" ಎಂದು ಭರವಸೆಯಿತ್ತರು.

ಎಲ್ಲರ ಮುಖಗಳೂ ಬಾಬಯ್ಯನವರಿಗೆ ಏನಾಗುವುದೋ; ಪೊಲೀಸರ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳುವಲ್ಲಿ ಸಫಲರಾದೇವೋ ಇಲ್ಲವೋ ಎನ್ನುವ

ಟೆನ್ಶನ್‌ನಿಂದ ಕುಗ್ಗಿದ್ದವು. ಅದನ್ನು ಮರೆಸಿ ಉದ್ವೇಗದ ತೀವ್ರತೆಯನ್ನು ಕಡಿಮೆಗೊಳಿಸುವ ಉದ್ದೇಶದಿಂದ "ಬನ್ನಿ ಇನ್ನು ನೀವು ಏನೂ ಯೋಚಿಸಬೇಕಾಗಿಲ್ಲ. ಮೊದಲು ಕಾಫಿ ಕುಡಿಯೋಣ" ಎಂದು ಅವರನ್ನೆಲ್ಲ ಕ್ಯಾಂಟೀನ್ ಕಡೆಗೆ ಕರೆದೊಯ್ದೆ.

ನಾವು ಕಾಫಿ ಕುಡಿಯುತ್ತಿರುವಂತೆಯೇ ಪೊಲೀಸ್ ವ್ಯಾನ್ ಬಂದು, ಅದರಿಂದ ಬಾಬಯ್ಯ ಇಳಿಯುತ್ತಿರುವುದು ಕಾಣಿಸಿತು. ನಾವೆಲ್ಲ ಲಗುಬಗೆಯಿಂದ ಅತ್ತ ಹೋದೆವು. ಮ್ಯಾಜಿಸ್ಟ್ರೇಟ್ ಚೇಂಬರ್‌ಗೆ ಬಾಬಯ್ಯನವರನ್ನು ಪೊಲೀಸರು ಕರೆದೊಯ್ದರು. ಚೇಂಬರ್‌ನಿಂದ ಬಾಬಯ್ಯನವರನ್ನು ಹೊರತಂದಾಗ ನಾವೆಲ್ಲ ನಿಂತಿದ್ದೆವು. ಅಷ್ಟೊತ್ತಿಗೆ ಮಹಿಳಾ ಹೋರಾಟಗಾರ್ತಿಯರಾದ ಶ್ರೀಮತಿ ಕೊರಿಯನ್ ಕುಮಾರ್ ಡಿಸೋಜಾ, ಡೋನಾ ಫರ್ನಾಂಡೀಸ್ (ಇವರು ಈಗಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಅವರ ಸಹೋದರ ಮೈಕಲ್ ಫರ್ನಾಂಡೀಸ್‌ರವರ ಪತ್ನಿ), ನಾಗರಿಕ ಹಕ್ಕು ರಕ್ಷಣಾ ಸಮಿತಿಯ ರಾಮಕೃಷ್ಣ ಸಹ ಬಂದು ನಮ್ಮನ್ನ ಸೇರಿಕೊಂಡಿದ್ದರು.

ಬಾಬಯ್ಯ ಮೋಹನ್‌ನನ್ನು ನೋಡುತ್ತಲೇ ಕುಸಿದು ಕೂತುಬಿಟ್ಟರು. ಬಾಬಯ್ಯನವರ ಪತ್ನಿ ಧಾವಿಸಿ ಹೋಗಿ ಅವರನ್ನು ಹಿಡಿದುಕೊಂಡರು. ಬಾಬಯ್ಯನವರಿಗೆ ತಾವು ಬದುಕುಳಿಯುವ ಆಸೆಯೇ ಹೊರಟುಹೋಗಿತ್ತು. ಮ್ಯಾಜಿಸ್ಟ್ರೇಟ್‌ರು ಆರ್ಡರ್ ಮಾಡಿದ್ದು ಆಂಧ್ರ ಪೊಲೀಸ್ ಕಸ್ಟಡಿಗಲ್ಲ; ಮರಣದಂಡನೆಗೆ ಎಂದು ನಿರ್ಧರಿಸಿಕೊಂಡುಬಿಟ್ಟಿದ್ದರು.

ನಾಲ್ಕೇ ದಿನಗಳಲ್ಲಿ ಬಾಬಯ್ಯ ಹಿಟ್ಲರ್‌ನ ಕಾನ್ಸಂಟ್ರೇಷನ್ ಖೈದಿಯಂತೆ ಕಾಣತೊಡಗಿದ್ದರು. ನಾನು ಹೋಗಿ ಬಾಬಯ್ಯನವರ ಕೈಗಳನ್ನು ಹಿಡಿದು ಎತ್ತಿದೆ. ಪೆನ್ನು ಹಿಡಿದ ಅಪರಾಧಕ್ಕೆ ಕೈಕೋಳ ತೊಡಿಸಿದಂತೆ ಕಾಣುತ್ತಿತ್ತು. ನಾವಿಬ್ಬರೂ ಪರಸ್ಪರರ ಹೆಸರು ಕೇಳಿದ್ದವರೇ. ಮುಖತಃ ಪರಿಚಯವಾದದ್ದೇ ಆ ಸನ್ನಿವೇಶದಲ್ಲಿ. ನನ್ನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ನೀವೇ ನನ್ನ ಅಂತಿಮ ಭರವಸೆ ಎನ್ನುವ ಮಾತು ಆ ಸ್ಪರ್ಶದಲ್ಲಿತ್ತು. ಬಾಬಯ್ಯರಿಗೆ ತಲೆ ಸುತ್ತು ಬರುತ್ತಿತ್ತು. ತೇಲುಗಣ್ಣಾಗುತ್ತಿತ್ತು. ನನ್ನ ಸಹಾಯಕನಿಂದ ಮೊಸರನ್ನ ತರಿಸಿ ಬಾಬಯ್ಯನಿಗೆ ತಿನ್ನಿಸಿದೆ. ಕಣ್ಣು ನಿಚ್ಚಳವಾದವು. ಮುದ್ದುರಹಿತ ಅನ್ನ ಸಿಕ್ಕಿದ್ದರಿಂದ ಇರಬೇಕು.

ಸರಿ, ಅಪರಾಹ್ನ ಮೂರು ಗಂಟೆಗೆ ನಮ್ಮ ವಾದ ಮಂಡಿಸಲು ಮ್ಯಾಜಿಸ್ಟ್ರೇಟ್ ಇಂದೂಧರ ಅವರು ಅವಕಾಶ ಮಾಡಿಕೊಟ್ಟರು.

ಬಾಬಯ್ಯನವರ ಕೇಸ್ ಮೇಯೋಹಾಲ್‌ನ ಒಂದು ಕೋರ್ಟ್‌ನಲ್ಲಿತ್ತು. ಆ ಮ್ಯಾಜಿಸ್ಟ್ರೇಟ್ ರಜೆ ಮೇಲೆ ಹೋಗಿದ್ದರಿಂದ ಇಂದೂಧರರು ಇನ್‌ಚಾರ್ಜ್‌ನಲ್ಲಿದ್ದರು.

"ಕರ್ನಾಟಕ ಪೊಲೀಸ್ ಕಸ್ಟಡಿಯಲ್ಲಿ ಆರೋಪಿ ಹಣ್ಣುಗಾಯಿ ನೀರುಗಾಯಿ ಆಗಿದ್ದಾರೆ. ಕಳ್ಳರು, ಕೊಲೆಗಡುಕರು ಎನ್ನುವಂತೆ ಬಾಬಯ್ಯನವರನ್ನು ನಡೆಸಿಕೊಂಡು ತೀವ್ರ ಚಿತ್ರಹಿಂಸೆಗೆ ಗುರಿಪಡಿಸಿದ್ದಾರೆ. ಆರೋಪಿಯ ಮೈಮೇಲೆ ಆಗಿರುವ ಪೆಟ್ಟುಗಳನ್ನು ನೀವು ಬೇಕಿದ್ದರೆ ಪರಿಶೀಲಿಸಬಹುದು.

"ಯೂನಿವರ್ಸಿಟಿಯ ಒಬ್ಬ ಪ್ರೊಫೆಸರ್‌ರನ್ನು ಎಷ್ಟು ಹೀನಾಯವಾಗಿ ನಡೆಸಿಕೊಂಡಿದ್ದಾರೆನ್ನುವುದನ್ನು ಖುದ್ದು ನೀವೇ ಪರಿಶೀಲಿಸಿರಿ. ಈ ರಾಜ್ಯದ ಪೊಲೀಸ್ ಕಸ್ಟಡಿಯಿಂದ ಇನ್ನೊಂದು ರಾಜ್ಯದ ಪೊಲೀಸ್ ಕಸ್ಟಡಿಗೆ ವರ್ಗಾಯಿಸುವುದಕ್ಕೂ ಮುಂಚೆ ಏನೆಲ್ಲ ಕಾನೂನಿನ ಪ್ರಕ್ರಿಯೆಗಳಿವೆ ಎನ್ನುವುದು ಕೋರ್ಟಿಗೆ ತಿಳಿಯದಂಥದ್ದು ಏನೂ ಅಲ್ಲ. ಮೊದಲು ಬೆಂಗಳೂರು ಶಿವಾಜಿನಗರ ಪೊಲೀಸ್ ಠಾಣೆಯ ಕ್ರೈಂನಲ್ಲಿರುವ ಅವರನ್ನು ಪೊಲೀಸ್ ಕಸ್ಟಡಿಯಿಂದ ನ್ಯಾಯಾಂಗ ಕಸ್ಟಡಿಗೆ ವರ್ಗಾಯಿಸಿರಿ. ಈಗ ಆಂಧ್ರದ ಪೊಲೀಸರು ಬಾಡಿ ವಾರಂಟ್ ಅನ್ನೇನೂ ತಂದಿಲ್ಲ. ಮೊದಲು ಆಂಧ್ರದ ಕೋರ್ಟ್‌ನಿಂದ ಬಾಡಿ ವಾರಂಟ್ ಬರಲಿ. ಆಮೇಲೆ ಪರಿಶೀಲಿಸಿರಿ ವರ್ಗಾಯಿಸುವುದರ ಬಗೆಗೆ."

ನನ್ನ ಈ ವಾದದ ಅಂಶಗಳನ್ನು ಕೇಳಿ ಬಾಬಯ್ಯನವರ ಮುಖದ ಮೇಲೆ ಗೆಲುವು ಮೂಡಿತು. ಮಿತ್ರ ಮೋಹನ್ ಮತ್ತಿತರ ಹೋರಾಟಗಾರರು ನನ್ನತ್ತ ಮೆಚ್ಚುಗೆಯ ದೃಷ್ಟಿ ಬೀರತೊಡಗಿದರು. ಆಂಧ್ರದ ಪೊಲೀಸರ ಪರವಾಗಿ ಪ್ರಾಸಿಕ್ಯೂಟರ್ ವಾದಿಸಿದರು. ಮ್ಯಾಜಿಸ್ಟ್ರೇಟ್‌ರಿಗೆ ನನ್ನ ವಾದ ಕನ್ವಿನ್ಸ್ ಆಗಿತ್ತು. ನ್ಯಾಯಾಂಗ ಕಸ್ಟಡಿಗೆ ಆರ್ಡರ್ ಮಾಡಿಬಿಟ್ಟರು!

ಆ ಎರಡೂವರೆ ಮೂರು ತಾಸುಗಳಲ್ಲಿ ಡಬಲ್ ವಿಕ್ಟರಿ ನನ್ನದಾಗಿತ್ತು. ಆಂಧ್ರದ ರಕ್ಕಸ ಪೊಲೀಸರ ಮುಷ್ಟಿಯಿಂದ ಬಾಬಯ್ಯ ಪಾರಾಗಿದ್ದರು. ಹಾಗೆಯೇ ಬೆಂಕಿಯಿಂದ ಬಾಣಲೆಗೆ ಎನ್ನುವಂತಾಗದೆ ಕರ್ನಾಟಕ ಪೊಲೀಸರ ಕಸ್ಟಡಿಗೂ ಒಳಗಾಗದೆ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲ್ಪಟ್ಟಿದ್ದರು. ಬಾಬಯ್ಯನವರ ಪತ್ನಿ ನನ್ನ ಬಳಿಗೆ ಬಂದು, 'ಎಂದಿಗೂ ನಿಮ್ಮ ಈ ಉಪಕಾರವನ್ನು ಮರೆಯುವುದಿಲ್ಲ' ಎಂದಾಗ ಕೃತಜ್ಞತೆ ಕಣ್ಣಲ್ಲಿ ಮುತ್ತಾಗಿ ಉದುರಿತು.

ಬಾಬಯ್ಯನವರ ಪ್ರಕರಣ ರಾಜಧಾನಿಯಲ್ಲಿ ಬಿಸಿ ಸುದ್ದಿಯಾಗಿಬಿಟ್ಟಿತು. ವಿವಿಧ ಜನಪರ ಸಂಘ ಸಂಸ್ಥೆಗಳು ಬಾಬಯ್ಯನವರಿಗೆ ನೈತಿಕ ಬೆಂಬಲ ಸೂಚಿಸಲು ನನ್ನನ್ನು ಸಂಪರ್ಕಿಸತೊಡಗಿದವು. ಅದರಲ್ಲೂ ಸ್ತ್ರೀವಾದಿ ಸಂಘಟನೆಯಾದ 'ವಿಮೋಚನಾ', 'ಮಾನಿನಿ' ಮತ್ತು ಬೆಂಗಳೂರು ಲೇಬರ್ಸ್ ಯೂನಿಯನ್ ಸಂಘಟನೆಗಳು ಸಕ್ರಿಯವಾಗಿಯೇ ಬೆಂಬಲಿಸಿದವು. ನಂದನಾರೆಡ್ಡಿ, ಶ್ರೀಮತಿ ಕೊರಿಯನ್ ಕುಮಾರ್ ಡಿಸೋಜಾ, ಶ್ರೀಮತಿ ಡೋನಾ ಫರ್ನಾಂಡೀಸ್ ಮುಂತಾದವರು ಈ ಕೇಸು ನೇರವಾಗಿ ತಮಗೇ ಸಂಬಂಧಿಸಿದ್ದೇನೊ ಎನ್ನುವಂತೆ ತುಂಬಾ ಕಳಕಳಿಯಿಂದ ಪರಿಶ್ರಮಿಸತೊಡಗಿದರು.

ನಂದನಾ ರೆಡ್ಡಿಯವರು ತೀರ ಹತ್ತಿರದಿಂದ ಪರಿಚಯವಾದದ್ದೇ ಈ ಕೇಸಿನ ಸಂದರ್ಭದಲ್ಲಿ. ಅವರ ತಾಯಿ ಸ್ನೇಹಲತಾ ರೆಡ್ಡಿಯವರನ್ನು ಎಮರ್ಜನ್ಸಿಯಲ್ಲಿ ಸೆಂಟ್ರಲ್ ಜೈಲಿನ ಸೆಲ್‌ನಲ್ಲಿ ಕೂಡಿಹಾಕಿದ್ದು ಬಹುದೊಡ್ಡ ಸುದ್ದಿಯಾಗಿತ್ತು. ಎಮರ್ಜನ್ಸಿಯ ವಿರುದ್ಧದ ಪ್ರಜಾಸತ್ತಾತ್ಮಕ ಹೋರಾಟದ ಮುಖ್ಯ ತಾರೆಗಳಲ್ಲಿ ಸ್ನೇಹಲತಾ ರೆಡ್ಡಿಯವರೂ ಒಬ್ಬರಾಗಿಬಿಟ್ಟಿದ್ದರು. ಸಾಮಾಜಿಕ ಕಳಕಳಿ, ಸಮಾಜವಾದಿ ಆಶಯ, ಹೋರಾಟದ ಛಲ, ಪ್ರವಾಹದ ಎದುರು ಈಜಬೇಕೆನ್ನುವ ಧೈರ್ಯ ಇವೆಲ್ಲ ನಂದನಾ ರೆಡ್ಡಿಯವರಲ್ಲಿರುವುದನ್ನು ಸೂಕ್ಷ್ಮವಾಗಿ ಗುರುತಿಸಿದೆ. ತಾಯಿಗೆ ತಕ್ಕ ಮಗಳು ಎನಿಸಿತು ಅವರ ಚಟುವಟಿಕೆಗಳನ್ನು ನೋಡಿ. ತಾಯಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಬಹುದೆನ್ನುವ ವಿಶ್ವಾಸವನ್ನು ಅವರ ಮುಖದ ಪ್ರಭಾವಳಿ ಹುಟ್ಟಿಸುತ್ತಿತ್ತು. ಅವರ ವ್ಯಕ್ತಿತ್ವದ ಇವೆಲ್ಲ ಗುಣಗಳು ಅವರ ಮುಖಕ್ಕೆ ವಿಚಿತ್ರ ಕಳೆಯನ್ನು ತಂದುಕೊಟ್ಟಿದ್ದವು. ಇವೆಲ್ಲ ಸೇರಿ ಅವರ ವ್ಯಕ್ತಿತ್ವದ ಬಗ್ಗೆ ಗೌರವ ಭಾವವನ್ನು ಹುಟ್ಟಿಸುತ್ತಿತ್ತು.

ಇನ್ನೇನು ಬೇಟೆ ಸಿಕ್ಕಿತು ಎನ್ನುವ ಖುಷಿಯಲ್ಲಿದ್ದ ಟಾಸ್ಕ್ ಫೋರ್ಸ್ ರಣಹದ್ದುಗಳು ನಿರಾಶೆಗೊಂಡು ಉರಿಯುತ್ತಿದ್ದವು. ಕರ್ನಾಟಕದ ಪೊಲೀಸರೊಡಗೂಡಿ ಬಾಬಯ್ಯನವರ ಬಿಡುಗಡೆಗೆ ಪ್ರಯತ್ನಿಸುತ್ತಿರುವವರನ್ನು ಅಧೈರ್ಯಗೊಳಿಸುವ ಪ್ರಯತ್ನ ನಡೆಸಿದರು. ಬಾಬಯ್ಯನವರ ಬಿಡುಗಡೆಗೆ ಪ್ರಯತ್ನಿಸುತ್ತಿದ್ದ ಲೆಕ್ಚರರ್ ಮೋಹನ್, ಸಿವಿಲ್ ರೈಟ್ಸ್ ಕಮಿಟಿಯ ಸೆಕ್ರೆಟರಿ ವಕೀಲ ರಾಮಕೃಷ್ಣ, ಶ್ರೀಮತಿ ಡಿಸೋಜಾ, ಶ್ರೀಮತಿ ಫರ್ನಾಂಡೀಸ್, ನಂದನಾ ರೆಡ್ಡಿ ಇನ್ನು ಮುಂತಾದವರ ಮನೆಗಳಿಗೆ ಹೋಗಿ ಅನವಶ್ಯಕ ಮಾಹಿತಿಗಳಿಗಾಗಿ ಪೀಡಿಸತೊಡಗಿದರು.

ನಂದನಾ ರೆಡ್ಡಿಯವರನ್ನು ಪೊಲೀಸರು ಈ ರೀತಿ ಬೆದರಿಸುವ ವಿಫಲ ಯತ್ನ ನಡೆಸಿದರು. "ಪ್ರೊ. ಬಾಬಯ್ಯನವರನ್ನು ಬೆಂಗಳೂರಿನ ಗಡಿಯಾಚೆಗೂ ಒಯ್ಯಲು ಬಿಡುವುದಿಲ್ಲ. ಒಂದುವೇಳೆ ನೀವು ಕೋರ್ಟ್ ಮೂಲಕ ಯಶಸ್ಸು ಪಡೆದುಕೊಂಡಿರೆಂದೇ ಇಟ್ಟುಕೊಂಡರೂ ನಿಮ್ಮ ವ್ಯಾನ್ ಬೆನ್ನಹಿಂದೇ ನನ್ನ ಜೀಪಿರುತ್ತದೆ. ಬಾಬಯ್ಯನವರನ್ನು ಎನ್‌ಕೌಂಟರ್ ನೆಪದಲ್ಲಿ ಕೊಲೆ ಮಾಡುವ ಕನಸಿಗೆ ತಿಲಾಂಜಲಿಯಿಡಿ" ಎಂದು ನಂದನಾ ರೆಡ್ಡಿ ಎದಿರೇಟು ನೀಡಿ ಕಳಿಸಿದರು.

ಕೋರ್ಟ್ ಕ್ಯಾಂಪಸ್ ಒಳಗೆ ಆಂಧ್ರದ ಪೊಲೀಸ್ ಅಧಿಕಾರಿಯೊಬ್ಬ, "ಬಾಬಯ್ಯನನ್ನು ಬಿಡಿಸಿಕೊಳ್ಳಲು ಓಡಾಡುತ್ತಿರುವ ಈ ವಕೀಲ ಆಂಧ್ರದಲ್ಲಿರಬೇಕಿತ್ತು. ಒಂದೇ ದಿವಸದಲ್ಲಿ ಅವನನ್ನೂ ನಕ್ಸಲೈಟ್ ಎಂದು ಬ್ರಾಂಡ್ ಮಾಡಿ ಎನ್‌ಕೌಂಟರ್‌ನಲ್ಲಿ ಮುಗಿಸಿಹಾಕಿಬಿಡುತ್ತಿದ್ದೆವು. ಈ ಕರ್ನಾಟಕವೇ ವಿಚಿತ್ರ. ಇಂಥವರೆಲ್ಲ ಧೈರ್ಯದಿಂದ ಇದ್ದಾರೆ" ಎಂದು ಮಾತನಾಡಿದ್ದನ್ನು ಮಿತ್ರ ಮೋಹನ್ ಬಂದು ನನಗೆ ಹೇಳಿದ. ಆಂಧ್ರ ಪೊಲೀಸರ ಈ ಹಿಟ್ಲರ್‌ಶಾಹೀ ಧೋರಣೆಯ ಬಗ್ಗೆ ನನಗೆ ಕ್ರೋಧವುಕ್ಕಿತು. ಅವರಿಗೆ ಪ್ರಜಾಪ್ರಭುತ್ವದ ಮೂಲಪಾಠ ಕಲಿಸಿಯೇ ಆಂಧ್ರಕ್ಕೆ ವಾಪಸ್ ಕಳಿಸಬೇಕು ಎನ್ನುವ ಛಲ ನನ್ನಲ್ಲಿ ಧುತ್ತೆಂದಿತ್ತು.

ಬಾಬಯ್ಯನವರ ಬಿಡುಗಡೆಗಾಗಿ ಶ್ರಮಿಸುತ್ತಿದ್ದವರೆಲ್ಲ ನನ್ನನ್ನೇ ನಂಬಿ ಕೂತಿದ್ದರು. ಕಕ್ಷಿದಾರರ ದೃಷ್ಟಿಯಲ್ಲಿ ವಕೀಲ ದೇವರಾಗುವುದು ಸುಲಭ. ಆದರೆ ಆ ದೇವತ್ವವನ್ನು ಕಾಪಾಡಿಕೊಳ್ಳುವುದೆಂದರೆ ನರಕ! ಯಾವುದಾದರೂ ಪಾಯಿಂಟ್ ಹಾಕಿ ಪಾರುಮಾಡಿಬಿಡುತ್ತಾರೆ ಎನ್ನುವ ನಿರೀಕ್ಷೆಯಿರಿಸಿಕೊಂಡು ಕೂತಿರುತ್ತಾರೆ. ಆದರೆ ವಕೀಲನ ಬಳಿ ಅಂಥ ಮಾಂತ್ರಿಕ ಪಾಯಿಂಟ್‌ಗಳ ಸ್ಟಾಕು ಇರುವುದಿಲ್ಲ. ವಕೀಲ ಏನಿದ್ದರೂ ಕಾನೂನಿನ ಆಯುಧದಿಂದ ಹೋರಾಡಿಯೇ ಕಕ್ಷಿದಾರನನ್ನು ಪಾರುಮಾಡಬೇಕು.

ಬಾಬಯ್ಯನವರನ್ನು ಜ್ಯುಡಿಷಿಯಲ್ ಕಸ್ಟಡಿಗೇನೋ ಕಳಿಸಿದ್ದಾಗಿತ್ತು. ಆದರೆ ಮುಂದೇನು ಎನ್ನುವ ಪ್ರಶ್ನೆ ನನ್ನ ಮುಂದೆ ಅಗಾಧವಾಗಿ ಬೆಳೆದು ನಿಂತಿತ್ತು.

'ಇಂಡಿಯನ್ ಇಕ್ಸ್‌ಪ್ರೆಸ್'ನ ಚಂದ್ರಮೌಳಿ (ಚಲಮ್) ಈ ಪ್ರಕರಣದ ಸೂಕ್ಷ್ಮ ವಿವರಗಳನ್ನು ಬರೆದು ಬಾಬಯ್ಯನವರ ನಿರಪರಾಧಿತ್ವವನ್ನು ಪತ್ರಿಕೆಯಲ್ಲಿ ಬಿಂಬಿಸುವಲ್ಲಿ ಸಫಲರಾಗಿದ್ದರು. ಅದೇ ರೀತಿ 'ಡೆಕ್ಕನ್ ಹೆರಾಲ್ಡ್'ನ ರಾಮಮೂರ್ತಿಯವರೂ ಈ ಪ್ರಕರಣದಲ್ಲಿ ತೀವ್ರ ಆಸಕ್ತಿಯನ್ನು ತೋರಿದರು.

'ಲಂಕೇಶ್ ಪತ್ರಿಕೆ' "ಇಂದು ಬಾಬಯ್ಯ, ನಾಳೆ ಯಾರು?" ಎನ್ನುವ ತಲೆಬರಹದಲ್ಲಿ ಲೇಖನ ಪ್ರಕಟಿಸಿ ಕರ್ನಾಟಕದ ಬುದ್ಧಿಜೀವಿ ಮತ್ತು ಪ್ರಗತಿಪರ

ಸಂಘಟನೆಗಳೆಲ್ಲ ಬಾಬಯ್ಯನವರ ಬಗ್ಗೆ ಅನುಕಂಪ ತಳೆಯುವಂತೆ ಮಾಡಿತ್ತು. ಸ್ವತಃ ಲಂಕೇಶ್ ಮೇಷ್ಟ್ರು ಬಾಬಯ್ಯನವರನ್ನು ಕಾಣಲು ಸೆಂಟ್ರಲ್ ಪ್ರಿಜನ್‌ಗೆ ಹೋದದ್ದು ಒಂದು ದೊಡ್ಡ ಸುದ್ದಿಯಾಯಿತು.

ಹೀಗೆ ಕೋರ್ಟಿನ ಹೊರಗೆ ಎಲ್ಲವೂ ನಮ್ಮ ಪರ ಇದ್ದವು. ಆದರೆ ಕೋರ್ಟಿನ ಒಳಗೆ? ಅದೆಲ್ಲ ಲೆಕ್ಕಕ್ಕೇ ಬರುವುದಿಲ್ಲ. ಸಾರ್ವಜನಿಕ ಬೆಂಬಲವನ್ನು ಪರಿಗಣಿಸಿ ಕೋರ್ಟು ತನ್ನ ನಿರ್ಣಯಕ್ಕೆ ಬರುವುದಿಲ್ಲವಲ್ಲ!

ನನ್ನ ತಲೆಯ ಕಾರ್ಖಾನೆಯಲ್ಲಿ ನಡೆಯುತ್ತಿದ್ದದ್ದೇ ಬೇರೆ. ಏನು ಮಾಡಿದರೆ ಆಂಧ್ರ ಪೊಲೀಸರಿಂದ ಬಾಬಯ್ಯನವರು ಪಾರಾಗುತ್ತಾರೆ? ತಾಸಿನಿಂದ ತಾಸಿಗೆ ಇದು ನನ್ನನ್ನು ಕಿತ್ತು ತಿನ್ನುವ ಸಮಸ್ಯೆಯಾಗತೊಡಗಿತು. ಸಾರ್ವಜನಿಕ ಹಿತಾಸಕ್ತಿಯ ಮಹನೀಯರು ಬಂದು ನನ್ನ ಈ ಪ್ರಯತ್ನದ ಬಗ್ಗೆ ಕೊಂಡಾಡಿದಾಗಲಂತೂ ಎದೆಯೊಳಗೆ ಅಳುಕು ಮುಳ್ಳಾಡಿಸಿದಂತಿತ್ತು. ಇವರೆಲ್ಲರ ನಿರೀಕ್ಷೆಯಂತೆ ಈ ಕೇಸಿನಲ್ಲಿ ನಾನು ಯಶಸ್ವಿಯಾಗುವೆನೆ ಎನ್ನುವ ಚಿಂತೆ ಆವರಿಸಿದಾಗ ಮನಸ್ಸಿಗೆ ದಣಿವಾಗುತ್ತಿತ್ತು.

ಮೋಹನ್, ರಾಮಕೃಷ್ಣ, ಶ್ರೀಮತಿ ಡಿಸೋಜಾ, ಶ್ರೀಮತಿ ಫರ್ನಾಂಡೀಸ್ ಮತ್ತು ನಂದನಾ ರೆಡ್ಡಿ ಮುಂತಾದವರನ್ನೆಲ್ಲ ನನ್ನ ಆಫೀಸ್‌ಗೆ ಕರೆದೆ. ಕಾನೂನಿನ ವಾಸ್ತವ ಸ್ಥಿತಿಗತಿ ಚಿತ್ರಣವನ್ನು ಅವರ ಮುಂದೆ ಬಿಡಿಸಿಟ್ಟೆ.

ನಾವು ಈಗ ಬೀಸೋ ದೊಣ್ಣೆಯಿಂದ ಮಾತ್ರ ತಪ್ಪಿಸಿಕೊಂಡಿದ್ದೇವೆ. ಪುನಃ ಆಂಧ್ರ ಪೊಲೀಸರು ಅರ್ಜಿ ಹಾಕಿಕೊಂಡಿದ್ದಾರೆ. ಬಾಬಯ್ಯನವರನ್ನು ಜ್ಯುಡಿಷಿಯಲ್ ಕಸ್ಟಡಿಗೆ ಕಳಿಸುವಲ್ಲಿ ಸಫಲರಾದೆವು ಎಂದ ಮಾತ್ರಕ್ಕೆ ನಾವು ಬಾಬಯ್ಯನವರನ್ನು ಆಂಧ್ರದ ಹದ್ದುಗಳಿಂದ ಪಾರು ಮಾಡಿದಂತಾಗುವುದಿಲ್ಲ. ಆಂಧ್ರ ಪೊಲೀಸರು ಅಲ್ಲಿಯ ಕೋರ್ಟ್‌ನಿಂದ ವಾರಂಟನ್ನು ತಂದಿಲ್ಲ ಎಂದು ವಾದಿಸಿ ಸದ್ಯಕ್ಕೆ ಗೆದ್ದಿದ್ದೇವೆ. ಈಗ ಅವರು ಹೈದ್ರಾಬಾದಿನ ಕೋರ್ಟ್ ಮೂಲಕ ವಾರೆಂಟ್ ತಂದು ಕೋರ್ಟಿನಲ್ಲಿ ಹಾಜರುಪಡಿಸಿದಾಗ ಇಲ್ಲಿಯ ಜಡ್ಜ್ ಬಾಬಯ್ಯನವರನ್ನು ಅವರಿಗೆ ಒಪ್ಪಿಸುವ ಸಾಧ್ಯತೆಯಿದೆ. ನಾಳೆಯೇ ಬಾಬಯ್ಯನವರನ್ನು ಕೋರ್ಟಿಗೆ ಹಾಜರುಪಡಿಸುತ್ತಿದ್ದಾರೆ. ಹಾಗೊಂದು ವೇಳೆ ಹಾಜರುಪಡಿಸಿದ್ದೇ ಆದರೆ ಆಂಧ್ರ ಪೊಲೀಸರ ಕೈ ಮೇಲಾಗಿಬಿಡುತ್ತದೆ. ಆಂಧ್ರ ಪೊಲೀಸರು ಹೈದ್ರಾಬಾದ್ ಕೋರ್ಟಿನಲ್ಲಿ ಹೂಡಿರುವ ಕೇಸಿನಲ್ಲಿ ಬಾಬಯ್ಯನವರನ್ನು ಆರೋಪಿಯಾಗಿಸಿದ್ದಾರೆ. ಆ ಕೇಸಿನಲ್ಲಿ ನಾವು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಹಾಕಿಕೊಳ್ಳಬೇಕಾಗುತ್ತದೆ. ನಮಗೆ ನಿರೀಕ್ಷಣಾ ಜಾಮೀನು ಸಿಗದಿದ್ದರೆ ನಾವು ವಿಫಲರಾದೆವೆಂದೇ ಅರ್ಥ. ಕರ್ನಾಟಕದ ಪೊಲೀಸರು

ಬಾಬಯ್ಯನವರ ಮೇಲೆ ಹಾಕಿರುವ TADA ಕೇಸ್ ಬಗ್ಗೆ ಒಳ್ಳೆಯ ಪಾಯಿಂಟ್ ಅನ್ನು ಹುಡುಕಿಟ್ಟಿರುವೆ. ಇನ್ನುಳಿದಂತೆ Arms Actನಲ್ಲಿ ಮಾತ್ರ ಕೇಸನ್ನು ಮುಂದುವರಿಸುವ ಅವಕಾಶ ಕರ್ನಾಟಕದ ಪೋಲೀಸರಿಗಿರುತ್ತದೆ. ನಾವು ಈಗ ಏನಿದ್ದರೂ ನಮ್ಮ ಎಲ್ಲ ಶಕ್ತಿಯನ್ನು ವ್ಯಯಿಸಬೇಕಿರುವುದು ಬಾಬಯ್ಯನವರನ್ನು ಆಂಧ್ರ ಪೊಲೀಸರ ವಶಕ್ಕೆ ಒಪ್ಪಿಸದಂತೆ ಮಾಡುವುದಕ್ಕಾಗಿ ಮಾತ್ರ.

ಸರಿ, ಮುಂದೇನು ದಾರಿ ಹೇಳಿ ಎಂದರು ಉದ್ವೇಗದಿಂದ ನಂದನಾ ರೆಡ್ಡಿ. ನೋಡಿ, ನಾಳೆ ಸೆಂಟ್ರಲ್ ಪ್ರಿಜನ್‌ನವರು ಬಾಬಯ್ಯನವರನ್ನು ಕೋರ್ಟಿಗೆ ಹಾಜರು ಮಾಡಬಾರದು. ಏನಾದರೂ ಮಾಡಿ ಸೆಂಟ್ರಲ್ ಜೈಲಿನವರು ಬಾಬಯ್ಯನನ್ನು ಕೋರ್ಟಿನಲ್ಲಿ ನಾಳೆ ಹಾಜರು ಮಾಡದಂತೆ ನೋಡಿಕೊಂಡರೆ ಕಾಲಾವಕಾಶ ಸಿಗುತ್ತದೆ. ಪೋಸ್ಟ್‌ಪೋನ್ ಮಾಡಿಸಿದರೆ ನಮಗೆ ಕಾಲಾವಕಾಶ ಸಿಕ್ಕುತ್ತದೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿಕೊಳ್ಳಲು. ಪ್ರಿಜನ್ ಸೂಪರಿಂಟೆಂಡೆಂಟ್ ಮೇಲೆ ಇನ್‌ಫ್ಲೂಯೆನ್ಸ್ ತಂದರೆ ಮಾತ್ರ ಇದು ಸಾಧ್ಯವಾಗುವ ಕೆಲಸ. ಆ ಶಕ್ತಿ ಇರೋರು ಯಾರಿಲ್ಲಿ? ಎಂದೆ.

ಚೀಫ್ ಮಿನಿಸ್ಟರ್ ಕಡೆಯಿಂದ ಫೋನ್ ಮಾಡಿಸಿದರೆ ಆಗಬಹುದಾ ಎಂದರು ನಂದನಾ ರೆಡ್ಡಿ. ಓಹೋ, ಬೇಕಾದದ್ದಕ್ಕಿಂತ ಹೆಚ್ಚಿನ ಇನ್‌ಫ್ಲೂಯೆನ್ಸ್ ಸಿಕ್ಕಂತಾಯಿತು. ಆದರೆ ಈ ಕ್ಷಣದಿಂದಲೇ ಕಾರ್ಯ ಶುರುವಾಗಬೇಕು ಎಂದೆ.

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಎಮರ್ಜನ್ಸಿ ವಿರುದ್ಧದ ಹೋರಾಟದಲ್ಲಿ ಹೆಗಡೆಯವರೂ ಜೈಲು ಸೇರಿದವರಾಗಿದ್ದರು. ಸ್ನೇಹಲತಾ ರೆಡ್ಡಿಯವರನ್ನು ಜೈಲ್‌ನಲ್ಲಿ ಹಿಂಸಿಸಿದ್ದು, ಅವರು ಅದಕ್ಕೆಲ್ಲ ಜಗ್ಗದೆ ಪ್ರತಿರೋಧಿಸಿದ್ದು ಹೆಗಡೆಯವರಿಗೇನೂ ತಿಳಿಯದಂಥದ್ದಾಗಿರಲಿಲ್ಲ. .ಪೊಲೀಸರ ಚಿತ್ರಹಿಂಸೆಯ ಬಗ್ಗೆ ಕೇಳಿದರೆ ಸಾಕು ನಂದನಾ ರೆಡ್ಡಿ ಏಕೆ ಕೆರಳಿ ಕೆಂಡವಾಗುತ್ತಿದ್ದರು ಎನ್ನುವುದಕ್ಕೆ ಈ ಹಿನ್ನೆಲೆಯೂ ಒಂದು ಮುಖ್ಯ ಕಾರಣವಾಗಿದ್ದಿರಬೇಕೆಂದು ನನ್ನೊಳಗೇ ಅನೇಕ ಬಾರಿ ಅಂದುಕೊಂಡಿದ್ದೆ.

ಹೆಗಡೆಯವರ ಆರೋಗ್ಯ ಸರಿಯಿರದ್ದಕ್ಕೆ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಸೇರಿಸಲಾಗಿದೆಯೆಂದು ತಿಳಿದಾಗ ನಮ್ಮೆಲ್ಲರ ಮುಖದ ಮೇಲೆ ನಿರಾಶೆಯ ಛಾಯೆ ಆವರಿಸಿತು. ನಂದನಾ ರೆಡ್ಡಿ ತಮ್ಮ ಪ್ರಯತ್ನ ಬಿಡದೆ, ಸೇಂಟ್‌ಜಾನ್ಸ್ ಆಸ್ಪತ್ರೆಗೆ ಫೋನ್ ಮಾಡಿ ಹೆಗಡೆಯವರೊಂದಿಗೆ ಮಾತಾಡಿಯೇಬಿಟ್ಟರು. ಕೂಡಲೇ ಅಪಾಯಿಂಟ್‌ಮೆಂಟೂ ಸಿಕ್ಕಿಬಿಟ್ಟಿತು.

ನಾವೆಲ್ಲ ಆಸ್ಪತ್ರೆಗೆ ಹೋದಾಗ ಹೆಗಡೆಯವರು ಕಾಟ್ ಮೇಲೆ ಮಲಗಿದ್ದರು. ಕಾಯಿಲೆಯಿಂದ ಮುಖ ಬಳಲಿತ್ತು. ನಮಗೆಲ್ಲ ಮಲಗಿಯೇ ದೃಷ್ಟಿ ಸ್ವಾಗತ ಕೋರಿದರು. ಒಂದು ಕೇಸಿನ ಬಗ್ಗೆ ಮಾತಾಡಲು ನಾವೆಲ್ಲ ಬಂದಿರುವುದಾಗಿ ತಿಳಿದುಕೊಂಡ ಹೆಗಡೆಯವರು ಕರಿಕೋಟು ಹಾಕಿದ್ದ ನನ್ನತ್ತ ನೋಡಿ ಸನ್ನೆ ಮಾಡಿ ತಮ್ಮ ಕಾಟ್ ಪಕ್ಕದ ಕುರ್ಚಿಯ ಮೇಲೆ ಕೂರುವಂತೆ ಸೂಚಿಸಿದರು.

ನಾನು ಹೇಳಿದ ವಿವರಗಳನ್ನೆಲ್ಲ ಕೇಳಿ, ಎರಡು ವಾರ ಕಾಲಾವಕಾಶ ಸಿಕ್ಕ ನಂತರವೂ ಆಂಧ್ರ ಪೊಲೀಸರು ಬಾಬಯ್ಯನವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಳ್ಳಬಹುದಲ್ಲವೆ? ಇಷ್ಟೆಲ್ಲ ನಾವು ಇನ್‌ಫ್ಲೂಯೆನ್ಸ್ ಮಾಡೋದು ಕೇವಲ ಎರಡು ವಾರ ಬೀಸೋ ದೊಣ್ಣೆ ತಪ್ಪಿಸಿಕೊಳ್ಳಲು ಎಂದಂತಾಗುವುದಿಲ್ಲವೆ ಎಂದು ಹೆಗಡೆಯವರು ಪ್ರಶ್ನಿಸಿದರು. ಆಗ ನಾನು ಹೈದ್ರಾಬಾದ್ ಕೇಸಿಗೆ ಸಂಬಂಧಪಟ್ಟಂತೆ ಬಾಬಯ್ಯನವರಿಗೆ ನಿರೀಕ್ಷಣಾ ಜಾಮೀನಿಗೆ ಹಾಕಿಕೊಳ್ಳುವೆ. ಅದು ತಿರಸ್ಕೃತಗೊಂಡರೆ ಸುಪ್ರೀಂಕೋರ್ಟಿಗೂ ಹೋಗಿ ನಿರೀಕ್ಷಣಾ ಜಾಮೀನು ಪಡೆದೇ ತೀರುವೆ ಎಂದು ಹೇಳಿದಾಗ ಹೆಗಡೆಯವರು ನಂದನಾ ರೆಡ್ಡಿ ಮತ್ತಿತರರ ಕಡೆ ನೋಡುತ್ತ 'ನಿಮ್ಮ ಲಾಯರ್ ತುಂಬ ಹುಮ್ಮಸ್ಸಿನವರು. ಪ್ರೊಫೆಷನಲಿಜಮ್ ಎಂದರೆ ಇದು' ಎಂದು ಮೆಚ್ಚುಗೆ ಸೂಚಿಸುತ್ತ ತಮ್ಮ ಸಹಾಯಕ ಅಧಿಕಾರಿಯನ್ನು ಕರೆದು ಬಿ.ಕೆ. ಚಂದ್ರಶೇಖರ್‌ಗೆ ಫೋನ್ ಕನೆಕ್ಟ್ ಮಾಡಿಕೊಡು ಎಂದರು.

ಈಗ ಪ್ರಾಥಮಿಕ ಶಿಕ್ಷಣ ಸಚಿವರಾಗಿರುವ ಪ್ರೊ. ಬಿ.ಕೆ. ಚಂದ್ರಶೇಖರ್ ಆಗ ಹೆಗಡೆಯವರ ಥಿಂಕ್‌ಟ್ಯಾಂಕ್ ಆಗಿದ್ದರು; ಅವರ ರೈಟ್ ಹ್ಯಾಂಡ್ ಎಂದೇ ಹೆಸರಾಗಿದ್ದರು.

ಹೆಗಡೆಯವರು ಚಂದ್ರಶೇಖರ್ ಅವರ ಜೊತೆ ನಮ್ಮೆದುರಿಗೇ ಮಾತನಾಡಿದರು. ಆಯಿತು ನಿಮ್ಮ ಕೆಲಸ ಆಗುತ್ತದೆ ಎಂದರು ಹೆಗಡೆ. ಅವರ ಧ್ವನಿಯಲ್ಲಿದ್ದ ಭರವಸೆಯಿಂದ ಗೆಲುವಿನಿಂದ ಹೊರಬಂದೆವು.

ಮುಖ್ಯಮಂತ್ರಿ ಹೆಗಡೆಯವರು ಆಶ್ವಾಸನೆ ಕೊಟ್ಟಿದ್ದರೂ ಸಹ ನನಗೆ ಒಂದೆಡೆ ಅನುಮಾನ ಕಾಡುತ್ತಲೇ ಇತ್ತು. ಮುಖ್ಯಮಂತ್ರಿಯವರಿಗೂ ಚಳ್ಳೆ ಹಣ್ಣು ತಿನ್ನಿಸಿ ಬಾಬಯ್ಯನವರನ್ನು ಕೋರ್ಟಿಗೆ ಹಾಜರುಪಡಿಸಿದರೆ ಏನು ಗತಿ? ಎದೆಗುದಿಯಲ್ಲಿ ಕೋರ್ಟ್‌ಗೆ ಹೊರಟೆ. ಬೇರೆ ಕೋರ್ಟ್‌ನಲ್ಲಿ ಮರ್ಡರ್ ಕೇಸ್ ಒಂದರ ಬಗ್ಗೆ ಆರ್ಗ್ಯುಮೆಂಟ್ ಇತ್ತು. ಆದರೆ ನನ್ನ ತಲೆಯೆಲ್ಲ ಬಾಬಯ್ಯನವರ ಕೇಸಿನಲ್ಲಿ ಮುಳುಗಿಹೋಗಿತ್ತು. ಫೀಜು ಕೊಟ್ಟವರ ಕೇಸಿನ ಬಗೆಗೆ ಇರದ ಕಾಳಜಿ ಪುಕ್ಕಟೆ

ಕೇಸಿಗೆ ಎಂದಿತು ಒಂದೆಡೆ ಮನಸ್ಸು. ಒಳಗೇ ನಗು ಬಂದಿತು. ಹಣ ಕೊಟ್ಟುಬಿಟ್ಟರೆ ಎಲ್ಲ ಕೆಲಸ ಆಗುವುದಿಲ್ಲ ಎನ್ನೋದು ಇದಕ್ಕೇ ಇರಬೇಕು ಎನಿಸಿತು.

ಬಾಬಯ್ಯನವರ ಕೇಸು ನನಗೆ ಪ್ರತಿಷ್ಠೆಯ ಪ್ರಶ್ನೆಯಾಗಿ ಮಾರ್ಪಾಟಾಗಿತ್ತು. ಆದರೆ ಯಾವ ಪ್ರತಿಷ್ಠೆ, ಯಾರ ಪ್ರತಿಷ್ಠೆ ಎನ್ನುವುದು ಮಾತ್ರ ಸ್ಪಷ್ಟವಾಗಿರಲಿಲ್ಲ. ಆರ್ಥಿಕ ಸ್ವಾರ್ಥವಿರದಿದ್ದಾಗಲೂ ಪ್ರತಿಷ್ಠೆ, ಜಿದ್ದುಗಳು ವ್ಯಕ್ತಿಯಲ್ಲಿ ಕೆಲಸ ಮಾಡುವ ಬಗೆಗೆ ಬೆರಗಾದೆ. ಕೋರ್ಟ್ ಆವರಣದೊಳಕ್ಕೆ ಬಂದಾಗ ಆಂಧ್ರ ಪೋಲೀಸರ ಜೀಪು ಧುತ್ತೆಂದು ಎದುರಾದಾಗ ತಲೆ ಕೊಡವಿಕೊಂಡು ಮೆಲುಕು ಹಾಕುವುದನ್ನು ನಿಲ್ಲಿಸಿದೆ. ನನ್ನನ್ನು ನೋಡಿದ ಆಂಧ್ರ ಪೋಲೀಸ್ ಅಧಿಕಾರಿಯೊಬ್ಬ ತನ್ನ ಮೀಸೆ ಮೇಲೆ ಕೈಹಾಕಿ ಮುಗುಳುನಕ್ಕ. ಹೊರಡುವಾಗ ಅಂದುಕೊಂಡ ಸಂಶಯ ಪುನಃ ಇಣುಕಿತು. "ನೀವು ಏನೇ ತಂತ್ರ ಹೂಡಿದರೂ ಬಾಬಯ್ಯನನ್ನು ಎಳೆದೊಯ್ದೇ ತೀರುತ್ತೇವೆ. ನೋಡಿ ಕೋರ್ಟ್‌ನಲ್ಲಿ ಬಾಬಯ್ಯ ಹಾಜರಾಗುತ್ತಾನೆ" ಎಂದು ಕುಟುಕಿದಂತೆ ಭಾಸವಾಗಿ ಸಣ್ಣದಾಗಿ ಬೆವರಿದೆ. ನಾವು ಮುಖ್ಯಮಂತ್ರಿಗಳಿಂದ ಶಿಫಾರಸ್ಸು ಮಾಡಿಸಿದ್ದೆಲ್ಲ ಇವನಿಗೇನು ತಿಳಿದಿರುತ್ತೆ. ಇವತ್ತು ಬಾಬಯ್ಯ ಹಾಜರಾಗುತ್ತಾನೆ ಕೋರ್ಟಿಗೆ ಎನ್ನುವ ಭ್ರಮೆಯಿಂದ ಹೀಗೆ ಬೀಗುತ್ತಿರಬಹುದು ಎಂದು ಸಮಾಧಾನ ಮಾಡಿಕೊಂಡೆ. ಮುಂಚೆಯೇ ಬಂದು ನನ್ನ ನಿರೀಕ್ಷೆಯಲ್ಲಿ ನಿಂತಿದ್ದ ನಂದನಾ ರೆಡ್ಡಿ ಸ್ವಲ್ಪ ಓಟದ ನಡಿಗೆಯಲ್ಲಿಯೇ ನನ್ನೆಡೆ ಧಾವಿಸಿ ಬಂದರು. "ಬಾಬಯ್ಯನವರನ್ನು ಕೋರ್ಟ್‌ಗೆ ಕರೆತರುತ್ತಿಲ್ಲ ತಾನೆ?" ಎಂದು ಅನುಮಾನದಿಂದ ಪ್ರಶ್ನಿಸಿದೆ. "ಅದು ಸಾಧ್ಯವೇ ಇಲ್ಲ. ಅದೆಲ್ಲ ವ್ಯವಸ್ಥೆ ಆಗಿರುವುದನ್ನು ಪುನಃ ಸಿ.ಎಂ.ಗೆ ಫೋನ್ ಮಾಡಿ ಕನ್‌ಫರ್ಮ್ ಆಯ್ತು" ಎಂದರು. ನನ್ನನ್ನು ಬಹಳಷ್ಟು ಪತ್ರಕರ್ತರು ಮುತ್ತಿಕೊಂಡರು. ಬಾಬಯ್ಯನವರನ್ನು ನೋಡಲು ಮತ್ತು ನನ್ನ ಆರ್ಗ್ಯುಮೆಂಟ್ ಕೇಳಲು ಜನ ಬಂದಿದ್ದರು. ಸ್ವಯಂ ಪ್ರೇರಣೆಯ ಹಿತೈಷಿಗಳು ನಮಗಾಗಿ ಸ್ಪಂದಿಸತೊಡಗಿದ್ದರು. ಬಾಬಯ್ಯನವರನ್ನು ಬಿಡಿಸುವುದರಲ್ಲಿ ತಾವೂ ಪಾತ್ರಧಾರಿಗಳಾಗಬೇಕೆನ್ನುವ, ತಮ್ಮ ಕೈಯಿಂದ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಬೇಕೆನ್ನುವ ಹುಮ್ಮಸ್ಸು ಅವರಲ್ಲಿ ಮೂಡಿತ್ತು. ನಮ್ಮನ್ನು ಸುತ್ತುವರಿದವರಲ್ಲೊಬ್ಬ ವ್ಯಕ್ತಿ "ಆಂಧ್ರ ಪೋಲೀಸರು ತಮ್ಮ ವ್ಯಾನ್ ಒಳಗೆ ವಿಡಿಯೋ ಕ್ಯಾಮೆರಾ ಇಟ್ಟುಕೊಂಡಿದ್ದಾರೆ. ನಿಮ್ಮನ್ನ ಯಾರು ಭೇಟಿಯಾಗ್ತಾರೆ, ಮಾತಾಡಿಸ್ತಾರೆ ಅದನ್ನೆಲ್ಲ ರೆಕಾರ್ಡ್ ಮಾಡಿಕೊಳ್ತಿದ್ದಾರೆ" ಎಂದ. ಆ ತಕ್ಷಣವೇ ನಂದನಾ ರೆಡ್ಡಿ ಸ್ಫೋಟಗೊಂಡು ಆಂಧ್ರ ಪೋಲೀಸರ ವ್ಯಾನ್ ಮುಂದೆ ಹೋಗಿ ನಿಂತು "ಬರೀ ವೀಡಿಯೋ ಅಷ್ಟೇ ಏಕೆ ಮಾಡಿಕೊಳ್ತಿದೀರಿ. ನನ್ನ ಮಾತುಗಳನ್ನೂ ರೆಕಾರ್ಡ್ ಮಾಡಿಕೊಳ್ಳಿ" ಎಂದು ನಿಂತಾಗ ನನ್ನೆದೆಯಾಳದಿಂದ ಹೆಮ್ಮೆ ತುಂಬಿ ಬಂದಿತು. ನಂದನಾ ರೆಡ್ಡಿ ಆ

ಸಂದರ್ಭದಲ್ಲಿ ಸಿಂಹಿಣಿಯಂತೆ ಕಂಡರು. ಹೆಣ್ಣಿನ ದಿಟ್ಟತನದ ಪರಿಪೂರ್ಣ ರೂಪ ಇದೇಯೇನೋ ಎನಿಸಿತು. ಗಂಡಸಿನ ಪೌರುಷಕ್ಕೆ ಯಾವ ದೃಷ್ಟಿಯಲ್ಲೂ ಕಮ್ಮಿಯಲ್ಲ ಎನಿಸಿ ಹುಬ್ಬೇರಿಸಿ ನಿಂತೆ.

ಎದೆಯುಬ್ಬಿಸಿಕೊಂಡು ಕೋರ್ಟ್ ಹಾಲ್ ಒಳಕ್ಕೆ ಹೋದ ಪೋಲೀಸರಿಗೆ ನಿರಾಶೆ ಕಾದಿತ್ತು. ಸೆಂಟ್ರಲ್ ಪ್ರಿಜನ್ ಸೂಪರಿಂಟೆಂಡೆಂಟ್, 'ಆರೋಪಿ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಪ್ರಿಜನ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಲಾಗಿದೆ. ಇನ್ನೊಂದು ವಾರದವರೆಗೆ ಚಿಕಿತ್ಸೆಯ ಆವಶ್ಯಕತೆಯಿದೆ' ಎಂದು ಬರೆದು ನಿವೇದಿಸಿಕೊಂಡಿದ್ದರು.

ನಂದನಾ ರೆಡ್ಡಿ ಕೋರ್ಟ್ ಹಾಲ್‌ನಲ್ಲಿಯೇ ತನ್ನ ಬೆರಳುಗಳನ್ನು 'V' ಸಂಕೇತ ಮಾಡಿ ನನ್ನತ್ತ ನೋಡಿದರು. ರಾಮಕೃಷ್ಣ ಹೆಗಡೆಯವರು ಮಾನವ ಹಕ್ಕುಗಳ ರಕ್ಷಣೆಗಾಗಿ ತಮ್ಮ ಅಧಿಕಾರ ಬಳಸಿ ಶಿಫಾರಸ್ಸು ಮಾಡಿದ್ದಕ್ಕಾಗಿ ಮೆಚ್ಚುಗೆಯ ಭಾವವುಕ್ಕಿ ಬಂದಿತು.

ಮಾರನೆಯ ದಿನ ಹೆರಾಲ್ಡ್, ಪ್ರಜಾವಾಣಿ, ಎಕ್ಸ್‌ಪ್ರೆಸ್, ಸಂಯುಕ್ತ ಕರ್ನಾಟಕ. ಪತ್ರಿಕೆಗಳು ಈ ಕೇಸಿನ ಬೆಳವಣಿಗೆ ಮತ್ತು ತಿರುವುಗಳ ಬಗ್ಗೆ ಬರೆದವು. 'ದಿ ವೀಕ್' ಮತ್ತು 'ಇಲ್ಲಸ್ಟ್ರೇಟೆಡ್ ವೀಕ್ಲಿ' ವಾರಪತ್ರಿಕೆಗಳು ವಿಶ್ಲೇಷಿಸಿದವು. ಈ ಕೇಸಿಗೆ ಸಾರ್ವಜನಿಕ ಹಿತಾಸಕ್ತಿಯ ಆಯಾಮವುಂಟಾಗಿತ್ತು. 'ಓದುಗರ ಪತ್ರಗಳು' ಕಾಲಮ್‌ಗಳಲ್ಲಿ ಬಾಬಯ್ಯನವರ ಮೇಲೆ ಪೋಲೀಸರು ನಡೆಸಿದ ದಬ್ಬಾಳಿಕೆ ಖಂಡಿಸಿ ಪತ್ರಗಳು ಪ್ರಕಟವಾದವು. ವಿದ್ಯಾರ್ಥಿನಿಯೊಬ್ಬಳು, ಯೂನಿವರ್ಸಿಟಿ ವಿದ್ಯಾರ್ಥಿಗಳ ಸಹಿ ಸಂಗ್ರಹಿಸಿ ಬಾಬಯ್ಯನವರ ಬಿಡುಗಡೆ ಮಾಡಿಸಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದಳು. ಶಿವಾಜಿನಗರದ ಅನೇಕ ಮುಸ್ಲಿಮರು ಬಾಬಯ್ಯನವರಿಗಾಗಿ ಯಾವಾಗ ಕರೆದರೂ ತಾವು ಬರುತ್ತೇವೆ ಎಂದು ಹೇಳಿದರು. ಬಹುಶಃ ಅವರೆಲ್ಲ ಆಟೋ ಡ್ರೈವರ್‌ಗಳಿರಬೇಕು. ಶಿವಾಜಿನಗರ ಪೋಲೀಸ್ ಗೋಲಿಬಾರ್ ಪ್ರಕರಣದಲ್ಲಿ ಕುಲಕರ್ಣಿ ಕಮೀಷನ್ ಎದುರಿಗೆ ಬಾಬಯ್ಯ ಮುಸ್ಲಿಮರ ಪರ ವಾದಿಸಿದ್ದರು. ಬಾಬಯ್ಯನವರ ಪತ್ನಿ ಮುಸ್ಲಿಮ್ ಎನ್ನುವ ಸಂಗತಿ ತಿಳಿದುದರಿಂದಲೋ ಏನೋ ಅವರಲ್ಲಿ ಕೆಲವರು ಬಹಳಷ್ಟು ಕಾಳಜಿ ವ್ಯಕ್ತಪಡಿಸತೊಡಗಿದರು. ಬಾಬಯ್ಯನವರ ಪತ್ನಿ ಖೈರುನ್ನೀಸಾಗೆ ಈ ಎಲ್ಲ ಬೆಂಬಲ, ಕಾಳಜಿಗಳು ಅವ್ಯಕ್ತ ಧೈರ್ಯವೊದಗಿಸಿದಂತೆನಿಸುತ್ತಿತ್ತು. ಕೋರ್ಟು, ಕಾನೂನುಗಳ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಮುಗ್ಧವಾಗಿ ಎಲ್ಲ ಜವಾಬ್ದಾರಿಯನ್ನು ನನ್ನ ಮೇಲೇ ಹೊರಿಸಿದ್ದರು.

ನಮಗೆ ಕಾಲಾವಕಾಶ ಬಹಳವಿರಲಿಲ್ಲ. ಒಂದು ವಾರದೊಳಗೆ ಹೈಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆದುಕೊಳ್ಳಬೇಕಾಗಿತ್ತು. ಅದೇ ಸಂದರ್ಭದಲ್ಲಿ TADA ಕಾನೂನಿನಡಿ ಹಾಕಲಾಗಿದ್ದ ಕೇಸನ್ನು ವಜಾ ಮಾಡಿಸಬೇಕಾಗಿತ್ತು. ಇದು ರದ್ದಾಗದಿದ್ದರೆ ಬಾಬಯ್ಯಗೆ ಬೇಲ್ ಅಸಂಭವವಾಗಿತ್ತು.

ಪಂಜಾಬ್ ಉಗ್ರಗಾಮಿಗಳನ್ನು ಹತ್ತಿಕ್ಕಲು TADA ಕಾನೂನನ್ನು ಪ್ರಯೋಗಿಸಲಾಗಿತ್ತು. ನನಗೆ ತಿಳಿದಂತೆ ಆ ಸಂದರ್ಭದಲ್ಲಿ ಆ ಕಾನೂನನ್ನು ಇತರ ಯಾವುದೇ ರಾಜ್ಯದಲ್ಲಿ ಪ್ರಯೋಗಿಸಲಾಗಿರಲಿಲ್ಲ. ದೇಶದಾದ್ಯಂತ ಎಡ ಮತ್ತು ಪ್ರಗತಿಪರ ಸಂಘಟನೆಗಳು TADA ಕಾನೂನಿನ ದುರ್ಬಳಕೆಯ ಸಾಧ್ಯತೆಗಳ ಬಗ್ಗೆ ವ್ಯಾಪಕ ಚರ್ಚೆ ಮತ್ತು ಪ್ರಚಾರಗಳನ್ನು ನಡೆಸಿದ್ದವು. ಆ ಕಾನೂನಿನ ದುರ್ಬಳಕೆಗೆ ಬಾಬಯ್ಯನವರ ಪ್ರಕರಣ ಜೀವಂತ ಸಾಕ್ಷಿಯಂತಾಗಿತ್ತು. ಇಂಗ್ಲಿಷ್ ಪತ್ರಿಕೆಗಳಲ್ಲಿ ಈ ಪ್ರಕರಣ ಪ್ರಕಟವಾದುದರಿಂದ ಬೇರೆ ರಾಜ್ಯಗಳ ಮತ್ತು ದೆಹಲಿಯ ಬುದ್ಧಿಜೀವಿಗಳ ಮಧ್ಯೆ ಈ ಪ್ರಕರಣ ಚರ್ಚೆಗೆ ಬಂದಿತು.

ಬಾಬಯ್ಯನವರ ಪರ ಡಾ. ಎಂ. ಚಿದಾನಂದಮೂರ್ತಿ, ಡಾ. ಜಿ. ರಾಮಕೃಷ್ಣ ಧ್ವನಿಯೆತ್ತಿದರು. ಚಿದಾನಂದಮೂರ್ತಿಯವರು ಬಾಬಯ್ಯನವರನ್ನು ಕಾಣಲು ಜೈಲ್‌ಗೆ ಹೋಗಿಬಂದುದು ಸುದ್ದಿಯಾಯಿತು. ಬಂಡಾಯ ಸಂಘಟನೆಯ ಬರಗೂರು ರಾಮಚಂದ್ರಪ್ಪನವರು ಬಾಬಯ್ಯನವರ ಮೇಲೆ ಪೊಲೀಸರು ನಡೆಸಿದ ದಬ್ಬಾಳಿಕೆಯನ್ನು ಪ್ರತಿಭಟಿಸಿದರು. 'ಸುದ್ದಿ ಸಂಗಾತಿ' ಪತ್ರಿಕೆಯ ಸಂಪಾದಕ ಇಂದೂಧರ ಹೊನ್ನಾಪುರ ಸಂಪಾದಕೀಯದಲ್ಲಿ ಖಂಡಿಸಿದರು. ಅಂತಿಮವಾಗಿ ಬಾಬಯ್ಯ ಪ್ರಕರಣ ಸಿಂಪೋಜಿಯಮ್‌ಗೆ ಒಂದು ವಸ್ತುವಾಗಿ ಮಾರ್ಪಟ್ಟಿತು.

ಶ್ರೀಮತಿ ಡೋನಾ ಫರ್ನಾಂಡೀಸ್, ನಂದನಾ ರೆಡ್ಡಿ, ಶ್ರೀಮತಿ ಕೊರಿಯನ್, ಮೋಹನ್ ಮತ್ತು ಇತರ ಗೆಳೆಯರೊಂದಿಗೆ ಸೇರಿ ಚರ್ಚಿಸುವಾಗ ಬಾಬಯ್ಯನವರ ಮೇಲೆ ಅಕ್ರಮವಾಗಿ TADA ಕೇಸ್ ಹಾಕಿದ್ದರ ಬಗ್ಗೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸುವ ಅಭಿಪ್ರಾಯ ಹೊರಬಿತ್ತು.

ಜನಪರ ಸಂಘಟನೆಗಳ ಜಂಟಿ ಆಶ್ರಯದಲ್ಲಿ ವಿಚಾರ ಸಂಕಿರಣವನ್ನು ತರಾತುರಿಯಲ್ಲಿ ಏರ್ಪಡಿಸುವ ವ್ಯವಸ್ಥೆಯೂ ಆಯಿತು. ಮುಖ್ಯ ಭಾಷಣಕಾರರನ್ನಾಗಿ ಸುಪ್ರೀಂಕೋರ್ಟ್ ನಿವೃತ್ತ ಜಸ್ಟಿಸ್ ವಿ.ಆರ್. ಕೃಷ್ಣ ಅಯ್ಯರ್ ಅವರನ್ನು ಕರೆಸುವುದೆಂದೂ ತೀರ್ಮಾನವಾಯಿತು. ಯು.ಆರ್. ಅನಂತಮೂರ್ತಿ ಮತ್ತು ಖಾದ್ರಿ ಶಾಮಣ್ಣನವರಿಗೆ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ತೀವ್ರ ಕಾಳಜಿ; ಆದರೂ ಅದೇಕೆ

ಈ ಸಂದರ್ಭದಲ್ಲಿ ಮೌನ ವಹಿಸಿದ್ದಾರೆ ಎಂದು ನಂದನಾ ರೆಡ್ಡಿ ಪತ್ರಿಕೆಯ ಸಂದರ್ಶನವೊಂದರಲ್ಲಿ ಪ್ರಶ್ನಿಸಿದರು. ಕರ್ನಾಟಕ ನಾಗರಿಕ ಹಕ್ಕು ರಕ್ಷಣಾ ಸಮಿತಿ ಬಾಬಯ್ಯನವರ ಪ್ರಕರಣದ ಬಗ್ಗೆ ತೋರುತ್ತಿರುವ ಅನಾಸ್ಥೆಯನ್ನೂ ತರಾಟೆಗೆ ತೆಗೆದುಕೊಂಡರು. ಈ ಸಮಿತಿಯ ಕೆಲವರು ಬಾಬಯ್ಯನವರನ್ನು ಸಂಘಟನೆಯಿಂದ ಕೈಬಿಡುವ ಮಾತಾಡಿದ್ದು ತಿಳಿದು ನಂದನಾ ರೆಡ್ಡಿ ಕೆಂಡವಾಗಿದ್ದರು. ರಾಜಕೀಯ ಆಕಾಂಕ್ಷೆಯಿಂದ ಇದೆಲ್ಲ ಮಾಡುತ್ತಿದ್ದಾಳೆ ನಂದನಾ ರೆಡ್ಡಿ ಎಂದು ಕೆಲವು ಕುತ್ಸಿತಮತಿಗಳು ಮಾತಾಡಿಕೊಂಡರು. ಏತನ್ಮಧ್ಯ ನಂದನಾ ರೆಡ್ಡಿ ಪೊಲೀಸ್ ಕಮೀಷನರ್ ಆಫೀಸ್‌ಗೆ ಮುತ್ತಿಗೆ ಹಾಕುವ ಹೋರಾಟ ನಡೆಸಿದರು. ಕಮೀಷನರ್ ಪಿ.ಜಿ. ಹರ್ಲಂಕರ್ ಜೊತೆ ನಂದನಾ ರೆಡ್ಡಿ ಜಗಳ ಮಾಡಿ "ನಗರದಲ್ಲೆಲ್ಲ ಪ್ರತಿನಿತ್ಯ ಬಾಬಯ್ಯನವರಿಗೆ ಚಿತ್ರಹಿಂಸೆ ಮಾಡುವುದಕ್ಕೆ ಆಂಧ್ರ ಪೊಲೀಸರಿಗೆ ಹೇಗೆ ಅವಕಾಶ ಕಲ್ಪಿಸಿಕೊಟ್ಟಿರಿ?" ಎಂದು ಜಟಾಪಟಿ ನಡೆಸಿದ್ದರು. ಹರ್ಲಂಕರ್ ಅವರು ಆ ಸಂದರ್ಭದಲ್ಲಿ ತಮ್ಮ ಆಡಳಿತವನ್ನು ಸಮರ್ಥಿಸಿಕೊಂಡರೂ ಏಳು ತಿಂಗಳ ನಂತರ, ಅಂದರೆ 1986ರ ನವೆಂಬರ್ 19ರಂದು, Indian Express ಜೊತೆ ಮಾತಾಡುತ್ತಾ "ಬಾಬಯ್ಯನ ವಿಷಯದಲ್ಲಿ ಪೊಲೀಸರು ನಡೆದುಕೊಂಡ ರೀತಿಯಿಂದ ಕರ್ನಾಟಕದ ಪೊಲೀಸರಿಗೆ ಕೆಟ್ಟ ಹೆಸರು ಬಂದಿದೆ" ಎಂದು ಒಪ್ಪಿಕೊಂಡರು. ಹೀಗೆ ಒಪ್ಪಿಕೊಳ್ಳುವ ಒತ್ತಡವಾಗಲೀ ಅನಿವಾರ್ಯತೆಯಾಗಲೀ ಇದ್ದಿರಲಿಲ್ಲ ಎನ್ನುವುದು ಗಮನಾರ್ಹ.

ಇಂಡಿಯನ್ ಎಕ್ಸ್‌ಪ್ರೆಸ್ ಆಫೀಸ್ ಎದುರಿಗಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಕಟ್ಟಡದಲ್ಲಿ ಸಿಂಪೋಜಿಯಮ್ ಏರ್ಪಾಟಾಯಿತು. ನಿವೃತ್ತ ಸರ್ವೋಚ್ಚ ನ್ಯಾಯಾಲಯದ ಜಸ್ಟಿಸ್ ವಿ.ಆರ್. ಕೃಷ್ಣ ಅಯ್ಯರ್ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡಿದ್ದರು.

ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶ ವಿ.ಆರ್. ಕೃಷ್ಣ ಅಯ್ಯರ್ ಅವರ ಅಧ್ಯಕ್ಷ ಭಾಷಣ ಕೇಳಲು ಜನ ಕಿಕ್ಕಿರಿದಿದ್ದರು. ಆ ದಿನ ನನ್ನನ್ನೂ ಒಬ್ಬ ಭಾಷಣಕಾರನಾಗಿ ನಿಗದಿಪಡಿಸಿದ್ದರು.

ಭಾರತ ಪ್ರಜಾತಂತ್ರ ದೇಶವಾಗಿದ್ದರೂ ನಾಗರಿಕ ಹಕ್ಕುಗಳು ಹೇಗೆ ದಮನಿಸಲ್ಪಡುತ್ತಿವೆಯೆಂದುಅಯ್ಯರ್ ಅವರು ಸುದೀರ್ಘವಾಗಿ, ಪ್ರಭಾವಕಾರಿಯಾಗಿ ಮಾತನಾಡಿದರು.

ನಾಗರಿಕ ಹಕ್ಕುಗಳ ಬಗ್ಗೆ ಸ್ವತಃ ನಾಗರಿಕರಿಗೆ ಪ್ರಜ್ಞೆಯಿಲ್ಲ. ಅದನ್ನು ಜಾಗೃತಗೊಳಿಸುವ ಚಟುವಟಿಕೆಗಳು ತೀರಾ ಕ್ಷೀಣವಾಗಿವೆ. ಅಲ್ಲೊಂದು ಇಲ್ಲೊಂದು ನಾಗರಿಕ ಹಕ್ಕು ರಕ್ಷಣಾ ಸಮಿತಿಗಳು ಕೆಲಸ ಮಾಡತೊಡಗಿದರೆ ಹೇಗೆ ದಮನಿಸುತ್ತಾರೆ

ಎನ್ನುವುದಕ್ಕೆ ಬಾಬಯ್ಯನವರ ಪ್ರಕರಣವೇ ಜೀವಂತ ಸಾಕ್ಷಿ ಎಂದು ನಾನು ಮಾತನಾಡಿದೆ. ಪತ್ರಿಕೆಗಳೂ ಈ ಸಿಂಪೋಜಿಯಮ್‌ಗೆ ಪ್ರಾಶಸ್ತ್ಯ ನೀಡಿ ಪ್ರಕಟಿಸಿದವು. ಕೃಷ್ಣ ಅಯ್ಯರ್ ಅವರ ಸಂದರ್ಶನವನ್ನೂ ವಿಶೇಷವಾಗಿ ಪ್ರಕಟಿಸಿದವು. ಬೆಂಗಳೂರಿನ ಪ್ರಜ್ಞಾವಂತರ ಮಧ್ಯೆ ಬಾಬಯ್ಯನವರ ಪರ ಅಭಿಪ್ರಾಯ ದಟ್ಟಗೊಳ್ಳತೊಡಗಿತು. ಏತನ್ಮಧ್ಯೆ ಹೈಕೋರ್ಟಿನಲ್ಲಿ ಬೆಂಗಳೂರು ನಗರ ಪೊಲೀಸರು ಟಾಡಾ ಕಾಯ್ದೆಯ ಸಂಬಂಧ ನಡೆಸುತ್ತಿದ್ದ ತನಿಖೆಯನ್ನು ಅನೂರ್ಜಿತಗೊಳಿಸಲು ಅರ್ಜಿ ಸಲ್ಲಿಸಿದ್ದೆ. ಕರ್ನಾಟಕ ಸರ್ಕಾರ ಟಾಡಾ ಕಾಯ್ದೆಯನ್ನು ಜಾರಿಗೊಳಿಸಲು ಅಧಿಸೂಚನೆ ಹೊರಡಿಸಿರಲಿಲ್ಲ. ರಾಜ್ಯದ ಯಾವ ಯಾವ ಭಾಗಗಳಲ್ಲಿ ಅದನ್ನು ಬಳಸಬೇಕೆಂದು ಸೂಚಿಸಿರಲಿಲ್ಲ. ವಿಶೇಷ ನ್ಯಾಯಾಲಯವನ್ನು ಗೊತ್ತುಪಡಿಸಿರಲಿಲ್ಲ. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನ್ನೂ ನೇಮಕ ಮಾಡಿರಲಿಲ್ಲ. ನನ್ನ ವಾದದಲ್ಲಿ ಇವೆಲ್ಲ ಬಿಂಬಿತವಾಗಿ ಹೈಕೋರ್ಟ್ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಬಾಬಯ್ಯರ ವಿರುದ್ಧ ದಾಖಲಾಗಿದ್ದ ಕ್ರೈಂನಿಂದ ಟಾಡಾ ಆರೋಪವನ್ನು ಕೈಬಿಡುವಂತೆ ಆದೇಶಿಸಿತು. ಇದರಲ್ಲಿ ಬಾಬಯ್ಯರ ಪರವಾಗಿ ಜಾಮೀನಿನ ಮೇಲೆ ಬಿಡುವಂತೆ ಸೆಷನ್ಸ್ ಕೋರ್ಟಿನಲ್ಲಿ ಅರ್ಜಿ ಹಾಕಿಕೊಂಡೆ. ನಿರಾಯಾಸವಾಗಿ ಜಾಮೀನು ಪಡೆದೆ. ಷೂರಿಟಿ ಕೊಟ್ಟರೆ ಅದೇ ದಿನ ಬಾಬಯ್ಯ ಜೈಲಿನಿಂದ ಹೊರಗೆ ಬರುತ್ತಿದ್ದರು. ನನಗೆ ಅದಾಗಬಾರದಿತ್ತು. ಆಂಧ್ರಪ್ರದೇಶದ ಹೈದರಾಬಾದಿನ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಸಿಗುವವರೆಗೆ ಬಾಬಯ್ಯರನ್ನು ಜೈಲಿನಿಂದ ಹೊರತರದ ನಿರ್ಧಾರ ಮಾಡಿದ್ದೆ. ಕೋರ್ಟಿನಲ್ಲಿ TADA ಕಾಯ್ದೆಯಡಿ ಹೂಡಲ್ಪಟ್ಟಿದ್ದ ಕೇಸು ಧೂಳೀಪಟವಾಗಿದ್ದು ನಮ್ಮ ಯಶಸ್ಸಿಗೆ ಗರಿಯೇರಿಸಿದಂತಾಗಿತ್ತು. ಹೀಗೆ ಕೋರ್ಟ್ ಹೊರಗೆ ಮತ್ತು ಒಳಗೆ ನಮ್ಮ ಪರ ವಾತಾವರಣ ಸೃಷ್ಟಿಯಾಗಿತ್ತು. ಕೋರ್ಟಿನಲ್ಲಿ ಪೊಲೀಸರು ಎಕ್ಸ್‌ಪೋಜ್ ಆಗಿದ್ದರು. ಕೇಸನ್ನು ಹಾಕುವಾಗ ಪೊಲೀಸರು ತೋರಿಸಿದ್ದ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯ ಕುರಿತು ಜಸ್ಟಿಸ್ ಆರ್.ಜಿ. ದೇಸಾಯಿ ಅಸಮಾಧಾನ ವ್ಯಕ್ತಪಡಿಸಿದ್ದರು.

ನಿರೀಕ್ಷಣಾ ಜಾಮೀನಿಗಾಗಿ ಹಾಕಿಕೊಂಡ ಅರ್ಜಿ ವಿಚಾರಣೆಗೆ ಬಂದಾಗ ಬಹಿರಂಗವಾಗಿ ಕೋರ್ಟಿನಲ್ಲಿಯೇ ಆಂಧ್ರದ ಪೊಲೀಸ್ ಅಧಿಕಾರಿ ತಿರುಗಿಬಿದ್ದ. ನಾನು ವಾದ ಮಾಡುತ್ತಾ ಒಂದು ಹಂತದಲ್ಲಿ "ಆಂಧ್ರದ ಪೊಲೀಸರು ಕೊಲೆಗಡುಕತನದಲ್ಲಿ ದೇಶಕ್ಕೆ ಕುಖ್ಯಾತರಾಗಿದ್ದಾರೆ. ಅವರು ವಿಶ್ವಾಸಘಾತಕರು. ಯಾವ ಸಂದರ್ಭದಲ್ಲೂ ಬಾಬಯ್ಯನವರನ್ನು ಅವರ ಮುಷ್ಟಿಗೆ ಒಪ್ಪಿಸತಕ್ಕದ್ದಲ್ಲ..." ಎಂದು ವಾದ ಮಾಡುತ್ತಿರುವಾಗಲೇ ಆಂಧ್ರದ ಪೊಲೀಸ್ ಅಧಿಕಾರಿ ಸ್ಫೋಟಗೊಂಡು, "ಇಂಥ ಹಿಯ್ಯಾಳಿಕೆಗೆ ಕೋರ್ಟ್ ಅವಕಾಶ ಕೊಡಬಾರದು" ಎಂದ. ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ಅಧಿಕಪ್ರಸಂಗಿಯಂತೆ ಮೂಗು ತೂರಿಸಿದ ಆ

ಅಧಿಕಾರಿಗೆ ಜಡ್ಜ್ ಛೀಮಾರಿ ಹಾಕಿ ಕೂರಿಸಿದರು. ನನ್ನ ವಾದ ಕೇಳಿದ ಜಸ್ಟಿಸ್ ದೇಸಾಯಿಯವರು ಬಾಬಯ್ಯನವರಿಗೆ ನಿರೀಕ್ಷಣಾ ಜಾಮೀನು ನೀಡಿಬಿಟ್ಟರು!

ನಾನು ಕೋರ್ಟ್ ಹಾಲ್‌ನಿಂದ ಹೊರಬಂದಾಗ ಬಾಬಯ್ಯನವರ ರಕ್ಷಣಾ ಪಡೆ ಕೇಕೆ ಹಾಕುವುದೊಂದನ್ನು ಬಾಕಿಯುಳಿಸಿತು. ಇದನ್ನೆಲ್ಲಾ ನೋಡಿದ ಆಂಧ್ರದ ಪೊಲೀಸ್ ಅಧಿಕಾರಿ ಹಲ್ಲು ಕಡಿಯತೊಡಗಿದ. ಆಂಧ್ರ ಪೊಲೀಸರ ಕ್ರೋಧ ಬಾಬಯ್ಯನವರನ್ನು ಬಿಟ್ಟು ನನ್ನೆಡೆಗೆ ತಿರುಗಿದಂತಾಗಿತ್ತು.

ನಿರೀಕ್ಷಣಾ ಜಾಮೀನು ದೊರೆತ ಉತ್ಸಾಹ ಬಹಳ ಹೊತ್ತು ಉಳಿಯಲಿಲ್ಲ. ಜಾಮೀನಿನ ಆದೇಶದ ಕಾಪಿ ಸಿಕ್ಕೊಡನೆ ಅದರಲ್ಲಿಯ ಷರತ್ತುಗಳನ್ನು ಓದಿ ಸುಸ್ತಾಗಿಬಿಟ್ಟೆವು.

ಒಂದನೆಯದಾಗಿ, ಬಾಬಯ್ಯ ಹೈದ್ರಾಬಾದ್‌ಗೆ ಹೋಗಿ ಅಲ್ಲಿ ಪೊಲೀಸರ ಮುಂದೆ ಹಾಜರಾಗಬೇಕು. ಆಗ ಅವರು ಅರೆಸ್ಟ್ ಮಾಡುತ್ತಾರೆ. ಆಗ ಈ ನಿರೀಕ್ಷಣಾ ಜಾಮೀನು ಆದೇಶವನ್ನು ಹಾಜರುಪಡಿಸಬೇಕು ಮತ್ತು ಎರಡನೆಯದಾಗಿ, ಜಾಮೀನು ಪಡೆದಾದ ನಂತರವೂ ಆಂಧ್ರದ ಪೊಲೀಸರು ಯಾವ್ಯಾವಾಗ ಬಯಸುವರೋ ಆಗಾಗ ಹೋಗಿ ಅವರ ಮುಂದೆ ಹಾಜರಾಗಿ ಅವರ ವಿಚಾರಣೆಗೆ ಸಹಕರಿಸಬೇಕು!

ಮೇಲೆ ನೋಡಲು ನಮಗೆ ನಿರೀಕ್ಷಣಾ ಜಾಮೀನು ಸಿಕ್ಕಂತಾಗಿದ್ದರೂ ಆ ಆದೇಶದಿಂದ ಗೆಲುವು ಆಂಧ್ರ ಪೊಲೀಸರದೇ ಆಗಿಬಿಟ್ಟಿತ್ತು. ಆಂಧ್ರ ಪೊಲೀಸರ ಮುಖದಲ್ಲಿ ಮುಗುಳ್ನಗೆಯಾಡತೊಡಗಿತ್ತು.

ಸಿಂಪೋಜಿಯಮ್ ಮುಗಿದ ಮೇಲೆ ತಾವಿಳಿದುಕೊಂಡಿದ್ದ ಅಶೋಕ ಹೋಟೆಲ್‌ಗೆ ಹೊರಟು ನಿಂತರು ಕೃಷ್ಣ ಅಯ್ಯರ್. 'ಕೇಸ್ ಫೈಲ್ ತನ್ನಿ ಅಲ್ಲಿಯೇ ರೂಮಲ್ಲಿ ಚರ್ಚೆ ಮಾಡೋಣ' ಎಂದು ನನಗೆ ಹೇಳಿದರು.

ನಾನು ಆಫೀಸಿಗೆ ಹೋಗಿ ಫೈಲ್ ತೆಗೆದುಕೊಂಡು ಅಶೋಕ ಹೋಟೆಲ್‌ಗೆ ಹೋದೆ. ನಿಧಾನವಾಗಿ ಎಲ್ಲವನ್ನು ಪರಿಶೀಲಿಸಿದರು. ತಮಗೆ ಯಾವ ಯಾವ ಡಾಕ್ಯುಮೆಂಟ್‌ಗಳು ಬೇಕು ಎಂದು ಒಂದು ಪಟ್ಟಿ ಮಾಡಿಕೊಟ್ಟರು.

ವಿಮಾನ ನಿಲ್ದಾಣಕ್ಕೆ ಹೋಗಿ ಅವರು ಕೇಳಿದ ಪೇಪರ್‌ಗಳನ್ನೆಲ್ಲ ಕೊಟ್ಟೆ. ಅವರು ಹೋಗಿ ಬರುವುದಾಗಿ ಕೈ ಬೀಸಿದರು. ಕೃಷ್ಣ ಅಯ್ಯರ್ ಅವರೇ ನಮಗೆ ಕೊನೆಯ ಆಶ್ರಯ ಮತ್ತು ಆಶ್ವಾಸನೆ ಎರಡೂ ಆಗಿದ್ದರು.

ಕೃಷ್ಣ ಅಯ್ಯರ್ ಅವರು ತಮಗೆ ಬೇಕಾದ ವಕೀಲರೊಬ್ಬರ ಕಡೆಯಿಂದ ಕರ್ನಾಟಕ ಹೈಕೋರ್ಟ್ ಬಾಬಯ್ಯನವರಿಗೆ ನಿರೀಕ್ಷಣಾ ಜಾಮೀನು ಕೊಟ್ಟಾಗ ಹಾಕಿದ್ದ ಷರತ್ತುಗಳನ್ನು ಮಾರ್ಪಾಡು ಮಾಡಿಸಲು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಾಕಿಸಿದರು. ಅಷ್ಟೇ ಬೇಗ ಅದು ಸಿಕ್ಕಿಯೂ ಬಿಟ್ಟಿತು! ಕರ್ನಾಟಕ ಹೈಕೋರ್ಟ್ ಹಾಕಿದ್ದ ಷರತ್ತುಗಳನ್ನು ಮಾರ್ಪಾಟು ಮಾಡಿತು. ಅದರಂತೆ ಯಾವ ಕಾರಣಕ್ಕೂ ಪೊಲೀಸರು ಆಂಧ್ರಕ್ಕೆ ಬಾಬಯ್ಯನವರನ್ನು ಕರೆಸಿಕೊಳ್ಳುವಂತಿಲ್ಲ. ಹಾಗೊಂದು ವೇಳೆ ಬಾಬಯ್ಯನವರನ್ನು ವಿಚಾರಣೆ ಮಾಡುವುದೇ ಇದ್ದಲ್ಲಿ, ಆಂಧ್ರ ಪೊಲೀಸರೇ ಬೆಂಗಳೂರಿಗೆ ಬರಬೇಕು. ಬಂದು ಕರ್ನಾಟಕದ ಬೆಂಗಳೂರು ಪೊಲೀಸ್ ಕಮೀಷನರ್ ಸಮಕ್ಷಮದಲ್ಲಿ ವಿಚಾರಣೆ ಮಾಡಿಕೊಂಡು ಹೋಗಬೇಕು! ಇದು ಕರ್ನಾಟಕ ಹೈಕೋರ್ಟಿನ ಷರತ್ತುಗಳಿಗೆ ಪ್ರತಿ ಷರತ್ತು ಹಾಕಿದಂತಿತ್ತು!

ಸುಪ್ರೀಂಕೋರ್ಟ್‌ನಲ್ಲಿ ಅಷ್ಟೊಂದು ಪರಿಶ್ರಮಪಟ್ಟು ಜಾಮೀನು ಆದೇಶ ದೊರಕಿಸಿಕೊಟ್ಟ ಆ ಮಹಾನುಭಾವ ಯಾರು ಎಂದು ನಮಗ್ಯಾರಿಗೂ ಗೊತ್ತಾಗಲೇ ಇಲ್ಲ. ಆ ಲಾಯರ್ ಫೀಜು ಇಲ್ಲದೆ ಈ ಕೆಲಸ ಮಾಡಿಕೊಟ್ಟಿದ್ದ. ಇದೆಲ್ಲ ಕೃಷ್ಣ ಅಯ್ಯರ್ ಅವರು ಮಾನವ ಹಕ್ಕುಗಳ ಬಗ್ಗೆ ಇರಿಸಿಕೊಂಡಿದ್ದ ಕಾಳಜಿಯ ಫಲಶ್ರುತಿಯಾಗಿತ್ತು. ನಾವು ಸ್ನೇಹಿತರೆಲ್ಲ ಸೇರಿ ಕೃಷ್ಣ ಅಯ್ಯರ್ ಅವರಿಗೆ ಫೋನ್ ಮಾಡಿ ಅಭಿನಂದನೆಗಳನ್ನು ತಿಳಿಸಿದೆವು.

ತಾ. 23.7.86 ರಂದು ಬಾಬಯ್ಯನವರನ್ನು ಜೈಲ್‌ನಿಂದ ಹೊರಗೆ ಬಿಡಿಸಿಕೊಂಡೆ. ಅರೆಸ್ಟ್ ಆಗಿದ್ದು ಏಪ್ರಿಲ್ 23 ರಂದು. ಬಿಡುಗಡೆಯ ದಿನಕ್ಕೆ ಸರಿಯಾಗಿ ತೊಂಬತ್ತು ದಿನಗಳಾಗಿದ್ದವು. ಬಾಬಯ್ಯ ಸೆರೆಮನೆಯಿಂದ ಹೊರಬಂದ ಕೂಡಲೇ ನಾನು ಚಿಕ್ಕಮಗುವಿಗೆ ಒಂದು ಜೊತೆ ಬಟ್ಟೆ ಖರೀದಿಸಬೇಕು ಎಂದು ಚಡಪಡಿಸತೊಡಗಿದರು. ನಂತರ ಗೊತ್ತಾಯಿತು: ಜೈಲ್ ಒಳಗೆ ಗಣೇಶ್ ಎನ್ನುವ ಖೈದಿಯ ಜೊತೆಗೆ ಬಾಬಯ್ಯನವರ ಗೆಳೆತನ ತೀವ್ರವಾಗಿ ಬೆಳೆದಿತ್ತು. ಗಣೇಶ್ ತನ್ನ ಚಿಕ್ಕಮಗಳಿಗಾಗಿ ಒಂದು ಜೊತೆ ಬಟ್ಟೆ ಕಳಿಸಿಕೊಡಬೇಕು ಎಂದು ವಿನಂತಿಸಿಕೊಂಡು ಬಾಬಯ್ಯನವರಿಗೆ ತನ್ನ ಮನೆಯ ವಿಳಾಸ ಕೊಟ್ಟಿದ್ದ.

ಪೊಲೀಸರಿಂದ ಅನುಭವಿಸಿದ ಚಿತ್ರಹಿಂಸೆ, ತೊಂಬತ್ತು ದಿನಗಳ ಜೈಲ್ ಅನುಭವ ಎಲ್ಲ ಮರೆತು ಗಣೇಶನ ಮಗಳಿಗೆ ಬಟ್ಟೆ ಕೊಡಿಸುವ ಹುಮ್ಮಸ್ಸಿನಲ್ಲಿದ್ದರು. ಈಗಾಗಿದ್ದೆ ಸಾಕು ಬೇಕಾಗಿದೆ, ಮತ್ತೇಕೆ ಖೈದಿಯ ಸಂಪರ್ಕ, ಗೆಳೆತನ ಎನ್ನುವ ಮಧ್ಯಮ ವರ್ಗದ ಅತಿಜಾಗ್ರತಿ ಅವರಲ್ಲಿ ಕಾಣಲಿಲ್ಲ. ಬಾಬಯ್ಯನವರ ವ್ಯಕ್ತಿತ್ವದ ಮಹತ್ವ ಇರುವುದೇ ಇಲ್ಲಿ ಎನಿಸದಿರಲಿಲ್ಲ!

ಬಾಬಯ್ಯನವರ ಮೇಲೆ Arms Act ಅಡಿಯಲ್ಲಿ ಹೂಡಲ್ಪಟ್ಟಿದ್ದ ಕೇಸು ಮಾತ್ರ ಉಳಿದುಕೊಂಡಿತು. ಅದು ಆರೇಳು ವರ್ಷಗಳವರೆಗೆ ನಡೆದು ಅವರು ಆರೋಪದಿಂದ ಮುಕ್ತರೂ ಆದರು. ಏತನ್ಮಧ್ಯೆ ಉನ್ನತ ವ್ಯಾಸಂಗಕ್ಕಾಗಿ ಬಾಬಯ್ಯ ಇಂಗ್ಲೆಂಡ್‌ಗೆ ಹೋದರು. ಆಗ ಕೋರ್ಟ್ ಅನುಮತಿ ಕೊಟ್ಟರೂ ಪೋಲೀಸರು ಕಿರಿಕಿರಿ ಮಾಡಿದರು. ಆಗಲೂ ನಂದನಾ ರೆಡ್ಡಿ ಬಾಬಯ್ಯನವರ ಸಹಾಯಕ್ಕೆ ನಿಂತರು.

ಬಾಬಯ್ಯನವರ ಜೀವ ರಕ್ಷಿಸುವ ಹೋರಾಟದಲ್ಲಿ ಗೆದ್ದ ತೃಪ್ತಿಯ ಜೊತೆಗೆ ನನ್ನ ವೃತ್ತಿಗೆ ಸಂಬಂಧಿಸಿದ ಅನೇಕ ಪಾಠ ಮತ್ತು ಅನುಭವಗಳು ದಕ್ಕಿದ ಸಂತೋಷ ನನ್ನಲ್ಲಿ ತೇಲಾಡಿತು.

76

ಆಗದ ರೇಪ್‌ಗೆ ಆದ ವಿಚಾರಣೆ

ಒಂದು ಸಂಜೆ ಕೋರ್ಟಿನಿಂದ ಬರುವಷ್ಟರಲ್ಲಿ ಆಫೀಸ್ ಮುಂದೆ ಮೂವರು ನನಗಾಗಿ ಕಾಯುತ್ತ ನಿಂತಿದ್ದರು. ಈ ಮೂವರಲ್ಲಿ ಒಬ್ಬಳು ಮಹಿಳೆಯಿದ್ದಳು. ಆಜಾನುಬಾಹುವಾದ ಈ ಮಹಿಳೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಡಾ. ಬೆಲ್ಲದ್ ಅವರ ಪತ್ನಿ ರಮಾ ಭಂಡಾರಿಯೆಂದು ತಿಳಿಯಿತು.

ವಿಕ್ಟೋರಿಯಾ ಆಸ್ಪತ್ರೆಯ ಫೊರೆನ್ಸಿಕ್ ಮೆಡಿಸಿನ್ ಡಿಪಾರ್ಟ್‌ಮೆಂಟಿನ ಡಾ. ಪಾಟೀಲ್ ಜೊತೆಗೂಡಿ ಬಂದಿದ್ದರು. ವಿಕ್ಟೋರಿಯಾದಲ್ಲಿದ್ದ ಸೀನಿಯರ್ ಡಾಕ್ಟರ್ ಬಿ.ಸಿ. ಚಂದ್ರೇಗೌಡರ ಪರಿಚಯ ಹೇಳಿಕೊಂಡರು. ಚಂದ್ರೇಗೌಡರು ನನಗೆ ಚೆನ್ನಾಗಿ ಗೊತ್ತಿರುವ ವ್ಯಕ್ತಿ. ರಮಾ ಭಂಡಾರಿಯವರು ಧಾರವಾಡದ ನರ್ಸ್ ಮತ್ತು ಮಿಡ್‌ವೈಫ್ ಟ್ರೈನಿಂಗ್ ಸೆಂಟರ್‌ನ ಪ್ರಿನ್ಸಿಪಾಲ್ ಎಂದೂ ಅವರ ಮೇಲೆ ಅವರ ವಿದ್ಯಾರ್ಥಿಯೋರ್ವಳು ಗುರುತರ ಅಪವಾದ ಹೊರಿಸಿ ಕಂಪ್ಲೇಂಟ್ ಕೊಟ್ಟಿರುವುದಾಗಿಯೂ ಗೊತ್ತಾಯಿತು.

ನರ್ಸ್ ಟ್ರೈನಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿದ್ದ ಸುಲೋಚನಾ

ಎನ್ನುವ ವಿದ್ಯಾರ್ಥಿನಿ 7.2.87ರಂದು ಪೋಲೀಸರಿಗೆ ಕಂಪ್ಲೇಂಟ್ ನೀಡಿದ್ದರ ಸಾರಾಂಶ :

1986 ಸೆಪ್ಟೆಂಬರ್ ತಿಂಗಳಿನಲ್ಲಿ ಒಂದು ದಿನ ನನ್ನನ್ನು ಸಂಜೆಯ ಹೊತ್ತು ಮನೆಗೆ ಕರೆದರು. ನಾನು ಹೋದೆ. ಪಾತ್ರೆಗಳನ್ನು ತೊಳಿ ಎಂದರು. ತೊಳೆದೆ. ಇತರ ಕೆಲಸಗಳನ್ನೂ ಮಾಡಿ ಮುಗಿಸಿದೆ.

ಅಷ್ಟೊತ್ತಿಗೆ ರಾತ್ರಿಯಾಗಿತ್ತು. ಹೊರಡಲೆ ಮೇಡಮ್ ಎಂದು ಕೇಳಿದೆ. ಅದಕ್ಕೆ ಅವರು ಇನ್ನೂ ಸ್ವಲ್ಪ ಹೊತ್ತು ಇರು, ಟಿವಿ ನೋಡು ಬೇಜಾರಾದರೆ ಎಂದರು. ಇದಾಗಿ ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಪುರುಷ ಪ್ರಿನ್ಸಿಪಾಲ್ ರಮಾ ಭಂಡಾರಿಯವರ ಮನೆಯೊಳಕ್ಕೆ ಬಂದ. ಬಂದವನೇ ನೇರ ಬೆಡ್‌ರೂಮಿನೊಳಕ್ಕೆ ಹೋದ. ಅವನು ಹೋಗಿ ಎರಡು ನಿಮಿಷಗಳಾಗಿರಬಹುದು. ಅದೇ ರೂಮಲ್ಲಿ ಹೋಗಿ ಏನೋ ಒಂದು ವಸ್ತುವನ್ನು ತಂದುಕೊಡಬೇಕೆಂದು ಪ್ರಿನ್ಸಿಪಾಲ್ ಹೇಳಿದರು. ಅದರಂತೆ ನಾನು ಆ ಪುರುಷನಿದ್ದ ರೂಮೊಳಕ್ಕೆ ಹೋದೆ. ನಾನು ಒಳ ಹೋದದ್ದೇ ತಡ ಪ್ರಿನ್ಸಿಪಾಲ್ ಹೊರಗಿನಿಂದ ಚಿಲಕ ಹಾಕಿಕೊಂಡುಬಿಟ್ಟರು. ನನಗೆ ಗಾಬರಿಯಾಯಿತು. ಕೂಗಬೇಕೆಂದುಕೊಂಡು ಬಾಯಿ ತೆರೆದೆ. ಕೂಡಲೇ ಆ ಪುರುಷ ನನ್ನ ಬಾಯಿಯನ್ನು ತನ್ನ ಕೈಯಿಂದ ಮುಚ್ಚಿ ಅದುಮಿ ಹಿಡಿದುಬಿಟ್ಟ. ನನಗೆ ಉಸಿರೇ ಕುಸಿದಂತಾಯಿತು. ಹಾಗೆಯೇ ಅವನು ನನ್ನನ್ನು ರೇಪ್ ಮಾಡಿಬಿಟ್ಟ. ನಂತರ ರಮಾ ಭಂಡಾರಿ 'ನೀನು ಇದನ್ನು ಯಾರ ಮುಂದಾದರೂ ಹೇಳಿದರೆ ನಿನ್ನದೇ ಮರ್ಯಾದೆ ಹೋಗುತ್ತದೆ' ಎಂದು ಹೆದರಿಸಿದರು. ನನಗೆ ಏನೂ ತಿಳಿಯದಂತಾಗಿ ಸುಮ್ಮನಾಗಿಬಿಟ್ಟೆ. ಆ ತಿಂಗಳು ನಾನು ಮುಟ್ಟಾಗಲಿಲ್ಲ. ಭಯವಾಗಿ ಪ್ರಿನ್ಸಿಪಾಲ್ ಎದುರು ಹೇಳಿದೆ. ಅದಕ್ಕೇನೂ ಚಿಂತೆ ಮಾಡಬೇಡ ಎಂದು ಸಮಾಧಾನಪಡಿಸಿದರು. ಇದಾಗಿ ನಾಲ್ಕು ತಿಂಗಳ ನಂತರ ಅಂದರೆ 17.1.87ರಂದು ದಾಂಡೇಲಿಯ ಆಸ್ಪತ್ರೆಯಲ್ಲಿ ನನಗೆ ಅಬಾರ್ಷನ್ ಮಾಡಿಸಿದರು. ಅಬಾರ್ಷನ್ ಅನ್ನು ಡಾ. ಬೈಕೋಡ್ ಎನ್ನುವವರು ಮಾಡಿದರು. ಅವರ ಬಳಿಗೆ ನನ್ನನ್ನು ರಮಾ ಭಂಡಾರಿಯವರು ತಮ್ಮ ಸಹೋದರಿ ಪ್ರೇಮಾಬಾಯಿಯವರ ಮೂಲಕ ಕಳಿಸಿದರು. ಪ್ರೇಮಾಬಾಯಿ ಅಬಾರ್ಷನ್ ಮಾಡಿಸುವಾಗ ಆಸ್ಪತ್ರೆಯ ದಾಖಲಾತಿಯಲ್ಲಿ ನನ್ನ ಹೆಸರನ್ನು ಶಾಂತಾ ಕೃಷ್ಣೇಗೌಡ ಎಂದು ಬರೆಸಿದರು.

ಸುಲೋಚನಾಳ ಈ ದೂರಿನ ಹೇಳಿಕೆಯ ಆಧಾರಗಳ ಮೇಲೆ ಧಾರವಾಡ ಟೌನ್ ಪೋಲೀಸರು ರೇಪ್ ಮಾಡಿದ ಅಪರಿಚಿತ ವ್ಯಕ್ತಿಯ ವಿರುದ್ಧ ದಂಡಸಂಹಿತೆಯ 376ನೇ ಸೆಕ್ಷನ್ ಅಡಿಯಲ್ಲಿ ರೇಪ್ ಕೇಸ್ ಅನ್ನೂ ಮತ್ತು

ರಮಾ ಭಂಡಾರಿಯವರ ಮೇಲೆ ಅಬೆಟ್‌ಮೆಂಟ್ ಆಫ್ ರೇಪ್ ಆರೋಪಣಾ ಪಟ್ಟಿಯನ್ನೂ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಸಲ್ಲಿಸಿದರು. ಅನಂತರ ಅದು ಧಾರವಾಡ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಗಣೇಶ್‌ರಾವ್‌ರವರ ಮುಂದೆ ವಿಚಾರಣೆಗೆ ಬಂತು. ಸುಲೋಚನಾ ಕಂಪ್ಲೇಂಟ್ ಕೊಟ್ಟ ದಿವಸವೇ ಆಕೆಯನ್ನು ಡಿಸ್ಟ್ರಿಕ್ಟ್ ಆಸ್ಪತ್ರೆಗೆ ತಪಾಸಣೆಗಾಗಿ ಅಡ್ಮಿಟ್ ಮಾಡಿದರು. ಅಡ್ಮಿಟ್ ಆದ ಸುಲೋಚನಾ ಆರೋಗ್ಯ ತಪಾಸಣೆಯನ್ನು ಡಾ. ಇಂದಿರಾ ಎನ್ನುವ ಅಸಿಸ್ಟೆಂಟ್ ಸರ್ಜನ್ ಅವರು ಮಾಡಿದರು. ಸುಲೋಚನಾಳಿಗೆ ಇತ್ತೀಚೆಗೆ ಗರ್ಭಪಾತವಾದದ್ದು ನಿಜ ಎಂದು ತಪಾಸಣಾ ವರದಿಯನ್ನು ಡಾ. ಇಂದಿರಾ ನೀಡುತ್ತಾರೆ. ಅದೇ ಸಂದರ್ಭದಲ್ಲಿ ಸುಲೋಚನಾ ನೀಡಿದ ಮತ್ತೊಂದು ಹೇಳಿಕೆಯನ್ನು ದಾಖಲಿಸಿಕೊಳ್ಳುತ್ತಾರೆ ಡಾ. ಇಂದಿರಾ. ಅದು: ತಾ. 10.9.86ರಂದು ನಾನು ಕೊನೆಯದಾಗಿ ಮುಟ್ಟಾದೆ ಎಂದಾಗಿತ್ತು.

'ಧಾರವಾಡದ ಜಿಲ್ಲಾ ಸಿವಿಲ್ ಸರ್ಜನ್‌ರಿಗೆ ವೈಯಕ್ತಿಕವಾಗಿ ನನ್ನ ಮೇಲೆ ದ್ವೇಷವಿದೆ. ಅದನ್ನು ಸಾಧಿಸಲು ನನ್ನ ಮೇಲೆ ನನ್ನ ವಿದ್ಯಾರ್ಥಿನಿಯನ್ನೇ ಎತ್ತಿಕಟ್ಟಿ ಈ ನಾಟಕ ನಡೆಸಿದ್ದಾರೆ' ಎಂದು ರಮಾ ಭಂಡಾರಿ ಕಣ್ಣಲ್ಲಿ ನೀರು ತಂದುಕೊಂಡರು.

ಕೇಸಿನ ವಿವರಗಳನ್ನು ಕೇಳಿದ ಕೂಡಲೇ ಸ್ವತಃ ನನಗೇ ರಮಾ ಭಂಡಾರಿಯವರ ಮೇಲೆ ಅನುಮಾನ ಬಂದಿತು. ಆದರೆ ಅದನ್ನೆಲ್ಲ ತೋರಿಸಿಕೊಳ್ಳದೇ, "ನೀವೇನೂ ಚಿಂತೆ ಮಾಡಬೇಡಿ, ನೀವು ನಿರಪರಾಧಿಗಳಾಗಿದ್ದರೆ ಖಂಡಿತ ನಿಮಗೆ ಜಯ ಸಿಗುತ್ತದೆ. ಆದರೆ ನಾನು ಕೇಳುವ ಡಾಕ್ಯುಮೆಂಟ್, ಪುರಾವೆಗಳನ್ನೆಲ್ಲ ಒದಗಿಸಿಕೊಡುವ ಜವಾಬ್ದಾರಿ ನಿಮ್ಮದು" ಎಂದೆ. ರಮಾ ಭಂಡಾರಿಯವರನ್ನು ಮೊದಲು ಬೀಸೋ ದೊಣ್ಣೆಯಿಂದ ತಪ್ಪಿಸಬೇಕಿತ್ತು. ಅವರಿಗೆ ತಕ್ಷಣವೇ ನಿರೀಕ್ಷಣಾ ಜಾಮೀನು ಕೊಡಿಸಬೇಕಿತ್ತು. ರಮಾ ಭಂಡಾರಿಯವರ ಪರ ಈಗ ಸುಪ್ರೀಂಕೋರ್ಟ್ ಜಸ್ಟಿಸ್ ಆಗಿರುವ ಶಿವರಾಜ್ ಪಾಟೀಲ್ ಮತ್ತು ನಾನು ಒಟ್ಟಿಗೆ ವಕಾಲತ್ತು ಹಾಕಿದೆವು. ನಾವಿಬ್ಬರು ಜಂಟಿಯಾಗಿ ಹೈಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿಕೊಂಡಾಗ ಅದು ಸಿಕ್ಕಿಬಿಟ್ಟಿತು! ಅಷ್ಟಕ್ಕೆ ಶಿವರಾಜ್ ಪಾಟೀಲ್ ಪಾತ್ರ ಮುಗಿಯಿತು. ಈ ಕೇಸನ್ನು ಧಾರವಾಡಕ್ಕೆ ಹೋಗಿ ನಡೆಸಬೇಕಾಗಿತ್ತು. ಧಾರವಾಡ ಮತ್ತು ಹುಬ್ಬಳ್ಳಿ ವಕೀಲರ ಸಂಘಗಳು ಸಭೆ ಸೇರಿ ರಮಾ ಭಂಡಾರಿ ಪರ ಯಾರೂ ವಕಾಲತ್ತು ಹಾಕಬಾರದು ಎಂದು ಠರಾವು ಪಾಸು ಮಾಡಿದ್ದವು. ಸಹಾಯಕ್ಕೆಂದು ಅಲ್ಲಿಯ ಸ್ಥಳೀಯ ವಕೀಲರಾರೂ ಸಿಗುವ ಪರಿಸ್ಥಿತಿಯೂ ಇರಲಿಲ್ಲ. ಈ ಕೇಸನ್ನು ತುಂಬಾ ಜಾಗ್ರತೆಯಿಂದ ಹ್ಯಾಂಡಲ್ ಮಾಡಬೇಕಾಗುತ್ತದೆ,

ಧಾರವಾಡದಲ್ಲಿಯೇ ಇದ್ದು ನಡೆಸಬೇಕಾಗುತ್ತದೆ, ನನಗೆ ಆಗುವುದಿಲ್ಲ ಎಂದೆ. ಆಗ ನನ್ನ ಗುರುಗಳಾದ ಪ್ರೊ. ಎಂ.ಆರ್. ಜನಾರ್ದನ್ ಅವರು ಬಂದು, ನನಗಾಗಿ ಈ ಕೇಸನ್ನು ನಡೆಸಿಕೊಡಬೇಕು ಎಂದರು. ಇದರಿಂದ ಬೆಂಗಳೂರಿನ ಕೇಸು, ಕೆಲಸಗಳಿಗೆ ಪೆಟ್ಟು ಬೀಳುತ್ತದೆಂದು ಗೊತ್ತಿದೆ. ಆದರೂ ನೀನು ಈ ಕೇಸ್ ನಡೆಸಬೇಕು ಎಂದು ಅಧಿಕಾರವಾಣಿಯಲ್ಲಿ ಹೇಳಿದಾಗ ನಾನು ತಲೆ ಬಾಗಲೇಬೇಕಾಯಿತು.

ನಾನು ಧಾರವಾಡಕ್ಕೆ ಹೋದಾಗ ಬಹುತೇಕ ಸಾರ್ವಜನಿಕ ಕಟ್ಟಡ, ಕಾಂಪೌಂಡ್‌ಗಳ ಮೇಲೆ ರಮಾ ಭಂಡಾರಿಯವರ ವಿರುದ್ಧ ಬರೆಯಲ್ಪಟ್ಟ ಘೋಷಣೆಗಳು ನನ್ನನ್ನು ಸ್ವಾಗತಿಸಿದವು. ಕೆಲವೆಡೆ ರಮಾ ಅವರ ಬಗ್ಗೆ ಅವಾಚ್ಯವಾಗಿಯೂ, ಅಶ್ಲೀಲವಾಗಿಯೂ ಘೋಷಣೆಗಳು ಬರೆಯಲ್ಪಟ್ಟಿದ್ದವು. A.I.S.F. ಎನ್ನುವ ವಿದ್ಯಾರ್ಥಿ ಸಂಘಟನೆ ಬಹಳ ಕಡೆ ಘೋಷಣೆಗಳನ್ನು ಬರೆದಿತ್ತು ಎನ್ನುವ ನೆನಪು ನನಗೆ.

ಧಾರವಾಡದ ಕೋರ್ಟಿಗೆ ಹೋದಾಗ ರಮಾ ಭಂಡಾರಿಯವರ ಪರವಾಗಿ ವಕಾಲತ್ತು ಹಾಕಲು ಬೆಂಗಳೂರಿನಿಂದ ಬಂದಿರುವ ಲಾಯರ್ ಇವರು ಎಂದು ನನ್ನನ್ನು ಅಲ್ಲಿಯ ವಕೀಲರು ವಿಚಿತ್ರವಾಗಿ ನೋಡತೊಡಗಿದರು. ಅವರಲ್ಲಿ ಕೆಲವರು ದುಡ್ಡಿನಾಸೆಗಾಗಿ ಎಂಥ ಕೇಸುಗಳನ್ನು ಬೇಕಾದ್ರೂ ಹಿಡಿಯುವಂಥ ವ್ಯಕ್ತಿ ನೀನು ಎನ್ನುವಂತೆ ಕೆಟ್ಟ ದೃಷ್ಟಿ ಬೀರಿ ನೋಡಿದರು. ನಾನು ಅವಾವಕ್ಕೂ ವಿಚಲಿತಗೊಳ್ಳದೆ ನನ್ನ ಕೆಲಸ ಆರಂಭಿಸಿದೆ.

'ಸಂಯುಕ್ತ ಕರ್ನಾಟಕ'ದಲ್ಲಿ ರಮಾ ಭಂಡಾರಿಯವರ ಪ್ರಕರಣದ ಬಗ್ಗೆ ಪ್ರತಿನಿತ್ಯ ವರದಿಗಳಿರುತ್ತಿದ್ದವು. ಕಮ್ಯೂನಿಸ್ಟ್ ಮತ್ತು ದಲಿತ ಸಂಘಟನೆಗಳು ರಮಾ ಭಂಡಾರಿಯವರ ವಿರುದ್ಧ ಚಳವಳಿಯನ್ನು ತೀವ್ರಗೊಳಿಸಿದ್ದವು. ಕೋರ್ಟಿನ ಹೊರಗೆ ಇರುವ ಕಾವು ಕೋರ್ಟಿನೊಳಗಿನ ಕೇಸ್ ಫೈಲ್‌ನಲ್ಲಿರಲಿಲ್ಲ.

ಏತನ್ಮಧ್ಯೆ ಪೊಲೀಸರು ತಮ್ಮ ತನಿಖೆ ನಡೆಸಿದಾಗ ಅದೇ ಟ್ರೈಸಿಂಗ್ ಸೆಂಟರಿನ ಮತ್ತೀರ್ವರು ವಿದ್ಯಾರ್ಥಿನಿಯರು ತಮ್ಮನ್ನೂ ಸಹ ರಮಾ ಭಂಡಾರಿ ಮನೆಗೆ ಕರೆದೊಯ್ದು ರೇಪ್ ಮಾಡಿಸಿದ್ದಾರೆ ಎಂದು ಹೇಳಿಕೆ ನೀಡಿದ್ದರು. ಈ ಸಂಗತಿ ತಿಳಿದ ಮೇಲಂತೂ ಧಾರವಾಡದ ಲಾಯರ್‌ಗಳು ಇದಕ್ಕಿಂತ ಬೇರೇನು ಸಾಕ್ಷಿ ಬೇಕು? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎಂದು ನನ್ನನ್ನು ನೋಡಿ ಮರೆಯಲ್ಲಿ, ಆದರೆ ನನ್ನ ಕಿವಿಗೆ ಬೀಳುವಂತೆ, ಚುಚ್ಚಿ ಮಾತಾಡತೊಡಗಿದರು.

ಅಷ್ಟೊತ್ತಿಗೆ ನಾನು ಕೇಳಿದ ದಾಖಲಾತಿಗಳನ್ನೆಲ್ಲ ರಮಾ ಭಂಡಾರಿಯವರು ಒದಗಿಸಿಕೊಟ್ಟಿದ್ದರು. ಆ ದಾಖಲಾತಿಗಳು ಸಿಕ್ಕಮೇಲೆ ರಮಾ ಭಂಡಾರಿ ನಿರಪರಾಧಿ ಎನ್ನುವುದು ನನಗೆ ಖಾತ್ರಿಯಾಗಿಬಿಟ್ಟಿತು. ಆದರೆ ನನಗಾದ ಖಾತ್ರಿಯನ್ನು ಕೋರ್ಟಿಗೆ ಕನ್ವಿನ್ಸ್ ಮಾಡಿದರೆ ಮಾತ್ರ ರಮಾ ಭಂಡಾರಿಗೆ ನ್ಯಾಯ ಸಿಗಲು ಸಾಧ್ಯವಿತ್ತು.

ಭಂಡಾರಿಯವರ ಪತಿ ಡಾ. ಬೆಲ್ಲದ್ ಮತ್ತು ನಾನು ಸೇರಿ ಬೆಂಗಳೂರಿನ ಬುಕ್ ಷಾಪ್‌ಗಳನ್ನೆಲ್ಲ ತಿರುಗಿ ಗರ್ಭಧಾರಣೆ ಮತ್ತು ಗರ್ಭಪಾತಗಳ ಬಗೆಗೆ ಇರುವ ಹತ್ತಾರು ಪುಸ್ತಕಗಳನ್ನು ಖರೀದಿಸಿದೆವು. ಅವಾಗಲೇ ಅಂದಾಜು ಐದು ಸಾವಿರ ರೂಪಾಯಿಗಳು ಆಗಿರುವಂತೆ ನೆನಪು.

ಮಹಿಳೆಗೆ ಮುಟ್ಟು ಆಗುವ ಅವಧಿಗಳು ಎಷ್ಟು ಬಗೆ, ಅದರಲ್ಲಿ ಸಾಮಾನ್ಯ ಹಾಗೂ ಅಸಾಮಾನ್ಯ ಯಾವುವು, ಅಂಡಾಣು ಉತ್ಪತ್ತಿಯ ಪ್ರಕ್ರಿಯೆ, ಅದು ಗರ್ಭಾಶಯಕ್ಕೆ ಬರುವ ಅವಧಿ, ಬಂದ ಮೇಲೆ ಎಷ್ಟು ಕಾಲದವರೆಗೆ ಜೀವಂತವಾಗಿರುತ್ತದೆ, ನಂತರ ಏನಾಗುತ್ತದೆ? ಅದೇ ರೀತಿ ಪುರುಷನ ವೀರ್ಯಾಣುಗಳು ಎಷ್ಟು ಅವಧಿಯವರೆಗೆ ಜೀವಂತ ಇರುತ್ತದೆ ಇತ್ಯಾದಿ ವಿಷಯಗಳ ಬಗ್ಗೆ ಅಥಾರಿಟಿ ಎನ್ನುವಂಥ ಪುಸ್ತಕಗಳಿಂದ ವಿಷಯ ಸಂಗ್ರಹಿಸಿಕೊಂಡೆ.

ಕೋರ್ಟಿನಲ್ಲಿ ಎವಿಡೆನ್ಸ್ ಆರಂಭವಾದದ್ದೇ ತಡ, ಅಲ್ಲಿಯ ವಕೀಲರುಗಳಿಗೆ ಕೇಸಿನ ನಿಜ ಬಣ್ಣ ಏನು ಎನ್ನುವುದು ಗೊತ್ತಾಗತೊಡಗಿತು, ಹಾಗಿದ್ದವು ಸಾಕ್ಷಿಗಳು.

ಸುಲೋಚನಾಳ ಗರ್ಭಪಾತ ಮಾಡಿದರೆನ್ನಲಾದ ಡಾ. ಬೈಕೋಡ್, ಸುಲೋಚನಾಳನ್ನು ಈ ಮುಂಚೆ ಎಂದೂ ನೋಡಿಯೇ ಇರಲಿಲ್ಲ. ಈ ಕೇಸಿನ ಸಂದರ್ಭದಲ್ಲಿಯೇ ನೋಡುತ್ತಿರುವುದು ಮತ್ತು ನಾನು ಈಕೆಗೆ ಅಬಾರ್ಷನ್ ಅನ್ನೇ ಮಾಡಿಲ್ಲ ಎಂದು ಹೇಳಿದರು.

ತಾ. 17.1.87ರಂದು ನಾನು ಒಂದೇ ಒಂದು ಅಬಾರ್ಷನ್ ಕೇಸ್ ಮಾಡಿದ್ದೇನೆ. ಅದಕ್ಕೆ ಇದು ದಾಖಲಾತಿ ಎಂದು ಆಸ್ಪತ್ರೆಯ ರಿಜಿಸ್ಟರ್ ಅನ್ನು ತೋರಿಸಿದರು ಡಾ. ಬೈಕೋಡ್. ಈ ಒಂದು ಗರ್ಭಪಾತದ ಕೇಸ್ ಈಕೆಯದಲ್ಲ. ಬೇರೆಯವರದು ಎಂದು ಹೇಳಿದರು.

ಏತನ್ಮಧ್ಯೆ ಸುಲೋಚನಾ ತನ್ನ ರೇಪ್ ನವಂಬರ್ 86ನೇ ಇಸವಿಯಲ್ಲಿ ಆಗಿದೆ ಎಂದು ಭಿನ್ನ ಹೇಳಿಕೆಯನ್ನು ನೀಡಿ ಎಡವಿದ್ದಳು. ಸುಲೋಚನಾಳಂತೆಯೇ ತಮಗೂ ರೇಪ್ ಆಗಿದೆಯೆಂದು ಪೊಲೀಸರ ಮುಂದೆ ಸಾಕ್ಷಿ ನೀಡಿದ ಹುಡುಗಿಯರು ಸುಳ್ಳು ಹೇಳುತ್ತಿದ್ದಾರೆನ್ನುವುದಕ್ಕೆ ಬಲವಾದ ದಾಖಲೆ ನಮಗೆ ಸಿಕ್ಕಿಬಿಟ್ಟಿತು. ಕೋರ್ಟಿನ

ವಿಟ್ನೆಸ್ ಬಾಕ್ಸ್‌ನಲ್ಲಿ ಆ ಹುಡುಗಿಯರು ನವಂಬರ್ ತಿಂಗಳಲ್ಲಿ ರಮಾ ಭಂಡಾರಿಯವರ ಮನೆಯಲ್ಲಿ ತಮ್ಮ ಮೇಲೆ ಅಪರಿಚಿತ ಪುರುಷರಿಂದ ರೇಪ್ ನಡೆಯಿತು ಎಂದು ಹೇಳಿಕೆ ನೀಡಿದ್ದರಷ್ಟೇ.

ನಾನು ಕೋರ್ಟ್ ಮುಂದೆ, ತಮಿಳುನಾಡಿನ ಗಾಂಧೀ ಗ್ರಾಮದ ರಿಜಿಸ್ಟರ್ ಒಂದರ ದಾಖಲೆಯನ್ನು ಹಾಜರುಪಡಿಸಿದಾಗ ನ್ಯಾಯಾಧೀಶರಾದಿಯಾಗಿ ವಕೀಲರೆಲ್ಲ ಆಶ್ಚರ್ಯಚಕಿತರಾದರು.

1986ರ ನವಂಬರ್ ಇಡೀ ತಿಂಗಳು ರಿಫ್ರೆಶರ್ ಕೋರ್ಸ್‌ಗಾಗಿ ತಮಿಳುನಾಡಿನ ಗಾಂಧೀ ಗ್ರಾಮದ ಟ್ರೈನಿಂಗ್ ಸೆಂಟರ್‌ನಲ್ಲಿ ತಂಗಿದ್ದರು ರಮಾ ಭಂಡಾರಿ. ಅದಕ್ಕಾಗಿ ಪಡೆದುಕೊಂಡಿದ್ದ T.A., D.A. ವಿವರಗಳನ್ನು ಸಹ ನಾನು ಹಾಜರುಪಡಿಸಿದೆ. ರಿಫ್ರೆಸರ್ ಕೋರ್ಸ್ ಅಟೆಂಡ್ ಮಾಡುವಾಗ ನಿತ್ಯ ಅಟೆಂಡೆನ್ಸ್ ಹಾಕಲಾಗಿದ್ದ ರಿಜಿಸ್ಟರ್ ಕೋರ್ಟಿನಲ್ಲಿ ಸಮನ್ ಮಾಡಿಸಿದ್ದೆ. ಆಗ ಎಲ್ಲರೂ ಬೆಕ್ಕಸಬೆರಗಾಗಬೇಕಾಯಿತು.

ಅದೆಲ್ಲಕ್ಕಿಂತ ತಮಾಷೆಯ ಸಂಗತಿ ಏನಾಗಿತ್ತೆಂದರೆ, ಸುಲೋಚನಾ ಸೆಪ್ಟೆಂಬರ್ 86 ರಲ್ಲಿ ತನ್ನ ರೇಪ್ ರಮಾ ಭಂಡಾರಿಯವರ ಮನೆಯಲ್ಲಿ ಆಯಿತು ಎಂದು ಹೇಳಿದ್ದಳಷ್ಟೇ. ಆದರೆ ಆ ತಿಂಗಳಿಡೀ ನರ್ಸ್ ಟ್ರೈನಿಂಗ್ ಸೆಂಟರ್‌ಗೆ ರಜೆ ಘೋಷಿಸಲ್ಪಟ್ಟಿತ್ತು. ಇಡೀ ಹಾಸ್ಟೆಲ್‌ನಲ್ಲಿ ಯಾವೊಬ್ಬ ವಿದ್ಯಾರ್ಥಿನಿಯೂ ಇದ್ದಿರಲಿಲ್ಲ!

ಆರ್ಗ್ಯುಮೆಂಟ್ ನಡೆಯುವಷ್ಟು ಹೊತ್ತಿಗೆ ಧಾರವಾಡದ ಬಹಳಷ್ಟು ವಕೀಲರು ನನ್ನ ಮಿತ್ರರಾಗಿಬಿಟ್ಟಿದ್ದರು. ಲಾ ಕಾಲೇಜೊಂದಕ್ಕೆ ಪ್ರಿನ್ಸಿಪಾಲರೂ ಆಗಿದ್ದ ಜಿ.ಎಂ. ಪಾಟೀಲ್ ಎನ್ನುವ ವಕೀಲರು ತಮ್ಮ ಕಾಲೇಜ್‌ಗೆ ನನ್ನನ್ನು ಕರೆದೊಯ್ದು ವಿದ್ಯಾರ್ಥಿಗಳಿಗೆ ಲೆಕ್ಚರ್ ಕೊಡಿಸಿದರು ಮತ್ತು ಸನ್ಮಾನ ಮಾಡಿದರು. ಮತ್ತೆ ಕೆಲವು ವಕೀಲರು ಕ್ಯಾಂಟೀನ್‌ನಲ್ಲಿ ಸ್ವೀಟ್ಸ್ ಕೊಡಿಸಿ ತಮ್ಮ ಖುಷಿ ವ್ಯಕ್ತಪಡಿಸಿದರು.

ಧಾರವಾಡದಲ್ಲಿ ಒಂದೂವರೆ ತಿಂಗಳು ಲಾಜ್‌ನಲ್ಲಿ ತಂಗಿದ್ದು ಈ ಕೇಸ್ ನಡೆಸಿದೆ. ನಂತರ ಸರ್ಕಾರ ಹೈಕೋರ್ಟ್‌ಗೆ ಅಪೀಲ್ ಹೋಯಿತು ಸೆಷನ್ಸ್ ಕೋರ್ಟಿನ ತೀರ್ಪಿನ ವಿರುದ್ಧ. ಆದರೆ ಹೈಕೋರ್ಟ್ ಸೆಷನ್ಸ್ ಕೋರ್ಟಿನ ತೀರ್ಪನ್ನೇ ಎತ್ತಿ ಹಿಡಿಯಿತು. ಯಾರದೋ ಪಿತೂರಿಯ ಮಾತು ಕೇಳಿ ವಿದ್ಯಾರ್ಥಿನಿ ಸುಲೋಚನಾ ಪ್ರಿನ್ಸಿಪಾಲ್ ರಮಾ ಭಂಡಾರಿಯವರ ಮೇಲೆ ಕೇಸ್ ಹಾಕಿದ್ದಳು.

77

ಸರ್ಕಲ್ ಇನ್ಸ್‌ಪೆಕ್ಟರ್‌ಗೆ ತಿರುಮಂತ್ರ

ಎಲ್ಲ ಊರುಗಳಲ್ಲಿ ಬಣಗಳಿರುವಂತೆ ನೆಲಮಂಗಲ ತಾಲ್ಲೂಕಿನ ದಾಸನಪುರದಲ್ಲೂ ಎರಡು ಪರಸ್ಪರ ವಿರೋಧಿ ಗುಂಪುಗಳಿದ್ದವು. ಅವುಗಳ ಮಧ್ಯೆ ಕ್ಷುಲ್ಲಕ ಹಾಗೂ ಸ್ವಾರ್ಥ ಕಾರಣಗಳಿಗಾಗಿ ಆಗಾಗ ಘರ್ಷಣೆಗಳೂ ಉಂಟಾಗುತ್ತಿದ್ದವು. ವೈಯಕ್ತಿಕ ಜಗಳಗಳೇ ಸಾಮೂಹಿಕ ಘರ್ಷಣೆಗಳಾಗುತ್ತಿದ್ದವು. ಇಂಥ ಕದನಗಳಿಂದಾಗಿ ದಾಸನಪುರ ರಾಜಕೀಯವಾಗಿಯೂ ಕಾಂಗ್ರೆಸ್ ಮತ್ತು ಜನತಾ ಪಕ್ಷಗಳೆಂದು ಇಬ್ಭಾಗವಾಗಿತ್ತು. ಕಾಂಗ್ರೆಸ್ ಗುಂಪಿಗೆ ಡಿ.ಆರ್. ರಾಮಕೃಷ್ಣ ಮತ್ತು ಜನತಾ ಪಕ್ಷದ ಗುಂಪಿಗೆ ಎಲ್. ರಾಮಕೃಷ್ಣಪ್ಪ ಮುಂದಾಳುಗಳಾಗಿದ್ದರು. ನನ್ನ ಆತ್ಮೀಯ ಸ್ನೇಹಿತರಾದ ನೆಲಮಂಗಲದ ಲಾಯರ್ ಕೇಶವಮೂರ್ತಿ ಕಾಂಗ್ರೆಸ್ ಪಕ್ಷದಲ್ಲಿದ್ದರು. ಅವರು ಒಂದು ಅವಧಿ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರು ಸಹ ಆಗಿದ್ದರು.

ಕೆ. ಬೈಲಪ್ಪ ಎನ್ನುವ ರೈತ ಕೇಶವಮೂರ್ತಿಯವರ ಕ್ಲೈಂಟ್ ಆಗಿದ್ದ. ಈ ಕೆ. ಬೈಲಪ್ಪನಿಗೂ ಮತ್ತು ದೇವರಹಟ್ಟಿ ರಾಮಯ್ಯ ಎನ್ನುವವನಿಗೂ ಜಮೀನು

ಸಂಬಂಧದ ವ್ಯಾಜ್ಯ ಶುರುವಾಯಿತು. ಈ ವ್ಯಾಜ್ಯಕ್ಕೆ ಸಂಬಂಧಿಸಿ ಸಣ್ಣಪುಟ್ಟ ಜಗಳದ ಘಟನೆಗಳು ನಡೆಯತೊಡಗಿದವು. ದಾಸನಪುರದ ಸ್ವಭಾವಕ್ಕೆ ತಕ್ಕಂತೆ ಒಂದು ದಿನ ಈ ಜಗಳ ಸಾರ್ವತ್ರಿಕಗೊಂಡು ಸ್ಫೋಟವಾಯಿತು. ಊರಿನ ರಂಗನಾಥಸ್ವಾಮಿ ದೇವಾಲಯದ ಮುಂದೆ ಭಾರೀ ಕೋಲಾಹಲ ನಡೆಯತೊಡಗಿತು. ಈ ಗಲಾಟೆಯ ದುರ್ಲಾಭ ಪಡೆದುಕೊಂಡು ಯಾವನೋ ಒಬ್ಬ ತನ್ನ ವೈಯಕ್ತಿಕ ಸೇಡಿಗಾಗಿ ಜನತಾ ಪಕ್ಷದ ಗುಂಪಿಗೆ ಸೇರಿದ ಹನುಮಯ್ಯ ಎನ್ನುವವನನ್ನು ಮರ್ಡರ್ ಮಾಡಿಬಿಟ್ಟ. ಹನುಮಯ್ಯನ ಹೆಣ ಬಿದ್ದದ್ದೇ ತಡ ಎಲ್ಲ ಚೆಲ್ಲಾಪಿಲ್ಲಿಯಾದರು. ಕಾಂಗ್ರೆಸ್ ಮುಖಂಡ ಡಿ.ಆರ್. ರಾಮಕೃಷ್ಣಪ್ಪ ಒಳ್ಳೆ ಸ್ಥಿತಿವಂತರೂ ಆಗಿದ್ದರು. ಇವರ ಇಬ್ಬರ ಹೆಣ್ಣುಮಕ್ಕಳ ಮದುವೆಯ ನಿಶ್ಚಯವೂ ಆಗಿತ್ತು. ಹಿರಿಯ ಮಗಳು ಕಾಂತಮ್ಮ, ಚಿಕ್ಕವಳು ವರಮಹಾಲಕ್ಷ್ಮಮ್ಮ. ದಾಸನಪುರಕ್ಕೆ ಸಮೀಪದ ವೀರಸಾಗರದಲ್ಲಿ ಕಾಂತಮ್ಮನ ವಿವಾಹವನ್ನು ಮಾಡುವುದೆಂದೂ ಇದಾದ ಒಂದು ವಾರದ ನಂತರ ಸಮೀಪದ ಮತ್ತೊಂದು ಹಳ್ಳಿ ಉದ್ದಿಚಿಕ್ಕನಹಳ್ಳಿಯಲ್ಲಿ ವರಮಹಾಲಕ್ಷ್ಮಮ್ಮನ ಮದುವೆ ಮಾಡಬೇಕೆಂದೂ ತೀರ್ಮಾನವಾಗಿತ್ತು. ಡಿ.ಆರ್. ರಾಮಕೃಷ್ಣಪ್ಪನ ಬೀಗರು ಜಗಳ, ಘರ್ಷಣೆಗಳೆಂದರೆ ಮೈಲು ದೂರು ಓಡುವ ಸ್ವಭಾವದವರು.

ದಾಸನಪುರದಲ್ಲಿ ನಡೆದ ಹನುಮಯ್ಯನ ಕೊಲೆ ಕೇಸಿನಲ್ಲಿ ಡಿ.ಆರ್. ರಾಮಕೃಷ್ಣಪ್ಪನ ಮಗ ಗಂಗರಾಜುವನ್ನು ಆರೋಪಿಯಾಗಿ ಮಾಡಲಾಗಿತ್ತು. ಎಸ್. ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದ ಆ ಸಮಯದಲ್ಲಿ ಆಡಳಿತ ಪಕ್ಷದವರು ತಾವು ಎನ್ನುವ ಹಮ್ಮು ಜನತಾ ಪಕ್ಷದ ಗುಂಪಿನವರಲ್ಲಿತ್ತು. ತಾವು ಯಾರನ್ನು ಬೇಕಾದರೂ ಜೈಲಿಗೆ ಕಳಿಸಬಹುದು ಈಗ ಎಂದು ಸೊಕ್ಕಿನಿಂದ ಕೆಲವರು ಮಾತಾಡತೊಡಗಿದರು.

ಡಿ.ಆರ್. ರಾಮಕೃಷ್ಣಪ್ಪನವರ ಮಗಳು ಕಾಂತಮ್ಮನ ಮದುವೆಗೆ ಒಂದು ವಾರ ಮಾತ್ರ ಉಳಿದಿತ್ತು.

ಗಂಗರಾಜುವಿನ ಹೆಸರನ್ನು ಆರೋಪ ಪಟ್ಟಿಯಲ್ಲಿ ಸೇರಿಸಿಯಾದ ಮೇಲೆ ಜನತಾ ಪಕ್ಷದ ಗುಂಪಿನವರಿಗೆ ಜ್ಞಾನೋದಯವಾಗಿ, ಛೆ ಎಂಥ ಕೆಲಸ ಮಾಡಿದೆವು. ಗಂಗರಾಜುವಿನೊಂದಿಗೆ ಅವರಪ್ಪ ಡಿ.ಆರ್. ರಾಮಕೃಷ್ಣಪ್ಪ ಮತ್ತು ಅವರ ಲಾಯರ್ ಕೇಶವಮೂರ್ತಿಯ ಹೆಸರುಗಳನ್ನೂ ಸೇರಿಸಿದ್ದರೆ ಸರಿಯಾಗುತ್ತಿತ್ತು ಎಂದುಕೊಳ್ಳತೊಡಗಿದರು. ಚಾರ್ಜ್‌ಶೀಟ್‌ನಲ್ಲಿ ಇವರುಗಳ ಹೆಸರುಗಳನ್ನು ಹೆಚ್ಚುವರಿ

ಯಾಗಿ ಸೇರಿಸಿ ಮದುವೆಗೆ ವಿಘ್ನವುಂಟುಮಾಡಬೇಕೆಂದು ಪಣತೊಟ್ಟರು ಎಲ್. ರಾಮಕೃಷ್ಣನ ಗುಂಪಿನವರು.

ಕಂಪ್ಲೇಂಟ್ ನೆಲಮಂಗಲ ಠಾಣೆಯಲ್ಲಿ ರಿಜಿಸ್ಟರ್ ಆಗಿತ್ತು. ಮೆಹಬೂಬ್ ಪಾಷ ಎನ್ನುವ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲಿಗೆ ವರ್ಗಾ ಆಗಿ ಬಂದು ಹದಿನೈದು ದಿನಗಳೂ ಕಳೆದಿರಲಿಲ್ಲ. ನೆಲಮಂಗಲ ಠಾಣೆಗೆ ಪೋಸ್ಟಿಂಗ್ ತೆಗೆದುಕೊಳ್ಳಬೇಕಾದರೆ ಲಕ್ಷಗಟ್ಟಲೆ ಲಂಚ ಕೊಟ್ಟಿರುತ್ತಾರೆನ್ನುವುದು ಜನಜನಿತ ಸಂಗತಿಯಾಗಿತ್ತು. ನೆಲಮಂಗಲ ಸುತ್ತಮುತ್ತ ನಡೆಯುವ ಕೊಲೆ, ರೇಪು, ಹೊಡೆದಾಟ, ಹೈವೆ ಅಪಘಾತಗಳು ಇತ್ಯಾದಿಗಳಿಂದಾಗಿ ನೆಲಮಂಗಲ ಠಾಣೆಗೆ ವರ್ಗಾ ಮಾಡಿಸಿಕೊಳ್ಳಲು ಅಧಿಕಾರಿಗಳು ಲಂಚ ನೀಡಿಕೆಯಲ್ಲಿ ಸ್ಪರ್ಧೆಯನ್ನೇ ನಡೆಸುತ್ತಿದ್ದರು. ಈ ಮಾತು ಇಂದಿಗೂ ಅನ್ವಯಿಸುವಂಥದ್ದು. ದಾಸನಪುರದ ಈ ವಿದ್ಯಮಾನದ ಎಲ್ಲ ಬೆಳವಣಿಗೆಗಳನ್ನು ಕೇಶವಮೂರ್ತಿ ನನಗೆ ಫೋನ್‌ನಲ್ಲಿ ಹೇಳುತ್ತ ಬಂದರು. ಸ್ವತಃ ಕೇಶವಮೂರ್ತಿಯವರನ್ನೇ ಕೊಲೆ ಕೇಸಿನಲ್ಲಿ ಶಾಮೀಲು ಮಾಡುವ ದುರ್ಯೋಚನೆ ನಡೆದದ್ದು ಕೇಳಿ ನಾನು ಗಂಭೀರನಾದೆ. ಇದು ಅಲಕ್ಷಿಸುವಂಥದ್ದಲ್ಲ ಎಂದುಕೊಂಡು, "ಕೂಡಲೇ ನೀವು, ಡಿ.ಆರ್. ರಾಮಕೃಷ್ಣಪ್ಪ ಮತ್ತು ಗಂಗರಾಜು ಹೊರಟು ಬನ್ನಿ" ಎಂದು ಹೇಳಿದೆ.

ಡಿ.ಆರ್. ರಾಮಕೃಷ್ಣಪ್ಪ ನನಗೆ ದೂರದ ಸಂಬಂಧಿಯೂ ಆಗಿದ್ದರಿಂದ ಅವರ ಮಗಳ ಮದುವೆಯ ಭಗ್ನದ ಪ್ರಯತ್ನಗಳ ಬಗ್ಗೆ ಆತಂಕಗೊಂಡೆ. ಮದುವೆ ನಡೆಯದಂತೆ ಮಾಡಿ ಮಾನ ಹರಾಜು ಹಾಕಬೇಕೆನ್ನುವ ತಂತ್ರಗಳನ್ನೆಲ್ಲ ವಿಫಲಗೊಳಿಸಲು ಮೈಕೊಡವಿ ಸಿದ್ಧನಾದೆ. ಬೆಂಗಳೂರು ಕೋರ್ಟಿನ ಕೆಲಸಗಳನ್ನೆಲ್ಲ ಸಹೋದ್ಯೋಗಿಗಳಿಗೆ ವಹಿಸಿ ನೆಲಮಂಗಲದ ಈ ಪ್ರಕರಣದಲ್ಲಿ ನನ್ನನ್ನು ಪೂರ್ಣ ತೊಡಗಿಸಿಕೊಂಡೆ.

ಕೇಶವಮೂರ್ತಿ ಅವರನ್ನು ಕಾನಿಷ್ಕ ಹೋಟೆಲ್‌ನ ಮೂರನೇ ಮಹಡಿಯ ರೂಮೊಂದರಲ್ಲಿ ಇರಿಸಿದೆ. ಡಿ.ಆರ್. ರಾಮಕೃಷ್ಣಪ್ಪ ಮತ್ತು ಅವರ ಮಗ ತಮ್ಮ ಸಂಬಂಧಿಕರೊಬ್ಬರ ಮನೆಯಲ್ಲಿ ತಲೆಮರೆಸಿಕೊಂಡರು. ಗಂಗರಾಜುಗೆ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಹಾಕಿದೆ.

ಪರಿಸ್ಥಿತಿಯ ಸೂಕ್ಷ್ಮತೆಯನ್ನು ಗ್ರಹಿಸಿಕೊಂಡ ಸರ್ಕಲ್ ಇನ್ಸ್‌ಪೆಕ್ಟರ್ ಚೆನ್ನಾಗಿ ದುಡ್ಡು ಸುಲಿಯಲು ನಿರ್ಧರಿಸಿಕೊಂಡ. ಕೇಶವಮೂರ್ತಿ ಮತ್ತು ಡಿ.ಆರ್. ರಾಮಕೃಷ್ಣಪ್ಪನವರ ಹೆಸರುಗಳನ್ನು ಆರೋಪಿಗಳ ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಸುದ್ದಿ ನಮಗೆ ಮುಟ್ಟುವಂತೆ ನೋಡಿಕೊಂಡ. ಕೇಸಿನ

ವಿಚಾರಣೆ ನಡೆದು ತೀರ್ಪು ಹೊರಬೀಳುವವರೆಗೆ ಕೇಶವಮೂರ್ತಿ ವಿನಾಕಾರಣ ಮರ್ಡರ್ ಕೇಸಿನಲ್ಲಿ ಇನ್‌ವಾಲ್ವ್ ಆಗುವಂತಾಗುತ್ತದಲ್ಲಾ ಎಂದು ಚಿಂತೆಗೀಡಾದೆ.

ಸರ್ಕಲ್ ಇನ್ಸ್‌ಪೆಕ್ಟರ್ ಹುಂಬನಿದ್ದ. ದುಡ್ಡೆಂದರೆ ಬಾಯಿಬಿಡುತ್ತಿದ್ದ. ಡಿ.ಆರ್. ರಾಮಕೃಷ್ಣಪ್ಪನಿಂದ ಲಕ್ಷಗಟ್ಟಲೆ ಸುಲಿದುಕೊಳ್ಳಬಹುದು, ವರ್ಗಾ ಮಾಡಿಸಿಕೊಳ್ಳಲು ನೀಡಿದ ಲಂಚವನ್ನು ಇದೊಂದೇ ಕೇಸಿನಲ್ಲಿ ಗಿಟ್ಟಿಸಿಕೊಂಡುಬಿಡಬಹುದು ಎಂದು ಲೆಕ್ಕ ಹಾಕಿಕೊಂಡ.

ಲಕ್ಷಾಂತರ ಹಣವನ್ನು ಇವನಿಗ್ಯಾಕೆ ಕೊಡುವುದು ಎಂದು ಮನದಲ್ಲೇ ಗುಣಿಸತೊಡಗಿದೆ.

ನನ್ನ ಶಾಲಾ ದಿನಗಳಲ್ಲಿ ಸಹಪಾಠಿಯಾಗಿದ್ದ ಚನ್ನಬಸವ ನೆಲಮಂಗಲದ ಕನ್ಯೆಯನ್ನು ವಿವಾಹವಾಗಿ ಅಲ್ಲಿಯೇ ವೃತ್ತಿ ಆರಂಭಿಸಿದ್ದ. ಈತ ಈಗಲೂ ಅಲ್ಲಿ ಲಾಯರ್. ಈತ ಜನತಾ ಪಕ್ಷದಲ್ಲಿದ್ದ. ಈತನಿಗೆ ಕೇಳಿದರೆ ಎಲ್ಲ ವಿಷಯ ತಿಳಿಯುತ್ತದೆ ಎಂದುಕೊಂಡು, "ಏನೋ ಕೇಶವಮೂರ್ತಿಯ ಹೆಸರನ್ನು ಅಕ್ಯೂಜ್ಡ್ ಲಿಸ್ಟ್‌ಗೆ ಸೇರಿಸಿದ್ದಾರಾ?" ಎಂದೆ.

"ನಾನು ಈಗ ಪೊಲೀಸ್ ಸ್ಟೇಷನ್‌ನಿಂದಲೇ ಬರುತ್ತಿದ್ದೇನೆ. ಕೇಶವಮೂರ್ತಿ ಹೆಸರು ಕೇಸಿನಲ್ಲಿದೆ. ನನ್ನ ಕಣ್ಣುಗಳ ಆಣೆಗೂ ಸತ್ಯ ಈ ಮಾತು" ಎಂದ.

ಶಾಲಾ ದಿನಗಳಲ್ಲಿ ಚನ್ನಬಸವ ಬಾಯಿಬಿಟ್ಟರೆ ಏನಾದರೂ ಅನಾಹುತ ಆಗುತ್ತೆ ಎಂದು ಸ್ನೇಹಿತರು ಹಾಸ್ಯ ಮಾಡುತ್ತಿದ್ದುದು ನೆನಪಾಯಿತು. ಆದರೆ ತನ್ನ ಕಣ್ಣುಗಳ ಮೇಲೆ ಆಣೆ ಮಾಡುತ್ತಿದ್ದಾನೆಂದರೆ ಸತ್ಯವಿರಬೇಕು ಎಂದುಕೊಂಡೆ.

ಕೇಶವಮೂರ್ತಿ ಮತ್ತು ಡಿ.ಆರ್. ರಾಮಕೃಷ್ಣಪ್ಪನವರ ಹೆಸರುಗಳನ್ನು ಆರೋಪ ಪಟ್ಟಿಗೆ ಸೇರಿಸಿಬಿಟ್ಟಾರು ಎನ್ನುವ ತೀವ್ರ ಆತಂಕದಲ್ಲಿ ನಾನಿರುವ ವಿಷಯ ಕೂಡಲೇ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಗೊತ್ತುಮಾಡಲ್ಪಟ್ಟಿತು!

ನನ್ನೊಂದಿಗೆ ಲಾಯರ್ ಎಂ. ರಂಗಸ್ವಾಮಿ ತುಂಬ ಶ್ರದ್ಧೆಯಿಂದ ಓಡಾಡತೊಡಗಿದ್ದರು. ನೆಲಮಂಗಲದ PWD ಇನ್‌ಸ್ಪೆಕ್ಷನ್ ಬಂಗ್ಲಾದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಇರುವ ಸಂಗತಿ ಗೊತ್ತಾಯಿತು. ನನ್ನ ಕಾರಿನಲ್ಲಿ ರಂಗಸ್ವಾಮಿಯವರನ್ನು ಕರೆದೊಯ್ದೆ. ನೀವೊಬ್ಬರೇ ಹೋಗಿ ಸರ್ಕಲ್ ಇನ್ಸ್‌ಪೆಕ್ಟರ್ ಜೊತೆ ಮಾತಾಡಿ ಎಂದೆ. ನಾನು ಕಾರಿನಲ್ಲೇ ಕೂತಿರುತ್ತೇನೆ. ನಾನು ಸಿಪಿಐ ಭೇಟಿಯಾದುದನ್ನು ಜನ ನೋಡಿದರೆ ಅದು ಸುದ್ದಿಯಾಗುತ್ತದೆ ಎಂದೆ. ಐ.ಬಿ.ಯಿಂದ ರಂಗಸ್ವಾಮಿ ಮತ್ತು ಸಿಪಿಐ ಬಂದರು. ಇಬ್ಬರೂ ನನ್ನ ಕಾರಿನಲ್ಲಿ ಕುಳಿತರು. ನಾನು ಸ್ಪೋರ್ಟ್ಸ್

ಕ್ಯಾಪ್ ಹಾಕಿದ್ದೆ. "ಡ್ರೈವರ್ ಪೊಲೀಸ್ ಠಾಣೆಗೆ ನಡೆ" ಎಂದ.

ನಾನು ರಂಗಸ್ವಾಮಿಗೆ ಸುಮ್ಮನಿರುವಂತೆ ಸಂಜ್ಞೆ ಮಾಡಿದೆ. ಪೊಲೀಸ್ ಠಾಣೆಯಿಂದ ಕೋರ್ಟಿಗೆ ಹೋದೆವು. ಆಗಲೂ ಸಿಪಿಐ ನನ್ನನ್ನು ಡ್ರೈವರ್ ಎಂದೇ ಸಂಬೋಧಿಸಿದ. ನಾನು ಮಾತಾಡದೆ ಅತಿ ವಿನಯದಿಂದ ಇದ್ದುದನ್ನು ನೋಡಿ ಸಿಪಿಐ "ಒಳ್ಳೆ ಡ್ರೈವರನ್ನು ಇಟ್ಟುಕೊಂಡಿದೀರಾ. ಅಫೀಷಿಯಲ್ಸ್‌ಗೆ ಈ ಥರ ಬಾಯಿ ಮುಚ್ಚಿಕೊಂಡಿರೋ ಡ್ರೈವರ್‌ಗಳಿರಬೇಕು. ಕಾರಲ್ಲಿ ನಡಿಯೋ ಮಾತುಗಳನ್ನ ಹೊರಗೆ ಕಕ್ಕಿಕೊಳ್ಳೋ ಡ್ರೈವರ್‌ಗಳೇ ಬಹಳ" ಎಂದು ನನ್ನ ಬಗೆಗೆ ಮೆಚ್ಚುಗೆ ಸೂಚಿಸಿದ.

ರಂಗಸ್ವಾಮಿಗೆ ಸಿಪಿಐ, ನಾಳೆ ನಿಮ್ಮ ಬೆಂಗಳೂರು ವಕೀಲರ ಜೊತೆಗೆ ಮಾತಾಡಿ ವ್ಯವಹಾರ ಬಗೆಹರಿಸೋಣ ಎಂದಿದ್ದ. ಬೆಂಗಳೂರಿನ ನನ್ನ ಮನೆಯ ವಿಳಾಸವನ್ನೂ ಪಡೆದುಕೊಂಡಿದ್ದ.

ಮಾರನೇ ದಿನ ಬೆಳಗ್ಗೆ ನನ್ನ ಮನೆಗೆ ಸಿಪಿಐ ಫೋನ್ ಮಾಡಿ ಬರುತ್ತಿರುವುದಾಗಿ ತಿಳಿಸಿದ. 'ಖಂಡಿತವಾಗಿ ಬನ್ನಿ ಸ್ವಾಗತ' ಎಂದೆ.

ನಾನು ಮನೆಯ ಹೊರಗೆ ಸಿಪಿಐಯನ್ನು ಕಾಯುತ್ತ ನಿಂತಿದ್ದೆ. ನನ್ನನ್ನು ನೋಡಿ, "ಏನಯ್ಯಾ ಎಲ್ಲ ಒಳಗಿದ್ದಾರಾ?" ಎಂದ.

ನಾನು ಮೌನವಾಗಿ ಮುಂದು ಮುಂದೆ ನಡೆದು ಹಾಲ್‌ನಲ್ಲಿ ಸಿಪಿಐಯನ್ನು ಸ್ವಾಗತಿಸಿ, ನನ್ನ ಪರಿಚಯ ಹೇಳಿಕೊಂಡಾಗ ಆತ ಬೆಚ್ಚಿಬಿದ್ದ!

"ಏನ್ರೀ ನೀವು ಈ ರೀತಿ ಹುಡುಗಾಟ ಆಡೋದಾ? ಛೆ ಛೆ ಐ ಆಮ್ ವೆರಿ ಸಾರಿ, ಸಾರಿ" ಎಂದು ವಿನೀತನಾಗಿ ಕೈಕುಲುಕಿದ. ರಂಗಸ್ವಾಮಿಯವರತ್ತ ತಿರುಗಿ, "ನೀವಾದ್ರೂ ಹೇಳಬಾರ್ದೆ?" ಎಂದು ಆಕ್ಷೇಪಿಸಿದ.

"ಇರ್ಲಿ, ಈಗ ನಮ್ಮ ಕೆಲಸದ ಬಗ್ಗೆ ಮಾತಾಡೋಣ" ಎಂದೆ.

"ನೋಡಿ ನನ್ನದೇನೂ ಇಲ್ಲ, ನಮ್ಮ ಎಸ್‌ಪಿ ಈ ಕೇಸಿನಲ್ಲಿ ಬಹಳ ಇಂಟರೆಸ್ಟ್ ತಕ್ಕೊಂಡಿದಾರೆ. ಹೋಮ್ ಮಿನಿಸ್ಟರ್ ಕಡೆಯಿಂದ ಪ್ರೆಶ್ಶರ್ ಇದೆಯಂತೆ ಅವರಿಗೆ. ರೂಲಿಂಗ್ ಗೌರ್ನಮೆಂಟ್‌ಗೆ ನಾವು ಫೇವರ್ ಮಾಡ್ಲೇಬೇಕಾಗುತ್ತೆ ಅಂತ ಹೇಳಿದ್ರು. ನಿನ್ನೆ ರಂಗಸ್ವಾಮಿಯವರ ಹತ್ತಿರ ಮಾತಾಡಿದ ಮೇಲೆ ನಾನು ಎಸ್ಪಿಯವರಿಗೆ ಪರ್ಸನಲ್ ಆಗಿ ರಿಕ್ವೆಸ್ಟ್ ಮಾಡಿಕೊಂಡೆ. ಏನಾದ್ರೂ ಮಾಡಿ, ಪಾಪ ಲಾಯರ್ ಅವರನ್ನೇ ಕೇಸಲ್ಲಿ ಇನ್‌ವಾಲ್ವ್ ಮಾಡಿದ್ರೆ ಅವರ ವೃತ್ತಿಯ ಫ್ಯೂಚರ್‌ಗೂ ಪೆಟ್ಟಾಗುತ್ತೆ.

ಬೇರೆ ಇನ್ನೂ ಹತ್ತು ಜನರ ಮೇಲೆ ಹಾಕೋಣ. ಲಾಯರ್ ಮತ್ತು ರಾಮಕೃಷ್ಣಪ್ಪನವರನ್ನು ಬಿಟ್ಟುಬಿಡೋಣ. ರಾಮಕೃಷ್ಣಪ್ಪನವರ ಮಗಳ ಮದುವೆ, ನಾವು ಇನ್‌ಹ್ಯೂಮನ್ ಆದಂತೆ ಆಗುತ್ತದೆ" ಎಂದೆ. ಅದಕ್ಕೆ ಎಸ್ಪಿಯವರು, "ಆಯ್ತು ಒಂದು ಫಿಯಟ್ ಕಾರು, ಮೇಲೆ ಇಪ್ಪತ್ತೈದು ಸಾವಿರ ಕೊಡು ಅಂತ ಹೇಳು. ನಾನು ಮಿನಿಸ್ಟರ್ ಜೊತೆ ಸೆಟ್ಲ್ ಮಾಡಿಕೋತೇನೆ ಅಂದಿದಾರೆ. ಈ ಕೂಡ್ಲೇ ಅಷ್ಟು ಮಾಡಿಬಿಡಿ. ನಂತರ ನನಗೆ ಏನಾದರೂ ಹೆಲ್ಪ್ ಮಾಡುವಿರಂತೆ. ಸದ್ಯ ಎಸ್ಪಿಯವರ ಡಿಮ್ಯಾಂಡ್ ಫುಲ್‌ಫಿಲ್ ಮಾಡಿಬಿಡಿ" ಎಂದ.

"ಆಯಿತು ಇವತ್ತು ಸಾಯಂಕಾಲವೇ ನಿಮ್ಮ ಮನೆಗೆ ನಮ್ಮ ವ್ಯಕ್ತಿಯೊಬ್ಬರು ಬಂದು ನೀವು ಕೇಳಿದ್ದನ್ನು ತಲುಪಿಸುತ್ತಾರೆ" ಎಂದೆ.

ಸಂಜೆಗೆ ಸಿಪಿಐ ಮನೆಗೆ ನನ್ನ ಸಹಾಯಕನಿಂದ ಒಂದು ಕ್ಯಾಸೆಟ್ ಕಳಿಸಿಕೊಟ್ಟೆ. ಆ ರಾತ್ರಿಯೇ ಸಿಪಿಐ ಸತ್ತೆನೋ ಕೆಟ್ಟೆನೋ ಎಂದು ಓಡಿಬಂದ. "ನಿಮ್ಮ ಕಾಲು ಹಿಡಿಯುತ್ತೇನೆ. ನನಗೆ ಎಂಟು ಮಕ್ಕಳಿವೆ. ಲಕ್ಷಗಟ್ಟಲೆ ಲಂಚ ಕೊಟ್ಟು ಟ್ರಾನ್ಸ್‌ಫರ್ ತೆಗೆದುಕೊಂಡಿದ್ದೇನೆ. ಅದನ್ನು ಹೇಗಾದರೂ ವಾಪಸ್ ಗಳಿಸಿಕೊಳ್ಳೋ ಆಸೆಯಿಂದ ಹೀಗೆಲ್ಲ ಮಾಡಿಬಿಟ್ಟೆ. ನಮ್ಮ ಎಸ್ಪಿ ಈ ಕೇಸಿನಲ್ಲಿ ಏನೂ ಲಂಚ ಕೇಳಿಲ್ಲ. ನೀವು ಏನು ಹೇಳುತ್ತೀರೋ ಅದನ್ನೆಲ್ಲ ಮಾಡುತ್ತೇನೆ. ಕ್ಯಾಸೆಟ್ಟನ್ನು ಮಾತ್ರ ನನಗೆ ಕೊಡಿ. ಎಸ್ಪಿ ಕೈಗೆ ಅದು ಸಿಕ್ಕರೆ ನನ್ನ ಕೆಲಸ ಹೋಗೋದು ಗ್ಯಾರಂಟಿ" ಎಂದು ಕಣ್ಣಲ್ಲಿ ನೀರು ತಂದುಕೊಂಡ.

"ಕೇಶವಮೂರ್ತಿಯವರ ಹೆಸರು ಆರೋಪಿಗಳ ಪಟ್ಟಿಯಲ್ಲಿ ಸೇರಬಾರದು".

"ಇಲ್ಲಾ ಸಾರ್, ನಾನು ಸೇರಿಸಿಯೇ ಇಲ್ಲ. ಹೀಗೆ ರೂಮರ್ ಹಬ್ಬಿಸಿದ್ರೆ ಹೆದರ್ಕೊಂಡು ದುಡ್ಡು ಕೊಡ್ತಾರೆ ಅಂತ ಜನತಾ ಪಕ್ಷದ ಒಬ್ಬ ಲಾಯರ್ ಬಂದು ಹೇಳಿದ. ನೀವು ಈ ವಿಷಯದ ಬಗ್ಗೆ ತೀವ್ರ ಟೆನ್ಶನ್‌ನಲ್ಲಿದ್ದೀರಿ ಎಂದೂ ಹೇಳಿದ. ಅವನ ಮಾತು ಕೇಳಿಕೊಂಡು ನಾನು ಟೆನ್ಶನ್ ಬಿಲ್ಡ್‌ಅಪ್ ಮಾಡ್ತಾ ಬಂದೆ. ದಯವಿಟ್ಟು ಕ್ಷಮಿಸಿ. ನಿಮ್ಮ ಬ್ರದರ್ ಅಂತ ತಿಳ್ದು ಕ್ಷಮಿಸಿ"

ಅವನಿಗೆ ಒರಿಜಿನಲ್ ಕ್ಯಾಸೆಟ್ ಅನ್ನು ವಾಪಸ್ ಕೊಟ್ಟೆ. ಡಿ.ಆರ್. ರಾಮಕೃಷ್ಣಪ್ಪನವರ ಹೆಣ್ಣುಮಕ್ಕಳ ಮದುವೆ ನಿರಾತಂಕವಾಗಿ ನಡೆಯಿತು. ಕೇಶವಮೂರ್ತಿಯವರಿಗೆ ಕಾನಿಷ್ಕ ಹೋಟೆಲ್‌ನ ಸೆರೆವಾಸದಿಂದ ಮುಕ್ತಿಯೂ ಸಿಕ್ಕಿತು!

78

ತಂಗಿಯ ಶೀಲಹರಣಕ್ಕೆ ಶ್ರೀರಾಮನ ತೀರ್ಪು

ಮುಕುಂದ ಎಂ.ಎಸ್. ರಾಮಯ್ಯ ಇಂಜಿಯರಿಂಗ್ ಕಾಲೇಜ್‌ನಲ್ಲಿ ಏಳು ವರ್ಷಗಳಿಂದ ಓದುತ್ತಿದ್ದರೂ ಬಿ.ಇ. ಪಾಸಾಗಿರಲಿಲ್ಲ. ಅವನ ತಲೆಗೆ ವಿದ್ಯೆ ಹತ್ತಿರಲಿಲ್ಲ. ಕೊರಳು, ಕೈ, ಬೆರಳುಗಳಲ್ಲಿ ಚಿನ್ನ, ವಜ್ರದ ಭಾರೀ ಆಭರಣಗಳನ್ನು ಹಾಕಿಕೊಂಡು ಯಮಹ ಮೋಟಾರ್ ಬೈಕ್ ಮೇಲೆ ತಿರುಗಾಡುತ್ತಿದ್ದ. ವಿದ್ಯೆಯಲ್ಲಿ ಇಲ್ಲದ ತನ್ನ ಅಸ್ತಿತ್ವವನ್ನು ಆಭರಣಗಳ ಮೂಲಕ ತೋರಿಸಲು ಯತ್ನಿಸುವವನಂತೆ ಕಾಣುತ್ತಿದ್ದ. ಉಡಾಳ ಹುಡುಗರನ್ನ ಕಟ್ಟಿಕೊಂಡು ಅಂಡಲೆಯುವ ಕೆಲಸಕ್ಕಿಳಿದಿದ್ದ ಮುಕುಂದ. ಈ ಮುಕುಂದನ ಅಪ್ಪ ಆಂಧ್ರಪ್ರದೇಶದ ನಾಗಾರ್ಜುನ ಸಾಗರ ಪ್ರಾಜೆಕ್ಟ್‌ನಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿದ್ದ. ಭಾರೀ ದುಡ್ಡು ಗಳಿಸಿದ್ದ. ಮುಕುಂದನನ್ನು ಬಿಟ್ಟರೆ ಬೇರೆ ಮಕ್ಕಳಿರಲಿಲ್ಲ ಅವರಿಗೆ. ತಂದೆ ತಾಯಿಗಳು ಮಗನ ಮೇಲೆ ತಮಗಿರುವ ಪ್ರೀತಿಯನ್ನು ದುಡ್ಡಿನ ಮೂಲಕ ಹರಿಸುತ್ತಿದ್ದರು. ತಂದೆ ಮುಕುಂದನಿಗೆ ಐದು ಸಾವಿರ ಪಾಕೆಟ್ ಮನಿ ಕೊಟ್ಟರೆ ತಾಯಿ ಹತ್ತು ಸಾವಿರ ಕೊಡುತ್ತಿದ್ದಳು. ಆಂಧ್ರಪ್ರದೇಶದಿಂದ ಬೆಂಗಳೂರಿಗೆ ಫ್ಲೈಟ್‌ನಲ್ಲಿ ಬಂದು ಹೋಗುತ್ತಿದ್ದ! ಬಹುಶಃ ಅವನ ಕಾಲೇಜಿನಲ್ಲಿ ಬೇರೆ ಇನ್ನಾವ ವಿದ್ಯಾರ್ಥಿಯೂ

ಹೀಗೆ ಫ್ಲೈಟ್‌ನಲ್ಲಿ ಓಡಾಡುತ್ತಿರಲಿಲ್ಲವೇನೋ. ಮುಕುಂದನಂಥ ಮುಠ್ಠಾಳ ಹುಡುಗರ ಗುಂಪೇ ಸೃಷ್ಟಿಯಾಗಿತ್ತು ರಾಮಯ್ಯ ಕಾಲೇಜಿನಲ್ಲಿ. ಧಾರಾಳವಾಗಿ ಖರ್ಚು ಮಾಡುತ್ತಾನೆನ್ನುವ ಕಾರಣಕ್ಕಾಗಿ ಮುಕುಂದನ ಬಾಲಬಡುಕರಾಗಿದ್ದರು ಹಲವು ವಿದ್ಯಾರ್ಥಿಗಳು.

ಎಂ.ಎಸ್. ರಾಮಯ್ಯನವರ ಮನೆ ಇರುವ ಗೋಕುಲ್ ಎಕ್ಸ್‌ಟೆನ್ಶನ್‌ನಲ್ಲಿ ಶ್ರೀರಾಮ ಎನ್ನುವ ಆಂಧ್ರದ ಯುವಕ ವಿದ್ಯಾರ್ಥಿಗಳಿಗಾಗಿ ಮೆಸ್ ಪ್ರಾರಂಭಿಸಿದ್ದ. ಡೊನೇಷನ್ ಕೊಟ್ಟು ಆಂಧ್ರದಿಂದ ಬಹಳಷ್ಟು ವಿದ್ಯಾರ್ಥಿಗಳು ಆ ಕಾಲೇಜಿನಲ್ಲಿ ಓದುತ್ತಿದ್ದುದರಿಂದ ಆಂಧ್ರ ಶೈಲಿಯ ಊಟಕ್ಕೆ ಬೇಡಿಕೆಯಿತ್ತು. ಶ್ರೀರಾಮ ವಿಶೇಷ ಕಾಳಜಿ ವಹಿಸಿ ತುಂಬ ಉಪ್ಪು, ಖಾರಗಳನ್ನು ಹಾಕಿ ಅಡುಗೆ ಮಾಡಿಸುತ್ತಿದ್ದ. ವಿದ್ಯಾರ್ಥಿಗಳು ಮೆಸ್‌ಗೇ ಲಿಕ್ಕರ್ ಬಾಟಲ್‌ಗಳನ್ನು ತಂದು ಊಟ ಮಾಡುತ್ತಿದ್ದರು. ಅದಕ್ಕೆಲ್ಲ ಶ್ರೀರಾಮ ವ್ಯವಸ್ಥೆ ಮಾಡುತ್ತಿದ್ದ. ಮುಕುಂದ ತನ್ನ ಗೆಳೆಯರೊಟ್ಟಿಗೆ ಕುಡಿದು ಊಟ ಮಾಡಲು ಈ ಮೆಸ್‌ಗೆ ಬರುತ್ತಿದ್ದ. ಶ್ರೀರಾಮನೊಂದಿಗೆ ಗೆಳೆತನವೂ ಕುದುರಿತು.

ಮುಕುಂದ ತಿಂದು, ಕುಡಿದು ದುಂದು ಮಾಡಿದ ಮೇಲೂ ದುಡ್ಡು ಸಾಕಷ್ಟು ಉಳಿಯುತ್ತಿತ್ತು. ಇದು ಶ್ರೀರಾಮನಿಗೆ ಗೊತ್ತಾಯಿತು. ಶ್ರೀರಾಮ ಬಡ್ಡಿ ನೀಡುವುದಾಗಿ ಹೇಳಿ ಮುಕುಂದನಿಂದ ಸಾಲ ಪಡೆದುಕೊಂಡ. ಸರಿಯಾಗಿ ಬಡ್ಡಿಯನ್ನು ನೀಡತೊಡಗಿದ. ಮುಕುಂದನಿಗೆ ಬಡ್ಡಿಯ ರುಚಿ ಹತ್ತಿತು. ಬೇರೆಯವರಿಗೂ ಬೇಕಿದ್ದರೆ ಬಡ್ಡಿಗಾಗಿ ಸಾಲ ಕೊಡುವೆ ಎಂದ ಮುಕುಂದ. ತನಗೆ ಗ್ಯಾರಂಟಿಯಿರುವ ಕೆಲವು ವ್ಯಾಪಾರಸ್ಥರಿಗೆ ಶ್ರೀರಾಮ ಮುಕುಂದನಿಂದ ಸಾಲ ಕೊಡಿಸಿದ. ಪ್ರತಿ ತಿಂಗಳೂ ಬಡ್ಡಿ ವಸೂಲಿಗಾಗಿ ಅಲೆದಾಡತೊಡಗಿದ. ಬಡ್ಡಿ ವಸೂಲಿಯಲ್ಲಿ ನೀನೂ ಶ್ರಮಪಡುತ್ತಿರುವಿ, ಬಂದ ಲಾಭದಲ್ಲಿ ನಿನಗೂ ಒಂದಷ್ಟು ಷೇರು ಕೊಡುವೆ ಎಂದ. ಇನ್ನಷ್ಟು ಹಿಗ್ಗಿನಿಂದ ಶ್ರೀರಾಮ ಸಾಲದ ವ್ಯವಹಾರಕ್ಕಾಗಿ ಓಡಾಡತೊಡಗಿದ.

ಶ್ರೀರಾಮನ ಕೈಯಲ್ಲಿ ಹಣ ಶೇಖರಣೆಗೊಳ್ಳತೊಡಗಿತು. ಮುಕುಂದನ ಸಾಲವನ್ನು ವಾಪಸ್ ಕೊಟ್ಟಿದ್ದೂ ಅಲ್ಲದೆ ತನ್ನ ಮೆಸ್ ಅನ್ನು ಹೋಟೆಲ್ ಆಗಿ ಪರಿವರ್ತಿಸಿದ. ಬಗೆಬಗೆಯ ಖಾದ್ಯಗಳನ್ನು ತಯಾರಿಸತೊಡಗಿದ. ತಾನೇ ಖುದ್ದು ಕುರಿ, ಮೇಕೆಗಳನ್ನು ಖರೀದಿಸಿ ತಂದು ಮಾಂಸ ತಯಾರಿಸುತ್ತಿದ್ದ. ಯಾವತ್ತಿಗೂ ಶ್ರೀರಾಮ ನಾಲ್ಕಾರು ಕುರಿಗಳನ್ನು ಕಟ್ಟಿರುತ್ತಿದ್ದ. ಇದು ವಿದ್ಯಾರ್ಥಿಗಳ ಮಧ್ಯೆ, ಶ್ರೀರಾಮನ ಮೆಸ್‌ನಲ್ಲಿ ಪ್ರತಿಯೊಂದು ಫ್ರೆಶ್ ಆಗಿರುತ್ತದೆಂದು ಪ್ರಚಾರಕ್ಕೆ ಬಂದಿತು. ವಿದ್ಯಾರ್ಥಿಗಳಷ್ಟೇ ಅಲ್ಲದೆ ಹೊರಗಿರಾಕಿಗಳೂ ಮೆಸ್‌ಗೆ ಧುಮುಕತೊಡಗಿದರು.

ಒಬ್ಬನಿಂದ ಇದನ್ನೆಲ್ಲ ಮೇಂಟೇನ್ ಮಾಡಲು ಆಗುವುದಿಲ್ಲವೆಂದು ಊರಲ್ಲಿದ್ದ ತನ್ನ ತಂದೆ, ಅಣ್ಣ ಮತ್ತು ತಂಗಿಯರನ್ನು ಕರೆಸಿದ.

ತಂದೆ ವೆಂಕಟಯ್ಯ ಹೃದ್ರೋಗಿ, ಎರಡು ಬಾರಿ ಆಪರೇಷನ್ ಕೂಡ ಆಗಿತ್ತು. ಹೆಚ್ಚಿನ ಆಯಾಸ ಮಾಡಿಕೊಳ್ಳದೆ ಗಲ್ಲಾಪೆಟ್ಟಿಗೆ ನೋಡಿಕೊಳ್ಳುತ್ತಿದ್ದ. ಅಣ್ಣ ಶ್ರೀನಿವಾಸ ಮೊದ್ದು ಮೊದ್ದಾಗಿದ್ದ. ಯಾರಾದರೂ ಮಾತಾಡಿಸಿದರೆ ಬೆಬ್ಬೆಬ್ಬೆ ಎಂದು ಗ್ಗುತ್ತಿದ್ದ. ತಂಗಿ ಪದ್ಮಾವತಿ ಸ್ಫುರದ್ರೂಪಿಯಾಗಿದ್ದಳು. ತಂದೆ ಮತ್ತು ಅಣ್ಣಂದಿರಿಗೆ ಅಡುಗೆ ಮಾಡುವುದು, ಬಟ್ಟೆ ತೊಳೆದು ಮನೆ ನೋಡಿಕೊಳ್ಳುವುದು ಅವಳ ಕೆಲಸವಾಗಿತ್ತು.

ಕುಡಿತ ಮತ್ತು ಇತರ ಷೋಕಿಗಳೊಂದಿಗೆ ಹುಡುಗಿಯರ ಚಟಕ್ಕೂ ಈಡಾಗಿದ್ದ ಮುಕುಂದನ ಕಣ್ಣಿಗೆ ಪದ್ಮಾವತಿ ಬಿದ್ದಳು. ನೋಡಿದ ದಿನದಂದೇ ಅವಳನ್ನು ಕೂಡುವ ಕನಸು ಕಂಡ.

ಮುಕುಂದ ಶ್ರೀರಾಮನ ಮನೆಗೆ ಬರುವುದು ಹೆಚ್ಚಾಗತೊಡಗಿತು. ವಿಶೇಷವಾಗಿ ಶ್ರೀರಾಮ ಇಲ್ಲದಾಗ ಬರತೊಡಗಿದ್ದ. ಇಷ್ಟೊತ್ತಿನಲ್ಲಿ ಅಣ್ಣ ಮನೆಯಲ್ಲಿರೋಲ್ಲ ಎಂದು ನಿಮಗೆ ಗೊತ್ತಿದ್ದರೂ ಬರುತ್ತಿದ್ದೀರಲ್ಲ ಎಂದು ಪದ್ಮಾವತಿ ಆಕ್ಷೇಪಿಸತೊಡಗಿದಳು. ಅದನ್ನು ನಿರ್ಲಕ್ಷಿಸಿದ ಮುಕುಂದ.

ನಿಮ್ಮ ಮೆಸ್ ಊಟ ಮಾಡಿ ಬಾಯಿ ಕಟ್ಟಿದಂತಾಗಿದೆ. ಪಕ್ಕಾ ಆಂಧ್ರದ ಅಡಿಗೆ ಮಾಡಿಸು ಮನೆಯಲ್ಲಿ, ಊಟಕ್ಕೆ ಬರುವೆ ಎಂದು ಮುಕುಂದ ಹೇಳಿದಾಗ ಶ್ರೀರಾಮ ಸಂತೋಷದಿಂದ ಆಹ್ವಾನವಿತ್ತ. ಮುಕುಂದನನ್ನು ತನ್ನ ಸಹೋದರನೆಂದೇ ತಿಳಿದುಕೊಂಡಿದ್ದ ಶ್ರೀರಾಮ. ಮನೆಯಲ್ಲಿ ಊಟ ಮಾಡಿಸಿದ ಮೇಲೆ ತಂದೆ, ಅಣ್ಣ, ತಂಗಿಯನ್ನು ಕರೆದು ಮುಕುಂದನೇ ತನ್ನ ಆರ್ಥಿಕ ಅಭಿವೃದ್ಧಿಗೆ ಕಾರಣೀಭೂತ ಎಂದು ಹೇಳಿದ. ಮುಕುಂದ ಅವರೆಲ್ಲರ ಎದುರಿಗೇ ತನ್ನ ಜೇಬಿನಿಂದ ಹತ್ತು ಸಾವಿರದ ಕಟ್ಟು ತೆಗೆದು ಶ್ರೀರಾಮನ ಕೈಗಿಟ್ಟು ಇದನ್ನು ನಿನಗೆ ವಿಶ್ವಾಸವಿದ್ದ ಯಾರಿಗಾದರೂ ಸಾಲ ಕೊಡು ಎಂದ. ಪದ್ಮಾವತಿಯ ಮುಂದೆ ತನ್ನ ಧಾರಾಳತನದ ಪ್ರದರ್ಶನ ಮಾಡಲೆಂದು ಹೀಗೆ ಹಣ ನೀಡಿದ ಮುಕುಂದ ಎನ್ನುವುದು ಶ್ರೀರಾಮನಿಗೆ ಹೊಳೆಯಲಿಲ್ಲ.

ಶ್ರೀರಾಮ ತನ್ನ ವ್ಯವಹಾರಕ್ಕೆ ಸಂಬಂಧಿಸಿದ ಕೆಲಸಕ್ಕಾಗಿ ಆಗಾಗ ಹೊಸೂರಿಗೆ ಹೋಗಿ ಬರುತ್ತಿದ್ದ.

ಹೀಗೆ ಶ್ರೀರಾಮ ಹೊಸೂರಿಗೆ ಹೋಗಿದ್ದ ಒಂದು ದಿನವನ್ನು ನೋಡಿ ಪದ್ಮಾವತಿಯನ್ನು ಭೋಗಿಸುವ ಯೋಜನೆ ಹಾಕಿದ ಮುಕುಂದ.

ಒಂದು ಬಾರಿ ಅವಳಿಗೆ, ನಿನ್ನನ್ನು ಸಂಪತ್ತಿನಲ್ಲಿ ತೇಲಾಡಿಸುತ್ತೇನೆ ಹಾಗೆ ಹೀಗೆ ಎಂದು ಏನೆಲ್ಲ ಆಮಿಷ ತೋರಿಸಿದ. ಪದ್ಮಾವತಿ, ಅದೆಲ್ಲ ನನಗೆ ಗೊತ್ತಿಲ್ಲ, ನೀವು ಮದುವೆಯಾಗುವುದಾದ್ರೆ ಅಣ್ಣನ್ನ ಕೇಳಿ ಎಂದಿದ್ದಳು. ಇವಳಿಗೆಂಥ ಸೊಕ್ಕು? ತನ್ನ ಸಂಪತ್ತು, ಇಂಜಿನಿಯರಿಂಗ್ ಕೋರ್ಸು ಇವಾವೂ ಇವಳಿಗೆ ಕಾಣುತ್ತಿಲ್ಲವೇ? ಮೊದಲೇ ಹಳ್ಳಿ ಗುಗ್ಗು, ಕತ್ತೆಗೇನು ಗೊತ್ತು ಹತ್ತಿ ಕಾಳು! ಕಣ್ಣು, ಮೂಗಿನಿಂದ ಒಂದಷ್ಟು ಸುಂದರಿಯಾಗಿದ್ದಾಳೆ ಎಂದುಕೊಂಡು ಪೂಸಿ ಹೊಡೆದರೆ ದೊಡ್ಡ ಧಿಮಾಕು ತೋರಿಸುತ್ತಿದ್ದಾಳೆ ಲೌಡಿ. ಅಷ್ಟಕ್ಕೂ ಇವಳಣ್ಣನಿಗೆ ಗೊತ್ತಾದ್ರೂ ಏನು ಮಾಡಿಯಾನು. ನನ್ನಿಂದ್ಲೇ ಇಷ್ಟೊಂದು ಅನುಕೂಲಸ್ಥನಾಗಿದ್ದಾನೆ ಈ ಶ್ರೀರಾಮ. ಆ ಋಣ ತೀರಿಸೋಕೆ ಪದ್ಮಾವತಿಯಂಥ ಹತ್ತು ಜನ ತಂಗಿಯರನ್ನ ಅಡ್ಡ ಹಾಕಬೇಕು ನಂಗೆ ಎಂದು ಮೆಲುಕುಹಾಕಿಕೊಂಡಿದ್ದ.

ಅಂದು ರಾತ್ರಿ ಶ್ರೀರಾಮನ ಮನೆಗೆ ಊಟ ಮಾಡಲು ಬಂದ ಮುಕುಂದ. ಶ್ರೀರಾಮನ ತಂದೆ ಮತ್ತು ಅಣ್ಣರಿಗೆ ಮುಕುಂದನ ಬಗ್ಗೆ ಬಹಳ ಗೌರವ ಭಾವನೆಯಿತ್ತಾದ್ದರಿಂದ ಧಾರಾಳವಾಗಿ ಮಾಡಿ ಎಂದು ಪದ್ಮಾವತಿಗೆ ಹೇಳಿ ವಿಶೇಷ ಅಡಿಗೆ ಮಾಡಿಸಿ ಬಡಿಸಿದರು. ಅಷ್ಟೊತ್ತಿಗೆ ಲೇಟ್ ಆಗಿತ್ತು, ತೀವ್ರ ಸುಸ್ತಾಗುತ್ತಿದೆ. ಬೈಕ್ ಓಡಿಸಲೂ ಆಗುತ್ತೋ ಇಲ್ವೋ ತಲೆ ಸುತ್ತು ಬರುತ್ತಿದೆಯೆಂದು ಒರಗಿಕೊಂಡ. ಇಲ್ಲೇ ಮಲಗಿದ್ದು ಬೆಳಗ್ಗೆ ಹೋಗಿ ಎಂದು ಅಣ್ಣ ಶ್ರೀನಿವಾಸ್ ಹಾಸಿಗೆ ಹಾಸಿಕೊಟ್ಟ. ಪದ್ಮಾವತಿ ಪ್ರತ್ಯೇಕ ರೂಮಿನಲ್ಲಿ ಮಲಗಿಕೊಂಡಳು. ಆ ರೂಮಿಗೆ ಬಾಗಿಲಿರಲಿಲ್ಲ. ಪರದೆಯನ್ನು ಹಾಕಿಕೊಂಡಿದ್ದಳು. ಮಧ್ಯರಾತ್ರಿಯ ನಂತರ ಎದ್ದು ಕೂತ ಮುಕುಂದ ಕಾಮದ ಹಸಿವಿನಿಂದ ಕಂಗೆಟ್ಟಿದ್ದ. ಶ್ರೀರಾಮನ ಅಪ್ಪ ಗೊರಕೆ ಹೊಡೆಯುವುದನ್ನೇ ಕಾಯುತ್ತಿದ್ದ. ಮುಕುಂದ ಕಣ್ಣುಮುಚ್ಚಿ ಪದ್ಮಾವತಿಯ ರೂಪ, ಮೈಮಾಟದ ನಾನಾ ಭಂಗಿಗಳನ್ನು ಕಲ್ಪಿಸಿಕೊಂಡು ಆಟ ನಡೆಸಿದ್ದ. ಕತ್ತಲಲ್ಲಿ ಎದ್ದು ಹೋಗಿ ಪದ್ಮಾವತಿಯ ರೂಮಿನೊಳಗೆ ಹೊಕ್ಕ. ಮಂದ ಬೆಳಕಿನಲ್ಲಿ ಪದ್ಮಾವತಿಯ ರೂಪ ನಿಗಿನಿಗಿಯಾಗಿ ಕುಕ್ಕಿತು ಮುಕುಂದನಿಗೆ. ಎದೆಯ ಮೇಲಿನ ದಾವಣಿ ಸರಿದಿತ್ತು. ಒಂದೇ ಪಟ್ಟಿಗೆ ಪದ್ಮಾವತಿಯ ಬಾಯಿಯನ್ನು ಗಟ್ಟಿಯಾಗಿ ಮುಚ್ಚಿ ಪಶುವಿನಿಂತೆ ಮೇಲೆರಗಿದ. ಎಚ್ಚರಾದ ಪದ್ಮಾವತಿಗೆ ಕೂಗಿಕೊಳ್ಳುವ ಅವಕಾಶವಿರಲಿಲ್ಲ. ಕಾಲು ಬಡಿಯುತ್ತ ಕೈಗಳಿಂದ ಅವನ ತಲೆ ಕೂದಲನ್ನು ಕೀಳತೊಡಗಿದಳು. ಈ ಒದ್ದಾಟದಲ್ಲಿ ನೀರು ತುಂಬಿಟ್ಟಿದ್ದ ತಂಬಿಗೆ ಮತ್ತು ಅದರ ಮೇಲಿನ ಲೋಟ ಉರುಳಿ ಸದ್ದಾಯಿತು. ಈ

ಸದ್ದಿಗೆ ತಂದೆ ವೆಂಕಟಯ್ಯ ಎದ್ದು ಲೈಟು ಹಾಕಿದ. ಮುಕುಂದ ಹಾಸಿಗೆಯಲ್ಲಿರಲಿಲ್ಲ. ಮಗಳ ರೂಮಿನೆಡೆಗೆ ನೋಡಿದ. ಒದ್ದಾಟದ ಅಸ್ಪಷ್ಟ ಶಬ್ದ ಕೇಳುತ್ತಿತ್ತು. ರೂಮಿನ ಡೋರ್ ಕರ್ಟನ್ ಸರಿಸಿ ಲೈಟ್ ಹಾಕಿ ಪದ್ಮಾವತಿ ಎಂದ. ಮುಕುಂದ ಪದ್ಮಾವತಿಯ ಮೇಲಿದ್ದ ದೃಶ್ಯ ನೋಡಿ ಹಾಂ ಎಂದು ಎದೆಯೊಡೆದುಕೊಂಡ. ಅಷ್ಟೊತ್ತಿಗೆ ಅಣ್ಣ ಶ್ರೀನಿವಾಸ ಎದ್ದು ಬಂದಿದ್ದ. ಕುಸಿದು ಬೀಳುತ್ತಿದ್ದ ತಂದೆಯನ್ನು ಹಿಡಿದುಕೊಂಡ. ಹಿಡಿದಿರುವಂತೆಯೇ ತಂದೆಯ ಪ್ರಾಣ ಹಾರಿಹೋಗಿ ಮೈ ತಣ್ಣಗಾಗತೊಡಗಿತು. ತಂದೆಯ ದೇಹವನ್ನು ಅಲ್ಲೇ ಮಲಗಿಸಿ ಮೂಲೆಯಲ್ಲಿದ್ದ ಕೋಲನ್ನು ಕೈಗೆ ತೆಗೆದುಕೊಂಡು ಜೋರಾಗಿ ಬೀಸಿದ. ಅಷ್ಟೊತ್ತಿಗೆ ಎದ್ದು ಪ್ಯಾಂಟ್ ಏರಿಸಿಕೊಂಡಿದ್ದ ಮುಕುಂದ ಆ ಹೊಡೆತ ತಪ್ಪಿಸಿಕೊಂಡು ಪಾರಾಗಿ ಹೊರಗೆ ಓಡಿದ.

ಅಪ್ಪ ಸತ್ತ ಸುದ್ದಿ ತಿಳಿದು ಮಾರನೆ ದಿನ ಶ್ರೀರಾಮ ಓಡೋಡಿ ಬಂದ.

ಪದ್ಮಾವತಿ ಅಣ್ಣನ ಪಾದಗಳ ಮೇಲೆ ಬಿದ್ದು, ಶ್ರೀರಾಮನಿಗೆ ಅತ್ಯಾಚಾರದ ವಿಷಯ ಹೇಳಬೇಡ, ಆದದ್ದನ್ನು ಇಲ್ಲಿಗೇ ಮುಚ್ಚೋಣ, ಇಲ್ಲದಿದ್ದರೆ ಮತ್ತೊಂದು ಅನಾಹುತಕ್ಕೆ ಎಡೆ ಮಾಡಿಕೊಟ್ಟಂತೆ ಆಗುತ್ತದೆ ಎಂದು ಪರಿಪರಿಯಾಗಿ ಬೇಡಿಕೊಂಡಿದ್ದಳು.

ಅಪ್ಪ ಸತ್ತದ್ದು ಏಕೆಂದು ಅಣ್ಣನನ್ನು ಕೇಳಿದ. ಮೊದ್ದು ಮೊದ್ದಾಗಿದ್ದ ಶ್ರೀನಿವಾಸನಿಗೆ ಪರ್‌ಫೆಕ್ಟ್ ಆಗಿ ನಾಟಕ ಮಾಡಲು ಸಾಧ್ಯವಿರಲಿಲ್ಲ. ತಂಗಿಯ ಕಡೆ ನೋಡತೊಡಗಿದ. ಅವಳು ಅದೇನೂ ಹೇಳಬೇಡ ಎನ್ನುವಂತೆ ಕಣ್‌ಸಂಜ್ಞೆ ಮಾಡಿದಳು. ಶ್ರೀರಾಮನಿಗೆ ಅನುಮಾನ ಬಂದಿತು. ಇವರು ತನ್ನಿಂದ ಏನು ಮುಚ್ಚಿಡುತ್ತಿದ್ದಾರೆ ಎಂದು ತಲೆಕೆಡಿಸಿಕೊಂಡ. ತಂದೆಯ ದೇಹಕ್ಕೆ ಕೊಳ್ಳಿಯಿಡುವಾಗಲೂ ಸಂಶಯದ ಹುಳ ಕೊರೆಯುತ್ತಲೇ ಇತ್ತು. ಏಕೆ ಸತ್ತ ಅಪ್ಪ? ಕೇವಲ ಹಾರ್ಟ್ ಅಟ್ಯಾಕ್ ಆಗಿದ್ದರೆ ಅಣ್ಣ–ತಂಗಿ ಇಬ್ಬರೂ ಏಕೆ ಸಂಜ್ಞೆಯಲ್ಲಿ ಮಾತಾಡಿಕೊಂಡರು?

ಅಂತ್ಯಕ್ರಿಯೆ ಮುಗಿಸಿ ಮನೆಗೆ ಬಂದು ಸಿಗರೇಟ್ ಸೇದುತ್ತ ಕೂತ. ಚಹದ ಲೋಟ ಹಿಡಿದುಕೊಂಡು ಬಂದ ತಂಗಿಯ ಮುಖದತ್ತ ನೋಡಿದ. ಕಣ್ಣುಗಳು ಕೆಂಪಾಗಿದ್ದವು. ಪಕ್ಕನೆ ಅವಳ ಗಲ್ಲದ ಮೇಲೆ ದೃಷ್ಟಿ ಹೋಯಿತು. ಕಚ್ಚಿದ ಕಲೆಗಳು ಕಂಡವು. ಅವಳಿಗೆ ಗೊತ್ತಾಗಬಾರದೆಂದು ಥಟ್ಟನೆ ದೃಷ್ಟಿ ಹೊರಳಿಸಿದ. ಅವಳಿಗೆ ತಿಳಿಯದಂತೆ ಅವಳ ದೇಹವನ್ನು ಗಮನಿಸತೊಡಗಿದ. ಕೈಗಳಲ್ಲಿ ಬಳೆಗಳೊಡೆದು ತಿರುಚಿದ ಗಾಯಗಳಾಗಿದ್ದಿರುವುದನ್ನು ಕಂಡ. ಕೆಟ್ಟ ಕಲ್ಪನೆಗಳು ಅದೇಕೆ ಬರುತ್ತಿವೆ

ಎಂದು ಮತ್ತೊಂದು ಸಿಗರೇಟ್ ಹಚ್ಚಿದ. ಕೊರೆದ ಕಡ್ಡಿಯನ್ನು ಮೂಲೆಗೆಸೆದ. ಕಣ್ಣುಗಳು ಅವಾಕ್ಕಾಗಿ ಮೂಲೆಯನ್ನೇ ನೋಡತೊಡಗಿದವು...... ಮುಕುಂದನ ಚಪ್ಪಲಿಗಳು! ಅಂತ್ಯಸಂಸ್ಕಾರದತ್ತ ಅವನು ಸುಳಿದೇ ಇಲ್ಲ! ಅವನ ನೆನಪೇ ಇರಲಿಲ್ಲವಲ್ಲ! ಹೌದು ಅವನು ಊರಲ್ಲಿದ್ದೂ ಅದ್ಹೇಗೆ ಶವಸಂಸ್ಕಾರಕ್ಕೆ ಬರಲಿಲ್ಲ ಎನ್ನುವ ಯೋಚನೆಗಳು ದೈತ್ಯಾಕಾರವಾಗಿ ಬೆಳೆಯತೊಡಗಿದವು. ಹಾಗೇ ಎದ್ದು ಅಣ್ಣನನ್ನು ಕರೆದುಕೊಂಡು ಹೊರಗೆ ನಡೆದ. ಸ್ವಲ್ಪ ದೂರ ಹೋಗಿ ಅಣ್ಣನನ್ನು ಕೇಳಿದ: ನನ್ನಿಂದ ಏನನ್ನು ಮುಚ್ಚಿಡುತ್ತಿದ್ದೀಯಾ? ಏಕೆ? ಏನಾಗಿದೆ ಹೇಳು? ಅಪ್ಪ ಏಕೆ ಸತ್ತ? ತಂಗಿಯ ಮುಖದ ಮೇಲೆ ಕಚ್ಚಿದ ಗಾಯಗಳೇಕೆ? ಮುಕುಂದನ ಚಪ್ಪಲಿಗಳು ಮನೆಯಲ್ಲಿ ಹೇಗೆ ಬಂದವು?

ಒಂದೊಂದು ಪ್ರಶ್ನೆಯೂ ಶ್ರೀನಿವಾಸನಿಗೆ ಬರಸಿಡಿಲಿನಂತೆರಗಿತು. ಏನೂ ಹೇಳಲಾಗದೆ ಮತ್ತು ಹೇಳದಿರಲಾಗದೆ ಬಿಕ್ಕಿ ಅಳತೊಡಗಿದ.

ಶ್ರೀರಾಮನು ತಾಳ್ಮೆ ಕಳೆದುಕೊಂಡು ಇಂದು ಸಾಯಂಕಾಲದೊಳಗೆ ಅದೇನು ನಡೆಯಿತೋ ಹೇಳದಿದ್ದರೆ ನೇಣು ಹಾಕಿಕೊಂಡು ಸಾಯುತ್ತೇನೆ ಎಂದು ಗುಡುಗಿದ.

ಅತ್ತ ತಂಗಿಗೆ ಕೊಟ್ಟ ಭಾಷೆ. ಇತ್ತ ತಮ್ಮನ ಆತ್ಮಹತ್ಯೆಯ ಬೆದರಿಕೆ ಇಕ್ಕಟ್ಟಿಗೆ ಸಿಕ್ಕು ಅಪ್ಪಚ್ಚಿಯಾಗಿಬಿಟ್ಟ ಶ್ರೀನಿವಾಸ. ಪೆಸ್ಟಿಸೈಡ್ಸ್ ಅಂಗಡಿಗೆ ಹೋಗಿ ಬಂದ ಶ್ರೀನಿವಾಸ. ಮನೆಯ ಹಿತ್ತಲಿಗೆ ಮುಸುರೆ ಚೆಲ್ಲಲು ಪದ್ಮಾವತಿ ಹೋದಾಗ ಕೆಳಗೆ ವಿಕಾರವಾಗಿ ಬಿದ್ದಿದ್ದ ಶ್ರೀನಿವಾಸನ ಬಾಯಲ್ಲಿ ಬುರುಗು ಬರುತ್ತಿತ್ತು. ಪದ್ಮಾವತಿ ಚಿಟ್ಟನೆ ಚೀರಿದಳು. ಶ್ರೀರಾಮ ಓಡಿಬಂದ. ಅಣ್ಣ ಕೀಟನಾಶಕ ಕುಡಿದಿರುವುದಕ್ಕೆ ಸಾಕ್ಷಿಯಾಗಿ ಡಬ್ಬ ಪಕ್ಕದಲ್ಲೇ ಬಿದ್ದಿತ್ತು. ಅಣ್ಣನನ್ನು ಅಪ್ಪಿ ಹಾಗೇ ಎತ್ತಿಕೊಂಡು ಆಟೋ ಸ್ಟ್ಯಾಂಡ್‌ವರೆಗೆ ಓಡಿ ಬಂದ. ಜೀವ ಉಳಿಯುವುದಿಲ್ಲ ಎಂದು ಡಾಕ್ಟರ್ ಹೇಳಿದರು. ಶ್ರೀನಿವಾಸನ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಎನಿಮಾ ಕೊಟ್ಟಿದ್ದರು. ಗ್ಲುಕೋಸ್ ಬಾಟ್ಲ್ ಹಚ್ಚಿದ್ದರು. ಶ್ರೀನಿವಾಸ ತಮ್ಮನತ್ತ ಹತ್ತಿರಕ್ಕೆ ಬಾ ಎನ್ನುವಂತೆ ನೋಡಿದ. ಅವನ ಬಾಯಿಯತ್ತ ತನ್ನ ಕಿವಿಗಳನ್ನೊಯ್ದ. 'ಮುಕುಂದ.....' ಎಂದು ಪಿಸುಗುಟ್ಟಿದ ಶ್ರೀನಿವಾಸ. ಇನ್ನೊಂದು ಮಾತಾಡಲೂ ಆಗದೆ ಪ್ರಜ್ಞೆ ತಪ್ಪಿದ. ಪ್ರಜ್ಞೆ ಮರಳಿ ಬರಲೇ ಇಲ್ಲ.

ತಂದೆಯ ಶವಸಂಸ್ಕಾರ ಮಾಡಿದ ಮಾರನೇ ದಿನವೇ ಅಣ್ಣನ ದೇಹ ಚಿತೆಯೇರಲು ಸಿದ್ಧವಾಗಿದ್ದನ್ನು ನೆನೆದು ಶ್ರೀರಾಮ ತಳಮಳಿಸಿದ. ಮುಕುಂದ ಮುಕುಂದ ಎಂದು ಜಾಗಟೆಯಂತೆ ಕಿವಿಗಳಲ್ಲಿ ಬಾರಿಸತೊಡಗಿತು. ಮೆಸ್ಸು, ವ್ಯವಹಾರ, ಬಡ್ಡಿ ಹಣ ಯಾವ ವಿಷಯಕ್ಕೂ ಅವಕಾಶವಿಲ್ಲದಂತೆ ಅನುರಣಿಸತೊಡಗಿತು.

ಅಣ್ಣನ ಶವಸಂಸ್ಕಾರ ಮುಗಿಸಿ ಅಣ್ಣ, ತಂಗಿ ಮನೆಯಲ್ಲಿ ಕೂತಿದ್ದರು. ಸಾಂತ್ವನ ಹೇಳುವ ಸಂಬಂಧಿಕರು ಕೆಲವರು ಬಂದಿದ್ದರು. ಶ್ರೀರಾಮ ಹಿತ್ತಲಿಗೆ ಹೋಗಿ ಅದೇನೋ ಬೇಕು ಎನ್ನುವವನಂತೆ ಪದ್ಮಾವತೀ ಎಂದು ಕೂಗಿದ. ಸೂರ್ಯ ಮುಳುಗುತ್ತಿದ್ದುದ್ದರಿಂದ ಬೆಳಕು ಕೆಂಪಾಗಿತ್ತು. "ನಾನು ಯಾರ ಮುಂದೂ ಹೇಳೊಲ್ಲ, ಯಾರಿಗೂ ಏನೂ ಮಾಡೊಲ್ಲ, ನಿನ್ನ ಮುಖವನ್ನು ಕಚ್ಚಿದ್ದು ಮುಕುಂದನಲ್ಲವೇ? ನಿನ್ನನ್ನು ರೇಪ್ ಮಾಡಿ ಓಡಿ ಹೋದನಲ್ಲವೇ? ಅಪ್ಪ ಆ ದೃಶ್ಯ ನೋಡಿ ಸತ್ತ ಅಲ್ಲವೇ? ತೀರಾ ತಣ್ಣನೆಯ ಧ್ವನಿಯಲ್ಲಿ ಈ ಎಲ್ಲ ಪ್ರಶ್ನೆಗಳನ್ನು ಕೇಳಿದಾಗ ಪದ್ಮಾವತಿ ಅಣ್ಣನ ತೆಕ್ಕೆಗೆ ಬಿದ್ದು ಬಿಕ್ಕಳಿಸುತ್ತಾ, "ಆ ಪಾಪಿ ನನ್ನನ್ನ ಕೆಡಿಸಿಬಿಟ್ಟಾ ಅಣ್ಣ" ಎಂದಳು!

"ನೀನೇನೂ ತಪ್ಪು ಮಾಡಿಲ್ಲ. ಯಾರ ಮುಂದೂ ಏನೂ ಬಾಯಿಬಿಡಬೇಡ. ಸುಮ್ಮನೆ ಇರು?" ಎಂದು ಹೇಳಿ ಅವಳನ್ನು ಒಳಗೆ ಕಳಿಸಿದ.

ಆ ರಾತ್ರಿ ಸಂಬಂಧಿಕರೊಂದಿಗೆ ಸಹಜವಾಗಿ ನಡೆದುಕೊಂಡ. ಮಾರನೇ ದಿನ ಬೆಳಗ್ಗೆ ಮುಕುಂದನ ರೂಮಿಗೆ ಹೋದ. ರೆಡಿಯಾಗಿ ಎಲ್ಲೋ ಹೊರಟು ನಿಂತಿದ್ದ ಮುಕುಂದ "ಛೆ, ನಿಮ್ಮಪ್ಪ, ಅಣ್ಣ ತೀರಿಹೋಗಿಬಿಟ್ಟರಂತಲ್ಲ? ನಾನು ನಿನ್ನನ್ನೇ ಮಾತಾಡಿಸೋಕೇ ಅಂತ ಹೊರಟಿದ್ದೆ. ನನ್ನ ಫ್ರೆಂಡ್ ಬಂದು ಬಿಡದೆ ನಂದಿ ಹಿಲ್ಸ್‌ಗೆ ಕರೆದುಕೊಂಡು ಹೋಗಿದ್ದ. ರಾತ್ರಿ ಲೇಟ್ ಆಗಿ ಬಂದೆವು. ವಿಷಯ ಬೆಳಿಗ್ಗೆ ತಿಳಿಯಿತು" ಎನ್ನುತ್ತ ಒಣಗುತ್ತಿದ್ದ ತುಟಿಗಳನ್ನು ನಾಲಿಗೆಯಿಂದ ತೇವ ಮಾಡಿಕೊಂಡ.

"ನನ್ನ ದುರದೃಷ್ಟಕ್ಕೆ ಯಾರೇನು ಮಾಡುತ್ತಾರೆ. ಹ್ಞ, ನನಗೆ ಆತ್ಮೀಯ ಎಂದರೆ ನೀನೊಬ್ಬನೇ. ನಿನ್ನ ಮುಂದೆ ದುಃಖ ತೋಡಿಕೊಂಡರೆ ಎದೆ ಹಗುರಾಗುತ್ತದೆ" ಎನ್ನುತ್ತ ಮುಕುಂದ ತೊಟ್ಟಿದ್ದ ಹೊಸ ಚಪ್ಪಲಿಗಳತ್ತ ವಾರೆನೋಟ ಬೀರಿದ.

"ಬಹಳ ಬೇಜಾರಾಗಿದೆ. ಇವತ್ತು ನಾನು ಡ್ರಿಂಕ್ಸ್ ತೊಗೋತೇನೆ. ನೀನು ಯಾವಾಗ್ಲೂ ಒತ್ತಾಯಿಸುತ್ತಿದ್ದಿ. ನಾನು ತೊಗೋತಿರಲಿಲ್ಲ. ಇಬ್ಬರೂ ಎಲ್ಲಾದ್ರೂ ಕುಡಿಯಲು ಕೂಡೋಣ" ಎಂದ ಶ್ರೀರಾಮ.

"ಅಲ್ಲಿ ಇಲ್ಲಿ ಯಾಕೆ, ನಿಮ್ಮ ಮೆಸ್‌ನಲ್ಲೇ ಕೂಡೋಣ" ಎಂದ ಮುಕುಂದ. ಇವನಿಗೆ ಆ ರಾತ್ರಿಯ ಘಟನೆ ಗೊತ್ತಾಗಿಲ್ಲ. ಸದ್ಯ ಪಾರಾದೆ ಎಂದು ನಿಟ್ಟುಸಿರುಬಿಟ್ಟ ಮುಕುಂದ.

ಬಾಟ್ಲ್ ತೆಗೆದುಕೊಂಡು ಮೆಸ್‌ಗೆ ಹೋಗಿ ಕೂತಾಗ ಮಧ್ಯಾಹ್ನವಾಗಿತ್ತು. ಶ್ರೀರಾಮ ಕುಡಿಯುವಂತೆ ನಟಿಸಿದ. ಆದರೆ ಮುಕುಂದ ಚೆನ್ನಾಗಿ ಕುಡಿಯತೊಡಗಿದ. ಮುಕುಂದನಿಗೆ ಅಮಲೇರಿತು. "ನಿನ್ನ ತಂದೆ, ಅಣ್ಣ ಸಾಯಬಾರದಿತ್ತು" ಎಂದು ಅಳತೊಡಗಿದ.

"ನಾನೇ ಅಳುತ್ತಿಲ್ಲ, ನೀನೇಕೆ ಅಳುತ್ತಿ" ಎಂದು ಶ್ರೀರಾಮನೇ ಸಮಾಧಾನಪಡಿಸಿದ. "ಇವೆಲ್ಲ ನಡೀತಿರ್ತವೆ. ನಾವು ನಮ್ಮ ಕೆಲಸಗಳತ್ತ ಗಮನಕೊಟ್ಟರೆ ಇದ್ದವರ ಬದುಕು ಸಾಗುತ್ತದೆ. ಸತ್ತವರ ಹಿಂದೆ ಸಾಯಲಿಕ್ಕಾಗುತ್ತದಾ? ಎಂದು ಶ್ರೀರಾಮ ವಿಷಣ್ಣ ನಗೆ ಬೀರಿದ. "ನಡಿ ಪೀಣ್ಯಕ್ಕೆ ಹೋಗಿ ಬರೋಣ. ನನ್ನ ಫ್ರೆಂಡ್ ಜಯರಾಮನ ಜೊತೆಗೆ ಒಂದಷ್ಟು ಕುಡಿಯೋಣ" ಎಂದ ಶ್ರೀರಾಮ.

ಗೋಕುಲ ಎಕ್ಸ್‌ಟೆನ್ಶನ್‌ನಿಂದ ಪೀಣ್ಯಕ್ಕೆ ಹೋಗಲು ಎಚ್‌ಎಂಟಿ ಫ್ಯಾಕ್ಟರಿ ಮತ್ತು ಅಲಂದಾ ಫ್ಯಾಕ್ಟರಿಯ ಕಾಂಪೌಂಡ್ ಅನ್ನು ಬಳಸಿಕೊಂಡು ಒಂದು ಷಾರ್ಟ್‌ಕಟ್ ರಸ್ತೆಯಿತ್ತು. ಇವರಿಬ್ಬರೂ ಬಡ್ಡಿ ವಸೂಲಿಗೆ ಪೀಣ್ಯಕ್ಕೆ ಯಾವಾಗ್ಲೂ ಹೋಗುತ್ತಿದ್ದ ರಸ್ತೆ ಅದಾಗಿತ್ತು. "ಸ್ವಲ್ಪ ಜಾಸ್ತಿ ತೊಗೊಂಡಿದೀಯ, ಜಾಗರೂಕವಾಗಿ ಓಡಿಸು ಗಾಡಿಯನ್ನ" ಎಂದ ಶ್ರೀರಾಮ. ಸಂಜೆ ಮಸುಕು ಕವಿಯತೊಡಗಿತ್ತು. ಅಲಂದಾ ಫ್ಯಾಕ್ಟರಿಯ ಕಾಂಪೌಂಡ್ ಗುಂಟ ಹೋಗುವ ರಸ್ತೆ ಇಕ್ಕಟ್ಟಿನದು. ಇಕ್ಕೆಲಗಳಿಗೆ ಗಿಡಗಂಟಿಗಳಿದ್ದು ಹೆಚ್ಚು ಕತ್ತಲಾದಂತೆ ಕಾಣತೊಡಗಿತ್ತು. ಅಲಂದಾ ಫ್ಯಾಕ್ಟರಿ ದಾಟಿರಲಿಲ್ಲ. "ಮೂತ್ರ ಮಾಡಬೇಕು ನಿಲ್ಲಿಸು" ಎಂದ ಶ್ರೀರಾಮ. ಇಳಿದು ಮೂತ್ರ ಮಾಡಿ ಬರುವವರೆಗೆ ಇಂಜಿನ್ ಚಲಿಸುತ್ತಿದ್ದ ಮೋಟಾರ್ ಬೈಕ್ ಮೇಲೆ ಕೂತಿದ್ದ ಮುಕುಂದ. ಶ್ರೀರಾಮ ಬಂದುದು ಗೊತ್ತಾಗಿ "ಕೂತೆಯಾ?" ಎಂದ.

"ಲೇ ಮುಕುಂದ ಇಂದು ನಿನ್ನ ಕತೆ ಮುಗಿಯಿತು. ನನ್ನ ತಂಗಿಯನ್ನು ಕೆಡಿಸಿದಿ. ಅಪ್ಪ, ಅಣ್ಣರ ಜೀವ ತಿಂದಿ" ಈ ಮಾತುಗಳನ್ನು ಕೇಳುತ್ತಲೇ ಮುಕುಂದನಿಗೆ ಕುಡಿದ ನಶೆಯೆಲ್ಲಾ ಜರ್ರನೇ ಇಳಿದು 'ಹಾಂ' ಎಂದು ಬೈಕ್ ಮೇಲೆ ಕೂತಲ್ಲಿಂದಲೇ ತಿರುಗಿದ. ಶ್ರೀರಾಮ ಬೆನ್ನ ಹಿಂದೆ ಬಚ್ಚಿಟ್ಟುಕೊಂಡಿದ್ದ ಮಚ್ಚು ಎತ್ತಿಕೊಂಡು ನಿಂತಿದ್ದ! ಮುಕುಂದನ ಗಂಟಲಿನಿಂದ ಸ್ವರ ಹೊರ ಬೀಳಲೂ ಆಸ್ಪದ ನೀಡದಂತೆ ರುಂಡವನ್ನು ಕಡಿದ!

ಮೆಸ್‌ನಿಂದ ಹೊರಡುವಾಗ ಶ್ರೀರಾಮ ಬೆನ್ನಲ್ಲಿ ಮಚ್ಚನ್ನು ಸಿಕ್ಕಿಸಿಕೊಂಡು ಮೇಲೆ ಜರ್ಕಿನ್ ತೊಟ್ಟುಕೊಂಡಿದ್ದರ ಅರಿವು ಮುಕುಂದನಿಗಿರಲಿಲ್ಲ.

ಬೆಳಿಗ್ಗೆ ಅಲಂದಾ ಫ್ಯಾಕ್ಟರಿಯ ಮಾಲೀಕ ಬಾಂಬೆಗೆ ಹೋಗುವ

ತರಾತುರಿಯಲ್ಲಿದ್ದರು. ತಮ್ಮ ರೂಮಿನ ಕಿಟಕಿಯಿಂದ ಹೊರಕ್ಕೆ ಕಣ್ಣು ಹಾಯಿಸಿದರು. ಕಾಗೆಗಳು ಹಾರಾಡುತ್ತಿದ್ದವು. ಕಿಟಕಿಯ ಹತ್ತಿರಕ್ಕೆ ಬಂದು ನೋಡಿದರು. ಬಿದಿರು ಮೆಳೆಯಲ್ಲಿ ಹೆಣ ನೇತಾಡುತ್ತಿರುವುದು ಕಾಣಿಸಿತು. ಕೂಡಲೇ ಪೋಲೀಸರಿಗೆ ಫೋನ್ ಮಾಡಿದರು.

ಅಲಂದಾ ಫ್ಯಾಕ್ಟರಿಯ ಮಾಲೀಕರು ಬಾಂಬೆಗೆ ಹೋಗುವ ಗಡಿಬಿಡಿಯಲ್ಲಿದ್ದುದ್ದರಿಂದ ತಮ್ಮ ವಾಚ್‌ಮನ್ ಮೂಲಕ ಪೋಲೀಸರಿಗೆ ದೂರು ನೀಡಿಸಿ ಬಾಂಬೆಗೆ ಹೊರಟು ಹೋದರು.

ಪೋಲೀಸರು ಬಂದು ಮುಕುಂದನ ಹೆಣವನ್ನು ಬೇಲಿ ಮೆಳೆಯಿಂದ ತೆಗೆದಾಗ ಶವದ ಮೇಲಿದ್ದ ಭಾರೀ ಆಭರಣಗಳು ಪೋಲೀಸರ ಕಣ್ಣು ಕುಕ್ಕಿದವು. ಆ ಆಭರಣಗಳನ್ನೆಲ್ಲ ಎತ್ತಿಟ್ಟುಕೊಂಡರು. ಆಭರಣ ಮತ್ತು ಮೋಟಾರ್ ಸೈಕಲ್ ಅಲ್ಲಿದ್ದವೆಂಬ ಬಗ್ಗೆ ಶವದ ಪಂಚನಾಮೆಯಲ್ಲಿ ತೋರಿಸಲಿಲ್ಲ. ಅವನ ಯಮಹಾ ಬೈಕ್ ಅನ್ನೂ ಕದ್ದು ಇಟ್ಟುಕೊಂಡರು.

ಒಡವೆ, ಹಣ, ಬೈಕ್ ಕದಿಯಲಿಕ್ಕಾಗಿ ಕೊಲೆ ಮಾಡಲಾಗಿದೆಯೆಂದು ಕೇಸ್ ರಿಜಿಸ್ಟರ್ ಮಾಡಿಕೊಂಡರು. ಅಂದರೆ ಮರ್ಡರ್ ಫಾರ್ ಗೇನ್ ಆಗಿದೆ ಎಂದು ತೋರಿಸುವ ಪ್ರಯತ್ನ ಮಾಡಿದರು. ಈ ವಿಷಯ ತಿಳಿದು ಮೆಡಿಕಲ್ ಕಾಲೇಜಿನ ಹುಡುಗ–ಹುಡುಗಿಯರ ದಂಡು ಬಂದಿಳಿಯಿತು. ಜನ ಬರುವಷ್ಟರಲ್ಲಿ ಪೋಲೀಸರು ಆಭರಣ ಮತ್ತು ಬೈಕ್‌ಗಳನ್ನು ಬೇರೆಡೆಗೆ ಸಾಗಿಸಿದ್ದರು. ವಾಚ್‌ಮನ್‌ಗೆ ಗದರಿಸಿ ತಾವು ಬರೆದುಕೊಂಡದ್ದಕ್ಕೆ ಸಹಿ ಮಾಡಿಸಿಕೊಂಡರು. ಮುಂದೆ ಕೋರ್ಟಿನಲ್ಲಿ ನಾವು ಹೇಳಿಕೊಟ್ಟಂತೆ ಹೇಳಬೇಕೆಂದೂ ನಿರ್ಬಂಧಿಸಿದರು. ಯಾರು ಕೇಳಿದರೂ ಶವದ ಮೇಲೆ ಒಡವೆಗಳಿದ್ದವು ಎಂದು ಹೇಳಬಾರದೆಂದು ತಾಕೀತು ಮಾಡಿಹೋದರು.

ಮುಕುಂದ ಸಾಯುವ ದಿನ ಕೊನೆಯ ಬಾರಿಗೆ ಅವನೊಂದಿಗೆ ಇದ್ದವ ಶ್ರೀರಾಮ ಎನ್ನುವುದು ತನಿಖೆಯಿಂದ ಬಯಲಾಯಿತು. ಶ್ರೀರಾಮನನ್ನು ಪೋಲೀಸರು ಬಂಧಿಸಿದರು. ಒಡವೆ, ಹಣ, ಬೈಕ್‌ಗಳಾಸೆಗೆ ಕೊಲೆ ಮಾಡಿರುವುದಾಗಿ ಹೇಳು ಎಂದು ಚಿತ್ರಹಿಂಸೆ ನೀಡಿದರು. ಆದರೆ ಶ್ರೀರಾಮ ಮಾತ್ರ ಮುಚ್ಚಿದ ಬಾಯಿಯನ್ನು ತೆಗೆಯಲೇ ಇಲ್ಲ. ಪೋಲೀಸರ ಲಾಠಿಗಳೇ ಸುಸ್ತಾದವು.

ಹೈದ್ರಾಬಾದ್‌ನಿಂದ ಮುಕುಂದನ ತಂದೆತಾಯಿಗಳು ಬಂದು ಬೆಂಗಳೂರಲ್ಲಿ ತಳವೂರಿ ತಮ್ಮ ಮಗನ ಕೊಲೆಗಾರನನ್ನು ಶೋಧಿಸಲೇಬೇಕೆಂದು ಪಟ್ಟುಹಿಡಿದು

ಕೂತಿದ್ದರಿಂದ ಮತ್ತು ಪೊಲೀಸರಿಗೆ ಲಂಚ ನೀಡಿದ್ದರಿಂದ ತನಿಖೆಯನ್ನು ತೀವ್ರಗೊಳಿಸಲಾಗಿತ್ತು. ಮುಕುಂದನ ತಂದೆ, ತಾಯಿಗಳ ಎದೆಯೊಡೆದುಹೋಗಿತ್ತು. ಇದ್ದ ಒಬ್ಬನೇ ಮಗನನ್ನು ಹೀಗೆ ಅಪಾಪೋಲಿಯಾಗಲು ಬಿಡಬಾರದಿತ್ತು ಎಂದು ಪಶ್ಚಾತ್ತಾಪಪಟ್ಟುಕೊಂಡರು. ಹಣಕ್ಕಾಗಿ ಮಗನ ಪ್ರಾಣವನ್ನೇ ಕಿತ್ತುಕೊಂಡ ಕ್ರೂರಿಯನ್ನು ಪತ್ತೆಹಚ್ಚಲೇಬೇಕೆಂದು ಪೊಲೀಸರ ಕೈಬಾಯಿಗಳಿಗೆ ಮತ್ತಷ್ಟು ಹಣ ಸುರಿದರು. ಮುಕುಂದನ ಶವದ ಮೇಲಿದ್ದ ಒಡವೆಗಳ ಮೊತ್ತಕ್ಕಿಂತ ನಾಲ್ಕೈದು ಪಟ್ಟು ಲಂಚ ಸಿಕ್ಕಿತು. ಆಗ ಆ ಒಡವೆಗಳನ್ನು ಒಬ್ಬ ಗಿರವಿ ಅಂಗಡಿಯವನ ಬಳಿ ಕೊಟ್ಟು ಶ್ರೀರಾಮನೇ ಮಾರಿಹೋಗಿದ್ದಾನೆನ್ನುವಂತೆ ಹೇಳಿಕೆ ದಾಖಲಿಸಿಕೊಂಡರು. ಅದೇ ರೀತಿ ಬೈಕ್ ಅನ್ನೂ ಒಂದು ಗ್ಯಾರೇಜ್‌ನಲ್ಲಿ ಶ್ರೀರಾಮನೇ ಮಾರಿದ್ದಾಗಿ ಸಾಕ್ಷಿ ಸೃಷ್ಟಿಸಿದರು.

ಶ್ರೀರಾಮನ ಪರ ನಾನು ವಕಾಲತ್ ಹಾಕಿದೆ. ಕೇಸನ್ನು ಬೇರೆಯವರು ತಂದುಕೊಟ್ಟಿದ್ದರು. ಶ್ರೀರಾಮನನ್ನು ಭೇಟಿಯಾಗಲು ನಾನು ಜೈಲಿಗೆ ಹೋದೆ. ಅಲ್ಲಿ ಸೂಪರಿಂಟೆಂಡೆಂಟ್ ನನಗೆ ಪರಿಚಯದವರಿದ್ದರು. ತಮ್ಮ ಚೇಂಬರ್‌ನಲ್ಲಿಯೇ ನನ್ನನ್ನು ಕೂರಿಸಿಕೊಂಡು ಅಲ್ಲಿಗೇ ಶ್ರೀರಾಮನನ್ನು ಕರೆಸಿದರು. ನಾನು ವಿವರಗಳನ್ನು ಕೆದಕಿದೆ. ಶ್ರೀರಾಮ ಸೂಪರಿಂಟೆಂಡೆಂಟ್ ಕಡೆ ನೋಡತೊಡಗಿದ. "ಆಯಿತು, ನೀನು ನಿನ್ನ ವಕೀಲರ ಮುಂದೆ ಅದೇನು ಸೀಕ್ರೆಟ್ ಆಗಿ ಹೇಳ್ಕೋಳೋದು ಇದೆಯೋ ಹೇಳ್ಕೋ" ಎಂದು ಎದ್ದು ಹೊರಹೊರಟರು. ಸೂಪರಿಂಟೆಂಡೆಂಟ್ ಚೇಂಬರ್‌ನಲ್ಲಿ ನಾವಿಬ್ಬರೇ. ದಿಢೀರ್‌ನೇ ನನ್ನ ಪಾದಗಳ ಮೇಲೆ ಬಿದ್ದು ಅಳತೊಡಗಿದ ಶ್ರೀರಾಮ. ಅವನ ಭುಜಗಳನ್ನು ಹಿಡಿದು ಮೇಲೆತ್ತಿದೆ. ತನ್ನ ಕತೆಯನ್ನೆಲ್ಲ ಹೇಳಿದ.....

"ಅವನ ಒಡವೆ, ಬೈಕ್‌ಗಳನ್ನು ಏನು ಮಾಡಿದೆ" ಎಂದು ಕೇಳಿದೆ.

"ನನ್ನ ತಾಯಿಯಾಣೆಗೂ ಅದನ್ನು ನಾನು ಮುಟ್ಟಿಲ್ಲ ಸ್ವಾಮಿ". ಶ್ರೀರಾಮನ ಉತ್ತರದಿಂದ ಚಕಿತನಾದೆ.

"ಹಾಗಾದರೆ ನೀನು ಗಿರವಿ ಅಂಗಡಿಯವನ ಬಳಿ ಮಾರಿಕೊಂಡಿಲ್ಲ?"

"ಇಲ್ಲ ಸ್ವಾಮಿ ಅದೆಲ್ಲ ಪೊಲೀಸರು ಸೃಷ್ಟಿಸಿದ ಕತೆ".

"ಬಿಡು. ನೀನು ನಿಶ್ಚಿಂತನಾಗಿರು" ಎಂದು ಹೇಳಿ ಹೊರಬಂದೆ.

ನಾನು ಆನಂತರ ವಿಚಾರಣೆ ಸಮಯದಲ್ಲಿ ಶವದ ಮೇಲೆ ಒಡವೆಗಳಿದ್ದ ವಿಷಯವನ್ನು ತಿಳಿಯಲು ಬೇರೆಯವರಿಂದ ಅಲಂದಾ ಫ್ಯಾಕ್ಟರಿಯ ವಾಚ್‌ಮನ್‌ನನ್ನು

ಸಂಪರ್ಕಿಸಿದೆ. ಶವದ ಮೇಲೆ ಒಡವೆಗಳಿದ್ದವಾ ಎಂದುದಕ್ಕೆ ಅವನು ತಡವರಿಸತೊಡಗಿದ. "ಪೊಲೀಸರು ಇದ್ದಿಲ್ಲ ಎಂದು ಹೇಳು ಅಂತ ಹೇಳವ್ರೆ ಬುದ್ಧಿ" ಎಂದ!

"ನೀನಲ್ಲದೆ ಮತ್ತಾರು ಮೊದಲು ಶವ ನೋಡಿದರು?"

"ಎಲ್ಲರಿಗಿಂತ ಮುಂಚೆ ನಮ್ಮ ಮಾಲೀಕರೇ ನೋಡಿದ್ದು ಬುದ್ಧಿ. ಅವರು ಕರೆದ ಮ್ಯಾಕೇ ನಾನು ನೋಡಿದ್ದು. ಅವರು ಬೊಂಬಾಯಿಗೆ ಹೋಗೋ ಗಡಿಬಿಡಿಯಲ್ಲಿದ್ದರು. ಪೊಲೀಸರಿಗೆ ಹೇಳಿಕೆ ಕೊಡುವ ಕೆಲಸ ನಂಗೆ ವಹಿಸಿ ಹೋದರು ಅವತ್ತು"

ಅಷ್ಟರಲ್ಲಿ ವಾಚ್‌ಮನ್‌ನ ಹೆಂಡತಿ ಕಣ್ಣಗಲಿಸಿಕೊಂಡು ಬಂದು "ನೀನು ಕಂಡೋರಿಗೆಲ್ಲ ಏನೇನೋ ಹೇಳ್ತಾ ನಿಲ್‌ಬ್ಯಾಡಾ ಬಾ ಒಳಕ್ಕೆ" ಎಂದು ಗದರಿಸಿ ಕರೆದೊಯ್ದಳು.

ಬೆಂಗಳೂರು ಉತ್ತರ ತಾಲ್ಲೂಕಿನ ಕಾಂಗ್ರೆಸ್ ಲೀಡರ್ ಆಗಿದ್ದ ಪೀಣ್ಯದ ವಾಸಿ ಆರ್. ರಾಜಣ್ಣ ಒಂದು ಅವಧಿಗೆ T.D.B ಸದಸ್ಯರೂ ಆಗಿದ್ದ. ನನಗೆ ತುಂಬಾ ಪರಿಚಿತರಾಗಿದ್ದ ರಾಜಣ್ಣನವರ ಮೂಲಕ ಸಂಪರ್ಕಿಸಿದರೆ ಫ್ಯಾಕ್ಟರಿಯ ಮಾಲೀಕರು ನನ್ನ ಕೇಸಿಗೆ ಸಹಕರಿಸಬಹುದು ಎಂದು ಎಣಿಸಿದೆ.

"ಅಲಂದಾ ಫ್ಯಾಕ್ಟರಿಗೆ ಜಾಗ ಕೊಡಿಸಿದ್ದೇ ನಾನು, ನೀವೇನೂ ಚಿಂತಿಸಬೇಡಿ. ಈಗಲೇ ಅವರ ಬಳಿಗೆ ಕರೆದೊಯ್ಯುವೆ" ಎಂದು ರಾಜಣ್ಣ ಹೇಳಿದಾಗ ಸಮಸ್ಯೆ ಎಷ್ಟು ಸರಳವಾಗಿ ಬಗೆಹರಿಯಿತಲ್ಲ ಎಂದು ಖುಷಿಗೊಂಡೆ.

ಅಲಂದಾ ಫ್ಯಾಕ್ಟರಿಯ ಮಾಲೀಕ ತುಕಾರಾಮ್ ಅವರಿಗೆ, ಶ್ರೀರಾಮನ ದುರಂತ ಕಥೆಯನ್ನೆಲ್ಲ ವಿವರಿಸಿದೆ. ನೀವು ಕೋರ್ಟಿಗೆ ಬಂದು ಒಂದೇ ಒಂದು ಹೇಳಿಕೆ ನೀಡಿದರೆ ಸಾಕು ಅವನಿಗಾಗುವ ಗಲ್ಲು ಶಿಕ್ಷೆ ತಪ್ಪುತ್ತೆ ಎಂದು ವಿನಂತಿಸಿಕೊಂಡೆ.

ಆಶ್ವಾಸನೆ ಸಿಕ್ಕಿದ್ದೇ ತಡ, ನನ್ನ ಕೇಸು ಗೆದ್ದಿತು ಎಂದುಕೊಂಡೆ. ಅಷ್ಟರಲ್ಲಿ ಅವರ ವಾಚ್‌ಮನ್ ಹೇಳಿಕೆ ಕೋರ್ಟಿನಲ್ಲಿ ಮುಗಿದಿತ್ತು. ಶವದ ಮೇಲೆ ಒಡವೆಗಳು ಇರಲಿಲ್ಲ. ಅಷ್ಟೇ ಅಲ್ಲದೆ ಅಲ್ಲೆಲ್ಲಿಯೂ ಮೋಟಾರ್ ಸೈಕಲ್ ಇರಲಿಲ್ಲ ಎಂದು ಹೇಳಿದ್ದ.

ಪೊಲೀಸರು ಗಿರವಿ ಅಂಗಡಿಯವ ಮತ್ತು ಗ್ಯಾರೇಜ್ ಮೆಕ್ಯಾನಿಕ್‌ನ ಸಾಕ್ಷಿಗಳನ್ನು ಕೋರ್ಟಿನಲ್ಲಿ ಹಾಜರುಪಡಿಸಿ ಶ್ರೀರಾಮ ಒಡವೆಗಳಾಸೆಗೆ ಕೊಲೆ

ಮಾಡಿದ ಎಂದು ವಾದ ಮಂಡಿಸಿದರು. ಪೊಲೀಸರ ಸರ್ಕಸ್ಸೆಲ್ಲ ಮುಗಿದ ಮೇಲೆ, ನೇರವಾಗಿ ಕೋರ್ಟೇ ಅಲಂದಾ ಫ್ಯಾಕ್ಟರಿಯ ಮಾಲೀಕ ತುಕಾರಾಮ್ ಅವರ ಹೇಳಿಕೆಯನ್ನು ಪಡೆದುಕೊಂಡು ಕೇಸನ್ನು ಇತ್ಯರ್ಥಗೊಳಿಸಬೇಕೆಂದು ವಿನಂತಿಸಿಕೊಂಡೆ.

ಪೊಲೀಸರು ಕಂಗಾಲಾಗಿ ಹೋದರು. ಫ್ಯಾಕ್ಟರಿಯ ಮಾಲೀಕರಿಗೆ ಹೋಗಿ ಅಂಗಲಾಚಿ ಬೇಡಿಕೊಂಡರು. ಅದಕ್ಕೆ ಬಗ್ಗದಿದ್ದಾಗ ಧಮ್‌ಕಿಯನ್ನು ಹಾಕಿ ನೋಡಿದರು.

ತುಕಾರಾಮ್ ತೀರಾ ದೈವೀಭಕ್ತರು. "ನಾನು ಅಂದು ಕಂಡ ಸತ್ಯವನ್ನು ಹೇಳದಿದ್ದರೆ ಒಬ್ಬನ ತಲೆ ಹೋಗುತ್ತದೆ. ನನ್ನ ಹೇಳಿಕೆಯಿಂದಾಗಿ ಒಬ್ಬನ ಕೊರಳಿಗೆ ಗಲ್ಲು ತಪ್ಪುವುದಿದ್ದರೆ ನನಗೆಂಥ ಪುಣ್ಯ ಬರುತ್ತದೆ!" ಎಂದು ಖಡಾಖಂಡಿತವಾಗಿ ಪೊಲೀಸರಿಗೆ ಹೇಳಿದರು.

ನಾನು ಕೋರ್ಟಿನಲ್ಲಿ ಹಾಕಿಕೊಂಡ ಅರ್ಜಿ ಊರ್ಜಿತವಾಗಿ ತುಕಾರಾಮ್ ಅವರು ಕೋರ್ಟ್ ಸಾಕ್ಷಿಯಾಗಿ ಬಂದರು. ಕೊಲೆಯಾದ ಮಾರನೆಯ ದಿನ ತಾವು ಶವವನ್ನು ಕಂಡಾಗ ಅದರ ಮೈ ಮೇಲಿದ್ದ ಒಡವೆಗಳ ವಿವರಗಳನ್ನು ಮತ್ತು ಪಕ್ಕದಲ್ಲೇ ಬಿದ್ದಿದ್ದ ಮೋಟಾರ್ ಸೈಕಲ್ ವಿವರಗಳನ್ನು ಕೊಟ್ಟರು. ಪೊಲೀಸರು ಶವವಿದ್ದ ಜಾಗಕ್ಕೆ ಬರುವ ಮುನ್ನವೇ ಅಲ್ಲಿಂದ ಹೊರಟುಹೋದರೆ ಅಲ್ಲಿ ಸೇರಿದ ಜನರು ಒಡವೆಗಳನ್ನು ಕದಿಯಬಹುದೆಂದು ಭಾವಿಸಿ ಪೊಲೀಸರು ಬರುವವರೆಗೂ ಅಲ್ಲಿದ್ದುದಾಗಿಯೂ, ಅವರು ಬಂದ ನಂತರ ತಮಗೆ ಅನ್ನಿಸಿದ್ದನ್ನು ಅವರಿಗೆ ತಿಳಿಸಿ ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಹೊರಟಿದ್ದಾಗಿಯೂ ಕೋರ್ಟಿನಲ್ಲಿ ಹೇಳಿದರು.

ತಮ್ಮ ವಾಚ್‌ಮನ್ ಮತ್ತು ಆತನ ಹೆಂಡತಿ ಪೊಲೀಸರಿಗೆ ಶವದ ಮೇಲೆ ಒಡವೆಗಳು ಇರಲಿಲ್ಲ ಎಂದು ಅಸತ್ಯವನ್ನು ನುಡಿದಿದ್ದಾರೆ ಎಂದು ಹೇಳಿದರು. ನನಗೆ ಬೇಕಾಗಿದ್ದು ಇಷ್ಟೇ ಆಗಿತ್ತು.

ತುಕಾರಾಮ್ ಸಾಕ್ಷಿ ಪೊಲೀಸರು ಕಟ್ಟಿದ್ದ ಮರಳಿನ ಗೋಪುರವನ್ನು ನೆಲಸಮ ಮಾಡಿಬಿಟ್ಟಿತು!

ಶ್ರೀರಾಮ ಆರೋಪ ಮುಕ್ತನಾದ.

79

ರಷೀದ್ ಕೊಲೆ ಪ್ರಕರಣ

1987ರಷ್ಟೊತ್ತಿಗೆ ರಾಮಕೃಷ್ಣ ಹೆಗಡೆಯವರ ಸರಕಾರ ಜನರ ಆಶಯಗಳನ್ನು ನುಚ್ಚುನೂರು ಮಾಡಿ ತನ್ನ ಬ್ರಹ್ಮಾಂಡ ಭ್ರಷ್ಟಾಚಾರದೊಂದಿಗೆ ಮೆರೆಯತೊಡಗಿತ್ತು. ಕಾಂಗ್ರೆಸ್ ಮತ್ತು ಜನತಾ ಅಣ್ಣ ತಮ್ಮ ಎನ್ನತೊಡಗಿದ್ದರು ಜನ. ಹೆಗಡೆ ಸರ್ಕಾರದಲ್ಲಿ ಕ್ಯಾಪಿಟೇಷನ್ ಲಾಬಿ ಗರಿಗೆದರಿ ಕುಣಿಯತೊಡಗಿತ್ತು. ಹೆಗಡೆ ಸರಕಾರದಲ್ಲಿ ಗೃಹ ಮಂತ್ರಿಯಾಗಿದ್ದ ಜಾಲಪ್ಪನವರು ತಮ್ಮನ್ನು ಈಡಿಗ ಲಾಬಿಯೊಂದಿಗೆ ಗುರುತಿಸಿಕೊಂಡು ಕ್ಯಾಪಿಟೇಷನ್ ಲಾಬಿಗೂ ಕೈ ಚಾಚಿದ್ದರು. ಹುಚ್ಚು ಮುಂಡೆಯ ಮದುವೆಯಲ್ಲಿ ಉಂಡವನೇ ಜಾಣ ಎನ್ನುವಂತಾಗತೊಡಗಿತ್ತು ಹೆಗಡೆ ಸಂಪುಟ. ಜಾಲಪ್ಪ ಜನತಾ ಸರ್ಕಾರದಲ್ಲಿದ್ದರೂ ತಮ್ಮ ಜಾಲವನ್ನು ವಿರೋಧ ಪಕ್ಷಗಳಲ್ಲಿಯೂ ವಿಸ್ತರಿಸಿಕೊಂಡಿದ್ದರು.

ಆಗ ಕೆಪಿಸಿಸಿ ಅಧ್ಯಕ್ಷರಾಗಿದ್ದ ಜನಾರ್ದನ ಪೂಜಾರಿಯವರೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿದ್ದರು. ಜಾಲಪ್ಪನವರಿಗೆ ಸ್ವಜಾತಿಯ ಗೀಳು ಎಷ್ಟರಮಟ್ಟಿಗೆ ಅಮರಿಕೊಂಡಿತ್ತೆಂದರೆ, ಗುಲ್ಬರ್ಗಾದ 'ಕ್ರಾಂತಿ' ಪತ್ರಿಕೆಯ ಸಿದ್ಧರಾಮೇಶ್ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಎಸಿಪಿ ನಾರಾಯಣ್‌ರನ್ನು ಬೆಂಗಳೂರಿಗೆ

ವರ್ಗಾಯಿಸಿಕೊಂಡು ಡಿಸಿಪಿ ಲಾ ಅಂಡ್ ಆರ್ಡರ್ ಮಾಡಿದ್ದರು. ಕೋಲಾರ ಜಿಲ್ಲೆಯಲ್ಲಿ ಒಂದು ಮೆಡಿಕಲ್ ಕಾಲೇಜ್ ಆರಂಭಿಸಿ ಡೊನೇಷನ್ ದುಡ್ಡಲ್ಲಿ ತೇಲಾಡುವ ಕನಸು ಕಾಣತೊಡಗಿದ್ದರು.

19.8.87ರಂದು ನೋಟರಿ ಮತ್ತು ವಕೀಲ ಮನಮೋಹನ್ ಮೂರುನಾಲ್ಕು ಜನರೊಂದಿಗೆ ಬಂದು ನನ್ನೊಂದಿಗೆ ಮಾತಾಡುವುದಿದೆ ಎಂದರು. ಈ ಮನಮೋಹನ್ ಕಾಂಗ್ರೆಸ್‌ನಲ್ಲಿ ಓಡಾಡಿಕೊಂಡು ಒಳ್ಳೆಯ ಸಂಪರ್ಕ ಏರ್ಪಡಿಸಿಕೊಂಡಿದ್ದರು. ಆ ಪಕ್ಷದಿಂದ ಒಮ್ಮೆಯಾದರೂ ಎಂ.ಎಲ್.ಸಿ. ಯಾಗುವುದಾಗಿ ಅವರಿವರ ಮುಂದೆ ಹೇಳಿಕೊಳ್ಳುತ್ತಿದ್ದರು. ಬಂದವರೇ "ರೀ ಹನುಮಂತರಾಯರೇ, ಕೇರಳದಿಂದ ಬೆಂಗಳೂರಿಗೆ ಕೇಸು ನಡೆಸಲು ಬಂದಿದ್ದ ಅಬ್ದುಲ್ ರಷೀದ್ ಎನ್ನುವ ವಕೀಲನ ಕೊಲೆಯಾಗಿದೆ. ಈ ಕೊಲೆಯ ಹಿಂದೆ ಗೃಹಮಂತ್ರಿಗಳ ಕೈವಾಡವಿದೆ. ಈ ಕೇಸ್‌ಗೆ ನೀವು ಗಮನಹರಿಸಬೇಕು" ಎಂದರು.

ಅದರ ಹಿಂದಿನ ದಿನವೇ ರಷೀದ್ ದೇಹವು ತಮಿಳುನಾಡಿನ ಸೇಲಮ್ ಜಿಲ್ಲೆಯ ದಾಶಿಷ್‌ಪೇಟ್ ಮತ್ತು ಲೋಕಾಪುರ ರೈಲ್ವೆ ಸ್ಟೇಷನ್‌ಗಳ ಮಧ್ಯೆ ಹಳಿ ಪಕ್ಕದ ಪೊದೆಯೊಂದರಲ್ಲಿ ಸಿಕ್ಕಿರುವ ವಿಷಯ ಆಗಲೇ ನನಗೆ ಗೊತ್ತಾಗಿತ್ತು.

ಮನಮೋಹನ್ ಜೊತೆಗೆ ಬಂದವರು ರಷೀದ್ ಕೊಲೆ ಹೇಗೆ ನಡೆಯಿತೆಂದು ಹೇಳತೊಡಗಿದರು. ಕೊಲೆ ರಹಸ್ಯ ಸಿನಿಮಾ ಕಥೆಯಂತೆ ಕಣ್ಣ ಮುಂದೆ ಓಡತೊಡಗಿತು.

ಪಿ. ಸದಾಶಿವನ್ ಕೇರಳದಿಂದ ಕೋಲಾರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ಆರಂಭಿಸುವ ಕನಸು ಹೊತ್ತು ಬೆಂಗಳೂರಿಗೆ ಬಂದಿದ್ದರು. ಇವರ ಟ್ರಸ್ಟಿನ ಒಳಜಗಳದ ಕೇಸ್ ನಡೆಸಲೆಂದು ಕೇರಳದಿಂದ ಅಬ್ದುಲ್ ರಷೀದ್ ಎನ್ನುವ ವಕೀಲನನ್ನು ಕರೆತಂದಿದ್ದರು. ಸದಾಶಿವನ್‌ಗೆ ಕೋರ್ಟಿನಲ್ಲಿ ತಮ್ಮ ಕೇಸು ನಡೆಸಿಕೊಡುವ ವಕೀಲರು ಮಾತ್ರ ಬೇಕಿರಲಿಲ್ಲ. ವ್ಯಾಜ್ಯಕ್ಕೆ ಸಂಬಂಧಿಸಿದ ಎಲ್ಲದರ ಉಸ್ತುವಾರಿ, ಪೊಲೀಸ್ ವ್ಯವಹಾರ ಮುಂತಾದವುಗಳನ್ನು ಒಳಗೊಂಡ ಏಜಂಟ್ ಥರದ ವಕೀಲನ ಅವಶ್ಯಕತೆಯಿತ್ತು.

ಕೋರ್ಟಿನಲ್ಲಿ ಆದ ಆರ್ಡರ್ ಅನ್ನು ಸ್ಪಾಟ್‌ಗೆ ಹೋಗಿ ಎಗ್ಸಿಕ್ಯೂಟ್ ಮಾಡಿಸುವವರೆಗೆ ಪಟ್ಟುಬಿಡದೆ ಓಡಾಡುತ್ತಿದ್ದ ರಷೀದ್. ಸಮಯ ಬಂದರೆ ಪೊಲೀಸರೊಂದಿಗೂ ಘರ್ಷಣೆಗೆ ಸಿದ್ಧನಾಗುತ್ತಿದ್ದ.

ಪಿ. ಸದಾಶಿವನ್ ಜವಾಹರ್ ಭಾರತಿ ಎಜುಕೇಷನ್ ಟ್ರಸ್ಟ್ ಅನ್ನು ಆರಂಭಿಸಿ,

ಅದರಡಿಯಲ್ಲಿ ರಾಜೀವ್‌ಗಾಂಧಿ ಎಜುಕೇಷನ್ ಕಾಲೇಜ್ ಅನ್ನು ಆರಂಭಿಸಿದ್ದರು. ಆ ಕಾಲೇಜಿಗೆ ಶ್ರೀಮತಿ ರತ್ನ ಎನ್ನುವವರನ್ನು ಪ್ರಿನ್ಸಿಪಾಲ್ ಆಗಿ ನೇಮಕ ಮಾಡಿಕೊಂಡಿದ್ದರು.

ಕಾಲೇಜ್ ಆರಂಭವಾದ ನಂತರ ಟ್ರಸ್ಟಿನಲ್ಲಿ ಒಳಜಗಳ ಭುಗಿಲೆದ್ದಿತ್ತು. ಮರಿಯಪ್ಪ ಮತ್ತು ಕೆ.ಆರ್. ಶ್ರೀನಿವಾಸನ್ ಎನ್ನುವ ಟ್ರಸ್ಟಿಗಳು ಚೇರ್ಮನ್ ಪಿ. ಸದಾಶಿವನ್ ವಿರುದ್ಧ ತಿರುಗಿಬಿದ್ದರು. ಕೊನೆಗೆ ಇವರಿಬ್ಬರೂ ಆ ಟ್ರಸ್ಟ್‌ನಿಂದ ಹೊರಬಂದು ಸದಾಶಿವನ್ ವಿರುದ್ಧ ಕೋರ್ಟಿನಲ್ಲಿ ಕೇಸು ಹಾಕಿದರು. ರಾಜೀವ್‌ಗಾಂಧಿ B.Ed. ಕಾಲೇಜಿನ ಪ್ರಿನ್ಸಿಪಾಲ್ ರತ್ನ ಅವರು ಟ್ರಸ್ಟ್‌ನಿಂದ ಹೊರಬಂದ ಮರಿಯಪ್ಪ ಮತ್ತು ಶ್ರೀನಿವಾಸನ್‌ಗಳ ಶಿಫಾರಸ್ ಮೇರೆಗೆ ನೇಮಕಗೊಂಡವರಾಗಿದ್ದರಿಂದಲೋ ಏನೋ, ಅವರನ್ನು ಸದಾಶಿವನ್ ಪ್ರಿನ್ಸಿಪಾಲ್ ಹುದ್ದೆಯಿಂದ ತೆಗೆದುಹಾಕಿ, ಆ ಜಾಗಕ್ಕೆ ತನಗೆ ಬೇಕಾದ ಸೀತಾರಾಮ್ ಅಯ್ಯಂಗಾರ್ ಎನ್ನುವವರನ್ನು ನೇಮಕ ಮಾಡಿದ. ತನ್ನನ್ನು ವಿನಾಕಾರಣ ತೆಗೆದುಹಾಕಿದ್ದರ ವಿರುದ್ಧ ರತ್ನ ಕೋರ್ಟಿಗೆ ಹೋದರು. ಪಿ. ಸದಾಶಿವನ್ ವಿರುದ್ಧ ಈಗಾಗಲೇ ಟ್ರಸ್ಟ್ ಜಗಳ ಸಂಬಂಧ ಸಿವಿಲ್ ಕೇಸ್ ಹಾಕಿದ್ದ ಮರಿಯಪ್ಪ ಮತ್ತು ಶ್ರೀನಿವಾಸನ್ ರತ್ನರಿಗೆ ಕುಮ್ಮಕ್ಕು ನೀಡಿ ಕೇಸ್ ಹಾಕಿಸಿದ್ದರು.

ಏತನ್ಮಧ್ಯೆ ಪಿ. ಸದಾಶಿವನ್ ಜವಾಹರ್ ಭಾರತಿ ಟ್ರಸ್ಟ್‌ನ ಒಳಜಗಳದಿಂದ ರೋಸಿಹೋಗಿ ವಿಶ್ವೇಶ್ವರಯ್ಯ ಹೆಸರಿನಲ್ಲಿ ಮತ್ತೊಂದು ಟ್ರಸ್ಟ್ ಅನ್ನು ಆರಂಭಿಸಿದ್ದರು. ಈ ಟ್ರಸ್ಟ್ ಹೆಸರಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸುವುದಾಗಿ ಅರ್ಜಿ ಹಾಕಿಕೊಂಡಿದ್ದರು. ಈಗಾಗಲೇ ಗೃಹಮಂತ್ರಿ ಆರ್. ಎಲ್. ಜಾಲಪ್ಪನವರೂ ಸಹ ತಮ್ಮ ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಹೆಸರಲ್ಲಿ ಅದೇ ಕೋಲಾರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸುವುದಕ್ಕಾಗಿ ಅರ್ಜಿ ಹಾಕಿಕೊಂಡಿದ್ದರು. ತಮ್ಮ ವಿರುದ್ಧ ಇವನಾವ ಮಲೆಯಾಳಿ ಬಂದ ಎಂದು ಪಿ. ಸದಾಶಿವನ್ ಮೇಲೆ ಜಾಲಪ್ಪ ಕೆಂಡವಾದರು.

ಚೇರ್ಮನ್ ಪಿ. ಸದಾಶಿವನ್ ವಿರುದ್ಧ ಮಾಜಿ ಪ್ರಿನ್ಸಿಪಾಲ್ ರತ್ನ ಹಾಕಿದ ಕೇಸ್‌ನಲ್ಲಿ ಸದಾಶಿವನ್ ಪರ ಇಂಜಂಕ್ಷನ್ ಆರ್ಡರ್ ಪಡೆದುಕೊಳ್ಳುವಲ್ಲಿ ಲಾಯರ್ ಅಬ್ದುಲ್ ರಷೀದ್ ಯಶಸ್ವಿಯಾದ. ಆದರೆ ಅಷ್ಟೊತ್ತಿಗೆ ರತ್ನ ಅವರಿಗೆ ಪೊಲೀಸರು ಗಾರ್ಡ್‌ಗಳಾಗಿಬಿಟ್ಟಿದ್ದರು!

ಕೋಲಾರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸುವ ವಿಷಯದಲ್ಲಿ ಗೃಹಮಂತ್ರಿ ಜಾಲಪ್ಪ, ಪಿ. ಸದಾಶಿವನ್ ಮೇಲೆ ಕೆಂಡ ಕಾರುತ್ತಿದ್ದಾರೆನ್ನುವ

ಸಂಗತಿಯನ್ನು ತಿಳಿದುಕೊಂಡಿದ್ದ ಮರಿಯಪ್ಪ ಮತ್ತು ಶ್ರೀನಿವಾಸ್ ಈರ್ವರೂ ಜಾಲಪ್ಪನವರ ಬಳಿ ಹೋಗಿ ಸದಾಶಿವನ್ ವಿರುದ್ಧ ಚಾಡಿ ಹೇಳತೊಡಗಿದ್ದರು. ಸದಾಶಿವನ್ ಹುಳುಕುಗಳನ್ನು ಹೇಳುವವರು ಜಾಲಪ್ಪನವರಿಗೆ ಬೇಕಾಗಿತ್ತು. ಈ ಸದರ ಬಳಸಿಕೊಂಡ ಮರಿಯಪ್ಪ ರತ್ನ ಅವರಿಗೆ ಪೊಲೀಸ್ ಸಹಾಯ ಕೊಡಿಸಿದ.

ಲಾಯರ್ ಅಬ್ದುಲ್ ರಷೀದ್ ಕೋರ್ಟ್ ಇಂಜಂಕ್ಷನ್ ಆರ್ಡರ್ ಆದೇಶವನ್ನು ತೆಗೆದುಕೊಂಡು ಹೋಗಿ ರತ್ನ ಅವರಿಗೆ ತೋರಿಸಿ, ನೀವು ಜಾಗ ಖಾಲಿ ಮಾಡಿ ಅಯ್ಯಂಗಾರ್‌ಗೆ ಚಾರ್ಜ್ ಕೊಡಿ ಎಂದ. ಅಷ್ಟರಲ್ಲಿ ಪೊಲೀಸರು ಮಧ್ಯಪ್ರವೇಶಿಸಿ 'ಹೆಣ್ಣುಮಗಳ ಮೇಲೆ ದಬಾಯಿಸೋದು ಸರಿಯಲ್ಲ. ಸಮಾಧಾನದಿಂದ ಹೇಳು. ಕಾಲಾವಕಾಶ ಕೊಡು. ನಾಳೆಯೊಳಗೆ ಚಾರ್ಜ್ ಕೊಡುತ್ತಾರೆ. ಎಂದು ಹೇಳಿದರು. ಇವತ್ತು ಸಂಜೆಯೊಳಗೆ ಚಾರ್ಜ್ ಕೊಡಬೇಕು ಎಂದು ತಾಕೀತು ಮಾಡಿ ರಷೀದ್ ಹೊರಟು ಹೋದ.

ಆಗ ರತ್ನಳನ್ನು ಕರೆದುಕೊಂಡು ಮರಿಯಪ್ಪ ಮತ್ತು ಶ್ರೀನಿವಾಸನ್ ಗೃಹಮಂತ್ರಿ ಜಾಲಪ್ಪನವರ ಬಳಿಗೆ ಹೋಗಿ "ನೋಡಿ ಆ ಕೇರಳದ ಲಾಯರ್ ಬಂದು ಆಕೆಯನ್ನು ಚಾರ್ಜ್ ಕೊಡುವಂತೆ ಒತ್ತಾಯಿಸುತ್ತಿದ್ದಾನೆ. ನಿಮ್ಮ ಪೊಲೀಸರಿಗೆ ಅವನಿಗೆ ಬುದ್ಧಿ ಕಲಿಸುವಂತೆ ಹೇಳಿ" ಎಂದು ಕೇಳಿಕೊಂಡರು.

ಇದರಿಂದ ಕುಪಿತಗೊಂಡ ಜಾಲಪ್ಪ ಡಿ.ಸಿ.ಪಿ.ನಾರಾಯಣ್‌ಗೆ ಫೋನ್ ಮಾಡಿ "ಅಲ್ರೀ, ಈ ಹೆಣ್ಣುಮಗಳು ರತ್ನಾಗೆ ಫೇವರ್ ಮಾಡಿ ಅಂತ ಹೇಳಿದ್ರೆ, ಏನೂ ಮಾಡಿಲ್ಲವಲ್ಲರೀ, ಪದೇ ಪದೇ ಇವರು ನನ್ಹತ್ರ ಬಂದು ತಲೆ ತಿಂತಿದಾರೆ. ಅದು ಯಾವೋನ್ರೀ ಮಲೆಯಾಳೀ ಲಾಯರ್, ಅವ್ನನ್ನ ಒಂದ್ ಕೈ ನೋಡ್ಕೋಳೋಕೆ ಆಗೋಲ್ಲವೇನ್ರೀ ನಿಮಗೆ? ಈಗ ಇವ್ರುರನ್ನ ನಿಮ್ಹತ್ರ ಕಳಿಸ್ತೀನಿ" ಎಂದು ಫೋನ್ ಇಟ್ಟರು.

ಡಿ.ಸಿ.ಪಿ. ನಾರಾಯಣ್ ಡಿ.ಸಿ.ಪಿ. ಉತ್ತಪ್ಪಗೆ ರಷೀದ್‌ನನ್ನು ನೋಡಿಕೊಳ್ಳುವ ಜವಾಬ್ದಾರಿ ಕೊಟ್ಟರು.

ರಷೀದ್ ಪುನಃ ಸಾಯಂಕಾಲ ಬಂದು 'ಇನ್ನೂ ನೀನು ಚಾರ್ಜ್ ಕೊಟ್ಟಿಲ್ಲವೇಕೆ? ಎಂದು ರತ್ನ ಅವರ ಮೇಲೆ ರೋಪು ಹಾಕಿದ. ಆಗ ಅಲ್ಲಿಯೇ ಪೊಲೀಸರು ರಷೀದ್‌ನನ್ನು ಬಂಧಿಸಿದರು. ಮಾನಭಂಗಕ್ಕೆ ಯತ್ನಿಸಿದ ಎಂದು ರಷೀದ್ ಮೇಲೆ ರತ್ನ ದೂರು ಕೊಟ್ಟಿದ್ದರು. ಹೈಗ್ರೌಂಡ್ ಠಾಣೆಗೆ ರಷೀದ್‌ನನ್ನು ಎಳೆತಂದು ಚೆನ್ನಾಗಿ ತದುಕಿದರು ಪೊಲೀಸರು. ನಂತರ ೨ನೇ ಮೆಟ್ರೋಪಾಲಿಟನ್

ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದರು. ಕೋರ್ಟಿನಲ್ಲಿ ಜಡ್ಜ್ ಮುಂದೆ ರಷೀದ್ ತೀವ್ರ ದುಃಖದಿಂದ ಹೇಗೆಲ್ಲ ಪೊಲೀಸರು ತನಗೆ ಚಿತ್ರಹಿಂಸೆ ನೀಡಿದರು ಎಂದು ಹೇಳಿದ. ರಷೀದ್ ಕಕ್ಷಿದಾರ ಪಿ. ಸದಾಶಿವನ್ ಟಿ. ವೆಂಕಟಪ್ಪ ಎನ್ನುವ ವಕೀಲರಿಂದ ರಷೀದ್ ಪರ ವಕಾಲತ್ತು ಹಾಕಿಸಿ ಜಾಮೀನು ಕೊಡಿಸುವ ಏರ್ಪಾಡು ಮಾಡಿದರು. ಕೋರ್ಟ್ ಹಾಲ್‌ನಿಂದ ಹೊರಬಂದ ರಷೀದ್ ಕಂಡ ಕಂಡ ಲಾಯರ್‌ಗಳಿಗೆ ತನಗೆ ಪೊಲೀಸರಿಂದ ಆದ ಚಿತ್ರಹಿಂಸೆಯನ್ನು ಹೇಳಿಕೊಳ್ಳತೊಡಗಿದ. ಆಗ ಗೋಪಾಲಗೌಡರು (ಈಗಿನ ಹೈಕೋರ್ಟ್ ಜಸ್ಟಿಸ್) ರಷೀದ್‌ಗೆ 'ನೀನೇನೂ ಭಯಬೀಳಬೇಡ, ನಿನ್ನ ರಕ್ಷಣೆಗೆ ನಾವೆಲ್ಲಾ ಇರುತ್ತೇವೆ' ಎಂದು ಅಭಯ ನೀಡಿದರು.

ತಾ. 16.8.1987ರಂದು ಪೊಲೀಸರು ಸಂಧ್ಯಾ ಲಾಡ್ಜ್‌ನಲ್ಲಿದ್ದ ರಷೀದ್‌ನನ್ನು ಸ್ವಸ್ತಿಕ್ ಏರಿಯಾದ ಸತ್ಯಪ್ರಕಾಶ್ ಲಾಡ್ಜ್‌ಗೆ ಎಳೆತಂದರು. ರೂಮ್. ನಂ. 11ರಲ್ಲಿ ಕೂಡಿ ಹಾಕಿ ಪುನಃ ಚಿತ್ರಹಿಂಸೆ ನೀಡಲಾರಂಭಿಸಿದರು. ಅತಿರೇಕದ ಚಿತ್ರಹಿಂಸೆಯಿಂದಾಗಿ ರಷೀದ್ ಅಂದೇ ರಾತ್ರಿ ಸತ್ತ. ಪೊಲೀಸರು ತಮ್ಮೊಂದಿಗೆ ಗೋವಿಂದಪ್ರಸಾದ್, ಕೆ. ಪಾಂಡ್ಯನ್, ಶಿವಕುಮಾರ್ ಮತ್ತು ರಂಗನಾಥ್ ಎನ್ನುವ ರೌಡಿಗಳನ್ನು ಕರೆತಂದಿದ್ದರು. ಹೆಡ್‌ಕಾನ್ಸ್‌ಟೇಬಲ್ ಎಂ. ನಾಗರಾಜ್ ಮತ್ತು ಎ. ಮೋಹನ್ ಮತ್ತು ಪ್ರಸನ್ನ ಎನ್ನುವ ಪಿ.ಜಿ. ಗಳು ಗೂಂಡಾಗಳು ಮತ್ತು ಪೊಲೀಸರು ಸೇರಿ ರಷೀದ್‌ನನ್ನು ಕೊಂದುಹಾಕಿದರು.

ಮಧ್ಯರಾತ್ರಿಯಲ್ಲಿ ಕಾರೊಂದು ಬಂದು ರಷೀದ್ ಶವವನ್ನು ಹೊತ್ತೊಯ್ದು ಬೆಂಗಳೂರಿನಿಂದ ಸುಮಾರು 250 ಕಿ.ಮೀ. ದೂರದ ಸೇಲಮ್ ಜಿಲ್ಲೆಯ ದಾಶಿಷ್ ಪೇಟ್ ಸ್ಟೇಷನ್ ಸಮೀಪ ಬಿಸಾಡಿ ಬಂತು.

ರೈಲ್ವೆ ಪೊಲೀಸರು ಕೇಸ್ ಬುಕ್ ಮಾಡಿಕೊಂಡರು. ದೇಹ ಗುರುತು ಹಿಡಿಯುವುದು ಹೇಗೆನ್ನುವ ಚಿಂತೆಯಲ್ಲಿದ್ದ ಪೊಲೀಸರಿಗೆ ರಷೀದ್ ಪ್ಯಾಂಟ್ ಜೇಬಿನಲ್ಲಿದ್ದ ಸತ್ಯಪ್ರಕಾಶ್ ಲಾಡ್ಜ್‌ನ ರಸೀದಿ ಕೊಲೆ ರಹಸ್ಯದ ಕೀಲಿಕೈಯಂತೆ ಸಿಕ್ಕಿತು.

ಸೇಲಮ್ ರೈಲ್ವೆ ಪೊಲೀಸರು ಬೆಂಗಳೂರಿನ ಸತ್ಯಪ್ರಕಾಶ್ ಲಾಡ್ಜ್‌ಗೆ ಬಂದರು. ಶವದ ಜೇಬಿನಲ್ಲಿದ್ದ ರಸೀದಿಯನ್ನು ತೋರಿಸಿ ಈ ವ್ಯಕ್ತಿಯ ವಿಳಾಸ ಕೊಡಿ ಎಂದರು. ರಿಸೆಪ್ಷನಿಸ್ಟ್ ಅನುಮಾನಿಸಿ ಏಕೆ ಏನು ಎಂದು ಕೆದಕತೊಡಗಿದಾಗ ಮಫ್ತಿಯಲ್ಲಿದ್ದ ಪೊಲೀಸ್ ಅಧಿಕಾರಿಯೊಬ್ಬ ತನ್ನ ಐಡೆಂಟಿಟಿ ಕಾರ್ಡ್ ತೆಗೆದು ತೋರಿಸಿದ. ಆಗ ರಿಸೆಪ್ಷನಿಸ್ಟ್ ಸ್ವಲ್ಪ ತಡೆಯಿರಿ ನಮ್ಮ ಯಜಮಾನರನ್ನು ಕರೆಯುತ್ತೇನೆ

ಎಂದು ಫೋನ್ ಮಾಡಿದ. ಇಂಥದ್ದು ಏನಾದರೂ ಕಿರಿಕಿರಿ ಎದುರಾಗಬಹುದು ಎನ್ನುವ ಅನುಮಾನ ಲಾಡ್ಜ್ ಮಾಲೀಕರಲ್ಲಿತ್ತೆಂದು ಕಾಣುತ್ತದೆ. ನೀನು ಏನೂ ಹೇಳಬೇಡ, ನಾನೇ ಬಂದು ಹೇಳುತ್ತೇನೆ. ಅವರಿಗೆಲ್ಲ ಒಂದು ರೂಮಲ್ಲಿ ಕೂರಿಸಿ ಕಾಫಿ ಕುಡಿಸು ಎಂದ. ಲಾಡ್ಜ್‌ನಲ್ಲಿ ತಮಿಳುನಾಡು ರೈಲ್ವೆ ಪೊಲೀಸರಿಗೆ ರಾಜ ಆತಿಥ್ಯ ನಡೆಯತೊಡಗಿತು. ಲಾಡ್ಜ್ ಮಾಲೀಕ ದಾರಿಯಲ್ಲಿ ಬರುವಾಗಲೇ ತೀರ್ಮಾನಿಸಿಕೊಂಡು ಬಂದಿದ್ದ. ಇದ್ದದ್ದನ್ನು ಹೇಳದೇ ಹೋದರೆ ವಿನಾಕಾರಣ ತಾನು ಪ್ರಕರಣದಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ ಎಂದುಕೊಳ್ಳುತ್ತಲೇ ರೈಲ್ವೆ ಪೊಲೀಸರನ್ನು ಭೇಟಿಯಾದ ಮಾಲೀಕ. ಆದರೆ ಪೊಲೀಸರು ಮಾಲೀಕನನ್ನು ಹೆಚ್ಚಿಗೆ ಏನನ್ನೂ ಕೇಳದೆ, ರಷೀದ್ ಎನ್ನುವ ವ್ಯಕ್ತಿ ಯಾವಾಗ ಬಂದ ಮತ್ತು ಅವನು ಯಾವ ವಿಳಾಸ ಬರೆದಿದ್ದಾನೆ ಎಂದು ಮಾತ್ರ ವಿಚಾರಿಸಿದರು. ಸ್ವಲ್ಪ ಕೇಳಿದರೂ ಸಾಕು ಎಲ್ಲ ಬಾಯಿಬಿಡಲು ತಯಾರಿದ್ದ ಲಾಡ್ಜ್ ಮಾಲೀಕನಿಗೆ ಅರೆವ್ಹಾಂತಿ ಮಾಡುವಂತೆ ಎದೆ ತಳಮಳಿಸತೊಡಗಿತು.

ಲಾಡ್ಜ್‌ನಲ್ಲಿ ಪಡೆದ ವಿಳಾಸವನ್ನು ತೆಗೆದುಕೊಂಡು ಪೊಲೀಸರು ಕೇರಳಕ್ಕೆ ಹೊರಟರು. ರಷೀದ್ ಸಹೋದರ ಅಬ್ದುಲ್ ಸಲೀಮ್ ರೈಲ್ವೆ ಪೊಲೀಸರೊಂದಿಗೆ ತಮಿಳುನಾಡಿಗೆ ಹೋದ. ತನ್ನ ಸಹೋದರನ ಶವ ನೋಡಿ ಬಿಕ್ಕಳಿಸತೊಡಗಿದ.

ರಷೀದ್ ಶವದ ಪೋಸ್ಟ್ ಮಾರ್ಟಮ್ ಸೇಲಮ್‌ನಲ್ಲಿ ನಡೆಯುತ್ತಿರುವಾಗಲೇ ಇತ್ತ ಬೆಂಗಳೂರು ಕೋರ್ಟಿನಲ್ಲಿ ರಷೀದ್ ರಷೀದ್ ಎಂದು ಕೋರ್ಟ್ ದಫೇದಾರ್ ಕೂಗಿದ. ಅಂದು ರಷೀದ್ ಕೋರ್ಟಿಗೆ ಹಾಜರಾಗಬೇಕಾಗಿತ್ತು. ಹೆಣ್ಣುಮಗಳೊಬ್ಬಳ ಮಾನಭಂಗದಂಥ ಆರೋಪಕ್ಕೊಳಗಾಗಿ ಕೇಸ್ ಇದ್ದ ದಿವಸ ಹಾಜರಾಗದ ಕಾರಣ ನ್ಯಾಯಾಧೀಶರು ವಾರಂಟ್ ಹೊರಡಿಸಿದರು. ಆಗ ರಷೀದ್‌ನ ಪರ ಲಾಯರ್ ವೆಂಕಟಪ್ಪನವರು, ನನ್ನ ಕಕ್ಷಿದಾರನನ್ನ ಪೊಲೀಸರೇ ಮುಚ್ಚಿಟ್ಟಿದ್ದಾರೆ. ಇಲ್ಲದಿದ್ದರೆ ಅವನು ಇಂದು ಗೈರುಹಾಜರಾಗುತ್ತಿರಲಿಲ್ಲ. ಅದಕ್ಕಾಗಿ ಸರ್ಚ್ ವಾರಂಟ್ ಹೊರಡಿಸಬೇಕೆಂದು ವಿನಂತಿಸಿಕೊಂಡರು. ಪೊಲೀಸರು ತಮ್ಮ ವಿಚಾರಣೆಗಾಗಿ ರಷೀದ್‌ನನ್ನು ಯಾವುದೇ ಠಾಣೆಯಲ್ಲಿರಿಸಿಕೊಂಡಿದ್ದರೂ ಕೂಡಲೇ ಹುಡುಕಿ ತಂದು ಕೋರ್ಟಿಗೆ ಹಾಜರುಪಡಿಸಬೇಕೆಂದು ನ್ಯಾಯಾಧೀಶರು ಆದೇಶಿಸಿದರು. ಎಲ್ಲೆಡೆ ಶೋಧಿಸಿದರೂ ರಷೀದ್ ಪತ್ತೆಯಾಗಲಿಲ್ಲ. ಪೊಲೀಸರ ವಶದಲ್ಲಿ ರಷೀದ್ ಇಲ್ಲ ಎಂದು ಕರ್ನಾಟಕದ ಪೊಲೀಸರು ಕೋರ್ಟಿಗೆ ಸಮಜಾಯಿಷಿ ನೀಡಿದರು. ಅದೇ ಸೇಲಮ್ ಬಳಿ ಪತ್ತೆಯಾಗಿರುವ ಶವ ರಷೀದ್‌ನದೇ ಎಂದು ಅವರ ಸಹೋದರ ಗುರುತಿಸಿದ್ದಾನೆನ್ನುವ ವಿಷಯ ಬೆಂಗಳೂರು ವಕೀಲರ ಸಂಘಕ್ಕೆ

ತಿಳಿಯಿತು. ಈ ವಿಷಯ ತಿಳಿದ ವಕೀಲರ ಸಮೂಹ ಬೆಚ್ಚಿಬಿದ್ದಿತು. ಪೊಲೀಸರಿಂದ ತನಗಾದ ಚಿತ್ರಹಿಂಸೆಯ ಬಗ್ಗೆ ವಕೀಲರ ಸಂಘಕ್ಕೆ ದೂರು ನೀಡಿದ್ದು ಚರ್ಚೆಗೆ ಬಂದಿತು. ಪೊಲೀಸರೇ ರಷೀದ್‌ನನ್ನು ಕೊಲೆ ಮಾಡಿದ್ದಾರೆ. ಇದರಲ್ಲಿ ಸಂಶಯಕ್ಕೆಡೆಯೇ ಇಲ್ಲ ಎಂದು ವಕೀಲರು ಮಾತಾಡತೊಡಗಿದರು. ನಂತರ ಹೈಕೋರ್ಟ್ ನ್ಯಾಯಾಧೀಶರಾದ ಸದಾಶಿವ ಅವರು ವಕೀಲರ ಸಂಘದ ಅಧ್ಯಕ್ಷರಾಗಿದ್ದರು. ರಷೀದ್ ಕೊಲೆ ವಕೀಲರಿಗೆ ಮರ್ಮಾಘಾತವಾದಂತೆನಿಸಿತ್ತು.

ರಷೀದ್ ಕೊಲೆ ಪ್ರಕರಣದ ವಿಷಯ ವಕೀಲರ ಸಂಘದ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಬರುವಷ್ಟರಲ್ಲಿ ಆ ಬಗ್ಗೆ ನನ್ನಲ್ಲಿ ಸಾಕಷ್ಟು ಮಾಹಿತಿಗಳು ಸಂಗ್ರಹವಾಗಿದ್ದವು. ಸಭೆಯಲ್ಲಿ ನಾನು ದಾಖಲೆಗಳ ಸಮೇತ ಅನುಕ್ರಮವಾಗಿ ರಷೀದ್ ಕೊಲೆ ಪ್ರಕರಣವನ್ನು ವಿವರಿಸಿದೆ. ಅದನ್ನು ನೋಡಿ ವಕೀಲರೆಲ್ಲ, ಈ ಪ್ರಕರಣದ ಆಗುಹೋಗುಗಳನ್ನು ಗಮನವಿಟ್ಟು ನೋಡುವ ಜವಾಬ್ದಾರಿ ನಿನ್ನದೇ ಎಂದರು. ಅದಕ್ಕೆ ನಾನು ಒಪ್ಪಿಕೊಂಡೆ. ಪತ್ರಕರ್ತರು ವಕೀಲರ ಸಂಘದ ಅಧ್ಯಕ್ಷ ಸದಾಶಿವ ಅವರಿಗೆ ಏನಾದರೂ ಕೇಳಿದರೆ ಅದೆಲ್ಲದರ ಜವಾಬ್ದಾರಿಯನ್ನು ಹನುಮಂತರಾಯರಿಗೆ ಒಪ್ಪಿಸಿದ್ದೇವೆ, ಅವರನ್ನೇ ಕೇಳಿ ಎನ್ನತೊಡಗಿದರು. ಕೋರ್ಟ್ ಬಿಡುವಿನ ವೇಳೆಯಲ್ಲಿ ವಕೀಲರು ಒಂದೆಡೆ ಸೇರಿ ಮಾತಾಡತೊಡಗಿದರೆ ಅದು ರಷೀದ್ ಪ್ರಕರಣಕ್ಕೆ ಸಂಬಂಧಿಸಿದ ಚರ್ಚೆ ಎಂದು ತೀರ್ಮಾನಿಸಿಬಿಡುವಂತಾಗಿತ್ತು. ವಕೀಲರಲ್ಲಿ ಆ ಕೊಲೆಯ ಬಗ್ಗೆ ತೀವ್ರ ಕಳಕಳಿ ಹೊಮ್ಮತೊಡಗಿತ್ತು. ಕೇರಳದಿಂದ ಬಂದ ಯಾವನೋ ವಕೀಲನಿಗಾಗಿ ಅಷ್ಟೇಕೆ ತಲೆಕೆಡಿಸಿಕೊಳ್ಳಬೇಕು ಎನ್ನುವ ಯೋಚನೆ ಯಾರೊಬ್ಬರಲ್ಲಿಯೂ ಇರಲಿಲ್ಲ. ಹೀಗೆ ಒಂದು ಗುಂಪು ಸಭೆ ಸೇರಿದಾಗ ಈಗ ಹೈಕೋರ್ಟ್ ನ್ಯಾಯಾಧೀಶರಾಗಿರುವ ಗೋಪಾಲಗೌಡರು ಉದ್ವೇಗಭರಿತರಾಗಿ ಮಾತಾಡತೊಡಗಿದರು. ಮೊದಲೇ ಅವರದು ಕಮ್ಯುನಿಸ್ಟ್ ಹಿನ್ನೆಲೆ. ಅವರಿಗೆ ನಿರರ್ಗಳ ಮಾತಾಡುವ ಶಕ್ತಿ. "ಪಾಪ ರಷೀದ್ ಅಂದು ಕೋರ್ಟ್‌ನಿಂದ ಹೊರಬಂದ ಕೂಡಲೇ ಮೊದಲು ನನಗೆ ಮಾತಾಡಿಸಿ, ಈ ಪೊಲೀಸರು ಕೊಂದುಬಿಡ್ತಾರೆ ಸಾರ್, ಹೆಲ್ಪ್ ಮಾಡಿ ಅಂತ ಕೇಳಿಕೊಂಡ. ಅದು ಹೇಗೆ ಪೊಲೀಸರು ಒಬ್ಬ ವಕೀಲನನ್ನು ಕೊಲೆ ಮಾಡಬಲ್ಲರು ಅಂತ ನಾನು ಅಲಕ್ಷಿಸಿದೆ. ಏನೋ ಸ್ವಲ್ಪ ಷರ್ಟ್ ಎಳೆದಾಡಿರಬಹುದು ಅಂತ ಭಾವಿಸಿಕೊಂಡೆ. ಆದರೆ ಅದಾಗಿ ಮೂರೇ ದಿನಕ್ಕೆ ಅವನ ಕತೆಯನ್ನು ಈ ಪೊಲೀಸರು ಮುಗಿಸಿ ಹಾಕಿಬಿಟ್ಟಿದ್ದಾರೆ. ನಾವು ಹೀಗೇ ಸುಮ್ಮನೆ ಕೂತರೆ ಪೊಲೀಸರು ಒಬ್ಬೊಬ್ಬ ವಕೀಲನನ್ನೂ ಎಳೆದೊಯ್ದು ತಿಗಣೆ ಒರೆದಂತೆ ಒರೆದು ಹಾಕಿಬಿಡ್ತಾರೆ" ಎಂದಾಗ ಅಲ್ಲಿ ಸೇರಿದ್ದ ವಕೀಲರೆಲ್ಲ ಕರತಾಡನ ಮಾಡತೊಡಗಿದರು. ಗೋಪಾಲಗೌಡರು

ನನಗೆ "ಹನುಮಂತರಾಯರೇ ಈ ಕೇಸು ಅಷ್ಟು ಸರಳವಾದುದಲ್ಲ. ಮನವಿ ಪತ್ರ, ಪತ್ರಿಕಾ ಹೇಳಿಕೆ ಕೊಡುತ್ತ ಕೂತರೆ ಪೊಲೀಸರು ಸುಮ್ಮನಿರುವುದಿಲ್ಲ. ಅವರ ಗೃಹಮಂತ್ರಿ ಜಾಲಪ್ಪ ಹಾಯಾಗಿರ್ತಾರೆ, ನಾವೆಲ್ಲ ಬೀದಿಗಿಳಿಯಬೇಕು" ಎಂದರು.

ರಷೀದ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಸಿನಿಂದ ತಾಸಿಗೆ ಭಿನ್ನವಿಭಿನ್ನ ಸುದ್ದಿಗಳು ಹರಡತೊಡಗಿದವು. ಒಬ್ಬ "ಹೋಮ್ ಮಿನಿಸ್ಟರ್ ಜಾಲಪ್ಪ ಸ್ವತಃ ತನ್ನ ಬಾಯಿಂದ ಡಿಸಿಪಿ ನಾರಾಯಣ್‌ಗೆ ರಷೀದ್‌ನನ್ನು ಮುಗಿಸು ಅಂತ ಹೇಳಿದ್ದನಂತೆ" ಎಂದರೆ, ಮತ್ತೊಬ್ಬ "ಅದೇಲ್ಲೋ ರಷೀದ್ ಮರ್ಡರ್ ಆದಾಗ ಜಾಲಪ್ಪ ಎದುರಿಗೇ ಇದ್ದರಂತೆ...!" ಎಂದ. ಸರ್ಕಾರದ ದಿವಾಳಿಕೋರತನವನ್ನು ಕಣ್ಣಾರೆ ಕಂಡು ಸರ್ಕಾರದ ವಿರುದ್ಧ ರೊಚ್ಚಿನಿಂದ ನನ್ನ ಮನಸ್ಸು ಕುದಿಯತೊಡಗಿತು. "ಇಂದಿರಾ ಎಮರ್ಜನ್ಸಿಯಲ್ಲಿ ವಿದ್ಯಾರ್ಥಿ ರಾಜನ್‌ನನ್ನು ಕೊಂದಂತೆ ಹೆಗಡೆ" ಜಾಲಪ್ಪ ಈಗ ರಷೀದ್‌ನನ್ನು ಕೊಂದಿದ್ದಾರೆ" ಎಂದು ಜನತೆ ಮಾತಾಡತೊಡಗಿತು.

ಬೇರೆ ಕೇಸುಗಳ ಫೈಲ್‌ಗಳನ್ನು ತೆಗೆಯುವುದಕ್ಕೆ ಮನಸ್ಸೇ ಇಲ್ಲವಾಗಿತ್ತು. ಕೇಸ್‌ಗಳನ್ನು ಅಡ್ಜರ್ನ್ ಮಾಡಿಸಿ ರಷೀದ್ ಪ್ರಕರಣದ ಸುತ್ತ ಸುತ್ತತೊಡಗಿದೆ.

ಕೇಸು ತಮ್ಮ ಸುತ್ತ ಆವರಿಸಿಕೊಳ್ಳತೊಡಗಿದಾಗ ಜಾಲಪ್ಪ ಬೆಚ್ಚಿಬಿದ್ದರು. ರಷೀದ್‌ನ ಕಕ್ಷಿದಾರ ಪಿ. ಸದಾಶಿವನ್ ಎಂಥ ಮೋಸಗಾರ ಎನ್ನುವ ವರದಿಗಳನ್ನು ಮಾಧ್ಯಮಗಳಲ್ಲಿ ಬರುವಂತೆ ಮಾಡಿದರು. ಕಕ್ಷಿದಾರ ಮೋಸಗಾರ ಇದ್ದನೆಂದಾಕ್ಷಣ ವಕೀಲನನ್ನು ಕೊಲ್ಲಬಹುದೆ ಎಂದು ಪ್ರತಿ ಚರ್ಚೆ ಶುರುವಾಯಿತು. ಸಾರ್ವಜನಿಕರಲ್ಲಿ ದಟ್ಟಗೊಳ್ಳುತ್ತಿದ್ದ ಜ್ವಾಲೆಯನ್ನು ತಗ್ಗಿಸಲು ಗೃಹಮಂತ್ರಿಗಳಿಂದ ಸಾಧ್ಯವಾಗಲಿಲ್ಲ. ಜನತಾ ಪಕ್ಷದ ವಕೀಲರ ಸೆಲ್ ಮೂಲಕ ಲಾಯರ್‌ಗಳನ್ನು ಉಪಶಮನಗೊಳಿಸಲು ನೋಡಿದರು. ಆದರೆ ವಕೀಲರೆಲ್ಲ ತಮ್ಮ ಪಕ್ಷಭೇದ ಮರೆತು ರಷೀದ್ ಕೊಲೆಗಡುಕರಿಗೆ ಶಿಕ್ಷೆಯಾಗಲೇಬೇಕು ಎನ್ನುವ ಪಟ್ಟು ಹಿಡಿದುಬಿಟ್ಟಿದ್ದರು.

ರಷೀದ್ ಕೊಲೆ ಆಗಿರುವ ಸಂಗತಿ ತಿಳಿಯುವುದಕ್ಕೆ ಮುಂಚೆ ಹೈಕೋರ್ಟಿನಲ್ಲಿ ಹೇಬಿಯಸ್‌ಕಾರ್ಪಸ್ ರಿಟ್ ಅನ್ನೂ ಹಾಕಲಾಗಿತ್ತು (ರಿಟ್ ಸಂಖ್ಯೆ 79/87). ರಷೀದ್ ಮನೆಯವರಿಗೆ ಈ ರಿಟ್ ಆಶಾಕಿರಣವಾಗಿತ್ತು. ಆದರೆ ಕೊಲೆಯ ವಿಷಯ ಬಯಲಾಗಿದ್ದರಿಂದ ರಷೀದ್ ಮನೆಯವರು ಏನು ಮಾಡುವುದೆಂದು ದಿಕ್ಕುತೋಚದೆ ತಲೆಮೇಲೆ ಕೈಹೊತ್ತು ಕುಳಿತರು. ಆಗ ನಾನು ರಷೀದ್ ಸಹೋದರ ಅಬ್ದುಲ್ ಸಲೀಮ್ ಕಡೆಯಿಂದ ಸರ್ಕಾರಕ್ಕೆ ಒಂದು ದೂರು ಕೊಡಿಸಿದೆ. ಮುಖ್ಯಮಂತ್ರಿ ಆ ದೂರನ್ನು ಸ್ವೀಕರಿಸಿ, ತಪ್ಪಿತಸ್ಥರು ಎಷ್ಟೇ ದೊಡ್ಡವರಿರಲಿ ಅವರ

ಮೇಲೆ ದಾವೆ ಹಾಕಬೇಕು ಎಂದು ಆದೇಶಿಸಿದರು. ಸ್ಪೆಷಲ್ ಡಿಐಜಿ ಒಬ್ಬರಿಗೆ ಈ ಜವಾಬ್ದಾರಿಯನ್ನು ವಹಿಸಲಾಯಿತು. ಗೃಹಮಂತ್ರಿಗಳನ್ನು ರಕ್ಷಿಸುವ ಉದ್ದೇಶದಿಂದ ಕೂಡಲೇ ಹೈಗ್ರೌಂಡ್ ಪೊಲೀಸ್ ಠಾಣೆಯ ಪೊಲೀಸರ ಮೇಲೆ 302 ಕೇಸ್ ಹಾಕುವುದಕ್ಕೆ ಕೇಸಿನ ತನಿಖಾಧಿಕಾರಿಯಾಗಿದ್ದ ಡಿಐಜಿ ಶಿಫಾರಸ್ ಮಾಡಿ ವರದಿ ಕಳುಹಿಸಿದರು. ಆ ಪ್ರಕಾರ ಹೈಗ್ರೌಂಡ್ ಠಾಣೆಯ ಪೊಲೀಸರ ಮೇಲೆ 302 ಕೇಸ್ (ಸಂಖ್ಯೆ 4 6 1/87) ತಾ. 3.9.87ರಂದು ದಾಖಲಾಯಿತು.

ಸ್ಪೆಷಲ್ ಡಿಐಜಿಯವರು ತನಿಖೆಯ ಜವಾಬ್ದಾರಿಯನ್ನು ತಮ್ಮ ಕೈಕೆಳಗಿನ ಸ್ಪೆಷಲ್ ಎಸ್ಪಿ ಮಹದೇವಪ್ಪ ಅವರಿಗೆ ವಹಿಸಿದ್ದರು. ಮಹದೇವಪ್ಪನವರ ತನಿಖಾ ವರದಿಯನ್ನಾಧರಿಸಿ ಪೊಲೀಸರ ಮೇಲೆ 302 ಕೇಸ್ ದಾಖಲಾಗಿದ್ದುದು ಪೊಲೀಸರ ಮಧ್ಯೆ ದೊಡ್ಡ ಕೋಲಾಹಲವನ್ನೇ ಉಂಟುಮಾಡಿತು. ಕೆಲವು ಪೊಲೀಸ್ ಅಧಿಕಾರಿಗಳು, "ನಮ್ಮನ್ನು ಬಲಿಪಶು ಮಾಡಲು ನೋಡಿದರೆ ಮಂತ್ರಿಗಳನ್ನು ನಾವು ಬಿಡುವುದಿಲ್ಲ. ಮುಳುಗುವಾಗ ಅವರನ್ನೂ ಹಿಡಿದುಕೊಂಡೇ ಮುಳುಗುತ್ತೇವೆ" ಎಂದು ಚೀರಾಡಿದರಂತೆ. ಈ ವಿಷಯ ಗೃಹಮಂತ್ರಿಗಳಿಗೆ ಗೊತ್ತಾಯಿತು. ಕೂಡಲೇ ಜಾಲಪ್ಪನವರು ಪ್ರಕರಣದ ತನಿಖಾಧಿಕಾರಿ ಡಿಐಜಿಯವರಿಗೆ ಬೇರೆ ಸಂಜ್ಞೆ ಮಾಡಿದರೆಂದು ಕಾಣುತ್ತದೆ. ಮಾರನೇ ದಿನವೇ ಎಸ್ಪಿ ಮಹದೇವಪ್ಪ, "ತಪ್ಪು ತಿಳಿವಳಿಕೆಯಿಂದ ಹೈಗ್ರೌಂಡ್ ಪೊಲೀಸರ ಮೇಲೆ 302 ಕೇಸ್ ದಾಖಲಿಸುವಂತೆ ವರದಿ ನೀಡಲಾಗಿತ್ತು. ಆದರೆ ನಂತರದಲ್ಲಿ ನಡೆದ ಹೆಚ್ಚಿನ ತನಿಖೆಯಿಂದ ಆ ಠಾಣೆಯ ಪೊಲೀಸರು ಸದರಿ ಕೊಲೆ ಪ್ರಕರಣದಲ್ಲಿ ಭಾಗಿಗಳಲ್ಲವೆಂದು ತಿಳಿದುಬಂದಿದೆ. ಹೀಗಾಗಿ ಅವರ ಮೇಲೆ ಹೂಡಲಾಗಿರುವ ಕೊಲೆ ಮೊಕದ್ದಮೆಯನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು" ಎಂದು ಮತ್ತೊಂದು ವರದಿ ನೀಡಿದರು. ಕೇವಲ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಊಸರವಳ್ಳಿಯಂತೆ ಬಣ್ಣ ಬದಲಿಸಿದ್ದರು ತನಿಖಾಧಿಕಾರಿಗಳು. ಇಂಥವರಿಂದ ಇನ್ನೆಂಥ ತನಿಖೆಯನ್ನು ನಿರೀಕ್ಷಿಸಬಹುದು ಎಂದು ವಕೀಲರು ಕ್ರೋಧಗೊಂಡರು. ಸೀನಿಯರ್ ವಕೀಲರಾದ ಕೆ. ನಾರಾಯಣಪ್ಪ ಮತ್ತು ಪಿ.ಪಿ. ಮುತ್ತಣ್ಣ ಮತ್ತಿತರರು, "ಹನುಮಂತರಾಯ, ಇದನ್ನ ಹೀಗೆ ಬಿಟ್ಟರೆ ಬಗೆಹರಿಯುವುದಿಲ್ಲ, ನಾವೆಲ್ಲ ಬೀದಿಗಿಳಿಯಬೇಕು" ಎಂದರು. ಅದಕ್ಕೆ ನಾನು ಎಂದೋ ಸಿದ್ಧವಾಗಿದ್ದೆ. ಅವರ ಮಾತುಗಳು ನನಗೆ ರೆಕ್ಕೆಪುಕ್ಕ ಮೂಡಿಸಿದವು.

ತಾ. 31.8.87ರಂದು ಬೆಂಗಳೂರಿನ ಎಲ್ಲ ಕೋರ್ಟ್‌ಗಳನ್ನೂ ವಕೀಲರು ಬಹಿಷ್ಕರಿಸಿ ಬೀದಿಗಿಳಿದರು. ತಾ. 1.9.87 ರಂದು ಗವರ್ನರ್‌ರಿಗೆ ಮನವಿ

ಕೊಟ್ಟೆವು. ಅದೇ ದಿನ ಮುಖ್ಯಮಂತ್ರಿ ಹೆಗಡೆಯವರನ್ನು ಭೇಟಿಯಾಗಿ ನಿಷ್ಪಕ್ಷಪಾತ ತನಿಖೆಗೆ ಒತ್ತಾಯಿಸಿದೆವು. ನೀವು ಈಗ ನೇಮಿಸಿರುವ ತನಿಖಾಧಿಕಾರಿ ಢೋಂಗಿಯಿದ್ದಾರೆ. ಯಾರದೋ ಕೈಗೊಂಬೆಯಾಗಿ ತಾಸಿಗೊಂದು ಬಣ್ಣ ಬದಲಿಸುತ್ತಿದ್ದಾರೆ ಎಂದು ತೀವ್ರವಾಗಿ ಕನಲಿ ಮಾತಾಡಿದೆ ನಾನು. ಆಗ ಮುಖ್ಯಮಂತ್ರಿ ಹೆಗಡೆಯವರ ಪಕ್ಕದಲ್ಲಿದ್ದ ದೇವೇಗೌಡರು ತಾಳ್ಮೆ ಕಾಯ್ದುಕೊಳ್ಳಿ, ಎಲ್ಲ ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ನೀವು ಅಧಿಕಾರದಲ್ಲಿಲ್ಲದಿದ್ದಾಗ ಹೀಗೆ ಮಾತಾಡುತ್ತಿರಲಿಲ್ಲ ಎನ್ನುವ ಅರ್ಥದಲ್ಲಿ ಅವರತ್ತ ಮೌನ ದೃಷ್ಟಿ ಬೀರಿದೆ. ಅದು ಗೌಡರಿಗೆ ಅರ್ಥವಾಯಿತೇನೋ ನನ್ನಿಂದ ದೃಷ್ಟಿ ಕದಲಿಸಿ ಬೇರೆಡೆಗೆ ನೆಟ್ಟರು.

ರಾಮಕೃಷ್ಣ ಹೆಗಡೆಯವರು ತಮ್ಮ ಎಂದಿನ ಜಾರುಬಂಡೆ ಶೈಲಿಯಲ್ಲಿ, "ಈ ಪ್ರಕರಣದಲ್ಲಿ ನಿಜವಾದ ಕೊಲೆಗಾರರು ಯಾರು ಎನ್ನುವುದು ನನಗೆ ತಿಳಿದಿದೆ. ಸೂಕ್ತ ಸಮಯದಲ್ಲಿ ಅದನ್ನು ಬಹಿರಂಗಪಡಿಸುವೆ" ಎಂದರು. ಬೇರೆ ವಿಷಯ ಹಾಗೂ ಸಂದರ್ಭಗಳಲ್ಲಿ ಇಂಥ ನಿಗೂಢ ಹೇಳಿಕೆ ನೀಡುವ ಮೂಲಕ ಹೆಗಡೆಯವರು ಶಹಬ್ಬಾಸ್‌ಗಿರಿ ಪಡೆದುಕೊಳ್ಳುತ್ತಿದ್ದರು. ಆದರೆ ಈ ಸಂದರ್ಭದಲ್ಲಿ ಇಂಥ ಹೇಳಿಕೆ ನೀಡಿ ಅಡಕತ್ತಿನೊಳಗೆ ಸಿಕ್ಕ ಅಡಿಕೆಯಂತಾಗಿಬಿಟ್ಟರು. ಬಾಯಿಂದ ಹೊರಬಿದ್ದಾಗಿತ್ತು ಮಾತು. ನಿರಾಕರಿಸುವಂತೆಯೂ ಇರಲಿಲ್ಲ. ಸ್ವೀಕರಿಸುವಂತೆಯೂ ಇರಲಿಲ್ಲ.

ಪತ್ರಿಕೆಗಳಲ್ಲಿ ಪ್ರಕಟವಾದ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾನು ಜಾಲಾಡಲಾರಂಭಿಸಿದೆ!

"ಕೊಲೆಗಾರ ಯಾರು ಎನ್ನುವುದು ಸ್ವತಃ ಮುಖ್ಯಮಂತ್ರಿಗಳಿಗೇ ಗೊತ್ತಿರುವಾಗ ಅದನ್ನು ಮುಚ್ಚಿಡುವುದು ನ್ಯಾಯಾಂಗದ ದೃಷ್ಟಿಯಿಂದ ಅಪರಾಧವಾದರೆ ಶಾಸಕಾಂಗದ ದೃಷ್ಟಿಯಿಂದ ವಿಧಾನಮಂಡಲಕ್ಕೆ ಬಗೆದ ದ್ರೋಹವಾಗುತ್ತದೆ" ಎಂದೆ.

ತಮ್ಮ ಅತಿಬುದ್ಧಿವಂತಿಕೆಯ ಪ್ರದರ್ಶನ ಎಡವಟ್ಟಿಗಿಟ್ಟುಕೊಂಡಿತಲ್ಲಾ ಎಂದುಕೊಂಡಿರಬೇಕು ಹೆಗಡೆಯವರು.

ಮುಖ್ಯಮಂತ್ರಿಗಳ ಹೇಳಿಕೆಗೆ ನಾನು ಹೀಗೆ ಪ್ರತಿಕ್ರಿಯಿಸಿದ್ದನ್ನು ಶ್ಲಾಘಿಸಿ ಜನಾರ್ದನ ಪೂಜಾರಿಯವರು ನನಗೆ ಫೋನ್ ಮಾಡಿದರು. "ನಾವು ವಿರೋಧ ಪಕ್ಷದವರು ವಿಧಾನಮಂಡಲದೊಳಗೆ ನಡೆಸುವ ಹೋರಾಟಕ್ಕಿಂತ ಪರಿಣಾಮಕಾರಿಯಾಗಿದೆ ವಕೀಲರ ಮುಷ್ಕರ. ನಿಮ್ಮ ಹೋರಾಟವನ್ನು ನಮ್ಮ ಪಕ್ಷ ಸಂಪೂರ್ಣವಾಗಿ ಬೆಂಬಲಿಸುತ್ತದೆ. ನಿಮ್ಮ ಇತರ ಮುಖಂಡರುಗಳನ್ನೂ

ನನಗೆ ಪರಿಚಯಿಸಿರಿ. ನಾವೆಲ್ಲ ಪದೇ ಪದೇ ಸಂಧಿಸಿ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚಿಸೋಣ" ಎಂದರು.

ಸಹೋದ್ಯೋಗಿಗಳಾದ ನಾರಾಯಣಪ್ಪ, ಪಿ.ಪಿ. ಮುತ್ತಣ್ಣ ಮತ್ತು ಇತರ ವಕೀಲರುಗಳೊಂದಿಗೆ ಜನಾರ್ದನ ಪೂಜಾರಿಯವರನ್ನು ಕಾಣಲು ಕುಮಾರ ಕೃಪಾ ಗೆಸ್ಟ್‌ಹೌಸ್‌ಗೆ ಹೋದೆ. ಪೂಜಾರಿಯವರು ನಮಗೆಲ್ಲ ಕಾಫಿ ತರಿಸಿ ನಮ್ಮ ಹೋರಾಟವನ್ನು ಹೊಗಳತೊಡಗಿದರು. ಅಷ್ಟರಲ್ಲಿ ಯಾರೋ ಒಬ್ಬ ಕಾಂಗ್ರೆಸ್ ಕಾರ್ಯಕರ್ತನಿರಬೇಕು, "ಸಾರ್, ನಾಗರತ್ನಮ್ಮನವರು ಬಂದರು" ಎಂದು ಒಳಬಂದು ಹೇಳಿದ. ಗುಟುಕರಿಸುತ್ತಿದ್ದ ಕಾಫಿ ಇನ್ನೂ ಮುಗಿದಿರಲಿಲ್ಲ. ಅರ್ಧಕ್ಕೇ ಬಿಟ್ಟು ಕಪ್ ಅನ್ನು ಕೆಳಗಿಟ್ಟು, "ಇದೀಗ ಬಂದೆ, ಇಲ್ಲೇ ಇರಿ" ಎನ್ನುತ್ತ ಪೂಜಾರಿ ಕೆಳಗಿಳಿದು ಹೋದರು. ಟೀಚರ್ ಕ್ಲಾಸ್ ಒಳಗೆ ಬಂದಾಗ ಅಸ್ತವ್ಯಸ್ತ ಸ್ಥಿತಿಯ ವಿದ್ಯಾರ್ಥಿಗಳು ಎದ್ದುನಿಂತು ವಿಧೇಯತೆ ತೋರುವ ದೃಶ್ಯ ಕಣ್ಮುಂದೆ ಬಂದಿತು ಪೂಜಾರಿಯವರ ನಡವಳಿಕೆ ನೋಡಿ ರಾಜ್ಯ ಕಾಂಗ್ರೆಸ್ ಮಟ್ಟಿಗೆ ಪಿಸಿಸಿ ಅಧ್ಯಕ್ಷ ಹುದ್ದೆಯೇ ಅತ್ಯುನ್ನತ ಎಂದುಕೊಂಡಿದ್ದ ನನಗೆ ಪಿಚ್ಚೆನ್ನಿಸಿತು!

ರಾಜ್ಯ ಅಧಿಕಾರ ವ್ಯಾಪ್ತಿಯ ತನಿಖೆಗೆ ಯಾವುದೇ ಸಮರ್ಥನೆ ಉಳಿದಿರಲಿಲ್ಲ.

ಪ್ರಕರಣ ಸಿಬಿಐಗೆ ಒಪ್ಪಿಸಲ್ಪಟ್ಟಿತು. ಕೆ. ರಘೋತ್ತಮನ್ ಎನ್ನುವವರು ತನಿಖಾಧಿಕಾರಿಯಾಗಿ ನೇಮಕಗೊಂಡರು. ರಘೋತ್ತಮನ್ ತಮಿಳುನಾಡಿನವರು. ಬೆಂಗಳೂರಲ್ಲಿ ಬಂದು ಕ್ಯಾಂಪ್ ಮಾಡಿದರು. ಇಡೀ ಪ್ರಕರಣಕ್ಕೆ ಸಂಬಂಧಿಸಿದ ವಿವರಗಳು ನನ್ನ ಬಳಿಯಿವೆ ಎನ್ನುವುದು ಅವರಿಗೆ ತಿಳಿಯಿತು. ನನ್ನ ಆಫೀಸ್‌ಗೆ ತಮ್ಮ ತಂಡದೊಂದಿಗೆ ರಘೋತ್ತಮನ್ ಬಂದರು. ನಾನು ಕೂಡಿಹಾಕಿದ್ದ ಮಾಹಿತಿಗಳನ್ನೆಲ್ಲ ಅವರ ಮುಂದಿಟ್ಟಾಗ, "ನೀವು ಪರ್ಯಾಯ ತನಿಖಾ ಏಜನ್ಸಿಯಂತೆಯೇ ಕೆಲಸ ನಿರ್ವಹಿಸಿದ್ದೀರಿ. ನಮ್ಮ ಭಾರವನ್ನು ಕಡಿಮೆ ಮಾಡಿದ್ದೀರಿ. ಇದನ್ನೆಲ್ಲ ನೋಡಿದರೆ ಕರ್ನಾಟಕದ ಪೊಲೀಸರು ಈ ಪ್ರಕರಣದಲ್ಲಿ ಶಾಮೀಲಾಗಿದ್ದಾರೆನ್ನುವುದು ಮೇಲುನೋಟಕ್ಕೇ ಖಚಿತವಾಗುತ್ತದೆ" ಎಂದರು. ಸಿಬಿಐ ಅಧಿಕಾರಿಗಳು ಯೂನಿಫಾರ್ಮ್ ತೊಟ್ಟು ಓಡಾಡುತ್ತಿರಲಿಲ್ಲ. ಮಫ್ತಿಯಲ್ಲಿರುತ್ತಿದ್ದ ಅವರನ್ನು ಸಿಬಿಐನವರೆಂದು ಗುರುತಿಸುವುದು ಸುಲಭವಾಗಿರಲಿಲ್ಲ. ಸಿಬಿಐ ಅಧಿಕಾರಿಗಳು ಪ್ರತಿದಿನ ನನ್ನನ್ನು ಸಂಪರ್ಕಿಸುತ್ತಿದ್ದಾರೆ, ಮಾಹಿತಿಗಳನ್ನೆಲ್ಲ ಪಡೆದುಕೊಳ್ಳುತ್ತಿದ್ದಾರೆಂದು ಸ್ಟೇಟ್ ಪೊಲೀಸ್ ಇಂಟೆಲಿಜೆನ್ಸ್‌ಗೆ ಗೊತ್ತಾಯಿತು. ನನ್ನ ಆಫೀಸು ಮತ್ತು ಮನೆಯ ಬಳಿ ಸ್ಟೇಟ್ ಇಂಟೆಲಿಜನ್ಸ್ ಪೊಲೀಸರು ಮಫ್ತಿಯಲ್ಲಿ ಓಡಾಡತೊಡಗಿದರು.

ಕೆ. ರಘೋತ್ತಮನ್ ತುಂಬ ಚೂಟಿ ವ್ಯಕ್ತಿ. ಪಾದರಸದಂತಿತ್ತು ಅವರ ಚಲನವಲನ. ಸತತ ಎರಡು ತಿಂಗಳ ತನಿಖೆಯ ನಂತರ ಒಂದು ಬೆಳಗ್ಗೆ ಡಿಸಿಪಿ ನಾರಾಯಣ್ ಮತ್ತು ಇತರ ಆರೋಪಿತ ಪೊಲೀಸ್ ಅಧಿಕಾರಿಗಳನ್ನು ಬಂಧಿಸಿ ತಮ್ಮ ವಶಕ್ಕೆ ತೆಗೆದುಕೊಂಡರು. ಒಂದು ವಾರದ ಮುಂಚೆಯೇ ಅವರು ಬಂಧಿಸಲ್ಪಡುತ್ತಾರೆಂದು ನನಗೆ ಗೊತ್ತಾಗಿತ್ತು. ಆದರೆ ನಾನು ಯಾರ ಮುಂದೂ ಬಾಯಿಬಿಟ್ಟಿರಲಿಲ್ಲ.

ಪೊಲೀಸ್ ಅಧಿಕಾರಿಗಳ ಬಂಧನದ ಸುದ್ದಿ ತಿಳಿಯುತ್ತಲೇ ಇಡೀ ರಾಜ್ಯ ಪೊಲೀಸ್ ಇಲಾಖೆ ಬೆಚ್ಚಿಬಿದ್ದಿತು. ಗೃಹಮಂತ್ರಿ ಜಾಲಪ್ಪ ತಲ್ಲಣಿಸಿಬಿಟ್ಟರು. ಪೊಲೀಸರ ಬಂಧನದ ಬೆನ್ನಿಗೇ ಗೃಹಮಂತ್ರಿಗಳನ್ನೂ ಅರೆಸ್ಟ್ ಮಾಡಲಾಗುತ್ತದೆನ್ನುವ ಸುದ್ದಿ ಹಬ್ಬಿಬಿಟ್ಟಿತು. ಇದರಿಂದ ಜಾಲಪ್ಪ ಪೂರ್ಣ ಕಂಗೆಟ್ಟುಹೋದರು.

ಸತ್ಯಪ್ರಕಾಶ್ ಲಾಡ್ಜ್‌ನ ಮಾಲೀಕರನ್ನ ಆರೋಪಿಗಳನ್ನಾಗಿ ಮಾಡಲಾಗಿತ್ತಷ್ಟೆ. ಈಗ ಸಿಬಿಐನವರು ಅವರನ್ನು ಅಪ್ರೂವರ್‌ಗಳನ್ನಾಗಿ ಮಾರ್ಪಡಿಸಿಬಿಟ್ಟಿದ್ದರು. ಹೈಗ್ರೌಂಡ್ ಠಾಣೆಯ ಪಿಎಸ್ಐ ಉತ್ತಪ್ಪನವರ ಉಸ್ತುವಾರಿಯಲ್ಲಿಯೇ ರಷೀದ್‌ನನ್ನು ಸಂಧ್ಯಾ ಲಾಡ್ಜ್‌ನಿಂದ ತಂದು ತಮ್ಮ ಲಾಡ್ಜ್‌ನಲ್ಲಿರಿಸಲಾಯಿತು. ನಂತರ ಕೊಲೆ ನಡೆದು ಆ ಶವವನ್ನು ತಮಿಳುನಾಡಿನ ಸೇಲಮ್ ಬಳಿ ಬಿಸುಡಲಾಯಿತೆನ್ನುವ ಹೇಳಿಕೆಯನ್ನು ಅವರಿಂದ ಸಿಬಿಐನ ರಘೋತ್ತಮನ್ ಪಡೆದುಕೊಂಡಿದ್ದಾರೆನ್ನುವ ಸುದ್ದಿ ವಕೀಲರ ಮಧ್ಯೆ ಹಬ್ಬಿತು. ಇಂಥ ಸ್ಪಷ್ಟ ಸಾಕ್ಷ್ಯಾಧಾರವಿಲ್ಲದೆ ಡಿಸಿಪಿಯನ್ನು ಬಂಧಿಸಲು ಸಾಧ್ಯವೇ ಇಲ್ಲ ಎಂದು ಮಾತಾಡತೊಡಗಿದರು.

ಜವಾಹರ ಭಾರತಿ ಟ್ರಸ್ಟ್‌ನಿಂದ ಹೊರಬಂದ ಅದರ ಚೇರ್ಮನ್ ಸದಾಶಿವನ್‌ನೊಂದಿಗೆ ಕೋರ್ಟ್ ವ್ಯಾಜ್ಯಕ್ಕಿಳಿದಿದ್ದ ಮರಿಯಪ್ಪ ಮತ್ತು ಕೆ.ಆರ್. ಶ್ರೀನಿವಾಸನ್ ಇವರಿಬ್ಬರ ಬೆಂಬಲ ತಿಳಿಯುತ್ತಲೇ ಗೃಹಮಂತ್ರಿ ಜಾಲಪ್ಪನವರು ಜರ್ಝರಿತರಾದರು.ಸ

ಜಾಲಪ್ಪನವರ ರಾಜಕೀಯ ವೈರಿಗಳು ಈ ಅವಕಾಶದ ಲಾಭ ಪಡೆದುಕೊಳ್ಳಲು ಎದ್ದುಕೂತರು. ವಿಶೇಷವಾಗಿ ದೊಡ್ಡಬಳ್ಳಾಪುರದಲ್ಲಿ ಜಾಲಪ್ಪನವರ ವಿರುದ್ಧ ರಾಜಕೀಯ ಬಿರುಗಾಳಿ ಬೀಸತೊಡಗಿತು. ನಾನು ಈ ಹೋರಾಟದ, ಮಂಚೂಣಿಗೆ ನಿಂತುಕೊಂಡಿದ್ದು ಯಾವುದೇ ರಾಜಕೀಯ ಉದ್ದೇಶದಿಂದ ಆಗಿರಲಿಲ್ಲ. ಆದರೆ ಒಂದು ಹಂತದಲ್ಲಿ ಹೋರಾಟಕ್ಕೆ ರಾಜಕೀಯ ಆಯಾಮ ಸೃಷ್ಟಿಯಾಗಿಬಿಟ್ಟಿತು. ನಾನು ದೊಡ್ಡಬಳ್ಳಾಪುರ ತಾಲ್ಲೂಕಿನಿಂದ ಬಂದವನಾದುದರಿಂದ ನನ್ನ ಹೋರಾಟಕ್ಕೆ ರಾಜಕೀಯ ಬಣ್ಣ ಬಳಿಯುವ ಕೆಲಸವೂ ಆರಂಭವಾಯಿತು. ಇಂಥ ಪ್ರಯತ್ನಗಳಿಂದ

ನನ್ನನ್ನು ಹೋರಾಟದಿಂದ ಹಿಂದೆ ಸರಿಸಬಹುದು ಎಂದುಕೊಂಡಿದ್ದರೆಂದು ಕಾಣುತ್ತದೆ. ಆದರೆ ನಾನು ವಿಚಲಿತನಾಗಲಿಲ್ಲ.

ಯಾವ ವ್ಯಕ್ತಿಗಳನ್ನು ಹಿಡಿದು ಇಂಟ್ರಾಗೇಷನ್ ನಡೆಸಿದರೆ ಪೊಲೀಸ್ ಮತ್ತು ಗೃಹಮಂತ್ರಿಗಳ ಶಾಮೀಲಿನ ಬಗೆಗೆ ಸುಳಿವುಗಳು ದೊರೆಯುತ್ತವೆ ಎಂದು ಸಿಬಿಐ ಅಧಿಕಾರಿಗಳಿಗೆ ನಾನೇ ಹೇಳಿಕೊಟ್ಟಿದ್ದೇನೆ ಎನ್ನುವ ಸುದ್ದಿ ಎಲ್ಲೆಡೆ ಹಬ್ಬಿತು. ಇದರಿಂದಾಗಿ ಪೊಲೀಸರು ಮತ್ತು ಗೃಹಮಂತ್ರಿಗಳು ನನ್ನ ಮೇಲೆ ಕೆಂಡಕಾರತೊಡಗಿದರು. ನಾನು ಇದಕ್ಕೆಲ್ಲ ಎದೆಗುಂದಲಿಲ್ಲ.

ನಾನು ಕಾಲೇಜ್ ಸ್ಟೂಡೆಂಟ್ ಆಗಿದ್ದಾಗ ನಡೆಸಿದ ಹೋರಾಟಗಳಲ್ಲಿ ಪೊಲೀಸರ ರಾಕ್ಷಸಾವತಾರದ ದರ್ಶನವಾಗಿತ್ತು. ಅದು ನನಗೆ ಹೊಸದೇನೂ ಆಗಿರಲಿಲ್ಲ. ಪೊಲೀಸ್ ವಿರೋಧಿ ಧೋರಣೆ ನನ್ನಲ್ಲಿ ದಟ್ಟವಾಗಿ ಬೇರೂರಲು ಅದೂ ಒಂದು ಮುಖ್ಯ ಕಾರಣವಾಗಿತ್ತು. ಕಾನೂನಿನ ಮೇಲೆ ಸತತ ಅತ್ಯಾಚಾರ ನಡೆಸುವವರು ಪೊಲೀಸರೇ ಎನ್ನುವ ಸಂಗತಿ ಕೋರ್ಟಿನಲ್ಲಿ ನಡೆಸಿದ ಹಲವಾರು ಕೇಸುಗಳಲ್ಲಿ ನನ್ನ ಅನುಭವಕ್ಕೆ ಬಂದಿತ್ತು.

ಡಿಸಿಪಿ ನಾರಾಯಣ್ ಮತ್ತು ಇತರ ಪೊಲೀಸರನ್ನು ಸಿಬಿಐ ಪೊಲೀಸರು ವಿಚಾರಣೆ ಮಾಡತೊಡಗಿದರು. ಪೊಲೀಸ್ ವಿಚಾರಣೆಯೆಂದರೆ ಏನೆಂದು ಬೇರೆ ಹೇಳಬೇಕಿಲ್ಲವಲ್ಲ. ಹಿಡಿದು ಚೆನ್ನಾಗಿ ತದುಕುವುದಕ್ಕೆ 'ವಿಚಾರಣೆ' ಎನ್ನುವ ಶಿಷ್ಟ ಶಬ್ದ ಪ್ರಯೋಗ ಮಾಡಲಾಗುತ್ತದೆ. ಡಿಸಿಪಿ ನಾರಾಯಣ್ ಮತ್ತಿತರ ಪೊಲೀಸ್ ಅಧಿಕಾರಿಗಳು ಕೆಲಸಕ್ಕೆ ಸೇರಿದಾಗಿನಿಂದ ಅದೆಷ್ಟು ಜನರಿಗೆ ತಮ್ಮ ಲಾಠಿ, ಬೂಟುಗಳಿಂದ ಚಿತ್ರಹಿಂಸೆ ನೀಡಿದ್ದರೋ ಅದೆಲ್ಲದರ ನೆನಪಾಗುವಂತೆ ಸಿಬಿಐ ಪೊಲೀಸರು ಅವರನ್ನು ಚಚ್ಚಿದರು. ಡಿಸಿಪಿ ನಾರಾಯಣ್ ಗುಲ್ಬರ್ಗಾದ 'ಕ್ರಾಂತಿ' ಪತ್ರಿಕೆಯ ಸಂಪಾದಕ ಸಿದ್ಧರಾಮೇಶ್ ಕೊಲೆ ಪ್ರಕರಣದಲ್ಲಿ ಆರೋಪಿಗಳಾಗಿದ್ದರಷ್ಟೆ. ಅದಕ್ಕೆ ಸಂಬಂಧಿಸಿದ ಇಡೀ ಫೈಲ್ ನನ್ನ ಬಳಿಯಿತ್ತು. ಅದರ ಒಂದು ಪ್ರತಿಯನ್ನು ಸಿಬಿಐಗೆ ಒಪ್ಪಿಸಿದ್ದೆ. ತನ್ನ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೊಲೆ ಮಾಡುವುದಕ್ಕೂ ಹೇಸದ ವ್ಯಕ್ತಿಯೀತ ಅಲ್ಲವೆ? ಎಂದು ಸಿಬಿಐ ಅಧಿಕಾರಿಗಳು ನನ್ನನ್ನು ಕೇಳಿದರು!

ಡಿಸಿಪಿ ನಾರಾಯಣ್ ಮತ್ತಿತರರನ್ನು ಕೋರ್ಟ್ ಮುಂದೆ ಹಾಜರುಪಡಿಸಿದಾಗ ದೊಡ್ಡ ರಾದ್ಧಾಂತವೇ ನಡೆದುಹೋಯಿತು. ಸಿಬಿಐ ವಾಹನದಿಂದ ಬಂಧಿತ ಪೊಲೀಸರನ್ನು ಇಳಿಸಿದಾಗ ಕಾಲೆತ್ತಿಡಲೂ ಆಗದ ಸ್ಥಿತಿಯಲ್ಲಿದ್ದರು ಕೆಲವು ಪೊಲೀಸ್

ಆರೋಪಿಗಳು. ಈ ದೃಶ್ಯವನ್ನು ನೋಡಿದ ತರುಣ ಪೊಲೀಸ್ ಅಧಿಕಾರಿಗಳಿಗೆ ತಡೆದುಕೊಳ್ಳಲಾಗಲಿಲ್ಲ. ತಮ್ಮ ಸಹೋದ್ಯೋಗಿಗಳನ್ನು ಹೀಗೆ ಥರ್ಡ್‌ಗ್ರೇಡ್ ಖೈದಿಗಳಿಗೆ ಥಳಿಸುವಂತೆ ಥಳಿಸಿದ್ದಾರಲ್ಲಾ ಎಂದು ಕ್ರೋಧಗೊಂಡರು. ಬಂಧಿತ ಪೊಲೀಸ್ ಅಧಿಕಾರಿಗಳಿಗೆ ತಮ್ಮ ಸಾಲಿಡಾರಿಟಿಯನ್ನು ವ್ಯಕ್ತಪಡಿಸಲು ಬಂದಿದ್ದ ಹದಿನೈದು ಇಪ್ಪತ್ತು ಪೊಲೀಸ್ ಅಧಿಕಾರಿಗಳು ಸಿಬಿಐ ಪೊಲೀಸರ ಮೇಲೆ ಮುಗಿಬಿದ್ದು ಅವರನ್ನು ಎಳೆದಾಡಿ ಪ್ರತಿಭಟಿಸತೊಡಗಿದರು. ಹಾಗೆ ದಾಳಿ ನಡೆಸಿದ ತರುಣ ಅಧಿಕಾರಿಗಳಲ್ಲಿ ಒಬ್ಬರ ಹೆಸರು ಮಾತ್ರ ನನಗೆ ನೆನಪಿದೆ. ಅವರು ಲವಕುಮಾರ್. ಈಗ ಸಿಓಡಿಯಲ್ಲಿ ಡಿವೈಎಸ್ಪಿ ಆಗಿದ್ದಾರೆ. ಕ್ಷಣಾರ್ಧದಲ್ಲಿ ರಾಜ್ಯ ಮತ್ತು ಕೇಂದ್ರ ಪೊಲೀಸರ ಮಧ್ಯದ ಘರ್ಷಣೆಯು ರಣಾಂಗಣವಾಗಿ ಮಾರ್ಪಟ್ಟಿತು ಕೋರ್ಟ್ ಕ್ಯಾಂಪಸ್!

ಕೆಲವೇ ನಿಮಿಷಗಳಲ್ಲಿ ದಿಲ್ಲಿಯ ಸಿಬಿಐ ಚೀಫ್‌ಗೆ ಈ ವಿಷಯ ತಿಳಿಸಲ್ಪಟ್ಟಿತು. ರಾಜ್ಯದ ಡಿಜಿಪಿ ಮತ್ತು ಬೆಂಗಳೂರು ಪೊಲೀಸ್ ಕಮೀಷನರ್‌ಗಳಿಗೆ ತಕ್ಷಣವೇ ಫೋನ್‌ನಲ್ಲಿ "ನೀವು ನಿಮ್ಮ ಪೊಲೀಸರನ್ನು ಹಿಂದಕ್ಕೆ ಕರೆದುಕೊಳ್ಳದಿದ್ದರೆ ನಿಮ್ಮನ್ನೂ ಒಳಗೊಂಡಂತೆ ಅವರನ್ನೆಲ್ಲ ಡೆಲ್ಲಿಗೆ ಎಳೆತರಬೇಕಾಗುತ್ತದೆ ಹುಷಾರ್" ಎಂದು ಎಚ್ಚರಿಕೆ ನೀಡಿದರು (ಸಿಬಿಐ ಚೀಫ್, ರಷೀದ್ ಪ್ರಕರಣದ ತನಿಖಾಧಿಕಾರಿಯಾಗಿ ಬಂದಿದ್ದ ಕೆ. ರಘೋತ್ತಮನ್ ಈ ಒಳವಿಷಯವನ್ನು ನಂತರ ನನಗೆ ಹೇಳಿದರು). ಆ ಕೂಡಲೇ ಡಿಜಿಪಿ ಮತ್ತು ಕಮೀಷನರ್‌ಗಳು ಸ್ಥಳಕ್ಕೆ ಧಾವಿಸಿ ತಮ್ಮ ಹುರಿಯಾಳುಗಳನ್ನು ಹಿಂದಕ್ಕೆ ಕರೆದುಕೊಂಡು ಹೋದರು.

ಈ ಘಟನೆಯಿಂದಾಗಿ ಸಿಬಿಐ ಪೊಲೀಸರ ಕೋಪ ಸ್ಫೋಟಗೊಂಡಿತು. ಕರ್ನಾಟಕ ಪೊಲೀಸರಿಗೆ ತಕ್ಕ ಪಾಠ ಕಲಿಸದೆ ಬೆಂಗಳೂರು ಬಿಡುವುದಿಲ್ಲ ಎನ್ನತೊಡಗಿದರು.

ಸಿಬಿಐ ಪೊಲೀಸರಿಗೂ ಮತ್ತು ಕರ್ನಾಟಕದ ಪೊಲೀಸರಿಗೂ ನಡೆದ ಘರ್ಷಣೆ ಅಷ್ಟೊಂದು ಸುದ್ದಿ ಮಾಡದೇ ಹೋದರೂ ಕೇಂದ್ರ ಮತ್ತು ರಾಜ್ಯ ಪೊಲೀಸ್ ಆಡಳಿತಗಳ ಮಧ್ಯ ಆಂತರಿಕವಾಗಿ ಭಾರೀ ಕೋಲಾಹಲವನ್ನುಂಟುಮಾಡಿತು. ಆಗ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಪೊಲೀಸರ ಮಧ್ಯದ ಜಗಳ ರಾಜಕೀಯ ಘರ್ಷಣೆಯಾಗಿ ಪರಿವರ್ತನೆಗೊಂಡೀತೆನ್ನುವ ಭಯಕ್ಕೀಡಾದರು ಹೆಗಡೆ. ಆರಂಭದಲ್ಲಿ ವಕೀಲರ ಮುಷ್ಕರವನ್ನು ಬಹಳ ಹಗುರಾಗಿ ತೆಗೆದುಕೊಂಡಿದ್ದರು ಮುಖ್ಯಮಂತ್ರಿಗಳು. ವಕೀಲರ ಪ್ರತಿನಿಧಿಗಳು ಪ್ರಕರಣಕ್ಕೆ ಸಂಬಂಧಿಸಿದಂತೆ ಏನೇ ಮನವಿಗಳನ್ನು

ಒಯ್ದರೂ ಕೂಡಲೇ ಸ್ಪಂದಿಸತೊಡಗಿದರು. ಅದೂ ಅಲ್ಲದೆ ಆರ್.ಎಲ್. ಜಾಲಪ್ಪನವರು ತಾವೇ ಮುಂದಿನ ಮುಖ್ಯಮಂತ್ರಿ ಎಂದು ಹೇಳಿಕೊಳ್ಳತೊಡಗಿದ್ದಾರೆನ್ನುವ ಗುಪ್ತ ಮಾಹಿತಿಯೂ ಹೆಗಡೆಯವರಿಗೆ ಹೋಗಿತ್ತೆಂದು ಕಾಣುತ್ತದೆ. ಸಹೋದ್ಯೋಗಿ ಕಷ್ಟಕ್ಕೆ ಸಿಲುಕಿದಷ್ಟೂ ತಮಗೆ ಒಳ್ಳೆಯ ಅವಕಾಶ ಎನ್ನುವುದು ರಾಜಕೀಯದ ಮೂಲಪಾಠ. ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ. ನಾನೇನೂ ಮಾಡಲಾಗುವುದಿಲ್ಲ ಎಂದು ಜಾಲಪ್ಪನವರಿಗೆ ಹೆಗಡೆಯವರು ಹೇಳಿದ್ದಾರೆನ್ನುವ ಸುದ್ದಿಗಳು ನಮಗೆ ತಲುಪತೊಡಗಿದವು. ಜಾಲಪ್ಪನವರ ಮಹತ್ವಾಕಾಂಕ್ಷೆ ಹೆಗಡೆಯವರಿಗಿಂತ ದೇವೇಗೌಡರನ್ನೇ ಹೆಚ್ಚು ಬಾಧಿಸಿದ್ದು ಸಹಜವೆನಿಸುತ್ತದೆ. ವಕೀಲರ ಮುಷ್ಕರ ದೇವೇಗೌಡರಿಗೆ ಖುಷಿಯುಂಟುಮಾಡಿದೆ ಎನ್ನುವ ಸುದ್ದಿಗಳನ್ನು ಕೆಲ ವಕೀಲರು ತಂದರು. ರಾಜಕೀಯದ ಇಂಥ ಒಳಸುಳಿಗಳನ್ನು ಬೆರಗಾಗಿ ನೋಡತೊಡಗಿದೆ.

ನಿವೃತ್ತ ನ್ಯಾಯಾಧೀಶರಾದ ಸಿ. ಶಿವಪ್ಪನವರು ಹೈಕೋರ್ಟ್‌ನಲ್ಲಿ ಸಿಬಿಐ ವಕೀಲರಾಗಿದ್ದರು. ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಅವರು ಸಿಬಿಐ ಪರ ವಾದಿಸುವುದಕ್ಕೆ ಕಾನೂನಿನ ಅಡಚಣೆಯಾಯಿತು. ಹೀಗಾಗಿ ಸಿಬಿಐ ಪರ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ವಾದಿಸಲು ಅನುವಾಗುವಂತೆ ಸ್ಪೆಷಲ್ ಪ್ರಾಸಿಕ್ಯೂಟರ್ ಎಂದು ಅವರನ್ನು ನೇಮಕ ಮಾಡಲಾಯಿತು. ಅವರಿಗೆ ಅಸಿಸ್ಟ್ ಮಾಡಲು ನನಗೆ ಕೇಳಿಕೊಂಡರು. ನಾನು ಒಪ್ಪಿಕೊಂಡೆ.

ಬಂಧಿತ ಡಿಸಿಪಿ ನಾರಾಯಣ್ ಮತ್ತು ಇತರ ಪೊಲೀಸ್ ಅಧಿಕಾರಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ಅವರಲ್ಲಿ ಕೆಲವರು ತಮ್ಮ ಮೈಮೇಲಿನ ಗಾಯಗಳನ್ನು ಪ್ರದರ್ಶಿಸಿ ನಮಗೆ ತೀವ್ರ ರೀತಿಯ ಚಿತ್ರಹಿಂಸೆ ನೀಡಿದ್ದಾರೆ ಈ ಸಿಬಿಐ ಪೊಲೀಸರು ಎಂದು ನ್ಯಾಯಾಧೀಶರೆದುರು ದೂರಿದರು ಮತ್ತು ತಮ್ಮನ್ನು ಚಿಕಿತ್ಸೆಗೆ ಒಳಪಡಿಸಬೇಕೆಂದೂ ಮನವಿ ಮಾಡಿಕೊಂಡರು. ಶಂಭುಲಿಂಗಪ್ಪ ಮ್ಯಾಜಿಸ್ಟ್ರೇಟ್ ಆಗಿದ್ದರು. ರಾಜ್ಯ ಪೊಲೀಸರ ಪರ ಮ್ಯಾಜಿಸ್ಟ್ರೇಟರಿಗೆ ಅದೇಕೊ ಅನುಕಂಪವಿರುವಂತೆ ಕಾಣುತ್ತದೆ ಎಂದು ಕೆಲವು ವಕೀಲರು ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗಾಯಾಳುಗಳ ಗಾಯಗಳ ತಪಾಸಣೆ ಮಾಡಿ ವರದಿಯನ್ನು ನ್ಯಾಯಾಲಯಕ್ಕೆ ನೀಡಬೇಕೆಂದು ಆದೇಶಿಸಿದರು. ಮುಂದೆ ಇದರ ಪರಿಣಾಮ ಏನಾಗಬಹುದೆನ್ನುವ ದೃಶ್ಯ ಕೂಡಲೇ ನನ್ನ ಕಣ್ಣಮುಂದೆ ಬಂದಿತು. ಇದು ಹೀಗೇ ಆಗುತ್ತದೆ ಅದಕ್ಕೆ ಪ್ರತಿಯಾಗಿ ಏನು ಮಾಡುವುದು ಎಂದು ಮೊದಲೇ ಯೋಚಿಸಿಕೊಂಡಿದ್ದ ನಾನು ಕೂಡಲೇ ಸ್ಪೆಷಲ್ ಪ್ರಾಸಿಕ್ಯೂಟರ್

ಸಿ. ಶಿವಪ್ಪ ನವರ ಕಿವಿಯಲ್ಲಿ "ಸಾರ್, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರುಪಡಿಸಲ್ಪಟ್ಟ ಗಾಯಾಳುಗಳನ್ನು ಮೊದಲು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್‌ರೇ ತಪಾಸಣೆ ಮಾಡಬೇಕು. ಕಾರಣ ಬೇರೆ ಯಾವ ವೈದ್ಯರೂ ತಪಾಸಣೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ" ಎಂದು ಹೇಳಿದೆ. ಶಿವಪ್ಪನವರು ಅದೇ ರೀತಿ ನ್ಯಾಯಾಧೀಶರಿಗೆ ಹೇಳಿದರು. ಅದು ಕಾನೂನುಬದ್ಧವೂ ಆಗಿದ್ದರಿಂದಲೇ ನ್ಯಾಯಾಧೀಶರು ಗಾಯಾಳುಗಳನ್ನೆಲ್ಲ ಜಿಲ್ಲಾ ಸರ್ಜನ್‌ರಿಂದ ತಪಾಸಣೆ ಮಾಡಿಸಿಕೊಳ್ಳಲು ಆದೇಶಿಸಿದರು.

ದೇವೇಗೌಡರು ವಕೀಲರ ಈ ಹೋರಾಟಕ್ಕೆ ಮಾನಸಿಕ ಬೆಂಬಲ ನೀಡುತ್ತಿದ್ದಾರೆನ್ನುವ ಸಂಗತಿ ನಮಗೆ ಮೊದಲೇ ತಿಳಿದಿತ್ತಷ್ಟೆ. ಅದರೊಂದಿಗೆ ನಮಗೆ ಪ್ಲಸ್ ಪಾಯಿಂಟ್ ಏನಾಗಿತ್ತೆಂದರೆ, ದೇವೇಗೌಡರ ಬೀಗ ಡಾ. ಸೀತಾರಾಮ್ ಅವರು ಡಿಸ್ಟ್ರಿಕ್ಟ್ ಸರ್ಜನ್ ಆಗಿದ್ದುದು! ಡಾ. ಸೀತಾರಾಮ್ ಅವರು ದೊಡ್ಡಬಳ್ಳಾಪುರ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ಜಾಲಪ್ಪನವರ ಕಿರುಕುಳಕ್ಕೆ ಒಳಗಾಗಿದ್ದರು ಎನ್ನುವ ಸುದ್ದಿಯನ್ನು ಕೆಲವು ತರುಣ ವಕೀಲರು ತಂದು ಹೇಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಲಾಯರ್ ಉಗ್ರಪ್ಪನವರನ್ನು ನನ್ನೊಂದಿಗೆ ಕರೆದುಕೊಂಡು ದೇವೇಗೌಡರ ಮನೆಗೆ ಹೋದೆ. ಉಗ್ರಪ್ಪ ಕೆಲಕಾಲ ನನ್ನಲ್ಲಿ ಜ್ಯೂನಿಯರ್ ಆಗಿ ಕೆಲಸ ಮಾಡಿದವರೇ ಆಗಿದ್ದರು ಮತ್ತು ದೇವೇಗೌಡರಿಗೆ ಬಲಗೈ ಎಂದೂ ಹೆಸರಾಗಿದ್ದರು. ರಾಜಕೀಯದಲ್ಲಿ ಯಾರೂ ಪರ್ಮನೆಂಟ್ ಮಿತ್ರರೂ ಅಲ್ಲ ಶತ್ರುಗಳೂ ಅಲ್ಲ ಎನ್ನುವಂತೆ ನಂತರದ ವರ್ಷಗಳಲ್ಲಿ ದೇವೇಗೌಡ ಮತ್ತು ಉಗ್ರಪ್ಪನವರ ಸಂಬಂಧ ಹಳಿಸಿದ್ದು ಬೇರೆ ಮಾತು.

ದೇವೇಗೌಡರು ಖುಷಿಯಿಂದಲೇ ನಮ್ಮನ್ನು ಬರಮಾಡಿಕೊಂಡರು. ನಾನು ದೇವೇಗೌಡರಿಗೆ, "ಸಾರ್ ನಿಮ್ಮ ಸಂಬಂಧಿಕರೂ ಆಗಿರುವ ಡಿಸ್ಟ್ರಿಕ್ಟ್ ಸರ್ಜನ್ ಡಾ. ಸೀತಾರಾಮ್ ಅವರಿಗೆ ಹೇಳಿ ನಮಗೊಂದು ಸಹಾಯ ಮಾಡಿಸಬೇಕು. ಅದೇನೆಂದರೆ ರಷೀದ್ ಕೊಲೆ ಪ್ರಕರಣದಲ್ಲಿ ಕೆಲವು ಪೊಲೀಸರ ಮೈಮೇಲೆ ಆಗಿರುವ ಗಾಯಗಳು ಏಳು ದಿವಸಗಳಷ್ಟು ಹಳೆಯವು ಎಂದು ವೈದ್ಯಕೀಯ ವರದಿಯನ್ನು ನ್ಯಾಯಾಲಯಕ್ಕೆ ನೀಡಬೇಕು. ಹಾಗಾದರೆ ಮಾತ್ರ ಸಿಬಿಐ ಪೊಲೀಸರು ತಪ್ಪಿನಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ಇಲ್ಲದೇ ಹೋದರೆ ಸಿಬಿಐ ತನಿಖೆಗೆ ಮಧ್ಯದಲ್ಲೇ ಭಾರೀ ಪೆಟ್ಟು ಬಿದ್ದಂತಾಗಿ ನಾವು ನಡೆಸುತ್ತಿರುವ ಮುಷ್ಕರಕ್ಕೆ ಹಿಂದೇಟಾಗುತ್ತದೆ" ಎಂದು ಹೇಳಿದೆ. ನಮ್ಮ ಮಾತಿಗೆ ದೇವೇಗೌಡರು ಎರಡನೇ ಮಾತಿಲ್ಲದೇ ಒಪ್ಪಿಕೊಂಡರು.

ಡಿಸ್ಟ್ರಿಕ್ಟ್ ಸರ್ಜನ್ ನೀಡಿದ ವೈದ್ಯಕೀಯ ವರದಿಯಿಂದ ಕೆಲವು ಪೊಲೀಸರ

ಮೈಮೇಲೆ ಆದ ಗಾಯಗಳು ಸಿಬಿಐ ಪೊಲೀಸರು ಅವರನ್ನು ಬಂಧಿಸುವುದಕ್ಕೆ ಮುಂಚಿನವು ಎಂದಂತಾಗಿಬಿಟ್ಟಿತು!

ಅಷ್ಟರಲ್ಲಿ ಡಿಸಿಪಿ ನಾರಾಯಣ್ ತಮ್ಮ ಜಾಮೀನಿಗಾಗಿ ಬಹಳಷ್ಟು ತಲೆಕೆಡಿಸಿಕೊಂಡಿದ್ದರು. ಹೀಗಾಗಿ ಡಿಸ್ಟ್ರಿಕ್ಟ್ ಸರ್ಜನ್ ನೀಡಿದ ವೈದ್ಯಕೀಯ ವರದಿಯನ್ನು ಪ್ರಶ್ನಿಸಿ ಮರುವೈದ್ಯಕೀಯ ತಪಾಸಣೆಗಾಗಿ ಅರ್ಜಿ ಹಾಕಿಕೊಳ್ಳಲಿಲ್ಲವೆಂದು ಕಾಣುತ್ತದೆ.

ನನ್ನ ಈ ಸಾಹಸಕ್ಕೆ ಸಿಬಿಐ ವಿಚಾರಣಾಧಿಕಾರಿ ಬಂದು ನನ್ನನ್ನು ಅಪ್ಪಿಕೊಂಡೇಬಿಟ್ಟರು. ನಾನು ಹೀಗೆ ನನ್ನ ವೈಯಕ್ತಿಕ ಕೆಲಸವೆನ್ನುವಂತೆ ಬೆನ್ನುಹತ್ತಿ ಈ ಪ್ರಕರಣವನ್ನು ಕೋರ್ಟ್ ಒಳಗೆ ಮತ್ತು ಹೊರಗೆ ಪ್ರತಿಭಟಿಸತೊಡಗಿದ್ದು ಜಾಲಪ್ಪನವರ ಕೋಪ ಸ್ಫೋಟಗೊಳ್ಳಲು ಕಾರಣವಾಯಿತು. "ಹನುಮಂತರಾಯ ಮುಂದೆ ದೊಡ್ಡಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸುವ ರಾಜಕೀಯ ಉದ್ದೇಶದಿಂದ ನನ್ನನ್ನು ರಾಜಕೀಯವಾಗಿ ಮುಗಿಸುವ ಸಂಚು ನಡೆಸಿದ್ದಾನೆ" ಎನ್ನುವ ಪ್ರಚಾರವನ್ನು ತೀವ್ರಗೊಳಿಸಿದರು ಜಾಲಪ್ಪ.

ಜಾಲಪ್ಪನವರ ಈ ಆರೋಪದ ಬಗ್ಗೆ 'ಲಂಕೇಶ್ ಪತ್ರಿಕೆ' ನನ್ನನ್ನು ಆಗ ಸಂದರ್ಶನ ಮಾಡಿತು. ಸಂದರ್ಶನದಲ್ಲಿ ನಾನು, "ನನಗೆ ರಾಜಕಾರಣಿಯಾಗುವ ಉದ್ದೇಶವೇ ಇಲ್ಲ. ಸಾಯುವವರೆಗೂ ವಕೀಲನಾಗಿಯೇ ಇರುತ್ತೇನೆ" ಎಂದು ಹೇಳಿದೆ. ಇಂದಿನವರೆಗೂ ನನ್ನ ಆ ಮಾತು ನಿಜವಾಗಿರುವುದರ ಬಗ್ಗೆ ನನಗೆ ಹೆಮ್ಮೆಯಿದೆ.

ಏತನ್ಮಧ್ಯೆ ನನಗೆ ಜನಾರ್ದನ ಪೂಜಾರಿಯವರೊಂದಿಗೆ ಒಡನಾಟ ತೀವ್ರವಾಯಿತು. ನಾನು ಮತ್ತು ಇತರ ಮುಂದಾಳು ವಕೀಲರು ಜನಾರ್ಧನ ಪೂಜಾರಿಯವರನ್ನು ಕುಮಾರಕೃಪಾದಲ್ಲಿ ಮೇಲಿಂದ ಮೇಲೆ ಸಂಧಿಸತೊಡಗಿದೆವು. ಅವರೇ ಫೋನ್ ಮಾಡಿ ನಮ್ಮನ್ನು ಕರೆಸಿಕೊಳ್ಳುತ್ತಲೂ ಇದ್ದರು. ವಿಧಾನಮಂಡಲದ ಒಳಗಿನ ಹೋರಾಟಕ್ಕೆ ವಿರೋಧ ಪಕ್ಷದವರಿಂದ ಸಹಾಯವಾಗಬಹುದು ಎಂದು ನಾವೂ ಹೋಗುತ್ತಿದ್ದೆವು. ಮುಗ್ಧವಾಗಿ ನಾವು ಹೋರಾಟದ ವಿವಿಧ ಹಂತಗಳನ್ನು ಮತ್ತು ಯೋಜನೆಗಳನ್ನು ಮುಕ್ತವಾಗಿ ಅವರೊಂದಿಗೆ ಚರ್ಚಿಸುತ್ತಿದ್ದೆವು. ಜನಾರ್ದನ ಪೂಜಾರಿಯವರು ನಮಗೆ ದ್ರೋಹ ಮಾಡಿದರು ಎನ್ನುವ ವಿಚಾರ ಬಹಳ ತಡವಾಗಿ ನಮಗೆಲ್ಲ ತಿಳಿಯಿತು. ಏಕೆಂದರೆ ನಮ್ಮಿಂದ ಪಡೆದುಕೊಂಡ ಮಾಹಿತಿಗಳನ್ನೆಲ್ಲ ಅವರು ಜಾಲಪ್ಪನವರಿಗೆ ರವಾನಿಸುತ್ತಿದ್ದರು. ಆಡಳಿತಾರೂಢ

ಗೃಹಮಂತ್ರಿಗೆ ವಿರೋಧ ಪಕ್ಷದ ಅಧ್ಯಕ್ಷರೇ ಇಂಟೆಲಿಜನ್ಸ್ ಆಫೀಸರ್ ಆಗಿ ನೇಮಕಗೊಂಡಂತಾಗಿಬಿಟ್ಟಿತು. ಜನಾರ್ದನ ಪೂಜಾರಿಯವರು ತಮ್ಮ ಈಡಿಗ ಕುಲದ ವ್ಯಾಮೋಹಕ್ಕಾಗಿ ಜಾಲಪ್ಪನವರ ರಕ್ಷಣೆಗೆ ನಿಂತಿದ್ದರು. ತಮ್ಮ ಪಕ್ಷದ ಹಿತಾಸಕ್ತಿಗೆ ದ್ರೋಹ ಬಗೆದಿದ್ದರು! ಜನಾರ್ದನ ಪೂಜಾರಿಯವರು ಇನ್ನೂ ಮುಂದಕ್ಕೆ ಹೋಗಿ ಕೇಂದ್ರದಲ್ಲಿ ಮಂತ್ರಿಗಳಾಗಿದ್ದ ಬೂಟಾಸಿಂಗ್ ಅವರಿಗೆ ಜಾಲಪ್ಪನವರನ್ನು ರಕ್ಷಿಸಿರಿ ಎಂದು ಶಿಫಾರಸ್ ಮಾಡಿರುವುದಾಗಿಯೂ ನಮಗೆ ಸುದ್ದಿ ಬಂದಿತು.

ಮುಷ್ಕರದಲ್ಲಿ ನಾನು ತೋರುತ್ತಿದ್ದ ಉತ್ಸಾಹವನ್ನೆಲ್ಲ ಜಾಲಪ್ಪ ತಮ್ಮ ವಿರುದ್ಧದ ಸಂಚು ಎಂದು ಭಾವಿಸಿಕೊಂಡು ನನ್ನನ್ನು ಕೊಲೆ ಮಾಡಿಸುವ ಯೋಜನೆ ರೂಪಿಸುತ್ತಿದ್ದಾರಂತೆ ಎಂದು ದೊಡ್ಡಬಳ್ಳಾಪುರದ ಹಲವಾರು ನನ್ನ ಹಿತೈಷಿಗಳು, ಮಿತ್ರರು ಬಂದು ಹೇಳತೊಡಗಿದರು. ಈ ಅಂತೆಕಂತೆಯ ಸುದ್ದಿಯನ್ನು ಪುಷ್ಟೀಕರಿಸುವಂತೆ ನನ್ನ ಮನೆಗೆ ಬೆದರಿಕೆಯ ಫೋನ್ ಕರೆಗಳು ಬರತೊಡಗಿದವು. ನಾನಿರದಾಗ ನನ್ನ ಪತ್ನಿಗೆ, "ನಿನ್ನ ಗಂಡ ಇದರಲ್ಲಿ ಆಸಕ್ತಿ ವಹಿಸುವುದನ್ನು ನಿಲ್ಲಿಸದಿದ್ದರೆ, ಅವನನ್ನು ಮುಗಿಸುತ್ತೇನೆ" ಎನ್ನುವ ಕರೆ ಬಂದಿತು. ಇದನ್ನು ಕೇಳಿ ನನ್ನ ಪತ್ನಿ ಎದೆಯೊಡೆದುಕೊಂಡು, "ಹಾಳಾದ್ದೆಲ್ಲ ನಿಮಗೇಕೆ ಬೇಕು? ನೀವಾಯಿತು ನಿಮ್ಮ ಕೋರ್ಟ್ ಕೆಲಸವಾಯಿತು ಎಂದು ಸುಮ್ಮನಿರಬಾರದೆ" ಎಂದಳು ಕಣ್ಣೀರು ತಂದುಕೊಂಡು.

ಚಿಕ್ಕಬಳ್ಳಾಪುರ ಸಂಸದರಾಗಿದ್ದ ಕೃಷ್ಣರಾವ್ ಅವರು ವಿಶೇಷ ಮುತುವರ್ಜಿ ವಹಿಸಿ ನನಗೆ ಪೊಲೀಸ್ ಎಸ್ಕಾರ್ಟ್ ಕೊಡಿಸಿದರು. ನನ್ನ ಮನೆಯ ಮುಂದೆ ಬಂದೂಕು ಹಿಡಿದುಕೊಂಡ ಪೊಲೀಸರು ಕಾವಲಿಗೆ ನಿಂತರು. ಅಕ್ಕಪಕ್ಕದ ಮನೆಗಳವರೆಲ್ಲ ಬಂದು, "ಯಾಕೆ ನಿಮ್ಮ ಮನೆ ಮುಂದೆ ಪೊಲೀಸರು. ಸ್ವತಃ ನಿಮ್ಮ ಗಂಡ ಯಾವುದಾದ್ರೂ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿದಾರಾ?" ಎಂದು ನನ್ನ ಪತ್ನಿಗೆ ಕೇಳತೊಡಗಿದರು. ಇದರಿಂದ ನನ್ನ ಪತ್ನಿ ಮತ್ತಷ್ಟು ಸಿಡಿಮಿಡಿಗೊಳ್ಳತೊಡಗಿದರು. "ಮೊದಲು ಪೊಲೀಸರನ್ನು ನಮ್ಮ ಮನೆಯಿಂದ ಓಡಿಸಿ" ಎಂದಳು.

ನನ್ನ ಸಮಸ್ಯೆಯನ್ನು ಸಿಬಿಐ ವಿಚಾರಣಾಧಿಕಾರಿ ಕೆ. ರಘೋತ್ತಮನ್ ಮುಂದೆ ತೋಡಿಕೊಂಡೆ. ಅದಕ್ಕೆ ಅವರು "ಮೊದಲೇ ಹೇಳಿದ್ದರೆ ಇಷ್ಟೆಲ್ಲ ರಾದ್ಧಾಂತಕ್ಕೆ ಅವಕಾಶ ಇರುತ್ತಿರಲಿಲ್ಲ. ನೀವು ನಿಮ್ಮ ಪಾಡಿಗೆ ಇರಿ. ನಮ್ಮ ಪೊಲೀಸರು ಮಫ್ತಿಯಲ್ಲಿ ನಿಮ್ಮನ್ನು ಹೂವಿನಂತೆ ರಕ್ಷಿಸುತ್ತಾರೆ" ಎಂದರು. ಮಾರನೇ ದಿನದಿಂದ ನಾನು ಕೋರ್ಟಿಗೆ ಹೊರಟಾಗ ದೂರದಿಂದಲೇ ಸಿಬಿಐ ಕಾರ್ ಫಾಲೋ

ಮಾಡತೊಡಗಿತು. ನಾನು ಕೋರ್ಟಿನಲ್ಲಿರುವಾಗಲೂ ಮಫ್ತಿಯಲ್ಲಿದ್ದ ಪೊಲೀಸರು ಕಕ್ಷಿದಾರರಂತೆ ಅಡ್ಡಾಡಿಕೊಂಡಿರತೊಡಗಿದರು. ನನಗೆ ಇಂಥ ಬಿಗುವಿನ ಸಿಬಿಐ ರಕ್ಷಣೆ ಇದೆಯೆನ್ನುವುದು ವಕೀಲರಿಗೆ ಸಹ ಗೊತ್ತಾಗಲಿಲ್ಲ. ಆದರೆ ಗೃಹಮಂತ್ರಿಗಳ ಇಂಟೆಲಿಜನ್ಸ್ ಮಾತ್ರ ಇದನ್ನೆಲ್ಲ ಪತ್ತೆ ಹಚ್ಚಿತು. ಜಾಲಪ್ಪನವರಿಗೆ ಈ ಮಾಹಿತಿಯೆಲ್ಲ ಹೋಯಿತೆಂದು ಕಾಣುತ್ತದೆ. ಮತ್ತೊಂದು ರಷೀದ್ ಪ್ರಕರಣ ಆದೀತೆಂದು ಭಯಗೊಂಡರೆಂದು ಕಾಣುತ್ತದೆ. ನನ್ನ ಮನೆಗೆ ಬರುತ್ತಿದ್ದ ಬೆದರಿಕೆ ಫೋನ್ ಕರೆಗಳೂ ನಿಂತವು!

ಜಾಲಪ್ಪನವರು ಸೆಷನ್ಸ್ ಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿಕೊಂಡರು. ಜಡ್ಜ್ ಅನ್ವರ್ ಅವರು ಅದನ್ನು ತಿರಸ್ಕರಿಸಿದರು. ನಂತರ ಹೈಕೋರ್ಟ್‌ಗೆ ಅರ್ಜಿ ಹಾಕಿಕೊಂಡಾಗ ನಿರ್ಬಂಧಿತ ನಿರೀಕ್ಷಣಾ ಜಾಮೀನು ಸಿಕ್ಕಿತು. ರಾಜ್ಯ ಗೃಹಮಂತ್ರಿಗಳೊಬ್ಬರಿಗೆ ಕಂಡೀಷನ್‌ಗಳನ್ನು ಹಾಕಿ ಜಾಮೀನು ನೀಡಿದ ಉದಾಹರಣೆ ಕರ್ನಾಟಕದ ಮಟ್ಟಿಗೆ ಅದೇ ಪ್ರಥಮವೆಂದು ಕಾಣುತ್ತದೆ.

ಏತನ್ಮಧ್ಯೆ ರಷೀದ್ ಪ್ರಕರಣಕ್ಕೆ ಸಂಬಂಧಿಸಿದಂತೆಯೇ ಕೋರ್ಟ್ ಬಹಿಷ್ಕಾರಕ್ಕೆ ಕರೆಕೊಡಲಾಯಿತು. ಮುಷ್ಕರನಿರತ ವಕೀಲರೆಲ್ಲ ಕೋರ್ಟ್ ಕಲಾಪಗಳನ್ನು ಸ್ಥಗಿತಗೊಳಿಸುತ್ತ, ವಕೀಲರ ಗುಂಪು ದೂರಹೋದ ತಕ್ಷಣ ಕೆಲವು ವಕೀಲರು ಹೈಕೋರ್ಟ್‌ಗೆ ಹಾಜರಾಗಿದ್ದಾರೆಂದು ಹೇಳಿದರು. ಆಗ ವಕೀಲರ ಗುಂಪು ಕೆರಳಿತು. ಹೈಕೋರ್ಟ್ ಕಡೆಗೆ ನುಗ್ಗಿತು.

ವಕೀಲರೆಲ್ಲ ಕೋರ್ಟ್ ಬಹಿಷ್ಕರಿಸಿದ್ದರೂ ಹೈಕೋರ್ಟ್ ಒಳಗೆ ಕೆಲಸದಲ್ಲಿ ನಿರತರಾಗಿದ್ದ ಲಾಯರ್ ವಿಶ್ವೇಶ್ವರ ಅವರನ್ನು ವರ್ಧಮಾನಯ್ಯ ಷರ್ಟ್ ಹಿಡಿದು ಹೊರಗೆಳೆದುಕೊಂಡು ಬಂದು ಅವರ ಮುಖಕ್ಕೆ ಉಗಿದು ಹೊಡೆಯಲು ಕೈ ಎತ್ತಿದರು. ಈ ದಿಢೀರ್ ದಾಳಿಗೆ ಬೆಚ್ಚಿ ಹೋಗಿದ್ದ ವಿಶ್ವೇಶ್ವರ ರಕ್ಷಣೆಗಾಗಿ ಸೆಕ್ಯುರಿಟಿ ಗಾರ್ಡ್‌ನ ಸೆಲ್‌ಗೆ ನುಗ್ಗಿ ಒಳಗಿನಿಂದ ಬೋಲ್ಟ್ ಹಾಕಿಕೊಂಡರು. ರೊಚ್ಚಿಗೆದ್ದಿದ್ದ ಲಾಯರ್ ವರ್ಧಮಾನಯ್ಯ ಹೊರಗಿನಿಂದ ಆ ಸೆಲ್‌ಗೆ ಒದೆಯತೊಡಗಿದರು. ವಿಶ್ವೇಶ್ವರ ಅವರ ವಕೀಲರಾದ ಸಿ.ವಿ. ನಾಗೇಶ್ ಅವರು ಜೊತೆಗಿದ್ದು ಅವರ ರಕ್ಷಣೆಗೆ ನಿಂತರು. ಸ್ವಲ್ಪೇ ಹೊತ್ತಿನಲ್ಲಿ ಅವರು ಇನ್‌ಚಾರ್ಜ್ ಚೀಫ್ ಜಸ್ಟಿಸ್ ನೇಸರ್ಗಿಯವರು ಮತ್ತು ಪೊಲೀಸರ ಸಮೇತ ಗಲಾಟೆ ನಡೆಯುತ್ತಿದ್ದ ಸ್ಥಳಕ್ಕೆ ಹಾಜರಾಗಿ ಪೊಲೀಸರ ನೆರವಿನಿಂದ ವಿಶ್ವೇಶ್ವರರನ್ನು ಸೆಕ್ಯುರಿಟಿ ಗಾರ್ಡ್ ರೂಮಿನಿಂದ ಹೊರ ತೆಗೆಸಿ ಪೊಲೀಸ್ ವ್ಯಾನಿನಲ್ಲಿ ಅವರನ್ನು ಮನೆಗೆ ಕಳಿಸುವ ಏರ್ಪಾಡು ಮಾಡಿದರು.

ವಕೀಲರ ಸಂಘವನ್ನು ಒಡೆಯುವ ಯತ್ನಗಳು ನಡೆದಾಗ ಬ್ಯಾರಿಸ್ಟರ್ ವಾಸುದೇವರೆಡ್ಡಿ, ಕೆ. ನಾರಾಯಣಪ್ಪ ಮತ್ತು ಪಿ.ಪಿ. ಮುತ್ತಣ್ಣರಂಥವರು ತಮ್ಮ ದಿಟ್ಟತನದಿಂದ ವಕೀಲರ ಐಕ್ಯತೆಯನ್ನು ಕಾಪಾಡಿದರು.

ರಷೀದ್ ಪ್ರಕರಣದ ಟ್ರಯಲ್ ತಮಿಳುನಾಡು ಕೋರ್ಟಿನಲ್ಲಿ ನಡೆಯಿತು. ಸತ್ಯಪ್ರಕಾಶ್ ಲಾಡ್ಜ್‌ನ ಭೋಜರಾಜ್ ಬುದ್ದಿಯಾ ಮತ್ತು ಸುಧಾಕರ್ ಇವರಿಬ್ಬರೂ ಸಿಬಿಐ ಪರ ಅಪ್ರೂವರ್‌ಗಳಾಗಿದ್ದರು. ಆದರೆ ನಂತರ ತಿರುಗಿಬಿದ್ದರು. ಆರೋಪಗಳನ್ನು ದೃಢೀಕರಿಸುವುದಕ್ಕೆ ಸೂಕ್ತ ಸಾಕ್ಷ್ಯಾಧಾರಗಳು ದೊರೆಯಲಿಲ್ಲವೆಂದು ಜಾಲಪ್ಪನವರು ಮತ್ತೆ ಕೆಲವರು ಬಿಡುಗಡೆ ಹೊಂದಿದರು.

ಶಿಕ್ಷೆಯಾದ ಪೊಲೀಸರು ಮದ್ರಾಸ್ ಹೈಕೋರ್ಟಿನಲ್ಲಿ ಅಪೀಲ್ ಹಾಕಿಕೊಂಡರು. ಇತ್ತೀಚೆಗಷ್ಟೇ ಅವರ ಅಪೀಲ್ ಊರ್ಜಿತವಾಯ್ತು.

80

ಕೆಂಗಲ್ ಹನುಮಂತಯ್ಯನವರ ಮೊಮ್ಮಗ ಸುನೀಲ್ ದರೋಡೆಕೋರನಾದ ಕಥೆ

ನಮ್ಮ ಕಣ್ಮನಗಳನ್ನು ಸೂರೆಗೊಳ್ಳುವಂಥ ವಿಧಾನಸೌಧವನ್ನು ಕಟ್ಟಿಸಿದವರು ದಿ. ಕೆಂಗಲ್ ಹನುಮಂತಯ್ಯ. ಒಳ್ಳೆಯ ಆಡಳಿತವನ್ನು ನೀಡಿದ ಬೆರಳೆಣಿಕೆಯ ಮುಖ್ಯಮಂತ್ರಿಗಳಲ್ಲಿ ಇವರೂ ಒಬ್ಬರು. ರಾಜಕಾರಣಗಳಿರುವುದು ದೇಶಸೇವೆಗಾಗಿ ಎಂದು ಭಾವಿಸಿಕೊಂಡು ಜೀವಿಸಿದವರು. ಇಡೀ ದೇಶವಿರುವುದೇ ರಾಜಕಾರಣಿಗಳ ಸುಲಿಗೆಗೆ ಎನ್ನುವ ಇಂದಿನ ರಾಜಕೀಯ ಮಂತ್ರ ಅವರಿಗೆ ಅಪಥ್ಯವಾಗಿತ್ತು. ಹನುಮಂತಯ್ಯನವರು, 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ವಿಧಾನಸೌಧದ ಹೆಬ್ಬಾಗಿಲ ತಲೆಯ ಮೇಲೆ ಕೆತ್ತಿಸಿದರು. ನಂತರದ ರಾಜಕಾರಣಿಗಳು ತಮ್ಮನ್ನೇ ದೇವರೆಂದು ಭಾವಿಸಿಕೊಂಡರು, ಆ ಮಾತು ಬೇರೆ.

ಹೀಗೆ ಒಮ್ಮೆ ಸರ್ಕಾರೀ ಕೆಲಸದ ನಿಮಿತ್ತ ಮುಖ್ಯಮಂತ್ರಿ ಕೆಂಗಲ್ ಅವರು ಇಟಲಿಗೆ ಹೋದರು. ಆ ದೇಶದ ಪಾರ್ಲಿಮೆಂಟಿನ ಕಟ್ಟಡ ನೋಡಿ ಮನಸೋತುಬಿಟ್ಟರು. ಸರಿ ಆ ಕ್ಷಣವೇ ತೀರ್ಮಾನಿಸಿಕೊಂಡರು; ನಮ್ಮ ರಾಜಧಾನಿ

ಬೆಂಗಳೂರಲ್ಲೂ ಇಂಥದ್ದೇ ಕಟ್ಟಡ ನಿರ್ಮಿಸಬೇಕು ವಿಧಾನಸೌಧಕ್ಕಾಗಿ. ಇಟಲಿಯ ಆರ್ಕಿಟೆಕ್ಟ್‌ಗಳ ಮೂಲಕ ನೀಲನಕ್ಷೆಯನ್ನು ತಯಾರಿಸಿದರು. ಅವರ ಕಠಿಣ ಪರಿಶ್ರಮ, ವೈಯಕ್ತಿಕ ಉಸ್ತುವಾರಿ, ಸದಭಿರುಚಿಗಳ ಪರಿಣಾಮವಾಗಿ ಮಾನಸ ಕಟ್ಟಡ ಅರಳಿ ನಿಂತು ಕೋಟ್ಯಂತರ ವೀಕ್ಷಕರ ಮನತಣಿಸತೊಡಗಿತು.

ಕೆಂಗಲ್ ಅವರಿಗೆ ಗಂಡು ಸಂತಾನವಿರಲಿಲ್ಲ. ಇಬ್ಬರು ಹೆಣ್ಣುಮಕ್ಕಳು ಮಾತ್ರ, ಒಬ್ಬ ಮಗಳನ್ನು ಶಿವಲಿಂಗಯ್ಯ ಎನ್ನುವ ಉನ್ನತ ಅಧಿಕಾರಿಗೆ ಕೊಟ್ಟು ಮದುವೆ ಮಾಡಿದ್ದರು. ಶಿವಲಿಂಗಯ್ಯನವರು Indian Oil Corpn ನಲ್ಲಿ ಉನ್ನತ ಅಧಿಕಾರಿಯಾಗಿದ್ದರು. ಇವರ ಮಗ ಸುನೀಲ್ ಸಂದೀಪ್; ಬಹಳ ಜಾಣ ಹುಡುಗ. ಬೆಂಗಳೂರಿನ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿ ನಂತರ ಹೈದ್ರಾಬಾದಿನಲ್ಲಿ ಪಿಯುಸಿ ಮಾಡಲು ಹೋದ. ನಂತರ ಬೆಂಗಳೂರು ಯೂನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. (ಎಲೆಕ್ಟ್ರಿಕಲ್) ಅಧ್ಯಯನ ಮಾಡತೊಡಗಿದ. ಪ್ರೊ. ಜಿ. ಪರಮೇಶ್ವರ ಅವರು ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್‌ಗೆ ಎಚ್ ಓಡಿ ಆಗಿದ್ದರು. ಡಾ.ಕೆ. ಲಿಂಗಯ್ಯನವರು ಪ್ರಿನ್ಸಿಪಾಲ್ ಆಗಿದ್ದರು. ಸುನೀಲ್ ಯಾವತ್ತೂ 95% ಮೇಲೆಯೇ ರ್‍ಯಾಂಕ್ ತೆಗೆಯುತ್ತಿದ್ದ. ಹಾಗೆಂದು ಪುಸ್ತಕದ ಹುಳುವೂ ಆಗಿರಲಿಲ್ಲ. ಅವನದು ಬಹುಮುಖ ಪ್ರತಿಭೆ. ಅಥ್ಲೆಟಿಕ್ಸ್‌ನಲ್ಲಿ ಯೂನಿವರ್ಸಿಟಿ ಬ್ಲ್ಯೂ ಕೂಡಾ ಆಗಿದ್ದ. ಸ್ವಿಮ್ಮಿಂಗ್, ಹಾರ್ಸ್‌ರೈಡಿಂಗ್‌ನಂಥ ಹವ್ಯಾಸಗಳನ್ನೂ ಮೈಗೂಡಿಸಿಕೊಂಡಿದ್ದ.

ನಾನು ಈಗ ಹೇಳಹೊರಟಿರುವುದು ಈ ಸುನೀಲ್ ಸಂದೀಪ್ ಕಥೆಯನ್ನು. ದೊಡ್ಡವರ ವಿಚಾರಗಳು, ಕಾರ್ಯಾಚರಣೆಯ ಕ್ಷೇತ್ರಗಳು, ಗುರಿಗಳು ದೊಡ್ಡವಾಗಿಯೇ ಇರುತ್ತವೆ. ಹಾಗಾಗಿ ಅವರ ಕೌಟುಂಬಿಕ ಸಂಬಂಧಗಳೂ ಶ್ರೇಷ್ಠವಾಗಿರುತ್ತವೆ ಎಂದು ಸಾಮಾನ್ಯವಾಗಿ ನಂಬಿಕೊಂಡಿರಲಾಗುತ್ತದೆ. ಆದರೆ ಬಹುತೇಕವಾಗಿ ದೊಡ್ಡವರ ಕೌಟುಂಬಿಕ ಸಂಬಂಧಗಳು ಹೇಗೆ ಯಾಂತ್ರಿಕಗೊಂಡಿರುತ್ತವೆ ಎನ್ನುವುದಕ್ಕೆ ಸುನೀಲ್ ಸಂದೀಪ್ ಪ್ರಕರಣ ಒಂದು ಜ್ವಲಂತ ಸಾಕ್ಷಿ ಎಂದರೆ ತಪ್ಪಲ್ಲ.

ವ್ಯಕ್ತಿ ಸಾರ್ವಜನಿಕವಾಗಿ ಉನ್ನತ ಸ್ಥಾನಕ್ಕೇರಿದಾಗ ಜೊತೆಜೊತೆಗೆ ತನ್ನ ಕೌಟುಂಬಿಕ ಸಂಬಂಧಗಳನ್ನೂ ಜೀವಂತವಾಗಿ ಕಾಯ್ದುಕೊಂಡು ಹೋಗುವುದು ಬಹಳ ಕಷ್ಟ. ಇಡೀ ಸಮಾಜ ತನಗೆ ಕೊಡುತ್ತಿರುವ ಗೌರವವನ್ನು ಮನೆಯವರೂ ಕೊಡಬೇಕೆನ್ನುವ ನಿರೀಕ್ಷೆಯಿಟ್ಟುಕೊಳ್ಳುತ್ತಾನೆ. ಆದರೆ ಮನೆಯವರು ಒಡೆಯನಿಂದ ಬೇರೆಯದನ್ನೇ ನಿರೀಕ್ಷಿಸುತ್ತಾರೆ. ಈ ದ್ವಂದ್ವದಲ್ಲಿ ಬಹಳಷ್ಟು ಕುಟುಂಬಗಳು ಸಂಕಷ್ಟಕ್ಕೀಡಾಗುತ್ತವೆ. ಉಣ್ಣಲು, ತಿನ್ನಲು, ಮರೆಯಲು ಯಾವ ಕೊರತೆಯೂ

ಇಲ್ಲಿರುವುದಿಲ್ಲ. ಆದರೆ, ಕರುಳಿನ ಸಂಬಂಧಗಳು ಕತ್ತರಿಸಲ್ಪಟ್ಟಿರುತ್ತವೆ. ಸ್ಕೂಲ್‌ನಲ್ಲಿ ಓದುವ ಮಗ ತಂದೆ ತನ್ನನ್ನು ಹೋಟೆಲ್, ಸಿನಿಮಾ, ಸೈಟ್ ಸೀಯಿಂಗ್‌ಗೆ ಕರೆದೊಯ್ಯಬೇಕೆಂದು ಅಪೇಕ್ಷಿಸುತ್ತಾನೆ. ಅದು ದೊರಕದಿದ್ದಾಗ ತನ್ನ ತಂದೆಯ ಬಗೆಗೆ ಮಾತ್ರವಲ್ಲ ಆತನ ಉನ್ನತ ಹುದ್ದೆಯ ಬಗೆಗೂ ತಿರಸ್ಕಾರಭಾವ ತಾಳತೊಡಗುತ್ತಾನೆ.

ಮಕ್ಕಳಿಗೆ ಊಟ, ತಿಂಡಿಗಳಷ್ಟೇ ಸಿಕ್ಕರೆ ಸಾಲದು. ಅವಕ್ಕೆ ತಂದೆತಾಯಿಗಳ ಸ್ಪರ್ಶ ಸುಖವೂ ಬೇಕು. ಅಂದಾಗಲೇ ಅವುಗಳ ಮನೋಶಾರೀರಿಕ ಬೆಳವಣಿಗೆ ಸಾಧ್ಯ.

ಶ್ರೀಮಂತರ ಮಕ್ಕಳು ಓದುವ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ಡ್ರಗ್ಸ್ ಮಾರಾಟವಾಗುತ್ತಿರುವುದನ್ನು ನಾವು ನೋಡಬಹುದು. ತಂದೆ, ತಾಯಿ ಇಬ್ಬರೂ ಐಎಎಸ್ ಆಫೀಸರ್‌ಗಳು. ಮಕ್ಕಳ ಪಾಲನೆಗೆ ಆಯಾಗಳು, ಅಡಿಗೆಯಾಳುಗಳು, ಸ್ಕೂಲ್‌ನಿಂದ ವಾಪಸ್ಸು ಬಂದ ಮಕ್ಕಳಿಗೆ ಆಡಲು ಯಂತ್ರದ ಬೊಂಬೆಗಳು. ಅಧಿಕಾರಿ ತಂದೆ ತಾಯಿಗಳು ಮನೆಗೆ ಬರುವಷ್ಟರಲ್ಲಿ ಮಕ್ಕಳು ಮಲಗಿರುತ್ತವೆ. ಮಕ್ಕಳು ಬೆಳಗ್ಗೆ ಏಳುವಷ್ಟರಲ್ಲಿ ತಂದೆ ತಾಯಿಗಳು ಆಫೀಸ್‌ಗೆ ಹೊರಡಲು ರೆಡಿಯಾಗಿರುತ್ತಾರೆ. ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾದಂತೆ ಅಧಿಕಾರಿಗಳು ಹಣದಾಸೆಗಾಗಿ ರಜೆ ದಿನಗಳಲ್ಲೂ ತಮ್ಮ ಡೀಲಿಂಗ್‌ಗಳಿಗೆ ಯಾರಯಾರದೋ ಜೊತೆ ಪಾರ್ಟಿಗಳಿಗೆ ಹೋಗಿಬಿಡುವುದೂ ಉಂಟು. ಇದು ಒಂದು ಸ್ಥೂಲ ಉದಾಹರಣೆ ಮಾತ್ರ. ಹೃದಯಸ್ಪರ್ಶಿ ಸಂಬಂಧಗಳ ಗೈರುಹಾಜರಿಯಲ್ಲಿ ಬೆಳೆಯುವ ಮಕ್ಕಳು ತಮಗೆ ಸಿಗುವ ಉನ್ನತ ಶೈಕ್ಷಣಿಕ ಅವಕಾಶಗಳನ್ನು ಬಳಸಿಕೊಂಡು ಜಾಣರಾಗುತ್ತಾರೆ. ಆದರೆ ಹೃದಯಹೀನರಾಗುವ ಅಪಾಯಕ್ಕೂ ಈಡಾಗುತ್ತಾರೆ......

ಬಹುಶಃ ಸುನೀಲ್ ಸಂದೀಪ್ ಕೂಡಾ ಇಂಥದೇ ಕೌಟುಂಬಿಕ ವಾತಾವರಣಕ್ಕೆ ಸಿಕ್ಕನೇನೋ ಎನಿಸಿದ್ದರಿಂದ ಇದನ್ನೆಲ್ಲ ಊಹಿಸಿಕೊಳ್ಳಬೇಕಾಯಿತು.

ಸುನೀಲ್‌ನ ತಂದೆಯ ಸಹೋದರರೊಬ್ಬರು ಅಮೆರಿಕಾದಲ್ಲಿದ್ದರು. ಒಮ್ಮೆ ಬೆಂಗಳೂರಿಗೆ ಬಂದಾಗ ಸುನೀಲ್‌ನನ್ನು ಸುತ್ತಾಟಕ್ಕೆ ಕರೆದೊಯ್ದರು. ಅಮೆರಿಕಾದ ಕಲ್ಚರನ್ನು ಮೈಗೂಡಿಸಿಕೊಂಡಿದ್ದ ಅವರು ಸುನೀಲ್‌ನನ್ನು ಮಗನಂತೆ ಕಾಣದೆ ಸ್ನೇಹಿತನಂತೆ ಕಂಡರು. ಬಾರ್‌ಗೂ ಕರೆದೊಯ್ದರು. ಸುನೀಲ್ ಇಷ್ಟಪಟ್ಟ ಸಾಮಾನುಗಳನ್ನು ಖರೀದಿಸಿಕೊಟ್ಟರು. ಇದೆಲ್ಲದರಿಂದ ಸುನೀಲ್ ತನ್ನ ಅಂಕಲ್‌ಗೆ ಮಾರುಹೋದ. ಈ ಅಂಕಲ್‌ಗೇ ತಾನು ಮಗನಾಗಿದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಭಾವಿಸಿಕೊಂಡ. ಆದರೆ ಮುಗ್ಧ ಸುನೀಲ್‌ಗೇನು ಹೊತ್ತು ಈ ಅಂಕಲ್

ಕೂಡಾ ಅಮೆರಿಕಾದಲ್ಲಿ ತನ್ನ ಸ್ವಂತ ಮಕ್ಕಳೊಂದಿಗೆ ಯಾಂತ್ರಿಕ ಜೀವನ ನಡೆಸುತ್ತಿದ್ದಾರೆನ್ನುವುದು! ಅಮೆರಿಕಾದ ತನ್ನ ಯಾಂತ್ರಿಕ ಜೀವನವನ್ನು ಬೆಂಗಳೂರಲ್ಲಿ ಅಲ್ಪಕಾಲಕ್ಕಾದರೂ ಮರೆಯುವ ಪ್ರಯತ್ನ ಮಾಡುತ್ತಿದ್ದಾರೆ ಅಂಕಲ್ ಎನ್ನುವುದು ಸುನೀಲ್‌ಗೆ ಗೊತ್ತಾಗಲಿಲ್ಲ. ಸುನೀಲ್‌ನ ಜಾಣತನ, ಪ್ರತಿಭೆಗಳನ್ನು ನೋಡಿ ಅಂಕಲ್ ಮಾತಿಗೆ ಮಾತು ಬಂದು, "ನಿನ್ನಂಥ ಇಂಟೆಲಿಜೆಂಟ್ ಹುಡುಗ ಅಮೆರಿಕಾದಲ್ಲಿ ಓದಬೇಕು. ಇಂಡಿಯಾದಲ್ಲಿ ಪ್ರತಿಭೆಗೆ ಮನ್ನಣೆಯಿಲ್ಲ" ಎಂದ. ಈ ಮಾತು ಸುನೀಲ್ ತಲೆಯಲ್ಲಿ ರಿಜಿಸ್ಟರ್ ಆಗಿಬಿಟ್ಟಿತು. ನಾನು ಅಮೆರಿಕಾದಲ್ಲಿಯೇ ಇಂಜಿನಿಯರಿಂಗ್ ಮಾಡೋದು ಹೂಂ ಎಂದುಕೊಂಡ. ಅಂಕಲ್ ಅಮೆರಿಕಾಕ್ಕೆ ಹೋಗಿಬಿಟ್ಟ. ಅಮೆರಿಕಾಕ್ಕೆ ಹೋಗಿ ತನ್ನ ಪತ್ನಿಗೆ ಈ ವಿಷಯ ತಿಳಿಸಿದಾಗ ಆಕೆ ಸಿಡಿಮಿಡಿಯಾಗಿಬಿಟ್ಟಳು......

ಆದರೆ ಸುನೀಲ್ ತಂದೆ, "ಇಲ್ಲಿ ನಿನಗೆ ಏನು ಕಡಿಮೆಯಾಗಿದೆಯೆಂದು ಅಲ್ಲಿಗೆ ಹೋಗುತ್ತಿದ್ದೀಯಾ?" ಎಂದು ಸಿಟ್ಟಿಗೆದ್ದ. ಅದಕ್ಕೆ ಪ್ರತಿಯಾಗಿ ಸುನೀಲ್, "ಇದೊಂದು ಮನೇನಾ? ನರಕ!" ಎಂದು ಸ್ಫೋಟಗೊಂಡ. "ಹಾಗಿದ್ದರೆ ನಿನಗೆ ತಿಳಿದಂತೆ ಮಾಡು, ಪುನಃ ಈ ಮನೆಯಲ್ಲಿ ನಿನಗೆ ಸ್ಥಾನವಿಲ್ಲ" ಎಂದುಬಿಟ್ಟರು ಸುನೀಲ್ ತಂದೆ. "ನೀನು ಒಂದು ಪೈಸೆಯನ್ನೂ ಕಳಿಸುವುದು ಬೇಡ. ಎಲ್ಲವನ್ನೂ ಅಂಕಲ್ ನೋಡಿಕೊಳ್ಳುತ್ತಾರೆ" ಎಂದು ಸುನೀಲ್ ಉತ್ತರಿಸಿದ.

"ನಾನು ಅಮೆರಿಕಾದಲ್ಲಿದ್ದು ನಿನಗಿಂತ ಹೆಚ್ಚಿನದನ್ನು ಸಾಧಿಸಿ ತೋರುತ್ತೇನೆ. ಇಂಡಿಯಾಕ್ಕೆ ವಾಪಸ್ ಬಂದರೂ ನಿನ್ನ ಮನೆಯೊಳಗೆ ಕಾಲಿಡುವುದಿಲ್ಲ. ಇಲ್ಲಿಯೇ ದೊಡ್ಡ ಬಂಗಲೆ ಕಟ್ಟಿಸಿ ನಿನ್ನ ಮುಖಕ್ಕೆ ಹೊಡೆಯುವಂತೆ ಬದುಕಿ ತೋರಿಸುತ್ತೇನೆ" ಎಂದ ಉದ್ವೇಗದಲ್ಲಿದ್ದ ಸುನೀಲ್.

ಅಮೆರಿಕಾದಲ್ಲಿ ಫ್ಲೈಟ್ ಇಳಿದ ಸುನೀಲ್‌ನನ್ನು ಎದುರುಗೊಳ್ಳಲು ಬಂದಿದ್ದ ಅಂಕಲ್ ಮುಖದಲ್ಲಿ ಕಳೆಯಿರಲಿಲ್ಲ. "ಅದೇಕೆ ಅಂಕಲ್, ಆಂಟಿ ಮತ್ತು ಕಿಡ್ಸ್ ಬರಲಿಲ್ವಾ?" ಎಂದ.

ಜೋಲುಧ್ವನಿಯಲ್ಲಿ "ಇಲ್ಲ ಅವರಿಗೇನೇನೋ ಅಪಾಯಿಂಟ್‌ಮೆಂಟ್. ನಡಿ ಹೋಗೋಣ" ಎಂದ ಅಂಕಲ್.

ಬೆಂಗಳೂರಿಗೆ ಬಂದಾಗ ಅಂಕಲ್ ತೋರಿದ ಖುಷಿ, ಭರವಸೆಗಳು ಇಲ್ಲವಲ್ಲ ಎಂದು ಸುನೀಲ್‌ಗೆ ಪಿಚ್ಚೆನ್ನಿಸತೊಡಗಿತು. ಕಾರಲ್ಲಿ ಸಹ ಅಂಕಲ್ ಮೌನವಾಗಿಯೇ ಇದ್ದರು. ಕೃತಕ ಮುಗುಳ್ನಗೆಯೊಂದಿಗೆ ಸ್ವಾಗತಿಸಿದ ಆಂಟಿ ಬಹಳ ಎತ್ತರ ಬೆಳೆದುಬಿಟ್ಟಿದ್ದೀಯಾ" ಎಂದರು ಉಪಚಾರದ ಮಾತಿಗಾಗಿ.

ಅಮೆರಿಕಾ ಎಂದರೆ ಸ್ವಾಗತ ಎಂದು ಕಲ್ಪಿಸಿಕೊಂಡು ಬಂದಿದ್ದ ಸುನೀಲ್‌ಗೆ ಭ್ರಮನಿರಸನಗಳ ಸರಮಾಲೆಯೇ ಕಾದಿತ್ತು. ಅಂಕಲ್ ಇದ್ದದ್ದು ಡಲ್ಲಾಸ್ ಸಿಟಿಯಲ್ಲಿ. ಅಲ್ಲಿಯ ಯಾವ ಕಾಲೇಜಿನಲ್ಲೂ ಸುನೀಲ್‌ಗೆ ಸೀಟು ಸಿಗಲಿಲ್ಲ. ಮುಂದಿನ ಅಕಾಡೆಮಿಕ್ ಈಯರ್‌ಗೆ ಬನ್ನಿ ನೋಡೋಣ ಎನ್ನುವ ಉತ್ತರಗಳಿಂದ ಸುನೀಲ್‌ಗೆ ಮುಖಭಂಗವಾದಂತೆನಿಸಿತು.

ಅಂಕಲ್ ಮನೆಯ ವಾತಾವರಣ ಸುನೀಲ್‌ಗೆ ಉಸಿರುಗಟ್ಟಿಸತೊಡಗಿತು. ಅಮೆರಿಕಾದಲ್ಲಿ ಗಳಿಸದೆ ತಿನ್ನುವವರಿಗೆ ಸ್ಥಾನವಿಲ್ಲ ಎನ್ನುವುದನ್ನು ಕಂಡುಕೊಂಡ.

ಕೆಲಸ ಮಾಡುವಾಗ ಕೈಜಾರಿ ಗಾಜಿನ ಪಾತ್ರೆಗಳನ್ನು ಒಡೆದರೆ ಕೆಲಸದವಳ ಸಂಬಳದಲ್ಲಿ ಅದರ ಮೊತ್ತವನ್ನು ಮುರಿದುಕೊಳ್ಳುತ್ತಿದ್ದಳು ಆಂಟಿ. ಮಕ್ಕಳಿಗೆ ಚಿಕ್ಕವರಿದ್ದಾಗಿನಿಂದಲೇ ಗಳಿಸುವ ತರಬೇತಿ ನೀಡುವುದನ್ನು ನೋಡಿ ದಿಗಿಲುಗೊಂಡ. ಅಂಕಲ್ ಮಕ್ಕಳಿಗೆ ಆಂಟಿ ಇಂಥ ಕೆಲಸಕ್ಕೆ ಇಂತಿಷ್ಟು ಎಂದು ನಿಗದಿ ಮಾಡಿದ್ದಳು. ತಂದೆ ಬೂಟ್ ಪಾಲಿಷ್ ಮಾಡಿದರೆ, ಫ್ರಿಜ್ ಕ್ಲೀನ್ ಮಾಡಿದರೆ, ಡ್ರೆಸ್‌ಗಳನ್ನು ಇಸ್ತ್ರಿ ಮಾಡಿದರೆ, ಚಿಕ್ಕ ಮಗುವನ್ನು ಇಂತಿಷ್ಟು ಗಂಟೆ ಆಟವಾಡಿಸಿದರೆ ಹೀಗೆ ಪ್ರತಿಯೊಂದಕ್ಕೂ ತನ್ನ ಮಗನಿಗೆ ಕೂಲಿಯನ್ನು ನಿಗದಿ ಮಾಡಿದ್ದಳು. ಆಟವಾಡುತ್ತ ಏನಾದರೂ ಆಟಿಗೆಗಳನ್ನು ಮುರಿದರೆ, ಇಸ್ತ್ರಿ ಮಾಡುತ್ತ ಬಟ್ಟೆಯನ್ನು ಸುಟ್ಟರೆ ಗಳಿಕೆಯ ಕೂಲಿಯಲ್ಲಿ ಹಣವನ್ನು ಕಟ್ ಮಾಡುತ್ತಿದ್ದಳು. ಹೀಗಾಗಿ ವಯಸ್ಸಿಗೆ ಮೀರಿದ ಜಾಗ್ರತೆ ಮತ್ತು ಲೆಕ್ಕಾಚಾರಗಳನ್ನು ಅಂಕಲ್ ಮಗ ಮೈಗೂಡಿಸಿಕೊಂಡಿದ್ದ. ಹೆಚ್ಚಿನ ಗಳಿಕೆಯ ಆಸೆಯಿಂದ ಅಂಕಲ್ ಮಗ ಪಕ್ಕದ ಮನೆಯ ಚಿಕ್ಕ ಮಗುವನ್ನೂ ಆಟ ಆಡಿಸಿ ದುಡ್ಡು ಗಳಿಸಿ ತರುತ್ತಿದ್ದ.

ಇದನ್ನೆಲ್ಲ ನೋಡುತ್ತ ಸುಮ್ಮನೆ ಎರಡು ಹೊತ್ತು ತಿಂಡಿ, ಊಟ ಮಾಡುತ್ತಿದ್ದ ಸುನೀಲ್‌ಗೆ ವಾಕರಿಕೆ ಬರತೊಡಗಿತು.

ಅಂಕಲ್ ಮಗ ಒಮ್ಮೆ ತಪ್ಪು ಮಾಡಿದಾಗ, "ನೀನು ಅಮೆರಿಕಾದಲ್ಲಿರಲು ಲಾಯಕ್ಕಿಲ್ಲ, ಇಂಡಿಯಾಗೆ ಕಳಿಸುತ್ತೇನೆ" ಎಂದಳು ಸುನೀಲ್ ಕಡೆ ನೋಡುತ್ತ. ನೇರವಾಗಿ ತನಗೇ ಈ ಮಾತು ಹೇಳುತ್ತಿದ್ದಾಳೆ ಆಂಟಿ ಅನಿಸಿತು ಸೂಕ್ಷ್ಮಗ್ರಾಹಿ ಸುನೀಲ್‌ಗೆ. ತಿಂಡಿ ತಿನ್ನುತ್ತಿದ್ದ ಸುನೀಲ್‌ಗೆ ತಿಂದದ್ದು ವಾಪಸು ಬಂದಂತಾಗಿ ಹಾಗೇ ಅದನ್ನು ಬಿಟ್ಟು ಎದ್ದ. ಆಗ, "ಸುನೀಲ್ ಹಾಗೆಲ್ಲ ವೇಸ್ಟ್ ಮಾಡಬಾರದು. ಅದನ್ನೆಲ್ಲ ತಿಂದು ಮುಗಿಸು. ಯಾವುದನ್ನೂ ನ್ಯಾಷನಲ್ ವೇಸ್ಟ್ ಮಾಡಕೂಡದು" ಎಂದು ಆಜ್ಞಾಪಿಸಿದಳು.

ಇತ್ತ ಬೆಂಗಳೂರಿನಿಂದ ಸುನೀಲ್‌ನ ತಂದೆ ತಾಯಿಗಳು ಒಮ್ಮೆಯೂ ಫೋನ್ ಮಾಡಿ ಮಗನನ್ನು ವಿಚಾರಿಸಿಕೊಳ್ಳಲಿಲ್ಲ. ಯೌವನ ಉಕ್ಕಿ ಹರಿಯುವ ವಯಸ್ಸಿನಲ್ಲಿದ್ದ ಸುನೀಲ್‌ಗೆ ಇದರಿಂದ ತನ್ನ ತಂದೆತಾಯಿಗಳ ಮೇಲೆ ಮತ್ತಷ್ಟು ಕೋಪವುಕ್ಕಿತು. ಹೀಗೆ ನನ್ನನ್ನು ಅವರು ನಿರ್ಲಕ್ಷಿಸುತ್ತಿದ್ದಾರೆಂದರೆ ಅದರ ಎರಡು ಪಟ್ಟು ನಾನು ಅವರನ್ನು ತಿರಸ್ಕರಿಸಿ ತೋರಿಸುತ್ತೇನೆ ಎಂದು ಮನದಲ್ಲೆ ಪ್ರತಿಜ್ಞೆ ಮಾಡಿಕೊಂಡ.

ರಜೆ ದಿವಸದ ವಿಹಾರಕ್ಕೆ ಮೊದಮೊದಲು ಸುನೀಲ್‌ನನ್ನು ಅಂಕಲ್ ಮತ್ತು ಆಂಟಿ ಕರೆದೊಯ್ಯುತ್ತಿದ್ದರು. ಆದರೆ ಬರುಬರುತ್ತ, "ಸುನೀಲ್ ಮನೆ ಕಡೆ ಜೋಪಾನ. ರಾತ್ರಿಗೆ ಬಂದು ಬಿಡುತ್ತೇವೆ" ಎಂದು ಹೇಳಿ ಹೋಗತೊಡಗಿದರು.

"ಛೇ! ಇದೊಂದು ಮನೆಯೆ? ದೇಶವೇ? ಸಂಸ್ಕೃತಿಯೆ? ಕುಟುಂಬವೆ? ಇದಕ್ಕಿಂತ ಇಂಡಿಯಾ ಸಾವಿರ ಪಾಲು ಉತ್ತಮ. ಇದೊಂದು ಅಹಿಂಸಾತ್ಮಕ ನರಕ!" ಎಂದು ಸುನೀಲ್‌ನ ಅಂತರಾಳ ಕೂಗಿತು.

ಕೆಲವೇ ತಿಂಗಳುಗಳಲ್ಲಿ ಪ್ರತಿಭಾವಂತ ಸುನೀಲ್ ತನ್ನ ಅಂಕಲ್ ಮನೆಯ ಕೆಲಸದ ಆಳಾಗಿ ಪರಿವರ್ತನೆಗೊಂಡುಬಿಟ್ಟಿದ್ದ. ಮಾಡು ಎಂದು ಯಾರೂ ಆದೇಶಿಸುತ್ತಿರಲಿಲ್ಲ. ಆದರೆ ಕುಟುಂಬದ, ಸಮಾಜದ ವ್ಯವಸ್ಥೆಯೇ ಎಲ್ಲವನ್ನೂ ಮಾಡಿಸುತ್ತಿತ್ತು. ಮಾಡದೆ ಊಟ ಮಾಡುವುದೆಂದರೆ ಅಸಾಧ್ಯ ಎನ್ನುವ ಅನಿವಾರ್ಯತೆಯನ್ನು ಆ ವ್ಯವಸ್ಥೆ ನಿರ್ಮಿಸಿತು.

ತಾನೇನೂ ಬಿಟ್ಟಿಯಾಗಿ ಅಂಕಲ್ ಮನೆಯಲ್ಲಿ ಊಟ ಮಾಡುತ್ತಿಲ್ಲ. ಮನೆಗೆಲಸಗಳನ್ನೆಲ್ಲ ಮಾಡುತ್ತಿದ್ದೇನೆ. ಹೇಗಾದರೂ ಮಾಡಿ ಮುಂದಿನ ಅಕಾಡೆಮಿಕ್ ಈಯರ್‌ವರೆಗೆ ಹೀಗೇ ಮುಂದುವರೆದು ಇಂಜಿನಿಯರಿಂಗ್ ಅಡ್ಮಿಶನ್ ಸಿಕ್ಕಿತೆಂದರೆ ಮೊದಲು ಅಂಕಲ್ ಮನೆ ತೊರೆದು ಎಲ್ಲಾದರೂ ಕೆಲಸಕ್ಕೆ ಸೇರಿಕೊಳ್ಳಬೇಕೆಂದು ಯೋಚಿಸುತ್ತ ಕೂತಿದ್ದಾಗಲೇ ಅಂಕಲ್ "ಸುನೀಲ್ ಬಾ ಇಲ್ಲಿ ಸ್ವಲ್ಪ ಮಾತಾಡುವುದಿದೆ" ಎಂದರು.

ಅಂಕಲ್ ರೂಮಿನೊಳಕ್ಕೆ ಹೋಗುವಾಗಲೇ ಸುನೀಲ್‌ಗೆ ಅದೇನೋ ತಳಮಳ ಶುರುವಾಯಿತು. ಅಹಿತಕರವಾದುದನ್ನು ಹೇಳುವ ಪೀಠಿಕೆಯಂತಿತ್ತು ಅಂಕಲ್ ಧ್ವನಿ.

"ಈ ಮನೆಯಲ್ಲಿ ನಿನಗೆ ಬೇಜಾರಾಗುತ್ತಿರಬಹುದು. ನೀನು ಬಹಳ ಸೂಕ್ಷ್ಮ. ಬಾಯಿಬಿಟ್ಟು ಹೇಳದಿದ್ದರೂ ನನಗೆ ತಿಳಿಯುತ್ತೆ. ನಿಮ್ಮ ಆಂಟಿ ಬಹಳ ಲೆಕ್ಕಾಚಾರದವಳು. ಅಕಾಡೆಮಿಕ್ ಈಯರ್ ಸ್ಟಾರ್ಟ್ ಆಗಲು ಇನ್ನೂ ಆರು ತಿಂಗಳಿವೆ. ಅಲ್ಲಿಯವರೆಗೆ ನೀನು ಬೆಂಗಳೂರಿಗೆ ಹೋಗಿದ್ದು ನಂತರ ಬಾ" ಎಂದರು.

ಇಂಥ ಮಾತುಗಳ ನಿರೀಕ್ಷೆಯಲ್ಲಿಯೇ ಬಂದಿದ್ದ ಸುನೀಲ್‌ಗೆ ಆಗಬೇಕಾದಷ್ಟು ಆಘಾತವಾಗಲಿಲ್ಲ.

"ಸರಿ ಅಂಕಲ್, ಒಂದು ವಾರ ಟೈಂ ಕೊಡಿ, ನಾನು ಬೇರೆಡೆ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ನಿಮಗೆ ತೊಂದರೆ ಕೊಡೋದಿಲ್ಲ" ಎಂದ.

"ಹಾಗಲ್ಲ ನಾನು ಹೇಳಿದ್ದು. ನಿನಗೆ ಬೇಜಾರಾಗಿದ್ದರೆ ಹೋಗಿ ಬಾ ಎಂದೆ. ನೀನೇನೂ ನನಗೆ ಭಾರವಲ್ಲ. ನನ್ನ ಮಗನಿದ್ದಂತೆ ನೀನೂ. ನಾನಿಲ್ಲಿರುವಾಗ ನೀನು ಪ್ರತ್ಯೇಕ ಮನೆ ಮಾಡಿಕೊಂಡಿದ್ದರೆ ಅಣ್ಣ ಏನೆಂದುಕೊಂಡಾನು? ಹಾಗೆಲ್ಲ ಮಾಡಬೇಡ" ಎಂದ ಅಂಕಲ್.

"ನಿಮ್ಮ ಅಣ್ಣನಿಗೆ ನನ್ನ ಬಗ್ಗೆಯೇ ಅನಿಸಿಕೆಗಳಿಲ್ಲ. ಅಂದಮೇಲೆ ನಿಮ್ಮ ಬಗ್ಗೆ ಏನೆಂದು ಕೇಳಲು ಸಾಧ್ಯ? ಇಷ್ಟರಲ್ಲಿ ಆತನೇ ನಿಮಗೆ ಮೊದಲು ಸುನೀಲ್‌ನನ್ನು ಮನೆಯಿಂದ ಹೊರಹಾಕು ಎಂದು ಹೇಳಿರಲೂ ಸಾಕು. ಇಷ್ಟು ಕಾಲ ಇರಿಸಿಕೊಂಡಿದ್ದಕ್ಕೆ ಥ್ಯಾಂಕ್ಸ್" ಎಂದು ಹೇಳಿ ಅಂಕಲ್ ರೂಮಿನಿಂದ ಹೊರಬಂದ....

ಸುನೀಲ್ ಅಂಕಲ್ ಮನೆ ಬಿಟ್ಟು ಹೊರಬಂದಾಗ ತೀವ್ರ ಅನಾಥಪ್ರಜ್ಞೆ ಕಾಡತೊಡಗಿತು. ಈ ಜಗತ್ತಿನಲ್ಲಿ ತನ್ನವರು ಎನ್ನುವವರು ಯಾರೂ ಇಲ್ಲವಲ್ಲ ಎನಿಸತೊಡಗಿತು. ತಂದೆ, ತಾಯಿ, ಅಂಕಲ್, ಆಂಟಿ ಎಲ್ಲ-ಸ್ವಾರ್ಥಿಗಳು ಎನಿಸತೊಡಗಿತು. ತಂದೆಯ ಮೇಲಂತೂ ಕೋಪ ಜ್ವಾಲಾಮುಖಿಯಂತೆ ಸ್ಫೋಟಗೊಳ್ಳತೊಡಗಿತು.

ನನ್ನನ್ನು ಹುಟ್ಟಿಸು ಅಂತ ಅಪ್ಲಿಕೇಶನ್ ಹಾಕಿಕೊಂಡಿದ್ದೆನಾ ಈ ನನ್ನಪ್ಪನಿಗೆ. ತಮ್ಮ ಪುತ್ರ ಭಾಗ್ಯಕ್ಕಾಗಿ ಹುಟ್ಟಿಸಿ ಈ ರೀತಿ ಉಪೇಕ್ಷಿಸುವುದೆ? 'ಪಿತೃದೇವೋಭವ' ಎನ್ನುತ್ತಾರೆ ಬ್ಲಡಿ ಇಂಡಿಯನ್ಸ್. ಈ ಸೂಕ್ತಿ ತಂದೆಗಳು ತಮ್ಮ ಹಿತಾಸಕ್ತಿಗಾಗಿ ರೂಪಿಸಿ ಅಮಾಯಕ ಮಕ್ಕಳ ಮೇಲೆ ಹೇರುತ್ತಿದ್ದಾರೆ. ಶತಶತಮಾನಗಳಿಂದ ಪಾಪ ಮಕ್ಕಳು ತಂದೆ ಏನೇ ಮಾಡಲಿ ಅವನನ್ನು ದೇವರೆಂದು ತಿಳಿಯುತ್ತ ಬಂದಿದ್ದಾರೆ. ಈ ರೀತಿ ದೈವಿಕ ಭಾವನೆಗಳನ್ನು ಹೇರುವ ಮೂಲಕ ತಾವು ಮುದಿಯಾದ ಮೇಲೂ ಮಕ್ಕಳ ಮೇಲೆ ಸವಾರಿ ಮಾಡುವ ಹುನ್ನಾರ ಈ ತಂದೆಯರಿಗೆ. ಆದರೆ ಎಲ್ಲ ಮಕ್ಕಳೂ ಎಲ್ಲಿ ತಂದೆಯನ್ನು ಪಾಲಿಸುತ್ತಾರೆ. ತಾವು ದುಡಿಯುವಂತಾದೊಡನೆ ತಂದೆಯ ಮೇಲೆ ಸೇಡು ತೀರಿಸಿಕೊಳ್ಳಲು ಆರಂಭಿಸುತ್ತಾರೆ. ತಾನು ಚಿಕ್ಕವನಿದ್ದಾಗ ತಂದೆಯಿಂದ ಏನೇನು ಕಿರುಕುಳ ಅನುಭವಿಸಿದ್ದನೋ ಅವನ್ನೆಲ್ಲ ತೀರಿಸತೊಡಗುತ್ತಾನೆ. ಆಗಲೇ ತಂದೆಗೆ

ಪಶ್ಚಾತ್ತಾಪವಾಗುವುದು. ಅದಕ್ಕೇ ಎಲ್ಲ ಮುದಿಯರು ಸೇರಿ ಕಾಲ ಕೆಟ್ಟು ಹೋಯಿತು, ಮಕ್ಕಳಿಗೆ ಧಾರ್ಮಿಕ ಭಾವನೆ ಹೊರಟುಹೋಗಿದೆ, ಹಿರಿಯರೆಂದರೆ ಕಾಸಿನ ಕಿಮ್ಮತ್ತು ಇಲ್ಲದಂತಾಗಿದೆ ಎಂದೆಲ್ಲ ಟೈಮ್‌ಪಾಸ್ ಚರ್ಚೆ ಮಾಡುತ್ತಾರೆ. ಮಗನ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕುವ ಈ ತಂದೆಯರು ಅದೆಷ್ಟು ಷೋಕಿಲಾಲರು! ಇವರಿಂದಲೇ ಅಲ್ಲವೆ ಭಾರತದ ಬಾರು, ಸೂಳೆಗೇರಿಗಳು ನಡೆಯುತ್ತಿರುವುದು, ಭಾರತದ ಯಾವ ತಂದೆ ಮಗನನ್ನು ಬಾರ್‌ಗೆ ಕರೆದುಕೊಂಡು ಹೋಗುತ್ತಾನೆ? ಮನೆಗೆ ಬಂದು ಹೆಂಡತಿ, ಮಕ್ಕಳಿಗೆ ಶಿಸ್ತು, ಸಂಸ್ಕೃತಿಗಳನ್ನು ಬೋಧಿಸುವ ಹಿಪೋಕ್ರಾಟ್‌ಗಳು! ಅದೇ ಅಮೆರಿಕಾದಲ್ಲಿ ಯಾವುದೂ ಮುಗಮ್ಮಾಗಿ ಇಲ್ಲ. ಮೇಲುನೋಟಕ್ಕೆ ತೀರಾ ವ್ಯಾವಹಾರಿಕ ಎನಿಸಿದರೂ ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯವಿದೆ. ಭಾರತದಲ್ಲಾದರೆ ವ್ಯಕ್ತಿಯೆಂದರೆ ವಯಸ್ಕ ಎನ್ನುವ ಪರಿಕಲ್ಪನೆಯಿದೆ. ಆದರೆ ಇಲ್ಲಿ ಚಿಕ್ಕಮಗುವೂ ವ್ಯಕ್ತಿಯೇ. ತನ್ನ ಮಗನನ್ನು ಹೊಡೆಯುವಂತಿಲ್ಲ ಅಮೆರಿಕಾದ ತಂದೆ. ತಂದೆ, ತಾಯಿಗಳು ಹಿಂಸಿಸುತ್ತಿದ್ದಾರೆ ಎಂದು ಪೊಲೀಸರಿಗೆ ಒಂದು ಫೋನ್ ಮಾಡಿದರೂ ಸಾಕು ಪೊಲೀಸರು ತಂದೆತಾಯಿಗಳನ್ನು ಠಾಣೆಗೆ ಎಳೆದೊಯ್ಯುತ್ತಾರೆ. ಭಾರತದ ತಂದೆತಾಯಿಗಳಿಗಿರುವಂತೆ ತಾವೇ ಮಕ್ಕಳನ್ನು ಹುಟ್ಟಿಸಿದ್ದೇವೆ ಎನ್ನುವ ಭ್ರಮೆ ಅಮೆರಿಕಾದ ತಂದೆತಾಯಿಗಳಿಗಿಲ್ಲ. ತಂದೆತಾಯಿಗಳ ಮೂಲಕ ಮಕ್ಕಳು ಹುಟ್ಟಿರುತ್ತಾರೆಯೇ ವಿನಃ ಅವರಿಂದಲೇ ಅಲ್ಲ ಎಂದು ಅಮೆರಿಕಾದ ಕಾನೂನು ಪ್ರತಿಪಾದಿಸುತ್ತದೆ. ನಿಜವಾದ ಸ್ವಾತಂತ್ರ್ಯ ಅಮೆರಿಕಾದಲ್ಲಿಯೇ ಹೊರತು ಆ ಕೊಂಪೆ ಭಾರತದಲ್ಲಿಲ್ಲ. ಅದು ಸಮಯಸಾಧಕರ ದೇಶ; ಗೆಲ್ಲುವ ಕುದುರೆಯ ಬಾಲ ಹಿಡಿಯುವ ಕುರಿಗಳ ನಾಡು. ಅದಕ್ಕಾಗಿಯೇ ಅಲ್ಲವೇ ಶತಮಾನಗಳ ಕಾಲ ಪರಕೀಯರು ಆಳಿದ್ದು. ಭಾರತವನ್ನು ವಾಸ್ಕೋಡಗಾಮ ಸಾವಿರ ವರ್ಷ ಮುಂಚೆಯೇ ಕಂಡುಹಿಡಿದಿದ್ದರೆ ಆವಾಗಿನಿಂದಲೇ ಭಾರತ ಗುಲಾಮು ದೇಶವಾಗಿರುತ್ತಿತ್ತು. ತಡವಾಗಿ ಕಂಡುಹಿಡಿದ ವಾಸ್ಕೋಡಗಾಮಗೆ ಭಾರತ ಥ್ಯಾಂಕ್ಸ್ ಹೇಳಬೇಕು.... ಹೀಗೇ ಇಚ್ಛೆ ಬಂದಂತೆ ಕಿಚ್ಚೇಳತೊಡಗಿತು ಸುನೀಲ್ ಮಿದುಳಿನಲ್ಲಿ. ಆ ಸಮಯದಲ್ಲಿ ಜಾರ್ಜ್‌ನ ನೆನಪಾಯಿತು. ಅವನೊಂದಿಗೆ ಒಂದಷ್ಟು ವ್ಹಿಸ್ಕಿ ಕುಡಿದು ಸಿಗಾರ್ ಎಳೆದರೆ ಮನಸ್ಸಿಗೆ ಹಾಯ್ ಎನ್ನಿಸಬಹುದು ಎನಿಸಿತು. ಸುನೀಲ್ ಅಮೆರಿಕಾಕ್ಕೆ ಬಂದ ಮೇಲೆ ಬಹಳಷ್ಟು ಹುಡುಗರ ಪರಿಚಯವಾಗಿತ್ತು. ಗುಂಡು ಹಾರಿಸುವ ತರಬೇತಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಜಾರ್ಜ್ ಮಾತ್ರ ತೀರಾ ಆಪ್ತಮಿತ್ರ ಎನಿಸಿದ್ದ ಸುನೀಲ್‌ಗೆ. ಜಾರ್ಜ್ ಜೊತೆ ಕೂತರೆ ಹೊತ್ತು ಹೋದದ್ದೇ ಗೊತ್ತಾಗುವುದಿಲ್ಲ ಸುನೀಲ್‌ಗೆ. ಅವನಲ್ಲಿ ಅಷ್ಟೊಂದು ಜೇಮ್ಸ್ ಬಾಂಡ್ ಕಥೆಗಳಿವೆ. ಫ್ರಾನ್ಸಿಸ್ ಡ್ರೇಕ್ ಬಾಲ್ಯದಲ್ಲಿಯೇ ನಾವಿಕನಾಗಿ, ನಂತರ ಕಡಲಿನ

ಒಡೆಯನಾಗಿ, ಇಂಗ್ಲೆಂಡಿನ ರಾಣಿ ಎಲಿಜೆಬೆತ್‌ಳ ಕಣ್ಮಣಿಯೂ ಹೇಗೆ ಆದ ಎಂದು ಜಾರ್ಜ್ ವಿವರಿಸತೊಡಗಿದರೆ ಕಣ್ಮುಂದೆ ಚಲನಚಿತ್ರವೇ ಓಡಿದಂತಾಗುತ್ತದೆ. ಕಡಲುಗಳ್ಳ ಡ್ರೇಕ್‌ಗೆ ರಾಣಿ ಸರ್ ಪದವಿಯನ್ನು ಕೊಟ್ಟು ಸನ್ಮಾನಿಸಿದಳು. ಡ್ರೇಕ್‌ನ ದರೋಡೆಗಳನ್ನು ಮರೆಮಾಚಲು ಸರ್ ಪದವಿ ಕೊಟ್ಟ ರಾಣಿ ಎಲಿಜೆಬೆತ್ ಡ್ರೇಕ್‌ನನ್ನು ಮೋಹಿಸಿದ್ದಳೆ? ಅವನ ದರೋಡೆಯ ಶೌರ್ಯಕ್ಕೆ ರಾಣಿಯೇ ಮನಸೋತಿದ್ದರೆ ಜನ ಇನ್ನೆಷ್ಟು ಹುಚ್ಚೆದ್ದಿರಬಹುದು ಡ್ರೇಕ್ ಸಾಹಸಗಳ ಬಗ್ಗೆ ಎನ್ನುವ ಪ್ರಶ್ನೆಗಳು ಸುನೀಲ್ ಕೇಳಿದರೆ ಜಾರ್ಜ್ ತನಗೆ ತಿಳಿದ ಸಮಜಾಯಿಷಿ ನೀಡುತ್ತ ವ್ಹಿಸ್ಕಿಯನ್ನು ಕುಡಿ ಎನ್ನುತ್ತಿದ್ದ.

ಏನನ್ನಾದರೂ ಸಾಧಿಸಬೇಕಾದರೆ ಧೈರ್ಯವಿರಬೇಕು. ಹೌದು, ಹೌದು ಈ ಕುಟುಂಬ, ಸಮಾಜ, ಸಂಬಂಧ, ಕಾಯ್ದೆ ಕಾನೂನು, ಸಂವಿಧಾನ, ಕೋರ್ಟು, ಕಚೇರಿ ಇವೆಲ್ಲ ನಮ್ಮ ಪುಂಸತ್ವವನ್ನೇ ಹಿಚುಕಿಟ್ಟಿವೆ. ಹೋರಿಯ ತರಡು ಒಡೆದು ಉಳುವ ಎತ್ತುಗಳನ್ನಾಗಿ ಮಾಡಿದಂತೆಯೇ ಇದೂ ಸಹಾ.... ಹೀಗೇ ಅಂತರ್ಮುಖಿಯಾಗಿ ಯೋಚಿಸುತ್ತಾ ಜಾರ್ಜ್ ಎದುರಿಗೆ ಬಂದು ನಿಂತಿದ್ದ ಸುನೀಲ್.

"ನನ್ನ ಅಂಕಲ್ ಮನೆ ಬಿಟ್ಟುಬಂದೆ" ಎಂದ ಯಾವ ಪೀಠಿಕೆಯೂ ಇಲ್ಲದೆ.

"ಒಳ್ಳೆಯ ಕೆಲಸ ಮಾಡಿದಿ. ನಾನೇ ನಿನಗೆ ಹೇಳಬೇಕೆಂದುಕೊಂಡಿದ್ದೆ ಬಹಳ ಸಾರಿ."

"ಈಗ ನಾನೆಲ್ಲಿರಲಿ?"

"ಯೋಚಿಸಬೇಡ, ಅದಕ್ಕೆಲ್ಲ ನಾನು ಏರ್ಪಾಟು ಮಾಡುತ್ತೇನೆ. ಅಲ್ಲಿಯವರೆಗೆ ನನ್ನೊಂದಿಗೆ ಇರು".

ಸುನೀಲ್ ಜಾರ್ಜ್‌ನನ್ನು ಅಪ್ಪಿಕೊಂಡು ಅಳತೊಡಗಿದ.

"ನನಗೆ ಯಾರೂ ಇಲ್ಲ ನಿನ್ನನ್ನು ಬಿಟ್ಟರೆ. ಅಪ್ಪ, ಅಮ್ಮ, ಬಂಧುಬಳಗವನ್ನೆಲ್ಲ ಹೇಟ್ ಮಾಡುತ್ತೇನೆ. ನಿನ್ನ ಸಪೋರ್ಟ್ ಒಂದಿದ್ದರೆ ಸಾಕು ಎಲ್ಲರನ್ನು ಹೇಗೆ ಆಟವಾಡಿಸುತ್ತೇನೆ ನೋಡು. ನನಗೆ ಷೂಟಿಂಗ್ ಕಲಿಸು. ಅಮೆರಿಕಾಕ್ಕೆ ನಾನು ಬಂದದ್ದು ಒಬ್ಬ ತಜ್ಞ ಇಂಜಿನಿಯರ್ ಆಗಲೆಂದು. ಆದರೆ ನಾನೀಗ ನನ್ನ ವಿಧಾನ ಬದಲಿಸಿದ್ದೇನೆ. ನನ್ನನ್ನು ನೋಡಿದರೆ ಜನ ಗಡಗಡ ನಡುಗಬೇಕು. ಹಾಗಾಗುವೆ" ಎಂದು ಚೀರತೊಡಗಿದ.

ಜಾರ್ಜ್ ಸುನೀಲ್‌ಗೆ ಸೋಷಿಯಲ್ ಸೆಕ್ಯೂರಿಟಿ ಸ್ಕೀಮ್ ಒಂದರಲ್ಲಿ ಸದಸ್ಯತ್ವವನ್ನು ಪಡೆಯಲು ಸಹಾಯ ಮಾಡಿದ. ಬಂದೂಕು, ರೈಫಲ್, ರಿವಾಲ್ವರ್, ಪಿಸ್ತೂಲು ಇವುಗಳನ್ನು ಗುರಿ ಹಿಡಿಯುವುದು, ಕೆಟ್ಟಾಗ ಸರಿಪಡಿಸುವುದು ಇವುಗಳ ಬೋಧನೆ ಆಯಿತು.

ಸುನೀಲ್ ತನ್ನ ಪ್ರತಿಭೆಯನ್ನೆಲ್ಲ ಷೂಟಿಂಗ್‌ಗೆ ಮುಡುಪಿಟ್ಟ. ಅಲ್ಪಕಾಲದಲ್ಲಿಯೇ ಅದ್ಭುತ ಗುರಿಕಾರ ಎಂದು ಇನ್‌ಸ್ಟಿಟ್ಯೂಟ್‌ನಲ್ಲಿ ಹೆಸರು ಮಾಡಿದ. ಸುನೀಲ್‌ನ ಜಾಣ್ಮೆಯನ್ನು ತರಬೇತುದಾರ ಮೆಚ್ಚಿಕೊಂಡ. ವಿಶೇಷ ಕಾಳಜಿ ತೋರಿಸಿ ಕಲಿಸತೊಡಗಿದ.

ಜಾರ್ಜ್ ಜೊತೆ ಸೇರಿ ಲೆಕ್ಕವಿಲ್ಲದಷ್ಟು ಕ್ರೈಮ್ ಸಿನಿಮಾಗಳನ್ನು ನೋಡಿದ. ಜಾಲಿ ರೈಡಿಂಗ್‌ಗಾಗಿ ಇಬ್ಬರೂ ಸೇರಿ ಕಾರುಗಳನ್ನು ಕದಿಯತೊಡಗಿದರು. ಯಾವುದೇ ಮಾಡೆಲ್ ಕಾರಿರಲಿ ಅದರ ಡೋರ್ ಓಪನ್ ಮಾಡುವುದು ಹೇಗೆನ್ನುವುದರಲ್ಲಿ ಪರಿಣತನಾದ. ಇಂಥ ಸಾಹಸದ ಆರಂಭದಲ್ಲಿ ಪೊಲೀಸರ ಕೈಗೂ ಸಿಕ್ಕುಬಿದ್ದರು. ಉಪಜೀವನಕ್ಕಾಗಿ ಅಲ್ಲಲ್ಲಿ ಪಾರ್ಟ್ ಟೈಮ್ ಕೆಲಸ ಹಚ್ಚಿಕೊಟ್ಟಿದ್ದ ಜಾರ್ಜ್.

ನಾನಾ ನಮೂನೆಯ ಪಿಸ್ತೂಲು, ರೈಫಲ್‌ಗಳನ್ನು ಚಲಾಯಿಸುವುದರಲ್ಲಿ ಸುನೀಲ್‌ನದು ಎತ್ತಿದ ಕೈಯಾಯಿತು. ಮರೆತು ಸಹ ಅಂಕಲ್ ಮನೆಯ ಕಡೆ ಹೋಗಲಿಲ್ಲ.

ಒಂದು ದಿನ ಜಾರ್ಜ್ ಜೊತೆ ವ್ಹಿಸ್ಕಿ ಹೀರುತ್ತ ಕೂತಾಗ ಸುನೀಲ್ "ಇಂಡಿಯಾಕ್ಕೆ ಹೋಗಬೇಕು ಅನಿಸತೊಡಗಿದೆ. ಅಲ್ಲಿ ಪಿಸ್ತೂಲ್ ನೋಡಿದರೆ ಸಾಕು ಜನ ಉಚ್ಚೆ ಹೊಯ್ಕೋತಾರೆ. ಕೈಯಲ್ಲಿ ಒಂದು ಪಿಸ್ತೂಲ್ ಇದ್ದರೆ ಸಾಕು, ಇಂಡಿಯಾದ ಒಂದು ಸಿಟಿಯನ್ನೇ ಹೆದರಿಸಬಹುದು. ಅಲ್ಲಿಯ ಪೊಲೀಸರು ಸಹ ಪುಕ್ಕಲುಗಳು. ನಿಶ್ಶಸ್ತ್ರ ಸಿಟಿಜನ್‌ರನ್ನು ಹೆದರಿಸಿಕೊಂಡು ಹೊಟ್ಟೆ ಹೊರೆಯುವ ಅಬ್ಬೇಪಾರಿಗಳು. ಅಲ್ಲಿ ಹೋಗಿ ನನ್ನ ಕೈಚಳಕ ತೋರಿಸಬೇಕು ಅನ್ನಿಸುತ್ತಿದೆ."ಎಂದ.

ಇಂಡಿಯಾಕ್ಕೆ ಹೋಗಲು ಸುನೀಲ್‌ಗೆ ಜಾರ್ಜ್ ಸ್ವಲ್ಪ ದುಡ್ಡಿನ ಸಹಾಯ ಮಾಡಿದ. ಏರ್‌ಪೋರ್ಟ್ ಅಧಿಕಾರಿಗಳ ಕಣ್‌ತಪ್ಪಿಸಿ ಪಿಸ್ತೂಲ್ ಅನ್ನು ಪ್ಲೇನ್ ಒಳಕ್ಕೆ ಒಯ್ದ. ಡಲ್ಲಾಸ್ ಸಿಟಿಯಿಂದ ನೇರವಾಗಿ ದೆಹಲಿಗೆ ಪ್ಲೇನ್ ಮೂಲಕ ಹಾರಿ ಬಂದ ಸುನೀಲ್ ಅಲ್ಲಿಯ ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕುಬಿದ್ದ. ಪಿಸ್ತೂಲ್ ಅನ್ನು ಅವರು ಸೀಜ್ ಮಾಡಬೇಕು ಎನ್ನುವಷ್ಟರಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿದ.

ಈ ದಿಢೀರ್ ದಾಳಿಯಿಂದ ಏರ್‌ಪೋರ್ಟ್ ಕಸ್ಟಮ್ಸ್ ಮತ್ತು ಸೆಕ್ಯುರಿಟಿ ಅಧಿಕಾರಿಗಳು ದಿಗ್ಭ್ರಾಂತರಾದರು. ಸಿಕ್ಕ ಮಿಂಚಿನ ಅವಕಾಶದಲ್ಲಿ ಛಂಗನೆ ಹಾರಿ ಪಾರಾಗಿ ಏರ್‌ಪೋರ್ಟ್ ಹೊರಕ್ಕೆ ಓಡಿ ಬಂದ ಸುನೀಲ್. ಪಾರ್ಕಿಂಗ್‌ನಲ್ಲಿದ್ದ ಒಂದು ಕಾರನ್ನು ಓಪನ್ ಮಾಡಿ ತನ್ನಲ್ಲಿದ್ದ ಮಾಸ್ಟರ್ ಕೀಯಿಂದ ಸ್ಟಾರ್ಟ್ ಮಾಡಿದ. ಯಾವ ಕಾರಲ್ಲಿ ಹತ್ತಿದ್ದಾನೆ ಎಂದು ಸೆಕ್ಯುರಿಟಿಗಳಿಗೆ ಗೊತ್ತಾಗುವ ಮುಂಚೆಯೇ ರಭಸದಿಂದ ಕಾರನ್ನು ಓಡಿಸತೊಡಗಿದ. ಹಿಂದಿನಿಂದ ಸೆಕ್ಯುರಿಟಿ ಪೊಲೀಸರು ಕಾರಿಗೆ ಗುಂಡು ಹಾರಿಸಿದರು. ಆದರೆ ಉಪಯೋಗವಾಗಲಿಲ್ಲ. ಟ್ರಾಫಿಕ್ ಪೊಲೀಸರಿಗೆಲ್ಲ ಮೆಸೇಜ್ ಹೋಯಿತು. ಸುನೀಲ್ ಒಯ್ದ ಕಾರಿನ ನಂಬರ್ ಅನ್ನು ಪೊಲೀಸರಿಗೆ ತಿಳಿಸಿದರು. ಮುಖ್ಯರಸ್ತೆಯಲ್ಲಿ ತಡೆಗಳನ್ನು ನಿಲ್ಲಿಸಿ ಪೊಲೀಸರು ತಪಾಸಣೆ ಮಾಡತೊಡಗಿದರು. ಚಾಣಾಕ್ಷ ಸುನೀಲ್ ಮುಖ್ಯರಸ್ತೆ ಬಿಟ್ಟು ಒಳದಾರಿಯ ಮೂಲಕ ಸಿಟಿಯೊಳಗೆ ನುಗ್ಗಿದ. ಒಂದೆಡೆ ಕಾರನ್ನು ನಿಲ್ಲಿಸಿ ಜನಸಂದಣಿಯಲ್ಲಿ ತಲೆ ಮರೆಸಿಕೊಂಡ. ಸ್ವಲ್ಪ ಕಾಲದ ನಂತರ ಮತ್ತೊಂದು ಕಾರನ್ನು ಕದ್ದುಕೊಂಡು ನಡೆದ. ಪೊಲೀಸರು ಹುಡುಕುತ್ತಿದ್ದ ಕಾರು ಒಂದೆಡೆ ನಿಂತಿತ್ತು. ಮೊದಲು ಕದ್ದ ಕಾರನ್ನು ಹಿಡಿಯುವುದರಲ್ಲಿ ನಿರತರಾಗಿದ್ದ ದಿಲ್ಲಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಬೇರೊಂದು ಕಾರಿನ ಮೂಲಕ ದಿಲ್ಲಿಯ ಸರಹದ್ದನ್ನು ದಾಟಿದ ಸುನೀಲ್ ಹೈದ್ರಾಬಾದ್ ಕಡೆಗೆ ನಡೆದ. ಎರಡನೇ ಕಾರು ಕಳುವಾದ ವಿಷಯ ಪೊಲೀಸರಿಗೆ ತಿಳಿಯುವಷ್ಟರಲ್ಲಿ ಸುನೀಲ್ ಬಹುದೂರ ಸಾಗಿಬಂದಿದ್ದ. ದಾರಿ ಮಧ್ಯ ಊರೊಂದರಲ್ಲಿ ಪೇಂಟ್ ಮತ್ತು ಬ್ರಷ್‌ಗಳನ್ನು ಖರೀದಿಸಿದ. ಊರ ಹೊರಗೆ ನಿಲ್ಲಿಸಿ ಅದರ ನಂಬರ್ ಅನ್ನು ಬದಲಿಸಿದ. ಮಹಾರಾಷ್ಟ್ರದ ಮನ್‌ಮುಡ್‌ನಲ್ಲಿ ಒಂದು ದಿನ ತಂಗಿ ಮತ್ತೆ ಪ್ರಯಾಣ ಬೆಳೆಸಿದ. ಹೈದ್ರಾಬಾದ್ ತಲುಪಿದ ಸುನೀಲ್ ಅಲ್ಲಿಯೂ ಒಂದೆರಡು ದಿನ ಮಜಾ ಉಡಾಯಿಸಿದ. ಅಲ್ಲಿಂದ ಬೆಂಗಳೂರಿಗೆ ಹೊರಡಲು ಸಿದ್ಧನಾದ. ಹೈದ್ರಾಬಾದ್‌ನ ಸಾಲಾರ್ ಜಂಗ್ ಮ್ಯೂಜಿಯಂ ಮುಂದೆ ನಿಂತ. ನವದಂಪತಿಗಳು ಹೊಚ್ಚ ಹೊಸ ಕಾರಿನಿಂದ ಇಳಿದು ಮ್ಯೂಜಿಯಂ ಒಳಕ್ಕೆ ಹೋದೊಡನೆ ಆ ಕಾರನ್ನು ಕದ್ದ. ಮೊದಲಿನ ಕಾರನ್ನು ಅಲ್ಲಿಯೇ ಬಿಟ್ಟ. ಸುನೀಲ್‌ನ ಹೊಸ ಫಿಯಟ್ ಕಾರು ಬೆಂಗಳೂರು ಕಡೆಗೆ ಓಡತೊಡಗಿತು.

ಬೆಂಗಳೂರು ಸಮೀಪಿಸುತ್ತಿದ್ದಂತೆ ಸುನೀಲ್ ಭಾವನೆಗಳು ಉದ್ರೇಕಗೊಳ್ಳತೊಡಗಿದವು. ತನ್ನ ತಂದೆ ಹೈದ್ರಾಬಾದ್‌ನಲ್ಲಿದ್ದಾರೆಂದು ತಿಳಿದುಕೊಂಡಿದ್ದ ಸುನೀಲ್. ಆದರೆ ಅವರು ದಿಲ್ಲಿಯಲ್ಲಿದ್ದರು. ತನ್ನವರೆನ್ನುವವರು ಈ ಬೆಂಗಳೂರಲ್ಲಿ ಯಾರೂ ಇಲ್ಲವಲ್ಲ ಎಂದು ಒಂದು ಕ್ಷಣ ಪಿಚ್ಚೆನಿಸಿತು. ಬೆಂಗಳೂರಿಗೆ ಹೋದ ತಕ್ಷಣ ಮೊದಲು ವಿಧಾನಸೌಧ ನೋಡಬೇಕೆನ್ನಿಸಿತು.

ತನ್ನಜ್ಜ ಕಟ್ಟಿಸಿದ್ದಲ್ಲವೆ. ಅಜ್ಜ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ. ರಾಷ್ಟ್ರದ ಗೌರವಾನ್ವಿತ ಸ್ಟೇಟ್ಸ್‌ಮನ್‌ಗಳಲ್ಲಿ ಒಬ್ಬನಾಗಿದ್ದ. ಅದೆಂಥ ದೊಡ್ಡ ಹೆಸರು ಮಾಡಿದ ರಾಜಕೀಯದಲ್ಲಿ! ಈ ದೈವ, ಈ ಸಮಾಜ ತನಗೆ ಸಹಕರಿಸಿದ್ದಿದ್ದರೆ ತನ್ನಜ್ಜನಿಗಿಂತ ದೊಡ್ಡ ಹೆಸರು ಮಾಡಬಲ್ಲ ಶಕ್ತಿ, ಸಾಮರ್ಥ್ಯಗಳು ತನ್ನಲ್ಲಿರಲಿಲ್ಲವೆ? ಸರ್ವಥಾ ಇವೆ.

ಇಡೀ ಬೆಂಗಳೂರು ತನ್ನೆಡೆ ನೋಡಬೇಕು! ನೋಡಿ ಗಡಗಡ ನಡುಗಬೇಕು. ಈಗ ಕಾಲ ಬದಲಾಗಿದೆ. Might is right. ಒಳ್ಳೆಯತನಕ್ಕೆ ಕಿಲುಬುಕಾಸಿನ ಬೆಲೆಯೂ ಇಲ್ಲ. ಬಂದೂಕಿನ ನಳಿಕೆಯ ಸನ್ನೆಗೆ ತಕ್ಕಂತೆ ಕುಣಿಯಬೇಕು ಜನ, ಹಾಗೆ ಮಾಡುತ್ತೇನೆ.

ಹೋ, ನನ್ನ ಕಾಲೇಜ್‌ನಲ್ಲಿ ನಾನೆಂದರೆ ಸಹಪಾಠಿಗಳಷ್ಟೇ ಅಲ್ಲ ಪ್ರೊಫೆಸರ್‌ಗಳೂ ಉತ್ಸಾಹ ತೋರುತ್ತಿದ್ದರು. ಈಗ ಅದೆಲ್ಲ ಕನಸು. ನನ್ನ ಈ ಅವತಾರವನ್ನು ಅವರು ನೋಡಿದರೆ ಬೆಚ್ಚಿ ಬೀಳಬಹುದು. ನಾನು ಸ್ವಿಮ್ಮಿಂಗ್ ಕಾಂಪಿಟೇಷನ್‌ನಲ್ಲಿ ಫಸ್ಟ್ ಬಂದಾಗ ನನ್ನ ಗೆಳತಿ ನಂದಿತಾ 'ನೀನು ಈ ಕಾಲೇಜಿಗೊಂದು ಹೆಮ್ಮೆ' ಎಂದಿದ್ದಳು. ಈಗ ಯಾರನ್ನು ಮದುವೆಯಾಗಿರುವಳೋ. ವಾರ್ಷಿಕ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾದಾಗ ನನ್ನ HOD ಜಿ. ಪರಮೇಶ್ವರ್ ಕೈಕುಲುಕಿ ಆನಂದಭಾಷ್ಪ ಸುರಿಸಿ 'ನಿನ್ನಜ್ಜನ ಕೀರ್ತಿಯನ್ನು ಬೆಳಗುತ್ತೀಯಾ ನೀನು' ಎಂದು ಪ್ರಿನ್ಸಿಪಾಲ್ ಕೆ. ಲಿಂಗಯ್ಯನವರ ಬಳಿಗೆ ಕರೆದೊಯ್ದಿದ್ದರಲ್ಲ. ಅವರು 'ಕೆಲವು ವಿದ್ಯಾರ್ಥಿಗಳು ಕೇವಲ ಪಾಠದಲ್ಲಿ ಮತ್ತೆ ಕೆಲವು ವಿದ್ಯಾರ್ಥಿಗಳು ಕೇವಲ ಆಟದಲ್ಲಿ ಮುಂದಿರುತ್ತಾರೆ. ಆದರೆ ನೀನು ಎರಡರಲ್ಲೂ ಮುಂದಿದ್ದೀಯಾ. ನಿನ್ನದು ಬಹುಮುಖ ಪ್ರತಿಭೆ' ಎಂದು ಬೆನ್ನು ಚಪ್ಪರಿಸಿದ್ದರಲ್ಲ. ಅಮೆರಿಕಾ ನನ್ನೆಲ್ಲ ಜೀವನವನ್ನು ಸುಟ್ಟು ಸುಣ್ಣ ಮಾಡಿಬಿಟ್ಟಿತು. ನನ್ನ ಬಂಧುಗಳು ನನ್ನನ್ನು ದೂರ ಮಾಡಿರದಿದ್ದರೆ ನಾನು ಈ ಪರಿಸ್ಥಿತಿಗೆ ಬರುತ್ತಿರಲಿಲ್ಲವೇನೋ. ನನಗೀಗ ಇನ್ನೂ ಹತ್ತೊಂಬತ್ತು ವಯಸ್ಸು. ರಾಜಕೀಯದಲ್ಲಿ ಹೆಸರು ಮಾಡಬೇಕಾದರೆ ಮುದುಕರಾಗಬೇಕು. ನಾನು ಈ ಹದಿವಯಸ್ಸಿನಲ್ಲೇ ಹೇಗೆ ಹೆಸರು ಮಾಡಿ ತೋರಿಸುತ್ತೇನೆ ನೋಡಿ, ಎಲ್ಲ ನೋಡಿ" ಹೀಗೇ ಅಂತರ್ಮುಖಿಯಾಗಿ ಯೋಚನೆಗಳ ಸುಳಿಯಲ್ಲಿ ಸುನೀಲ್ ಸುತ್ತುತ್ತಿರುವಾಗ ಕಾರು ಗಕ್ಕನೆ ನಿಂತಿತು. ಯಲಹಂಕ ಬಿಟ್ಟು ಬ್ಯಾಟರಾಯನಪುರ ಸಮೀಪಿಸಿದಾಗ ಪೆಟ್ರೋಲ್ ಮುಗಿದಿತ್ತು. ಅತ್ತಿತ್ತ ನೋಡಿದ, ಸ್ವಲ್ಪವೇ ದೂರದಲ್ಲಿ ಪೆಟ್ರೋಲ್ ಬಂಕ್ ಕಾಣಿಸಿತು. ಮಧ್ಯರಾತ್ರಿಯಾಗುತ್ತಿತ್ತು. ಕಾರಲ್ಲಿ ಪೆಟ್ರೋಲ್ ಮುಗಿದಿದೆ. ತಳ್ಳಿಕೊಂಡು ಬರಲು

ಯಾರಾದರೂ ಸಹಾಯಕ್ಕೆ ಬನ್ನಿ, ಸ್ವಲ್ಪ ದುಡ್ಡು ಕೊಡುತ್ತೇನೆ ಎಂದ. ಬಂಕಿನ ಕಾವಲಿನವ ಸುನೀಲ್ ಸಹಾಯಕ್ಕೆ ಹೋದ. 30 ಲೀಟರ್ ಪೆಟ್ರೋಲ್ ಹಾಕಿಸಿಕೊಂಡ. 'ದುಡ್ಡು ಸದ್ಯ ನನ್ನ ಬಳಿ ಇಲ್ಲ. ನನ್ನೊಂದಿಗೆ ಯಾರಾದರೂ ಬನ್ನಿ ಸದಾಶಿವನಗರದಲ್ಲಿ ನಮ್ಮ ಮನೆಯಿದೆ ಹಣ ಕೊಡುತ್ತೇನೆ. ಟಿಪ್ಸ್ ಕೊಟ್ಟು ಆಟೋದಲ್ಲಿ ಕಳಿಸಿ ಕೊಡುತ್ತೇನೆ' ಎಂದ. ಸುನೀಲ್ ಮಾತನ್ನು ನಂಬಿ ಪೆಟ್ರೋಲ್ ಬಂಕಿನ ಇಬ್ಬರು ಹುಡುಗರು ಕಾರೊಳಕ್ಕೆ ಹತ್ತಿದರು. ಮೇಖ್ರಿ ಸರ್ಕಲ್ ಸಮೀಪದ ನಿರ್ಜನ ರಸ್ತೆಯಲ್ಲಿ ಒಂದು ಪಕ್ಕಕ್ಕೆ ಕಾರು ನಿಲ್ಲಿಸಿದ ಸುನೀಲ್ 'ಇಳಿರೋ ಕಾರಿನಿಂದ. ಇಲ್ಲದಿದ್ದರೆ ನಿಮ್ಮಿಬ್ಬರನ್ನೂ ಷೂಟ್ ಮಾಡಿಬಿಡುತ್ತೇನೆ' ಎಂದು ಪಿಸ್ತೂಲನ್ನು ತೋರಿಸಿದ. ಅದರಲ್ಲೊಬ್ಬ ಚೀರಲು ಬಾಯಿ ತೆರೆದ. ಗಕ್ಕನೆ ಅವನ ಬಾಯಿಗೆ ಸುನೀಲ್ ಕೈಯಿಟ್ಟು, 'ತುಟಿಪಿಟಕ್ಕೆಂದರೆ ಸುಟ್ಟು ಹಾಕಿಬಿಡ್ತೇನೆ' ಎಂದ. ಇಬ್ಬರೂ ಕಾರಿನಿಂದ ಇಳಿದು ಸತ್ತೆವೋ ಕೆಟ್ಟೆವೋ ಎಂದು ಓಡತೊಡಗಿದರು. ಅವರು ದಿಕ್ಕೆಟ್ಟು ಓಡುವುದನ್ನು ನೋಡಿ ಸುನೀಲ್ ಬ್ಲಡಿ ಇಂಡಿಯನ್ಸ್ ಹ್ಹ ಹ್ಹ ಹ್ಹ ಎಂದು ಗಹಗಹಿಸಿ ನಕ್ಕ.

ಸುನೀಲ್ ಸದಾಶಿವನಗರದ ತಮ್ಮ ಮನೆಗೆ ಹೋಗಲಿಲ್ಲ. ಮೆಜೆಸ್ಟಿಕ್‌ಗೆ ಬಂದು ಒಂದು ಲಾಡ್ಜ್‌ನಲ್ಲಿ ಇಳಿದುಕೊಂಡ. ವಿಸ್ಕಿ ಹೀರಿ ನಿದ್ರೆ ಹೋದ. ಅತ್ತ ಕಾರಿಂದ ಇಳಿದು ಓಡಿಹೋದ ಇಬ್ಬರು ಪೆಟ್ರೋಲ್ ಬಂಕ್ ನೌಕರರು ಯಲಹಂಕ ಠಾಣೆಯಲ್ಲಿ ಫಿರ್ಯಾದು ಕೊಟ್ಟರು.

ಸುನೀಲ್ ಬೆಳಗ್ಗೆ ಎದ್ದಾಗ ಎಂಟು ಗಂಟೆಯಾಗಿತ್ತು. ತುಂಬಾ ಖುಷಿಯ ಮೂಡ್‌ನಲ್ಲಿದ್ದ. ವಾಕ್‌ಮನ್ ಆನ್ ಮಾಡಿ ಹೆಡ್‌ಫೋನ್ ಅನ್ನು ಕಿವಿಗಳಿಗೆ ಅಂಟಿಸಿಕೊಂಡ. ರಾಕ್ ಮ್ಯೂಜಿಕ್ ತಾಳಕ್ಕೆ ತಕ್ಕಂತೆ ರೂಮಲ್ಲಿಯೇ ಕುಣಿಯತೊಡಗಿದ.

ಬೆಲ್ ಬಟನ್ ಒತ್ತಿದ. ರೂಮ್ ಬಾಯ್‌ಗೆ ಒಳ್ಳೆ ಕಾಫೀ ತರಲು ಹೇಳಿದ. ಬೆಂಗಳೂರು ಕಾಫೀ ಕುಡಿದು ಅನೇಕ ವರ್ಷಗಳೇ ಆಗಿವೆಯಲ್ಲವೆ ಎಂದುಕೊಂಡ.

ಕುರುಚಲು ಗಡ್ಡ ಬೆಳೆದಿತ್ತು. ಷೇವ್ ಬೇಡವೆನಿಸಿತು. ಸ್ನಾನ ಮಾಡಿ ಜೀನ್ಸ್ ತೊಟ್ಟ. ರಾಮಕೃಷ್ಣ ಹೋಟೆಲ್‌ನಲ್ಲಿ ಇಡ್ಲಿ ತಿನ್ನಬೇಕೆನಿಸಿತು. ನಡೆಯುತ್ತಲೇ ಹೋಟೆಲ್ ಕಡೆ ಹೊರಟ. ಚಿಕ್ಕವನಿದ್ದಾಗ ಮೆಜೆಸ್ಟಿಕ್‌ಗೆ ಬಂದು ಸಿನಿಮಾ ನೋಡಿ ಹೋಟೆಲ್‌ನಲ್ಲಿ ತಿಂಡಿ ತಿನ್ನುವುದೆಂದರೆ ಸ್ವರ್ಗಸುಖವೆನ್ನಿಸುತ್ತಿತ್ತು. ಮೆಜೆಸ್ಟಿಕ್‌ನ ಜನಸಂದಣಿ, ವಾಹನಗಳ ಸಾಲು, ಕಳ್ಳಸಾಗಣೆಯಿಂದ ಬಂದ ಮಾಲುಗಳ ಅಂಗಡಿಗಳು, ಸಂಜೆಯಾಯಿತೆಂದರೆ ಬಗೆಬಗೆಯ ಲೈಟುಗಳಿಂದ ಝಗಝಗಿಸುವ ಅಂಗಡಿ

ಮುಂಗಟ್ಟುಗಳು... ಆಗ ಇವೆಲ್ಲ ಎಷ್ಟೊಂದು ಪುಳಕಗೊಳಿಸುತ್ತಿದ್ದವು ಎಂದುಕೊಂಡ. ಮೆಜೆಸ್ಟಿಕ್ ಗಡಿಬಿಡಿ, ಭರಾಟೆಗಳು ಅಮೆರಿಕಾದ ಡಲ್‌ಹೌಸ್ ಸಿಟಿಯ ಸಡಗರದ ಯಾವ ಮೂಲೆಗೂ ಹೋಲುವುದಿಲ್ಲ. ಈ ಮೆಜೆಸ್ಟಿಕ್ ಹಳ್ಳಿಯ ಒಂದು ದೊಡ್ಡ ಜಾತ್ರೆಯಂತೆ ಕಾಣಿಸತೊಡಗಿತು ಸುನೀಲ್‌ಗೆ. ಸಿಟಿ ಎಂದರೆ ಫ್ರಾಗ್ರನ್ಸ್ ಇರುತ್ತದೆ. ಆದರೆ ಈ ಮೆಜೆಸ್ಟಿಕ್ ಗಬ್ಬು ನಾರುತ್ತಿದೆ. dirty slum! ಥೂ ಎಂದು ಉಗಿದ.

ಹೋಟೆಲ್‌ನಲ್ಲಿ ತನ್ನನ್ನು ಗುರುತಿಸುವವರು ಯಾರಾದರೂ ಇದ್ದಾರಾ ಎಂದು ನೋಡಿದ. ಯಾರೂ ಇರಲಿಲ್ಲ. ಏನಿದೆ ಎಂದು ಕೇಳುವುದಕ್ಕೆ ಮುಂಚೆಯೇ ಸಪ್ಲೈಯರ್ ಪ್ರೀರೆಕಾರ್ಡರ್ ವಾಯ್ಸ್ ಕೇಳಿಬರತೊಡಗಿತು. ಇಡ್ಲಿ, ವಡೆ, ದೋಸೆ....

ಟಿಫನ್ ಮುಗಿಸಿ ಹೊರಬಂದ ಸುನೀಲ್‌ಗೆ ಇವತ್ತು ದುಡ್ಡಿಗೆ ಏನಾದರೂ ಮಾಡಲೇಬೇಕು. ಇಲ್ಲದಿದ್ದರೆ ಬಹಳ ಕಷ್ಟ. ಸಂಬಂಧಿಕರ ಮುಂದೆ ಹೋಗಿ ಭಿಕ್ಷುಕನಂತೆ ಕೈಚಾಚುವುದು ನನ್ನಿಂದ ಹೇಗೆ ಸಾಧ್ಯ ಎಂದುಕೊಂಡ. ಒಂದು ವೇಳೆ ಕೊಟ್ರೂ ಅವರೆಷ್ಟು ಕೊಟ್ಟಾರು? ನೂರೊ ಐನೂರೋ. ಅದೆಲ್ಲ ನನಗೆಲ್ಲಿ ಸಾಲುತ್ತೆ. ಇಂಡಿಯನ್ ವಿಸ್ಕಿಯಿಂದ ಹ್ಯಾಂಗ್ ಓವರ್ ಆಗುತ್ತಿದೆ. ಇಂಪೋರ್ಟೆಡ್ ಸ್ಕಾಚ್ ತೆಗೆದುಕೊಳ್ಳಬೇಕು ಇವತ್ತು. ಆದರೆ ಜೇಬಲ್ಲಿ ಲಾಡ್ಜ್ ಬಾಡಿಗೆ ಕಟ್ಟಲೂ ದುಡ್ಡಿಲ್ಲ. ಇದಕ್ಕೆ ಏನಾದರೂ ದಾರಿ ಹುಡುಕಲೇಬೇಕು ಎಂದು ನಿರ್ಧರಿಸಿಕೊಳ್ಳುತ್ತ ತಾನಿಳಿದುಕೊಂಡಿದ್ದ ಲಾಡ್ಜ್‌ನ ರೂಮೊಳಕ್ಕೆ ಬಂದ.

ಅಮೆರಿಕಾಕ್ಕೆ ಹೋಗುವ ಮುಂಚೆ ತಾನು ಓಡಾಡಿದ ಬೆಂಗಳೂರಿನ ಒಂದೊಂದೇ ಪ್ರದೇಶಗಳನ್ನು ಕಣ್‌ಮುಂದೆ ತಂದುಕೊಂಡ. ದರೋಡೆ ಮಾಡಲು, ಅದೂ ಏಕಾಂಗಿಯಾಗಿ ದರೋಡೆ ಮಾಡಲು ಯಾವ ಬ್ಯಾಂಕ್ ಸೂಕ್ತ ಎಂದು ತಲೆಕೆಡಿಸಿಕೊಂಡ. ಒಂದು ಪೆಗ್ ಹಾಕಿ ಸಿಗರೇಟ್ ಹೊತ್ತಿಸಿದ.

ಸದಾಶಿವನಗರದ ರಾಜ್‌ಮಹಲ್ ವಿಲಾಸ್‌ನಲ್ಲಿರುವ ಕೆನರಾ ಬ್ಯಾಂಕ್ ಫ್ಲ್ಯಾಷ್ ಆಯಿತು. ಅಮೆರಿಕಾಕ್ಕೆ ಹೋಗುವ ಮುಂಚೆ ಆ ಬ್ಯಾಂಕಿಗೆ ಹೋಗಿಬರುತ್ತಿದ್ದ. ಅಲ್ಲಿ ಯಾವ ಸಮಯದಲ್ಲಿ ಜನಸಂದಣಿ ಕಡಿಮೆಯಾಗಿರುತ್ತದೆಂದು ಜ್ಞಾಪಿಸಿಕೊಂಡ. ಕ್ರಿಕೆಟ್ ಕ್ಯಾಪ್ ಮತ್ತು ಕಪ್ಪು ಮಫ್ಲರ್‌ಗಳನ್ನು ಖರೀದಿಸಿ ಕಾರು ಹತ್ತಿದ. ಆ ಕೆನರಾ ಬ್ಯಾಂಕ್ ಶಾಖೆಗೆ ಸ್ವಲ್ಪ ದೂರದಲ್ಲಿ ಕಾರ್ ಪಾರ್ಕ್ ಮಾಡಿ ಬ್ಯಾಂಕಿನೊಳಕ್ಕೆ ಪ್ರವೇಶಿಸಿದ. ಒಬ್ಬಿಬ್ಬರು ಕಸ್ಟಮರ್ಸ್ ಬಿಟ್ಟರೆ ಉಳಿದವರೆಲ್ಲ ಸಿಬ್ಬಂದಿ. ಒಳಗಿನ ವಾತಾವರಣವನ್ನು ಕ್ಷಣಾರ್ಧದಲ್ಲಿ ಗ್ರಹಿಸಿಕೊಂಡು ಹೊರಬಂದ. ತಲೆಗೆ ಕ್ರಿಕೆಟ್ ಕ್ಯಾಪ್ ಹಾಕಿಕೊಂಡು ಮೂಗಿನವರೆಗೆ ಮಫ್ಲರ್ ಕಟ್ಟಿಕೊಂಡ. ಬನಿಯನ್ ಒಳಗೆ ಅಡಗಿಸಿಟ್ಟುಕೊಂಡಿದ್ದ ಪಿಸ್ತೂಲ್ ಅನ್ನು ಕೈಯಲ್ಲಿ ಹಿಡಿದುಕೊಂಡು ಒಮ್ಮೆಗೆ

ಒಳಕ್ಕೆ ನುಗ್ಗಿ, 'ಹ್ಯಾಂಡ್ಸ್ ಅಪ್!' ಎಂದ. ಈ ದಿಢೀರ್ ದಾಳಿಯಿಂದ ಸಿಬ್ಬಂದಿಯೆಲ್ಲಾ ಬೆಚ್ಚಿಬಿದ್ದಿತು. ಅಲ್ಲಿಂದ ಕಸ್ಟಮರ್ಗಳು ಹೊರಹೋಗದಂತೆ ತಡೆದ. ಮೊದಲು ಫೋನ್ ವೈರ್ ಅನ್ನು ಕಟ್ ಮಾಡಿದ. ಕ್ಯಾಷಿಯರ್ ಬಳಿಗೆ ಹೋಗಿ ನೋಟಿನ ಕಂತೆಗಳ ಟ್ರೇಯನ್ನು ಕೈಯಲ್ಲಿ ಹಿಡಿದುಕೊಂಡ. ಸಿಬ್ಬಂದಿಯೆಲ್ಲಾ ನೀರು ನೀರಾಗಿ ಅರೆಶವಗಳಂತೆ ಬಾಯೊಣಗಿಸಿಕೊಂಡು ಸುನೀಲ್ ಸನ್ನೆ ಸಂಜ್ಞೆಗಳನ್ನು ಪಾಲಿಸುವ ಕೀಲುಗೊಂಬೆಗಳಂತಾಗಿದ್ದರು. ಕ್ಯಾಷ್ ಟ್ರೇ ಸಮೇತ ಹೊರಬಂದ ಸುನೀಲ್ ಬ್ಯಾಂಕಿನ ಬಾಗಿಲನ್ನು ಹಾಕಿ ಹೊರಗಿನಿಂದ ಚಿಲಕ ಹಾಕಿದ. ಅಷ್ಟರಲ್ಲಿ ಸ್ಕೂಟರ್ ಮೇಲೆ ಒಬ್ಬ ಕಸ್ಟಮರ್ ಬ್ಯಾಂಕಿಗೆ ಬಂದ. ಮುಖಕ್ಕೆ ಕಪ್ಪು ಬಟ್ಟೆ ಕಟ್ಟಿಕೊಂಡು ಕೈಯಲ್ಲಿ ಕ್ಯಾಷ್ ಟ್ರೇ ಮತ್ತು ಪಿಸ್ತೂಲನ್ನು ಹಿಡಿದುಕೊಂಡು ಹೊರಗಿನಿಂದ ಬ್ಯಾಂಕಿನ ಬಾಗಿಲು ಹಾಕುತ್ತಿರುವುದನ್ನು ನೋಡಿ ಭಯಗೊಂಡು ಆಚೆ ಹೋಗಿ ಮರೆಯಾಗಿ ನಿಂತು ಇದನ್ನೆಲ್ಲ ವೀಕ್ಷಿಸತೊಡಗಿದ. ಸುನೀಲ್ ಲಗುಬಗೆಯಿಂದ ತನ್ನ ಕಾರ್ ಹತ್ತಿ ರಭಸವಾಗಿ ಹೊರಟುಹೋದ. ಮರೆಯಲ್ಲಿ ನಿಂತು ಇದನ್ನೆಲ್ಲ ವೀಕ್ಷಿಸುತ್ತಿದ್ದ ಮೋಹನ್ ಎಂಬ ಕಂಟ್ರಾಕ್ಟರ್ ಬ್ಯಾಂಕಿನ ಬಾಗಿಲು ತೆಗೆದ. ಆಗ ಸಿಬ್ಬಂದಿಯೆಲ್ಲ ಬಾಯಿ ಬಡಿದುಕೊಳ್ಳುತ್ತ 'ದರೋಡಕೋರ ಹಿಡೀರಿ, ಹಿಡೀರಿ' ಎಂದು ಚೀರುತ್ತಾ ರಸ್ತೆಗೆ ಬಂದರು. ಕೂಡಲೇ ಸುನೀಲ್ ಕಾರಿನ ನಂಬರ್ ಹೇಳಿ ಪೊಲೀಸ್ ಸ್ಟೇಷನ್‌ಗೆ ಮೋಹನ್ ಫೋನ್ ಮಾಡಿದ.

ಸುನೀಲ್ ತನ್ನ ಕಾರನ್ನು ಯಶವಂತಪುರದ ಕಡೆ ಓಡಿಸಿದ. ಸಿಗ್ನಲ್‌ನಲ್ಲಿ ನಿಲ್ಲಿಸದೆ ಭಾರೀ ರಭಸದಿಂದ ಹೋದ ಕಾರಿನ ನಂಬರ್ ಅನ್ನು ಟ್ರಾಫಿಕ್ ಪೊಲೀಸ್ ನೋಟ್ ಮಾಡಿಕೊಂಡ. ಬ್ಯಾಂಕಿನ ಕ್ಯಾಷಿಯರ್ ಎಂ.ಆರ್. ಸುಬ್ರಹ್ಮಣ್ಯ, ಅಧಿಕಾರಿ ಶ್ರೀನಿವಾಸ್, ಇತರ ಸಿಬ್ಬಂದಿಗಳಾದ ಆರ್.ವಿ. ರಂಗನ್, ಎನ್. ಶೇಷಾದ್ರಿ ಇವರೆಲ್ಲಾ ಪೊಲೀಸರಿಗೆ ದೂರು ಸಲ್ಲಿಸಿದರು. ಕೂಡಲೆ ಎಲ್ಲೆಡೆ ವೈರ್‌ಲೆಸ್ ಮೆಸೇಜ್ ಹೋಯಿತು. ಯಶವಂತಪುರ ಟ್ರಾಫಿಕ್ ಪೊಲೀಸ್ ನೀಡಿದ ನಂಬರಿನ ಕಾರೇ ಸುನೀಲ್‌ದು ಎಂದು ಪೊಲೀಸರಿಗೆ ಗೊತ್ತಾಯಿತು. ನೆಲಮಂಗಲ ಒಂದು ಕಿ.ಮೀ. ಇದೆಯೆನ್ನುವಾಗ ಕಾರ್ ಅನ್ನು ಕಿರಿದಾದ ದಾರಿಯಲ್ಲಿ ತಿರುಗಿಸಿಕೊಂಡು ಹೋಗಿ ಒಂದು ಹೊಲದ ಬಳಿ ನಿಲ್ಲಿಸಿದ. ಹೊಂಗೆ ಮರದ ನೆರಳಲ್ಲಿ ವಾಕ್‌ಮನ್ ಹಚ್ಚಿಕೊಂಡು ಕುಣಿಯತೊಡಗಿದ್ದನ್ನು ಕೃಷಿ ಕೆಲಸಕ್ಕಾಗಿ ಬಂದಿದ್ದ ರೈತರು ಬೆರಗಾಗಿ ನೋಡತೊಡಗಿದರು.

ಮುಖ್ಯರಸ್ತೆಯಿಂದ ಕಾರು ಡೈವರ್ಶನ್ ಆಗಿದ್ದಕ್ಕೆ ಸಾಕ್ಷಿಯಾಗಿದ್ದ ಗಾಲಿಗಳ ಜಾಡನ್ನು ಹಿಡಿದುಕೊಂಡು ಪೊಲೀಸರು ಸುನೀಲ್ ಹೋದೆಡೆ ಬರುತ್ತಾರೆ.

ಪೋಲೀಸ್ ಜೀಪ್ ಅನ್ನು ನೋಡಿ ಕುಣಿಯುವುದನ್ನು ನಿಲ್ಲಿಸಿದ ಸುನೀಲ್ ಪೊಲೀಸರೆಡೆಗೆ ಗುಂಡು ಹಾರಿಸುತ್ತಾನೆ. ಆಗ ಪ್ರತಿಯಾಗಿ ಪೊಲೀಸರೂ ಗುಂಡು ಹಾರಿಸುತ್ತಾರೆ. ಸುನೀಲ್‌ನ ಕರಾರುವಕ್ಕಾದ ಗುಂಡಿನ ದಾಳಿಯನ್ನು ನೋಡಿ ಪೊಲೀಸರು ಬೆರಗಾಗುತ್ತಾರೆ. ಒಳ್ಳೆ ಪಳಗಿದ ಕೈ ಇವನದು ಎಂದುಕೊಳ್ಳುತ್ತಾರೆ ಮತ್ತು ದಿಢೀರ್ ಎಂದು ಮುನ್ನುಗ್ಗಲು ಹಿಂಜರಿಯುತ್ತಾರೆ. ಪೊಲೀಸರ ಹಿಂಜರಿತವನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಂಡ ಸುನೀಲ್ ಕೂಡಲೇ ಕಾರ್ ಒಳಕ್ಕೆ ಹತ್ತಿ ಕಾರನ್ನು ಸ್ಟಾರ್ಟ್ ಮಾಡಿ ಭರ್ ಎಂದು ಹೋಗುತ್ತಾನೆ. ಅವನನ್ನು ಬೆನ್ನಟ್ಟಿ ಪೊಲೀಸರೂ ತಮ್ಮ ಜೀಪ್ ಓಡಿಸುತ್ತಾರೆ. ಹೇ ಫೂಲ್ಸ್! ಎಂದು ಪೊಲೀಸರತ್ತ ವ್ಯಂಗ್ಯವಾಗಿ ಕೈಬೀಸಿ ಸುನೀಲ್ ಕೇಕೆ ಹಾಕುತ್ತಾನೆ. ಸುನೀಲ್ ತನ್ನ ಕಾರನ್ನು MES ಕ್ವಾರ್ಟರ್ಸ್‌ಗಳೆಡೆಗೆ ಓಡಿಸುತ್ತಾನೆ. ಸ್ವಲ್ಪವೇ ಅಂತರದಲ್ಲಿ ಬೆನ್ನಟ್ಟುತ್ತಿದ್ದ ಪೊಲೀಸರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆನಿಸಿದಾಗ ಕಾರನ್ನು ಒಂದು ಕ್ವಾರ್ಟರ್ಸ್ ಬಳಿ ನಿಲ್ಲಿಸಿ ಕೈಗೆ ಸಿಕ್ಕಷ್ಟು ನೋಟಿನ ಕಂತೆಗಳನ್ನು ಬನಿಯನ್ ಒಳಕ್ಕೆ, ಪ್ಯಾಂಟ್ ಮತ್ತು ಶರ್ಟ್ ಜೇಬುಗಳಲ್ಲಿ ತುರುಕಿಕೊಂಡು ಓಡತೊಡಗಿದ. ಅವನನ್ನು ಜೀಪ್ ಮೂಲಕ ಬೆನ್ನಟ್ಟುವುದು ಅಸಾಧ್ಯವಾದಾಗ ಪೊಲೀಸರೂ ತಮ್ಮ ಜೀಪ್ ಇಳಿದು ಓಡತೊಡಗಿದರು. ಆ ಪ್ರದೇಶದಲ್ಲಿದ್ದ ಜನರು ಆಶ್ಚರ್ಯದಿಂದ ಈ ದೃಶ್ಯವನ್ನು ನೋಡತೊಡಗಿದರು. ಜನರ ಮತ್ತು ಪೊಲೀಸರ ಗುಂಪು ಹಿಂದೆ ಹಿಂದೆ ಸುನೀಲ್ ಮುಂದೆ ಮುಂದೆ ಓಡುವುದನ್ನು ಸುನೀಲ್‌ನ ಎದುರಿನಲ್ಲಿ ನಿಂತಿದ್ದ ಜನ ನೋಡಿ, ಸುನೀಲ್‌ನನ್ನು ಅಡ್ಡಗಟ್ಟಿ ಹಿಡಿಯಲು ಬಂದರು. ಹಿಂದೆ ಮುಂದೆ ಎರಡೂ ಕಡೆಯಿಂದ ಜನ ಬರುವುದನ್ನು ನೋಡಿದ ಸುನೀಲ್‌ಗೆ ದಿಕ್ಕೇ ತೋಚದಂತಾಯಿತು. ತಕ್ಷಣ ಚಾಣಾಕ್ಷ ಸುನೀಲ್ ತನ್ನ ಪ್ಯಾಂಟ್ ಜೇಬು, ಬನಿಯನ್ ಒಳಕ್ಕೆ ಇರಿಸಿಕೊಂಡಿದ್ದ ನೋಟುಗಳನ್ನು ಬಿಡಿಬಿಡಿಯಾಗಿ ಗಾಳಿಯಲ್ಲಿ ತೂರಿದ! ಇವನನ್ನು ಬಿಟ್ಟು ಬೆನ್ನಟ್ಟಿ ಬಂದ ಜನ ಆ ನೋಟಿನ ಕಂತೆಗಳನ್ನು ಆಯ್ದುಕೊಳ್ಳಲು ಪರಸ್ಪರ ಕಚ್ಚಾಡತೊಡಗಿದರು. ಕೆಲವು ಕಾನ್‌ಸ್ಟೇಬಲ್‌ಗಳು ಜನರಿಂದ ಆ ನೋಟಿನ ಕಂತೆಗಳನ್ನು ಕಸಿದುಕೊಳ್ಳಲು ಯತ್ನಿಸತೊಡಗಿದರು. ಆದರೆ ಸರ್ಕಲ್ ಇನ್‌ಸ್ಪೆಕ್ಟರ್ ಕಾನ್‌ಸ್ಟೇಬಲ್‌ಗಳಿಗೆ ಬೈದು ಮೊದಲು ಅವನನ್ನು ಹಿಡಿಯಿರಿ ಎನ್ನುತ್ತ ಬೆನ್ನಟ್ಟಿ ಸುನೀಲ್‌ನನ್ನು ಹಿಡಿದುಬಿಟ್ಟ. ಈ ಮುಂಚೆ ಪೊಲೀಸರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಸುನೀಲ್ ಬಳಿಯಿದ್ದ ಕಾಡತೂಸುಗಳೆಲ್ಲ ಖಾಲಿಯಾಗಿದ್ದವು. ನಿರಾಯುಧನಾಗಿದ್ದ ಸುನೀಲ್ ಪೊಲೀಸ್ ಕೈಗೆ ಸಿಕ್ಕುಬಿದ್ದ. ಸದಾಶಿವನಗರ ಠಾಣೆಯ ಪೊಲೀಸರು ಸುನೀಲ್‌ನಿಂದ ರೂ. 42,000/- ಹಣವನ್ನು ಮತ್ತು ಅವನ ಪಿಸ್ತೂಲನ್ನು ಸೀಜ್ ಮಾಡಿ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ಸ್

448,342,392,397,307, ಮತ್ತು ಇಂಡಿಯನ್ ಆರ್ಮ್ಸ್ ಆಕ್ಟ್‌ನ 25 ಮತ್ತು 27ಸೆಕ್ಷನ್‌ಗಳ ಪ್ರಕಾರ ಕೇಸ್ ದಾಖಲು ಮಾಡಿದರು.

ಸುನೀಲ್ ಸಂದೀಪ್ ಕೇಸಿಗೆ ನಾನು ವಕಾಲತ್ ಹಾಕಿದೆ. ಯಾವ ಪಾಯಿಂಟ್ ಮೇಲೆ ಈ ಕೇಸನ್ನು ನಡೆಸುವುದು ಎಂದು ಯೋಚಿಸತೊಡಗಿದೆ. ಮೊದಲು ಸಂದೀಪನನ್ನು ಮಾತಾಡಿಸಿ ಆಮೂಲಾಗ್ರವಾಗಿ ವಿವರಗಳನ್ನು ಸಂಗ್ರಹಿಸುವಾ ಎಂದು ತೀರ್ಮಾನಿಸಿ ಸುನೀಲ್‌ನನ್ನು ಜೈಲ್‌ನಲ್ಲಿ ಸಂಧಿಸಿದಾಗ ಈ ಕಥೆಯನ್ನೆಲ್ಲಾ ಬಿಚ್ಚಿಟ್ಟ.

ಸುನೀಲ್‌ನ ಕಥೆಯನ್ನು ಕೇಳಿ ನನಗೆ ದುಃಖವುಕ್ಕಿ ಬಂದಿತು. ಮೊದಲು ಅವನನ್ನು ಜಾಮೀನಿನ ಮೇಲೆ ಬಿಡಿಸಿಕೊಳ್ಳುವೆಡೆ ಗಮನ ಕೊಟ್ಟೆ. ಸುನೀಲ ಮಾನಸಿಕ ಅಸಮತೋಲನದಿಂದಾಗಿ ಹೀಗೆ ಮಾಡಿದ್ದಾನೆಂದು ನನಗೆ ಹೊಳೆಯಲು ಕಷ್ಟವಾಗಲಿಲ್ಲ. ಸೈಕಾಲಜಿಯ ಪುಸ್ತಕಗಳನ್ನು ತಿರುವಿಹಾಕತೊಡಗಿದೆ. ಸುನೀಲನ ಅಪರಾಧಗಳನ್ನೆಲ್ಲ ಕೋರ್ಟ್ ಮುಂದೆ ಒಪ್ಪಿಕೊಂಡು, ಮಾನಸಿಕ ಅಸ್ವಸ್ಥತೆಯ ಕಾರಣಕ್ಕಾಗಿ ಇಂಥ ಅಪರಾಧಗಳನ್ನು ಎಸಗಿದ್ದಾನೆ ಎನ್ನುವ ಸಂಗತಿಯನ್ನು ಕೋರ್ಟಿಗೆ ಮನದಟ್ಟು ಮಾಡಿಕೊಡಲು ನಿರ್ಧರಿಸಿಕೊಂಡೆ.

ಸೈಕಿಯಾಟ್ರಿಸ್ಟ್ ಒಬ್ಬರನ್ನು ಸಂಪರ್ಕಿಸಿ ಸುನೀಲನ ಮಾನಸಿಕ ಕಾಯಿಲೆ ಯಾವುದಿರಬಹುದು ಎಂದೆ. ಅದಕ್ಕೆ ಅವರು "grandiose ಕಾಯಿಲೆಯಿದು. ಐಡೆಂಟಿಟಿ ಕ್ರೈಸಿಸ್ ಉಂಟಾದಾಗ ವ್ಯಕ್ತಿ ತನ್ನ ಪ್ರಾಮುಖ್ಯತೆಯನ್ನು ಅಗಾಧ ಸಂಪತ್ತು, ಅಧಿಕಾರ, ಖ್ಯಾತಿಗಳನ್ನು ಗಳಿಸಲು ಸಾಮಾಜಿಕ, ನೈತಿಕ, ಕಾನೂನು ಕಟ್ಟಳೆಗಳನ್ನೆಲ್ಲ ಮೀರಿ ವರ್ತಿಸತೊಡಗುತ್ತಾನೆ ಇಂಥ ಕಾಯಿಲೆಯಲ್ಲಿ" ಎಂದು ಹೇಳಿದರು.

ಈ ಸಂಗತಿಯನ್ನು ಕೋರ್ಟಿಗೆ ಮನದಟ್ಟು ಮಾಡುವುದು ಹೇಗೆಂದು ಯೋಚಿಸತೊಡಗಿದೆ. ಈ ಸಮಾಜದಲ್ಲಿ individualಗೆ ಒಂದು personality ಎನ್ನುವುದು ಇರದಿದ್ದಲ್ಲಿ ಎಂಥೆಂಥ ಅನಾಹುತಗಳು ನಡೆಯುತ್ತವೆ! ಶ್ರೀಮಂತ, ಅಧಿಕಾರಿ, ನಟ, ಯೋಧ, ವಿಜ್ಞಾನಿ ಹೀಗೆ ಇವೆಲ್ಲ personality. ಈ ವಿವಿಧ personality ಗಳನ್ನು ಕಳಚಿ ನೋಡಿದರೆ ಕಾಣುವುದು ವಿವಿಧ individualಗಳು. ಇನ್ನು ವಿಭಜಿಸಲು ಸಾಧ್ಯವಿಲ್ಲ ಎನ್ನುವುದೇ individual. ಅದೇ ಮೂಲ ಮತ್ತು ಕೊನೆ. ಆದರೆ, personality ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಸತತ ದಾಳಿ ನಡೆಸುತ್ತ ಬೆಳೆಯುವಂಥದ್ದು. Individual ತನಗಾಗಿ ಇದ್ದರೆ, personality ಇತರರ ಮುಂದೆ

ಪ್ರದರ್ಶಿಸಲಿಕ್ಕಾಗಿ. Persona ಶಬ್ದದಿಂದ personality ಶಬ್ದ ಹುಟ್ಟಿಕೊಂಡಿದೆ. ಗ್ರೀಕ್ ಭಾಷೆಯಲ್ಲಿ Persona ಎಂದರೆ ಮುಖವಾಡ. ಹೀಗೇ ಯೋಚಿಸುತ್ತ ಜೈಲಿನ ಮುಂದೆ ಬಂದು ನಿಂತುಕೊಂಡಿದ್ದೆ. ಸುನೀಲ್‌ನನ್ನು ಕಂಡೆ. ಪಶ್ಚಾತ್ತಾಪದ ಭಾರದಿಂದ ಬಳಲುತ್ತಿತ್ತು ಸುನೀಲ್ ಮುಖ. ನನ್ನನ್ನು ನೋಡುತ್ತಲೇ ಅವನು ನನ್ನ ಕಾಲುಗಳ ಮೇಲೆ ಬಿದ್ದು ಅಳತೊಡಗಿದ. ನೀವಲ್ಲದೆ ನನ್ನನ್ನು ಯಾರೂ ರಕ್ಷಿಸುವುದಿಲ್ಲ" ಎಂದ.

"ನೋಡು, ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆದ ಸಾಮರ್ಥ್ಯವಿರುತ್ತದೆ. ಇರುವೆ ಕಿರಿದಾದರೂ ಆನೆಯನ್ನೇ ಕೊಲ್ಲಬಲ್ಲದು. ಅದಕ್ಕೇ ಹಿರಿಯರು ಆನೆಯ ಭಾರ ಆನೆಗೆ, ಇರುವೆಯ ಭಾರ ಇರುವೆಗೆ ಎಂದಿದ್ದಾರೆ. ನಿನ್ನಲ್ಲಿರುವ ಸಾಮರ್ಥ್ಯವನ್ನು ಕಂಡುಕೊಂಡು ಅದನ್ನು ಬೆಳೆಸಿಕೊ. ಸುಸಂಸ್ಕೃತನಾಗು. ಅಜ್ಜ ಕೆಂಗಲ್ ಹನುಮಂತಯ್ಯನವರ ಮರ್ಯಾದೆ ಕಾಯುವ ಕೆಲಸ ನಿನ್ನಿಂದಾಗಬೇಕು. ಅದನ್ನ ಬಿಟ್ಟು ಡಕಾಯಿತಿ, ರೌಡಿತನಗಳಲ್ಲಿ ತೊಡಗಿದ್ದೀಯಾ ನೀನು. ಇಂಥ ಕೃತ್ಯಗಳ ಮೂಲಕ ಖ್ಯಾತಿ ಗಳಿಸಬಹುದು ಎಂದು ತಪ್ಪು ತಿಳಿದುಕೊಂಡಿದ್ದೀಯಾ. ಖ್ಯಾತಿಗೂ ಕುಖ್ಯಾತಿಗೂ ಅಜಗಜಾಂತರ ವ್ಯತ್ಯಾಸವಿದೆ. ಸಂಪೂರ್ಣ ಬದಲಾಗಿ ಸಜ್ಜನನಾಗುತ್ತೇನೆ ಎಂದು ಪ್ರಮಾಣ ಮಾಡು. ಖಂಡಿತ ನಿನ್ನನ್ನು ಬಿಡಿಸುವೆ" ಎಂದೆ. "ನಿಮ್ಮ ಪಾದದ ಮೇಲೆ ಆಣೆ" ಎಂದು ಕೆಳಕ್ಕೆ ಬಾಗಿದ ಸುನೀಲ್‌ನನ್ನು ಮೇಲೆತ್ತಿ ಅವನ ಬೆನ್ನು, ತಲೆಗಳನ್ನು ಸವರಿದೆ. ಪಾಪದ ಹುಡುಗ ಎನಿಸಿತು. "ನನ್ನ ತಂದೆ-ತಾಯಿ, ಬಂಧು ಬಳಗಗಳ ಪ್ರೀತಿ, ವಿಶ್ವಾಸಗಳಿಂದ ನಿರ್ಲಕ್ಷಿತನಾದದ್ದಕ್ಕೆ ಇಂಥ ಕ್ರಿಮಿನಲ್ ಐಡಿಯಾಗಳು ನನ್ನಲ್ಲಿ ಹುಟ್ಟಿಕೊಂಡವು ಅಂಕಲ್. ಸಮಾಜದ ಪ್ರತಿಯೊಬ್ಬರಲ್ಲೂ ನನ್ನ ಬಂಧು ಇದ್ದಾನೆ ಎನ್ನುವುದಕ್ಕೆ ನೀವೇ ಸಾಕ್ಷಿ. ನೀವು ನನ್ನ ಲಾಯರ್ ಥರ ಕಾಣುತ್ತಿಲ್ಲ. ಅದಕ್ಕೇ ನಿಮ್ಮನ್ನು ಅಂಕಲ್ ಎಂದು ಕರೆದೆ" ಎಂದ ಬಿಕ್ಕಳಿಸುತ್ತ.

ಸುನೀಲ್‌ನನ್ನು ಜಾಮೀನಿನ ಮೇಲೆ ಬಿಡಿಸಿದೆ. ಬಿ.ಇ. ಪದವಿಯನ್ನು ಪೂರ್ಣಗೊಳಿಸಿದ. ನಂತರ ಒಂದು ಗ್ಯಾರೇಜ್ ಅನ್ನೂ ಆರಂಭಿಸಿದ. ಅದರಲ್ಲಿ 40 ಜನ ನಿರುದ್ಯೋಗಿಗಳಿಗೆ ಕೆಲಸ ಒದಗಿಸಿದ.

ಸೆಷನ್ಸ್ ಕೋರ್ಟ್‌ನಲ್ಲಿ ಸುನೀಲ್‌ಗೆ ಶಿಕ್ಷೆ ವಿಧಿಸಲ್ಪಟ್ಟಿತು. ಹೈಕೋರ್ಟ್‌ಗೆ ಅಪೀಲ್ ಹೋದೆ. ಸುನೀಲ್‌ನನ್ನು ಆರೋಪಮುಕ್ತಗೊಳಿಸಿಯೇ ತೀರಬೇಕೆಂದು ಪಣತೊಟ್ಟಿದ್ದೆ. ಸುನೀಲ್ ತಂದೆ ಬಂದು ನನ್ನನ್ನು ಸಂಪರ್ಕಿಸದಿದ್ದರೂ ನಾನೇ ಹೈಕೋರ್ಟಿನಲ್ಲಿ ಅಪೀಲ್ ಅರ್ಜಿ ಹಾಕಿದೆ.

ಸುನೀಲ್ ಕಾಲೇಜ್‌ನಲ್ಲಿ H.O.D.ಯಾಗಿದ್ದು, ನಂತರ ತುಮಕೂರಿನ ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜಿಗೆ ಪ್ರಿನ್ಸಿಪಾಲ್ ಆದ ಪ್ರೊಫೆಸರ್ ಲಿಂಗಯ್ಯ ಅವರು ಬಹಳ ಪರಿಣಾಮಕಾರಿಯಾಗಿ ಸಾಕ್ಷಿ ಹೇಳಿಕೆ ನೀಡಿದ್ದರು. ಫೊರೆನ್ಸಿಕ್ ಮತ್ತು ಸೈಕಿಯಾಟ್ರಿ ಹೆಡ್ ಡಾ. ಚಂದ್ರೇಗೌಡರು ಸುನೀಲ್‌ನ ಮಾನಸಿಕ ಕಾಯಿಲೆಯ ಬಗ್ಗೆ ವಿವರವಾದ ಮಾಹಿತಿಯುಳ್ಳ ಹೇಳಿಕೆಯನ್ನು ನೀಡಿದ್ದರು. ಇಂಥ ಮಾನಸಿಕ ಅಸಮತೋಲನದ ವ್ಯಕ್ತಿಯ ಅಪರಾಧಗಳ ಕೇಸುಗಳಲ್ಲಿ ವಿವಿಧ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನೀಡಿದ ತೀರ್ಪುಗಳನ್ನು ಸಂಗ್ರಹಿಸಿದೆ. ನನ್ನ ವಾದ ಹೈಕೋರ್ಟ್‌ಗೆ ಕನ್ವಿನ್ಸ್ ಆಯಿತು. ಸುನೀಲ್ ಬಿಡುಗಡೆಯಾಯಿತು.

ಆದರೆ ಕಳೆದ ವರ್ಷ ಸುನೀಲ್ ಅಪಘಾತವೊಂದರಲ್ಲಿ ಸಾವನ್ನಪ್ಪಿದ ಎನ್ನುವ ಸಂಗತಿ ಅವನ ಕಥೆಯ ಕೊನೆಯ ಕಂತನ್ನು ಬರೆಯುತ್ತಿರುವಾಗ ತಿಳಿದು ಕಣ್ಣುಗಳಲ್ಲಿ ಹನಿಗಳು ಉದುರಿದವು. ನನ್ನ ಕಣ್ಣುಗಳನ್ನು ಕರವಸ್ತ್ರದಿಂದ ಒರೆಸುವಾಗ ಸುನೀಲ್‌ನನ್ನು ಜೈಲಲ್ಲಿ ಸಂಧಿಸಿ ಅವನ ತಲೆಯ ಮೇಲೆ ಕೈಯಾಡಿಸಿದ ನೆನಪು ಉಕ್ಕಿಬಂದಿತು.

81

ಸೊಸೆಯನ್ನೇ ಕೊಲೆಮಾಡಿದ ವಿಜ್ಞಾನಿ ವಿಷಕಂಠಯ್ಯ

ಕರ್ನಾಟಕದ ಕಾಶ್ಮೀರ ಎಂದೇ ಖ್ಯಾತವಾಗಿರುವ ಸುಂದರ ತಾಣ ಕೊಡಗು ಬೀನಾಳ ಹುಟ್ಟೂರು. ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಮೇಲೆ ತಾಯಿ ರತಿದೇವಿಯೊಂದಿಗೆ ಹಟ ಹಿಡಿದು ಕಾಲೇಜ್ ವಿದ್ಯಾಭ್ಯಾಸಕ್ಕಾಗಿ ಬೀನಾ ಬೆಂಗಳೂರಿಗೆ ಬಂದಳು. ಮಹಾರಾಣಿ ಕಾಲೇಜ್ ಸೇರಿಕೊಂಡಳು. ಗರ್ಲ್ಸ್ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದಳು. ನೂರು ಹುಡುಗಿಯರ ಮಧ್ಯೆ ಎದ್ದು ಕಾಣುವ ಸೌಂದರ್ಯದ ಬೆಡಗಿ ಬೀನಾ ಮಹಾರಾಣಿ ಕಾಲೇಜಿನ ರಾಣಿಯಾಗಲು ತಡವಾಗಲಿಲ್ಲ. ಎದುರಿಗಿರುವ ಜಯ ಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜಿನ ಹುಡುಗರನೇಕರು ಜೊಲ್ಲು ಸುರಿಸುತ್ತ ಬೀನಾಳ ಹಿಂದೆ ಸುತ್ತತೊಡಗಿದರು.

ಬೀನಾ ಓದುವುದಕ್ಕಿಂತ ತನ್ನ ಸೌಂದರ್ಯ ವರ್ಧನೆ, ಬಿಂಕ, ಬಿನ್ನಾಣಗಳ ಕಡೆಗೆ ಗಮನ ಕೊಡತೊಡಗಿದಳು. ಹುಡುಗರನ್ನು ಬೆರಳತುದಿಯ ಮೇಲೆ ಆಡಿಸಿ ಮಜಾ ನೋಡುವುದು ತಮಾಷೆಯಾಗಿ ಕಂಡಿತು. ಊರಿಂದ ತಾಯಿ ಕಳಿಸುತ್ತಿದ್ದ ದುಡ್ಡು ಬೀನಾಳ ಕಾಸ್ಮೆಟಿಕ್ಸ್‌ಗೆ ಸಾಲದಂತಾಯಿತು. ಹೆಚ್ಚಿನ ದುಡ್ಡು ಕಳಿಸುವಂತೆ ಪೀಡಿಸಿದಾಗ ತಾಯಿ, "ನೀನು ಓದುವುದೇ ಬೇಡ, ಮೊದಲು ವಾಪಸ್ ಹೊರಟು

ಬಾ" ಎಂದು ಗದರಿದಳು. ಬೆಂಗಳೂರಿನ ಹೋಟೆಲ್ ಮತ್ತು ಥೇಟರ್‌ಗಳು ಸದಾ ಬೀನಾಳ ಕಣ್ಮುಂದೆ ತೇಲಾಡತೊಡಗಿ ಹಾಸ್ಟೆಲ್ ಊಟ ರುಚಿಸದಂತಾಯಿತು.

ಬೀನಾಳ ಮಜಾ, ಮೋಜುಗಳಿಗಾಗಿ ವ್ಯಯಿಸುವಷ್ಟು ದುಡ್ಡು ಕಾಲೇಜ್ ಹುಡುಗರಲ್ಲಿ ಇರುತ್ತಿರಲಿಲ್ಲ. ತನಗೆ ಲೈನ್ ಹೊಡೆಯಲು ಬಂದ ಹುಡುಗನೊಬ್ಬನನ್ನು ಅಶೋಕಾ ಹೋಟೆಲ್‌ಗೆ ಕರೆದುಕೊಂಡು ಹೋದಾಗ ಕಕ್ಕಾಬಿಕ್ಕಿಯಾದ ಆ ಹುಡುಗ ತನ್ನಲ್ಲಿ ಈ ಹೋಟೆಲ್‌ನ ಬಿಲ್ ಕೊಡುವಷ್ಟು ಹಣವಿಲ್ಲ ಎಂದು ಬೆವೆತು ಓಡಿಹೋಗಿದ್ದನ್ನು ನೆನೆದುಕೊಂಡ ಬೀನಾ, ಕಾಲೇಜ್ ಹುಡುಗರನ್ನು ಖಾಲಿ ಜೇಬುಗಳ ಹೀರೋಗಳು ಎಂದು ಲೇವಡಿ ಮಾಡುತ್ತಿದ್ದಳು. ತಮ್ಮ ಮೈಕಟ್ಟು, ಡ್ರೆಸ್ಸುಗಳಿಗೆ ಬೀನಾ ಮೋಹಗೊಳ್ಳುತ್ತಾಳೆಂದು ಅನೇಕ ಹುಡುಗರಲ್ಲಿ ಭ್ರಮೆಯಿತ್ತು. ಆದರೆ ಬೀನಾ ಡ್ರೆಸ್ಸು, ಕಾಸ್ಮೆಟಿಕ್ಸು, ಸ್ಟಾರ್ ಹೋಟೆಲ್, ಸಿನಿಮಾ, ಆಭರಣಗಳಲ್ಲಿ ಖುಷಿ ಕಂಡುಕೊಳ್ಳುತ್ತಿದ್ದಳು. ಅವೆಲ್ಲ ಇದ್ದರಲ್ಲವೆ ಹುಡುಗರಾದಿಯಾಗಿ ಜನವೆಲ್ಲ ತನ್ನೆಡೆ ನೋಡುವುದು ಎಂದು ನಂಬಿದ್ದಳು.

ನಗರ ಜೀವನದ ಸಾಮಾನ್ಯ ರೋಗವಾಗಿರುವ ಈ Philistinism ನಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಅದು ಹೇಗೋ ಜನತಾ ಪಕ್ಷದ ಅಗ್ರಗಣ್ಯ ನಾಯಕರಲ್ಲೊಬ್ಬರಾದ ಡಾ. ಜೀವರಾಜ್ ಆಳ್ವ ಅವರಿಗೆ ಬೀನಾಳ ಪರಿಚಯವಾಯಿತು. ಆಳ್ವ ಬೀನಾಳಿಗೆ ಧಾರಾಳವಾಗಿ ದುಡ್ಡು ಕೊಡತೊಡಗಿದರು. ಅವಳ ಕಾಲೇಜು ಮತ್ತು ಹಾಸ್ಟೆಲ್‌ಗಳ ಖರ್ಚನ್ನೂ ಅವರೇ ನೋಡಿಕೊಳ್ಳತೊಡಗಿದರು. ಗ್ರಾಮೀಣ ಪ್ರದೇಶದಿಂದ ಬಂದಿದ್ದ ಬೀನಾಳನ್ನು ಆಳ್ವ ಒಮ್ಮೆ ಫ್ಲೈಟ್‌ನಲ್ಲಿ ಬಾಂಬೆಗೆ ಕರೆದೊಯ್ದರು. ಆಗ ಅವಳಿಗೆ ಇದಕ್ಕಿಂತ ಮಿಗಿಲಾದ ಸ್ವರ್ಗ ಎಲ್ಲಿದೆ ಎನಿಸದಿರಲಿಲ್ಲ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಂಟಮೊಲಜಿ ಪ್ರೊಫೆಸರ್ ಆಗಿದ್ದ ವಿಷಕಂಠಯ್ಯನವರ ಏಕಮಾತ್ರ ಪುತ್ರ ಮಹೇಶ್ ಮಹಾರಾಣಿ ಕಾಲೇಜಿನ ಎದುರಿನ ಜೆ.ಪಿ. ಪಾಲಿಟೆಕ್ನಿಕ್‌ನಲ್ಲಿ ಸ್ಟೂಡೆಂಟ್ ಆಗಿದ್ದ. ಬೀನಾಳ ಗಂಧರ್ವ ಸೌಂದರ್ಯಕ್ಕೆ ಹುಚ್ಚಾಗಿಬಿಟ್ಟಿದ್ದ. ಕ್ಲಾಸ್‌ಗಳಿಗೆ ಚಕ್ಕರ್ ಕೊಟ್ಟು ಬೀನಾ ಎಷ್ಟು ಹೊತ್ತಿನಲ್ಲಿ ಎಲ್ಲಿರುತ್ತಾಳೆ ಎಂದು ಪತ್ತೆ ಹಚ್ಚುವ ಕೆಲಸದಲ್ಲಿ ತೊಡಗಿದ. ಒಂದು ಬಾರಿ ಬೀನಾ ಆಳ್ವ ಜೊತೆ ಬಾಂಬೆಗೆ ಹೋಗಲೆಂದು ಏರ್‌ಪೋರ್ಟ್‌ಗೆ ಹೋದಳು. ಅವಳನ್ನು ಬೆನ್ನು ಹತ್ತಿ ಮಹೇಶನೂ ಅಲ್ಲಿಗೆ ಹೋದ. ಬೀನಾಳನ್ನು ಹುಚ್ಚು ಹಿಡಿದವನಂತೆ ನೋಡುತ್ತಿದ್ದ ಮಹೇಶ್‌ನನ್ನು ಗಮನಿಸಿದ ಆಳ್ವ, "ಯಾರು ಆ ಹುಡುಗ?" ಎಂದು ಪ್ರಶ್ನಿಸಿದರು. "ನಾನು ಹೊರಬಿದ್ದರೆ ಸಾಕು C.I.D ಯಂತೆ

ಬೆನ್ನು ಹತ್ತುತ್ತಾನೆ. ಇದು ಬಿಟ್ಟರೆ ಜೀವನದಲ್ಲಿ ಬೇರೆ ಕೆಲಸ ಅವನಿಗಿದ್ದಂತೆ ಕಾಣೆ. ಶನಿ ತೊಲಗಿದೆಯೊ ಇಲ್ಲವೊ ಎಂದು ಹಿಂದೆ ಹೊರಳಿ ನೋಡಿದರೆ ಸಾಕು ತನ್ನನ್ನು ನೋಡಲೆಂದೇ ಹೊರಳಿದ್ದಾಳೆಂದುಕೊಂಡು ಕೋತಿಯಂತೆ ಹಲ್ಲುಕಿಸಿಯುತ್ತಾನೆ" ಎಂದಳು ಬೀನಾ ಮೂಗು ಮುರಿಯುತ್ತಾ.

"ಓ, ಅದಾ ವಿಷಯ" ಎನ್ನುತ್ತ ಆಳ್ವ ತನ್ನೊಂದಿಗೆ ಇದ್ದ ಸಹಾಯಕನಿಗೆ "ಆ ಹುಡುಗನ ಜಾತಕ ಜಾಲಾಡಿಕೊಂಡು ಬಾ ನಾನು ವಾಪಾಸು ಬರುವುದರೊಳಗೆ" ಎಂದರು.

ಫ್ಲೈಟ್‌ನಲ್ಲಿ ಡಾ. ಆಳ್ವ ಅವರು "ಬೀನಾ, ನೀನು ಆ ಹುಡುಗನನ್ನು ಮದುವೆಯಾಗು. ನಾವು ಯಾರನ್ನು ಪ್ರೀತಿಸುತ್ತೇವೊ ಅವರನ್ನು ಮದುವೆಯಾಗೋದಕ್ಕಿಂತ ನಮ್ಮನ್ನು ಯಾರು ಪ್ರೀತಿಸುತ್ತಾರೋ ಅವರನ್ನು ಮದುವೆಯಾಗೋದು ಸುಖಕರ...." ಎಂದಾಗ ಆಶ್ಚರ್ಯ ದಿಗಿಲುಗಳಿಂದ ಬೀನಾ ಆಳ್ವರ ಕಡೆ ನೋಡಿದಳು. ಆಳ್ವ ಶೂನ್ಯದಲ್ಲಿ ದೃಷ್ಟಿಗೆಟ್ಟು ತಮ್ಮ ಮೀಸೆಯ ಮೇಲೆ ಕೈಯಾಡಿಸಿಕೊಳ್ಳುತ್ತಿದ್ದರು.

ಒಂದು ದಿನ ನಾಲ್ವರು ರೌಡಿಗಳು ಮಹೇಶನ ಬಳಿಗೆ ಬಂದು, "ಏನೋ ನಮ್ ಹುಡ್ಗೀ ಹಿಂದೆ ದಿನಾ ತಿರುಗ್ತಾ ಇದೀಯಾ. ಎರಡೂ ಕಾಲೇಜುಗಳ ಹುಡುಗ-ಹುಡುಗೀರು ನಿಮ್ಮಿಬ್ಬರ ಬಗ್ಗೆ ಕಥೆ ಕಟ್ಟಿ ಆಡ್ಕೋತಿದಾರೆ. ನೀನು ಗಂಡ್ಸು. ಆದರೆ ಬೀನಾ ಹೆಣ್ಣು. ಅವಳ ಹೆಸರು ಕೆಟ್ರೆ ಫ್ಯೂಚರ್ ಇಲ್ಲ. ಬೇಗ ಅವಳನ್ನು ಮದುವೆಯಾಗು" ಎಂದು ಗದರಿದರು. ಈ ಅನಿರೀಕ್ಷಿತ ದಾಳಿಯಿಂದ ಬೆಚ್ಚಿಬಿದ್ದ ಮಹೇಶ್ ನಮಾಜು ಮಾಡಲು ಹೋದರೆ ಮಸೀದೆಯೇ ಕೊರಳಿಗೆ ಬಿದ್ದಂತಾಯಿತಲ್ಲ ಎಂದು ಭಯಗ್ರಸ್ತನಾದ. ಧೈರ್ಯ ತಂದುಕೊಂಡು, "ಅವಳಿಗೆ ಲೈನ್ ಹೊಡಿತಾ ಇರೋದು ನಾನು ಒಬ್ಬನೇ ಏನೂ ಅಲ್ಲ. ನೂರು ಹುಡುಗರಲ್ಲಿ ನಾನೂ ಒಬ್ಬ" ಎನ್ನುತ್ತಿದ್ದಂತೆಯೇ ಒಬ್ಬ ಗೂಂಡಾ ಹಿಂದಿನಿಂದ ತಲೆಗೆ ಒಮ್ಮೆ ಬಾರಿಸಿದ. ಮಹೇಶನ ಕಣ್ಣಿಗೆ ಕತ್ತಲು ಬಂದಂತಾಯಿತು. ಥರಥರ ನಡುಗತೊಡಗಿದ. ಚೀರಿಕೊಳ್ಳಲೂ ಬಾಯೇಳದಂತಾಯಿತು.

"ನಮ್ಮಪ್ಪನ್ನ ಕೇಳಿ ಹೇಳ್ತೀನಿ" ಎಂದ. "ಬೋಳಿಮಗನೆ, ಲೈನ್ ಹೊಡಿಯೋವಾಗ ನಿಮ್ಮಪ್ಪನ್ ಪರ್ಮಿಷನ್ ತಗೊಂಡಿದ್ದಿಯೇನೊ" ಎಂದು ಮತ್ತೊಂದು ಹೊಡೆಯಲು ಗೂಂಡಾ ಕೈಯೆತ್ತಿದಾಗ "ಆಯಿತು, ಒಂದು ವಾರ ಟೈಮ್ ಕೊಡಿ ಮದುವೆಗೆ ರೆಡಿಯಾಗ್ತೇನೆ" ಎಂದು ಒಪ್ಪಿಕೊಂಡ.

ಬೆಂಗಳೂರಿನ ಆರ್ಯ ಸಮಾಜದಲ್ಲಿ 1988ರ ಜನವರಿ ತಿಂಗಳು ಬೀನಾಳೊಂದಿಗೆ ಮದುವೆಯಾದ. ಆ ಮದುವೆಯಲ್ಲಿ ಗೂಂಡಾಗಳೇ ಗುರುಹಿರಿಯರಾಗಿದ್ದರು! ರೌಡಿಗಳೇ ಬಂಧುಬಾಂಧವರಾಗಿದ್ದರು.

ಮಗನ ಈ ವಿಷಯ ಪ್ರೊ. ವಿಷಕಂಠಯ್ಯನವರಿಗೆ ತಿಳಿಯಲು ತಡವಾಗಲಿಲ್ಲ. ವಿಷಕಂಠಯ್ಯ ಅಂತಾರಾಷ್ಟ್ರೀಯ ಖ್ಯಾತಿಯ ಕೀಟಶಾಸ್ತ್ರಜ್ಞರು. ಜಗತ್ತಿನ ಐವತ್ತು ಖ್ಯಾತ ಎಂಟಮೊಲಜಿಸ್ಟ್‌ರಲ್ಲಿ ಇವರೂ ಒಬ್ಬರಾಗಿದ್ದರು. ಮಾಜಿ ಶಿಕ್ಷಣ ಮಂತ್ರಿ ವೆಂಕಟಪ್ಪನವರ ಮಗಳನ್ನು ವಿಷಕಂಠಯ್ಯ ಮದುವೆಯಾಗಿದ್ದರು. ಮಹೇಶನನ್ನು ಬಿಟ್ಟರೆ ಬೇರೆ ಮಕ್ಕಳಿರಲಿಲ್ಲ. ವಂಶದ ಏಕೈಕ ಕುಡಿ ಮಹೇಶ ಎಂದು ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿದ್ದರು. ಮಾಜಿ ಸಚಿವ ವೆಂಕಟಪ್ಪ ತಮ್ಮ ಮೊಮ್ಮಗ ಮಹೇಶನ ಹೆಸರಿಗೆ ಸಾಕಷ್ಟು ಆಸ್ತಿ ಬರೆದಿದ್ದರು. ಈ ಆಸ್ತಿಯನ್ನೆಲ್ಲ ಲಪಟಾಯಿಸಲು ಯಾವುದೋ ಬೇವರ್ಸಿ ಹೆಣ್ಣು ಈ ಸಂಚು ಹೂಡಿ ತನ್ನ ಮಗನ ಮನಸ್ಸು ಕೆಡಿಸಿದೆ ಎಂದುಕೊಂಡಿದ್ದರು ವಿಷಕಂಠಯ್ಯ. "ಆಗಿದ್ದು ಆಗಿಹೋಯಿತು. ಒಂದಷ್ಟು ದುಡ್ಡು ಕೊಡು ಅವಳಿಗೆ. ಎಲ್ಲಾದರೂ ಹಾಳಾಗಿಹೋಗಲಿ" ಎಂದರು ವಿಷಕಂಠಯ್ಯ. ಆದರೆ ಅಷ್ಟೊತ್ತಿಗೆ ಬೀನಾಳ ದೇಹಸುಖದ ಸುಳಿಯಲ್ಲಿ ಮಹೇಶ ಸಿಲುಕಿಕೊಂಡಿದ್ದ. "ಎಂತೆಂಥವರು ಮದುವೆಯಾಗಲು ಬಯಸಿದರೂ ಅವರಾರಿಗೂ ಬೀನಾ ಸಿಗಲಿಲ್ಲ. ಅಷ್ಟಕ್ಕೂ ನೀವು ತಿಳಿದುಕೊಂಡಂತೆ ಅವಳೇನೂ ನನ್ನ ಬೆನ್ನು ಬೀಳಲಿಲ್ಲ. ನಾನೇ ಬಯಸಿ ಅವಳ ಹಿಂದೆ ಬಿದ್ದೆ. ನಾನು ಮಾತ್ರ ಅವಳ ಕೈ ಬಿಡೋಲ್ಲ" ಎಂದಾಗ ವಿಷಕಂಠಯ್ಯನವರ ಕಣ್ಣುಗಳಲ್ಲಿ ವಿಷಜ್ವಾಲೆ ಸ್ಫೋಟಗೊಂಡಿತು. "ಹಾಗಾದರೆ ಒಂದು ಕ್ಷಣವೂ ನೀನು ಈ ಮನೆಯಲ್ಲಿ ಇರಕೂಡದು, ಹೊರಟುಹೋಗು" ಎಂದು ಚೀರಿದರು. ಗಳಿಸುವುದು ಎಂದರೇನೆಂದು ಗೊತ್ತಿಲ್ಲದ ತಮ್ಮ ಮಗ ಒಂದೆರಡು ತಿಂಗಳು ಉಪವಾಸ ಬಿದ್ದು ತಾನೇ ಬಂದು ಶರಣಾಗುತ್ತಾನೆ ಎಂದೆಣಿಸಿದ್ದರು ವಿಷಕಂಠಯ್ಯ.

ಕೈಯಲ್ಲಿ ಪುಡಿಗಾಸೂ ಇಲ್ಲದೆ ಹೊರಬಂದ ಮಹೇಶ. ರಾಜಾಜಿನಗರದ ಐದನೇ ಬ್ಲಾಕ್‌ನಲ್ಲಿ ಮಹೇಶ್ ಮತ್ತು ಬೀನಾಗೆ ಮದುವೆ ಮಾಡಿಸಿದ ಗೂಂಡಾಗಳೇ ಮನೆಯ ಏರ್ಪಾಟು ಮಾಡಿದರು. ರಾಜಾಜಿನಗರ ಪೊಲೀಸ್ ಠಾಣೆಯ ಎದುರು ಮಳಿಗೆಯೊಂದರಲ್ಲಿ ಟೀವಿ ಮಾರಾಟ ಅಂಗಡಿಯನ್ನೂ ಆರಂಭಿಸಿಕೊಟ್ಟರು. ನೋಡಲು ರೌಡಿಗಳಂತೆ ಕಾಣುವ ಇವರು ಅದೆಷ್ಟು ಒಳ್ಳೆಯವರು ಎನಿಸಿತು ಮಹೇಶ್‌ಗೆ!

ಮಹೇಶನ ಕೈಯಲ್ಲಿ ಟೀವಿ ಅಂಗಡಿಯೇನೋ ಇತ್ತು. ಆದರೆ ವ್ಯವಹಾರ ಜ್ಞಾನವಿರಲಿಲ್ಲ. ಅದಕ್ಕಾಗಿ ಸುಬ್ಬ ಎನ್ನುವ ಯುವಕನನ್ನು ವ್ಯವಹಾರ ನೋಡಿಕೊಳ್ಳಲು ತಂದಿಡಲಾಯಿತು. ಸುಬ್ಬ ಮತ್ತು ಮಹೇಶ್ ಕೂಡಿ ಒಳ್ಳೆ ವ್ಯವಹಾರ ನಡೆಸತೊಡಗಿದರು.

ಬೀನಾಳೊಂದಿಗೆ ಮಹೇಶ್ ಹನಿಮೂನ್‌ಗೆ ಹೋಗಿಬಂದ. ರತ್ರಿಕ್ರೀಡೆಯಲ್ಲಿ ಬೀನಾ ತನಗಿಂತ ಚತುರೆ ಎನಿಸಿ ತನ್ನ ಪೆದ್ದುತನದ ಬಗ್ಗೆ ಮುಜುಗರವೆನಿಸಿತು ಮಹೇಶ್‌ಗೆ. "ಒಳ್ಳೆಯ ಸ್ಕಾಚ್ ವ್ಹಿಸ್ಕಿಯೊಂದಿಗೆ ನಮ್ಮ ಹನಿಮೂನ್ ಸೆಲೆಬ್ರೇಟ್ ಮಾಡೋಣ" ಎಂದು ಬೀನಾ ತನ್ನ ಸೂಟ್‌ಕೇಸ್‌ನಿಂದ ಬಾಟಲ್ ಅನ್ನು ಹೊರತೆಗೆದಾಗ ಮಹೇಶ್ ಗಾಬರಿಗೊಂಡ. ಅಂದಿನವರೆಗೂ ಅವನು ಕುಡಿದಿರಲಿಲ್ಲ. ಪೆಗ್ ಮಾಡುವುದರಲ್ಲಿ, ಸಿಪ್ ಮಾಡುವುದರಲ್ಲಿ ಬೀನಾ ನೈಪುಣ್ಯತೆ ಸಾಧಿಸಿದ್ದಳು. ಮಹೇಶ ಗಟಗಟನೆ ಕುಡಿಯತೊಡಗಿದಾಗ, "ಇದು ಪಾನಕವಲ್ಲ" ಎಂದು ಮಹೇಶನ ಗ್ಲಾಸನ್ನು ಕಸಿದುಕೊಂಡಳು ಬೀನಾ. ಮೊದಲ ಬಾರಿಗೆ ಕುಡಿದದ್ದರಿಂದ ಮಹೇಶ್‌ಗೆ ವ್ಹಿಸ್ಕಿ ಬೇಗ ತಲೆಗೇರಿತು. "ಇದನ್ನೆಲ್ಲ ಯಾರು ಕಲಿಸಿದರೆ ನಿಂಗೆ?" ಎಂದು ಕೇಳಿದ ಅಮಲಿನಲ್ಲಿ. "ನಮ್ಮ ಕೊಡಗಿನಲ್ಲಿ ಪ್ರತಿ ಸಮಾರಂಭದಲ್ಲೂ ಹಂದಿ ಮಾಂಸ, ರಮ್ಮು ಸಮಾರಾಧನೆ ಆಗುತ್ತೆ. ಇದು ನಮ್ಮ ಹುಟ್ಟಿನಿಂದ ಬಂದ ಕಲ್ಚರ್" ಎಂದು ಮಹೇಶನ ತಲೆಯ ಮೇಲೆ ಕೈಯಾಡಿಸಿದಳು. ಮಹೇಶ ಹಾಗೇ ನಿದ್ದೆಹೋದ.

ಮಹೇಶನಿಗೆ ಹನಿಮೂನ್ ಸುಖ ಭ್ರಮನಿರಸನಗೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ಮಹೇಶ ಶಾಪ್‌ಗೆ ಹೋದನೆಂದರೆ ಸಾಕು, ಬೀನಾ ಮನೆಯಲ್ಲಿರುತ್ತಿರಲಿಲ್ಲ. ರಾತ್ರಿ ತಡವಾಗಿ ಕುಡಿದು ತೂರಾಡುತ್ತ ಬರುತ್ತಿದ್ದಳು. ಅಪರಿಚಿತ ಕಾರುಗಳು ಅವಳನ್ನು ಬಿಡಲು ಬರತೊಡಗಿದವು. ಮಹೇಶ ಇದನ್ನೆಲ್ಲ ನೋಡಿ ಸ್ಫೋಟಗೊಂಡ. ಒಮ್ಮೆಯಂತೂ ಅವಳು ಇಡೀ ರಾತ್ರಿ ಬರಲೇ ಇಲ್ಲ. ಬೆಳಗ್ಗೆ ಹತ್ತು ಗಂಟೆಗೆ ಹಾಜರಾದಳು.

ಮನೆ ಬಾಗಿಲು ತೆರೆದ ಮಹೇಶ ಅವಳನ್ನು "ನಿನ್ನೆಯೆಲ್ಲ ಎಲ್ಲಿದ್ದೆ?" ಎಂದ.

"ಬೋರ್ ಆಗಿತ್ತು. ನನ್ನ ಹಾಸ್ಟೆಲ್‌ಮೇಟ್ ಒಬ್ಬಳ ಮದುವೆಯಿತ್ತು. ಅವರು ಬಿಡಲಿಲ್ಲ. ಬಹಳ ಒತ್ತಾಯ ಮಾಡಿದ್ದರಿಂದ ಅಲ್ಲೇ ಉಳಿದುಕೊಂಡೆ" ಎಂದು ಸಬೂಬು ಹೇಳಿದಳು. ಅದೆಲ್ಲ ಬುರುಡೆ ಎಂದು ತಿಳಿದರೂ ಮಹೇಶ ಅವಳನ್ನು ಬೈಯಲಿಲ್ಲ. ಸುಸ್ತಾಗಿದ್ದ ಬೀನಾ ಸ್ನಾನ ಮಾಡಿ ಬೇಗ ನಿದ್ದೆ ಹೋದಳು. ಮಹೇಶ ಷಾಪ್‌ಗೆ ಹೋದ. ತನ್ನ ಅಸಿಸ್ಟೆಂಟ್ ಸುಬ್ಬನನ್ನು "ಮನೆಯಿಂದ ಸ್ವಲ್ಪವೇ ದೂರದಲ್ಲಿ

ನಿಂತುಕೊಂಡು ಅವಳನ್ನು ಕರೆಯಲು ಯಾವುದಾದರೂ ಕಾರು ಬಂದ ತಕ್ಷಣ ನನಗೆ ಘೋನ್ ಮಾಡು" ಎಂದು ಹೇಳಿಕಳಿಸಿದ.

ಮಧ್ಯಾಹ್ನ ಒಂದೂವರೆಯಾಗಿರಬಹುದು ಕಾಂಟೆಸ್ಸಾ ಕಾರೊಂದು ಬಂದಿತು. ಅದರೊಳಗಿನಿಂದ ಒಬ್ಬ ವ್ಯಕ್ತಿ ಹಾರ್ನ್ ಮಾಡಿದ್ದನ್ನು ನೋಡಿದ ಸುಬ್ಬ ತಕ್ಷಣವೇ ಮಹೇಶನಿಗೆ ಘೋನ್ ಮಾಡಿದ. ಶಾಪ್ ಮನೆಯಿಂದ ಸಮೀಪವೇ ಇದ್ದುದರಿಂದ ಬೈಕ್ ಮೇಲೆ ಮಹೇಶ ಧಾವಿಸಿದ. ಅಷ್ಟರಲ್ಲಿ ಬೀನಾ ರೆಡಿಯಾಗಿ ಕಾರ್ ಹತ್ತಲು ಕೆಳಗಿಳಿದು ಬಂದು ನಿಂತುಕೊಂಡಿದ್ದಳು. ಮಹೇಶ ಅವಳಿಗೆ ಕಾಣದಂತೆ ದೂರವೇ ನಿಂತುಕೊಂಡ. ಸುಬ್ಬನನ್ನು ಶಾಪ್‌ಗೆ ಕಳಿಸಿಕೊಟ್ಟು ಬೀನಾ ಏರಿದ ಕಾರನ್ನು ಬೆನ್ನುಹತ್ತಿದ. ಕಾರು ಪಂಚತಾರಾ ಹೋಟೆಲ್ ವೆಸ್ಟೆಂಡ್ ಒಳಕ್ಕೆ ಹೋಯಿತು. ಮಹೇಶನ ಇಡೀ ದೇಹ ಕೋಪದಿಂದ ಅದುರತೊಡಗಿತು. ಸಿಗರೇಟ್ ಕೊಂಡು ಸೇದುತ್ತ ಹೋಟೆಲ್ ಹೊರಗೇ ನಿಂತುಕೊಂಡ. ಮೇಲಿಂದ ಮೇಲೆ ಐದು ಸಿಗರೇಟ್‌ಗಳನ್ನು ಸೇದಿ ನಾಲಿಗೆ ಒಣಗಿ ತಲೆ ಸುತ್ತಿದಂತಾಯಿತು. ಕೋಲ್ಡ್ ಡ್ರಿಂಕ್ಸ್ ಕುಡಿದು ಬಂದು ವೆಸ್ಟೆಂಡ್ ಕಾಂಪೌಂಡ್ ಒಳಕ್ಕೆ ಹೋದ. ತಾನು ಬೆನ್ನಟ್ಟಿ ಬಂದ ಕಾರು ಎಲ್ಲಿದೆಯೆಂದು ನೋಡಿದ. ಪುನಃ ಹೋಟೆಲ್ ಕಾಂಪೌಂಡ್‌ನಿಂದ ಹೊರಕ್ಕೆ ಬಂದು ಹೊರಗೇ ನಿಂತುಕೊಂಡ. ಹೇಳಲು ಬಾರದ ಚಡಪಡಿಕೆಯಿಂದ ತೀರಾ ಬಳಲಿಕೆಯೆನಿಸಿತು. ಹೊರಕ್ಕೆ ಕಾರು ಬರುವವರೆಗೆ ಇಲ್ಲಿಂದ ಕದಲಬಾರದೆಂದು ನಿರ್ಧರಿಸಿಕೊಂಡ. ಸಂಜೆ ಐದು ಗಂಟೆಯಾಗಿತ್ತು ಬೀನಾ ಹತ್ತಿದ ಕಾಂಟೆಸ್ಸಾ ಕಾರು ಹೊರಬಂದಾಗ, ದೂರದಿಂದಲೇ ಫಾಲೋ ಮಾಡಿದ. ಕಾರು ತನ್ನ ಮನೆಯ ಮುಂದೆ ನಿಂತುದನ್ನು, ಬೀನಾ ಇಳಿದು ಮನೆಯೊಳಕ್ಕೆ ಹೋದುದನ್ನು ಗಮನಿಸಿದ. ಮನೆಯೊಳಕ್ಕೆ ಹೋಗಲು ಮನಸ್ಸಾಗದೆ ಶಾಪ್‌ಗೆ ಹೋದ. ಸುಬ್ಬನನ್ನು ಕರೆದುಕೊಂಡು ಬಾರ್ ಒಂದಕ್ಕೆ ಹೋದ. ಚೆನ್ನಾಗಿ ವ್ಹಿಸ್ಕಿ ಕುಡಿದ. ಎದುರಿನ ಸುಬ್ಬ, ಅಕ್ಕಪಕ್ಕದ ಟೇಬಲ್‌ಗಳು ಎಲ್ಲ ತೇಲಾಡುತ್ತಿರುವಂತೆ ಕಂಡವು. ಇದ್ದಕ್ಕಿದ್ದಂತೆ ಅಳು ಉಕ್ಕಿ ಬಂದಿತು. ಬಿಕ್ಕಳಿಸತೊಡಗಿದ. "ಸುಬ್ಬ ನಾನು ಮೋಸ ಹೋದೆ" ಎಂದು ಅಳತೊಡಗಿದ. "ಯಜಮಾನ್ರೇ, ಇದೆಲ್ಲ ನನಗೆ ಬಹಳ ದಿವಸಗಳ ಹಿಂದೆಯೇ ಗೊತ್ತಾಗಿದೆ. ಏನೆಂದು ಹೇಳುವುದು ಎಂದು ನನಗೆ ಬಾಯಿಯೇ ಬರಲಿಲ್ಲ" ಎಂದಾಗ, ಸುಬ್ಬನ ಕೈಗಳನ್ನು ಮಹೇಶ ಗಟ್ಟಿಯಾಗಿ ಹಿಡಿದುಕೊಂಡು "ನನ್ನಪ್ಪನ ಮಾತು ಕೇಳದೆ ಕೆಟ್ಟೆ...." ಎಂದು ಗದ್ಗದಿಸತೊಡಗಿದ. ವಾಂತಿಯಾಗುವ ಅನುಭವವಾಯಿತು. ತೂರಾಡುತ್ತ ಟಾಯ್ಲೆಟ್‌ಗೆ ಹೋಗಿ ವಾಂತಿ ಮಾಡಿಕೊಂಡು ಬಂದ. ಮುಖ, ತಲೆಗೆ ನೀರು ಹಾಕಿಕೊಂಡ. ಸ್ವಲ್ಪ ನಶೆ ಇಳಿದಂತೆನಿಸಿತು. "ಸ್ವಲ್ಪ ಏನಾದರೂ ತಿನ್ನಿ, ಇಲ್ಲದಿದ್ದರೆ ಹ್ಯಾಂಗ್ ಓವರ್ ಆಗುತ್ತೆ"

ಎಂದು ಸುಬ್ಬ ಒತ್ತಾಯಿಸಿದರೂ ಮಹೇಶನಿಗೆ ಏನೂ ತಿನ್ನುವ ಮನಸ್ಸಾಗಲಿಲ್ಲ.

ಮನೆಗೆ ಬಂದ ಮಹೇಶ ನೇರವಾಗಿ ಬೆಡ್‌ರೂಮ್‌ಗೆ ಹೋಗಿ ಉರುಳಿದ.

ಬೀನಾ ಊಟ ಮಾಡು ಎಂದು ಒತ್ತಾಯಿಸಿದಳು. ಒಲ್ಲೆ ಎಂದ ಮಹೇಶನಿಗೆ "ಹೊರಗೆ ಜೋರ್ ಪಾರ್ಟಿ ಆಯಿತಾ?" ಎಂದು ಕೇಳಿದಳು.

"ಹೌದು, ಇವತ್ತು ಮಧ್ಯಾಹ್ನ ಮನೆಗೆ ಬಂದಿದ್ದೆ ನೀನಿರಲಿಲ್ಲ, ಎಲ್ಲಿ ಹೋಗಿದ್ದೆ?"

"ಮಡಿಕೇರಿಯಿಂದ ನನ್ನ ಫ್ರೆಂಡ್ ಬಂದಿದ್ದಳು, ಶಾಪಿಂಗ್‌ಗೆ ಕರೆದಿದ್ದಳು ಹೋಗಿದ್ದೆ" ಎಂದಳು.

"ಶಾಪಿಂಗ್ ಮಾಡಲು ವೆಸ್ಟೆಂಡ್ ಹೋಟೆಲ್‌ಗೆ ಏಕೆ ಹೋಗಿದ್ದೆ?" ಎಂದು ಕೇಳಿದ ಏರಿದ ಧ್ವನಿಯಲ್ಲಿ ಮಹೇಶ್.

"ಓ, ನೀನು ನನ್ನನ್ನು ಎಷ್ಟು ದಿವಸದಿಂದ ಫಾಲೋ ಮಾಡುತ್ತಿದ್ದೀಯಾ ಹಾಗಾದರೆ?" ಎಂದು ಮರುಪ್ರಶ್ನಿಸಿದ ಬೀನಾಳ ಕೆನ್ನೆಗೆ ಜೋರಾಗಿ ಬಾರಿಸಿದ ಮಹೇಶ್. ಈ ದಿಢೀರ್ ದಾಳಿಯಿಂದ ಬೆದರಿದ ಬೀನಾ ಜೋರಾಗಿ ಕಿರುಚಿಕೊಂಡಳು.

"ಲೇ! ನೀನು ಸೂಳೆಯಾಗಿದ್ದು ನನಗೇಕೆ ಮೋಸ ಮಾಡಿ ಮದುವೆ ಮಾಡಿಕೊಂಡೆ? ನಿಜ ಹೇಳು, ವೆಸ್ಟೆಂಡ್‌ನಲ್ಲಿ ಯಾವನ ತೆಕ್ಕೆಯಲ್ಲಿ ಬಿದ್ದುಕೊಂಡಿದ್ದೆ? ಇಲ್ಲದಿದ್ದರೆ ಇಲ್ಲೇ ನಿನ್ನ ಕತ್ತು ಹಿಸುಕಿ ಸಾಯಿಸಿಬಿಡ್ತೀನಿ" ಎಂದು ಬೀನಾಳ ಕತ್ತಿಗೆ ಕೈಹಾಕಿದ. ಅವನ ಕೈ ಕಚ್ಚಿ ಬಿಡಿಸಿಕೊಂಡು ಹೊರಗೋಡಿ ಬೆಡ್‌ರೂಮ್ ಬಾಗಿಲು ಹಾಕಿದಳು ಬೀನಾ. ರಾತ್ರಿ ಹತ್ತೂವರೆಯಾಗಿತ್ತು ಕೂಡಲೇ ಮಾಗಡಿ ರಸ್ತೆಯಲ್ಲಿರುವ ಪೀಟರ್‌ಗೆ ಫೋನ್ ಮಾಡಿದಳು. ಅರ್ಧ ಗಂಟೆಯಲ್ಲಿ ಪೀಟರ್ ಕಾರು ತೆಗೆದುಕೊಂಡು ಬಂದ.

"ಮಹೇಶ್ ನನ್ನ ಕತ್ತು ಹಿಸುಕಿ ಸಾಯಿಸಿಬಿಡುತ್ತಿದ್ದ" ಎಂದು ಗೋಳೋ ಎಂದು ಅಳತೊಡಗಿದಳು. ಮಹೇಶ್ ಬೆಡ್‌ರೂಮ್ ಒಳಗೆ ಒದರಾಡುತ್ತಲೇ ಇದ್ದ. ಬೆಡ್‌ರೂಮ್ ಬಾಗಿಲು ತೆರೆದ ಪೀಟರ್ ಮಹೇಶನ ಕಾಲರ್ ಹಿಡಿದು ನಾಲ್ಕು ಬಾರಿಸಿದ. "ಇನ್ನೊಂದು ಬಾರಿ ಹೀಗೆ ಮಾಡಿದರೆ ನಿನ್ನನ್ನೇ ಸಾಯಿಸಿಬಿಡ್ತೇನೆ" ಎಂದು ಹೆದರಿಸಿದ.

ಬೀನಾ, "ಈ ರಾತ್ರಿ ಮಾತ್ರ ನಾನಿಲ್ಲಿರುವುದಿಲ್ಲ. ನನಗೆ ಭಯವಾಗ್ತಿದೆ. ನಿಮ್ಮ

ಮನೆಗೆ ಬರ್ತೇನೆ" ಎಂದಳು. ಬೀನಾ ಪೀಟರ್ ಜೊತೆ ಹೊರಟುಹೋದಳು.

ಮಹೇಶ್ ಎದ್ದಾಗ ಬೆಳಗಿನ ಒಂಬತ್ತು ಗಂಟೆಯಾಗಿತ್ತು. ತಲೆ ಸಿಡಿಯುತ್ತಿತ್ತು. ಒಂದು ಅನಾಲ್ಜಿನ್ ಮಾತ್ರೆ ತೆಗೆದುಕೊಂಡು ಕಾಫಿ ಕುಡಿದ. ಹೊಟ್ಟೆ ಚುರುಗುಟ್ಟತೊಡಗಿತ್ತು. ಮುಖ ತೊಳೆದುಕೊಂಡು ಫ್ರಿಜ್‌ನಲ್ಲಿದ್ದ ಬ್ರೆಡ್, ಜಾಮ್ ತಿಂದ.

ಬದುಕು ದೊಡ್ಡ ಶೂನ್ಯ ಎಂದು ಭಾಸವಾಗತೊಡಗಿತು. ಸಿಗರೇಟ್ ಹಚ್ಚಿ ಉಂಗುರಾಕಾರದಲ್ಲಿ ಹೊಗೆ ಬಿಡತೊಡಗಿದ.

ಇಂಗ್ಲಿಷ್ ಹಾರರ್ ಚಿತ್ರಗಳಲ್ಲಿ ಸುಂದರಿ ಇದ್ದಕ್ಕಿದ್ದಂತೆ ಕೋರೆ ಹಲ್ಲುಗಳ ರಾಕ್ಷಸಿಯಾಗಿ ಗೋಚರವಾಗುವ ದೃಶ್ಯಗಳು ಕಣ್ಮುಂದೆ ತೇಲಿದವು. ಕನಸಿನ ಕನ್ಯೆ ಬೀನಾ ಕೈಗೆ ಸಿಕ್ಕಾಗ ಈ ಜೀವನದಲ್ಲಿ ತನಗೆ ಮತ್ತೇನೂ ಬೇಕಿಲ್ಲವೆನಿಸಿದ್ದು, ನಂತರ ಅವಳ ಕರಾಳ ಮುಖದ ದರ್ಶನವಾದದ್ದು, ತಂದೆಯನ್ನೂ, ತನ್ನವರನ್ನೂ (ಮಹೇಶನ ತಾಯಿ ತೀರಿಕೊಂಡು ಅನೇಕ ವರ್ಷಗಳಾಗಿದ್ದವು) ಬೀನಾಳಿಗಾಗಿ ತೊರೆದುಬಂದದ್ದು ಎಲ್ಲ ಸಿಗರೇಟಿನ ಹೊಗೆಯಲೆಗಳೊಂದಿಗೆ ತೇಲಿ ಬರತೊಡಗಿದವು. ಇದ್ದಕ್ಕಿದ್ದಂತೆ ಅಪ್ಪನನ್ನು ನೋಡಬೇಕೆನಿಸಿತು. ಕೂಡಲೇ ಫೋನ್ ಮಾಡಿದ.

ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಕಡೆಗೆ ಮಹೇಶನ ಬೈಕ್ ಓಡತೊಡಗಿತು. ಅಪ್ಪನ ಬಗ್ಗೆ ಮಹೇಶನ ಹೃದಯದಲ್ಲಿ ಭಯಮಿಶ್ರಿತ ಪ್ರೀತಿಯ ಕಂಪನವುಂಟಾಯಿತು. ತನಗೆ ಮನೆಬಿಟ್ಟು ಹೋಗು ಎಂದು ಅಪ್ಪ ಹೇಳಿದ ಸಂದರ್ಭ ನೆನಪಿಗೆ ಬಂದಿತು. 'ದ್ರೋಹಕ್ಕೆ ಯಾವತ್ತೂ ಸುಂದರ ಮುಖವಾಡವಿರುತ್ತದೆ' ಎಂದು ಅಪ್ಪ ಹೇಳಿದ ಮಾತು ನೆನಪಿಗೆ ಬಂದು ಕಣ್ಣುಗಳು ಮಂಜಾದವು. ಹೀಗೆ ಅಂತರ್ಮುಖಿಯಾಗಿ ಬೈಕ್ ಓಡಿಸಿದರೆ ಆಕ್ಸಿಡೆಂಟ್ ಆಗುವುದು ಗ್ಯಾರಂಟಿ ಎನಿಸಿ, ಬೈಕ್ ಅನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಿ ಒಂದು ಸಿಗರೇಟ್ ಸೇದಿ ಪುನಃ ಬೈಕ್ ಹತ್ತಿದ.

ಬಾಗಿಲು ತೆರೆದು ಒಳಗೆ ಬಂದಾಗ ಅಪ್ಪ ತನ್ನ ಚೇಂಬರ್‌ನಲ್ಲಿ ಯಾರೊಂದಿಗೋ ಮಾತಾಡುತ್ತ ಕೂತಿದ್ದರು. ಮಗನನ್ನು ನೋಡಿ ವಾತ್ಸಲ್ಯವುಕ್ಕಿತು. ತಕ್ಷಣವೇ ರೋಷ ಅದರಲ್ಲಿ ಮಿಶ್ರಿತಗೊಂಡು ಕಣ್ಣುಗಳು ಕೆಂಡವಾದವು; ಅದ್ಯಾಕೆ ಒಳಕ್ಕೆ ಬಂದೆ ಎನ್ನುವಂತೆ ಪ್ರಶ್ನಿಸಿದವು ಮಹೇಶನನ್ನು.

ಎದುರು ಕೂತಿದ್ದ ವ್ಯಕ್ತಿಯನ್ನು ಹೊರಕ್ಕೆ ಕಳಿಸಿದ ವಿಷಕಂಠಯ್ಯ ಮಗನಿಗೆ ಕೂರಲು ಹೇಳಲಿಲ್ಲ. "ಏಕೆ ಬಂದೆ?" ಎಂದರು ಗುಡುಗುವ ಧ್ವನಿಯಲ್ಲಿ.

ಏನೂ ಮಾತಾಡದ ಮಹೇಶ ಅಪ್ಪನ ಕಾಲುಗಳ ಮೇಲೆ ಕುಸಿದುಬಿದ್ದು ಅಳತೊಡಗಿದ. ಉಕ್ಕಿದ ರೋಷವೆಲ್ಲ ಇಳಿದು ಮಗನ ಭುಜಗಳನ್ನು ಹಿಡಿದು ಮೇಲೆತ್ತಿದ ಅಪ್ಪ.

"ನಿಮ್ಮ ಮಾತು ಕೇಳದೆ ಮೋಸ ಹೋದೆ. ಅದಕ್ಕಾಗಿ ಏನು ಶಿಕ್ಷೆ ಬೇಕಾದರೂ ಕೊಡಿ. ನನ್ನನ್ನು ದಯವಿಟ್ಟು ಕ್ಷಮಿಸಿ. ನಿಮ್ಮ ಬಳಿಗೆ ನಾನು ಬಂದದ್ದು ದುಡ್ಡು ಕೇಳಲಲ್ಲ, ಪಶ್ಚಾತ್ತಾಪ ಮಾಡಿಕೊಳ್ಳಲು" ಎಂದ.

ಮಗನ ಕಣ್ಣೀರನ್ನು ಒರೆಸಿದ ವಿಷಕಂಠಯ್ಯ, "ಜೀವನದಲ್ಲಿ ಎಲ್ಲರೂ ತಪ್ಪು ಮಾಡುತ್ತಾರೆ. ಆದರೆ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಮಾಡಿಕೊಳ್ಳುವವರು ಬಹಳ ವಿರಳ. ನಿನಗೆ ಪಶ್ಚಾತ್ತಾಪವಾಗಿದೆ ಅಷ್ಟು ಸಾಕು. ಏನಾಗಿದೆ ಹೇಳು" ಎಂದು ಮಗನ ಮುಖವನ್ನು ದಿಟ್ಟಿಸಿದ. ಹಿಂದಿನ ರಾತ್ರಿ ಪೀಟರ್ ಹೊಡೆತಕ್ಕೆ ಮುಖ ಊದಿಕೊಂಡಿತ್ತು. "ಯಾರು ಹೊಡೆದರು ನಿನಗೆ?" ಎಂದು ಅಪ್ಪ ಮುಖ ಸವರಿದಾಗ ಮಹೇಶನಿಗೆ ದುಃಖ ಉಮ್ಮಳಿಸಿಕೊಂಡು ಬಂದಿತು. ಬೀನಾಳ ರಾದ್ಧಾಂತವನ್ನೆಲ್ಲ ಅಪ್ಪನ ಮುಂದೆ ಬಿಚ್ಚಿಟ್ಟ.

ಪ್ರೊ. ವಿಷಕಂಠಯ್ಯನವರಿಗೆ ಬೀನಾಳ ಮೇಲೆ ಕೋಪ ಜ್ವಾಲಾಮುಖಿಯಂತೆ ಸ್ಫೋಟಗೊಂಡಿತು. ಬೀನಾ ತನ್ನ ವಂಶವನ್ನು ನಿರ್ನಾಮಗೊಳಿಸಲು ಬಂದ ರಾಕ್ಷಸಿ ಎನಿಸಿತು.

"ತನ್ನ ಹಾದರದ ರಕ್ಷಣೆಗಾಗಿ ಗೂಂಡಾಗಳನ್ನಿಟ್ಟುಕೊಂಡು ಈ ರೀತಿ ನಿನಗೆ ಹೊಡೆಸಿದಳಾ ಅವಳು! ಅವಳನ್ನು ನಾನು ಸುಮ್ಮನೆ ಬಿಡುವುದಿಲ್ಲ. ಅವಳು ವಾಪಸ್ ಮನೆಗೆ ಬಂದೊಡನೆ ನನಗೆ ಹೇಳು. ಅವಳೊಂದಿಗೆ ಜಗಳವಾಡಬೇಡ. ಆಗಿದ್ದನ್ನೆಲ್ಲ ಮರೆತು ಚೆನ್ನಾಗಿರೋಣ ಎಂದು ಹೇಳು. ಇನ್ನೊಂದು ವಾರ ನೋಡು. ಅವಳು ಬರದಿದ್ದರೆ ನೀನೇ ಹೋಗಿ ಅವಳನ್ನು ಕರೆತಾ. ಆಮೇಲೆ ಬಂದು ನನಗೆ ತಿಳಿಸು. ಖರ್ಚಿಗೆ ಏನಾದರೂ ಬೇಕಾದರೆ ಬಂದು ಪಡೆದುಕೋ" ಎಂದರು.

ವಿಜ್ಞಾನಿ ವಿಷಕಂಠಯ್ಯನವರನ್ನು ಬಹಳಷ್ಟು ಜನ ಸೌಮ್ಯ ಹಾಗೂ ಸಾಧು ಸ್ವಭಾವದ ವ್ಯಕ್ತಿ ಎಂದು ತಿಳಿದುಕೊಂಡಿದ್ದರು. ಅವರು ತಮ್ಮ ವ್ಯಕ್ತಿತ್ವವನ್ನು ಹಾಗೆಯೇ ಬೆಳೆಸಿಕೊಂಡಿದ್ದರು. ವಾಚಾಳಿಯಲ್ಲದ ವಿಷಕಂಠಯ್ಯ ಸದಾ ಶ್ರೀಮದ್ ಗಾಂಭೀರ್ಯದಲ್ಲಿರುತ್ತಿದ್ದರು. ಮಗ ಮನೆಬಿಟ್ಟು ಹೋದಮೇಲೆ ಅವರ ಗಾಂಭೀರ್ಯದೊಂದಿಗೆ ಮೌನಸ್ನೇಹ ಬೆಳೆದಿತ್ತು. ಅವರ ಸಹೋದ್ಯೋಗಿಗಳೂ ಅವರನ್ನು ಮಾತಾಡಿಸಿ, ಅವರ ಮನೆಯ ವಿಷಯಗಳನ್ನು ಕೆದಕಲು ಹಿಂಜರಿಯುತ್ತಿದ್ದರು.

ತಮ್ಮ ಮಗನ ಬಾಳನ್ನು ಹಾಳುಮಾಡಿದ ಬೀನಾಳ ಮೇಲೆ ಉಕ್ಕಿದ ರೋಷ ಸೇಡಾಗಿ ಪರಿವರ್ತನೆಗೊಳ್ಳತೊಡಗಿದ್ದು ಸ್ವತಃ ವಿಷಕಂಠಯ್ಯನವರಿಗೇ ಗೊತ್ತಾಗಲಿಲ್ಲ. ಬೀನಾಳ ಬಗ್ಗೆ ಯಾವ ನಿಟ್ಟಿನಿಂದ ಯೋಚಿಸಿದರೂ ಅದು ಸೇಡಿನಲ್ಲಿ ಹೋಗಿ ಮುಳುಗತೊಡಗಿತು.

ಡೈವೋರ್ಸ್ ಕೊಡಿಸಿದರೆ ಹೇಗೆ ಎನ್ನುವ ಪ್ರಶ್ನೆಯೂ ವಿಷಕಂಠಯ್ಯನವರನ್ನು ಕಾಡಿತು. ಹಾಗಾದರೆ ಅವಳಿಗೆ ಮಾಸಾಶನ, ಆಸ್ತಿಯಲ್ಲಿ ಪಾಲು ಏನೆಲ್ಲ ಕೊಡಬೇಕಾಗುತ್ತದಲ್ಲವೆ ಎನಿಸಿತು. ಇಲ್ಲ ಇಲ್ಲ, ಆ ಸೂಳೆಗೆ ನನ್ನ ವಂಶದ ಆಸ್ತಿಯ ಕಿಲುಬುಕಾಸೂ ಹೋಗಬಾರದು, ಅವಳನ್ನು ಜೀವ ಸಹಿತ ಮುಗಿಸುವುದೇ ಸರಿಯಾದ ಮಾರ್ಗ ಎನಿಸಿತು. ಮನಸ್ಸು ಈ ತೀರ್ಮಾನಕ್ಕೆ ಬಂದಾಗ ಒಂದು ಕ್ಷಣ ಹಿಂಜರಿಯಿತು. ವಿಶ್ವಮಟ್ಟದ ಖ್ಯಾತಿಯ ವಿಜ್ಞಾನಿ ಕೊಲೆಗಾರನಾಗಬೇಕೆ?

ಆದರೆಸ ಜನಕ್ಕೆ ತಿಳಿದರಲ್ಲವೆ ತಾನು ಕೊಲೆಗಾರ ಎನ್ನುವುದು. ಯಾರಿಗೂ ಗೊತ್ತಾಗಬಾರದು ಹಾಗೆ ಕೊಲ್ಲಬೇಕು. ರೋಡ್ ರೌಡಿಗಳಂತೆ ನಾನು ಕೊಲ್ಲಬೇಕಿಲ್ಲ. ಮಚ್ಚು ಹಿಡಿದು ರಕ್ತ ಚೆಲ್ಲೆನಿಸಬೇಕಿಲ್ಲ. ಸದ್ದಿಲ್ಲದೆ ಅವಳನ್ನು ಸಾವಿನ ದವಡೆಯಲ್ಲಿ ಸಿಕ್ಕಿಸುವ ಜ್ಞಾನ ನನ್ನಲ್ಲಿಲ್ಲವೇ? ಹೀಗೆ ಯೋಚಿಸುತ್ತಿದ್ದ ವಿಷಕಂಠಯ್ಯ ತಮ್ಮ ಲ್ಯಾಬೊರೇಟರಿಯೊಳಕ್ಕೆ ಅಪ್ರಜ್ಞಾಪೂರ್ವಕವಾಗಿ ಬಂದು ನಿಂತಿದ್ದರು. ಅವರ ಅವ್ಯಕ್ತ ಮನದಾಳ ರೂಪಿಸಿದ ಕೊಲೆಯ ಸಂಚು ಅವರ ಕೈಹಿಡಿದು ಕರೆತಂದು ಪೊಟಾಸಿಯಮ್ ಸೈನಾಯ್ಡ್ ವಿಷದ ಜಾರಿನ ಎದುರು ನಿಲ್ಲಿಸಿತ್ತು.

ಪೊಟಾಸಿಯಮ್ ಸೈನಾಯ್ಡ್ ಅನ್ನು ಕಂಡುಹಿಡಿದ ವಿಜ್ಞಾನಿಗೆ ಅದೆಂಥ ಅದಮ್ಯ ಕುತೂಹಲವಿತ್ತು! ಜಗತ್ತು ಕಂಡಿರುವ ವಿಷಗಳಿಗೆಲ್ಲ ಚಕ್ರಾಧಿಪತಿಯಂತಿದೆ ಇದು. ಈ ವಿಷ ಅದೆಷ್ಟು ಶೀಘ್ರವಾಗಿ ಪ್ರಾಣವನ್ನು ಮುಗಿಸಿಬಿಡುತ್ತದೆ ಎಂಬುದು ಗೊತ್ತಿದ್ದರೂ ಆ ವಿಜ್ಞಾನಿ ತನ್ನ ಜೀವವನ್ನೇ ತ್ಯಜಿಸಲು ಸಿದ್ಧನಾದ! ಕೈಯಲ್ಲಿ ಪೆನ್ನು ಹಿಡಿದು ಎದುರಿಗೆ ಬಿಳಿಹಾಳೆಯನ್ನು ಇಟ್ಟುಕೊಂಡು ಕುಳಿತ. ಪೊಟಾಸಿಯಮ್ ಸೈನಾಯ್ಡ್ ಮೇಲೆ ಒಂದು ಸೂಜಿಯ ಮೊನೆಯನ್ನಿರಿಸಿದ. ಆ ಸೂಜಿಯನ್ನು ಎಡಗೈಯಿಂದ ನಾಲಿಗೆಯ ಮೇಲಿರಿಸಿಕೊಳ್ಳುವುದು. ತಕ್ಷಣವೇ ಬಲಗೈಯಿಂದ ಅದರ ರುಚಿಯನ್ನು ಪೇಪರ್ ಮೇಲೆ ಬರೆಯುವುದು; ಮೊದಲೇ ಆ ಪೇಪರ್ ಮೇಲೆ "ಇದು ಪೊಟಾಸಿಯಮ್ ಸೈನಾಯ್ಡ್‌ನ ರುಚಿ" ಎಂದು ಬರೆದಿದ್ದ ವಿಜ್ಞಾನಿ ವಿಷಯುಕ್ತ ಸೂಜಿಯ ಮೊನೆಯನ್ನು ತನ್ನ ನಾಲಿಗೆಯ ಮೇಲಿರಿಸಿಕೊಂಡ. ಎದುರಿಗಿದ್ದ ಪೇಪರ್ ಮೇಲೆ 'S' ಎಂದು ಬರೆದ. ಮುಂದಿನ ಅಕ್ಷರಗಳನ್ನು ಬರೆಯಲು ಆ ವಿಜ್ಞಾನಿಯ ದೇಹದಲ್ಲಿ ಪ್ರಾಣವಿರಲಿಲ್ಲ.

ಇಂದಿಗೂ ಪೊಟಾಸಿಯಮ್ ಸೈನಾಯ್ಡ್ ಸ್ವೀಟೋ, ಸಾಲ್ಟೋ, ಸೋರೋ ಗೊತ್ತಿಲ್ಲ! ಅದನ್ನು ತಿಂದವನ ಪ್ರಾಣದೊಂದಿಗೇ ಅದರ ರುಚಿಯೂ ಕ್ಷಣಾರ್ಧದಲ್ಲಿ ಮಾಯವಾಗಿಬಿಡುತ್ತದೆ. ಸೈನಾಯ್ಡ್ ವಿಷದ ಜಾರ್ ಒಳಕ್ಕೆ ಹಾಕುತ್ತಲೇ ಕೀಟಗಳು ಯಥಾಸ್ಥಿತಿಯಲ್ಲಿ ಸಾಯುತ್ತವೆ. ಅವುಗಳ ದೇಹದ ಯಾವ ಅಂಗಕ್ಕೂ ಊನವಾಗಿರುವುದಿಲ್ಲ. ಕೀಟಗಳನ್ನು ಹೀಗೆ ಅಂಗ ಊನವಾಗದಂತೆ ಕೊಲ್ಲುವ ಸೈನಾಯ್ಡ್‌ನ್ನು ಬಳಸಿ ಬೀನಾಳನ್ನು ಕೊಲ್ಲುವ ಯೋಚನೆ ಮಾಡಿದ ವಿಜ್ಞಾನಿ ವಿಷಕಂಠಯ್ಯರಿಗೆ ಜಾರ್‌ನಲ್ಲಿರಿಸಲ್ಪಟ್ಟಿದ್ದ ಸುಂದರ ಪಾತರಗಿತ್ತಿಯಲ್ಲಿ ಬೀನಾಳ ಮುಖ ಕಾಣತೊಡಗಿತು.

ಪೊಟಾಸಿಯಮ್ ಸೈನಾಯ್ಡ್ ವಿಷ ಕಂಡುಹಿಡಿದ ವಿಜ್ಞಾನಿ ಅದರ ರುಚಿ ನೋಡಲಿಕ್ಕಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ್ದ. ಆದರೆ, ಈ ವಿಷಕಂಠಯ್ಯ ಬೀನಾಳನ್ನು ಕೊಲ್ಲಲು ಅದನ್ನು ಬಳಸಲು ಮುಂದಾಗಿದ್ದ! ಆಗ ವಿಷಕಂಠಯ್ಯ ತಾನೋರ್ವ ವಿಜ್ಞಾನಿ ಎನ್ನುವುದನ್ನು ಮರೆತು ವಿಷಕಕ್ಕುವ ವಿಷಕಂಠಯ್ಯನೇ ಆಗಿದ್ದ.....

ಬೀನಾ ಮಹೇಶನ ಮನೆಬಿಟ್ಟು ಹೋಗಿ ನಾಲ್ಕು ದಿವಸಗಳಾಗಿದ್ದವು. ಮನವೊಲಿಸಿ ಬೀನಾಳನ್ನು ಕರೆತರಲೆ ಎನ್ನುವ ಯೋಚನೆಯಲ್ಲಿದ್ದ ಮಹೇಶ. ಬೆಳಿಗ್ಗೆ ಒಂಬತ್ತು ಘಂಟೆಯ ಸಮಯ. ಮಾಗಡಿ ರೋಡಿನ ರೌಡಿ ಪೀಟರ್ ಬೀನಾಳೊಂದಿಗೆ ಮಹೇಶನ ಮನೆಯಲ್ಲಿ ಪ್ರತ್ಯಕ್ಷನಾದ. ಮಹೇಶನಿಗೆ ಖುಷಿಯಾಯಿತ್ತು. ತಾನೇ ಬಂದಿದ್ದಾಳೆ ಬೀನಾ ಎಂದು. "ಇನ್ನೊಮ್ಮೆ ಬೀನಾಳ ಮೇಲೆ ಕೈಮಾಡಿದ್ದೇ ಆದರೆ ನಿನ್ನ ಕಥೆ ಮುಗಿಸುತ್ತೇನೆ" ಎಂದು ಪೀಟರ್ ಎಚ್ಚರಿಕೆ ನೀಡಿಹೋದ.

ಇದ್ದಕ್ಕಿದ್ದಂತೆ ಬೀನಾಗೆ ತಲೆ ಸುತ್ತು ಬಂದು ಬಿದ್ದುಬಿಟ್ಟಳು. ಗಾಬರಿಗೊಂಡ ಮಹೇಶ್ ಡಾಕ್ಟರ್‌ಗೆ ಫೋನ್ ಮಾಡಿದ. ಗರ್ಭಿಣಿಯಾಗಿರುವ ಸಾಧ್ಯತೆಯಿದೆ, ಪರೀಕ್ಷೆ ಮಾಡಿಸಿ ಎಂದು ಹೇಳಿ ಹೋದರು ಡಾಕ್ಟರ್.

ಮಹೇಶ ಬೀನಾಳನ್ನು ಅಪ್ಪಿ ಮುದ್ದಾಡಿದ. 'ಎಂಥ ಸಿಹಿ ಸುದ್ದಿ ತಂದಿದೀಯಾ ಗೊತ್ತಾ? ಅಂದು ಕುಡಿದ ಅಮಲಿನಲ್ಲಿ, ನಿನ್ನ ಮೇಲೆ ಕೈಮಾಡಿದ್ದಕ್ಕೆ ನಾನು ಪಟ್ಟ ಪಶ್ಚಾತ್ತಾಪ ಅಷ್ಟಿಷ್ಟಲ್ಲ' ಎಂದು ಅವಳನ್ನು ರಮಿಸಿದ. ಬೀನಾಗೆ ಮಹೇಶನ ವರ್ತನೆಯಿಂದ ಆಶ್ಚರ್ಯವಾಯಿತು. 'ಓ ಮಹೇಶ್ ನಿನ್ನನ್ನು ಅದೆಷ್ಟು ತಪ್ಪು ತಿಳಿದುಕೊಂಡುಬಿಟ್ಟೆ. ನನ್ನದೂ ತಪ್ಪಿದೆ. ನಿನ್ನ ಮನಸ್ಸಿಗೆ ನೋವಾಗದ ಹಾಗೆ ನಡಕೋತೀನಿ' ಎಂದು ಮಹೇಶನ ಎದೆಗೊರಗಿದಳು.

ಮನೆಯಲ್ಲೇ ರೆಸ್ಟ್ ತೆಕ್ಕೊ. ಅಡಿಗೆ ಏನೂ ಮಾಡಬೇಡ. ಶಾಪ್‌ನಿಂದ ವಾಪಸ್ ಬರುವಾಗ ಮಧ್ಯಾಹ್ನ ಲಂಚ್ ಅನ್ನು ಹೋಟೆಲ್‌ನಿಂದ ತರುತ್ತೇನೆ ಎಂದು ಹೇಳಿ ಹೋದ. ಅಂದೇ ಮಧ್ಯಾಹ್ನ ಡಾ. ಮಾಲತಿ ರಾವ್ ಎನ್ನುವ ಗೈನಕಾಲಜಿಸ್ಟ್ ಬಳಿಗೆ ಬೀನಾಳ ಗರ್ಭ ಪರೀಕ್ಷೆಗಾಗಿ ಕರೆದೊಯ್ದು. ಡಾಕ್ಟರು ಬೀನಾಳ ಗರ್ಭವನ್ನು ದೃಢೀಕರಿಸಿ ಕೆಲವೊಂದು ಮಾತ್ರೆಗಳನ್ನು ಬರೆದುಕೊಟ್ಟರು. ಸಂಜೆ ಬೀನಾಳನ್ನು ಎಂ.ಜಿ. ರಸ್ತೆಗೆ ಕರೆದೊಯ್ದು ಅವಳಿಷ್ಟಪಟ್ಟ ಡ್ರೆಸ್‌ಗಳನ್ನು ಕೊಡಿಸಿದ. ಇಂಗ್ಲಿಷ್ ಫಿಲ್ಮ್ ತೋರಿಸಿದ. ಬರುವಾಗ ಇಂಪೀರಿಯಲ್ ಹೋಟೆಲ್‌ನಲ್ಲಿ ಕಬಾಬ್ ತಿನ್ನಿಸಿಕೊಂಡು ಬಂದ.

ಮಾರನೆ ದಿನ ಬೆಳಗ್ಗೆ ನೇರವಾಗಿ ತನ್ನ ತಂದೆಯ ಮನೆಗೆ ಹೋದ ಮಹೇಶ. ಏನು ವಿಷಯ ಎನ್ನುವಂತೆ ತಂದೆ ದಿಟ್ಟಿಸಿದಾಗ "ಅವ್ಳು ತಾನೇ ಬಂದಿದಾಳೆ. ಪ್ರೆಗ್ನೆಂಟ್ ಆಗಿದಾಳೆ. ಯಾವನು ಬಸುರು ಮಾಡಿದಾನೋ ಏನೋ......" ಎಂದ ಮಹೇಶ ಗಂಭೀರವಾಗಿ.

ಬೀನಾ ಗರ್ಭಿಣಿಯಾಗಿದ್ದಾಳೆಂದರೆ ಮಾತ್ರೆಗಳನ್ನೇನಾದರೂ ತೆಗೆದುಕೊಳ್ಳುತ್ತಿದ್ದಾಳಾ? ವಿಷಕಂಠಯ್ಯ ಪ್ರಶ್ನಿಸಿದರು.

'ನೆನ್ನೆ ಗೈನಕಾಲಜಿಸ್ಟ್ ಬಳಿ ಕರೆದುಕೊಂಡು ಹೋಗಿಬಂದೆ, ಕ್ಯಾಪ್ಸೂಲ್‌ಗಳನ್ನು ಬರೆದುಕೊಟ್ಟಿದ್ದಾರೆ' ಎಂದ ಮಹೇಶ.

'ಹಾಂ! ಕ್ಯಾಪ್ಸೂಲ್‌ಗಳಾ! ವೆರಿಗುಡ್. ಅದರಲ್ಲಿ ಒಂದೇ ಒಂದು ಕ್ಯಾಪ್ಸೂಲ್ ತಂದುಕೊಡು ನನಗೆ' ಎಂದರು ವಿಷಕಂಠಯ್ಯ.

'ಅದೇಕೆ?' ಎಂದ ಮಹೇಶ. 'ಏನು ಎತ್ತ ಕೇಳಬೇಡ. ಹೇಳಿದಷ್ಟು ಮಾಡುತ್ತಾ ಹೋಗು' ಎಂದರು ವಿಷಕಂಠಯ್ಯ. ಆಯಿತು ಎಂದು ಮಹೇಶ ನಡೆದ.

ಅಂದು ತಾ. 28.11.88 ಮಹೇಶನಿಗೆ ಮನೆ ಬಾಡಿಗೆ ಕೊಟ್ಟವರ ಮನೆಯಲ್ಲಿ ಸೀಮಂತ ಕಾರ್ಯಕ್ರಮವಿತ್ತು. ಸಂಜೆಯ ಸಮಯ. ಮಹೇಶ ತನ್ನ ತಂದೆಯ ಕಾರಲ್ಲಿ ಸುಬ್ಬನೊಂದಿಗೆ ಬಂದ. ಕಾರ್ಯಕ್ರಮ ನಡೆಯುತ್ತಿರುವಾಗಲೇ ಬೀನಾಳಿಗೆ ಬಾ ಎಂದು ಕರೆದ. ಮನೆ ಮಾಲೀಕರು, ನೀನೂ ಇಲ್ಲೇ ಊಟ ಮಾಡು ಎಂದು ಒತ್ತಾಯಿಸಿದರೂ ಇಲ್ಲ ಅರ್ಜೆಂಟಾಗಿ ಒಂದೆಡೆ ಹೋಗಬೇಕು. ಬೀನಾಳನ್ನು ಜೊತೆಗೆ ಕರೆದೊಯ್ಯಬೇಕು ಎಂದ ಮಹೇಶ. ಮನೆ ಮಾಲೀಕರ ಹೆಂಡತಿಗೆ ಬೀನಾ ಗರ್ಭಿಣಿಯೆಂದು ಆಗಲೇ ಗೊತ್ತಾಗಿತ್ತು. ಚಳಿಯಿದೆ, ಹಾಗೇ ಹೋಗಬೇಡ

ಎಂದು ತಮ್ಮಲ್ಲಿಯ ಒಂದು ಶಾಲ್ ಅನ್ನು ಹೊದೆದುಕೊಳ್ಳಲು ಕೊಟ್ಟರು. ಬೀನಾ ಆ ಶಾಲ್ ಹೊದ್ದುಕೊಂಡು ಮಹೇಶನೊಂದಿಗೆ ಕಾರು ಹತ್ತಿದಳು.

'ಇದೇನು ಇವತ್ತು ನಿಮ್ಮ ಡ್ಯಾಡಿ ಕಾರು' ಎಂದು ನಗುತ್ತ ಪ್ರಶ್ನಿಸಿದಳು ಬೀನಾ.

'ಡ್ಯಾಡಿಗೆ ನೀನು ಪ್ರೆಗ್ನೆಂಟ್ ಆಗಿರೋ ವಿಷಯ ತಿಳಿಸಿದೆ. ಖುಷಿಯಿಂದ ಉಬ್ಬಿಹೋದರು. ನನ್ನ ವಂಶೋದ್ಧಾರಕ ಬರುತ್ತಿದ್ದಾನೆಂದು ತಮ್ಮ ಕೊಲೀಗ್‌ಗಳಿಗೆಲ್ಲ ಸ್ವೀಟ್ ಹಂಚಿದರು. ನನ್ನನ್ನು ಕರೆದು, ಹಿಂದಿನದೆಲ್ಲ ಮರೆತುಬಿಡು, ನನ್ನ ಸೊಸೆಯನ್ನು ಮನೆಗೆ ಕರೆತಾ ಎಂದು ಹೇಳಿ ಈ ಕಾರನ್ನು ಕೊಟ್ಟರು' ಎಂದ. 'ಓ ಮಹೇಶ್ ನೀವು ತಂದೆಮಕ್ಕಳು ಮಾತಿನಲ್ಲಿ ಒರಟಾಗಿ ಕಂಡರೂ ಹಾರ್ಟ್‌ಲಿ ಅದೆಷ್ಟು ಒಳ್ಳೆಯವರು... ಹಾಗಿದ್ದರೆ ನಾಳೆಯಿಂದ ನನಗೆ ಮಾವನವರ ಮನೆಯ ಆತಿಥ್ಯ ಕಾದಿದೆ... ಅಂ?' ಎಂದು ರಾಗವೆಳೆದು ಅವನ ಭುಜಕ್ಕೆ ಒರಗಿದಳು. ಹಿಂದಿನ ಸೀಟಲ್ಲಿ ಕೂತಿದ್ದ ಸುಬ್ಬ ತನ್ನ ಇರುವನ್ನು ಕೆಮ್ಮಿನ ಮೂಲಕ ತೋರಿಸಿದ.

'ಓ, ಹಿಂದೆ ಯಾರು ಕೂತಿದ್ದಾರೆ?' ಎಂದಳು ಬೀನಾ ಗಾಬರಿಯಿಂದ.

'ಬೇರೆ ಯಾರೂ ಅಲ್ಲ. ನಮ್ಮ ಸುಬ್ಬ. ಸಹಾಯಕ್ಕೆ ಇರಲಿ ಎಂದು ಕರೆತಂದೆ' ಎಂದ ಮಹೇಶ.

'ನಡುವೆ ಇವನನ್ನೇಕೆ ಕರೆತಂದಿ' ಎಂದಳು ಬೀನಾ ಹುಸಿ ಮುನಿಸಿನಿಂದ. ಇಂಪೀರಿಯಲ್ ಹೋಟೆಲ್ ಮುಂದೆ ಕಾರನ್ನು ಪಾರ್ಕ್ ಮಾಡಿ ಸುಬ್ಬನಿಗೆ ಬಿಯರ್ ಮತ್ತು ಕಬಾಬ್ ತಂದುಕೊಡುವಂತೆ ಹೇಳಿದ.

ಮಹೇಶ್ ಮತ್ತು ಸುಬ್ಬ ಇಬ್ಬರೂ ಬಿಯರ್ ಹೀರುತ್ತಾ ಕಬಾಬ್ ತಿಂದರು. ಮತ್ತೆಲ್ಲಿಗೆ ಹೋಗೋಣ ಹೇಳು ಎಂದ ಮಹೇಶ. ನನಗೆ ಸುಸ್ತಾಗ್ತಿದೆ, ಮನೆಗೆ ಹೋಗೋಣ ಎಂದಳು ಬೀನಾ.

'ನೋಡು, ನೀನು ಡಾಕ್ಟರ್ ಹೇಳಿದಂತೆ ಸರಿಯಾಗಿ ಮಾತ್ರೆ ತೊಕ್ಕೊಳಲ್ಲ. ಅದಕ್ಕೇ ನಿನಗೆ ಸುಸ್ತು. ನಿನ್ನ ಹೊಟ್ಟೆಯಲ್ಲಿ ಬೆಳೀತಿರೋ ನನ್ನ ಮಗನ ಬಗ್ಗೆ ನಿನಗೆ ಕಾಳಜಿ ಇಲ್ಲವೆಂದರೆ ನನಗೂ ಇಲ್ಲವೆಂದು ತಿಳಿದಿದೀಯಾ? ತೊಗೋ ಊಟವಾದ ಮೇಲೆ ತೊಕ್ಕೋಳೋಕ್ಕೆ ಹೇಳಿದಾರಲ್ಲ ಈ ಕ್ಯಾಪ್ಸೂಲ್' ಎಂದು ತನ್ನ ಜೇಬಿನಿಂದ ಕ್ಯಾಪ್ಸುಲ್ ಒಂದನ್ನು ಕೊಟ್ಟ.

'ಏನು ಈ ಪರಿ ಕಾಳಜಿ ಮಾಡ್ತಾ ಇದಾರೆ ಮಹಾರಾಯ್ರು' ಎಂದು ನಗುತ್ತ

ಮಹೇಶನ ಕೈಯಿಂದ ಕ್ಯಾಪ್ಸೂಲ್ ಅನ್ನು ತೆಗೆದುಕೊಂಡು ಮೇಲೆ ನೀರು ಕುಡಿದುಬಿಟ್ಟಳು ಬೀನಾ.

ಮಹೇಶ ಕಾರನ್ನು ಸ್ಟಾರ್ಟ್ ಮಾಡಿದ. ನೇರ ತಂದೆಯ ಮನೆಗೆ ಹೋದಾಗ ರಾತ್ರಿ ಹನ್ನೊಂದುವರೆ ಆಗಿರಬಹುದು. ವಿಷಕಂಠಯ್ಯ, ಕೆಲಸ ಆಯಿತಾ ಎನ್ನುವಂತೆ ಮಗನೆಡೆ ನೋಡಿದರು. ಮಹೇಶ ತನ್ನ ಹೆಬ್ಬೆರಳನ್ನು ಮೇಲೆ ಮಾಡಿ, ಬೀನಾಳ ಡೆಡ್‌ಬಾಡಿ ಕಾರಲ್ಲಿದೆ ಎಂದ.

ಸುಬ್ಬನ ಸಹಾಯದಿಂದ ಬೀನಾಳ ದೇಹವನ್ನು ವಿಷಕಂಠಯ್ಯ ಮತ್ತು ಮಹೇಶ ಮನೆಯೊಳಕ್ಕೆ ಒಯ್ದರು.

'ನೀವು ಈಗ ಹೋಗಿ ಬೆಳಗ್ಗೆ ನಾಲ್ಕುವರೆ ಗಂಟೆಗೆ ಬನ್ನಿ' ಎಂದರು ವಿಷಕಂಠಯ್ಯ. ಮಹೇಶ ಮತ್ತು ಸುಬ್ಬ ಕಾರಿನಲ್ಲಿ ರಾತ್ರಿಯಿಡೀ ಬೆಂಗಳೂರನ್ನು ಸುತ್ತು ಹಾಕಿ ಬೆಳಗ್ಗೆ ನಾಲ್ಕುವರೆ ಗಂಟೆಗೆ ಮನೆಗೆ ಹೋದರು.

ಸುಬ್ಬನನ್ನು ಕಾರಲ್ಲೇ ಕೂರಿಸಿ ಮಹೇಶ ಮನೆಯೊಳಕ್ಕೆ ಹೋದ. ವಿಷಕಂಠಯ್ಯ ಮತ್ತು ಮಹೇಶ ಇಬ್ಬರೂ ಎರಡೂ ಕೈಗಳಲ್ಲಿ ಚೀಲಗಳನ್ನು ಹಿಡಿದು ಹೊರತಂದರು. ಕಾರಿನ ಡಿಕ್ಕಿಯಲ್ಲಿ ಅವನ್ನಿರಿಸಿದರು. ಕಾರನ್ನು ನೇರವಾಗಿ ಗಾಂಧಿ ಕೃಷಿ ವಿಶ್ವವಿದ್ಯಾಲಯ (ಜಿಕೆವಿಕೆ) ಕ್ಯಾಂಪಸ್ಸಿನಲ್ಲಿರುವ ಫಾರೆಸ್ಟ್‌ಗೆ ತೆಗೆದುಕೊಂಡು ಹೋದರು.

ವಿಷಕಂಠಯ್ಯ ಬೀನಾಳ ದೇಹವನ್ನು ದನ ಕಡಿಯುವ ಕಟುಕನಂತೆ ತುಂಡುತುಂಡು ಮಾಡಿ ಚೀಲಗಳಿಗೆ ತುಂಬಿದ್ದರು. ಡಿಕ್ಕಿಯಿಂದ ಬೀನಾಳ ದೇಹದ ತುಂಡುಗಳನ್ನು ಹೊರತೆಗೆದು ಮೂರು ನಾಲ್ಕು ಜಾಗಗಳಲ್ಲಿ ಒಂದೊಂದೇ ತುಂಡನ್ನು ಚೆಲ್ಲಾಪಿಲ್ಲಿ ಎಸೆದು ಮಹೇಶ ಮತ್ತು ವಿಷಕಂಠಯ್ಯ ಏನೂ ಆಗಿಲ್ಲವೇನೋ ಎನ್ನುವಂತೆ ವಾಪಸ್ಸು ಮನೆಗೆ ಬಂದುಬಿಟ್ಟರು. ಮಾರನೇ ದಿನ ಮಹೇಶನ ಮನೆ ಮಾಲೀಕರು, 'ಏಕೆ ಬೀನಾ ಕಾಣುತ್ತಿಲ್ಲ, ನೆನ್ನೆ ಎಲ್ಲಿಗೆ ಹೋದಿರಿ?' ಎಂದು ಕೇಳಿದರು.

ಅವಳ ತವರುಮನೆಯಿಂದ ಕರೆಯಲು ಬಂದಿದ್ದರು, ಕಳಿಸಿಕೊಟ್ಟೆ ಎಂದ ಕೊಂಚ ದಿಗಿಲು ವ್ಯಕ್ತಪಡಿಸುತ್ತ.

ಏನೂ ಲಗೇಜನ್ನೇ ಒಯ್ದಂತೆ ಕಾಣಲಿಲ್ಲ ಎಂದು ಅನುಮಾನಿಸುತ್ತ ಪ್ರಶ್ನಿಸಿದರು.

'ಇಲ್ಲ, ನೀವು ಕಾರ್ಯಕ್ರಮದ ಗಡಿಬಿಡಿಯಲ್ಲಿದ್ದಿರಿ, ಗಮನಿಸಲಿಲ್ಲವೆಂದು ಕಾಣುತ್ತದೆ... ಅಂಥಹಾಗೆ ಅವಳು ನೀವು ಕೊಟ್ಟ ಶಾಲನ್ನು ನಿಮಗೆ ವಾಪಾಸು ಕೊಡುವಂತೆ ನನ್ನ ಕೈಗೆ ಕೊಟ್ಟು ಹೋಗಿದ್ದಾಳೆ, ನಂತರ ಕೊಡ್ತೇನೆ...' ಎಂದ ಮಾಲೀಕರ ದೃಷ್ಟಿ ತಪ್ಪಿಸಿಕೊಳ್ಳುತ್ತಾ ಮಹೇಶನ ನಡವಳಿಕೆ ಅಸಹಜವಾಗಿ ತೋರಿ ಮನೆ ಮಾಲೀಕರಿಗೆ ಏನೂ ಅರ್ಥವಾಗದಂತಾಗಿ ಗೊಂದಲಕ್ಕೊಳಗಾಗಿರುವಾಗಲೇ ಮಹೇಶ ಅಲ್ಲಿಂದ ಕಾಲುಕಿತ್ತ.

ಬೀನಾಳನ್ನು ಕಾಣಲು ಒಂದು ದಿನವೂ ಅವಳ ತವರಿನಿಂದ ಯಾರೂ ಬಂದದ್ದಕ್ಕೆ ಉದಾಹರಣೆಯಿರಲಿಲ್ಲ. ಅಷ್ಟೊಂದು ಗಡಿಬಿಡಿಯಲ್ಲಿ ಬಂದು ಬೀನಾಳನ್ನು ಎಲ್ಲಿಗೆ ಕರೆದುಕೊಂಡು ಹೋದ ಈ ಮಹೇಶ ಎನ್ನುವ ಪ್ರಶ್ನೆ ಮನೆ ಮಾಲೀಕರ ತಲೆಯಲ್ಲಿ ಬೇಡವೆಂದರೂ ಕೊರೆಯತೊಡಗಿತು. ತಮ್ಮ ಅನುಮಾನವನ್ನೇ ಅಕ್ಕಪಕ್ಕದವರ ಮುಂದೂ ಹೇಳಿಕೊಂಡರು ಕೂಡಾ. ಒಂದು ವಾರದ ಹಿಂದೆಯಷ್ಟೇ ಗಂಡ ಹೆಂಡತಿ ಈರ್ವರೂ ಜೋರಾಗಿ ಜಗಳ ಕಾದಿದ್ದರು. ಚೀರಾಟ ನಮಗೆ ಕೇಳಿಸುತ್ತಿತ್ತು. ಈಗ ಇದ್ದಕ್ಕಿದ್ದಂತೆ ಬೀನಾ ಅನುಮಾನಾಸ್ಪದವಾಗಿ ನಾಪತ್ತೆಯಾಗಿದ್ದಾಳೆ ಎಂದು ತಮ್ಮ ಅನುಮಾನಕ್ಕೆ ಸಪೋರ್ಟ್ ಕೊಡುವ ಅಂಶ ಸೇರಿಸಿ ಗುಸುಗುಸು ಮಾತಾಡತೊಡಗಿದರು.

ಸುಬ್ಬ, ಮಹೇಶ, ವಿಷಕಂಠಯ್ಯರಿಗೆ ಈ ಗುಸುಗುಸು ವಿಷಯ ಗೊತ್ತಾಗಲಿಲ್ಲ. ಯಾರಿಗೂ ಏನೂ ಅನುಮಾನ ಬಂದಿಲ್ಲವೆನ್ನುವ ತರ್ಕದಲ್ಲಿ ತಮ್ಮ ಪಾಡಿಗೆ ತಾವಿದ್ದರು.

ಮಹೇಶ ಬಾಡಿಗೆ ಮನೆಗೆ ಆಗೊಮ್ಮೆ ಈಗೊಮ್ಮೆ ಬರತೊಡಗಿದ. ಒಂದು ದಿನ ಮುಂದಿನ ತಿಂಗಳಿನಿಂದ ಮನೆ ಖಾಲಿ ಮಾಡುವುದಾಗಿಯೂ ಅಡ್ವಾನ್ಸ್ ವಾಪಸ್ ಕೊಡಬೇಕೆಂದೂ ಹೇಳಿದ. ಮನೆಯೊಳಗಿದ್ದ ತನ್ನ ಸಾಮಾನುಗಳನ್ನೆಲ್ಲ ಪ್ಯಾಕ್ ಮಾಡಿಟ್ಟ. ಊಟ, ತಿಂಡಿಯನ್ನೆಲ್ಲ ಅಪ್ಪನ ಮನೆಯಲ್ಲೇ ಮಾಡತೊಡಗಿದ.

ಜನ ಗುಸುಗುಸು ಮಾತಾಡಿಕೊಳ್ಳುವುದಕ್ಕೆ ಸರಿಯಾಗಿ ವಿಷಕಂಠಯ್ಯ ಸಂಜೆ ಹೊತ್ತು ಬಂದು ಮಗನ ಟೀವಿ ಶಾಪ್‌ನಲ್ಲಿ ಕೂರತೊಡಗಿದ. ತಂದೆ, ಮಗ ಒಂದಾಗಿದ್ದಾರೆ. ಬೀನಾ ನಾಪತ್ತೆಯಾಗಿದ್ದಾಳೆ. ಏನಿದರ ಗುಟ್ಟು? ಎಂದು ಸುತ್ತಲ ಜನ ಬಹಿರಂಗವಾಗಿ ಚರ್ಚಿಸತೊಡಗಿದರು.

ಈ ವಿಷಯ (ಸೆಂಟ್ರಲ್ ಕ್ರೈಮ್ ಬ್ರಾಂಚ್) ಸಿಸಿಬಿಗೆ ತಿಳಿಯಿತು. ಕಲಂದರ್ ಎನ್ನುವ ಸಿ.ಸಿ.ಬಿ. ಪೊಲೀಸ್‌ನನ್ನು ಬೀನಾಳ ನಾಪತ್ತೆಯ ರಹಸ್ಯ ಭೇದಿಸಲು

ನೇಮಿಸಲಾಯಿತು. ರಾಜಾಜಿನಗರದ ಭಾಷ್ಯಮ್ ಸರ್ಕಲ್ ಬಳಿಯ ಆಟೋ ಸ್ಟ್ಯಾಂಡ್ ಎದುರಿಗಿನ ಹೋಟೆಲ್ ಒಂದರಲ್ಲಿ ಕಲಂದರ್ ಬೆಳಗಿನ ಜಾವವೇ ಬಂದು ಕೂರತೊಡಗಿದ. ಬೆಳಗ್ಗೆ ಕೆಲಸಕ್ಕೆ ಹೋಗುವವರು ಬೀನಾ ನಾಪತ್ತೆಯಾದ ವಿಷಯದ ಸುತ್ತ ಆಡುವ ಮಾತುಗಳನ್ನು ಸತತ ಒಂದು ವಾರ ಸಂಗ್ರಹಿಸಿದ. ಆ ಮಾತುಗಳಲ್ಲಿ, ಮಹೇಶನ ಅಸಿಸ್ಟೆಂಟ್ ಸುಬ್ಬನ ಬಾಯಿ ಬಿಡಿಸಿದರೆ ವಿಷಯವೆಲ್ಲ ಬಯಲಿಗೆ ಬರುತ್ತದೆನ್ನುವ ಮಾತಿನ ಮೇಲೆ ಪೊಲೀಸರು ತಮ್ಮ ಗಮನ ಕೇಂದ್ರೀಕರಿಸಿದರು. ಒಂದು ದಿನ ಸುಬ್ಬನನ್ನು ಗೌಪ್ಯವಾಗಿ ಎತ್ತಿಹಾಕಿಕೊಂಡು ಹೋಗಿ ಚೆನ್ನಾಗಿ ಥಳಿಸಿ ಬಾಯಿ ಬಿಡಿಸಿದರು. ಪೊಲೀಸರ ಹೊಡೆತ ತಾಳದೆ ಆರಂಭದಿಂದ ಅಂತ್ಯದವರೆಗೆ ನಡೆದ ಘಟನಾವಳಿಗಳನ್ನೆಲ್ಲ ಕಕ್ಕಿದ ಸುಬ್ಬ. ಅವನು ಕಕ್ಕಿದ ಎಲ್ಲ ವಿಷಯಗಳನ್ನು ಕ್ರೋಡೀಕರಿಸಿ ಕಲಂದರ್‌ರವರು ಒಂದು ಫಿರ್ಯಾದನ್ನಾಗಿ ಮಾರ್ಪಡಿಸಿ ರಾಜಾಜಿನಗರದ ಪೊಲೀಸ್ ಠಾಣೆಗೆ ಕೊಟ್ಟರು.

ಆ ಕೂಡಲೇ ರಾಜಾಜಿನಗರ ಠಾಣೆಯ ಪಿಎಸ್‌ಐ ನಾಗರಾಜ್ ವಿಷಕಂಠಯ್ಯ ಮತ್ತು ಮಹೇಶ್‌ರನ್ನು ಅರೆಸ್ಟ್ ಮಾಡಿ ಲಾಕಪ್‌ನಲ್ಲಿ ಹಾಕಿದರು.

ಪೊಲೀಸ್ ಲಾಕಪ್‌ನಲ್ಲಿದ್ದ ವಿಷಕಂಠಯ್ಯನವರನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ರಿಪೋರ್ಟರ್ ಅಲೆನ್ ಮೆಂಡೋಜ ಸಂದರ್ಶನ ಮಾಡಿದರು. ಆಗ ವಿಷಕಂಠಯ್ಯ ಬೀನಾಳ ಕೊಲೆಯ ಸಂಚನ್ನು ಮಾಡಿದ್ದು ತಾನೇ ಎಂದು ಒಪ್ಪಿಕೊಳ್ಳುತ್ತ, ಅಂಥ ಧೂರ್ತ ಹೆಣ್ಣಿಗೆ ತಕ್ಕದಾದ ಶಿಕ್ಷೆ ಕೊಟ್ಟಿದ್ದೇನೆ. ಆ ಬಗ್ಗೆ ತನಗೆ ಪಶ್ಚಾತ್ತಾಪವಿಲ್ಲ ಎಂದು ಹೇಳಿಕೆಯನ್ನೂ ಕೊಟ್ಟುಬಿಟ್ಟರು. ಇದು ಮಾರನೆಯ ದಿನ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ವಿವರವಾಗಿ ವ್ಯಾಪಕ ಪ್ರಚಾರ ಪಡೆಯಿತು. ಆ ಹಂತದಿಂದಲೇ ನಾನು ಅವರ ಲಾಯರ್ ಆಗಿ ಕೋರ್ಟಿನಲ್ಲಿ ಹಾಜರಾದೆ.

ಮಹೇಶ್, 'ಹೇಗಾದರೂ ಮಾಡಿ ನನ್ನನ್ನು ಪಾರು ಮಾಡಿ. ಅಪ್ಪ ಬೀನಾಳ ಮೇಲಿನ ರೋಷದಿಂದ ಪತ್ರಿಕೆಗೆ ಹೀಗೆಲ್ಲ ಹೇಳಿಕೆ ಕೊಟ್ಟುಬಿಟ್ಟಿದ್ದಾರೆ' ಎಂದು ವಿನಂತಿಸಿಕೊಂಡ. ಆಯಿತು ನನ್ನ ಸಾಮರ್ಥ್ಯ ಮೀರಿ ಪ್ರಯತ್ನಿಸುವೆ ಎಂದೆ. ವಿಚಾರಣೆ ಪ್ರಾರಂಭವಾಯ್ತು. ತನಿಖೆ ಕಾಲದಲ್ಲಿ ರಾಜಾಜಿನಗರ ಸಿಪಿಐ ಅಬ್ದುಲ್ ಮಜೀದ್ ಜಿಕೆವಿಕೆ ಕ್ಯಾಂಪಸ್ಸಿನಲ್ಲಿ ಸಿಕ್ಕಿದ ಬೀನಾಳ ಮೂಳೆಗಳನ್ನು ಮತ್ತು ತಲೆ ಬುರುಡೆಯನ್ನು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಸಿನ್ ವಿಭಾಗದ ಡಾ. ಪಾಟೀಲರಿಂದ ಪರೀಕ್ಷೆ ಮಾಡಿಸಿ ವರದಿ ಪಡೆದಿದ್ದರು. ನಾನು ಡಾ. ಪಾಟೀಲರನ್ನು ಪಾಟೀ ಸವಾಲು ಮಾಡಿ ಕೋರ್ಟಿನ ಎದುರಿಗಿದ್ದ ಮೂಳೆಗಳು ಯಾವ ವಯಸ್ಸಿನ ವ್ಯಕ್ತಿಯದು, ಮೂಳೆಗಳು ಗಂಡಸಿನವೊ, ಹೆಣ್ಣಿನವೊ, ಬಾಲಕಿಯವೊ ಅಥವಾ

ವೃದ್ಧೆಯವೊ ಎಂದು ತೀರ್ಮಾನಿಸಲು ಬರುವುದಿಲ್ಲ ಎಂದು ವಾದಿಸಿದೆ. ಅದನ್ನು ನ್ಯಾಯಾಲಯ ಒಪ್ಪಿಕೊಂಡಾಗ ಗಲಿಬಿಲಿಗೊಂಡ ಪೊಲೀಸರು ಮೂಳೆಗಳನ್ನು ಡಿ.ಎನ್.ಎ. ಟೆಸ್ಟ್‌ಗೆ ಕಳಿಸಬೇಕೆಂದು ಅರ್ಜಿ ಹಾಕಿಕೊಂಡರು. ಆಗ ನಾನು ವಿರೋಧಿಸಿದೆ. ನ್ಯಾಯಾಲಯವು ನನ್ನ ವಾದವನ್ನು ಎತ್ತಿ ಹಿಡಿಯಿತು. ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿಕೊಂಡಾಗ ಅದು ಒಪ್ಪಿ ಡಿ.ಎನ್.ಎ. ಪರೀಕ್ಷೆಗೆ ಒಪ್ಪಿಗೆ ನೀಡಿತು.

ಕಲ್ಕತ್ತಾದ ಫೊರೆನ್ಸಿಕ್ ಇಲಾಖೆಗೆ ಈ ಕೆಲಸವನ್ನು ವಹಿಸಲಾಯಿತು. ಫೊರೆನ್ಸಿಕ್ ವಿಜ್ಞಾನದಲ್ಲಿ ಖ್ಯಾತಿ ಗಳಿಸಿದ್ದ ಡಾ. ಕಶ್ಯಪ್‌ಗೆ ಮೂಳೆಗಳನ್ನು ಕೊಡಲಾಯಿತು.

ಒಂದು ಕೊಲೆ ಕೇಸಿನಲ್ಲಿ ಡಿ.ಎನ್.ಎ. ಪರೀಕ್ಷೆ ನಡೆಸಿದ್ದು ಇಡೀ ದಕ್ಷಿಣ ಭಾರತದಲ್ಲಿ ಇದೇ ಪ್ರಥಮವಾಗಿತ್ತು.

ಡಿ.ಎನ್.ಎ. ಪರೀಕ್ಷೆಗೆ ಬೇಕಾಗಿರುವ ರಾಸಾಯನಿಕಗಳನ್ನು ಲಂಡನ್‌ನಿಂದ ತೆಗೆದುಕೊಂಡು ಆ ಕಾಲ್ಪನಿಕವಾಗಿ ಆಳವಾದ ಪರೀಕ್ಷೆ ಮಾಡಿದ ಡಾ. ಕಶ್ಯಪ್ ದೊರೆತಿರುವ ಮೂಳೆಗಳು ಬೀನಾಳ ತಾಯಿ, ತಂಗಿ ಮತ್ತು ತಮ್ಮ ಇವರೆಲ್ಲರ ರಕ್ತ ಸಂಬಂಧಿಯವು ಎಂದು ವರದಿ ಕೊಟ್ಟರು. ಈ ವರದಿ ಬರಲು ಒಂದೂವರೆ ವರ್ಷ ಹಿಡಿಯಿತು.

ಕೊಲೆಯಾದ ರಾಜೀವ್ ಗಾಂಧಿಯವರ ಮೂಳೆಗಳ ಡಿ.ಎನ್.ಎ. ಪರೀಕ್ಷೆ ಮಾಡಿದವರು ಈ ಡಾ. ಕಶ್ಯಪ್‌ರೇ. ಹೀಗಾಗಿ ಡಾ. ಕಶ್ಯಪ್ ಖ್ಯಾತಿ ದ್ವಿಗುಣಗೊಂಡಿತ್ತು. ಡಾ. ಕಶ್ಯಪ್‌ರನ್ನು ಪಾಟೀ ಸವಾಲಿಗೆ ಒಳಪಡಿಸಲು ಸಾಕಷ್ಟು ತಯಾರಿ ಮಾಡಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಆರು ತಿಂಗಳು ಕಾಲಾವಕಾಶ ಕೇಳಿದೆ. ಹೈಕೋರ್ಟ್ ಒಪ್ಪಿಗೆ ನೀಡಿತು.

ಡಾ. ಕಶ್ಯಪ್‌ರ ಸಚಿತ್ರ ವರದಿಯನ್ನು ಆಳವಾಗಿ ಅಧ್ಯಯನ ಮಾಡಿದೆ. ಅದರಲ್ಲೊಂದು ಪಾಯಿಂಟ್ ಸಿಕ್ಕು ಖುಷಿ ಸ್ಫೋಟಗೊಂಡಿತು.

ಬೀನಾಳನ್ನು ಎಲ್ಲ ಸಾಕ್ಷಿಗಳೂ ಸರ್ವಾಂಗ ಸುಂದರಿ ಎಂದು ಹೇಳಿದ್ದವು. ಯಾರೂ ಅವಳೊಬ್ಬ ಕುಂಟಿ ಎಂದು ಹೇಳಿರಲಿಲ್ಲ. ಆದರೆ DNA ಪರೀಕ್ಷೆಗೆ ಒಳಪಟ್ಟ ಮೂಳೆಗಳ ಜೋಡಣೆ ಮಾಡಿದಾಗ ಆ ಮೂಳೆಗಳಿಗೆ ಸಂಬಂಧಿಸಿದ ವ್ಯಕ್ತಿ ಕುಂಟುತ್ತಿತ್ತು ಎನ್ನುವ ಸಂಗತಿಯನ್ನು ಸಾಬೀತುಗೊಳಿಸಿದೆ. ಡಾ. ಕಶ್ಯಪ್ ಅವರನ್ನು ವಿಟ್ನೆಸ್ ಬಾಕ್ಸ್‌ನಲ್ಲಿ ಪಾಟೀ ಸವಾಲು ಮಾಡಿದಾಗ ಅವರು ದೊರೆತ ಮೂಳೆಗಳು ಕುಂಟುವ ವ್ಯಕ್ತಿಗೆ ಸೇರಿದಂಥವು ಎನ್ನುವುದನ್ನು ಒಪ್ಪಿಕೊಂಡರು.

ಸರ್ವಾಂಗ ಸುಂದರಿ ಬೀನಾಳಿಗೆ ಸಂಬಂಧಿಸಿದವು ಅಲ್ಲ ಈ ಮೂಳೆಗಳು ಎನ್ನುವ ವಿಷಯ ಸಾಬೀತಾಗಿ ಹೋಯಿತು.

ಪೊಲೀಸರು ಸುಬ್ಬನನ್ನು ಕೇಸಿನಲ್ಲಿ ಆರೋಪಿ ಎಂದು ಮಾಡಿದ್ದರು. ಆದರೆ ನಂತರ ಕೊಲೆ ಆರೋಪಿಗಳಾಗಿದ್ದ ತಂದೆ, ಮಗನೊಂದಿಗೆ ಅವನನ್ನು ಅರೆಸ್ಟ್ ಮಾಡಲಿಲ್ಲ. ಹೀಗಾಗಿ ಅವನು ಅಪ್ರೂವರ್ ಎಂದಾಗುವುದಿಲ್ಲ. ಏಕಾಏಕಿ ಚಾರ್ಜ್‌ಷೀಟ್ ಹಾಕುವಾಗ ಸುಬ್ಬನನ್ನು ಸಾಕ್ಷಿ ಎಂದು ತೋರಿಸಿದ್ದರು. ಇದೆಲ್ಲ ಕಾನೂನಿನ ಕ್ರಮಕ್ಕೊಳಪಡುವುದಿಲ್ಲ ಎಂದು ಸುಬ್ಬನ ಸಾಕ್ಷಿಯನ್ನು ಬೀಳಿಸಿದೆ. ಇನ್ನು ಪ್ರೊ. ವಿಷಕಂಠಯ್ಯ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗೆ ಕೊಟ್ಟ ಹೇಳಿಕೆ ಪೊಲೀಸ್ ಕಸ್ಟಡಿಯಲ್ಲಿದ್ದಾಗ ಹೇಳಲ್ಪಟ್ಟಿದ್ದು. ಹೀಗಾಗಿ ಅದು inadmissible ಎಂದು ವಾದಿಸಿದ್ದನ್ನು ಕೋರ್ಟ್ ಒಪ್ಪಿಕೊಂಡಿತು. ಮಹೇಶನಿಗೆ ಮನೆ ಬಾಡಿಗೆ ಕೊಟ್ಟ ಮಾಲೀಕ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ ಪರ ಸಾಕ್ಷಿ ಹೇಳುತ್ತಾ "ನಮ್ಮ ಮನೆಯಿಂದಲೇ ಬೀನಾಳನ್ನು ಕರೆದುಕೊಂಡು ಹೋದ ಈ ಮಹೇಶ್. ಹೋಗುವಾಗ ನಾವು ಬೀನಾಳಿಗೆ ಕೊಟ್ಟಿದ್ದ ಶಾಲನ್ನು ತಂದು ವಾಪಸು ಕೊಟ್ಟ" ಎಂದು ಹೇಳಿದರು.

ಆದರೆ ಮಹೇಶ ಮಾಲೀಕರಿಗೆ ಶಾಲ್ ಅನ್ನು ವಾಸ್ತವದಲ್ಲಿ ವಾಪಸ್ ಮಾಡಿರಲಿಲ್ಲ. ತಮ್ಮ ಹೇಳಿಕೆಗೆ ಸತ್ಯತೆ ಹೆಚ್ಚಿಗೆ ಬರಲಿ ಎಂದು ಶಾಲನ್ನು ಮಹೇಶ ವಾಪಸು ಕೊಟ್ಟ ಎಂದು ಹೇಳಿದ್ದರು.

ಮಹೇಶ ತನ್ನ ಬಾಡಿಗೆ ಮನೆಯಲ್ಲಿ ಪ್ಯಾಕ್ ಮಾಡಿರಿಸಿದ್ದ ಸಾಮಾನುಗಳನ್ನು ಪೊಲೀಸರು ಸೀಜ್ ಮಾಡಿದ್ದರು. ಪೊಲೀಸ್ ವಶದಲ್ಲಿದ್ದ ಆ ಶಾಲನ್ನು ತೋರಿಸಿ ಈ ಶಾಲು ನಿಮ್ಮದೆ? ಎಂದು ಪ್ರಶ್ನಿಸಿದೆ. ಅದಕ್ಕೆ ಅವರು ಹೌದು ಎಂದು ಒಪ್ಪಿಕೊಂಡುಬಿಟ್ಟರು. ಆಗ ಆ ಸಾಕ್ಷಿಯೂ ಬಿದ್ದುಹೋಯಿತು.

ಇಷ್ಟೆಲ್ಲ ಆಗಿಯೂ ಸೆಷನ್ಸ್ ಜಡ್ಜ್ ರಾಮಚಂದ್ರರಾಮ್ moral judgement ಕೊಟ್ಟು ಬಿಟ್ಟರು. ತಂದೆ, ಮಕ್ಕಳಿಬ್ಬರಿಗೂ ಜೀವಾವಧಿ ಶಿಕ್ಷೆಯಾಯಿತು.

ಮುಂದೆ ಹೈಕೋರ್ಟ್‌ನಲ್ಲಿ ಅಪೀಲ್ ವಿಚಾರಣೆಗೆ ಬಂದಾಗ ನ್ಯಾಯಾಧೀಶರಾದ ಎಂ.ಎಂ. ಮಿರ್ದೆ ಮತ್ತು ಎಂ.ಬಿ. ವಿಶ್ವನಾಥ್‌ರು ನಾನು ನಿರೂಪಿಸಿದ್ದ ಸಂದರ್ಭಗಳನ್ನು ಎತ್ತಿ ಹಿಡಿದು ಆರೋಪಿಗಳನ್ನು ಬಿಡುಗಡೆಗೊಳಿಸಿ ತೀರ್ಪು ನೀಡಿದರು.

ಆದರೆ ಅಷ್ಟರಲ್ಲಿ ವಿಷಕಂಠಯ್ಯನವರು ಜೈಲಿನಲ್ಲಿರುವಾಗಲೇ ಅಸುನೀಗಿದ್ದರು. ಮಹೇಶ ಜೈಲಿನಿಂದ ಹೊರಗೆ ನಡೆದು ಬಂದ.

82

ರಾಮನ ಹೆಸರಲ್ಲಿ ಸ್ವಾರ್ಥದ ಗೂಡು ಕಟ್ಟಿಕೊಳ್ಳುವವರು

ನಾನು ಅದು ಹೇಗೆ ಬಿಜೆಪಿ ವಿರೋಧಿಯಾದೆನೋ ತಿಳಿಯದು. ಅದರಲ್ಲೂ ರಾಮಮಂದಿರ ನಿರ್ಮಾಣ, ಇಟ್ಟಿಗೆ ಪೂಜೆ, ಬಾಬ್ರಿ ಮಸೀದಿ ಧ್ವಂಸ ಇವೆಲ್ಲ ಸಂಗತಿಗಳು ಆ ಪಕ್ಷದ ಬಗ್ಗೆ ನನ್ನಲ್ಲಿರುವ ತಿರಸ್ಕಾರವನ್ನು ದ್ವಿಗುಣಗೊಳಿಸಿದವು. ಬಿ.ಜೆ.ಪಿ.ಯ ಟ್ರೇಡ್ ಯೂನಿಯನ್ ವಿರುದ್ಧದ ಅನೇಕ ಕ್ರಿಮಿನಲ್ ಪ್ರಕರಣದಲ್ಲಿ ನಾನು ಶ್ರಮಿಸಿದ್ದೆ. ಅದರ ನಾಯಕರೊಂದಿಗೆ ಒಳ್ಳೆಯ ಸಂಬಂಧವನ್ನೇ ಇಟ್ಟುಕೊಂಡಿದ್ದೆ. ಆದರೆ ಅವರ ಇಟ್ಟಿಗೆ ಪೂಜೆ ಮಾತ್ರ ನನ್ನಲ್ಲಿ ಹೇಸಿಕೆ ಭಾವನೆಯನ್ನು ಹುಟ್ಟಿಸಿತು. ನನ್ನಲ್ಲಿ ಇಂಥ ಭಾವನೆಗಳು ಹುಟ್ಟುವುದಕ್ಕೆ ಲಂಕೇಶರ ಚಿಂತನೆಗಳು ಮಹತ್ವದ ಪಾತ್ರ ವಹಿಸಿವೆಯೆಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ.

ನನಗೆ ತೀರಾ ಆಘಾತಕಾರಿಯಾಗಿ ಕಂಡ ವಿಷಯವೆಂದರೆ, ವಿವಾದಿತ ಸ್ಥಳದಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ವಿಶ್ವ ಹಿಂದೂ ಪರಿಷತ್ ನಡೆಸಿದ ರಾಮಮಂದಿರ ನಿರ್ಮಾಣ ಚಳವಳಿಗೆ ಡಾ. ಶಿವರಾಮ ಕಾರಂತರು ಬೆಂಬಲ

ನೀಡಿದ್ದು. ವಿಎಚ್‌ಪಿಯವರು ರಾಮಮಂದಿರ ನಿರ್ಮಾಣದ ಸಂಬಂಧದಲ್ಲಿ ಸಹಿ ಸಂಗ್ರಹ ಮಾಡಿದಾಗ ಕಾರಂತರು ಸಹಿ ಮಾಡಿ ಮಂದಿರ ನಿರ್ಮಾಣವನ್ನು ಬೆಂಬಲಿಸಿದರು.

ಕಾರಂತರ ಬಗ್ಗೆ ನನ್ನಲ್ಲಿ ಭಕ್ತಿಪೂರ್ವಕ ಗೌರವ ಭಾವನೆಯಿತ್ತು. ಅವರು ತಮ್ಮನ್ನು ನಾಸ್ತಿಕ ಎಂದು ಬಿಂಬಿಸಿಕೊಂಡಿದ್ದರು. ತಮ್ಮ ಸೃಜನಶೀಲ ಸಾಹಿತ್ಯ, ನೇರ ನಡೆನುಡಿಗಳಿಂದ ಓದುಗರ ಮೇಲೆ ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದ್ದರು. ಅವರ ಪ್ರಭಾವಕ್ಕೊಳಗಾಗಿದ್ದ ಓದುಗರಲ್ಲಿ ನಾನೂ ಒಬ್ಬನಾಗಿದ್ದೆ.

ಕಾರಂತರು ಸಂಘ ಪರಿವಾರದ ಪ್ರಣಾಳಿಕೆಯನ್ನು ಬೆಂಬಲಿಸಿದ್ದು ನೆಚ್ಚಿನ ನಾಯಕ ನಟ ವಿಲನ್ ಪಾತ್ರದಲ್ಲಿ ಕಾಣಿಸಿಕೊಂಡಂತೆ ಭಾಸವಾಗಿತ್ತು.

ಕಾರಂತರಂತೆಯೇ ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರೂ ಸಹ ಸಂಘ ಪರಿವಾರದ ಸಿದ್ಧಾಂತಗಳನ್ನು ತಲೆಯ ಮೇಲೆ ಹೊತ್ತುಕೊಂಡಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಕಾರಂತರು ಮತ್ತು ಅಡಿಗರ ಈ ನಿಲುವುಗಳು ಅವರ ಸಾಹಿತ್ಯ ಕೃಷಿಯ ಬಂಜರು ಭಾಗಗಳಂತೆ ಕಾಣಿಸುತ್ತವೆ.

ಆದರೆ ಲಂಕೇಶ್ ಅವರು ತಮ್ಮ ನಿಲುವನ್ನು ದಿಟ್ಟವಾಗಿ 'ಪತ್ರಿಕೆ'ಯಲ್ಲಿ ಬರೆದರು. 'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಎಂದು ಘೋಷಿಸಿದರು. ಸಂಘ ಪರಿವಾರದ ಕೊಳಕು ಪ್ರಣಾಳಿಕೆಯನ್ನು ಜಾಲಾಡಿ ಓದುಗರ ಮುಂದಿಟ್ಟರು. ಲಂಕೇಶರು ಇಂಥ ನಿಲುವುಗಳನ್ನು ತೆಗೆದುಕೊಳ್ಳಲು ಬೌದ್ಧಿಕ ಸರ್ಕಸ್ಸು ಮಾಡುತ್ತಿರಲಿಲ್ಲ. ಇವು ಮನಸ್ಸಿನ ಸಹಜ ಅನಿಸಿಕೆಯೆನ್ನುವಂತೆ ಅವರಿಂದ ಹೊಮ್ಮಿಬರುತ್ತಿದ್ದವು. ಇಂಥ ಜನಪರ ನಿಲುವುಗಳಿಂದಾಗಿ ಲಂಕೇಶರು ಭಿನ್ನರಾಗಿ ಕಾಣಿಸುತ್ತಾರೆ.

ನಾನು ಕೋರ್ಟಿನಲ್ಲಿ ಬಿಡುವು ಸಿಕ್ಕಾಗ ಸಹೋದ್ಯೋಗಿಗಳೊಂದಿಗೆ ಕಾಫಿ ಹೀರುತ್ತ ಸಂಘ ಪರಿವಾರದವರ ಇಟ್ಟಿಗೆ ಯಾತ್ರೆಯನ್ನು ಲೇವಡಿ ಮಾಡುತ್ತ ಮಜಾ ತೆಗೆದುಕೊಳ್ಳುತ್ತಿದ್ದೆ. ಸಂಘ ಪರಿವಾರದ ಕೆಲವು ಲಾಯರ್‌ಗಳು ನನ್ನನ್ನು ಬ್ರಾಹ್ಮಣ ವಿರೋಧಿ ಎಂದು ಬೆನ್ನ ಹಿಂದೆ ಕಿಚಾಯಿಸಲು ಶುರುಮಾಡಿದರು. ಆದರೆ ನನಗೆ ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರೇ ಸ್ನೇಹಿತರಿದ್ದರು ಮತ್ತು ನನ್ನ ಹಿತೈಷಿಗಳಲ್ಲಿ ಅನೇಕ ಬ್ರಾಹ್ಮಣ ವಕೀಲರುಗಳು ಇದ್ದರು. ಸಂಘ ಪರಿವಾರವನ್ನು ವಿರೋಧಿಸಿದರೆ ಬ್ರಾಹ್ಮಣರನ್ನೇ ವಿರೋಧಿಸಿದಂತೆ ಎನ್ನುವ ವಾದ ಹೂಡುತ್ತಿದ್ದರು ಸಂಘ ಪರಿವಾರದ ಲಾಯರುಗಳು.

ಒಂದು ದಿನ ಕೋರ್ಟ್‌ಗೆ ಬಂದಾಗ ನನಗೆ ಆಘಾತಕಾರೀ ಸುದ್ದಿಯೊಂದು

ತಿಳಿಯಿತು. ವಕೀಲರ ಸಂಘದ ಸಭಾಭವನದಲ್ಲಿ ಇಟ್ಟಿಗೆ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಯಾರೋ ಬಂದು ಹೇಳಿದರು. ಅಂದಿನ ಕೋರ್ಟ್ ಕೇಸ್‌ಗಳ ಬಗ್ಗೆ ಮಾಡಿಕೊಂಡು ಬಂದಿದ್ದ ತಯಾರಿಗಳೆಲ್ಲ ನನ್ನ ತಲೆಯಿಂದ ಹಾರಿಹೋಗಿಬಿಟ್ಟವು. ಸಂಘ ಪರಿವಾರದ ಲಾಯರುಗಳ ನಡವಳಿಕೆ ಅತಿಯಾಯಿತು ಎನ್ನಿಸಿತು. ಆಗ ನನ್ನ ಜ್ಯೂನಿಯರ್ ಆಗಿದ್ದರು ನಾಚಪ್ಪ. ನಂತರ ಈತ ಕೊಡಗು ಪ್ರತ್ಯೇಕವಾಗಬೇಕು ಎನ್ನುವ ಚಳವಳಿಯನ್ನು ಆರಂಭಿಸಿದರು. ನಾಚಪ್ಪನನ್ನು ಕರೆದು, 'ಇವತ್ತು ವಕೀಲರ ಸಂಘದಲ್ಲಿ ಇಟ್ಟಿಗೆ ಪೂಜೆ ಆಗುವುದನ್ನು ತಡೆಯಬೇಕು ನಾವೆಲ್ಲ ಸೇರಿ' ಎಂದೆ. ನಾಚಪ್ಪನದು ಹೋರಾಟದ ಪ್ರವೃತ್ತಿ. ಕೂಡಲೇ ಯುವ ವಕೀಲರ ಗುಂಪನ್ನು ಸಂಘಟಿಸಿಕೊಂಡು ಬಂದ ನಾಚಪ್ಪ ಕ್ಯಾಂಟೀನ್‌ನಿಂದ ಒಂದು ಗಡಿಗೆ ನೀರನ್ನೂ ತಂದ. ನಾವೆಲ್ಲ ಇಟ್ಟಿಗೆ ಪೂಜೆಯ ವಿರುದ್ಧ ಘೋಷಣೆಗಳನ್ನು ಕೂಗತೊಡಗಿದೆವು. ಬಾಯಿ ಆರಿದಾಗ ಗಡಿಗೆಯಲ್ಲಿ ತಂದಿದ್ದ ನೀರನ್ನು ಕುಡಿದು ಗಂಟಲು ಸರಿಮಾಡಿಕೊಂಡು ಪುನಃ ಕೂಗುತ್ತಿದ್ದೆವು. ಒಬ್ಬ ಸಂನ್ಯಾಸಿಯನ್ನು ಇಟ್ಟಿಗೆ ಪೂಜೆಗಾಗಿ ಕರೆತರಲಾಗಿತ್ತು. ನಮ್ಮ ಈ ಗಲಾಟೆ ನೋಡಿದ ಆ ಸಂನ್ಯಾಸಿ ಅಲ್ಲಿಂದ ಓಟಕಿತ್ತ. ಅಂದು ನಾವು ಯಾವ ಕೇಸುಗಳನ್ನೂ ಅಟೆಂಡ್ ಮಾಡಲಿಲ್ಲ. ಸಂಜೆಯವರೆಗೆ ನಮ್ಮ ಪ್ರತಿಭಟನೆ. ಅದರಿಂದ ತಪ್ಪಿದ ಇಟ್ಟಿಗೆ ಪೂಜೆ, ಪಲಾಯನ ಮಾಡಿದ ಸಂನ್ಯಾಸಿಯ ಬಗ್ಗೆ ಹರಟೆ ಹೊಡೆದೆವು.

ವಕೀಲರ ಸಂಘದಲ್ಲಿ ಇಟ್ಟಿಗೆ ಪೂಜೆ ನಡೆಸುವ ಯೋಜನೆ ರೂಪಿಸಿದವರಾರು ಎಂದು ಕೆದಕಿದೆವು. ಎಚ್.ಎಲ್. ನರಸಿಂಹಮೂರ್ತಿ ಎನ್ನುವ ವಕೀಲರು ಅದರ ಪ್ರಾಯೋಜಕರು ಎಂದು ತಿಳಿದುಬಂದಿತು. ಈ ನರಸಿಂಹಮೂರ್ತಿಗಳು ಕೆಲವು ಬಾರಿ ವಕೀಲರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಸೋತಿದ್ದರು. ಹೀಗೆ ಇಟ್ಟಿಗೆ ಪೂಜೆ ಮೂಲಕ ಹಿಂದುತ್ವ ಪ್ರಜ್ಞೆಯನ್ನು ವಕೀಲರ ಮಧ್ಯೆ ಜಾಗೃತಗೊಳಿಸಿ ಅಧ್ಯಕ್ಷರಾಗಬಹುದು ಎನ್ನುವ ಉದ್ದೇಶ ಅವರದು ಎಂದು ಕೆಲವರು ಮಾತಾಡಿದರು. ಮತ್ತೆ ಕೆಲವರು ರಾಮನ ಇಟ್ಟಿಗೆಗಳು ಏನೆಲ್ಲ ಸ್ವಾರ್ಥಕ್ಕೆ ಬಳಕೆಯಾಗುತ್ತಿವೆ ನೋಡಿ ಎಂದು ಉದ್ಗಾರವೆಳೆದರು. ಕೆಲವು ಸೀನಿಯರ್ ಬ್ರಾಹ್ಮಣ ವಕೀಲರುಗಳು ನನ್ನ ಪ್ರತಿಭಟನೆಗಾಗಿ ಖಾಸಗಿಯಾಗಿ ಅಭಿನಂದಿಸಿದರು.

ಇದೆಲ್ಲ ಆಗಿ ಕೆಲವು ದಿನಗಳ ನಂತರ ನಗರಕ್ಕೆ ಸಿಪಿಐ (ಎಂ) ಕೇಂದ್ರ ಸಮಿತಿಯ ಕಾರ್ಯದರ್ಶಿಗಳಾಗಿದ್ದ ಇಎಂಎಸ್ ನಂಬೂದರಿಪಾದ್ ಬಂದರು. ಕಮ್ಯುನಿಸ್ಟ್ ಚಳವಳಿಯೊಂದಿಗೆ ಸಂಬಂಧವಿರಿಸಿಕೊಂಡಿದ್ದ ವಕೀಲರುಗಳಾದ ಗೋಪಾಲಗೌಡ, ಎಚ್.ಎನ್. ನಾಗಮೋಹನ್‌ದಾಸ್ ಮುಂತಾದವರು ಕೋಮು

ಸೌಹಾರ್ದತೆಯ ಬಗ್ಗೆ ಇಎಂಎಸ್ ಅವರಿಂದ ವಕೀಲರ ಸಂಘದಲ್ಲಿ ಭಾಷಣ ಕಾರ್ಯಕ್ರಮ ಏರ್ಪಡಿಸೋಣ ಎಂದರು. ಅದಕ್ಕೆ ನಾನು ಮತ್ತು ಸಮಾನ ಮನಸ್ಕ ಗೆಳೆಯರು ಓಗೊಟ್ಟೆವು.

ಇನ್ನೇನು ಇಎಂಎಸ್ ಭಾಷಣ ಆರಂಭಿಸುತ್ತಾರೆ ಎನ್ನುವಾಗ ಸಂಘ ಪರಿವಾರದ ಕೆಲವು ವಕೀಲರು 'ಅಂದು ನಮ್ಮ ಕಾರ್ಯಕ್ರಮಕ್ಕೆ ನೀವು ಅಡ್ಡಿಪಡಿಸಿದ್ದಿರಿ. ಇಂದು ನಾವು ಅಡ್ಡಿಪಡಿಸುತ್ತೇವೆ' ಎಂದು ಗಲಾಟೆ ಆರಂಭಿಸಿದರು. ಈ ವಿವಾದದ ಹಿನ್ನೆಲೆ ತಿಳಿಯದಿದ್ದ ನಂಬೂದರಿಪಾದ್ ಅವರು ಏನು ಜಗಳ? ಎಂದು ಕೇಳಿದರು. ವಿಷಯ ತಿಳಿದ ಮೇಲೆ ಇಎಂಎಸ್ ಅವರು, 'ಹಾಗಿದ್ದರೆ ನಾನು ಈ ಸಭಾಂಗಣದಲ್ಲಿ ಭಾಷಣ ಮಾಡುವುದಿಲ್ಲ. ಹೊರಗೆ ಮೈದಾನದಲ್ಲೇ ನಿಂತು ಮಾತಾಡುವೆ' ಎಂದರು.

ವಕೀಲರ ಸಂಘದ ಕಟ್ಟಡದ ಪಕ್ಕದಲ್ಲಿದ್ದ ಜಿಲ್ಲಾಧಿಕಾರಿಗಳ ಹಳೆಯ ಕಟ್ಟಡದ ಕೆಳಭಾಗದ ಕಾರಿಡಾರ್‌ನಲ್ಲಿ ಬಿಸಿಲಿನ ಝಳದಿಂದ ತಪ್ಪಿಸಿಕೊಂಡು ಹತ್ತಾರು ಕತ್ತೆಗಳು ನಿಲ್ಲುತ್ತಿದ್ದವು. ಆ ದಿನ ನಾವೆಲ್ಲಾ ಆ ಕತ್ತೆಗಳನ್ನು ಹೊರಗೆ ದಬ್ಬಿ ಜಾಗ ಸ್ವಚ್ಛಗೊಳಿಸಿ ನಂಬೂದರಿಪಾದ್‌ರವರು ಅಲ್ಲಿ ನಿಂತು ಮಾತಾಡುವಂತೆ ಏರ್ಪಾಡು ಮಾಡಿದೆವು. ನಾವೆಲ್ಲಾ ಬಿಸಿಲಿನಲ್ಲೇ ನಿಂತು ಅವರ ಭಾಷಣ ಕೇಳಿದೆವು. ಸಭಾಂಗಣದಲ್ಲಾಗಿದ್ದರೆ ಕೇವಲ ವಕೀಲರುಗಳು ಮಾತ್ರ ಭಾಷಣ ಕೇಳುತ್ತಿದ್ದರು. ಜಿಲ್ಲಾಧಿಕಾರಿಗಳ ಕಟ್ಟಡದ ಹೊರಗಿನ ಸ್ಥಳದಲ್ಲಿ ಭಾಷಣ ಕಾರ್ಯಕ್ರಮ ನಡೆದದ್ದರಿಂದ ರಸ್ತೆಯಲ್ಲಿ ಹೋಗುತ್ತಿದ್ದ ಸಾರ್ವಜನಿಕರೂ, ಕೇಸುಗಳಿಗಾಗಿ ಬಂದಿದ್ದ ಕಕ್ಷಿದಾರರೂ ಇಎಂಎಸ್ ಅವರ ಭಾಷಣ ಕೇಳಿದರು. ಆ ಕಾರ್ಯಕ್ರಮ ಅದ್ಭುತವಾಗಿ ಯಶಸ್ವಿಯಾಯಿತು.

ನಮ್ಮ ಕೆಲವು ಯುವ ಲಾಯರ್‌ಗಳು ಸಂಘ ಪರಿವಾರದ ಲಾಯರ್‌ಗಳಿಗೆ ಇಎಂಎಸ್ ನಂಬೂದರಿಪಾದ್ ಬ್ರಾಹ್ಮಣ ಎನ್ನುವುದು ನಿಮಗೆ ಗೊತ್ತಾ ಎಂದು ಕಿಚಾಯಿಸಿದರು.

ಆ ವಕೀಲರ ಸಂಘಕ್ಕೆ ಎ.ಎನ್. ಜಯರಾಮ್ ಅಧ್ಯಕ್ಷರಾಗಿದ್ದರು. ಈಗ ಇವರು ಅಡ್ವೊಕೇಟ್ ಜನರಲ್ ಆಗಿದ್ದಾರೆ. ಡಿ.ಎಲ್. ಜಗದೀಶ್ ಸೆಕ್ರೆಟರಿಯಾಗಿದ್ದರು. ಈಗ ಇವರು ಎಂಎಲ್‌ಸಿ ಆಗಿದ್ದಾರೆ.

ಇಎಂಎಸ್ ಅಂದಿನ ತಮ್ಮ ಭಾಷಣದಲ್ಲಿ ಇಟ್ಟಿಗೆ ಪೂಜೆ ಹೇಗೆ ದೇಶದ್ರೋಹಿ, ಸಮಾಜದ್ರೋಹಿ ಕೆಲಸವಾಗುತ್ತದೆಂದು ಒಂದೂವರೆ ಗಂಟೆ ಕಾಲ ಸವಿಸ್ತಾರವಾಗಿ ವಿವರಿಸಿದರು.

83

ದಾಕ್ಷಾಯಿಣಿಯ ದವಡೆಯಿಂದ ಪಾರಾದ ಷಡಕ್ಷರಿ

ನಾನು, ನೆಲಮಂಗಲದ ಲಾಯರ್ ಕೆ. ಕೇಶವಮೂರ್ತಿ ಮತ್ತು ಲಾಯರ್ ಪ್ರೊ. ಬಿಲ್ಲಪ್ಪ ಕೂತಿರುವಾಗಲೇ ಒಂದು ರೇಪ್ ಕೇಸ್ ನನ್ನ ಬಳಿ ಬಂದಿತು. ರೇಪ್ ಕೇಸ್‌ಗಳಲ್ಲಿ ಡಿಫೆನ್ಸ್ ಲಾಯರ್ ಆಗಕೂಡದೆಂದು ಹಿಂದೆಯೇ ತೀರ್ಮಾನಿಸಿದ್ದೆ. ಹಾಗಾಗಿ ನಾನು ಖಡಾಖಂಡಿತವಾಗಿ ತಿರಸ್ಕರಿಸಿದೆ ಕೇಸ್ ತೆಗೆದುಕೊಳ್ಳಲು. ಕೇಸ್ ಕೊಡಲು ಬಂದವರು ನಿರಾಶರಾಗಿ ಹೋದನಂತರ ಪ್ರೊ. ಬಿಲ್ಲಪ್ಪ, "ಅಷ್ಟೊಂದು ದೃಢವಾಗಿ ತೀರ್ಮಾನಿಸಿಬಿಟ್ಟಿದ್ದೀರಾ?" ಎಂದು ಪ್ರಶ್ನಿಸಿದರು. ನನ್ನ ಅಂತರಾಳ ಕಲಕುವ ಸನ್ನಿವೇಶಗಳು ಎದುರಾದುದನ್ನು ಅವರಿಗೆ ವಿವರಿಸಿದೆ. ಕೊಲೆಗೆ ಮಾನವೀಯ ನೆಲಗಟ್ಟಿನ ಹಲವು ಮುಖಗಳಿರುತ್ತವೆ. ವೃತ್ತಿನಿರತ ಕೊಲೆಗಡುಕರು ಮಾಡುವ ಕೊಲೆಗಳಿಗೂ ಹಠಾತ್ ಆಗಿ ಭಾವೋದ್ವೇಗಕ್ಕೊಳಗಾಗಿ, ಪೂರ್ವ ಯೋಜನೆಯಿಲ್ಲದೆ ಮಾಡುವ ಕೊಲೆಗಳಿಗೂ ಬಹಳ ವ್ಯತ್ಯಾಸವಿರುವುದರ ಬಗ್ಗೆ ನಾವು ಚರ್ಚಿಸಿದೆವು. ಆದರೆ ರೇಪ್ ಕೇಸ್‌ಗಳಲ್ಲಿ ಬಹುತೇಕವಾಗಿ ಪಾಶವೀ ಕಾಮದಾಹವೇ ಕಾರಣವಾಗಿರುತ್ತದೆಂದೂ ಚರ್ಚಿಸಿದೆವು. ಕೇಶವಮೂರ್ತಿ ಮತ್ತು ಬಿಲ್ಲಪ್ಪ ಈರ್ವರೂ ನನ್ನ ತೀರ್ಮಾನ ಸರಿಯಾದುದೆಂದು ಅಭಿಪ್ರಾಯಪಟ್ಟರು.

ಈ ಚರ್ಚೆ ನಡೆದು ಎರಡು ತಿಂಗಳು ಕಳೆದಿರಲಿಲ್ಲ. ಕೇಶವಮೂರ್ತಿಯವರು ಒಂದು ರೇಪ್ ಕೇಸ್ ಅನ್ನು ನನ್ನ ಮುಂದೆ ತಂದಿಟ್ಟರು. ಅವರ ಮುಖವನ್ನೇ ನೋಡುತ್ತ ಕೆಣಕುನಗೆ ನಕ್ಕೆ. ನನ್ನ ನಗುವನ್ನು ಅರ್ಥ ಮಾಡಿಕೊಂಡ ಕೇಶವಮೂರ್ತಿಯವರು, "ನಿಮ್ಮ ನಗೆ ನನಗೆ ಅರ್ಥವಾಯಿತು. ಆದರೆ ಇದು ನಿಜವಾಗಿಯೂ ರೇಪ್ ಕೇಸ್ ಅಲ್ಲ; ಸೃಷ್ಟಿಸಲ್ಪಟ್ಟದ್ದು" ಎಂದರು.

"ಹೌದು, ಕೇಸು ಕೊಡಲು ಬಂದವರು ಹಾಗೆ ಹೇಳುವುದೇ ಸಹಜವಲ್ಲವೆ?" ಎಂದು ಪುನಃ ಕೆದಕಿದೆ.

ಆಗ ಕೇಶವಮೂರ್ತಿಯವರು, ಆಮೂಲಾಗ್ರವಾಗಿ ತಾವು ತಂದಿದ್ದ ಕೇಸಿನ ವಿವರಗಳನ್ನು ತಿಳಿಸಿದರು. ಮೇಲುನೋಟಕ್ಕೇ ನನಗೆ ಅದು ರೇಪ್ ಕೇಸ್ ಅಲ್ಲವೆನಿಸಿತು. ಹಾಗಾಗಿ ನಡೆಸಲು ಒಪ್ಪಿಕೊಂಡೆ.

ನೆಲಮಂಗಲ ತಾಲ್ಲೂಕಿನ ಕಟ್ಟೆಹಳ್ಳಿಯಲ್ಲಿ ಗುರುಲಿಂಗ ಎನ್ನುವ ವ್ಯಕ್ತಿ ಹಸು, ಎಮ್ಮೆಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದ. ತನ್ನ ಬಡತನಕ್ಕಾಗಿ ಸಾಲಗಳನ್ನೂ ಮಾಡಿಕೊಂಡಿದ್ದ. ಗುರುಲಿಂಗನ ಪತ್ನಿ ದಾಕ್ಷಾಯಿಣಿಯದು ಸುಮಾರು ಇಪ್ಪತ್ತೈದರ ಹರೆಯ. ಪಂಚಾಯಿತಿಯ ಮಾಜಿ ಚೇರ್ಮನ್ ಮನೆಗೆ ಹೊಂದಿಕೊಂಡೇ ಗುರುಲಿಂಗನ ಮನೆಯಿತ್ತು. ಚೇರ್ಮನ್ ಗುರುಲಿಂಗನಿಗೆ ಆಗಾಗ ಸಾಲ ಕೊಡುತ್ತಿದ್ದ ಮತ್ತು ಗುರುಲಿಂಗನ ಮನೆಯ ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ. ಚೇರ್ಮನ್‌ಗೆ ಮಕ್ಕಳಿರಲಿಲ್ಲ. ಹೆಂಡತಿ ಟಿ.ಬಿ. ಪೇಷೆಂಟ್. ಮನೆಯಲ್ಲಿ ಮುಪ್ಪಿನ ತಾಯಿಯಿದ್ದಳು. ಚೇರ್ಮನ್ ದಾಕ್ಷಾಯಿಣಿಯ ಯೌವನದ ಫಲಾನುಭವಿಯಾಗಿದ್ದಾನೆಂದು ಊರಲ್ಲಿ ಸುದ್ದಿಯಾಗಿತ್ತು.

ಹೀಗಿರುವಾಗ ಷಡಕ್ಷರಿ ಎನ್ನುವ ಸ್ಕೂಲ್ ಟೀಚರ್ ದಾಕ್ಷಾಯಿಣಿಯ ಮನೆಗೆ ಎಡತಾಕತೊಡಗಿದ. ಗುರುಲಿಂಗನಿಗೆ ಸಾಲ ಕೊಡಲು ಚೇರ್ಮನ್ ಜೊತೆಗೆ ಸ್ಪರ್ಧೆಗಿಳಿದಂತೆ ಆಡತೊಡಗಿದ. ಷಡಕ್ಷರಿ ಶಾಲೆ ಮುಗಿದೊಡನೆ ನೇರ ತನ್ನ ಮನೆಗೆ ಹೋಗುತ್ತಿರಲಿಲ್ಲ. ಆತನಿಗೆ ಮದುವೆಯಾಗಿರಲಿಲ್ಲ. ಮನೆಯಲ್ಲಿ ತಾಯಿಯೊಬ್ಬಳೇ ಇರುತ್ತಿದ್ದಳು. ಮನೆಗೆ ಯಾರಾದರೂ ಬಂದರೆ ಷಡಕ್ಷರಿಯನ್ನು ಕರೆಯಲು ಆತನ ತಾಯಿ ನೇರವಾಗಿ ದಾಕ್ಷಾಯಿಣಿಯ ಮನೆಗೇ ಬರುತ್ತಿದ್ದಳು. ಮಗ ಮತ್ತೆಲ್ಲೂ ಹೋಗಿರಲಾರ ಅಲ್ಲಿ ಬಿಟ್ಟರೆ ಎನ್ನುವ ಖಾತರಿ ಷಡಕ್ಷರಿಯ ತಾಯಿಗೆ. ದಾಕ್ಷಾಯಿಣಿ ಮತ್ತು ಷಡಕ್ಷರಿ ಈರ್ವರೂ ಹೆಚ್ಚುಕಡಿಮೆ ಸಮವಯಸ್ಕರು. ಹಲವಾರು ಬಾರಿ ದಾಕ್ಷಾಯಿಣಿಯ ಮನೆಯಲ್ಲಿ ಚೇರ್ಮನ್ ಮತ್ತು ಷಡಕ್ಷರಿ

ಮುಖಾಮುಖಿಗೊಳ್ಳುತ್ತಿದ್ದರು. ಇಬ್ಬರೂ ಏಕಕಾಲಕ್ಕೆ ಬಂದು ಮನೆಯಲ್ಲಿ ವಕ್ಕರಿಸಿ ಕೂತಾಗ ಚೇರ್ಮನ್, ತನಗಿಂತ ಷಡಕ್ಷರಿಗೇ ಹೆಚ್ಚಿನ ಆತಿಥ್ಯ ನೀಡುತ್ತಿದ್ದಾಳೆ ಈ ದಾಕ್ಷಾಯಿಣಿ ಎಂದುಕೊಂಡದ್ದೂ ಉಂಟು. ಏನಾದರೂ ಮಾಡಿ ಈ ಷಡಕ್ಷರಿ ದಾಕ್ಷಾಯಿಣಿಯ ಮನೆಗೆ ಕಾಲಿಡದಂತೆ ಮಾಡಬೇಕೆಂದು ಚೇರ್ಮನ್ ಹೊಂಚು ಹಾಕುತ್ತಿದ್ದ.

ದಾಕ್ಷಾಯಿಣಿಯ ಮನೆಯಲ್ಲಿ ಚೇರ್ಮನ್ ಮೀಸೆ ತಿರುವುತ್ತ ಗೌಡಿಕೆ ಪ್ರದರ್ಶಿಸಿದರೆ ಷಡಕ್ಷರಿ ಅದಕ್ಕೆ ವಿರುದ್ಧವಾಗಿ ದಾಕ್ಷಾಯಿಣಿಯ ಕೆಲಸಗಳಿಗೆ ನೆರವಾಗುತ್ತಿದ್ದ. ಈ ಟೀಚರ್ ಕಳ್ಳಬಡ್ಡಿಮಗ, ಅವಳ ಮನಸ್ಸು ಒಲಿಸಿಕೊಳ್ಳಲು ಏನೆಲ್ಲ ಮಾಡ್ತಾನಲ್ಲ ಎಂದು ಚೇರ್ಮನ್ ಹಲ್ಲು ಕಡಿಯುತ್ತಿದ್ದ. ದಾಕ್ಷಾಯಿಣಿ ಹಸುವಿನ ಹಾಲು ಕರೆಯತೊಡಗಿದರೆ ಷಡಕ್ಷರಿ ಕರುವನ್ನು ಹಿಡಿದುಕೊಂಡು ನಿಲ್ಲುತ್ತಿದ್ದ. ಊರ ಹೊರಗಿನ ಬಾವಿಯಿಂದ ದಾಕ್ಷಾಯಿಣಿ ಬಟ್ಟೆಗಳನ್ನು ತೊಳೆದುಕೊಂಡುಬಂದರೆ ಷಡಕ್ಷರಿ ಅವನ್ನು ಝಾಡಿಸಿ ಆರಲು ಹಾಕುತ್ತಿದ್ದ.

ಒಂದು ದಿನ ಚೇರ್ಮನ್ ಕೇಳಿಯೇಬಿಟ್ಟ, ಆ ಷಡಕ್ಷರಿಗೇಕೆ ಅಷ್ಟೊಂದು ಸಲಿಗೆ ನೀಡಿದ್ದೀಯಾ ಎಂದು.

ಆಗ ದಾಕ್ಷಾಯಿಣಿ, 'ಏನು ಮಾಡಲಿ, ನಮ್ಮ ಕಷ್ಟಕ್ಕೆ ಸಾಲ ಕೊಟ್ಟಿದ್ದಾನೆ. ಹೋಗೆಂದು ಹೇಳಲು ಹೇಗೆ ಮನಸ್ಸು ಬರುತ್ತದೆ' ಎಂದು ಮರು ಪ್ರಶ್ನಿಸಿದಳು.

"ಅವನ ಸಾಲ ಎಷ್ಟಿದೆ ಹೇಳು, ಕೊಡ್ತೇನೆ. ಬಿಸಾಕಿಬಿಡು. ಮತ್ತೆ ನಿನ್ನ ಮನೆಯ ಹೊಸ್ತಿಲು ತುಳಿಯಬೇಡವೆಂದು ಹೇಳು" ಎಂದು ಒಂದಷ್ಟು ದುಡ್ಡನ್ನೂ ಕೊಟ್ಟ.

ಚೇರ್ಮನ್‌ನಂತೆಯೇ ಷಡಕ್ಷರಿ ಸಹ "ಇನ್ನು ಮೇಲೆ ಚೇರ್ಮನ್ ಸಾಲ ವಾಪಸ್ ಮಾಡಿಬಿಡು. ಅವನನ್ನು ಮನೆಯಲ್ಲಿ ಬಿಟ್ಟುಕೊಳ್ಳಬೇಡ" ಎಂದು ಹಣ ಕೊಟ್ಟ.

ಇಬ್ಬರ ಕಡೆಯಿಂದಲೂ ಹಣ ಪಡೆದ ದಾಕ್ಷಾಯಿಣಿಯ ವರ್ತನೆಯಲ್ಲಿ ಮಾತ್ರ ಏನೂ ಬದಲಾವಣೆ ಕಾಣಲಿಲ್ಲ. ಇವರಿಬ್ಬರ ಮಧ್ಯೆ ಸ್ಪರ್ಧೆಯನ್ನು ಹೇಗೆ ತೀವ್ರಗೊಳಿಸುವುದು ಎನ್ನುವ ಲೆಕ್ಕಾಚಾರ ಮಾಡತೊಡಗಿತ್ತು ದಾಕ್ಷಾಯಿಣಿಯ ಮನಸ್ಸು.

ಒಂದು ದಿನ ಮಟಮಟ ಮಧ್ಯಾಹ್ನ ದಾಕ್ಷಾಯಿಣಿ ಲಬೊಲಬೋ ಎಂದು

ಬಾಯಿಬಡಿದುಕೊಳ್ಳುತ್ತಾ ಕಬ್ಬಿನ ಗದ್ದೆಯಿಂದ ಊರಕಡೆಗೆ ಓಡುತ್ತಾ ಬಂದಳು. ಬಂದವಳೇ "ಆ ಟೀಚರ್ ಷಡಕ್ಷರಿ ನನ್ನ ಮೇಲೆ ಅತ್ಯಾಚಾರ ಮಾಡಿಬಿಟ್ಟ.... ನನ್ನ ಪಾಡಿಗೆ ನಾನು ಬಟ್ಟೆ ಒಗೆಯುತ್ತಿದ್ದಾಗ ಹಿಂದಿನಿಂದ ಬಂದು ಮುಖಕ್ಕೆ ಬಟ್ಟೆ ಸುತ್ತಿ ಬಾವಿಯ ಪಾವಟಿಗೆಯ ಮೇಲೆಯೇ ಮಾನಭಂಗ ಮಾಡಿಬಿಟ್ಟ." ಎಂದು ತನ್ನ ಗಂಡ ಮತ್ತು ಚೇರ್ಮನ್ ಇಬ್ಬರಿಗೂ ಹೇಳಿದಳು.

ದಾಕ್ಷಾಯಿಣಿ ಅಳುತ್ತ ಓಡಿ ಬರುತ್ತಿದ್ದುದನ್ನು ಊರಮುಂದಿನ ಬಾವಿಗಳಲ್ಲಿ ಒಟ್ಟೆ ಒಗೆಯುತ್ತಿದ್ದ ಹೆಂಗಸರು ನೋಡಿ ಗಾಬರಿಗೊಂಡರು.

ಇಂಥ ಸುವರ್ಣಾವಕಾಶಕ್ಕಾಗಿಯೇ ಚೇರ್ಮನ್ ಕಾಯುತ್ತಿದ್ದನಲ್ಲವೆ? ಆ ಕೂಡಲೇ ದಾಕ್ಷಾಯಿಣಿಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಟೀಚರ್ ಮೇಲೆ ದೂರು ರಿಜಿಸ್ಟರ್ ಮಾಡಿಸಿಬಿಟ್ಟ. ಅದಕ್ಕೆ ತನ್ನೊಂದಿಗೆ ದಾಕ್ಷಾಯಿಣಿ ಅಳುತ್ತ ಓಡಿ ಬಂದುದನ್ನು ನೋಡಿದ ಹೆಂಗಸರ ಸಾಕ್ಷಿಗಳನ್ನೂ ಒದಗಿಸಿದ.

ಪೊಲೀಸರು ದಾಕ್ಷಾಯಿಣಿಯನ್ನು ಕೂಡಲೇ ವೈದ್ಯಕೀಯ ತಪಾಸಣೆಗೆ ಕಳಿಸಿದರು. ಆಕೆಯ ಮರ್ಮಾಂಗದಿಂದ ದ್ರವವನ್ನು ಸಂಗ್ರಹಿಸಿದರು ವೈದ್ಯರು. ನಂತರ ಷಡಕ್ಷರಿಯ ವೀರ್ಯಾಣುಗಳನ್ನೂ ಸಂಗ್ರಹಿಸಿಕೊಂಡು ಟ್ಯಾಲಿ ಮಾಡಿ ದಾಕ್ಷಾಯಿಣಿಯ ಮರ್ಮಾಂಗದಲ್ಲಿ ದೊರೆತ ವೀರ್ಯಾಣುಗಳು ಷಡಕ್ಷರಿಯವೇ ಹೌದು ಎಂದು ವರದಿ ನೀಡಿದರು.

ಆಗ ದಿಕ್ಕುತಪ್ಪಿದಂತಾದ ಷಡಕ್ಷರಿ, ನೆಲಮಂಗಲದ ಲಾಯರ್‌ಗಳಾದ ಕೇಶವಮೂರ್ತಿ ಮತ್ತು ಶಿವಮೂರ್ತಿಗಳ ಬಳಿಗೆ ರಕ್ಷಣೆಗಾಗಿ ಧಾವಿಸಿ ಬಂದ. ಈ ಪ್ರಕರಣದ ತನಿಖಾಧಿಕಾರಿಗಳಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಹುರುಳಿಕೊಪ್ಪಿಯವರು ನೇಮಕಗೊಂಡರು. ಲಾಯರ್‌ಗಳಾದ ಕೇಶವಮೂರ್ತಿ ಮತ್ತು ಶಿವಮೂರ್ತಿಗಳನ್ನು ಕರೆದುಕೊಂಡು ನಾನು ಸ್ಥಳ ಪರಿಶೀಲನೆಗೆ ಕಟ್ಟೆಹಳ್ಳಿಗೆ ಹೋದೆ.

ಆ ಹಳ್ಳಿಯ ಗಡಿಗೇ ಹೊಂದಿಕೊಂಡು ನಾಲ್ಕಾರು ಬಾವಿಗಳಿದ್ದಿರುವಾಗ, ಒಂದೂವರೆ ಕಿ.ಮೀ.ಗಳಷ್ಟು ದೂರದ ಬಾವಿಗೇಕೆ ಬಂದಳು ದಾಕ್ಷಾಯಿಣಿ; ಅದೂ ಮಧ್ಯಾಹ್ನದ ಸುಡು ಬಿಸಿಲಲ್ಲಿ ಎನ್ನುವ ಪ್ರಶ್ನೆ ಕೇಳಿಕೊಂಡೆ.

ಆ ಕಬ್ಬಿನ ತೋಟದ ಬಾವಿಗೆ ಸಾಮಾನ್ಯವಾಗಿ ಊರ ಹೆಂಗಸರು ಬಟ್ಟೆ ತೊಳೆಯಲು ಬರುತ್ತಿರಲಿಲ್ಲ. ಮೇಲಾಗಿ ದಾಕ್ಷಾಯಿಣಿ ಆಗ ಗರ್ಭಿಣಿಯೂ ಆಗಿದ್ದಳು. ಅಷ್ಟು ದೂರ ಬರಬೇಕಾದಾಗ ಜೊತೆಗೆ ಯಾರನ್ನಾದರೂ ಕರೆತರಬೇಕಿತ್ತಲ್ಲವೆ ಇತ್ಯಾದಿ ಪ್ರಶ್ನೆಗಳನ್ನು ದಾಖಲಿಸಿಕೊಂಡೆ.

ಆ ಕಬ್ಬಿನ ತೋಟದಲ್ಲಿದ್ದ ಬಾವಿಗೆ ಇಳಿಯಲು ಪಾವಟಿಗೆಗಳಿದ್ದವು. ಕಬ್ಬಿನ ತೋಟಕ್ಕೆ ಹೊಂದಿಕೊಂಡಂತೆಯೇ ಒಂದು ತೆಂಗಿನ ತೋಟ ಇತ್ತು. ಅದನ್ನೆಲ್ಲ ಗುರುತು ಮಾಡಿಕೊಂಡೆ.

ನಿಜ ಸಂಗತಿಯನ್ನೆಲ್ಲ ಹೇಳಿಬಿಡು ಎಂದಾಗ ಷಡಕ್ಷರಿ ಸಾದ್ಯಂತವಾಗಿ ದಾಕ್ಷಾಯಿಣಿಯೊಂದಿಗಿನ ತನ್ನ ಸಂಬಂಧವನ್ನು ಹೇಳಿಕೊಂಡ. "ಅಂದು ಸಹ ಸ್ವತಃ ಅವಳೇ ಆ ಬಾವಿಯ ಹತ್ತಿರಕ್ಕೆ ಬರುವಂತೆ ನನಗೆ ತಿಳಿಸಿದ್ದಳು. ಆ ಪ್ರಕಾರ ಹೋಗಿದ್ದೆ. ನಾವಿಬ್ಬರೂ ಬಾವಿಯ ಪಾವಟಿಗೆಯ ಮೇಲೆ ಮಲಗಿಕೊಂಡಿರುವುದನ್ನು ಪಕ್ಕದ ತೆಂಗಿನ ತೋಟದಲ್ಲಿ ಕಾಯಿ ಕೀಳಲು ಮರ ಹತ್ತಿದ್ದ ರಂಗಪ್ಪ ನೋಡಿ ಮರದ ಕೆಳಗಿದ್ದ ಇತರರಿಗೆ, "ಬಾವಿಯಲ್ಲಿ ಗಂಡುಹೆಣ್ಣು ಒಂದಕ್ಕೊಂದು ಅಮರಿಕೊಂಡವೆ. ನೋಡ್ರೋ" ಎಂದು ಕೂಗಿದ. ಆಗ ನಾವಿಬ್ಬರೂ ಗಡಬಡಿಸಿ ಎದ್ದು ನಾನೊಂದು ದಿಕ್ಕಿಗೆ ಅವಳೊಂದು ದಿಕ್ಕಿಗೆ ಓಡಿದೆವು. ಇದಾಗಿ ಸಂಜೆಯಾಗುವುದರಲ್ಲಿ ಕೇಸಾಗಿತ್ತು" ಎಂದು ಹೇಳಿದ.

"ಸರಿ ಬಿಡು. ನೀನು ನಿಶ್ಚಿಂತೆಯಿಂದ ಇರು. ಕೇಸು ಗೆಲ್ಲುವುದು ನನ್ನ ಜವಾಬ್ದಾರಿ" ಎಂದು ಆಶ್ವಾಸನೆ ನೀಡಿದೆ. ಆಗ ಷಡಕ್ಷರಿ ದೀನನಾಗಿ, "ಇನ್ನೊಮ್ಮೆ ಇಂಥ ಗೋಜಿಗೆ ದೇವರಾಣೆಗೂ ಹೋಗೊಲ್ಲ. ನಮ್ಮಮ್ಮ ಸದಾ ಬಯ್ಯುತ್ತಿದ್ದಳು. ಅವಳು ಗೊತ್ತು ಮಾಡಿದ ಹುಡುಗಿಯನ್ನು ಮದುವೆ ಮಾಡಿಕೊಂಡು ಸಭ್ಯನಾಗುತ್ತೇನೆ" ಎಂದ.

ಏನಾದರೂ ಮಾಡಿ ಆ ಚೇರ್ಮನ್‌ಗೆ ಕೋರ್ಟಿನಲ್ಲಿ ನಿನ್ನ ಮತ್ತು ದಾಕ್ಷಾಯಿಣಿಯ ಮಧ್ಯೆ ಇದ್ದ ಅನೈತಿಕ ಸಂಬಂಧವನ್ನು ಸಾಬೀತುಪಡಿಸಿ ಕೇಸು ನಿನ್ನ ವಿರುದ್ಧವೇ ತಿರುಗುವಂತೆ ಮಾಡಿಬಿಡುತ್ತೇನೆ ಎನ್ನುವ ಸುದ್ದಿ ತಲುಪುವಂತೆ ಮಾಡಬೇಕು ಎಂದೆ.

ಆಗ ಕೇಶವಮೂರ್ತಿಗಳು, ಚೇರ್ಮನ್‌ನ ಖಾಸಾ ಚೇಲಾ ಒಬ್ಬನಿಗೆ ಈ ವಿಷಯ ತಿಳಿಸಿದರು. ಅವನು ಹೋಗಿ ಚೇರ್ಮನ್‌ಗೆ ಒಂದಕ್ಕೆರಡು ಮಾಡಿ ವಿಷಯ ತಿಳಿಸಿದ. ಭಾರೀ ಒಳಗುಟ್ಟೊಂದನ್ನು ತಂದು ಹೇಳಿದ್ದೇನೆಂದು ಅವನು ಚೇರ್ಮನ್‌ನಿಂದ ಶಹಬ್ಬಾಸ್‌ಗಿರಿ ಪಡೆದುಕೊಳ್ಳುವ ತವಕದಲ್ಲಿ, ನಮ್ಮ ಯೋಜನೆ ಫಲಿಸಿತು. ಚೇರ್ಮನ್‌ಗೆ ದಿಗಿಲು ಹುಟ್ಟಿಕೊಂಡಿತು. ಕೋರ್ಟಿನಲ್ಲಿ ತೇಜೋವಧೆಯಾದರೆ ತನ್ನ ರಾಜಕೀಯ ಜೀವನಕ್ಕೆ ದೊಡ್ಡ ಪೆಟ್ಟಾಗುತ್ತದೆಂದು ಅಂಜಿಕೊಂಡ. ಮಾರನೆ ದಿನವೇ ಚೇರ್ಮನ್ ಕೇಶವಮೂರ್ತಿಯವರ ಬಳಿಗೆ

ಬಂದು, 'ನೀವು ಏನು ಹೇಳುತ್ತೀರೋ ಅದನ್ನೇ ಕೋರ್ಟಿನಲ್ಲಿ ಹೇಳುತ್ತೇನೆ. ನನ್ನ ಸುತ್ತ ಮಾತ್ರ ಕೇಸನ್ನು ತಗಲು ಹಾಕಬೇಡಿ' ಎಂದು ಯಾಚಿಸಿದ.

ಕೇಶವಮೂರ್ತಿಯವರು ಚೇರ್ಮನ್‌ನನ್ನು ನನ್ನ ಬಳಿಗೆ ಕರೆದುಕೊಂಡು ಬಂದರು. ನಾನು ಅವನಿಗೆ ಹೇಳಿದೆ: ನೀನೇನೂ ಸುಳ್ಳು ಹೇಳಬೇಕಾದದ್ದಿಲ್ಲ, ಸತ್ಯ ಸಂಗತಿಯನ್ನೇ ಹೇಳು. ದಾಕ್ಷಾಯಿಣಿಗೂ ಷಡಕ್ಷರಿಗೂ ದೈಹಿಕ ಸಂಬಂಧ ಇತ್ತು ಎಂದು ಹೇಳಿದರೆ ಸಾಕು ಎಂದೆ. ಅದಕ್ಕೆ ಅವನು ಒಪ್ಪಿಕೊಂಡ.

ಕೋರ್ಟಿನಲ್ಲಿ ಷಡಕ್ಷರಿ ದಾಕ್ಷಾಯಿಣಿಯನ್ನು ಸಂಭೋಗಿಸಿದ ಸಂಗತಿಯನ್ನು ಒಪ್ಪಿಕೊಂಡೇ ನನ್ನ ವಾದವನ್ನು ಆರಂಭಿಸಿದೆ. ಆಗ ಕೇಶವಮೂರ್ತಿಯವರು, ನಮ್ಮ ಈ ಸ್ಟ್ಯಾಂಡ್ ಪಾಯಿಂಟ್‌ನಿಂದ ಅತ್ಯಾಚಾರವಾಗಿಲ್ಲವೆಂದು ಸಾಬೀತಾಗಬಹುದು. ಆದರೆ ಅಡಲ್ಟರಿ ಕೇಸಾಗಿ ಮಾರ್ಪಾಡಬಹುದಲ್ಲವೆ ಎಂದು ತಮ್ಮ ಅನುಮಾನ ವ್ಯಕ್ತಪಡಿಸಿದರು.

'ರಿಸ್ಕ್ ತೆಕ್ಕೊಳ್ಳದೆ ಕೇಸ್ ನಡೆಸೋಕ್ಕೆ ಆಗೊಲ್ಲ. ನಿಮ್ಮ ಅನುಮಾನದಲ್ಲಿ ಸತ್ಯಾಂಶವಿದೆ. ಆ ಅಪಾಯವನ್ನು ಮುಂದಾಲೋಚಿಸಿಯೇ ಈ ನಿಲುವನ್ನು ತೆಗೆದುಕೊಂಡಿದ್ದೇನೆ. ಮೊದಲು ಇದು ಅತ್ಯಾಚಾರ ಅಲ್ಲವೆಂದು ಸಾಬೀತಾದರೆ, ಅಡಲ್ಟರಿಯೂ ಅಲ್ಲವೆಂದು ಸಾಬೀತುಗೊಳಿಸುತ್ತೇನೆ' ಎಂದೆ.

ಚೇರ್ಮನ್ ವಿಟ್ನೆಸ್ ಬಾಕ್ಸ್‌ಗೆ ಹೋದಾಗ ದಾಕ್ಷಾಯಿಣಿಯ ಜೊತೆಗೆ ಷಡಕ್ಷರಿಗಿದ್ದ ಅನೈತಿಕ ಸಂಬಂಧ ಆಕೆಯ ಗಂಡ ಗುರುಲಿಂಗನಿಗೆ ತಿಳಿದಿತ್ತು ಎನ್ನುವ ಅಂಶವನ್ನು ಬಯಲಿಗೆಳೆದ. ಇದಕ್ಕೆ ಸಪೋರ್ಟ್ ಆಗಿ, ಷಡಕ್ಷರಿಯ ತಾಯಿಯ ಸಾಕ್ಷಿ ಹೇಳಿಕೆಯನ್ನೂ ತೆಗೆದುಕೊಂಡೆ. ತನ್ನ ಮಗ ಸದಾ ಆಕೆಯ ಮನೆಯಲ್ಲೇ ಇರುತ್ತಿದ್ದ. ಈ ವಿಷಯ ದಾಕ್ಷಾಯಿಣಿಯ ಗಂಡ ಗುರುಲಿಂಗನಿಗೆ ತಿಳಿದಿತ್ತು ಎಂದು ಷಡಕ್ಷರಿಯ ತಾಯಿ ಹೇಳಿದಳು.

"ಷಡಕ್ಷರಿ ಮತ್ತು ದಾಕ್ಷಾಯಿಣಿ ಬಾವಿಯ ಪಾವಟಿಗೆಯ ಮೇಲೆ ಸಂಭೋಗಿಸುತ್ತಿದ್ದಾಗ ಯಾವುದೇ ಕಿತ್ತಾಟವಾಗಲೀ, ಜಗಳವಾಗಲಿ, ದಾಕ್ಷಾಯಿಣಿಯ ಅಸಹಕಾರ–ಚೀರಾಟಗಳಾಗಲೀ ಇರಲಿಲ್ಲ. ನಾನು ಆ ದೃಶ್ಯ ನೋಡಿ ಕೂಗಿಕೊಂಡ ಮೇಲಷ್ಟೇ ದಾಕ್ಷಾಯಿಣಿ ಅಳುತ್ತ, ಬಾಯಿ ಬಡಿದುಕೊಳ್ಳುತ್ತ ಓಡತೊಡಗಿದಳು..." ಎಂದು ತೆಂಗಿನಮರ ಹತ್ತಿ ಕೂಟವನ್ನು ನೋಡಿದ ರಂಗಪ್ಪ ಸಾಕ್ಷಿ ಹೇಳಿದ.

ತೆಂಗಿನಮರದ ಮೇಲಿನಿಂದ ತಮ್ಮ ಮಿಲನವನ್ನು ನೋಡಿದ ರಂಗಪ್ಪ ಮತ್ತು ಮರದ ಕೆಳಗಿದ್ದ ಆತನ ಸಹ ಕೆಲಸಗಾರರು ಈ ಸಂಗತಿಯನ್ನು ಊರಿನಲ್ಲಿ

ಟಾಮ್‌ಟಾಮ್ ಮಾಡುವುದಕ್ಕೆ ಮುಂಚೆ ತಾನೇ ಸ್ವತಃ ಹೀಗೆ ಅತ್ಯಾಚಾರವಾಯಿತು ಎಂದು ಹೇಳಿಕೊಂಡುಬಿಟ್ಟರೆ ಊರವರು ತನ್ನ ಬಗ್ಗೆ ಅನುಕಂಪ ತೋರಬಹುದು ಎನ್ನುವ ದೃಷ್ಟಿಯಿಂದ ದಾಕ್ಷಾಯಿಣಿ ಇಂಥ ಸುಳ್ಳು ಕೇಸು ಮಾಡಿದ್ದಾಳೆ ಎಂದು ವಾದಿಸಿದೆ.

ಕೊನೆಗೂ ಷಡಕ್ಷರಿ ಬಿಡುಗಡೆಯಾದ; ಕೇಸಿನಿಂದ ಮತ್ತು ದಾಕ್ಷಾಯಿಣಿಯಿಂದ.

84

ಪ್ರೊ|| ಕೆ.ಎಸ್. ಭಗವಾನ್ ಮತ್ತು ಪುರೋಹಿತ ಶಾಹಿಗಳು

ಈಗ ಹೇಳಹೊರಟಿರುವ ಘಟನೆಯು 1988-89ರ ಅವಧಿಯಲ್ಲಿ ನಡೆದದ್ದು. ಕರ್ನಾಟಕವು ಎಂಬತ್ತರ ದಶಕದಲ್ಲಿ ಪ್ರಗತಿಪರ ಚಿಂತನೆ, ಹೋರಾಟ, ಸಂಘರ್ಷಗಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನುವ ಸಂಗತಿಯನ್ನು ಗಮನದಲ್ಲಿರಿಸಿಕೊಂಡರೆ ಈ ಘಟನೆಗೆ ಹೆಚ್ಚಿನ ಅರ್ಥ ಬರುತ್ತದೆನ್ನುವುದು ನನ್ನ ಅನಿಸಿಕೆ.

ಒಂದು ದಿನ ನನ್ನ ಕಾರ್ಯಾಲಯಕ್ಕೆ ಡಾ. ಸಿ. ವೀರಣ್ಣ, ಹಂಪನಾ, ರಾಮಣ್ಣ ಕೋಡಿಹೊಸಹಳ್ಳಿ ಮತ್ತು ರೆಹಮಾನ್‌ಖಾನ್ ಇವರೆಲ್ಲ ಒಟ್ಟಾಗಿ ಬಂದರು. ನಿತ್ಯದ ಕೇಸುಗಳಲ್ಲಿ ಮುಳುಗಿದ್ದ ನಾನು ಸಾಹಿತಿ ಮಿತ್ರರನ್ನು ಕಂಡು ಖುಷಿಯಿಂದ ಬರಮಾಡಿಕೊಂಡೆ.

ನಮ್ಮ ಪ್ರಗತಿಪರ ಬರಹಗಾರರಾದ ಕೆ.ಎಸ್. ಭಗವಾನ್ ಅವರ ಮೇಲೆ ಪೋಲೀಸ್ ಕೇಸ್ ಆಗಿದೆ. ಅವರಿಗೆ ತಕ್ಷಣವೇ ನಿರೀಕ್ಷಣಾ ಜಾಮೀನು ಕೊಡಿಸಬೇಕು ನೀವು ಎಂದು ಆತಂಕದಿಂದ ಅವರೆಲ್ಲ ವಿನಂತಿಸಿಕೊಂಡರು. ಅವರೆಲ್ಲ ಸ್ವಲ್ಪ ಸುಧಾರಿಸಿಕೊಳ್ಳಲಿ ಎಂದು ಮೊದಲು ಕಾಫಿ ತರಿಸಿದೆ.

'ಈಗ ಹೇಳಿ, ಭಗವಾನ್ ಅವರ ಯಾವ ಅಪರಾಧಕ್ಕಾಗಿ ಪೊಲೀಸರು ಕೇಸು ಹಾಕಿದ್ದಾರೆ?'

'ಅವರು ಯಾವ ಅಪರಾಧವನ್ನೂ ಮಾಡಿಲ್ಲ. 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಎನ್ನುವ ಲೇಖನಮಾಲೆಯನ್ನು 'ದಲಿತ್ ವಾಯ್ಸ್'ನಲ್ಲಿ ಪ್ರಕಟಿಸಿದ್ದೇ ಪೊಲೀಸರಿಗೆ ಮಹಾಪರಾಧವಾಗಿ ಕಂಡಿದೆ. ದೇಶದ್ರೋಹದ ಅಪರಾಧದ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿಕೊಂಡು ಭಗವಾನ್‌ರನ್ನು ರಾಜ್ಯದಿಂದ ಗಡೀಪಾರು ಮಾಡಲು ಹೊರಟಿದ್ದಾರೆ ಪೊಲೀಸರು. ಇದೆಲ್ಲ ಪುರೋಹಿತಶಾಹಿಗಳ ಪಿತೂರಿ' ಎಂದರು.

ತಟ್ಟನೆ ನಾನು ಹೇಳಿದೆ; ಸರಿ ಬಿಡಿ, ಭಗವಾನ್‌ರನ್ನು ಪೊಲೀಸರು ಬಂಧಿಸಲಿ. ನಾವು ಜಾಮೀನು ಪಡೆದುಕೊಳ್ಳುವುದು ಬೇಡ. ಅವರ ಬಂಧನವನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ವಿಚಾರವಾದಿಗಳು, ಪ್ರಗತಿಪರರು, ಬಂಡಾಯಗಾರರು ಹೋರಾಟಕ್ಕಿಳಿಯುವಂತಾಗುತ್ತದೆ. ಇದನ್ನು ಒಂದು ವೈಚಾರಿಕ ಹೋರಾಟವನ್ನಾಗಿ ಪರಿವರ್ತಿಸೋಣ.

ನನ್ನ ಸಲಹೆಯಿಂದ ಬಂದವರು ಕೊಂಚ ಗಲಿಬಿಲಿಗೊಂಡಂತೆ ಕಂಡರು. ಆಗ ನಾನು, 'ನೋಡಿ ನಿರೀಕ್ಷಣಾ ಜಾಮೀನು ಕೊಡಿಸುವ ಪರಿಶ್ರಮದಿಂದ ನುಣುಚಿಕೊಳ್ಳಲು ನಾನು ಈ ಮಾತನ್ನು ಹೇಳುತ್ತಿಲ್ಲ. ಪ್ರಗತಿಪರ ಚಳವಳಿಗಳ ಹಿತೈಷಿಯಾಗಿ ಸಲಹೆ ನೀಡುತ್ತಿದ್ದೇನೆ. ನೀವು ಕೂಡಲೇ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿರಿ. ಅದರಲ್ಲಿ ಈ ಬಗ್ಗೆ ಮುಕ್ತವಾಗಿ ಚರ್ಚೆ ನಡೆಯಲಿ. ಅಲ್ಲಿ ಬಹುಜನರ ಅಭಿಪ್ರಾಯ ಹೇಗೆ ಬರುವುದೋ ಹಾಗೆ ಮಾಡೋಣ' ಎಂದೆ. ಅವರೆಲ್ಲ ನನ್ನ ಈ ಸಲಹೆಗೆ ಸಮ್ಮತಿಸಿ ತಮ್ಮ ಜೊತೆಯಲ್ಲಿ ತಂದಿದ್ದ ಭಗವಾನ್ ಅವರ ಲೇಖನಗಳನ್ನು ಮತ್ತು ಪುಸ್ತಕಗಳನ್ನು ನನಗೆ ಕೊಟ್ಟುಹೋದರು.

ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಭಗವಾನ್‌ರ ವಿವಾದಿತ ಬರಹಗಳ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು. ನಿರೀಕ್ಷಿಸಿದಂತೆಯೇ ಪ್ರಗತಿಪರರು ಭಾರೀ ಸಂಖ್ಯೆಯಲ್ಲಿ ನೆರೆದರು.

ವಿಚಾರ ಸಂಕಿರಣದಲ್ಲಿ ಸಿ. ವೀರಣ್ಣ, ಹಂಪನಾ, ರಮ್ಜಾನ್ ದರ್ಗಾ, ರೆಹಮಾನ್ ಖಾನ್, ರಾಮಣ್ಣ ಕೋಡಿಹೊಸಹಳ್ಳಿ ಮಾತಾಡಿದರು. ನಂತರ ನಾನೂ ಮಾತಾಡಿದೆ. ನಿರೀಕ್ಷಣಾ ಜಾಮೀನನ್ನು ಏಕೆ ಪಡೆದುಕೊಳ್ಳಬಾರದು, ಅವರು ಅರೆಸ್ಟ್ ಆಗುವುದೇ ಸರಿ ಏಕೆ ಎಂದು ವಿಸ್ತಾರವಾಗಿ ವಿವರಿಸಿದೆ. ವಿಚಾರ ಸಂಕಿರಣದಲ್ಲಿ ನೆರೆದಿದ್ದವರೆಲ್ಲ

ಒಕ್ಕೊರಲಿನಿಂದ ಭಗವಾನ್ ಅವರನ್ನು ಬೆಂಬಲಿಸಿದರು ಮತ್ತು ನಾನು ಮುಂದಿಟ್ಟ ಸಲಹೆಯೇ ಅತ್ಯಂತ ಸೂಕ್ತವಾದುದು ಎಂದು ಅಭಿಪ್ರಾಯಪಟ್ಟರು. ಈ ವಿಚಾರ ಸಂಕಿರಣದ ಕಲಾಪಗಳು ಮಾಧ್ಯಮಗಳಲ್ಲಿ ಪ್ರಧಾನವಾಗಿ ಪ್ರಕಟಗೊಂಡವು. ಮಾಧ್ಯಮಗಳು ಭಗವಾನ್ ಅವರನ್ನು ಬೆಂಬಲಿಸಿ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದವು.

ದಲಿತ ಪರ ಚಿಂತಕ ವಿ.ಟಿ. ರಾಜಶೇಖರ್ ಅವರ ಸಂಪಾದಕತ್ವದಲ್ಲಿ 'ದಲಿತ್ ವಾಯ್ಸ್' ಇಂಗ್ಲಿಷ್ ನಿಯತಕಾಲಿಕೆಗೆ ಎಲ್ಲಿಲ್ಲದ ಬೇಡಿಕೆ ಶುರುವಾಯಿತು. ರಾಜ್ಯದ ಮೂಲೆಮೂಲೆಗಳಿಂದ ಸಾಹಿತಿಗಳು, ಚಿಂತಕರು ಮತ್ತು ಹೋರಾಟಗಾರರಿಂದ ಭಗವಾನ್ ಅವರಿಗೆ ಬೆಂಬಲದ ಸುರಿಮಳೆಯೇ ಆರಂಭವಾಯಿತು.

ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಚಂಪಾ, ದೇವೇಂದ್ರ ಕುಮಾರ ಹಕಾರಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಬರಗೂರು ರಾಮಚಂದ್ರಪ್ಪ, ಡಾ. ಎಂ.ಎಂ. ಕಲಬುರ್ಗಿ, ಅಲ್ಲಮಪ್ರಭು ಬೆಟ್ಟದೂರು, ಸುಕನ್ಯಾ ಮಾರುತಿ, ಬಿ.ವಿ. ವೀರಭದ್ರಪ್ಪ, ಮಲ್ಲಾಪುರ, ಬುದ್ಧಣ್ಣ ಹಿಂಗಮಿರೆ, ಸಿದ್ಧನಗೌಡ ಪಾಟೀಲ್, ಎಂ.ಕೆ. ಹರಿಚರಣ್, ಎಸ್.ಎಸ್. ಹಿರೇಮಠ, ನೀಲಕಂಠರಾಜ, ಜ.ಹೋ. ನಾರಾಯಣಸ್ವಾಮಿ, ಕರ್ನಾಟಕ ರಾಜ್ಯ ದಲಿತ ನೌಕರರ ಒಕ್ಕೂಟ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಪ್ರಗತಿಪರ ಚಿಂತಕರ ವೇದಿಕೆ, ಮಂಡ್ಯ, ಬಂಡಾಯ ಸಾಹಿತ್ಯ ಸಂಘಟನೆ, ರೈತ ವಿದ್ಯಾರ್ಥಿ ಒಕ್ಕೂಟ, ಮಲ್ಲೇಪುರಂ, ಶ್ರೀಕಂಠಯ್ಯ ಹಾಸನ, ಗವಿಸಿದ್ದ ಬಳ್ಳಾರಿ, ಆರ್.ಜಿ. ಹಳ್ಳಿ ನಾಗರಾಜ್, ಎಲ್. ಹನುಮಂತಯ್ಯ, ಡಾ. ಬಸವರಾಜ ಸಬರದ, 'ಸಂಕ್ರಮಣ' ನಾಗರಾಜ್, ದೆಹಲಿಯ ಶ್ರೀಮತಿ ಕವಿತಾಕುಮಾರಿ, ಪಿ.ಆರ್. ತಿಪ್ಪೇಸ್ವಾಮಿ, ಪ್ರೊ. ಕೆ.ಆರ್. ನಾರಾಯಣಶೆಟ್ಟಿ, ಷಣ್ಮುಖಯ್ಯ ಅಕ್ಕೂರಮಠ, ನಟೇಶ್ ದೊಡ್ಡಹಟ್ಟಿ, ಹೇಮಾ ಪಟ್ಟಣಶೆಟ್ಟಿ, ಗುರುಲಿಂಗ ಕಾಪಸೆ, ಎಂ.ಜಿ. ಸದಾನಂದಯ್ಯ, ಬಿ.ವಿ. ಗುರುರಾಜ್, ಬಸವರಾಜ ಕಂಬಾರ, ಸಂಪಿಗೆ ತೋಂಟದಾರ್ಯ, ಎ.ಮುರಿಗಪ್ಪ ದೇಶಪಾಂಡೆ ಸುಬ್ರಾಯ, ಕುಮಾರ ಕಕ್ಕಯ್ಯಪೋಳ, ಡಾ. ಪುರುಷೋತ್ತಮ ಬಿಳಿಮಲೆ, ಫಕೀರ್ ಮಹ್ಮದ್ ಕಟ್ಪಾಡಿ, ಎಂ. ಜಯಣ್ಣ ಡಿ.ಎಸ್.ಎಸಿ – ಇವರೆಲ್ಲರಿಂದ ಭಗವಾನ್ ಅವರಿಗೆ ಪತ್ರಗಳು ಹರಿದುಬಂದವು; ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎಂದು ಘೋಷಿಸಿದವು.

ಲಂಕೇಶ್ ಅವರ ನೇತೃತ್ವದಲ್ಲಿ ಹುಟ್ಟಿಕೊಂಡಿದ್ದ 'ಕರ್ನಾಟಕ ಪ್ರಗತಿರಂಗ'ವು ಭಗವಾನ್ ಅವರ ಮೇಲೆ ಕೇಸು ಹಾಕಿದ ಪೊಲೀಸ್ ಉದ್ಧಟತನವನ್ನು ತೀವ್ರವಾಗಿ ಖಂಡಿಸಿತು. ಇದೇ ಸಂದರ್ಭದಲ್ಲಿ 'ಹಿಂದೂ–ಮುಸ್ಲಿಮ್; ಅದೇ ರಕ್ತ' ಎನ್ನುವ

ಲೇಖನ ಪ್ರಕಟಿಸಿದ 'ಲಂಕೇಶ್ ಪತ್ರಿಕೆ'ಯನ್ನು ಪುರೋಹಿತಶಾಹಿಗಳು ಹೊಳೆನರಸೀಪುರದಲ್ಲಿ ಸುಟ್ಟುಹಾಕಿ ಪ್ರತಿಭಟಿಸಿದ ಘಟನೆಯೂ ನಡೆಯಿತು. ಭಗವಾನ್ ಅವರ ಪರ ಹೋರಾಟಕ್ಕೆ ನಿಂತಿದ್ದ ಪ್ರಗತಿಪರರು ಇದರಿಂದ ಮತ್ತಷ್ಟು ಕೆಂಡಾಮಂಡಲಗೊಂಡರು.

1988ರ ಫೆಬ್ರವರಿಯಲ್ಲಿ ಬೆಂಗಳೂರಿನ ವೈಯಾಲಿಕಾವಲ್ ಪೋಲೀಸ್ ಠಾಣೆಯಲ್ಲಿ ಭಗವಾನ್ ಅವರ ವಿರುದ್ಧ ಕೇಸು ಮಾಡಲ್ಪಟ್ಟು ಎಫ್‌ಐಆರ್ ಅನ್ನು ಕೋರ್ಟ್‌ಗೆ ಕಳಿಸಲಾಗಿತ್ತು. ಆದರೆ ರಾಜ್ಯದಾದ್ಯಂತ ಭಗವಾನ್ ಪರ ಸ್ಫೋಟಗೊಂಡ ಪ್ರಗತಿಪರರ ಚಳವಳಿಯಿಂದಾಗಿ ಭಗವಾನ್ ಅವರ ಬಂಧನವಾಗಲಿಲ್ಲ.

ಇಷ್ಟೆಲ್ಲ ಕೋಲಾಹಲವನ್ನುಂಟುಮಾಡಿದ ಭಗವಾನ್ ಅವರ ಲೇಖನಗಳ ತಿರುಳು ಏನಿತ್ತು ಎನ್ನುವುದರ ಬಗ್ಗೆ ಓದುಗರಿಗೆ ಕುತೂಹಲವಿರುವುದು ಸಹಜ. ಹಾಗಾಗಿ ಅವರ ಲೇಖನಗಳಲ್ಲಿ ನನಗೆ ಮುಖ್ಯವೆನಿಸಿದ ಕೆಲವು ಭಾಗಗಳನ್ನು ಇಲ್ಲಿ ಕೊಡುತ್ತೇನೆ.

ಬೌದ್ಧರ ಧ್ವಂಸ : ಶಂಕರಾಚಾರ್ಯರು ಶೂದ್ರರಿಗೆ ಜ್ಞಾನವನ್ನು ನಿರಾಕರಿಸಿದ್ದಷ್ಟೇ ಅಲ್ಲ; ಅವರು ಮಾಡಿದ ಮಹಾಪರಾಧ ತಮ್ಮ ಸಿದ್ಧಾಂತಕ್ಕೆ ಬೃಹತ್ ಪ್ರಮಾಣದಲ್ಲಿ ಎದುರಾದ, ಬಲವಾಗಿ ಬೇರೂರಿದ್ದ ಬೌದ್ಧ ಧರ್ಮವನ್ನು ನಾಶಮಾಡಲು ಅವರು ತುಂಬಾ ಅನಾಗರಿಕ, ಅಸಂಸ್ಕೃತ, ಬರ್ಬರ, ಹೇಯ ವಿಧಾನಗಳನ್ನು ಅನುಸರಿಸಿದರು. ತಮ್ಮ ವಿದ್ವತ್ತು ಮತ್ತು ವಾದದ ಮೂಲಕ ಬೌದ್ಧರನ್ನು ಸೋಲಿಸಿದರೆಂಬುದು ಕೇವಲ ಬೂಟಾಟಿಕೆ. ವಾದದಲ್ಲಿ ಸೋಲುವುದೆಂದರೆ ಏನರ್ಥ? ವಾದಗಳು ಭಿನ್ನಾಭಿಪ್ರಾಯ ಮತ್ತು ಭಿನ್ನ ದೃಷ್ಟಿಕೋನಗಳಲ್ಲವೆ? ಹಾಗಿರುವಾಗ ಗೆಲ್ಲುವುದಾಗಲಿ, ಸೋಲುವುದಾಗಲಿ ಎಲ್ಲಿ ಬಂತು? ಇದು ಘನಮೋಸದ ದೊಡ್ಡ ಕಥೆ. ಆಳುವ ವರ್ಗದ ಬೆಂಬಲದಿಂದ ಜನಪರವಾಗಿದ್ದ ಬೌದ್ಧರನ್ನು ಅವರು ನಿರ್ನಾಮ ಮಾಡಿದರು. ದಕ್ಷಿಣದಲ್ಲಿ ಪಲ್ಲವರೂ ಪಶ್ಚಿಮದಲ್ಲಿ ಚಾಲುಕ್ಯರೂ ಬ್ರಾಹ್ಮಣ ಧರ್ಮವನ್ನು ನಿಷ್ಠೆಯಿಂದ ಪೋಷಿಸುತ್ತಿದ್ದ ಪ್ರಬಲ ರಾಜಮನೆತನಗಳಾಗಿದ್ದವು. ಬೌದ್ಧ ಧರ್ಮದ ಒಂದು ಗಟ್ಟಿನೆಲೆಯಾಗಿದ್ದ ನಾಗಾರ್ಜುನಕೊಂಡವನ್ನು ತಮ್ಮ ಅಸಂಖ್ಯಾತ ಅನುಯಾಯಿಗಳ ಜೊತೆ ಹೋಗಿ ತಮ್ಮ ಮೇಲ್ವಿಚಾರಣೆಯಲ್ಲಿ ಧ್ವಂಸಮಾಡಿದರು! ನಾಗಾರ್ಜುನಕೊಂಡದಲ್ಲಿ ಮೊಟ್ಟ ಮೊದಲಿಗೆ ಭೂಶೋಧನೆ ನಡೆಸಿದ, ಭಾರತ ಮತ್ತು ಸಿಲೋನಿನ ಪ್ರಾಚ್ಯಶಾಸ್ತ್ರ ಇಲಾಖೆಯ ಮಹಾ ನಿರ್ದೇಶಕರಾಗಿದ್ದ ಎ.ಎಚ್. ಲಾಂಗ್ ಹರ್ಸ್ಟ್, 'ನಾಗಾರ್ಜುನಕೊಂಡದ ಬೌದ್ಧಾವಶೇಷಗಳು' ಎಂಬ ಅಮೂಲ್ಯ ಸಂಶೋಧನಾ ಗ್ರಂಥದಲ್ಲಿ ದಾಖಲು ಮಾಡಿದ್ದಾರೆ..... (ಶಂಕರಾಚಾರ್ಯ ಮತ್ತು ಪ್ರತಿಗಾಮಿತನ – ಪುಟ 19)

ಬ್ರಾಹ್ಮಣರು ಸಾಮೂಹಿಕವಾಗಿ ಜಾತಿವಾದಿಗಳಾದರೆ ಶೂದ್ರರು ವೈಯಕ್ತಿಕವಾಗಿ ಜಾತಿವಾದಿಗಳು ಎಂದು ಮಹಾನಾಯಕ ಮತ್ತು ವಿಚಾರವಾದಿ ಪೆರಿಯಾರ್ ರಾಮಸ್ವಾಮಿ ಅವರು ಹೇಳುವುದು ಅಕ್ಷರಶಃ ನಿಜ. ತಮ್ಮ ಕೋಮಿನ ಹಿತಕ್ಕಾಗಿ ಬ್ರಾಹ್ಮಣರು ತ್ಯಾಗ ಮಾಡಿದರೆ, ಸ್ವಂತ ಪ್ರತಿಷ್ಠೆಗಾಗಿ ಶೂದ್ರರು ತಮ್ಮ ಜನಾಂಗವನ್ನು ಬಲಿಕೊಡುತ್ತಾರೆ. ಅಧಿಕಾರದ ಆಸೆ ಆಮಿಷಗಳಿಗೆ ಒಳಗಾದ ಜನರು ಎಂಥ ಪ್ರತಿಗಾಮಿ ಕಾರ್ಯಕ್ಕೂ ಇಳಿಯುತ್ತಾರೆ. ಆದ್ದರಿಂದ ಶೂದ್ರ ಸಮುದಾಯದ ನಿಜವಾದ ಶತ್ರುಗಳೆಂದರೆ ಶೂದ್ರರೇ, ಬ್ರಾಹ್ಮಣರಲ್ಲ....

ಜಾತ್ಯಂಧತೆಯಿಂದ ಪಾರಾಗಬೇಕೆಂದು ಪರಮಹಂಸರು ಒಂದು ಕೈಯಲ್ಲಿ ಜನಿವಾರ ಇನ್ನೊಂದು ಕೈಯಲ್ಲಿ ಮಣ್ಣನ್ನು ಹಿಡಿದುಕೊಂಡು ಇವೆರಡೂ ಸಮ ಎಂದು ಗಂಗಾನದಿಗೆ ಎಸೆಯುತ್ತಿದ್ದರು. ಬ್ರಹ್ಮ ಸಾಕ್ಷಾತ್ಕಾರಕ್ಕೆ ಬ್ರಾಹ್ಮಣಿಕೆ ದೊಡ್ಡ ಅಡ್ಡಿ ಎಂದು ಅವರು ಹೇಳಿ ಅದನ್ನು ಪೂಜಿಸಿದರು, ಮನುಷ್ಯರಾದರು........ ಪರಮಹಂಸರು ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗದಲ್ಲಿ ಅದ್ವೈತವನ್ನು ಸಾಧಿಸಿದ ನಂತರ ಇಸ್ಲಾಂ ಧರ್ಮವನ್ನೂ, ಕ್ರೈಸ್ತ ಧರ್ಮವನ್ನೂ ಅಕ್ಷರಶಃ ಪಾಲಿಸಿದರು. ಆ ಮತಸ್ಥರ ರೀತಿಯಲ್ಲಿ ಬಟ್ಟೆ ತೊಟ್ಟರು. ದೇವರ ಪೂಜೆ ಮಾಡಿದರು; ಅವರು ಸೇವಿಸಿದ ಆಹಾರವನ್ನೇ ಊಟ ಮಾಡಿದರು. ಕೊನೆಗೆ ಒಂದು ಸತ್ಯವನ್ನು ಕಂಡುಕೊಂಡರು. "ದೇವನೊಬ್ಬ ನಾಮ ಹಲವು..."

ಶಂಕರಾಚಾರ್ಯರ ಬಗ್ಗೆ ವಿವೇಕಾನಂದರ ಟೀಕೆ: 'ಶಂಕರರಿಗೆ ಕ್ಷೌರದ ಕತ್ತಿಯಂಥ ನಿಶಿತಮತಿಯಿತ್ತು. ಅವರು ಒಳ್ಳೆಯ ವಾದಪಟು ಮತ್ತು ವಿದ್ವಾಂಸ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಅವರಿಗೆ ಔದಾರ್ಯವಿರಲಿಲ್ಲ. ಅವರ ಹೃದಯವೂ ಹಾಗೆಯೇ ಇದ್ದಂತೆ ಕಾಣುತ್ತದೆ. ಜೊತೆಗೆ ಅವರು ತಮ್ಮ ಬ್ರಾಹ್ಮಣ್ಯದ ಬಗ್ಗೆ ಭಾರೀ ಹೆಮ್ಮೆಪಡುತ್ತಿದ್ದರು– ದಕ್ಷಿಣ ಭಾರತದ ಪುರೋಹಿತವರ್ಗದ ಹಾರುವರ ಹಾಗೆ ತುಂಬಾ ಗರ್ವಪಡುತ್ತಿದ್ದರು ಎನ್ನಬಹುದು. ಬ್ರಾಹ್ಮಣೇತರ ಜಾತಿಯವರಿಗೆ ಬ್ರಹ್ಮಜ್ಞಾನ ಸಿದ್ಧಿಸುವುದಿಲ್ಲವೆಂದು ವೇದಾಂತ ಸೂತ್ರಗಳ ಭಾಷ್ಯದಲ್ಲಿ ಹೇಗೆ ಸಮರ್ಥಿಸಿಬಿಟ್ಟಿದ್ದಾರೆ! ಎಂಥ ಡಾಂಭಿಕ ವಾದಸರಣಿ! ಹಿಂದಿನ ಜನ್ಮದಲ್ಲಿ ವಿದುರ ಬ್ರಾಹ್ಮಣ ದೇಹವನ್ನು ಧರಿಸಿದ್ದರಿಂದ ಅವನಿಗೆ ಬ್ರಹ್ಮಜ್ಞಾನ ಸಿದ್ಧಿಸಿದರೆ, ಅವನು ಹಿಂದೆ ಹಾರುವನಾಗಿ ಹುಟ್ಟಿದ್ದರಿಂದ ಬ್ರಹ್ಮಜ್ಞಾನ ಸಿದ್ಧಿಸಿತೆಂಬ ನಿಮ್ಮ ಶಂಕರನ ವಾದವನ್ನು ನಾವು ಒಪ್ಪಬೇಕಲ್ಲವೆ? ಚೆನ್ನಾಗಿದೆ!.... ತ್ರೈವರ್ಣಿಕರಲ್ಲಿ ಪ್ರತಿಯೊಬ್ಬನಿಗೂ ವೇದಾಧ್ಯಯನ ಮತ್ತು ಬ್ರಹ್ಮ ಸಾಕ್ಷಾತ್ಕಾರದ ಹಕ್ಕುಂಟು ಎಂದು ವೇದಗಳೇ ಹೇಳುವುದಿಲ್ಲವೆ? ಆದ್ದರಿಂದ ವೇದಕ್ಕೆ ವಿರುದ್ಧವಾದ ಈ ವಿಷಯದ ಬಗ್ಗೆ ಶಂಕರ ತನ್ನ ಪಾಂಡಿತ್ಯದ ಒಂದು ವಿಚಿತ್ರ ತುಣುಕನ್ನು ಪ್ರದರ್ಶಿಸುವ ಅಗತ್ಯವೇ ಇರಲಿಲ್ಲ.

ಆತನ ಹೃದಯ ಎಂಥಾದ್ದು ಎಂದರೆ, ಅಸಂಖ್ಯಾತ ಬೌದ್ಧ ಭಿಕ್ಷುಗಳನ್ನು ಬೆಂಕಿಗೆ ಹಾಕಿ ಸುಟ್ಟುಬಿಟ್ಟನು.... ಶಂಕರನ ಇಂಥ ಕೆಲಸವನ್ನು ಮತಾಂಧತೆ (fanaticism) ಎನ್ನದೆ ಬೇರೇನೆಂದು ಕರೆಯುವುದು? (ಸ್ವಾಮಿ ವಿವೇಕಾನಂದ ಸಮಗ್ರ ಕೃತಿಗಳು, ಸಂ. 7, ಪುಟ 116, ಕಲ್ಕತ್ತ) (ಅದೇ ಪುಟ ೩೫)

ಉಪನಿಷತ್ತಿನ ಮೇಲೆಯೇ ಬೌದ್ಧಧರ್ಮ ಬೆಳೆದಿದೆ. ಶಂಕರನ ತತ್ವಶಾಸ್ತ್ರಕ್ಕೂ ಅದೇ ಮೂಲ. ಬುದ್ಧರ ಮಹಾದ್ಭುತ ಅನುಕಂಪ ಹೃದಯದ ತಿಲಾಂಶವೂ ಶಂಕರನಿಗೆ ಇರಲಿಲ್ಲ. ಅವನದು ಬರಿಯ ಬುದ್ಧಿಯ ಒಣಪಾಂಡಿತ್ಯ... (ಸ್ವಾ ವಿವೇಕಾನಂದ ಸಕೃ ಸಂ. 6, ಪುಟ 202, ಕಲ್ಕತ್ತ)

ಧೂರ್ತರೂ ಠಕ್ಕರೂ ಆದ ಪುರೋಹಿತರು ಎಲ್ಲಾ ಬಗೆಯ ಮೂಢನಂಬಿಕೆಗಳನ್ನೂ ವೇದ ಮತ್ತು ಹಿಂದೂ ಧರ್ಮದ ಸಾರ ಎಂದು ಜನರಿಗೆ ಬೋಧಿಸುತ್ತಾರೆ. ಈ ಖದೀಮ ಪುರೋಹಿತರಾಗಲಿ ಅವರ ತಾತ ಮುತ್ತಾತಂದಿರಾಗಲೀ ಕಳೆದ ನಾನೂರು ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನೂ ಕೂಡ ನೋಡಿಲ್ಲ. ಅವರು ಮೂಢಾಚಾರಗಳನ್ನು ಅನುಸರಿಸಿ ತಮ್ಮನ್ನೇ ಹೀನಸ್ಥಿತಿಗೆ ತಂದುಕೊಳ್ಳುತ್ತಾರೆ. ಕಲಿಯುಗದ ರಾಕ್ಷಸರಂತೆ ಇರುವ ಈ ಬ್ರಾಹ್ಮಣರಿಂದ ಜನರನ್ನು ಆ ದೇವರೇ ಕಾಪಾಡಬೇಕು... ಬನ್ನಿ, ಮನುಷ್ಯರಾಗಿ. ಪುರೋಹಿತರನ್ನು ಒದ್ದೋಡಿಸಿ. ಅವರು ಎಲ್ಲಾ ಪ್ರಗತಿಗೂ ವಿರೋಧವಾಗಿದ್ದಾರೆ. ಅವರೆಂದೂ ಬದಲಾಗುವುದಿಲ್ಲ. ಅವರ ಹೃದಯವೆಂದೂ ವಿಶಾಲವಾಗುವುದಿಲ್ಲ. ಅವರು ಶತಶತಮಾನಗಳ ಮೂಢನಂಬಿಕೆಯ ದಬ್ಬಾಳಿಕೆಯ ಸಂತಾನ. ಮೊದಲು ಪುರೋಹಿತಶಾಹಿಯನ್ನು ಮೂಲೋತ್ಪಾಟನೆ ಮಾಡಿ.... (ಸ್ವಾವಿ. ಸಮಗ್ರ ಕೃತಿಗಳು– ಸಂಪುಟ 5, ಪುಟ 10, ಕಲ್ಕತ್ತ 1964)

ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ತಲೆಯ ಮೇಲೆ ಹೊತ್ತುಕೊಂಡು ಮೆರೆಸುತ್ತಿದ್ದ ಸಂಘ ಪರಿವಾರದವರಿಗೆ ಎಂಥ ಕೋಪ ಉಕ್ಕಿರಬೇಕು ನೀವೇ ಊಹಿಸಿ. ಸಂಘ ಪರಿವಾರಿಗಳಿಗೆ ವಿವೇಕಾನಂದರ ಫೋಟೋ ಬೇಕು. ಆದರೆ, ಅವರ ಚಿಂತನೆಗಳು ಬೇಡ! ವಿವೇಕಾನಂದರ ಚಿಂತನೆಗಳನ್ನು ಯಥಾವತ್ ಪ್ರಕಟಿಸಿದರೆ ಬಾಲಸುಟ್ಟುಕೊಂಡ ಬೆಕ್ಕಿನಂತಾಡತೊಡಗುತ್ತವೆ....

ಭಗವಾನರ ಪುಸ್ತಕ ಪುರೋಹಿತಶಾಹಿಗಳ ವಿರುದ್ಧ ಬೃಹತ್ ಜ್ವಾಲೆಗಳನ್ನು ಹುಟ್ಟಿಸಿದ್ದು ಕರ್ನಾಟಕದ ಪ್ರಗತಿಪರ ಚಳವಳಿಯ ಇತಿಹಾಸದ ಒಂದು ಮೈಲಿಗಲ್ಲು ಎಂದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ.

85

ಗಂಧದ ಗುಡಿಯ ನಿಜರಾಜಕುಮಾರ

ನಮ್ಮ ಪಾರಂಪರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನಾರ್ಜನೆಯೊಂದಿಗೆ ದೈಹಿಕ ಶಿಕ್ಷಣ ಸೇರಿಕೊಂಡಿರಲಿಲ್ಲ. ಮೇಲುನೋಟಕ್ಕೇ ಕಾಣುವಂತೆ ಇದು ವರ್ಣಾಶ್ರಮ ವ್ಯವಸ್ಥೆಯ ಫಲಶ್ರುತಿ. ಬ್ರಾಹ್ಮಣರಿಗೆ ವೇದಗಳ ಶಿಕ್ಷಣ ನೀಡುವ ಹಾಗೆಯೇ ಕ್ಷತ್ರಿಯರಿಗೆ ಯುದ್ಧ ಸಂಬಂಧಿ ಶಸ್ತ್ರಾಸ್ತ್ರ ಶಿಕ್ಷಣ ನೀಡುವ ಸಂಪ್ರದಾಯ ಬೆಳೆದುಕೊಂಡು ಬಂದದ್ದು ವೇದ್ಯ ವಿಷಯವೇ ಸರಿ. ಹಾಗಾಗಿ ರಾಜ್ಯವೊಂದರ ಮೇಲೆ ವೈರಿಗಳು ಯುದ್ಧ ಸಾರಿದಾಗ ಬ್ರಾಹ್ಮಣರು ಯುದ್ಧದಲ್ಲಿ ಜಯಗಳಿಸಲಿಕ್ಕಾಗಿ ಯಜ್ಞ, ಯಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಕ್ಷತ್ರಿಯರು ಶಸ್ತ್ರಗಳನ್ನು ಹಿಡಿದು ರಣರಂಗಕ್ಕೆ ಇಳಿಯುತ್ತಿದ್ದರು. ಯುದ್ಧದಲ್ಲಿ ವೈರಿಗಳು ಗೆಲುವು ಸಾಧಿಸಿ ಸಿಂಹಾಸನವನ್ನು ಆಕ್ರಮಿಸಿಕೊಂಡಾಗ ತಮ್ಮ ಆಶ್ರಯ ನೀಡಿದ ರಾಜನ ಗೆಲುವಿಗಾಗಿ ಯಜ್ಞದಲ್ಲಿ ತೊಡಗಿದ ವೈದಿಕರು ಅದೇ ಯಜ್ಞವನ್ನು ವೈರಿರಾಜನ ಪಟ್ಟಾಭಿಷೇಕದ ಯಜ್ಞವಾಗಿ ಮಾರ್ಪಡಿಸಿದ ಉದಾಹರಣೆಗಳಿಗೆ ಕೊರತೆಯಿಲ್ಲ. ಟಿಪ್ಪು ಸುಲ್ತಾನನನ್ನು ಬ್ರಿಟಿಷರು ಯುದ್ಧದಲ್ಲಿ ಕೊಂದಾಗ ದಿವಾನ್ ಪೂರ್ಣಯ್ಯನವರು ತಕ್ಷಣವೇ ತಮ್ಮ ನಿಷ್ಠೆಯನ್ನು ಬ್ರಿಟಿಷರ ಪಾದಗಳಿಗೆ ಎರೆದದ್ದನ್ನು ಆಧುನಿಕ ಇತಿಹಾಸದಲ್ಲಿ

ನಾವು ಕಾಣುತ್ತೇವೆ. ಅಷ್ಟೇ ಏಕೆ, ಇತ್ತೀಚೆಗೆ ನಡೆದ ಕ್ರಿಕೆಟ್ ವರ್ಲ್ಡ್ ಕಪ್‌ನಲ್ಲಿ ಭಾರತ ತಂಡದ ಯಶಸ್ಸಿಗಾಗಿ ಯಜ್ಞ, ಹೋಮಗಳನ್ನು ನಡೆಸಿದ್ದು ತಾಜಾ ಉದಾಹರಣೆ. ಜ್ಞಾನ ಮತ್ತು ಪರಿಶ್ರಮಗಳು ಶತಶತಮಾನಗಳಿಂದ ನಮ್ಮ ದೇಶದಲ್ಲಿ ಪರಸ್ಪರ ವಿಚ್ಛೇದನಗೊಂಡು ಬಂದಿರುವುದರ ದುಷ್ಪರಿಣಾಮಗಳನ್ನು ಹೀಗೇ ಗುರುತಿಸುತ್ತಾ ಹೋಗಬಹುದು. ಯಾವ ಯಜ್ಞಯಾಗಗಳನ್ನೂ ಮಾಡದ ಆಸ್ಟ್ರೇಲಿಯಾ ತಂಡ ವರ್ಲ್ಡ್ ಕಪ್ ಅನ್ನು ಹೇಗೆ ತನ್ನದಾಗಿಸಿಕೊಂಡಿತೆನ್ನುವ ಆತ್ಮಾವಲೋಕನ ಈಗಲೂ ಆಗದಿರುವುದು ನಮ್ಮ ದೇಶದ ಬಹುದೊಡ್ಡ ದುರಂತವೆನಿಸುತ್ತದೆ.

ಸ್ವಾತಂತ್ರ್ಯಾ ನಂತರದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮಗಳ ಜೊತೆಗೆ ದೈಹಿಕ ಶಿಕ್ಷಣವನ್ನೂ ಸೇರಿಸಲಾಯಿತು. ಈ ವಿಶಿಷ್ಟ ಸಂಯೋಜನೆಯ ಶಿಕ್ಷಣ ಪದ್ಧತಿ ಗ್ರೀಕರ ಬಳುವಳಿಯಾಗಿದೆಯೆನ್ನುವುದು ನನ್ನ ಅನಿಸಿಕೆ. ಪ್ರಪಂಚದ ಸಾಹಿತ್ಯದಲ್ಲಿ ಬೀಜಬರಹಗಾರರೆಂದು (seed writers) ಖ್ಯಾತಿ ಗಳಿಸಿದ ಟಾಲ್‌ಸ್ಟಾಯ್ ಮತ್ತು ದಾಸ್ತೋವ್‌ಸ್ಕಿಗಳು ಸ್ವತಃ ರಣರಂಗದಲ್ಲಿ ನಿಂತು ಯುದ್ಧ ಮಾಡಿದ ಅನುಭವಿಗಳು. ಅಂಥ ಅನುಭವ ಶ್ರೀಮಂತಿಕೆಯೇ ಟಾಲ್‌ಸ್ಟಾಯ್‌ರಿಂದ 'ವಾರ್ ಅಂಡ್ ಪೀಸ್'ನಂಥ ಮಹಾನ್ ಕಾದಂಬರಿಗೆ ಕಾರಣವಾಯಿತು. ಕಳಿಂಗ ಯುದ್ಧದ ಕ್ರೌರ್ಯ ಸಾಮ್ರಾಟ್ ಅಶೋಕನ ಮನದಂತರಾಳದ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು. ಅಶೋಕನ ಮನಸ್ಸಿನೊಳಗೆ ಯುದ್ಧದ ಬಗೆಗೆ ಉಂಟಾದ ವಾಕರಿಕೆ, ತಳಮಳಗಳು ಕಾವ್ಯವಾಗಿ ಹೊಮ್ಮಲು ಸಾಧ್ಯವಾಗಲಿಲ್ಲ. ಇಂಥ ಊಹಾತ್ಮಕ ನಿರೀಕ್ಷೆ ಮೇಲುನೋಟಕ್ಕೆ ಅಸಮಂಜಸವಾಗಿ ಕಾಣಿಸಬಹುದು. ಆದರೆ ಇಂಥದೊಂದು ಪ್ರಶ್ನೆ ಏಕೆ ಹೊಳೆಯಿತು ಎನ್ನುವುದರ ಬಗೆಗೆ ತಲೆ ಕೆಡಿಸಿಕೊಳ್ಳಬೇಕೆನಿಸುತ್ತದೆ.

ನಾನು ಈಗ ಹೇಳಹೊರಟಿರುವ ವಿಷಯಕ್ಕೆ ಇದು ದೊಡ್ಡ ಪೀಠಿಕೆಯೇ ಎನಿಸಬಹುದು. ಶಾಲಾ, ಕಾಲೇಜುಗಳ ವಿದ್ಯಾಭ್ಯಾಸದ ಸಮಯದಲ್ಲಿ ಆಡುವ ಆಟಗಳು ಮನಸ್ಸು ಮತ್ತು ದೇಹಗಳ ಸಮಾಗಮಕ್ಕೆ ಕಾರಣವಾಗುತ್ತವೆ. ಇಂಥ ಸಮಾಗಮ ವಿದ್ಯಾರ್ಥಿಯ ಧ್ಯೇಯ, ಧೋರಣೆ, ಬದ್ಧತೆ, ಛಲಗಳ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಬಲ್ಲದು. ವಿದ್ಯಾಭ್ಯಾಸ ಮುಗಿಸಿದ ಯುವಕ ತನ್ನ ಜ್ಞಾನದ ಮೂಲಕ ಕಾರ್ಯಪ್ರವೃತ್ತನಾಗಬೇಕಾದಾಗ ಆಟದಿಂದ ಕಲಿತ ಪಾಠಗಳ ಅವಶ್ಯಕತೆ ತುಂಬಾ ಇರುತ್ತದೆ.

ಕೆ.ಎಂ.ಇ. ಸ್ವಾಮಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ

ಅಧಿಕಾರಿಯಾಗಿದ್ದಾಗ ಅವರ ಕೈಯಲ್ಲಿ ಅನೇಕ ವಿದ್ಯಾರ್ಥಿಗಳು ವಿಶೇಷವಾಗಿ ವಾಲಿಬಾಲ್ ತರಬೇತಿ ಪಡೆದುಕೊಂಡರು. ಸ್ವಾಮಿಯವರು ಒಳ್ಳೆಯ ವಾಲಿಬಾಲ್ ಆಟಗಾರರು ಮತ್ತು ದೇಶಮಟ್ಟದ ಕೋಚ್ ಕೂಡಾ ಹೌದು. ಭಾರತದ ವಾಲಿಬಾಲ್ ಟೀಮ್‌ಗೆ ತರಬೇತುದಾರರಾಗಿ ಪಂಜಾಬಿನ ಪಾಟಿಯಾಲಾದಲ್ಲಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಕೀರ್ತಿ ಇವರದು.

ಸ್ವಾಮಿಯವರಿಗೆ ಆರು ಜನ ಕಿರಿಯ ಸಹೋದರರು. ಈ ಏಳೂ ಜನ ಸಹೋದರರೂ ವಾಲಿಬಾಲ್ ಆಟಗಾರರೆನ್ನುವುದು ಒಂದು ವಿಶೇಷ.

ಐಟಿಐನಲ್ಲಿ ಸೇವೆ ಸಲ್ಲಿಸುತ್ತಿದ್ದ ಬಾಲಾಜಿ ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರರು. ಇವರು ಸ್ವಾಮಿಯವರ ಸಹೋದರರಲ್ಲೊಬ್ಬರು. ಸ್ವಾಮಿಯವರ ಇನ್ನೋರ್ವ ಸಹೋದರ ಕೆ.ಎಂ.ಇ. ರಾಮು ರಾಜ್ಯಮಟ್ಟದ ವಾಲಿಬಾಲ್ ಆಟಗಾರರು. ಇವರು ನನ್ನ ತಂಗಿಯ ಗಂಡ.

ಈ ಏಳೂ ಜನ ಸಹೋದರರು ಒಂದೇ ಟೀಮ್‌ನಲ್ಲಿ ಆಡಿದ್ದೂ ಉಂಟು. ಆಗ ಈ ಸೆವೆನ್ ಬ್ರದರ್ಸ್ ಟೀಮ್ ಅನ್ನು ಸೋಲಿಸುವ ತಾಕತ್ತು ಯಾವ ಟೀಮುಗಳಿಗೂ ಇರುತ್ತಿರಲಿಲ್ಲ. ಕೆ.ಎಂ.ಇ. ರಾಮು ಅಕೌಂಟೆಂಟ್ ಜನರಲ್ ಆಫೀಸ್‌ನಲ್ಲಿ ಅಧಿಕಾರಿಗಳೂ ಆಗಿದ್ದರು.

ಈ ಏಳು ಜನ ಸಹೋದರರನ್ನು ಪತ್ರಿಕೆಗಳು 'ಫ್ಯಾಮಿಲಿ ಆಫ್ ಪ್ಲೇಯರ್ಸ್' ಎಂದು ಬಣ್ಣಿಸಿದ್ದೂ ಇದೆ.

ದೇಶಮಟ್ಟದಲ್ಲಿ ನೂರಾರು ವಾಲಿಬಾಲ್ ಆಟಗಾರರನ್ನು ತರಬೇತುಗೊಳಿಸಿದ ಸ್ವಾಮಿಯವರ ಕೈಯಲ್ಲಿ ಪಳಗಿದ ಆಟಗಾರರಲ್ಲಿ ಅನೇಕರು ಅರಣ್ಯಾಧಿಕಾರಿಗಳಾದರು. ಅವರ ಪೈಕಿ ಚಿನ್ನಪ್ಪ ಒಬ್ಬರು. ಚಿನ್ನಪ್ಪ ತಮ್ಮ ದಕ್ಷತೆ, ಕರ್ತವ್ಯನಿಷ್ಠೆಗಳಿಗೆ ಹೆಸರುವಾಸಿಯಾದ ಅರಣ್ಯ ಅಧಿಕಾರಿಗಳಾಗಿದ್ದರು.

ನಾಗರಹೊಳೆ ಅರಣ್ಯವನ್ನು ಅಭಯಾರಣ್ಯವೆಂದು ಅರವತ್ತರ ದಶಕದಲ್ಲೇ ಘೋಷಿಸಲಾಗಿತ್ತಾದರೂ ಅದರ ರಕ್ಷಣೆಯ ಕಡೆಗೆ ಸರ್ಕಾರ ವಿಶೇಷ ಗಮನ ಹರಿಸಿರಲಿಲ್ಲ. ನಾಗರಹೊಳೆ ರೇಂಜ್‌ಗೆ ಹೋಗಿ ಕೆಲಸ ಮಾಡಲು ಬಹುತೇಕ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದರು. ನಿವೃತ್ತಿಗೆ ಐದಾರು ತಿಂಗಳುಗಳು ಮಾತ್ರ ಉಳಿದಿರುವಂಥ ಅಧಿಕಾರಿಗಳಿಗೆ ಪೋಸ್ಟಿಂಗ್ ಕೊಡಲಾಗುತ್ತಿದ್ದುದೇ ಹೆಚ್ಚು.

ನಾಗರಹೊಳೆಯಲ್ಲಿ ಕಾಡುಮೃಗಗಳಿಗಿಂತ ಕಾಡುಗಳ್ಳರ ಸಂಖ್ಯೆಯೇ ಹೆಚ್ಚು ಎನ್ನುವ ಸ್ಥಿತಿಯುಂಟಾಗಿತ್ತು. ಬೇಟೆಗಾರರು ಮತ್ತು ಕಾಡುಕಟುಕರು ನೈಸರ್ಗಿಕ

ಅರಣ್ಯವನ್ನು ನಾಶಮಾಡುತ್ತಿರುವುದನ್ನು ಸರ್ಕಾರ ನಿಯಂತ್ರಿಸಲು ವಿಶೇಷ ಮುತುವರ್ಜಿ ವಹಿಸಲಿಲ್ಲ. ಖದೀಮರ ದಾಳಿಯಿಂದ ಬೋಳಾದ ಖಾಲಿ ಕಾಡು ಪ್ರದೇಶದಲ್ಲಿ ಕೋಟ್ಯಂತರ ವೆಚ್ಚ ಮಾಡಿ ತೇಗದ ಮರಗಳನ್ನು ನೆಡುವ ಯೋಜನೆಗೆ ಸರ್ಕಾರ ಅಂಟಿಕೊಂಡಿತ್ತು. ನೈಸರ್ಗಿಕ ಕಾಡು ಮಾತ್ರ ಅರಣ್ಯದ ಜೌಗು ಪ್ರದೇಶಗಳನ್ನು ಕಾಪಾಡಿಕೊಂಡು ಬರಲು ಸಾಧ್ಯ. Monoculture ಮೂಲಕ ಕೃತಕ ತೇಗದ ಅರಣ್ಯ ಬೆಳೆಸಿದರೆ ಅರಣ್ಯ ಭೂಮಿಯ ಸಂಪತ್ತು ಕೊಚ್ಚಿಹೋಗುತ್ತದೆ.

ಇಂಥ ದುಃಸ್ಥಿತಿಯಲ್ಲಿದ್ದ ನಾಗರಹೊಳೆ ಅಭಯಾರಣ್ಯಕ್ಕೆ ಚಿನ್ನಪ್ಪ ಅಧಿಕಾರಿಯಾಗಿ ಬಂದರು.

ಚೆನ್ನಾಗಿರುವ ಬೃಹತ್ ಮರಗಳನ್ನು ರಾತ್ರೋರಾತ್ರಿ ಕಡಿದು ಹಾಕಿ ತಾವೇ ಉರುಳಿಬಿದ್ದ ಮರಗಳು ಎಂದು ಮಾರುವ ದಂಧೆಯೂ ಅಲ್ಲಿತ್ತು. ಅರಣ್ಯವಾಸಿ ಬುಡಕಟ್ಟು ಬಡಜನರು ತಮ್ಮ ಹೊಟ್ಟೆಪಾಡಿಗಾಗಿ ಕಾಡುಗಳ್ಳರೊಂದಿಗೆ ಶಾಮೀಲಾಗಿದ್ದರು. ಅಷ್ಟೇ ಅಲ್ಲ, ಅರಣ್ಯ ಇಲಾಖೆಯ ಉನ್ನತ ಸ್ಥಾನಗಳಲ್ಲಿದ್ದ ಕೆಲವು ಅಧಿಕಾರಿಗಳೂ ಕಾಡುಗಳ್ಳರೊಂದಿಗೆ ಶಾಮೀಲಾಗಿದ್ದರು. ಇನ್ನು ಸ್ಥಳೀಯ ಪೊಲೀಸರು ಭ್ರಷ್ಟ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿಬಿಟ್ಟಿದ್ದರು. ಹುಲಿ, ಚಿರತೆ, ಆನೆಗಳನ್ನು ಕೊಂದು ಚರ್ಮ ಮತ್ತು ದಂತಗಳನ್ನು ಕಳ್ಳ ಸಾಗಾಣಿಕೆ ಮಾಡಲಾಗುತ್ತಿತ್ತು. ಇಂಥ ದರೋಡೆಗಳ ವಿರುದ್ಧ ಶಾಸ್ತ್ರಕ್ಕೆನ್ನುವಂತೆ ವರ್ಷದಲ್ಲಿ ಒಂದೆರಡು ಕೇಸುಗಳನ್ನು ಮಾಡಿ ಕೈತೊಳೆದುಕೊಳ್ಳುತ್ತಿತ್ತು ಆ ರೇಂಜ್‌ಗೆ ಸಂಬಂಧಿಸಿದ್ದ ಸಿಬ್ಬಂದಿ. ಅಭಯಾರಣ್ಯದ ಕಾಡು ಹಂದಿ, ಜಿಂಕೆ, ಮೊಲ ಇತ್ಯಾದಿ ಮಾಂಸಗಳ ರುಚಿ ನೋಡಲು ಶ್ರೀಮಂತರು, ರಾಜಕಾರಣಿಗಳು, ಮಂತ್ರಿ ಮಹೋದಯರು ಹಾಗೂ ಉನ್ನತ ಅಧಿಕಾರಿಗಳು ಬಂದು ಅಲ್ಲಿ ತಂಗುತ್ತಿದ್ದರು.

ದಕ್ಷ ಅಧಿಕಾರಿ ಚಿನ್ನಪ್ಪ ನಾಗರಹೊಳೆ ರೇಂಜ್‌ಗೆ ವರ್ಗಾ ಆಗಿ ಬಂದು ಈ ಎಲ್ಲ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದರು. ಅರಣ್ಯವನ್ನು ಅಭಿವೃದ್ಧಿಗೊಳಿಸದಿದ್ದರೂ ಇದ್ದುದನ್ನಾದರೂ ಉಳಿಸಿಕೊಂಡು ಹೋಗಬೇಕು ಎನ್ನುವ ಪಣ ತೊಟ್ಟರು. ಈ ಕೆಲಸ ಚಿನ್ನಪ್ಪನವರಿಗೆ ಸುಲಭ ಸಾಧ್ಯದ್ದೇನೂ ಆಗಿರಲಿಲ್ಲ. ಏಕಕಾಲದಲ್ಲಿ ತಮ್ಮ ಉನ್ನತ ಅಧಿಕಾರಿಗಳು, ಮಂತ್ರಿಗಳು, ಪೊಲೀಸರು, ಕಾಡಿನ ಬುಡಕಟ್ಟು ಜನರು ಮತ್ತು ಕಾಡುಗಳ್ಳರನ್ನು ಎದುರು ಹಾಕಿಕೊಂಡು ತಮ್ಮ ಕಾರ್ಯ ಸಾಧಿಸಬೇಕಾಗಿತ್ತು. ನಾಲ್ಕು ಗೋಡೆಗಳ ಮಧ್ಯೆ ಹವಾನಿಯಂತ್ರಿತ ಚೇಂಬರ್‌ನಲ್ಲಿ ಕೂರುವ ಅಧಿಕಾರಿಯಿಂದ ಇಂಥ ಕಾರ್ಯಾಚರಣೆಯನ್ನು ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಕಾಡು ಉಳಿಸುವ ಈ ಕಾರ್ಯಾಚರಣೆಗೆ ಅತ್ಯವಶ್ಯವಾಗಿ

ಬೇಕಿರುವ ಸಂಪರ್ಕ ಮಾಧ್ಯಮದ ಅನುಕೂಲವೂ ಚಿನ್ನಪ್ಪನವರ ಬಳಿ ಇರಲಿಲ್ಲ. ತಮ್ಮ ಕೈಕೆಳಗೆ ಇದ್ದ ಸಿಬ್ಬಂದಿಯಲ್ಲಿಯೇ ಕೆಲವರು ಕಾಡುಗಳ್ಳರ ಬೇಹುಗಾರರಿದ್ದರು. ಇವನ್ನೆಲ್ಲ ನಿಭಾಯಿಸಲು ಚಿನ್ನಪ್ಪ ಯೋಧನಂತೆ ಸಿದ್ಧಗೊಂಡರು.

ಅರಣ್ಯ ಅಧಿಕಾರಿ ಚಿನ್ನಪ್ಪ ನಾಗರಹೊಳೆ ಅಭಯಾರಣ್ಯದ ರಕ್ಷಣೆಯ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಇಲಾಖೆಯ ಸಿಬ್ಬಂದಿಯಲ್ಲಿ ಕೆಲವರು ಅಸಹಕಾರ ತೋರಿದರೆ ಮತ್ತೆ ಕೆಲವರು ಸಂಪೂರ್ಣ ಸಹಕಾರ ನೀಡತೊಡಗಿದರು. ಅದರಲ್ಲಿ ವಿಶೇಷವಾಗಿ ಚೆಂಗಪ್ಪ ಎನ್ನುವ ಫಾರೆಸ್ಟ್ ಗಾರ್ಡ್ ತ್ಯಾಗಮನೋಭಾವದಿಂದ ಕರ್ತವ್ಯ ನಿಷ್ಠೆ ತೋರತೊಡಗಿದ. ಕಾಡನ್ನು ತನ್ನ ತಾಯಿ ಎಂದೇ ತಿಳಿದುಕೊಂಡಿದ್ದ ಚೆಂಗಪ್ಪನಿಗೆ ತನ್ನ ಕರ್ತವ್ಯನಿಷ್ಠೆ ಮೆರೆಯಲು ಸೂಕ್ತ ಅವಕಾಶಗಳು ಸಿಕ್ಕಿರಲಿಲ್ಲ. ಅಂಥ ಸದವಕಾಶವನ್ನು ಕಲ್ಪಿಸಿಕೊಟ್ಟ ಅಧಿಕಾರಿ ಚಿನ್ನಪ್ಪನ ಅಚ್ಚುಮೆಚ್ಚಿನ ಬಲಗೈ ಬಂಟನಾದ ಚೆಂಗಪ್ಪ. ಮೂಲತಃ ಕೊಡಗಿನವನಾದ ಚೆಂಗಪ್ಪನ ಮೇಲೆ 'ಗಂಧದ ಗುಡಿ' ಮತ್ತು 'ಹುಲಿಯ ಹಾಲಿನ ಮೇವು' ಸಿನಿಮಾಗಳು ವಿಶೇಷ ಪ್ರಭಾವ ಬೀರಿದ್ದವು.

ಚೆಂಗಪ್ಪನಿಗೆ ಗಂಡು ಮಗು ಜನಿಸಿದ್ದರಿಂದ ತನ್ನ ಸ್ನೇಹಿತರಿಗೆ ಗುಂಡಿನ ಪಾರ್ಟಿ ವ್ಯವಸ್ಥೆ ಮಾಡಿದ. ಕುಡಿಯುತ್ತ ಅಮಲೇರಿಸಿಕೊಂಡ ಸ್ನೇಹಿತರು ಚೆಂಗಪ್ಪನನ್ನು ಹೊಗಳಲು ಶುರು ಮಾಡಿದರು. 'ನೀನು ಹುಲಿಯ ಹಾಲಿನ ಮೇವು ಸಿನಿಮಾದ ಹೀರೋ ಚೆಂಗಮಣೀನೇ ಕಣೋ...' ಎಂದು ಒಬ್ಬ ಸ್ನೇಹಿತ ಎಂದಾಗ ಖುಷಿಯಿಂದ ಎದೆಯುಬ್ಬಿಸಿದ. ಹಾಗೆಂದು ತನ್ನನ್ನು ಹೊಗಳಿದ ಸ್ನೇಹಿತ ಮಣಿಯ ಗ್ಲಾಸ್‌ಗೆ ಮದ್ಯ ಸುರಿದ ಚೆಂಗಪ್ಪ.

ಮಾರನೆಯ ಬೆಳಿಗ್ಗೆ ಚೆಂಗಪ್ಪ ಡ್ಯೂಟಿಗೆ ಹೋದ. ಇದ್ದಕ್ಕಿದ್ದಂತೆ ಸಮೀಪದಲ್ಲಿಯೇ ಗುಂಡು ಹಾರಿದ ಶಬ್ದ ಕೇಳಿಬಂದಿತು. ಶಬ್ದ ಬಂದೆಡೆಗೆ ಶರವೇಗದಲ್ಲಿ ಕೂಗಾಡುತ್ತ ಚೆಂಗಪ್ಪ ಧಾವಿಸಿದ. ಚೆಂಗಪ್ಪನ ಧ್ವನಿ ಕೇಳಿದ ಬೇಟೆಗಾರ ತಲೆ ತಪ್ಪಿಸಿಕೊಂಡು ಓಡಿಹೋಗಿದ್ದ. ಬೇಟೆಗಾರನ ಗುಂಡಿಗೆ ಅದೇ ತಾನೆ ಮರಿ ಹಾಕಿ ನಿಂತಿದ್ದ ತಾಯಿ ಜಿಂಕೆಯೊಂದು ಬಲಿಯಾಗಿತ್ತು. ತಾನು ಹೆತ್ತಿದ್ದ ಮರಿಯ ಮೇಲೆ ಮುಖವಿಟ್ಟು ನೆಲಕ್ಕೊರಗಿದ ಜಿಂಕೆಯನ್ನು ಕಂಡು ಚೆಂಗಪ್ಪನ ಹೃದಯ ವಿಲವಿಲ ಒದ್ದಾಡಿತು. ಜಿಂಕೆಯನ್ನು ಬದುಕಿಸಲು ಸಾಧ್ಯವೇನೋ ಎಂದು ನೋಡಿದ. ಆದರೆ ಅದು ಕೊನೆಯುಸಿರಿನ ಅಂಚಿನಲ್ಲಿತ್ತು. ಮುದ್ದಾದ ಜಿಂಕೆ ಮರಿಯನ್ನು ಹೂವಿನಂತೆ ಎತ್ತಿಕೊಂಡಾಗ ಚೆಂಗಪ್ಪನಿಗೆ ತನ್ನ ಹಸಿಮೈಯ ಮಗುವನ್ನೇ ಎತ್ತಿಕೊಂಡ ಅನುಭವವಾಯಿತು. ಬೇಟೆಗಾರನನ್ನು ವಾಚಾಮಗೋಚರ ಬೈಯುತ್ತ ಸತ್ತ ಜಿಂಕೆ

ಮತ್ತು ಹಸುಳೆ ಜಿಂಕೆಗಳೆರಡನ್ನೂ ಕಾರ್ಯಾಲಯಕ್ಕೆ ಸಾಗಿಸುವ ಏರ್ಪಾಟು ಮಾಡಿದ. ಕಾರ್ಯಾಲಯದಲ್ಲಿ ಹಸುಳೆ ಜಿಂಕೆಗೆ ಹಾಲು ಹುಲ್ಲುಗಳನ್ನು ತಿನ್ನಿಸಿ ಬದುಕಿಸುವ ಪ್ರಯತ್ನ ನಡೆಸಿದ. ಆದರೆ, ಹಸುಳೆ ಜಿಂಕೆ ಏನನ್ನೂ ಮುಟ್ಟದೆ ತಾಯಿ ಬೇಕೆಂದು ಸತ್ಯಾಗ್ರಹ ಹೂಡಿಬಿಟ್ಟಿತು. ಡ್ಯೂಟಿಗೆ ಹೋದ ಚೆಂಗಪ್ಪನ ಮನಸ್ಸಿನಲ್ಲಿ ಜಿಂಕೆ ಮರಿ ಒತ್ತರಿಸಿಕೊಂಡು ಬರತೊಡಗಿತು. ಕಾರ್ಯಾಲಯಕ್ಕೆ ಮೂರು ನಾಲ್ಕು ಬಾರಿ ಬಂದು ಅದಕ್ಕೆ ಏನನ್ನಾದರೂ ತಿನ್ನಿಸುವ ವಿಫಲ ಪ್ರಯತ್ನ ಮಾಡಿದ. ಹೀಗೇ ಆದರೆ ಬಹುಶಃ ನಾಳೆ ಇದೂ ಜೀವ ಬಿಡುತ್ತದೆ ಎನಿಸಿತು. ತಕ್ಷಣವೆ ಚೆಂಗಪ್ಪನಿಗೆ ಯೋಚನೆಯೊಂದು ಮಿಂಚಿತು; ಈ ಮರಿಗೆ ತನ್ನ ಹೆಂಡತಿಯ ಎದೆಹಾಲನ್ನು ಕುಡಿಸಿದರೆ ಹೇಗೆ? ಕೂಡಲೇ ಅಧಿಕಾರಿ ಚಿನ್ನಪ್ಪನವರ ಬಳಿಗೆ ಹೋಗಿ ತನ್ನ ಯೋಚನೆಯನ್ನು ಮುಂದಿಟ್ಟು ಆ ಮರಿಯನ್ನು ತನ್ನ ಮನೆಗೊಯ್ಯಲು ಪರವಾನಗಿ ಪಡೆದುಕೊಂಡ. ಚೆಂಗಪ್ಪನ ಬಾಣಂತಿ ಪತ್ನಿ ವಿಶೇಷ ಅಕ್ಕರೆಯಿಂದ ಜಿಂಕೆ ಮರಿಯನ್ನು ಬರಮಾಡಿಕೊಂಡಳು. 'ನೀನು ಇದಕ್ಕೂ ತಾಯಿಯಾಗು' ಎಂದು ಗಂಡ ಹೇಳಿದಾಗ ಆಕೆಯ ಎದೆ ಮರಿಗಾಗಿ ಬಿರಿದು ನಿಂತಿತು. ಆಶ್ಚರ್ಯವೆಂದರೆ ಜಿಂಕೆಯ ಮರಿ ಚೆಂಗಪ್ಪನ ಪತ್ನಿಯ ಮೊಲೆಯಿಂದ ಹಾಲನ್ನು ಹೀರಿಕೊಳ್ಳತೊಡಗಿತು. ಚೆಂಗಪ್ಪನಿಗೆ ಚಂಗನೆ ನೆಗೆಯುವಷ್ಟು ಖುಷಿಯುಕ್ಕಿತು. 'ಮರಿ ಬದುಕಿತು. ಇದಿನ್ನು ಸಾಯುವುದಿಲ್ಲ' ಎಂದು ತನಗೆ ತಾನೇ ಕೂಗಿಕೊಂಡ. ಅಷ್ಟರಲ್ಲಿ ಚೆಂಗಪ್ಪನ ಮಗು ಹಸಿವೆಯಿಂದ ಕಿರುಚಿಕೊಳ್ಳತೊಡಗಿತು. ಚೆಂಗಪ್ಪ ಮಗುವನ್ನು ಎತ್ತಿ ತಂದು ತನ್ನ ಪತ್ನಿಯ ಇನ್ನೊಂದು ಸ್ತನಕ್ಕೆ ಹಿಡಿದ. ಏಕಕಾಲದಲ್ಲಿ ತನ್ನ ಮಗು ಮತ್ತು ತನ್ನ ಮುದ್ದಿನ ಮರಿ ಎರಡೂ ಹಾಲನ್ನು ಹೀರುವ ದೃಶ್ಯ ನೋಡಿ ಪುಳಕಿತಗೊಂಡ.

ಚೆಂಗಪ್ಪ ಜಿಂಕೆಮರಿಗೆ ಕಾವೇರಿ ಎಂದು ಹೆಸರಿಟ್ಟ. ತಮ್ಮ ಮಗನೊಂದಿಗೆ ಇನ್ನೊಂದು ಮಗುವಾಗಿ ಬೆಳೆಸತೊಡಗಿದರು ಚೆಂಗಪ್ಪ ಮತ್ತು ಆತನ ಪತ್ನಿ.

ಚೆಂಗಪ್ಪನ ಮನೆಯ ಮುಂದಿನ ಕಾಲುದಾರಿಯ ಮೂಲಕ ನಿತ್ಯ ಮಕ್ಕಳು ಸ್ಕೂಲ್‌ಗೆ ಹೋಗಿಬರುತ್ತಿದ್ದರು. ಆ ಮಕ್ಕಳಿಗೆ ಜಿಂಕೆಮರಿ ಒಂದು ವಿಶೇಷ ಆಕರ್ಷಣೆಯಾಯಿತು, ಹೋಗುವಾಗ ಬರುವಾಗ ಕಾವೇರಿಯನ್ನು ಆಡಿಸುವುದು ಅ ಮಕ್ಕಳ ದಿನಚರಿಗೆ ಸೇರಿಕೊಂಡಿತು. ತಮಗಾಗಿ ತಂದ ತಿಂಡಿಯನ್ನು ಜಿಂಕೆ ಮರಿಗೆ ತಿನ್ನಿಸಿ ಅದರ ಮೈನೇವರಿಸದಿದ್ದರೆ ಮಕ್ಕಳಿಗೆ ಸಮಾಧಾನವಾಗುತ್ತಿರಲಿಲ್ಲ. ಹೀಗೇ ಆರು ತಿಂಗಳುಗಳು ಕಳೆದಿರಬಹುದು. ಒಂದು ದಿನ ಮಧ್ಯಾಹ್ನ ಜಿಂಕೆ ಮರಿ ಇದ್ದಕ್ಕಿದ್ದಂತೆ ಮಾಯವಾಗಿಬಿಟ್ಟಿತು. ಸಂಜೆ ಚೆಂಗಪ್ಪ ಮನೆಗೆ ಬಂದಾಗ

ಆತನ ಪತ್ನಿ ಆತಂಕದಿಂದ ಕಾವೇರಿ ಕಾಣೆಯಾಗಿದ್ದಾಳೆ ಎಂದಳು. ಮನೆ ಅಂಗಳ ತೊರೆದು ಎಲ್ಲಿಗೂ ಹೋಗುವಂಥದ್ದಲ್ಲ. ಎಲ್ಲಿ ಹೋಯಿತು ಎಂದು ಪ್ರಶ್ನಿಸಿದ ಗರ್ಜನೆಯ ಧ್ವನಿಯಲ್ಲಿ. ಆತನ ಪತ್ನಿ ಭಯಗೊಂಡು ಏನುತ್ತರಿಸುವುದು ಎನ್ನುವ ಗೊಂದಲದಲ್ಲಿರುವಾಗಲೇ ನಿತ್ಯ ಶಾಲೆಗೆ ಹೋಗುವ ಮಕ್ಕಳಲ್ಲಿ ಕೆಲವು ಏದುಸಿರಿಡುತ್ತ ಓಡಿಬಂದವು. ನಾವು ಜಿಂಕೆ ಮರಿಯನ್ನು ತಮ್ಮಯ್ಯನ ಮನೆಯ ಹತ್ತಿರ ನೋಡಿದೆವು ಎಂದವು ಒಂದೇ ಉಸುರಿಗೆ. ಆ ಕೂಡಲೇ ಚೆಂಗಪ್ಪ ತಮ್ಮಯ್ಯನ ಮನೆಯತ್ತ ಧಾವಿಸಿದ. ಹೋಗುವಾಗಲೇ ಚೆಂಗಪ್ಪನ ಎದೆ ಡವಗುಟ್ಟತೊಡಗಿತು ಎಲ್ಲಿ ಆ ತಮ್ಮಯ್ಯ ಜಿಂಕೆ ಮರಿಯನ್ನು ಕೊಂದುಬಿಟ್ಟಿದ್ದಾನೋ ಎಂದು. ತಮ್ಮಯ್ಯನಿಗೆ ಜಿಂಕೆ ಮಾಂಸದ ಹುಚ್ಚು ಇರುವುದು ಚೆಂಗಪ್ಪನಿಗೆ ತಿಳಿಯದ್ದೇನೂ ಆಗಿರಲಿಲ್ಲ. ಆ ತಮ್ಮಯ್ಯ ಕೊಲ್ಲುವ ಉದ್ದೇಶದಿಂದ ಮರಿಯನ್ನು ಒಯ್ದಿದ್ದರೂ ಸಹ ಇನ್ನೂ ಕೊಂದಿರಬಾರದು. ನಾಳೆ ಕೊಲ್ಲೋಣವೆಂದು ಇಟ್ಟುಕೊಂಡಿರಬೇಕು. ಅಷ್ಟರಲ್ಲಿ ಅದು ತನ್ನ ಕೈಗೆ ಸಿಕ್ಕುವಂತಾಗಬೇಕು ಎಂದು ದೇವರಲ್ಲಿ ಪ್ರಾರ್ಥಿಸುತ್ತಲೇ ದಾಪುಗಾಲು ಇಡತೊಡಗಿದ. ತಮ್ಮಯ್ಯನ ಮನೆಯ ಮುಂದೆ ಹೋಗಿ ಚೆಂಗಪ್ಪ ಹೊರಗೆ ಬರುವಂತೆ ಕೂಗು ಹಾಕಿದ. ಮಧ್ಯಮ ತರಗತಿಯ ಕಾಫಿ ಪ್ಲಾಂಟರ್ ಆಗಿದ್ದ ತಮ್ಮಯ್ಯ ಒಳ್ಳೇ ಗತ್ತಿನಿಂದಲೇ ಹೊರಗೆ ಬಂದು ಏನು ಎನ್ನುವಂತೆ ಮೌನವಾಗಿಯೇ ಹುಬ್ಬೇರಿಸಿದ.

'ನನ್ನ ಜಿಂಕೆಮರಿ ಕೊಟ್ಟುಬಿಡು. ಅದನ್ನು ತಿನ್ನುವುದಕ್ಕಾಗಿಯೇ ನೀನು ಕದ್ದು ತಂದಿದ್ದೀಯಾ. ಅದು ನನ್ನ ಇನ್ನೊಂದು ಮಗು. ನನ್ನ ಹೆಂಡತಿಯ ಹಾಲು ಅದರ ಮೈಯಲ್ಲಿ ರಕ್ತವಾಗಿ ಹರಿಯುತ್ತಿದೆ. ಏನಾದರೂ ಹೆಚ್ಚುಕಮ್ಮಿ ಮಾಡಿದರೆ ನಿನ್ನ ಮೇಲೆ ಕೇಸ್ ಆಗುತ್ತದೆ ಹುಷಾರ್......' ಎಂದು ಬಡಬಡಿಸಿದ.

'ಯಾರೋ ನಿಂಗೆ ಹೇಳಿದ್ದು ಜಿಂಕೆಮರಿ ನನ್ನ ಮನೆಯಲ್ಲಿ ಇದೆಯಂತ? ಕರೆದುಕೊಂಡು ಬಾ ಅವರನ್ನು ಹುಟ್ಟಲಿಲ್ಲ ಅನ್ನಿಸ್ತೇನೆ' ಎಂದು ಗುಡುಗಿದ ತಮ್ಮಯ್ಯ.

'ಸ್ಕೂಲ್ ಮಕ್ಕಳು ನಂಗೆ ಹೇಳವ್ರೆ, ಅದು ನಿನ್ನ ಮನೆ ಮುಂದೆ ಇದ್ದದ್ದನ್ನ ನೋಡವ್ರೆ, ಸುಮ್ಮನೆ ನನ್ನ ಮರಿಯನ್ನ ನಂಗೆ ಕೊಟ್ಟುಬಿಡು' ಎಂದ ವಿನೀತನಾಗಿ.

'ನಿಂಗೆಲ್ಲೋ ಹುಚ್ಚು. ಸುಮ್ಮನೆ ಹೋಗು. ಹೆಚ್ಚು ಮಾತಾಡಿದರೆ ವಿನಾಕಾರಣ ಮನೆಗೆ ಬಂದು ಉಪದ್ರವ ಕೊಡ್ತಿದಾನೆ ಅಂತ ಪೋಲೀಸರಿಗೆ ಕಂಪ್ಲೇಂಟ್ ಕೊಡಬೇಕಾಗುತ್ತದೆ...' ಎಂದ ಲೆಕ್ಕಾಚಾರದ ಧ್ವನಿಯಲ್ಲಿ. ಏನು ಮಾಡುವುದು ಎಂದು ತೋಚದೆ ಚೆಂಗಪ್ಪ ವಾಪಾಸಾದ. ಅರ್ಧ ದಾರಿ ಹೋಗಿ

ಪುನಃ ತಮ್ಮಯ್ಯನ ಮನೆಯ ಹತ್ತಿರ ಬಂದ. ಯಾರಿಗೂ ಕಾಣದಂತೆ ತಮ್ಮಯ್ಯ ಹಿತ್ತಿಲಿನೆಡೆಗೆ ಹೋದ. ಅಡಿಗೆ ಮನೆಯಲ್ಲಿ ಏನನ್ನು ಬೇಯಿಸುತ್ತಿರಬಹುದು ಎಂದು ವಾಸನೆ ಎಳೆದುಕೊಳ್ಳತೊಡಗಿದ. ಚೆಂಗಪ್ಪ ಎಂಥ ಪರಿಣತನೆಂದರೆ, ವಾಸನೆಯ ಮೇಲೆಯೇ ಬೇಯಿಸಿದ ಮಾಂಸ ಕುರಿಯದೋ, ಹಂದಿಯದೋ, ಜಿಂಕೆಯದೋ, ಮೊಲದ್ದೋ ಎಂದು ಗುರುತಿಸುತ್ತಿದ್ದ. ಬಹಳ ಹೊತ್ತು ತಮ್ಮಯ್ಯನ ಮನೆಯ ಸುತ್ತಲೇ ಗುಪ್ತವಾಗಿ ಓಡಾಡಿ ಜಿಂಕೆಯ ಮಾಂಸ ಬೇಯುತ್ತಿಲ್ಲವೆನ್ನುವುದನ್ನು ಖಾತ್ರಿ ಪಡಿಸಿಕೊಂಡ. ದಿಕ್ಕೆಟ್ಟವನಂತಾಗಿದ್ದ ಚೆಂಗಪ್ಪನಿಗೆ ಬಳಲಿಕೆಯಿಂದ ತಲೆ ತಿರುಗತೊಡಗಿತು. ವಾಚು ನೋಡಿಕೊಂಡ. ರಾತ್ರಿ ಹತ್ತು ಗಂಟೆಯಾಗತೊಡಗಿತ್ತು. ಇಂದಂತೂ ಅದನ್ನು ಕೊಂದಿಲ್ಲ. ನಾಳೆ ಬೆಳಗ್ಗೆ ಸರ್ಚ್ ವಾರೆಂಟ್ ತಂದು ಇವನ ಮನೆ ಶೋಧಿಸುತ್ತೇನೆ ಎಂದುಕೊಳ್ಳುತ್ತ ಮನೆಯ ಕಡೆ ಹೊರಟ.

ತಿನ್ನುವ ಉದ್ದೇಶದಿಂದ ತಮ್ಮಯ್ಯ ಮರಿಯನ್ನು ಮರೆಮಾಚಿರಿಸಿದ್ದಾನೆ ಎಂದು ಹೇಳಿದಾಗ ಆತನ ಪತ್ನಿಯ ಕಣ್ಣುಗಳಲ್ಲಿ ನೀರು ಉಕ್ಕಿತು. ತಕ್ಷಣವೇ ದೇವರ ಮುಂದೆ ದೀಪ ಹಚ್ಚಿ, ಜಿಂಕೆಯನ್ನು ಕೊಲ್ಲುವ ಬುದ್ಧಿ ಕೊಡಬೇಡವೆಂದು ಪ್ರಾರ್ಥಿಸಿದಳು. ಪತ್ನಿಯ ಅಂತಃಪ್ರಾರ್ಥನೆಯನ್ನು ಅರಿತುಕೊಂಡ ಚೆಂಗಪ್ಪ ದೇವರ ಫೋಟೋದ ಕಡೆ ಶೂನ್ಯ ನೋಟವನ್ನು ಬೀರಿದ. ಆ ರಾತ್ರಿ ಇಬ್ಬರೂ ಊಟ ಮಾಡಲಿಲ್ಲ.

ಮಾರನೇ ದಿನ ಬೆಳಗ್ಗೆಯೇ ಚೆಂಗಪ್ಪ ತನ್ನ ಮೇಲಧಿಕಾರಿ ಚೆನ್ನಪ್ಪನವರಿಗೆ ನಡೆದ ವಿಷಯವನ್ನೆಲ್ಲ ತಿಳಿಸಿದ. ಚೆನ್ನಪ್ಪ ಸರ್ಚ್ ವಾರಂಟ್ ಕೊಟ್ಟರು. ಸಿಬ್ಬಂದಿಯ ಸಮೇತ ತಮ್ಮಯ್ಯನ ಮನೆಯ ಒಳಹೊಕ್ಕು ಇಡೀ ಮನೆಯನ್ನು ಜಾಲಾಡಿದರೂ ಜಿಂಕೆ ಮಾತ್ರ ಸಿಗದಾಗ ಚೆಂಗಪ್ಪ ಪೆಚ್ಚಾದ. ಮತ್ತೆ ಮಾರನೆಯ ದಿನವೂ ಅನಿರೀಕ್ಷಿತವಾಗಿ ತಮ್ಮಯ್ಯನ ಮನೆಯ ಮೇಲೆ ಚೆಂಗಪ್ಪ ದಾಳಿಯಿಟ್ಟ. ಆದರೂ ಮರಿ ಸಿಗಲಿಲ್ಲ. ಹೀಗೇ ಅದರ ಮಾರನೇ ದಿನವೂ ತಮ್ಮಯ್ಯನ ಮನೆಯನ್ನು ಶೋಧಿಸಿದ ಚೆಂಗಪ್ಪ ನಿರಾಶೆಯಿಂದ ತತ್ತರಿಸತೊಡಗಿದ.

ಚೆಂಗಪ್ಪನ ಸಹ ಸಿಬ್ಬಂದಿಯಲ್ಲಿ ಕೆಲವರು ಜಿಂಕೆಮರಿ ಹುಡುಕುವುದೊಂದೇ ಡ್ಯೂಟಿಯಾಯಿತಲ್ಲ ಎಂದು ಗೊಣಗತೊಡಗಿದರು. ಒಂದು ಜಿಂಕೆ ಮರಿ ಉಳಿಸಲು ನಾವಿಲ್ಲಿಯೇ ಇದ್ದರೆ ಕಾಡಿನಲ್ಲಿ ಬೇಟೆಗಾರರು ಅದೆಷ್ಟು ಜಿಂಕೆಗಳನ್ನು ಬೇಟೆಯಾಡಿ ಹೋದಾರೊ ಎನ್ನುವ ತರ್ಕವನ್ನೂ ಮುಂದಿಟ್ಟರು.

ಚೆಂಗಪ್ಪ ತನ್ನ ಆಪ್ತ ಸ್ನೇಹಿತ ಮಣಿಯನ್ನು ತಮ್ಮಯ್ಯನ ಮನೆಯ ಮೇಲೆ ಬೇಹುಗಾರಿಕೆಗೆ ಬಿಟ್ಟ. ಎರಡು ದಿವಸಗಳೂ ಕಳೆದಿರಲಿಲ್ಲ. ಒಂದು

ಮಧ್ಯಾಹ್ನ ಮಣಿ ಚೆಂಗಪ್ಪನಲ್ಲಿಗೆ ಓಡಿ ಬಂದ. 'ತಮ್ಮಯ್ಯನ ಮನೆಯಲ್ಲಿ ಜಿಂಕೆಯ ಮಾಂಸ ಬೇಯುವ ವಾಸನೆ ಬಂದಿತು' ಎಂದ ಉದ್ವೇಗದಿಂದ. ಈ ವಿಷಯ ಕೇಳಿ ಚೆಂಗಪ್ಪನ ತಲೆ ಗಿರ್ರೆಂದಿತು. ಕೋಪ ಸ್ಫೋಟಗೊಂಡಿತು. ಡಬಲ್ ಬ್ಯಾರಲ್ ಗನ್ ಅನ್ನು ಹೆಗಲಿಗೇರಿಸಿಕೊಂಡು ಮಣಿಯೊಂದಿಗೆ ತಮ್ಮಯ್ಯನ ಮನೆಯೆಡೆಗೆ ಓಡಿದ.

ಏದುಸಿರು ಬಿಡುತ್ತಿದ್ದ ಚೆಂಗಪ್ಪ ತಮ್ಮಯ್ಯ ಎಂದು ಕೂಗಿದ. ಕೂಗು ಕೇಳಿ ತಮ್ಮಯ್ಯನ ಪತ್ನಿ ರೋಹಿಣಿ ಹೊರಬಂದು ಏನು ಸಮಾಚಾರ ಎಂದು ಪ್ರಶ್ನಿಸುವ ಮುಂಚೆ 'ಸ್ವಲ್ಪ ನೀರು ಕುಡಿಯುತ್ತೀರಾ?' ಎಂದಳು. ಬಾಯಾರಿದ್ದ ಇಬ್ಬರೂ ನೀರು ಕುಡಿದರು. ತನ್ನ ಪತಿ ಪಂಪ್‌ಹೌಸ್ ಹತ್ತಿರ ಏನೋ ಕೆಲಸದಲ್ಲಿದ್ದಾನೆ, ಕರೆಯುವೆ ಎಂದು ಹೇಳಿ ಹೋದಳು ರೋಹಿಣಿ. ತಮ್ಮಯ್ಯ ತನ್ನ ಮೀಸೆಯ ಮೇಲೆ ಕೈ ಸವರಿಕೊಳ್ಳುತ್ತ ಪ್ರತ್ಯಕ್ಷನಾದ.

'ನೀನು ಕೊಲೆ ಪಾತಕಿ. ನನ್ನ ಜಿಂಕೆ ಮರಿಯನ್ನು ಕೊಂದು ತಿಂದಿದ್ದೀಯಾ? ನನ್ನ ಮೂಗಿಗೆ ಬಡಿಯುತ್ತಿರುವುದು ಜಿಂಕೆ ಮರಿಯ ಮಾಂಸದ ವಾಸನೆಯಲ್ಲ; ನನ್ನ ಹೆಂಡತಿಯ ಹಾಲಿನ ವಾಸನೆ. ಎಲ್ಲಿವೆ ಅದರ ಎಲುಬುಗಳು? ಸುಲಿದ ಚರ್ಮವನ್ನ ಎಲ್ಲಿ ಅಡಗಿಸಿಟ್ಟಿದ್ದೀಯಾ? ಈಗ ನೀನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದರ ಎಲುಬು, ಚರ್ಮಗಳನ್ನು ಮುಂದಿಟ್ಟುಕೊಂಡು ನಿನ್ನ ಮೇಲೆ ಕೇಸು ಮಾಡುವೆ.

'ಹ್ಹಹ್ಹ ಈಗ ನೀನು ಏನು ಮಾಡಲೂ ಸಾಧ್ಯವಿಲ್ಲ. ನಿನ್ನ ಮರಿ ಅದೆಷ್ಟು ರುಚಿಯಿತ್ತು ಗೊತ್ತಾ? ಅದರ ಎಳೆಯ ಎಲುಬುಗಳನ್ನೂ ಬಿಡಲು ಮನಸ್ಸಾಗಲಿಲ್ಲ ನನಗೆ. ಅವೆಲ್ಲ ಈಗ ನನ್ನ ಹೊಟ್ಟೆಯಲ್ಲಿವೆ. ಕೇಸ್ ಮಾಡಿಕೊಳ್ಳಲು ಅವುಗಳ ಅವಶ್ಯಕತೆಯಿದ್ದರೆ ನಾಳೆ ಬೆಳಗ್ಗೆ ಬಾ-ಪಾಯಖಾನೆಯಲ್ಲಿ ಅವು ಸಿಗುತ್ತವೆ. ಅದನ್ನೊಯ್ದು ಕೇಸು ಮಾಡಿಕೊ' ತಮ್ಮಯ್ಯ ಇನ್ನೂ ತನ್ನ ಮಾತನ್ನು ಮುಗಿಸಿರಲಿಲ್ಲ. ಚೆಂಗಪ್ಪ ತನ್ನ ಡಬಲ್ ಬ್ಯಾರಲ್ ಗನ್ ಅನ್ನು ಎತ್ತಿ ತಮ್ಮಯ್ಯನ ಹೊಟ್ಟೆಗೆ ಗುಂಡು ಹಾರಿಸಿಬಿಟ್ಟ.

ತಮ್ಮಯ್ಯನ ಹೆಂಡತಿ ಕೊಲೆ ಕೊಲೆ ಎಂದು ಚೀರತೊಡಗಿದಳು. ಚೆಂಗಪ್ಪನೊಂದಿಗೆ ಬಂದಿದ್ದ ಮಣಿ ಕ್ಷಣಾರ್ಧದಲ್ಲಿ ಹಾರಿಹೋದ. ಏನೂ ಅನಾಹುತ ಘಟಿಸಿಲ್ಲವೇನೋ ಎನ್ನುವಂತೆ ಚೆಂಗಪ್ಪ ತಣ್ಣಗೆ ಪೊಲೀಸ್ ಠಾಣೆಯ ಕಡೆ ನಡೆಯತೊಡಗಿದ.

ಫಾರೆಸ್ಟ್ ಗಾರ್ಡ್ ಚೆಂಗಪ್ಪ ಹಾರಿಸಿದ ಗುಂಡು ತಮ್ಮಯ್ಯನ ಕಿಬ್ಬೊಟ್ಟೆಯ ಎಡಭಾಗದಲ್ಲಿ ನೆಟ್ಟುಕೊಂಡಿತ್ತು. ಶಕ್ತಿಯುತ ಗನ್‌ನಿಂದ ಹಾರಿಸಲ್ಪಟ್ಟ ಗುಂಡಾಗಿದ್ದರಿಂದ ಅದು ಎಲುಬುಗಳನ್ನು ತುಂಡರಿಸಿ ಒಳಗೆ ದೊಡ್ಡಬಿಗಾರವಾಗಿಸಿತ್ತು. ಈ ಘಟನೆ 30.1.99ರಂದು ಅಪರಾಹ್ನ 4 ಗಂಟೆಗೆ ನಡೆಯಿತು. ಗಾಯಗೊಂಡ ತಮ್ಮಯ್ಯನನ್ನು ಗೋಣಿಕೊಪ್ಪಲು ಪ್ರೈಮರಿ ಹೆಲ್ತ್ ಸೆಂಟರ್‌ಗೆ ಸೇರಿಸಲಾಯಿತು. ತಮ್ಮಯ್ಯನ ಪರಿಸ್ಥಿತಿ ಗಂಭೀರವಾಗಿದೆ, ಮೈಸೂರಿನ ದೊಡ್ಡ ಆಸ್ಪತ್ರೆಗೆ ಒಯ್ಯಿರಿ ಎಂದು ಡಾಕ್ಟರ್ ಸಲಹೆ ಮಾಡಿದರು. ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ತಂದು ಸೇರಿಸಲಾಯಿತು. ರಾತ್ರಿ 7 ಗಂಟೆಗೆ ತಮ್ಮಯ್ಯ ತನ್ನನ್ನು ಕೊಂದವರ ಹೆಸರುಗಳನ್ನು ಘೋಷಿಸಿ ಕೊನೆಯುಸಿರೆಳೆದ. ಸ್ಥಳೀಯ ಪೊಲೀಸರಿಗೆ ಅರಣ್ಯ ಅಧಿಕಾರಿ ಚಿನ್ನಪ್ಪನ ಮೇಲೆ ಮೊದಲೇ ಸಿಟ್ಟಿತ್ತು. ಚೆಂಗಪ್ಪ, ಮಣಿಯ ಜೊತೆಗೆ ಚಿನ್ನಪ್ಪನವರ ಹೆಸರನ್ನೂ ಸೇರಿಸಿ 302 ಐಪಿಸಿ ಕೇಸ್ ದಾಖಲಿಸಿದರು. ಚಿನ್ನಪ್ಪನವರ ಮೇಲೆ ಹರಿಹಾಯಲು ಕೂತಿದ್ದ ಕಾಡುಗಳ್ಳರು ಒಂದಾಗಿ ಪೊಲೀಸರು ಮತ್ತು ರಾಜಕಾರಣಿಗಳ ಮೇಲೆ ಕೂಡಲೇ ಚಿನ್ನಪ್ಪ ಮತ್ತಿತರರನ್ನು ಬಂಧಿಸುವಂತೆ ಒತ್ತಾಯ ತಂದರು. ಚಿನ್ನಪ್ಪನವರ ಕರ್ತವ್ಯಪರತೆಯಿಂದಾಗಿ ಕೆಂಡಾಮಂಡಲಗೊಂಡಿದ್ದ ಹಲವು ಕಾಡುಗಳ್ಳರು ನಾಗರಹೊಳೆ ಅರಣ್ಯಕ್ಕೆ ಬೆಂಕಿ ಹಚ್ಚಿದ್ದರು. ಅವರೂ ಸಹ ಪೊಲೀಸರ ಕೈಯೊಳಗಿನ ಕೋಳವಾಗಿ ನಿಂತರು ಚಿನ್ನಪ್ಪನವರ ಪಾಲಿಗೆ.

ಚೆಂಗಪ್ಪ ಸ್ವತಃ ಪೊಲೀಸರಿಗೆ ಶರಣಾಗಿದ್ದ. ಅವನೊಂದಿಗೆ ತಮ್ಮಯ್ಯನ ಮನೆಗೆ ಹೋಗಿದ್ದ ಮಣಿ ಕೇರಳಕ್ಕೆ ಹೋಗಿ ತಲೆ ತಪ್ಪಿಸಿಕೊಂಡಿದ್ದ. ಅವನು ಇಂದಿಗೂ ತಲೆಮರೆಸಿಕೊಂಡೇ ಇದ್ದಾನೆ!

ತನ್ನ ಗಂಡ ತಮ್ಮಯ್ಯನನ್ನು ಕೊಂದು ಪೊಲೀಸರ ಲಾಕಪ್‌ನಲ್ಲಿರುವ ಸುದ್ದಿ ತಿಳಿಯುತ್ತಲೇ ಚೆಂಗಪ್ಪನ ಪತ್ನಿ ಎದೆಯೊಡೆದುಕೊಂಡಳು. ಹೊಟ್ಟೆ ರುಮ್ಮೆಂದದ್ದೇ ನೆಪ ಹೊಟ್ಟೆ ಹಿಡಿದುಕೊಂಡು ಹಾಸಿಗೆ ಹಿಡಿದಳು. ಉಂಟಾದ ಮಾನಸಿಕ ಆಘಾತದಿಂದ ಅವಳ ಎದೆ ಹಾಲೇ ಬತ್ತಿದವು. ಅವಳ ಕೂಸು ಚೀತ್ಕರಿಸತೊಡಗಿತು. ಚೆಂಗಪ್ಪನ ಪತ್ನಿ ಮತ್ತು ಮಗುವನ್ನು ಕೇಳುವವರೇ ಇಲ್ಲವಾಯಿತು. ಜಿಂಕೆ ಮರಿಗೆ ಮೊಲೆ ಹಾಲು ಕೊಟ್ಟು ಬೆಳೆಸಿದ ತಾಯಿ ಮತ್ತು ಅವಳ ಮಗುವಿನ ಅಳು ನಾಗರಹೊಳೆಯಲ್ಲಿ ಅರಣ್ಯರೋದನವಾಗಿತ್ತು. ನಿರ್ಲಜ್ಜ ಸರ್ಕಾರ, ಹೃದಯರಹಿತ ಪೊಲೀಸರು, ಕ್ರೂರ ಕಾಡುಗಳ್ಳರ ಕ್ರೌರ್ಯದೆದುರು ತಾಯಿ-ಮಗು ತತ್ತರಿಸಿ ಹೋಗಿದ್ದರು.

ಚಿನ್ನಪ್ಪನವರನ್ನು ಬಂಧಿಸಲು ತೋಳೇರಿಸಿ ನಿಂತಿದ್ದರು ಪೋಲೀಸರು. ಚಿನ್ನಪ್ಪನವರ ಸಮಾನಮನಸ್ಕ ಇತರೆ ಅರಣ್ಯ ಅಧಿಕಾರಿಗಳು ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಿಕೊಂಡರು. ಚಿನ್ನಪ್ಪ ತಮ್ಮ ಕರ್ತವ್ಯನಿಷ್ಠೆಯಲ್ಲಿ ಸ್ಥಳೀಯ ಪೋಲೀಸರನ್ನು ಎದುರು ಹಾಕಿಕೊಂಡಿದ್ದಾರೆ. ಈ ಕೊಲೆ ಕೇಸಿನ ವಿಚಾರಣೆಯ ಅಧಿಕಾರವನ್ನು ಸ್ಥಳೀಯ ಪೋಲೀಸರಿಗೆ ನೀಡಿದ್ದೇ ಆದರೆ ಚಿನ್ನಪ್ಪನವರನ್ನು ಕ್ರೂರವಾಗಿ ನಡೆಸಿಕೊಳ್ಳುವುದು ಖಚಿತ. ಆದ್ದರಿಂದ ಪ್ರಕರಣವನ್ನು ಸಿಓಡಿಗೆ ಒಪ್ಪಿಸಬೇಕೆಂದು ವಿನಂತಿಸಿಕೊಂಡರು.

ಸರ್ಕಾರ ಸಹೃದಯಿ ಅಧಿಕಾರಿಗಳ ಮನವಿಯನ್ನು ಪುರಸ್ಕರಿಸಿ ಕೊಲೆ ಪ್ರಕರಣವನ್ನು ಸಿಓಡಿಗೆ ಒಪ್ಪಿಸಿತು. ತನಿಖೆ ನಡೆಸಿದ ಸಿಓಡಿ ಸದರಿ ಕೊಲೆಯಲ್ಲಿ ಚಿನ್ನಪ್ಪನವರ ಪಾತ್ರವೇನೂ ಇಲ್ಲವೆಂದು ಘೋಷಿಸಿತು. ಚಿನ್ನಪ್ಪನವರನ್ನು ಕೇಸ್‌ನಲ್ಲಿ ಫಿಕ್ಸ್ ಮಾಡಲು ಸಾಧ್ಯವಾಗದೆ ಹೋಯಿತಲ್ಲ ಎಂದು ಸ್ಥಳೀಯ ಪೋಲೀಸರಿಗೆ ಹೊಟ್ಟೆಯುರಿ ಆರಂಭವಾಯಿತು. ಚೆಂಗಪ್ಪ ಒಬ್ಬನನ್ನೇ ಬಂಧಿಸಿ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸುವ ಅನಿವಾರ್ಯತೆಗೆ ಒಳಗಾದರು ಪೋಲೀಸರು. ಕೇರಳಕ್ಕೆ ಓಡಿ ಹೋಗಿ ತಲೆ ತಪ್ಪಿಸಿಕೊಂಡಿದ್ದ ಮಣಿಯನ್ನು ಪೋಲೀಸರಿಗೆ ಹಿಡಿಯಲು ಸಾಧ್ಯವಾಗಲೇ ಇಲ್ಲ.

ನಿತ್ಯ ಸ್ಕೂಲಿಗೆ ಹೋಗಿಬರುವ ಮಕ್ಕಳು ಚೆಂಗಪ್ಪನ ಮಗುವಿಗೆ ಬಿಸ್ಕತ್ತು, ಇತರೆ ತಿಂಡಿಗಳನ್ನು ತಿನಿಸತೊಡಗಿದರು. "ನನ್ ಚೆಂಗ ಜಿಂಕೆಮರಿ ತರಕ್ಕೆ ಹೋಗಿದಾನೆ ಈಗ ಬಂದುಬಿಡ್ತಾನೆ" ಎನ್ನುತ್ತಿದ್ದಳು ಅವನ ಪತ್ನಿ ನಗುತ್ತ ಆ ಮಕ್ಕಳಿಗೆ. ಬರುಬರುತ್ತ ಆ ಮಕ್ಕಳು ಚೆಂಗಪ್ಪನ ಹೆಂಡ್ತಿಗೆ ಹುಚ್ಚು ಹಿಡಿದಿದೆ ಎಂದು ಸುದ್ದಿ ಮಾಡಿದವು.

ಮಡಿಕೇರಿಯ ಸೆಷನ್ಸ್ ನ್ಯಾಯಾಲಯದಲ್ಲಿ ಕೇಸು ನಡೆಯಿತು. ಚೆಂಗಪ್ಪನಿಗೆ ಜೀವಾವಧಿ ಶಿಕ್ಷೆಯಾಯಿತು.

ಹೈಕೋರ್ಟ್‌ಗೆ ಅಪೀಲ್ ಹೋಗಲು ಕೋರಿ ಅಧಿಕಾರಿ ಚಿನ್ನಪ್ಪ ಕೇಸನ್ನು ನನಗೆ ತಂದು ಕೊಟ್ಟರು. ನಾನು ಹಾಕಿದ ಅಪೀಲ್ ಅರ್ಜಿ ಪುರಸ್ಕಾರಗೊಂಡು ಕೇಸು ಜಸ್ಟಿಸ್ ಸಾಲ್ಡಾನ ಅವರಿದ್ದ ಬೆಂಚ್ ಮುಂದೆ ಬಂದಿತು.

ನನ್ನೊಂದಿಗೆ ಲಾಯರ್ ಸದಾಶಿವಪ್ಪ ಸಹ ವಕಾಲತ್ತು ಹಾಕಿದರು. ಹೈಕೋರ್ಟ್‌ನಲ್ಲಿ ಈ ಕೆಳಗಿನ ಅಂಶಗಳ ಮೇಲೆ ಬೆಳಕು ಚೆಲ್ಲಿ ವಾದ ಮಂಡಿಸಿದೆವು.

* ಚೆಂಗಪ್ಪನಿಗೆ ತಮ್ಮಯ್ಯನನ್ನು ಕೊಲ್ಲುವ ಉದ್ದೇಶವೇ ಇರಲಿಲ್ಲ. ಸತತ ಮೂರು ದಿನಗಳವರೆಗೆ ಸರ್ಚ್ ವಾರಂಟ್ ತಂದು ತಮ್ಮಯ್ಯನ ಮನೆಯನ್ನು ಜಿಂಕೆಮರಿಗಾಗಿ ಶೋಧಿಸಿದ ಚೆಂಗಪ್ಪನನ್ನು ತಮ್ಮಯ್ಯನೇ ರೊಚ್ಚಿಗೆಬ್ಬಿಸಿದ.
* ಕೊಲ್ಲುವ ಉದ್ದೇಶವಿಟ್ಟುಕೊಂಡು ಬಂದಿದ್ದರೆ ಚೆಂಗಪ್ಪ ತಮ್ಮಯ್ಯನ ಹೆಂಡತಿ ರೋಹಿಣಿ ನೀಡಿದ ನೀರನ್ನು ಕುಡಿದು ದಣಿವಾರಿಸಿಕೊಳ್ಳುತ್ತಿದ್ದನೆ?
* ಚೆಂಗಪ್ಪ ತಮ್ಮಯ್ಯನ ಎದೆ, ತಲೆಗಳಿಗೆ ಗುಂಡು ಹಾರಿಸದೆ ತೊಡೆಯ ಮೇಲ್ಭಾಗಕ್ಕೆ ಹಾರಿಸಿದ್ದನ್ನು ಪರಿಗಣಿಸಬೇಕು.
* ಪಂಪ್‌ಹೌಸ್ ಬಳಿ ಕೆಲಸ ಮಾಡುತ್ತಿದ್ದ ತಮ್ಮಯ್ಯನನ್ನು ಆತನ ಪತ್ನಿ ರೋಹಿಣಿ ಚೆಂಗಪ್ಪ ಬಂದಿದ್ದಾನೆ ಎಂದು ಕರೆದಾದ ಮೇಲೆ ಚೆಂಗಪ್ಪ ಮತ್ತು ತಮ್ಮಯ್ಯನ ಮಧ್ಯೆ ಮಾತಿನ ಚಕಮಕಿ ನಡೆದುದು ಚೆಂಗಪ್ಪನಲ್ಲಿ ಸುಪ್ತವಾಗಿದ್ದ ಅಸಹನೆ ಆಕ್ರೋಶವಾಗಿ ಸ್ಫೋಟಗೊಳ್ಳಲು ಕಾರಣವಾಯಿತು.
* ಚೆಂಗಪ್ಪ ಮತ್ತು ತಮ್ಮಯ್ಯರ ಮಧ್ಯೆ ಘರ್ಷಣೆ ಉದ್ಭವಗೊಳ್ಳಲು ಯಾರು ಮೂಲ ಕಾರಣ ಎನ್ನುವುದು ಖಚಿತಗೊಳ್ಳದೇ ಹೋದಾಗ ಅದರ benefit of doubt ಆರೋಪಿಯ ಪರವೇ ದೊರಕಬೇಕಾದುದು ನ್ಯಾಯ.
* ಚೆಂಗಪ್ಪ ಅಪರಾಹ್ನ 4 ಗಂಟೆಗೆ ಗುಂಡು ಹಾರಿಸಿದ. ಆದರೆ ತಮ್ಮಯ್ಯ ಸತ್ತದ್ದು ರಾತ್ರಿ 7 ಗಂಟೆಗೆ. ಮೂರು ತಾಸುಗಳ ದೀರ್ಘ ಅವಧಿಯೊಳಗೆ ಸೂಕ್ತ ಚಿಕಿತ್ಸೆ ದೊರೆತಿದ್ದಿದ್ದರೆ, ರಕ್ತಸ್ರಾವವಾಗಲು ಬಿಡದೇ ಇದ್ದಿದ್ದರೆ ತಮ್ಮಯ್ಯ ಬದುಕಿ ಉಳಿಯುತ್ತಿದ್ದ. ತಮ್ಮಯ್ಯ ಸತ್ತದ್ದು ಮೆಡಿಕಲ್ ಸಾಕ್ಷ್ಯದ ಪ್ರಕಾರ ರಕ್ತಸ್ರಾವ ಮತ್ತು ಶಾಕ್‌ನಿಂದ. ಈ ಎಲ್ಲ ಹಿನ್ನೆಲೆಯಲ್ಲಿ ಇದು ಕೊಲೆಯಾಗುವುದಿಲ್ಲ culpable homicide not amounting to murder; ಅದೂ ಹಠಾತ್ provocation ನಿಂದ.
* ಹೀಗಾಗಿ ಪ್ರಾಸಿಕ್ಯೂಷನ್ ಹೇಳುವಂತೆ ಈ ಪ್ರಕರಣ I.P.C. ಯ 302 ಕಲಮ್‌ಗೆ ಒಳಪಡುವುದಿಲ್ಲ. ಬದಲಾಗಿ I.P.C. 304 ಭಾಗ II ಕ್ಕೆ ಒಳಪಡುತ್ತದೆ.
* ನಮ್ಮ ವಾದದ ಮುಖ್ಯಾಂಶಗಳನ್ನು ಜಸ್ಟಿಸ್ ಸಾಲ್ಡಾನ ಅವರು ಎತ್ತಿ ಹಿಡಿದರು. ಜೀವಾವಧಿ ಶಿಕ್ಷೆಯನ್ನು ಕೇವಲ ಐದು ವರ್ಷಗಳ ಕಾರಾಗೃಹ ಶಿಕ್ಷೆಗೆ ಇಳಿಸಿ ತೀರ್ಪು ನೀಡಿದರು. ಚೆಂಗಪ್ಪ ಆಗಲೇ ಅಷ್ಟು ವರ್ಷಗಳ

ಕಾಲ ಕಾರಾಗೃಹದಲ್ಲಿ ಜೀವನ ಕಳೆದುದರಿಂದ ಅದನ್ನೇ ಶಿಕ್ಷೆಯೆಂದು ಪರಿಗಣಿಸಿ ಬಿಡುಗಡೆಗೊಳಿಸಲಾಯಿತು.

ಆದರೆ ಚೆಂಗಪ್ಪನ ಬಿಡುಗಡೆಗೆ ಸ್ವಲ್ಪವೇ ಮುಂಚೆ ಪತ್ನಿ ಮಾನಸಿಕ ಆಘಾತ, ದೈಹಿಕ ರೋಗ ರುಜಿನಗಳಿಂದ ಬಳಲಿ ನಾಗರಹೊಳೆ ದಟ್ಟ ಅರಣ್ಯದಲ್ಲಿ ತನ್ನ ಪ್ರಾಣಪಕ್ಷಿಯನ್ನು ಹಾರಿ ಬಿಟ್ಟುಬಿಟ್ಟಿದ್ದಳು. "ನನ್ನಿಂದ ನಾಗರಹೊಳೆಯ ಗಂಧದ ಗಿಡ, ಆನೆ, ಹುಲಿ, ಸಿಂಹ, ಜಿಂಕೆ, ಕಟ್ಟಿಕೊಂಡ ಹೆಂಡತಿ ಯಾವನ್ನೂ ಉಳಿಸಲಾಗಲಿಲ್ಲ. ಕೊನೆಗೆ ನನ್ನ ಮಗುವನ್ನಾದರೂ ಉಳಿಸಿಕೊಳ್ಳುವೆ ಸಾರ್" ಎಂದು ಚೆಂಗಪ್ಪ ಗದ್ಗದಿತನಾಗಿ ಹೇಳಿದಾಗ ನನ್ನ ಹೃದಯವೇ ಬಾಯಿಗೆ ಬಂದ ಅನುಭವವಾಯಿತು.

86

ಲಲಿತ ಮಹಲ್ ಈಜುಕೊಳದ ಕೊಲೆ ರಹಸ್ಯ

ನನ್ನಲ್ಲಿ ಬಹುವಾಗಿ ಕುತೂಹಲ ಕೆರಳಿಸಿದ ವ್ಯಕ್ತಿತ್ವ ಡಿಸಿಪಿ ಸೋಮಶೇಖರ್‌ದು. ಸೋಮಶೇಖರ್ ಅವರ ತಂದೆ ಕೆ.ಜಿ.ಎಫ್.ನಲ್ಲಿ ಗುಮಾಸ್ತರಾಗಿದ್ದರು ಎಂದು ಕೇಳಿದ ನೆನಪು. ಅಧಿಕಾರ ಬಂದಾಗ ಸೋಮಶೇಖರರನ್ನು ನೋಡಿದವರೂ ಇದ್ದಾರೆ. ಹಾಗೆಯೇ ಅವರು ವಿದ್ಯಾಭ್ಯಾಸ ಮಾಡುವಾಗ ಅತ್ಯಂತ ಸಾಮಾನ್ಯವಾಗಿ ಬದುಕು ನಡೆಸಿದ್ದನ್ನು ನೋಡಿದವರೂ ಇದ್ದಾರೆ. ಪರಸ್ಪರ ದ್ವಂದ್ವ ವ್ಯಕ್ತಿತ್ವಗಳು ಸೋಮಶೇಖರ್‌ರಲ್ಲಿ ಅಡಕವಾಗಿದ್ದವು. ಒಂದು ತೀರಾ ವಿನೀತ ಹಾಗೂ ದಾಸ್ಯ ಮನೋಭಾವದ್ದು; ಮತ್ತೊಂದು ತೀರಾ ಉಗ್ರ ಹಾಗೂ ಸರ್ವಾಧಿಕಾರಿ ಮನೋಭಾವದ್ದು. ತಮ್ಮ ಬದುಕಿನ ಶ್ರೇಣಿಗಳನ್ನು ವಸ್ತುನಿಷ್ಠವಾಗಿ ನೋಡಲು ಸಾಧ್ಯವಾಗದೆ ಹೋದಾಗ ಇಂಥ ಅತಿರೇಕದ ಮತ್ತು ಸ್ವಯಂದ್ವಂದ್ವಾತ್ಮಕ ಮುಖಗಳು ವ್ಯಕ್ತಿತ್ವದಲ್ಲಿ ಕಾಣಿಸಿಕೊಳ್ಳುತ್ತವೇನೋ ಎನ್ನುವ ಅನುಮಾನ ನನಗೆ. ವಿದ್ಯಾರ್ಥಿ ದಿಸೆಯಲ್ಲಿ ಸೋಮಶೇಖರ್ ತಮ್ಮ ಬದುಕನ್ನು ಪಾಸಿಟಿವ್ ಆಗಿ ಸ್ವೀಕರಿಸಿದ್ದಿದ್ದರೆ ನಂತರ ಅಧಿಕಾರಿಯಾದಾಗ ಸಾಮಾನ್ಯರ ಬದುಕನ್ನು ಹೀಯಾಳಿಕೆಯ ದೃಷ್ಟಿಯಲ್ಲಿ ನೋಡುತ್ತಿರಲಿಲ್ಲವೇನೋ. ಸೋಮಶೇಖರ್ ತಮ್ಮ ಕೈಕೆಳಗಿನ ಅಧಿಕಾರಿಗಳನ್ನಷ್ಟೇ

ಅವಮಾನಿಸಿ ತೃಪ್ತಿಪಟ್ಟುಕೊಳ್ಳುತ್ತಿರಲಿಲ್ಲ. ತಮ್ಮ ಮೇಲಧಿಕಾರಿಗಳ ಸ್ವಾಭಿಮಾನ ಕೆಣಕಿ ಅದರಲ್ಲಿ ಖುಷಿ ಕಂಡುಕೊಳ್ಳುವ sadist ಮನೋಭಾವ ಅವರದಾಗಿತ್ತು. ಅತ್ಯಂತ ಉಚ್ಚ, ಶ್ರೀಮಂತ ಹಾಗೂ ಭಾರೀ VIPಗಳ ಸ್ನೇಹ ಗಳಿಸುವ ಗೀಳು ಅದರಲ್ಲಿ ಮನೆ ಮಾಡಿಕೊಂಡಿತ್ತು. ಅದೊಂದು ರೀತಿಯ ರೋಗಗ್ರಸ್ತ ಮಾನಸಿಕ ಹಸಿವು ಎನ್ನುವಷ್ಟರ ಮಟ್ಟಿಗೆ ಸೋಮಶೇಖರ್ ಆ ಗೀಳಿಗೆ ಈಡಾಗಿದ್ದರು. ಸ್ವಲ್ಪವೇ ವೀಕ್ ಆದರೂ ಪ್ರಬಲರ ಕಾಲು ಹಿಡಿಯಲೂ ಹಿಂದುಮುಂದು ನೋಡುತ್ತಿರಲಿಲ್ಲ ಸೋಮಶೇಖರ್. ಅದೇ ರೀತಿ ತಾವು ಸ್ವಲ್ಪ ಪವರ್‌ಫುಲ್ ಎನಿಸಿದರೂ ಸಾಕು ಇನ್ನೊಬ್ಬರನ್ನು ಬೂಟಿನಿಂದ ಹೊಸಕಿ ಹಾಕಿಬಿಡುವೆ ಎನ್ನುವಂತೆ ವರ್ತಿಸುತ್ತಿದ್ದರು. ಅವರಲ್ಲಿ ಮನೆಮಾಡಿರುವ ಈ ದ್ವಂದ್ವಮಯ ಗುಣಗಳನ್ನು ನನಗೆ ಬೇಗ ಅರಿತುಕೊಳ್ಳಲು ಸಾಧ್ಯವಾಗಲಿಲ್ಲ ಎನ್ನುವ ಮಾತು ಬೇರೆ.

ದೇವರಾಜ ಅರಸು ಅವರು ಕರ್ನಾಟಕದ ರಾಜಕೀಯ ಮೈದಾನದಲ್ಲಿ ಫಾರ್ವರ್ಡ್ ಪಾಲಿಟಿಕ್ಸ್‌ಗೆ ವಿರುದ್ಧ ಸೃಷ್ಟಿಸಿದ ಬ್ಯಾಕ್‌ವರ್ಡ್ ಪಾಲಿಟಿಕ್ಸ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗುವಷ್ಟರಲ್ಲಿ ರೋಗಗ್ರಸ್ತ ಗುಣಗಳನ್ನು ಪ್ರಧಾನವಾಗಿಸಿಕೊಂಡು ಭೀಕರವಾಗಿ ಕೇಕೆ ಹಾಕತೊಡಗಿತ್ತು. ಕರ್ನಾಟಕದ ಹಿಂದುಳಿದ ಮತ್ತು ಪರಿಶಿಷ್ಟ ಜನರ ಏಳ್ಗೆಯ ಕನಸು ಹಿಂದುಳಿದ ಪುಢಾರಿಗಳ ದುರಾಸೆ, ಸ್ವಾರ್ಥ, ಭ್ರಷ್ಟತನಗಳಲ್ಲಿ ಕಲೆಸಿದ ಕೆಸರಿನಂತಾಗಿತ್ತು. ಬ್ಯಾಕ್‌ವರ್ಡ್ ಪಾಲಿಟಿಕ್ಸ್ ತನ್ನ ಹುಟ್ಟಿನೊಂದಿಗೆ ಹೊತ್ತುಕೊಂಡು ಬಂದ ಬಾಲಾರಿಷ್ಟವು ಅರ್ಬುದವಾಗಿ ಬೆಳೆದಿತ್ತು. ಪಟ್ಟಭದ್ರಗೊಂಡಿದ್ದ ಬ್ಯಾಕ್‌ವರ್ಡ್ ಲೀಡರ್‌ಗಳಿಗೆ ತಮಗೆ ಸ್ಪರ್ಧೆಯೊಡ್ಡಬಲ್ಲವರು ಬ್ಯಾಕ್‌ವರ್ಡ್ ಪಾಲಿಟಿಶಿಯನ್‌ಗಳು ತಮ್ಮ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಕಾಂಗ್ರೆಸ್ಸಿನ ಹೊರಗೆ ಆಶ್ರಯಗಳಿಗಾಗಿ ತಡಕಾಡತೊಡಗಿದರು. ಇದರ ದುರ್ಲಾಭವನ್ನು ಪಡೆದುಕೊಳ್ಳಲು ಬಿಜೆಪಿಯಂಥ ವೈದಿಕಶಾಹಿ ಪಕ್ಷ ತುದಿಗಾಲ ಮೇಲೆ ನಿಂತಿತ್ತು.

ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ರಾಜಕೀಯದಲ್ಲಾಗುವ ಇಂಥ ವಿದ್ಯಮಾನಗಳು ಮತ್ತು ಪಲ್ಲಟಗಳು ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಜನಾಂಗಗಳ ಮಧ್ಯಮ ವರ್ಗದಲ್ಲಿ ಮತ್ತು ಅಧಿಕಾರಶಾಹಿಯಲ್ಲಿ ಸ್ಥಾನ ಪಡೆದ ಯುವಜನತೆಯ ಮನೋಭೂಮಿಕೆಯ ಮೇಲೆ ವಿಶೇಷ ಪರಿಣಾಮ ಬೀರಿದಂತೆ ನನಗೆ ಕಂಡಿದ್ದರಿಂದ. ಹಿಂದುಳಿದವರು ಮುಂದೆ ಬರುವುದೆಂದರೆ, ಮುಂದುವರಿದ ಶೋಷಕರ ಸ್ಥಾನಗಳನ್ನು ಕಬಳಿಸಿಕೊಂಡು ಅವರಂತೆಯೇ ತಾವೂ ಶೋಷಕರಾಗಿ ಮಾರ್ಪಡುವುದು ಎನ್ನುವ ಸರಳ ಫಾರ್ಮುಲಾ ಒಂದು ಸೋಮಶೇಖರ್‌ರಂಥವರ

ಮನಸ್ಸಿನಲ್ಲಿ ಕೆಲಸ ಮಾಡುತ್ತಿತ್ತು ಎನಿಸುತ್ತದೆ. ಇದು ಕೇವಲ ಬಂಡುಕೋರ ಸ್ವಭಾವ. ಇದಕ್ಕೆ ಕ್ರಾಂತಿಕಾರಿ ಪರ್ಯಾಯಗಳ ನೆಲೆಗಟ್ಟು ಇರದೇ ಹೋದರೆ ಅಂತಿಮವಾಗಿ ಮುಂದುವರಿದವರ ಶೋಷಕ ವ್ಯವಸ್ಥೆಯಲ್ಲಿ ಹಿಂದುಳಿದ ಪಟ್ಟಭದ್ರರು ಒಂದು ಭಾಗವಾಗಿ ಹೋಗಿಬಿಡುತ್ತಾರೆ. ಆಗ ಅವರಿಗೆ ಶೋಷಣೆ ಸಹ್ಯವಾಗಿ ಕಾಣತೊಡಗುತ್ತದೆ. ಸ್ವತಃ ಶೋಷಕರಾಗಿ ಮಾರ್ಪಟ್ಟಿರುವುದರಿಂದ ಶೋಷಣಾ ವ್ಯವಸ್ಥೆಯ ಕೋಟೆಗೆ ಮಾಜಿ ಶೋಷಿತರೇ ಹಾಲಿ ಕಾವಲು ಸಿಪಾಯಿಗಳಾದಂತಾಗುತ್ತದೆ. ಹಿಂದುಳಿದ ಜನಾಂಗಗಳಲ್ಲಿ ಕೆಲವರಾದರೂ ಪಟ್ಟಭದ್ರರಾದಲ್ಲಿ ಅದೇ ಮುಂದುವರಿದವರಿಗೆ ನೀಡುವ ಶಾಕ್ ಎಂದು ಸಂಭ್ರಮದಿಂದ ವಾದಿಸುವವರ ಮಾತಿನ ಮಿತಿಗಳನ್ನು ಗಮನದಲ್ಲಿರಿಸಿಕೊಂಡೇ ಈ ಮಾತು ಹೇಳುತ್ತಿದ್ದೇನೆ. ಇಂಥ ಅನೇಕ ಶಾಕ್‌ಗಳನ್ನು ಫಾರ್ವರ್ಡ್ ಪಾಲಿಟಿಕ್ಸ್ ಮತ್ತು ಈ ದೇಶದ ವೈದಿಕಶಾಹಿ ಅರಗಿಸಿ ಜೀರ್ಣಿಸಿಕೊಂಡಿದ್ದರಿಂದಲೇ ಅಷ್ಟೊಂದು ಆಳವಾಗಿ ಅವು ನಮ್ಮ ಸಮಾಜದಲ್ಲಿ ಬೇರುಬಿಟ್ಟಿವೆ ಎನ್ನುವುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ.

ಸೋಮಶೇಖರ್‌ರಂಥ ವ್ಯಕ್ತಿತ್ವಗಳನ್ನು ಸಮಾಜಶಾಸ್ತ್ರೀಯವಾಗಿ ಅರ್ಥೈಸಿಕೊಳ್ಳುವ superficial ಪ್ರಯತ್ನ ಮಾತ್ರವಿದು. ಇದೇನೂ ನನ್ನ ಆತ್ಯಂತಿಕ ಅಭಿಪ್ರಾಯ ಅಲ್ಲ. ಸಾಮಾಜಿಕ ಘರ್ಷಣೆಗಳ ಪರಿಣಾಮವಾಗಿ ಉದ್ಭವಿಸುವ ವೈಚಾರಿಕ ವಿದ್ಯಮಾನಗಳು ಹೇಗೆ ಸೋಮಶೇಖರ್‌ರಂಥವರ ವ್ಯಕ್ತಿತ್ವ ಪ್ರವೇಶಿಸಿ ಕ್ರಿಯಾತ್ಮಕ ವಿದ್ಯಮಾನಗಳಾಗಿ ಪರಿಣಮಿಸುತ್ತವೆ ಎನ್ನುವುದರತ್ತ ಗಮನ ಹರಿಸಿದರೆ ಸೋಮಶೇಖರ್ ಥರದ ವ್ಯಕ್ತಿಗಳು ಮೂಲತಃ ದುಷ್ಟರಾಗಿ ಕಾಣಿಸುವುದಿಲ್ಲ.

ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರೊಂದಿಗೆ ಸೋಮಶೇಖರ್ ಟೆನ್ನಿಸ್ ಆಡುತ್ತ ಅವರ ಸ್ನೇಹ ಗಳಿಸಿದ್ದರು. 'ಮುಖ್ಯಮಂತ್ರಿಗಳು ಪ್ರೋಟೋಕಾಲ್‌ನೆಲ್ಲ ಉಲ್ಲಂಘಿಸಿ ನನ್ನೊಂದಿಗೆ move ಆಗುತ್ತಾರೆ ನೋಡಿ' ಎಂದು ಸೋಮಶೇಖರ್ ಜಂಬ ಕೊಚ್ಚಿಕೊಳ್ಳತೊಡಗಿದರು. 'ಹಿರಿಯ ಪೊಲೀಸ್ ಅಧಿಕಾರಿಗಳು ಇರುವಾಗಲೇ ನನ್ನನ್ನು ಮುಖ್ಯಮಂತ್ರಿಗಳು ಪ್ರತ್ಯೇಕ ಕರೆದು ಕೂರಿಸಿಕೊಂಡು ಚರ್ಚಿಸುತ್ತಾರೆ ನೋಡಿ' ಎಂದೂ ಸೋಮಶೇಖರ್ ಬೀಗತೊಡಗಿದರು. ಬಂಗಾರಪ್ಪನವರೊಂದಿಗಿನ ತಮ್ಮ ಸ್ನೇಹವನ್ನು ಸಾರ್ವಜನಿಕ ಪ್ರದರ್ಶನಕ್ಕಿಟ್ಟು ಖುಷಿಪಡತೊಡಗಿದರು ಸೋಮಶೇಖರ್. ಅದೇ ಸಂದರ್ಭದಲ್ಲಿ ಸೋಮಶೇಖರ್ ಮೈಸೂರಿಗೆ ಡಿಸಿಪಿಯಾಗಿ ವರ್ಗಾ ಆದರು. ಸೋಮಶೇಖರ್ ಮನದಲ್ಲಿ ಮೊದಲೇ ಮನೆಮಾಡಿಕೊಂಡಿದ್ದ ದುರಹಂಕಾರ ಗರಿಬಿಚ್ಚಿ ಹಾರಾಡತೊಡಗಿತು.

ಸೋಮಶೇಖರ್ ತಮ್ಮ ಎಂ.ಎಸ್ಸಿ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುಗಿಸಿದರು ಎನ್ನುವುದನ್ನು ಇಲ್ಲಿ ಗಮನಿಸಬೇಕು. ಮೈಸೂರಿನ ಮೆಸ್‌ನಲ್ಲಿ ಅನ್ನ ತಿಂದುಕೊಂಡು ಅಡ್ರೆಸ್ ಇಲ್ಲದವನಂತೆ, non identity ಯಾಗಿ ಅಲೆಯುತ್ತಿದ್ದ ಕಾಲವೊಂದಿತ್ತು. ಅದಕ್ಕೆ ತಿರುಗೇಟು ಎನ್ನುವಂತೆ ಮೈಸೂರಿನ ಎಲ್ಲ ಜನರ ಗಮನ ತನ್ನೆಡೆಗೆ ತಿರುಗಬೇಕೆನ್ನುವ ದುಷ್ಟದಾಹ ಸೋಮಶೇಖರ್‌ರಲ್ಲಿ ಉಮ್ಮಳಿಸತೊಡಗಿತು.

ಸಂಜೆಯಾದರೆ ಕುದುರೆಯೇರಿ ಟ್ರಾಫಿಕ್ ಕಂಟ್ರೋಲ್‌ಗೆ ಕೈಯಲ್ಲಿ ಚಾಟಿ ಹಿಡಿದು ಹೊರಡುತ್ತಿದ್ದರು. ಯಾವೊಬ್ಬ ಪಾದಚಾರಿಯೂ ಫುಟ್‌ಪಾತ್ ಬಿಟ್ಟು ಕೆಳಕ್ಕಿಳಿಯಬಾರದೆಂದು ಕಟ್ಟಪ್ಪಣೆ ಹೊರಡಿಸಿದ್ದರು. ಈ ಕಟ್ಟಪ್ಪಣೆ ಗೊತ್ತಿರದವರು, ಮರೆತವರು ರಸ್ತೆಗಿಳಿದರೆ ಸಾಕು ಸೋಮಶೇಖರ್ ಅವರೆಡೆಗೆ ಕುದುರೆ ರೇಸಿನ ಜಾಕಿಯಂತೆ ಧಾವಿಸುತ್ತಿದ್ದರು. ಚಾಟಿಯಿಂದ ಟಾರು ರಸ್ತೆಗೆ ಛಟೀರ್ ಎಂದು ಹೊಡೆದು ವಿಚಿತ್ರ ಶಬ್ದ ಮಾಡಿ ರಸ್ತೆಯ ಮೇಲಿನ ಜನರನ್ನು ಬೆಚ್ಚಿಬೀಳಿಸುತ್ತಿದ್ದರು. ಆ ಶಬ್ದಕ್ಕೆ ಮಕ್ಕಳು ಹೆದರಿಕೊಂಡು ಚಿಟ್ಟನೆ ಚೀರಿದರೆ, ದೊಡ್ಡವರು ಸತ್ತೆವೋ ಕೆಟ್ಟೆವೋ ಎಂದು ಪುಟ್‌ಪಾತ್‌ಗೆ ಜಿಗಿಯುತ್ತಿದ್ದರು. ಸೋಮಶೇಖರ್ ಅವರ ಈ ಆಟವನ್ನು ಸರ್ಕಸ್ ದೃಶ್ಯ ಏನೋ ಎನ್ನುವಂತೆ ಯುವಕರು ನೋಡಿ ಸಂಭ್ರಮಿಸುತ್ತಿದ್ದರು.

ಒಂದು ದಿನ ಟ್ಯಾಕ್ಸಿಯೊಂದು ರಾಂಗ್ ಸೈಡ್‌ನಲ್ಲಿ ಬಂದಿತು ಎಂದು ಸೋಮಶೇಖರ್ ಅದರ ಚಾಲಕನಿಗೆ ಕಪಾಳಕ್ಕೆ ಬಾರಿಸಿದರು. ಮುದುಕನಾಗಿದ್ದ ಆ ಚಾಲಕನ ಒಂದು ಹಲ್ಲು ಮುರಿದುಬಿದ್ದಿತು. ಇದರಿಂದಾಗಿ ಇಡೀ ಮೈಸೂರಿನ ಚಾಲಕರು ಡಿಸಿಪಿ ವಿರುದ್ಧ ಸ್ಟ್ರೈಕ್ ಮಾಡಿದರು.

ನಗರದ ಗಣ್ಯರು, ವ್ಯಾಪಾರಸ್ಥರು, ರಾಜಕಾರಣಿಗಳು ಯಾರನ್ನೂ ತಾನು ಕೇರ್ ಮಾಡುವುದಿಲ್ಲ ಎನ್ನುವಂತೆ ಸೋಮಶೇಖರ್ ವರ್ತಿಸತೊಡಗಿದರು.

ನಗರದಲ್ಲಿ ಸ್ಟ್ರೈಕ್‌ಗಳಾದರೆ, ಬಂದೋಬಸ್ತ್‌ಗೆ ತಾವೇ ಮುಂದಾಗಿ ನಿಲ್ಲುತ್ತಿದ್ದರು. ತಮ್ಮ ಆಜ್ಞೆಯನ್ನು ಸ್ವಲ್ಪವೇ ಉಲ್ಲಂಘಿಸಿದರೂ ಸ್ವತಃ ಲಾಠಿ ಚಾರ್ಜ್ ಮಾಡುತ್ತಿದ್ದರು.

ಹೀಗಾಗಿ ತಮ್ಮ ಇಲಾಖೆಯಲ್ಲಿ ಮಾತ್ರವಲ್ಲದೆ ಇಡೀ ನಗರದ ಎಲ್ಲ ವರ್ಗಗಳ ಜನರ ಕೆಂಗಣ್ಣುಗಳಿಗೆ ಗುರಿಯಾಗಿದ್ದರು...

ತಮ್ಮನ್ನು ನೋಡಿ ಜನ ಥರಗುಟ್ಟಬೇಕೆಂದು ಸದಾ ಬಯಸುತ್ತಿದ್ದರು

ಸೋಮಶೇಖರ್. ಕೋಪಗ್ರಸ್ತರಾಗಿದ್ದ ಜನ, ಇವನ ಕಥೆ ನಮಗೆ ಗೊತ್ತಿಲ್ಲವೆ, ಇಲ್ಲಿ ಎಂ.ಎಸ್ಸಿ. ಓದುವಾಗ ಒಬ್ಬ ಲೇಡಿ ಡಾಕ್ಟರ್ ಅನ್ನು ಲವ್ ಮಾಡಿದ್ದ. ಇವನ ಉಪಜೀವನಕ್ಕೆ ಆಕೆ ಕಾಸು ಕೊಡುತ್ತಿದ್ದಳು. ನಂತರ ಅವಳಿಗೇ ಕೈಕೊಟ್ಟ ಎಂದು ಸೋಮಶೇಖರ್‌ರ ಬೆನ್ನಹಿಂದೆ ಕಿಚಾಯಿಸಿ ಮಾತಾಡತೊಡಗಿದರು.

ಸೋಮಶೇಖರ್ ರಾಜಾಜಿನಗರದಲ್ಲಿ ವಾಸವಾಗಿದ್ದ ಡಾಕ್ಟರ್ ಒಬ್ಬರ ಮಗಳು ಶಮಂತಕಮಣಿಯವರನ್ನು ಮದುವೆಯಾಗಿದ್ದರು. ಎಂ.ಎ. ಪದವೀಧರೆಯಾಗಿದ್ದ ಶಮಂತಕಮಣಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದ ನಗರಿ ಬಾಬಯ್ಯನವರ ವಿದ್ಯಾರ್ಥಿಯಾಗಿದ್ದರು. ಸೋಮಶೇಖರ್‌ಗೆ ತೀರಾ ವಿರುದ್ಧ ಎನಿಸುವಂತೆ ಸೌಮ್ಯ ಸ್ವಭಾವದವರಾಗಿದ್ದರು ಶಮಂತಕಮಣಿ. ಅನ್ಯರ ಮೇಲೆ ವಿನಾಕಾರಣ ಹರಿಹಾಯುತ್ತಿದ್ದ ಪತಿಯ ವರ್ತನೆಯನ್ನು ಆಕ್ಷೇಪಿಸುತ್ತಿದ್ದರು. ಆದರೆ ಸೋಮಶೇಖರ್ ತಮ್ಮ ಸ್ವಭಾವವನ್ನೇನೂ ಮಾರ್ಪಡಿಸಿಕೊಳ್ಳಲಿಲ್ಲ. ಸೋಮಶೇಖರ್ ಅವರಿಗೆ ಇಬ್ಬರು ಗಂಡು ಮಕ್ಕಳಿದ್ದರು.

ಶಮಂತಕಮಣಿಯವರಿಗೆ ಟೀಚಿಂಗ್‌ನಲ್ಲಿ ಅಗಾಧ ಆಸಕ್ತಿ ಮಾತ್ರವಲ್ಲ ಅದರಲ್ಲಿ ವಿಶೇಷ ಪ್ರತಿಭೆಯೂ ಇತ್ತು. ಪ್ರತಿಯೊಬ್ಬರನ್ನು ಸುಶಿಕ್ಷಿತಗೊಳಿಸಬೇಕೆನ್ನುವ ತೀವ್ರ ಹಂಬಲದಲ್ಲಿದ್ದ ಅವರು ಪತಿಯನ್ನು ಪ್ರತಿಯೊಂದು ಹೆಜ್ಜೆಗೂ ಎಚ್ಚರಿಸುತ್ತಿದ್ದರು. ಆದರೆ ಸೋಮಶೇಖರ್ ಮಾತ್ರ "ನಿನ್ನ ಬುದ್ಧಿವಾದ ನನಗೆ ಬೇಡ" ಎಂದು ಕೈ ಜಾಡಿಸಿಬಿಡುತ್ತಿದ್ದರು.

ಸೋಮಶೇಖರ್ ವಿರುದ್ಧ ಕೆಳ ಅಧಿಕಾರಿಗಳು ಮತ್ತು ಸಿಬ್ಬಂದಿ ಅಷ್ಟೇ ಅಲ್ಲ ಮೇಲಧಿಕಾರಿಗಳೂ ಮಾತಾಡಲು ಅಂಜುತ್ತಿದ್ದರು. ಅಂಥ ಒಂದು ಭಯ ಹುಟ್ಟಿಸಬಲ್ಲ ಪ್ರಭಾವಳಿಯನ್ನು ತನ್ನ ಸುತ್ತ ಸೃಷ್ಟಿಸಿಕೊಂಡಿದ್ದರು. ತಾವು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಎಲ್ಲಿಗೆ ಬೇಕಾದರೂ ಒಂದೇ ದಿನದಲ್ಲಿ ವರ್ಗಾ ಮಾಡಿಸಬಹುದು ಎನ್ನುವಂತೆ ವರ್ತಿಸುತ್ತಿದ್ದರು ಸೋಮಶೇಖರ್. ಆಗ ಮೈಸೂರಿನ ಪೊಲೀಸ್ ಕಮೀಷನರ್ ಆಗಿದ್ದ ಸೂರತ್ ಪ್ರಸಾದ್ ಅವರಿಗೆ ಸೋಮಶೇಖರ್‌ರ ಈ ವರ್ತನೆ ಹಿಡಿಸದಿದ್ದರೂ ಬೇರೆ ದಾರಿಕಾಣದೆ ಬಾಯಿ ಮುಚ್ಚಿಕೊಂಡಿದ್ದರು.

ಬಗ್ಗೆ ತೀವ್ರ ಅಸಹನೆ ಅವರಲ್ಲಿ ಮನೆ ಮಾಡಿಕೊಂಡಿತ್ತು. ತಮ್ಮಲ್ಲಿನ ಸೊಕ್ಕು, ಸೆಡವು, ಕೋಪ ಜ್ವಾಲೆಗಳನ್ನು ಹಿಂದುಳಿದವರು ನೋಡಿ ಮೆಚ್ಚಿಕೊಳ್ಳಬೇಕೆಂದು ಬಯಸುತ್ತಿರುವಾಗಲೇ ಅವೆಲ್ಲ ಮುಂದುವರಿದವರ ಹೊಟ್ಟೆಯಲ್ಲಿ ಖಾರ ಕಲೆಸುವಂತೆ ಮಾಡಬೇಕೆಂದು ಕಾತರಿಸುತ್ತಿದ್ದರು. ಇದೆಲ್ಲದರ ಒಟ್ಟು ಪರಿಣಾಮವಾಗಿ ಹಿಂದುಳಿದವರು ಮತ್ತು ಮುಂದುವರಿದವರು ಇದ್ದಲ್ಲಿಯೇ ಇದ್ದು, ತಮ್ಮ ವೈಯಕ್ತಿಕ ಡೈನಾಮಿಸಮ್ ಅನ್ನು ನೋಡುತ್ತಿರಬೇಕೆನ್ನುವುದು ತಮ್ಮ ಒಳ ಆಶಯವಾಗಿದೆ ಎನ್ನುವುದರ ಪ್ರಜ್ಞೆ ಸೋಮಶೇಖರ್ ಅವರಿಗಿರಲಿಲ್ಲ. ತಮ್ಮ ಸಂಬಂಧಿಕರಾಗಲಿ ಅಥವಾ ಸ್ವಜಾತಿಯವರಾಗಲಿ ತಮ್ಮನ್ನು ಮೀರಿ ಬೆಳೆಯುವುದನ್ನು ಅವರ ಸುಪ್ತ ಮನಸ್ಸು ವಿರೋಧಿಸುತ್ತಿತ್ತು. ಹಾಗೆ ಅವರು ಬೆಳೆದುಬಿಟ್ಟರೆ ತನ್ನ ಹೀರೋಯಿಸಮ್‌ಗೆ ಅವಕಾಶವೇ ಇರುವುದಿಲ್ಲ ಎಂದು ಅವರ ಸುಪ್ತ ಚೇತನ ತರ್ಕಿಸುತ್ತಿತ್ತು. ಹೀಗಾಗಿ ತಾನು ಎಲ್ಲರಂತಲ್ಲ ಎನ್ನುವುದನ್ನು ಕಾರಿಕೊಳ್ಳಲು ಸದಾ ತವಕಿಸುತ್ತಿತ್ತು. ತಮ್ಮ ಜಾತಿಯ ಯುವಕರು ಸಿಕ್ಕಾಗ, ಇನ್ನೊಬ್ಬರ ಸಹಾಯದಿಂದ ಮೇಲೆ ಬರುತ್ತೇನೆನ್ನುವುದು ಹೇಡಿತನ. ನಮ್ಮಲ್ಲಿ ಶಕ್ತಿ ಸಾಮರ್ಥ್ಯಗಳನ್ನು ಸಂಚಯಿಸಿಕೊಂಡರೆ ಅಧಿಕಾರ ಅಂತಸ್ತುಗಳು ಕಾಲ ಮೇಲೆ ಬಂದು ಬೀಳುತ್ತವೆ ಎಂದು ಲೆಕ್ಚರ್ ಕೊಡುತ್ತಿದ್ದರು. ತಮಗೆ ಸಿಕ್ಕ ಅಧಿಕಾರ, ಅಂತಸ್ತುಗಳನ್ನು ತಮ್ಮದೇ ಜಾತಿಯ ಬಡ ಯುವಕರ, ವಿದ್ಯಾರ್ಥಿಗಳ ಏಳ್ಗೆಗೆ ಬಳಸುವ ಯೋಚನೆಯನ್ನು ಸೋಮಶೇಖರ್ ಮಾಡದೇ ಇದ್ದುದಕ್ಕೆ ಅವರ ಈ ಮನಸ್ಥಿತಿಯೇ ಕಾರಣ.

ತಾವು ಬಹಳ ಸಿಟ್ಟಿನ ಸ್ವಭಾವದವರೆಂದು ಬಿಂಬಿಸಿಕೊಳ್ಳಲು ಬಹಳಷ್ಟು ಬಾರಿ ಕೃತಕ ಸಿಟ್ಟನ್ನು ಅದೂ ಅನಾವಶ್ಯಕವಾಗಿ ಪ್ರದರ್ಶಿಸುತ್ತಿದ್ದರು. ತಮ್ಮ ಕೈಕೆಳಗಿನ ಸಿಬ್ಬಂದಿಯ ಮೇಲೆ ಅವಶ್ಯಕತೆ ಮೀರಿ ಚೀರಾಡಿ, ಒದರಾಡಿ ನಂತರ ಅವರನ್ನು ಕರೆದು ಕೋಪದಲ್ಲಿ ಏನೇನೋ ಅಂದುಬಿಟ್ಟೆ ಬೇಜಾರು ಮಾಡಿಕೊಳ್ಳಬೇಡಿ ಎಂದು ಸಮಾಧಾನಪಡಿಸುತ್ತಿದ್ದರು. ಇದು ಉದ್ದೇಶಪೂರ್ವಕವಾಗಿ ಆರಂಭವಾಗಿ ನಂತರ ಸೋಮಶೇಖರ್ ಅವರ ಸ್ವಭಾವದ ಒಂದು ಅವಿಭಾಜ್ಯ ಗುಣವಾಗಿ ಫಿಕ್ಸ್ ಆಗಿಬಿಟ್ಟಿತು. ಇಂಥ ಹಲವಾರು ಹುಸಿ ಮುಖವಾಡಗಳ ಮೂಲಕ ತಮ್ಮ ವ್ಯಕ್ತಿತ್ವವನ್ನು ಕಟ್ಟಿ ಬೆಳೆಸಿಕೊಂಡಿದ್ದ ಸೋಮಶೇಖರ್ ಒಬ್ಬರೇ ಕೂತಾಗ ಕಣ್ಣೀರು ಸುರಿಸುತ್ತಿದ್ದರು. ಆ ಕಣ್ಣೀರಿಗೆ ನಿರ್ದಿಷ್ಟ ಕಾರಣಗಳು ಏನು ಎಂದು ಅವರಿಗೇ ತಿಳಿಯುತ್ತಿರಲಿಲ್ಲ.

ಮೇಲಧಿಕಾರಿಗಳೊಂದಿಗೆ ಮಾತಾಡುವಾಗ ಸೋಮಶೇಖರ್‌ರ ಮೈಮೇಲೆ ಮುಖ್ಯಮಂತ್ರಿ ಬಂಗಾರಪ್ಪನವರ ಆವಾಹನೆಯಾಗುತ್ತಿತ್ತು. ದೇಹದಿಂದ ಬಂಗಾರಪ್ಪನವರು ನಿರ್ಗಮನವಾದೊಡನೆ ಸೋಮಶೇಖರ್‌ಗೆ ಹಳ್ಳದಲ್ಲಿ ನೀರು

ಹರಿದುಹೋಗಿ ಬರೀ ಮರಳು ಉಳಿದಂತೆ ಚಡಪಡಿಸುತ್ತಿದ್ದರು. ಈ ಎಲ್ಲ ಮುಖವಾಡ, ಆವೇಶ, ಆವಾಹನೆಗಳ ಭರದಲ್ಲಿ ತನ್ನತನದ ನಿಜ ಅಸ್ತಿತ್ವ ಕಾಣದಂತಾಗಿ ತೀವ್ರ ಅನಾಥಪ್ರಜ್ಞೆಯಿಂದ ಬಳಲುತ್ತಿದ್ದರು. ತಮ್ಮ ನಿಜ ಅಸ್ತಿತ್ವವನ್ನು ಪತ್ನಿಯ ಮುಂದೂ ಬಿಚ್ಚಿಡದ ಸೋಮಶೇಖರ್‌ಗೆ ಒಂಟಿ ಭಾವನೆ ಕೆರಳುತ್ತಲೇ ಇತ್ತು. ಇದು ಅವರ ಅಸಹನೆ, ಸಿಡುಕುತನಗಳನ್ನು ಪದೇಪದೇ ಭುಗಿಲೇಳುವಂತೆ ಮಾಡುತ್ತಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಪತ್ನಿ ಶಮಂತಕಮಣಿ ಪತಿಯೊಂದಿಗೆ ಆಪ್ತವಾಗಿರಲು ವಿಫಲ ಯತ್ನ ಮುಂದುವರಿಸಿಯೇ ಇದ್ದರು.

ಮೈಸೂರು ಅರಸರ ವೈಭೋಗದ ಪಳೆಯುಳಿಕೆಯಿಂದ ಲಲಿತ್ ಮಹಲ್ ಪಂಚತಾರಾ ಹೋಟೆಲ್ ಆಗಿ ಮಾರ್ಪಟ್ಟು ಅರಸರನ್ನು ಅಣಕಿಸುತ್ತಿತ್ತು. ಈ ಲಲಿತ್ ಮಹಲ್‌ನಲ್ಲಿ ಸ್ವಿಮ್ಮಿಂಗ್ ಪೂಲ್ ಇದ್ದು, ಅದಕ್ಕೇ ಆದ ಪ್ರತ್ಯೇಕ ಕ್ಲಬ್ ಮೆಂಬರ್‌ಶಿಪ್ ಇದೆ. ಸೋಮಶೇಖರ್ ಆಗಾಗ್ಗೆ ಈ ಸ್ವಿಮ್ಮಿಂಗ್ ಪೂಲ್‌ಗೆ ಈಜಾಡಲು ಹೋಗುತ್ತಿದ್ದರು. ಈ ಸ್ವಿಮ್ಮಿಂಗ್ ಪೂಲ್ ಆಚೆಗೆ ಟೆನ್ನಿಸ್ ಕೋರ್ಟ್ ಇದ್ದು, ಇವೆರಡನ್ನೂ ಪ್ರತ್ಯೇಕಗೊಳಿಸುವಂತೆ ಮಧ್ಯ ಹಸಿರು ಬೇಲಿ ಇದೆ. ಬಹಳಷ್ಟು ವಿದೇಶಿ ಪ್ರವಾಸಿಗರು ಲಲಿತ್ ಮಹಲ್‌ಗೆ ಬರುತ್ತಾರೆ. ಈ ಹೋಟೆಲ್‌ನ ಸ್ವಿಮ್ಮಿಂಗ್ ಪೂಲ್‌ನಲ್ಲಿ ಗಂಡು-ಹೆಣ್ಣು ಒಟ್ಟಿಗೆ ಈಜಾಡಲು ಅವಕಾಶವಿದೆ. ಉತ್ತಪ್ಪ ಎನ್ನುವ ವ್ಯಕ್ತಿ ಈಜು ಕಲಿಸುವ ಕೋಚ್ ಆಗಿದ್ದ. ಮೈಸೂರಿನ ವಿಕ್ರಾಂತ್ ಟೈರ್ಸ್‌ನಲ್ಲಿ ಉದ್ಯೋಗಿಯಾಗಿದ್ದ ಸತ್ಯದೇವ್ ಎನ್ನುವ ಅವಿವಾಹಿತ ಯುವಕ ಟೆನ್ನಿಸ್ ಆಡಲು ಬರುತ್ತಿದ್ದ. ಅಡ್ಡವಿದ್ದ ಹಸಿರು ಬೇಲಿಯಿಂದ ಸ್ವಿಮ್ಮಿಂಗ್ ಪೂಲ್‌ನತ್ತ ಇಣುಕಿ ಈಜುಡುಗೆಯಲ್ಲಿರುವ ಹೆಣ್ಣುಗಳ ಅಂಗಸೌಷ್ಠವವನ್ನು ಸವಿಯುವ ಹುಚ್ಚಿಗೆ ಬಿದ್ದಿದ್ದ. ಬರುಬರುತ್ತ ಈ ಸತ್ಯದೇವ್, ಕೋಚ್ ಉತ್ತಪ್ಪನಿಗೆ ಭಕ್ಷೀಸು ಕೊಡಲಾರಂಭಿಸಿದ. ಸ್ವಿಮ್ಮಿಂಗ್ ಪೂಲ್ ಕ್ಲಬ್‌ಗೆ ಸದಸ್ಯನಾಗಿರದಿದ್ದರೂ ಬಂದು ಅಲ್ಲಿ ಈಜಾಡಲು ಶುರುಮಾಡಿದ. ಸಾಮಾನ್ಯವಾಗಿ ಅಲ್ಲಿ ಗಂಡ-ಹೆಂಡತಿ ಮತ್ತು ಮಕ್ಕಳು ಜೊತೆಯಾಗಿ ಹೋಗುತ್ತಿದ್ದರು. ಒಂಟಿಯಾಗಿ ಬರುತ್ತಿದ್ದ ಸತ್ಯದೇವ್ ಹೆಂಗಸರ ಮೈಮಾಟದತ್ತ ಜೊಲ್ಲು ಸುರಿಸುತ್ತ ನೋಡತೊಡಗಿದ್ದನ್ನು ಯಾರಾದರೂ ಆಕ್ಷೇಪಿಸಿದರೆ ಕೋಚ್ ಉತ್ತಪ್ಪ, ಅವರೂ ಕ್ಲಬ್ ಮೆಂಬರ್ ಎಂದು ಬಾಯಿಮುಚ್ಚಿಸುತ್ತಿದ್ದ.

ಈಜಾಡುವುದಕ್ಕಿಂತ ಹೆಂಗಸರ ಮೈ ನೋಡಲಿಕ್ಕೇ ಹೆಚ್ಚು ಗಮನ ಕೊಡುತ್ತಿದ್ದ ಸತ್ಯದೇವ್‌ನನ್ನು ಒಂದು ಬಾರಿ ಸೋಮಶೇಖರ್ ಗದರಿಸಿದರು. ಸೋಮಶೇಖರ್‌ಗೆ ತಿರುಗಿಬಿದ್ದ ಸತ್ಯದೇವ್, ನಾನೂ ಮೆಂಬರ್ ನೀನೂ ಮೆಂಬರ್, mind your business ಎಂದು ದಬಾಯಿಸಿದ. ಇನ್ನೂ ಮುಂದು ಹೋಗಿ ಟ್ರಾಫಿಕ್‌ನಲ್ಲಿ

ಚಾಟಿ ಹಿಡಿದು ಜನರನ್ನು ಅಂಜಿಸಿದಂತೆ ನನ್ನನ್ನು ಅಂಜಿಸಲು ಬರಬೇಡ ಎಂದೂ ದಬಾಯಿಸಿದ. ಸತ್ಯದೇವ್‌ನ ಈ ಮಾತಿನಿಂದ ಸೋಮಶೇಖರ್‌ಗೆ ಕೋಪ ಸ್ಫೋಟಗೊಂಡರೂ ಏನೂ ಮಾಡುವಂತಿರಲಿಲ್ಲ. ಅವುಡುಗಚ್ಚಿ ಸಿಟ್ಟನ್ನು ಅದುಮಿಕೊಂಡ ಸೋಮಶೇಖರ್, ಮಗನೇ ನಿನಗೆ ಪಾಠ ಕಲಿಸದೆ ಬಿಡುವುದಿಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡರು.

ಅದು ಮಕ್ಕಳಿಗೆ ಬೇಸಿಗೆ ರಜೆಯ ಸಮಯವಾಗಿತ್ತು. ಸೋಮಶೇಖರ್ ಅವರ ಇಬ್ಬರು ಗಂಡು ಮಕ್ಕಳು ಲಲಿತ್ ಮಹಲ್ ಸ್ವಿಮ್ಮಿಂಗ್ ಪೂಲ್‌ಗೆ ಕರೆದೊಯ್ಯಬೇಕೆಂದು ಹಟ ಮಾಡಿದರು. ಡಿಸಿಪಿ ಸೋಮಶೇಖರ್ ಅವರ ಮಕ್ಕಳು ತಮ್ಮ ಸ್ನೇಹಿತರಾದ ಎಲಿಷಾ ಆಂಡ್ರ್ಯೂಜ್, ಶ್ರೀಕಾಂತ ಮತ್ತು ಅಜಯ್‌ರನ್ನು (ಎಲ್ಲರೂ ಅಪ್ರಾಪ್ತ ವಯಸ್ಸಿನವರೇ) ಈಜುಕೊಳಕ್ಕೆ ಆಹ್ವಾನಿಸಿದರು. ಈ ಹುಡುಗರೆಲ್ಲ ಸೋಮಶೇಖರ್ ಅವರ ಕೆಳ ಅಧಿಕಾರಿಗಳ ಮಕ್ಕಳು.

ದಿ. 7.4.91ರಂದು ಸ್ವಿಮ್ಮಿಂಗ್ ಪೂಲ್‌ಗೆ ಹೋಗುವ ತೀರ್ಮಾನವಾಯಿತು. ಮೊದಲು ಮಕ್ಕಳೆಲ್ಲ ಪೊಲೀಸ್ ವ್ಯಾನ್‌ನಲ್ಲಿ ಲಲಿತ್ ಮಹಲ್ ಈಜುಕೊಳಕ್ಕೆ ಹೋದರು. ಹಿಂದಿನಿಂದ ಕಾರಲ್ಲಿ ಸೋಮಶೇಖರ್ ಮತ್ತು ಅವರ ಪತ್ನಿ ಶಮಂತಕ ಮಣಿ ಹೊರಟರು. ಇವರು ಹೋಟೆಲ್ ತಲುಪುವಷ್ಟರಲ್ಲಿ ಮಕ್ಕಳೆಲ್ಲ ಕಡಿಮೆ ಆಳದ (shallow end) ಸ್ಥಳದಲ್ಲಿ ಈಜಾಡುತ್ತಿದ್ದರು. ಸೋಮಶೇಖರ್ ಮತ್ತು ಶಮಂತಕಮಣಿ ಈರ್ವರೂ ಬಾತ್‌ರೂಮ್‌ಗೆ ಹೋಗಿ ಈಜುಡುಗೆಗಳನ್ನು ಧರಿಸಿಕೊಂಡು ಬಂದರು.

ಸೋಮಶೇಖರ್ ಮತ್ತು ಶಮಂತಕಮಣಿ ನೀರಿಗಿಳಿದ ಕೆಲವೇ ನಿಮಿಷಗಳಲ್ಲಿ ಸತ್ಯದೇವ್ ಹಾಜರಾದ. ಸತ್ಯದೇವ್‌ನನ್ನು ಕಂಡ ಸೋಮಶೇಖರ್ ಕ್ರುದ್ಧನಾದ. ಸತ್ಯದೇವ್ ಸಹ ಈಜುಡುಗೆ ಧರಿಸಿ ಕೊಳಕ್ಕೆ ಜಿಗಿದ. ತನ್ನ ಪಾಡಿಗೆ ತಾನು ಈಜುತ್ತಿದ್ದ ಶಮಂತಕಮಣಿಯ ಸಮೀಪ ಹೋಗುವುದು, ಮೈಮಾಟ ನಿಟ್ಟಿಸಿ ನೋಡುವುದು, ಹಲ್ಲು ಗಿರಿಯುವುದು ಮಾಡತೊಡಗಿದ. ಇದನ್ನು ಗಮನಿಸಿದ ಸೋಮಶೇಖರ್ ಸತ್ಯದೇವ್ ಮತ್ತು ಶಮಂತಕಮಣಿಗಳ ಮಧ್ಯೆ ಹೋಗಿ ಅಡ್ಡಗೋಡೆಯಾಗಲು ಪ್ರಯತ್ನಿಸಿದ. ಸತ್ಯದೇವನ ಕಣ್ಣುಗಳು ಸುತ್ತಲು ಏನು ನಡೆಯುತ್ತಿದೆ ಎನ್ನುವುದನ್ನು ನೋಡುವ ಸಾಮರ್ಥ್ಯವನ್ನೇ ಕಳೆದುಕೊಂಡು ಶಮಂತಕಮಣಿಯ ಸೌಂದರ್ಯಕ್ಕೆ ಸೋತು ಜೋತುಬಿದ್ದಿದ್ದವು. ಈ ಸ್ಥಿತಿಯಲ್ಲಿದ್ದ ಸತ್ಯದೇವ್‌ಗೆ ನೀರಿನೊಳಗಿನಿಂದಲೇ ಕಾಲಿನಿಂದ ಒದ್ದ ಸೋಮಶೇಖರ್ 'ನೀನು ಆ ಕಡೆ ಈಜಾಡು ಹೋಗು' ಎಂದ ಸತ್ಯದೇವ. 'ನನಗೆ ಆರ್ಡರ್ ಮಾಡಲು

ನೀನು ಯಾರು? ನೀನೇ ಆ ಕಡೆ ಹೋಗು' ಎಂದ. ಪತಿ ಮತ್ತು ಅಪರಿಚಿತನ ಮಧ್ಯೆ ನಡೆಯುತ್ತಿದ್ದ ಈ ಜಲಾಂತರ್ಗಾಮಿ ಸಮರ ಶಮಂತಕಮಣಿಯ ಗಮನಕ್ಕೆ ಬರಲೇ ಇಲ್ಲ. ತನ್ನ ಪತ್ನಿಗೆ, ಈಜು ಸಾಕು ಡ್ರೆಸ್ ಹಾಕಿಕೊಂಡು ಬಾ ಎಂದು ಹೇಳಬೇಕೆನಿಸಿತು. ಆದರೆ, ಅದು ಸತ್ಯದೇವ್ ಎನ್ನುವ ಸೊಳ್ಳೆಯೆದುರು ಸೋತಂತಾಗುವುದಿಲ್ಲವೇ ಎನಿಸಿ ಪತ್ನಿಗೆ ಹಾಗೆ ಹೇಳಲಿಲ್ಲ.

ಸೋಮಶೇಖರ್‌ರ ಪ್ರತಿರೋಧವನ್ನೆಲ್ಲ ಅಲಕ್ಷಿಸಿ ಶಮಂತಕಮಣಿ ಮುಳುಗಿದ್ದಲ್ಲಿ, ಎದ್ದಲ್ಲಿ, ಜಿಗಿದಲ್ಲಿ, ತೇಲಿದಲ್ಲಿ ಎಲೆಲ್ಲೂ ದೃಷ್ಟಿ ನೆಟ್ಟ. ಸಾವು ಇಂಥ ಸೌಂದರ್ಯದ ಮೂಲಕ ಕಣ್ಮುಂದೆ ಓಲಾಡುತ್ತದೆ ಎನ್ನುವುದು ಮತಿಗೆಟ್ಟ ಸತ್ಯದೇವ್‌ಗೆ ಗೊತ್ತಾಗಲಿಲ್ಲ.

ಈಜಾಡುತ್ತಿದ್ದ ಸತ್ಯದೇವ್ ಇದ್ದಕ್ಕಿದ್ದಂತೆ ನೀರೊಳಕ್ಕೆ ಹೋದ. ಕೆಲವು ಕ್ಷಣಗಳ ನಂತರ ಮೇಲೆ ಬಂದು ಕೈಯಾಡಿಸಿ ಮತ್ತೆ ಮುಳುಗಿದ. ಕಡಿಮೆ ಆಳದ ಸ್ಥಳದಲ್ಲಿ ಈಜುತ್ತಿದ್ದ ಸತ್ಯದೇವ್ ಆಳದ ನೀರಿನ ಪ್ರದೇಶದಲ್ಲಿ ಎದ್ದು ಕೈಯಾಡಿಸಿ ಮತ್ತೆ ಮುಳುಗು ಹಾಕಿದ್ದನ್ನು ಈಜುತ್ತಿದ್ದ ಮಕ್ಕಳು ನೋಡಿ, ಆ ಅಂಕಲ್ ಮುಳುಗುತ್ತಿದ್ದಾನೆ' ಎಂದು ಕೂಗಿಕೊಂಡರು. ಇದನ್ನು ಕೇಳಿದ ಕೋಚ್ ಉತ್ತಪ್ಪ ಯಾರಾದರೂ ಬನ್ನಿ ಉಳಿಸಿ, ಒಬ್ಬ ಮುಳುಗುತ್ತಿದ್ದಾನೆ ಎಂದು ಕೂಗತೊಡಗಿದ. ಅಷ್ಟರಲ್ಲಿ ಕಡಿಮೆ ಆಳದ ನೀರಿನ ಸ್ಥಳದಲ್ಲಿ ಮೇಲೆ ಬಂದ ಸೋಮಶೇಖರ್. 'ಏನು ಏನಾಗಿದೆ?' ಎಂದು ಗಾಬರಿಭಾವದಿಂದ ಪ್ರಶ್ನಿಸಿದರು. ಆಗ ಉತ್ತಪ್ಪ, 'ಸಾರ್ ಅವ್ನು ಮುಳುಗಿಬಿಟ್ಟಿದಾನೆ, ನನ್ನ ಕೈಗೆ ಬ್ಯಾಂಡೇಜ್ ಇಲ್ಲದಿದ್ದರೆ ನೀರಿಗೆ ನಾನೇ ಜಿಗಿಯುತ್ತಿದ್ದೆ. ನೀರು ಬಗೆಯೋಕೆ ಆಗೊಲ್ಲ. ನೀವೇ ಧುಮುಕಿ ಸಾರ್' ಎಂದ ಗೋಗರೆವ ಧ್ವನಿಯಲ್ಲಿ.

"ಅವನಿಗೆ ಈಜು ಬರುತ್ತಿತ್ತೋ ಇಲ್ವೊ?"

"ಬರುತ್ತಿತ್ತು ಸಾರ್"

"ಹಾಗಿದ್ರೆ ಮೇಲೆ ಬರ‍್ತಾನೆ ಬಿಡು"

"ಅಷ್ಟು ಪರ್‌ಫೆಕ್ಟ್ ಆಗಿ ಬರೋಲ್ಲ ಸಾರ್. ಅವ್ನು ಯಾವಾಗ್ಲೂ ಕಮ್ಮಿ ಆಳದಲ್ಲೇ ಈಜುತ್ತಿದ್ದ. ಆದ್ರೆ ಆಳದ ನೀರಲ್ಲಿ ಎದ್ದು ಕೈಯಾಡಿಸಿ ಮತ್ತೆ ಮುಳುಗಿದ ಅಂತ ನಿಮ್ಮ ಮಕ್ಳೇ ಹೇಳಿದ್ರು ಸಾರ್"

"ಈಜು ಬರ್ದೇ ಇರೋರಿಗೆಲ್ಲ ಈಜಾಡಲಿಕ್ಕೆ ಅವಕಾಶ ಕೊಟ್ರೆ ಇನ್ನೇನಾಗುತ್ತೆ.

ಕೋಚ್ ಆಗಿದ್ದುಕೊಂಡು ಇಂಥದಕ್ಕೆಲ್ಲ ಅವಕಾಶ ಮಾಡಿಕೊಟ್ಟೀಯಲ್ಲಾ ನಿನ್ನನ್ನ ಮೊದ್ಲು ಒಳಗೆ ಹಾಕಿಸಬೇಕು"

"ಅದೆಲ್ಲ ಆಮೇಲೆ ಮಾತಾಡೋಣ ಸಾರ್. ಮೊದ್ಲು ನೀರಿಗೆ ಜಿಗಿದು ಅವ್ನ ಪ್ರಾಣ ಉಳಿಸಿ ಸಾರ್.... ಅಯ್ಯೋ ಅಯ್ಯೋ ಯಾರಾದ್ರೂ ಬನ್ನೀ ಬನ್ನೀ"

ಉತ್ತಪ್ಪನ ಚೀತ್ಕಾರ ತಾರಕಕ್ಕೇರಿದೊಡನೆ ಹೋಟೆಲ್ ಒಳಗಿನಿಂದ ಪೀಟರ್, ಎಸ್.ಎಸ್. ಛತ್ರಿ, ಸಾಧುವನ್, ಕುಸುಮಾಕರ ಶೆಟ್ಟಿ ಮುಂತಾದವರು ಓಡಿಬಂದರು. ಇವರಲ್ಲಿ ಒಬ್ಬಿಬ್ಬರು ನೀರಿಗಿಳಿಯಲು ತಯ್ಯಾರಾದಾಗ ಸೋಮಶೇಖರ್, "ನೀರಲ್ಲಿ ಮುಳುಗಿದವನನ್ನ ತೆಗೆಯೋದು ಅಷ್ಟು ಸುಲಭವಲ್ಲ. ಮೇಲೇಳಲು ಹೋದವನನ್ನೇ ಪ್ರಾಣಭಯದಿಂದ ತೆಕ್ಕೆ ಹಿಡಿದುಬಿಡುತ್ತಾರೆ. ಆಗ ಉಳಿಸಲು ಹೋದವನೂ ಮುಳುಗಬೇಕಾಗುತ್ತದೆ. ನಾನು ಡಿಸಿಪಿಯಾಗಿದ್ದುಕೊಂಡೇ ಹಿಂದೆಮುಂದೆ ನೋಡುತ್ತಿದ್ದೇನೆ, ನೀರಿಗೆ ಧುಮಕಲು. ಅವನು ನೀರಿಗೆ ಜಿಗಿಯುವ ಮುನ್ನ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶವೇನಾದರೂ ಇತ್ತೇ ಎನ್ನುವ ಅನುಮಾನವೂ ಬರುತ್ತದೆ. ಅಥವಾ ಗಾಂಜಾ, ಚರಸ್‌ನಂಥ ಮಾದಕ ದ್ರವ್ಯಗಳನ್ನೇನಾದರೂ ಸೇವಿಸಿದ್ದನೋ? ಹೇಳಲು ಬರುವುದಿಲ್ಲ. ಇಷ್ಟು ಹೊತ್ತು ನೀರೊಳಗೆಯೇ ಇದ್ದಾನೆಂದರೆ ಮೊದಲು ಅವನ ಬಾಡಿ ಎಲ್ಲಿದೆಯೆಂದು ತಿಳಿದುಕೊಂಡು ಆ ಸ್ಥಳಕ್ಕೆ ಇಳಿದು ಜಾಗರೂಕವಾಗಿ ಅಂತರವಿರಿಸಿಕೊಂಡು ಹುಕ್ ಸಹಾಯದಿಂದ ಹೊರಗೆಳೆದು ತರುವುದು ಒಳ್ಳೆಯದು ಎನಿಸುತ್ತದೆ" ಎಂದು ಹೇಳಿದಾಗ ನೀರಿಗಿಳಿಯಲು ತಯಾರಾದವರು ಹಿಂದೇಟು ಹಾಕಿದರು.

ಅಷ್ಟರಲ್ಲಿ ಹೋಟೆಲ್‌ನ ಸಿಬ್ಬಂದಿ, ಕಾರ್ಮಿಕರು ಧಾವಿಸಿ ಬಂದರು.

ಈಜುಕೊಳವನ್ನು ಶುಚಿ ಮಾಡಲು ಉಪಯೋಗಿಸುವ ಉದ್ದನೆಯ ಬಂಬಿನ ಬ್ರಶ್‌ಗಳನ್ನು ತೆಗೆದುಕೊಂಡು ನೀರಲ್ಲಿ ದೇಹ ಎಲ್ಲಿ ತಟ್ಟುತ್ತದೆ ಎಂದು ತಡಕಾಡ ತೊಡಗಿದರು ಕಾರ್ಮಿಕರು. ಒಂದೆಡೆ ದೇಹ ಇರುವುದು ಪತ್ತೆಯಾಯಿತು. ಹುಕ್ ತೆಗೆದುಕೊಂಡು ಕೆಲವರು ನೀರಿಗಿಳಿದು ದೇಹವನ್ನು ಮೇಲೆ ತಂದರು. ಅಷ್ಟರಲ್ಲಿ ಸೋಮಶೇಖರ್ ಹೋಟೆಲ್ ಮ್ಯಾನೇಜರ್‌ಗೆ ಹೇಳಿ ಡಾಕ್ಟರ್‌ರನ್ನು ಕರೆಯಿಸಿದ್ದರು.

ಮುಳುಗಿದ್ದ ಸತ್ಯದೇವ್ ನೀರು ಕುಡಿದಿದ್ದಾನೋ ಏನೋ ಎಂದು ಹೊಟ್ಟೆ ಅದುಮಿ ನೀರು ಹೊರತೆಗೆಯಲು ಪ್ರಯತ್ನಿಸುತ್ತಿದ್ದಾಗ ಡಾಕ್ಟರ್ ಬಂದು ನಾಡಿ, ಹೃದಯಬಡಿತ ಪರೀಕ್ಷಿಸಿ, ಕಣ್ಣು ರೆಪ್ಪೆ ಬಿಡಿಸಿ ಗುಡ್ಡೆಗಳನ್ನು ನೋಡಿದರು. "ಸಾರಿ, ಏನೂ ಮಾಡಬೇಡಿ ಇವನು ಸತ್ತಿದ್ದಾನೆ" ಎಂದು ನಿಟ್ಟುಸಿರುಬಿಟ್ಟರು.

ಕೋಚ್ ಉತ್ತಪ್ಪನ ದೇಹ ಕಂಪಿಸತೊಡಗಿತ್ತು. ಬೆವರು ವಸರತೊಡಗಿತ್ತು. ಉತ್ತಪ್ಪನ ಹತ್ತಿರ ಬಂದ ಸೋಮಶೇಖರ್, 'ನಿನ್ನ ಮೇಲೆ ಏನೂ ಕೇಸ್ ಆಗದಂತೆ ನೋಡಿಕೊಳ್ತೇನೆ. ನಾನು ಹೇಳಿದಂತೆ ಬರೆದುಕೊಡು' ಎಂದರು.

ಸೋಮಶೇಖರ್‌ರ ಕೀಲುಗೊಂಬೆಯಂತಾಗಿದ್ದ ಉತ್ತಪ್ಪ, 'ಆಯಿತು ಸಾರ್' ಎಂದ.

"ಸತ್ಯದೇವ್ ಟೆನ್ನಿಸ್ ಕೋರ್ಟ್ ಕಡೆಯಿಂದ ಹಸಿರು ಬೇಲಿ ದಾಟಿ ಬಂದವನೇ ನೀರಿಗೆ ಜಿಗಿದ. ಒಳಕ್ಕೆ ಮುಳುಗಿದವನು ಮೇಲೆ ಬರಲೇ ಇಲ್ಲ ಎಂದು ಬರೆ" ಎಂದರು. ಹಾಗೆಯೇ 'ಘಟನೆ ನಡೆದಾಗ ಸ್ಥಳದಲ್ಲಿದ್ದವರ ಹೆಸರುಗಳಲ್ಲಿ ನನ್ನ ಮತ್ತು ಪತ್ನಿಯ ಹೆಸರು ಸೇರಿಸಬೇಡ. ಇಲ್ಲಿ ನಾವು ಇದ್ದೆವು ಎಂದರೆ ಸುಮ್ಮನೆ ಕೋರ್ಟ್‌ಗೆ ಸಾಕ್ಷ್ಯ ಹೇಳಲು ಅಲೆಯಬೇಕಾಗುತ್ತದೆ. ಅದೂ ಅಲ್ಲದೆ ನಿನಗೆ ಹೆಲ್ಪ್ ಮಾಡಬೇಕಾದರೆ ಕೇಸ್‌ನೊಂದಿಗೆ ನನ್ನ ಲಿಂಕ್ ಇಲ್ಲದಿದ್ರೆ ಹೆಚ್ಚು ಅನುಕೂಲ' ಎಂದರು.

ಸೋಮಶೇಖರ್‌ರ ವಿವರಣೆಗಳಾವುವು ಉತ್ತಪ್ಪನ ತಲೆಯೊಳಗೆ ಹೋಗುವಂತಿರಲಿಲ್ಲ. ಪ್ರತಿಯೊಂದಕ್ಕೂ ಆಯ್ತು ಸಾರ್ ಎಂದು ಹೇಳಿದ್ದನ್ನು ಬರೆಯುತ್ತಿದ್ದ.

ಅಷ್ಟರಲ್ಲಿ ನಜರ್‌ಬಾದ್ ಠಾಣೆಯ ಪಿಎಸ್‌ಐ ಗಣೇಶ್ ಬಂದು ಸೋಮಶೇಖರ್ ಅವರಿಗೆ ಸೆಲ್ಯೂಟ್ ಹೊಡೆದು ನಿಂತರು.

"ನೋಡಿ, ಆ ಕೋಚ್ ನಡೆದ ಘಟನೆ ವಿವರಿಸಿ ಹೇಳಿಕೆ ಬರೆದಿದ್ದಾನೆ. ಅದನ್ನ ಫೈಲಿನಲ್ಲಿ ಇಟ್ಟುಕೊಳ್ಳಿರಿ. ಏನೂ ಮಿಸ್ ಆಗದಂತೆ ಪ್ರತಿಯೊಂದನ್ನೂ ರೆಕಾರ್ಡ್ ಮಾಡಿಕೊಳ್ಳಿ. ಸತ್ತವನ ಡ್ರೆಸ್‌ಗಳನ್ನ ಶೋಧಿಸಿ. ಗಾಂಜಾ, ಚರಸ್‌ನಂಥವು ಏನಾದ್ರೂ ಇವೆಯಾ ಚೆಕ್ ಮಾಡಿ. ಹಾಗೇ ಅವನ ವಿಳಾಸ ಅದರಲ್ಲಿ ಸಿಕ್ಕಬಹುದು. ಅವನ ಮನೆಯವರನ್ನ ಕರೆಸಿ" ಎಂದರು. ಕೋಚ್ ಉತ್ತಪ್ಪ, ಸತ್ಯದೇವ್ ನೀರಿಗೆ ಹಾರಿದ್ದರ ಬಗ್ಗೆ ಹೇಳಿಕೆ ಕೊಟ್ಟರೆ ನಂತರ ಉತ್ತಪ್ಪನ ಕೂಗಾಟ ಕೇಳಿ ಓಡಿಬಂದ ಪೀಟರ್ ಮುಂತಾದವರು ಶವವನ್ನು ಶೋಧಿಸಿ ಹೊರ ತೆಗೆದುದರ ಬಗ್ಗೆ ಹೇಳಿಕೆಗಳನ್ನು ನೀಡಿದರು.

ಆದರೆ ಹೇಗೆ ಸತ್ತ ಎನ್ನುವುದನ್ನು ಮಾತ್ರ ಯಾರೂ ಹೇಳಲಿಲ್ಲ.

ಲಲಿತ್ ಮಹಲ್ ಹೋಟೆಲ್ ಚೀಫ್ ಆಗಿದ್ದ ಶ್ರೀಮತಿ ಇಂದ್ರಜಿತ್ ಮಲಿಕ್

ಅವರು ಜನರಲ್ ಮ್ಯಾನೇಜರ್ ಅಶೋಕ್ ರಾಡಿಸನ್ ಮೂಲಕ ಪಿಎಸ್ಐ ಗಣೇಶ್ ಅವರಿಗೆ ಘಟನೆಯ ಬಗ್ಗೆ ದೂರು ನೀಡಿಸಿದರು.

ಘಟನೆ ನಡೆದಾಗ ಸ್ಥಳದಲ್ಲಿದ್ದವರ ಪಟ್ಟಿಯಲ್ಲಿ ಸೋಮಶೇಖರ್ ಅವರ ಇಬ್ಬರು ಅಪ್ರಾಪ್ತ ಮಕ್ಕಳು ಸೂರಜ್ ಮತ್ತು ಸಂಜಯ, ಹಾಗೆಯೇ ಅವರ ಸ್ನೇಹಿತರಾದ ಎಲೀಷಾ ಆಂಡ್ರೂಸ್, ಶ್ರೀಕಾಂತ್ ಮತ್ತು ಅಜಯ್ ಅವರ ಹೆಸರುಗಳನ್ನೂ ದಾಖಲಿಸಲಾಗಿತ್ತು.

ಮೃತ ಸತ್ಯದೇವ್‌ನ ತಾಯಿ ಎಂ.ಆರ್. ಲಲಿತ ತನ್ನ ಸಹೋದರ ಎಂ.ಆರ್. ರಂಗನಾಥ್ ಮತ್ತು ಮಗಳು ಕಲ್ಪನಾ ಜೊತೆಗೂಡಿ ಲಲಿತ ಮಹಲ್ ಹೋಟೆಲ್‌ಗೆ ಗಾಬರಿ, ಭೀತಿಗಳಿಂದ ಓಡಿಬಂದಳು. ಮಗನ ಶವದ ಮೇಲೆ ಬಿದ್ದು ತಾಯಿ ಲಲಿತ ರೋದಿಸತೊಡಗಿದರು. ಸಹೋದರಿ ಕಲ್ಪನಾ ತಲೆತಿರುಗಿಬಿದ್ದಳು. ಅವಳ ಮುಖಕ್ಕೆ ಯಾರೋ ನೀರು ಚಿಮುಕಿಸಿದರು. ಶವವನ್ನು ಸರ್ಕಾರಿ ಆಸ್ಪತ್ರೆಗೆ ಪೋಸ್ಟ್ ಮಾರ್ಟಮ್‌ಗಾಗಿ ಕಳಿಸಿಕೊಡಲಾಯಿತು. ಪಿಎಸ್ಐ ಗಣೇಶ್ ಅವರು ಅದನ್ನು ಅಸ್ವಾಭಾವಿಕ ಸಾವು (UDR 17/91) ಎಂದು ದಾಖಲಿಸಿಕೊಂಡು ತನಿಖೆಯನ್ನು ಮುಂದುವರಿಸಿದರು.

ಗಣೇಶ್ ಜೊತೆ ಮಾತಾಡುತ್ತ, "ಪಾಪ ಸತ್ತವನ ತಾಯಿಯ ರೋದನ ನೋಡಲು ನನಗಾಗುತ್ತಿಲ್ಲ. ಈಗಿನ ಯೂಥ್ಸ್ ಹಾಳಾಗುತ್ತಿದ್ದಾರೆ. ತಮ್ಮ ಬಗ್ಗೆಯೂ ರೆಸ್ಪಾನ್ಸಿಬಿಲಿಟಿಯಿಲ್ಲ. ತಮ್ಮ ಫ್ಯಾಮಿಲಿಯ ಬಗ್ಗೆಯೂ ಇಲ್ಲ. ಸದ್ಯಕ್ಕೆ ಅವನಿಗೆ ಮದುವೆಯೊಂದು ಆಗಿಲ್ಲ. ಇಲ್ಲದಿದ್ದರೆ ಅವನ ವಿಧವೆ ಹೆಂಡತಿಯ ಗೋಳು ನೋಡಲಾಗುತ್ತಿರಲಿಲ್ಲ: ಅಷ್ಟಕ್ಕೂ ನನಗೆ ಅವನು ಹೇಗೆ, ಏಕೆ ಸತ್ತ ಎನ್ನುವುದೇ ಒಗಟಾಗಿದೆ. ಈಜುಕೊಳದ ಗೋಡೆಗಳಲ್ಲಿರುವ ವಾಲ್ವ್, ಪೈಪುಗಳೇನಾದರೂ ತಾಗಿ ಪ್ರಾಣಬಿಟ್ಟನೆ ಹೇಗೆ?" ಎಂದರು ಸೋಮಶೇಖರ್.

"ಯಾವುದಕ್ಕೂ ಪೋಸ್ಟ್ ಮಾರ್ಟಮ್ ರಿಪೋರ್ಟ್ ಬರುತ್ತಲ್ಲ ಸಾರ್. ಅದರಲ್ಲಿ ಎಲ್ಲ ಸಿಗುತ್ತೆ ಬಿಡಿ. ನಿಮ್ಮನ್ನ ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ ಸಾರ್. ನೀವು ಮೇಲೆ ನೋಡಲು ಕಟುವಾಗಿ ವರ್ತಿಸುತ್ತೀರಿ. ಆದರೆ ಈಗ ನೋಡಿ, ಅದಾವನೋ ಅಪರಿಚಿತನ ಸಾವಿಗೆ ಎಷ್ಟೊಂದು ಮರುಗುತ್ತಿದ್ದೀರಿ" ಎಂದರು ಪಿಎಸ್ಐ ಗಣೇಶ್.

ಒಳಗೇ ಮುಳುಗಿಹೋಗಿದ್ದ ಸೋಮಶೇಖರ್ ಗಣೇಶ್ ಮಾತಿನಿಂದ ಎಚ್ಚರಗೊಂಡು ಆಂ! ಎಂದು ಕೈಯಲ್ಲಿ ಉರಿಯುತ್ತಿದ್ದ ಸಿಗರೇಟ್ ಅನ್ನು

ತುಟಿಗಿರಿಸಿಕೊಂಡು ದೀರ್ಘ ಜುರಿ ಎಳೆದು ನಿಧಾನವಾಗಿ ಮೂಗಿನಿಂದ ಹೊಗೆಯುಗುಳತೊಡಗಿದರು.

ಅಂದು ಬೆಳಗ್ಗೆ ಎದ್ದವರೇ ಸೋಮಶೇಖರ್, 'ಇಂದು ನನ್ನ ಗೆಳೆಯರೊಂದಿಗೆ ಪಿಕ್‌ನಿಕ್‌ಗೆ ಹೊರಟಿರುವೆ' ಎಂದರು.

ತಮ್ಮ ಸ್ನೇಹಿತರೊಂದಿಗೆ ಅರಣ್ಯ ಮಧ್ಯದ ಫಾರೆಸ್ಟ್ ಗೆಸ್ಟ್‌ಹೌಸ್‌ಗೆ ಸೋಮಶೇಖರ್ ಬಂದಿಳಿದರು. ಗೆಸ್ಟ್‌ಹೌಸ್‌ನ ಕುಕ್‌ನನ್ನು ಕರೆದು ಒಳ್ಳೆಯ ಅಡುಗೆ ಮಾಡುವಂತೆ ಸೂಚಿಸಿದರು. ಸೋಮಶೇಖರ್ ಬಂದೂಕನ್ನು ಕೈಗೆತ್ತಿಕೊಂಡರೆ ಅದ್ಭುತ ಏಕಾಗ್ರತೆಗೆ ಒಳಗಾಗುತ್ತಿದ್ದರು. ಸಾಮಾನ್ಯವಾಗಿ ಅವರಿಟ್ಟ ಗುರಿ ಫೇಲ್ ಆಗುತ್ತಿರಲಿಲ್ಲ. ತಮ್ಮ ಗುರಿಯ ಕೈಚಳಕವನ್ನು ಗೆಳೆಯರ ಮುಂದೆ ಪ್ರದರ್ಶಿಸಿ ಶಭಾಶ್‌ಗಿರಿ ಪಡೆದುಕೊಳ್ಳುವುದರಲ್ಲಿ ಸೋಮಶೇಖರ್ ಖುಷಿ ಕಂಡುಕೊಳ್ಳುತ್ತಿದ್ದರು. ತಮ್ಮ ಈ ಗೀಳಿನಿಂದಾಗಿ ಸರ್ಕಾರ ನಿಗದಿಗೊಳಿಸಿದ್ದಕ್ಕಿಂತ ಹತ್ತಾರುಪಟ್ಟು ಹೆಚ್ಚಿನ ಗುಂಡುಗಳನ್ನು ಪ್ರತಿ ತಿಂಗಳು ಹಾರಿಸುತ್ತಿದ್ದರು. ಹೆಚ್ಚಿನ ಗುಂಡುಗಳ ಇಂಡೆಂಟ್ ಅನ್ನು ಮೇಲಧಿಕಾರಿಗಳು ಆಕ್ಷೇಪಿಸುವ ಗೊಡವೆಗೆ ಹೋಗುತ್ತಿರಲಿಲ್ಲ.

ಅಂದು ಸೋಮಶೇಖರ್ ಮನಸ್ಸು ಸರಿಯಿರಲಿಲ್ಲವೇನೊ. ಮನಸ್ಸು, ಕಣ್ಣು, ಬಂದೂಕಿನ ಕುದುರೆಯ ಮೇಲಿನ ಬೆರಳುಗಳು ಪರಸ್ಪರ ಜಗಳ ಮಾಡಿಕೊಂಡಂತೆ ಆಡತೊಡಗಿದ್ದವು. ಗುರಿತಪ್ಪಿದಂತೆಲ್ಲ ಸೋಮಶೇಖರ್ ಮನಸ್ಸು ಸಮತೋಲನ ಕಳೆದುಕೊಳ್ಳುತ್ತ ಸಾಗಿತು. ಕೊನೆಗೆ ಹುಚ್ಚು ಹಿಡಿದವರಂತೆ, ಗಾಳಿಯಲ್ಲಿ ಗುಂಡಿನ ಸುರಿಮಳೆಗರೆದು 'ಇವನಮ್ಮನ್' ಎಂದು ನಿಟ್ಟುಸಿರಿಟ್ಟರು. ಈ ವೈಫಲ್ಯವನ್ನು ಸರಿದೂಗಿಸಿಕೊಳ್ಳಲು ಸಿಗರೇಟ್ ತುಟಿಗಿರಿಸಿಕೊಂಡು ಬೆಂಕಿ ಹಚ್ಚಿ ಜೋರಾಗಿ ಜುರಿ ಎಳೆದರು. ಸಿಗರೇಟ್ ಅನ್ನು ಸಿಕ್ಕಿಸಿಕೊಂಡಿದ್ದ ಬೆರಳುಗಳು ಸೂಕ್ಷ್ಮವಾಗಿ ಅದುರುತ್ತಿರುವುದು ಸೋಮಶೇಖರ್ ಗಮನಕ್ಕೆ ಬಂದಾಗ ಸಿಗರೇಟ್ ಅನ್ನು ನೆಲದ ಮೇಲೆ ಬಿಸಾಡಿ ಬೂಟುಗಾಲಿನಿಂದ ತಿಕ್ಕಿ ಆರಿಸಿದರು. ಅವಶ್ಯಕತೆಗಿಂತ ಅತಿಹೆಚ್ಚಿನ ಬಲ ಪ್ರಯೋಗಿಸುತ್ತಿರುವೆನಲ್ಲ ಈ ಸಿಲ್ಲಿ ಸಿಗರೇಟ್ ಅನ್ನು ಆರಿಸಲು ಎಂದುಕೊಂಡ ಸೋಮಶೇಖರ್ ವಿಕ್ಷಿಪ್ತವಾಗಿ ಅಡುಗೆಯವನನ್ನು ಕೂಗಿ ಕರೆದರು.

ಮಾರನೆ ದಿನ ಪೋಸ್ಟ್ ಮಾರ್ಟಮ್ ರಿಪೋರ್ಟ್ ಬಂದಿರುವುದನ್ನು ಖಚಿತಪಡಿಸಿಕೊಂಡ ಸೋಮಶೇಖರ್, ಪಿಎಸ್‌ಐ ಗಣೇಶ್‌ಗೆ ಸ್ವಿಮ್ಮಿಂಗ್ ಪೂಲ್‌ನ ಗೋಡೆಯಲ್ಲಿರುವ ವಾಲ್ವ್, ನೀರಿನ ಪೈಪುಗಳಿಗೆ ತಲೆ ತಾಗಿದರೆ ಇಂಥ ಸಾವು ಸಂಭವಿಸಬಹುದೆ ಎಂದು ಪ್ರಶ್ನಿಸಿ ಅವರಿಂದ ವಿವರಣೆ ಪಡೆದುಕೊಳ್ಳಿರಿ ಎಂದು

ಸೂಚಿಸಿದರು. ಅದರಂತೆ ಪಿಎಸ್ಐ ಗಣೇಶ್ ಡಾ. ಶೆಣೈ ಅವರನ್ನು ಪ್ರಶ್ನಿಸಿದರು. ಅದಕ್ಕೆ ಡಾ. ಶೆಣೈ, ಹೌದು ಅಂಥ ಸಾಧ್ಯತೆಗಳಿಂದಲೂ ಈ ಸಾವು ಸಂಭವಿಸಿರಬಹುದು ಎಂದು ವಿವರಣೆ ನೀಡಿದರು. ಅದನ್ನೆಲ್ಲ ಒಳಗೊಂಡ ಒಂದು ವರದಿಯನ್ನು ಡಾ. ಶೆಣೈಯವರಿಂದ ಸಬ್‌ಇನ್ಸ್‌ಪೆಕ್ಟರ್ ಗಣೇಶ್ ಪಡೆದುಕೊಂಡರು. ಸತ್ಯದೇವ್‌ನ ಮೃತ ದೇಹದ ಶಿಶ್ನ ನಿಗುರಿಕೊಂಡಿದ್ದ ಸಂಗತಿಯನ್ನು ಡಾಕ್ಟರ್ ತಮ್ಮ ವರದಿಯಲ್ಲಿ ನೀಡಿದರು.

ಇವೆಲ್ಲ ಆಗಿ ಹತ್ತು ದಿನಗಳು ಕಳೆದಿರಬಹುದು. ಒಂದು ದಿನ ಬ್ರೇಕ್‌ಫಾಸ್ಟ್ ಮಾಡುತ್ತಿರುವಾಗ ಅದೇನೋ ಮಾತಿಗೆ ಮಾತು ಬಂದು ಎಲೀಷಾ ಆಂಡ್ರ್ಯೂಸ್ "ಅಂದು ಸೋಮಶೇಖರ್ ಅಂಕಲ್ ಕೂಡಲೇ ನೀರಿಗೆ ಜಿಗಿದಿದ್ದರೆ ಅವನನ್ನು ಉಳಿಸಬಹುದಿತ್ತು" ಎಂದುದು ಅವನ ತಂದೆ ಸರ್ಕಲ್ ಇನ್ಸ್‌ಪೆಕ್ಟರ್ ಆಂಡ್ರ್ಯೂಸ್ ಕಿವಿಗೆ ಬಿದ್ದಿತು.

ತಕ್ಷಣವೇ ಆಂಡ್ರ್ಯೂಸ್ ಕಿವಿಗಳು ನಿಮಿರಿ ನಿಂತವು. "ಏನು? ಏನಂದೆ ಹೇಳು ಇನ್ನೊಮ್ಮೆ" ಎಂದರು ಮಗನ ಮಾತನ್ನು ಅರ್ಧಕ್ಕೇ ತಡೆದು. ಎಲೀಷಾ ಪುನಃ ಅದೇ ಮಾತನ್ನು ಹೇಳಿದಾಗ, ಅಂದರೆ ಆ ಘಟನೆ ನಡೆಯುವಾಗ ಸೋಮಶೇಖರ್ ಆ ಸ್ಥಳದಲ್ಲಿದ್ದರು ಎಂದಾಯಿತು ಎಂದು ರಾಗವಾಗಿ ಹೇಳಿದಾಗ "ಅವರಷ್ಟೇ ಅಲ್ಲ ಅಪ್ಪ, ಅವರ ಹೆಂಡತಿ ಶಮಂತಕಮಣಿ ಆಂಟಿ ಕೂಡಾ ಇದ್ದರು..." ಎಂದುಬಿಟ್ಟ . ತಿನ್ನುತ್ತಿದ್ದುದನ್ನು ಅರ್ಧಕ್ಕೆ ಬಿಟ್ಟು ಲಗುಬಗೆಯಿಂದ ಡ್ರೆಸ್ ಮಾಡಿಕೊಂಡು ನೇರ ನಜರ್‌ಬಾದ್ ಠಾಣೆಗೆ ಹೋಗಿ ಸತ್ಯದೇವ್ ಕೊಲೆಗೆ ಸಂಬಂಧಿಸಿದ ಫೈಲ್ ಅನ್ನು ತಿರುವಿ ಹಾಕತೊಡಗಿದರು. ಘಟನೆ ನಡೆದಾಗ ಇದ್ದವರ ಹೆಸರುಗಳ ಪಟ್ಟಿಯಲ್ಲಿ ಸೋಮಶೇಖರ್ ಮತ್ತು ಅವರ ಪತ್ನಿಯ ಹೆಸರುಗಳು ಇಲ್ಲದಿರುವುದನ್ನು ಕಂಡ ಆಂಡ್ರ್ಯೂಸ್‌ಗೆ ಅದೇನೋ ಫ್ಲ್ಯಾಶ್ ಆದಂತಾಗಿ, ಇನ್ಸ್‌ಪೆಕ್ಟರ್ ಇಫ್ತಿಕಾರ್ ಅಹ್ಮದ್‌ನನ್ನು ಕಾಣಲು ಹೊರಟ. ಅಂದು ಈಜಲು ಹೋಗಿದ್ದ ಸೋಮಶೇಖರ್ ಮಕ್ಕಳ ಸ್ನೇಹಿತರಾದ ಎಲೀಷಾ, ಶ್ರೀಕಾಂತ ಮತ್ತು ಅಜಯ್‌ರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕಂಡು ಆಂಡ್ರ್ಯೂಸ್ ಮತ್ತು ಇಫ್ತಿಕಾರ್ ಮಾತಾಡಿಸಿದರು.

ಅಂದು ಸೋಮಶೇಖರ್ ಆ ಸ್ಥಳದಲ್ಲಿ ಹಾಜರಿದ್ದುದಷ್ಟೇ ಅಲ್ಲ ಕೊಳದಲ್ಲಿ ಪತ್ನಿ, ಮಕ್ಕಳೊಂದಿಗೆ ಈಜಾಡುತ್ತಿದ್ದರು ಎನ್ನುವ ಸಂಗತಿಯನ್ನು ಆ ಮಕ್ಕಳು ಹೊರಹಾಕಿದರು.

ತಾ. 20.4.91ರಂದು ಪ್ರಪ್ರಥಮವಾಗಿ ಮೈಸೂರಿನ ದೈನಿಕ ಪತ್ರಿಕೆ

'ಆಂದೋಲನ'ದಲ್ಲಿ ಸತ್ಯದೇವ್‌ದು ಅಸ್ವಾಭಾವಿಕ ಸಾವು ಅಲ್ಲ, ಕೊಲೆಯಾಗಿರುವುದರ ಬಗ್ಗೆ ಶಂಕೆಯಿದೆ ಎನ್ನುವ ಅರ್ಥದ ವರದಿ ಪ್ರಕಟವಾಯಿತು.

ಈ ಕೊಲೆಯ ಸುತ್ತ ಸೋಮಶೇಖರ್ ಹೆಸರು ಅನಧಿಕೃತವಾಗಿ ಸುಳಿದಾಡಲಾರಂಭಿಸಿತು. ಸೋಮಶೇಖರ್‌ರನ್ನು ಇಲಾಖೆಯಲ್ಲಿ ಮಾತ್ರವಲ್ಲದೆ ನಗರದಲ್ಲೂ ಬಹುತೇಕರು ವಿರೋಧಿಸುತ್ತಿರುವಂಥ ವಾತಾವರಣದಲ್ಲಿ ಈ ಸುದ್ದಿಗೆ ರೆಕ್ಕೆಪುಕ್ಕಗಳು ಹುಟ್ಟಿಕೊಂಡು ಗುಲ್ಲೆದ್ದುಬಿಟ್ಟಿತು. ಆದರೆ ಅಧಿಕೃತವಾಗಿ ಮಾತ್ರ ಸೋಮಶೇಖರ್ ಹೆಸರು ಎಲ್ಲೂ ದಾಖಲಾಗಲಿಲ್ಲ. ಆದರೆ ತಾ. 25.4.91ರಂದು ಸತ್ಯದೇವ್‌ನ ಸಾವನ್ನು 'ಅಸ್ವಾಭಾವಿಕ' ಎಂದು ಇದ್ದುದನ್ನು 'ಕೊಲೆ' ಎಂದು ಪರಿವರ್ತಿಸಲಾಯಿತು. ಅದೇ ದಿನ ಮೃತ ಸತ್ಯದೇವ್‌ನ ತಾಯಿ ಲಲಿತ ಅವರು ತಮ್ಮ ಮಗ ಕೊಲೆಯಾಗಿರುವ ಶಂಕೆ ತಮಗಿದೆ ಎಂದು ನೀಡಿದ ದೂರಿನ ಆಧಾರದ ಮೇಲೆ ಹೀಗೆ ಆ ಪ್ರಕರಣವನ್ನು ಪರಿವರ್ತಿಸಲಾಯಿತು.

ತಾ. 25.4.91 ರಂದು ಸರ್ಕಲ್ ಇನ್‌ಸ್ಪೆಕ್ಟರ್ ಇಫ್ತಿಕಾರ್ ಅಹ್ಮದ್ ಈ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ವಹಿಸಿಕೊಂಡರು.

ನಗರದಲ್ಲಿ ದಿನದಿಂದ ದಿನಕ್ಕೆ ಈ ಕೊಲೆ ಪ್ರಕರಣದ ಬಗ್ಗೆ ಕುತೂಹಲ ಜ್ವಾಲೆಯಂತೆ ಕೆರಳಲಾರಂಭಿಸಿತು. ಮಾಧ್ಯಮದವರು ಮೈಸೂರಿನ ಪೊಲೀಸ್ ಕಮೀಷನರ್ ಸೂರತ್‌ಪ್ರಸಾದ್ ಅವರನ್ನು ಭೇಟಿಯಾಗಿ ಫೋನ್ ಮಾಡಿ ತನಿಖೆ ಎಲ್ಲಿಗೆ ಬಂದಿತು, ಕೊಲೆಯ ಅಪರಾಧಿ ಪತ್ತೆಯಾದನೆ ಇತ್ಯಾದಿ ಪ್ರಶ್ನೆಗಳನ್ನು ಹಾಕತೊಡಗಿದರು.

ಏತನ್ಮಧ್ಯ, ಪ್ರಕರಣದ ತನಿಖಾಧಿಕಾರಿ ಸಿಪಿಐ ಇಫ್ತಿಕಾರ್ ಅಹ್ಮದ್ ಸೋಮಶೇಖರ್ ಅವರ ಮಕ್ಕಳೊಂದಿಗೆ ಅಂದು ಈಜಲು ಹೋಗಿದ್ದ ಇತರ ಮೂವರು ಬಾಲಕರ ಹೇಳಿಕೆಗಳನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಚುರುಕುಗೊಳಿಸಿದರು.

ಮೂಲ ದೂರಿನಲ್ಲಿ ಹೇಳುವ ಪ್ರಕಾರ ಸತ್ಯದೇವ್, ಟೆನ್ನಿಸ್ ಕೋರ್ಟ್ ಕಡೆಯಿಂದ ಓಡಿಬಂದು ಈಜುಕೊಳದೊಳಕ್ಕೆ ತಲೆ ಕೆಳಗೆ ಮಾಡಿ ಧುಮುಕಿ ಸಾವಿಗೀಡಾದ ಎನ್ನುವುದು ಸುಳ್ಳು. ಬದಲಾಗಿ ಚೆನ್ನಾಗಿ ಈಜಾಡುತ್ತಿದ್ದ ಸತ್ಯದೇವ್ ಇದ್ದಕ್ಕಿದ್ದಂತೆ ಒಳಕ್ಕೆ ಮುಳುಗಿ ಸತ್ತ. ಅದೇ ಸಂದರ್ಭದಲ್ಲಿ ಸೋಮಶೇಖರ್ ಅವರು ತಮ್ಮ ಪತ್ನಿಯ ಸಮೇತ ಅದೇ ಕೊಳದಲ್ಲಿ ಈಜಾಡುತ್ತಿದ್ದರು ಇತ್ಯಾದಿ ಹೊಸ ಸಂಗತಿಗಳನ್ನು ತನಿಖಾಧಿಕಾರಿ ಇಫ್ತಿಕಾರ್ ತಮ್ಮ ಮೇಲಧಿಕಾರಿಗಳಿಗೆ ನೀಡಿದರು.

ಸದರಿ ಕೊಲೆ ಪ್ರಕರಣ ತಮ್ಮ ಸುತ್ತ ಸುತ್ತಿಕೊಳ್ಳುತ್ತಿರುವುದರ ಅರಿವಾದ ಸೋಮಶೇಖರ್ ಮುಖ್ಯಮಂತ್ರಿಗಳಿಗೆ 'ವಿನಾಕಾರಣ ಇದನ್ನೆಲ್ಲ ನನ್ನ ಸುತ್ತ ತರಲಾಗುತ್ತಿದೆ. ನನ್ನ ಬೆಳವಣಿಗೆಯನ್ನು ಕಂಡು ಕರುಬುತ್ತಿರುವವರ ಷಡ್ಯಂತ್ರವಿದು' ಎಂದು ಸಮಜಾಯಿಷಿ ನೀಡಿದರು.

ಮೈಸೂರು ನಗರದ ಪೊಲೀಸ್ ಕಮೀಷನರ್ ಸೂರತ್‌ಪ್ರಸಾದ್ ಅವರು ತಮ್ಮದೇ ಗುಪ್ತ ತನಿಖಾದಳದ ಮೂಲಕ ಈ ಕೊಲೆ ಪ್ರಕರಣದ ಬಗ್ಗೆ ಗೌಪ್ಯ ಮಾಹಿತಿಯನ್ನು ತರಿಸಿಕೊಂಡರು. ಆ ಮಾಹಿತಿಯ ವರದಿಯನ್ನು ಪೊಲೀಸ್ ಮಹಾನಿರ್ದೇಶಕರಿಗೆ ಕಳಿಸಿಕೊಟ್ಟರು. ಒಂದೇ ದಿನದಲ್ಲಿ ಈ ವರದಿಯ ಒಂದು ಪ್ರತಿ ಸೋಮಶೇಖರ್ ಅವರ ಕೈಗೆ ಸಿಕ್ಕಿತು!

ನಗರದ ಸಾರ್ವಜನಿಕರು ಮತ್ತು ಮಾಧ್ಯಮಗಳ ಒತ್ತಾಯದಿಂದಾಗಿ ಕಮೀಷನರ್ ಸೂರತ್‌ಪ್ರಸಾದ್ ಅವರು ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಪತ್ರಿಕಾಗೋಷ್ಠಿಯೊಂದನ್ನು ಕರೆದರು. ಸೋಮಶೇಖರ್ ಸಹ ಆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಕಿಕ್ಕಿರಿದಿದ್ದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ, ಸತ್ಯದೇವ್ ಕೊಲೆಯ ಬಗ್ಗೆ ತನಿಖೆ ತೀವ್ರ ಗತಿಯಲ್ಲಿ ಮುನ್ನಡೆದಿದೆ. ಸಾರ್ವಜನಿಕರು ಮತ್ತು ಮಾಧ್ಯಮಗಳಿಂದ ಟೀಕೆಗಳು ಬಂದಿರುವಂತೆ ಈ ತನಿಖೆಯಲ್ಲಿ ಯಾವುದೇ ರೀತಿಯ ಪಕ್ಷಪಾತ ಮಾಡಲಾಗುತ್ತಿಲ್ಲ. ನಮ್ಮ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರನ್ನು ರಕ್ಷಿಸುವ ಷಡ್ಯಂತ್ರ ನಡೆಯುತ್ತಿದೆ ಎನ್ನುವುದು ಅಪ್ಪಟ ಸುಳ್ಳು ಎಂದರು.

ಅಷ್ಟರಲ್ಲಿ ಒಬ್ಬ ಪತ್ರಕರ್ತ, 'ಹಾಗಿದ್ದರೆ ಯಾರು ಆ ಆರೋಪಿತ ಹಿರಿಯ ಅಧಿಕಾರಿ?' ಎಂದು ಪ್ರಶ್ನಿಸಿದ.

'ಇಲ್ಲಿಯೇ ನಿಮ್ಮೆದುರಿಗೆ ಇದ್ದಾರಲ್ಲ, ಡಿಸಿಪಿ ಸೋಮಶೇಖರ್–ಇವರೇ ಸತ್ಯದೇವ್ ಕೊಲೆ ಮಾಡಿದ್ದಾರೆಂದು ಈವರೆಗಿನ ತನಿಖೆಯಿಂದ ಸಾಕ್ಷಿ ಹೇಳಿಕೆಗಳು ದೊರೆತಿವೆ. ನಿಷ್ಪಕ್ಷಪಾತವಾಗಿ ತನಿಖೆಯನ್ನು ಮುಂದುವರೆಸಲಾಗುತ್ತಿದೆ. ಆ ಬಗ್ಗೆ ಕಳವಳಪಡಬೇಕಾದ ಅವಶ್ಯಕತೆಯಿಲ್ಲ' ಎಂದುಬಿಟ್ಟರು.

ಅಲ್ಲಿಯೇ ಕೂತಿದ್ದ ಸೋಮಶೇಖರ್ ರಕ್ತ ಕುದಿಯತೊಡಗಿತು. ಅವುಡುಗಚ್ಚಿ ಸಿಟ್ಟನ್ನು ತಡೆದುಕೊಳ್ಳುತ್ತಿದ್ದ ಸೋಮಶೇಖರ್ ಮುಖ ಕೆಂಡದುಂಡೆಯಂತಾಯಿತು. ಮೇಲಧಿಕಾರಿಗಳ ಪರವಾನಗಿಯಿಲ್ಲದೆ ಪ್ರೆಸ್ ಮುಂದೆ ಬಾಯಿಬಿಡದಿರುವ ತಮ್ಮ ದುಃ ಸ್ಥಿತಿಯ ಬಗ್ಗೆ ಕ್ರೋಧಗೊಂಡಿತು.

ಪತ್ರಕರ್ತರು ಚುಡಾಯಿಸುವ ಧ್ವನಿಯಲ್ಲಿ, 'ಇದಕ್ಕೆ ನೀವೇನಂತೀರಿ ಸೋಮಶೇಖರ್?' ಎಂದು ಪ್ರಶ್ನಿಸಿದಾಗ ಮುಖದಲ್ಲಿ ಬೆವರು ಹರಿಯತೊಡಗಿತು. ಕಮೀಷನರ್ ಸೂರತ್‌ಪ್ರಸಾದ್‌ರನ್ನು ಕೊಂದು ತಿಂದೇಬಿಡುತ್ತಾರೇನೋ ಎನ್ನುವಂತೆ ಸೋಮಶೇಖರ್ ನೋಡತೊಡಗಿದರಲ್ಲದೆ ಆ ಪ್ರಶ್ನೆಗೆ ತಾನು ಉತ್ತರಿಸಲು ಹುಕುಂ ಬೇಕು ಎನ್ನುವಂತೆ ನೋಡಿದರು.

ಮಾರನೇ ದಿನ ಪತ್ರಿಕೆಗಳಲ್ಲೆಲ್ಲ, "ಸೋಮಶೇಖರ್ ಕೊಲೆಗಾರ: ಕಮೀಷನರ್ ಹೇಳಿಕೆ", "ಆರೋಪ ಅಲ್ಲಗಳೆಯದೆ ಸೋಮಶೇಖರ್ ಮೌನ" ಇತ್ಯಾದಿ ವರದಿಗಳು ಸ್ಫೋಟಕವಾಗಿ ಬಿತ್ತರಗೊಂಡವು.

ಸೋಮಶೇಖರ್ ತಮ್ಮ ಚೇಂಬರ್‌ನಲ್ಲಿ ಕೆಂಡದುಂಡೆಯಾಗಿ ಕೂತಿದ್ದರು. ಟೇಬಲ್ ಮೇಲೆ ದಿನಪತ್ರಿಕೆಗಳೆಲ್ಲ ಬಿದ್ದಿದ್ದವು. ಹಿಂದಿನ ದಿನ ಕಮೀಷನರ್ ಪ್ರೆಸ್‌ಮೀಟ್ ಮಾಡಿ ಸತ್ಯದೇವ್ ಕೊಲೆ ಪ್ರಕರಣದಲ್ಲಿ ಡಿಸಿಪಿ ಸೋಮಶೇಖರ್ ಅವರೇ ಆರೋಪಿ ಎಂದು ಹೇಳಿದ್ದು ಬಗೆಬಗೆಯ ಸುದ್ದಿಗಳಾಗಿ ಪ್ರಕಟಗೊಂಡಿದ್ದವು. ಪೇಪರ್‌ಗಳನ್ನೆಲ್ಲ ಸುಟ್ಟುಬಿಡುವಂತೆ ಅವುಗಳ ಮೇಲೆ ರಭಸದಿಂದ ಸಿಗರೇಟ್ ಹೊಗೆಯನ್ನು ಉಗುಳುತ್ತಿದ್ದರು. ಅದೇ ಸಮಯಕ್ಕೆ ಸರ್ಕಲ್ ಇನ್‌ಸ್ಪೆಕ್ಟರ್ ಇಫ್ತಿಕಾರ್, ಪಿ.ಎಸ್.ಐ. ಗಳಾದ ಗಣೇಶ ಮತ್ತು ಎಸಿಪಿ ದಾಸ್ತಿಕೊಪ್ಪ ಅವರು ಸೋಮಶೇಖರ್ ಚೇಂಬರ್ ಒಳಕ್ಕೆ ಪ್ರವೇಶಿದರು. ಒಳಬಂದವರೆಲ್ಲ ತಮ್ಮನ್ನು ಲೇವಡಿ ಮಾಡಲು ಬಂದಿದ್ದಾರೆನ್ನಿಸಿತು ಸೋಮಶೇಖರ್‌ಗೆ. ಬಂದವರಿಗೆ ಕೂಡಲೂ ಸೂಚಿಸದೆ ಇದ್ದಕ್ಕಿದ್ದಂತೆ ಸ್ಫೋಟಗೊಂಡು ಪೇಪರ್‌ನಲ್ಲಿ ಅಚ್ಚಾಗಿದ್ದ ಕಮೀಷನರ್ ಅವರ ಫೋಟೋವನ್ನು ನೆಲಕ್ಕೆ ಹಾಕಿ ಬೂಟುಗಾಲಿನಿಂದ ತುಳಿದು ಮತ್ತೆ ಅದನ್ನು ಕೈಗೆತ್ತಿಕೊಂಡು ಚಿಂದಿಚಿಂದಿಯಾಗಿ ಹರಿದು ಕಕ್ಕಸ್ಸು ರೂಮಿಗೆ ಎಸೆದು ಬಂದು, "ನೋಡ್ತಾ ಇರಿ, ಪೆರೇಡ್ ಗ್ರೌಂಡ್‌ನಲ್ಲೇ ಈ ಕಮೀಷನರ್ ನನ್ನ ಪಿಸ್ತೂಲಿನ ಬುಲೆಟ್‌ಗಳನ್ನು ತಿಂದು ಸಾಯುತ್ತಾನೆ ಹಾಂ... ಯಾವ ನನ್ ಮಗಂಗೂ ನನ್ನನ್ನು ಏನೂ ಮಾಡೋಕಾಗಲ್ಲ..." ಎಂದು ಸ್ಫೋಟಗೊಂಡು ಚೀರಿದ. ಸೋಮಶೇಖರ್ ರೌದ್ರಾವತಾರಕ್ಕೆ ಬೆಚ್ಚಿಬಿದ್ದು ಅವರೆಲ್ಲ ಲಗುಬಗೆಯಿಂದ ಚೇಂಬರ್‌ನಿಂದ ಹೊರಕ್ಕೆ ಓಟಕಿತ್ತಿದ್ದರು.

ಆ ಕೂಡಲೇ ಕಮೀಷನರ್ ಬಳಿಗೆ ಹೋದ ಅವರು ಸೋಮಶೇಖರ್ ಆಡಿದ ಮಾತುಗಳಿಗೆ ಬಣ್ಣ ಹಚ್ಚಿ ಹೇಳಿದರು. "ಇನ್ನೂ ಸ್ವಲ್ಪ ಹೊತ್ತು ನಾವು ಅಲ್ಲಿಯೇ ಇದ್ದಿದ್ದರೆ ನಮ್ಮಲ್ಲಿ ಯಾರಿಗಾದರೂ ಅವನು ಗುಂಡು ಹಾರಿಸಬಿಡುತ್ತಿದ್ದನೇನೋ" ಎಂದೂ ಸೇರಿಸಿದರು.

ಸ್ವಭಾವತಃ ಸೌಮ್ಯವಾಗಿದ್ದ ಕಮೀಷನರ್ ಸೂರತ್ ಪ್ರಸಾದ್ ಅವರಿಗೆ ಅವರ ಮಾತುಗಳನ್ನು ಕೇಳಿ ನಿಜಕ್ಕೂ ದಿಗಿಲು ಉಂಟಾಯಿತು. ಆ ಕೂಡಲೇ ಸೋಮಶೇಖರ್ ತಮಗೆ ಕೊಲೆ ಬೆದರಿಕೆ ಹಾಕಿದ್ದಾರೆಂದು ಕಂಪ್ಲೇಂಟ್ ಒಂದನ್ನು ರಿಜಿಸ್ಟರ್ ಮಾಡಿಸಿದರು. ಮತ್ತು ಸದರಿ ಕೊಲೆ ಪ್ರಕರಣದ ತನಿಖೆ ನಡೆಯದಂತೆ ಸೋಮಶೇಖರ್ ಭಯೋತ್ಪಾದನೆಯನ್ನು ಸೃಷ್ಟಿ ಮಾಡಿರುವುದರಿಂದ ಕೂಡಲೇ ತನಿಖೆಯ ಜವಾಬ್ದಾರಿಯನ್ನು ಸಿ.ಓ.ಡಿ.ಗೆ ವಹಿಸಿಕೊಡಬೇಕೆಂದು ಡಿಜಿಪಿ ಪತ್ರ ಬರೆದರು. ಹೀಗಾಗಿ ಸತ್ಯದೇವ್ ಕೊಲೆ ಪ್ರಕರಣವನ್ನು ಸಿ.ಓ.ಡಿ. ಕೈಗೆತ್ತಿಕೊಂಡಿತು. "ಯಾರು ಏನೇ ಬರೆದುಕೊಳ್ಳಲಿ, ಹರಿದುಕೊಳ್ಳಲಿ ನನ್ನ ಮೈಮುಟ್ಟುವ ಧೈರ್ಯ ಯಾವ ಮಗನಿಗೂ ಇಲ್ಲ" ಎಂದು ಸೋಮಶೇಖರ್ ಗುಡುಗಿದರು.

ಸೋಮಶೇಖರ್ ಅವರ ಹಿತೈಷಿಗಳು "ಕೂಡಲೇ ನೀನು ತಲೆ ತಪ್ಪಿಸಿಕೋ, ಇಲ್ಲದಿದ್ದರೆ ನಿನ್ನ ಅರೆಸ್ಟ್ ಆಗುತ್ತದೆ" ಎಂದು ಹೇಳಿದರು. ಅವರ ಮಾತಿಗೆ ಗಹಗಹಿಸಿ ನಕ್ಕ ಸೋಮಶೇಖರ್. "ನಾನು ಆಗಲೇ ಸಿ.ಎಂ ಗೆ ಫೋನ್‌ನಲ್ಲಿ ಮಾತಾಡಿದ್ದೇನೆ. ಸ್ವತಃ ಸಿ.ಎಂ ನನ್ನ ಫ್ರೆಂಡ್ ಆಗಿರೋವಾಗ ಯಾರಿಗೆ ಇದೆ ನನ್ನನ್ನು ಅರೆಸ್ಟ್ ಮಾಡೋ ಧೈರ್ಯ ಆಂ?" ಎಂದು ವ್ಯಂಗ್ಯವಾಗಿ ಮರುಪ್ರಶ್ನೆ ಹಾಕಿದರು. ಯಾರ ಮಾತಿಗೂ ಕಿವಿಗೊಡದೆ ಸೋಮಶೇಖರ್ ತಲೆಮರೆಸಿಕೊಂಡು ಆಂಟಿಸಿಪೇಟರಿ ಬೇಲ್‌ಗೆ ಪ್ರಯತ್ನಿಸುವ ಗೋಜಿಗೆ ಹೋಗಲಿಲ್ಲ.

ತಾ. 10.5.91ರಂದು ಪ್ರಕರಣವು ಸಿ.ಓ.ಡಿ.ಗೆ ವಹಿಸಲ್ಪಟ್ಟಿತು. ಅಂದೇ SP ಹಲಗೇರಿ.ಎಸ್.ಎಸ್. ಅವರ ನೇತೃತ್ವದಲ್ಲಿ ತನಿಖಾ ತಂಡ ರಚನೆಗೊಂಡಿತು. ಕೆ. ಶ್ರೀಕಂಠ ಮತ್ತು ಎಸ್.ಬಿ.ನಾಯ್ಡು ಆ ತಂಡದ ಇತರ ಇಬ್ಬರು ಅಧಿಕಾರಿಗಳು. ಇಷ್ಟೆಲ್ಲ ಆದರೂ ಸೋಮಶೇಖರ್ ನಿರ್ಭಯವಾಗಿ ಓಡಾಡಿಕೊಂಡಿದ್ದರು.

ಸಿ.ಓ.ಡಿ. ತಂಡ ಮೈಸೂರಿನಲ್ಲಿ ಇಪ್ಪತ್ತು ದಿನಗಳವರೆಗೆ ಠಿಕಾಣಿ ಹೂಡಿ ಮೃತ ಸತ್ಯದೇವನ ಸಂಬಂಧಿಕರು, ಲಲಿತ ಮಹಲ್ ಪ್ಯಾಲೇಸ್ ಸಿಬ್ಬಂದಿ, ಕೋಚ್ ಉತ್ತಪ್ಪ, ಸೋಮಶೇಖರ್ ಅವರ ಮಕ್ಕಳ ಮೂವರು ಸ್ನೇಹಿತರು ಮತ್ತು ಇತರೆ ಸಾಕ್ಷಿಗಳನ್ನು ಭೇಟಿಯಾಗಿ ಹೇಳಿಕೆಗಳನ್ನು ಪಡೆದುಕೊಂಡರು.

ಮುಖ್ಯಮಂತ್ರಿಗಳ ಕಚೇರಿಯ ಸಂಪರ್ಕದಲ್ಲಿದ್ದ ಸೋಮಶೇಖರ್, ಇದೆಲ್ಲ ಪಬ್ಲಿಕ್‌ಗೆ ಕಣ್ಣೊರೆಸಲು ಮಾಡುತ್ತಿರುವ ನಾಟಕ ಎಂದೇ ಭಾವಿಸಿಕೊಂಡರು. ಸಿ.ಓ.ಡಿ. ಮುಖ್ಯಸ್ಥರಾಗಿದ್ದ ರೇವಣಸಿದ್ದಯ್ಯನವರೊಂದಿಗೆ ಮುಖ್ಯಮಂತ್ರಿಗಳ ಸ್ನೇಹಿತ ಎನ್ನುವ ಗತ್ತಿನಲ್ಲಿ ಮಾತಾಡುತ್ತಾ "ಎಲ್ಲಿಗೆ ಬಂತು ನಿಮ್ಮ ತನಿಖೆ?" ಎಂದು ತಮಾಷೆಯಿಂದ ಕೇಳುತ್ತಿದ್ದರು.

ತಾ. 5.6.91ರಂದು ಸಿ.ಓ.ಡಿ. ತಂಡ ಸೋಮಶೇಖರ್ ಅವರನ್ನು ಬಂಧಿಸಿಬಿಟ್ಟಿತು!

"ಇದು ವಿಶ್ವಾಸದ್ರೋಹ. ಬೆನ್ನಿಗೆ ಚೂರಿ ಇರಿಯುವ ಕೃತ್ಯ. ನಾನು ಈಗಲೇ CMಗೆ ಮಾತಾಡುತ್ತೇನೆ. ಖಂಡಿತ ಈ ವಿಷಯ CM ಗಮನಕ್ಕೆ ಬಂದಿರುವುದಿಲ್ಲ. ಎಲ್ಲಿ ನಿಮ್ಮ ಆಫೀಸರ್ ರೇವಣಸಿದ್ದಯ್ಯ? ಅವರಿಗೇ ಮಾತಾಡುತ್ತೇನೆ. ಇದೆಲ್ಲ ಯಾರ ಕುತಂತ್ರ ಎಂದು ನನಗೆ ಗೊತ್ತು" ಎಂದು ಸೋಮಶೇಖರ್ ಕೂಗುತ್ತಲೇ ಇದ್ದರು. ಆದರೆ ಅವರನ್ನು ಬಂಧಿಸಿದ ಸಿ.ಓ.ಡಿ. ತಂಡ ನಿರ್ಭಾವುಕವಾಗಿ ತಣ್ಣಗೆ "ಅವರಿಗೆಲ್ಲ ನೀನು ಲಾಕಪ್‌ನೊಳಗಿನಿಂದ ಮಾತಾಡುವಿಯಂತೆ, ಈಗ ನಮ್ಮೊಂದಿಗೆ ನಡಿ" ಎಂದಿತು!

ಇದೆಲ್ಲ ಸೋಮಶೇಖರ್ ಅವರ ಪತ್ನಿ ಶಮಂತಕಮಣಿ ಗಮನಕ್ಕೆ ಕೂಡಲೇ ಬಂತು.

ಸಿ.ಓ.ಡಿ. ತನಿಖಾ ತಂಡ ಅಂದೇ ಅಂದರೆ 5.6.91ರಂದು ಬೆಂಗಳೂರಿನಲ್ಲಿದ್ದ ಸೋಮಶೇಖರ್ ಅವರ ಸ್ವಂತ ಮನೆಯನ್ನು ಸರ್ಚ್ ಮಾಡಿತು. ಆಗ ಲೈಸೆನ್ಸ್ ರಹಿತ ಇಂಪೋರ್ಟೆಡ್ ರೈಫಲ್ ಮತ್ತು ಐವತ್ತು ಕಾಡತೂಸುಗಳನ್ನು ಸೀಜ್ ಮಾಡಿತು. "ಇದು ಎಲ್ಲಿಂದ ಬಂತು?" ಎಂದು ಪ್ರಶ್ನಿಸಿದಾಗ ಸೋಮಶೇಖರ್, "ಒಬ್ಬ ವ್ಯಕ್ತಿ ಇದನ್ನು ಗಿಫ್ಟ್ ಆಗಿ ಕೊಟ್ಟ" ಎಂದು ಹೇಳಿದರು. ಆಗ ಬೆಂಗಳೂರಿನ ಸುಬ್ರಹ್ಮಣ್ಯನಗರ ಠಾಣೆಯಲ್ಲಿ Indian Arms Act ಪ್ರಕಾರ ಅನಧಿಕೃತವಾಗಿ ರೈಫಲ್ ಹೊಂದಿದ್ದಕ್ಕೆ ಒಂದು ಕೇಸನ್ನೂ ಅದೇ ರೀತಿ Prevention of Corruption Act ಪ್ರಕಾರ ಲಂಚ ರೂಪದಲ್ಲಿ ರೈಫಲ್ ಅನ್ನು ಪಡೆದುಕೊಂಡಿದ್ದಕ್ಕೆ ಮತ್ತೊಂದು ಕೇಸನ್ನೂ ಬುಕ್ ಮಾಡಿದರು.

ಇದರ ಮಾರನೆ ದಿನ ಬೆಳಗ್ಗೆ ನನ್ನ ಮನೆಗೆ ಇಬ್ಬರು ಬಂದರು. ಅವರಲ್ಲಿ ಒಬ್ಬನ ಹೆಸರು ಕೃಷ್ಣಸ್ವಾಮಿ ಎಂದು ನನಗೆ ಗೊತ್ತಿತ್ತು. ಅವರನ್ನು ನಾನು ಕೋರ್ಟ್‌ನಲ್ಲಿ ಬಹಳಷ್ಟು ಬಾರಿ ನೋಡಿದ್ದೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಆಗಿದ್ದ ಕೃಷ್ಣಸ್ವಾಮಿಯವರು ತಮ್ಮ ಪತ್ನಿಯ ಕೊಲೆ ಆರೋಪ ಹೊತ್ತು 1972ರಲ್ಲಿ ಕೋರ್ಟ್‌ಗೆ ಹಾಜರಾಗುತ್ತಿದ್ದರು. ಆ ಕೇಸು ಕುತೂಹಲಕರವಾಗಿದ್ದುದರಿಂದ ವಿಚಾರಣೆ ನಡೆಯುವಾಗ ನಾನು ಹಾಜರಿದ್ದು ಆಲಿಸುತ್ತಿದ್ದೆ. 1972ರಲ್ಲಿ ನಡೆದ ಈ ಕೊಲೆ ಪ್ರಕರಣ ಕೋರ್ಟಿನಲ್ಲಿ ಮತ್ತು ಪತ್ರಿಕೆಗಳಲ್ಲಿ ಮಹಾಲಕ್ಷ್ಮಿ ಲೇಔಟ್ ಕೊಲೆ ಮೊಕದ್ದಮೆ ಎಂದು ಪ್ರಚಾರ ಪಡೆದುಕೊಂಡಿತ್ತು. ಈ ಕೇಸ್‌ನಲ್ಲಿ ಆರೋಪಮುಕ್ತರಾದ

ಕೃಷ್ಣಸ್ವಾಮಿಯವರು ಮುಂದೆ ಸ್ವತಃ ತಾವೇ ವಕೀಲಿ ವೃತ್ತಿಯನ್ನು ಆರಂಭಿಸಿದರು. ಇದನ್ನೆಲ್ಲ ನನ್ನ ನೆನಪಿನಾಳದಿಂದ ಬಗೆದು ತೆಗೆಯುತ್ತಿರುವಾಗ ಕೃಷ್ಣಸ್ವಾಮಿಯವರು, "ಇವಳು ನನ್ನ ಸೋದರ ಸೊಸೆ, ಕೊಲೆ ಕೇಸ್‌ನಲ್ಲಿ ಈಗ ಅರೆಸ್ಟ್ ಆಗಿರುವ ಸೋಮಶೇಖರ್ ಅವರ ಪತ್ನಿ ಶಮಂತಕಮಣಿ" ಎಂದು ಪರಿಚಯಿಸಿದರು.

ಗಾಬರಿ ಮುಖ ಹೊತ್ತು ಬಂದಿದ್ದ ಶಮಂತಕಮಣಿಯವರಿಗೆ ನಾನು ಸಮಾಧಾನ ಹೇಳಿದ್ದೆ. "ನೀವು ನಿರ್ಭಯವಾಗಿರಿ ಕೇಸನ್ನು ನಡೆಸೋಣ" ಎಂದೆ. ನನ್ನ ಮಾತುಗಳು ಶಮಂತಕಮಣಿಯವರಲ್ಲಿ ವಿಶ್ವಾಸ ಹುಟ್ಟಿಸಿದವು ಎಂದು ಕಾಣುತ್ತದೆ. ಸಾದ್ಯಂತವಾಗಿ ಪ್ರಕರಣಕ್ಕೆ ಸಂಬಂಧಿಸಿದ ವಿಷಯಗಳನ್ನೆಲ್ಲ ಬಿಚ್ಚು ಮನಸ್ಸಿನಿಂದ ತೋಡಿಕೊಂಡರು.

"ಮೊದಲೇ ಬಂದಿದ್ದರೆ ಆಂಟಿಸಿಪೇಟರಿ ಬೇಲ್ ಕೊಡಿಸಬಹುದಾಗಿತ್ತು. ಅದೇಕೆ ಹೀಗೆ ಅಲಕ್ಷ್ಯ ಮಾಡಿ ಚಪ್ಪಡಿ ಮೇಲೆ ಎಳೆದುಕೊಂಡಿರಿ" ಎಂದೆ.

"ಅಯ್ಯೋ ಅವರು ಯಾರ ಮಾತು ಕೇಳ್ತಾರೆ? ನಾನು ಎಷ್ಟೇ ಬಡಿದುಕೊಂಡರೂ ನನ್ನ ಆಫೀಸ್ ವಿಷಯ ನಿಂಗೆ ಗೊತ್ತಾಗೊಲ್ಲ ಸುಮ್ನಿರು. ನಾನು CM ಮತ್ತು ರೇವಣಸಿದ್ದಯ್ಯನವರಿಗೆ ಮಾತಾಡಿದ್ದೇನೆ. ನನ್ನ ಅರೆಸ್ಟ್ ಆಗೋದು ಎಂದರೆ ಹುಡುಗಾಟವೆ ಎಂದು ನನ್ನ ಬಾಯಿ ಮುಚ್ಚಿಸಿದರು" ಎನ್ನುವಾಗ ಶಮಂತಕಮಣಿಯವರ ಕಣ್ಣಾಲಿಗಳಲ್ಲಿ ಅಶ್ರು ವಸರತೊಡಗಿತು.

ಶಮಂತಕಮಣಿಯವರು ತಮ್ಮ ಸೋದರ ಮಾವ ಕೃಷ್ಣಸ್ವಾಮಿಯವರೊಂದಿಗೆ ಬಂದು ನನ್ನನ್ನು ಕಂಡು ಕೇಸನ್ನು ನಡೆಸಿಕೊಡಬೇಕೆಂದು ಕೋರಿಕೊಂಡ ದಿನವೇ ನಾವೆಲ್ಲಾ ಮೈಸೂರಿಗೆ ಹೊರಟೆವು. ಮೈಸೂರಿನ ಪತ್ರಿಕೆಗಳಲ್ಲೆಲ್ಲ ಸೋಮಶೇಖರ್‌ದೇ ವಿಷಯ. ಈ ಕೇಸಿಗೆ ಸಂಬಂಧಿಸಿದ ವಿಷಯಗಳು ಮಾಧ್ಯಮಗಳಲ್ಲಿ ಧಗಧಗಿಸುತ್ತಿದ್ದವು. ಸಾರ್ವಜನಿಕರಿಂದ ಕಿಂಚಿತ್ತೂ ಅನುಕಂಪ ಸೋಮಶೇಖರ್ ಬಗ್ಗೆ ಇರಲಿಲ್ಲ. ಕೋರ್ಟ್ ಆವರಣದೊಳಕ್ಕೆ ನಾನು ಹೋಗುತ್ತಿದ್ದಂತೆಯೇ ಹಲವಾರು ಪತ್ರಕರ್ತರು ನನ್ನನ್ನು ಗುರುತಿಸಿ, 'ನೀವು ಸೋಮಶೇಖರ್ ಕೇಸ್ ನಡೆಸಲು ಬಂದಿರುವಿರಂತೆ?' ಎಂದು ಅತೃಪ್ತ ಮುಖಭಾವದಿಂದ ಪ್ರಶ್ನಿಸಿದರು. ನಾನು ಹೌದು ಎಂದೆ.

ಸೋಮಶೇಖರ್ ಪರವಾಗಿ ಮೈಸೂರಿನ ಸ್ಥಳೀಯ ವಕೀಲರಾದ ಶಿವಣ್ಣಗೌಡರೂ ನನ್ನೊಂದಿಗೆ ಜಂಟಿ ವಕಾಲತ್ತು ಹಾಕಿದರು. ಶಿವಣ್ಣಗೌಡರೊಂದಿಗೆ ಜೈಲ್‌ಗೆ ಹೋಗಿ ಸೋಮಶೇಖರ್‌ರನ್ನು ಭೇಟಿಯಾಗಿ ಮಾತಾಡಿಸಿದೆ. ಜೈಲಲ್ಲಿ ಸೋಮಶೇಖರ್ ಅತ್ಯಂತ ಸೌಮ್ಯವಾಗಿಯೂ, ಸಂತನಂತೆಯೂ ಮಾತಾಡಿದರು.

ಮೈಸೂರಿನ ಸೆಷನ್ಸ್ ಕೋರ್ಟ್‌ನಲ್ಲಿ ಬೇಲ್‌ಗಾಗಿ ಅರ್ಜಿ ಹಾಕಿಕೊಂಡೆ. ಹೈಕೋರ್ಟ್ ಜಸ್ಟಿಸ್ ಆಗಿದ್ದು, ಕೆಲದಿನಗಳ ಹಿಂದೆ ನಿವೃತ್ತರಾದ ಎಚ್.ಎನ್. ನಾರಾಯಣ್ ಅವರು ಆಗ ಅಲ್ಲಿ ಸೆಷನ್ಸ್ ಜಡ್ಜ್ ಆಗಿದ್ದರು. ಜಾಮೀನು ಅರ್ಜಿಯನ್ನು ಅವರು ತಿರಸ್ಕರಿಸಿದ್ದರಿಂದ ಹೈಕೋರ್ಟ್‌ಗೆ ಅರ್ಜಿ ಹಾಕಿಕೊಂಡೆ.

ಹೈಕೋರ್ಟ್ ಜಸ್ಟಿಸ್ ಆಗಿ ಈಗ ನಿವೃತ್ತರಾಗಿರುವ ಎಲ್. ಶ್ರೀನಿವಾಸ ರೆಡ್ಡಿಯವರು ಸ್ಟೇಟ್ ಪ್ರಾಸಿಕ್ಯೂಟರ್ ಆಗಿದ್ದರು. ಜಾಮೀನು ನೀಡಕೂಡದೆಂದು ಅವರು ಬಲವಾಗಿ ವಾದಿಸಿದರು. ಎರಡು ತಿಂಗಳ ಕಾಲ ಹಲವಾರು ವಿಚಾರಣೆಗಳು ಹೈಕೋರ್ಟ್‌ನಲ್ಲಿ ನಡೆದವು. ಪ್ರಾಸಿಕ್ಯೂಟರ್ ಅವರ ಬಲವಾದ ವಿರೋಧದ ಮಧ್ಯೆ ಜಾಮೀನು ಸಿಕ್ಕಿತು. ಆಗ ಅನೇಕ ಪತ್ರಿಕೆಗಳು ಸರ್ಕಾರ ಈ ಪ್ರಕರಣದಲ್ಲಿ ಅಲಕ್ಷ್ಯ ತೋರದೆ ಜಾಮೀನು ರದ್ಧತಿಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಹಾಕಿಕೊಳ್ಳಬೇಕೆಂದು ಒತ್ತಾಯಿಸಿ ಬರೆದವು. ಈ ಜಾಮೀನು ಅರ್ಜಿಯ ವಿಚಾರಣೆಯ ಕಾಲಕ್ಕೆ ಕೋರ್ಟ್ ಸಾರ್ವಜನಿಕರಿಂದ ಕಿಕ್ಕಿರಿದಿರುತ್ತಿತ್ತು.

ಜಾಮೀನು ಸಿಕ್ಕ ತಕ್ಷಣ ಸೋಮಶೇಖರ್‌ರನ್ನು ನಾನು ಬಿಡುಗಡೆ ಮಾಡಿಸಲು ಹೋಗಲಿಲ್ಲ. ಮೈಸೂರು ಪೊಲೀಸ್ ಕಮೀಷನರ್ ಸೂರತ್‌ಪ್ರಸಾದ್ ಅವರು ತಮಗೆ ಸೋಮಶೇಖರ್ ಪ್ರಾಣಭಯ ಒಡ್ಡಿದ್ದಾರೆಂದು ಹಾಕಲಾಗಿದ್ದ ಕೇಸು ಮತ್ತು ಅನಧಿಕೃತ ರೈಫಲ್ ಪತ್ತೆಯಾದ ಹಿನ್ನೆಲೆಯಲ್ಲಿ Arms Act ಅಡಿಯಲ್ಲಿ ಹೂಡಲಾಗಿದ್ದ ಕೇಸು ಇವೆರಡರಲ್ಲೂ ಸೋಮಶೇಖರ್‌ರನ್ನು ಬಂಧನಕ್ಕೆ ತೆಗೆದುಕೊಂಡಿರಲಿಲ್ಲ. ಒಂದರಲ್ಲಿ ಬೇಲ್ ತೆಗೆದುಕೊಂಡರೆ ಮತ್ತೊಂದರಲ್ಲಿ ಬಂಧಿಸಬೇಕೆನ್ನುವ ಉದ್ದೇಶದಿಂದ ಪೊಲೀಸರು ಈ ಎರಡೂ ಕೇಸ್‌ಗಳನ್ನು ಅಸ್ತ್ರದಂತೆ ಇರಿಸಿಕೊಂಡಿದ್ದರು. ಹಾಗಾಗಿ ನಾನು ಮೊದಲು ಎರಡೂ ಕೇಸ್‌ಗಳಲ್ಲಿ ನಿರೀಕ್ಷಣಾ ಜಾಮೀನು ಪಡೆದುಕೊಂಡೆ. ನಂತರ ಸೋಮಶೇಖರ್‌ರನ್ನು ಜೈಲ್‌ನಿಂದ ಬಿಡುಗಡೆ ಮಾಡಿಸಿದೆ.

ಜೈಲ್‌ನಿಂದ ಹೊರಬಂದ ಸೋಮಶೇಖರ್‌ರನ್ನು ಮೈಸೂರಿನ ಹಲವಾರು ಮುಖ್ಯ ವ್ಯಕ್ತಿಗಳು ಬಂದು ಸ್ವಾಗತಿಸಿದರು. ಅವರೆಲ್ಲ ಬಹುತೇಕ ಕುರುಬರಾಗಿದ್ದರು. ಈ ಪ್ರಕರಣದಿಂದ ಹೊರಬರಲು ತಮ್ಮ ಕೈಲಾದ ಧನಸಹಾಯ ಮಾಡುವುದಾಗಿಯೂ ಅವರಲ್ಲಿ ಕೆಲವರು ಆಶ್ವಾಸನೆ ನೀಡಿದರು. ಜೈಲ್‌ನಿಂದ ಸೋಮಶೇಖರ್ ಅವರನ್ನು ಬಿಡಿಸಿದ ನನಗೂ ಧನ್ಯವಾದಗಳನ್ನು ಅವರು ಹೇಳಿದರು.

ಜೈಲ್‌ನಿಂದ ಸೋಮಶೇಖರ್ ಅವರನ್ನು ಬಿಡುಗಡೆಗೊಳಿಸಲು ಹೋದಾಗ

ಜೈಲ್ ಸೂಪರಿಂಟೆಂಡೆಂಟ್, ಸೋಮಶೇಖರ್ ಅವರ ವರ್ತನೆಯ ಬಗ್ಗೆ ಶ್ಲಾಘನೆಯ ಮಾತುಗಳನ್ನು ಹೇಳಿದರು. ಸೆಷನ್ಸ್ ನ್ಯಾಯಾಧೀಶರು ಜೈಲ್ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಅನಿರೀಕ್ಷಿತ ಭೇಟಿಕೊಡುವುದು ವಾಡಿಕೆ. ಸೋಮಶೇಖರ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದ ಸೆಷೆನ್ಸ್ ನ್ಯಾಯಾಧೀಶ ಎಚ್.ಎನ್. ನಾರಾಯಣ್ ಅವರು ಅದೇನೋ ಕುತೂಹಲದಿಂದ ಸೋಮಶೇಖರ್‌ರನ್ನು ಬಂಧಿಸಿಡಲ್ಪಟ್ಟಿದ್ದ ಸೆಲ್‌ಗೆ ಅನಧಿಕೃತ ಭೇಟಿ ನೀಡಿದಾಗ ಸೋಮಶೇಖರ್ ಕೊಠಡಿಗೂ ಹೋಗಿದ್ದರು. ಆಗ ಸೋಮಶೇಖರ್ ಶಾಂತಚಿತ್ತದಿಂದ ಕಾನೂನು ಪುಸ್ತಕಗಳನ್ನು ಓದುತ್ತಿದ್ದುದನ್ನು ನೋಡಿ, ಇವರ ಬಗ್ಗೆ ಸಾರ್ವಜನಿಕರು ವ್ಯಕ್ತ ಮಾಡುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ ಜೈಲಲ್ಲಿ ಐಷಾರಾಮದಿಂದ ಇರಬಹುದು ಎಂದುಕೊಂಡಿದ್ದೆ. ಬಂಧನದಲ್ಲಿರುವಾಗಲೂ ತಮ್ಮ ಚಿತ್ತ ಸಮತೋಲನ ಕಳೆದುಕೊಳ್ಳದೆ ಗಂಭೀರವಾಗಿ ಅಧ್ಯಯನದಲ್ಲಿ ಮುಳುಗಿದ್ದುದು ನನಗೆ ಆಶ್ಚರ್ಯದ ಸಂಗತಿಯೇ ಎಂದು ಉದ್ಗಾರವೆಳೆದರು. ಈ ಘಟನೆಯನ್ನು ಆ ಜೈಲ್ ಸೂಪರಿಂಟೆಂಡೆಂಟ್ ಮನತುಂಬಿ ನನ್ನ ಮುಂದೆ ಬಣ್ಣಿಸಿದರು. ಮುಂದುವರಿದ ಅವರು, ಸೋಮಶೇಖರ್ ಇದ್ದ ಜೈಲಲ್ಲಿಯೇ ಸುಮಾರು ಇಪ್ಪತ್ತು ಎಲ್‌ಟಿಟಿಇ ಉಗ್ರಗಾಮಿಗಳಿದ್ದರು. ಅವರಿಗೆಲ್ಲ ದೇಶಪ್ರೇಮ, ಶಾಂತಿ, ಅಹಿಂಸೆ, ಸಂಯಮಗಳ ಬಗೆಗೆ ಹಲವಾರು ತರಬೇತಿ ತರಗತಿಗಳನ್ನು ಸೋಮಶೇಖರ್ ತೆಗೆದುಕೊಂಡದ್ದಾಗಿಯೂ ಹೆಮ್ಮೆಯಿಂದ ತಿಳಿಸಿದರು. ಸೆಷನ್ಸ್ ಜಡ್ಜ್ ನಾರಾಯಣ್ ಅವರಿಗೆ ಇದನ್ನೆಲ್ಲ ವರದಿ ಮಾಡಿದಾಗ ಖುಷಿ ವ್ಯಕ್ತಪಡಿಸಿದ್ದನ್ನೂ ಸೂಪರಿಂಟೆಂಡೆಂಟ್ ಹೇಳಿದರು.

ಸೋಮಶೇಖರ್ ಅವರಿಗೆ ನೀಡಲ್ಪಟ್ಟ ಜಾಮೀನಿನಲ್ಲಿ ಷರತ್ತುಗಳನ್ನು ಒಡ್ಡಲಾಗಿತ್ತು. ವಿದೇಶ ಪ್ರವಾಸ ಕೈಗೊಳ್ಳತಕ್ಕದ್ದಲ್ಲ, ನಿತ್ಯ ಬೆಂಗಳೂರಿನ ಕಮೀಷನರ್ ಕಚೇರಿಯಲ್ಲಿ ರುಜು ಹಾಕತಕ್ಕದ್ದು, ಸ್ಥಳ ತೊರೆದು ಪ್ರಯಾಣ ಮಾಡಬೇಕಿದ್ದಲ್ಲಿ ಪೂರ್ವಾನುಮತಿ ಪಡೆದುಕೊಳ್ಳತಕ್ಕದ್ದು ಇತ್ಯಾದಿ.

ಕೇಸ್ ನಡೆಸಲು ಮೈಸೂರಿಗೆ ಹೋದರೆ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಇಳಿದುಕೊಳ್ಳುತ್ತಿದ್ದೆ. ಅದು ಕೋರ್ಟ್‌ಗೆ ಸಮೀಪವಿತ್ತು. ಸೋಮಶೇಖರ್ ಅವರು ನನ್ನೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ಆಪ್ಯಾಯಮಾನವೆನಿಸಿತು. ವ್ಯಕ್ತಿಯ ನಿಜ ಒಳಗನ್ನು ಅರಿತುಕೊಳ್ಳದೆ ಜನ ಏನೇನೋ ಮಾತಾಡುತ್ತಾರೆ. ಅದನ್ನು ಕೇಳಿಕೊಂಡ ಪತ್ರಿಕೆಗಳು ಬರೆಯುತ್ತವೆ ಎನಿಸಿತು. ಮೈಸೂರಿಗೆ ಹೋದರೆ, ನನಗೆ ವಿಶೇಷ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಮೈಸೂರಿನ ಯಾವ ಜಾಗೆಯಲ್ಲಿ

ವಿಶೇಷ ಅಡುಗೆ ತಯಾರಿಸಲಾಗುತ್ತದೆನ್ನುವುದನ್ನು ತಿಳಿದುಕೊಂಡಿದ್ದ ಸೋಮಶೇಖರ್ ಪ್ರತಿ ಬಾರಿಯೂ ಭಿನ್ನವಿಭಿನ್ನ ರುಚಿಯ ಅಡುಗೆ ಮಾಡಿಸುವ ವ್ಯವಸ್ಥೆ ಮಾಡುತ್ತಿದ್ದರು.

ಸೋಮಶೇಖರ್ ಅವರ ಕುರುಬ ಜಾತಿಗೆ ಸೇರಿದ ಶಿವಣ್ಣ ಎನ್ನುವ ಬಸ್ ಕಂಡಕ್ಟರ್ ಅಡುಗೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಏರ್‌ಲೈನ್ಸ್ ಹೋಟೆಲ್‌ನ ಸಮೀಪದ ರಾಮಸ್ವಾಮಿ ಸರ್ಕಲ್ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕುರುಬರ ಮನೆಗಳಿದ್ದ ಜಾಗೆಯಲ್ಲಿ ಶಿವಣ್ಣನ ಮನೆಯಿತ್ತು.

ಶಿವಣ್ಣ ತೀರಾ ದೈವಭಕ್ತ. ಅಡುಗೆ ಮಾಡಿಸಿಕೊಂಡು ಬಂದು ತಟ್ಟೆಗೆ ಬಡಿಸಿ ಊದುಬತ್ತಿ ಹೊತ್ತಿಸಿ ದೇವರ ಫೋಟೋಕ್ಕೆ ಬೆಳಗಿ ಊಟ ಆರಂಭಿಸಲು ಅಪ್ಪಣೆ ಕೊಡುತ್ತಿದ್ದ. ಶಿವಣ್ಣ ಒಮ್ಮೆ ಹೀಗೆ ಊದುಬತ್ತಿ ಬೆಳಗುವಾಗ ಸೋಮಶೇಖರ್, 'ಏನು ಶಿವಣ್ಣ ನಿನ್ನ ಹುಚ್ಚಾಟ? ಪೇಪರ್ ಮೇಲಿರೋ ದೇವರಿಗೆ ಊದುಬತ್ತಿ ಬೆಳಗುತ್ತೀಯಲ್ಲ? ಇಲ್ಲಿ ಉಸಿರಾಡೋ ದೇವರೇ ನನ್ನೆದುರು ಕೂತಿದೆ, ಮೊದಲು ಇವರಿಗೆ ಬೆಳಗು' ಎಂದು ನನ್ನೆಡೆ ಕೈತೋರಿಸಿದರು! ಮುಜುಗರಗೊಂಡ ನಾನು, 'ಇರಲಿ ಬಿಡಿ ಪಾಪ, ಅವರವರ ಭಾವನೆಗಳು ಅವರಿಗಿರುತ್ತವೆ. ನಾವು ಕೇವಲ ಮನುಷ್ಯರು. ನನ್ನ ಮೇಲೆ ದೇವರನ್ನು ಆರೋಪಿಸಬೇಡಿ' ಎಂದೆ.

ಆಗ ಭಾವುಕನಾದ ಸೋಮಶೇಖರ್ 'ಸಾರ್, ಯಾರು ಏನೇ ಹೇಳಲಿ, ನೀವು ನನ್ನ ಪಾಲಿನ ದೇವರು. ನಿಮಗೆ ನಾನು ಏನು ಕೊಟ್ಟರೂ ಕಡಿಮೆಯೇ. ಫೀಸ್ ಬಗ್ಗೆ ಏನೂ ಮಾತಾಡದೆ ಇಷ್ಟೊಂದು ನಿಷ್ಠೆಯಿಂದ ನನ್ನ ಬಿಡುಗಡೆಗಾಗಿ ಯುದ್ಧೋಪಾದಿಯಲ್ಲಿ ಹೋರಾಡುತ್ತಿರುವಿರಿ. ನನ್ನ ಸಹೋದ್ಯೋಗಿಗಳೇ ಕುತಂತ್ರ ಮಾಡಿ ನನ್ನನ್ನು ಈ ಸ್ಥಿತಿಗೆ ತಂದಿದ್ದಾರೆ. ಸಸ್ಪೆಂಡ್ ಆಗಿದ್ದರೂ ನನಗೆ ಸಂಬಳ ಬರುತ್ತದೆ. ಆದರೆ ನನಗೆ ಜಿದ್ದಿದೆ; ಕೇಸ್‌ನಿಂದ ಮುಕ್ತನಾಗಿ reinstate ಆದ ಆರ್ಡರ್ ತೆಗೆದುಕೊಳ್ಳುವವರೆಗೆ ಸಂಬಳಕ್ಕಾಗಿ ಆ ಕಳ್ಳರ ಎದುರು ಕೈ ಒಡ್ಡಬಾರದೆಂದು ನಿರ್ಧರಿಸಿರುವೆ. ಈ ಕೇಸ್ ಮುಗಿಯುವವರೆಗೆ ನನ್ನ ಸಂಬಳ ಅಲ್ಲಿಯೇ ಸಂಚಯವಾಗುತ್ತಿರಲಿ. ಕೊನೆಗೆ ಅದೆಷ್ಟೇ ಲಕ್ಷವಾಗಿರಲಿ ಅದನ್ನು ನಿಮ್ಮ ಪಾದಕ್ಕೆ ಅರ್ಪಿಸುವೆ' ಎಂದರು ಗದ್ಗದಿತನಾಗಿ. ಕುರುಬರ ಜಾತಿಯ ಕೆಲವರು ಪ್ರಮುಖರು ಸೋಮಶೇಖರ್‌ಗೆ ಆಪದ್ಧನವೆಂದು ಐದು, ಹತ್ತು ಸಾವಿರ ತಂದುಕೊಟ್ಟು ಹೋಗುತ್ತಿದ್ದರು.

ಸತ್ಯದೇವ್ ಕೊಲೆ ಕೇಸಿನ ಕೋರ್ಟ್ ವಿಚಾರಣೆ ನಡೆಯುವಾಗ ಮೈಸೂರಿಗೆ ಹೋಗುತ್ತಿದ್ದೆ. ಉಳಿದಂತೆ ಬೆಂಗಳೂರಲ್ಲಿರುವಾಗ ಸೋಮಶೇಖರ್ ಅವರು

ಹೆಚ್ಚೂಕಮ್ಮಿ ನನ್ನ ಹಿಂಬಾಲಕರಂತೆಯೇ ಇರುತ್ತಿದ್ದರು. ಫೈಲ್ ಅನ್ನು ತೆರೆದುಕೊಂಡು ಕೂತರೆ ಅವರು ಫ್ಲಾಸ್ಕ್‌ನಲ್ಲಿ ಕಾಫಿ ತಂದುಕೊಡುತ್ತಿದ್ದರು: ಕ್ಯಾರಿಯರ್‌ನಲ್ಲಿ ಊಟ ತಂದುಕೊಡುತ್ತಿದ್ದರು. ಅದೆಲ್ಲ ಉಪಚಾರ ಮಾಡಬೇಡಿ ಎಂದು ನಾನು ಹೇಳಿದರೆ ನನಗೋಸ್ಕರ ಇಷ್ಟೊಂದು ನೀವು ತಲೆ ಕೆಡಿಸಿಕೊಳ್ಳುತ್ತಿರುವಾಗ ನಾನು ಇಷ್ಟು ಮಾಡುವುದು ಏನು ಮಹಾ ಎಂದು ನನ್ನ ಬಾಯಿ ಮುಚ್ಚಿಸುತ್ತಿದ್ದರು. ಸೋಮಶೇಖರ್ ಅವರ ಕೇಸು ಇಡೀ ರಾಜ್ಯದ ಗಮನ ಸೆಳೆದಿತ್ತು. ಇಡೀ ಪೊಲೀಸ್ ಇಲಾಖೆ ಸೋಮಶೇಖರ್ ಅವರನ್ನು ನೇಣುಗಂಬಕ್ಕೆ ಏರಿಸಲು ಸಿದ್ಧವಾದಂತೆ ತೋಳೇರಿಸಿ ನಿಂತಿತ್ತು. ಸಿಓಡಿ ಪೊಲೀಸರು ಸಾಕ್ಷಿಗಳನ್ನು ದಾಖಲೆಪಡಿಸಿ ಅವುಗಳ ಪೈಕಿ 100 ಚಿಲ್ಲರೆ ಸಾಕ್ಷಿಗಳನ್ನು ಚಾರ್ಟ್‌ಶೀಟ್ ವಿಚಾರಣೆಗೆ ಒಳಪಡಿಸಿದ್ದರು. ಒಂದರಲ್ಲಿ ತಪ್ಪಿಸಿಕೊಂಡರೆ ಮತ್ತೊಂದರಲ್ಲಿ ಸಿಕ್ಕಿ ಬೀಳಲಿ ಎನ್ನುವ ಲೆಕ್ಕಾಚಾರದಲ್ಲಿ ಲಲಿತ ಮಹಲ್ ಈಜುಕೊಳದ ನಕ್ಷೆಯನ್ನು ತಜ್ಞ ಇಂಜಿನಿಯರ್ ಒಬ್ಬರಿಂದ ಸಿದ್ಧಪಡಿಸಿ ಸತ್ಯದೇವ್ ಕೊಲೆ ಹೇಗೆ ನಡೆಯಿತು ಎಂದು ಚಿತ್ರೀಕರಿಸಿದ್ದರು. ಸೋಮಶೇಖರ್ ಪಾರಾಗಲು ಎಲ್ಲೂ ಅವಕಾಶವಿಲ್ಲದಂತೆ ತನಿಖೆ ನಡೆಸಿದ್ದೇವೆ ಎಂದು ಸಿಓಡಿ ಎದೆಯುಬ್ಬಿಸಿಕೊಂಡಿತ್ತು.

ಈ ಕೇಸ್ ವಿರುದ್ಧ ಸೆಣಸತೊಡಗಿದ್ದ ನಾನು ನನಗೇ ತಿಳಿಯದಂತೆ ಅದರ ಸೆಳವಿಗೆ ಸಿಲುಕಿಹೋಗಿದ್ದೆ. ಒಂದು ಹಂತದಲ್ಲಿ ಆರೋಪಿ ಸೋಮಶೇಖರ್ ಅವರಿಗಿಂತ ಹೆಚ್ಚಿನ ಕಾಳಜಿ ಆ ಕೇಸಿನ ಬಗ್ಗೆ ನನ್ನಲ್ಲಿ ಉಂಟಾಗಿಬಿಟ್ಟಿತ್ತು. ಕೇಸ್ ಗೆಲ್ಲುವುದು ನನ್ನ ಪ್ರತಿಷ್ಠೆಯ ಪ್ರಶ್ನೆಯಾಗಿ ಮಾರ್ಪಟ್ಟಿತ್ತು. ಸಿಓಡಿ ಪೊಲೀಸರು ಹಾಜರುಪಡಿಸಿದ್ದ 45 ಸಾಕ್ಷಿಗಳನ್ನೆಲ್ಲ ಜಾಲಾಡಿ ನೋಡಿದೆ. ಅದರಲ್ಲಿ 40 ಸಾಕ್ಷಿಗಳನ್ನು ಬರೀ ಬಾಯಿಂದ ಊದಿ ಹಾರಿಸಬಲ್ಲೆ ಎಂದುಕೊಂಡೆ. ಆದರೆ ಐದು ಸಾಕ್ಷಿಗಳು ಮಾತ್ರ ಚಾಲೆಂಜಿಂಗ್ ಆಗಿ ಕಂಡವು. ಪಿ.ಕೆ. ಉತ್ತಪ್ಪ, ಎಲೀಷಾ ಆಂಡ್ರ್ಯೂಸ್, ಶ್ರೀಕಾಂತ್, ಅಜಯ್, ಡಾ. ಶೆಣೈ ಇವರ ಸಾಕ್ಷಿ ಹೇಳಿಕೆಗಳ ಮೇಲೆ ಕೇಸಿನ ಸೋಲು ಗೆಲುವು ನಿಂತಿತ್ತು.

ಪ್ರಾಸಿಕ್ಯೂಷನ್ ಭಾರೀ ತಯಾರಿ ಮಾಡಿಕೊಂಡು ದಾಳಿಗೆ ಸಿದ್ಧವಾಗಿ ನಿಂತಿತ್ತು. ಸಿಓಡಿ ಪೊಲೀಸರು ತಮ್ಮ ತನಿಖೆ ಭಾರೀ 'ಗಾತ್ರ'ದಲ್ಲಿ ಮಾಡಿದ್ದರು. ಆದರೆ 'ಗುಣ'ದಲ್ಲಿ ಬಹಳ ಅಶಕ್ತ ಅಂಶಗಳು ಇದ್ದಿರುವುದು ನನಗೆ ಗೋಚರಿಸಿತು. ಅವರ ತನಿಖೆ ತಲೆಕೆಳಗಾದ ಪಿರಮಿಡ್‌ನಂತೆ ಕಾಣುತ್ತಿತ್ತು. ಗಟ್ಟಿ ಪಾಯವಿಲ್ಲದೆ ಮೇಲೆ ಕಟ್ಟುತ್ತ ಹೋಗಿದ್ದರು. ಆಯ ನೋಡಿ ಒಂದೇ ಪೆಟ್ಟು ಕೊಟ್ಟರೂ ಸಾಕು ಇಡೀ ಕಟ್ಟಡ ಉರುಳಿಬೀಳುವಂತಿತ್ತು.

ಈಜುಕೊಳದ ಕೋಚ್ ಪಿ.ಕೆ. ಉತ್ತಪ್ಪ, ಸತ್ಯದೇವ್ ಸತ್ತೊಡನೆ ಪ್ರಪ್ರಥಮವಾಗಿ ನಜರ್‌ಬಾದ್ ಠಾಣೆಗೆ ನೀಡಿದ ದೂರಿನ ಹೇಳಿಕೆಯನ್ನು ಹೇಗೆ ಅರಗಿಸಿಕೊಳ್ಳಬೇಕೆನ್ನುವುದರ ಕಡೆಗೆ ಪ್ರಾಸಿಕ್ಯೂಷನ್ ಗಮನ ನೀಡಿಲ್ಲ ಎನ್ನುವುದನ್ನು ನಾನು ಗುರುತಿಸಿಕೊಂಡೆ. ಮತ್ತೊಂದು ವಿಚಿತ್ರ ಸಂಗತಿ ಏನು ನಡೆದಿತ್ತೆಂದರೆ, ಮೈಸೂರು ಪೊಲೀಸ್ ಕಮೀಷನರ್ ಸೂರತ್ ಪ್ರಸಾದ್ ಅವರು ತಾವು ಪ್ರತ್ಯೇಕವಾಗಿ ಒಂದು ಗುಪ್ತದಳವನ್ನು ರಚಿಸಿ, ಸತ್ಯದೇವ್ ಸಾವಿನ ಪ್ರಕರಣದಲ್ಲಿ ಸೋಮಶೇಖರ್ ಅವರ ಪಾತ್ರ ಏನು ಎನ್ನುವುದರ ಬಗ್ಗೆ ವರದಿಯೊಂದನ್ನು ತರಿಸಿಕೊಂಡಿದ್ದರು. ಆ ವರದಿಯಲ್ಲಿ ಸೋಮಶೇಖರ್ ಅವರದು ಸತ್ಯದೇವ್ ಸಾವಿನ ಪ್ರಕರಣದಲ್ಲಿ ಯಾವ ಪಾತ್ರವೂ ಇಲ್ಲ ಎಂದು ಹೇಳಲಾಗಿತ್ತು. ಆ ಗುಪ್ತ ವರದಿಯನ್ನು ಸೂರತ್ ಪ್ರಸಾದ್ ಅವರು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದರು. ಒಂದೆಡೆ ಹೀಗೆ ವರದಿ ಕಳಿಸಿ ಕೊಟ್ಟು ಇನ್ನೊಂದೆಡೆ ಇದರ ವಿರುದ್ಧವಾಗಿ ಪ್ರೆಸ್‌ಮೀಟ್‌ನಲ್ಲಿ ಸತ್ಯದೇವ್‌ನ ಕೊಲೆಗಾರ ಸೋಮಶೇಖರ್ ಎಂದು ಘೋಷಿಸಿದ್ದರು. ಕಮೀಷನರ್ ಅವರ ಈ ದ್ವಂದ್ವ ಸೋಮಶೇಖರ್ ಅವರಿಗೆ ಮೊದಲು ಮುಳುವಾಗಿ ತೋರಿದರೂ ಕೋರ್ಟ್ ವಿಚಾರಣೆಯ ಹಂತದಲ್ಲಿ ಸಹಾಯಕ ಅಂಶವಾಗಿ ಪರಿಣಮಿಸಿತು.

ಕೋಚ್ ಉತ್ತಪ್ಪ ಮೊಟ್ಟಮೊದಲು ನೀಡಿದ ದೂರಿನಲ್ಲಿ ಘಟನೆ ಹೇಗೆ ಸಂಭವಿಸಿತು ಎಂದು ವಿವರಿಸಿದ್ದು ಸೋಮಶೇಖರ್ ಅವರ ಸಹಾಯಕ್ಕೆ ಬಂದಿತು. ಲಲಿತಮಹಲ್ ಹೋಟೆಲ್‌ನ ಕ್ಯಾಂಪಸ್ ಒಳಗಿನ ಟೆನ್ನಿಸ್ ಕೋರ್ಟ್ ಕಡೆಯಿಂದ ಈಜು ಕೊಳದ ಕಡೆಗೆ ಓಡಿ ಬಂದ ಸತ್ಯದೇವ್ ತಲೆ ಕೆಳಗಾಗಿ ಧುಮುಕಿದ. ನಂತರ ಮೇಲೆ ಏಳಲೇ ಇಲ್ಲ. ದೇಹ ಹೊರತೆಗೆದಾಗ ಸತ್ತು ಹೋಗಿದ್ದ ಎನ್ನುವ ಹೇಳಿಕೆಯು ಕೇಸಿನ ದಿಕ್ಸೂಚಿಯಂತಿದ್ದಿತು. ಇನ್ನು ಸೋಮಶೇಖರ್ ಅವರ ಮಕ್ಕಳ ಮೂವರು ಸ್ನೇಹಿತರು ನೀಡಿದ ಸಾಕ್ಷಿ ಹೇಳಿಕೆಗಳ ಅಸ್ವಾಭಾವಿಕತೆಯನ್ನು ಕೋರ್ಟ್‌ಗೆ ಮನದಟ್ಟು ಮಾಡಿಕೊಟ್ಟೆ. ಘಟನೆ ನಡೆದ ಒಂದೂವರೆ ತಿಂಗಳ ಮೇಲೆ ಆ ಮಕ್ಕಳು ಸೋಮಶೇಖರ್ ಅವರೇ ಸತ್ಯದೇವ್‌ನನ್ನು ಕೊಲೆ ಮಾಡಿದ್ದು ಎಂದು ಹೇಳಿಕೆ ನೀಡಿದ್ದವು. ಅಷ್ಟು ದೀರ್ಘ ಅವಧಿಯವರೆಗೆ ಅಂಥ ಒಂದು ಭೀಕರ ಘಟನೆಯನ್ನು ಮಕ್ಕಳು ತಮ್ಮ ಮನಸ್ಸಿನಲ್ಲಿ ಮುಚ್ಚಿಟ್ಟುಕೊಳ್ಳುವ ಸಾಧ್ಯತೆಯನ್ನು ಪ್ರಶ್ನಾರ್ಹಗೊಳಿಸಿದೆ.

ಸತ್ಯದೇವ್‌ನ ದೇಹವನ್ನು ಶೋಧಿಸಲು ಈಜುಕೊಳವನ್ನು ಶುಚಿ ಮಾಡಲು ಉಪಯೋಗಿಸುತ್ತಿದ್ದ ಇಪ್ಪತ್ತು ಅಡಿ ಉದ್ದದ ಬ್ರಶ್‌ಗಳನ್ನು ಬಳಸಿದ್ದರು. ಆ ಬ್ರಶ್‌ಗಳಿಂದ ದೇಹವನ್ನು ತಡಕಾಡಿದ್ದರು, ತಿವಿದಿದ್ದರು. ತಡಕಾಡಿದ ಬ್ರಶ್‌ಗಳ

ಬಾಯಿಗೆ ಸತ್ಯದೇವ್ ದೇಹ ಸಿಕ್ಕಾಗ ಅದು ಮತ್ತೊಂದೆಡೆ ಪಲ್ಲಟಗೊಳ್ಳದಂತೆ ತಡೆಯಲೆಂದು ಆ ಬ್ರಶ್‌ಗಳ ತುದಿಯಿಂದ ಚುಚ್ಚಿ ಹಿಡಿದಿದ್ದರು. ಹೀಗೆ ಪತ್ತೆಹಚ್ಚಲ್ಪಟ್ಟ ದೇಹವನ್ನು ಈಜುಕೊಳದ ಏಣಿಯ ಮೂಲಕ ಮೇಲಕ್ಕೆ ಎಳೆದುಕೊಂಡಿದ್ದರು. ಹಾಗೆ ಮೇಲೆಳೆದುಕೊಳ್ಳುವಾಗ ಏಣಿಯ ಬಾಹುವಿನಗುಂಟ ದೇಹದ ಕತ್ತು ತರಚುತ್ತಾ ಹೋಗಿತ್ತು. ಕತ್ತಿನ ಎಡಭಾಗದಲ್ಲಿರುವ ರಕ್ತನಾಳ ಡ್ಯಾಮೇಜ್ ಆಗಿದ್ದರಿಂದ ಸಾವು ಸಂಭವಿಸಿದೆ ಎಂದು ಡಾ. ಶೆಣೈ ಪೋಸ್ಟ್ ಮಾರ್ಟಮ್ ರಿಪೋರ್ಟ್ ನೀಡಿದ್ದರು. ಇನ್ನೂ ಬದುಕಿದ್ದ ಸತ್ಯದೇವ್‌ನ ದೇಹವನ್ನು ಮೇಲೆತ್ತುವ ಪ್ರಕ್ರಿಯೆಯಲ್ಲಿ ಸಾವು ಸಂಭವಿಸಿರುವ ಸಾಧ್ಯತೆಯನ್ನು ಕೋರ್ಟ್‌ಗೆ ಮನದಟ್ಟು ಮಾಡಿಕೊಟ್ಟೆ.

ಪ್ರಾಸಿಕ್ಯೂಷನ್ ಕೋರ್ಟ್‌ಗೆ ಹಾಜರುಪಡಿಸಿದ್ದ ಈಜುಕೊಳದ ನಕ್ಷೆಯಲ್ಲಿ ಏಣಿಗಳನ್ನು ಮತ್ತು ಸತ್ಯದೇವ್ ದೇಹವನ್ನು ಶೋಧಿಸಲು ಬಳಸಿದ ಬ್ರಶ್‌ಗಳನ್ನು ಚಿತ್ರಿಸಿರಲಾಗಿರಲಿಲ್ಲ. ಉದ್ದೇಶಪೂರ್ವಕವಾಗಿ ಈ ಅಂಶಗಳನ್ನು ಬಚ್ಚಿಡಲಾಗಿದೆಯೆಂದು ವಾದಿಸಿ, ಸೆಕ್ಷನ್ 310ರಲ್ಲಿ ಅರ್ಜಿಯೊಂದನ್ನು ಹಾಕಿಕೊಂಡು ನ್ಯಾಯಾಧೀಶರು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಬೇಕೆಂದು ಕೋರಿಕೊಂಡೆ. ಪ್ರಾಸಿಕ್ಯೂಷನ್ ನನ್ನ ವಾದವನ್ನು ಬಲವಾಗಿ ವಿರೋಧಿಸಿತು. ಆದರೂ ನ್ಯಾಯಾಧೀಶರು ನನ್ನ ವಾದವನ್ನು ಪುರಸ್ಕರಿಸಿ ಸ್ಥಳ ಪರಿಶೀಲನೆ ನಡೆಸಿದರು. ಇಷ್ಟೆಲ್ಲ ವಿಚಾರಣೆ ನಡೆದದ್ದು ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾಗಿದ್ದ ಕೆ.ಎಲ್. ಅನಂತರಾಮನ್ ಅವರ ಮುಂದೆ. ಕೇಸು ಆರ್ಗ್ಯುಮೆಂಟ್ ಹಂತದಲ್ಲಿದೆಯೆನ್ನುವಾಗ ಈ ನ್ಯಾಯಾಧೀಶರು ಒಂದನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾಗಿ ಬಡ್ತಿ ಹೊಂದಿದರು. ಆಗ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾಗಿ ಬಂದ ಜಾವೇದ್ ರಹೀಮ್ ಅವರ ಮುಂದೆ ಕೇಸ್ ಬಂದಿತು. ಆರಂಭದಿಂದ ಕೇಸಿನ ಪ್ರತಿಯೊಂದು ಸೂಕ್ಷ್ಮ ಅಂಶಗಳನ್ನು ಅವಗಾಹನಿಸುತ್ತ ಬಂದಿದ್ದ ನ್ಯಾಯಾಧೀಶ ಕೆ.ಎನ್. ಅನಂತರಾಮನ್ ಅವರ ಮುಂದೆಯೇ ಈ ಪ್ರಕರಣ ವಿಚಾರಣೆಗೆ ಒಳಪಡಬೇಕೆಂದು ಪ್ರಿನ್ಸಿಪಾಲ್ ನ್ಯಾಯಾಧೀಶರ ಮುಂದೆ ಅರ್ಜಿ ಹಾಕಿಕೊಂಡೆ. ಈ ಕೇಸ್‌ಗೆ ನಿಗದಿಗೊಳಿಸಲಾಗಿದ್ದ ಸಮಯ ನಷ್ಟವಾಯಿತೆಂದು ನ್ಯಾಯಾಧೀಶ ಜಾವೇದ್ ರಹೀಮ್ ಅವರು ರೂ. 3000 ವೆಚ್ಚವನ್ನು ಆರೋಪಿ ಭರಿಸಬೇಕೆಂದು ಆದೇಶಿಸಿದರು. ನಂತರ ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದೆ. ಹೈಕೋರ್ಟ್ ನನ್ನ ವಾದವನ್ನು ಮನ್ನಿಸಿ ಆ ಮೂರು ಸಾವಿರ ರೂಪಾಯಿಗಳನ್ನು ವಾಪಸ್ ಕೊಡುವಂತೆ ಆದೇಶಿಸಿತು.

ಪ್ರಾಸಿಕ್ಯೂಷನ್ ಪರ ವಕೀಲರು 15 ದಿನಗಳ ಕಾಲ ವಾದ ಮಂಡಿಸಿದರು. ನಾನು 19 ದಿನಗಳ ಕಾಲ ಮಂಡಿಸಿದೆ.

ಕೇಸಿನ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎಲ್. ಅನಂತರಾಮನ್ 15.7.93 ರಂದು ಮುಗಿಸಿ ತಾ. 31.11.93 ರಂದು ಸೋಮಶೇಖರ್ ಆರೋಪಮುಕ್ತ ಎಂದು ತೀರ್ಪು ನೀಡಿದರು.

ತೀರ್ಪು ಹೊರಬೀಳುವ ದಿನ ಕೋರ್ಟ್ ಹೊರಗೆ ಸುಮಾರು ಹತ್ತು ಸಾವಿರ ಸಂಖ್ಯೆಯಲ್ಲಿ ಜನ ನೆರೆದಿತ್ತು. ಸೋಮಶೇಖರ್ ಖುಲಾಸೆಯ ಕೋರ್ಟ್ ತೀರ್ಪನ್ನು ಕೇಳಿದ ಪೊಲೀಸ್ ಇಲಾಖೆ ಹರಳೆಣ್ಣೆ ಕುಡಿದಂತೆ ಆಡತೊಡಗಿತ್ತು.

ಸೋಮಶೇಖರ್ ಅವರ ಅಮಾನತ್ತು ರದ್ದಾಯಿತು. ಪುನಃ ಕೆಲಸದಲ್ಲಿ ಮುಂದುವರಿದರು. ಪೊಲೀಸ್ ಇಲಾಖೆಯ ಒಂದು ವಿಭಾಗದ ಫಿಂಗರ್‌ಪ್ರಿಂಟ್ ಬ್ಯೂರೋದಲ್ಲಿ ಎಸ್ಪಿ ಎಂದು ಪೋಸ್ಟಿಂಗ್ ಆಯಿತು. ಈ ಕಚೇರಿ ಕಾವೇರಿ ಭವನದ ಸಂಕೀರ್ಣದಲ್ಲಿದೆ. ಕೆಲಸಕ್ಕೆ ಹೋಗುವ ದಿನ ನನ್ನ ಆಫೀಸ್‌ಗೆ ಸ್ವೀಟ್ ಮತ್ತು ಬೊಕೆಯೊಂದಿಗೆ ಬಂದು ನನ್ನ ಪಾದಗಳಿಗೆರಗಲು ಬಂದ ಸೋಮಶೇಖರ್‌ರ ತೋಳುಗಳನ್ನು ಹಿಡಿದು ಮೇಲೆತ್ತಿ ಬೆನ್ನು ಚಪ್ಪರಿಸಿ, ಹಾಗೆಲ್ಲ ಮಾಡಬಾರದು ಎಂದೆ.

ಆದರೆ ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಸೋಮಶೇಖರ್‌ರ ವರ್ತನೆ ಬದಲಾಗಿ ಹೋಯಿತು. ಒಂದು ಸಂಜೆ ಹಾಫ್ ಪ್ಯಾಂಟ್ ಟಿಷರ್ಟ್ ತೊಟ್ಟು ಬಂದ ಸೋಮಶೇಖರ್ ಹಲೋ ಸಿಎಚ್‌ಎಚ್ ಎನ್ನುತ್ತಾ ನನ್ನ ಮುಖದ ಮೇಲೇ ಎನ್ನುವಂತೆ ಸಿಗರೇಟ್ ಹೊಗೆ ಬಿಟ್ಟಾಗ ನನಗೆ ತೀವ್ರ ಆಶ್ಚರ್ಯವಾಯಿತು. ಅದೇಕೆ ಈ ಮನುಷ್ಯ ಹೀಗೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾನೆ ಎನ್ನುವ ಗೊಂದಲಕ್ಕೊಳಗಾದೆ. ಸೌಜನ್ಯದಿಂದ ಮಾತಾಡಿಸಿ ಸಾಗಹಾಕಿದೆ. ಸೋಮಶೇಖರ್‌ರ ಈ ವರ್ತನೆ ಕೋಪ ಹುಟ್ಟಿಸುವುದಕ್ಕಿಂತ ಹೆಚ್ಚಾಗಿ ಸಮಸ್ಯೆಯಾಗಿ ಕಾಡತೊಡಗಿತು. ಕೇಸು ನಡೆಯುತ್ತಿದ್ದಾಗ ಇದ್ದ ನಯವಿನಯಗಳು ಸೋಮಶೇಖರ್‌ರಲ್ಲಿ ಮಾಯವಾಗಿದ್ದವು. ಹಲವಾರು ಕೇಸುಗಳನ್ನು ನಡೆಸಬೇಕಾದ ಸಂದರ್ಭದಲ್ಲಿ ನಾನು ಓದಿಕೊಂಡಿದ್ದ ಮನಶ್ಶಾಸ್ತ್ರದ ತಿಳಿವಳಿಕೆಯ ಮೇಲೆ ಇದೊಂದು ಮನೋಜಾಡ್ಯವೆಂದು ಕಾಣಿಸಿತು; split personality ಯ ಲಕ್ಷಣಗಳು ಎಂದುಕೊಂಡೆ.

ಇದಾದ ಕೆಲವೇ ದಿನಗಳಲ್ಲಿ ಸೋಮಶೇಖರ್ Nimhans (ಮನೋರೋಗಿಗಳ ಆಸ್ಪತ್ರೆ)ಗೆ ದಾಖಲಾಗಿದ್ದಾರೆಂದು ತಿಳಿಯಿತು. ಮನೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಸಲ್ಲದ ಅನುಮಾನ ವ್ಯಕ್ತಪಡಿಸತೊಡಗಿದ್ದರಿಂದ ಮತ್ತು

ಅಸಹಜ ಕೋಪ, ಅಳು, ಒಬ್ಬರೇ ಮಾತಾಡಿಕೊಳ್ಳುವುದು, ಮನದೊಳಗೇ ಚರ್ಚೆ ನಡೆಸುವುದು ಇತ್ಯಾದಿ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ಅವರ ಪತ್ನಿ ಶಮಂತಕಮಣಿ ತಮ್ಮ ಸಂಬಂಧಿಕರ ಸಹಾಯದಿಂದ ಸೋಮಶೇಖರ್‌ರನ್ನು ಹುಚ್ಚಾಸ್ಪತ್ರೆಗೆ ಸೇರಿಸಿದ್ದರು! ಈ ವಿಷಯ ಕೇಳಿ ನನಗೆ ತೀವ್ರ ವಿಷಾದವೆನಿಸಿತು. ಸೋಮಶೇಖರ್‌ಗೆ ಸ್ಕಿಜೋಫ್ರೀನಿಯಾ ರೋಗವೇನಾದರೂ ಕಾಣಿಸಿಕೊಂಡಿರಬಹುದೆ ಎಂದು ವ್ಯಾಕುಲಗೊಂಡೆ. ಒಂದು ಬಾರಿ ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬರಬೇಕೆಂದುಕೊಂಡೆ.

ಒಂದು ದಿನ ಬೆಳಗಿನ ಜಾವ ನಾಲ್ಕು ಗಂಟೆಗೆ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಹೊಸೂರು ರೋಡ್ ಮೂಲಕ ಸಿಟಿ ಕಡೆಗೆ ಹೂಗುಚ್ಛಗಳನ್ನು ಹೊತ್ತೊಯ್ಯುತ್ತಿದ್ದ ಟ್ರಾಲಿಯಿರುವ ಆಟೋ ರಿಕ್ಷಾ ಹತ್ತಿ ತಮ್ಮ ಮನೆಯ ಸಮೀಪಕ್ಕೆ ಇಳಿದುಕೊಂಡ ಸೋಮಶೇಖರ್ ತಮ್ಮ ಮನೆಯ ಕರೆಗಂಟೆ ಒತ್ತಿದರು. ಇಷ್ಟು ಬೆಳಗ್ಗೆ ಯಾರಿರಬಹುದು ಎಂದು ಅವರ ಪತ್ನಿ ಕಿಟಕಿ ತೆರೆದು ನೋಡಿದರೆ; ಸೋಮಶೇಖರ್! ಅದೂ ಹುಚ್ಚಾಸ್ಪತ್ರೆಯ ಬಿಳಿ ಅಂಗಿ ಚೊಣ್ಣಗಳ ಕಾಸ್ಟ್ಯೂಮ್‌ನಲ್ಲಿ! ಕಿಟಕಿಯ ಮೂಲಕವೇ ಸೋಮಶೇಖರ್ ಹಲ್ಲು ಕಿರಿಯುತ್ತ ತಮ್ಮ ಪತ್ನಿಗೆ ಹೂಗುಚ್ಛ ಕೊಡಲು ಕೈಚಾಚಿದಾಗ ಶಮಂತಕಮಣಿ ಕಿಟಾರನೆ ಕಿರುಚಿಕೊಂಡು ಕೂಡಲೇ ಪೊಲೀಸರಿಗೆ ಮತ್ತು ಹುಚ್ಚಾಸ್ಪತ್ರೆಗೆ ಫೋನ್ ಮಾಡಿದರು. ಪೊಲೀಸರು ಬಂದು ಸೋಮಶೇಖರ್‌ರನ್ನು ಆಸ್ಪತ್ರೆಗೆ ಹೊತ್ತೊಯ್ದು ಸೇರಿಸಿದರು.

ಇಷ್ಟರವರೆಗೂ ಸೋಮಶೇಖರ್ ನನಗೆ ಫೀಜು ಕೊಟ್ಟಿರಲಿಲ್ಲ. ಸಸ್ಪೆಂಡ್ ಅವಧಿಯ ಸಂಬಳವನ್ನೆಲ್ಲ ತಂದುಕೊಡುವುದಾಗಿ ಹೇಳಿದ್ದ ಸೋಮಶೇಖರ್ ಕೆಲಸಕ್ಕೆ ಸೇರಿಕೊಂಡ ಮೇಲೂ ಆ ಬಗ್ಗೆ ಚಕಾರವೆತ್ತಿರಲಿಲ್ಲ. ಸೈಕಿಯಾಟ್ರಿಸ್ಟ್‌ರ ಶಿಫಾರಸ್ಸಿನ ಮೇರೆಗೆ ಆ ಹುಚ್ಚಾಸ್ಪತ್ರೆಯಿಂದ ಸೋಮಶೇಖರ್ ಬಿಡುಗಡೆಗೊಂಡಿರುವ ಸಂಗತಿ ತಿಳಿಯಿತು. ಇದರ ಬೆನ್ನಿಗೇ, ಅವರ ಪತ್ನಿ ಶಮಂತಕಮಣಿ ಸೋಮಶೇಖರ್ ಅವರ ಮನೆಯನ್ನು ತೊರೆದು ತವರಿಗೆ ಹೋಗಿರುವುದಾಗಿಯೂ ಮತ್ತು ಡೈವೋರ್ಸ್‌ಗಾಗಿ ಫ್ಯಾಮಿಲಿ ಕೋರ್ಟ್‌ನಲ್ಲಿ ಕೇಸ್ ಹಾಕಿರುವುದಾಗಿಯೂ ತಿಳಿಯಿತು.

ತಮ್ಮ ಪತ್ನಿ ಹೂಡಿರುವ ಡೈವೋರ್ಸ್ ಕೇಸಿನ ಫೈಲ್ ಅನ್ನು ಹೊತ್ತುಕೊಂಡು ಸೋಮಶೇಖರ್ ನನ್ನ ಬಳಿಗೆ ಬಂದರು. ಆಗ ನಾನು, 'ನೀವು ಈ ಮುಂಚಿನ ಕೇಸಿನ ಫೀಜ್ ಅನ್ನೇ ಕೊಡಲಿಲ್ಲ' ಎಂದೆ. ಅದಕ್ಕೆ ಅವರು, ಆಂ ಊಂ ಅದಾ ಎಂದು ರಾಗವೆಳೆದು, 'ಇಲ್ಲ ಇಲ್ಲ, ಸಸ್ಪೆಂಡ್ ಆದಾಗಿನ ಸಂಬಳದ ಅರೀಯರ್ಸ್ ಇನ್ನೂ ಬಂದಿಲ್ಲ. ಬಂದ ತಕ್ಷಣ ಅದನ್ನೆಲ್ಲ ತಂದು ನಿಮ್ಮ ಪಾದದ ಮೇಲೆ

ಇಡುತ್ತೇನೆ. ನಿಮಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಂಡು ಉಳಿದದ್ದನ್ನು ನನಗೆ ಕೊಡುವಿರಂತೆ' ಎಂದರು. ಅವರ ಮುಖಚರ್ಯೆ ಮತ್ತು ಮಾತಿನ ಧಾಟಿಯ ಮೇಲೆ ನನಗೆ ಅನುಮಾನ ಬಂದಿತು. ನನ್ನ ಪರಿಚಿತ ಪೋಲೀಸ್ ಅಧಿಕಾರಿಯ ಸಹಾಯದಿಂದ ಸೋಮಶೇಖರ್ ಅವರ ಅರಿಯರ್ಸ್ ಬಗ್ಗೆ ತಿಳಿದುಕೊಂಡು ಸ್ತಂಭೀಭೂತನಾದೆ. ಸೋಮಶೇಖರ್ ತಾವು ಸಸ್ಪೆಂಡ್ ಆಗಿದ್ದಾಗ ಒಂದು ತಿಂಗಳೂ ಬಿಡದೇ ಪ್ರತಿ ತಿಂಗಳೂ ಸಂಬಳ ಪಡೆದುಕೊಳ್ಳುತ್ತ ಬಂದಿದ್ದರು! ಅವರ ಮಾತುಗಳಿಗೆ ಹೇಗೆ ಮರುಳಾದೆನಲ್ಲ ಎಂದು ಜಿಗುಪ್ಸೆಗೊಂಡೆ.

ಸೋಮಶೇಖರ್ ತೀರಾ ಸ್ವಾಭಿಮಾನದ, ಜಿದ್ದಿನ ವ್ಯಕ್ತಿ, ಸಸ್ಪೆನ್ಶನ್ ರಿವೋಕ್ ಆಗುವವರೆಗೆ ತನ್ನ ಸಂಬಳಕ್ಕಾಗಿ ಕೈಯೊಡ್ಡುವ ಘಟವಲ್ಲ ಎಂದು ಭಾವಿಸಿಕೊಂಡದ್ದು ಅದೆಂಥ ದೊಡ್ಡ ತಪ್ಪು ಎನಿಸಿತು. ಒಬ್ಬ ವ್ಯಕ್ತಿಯನ್ನು ಅವನ ಅಟಾಟೋಪದ ಮಾತು, ಗತ್ತಿನ ವರ್ತನೆಗಳ ಆಧಾರದಲ್ಲಿ ಅಸ್ಸೆಸ್ ಮಾಡುವುದು ಹುಚ್ಚುತನವೆನಿಸಿತು. ಖಾಲೀ ಡಬ್ಬಾಕ್ಕೆ ಕಲ್ಲು ಹಾಕಿ ಅಲ್ಲಾಡಿಸಿದರೆ ಭಾರೀ ಶಬ್ದ ಬರುತ್ತದೆ; ತುಂಬಿದ ಡಬ್ಬಾದಿಂದ ಅಲ್ಲ. ಗತ್ತು, ಗೈರತ್ತು, ದುರಹಂಕಾರ, ಠೇಂಕಾರ ಇತ್ಯಾದಿಗಳೆಲ್ಲ ಖಾಲಿ ವ್ಯಕ್ತಿತ್ವದ ಲಕ್ಷಣಗಳು ಎನ್ನುವುದನ್ನು ಪ್ರಥಮ ಬಾರಿಗೆ ಸೋದಾಹರಣಾತ್ಮಕವಾಗಿ ಖಚಿತ ಮಾಡಿಕೊಂಡೆ.

ಏತನ್ಮಧ್ಯ ಸರ್ಕಾರವು ಸತ್ಯದೇವ್ ಕೊಲೆ ಪ್ರಕರಣವನ್ನು ಹೈಕೋರ್ಟ್‌ಗೆ ಅಪೀಲ್ ಮಾಡಿಕೊಂಡದ್ದು ಪುರಸ್ಕರಿಸಲ್ಪಟ್ಟಿತ್ತು. ಸೋಮಶೇಖರ್ ಮತ್ತೆ ನನ್ನ ಆಫೀಸ್‌ಗೆ ಬಂದರು; ಠಾಕುಠೀಕುಗಳೆಲ್ಲ ಮಂಗಮಾಯವಾಗಿ ತೀರಾ ವಿನಮ್ರ ಧ್ವನಿಯಲ್ಲಿ ಕೈಕಟ್ಟಿಕೊಂಡು ನಿಯತ್ತಿನ ನಾಯಿ ಬಾಲವನ್ನಾಡಿಸುತ್ತಾ ನಿಂತಂತೆ ನಿಂತುಕೊಂಡಿದ್ದರು! ಅವರ ನಯವಿನಯಗಳ ಹುಸಿತನ ನನಗೆ ಗೊತ್ತಾಗಿಹೋಗಿದ್ದರಿಂದ ವಿಚಲಿತನಾಗಲಿಲ್ಲ. ಗಂಭೀರವಾಗಿ ಕೇಳಿದೆ: ನಿಮಗೆ ಯಾವ ಅರಿಯರ್ಸ್ ಬರಬೇಕಾದದ್ದು ಇಲ್ಲವಂತೆ? ತಕ್ಷಣವೇ ಸೋಮಶೇಖರ್ ಕಣ್ಣುಗಳಲ್ಲಿ ನೀರು ಬಂದಿತು. 'ಸಾರ್, ನನ್ನನ್ನು ದಯವಿಟ್ಟು ಕ್ಷಮಿಸಿ. ಹಣಕಾಸಿನ ಮುಗ್ಗಟ್ಟಿನಲ್ಲಿದ್ದುದರಿಂದ ನಿಮಗೆ ಸುಳ್ಳು ಹೇಳಿದೆ. ಈಗ ನಾನು ಕೆಲಸಕ್ಕೆ ಸೇರಿಕೊಂಡಿರುವೆ, ಏನಾದರೂ ಮಾಡಿ ನಿಮ್ಮ ಫೀಜನ್ನು ಹೊಂದಿಸಿಕೊಡುವೆ' ಎಂದರು ಅದೃಢ ಸ್ವರದಲ್ಲಿ. ಸೋಮಶೇಖರ್ ಅವರ ದುರಹಂಕಾರ–ಹಲ್ಲುಗಿಂಜುವಿಕೆ, ಠೇಂಕಾರ–ಕುಂಯ್‌ಗುಟ್ಟುವಿಕೆ, ಅಟಾಟೋಪ ವಿದೂಷಕತನ, ವೀರಾವೇಶ–ಹೇಡಿತನ ಇತ್ಯಾದಿಗಳು comparative ಆಗಿ ನನ್ನ ಕಣ್ಮುಂದೆ ಕುಣಿಯತೊಡಗಿದವು. ಪಿಚ್ಚೆನ್ನಿಸಿತು. ಸೋಮಶೇಖರ್ ಮೇಲೆ ಕರುಣೆ ಮೂಡಿತು. ಕೇಸ್ ನಡೆಸಲು ಒಪ್ಪಿಕೊಂಡೆ.

ಒಂದು ದಿನ ಫ್ಯಾಮಿಲಿ ಕೋರ್ಟ್‌ಗೆ ಕೇಸ್ ಅಟೆಂಡ್ ಮಾಡಲು ಸೋಮಶೇಖರ್ ಹೋಗಿದ್ದರು. ಪತ್ನಿ ಶಮಂತಕಮಣಿಯವರ ಪರ ಅವರ ಸೋದರಮಾವ ಕೃಷ್ಣಸ್ವಾಮಿಯವರೇ ವಕಾಲತ್ತು ಹಾಕಿದ್ದರು. ಸೋಮಶೇಖರ್ ಅರೆಸ್ಟ್ ಆದಾಗ ಶಮಂತಕಮಣಿಯವರೊಂದಿಗೆ ನಮ್ಮ ಮನೆಗೆ ಬಂದಿದ್ದವರೇ ಕೃಷ್ಣಸ್ವಾಮಿ. ತಮ್ಮನ್ನು ಬಂಧನ ಮುಕ್ತಗೊಳಿಸಲು ಮುಂಚೆ ಪರದಾಡಿದ್ದ ಕೃಷ್ಣಸ್ವಾಮಿಯವರ ಮೇಲೆಯೇ ಸೋಮಶೇಖರ್ ಓಪನ್‌ಕೋರ್ಟ್‌ನಲ್ಲಿ ಹಲ್ಲೆ ನಡೆಸಿಬಿಟ್ಟರು. ಇದನ್ನು ನೋಡಿದ ಇತರ ಲಾಯರ್‌ಗಳು ಸೋಮಶೇಖರ್ ಮೇಲೆ ಒಮ್ಮೆಗೇ ಮುಗಿಬಿದ್ದು ಮನಬಂದಂತೆ ಚಚ್ಚಿದರು. ರಕ್ತ ಸೋರಿಸಿಕೊಳ್ಳುತ್ತ ನಿಶ್ಚಲವಾಗಿ ನೆಲಕ್ಕುರುಳಿಬಿದ್ದಿದ್ದ ಸೋಮಶೇಖರ್‌ರನ್ನು ಸ್ಟ್ರೆಚರ್‌ನಲ್ಲಿ ಆಸ್ಪತ್ರೆಗೆ ಹೊತ್ತೊಯ್ಯಲಾಯಿತು.

ಈ ಘಟನೆಯ ನಂತರ ಹಲವಾರು ನನ್ನ ಪರಿಚಿತ ಲಾಯರ್‌ಗಳು ಬಂದು ಸೋಮಶೇಖರ್‌ಗೆ ಹಾಕಿದ್ದ ವಕಾಲತ್ತನ್ನು ವಾಪಸ್ ಪಡೆಯಬೇಕೆಂದು ನನ್ನನ್ನು ಒತ್ತಾಯಿಸಿದರು. ನನ್ನ ಅನುಕಂಪ ಕೊಂಡಿ ಮಾತ್ರ ಸೋಮಶೇಖರ್‌ರೊಂದಿಗೆ ತಗುಲಿಕೊಂಡಿತ್ತು. ನನ್ನ ಲಾಯರ್ ಗೆಳೆಯರ ಒತ್ತಾಯಕ್ಕೆ ಅದೂ ಅಭದ್ರಗೊಂಡು ಕಡಿದುಹೋಯಿತು. ನನ್ನ ವಕಾಲತ್ತನ್ನು ವಾಪಸ್ ಪಡೆದುಕೊಂಡೆ.

ಆ ನಂತರ ಬಹಳಷ್ಟು ಬಾರಿ ನನ್ನ ಆಫೀಸಿಗೆ ಸೋಮಶೇಖರ್ ಅಂಗಲಾಚಿಕೊಂಡು ಅಲೆದರು. ನಾನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ ವಾಪಸ್ಸು ಕಳಿಸಿದೆ. ಒಮ್ಮೆ ನನ್ನ ಆಫೀಸಿನಿಂದ ದೂರದಲ್ಲೇ ನಿಂತುಕೊಂಡು ನನ್ನ ಜ್ಯೂನಿಯರ್ ಆಗಿದ್ದ ಬಸವರಾಜ್‌ರನ್ನು ನನ್ನ ಮನ ಒಲಿಸುವಂತೆ ಕಳಿಸಿಕೊಟ್ಟರು. ನನ್ನ ಆಫೀಸ್‌ನಿಂದ ಹೊರಬಂದು ನೋಡಿದೆ. ದೀನವದನರಾಗಿ ನಿಂತಿದ್ದರು ಸೋಮಶೇಖರ್. ಹೆಚ್ಚು ಹೊತ್ತು ನಿಂತಿದ್ದರೆ ನನ್ನ ಮನ ಕರಗಿಬಿಡಬಹುದೆಂದು ನನ್ನ ಬಗೆಗೇ ಭಯವಾಗಿ ಒಳಕ್ಕೆ ಬಂದುಬಿಟ್ಟೆ. ಇನ್ನೊಮ್ಮೆ ಇತ್ತ ಸುಳಿಯಬೇಡವೆಂದು ಅವರಿಗೆ ಹೇಳಿಬಿಡು ಎಂದೆ ಬಸವರಾಜ್‌ಗೆ ಕೃತಕ ಕಟುಧ್ವನಿಯಲ್ಲಿ.

ಹೈಕೋರ್ಟ್‌ನಲ್ಲಿ ಸೋಮಶೇಖರ್‌ಗೆ ಶಿಕ್ಷೆಯಾಯಿತು. ಸುಪ್ರೀಂ ಕೋರ್ಟ್‌ಗೆ ಅಪೀಲ್ ಮಾಡಿಕೊಂಡರು. ಅಲ್ಲಿ ಕೇಸ್ ನಡೆಯುತ್ತಿರುವಾಗಲೇ ಸೋಮಶೇಖರ್ ಕೊನೆಯುಸಿರೆಳೆದರು.

87

ಸರ್ಪ ವ್ಯಾಮೋಹಕ್ಕಾಗಿ ಕಂಬಿ ಎಣಿಸಿದ ವಾಸೀಮ್

ಪಿ.ಬಿ. ಸುರೇಶ್ ಅವರು ಕ್ರಿಶ್ಚಿಯನ್ ಹುಡುಗನ ಕೇಸೊಂದನ್ನು ನನಗೆ ತಂದುಕೊಡುವ ಮೂಲಕ ಪರಿಚಿತರಾದರು. ಆ ಕೇಸನ್ನು ನಾನು ಗೆದ್ದುಕೊಟ್ಟಾಗ ಕಕ್ಷಿದಾರ ಹುಡುಗನಿಗಿಂತ ಅವರಿಗೇ ಹೆಚ್ಚು ಖುಷಿಯಾಗಿದ್ದನ್ನು, ಆ ಖುಷಿಯನ್ನು ಅತಿ ವಿಜೃಂಭಣೆಯಿಂದ ವ್ಯಕ್ತಿಪಡಿಸಿದ್ದನ್ನು ನಾನು ಮರೆಯಲಾರೆ. ಆ ಕೇಸಿನೊಂದಿಗಾಗಲೀ ಮತ್ತು ಆ ಕಕ್ಷಿದಾರನೊಂದಿಗಾಗಲೀ ಯಾವುದೇ ರೀತಿಯಲ್ಲಿ ಸ್ವಹಿತಾಸಕ್ತಿ ಹೊಂದಿರದ ಸುರೇಶ್ ಅವರು ಸಂಭ್ರಮಪಟ್ಟುದ್ದನ್ನು ಕಂಡು ನನಗೆ ಅತೀವ ಸಂತೋಷವಾಯಿತು. ಆ ಕೇಸನ್ನು ಗೆದ್ದ ನೆನಪಿಗಾಗಿ ಸರೋವರ್ ಹೋಟೆಲ್‌ನಲ್ಲಿ ಪುಟ್ಟ ಸಮಾರಂಭವನ್ನೇ ಏರ್ಪಡಿಸಿ, ಕೃಷ್ಣ ಸಾರಥ್ಯದ ರಥದಲ್ಲಿ ಯುದ್ಧ ಸನ್ನದ್ಧನಾಗಿ ನಿಂತಿರುವ ಕೃಷ್ಣಾರ್ಜುನ ಪ್ರತಿಮೆಯನ್ನು ನನಗೆ ನೀಡಿದ ಕಾಣಿಕೆ ಇಂದಿಗೂ ನನ್ನ ಬಳಿಯಿದೆ. ಅಂದು ಸುಮಾರು ನೂರಾ ಐವತ್ತು ಜನ ನನ್ನ ಲಾಯರ್ ಮಿತ್ರರಿಗೆ ಊಟದ ಪಾರ್ಟಿಯನ್ನು ಕೊಟ್ಟರು.

ಸುರೇಶ್ ಅವರ ಪ್ರವೃತ್ತಿಯ ಬಗ್ಗೆ ಕುತೂಹಲ ಹುಟ್ಟಿತು. ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ವಿದ್ಯಾರ್ಥಿ ಮುಖಂಡರಾಗಿದ್ದವರು. ಆಗೆಲ್ಲ ಅವರಿಗೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬೆಂಬಲಿಗರಾಗಿದ್ದರು. ಈ ಒಡನಾಟವೂ ಅವರು ಅಪ್ಪಟ ಸೆಕ್ಯುಲರ್ ವ್ಯಕ್ತಿಯಾಗಿ ಬೆಳೆಯಲು ಸಾಧ್ಯ ಮಾಡಿಕೊಟ್ಟಿತು ಎನ್ನುವುದನ್ನು ತಿಳಿದುಕೊಂಡೆ. ಅವರ ವಿದ್ಯಾರ್ಥಿ ಜೀವನ ಮುಗಿದ ಮೇಲೆ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದರು. ಆಗಲೂ ಅವರು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವರ ಅನುಕೂಲತೆ, ಅಭಿವೃದ್ಧಿಗಳಿಗಾಗಿ ಪರಿಶ್ರಮಿಸಿದರು. ಸುರೇಶ್ ಬಗ್ಗೆ ಈ ಅಭಿಪ್ರಾಯಗಳನ್ನು ನನಗೆ ನೀಡಿದವರು ಅವರೊಂದಿಗೆ ಒಡನಾಟದಲ್ಲಿದ್ದ ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ವಿದ್ಯಾರ್ಥಿ ತರುಣರು.

ಸರೋವರ್ ಹೋಟೆಲ್‌ನಲ್ಲಿ ಪಾರ್ಟಿ ಕೊಟ್ಟ ಕೆಲವೇ ದಿನಗಳಲ್ಲಿ ಸುರೇಶ್ ಪುನಃ ನನ್ನ ಆಫೀಸ್‌ಗೆ ವಿದೇಶಿ ವಿದ್ಯಾರ್ಥಿಗಳೊಂದಿಗೆ ಹಾಜರಾದರು. ಅವರೊಂದಿಗೆ ಬಂದಿದ್ದವರು ಜೋರ್ಡಾನ್ ದೇಶದ ವಿದ್ಯಾರ್ಥಿಗಳೆಂದು ತಿಳಿಯಿತು.

"ನೋಡಿ, ಜೋರ್ಡಾನ್‌ನ ವಾಸೀಮ್ ಅನ್ನುವ ವಿದ್ಯಾರ್ಥಿಯನ್ನು ಬೆಂಗಳೂರು ಏರ್‌ಪೋರ್ಟ್ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ದಯವಿಟ್ಟು ಬಿಡಿಸಿಕೊಡಬೇಕು. ವಾಸೀಮ್ ಒಳ್ಳೆಯ ಹುಡುಗ. ಸರ್ಪದ ಮೇಲಿನ ವ್ಯಾಮೋಹಕ್ಕಾಗಿ ಪೊಲೀಸರ ಅತಿಥಿಯಾಗಿಬಿಟ್ಟಿದ್ದಾನೆ" ಎಂದರು ಸುರೇಶ್ ಒಂದೇ ಉಸಿರಿಗೆ.

ವಾಸೀಮ್ ಜೋರ್ಡಾನ್‌ನಿಂದ ಮೈಸೂರಿಗೆ ಬಿ.ಕಾಂ. ಕಲಿಯಲು ಬಂದಿದ್ದ. ವಾಸೀಮನ ಅಪ್ಪ ಅಬ್ದುಲ್ಲಾ ಷಾರ್ಜಾದಲ್ಲಿ ಶಿಕ್ಷಕ ಹುದ್ದೆಯಲ್ಲಿದ್ದರು. ಅಬ್ದುಲ್ಲಾಗೆ ಭಾರತದ ಬಗ್ಗೆ ಅಪಾರ ಪ್ರೀತಿ. ಭಾರತದ ಪರಿಸರ, ಶಿಕ್ಷಣ, ಸಂಸ್ಕೃತಿಗಳ ಬಗ್ಗೆ ಅಭಿಮಾನ ಬೆಳೆಸಿಕೊಂಡಿದ್ದ ಅಬ್ದುಲ್ಲಾ ತಮ್ಮ ಮಗನನ್ನು ಮೈಸೂರಿಗೆ ಕಳಿಸಿಕೊಟ್ಟಿದ್ದರು. ಉನ್ನತ ಹಾಗೂ ತಾಂತ್ರಿಕ ಪದವಿಯೇನೂ ಆಗಿರದೆ ಬಿ.ಕಾಂ. ಕಲಿಯಲು ಜೋರ್ಡಾನ್‌ನಿಂದ ಇಷ್ಟು ದೂರ ಏಕೆ ವಾಸೀಮ್ ಬಂದ? ಎಂದು ತಾನು ಪ್ರಶ್ನಿಸಿದಾಗ ಅಬ್ದುಲ್ಲಾ ಅವರ ಭಾರತ ವ್ಯಾಮೋಹದ ಸಂಗತಿ ಬಯಲಾಯಿತು. ಮೈಸೂರಲ್ಲಿ ಓದುತ್ತಿದ್ದ ವಾಸೀಮ್ ಒಂದು ಬಾರಿ ಹತ್ತಿರದ ಕೊಳ್ಳೇಗಾಲಕ್ಕೆ ತನ್ನ ಸ್ನೇಹಿತರೊಂದಿಗೆ ಪಿಕ್‌ನಿಕ್‌ಗೆ ಹೋಗಿದ್ದ. ಆಗ ಅಲ್ಲಿ ಹಾವಾಡಿಗನೊಬ್ಬ ಹಾವಾಡಿಸುತ್ತಿದ್ದದ್ದನ್ನು ನೋಡಿದ. ಎಂಟು ಅಡಿ ಉದ್ದದ ಕರಿಸರ್ಪ ಕೋಬ್ರಾ ಒಂದನ್ನು ನೋಡಿದ ವಾಸೀಮ್ ರೋಮಾಂಚಿತನಾದ. ಆ ಹಾವಾಡಿಗನಿಗೆ

ವಾಸೀಮ್, ನನಗೆ ಆ ಹಾವನ್ನು ಕೊಡುತ್ತೀಯಾ ಎಂದು ಪ್ರಶ್ನಿಸಿದ. ಓಹೋ ಏಕಾಗುವುದಿಲ್ಲ. ಹಣ ಕೊಟ್ಟರೆ ಕೊಡುವೆ ಎಂದ ಹಾವಾಡಿಗ. ಸರಿ ನಾನಿಷ್ಟರಲ್ಲಿಯೇ ನಮ್ಮ ದೇಶಕ್ಕೆ ಹೋಗುತ್ತಿದ್ದೇನೆ. ಆಗ ಬಂದು ಕೊಂಡೊಯ್ಯುವೆ ಎಂದು ಆ ಹಾವಾಡಿಗನ ವಿಳಾಸವನ್ನು ಪಡೆದುಕೊಂಡ. ತಂದೆ ಅಬ್ದುಲ್ಲಾ ವಾಸೀಮ್‌ನನ್ನು ರಂಜಾನ್ ಹಬ್ಬಕ್ಕೆ ಜೋರ್ಡಾನ್‌ಗೆ ಬರುವಂತೆ ಕರೆದಿದ್ದ. ಜೋರ್ಡಾನ್‌ಗೆ ಹೋಗಲು ಏರೋಪ್ಲೇನ್ ಟಿಕೆಟ್ ಬುಕ್ ಮಾಡಿದ ವಾಸೀಮ್. ನಾಳೆ ಬೆಂಗಳೂರಿನಿಂದ ಫ್ಲೈಟ್ ಹತ್ತುವುದೆಂದು ನಿರ್ಧಾರವಾದ ಹಿಂದಿನ ದಿನ ವಾಸೀಮ್ ಕೊಳ್ಳೇಗಾಲಕ್ಕೆ ಹೋದ. ಹಾವಾಡಿಗ ಆ ಕಾಳಸರ್ಪ ಕೊಡಲು ವಾಸೀಮ್‌ನಿಂದ ರೂ. 600 ಪಡೆದುಕೊಂಡ. ಆ ಸರ್ಪದ ವಿಷದ ಹಲ್ಲನ್ನು ಕಿತ್ತಿದ್ದ ಹಾವಾಡಿಗ ಇನ್ನೂ ನಾಲ್ಕು ದಿವಸ ಏನೂ ತಿನ್ನದೆ ಇದ್ದರೂ ಬದುಕಿರುತ್ತದೆ ಈ ಸರ್ಪ, ಅಂತಹ ಮೂಲಿಕೆ ರಸ ಹಿಂಡಿದ್ದೇನೆ ಇದಕ್ಕೆ ಎಂದು ಬಿದರಿನ ಬಿಟ್ಟಿಯೊಂದರಲ್ಲಿ ಹಾಕಿ ಬಂದೋಬಸ್ತ್ ಪ್ಯಾಕ್ ಮಾಡಿಕೊಟ್ಟ. ಡಿಸ್ಕ್ ಆಕಾರದ ಆ ಬುಟ್ಟಿಯನ್ನು ಏರ್‌ಬ್ಯಾಗ್‌ನೊಳಕ್ಕೆ ಹಾಕಿಕೊಂಡು ವಾಸೀಮ್ ಬೆಂಗಳೂರು ಕಡೆಗೆ ಪ್ರಯಾಣಿಸಿದ.

ಜೋರ್ಡಾನ್‌ನ ಮರುಳುಗಾಡಿನಲ್ಲಿರುವ ತನ್ನ ಊರಲ್ಲಿ ಇಂಥ ಭಾರೀ ಸರ್ಪಗಳೇ ಇಲ್ಲ. ಅಲ್ಲಿರುವ sand snake ಗಳೆಲ್ಲ ಒಂದೂವರೆ ಎರಡು ಅಡಿಗಳಷ್ಟು ಮಾತ್ರ ಉದ್ದದವು. ಮರುಳುಗಾಡಿನಲ್ಲಿ ಬೀಸುವ ಭಾರೀ ಸುಂಟರಗಾಳಿಗೆ ಅಲ್ಲಿಯ ಹಾವುಗಳು ಮರಳಿನೊಂದಿಗೆ ಆಕಾಶಕ್ಕೆ ಧೂಳೀಪಟದಂತೆ ಹಾರಿ ಊರ ಬೀದಿ, ಮನೆ ಮಳಿಗೆಗಳ ಮೇಲೆ ಬಿದ್ದಾಗ ಅವನ್ನು ಹಿಡಿದು ಆಟವಾಡಿದ ನನಗೆ ಎಂಥ ಭಾರೀ ಸರ್ಪ ಸಿಕ್ಕಿತು! ಈ ಸರ್ಪ ನೋಡಿ ಅಪ್ಪ, ಅಮ್ಮ, ಸುತ್ತಮುತ್ತಲಿನ ಜನರು ಆಶ್ಚರ್ಯದಿಂದ ಬಾಯಿ ತೆಗೆಯುವುದರಲ್ಲಿ ಸಂಶಯವೇ ಇಲ್ಲ. ಇಂಡಿಯಾದಿಂದ ಒಂದು surprise ತರುತ್ತೇನೆಂದು ಈಗಾಗಲೇ ಹೇಳಿರುವೆ. ಅದೇನು surprise ಎಂದು ಎಲ್ಲ ಕಾಯುತ್ತಿರುತ್ತಾರೆ! ಈ ಸರ್ಪ ನೋಡಲು ಇಡೀ ಊರೇ ನನ್ನ ಮುಂದೆ ಘೇರಾಯಿಸದಿರದು... ಹೀಗೆ ಖುಷಿ ಯೋಚನೆಯಲ್ಲಿರುವಾಗ ಬಸ್ ಬೆಂಗಳೂರು ತಲುಪಿತ್ತು.

ಏರೋಡ್ರೋಮ್ ತಲುಪಿದ ವಾಸೀಮ್ ನಿಲ್ದಾಣದ ನಿಯಮಗಳ ರೀತ್ಯಾ ತಪಾಸಣೆಗೆ ಒಳಗಾದ. ಅದೇ ರೀತಿ ಅವನ ಲಗ್ಗೇಜೂ ತಪಾಸಣಾ ಯಂತ್ರದ ಬಾಯಿಗೆ ತಳ್ಳಲ್ಪಟ್ಟಿತು. ಏರ್‌ಬ್ಯಾಗ್‌ನೊಳಗೆ ಸಿಂಬೆಯಾಕಾರದ ವಸ್ತುವೊಂದು ಚಲನವಲನಗೊಳ್ಳುತ್ತಿರುವುದನ್ನು ತಪಾಸಣಾ ಯಂತ್ರದಲ್ಲಿ ಕಂಡು ಗಾಬರಿಯಾಗಿ ಕೂಡಲೇ ಆ ಲಗ್ಗೇಜ್‌ನ ವಾರಸುದಾರನನ್ನು ಕರೆಯಿರಿ ಎಂದ ಸೆಕ್ಯುರಿಟಿ ಆಫೀಸರ್.

ಸೆಕ್ಯುರಿಟಿ ಅಧಿಕಾರಿಗಳು ವಾಸೀಮ್‌ನಿಗೆ ಬ್ಯಾಗ್ ಅನ್ನು ಓಪನ್ ಮಾಡುವಂತೆ ಹೇಳಿದರು. ಅದರೊಳಗೆ ಸಿಂಬೆಯಾಕಾರದ ಬಿದಿರಿನ ಪುಟ್ಟಿಯಿರುವುದು ಕಾಣಿಸಿ ಅದನ್ನೂ ಓಪನ್ ಮಾಡೆಂದು ಹೇಳಿದರು. ಹಿಂಜರಿಯುತ್ತಲೇ ವಾಸೀಮ್ ಬಿದಿರಿನ ಪುಟ್ಟಿಯ ಒಂದು ಮಗ್ಗಲನ್ನು ಸ್ವಲ್ಪವೇ ತೆರೆದ. ಕೂಡಲೇ ಸರ್ಪದ ಬಾಲ ಬುಟ್ಟಿಯಿಂದ ಹೊರಬಿದ್ದಿತು! ಹೌಹಾರಿದ ಸೆಕ್ಯೂರಿಟಿ ಅಧಿಕಾರಿಗಳು ದೂರಕ್ಕೆ ಹಾರಿದರು. ಕೂಡಲೇ ಈ ವಿಷಯ ಇತರ ಪ್ರಯಾಣಿಕರಿಗೆ ತಿಳಿದು ಅವರೆಲ್ಲ ಭಯಭೀತರಾಗದಿರುವಂತೆ ಮುಂಜಾಗ್ರತೆ ವಹಿಸಿದ ನಿಲ್ದಾಣದ ಅಧಿಕಾರಿಗಳು ಗದ್ದಲ ಮಾಡದೆ ಆ ಬುಟ್ಟಿಯ ಸಮೇತ ವಾಸೀಮ್‌ನನ್ನು ನಿಲ್ದಾಣದ ಪೊಲೀಸ್ ಠಾಣೆಗೆ ಕರೆದೊಯ್ದರು. ಪೊಲೀಸರು ಹಾವಾಡಿಗನೊಬ್ಬನ್ನು ಕರೆತಂದು ಬುಟ್ಟಿಯನ್ನು ಓಪನ್ ಮಾಡಿಸಿದರು. ಎಂಟು ಅಡಿ ಉದ್ದದ ಭಾರೀ ಕಾಳಸರ್ಪ ನೋಡಿ ಎಲ್ಲರೂ ಬೆವೆತುಹೋದರು. ಈ ಸರ್ಪವನ್ನು ಏಕೆ ಒಯ್ಯುತ್ತಿದ್ದೀ ಎಂದು ವಾಸೀಮ್‌ಗೆ ಒಂದೆರಡು ಚಚ್ಚಿ ಲಾಕಪ್‌ಗೆ ತಳ್ಳಿದರು. ಫಾರೆಸ್ಟ್ ಅಧಿಕಾರಿಯೊಬ್ಬರನ್ನು ಕರೆಸಿ ಆ ಸರ್ಪವನ್ನು ಅವರ ಸುಪರ್ದಿಗೆ ಒಪ್ಪಿಸಿದ ಪೊಲೀಸರು ವಾಸೀಮ್ ಮೇಲೆ Wild Life Protection Act ಅನ್ವಯ ಕೇಸು ದಾಖಲು ಮಾಡಿದರು.

ವಾಸೀಮ್ ಕಾಳಸರ್ಪದ ವ್ಯಾಮೋಹಕ್ಕೆ ಬಲಿಯಾಗಿ ಕಂಬಿ ಎಣಿಸುವಂತಾಗಿರುವ ಪ್ರಹಸನವನ್ನು ನೆನೆದು ನಾನು ಘುತ್ತು ಸುರೇಶ್ ಮನಸಾರೆ ನಕ್ಕೆವು. ಕೇಸ್ ಫೈಲ್ ತೆಗೆದುಕೊಂಡ ನಾನು ಅವರಿಗೆ ಅಭಯ ಹೇಳಿಕಳಿಸಿದೆ.

ಕೇಸು ಮೇಯೋಹಾಲ್ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್‌ವೊಂದರಲ್ಲಿ ಬಂದಿತು. ಕೇಸಿನಲ್ಲಿ ತನಿಖಾಧಿಕಾರಿಯೇ ಅತ್ಯಂತ ಮುಖ್ಯ ಸಾಕ್ಷಿಯಾಗಿದ್ದರು. ಅವರ ಮತ್ತು ವಿಮಾನ ನಿಲ್ದಾಣದ ಸೆಕ್ಯುರಿಟಿ ಆಫೀಸರ್‌ಗಳ ಪಾಟೀ ಸವಾಲಿನಲ್ಲಿ ಹಾವಿನ ಬುಟ್ಟಿ ಮತ್ತು ಹಾವು ವಾಸೀಮ್‌ನಿಗೆ ಸೇರಿದ್ದೆಂದು ಸಾಬೀತುಪಡಿಸುವಲ್ಲಿ ಅವರು ವಿಫಲರಾಗುವಂತೆ ನೋಡಿಕೊಂಡೆ. ಅವರ ಪ್ರಕಾರ ಅವನೇ ಖುದ್ದಾಗಿ ಹಾವು ನನಗೆ ಸೇರಿದ್ದೆಂದು ಕೊಟ್ಟಿದ್ದ ಹೇಳಿಕೆ ಕಾನೂನಿನಲ್ಲಿ ಅವನ ವಿರುದ್ಧ ಬಳಸಲಾಗದಂತೆಯೂ ನೋಡಿಕೊಂಡೆ. ಹೀಗೆ ಕಾನೂನಿನ ಇಕ್ಕಳಕ್ಕೆ ಸಿಕ್ಕಿಬಿದ್ದ ಪೊಲೀಸರು ಆ ಕಾಳಸರ್ಪ ಆ ದಿನ ಏರೋಡ್ರೋಮ್‌ನ ಒಳಕೋಣೆಗೆ ಪ್ರವೇಶ ಮಾಡಿದ್ದ ಯಾರದ್ದಾದರೂ ಆಗಿರಬಹುದೆನ್ನುವಂತೆ ಉತ್ತರಗಳನ್ನು ಪಡೆದೆ. ವಾಸೀಮ್‌ನ ಪಾಸ್‌ಪೋರ್ಟನ್ನಾಗಲೀ, ಏರ್ ಟಿಕೆಟ್ ಆಗಲಿ, ಬ್ಯಾಗೇಜ್ ಚೀಟಿಯನ್ನಾಗಲಿ ಹಾಜರುಪಡಿಸಲಾಗದೆ ಕೋರ್ಟಿನಲ್ಲಿ ನಗೆಪಾಟಲಾಯ್ತು. ಆದರೆ ವಾಸೀಮ್ ಆ ವರ್ಷ ರಂಜಾನನ್ನು ಜೈಲ್‌ನಲ್ಲೇ

ಆಚರಿಸಬೇಕಾಯಿತು. ಮಗ ಬಿಡುಗಡೆಯದ ಸುದ್ದಿ ತಿಳಿದ ಅಬ್ದುಲ್ಲ ಮುಂದಿನ ರಂಜಾನ್‌ಗೆ ಖಂಡಿತಾ ಜೋರ್ಡಾನ್‌ಗೆ ನನ್ನ ಮಗನೊಂದಿಗೆ ಬರಬೇಕೆಂದು ನನಗೆ ಫೋನ್‌ನಲ್ಲಿ ಆಹ್ವಾನಿಸಿದ. ರಂಜಾನ್ ಆಚರಿಸಲು ಜೋರ್ಡಾನ್‌ಗೆ ಹೋಗಲಾಗಲಿಲ್ಲ. ಆದರೆ ಪಿ.ಬಿ. ಸುರೇಶ್ ಹೋಗುವಂತೆ ನೋಡಿಕೊಂಡೆ.

88

ಸಂವಿಧಾನಾತ್ಮಕತೆ ಮತ್ತು ಸತ್ಯದ ಸಂಕೀರ್ಣತೆಯ ತಲ್ಲಣಗಳು

ಡಿಸಿಪಿ ಸೋಮಶೇಖರ್ ಕೊಲೆ ಮೊಕದ್ದಮೆ ಸೆಷನ್ಸ್ ಕೋರ್ಟ್‌ನಲ್ಲಿ ಮುಗಿಯುವವರೆಗೆ ಆ ಬಗ್ಗೆ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇದ್ದವು. ಅದಕ್ಕೂ ಮುಂಚೆ ಗುಲ್ಬರ್ಗಾದಲ್ಲಿ ನಡೆದ ಕಮಲಾಕರ್ ಲಾಕಪ್‌ಡೆತ್ ಪ್ರಕರಣದಲ್ಲಿ ಆರೋಪಿಗಳಲ್ಲೊಬ್ಬರಾಗಿದ್ದ ಜಿಲ್ಲಾ ಪೊಲೀಸ್ ಅಧಿಕಾರಿ ಶ್ರೀವಾಸ್ತವ್ ಪರ ವಕಾಲತ್ತು ಹಾಕಿ ಅವರನ್ನು ಜಾಮೀನಿನ ಮೇಲೆ ಬಿಡಿಸಿದ್ದೆ. ವಿಷಯವಾಗಿಯೂ ಪತ್ರಿಕೆಗಳಲ್ಲಿ ಬಹಳಷ್ಟು ವರದಿಗಳು ಪ್ರಕಟವಾಗಿದ್ದವು. ಸೋಮಶೇಖರ್ ಅವರ ಕೇಸು ನಡೆಯುತ್ತಿರುವಾಗಲೇ ಕುತೂಹಲಕರ ಕೇಸೊಂದಕ್ಕೆ ಮೈಸೂರು ಕೋರ್ಟ್‌ನಲ್ಲಿ ನಾನೇ ಲಾಯರ್ ಆಗಿದ್ದೆ. ಅದು ಪಡುವಾರಳ್ಳಿಯ ಜೋಡಿ ಕೊಲೆ ಕೇಸಾಗಿತ್ತು. ಹೀಗೆ ನಿರಂತರವಾಗಿ ಎರಡು ವರ್ಷಗಳವರೆಗೆ ಮಾಧ್ಯಮಗಳು ನನ್ನ ಬಗ್ಗೆ ಬರೆಯುವ ಅನಿವಾರ್ಯತೆಗೆ ಒಳಗಾಗಿದ್ದವು. ನನಗೆ ಸಿಕ್ಕ ಈ ಮಾಧ್ಯಮ ಪ್ರಚಾರದಿಂದಾಗಿ ನನ್ನ ಅನೇಕ ವೃತ್ತಿಬಾಂಧವರು, "ಏನು ಹನುಮಂತ್ರಾಯ ಭಾರೀ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದೀಯಾ?" ಎನ್ನುತ್ತಿದ್ದರು. ಹೀಗೆ ನನ್ನನ್ನು ಪ್ರಶ್ನಿಸುವ

ಅನೇಕರಲ್ಲಿ ನನ್ನ ಬಗ್ಗೆ ಮಾತ್ಸರ್ಯ ಉಂಟಾಗಿದೆಯಾ ಎನ್ನುವ ಅನುಮಾನ ಉಂಟಾಯಿತು. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ನನ್ನ ಕೆಲಸಗಳಲ್ಲಿ ಮುಳುಗಿದೆ.

ಇದರ ಬೆನ್ನಿಗೇ ಮತ್ತೊಂದು ವಿವಾದಾಸ್ಪದ ಕೇಸು ನನ್ನ ಆಫೀಸ್ ಮೆಟ್ಟಿಲೇರಿ ಬಂದಿತು; 'ಲಂಕೇಶ್ ಪತ್ರಿಕೆ'ಯಲ್ಲಿ ಆಗಾಗ್ಗೆ ಲೇಖನ, ವರದಿಗಳನ್ನು ಬರೆಯುತ್ತಿದ್ದ ಕಂಚನಹಳ್ಳಿ ಗಂಗಾಧರಮೂರ್ತಿಯವರ ಕೊಲೆ ಕೇಸು! ಈ ಪ್ರಕರಣದಲ್ಲಿ ಪ್ರಥಮ ಆರೋಪಿಯಾಗಿದ್ದ ಎಲ್.ಆರ್. ಶಿವರಾಮೇಗೌಡ ಪರ ವಕಾಲತ್ತು ಹಾಕಬೇಕೆಂದು ನನ್ನ ಜ್ಯೂನಿಯರ್ ಆಗಿದ್ದ ಪ್ರೊ. ಬಿ. ಬಸವರಾಜು ಅವರು ನನ್ನನ್ನು ಒತ್ತಾಯಿಸಿದರು. ಬಸವರಾಜು ಮತ್ತು ಶಿವರಾಮೇಗೌಡರು ತೀರಾ ಆಪ್ತ ಗೆಳೆಯರು ಎನ್ನುವ ವಿಷಯ ನನಗೆ ಗೊತ್ತಾಯಿತು. ಈ ಕೊಲೆ ಪ್ರಕರಣ ಸಾಮಾನ್ಯ ಕೊಲೆ ಪ್ರಕರಣಗಳಂತಿರದೆ ಸಾಮಾಜಿಕ ಮತ್ತು ರಾಜಕೀಯ ಆಯಾಮಗಳನ್ನು ಪಡೆದುಕೊಂಡಂಥದಾಗಿತ್ತು. ಈ ಕೊಲೆ ನಡೆದ ತಕ್ಷಣವೇ ವಕೀಲರ ಸಂಘಗಳು, ಪ್ರೊಫೆಸರ್‌ಗಳು, ದೇವೇಗೌಡರಂಥ ರಾಜಕೀಯ ಮುಖಂಡರುಗಳು ಖಂಡಿಸಿ ಹೇಳಿಕೆ ನೀಡಿದ್ದರು ನಾನು ಹಿಂದೇಟು ಹಾಕುತ್ತಿರುವೆನೆಂದು ಗೊತ್ತಾದ ಬಸವರಾಜು, "ಈ ಕೇಸನ್ನು ನನಗಾಗಿ ನೀವು ನಡೆಸಲೇಬೇಕು ಸಾರ್, ಇಲ್ಲ ಅನ್ನಬಾರದು" ಎಂದು ಪಟ್ಟುಹಿಡಿದರು. ನಾನು ಆಗಲಿ ಎಂದು ಒಪ್ಪಿಕೊಂಡೆ.

ಕಂಚನಹಳ್ಳಿ ಗಂಗಾಧರಮೂರ್ತಿ ವೃತ್ತಿಯಲ್ಲಿ ವಕೀಲರಾಗಿದ್ದರೂ ಜನರ ಸಂಘಟನೆ, ಅನ್ಯಾಯದ ವಿರುದ್ಧ ಪ್ರತಿಭಟನೆ, ಅವ್ಯವಹಾರಗಳನ್ನು ಪತ್ರಿಕೆಗಳಲ್ಲಿ ಬಯಲುಗೊಳಿಸುವುದು ಮುಂತಾದವು ಅವರ ಪ್ರವೃತ್ತಿಯಲ್ಲಿ ಸೇರಿಕೊಂಡಿದ್ದವು.

ಎಲ್.ಆರ್. ಶಿವರಾಮೇಗೌಡ ಮತ್ತು ಅವರ ಸೋದರಮಾವ ಶಿವಣ್ಣನವರನ್ನು ಗಂಗಾಧರಮೂರ್ತಿ ಎದುರು ಹಾಕಿಕೊಂಡಿದ್ದರು. ನಾಗಮಂಗಲ ಮತ್ತು ಮಂಡ್ಯಗಳ ಕೋರ್ಟ್‌ಗಳೆರಡರಲ್ಲೂ ಪ್ರಾಕ್ಟೀಸ್ ಮಾಡುತ್ತಿದ್ದ ಗಂಗಾಧರಮೂರ್ತಿ ತಾ. 23.9.92ರಂದು ತಮ್ಮ ಮೋಟಾರ್ ಬೈಕ್ ಮೇಲೆ ಬೆಳಗ್ಗೆ 8.45 ಕ್ಕೇ ಹೊರಟರು. ಅದಾವುದೋ ತುರ್ತು ಕೆಲಸದ ನಿಮಿತ್ತ ಫೋನ್ ಕರೆ ಬಂದಿದೆ ಎಂದು ಅಷ್ಟು ಬೇಗ ಹೊರಟಿದ್ದರು. ಪತಿಯನ್ನು ಬೀಳ್ಕೊಡಲು ಬಾಗಿಲ ಬಳಿಗೆ ಬಂದ ನಾಗಮ್ಮನಿಗೆ ಸ್ವಲ್ಪ ಆತಂಕವಾಯಿತು. ಏಕೆಂದರೆ, ತನ್ನ ಪತಿಗೆ ವಿರುದ್ಧವಾಗಿದ್ದ ಲೋಕೇಶ್ ಮತ್ತು ಇನ್ನೀರ್ವರು ಸ್ಕೂಟರ್ ಮೇಲೆ ಗಂಗಾಧರಮೂರ್ತಿ ಹೋದ ದಿಕ್ಕಿನೆಡೆಗೇ ಹೋದದ್ದು ಕಂಡು.

ಇದಾದ ಸ್ವಲ್ಪ ಹೊತ್ತಿಗೆ, ಗೋವಿಂದಾಚಾರಿ ಎನ್ನುವಾತ ಏದುಸಿರುಬಿಡುತ್ತ ಓಡಿಬಂದು, 'ನಿನ್ ಗಂಡನ್ ಕೊಂದಾಕಿದಾರೆ..." ಎಂದಾಗ ನಾಗಮ್ಮ ಬವಳಿ ಬಂದು ಬಿದ್ದಳು. ಅಲ್ಲಿಯೇ ಇದ್ದ ಅವಳ ಅಣ್ಣ ರುದ್ರಾಚಾರಿ ಕೂಡಲೇ ಬೆಳ್ಳೂರು ಠಾಣೆ ಪೊಲೀಸರಿಗೆ ದೂರು ನೀಡಿದ. ಆಗ ನಾಗಮಂಗಲ ಸರ್ಕಲ್ ಠಾಣೆಗೆ ಸಿ. ಬಸವರಾಜು ಸಿಪಿಐ ಆಗಿದ್ದರು. ಮಂಡ್ಯ ಜಿಲ್ಲೆಯ ಎಸ್ಪಿ ಆಗಿ ಮಹಾಪಾತ್ರ ಇದ್ದರು.

ಈ ಸುದ್ದಿ ಕಾಳ್ಗಿಚ್ಚಿನಂತೆ ಮಂಡ್ಯ, ಬೆಂಗಳೂರುಗಳಲ್ಲಿ ಹಬ್ಬಿತು. ಪ್ರೊ. ಬಸವರಾಜು ನನ್ನನ್ನು ಎಂ.ಜಿ. ರೋಡ್ ಹತ್ತಿರದ ಪಂಚತಾರಾ ಹೋಟೆಲ್ ತಾಜ್‌ಗೆ ಕರೆದೊಯ್ದರು. ತಲೆಮರೆಸಿಕೊಂಡಿದ್ದ ಶಿವರಾಮೇಗೌಡರು ಅಲ್ಲಿ ತಂಗಿದ್ದರು. ತಮಗೂ ಮತ್ತು ಗಂಗಾಧರಮೂರ್ತಿಯವರಿಗೂ ವೈರತ್ವ ಇದ್ದದ್ದು ನಿಜ. ಆದರೆ ಈ ಕೊಲೆಯಲ್ಲಿ ಮಾತ್ರ ತಮ್ಮ ಪಾತ್ರವಿಲ್ಲ ಎಂದು ಹೇಳಿದರು. ಕೇಸ್ ನಡೆಸಲು ನನಗೆ ಬೇಕಾದ ಮಾಹಿತಿಗಳನ್ನು ಅವರಿಂದ ಪಡೆದುಕೊಂಡು ವಾಪಸಾದೆ.

ಶಿವರಾಮೇಗೌಡರ ಪರ ನಾನು ವಕಾಲತ್ತು ಹಾಕುತ್ತಿರುವ ವಿಷಯ ಮಿಂಚಿನಂತೆ ಸಂಚರಿಸಿಬಿಟ್ಟಿತ್ತು. ಮುಖ್ಯವಾಗಿ ನನ್ನನ್ನು ತಡೆಯುವ ಉದ್ದೇಶದಿಂದ ಬೆಂಗಳೂರು ವಕೀಲರ ಸಂಘವು, ಶಿವರಾಮೇಗೌಡರ ಪರ ಯಾವ ಲಾಯರೂ ವಕಾಲತ್ತು ಹಾಕಬಾರದು ಎಂದು ಠರಾವು ಪಾಸು ಮಾಡಿತು. ಇದೇ ರೀತಿ ನಾಗಮಂಗಲ ಮತ್ತು ಮಂಡ್ಯ ವಕೀಲರ ಸಂಘಗಳೂ ಠರಾವು ಪಾಸು ಮಾಡಿದವು.

ನಾನು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡೆ. ಬೆಂಗಳೂರು ವಕೀಲರ ಸಂಘದಲ್ಲಿರುವ ನನ್ನ ಸದಸ್ಯತ್ವವನ್ನು ಕಳೆದುಕೊಂಡು ಶಿವರಾಮೇಗೌಡರ ಪರ ವಕಾಲತ್ತು ಹಾಕಬೇಕಾಗಿತ್ತು. ನಂತರ ಹೈಕೋರ್ಟ್ ಜಸ್ಟಿಸ್ ಆದ ಬಿ. ವಿಶ್ವನಾಥಶೆಟ್ಟಿಯವರನ್ನು ಲಾಯರ್ ಮಾಡಿಕೊಂಡು, ಬೆಂಗಳೂರು ವಕೀಲರ ಸಂಘ ಪಾಸು ಮಾಡಿದ್ದ ಠರಾವಿನ ಸಂವಿಧಾನಾತ್ಮಕತೆಯನ್ನು ಪ್ರಶ್ನಿಸಿದೆ. ಹೈಕೋರ್ಟ್ ವಕೀಲರ ಸಂಘದ ಠರಾವನ್ನು ಸ್ಟೇ ಮಾಡಿತು. ಹೈಕೋರ್ಟ್ ನೀಡಿದ ಸ್ಟೇ ಕಾಪಿಯನ್ನು ಪಡೆದುಕೊಂಡು ಮಂಡ್ಯ ಸೆಷನ್ಸ್ ಕೋರ್ಟ್‌ಗೆ ಹೋಗಲು ಸಿದ್ಧನಾದೆ.

ಮಂಡ್ಯಕ್ಕೆ ಹೊರಡುವ ದಿನ ಬೆಳಗ್ಗೆ ಶೇವ್ ಮಾಡಿಕೊಳ್ಳುತ್ತಿರುವಾಗಲೇ ಲಂಕೇಶ್ ಮೇಷ್ಟ್ರಿಂದ ಫೋನ್ ಬಂದಿತು. ಅರ್ಧ ಶೇವ್ ಮಾಡಿಕೊಂಡಿರುವಂತೆಯೇ ಫೋನ್ ರಿಸೀವ್ ಮಾಡಿಕೊಂಡೆ. ಆ ಕಡೆಯಿಂದ ಲಂಕೇಶ್ ಮೇಷ್ಟ್ರು ಔಪಚಾರಿಕ ಮಾತುಗಳನ್ನಾಡದೆ ನೇರವಾಗಿ ವಿಷಯ ಪ್ರಸ್ತಾಪಿಸಿದರು: "ಹನುಮಂತ್ರಾಯ, ಸತ್ಯ ಎನ್ನುವುದು ತೀರಾ ಸಂಕೀರ್ಣವಾದದ್ದು. ಸಂವಿಧಾನ, ಕಾನೂನು,

ಕೋರ್ಟ್‌ಗಳನ್ನು ಮೀರಿದ್ದು ಮಾನವೀಯತೆ. ಮನುಷ್ಯರೊಂದಿಗೆ ಅದರ ಸಂಬಂಧವಿರುತ್ತದೆ. ಹೀಗಾಗಿ ಮನುಷ್ಯರು ಆಗಾಗ್ಗೆ ಸಂವಿಧಾನ, ಕಾನೂನುಗಳನ್ನು ಬದಲಾಯಿಸುತ್ತಿರುತ್ತಾರೆ. ನೀನು ಶಿವರಾಮೇಗೌಡನ ಪರ ವಕಾಲತ್ತು ಹಾಕುತ್ತಿದ್ದೀಯೆಂದು ನನಗೆ ತಿಳಿಯಿತು. ನಿರ್ಧರಿಸುವ ಹಕ್ಕು ನಿನ್ನದು. ಆದರೆ 'ನಿರ್ಧಾರ ತೆಗೆದುಕೊಳ್ಳುವ ಮುನ್ನ ಒಮ್ಮೆ ಯೋಚಿಸು. ಬಿಡುವಾದಾಗ ಆಫೀಸ್ ಕಡೆ ಬಾ." ಎಂದು ಫೋನ್ ಇಟ್ಟರು.

ನಿತ್ಯ ಕಾನೂನಿನಲ್ಲಿ ಮುಳುಗಿ ಏಳುವ ವಕೀಲರು, ಸಂಘದ ಸಭೆಯಲ್ಲಿ ಪಾಸು ಮಾಡಿದ ಠರಾವಿಗೂ ಮತ್ತು ಲಂಕೇಶರ ಮಾತಿಗೂ ಅದೆಂಥ ವ್ಯತ್ಯಾಸವಿದೆಯಲ್ಲ ಎನಿಸಿತು. ಲಂಕೇಶರು, ನಿರ್ಧಾರದ ಹಕ್ಕು ನಿನ್ನದು ಎಂದಿದ್ದರೆ ವಕೀಲರ ಸಂಘ ಆ ಹಕ್ಕು ನನ್ನದು ಎಂದಿತ್ತು ಸರ್ವಾಧಿಕಾರಿಯಂತೆ! ವ್ಯಕ್ತಿ ಸ್ವಾತಂತ್ರ್ಯಕ್ಕೆ ಲಂಕೇಶ್ ಮೇಷ್ಟ್ರು ಅದೆಷ್ಟು ಮಹತ್ವ ಕೊಡುತ್ತಾರಲ್ಲ ಎಂದು ಕ್ಷಣ ದಿಗ್ಭ್ರಾಂತನಾದೆ. ಮುಖಕ್ಕೆ ಹಚ್ಚಿಕೊಂಡಿದ್ದ ಶೇವಿಂಗ್ ಕ್ರೀಮ್ ಒಣಗಿತ್ತು. ಮತ್ತೆ ಹಸಿ ಮಾಡಿಕೊಂಡು ಶೇವ್ ಮಾಡಿಕೊಂಡೆ.

ಕಂಚನಹಳ್ಳಿ ಗಂಗಾಧರಮೂರ್ತಿಯವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮ ನಡೆಯಿತೆಂದೂ ಅದರಲ್ಲಿ ಲಂಕೇಶ್ ಮೇಷ್ಟ್ರು, ಮಾದೇಗೌಡ, ದೇವೇಗೌಡ, ಆತ್ಮಾನಂದ, ಎಚ್.ಟಿ. ಕೃಷ್ಣಪ್ಪ ಮುಂತಾದವರು ಭಾಗವಹಿಸಿ ಮಾತಾಡಿದರೆಂದೂ ನನಗೆ ಗೊತ್ತಾಯಿತು. ದೇವೇಗೌಡರು ಆ ಸಭೆಯಲ್ಲಿ ಭಾವೋದ್ವೇಗದಿಂದ ಮಾತಾಡಿದ್ದೂ ಅಲ್ಲದೆ ಮೆರವಣಿಗೆಯಲ್ಲಿ ಗಂಗಾಧರಮೂರ್ತಿಯ ಫೋಟೋವನ್ನು ತಲೆ ಮೇಲೆ ಹೊತ್ತುಕೊಂಡರು ಎಂದೂ ತಿಳಿದುಬಂದಿತು. ಮುಂದೊಂದು ದಿನ ದೇವೇಗೌಡರು ಮುಖ್ಯಮಂತ್ರಿಗಳಾದಾಗ ಇದೇ ಶಿವರಾಮೇಗೌಡರನ್ನು ತಮ್ಮ ಬಲಗೈ ಬಂಟರನ್ನಾಗಿಸಿಕೊಂಡರು ಎನ್ನುವ ಸಂಗತಿಯನ್ನು ಇಲ್ಲಿ ವಿವರಿಸುವುದು ಸಾಂದರ್ಭಿಕವಾಗಲಿಕ್ಕಿಲ್ಲ.

ನಾನು ಪ್ರೊ. ಬಸವರಾಜ ಜೊತೆಗೂಡಿ ಮಂಡ್ಯ ಕೋರ್ಟ್‌ಗೆ ಹೋಗುತ್ತಿದ್ದಂತೆಯೇ ವಕೀಲರ ಗುಂಪೊಂದು ಬಂದು ನಮ್ಮನ್ನು ಸುತ್ತುಗಟ್ಟಿತು. ಆಗ ಕೆ.ಸಿ. ಶಂಕರೇಗೌಡರು ಬೆಂಬಲಕ್ಕೆ ನಿಂತು, ಹೆದರಬೇಡಿ ಎಂದು ಅಭಯವಿತ್ತರು. ಹಿಂದೆ ಮಿನಿಸ್ಟರ್ ಆಗಿದ್ದ ಕೆ.ಸಿ. ಶಂಕರೇಗೌಡ ಮತ್ತು ಇವರು ಒಂದೇ ಊರಿನವರು. ಅವರಂತೆಯೇ ಪ್ರಾಮಾಣಿಕರು ಎಂದು ಹೆಸರು ಪಡೆದುಕೊಂಡಿದ್ದರು. ಆದರೆ ಈ ಇಬ್ಬರೂ ಶಂಕರೇಗೌಡರ ಮಧ್ಯ ಮನಸ್ತಾಪವಿತ್ತು. ಈ ಶಂಕರೇಗೌಡರ

ವ್ಯಕ್ತಿತ್ವದ ಬಗ್ಗೆ ಕೇಳಿ ತಿಳಿದಿದ್ದರಿಂದ ಅವರು ನೀಡಿದ ಅಭಯ ನನ್ನಲ್ಲಿ ಆನೆ ಬೆಂಬಲವನ್ನುಂಟು ಮಾಡಿತು.

ಮಂಡ್ಯ ವಕೀಲರ ಸಂಘದ ಅಧ್ಯಕ್ಷರು ತಾವು ಎಂದು ಹೇಳಿಕೊಂಡ ಆಚಾರ್ ಕೃಷ್ಣಮೂರ್ತಿ ನಮಗೆ, "ನೀವು ಕೋರ್ಟ್ ಒಳಕ್ಕೆ ಹೋಗುವ ಮುನ್ನ ನಮ್ಮ ವಕೀಲರ ಸಂಘಕ್ಕೆ ಬಂದು ನಾವು ಹಾಕುವ ಪ್ರಶ್ನೆಗಳಿಗೆ ಸಮಜಾಯಿಷಿ ನೀಡಬೇಕು. ಇಲ್ಲದಿದ್ದರೆ ನಿಮ್ಮನ್ನು ಕೋರ್ಟ್ ಒಳಕ್ಕೆ ಬಿಡುವುದಿಲ್ಲ" ಎಂದರು. ನಾನು ಆಗಲಿ ಎಂದು ಒಪ್ಪಿಕೊಂಡೆ.

ಕೋರ್ಟ್ ಮತ್ತು ವಕೀಲರ ಸಂಘಗಳ ಕಛೇರಿ ಕಟ್ಟಡಗಳ ಮಧ್ಯೆ ಜಿಲ್ಲಾಧಿಕಾರಿಗಳ ಕಚೇರಿಯಿದೆ. ಅದನ್ನು ದಾಟಿಕೊಂಡು ನಾವು ವಕೀಲರ ಸಂಘದ ಕಚೇರಿಗೆ ಹೋಗಬೇಕಾಗಿತ್ತು.

ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಹಾದು ಹೋಗುತ್ತಿರುವಂತೆಯೇ ವಿಚಿತ್ರ ದೃಶ್ಯ ನಮಗೆದುರಾಯಿತು. ಅಂದೇ ಸಾವಿರಾರು ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಜಡಿದಿದ್ದರು. ಹಳೆಯ ಕಾಲದ ಕಟ್ಟಡವಾಗಿದ್ದರಿಂದ ಅದಕ್ಕೆ ಆರಡಿಗೂ ಮಿಕ್ಕಿದ ಕಿಟಕಿಗಳಿದ್ದವು. ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಒಳಗೇ ಕೂಡಿಹಾಕಿದ್ದ ರೈತರು ಕಿಟಕಿಯ ಮೂಲಕ ಯಾರೂ ಹಾರಿ ಹೋಗದಿರಲೆಂದು ಪ್ರತಿ ಕಿಟಕಿಗೂ ಸೊಕ್ಕಿನ ಹೋರಿಗಳನ್ನು ಹಗ್ಗದಿಂದ ಕಟ್ಟಿಹಾಕಿದ್ದರು. ಆ ಹೋರಿಗಳ ಮೊನಚಾದ ಕೊಂಬು, ಬುಸುಗುಟ್ಟಿದಾಗ ಹೊರಬೀಳುವ ಬಿಸಿಯುಸಿರು ಭಯವುಂಟುಮಾಡುತ್ತಿತ್ತು.

ಕೇಶವಮೂರ್ತಿ ಎನ್ನುವ ಲಾಯರ್ ಒಬ್ಬರು, "ಕೊಲೆಗಡುಕ ಶಿವರಾಮೇಗೌಡನಿಗೆ ವಕಾಲತ್ತು ಹಾಕಲು ಬೆಂಗಳೂರಿನಿಂದ ವಕೀಲರು ಬಂದಿದ್ದಾರೆ. ರೈತರ ಬಂಧುವಾಗಿದ್ದ ಲಾಯರ್ ಗಂಗಾಧರಮೂರ್ತಿಯವರನ್ನು ಕೊಂದವರಿಗೆ ಯಾವುದೇ ರಕ್ಷಣೆ ಸಿಗಕೂಡದು. ನಾವೆಲ್ಲ ಸೇರಿ ಈ ಇಬ್ಬರೂ ಲಾಯರ್‌ಗಳನ್ನು ವಾಪಸ್ ಬೆಂಗಳೂರಿಗೆ ಅಟ್ಟಬೇಕು" ಇತ್ಯಾದಿ ಇತ್ಯಾದಿ ಸ್ಪೀಕರ್‌ನಲ್ಲಿ ಭಾಷಣ ಕುಟ್ಟತೊಡಗಿದರು. ಕಾಂಪೌಂಡ್‌ನ ಗಿಡಗಳ ನೆರಳಲ್ಲಿ ಬೀಡಿ ಸೇದುತ್ತ ಚದುರಿ ಕೂತಿದ್ದ ರೈತರೆಲ್ಲ ಒಮ್ಮೆಗೇ ಹುರ್ರೆಂದು ನಮ್ಮತ್ತ ಘೇರಾಯಿಸತೊಡಗಿದರು. ಆಗ ನನಗೆ ನಿಜಕ್ಕೂ ಭಯವಾಯಿತು. ಪಕ್ಕದಲ್ಲಿದ್ದ ವಕೀಲ ಶಂಕರೇಗೌಡರತ್ತ ನೋಡಿದೆ. ಅವರು ನನ್ನ ಬೆನ್ನ ಮೇಲೆ ಕೈ ಹಾಕಿದರು. ಪೊಲೀಸರು ನಮ್ಮ ರಕ್ಷಣೆಗೆ ಧಾವಿಸಿದರು. ಆದರೂ ರೈತರು ನಮ್ಮ ಮೇಲೆ ಕೈ ಮಾಡಲು ತವಕಿಸತೊಡಗಿದರು. ರೈತಸಂಘದ ಪದಾಧಿಕಾರಿಯೂ ಆಗಿದ್ದ ಲಾಯರ್ ಶ್ರೀನಿವಾಸ್

"ಶಾಂತವಾಗಿರಬೇಕು" ಎಂದು ವಿನಂತಿಸಿಕೊಂಡರು. ವಕೀಲರ ಸಂಘದಲ್ಲಿ ಲಾಯರ್‌ಗಳು ವಿರುದ್ಧನಿಯಲ್ಲಿ ನಮಗೆ ಪ್ರಶ್ನೆಗಳ ಸುರಿಮಳೆಗೈದರು. ಕೊಲೆಯಾದ ಗಂಗಾಧರಮೂರ್ತಿ ಒಬ್ಬ ಲಾಯರ್ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಉತ್ತರಿಸಿ ಎಂದು ದಬಾಯಿಸಿದರು.

"ಇದು ತೀರಾ ಸೂಕ್ಷ್ಮ ವಿಷಯ. ಗಂಗಾಧರಮೂರ್ತಿಯವರ ಕೊಲೆಯ ಬಗ್ಗೆ ನನ್ನಲ್ಲೂ ವಿಷಾದವಿದೆ. ಆದರೆ ಅಪರಾಧಿ ಯಾರು ಎಂದು ತೀರ್ಮಾನವಾಗದೆ ಶಿಕ್ಷಿಸುವುದು ಹೇಗೆ? ಆರೋಪಿ ಯಾರೆಂದು ತೀರ್ಮಾನಗೊಳ್ಳುವುದು ನ್ಯಾಯಾಲಯದಲ್ಲಿಯೇ ಹೊರತು ವಕೀಲರ ಸಂಘದಲ್ಲಿ ಅಲ್ಲ" ಎಂದೆ. ನನ್ನ ಈ ಮಾತಿಗೆ ಕೆರಳಿದ ವಕೀಲರು ನಮ್ಮ ಮೇಲೆ ಮುಗಿಬಿದ್ದರು. ಪೊಲೀಸರು ನನ್ನನ್ನು ಷೀಲ್ಡ್ ಮಾಡಿಕೊಂಡು ಹೊರತಂದರು. ಆದರೆ ನನ್ನ ಜ್ಯೂನಿಯರ್ ಪ್ರೊ. ಬಸವರಾಜು ಅವರು ಹಲ್ಲೆಗೊಳಗಾಗಿಬಿಟ್ಟರು. ಅವರ ಕಪ್ಪು ಕೋಟಿನ ಒಂದು ತೋಳನ್ನೇ ಲಾಯರ್‌ಗಳು ಹರಿದುಕೊಂಡಿದ್ದರು. ನಂತರ ಪೊಲೀಸರು ಧಾವಿಸಿ ಹೋಗಿ ಬಸವರಾಜರನ್ನೂ ಬಿಡಿಸಿಕೊಂಡು ಬಂದರು.

89

ಕಾನೂನಿನ ಅಂಗಳದಲ್ಲಿ ನೈತಿಕತೆಯ ರಿಂಗಣ

ಮಂಡ್ಯ ವಕೀಲರ ಸಂಘದಲ್ಲಿ ಆದದ್ದನ್ನು ನಾನು ಹೇಳದೆ ಹೋದರೆ, ಇಡೀ ಪ್ರಕರಣದಲ್ಲಿ ನನಗೆ ದಕ್ಕಿದ ಒಂದು ವಿಶೇಷ ಅನುಭವವನ್ನು ಮರೆಮಾಚಿದಂತಾಗುತ್ತದೆ. ಕಾರಣ, ಅದಕ್ಕೆ ಒದಗಿಬಂದಂತಹ ಸಾಮಾಜಿಕ ಆಯಾಮ. ಆ ದಿನದ ಮುಖಾಮುಖಿಯಲ್ಲಿ ನಾನು ಎದುರಿಸಿದ ಪ್ರಶ್ನೆಗಳನ್ನು ವಕೀಲ ವೃತ್ತಿ ಹುಟ್ಟಿದಂದಿನಿಂದ ಬಂದು–ಹೋಗಿರುವ ಎಲ್ಲಾ ವಕೀಲರೂ ಒಂದಲ್ಲಾ ಒಂದು ಹಂತದಲ್ಲಿ ಎದುರಿಸಿರುವಂತಹುವೆ. ಈ ಗಳಿಗೆಯಲ್ಲೂ ಅದೇ ಪ್ರಶ್ನೆಗಳು ಬೇರೊಂದು ರೂಪದಲ್ಲಿ ಪದೇಪದೇ ರಿಂಗಣಿಸುವುದನ್ನು ಕಾಣುತ್ತಿದ್ದೇವೆ. ಉತ್ತರಗಳು ಮಾತ್ರ ಅವರವರ ಅನುಭವ, ಪರಿಶ್ರಮ, ಹಿತಾಸಕ್ತಿ, ನಿಲುವು–ಒಲವುಗಳನ್ನು ಅವಲಂಬಿಸಿರುತ್ತವೆ. ಇದೇ ಮಾನದಂಡ ಎಲ್ಲ ವೃತ್ತಿಗೂ ಆದಕಾರಣ, ಇದು ನಡೆದದ್ದನ್ನು ನನ್ನ ನೆನಪಿನಿಂದ ಹೆಕ್ಕಿ ತೆಗೆದು ನಿಮಗೆ ಕೊಡುವ ಪ್ರಾಮಾಣಿಕ ಪ್ರಯತ್ನವಿದು.

ವಕೀಲರ ಸಂಘದ ಒಂದು ಬದಿಯಲ್ಲಿ ನನ್ನನ್ನು ಎದ್ದು ಕಾಣುವಂತೆ ಕೂಡಿಸಿದರು. ನನ್ನ ಒಂದು ಬದಿಯಲ್ಲಿ ಹಿರಿಯ ವಕೀಲ ಕೆ.ಸಿ. ಶಂಕರೇಗೌಡರು

ಕುಳಿತರು. ಮತ್ತೊಬ್ಬ ಹಿರಿಯ ವಕೀಲ, ಭಾರತೀಯ ಜನತಾ ಪಕ್ಷದ ಮುಖಂಡರೂ ಆಗಿದ್ದ ರಾಮಲಿಂಗಯ್ಯನವರು ಕುಳಿತರು. ಪ್ರಾರಂಭಿಕ ಮಾತುಗಳನ್ನು ವಕೀಲ ಸೋಮಶೇಖರ್ ಮಾಡಿದರು. "ನಿಮಗೆ ವೃತ್ತಿಯಿಂದ ಸಾಕಷ್ಟು ಹೆಸರು, ಖ್ಯಾತಿ, ಸ್ಥಾನ–ಮಾನ, ಹಣ ದೊರಕಿದೆ; ವೃತ್ತಿಯ ಉತ್ತುಂಗದಲ್ಲಿದ್ದೀರಿ; ಇದೊಂದು ಪ್ರಕರಣದಲ್ಲಿ ಆರೋಪಿ ಶಿವರಾಮೇಗೌಡನ ಪರ ವಕಾಲತ್ತು ವಹಿಸದಿದ್ದಲ್ಲಿ ನಿಮಗಾಗುವ ನಷ್ಟವೇನೂ ಇಲ್ಲ; ಬದಲಿಗೆ ಈ ನಿಲುವು ಎಲ್ಲರ ಮೆಚ್ಚುಗೆ ಗಳಿಸುತ್ತದೆ. ನಮ್ಮೆಲ್ಲರ ನೋವು, ಕಾಳಜಿಯನ್ನು ಗಮನದಲ್ಲಿರಿಸಿಕೊಂಡು ಈಗಲೇ ಇಲ್ಲೇ ಆರೋಪಿ ಶಿವರಾಮೇಗೌಡನ ಪರ ವಕಾಲತ್ತು ವಹಿಸುವುದಿಲ್ಲ ಎಂದು ಘೋಷಿಸಿ" ಎಂದು ಆಗ್ರಹಿಸಿದರು. ಇವರ ಮಾತು ಮುಗಿಯುತ್ತಿದ್ದಂತೆ ನೆರೆದಿದ್ದ ವಕೀಲರೆಲ್ಲರೂ ಚಪ್ಪಾಳೆ ಹೊಡೆದು ತಮ್ಮೆಲ್ಲರ ಅನುಮೋದನೆಯನ್ನು ವ್ಯಕ್ತಪಡಿಸಿದರು. ಹಿರಿಯ ವಕೀಲರಾದ ರಾಮಲಿಂಗಯ್ಯನವರು ಕೊಲೆಯಾದ ವಕೀಲ ಗಂಗಾಧರಮೂರ್ತಿಯ ಗುಣಗಾನ ಮಾಡಿ, ಒಬ್ಬ ಸಹೋದರನನ್ನು ಕಳೆದುಕೊಂಡಿರುವ ಬಗ್ಗೆ ಶೋಕವನ್ನು ವ್ಯಕ್ತಪಡಿಸಿ, ನನ್ನತ್ತ ತಿರುಗಿ, "ಗಂಗಾಧರಮೂರ್ತಿ ನಿಮ್ಮ ಸಹೋದರನೂ ಕೂಡ" ಎನ್ನುವಂತೆ ದಿಟ್ಟಿಸಿದರು. ನಂತರದಲ್ಲಿ ವಕೀಲರೂ, ರೈತ ಸಂಘದ ಉಪಾಧ್ಯಕ್ಷರೂ ಆದ ಶ್ರೀನಿವಾಸ್ ಎದ್ದುನಿಂತು, "ಈ ಸಂಬಂಧದಲ್ಲಿ ವಿವಿಧ ವಕೀಲ ಸಂಘಗಳು ಯಾವೊಬ್ಬ ವಕೀಲನೂ ಆರೋಪಿ ಶಿವರಾಮೇಗೌಡನ ಪರ ವಕಾಲತ್ತು ವಹಿಸಬಾರದೆಂದು ಹೊರಡಿಸಿರುವ ಠರಾವುಗಳನ್ನು ನೆನಪಿಸಿ, ಬೆಂಗಳೂರು ವಕೀಲರ ಸಂಘವೂ ಅಂತಹ ಠರಾವನ್ನು ಹೊರಡಿಸಿರುವುದರಿಂದ ಅದರ ಸದಸ್ಯರಾದ ನೀವು ವಕಾಲತ್ತು ವಹಿಸುವುದರ ಮೂಲಕ ಎಲ್ಲರನ್ನು ಅಪಮಾನಗೊಳಿಸುತ್ತಿದ್ದೀರಿ" ಎಂದರು. ಸಭೆಯಲ್ಲಿ ಚಪ್ಪಾಳೆಯೋ ಚಪ್ಪಾಳೆ. ನಂತರ ಕೆ.ಸಿ. ಶಂಕರೇಗೌಡರು ಎದ್ದು "ಹನುಮಂತರಾಯರು ಮಾತಾಡಬಹುದೇ?" ಎಂದು ಸಭೆಯನ್ನು ಉದ್ದೇಶಿಸಿದರು. ಸಭೆಯ ಸಮ್ಮತಿಯ ಮೇರೆಗೆ ನಾನು ಉತ್ತರಿಸಲು ಎದ್ದಾಗ ಸಮೀಪದಲ್ಲಿದ್ದ ನನ್ನ ಸಹೋದ್ಯೋಗಿ ಪ್ರೊ. ಬಸವರಾಜು ತೀರಾ ಆತಂಕಕ್ಕೊಳಗಾಗಿದ್ದುದನ್ನು ಗಮನಿಸಿದೆ. ನನ್ನನ್ನು ಈ ಬಿಕ್ಕಟ್ಟಿಗೆ ದೂಡಲು ತಾನೇ ಕಾರಣನೆಂಬಂತೆ ವಿಚಲಿತರಾಗಿದ್ದರು. ಸಭೆಯಲ್ಲಿದ್ದ ಬಹುಮಂದಿ ವಕೀಲರ ಮುಖ ಪರಿಚಯ ನನಗಿತ್ತು. ನಾನು ಅವರ ಮಾತಿಗೆ, ಒತ್ತಾಯಕ್ಕೆ ಮನ್ನಣೆ ಕೊಟ್ಟೇಕೊಡುವೆನೆಂಬ ವಿಶ್ವಾಸ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ನನ್ನನ್ನು ವಾಪಸ್ಸು ಸಾಗುಹಾಕಿ ತಮ್ಮ ಉದ್ದೇಶ ಸಾಧನೆಯಲ್ಲಿ ಸಫಲರಾಗುವ ಕಾತರ ಸಭಾಂಗಣದಲ್ಲಿ ತುಳುಕುತ್ತಿತ್ತು. ನನಗೆ ನೇರವಾಗಿ, ಎದುರಾಗಿ ಕುಳಿತಿದ್ದ ಅನೇಕ ಪತ್ರಕರ್ತರು ಅಲ್ಲಿ ಜರುಗುತ್ತಿದ್ದ ಎಲ್ಲವನ್ನೂ

ನಿಗಾವಹಿಸಿ ದಾಖಲಿಸಿಕೊಳ್ಳುತ್ತಿದ್ದರು. ಅವರಿಗೆ ನನ್ನ ಸ್ಪಷ್ಟ ನಿಲುವನ್ನು ಮನವರಿಕೆ ಮಾಡಿಕೊಡುವ ಆತ್ಮವಿಶ್ವಾಸ ನನ್ನ ಒತ್ತಾಸೆಯಾಗಿತ್ತು. ಈ ಮಧ್ಯೆ ನಾನು ಬಾಯಿಬಿಡುವುದರಲ್ಲಿದ್ದಾಗ ನೆರೆದಿದ್ದ ಪತ್ರಕರ್ತರೊಬ್ಬರು ಥಂಗನೆ ಎದ್ದು ನಿಂತು ನನಗೆ ಎಸೆದ ಪ್ರಶ್ನೆ "ನೀವು ಕೇವಲ ವಕೀಲರು ಮಾತ್ರವಲ್ಲ; ಈಗಾಗಲೇ ನೀವೊಬ್ಬ ಅಪಾರ ಸಾಮಾಜಿಕ ಕಾಳಜಿಯುಳ್ಳವರೆಂದು ಗುರುತಿಸಿಕೊಂಡಿದ್ದೀರಿ ಮತ್ತು ನಿಮ್ಮ ಕಳಕಳಿಗೆ ಮನ್ನಣೆಯನ್ನೂ ಪಡೆದಿದ್ದೀರಿ. ಈ ಹಿನ್ನೆಲೆಯಲ್ಲಿ ನಿಮಗೆ ಮೊಕದ್ದಮೆಗಳ ಆಯ್ಕೆ ಮುಖ್ಯವಲ್ಲವೇ? ಸಾಮಾಜಿಕ ಹಿತದೃಷ್ಟಿಯಿಂದ ಕೆಲವು ಮೊಕದ್ದಮೆಗಳನ್ನು ಬಿಟ್ಟುಕೊಡುವುದು ನಿಮ್ಮಂಥವರ ವ್ಯಕ್ತಿತ್ವಕ್ಕೆ ಶೋಭೆ ಎನಿಸುತ್ತದೆ. ನನ್ನ ಪ್ರಶ್ನೆ ನಿಮಗೆ ಮುಜುಗರವೆನಿಸಬಹುದು. ಆದರೆ ಈ ಪ್ರಶ್ನೆ ಇಲ್ಲಿ ತೀರಾ ಪ್ರಸ್ತುತ, ಕ್ಷಮೆಯಿರಲಿ. ಉತ್ತರಿಸಿ?" ಎಂದರು.

ನನ್ನ ಉತ್ತರಕ್ಕಾಗಿ ತವಕಿಸುತ್ತಿದ್ದವರನ್ನು ಎಚ್ಚರವಾಗಿಯೇ ಉದ್ದೇಶಿಸಿ ನಾನು ಹೇಳಿದ್ದು– "ವೃತ್ತಿಯ ಪ್ರಾರಂಭದಲ್ಲಿ ನಮ್ಮೆಲ್ಲರಿಗೆ ಬೋಧನೆಯಾಗಿರುವ ಪ್ರಮಾಣ ವಚನದಂತೆ ಈ ಮೊಕದ್ದಮೆಯನ್ನು ಕೈಗೆತ್ತಿಕೊಂಡಿದ್ದೇನೆ. ಆರೋಪಿಯೊಬ್ಬ ನನ್ನ ಸೇವೆಯನ್ನು ಕೇಳಿ ಬಂದಾಗ ಅವನೊಂದಿಗೆ ವಿಚಾರಣೆಗೆ ತೊಡಗಿ, ಅವನು ಧರ್ಮನಿಷ್ಠನಿದ್ದರೆ, ಪಾತಕಿಯಲ್ಲದಿದ್ದರೆ ಮಾತ್ರ ಒಪ್ಪುವಂತಹ ನಿರ್ಬಂಧವಿಲ್ಲ. ಕಕ್ಷಿದಾರನ ಕೇಸನ್ನು ಕೈಗೆತ್ತಿಕೊಳ್ಳುವಾಗಲೇ ವಿಶದವಾಗಿ ಸತ್ಯಾನ್ವೇಷಣೆಗೆ ವಕೀಲ ಹೊರಟರೆ, ವಕೀಲನಿಂದಲೇ ಸತ್ಯಾಸತ್ಯತೆ ನಿರ್ಧಾರವಾಗುವ, ಅಪರಾಧಿ ಇಲ್ಲವೇ ನಿರಪರಾಧೀ ಎಂದು ನಿರ್ಧಾರವಾಗುವ ಸಂಭವವಿದ್ದು ನ್ಯಾಯಾಧೀಶನ ಹಾಗೂ ನ್ಯಾಯವಿತರಣಾ ಪ್ರಕ್ರಿಯೆಗಳನ್ನು ಗಾಳಿಗೆ ತೂರುವ ಕೆಲಸಕ್ಕೆ ಕೈಹಾಕಿದಂತಾಗುತ್ತದೆ. ಲೋಕಕ್ಕೆ, ಮೇಲ್ನೋಟಕ್ಕೆ ಅಪರಾಧಿಯಂತೆ ಕಂಡರೂ ಆತ ನಿರಪರಾಧಿಯಾಗಿರುವ ಸಾಧ್ಯತೆಯನ್ನು ಯಾರೂ ತಳ್ಳಿಹಾಕುವಂತಿಲ್ಲ. ಅಷ್ಟಾಗಿ, ಆರೋಪಿ ಶಿವರಾಮೇಗೌಡನ ಇಡೀ ಪ್ರಕರಣವನ್ನು ಒಂದು ನೈತಿಕ ಸಮಸ್ಯೆ (moral issue) ಎಂಬಂತೆ ನೋಡುವಾಗಲೇ ನಾವೆಲ್ಲ ಅಕ್ಷಮ್ಯ ಅಪರಾಧದಲ್ಲಿ ಪಾಲ್ಗೊಳ್ಳುತ್ತೇವೆ. ಇದು ಅದಾಗಿರದೆ, ಒಂದು ಕಾನೂನು ಸಂಬಂಧಿ ಪ್ರಶ್ನೆ (legal issue) ಆಗಿರುವುದನ್ನು ಮನಗಂಡಾಗಲೇ ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ಸಂದರ್ಭಕ್ಕೆ ನಾವು ಹತ್ತಿರವಾಗಲು ಸಾಧ್ಯವಾಗುತ್ತದೆ. ಇದನ್ನು ನೀವು ಕೇವಲ ನೈತಿಕ ಸಮಸ್ಯೆಯೆಂದು ಎಲ್ಲಿಯವರೆಗೆ ಪರಿಗಣಿಸುತ್ತೀರೋ ಅಲ್ಲಿಯವರೆಗೆ ನೀವು ನನ್ನನ್ನು 'ಭಾವನಾತ್ಮಕ ಒತ್ತಡಕ್ಕೆ' (emotional blackmailing) ಸಿಲುಕಿಸುವಿರಿ. ನಾನು ಮೊದಲು ವೇದ್ಯ ಮಾಡಬೇಕಾಗಿರುವುದು ಇದೊಂದು ನಾಡಿನ ಕಾನೂನಿನ ಪ್ರಕ್ರಿಯೆಗೆ ಒಳಪಡದೆ ಬೇರೆಯಾಗಿಯೇ ಉಳಿದ ಒಂದು ನೈತಿಕ ಸಮಸ್ಯೆ ಎಂಬ ತಪ್ಪು

ಗ್ರಹಿಕೆಯಿಂದ ಹೊರಬರುವುದು. ನಮ್ಮೆಲ್ಲರ ಹಂಬಲದ ನೈತಿಕತೆಯೂ ಕಾನೂನಿನ ಪ್ರಕ್ರಿಯೆಯ ಮೂಸೆಯಲ್ಲಿಯೇ ಸಿದ್ಧಗೊಳಿಸಬೇಕು. ರಾಜ್ಯಾಂಗವನ್ನು ಆಕರವಾಗಿ ಒಪ್ಪಿಕೊಂಡು ಕಾನೂನು ಸಾರ್ವಭೌಮತ್ವಕ್ಕೆ ಒಡ್ಡಿಕೊಂಡಿರುವ ನಾವು ಕಾನೂನಿನನ್ವಯ ನ್ಯಾಯ ವಿತರಣೆಯ ಪ್ರಕ್ರಿಯೆಯನ್ನು ಈ ಸಂದರ್ಭದಲ್ಲಿ ನಿರ್ಲಕ್ಷಿಸ ಹೊರಟಿರುವುದು ವಿಪರ್ಯಾಸವೇ ನಿಜ. ಈ ವಾಸ್ತವವನ್ನು ಒಪ್ಪದ ಹೊರತು ಒಬ್ಬ ವಕೀಲ ವೃತ್ತಿನಿಷ್ಠನಾಗಿರಲು ಸಾಧ್ಯವಿಲ್ಲ. ನಾವು ಒಪ್ಪಿರುವ ನ್ಯಾಯಾಂಗ ವ್ಯವಸ್ಥೆಯಲ್ಲಿ ನಮಗೆ ಸರಿಯೆನಿಸಿದ ಸ್ತರದಲ್ಲಿ ನೈತಿಕ ನಿಯಮಗಳನ್ನು (moral principles) ತುರುಕಲು ಅವಕಾಶವಿಲ್ಲ. ಕಾನೂನುದತ್ತವಲ್ಲದ ಹಕ್ಕನ್ನು ನಾನು ಚಲಾಯಿಸಲು ಹೊರಟಿಲ್ಲ. ಅವನು ಅಪರಾಧಿಯೆಂದು ಸಿದ್ಧಪಡಿಸುವ ಅಥವಾ ಸ್ಥಾಪಿಸುವ ಹಕ್ಕನ್ನು ಅದೇ ಕಾನೂನು ನಿಮಗೆ ದತ್ತವಾಗಿಸುತ್ತದೆ. ಇದನ್ನು ತಿರುಗು-ಮುರುಗು ಮಾಡುವ ಹಕ್ಕು ನಮಗ್ಯಾರಿಗೂ ಇಲ್ಲ. ಇವೆಲ್ಲವುಗಳಿಂದ ಸಿದ್ಧವಾಗುವ ಒಂದು ಸರಳ ವಿಚಾರ, ನಾವುಗಳು ಕಾನೂನಿಗೆ ಮೀರಿದ ಅಥವಾ ಕಾನೂನಿನಿಂದಾಚೆಯ ವಲಯವೊಂದರಲ್ಲಿ ಕಾನೂನಿಗೆ ಸಂಬಂಧಿಸಿದಂತೆ, ಅಷ್ಟಲ್ಲದೆ ಕಾನೂನೆಂಬುದು ಇಲ್ಲವೇ ಇಲ್ಲ ಎಂಬಂತೆ ಸಂವಾದದಲ್ಲಿ ತೊಡಗಿದ್ದೇವೆ.

ನಾನು ಈ ಮೊಕದ್ದಮೆಯನ್ನು ಕೈಗೆತ್ತಿಕೊಳ್ಳದಿದ್ದರೆ ಮತ್ತೊಬ್ಬನೋ ಮಗದೊಬ್ಬನೋ ಇದನ್ನೇ ಮಾಡುವುದುಂಟು. ಯಾರೂ ಮುಂದೆ ಬರದಿದ್ದರೂ ಸರ್ಕಾರವೇ ನ್ಯಾಯಾಲಯದ ಮುಖಾಂತರ ಆರೋಪಿಗೆ ಒಬ್ಬ (standing council) ನ ಸೇವೆಯನ್ನು ಉಚಿತವಾಗಿ ಒದಗಿಸುತ್ತದೆ. ಆರೋಪಿಯನ್ನು ಶಿಕ್ಷೆಗೊಳಪಡಿಸುವ ವ್ಯವಸ್ಥೆಯ ಗರ್ಭದಲ್ಲೇ ಅವನಿಗೆ ರಕ್ಷಣೆಯನ್ನೂ ಒದಗಿಸುವ ಅಂಶ ಒಳಗೊಂಡಿರುವ ಶ್ರೇಷ್ಠ ನಿಯಮಕ್ಕೆ ನಾವು ವಿಮುಖರಾಗಿದ್ದೇವೆ. ನಾವು ಚರ್ಚಿಸುತ್ತಿರುವ ಕಾನೂನು ವ್ಯವಸ್ಥೆಯಲ್ಲೇ ಆರೋಪಿ ಶಿವರಾಮೇಗೌಡನನ್ನು ಅಪರಾಧಿ ಎಂದು ಇತ್ಯರ್ಥಪಡಿಸುವ ಪ್ರಕ್ರಿಯೆಗಳೂ ಉಂಟು. ಆ ಸವಾಲುಗಳನ್ನು ಸ್ವೀಕರಿಸಿ, ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಸಫಲರಾಗಬೇಕು. ಈ ಅರ್ಥದಲ್ಲಿ ನೀವು ಕಾನೂನಿನ ಅಗ್ನಿಪರೀಕ್ಷೆಗೆ ಒಳಪಡಲೇಬೇಕಾಗುತ್ತದೆ. ಆದರೆ ಈಗಿನ ನಿಮ್ಮ ಹೇಳಿಕೆಗಳು ನೀವು ಅಂತಹ ಹೊಣೆಯಿಂದ ತಪ್ಪಿಸಿಕೊಳ್ಳುವ ಹುನ್ನಾರದಂತಿವೆ.

ವೃತ್ತಿನಿರತನೊಬ್ಬ ತನ್ನ ವೃತ್ತಿಯಲ್ಲಿ ಪರಿಣತಿಯನ್ನು ಸಾಧಿಸಿ ಅವರ ಸೇವೆಯನ್ನು ನಿರ್ವಂಚನೆಯಿಂದ ಸಮಾಜಕ್ಕೆ ಒದಗಿಸಿಕೊಡುವುದೇ ನಿಜವಾದ ಸೇವೆ. ನನ್ನ ಸಾಮಾಜಿಕ ಕಳಕಳಿಯನ್ನು ವೃತ್ತಿಧರ್ಮಕ್ಕೆ ತಳುಕು ಹಾಕುವ ನಿಮ್ಮ

ಪ್ರಯತ್ನ ಅಸಮಂಜಸ ಮತ್ತು ಬಾಲಿಶ. ಅಪರಾಧವನ್ನು ಸಾಬೀತುಪಡಿಸುವ ಹೊಣೆ ಹೊತ್ತಿರುವ ಪ್ರಾಸಿಕ್ಯೂಟರ್ ಕೂಡಾ ಕಾನೂನಿನ ಮತ್ತು ಅದರ ಪ್ರಕ್ರಿಯೆಯಲ್ಲಿ ಸಮರ್ಥ ಪ್ರಾವೀಣ್ಯತೆಯನ್ನು ಪಡೆದುಕೊಂಡೇ ತನ್ನ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ನೀವು ಎತ್ತಿರುವ ಪ್ರಶ್ನೆಗಳು ನನ್ನ ಕರ್ತವ್ಯಕ್ಕೆ ಅಸಂಬದ್ಧವಾದವು. ಅವುಗಳನ್ನು ನೈತಿಕ ನೆಲೆಯಲ್ಲಿ ಉತ್ತರಿಸಲು ನಾನು ವಕೀಲ ವೃತ್ತಿ ಬಿಟ್ಟು ಪಾದ್ರಿ ಅವತಾರ ತಾಳಬೇಕಾದೀತು. ಸಾಮಾಜಿಕ ಕಳಕಳಿಯ ಸ್ವರೂಪ ಎಲ್ಲಾ ವೃತ್ತಿಗಳಿಗೂ ಏಕರೂಪವಾಗಿರುವುದಿಲ್ಲ. ಪ್ರತಿ ವೃತ್ತಿಯೂ ತನ್ನ ವೈಶಿಷ್ಟ್ಯಾನುಸಾರವಾಗಿ ಸಾಮಾಜಿಕ ಕಳಕಳಿಯನ್ನು ವ್ಯಾಖ್ಯಾನಿಸಿಕೊಳ್ಳುತ್ತದೆ. ವಕೀಲ ವೃತ್ತಿಯೂ ಇದಕ್ಕೆ ಹೊರತಾಗಿಲ್ಲ. ಸಾಮಾಜಿಕ ಚಳವಳಿಗಾರರು ಒಂದು ಸಾಮಾಜಿಕ ಸಮಸ್ಯೆಗೆ ಸ್ಪಂದಿಸುವ ರೀತಿಗೂ ಹಾಗೂ ವಕೀಲನೊಬ್ಬ ಅದಕ್ಕೆ ಸ್ಪಂದಿಸುವ ರೀತಿಗೂ ಈ ಕಾರಣದಿಂದಲೇ ಮೂಲಭೂತ ವ್ಯತ್ಯಾಸವಿರುತ್ತದೆ. ನೀವು ನನ್ನ ಮುಂದಿಟ್ಟಿರುವ ಬೇಡಿಕೆ ಒಂದೋ, ನಾನು ನನ್ನ ವೃತ್ತಿಧರ್ಮವನ್ನು ಬಿಡುವುದು, ಇಲ್ಲವೇ ಸಾಮಾಜಿಕ ಕಳಕಳಿಯಿಂದ ವಿಮುಕ್ತನಾಗುವುದು–ಇಂತಹ ಹುಸಿ ದ್ವಂದ್ವಕ್ಕೆ ನನ್ನನ್ನು ದೂಡುತ್ತಿದೆ–ಆದ್ದರಿಂದ ನಿಮ್ಮ ಒತ್ತಾಯ ತೀರಾ ಅನುಚಿತ.

ಇಲ್ಲಿರುವ ಹಿರಿಯ ವಕೀಲರು ಸಾವಿರಾರು ಕೇಸುಗಳನ್ನು ನಡೆಸಿದ್ದೀರಿ. ಸಾಮಾಜಿಕ ಕಳಕಳಿಯುಳ್ಳ ನೀವು, ಅದೇ ಕಾರಣಕ್ಕೆ ಒಂದು ಕೇಸನ್ನಾದರೂ ವಕಾಲತ್ತು ವಹಿಸದೆ ಹಿಂದಕ್ಕೆ ಕಳುಹಿಸಿರುವ ಉದಾಹರಣೆ ಇದೆಯೇ? ನಿಮ್ಮ ತಮ್ಮನೋ ಅಣ್ಣನೋ ಕೊಲೆ ಆರೋಪ ಹೊತ್ತರೆ ಸಾಮಾಜಿಕ ಕಾಳಜಿ ಇಲ್ಲದ ವಕೀಲನನ್ನು ಹುಡುಕುವ ಪೀಕಲಾಟ ನಿಮಗೆ ಎದುರಾಗುವುದಲ್ಲಾ?" ಮುಂತಾಗಿ ನಾನು ಹೇಳುತ್ತಿದ್ದಂತೆ ಅವರು ಕಸಿವಿಸಿಗೊಂಡದ್ದನ್ನು ಗಮನಿಸಿಕೊಂಡ ಕೆ.ಸಿ.ಶಂಕರೇಗೌಡರು ನಿಂತು "ನಿಮಗೆ ಇನ್ನೂ ಬೇಕೋ, ಸಾಕೋ?" ಎಂದು ಪ್ರಶ್ನಿಸಿದರು. ಯಾರೂ ಮಾತಾಡದಿದ್ದರೂ ಉತ್ತರದಿಂದ ತೃಪ್ತರಾಗದಂತೆ ಕೂಗಾಡುತ್ತಾ ಹೊರನಡೆದರು.

90

ಪ್ರತಿಭಟಿಸಿದವರೇ ಪಾದಸೇವೆಗೆ ನಿಂತರು!

ಅಂದು ಮಂಡ್ಯ ವಕೀಲರ ಸಂಘ ಮತ್ತು ರೈತ ಸಂಘದ ಪ್ರಚೋದನೆಯಿಂದ ನಡೆದ ದಾಳಿಯಲ್ಲಿ ನನಗೆ ಸಂಪೂರ್ಣ ರಕ್ಷಣೆ ನೀಡಿದ ಸರ್ಕಲ್ ಇನ್‌ಸ್ಪೆಕ್ಟರ್ ಹನುಮಯ್ಯನವರನ್ನು ನಾನು ಮರೆಯಲು ಸಾಧ್ಯವೇ ಇಲ್ಲ. ಎತ್ತರದ ನಿಲುವಿನ ಗಟ್ಟಿ ವ್ಯಕ್ತಿ ನನ್ನನ್ನು ಕಪ್ಪೆಚಿಪ್ಪಿನಂತೆ ಕವರ್ ಮಾಡಿಕೊಂಡು ಸುರಕ್ಷಿತ ಸ್ಥಳಕ್ಕೆ ತಂದು ನಿಲ್ಲಿಸಿದರು. ನನಗೆ ಬೀಳಬೇಕಾಗಿದ್ದ ಕಲ್ಲೇಟುಗಳು ಅವರಿಗೆ ಬಿದ್ದವು.

ಹನುಮಯ್ಯನವರು ನನಗೆ ಅಪರಿಚಿತರೇನೂ ಅಲ್ಲ. 1980ರಲ್ಲಿ ಇವರ ತಂದೆ ಕೆಂಪಯ್ಯನವರು ಸುಗ್ಗನಹಳ್ಳಿ ಕೊಲೆ ಕೇಸೊಂದರಲ್ಲಿ ಆರೋಪಿಗಳಾಗಿದ್ದರು. ಅವರ ಪರ ನಾನು ಮತ್ತು ಬಿ.ಕೆ. ರಾಮಚಂದ್ರರಾವ್ ವಕಾಲತ್ತು ಹಾಕಿ ಕೇಸು ಗೆದ್ದುಕೊಟ್ಟಿದ್ದೆವು. ರಾಮನಗರ ತಾಲ್ಲೂಕಿನ ಹನುಮಂತೇಗೌಡನದೊಡ್ಡಿಯವರಾದ ಕೆಂಪಯ್ಯನವರು 70 ವರ್ಷ ವಯಸ್ಸಿನ ವಯೋವೃದ್ಧರಾಗಿದ್ದರೂ ಸಹ ಕೊಲೆ ಪ್ರಕರಣದಲ್ಲಿ ಆರೋಪಿಗಳನ್ನಾಗಿಸಿದ್ದರು. ಇವರೊಂದಿಗೆ ಇತರ 29 ಜನರನ್ನೂ ಆರೋಪಮುಕ್ತಗೊಳಿಸಿದ್ದೆವು. ಈ ಕಾರಣಕ್ಕಾಗಿಯೇ ಕೃತಜ್ಞತಾಭಾವ ಸರ್ಕಲ್ ಇನ್‌ಸ್ಪೆಕ್ಟರ್ ಹನುಮಯ್ಯನವರಲ್ಲಿ ಮನೆ ಮಾಡಿತ್ತು. ಆದರೆ ಅವರ ಕೃತಜ್ಞತಾಭಾವ

ನನ್ನ ಮೇಲಿನ ಪ್ರೇಮವಾಗಿ ಮಾರ್ಪಟ್ಟಿದ್ದು ನನಗೆ ಗೊತ್ತಿರಲಿಲ್ಲ. ಮಂಡ್ಯ ಗಲಾಟೆಯಲ್ಲಿ ಅವರು ನನಗೆ ರಕ್ಷಣೆ ನೀಡುವ ಸಂದರ್ಭ ಒದಗಿಬಾರದೇ ಹೋಗಿದ್ದರೆ ಅವರ ಪ್ರೇಮದ ಆಳ ಅರ್ಥವಾಗುತ್ತಿರಲಿಲ್ಲವೇನೋ.

ಕೋರ್ಟ್‌ನಿಂದ ಎರಡೂವರೆ ಫರ್ಲಾಂಗ್ ದೂರದಲ್ಲಿದ್ದ ಐಬಿಗೆ ನಮ್ಮನ್ನು ಕರೆದೊಯ್ದು ಕೋಲ್ಡ್ ಡ್ರಿಂಕ್ಸ್ ತರಿಸಿ ಕುಡಿಸಿದಾಗ ನನ್ನ ಎದೆಬಡಿತ ಸಮಸ್ಥಿತಿಗೆ ಬಂದಿತು. ಎಸ್ಪಿ ಮತ್ತು ಡಿವೈಎಸ್ಪಿಗಳಿಗೆ ಫೋನ್ ಮಾಡಿದರು ಹನುಮಯ್ಯ. ಪೊಲೀಸರು, ನಾವು ಮತ್ತು ಶಂಕರೇಗೌಡರು ಸೇರಿ ಸುಮಾರು ಇಪ್ಪತ್ತು ಜನರಿದ್ದೆವು. ಎಲ್ಲರಿಗೂ ಊಟದ ವ್ಯವಸ್ಥೆಯನ್ನೂ ಮಾಡಿದರು ಹನುಮಯ್ಯ. ಅಷ್ಟರಲ್ಲಿ ಸ್ಪೆಷಲ್ ಬ್ರಾಂಚ್‌ನ ಬೇಹುಗಾರರು ನಾವಿದ್ದಲ್ಲಿಗೆ ಬಂದು, "ಇನ್ನೂ ವಾತಾವರಣ ಪ್ರಕ್ಷುಬ್ಧವಾಗಿಯೇ ಇದೆ. ಬೆಂಗಳೂರಿನ ಕೆಲ ವಕೀಲರು ಇಲ್ಲಿಯ ವಕೀಲರೊಂದಿಗೆ ಫೋನ್‌ನಲ್ಲಿ ಮಾತಾಡುತ್ತಿದ್ದಾರೆ. ಏನಾದರೂ ಮಾಡಿ ಹನುಮಂತರಾಯರ ಮೇಲೆ ದೈಹಿಕ ದಾಳಿ ಮಾಡಿಸಿ ಎಂದೂ ಹೇಳುತ್ತಿದ್ದಾರೆಂದು ತಿಳಿದುಬಂದಿದೆ. ಪುನಃ ಹನುಮಂತರಾಯರು ವಕಾಲತ್ತು ಹಾಕಲು ಕೋರ್ಟ್ ಪ್ರವೇಶಿಸುವ ಯತ್ನ ಮಾಡಿದರೆ ಮಾನವ ಸರಪಳಿ ನಿರ್ಮಿಸಿ ತಡೆಯೊಡ್ಡುವ ಮತ್ತು ಗಲಾಟೆ ಮಾಡಿಸುವ ಯೋಜನೆಗಳು ಸಿದ್ಧವಾಗುತ್ತಿವೆ" ಇತ್ಯಾದಿಯಾಗಿ ಹೇಳಿದರು.

ಊಟ ಮಾಡುತ್ತಿರುವಾಗ ಎಸ್ಪಿಯವರಿಗೆ "ನಾವು ಇಂದು ವಕಾಲತ್ತು ಹಾಕಿಯೇ ವಾಪಸ್ ಹೋಗುವುದು" ಎಂದು ಹೇಳಿದ್ದೆ. ಅವರು ನನ್ನೆಡೆ ನೋಡಿ, "ನೀವು ಇಂದು ವಕಾಲತ್ತು ಹಾಕಿಯೇ ತೀರಬೇಕು ಎಂದರೆ ನಾವು ಲಾಠಿ ಚಾರ್ಜ್ ಮಾಡಿ ಜನರನ್ನು, ವಕೀಲರನ್ನು ಚದುರಿಸಬೇಕಾಗುತ್ತದೆ. ಕೋರ್ಟ್ ಒಳಗಡೆ ನಿಮ್ಮ ಮೇಲೆ ದಾಳಿ ನಡೆದರೆ ನಾವೇನೂ ಮಾಡಲು ಬರುವಂತಿಲ್ಲ. ನ್ಯಾಯಾಧೀಶರ ಆದೇಶವಿಲ್ಲದೆ ಒಳಗೆ ನಾವು ಪ್ರವೇಶಿಸುವಂತಿಲ್ಲ. ನೋಡಿ ಪರಿಸ್ಥಿತಿ ಹೀಗಿದೆ. ತೀರ್ಮಾನ ನಿಮಗೆ ಬಿಟ್ಟದ್ದು" ಎಂದರು.

ಲಾಠಿ ಚಾರ್ಜು, ರಕ್ತಪಾತಗಳೆಲ್ಲ ಆಗುವುದು ನನಗೆ ಬೇಡವೆನಿಸಿತು. ಅಷ್ಟಕ್ಕೂ ಇದೇ ಕೋರ್ಟ್‌ನಲ್ಲಿ ವಕಾಲತ್ತು ಹಾಕಬೇಕೆಂದೇನೂ ಇಲ್ಲ ಎನ್ನುವ ಕಾನೂನಿನ ಸಂಗತಿ ನನಗೆ ಗೊತ್ತಿದ್ದುದರಿಂದ "ನಾನು ಇಂದು ವಕಾಲತ್ತು ಹಾಕೋಲ್ಲ. ಇದನ್ನೆಲ್ಲ ವಿವರಿಸಿ ಕೇಸನ್ನು ಬೇರೆಡೆ ವರ್ಗಾಯಿಸಿ ಕೊಡಬೇಕೆಂದು ಹೈಕೋರ್ಟಿಗೆ ಮನವಿ ಮಾಡಿಕೊಳ್ಳುವೆ" ಎಂದೆ. ಆಗ ಪೊಲೀಸ್ ಅಧಿಕಾರಿಗಳು ನಿರಾತಂಕದಿಂದ ವಾಪಸ್ ಹೊರಟರು.

ವಕಾಲತ್ತು ಹಾಕಲು ಹೋದಾಗ ಮಂಡ್ಯ ವಕೀಲರ ಸಂಘವು ಒಡ್ಡಿದ ತಡೆ ಮತ್ತು ನಡೆಸಿದ ಗಲಾಟೆಗಳನ್ನು ಸಾದ್ಯಂತ ವಿವರಿಸಿ ಹೈಕೋರ್ಟಿಗೆ ಅರ್ಜಿ ಹಾಕಿದೆ. ಜಸ್ಟಿಸ್ ಸಿ. ಶಿವಪ್ಪನವರ ಮುಂದೆ ಅರ್ಜಿ ವಿಚಾರಣೆಗೆ ಬಂದಿತು. ಸರ್ಕಾರ ಮತ್ತು ಮಂಡ್ಯ ವಕೀಲರ ಸಂಘದ ಅಧ್ಯಕ್ಷರನ್ನು ಪಾರ್ಟಿ ಮಾಡಿ ಅರ್ಜಿ ಹಾಕಿದ್ದೆ. ಮಂಡ್ಯ ವಕೀಲರ ಸಂಘದ ಅಧ್ಯಕ್ಷರ ಪರ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿಯವರು ವಕಾಲತ್ತು ಹಾಕಿದರು.

ಜಸ್ಟಿಸ್ ಸಿ. ಶಿವಪ್ಪ ಅವರು ಮಂಡ್ಯ ಬಾರ್ ಅಸೋಸಿಯೇಷನ್‌ನಿಂದ ಬಂದ ನ್ಯಾಯಾಧೀಶರಾಗಿದ್ದರು. ಜಸ್ಟಿಸ್ ಶಿವಪ್ಪ ಅವರು ಸುಬ್ಬಾರೆಡ್ಡಿಯವರನ್ನು ತರಾಟೆಗೆ ತೆಗೆದುಕೊಂಡರು. "ಕಾನೂನು ತಜ್ಞರಾಗಿದ್ದುಕೊಂಡು ಇಂಥ ಅಸಂವಿಧಾನಾತ್ಮಕ ಠರಾವುಗಳನ್ನು ಪಾಸುಮಾಡಲು ನಾಚಿಕೆ ಆಗುವುದಿಲ್ಲವೆ?" ಎಂದು ಛೇಡಿಸಿದರು. ಇದರಿಂದ ಸುಬ್ಬಾರೆಡ್ಡಿಯವರು ಮುಜುಗರಪಟ್ಟುಕೊಂಡಂತೆ ಕಾಣಲಿಲ್ಲ. ಮುಂದುವರಿದು ಜಸ್ಟಿಸ್ ಶಿವಪ್ಪ "ಸಹೋದ್ಯೋಗಿಯು ಕೊಲೆಯಾಗಿದೆಯೆಂದು ಇಂಥ ಠರಾವುಗಳನ್ನು ಪಾಸು ಮಾಡಿದ್ದೀರಲ್ಲಾ, ಕೊಲೆಯಾದ ಆ ಲಾಯರ್ ಕುಟುಂಬಕ್ಕೆ ಎಷ್ಟು ಧನ ಸಂಗ್ರಹಿಸಿಕೊಟ್ಟಿದ್ದೀರಾ ನಿಮ್ಮ ವಕೀಲರ ಸಂಘದಿಂದ?" ಎಂದು ಪ್ರಶ್ನಿಸಿದಾಗ ಸುಬ್ಬಾರೆಡ್ಡಿಯವರು ಬೆವೆತು ಹೋದರು.

ಜಸ್ಟಿಸ್ ಸಿ. ಶಿವಪ್ಪ ಅವರು ನನಗೆ "ನೀವೇನೂ ಕೇಸನ್ನು ವರ್ಗಾಯಿಸಿಕೊಳ್ಳುವುದು ಬೇಡ. ಈಗ ಹೋಗಿ ಮಂಡ್ಯ ಕೋರ್ಟ್‌ನಲ್ಲಿಯೇ ವಕಾಲತ್ತು ಹಾಕಿರಿ. ಯಾವ ಅಡಚಣೆಯೂ ಆಗುವುದಿಲ್ಲ" ಎಂದು ಹೇಳಿದರು.

ಮಂಡ್ಯ ಕೋರ್ಟ್‌ನಲ್ಲಿ ವಕಾಲತ್ತು ಹಾಕಿದೆ. ಯಾರೂ ಗಲಾಟೆ ಮಾಡಲಿಲ್ಲ. ಆಂಟಿಸಿಪೇಟರಿ ಬೇಲ್‌ಗೆ ಅರ್ಜಿ ಹಾಕಿದೆ. ಸಿಓಡಿ ಆಕ್ಷೇಪಣೆ ಹಾಕಲು ತಡಮಾಡಿತು ಮತ್ತು ಶಿವರಾಮೇಗೌಡನನ್ನು ಸಿಓಡಿ ತನ್ನ ವಶಕ್ಕೆ ತೆಗೆದುಕೊಂಡಿತು. ರಾತ್ರೋರಾತ್ರಿ ಮ್ಯಾಜಿಸ್ಟ್ರೇಟ್ ಮುಂದೆ ಆರೋಪಿಯನ್ನು ಹಾಜರುಪಡಿಸಿ ಪೊಲೀಸ್ ಕಸ್ಟಡಿಯನ್ನು ಮುಂದುವರಿಸಲು ಅನುಮತಿ ಪಡೆದುಕೊಂಡಿತು. ಹೀಗೆಯೇ ಮತ್ತೆರಡು ಬಾರಿ ಪೊಲೀಸ್ ಕಸ್ಟಡಿಯ ಕಾಲಾವಕಾಶವನ್ನು ವಿಸ್ತರಿಸಿಕೊಂಡಿತು. ಇಂಥ ಸಂದರ್ಭಗಳಲ್ಲಿ ರಿಮಾಂಡ್ ಅಪ್ಲಿಕೇಷನ್ ಇಲ್ಲದೆ ಪೊಲೀಸ್ ಕಸ್ಟಡಿಯ ಕಾಲಾವಕಾಶವನ್ನು ವಿಸ್ತರಿಸಿಕೊಳ್ಳುವುದಿಲ್ಲ. ಹೀಗಾಗಿ ನಾನು ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿ ಹಾಕಿದೆ.

ಜಸ್ಟಿಸ್‌ಗಳಾದ ಕೆ.ಎ. ಸ್ವಾಮಿ ಮತ್ತು ಎನ್.ಡಿ.ವಿ. ಭಟ್ ಅವರುಗಳ ಬೆಂಚ್ ಮುಂದೆ ಅರ್ಜಿ ವಿಚಾರಣೆಗೆ ಬಂದಿತು. ಸರ್ಕಾರದ ಪರ ಅಡ್ವೋಕೇಟ್ ಜನರಲ್ ಬಿ.ವಿ. ಆಚಾರ್ಯ ಮತ್ತು ಹೈಕೋರ್ಟ್ ಗವರ್ನ್‌ಮೆಂಟ್ ಪ್ಲೀಡರ್ ಮತ್ತು ಸುವಿಖ್ಯಾತ ಗಾಯಕರೂ ಆದ ಶಿವಮೊಗ್ಗ ಸುಬ್ಬಣ್ಣ ವಾದಿಸಿದರು. ರಿಮಾಂಡ್ ಅಪ್ಲಿಕೇಷನ್ ಹಾಕದಿದ್ದರೂ ಸಹ ಕಸ್ಟಡಿ ಕಾನೂನು ಸಮ್ಮತವೇ ಆಗುತ್ತದೆಂದು ಆದೇಶ ನೀಡಲಾಯಿತು. ವಿಶೇಷ ತೀರ್ಪಾಗಿದ್ದರಿಂದ ಇದು ಕರ್ನಾಟಕ ಲಾ ಜರ್ನಲ್‌ನಲ್ಲಿ ಪ್ರಕಟವಾಯಿತು.

ಆ ನಂತರ ಸೆಷನ್ಸ್ ನ್ಯಾಯಾಲಯದಲ್ಲಿ ರೆಗ್ಯುಲರ್ ಬೇಲ್‌ಗೆ ಅರ್ಜಿ ಹಾಕಿದೆ. ತಿರಸ್ಕೃತವಾಯಿತು. ಏತನ್ಮಧ್ಯೆ ಸಿಓಡಿ ಶಿವರಾಮೇಗೌಡರನ್ನು ಅನಾರೋಗ್ಯ ಕಾರಣಕ್ಕಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇರ್ಪಡೆ ಮಾಡಿತು. ಬೇಲ್‌ಗಾಗಿ ಹೈಕೋರ್ಟ್‌ಗೆ ಅರ್ಜಿ ಹಾಕಿದೆ.

ಮಂಡ್ಯದ ಲಾಯರ್ ಬೋರೇಗೌಡರು ಶಿವರಾಮೇಗೌಡರ ಪರ ಓಡಾಡತೊಡಗಿದರು. ಇವರು ಆಗಿನ ಶಾಸಕಿ ದಮಯಂತಿಯವರ ಪತಿ.

ನಾನು ಶಿವರಾಮೇಗೌಡನನ್ನು ಬಿಡಿಸುವುದಕ್ಕಾಗಿ ಫೈಲು, ಲಾ ಬುಕ್‌ಗಳಲ್ಲಿ ಮುಳುಗಿದ್ದೆ. ಕಕ್ಷಿದಾರನನ್ನು ಕಾಣುವ ಅವಶ್ಯಕತೆಯಿಲ್ಲದೆ ವಿನಾಕಾರಣ ಹೋಗುವುದು ನನಗೆ ಹಿಡಿಸುತ್ತಿರಲಿಲ್ಲ. ಆದರೆ ಶಿವರಾಮೇಗೌಡನಿಗೆ ತನ್ನನ್ನು ಭೇಟಿಯಾಗಲು ಬಂದ ಲಾಯರ್‌ಗಳ ಉಪದೇಶ ಶಂಖದ ತೀರ್ಥವಾಗತೊಡಗಿತು.

ಮಂಡ್ಯ ವಕೀಲರ ಸಂಘವು ಪಾಸು ಮಾಡಿದ್ದ ಠರಾವು ಇನ್ನೂ ಜೀವಂತ ಇರುವಾಗಲೇ ಬೋರೇಗೌಡರು ಮತ್ತು ಶಿವರಾಮೇಗೌಡನಿಗೆ ಸಂಬಂಧಿಕರೆಂದು ಹೇಳಿಕೊಳ್ಳುವ ಇತರ ಮೂರು, ನಾಲ್ಕು ಲಾಯರ್‌ಗಳು ಮತ್ತು ಬೆಂಗಳೂರಿನ ಸಿ.ಜಿ. ಸುಂದರ್ ವಕೀಲರು ಅನಗತ್ಯವಾಗಿ ಕೇಸಿನಲ್ಲಿ ಮೂಗು ತೂರಿಸತೊಡಗಿದರು. ಅಂದು ಮಂಡ್ಯದಲ್ಲಿ ಬಸವರಾಜು ಮತ್ತು ನನ್ನ ಮೇಲೆ ದಾಳಿ ನಡೆದಾಗ ಮೌನ ಸಮ್ಮತಿ ನೀಡಿದವರೇ ಇಂದು ಶಿವರಾಮೇಗೌಡನ ಪರ ಓಡಾಡುವುದು ನೋಡಿ ಆಶ್ಚರ್ಯವಾಯಿತು ನನಗೆ.

ಶಿವರಾಮೇಗೌಡನ ಜಾಮೀನಿನ ಅರ್ಜಿ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದ ದಿನ ನಾನು ಎಲ್ಲ ತಯಾರಿ ಮಾಡಿಕೊಂಡು ಹೋದೆ. ಅಷ್ಟರಲ್ಲಿ ನನಗೆ ಯಾವ ಮುನ್ಸೂಚನೆಯನ್ನು ನೀಡದೇ ಸೀನಿಯರ್ ಲಾಯರ್ ಸಂತೋಷ್ ಹೆಗಡೆ (ಈಗಿನ ಸುಪ್ರೀಂ ಕೋರ್ಟ್ ನ್ಯಾಯಾಧೀಶರುಗಳಲ್ಲೊಬ್ಬರು) ಯವರನ್ನು

ಶಿವರಾಮೇಗೌಡನ ಕಡೆ ಮೂಗು ತೂರುತ್ತಿದ್ದ ವಕೀಲರು ಆರ್ಗ್ಯುಮೆಂಟ್‌ಗೆ ನಿಲ್ಲಿಸಿದ್ದರು. ನಾನು ಆರ್ಗ್ಯುಮೆಂಟ್‌ನಲ್ಲಿ ಭಾಗವಹಿಸಲಿಲ್ಲ. ಶಿವರಾಮೇಗೌಡನಿಗೆ ಬೇಲ್ ಸಿಕ್ಕಿತು. ನನ್ನ ಮನಸ್ಸಿಗೆ ಬೇಜಾರಾಗಿ ಕೇಸ್‌ನಿಂದ ನಿವೃತ್ತನಾದೆ.

ನಂತರ ವಿಚಾರಣೆಯ ಕಾಲಕ್ಕೆ ಕೇಸು ಮಂಡ್ಯದಿಂದ ಬೆಂಗಳೂರಿಗೆ ವರ್ಗಾವಣೆಗೊಂಡಿತು. ಶಿವರಾಮೇಗೌಡನ ಮತ್ತು ಬೆಂಗಳೂರು ವಕೀಲರ ಸಂಘದ ಎ.ಎಸ್. ಭಗವಾನ್, ಎ.ಎನ್. ರಾಧಾಕೃಷ್ಣ, ಮಂಡ್ಯದ ಬೋರೇಗೌಡ ಮತ್ತು ಸಿ.ಜಿ. ಸುಂದರ್ ಮುಂತಾದವರು ವಕಾಲತ್ತು ಹಾಕಿದರು. ಆಗ ಬೆಂಗಳೂರು ವಕೀಲರ ಸಂಘ ಅವರುಗಳನ್ನು ವಕಾಲತ್ತು ಹಾಕದಂತೆ ತಡೆಯಲೂ ಇಲ್ಲ ಮತ್ತು ಆ ಮುಂಚೆ ಪಾಸು ಮಾಡಿದ್ದ ಠರಾವನ್ನು ಹಿಂದೆಗೆದುಕೊಳ್ಳಲೂ ಇಲ್ಲ! ವಕೀಲರ ಸಂಘ ನನ್ನನ್ನು ಮಾತ್ರ ಏಕೆ ತಡೆಯಿತು? ಎನ್ನುವ ಪ್ರಶ್ನೆ ಇಂದಿಗೂ ಕಾಡುತ್ತಿದೆ.

91

ಸೊಸೆಯನ್ನು ಬಲಿಕೊಟ್ಟ ಕೆಂಪೇಗೌಡ, ಭಾರ್ಗವಿಗೆ ಸೈಟು ಕೊಟ್ಟ ಗುಂಡೂರಾವ್

ನಗರೀಕರಣಕ್ಕೆ ಒಂದು ರೀತಿಯ ರಾಕ್ಷಸೀ ಗುಣವಿರುತ್ತದೆ. ಹೃದಯ ಮತ್ತು ವಿವೇಚನೆಗಳೆರಡೂ ಅದಕ್ಕಿರುವುದಿಲ್ಲ. ಹಣವನ್ನು ಬಿಟ್ಟರೆ ಮತ್ತೇನೂ ಕಾಣುವುದಿಲ್ಲ ಅದರ ಕಣ್ಣಿಗೆ. ಹಾಲು ಕುಡಿದ ಮೇಲೆ ಕೆಚ್ಚಲನ್ನೇ ಕೊಯ್ಯುವ ಕ್ರೌರ್ಯ ಅದಕ್ಕಿರುತ್ತದೆ. ಇಂದು ಕರ್ನಾಟಕದ ರಾಜಧಾನಿಯಾಗಿ ಮೆರೆಯುತ್ತಿರುವ ಬೆಂಗಳೂರು ಹದಿನೈದನೇ ಶತಮಾನದಲ್ಲಿ ಒಂದು ಕುಗ್ರಾಮ ಮಾತ್ರವಾಗಿತ್ತು. ನಗರದ ಹೊರವಲಯವೆಂದು ಕರೆಸಿಕೊಳ್ಳುತ್ತಿರುವ ಯಲಹಂಕವು ಕೆಂಪೇಗೌಡನ ರಾಜಧಾನಿಯಾಗಿತ್ತು. 1513ರಲ್ಲಿ ಕೆಂಪನಂಜೇಗೌಡರು ನಿಧನ ಹೊಂದಿದ ನಂತರ ಅವರ ಮಗ ಕೆಂಪೇಗೌಡನಿಗೆ ಪಟ್ಟಕಟ್ಟಲಾಯಿತು. ಆಗ ವರ್ಷವೊಂದಕ್ಕೆ ಮೂವತ್ತು ಸಾವಿರ ವರಹಗಳ ಕಂದಾಯದ ನಾಡಾಗಿತ್ತು ಯಲಹಂಕ. ಇದನ್ನು ಕಬಳಿಸಲು ಶೀರ್ರ್ಯ, ಸೋಲೂರು, ಚನ್ನಪಟ್ಟಣ, ಹೊಳವಳನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಮತ್ತು ಕುಣಿಗಲ್‌ಗಳ ಚುಟುಕು ಪಾಳೆಯಗಾರರು ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯನ ನೇತೃತ್ವದಲ್ಲಿ ಸಿದ್ಧರಾಗಿದ್ದರು. ಯಲಹಂಕ

ನಾಡಿನ ಮುಖ್ಯ ಕೇಂದ್ರಗಳಾಗಿದ್ದ ಶಿವಗಂಗೆ ಮತ್ತು ರಾಮಗಿರಿಗಳ ಮೇಲೆ ವೈರಿಗಳು ದಾಳಿ ನಡೆಸುವ ಷಡ್ಯಂತ್ರ ರೂಪಿಸಿದಾಗ ಕೆಂಪೇಗೌಡ ತನ್ನ ಚಾಣಾಕ್ಷತೆ ಮತ್ತು ಶೌರ್ಯಗಳಿಂದ ವೈರಿಗಳನ್ನು ಹಿಮ್ಮೆಟ್ಟಿಸಿದ. ಕೆಂಪೇಗೌಡನ ಶಸ್ತ್ರಾಸ್ತ್ರಗಳ ಕಾರ್ಖಾನೆ ರಾಮಗಿರಿಯಲ್ಲಿದ್ದುದ್ದರಿಂದ ವೈರಿಗಳ ಕಣ್ಣು ಸದಾ ಅದರ ಮೇಲಿರುತ್ತಿತ್ತು. ತನ್ನ ಪಾಳೆಯದ ಸುರಕ್ಷತೆಯ ದೃಷ್ಟಿಯಿಂದ ರಾಜಧಾನಿಯನ್ನು ಸ್ಥಳಾಂತರಿಸುವುದು ಸೂಕ್ತವೆನಿಸಿತು ಕೆಂಪೇಗೌಡನಿಗೆ. ಹೊಸ ರಾಜಧಾನಿಯ ಗುಂಗಿನಲ್ಲಿ ಯಲಹಂಕದಿಂದ ದಕ್ಷಿಣ ದಿಕ್ಕಿಗೆ ಹೊರಟಿದ್ದ ಕೆಂಪೇಗೌಡ ಈಗಿನ ವಯ್ಯಾಲಿಕಾವಲ್ ದಿಬ್ಬದ ಮೇಲೆ ಬಂದು ನಿಂತಾಗ ಇದರ ಸುತ್ತಮುತ್ತಲಿನಲ್ಲಿಯೇ ರಾಜಧಾನಿ ನಿರ್ಮಿಸುವುದು ಸರಿಯೆಂದು ಕಂಡಿತು. ತನ್ನ ಹೊಸ ರಾಜಧಾನಿಗೆ ಕ್ರಿ.ಶ. 1573ರಲ್ಲಿ ಶಂಕುಸ್ಥಾಪನೆ ಮಾಡಿದ. ಆ ಸ್ಥಳದಿಂದ ನಾಲ್ಕೂ ದಿಕ್ಕುಗಳಿಗೆ ನೇಗಿಲಿಗೆ ಹೂಡಿದ ಎತ್ತುಗಳನ್ನು ಬಿಟ್ಟ. ಪ್ರತಿ ನೇಗಿಲೂ ಭಿನ್ನ ದಿಕ್ಕಿನೆಡೆ ಚಲಿಸಿತು. ಈ ನೇಗಿಲು ಗುರುತುಗಳೇ ನಾಲ್ಕು ದಿಕ್ಕುಗಳಲ್ಲಿ ಮುಖ್ಯರಸ್ತೆಯಾದವು. ಎತ್ತುಗಳು ಹೋಗಿ ನಿಂತುಕೊಂಡಲ್ಲಿಗೆ ಸರಹದ್ದು ಆಯಿತು. ಆ ಸರಹದ್ದಿನ ಗುರುತಿಗಾಗಿ ದಿಕ್ಕಿಗೊಂದರಂತೆ ನಾಲ್ಕು ಗೋಪುರಗಳನ್ನು ನಿರ್ಮಿಸಿದನು. ಬೆಂಗಳೂರು ಗ್ರಾಮದ ಹತ್ತಿರದ ಈ ಹೊಸ ಪಟ್ಟಣಕ್ಕೆ ಏನು ಹೆಸರಿಡುವುದು ಎನ್ನುವ ಪ್ರಶ್ನೆ ಮುಂದಾದಾಗ ತಮ್ಮ ತಾಯಿಯ ತವರೂರು ಬೆಂದಕಾಳೂರು ಗ್ರಾಮವೇ ಆಗಿದ್ದರಿಂದ ಅದೇ ಹೆಸರಿರಲಿ ಹೊಸ ರಾಜಧಾನಿಗೆ ಎಂದು ತೀರ್ಮಾನಿಸಿದ.

ಅರಮನೆ ರಾಜಬೀದಿಗಳು ನಿರ್ಮಾಣವಾದವು. ಹಳೆಯ ರಾಜಧಾನಿ ಯಲಹಂಕದಿಂದ ವಲಸೆ ಬಂದವರಿಗೆಲ್ಲ ಯೋಜನಾಬದ್ಧ ನಿವೇಶನಗಳನ್ನು ನೀಡಿದ. ಕರಕುಶಲಿಗರು ಮತ್ತು ವ್ಯಾಪಾರಿಗಳಿಗಾಗಿ ಅವರವರ ವೃತ್ತಿಗೆ ಸಂಬಂಧಿಸಿದಂತೆ ಅರಳೇಪೇಟೆ, ಅಕ್ಕಿಪೇಟೆ, ರಾಗೀಪೇಟೆ, ದೊಡ್ಡಪೇಟೆ, ಚಿಕ್ಕಪೇಟೆ, ಕುಂಬಾರಪೇಟೆ, ಬಳೇಪೇಟೆ ಹೀಗೆ ವಿಂಗಡಿತ ಪೇಟೆಗಳನ್ನು ನಿರ್ಮಿಸಿದ. ಪಕ್ಕದ ತಮಿಳುನಾಡಿನಿಂದ ಹಲವಾರು ಉದ್ಯಮಿಗಳನ್ನು ಆಹ್ವಾನಿಸಿ ಅವರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟ. ಹೀಗಾಗಿ ಆಗಿನ ಕಾಲದಲ್ಲಿಯೇ ಬೆಂಗಳೂರು ಒಂದು ಉದ್ಯಮ ಕೇಂದ್ರವಾಗಲು ಸಾಧ್ಯವಾಯಿತು. ಸುಸಜ್ಜಿತ ರಾಜಧಾನಿಗೆ ಅತ್ಯವಶ್ಯಕವಾದ ಕೋಟೆಯನ್ನೂ ಕಟ್ಟಿಸಿದ.

ರಾಜಧಾನಿಯನ್ನು ಸ್ಥಳಾಂತರಿಸಲು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯ ಪರವಾನಗಿಯ ಅವಶ್ಯಕತೆಯಿತ್ತು. ಕೃಷ್ಣದೇವರಾಯನ ನಿಧನಾನಂತರ 1529 ರಲ್ಲಿ ಅಚ್ಯುತದೇವರಾಯ ಪಟ್ಟಕ್ಕೆ ಬಂದಿದ್ದ. ಅಚ್ಯುತದೇವರಾಯ ಕೆಂಪೇಗೌಡನ

ಜಾಣ್ಮೆ, ಸಾಹಸಗಳ ಬಗ್ಗೆ ವಿಶೇಷ ಅಭಿಮಾನ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದರಿಂದ ಪರವಾನಗಿ ಸಿಗುವುದು ಕಷ್ಟವಾಗಲಿಲ್ಲ. ಅಚ್ಯುತದೇವರಾಯನ ಪಟ್ಟಾಭಿಷೇಕದ ಸಮಾರಂಭಕ್ಕೆ ಕೆಂಪೇಗೌಡನನ್ನು ವಿಶೇಷ ಅತಿಥಿಯ ಸ್ಥಾನ ನೀಡಿ ಆಹ್ವಾನಿಸಲಾಗಿದ್ದುದು ಕೆಲವು ಪಾಳೆಗಾರರಿಗೆ ಕಸಿವಿಸಿಯುಂಟುಮಾಡಿತ್ತು.

ನಗರಕ್ಕೆ ಹೊಸತಾಗಿ ಕಟ್ಟಿದ ಕೋಟೆಗೆ ನಾಲ್ಕೂ ದಿಕ್ಕುಗಳಲ್ಲಿ ಅಗಸಿ ಬಾಗಿಲುಗಳನ್ನು ನಿರ್ಮಿಸುವಾಗ ಒಂದು ಅವಘಡ ಸಂಭವಿಸಿತು. ದಕ್ಷಿಣ ದಿಕ್ಕು ಬಿಟ್ಟು ಉಳಿದ ಎಲ್ಲ ದಿಕ್ಕುಗಳಿಗೂ ಬಾಗಿಲುಗಳು ಸರಿಯಾಗಿ ನಿಂತುಕೊಂಡವು. ದಕ್ಷಿಣದ ದ್ವಾರ ನಿಲ್ಲಿಸಿದಂತೆಲ್ಲ ಉರುಳಿ ಬೀಳತೊಡಗಿತು. ಇದರಿಂದ ಕೆಂಪೇಗೌಡ ಚಿಂತಾಕ್ರಾಂತನಾದ. ಪುರೋಹಿತರನ್ನು ಕೇಳಿದ. ಅದಕ್ಕೆ ಅವರು ಗರ್ಭಿಣಿ ಹೆಣ್ಣಿನ ಬಲಿ ನೀಡಿದರೆ ದ್ವಾರಬಾಗಿಲು ನಿಲ್ಲುತ್ತದೆ ಎಂದು ಪರಿಹಾರ ಸೂಚಿಸಿದರು. ಇದನ್ನು ಕೇಳಿದ ಕೆಂಪೇಗೌಡ ತೀವ್ರ ಆಘಾತಕ್ಕೊಳಗಾದ.

ಹೊಸ ರಾಜಧಾನಿ ಬೆಂಗಳೂರನ್ನು ನಿರ್ಮಿಸುವಾಗ, ಸಾತ್ವಿಕ ದೈವಭಕ್ತಿಯಲ್ಲಿ ನಂಬಿಕೆಯಿರಿಸಿಕೊಂಡಿದ್ದ ಕೆಂಪೇಗೌಡ ಬೃಹತ್ ಬಸವನ (ನಂದಿ) ಗುಡಿ, ಗವಿ ಗಂಗಾಧರೇಶ್ವರ ದೇವಾಲಯ, ಬಸವನಗುಡಿಯ ವಿನಾಯಕ ದೇವಸ್ಥಾನ, ಮಾಗಡಿ ತಿರುಮಲೆಯಲ್ಲಿ ಹಲವಾರು ದೇವಸ್ಥಾನ ಹೀಗೆ ಸಾತ್ವಿಕ ಸಂಪ್ರದಾಯದ ಮಂದಿರಗಳನ್ನೇ ಕಟ್ಟಿಸಿದ. ನರಬಲಿಯ ವಿಷಯ ಕೆಂಪೇಗೌಡನ ಎದೆಯೊಡೆಸಿತು.

ತಲೆಮೇಲೆ ಕೈಹೊತ್ತು ಕೂತಿದ್ದ ಮಾವನನ್ನು ನೋಡಲಾಗಲಿಲ್ಲ ಸೊಸೆ ಲಕ್ಷ್ಮಮ್ಮಳಿಗೆ.

ಪ್ರತಿದಿನ ಸಾಯಂಕಾಲದವರೆಗೆ ಕೆಲಸ ಮಾಡಿ ಬಾಗಿಲು ನಿಲ್ಲಿಸಿ ಹೋಗುವ ತಮ್ಮ ಪ್ರಯತ್ನವನ್ನು ಕೆಲಸಗಾರರು ಮುಂದುವರಿಸಿದ್ದರು. ಆದರೆ ಬೆಳಗಾಗುವಷ್ಟರಲ್ಲಿ ಬಾಗಿಲು ಮಾತ್ರ ನೆಲಕ್ಕುರುಳಿರುತ್ತಿತ್ತು. ಒಂದು ರಾತ್ರಿ ಕೆಂಪೇಗೌಡನ ಗರ್ಭಿಣಿ ಸೊಸೆ ದಕ್ಷಿಣ ದ್ವಾರದ ಬಳಿಗೆ ಯಾರಿಗೂ ತಿಳಿಯದಂತೆ ಹೋಗಿ ತನ್ನ ರುಂಡವನ್ನು ತನ್ನ ಕೈಖಡ್ಗದಿಂದಲೇ ಕತ್ತರಿಸಿಕೊಂಡು ಆಹುತಿಯಾದಳು.

ಲಕ್ಷ್ಮಮ್ಮನ ಆಹುತಿಯ ಬಗ್ಗೆ ಕೇವಲ ಹೇಳಿಕೆ ಕೇಳಿಕೆಗಳ ಐತಿಹ್ಯ ಮಾತ್ರವಿರದೆ ಆಕೆಯ ಸಮಾಧಿಯೂ ಇದೆ. ಆಕೆಯ ಬಲಿಯ ಸ್ಮರಣಾರ್ಥ ಕೋರಮಂಗಲದಲ್ಲಿ ಕೆಂಪೇಗೌಡ ಕಟ್ಟಿಸಿದ ಲಕ್ಷ್ಮಮ್ಮನ ಗುಡಿಯೂ ಇದೆ. ಬಾಗಿಲು ನಿಂತುಕೊಂಡದ್ದು ಆಕೆಯ ಆಹುತಿಯಿಂದಾಗಿಯೇ ಎನ್ನುವುದು ಮೌಢ್ಯತೆಯ ಸಂಗತಿಯಾಗಿದ್ದರೂ ಆಹುತಿಯಾಗಿದ್ದುದಕ್ಕೆ ಮಾತ್ರ ಇತಿಹಾಸದ ದಾಖಲೆ ಮತ್ತು ಸ್ಮಾರಕಗಳಿರುವುದು ನಿಜ.

ಉದ್ಯಾನನಗರಿಯೆಂದು ದೇಶವಿದೇಶಿಯರ ಕಣ್ಮನ ಸೆಳೆಯುವ ಈ ಸುಂದರ ನಗರದ ಅಡಿಪಾಯದಲ್ಲಿ ಆ ಮಹಾತಾಯಿ ಲಕ್ಷ್ಮಮ್ಮಳ ರಕ್ತ ಹೆಪ್ಪುಗಟ್ಟಿ ನಿಂತಿದೆ. ಆ ಪಾಪದ ಫಲವೇನೋ ಎನ್ನುವಂತೆ ಇಂದು ಬೆಂಗಳೂರು ಬೆಂಗಾಡಾಗಿ ಪರಿವರ್ತನೆಗೊಂಡಿದೆ.

ನಗರಕ್ಕೆ ನೀರೊದಗಿಸುತ್ತಿದ್ದ ಕೆರೆಗಳಲ್ಲಿ ಕಾಂಕ್ರೀಟ್ ಕಾಡು ತಲೆಯೆತ್ತಿದೆ. ಪರಿಣಾಮವಾಗಿ ಸಾವಿರಾರು ಅಡಿ ಬೋರು ಕೊರೆದರೂ ಹನಿ ನೀರೂ ಸಿಗದಂತಾಗಿದೆ. ಧರ್ಮಾಂಬುಧಿ ಕೆರೆ ಇಂದು ಸಿಟಿ ಬಸ್‌ಸ್ಟಾಂಡ್ ಆಗಿ ನಿಂತಂತೆ ಇನ್ನೂ ಹಲವು ಕೆರೆಗಳು ಮತ್ತೇನೇನೋ ಆಗಿ ಮಾರ್ಪಟ್ಟುಹೋಗಿವೆ.

ಬೆಂಗಳೂರಿನ ನೈಸರ್ಗಿಕತೆ, ಸ್ಮಾರಕ ಮತ್ತು ಐತಿಹ್ಯಗಳ ಬಗ್ಗೆ ಕಳಕಳಿಯಿಟ್ಟುಕೊಂಡಿರುವವರು ತೀರಾ ಕಮ್ಮಿ. BEL, HMT, HAL, NGEF, MICO, ITI, ಫ್ಯಾಕ್ಟರಿಗಳ ಕನ್ನಡ ಸಂಘಗಳು ಹಾಗೆಯೇ ಕೆಂಪೇಗೌಡ ಸಂಘ ಮತ್ತಿತರೆ ಕನ್ನಡಪರ ಸಂಸ್ಥೆಗಳು ನಗರದ ಬಗ್ಗೆ ತಮ್ಮ ಕೈಲಾದ ಕಾಳಜಿ ವ್ಯಕ್ತಪಡಿಸಿದ್ದನ್ನು ಇಲ್ಲಿ ಸ್ಮರಿಸಬೇಕು.

ಶ್ರೀ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಕೆಂಪೇಗೌಡರು ನಿರ್ಮಿಸಿದ ಸ್ಮಾರಕವೊಂದರ ರಕ್ಷಣೆಯ ಬಗ್ಗೆ ನಡೆದ ಹೋರಾಟವನ್ನು ಇಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ.

ಒಂದು ಸಂಜೆ ನನ್ನ ಆಫೀಸ್‌ಗೆ ಈ ಮೇಲೆ ಹೇಳಿದ ಕನ್ನಡ ಸಂಘಗಳ ಪದಾಧಿಕಾರಿಗಳು ಬಂದು ನನ್ನನ್ನು ಕಂಡರು.

ಮುಖ್ಯಮಂತ್ರಿಗಳು ನಾಟ್ಯ ತಾರೆ ಮಂಜುಭಾರ್ಗವಿಗೆ 10 x 100 ಅಳತೆಯ ನಿವೇಶನವೊಂದನ್ನು ಮೇಖ್ರಿ ಸರ್ಕಲ್ ಸಮೀಪದಲ್ಲಿರುವ ಸರಹದ್ದು ಗೋಪುರದ ವ್ಯಾಪ್ತಿಗೊಳಪಡುವ ಪ್ರದೇಶದಲ್ಲಿ ನೀಡಿದ್ದಾರೆ. ಈಗಾಗಲೇ ಆಕೆ ಅಲ್ಲಿ ಪಾಯ ಹಾಕಿ ಪಿಲ್ಲರ್‌ಗಳನ್ನು ಏರಿಸುವ ಸಿದ್ಧತೆ ನಡೆಸಿದ್ದಾರೆ. ಗೋಪುರದ ಸುತ್ತ ಐವತ್ತು ಎಕರೆ ಜಾಗವನ್ನು ಸ್ಮಾರಕ ಪ್ರದೇಶವೆಂದು ಪರಿಗಣಿಸಬೇಕೆಂದಿದೆ. ಅದನ್ನು ಉಲ್ಲಂಘಿಸಿ ಈ ಅಕೃತ್ಯ ನಡೆಯುತ್ತಿದೆ ಎಂದರು ಒಂದೇ ಉಸಿರಿಗೆ. ಕೈಲಿದ್ದ ಫೈಲನ್ನು ಮುಚ್ಚಿಟ್ಟು ಅವರೊಟ್ಟಿಗೆ ನಡೆದೆ.

ಮುಖ್ಯಮಂತ್ರಿಗಳಿಗೆ ಕೂಡಲೇ ಆ ನಿವೇಶನ ಮಂಜೂರಾತಿಯನ್ನು ರದ್ದುಗೊಳಿಸಬೇಕೆಂದು ಮನವಿಪತ್ರ ನೀಡಿದೆವು. ಕಾರ್ಪೋರೇಷನ್ ಮತ್ತು ಬಿಡಿಎಗಳಲ್ಲಿ ಹೋಗಿ ಆಕ್ಷೇಪಣೆ ಸಲ್ಲಿಸಿದೆವು. ಇದೆಲ್ಲ ಪತ್ರಿಕೆಗಳಲ್ಲಿ ಸುದ್ದಿಯಾಯಿತು.

ಆದರೂ ವಿವಾದಿತ ನಿವೇಶನದಲ್ಲಿ ಕಟ್ಟಡ ಕೆಲಸ ಸ್ಥಗಿತಗೊಳ್ಳಲಿಲ್ಲ. ಕಾರ್ಪೋರೇಷನ್ ಮತ್ತು ಬಿಡಿಎದವರು ನಮಗೇನೂ ಕೇಳಬೇಡಿ ಮುಖ್ಯಮಂತ್ರಿಗಳನ್ನು ಹೋಗಿ ಕೇಳಿ ಎಂದರು. ಕನ್ನಡದ ಕಟ್ಟಾ ಹೋರಾಟಗಾರರಲ್ಲೊಬ್ಬರಾಗಿದ್ದ ಜಿಲ್ಲಾ ಟ್ರೆಜರಿ ಅಧಿಕಾರಿಯೂ ಆಗಿದ್ದ ರೆಹಮಾನ್‌ಖಾನ್, ರಾಮಣ್ಣ ಕೋಡಿಹೊಸಹಳ್ಳಿ ಮತ್ತು ಆರ್. ತಿಮ್ಮೇಗೌಡ ಬಂದು ನನ್ನೊಂದಿಗೆ ಸೇರಿಕೊಂಡರು.

ಮನವಿ ಪತ್ರಗಳಿಂದ ಇದು ಬಗೆಹರಿಯುವಂಥದ್ದಲ್ಲ ಎಂದು ನಾವೆಲ್ಲ ನಿರ್ಧರಿಸಿದೆವು. ಒಂದು ದಿನ ನಾಲ್ಕು ಲಾರಿಗಳಲ್ಲಿ ಕನ್ನಡಪರ ಹೋರಾಟಗಾರರೊಂದಿಗೆ ಸ್ಥಳಕ್ಕೆ ಗುದ್ದಲಿ, ಸನಿಕೆಗಳ ಸಮೇತ ಹೋದೆವು. ಅಗೆದಿದ್ದ ಪಾಯವನ್ನು ಮುಚ್ಚಿದೆವು. ಯಾರೂ ಅಡ್ಡಬರಲಿಲ್ಲ! ಆ ನಂತರವೂ ಕಟ್ಟಡ ನಿರ್ಮಾಣದ ಪುನರ್ ಯತ್ನವೂ ನಡೆಯಲಿಲ್ಲ. ಮಂಜುಭಾರ್ಗವಿಗೆ ನೀಡಲಾಗಿದ್ದ ನಿವೇಶನ ಮಂಜೂರಾತಿ ರದ್ದಾಯಿತೆಂದು ಕನ್ನಡ ಚಳವಳಿಗಾರರು ಬಂದು ಹೇಳಿದರು.

ರಮಣಮಹರ್ಷಿ ಆಶ್ರಮದವರು ಅದೇ ಗೋಪುರದ ಜಮೀನನ್ನು ಕಬ್ಜಾ ಮಾಡಿಕೊಂಡು ಒಂದು ಕಟ್ಟಡ ಕಟ್ಟಿಕೊಂಡುಬಿಟ್ಟಿದ್ದರು. ಆ ಕಟ್ಟಡದ ಹಿಂಭಾಗದಲ್ಲಿಯೇ ಹೊಸತಾಗಿ ಬೃಹತ್ ನಾಟ್ಯಶಾಲೆಯೊಂದನ್ನು ನಿರ್ಮಿಸುವುದಕ್ಕಾಗಿ ನಲವತ್ತು ಪಿಲ್ಲರ್‌ಗಳನ್ನು ಹಾಕಿಬಿಟ್ಟರು. ಈ ಬಗ್ಗೆ ಸಹ ನಾವು ತಕರಾರು ಹೂಡಿದೆವು. ಆಶ್ರಮದವರು ಕಾನೂನುರೀತ್ಯಾ ಡಾಕ್ಯುಮೆಂಟ್‌ಗಳನ್ನೆಲ್ಲ ಮಾಡಿಕೊಂಡಿದ್ದರು. ಮೂರು ದಿವಸಗಳವರೆಗೆ ಮಾಜಿ ಮೇಯರ್ ಜೆ. ಲಿಂಗಯ್ಯನವರ ನೇತೃತ್ವದಲ್ಲಿ ಆಶ್ರಮದ ಮುಂದೆ ಷಾಮಿಯಾನ ಹಾಕಿ ಪ್ರತಿಭಟನೆ ನಡೆಸಿದೆವು. ಕೊನೆಯ ದಿನ ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಹ.ಕ. ರಾಜೇಗೌಡರನ್ನು ಕರೆಸಿ ಭಾಷಣ ಮಾಡಿಸಿದೆವು. ಐದು ಸಾವಿರ ಜನ ಸೇರಿದರು. ಕಟ್ಟಡ ಕೆಲಸವನ್ನು ಮುಂದುವರಿಸಲು ನಾವು ಬಿಡುವುದಿಲ್ಲವೆಂದು ಪಟ್ಟುಹಿಡಿದಾಗ ಆಶ್ರಮದವರು ರಾಜೀಸಂಧಾನಕ್ಕೆ ಬಂದರು. ಕೇವಲ 15 x 15 ಅಳತೆಯ ಜಾಗೆಯಲ್ಲಿ ಮಾತ್ರ ಕಟ್ಟಡ ಕಟ್ಟಿಕೊಳ್ಳಬೇಕೆಂದೂ ಅದರ ಎತ್ತರ 15 ಅಡಿಗಳಿಗಿಂತ ಹೆಚ್ಚಾಗಿರಬಾರದೆಂದೂ ಷರತ್ತು ಹಾಕಿದೆವು, ಒಪ್ಪಿಕೊಂಡರು.

ಇದರ ಬೆನ್ನಿಗೇ ಬಿಡಬ್ಲ್ಯೂಎಸ್‌ಎಸ್‌ಬಿ (ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ) ನವರು ಗೋಪುರಕ್ಕೆ ಒಂದು ದಿಕ್ಕಿನಿಂದ ಅಡ್ಡವಾಗುವಂತೆ ದೊಡ್ಡ ಓವರ್ ಹೆಡ್ ವಾಟರ್‌ಟ್ಯಾಂಕ್ ಅನ್ನು ನಿರ್ಮಿಸತೊಡಗಿದರು.

ಬಿಡಬ್ಲ್ಯೂಎಸ್‌ಎಸ್‌ಬಿ ಚೇರ್ಮನ್ ಆಗಿದ್ದ ಕೆಂಪಣ್ಣನವರನ್ನು ನಾವೆಲ್ಲ ಅಂದರೆ ನಾನು, ರಾಮಣ್ಣ ಕೋಡಿಹೊಸಹಳ್ಳಿ, ಡಾ.ರಾಜ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ಕನ್ನಡ ಹೋರಾಟಗಾರ ರೆಹಮಾನ್‌ಖಾನ್, ರಾಮೇಗೌಡ ಹೋಗಿ .ಕಂಡು ಹೋರಾಟ ನಡೆಸುವುದಾಗಿ ತಿಳಿಸಿದೆವು. ಅದರಂತೆ ಹೋರಾಟಕ್ಕೆ ಧುಮುಕಿದೆವು. ಇದಕ್ಕೆ ಮಣಿದ ಕೆಂಪಣ್ಣನವರು ಕೆಲಸ ಸ್ಥಗಿತಗೊಳಿಸಲು ಒಪ್ಪಿಕೊಂಡರು ಮತ್ತು ಕಟ್ಟಡ ಹಂತದಲ್ಲಿರುವ ಕಾಂಕ್ರೀಟ್ ಪಿಲ್ಲರ್‌ಗಳನ್ನು ಕನ್ನಡ ಚಳುವಳಿಗಾರರ ಮೂಲಕವೇ ನೆಲಸಮ ಮಾಡಿಸಿರಿ ಎಂದೂ ಹೇಳಿದರು. ಆದರೆ ನಾವು ನಮ್ಮ ಹೋರಾಟದ ಐತಿಹಾಸಿಕ ಕುರುಹಾಗಿ ಉಳಿಯಲಿ ಆ ಫಿಲ್ಲರ್‌ಗಳು ಎಂದು ಹಾಗೆಯೇ ಬಿಟ್ಟೆವು. ಆ ಸ್ಟ್ರಕ್ಚರ್ ಇಂದಿಗೂ ಹಾಗೇ ಭ್ರೂಣಾವಸ್ಥೆಯಲ್ಲಿಯೇ ನಿಂತಿರುವುದನ್ನು ಕಾಣಬಹುದು. ಆ ಹೋರಾಟದಿಂದೀಚೆಗೆ ಸ್ಮಾರಕದ ಜಾಗದ ತಂಟೆಗೆ ಯಾರೂ ಹೋಗಿಲ್ಲ.

ಇದಾದ ಮೇಲೆ ಕೋರಮಂಗಲದಲ್ಲಿರುವ ಲಕ್ಷ್ಮಮ್ಮನ ಸಮಾಧಿಯ ಸುತ್ತಲಿನ ಜಾಗೆಯನ್ನು ಕಬಳಿಸಿಕೊಂಡು ಕಟ್ಟಡ ಕಟ್ಟಿಕೊಂಡಿದ್ದಾರೆನ್ನುವ ದೂರನ್ನು ಕನ್ನಡ ಸಂಘಟನೆಗಳವರು ಹೊತ್ತುತಂದರು. ಇದು ನಡೆದದ್ದು 1995ರಲ್ಲಿ. ಆಗ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು.

ಮುಖ್ಯಮಂತ್ರಿಗಳ ನಿವಾಸದಲ್ಲಿದ್ದಾಗ ದೇವೇಗೌಡರನ್ನು ಕಂಡು ಮನವಿ ನೀಡಿದೆವು. ಒಂದೆರಡು ದಿವಸಗಳಲ್ಲಿ ಎಲ್ಲ ಸರಿ ಮಾಡುವುದಾಗಿ ಆಶ್ವಾಸನೆ ನೀಡಿ ನಮ್ಮನ್ನು ಕಳಿಸಿದರು. ಆದರೆ ಅಂದೇ ಅವರು ಆ ಸ್ಥಳಕ್ಕೆ ಭೇಟಿ ನೀಡಿ ಕಾರ್ಪೋರೇಷನ್, ಬಿಡಿಎ ಅಧಿಕಾರಿಗಳನ್ನೆಲ್ಲ ಕರೆಸಿಕೊಂಡು ಕೂಡಲೇ ಆಕ್ರಮಿತ ಕಟ್ಟಡಗಳನ್ನೆಲ್ಲ ನೆಲಸಮಗೊಳಿಸುವಂತೆ ಆದೇಶಿಸಿದರು. ಎರಡೇ ದಿವಸಗಳಲ್ಲಿ ಆ ಸಮಾಧಿ ಜಾಗದಲ್ಲಿ ತಲೆಯೆತ್ತಿದ್ದ ಕಟ್ಟಡಗಳು ನೆಲಕ್ಕುರುಳಿದವು. ಮುಂದೆ ಹೀಗೆ ಆಗದಂತೆ ಕಟ್ಟುನಿಟ್ಟಿನ ಆದೇಶವನ್ನು ಸರ್ಕಾರದಿಂದ ಹೊರಡಿಸಿ ಸಂಬಂಧಿಸಿದ ಇಲಾಖೆಗಳಿಗೆ ಎಚ್ಚರಿಕೆ ನೀಡಿದರು.

ಕನ್ನಡಪರ ಹೋರಾಟಗಾರರೊಂದಿಗೆ ನಡೆಸಿದ ಇಂಥ ಹೋರಾಟಗಳು ಅವಿಸ್ಮರಣೀಯ. ಇಂಥ ಹೋರಾಟದ ಶಾಕ್‌ಗಳಿಲ್ಲದೇ ಹೋಗಿದ್ದರೆ ಕೆಂಪೇಗೌಡರು ನಿರ್ಮಿಸಿದ ಸರಹದ್ದು ಗೋಪುರ, ಲಕ್ಷ್ಮಮ್ಮನ ಸಮಾಧಿ, ಗುಡಿಗಳನ್ನು ಈ ನಗರರಾಕ್ಷಸ ನುಂಗಿ ನೀರು ಕುಡಿದು ಬಿಟ್ಟಿರುತ್ತಿದ್ದನೇನೊ, ಕೆಂಪಾಂಬುಧಿ ಮತ್ತಿತರೆ ಕೆರೆಗಳನ್ನು ನುಂಗಿದಂತೆ.

92

"ಶೆಲ್ಲಿ, ನನಗಿಲ್ಲದ ನೀನು ಇರಬಾರದು"

1990ರ ಕಾಲಾವಧಿಯಲ್ಲಿ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಉತ್ತರ ಭಾರತದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ವಿಪುಲವಾಗಿತ್ತು. ಅದರಲ್ಲೂ ಬಿಹಾರ್ ಮತ್ತು ಪಂಜಾಬ್ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿತ್ತು. ನಿರೀಕ್ಷಿತ ಮಟ್ಟದ ಪ್ರತಿಭೆ ಇಲ್ಲದ ವಿದ್ಯಾರ್ಥಿಗಳು ಡೊನೇಷನ್ ಕೊಟ್ಟು ಮೆಡಿಕಲ್, ಇಂಜಿನಿಯರಿಂಗ್ ಕೋರ್ಸ್‌ಗಳಿಗಾಗಿ ಬರುತ್ತಿದ್ದುದು ಸಾಮಾನ್ಯವಾಗಿತ್ತು. ಆಗ ಕರ್ನಾಟಕದಲ್ಲಿ ಸಿಇಟಿ ಪರೀಕ್ಷಾ ಪದ್ಧತಿ ಆರಂಭಗೊಂಡಿರಲಿಲ್ಲ. ಸೀಟುಗಳನ್ನು ಮನಸೇಚ್ಛೆಯಾಗಿ ಮಾರಿಕೊಳ್ಳುತ್ತಿತ್ತು ಮ್ಯಾನೇಜ್‌ಮೆಂಟ್. ಕರ್ನಾಟಕದಲ್ಲಿ ಶಿಕ್ಷಣದ ಬಂಡವಾಳಶಾಹೀಕರಣ ಉಚ್ಛ್ರಾಯ ಸ್ಥಿತಿ ತಲುಪಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಶಿಕ್ಷಣ ಬಂಡವಾಳಶಾಹೀಕರಣದಲ್ಲಿ ಆಳವಾಗಿ ಬೇರುಬಿಟ್ಟಂತೆ ತೋರುತ್ತಿತ್ತು. ಉದ್ಯಮಗಳು ಆರಂಭಗೊಂಡರೆ ಅದರೊಂದಿಗೇ ಪರಿಸರ ಮಾಲಿನ್ಯವೂ ಉಂಟಾಗುವಂತೆ ಈ ಶಿಕ್ಷಣ ಬಂಡವಾಳಶಾಹೀಕರಣದಿಂದಲೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಾಲಿನ್ಯ ಉಂಟಾಗಿತ್ತು. ಕರ್ನಾಟಕದ ಪ್ರತಿಭಾವಂತ ಬಡವಿದ್ಯಾರ್ಥಿಗಳು ಬಾಯಿತೆರೆದು

ಕೂತಿರುವಾಗ ಡೊನೇಷನ್, ಕ್ಯಾಪಿಟೇಷನ್ ವಿದ್ಯಾರ್ಥಿಗಳು ಕೇಕೆ ಹಾಕುವ ಸ್ಥಿತಿ ನಿರ್ಮಾಣವಾಗಿತ್ತು. ಸ್ಥಳೀಯ ವಿದ್ಯಾರ್ಥಿ ಮತ್ತು ಪೋಷಕರಲ್ಲಿ ಇದರಿಂದ ತೀವ್ರ ಅತೃಪ್ತಿಯುಂಟಾಗಿತ್ತು. ಬಡ ಹುಡುಗ ಗಾಜಿನ ಜಾರೊಳಗಿನ ತಿಂಡಿಗಳನ್ನು ನೋಡಿ ಜೊಲ್ಲು ಸುರಿಸುವಂತಾಗಿತ್ತು. ಸ್ಥಳೀಯರಲ್ಲಿನ ಇಂಥ ಅತೃಪ್ತಿ ಬೀದರ್‌ನಲ್ಲಿ ಕೆಲವು ಸಿಖ್ ವಿದ್ಯಾರ್ಥಿಗಳ ಹತ್ಯೆ ಮಾಡುವಲ್ಲಿ ಸ್ಫೋಟಗೊಂಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕರ್ನಾಟಕದ ಶಿಕ್ಷಣ ಬಂಡವಾಳಶಾಹಿಗಳ ಧನದಾಹ ಮತ್ತು ಹೊರರಾಜ್ಯದ ಶ್ರೀಮಂತ ವಿದ್ಯಾರ್ಥಿಗಳ ಠೇಂಕಾರಗಳು ಈ ನಾಡಿನ ಸಾಮಾನ್ಯರ ಮನದಲ್ಲಿ ಹೊಗೆಯಾಡಲು ಎಡೆಮಾಡಿಕೊಟ್ಟಿದ್ದವು.

ಮೆಡಿಕಲ್, ಇಂಜಿನಿಯರಿಂಗ್ ಸೀಟುಗಳನ್ನು ಖರೀದಿ ಮಾಡಿ ಅಡ್ಮಿಷನ್ ಗಿಟ್ಟಿಸಿಕೊಂಡ ವಿದ್ಯಾರ್ಥಿಗಳನೇಕರು ಸರ್ಟಿಫಿಕೇಟ್‌ಗಳನ್ನು ಖರೀದಿಸುವುದರಲ್ಲಿ ನಿಷ್ಣಾತರಾಗಿದ್ದರು. ದುಂದುವೆಚ್ಚಕ್ಕೆ ಕುಖ್ಯಾತರಾಗಿದ್ದ ಈ ವಿದ್ಯಾರ್ಥಿಗಳ ತೀಟೆಗಳನ್ನು ತೀರಿಸಲಿಕ್ಕಾಗಿ ಬೆಂಗಳೂರಿನ ಹಲವಾರು ಪಬ್ ಹಾಗೂ ಹೋಟೆಲುಗಳು ಸನ್ನದ್ಧಗೊಂಡವು. ವಿದ್ಯಾರ್ಥಿಗಳು ರಾಜಾರೋಷದಿಂದ ಬಾರ್‌ಗಳಿಗೆ ಹೋಗುವ ಕಲ್ಚರ್‌ಗೆ ದಾಸರಾಗಲು ಇಂಥ ವಾತಾವರಣವೇ ಕಾರಣವೆಂದು ಕಾಣುತ್ತಿತ್ತು. ಈಗ ನಾನು ಹೇಳಿದ್ದಕ್ಕೆ ವ್ಯತಿರಿಕ್ತವಾಗಿದ್ದ ಬಿಹಾರದ ವಿದ್ಯಾರ್ಥಿಯೊಬ್ಬ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಓದಲು ಬಂದಿದ್ದ. ಕುಡಿತ, ಜೂಜುಗಳ ಷೋಕಿ ಈತನಿಗಿರಲಿಲ್ಲ. ಗಂಭೀರವಾಗಿ ವಿದ್ಯಾಭ್ಯಾಸ ಮಾಡುತ್ತಿದ್ದ ಈತನ ಹೆಸರು ಸಂದೀಪ್ ಕುಮಾರ್. ಬಿಹಾರದ ಸೂಪರಿಂಟೆಂಡೆಂಟ್ ಇಂಜಿನಿಯರ್ ಒಬ್ಬರ ಮಗನಾಗಿದ್ದ. ಐದಾರು ವರ್ಷಗಳಿಂದ ಓದುತ್ತಿದ್ದರೂ ಎಂಬಿಬಿಎಸ್ ಪಾಸು ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ. ದೈಹಿಕವಾಗಿ ಆರೋಗ್ಯಶಾಲಿಯೂ, ಸ್ಫುರದ್ರೂಪಿಯೂ ಆಗಿದ್ದ ಸಂದೀಪ್ ವಿಚಿತ್ರ ಮಾನಸಿಕ ಕಾಯಿಲೆಗೆ ಬಲಿಯಾಗಿದ್ದ. ಓದಿನಲ್ಲಿ ಜಾಣನೇನೋ ಆಗಿದ್ದ. ಆದರೆ ಓದಿದ್ದನ್ನೆಲ್ಲ ಮರೆತುಹೋಗಿಬಿಡುತ್ತಿದ್ದ. ಇದರೊಂದಿಗೆ ಪರೀಕ್ಷೆಯ ಭಯವೂ ಆತನನ್ನು ಆವರಿಸಿಕೊಂಡಿತ್ತು. ನಾಲ್ಕೈದು ಪೇಪರ್‌ಗಳಿಗಾಗಿ ಓದಿ ಸಿದ್ಧತೆ ಮಾಡಿಕೊಂಡಿದ್ದರೂ ಒಂದೋ ಎರಡೋ ವಿಷಯಗಳಲ್ಲಿ ಮಾತ್ರ ಪಾಸಾಗುತ್ತಿದ್ದ.

ರಾಮಯ್ಯ ಮೆಡಿಕಲ್ ಕಾಲೇಜ್‌ನ ಜೆಂಟ್ಸ್ ಹಾಸ್ಟೆಲ್‌ನಲ್ಲಿದ್ದ ಈತನಿಗೆ ಅದೇ ಕಾಲೇಜಿನ ಲೇಡೀಸ್ ಹಾಸ್ಟೆಲ್‌ನಲ್ಲಿದ್ದ ಶೆಲ್ಲಿ ಮಾಥುರ್ ಎನ್ನುವ ಮೆಡಿಕಲ್ ವಿದ್ಯಾರ್ಥಿನಿಯೊಂದಿಗೆ ಸ್ನೇಹ ಬೆಳೆಯಿತು. ನೋಡಲು ಆಕರ್ಷಕನಾಗಿದ್ದ ಸಂದೀಪ್‌ನೊಂದಿಗೆ ಶೆಲ್ಲಿಯ ಪ್ರಣಯ ಅಂಕುರಿಸಿತು. ಇವರಿಬ್ಬರೂ ತಮ್ಮ ಪ್ರೇಮ

ಪ್ರಸಂಗವನ್ನು ತಮ್ಮ ತಂದೆ ತಾಯಿಗಳಿಗೆ ಹೇಳಿಕೊಂಡರು. ಓದುತ್ತಿರುವಾಗಲೇ ಇವರಿಬ್ಬರ ಮದುವೆಯನ್ನು ಇಬ್ಬರ ತಂದೆ ತಾಯಿಗಳು ಸೇರಿ ಮಾಡಿ ಮುಗಿಸಿದರು.

ಶೆಲ್ಲಿಯ ಪ್ರೇಮದಲ್ಲಿ ಸಂದೀಪ್ ಕ್ಷೇಮಭಾವನೆಯನ್ನು ಕಂಡುಕೊಂಡ. ಅವನನ್ನು ಕಾಡುತ್ತಿದ್ದ ಅವ್ಯಕ್ತ ಅಭದ್ರತಾಭಾವ ಕಡಿಮೆಯಾಗತೊಡಗಿತು. Anticipatory tensions ಸಹ ಕಡಿಮೆಯಾದವು. ಇದೆಲ್ಲದರಿಂದಾಗಿ ಫೇಲ್ ಆಗಿದ್ದ ಒಂದೊಂದೇ ವಿಷಯಗಳನ್ನು ಆತ್ಮವಿಶ್ವಾಸದಿಂದ ಪಾಸು ಮಾಡತೊಡಗಿದ.

ಶೆಲ್ಲಿಯ ಸಾಮೀಪ್ಯದಲ್ಲಿ ಕ್ಷೇಮ ಕಂಡುಕೊಂಡಿದ್ದ ಸಂದೀಪ್ ಅದಕ್ಕಾಗಿ ಪರಿತಪಿಸುತ್ತಿದ್ದ. ಮದುವೆಯಾಗಿದ್ದರೂ ಇಬ್ಬರೂ ಹಾಸ್ಟೆಲ್‌ಗಳಲ್ಲಿದ್ದುದರಿಂದ ಪದೇ ಪದೇ ಸೇರಲು ಸಾಧ್ಯವಾಗುತ್ತಿರಲಿಲ್ಲ. ಇಬ್ಬರ ತಂದೆ ತಾಯಿಗಳು ಕೋರ್ಸು ಮುಗಿಯುವವರೆಗೆ ಮನೆ ಮಾಡಬೇಡಿರೆಂದು ಹೇಳಿದ್ದರಿಂದ ಹಾಸ್ಟೆಲ್ ಜೀವನ ಅನಿವಾರ್ಯವಾಗಿತ್ತು. ಶೆಲ್ಲಿಯ ಭೌತಿಕ ಅಗಲಿಕೆ ಸಂದೀಪ್‌ನನ್ನು ಕಂಗೆಡಿಸತೊಡಗಿತು. ತಹಬಂದಿಗೆ ಬಂದಿದ್ದ ಮನೋವ್ಯಾಧಿ ಪುನಃ ಕೆರಳತೊಡಗಿತು.

ಸಂದೀಪ್ ತನ್ನ ಹಾಸ್ಟೆಲ್ ರೂಮಿಗೆ ಬರುವಂತೆ ಶೆಲ್ಲಿಯನ್ನು ಪೀಡಿಸತೊಡಗಿದ. ಒಂದೆರಡು ಬಾರಿ ಹೋಗಿಯೂ ಬಂದಳು. ಆಗೆಲ್ಲ ಸಂದೀಪನ ನಡವಳಿಕೆ ವಿಚಿತ್ರವಾಗಿ ಕಂಡಿತು ಶೆಲ್ಲಿಗೆ. ಸಂತೋಷ, ಸಂಭ್ರಮಗಳಿಂದ ಮಾತಾಡುತ್ತಿರುವಾಗಲೇ ಒಮ್ಮಿಂದೊಮ್ಮೆಗೇ ದುಃಖಿತನಾಗಿಬಿಡುವುದನ್ನು, ಮರುಕ್ಷಣದಲ್ಲಿಯೇ ನಗುವುದನ್ನು ಗಮನಿಸಿಕೊಂಡಳು. ಸಂದೀಪನ ನಡವಳಿಕೆ ನಾರ್ಮಲ್ ಆಗಿಲ್ಲವಲ್ಲ ಎಂದುಕೊಂಡಳು ಶೆಲ್ಲಿ. ತನ್ನನ್ನು ತೀವ್ರವಾಗಿ ಪ್ರೇಮಿಸುತ್ತಿರುವುದರಿಂದ ಸೆಂಟಿಮೆಂಟಲ್ ಆಗಿದ್ದಾನೆ ಎಂದುಕೊಂಡು ಸಮಾಧಾನ ತಂದುಕೊಂಡಳು. ಸಂದೀಪ್ ಮತ್ತು ಶೆಲ್ಲಿಯರ ಮದುವೆಯಾಗಿದ್ದು ಗೊತ್ತಿದ್ದುದರಿಂದ ಹಾಸ್ಟೆಲ್ ವಾರ್ಡನ್ ಶೆಲ್ಲಿ ಬಂದು ಹೋಗುವುದನ್ನು ಆಕ್ಷೇಪಿಸುತ್ತಿರಲಿಲ್ಲ.

ಒಂದು ದಿನ ಶೆಲ್ಲಿ ಸಂದೀಪ್ ರೂಮಿಗೆ ಬಂದಿದ್ದಳು. ಸಂದೀಪ್ ಸ್ನಾನ ಮಾಡುವುದಾಗಿ ಹೇಳಿ ಬಾತ್‌ರೂಮಿಗೆ ಹೋದ. ಖಾಲಿ ಕುಳಿತಿದ್ದ ಶೆಲ್ಲಿ ಶೆಲ್ಫ್‌ನಲ್ಲಿದ್ದ ಪುಸ್ತಕಗಳ ಮೇಲೆ ಕೈಯಾಡಿಸತೊಡಗಿದಳು. ಅದರಲ್ಲಿ ಒಂದು ಫೈಲ್ ಅವಳ ಕೈಗೆ ಸಿಕ್ಕಿತು. ತೆರೆದು ನೋಡಿದ ಶೆಲ್ಲಿಗೆ ಮೈಯೆಲ್ಲ ಬೆವರತೊಡಗಿತು. ಕೈಗಳು ನಡುಗತೊಡಗಿದವು. ಸಂದೀಪ್ ತನ್ನ ಮನೋರೋಗಕ್ಕಾಗಿ ಪಡೆದುಕೊಳ್ಳುತ್ತಿದ್ದ ಚಿಕಿತ್ಸೆಯ ಫೈಲ್ ಅದಾಗಿತ್ತು. ಬಿಹಾರ್‌ನಲ್ಲಿ ಆರಂಭವಾಗಿದ್ದ ಈ ಚಿಕಿತ್ಸೆಯನ್ನು ಬೆಂಗಳೂರಿಗೆ ಬಂದಮೇಲೂ ಮುಂದುವರಿಸಿದ್ದ. ಬೆಂಗಳೂರಿನ ಸೈಕಿಯಾಟ್ರಿಸ್ಟ್ ಒಬ್ಬರು ಆತನಿಗೆ ಚಿಕಿತ್ಸೆ ನೀಡುತ್ತಿದ್ದರು. ಆ ಫೈಲ್‌ನಲ್ಲಿ ಸೈಕಿಯಾಟ್ರಿಸ್ಟ್, ಸಂದೀಪನ

ಮನೋ ಕಾಯಿಲೆಯನ್ನು Psycho cyclothymic personality & suffering from manic depressive psychosis ಎಂದು ವಿಶ್ಲೇಷಿಸಿದ್ದನ್ನು ಓದಿ ಶೆಲ್ಲಿಯ ಎದೆ ಒಡೆದು ಹೋಯಿತು. ಸಂದೀಪ್‌ನ ಅಬ್‌ನಾರ್ಮಲ್ ವರ್ತನೆಗಳೆಲ್ಲ ಶೆಲ್ಲಿಯ ಕಣ್ಮುಂದೆ ಮೂಡತೊಡಗಿದವು... ಮೋಸಹೋದೆ ಎಂದುಕೊಂಡಳು. ಸ್ವತಃ ಮೆಡಿಕಲ್ ಕೋರ್ಸ್ ಮಾಡುತ್ತಿದ್ದರೂ, mental patient ಒಬ್ಬನನ್ನು ತನ್ನ ಗಂಡನೆಂದು ಸ್ವೀಕರಿಸುವ ಸಾಮರ್ಥ್ಯ ಶೆಲ್ಲಿಗಿರಲಿಲ್ಲ. ಸೈಕಿಯಾಟ್ರಿಸ್ಟ್‌ರ ಆ ಫೈಲ್ ಅನ್ನು ಇದ್ದ ಜಾಗೆಯಲ್ಲಿಯೇ ಜಾಗರೂಕವಾಗಿ ಇರಿಸಿ ಸಂದೀಪ್ ಬಾತ್‌ರೂಮಿನಿಂದ ಆಚೆ ಬರುವಷ್ಟರಲ್ಲಿ ದಾಪುಗಾಲಲ್ಲಿ ಹೊರಗೆ ಹೋಗಿಬಿಟ್ಟಳು. ನೇರ ತನ್ನ ಹಾಸ್ಟೆಲ್ ರೂಮಿಗೆ ಹೋದ ಶೆಲ್ಲಿ ತನ್ನ ಬೆಡ್ ಮೇಲೆ ಬೋರಲು ಬಿದ್ದು ಅಳತೊಡಗಿದಳು. ಅವಳ ರೂಮ್‌ಮೇಟ್ ಜಸ್ಬೀರ್ ಕೌರ್ ಆಶ್ಚರ್ಯದಿಂದ, "ಏನಾಯಿತು?" ಎಂದು ಶೆಲ್ಲಿ ಭುಜ ಹೊರಳಿಸಿದಳು. ಧಾರಾಕಾರವಾಗಿ ಕಣ್ಣಲ್ಲಿ ಹರಿಯುತ್ತಿದ್ದ ನೀರನ್ನು ನೋಡಿ, "ಸಂದೀಪ್ ಜೊತೆಗೆ ಜಗಳವಾಯಿತಾ? ಎಲ್ಲ ಸರಿ ಹೋಗುತ್ತೆ. ಅವನು ನಿನ್ನನ್ನು ಬಹಳ ಪ್ರೀತಿಸುತ್ತಾನೆ. ಸಿಟ್ಟಿನಲ್ಲಿ ಒಂದೆರಡು ಮಾತಾಡಿರಬಹುದು. ಏಳು, ಸಮಾಧಾನ ಮಾಡಿಕೊ. ನಡಿ ಸ್ವಲ್ಪ ಹೊರಗೆ ಹೋಗಿ ಸುತ್ತಾಡಿಕೊಂಡು ಬರೋಣ." ಎಂದಳು.

ಶೆಲ್ಲಿ, ತಾನು ನೋಡಿ ಬಂದ ಫೈಲ್ ವಿಷಯ ಹೇಳಿ, ಸಂದೀಪ್‌ನ ಅಬ್‌ನಾರ್ಮಲ್ ವರ್ತನೆಗಳ ಬಗೆಗೆ ಬಿಕ್ಕುತ್ತ ಹೇಳಿದಳು. ಈ ವಿಷಯ ತಿಳಿದು ಜಸ್ಬೀರ್‌ಗೂ ಶಾಕ್ ಆಯಿತು.

"ಏನಾದರೂ ಪರಿಹಾರ ಹುಡುಕೋಣ. ಈಗ ನೀನು ಸುಮ್ಮನಾಗು" ಎಂದು ಜಸ್ಬೀರ್ ಸಂತೈಸಿದಳು.

ಅಷ್ಟರಲ್ಲಿ ಹಾಸ್ಟೆಲ್ ವಾಚ್‌ಮನ್ ತಿಮ್ಮಪ್ಪ, "ಶೆಲ್ಲಿ ಮೇಡಮ್ ಗಂಡ ಬಂದವ್ರೆ" ಎಂದ.

"ನೀನು ಇಲ್ಲೇ ಇರು. ನಾನೇ ಹೋಗಿ ಕಂಡು ಬರುವೆ" ಎಂದು ಜಸ್ಬೀರ್ ಹೋದಳು.

"ಶೆಲ್ಲಿ ಮೈಯಲ್ಲಿ ಹುಷಾರಿಲ್ಲ. ಈಗ ನೋಡೋಕ್ಕೆ ಆಗೊಲ್ಲ. ಮಾತ್ರೆ ನುಂಗಿ ಮಲಕ್ಕೊಂಡಿದ್ದಾಳೆ" ಎಂದಳು.

"ಇದೀಗ ನನ್ನ ರೂಮಿಗೆ ಬಂದಾಗ ಚೆನ್ನಾಗಿಯೇ ಇದ್ದಳು? ಹುಷಾರಿಲ್ಲದಿದ್ದರೆ ಡಾಕ್ಟರ್ ಬಳಿ ಕರೆದೊಯ್ಯುವೆ ಕಳಿಸಿಕೊಡಿ" ಎಂದ ಸಂದೀಪ್.

"ಇಲ್ಲ. ಇವತ್ತು ಅವಳು ಹೊರಗೆ ಬರೊಲ್ಲ. ಹಾಗಂತ ಅವಳೇ ಹೇಳಿದ್ದಾಳೆ" ಎಂದು ಅವನ ಉತ್ತರಕ್ಕೂ ಕಾಯದೆ ಜಸ್ಬೀರ್ ವಾಪಸ್ ರೂಮಿಗೆ ಹೊರಟಳು.

ಸಂದೀಪ್‌ಗೆ ಇದರಿಂದ ಸ್ವಲ್ಪ ಮುಖಭಂಗವಾದಂತೆನಿಸಿತು. 'ಇವಳದೆಷ್ಟು ಪೊಗರು' ಎಂದುಕೊಳ್ಳುತ್ತ ತನ್ನ ಹಾಸ್ಟೆಲ್ ಕಡೆ ನಡೆದ.

ಪುನಃ ಮಾರನೆ ದಿನ ಹಾಸ್ಟೆಲ್‌ಗೆ ಬಂದು ಶೆಲ್ಲಿಯನ್ನು ಕೇಳಿದಾಗ ಜಸ್ಬೀರ್‌ಳೇ ಬಂದು, "ಟೆಸ್ಟ್‌ಗೆ ಅವಳು ಪ್ರಿಪೇರ್ ಆಗಬೇಕಂತೆ. ಇನ್ನೂ ಹದಿನೈದು ದಿವಸ ಕಾಣಲು ಬರಬಾರದಂತೆ" ಎಂದು ಕೊಂಕು ನಗೆ ಬೀರಿ ಅವನ ಪ್ರತಿ ಮಾತಿಗೆ ಕಾಯದೆ ಹೋದಳು. ಜಸ್ಬೀರ್‌ಳ ಉತ್ತರ ಮತ್ತು ಅವಳ ಕೊಂಕು ನಗೆಗಳು ಸಂದೀಪ್‌ನನ್ನು ರೊಚ್ಚಿಗೆಬ್ಬಿಸಿದವು. ಹಲ್ಲು ಕಡಿಯುತ್ತ, ಮುಷ್ಟಿ ಬಿಗಿಯುತ್ತ ಹೊರಟುಹೋದ.

ರೂಮ್‌ಮೇಟ್ ಊರಿಗೆ ಹೋಗಿದ್ದರಿಂದ ಸಂದೀಪ್ ಒಂಟಿಯಾಗಿದ್ದ. ಗೆಳೆಯರೊಂದಿಗೆ ಅಷ್ಟಾಗಿ ಬೆರೆಯಲು ಇಚ್ಛೆಪಡದ ಸಂದೀಪ್‌ಗೆ ಅಂಥ ಪ್ರಾಣ ಸ್ನೇಹಿತರಾರೂ ಇರಲಿಲ್ಲ. ತನ್ನೊಳಗಿನ ಕೋಲಾಹಲವನ್ನು ಹಂಚಿಕೊಳ್ಳಲು ಸಾಧ್ಯವಿದ್ದದ್ದು ಶೆಲ್ಲಿಯೊಂದಿಗೆ ಮಾತ್ರ ಅಲ್ಲವೆ ಎನ್ನುವ ಪ್ರಶ್ನೆ ಪುನಃ ಪುನಃ ಧುತ್ತೆನ್ನತೊಡಗಿತು. ತನ್ನ ಮತ್ತು ಶೆಲ್ಲಿಯ ಮಧ್ಯೆ ಜಸ್ಬೀರ್ ಗೋಡೆಯಾಗಿದ್ದಾಳೆ ಏಕೆ ಎಂದು ಪ್ರಶ್ನಿಸಿಕೊಂಡ. ಜಸ್ಬೀರ್‌ಳ ಮುಖ ಕಣ್ಮುಂದೆ ಬಂದದ್ದೇ ತಡ ಅವಳ ಮೇಲೆ ಹಲ್ಲು ಕಡಿಯತೊಡಗಿದ... ಕೋಪ ಭುಗಿಲೇಳತೊಡಗಿತು... ಭುಗಿಲೆದ್ದಷ್ಟೂ ಶೆಲ್ಲಿ ಬೇಕೆನಿಸತೊಡಗಿತು... ಬೇಕೆನಿಸಿದ ಶೆಲ್ಲಿ ಸಿಗದಾದಳಲ್ಲ ಎನಿಸಿ ಭುಗಿಲೆದ್ದ ಕೋಪ ಇಮ್ಮಡಿಸಿತು.... ಹೀಗೆ ಒಂದು ಇನ್ನೊಂದನ್ನು ಪ್ರಚೋದಿಸಿದ್ದರಿಂದ ಸಂದೀಪ್‌ನ ದೇಹ ಹೊತ್ತಿ ಉರಿಯತೊಡಗಿತು.

ಅದೇ ಕೋಪದಲ್ಲಿ ಪುನಃ ಶೆಲ್ಲಿಯ ಹಾಸ್ಟೆಲ್ ಕಡೆ ಹೋದ ಸಂದೀಪ್. ಯಥಾರೀತಿ ಜಸ್ಬೀರ್‌ಳೇ ಬಂದಳು. "ನೀನೇಕೆ ಬಂದಿಯೇ? ಅವಳಿಗೇನಾಗಿದೆ ಧಾಡಿ? ಅವಳನ್ನು ಕಳಿಸು. ಅವಳು ಇಂದು ಬಾರದಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲವೆಂದು ಹೇಳು." ಎಂದು ಗುಡುಗಿದ. ಸಂದೀಪ್‌ನ ರೌದ್ರಾವತಾರ ಕಂಡ ಜಸ್ಬೀರ್ ಒಳಗೇ ನಡುಗಿದಳು. ರೂಮೊಳಗೆ ಧಾವಿಸಿದ ಅವಳು, "ಸಂದೀಪ್‌ಗೆ ಹುಚ್ಚು ಪೂರ್ಣ ಕೆರಳಿಬಿಟ್ಟಿದೆ. ನೀನು ನಾಳೆಯಿಂದ ಕಾಲೇಜಿಗೂ ಹೋಗಬೇಡ. ಅವನು ಅಲ್ಲಿ ನಿನ್ನನ್ನು ಕಾಯಬಹುದು. ಇಲ್ಲಾ ನಿನ್ನ ಊರಿಗೆ ಹೊರಟುಹೋಗು" ಎಂದಳು. ಜಸ್ಬೀರ್‌ಳ ಮಾತಿನಿಂದ ಶೆಲ್ಲಿ ಧೃತಿಗೆಟ್ಟು ಮುದುರಿ ಕೂತಳ.

ಐದು ನಿಮಿಷಗಳಾದರೂ ಶೆಲ್ಲಿ ಬಾರದೆ ಹೋದಾಗ ಸಂದೀಪನ ಮನಸ್ಸು ಸಂಪೂರ್ಣವಾಗಿ ಸ್ತಿಮಿತ ಕಳೆದುಕೊಂಡಿತು. ಅವಾಚ್ಯವಾಗಿ ಶೆಲ್ಲಿ ಮತ್ತು ಜಸ್ಬೀರ್‌ರನ್ನು ಬೈದುಕೊಳ್ಳುತ್ತ ತನ್ನ ಹಾಸ್ಟೆಲ್ ಕಡೆ ನಡೆದ.

ಬೋಲ್ಟ್ ಹಾಕಿಕೊಂಡು ರೂಮೊಳಗೆ ಕೂತು, "ಶೆಲ್ಲಿ, ನೀನು ನನ್ನವಳು, ನನ್ನವಳು. ಆದರೆ ನನಗೇ ನೀನಿಲ್ಲ. ನನಗಿಲ್ಲದ ನಿನ್ನನ್ನು ಬಿಡುವುದಿಲ್ಲ. ಖಂಡಿತಾ ನಿನ್ನನ್ನು ಬದುಕಲು ಬಿಡುವುದಿಲ್ಲ... ಖಂಡಿತಾ ನಿನ್ನನ್ನು ಬದುಕಲು ಬಿಡುವುದಿಲ್ಲ... ನಮ್ಮಿಬ್ಬರ ಮಧ್ಯೆ ಗೋಡೆಯಾಗಿ ನಿಂತಿರುವ ಕೊಂಕುನಗೆಯ ಆ ಜಸ್ಬೀರ್‌ಳನ್ನೂ ಬಿಡುವುದಿಲ್ಲ." ತನಗೇ ಕೇಳಿಸುವಂತೆ ಅಂದುಕೊಂಡ.

ತಲೆಭಾರವಾಗಿ ಕಣ್ಣಿಗೆ ಮಂಪರು ಬಂದಂತಾಯಿತು. ಎಚ್ಚರಾದಾಗ ರಾತ್ರಿ ಎಂಟು ಗಂಟೆಯಾಗಿತ್ತು. ಕನಸಿನಲ್ಲೆಲ್ಲಾ ಶೆಲ್ಲಿ, ಜಸ್ಬೀರ್‌ರ ತಿರಸ್ಕಾರ; ಕೊಂಕುನಗೆ ಜೇನುಹುಳುಗಳಂತೆ ಮುಕುರಿ ಕಚ್ಚಿದ್ದವು. ಮನ ಗಾಯದಿಂದ ಊದಿಕೊಂಡಿತ್ತು. ದೃಢ ತೀರ್ಮಾನ ಕೈಗೊಂಡಂತೆ ಎದ್ದುನಿಂತ. ನೇರ ಹಾಸ್ಟೆಲ್ ಕ್ಯಾಂಟೀನ್‌ಗೆ ಹೋದ. ಅಡಿಗೆಯವರು ತಮ್ಮ ಗಡಿಬಿಡಿಯಲ್ಲಿದ್ದರು. ಅಲ್ಲಿದ್ದ ಮಚ್ಚೊಂದನ್ನು ಎತ್ತಿ ಶರ್ಟ್ ಒಳಗೆ ಮರೆಸಿಕೊಂಡು ಹಿಂದಿನಿಂದಲೇ ಕಾಂಪೌಂಡ್ ಹಾರಿ ಕಣ್ಮರೆಯಾದ.

ಲೇಡೀಸ್ ಹಾಸ್ಟೆಲ್ ಮುಂದೆ ಬಂದು ನಿಂತಾಗ ವಾಚ್‌ಮನ್ ಎಲ್ಲೋ ಹೋಗಿದ್ದ. ವಾಚ್‌ಮನ್ ಇದ್ದಿದ್ದರೂ ಅವನ ಅಪ್ಪಣೆಯನ್ನು ಪಡೆದುಕೊಳ್ಳುವ ಮನಸ್ಥಿತಿಯಲ್ಲಿರಲಿಲ್ಲ ಸಂದೀಪ್. ನೇರ ಶೆಲ್ಲಿಯ ರೂಮ್ ನಂಬರ್ 118ಕ್ಕೆ ಹೋದ. ಒಳಗಿನಿಂದ ಬೋಲ್ಟ್ ಹಾಕಿರಲಿಲ್ಲ. ತಳ್ಳಿದೊಡನೆ ಬಾಗಿಲು ತೆಗೆದುಕೊಂಡಿತು. ಊಟಕ್ಕೆ ಹೊರಡಲು ತಯಾರಾಗುತ್ತಿದ್ದ ಶೆಲ್ಲಿ, ಜಸ್ಬೀರ್ ಸಂದೀಪ್‌ನ ದಿಢೀರ್ ಪ್ರವೇಶದಿಂದ ದಿಗಿಲುಗೊಂಡರು. ಒಳಬಂದ ಸಂದೀಪ್ ಬೋಲ್ಟ್ ಹಾಕಿದಾಗ ಭೀತಿಯಿಂದ ತೆರೆದ ಬಾಯಲ್ಲಿ ನಿಂತರು. ಷರ್ಟ್ ಒಳಗೆ ಮುಚ್ಚಿಟ್ಟುಕೊಂಡಿದ್ದ ಮಚ್ಚನ್ನು ಹೊರತೆಗೆದಾಗ ಶೆಲ್ಲಿಯ ಕಣ್ಣಿಗೆ ಕತ್ತಲಾವರಿಸಿತು. ಜಸ್ಬೀರ್ ಕಿಟಾರನೇ ಕಿರುಚಿಕೊಂಡಳು. ಮೊದಲು ಜಸ್ಬೀರ್ ಹೊಟ್ಟೆಯನ್ನು ಮಚ್ಚಿನಿಂದ ಕೊಚ್ಚಿದ. ತಕ್ಷಣವೇ ತೇಲುಗಣ್ಣಲ್ಲಿ ಉಸಿರು ಕುಸಿದು ನಿಂತಿದ್ದ ಶೆಲ್ಲಿಯ ಹೊಟ್ಟೆಗೆ ತಿವಿದ. ಇಬ್ಬರೂ ಕುಸಿದುಬಿದ್ದರು ಶಾಕ್‌ನಿಂದ. ಆದರೂ ಬಿಡದೆ ಕೊಚ್ಚತೊಡಗಿದ; ದೇಹವನ್ನು 29 ಬಾರಿ ಕೊಚ್ಚಿದ. ಪ್ರತಿರೋಧಿಸದೆ ಸತ್ತ ದೇಹಗಳನ್ನು ಮನದಣಿಯೆ ಕೊಚ್ಚಿ ಬೋಲ್ಟ್ ತೆಗೆದು ಹೊರಬಂದಾಗ ಹುಡುಗಿಯರೆಲ್ಲ ಚೀರಾಡುತ್ತ ಚೆಲ್ಲಾಪಿಲ್ಲಿ ಓಡಿದರು. ವಾಚ್‌ಮನ್ ತಿಮ್ಮಪ್ಪ ಸಂದೀಪ್‌ನನ್ನು ಮುಟ್ಟುವ

ಧೈರ್ಯ ಮಾಡಲಿಲ್ಲ. ನೇರ ತನ್ನ ಹಾಸ್ಟೆಲ್‌ಗೆ ಹೋದ ಸಂದೀಪ್‌ನ ಮೈಮೇಲಿನ ರಕ್ತದ ಓಕುಳಿಯನ್ನು ನೋಡಿದ ವಿದ್ಯಾರ್ಥಿಗಳು ಪೊಲೀಸ್ ಠಾಣೆಗೆ ಓಡಿದರು. ತನ್ನ ರೂಮಿನ ಒಳಹೊಕ್ಕ ಸಂದೀಪ್ ಅದೇ ಮಚ್ಚಿನಿಂದ ತನ್ನ ಕತ್ತಿಗೆ ಹೊಡೆದುಕೊಂಡು ಕೆಳಗೆ ಬಿದ್ದ. ಕೂಡಲೇ ವಿದ್ಯಾರ್ಥಿಗಳು ಅವನನ್ನು ಆಸ್ಪತ್ರೆಗೆ ಸೇರಿಸಿದರು. ರಕ್ತಸ್ರಾವವಾಗಿದ್ದರೂ ಡಾಕ್ಟರ್‌ಗಳು ಅವನ ಪ್ರಾಣವನ್ನು ಉಳಿಸಿದರು. ಹಾಸ್ಟೆಲ್ ವಾರ್ಡನ್ ನಟರಾಜನ್ ನೀಡಿದ ಕಂಪ್ಲೇಂಟ್ ಆಧಾರದ ಮೇಲೆ ಕೊಲೆ ಮೊಕದ್ದಮೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದರು. ಸಂದೀಪನ ತಂದೆ ಕೇಸನ್ನು ನನಗೆ ಕೊಟ್ಟರು. ಸಂದೀಪನಿಗಿದ್ದ ಮನೋರೋಗ ಮತ್ತು ಅದಕ್ಕಾಗಿ ಪಡೆದುಕೊಳ್ಳುತ್ತಿದ್ದ ಚಿಕಿತ್ಸೆಯ ದಾಖಲೆ, ಸಾಕ್ಷಿಗಳನ್ನು ಮಂಡಿಸಿ ಸಂದೀಪ್‌ನನ್ನು ಆರೋಪಮುಕ್ತಗೊಳಿಸುವುದು ನನಗೆ ಕಷ್ಟವಾಗಲಿಲ್ಲ.

ಈ ಘಟನೆಯ ನಂತರ ಸಂದೀಪ್‌ನಲ್ಲಿ ಭಾರೀ ಬದಲಾವಣೆಗಳು ಬಂದವು. ತನ್ನ ಕಾಯಿಲೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಲೇ ಮೆಡಿಕಲ್ ಕೋರ್ಸ್ ಮುಗಿಸಿದ. ಹೌಸ್‌ಮನ್‌ಷಿಪ್ ಅನ್ನೂ ಮುಗಿಸಿದ. ಈಗ ಬೆಂಗಳೂರಿನ ಆರ್.ಟಿ. ನಗರದಲ್ಲಿ ಕ್ಲಿನಿಕ್ ಒಂದನ್ನು ಇಟ್ಟುಕೊಂಡು ಪ್ರಾಕ್ಟೀಸ್ ನಡೆಸುತ್ತಿದ್ದಾನೆ. ಕೆಲ ವರ್ಷಗಳ ಹಿಂದೆ ಒಮ್ಮೆ ಸಿಕ್ಕಿದಾಗ, "ಸದ್ಯ ಯಾವ ಮೆಡಿಸಿನ್ನೂ ಇಲ್ಲದೆ ಆರಾಮವಾಗಿದ್ದೇನೆ ಸಾರ್. ನಿಮ್ಮ ಕೃಪೆ ಇಲ್ಲದಿದ್ದಿದ್ದರೆ ಕಂಬಿ ಎಣಿಸಬೇಕಾಗಿರುತ್ತಿತ್ತು. ಹುಚ್ಚಿನಲ್ಲಿ ಅಮಾಯಕ ಶೆಲ್ಲಿ, ಜಸ್ಬೀರ್‌ರನ್ನು ಕೊಂದದ್ದನ್ನು ಮಾತ್ರ ಮರೆಯಲು ಸಾಧ್ಯವಿಲ್ಲ. ಪಶ್ಚಾತ್ತಾಪ ಮಾಡಿಕೊಳ್ಳಲು ಸಾಧ್ಯವಿರದ ಅಪರಾಧವನ್ನು ಮಾಡಿದೆ. ದೇವರೂ ನನ್ನನ್ನು ಕ್ಷಮಿಸಲಾರ" ಎಂದ ಗದ್ಗದಿತನಾಗಿ. ಬೆನ್ನುತಟ್ಟಿ ಮೌನವಾಗಿ ಸಂತೈಸಿದ ನಾನು ಅವನಿಂದ ಬೀಳ್ಕೊಂಡೆ.

93

ಕನ್ವರ್‌ಳನ್ನು ಕಾಪಾಡಲು ಮಠಾಧಿಪತಿಗಳು ಮುಂದಾಗಲಿಲ್ಲ

ಹಲವಾರು ಚಳವಳಿಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಿದ್ದರಿಂದ ಮತ್ತು ಅನ್ಯಾಯದ ವಿರುದ್ಧ ನಡೆಯುವ ಪ್ರತಿಭಟನೆಗಳಲ್ಲಿ ಧುಮುಕುವ ಪ್ರವೃತ್ತಿಯಿಂದಾಗಿ ನನ್ನೊಳಗಿನ ಬಂಡುಕೋರ ಸ್ವಭಾವ ಬಲಿತಿತ್ತು. ಈ ನನ್ನ ಪ್ರವೃತ್ತಿ ಎಷ್ಟೋ ಬಾರಿ ನನ್ನ ವೃತ್ತಿಗೆ ಅಡಚಣೆಯುಂಟುಮಾಡಿದ್ದರೂ ಅದರ ಸೆಳೆತದಿಂದ ಪಾರಾಗಲು ಸಾಧ್ಯವಾಗಲಿಲ್ಲ. ನಮ್ಮ ಸಮಾಜದೊಳಗಿನ ಮೂಢನಂಬಿಕೆಗಳ ಬಗ್ಗೆ ನನ್ನಲ್ಲಿ ತೀವ್ರ ಅತೃಪ್ತಿ ಮನೆ ಮಾಡಿತ್ತು. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ಕೋಮು ಸಂಘರ್ಷ, ದೇವದಾಸಿ ಪದ್ಧತಿ, ಸತಿಪದ್ಧತಿ ಮುಂತಾದವುಗಳು ನಮ್ಮ ಸಮಾಜದಿಂದ ಮೂಲೋತ್ಪಾಟನೆಗೊಳ್ಳುವುದು ಯಾವಾಗ ಎನ್ನುವ ಆಲೋಚನೆ ಪದೇಪದೇ ನನ್ನ ಮುಂದೆ ಧುತ್ತೆನ್ನುತ್ತಿತ್ತು. ಒಂದು ದಿನ ಪ್ರೊ. ಹಂಪ ನಾಗರಾಜಯ್ಯ ಮತ್ತು ಡಾ. ಸಿ. ವೀರಣ್ಣ ಇಬ್ಬರೂ ನನ್ನನ್ನು ಕಾಣಲು ಬಂದರು. ಸಿ. ವೀರಣ್ಣನವರು ನಮ್ಮ ಊರಿನ ಕಡೆಯವರು

ಮಾತ್ರವಲ್ಲ ನಮ್ಮ ಮನೆಯ ಒಡನಾಟದಲ್ಲಿದ್ದವರೂ ಆಗಿದ್ದರು. ಹಂಪನಾ ಅವರೂ ನನಗೆ ಒಳ್ಳೆಯ ಹಿತೈಷಿಗಳು.

"ಏನು ವಿಶೇಷ? ಇಬ್ರು ಪ್ರೊಫೆಸರ್‌ಗಳು ಸೇರಿ ದಾಳಿ ನಡೆಸಿದ್ದೀರಿ?" ಎಂದೆ ನಗೆಚಾಟಿ ಬೀಸುತ್ತಾ.

"ಡಿಸೆಂಬರ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಮಹಾ ಸಮ್ಮೇಳನ ಮೈಸೂರಿನಲ್ಲಿ ಜರುಗುತ್ತದೆ. ಆ ಸಮ್ಮೇಳನದ, 'ರಾಷ್ಟ್ರದ ಸಮಸ್ಯೆಗಳು' ಎನ್ನುವ ಗೋಷ್ಠಿಯಲ್ಲಿ ನೀನು ಮಾತಾಡಬೇಕು" ಎಂದರು. ಆಗಲಿ ಎಂದು ಒಪ್ಪಿಕೊಂಡ ನಾನು, "ಮೂಢನಂಬಿಕೆ, ವಿಚ್ಛಿದ್ರಕಾರಿ ಶಕ್ತಿಗಳನ್ನು ಕೇಂದ್ರವಾಗಿರಿಸಿಕೊಂಡು ಮಾತಾಡುವೆ" ಎಂದು ಹೇಳಿದೆ.

ಕಾಫಿ ತರಲು ನನ್ನ ಸಹಾಯಕನಿಗೆ ಹೇಳಿ ಅವರೊಂದಿಗೆ ಹರಟೆ ಕೊಚ್ಚತೊಡಗಿದೆ.

ಹಂಪನಾ ಮತ್ತು ವೀರಣ್ಣ ಅವರು 1989ರಲ್ಲಿ ನಡೆದ ವಿಚಾರ ಸಂಕಿರಣವನ್ನು ನೆನಪಿಸಿಕೊಂಡರು.

ಪ್ರಧಾನಿ ರಾಜೀವ್‌ಗಾಂಧಿಯವರು ಪಾರ್ಲಿಮೆಂಟ್‌ನಲ್ಲಿ ಡಿಫಮೇಷನ್ ಬಿಲ್ ಅನ್ನು ಮಂಡಿಸಲು ಹೊರಟಿದ್ದರ ಹಿನ್ನೆಲೆಯಲ್ಲಿ ಆ ವಿಚಾರ ಸಂಕಿರಣ ಏರ್ಪಾಟಾಗಿತ್ತು. ಪತ್ರಿಕೆ ಮತ್ತು ಇತರೆ ಮಾಧ್ಯಮಗಳನ್ನು ನಿರ್ವೀರ್ಯಗೊಳಿಸುವ ಉದ್ದೇಶದಿಂದ ಆ ಬಿಲ್ ಸಿದ್ಧಗೊಳಿಸಲ್ಪಟ್ಟಿತು. ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಹಾಲ್‌ನಲ್ಲಿ ಕಾರ್ಯಕ್ರಮದ ಏರ್ಪಾಟಾಗಿತ್ತು. ಪಿ. ಲಂಕೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆ ವಿಚಾರ ಸಂಕಿರಣದಲ್ಲಿ ಕಾಂಗ್ರೆಸ್ಸಿನ ಪರ ವಾದ ಮಂಡಿಸಲು ಎ.ಕೆ. ಸುಬ್ಬಯ್ಯನವರು ಬಂದಿದ್ದರು. ಸಿ.ವೀರಣ್ಣ ಪ್ರಾಸ್ತಾವಿಕ ಭಾಷಣ ಮಾಡಿದರು. "ಈಗ ಬರಲಿರುವ ಬಿಲ್ ದುರುದ್ದೇಶದಿಂದ ಕೂಡಿದ್ದು" ಎಂದು ನಾನು ವಾದಿಸಿದೆ. ಎ.ಕೆ. ಸುಬ್ಬಯ್ಯನವರು ಆ ಪಕ್ಷದಲ್ಲಿದ್ದ ಕಾರಣದಿಂದ ಕಾಟಾಚಾರಕ್ಕಾಗಿ ಆ ಬಿಲ್ ಅನ್ನು ಸಮರ್ಥಿಸಿಕೊಂಡರು. ಆದರೆ ಅಧ್ಯಕ್ಷೀಯ ಭಾಷಣ ಮಾಡಿದ ಪಿ. ಲಂಕೇಶ್ ಮೇಷ್ಟ್ರು ನನ್ನ ಮಾತುಗಳನ್ನೇ ಎತ್ತಿ ಹಿಡಿದರು. ಸಭೆ ಮುಕ್ತಾಯವಾಗುವಾಗ ಸುಬ್ಬಯ್ಯನವರು, "ನಮ್ಮ ಲೀಡರ್‌ಗಳು ಇಂಥ ಜನವಿರೋಧಿ ಬಿಲ್‌ಗಳನ್ನು ತಂದು ನಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿಬಿಡುತ್ತಾರೆ. ವೇದಿಕೆಯ ಮೇಲೆ ಸಮರ್ಥಿಸಿಕೊಂಡ ನಾನು ವೈಯಕ್ತಿಕವಾಗಿ ಆ ಬಿಲ್ ಅನ್ನು ವಿರೋಧಿಸುತ್ತೇನೆ" ಎಂದು ಹೇಳಿದರು.

ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮೂರು ದಿನಗಳ ಕಾಲ ನಡೆಸಿದ ಅಖಿಲ ಭಾರತ ಸಮ್ಮೇಳನದಲ್ಲಿ ನಾನು ಮಾತಾಡಬೇಕಿದ್ದ ಗೋಷ್ಠಿ ತಾ. 29.12.90ರಂದು ಇತ್ತು. ಗೋಷ್ಠಿಯು ಅಧ್ಯಕ್ಷತೆಯನ್ನು ಮಾಜಿ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪನವರು ವಹಿಸಿದ್ದರು. ಸಚಿವ ಎಂ.ಪಿ. ಪ್ರಕಾಶ್ ಅವರು ಉದ್ಘಾಟಕರಾಗಿದ್ದರು. ತಮ್ಮ ಉದ್ಘಾಟನಾ ಭಾಷಣದ ಆರಂಭಕ್ಕೇ ಪ್ರಕಾಶ್ ಅವರು ರಥಯಾತ್ರೆಯ ರಾಜಕೀಯವನ್ನು ಛೇಡಿಸತೊಡಗಿದರು. ಶ್ರೋತೃಗಳು, 'ಇಲ್ಲಿ ರಾಜಕೀಯ ಮಾತಾಡಬೇಡಿ' ಇತ್ಯಾದಿಯಾಗಿ ಗಲಾಟೆ ಶುರು ಮಾಡಿದರು. ಸಾವಿರಾರು ಜನ ಸೀಟಿ, ಚಪ್ಪಾಳೆಗಳ ಮೂಲಕ ಪ್ರಕಾಶ್ ಅವರ ಭಾಷಣವನ್ನು ಪ್ರತಿರೋಧಿಸತೊಡಗಿದರು. ಪರಿಸ್ಥಿತಿಯನ್ನು ತಹಬಂದಿಗೆ ತಂದ ಅಧ್ಯಕ್ಷ ನಿಜಲಿಂಗಪ್ಪನವರು ಶಾಂತಿ ಕಾಪಾಡಲು ವಿನಂತಿಸಿದರು. ಪ್ರಕಾಶ್ ಅವರು ಹಠಾತ್ ತಮ್ಮ ಭಾಷಣವನ್ನು ನಿಲ್ಲಿಸಿದರು. ಉಪನ್ಯಾಸ ಮಂಡಕರ ಪಟ್ಟಿಯಲ್ಲಿ ಮೊದಲಿಗೇ ನನ್ನ ಹೆಸರಿತ್ತು. ಪ್ರಕ್ಷುಬ್ಧಗೊಂಡಿದ್ದ ಶ್ರೋತೃಗಳ ಮನಸ್ಸು ತಿಳಿಗೊಂಡ ಮೇಲೆ ಮಾತಾಡಿದರೆ ಚೆನ್ನಾಗಿರುತ್ತದೆ ಎಂದುಕೊಳ್ಳುತ್ತಿರುವಾಗಲೇ ಅಧ್ಯಕ್ಷರು ನನ್ನ ಹೆಸರನ್ನು ಘೋಷಿಸಿದರು. ಅರೆಮನಸ್ಸಿನಿಂದಲೇ ಮೈಕ್ ಮುಂದೆ ನಿಂತುಕೊಂಡೆ.

"ಇದೀಗ ಮಾತು ಮುಗಿಸಿದ ಎಂ.ಪಿ. ಪ್ರಕಾಶ್ ಅವರಿಗೆ ತೋರಿದ ಪ್ರತಿಕ್ರಿಯೆ ಅಥವಾ ಅದಕ್ಕೂ ಮುಂದುವರಿದ ಪ್ರತಿಕ್ರಿಯೆಯನ್ನು ನೀವು ನನಗೆ ತೋರುತ್ತೀರೆನ್ನುವ ನಡುಕ ನನ್ನಲ್ಲುಂಟಾಗಿದೆ" ಎನ್ನುತ್ತಿರುವಂತೆಯೇ ಶ್ರೋತೃಗಳು ಕರತಾಡನ ಶುರು ಮಾಡಿದರು.

"ಈ ಕರತಾಡನದ ಸೂಚನೆ ಭಾಷಣ ನಿಲ್ಲಿಸುವುದಕ್ಕೋ ಅಥವಾ ಮುಂದುವರಿಸುವುದಕ್ಕೋ?" ಎಂದು ಪ್ರಶ್ನಿಸಿ ಕ್ಷಣ ಸುಮ್ಮನಾದೆ.

"ನಿಲ್ಲೋಕೆ ಅಲ್ಲ, ಮುಂದುವರಿಸೋಕೆ" ಎನ್ನುವ ಮಾತು ಶ್ರೋತೃವೃಂದದಿಂದ ಕೇಳಿಬಂದಿತು. ನಿರಾಳಗೊಂಡು ಮಾತು ಮುಂದುವರಿಸಿದೆ.

ನನಗೆ 20 ನಿಮಿಷಗಳ ಕಾಲಾವಧಿಯನ್ನು ಕೊಡಲಾಗಿತ್ತು. ಆದರೆ, ನಾನು ತಯಾರು ಮಾಡಿಕೊಂಡು ಬಂದಿದ್ದ ವಿಷಯಕ್ಕೆ ಒಂದು ಗಂಟೆಯದರೂ ಸಮಯ ಬೇಕಿತ್ತು. ಏನಾದರಾಗಲಿ ಎಂದು ಆರಂಭಿಸಿದೆ.

"ಮತಧರ್ಮ ಮತ್ತು ಅಣುಬಾಂಬ್ ಇವೆರಡೂ ಸಮಾನ ಅಪಾಯಕಾರಿಗಳಾದಂಥವು. ಅಣುಬಾಂಬು ಮನುಷ್ಯರ ಹೆಣಗಳನ್ನು ಉರುಳಿಸಿದರೆ ಧರ್ಮ ಮನುಷ್ಯತ್ವದ ಹೆಣಗಳನ್ನು ಉರುಳಿಸುತ್ತದೆ.

'ನೀನು ಧರ್ಮವನ್ನು ಉಳಿಸಿದರೆ ನಿನ್ನನ್ನು ಧರ್ಮ ಉಳಿಸುತ್ತದೆ' ಎನ್ನುವುದು ಭಗವದ್ಗೀತೆಯ ಘೋಷಣೆ. ಆದರೆ ನಮ್ಮ ದೇಶದಲ್ಲಿ ಏನಾಗುತ್ತಿದೆ? ಯಾರು ತಮ್ಮ ಧರ್ಮಕ್ಕಾಗಿ ಹೋರಾಡುತ್ತಿದ್ದಾರೋ ಅವರನ್ನೇ ಕೊಂದು ತಿನ್ನುತ್ತಿದೆ ಅವರ ಧರ್ಮ! ನೋಡಿ, ಖಲಿಸ್ತಾನ್ ಹೋರಾಟದಲ್ಲಿ ಸಿಖ್ ಜನಾಂಗವೇ..... ಸಿಖ್ ಉಗ್ರಗಾಮಿಗಳು ಸಿಖ್ ಧರ್ಮದ ಹೆಸರಿನಲ್ಲಿ ಅಮಾಯಕ ಸಿಖ್‌ರನ್ನು ಕೊಂದು ಹಾಕುತ್ತಿದ್ದಾರೆ. ಕಟ್ಟಾ ಧರ್ಮಪಾಲಕರಾದ ಸಿಖ್ಖರಿಗೆ ದಿಗ್ಭ್ರಾಂತಿಯಾಗತೊಡಗಿದೆ; ತಮ್ಮ ಧರ್ಮವೇ ತಮ್ಮ ರಕ್ತಹರಿಸುವುದನ್ನು ನೋಡಿ!

ಆಳವಾದ ಧರ್ಮ ಶ್ರದ್ಧೆಯ ಪಾತಿವ್ರತ್ಯದಲ್ಲಿ ನಂಬಿಕೆಯಿರಿಸಿಕೊಂಡಿದ್ದ ರೂಪ್ ಕನ್ವರ್‌ಳನ್ನು ಸುಟ್ಟು ಕರಕಲು ಮಾಡಿದ್ದು ಅವಳು ನಂಬಿದ ಧರ್ಮವೇ ಅಲ್ಲವೆ? ಸ್ವಾತಂತ್ರ್ಯ ಪೂರ್ವದಲ್ಲಿಯೇ ರಾಜಾರಾಮ್ ಮೋಹನ್‌ರಾಯ್ ಸತಿಪದ್ಧತಿಯ ವಿರುದ್ಧ ಹೋರಾಡಿ ಅದರ ನಿಷೇಧದ ಕಾನೂನು ಅಸ್ತಿತ್ವಕ್ಕೆ ಬರಲು ಕಾರಣರಾದರು. ಆದರೆ ರೂಪ್‌ಕನ್ವರ್, ಅವಳ ಗಂಡನ ಚಿತೆಯ ಮೇಲೆ ಜೀವಂತ ಸುಟ್ಟುಹೋಗುವಾಗ ಕಾನೂನಿನ ರಕ್ಷಕರೆನಿಸಿಕೊಂಡ ಪೊಲೀಸರು ಮೌನ ಪ್ರೇಕ್ಷಕರಾಗಿದ್ದರು. 'ಸರ್ವೇಜನಾಃ ಸುಖಿನೋಭವಂತು' ಎಂದು ಬಡಬಡಿಸುವ ಯಾವೊಬ್ಬ ಮಠಾಧಿಪತಿಯೂ ಕನ್ವರ್‌ಳ ಪ್ರಾಣವನ್ನು ಕಾಪಾಡಲು ಮುಂದಾಗಲಿಲ್ಲ. ನಂತರವೂ ಕನ್ವರ್‌ಳ ಕ್ರೂರ ಬಲಿಯನ್ನು ಖಂಡಿಸುವ ಮಾನವೀಯತೆಯನ್ನೂ ತೋರಿಸಲಿಲ್ಲ! ಏಕೆ?" ಎಂದಾಗ ಜನ ಮೆಚ್ಚುಗೆಯ ಕರತಾಡನ ಮಾಡಿದರು. ಹೀಗೇ ಭಿನ್ನ ಉದಾಹರಣೆಗಳನ್ನು ಕೊಡುತ್ತ ನನ್ನ ಮಾತನ್ನು ಮುಂದುವರಿಸಿದೆ. ಒಂದು ತಾಸು ಹತ್ತು ನಿಮಿಷಗಳ ಕಾಲ ಮಾತಾಡಿದೆ. ಅಧ್ಯಕ್ಷರಾಗಲೀ, ಶ್ರೋತೃಗಳಾಗಲೀ ನನ್ನ ಮಾತನ್ನು ತಡೆಯಲಿಲ್ಲ. ಮಾತು ಮುಗಿಸುತ್ತಿದ್ದಂತೆಯೇ ವಕೀಲ ಮಿತ್ರ ಎಚ್.ಎನ್. ನಾಗಮೋಹನ್‌ದಾಸ್ ಬಂದು ನನ್ನ ಕೈಕುಲುಕಿ ತಮ್ಮ ತೀವ್ರ ಸಂತೋಷವನ್ನು ವ್ಯಕ್ತಪಡಿಸಿದರು. ಸಾವಿರಾರು ಶ್ರೋತೃಗಳು ನನ್ನ ಕೈ ಕುಲುಕಿದರು. ಶ್ರೋತೃಗಳಿಂದ ಪ್ರತಿರೋಧವನ್ನು ನಿರೀಕ್ಷಿಸುತ್ತಿದ್ದ ನನಗೆ ಅತೀವ ಸಂತೋಷವಾಯಿತು. ಮಾರನೆ ದಿನ ಮುಖ್ಯ ದೈನಿಕಗಳಲ್ಲೆಲ್ಲ, ನನ್ನ ಭಾಷಣ ಪ್ರಭಾವಪೂರ್ವಕವಾಗಿ ಹೊಮ್ಮಿಬಂದಿತು ಎನ್ನುವ ವರದಿಗಳು ಪ್ರಕಟವಾದವು.

ಭಾಷಣ ಮುಗಿಸಿ ವೇದಿಕೆಯ ಮೇಲೆ ಆಸೀನನಾದಾಗ ಅಧ್ಯಕ್ಷ ನಿಜಲಿಂಗಪ್ಪನವರು ತುಂಬಾ ಅದ್ಭುತವಾಗಿ ಮಾತಾಡಿದಿಯಪ್ಪಾ ಎಂದು ಬೆನ್ನು ತಟ್ಟಿದ್ದು ನನ್ನಲ್ಲಿ ಸಾರ್ಥಕ ಭಾವ ಮೂಡಿಸಿತು. ಹಂಪನಾ ಮತ್ತು ಸಿ. ವೀರಣ್ಣ ಅವರು, ಇಡೀ ಸಮ್ಮೇಳನದಲ್ಲಿಯೇ ನಿನ್ನ ಭಾಷಣ ವಿಶೇಷ ಆಕರ್ಷಣೆಯದ್ದಾಗಿತ್ತು ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಅದಕ್ಕೆ ನಾನು "ಸ್ನೇಹದ ಔದಾರ್ಯಕ್ಕಾಗಿ ಹಾಗೆ ಹೇಳುತ್ತಿದ್ದೀರಿ" ಎಂದು ನನ್ನ ಮುಜುಗರ ವ್ಯಕ್ತಪಡಿಸಿದೆ. ನಂತರ 1995ರಲ್ಲಿ ಮುಧೋಳದಲ್ಲಿ ನಡೆದ 64ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಸಂವಿಧಾನ ಮತ್ತು ಧರ್ಮ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕೊಡಲು ನನಗೆ ಆಹ್ವಾನ ಬಂದಿತು. ಪುನಃ 1996ರಲ್ಲೂ ಹಾಸನದಲ್ಲಿ ನಡೆದ 65ನೇ ಸಮ್ಮೇಳನದಲ್ಲಿ "ಭಾರತ ಸಂವಿಧಾನ ಮತ್ತು ಕರ್ನಾಟಕದ ಹಿತ" ಎನ್ನುವ ವಿಷಯದ ಮೇಲೆ ಮಾತಾಡಲು ಆಹ್ವಾನ ಬಂದಿತು. ಈ ಎರಡೂ ಸಮ್ಮೇಳನದಲ್ಲಿ ಮಾತಾಡಿದೆ. ಹಾಸನದಲ್ಲಿ ನಡೆದ ಸಮ್ಮೇಳನದ ಗೋಷ್ಠಿಯೊಂದಕ್ಕೆ ಅಧ್ಯಕ್ಷರಾಗಿದ್ದ ಜಸ್ಟಿಸ್ ರಾಮಾಜೋಯಿಸ್ ಅವರು ಬಾರದಿದ್ದ ಕಾರಣ ಅವರ ಸ್ಥಾನದಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿಸಲಾಯಿತು. ಹೀಗಾಗಿ ಅಧ್ಯಕ್ಷೀಯ ಭಾಷಣದಲ್ಲಿಯೇ ನನ್ನ ಉಪನ್ಯಾಸವನ್ನು ಸೇರಿಸಿ ಮಾತಾಡುವ ಅನಿವಾರ್ಯತೆಗೆ ಒಳಗಾದೆ.

ಈ ಸಮ್ಮೇಳನಗಳಲ್ಲೆಲ್ಲ ಮಾತಾಡಿದ ನೆನಪು, ಅನುಭವಗಳು ಆಗಾಗ ನನ್ನಲ್ಲಿ ಆನಂದದ ತರಂಗಗಳನ್ನು ಏಳಿಸುತ್ತಿರುತ್ತವೆ.

94

ಗತ ನೆನಪುಗಳೆದುರು ಇಂದಿನ ವ್ಯಥೆಗಳು

1990ರಷ್ಟೊತ್ತಿಗೆ ನಾನು ನನ್ನ ವೃತ್ತಿಯಲ್ಲಿ ನೆಲೆಯೂರಿದ್ದೆ. ಸಾಕುಸಾಕು ಎನ್ನುವಷ್ಟು ಕೇಸುಗಳು ಬರತೊಡಗಿದ್ದವು. ಕೆಲವು ಕೇಸುಗಳನ್ನು ಹಿಡಿಯಲಾಗುವುದಿಲ್ಲ ಎಂದು ಹೇಳಿ ವಾಪಸ್ ಕಳಿಸಿದರೆ, ಅವರು ನನ್ನ ಆತ್ಮೀಯ ಸ್ನೇಹಿತರ, ಹಿತೈಷಿಗಳ, ಬಂಧುಗಳ ಶಿಫಾರಸ್ಸು ತಂದು ಒತ್ತಾಯಿಸುತ್ತಿದ್ದರು. ಅವರ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಹಿಡಿದ ಕೇಸುಗಳ ಸಂಖ್ಯೆ ಕಡಿಮೆಯೇನೂ ಇರಲಿಲ್ಲ. ನನ್ನ ವೃತ್ತಿಯ ಜೊತೆಜೊತೆಗೇ ಕನ್ನಡ ನಾಡು-ನುಡಿಗಳಿಗಾಗಿ ಹೋರಾಡುವ ಹಂಬಲ ನನ್ನದು. ಸಿಕ್ಕಾಪಟ್ಟೆ ಕೇಸುಗಳನ್ನು ಹಿಡಿದು ಅವುಗಳಲ್ಲೇ ಮುಳುಗಿಹೋಗುವ ಜಾಯಮಾನ ನನ್ನದಾಗಿರಲಿಲ್ಲ. ಪ್ರೊಫೆಷನ್‌ಗೆ ಅದರದೇ ಆದ ಗುಣ ಲಕ್ಷಣಗಳಿರುತ್ತವೆ. ಉನ್ನತ ಉದ್ಯೋಗದಲ್ಲಿರುವ ಅಧಿಕಾರಿಗೆ ಪ್ರೊಫೆಷನ್‌ನಲ್ಲಿರುವ ಸ್ವಾತಂತ್ರ್ಯ ಇರುವುದಿಲ್ಲ. ಬೇರು ಬಿಡುವವರೆಗೆ ಪ್ರೊಫೆಷನ್ ಅಭದ್ರವಾಗಿ ಕಾಣುತ್ತಿರುತ್ತದೆ. ಒಮ್ಮೆ ನೆಲೆಯೂರಿದರೆ ಸಾಕು ಅದರ ಖದರೇ ಬೇರೆ. ಪ್ರೊಫೆಷನ್‌ನಲ್ಲಿರುವ ವ್ಯಕ್ತಿಗೆ ಇರುವ ದೃಷ್ಟಿ ವೈಶಾಲ್ಯ ಮತ್ತಾರಿಗೂ ಲಭಿಸುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಪ್ರೊಫೆಷನ್ ಮತ್ತು ಉದ್ಯೋಗಗಳ ಮಧ್ಯದ ವ್ಯತ್ಯಾಸವನ್ನು ಕಂಡುಕೊಳ್ಳದೆ

ಅನೇಕರು ತಮ್ಮ ಪ್ರೊಫೆಷನ್ ಅನ್ನು ಉದ್ಯೋಗವಾಗಿ ಪರಿವರ್ತಿಸಿಕೊಂಡು ಒದ್ದಾಡುವುದನ್ನು ನೋಡಿದ್ದೇನೆ. ದೇಶದ ಅಧಿಕಾರ ಚುಕ್ಕಾಣಿಯನ್ನು ಹಿಡಿಯುವ ಬಹುತೇಕ ಮುತ್ಸದ್ದಿಗಳು ಲಾಯರ್‌ಗಳೇ ಏಕಾಗಿರುತ್ತಾರೆಂದು ಒಮ್ಮೆ ಯೋಚಿಸಿದರೆ ಅದರ ಸುಳಿವು ಸಿಗುತ್ತದೆ. ಗಾಂಧಿ, ನೆಹರು, ಪಟೇಲ್, ಕೃಷ್ಣಮೆನನ್, ಮಾವ್ಲೊ, ಅಬ್ರಹಾಂ ಲಿಂಕನ್, ಲೆನಿನ್ ಮುಂತಾದವರೆಲ್ಲ ಲಾಯರ್‌ಗಳಾಗಿದ್ದವರೇ.

ಹೀಗೆ ಪ್ರೊಫೆಷನ್‌ನಲ್ಲಿ ನೆಲೆಯೂರಿದವರ ಮೇಲೆ ರಾಜಕೀಯ ಪಕ್ಷಗಳ ಕಣ್ಣು ಬೀಳುವುದು ಸಹಜ.

ಈ ಹಿಂದೆ ರಷೀದ್ ಕೊಲೆ ಪ್ರಕರಣದಲ್ಲಿ ಆರ್.ಎಲ್. ಜಾಲಪ್ಪನವರ ವಿರುದ್ಧ ನಡೆದ ಹೋರಾಟದಲ್ಲಿ ಸಕ್ರಿಯ ನೇತೃತ್ವ ನೀಡಿದಾಗಲೇ ಅನೇಕರು ದೊಡ್ಡಬಳ್ಳಾಪುರ ಕ್ಷೇತ್ರದ ಮೇಲೆ ಕಣ್ಣಿರಿಸಿಕೊಂಡು ಹೋರಾಟ ಮಾಡುತ್ತಿದ್ದಾನೆ ಎಂದು ಕುಟುಕಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ನನಗೆ ರಾಜಕೀಯದಲ್ಲಿ ಆಸಕ್ತಿಯಿಲ್ಲ ಎಂದು ಹೇಳಿದರೆ ಅನೇಕರು ನಂಬುತ್ತಿರಲಿಲ್ಲ. ಅವರ ಅಪನಂಬಿಕೆ ನಿರಾಧಾರವಾದುದು ಎಂದು ಇಂದು ಸಾಬೀತಾಗಿದೆ. ದಶಕಗಳ ನಂತರವೂ ಇಂದಿಗೂ ನಾನು ರಾಜಕೀಯದಿಂದ ಹೊರಗೇ ಉಳಿದಿರುವೆ.

ಹಾಗೆಂದ ಮಾತ್ರಕ್ಕೆ ನಾನು ರಾಜಕೀಯವನ್ನು ತಿರಸ್ಕರಿಸುವೆನೆಂದೇನೂ ಅಲ್ಲ. ರಾಜಕೀಯದೊಂದಿಗೆ ಸಂಬಂಧವಿರಿಸಿಕೊಂಡರೂ ನಾನು ವೈಯಕ್ತಿಕವಾಗಿ ಅದರೊಳಗೆ ಸಕ್ರಿಯನಾಗಿಲ್ಲ ಅಷ್ಟೆ. ಮಾಲೂರು ಗೋಲಿಬಾರ್ ಪ್ರಕರಣದಲ್ಲಿ ಶಾಸಕ ಎ. ನಾಗರಾಜ್ ಅವರ ಪರ ಶಾಮಸುಂದರ್ ಆಯೋಗದ ಮುಂದೆ ವಾದಿಸಲು ಆಗ ಮುಖ್ಯಮಂತ್ರಿಗಳಾಗಿದ್ದ ಮೊಯ್ಲಿಯವರು ನನ್ನನ್ನು ಕೇಳಿಕೊಂಡಿದ್ದರು. ಇನ್ನೂ ಅನೇಕ ಕಾನೂನು ಸಂಬಂಧಿ ವಿಷಯಗಳಿಗಾಗಿ ಅವರೊಂದಿಗೆ ನಾನು ನಿಕಟವರ್ತಿಯಾಗಿದ್ದೆ. ಆ ಸಲಿಗೆಯನ್ನು ಬಳಸಿಕೊಂಡು ಎ.ಆರ್. ನಾಗರಾಜ್ ಅವರನ್ನು ಕರೆದುಕೊಂಡು ಮೊಯ್ಲಿಯವರ ಹತ್ತಿರ ಹೋಗಿದ್ದೆ. ಎ.ಆರ್. ನಾಗರಾಜ್ ಕಟ್ಟಾ ಕಾಂಗ್ರೆಸ್ಸಿಗರಾಗಿದ್ದುದರೊಂದಿಗೆ ಇಂದಿರಾ ಗಾಂಧಿಯವರಿಗೆ ಲಾಯರ್ ಸಹ ಆಗಿದ್ದರು. ಆರ್.ಎಲ್. ಜಾಲಪ್ಪವರು ಇಂದಿರಾ ಗಾಂಧಿಯವರ ವಿರುದ್ಧ ದೊಡ್ಡಬಳ್ಳಾಪುರ ಕೋರ್ಟ್‌ನಲ್ಲಿ ಕ್ರಿಮಿನಲ್ ಕೇಸ್ ಹೂಡಿದ್ದರು. ಇಂದಿರಾ ಗಾಂಧಿಯವರ ಪರ ವಕೀಲರಾಗಿದ್ದವರು ಎನ್ನುವ ಪ್ಲಸ್ ಪಾಯಿಂಟ್ ಸಹ ಎ.ಆರ್. ನಾಗರಾಜ್ ಅವರಿಗಿತ್ತು. ನಾಗರಾಜ್‌ರನ್ನು ಎಂಎಲ್‌ಸಿ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ಆಶ್ವಾಸನೆಯಿತ್ತ ಮೊಯ್ಲಿಯವರು ನನ್ನನ್ನು ಪ್ರತ್ಯೇಕ ಕರೆದು, 'ನೀವು ದೊಡ್ಡಬಳ್ಳಾಪುರ ಕ್ಷೇತ್ರಕ್ಕೆ ಎಂಎಲ್‌ಎ ಚುನಾವಣೆಗೆ

ಸ್ಪರ್ಧಿಸುವುದಾದರೆ ನಮ್ಮ ಪಕ್ಷದ ಟಿಕೆಟ್ ಕೊಡಿಸುವೆ' ಎಂದರು. "ನಿಮ್ಮ ಔದಾರ್ಯಕ್ಕೆ ನಾನು ಕೃತಜ್ಞ, ಯೋಚಿಸಿ ತೀರ್ಮಾನ ತೆಗೆದುಕೊಂಡು ಆನಂತರ ಬಂದು ಹೇಳುವೆ" ಎನ್ನುತ್ತಾ ಸೌಜನ್ಯದ ಮಾತುಗಳೊಂದಿಗೆ ಜಾರಿಕೊಂಡೆ.

ಆನಂತರ ಜನತಾದಳ ಒಡೆದು ಹೆಗಡೆ-ಗೌಡ ಎಂದು ಎರಡು ಬಣಗಳಾದವು. ದೇವೇಗೌಡರು ಸಹ ತಮ್ಮ ಪಕ್ಷದ ಟಿಕೆಟ್ ನೀಡುವುದಾಗಿ ನನಗೆ ಹೇಳಿಕಳಿಸಿದರು. ಆಗಲೂ ನಾನು ತಿರಸ್ಕರಿಸಿದೆ. ನನ್ನನ್ನು ದೂರದಿಂದ ಬಲ್ಲವರಿಗೆ ನಾನು ಒಗಟಾಗಿ ಕಾಣತೊಡಗಿದೆ; ಅದೇಕೆ ಈ ವ್ಯಕ್ತಿ ರಾಜಕೀಯ ಎಂದರೆ ಹಿಂದೇಟು ಹಾಕುತ್ತಾನೆ ಎಂದು. ಆದರೆ ನನ್ನ ಆಪ್ತ ಸ್ನೇಹಿತರಿಗೆ ನನ್ನ ಒಲವು ಯಾವ ಕಡೆಗೆ ಎಂದು ಗೊತ್ತಿತ್ತು.

ಲಂಕೇಶ್ ಮೇಷ್ಟ್ರರ ವಿದ್ಯಾರ್ಥಿಯಾಗಿದ್ದ ನನ್ನಲ್ಲಿ ಸಾಹಿತ್ಯದ ಕಡೆ ವಿಶೇಷ ಸೆಳೆತವೊಂದು ಮುಂಚಿನಿಂದಲೂ ಮನೆ ಮಾಡಿಕೊಂಡಿತ್ತು. ಅದರೊಟ್ಟಿಗೆ ಹಲವಾರು ಕನ್ನಡ ಸಂಘಟನೆಗಳು ವಿಶೇಷ ಆದರ ನೀಡಿ ನನ್ನನ್ನು ತಮ್ಮೊಳಗೆ ಸೇರಿಸಿಕೊಂಡಿದ್ದವು. ರಾಮಣ್ಣ ಕೋಡಿಹೊಸಹಳ್ಳಿಯವರ ಕನ್ನಡ ಸಂಘರ್ಷ ಸಮಿತಿ, ಮೈಕೋ ಕಾರ್ಖಾನೆ ಕನ್ನಡ ಕ್ರಿಯಾ ಸಮಿತಿ, ಪೋರ್ಸ್‌ಲೈನ್ ಫ್ಯಾಕ್ಟರಿಯ ಕನ್ನಡ ಸಂಘ, ಎಚ್‌ಎಎಲ್ ಕನ್ನಡ ಸಂಘಗಳಿಗೆ ಅಧ್ಯಕ್ಷನಾಗಿದ್ದೆ. ರಾಜಕೀಯಕ್ಕಿಂತ ಕನ್ನಡ ನಾಡು-ನುಡಿಗಳೇ ನನ್ನನ್ನು ಹೆಚ್ಚು ಆಕರ್ಷಿಸಿದವು. ಕೇವಲ ಪ್ರತಿಭಟನೆ, ಹೋರಾಟಗಳಿಂದ ಕನ್ನಡದ ಹೋರಾಟವನ್ನು ಅಷ್ಟೊಂದು ಅರ್ಥಪೂರ್ಣಗೊಳಿಸಲು ಸಾಧ್ಯವಿಲ್ಲ ಎನ್ನುವುದನ್ನು ಕಂಡುಕೊಳ್ಳಲು ತಡವಾಗಲಿಲ್ಲ. ಅದೇ ಸಮಯಕ್ಕೆ ನನಗೆ ಪ್ರೇರೇಪಣೆಯ ಸೆಲೆಯಾಗಿ ಹಂಪನಾ,ಡಾ.ಸಿ.ವೀರಣ್ಣ, ಡಾ. ಚಿದಾನಂದಮೂರ್ತಿಗಳು ಬಂದರು. ಕನ್ನಡತನದ ಅಭಿವೃದ್ಧಿಗಾಗಿ ನಿರ್ದಿಷ್ಟ ಕಾರ್ಯಕ್ರಮದೊಂದಿಗೆ ತಲೆಯೆತ್ತಿದ ಕನ್ನಡ ಶಕ್ತಿ ಕೇಂದ್ರಕ್ಕೆ ನನ್ನನ್ನು ಉಪಾಧ್ಯಕ್ಷನನ್ನಾಗಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದ ಸಾಹಿತಿ ಶಾಂತರಸರೂ ನನ್ನೊಂದಿಗೆ ಉಪಾಧ್ಯಕ್ಷರಾದರು. ಚಿದಾನಂದಮೂರ್ತಿಯವರ ಕನಸಿನ ಕರ್ನಾಟಕವೇ ಕನ್ನಡ ಶಕ್ತಿ ಕೇಂದ್ರವಾಗಿ ಮೈದಳೆದಿತ್ತು. ಕರ್ನಾಟಕ ಏಕೀಕರಣ ಹೋರಾಟದ ಸಂದರ್ಭದಲ್ಲಿ ಹೊಮ್ಮಿದ್ದ ಕರ್ನಾಟಕತ್ವದ ಪರಿಕಲ್ಪನೆ ಪ್ರಜಾಸತ್ತಾತ್ಮಕ ನೆಲೆಯುಲ್ಲಿತ್ತು. ಆದರೆ, ಚಿದಾನಂದಮೂರ್ತಿಯವರ ಕರ್ನಾಟಕತ್ವ ಅನ್ಯ ರಾಷ್ಟ್ರೀಯತೆಗಳೊಂದಿಗೆ ಅಸಹಿಷ್ಣು ಭಾವನೆಯನ್ನು ಪ್ರಧಾನವಾಗಿ ಬಿಂಬಿಸುವಂತಿದೆ ಎನ್ನುವ ಟೀಕೆಗಳು ಕೇಳಿಬಂದವು. ಆದರೆ ನನಗೆ ಶಕ್ತಿಕೇಂದ್ರದ ಪಾಸಿಟಿವ್ ಗುಣಗಳೇ ಎದ್ದು ಕಂಡವು.

ಸಾಹಿತ್ಯಕ ಚಟುವಟಿಕೆಗಳಲ್ಲಿ ನನ್ನನ್ನು ತೊಡಗಿಸಲು ಪ್ರೊ. ಎಲ್.ಎಸ್. ಶೇಷಗಿರಿರಾವ್, ರಮಜಾನ್ ದರ್ಗಾ, ರಾಮಣ್ಣ ಕೋಡಿಹಳ್ಳಿ, ರೆಹಮಾನ್ ಖಾನ್ ಮುಂತಾದವರು ಉತ್ಸಾಹಪೂರ್ವಕ ಕಳಕಳಿ ತೋರಿದ್ದನ್ನು ನಾನು ಮರೆಯಲಾರೆ.

1992ರಲ್ಲಿ ಕಾವೇರಿ ಗಲಭೆ ನಡೆದಾಗ ಡಾ. ಚಿದಾನಂದ ಮೂರ್ತಿಯವರೊಂದಿಗೆ ಮಂಡ್ಯ, ಮೈಸೂರುಗಳಿಗೆ ಹೋಗಿ ಪ್ರತಿಭಟನಾ ಸಭೆಗಳಲ್ಲಿ ಪಾಲ್ಗೊಂಡೆ. ಇದೇ ಸಂದರ್ಭದಲ್ಲಿ ಭೂಸೇನಾ ಕಾರ್ಯಾಲಯ ಸಾಹಿತ್ಯಕ ವೇದಿಕೆ ಮತ್ತು ಬೆಂಗಳೂರು ಲಿಟರರಿ ಯೂನಿಯನ್‌ಗಳಿಗೂ ಅಧ್ಯಕ್ಷನಾದೆ. ನನ್ನ ಕನ್ನಡಪರ ಚಟುವಟಿಕೆಗಾಗಿ ಆರ್ಯಭಟ ಮತ್ತು ಕನ್ನಡಶ್ರೀ ಪ್ರಶಸ್ತಿಗಳು ನೀಡಲ್ಪಟ್ಟವು. ನಾನು ರಾಜಕಾರಣಿಯಾಗಿದ್ದಿದ್ದರೆ ಕನ್ನಡಿಗರ ಈ ಅಭಿಮಾನ, ಪ್ರೀತಿಗಳಿಂದ ವಂಚಿತನಾಗಿರುತ್ತಿದ್ದೆ ಎನಿಸದೆ ಇರಲಿಲ್ಲ ಆ ಘಳಿಗೆಗಳಲ್ಲಿ.

1995ರಲ್ಲಿ ಕೆಜಿಎಫ್‌ನಲ್ಲಿ ಕನ್ನಡಿಗರ ಮೇಲೆ ತಮಿಳರು ದಬ್ಬಾಳಿಕೆ ನಡೆಸಿದ್ದರ ವಿರುದ್ಧ ಶಕ್ತಿ ಕೇಂದ್ರ ಪ್ರತಿಭಟನೆ ನಡೆಸಿತು. ಬ್ರಿಟಿಷರ ಕಾಲದಲ್ಲಿ ಚಿನ್ನದ ಗಣಿ ಆರಂಭಿಸಲ್ಪಟ್ಟಾಗ ಕನ್ನಡಿಗರು ಅಲ್ಲಿ ಕೆಲಸಕ್ಕೆ ಸೇರಿಕೊಳ್ಳಲು ಮುಂದಾಗಲಿಲ್ಲ. ಅಂಥ ಕೆಲಸದಲ್ಲಿ ಪರಿಣತಿ ಕನ್ನಡ ರೈತರಿಗೆ ಇರಲಿಲ್ಲ. Basic Industry ಗಳು ಆಗಿನ ಮೈಸೂರು ಸಂಸ್ಥಾನದಲ್ಲಿ ಆರಂಭಿಸಲ್ಪಡುವುದಕ್ಕಿಂತ ಎಷ್ಟೋ ಮುಂಚೆಯೇ ಮದ್ರಾಸ್ ಪ್ರಾವಿನ್ಸ್‌ನಲ್ಲಿ ಆರಂಭಿಸಲ್ಪಟ್ಟಿದ್ದ ಕಾರಣದಿಂದಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಪರಿಣತಿ ಪಡೆದ ಅನುಭವೀ ಕಾರ್ಮಿಕರು ಮದ್ರಾಸ್ ಪ್ರಾಂತ್ಯದಿಂದ ಬಂದು ಕೆಜಿಎಫ್‌ನಲ್ಲಿ ನೆಲೆಯೂರುವಂತಾಯಿತು. ಹೀಗಾಗಿ ಆ ಚಿನ್ನದ ಗಣಿ ಪ್ರದೇಶದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಬೇಕಾಯಿತು. ತಮ್ಮ ಜಮೀನಿನ ಗರ್ಭದಲ್ಲಿ ಚಿನ್ನದ ಪರ್ವತಗಳನ್ನೇ ಇಟ್ಟುಕೊಂಡಿದ್ದ ಕನ್ನಡಿಗ ರೈತರು ಕುಬ್ಜರಾಗಿ ಬದುಕುವಂಥ ಸ್ಥಿತಿಗೆ ತಳ್ಳಲ್ಪಟ್ಟರು. ಕೆಜಿಎಫ್‌ನಲ್ಲಿ ತಾವೇ ಪ್ರಬಲರು, ತಮ್ಮದೇ ನಡೆಯಬೇಕು ಎನ್ನುವ ದುರಭಿಮಾನ ತಮಿಳರಲ್ಲಿ ಮನೆ ಮಾಡಿತು. ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸಬಾರದು ಎನ್ನುವ ಮಟ್ಟಕ್ಕೆ ಹದ್ದುಮೀರಿ ನಿಂತರು ತಮಿಳರು. ತಮ್ಮ ತವರು ತಮಿಳುನಾಡಾಗಿದ್ದರೂ ಕರ್ನಾಟಕ ಗಂಡನ ಮನೆ ಎನ್ನುವುದನ್ನು ಮರೆತ ತಮಿಳರು ಕೆಜಿಎಫ್ ಅನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಬೇಕು ಎನ್ನುವ ಬೇಡಿಕೆ ಇಡುವ ಮಟ್ಟಕ್ಕೆ ಹೋದರು. ಆಗ ಶಕ್ತಿ ಕೇಂದ್ರ ಅಲ್ಲಿಗೆ ಹೋಗಿ ಕನ್ನಡಿಗರಲ್ಲಿ ಧೈರ್ಯ ತುಂಬುವ ಕೆಲಸ ಮಾಡಿತು. ಕರ್ನಾಟಕದಲ್ಲಿಯೇ ಕನ್ನಡಿಗರಿಗೆ ಧೈರ್ಯ ತುಂಬಬೇಕಾದ ದಯನೀಯ ಸ್ಥಿತಿಯುಂಟಾದದ್ದು ನಿಜವಾಗಿಯೂ ನಾಚಿಕೆಗೇಡಿತನವಲ್ಲವೆ? ಇದೇ ಸಂದರ್ಭದಲ್ಲಿ

ಕನ್ನಡ ಮಾಧ್ಯಮ ಕುರಿತ ವಿವಾದ ತೀವ್ರ ಸ್ವರೂಪ ಪಡೆದುಕೊಂಡಿತು. ಶಾಲೆಗಳಲ್ಲಿ ಮಾತೃಭಾಷಾ ಮಾಧ್ಯಮ ಜಾರಿ ವಿಚಾರದಲ್ಲಿ ಸರ್ಕಾರದೊಂದಿಗೆ ಕನ್ನಡಪರ ಸಂಘಟನೆಗಳು ಮಾತುಕತೆ ನಡೆಸತೊಡಗಿದವು. ಆಗ ಶಿಕ್ಷಣ ಸಚಿವರಾಗಿದ್ದ ಎಚ್.ಜಿ. ಗೋವಿಂದೇಗೌಡರೊಂದಿಗೆ ನಾನು, ಡಾ.ಎಚ್. ನರಸಿಂಹಯ್ಯ, ಪ್ರೊ.ಎಲ್. ಎಸ್. ಶೇಷಗಿರಿರಾವ್, ಹೇಮಲತಾ ಮಹಿಷಿ ಮುಂತಾದವರು ಚರ್ಚಿಸಿದೆವು. ಶಾಲೆಗಳಲ್ಲಿ ಕನ್ನಡ ಮಾಧ್ಯಮ ಜಾರಿಗೊಳಿಸುವಂತೆ ಹೊರಡಿಸಲಾಗಿದ್ದ ಸರ್ಕಾರದ ಆದೇಶ ಸಂವಿಧಾನ ಸಿಂಧುತ್ವಕ್ಕೆ ವ್ಯತಿರಿಕ್ತವಾಗಿದೆ ಎಂದು ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ ಆಫ್ ಪ್ರೈಮರಿ ಅಂಡ್ ಸೆಕೆಂಡರಿ ಸ್ಕೂಲ್ಸ್‌ನ ಕಾರ್ಯದರ್ಶಿ ಕೆ.ಎಸ್. ಕೃಷ್ಣ ಅಯ್ಯರ್ ಹೈಕೋರ್ಟ್‌ಗಳಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ನಾಡಿನ ಹದಿನೈದು ಖ್ಯಾತ ಕನ್ನಡ ಸಾಹಿತಿಗಳು ರಾಜ್ಯ ಸರ್ಕಾರ ಹೊರಡಿಸಿದ್ದ ಕನ್ನಡಪರ ಆದೇಶದ ಪರವಾಗಿ ಕೋರ್ಟ್‌ನಲ್ಲಿ ವಾದಿಸಲು ಮುಂದಾದಾಗ ಅವರ ಪರವಾಗಿ ನಾನು ವಕಾಲತ್ ಹಾಕಿದ್ದೆ. ಹೀಗಾಗಿ ಎಚ್. ನರಸಿಂಹಯ್ಯ ಅವರು, ಕಾನೂನಿಗೆ ಸಂಬಂಧಿಸಿದ ವಿಷಯಗಳನ್ನೆಲ್ಲ ಮಂತ್ರಿಗಳಿಗೆ ವಿವರಿಸುವ ಜವಾಬ್ದಾರಿಯನ್ನು ನನಗೆ ಹೊರಿಸಿದರು.

ಈ ಘಟನಾವಳಿಗಳು ನಡೆಯುತ್ತಿರುವಾಗಲೇ ರಾಜ್ಯೋತ್ಸವ ದಿನಾಚರಣೆ ಎದುರಾಯಿತು. ಆಗ 'ಕನ್ನಡಪ್ರಭ' ಪತ್ರಿಕೆಯು ಕನ್ನಡ ಪರ ಹೋರಾಟಗಾರರನ್ನು ಮತ್ತು ಲೇಖಕರನ್ನು ಸಂದರ್ಶನ ನಡೆಸಿತು. ಆ ಸಂದರ್ಶಿತರಲ್ಲಿ ನಾನೂ ಒಬ್ಬನಾಗಿದ್ದೆ.

'ಕನ್ನಡದ ಸಮಸ್ಯೆಗೆ ನೀವೇನು ಪರಿಹಾರ ಸೂಚಿಸುತ್ತೀರಿ?' ಎಂದು ಪ್ರಶ್ನಿಸಿದರು.

"ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದು ಸಮಸ್ಯೆಗೆ ಮೂಲ ಕಾರಣವಾಗಿದೆ. ಕನ್ನಡದ ಎಲ್ಲ ಸಮಸ್ಯೆಗಳನ್ನು ಕಾನೂನಿನಿಂದಲೇ ಬಗೆಹರಿಸಿಕೊಳ್ಳಬೇಕೆಂದಿಲ್ಲ. ಅರಸು ಮುಖ್ಯಮಂತ್ರಿಗಳಾಗಿದ್ದಾಗ ಕನ್ನಡದ ಕೆಲಸಗಳಾದವು. ಅದೇ ಬೇರೆಯವರಿದ್ದಾಗ ಏಕೆ ಕುಂಠಿತಗೊಂಡವು?

"ಇನ್ನು ನ್ಯಾಯಾಲಯದಲ್ಲಿ ಕನ್ನಡ ಬಳಕೆಯ ಸಮಸ್ಯೆಗೆ ಕನ್ನಡಿಗ ವಕೀಲರೇ ಹೊಣೆಯಾಗಿದ್ದಾರೆ. ಇಂಗ್ಲಿಷ್‌ನಲ್ಲಿ ವಾದಿಸುವುದು ಪ್ರತಿಷ್ಠೆಯ ಸಂಕೇತ ಎನ್ನುವ ಭಾವನೆ ಬೇರೂರಿದೆ. ಅದರೊಂದಿಗೆ, ಕನ್ನಡದಲ್ಲಿ ವಾದಿಸಿದರೆ ಕಕ್ಷಿದಾರನ ಮುಂದೆ ತಮ್ಮ ಬಂಡವಾಳ ಬಯಲಾಗುವ ಭಯವೂ ಕೆಲವರಲ್ಲಿದೆ. ರಾಜ್ಯ ಉಚ್ಚನ್ಯಾಯಾಲಯ ಕನ್ನಡದಲ್ಲೇ ತೀರ್ಪುಗಳನ್ನು ಬರೆಯುವಂತೆ ಕಟ್ಟಾಜ್ಞೆ

ನೀಡುವಂತಾಗಬೇಕು. ಕನ್ನಡದಲ್ಲಿ ಪರಿಣತಿ ಇರುವ ನ್ಯಾಯಾಧೀಶರನ್ನು ನೇಮಕ ಮಾಡಬೇಕು" ಎಂಬಿತ್ಯಾದಿಯಾಗಿ ಹೇಳಿದೆ.

ಅಂದಿನ ಕನ್ನಡ ಪರ ಹೋರಾಟ, ಚಟುವಟಿಕೆಗಳು ಇಂದು ಇಲ್ಲವಾಗಿವೆ. ಗತ ನೆನಪುಗಳು ಉಕ್ಕಿದಾಗಲೆಲ್ಲ ಇಂದಿನ ವ್ಯಥೆಗಳು ಎದುರು ನಿಲ್ಲುತ್ತವೆ.

95

ನಾಗರಿಕತೆಯ ಶಿಖಂಡಿತನ, ರಕ್ತಸಿಕ್ತ ಸಜ್ಜನಿಕೆ

1995ರಷ್ಟೊತ್ತಿಗೆ ನಾನು ವೃತ್ತಿ ಆರಂಭಿಸಿ 24 ವರ್ಷಗಳಾಗಿದ್ದವು. ವೃತ್ತಿಯಲ್ಲಿ ಒಂದು ನೆಲೆಯನ್ನು ಕಂಡುಕೊಂಡಿರುವ ತೃಪ್ತಿ ನನಗಾಗಿತ್ತು. ಇದನ್ನಷ್ಟೇ ಹೇಳಿಬಿಟ್ಟರೆ ವೃತ್ತಿಯಲ್ಲಿ ನನಗುಂಟಾದ ಕರಾಳ ಅನುಭವಗಳನ್ನು ಅನಾವರಣಗೊಳಿಸಿ ದಂತಾಗುವುದಿಲ್ಲ.

ಗ್ರಾಮೀಣ ಪ್ರದೇಶಗಳಿಂದ ಬರುತ್ತಿದ್ದ ಬಹುತೇಕ ಕೊಲೆ ಕೇಸುಗಳಲ್ಲಿ ವೃತ್ತಿಪರ ಕೊಲೆಗಡುಕರು ಆರೋಪಿಗಳಾಗಿರುತ್ತಿರಲಿಲ್ಲ. ಆದರೆ ಅದೇ ನಗರ ಪ್ರದೇಶದಿಂದ ಬರುತ್ತಿದ್ದ ಬಹುತೇಕ ಕೊಲೆ ಕೇಸುಗಳಲ್ಲಿ ವೃತ್ತಿಪರ ಕೊಲೆಗಡುಕರು ಆರೋಪಿಗಳಾಗಿರುತ್ತಿದ್ದ ಸಂಗತಿ ನನ್ನ ಅವಗಾಹನೆಗೆ ಬಂದಿತು.

ಗ್ರಾಮೀಣ ಪ್ರದೇಶದಲ್ಲಿ ವೈರಿಗಳು ನೇರವಾಗಿ ಕಚ್ಚಾಡಿದರೆ ನಗರ ಪ್ರದೇಶಗಳಲ್ಲಿ ಕೊಲೆಗಡುಕ ಅದೃಶ್ಯನಾಗಿದ್ದುಕೊಂಡು ಬಾಡಿಗೆ ಕೊಲೆಗಡುಕರ ಮೂಲಕ ಕೊಲೆ ನಡೆಸುತ್ತಿರುವ ಸಂಗತಿ ನನ್ನ ಅನುಭವಕ್ಕೆ ಬಂದಿತು. ಇದೇಕೆ ಹೀಗೆ? ನೇರ ಕಾದಾಟದ ಹಳ್ಳಿಗರು ಮತ್ತು ಪ್ರಾಕ್ಸಿ ಕದನದ ನಾಗರಿಕರು ನನ್ನೆದುರು ಬಂದು

ನಿಲ್ಲತೊಡಗಿದರು. ಒಂದೆಡೆ ಕಾನೂನು ತಿಳಿಯದ ಹಳ್ಳಿಗರು, ಇನ್ನೊಂದೆಡೆ ಕಾನೂನನ್ನು ಅರೆದು ಕುಡಿದ ನಾಗರಿಕರು. ಕಾನೂನಿನ ತಿಳುವಳಿಕೆ ಬಂದರೆ ಅಪರಾಧಗಳು ಕಡಿಮೆಯಾಗುತ್ತವೆ ಎನ್ನುವ ಜ್ಯುಡಿಷಿಯಲ್ ಭಾಷಣಗಳು ಅದೆಷ್ಟು ಸೂಪರ್‌ಫಿಸಿಯಲ್ ಎನಿಸತೊಡಗಿತು. ಹಳ್ಳಿಗಾಡಿನಲ್ಲಿ ನ್ಯಾಯಾಲಯಗಳು ರಕ್ತಪಾತದಲ್ಲಿ ಪರ್ಯವಸಾನಗೊಳ್ಳುತ್ತವೆ ಎಂದು ನಾಗರಿಕರು ಮೂಗುಮುರಿಯುವಲ್ಲಿ ಅರ್ಥವಿಲ್ಲವೆನಿಸಿತು. ನಾಗರಿಕತೆ, ಸಂಸ್ಕೃತಿಗಳಲ್ಲಿ ಬೆಳೆದವರಲ್ಲಿ ರಕ್ತಪಾತದ ಪ್ರವೃತ್ತಿ ಬದಲಾಗಿದೆಯೇ? ರಕ್ತಪಾತದ ಮೂಲ ಪ್ರವೃತ್ತಿ ಹೊರಕ್ಕೆ ಕಾಣದಂತೆ ಮುಚ್ಚಿಟ್ಟು ಮೇಲೆ ಪೌಡರ್, ಕ್ರೀಮು, ಲಿಪ್‌ಸ್ಟಿಕ್‌ಗಳನ್ನು ಬಳಿದುಕೊಂಡಿರುವಂತೆಯೂ ತೀರಾ ಗೌಪ್ಯವಾಗಿ ಸಮಯ ಸಾಧಿಸಿ ಅದು ಹೊರಬಂದು ತನ್ನ ದಾಹ ಇಂಗಿಸಿಕೊಂಡು ಪುನಃ ಬಸವನ ಹುಳುವಿನಂತೆ ಷೆಲ್ ಒಳಕ್ಕೆ ಹೋಗುವಂತೆಯೂ ಕಂಡಿತು. ನಾಗರಿಕತೆಯ ಮುಖವಾಡದಲ್ಲಿ ನಡೆಯುವ ರಕ್ತಪಾತ ನೇರ ಹಣಾಹಣಿಯಲ್ಲಿ ನಡೆಯುವುದಿಲ್ಲ. ಬದಲಿಗೆ ಆ ಕೆಲಸಕ್ಕೆಂದೇ ಬಾಡಿಗೆ ಹಂತಕರ ವಿಭಾಗ ಸೃಷ್ಟಿಗೊಳ್ಳುತ್ತದೆ. ಕೆಲಸವನ್ನು ವಿಭಜಿಸುವಲ್ಲಿ ನಿಪುಣರಾದ ನಾಗರಿಕರು ತಮ್ಮ ಕಾಮ, ಪ್ರೇಮ, ಸೇಡುಗಳನ್ನು ಈಡೇರಿಸುವವರ ತಂಡಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಇಂಥ ವಿಚಾರಗಳು ಪ್ರಧಾನವಾಗಿ ನನ್ನನ್ನು ಆವರಿಸಿಕೊಂಡ ಕಾಲವದು. ಕೆಲವು ಕಾಲಗಳಲ್ಲಿ ಕೆಲವು ಯೋಚನೆಗಳು ನಮ್ಮ ಮನಸ್ಸನ್ನು ಪ್ರಧಾನವಾಗಿ ಆವರಿಸಿಕೊಂಡಿರುತ್ತವೆ ಎನ್ನುವುದು ನನ್ನ ಭಾವನೆ. ನಗರ ಜೀವನದಲ್ಲಿ ರೌಡಿಗಳು ಸೃಷ್ಟಿಯಾಗುವುದನ್ನು ಹಲವಾರು ಸಿನಿಮಾಗಳು romanticise ಗೊಳಿಸುತ್ತ ಬರುತ್ತಿವೆ. ಈ ಸಮಯದಲ್ಲಿ ನಡೆಯುವ ಅನ್ಯಾಯಗಳನ್ನು ಮಟ್ಟಹಾಕಲು ಕಾನೂನನ್ನು ಕೈಗೆ ತೆಗೆದುಕೊಳ್ಳುವವರು ರೌಡಿಗಳಾಗುತ್ತಾರೆ ಎನ್ನುವ ವಾದ ನನ್ನ ದೃಷ್ಟಿಯಲ್ಲಿ ತೀರಾ ಆಕ್ಷೇಪಾರ್ಹವಾದುದು. ಇದಕ್ಕೆ ವಿರುದ್ಧವಾಗಿ ನಾಗರಿಕತೆಯ ಮುಖವಾಡ ಧರಿಸಿದವರ ಸೇಡು, ರೋಷಗಳ ಈಡೇರಿಕೆಗೆ ಸಾಧನವಾಗಲು ಬಡ ಯುವಜನ ರೌಡಿಗಳಾಗಿ ಹೊರಹೊಮ್ಮುತ್ತಾರೆ. ಈ ರೌಡಿಗಳು ಯಾರನ್ನು ಕೊಲೆ ಮಾಡುತ್ತಾರೋ ಅವರೊಂದಿಗೆ ಯಾವುದೇ ಥರದ ರೋಷ, ದ್ವೇಷಗಳನ್ನು ಹೊಂದಿರುವುದಿಲ್ಲ. ಕೇವಲ ದುಡ್ಡಿಗಾಗಿ ನಿರ್ಲಿಪ್ತತೆಯಿಂದ ರಕ್ತ ಹರಿಸುತ್ತಾರೆ; ಕಸಾಯಿಖಾನೆಯಲ್ಲಿ ಹರಿಸುವಂತೆ. ಹೀಗೆ ಬಾಡಿಗೆ ಕೊಲೆಗಡುಕರಾಗುವ ಯುವಕರು ತಮ್ಮ ವೃತ್ತಿಯಲ್ಲಿ ಬೇರುಬಿಟ್ಟಂತೆ ಅವರದೇ ಭೂಗತ ಲೋಕಕ್ಕೆ ಡಾನ್‌ಗಳಾಗುತ್ತಾರೆ. ಇವರಿಗೆ ಪ್ರತಿಸ್ಪರ್ಧಿಯಾಗಿ ಮತ್ತೊಬ್ಬ ಡಾನ್ ಹುಟ್ಟಿಕೊಳ್ಳುತ್ತಾನೆ. ಇಂಥ ಅನೇಕ ಡಾನ್‌ಗಳ ಮಧ್ಯೆ ಕಾಳಗ ನಡೆಯುತ್ತದೆ ಇಡೀ ಸಮಾಜಕ್ಕೆ ಈ ಲೋಕ ಕೊಲೆಗಡುಕರ

ಲೋಕವಾಗಿ ಕಾಣಿಸುತ್ತದೆ. ರೌಡಿಗಳನ್ನು ಹುಟ್ಟಿಸಿದ್ದು ನಾಗರಿಕ ಸಮಾಜವೇ ಎನ್ನುವುದು ನೇಪಥ್ಯದಲ್ಲಿ ಉಳಿದುಬಿಡುತ್ತದೆ. ಇದು ಒಂದು ರೀತಿಯಲ್ಲಿ, ಕುಲೀನರು ಒಂದೆಡೆ ವೇಶ್ಯಾ ಸಂತತಿಯನ್ನು ಸೃಷ್ಟಿಸಿ ಇನ್ನೊಂದೆಡೆ ತಮ್ಮ ಕುಲಪಾವಿತ್ರ್ಯ ಕಾಪಾಡಿಕೊಂಡಂತೆ.

ಕೆಲವರು ರಕ್ತ ಹರಿಸಿಯೇ ನ್ಯಾಯ ಪಡೆದುಕೊಳ್ಳಬೇಕಾಗುತ್ತದೆಂದು ವಾದಿಸುತ್ತಾರೆ. ಅದಕ್ಕೆ ಮಹಾಭಾರತ ಮತ್ತು ರಾಮಾಯಣಗಳ ಉದಾಹರಣೆಗಳನ್ನು ಕೊಡುತ್ತಾರೆ. ಆದರೆ ಅವು ಒಂದು ಚಾರಿತ್ರಿಕ ಕಾಲಘಟ್ಟದಲ್ಲಿ ರೂಪುಗೊಂಡಂಥವು. ಇಂದು ಅವುಗಳನ್ನು ಯಥಾರ್ಥದಲ್ಲಿ ಅರ್ಥೈಸಿಕೊಳ್ಳುತ್ತಿರುವುದು ನಿಜವಾಗಿಯೂ ಅಪಾಯಕಾರಿ. ಅವುಗಳ ತತ್ವಾರ್ಥವನ್ನು ಗ್ರಹಿಸಿಕೊಂಡರೆ ರಕ್ತಪಾತಕ್ಕೆ ಅವಕಾಶವಿಲ್ಲದಂತೆ ಅವುಗಳನ್ನು ಗ್ರಹಿಸಿಕೊಳ್ಳಬಹುದು. ನಮ್ಮ ಅನೇಕ ಪುರಾಣಗಳನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಗ್ರಹಿಸಿಕೊಂಡು, ವರ್ತಮಾನದ ಹೊಸ ಮಾನವೀಯತೆಯ ದೃಷ್ಟಿಕೋನದಲ್ಲಿ ಗ್ರಹಿಸಿಕೊಂಡ ಮಹೋದಯರು ನಮ್ಮ ಕಣ್ಮುಂದಿದ್ದಾರೆ. ವಾಮಾಚಾರದಲ್ಲಿ ಶಕ್ತಿಯನ್ನು ಆರಾಧಿಸುವ ತಾಂತ್ರಿಕರ ಟೊಳ್ಳುತನವನ್ನು ಪರಮಹಂಸರು ಭೇದಿಸಿದರು. ಹೀಗೆಯೇ ಅರವಿಂದ ಘೋಷ್ ಮತ್ತು ವಿವೇಕಾನಂದರನ್ನು ಹೆಸರಿಸಬಹುದು. ಇವರು ಪುರಾಣಗಳ ಯಥಾರ್ಥವನ್ನು ಬಿಟ್ಟು ತತ್ವಾರ್ಥವನ್ನು ಗ್ರಹಿಸಿಕೊಂಡುದರಿಂದಾಗಿ ಹಿಂದೂ ಧರ್ಮದ ಸುಧಾರಣೆಯಾಗಲು ಸಾಧ್ಯವಾಯಿತು ಎನ್ನುವುದು ನನ್ನ ಭಾವನೆ. ಜಡ್ಡುಗೊಂಡ ಪುರೋಹಿತಶಾಹಿಯನ್ನು ವಿರೋಧಿಸಿದ ಪರಮಹಂಸರು ತಮ್ಮ ಜನಿವಾರವನ್ನು ಕಿತ್ತು ನದಿಯಲ್ಲಿ ಬಿಸಾಡಿದ್ದರಲ್ಲಿ ಅಗಾಧ ಅರ್ಥವಿದೆ. ಭಾರತವು ಊಳಿಗಮಾನ್ಯ ವ್ಯವಸ್ಥೆಯಿಂದ ಪ್ರಜಾಸತ್ತೆಗೆ ಪರಿವರ್ತನೆಗೊಳ್ಳುವ ಸಂಕ್ರಮಣ ಕಾಲದಲ್ಲಿ ಇವರೆಲ್ಲ ಬೋಧಿಸಿದ್ದನ್ನೂ ನಾವು ಗಮನಿಸಿಕೊಳ್ಳಬೇಕು. ಒಂದು ದೇಶ ಕೇವಲ ಆರ್ಥಿಕತೆ ಮತ್ತು ರಾಜಕೀಯದಲ್ಲಿ ಮಾತ್ರ ಹೊಸತನವನ್ನು ಕಂಡುಕೊಂಡರೆ ಸಾಲದು. ಜನರ ನರನಾಡಿಗಳಲ್ಲಿ ರಕ್ತವಾಗಿ ಹರಿಯುತ್ತಿರುವ ಧಾರ್ಮಿಕ ಭಾವನೆಯಲ್ಲೂ ಹೊಸತನ ಉಂಟಾಗಬೇಕಾದುದು ಅತ್ಯವಶ್ಯ. ದಾಯಾದಿಗಳು ತಮ್ಮ ಆಸ್ತಿಯ ವ್ಯಾಜ್ಯ ಬಗೆಹರಿಸಿಕೊಳ್ಳಲು ಕುರುಕ್ಷೇತ್ರ ಯುದ್ಧ ನಡೆಸಬೇಕಾದ ಅವಶ್ಯಕತೆಯಿಲ್ಲ. ಯುದ್ಧ ಸಂಸ್ಕೃತಿಗೆ ಬೇಸತ್ತೇ ಜನ ಶಾಂತಿ ಸಂಸ್ಕೃತಿಯತ್ತ ವಾಲಿದ್ದಾರೆ. ಯುದ್ಧ ಎನ್ನುವುದು ರಕ್ತಪಾತದಿಂದ ಕೂಡಿದ ರಾಜಕೀಯ; ಅಂತೆಯೇ ರಾಜಕೀಯ ಎನ್ನುವುದು ರಕ್ತಪಾತರಹಿತ ಯುದ್ಧ ಈ ಸತ್ಯವನ್ನು ಸಾಮಾನ್ಯರು ಅರಿತುಕೊಂಡಿದ್ದರಿಂದಲೇ ಬುಷ್‌ನಂಥ ಯುದ್ಧ ಪಿಪಾಸುಗಳ ಆಟ ಪೂರ್ಣವಾಗಿ ನಡೆಯುತ್ತಿಲ್ಲ. ಭಾರತದ ಯೋಧರು ಯುದ್ಧದಲ್ಲಿ ಸತ್ತರೆ ಅವರ ಶವಗಳನ್ನು

ಮೆರವಣಿಗೆ ಮಾಡಲಾಗುತ್ತದೆ. ಆದರೆ ಅಮೆರಿಕಾದಲ್ಲಿ ಅನವಶ್ಯಕವಾಗಿ ಒಬ್ಬನೇ ಯೋಧ ಸತ್ತರೂ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತದೆ. ಆಡಳಿತಾರೂಢ ಸರ್ಕಾರದ ಪತನಕ್ಕೆ ಕಾರಣವಾಗುತ್ತದೆ ಇದು ಆಗಬೇಕಾದರೆ ಸಾಮಾನ್ಯರ ಜೀವನಮಟ್ಟ ಏರಬೇಕು. ಆಗ ಆ ಜೀವಗಳಿಗೂ ಬೆಲೆ ಬರುತ್ತದೆ. ತನ್ನ ಯೋಧರ ಸಾವನ್ನು ದೈವಬಲಿಯಂತೆ ಮೆರೆಸುವ, ವೈಭವೀಕರಿಸುವ ಸ್ಥಿತಿಯಲ್ಲಿದೆ ಭಾರತ! ಇದರ ಬಗ್ಗೆ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆಯಲ್ಲವೆ.

ಸುಧಾರಣೆಗೆ ಒಳಪಡದ ಧರ್ಮಗಳೂ ನಮ್ಮ ಕಣ್ಮುಂದಿವೆ. ಶತಮಾನಗಳ ಹಿಂದೆ ಹೇಳಿದ್ದೇ ಸರಿ ಎಂದು ಪಟ್ಟು ಹಿಡಿದಿರುವುದರಿಂದ ಅದರ ಅನುಯಾಯಿಗಳು ಹೊಸ ಮೌಲ್ಯಗಳ ಸಾಮಾಜಿಕ ವ್ಯವಸ್ಥೆಯೊಂದಿಗೆ ಹಿಗ್ಗಿಕೊಳ್ಳಲಾಗದೆ ಧರ್ಮಾಂಧರಾಗಿ ತೊಳಲಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಧರ್ಮ ಯಾರಿಂದಲೂ ಬದಲಿಸಲಾರದಂಥದ್ದು ಎನ್ನುವ ಭ್ರಮೆ ಅವರನ್ನು ಕಾಡುತ್ತಿದೆ ಮತ್ತು ಅವರ ಬದುಕನ್ನೇ ನಾಶದಂಚಿಗೆ ತಳ್ಳುತ್ತಿದೆ.

ದೇವೀ ಪುರಾಣದಲ್ಲಿರುವ ರಕ್ತಬೀಜಾಸುರ ವಧೆಯನ್ನು ಪರಮಹಂಸರು ತೀರಾ ಹೊಸ ಪರಿಕಲ್ಪನೆಯಲ್ಲಿ ವಿವರಿಸಿದರು. ರಕ್ತ ಬೀಜಾಸುರನನ್ನು ಚಿತ್ತ ಬೀಜಾಸುರನೆಂದು ಕರೆದರು. ರಕ್ತಬೀಜಾಸುರ ಹಿಂದೆಂದೋ ಇದ್ದು ದೇವಿಯಿಂದ ವಧಿಸಲ್ಪಟ್ಟಂಥವ ಎನ್ನುವ ಕಲ್ಪನೆಯ ಮೂಲೋತ್ಪಾಟನೆ ಮಾಡಿದರು. ವ್ಯಕ್ತಿಯ ಚಿತ್ತದಲ್ಲಿ ಹುಟ್ಟುವ ಆಸುರೀ ವಿಚಾರವೊಂದು ಅಂಥ ಸಾವಿರ ಆಸುರೀ ವಿಚಾರಗಳಿಗೆ ಜನ್ಮ ನೀಡುತ್ತದೆ. ಆದ್ದರಿಂದ ಸದ್ವಿಚಾರವನ್ನು ಪ್ರಬಲಗೊಳಿಸಿಕೊಳ್ಳುವ ಮೂಲಕ ಚಿತ್ತಬೀಜಾಸುರನ ವಧೆ ಮಾಡಬೇಕೆನ್ನುವ ವ್ಯಾಖ್ಯಾನ ನೀಡಿದರು ಪರಮಹಂಸರು. ಪುರೋಹಿತಶಾಹಿಗಳಿಗೆ ಪರಮಹಂಸರ ಈ ವ್ಯಾಖ್ಯಾನ ಜೀರ್ಣವಾಗಲಿಲ್ಲ. ಆದರೆ ಪುರೋಹಿತಶಾಹಿಗಳ ಎಷ್ಟೋ ಡೊಂಬರಾಟಗಳಿಗೆ ಪರಮಹಂಸರಂಥವರು ಕಡಿವಾಣ ಹಾಕಿದ್ದಾರೆ. ಈ ಹಿಂದೆ ಬುದ್ಧ, ಮಹಾವೀರರು ಅಂತೆಯೇ ಬಸವ, ನಾನಕರು ಮುಂತಾದವರು ಇದನ್ನೇ ಮಾಡುತ್ತ ಬಂದುದರಿಂದ ಹಿಂದೂ ಧರ್ಮದಲ್ಲಿ ಸುಧಾರಣೆಗಳ ಪ್ರವಾಹವೇ ಉಂಟಾಯಿತು. ಇಂಥದೇ ಸುಧಾರಣೆ ಕ್ರೈಸ್ತ ಧರ್ಮದಲ್ಲಿ ಉಂಟಾಯಿತು. ಆದರೆ ಇಸ್ಲಾಮ್ ಧರ್ಮದಲ್ಲಿ ಇಂಥ ಸುಧಾರಣೆ ಅಷ್ಟಾಗಿ ಕಂಡುಬರುವುದಿಲ್ಲ ಎನ್ನುವುದು ನನ್ನ ಅನಿಸಿಕೆ.

ಈ ಪೀಠಿಕೆ ಭಾರವಾದಂತೆನಿಸಿದರೂ ನಾನು ಈಗ ಪ್ರಸ್ತಾಪಿಸಲಿರುವ ಸಂಗತಿಗಳಿಗೆ ಪೂರಕವಾಗಿದೆಯೆನಿಸುತ್ತದೆ.

ನನ್ನದೇ ಸ್ವಂತ ಜಮೀನೊಂದು ಸಿವಿಲ್ ಡಿಸ್ಪ್ಯೂಟ್‌ಗೆ ಒಳಗಾಗಿ ಉದ್ವೇಗದಲ್ಲಿದ್ದೆ. ಕೋರ್ಟ್‌ನಲ್ಲಿ ಆ ಕೇಸ್ ಅನ್ನು ಹೇಗೆ ಗೆಲ್ಲುವುದೆನ್ನುವ ಯೋಚನೆ ನನ್ನನ್ನು ಕಾಡುತ್ತಿತ್ತು. ಆ ಸಂದರ್ಭದಲ್ಲಿ ನನ್ನ ಕಕ್ಷಿದಾರನೊಬ್ಬ ಬಂದು, "ಸಾರ್ ನಿಮ್ಮ ಜ್ಯೂನಿಯರ್ ಲಾಯರ್‌ನಿಂದ ತಿಳಿಯಿತು, ಅದಾವನೋ ನಿಮ್ಮ ಜಮೀನಿನ ಮೇಲೆ ಕಣ್ಣು ಹಾಕಿದಾನಂತೆ. ನೀವು ಹೂಂ ಅನ್ನಿ ಚಿಟಿಕೆ ಹೊಡೆಯುವುದರಲ್ಲಿ ಆ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡ್ತೇನೆ ನೋಡಿ" ಎಂದ. ನೀವು ಅಸಹಾಯಶೂರರೇನೂ ಅಲ್ಲ. ಇಂಥ ಸಂದರ್ಭದಲ್ಲಿ ನನ್ನಂಥವರ ಸಹಾಯ ನಿಮಗೆ ಬೇಕೇ ಬೇಕಾಗುತ್ತದೆ ಎನ್ನುವ ಮಾತುಗಳನ್ನು ಅವನ ಕಣ್ಣು ಆಡುವುದು ಕಾಣಿಸಿತು. ಆ ಕಕ್ಷಿದಾರ ಒಬ್ಬ ರೌಡಿ. ರೌಡಿಯೆನ್ನುವ ಹಣೆಪಟ್ಟಿ ಬಿದ್ದಿದ್ದರಿಂದ ಪೋಲೀಸರು ಕೊಲೆ ಕೇಸೊಂದನ್ನು ನನ್ನ ಕೊರಳಿಗೆ ತಗುಲಿಸಿಬಿಟ್ಟಿದ್ದಾರೆ ಸಾರ್ ಕಾಪಾಡಿ ಎಂದು ಬಂದಿದ್ದ. ಬಾಯಿಮುಚ್ಚೋ, ನಿನ್ನ ಕೇಸಿಗೆ ಸಂಬಂಧಿಸಿ ಮಾತ್ರ ನನ್ನೊಂದಿಗೆ ಮಾತಾಡು. ನನ್ನ ಸಮಸ್ಯೆಗಳನ್ನು ಬಗೆಹರಿಸಿಕೊಡು ಅಂತ ನಿನ್ನ ಬಳಿ ಬಂದಿದ್ದೆನಾ ನಾನು? ಮೊದಲು ಎದ್ದು ಹೋಗು ಇಲ್ಲಿಂದ ಎಂದು ಗದರಿಸಿ ಓಡಿಸಿದೆ.

ಕ್ರಿಮಿನಲ್ ಲಾಯರ್ ವೃತ್ತಿಯಲ್ಲಿ ಸ್ವಲ್ಪವೇ ಜೋಲಿ ತಪ್ಪಿದರೂ ಪಾತಕಿ ಕಕ್ಷಿದಾರರು ತಮ್ಮ ಕಾನೂನುಬಾಹಿರ ಸಹಾಯದ ಬಲೆಯಲ್ಲಿ ನಮ್ಮನ್ನು ಸಿಕ್ಕಿಸಿಕೊಂಡು ಬಿಡುತ್ತಾರಲ್ಲವೇ ಎನ್ನಿಸಿ ಮನಸ್ಸು ಉದ್ವೇಗಗೊಂಡಿತು. ಯಾರಾದರೂ ಸ್ನೇಹಿತರನ್ನು ಕರೆದುಕೊಂಡು ಬಿಯರ್ ಹೀರುತ್ತಾ ಹರಟೆ ಹೊಡೆದರೆ ಈ ಜಂಟಾಟದಿಂದ ಮನಸ್ಸು ಮುಕ್ತನಾಗಬಹುದು ಎಂದುಕೊಂಡೆ.

ಅಷ್ಟರಲ್ಲಿ ಆತ್ಮೀಯ ಸ್ನೇಹಿತರಾದ ಲಾಯರ್ ಕೇಶವಮೂರ್ತಿಗಳಿಂದ ಫೋನ್ ಕರೆ ಬಂದಿತು. ಸಂಜೆಗೆ ಎಂ.ಜಿ. ರಸ್ತೆಯ ಹೋಟೆಲ್ ಒಂದರಲ್ಲಿ ಪಾರ್ಟಿಯಿರುವುದಾಗಿಯೂ ಅದಕ್ಕೆ ನೀವು ತಪ್ಪದೆ ಬರಬೇಕೆಂದೂ ಒತ್ತಾಯಿಸಿದರು. 'ಬಯಸ್ಸಿದ್ದನ್ನು ಈಡೇರಿಸುವ ಸ್ನೇಹಿತ ನೀವೇ ಕಣ್ರಿ. ನಿಮ್ಮನ್ನು ಆಹ್ವಾನಿಸಬೇಕೆಂದು ಯೋಚಿಸುತ್ತಿದ್ದೆ. ಈ ಕ್ಷಣದಲ್ಲಿಯೇ ನಿಮ್ಮ ಫೋನ್ ಬಂತು. ಖಂಡಿತ ಬರುವೆ' ಎಂದು ರಿಸೀವರ್ ಇಟ್ಟೆ.

ಹರ್ಷಗೌಡ ಎನ್ನುವ ಕೈಗಾರಿಕೋದ್ಯಮಿ ಆ ಪಾರ್ಟಿಯನ್ನು ಅರೇಂಜ್ ಮಾಡಿದ್ದರು. ಹರ್ಷಗೌಡರ ದೊಡ್ಡಪ್ಪನ ಮಗ ಅನಂತಗೌಡ ಮತ್ತು ಸ್ನೇಹಿತ ಕೇಶವಮೂರ್ತಿ ಮೂವರೇ ಇದ್ದರು ಆ ಲಾಡ್ಜ್ ರೂಮಲ್ಲಿ. ಬಗೆಬಗೆಯ ಖಾದ್ಯ, ಪಾನೀಯಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಗೌಡ ಸಹೋದರರ ಪರಿಚಯವನ್ನು ಕೇಶವಮೂರ್ತಿ ಮಾಡಿಕೊಟ್ಟರು.

ಪಾನಗೋಷ್ಠಿಯಲ್ಲಿ ಮಾತಾಡುತ್ತ ಹರ್ಷಗೌಡರ ಪೂರ್ವಾಪರಗಳು ಗೊತ್ತಾದವು. ನಂದಿನಿ ಲೇಔಟಿನಲ್ಲಿರುವ ಹರ್ಷಗೌಡರು ಹನ್ನೆರಡು ವರ್ಷಗಳ ಕಾಲ ಜರ್ಮನಿಯಲ್ಲಿ ಇದ್ದು ಬಂದವರು. ಇವರಿಗೂ ಮುಂಚೆ ಇವರ ಸಹೋದರ ಅನಂತಗೌಡ ಜರ್ಮನಿಯಲ್ಲಿಯೇ ಇದ್ದರು. ನಾಲ್ಕು ವರ್ಷಗಳಷ್ಟು ಹಿಂದೆಯಷ್ಟೇ ಈರ್ವರೂ ಭಾರತಕ್ಕೆ ವಾಪಸ್ಸಾಗಿದ್ದರು. ಹರ್ಷಗೌಡರು ಪೀಣ್ಯದಲ್ಲಿ ದೊಡ್ಡ ಕಾರ್ಖಾನೆಯೊಂದನ್ನು ಸ್ಥಾಪಿಸಿದ್ದರು. ಕೋಟ್ಯಂತರ ವ್ಯವಹಾರದ ಕುಳವಾಗಿದ್ದರು. ಅನಂತಗೌಡ ಕನ್‌ಸ್ಟ್ರಕ್ಷನ್ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹರ್ಷಗೌಡರಿಗೆ ಒಬ್ಬನೇ ಒಬ್ಬ ಪುತ್ರನಿದ್ದ. ಹೆಣ್ಣು ಮಕ್ಕಳಾಗಿರಲಿಲ್ಲ.

ಹರ್ಷಗೌಡ ಅಂಥ ಭಾರೀ ಶ್ರೀಮಂತರಾಗಿದ್ದರೂ ಬಹಳ ನಯವಿನಯದ ವ್ಯಕ್ತಿಯಾಗಿದ್ದರು. ನನಗೆ ಅವರು ತೋರಿದ ಆದರಾತಿಥ್ಯಗಳು ಅಪರೂಪದ್ದೆನಿಸಿತು. ಜರ್ಮನಿಗೆ ಹೋಗಿರದಿದ್ದರೆ ಇಂಥ ನಾಗರಿಕ ವರ್ತನೆಯ ಮೆರುಗು ಇವರಿಗಿರುತ್ತಿರಲಿಲ್ಲ ಎನಿಸದಿರಲಿಲ್ಲ.

ಒಂದು ತಿಂಗಳು ಕಳೆದಿರಬಹುದು. ಪುನಃ ಕೇಶವಮೂರ್ತಿಗಳಿಂದ ಪಾರ್ಟಿಗೆ ಆಹ್ವಾನ ಬಂದಿತು. ಹರ್ಷಗೌಡರ ಆತಿಥ್ಯಕ್ಕೆ ಮನಸೋತಿದ್ದ ನಾನು. ತಪ್ಪಿಸಿಕೊಳ್ಳಲಿಲ್ಲ, ಪಾನಗೋಷ್ಠಿಯಲ್ಲಿ ಹರ್ಷಗೌಡರು ಜರ್ಮನಿಯಲ್ಲಿ ತಮಗಾದ ಅನುಭವಗಳನ್ನು ಇಂಗ್ಲಿಷ್‌ನ ಮಧುರಶೈಲಿಯಲ್ಲಿ ವರ್ಣಿಸಿದರು. ಆಗಂತೂ ನಾನು ಜರ್ಮನಿಯಲ್ಲೇ ಹರ್ಷಗೌಡರೊಂದಿಗಿದ್ದೇನೆ ಎನ್ನುವ ಅನುಭವವಾಯಿತು. ಬೆಳೆಯಲು ಅವಕಾಶವಿದ್ದರೂ ಏಕೆ ಒಕ್ಕಲಿಗರು ನಿರೀಕ್ಷಿತ ಮಟ್ಟಕ್ಕೆ ಏರುತ್ತಿಲ್ಲ ಎನ್ನುವುದಕ್ಕೆ ತರ್ಕ ವಿಶ್ಲೇಷಣೆಗಳನ್ನು ಮಾಡಿದರು.

ಈಗ ನಿಮ್ಮ ವೃತ್ತಿಯ ಅನುಭವಗಳನ್ನು ಹೇಳಿ ಎಂದು ನನ್ನನ್ನು ಒತ್ತಾಯಿಸಿದರು.

ನನ್ನ ಬಳಿ ಬರುವ ಚಿತ್ರವಿಚಿತ್ರ ಕೊಲೆ ಕೇಸುಗಳು, ಕಕ್ಷಿದಾರರು, ಅಮಾಯಕ ಅಪರಾಧಿಗಳು, ವೃತ್ತಿಪರ ಅಪರಾಧಿಗಳು, ಸವಾಲು, ಪಾಟೀಸವಾಲು ಹೀಗೆ ಏನೆಲ್ಲ ಹೇಳಿದೆ.

'ನಿಮ್ಮ ಪ್ರಪಂಚ ನಮಗೆ ಗೊತ್ತಿರುವುದಿಲ್ಲ. ನೀವು ಹೇಳಿದ್ದೆಲ್ಲ ನಮಗೆ ಹೊಸದು ನೋಡಿ' ಎಂದರು ಹರ್ಷಗೌಡ. ನನ್ನ ಅನುಭವಗಳನ್ನು ತೀವ್ರ ಆಸಕ್ತಿ ವಹಿಸಿ ಆಲಿಸಿದ್ದರಿಂದ ನನಗೆ ಖುಷಿಯಾಗಿತ್ತು.

ಆನಂತರದ ದಿನಗಳಲ್ಲಿ ಹರ್ಷಗೌಡ ಅವರಾಗಿಯೇ ನನಗೆ ಫೋನ್ ಮಾಡತೊಡಗಿದರು. ಪ್ರತಿಯಾಗಿ ನಾನೂ ಫೋನ್ ಮಾಡತೊಡಗಿದೆ. ನಮ್ಮೀರ್ವರ ಮಧ್ಯೆ ಆರೇಳು ತಿಂಗಳಲ್ಲಿ ನಿಕಟ ಬಾಂಧವ್ಯ ಬೇರುಬಿಟ್ಟಿತು. ಗೆಳೆಯ ಕೇಶವಮೂರ್ತಿಗಳ ಮಧ್ಯಸ್ಥಿಕೆಯಿಲ್ಲದೆಯೇ ನನ್ನನ್ನು ಪಾರ್ಟಿಗಳಿಗೆ ಆಹ್ವಾನಿಸತೊಡಗಿದರು.

ಒಂದು ದಿನ ನನ್ನನ್ನು ತಮ್ಮ ಕಾರಲ್ಲಿ ತಮ್ಮ ಬಂಗಲೆಗೆ ಕರೆದೊಯ್ದರು ಹರ್ಷಗೌಡ. ಅರಮನೆಯಂತಿತ್ತು ಅವರ ಬಂಗಲೆ. ಹರ್ಷಗೌಡರ ಸಜ್ಜನಿಕೆಗೆ ನನ್ನ ಬಾಯಿ ಕಟ್ಟಿಹೋಗಿತ್ತು. ಎಷ್ಟೋ ಶ್ರೀಮಂತ ಕಕ್ಷಿದಾರರನ್ನು ನಾನು ಕಂಡಿದ್ದೆ. ಅವರ ಉಪಚಾರಗಳನ್ನೂ ಅನುಭವಿಸಿದ್ದೆ. ಆದರೆ ಕಕ್ಷಿದಾರರಲ್ಲದ ಈ ಶ್ರೀಮಂತರ ಉಪಚಾರಕ್ಕೆ ಸಮ್ಮೋಹಿತನಾಗಿದ್ದೆ. ಅಂದು ನಾನು, ಹರ್ಷಗೌಡ ಮತ್ತು ಅವರ ಸಹೋದರ ಅನಂತಗೌಡ ಮೂವರೇ ಇದ್ದೆವು. ನಮಗೆ ಬೇಕಾದ ಖಾದ್ಯ, ಪಾನೀಯಗಳನ್ನು ಹರ್ಷಗೌಡರ ಮಗನೇ ಸರಬರಾಜು ಮಾಡುತ್ತಿದ್ದ. ಆಳುಕಾಳುಗಳಾರೂ ಅಲ್ಲಿರಲಿಲ್ಲ. ಪಾಪ ನಿಮ್ಮ ಮಗನಿಗೆ ಇದೆಲ್ಲ ತೊಂದರೆ ಏಕೆ ಕೊಡುತ್ತಿದ್ದೀರಿ ಎಂದೆ. ಆತ್ಮೀಯವಾಗಿ ಆಳುಕಾಳುಗಳಿಂದ ಉಪಚಾರ ಮಾಡಿಸುವುದು ಸಜ್ಜನಿಕೆಯೆನಿಸುವುದಿಲ್ಲ. ಎಂದರು ಹರ್ಷಗೌಡ ನಗುತ್ತ.

ಸ್ವಲ್ಪ ಸಮಯ ಕಳೆದಿರಬೇಕು. ಅನಂತಗೌಡ , 'ನಿಮ್ಮ ಮುಂದೆ ನಮ್ಮ ಸಮಸ್ಯೆಯೊಂದನ್ನು ಹೇಳಿಕೊಳ್ಳಬೇಕೆಂದುಕೊಂಡಿದ್ದೇವೆ. ನೀವು ಪರ್ಮಿಷನ್ ಕೊಟ್ಟರೆ ಹೇಳುತ್ತೇವೆ' ಎಂದ.

'ನನ್ನೊಂದಿಗೆ ಹೇಳಿಕೊಳ್ಳಲು ಅಷ್ಟೇಕೆ ಮುಜುಗರ ನಿಮಗೆ? ನಮ್ಮ ಕೋರ್ಟು, ಕಾನೂನಿಗೆ ಸಂಬಂಧಿಸಿದ್ದಾರೆ ನನ್ನ ಶಕ್ತಿಯನ್ನೆಲ್ಲ ಪಣಕ್ಕಿಟ್ಟು ಪರಿಹರಿಸಿಕೊಡಲು ಯತ್ನಿಸುವೆ' ಎಂದೆ.

'ನೋಡಿ, ನೀವು ಆತ್ಮೀಯರು ಅಂತ ಎಲ್ಲ ಬಿಚ್ಚಿ ಹೇಳುತ್ತಿದ್ದೇನೆ. ನನ್ನ ಬ್ರದರ್ ಹರ್ಷಗೌಡರಿಗೆ ಬೆಂಗಳೂರಿನ ಹೃದಯಭಾಗದಲ್ಲಿ ಎರಡು ಎಕರೆ ಜಮೀನಿದೆ. ಇವರು ಜರ್ಮನಿಗೆ ಹೊರಡುವಾಗಲೇ ಸತ್ಯನಾರಾಯಣ ರೆಡ್ಡಿ ಎನ್ನುವ ವ್ಯಕ್ತಿ ತಗಾದೆ ಶುರುಮಾಡಿದ. ಕೋರ್ಟ್‌ನಲ್ಲಿ ಸಿವಿಲ್ ವ್ಯಾಜ್ಯ ಆರಂಭವಾಯಿತು. ಡಾಕ್ಯುಮೆಂಟ್‌ಗಳೆಲ್ಲ ನಮ್ಮಲ್ಲಿಯೇ ಇವೆ. ಅಕ್ರಮವಾಗಿ ಕಬ್ಜಾ ಮಾಡಿಕೊಂಡು ಕೂತಿರುವ ಸತ್ಯನಾರಾಯಣರೆಡ್ಡಿ ಏನಾದರೂ ಮಾಡಿ ಆ ಜಮೀನನ್ನು ತನ್ನದಾಗಿಸಿಕೊಳ್ಳಲು ಹೊಂಚುಹಾಕಿ ಕೋಟ್ಯಂತರ ಬೆಲೆ ಬಾಳುವ

ಆ ಜಮೀನಿನಲ್ಲಿ ಒಂದಷ್ಟು ಭಾಗವನ್ನು ಕೊಡುವುದಾಗಿ ಕೆಲವು. ಪೋಲೀಸ್ ಅಧಿಕಾರಿಗಳಿಗೆ ಆಮಿಷವೊಡ್ಡಿದ್ದಾನೆ. ಅವರಿಗೆ ನಾಲ್ಕು ಮಕ್ಕಳಿವೆ. ಅವರಲ್ಲಿ ಪ್ರಕಾಶ ರೆಡ್ಡಿ ಎನ್ನುವ ಮಗ ರೌಡಿಯಾಗಿ ಬೆಳೆದಿದ್ದಾನೆ. ಇತರ ಮೂವರು ಹುಡುಗರು ಅಂಥ ಧಾರ್ಷ್ಟ್ಯ ಸ್ವಭಾವದವರಲ್ಲ. ಆ ತನ್ನ ರೌಡಿ ಮಗನನ್ನು ಮುಂದಿಟ್ಟುಕೊಂಡು ಹರ್ಷಗೌಡರಿಗೆ ಬೆದರಿಕೆಯೊಡುತ್ತಿದ್ದಾನೆ. ಎಂಥ ಬೆದರಿಕೆ ಗೊತ್ತೆ? ಜಮೀನನ್ನು ಬಿಟ್ಟು ಕೊಡದಿದ್ದರೆ ನಿನ್ನ ಒಬ್ಬನೇ ಮಗನನ್ನು ಕೊಲೆ ಮಾಡಿಸುತ್ತೇನೆ ಎಂದು!

ಸತ್ಯನಾರಾಯಣರೆಡ್ಡಿಯ ತ್ರೈಕಾಲುಗಳು ಸೋತಿವೆ. ಅವನ ಹಿರಿಯ ಮಗ ಪ್ರಕಾಶ್‌ರೆಡ್ಡಿಯ ಬಲದಿಂದ ಇಂಥ ಪಾತಕತನಕ್ಕೆ ಕೈ ಹಾಕಿದ್ದಾನೆ. ಈಗಾಗಲೇ ಎರಡುಮೂರು ಬಾರಿ ಇಂಥ ಬೆದರಿಕೆಯ ಕರೆಗಳು ಬಂದಿವೆ. ನಾವು ಎಂಥ ಮೃದು ಸ್ವಭಾವದವರು ಎನ್ನುವುದು ನಿಮಗೆ ಗೊತ್ತಿರುವ ಸಂಗತಿಯೇ. ನಮ್ಮ ಸಜ್ಜನಿಕೆಯನ್ನು ಸತ್ಯನಾರಾಯಣರೆಡ್ಡಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾನೆ. ನೀವು ಖ್ಯಾತ ಕ್ರಿಮಿನಲ್ ಲಾಯರ್ ಎನ್ನುವುದನ್ನು ನಾವು ಕೇಳಿದ್ದೇವೆ. ನಿಮ್ಮ ಬಳಿ ಹಲವಾರು ಗೂಂಡಾಗಳು ಮತ್ತು ರೌಡಿಗಳು ಕಕ್ಷಿದಾರರಾಗಿ ಬಂದಿರುತ್ತಾರೆ. ಅಂಥವರ ಮೂಲಕ ಪ್ರಕಾಶರೆಡ್ಡಿಯನ್ನು ಕೊಲೆ ಮಾಡಿಸಿದರೆ ಹರ್ಷಗೌಡರ ವಂಶದ ಕುಡಿಯನ್ನು ಉಳಿಸಿಕೊಟ್ಟ ಪುಣ್ಯ ನಿಮಗೆ ಲಭಿಸುತ್ತದೆ. ಇದೋ ತೆಗೆದುಕೊಳ್ಳಿ. ಈ ಸೂಟ್‌ಕೇಸ್‌ನಲ್ಲಿ ಇಪ್ಪತ್ತೈದು ಲಕ್ಷಗಳಿವೆ. ಏನೂ ತಪ್ಪು ಭಾವಿಸಬೇಡಿ. ನಮ್ಮ ಪ್ರೀತಿ ವಿಶ್ವಾಸದ ಸಂಕೇತವಾಗಿ ಕೊಡುತ್ತಿದ್ದೇವೆ. ನೀವು ಯಾವ ರೌಡಿಯನ್ನು ಕೊಲೆ ಮಾಡಲು ನೇಮಿಸುತ್ತೀರೋ ಅವನಿಗೆ ಪ್ರತ್ಯೇಕ ಹಣ ಕೊಡುತ್ತೇವೆ. ಯಾವುದೇ ಕಾರಣಕ್ಕೂ ಎಲ್ಲೂ ನಮ್ಮ ಪ್ರಸ್ತಾಪ ಬರದಂತೆ ನೋಡಿಕೊಳ್ಳಬೇಕು ಎನ್ನುತ್ತ ಅನಂತಗೌಡ ಸೂಟ್‌ಕೇಸನ್ನು ನನ್ನ ಮುಂದಿರಿಸಿದರು

ಆ ಕ್ಷಣ ನಾನು ಕೂತಿದ್ದ ನೆಲವೇ ಬಾಯ್ದೆರೆದು ನುಂಗುವಂತೆ ನೋಡುತ್ತಿದೆಯೆನಿಸಿತು ನನಗೆ! ಆ ಶಾಕ್‌ನಿಂದ ಚೇತರಿಸಿಕೊಳ್ಳಲು ಶಕ್ತಿ ಸಾಲುತ್ತಿಲ್ಲ ಎನಿಸಿತು. ಮೊದಲು ಇಲ್ಲಿಂದ ಎದ್ದುಹೋಗು ಎಂದು ನನ್ನ ಅಂತರಾತ್ಮ ಹೇಳತೊಡಗಿತು.

ಅವರ ದಾಕ್ಷಿಣ್ಯ, ಸಜ್ಜನಿಕೆ, ನಯವಿನಯಗಳು ಎಂಥ ಬಲವಾದ ಸಂಕೋಲೆಗಳಾಗಿ ನನ್ನನ್ನು ಬಂಧಿಸಿವೆಯಲ್ಲ ಎನ್ನುವ ಅನುಭವ ಪ್ರಪ್ರಥಮವಾಗಿ ಆಯಿತು.

ನಾನು ಮೌನವಾಗಿಯೇ ಇದ್ದೆ. ಅರ್ಧಕ್ಕೇ ಬಿಟ್ಟು ಹೋದರೆ ಸಜ್ಜನಿಕೆಯೆನಿಸು ವುದಿಲ್ಲವೆಂದು ಪಾನಗೋಷ್ಠಿಯನ್ನು ಮುಂದುವರಿಸಿದೆ. ಊಟದ ಶಾಸ್ತ್ರವನ್ನು

ಮುಗಿಸಿದೆ. ನನ್ನೊಳಗಿನ ಅತೃಪ್ತಿ, ಸಿಟ್ಟುಗಳನ್ನು ಎಳ್ಳಷ್ಟೂ ಪ್ರಕಟಿಸದೆ 'ಇನ್ನೊಂದು ವಾರಬಿಟ್ಟು ಫೋನ್ ಮಾಡಿರಿ, ನಿಮಗೆ ತಿಳಿಸುತ್ತೇನೆ' ಎನ್ನುವ ಮಾತುಗಳು ಯಾಂತ್ರಿಕವಾಗಿ ಬಾಯಿಂದ ಉದುರಿಸಿದೆ.

ನನ್ನ ಮೌನವನ್ನು ಅರ್ಥಮಾಡಿಕೊಂಡು ಇರಬೇಕು, ನಾನು ಹೊರಡುವಾಗ ಸೂಟ್‌ಕೇಸ್ ಅನ್ನು ಒಯ್ಯುವಂತೆ ಒತ್ತಾಯಿಸಲಿಲ್ಲ. ಅವರೇ ಕಾರ್‌ನಲ್ಲಿ ಬಂದು ನನ್ನನ್ನು ಮನೆಗೆ ಡ್ರಾಪ್ ಮಾಡಿದರು.

ನನ್ನ ರೀಡಿಂಗ್ ರೂಮಲ್ಲಿ ಹೋಗಿ ಕೂತೆ. ಪಾರ್ಟಿಯ ನಂತರ ಎಂದಿನಂತೆ ಆವರಿಸುತ್ತಿದ್ದ ಸುಖನಿದ್ರೆ ಎಲ್ಲೋ ತಪ್ಪಿಸಿಕೊಂಡು ಹೋಗಿತ್ತು.

ಇಪ್ಪತ್ತೈದು ವರ್ಷಗಳ ನನ್ನ ವೃತ್ತಿಯಲ್ಲಿ ಇಂಥ ಅದೆಷ್ಟೋ ಲಕ್ಷಗಳನ್ನು ನೋಡಿದ್ದೆ. ಇಂದು ಆ ಸೂಟ್‌ಕೇಸ್‌ಗೆ ನನ್ನನ್ನು ಖರೀದಿಸಲು ಸಾಧ್ಯವಾಗಲಿಲ್ಲ ಎನ್ನುವ ಹೆಮ್ಮೆ ಒಂದೆಡೆ ಇಣುಕಿ ಆತ್ಮಸಂತೋಷ ಸೂಸತೊಡಗಿತು. ಆದರೆ ನನ್ನ ತರ್ಕಬುದ್ಧಿ ಸುಮ್ಮನಿರಲಿಲ್ಲ. ನೀನು ವೃತ್ತಿಯ ಆರಂಭದ ಸ್ಥಿತಿಯಲ್ಲಿದ್ದಾಗ ಲಕ್ಷಗಳೆಂದರೆ ಆಶ್ಚರ್ಯಗೊಳ್ಳುವಾಗ ಇಂಥ ಮೊತ್ತ ನಿನ್ನ ಮುಂದೆ ಬಂದು ಅಪ್ಪಿಕೋ ಎಂದು ನರ್ತಿಸಿದ್ದರೆ ಸುಮ್ಮನಿರುತ್ತಿದ್ದೆಯಾ ಎಂದು ಕೇಳಿತು.

ವ್ಯಕ್ತಿತ್ವ ಆತ್ಮಗೌರವಗಳು ಸುಮ್ಮನೆ ಬರಲಾರವು. ಅದಕ್ಕಾಗಿ ಪರಿಶ್ರಮಪಡಬೇಕು. ಅವನ್ನು ಕೃಷಿ ಮಾಡಿ ಬೆಳೆಸಿದಾಗ, ಮರವಾಗಿ ಬೆಳೆದಾಗ ಮಾತ್ರ ಬಾಗಲಾರವು ಅಲ್ಲವೆ ಎನಿಸಿತು.

ವಿದೇಶಿ ನಯವಿನಯಗಳು, ಸುಸಂಸ್ಕೃತಿಯ, ಸಜ್ಜನಿಕೆಯ ಶ್ರೀಮಂತ ಹರ್ಷಗೌಡನ ಕಣ್ಣಲ್ಲಿ ನನ್ನನ್ನು ಏನೆಂದು ಕಾಣಿಸಿದೆ ಎನ್ನುವ ಪ್ರಶ್ನೆ ಧುತ್ತೆಂದಾಗ ಆತ ಈ ದೀರ್ಘಾವಧಿಯಲ್ಲಿ ತನ್ನ ಆದರಾತಿಥ್ಯಗಳಿಂದ ನನ್ನನ್ನು ಓಲೈಸಿದ ಸುಖಸಂತೋಷದ ಭಾವಗಳು ಭಗ್ಗನೆ ಬೆಂಕಿ ಹತ್ತಿಕೊಂಡು ಉರಿಯತೊಡಗಿತು.

ಆತ ನನ್ನನ್ನು ಖ್ಯಾತ ಕ್ರಿಮಿನಲ್ ಲಾಯರ್ ಎಂದು ಕಾಣಲಿಲ್ಲ. ಕ್ರಿಮಿನಲ್ ಎಂದು ಕಂಡನಲ್ಲವೆ? ಬಾಡಿಗೆ ಕೊಲೆಪಾತಕಿಗಳ ಬ್ರೋಕರ್‌ನಂತೆ ಕಂಡನಲ್ಲವೆ? ಇದ್ದಕ್ಕಿದ್ದಂತೆ ಸಜ್ಜನಿಕೆಯ ಹರ್ಷಗೌಡನ ಮುಖ ಉರಿಯುವ ಮೇಣದ ಬತ್ತಿಯಂತೆ ಕರಗತೊಡಗಿತು. ಸ್ವಾರ್ಥಾತಿರೇಕದ, ಹೇಡಿತನದ, ಪೌರುಷಹೀನತೆಯ ಗಂಟುಗಳು ಊದಿಕೊಂಡು ಅವನ ಮುಖ ವಿಕಾರರೂಪ ಪಡೆದುಕೊಳ್ಳತೊಡಗಿತು.

ತನ್ನ ವಂಶದ ಕುಡಿಯನ್ನು ಉಳಿಸಿಕೊಳ್ಳಲು ಹೇಡಿಯಂತೆ ಮತ್ತೊಬ್ಬರನ್ನು ಬಾಡಿಗೆಗೆ ಪಡೆದುಕೊಳ್ಳುವುದರ ಮತ್ತು ಶಿಖಂಡಿಯೊಬ್ಬ ತನ್ನ ಪತ್ನಿಗೆ ಗರ್ಭದಾನ

ಮಾಡು ಎಂದು ಕೇಳುವುದರ ಮಧ್ಯೆ ಏನು ವ್ಯತ್ಯಾಸ ಇರಬಹುದು ಎಂದು ಯೋಚಿಸತೊಡಗಿತು ಮಿದುಳು.

ಬೆಳಗ್ಗೆ ನನ್ನ ಪತ್ನಿ ಎಬ್ಬಿಸಿದಾಗ 8 ಗಂಟೆಯಾಗಿಬಿಟ್ಟಿತ್ತು. ತಲೆ, ಮೈಗಳು ಸಿಡಿಯುತ್ತಿದ್ದವು.

ಒಂದು ವಾರದ ನಂತರ ಹರ್ಷಗೌಡನ ಇಂಪಾದ ಇಂಗ್ಲಿಷ್ ಧ್ವನಿ ಫೋನ್‌ನಲ್ಲಿ ಕೇಳಿಸಿತು. "ದಯವಿಟ್ಟು ಇನ್ನು ಮುಂದೆ ನನಗೆ ಫೋನ್ ಮಾಡಬೇಡಿ" ಎಂದು ಫೋನ್ ಇಟ್ಟೆ. ಮನಸ್ಸು ಹಗುರಾಗಿ ತೇಲಾಡತೊಡಗಿತು. ಸಾಮಾನ್ಯರ ಒಡ್ಡತನ, ಸೌಜನ್ಯರಾಹಿತ್ಯಗಳ ಮಧ್ಯ ಸ್ಫೋಟಗೊಳ್ಳುವ ರೋಷ-ದ್ವೇಷಗಳಲ್ಲಿ ಹೃದಯದ ಮಿಡಿತ ಕೇಳತೊಡಗಿತು.

96

ಗುಳೆಯೆದ್ದ ರೈತ ಮಕ್ಕಳು ಕ್ರಿಮಿನಲ್‌ಗಳಾಗುವ ಪರಿ

ನಗರೀಕರಣದ ಮೂಲಭೂತ ಬೆಳವಣಿಗೆಗೆ ಅತ್ಯವಶ್ಯಕವಾದುದು ಸಂಪರ್ಕ. ಹಲವಾರು ಸಂಪರ್ಕ ಸಾಧನಗಳಲ್ಲಿ ಹೆದ್ದಾರಿ ಬಹುಮುಖ್ಯವಾದುದು. ನಗರ ಹಿಗ್ಗುತ್ತಾ ಹೋದಂತೆ ಹಳ್ಳಿಗಳು ಅದರ ವಾತಾಪಿ ಗರ್ಭದಲ್ಲಿ ಜೀರ್ಣಗೊಂಡು ಬಿಡುತ್ತವೆ. ಆಗ ಆ ಹಳ್ಳಿಗಳ ಭೂಮಿಗೆ ಭಾರೀ ಬೆಲೆ ಬಂದುಬಿಡುತ್ತದೆ. ಭೂಮಿಯ ಫಲವತ್ತತೆಯನ್ನು ಆಧರಿಸಿ ಅದರ ಬೆಲೆಯಲ್ಲಿ ಹೆಚ್ಚುಕಡಿಮೆಯಾಗುತ್ತ ಹೋಗುವುದು ಗ್ರಾಮೀಣ ವ್ಯವಸ್ಥೆಯಲ್ಲಿ ಸಾಮಾನ್ಯ. ಒಣ ಬೇಸಾಯದ ಜಮೀನು ನೀರಾವರಿಯಾಯಿತೆಂದರೆ ಅದರ ಬೆಲೆಯಲ್ಲಿ ಇದ್ದಕ್ಕಿದ್ದಂತೆ ಕನಿಷ್ಠ ಹತ್ತುಪಟ್ಟು ನೆಗೆತ ಉಂಟಾಗಿಬಿಡುತ್ತದೆ. ಏಕೆಂದರೆ, ಒಣಬೇಸಾಯದಲ್ಲಿ ಪ್ರತಿ ಎಕರೆಗೆ ಬರುವ ಉತ್ಪನ್ನಕ್ಕಿಂತ ಹತ್ತಾರುಪಟ್ಟು ಹೆಚ್ಚಿನ ಫಸಲು ನೀರಾವರಿ ಜಮೀನಿನಲ್ಲಿ ಬರಲಾರಂಭಿಸುತ್ತದೆ. ಕೃಷಿ ಉತ್ಪನ್ನಗಳ ಉತ್ಪಾದನೆಯ ಸಾಮರ್ಥ್ಯಕ್ಕನುಗುಣವಾಗಿ ಗ್ರಾಮೀಣ ಜಮೀನುಗಳಲ್ಲಿ ಬೆಲೆಯೇರಿಕೆಯುಂಟಾಗುವುದು ಒಂದು ರೀತಿ. ಆದರೆ ನಗರೀಕರಣದ ತೆಕ್ಕೆಯೊಳಕ್ಕೆ ಆ ಜಮೀನು ಒಳಪಟ್ಟಿತೆಂದರೆ ಬರೀ ಹತ್ತುಪಟ್ಟು ಅಲ್ಲ ಕನಿಷ್ಠ ನೂರುಪಟ್ಟು ನೆಗೆತ ಅದರ ಬೆಲೆಯಲ್ಲಿ ಉಂಟಾಗುತ್ತದೆ. ಆದರೆ ಈ ಬೆಲೆ ಹೆಚ್ಚಳಕ್ಕೆ ಕೃಷಿ

ಉತ್ಪನ್ನದ ಸಾಮರ್ಥ್ಯ ಅಳತೆಗೋಲಾಗಿರುವುದಿಲ್ಲ! ಕೃಷಿ ವ್ಯವಸ್ಥೆಯನ್ನು ಸಮಾಧಿ ಮಾಡಿ ಅದರ ಮೇಲೆ ನಗರ ರಾಕ್ಷಸ ನರ್ತಿಸತೊಡಗುತ್ತಾನೆ. ರೈತ ತನ್ನ ಜಮೀನಿನಲ್ಲಿ ವಿಸ್ತಾರವಾದ ಪ್ಲಾಟುಗಳನ್ನು ಮಾಡಿ ಅದರಲ್ಲಿ ಬೆಳೆ ತೆಗೆಯಲು ಯತ್ನಿಸುವುದಕ್ಕೆ ವಿರುದ್ಧವಾಗಿ ಲೇಔಟ್ ಮಾಲೀಕ ಅತ್ಯಂತ ಚಿಕ್ಕ ಚಿಕ್ಕ ಪ್ಲಾಟುಗಳನ್ನು ಮಾಡಿ ಭಾರೀ ಮೊತ್ತಕ್ಕೆ ಅವನ್ನು ಮಾರಿಕೊಳ್ಳತೊಡಗುತ್ತಾನೆ. ರೈತ ಜಮೀನನ್ನು ಫಲವತ್ತುಗೊಳಿಸಲು ಹಗಲಿರುಳೂ ಶ್ರಮಿಸಿದರೆ ರಿಯಲ್ ಎಸ್ಟೇಟ್ ಏಜೆಂಟ್ ಅದನ್ನು ಬಂಜರುಗೊಳಿಸಲು ಶ್ರಮಿಸುತ್ತಿರುತ್ತಾನೆ.

ಜಮೀನು ಫಲವತ್ತತೆಯಿಂದ ಬಂಜರಾಗಿ ಪರಿವರ್ತನೆಗೊಂಡಾಗ ಅದನ್ನು ನೆಚ್ಚಿಕೊಂಡಿದ್ದ ಹಳ್ಳಿಯ ವಿವಿಧ ಶ್ರೇಣಿಗಳ ಜನ ವಿವಿಧ ರೀತಿಗಳಲ್ಲಿ ಅನಾಥರಾಗಿ ಬಿಡುತ್ತಾರೆ. ಈ ಅನಾಥತೆ ಕೇವಲ ಆರ್ಥಿಕ ಅಂಶಕ್ಕೆ ಮಾತ್ರ ಸೀಮಿತಗೊಳ್ಳದೆ ಸಾಮಾಜಿಕ, ಮಾನವೀಯ, ಧಾರ್ಮಿಕ, ಕೌಟುಂಬಿಕ ಒಟ್ಟಾರೆ ಸಾಂಸ್ಕೃತಿಕ ಅಂಶಗಳವರೆಗೆ ವ್ಯಾಪಿಸಿಕೊಳ್ಳುತ್ತದೆ.

ಹಳ್ಳಿಯ ಜಮೀನುಗಳಲ್ಲಿ ಕೆಲಸ ಮಾಡುವ ನಿರಕ್ಷರಿಗಳಿಗೆ ನಗರದ ಕಾರ್ಖಾನೆಗಳು ಕೆಲಸ ನೀಡುವುದಿಲ್ಲ. ನಗರ ಬದುಕು ಪರಿವರ್ತಿತ ಹಳ್ಳಿಗರ ಮುಂದೆ ಚಿತ್ರವಿಚಿತ್ರ ಸರಕುಗಳ ಆಮಿಷ ಒಡ್ಡತೊಡಗುತ್ತದೆ. ಆದರೆ ಬಡ ರೈತ ತನ್ನ ಕೃಷಿಜ್ಞಾನದಿಂದ ಅವನ್ನು ಖರೀದಿಸಲು ಅಶಕ್ತನಾಗುತ್ತಾನೆ. ಬದಲಾದ ಪರಿಸರದಲ್ಲಿ ಕೆಲವರು ಏನಾದರೂ ಮಾಡಿ ಹಣ ಗಳಿಸಲು ಮುಂದಾಗಿಬಿಡುತ್ತಾರೆ.

ಹಳ್ಳಿಯ ಹೋಟೆಲ್‌ನಲ್ಲಿ ಅಸ್ಪೃಶ್ಯನಿಗೆ ಚಹದ ಕಪ್ಪು ಪ್ರತ್ಯೇಕ ಇಡುವಂತೆ ಒತ್ತಾಯಿಸುವ ಸವರ್ಣೀಯ ಹೆದ್ದಾರಿಯ ಡಾಬಾಗಳಲ್ಲಿ ಸಪ್ಲೈ ಮಾಡಲು, ಮುಸುರೆ ತೊಳೆಯಲು ತಯಾರಾಗಿಬಿಡುತ್ತಾನೆ. ಏಕೆಂದರೆ ಕೃಷಿ ಶ್ರಮಕ್ಕೆ ಸಿಗುವ ಕೂಲಿಗಿಂತ ಎರಡುಮೂರುಪಟ್ಟು ಹೆಚ್ಚಿನ ಕೂಲಿ ಅದರಲ್ಲಿ ಸಿಗತೊಡಗುತ್ತದೆ. ರಾಜಧಾನಿಯ ಪಬ್ಬು, ಬಾರುಗಳಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳ ಸವರ್ಣೀಯ ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಪ್ಲೈಯರ್ ಮತ್ತು ಕ್ಲೀನರ್‌ಗಳಾಗಿರುವುದರ ಗುಟ್ಟಿದು.

ಡಾಬಾ ಮತ್ತು ಪಬ್ಬು, ಬಾರುಗಳಲ್ಲಿ ದಲಿತರ ಎಂಜಲು ಎತ್ತುವುದಿಲ್ಲ ಎನ್ನುವುದಕ್ಕೆ ಅವಕಾಶವೇ ಇಲ್ಲದಂಥ ವಾತಾವರಣ.

ನಗರೀಕರಣ ಸವರ್ಣೀಯರ ಮೇಲೆಯೇ ಈ ರೀತಿಯ ಪರಿಣಾಮವುಂಟು ಮಾಡಿದ್ದರೆ ಇನ್ನು ಗ್ರಾಮೀಣ ದಲಿತರ ಮೇಲೆ ಇನ್ನೆಂಥ ದುಷ್ಪರಿಣಾಮವುಂಟು ಮಾಡಿರಬೇಕು ಊಹಿಸಿಕೊಳ್ಳಿ.

ಬೆಂಗಳೂರಿನಿಂದ ಸುಮಾರು ಇಪ್ಪತ್ತೈದು ಕಿ.ಮೀ.ಗಳ ದೂರದವರೆಗೆ ಎಲ್ಲ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಳ್ಳಿ ಯುವಕರು ಸೈಕಲ್ ಹಾಕಿಕೊಂಡು ಸುಮ್ಮನೇ ತಿರುಗಾಡುತ್ತಿರುತ್ತಾರೆ. ಬೇರೆ ಕೆಲಸಗಳೇ ಇರುವುದಿಲ್ಲ. ಹಳ್ಳಿಗಳಲ್ಲಿ ಇವರಿಗೆ ಪುಂಡರು ಎಂದು ಹಣೆಪಟ್ಟಿ ಕಟ್ಟಿರುತ್ತಾರೆ. ಹೆದ್ದಾರಿಯ ಮೇಲೆ ಇವರ ತಿರುಗಾಟ ವಿಶೇಷವಾಗಿ ಬೆಳಗಿನ ಜಾವ ಮತ್ತು ರಾತ್ರಿ ಸಮಯಗಳಲ್ಲೇ ಹೆಚ್ಚು. ರಾಜ್ಯದ ವಿವಿಧೆಡೆಗಳಿಂದ ಬೆಂಗಳೂರಿಗೆ ಹೊರಡಲು ಬಸ್ ಹತ್ತುವಾಗ ಸುರಕ್ಷಿತವಾಗಿ ಊರು ತಲುಪಿಸು ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡರೆ ಈ ಸೈಕಲ್ ಸವಾರಿಯ ಯುವಕರು ವಾಹನಗಳು ಅಪಘಾತಕ್ಕೀಡಾಗಲಿ ಎಂದು ಹಂಬಲಿಸುತ್ತಿರುತ್ತಾರೆ! ಅಪಘಾತಗಳು ಸಂಭವಿಸಿದರೆ ಈ ಯುವಕರಿಗೆ ಹಬ್ಬ! ಅಪಘಾತ ಸ್ಥಳಕ್ಕೆ ಎಲ್ಲರಿಗಿಂತ ಮುಂಚೆ ಸಹಾಯಕರ ವೇಷದಲ್ಲಿ ಮುನ್ನುಗ್ಗಿರುತ್ತಾರೆ. ಅಪಘಾತಕ್ಕೀಡಾಗಿ ನರಳುತ್ತಿರುವ ಗಾಯಾಳುಗಳ ಮತ್ತು ಸತ್ತವರ ಹಣ, ಒಡವೆಗಳನ್ನು ಕದ್ದು ಪೋಲೀಸರು ಬರುವಷ್ಟರಲ್ಲಿ ಮಂಗಮಾಯವಾಗಿರುತ್ತಾರೆ. ರೈಲು ಅಪಘಾತವೊಂದು ಸಂಭವಿಸಿದಾಗ ಒಬ್ಬ ಪೊಲೀಸ್ ಶವಗಳ ಮೇಲಿನ ಚಿನ್ನಾಭರಣವನ್ನು ಕದ್ದುಕೊಂಡು ತಲೆಮೇಲಿಟ್ಟುಕೊಂಡು ಅದರ ಮೇಲೆ ಪೋಲೀಸ್ ಹ್ಯಾಟ್ ಹಾಕಿಕೊಂಡ. ಆದರೆ ಒಂದು ಚಿನ್ನದ ಸರ ಹ್ಯಾಟ್‌ನಿಂದ ಜರಿದು ಪೊಲೀಸನ ಕಿವಿಯ ಬಳಿ ಇಳಿಬಿದ್ದಿತು. ಈ ದೃಶ್ಯವನ್ನು ಜಾಣ ಛಾಯಾಗ್ರಾಹಕನೊಬ್ಬ ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದು ವೃತ್ತಿಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾದುದನ್ನು ಓದುಗರು ಮರೆತಿರಲಿಕ್ಕಿಲ್ಲ. ಕೆಲವು ಪೊಲೀಸರು ಸಂರಕ್ಷಣೆ, ಕರ್ತವ್ಯ ಮರೆತು ಸ್ವತಃ ಭಕ್ಷಕರಾಗಿರುವುದಕ್ಕೆ ಇದು ಜ್ವಲಂತ ಉದಾಹರಣೆ. ಹೆದ್ದಾರಿಯಲ್ಲಿ ಇಂಥ ಅಪಘಾತಗಳು ಸಂಭವಿಸಿದಾಗ ಕೆಲವು ಪೊಲೀಸರು ಸ್ವತಃ ಹಣ, ಒಡವೆಗಳನ್ನು ಕದ್ದು ಹೆದ್ದಾರಿಗಳ್ಳರ ಮೇಲೆ ಹಾಕಿರುವುದರ ಬಗೆಗಿನ ವದಂತಿಗಳಿಗೇನೂ ಕೊರತೆಯಿಲ್ಲ. ಈ ವಿಷಯವನ್ನು ಈಗ ಬದಿಗಿಟ್ಟು ಹೆದ್ದಾರಿಗಳ್ಳರ ವಿಷಯಕ್ಕೆ ಬರೋಣ.

ಬೆಂಗಳೂರಿನಿಂದ ತುಮಕೂರು ಕಡೆ ಹೋಗುವ ಹೆದ್ದಾರಿಯಲ್ಲಿ ಬರುವ ದಾಸನಪುರ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳ ಕೆಲವು ಯುವಕರು ಈ ಹೆದ್ದಾರಿಗಳ್ಳತನಕ್ಕೆ ಕುಖ್ಯಾತರಾಗಿದ್ದಾರೆ. ಅನೇಕ ಸಂದರ್ಭಗಳಲ್ಲಿ ಈ ಹೆದ್ದಾರಿಗಳ್ಳರು ಒಮ್ಮೊಮ್ಮೆ ತಾವು ಮಾಡಲಾರದ ಅಪರಾಧಕ್ಕೆ ಗುರಿಯಾಗುವುದೂ ಉಂಟು.

ಒಂದು ದಿನ ನಾಲ್ಕೈದು ಹೆಣ್ಣುಮಕ್ಕಳು ನನ್ನ ಆಫೀಸ್‌ಗೆ ಬಂದರು. ಅವರಲ್ಲಿ ಇಬ್ಬರು ಮುದುಕಿಯರು ಕಣ್ಣುಗಳಲ್ಲಿ ನೀರು ತುಂಬಿಕೊಂಡು "ನಮ್ಮ ಮಕ್ಕಳ ಪೊಲೀಸ್ರು ಹಿಡ್ಕೊಂಡು ಹೋಗವ್ರೆ, ಬುಡಿಸಿ ಸೋಮಿ" ಎಂದು

ರೋದಿಸತೊಡಗಿದರು. ಅವರೊಂದಿಗಿದ್ದ ಯುವತಿಯರೂ ಅಳುತ್ತ ತಮ್ಮ ಗಂಡಂದಿರನ್ನು ಬಿಡಿಸಿಕೊಡುವಂತೆ ದನಿಗೂಡಿಸಿದರು. "ವಿಷಯ ಏನು ಹೇಳಿ ಮೊದಲು" ಎಂದೆ.

ರಾಘಣ್ಣ, ಗೂರಯ್ಯ, ವರದ, ಜಾಮ, ಪರಪ್ಪ ಎಂಬ ಯುವಕರನ್ನು ಕೊಲೆ ಮತ್ತು ದರೋಡೆ ಕೇಸುಗಳಲ್ಲಿ ಬಂಧಿಸಲಾಗಿದೆಯೆಂದು ತಿಳಿಯಿತು. ಆ ಹೆಣ್ಣುಮಕ್ಕಳಿಗೆ "ಅಳಬೇಡಿರಿ ನನ್ನ ಕೈಲಾದ ಪ್ರಯತ್ನ ಮಾಡುವೆ" ಎಂದು ಹೇಳಿ ಕಳಿಸಿದೆ.

ಮಾರನೆ ದಿನ ಕೋರ್ಟ್‌ನಲ್ಲಿ ಆ ಕೇಸಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡೆ. ದೊಡ್ಡಬಳ್ಳಾಪುರ-ನೆಲಮಂಗಲಗಳ ಮಧ್ಯ ಬರುವ ಮಧುರೆಗೆ ಸಮೀಪದ ಗ್ರಾಮದ ನೀಲಗಿರಿ ತೋಪಿನಲ್ಲಿ ಅರೆಬರೆ ಬೆಂದ ಮೂರು ಶವಗಳ ಪ್ರಕರಣಕ್ಕೆ ಸಂಬಂಧಿಸಿದ ಕೇಸಾಗಿತ್ತು. ಈ ಸುದ್ದಿ ಪತ್ರಿಕೆಗಳ ಮೂಲಕ ಭಾರೀ ಪ್ರಚಾರಕ್ಕೆ ಬಂದಿತ್ತು. ಈ ತ್ರಿಬಲ್ ಮರ್ಡರ್ ಕೇಸ್ ಅನ್ನು ಭಾರೀ ಸಾಹಸ ಮಾಡಿ ಭೇದಿಸಿದ್ದಾಗಿ ಪೊಲೀಸರು ಹೇಳಿಕೊಂಡಿದ್ದರು. ಆರೋಪಿಗಳಿಗೆ ಗಲ್ಲು ಶಿಕ್ಷೆಯಾಗುವುದು ಗ್ಯಾರಂಟಿ ಎನ್ನುವಂತೆ ಪ್ರಕರಣವನ್ನು ಆಳವಾದ ತನಿಖೆಗೆ ಒಳಪಡಿಸಿ ಸೂಕ್ತ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿರುವುದಾಗಿಯೂ ಪೊಲೀಸರು ಹೇಳಿಕೊಂಡಿದ್ದರು. ನನಗೆ ತಿಳಿದುಬಂದಂತೆ ಆ ಪ್ರಕರಣದ ವಿಚಾರಣಾಧಿಕಾರಿಗಳಾಗಿದ್ದ ಪೊಲೀಸ್ ಅಧಿಕಾರಿಗಳು ಈ ಪ್ರಕರಣದಲ್ಲಿ ತಾವು ಮಾಡಿದ ಸಾಧನೆಗೆ ರಾಷ್ಟ್ರಪತಿಗಳಿಂದ ಮೆಡಲ್ ಸಿಗುತ್ತದೆಂದೂ ಮಾತಾಡಿಕೊಳ್ಳುತ್ತಿದ್ದರು.

ಪ್ರಕರಣದ ದಾಖಲೆ ಪತ್ರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದೆ. ಪೊಲೀಸರು ಹಾಕಿದ್ದ ಚಾರ್ಜ್ ಷೀಟ್‌ನಲ್ಲಿ ದೊಡ್ಡ ಕಥೆಯೇ ಇತ್ತು.

ಯಶವಂತಪುರದ ಆಚೆಯಿರುವ ಪಟೇಲ್ ರೋಡ್‌ವೇಸ್ ಮುಂದೆ ಲಾರಿಯೊಂದು ಲೋಡ್ ಆಗುತ್ತಿದ್ದುದನ್ನು ಪ್ರಥಮ ಆರೋಪಿ ರಾಘಣ್ಣ ಗಮನಿಸಿದ. ಆ ಲಾರಿಯಲ್ಲಿ ಸುಮಾರು ಆರೇಳು ಲಕ್ಷ ಮೊತ್ತದ ಟೀವಿ ಮತ್ತು ಫ್ಯಾನ್‌ಗಳನ್ನು ಲೋಡ್ ಮಾಡಲಾಗಿತ್ತು. ಈ ಲಾರಿಯನ್ನು ಲೂಟಿ ಮಾಡುವ ಷಡ್ಯಂತ್ರವನ್ನು ಐವರೂ ಆರೋಪಿಗಳು ಸೇರಿ ರೂಪಿಸಿದರು. ಲಾರಿ ಬೆಂಗಳೂರಿನಿಂದ ಹೈದ್ರಾಬಾದ್‌ಗೆ ಹೊರಡುವುದಿತ್ತು. ರಾತ್ರಿ 8.30ರ ಸುಮಾರಿಗೆ ಲೋಡ್ ಮಾಡುವ ಕೆಲಸ ಮುಗಿದಾಗ ರಾಘಣ್ಣ ಬಂದು ಲಾರಿ ಡ್ರೈವರ್ ಹಾಲಯ್ಯನನ್ನು ಮಾತಾಡಿಸಿದ. ಏನಣ್ಣ ನನ್ನ ಗುರುತು ಸಿಕ್ಕಿಲ್ಲವಾ? ಅವೊತ್ತು ಡಾಬಾದಲ್ಲಿ ಇಬ್ಬರೂ ಊಟ ಮಾಡಿದೆವಲ್ಲ ಎಂದು ರೀಲು ಬಿಟ್ಟ. ಹಾಲಯ್ಯನಿಗೆ ನೆನಪಿಗೆ ಬರಲಿಲ್ಲ. ಈ ಹಿಂದೆ

ರಾಘಣ್ಣನನ್ನು ಹಾಲಯ್ಯ ನೋಡಿರಲೇ ಇಲ್ಲದಿರುವಾಗ ನೆನಪಾದರೂ ಹೇಗೆ ಬರುವುದು? ಆದರೂ ಹೌದು ಹೌದು ಏನೀಗ ಎಂದ ಹಾಲಯ್ಯ. ಏನೂ ಇಲ್ಲ ನಾವು ಐದು ಜನ ಇದೇವೆ. ನಮ್ಮ ಮನೇಲಿ ದೇವರ ಕಾರ್ಯಕ್ರಮ ಇದೆ. ಇಲ್ಲೇ ದೇವನಹಳ್ಳಿಗೆ ನಮ್ಮನ್ನು ಇಳಿಸು. ಯಲಹಂಕದ ಬಳಿಯ ಡಾಬಾದಲ್ಲಿ ಊಟ ಮಾಡಿಸ್ತೇವೆಂದ.

ಆಗ ಡ್ರೈವರ್ 'ಈಗ ನೆನಪಾಯ್ತು ನೋಡಿ. ಎಷ್ಟ್ ದಿವಸಗಳಾದುವು ನಿನ್ನ ಭೇಟಿಯಾಗಿ ಆಂ?' ಎಂದ ಊಟದ ಆಸೆಗಾಗಿ. 'ಹತ್ತಿ ಲಾರೀನ. ನಮ್ಮ ಕ್ಲೀನರ್‌ಗಳನ್ನು ಕ್ಯಾಬಿನ್ ಮೇಲೆ ಕಳಿಸ್ತೇನೆ' ಎಂದ.

ಸರಿ, ಗೋಡೌನ್‌ನಿಂದ ಲಾರಿ ರಸ್ತೆಗೆ ಬಂದಾಗ ಐವರೂ ಲಾರಿಯೊಳಕ್ಕೆ ಹೊಕ್ಕರು. ಟೇಪ್ ಆನ್ ಮಾಡಿ ಡ್ರೈವರ್ ಲಲಲ ಎಂದು ಗುನುಗುಟ್ಟುತ್ತ ಯಲಹಂಕದ ಕಡೆ ಲಾರಿ ಓಡಿಸತೊಡಗಿದ. ಹೊರ ಪ್ರದೇಶದಲ್ಲಿರುವ ಡಾಬಾ ಒಂದರ ಬಳಿ ಲಾರಿಯನ್ನು ಊಟಕ್ಕಾಗಿ ನಿಲ್ಲಿಸಿದ. ಎಲ್ಲರೂ ಊಟಕ್ಕೆ ಇಳಿದರು. ಆರೋಪಿ ರಾಘಣ್ಣ ಡ್ರೈವರ್‌ಗೆ, ಅಣ್ಣ ಮತ್ತೆ ನನ್ನ ನಿನ್ನ ಭೇಟಿ ಯಾವಾಗೋ ಏನೋ, ಬರೀ ಊಟ ಏಕೆ ಸ್ವಲ್ಪ ಎಣ್ಣೇನೂ ತೊಗೋ ಎಂದಾಗ ಹಾಲಯ್ಯ ಉಬ್ಬಿಹೋದ. ಕಂಟ್ರಿ ವ್ಹಿಸ್ಕಿ ಬಾಟಲ್‌ಗಳನ್ನು ಜೇಬುಗಳಿಂದ ಆರೋಪಿಗಳು ತೆಗೆದರು. ನಮ್ಮ ಮನೇಲಿ ಬೇಟೆ ಕೊಯ್ದವ್ರೆ. ಅದಕ್ಕೇ ಎಣ್ಣೆ ಒಯ್ತಾ ಇದ್ವಿ. ನೀವು ಕುಡೀರಿ ಎಂದರು. ಡ್ರೈವರ್ ಮತ್ತು ಕ್ಲೀನರ್‌ಗಳು ಯಥೇಚ್ಛ ಕುಡಿದು, ಸಖತ್ತಾಗಿ ಮಾಂಸದ ಊಟವನ್ನೂ ಮಾಡಿದರು. ಪುನಃ ಎಲ್ಲರೂ ಲಾರಿ ಏರಿದರು. ಸ್ವಲ್ಪ ದೂರ ಹೋದಮೇಲೆ ಡ್ರೈವರ್ ಮೂತ್ರಕ್ಕಾಗಿ ಲಾರಿ ನಿಲ್ಲಿಸಿದ. ಕ್ಲೀನರ್‌ಗಳಿಬ್ಬರೂ ಕ್ಯಾಬಿನ್ ಮೇಲೆ ಗೊರಕೆ ಹೊಡೆಯಲಾರಂಭಿಸಿದ್ದರು. ರಾಘಣ್ಣ ತನ್ನ ಸೊಂಟಕ್ಕೆ ಸುತ್ತಿಕೊಂಡಿದ್ದ ದಪ್ಪ ನೂಲಿನ ಹಗ್ಗವನ್ನು ಬಿಚ್ಚಿಕೊಂಡು ಮೂತ್ರ ಮಾಡುತ್ತಿದ್ದ ಡ್ರೈವರ್ ಕುತ್ತಿಗೆಗೆ ಹಿಂದಿನಿಂದ ಹಾಕಿ ಒಂದೇ ಪಟ್ಟಿಗೆ ಎಳೆದ. ಕುಡಿತದಿಂದ ನಿಸ್ತೇಜಗೊಂಡಿದ್ದ ಡ್ರೈವರ್ ಪ್ರತಿರೋಧಿಸದೆ ರಾಘಣ್ಣನ ಪಾಶಕ್ಕೆ ಸಿಕ್ಕು ಉಸಿರುಬಿಟ್ಟ. ಡ್ರೈವರ್‌ನನ್ನು ರಾಘಣ್ಣ ಮುಗಿಸಿದಂತೆಯೇ ಉಳಿದವರು ಕ್ಯಾಬಿನ್ ಮೇಲೇರಿ ಕ್ಲೀನರ್‌ಗಳಿಬ್ಬರ ಕತ್ತು ಹಿಸುಕಿ ಕೊಂದು ಹಾಕಿದರು. ಡ್ರೈವರ್‌ನನ್ನು ಎಳೆತಂದು ಕ್ಯಾಬಿನ್ ಒಳಕ್ಕೆ ತುರುಕಿ ಲಾರಿಯನ್ನು ಮಧುರೆ ಗ್ರಾಮದೆಡೆಗೆ ತಿರುಗಿಸಿದರು. ದಾರಿಯಲ್ಲಿ ಪುಟ್ಟೇನಹಳ್ಳಿ ಸೀಮೆಯಲ್ಲಿ ಬರುವ ನೀಲಗಿರಿ ತೋಪಿನ ಬಳಿ ಲಾರಿಯನ್ನು ನಿಲ್ಲಿಸಿದರು. ನಿರ್ಜನ ಪ್ರದೇಶವದಾಗಿತ್ತು. ಹೆಚ್ಚು ವಾಹನಗಳೂ ಆ ರಸ್ತೆಯಲ್ಲಿ ಓಡಾಡುತ್ತಿರಲಿಲ್ಲ. ರಾತ್ರಿ ಹನ್ನೆರಡು ಗಂಟೆಯಾಗಿರಬಹುದು. ಮೂರೂ

ಶವಗಳನ್ನು ಆ ನೀಲಗಿರಿ ತೋಪಿನೊಳಗೆ ಎಳೆದುಕೊಂಡು ಹೋಗಿ ಕಟ್ಟಿಗೆ ತರಗೆಲೆಗಳನ್ನು ಆ ಹೆಣಗಳ ಮೇಲೆ ಗುಡ್ಡೆ ಹಾಕಿ ಬೆಂಕಿ ಹಚ್ಚಿ ಲಾರಿ ತೆಗೆದುಕೊಂಡು ಹೋದರು. ಕಟ್ಟಿಗೆ ಹಸಿಯಾಗಿದ್ದರಿಂದ ಆ ಹೆಣಗಳು ಅರೆಬರೆ ಬೆಂದವು. ಬೆಳಗ್ಗೆ ಹಳ್ಳಿಯ ಜನ ಕಕ್ಕಸಿಗೆಂದು ಆ ತೋಪಿನೆಡೆಗೆ ಬಂದಾಗ ಸುಟ್ಟವಾಸನೆ ಆವರಿಸಿಕೊಂಡಿತ್ತು. ವಾಸನೆಯ ಜಾಡು ಹಿಡಿದು ಹೋದ ಹಳ್ಳಿಗರು ಗಾಬರಿ ಬಿದ್ದು ಠಾಣೆಗೆ ಹೋಗಿ ದೂರುಕೊಟ್ಟರು. ದೊಡ್ಡ ಬೆಳವಂಗಲ ಠಾಣೆಯಲ್ಲಿ ಕೇಸು ರಿಜಿಸ್ಟರ್ ಆಯಿತು. ಅನಾಮಧೇಯರಿಂದ ಮಾಡಲ್ಪಟ್ಟ ಕೊಲೆ ಎಂದು ಕೇಸು ದಾಖಲಾಯಿತು.

ಇತ್ತ ರಾತ್ರಿ ಲಾರಿ ತೆಗೆದುಕೊಂಡು ಹೊರಟ ಆರೋಪಿಗಳು ನೆಲಮಂಗಲದ ಸಮೀಪದ ತೋಟವೊಂದರಲ್ಲಿ ಟೀವಿ, ಫ್ಯಾನ್‌ಗಳನ್ನು ಇಳಿಸಿಕೊಂಡು ಖಾಲಿ ಲಾರಿಯನ್ನು ಕೆಲವು ಕಿಲೋ ಮೀಟರ್‌ಗಳ ದೂರದಲ್ಲಿ ಹೆದ್ದಾರಿಯ ಮೇಲೆ ನಿಲ್ಲಿಸಿ ಪರಾರಿಯಾದರು.

ಮಾಲು ಇಳಿಸಲ್ಪಟ್ಟ ತೋಟವು ಬೆಂಗಳೂರಿನ ಮಾರವಾಡಿಯೋರ್ವನಿಗೆ ಸೇರಿದ್ದಾಗಿತ್ತು. ಇನ್‌ಕಮ್‌ಟ್ಯಾಕ್ಸ್ ಇಲಾಖೆಯವರೊಂದಿಗೆ ಶಾಮೀಲಾಗಿ ಟ್ಯಾಕ್ಸ್ ಕಳ್ಳತನ ಮಾಡಲು ಇಂಥ ತೋಟಗಳನ್ನು ಅನೇಕ ವ್ಯಾಪಾರಿಗಳು ಮಾಡುವುದು ಸಾಮಾನ್ಯ. ಆ ತೋಟದಲ್ಲಿ ಮಾಲಿಯಾಗಿದ್ದ ಆ ಐವರು ಆರೋಪಿಗಳಲ್ಲೊಬ್ಬ. ಸರಿ, ಮಾರನೇ ದಿನ ಕೆಲವು ಟೀವಿ ಮತ್ತು ಫ್ಯಾನ್‌ಗಳನ್ನು ಆರೋಪಿಗಳು ಬೆಂಗಳೂರಿನ ವಿವಿಧೆಡೆ ಮಾರಾಟಕ್ಕೆ ಒಯ್ದರು. ಕಂಪನಿಯ ಪ್ರಚಾರಕ್ಕೆಂದು 50 ರಿಬೇಟ್‌ನಲ್ಲಿ ಮಾರಲಾಗುತ್ತಿದೆಯೆಂದು ಹೇಳಿದರು. ಜನ ನಾನು-ನೀನು ಎಂದು ಖರೀದಿಸಿದರು. ತಮ್ಮ ಮಾರಾಟಕ್ಕೆ ಒಳ್ಳೆಯ ಉತ್ತೇಜನ ಸಿಕ್ಕಿದ್ದರಿಂದ ಆರೋಪಿಗಳು ಖುಷಿಯಿಂದ ಹಿಂದಿರುಗಿದರು. ನಿತ್ಯ ಸ್ವಲ್ಪ ಸ್ವಲ್ಪವೇ ಮಾಲುಗಳನ್ನು ಆಟೋದಲ್ಲಿ ತರುತ್ತಿದ್ದವರು ಒಂದು ದಿನ ಮಾರುತಿ ವ್ಯಾನ್ ಅನ್ನೇ ಬಾಡಿಗೆಗೆ ಪಡೆದುಕೊಂಡರು. ಸಿಟಿ ಮಾರ್ಕೆಟ್‌ನ ರಸ್ತೆ ಬದಿ ಟೀವಿಗಳು ಅರ್ಧಬೆಲೆಗೆ ಸಿಗುತ್ತಿರುವ ವಿಷಯ ಕೆಲವು ಟೀವಿ ಅಂಗಡಿಯವರಿಗೆ ತಿಳಿಯಿತು. ಅವರು ಬಂದು ನೋಡಿದರು. ಮಾಲು ನಕಲಿಯಾಗಿರಲಿಲ್ಲ. ಆದರೂ 50 ರಿಬೇಟ್‌ನಲ್ಲಿ ಹೇಗೆ ಕೊಡುತ್ತಿದ್ದಾರೆ ಎಂದು ಯೋಚಿಸಿದರು. ಅಷ್ಟೊತ್ತಿಗೆ ಆ ಐವರೂ ತಮ್ಮ ಸಹಾಯಕ್ಕೆ ಕೆಲವು ಕಟ್ಟಾಳುಗಳನ್ನು ಇಟ್ಟುಕೊಂಡಿದ್ದರು. ಕಳ್ಳಮಾಲು ಎಂದು ಅಂಗಡಿಯವರಿಗೆ ಗೊತ್ತಾದರೂ ನೇರವಾಗಿ ಆಕ್ಷೇಪಿಸಲು ಹೆದರಿಕೊಂಡು ಪೊಲೀಸರಿಗೆ ಫೋನ್ ಮೂಲಕ ತಿಳಿಸಿದರು.

ಸುಮಾರು ಮೂರು ಲಕ್ಷದಷ್ಟು ಹಣವನ್ನು ಆರೋಪಿಗಳು ಮಾಡಿಕೊಂಡಿದ್ದರು. ಬಹುತೇಕ ಮಾಲು ಖರ್ಚಾಗಿತ್ತು. ಇಷ್ಟಾಗುವುದರಲ್ಲಿ ಒಂದು ತಿಂಗಳು ಕಳೆದಿತ್ತು.

ಅತ್ತ ದೊಡ್ಡ ಬೆಳವಂಗಲ ಠಾಣೆಯಲ್ಲಿ ಕೊಲೆ ಕೇಸು ರಿಜಿಸ್ಟರ್ ಆಗಿದ್ದರೂ ಕೊಲೆ ತನಿಖೆಯಲ್ಲಿ ಏನೂ ಪ್ರಗತಿಯಾಗಿರಲಿಲ್ಲ.

ಸಿಟಿ ಮಾರ್ಕೆಟ್ ಸಬ್ ಡಿವಿಜನ್‌ನಲ್ಲಿ ಎಸಿಪಿಗಳಾಗಿದ್ದ ಬಿ.ಕೆ. ಮುನಿಯಪ್ಪನವರಿಗೆ ಕಳ್ಳ ಮಾರಾಟದ ಮಾಹಿತಿ ಹೋಯಿತು. ಪೊಲೀಸರ ಒಂದು ತಂಡವನ್ನು ಕಳಿಸಿ ಕಳ್ಳಮಾಲುಗಳ ಮಾರಾಟಗಾರರನ್ನು ಹಿಡಿದು ತರಲು ಆದೇಶಿಸಿದರು. ಪೊಲೀಸರು ಸುತ್ತುವರಿದಾಗ ಆರೋಪಿಗಳೆಲ್ಲ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಅವರಲ್ಲಿ ಇಬ್ಬರು ಸಿಕ್ಕಿಬಿದ್ದರು.

ಆರೋಪಿಗಳನ್ನು ವಿಚಾರಣೆ ಮಾಡಲಾಗಿ ಲಾರಿಯ ಡ್ರೈವರ್ ಮತ್ತು ಕ್ಲೀನರ್‌ಗಳನ್ನು ಮರ್ಡರ್ ಮಾಡಿದ್ದಾಗಿ ಒಪ್ಪಿಕೊಂಡರು.

ಈ ಪ್ರಕರಣದ ಕಥೆ ಪತ್ರಿಕೆಗಳಲ್ಲಿ ವಿವರವಾಗಿ ಪ್ರಕಟಗೊಂಡಿತು.

ಪ್ರಾಸಿಕ್ಯೂಷನ್‌ನ ಈ ವಾದ, ಹೆಣೆದ ಕಥೆ ಮೇಲುನೋಟಕ್ಕೆ ಭಾರೀ ಆಳವಾದ ತನಿಖೆ ನಡೆಸಿ ಭಾರೀ ಪ್ರಕರಣವನ್ನು ಬಯಲುಗೊಳಿಸಿದಂತೆ ತೋರುತ್ತಿತ್ತು. ಆದರೆ, ನನ್ನ ದೃಷ್ಟಿಯಲ್ಲಿ ತೀರಾ ನಿರರ್ಥಕವಾಗಿ ಕಾಣಿಸಿತು.

ಟೀವಿ ಮತ್ತು ಫ್ಯಾನ್‌ಗಳ ಲೋಡ್ ಕಳುವಾಗಿದೆಯೆಂದು ಯಾರೂ ಕಂಪ್ಲೇಂಟ್ ನೀಡಿರಲಿಲ್ಲ. ಕಳ್ಳತನದಲ್ಲಿ ಮಾರಾಟಗೊಂಡವೆಂದು ಹೇಳಿ ಪೊಲೀಸರಿಂದ ವಶಪಡಿಸಿಕೊಳ್ಳಲ್ಪಟ್ಟ ಮಾಲನ್ನು ಕೇಳಲು ಯಾರೂ ಮುಂದೆ ಬಂದಿರಲಿಲ್ಲ. ಇನ್ನು ಪೊಲೀಸರ ಬೆದರಿಕೆಗೆ ಅಂಜಿ ಕೊಲೆ ಮಾಡಿದ್ದೇವೆಂದು ಒಪ್ಪಿಕೊಂಡು ಠಾಣೆಯಲ್ಲಿ ಆರೋಪಿಗಳು ನೀಡಿದ ಹೇಳಿಕೆ ಕೋರ್ಟಿನ ಮುಂದೆ ಕೆಲಸಕ್ಕೆ ಬಾರದ ಸಾಕ್ಷಿಗಳನ್ನು ಪೊಲೀಸರು ತಿಪ್ಪೆಯಂತೆ ಗುಡ್ಡೆ ಹಾಕಿದರು. ನಾನು ಕ್ರಾಸ್ ಎಗ್ಸಾಮಿನೇಷನ್‌ನಿಂದಾಗಿ ಕೇಸನ್ನು ಗೆಲ್ಲಲಿಲ್ಲ. ನನ್ನೊಳಗೇ ಉಕ್ಕುತ್ತಿದ್ದ ಪಾಟೀಸವಾಲಿನ ಪ್ರಶ್ನೆಗಳನ್ನು ಅದುಮಿಟ್ಟುಕೊಳ್ಳುವ ಮೂಲಕ ಕೇಸನ್ನು ಗೆದ್ದೆ.

97

ಬ್ಯಾಂಕ್ ಮ್ಯಾನೇಜರ್ ಕೊಲೆ ಸಂಚು

1907ರಲ್ಲಿ ಸ್ಥಾಪಿಸಲ್ಪಟ್ಟ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಚಾಮರಾಜಪೇಟೆಯಲ್ಲಿದೆ. ಈ ಬ್ಯಾಂಕಿನ ಸಮೀಪ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಿದೆ. ಬೆಂಗಳೂರಿನ ಅತ್ಯಂತ ಹಳೆಯ ಬ್ಯಾಂಕುಗಳಲ್ಲೊಂದಾದ ಇದು 1996ರಲ್ಲಿ ಭಾರೀ ವಿವಾದಕ್ಕೊಳಗಾಗಿ ಸಾರ್ವಜನಿಕರ ಚರ್ಚೆಗೆ ಗ್ರಾಸವಾಯಿತು. ಈ ಬ್ಯಾಂಕಿನಲ್ಲಿ ಅವ್ಯವಹಾರ, ಅಕ್ರಮಗಳು ನಡೆಯುತ್ತಿವೆಯೆಂದು ಕನ್ನಡ ದೈನಿಕವೊಂದು ಹಲವು ಕಂತುಗಳಲ್ಲಿ ವರದಿ ಪ್ರಕಟಿಸಿತು. ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ನಂಬರ್ 1- ವೆಂಕಟರಮಣಶೆಟ್ಟಿಯವರು ದಿಲ್ಲಿಯ ನಕಲಿ ವಿಶ್ವವಿದ್ಯಾಲಯದಿಂದ ಪದವಿ ಪ್ರಮಾಣಪತ್ರ ಪಡೆದುಕೊಂಡು ಬಡ್ತಿ ಪಡೆದುಕೊಂಡಿದ್ದಾರೆಂದು ಮುಖ್ಯವಾಗಿ ಪತ್ರಿಕೆ ಆರೋಪಿಸಿತು. ಅದರೊಂದಿಗೆ ವೆಂಕಟರಮಣಶೆಟ್ಟಿಯವರ ಮೇಲೆ ಹಣಕಾಸಿನ ಅವ್ಯವಹಾರಗಳ ಆರೋಪ ಮಾಡಿತು ತನ್ನ ವರದಿಯಲ್ಲಿ. ಸಹಕಾರ ಇಲಾಖೆಯ ಜಂಟಿ ರಿಜಿಸ್ಟ್ರಾರ್ ಅವರು ವೆಂಕಟರಮಣಶೆಟ್ಟಿಯವರ ಬಡ್ತಿ ಅಸಿಂಧುವಾಗಿದ್ದು ತಕ್ಷಣವೇ ಬಡ್ತಿಯನ್ನು

ರದ್ದುಗೊಳಿಸಿ ಹೆಚ್ಚುವರಿಯಾಗಿ ಪಡೆದುಕೊಂಡ ಸಂಬಳ ಮತ್ತು ಭತ್ಯೆಗಳನ್ನು ವಸೂಲಿ ಮಾಡಿಕೊಳ್ಳುವಂತೆ ಆದೇಶಿಸಿದ್ದಾರೆಂದೂ ಸದರಿ ದೈನಿಕವು ಬರೆಯಿತು.

ಪತ್ರಿಕೆಯಲ್ಲಿ ಪ್ರಕಟವಾದ ಈ ಸುದ್ದಿ ಬ್ಯಾಂಕಿನ ಠೇವಣಿದಾರರು ಮತ್ತು ಖಾತೆದಾರರನ್ನು ಕಳವಳಕ್ಕೀಡುಮಾಡಿತು.

ಬ್ಯಾಂಕಿನ ಒಳವ್ಯವಹಾರಗಳು ಬ್ಯಾಂಕಿನ ಸಿಬ್ಬಂದಿಯಿಂದಲೇ ಹೊರಗೆ ಲೀಕ್ ಆಗುತ್ತಿವೆಯೆಂದು ವೆಂಕಟರಮಣಶೆಟ್ಟಿ ಆಡಳಿತ ಮಂಡಳಿಯವರ ಮುಂದೆ ಗೋಳು ತೋಡಿಕೊಳ್ಳತೊಡಗಿದರು. ತಮ್ಮ ಸಹೋದ್ಯೋಗಿ ಪುಟ್ಟರುದ್ರಯ್ಯ ಎನ್ನುವ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ನಂಬರ್ 2– ಇವರ ಮೂಲಕ ಪತ್ರಿಕೆಗಳು ಮಾಹಿತಿ ಪಡೆದುಕೊಳ್ಳುತ್ತಿವೆಯೆಂದೂ ದೂರತೊಡಗಿದ.

ಪುಟ್ಟರುದ್ರಯ್ಯ ಮತ್ತು ವೆಂಕಟರಮಣಶೆಟ್ಟಿಯವರುಗಳ ಮಧ್ಯದ ವೈಷಮ್ಯವೇ ಇದಕ್ಕೆಲ್ಲ ಕಾರಣವೆಂದು ಬ್ಯಾಂಕಿಗೆ ಸಂಬಂಧಿಸಿದ ಅನೇಕರು ಮಾತಾಡಿಕೊಳ್ಳ ತೊಡಗಿದರು.

ವೆಂಕಟರಮಣಶೆಟ್ಟಿಗೆ ಸದರಿ ಬ್ಯಾಂಕಿನಲ್ಲಿ ಕೆಲಸ ಕೊಡಿಸಿದ್ದೇ ಪುಟ್ಟರುದ್ರಯ್ಯ ಎನ್ನುವುದು ಸಿಬ್ಬಂದಿಗೆಲ್ಲಾ ತಿಳಿದ ವಿಚಾರವೇ ಆಗಿತ್ತು. ವೆಂಕಟರಮಣ ಶೆಟ್ಟಿ ಕೆಲಸಕ್ಕೆ ಸೇರಿಕೊಂಡಾಗ ಈತನಿಗಿಂತ ಪುಟ್ಟರುದ್ರಯ್ಯ ಎಂಟು ವರ್ಷ ಸೀನಿಯರ್ ಆಗಿದ್ದ. ಆದರೆ ನಂತರ ವೆಂಕಟರಮಣಶೆಟ್ಟಿ ದಿನಪತ್ರಿಕೆಯಲ್ಲಿ ಆರೋಪಿಸಲ್ಪಟ್ಟಂತೆ ನಕಲಿ ವಿಶ್ವವಿದ್ಯಾಲಯದ ಡಿಗ್ರಿ ಸರ್ಟಿಫಿಕೇಟ್ ಸೃಷ್ಟಿಸಿ ಮತ್ತು ಆಡಳಿತ ಮಂಡಳಿಯವರ ಓಲೈಕೆ ಮುಂತಾದ ತಂತ್ರಗಳಿಂದ ಪುಟ್ಟರುದ್ರಯ್ಯನವರಿಗಿಂತ ಮೇಲಿನ ಹುದ್ದೆಗೆ ಬಡ್ತಿ ಗಿಟ್ಟಿಸಿಕೊಂಡಿದ್ದೇ ಈ ವೈಷಮ್ಯಕ್ಕೆ ಕಾರಣವೆಂದು ಬ್ಯಾಂಕ್ ಸಿಬ್ಬಂದಿ ಗುಸುಗುಸು ಮಾತಾಡಿಕೊಳ್ಳತೊಡಗಿತ್ತು.

ಶರವಣ ಎನ್ನುವ ತಮಿಳು ಯುವಕ ಕೋರಮಂಗಲದಲ್ಲಿ ಪುಟ್ಟ ಅಂಗಡಿಯೊಂದನ್ನು ಇಟ್ಟುಕೊಂಡಿದ್ದ. ಆತನಿಗೆ ರಮೇಶ ಎನ್ನುವ ಯುವಕ ಸಹಾಯಕ್ಕಿದ್ದ. ಪುಟ್ಟರುದ್ರಯ್ಯ ಮತ್ತು ಇತರ ಐವರು ಸಹಚರರು ಬಂದು ಶರವಣನನ್ನು ಭೇಟಿಯಾದರು. ನೀನು ವೆಂಕಟರಮಣಶೆಟ್ಟಿಯನ್ನು ಕೊಲೆ ಮಾಡಬೇಕು. ಅದಕ್ಕಾಗಿ ಈಗ ರೂ. 15,000 ಅಡ್ವಾನ್ಸ್ ಕೊಡುತ್ತೇವೆ. ಕೆಲಸ ಮುಗಿದ ನಂತರ ಮತ್ತಷ್ಟು ಕೊಡುತ್ತೇವೆ ಎಂದು ಹೇಳಿದರು. ಇಂದು ಸಂಜೆ 7.30ಕ್ಕೆ ಆಡುಗೋಡಿಯಲ್ಲಿರುವ ಚಾಣಕ್ಯ ಬಾರ್ ರೆಸ್ಟೋರೆಂಟ್‌ಗೆ ಬಾ ನಾವು ಹಣ ತಂದಿರುತ್ತೇವೆ ಎಂದೂ ಹೇಳಿ ಹೊರಟರು.

ಮೊದಮೊದಲು ಇದಕ್ಕೆ ಒಪ್ಪಿಕೊಂಡಿದ್ದ ಶರವಣನ ಮನಸ್ಸು ಬದಲಾಯಿತು. ತನ್ನ ಸ್ನೇಹಿತ ಮಧುವನ್ನು ಕರೆದುಕೊಂಡು ಸಂಜೆ 4.30ಕ್ಕೆ ಆಡುಗೋಡಿ ಪೊಲೀಸ್ ಠಾಣೆಗೆ ಹೋದ. ಅಲ್ಲಿ ಪಿ.ಎಸ್.ಐ. ಆಗಿದ್ದ ರಮೇಶ್‌ಚಂದ್ರರಿಗೆ ಪುಟ್ಟರುದ್ರಯ್ಯ ಮತ್ತಿತರರು ಕೊಲೆಗೆ ಸುಪಾರಿ ಕೊಡಲು ಬಂದಿದ್ದ ವಿಷಯವನ್ನು ತಿಳಿಸಿದ. ಕೂಡಲೇ ಪಿಎಸ್ಐ ಶರವಣನಿಂದ ಕಂಪ್ಲೇಂಟ್ ಒಂದನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾದರು. ತಮ್ಮೊಂದಿಗೆ ಶರವಣನನ್ನು ಕರೆದುಕೊಂಡು ಸಂಜೆ ಏಳೂವರೆ ಗಂಟೆಗೆ ಚಾಣಕ್ಯ ಬಾರ್ ಮತ್ತು ರೆಸ್ಟೋರೆಂಟ್ ಮೇಲೆ ದಾಳಿಯಿಟ್ಟರು. ಪೊಲೀಸರು ಬಾರ್ ಒಳಹೊಕ್ಕಾಗ ಹಾಲ್‌ನ ಟೇಬಲ್ ಒಂದರ ಸುತ್ತ ಪುಟ್ಟರುದ್ರಯ್ಯ ಮತ್ತು ಇತರ ಐವರು ಡ್ರಿಂಕ್ಸ್ ಬಾಟಲ್‌ಗಳನ್ನಿಟ್ಟುಕೊಂಡು ಕುಡಿಯುತ್ತ ಕೂತಿದ್ದರು. ವಿಧವಿಧದ ತಿನಿಸುಗಳು, ಸೋಡಾ ಬಾಟಲ್‌ಗಳು, ಸಿಗರೇಟ್ ಪ್ಯಾಕ್‌ಗಳು ಟೇಬಲ್ ಮೇಲಿದ್ದವು. 'ಇನ್ನೇನು ಶರವಣ ಬರುತ್ತಾನೆ. ವೆಂಕಟರಮಣಶೆಟ್ಟಿಯ ಕಥೆ ಮುಗಿಯಿತು' ಎಂದು ಪುಟ್ಟರುದ್ರಯ್ಯ ಎಂದುದಕ್ಕೆ ಉಳಿದವರೆಲ್ಲ ಗಹಗಹಿಸಿ ನಗುತ್ತಿದ್ದರು. ಆ ಸಂದರ್ಭದಲ್ಲಿಯೇ ಪೊಲೀಸರು ಆ ಆರೂ ಜನರನ್ನು ಸುತ್ತುವರಿದು ಬಂಧಿಸಿದರು. ಬಂಧಿತ ಆರೋಪಿಗಳಿಂದ ರೇಜರ್, ಚಾಕುಗಳು ಮತ್ತು ಸುಪಾರಿ ನೀಡಲು ತಂದಿದ್ದ 15,000ರೂಪಾಯಿ ಎಲ್ಲವನ್ನೂ ಪೊಲೀಸರು ಜಪ್ತಿ ಮಾಡಿಕೊಂಡರು. ಪುಟ್ಟರುದ್ರಯ್ಯ ಮತ್ತಿತರ ಮೇಲೆ ಕೊಲೆ ಸಂಚಿನ ಕೇಸನ್ನು ರಿಜಿಸ್ಟರ್ ಮಾಡಿಕೊಂಡು ಆರೋಪಿಗಳನ್ನು ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರುಪಡಿಸಿ ನ್ಯಾಯಾಂಗ ಕಸ್ಟಡಿಗೆ ನೀಡಿದರು.

ಈ ಕಥೆಯೆಲ್ಲ ನನ್ನೆದುರಿಗಿದ್ದ ಕೇಸ್ ಫೈಲ್‌ನಲ್ಲಿತ್ತು. ಪೊಲೀಸರು ಭಾರೀ ಸಾಹಸದಿಂದ ಕೊಲೆ ಸಂಚನ್ನು ಭೇದಿಸಿದ್ದಾಗಿ ಚಾರ್ಜ್‌ಷೀಟ್‌ನಲ್ಲಿ ವಿವರಿಸಿದ್ದರು.

ಪುಟ್ಟರುದ್ರಯ್ಯ ಮತ್ತಿತರರ ಪರ ವಕಾಲತ್ತು ಹಾಕುವಂತೆ ವಿನಂತಿಸಿಕೊಂಡು ಕೋರಮಂಗಲದ ಮೆಕ್ಯಾನಿಕ್ ಒಬ್ಬ ಈ ಕೇಸನ್ನು ತಂದು ನನ್ನೆದುರಿಗಿಟ್ಟಿದ್ದ. ಆ ಮೆಕ್ಯಾನಿಕ್‌ನನ್ನು ಕೆಲವು ವರ್ಷಗಳ ಹಿಂದೆ ಹುಸಿಕೊಲೆ ಆರೋಪದಿಂದ ಖುಲಾಸೆಗೊಳಿಸಿದ್ದೆ. "ಸಾರ್ ನಿಜವಾಗ್ಲೂ ಪುಟ್ಟರುದ್ರಯ್ಯ ನಿರಪರಾಧಿ ಸಾರ್. ಭಾಳ ವರ್ಷಗಳಿಂದ ಇವರು ನಂಗೆ ಗೊತ್ತು. ಪಾಪ ಇವ್ರ ಹೆಂಡತಿಗೆ ತೀರಾ ಸೀರಿಯಸ್ ಆಗಿ ಆಸ್ಪತ್ರೆ ಸೇರಿಕೊಂಡಿದ್ದರು. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿಸಲು ಹದಿನೈದು ಸಾವಿರ ಹೊಂದಿಸಿಕೊಂಡು ಇನ್ನೇನು ಹೊರಡಬೇಕು ಎನ್ನೋವಷ್ಟರಲ್ಲಿ ಪೊಲೀಸರು ಬಂದು ಅರೆಸ್ಟ್ ಮಾಡಿಕೊಂಡು ಹೋಗಿ ಸುಳ್ಳು ಕೇಸು ದಾಖಲು ಮಾಡಿದಾರೆ. ಹೇಗಾದ್ರೂ ಮಾಡಿ ಬಿಡಿಸಿಕೊಡಬೇಕು ಸಾರ್" ಎಂದು ಒಂದೇ ಉಸಿರಿಗೆ ಹೇಳಿದ್ದ ಆ ಮೆಕ್ಯಾನಿಕ್.

ಮೊದಲು ನಾನು ಆರೋಪಿಗಳ ಜೊತೆ ಮಾತಾಡ್ತೇನೆ, ನಂತರ ಈ ಕೇಸಿನ ಭವಿಷ್ಯವನ್ನು ನಿನಗೆ ಹೇಳ್ತೇನೆ ಎಂದೆ.

ಕೊಲೆ ಸಂಚಿನ ಕೇಸಿನ ಫೈಲನ್ನು ಜಾಲಾಡಿದಾಗ, ಇದು ಪೋಲಿಸರ ಕಟ್ಟುಕಥೆಯೆಂದು ಒಂದೇ ಪಟ್ಟಿಗೆ ಹೊಳೆದುಬಿಟ್ಟಿತು.

ಮೆಕ್ಯಾನಿಕ್ ಜೊತೆ ಹೋಗಿ ಆರೋಪಿಗಳನ್ನು ಕಂಡು ಮಾತಾಡಿಸಿಕೊಂಡು ಬಂದೆ. ಪುಟ್ಟರುದ್ರಯ್ಯ ಇರೋ ವಿಷಯವನ್ನೆಲ್ಲ ಹೇಳಿ ಕಣ್ಣೀರಿಟ್ಟ. "ಆ ಶೆಟ್ಟಿ ನನ್‌ಮಗ, ಕೆಲಸ ಕೊಡ್ಸಿ ಅಂತ ಕಾಲಿಗೆ ಬಿದ್ದ. ಆಮೇಲೆ ನನ್ನ ಬುಡಕ್ಕೇ ನೀರು ತಂದುಬಿಟ್ಟ. ನನ್ನ ಮಕ್ಕಳ ತಲೆ ಬಡಿದು ಹೇಳ್ತೇನೆ ಸಾರ್, ಕೊಲೆ ಮಾಡಿಸುವಂಥ ಕ್ರೂರಿ ನಾನಲ್ಲ ಆ ಶೆಟ್ಟಿ ನಕಲಿ ಡಿಗ್ರಿ ಸರ್ಟಿಫಿಕೇಟ್ ಸೃಷ್ಟಿಸಿ ಬಡ್ತಿ ಪಡೆದುಕೊಂಡಿದ್ದನ್ನು ಮತ್ತು ಅವನ ಅವ್ಯವಹಾರಗಳನ್ನು ಬಯಲುಗೊಳಿಸಿದ್ದು ನಾನೇ ಅಂತ ಒಪ್ಪಿಕೊಳ್ತೇನೆ. ಆದ್ರೆ ಈ ಕೊಲೆ ಸಂಚಿನ ತಲೆಬುಡ ಒಂದೂ ನಂಗೆ ಗೊತ್ತಿಲ್ಲ. ನನ್ನ ಮೇಲೆ ಕಂಪ್ಲೇಂಟ್ ಕೊಟ್ಟಿರುವ ಶರವಣ ಅನ್ನೋವ್ನು ಯಾರೂ ಅಂತಲೇ ನಂಗೊತ್ತಿಲ್ಲ. ಶೆಟ್ಟಿಯ ಮನೆ ಸಮೀಪ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಇದ್ದಾನೆ. ಅವುನ್ನ ಹಿಡ್ಕೊಂಡು ದುಡ್ಡು ಸುರುವಿ ಈ ಕಟ್ಟುಕಥೆ ಹೆಣೆದಿದ್ದಾರೆ ಸಾರ್. ನಾವು ಚಾಣಕ್ಯ ಬಾರ್‌ನಲ್ಲಿ ಕೂತೇ ಇರ್ಲಿಲ್ಲ. ನಮ್ಮನ್ನೆಲ್ಲ ಹಿಡುಕೊಂಡು ಹೋಗಿ ಲಾಕಪ್‌ನಲ್ಲಿ ಹಾಕಿದ್ರು, ಅಮ್ಯಾಕೆ ಶರವಣನ್ನ ಹಿಡುಕೊಂಡು ಬಂದು ಅವನಿಂದ ಕಂಪ್ಲೇಂಟ್ ಬರೆಸಿಕೊಂಡ್ರು" ಎಂದು ಗೊಳೋ ಎನ್ನತೊಡಗಿದ. ವಾಪಸ್ ಬರುವಾಗ ಮೆಕ್ಯಾನಿಕ್, 'ಆ ಶರವಣ ನಂಗೊತ್ತು ಸಾರ್. ಅವ್ನು ರೌಡಿ ಷೀಟರ್. ಪೊಲೀಸ್ರು ಕರೆದಲ್ಲಿಗೆ ಹೋಗೋನು, ಹೇಳಿದ ಕಡೆ ಸಹಿ ಹಾಕೋನು' ಎಂದ.

ಕಂಪ್ಲೇಂಟ್ ಕೊಟ್ಟವ ರೌಡಿ ಷೀಟರ್ ಎನ್ನುವುದು ಕೇಳಿದ್ದೇ ತಡ ಕೇಸು ಗೆದ್ದುಬಿಟ್ಟೆ ಬಿಡು ಎಂದು ನನಗೆ ನಾನೇ ಎನ್ನುವಂತೆ ಹೇಳಿಕೊಂಡೆ. ಪಕ್ಕದಲ್ಲಿದ್ದ ಮೆಕ್ಯಾನಿಕ್ ಹೌದಾ ಸಾರ್, ಗೆದ್ದುಬಿಡ್ತೀರಲ್ಲ ಎಂದ ಕಣ್ಣರಳಿಸುತ್ತಾ. "ನಿಶ್ಚಿಂತೆಯಿಂದಿರು, ಕೇಸು ನಡೆಯುವುದು ಮಾತ್ರ ಅಲ್ಲ, ಸುಳ್ಳು ಕೇಸು ಸೃಷ್ಟಿಸಿದ ಪೊಲೀಸರೂ ಮನೆಗೆ ಹೋಗಬೇಕು" ಎಂದೆ.

ಸೆಷನ್ಸ್ ಕೋರ್ಟ್‌ನಲ್ಲಿ ಕೇಸು ವಿಚಾರಣೆಗೆ ಬಂತು. ಕಂಪ್ಲೇಂಟ್ ಕೊಟ್ಟ ಶರವಣನನ್ನು ಆಳವಾಗಿ ಪಾಟೀ ಸವಾಲಿಗೆ ಒಳಪಡಿಸಿದೆ.

"ನೀನು ಠಾಣೆಗೆ ಹೋಗಿ ಕಂಪ್ಲೇಂಟ್ ಎಷ್ಟು ಗಂಟೆಗೆ ಕೊಟ್ಟೆ?"

"ಸಂಜೆ ನಾಲ್ಕೂವರೆ".

"ಅಂದಿನ ದಿನ ಒಟ್ಟು ನೀನು ಎಷ್ಟು ಪೇಪರ್‌ಗಳ ಮೇಲೆ ಸಹಿ ಮಾಡಿದೆ?"

"ಒಂದೇ ಪೇಪರ್ ಮೇಲೆ"

"ಅದು ಯಾವ ಪೇಪರ್?"

"ಕಂಪ್ಲೇಂಟ್ ಪೇಪರ್"

"ಸಂಜೆ ಆರೋಪಿಗಳನ್ನು ಬಾರ್‌ನಿಂದ ಹಿಡಿದು ತಂದ ಮೇಲೆ ಪುನಃ ನೀನು ಯಾವುದಾದರೂ ಪೇಪರ್ ಮೇಲೆ ಸಹಿ ಮಾಡಿದೆಯಾ?"

"ಇಲ್ಲ"

"ನೀನು ರೌಡಿ ಷೀಟರ್ ಹೌದು"

"ಹೌದು"

"ನೀನು ಪೊಲೀಸರೊಂದಿಗೆ ಚಾಣಕ್ಯ ಬಾರ್‌ಗೆ ಹೋದೆಯಾ?"

"ಹೋದೆ"

"ಆರೋಪಿಗಳನ್ನೆಲ್ಲ ಅರೆಸ್ಟ್ ಮಾಡಿದ್ದನ್ನು ನೋಡಿದೆಯಾ?"

"ನೋಡಿದೆ"

"ಆರೋಪಿಗಳು ಏನೆಲ್ಲ ಕುಡಿಯುತ್ತ ಕೂತಿದ್ದರೊ ಆ ಬಾಟಲ್‌ಗಳನ್ನು ಪೊಲೀಸರು ಸೀಜ್ ಮಾಡಿದರೊ?"

"ಹೌದು ಮಾಡಿದರು"

ನಾನು ನಡೆಸಿದ ಕ್ರಾಸ್ ಎಗ್ಸಾಮಿನೇಷನ್‌ನ ಸ್ಯಾಂಪಲ್ ಇದು

ಪೊಲೀಸರು ಕೋರ್ಟಿಗೆ ಸಲ್ಲಿಸಿದ ದಾಖಲೆಗಳಲ್ಲಿ ಶರವಣನಿಂದ ಸಂಜೆ 7.30ಕ್ಕೆ ಕಂಪ್ಲೇಂಟ್ ಪಡೆದುಕೊಂಡಿರುವುದಾಗಿ ನಮೂದಿಸಿದ್ದರು.

ಆರೋಪಿಗಳನ್ನು ಬಾರ್‌ನಿಂದ ರೆಡ್‌ಹ್ಯಾಂಡ್ ಹಿಡಿದ ಮೇಲೆ ಶರವಣನಿಂದ ದೂರು ಸ್ವೀಕರಿಸಿದಂತೆ ದಾಖಲಿಸಿಕೊಂಡಿದ್ದರು.

ವಾಸ್ತವದಲ್ಲಿ ಪೊಲೀಸರು ಶರವಣನಿಂದ ಸಂಜೆ 4.30ಕ್ಕೆ ದೂರು ಪಡೆದುಕೊಂಡಿದ್ದರೂ ಸಹ ಕೊಲೆ ಸಂಚುದಾರರು ಚಾಣಕ್ಯ ಬಾರ್‌ಗೆ ಶರವಣನನ್ನು

ಕರೆದಿದ್ದರು ಎಂದು ಸಾಬೀತುಗೊಳಿಸುವ ಜಾಣ್ಮೆ ಮೆರೆಯಲು ಸಮಯವನ್ನು ಬದಲಾಯಿಸಿದ್ದರು.

ಅಲ್ಲದೆ ಶರವಣ ಹೇಳಿದಂತೆ, ಪೊಲೀಸರು ಡ್ರಿಂಕ್ಸ್ ಬಾಟಲ್‌ಗಳನ್ನು, ಸಿಗರೇಟ್ ಪ್ಯಾಕೆಟ್‌ಗಳನ್ನು, ಬೆಂಕಿ ಪೊಟ್ಟಣಗಳನ್ನು ಮಹಜರ್ ಮಾಡಿ ಕೋರ್ಟಿಗೆ ಸಲ್ಲಿಸಿರಲಿಲ್ಲ.

ಶರವಣನನ್ನು ಕಟಕಟೆಯಲ್ಲಿ ನಿಲ್ಲಿಸಿ ಪಾಟೀಸವಾಲಿಗೆ ಒಳಪಡಿಸಿದ್ದನ್ನು ನೋಡಿದ ಅವನ ಮಿತ್ರ ಮಧು ಮತ್ತು ಅವನ ಅಂಗಡಿಯಲ್ಲಿ ಸಹಾಯಕನಾಗಿದ್ದ ರಮೇಶ್ ಇಬ್ಬರೂ ಕೋರ್ಟ್‌ನಲ್ಲಿ ನಮಗೆ ಸುಳ್ಳು ಹೇಳಲು ಭಯವಾಗುತ್ತದೆ. ಸಾಕ್ಷಿ ಹೇಳೊಲ್ಲ ಎಂದು ಪರಾರಿಯಾಗಿಬಿಟ್ಟಿದ್ದರು!

ವೆಂಕಟರಮಣಶೆಟ್ಟಿಯವರ ನಕಲಿ ಡಿಗ್ರಿ ಸರ್ಟಿಫಿಕೇಟ್‌ಗೆ ಸಂಬಂಧಿಸಿದ ದಾಖಲೆಗಳು ಮತ್ತು ಅದಕ್ಕೆ ಸಂಬಂಧಿಸಿದ ಜಂಟಿ ರಿಜಿಸ್ಟ್ರಾರ್ ಅವರು ಬಡ್ತಿ ರದ್ದುಗೊಳಿಸುವಂತೆ ನೀಡಿದ ಆದೇಶದ ದಾಖಲೆಗಳನ್ನು ಕೋರ್ಟ್‌ನಲ್ಲಿ ಹಾಜರುಪಡಿಸಿದೆ.

ಪುಟ್ಟರುದ್ರಯ್ಯನವರು ತಮ್ಮ ಅವ್ಯವಹಾರಗಳನ್ನು ಪತ್ರಿಕೆಯಲ್ಲಿ ಬಯಲುಗೊಳ್ಳುವಂತೆ ಮಾಡಿದರು ಎನ್ನುವ ವೈಷಮ್ಯದಿಂದ ಈ ಕೊಲೆ ಸಂಚಿನ ಕಟ್ಟುಕಥೆಯನ್ನು ವೆಂಕಟರಮಣಶೆಟ್ಟರು ಹೆಣೆದರು. ಅದಕ್ಕೆ ಪಿಎಸ್‌ಐ ರಮೇಶ್‌ಚಂದ್ರ ಮತ್ತು ಇತರ ಪೊಲೀಸರು ಸೂಜಿ ದಾರಗಳಾದರು ಎಂದು ಕೋರ್ಟ್‌ನಲ್ಲಿ ವಿಶ್ಲೇಷಿಸಿದೆ. ನನ್ನ ವಾದವನ್ನು ಆಲಿಸಿದ ನ್ಯಾಯಾಧೀಶರು ಪುಟ್ಟರುದ್ರಯ್ಯ ಮತ್ತು ಇತರ ಐವರು ಆರೋಪಿಗಳನ್ನು ಖುಲಾಸೆಗೊಳಿಸಿದರು.

ಪುಟ್ಟರುದ್ರಯ್ಯನವರೊಂದಿಗೆ ಆರೋಪಿಗಳಾಗಿದ್ದ ಇತರ ಐವರಲ್ಲಿ ಕೆಲವರು, "ಕೋರ್ಟ್ ಮುಂದೆ ನಾವು, ಪುಟ್ಟರುದ್ರಯ್ಯ ಕೊಲೆ ಸಂಚಿಗೆ ನಮ್ಮನ್ನು ಪ್ರೇರೇಪಿಸುತ್ತಿದ್ದ ಎಂದು ಹೇಳಿಬಿಡುತ್ತೇವೆ" ಎಂದು ಬ್ಲಾಕ್‌ಮೇಲ್ ಮಾಡಿ ಬಹಳಷ್ಟು ದುಡ್ಡು ಕಿತ್ತುಕೊಂಡಿದ್ದರು. ಪುಟ್ಟರುದ್ರಯ್ಯ ಕಾಯಿಲೆ ಬಿದ್ದ ಮಡದಿ, ಜೈಲುವಾಸ, ಸಂಬಳಲೋಪ, ಸ್ನೇಹಿತರ ಬ್ಲಾಕ್‌ಮೇಲ್ ಇವೆಲ್ಲದರಿಂದ ಜರ್ಝರಿತನಾಗಿ ಹೋಗಿದ್ದರು. ಕೇಸಿನಿಂದ ಪಾರಾದದ್ದೇ ದೊಡ್ಡದು ಎಂದು ನಿಟ್ಟುಸಿರುಬಿಟ್ಟರು... ಸುಳ್ಳು ಕೇಸು ಹಾಕಿದ್ದಕ್ಕೆ ಪೊಲೀಸರು ಮತ್ತು ವೆಂಕಟರಮಣಶೆಟ್ಟಿಯ ವಿರುದ್ಧ ಕೇಸು ಹಾಕೋಣ ಎಂದೆ.

"ಹಾಳಾಗಿ ಹೋಗಲಿ ಬಿಡಿ ಸಾರ್. ಈ ಕೋರ್ಟು, ಠಾಣೆ, ಜೈಲುಗಳ

ಮುಖವನ್ನು ಮತ್ತೆ ನೋಡುವುದಿಲ್ಲ ನಾನು. ನಿಮ್ಮ ಉಪಕಾರವನ್ನು ಕೊನೆಯುಸಿರುವವರೆಗೂ ಮರೆಯುವುದಿಲ್ಲ. ಪೊಲೀಸರು ಸೃಷ್ಟಿಸಿದ ಕಥೆಯಿಂದ ನಾನು ದಿಗ್ಭ್ರಾಂತನಾಗಿ ಹೋಗಿದ್ದೆ. ಸತ್ಯದ ತಲೆಯ ಮೇಲೆ ಹೊಡೆಯುವಂತೆ ಕಥೆ ಹೆಣೆದಿದ್ದರು. ನೀವು ಅದರ ಕೊಳೆತ ಕೊಂಡಿಗಳನ್ನು ಪತ್ತೆಹಚ್ಚಿ ಕಥೆಯ ಹುಸಿತನವನ್ನು ಅದ್ಭುತವಾಗಿ ಬಯಲುಗೊಳಿಸಿದಿರಿ" ಎನ್ನುತ್ತಾ ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ನಿಂತುಬಿಟ್ಟರು.

98

ತಂಗಿ ಮದುವೆಯಾದ ಸುಗ್ಗಯ್ಯನನ್ನು ಕತ್ತರಿಸಿದ ಪ್ರಭಯ್ಯ !

ಪ್ರಭಯ್ಯ ಟ್ರಾವೆಲ್ಸ್ ಏಜೆನ್ಸಿ ಇಟ್ಟುಕೊಂಡಿದ್ದ. ಕಾರು, ಜೀಪುಗಳನ್ನು ಬಾಡಿಗೆಗೆ ಓಡಿಸುತ್ತಿದ್ದ. ತಂದೆ ಗಳಿಸಿದ ಆಸ್ತಿಯಿಂದ ಮೇಲೆ ಬಂದ ವ್ಯಕ್ತಿ ಈತನಲ್ಲ. ಸ್ವಂತದುಡಿಮೆ, ಪರಿಶ್ರಮಗಳಿಂದ ತನ್ನ ಬಂಧು ವರ್ಗದಲ್ಲಿ ಸೈ ಎನ್ನಿಸಿಕೊಳ್ಳುವಂತೆ ಆಗಿದ್ದ. ಪ್ರಭಯ್ಯ ತನ್ನ ಒಬ್ಬಳು ತಂಗಿಯನ್ನು ರಾಮರೆಡ್ಡಿ ಎನ್ನುವ ಕಾಂಟ್ರಾಕ್ಟರ್‌ಗೆ ಅದ್ದೂರಿಯಿಂದ ಮದುವೆ ಮಾಡಿಕೊಟ್ಟಿದ್ದ. ತಾಯಿಯ ಆಸೆ ಈಡೇರಿಸಲು ಈರ್ವರು ಸಹೋದರಿಯರ ಮದುವೆ ಮಾಡಬೇಕಾಗಿತ್ತು. ಚಿಕ್ಕ ತಂಗಿ ಮಾದಮ್ಮಳ ಮದುವೆಯಾಗಬೇಕಿತ್ತು. ಅವಳಿಗೂ ಸಹ ಭಾರೀ ವರನನ್ನ ನೋಡಿ ಮದುವೆ ಮಾಡಬೇಕೆಂದು ಯೋಚಿಸುತ್ತಿದ್ದ ಪ್ರಭಯ್ಯ. ತಂಗಿಯನ್ನು ಮಗಳಂತೆಯೇ ಪ್ರೀತಿಸುತ್ತಿದ್ದ ಪ್ರಭಯ್ಯ. ಹೆಣ್ಣುಮಕ್ಕಳು ಕಾಲೇಜ್‌ಗೆ ಹೋದರೆ ಕೆಟ್ಟುಹೋಗುತ್ತಾರೆ ಎಂದು ನಂಬಿದ್ದ ಪ್ರಭಯ್ಯ ಚಿಕ್ಕ ತಂಗಿ ಮಾದಮ್ಮಳನ್ನು ಓದಲು ಕಳಿಸಲಿಲ್ಲ.

ಪ್ರಭಯ್ಯ ಟ್ರಾವೆಲ್ ಏಜೆನ್ಸಿ ಇಟ್ಟುಕೊಂಡಿದ್ದರಿಂದ ಡ್ರೈವರ್, ಕ್ಲೀನರ್‌ಗಳು

ಆತನ ಜೊತೆಯಲ್ಲಿ ಬಹಳಷ್ಟು ಸಂತೋಷವಾಗಿದ್ದ ಕಾರಣದಿಂದ ಸಂಬಂಧಿಕರು ಪ್ರಭಯ್ಯನನ್ನು ಆದರಿಸುತ್ತಿದ್ದರು. ಸಂಬಂಧಿಕರ ಮನೆಗಳಲ್ಲಿ ಕಾರ್ಯಕ್ರಮಗಳಿದ್ದರೆ ತನ್ನ ಪಟಾಲಮ್‌ನೊಂದಿಗೆ ಹೋಗಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ. ನಾಲ್ಕಾರು ಜನ ಡ್ರೈವರ್‌ಗಳು ಪ್ರಭಯ್ಯನಿಗೆ ತೀರಾ ವಿಶ್ವಾಸಿಗರಾಗಿಬಿಟ್ಟಿದ್ದರು. ಅದರಲ್ಲೂ ಸುಗ್ಗಯ್ಯ ಎನ್ನುವ ಡ್ರೈವರ್ ಪ್ರಭಯ್ಯನಿಗೆ ಮನೆಮಗನಂತಾಗಿಬಿಟ್ಟಿದ್ದ. ಪ್ರಭಯ್ಯನ ಬ್ಯಾಂಕ್ ಅಕೌಂಟ್‌ಗಳೆಲ್ಲ ಸುಗ್ಗಯ್ಯನಿಗೆ ಗೊತ್ತಿದ್ದವು. ಹಣ ತರುವುದು, ತುಂಬುವುದು ಇತ್ಯಾದಿ ವ್ಯವಹಾರಗಳನ್ನು ಸುಗ್ಗಯ್ಯನ ಮೂಲಕ ಮಾಡಿಸುತ್ತಿದ್ದ. ಸುಗ್ಗಯ್ಯ ಇದ್ದರೆ ಸಾಕು ಪ್ರಭಯ್ಯನ ಅವಶ್ಯಕತೆಯಿಲ್ಲ ಎನ್ನುವಂತೆ ಆಯಿತು ಪ್ರಭಯ್ಯನ ಮನೆ ಹೆಣ್ಣುಮಕ್ಕಳಿಗೆ. ಜವಾಬ್ದಾರಿಯಿಂದ ಕರೆದೊಯ್ದು ತರುವ ವಿಶ್ವಾಸಿಗ ವ್ಯಕ್ತಿ ಸುಗ್ಗಯ್ಯ ಎಂದು ಎಲ್ಲರೂ ಬಗೆದರು.

ಪ್ರಭಯ್ಯನ ಟ್ರಾವೆಲ್ಸ್ ಅನ್ನು ಫಾರಿನ್ ಟೂರಿಸ್ಟ್‌ಗಳು ಬಹಳ ಮೆಚ್ಚಿಕೊಳ್ಳುತ್ತಿದ್ದರು. ಕೆಲವು ಬಾರಿ ಪ್ರಭಯ್ಯನೇ ಟೂರಿಸ್ಟ್‌ಗಳನ್ನು ಕರೆದೊಯ್ದು ಐತಿಹಾಸಿಕ ಸ್ಥಳಗಳನ್ನು ತೋರಿಸಿಕೊಂಡು ಬರುತ್ತಿದ್ದ. ಇಂಗ್ಲಿಷ್‌ನಲ್ಲಿ ಮಾನ್ಯುಮೆಂಟ್‌ಗಳ ಸರಿಯಾದ ಮಾಹಿತಿ ನೀಡುತ್ತಿದ್ದ. ಟ್ರಾವೆಲ್ ಏಜೆನ್ಸಿ ಆರಂಭಿಸಿದ ಮೊದಮೊದಲು ಹೀಗೆ ಮಾಡುತ್ತಿದ್ದ ಪ್ರಭಯ್ಯನಿಗೆ ನಂತರ ಅದರ ಅವಶ್ಯಕತೆ ಇಲ್ಲವಾಯಿತು. ಆದರೂ ಫಾರಿನ್ ಟೂರಿಸ್ಟ್‌ಗಳು ತಮ್ಮ ವ್ಯಾನ್‌ನಲ್ಲಿ ಪ್ರಭಯ್ಯನನ್ನು ಕರೆದೊಯ್ಯುತ್ತಿದ್ದರು. ಇದರೊಂದಿಗೆ ತೀರ್ಥಯಾತ್ರೆಯ ಟ್ರಿಪ್‌ಗಳನ್ನೂ ಪ್ರಭಯ್ಯ ಯೋಜಿಸುತ್ತಿದ್ದ. ಹತ್ತು, ಹನ್ನೆರಡು ದಿವಸ ಟ್ರಿಪ್ ಹೋಗಬೇಕಾಗಿ ಬರುತ್ತಿತ್ತು.

ಪ್ರಭಯ್ಯ ಊರಲ್ಲಿಲ್ಲದಾಗ ಡ್ರೈವರ್ ಸುಗ್ಗಯ್ಯನದೇ ಕಾರುಬಾರು. ಅವಿವಾಹಿತನಾಗಿದ್ದ ಯುವಕ ಸುಗ್ಗಯ್ಯ ಮತ್ತು ಮಾದಮ್ಮರ ಮಧ್ಯೆ ಪ್ರಣಯ ಅಂಕುರಿಸಿಬಿಟ್ಟಿತು. ಮಾಲೀಕನ ತಂಗಿ ತನ್ನನ್ನು ಮೋಹಿಸಿದ ಸಂಗತಿಯನ್ನು ಅದುಮಿಟ್ಟುಕೊಳ್ಳುವಷ್ಟು ಮನೋಬಲ ಸುಗ್ಗಯ್ಯನಲ್ಲಿರಲಿಲ್ಲ. ತನ್ನ ಆಪ್ತ ಡ್ರೈವರ್‌ಗಳೊಂದಿಗೆ ಹಂಚಿಕೊಳ್ಳಲಾರಂಭಿಸಿದ. ಇತರೆಲ್ಲರಿಗಿಂತ ತಾನು ಹೇಗೆ ಗ್ರೇಟ್ ಎಂದು ತೋರಿಸಿಕೊಳ್ಳುವ ಇರಾದೆಯೂ ಅವನದಾಯಿತು. ಮಾದಮ್ಮ ಆಡಿದ ಮಾತುಗಳಿಗೆ ಬಣ್ಣಹಚ್ಚಿ ವರ್ಣಿಸಿ ಹೇಳತೊಡಗಿದ ಸ್ನೇಹಿತರೊಂದಿಗೆ. ಅವರಿಂದ ಆಣೆಯನ್ನೂ ಮಾಡಿಸಿಕೊಂಡ; ಯಾರ ಮುಂದೂ ಬಾಯಿ ಬಿಡಕೂಡದೆಂದು. ಒಂದು ದಿನ ಚಿನ್ನದ ಚೈನ್ ಅನ್ನು ತೋರಿಸಿ, ಇಂದು ಮಾದು ಕೊಡಿಸಿದಳು ಎಂದ ಗೆಲುವಿನಲ್ಲಿ.

ಏತನ್ಮಧ್ಯ ಪ್ರಭಯ್ಯ ತಂಗಿಗಾಗಿ ಒಳ್ಳೊಳ್ಳೆ ವರಗಳನ್ನು ಕರೆತರತೊಡಗಿದ.

ವರಗಳು ಒಪ್ಪಿದರೂ ಮಾದಮ್ಮ ವರಗಳನ್ನು ತಿರಸ್ಕರಿಸತೊಡಗಿದಳು. ಪ್ರಭಯ್ಯ ಇದನ್ನೆಲ್ಲ ತಲೆಗೆ ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ. ಇನ್ನೂ ಚಿಕ್ಕವಯಸ್ಸು ಎಂದುಕೊಂಡ.

ಒಮ್ಮೆ ಪ್ರಭಯ್ಯ ಒಂದು ವಾರ ಟೂರ್‌ಗೆ ಹೋಗಿ ವಾಪಸ್ ಬರುವಷ್ಟರಲ್ಲಿ ಸುಗ್ಗಯ್ಯ ಮತ್ತು ಮಾದಮ್ಮ ಓಡಿಹೋಗಿಬಿಟ್ಟಿದ್ದರು.

ಈ ವಿಷಯ ಪ್ರಭಯ್ಯನನ್ನು ತತ್ತರಿಸುವಂತೆ ಮಾಡಿತು. 'ಅದಾವನೋ ಓಡಿಸಿಕೊಂಡು ಹೋಗಿದ್ದರೆ ಇಷ್ಟು ಸಿಟ್ಟು ಬರುತ್ತಿರಲಿಲ್ಲ ನಂಗೆ, ಮನೆ ಮಗನಂತೆ ನಟಿಸಿ ವಂಚಿಸಿದಾನಲ್ಲ ಇವುನ್ನ ಸುಮ್ನೆ ಬಿಡೋಲ್ಲ' ಎಂದು ಪ್ರತಿಜ್ಞೆ ಮಾಡಿದ. ಪ್ರಭಯ್ಯನ ಆಪ್ತ ವಲಯದ ಡ್ರೈವರ್‌ಗಳು, "ಸುಗ್ಗಯ್ಯನೊಂದಿಗೆ ರಂಗಯ್ಯ, ಕೃಷ್ಣಪ್ಪ ಕುಡಿಯಾಕೆ ಶಾನೆ ಹೋಗಿದಾರೆ. ಅವರನ್ನು ಹಿಡಿಯಿರಿ, ಎಲ್ಲ ವಿಷ್ಯ ತಿಳೀತದೆ" ಎಂದರು.

ರಂಗಯ್ಯ ಮತ್ತು ಕೃಷ್ಣಪ್ಪರಿಗೆ ಕಂಠಮಟ್ಟ ಕುಡಿಸಿ, "ಆದದ್ದು ಆಗಿ ಹೋಯಿತು. ಸುಗ್ಗಯ್ಯನೂ ಮನೆಯವನಂತೆಯೇ ಆಗಿದ್ದ. ಅವನಿಗೂ ಒಂದು ಟ್ರಾವೆಲ್ ಏಜೆನ್ಸಿ ಮಾಡಿಕೊಡ್ತೇನೆ. ನನ್ನ ಮುಂದೆ ವಿಷಯ ಹೇಳಿದ್ದರೆ ಓಡಿಹೋಗಲು ಬಿಡ್ತಿರಲಿಲ್ಲ. ಈಗ ಎಲ್ಲಿ ಅವ್ರೆ ಹೇಳ್ರೊ, ಎಲ್ರೂ ಹೋಗಿ ಕರಕೊಂಡುಬರೋಣ," ಎಂದ.

ಪ್ರಭಯ್ಯನ ದೊಡ್ಡ ಮನಸ್ಸಿಗೆ ತಲೆದೂಗಿದ ರಂಗಯ್ಯ, ಕೃಷ್ಣಪ್ಪ "ಸುಗ್ಗಯ್ಯ ಮಾಲೂರು ಟೌನ್‌ನಲ್ಲಿ ಅದಾನೆ. ನಾವೇ ಮನೆ ಹಿಡ್ದುಕೊಟ್ಟು ಬಂದಿದೇವೆ. ಅಲ್ಲಿ ಚಿಕ್ಕತಿರುಪತಿಯಲ್ಲಿ ಮದುವೇನೂ ಮಾಡಿಸಿದೀವಿ" ಎಂದು ಬಾಯಿಬಿಟ್ಟರು.

ಅಡ್ರೆಸ್ ಪಡೆದುಕೊಂಡ ಪ್ರಭಯ್ಯ ಮಾಲೂರಿಗೆ ಹೋದ. ನೇರ ತಂಗಿ ಮಾದಮ್ಮಳ ಮನೆಗೆ ಹೋದ ಅಣ್ಣನನ್ನು ನೋಡಿ ದಿಗ್ಭ್ರಾಂತಳಾದ ತಂಗಿಯ ಬಾಯಿ ಒಣಗತೊಡಗಿತ್ತು.

'ನಿನ್ನ ಇಷ್ಟಕ್ಕೆ ಯಾವತ್ತು ವಿರುದ್ಧ ನಾನು ನಡೆದುಕೊಂಡಿದ್ದೇನೆ, ಮದುವೆ ಮಾಡ್ತೇನೆ. ಹೀಗೆ ಹೇಳ್ದೆ ಕೇಳ್ದೆ ಬಂದ್ರೆ, ಸಂಬಂಧಿಕರ ಮಧ್ಯೆ ಮರ್ಯಾದೆ ಇರುತ್ತಾ?' ಎನ್ನುವಷ್ಟರಲ್ಲಿ ಹೊರಗಿನಿಂದ ಸುಗ್ಗಯ್ಯ ಬಂದ. ಥರ ಥರ ನಡುಗುತ್ತಿದ್ದ ಸುಗ್ಗಯ್ಯ ಪ್ರಭಯ್ಯನ ಕಾಲು ಹಿಡಿದುಕೊಂಡು ಕ್ಷಮಿಸುವಂತೆ ಅಳತೊಡಗಿದ. ಅವನ ಭುಜಗಳನ್ನು ಹಿಡಿದೆತ್ತಿ ಬೆನ್ನು ಚಪ್ಪರಿಸಿದ. 'ನಡೆ ನನ್ನೊಂದಿಗೆ, ನನ್ನ ತಂಗಿಯ ಇಷ್ಟಕ್ಕೆ ನಾನು ಯಾವತ್ತೂ ವಿರುದ್ಧವಿಲ್ಲ.' ಎಂದ.

ಸುಗ್ಗಯ್ಯ ಮತ್ತು ಮಾದಮ್ಮ ಅಳುಕಿನಿಂದಲೇ ಪ್ರಭಯ್ಯನ ಕಾರು ಹತ್ತಿದರು. ಬೆಂಗಳೂರು ತಲುಪಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ತಂಗಿಯನ್ನು ಮನೆಗೆ ಬಿಟ್ಟು ಸುಗ್ಗಯ್ಯನನ್ನು ಕರೆದುಕೊಂಡು ಹೋದ. ಚೆನ್ನಾಗಿ ಕುಡಿಸಿದ. ಪೆಗ್ಗುಗಳು ಬಿದ್ದಂತೆಲ್ಲ ಸುಗ್ಗಯ್ಯನ ಪಶ್ಚಾತ್ತಾಪ, ಅಳುಗಳು ಹೆಚ್ಚತೊಡಗಿದವು. "ನೀವು ದೇವ್ರು. ಯಾವ ಮಾಲೀಕ ತನ್ನ ಡ್ರೈವರ್‌ಗೆ ಅಳಿಯನ್ನ ಮಾಡ್ಕೋತಾನೆ? ನಂದೇನೂ ತಪ್ಪಿಲ್ಲಣ್ಣ. ಮಾದಮ್ಮಗೆ ಬೇಡಬೇಡ ಅಂದೆ, ಕೇಳ್ಲಿಲ್ಲ. ಅವ್ಳೇ ಒತ್ತಾಯ ಮಾಡಿದ್ಲೂ" ಎನ್ನುತ್ತ ಟೇಬಲ್ ಮೇಲೆ ಒರಗಿದ. ಕಬ್ಬನ್‌ಪಾರ್ಕ್‌ನ ಬಾಲಭವನದ ಸಮೀಪವಿರುವ ಬೊಂಬಿನ ಮೆಳೆಯಲ್ಲಿ ಸುಗ್ಗಯ್ಯನ ಹೆಣ ಬಿದ್ದಿತ್ತು. ಮರ್ಮಾಂಗವನ್ನು ಕೊಯ್ದು ಬಾಯಲ್ಲಿರಿಸಲಾಗಿತ್ತು ಪ್ರಭಯ್ಯ ಹುಚ್ಚೆದ್ದು ಕೊಚ್ಚಿದ್ದ ಸುಗ್ಗಯ್ಯನನ್ನು.

ತಡವಾಗಿ ಮನೆಗೆ ಬಂದ ಅಣ್ಣನೊಂದಿಗೆ ತನ್ನ ಗಂಡ ಬರಲಿಲ್ಲವೇಕೆ ಎನ್ನುವಂತೆ ನೋಡಿದಳು ನಿದ್ರೆ ಹೋಗಿರದ ಮಾದಮ್ಮ. ಅಣ್ಣನ ಕೈ ಮೈಗಳೆಲ್ಲ ರಕ್ತಮಯವಾಗಿದ್ದವು. ಅದನ್ನು ನೋಡಿದಯೇ ಸುಗ್ಗಯ್ಯನ ಗತಿಯನ್ನು ಊಹಿಸಿ ಎದೆಯೊಡೆದುಕೊಂಡಳು. "ಅಣ್ಣಾ ಅವರೆಲ್ಲಿ?"

"ಆಂ, ಆ ಸೂಳೇಮಗಂಗೆ 'ಅವ್ರು' ಅಂತೀಯಾ? ನೀನೊಂದು ನಾಯಿ. ಅವ್ನ ಕಥೆ ಮುಗಿಸಿ ಬಂದೆ" ಎನ್ನುತ್ತ ಬಾತ್‌ರೂಮ್‌ಗೆ ತೆರಳಿದ ಪ್ರಭಯ್ಯ. ರೂಮೊಳಕ್ಕೆ ಹೋಗಿ ಮಾದಮ್ಮ ನೇಣು ಹಾಕಿಕೊಂಡಳು.

ರಂಗಯ್ಯ ಮತ್ತು ಕೃಷ್ಣಪ್ಪ ಕಬ್ಬನ್‌ಪಾರ್ಕ್ ಸರ್ಕಲ್ ಇನ್ಸ್‌ಪೆಕ್ಟರ್ ವೀರಕ್ಯಾತಯ್ಯನವರಿಗೆ ಫೋನ್ ಮಾಡಿ ಸುಗ್ಗಯ್ಯನ ಕೊಲೆಗಾರ ಪ್ರಭಯ್ಯ ಎಂದು ಹೇಳಿ ಅವನು ಕುಡಿಸಿದ ಋಣ ತೀರಿಸಿದರು.

ಸರ್ಕಲ್ ಇನ್ಸ್‌ಪೆಕ್ಟರ್ ವೀರಕ್ಯಾತಯ್ಯನೊಂದಿಗೆ ಪ್ರಭಯ್ಯ ಒರಟಾಗಿ ಪ್ರತಿಕ್ರಿಯಿಸಿದ. ಇದರಿಂದ ರೊಚ್ಚಿಗೆದ್ದ ಸಿಪಿಐ ಪ್ರಭಯ್ಯನನ್ನು ಹಿಗ್ಗಾಮುಗ್ಗಾ ಚಚ್ಚಿದ. ಈ ದಾಳಿಗೆ ಪ್ರಭಯ್ಯನ ಬಲಗೈ ಎಲುಬು ಮುರಿದು ಚರ್ಮದಿಂದ ಹೊರಗೆ ಇಣುಕಿತು. ಗಾಬರಿಗೊಂಡ ಸಿಪಿಐ ಕೂಡಲೇ ಪ್ರಭಯ್ಯನನ್ನು ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಿದ. ನಾಲ್ಕು ದಿನಗಳ ಹಿಂದೆಯೇ ಕೈಮುರಿದಿದೆ ಎನ್ನುವಂತೆ ಡಾಕ್ಟರ್ ರಿಪೋರ್ಟ್‌ನಲ್ಲಿ ಬರೆಸಿದ. ಕೋರ್ಟ್‌ಗೆ ಹಾಜರುಪಡಿಸುವಾಗ ಪ್ರಭಯ್ಯನ ಸಂಬಂಧಿಕರು, ಲಾಯರ್ ಸಮೇತ ಬಂದು ಕೋರ್ಟ್‌ನಲ್ಲಿ ನಡೆದ ವಿಷಯ ಹೇಳಿಸಿಬಿಟ್ಟರೆ ನನ್ನ ಕೆಲಸ ಹೋಗುವುದು ಗ್ಯಾರಂಟಿ ಎಂದುಕೊಂಡ ವೀರಕ್ಯಾತಯ್ಯ ಕೋರ್ಟ್‌ಗೆ ಪ್ರಭಯ್ಯನನ್ನು ಹಾಜರುಪಡಿಸಲಿಲ್ಲ. ರಾತ್ರಿ ಹನ್ನೊಂದು ಗಂಟೆಗೆ ಮ್ಯಾಜಿಸ್ಟ್ರೇಟ್ ಮನೆಗೆ ಒಯ್ದು ನ್ಯಾಯಾಂಗ ಕಸ್ಟಡಿಗೆ ಆರ್ಡರ್ ಮಾಡಿಸಿಕೊಂಡು

ಬಂದು ಎದೆಹಗುರ ಮಾಡಿಕೊಂಡ. ರಾತ್ರಿಯಾಗಿದ್ದರಿಂದ ಮ್ಯಾಜಿಸ್ಟ್ರೇಟ್ ಆರೋಪಿಯನ್ನು ಖುದ್ದಾಗಿ ಪರಿವೀಕ್ಷಿಸಲಿಲ್ಲ. ಹೇಳಿಕೆಯನ್ನೂ ಪಡೆದುಕೊಳ್ಳಲಿಲ್ಲ.

ಪ್ರಭಯ್ಯನ ಭಾಮೈದ ರಾಮರೆಡ್ಡಿ ಮತ್ತಿತರರು ಬಂದು ಕೇಸನ್ನು ನನಗೆ ಕೊಟ್ಟರು. ಈ ಕೂಡಲೇ ಆ ಸರ್ಕಲ್ ಇನ್ಸ್‌ಪೆಕ್ಟರ್‌ನ ನೌಕರಿ ಹೋಗಬೇಕು ಮತ್ತು ಪ್ರಭಯ್ಯನಿಗೆ ಜಾಮೀನು ಕೊಡಿಸಬೇಕು ಎಂದರು ಫೀಜನ್ನು ಮುಂದಿಟ್ಟು.

ಸಿಪಿಐ ತಾನು ಉಳಿದುಕೊಳ್ಳಲಿಕ್ಕಾಗಿ, ಪ್ರಭಯ್ಯನ ಬಲಗೈ ಕೊಲೆಯ ದಿನಕ್ಕಿಂತ ನಾಲ್ಕೈದು ದಿನಗಳ ಹಿಂದೆಯೇ ಮುರಿದಿದೆ ಎನ್ನುವಂತೆ ಬರೆಸಿದ ಪಾಯಿಂಟ್ ಮೇಲೆ ನನ್ನ ದೃಷ್ಟಿ ನೆಟ್ಟಿತು.

ನಾನು ಅವರಿಗೆ ಹೇಳಿದೆ: "ನಿಮ್ಮ ಫೀಜಿನ ಆಸೆಗಾಗಿ ಕಕ್ಷಿದಾರ ಪ್ರಭಯ್ಯನಿಗೆ ಜೀವಾವಧಿ ಶಿಕ್ಷೆಯಾಗುವಂತೆ ಮಾಡಲು ಸಾಧ್ಯವಿಲ್ಲ..." ನನ್ನ ಮಾತು ಕೇಳಿ ರಾಮರೆಡ್ಡಿ ಆಶ್ಚರ್ಯಗೊಂಡು ಅವಾಕ್ಕಾದರು!

ನಾವು ಈಗ ಪ್ರಭಯ್ಯನನ್ನು ಜಾಮೀನಿನ ಮೇಲೆ ಬಿಡಿಸಿಕೊಳ್ಳುವುದು ಬೇಡ ಎಂದು ಸಲಹೆ ಮಾಡಿದೆ. ಆರಂಭದಲ್ಲಿ ಅರೆಮನಸ್ಸಾದರೂ ನನ್ನ ಮಾತಿನ ಮೇಲೆ ರಾಮರೆಡ್ಡಿಗೆ ವಿಶ್ವಾಸ ಬಂದಿತು.

ಈ ಪ್ರಕರಣಕ್ಕೆ ಸಂಬಂಧಿಸಿ ಯಾರ ಮುಂದೂ ಬಾಯಿಬಿಡಕೂಡದು ಎಂದು ತಾಕೀತು ಮಾಡಿದೆ.

ಬಲಗೈಯನ್ನು ಕಾಂಪೌಂಡ್ ಫ್ರಾಕ್ಚರ್ ಮಾಡಿಕೊಂಡಿದ್ದ ಪ್ರಭಯ್ಯನಿಂದ ಅಂಥ ಭೀಕರ ಕೊಲೆ ಮಾಡಲು ಸಾಧ್ಯವೇ ಎನ್ನುವ ಒಂದೇ ಪ್ರಶ್ನೆಯ ಮೇಲೆ ಕೇಸು ಗೆದ್ದುಕೊಟ್ಟೆ.

99

ರೈತರ ಮೇಲೆ ಜಾಗತೀಕರಣದ ಅಟ್ಟಹಾಸ !

ಬಹುಕಾಲದಿಂದ ನಮ್ಮ ರೈತ ಚಳವಳಿಗಳನ್ನು ಅವಗಾಹಿಸುತ್ತ ಬಂದವನು ನಾನು. ಸ್ವಾತಂತ್ರ್ಯ ಚಳವಳಿಗೆ ಈ ದೇಶದ ರೈತರು ನೀಡಿದ ಕಾಣಿಕೆ ಅವಿಸ್ಮರಣೀಯವಾದುದು. ಅವರ ತ್ಯಾಗ, ಬಲಿದಾನಗಳಿಲ್ಲದೆ ಹೋಗಿದ್ದರೆ ಸ್ವಾತಂತ್ರ್ಯ ಕೇವಲ ಕನಸಾಗಿ ಉಳಿಯುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ.

ಶಾಲಾ ಪಠ್ಯಕ್ರಮಗಳಲ್ಲಿ 1857ರ ಸಿಪಾಯಿ ದಂಗೆಯ ಬಗ್ಗೆ ಓದಿದ್ದು ಇನ್ನೂ ನೆನಪಿದೆ. ನಿಜವಾಗಿಯೂ ಅದನ್ನು ರೈತ ದಂಗೆಯೆಂದೇ ಕರೆಯಬೇಕು ಎನಿಸುತ್ತದೆ. ಏಕೆಂದರೆ, ಆ ದಂಗೆ ಸ್ಫೋಟಗೊಳ್ಳುವುದಕ್ಕೆ ಕ್ರಾಂತಿಕಾರಕ ವಾತಾವರಣವನ್ನು ರೈತರು ತಮ್ಮ ಚಳವಳಿಗಳ ಮೂಲಕ ಸೃಷ್ಟಿ ಮಾಡಿದ್ದರು. ಬ್ರಿಟಿಷರು ರೈತರಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಯಾವ ಅನುಕೂಲಗಳನ್ನೂ ಒದಗಿಸುತ್ತಿರಲಿಲ್ಲ. ಕೆರೆ, ಬಾವಿಗಳ ಸಂರಕ್ಷಣೆ ಮತ್ತು ನಿರ್ಮಾಣ ಕಾರ್ಯಗಳು ಸ್ಥಗಿತಗೊಂಡವೆನ್ನುವಷ್ಟು ಕ್ಷೀಣಗೊಂಡವು. ರೈತರ ಹಳೆಯ ತೆರಿಗೆ ಪದ್ಧತಿಯ ಪ್ರಕಾರ, ಬೆಳೆದ ಬೆಳೆಯಲ್ಲಿ ಒಂದಷ್ಟು ಭಾಗವನ್ನು ಕೊಡಬೇಕೆನ್ನುವ ನಿಯಮವಿತ್ತು. ಬರ ಬಿದ್ದು ಬೆಳೆ ಬಾರದಿದ್ದರೆ ಆ ವರ್ಷ ತೆರಿಗೆ ಸಂಗ್ರಹ

ಇರುತ್ತಿರಲಿಲ್ಲ. ಆದರೆ ಬ್ರಿಟಿಷರು ತಂದ ಹೊಸ ನಮೂನೆಯ ಜಮೀನ್ದಾರೀ ಪದ್ಧತಿಯಿಂದ ರೈತರು ಹಣದ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು. ಬೆಳೆ ಬೆಳೆಯಲಿ ಬೆಳೆಯಾಗದಿರಲಿ ತೆರಿಗೆ ಕಡ್ಡಾಯವಾಯಿತು. ತೆರಿಗೆ ಪಾವತಿಸದ ರೈತನ ಜಮೀನನ್ನು ಬ್ರಿಟಿಷರಿಂದ ನೇಮಕಗೊಂಡಿದ್ದ ಜಮೀನ್ದಾರ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ. ಹೀಗಾಗಿ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ರೈತರು ಸಾಲ ಮಾಡಬೇಕಾಯಿತು. ಆ ಮೊದಲು ಇಲ್ಲದಿದ್ದ ಸಾಲ ನೀಡುವ ಸಾಹುಕಾರರ ವರ್ಗವೊಂದು ಹಳ್ಳಿ ಹೋಬಳಿಗಳಲ್ಲಿ ತಲೆಯೆತ್ತಿತ್ತು. ಸಾಲ ಮಾಡಿ ಕೃಷಿ ಮಾಡುವ ಪದ್ಧತಿ ರೈತರಿಗೆ ಅಪರಿಚಿತ ಎನ್ನುವಂತಿತ್ತು. ಸಾಲ ನೀಡಿದ ಸಾಹುಕಾರರು ಸಿಕ್ಕಾಪಟ್ಟೆ ಬಡ್ಡಿ ಹಾಕಿ ರೈತರನ್ನು ಸುಲಿಯುತ್ತಿದ್ದರು. ರೈತರಿಗೆ ಬ್ರಿಟಿಷರು ಕೊಲೆಗಡುಕರಂತೆ ಕಂಡರೆ ಸಾಹುಕಾರರು ಕಳ್ಳರಂತೆ ಕಾಣಿಸತೊಡಗಿದ್ದರು.

ಇದೆಲ್ಲದರ ಪರಿಣಾಮವಾಗಿ ಹತ್ತೊಂಬತ್ತನೇ ಶತಮಾನದ ಪೂರ್ವಾರ್ಧದಲ್ಲಿ ಮಾನವ ನಿರ್ಮಿತ ಬರಗಳು ಉಂಟಾಗತೊಡಗಿದ್ದವು. 1500 ರಿಂದ 1857 ರಷ್ಟು ಹೊತ್ತಿಗೆ ಸುಮಾರು ಇಪ್ಪತ್ತಕ್ಕೂ ಮಿಕ್ಕ ಬರಗಳು ಕಾಣಿಸಿಕೊಂಡವು. ರೈತರು ಎರೆಮಣ್ಣನ್ನು ತಿಂದು ಹೊಟ್ಟೆ ತುಂಬಿಸಿಕೊಂಡ ಸುದ್ದಿಗಳೂ ಹರಡಿದ್ದವು. ಆ ಕಾಲಕ್ಕೆ ಹಸಿವಿನಿಂದ ಸಾಯುವ ರೈತರ ದೇಹಗಳನ್ನು ಅಂತ್ಯಕ್ರಿಯೆ ಮಾಡಲೂ ಆಗದಂಥ ಸ್ಥಿತಿ ಉಂಟಾಗಿತ್ತು. ಶವಗಳನ್ನು ನಾಯಿ-ನರಿಗಳು ತಿನ್ನುತ್ತಿದ್ದವು. ಮಾನವ ಅಸ್ಥಿಪಂಜರಗಳು ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದವು. ಈಗಿನ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಬರವನ್ನು ಡೋಂಗಿ ಬರ ಎಂದು ಕರೆದರು. ಬ್ರಿಟಿಷರ ದರೋಡೆಕೋರ ನೀತಿಗಳ ವಿರುದ್ಧ ಉತ್ತರ ಪ್ರದೇಶದಲ್ಲಿ ಒಂದೆಡೆ ರೈತ ಸಿಡಿದೆದ್ದಾಗ ಅವರ ಮೇಲೆ ಗೋಲಿಬಾರ್ ಮಾಡುವಂತೆ ಬ್ರಿಟಿಷ್ ಅಧಿಕಾರಿಗಳು ಭಾರತೀಯ ಸೈನಿಕರಿಗೆ ಆದೇಶಿಸಿದ್ದರು. ಆದರೆ ಸೈನಿಕರು ಗುಂಡುಗಳನ್ನು ರೈತರ ಮೇಲೆ ಹಾರಿಸಲು ನಿರಾಕರಿಸಿದರು. ಆಗ ಬ್ರಿಟಿಷ್ ಸೈನಿಕರು ಮತ್ತು ಭಾರತೀಯ ಸೈನಿಕರು ಸ್ಫೋಟಗೊಳ್ಳಲು ಕಾರಣವಾಯಿತು. ಹಾಗೆಯೇ ರೈತರು ಮತ್ತು ಭಾರತೀಯ ಸೈನಿಕರ ಮಧ್ಯದ ಸಖ್ಯಕ್ಕೆ ದಾರಿ ಮಾಡಿಕೊಟ್ಟಿತು.

1857ರ ದಂಗೆಯಲ್ಲಿ ಒಂದೂವರೆ ಲಕ್ಷ ಭಾರತೀಯರು ಕೊಲ್ಲಲ್ಪಟ್ಟರು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ರೈತರೇ ಆಗಿದ್ದರು. ಸ್ವಾತಂತ್ರ್ಯ ಸಂಗ್ರಾಮದ ದ್ವಿತೀಯ ಘಟ್ಟದಲ್ಲಿ ಬ್ರಿಟಿಷ್ ಸರಕಾರಕ್ಕೆ ತೆರಿಗೆ ಕೊಡಬಾರದು ಎಂದು ಗಾಂಧೀಜಿ ಕರೆಕೊಟ್ಟರು. ಈ ಕರೆಗೆ ರೈತರು ಓಗೊಟ್ಟಿದ್ದರಿಂದ ಸ್ವಾತಂತ್ರ್ಯ ಚಳವಳಿ ಹಳ್ಳಿಹಳ್ಳಿಗಳಿಗೆ ವ್ಯಾಪಿಸಲು ಸಾಧ್ಯವಾಯಿತು. ಕಾಂಗ್ರೆಸ್ಸಿನ ಬಾವುಟಗಳು ಹಾರಾಡಲು ಸಾಧ್ಯವಾಯಿತು.

ಆದರೆ ಸ್ವಾತಂತ್ರ್ಯವು ರೈತರ ಕೈಗೆ ಸಿಗದೆ ಬಂಡವಾಳ ಶಾಹಿಗಳ ಕೈಗೆ ಸಿಕ್ಕಿತು. ಜಮೀನ್ದಾರಿ ಪದ್ಧತಿಯನ್ನು ಮೂಲೋತ್ಪಾಟನೆ ಮಾಡದೆ ಪಾಳೆಗಾರರನ್ನೆಲ್ಲ ಹಾಗೇ ಉಳಿಸಿಕೊಳ್ಳಲಾಯಿತು. ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲೀಕರು ತಮ್ಮ ಇಂಡಸ್ಟ್ರಿಗಳಿಗೆ ಕಚ್ಚಾಮಾಲಿಗೆ ಬೇಕೆಂದು ಲಕ್ಷಾಂತರ ಎಕರೆ ಜಮೀನುಗಳನ್ನು ಲಪಟಾಯಿಸಿಕೊಂಡರು. ಸ್ವಾತಂತ್ರ್ಯಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಕೈಗೆ ಚಿಪ್ಪನ್ನು ಮಾತ್ರ ಕೊಡಲಾಯಿತು.

ಹೀಗೆ ಸ್ವಾತಂತ್ರ್ಯಾನಂತರದ ಪರಿಸ್ಥಿತಿಯಲ್ಲಿ ಭಾರತದ ರೈತ ಹಳೆಯ ಜಮೀನ್ದಾರರು ಮತ್ತು ಬಂಡವಾಳಶಾಹೀ ಜಮೀನ್ದಾರರು ಈ ಇಬ್ಬರಿಂದಲೂ ಶೋಷಣೆಗೆ ಒಳಗಾಗಬೇಕಾಯಿತು. ನೆಹರು ಅವರ ಹಸಿರು ಕ್ರಾಂತಿ ಶ್ರೀಮಂತ ರೈತರ ಉದಯಕ್ಕೆ ಸಹಾಯಕವಾಯಿತು. ಕಾಂಗ್ರೆಸ್ಸಿನ ಪಂಚವಾರ್ಷಿಕ ಯೋಜನೆಗಳು ರೈತ ವಿರೋಧಿಯಾಗಿ ಮುಂದುವರೆದುಕೊಂಡು ಬಂದುದರಿಂದ ಮಧ್ಯಮ ರೈತ ಬಡ ರೈತನಾಗಿಯೂ ಬಡರೈತ ಕೂಲಿಕಾರನಾಗಿಯೂ ಪರಿವರ್ತನೆಗೊಳ್ಳುವಂತಾಯಿತು. ಕೃಷಿರಂಗದಲ್ಲಿ ಬಡ ಹಾಗೂ ಕೂಲಿಕಾರ ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಮಲ್ಟಿಪಲ್ ಆಗತೊಡಗಿತು. ಶ್ರೀಮಂತ ರೈತರು ಮತ್ತು ಜಮೀನ್ದಾರಿ ರೈತರ ಸಂಖ್ಯೆ ಕಡಿಮೆಯಾಯಿತು. ಆದರೆ, ಅವರ ಭೂಹಿಡುವಳಿ ಬೆಳೆಯತೊಡಗಿತು.

ಮಧ್ಯಮ ಮತ್ತು ಶ್ರೀಮಂತ ರೈತರ ಬೇಡಿಕೆಗಳನ್ನು ಪ್ರಧಾನವಾಗಿಸಿಕೊಂಡ ರೈತ ಹೋರಾಟಗಳು ವಿಶೇಷವಾಗಿ ಎಪ್ಪತ್ತರ ದಶಕದಲ್ಲಿ ಭುಗಿಲೇಳತೊಡಗಿದವು. ಉತ್ತರ ಭಾರತದಲ್ಲಿ ಮಹೇಂದ್ರಸಿಂಗ್ ಟಿಕಾಯತ್ ನೇತೃತ್ವದಲ್ಲಿ ರೈತರು ಸರಕಾರಗಳನ್ನು ನಡುಗಿಸತೊಡಗಿದರು. ಕರ್ನಾಟಕದಲ್ಲಿ ಗೋಪಾಲಗೌಡರ ನೇತೃತ್ವದಲ್ಲಿ ಕಾಗೋಡು ರೈತ ಹೋರಾಟವು ಅಭೂತಪೂರ್ವ ನೆಲಗಟ್ಟನ್ನು ಒದಗಿಸಿಕೊಟ್ಟಿತು. ದಾಂಡೇಲಿಯ ಹಳಿಯಾಳ ರೈತ ಹೋರಾಟವು ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆಯಿತು. ಗುಂಡೂರಾವ್ ಸರಕಾರದ ಕಾಲದಲ್ಲಿ ನರಗುಂದ ಮತ್ತು ಶಿವಮೊಗ್ಗ ರೈತ ಚಳವಳಿಗಳು ಭುಗಿಲೆದ್ದವು. ರುದ್ರಪ್ಪನವರ ನೇತೃತ್ವದ ಶಿವಮೊಗ್ಗ ರೈತ ಚಳವಳಿ ಮುಂದೆ ಹೋಳಾಗಿ ಒಡೆಯುತ್ತ ಹೋದದ್ದು ಈಗ ಇತಿಹಾಸ.

ಕರ್ನಾಟಕದ ರೈತ ಚಳವಳಿಗೆ ಬಡರೈತರು ಮತ್ತು ಕೂಲಿಕಾರರು ನೇತೃತ್ವ ಕೊಡಲು ಸಾಧ್ಯವಾಗಲಿಲ್ಲ. ಶ್ರೀಮಂತ ಮತ್ತು ಜಮೀನ್ದಾರಿ ರೈತರ ಬಾಲಂಗೋಚಿಗಳಾದರು ಮಧ್ಯಮ ಹಾಗೂ ಬಡ ರೈತರು; ಅದೇ ರೀತಿ ಕೂಲಿಕಾರರು. ಇಡೀ ರೈತ ಸಮುದಾಯದ ಕೇಂದ್ರಬಿಂದುಗಳಾಗಿದ್ದ ಬಡರೈತ

ಮತ್ತು ಕೂಲಿಕಾರರುಗಳ ಹಿತವನ್ನು ಪ್ರಧಾನವಾಗಿ ಇಟ್ಟುಕೊಳ್ಳಲು ಸಾಧ್ಯವಾಗದೇ ಹೋದ ರೈತ ಚಳವಳಿ ತನ್ನ ಮಿಲಿಟನ್ಸಿಯನ್ನು ಕಳೆದುಕೊಳ್ಳಲು ಮುಖ್ಯಕಾರಣಗಳಲ್ಲಿ ಒಂದಾಯಿತು ಎನ್ನಿಸುತ್ತದೆ.

ಅಪಾರ ಸಂಖ್ಯೆಯ ಬಡರೈತ ಮತ್ತು ಕೂಲಿಕಾರರ ಬೆಂಬಲವನ್ನು ರೈತ ಸಂಘ ಕಳೆದುಕೊಳ್ಳುತ್ತ ಮುಂದುವರಿಯಿತು. ಜನಬೆಂಬಲ ತನ್ನ ವೀರಾವೇಶವನ್ನು ಕಳೆದುಕೊಳ್ಳುವಲ್ಲಿ ಪರ್ಯಾವಸಾನಗೊಂಡಿತು. 'ನಿಷ್ಕ್ರಿಯ ಜನತೆ; ಸಕ್ರಿಯ ನಾಯಕರು' ಎನ್ನುವಂಥ ಪರಿಸ್ಥಿತಿ ರೈತ ಸಂಘಗಳಿಗೆ ಒದಗಿ ಬಂದಿತು.

ರೈತ ಸಂಘಗಳನ್ನು ತಮ್ಮ ಬಲ ಕಳೆದುಕೊಳ್ಳುತ್ತಿರುವಾಗಲೇ ದಲಿತ ಸಂಘರ್ಷ ಸಮಿತಿ ತನ್ನ ಬಲವನ್ನು ವೃದ್ಧಿಸಿಕೊಳ್ಳುತ್ತ ಸಾಗಿತು ಎನ್ನಿಸುತ್ತದೆ. ಈ ವಿಷಯ ಕುರಿತಂತೆ ಗಂಭೀರ ಅಧ್ಯಯನ ನಡೆದರೆ ಈ ನನ್ನ ಅನಿಸಿಕೆಗೆ ಪುಷ್ಟಿ ದೊರೆಯಬಹುದು.

ಕೃಷಿ ಕೂಲಿಕಾರರ ಸಮಸ್ಯೆಗಳನ್ನು ದಲಿತ ಸಂಘರ್ಷ ಸಮಿತಿ ಕೈಗೆತ್ತಿಕೊಂಡಿದ್ದರಿಂದ ರೈತ ಸಂಘದ ಹಿಂದಿದ್ದ ಬಡ ರೈತ-ಕೂಲಿಕಾರರು ಆ ಕಡೆಗೆ ಶಿಫ್ಟ್ ಆದಂತೆ ತೋರುತ್ತದೆ. ಆ ನಂತರ ದಲಿತ ಸಂಘರ್ಷ ಸಮಿತಿ ಸಹ ಭಾವನಾತ್ಮಕ ಬೇಡಿಕೆಗಳಿಗೆ ಹೆಚ್ಚು ಒತ್ತು ಕೊಟ್ಟು ಜೀವನಾತ್ಮಕ ಬೇಡಿಕೆಗಳನ್ನು ಕಡೆಗಣಿಸಿದ್ದರಿಂದ ಅಲ್ಲಿಂದಲೂ ಬಡರೈತ – ಕೂಲಿಕಾರರು ದೂರ ಸರಿದರು ಈ ಬೆಳವಣಿಗೆಯ ನಂತರ ದಲಿತ ಸಂಘರ್ಷ ಸಮಿತಿ ಉಪಜಾತಿಗಳ ಆಧಾರದ ಮೇಲೆ ಒಡೆಯುವುದರಲ್ಲಿ ಪರ್ಯಾವಸಾನಗೊಂಡಿದ್ದು ಕಣ್ಮುಂದೆಯೇ ಇದೆ. ದಲಿತ ಸಂಘರ್ಷ ಸಮಿತಿಯ ಈ ವಿದ್ಯಮಾನಗಳನ್ನೆಲ್ಲ ರೈತ ಚಳವಳಿಯ ಏಳು ಬೀಳುಗಳಿಗೆ ಸಂಬಂಧಿಸಿದಂತೆ ಮಾತ್ರ ಇಲ್ಲಿ ನೋಡಿದ್ದೇನೆ.

ನಮ್ಮ ಕೃಷಿರಂಗದಲ್ಲಿ ಹೊತ್ತಿ ಉರಿಯುತ್ತಿರುವ ಹಲವಾರು ಸಮಸ್ಯೆಗಳಿಗೆ ಜಾಗತೀಕರಣವೇ ಮೂಲಕಾರಣ ಎನ್ನುವ ಅಂಶ ಮೊದಮೊದಲಿಗೆ ರೈತರಿಗೆ ಅರ್ಥವಾಗಲಿಲ್ಲ. ಇಂದಿಗೂ ಈ ವಿಷಯ ಬಡರೈತ ಹಾಗೂ ಕೂಲಿಕಾರರಿಗೆ ಅರ್ಥವಾಗಿಲ್ಲ ಎನ್ನುವ ಮಾತು ಬೇರೆ. ನಮ್ಮ ಬಂಡವಾಳಶಾಹೀ ಜಮೀನ್ದಾರರು ಮತ್ತು ಶ್ರೀಮಂತ ರೈತರಿಗೆ ಜಾಗತೀಕರಣದ ಬಿಸಿ ತಡವಾಗಿಯಾದರೂ ಹತ್ತಿತ್ತು. ಜಾಗತೀಕರಣವು ಇಂದು ಇಡೀ ವಿಶ್ವದ ದೇಶಗಳಲ್ಲಿ ತನ್ನನ್ನು ಹೊಗಳುವ ವರ್ಗವೊಂದನ್ನು ಸೃಷ್ಟಿಸಿದೆ. ಈ ದೇಶದ ಬಂಡವಾಳಶಾಹಿಗಳು ಸಾಮ್ರಾಜ್ಯಶಾಹಿಗಳೊಂದಿಗೆ ಸ್ಪರ್ಧಿಸಲಾಗದೆ ಸೋತು ಒತ್ತಾಯದ ಹಸ್ತಲಾಘವ

ಮಾಡಿದರು. ಇದರ ಪರಿಣಾಮವಾಗಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ವದೇಶದಲ್ಲಿ ಪಾಲುಗಾರಿಕೆ ಉದ್ಯಮಗಳನ್ನು ಆರಂಭಿಸಿದವು. ಇದನ್ನೇ ನವವಸಾಹತುವಾದದ ಪರಿಪೂರ್ಣ ರೂಪ ಎನ್ನುವುದು. ಸಾಮ್ರಾಜ್ಯಶಾಹಿಗಳು ವಿವಿಧ ದೇಶಗಳನ್ನು ರಾಜಕೀಯವಾಗಿ ಆಕ್ರಮಿಸಿಕೊಂಡು ತಮ್ಮದೇ ಸರಕಾರ ಸ್ಥಾಪಿಸಿ ಆರ್ಥಿಕ ಕೊಳ್ಳೆಹೊಡೆಯುತ್ತಿದ್ದ ಕಾಲವು ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಕುಸಿಯತೊಡಗಿತು. ಸಾಮ್ರಾಜ್ಯಶಾಹಿಗಳೊಳಗಿನ ಪರಸ್ಪರ ಕಿತ್ತಾಟವು ಜಾಗತಿಕ ಯುದ್ಧದಲ್ಲಿ ಪರ್ಯಾವಸಾನಗೊಂಡಿತು. ಅದೇ ಸಂದರ್ಭದಲ್ಲಿ ವಸಾಹತು ದೇಶಗಳಗಳಲ್ಲಿ ದೇಶೀಯ ವಿಮೋಚನಾ ಚಳವಳಿಗಳು ಹುಟ್ಟಿಕೊಂಡವು. ಇದರಿಂದಾಗಿ ಸಾಮ್ರಾಜ್ಯಶಾಹಿಗಳಿಗೆ ತಮ್ಮ ವಸಾಹತು ಆಡಳಿತವನ್ನು ಮುಂದುವರಿಸಲು ಅಸಾಧ್ಯವಾಯಿತು. ಪರಿಣಾಮವಾಗಿ ಎರಡನೇ ಜಾಗತಿಕ ಯುದ್ಧಾನಂತರ ಹಲವಾರು ವಸಾಹತು ದೇಶಗಳು ಸ್ವತಂತ್ರಗೊಳ್ಳುವಂತಾಯಿತು. ಸ್ವಾತಂತ್ರ್ಯ ಪಡೆದ ಕೆಲವು ರಾಷ್ಟ್ರಗಳು ಸಾಮ್ರಾಜ್ಯಶಾಹಿಗಳ ಶತಮಾನಗಳ ಸತತ ಲೂಟಿಯಿಂದ ಪಾರಾಗಿ ಆರ್ಥಿಕವಾಗಿ ಸುಭದ್ರವಾಗಿದ್ದವು. ಹೀಗಾಗಿ ಅವು ಸಾಮ್ರಾಜ್ಯಶಾಹಿಗಳ ಆರ್ಥಿಕ ಶೋಷಣೆಗೆ ಕೊರಳೊಡ್ಡಬೇಕಾಯಿತು. ತಮ್ಮ ವಸಾಹತುಶಾಹೀ ಸುಲಿಗೆಯಿಂದ ಸಂಪತ್ತು ಕೇಂದ್ರೀಕರಿಸಿಟ್ಟುಕೊಂಡು ಸಾಮ್ರಾಜ್ಯಶಾಹಿಗಳು ಮೂರನೇ ಜಗತ್ತಿನ ಬಡ ರಾಷ್ಟ್ರಗಳನ್ನು ಸಾಲದ ಮೂಲಕ ಬಲೆಗೆ ಹಾಕಿಕೊಳ್ಳತೊಡಗಿದವು. ಸಾಲ ಕೇಳಲು ಹೋದ ರಾಷ್ಟ್ರಗಳಿಗೆ ಹತ್ತು ಹಲವು ಷರತ್ತುಗಳನ್ನು (ಸಾಲಕ್ಕೆ ಸಂಬಂಧಪಡದ) ಹೇರತೊಡಗಿದವು; ಬಡರಾಷ್ಟ್ರಗಳ ಯೋಜನೆಗಳಿಗೆ ದಿಕ್ಸೂಚಿಯಾಗತೊಡಗಿದವು. ಮಹಿಳೆ ಮತ್ತು ಶಿಶುಕಲ್ಯಾಣ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣಗಳಂಥ ಯೋಜನೆಗಳಿಗಾಗಿ ಹಣ ವ್ಯಯಿಸಬಾರದೆನ್ನುವ ನಿರ್ಬಂಧಗಳನ್ನು ವಿಶ್ವ ಬ್ಯಾಂಕ್ ಮತ್ತು ಐ.ಎಮ್.ಫ್.ಗಳು ಹೇರತೊಡಗಿದವು. ಬಡರಾಷ್ಟ್ರಗಳು ಅನುತ್ಪಾದಕವಾಗಿಯೇ ಮುಂದುವರಿದು ಕೇವಲ ಖರೀದಿದಾರರಾಗಬೇಕೆನ್ನುವುದು ಸಾಮ್ರಾಜ್ಯಶಾಹಿಗಳ ಇರಾದೆ. ಸಾಮ್ರಾಜ್ಯಶಾಹಿಗಳ ಉತ್ಪಾದನೆಗಳನ್ನು ಬಿಕರಿ ಮಾಡುವ ರೀಟೇಲ್ ಶಾಪ್‌ಗಳಂತಾದವು ಬಡ ರಾಷ್ಟ್ರಗಳು. ಜಾಗತಿಕ ಉತ್ಪನ್ನಗಳ ಗುಣ ನಿಯಂತ್ರಣದ ಸೋಗನ್ನು ಹಾಕಿಕೊಂಡು ಸಾಮ್ರಾಜ್ಯಶಾಹಿ ಪ್ರತ್ಯಕ್ಷವಾಯಿತು. ಪೇಟೆಂಟ್ ಕಾನೂನನ್ನು ತಂದಿತು.

ಭಾರತದಲ್ಲಿ ಬೆಳೆಯುವ ಬಾಸುಮತಿ ಅಕ್ಕಿ, ಬೇವಿನ ಔಷಧಿ ಗುಣಗಳು, ಅರಿಷಿಣದ ಔಷಧಿ ಗುಣ ಇತ್ಯಾದಿಗಳು ತನ್ನ ಸಂಶೋಧನೆಗಳು ಎಂದು ಪೇಟೆಂಟ್ ಮಾಡಿಸಿಕೊಳ್ಳಲಾರಂಭಿಸಿದವು ಸಾಮ್ರಾಜ್ಯಶಾಹೀ ಕಂಪನಿಗಳು. ಅತ್ಯವಶ್ಯಕ ಔಷಧಿಗಳ ಮೇಲೆ ತನ್ನ ಏಕಸ್ವಾಮ್ಯವನ್ನು ಘೋಷಿಸಿ ಇನ್ನು ಮುಂದೆ ಇಲ್ಲಿ ನಮ್ಮ ಪರವಾನಗಿ

ಇಲ್ಲದೆ ಏನನ್ನೂ ತಯಾರಿಸಕೂಡದು ಎಂದು ಹೇಳತೊಡಗಿದವು. ಏಡ್ಸ್‌ನಂಥ ವಿನಾಶಕಾರೀ ರೋಗಕ್ಕೆ ಬೇಕಾಗುವ ಮದ್ದುಗಳನ್ನು ಬಡ ರಾಷ್ಟ್ರಗಳು ಕಡಿಮೆ ವೆಚ್ಚದಲ್ಲಿ ತಯಾರಿಸುವುದು ದುಸ್ತರವಾಯಿತು. ಅಮೆರಿಕಾದ ಕಂಪನಿಗಳು ತಯಾರಿಸುವ ಏಡ್ಸ್ ಔಷಧಿಗಳಿಗೆ ಒಂದು ವರ್ಷದ ಅವಧಿಯ ಚಿಕಿತ್ಸೆಗೆ ತಗುವ ವೆಚ್ಚ 15,000 ಡಾಲರ್‌ಗಳು! ಆದರೆ ಅದೇ ಭಾರತ ಮತ್ತಿತರ ಬಡ ರಾಷ್ಟ್ರಗಳು ತಯಾರಿಸುವ ಔಷಧಿಯ ಬೆಲೆ ಕೇವಲ 250 ಡಾಲರ್‌ಗಳು! ಹೀಗಾಗಿ ಪೇಟೆಂಟ್‌ಗಳು ಏಡ್ಸ್ ರೋಗಿಗಳನ್ನು ನುಂಗತೊಡಗಿದವು. ಮೂರನೇ ಜಗತ್ತಿನ ರಾಷ್ಟ್ರಗಳ ಜನರು ಔಷಧಿ ಪಡೆಯುವ ಹಕ್ಕಿನಿಂದ ವಂಚಿತರಾಗಿಬೇಕಾಯಿತು.

ಮುಕ್ತ ಮಾರುಕಟ್ಟೆಯಲ್ಲಿ ದಿಗ್ವಿಜಯ ಸಾಧಿಸಲು ಸಾಮ್ರಾಜ್ಯಶಾಹಿಗಳು ಸಸ್ಯಾಹಾರಿ ದನಗಳನ್ನು ಸಹ ಮಾಂಸಾಹಾರಿಗಳನ್ನಾಗಿ ಪರಿವರ್ತಿಸಿಬಿಟ್ಟರು. ಹಲವಾರು ರಾಸಾಯನಿಕಗಳಿಂದ ಕೂಡಿದ ಆಹಾರ ನೀಡಿ ಕುರಿಗಳನ್ನು ದಿಢೀರ್ ಬೆಳವಣಿಗೆಗೆ ಒಳಪಡಿಸುವ ಪ್ರಯೋಗ ನಡೆಸಿದರು. ಅಕಾಲಿಕವಾಗಿ ಬಾತುಕೊಂಡು ಕೊಬ್ಬಿ ಬೆಳೆದ ಕುರಿಗಳು ನೋಡಲು ಮಾತ್ರ ಗೂಳಿಗಳಂತೆ ಕಂಡವು. ಆದರೆ, ಅವಕ್ಕೆ ರೋಗ ನಿರೋಧಕ ಶಕ್ತಿಯೇ ಇರಲಿಲ್ಲ. ಗುರುತಿಸಲಾಗದ ವಿಚಿತ್ರ ರೋಗಗಳಿಗೆ ಬಲಿಯಾಗಿ ಕುರಿಗಳು ಸಾಯತೊಡಗಿದವು. ಈ ರೀತಿ ರೋಗ ಬಂದು ಸತ್ತ ಕುರಿಗಳನ್ನು ಮೇವಿನೊಂದಿಗೆ ರುಬ್ಬಿ ಆಕಳು, ಎಮ್ಮೆಗಳಿಗೆ ಬೇಕಾಗುವ ಆಹಾರವನ್ನು ತಯಾರಿಸಿ ಮೂರನೇ ಜಗತ್ತಿನ ರಾಷ್ಟ್ರಗಳ ಮಾರುಕಟ್ಟೆಗೆ ರಫ್ತು ಮಾಡಿದರು. ಆಹಾರ ತಿಂದ ದನಗಳು ಸ್ಪಾಂಜಿಫಾರಮ್ ಎನ್ಸಿಫಲೋಪಾಲ್ ಎನ್ನುವ ರೋಗಕ್ಕೆ ಗುರಿಯಾಗಿ ಬಳಲತೊಡಗಿದವು. ಮೂರನೇ ಜಗತ್ತಿನ ರಾಷ್ಟ್ರಗಳ ಸರಕಾರಗಳು ಸಾಮ್ರಾಜ್ಯಶಾಹಿಗಳ ಒತ್ತಾಯಗಳಿಗೆ ಮಣಿದು ಕೃಷಿ ವಿರೋಧಿ ನೀತಿಗಳನ್ನು ಅನುಸರಿಸತೊಡಗಿದ್ದರಿಂದ ಬಡವರ ಆಹಾರ ಧಾನ್ಯ ಬಳಕೆಯಲ್ಲಿ ಕುಸಿತವುಂಟಾಯಿತು. 1991–92ರಲ್ಲಿ ನಡೆಸಲ್ಪಟ್ಟ ಸರ್ವೆ ಒಂದರ ಪ್ರಕಾರ ಭಾರತದ ಗ್ರಾಮೀಣ ಪ್ರದೇಶದ ಬಡವರು12.2% ರಷ್ಟು ಕಡಿಮೆ ಧಾನ್ಯಗಳನ್ನು ಬಳಸುವ ಅನಿವಾರ್ಯತೆಗೊಳಗಾಗಬೇಕಾಯಿತು. ಈಗ ಇದು ಇನ್ನಷ್ಟು ಕಡಿತವಾಗಿರಲೂ ಸಾಧ್ಯ.

ಸಾಮ್ರಾಜ್ಯಶಾಹಿಗಳು ನಮ್ಮ ರೈತರ ಮೇಲೆ ಎಂಥೆಂಥ ವಿನಾಶಗಳನ್ನು ಹೇರುತ್ತಿದ್ದಾರೆನ್ನುವುದಕ್ಕೆ ನಮ್ಮದೇ ರಾಜ್ಯದ ಉದಾಹರಣೆಯನ್ನು ತೆಗೆದುಕೊಳ್ಳೋಣ.

ಮಣ್ಣಿನ ಮಗ ದೇವೇಗೌಡರು ಪ್ರಧಾನಿಯಾಗಿದ್ದರು. ಇನ್ನೋರ್ವ ಮಣ್ಣಿನ ಮಗ ಪಟೇಲ್ ಮುಖ್ಯಮಂತ್ರಿಗಳಾಗಿದ್ದರು. ನಮ್ಮ ಭೂ ಸುಧಾರಣಾ ಕಾಯ್ದೆಗೆ

ತಿದ್ದುಪಡಿಯೊಂದನ್ನು ತಂದರು. ಈ ತಿದ್ದುಪಡಿ ಎಂಥ ವಿನಾಶಕಾರಿಯಾದುದೆಂದರೆ ನಮ್ಮ ರೈತರ ಅಸ್ತಿತ್ವವನ್ನೇ ನಾಶಮಾಡುವಂಥದ್ದು.

ನಮ್ಮ ಕರ್ನಾಟಕ ರಾಜ್ಯ ಭೂ ಸುಧಾರಣಾ ಕಾಯ್ದೆಯ ಪ್ರಕಾರ, ರೈತ ಅಥವಾ ರೈತ ಕೂಲಿಕಾರರಲ್ಲದವರು ಕೃಷಿ ಜಮೀನುಗಳನ್ನು ಖರೀದಿಸುವಂತಿಲ್ಲ. ಹಲವಾರು ವ್ಯಾಪಾರಿಗಳು, ಸಾಲ ಲೇವಾದೇವಿಗಾರರು ಸರಕಾರಕ್ಕೆ ಆದಾಯ ತೆರಿಗೆ ವಂಚಿಸಲು ಜಮೀನುಗಳನ್ನು ಖರೀದಿಸಿ, ತಮ್ಮ ವ್ಯಾಪಾರೀ ಮೂಲದಿಂದ ಬಂದ ಆದಾಯವನ್ನು ಕೃಷಿ ಮೂಲದಿಂದ ಬಂದ ಆದಾಯವೆಂದು ತೋರಿಸುವ ಪ್ರಕರಣಗಳು ನಮ್ಮಲ್ಲಿವೆ. ಕೃಷಿಕರಲ್ಲದ ಈ ವ್ಯಾಪಾರಿಗಳು ಜಮೀನು ಖರೀದಿಸಲು ಕಾನೂನಿನ ಕಣ್ಣಿಗೆ ಮಣ್ಣೆರಚಬೇಕಾಗಿತ್ತು. ಅಂದರೆ, ತಮ್ಮ ಕುಟುಂಬದ ಸದಸ್ಯರೊಬ್ಬರು ಕೃಷಿ ಕೂಲಿಕಾರರಿದ್ದಾರೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಸುಳ್ಳು ಸರ್ಟಿಫಿಕೇಟ್ ಪಡೆದುಕೊಂಡು ಜಮೀನು ಖರೀದಿಸುತ್ತಿದ್ದರು. ಬಡರೈತರ ಜಮೀನು ವ್ಯಾಪಾರಿಗಳ ಸೊತ್ತಾಗಕೂಡದೆನ್ನುವ ಉದ್ದೇಶದಿಂದ ಸರ್ಕಾರ ಈ ನಿಯಮವನ್ನು ರೂಪಿಸಿತ್ತು. ಪಟೇಲ್ ಸರಕಾರ ಈ ಕಾನೂನು ತರುವ ಮೂಲಕ ರೈತರ ಹೊಟ್ಟೆಯ ಮೇಲೆ ಚಪ್ಪಡಿ ಎಳೆಯಿತು.

ಭೂಮಿ ರೈತನಿಗೆ ಉತ್ಪಾದನಾ ಸಾಧನ ಮಾತ್ರವಲ್ಲ ಅವನ ಬದುಕೂ ಆಗಿದೆ. ರೈತನ ಬದುಕಿನ ವ್ಯವಸ್ಥೆಯ ಮೇಲೆ ನಡೆದ ದಾಳಿ ಇದಾಗಿದೆ. ಎಕರೆಗೆ ಆರೇಳು ಲಕ್ಷ ಸಿಕ್ಕೊಡನೆ ರೈತನ ಬದುಕು ಉಜ್ವಲಗೊಂಡಿತೆಂದು ತಿಳಿಯುವುದು ತಪ್ಪು. ಅವನೇ ಮಾರಿಕೊಂಡ ಜಮೀನು ಬಹುರಾಷ್ಟ್ರೀಯ ಕಂಪನಿಯಿಂದ ಲೇಔಟ್ ಮಾಡಿಸಲ್ಪಟ್ಟಾಗ ಅಷ್ಟು ಮೊತ್ತಕ್ಕೆ 30x 30 ಸೈಟ್ ಸಹ ಅವನಿಗೆ ಸಿಕ್ಕುವುದಿಲ್ಲ. ವ್ಯಾಪಾರದ ತಿಳಿವಳಿಕೆ, ಲೇವಾದೇವಿ ಚಾಣಾಕ್ಷತೆಯಿರದ ರೈತ ಆ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುವ ಮತ್ತು ಅಂತಿಮವಾಗಿ ನೆಲೆರಹಿತನಾಗುವ ಸಾಧ್ಯತೆಗಳೇ ಹೆಚ್ಚು.

ಜಾಗತೀಕರಣದ ಭಾಗವಾಗಿ ನಮ್ಮ ದೇಶಕ್ಕೆ ಕೆಂಟಕಿ ಚಿಕನ್, ಪಿಜ್ಜಾ, ಮ್ಯಾಕ್‌ಡೊನಾಲ್ಡ್, ಬರ್ಗರ್ ಕಿಂಗ್ಸ್ ಹೋಟೆಲ್‌ಗಳು ದಾಳಿಯಿಟ್ಟವು. ಅಮೆರಿಕಾದಲ್ಲಿ ಈ ಹೋಟೆಲ್‌ಗಳು ಆರೋಗ್ಯಪ್ರಿಯರ ತಿರಸ್ಕಾರಕ್ಕೆ ಗುರಿಯಾಗಿದ್ದವು. ಅಮೆರಿಕದ ಸಂಸತ್ತು ಕೆಂಟಕಿ ಚಿಕನ್ ಮತ್ತಿತರ ಹೋಟೆಲ್‌ಗಳು ತಯಾರಿಸುವ ಖಾದ್ಯಗಳ ಗುಣಮಟ್ಟ ಪರೀಕ್ಷಿಸಲು ಸಮಿತಿಯೊಂದನ್ನು ರಚಿಸಿತ್ತು. ಈ ಕಂಪನಿಗಳು ಖಾದ್ಯ ತಯಾರಿಕೆಗೆ ಬಳಸುವ ಕುರಿ, ಕೋಳಿಗಳಿಗೆ ವಿಶೇಷ ರಾಸಾಯನಿಕಗಳ ಆಹಾರ ತಿನ್ನಿಸಿ ಬೆಳೆಸಲಾಗುತ್ತಿದ್ದ ಅಂಶ ಬೆಳಕಿಗೆ ಬಂದಿತು. ಈ ರೀತಿ ಬೆಳೆಸಲ್ಪಡುವ

ಪ್ರಾಣಿಗಳ ಮಾಂಸ ಹೆಚ್ಚು ರುಚಿಕರವಾಗಲೆಂದು ಮತ್ತು ದಿಢೀರ್ ಉಬ್ಬಿಕೊಂಡು ಬೆಳೆಯಲೆಂದು arsenic, sulfa drugs, nitrofurans, antibiotics, diethyistibestrol (ಡಿ.ಇ.ಎಸ್. ಹಾರ್ಮೋನ್ಸ್) ಮುಂತಾದ ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿರುವ ಅಂಶವೂ ಬೆಳಕಿಗೆ ಬಂದಿತು.

ಇಂಥ ರಾಸಾಯನಿಕಗಳನ್ನು ತಿಂದು ಬೆಳೆದ ಪ್ರಾಣಿಗಳನ್ನು ತಿನ್ನುವುದರಿಂದ ಕರುಳಿನ ಕ್ಯಾನ್ಸರ್, salmanellosis ಜ್ವರ, ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಲೈಂಗಿಕ ಬದಲಾವಣೆಗಳು, ಗಂಡಸರಿಗೆ ಸ್ತನಗಳು ಬೆಳೆಯುವುದು, ಅಂಡು ದಪ್ಪಗಾಗುವುದು, ನಪುಂಸಕತ್ವ, ಮಕ್ಕಳಲ್ಲಿ ಅಕಾಲಿಕ ಹರೆಯ ಬರುವಿಕೆ ಮುಂತಾದ ಸಮಸ್ಯೆಗಳು ತಲೆದೋರುವುದು ಎಂದು ಅಮೆರಿಕಾದ ತಜ್ಞರು ತಮ್ಮ ಅಧ್ಯಯನದಿಂದ ತೋರಿಸಿಕೊಟ್ಟರು. ಕೋಟ್ಯಂತರ ಅಮೆರಿಕನ್ನರು ಇಂಥ ವಿಷಪೂರಿತ ಮಾಂಸ ಭಕ್ಷಣೆಯಿಂದ ಹೃದಯ ರೋಗಗಳಿಗೆ ಬಲಿಯಾಗಿರುವುದನ್ನೂ ಪತ್ತೆಹಚ್ಚಿದರು.

ಮತ್ತೊಂದು ಅಂಶವೇನೆಂದರೆ, ರಾಸಾಯನಿಕಗಳನ್ನು ಭಕ್ಷಿಸಿ ಬೆಳೆಯುವ ಹಂತದಲ್ಲಿಯೇ ಪ್ರಾಣಿಗಳಿಗೆ ಕ್ಯಾನ್ಸರ್, ಲ್ಯೂಕೋಸಿನ್, ಹಂದಿಜ್ವರ ಇತ್ಯಾದಿ ರೋಗಗಳು ಬರಲಾರಂಭಿಸುತ್ತವೆ. ಈ ರೋಗಗಳನ್ನು ತಡೆಗಟ್ಟಲಿಕ್ಕಾಗಿ ಮಾರಣಾಂತಕ ರೋಗನಿರೋಧಕಗಳಾದ Hloramphenicol ಮತ್ತು nitrofurozone ಗಳಂಥ ಔಷಧಿಗಳನ್ನು ಬಳಸಲಾಗುತ್ತದೆ. ಈ ರಾಸಾಯನಿಕಗಳು ಆ ಪ್ರಾಣಿಗಳ ದೇಹದಲ್ಲಿಯೇ ಡಿಪಾಜಿಟ್ ಆಗಿದ್ದು ಮಾಂಸದಲ್ಲಿಯೂ ಇರುತ್ತವೆ. ಮಾಂಸ ಬೇಯುವ ಶಾಖದ ಪ್ರಮಾಣಕ್ಕೆ ಈ ರಾಸಾಯನಿಕಗಳು ಹಾಳಾಗದೆ ಖಾದ್ಯಗಳ ಮೂಲಕ ಮನುಷ್ಯನ ದೇಹಕ್ಕೆ ರವಾನೆಗೊಳ್ಳುತ್ತವೆ.

ಈ ಎಲ್ಲ ಸಂಗತಿಗಳು ಬಯಲಾದ ಮೇಲೆ ಅಮೆರಿಕನ್ನರು ಕೆಂಟಕಿ ಮುಂತಾದವುಗಳನ್ನು ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಲಾರಂಭಿಸಿದರು.

ಈ ಹೋಟೆಲ್‌ಗಳನ್ನು ನಡೆಸುವ ಕಂಪನಿಗಳು ಸ್ವದೇಶದಲ್ಲಿ ತಾತ್ಸಾರಕ್ಕೆ ಒಳಗಾಗಿದ್ದರೂ ತಮ್ಮ ಶಾಖೆಗಳನ್ನು ಜಗತ್ತಿನ ನೂರಾರು ದೇಶಗಳಲ್ಲಿ ವಿಸ್ತರಿಸುವುದನ್ನು ಮಾತ್ರ ಬಿಡಲಿಲ್ಲ.

1995ರ ಆಗಸ್ಟ್ 25ರಂದು ಬೆಂಗಳೂರಲ್ಲಿ, "ವಿದೇಶಿ ಪಶು ಸಂಗೋಪನಾ ತಂತ್ರಜ್ಞಾನದ ಪರಿಣಾಮಗಳು" ಎನ್ನುವ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯ ರೈತ ಸಂಘವು ಏರ್ಪಡಿಸಿತು. ಈ ವಿಚಾರ ಸಂಕಿರಣದಲ್ಲಿ

ಕೇಂದ್ರ ಸರ್ಕಾರದ ಮಾಜಿ ಸಚಿವೆ ಮೇನಕಾ ಗಾಂಧಿ, ಪರಿಸರವಾದಿ ಡಾ. ವಂದನಾ ಶಿವ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಪ್ರೊ. ನಂಜುಂಡಸ್ವಾಮಿಗಳು ಮಾತಾಡಿದರು.

ಮೇನಕಾ ಗಾಂಧಿ, "ಇಂಥ ಆಹಾರ ಪೂರೈಸಿರುವ ವಿದೇಶಿ ಕಂಪನಿಗಳ ವಿರುದ್ಧ ರಾಜ್ಯಸಭೆಯಲ್ಲಿ ಸರ್ವಾನುಮತದ ನಿರ್ಧಾರ ತೆಗೆದುಕೊಂಡಿದ್ದರೂ ಕೇಂದ್ರ ಸರ್ಕಾರ ಅವುಗಳಿಗೆ ಅನುಮತಿ ನೀಡುತ್ತಿರುವುದು ದುರದೃಷ್ಟಕರ. ಈ ವಿದೇಶಿ ಸಂಸ್ಥೆಗಳು ಅಪ್ಪಟ ಸುಳ್ಳುಗಾರ ಸಂಸ್ಥೆಗಳು. ಅನುಮತಿ ಪಡೆದುಕೊಳ್ಳುವಾಗ ನೀಡಿದ ಆಶ್ವಾಸನೆಗಳನ್ನು ಗಾಳಿಗೆ ತೂರಿಬಿಡುತ್ತವೆ" ಎಂದು ಮಾತಾಡಿದರು. ಡಾ. ವಂದನಾ ಶಿವ, "ಬಹುರಾಷ್ಟ್ರೀಯ ಸಂಸ್ಥೆಗಳು ಈ ರೀತಿಯ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವ ಹುನ್ನಾರ ನಡೆಸುತ್ತಿರುವುದನ್ನು ನೋಡಿದರೆ, ವಿದೇಶಿ ಕಾರ್ಪೋರೇಟ್ ಸಂಸ್ಥೆಗಳು ಭಾರತದ ಆಹಾರ ಸಂಸ್ಕೃತಿಯ ಮೇಲೆ ನೇರವಾದ ದಾಳಿ ನಡೆಸುತ್ತಿರುವುದು ಮೇಲುನೋಟಕ್ಕೇ ಕಾಣಿಸುತ್ತಿದೆ" ಎಂದರು.

ಅದೇ ಸಂದರ್ಭದಲ್ಲಿ ವಿಧಾನ ಮಂಡಲದ ಒಳಗೆ ಸಹ ಕೆಂಟಕಿ ಚಿಕನ್ ಬಗ್ಗೆ ಬಿಸಿಬಿಸಿ ಚರ್ಚೆಗಳು ನಡೆಯತೊಡಗಿದವು.

ಬ್ರಿಗೇಡ್ ರಸ್ತೆಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದ್ದ ಕೆಂಟಕಿ ಚಿಕನ್ ಹೋಟೆಲ್ ಚರ್ಚೆಯ ಕೇಂದ್ರಬಿಂದುವಾಯಿತು.

ಪಶುಸಂಗೋಪನಾ ಸಚಿವ ಬಚ್ಚೇಗೌಡರು, "ನಾನೂ ಕೆಂಟಕಿ ಚಿಕನ್ ತಿಂದಿದ್ದೇನೆ, ರುಚಿಯಾಗಿದೆ. ಅದರಿಂದ ರೋಗಗಳು ಬರುವುದು ಗೊತ್ತಿಲ್ಲ" ಎಂದು ಪತ್ರಿಕೆಗೆ ಹೇಳಿಕೆ ನೀಡಿದರು.

ಈ ಎಲ್ಲ ವಿವಾದದ ಪರಿಣಾಮವಾಗಿ ಬೆಂಗಳೂರು ಮಹಾನಗರ ಪಾಲಿಕೆ ಕೆಂಟಕಿ ಫ್ರೈಡ್ ಚಿಕನ್ ಹೋಟೆಲ್‌ಗೆ ನೀಡಿದ್ದ ಲೈಸೆನ್ಸ್ ಅನ್ನು ರದ್ದುಗೊಳಿಸಿತು. ಕೆಂಟಕಿ ಚಿಕನ್ ಹೋಟೆಲ್ ಕಂಪನಿ ಸದರಿ ರದ್ದತಿಗೆ ಸ್ಟೇ ನೀಡಬೇಕೆಂದು ಹೈಕೋರ್ಟಿನಲ್ಲಿ ರಿಟ್ ದಾವೆ ಹೂಡಿ ಮನವಿ ಮಾಡಿತು. ಹೈಕೋರ್ಟ್‌ನಿಂದ ಸ್ಟೇ ಸಹ ಸಿಕ್ಕಿತು.

ಏತನ್ಮಧ್ಯೆ ದೆಹಲಿಯ ಮಹಾನಗರ ಪಾಲಿಕೆ ಸಹ ಕೆಂಟಕಿ ಚಿಕನ್ ಹೋಟೆಲ್‌ಗೆ ನೀಡಿದ್ದ ಲೈಸೆನ್ಸ್ ಅನ್ನು ರದ್ದುಗೊಳಿಸಿತು.

ನಂಜುಂಡಸ್ವಾಮಿಯವರು, "ಮಾಜಿ ನಾಯಕರಾದ ಚಂದ್ರಶೇಖರ್ ಮತ್ತು ಹಾಲಿ ನಾಯಕರಾದ ವಿ.ಪಿ. ಸಿಂಗ್ ಅವರುಗಳೇ ಈ ಕೆಂಟಕಿ ಚಿಕನ್

ಹೋಟೆಲ್‌ಗಳನ್ನು ವಿರೋಧಿಸಿದ್ದಾರೆ. ಆದರೆ ಇಲ್ಲಿ ದೇವೇಗೌಡರು ಆ ಹೋಟೆಲ್‌ಗೆ ಪರವಾನಗಿ ಕೊಟ್ಟಿದ್ದಾರೆ. ಜನತಾದಳದ ಕೇಂದ್ರ ನಾಯಕರ ಧೋರಣೆಗಳಿಗೆ ವಿರುದ್ಧವಾಗಿ ಗೌಡ ಮತ್ತು ಪಟೇಲ್ ನಡೆದುಕೊಳ್ಳುತ್ತಿದ್ದಾರೆ" ಎಂದು ಖಾರವಾದ ಹೇಳಿಕೆ ನೀಡಿದರು.

"ಸರ್ಕಾರ ಕೂಡಲೇ ಕೆಂಟಕಿ ಚಿಕನ್ ಹೋಟೆಲ್ ಅನ್ನು ಮುಚ್ಚಿಸದಿದ್ದರೆ ರೈತ ಸಂಘವೇ ಕಾನೂನು ಕಟ್ಟಳೆಗಳನ್ನು ಮುರಿದು ಅದನ್ನು ಮುಚ್ಚಬೇಕಾಗುತ್ತದೆ" ಎಂದೂ ನಂಜುಂಡಸ್ವಾಮಿ ಗುಡುಗಿದರು. ಬೀಜ ಸಂಸ್ಕರಣದ ಕಾರ್ಗಿಲ್ ಕಂಪನಿಯ ಮೇಲೆ ದಾಳಿ ಮಾಡಿದ ಅನುಭವ ರೈತ ಸಂಘಕ್ಕಿತ್ತು. ಸಂಘವು ಆಗ ದಾಳಿ ನಡೆಸಿ ಅದನ್ನು ದಕ್ಕಿಸಿಕೊಂಡಿತ್ತು. ಅದೇ ವಿಶ್ವಾಸದಿಂದ ಕೆಂಟಕಿ ಹೋಟೆಲ್ ಮೇಲೆ ದಾಳಿ ನಡೆಸುವುದಾಗಿ ಘೋಷಿಸಿತು.

ಕರ್ನಾಟಕ ಸರ್ಕಾರವು ಕೋರ್ಟ್ ಸ್ಟೇ ಇದೆ ಎಂದು ತನ್ನ ನಿಸ್ಸಹಾಯಕತೆ ಪ್ರದರ್ಶಿಸಿತು. ರೈತ ಸಂಘವು ಎರಡನೇ ಕ್ವಿಟ್ ಇಂಡಿಯಾ ಮಾದರಿಯಲ್ಲಿ ಕೆಂಟಕಿ ಹಟಾವ್ ಹೋರಾಟ ನಡೆಸಲಾಗುವುದೆಂದು ಸಾರಿತು. ಬ್ರಿಗೇಡ್ ರಸ್ತೆಯಲ್ಲಿರುವ ಕೆಂಟಕಿ ಚಿಕನ್ ಹೋಟೆಲ್‌ಗೆ ಪೊಲೀಸ್ ಸರ್ಪಗಾವಲು ನೀಡಲ್ಪಟ್ಟಿತು. ಹೋರಾಟಗಾರರು ಕೆಂಟಕಿ ಹೋಟೆಲ್‌ನಿಂದ ನೂರು ಮೀಟರ್ ದೂರದಿಂದಲೇ ತಮ್ಮ ಪ್ರತಿಭಟನೆ ನಡೆಸಬೇಕೆಂದು ಪೊಲೀಸರು ರೈತ ಸಂಘದ ಮೆರವಣಿಗೆಕಾರರಿಗೆ ಪರವಾನಗಿ ನೀಡಿದರು. 1996ರ ಜನವರಿ 30ರಂದು ರೈತ ಸಂಘವು ಕೆಂಟಕಿ ಹೋಟೆಲ್ ಮೇಲೆ ದಾಳಿ ನಡೆಸಿತು. ಹೋಟೆಲ್‌ನ ಗಾಜುಗಳನ್ನು, ಪೀಠೋಪಕರಣಗಳನ್ನು, ಕಂಪ್ಯೂಟರ್‌ಗಳನ್ನು, ಅಡಿಗೆಗೆ ಉಪಯೋಗಿಸುತ್ತಿದ್ದ ಯಂತ್ರಗಳನ್ನೂ ನಾಶಪಡಿಸಿದರೆಂದೂ ಕೆಲಸಗಾರರ ಮೇಲೆ ತೀವ್ರ ಹಲ್ಲೆ ನಡೆಸಿದರೆಂದೂ ಹಾಗೆಯೇ ರೂ. 29 ಲಕ್ಷದಷ್ಟು ನಷ್ಟವಾಗಿದೆ ಎಂದೂ ದೂರು ನೀಡಲಾಯಿತು.

ಅಂದಿನ ದಾಳಿಯಲ್ಲಿ ಪಾಲ್ಗೊಂಡವರಲ್ಲಿ 102 ರೈತರು ಸಿಕ್ಕಿಬಿದ್ದರು. ನೂರಾರು ಜನ ಪರಾರಿಯಾದರು. ಸಿಕ್ಕಿಕೊಂಡ 102 ಜನ ರೈತರೆಲ್ಲ ಮಂಡ್ಯದವರೇ ಆಗಿದ್ದರು; ನಂಜುಂಡಸ್ವಾಮಿಯವರು ದಾಳಿಯಲ್ಲಿ ಭಾಗವಹಿಸಿರಲಿಲ್ಲ.

ಆದರೂ ನಂಜುಂಡಸ್ವಾಮಿಯವರನ್ನು ಬಂಧಿಸಲಾಗುತ್ತದೆ ಎಂಬ ಸುದ್ದಿ ದಟ್ಟವಾಗತೊಡಗಿತು. ಇದು ನಿಜವೂ ಆಯಿತು. ಮೂರೇ ದಿನಗಳಲ್ಲಿ ನಂಜುಂಡಸ್ವಾಮಿಯವರನ್ನು ಅವರ ವಿಜಯನಗರದಲ್ಲಿರವ ಮನೆಯಲ್ಲಿ

ಹಲಸೂರ್‌ಗೇಟ್ ಸಹಾಯಕ ಪೊಲೀಸ್ ಕಮೀಶನರ್ ಡಾ. ಮಹೇಶ್ ನೇತೃತ್ವದಲ್ಲಿ ಕೊಲೆ ಯತ್ನ ಹಾಗೂ ಪ್ರಚೋದನೆಗಳ ಆರೋಪಗಳಡಿ ಬಂಧಿಸಲಾಯಿತು.

ನಂಜುಂಡಸ್ವಾಮಿಯವರನ್ನು ಫೆಬ್ರವರಿ 12ವರೆಗೆ ನ್ಯಾಯಾಂಗ ಕಸ್ಟಡಿಗೆ ತೆಗೆದುಕೊಳ್ಳಲಾಯಿತು. ನಂತರ ಕಸ್ಟಡಿ ಅವಧಿಯನ್ನು ವಿಸ್ತರಿಸುತ್ತ ಹೋಗಲಾಯಿತು.

ಈ ಪ್ರಕರಣದಲ್ಲಿ ಬಂಧಿಯಾದ ರೈತರು ಮತ್ತು ಮುಖಂಡರಾದ ನಂಜುಂಡಸ್ವಾಮಿಯವರ ಪರ ನಾನು ವಕಾಲತ್ತು ಹಾಕಿದೆ.

ನಂಜುಂಡಸ್ವಾಮಿಯವರು ಜಾಮೀನಿನ ಮೇಲೆ ಹೊರಬರುವುದಿಲ್ಲವೆಂದು ಘೋಷಿಸಿದರು ಮತ್ತು ನನ್ನ ಬಂಧನದಿಂದ ಉಂಟಾಗುವ ರೈತರ ಪ್ರಕ್ಷುಬ್ಧತೆಗೆ ನಾನು ಹೊಣೆಗಾರನಲ್ಲ, ಕೆಂಟುಕಿ ಹೋಟೆಲ್ ಮೇಲೆ ರೈತರ ದಾಳಿ ಮುಂದುವರಿಯುತ್ತದೆ ಎಂದು ಘೋಷಿಸಿದರು.

ನಂಜುಂಡಸ್ವಾಮಿಯವರ ಬಂಧನವನ್ನು ಪ್ರಜಾ ವಿಮೋಚನಾ ರಂಗದವರು ಮೆರವಣಿಗೆ ಮೂಲಕ ಪ್ರತಿಭಟಿಸಿದರು. ಬಂಡಾಯ ಸಾಹಿತ್ಯ ಸಂಘಟನೆ ಮತ್ತಿತರ ಕನ್ನಡ ಸಂಘಗಳು ಸಹ ನಂಜುಂಡಸ್ವಾಮಿಯವರ ಬಂಧನ ಖಂಡಿಸಿ ಹೇಳಿಕೆ ನೀಡಿದವು. ವಾಟಾಳ್ ನಾಗರಾಜ್, " ಈ ಬಂಧನ ಸೇಡಿನ ಫಲಶ್ರುತಿ" ಎಂದು ಗುಡುಗಿದರು. ಮುಖ್ಯಮಂತ್ರಿ ದೇವೇಗೌಡರು ವಾಟಾಳ್ ಆರೋಪವನ್ನು ಅಲ್ಲಗಳೆದರು.

ಷರತ್ತಿನ ಜಾಮೀನಿನ ಮೇಲೆ ನಂಜುಂಡಸ್ವಾಮಿಯವರನ್ನು ಬಿಡುಗಡೆ ಮಾಡಲಾಯಿತು. ಹೊರಬಂದ ನಂಜುಂಡಸ್ವಾಮಿಯವರನ್ನು ಪತ್ರಕರ್ತರು, "ನೂರಾ ಎರಡು ಜನ ರೈತರನ್ನು ಜೈಲಲ್ಲಿಟ್ಟಿರುವಾಗ ಮುಖಂಡರಾಗಿ ನೀವೊಬ್ಬರೇ ಹೊರಗೆ ಬಂದುದು ಸೂಕ್ತವೆ?" ಎಂದು ಪ್ರಶ್ನಿಸಿದರು.

ಅದಕ್ಕೆ ನಂಜುಂಡಸ್ವಾಮಿಯವರು, "ನನ್ನ ಮೇಲಿನ ಆರೋಪಗಳಿಗೆ ಸಾಕ್ಷ್ಯ ಒದಗಿಸಲು ಪೊಲೀಸ್ ಪ್ರಾಸಿಕ್ಯೂಷನ್‌ಗೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ಬಿಡುಗಡೆ ಮಾಡಿದರು" ಎಂದುತ್ತರಿಸಿದರು.

"ಕೆಂಟಕಿ ಹೋಟೆಲ್ ಮೇಲೆ ದಾಳಿ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿದ್ದೀರಿ ಮತ್ತು ರೈತರಿಗೆ ಕರೆಕೊಟ್ಟಿದ್ದೀರಿ. ಈ ಸಂಗತಿಗಳನ್ನು ಕೋರ್ಟ್‌ನಲ್ಲಿ ಏಕೆ ಒಪ್ಪಿಕೊಳ್ಳಲಿಲ್ಲ?" ಎಂದು ಪತ್ರಕರ್ತರು ಪ್ರಶ್ನಿಸಿದರು.

ಈ ಪ್ರಶ್ನೆಗೆ ಸೂಕ್ತ ಉತ್ತರ ನೀಡದೆ ಹೋದರು ನಂಜುಂಡಸ್ವಾಮಿ.

ಕಾರ್ಯಕರ್ತರನ್ನು ಜೈಲಲ್ಲಿರಿಸಿ ಮುಖಂಡರು ಹೊರಗೆ ಬರುವುದರಿಂದ ಜೈಲೊಳಗಿನ ಕಾರ್ಯಕರ್ತರ ನೈತಿಕ ಸ್ಥೈರ್ಯ ಕುಂದುತ್ತದೆ ಎಂದೆನಿಸಿತು ನನಗೆ. ಇದು ಈಗಿನ ಮುಖಂಡರ ವೈಖರಿಯೇನೋ ಎಂದುಕೊಂಡೆ.

ರಾಜ್ಯದಾದ್ಯಂತ ಕೆಂಟಕಿ ಹೋರಾಟವನ್ನು ಹರಡಿಸಲು ನಂಜುಂಡಸ್ವಾಮಿಯವರು ಬಹಳಷ್ಟು ಕರೆಗಳನ್ನು ಕೊಟ್ಟರು. ಆದರೆ ರೈತರು ಅಷ್ಟಾಗಿ ಸ್ಪಂದಿಸಲಿಲ್ಲವೆನಿಸಿತು.

ಸಂಘಟನೆಯ ಬಗ್ಗೆ ನನಗೂ ಅನುಭವಿದ್ದುದರಿಂದ ರೈತ ಸಂಘಟನೆಯ ಕೆಂಟಕಿ ಹೋರಾಟದ ಸ್ವರೂಪದಲ್ಲಿನ ನ್ಯೂನತೆಗಳು ಕಾಣಿಸಿದವು.

ಜನಸಮೂಹವನ್ನು ಹೋರಾಟಕ್ಕಿಳಿಸಲು action oriented ಬೇಡಿಕೆ, ಘೋಷಣೆಗಳನ್ನು ಇರಿಸಬೇಕಾಗುತ್ತದೆ. ಇದರೊಂದಿಗೆ propaganda oriented ಬೇಡಿಕೆ, ಘೋಷಣೆಗಳನ್ನು ಸೇರಿಸಿಕೊಳ್ಳಬಹುದು. ಆದರೆ ರಾಜ್ಯ ರೈತ ಸಂಘವು propaganda oriented ಬೇಡಿಕೆಯೊಂದನ್ನೇ ಪ್ರಧಾನಗೊಳಿಸಿಕೊಂಡು ರಾಜ್ಯಮಟ್ಟದ ಹೋರಾಟಕ್ಕೆ ಕರೆಕೊಟ್ಟಿತ್ತು. ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿರುವ ಕೆಂಟಕಿ ಹೋಟೆಲ್ ರದ್ಧತಿಯ ಬೇಡಿಕೆಗೆ ರಾಜ್ಯದ ಇಡೀ ರೈತ ಸಮೂಹ ಸ್ಪಂದಿಸಬೇಕೆಂದು ರೈತ ಸಂಘ ನಿರೀಕ್ಷಿಸಿತ್ತು. ಕೆಂಟಕಿ ಚಿಕನ್‌ನಂಥ ಬೇಡಿಕೆಗಳನ್ನು propaganda ಕ್ಕಾಗಿ ಇಟ್ಟುಕೊಳ್ಳುವುದೇ ಸೂಕ್ತ ಎನ್ನಿಸಿತು.

ನಂಜುಂಡಸ್ವಾಮಿಯವರು ಜಾಮೀನು ಪಡೆದುಕೊಳ್ಳದೆ ಜೈಲೊಳಗೇ ಇದ್ದು ಇಡೀ ರಾಜ್ಯದ ರೈತ ಸಮುದಾಯವನ್ನು ಬಾಧಿಸುವ ಜ್ವಲಂತ ಸಮಸ್ಯೆಯನ್ನು ಸೇರಿಸಿ ಹೋರಾಟಕ್ಕೆ ಕರೆಕೊಟ್ಟಿದ್ದರೆ ರೈತ ಹೋರಾಟ ತೀವ್ರಗೊಳ್ಳುತ್ತಿತ್ತೇನೋ.

ನೆಲ್ಸನ್ ಮಂಡೇಲಾ ಹೆಚ್ಚೂಕಮ್ಮಿ ತನ್ನ ಜೀವಮಾನವನ್ನು ಜೈಲಲ್ಲಿ ಕಳೆದರು. ಮಂಡೇಲಾ ಒಂದೇ ಬಾರಿ ವಿನಂತಿಸಿಕೊಂಡಿದ್ದರೂ ದಕ್ಷಿಣ ಆಫ್ರಿಕಾದ ವರ್ಣಭೇದ ಸರ್ಕಾರ ಅವರನ್ನು ಬಿಡುಗಡೆಗೊಳಿಸುತ್ತಿತ್ತು. ಹಾಗೊಂದು ವೇಳೆ ಮಾಡಿ ತಾವು ಜೈಲಿನಿಂದ ಹೊರಬಂದರೆ ಹೋರಾಟನಿರತ ಜನತೆಯ ನೈತಿಕ ಸ್ಥೈರ್ಯ ಕುಂದುತ್ತದೆನ್ನುವುದನ್ನು ಮಂಡೇಲಾ ಕಂಡುಕೊಂಡಿದ್ದರು. ತನ್ನ ದೇಶದ ವಿಮೋಚನೆಗಾಗಿ ಬದುಕನ್ನೇ ತ್ಯಾಗ ಮಾಡಿದರು. ಅದೇ ರೀತಿ ಸೂಕಿ ಅದೆಷ್ಟು ವರ್ಷಗಳ ಕಾಲ ಗೃಹಬಂಧನದಲ್ಲಿದ್ದಾಳೆ!

ಆಳುವವರು ಹೋರಾಟಗಾರರ ಮುಖಂಡರನ್ನು ಬಿಡುಗಡೆಗೊಳಿಸಲು ತುದಿಗಾಲ ಮೇಲೆ ನಿಂತಿರುತ್ತಾರೆ, ಹಾಗೆ ಮಾಡುವ ಮೂಲಕ ಹೋರಾಟಗಳನ್ನು ಶಿಥಿಲಗೊಳಿಸುತ್ತಾರೆ.

ರೈತರನ್ನು ಜಾಮೀನು ಮೇಲೆ ಬಿಡುಗಡೆಗೊಳಿಸಬೇಕೆಂದು 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಹಾಕಿದೆ. ನ್ಯಾಯಾಧೀಶರಾದ ಶ್ರೀ ಎ.ಎಮ್. ಪತ್ತಾರ್ ಅವರ ಮುಂದೆ ಅರ್ಜಿ ವಿಚಾರಣೆಗೆ ಬಂತು.

ಕೋರ್ಟ್‌ನಲ್ಲಿ ರೈತರ ಮೇಲೆ ಹೊರಿಸಲ್ಪಟ್ಟಿದ್ದ ಎಲ್ಲ ಆರೋಪಗಳನ್ನೂ ನಾನು ನಿರಾಕರಿಸಲಿಲ್ಲ. ಕೆಂಟಕಿಯ ಹೋಟೆಲ್ ಮೇಲೆ ಶಾಂತಿಯುತವಾಗಿದ್ದ ಪ್ರತಿಭಟನೆ ಉದ್ರಿಕ್ತಗೊಂಡದ್ದು ದುರದೃಷ್ಟಕರ. ಆದರೆ ಅದರ ಹಿಂದೆ ಸಾಮಾಜಿಕ ಹಿತಾಸಕ್ತಿಯ ಉದ್ದೇಶವಿದೆ. ಆದರೆ ಕೊಲೆಯತ್ನ ಆರೋಪ ಮಾತ್ರ ಸುಳ್ಳು ಎಂದು ವಾದಿಸಿದೆ. ಸಾರ್ವಜನಿಕ ಅಭಿಪ್ರಾಯ ರೂಪಿಸುವುದಕ್ಕೋಸ್ಕರ ಪ್ರತಿಭಟನೆ ಮಾಡಲಾಯಿತು ಎಂದು ವಾದಿಸಿದೆ.

ಮಾನ್ಯ ನಾಯಾಧೀಶರು ನನ್ನ ಅರ್ಜಿಯನ್ನು ಪುರಸ್ಕರಿಸಿದರು. ತಮ್ಮ ಆದೇಶದಲ್ಲಿ ನನ್ನ ವಾದದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಬರೆದರು: "ಮಾನ್ಯ ಶ್ರೀ ಸಿ.ಎಚ್. ಹನುಮಂತರಾಯ ಅವರು ಫಿರ್ಯಾದುದಾರರು ಸರಬರಾಜು ಮಾಡುತ್ತಿದ್ದ ಕೋಳಿಮಾಂಸದಲ್ಲಿ ಮೋನೋ ಸೋಡಿಯಮ್ ಗ್ಲುಟಾಮೇಟ್ ಎಂಬ ಪದಾರ್ಥ ಇದ್ದು, ಅದು ಜನರ ಆರೋಗ್ಯಕ್ಕೆ ಅಪಾಯಕಾರಕವಾದದ್ದೆಂದು ವಾದಿಸುತ್ತಾ ಈ ಬಗ್ಗೆ ಅವರು, ಜಾರ್ಜ್ ಆರ್. ಸ್ಟಾವರ್ಟ್ ಎಂ.ಡಿ.ರವರು ಪ್ರಕಟಿಸಿರುವ ಒಂದು ಪುಸ್ತಕವನ್ನು ಹಾಜರುಪಡಿಸಿರುತ್ತಾರೆ. ಇದರಲ್ಲಿ ಇಂತಹ ಹುರಿದ ಕೋಳಿ ಮಾಂಸದಿಂದ ಜನರಿಗೆ ಅದರಲ್ಲೂ ಮಕ್ಕಳಿಗೆ ಮುಂದೆ ಯಾವ ರೀತಿಯ ಹಾನಿ ಉಂಟುಮಾಡುತ್ತದೆ ಎಂಬ ಬಗ್ಗೆ ಉಲ್ಲೇಖಿಸಿದ್ದು ಕೂಡ ಇದೆ. ಶ್ರೀ ಸಿ.ಎಚ್. ಹನುಮಂತರಾಯರವರು ಕಷ್ಟಪಟ್ಟು ವಿಜ್ಞಾನದ ಬಗ್ಗೆ ಈ ರೀತಿಯಾದ ಒಂದು ಸಾಹಿತ್ಯವನ್ನು ನ್ಯಾಯಾಲಯದ ಅವಗಾಹನೆಗೆ ಹಾಜರು ಮಾಡಿದ್ದು ಪ್ರಶಂಸನೀಯವೆಂದು ಹೇಳಬೇಕಾಗುತ್ತದೆ"

ದೇವೇಗೌಡರು ಪ್ರಧಾನಮಂತ್ರಿಗಳಾಗಿ ದಿಲ್ಲಿಗೆ ಹೋದಮೇಲೆ ಜೆ.ಎಚ್. ಪಟೇಲ್ ಅವರು ಮುಖ್ಯಮಂತ್ರಿಗಳಾದರು.

ನಂಜುಂಡಸ್ವಾಮಿಯವರು ಕೆಂಟಕಿ ಹೋಟೆಲ್ ದಾಳಿ ಪ್ರಕರಣವನ್ನು ಸರ್ಕಾರ ಹಿಂದಕ್ಕೆ ಪಡೆಯಬೇಕು ಎಂದು ಮುಖ್ಯಮಂತ್ರಿ ಪಟೇಲ್ ಅವರಿಗೆ ಮನವಿ ಮಾಡಿಕೊಂಡರು. ಪಟೇಲ್ ಅವರು ಸದರಿ ಕೇಸ್ ಅನ್ನು ಹಿಂದಕ್ಕೆ ಪಡೆದುಕೊಂಡರು.

ಇಲ್ಲಿಗೆ ಕೆಂಟಕಿ ಹೋರಾಟದ ವೀರಾವೇಶ ಉಪಶಮನವಾದಂತಾಯಿತು.

ಇದೇ ರೀತಿ ವಾಟಾಳ್ ನಾಗರಾಜ್ ಸಹ ಹಲವಾರು ಹೋರಾಟಗಳಲ್ಲಿ ಕೇಸ್‌ಗಳನ್ನು ಹಾಕಿಸಿಕೊಂಡದ್ದನ್ನು ಪೇಪರ್‌ನಲ್ಲಿ ಓದಿರುವೆ. ಆ ಕೇಸ್‌ಗಳು ಮುಂದೆ ಏನಾದವು? ವಾಟಾಳ್ ಅವರು ನಂಜುಂಡಸ್ವಾಮಿಯವರಂತೆ ಸರ್ಕಾರಕ್ಕೆ ವಿನಂತಿಸಿಕೊಂಡು ಕೇಸುಗಳನ್ನು ಹಿಂದೆಗೆಸಿಕೊಂಡರೋ ಅಥವಾ ಇನ್ನೂ ಅವೆಲ್ಲ ಕೋರ್ಟ್‌ನಲ್ಲಿ ಜೀವಂತ ಇವೆಯೋ ಎನ್ನುವುದರ ಬಗ್ಗೆ ವಿವರಣೆ ಸಿಕ್ಕಿಲ್ಲ.

ಈ ಸಂದರ್ಭದಲ್ಲಿ ಡಾ.ಎಂ. ಚಿದಾನಂದಮೂರ್ತಿಯವರು ನೆನಪಿಗೆ ಬರುತ್ತಾರೆ. ಚಿದಾನಂದಮೂರ್ತಿಯವರು ವಿಧಾನಮಂಡಲದ ಕಲಾಪಗಳಲ್ಲಿ ಕನ್ನಡದ ಬಳಕೆಯ ವಿವಾದಕ್ಕೆ ಸಂಬಂಧಿಸಿ ಒಂದು ಪತ್ರವನ್ನು ಬರೆದರು. ಆ ಪತ್ರವು ಹಕ್ಕುಚ್ಯುತಿ ಉಂಟುಮಾಡುವಂಥದ್ದು ಎಂದು ವಿಧಾನಸಭೆಯ ಕಾರ್ಯದರ್ಶಿಗಳು ಚಿದಾನಂದಮೂರ್ತಿಯವರಿಗೆ ನೋಟೀಸ್ ಜಾರಿ ಮಾಡಿದರು. ಹಕ್ಕುಚ್ಯುತಿ ವಿಚಾರಣಾ ಸಮಿತಿಯ ಮುಂದೆ ಹಾಜರಾದರು ಚಿದಾನಂದಮೂರ್ತಿ. "ನೀವು ಹಾಗೆ ಟೀಕಿಸಿದ್ದರ ಬಗ್ಗೆ ತಪ್ಪೊಪ್ಪಿಗೆ ಬರೆದುಕೊಟ್ಟರೆ ಪ್ರಕರಣವನ್ನು ಇಲ್ಲಿಗೇ ಮುಗಿಸುತ್ತೇವೆ. ಇಲ್ಲದಿದ್ದರೆ ನಿಮ್ಮ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ" ಎಂದರು. ಅದಕ್ಕೆ ಚಿದಾನಂದಮೂರ್ತಿಯವರು, "ನನ್ನ ಮೇಲೆ ನೀವು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಿ. ನಾನು ಮಾತ್ರ ತಪ್ಪೊಪ್ಪಿಗೆ ಬರೆದುಕೊಡುವುದಿಲ್ಲ. ನಾನು ಬರೆದುದರಲ್ಲಿ ಎಳ್ಳಷ್ಟೂ ತಪ್ಪಿಲ್ಲ. ನೂರಕ್ಕೆ ನೂರು ಸತ್ಯವಿದೆ. ಹಾಗಿರುವಾಗ ನನ್ನ ಆತ್ಮಸಾಕ್ಷಿಗೆ ವಂಚನೆ ಮಾಡಿ ತಪ್ಪೊಪ್ಪಿಗೆ ಬರೆದುಕೊಡಲೆ? ಸಾಧ್ಯವಿಲ್ಲ!" ಎಂದು ಎದ್ದು ಬಂದಿದ್ದರು.

ಈ ಕೃತಿ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಕೃತಿ ಎನ್ನಬಹುದು. ತಮ್ಮ ವಿಸ್ತಾರವಾದ ವೃತ್ತಿ ಜೀವನದಲ್ಲಿ ಲೇಖಕರು ನೋಡಿದ, ಅನುಭವಿಸಿದ ಅನೇಕ ಸಂಗತಿಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಒಂದು ಕೃತಿಯ ಯಶಸ್ಸು ಇರುವುದು ಅದು ಓದಿಸಿಕೊಂಡು ಹೋಗುವ ಗುಣದಿಂದ.

ಆ ದೃಷ್ಟಿಯಲ್ಲಿ ಈ ಕೃತಿ ಅದ್ಭುತ ಯಶಸ್ಸನ್ನು ಸಾಧಿಸಿದೆ. ಕನ್ನಡ ಸಾಹಿತ್ಯ ರಚನೆ ಕೇವಲ ಕನ್ನಡ, ಆಂಗ್ಲ ಅಧ್ಯಾಪಕರಿಗೆ ಸೀಮಿತವಾಗಿದೆ ಎಂಬುದನ್ನು ಸುಳ್ಳು ಮಾಡುವಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮಹನೀಯರು ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದು ಅಭಿನಂದನಾರ್ಹ. ಶಿಕ್ಷಣ, ಕಂದಾಯ, ಪೋಲೀಸ್, ವೈದ್ಯಕೀಯ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಕೆಲವರಾದರೂ ತಮ್ಮ ಬದುಕಿನ ಅನುಭವಗಳನ್ನು ದಾಖಲಿಸಿದ್ದಾರೆ. ವಿಶೇಷವೆಂದರೆ ಕನ್ನಡದಲ್ಲಿ ಕಾನೂನು ವಿಭಾಗದಲ್ಲಿ ಕೆಲಸ ಮಾಡುತ್ತಿರುವವರು ಕಾನೂನಿಗೆ ಸಂಬಂಧಪಟ್ಟಂತೆ ಅನೇಕ ಲೇಖನಗಳು, ಕೃತಿಗಳನ್ನು ಹೊರತಂದಿದ್ದರೂ ಈ ಕ್ಷೇತ್ರದಲ್ಲಿನ ಸ್ವಂತ ಅನುಭವವನ್ನು ದಾಖಲಿಸಿರುವವರು ವಿರಳವೆನ್ನಬಹುದು. ಈ ದಿಶೆಯಲ್ಲಿ ಸಿ. ಹೆಚ್. ಹನುಮಂತರಾಯರ ಪ್ರಯತ್ನ ಗಮನಾರ್ಹವಾದದ್ದು.

ಡಾ. ಸಿದ್ಧಲಿಂಗಯ್ಯ

ಅಧ್ಯಕ್ಷರು